ಕರ್ನಾಟಕ ಸರ್ಕಾರ

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು



೨೨

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮತ್ತು

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ

ಮಲ್ಲತ್ತಹಳ್ಳಿ, ಬೆಂಗಳೂರು-560 056

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ - ೧೭೯

ವಿಚಾರ ಸಾಹಿತ್ಯಮಾಲೆ – ೯೦

# ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

ಸಂಪುಟ ೧೧

**ಸಂಪಾದನ ಸಮಿತಿ**

| | |
|---|---|
| ಅಧ್ಯಕ್ಷರು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ | ಅಧ್ಯಕ್ಷರು |
| ಡಾ. ಸಿದ್ಧಲಿಂಗಯ್ಯ | ಸದಸ್ಯರು |
| ಡಾ. ದೇವನೂರ ಮಹದೇವ | ಸದಸ್ಯರು |
| ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಸದಸ್ಯ ದರ್ಶಿಗಳು |

# ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

ಸಂಪುಟ ೨೨

ಡಾ. ಬಾಬಾಸಾಹೇಬ್ ಅಂಬೇಡ್ಕರ್

ಅವರ ಪತ್ರಿಕಾ ಬರೆಹಗಳು

(೧೯೨೧-೧೯೫೬)

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮತ್ತು

# ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ

ಮಲ್ಲತ್ತಹಳ್ಳಿ, ಬೆಂಗಳೂರು - ೫೬೦ ೦೫೬

**Dr. Baba Saheb Ambedkar Avara Samagra Barehagalu Mattu Bhashanagalu: Samputa 22 – Kannada translation of Collected Works of Baba Saheb Ambedkar, Published by Kannada Mattu Samskruti Ilakhe; Kuvempu Bhasha Bharati Pradhikara, Kalagrama, Jnanabharathi, Behind Bangalore University Campus, Mallattahalli, Bangalore - 560 056; Second Edition : 2015; Pp. xxiv + 558; Price: Rs. 50/-.**

© : ಹಕ್ಕುಗಳನ್ನು ಕಾದಿರಿಸಿದೆ

ಎರಡನೇ ಮುದ್ರಣ : ೨೦೧೫

ಪುಟಗಳು: xxiv + 38330S

ಬೆಲೆ: ರೂ. ೫೦/

ಪ್ರತಿಗಳು : ೫೦೦೦

ಪ್ರಕಾಶಕರು :

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಮತ್ತು

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**

ಕಲಾಗ್ರಾಮ, ಜ್ಞಾನಭಾರತಿ ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ

ಮಲ್ಲತ್ತಹಳ್ಳಿ, ಬೆಂಗಳೂರು - ೫೬೦ ೦೫೬

ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ: ಮೆ|| ರಾಜಾ ಪ್ರಿಂಟರ್

ISBN : 978-81-906513-5-6

ಮುದ್ರಕರು :

**ಮೆ|| ರಾಜಾ ಪ್ರಿಂಟರ್ಸ್**

ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ

ಕೆ.ಎಸ್.ಗಾರ್ಡನ್, ಗಂಗಾಧರಪ್ಪ ಬ್ಲಾಕ್

ಬೆಂಗಳೂರು - ೫೬೦ ೦೨೬

ದೂ: ೦೮೦-೨೨೨೩೪೦೬೬, ೦೮೦-೨೨೨೧೯೯೬೫

**ಕರ್ನಾಟಕ ಸರ್ಕಾರ**

**ಸಿದ್ದರಾಮಯ್ಯ**

ಮುಖ್ಯಮಂತ್ರಿಗಳು

ವಿಧಾನಸೌಧ

ಬೆಂಗಳೂರು - ೫೬೦ ೦೦೧

ದಿನಾಂಕ : ೦೫.೦೬.೨೦೧೫

ಸಿಎಂ/ಪಿಎಸ್/೧೫೦/೨೦೧೫

**ಸಂದೇಶ**

ಆಧುನಿಕ ಕನ್ನಡ ಸಾಹಿತ್ಯದ ಅತ್ಯುನ್ನತ ಸಾಹಿತ್ಯಕ ಸಾಧನೆಯ ಪ್ರತೀಕವಾಗಿರುವ ರಾಷ್ಟ್ರಕವಿ ಡಾ. ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಸಾಹಿತ್ಯಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ-ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡ ಭಾಷೆಯಲ್ಲಿ ಹಾಗೂ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ನಮ್ಮ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಲೇಖಕರ ಹಾಗೂ ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ ಸಂಚಯಗಳನ್ನು ಹೊರತರುತ್ತಿರುವುದು ಅಭಿನಂದನೀಯ ಮತ್ತು ಅನುಕರಣ ಯೋಗ್ಯ. ಕುವೆಂಪು, ಪು. ತಿ. ನರಸಿಂಹಾಚಾರ್ ಮತ್ತು ಜಿ. ಎಸ್. ಶಿವರುದ್ರಪ್ಪ ಅವರ ಸಂಚಯಗಳನ್ನು ಈಗಾಗಲೇ ಪ್ರಕಟಿಸಿರುವ ಕುವೆಂಪು ಭಾಷಾ

ಭಾರತಿ ಪ್ರಾಧಿಕಾರವು ಇನ್ನಿತರ ಜ್ಞಾನಪೀಠ ಪ್ರಶಸ್ತಿ ಹಾಗೂ ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ನನ್ನಲ್ಲಿ ಅಭಿಮಾನ ಮತ್ತು ಹೆಮ್ಮೆ ಮೂಡಿಸಿದೆ.

ಇವುಗಳೆಲ್ಲದರ ಹಿಂದಿ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ ಮತ್ತು ಗರಿಮೆ ಸಾರಸ್ವತ ಲೋಕದಲ್ಲಿ ಮತ್ತಷ್ಟು ಪ್ರಜ್ವಲಿಸಲಿದೆ. ಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಿಗೂ ಕೊಡುಗೆಯಾಗಬಲ್ಲ ಮಹತ್ವದ ಮೌಲಿಕ ಕೃತಿಗಳನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಮತ್ತಷ್ಟು ಹೊರತರಲಿ ಎಂಬುದೇ ನಮ್ಮ ಸರ್ಕಾರದ ಸದಾಶಯ.

ಭಾರತದ ಸಂವಿಧಾನ ಶಿಲ್ಪಿ ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಎಲ್ಲಾ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡ ಭಾಷೆಗೆ ಅನುವಾದಿಸಿ ಪ್ರಕಟಿಸುವ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹಾಗೂ ಭಾಷಾಂತರದ ಹೊಣೆ ಹೊತ್ತು ಅನುವಾದದ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಎಲ್ಲಾ ಸದಸ್ಯರಿಗೂ ನನ್ನ ಅಕ್ಕರೆಯ ಅಭಿನಂದನೆಗಳು ಹಾಗೂ ಆತ್ಮೀಯ ವಂದನೆಗಳು.

(ಸಿದ್ದರಾಮಯ್ಯ)

ಕರ್ನಾಟಕ ಸರ್ಕಾರ


ಹೆಚ್. ಆಂಜನೇಯ

ಸಮಾಜ ಕಲ್ಯಾಣ ಮತ್ತು

ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಹಾಗೂ

ದೂ.ಸಂ. ೦೮೦ ೨೨೩೫ ೩೧೦೪

೨೨೦೩ ೬೯೮೮

ಕೊಠಡಿ ಸಂಖ್ಯೆ: ೩೪೦/೩೪೦ಎ,

೩ನೇ ಮಹಡಿ, ವಿಧಾನ ಸೌಧ

ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು ಬೆಂಗಳೂರು - ೫೬೦ ೦೦೧

ದಿನಾಂಕ: ೧೨.೧.೨೦೧೬

## ಸಂದೇಶ

ನಮ್ಮ ಸುತ್ತಣ ಸಮಾಜದಲ್ಲಿ ಇರುವ ಅಸಮಾನತೆಗಳಿಗೆ ಕಾರಣಗಳೇನೇ ಇರಲಿ, ಆ ಅಸಮಾನತೆಯು ಬೆಳೆಯುವ ಮಕ್ಕಳ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ಅಡ್ಡಿಗಳನ್ನು ಉಂಟು ಮಾಡಬಾರದು. ಇಂತಹ ಅಡ್ಡಿಗಳು ಇರದಂತೆ ನೋಡಿಕೊಳ್ಳಲು ಸರ್ಕಾರಗಳು ತಕ್ಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೆ ಕೊಡುತ್ತಿವೆ. ಕರ್ನಾಟಕ ಸರಕಾರವೂ ಕೂಡ ತನ್ನ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಈ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ನಾಡಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳು ಓದನ್ನು ಮುಂದುವರಿಸಲು ಅನುಕೂಲವಾಗುವಂತೆ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದೆ. ಲಕ್ಷಾಂತರ ಮಕ್ಕಳು ಈ ವಿದ್ಯಾರ್ಥಿನಿಲಯ ಗಳಲ್ಲಿದ್ದುಕೊಂಡು ತಮ್ಮ ಶಿಕ್ಷಣವನ್ನು ಮುಂದುವರೆಸುತ್ತಿದ್ದಾರೆ. ಅವರ ಭೌತಿಕ ಅಗತ್ಯಗಳಿಗೆ ಬೇಕಾದ ಎಲ್ಲ ಸೌಲಭ್ಯಗಳು ಅಲ್ಲಿ ದೊರಕುವಂತೆ ನೋಡಿಕೊಳ್ಳಲಾಗಿದೆ.

ಇವೆಲ್ಲದರ ಜೊತೆಗೆ ಆ ವಿದ್ಯಾರ್ಥಿಗಳಿಗೆ ಬೌದ್ಧಿಕ ಬೆಳವಣಿಗೆಗೆ ಬೇಕಾದ ಅವಕಾಶಗಳನ್ನು ಕಲ್ಪಿಸುವುದು ಕೂಡ ಇಲಾಖೆಯ ಹೊಣೆಯಾಗಿದೆ. ಈ ನಿಟ್ಟಿನಲ್ಲಿ ಇಪ್ಪತ್ತನೆಯ ಶತಮಾನದ ಧೀಮಂತ ಚಿಂತಕರಾಗಿ ಎಲ್ಲ ಬಗೆಯ ಅಸಮಾನತೆಗಳ ವಿರುದ್ಧ ನಿರಂತರ ಹೋರಾಟ ಮಾಡಿದ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ವಿಚಾರಗಳ ಪರಿಚಯಮಾಡಿಕೊಡುವುದು ಅಗತ್ಯವೆನಿಸಿ ಇಲಾಖೆ ಒಂದು ಯೋಜನೆಯನ್ನು ರೂಪಿಸಿತು. ಅಂಬೇಡ್ಕರ್ ಅವರ ಎಲ್ಲ ಬರೆಹಗಳು ಮತ್ತು ಭಾಷಣಗಳು ಕನ್ನಡ ಅನುವಾದದ ಸಂಪುಟಗಳನ್ನು ಈ ವಿದ್ಯಾರ್ಥಿನಿಲಯಗಳಿಗೆ ಒದಗಿಸುವುದೇ ಈ ಯೋಜನೆ, ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ೨೦೧೫೧೬ನೇ ಸಾಲಿನ ವರ್ಷದ ತಮ್ಮ ಆಯವ್ಯಯವನ್ನು ಮಂಡನೆ ಮಾಡುವಾಗ ಈ ಯೋಜನೆಯನ್ನು ಘೋಷಿಸಿದರು. ಅದರಂತೆ ಈ ಸಂಪುಟಗಳನ್ನು ಅಚ್ಚುಮಾಡಿ ವಿದ್ಯಾರ್ಥಿನಿಲಯಗಳಿಗೆ ಒದಗಿಸುವ ಹೊಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವಹಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಅನುವಾದಿಸಿ ಪ್ರಕಟಿಸುವ ಕೆಲಸವನ್ನು ಕುವೆಂಪು ಭಾಷಾ

ಭಾರತಿ ಪ್ರಾಧಿಕಾರಕ್ಕೆ ವಹಿಸಿತು. ಈಗ ಈ ಸಂಪುಟಗಳನ್ನು ಸಿದ್ಧಗೊಳಿಸಿ ಪ್ರಾಧಿಕಾರವು ತನ್ನ ಹೊಣೆಯನ್ನು ಯಶಸ್ವಿಯಾಗಿ ಪೂರೈಸಿದೆ.

ಈ ಯೋಜನೆಗೆ ಚಾಲನೆಯನ್ನು ನೀಡಿದ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಕಾರ್ಯರೂಪಕ್ಕೆ ತಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಿಗೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

(ಹೆಚ್.ಆಂಜನೇಯ)

**ಕರ್ನಾಟಕ ಸರ್ಕಾರ**


**ಉಮಾಶ್ರೀ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ: ಕಛೇರಿ : ೨೨೨೫೫೨೮೨
೨೨೦೫೩೪೬೯
ಕೊಠಡಿ ಸಂಖ್ಯೆ: ೨೫೨, ೨ನೇ ಮಹಡಿ
ವಿಧಾನಸೌಧ,ಬೆಂಗಳೂರು


ದಿನಾಂಕ:

೦೪.೬.೨೦೧೫

ಸಂ: ಮ.ಮ.ಅ.ಕ.ಸಂ.ಸ/೨೪೮/೨೦೧೫

**ಸಂದೇಶ**

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ವಿಜ್ಞಾನ - ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ

ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ-ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸುವುದು ಒಂದಾಗಿದೆ. ಈ ಯೋಜನೆಯನ್ನು ನಿರ್ವಹಿಸಲು ಸಲಹಾ ಸಮಿತಿಯೊಂದನ್ನು ರೂಪಿಸಲಾಗಿದೆ. ಈ ಸಮಿತಿಯ ನೇತೃತ್ವದಲ್ಲಿ ಅನುವಾದಿತ ಕೃತಿಗಳನ್ನು ಹೊರತಂದಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ. ಪ್ರಕಟವಾದ ಎಲ್ಲ ಸಂಪುಟಗಳು ಜನಮನ್ನಣೆ ಗಳಿಸಿವೆ. ಅವುಗಳನ್ನು ಮರುಮದ್ರಿಸಿ ಓದುಗರಿಗೆ ಒದಗಿಸಲು ನಮ್ಮ ಇಲಾಖೆಯು ಮುಂದಾಗಿದೆ ಮತ್ತು ಈ ಹೊಣೆಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ನೀಡಿದೆ. ಪ್ರಾಧಿಕಾರವು ಈಗ ಈ ಸಂಪುಟಗಳನ್ನು ಓದುಗರ ಮುಂದೆ ಇರಿಸಿದೆ. ಇದಕ್ಕಾಗಿ ಸಂಬಂಧಿಸಿದ ಎಲ್ಲರನ್ನೂ ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ.

(ಉಮಾಶ್ರೀ)

**ಕರ್ನಾಟಕ ಸರ್ಕಾರ**

**ಡಾ. ಎನ್.ಎಸ್. ಚನ್ನಪ್ಪಗೌಡ,** ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

ಕೊಠಡಿ ಸಂಖ್ಯೆ: ೩, ನೆಲಮಹಡಿ
ವಿಕಾಸಸೌಧ
ಬೆಂಗಳೂರು - ೫೬೦ ೦೦೧
ಫ್ಯಾಕ್ಸ್: +೯೧ ೮೦ ೨೨೩೫೩೧೦೫

# ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ-ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ. ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಯಾಗಿರುತ್ತದೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸುವ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ. ಇಪ್ಪತ್ತೆರಡು ಸಂಪುಟಗಳಲ್ಲಿ ಹಲವು ಈಗಾಗಲೇ ಹೊರಬಂದಿದ್ದು ಕನ್ನಡ ಓದುಗರ ಮೆಚ್ಚುಗೆಗೆ ಪಾತ್ರವಾಗಿವೆ. ಕರ್ನಾಟಕ ಸರಕಾರವು ಈ ಸಂಪುಟಗಳನ್ನು ಮರು ಮುದ್ರಿಸುವ ಯೋಜನೆಗೆ ಅಗತ್ಯವಾದ ಅನುದಾನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಒದಗಿಸಿದೆ. ಈಗ ಈ ಎಲ್ಲ ಸಂಪುಟಗಳು ಹೊಸ ಮೆರುಗಿನೊಂದಿಗೆ ಪ್ರಕಟಗೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ.

ಒಟ್ಟಿನಲ್ಲಿ ಸಾಹಿತ್ಯ-ಸಂಸ್ಕೃತಿ-ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆ ಹಾಕುತ್ತಾ ಮುನ್ನಡೆಯಲೆಂದೂ, ಹೊಸ-ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

(ಡಾ. ಎನ್.ಎಸ್. ಚನ್ನಪ್ಪಗೌಡ)

**ಕರ್ನಾಟಕ ಸರ್ಕಾರ**

**ಶ್ರೀ ಕೆ. ಎ. ದಯಾನಂದ**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು - ೫೬೦ ೦೦೦೨

ದಿನಾಂಕ : ೧೦.೬.೨೦೧೫

**ಸಂದೇಶ**

ಕರ್ನಾಟಕ ಸರ್ಕಾರ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಸ್ಥಾಪಿಸಿ ಸಾಹಿತ್ಯಕ-ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಕನ್ನಡದೊಡನೆ ಭಾರತೀಯ ಹಾಗೂ ವಿದೇಶೀಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದು, ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು; ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು; ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಸೂಕ್ತ ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು

ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಇತಿಹಾಸ', ಜೆ.ಡಿ.ಬರ್ನಾಲ್ ಅವರ 'ವಿಜ್ಞಾನದ ಇತಿಹಾಸ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯ ಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು - ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಪ್ರಾಧಿಕಾರವು ಪ್ರಕಟಿಸಿದ್ದ 'ಡಾ. ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು' ಮಾಲಿಕೆಯ ಹಲವು ಸಂಪುಟಗಳು ಈಗ ಮರಳಿ ಮುದ್ರಿತವಾಗುತ್ತಿವೆ. ಈ ಸಂಪುಟಗಳು ಓದುಗರಿಗೆ ಸದಾಕಾಲವು ದೊರೆಯುತ್ತಿರಬೇಕೆಂಬುದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗುರಿಯಾಗಿದೆ. ಅದಕ್ಕಾಗಿ ಅಗತ್ಯವಾದ ಅನುದಾನವನ್ನು ಇಲಾಖೆಯು ಪ್ರಾಧಿಕಾರಕ್ಕೆ ನೀಡಿದೆ. ಈ ಸಂಪುಟಗಳನ್ನು ಸಿದ್ಧಪಡಿಸಲು ನೆರವಾದ ಸಲಹಾ ಸಮಿತಿಯ ಸದಸ್ಯರಿಗೆ, ಅನುವಾದಕರಿಗೆ ಮತ್ತು ಪ್ರಾಧಿಕಾರಕ್ಕೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಕ-ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಕೆ. ಎ. ದಯಾನಂದ

## ಮುನ್ನುಡಿ

ಡಾ. ಬಾಬಾಸಾಹೇಬ್ ಅಂಬೇಡ್ಕರ್ (೧೮೯೧ ರಿಂದ ೧೯೫೬) ತಮ್ಮ ಕಾಲಮಾನವನ್ನು ಮೆಟ್ಟಿನಿಂತು ಗೋಪುರೋಪಮವಾಗಿ ಬೆಳೆದುನಿಂತ ಮಹಾಮಾನವರಲ್ಲಿ ಒಬ್ಬರು. ರಾಷ್ಟ್ರೀಯತಾವಾದಿಯಾಗಿ, ಕಾನೂನು ತಜ್ಞರಾಗಿ, ರಾಜಕೀಯ ನೇತಾರರಾಗಿ, ಕ್ರಿಯಾಶೀಲ ಸಾಮಾಜಿಕ ಕಾರ್ಯಕರ್ತರಾಗಿ, ಶ್ರೇಷ್ಠ ಇತಿಹಾಸಕಾರರಾಗಿ, ಮಹಾ ದಾರ್ಶನಿಕರಾಗಿ, ಅಪ್ರತಿಮ ಚಿಂತಕರಾಗಿ, ಮಾನವಶಾಸ್ತ್ರಜ್ಞರಾಗಿ, ಖ್ಯಾತ ಅರ್ಥಶಾಸ್ತ್ರಜ್ಞರಾಗಿ, ಸಮೃದ್ಧ ಬರೆಹಗಾರರಾಗಿ, ಕ್ರಾಂತಿಕಾರಿಯಾಗಿ, ಅಸಾಮಾನ್ಯ ವಾಕಟುವಾಗಿ, ಬೌದ್ಧ ಧರ್ಮದ ಪುನರುಜೀವಕರಾಗಿ, ಭಾರತೀಯ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಅವರು ಮಾಡಿರುವ ಮಹತ್ತರ ಸಾಧನೆಗಳನ್ನು ಗಮನಿಸಿದರೆ, ಒಬ್ಬ ವ್ಯಕ್ತಿ ಒಂದು ಜೀವಮಾನದಲ್ಲಿ ಇಷ್ಟೆಲ್ಲ ಸಾಧನೆಗಳನ್ನು ಮಾಡಲು ಸಾಧ್ಯವೇ ಎಂದು ಬೆರಗಾಗಿ ನಿಲ್ಲುವಂತೆ ಆಗುತ್ತದೆ. ಆಧುನಿಕ ಅರ್ಥದಲ್ಲಿ ಅವರನ್ನು 'ಪವಾಡ ಪುರುಷ'ರೆಂದೇ ಹೆಸರಿಸಬೇಕಾಗುತ್ತದೆ.

ಸಾಮಾಜಿಕ ಭೇದಭಾವಕ್ಕೊಳಗಾಗಿ ನರಳುತ್ತಿದ್ದ ಬಡ ಕುಟುಂಬದಲ್ಲಿ ಹುಟ್ಟಿದ ಅವರು ತಮ್ಮ ಇಡೀ ಜೀವಮಾನವನ್ನು ಈ ಸಾಮಾಜಿಕ ಭೇದಭಾವಕ್ಕೆ, ಸಮಾಜದ ಎಲ್ಲ ಪಿಡುಗುಗಳಿಗೂ ಕಾರಣವಾಗಿರುವ ಜಾತಿಪದ್ಧತಿಯ ವಿರುದ್ಧವಾಗಿ ಹೋರಾಡುವುದಕ್ಕೆ ಮೀಸಲಾಗಿ ಇಡಬೇಕಾಯಿತು. ತಮ್ಮ ಈ ಅವಿರತ ಹೋರಾಟದಿಂದ, ಈ ಹಿಂದಿನ ಸಮಾಜ ಸುಧಾರಕರು ಯಾರೂ ಸಾಧಿಸದಿದ್ದಂಥ ಮಹಾಕ್ರಾಂತಿಯನ್ನು ಎಸಗಿ ಹೊಸ ಇತಿಹಾಸವನ್ನೇ ಸೃಷ್ಟಿಸಿದರು. ಸಾಮಾಜಿಕ-ಆರ್ಥಿಕ ಸಂಕಷ್ಟಗಳನ್ನು ಮೀರಿ ನಿಂತು ಅನೇಕ ಪ್ರಥಮಗಳನ್ನೂ ಅವರು ಸಾಧಿಸಿದರು. ಕಾಲೇಜು ಶಿಕ್ಷಣವನ್ನು ಪಡೆದ ದಲಿತರಲ್ಲಿಯೂ ಮೊದಲಿಗರಾಗಿದ್ದವರಲ್ಲಿ ಅವರು ಪ್ರಮುಖರಾದರು. ನ್ಯಾಯಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಸಂಬಂಧವಾದ ತಮ್ಮ ಅಧ್ಯಯನ ಮತ್ತು ಸಂಶೋಧನೆಗಳಿಂದಾಗಿ ಕೊಲಂಬಿಯಾದಂಥ ವಿಶ್ವವಿದ್ಯಾನಿಲಯದಿಂದ, ಲಂಡನ್ನಿನ ಅರ್ಥಶಾಸ್ತ್ರ ಶಾಲೆಯಿಂದ ಡಾಕ್ಟೋರೇಟ್ ಪದವಿಗಳನ್ನು ಪಡೆದ ಮಹಾಮೇಧಾವಿಗಳಲ್ಲೂ ಅವರೊಬ್ಬರಾದರು. ಹೀಗೆ ಶ್ರೇಷ್ಠ ವಿದ್ವಾಂಸರಾಗಿ ಭಾರತಕ್ಕೆ ಹಿಂದಿರುಗಿ ಬಂದ ಅವರು ಸಮಾಜದ ಕೆಳವರ್ಗಗಳ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ, ರಾಜಕೀಯ ಹಕ್ಕುಗಳಿಗಾಗಿ ಅಹರ್ನಿಶಿ ದುಡಿದರು.

ಬರೆಹಗಳ-ಭಾಷಣಗಳ ಮೂಲಕ, ವೈಚಾರಿಕ ಚರ್ಚೆ-ಸಂವಾದಗಳ ಮೂಲಕ ಸಾಮಾಜಿಕ-ರಾಜಕೀಯ ಜಾಗೃತಿಯನ್ನೇ ಮೂಡಿಸಿದರು; 'ಆಧುನಿಕ ಬೋಧಿಸತ್ವ'ರೆಂಬ ಕೀರ್ತಿಗೂ ಪಾತ್ರರಾದರು. ಸಮಾಜದ ಎಲ್ಲ ವರ್ಗಗಳಲ್ಲಿ, ವಿವಿಧ ಧರ್ಮಗಳಲ್ಲಿ ಪ್ರತ್ಯಕ್ಷವಾಗಿ, ಪ್ರಚ್ಛನ್ನವಾಗಿ ಬೇರುಬಿಟ್ಟಿದ್ದ ಸಾಮಾಜಿಕ ಕೆಡಕುಗಳ ವಿರುದ್ಧ ದನಿಯೆತ್ತಿದ ಹಿರಿಮೆಯೂ ಅವರದಾಗಿದೆ. ಅಂತಿಮವಾಗಿ ದೇಶ ವಿಭಜನೆಯ ಅನಿವಾರ್ಯತೆಯನ್ನು ಒಪ್ಪಿದರಾದರೂ, ಅದರ ಭಯಾನಕ ಪರಿಣಾಮಗಳ ವಿರುದ್ಧ ಎಚ್ಚರಿಕೆಯ ಗಂಟೆಯನ್ನೂ ಅವರು ಮೊದಲೇ ಮೊಳಗಿಸಿದ್ದರೆಂಬುದು ಗಮನಾರ್ಹವಾದ ಸಂಗತಿ.

ಬುದ್ಧ, ಕಬೀರ್, ಏಸು, ಅಶೋಕ, ಶಿವಾಜಿ, ಜಾರ್ಜ್ ವಾಷಿಂಗ್ಟನ್, ಥಾಮಸ್ ಪೇನ್, ಅಬ್ರಹಾಂ ಲಿಂಕನ್, ಎಡ್ಮಂಡ್ ಬರ್ಕ್, ಮಾರ್ಟಿನ್ ಲೂಥರ್, ಶಾಹೂ ಮಹಾರಾಜ್, ಮಹಾರಾಜ ಸಯ್ಯಾಜಿರಾವ್ ಗಾಯಕ್ ವಾಡ್-III ಮುಂತಾದವರ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಅಂಬೇಡ್ಕರ್ ಅವರು ಈಚಿನ ತಲೆಮಾರಿನ ಶ್ರೀ ಎ.ಎಚ್. ಸಾಳುಂಕೆ ಅವರಿಂದ ಹಿಡಿದು ಕು. ಮಾಯಾವತಿಯವರ ವರೆಗೆ ಅನೇಕ ಸಮಾಜ ಚಿಂತಕರು ಮತ್ತು ರಾಜಕೀಯ ನೇತಾರರ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದ್ದಾರೆ. ಅವರ ಅಸಾಮಾನ್ಯ ಜೀವಿತ-ಸಾಧನೆಗಳನ್ನು ಕುರಿತಂತೆ ವಿವಿಧ ಭಾಷೆಗಳಲ್ಲಿನ ಹಿರಿ-ಕಿರಿಯ ಲೇಖಕರುಗಳು ಹತ್ತಾರು ಜೀವನ ಚರಿತ್ರೆಗಳನ್ನು ರಚಿಸಿರುವುದು ಆಶ್ಚರ್ಯದ ಸಂಗತಿಯೇನೂ ಅಲ್ಲ. ದೆಹಲಿಯೂ ಸೇರಿದಂತೆ ನಾಡಿನ ಅನೇಕ ಕಡೆಗಳಲ್ಲಿ ಅವರ ಸ್ಮಾರಕಗಳು ನಿರ್ಮಾಣಗೊಂಡಿವೆ. ಹೈದರಾಬಾದಿನಲ್ಲಿ 'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾನಿಲಯ', ಮುಜಪ್ಪರ್‌ಪುರದಲ್ಲಿನ 'ಬಿ.ಆರ್. ಅಂಬೇಡ್ಕರ್ ಬಿಹಾರ್ ವಿಶ್ವವಿದ್ಯಾನಿಲಯ'ಗಳು ಸ್ಥಾಪನೆಗೊಂಡಿರುವುದಲ್ಲದೆ, ನಾಗಪುರದಲ್ಲಿನ ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ಅಂಬೇಡ್ಕರ್ ಅವರ ಹೆಸರನ್ನಿಡಲಾಗಿದೆ. ಸಂಸತ್ ಭವನದಲ್ಲಿಯೂ ಅವರ ಭಾವಚಿತ್ರವನ್ನು ಅನಾವರಣಗೊಳಿಸಲಾಗಿದೆ. ಅವರ ಹುಟ್ಟುಹಬ್ಬವನ್ನು (ಏಪ್ರಿಲ್ ೧೪) ಮತ್ತು ಪರಿನಿರ್ವಾಣ ದಿನವನ್ನು (ಡಿಸೆಂಬರ್ ೬) ನಾಡಿನಾದ್ಯಂತ ಆಚರಿಸಲಾಗುತ್ತಿದೆ. ಅವರ ಬಹುಮುಖೀ ಸಾಧನೆಯನ್ನು ಗುರುತಿಸಿ, ಮರಣೋತ್ತರವಾಗಿ ೧೯೯೦ರಲ್ಲಿ ಅವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನೂ ನೀಡಲಾಗಿದೆ. ಅಂಬೇಡ್ಕರ್ ಅವರು ಶಿಕ್ಷಣ ! ಸಂಘಟನೆ !! ಹೋರಾಟ!!! (**Educate! Organize! Agitate !!!**) ಎಂಬ ತಗಳನ್ನು ತಮ್ಮ ಅನುಯಾಯಿಗಳಿಗೆ ಹಾಗೂ ನಾಡಿಗೆ ನೀಡಿದ್ದಾರೆ.

ಮಹಾಮಾನವರೇ ಆಗಿದ್ದ ಅಂಬೇಡ್ಕರ್ ಸಮೃದ್ಧವಾಗಿ ಬರೆವಣಿಗೆಯನ್ನೂ ಮಾಡಿದ್ದಾರೆ-ಸಂಸತ್ತಿನ ಒಳಗೆ, ಹೊರಗೆ ಹಾಗೂ ಪತ್ರಿಕೋದ್ಯಮದ ಮೂಲಕ. ಇವೆಲ್ಲ ಐತಿಹಾಸಿಕ ಪ್ರಾಮುಖ್ಯದ ಬರೆವಣಿಗೆಗಳೇ ಆಗಿವೆ. ಇವುಗಳ ಐತಿಹಾಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಗುರುತಿಸಿದ ಮುಂಬಯಿ ಸರ್ಕಾರ ಡಾ. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಇಪ್ಪತ್ತೊಂದು ಸಂಪುಟಗಳಲ್ಲಿ ಹೊರತಂದಿದೆ. ಈ ಸಂಪುಟಗಳನ್ನು

ಕನ್ನಡದಲ್ಲಿಯೂ ಹೊರತರಬೇಕೆಂದು, ಆ ಮೂಲಕ ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಿಗರಿಗೂ ಅವರದೇ ಭಾಷೆಯಲ್ಲಿ ಮುಟ್ಟಿಸಬೇಕೆಂದು ಸಂಕಲ್ಪಿಸಿದ ಕರ್ನಾಟಕ ಸರ್ಕಾರ, ಕರ್ನಾಟಕ ವಿಶ್ವ ವಿದ್ಯಾನಿಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಾ. ಎ.ಎಂ. ರಾಜಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಅನುವಾದ ಸಂಪಾದನ ಸಮಿತಿಯೊಂದನ್ನು ನೇಮಿಸಿ, ೧೪ ಸಂಪುಟಗಳ ಕನ್ನಡ ಆವೃತ್ತಿಯನ್ನು ಹೊರತಂದಿತು. ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಕ್ಕೆ ಅಳವಡಿಸುವ ಮಹಾಸಾಹಸದ ಕಾರ್ಯವನ್ನು ಆ ಸಮಿತಿ ನಿರ್ವಹಿಸಿತು. ನಾಡಿನ ಹಲವಾರು ಗಣ್ಯ ವಿದ್ವಾಂಸರು ಆ ಮಹಾಕಾರ್ಯದಲ್ಲಿ ಸಹಕರಿಸಿದರು. ಅಂಬೇಡ್ಕರ್ ಅವರ ಇಂಗ್ಲಿಷ್ ಅತ್ಯಂತ ವಿದ್ವತ್ಪೂರ್ಣವೂ, ವಿಶಿಷ್ಟವೂ ಆಗಿದ್ದು, ಅನೇಕ ಬಗೆಯ ಸವಾಲುಗಳನ್ನು ಒಡ್ಡುವಂಥದಾಗಿದ್ದುದರಿಂದ, ಕನ್ನಡ ಅನುವಾದದಲ್ಲಿ ಕೆಲವೊಂದು ಅರೆಕೊರೆಗಳು ಉಳಿದುಕೊಂಡು ಬಿಟ್ಟುದು ಸಹಜವೇ ಆಗಿತ್ತು. ತಜ್ಞ ವಿದ್ವಾಂಸರು ಇಂಥ ಅರೆಕೊರೆಗಳತ್ತ ಬೊಟ್ಟುಮಾಡಿ ತೋರಿಸಿದ್ದೂ ಉಂಟು. ಈ ಆವೃತ್ತಿಯ ಪ್ರತಿಗಳೂ ಮುಗಿದು ಹೋಗಿ, ಅಂಬೇಡ್ಕರ್ ಅವರ ಕೃತಿಗಳಿಗೆ ಇದ್ದ ಬೇಡಿಕೆಯನ್ನು ಗಮನಿಸಿ, ಇದರ ಪರಿಷ್ಕೃತ ಆವೃತ್ತಿಯೊಂದನ್ನು ಹೊರತರುವ ಯೋಜನೆಯನ್ನು ಕರ್ನಾಟಕ ಸರ್ಕಾರ ಹಮ್ಮಿಕೊಂಡಿತು. ಈ ಹೊತ್ತಿಗೆ 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಅಸ್ತಿತ್ವಕ್ಕೆ ಬಂದಿದ್ದುದರಿಂದ, ಈ ಹೊಣೆಯನ್ನು ಸದರಿ ಅಕಾಡೆಮಿಗೆ ವಹಿಸಬೇಕೆಂದು ತೀರ್ಮಾನಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಈ ಸಂಬಂಧವಾಗಿ ಮಂಜೂರು ಮಾಡಲಾಗಿದ್ದ ೯೫ ಲಕ್ಷ ರೂಪಾಯಿಗಳ ಸಹಾಯಧನವನ್ನೂ, ಕಾರ್ಯನಿರ್ವಹಣೆಯ ಹೊಣೆಯನ್ನೂ ಅನುವಾದ ಸಾಹಿತ್ಯ ಅಕಾಡೆಮಿಗೆ ವರ್ಗಾಯಿಸಲಾಯಿತು. ಈ ಸಂಬಂಧವಾಗಿ ಅನುವಾದ ಸಂಪಾದನ ಸಮಿತಿಯನ್ನು ನೇಮಿಸಲಾಯಿತು. ಅನುವಾದ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಡಾ. ಪ್ರಧಾನ್ ಗುರುದತ್ತ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಈ ಸಮಿತಿಯಲ್ಲಿ ಈ ಕೆಳಕಂಡ ಮಹನೀಯರನ್ನು ಸದಸ್ಯರಾಗಿ ನಾಮಕರಣ ಮಾಡಲಾಯಿತು (ಆದೇಶ ಸಂಖ್ಯೆ: ಸಂ ವಾ ಪ್ರ ೨೮ ಕರಹ ೨೦೦೮ ದಿನಾಂಕ ೨೪-೩-೨೦೦೮)

೧. ಡಾ. ಸಿದ್ದಲಿಂಗಯ್ಯ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ;
೧೨-೬-೨೦೦೮ರಿಂದ ಈಚೆಗೆಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರು
೨. ಶ್ರೀ ದೇವನೂರ ಮಹದೇವ, ಖ್ಯಾತ ಸಾಹಿತಿಗಳು
೩. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅನುವಾದ ಅಕಾಡೆಮಿಯನ್ನು ವಿಧ್ಯುಕ್ತವಾಗಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿದ್ದರಿಂದ ಹಾಗೂ ಡಾ. ಪ್ರಧಾನ್ ಗುರುದತ್ತ ಅವರನ್ನೇ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ

ಅಧ್ಯಕ್ಷರನ್ನಾಗಿ ನೇಮಿಸಿದ್ದರಿಂದ ಇದೇ ಸಂಪಾದನ ಸಮಿತಿ ಡಾ. ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಸಂಪಾದನೆ ಮತ್ತು ಪ್ರಕಟಣೆಯ ಕಾರ್ಯಗಳನ್ನು ಮುಂದುವರಿಸಿಕೊಂಡುಬರುತ್ತಿದೆ.

ಸಂಪುಟಗಳ ಪರಿಷ್ಕರಣ ಕಾರ್ಯದ ಸ್ವರೂಪದ ಬಗ್ಗೆಯೂ ವ್ಯಾಪಕವಾದ ಚರ್ಚೆಯನ್ನು ನಡೆಸಲಾಯಿತು. ಖ್ಯಾತ ವಿದ್ವಾಂಸರುಗಳೇ ಈ ಅನುವಾದ ಕಾರ್ಯದಲ್ಲಿ ಭಾಗಿಯಾಗಿರುವುದನ್ನು ಗಮನಿಸಿ, ಎದ್ದು ಕಾಣುವಂಥ ಲೋಪದೋಷಗಳು ಇರುವಲ್ಲಿ ಮಾತ್ರವೇ ಅವುಗಳನ್ನು ಸರಿಪಡಿಸುವ, ಓರೆಕೋರೆಗಳನ್ನು ತಿದ್ದುವ ಕೆಲಸಮಾಡಬೇಕೆಂದೂ ನಿರ್ಧರಿಸಲಾಯಿತು. ಅದರಂತೆ, ಮೊದಲ ಪರಿಷ್ಕøತ ಸಂಪುಟವನ್ನು ೧೯-೮-೨೦೦೯ರಂದು ಹೊರತರಲಾಯಿತು. ಈ ಕಾರ್ಯವನ್ನು ಮುಂದುವರಿಸಿ ೨, ೩ ಮತ್ತು ೪ನೇ ಸಂಪುಟಗಳ ಪರಿಷ್ಕøತ ಆವೃತ್ತಿಯನ್ನು ೬.೧೨.೨೦೧೦ ರಂದು ಬಿಡುಗಡೆ ಮಾಡಲಾಯಿತು. ಈ ಕಾರ್ಯದಲ್ಲಿ ಈ ಕೆಳಕಂಡ ವಿದ್ವಾಂಸರು ಸಹಕರಿಸಿದ್ದರು.

೧. ಶ್ರೀ ವಿ. ಕೃಷ್ಣ, ಬೆಂಗಳೂರು (೨ನೆಯ ಸಂಪುಟ)

೨. ಶ್ರೀ ಕೇಶವ ಮಳಗಿ, ಬೆಂಗಳೂರು (೩ನೆಯ ಸಂಪುಟ)

೩. ಶ್ರೀ ಜೆ.ಎನ್. ಶಾಮರಾವ್, ಬೆಂಗಳೂರು (೪ನೆಯ ಸಂಪುಟ)

ಕೆಲಮಂದಿ ಪರಿಷ್ಕರಣಕಾರರ ಅತಿವ್ಯಸ್ತತೆಯಿಂದಾಗಿ, ಪರಿಷ್ಕರಣ ಕಾರ್ಯದಲ್ಲಿಯೂ ವಿಳಂಬವಾಯಿತು. ನಮ್ಮ ಒತ್ತಾಯ-ಒತ್ತಡಗಳನ್ನು ಮನ್ನಿಸಿ ಅವರು ನಮಗೆ ನೆರವು ನೀಡಿದ್ದಾರೆ. ಈ ವಿದ್ವಾಂಸರು ಸಾಧ್ಯವಿದ್ದಷ್ಟು ಮಟ್ಟಿಗೆ ಈ ಸಂಪುಟಗಳನ್ನು ಪರಿಷ್ಕರಿಸಿದ್ದಾರೆ. ಈಗಾಗಲೇ ೫, ೬, ೭, ೮ ಮತ್ತು ೯ ಸಂಪುಟಗಳ ಪರಿಷ್ಕೃತ ಆವೃತ್ತಿಯನ್ನು ಹೊರತರಲಾಗಿದೆ. ಇವುಗಳ ಪರಿಷ್ಕರಣ ಕಾರ್ಯದಲ್ಲಿ ಈ ಕೆಳಕಂಡ ಮಹನೀಯರು ಸಹಕರಿಸಿದ್ದಾರೆ:

೧. ಶ್ರೀಮತಿ ಬಿ.ಎನ್. ಶಾಂತಾ (ಸಂ. ೫)

೨. ಶ್ರೀ ವಿ. ಕೃಷ್ಣ (ಸಂ. ೬)

೩. ಶ್ರೀ ಕೆ.ಎಲ್. ಚಂದ್ರಶೇಖರ (ಸಂ. ೭)

೪. ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ (ಸಂ. ೮)

೫. ಶ್ರೀ ಜೆ.ಎನ್. ಶಾಮರಾವ್ (ಸಂ. ೯)

ಈಗ ೧೦ ರಿಂದ ೧೪ ರವರೆಗಿನ ಸಂಪುಟಗಳ ಪರಿಷ್ಕೃತ ಆವೃತ್ತಿಗಳನ್ನು ಹಾಗೂ ಹೊಸದಾಗಿ ಅನುವಾದಿಸಿ ಪ್ರಕಟಿಸಲಾಗುತ್ತಿರುವ ೧೯ ಮತ್ತು ೨೦ನೆಯ ಸಂಪುಟಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಈ ಕಾರ್ಯಗಳಲ್ಲಿ ಈ ಕೆಳಕಂಡ ಮಹನೀಯರು ಸಹಕರಿಸಿದ್ದಾರೆ.

೧. ಶ್ರೀ ಎಸ್.ಆರ್. ಗೌತಮ್ (ಸಂ. ೧೦; ಭಾಗಗಳು ೧-೩ ಮತ್ತು ಸಂ. ೧೪, ಭಾಗ ೨)

೨. ಶ್ರೀ ಜೆ.ಎನ್. ಶಾಮರಾವ್ (ಸಂ. ೧೧; ಭಾಗಗಳು ೧-೨)

೩. ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ (ಸಂ. ೧೨; ಭಾಗಗಳು ೧-೨)

೪. ಶ್ರೀ ಕೃಷ್ಣ ಮೂರ್ತಿಸಿರ್ಸಿ (ಸಂ. ೧೩; ಭಾಗಗಳು ೧-೨; ಸಂ. ೧೪ ಭಾಗ ೧(ಅ) ಮತ್ತು (ಆ)

೫. ಶ್ರೀಮತಿ ಅಕ್ಷತಾ ದೇಶಪಾಂಡೆ ಮತ್ತು ಶ್ರೀಮತಿ ಸುಮಾ ದ್ವಾರಕನಾಥ (ಸಂ. ೧೯)

೬. ಶ್ರೀಮತಿ ಶ್ಯಾಮಲಾ ಮಾಧವ್ ಮತ್ತು ಶ್ರೀ ವಿರೂಪಾಕ್ಷ ಕುಲಕರ್ಣಿ (ಸಂ. ೨೦)

ಇವರೆಲ್ಲರ ಸಹಾಯ-ಸಹಕಾರಗಳಿಗಾಗಿ ನಾವು ಕೃತಜ್ಞರಾಗಿದ್ದೇವೆ. ಅವರ ಗಮನವನ್ನು ತಪ್ಪಿಸಿ ಬಿಟ್ಟು ಹೋಗಿದ್ದ ಭಾಗಗಳನ್ನು ಸೇರಿಸಲಾಗಿದೆ; ಸಾರಣಿಗಳ ಮಾಹಿತಿಯನ್ನು ಸರಿಪಡಿಸಲಾಗಿದೆ; ಉಲ್ಲೇಖಗಳನ್ನು, ಅಂಕಿತನಾಮಗಳನ್ನು ಪರಿಷ್ಕರಿಸಲಾಗಿದೆ. ಹೀಗೆ ಪರಿಷ್ಕೃತವಾದ ಪಠ್ಯದ ಪ್ರಕಟಣೆಗೆ ಅನುವಾದ ಸಂಪಾದನ ಸಮಿತಿಯ ಒಪ್ಪಿಗೆಯನ್ನೂ ಪಡೆದುಕೊಳ್ಳಲಾಗಿದೆ.

ಹೊಸ ಆಕಾರದಲ್ಲಿ ಹಾಗೂ ಸ್ವರೂಪದಲ್ಲಿ ಹೊರತರಲಾದ ಮೊದಲನೆಯ ಸಂಪುಟ ಸಾರ್ವತ್ರಿಕ ಮೆಚ್ಚುಗೆಯನ್ನು ಗಳಿಸಿದ್ದರಿಂದ, ಅದೇ ವಿನ್ಯಾಸವನ್ನು ಇತರ ಸಂಪುಟಗಳೂ ಅವಳವಡಿಸಿಕೊಳ್ಳಲಾಗಿದೆ.

ಈ ದಿಕ್ಕಿನಲ್ಲಿ ನಮಗೆ ಎಲ್ಲ ಸಹಾಯ-ಸಹಕಾರ-ಮಾರ್ಗದರ್ಶನಗಳನ್ನು ಇತ್ತಿರುವ ಕನ್ನಡ ಮತ್ತು ಸಂಸ್ಕೃತಿ, ಹಾಗೂ ವಾರ್ತಾ ಇಲಾಖೆಯ ಸನ್ಮಾನ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಸವರಾಜು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸನ್ಮಾನ್ಯ ಆಯುಕ್ತರಾದ ಶ್ರೀ ಕೆ.ಆರ್. ರಾಮಕೃಷ್ಣ ಅವರಿಗೆ ನಮ್ಮ ಕೃತಜ್ಞತೆಗಳು.

ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳ ಮೂಲ ಪ್ರತಿಗಳು ಹಾಗೂ ಅನುವಾದದ ಎಲ್ಲ ಸಂಪುಟಗಳು ನಮ್ಮಲ್ಲಿಯಾಗಲೀ, ಹೊರಗಾಗಲೀ ಲಭ್ಯವಿಲ್ಲದೆ ಇದ್ದುದರಿಂದ, ಅನಿವಾರ್ಯವಾದ ವಿಳಂಬಕ್ಕೆ

ಎಡದೊರೆಯಿತು. ಅಂಬೇಡ್ಕರ್ ಸಾಹಿತ್ಯಾಸಕ್ತ ಕೆಲವು ಮಿತ್ರರ ಖಾಸಗಿ ಗ್ರಂಥ ಸಂಗ್ರಹಗಳಿಂದ ಕೆಲವು ಸಂಪುಟಗಳನ್ನು ಸಂಗ್ರಹಿಸಲಾಯಿತು. ಸಂಪಾದನ ಸಮಿತಿಯ ಮಾನ್ಯ ಸದಸ್ಯರುಗಳು ತಮ್ಮ ಮಿತ್ರರುಗಳ ಖಾಸಗಿ ಸಂಗ್ರಹಗಳಿಂದಲೂ ಕೆಲವು ಸಂಪುಟಗಳನ್ನು ಒದಗಿಸಿಕೊಡುವ ಕೃಪೆ ಯನ್ನು ತೋರಿದರು. ಅವರ ಈ ಕೃಪೆಗಾಗಿ ಹಾಗೂ ಸಂಪಾದನ ಕಾರ್ಯದಲ್ಲಿ ಅವರು ನೀಡುತ್ತಿರುವ ಆತ್ಮೀಯ ಸಹಕಾರಕ್ಕಾಗಿ ವಂದನೆಗಳನ್ನು ಸಲ್ಲಿಸ ಬಯಸುತ್ತೇನೆ.

ಕರಡು ಪರಿಶೀಲನೆಯಲ್ಲಿ ನಮಗೆ ನೆರವಾಗಿರುವ ವಿದ್ವಾಂಸರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ-ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ.ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ ಹಾಗೂ ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್ನ ಶ್ರೀ ಬಿ.ಎಲ್.ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

**ಪ್ರಧಾನ್ ಗುರುದತ್ತ**
ಅಧ್ಯಕ್ಷ, ಕುವೆಂಪು ಭಾಷಾ ಭಾರತಿ

## ಎರಡನೇ ಮುದ್ರಣಕ್ಕೆ ಮುನ್ನುಡಿ

ಕರ್ನಾಟಕ ಸರಕಾರವು ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡದಲ್ಲಿ ಪ್ರಕಟಿಸಲು ಯೋಜಿಸಿ ಅದನ್ನು ಯಶಸ್ವಿಯಾಗಿ ಪೂರೈಸಿದೆ. ಹಲವು ಸಂಪುಟಗಳಲ್ಲಿ ಪ್ರಕಟಗೊಂಡಿರುವ ಅಂಬೇಡ್ಕರ್ ಅವರ ಬರೆಹಗಳ ಕನ್ನಡ ಅನುವಾದ ಪರಿಷ್ಕರಣಗೊಂಡು ಮತ್ತೆ ಮತ್ತೆ ಅಚ್ಚಾಗುತ್ತಿವೆ. ಇದೀಗ ಎಲ್ಲ ಸಂಪುಟಗಳು ಒಮ್ಮೆಗೆ ಮತ್ತೊಮ್ಮೆ ಅಚ್ಚಾಗಿ ಪ್ರಕಟಗೊಳ್ಳುತ್ತಿವೆ. ಈವರೆಗೆ ಕನ್ನಡದಲ್ಲಿ

ದೊರಕದೇ ಇದ್ದ ಅಂಬೇಡ್ಕರ್ ಅವರ ಮರಾಠಿ ಬರೆಹಗಳು ಮತ್ತು ಭಾಷಣಗಳು ಈಗ ಮೊದಲ ಬಾರಿಗೆ ಅಚ್ಚಾಗುತ್ತಿವೆ. ಒಟ್ಟು ಇಪ್ಪತ್ತೆರಡು ಸಂಪುಟಗಳನ್ನು ಈಗ ವಿಷಯಸೂಚಿಯೊಂದಿಗೆ ಪ್ರಕಟಿಸಲಾಗುತ್ತಿದೆ. ಹಿಂದಿನ ಮುದ್ರಣಗಳಲ್ಲಿ ವಿಷಯಸೂಚಿಗಳು ಇಲ್ಲದಿದ್ದುದರಿಂದ ಸಂಪುಟಗಳನ್ನು ಓದುವವರಿಗೆ ಅಗತ್ಯ ವಿಷಯಗಳನ್ನು ಗುರುತಿಸಲು ಕಷ್ಟವಾಗುತ್ತಿದ್ದುದನ್ನು ಗಮನಿಸಿ ಈ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ಎಲ್ಲ ಸಂಪುಟಗಳ ವಿಷಯಸೂಚಿಗಳ ಸಂಕಲನವೂ ಈಗ ಹೊರಬಂದಿದೆ. ಇದರಿಂದ ಯಾವ ಸಂಪುಟದಲ್ಲಿ ಯಾವ ವಿಷಯದ ಬಗೆಗೆ ಮಾಹಿತಿ ಇದೆ ಎಂಬುದನ್ನು ಗುರುತಿಸಿಕೊಳ್ಳುವುದು ಓದುಗರಿಗೆ ಸುಲಭವಾಗಲಿದೆ. ಹಿಂದೆ ಪ್ರಕಟಗೊಂಡಿದ್ದ ಸಂಪುಟಗಳಲ್ಲಿ ಅಲ್ಲಲ್ಲಿ ಉಳಿದಿದ್ದ ಅಚ್ಚಿನ ತಪ್ಪುಗಳನ್ನು ತಿದ್ದಿ ಸರಿಪಡಿಸಲು ಕ್ರಮ ವಹಿಸಲಾಗಿದೆ.

ಈ ಸಂಪುಟಗಳನ್ನು ಅಚ್ಚು ಮಾಡಲು ಕರ್ನಾಟಕ ಸರ್ಕಾರವು ವಿಶೇಷ ಅನುದಾನವನ್ನು ಒದಗಿಸಿದೆ. ಅಚ್ಚಾದ ಸಂಪುಟಗಳು ರಾಜ್ಯದ ಎಲ್ಲೆಡೆ ಇರುವ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಗಳ ವಿದ್ಯಾರ್ಥಿನಿಲಯಗಳಿಗೆ ಉಚಿತವಾಗಿ ದೊರಕಬೇಕೆಂಬುದು ಸರ್ಕಾರದ ಸದಾಶಯ. ಇದರಿಂದ ಡಾ. ಅಂಬೇಡ್ಕರ್ ಅವರ ಚಿಂತನೆಗಳು ಮುಂದಿನ ತಲೆಮಾರಿಗೂ ಹರಿಯುವ ಅವಕಾಶ ಸೃಷ್ಟಿಯಾಗಿದೆ. ಕುವೆಂಪು ಭಾಷಾ ಭಾರತಿಗೆ ಇಂತಹ ಅಪೂರ್ವ ಹೊಣೆಯನ್ನು ನೀಡಿದ ಕರ್ನಾಟಕ ಸರ್ಕಾರಕ್ಕೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಈ ಸಂಪುಟಗಳ ಸಿದ್ಧತೆಗೆ ನಿಯುಕ್ತಿಗೊಂಡಿರುವ ಸಂಪಾದಕ ಮಂಡಲಿಯ ಸದಸ್ಯರಾದ ಡಾ. ದೇವನೂರ ಮಹದೇವ, ಡಾ. ಸಿದ್ದಲಿಂಗಯ್ಯ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ. ಎ. ದಯಾನಂದ ಅವರು ತಮ್ಮ ಸಕಾಲಿಕ ಸೂಕ್ತ ಸಲಹೆಗಳ ಮೂಲಕ ನಮ್ಮ ಕೆಲಸ ಹೆಚ್ಚು ಪರಿಪೂರ್ಣವಾಗುವಂತೆ ಮಾಡಿದ್ದಾರೆ.

ಕೆ. ವಿ. ನಾರಾಯಣ
ಅಧ್ಯಕ್ಷ
ಸಂಪಾದನ ಸಮಿತಿ

# ಪರಿವಿಡಿ


ಸಂದೇಶಗಳು v

ಮುನ್ನುಡಿ x

ಎರಡನೇ ಮುದ್ರಣಕ್ಕೆ ಮುನ್ನುಡಿ xiv

೧. ಯುವ ಪರಿಷತ್ತು ೧

೨. ಕಾಂಗ್ರೆಸ್ ಮತ್ತು ಸರ್ವಪಕ್ಷೀಯ ಪರಿಷತ್ತು ೩

೩. ಸಾಮಾಜಿಕ ಪರಿಷತ್ತು ೫

೪. ಪಾನಗಲ್‌ನ ರಾಜನ ಮರಣ ೭

೫. ಅಸ್ಪೃಶ್ಯರೋ ಅಥವಾ ಪೂರ್ವಾಸ್ಪೃಶ್ಯರೋ ೮

೬. ಸ್ಪೃಶ್ಯರ ಖಾಸಗೀ ಮಾಲೀಕತ್ವ ೯

೭. ನೆಹರೂ ಕಮಿಟಿಯ ಯೋಜನೆ ಮತ್ತು ಹಿಂದೂಸ್ತಾನದ ಭವಿಷ್ಯ ೧೦

೮. ಸಮತೆಗಾಗಿಯೇ ಈ ವಿಷಮತೆ ಅಸ್ಪೃಶ್ಯ ಸಮಾಜಕ್ಕೆ ೨೭

೯. ಅಸ್ಪೃಶ್ಯತೆ ಬ್ರಾಹ್ಮಣ ಧರ್ಮಪದ್ಧತಿ ಮತ್ತು ಭೇದಪ್ರಿಯ ಮನೋವೃತ್ತಿಯನ್ನು ನಾಶಗೊಳಿಸಬೇಕಾಗಿದೆ ೩೧

೧೦. ದೇಹ ಹತ್ಯೆಗಿಂತಲೂ ಮನದ ಹತ್ಯೆ ಹೆಚ್ಚು ಭಯಂಕರ ೨೪

೧೧. ಅಸ್ಪೃಶ್ಯರಿಗೆ ಹಿತಕಾರಕವಾಗಿರುವ ಯೋಜನೆಯನ್ನು ಹೊಸಕಿ ಹಾಕುವ ತಂತ್ರ ಸ್ಪೃಶ್ಯ ಸತ್ತಾಧಾರಿಗಳಿದ್ದು ೨೬

೧೨. ಧನಿಕರಿಂದ ಪಡೆದ ಹಣವನ್ನು ಆಪತ್ತಿನಲ್ಲಿರುವವರಿಗೆ ವಿನಿಯೋಗಿಸುವುದು ೨೭

| | | |
|---|---|---|
| ೧೩. | ದೇಶದ್ರೋಹಾತ್ಮಕ ಸನಾತನ ಧರ್ಮದ ವಿರುದ್ಧ ಕ್ರಾಂತಿವಾದ | ೨೮ |
| ೧೪. | ಮುಂಬಯಿ ಪುರಸಭೆಯ ಜನಪ್ರತಿನಿಧಿ | ೨೯ |
| ೧೫. | ಮುಂಬೈ ದಂಗೆ | ೪೨ |
| ೧೬. | ಹಿಂದೂ ದೇವಾಲಯಗಳ ಸಂರಕ್ಷಣೆ ಮಾಡುವ ಅಸ್ಪಶ್ಯರು | ೪೩ |
| ೧೭. | ಸ್ವಾಭಿಮಾನ ಸಂಘದ ಚಳವಳಿ | ೪೪ |
| ೧೮. | ಮದರಾಸಿನ ಅಸ್ಪಶ್ಯತಾ ನಿವಾರಕ ಸಂಘ | ೪೫ |
| ೧೯. | ಸಕಟರ ಸಂಘ | ೪೬ |
| ೨೦. | ದರೋಡೆಕೋರ ಧರ್ಮಾಭಿಮಾನ | ೪೮ |
| ೨೧. | ಹಿಂದೂಧರ್ಮಕ್ಕೆ ನೋಟೀಸ್ | ೪೯ |
| ೨೨. | ಸೈಮನ್ ಕಮಿಶನ್‌ಗೆ ಸಾಷ್ಟಾಂಗ ನಮಸ್ಕಾರ ಹಾಕುವ ಬ್ರಾಹ್ಮಣರು | ೫೪ |
| ೨೩. | ಸರ್ ಜಾನ್ ಸೈಮನ್ ಮತ್ತು ಅಸ್ಪೃಶ್ಯ ವರ್ಗ | ೪೬ |
| ೨೪. | ಪುಣೆಯ ಮಿಶ್ರ ವಸಾಹತು | ೪೭ |
| ೨೫. | ಹಿಂದೂಧರ್ಮ ಮತ್ತು ಅಸ್ಪೃಶ್ಯತೆ | ೪೮ |
| ೨೬. | ಗಿರಣಿಯ ಮಾಲೀಕರು ಮತ್ತು ಕಾರ್ಮಿಕರು | ೪೯ |
| ೨೭. | ಹಿಂದೂ ಮಹಾಸಭೆ ಮತ್ತು ಅಸ್ಪೃಶ್ಯತೆ | ೬೨ |
| ೨೮. | ಧರ್ಮೈಕ್ಯ ಪರಿಷತ್ತು | ೬೬ |
| ೨೯. | ಅಸ್ಪೃಶ್ಯರಿಗಾಗಿ ವಿಶೇಷ ದೇವಾಲಯ | ೬೭ |
| ೩೦. | ಪುನಃ ಶಾಲೆಗಳಲ್ಲಿನ ಕುಡಿವ ನೀರಿನ ಚರಿಗೆ | ೬೮ |
| ೩೧. | ನಡುವೆ ನನ್ನ ಚಾಂದ್‌ಭಾಯಿ | ೬೯ |
| ೩೨. | ದೇವರು ಪೂಜಾರಿಗಳದ್ದೇ ಅಥವಾ ಭಕ್ತರದ್ದೇ? | ೭೦ |
| ೩೩. | ಗೇಣಿ ಪದ್ಧತಿಯೂ, ಕೃಷಿಕ ವರ್ಗದ ಗುಲಾಮಗಿರಿಯೂ | ೭೧ |
| ೩೪. | ಪುನಃ ಎಲ್ಲ ಗಿರಣಿಗಳ ಮುಷ್ಕರ | ೭೫ |
| ೩೫. | ಬಹಿಸ್ಕೃತ ವರ್ಗದ ಕಾರ್ಮಿಕರ ದುಃಸ್ಥಿತಿ | ೭೭ |
| ೩೬. | ಚಿಪ್ಲೂಣ್‌ನಲ್ಲಿನ ಸಹಭೋಜನ | ೭೮ |
| ೩೭. | ಶಂಕರಾಚಾರ್ಯರೋ, ಪ್ರತಿಸಂಕರಾಚಾರ್ಯರೋ | ೭೯ |
| ೩೮. | ಜೀರ್ಣಮತವಾದಿಗಳ ನೀರಸತೆ | ೮೦ |

೩೯. ಗಿರಣಿ ಕಾರ್ಮಿಕರ ಮುಷ್ಕರ ಮತ್ತು ಬ್ರಾಹ್ಮಣೇತರ ಪತ್ರಿಕೆಗಳು ೮೧
೪೦. ಮೂಗು ಮುಚ್ಚಿದಲ್ಲದೆ ಬಾಯಿ ತೆರೆಯದೆಂಬಂತೆ ೮೩
೪೧. ದೇವನು ಅಡ್ಡ ಬರುವನೇ? ೮೭
೪೨. ಲೇಬರ್‌ಪಕ್ಷದ ಮಂತ್ರಿಮಂಡಳ ೮೯
೪೩. ಬ್ರಾಹ್ಮಣ ಆದಿದ್ರಾವಿಡ ವಿವಾಹ ೯೨
೪೪. ಸಮಾಜ ಸಮತೆಯ ವಿರೋಧಕ ೯೪
೪೫. ಬೆದರಿಕೆಯ ಭಾಷೆ ೯೮
೪೬. ಪ್ರತ್ಯಕ್ಷ ಕಂಡ ಒಂದು ದೃಶ್ಯ ೧೦೦
೪೭. ಬ್ರಾಹ್ಮಣೇತರ ಸ್ಪೃಶ್ಯರ ಪರೋಪದೇಶ ಪಾಂಡಿತ್ಯ ೧೦೧
೪೮. ಶುದ್ಧಿ ಯಾಕಾಗಿ ಬೇಕು? ೧೦೨
೪೯. ಆನುವಂಶಿಕತೆ ಮಸೂದೆಯ ತಾತ್ಕಾಲಿಕ ಇತಿಶ್ರೀ ೧೦೩
೫೦. ಮೂಗಿಲ್ಲದವರ ಪರಸ್ಪರ ಪರಿಹಾಸ ೧೦೮
೫೧. ಕಮ್ಯೂನಿಸಮ್ ಬೇಕಿದ್ದರೆ ಕರನಿರಾಕರಣೆ ಯಾಕೆ ಬೇಡ? ೧೧೦
೫೨. 'ಕೊಲಾಬಾ ಸಮಾಚಾರ'ದ ತುಂಟತನ ೧೧೧
೫೩. ಭೋಜನ ಭಾಸ್ಕರನ ಉದ್ಧಟತನ ೧೧೩
೫೪. ವೆಂಗುರ್ಲಿಯ ಸತ್ಯನಾರಾಯಣ ೧೧೪
೫೫. ಗಣೇಶೋತ್ಸವದ ಸಾರ್ವಜನಿಕತ್ವದ ವ್ಯಾಖ್ಯೆ ೧೧೫
೫೬. ವರ್ತಮಾನ ಪತ್ರದಲ್ಲಿಯ ಜಾಹೀರಾತು ೧೧೬
೫೭. ಸರ್ಪದಲ್ಲಿ ಸಮಗಾರನಿದ್ದಾನೋ ಅಥವಾ ಮನುಷ್ಯರಲ್ಲಿ ಸರ್ಪವಿದೆಯೋ? ೧೧೭
೫೮. ಅಸ್ಪೃಶ್ಯರಿಗೆ ಮಂದಿರ ಪ್ರವೇಶ ೧೨೦
೫೯. ನಮ್ಮ ಕೈಫಿಯತ್ತು ೧೨೨
೬೦. ದತ್ತದರ್ಬಾರ್‌ನ ಉದಾಹರಣೆ ೧೨೭
೬೧. ಈಗ ಈ ಚಿತ್ರ ನೋಡಿ ೧೨೯
೬೨. ಹರಿದಾಸರ ಟ್ರೇಡ್ ಯೂನಿಯನ್ ೧೩೧
೬೩ ಮೊದಲು ಕಳಶ, ಬಳಿಕ ಅಡಿಪಾಯ ೧೩೨
೬೪. ಒಕ್ಕಣ್ಣಿನ ಹರಿಣಿಯ ಕಥೆ ೧೩೫

೭೫. ಒಕ್ಕಣ್ಣಿನ ಹಿಂದೂಸಮಾಜ ೧೩೭
೭೬. ದಾವರ್ ಮತ್ತು ವರಾಡ್ಕರ್ ೧೩೭
೭೭. ಉಚ್ಚವರ್ಗದ ಸ್ವಹಿತ ಸಹಾನುಭೂತಿ ೧೩೮
೭೮. ಹಿಂದೂ ಸಂಸ್ಕೃತಿಯ ಗುಮ್ಮ ೧೩೯
೭೯. ಪುಣೆಯಲ್ಲಿನ ಪರ್ವತೀ ಸತ್ಯಾಗ್ರಹ ಪ್ರಕರಣ ೧೪೧
೮೦. ಕ್ರಾಂತಿ ಅನ್ನುವುದು ಯಾವುದಕೆ? ೧೪೯
೮೧. ಅಸ್ಪೃಶ್ಯರ ಮುಂಡಾಟಿಕೆಯೇ ಅಥವಾ ಸ್ಪೃಶ್ಯರ ಗೂಂಡಾಗಿರಿಯೇ? ೧೫೧
೮೨. ಈಗಾದರೂ ಕಣ್ಣು ತೆರೆಯಿತೇ? ೧೫೨
೮೩. ಭವಿಷ್ಯವಾದಿ ಭಾಲಾಕಾರ್ ಬೋಪಟ್ಕರ್ ೧೫೩
೮೪. ಬ್ರಾಹ್ಮಣ ಕನ್ಯೆಯನ್ನು ಕೇಳುವ ಅಸ್ಪಶ್ಯರು ೧೫೪
೮೫. ನರಸೋಬನ ವಾಡಿಯಲ್ಲಿ ಅಸ್ಪಶ್ಯರಿಗೆ ದೇವದರ್ಶನ ೧೫೬
೮೬. ರೊಟ್ಟಿ ಬೇಡಿದರೆ-ಕಲ್ಲು ಕೊಟ್ಟರು ೧೫೭
೮೭. ಅಸ್ಪೃಶ್ಯ ಬಾಂಧವರಿಗೆ ಸಂದೇಶ ೧೬೪
೮೮. ಅಸ್ಪೃಶ್ಯರ ಮತಾಂತರ ಮತ್ತು ಅವರ ರಾಜಕೀಯ ಹಕ್ಕು ೧೬೬
೮೯. ಮಹಾರಾಜರು - ಒಬ್ಬ ಉತ್ಕೃಷ್ಟ ನ್ಯಾಯಾಧೀಶರು ೧೭೭
೯೦. ರಾಮ್ಸೇ ಮ್ಯಾಕ್‌ಡೊನಾಲ್ಡ್ ಮತ್ತು ಹಿಂದೂಸ್ಥಾನ ೧೭೯
೯೧. ಗಾಂಧೀ ಮಹಾತ್ಮರೇನು? ೧೮೭
೯೨. ಮೋಸಗಾರ ಯಾರು? ಕಾಂಗ್ರೆಸ್ ಪಕ್ಷವೇ ಅಥವಾ ಕಾರ್ಮಿಕ ನಾಯಕರೇ? ೧೯೧
೯೩. ಸರ್ ಸಯ್ಯಾಜಿರಾವ್ ಗಾಯಕ್ ವಾಡ್- ರಾಷ್ಟ್ರೀಯ ವೃತ್ತಿಯ ದೇಶಭಕ್ತ ೧೯೫
೯೪. ಸ್ವತಂತ್ರ ಕಾರ್ಮಿಕ ಪಕ್ಷದ ಯುದ್ಧ ವಿಷಯಕ ಧೋರಣೆ ೧೯೭
೯೫. ಅಸ್ಪೃಶ್ಯತೆಯ ವಂಶಾವಳಿ ೨೦೨
೯೬. ವೃತ್ತಪತ್ರಗಳ ಸ್ವಾತಂತ್ರ್ಯ ರಕ್ಷಣೆಯ ಮಾರ್ಗ ೨೦೫
೯೭. ರಾಷ್ಟ್ರ ನಿರ್ಮಾಣ ಇನ್ನೂ ಆಗಬೇಕಷ್ಟೆ? ೨೦೮
೯೮. ಹಿಂದೀ ರಾಜಕಾರಣದ ಗೊಂದಲ ೨೧೦
೯೯. ಕ್ರಾಂತಿಯ ಉಪಾಸನೆಯೋ ಅಥವಾ ಧ್ಯೆಯದ ರಕ್ಷಣೆಯೋ ೨೩೫
೧೦೦. ಕಾರ್ಮಿಕಶಾಹಿಗೆ ಜಯವಾಗಲಿ ೨೩೯

೯೧. ಪ್ರತಿಯೊಬ್ಬರ ಕಟಾಕ್ಷ ಮಹಾದರ ಮೇಲೆ .೨೪೧
೯೨ ರಾಜಕೀಯದಲ್ಲಿ ಹೊಸ ಸಂಪ್ರದಾಯ ೨೪೪
೯೩. ಒಳ್ಳೆಯದಾಯಿತು, ಮಹಾತ್ಮ ಹೋದ, ಮನುಷ್ಯ ಉಳಿದ ೨೪೫
೯೪. ಬುದ್ಧಜಯಂತಿ ಹಾಗೂ ಅದರ ರಾಜಕೀಯ ಮಹತ್ವ ೨೫೩
೯೫. ದಂಗೆ ನಡೆಯಿತು ! ದಂಗೆ ನಡೆಯಿತು ! ಯಾವುದೇ ಉಪಾಯವಿಲ್ಲ ! ೨೬೨
೯೬. ಒಬ್ಬ ಮಾದಿಗ ಗೃಹಸ್ಥನ ಪತ್ರಕ್ಕೆ ಉತ್ತರ ೨೬೭
೯೭. ಇದು ನಿಜವೇ ಅಥವಾ ಒಂದು ಸಂಚೇ ? ೨೭೭
೯೮. ಆಂಗ್ಲರ ಪಿತೂರಿ ೨೮೨
೯೯. ಪ್ರಜಾಪ್ರಭುತ್ವವಾದ ಅಥವಾ ನಾಜೀವಾದ ೨೮೭
೧೦೦. ಕಾರ್ಮಿಕ-ವರ್ಗವು ಮರುಳುಗೊಳಿಸುವ ರಾಷ್ಟ್ರವಾದದ ಸುಳ್ಳು ಹಾಗೂ ಪೊಳ್ಳು ಘೋಷಣೆಗಳಿಗೆ ಮೋಸಹೋಗಕೂಡದು ೨೯೨
೧೦೧. ನಮಗೆ ಸ್ವಾತಂತ್ರ್ಯವೂ ಬೇಕು ! ಅದರ ಜೊತೆಗೆ ಗುಲಾಮಗಿರಿಯನ್ನೂ ಒದ್ದೋಡಿಸುವೆವು ! ೨೯೩
೧೦೨. ಯುವಕರು ಎರಡು ಸಂಗತಿಗಳನ್ನು ಸಾಬೀತುಪಡಿಸಬೇಕು ! ೨೯೪
೧೦೩. ಯಾವ ಜನರಲ್ಲಿ ನಮ್ಮ ಜನ್ಮವಾಗಿದೆಯೋ ಅಂಥವರನ್ನು ಉದ್ಧರಿಸುವುದು ನಮ್ಮ ಕರ್ತವ್ಯ ೨೯೫
೧೦೪. ಪರಮಪೂಜ್ಯರಾದ ಡಾ. ಬಾಬಾಸಾಹೇಬ ಅಂಬೇಡಕರರಿಂದ 'ಅರುಣ'ಕ್ಕಾಗಿ ಸಂದೇಶ ೨೯೭
೧೦೫. ಬುವಾ ಅವರ ನಿಧನದ ವಾರ್ತೆಯಿಂದ ತುಂಬ ಆಘಾತವಾಯಿತು ೨೯೮
೧೦೬. ಬುದ್ಧ ಹಾಗೂ ಅವನ ಧಮ್ಮದ ಭವಿಷ್ಯತ್ತು ೨೯೯
೧೦೭. ಬ್ರಾಹ್ಮಣೇತರರ ವರ್ಗವು ಮಹಾತ್ಮಾ ಫುಲೆ ಅವರ ಸ್ಮೃತಿಯನ್ನು ಅಳಿಸಿಬಿಟ್ಟಿತು ೩೧೪
೧೦೮ ಹಿಂದು ಸ್ತ್ರೀಯರ ಉನ್ನತಿ ಮತ್ತು ಅವನತಿ : ಯಾರು ಹೊಣೆಗಾರರು ? ೩೧೫
೧೦೯. ಹಿಂದು ಸಮಾಜದ ವರ್ಗವರ್ಗಗಳ ಉಚ್ಚನೀಚತೆ ಮತ್ತು ಲಿಂಗಭೇದಗಳನ್ನು ಉಳಿಸಿಕೊಂಡು ಸುಧಾರಣೆಯ ಯಾವುದೇ ಕಾನೂನನ್ನು ತಯಾರಿಸುವುದೆಂದರೆ ಹೊಲಸನ್ನು ತೆಗೆಯದೆ ಅದರ ಮೇಲೆಯೇ ಇಸ್ಪೀಟುಗಳ ಬಂಗ್ಲೆಯನ್ನು ಕಟ್ಟಿದಂತೆ ! ೩೨೪

೧೧೦. ಡಾ. ಬಾಬಾಸಾಹೇಬ ಅಂಬೇಡಕರರ ವ್ರತ ೩೪೭
೧೧೧. ಹಳೆಯ ವಾಯದ ಜೀರ್ಣೋದ್ಧಾರ ೩೪೮
೧೧೨. ಸ್ವಾಭಿಮಾನದ ಜ್ಯೋತಿಯನ್ನು ಉರಿಸುತ್ತಿರಿ ! ೩೫೩
೧೧೩. ಭಾಷಾವಾರು ಪ್ರಾಂತ ರಚನೆ ಅಖಂಡತೆ ಎಂದರೆ ತಾನು ಸ್ವತಂತ್ರನು,
ಬೇರೆಯವರಿಗಿಂತ ಭಿನ್ನನು ಎಂಬುದಾಗಿ ಅರ್ಥ ಮಾಡಿಕೊಂಡರೆ ತುಸು
ಈ ಅವಧಿಯಲ್ಲೇ ಹಿಂದುಸ್ಥಾನವು ಒಡೆದು ಹೋಳುಗಳಾಗಲಿದೆ ೩೫೭
೧೧೪. ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ೩೬೨
೧೧೫. 'ಬುದ್ಧ ಅಂಡ್ ಹಿಸ್ ಧಮ್ಮ' ಮೂರರ ಪೈಕಿ ಒಂದು ಗ್ರಂಥ ೩೮೪
೧೧೬. ಟ್ರೇನಿಂಗ್ ಸ್ಕೂಲ್ ಫಾರ್ ಎಂಟ್ರನ್ಸ್ ಟು ಪಾಲಿಟಿಕ್ಸ್ ೩೮೫
೧೧೭. ಪರಮಪೂಜ್ಯ ಡಾ. ಬಾಬಾಸಾಹೇಬ ಅಂಬೇಡಕರರ ಕ್ರಾಂತಿಯ
ದಿಶಾದರ್ಶಕ ಸೂತ್ರಗಳು ೨೮೭

ಪರಿಶಿಷ್ಟಗಳು

ಪರಿಶಿಷ್ಟ-೧ ಬ್ಯಾ, ಜಯಕರ ಅವರ ಭಾಷಣ ೩೯೧
ಪರಿಶಿಷ್ಟ-೨ ಕೊಂಕಣ ಪ್ರಾಂತದ ಪೂರ್ವಾಸ್ಪೃಶ್ಯ ಶಿಕ್ಷಣ ಪರಿಷತ್ತು, ಮಾಲವಣ ೩೯೪
ಪರಿಶಿಷ್ಟ-೩ ಅಖಿಲ ಹಿಂದುಸ್ಥಾನದೊಳಗಿನ ಅಸ್ಪೃಶ್ಯರು ಮತ್ತು ಅವರ ನಾಯಕರಾದ
ಡಾ.ಬಾ ಸಾಹೇಬ ಅಂಬೇಡಕರ ಇವರಿಗೆ, ಕ್ರಿಸ್ತ ಜಯಂತಿಯ ಸಂದೇಶ ೩೯೫
ಪರಿಶಿಷ್ಟ-೪ ಪುಣೆ ಜಿಲ್ಲಾ ಬೋರ್ಡ್ ಹಾಗೂ ಅಸ್ಪೃಶ್ಯ ಸಮುದಾಯ ೪೦೦
ಪರಿಶಿಷ್ಟ-೫ ಹಿಂದೂ ಸಮುದಾಯಕ್ಕೆ ಜಾಹೀರು ವಿನಂತಿ ೪೦೨
ಪರಿಶಿಷ್ಟ-೬ ಚವದಾರ ಕೆರೆಯ ಮೊಕದ್ದಮೆ ೪೦೪
ಪರಿಶಿಷ್ಟ-೭ ಜಳಗಾಂವದ (ವರ್ಹಾಡ ) ಹೊಲೆಯರು ಮುಸಲ್ಮಾನರಾದರು ೪೦೫
ಪರಿಶಿಷ್ಟ-೮ ಹಿಂದೂ ದೇವಾಲಯಗಳು ಹಾಗೂ ಅಸ್ಪೃಶ್ಯತೆ ೪೦೭
ಪರಿಶಿಷ್ಟ- ಮುಷ್ಕರದ ವಿಚಾರಣೆಯ ತೀರ್ಪು ೪೧೦

ಪರಿಶಿಷ್ಟ-೧೦ ಪನವೇಲದ ಗಣೇಶೋತ್ಸವ ೪೧೩

ಪರಿಶಿಷ್ಟ-೧೧ ಪರ್ವತಿ ದೇವಾಲಯದ ಪಂಚರಿಗೆ ವಿನಂತಿ ೪೧೬
ಪರಿಶಿಷ್ಟ-೧೨ ಪರ್ವತಿಯ ಮೇಲೆ ಅಸ್ಪೃಶ್ಯರ ಸತ್ಯಾಗ್ರಹ ೪೨೮
ಪರಿಶಿಷ್ಟ-೧೩ ವಜ್ರಸೂಚಿ ೪೨೮
ಪರಿಶಿಷ್ಟ-೧೪ ಮಹಾರಾಜ ಸಯಾಜೀರಾವ ಗಾಯಕವಾಡ ೪೩೫
ಪರಿಶಿಷ್ಟ-೧೫ ಬೆನಿತೋ ಮುಸೋಲಿನಿ ೪೪೩
ಪರಿಶಿಷ್ಟ-೧೬ ಫ್ಯಾಸಿಸಮ್ ೪೪೬
ಪರಿಶಿಷ್ಟ-೧೭ ಕಮ್ಯುನಿಸ್ಟ್ ಪಕ್ಷ ೪೫೪
ಪರಿಸಿಷ್ಟ-೧೮ ಫ್ರೆಂಚ್ ರಾಜ್ಯಕ್ರಾಂತಿ ೪೭೯
ಪರಿಶಿಷ್ಟ-೧೯ ನಾಝೀವಾದ ೪೭೧
ಪರಿಶಿಷ್ಟ-೨೦ ಹರಿಜನ ಸೇವಕ ಸಂಘ ೪೭೫
ಪರಿಶಿಷ್ಟ-೨೦ ಹರಿಜನ ಸೇವಕ ಸಂಘ ೪೭೭
ಪರಿಶಿಷ್ಟ-೨೧ ಬುವಾ ಮಡಿದರು ೪೭೯
ಪರಿಶಿಷ್ಟ-೨೨ ಮಹಾಬೋಧಿ ಸೋಸೈಟಿ ೪೮೪
ಪರಿಶಿಷ್ಟ-೨೨ ಮಹಾಬೋಧಿ ಸೋಸೈಟಿ ೪೮೬
ಪರಿಶಿಷ್ಟ-೨೩ ನಾಲಂದಾ ವಿಶ್ವವಿದ್ಯಾಲಯ ೪೮೮
ಪರಿಶಿಷ್ಟ-೨೪ Teslier falls ೪೯೫
ಪರಿಶಿಷ್ಟ-೨೫ ತಕ್ಷಶಿಲಾ ವಿಶ್ವವಿದ್ಯಾಲಯ ೪೯೬
ಪರಿಶಿಷ್ಟ-೨೬ ಮಾರ್ಕ್ಸ್‌ವಾದ ೪೯೭
ಪರಿಶಿಷ್ಟ-೨೭ DR. AMBEDKAR -LOHIA CORRESPONDENCE ೫೦೩
ಪರಿಶಿಷ್ಟ-೨೭ ಡಾ. ಅಂಬೇಡಕರ್ - ಲೋಹಿಯಾ ಪತ್ರವ್ಯವಹಾರ ೫೧೩
ವ್ಯಕ್ತಿ, ಸಂಸ್ಥೆ, ಕಾರ್ಯಸೂಚಿ ೫೨೨
ಆಕರ ಗ್ರಂಥಗಳು ೫೫೬
ವಿಷಯಸೂಚಿ ೫೫೯

# ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

ಸಂಪುಟ ೨೨

**ಡಾ. ಬಾಬಾಸಾಹೇಬ್ ಅಂಬೇಡ್ಕರ್**

**ಅವರ ಪತ್ರಿಕಾ ಬರೆಹಗಳು**

(೧೯೨೧-೧೯೫೭)

## ೧. ಯುವ ಪರಿಷತ್ತು

ಡಿಸೆಂಬರ್ ತಿಂಗಳ ಕೊನೆಯ ವಾರವೆಂದರೆ, ಪರಿಷತ್ತಿನ ಕೋಲಾಹಲದ ಸಮಯ. ಈ ವಾರದಲ್ಲಿ ಪರಿಷತ್ತಿನಲ್ಲಿ ಪ್ರವಹಿಸುವಷ್ಟು ವ್ಯಾಖ್ಯಾನ, ನಿರ್ಣಯಗಳ ಸುರಿಮಳೆ ವರ್ಷದ ಇತರ ಸಮಯ, ಇನ್ನೆಲ್ಲೂ ಕೇಳ ಬರುವುದಿಲ್ಲ ಹಾಗೂ ಇಲ್ಲಿ ಅಂಗೀಕರಿಸಲ್ಪಡುವ ನಿರ್ಣಯಗಳು ವಿಶೇಷ ಪ್ರಗತಿಪರ ಇರುತ್ತವೆ, ಎಂದೇನೂ ಹೇಳುವಂತಿಲ್ಲ. ಸಾಧಾರಣವಾಗಿ, ಹಿಂದಿನ ವರ್ಷದ ನಿರ್ಣಯಗಳ ಪುನರಾವರ್ತನೆಯೇ ನಡೆಯುತ್ತದೆ. ಹಾಗೂ

ಪರಿಷತ್ತಿನ ಅಧಿವೇಶನ ಮುಗಿದ ಬಳಿಕ, ಈ ನಿರ್ಣಯಗಳ ನೆನಪು ಯಾರಿಗೂ ಇರುವುದಿಲ್ಲ. ಈ ವಿಷಯ, ಅಖಿಲ ಭಾರತೀಯ ಯುವ ಪರಿಷತ್ತಿನ ಅಧ್ಯಕ್ಷ, ಶ್ರೀ. ಕೆ. ಎಫ್. ನರಿಮನ್ ಅವರ ಗಮನಕ್ಕೆ ಬಂದಿತೆಂದು ಕಾಣುತ್ತದೆ. ಹಾಗೆಂದೇ ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ, "ಯುವ ಪರಿಷತ್ತು ಕೇವಲ ವಾದ ವಿವಾದಕ್ಕಾಗಿಯೇ ಇರುವುದೆಂದಾದರೆ, ಅದು ದೇಶದಲ್ಲಿರುವ ಇತರ ಹಲವು ಅಂತಹ ಸಂಸ್ಥೆಗಳ ಸಾಲಿಗೆ ಇನ್ನೊಂದಾಗುತ್ತದಷ್ಟೇ ಹೊರತು ಬೇರೇನೂ ಅಲ್ಲ", ಎಂದು ಹೇಳಿರುವರು.

ಶ್ರೀ ನರಿಮನ್ ಅವರು ಹೀಗೆ ಸೂಚಿಸಬಹುದೆಂದು ಯಾರು ತಾನೇ ಹೇಳಬಹುದಿತ್ತು? ವಿಶೇಷವೆಂದರೆ, ಯುವ ಪರಿಷತ್ತು ಎಂದೂ ಕಣ್ಣು ತೆರೆದು ನಡೆದದ್ದೇ ಇಲ್ಲ. ಯುವ ಪರಿಷತ್ತು ಸಹ, ಇತರ ಪರಿಷತ್‌ಗಳಂತೆ ವಾದ ವಿವಾದದ ಸ್ತರದಿಂದ ಮುಂದೆ ಹೋಗಲೇ ಇಲ್ಲ. "ವಾದೇ ವಾದೇ ಜಾಯತೇ ತತ್ವಾಬೋಧಃ", ಈ ತತ್ವದಂತೆ ಆಚಾರ ಸಂಬಂಧಿ ತತ್ವ ನಿಶ್ಚಯಕ್ಕೆ ವಾದ ವಿವಾದಗಳು ಅಗತ್ಯವೆಂಬುದು ಸತ್ಯ. ಆದರೆ ಅದಕ್ಕೊಂದು ಎಲ್ಲೇ ಇದೆ. ಆ ಎಲ್ಲೆಯನ್ನು ದಾಟಿ, ಮುಂದಕ್ಕೆ ಹೋದರೆ ನಿಷ್ಕ್ರಿಯತೆ ಉಂಟಾದಂತೆ ಎಂದೇ ತಿಳಿಯಬೇಕು. 'ನಿಷ್ಕ್ರಿಯತೆಯನ್ನು ಬಿಟ್ಟುಕೊಟ್ಟು ಕಾರ್ಯಮಗ್ನವಾಗುವಂತೆ, ಶ್ರೀ ಸುಭಾಷ್ ಚಂದ್ರ ಬೋಸ್ ಅವರು, ಇದೇ ಪರಿಷತ್ತಿನಲ್ಲಿ ಯುವಕರಿಗೆ ಸಂದೇಶ ನೀಡಿದ್ದಾರೆ, ನಿಜ. ಆದರೆ, ಯುವ ಪರಿಷತ್ತು ತನ್ನೆದುರು ಇರಿಸಿಕೊಂಡಿರುವ ಕಾರ್ಯಕ್ರಮದಿಂದ, ಕ್ರಿಯಾಶೀಲತೆಗಿಂತ ನಿಷ್ಕ್ರಿಯತೆಯ ಸಂಭವವೇ ಜಾಸ್ತಿ. "ಸಂಪೂರ್ಣ ಸ್ವಾತಂತ್ರ್ಯ ಎಂಬ ಯುವ ಪರಿಷತ್ತಿನ ಧ್ಯೇಯವು ಅತ್ಯಂತ ಶ್ರೇಷ್ಠವೆಂಬುದರಲ್ಲಿ ಸಂಶಯವಿಲ್ಲ. ಆದರೆ ಧ್ಯೇಯವು ಶ್ರೇಷ್ಠವಾಗಿದ್ದರೆ, ಅದು ಕ್ರಿಯಾಶಕ್ತಿಯನ್ನು ಮುನ್ನಡೆಸುತ್ತದೆ ಎಂಬ ನಿಯಮ ಸದಾ ಸತ್ಯವೆನ್ನುವಂತಿಲ್ಲ. ಬದಲಿಗೆ, ಧ್ಯೇಯವು ಶ್ರೇಷ್ಠವಾಗಿದ್ದಷ್ಟೂ ಅಪಯಶಸ್ಸಿನ ಸಂಭವ ಜಾಸ್ತಿ. ಹಾಗಾಗಿಯೇ ನಿಷ್ಕ್ರಿಯತೆ ಉಂಟಾಗುತ್ತದೆ. ಎಲ್ಲ ಜನರೂ ಸುಭಾಷ್‌ಚಂದ್ರರೋ, ಇಲ್ಲಾ ಜವಾಹರ್‌ಲಾಲರೋ ಆಗಿರುವುದಿಲ್ಲ. ಯಾವುದೇ ಚಳುವಳಿಯಿರಲಿ, ಅಲ್ಲಿ, ಕೆಚ್ಚೆದೆಯವರಿಗಿಂತ, ಸಾಮಾನ್ಯ ಜನರೇ ಹೆಚ್ಚಿನ ಸಂಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಇಂತಹ ಸಾಮಾನ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡು ಯೋಜನೆ ಹಮ್ಮಿಕೊಂಡಲ್ಲಿ, ಅದು ಯಶಸ್ವಿಯಾಗುತ್ತದೆ. ಪರಿಸ್ಥಿತಿ ಹಾಗೂ ಮನುಷ್ಯ ಸ್ವಭಾವದ ನಂಟನ್ನು ಗಣನೆಗೆ ತೆಗೆದುಕೊಳ್ಳದೆ, ಮಹಾತ್ಮಾ ಗಾಂಧಿ ಅವರು ಕರೆಯಿತ್ತ ಅಸಹಕಾರ ಆಂದೋಲನದ ಗತಿ ಏನಾಯ್ತೆಂದು ನಾವೆಲ್ಲ ಕಂಡಿದ್ದೇವೆ. ಅಪಯಶವು ಅಪರಾಧವೇನಲ್ಲ, ನಿಜ. ಹಾಗೆಂದು ನಿತ್ಯವೂ ಅಪಯಶವನ್ನನುಭವಿಸಿ

ಎಂದು ಯಾರೂ ಹೇಳುವುದಿಲ್ಲ. ಇಂತಹ ಅಪಯಶವು ನಿಷ್ಕ್ರಿಯತೆಯಲ್ಲಿ ಪರ್ಯವಸಾನವಾಗುವುದು ಎಂಬುದನ್ನರಿತು, ಯಾವುದೇ ಚಳವಳಿಯ ಪ್ರವರ್ತಕರು , ತಮ್ಮ ಸರ್ವಸಾಮಾನ್ಯ ಅನುಯಾಯಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಅಂತಹುದೇ ಯೋಜನೆಗಳನ್ನು ರೂಪಿಸಬೇಕು.

ಆದರೆ, "ಸಂಪೂರ್ಣ ಸ್ವಾತಂತ್ರ್ಯ" ದ ಯೋಜನೆ ಹೀಗಿಲ್ಲ. ಸುಭಾಸ್‌ಚಂದ್ರ ಬೋಸ್ ಹಾಗೂ ಜವಾಹರ್‌ಲಾಲ್‌ರ ಅನುಯಾಯಿಗಳು ಇಂದು ಈ ಯೋಜನೆಯನ್ನು ಚಪ್ಪಾಳೆ ತಟ್ಟಿ ಬೆಂಬಲಿಸುತ್ತಿದ್ದರೂ, ಈ ನಿಟ್ಟಿನಲ್ಲಿ ಸಹಿಸಬೇಕಾದ ಅಪಯಶದ ಪ್ರಹಾರವನ್ನು ಭರಿಸುವಲ್ಲಿ ಎಷ್ಟು ಜನರ ತೊಡಗುವಿಕೆ ಇದೆಯೆಂಬುದು ಪ್ರಶ್ನೆಯಾಗಿಯೇ ಉಳಿದಿದೆ. ಆ ದೌರ್ಬಲ್ಯದಿಂದ ಉಂಟಾಗುವ ನಿಷ್ಕ್ರಿಯತೆಯು ನಿಜಕ್ಕೂ ಘಾತಕವೇ ಸರಿ. "ಪ್ರಾಂತೀಯ ಸ್ವಾಯತ್ತತೆ", ಬೇಡುವವರು, ದೇಶಕ್ಕೆ ನಷ್ಟವುಂಟಾಗಬಾರದೆಂದೇ ನಿಷ್ಕ್ರಿಯರಾಗಿರುತ್ತಾರೆ. ಪ್ರಾಂತೀಯ ಸ್ವಾತಂತ್ರ್ಯ ಇಲ್ಲವೇ ಸಂಪೂರ್ಣ ಸ್ವಾತಂತ್ರ್ಯ ಈ ಕುರಿತು, ಜವಾಹರ್‌ಲಾಲ್ ಹಾಗೂ ಇತರ ಯುವಕರು ಉಂಟು ಮಾಡಿದ ವೈರತ್ವದ ಪರ್ಯವಸಾನ, ಹೀಗೆಯೇ ಇರುತ್ತದೆ. ಶ್ರೀ ನರಿಮನ್‌ರಿಗೆ ಬೇಡವೆನಿಸಿದ ವಾದ ವಿವಾದವೂ ಇದರಿಂದಾಗಿ ಹೆಚ್ಚಿ ಕೊಂಡಿದೆ. ಅದು ಉಪಯುಕ್ತವಿದ್ದರೆ, ವಿಷಯ ಬೇರೆಯೇ ಇರುತ್ತಿತ್ತು. ಆದರೆ, ಪರಿಸ್ಥಿತಿಯನ್ನು ಲಕ್ಷಕ್ಕೆ ತಂದುಕೊಂಡರೆ ಅದು ಅವಾಸ್ತವವೇ ಸರಿ. ಜನರನ್ನು ಇಕ್ಕಟ್ಟಿಗೆ ಸಿಲುಕಿಸಿ, ಸಂಶಯಕೂಪಕ್ಕೆ ತಳ್ಳಿ, ಮತ್ತೆ ನಿಷ್ಕ್ರಿಯತೆಯನ್ನು ಉಂಟು ಮಾಡುವುದಷ್ಟೇ ಆಗಿರುತ್ತದೆ.

* * * *

## ೧. ಕಾಂಗ್ರೆಸ್ ಮತ್ತು ಸರ್ವಪಕ್ಷೀಯ ಪರಿಷತ್ತು

ಸ್ವರಾಜ್ಯವೋ, ಇಲ್ಲಾ, ಸಂಪೂರ್ಣ ಸ್ವಾತಂತ್ರ್ಯವೋ ಎಂಬ ಬಗ್ಗೆ, ಕಾಂಗ್ರೆಸ್‌ನಲ್ಲೇ ಭಿನ್ನಾಭಿಪ್ರಾಯವಿತ್ತು. ಸೈಮನ್ ಕಮಿಶನ್‌ನ ಘಟನೆಯು, ಹಲವು ರಾಜಕೀಯ ನಾಯಕರಿಗೆ ಅಗ್ರಾಹ್ಯವೆನಿಸಿ, ಹಿಂದೂಸ್ತಾನದ ರಾಜಕೀಯ ಭವಿತವ್ಯವನ್ನು ನಿರ್ಧರಿಸಲು 'ಸರ್ವಪಕ್ಷೀಯ ಪರಿಷತ್ತು' ಕರೆಯಲು ನಿರ್ಧರಿಸಿದ್ದು ಎಲ್ಲರಿಗೂ ತಿಳಿದೇ ಇದೆ. ಸ್ವರಾಜ್ಯದ ಕರಡು ತಯಾರಿಗಾಗಿ ಪರಿಷತ್ತು, ಪಂಡಿತ್ ಮೋತಿಲಾಲ್ ನೆಹರೂ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನೇಮಿಸಿತು. ಈ ಸಮಿತಿ ತಯಾರಿಸಿದ ಸ್ವರಾಜ್ಯ ನಿಬಂಧನೆ, ನೆಹರೂ ಕಮಿಟಿ ರಿಪೋರ್ಟ್ ಎಂದೇ ಪ್ರಸಿದ್ಧವಾಗಿದೆ.

ಬ್ರಿಟಿಷ್ ಪಾರ್ಲಿಮೆಂಟ್, ಭಾರತಕ್ಕೆ ಪ್ರಾಂತೀಯ ಸ್ವಾಯತ್ತತೆಯನ್ನು ತಕ್ಷಣ ನೀಡಬೇಕೆಂಬ ಮನವಿಯನ್ನು ಈ ವರದಿಯಲ್ಲಿ ಮಾಡಲಾಗಿದೆ. ಈ ಬೇಡಿಕೆಗೆ ಬಹುತೇಕ ರಾಜಕೀಯ ನಾಯಕರ ಬೆಂಬಲವೂ ಇದೆ. ಆದರೆ ಕಳೆದ ವರ್ಷ, ಮದರಾಸ್ ಕಾಂಗ್ರೆಸ್‌ನಲ್ಲಿ ಅಂಗೀಕರಿಸಿದ ಸಂಪೂರ್ಣ ಸ್ವಾತಂತ್ರ್ಯದ ಠರಾವನ್ನೇ ನೆಹರೂ ರಿಪೋರ್ಟ್‌ನಲ್ಲಿ ನಮೂದಿಸಬೇಕೆಂಬ ತಕರಾರು ಬಹಳ ದಿನಗಳಿಂದ ನಡೆದೇ ಇತ್ತು. ಪಂಡಿತ್ ಜವಾಹರ್‌ಲಾಲ್ ನೆಹರೂ, ಮುಂತಾದವರು ಎಲ್ಲಾದರೂ ತಪ್ಪಿದರೂ, ಇಂತಹ ಪ್ರಾಮಾಣಿಕರೇ ಈ ಪಕ್ಷದ ಧುರೀಣರಿದ್ದಾರೆ. ಆದರೆ, ಲೋಕದ ದೃಷ್ಟಿಯಲ್ಲಿ, ರಾಜಕೀಯವಾಗಿ ವಿಶ್ವಾಸಕ್ಕರ್ಹರಲ್ಲದವರೂ, ಈ ಪಕ್ಷದಲ್ಲಿ ಸೇರಿಕೊಂಡಿದ್ದಾರೆ. ಉದಾಹರಣೆಗೆ, ಶ್ರೀನಿವಾಸ ಅಯ್ಯಂಗಾರರು. ಇವರಿಗೆ ನಿಶ್ಚಿತ ರಾಜಕೀಯ ದೃಷ್ಟಿಕೋನ ಎಂಬುದಿರಲಿಲ್ಲ. ಏನ ಕೇನ ಪ್ರಕಾರೇಣ ಎಂಬಂತೆ ಜನರೆದುರು ಕುಣಿಯುವ ಅವಕಾಶ ಸಿಕ್ಕಿತೆಂದರೆ ಅವರಿಗೆ ರಾಜಕಾರಣ ದಕ್ಕಿದಂತೆ. ಹಾಗೆಂದಾದರೂ ಕುಣಿಯುವ ಅವಕಾಶ ಸಿಗದೇ ಹೋದರೆ, ಅಂಗಣ ಓರೆಯೆಂದು ಪ್ರಲಾಪ ನಿಶ್ಚಿತ. ಅವರ ಈ ವಕ್ರ ನೀತಿ, ಈ ವಿಷಯದಲ್ಲೂ ಕಂಡು ಬರುತ್ತದೆ. ಸಂಪೂರ್ಣ ಸ್ವಾತಂತ್ರ್ಯದ ಚಳವಳಿಯಲ್ಲಿ, ಮನಃಪೂರ್ವಕ

ತೊಡಗಿಕೊಂಡಿರುವರೆಂದೇ ಅಲ್ಲಿ ಅಶಾಂತಿಗೆ ಸ್ಥಳವಿಲ್ಲ. ಈ ಚಳವಳಿ ಅವರಿಗೆ, ಪಂಡಿತ್ ಮೋತಿಲಾಲ್ ನೆಹರೂ ಅವರನ್ನು ಸೋಲಿಸುವ ಸಾಧನವಾಗಿ ಕಾಣಿಸುತ್ತದೆ. ಪಂಡಿತ್ ನೆಹರೂ ಅವರ ಸ್ಥಾನದಲ್ಲಿ ಶ್ರೀನಿವಾಸ್ ಅಯ್ಯಂಗಾರರ

ಹೆಸರು ಬಂದಲ್ಲಿ, ಸಂಪೂರ್ಣ ಸ್ವಾತಂತ್ರ್ಯ ತಮ್ಮ ಕೈಗೆ ಬಂದಂತೆ ಎಂದೇ ಅವರು ಸುಮ್ಮನಿದ್ದಾರೆಂಬುದು ನಿಸ್ಸಂಶಯ

.

ಸಂಪೂರ್ಣ ಸ್ವಾತಂತ್ರವಾದಿ ಪಕ್ಷದಲ್ಲಿ ಸೇರಿದ ಇತರ ಜನರೂ ಇದೇ ಮನೋವೃತ್ತಿಯವರು. ಕೆಲ ದಿನಗಳ ಹಿಂದೆ ಸೇರಿದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆಯಲ್ಲಿ ಈ ಪಕ್ಷಕ್ಕೆ ಅಧಿಕ ಮತಗಳು ಬಂದು, ಸಂಪೂರ್ಣ ಸ್ವಾತಂತ್ರ್ಯದ ಬಗೆಗಿನ ಅವರ ವಿಶ್ವಾಸ ಜಗಜ್ಜಾಹೀರಾಯ್ತು.

ಮೊನ್ನೆ ಕಲ್ಕತ್ತಾದಲ್ಲಿ ಸೇರಿದ ಸರ್ವಪಕ್ಷೀಯ ಪರಿಷತ್ತಿನಲ್ಲಿ ಇದೇ ಧ್ಯೆಯವನ್ನು ಒಪ್ಪಿಕೊಂಡು, ನೆಹರೂ ವರದಿಯಲ್ಲಿ ಸೇರಿಸಬೇಕೆಂಬ ಸೂಚನೆಯನ್ನೂ ನೀಡಲಾಗಿತ್ತು. ಆದರೆ, ಸರ್ವಪಕ್ಷೀಯ ಪರಿಷತ್ತಿನಲ್ಲಿ, ಪ್ರಾಂತೀಯ ಸ್ವಾಯತ್ತತೆಗೇ ಬಹುಮತ ದೊರೆತಿತ್ತು. ಆದರೆ ಕಾಂಗ್ರೆಸ್‌ನಲ್ಲಿ



ಈ ಜನರು ದೊಡ್ಡ ಕೋಲಾಹಲವನ್ನೇ ಎಬ್ಬಿಸಿದ್ದರಿಂದ ಅವರ ಮಾತಿನಂತೆ ಪಂಡಿತ್ ಮೋತಿಲಾಲ್ ಮುಂತಾದವರು ಪ್ರಾಂತೀಯ ಸ್ವಾಯತ್ತತೆಯ ಬಗ್ಗೆ ಯೋಚಿಸ ತೊಡಗಿದರೆಂದು ಕಾಣುತ್ತದೆ. ಒಂದುವೇಳೆ, ಈ ಜನರ ಬೆಂಬಲ ಇಲ್ಲದೇ ಹೋದರೆ, ಪಾರ್ಲಿಮೆಂಟ್‌ನಲ್ಲಿ ನೆಹರೂ ವರದಿಯ ಭಾರ ಸಾಕಾಗದೇ ಹೋದೀತೆಂಬ ಭಯದಿಂದ, ಪ್ರಾಂತೀಯ ಸ್ವಾಯತ್ತತೆ ಹಾಗೂ ಸಂಪೂರ್ಣ ಸ್ವಾತಂತ್ರ್ಯ ಈ ಎರಡೂ ಪಕ್ಷಗಳನ್ನು ಒಂದೆಡೆ ಸೇರಿಸುವ ಒಪ್ಪಂದವಾಯ್ತು. ಕಾಂಗ್ರೆಸ್ ಒಪ್ಪಿಕೊಂಡ .ಮಹಾತ್ಮಾ ಗಾಂಧಿ ಅವರ ಸಹಕಾರೀ ತತ್ವ ಇದೇ ಬಗೆಯದ್ದು . ೧೯೩೦ರ ಡಿಸೆಂಬರ್ ತಿಂಗಳೊಳಗೆ ಪಾರ್ಲಿಮೆಂಟ್ ಪ್ರಾಂತೀಯ ಸ್ವಾಯತ್ತತೆಯನ್ನು ಮಾನ್ಯ ಮಾಡಬೇಕೆಂದೂ, ಒಂದು ವೇಳೆ

ಹಾಗಾಗದಿದ್ದಲ್ಲಿ, ಅಸಹಕಾರ ಹಾಗೂ ಕರನಿರಾಕರಣೆಯ ಚಳವಳಿಯನ್ನು ಆರಂಭಿಸುವುದೆಂದೂ ಈ ಒಪ್ಪಂದದ ಆಶಯ. ಈ ಹುಸಿ ಬೆದರಿಕೆಯಲ್ಲಿ ಯಾವ ಅರ್ಥವೂ ಇಲ್ಲವೆಂದು ಮಹಾತ್ಮಾ ಗಾಂಧಿ ಅರಿತಿದ್ದರು. ಅನುಭವವು ಅವರಿಗೆ ಈ ಪಾಠವನ್ನು ಕಲಿಸಿತ್ತು. ಆದರೆ ಶ್ರೀನಿವಾಸ್ ಅಯ್ಯಂಗಾರ್ ಮತ್ತಿತರರು, ಸಂಪೂರ್ಣ ಸ್ವಾತಂತ್ರ್ಯದ ಕೂಗು ತಾತ್ಕಾಲಿಕವಾಗಿ ನಿಂತು ಹೋಗುವಂತೆ ಮಾಡಿದ ಯುಕ್ತಿ ಇದೆಂಬ ಸತ್ಯ ಎದ್ದು ಕಾಣುತ್ತಿದೆ.

* * * *

## ೩. ಸಾಮಾಜಿಕ ಪರಿಷತ್ತು

ಈ  ರಾಜಕಾರಣದಿಂದ ಸಮಾಜವಾದದ ಕಡೆಗೆ ತಿರುಗುವಾಗ, ಬರಡು ಭೂಮಿಯಿಂದ ಹಸಿರು ಹುಲ್ಲು ಹಾಸಿನೆಡೆಗೆ ಪ್ರವೇಶಿಸಿದಂತೆ ಭಾಸವಾಗುತ್ತದೆ. ಪ್ರಸಕ್ತ ರಾಜಕಾರಣವೆಂಬುದು ಶುದ್ಧ ಮಕ್ಕಳಾಟದಂತೆ ಆಗಿ ಬಿಟ್ಟಿದೆಯೆಂಬುದು, ಕಾಂಗ್ರೆಸ್, ಸರ್ವಪಕ್ಷೀಯ ಪರಿಷತ್ ಮುಂತಾದವುಗಳ ನಿಜರೂಪವನ್ನು ಕಂಡರೆ ಯಾರಿಗೂ

ಭಾಸವಾಗುವುದು. ಹಾಗೂ ಇದರ ಕಾರಣವೂ ನಿಚ್ಚಳವಾಗಿದೆ. ಇಂದಿನ ರಾಜಕಾರಣದಲ್ಲಿ ನಿಜವಾದ ನಾಯಕರು ಯಾರೂ ಕಾಣ ಬರುತ್ತಿಲ್ಲ. ಹೀಗಾಗಿ, ಎಲ್ಲರೂ ನಾಯಕರೇ ಎಂಬಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಎಲ್ಲರನ್ನೂ ಹದ್ದುಬಸ್ತಿನಲ್ಲಿಟ್ಟು ಕೊಂಡು, ಅವರಿಂದ ಬಯಸಿದ ಕಾರ್ಯ ಪೂರೈಸಿ ಕೊಳ್ಳುವ ಮಾಂತ್ರಿಕರಾರೂ ಈಗಿಲ್ಲ. ಹಾಗೆಂದೇ ಈ ದುಷ್ಟಶಕ್ತಿಗಳೆಲ್ಲ ಮುಕ್ತವಾಗಿ ಹಾರಾಡಿ ರಾಜಕೀಯವು ಗೊಂದಲದ ಗೂಡಾಗಿದೆ.

ಆದರೆ, ಸಾಮಾಜಿಕ ಚಳವಳಿಯ ಪರಿಸ್ಥಿತಿ ನಿರಾಶಾಜನಕವಿದ್ದರೂ ಅಷ್ಟೊಂದು ನಿರಾಶಾಜನಕವೇನಲ್ಲ. ಉಪಮೆಯೊಡನೆ ಹೇಳಬೇಕೆಂದರೆ, ರಾಜಕೀಯ ಚಳವಳಿ, ಅಜೀರ್ಣವಾಗಿ ಸಾಯುತ್ತಿದೆಯಾದರೂ, ಇತ್ತ ಸಾಮಾಜಿಕ ಚಳವಳಿ, ಹಸಿವಿನಿಂದ ಸಾಯುತ್ತಿದೆ. ವಾಸ್ತವವಾಗಿ, ಅದು ಸಾಯುತ್ತಿಲ್ಲ. ಅದನ್ನು ಕೊಲ್ಲುವ ಅನೇಕ ಪ್ರಯತ್ನಗಳಾಗಿವೆ, ಹಾಗೂ ಇಂದೂ ನಡೆಯುತ್ತಾ ಇವೆ. ತಿಲಕ್, ಚಿಪ್ಳೂಣ್‌ಕರ್‌ರಿಂದ ತೊಡಗಿ, ಮೊನ್ನೆ ಕಾಶಿಯಲ್ಲಿ ಸೇರಿದ ಬ್ರಾಹ್ಮಣರವರೆಗೆ ಈ ಪ್ರಯತ್ನದ ಪರಂಪರೆ ಸಾಗಿ ಬಂದಿದೆ. ತಿಲಕ್, ಚಿಪ್ಳೂಣ್‌ಕರರು, ಸಾಮಾಜಿಕ ಸುಧಾರಣಾ ಚಳವಳಿಯನ್ನು ಮುಗಿಸಿ ಬಿಡಲು ಎಂತೆಂತಹ ಪ್ರಯತ್ನವನ್ನು ಮಾಡಿದರೆಂಬುದು, ಮಹಾರಾಷ್ಟ್ರದ ಚರಿತ್ರೆಯಲ್ಲಿ ದಾಖಲಾಗಿದೆ. ಅದರ ಗಂಟೆಯನ್ನು ಮೊಳಗಿಸಲು, ಹಿಂದೂ ಸಂಘಟನೆಯ ಹೆಸರಲ್ಲಿ ಸಾಮಾಜಿಕ ಅಂತಃಶುದ್ಧಿಯ ಚಳವಳಿಯನ್ನು ಹೊಸಕಿ ಹಾಕಲು ಎಂತೆಂತಹ ಕಾರಸ್ಥಾನವನ್ನು ನಡೆಸಿದರೆಂಬುದು ಸರ್ವರಿಗೂ ತಿಳಿದಿದೆ. ಕಾಶಿಯ ಬ್ರಾಹ್ಮಣ ಸಮ್ಮೇಲನವು ಸಮಾಜ ಸುಧಾರಣೆಯನ್ನು ಮೊಳಕೆಯಲ್ಲೇ ಹೇಗೆ ಕೊಡಲಿಯೆತ್ತಿ ಹಾಕಿ ಮುಗಿಸಿ ಬಿಟ್ಟಿತೆಂಬುದೂ ಎಲ್ಲರಿಗೂ ತಿಳಿದೇ ಇದೆ. ಈ ಪ್ರಯತ್ನವು ಬೇರೆ ಬೇರೆ ಕಡೆಗಳಲ್ಲಿ, ಬೇರೆ ಬೇರೆ ಸಮಯ, ಬೇರೆ ಬೇರೆ ಜನರಿಂದ ನಡೆಯಿತು. ಆದರೆ, ಸುಧಾರಣೆಯ ಹಿಂಸೆಯೇ ಅವರ ಏಕೈಕ ಧ್ಯೆಯ. ಆದರೂ ಸುಧಾರಣೆಯ ಚಳವಳಿಯು ಈ ಎಲ್ಲ ಪ್ರಯತ್ನವನ್ನೂ ಮೀರಿ ಉಳಿದು ಕೊಂಡಿದೆ. ಅದರ ಸೇನೆಯಲ್ಲಿ ಅದರ ವಿರೋಧಿಗಳ ಅಪೇಕ್ಷೆಯ ಹೊರತಾಗಿಯೂ ಜನರು ಸೇರಿಕೊಳ್ಳುತ್ತಿದ್ದಾರೆ. ಸಮಾಜ ಸುಧಾರಣೆಯ ಹೊರತು, ರಾಜಕೀಯ ಚಳವಳಿಗೆ ಬೇರೆ ಭರವಸೆಯಿಲ್ಲ, ಎಂಬುದು ಸರ್ವರಿಗೂ ತಿಳಿದಿದೆ.

ಹಿಂದೀ ರಾಷ್ಟ್ರೀಯ ಸಾಮಾಜಿಕ ಪರಿಷತ್ತಿನ ಅಧ್ಯಕ್ಷ ಬಾರಿಸ್ಟರ್ ಜಯಕರ್ ಅವರು ಮಾಡಿದ ಭಾಷಣ ಈ ದೃಷ್ಟಿಯಿಂದ ಮನನೀಯವಾಗಿದೆ. ಈ ಭಾಷಣದಲ್ಲಿ, ಬಾರಿಸ್ಟರ್ ಜಯಕರ್ ಅವರು, ಸಮಾಜ ಸುಧಾರಣೆಯ ಇದುವರೆಗಿನ ಇತಿಹಾಸವನ್ನು ಬಿಡಿಸಿಟ್ಟರಲ್ಲದೆ, ಇಂದು ಈ ಚಳವಳಿ ಯಾವ ಅವಸ್ಥೆಗೆ ತಲುಪಿದೆ ಎಂಬುದನ್ನೂ ವಿಶದ ಪಡಿಸಿದರು. ಬಾರಿಸ್ಟರ್ ಜಯಕರ್ ಅವರು

ಕೇವಲ ಸುಧಾರಕರಲ್ಲದೆ, ಸತ್ಯಶೋಧಕರೂ ಆಗಿದ್ದಾರೆ ಎಂಬುದು ಇದರಿಂದ ಸಿದ್ಧವಾಯ್ತು. ಹಾಗಿಲ್ಲದಿದ್ದರೆ, ಅವರಿಗೆ ಇತರ ಸಮಾಜಸುಧಾರಕರಂತೆ ಅಸ್ಪಶ್ಯರ ಮತ್ತು ಬ್ರಾಹ್ಮಣೇತರರ ಈ ಚಳವಳಿಯ ರಹಸ್ಯ ತಿಳಿಯುತ್ತಿರಲಿಲ್ಲ. ಅವರಿಗದು ತಿಳಿದಿದೆಯಲ್ಲದೆ, ಸಮಾಜ ಸುಧಾರಣೆಯ ಇತಿಹಾಸದಲ್ಲಿ ಈ ಚಳವಳಿಯ ಮಹತ್ವ ಎಷ್ಟೆಂದೂ ತಿಳಿದಿದೆ. ಆಗರ್‌ಕರ್ ಕಾಲದ ಸುಧಾರಣೆಯ ವ್ಯಾಪ್ತಿ, ಹಾಗೂ ಈ ಚಳವಳಿಯ ವ್ಯಾಪ್ತಿಯ ನಡುವಿನ ವ್ಯತ್ಯಾಸವನ್ನೂ ಅವರು ಅರಿತಿದ್ದಾರೆ. ಮತ್ತು ಈ ಚಳವಳಿಯ ಬಾಹ್ಯ ಸ್ವರೂಪ ಯಾರಿಗೆ ಎಷ್ಟೇ ಅಪ್ರಿಯವಿದ್ದರೂ , ಅವರ ಅಂತರಂಗದೊಳಗೆ ಸಮಾಜ ಸಮತೆಯ ತೀವ್ರ ತಳಮಳ ತುಂಬಿಕೊಂಡಿದೆ ಎಂಬುದನ್ನೂ ಅವರು ಕಂಡುಕೊಂಡಿದ್ದಾರೆ. ಬಾರಿಸ್ಟರ್ ಜಯಕರ್ ಅವರು, ತಿಲಕ್ - ಚಿಷ್ಲೂಣ್‌ಕರ್ ಪರಂಪರೆಯಿಂದ ಹಾದು ಬಂದಿದ್ದು, ತಮ್ಮ ರಾಜಕೀಯ ಧೋರಣೆಯನ್ನು ಅಲ್ಲೇ ರೂಪಿಸಿ ಕೊಂಡಿದ್ದರಿಂದಲೇ, ಈ ಭಾಷಣದಲ್ಲಿ ಅವರ ಸತ್ಯಶೋಧಕ ಗುಣ ಸ್ಪಷ್ಟ ವ್ಯಕ್ತಗೊಂಡಿದೆ. ಏನೇ ಆದರೂ ಅವರು ಬ್ರಾಹ್ಮಣೇತರರು. ಸಾಮಾಜಿಕ ವಿಷಮತೆಯ ಬಿಸಿ ಅವರಿಗೆ ಎಂದಾದರೊಮ್ಮೆ ತಟ್ಟಿಯೇ ತಟ್ಟಿರುತ್ತದೆ. ಆದ್ದರಿಂದ ಅವರು ಇಂತಹ ಭಾಷಣ ಮಾಡಿರುವುದು ಅಚ್ಚರಿಯೇನಲ್ಲ. ಈ ಭಾಷಣದಲ್ಲಿ ಅಷ್ಟೊಂದು ಭಾವ ತೀವ್ರತೆಯಾಗಲೀ, ಆತ್ಮೀಯ ಉತ್ಕಟತೆಯಾಗಲೀ ಇಲ್ಲ. ಆದರೆ, ರಾಜಕಾರಣಿಗಳಿಗೆ ಸಮಾಜ ಸುಧಾರಣೆಯ ಅಗತ್ಯ ಇದ್ದಕ್ಕಿದ್ದಂತೆಯೇ ಉಂಟಾಗಿದೆಯೆಂಬ ಬಾರಿಸ್ಟರ್ ಜಯಕರ್ ಅವರ ಮಾತಿಗೆ ಈ ಭಾಷಣ ಸ್ಪಷ್ಟ ನಿದರ್ಶನ. ಸಮಾಜ ಸುಧಾರಣೆಗೆ ಸರಕಾರೀ ಕಾಯ್ದೆ ಅವಶ್ಯವೆಂದು ಅವರು ಸೂಚಿಸಿದ್ದು, ರಾಜಕಾರಣಿಗಳ ಬದಲಾದ ದೃಷ್ಟಿಕೋನಕ್ಕೆ ಸಾಕ್ಷಿಯೇ ಆಗಿದೆ.

* * * *

## ೪. ಪಾನಗಲ್‌ನ ರಾಜನ ಮರಣ

ಮದರಾಸಿನ ಬ್ರಾಹ್ಮಣೇತರ ಪಕ್ಷದ ನಾಯಕ, ರಾಮರಾಯ ನಿಂಗಾರ್ ಉರ್ಫ್ ಪಾನಗಲ್‌ನ ರಾಜೇ ಸಾಹೇಬರ ನಿಧನದಿಂದ ದೇಶವು ಒಬ್ಬ ಕರ್ತೃತ್ವಶಾಲಿ ವ್ಯಕ್ತಿಯನ್ನು ಕಳಕೊಂಡಂತಾಯ್ತು. ಮದರಾಸಿನ ಬ್ರಾಹ್ಮಣೇತರ ಪಕ್ಷವು ಅಲ್ಲಿಯ ಬ್ರಾಹ್ಮಣೇತರ ಜನರನ್ನು ಬ್ರಾಹ್ಮಣೀ ವರ್ಚಸ್ಸಿನಿಂದ ಪಾರು ಮಾಡುವಲ್ಲಿ ಗಳಿಸಿದ ಯಶದ ಬಹುಪಾಲು ರಾಜೇಸಾಹೇಬ್‌ರಿಗೇ ಸಲ್ಲಬೇಕು. ಡಾ. ನಾಯರ್ ಹಾಗೂ ಸರ್ ತ್ಯಾಗರಾಯ ಶೆಟ್ಟಿ ಇವರ ನಂತರ ಬ್ರಾಹ್ಮಣೇತರ ಪಕ್ಷಕ್ಕೆ ರಾಜೇ ಸಾಹೇಬರಂತಹ ನಿಷ್ಠಾವಂತ ನಾಯಕ ಸಿಕ್ಕಿರಲಿಲ್ಲ. ಶಾಹು ಛತ್ರಪತಿಯ ನಂತರ ಮುಂಬಯಿಯ ಬ್ರಾಹ್ಮಣೇತರ ಪಕ್ಷಕ್ಕೆ ಯಾವ ಗತಿಯಾಯ್ತೋ, ಅದೇ ಗತಿ ಮದರಾಸ್‌ನ ಬ್ರಾಹ್ಮಣೇತರ ಪಕ್ಷಕ್ಕೂ ಆಯ್ತು. ಎಲ್ಲರೂ ನಾಯಕರೇ, ಆದರೆ ನಿಜವಾದ ನಾಯಕರು ಯಾರೂ ಇಲ್ಲವೆಂಬಂತೆ, ಇಂತಹ ಸ್ಥಿತಿಯಲ್ಲಿ ಯಾವ ಚಳವಳಿಯೂ ಉಳಿಯುವುದು ಕಷ್ಟ. ಆದರೆ ರಾಜೇ ಸಾಹೇಬರಿಂದಾಗಿ ಮದರಾಸಿನ ಬ್ರಾಹ್ಮಣೇತರ ಪಕ್ಷದ ಮೇಲೆ ಈ ಆಪತ್ತೊದಗಲಿಲ್ಲವಷ್ಟೇ ಅಲ್ಲ, ಅದು ಮಹತ್ವದ ಕಾರ್ಯಗಳನ್ನೂ ಪೂರೈಸುವುದು ಶಕ್ಯವಾಯ್ತು. ಮುಂಬಯಿಗಿಂತಲೂ ಮದರಾಸಿನ ಬ್ರಾಹ್ಮಣೇತರ ಜನರ ಮೇಲೆ ಬ್ರಾಹ್ಮಣತನದ ವರ್ಚಸ್ಸಿನ ಪ್ರಭಾವ ಅಧಿಕ. ಬ್ರಾಹ್ಮಣೇತರ ಪಕ್ಷವನ್ನು ಸೋಲಿಸಲು ಸರಕಾರದ ಸಹಾಯವನ್ನು ಪಡೆಯಲೂ ಅಲ್ಲಿನ ಸ್ವರಾಜ್ಯವಾದಿ ಹಾಗೂ ಸಂಪೂರ್ಣ ಸ್ವಾತಂತ್ರ್ಯವಾದಿ ಬ್ರಾಹ್ಮಣರು ಸಿದ್ದರಿದ್ದಾರೆ. ಇಂತಹ ಸ್ಥಿತಿಯಲ್ಲಿ ಬ್ರಾಹ್ಮಣೇತರ ಚಳವಳಿ ನಡೆಸುವುದು ಕಷ್ಟವೆಂಬುದು ನಿಜವಾದರೂ, ರಾಜೇ ಸಾಹೇಬರಿಂದಾಗಿ ಅದು ಸುಲಭವಾಯ್ತು. ತಮ್ಮ ಕುದುರೆಯನ್ನು ಹಿಡಿದಿಟ್ಟು, ಇತರರಿಗೆ ಯೋಗ್ಯ ಮಾನ

ಮರ್ಯಾದೆಯನ್ನಿತ್ತು ಅವರ ಕೈಯಿಂದ ಕೆಲಸ ಮಾಡಿಸಿ ಕೊಳ್ಳುವ ನಾಯಕತ್ವದ ಅತ್ಯಾವಶ್ಯಕ ಗುಣ ಅವರದಾಗಿದೆ. ಹಾಗೆಂದೇ ಅವರಿಂದ ಈ ಕಾರ್ಯ ಸಾಧ್ಯವಾಗಿದೆ.

ರಾಜೇ ಸಾಹೇಬರ ಅವಧಿಯಲ್ಲಿ ಬ್ರಾಹ್ಮಣೇತರ ಪಕ್ಷದ ಇತಿಹಾಸ ಸಂಸ್ಕರಣೀಯವಾಗಿದೆ. ಈ ಅವಧಿಯಲ್ಲಿ ದೊಡ್ಡ ದೊಡ್ಡ ಅಧಿಕಾರದ ಅವಕಾಶ ಬ್ರಾಹ್ಮಣೇತರ ಪಕ್ಷದ್ದಾಯ್ತಲ್ಲದೆ, ಬ್ರಾಹ್ಮಣ ವರ್ಚಸ್ಸಿಗೆ ಸರಕಾರೀ ಬೆಂಬಲವೂ ಸಾಕಷ್ಟು ದೊರೆಯಿತು. ದೇವಸ್ಥಾನಗಳ ಬಿಲ್ ಕೂಡ ಇದೇ ಅವಧಿಯಲ್ಲಿ ಮಂಜೂರಾಯ್ತು. ಅಲ್ಲದೆ, ಸಮಾಜ ಸುಧಾರಣೆ ಹಾಗೂ ಸರಕಾರೀ ಕಾಯ್ದೆ ಪರಸ್ಪರ ಚೆನ್ನಾಗಿ ಹೊಂದಿಕೊಂಡವು. ಈ ಅಪೂರ್ವ ಯಶಸ್ಸಿಗೆ ರಾಜೇ ಸಾಹೇಬರ ನಿಃಸ್ವಾರ್ಥ ಬುದ್ದಿಯೇ ಕಾರಣವೆಂಬುದನ್ನು ಮರೆಯಬಾರದು. ಅವರು ಸ್ವತಃ ಶ್ರೀಮಂತರಾಗಿದ್ದರು. ಇತರ ಶ್ರೀಮಂತರಂತೆ ಅವರು ಜನತೆಯಿಂದ ಬೇರೆಯಾಗಿರುತ್ತಿರಲಿಲ್ಲ. ಜನತೆಯೊಡನೆ ಸೇರಿಕೊಳ್ಳಲೆಂದು ಅಲ್ಲದಿದ್ದರೂ, ಜನತೆಯ ಹಿತಕ್ಕಾಗಿ ಅವರು ಸಾರ್ವಜನಿಕ ಸೇವೆಗೆ ಧುಮುಕಿದರು, ಹಾಗೂ ಅದೇ ಧ್ಯೆಯವನ್ನು ಕಣ್ಣೆದುರು ಇರಿಸಿಕೊಂಡು, ತಮ್ಮಿಂದಾದುದನ್ನು ಮಾಡಿದರು. ಸರಕಾರದೊಡನೆ ಸಹಕರಿಸಿದಂತೆ ವಿರೋಧವನ್ನೂ ಮಾಡಿದರು. ಆದರೆ ವಿರೋಧವೆಂದರೆ, ಕೃತಿಶೂನ್ಯ ಬಡಬಡಿಕೆಯೆಂದೇನಲ್ಲ; ಹಾಗೆಯೇ, ಸಹಕಾರವೆಂದರೆ ಸರಕಾರದ ದಾಸನಾಗಿರುವುದೆಂದೂ ಅಲ್ಲ.



ರಾಜೇಸಾಹೇಬರುಮೃತ್ಯುವಶರಾಗಿದ್ದರೂ,ಅವರಈಗುಣಅನೇಕರಿಗೆ
ಮಾರ್ಗದರ್ಶಕವಾಗಿರುವಂತಿದೆ.

* * * *

## ೫. ಅಸ್ಪೃಶ್ಯರೋ ಅಥವಾ ಪೂರ್ವಾಸ್ಪೃಶ್ಯರೋ

.

ಕೊಂಕಣ ಪ್ರಾಂತೀಯ ಬಹಿಷ್ಕತ ಶಿಕ್ಷಣ ಪರಿಷತ್ತು ಬೇಗನೇ ಸೇರುವುದಿದೆ. ಈಬಗ್ಗೆ ನಮ್ಮಲ್ಲಿಗೆ ಬಂದ ಜಾಹೀರಾತು ಪತ್ರವನ್ನು ನಾವು ಬೇರೆಡೆ ಮುದ್ರಿಸಿದ್ದೇವೆ. ಈ ಪತ್ರದಲ್ಲಿ ಬಹಿಷ್ಕೃತ ಇಲ್ಲವೇ ಅಸ್ಪೃಶ್ಯ ಶಬ್ದವನ್ನು ಬಳಸದೆ, ಬದಲಿಗೆ ಪೂರ್ವಾಸ್ಪೃಶ್ಯ ಎಂಬ ಶಬ್ದವನ್ನು ಯೋಜಿಸಲಾಗಿದೆ. ಇದು ಯಾರ ಕಲ್ಪನೆ ಎಂಬುದು ನಮಗೆ ನಿಜವಾಗಿಯೂ ತಿಳಿಯದು. ಆದರೆ, ಅದು ಯಾರೋ ಸ್ಪೃಶ್ಯ ಹಿಂದೂವಿನ ತಲೆಯಲ್ಲಿ ಹುಟ್ಟಿರಬಹುದೆಂದು ನಮ್ಮ ಊಹೆ. ಅದರ ಕಾರಣವನ್ನು ತಿಳಿಯುವುದು ಕಷ್ಟವಲ್ಲ. ನೀನು ಗುಲಾಮನೆಂದು, ಗುಲಾಮನಿಗೆ ಸ್ಪಷ್ಟ ಶಬ್ದಗಳಲ್ಲಿ ಹೇಳಿದರೆ, ಆತ ಗುಲಾಮಗಿರಿ ವಿರುದ್ಧ ಬಂಡೇಳುತ್ತಾನೆ. ಆದರೆ, ನೀನು ಗುಲಾಮನಾಗಿದ್ದೆ, ಈಗ ಇಲ್ಲ, ಎಂದರೆ, ಅವನ ಮನದಲ್ಲಿ ಬಂಡೇಳುವ ಆವೇಶ ಸಾಕಷ್ಟು ತಗ್ಗುತ್ತದೆ. ಇದನ್ನು ತಿಳಿದೇ ಅಸ್ಪೃಶ್ಯರನ್ನು ಕಾಯಂ ಗುಲಾಮಗಿರಿಯಲ್ಲಿ ಇರಿಸ ಬಯಸಿದ ಸ್ಪಶ್ಯ ಹಿಂದೂಗಳೇ ಹೀಗೆ ಈ ಸವಿನುಡಿಯನ್ನು ಹೆಣೆದಿರಬೇಕು. ತಮ್ಮ ಈ ಅಸ್ಪೃಶ್ಯತೆಯೆಂಬುದು ಗತಕಾಲದ ಸಂಗತಿಯಲ್ಲ, ಈಗಲೂ ತಾವು ಅಸ್ಪೃಶ್ಯರೇ ಇದ್ದೇವೆ, ಹಾಗೂ ಈ ಅಸ್ಪೃಶ್ಯತೆಯ ವಿರುದ್ಧ ತಾವು ಸೆಣಸುವಂತೆ ಸ್ಪೃಶ್ಯ ಹಿಂದೂಗಳು ಹೂಡಿದ ಮೋಸ ಇದೆಂದು ಅಸ್ಪೃಶ್ಯ ವರ್ಗ ತಿಳಿದು ಕೊಳ್ಳಬೇಕು. ನೀವು ಈಗ ಅಸ್ಪೃಶ್ಯರಲ್ಲ; ನಿಮ್ಮನ್ನು ಅಸ್ಪೃಶ್ಯರೆನ್ನಲು ನಮಗೆ ಕಷ್ಟವಾಗುತ್ತದೆ ಎಂದು, ಸಬೂಬು ಹೇಳಿ, ನಿಮ್ಮನ್ನು ದೂರ್ವಾಸ್ಪಶ್ಯರು, ಎನ್ನುತ್ತಾರವರು. ಅಸ್ಪೃಶ್ಯ ವರ್ಗ ಈ ಯುಕ್ತಿಗೆ ಬಲಿಯಾಗಬಾರದು. ತಮ್ಮ ಬಗ್ಗೆ ಸ್ಪಷ್ಟವಾಗಿ ಹೇಳಿಕೊಳ್ಳಲು ಯಾರಿಗಾದರೂ ಯಾಕೆ ನಾಚಿಕೆ ಅನಿಸಬೇಕು?

* * * *

## ೬. ಸ್ಪೃಶ್ಯರ ಖಾಸಗೀ ಮಾಲೀಕತ್ವ

ಕೊಚಿನ್ ಸಂಸ್ಥಾನದಲ್ಲಿ, ಧರ್ಮಶಾಲೆ, ಬಾವಿ, ಕೆರೆಗಳೇ ಮುಂತಾದ ಸಾರ್ವಜನಿಕ ಸ್ಥಳಗಳನ್ನು ಅಸ್ಪಶ್ಯರಿಗೆ ತೆರೆಯಬೇಕೆಂಬ ಮಸೂದೆಯನ್ನು ಮಿಸ್ಟರ್ ಮ್ಯಾಥ್ಯೂ ಎಂಬ ಸಭಾಸದರು, ಆ ಸಂಸ್ಥಾನದ ನ್ಯಾಯಮಂಡಳಿಯೆದುರು ಮಂಡಿಸಿದರು. ಈ ಮಸೂದೆ ಅಂಗೀಕರಿಸಲ್ಪಡ ಬಹುದಿತ್ತು. ಅಸ್ಪೃಶ್ಯರಿಗೆ ತೆರೆಯಬೇಕಾಗಿದ್ದ ಈ ಸಾರ್ವಜನಿಕ ಸ್ಥಳಗಳು, ಮಹಾಡ್‌ನ ಸ್ಪೃಶ್ಯ ಹಿಂದೂಗಳ ಖಾಸಗೀ ಮಾಲೀಕತ್ವದವುಗಳಂತಿರದೆ, ಕೊಚಿನ್ ಸರಕಾರ, ಸರಕಾರೀ ಖರ್ಚಿನಲ್ಲಿ ನಡೆಸುವುದಾಗಿತ್ತು. ಎಲ್ಲ ಪ್ರಜೆಗಳಿಗೂ ಅದರಲ್ಲಿ ಸಮಾನ ಹಕ್ಕು ಇದೆಯೆಂದೂ, ಅಸ್ಪೃಶ್ಯರೂ ಪ್ರಜೆಗಳೇ ಆದ್ದರಿಂದ ಅವರಿಗೂ ಹಕ್ಕು ಇದೆಯೆಂದು ಹೇಳಲೇ ಬೇಕಾಗಿಲ್ಲ, ಎಂದೂ ಸರಕಾರ ಹೇಳಿತು. ಆದರೆ, ಸ್ಪೃಶ್ಯ ಹಿಂದೂಗಳು ಎಷ್ಟೊಂದು ದಿವಾಳಿಯೆದ್ದಿದ್ದಾರೆಂದರೆ, ಇಂತಹ ಸರಳ ವಿಷಯಗಳೂ ಅವರಿಗೆ ತಿಳಿಯುವುದಿಲ್ಲ. ಹಾಗಲ್ಲದಿದ್ದರೆ, ಈ ಠರಾವಿಗೆ ಅವರು ವಿರೋಧ ಸೂಚಿಸುತ್ತಿರಲಿಲ್ಲ. ತಮ್ಮ ಖಾಸಗೀ ಮಾಲೀಕತ್ವದ ಕಾರಣ, ಅವರು ಅಸ್ಪಶ್ಯರನ್ನು ವಿರೋಧಿಸಿದ್ದು ಸರಿ ಎಂದು ಒಂದು ವೇಳೆ ಹೇಳಲೂ ಬಹುದು. ಆದರೆ, ಈ ನೂರಕ್ಕೆ ನೂರು ಸಾರ್ವಜನಿಕ ಸ್ಥಳಗಳನ್ನು ತಮ್ಮ ಖಾಸಗೀ ಮಾಲೀಕತ್ವದಡಿಯಲ್ಲಿ ತರಲಿಚ್ಛಿಸುವುದು ಅಮಾನುಷವೆಂದೇ ತಿಳಿಯಬೇಕು. ಶಾಸನಸಂಸ್ಥೆಯನ್ನೂ ಈ ಸ್ಪೃಶ್ಯ ಜನರು ತಮ್ಮ ಸ್ವಂತ ಮಾಲೀಕತ್ವದ್ದೆಂದು ತಿಳಿಯುತ್ತಾರೆಂದು ಅಸ್ಪೃಶ್ಯರು ಯಾಕೆ ತಿಳಿದು ಕೊಳ್ಳಬಾರದು? ಮತ್ತು, ಯಾವ ಸ್ವರಾಜ್ಯಕ್ಕಾಗಿ ಈ ಸ್ಪೃಶ್ಯ ಜನರು ಚಡಪಡಿಸುತ್ತಿರುವರೋ, ಅದೂ ಅವರ ಖಾಸಗೀ ಮಾಲೀಕತ್ವದ ಸ್ವರಾಜ್ಯವೆಂದು ಅವರು ಹೇಳಬಾರದೇಕೆ?

* * * *

## ೭. ನೆಹರೂ ಕಮಿಟಿಯ ಯೋಜನೆ ಮತ್ತು ಹಿಂದೂಸ್ತಾನದ ಭವಿಷ್ಯ

ಮಧ್ಯಂತರ ಕಾಲದಲ್ಲಿ ಕಾಂಗ್ರೆಸ್ ಒಂದು ಸರ್ವಪಕ್ಷೀಯ ಪರಿಷತ್ತು ಕರೆದಿತ್ತು. ೧೯೨೮ರ ಫೆಬ್ರವರಿ ತಿಂಗಳಲ್ಲಿ ಪ್ರಥಮವಾಗಿ ಹಾಗೂ ನಂತರ ಮೇ ತಿಂಗಳಲ್ಲಿ, ಪಂಡಿತ್ ಮೋತಿಲಾಲ್ ನೆಹರೂರ ನೇತೃತ್ವದಲ್ಲಿ ಹಿಂದ್ ಸ್ವರಾಜ್ಯದ ಸಂವಿಧಾನದ ಕರಡು ನಕ್ಷೆ ತಯಾರಿಗಾಗಿ ಈ ಪರಿಷತ್ತು ಸಮಿತಿಯೊಂದನ್ನು ನೇಮಿಸಿತು. ನೆಹರೂ ಸಮಿತಿಯು ೧೯೨೮ರ ಜೂನ್‌ನಿಂದ ಆಗಸ್ಟ್ ವರೆಗೆ ಕೆಲಸ ಮಾಡಿ ಸಂವಿಧಾನದ ಕರಡು ಪ್ರತಿ ತಯಾರು ಮಾಡಿತು.

ಸಂವಿಧಾನ ತಯಾರಿಸುವಲ್ಲಿ ಇದು ಪ್ರಥಮ ಹಿಂದೂ ಪ್ರಯತ್ನವಾಗಿತ್ತು. ಅದರ ಉದ್ದೇಶವು ಮುಖ್ಯವಾಗಿ ಹಿಂದೂ ಮುಸಲ್ಮಾನರ ನಡುವಿನ ವಿರೋಧವನ್ನು ಕಡಿಮೆ ಮಾಡುವುದಾಗಿತ್ತು. ದಲಿತ ಹಾಗೂ ಶೋಷಿತ ಸಮಾಜದ ಬಗ್ಗೆ ನೆಹರೂ ಸಮಿತಿಯ ವೃತ್ತಾಂತದಲ್ಲಿ, "ಸಂವಿಧಾನದ ಬಗ್ಗೆ ನಮ್ಮ ಸೂಚನೆಯಲ್ಲಿ, ವಿಧಿಮಂಡಳದಲ್ಲಿ ದಲಿತ ವರ್ಗದ ಪ್ರತಿನಿಧಿತ್ವದ ಬಗ್ಗೆ ಅಂತಹ ವಿಶೇಷ ಏರ್ಪಾಡೇನೂ ಮಾಡಿಲ್ಲ.", ಎಂದು ಹೇಳಲಾಗಿದೆ.

ಸ್ವತಂತ್ರ ಮತದಾರ ಸಂಘವನ್ನು ನಿರ್ಮಿಸಿಕೊಂಡು, ಹಾಗೂ ಸದಸ್ಯರನ್ನು ನಿಯಮಿಸಿ ಕೊಂಡು, ಈ ಕಾರ್ಯ ಮಾಡಬಹುದಾಗಿದೆ. ಹಾಗಿದ್ದರೂ, ಈ ಎರಡೂ ದಾರಿ ಅಪಾಯಕಾರಕ ಹಾಗೂ ದೋಷಯುಕ್ತವಾದ್ದರಿಂದ, ಅದರಲ್ಲೊಂದನ್ನು ಆಯ್ದುಕೊಳ್ಳುವುದು ಯೋಗ್ಯವಲ್ಲವೆಂದು ನೆಹರೂ ಸಮಿತಿ ಅಭಿಪ್ರಾಯ ಪಟ್ಟಿತು. ಮೂಲಭೂತ ಹಕ್ಕುಗಳನ್ನು ಪ್ರಚುರ ಪಡಿಸುವುದೇ ದಲಿತರ ಎಲ್ಲ ನೋವುಗಳಿಗೂ ರಾಮಬಾಣ ಎಂದೇ ಅದರ ಅಭಿಮತ.

ಕಾಂಗ್ರೆಸ್‌ನ ಕಾರ್ಯಕಾರಿ ಮಂಡಲಿಯು, ಮುಸಲ್ಮಾನ, ಸಿಖ್ಖ, ಪಾರಸೀ, ಕ್ರಿಶ್ಚಿಯನ್, ಆಂಗ್ಲೋ ಇಂಡಿಯನ್‌ರಂತಹ ಪ್ರಮುಖ ಸದಸ್ಯರನ್ನು ಅಷ್ಟೊಂದಲ್ಲದಿದ್ದರೂ, ಬ್ರಾಹ್ಮಣೇತರ ಸಂಸ್ಥಾನಗಳನ್ನೂ, ದ್ರಾವಿಡ ಮಹಾಜನ ಸಂಸ್ಥೆಯನ್ನೂ ಸರ್ವಪಕ್ಷೀಯ ಸಭೆ ಸೇರುವಂತೆ ಆಮಂತ್ರಿಸಿತ್ತು. ಆದರೆ, ಡಾ. ಅಂಬೇಡ್ಕರರು ಸ್ಥಾಪಿಸಿದ ದಲಿತ ವರ್ಗದ ಸಂಸ್ಥೆಯಲ್ಲಲ್ಲದಿದ್ದರೂ, ಭಾರತದ ದಲಿತ ವರ್ಗದ ಯಾವುದೇ ಸಂಸ್ಥೆಯಲ್ಲೂ. ಇದರಿಂದಾಗಿ, ಅಸ್ಪೃಶ್ಯ ವರ್ಗದ ಪ್ರಶ್ನೆಯ ಸಮಸ್ಯೆಯ ಬಗ್ಗೆ ರಾಷ್ಟ್ರೀಯ ಸಭೆಯ ದೃಷ್ಟಿಕೋನ ಏನಿತ್ತೆಂಬುದನ್ನು ಚೆನ್ನಾಗಿಯೂ ಕಲ್ಪಿಸಿ ಕೊಳ್ಳಬಹುದು. ನೆಹರೂ ಸಮಿತಿಯ ಶಿಫಾರಸ್ ಬಗ್ಗೆ, ಡಾ. ಅಂಬೇಡ್ಕರ್ ಅವರ ಅಭಿಪ್ರಾಯವು, ವಿಶ್ವಾಸಾರ್ಹವೂ, ಮಾನನೀಯವೂ ಆಗಿದೆ. ಹೊಸ ಪ್ರಾಂತ ನಿರ್ಮಾಣದಂತಹ ಮುಸಲ್ಮಾನರ ದುಷ್ಕೃತ್ಯಕ್ಕೆ ಬಲಿ ಬೀಳುವ ನೆಹರೂ

ಸಮಿತಿಯ ಶಿಫಾರಸ್, ಹಿಂದೂಗಳಿಗೆ ಮೋಸವಾಗಿಯೂ, ಹಿಂದೂಸ್ತಾನಕ್ಕೆ ಕೆಡುಕಾಗಿಯೂ ಪರಿಣಮಿಸುವುದೆಂದು ಡಾ.ಅಂಬೇಡ್ಕರರು ಎಚ್ಚರಿಸಿದ್ದಾರೆ. ಮೋತಿಲಾಲ್ ನೆಹರೂ ಅವರು ಮುಸಲ್ಮಾನ ಎಂದು ಅವರ ಅಭಿಪ್ರಾಯ.

"ಹಿಂದೂ ಸಮಾಜಕ್ಕೆ ನಮ್ಮ ಮೇಲೆ ರೋಷವಿದೆ.. ಅದರ ಮೇಲೆ ಮುಸಲ್ಮಾನ ಸಮಾಜದ ರೋಷವನ್ನೂ ಹೊತ್ತು ಕೊಳ್ಳುವುದು ಸರಿಯಲ್ಲವೆಂದು ನಮಗೆ ತಿಳಿದಿದೆ. ಆದರೆ ಯಾವುದರಲ್ಲಿ ನೆಹರೂ ಕಮಿಟಿಯ ಯೋಜನೆ ಮತ್ತು ಹಿಂದೂಸ್ತಾನದ ಭವಿಷ್ಯ

ನಮ್ಮ ದೇಶಕ್ಕೆ ಕೆಡಕು ಇದೆಯೋ, ಅದು ನಮಗೂ ಕೆಡುಕೆಂದು ನಮ್ಮ ಭಾವನೆ ಆಗಿರುವುದರಿಂದ ಈ ಗಂಡಾಂತರವನ್ನು ನಾವು ತಲೆಯ ಮೇಲೆ ಹೊತ್ತಿದ್ದೇವೆ. ದೇಶಭಕ್ತರಾದ ಡಾ. ಅಂಬೇಡ್ಕರರು ಈ ಮಾತನ್ನು ಸಾರಿ ಸಾರಿ ಹೇಳಿದರು. ಈ ಕಾಲದಲ್ಲಿ ಖಡ್ಗ ಮತ್ತು ಲೇಖನಿ ಎಂಬ ರೀತಿಯಲ್ಲಿ ತಮ್ಮ ಜೀವನದ ನಿಸ್ಪೃಹ ಸಂದೇಶ ನೀಡುವ ಆ ಜ್ಞಾನೀ ಮಹಾಮರುಷನ ಮಾತು ಮುಂದಕ್ಕೆ ಸತ್ಯವೆಂದೇ ಸಾಬೀತಾಯ್ತು. "

[ಮೋತಿಲಾಲ್ ನೆಹರೂ ಸಮಿತಿಯ ಶಿಫಾರಸಿನ ಮೇಲೆ ಜನರ ಆಗ್ರಹದಂತೆ ಡಾ. ಅಂಬೇಡ್ಕರರು, ಮೇಲ್ಕಂಡ ಶೀರ್ಷಿಕೆಯ ಅಗ್ರ ಲೇಖನವನ್ನು ಬಹಿಷ್ಕತ ಭಾರತದಲ್ಲಿ ಪ್ರಕಟಿಸಿ, ಪ್ರತಿಕ್ರಿಯೆಯನ್ನೂ ಬರೆದರು.]

೧೯೩೮ರ ಮೇ ತಿಂಗಳಲ್ಲಿ ರಾಜಕಾರಣದಲ್ಲಿ ವ್ಯಸ್ತರಾದ ಎಲ್ಲ ಪಕ್ಷಗಳ ವತಿಯಿಂದ, ಸ್ವರಾಜ್ಯದ ಸಂವಿಧಾನವನ್ನು ರೂಪಿಸಲು, ಪಂಡಿತ್ ಮೋತಿಲಾಲ್ ನೆಹರೂ ಅವರ ನೇತೃತ್ವದಲ್ಲಿ ಸಮಿತಿಯೊಂದನ್ನು ನೇಮಿಸಲಾಯ್ತು. ಈ ಸಮಿತಿಯ ವರದಿಯು, ಬಹುಕಾಲ ಪ್ರಸಿದ್ಧವಾಗಿ ಉಳಿಯಿತು. ವರದಿ ಪ್ರಸಿದ್ಧವಾದ ದಿನದಿಂದಲೇ ಅದರ ವಿರುದ್ಧ ಎಲ್ಲ ಟೀಕೆಯೂ ಆರಂಭವಾಯ್ತು. ಅದರಲ್ಲಿ ಕೆಲವು, ವರದಿಯ ಯೋಜನೆಯ ಬಗೆಗಿದ್ದರೆ, ಮತ್ತೆ ಹಲವು, ಜನಾಭಿಪ್ರಾಯವನ್ನೂ ಹೊರಡಿಸಿತ್ತು. ವರದಿಯಲ್ಲಿ ಸ್ವಾತಂತ್ರ್ಯದ ಯೋಜನೆಯ ಬಗ್ಗೆ ದೊಡ್ಡ ರಣರಂಪವೇ ನಡೆದಿತ್ತು. ಉಳಿದಂತೆ ಕಳೆದ ಡಿಸೆಂಬರ್ ತಿಂಗಳಲ್ಲಿ ಕಲ್ಕತ್ತಾದಲ್ಲಿ ಸೇರಿದ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರಸಕ್ತ ಸಮಿತಿಯ ಯೋಜನೆಯಲ್ಲಿ ತಿದ್ದುಪಡಿಯಾಗಿ, ಬಳಿಕ ಮಾನ್ಯತೆ ಪಡೆಯಿತು. ನಾವು ಮಾತ್ರ ಈ ನೆಹರೂ ಕಮಿಟಿಯ ವರದಿಯ ಬಗ್ಗೆ ನಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತ ಪಡಿಸಿರಲಿಲ್ಲ. ಆದರೂ ಕೂಡ, ಆ ವರದಿಯ ವಾಚ್ಯತೆ, ನಮ್ಮ ವಾಚಕರ ಕಿವಿಗೆ ಬೀಳದಿರಲಿಲ್ಲ, ಇದರ ಪರಿಣಾಮವೆಂದರೆ, ನಮ್ಮ  ವಾಚಕರ ಪೈಕಿ ಅನೇಕರು, ನೆಹರೂ ಕಮಿಟಿ ವರದಿ ಬಗ್ಗೆ ನಿಮ್ಮ ಅಭಿಪ್ರಾಯವೇನು ಎಂದು ನಮ್ಮನ್ನು ಕೇಳಿದ್ದಾರೆ. ನಮ್ಮ ಇಂತಹ ಜಿಜ್ಞಾಸುಗಳಾದ ವಾಚಕರ ಇಚ್ಛೆಯನ್ನು ಪೂರೈಸುವುದು ನಮ್ಮ ಕರ್ತವ್ಯವೇ ಆಗಿದೆ. ಹಾಗೆಂದೇ ಪ್ರಸ್ತುತ ವಿಷಯದ ಚರ್ಚೆ ನಡೆಸುವ ಯೋಜನೆ ನಮ್ಮದು.

ಯಾವುದೇ ದೇಶದಲ್ಲಿ ರಾಜ್ಯಕಾರುಭಾರ ಸುಲಲಿತವಾಗಿ ಸಾಗಲು, ಯಾವುದೇ ಪ್ರಕಾರದ ಉತ್ತಮ ಸಂವಿಧಾನವೊಂದು ಅಗತ್ಯ ಎಂದು ಕಾಣುತ್ತದೆ. ಅದಲ್ಲದೆ ಅನ್ಯ ಉಪಾಯವಿಲ್ಲ. ಹಾಗೆಂದೇ ಪ್ರತಿಯೊಂದು ಸುಧಾರಿತ ದೇಶದಲ್ಲಿ ಒಂದೊಂದು ತರಹದ ಸಂವಿಧಾನ ಅಸ್ತಿತ್ವದಲ್ಲಿದೆ.

ಅಂತೆಯೇ ನಮ್ಮ ಈ ದೇಶದಲ್ಲೂ ಸಂವಿಧಾನವೊಂದು ಪ್ರಚಲಿತವಿದೆ. ಇಷ್ಟಲ್ಲದೆ, ಪ್ರಜಾಸತ್ತಾತ್ಮಕ ಸ್ವರಾಜ್ಯಕರ್ತರಾದ ಎಲ್ಲ ರಾಜಕಾರಣಿಗಳು ಕಂಠಶೋಷಣೆ ಮಾಡಿಕೊಳ್ಳುತ್ತಿರುವ ಸಂವಿಧಾನವು, ಈ ದೇಶದಲ್ಲಿ ೧೯೩೧ರಿಂದ ಪ್ರಸ್ತಾಪಿತವಾಗಿದೆ. ಸಂವಿಧಾನದ ಬಗ್ಗೆ ರಾಜಕಾರಣವಾದಿಗಳ ಎದುರಿರುವ ಪ್ರಶ್ನೆಯಂತೆ ಪ್ರಜಾಪ್ರಭುತ್ವದ ಮೂಲ ಸತ್ವ ಸರ್ವವ್ಯಾಪಿಯಾಗುವಂತಹ ದುರಸ್ತಿ ಕಾರ್ಯ ಇನಿತೇ ಸಾಧ್ಯ.. ಸುದೈವದಿಂದ ಇದೀಗ ಪ್ರಸ್ತಾಪಿತವಾಗಿರುವ ಸ್ವರಾಜ್ಯದ ಸಂವಿಧಾನವು ಎಷ್ಟೊಂದು ಸಂವಹನಶೀಲ ಆಗಿದೆಯೆಂದರೆ, ದುರಸ್ತಿ ಅಲ್ಲಿ ಸಹಜವೆಂದೇ ಭಾಸವಾಗುತ್ತದೆ. ದುರಸ್ತಿಯ ಎಲ್ಲ ಕೆಲಸವನ್ನೂ ಬದಿಗಿಟ್ಟು, ಎಲ್ಲವನ್ನೂ ಬುಡಮೇಲು ಮಾಡಿ, ಹೊಸದಾಗಿ ರಾಜ್ಯ ಸಂವಿಧಾನವನ್ನು ಎದ್ದು ನಿಲ್ಲಿಸುವ ಯಾವ ಉಪದ್ಯಾಪವೂ ನೆಹರೂ ಸಮಿತಿಗೆ ಅಗತ್ಯವಿರಲಿಲ್ಲ.



ಸುವ್ಯವಸ್ಥಿತ ರಾಜ್ಯ ಸಂವಿಧಾನ ಅಸ್ತಿತ್ವದಲ್ಲಿರುವಾಗ, ಹೊಸದೊಂದು ಯೋಜನೆಯ ತಯಾರಿಗೆ ನೆಹರೂ ಸಮಿತಿ ಸಿದ್ಧವಾದುದು ನಮಗೆ ಆಶ್ಚರ್ಯವೆನಿಸುತ್ತದೆ. ಈ ವ್ಯರ್ಥ ಶ್ರಮಕ್ಕೆ ಎರಡು ಕಾರಣಗಳಿರಬಹುದು. ಹೊಸ ಸೃಷ್ಟಿಯ ಉಮೇದು ಒಂದು ಕಾರಣವಾಗಿರಬೇಕು. ಪ್ರತಿಸೃಷ್ಟಿಯ ಉಮೇದು ಕೇವಲ ವಿಶ್ವಾಮಿತ್ರನಿಗೊಬ್ಬನಿಗೇ ಇದ್ದುದಲ್ಲ. ವಿಧಾತನಾಗುವ ಉಮೇದು, ವಿಶ್ವಾಮಿತ್ರನಿಂದ ತೊಡಗಿ ಸರ್ವರಲ್ಲೂ ಎದ್ದು ಕಾಣುತ್ತದೆ. ಹೊಸತನ್ನು ಸ್ಥಾಪಿಸಿ ತನ್ನ ಹೆಸರನ್ನು ಅಜರಾಮರ ಗೊಳಿಸಿಕೊಳ್ಳಬೇಕೆನ್ನುವ ಭಾವನೆಯು ಎಲ್ಲರ ಅಂತಃಕರಣದಲ್ಲಿ ಸುರಿಸುತ್ತಿರುತ್ತದೆ.

ಸ್ವರಾಜ್ಯದ ಹೊಸ ಯೋಜನೆ ತಯಾರಿಸುವಾಗ, ನೆಹರೂ ಸಮಿತಿಯು ಇದೇ ಭಾವನೆಗೆ ಬಲಿಯಾಗಿದ್ದಿತೆಂದು ಕಾಣುತ್ತದೆ

.

ಇಂದು ನಲ್ವತ್ತು ವರ್ಷ ರಾಜಕಾರಣದಲ್ಲಿ ನುರಿತ ಜನರಿಗೆ, ಸಂವಿಧಾನ ರೂಪಿಸುವಲ್ಲಿ ಆಂಗ್ಲರ ಮುಖ ನೋಡಿ, ಅವರ ನಿರ್ಣಯದಂತೆ ಸಂವಿಧಾನ ರೂಪಿಸಿಕೊಳ್ಳುವುದು ಶೋಭಿಸುವಂತಹುದಲ್ಲ. ಹೀಗೆ, ಕಾಂಗ್ರೆಸ್‌ನಲ್ಲಿರುವವರು ಷಂಡರೂ, ಅವಿಚಾರಿಗಳೂ, ಆಗಿದ್ದು, ಅಭ್ಯಾಸಹೀನರೂ ಆಗಿರುವರೆಂಬ ಮುದ್ರೆ ಒತ್ತಿಕೊಳ್ಳುವ ಸಂಭವ ಇದೆ. ಹಾಗಾಗದಂತೆ ಹಾಗೂ ಆಂಗ್ಲರಂತೆ ನಾವೂ ಸಂವಿಧಾನ ರೂಪಿಸಿಕೊಳ್ಳಬಲ್ಲೆವೆಂದು ಸಾಧಿಸಿ ತೋರಿಸಲು, ನೆಹರೂ ಸಮಿತಿ ಈ ಕಾರ್ಯಕ್ಕಿಳಿದಿದೆ. ಇದು ನಮ್ಮ ಪಾಲಿನ ವಿಶೇಷ ಕರ್ತವ್ಯವೇನಲ್ಲ. ನೆಹರೂ ಸಮಿತಿ ಇಂದು ರೂಪಿಸಿರುವ ಸ್ವರಾಜ್ಯ ಯೋಜನೆಯಲ್ಲಿರುವ ಗುಣದೋಷಗಳನ್ನು ಪರೀಕ್ಷಿಸುವದಷ್ಟೇ ನಮ್ಮ ಕೆಲಸ.

ಯಾವುದೇ ಸ್ವರಾಜ್ಯ ಯೋಜನೆಯಲ್ಲಿ ಆ ಯೋಜನೆ ಪ್ರಜಾಸತ್ತಾತ್ಮಕ ಪದ್ಧತಿಯದ್ದಾಗಿದ್ದರೆ ಅಲ್ಲಿ ಮತದಾರ ಸಂಘದ ವಿಷಯ ಅತ್ಯಂತ ಮಹತ್ವದ್ದಾಗಿರುತ್ತದೆ. ಎಲ್ಲಿ ಮತದಾರ ಸಂಘ ಸ್ಥಾಪನೆಯು ರಾಜ್ಯಪದ್ಧತಿಯ ದೃಷ್ಟಿಯಲ್ಲಿ ಅಯೋಗ್ಯವೋ, ಅಲ್ಲಿ ಸ್ವರಾಜ್ಯವೆಂದರೆ ಬರಿಯ ಕಪಟವಷ್ಟೇ, ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕು. ಹಾಗೆಂದೇ ನೆಹರೂ ಕಮಿಟಿಯು ಪ್ರಥಮ ಬಾರಿಗೆ ಮತದಾರ ಸಂಘದ ವತಿಯಿಂದ ಸಾದರ ಪಡಿಸಿದ ಯೋಜನೆಯು, ರಾಜ್ಯಪದ್ಧತಿಯ ದೃಷ್ಟಿಯಿಂದ ಎಷ್ಟು ಉಪಯುಕ್ತವೆಂಬುದನ್ನು ವಿಚಾರ ಮಾಡಬೇಕು

.

ಪ್ರಸಕ್ತ ರಾಜ್ಯಪದ್ಧತಿಯಲ್ಲಿ ಮೂರು ಪ್ರಕಾರದ ಮತದಾರ ಸಂಘ ಅಸ್ತಿತ್ವದಲ್ಲಿರುವುದು ತಿಳಿದು ಬರುತ್ತದೆ. ಕೆಲವು ಸಂಘಗಳು ಕೇವಲ ಸ್ಥಳವಾಚಕಗಳಾಗಿರುತ್ತವೆ. ಮತ್ತೆ ಕೆಲವು ಸ್ಥಳವಾಚಕವಾಗಿದ್ದಂತೇ ಜಾತಿವಾಚಕವೂ ಆಗಿರುತ್ತದೆ. ಕೆಲವು ಕೇವಲ ಜಾತಿವಾಚಕವಾಗಿರುತ್ತವೆ. ಉಳಿದವು ವರ್ಗವಾಚಕವಾಗಿರುತ್ತವೆ. ಸ್ಥಳವಾಚಕ, ಜಾತಿವಾಚಕ ಸಂಘಗಳು ಹಿಂದುಳಿದ ಹಿಂದೂಗಳಿಗಾಗಿ ನಿರ್ಮಾಣವಾದವು. ಎಲ್ಲ ಜಾತಿಯ ಮತದಾರರ ಸಮ್ಮಿಶ್ರ ಸಂಘ ಇದ್ದರೆ, ಹಿಂದುಳಿದ ಜಾತಿಯ ಪ್ರತಿನಿಧಿ ಆರಿಸಿ ಬರುವಂತೆ ಸ್ಥಳ ಕಾದಿರಿಸುವ ನಿರ್ಣಯ ಕೈಗೊಳ್ಳಲಾಗುತ್ತದೆ. ಸ್ವತಂತ್ರ ಜಾತಿವಾಚಕ ಸಂಘವು ಮುಸಲ್ಮಾನರಿಗಾಗಿ ಪ್ರಸ್ತಾಪಿತವಾಗಿದೆ. ಮತ್ತು ವರ್ಗವಾಚಕ ಸಂಘವು, ವ್ಯಾಪಾರಿ, ಉದ್ಯಮಿಗಳೇ ಮುಂತಾದ ವರ್ಗದವರಿಗಾಗಿ ಯೋಜಿತವಾದುದು. ಈಗ ಅಸ್ತಿತ್ವದಲ್ಲಿರುವ ಮತದಾರ ಸಂಘಕ್ಕೆ ಎರಡು ಪಕ್ಷಗಳಿವೆ. ಒಂದು ಪಕ್ಷದ ಹೇಳಿಕೆ ಹೀಗಿದೆ : ಸ್ಥಳವಾಚಕ ಮತದಾರ ಸಂಘ ಹೊರತು ಪಡಿಸಿ ಇತರೆಲ್ಲ ಮತದಾರ ಸಂಘಗಳು ಜವಾಬ್ದಾರಿ ರಾಜ್ಯಪದ್ಧತಿಯ ಮೂಲತತ್ವಗಳಿಗೆ ವಿಸಂಗತವೂ, ವಿರೋಧಿಯೂ ಆಗಿದೆ. ಇನ್ನೊಂದು ಪಕ್ಷದ ಅಭಿಪ್ರಾಯ ಹೀಗಿದೆ : ಯಾವ

ದೇಶದಲ್ಲಿ ಜಾತಿಭೇದ, ಧರ್ಮಭೇದದ ಹಿಡಿತ ಜನಮಾನಸದ ಮೇಲೆ ಇಷ್ಟೊಂದು ಬಲವಾಗಿದ್ದು, ಮಾನವೀಯತೆಗೆ ಏನೂ ಬೆಲೆಯಿರದೆ ಜಾತಿಗೆ ಬೆಲೆಯಿದೆಯೋ, ಅಲ್ಲಿ ಮತದಾರ ಸಂಘವು ಜಾತಿವಾಚಕವಾಗಿರಬೇಕು. ಈ ಎರಡೂ ಪಕ್ಷಗಳ ಜನರು ದುರಾಗ್ರಹಿಗಳೆಂದು ಹೇಳಬೇಕು. ಹಿಂದುಸ್ಥಾನದಲ್ಲಿ ಎಲ್ಲೆಡೆಯೂ ಸ್ಥಳವಾಚಕ ಮತದಾರ ಸಂಘ ಸ್ಥಾಪನೆಯಾಗಬಹುದು, ಮತ್ತು ಜಾತಿಭೇದದ ಪರಿಣಾಮದ ಬಗ್ಗೆ ಇನಿತೂ ಲಕ್ಷ್ಯ ವಹಿಸಬೇಕಾಗಿಲ್ಲ ಎಂದು ಹೇಳುವುದು ಎಷ್ಟೊಂದು ಭ್ರಮೆ ಹಾಗೂ, ಬಾಯಿ ಬಡಕತನವೋ, ಅಷ್ಟೇ ಜಾತಿಭೇದ ಹಾಗೂ ಧರ್ಮಭೇದವನ್ನು ಒಪ್ಪದಿದ್ದರೆ, ಅದರ ಹೊರತು ಬೇರಾವುದೇ ತರದ ಹಿತಕಾರಿ ಮತದಾರ ಸಂಘ ಸ್ಥಾಪಿಸಲು ಬರುವಂತಿಲ್ಲ ಎನ್ನುವುದು ಮೂರ್ಖತನವಷ್ಟೇ. ಸ್ಥಳವಾಚಕ ಮತದಾರ ಸಂಘ ಇದ್ದರೂ, ಜವಾಬ್ದಾರಿ ರಾಜ್ಯಪದ್ಧತಿ ಅಸ್ತಿತ್ವಕ್ಕೆ ಬರುವುದು ಶಕ್ಯವಿಲ್ಲ, ಹಾಗೂ ಜಾತಿವಾಚಕ ಸಂಘ ಇದ್ದರೂ, ಜಾತಿಭೇದದ ಗಲಭೆಯಡಿ ಹೂತು ಹೋದ ಜಾತಿಗೆ ಅನ್ಯದಾರಿಯಿಲ್ಲ. ಇಂತಹ ನಿರ್ವಿಕಲ್ಪ ದೃಷ್ಟಿಯಿಂದ ಕಾಣುವ, ಇಂದು ಅಸ್ತಿತ್ವದಲ್ಲಿರುವ ಮತದಾರ ಸಂಘಗಳಲ್ಲಿ ಅತ್ಯಂತ ಅನಿಷ್ಟವೆನಿಸಲ್ಪಡುವದು, ಮುಸಲ್ಮಾನರಿಗಾಗಿ ಸ್ಥಾಪಿತವಾದ ಸ್ವತಂತ್ರ ಜಾತಿವಾಚಕ ಮತದಾರ ಸಂಘ. ಈ ದೇಶದ ರಾಜಕಾರಣದಲ್ಲಿ ಬೇಜವಾಬ್ದಾರಿತನ ಹಾಗೂ ಅರಾಜಕತೆಯನ್ನು ಹುಟ್ಟು ಹಾಕಿರುವುದು ಇದೇ ಸಂಘ, ವರ್ಗವಾಚಕ ಸಂಘಕ್ಕೂ ಹೆಚ್ಚು ಕಡಿಮೆ ಇದೇ ಆಕ್ಷೇಪ ಸಲ್ಲುತ್ತದೆ.

ಈ ಮತದಾರ ಸಂಘದಿಂದಾಗಿ ಒಂದಿಷ್ಟು ವಿಶಿಷ್ಟ ಪ್ರಕಾರದ ಹಿತಸಂಬಂಧದಿಂದ ಬದ್ಧರಾದ ಮತದಾರರ ಕಡೆಯಿಂದ ಆರಿಸಿ ಬಂದ ಪ್ರತಿನಿಧಿಗಳಿಗೆ ಸಾರ್ವಜನಿಕ ಹಿತ ಸಂಬಂಧಿತ ವಿಷಯಗಳಲ್ಲಿ ಮತ ನೀಡುವ ಅಧಿಕಾರ ಪ್ರಾಪ್ತವಾಗುತ್ತದೆ. ಇಂತಹ ಮತದಾರ ಸಂಘ ಇಲ್ಲದಾಗುವುದು ಅವಶ್ಯಕ. ಬ್ರಾಹ್ಮಣೇತರ ವರ್ಗ ನಿರ್ಮಿಸಲು ಸೃಷ್ಟಿಯಾದ ಸ್ಥಳವಾಚಕ, ಜಾತಿವಾಚಕ ಸಂಘಗಳ ಮೇಲೆ ಯಾವುದೇ ಆಕ್ಷೇಪವಿಲ್ಲ. ಇಂತಹ ಸಂಘದಿಂದ ಆಯ್ಕೆಯಾಗಿ ಬಂದ ಪ್ರತಿನಿಧಿಗಳು ಬೇಜವಾಬ್ದಾರರೆಂದು ಯಾರೂ ಹೇಳುವಂತಿಲ್ಲ. ಅದಕ್ಕೂ ಹೆಚ್ಚಾಗಿ, ಬೇರೆ ಜಾತಿಯಿಂದ ಅಂತೆಯೇ ಯೋಗ್ಯನಾದ ಉಮೇದ್ವಾರ ದಕ್ಕಬಹುದಿತ್ತೆಂದು ಹೇಳಬಹುದು. ಆದರೆ ಇದೇನೂ ಅಂತಹ ದೊಡ್ಡ ಆರೋಪವೆಂದು ನಮಗನಿಸುವುದಿಲ್ಲ. ರಾಜಕಾರಣದಲ್ಲಿ ಯೋಗ್ಯತೆಯ ನಿಟ್ಟಿನಲ್ಲಿ ಜವಾಬ್ದಾರಿಯ ಮಹತ್ವ ಹೆಚ್ಚು, ಹಾಗೂ, ಆ ದೃಷ್ಟಿಯಲ್ಲಿ ನೋಡಿದಾಗ , ಸ್ಥಳವಾಚಕ, ಜಾತಿವಾಚಕ ಸಂಘಗಳಿಂದಾಗಿ ರಾಷ್ಟ್ರಕ್ಕೆ ಅಂತಹ ದೊಡ್ಡ ನಷ್ಟವೇನೂ ಆಗುತ್ತದೆನ್ನುವಂತಿಲ್ಲ. ನೆಹರೂ ಕಮಿಟಿಯು ಮತದಾರ ಸಂಘದ ವತಿಯಿಂದ ಮಾಡಿದ ಯೋಜನೆಯಂತೆ, ಹಿಂದುಳಿದ ಹಿಂದೂಗಳು, ವ್ಯಾಪಾರಿಗಳು, ಮತ್ತು ಇನಾಮ್‌ದಾರ ವರ್ಗಗಳ ಸಂಘಗಳನ್ನು ಕಿತ್ತು ಹಾಕಿ ಅವುಗಳ ಸ್ಥಳದಲ್ಲಿ ಎಲ್ಲೆಡೆಯೂ ಸ್ಥಳವಾಚಕ ಸಂಘಗಳನ್ನು ಸ್ಥಾಪಿಸುವ ನಿರ್ಧಾರ ಕೈಗೊಳ್ಳಲಾಗಿದೆ. ಮುಸಲ್ಮಾನರಿಗಾಗಿ

ಅಸ್ತಿತ್ವದಲ್ಲಿರುವ ಸ್ವತಂತ್ರ ಜಾತಿವಾಚಕ ಸಂಘಗಳನ್ನು ತೆಗೆದು ಹಾಕಿ, ಸ್ಥಳವಾಚಕ, ಜಾತಿವಾಚಕ ಸಂಘಗಳ ಸವಲತ್ತನ್ನು ಕಮಿಟಿಯು ಅವರಿಗೆ ನೀಡಿತು. ಮುಸಲ್ಮಾನರ ಸ್ವತಂತ್ರ ಜಾತಿವಾಚಕ ಸಂಘಗಳನ್ನು ಕಿತ್ತು ಹಾಕಿದ್ದು, ನೆಹರೂ ಕಮಿಟಿಯ ವರದಿಯ ದೊಡ್ಡ ರಹಸ್ಯ ! ಹಾಗೂ ಈ ವರದಿಯ ಬಗ್ಗೆ ಇಷ್ಟೆಲ್ಲ ಅನಗತ್ಯ ಪ್ರಶಂಸೆಗೂ ಇದೇ ಕಾರಣ. ಆದರೆ ಹೀಗೆ ಕಮಿಟಿಯ ಗುಣಗಾನ ಮಾಡುವ ಅದರ ಭಕ್ತರಿಗೆ, ನಮ್ಮ ಪ್ರಶ್ನೆ ಹೀಗಿದೆ ; ಸ್ಥಳವಾಚಕ ಮತದಾರ ಸಂಘದ ಹೊರತು, ಇತರ ಯಾವುದೇ ಮತದಾರ ಸಂಘ, ರಾಷ್ಟ್ರಹಿತಕ್ಕೆ ಘಾತಕವೆಂದು, ನೆಹರೂ ಕಮಿಟಿಯ



ಅಭಿಪ್ರಾಯವಿದ್ದರೆ, ಮುಸಲ್ಮಾನರ ಬಗ್ಗೆ ಈ ನೀತಿ ಏಕಿಲ್ಲ? ಹಿಂದುಳಿದ ಹಿಂದೂಗಳಿಗಾಗಿ ಅಸ್ತಿತ್ವಕ್ಕೆ ಬಂದ ಸ್ಥಳವಾಚಕ, ಜಾತಿವಾಚಕ ಸಂಘವು, ರಾಷ್ಟಹಿತದ ದೃಷ್ಟಿಯಿಂದ ಹಾನಿಕಾರಕವೆಂದು ವರ್ಜ್ಯವೆನಿಸಿದ್ದು, ಅದೇ ಮುಸಲ್ಮಾನರಿಗಾಗಿ ನಿರ್ಮಿತವಾದ ಕಮಿಟಿಯ ವಿಷಯಕ್ಕೆ ಹಾಗೇಕನಿಸಲಿಲ್ಲವೆಂಬುದು ಅಚ್ಚರಿಯೆನಿಸುತ್ತದೆ. ಒಂದು ವರ್ಗದ ಮಟ್ಟಿಗೆ ಸದೋಷವೆನಿಸಿದ್ದು, ಇನ್ನೊಂದು ವರ್ಗದ ಮಟ್ಟಿಗೆ ದೋಷಮುಕ್ತ ಎನಿಸಿದ ತರ್ಕಶಾಸ್ತ್ರದ ವೈಚಿತ್ರ್ಯ, ಕಮಿಟಿಯ ವರದಿಯಲ್ಲಿ ಕಂಡು ಬರುತ್ತದೆ. ಬಹುಶಃ, ಹಿಂದುಳಿದ ಹಿಂದೂಗಳು ಬಹುಸಂಖ್ಯಾತರಿದ್ದು, ಮುಸಲ್ಮಾನರು ಅಲ್ಪಸಂಖ್ಯಾತರೆಂದು ಹೇಳುವವರು ಇರಬಹುದು. ಹಾಗೆಂದೇ ಹಿಂದುಳಿದ ಹಿಂದೂಗಳಿಗೆ ದೊರೆಯದ ಸವಲತ್ತು, ಮುಸಲ್ಮಾನರಿಗೆ ಲಭಿಸುತ್ತದೆ. ಮತ್ತು, ಹಾಗೆ ಕೊಡುವಾಗ, ಎಷ್ಟು ಸಾಧ್ಯವೋ, ಅಷ್ಟು ದೋಷಮುಕ್ತವಾಗಿಸಲು ಸಾಧ್ಯವಾಗುತ್ತದೆ. ಇಲ್ಲಿ, ನಮ್ಮ ಪ್ರಶ್ನೆಯೆಂದರೆ, ಯಾವ ಸವಲತ್ತನ್ನು ಮುಸಲ್ಮಾನರಿಗೆ ನೀಡುವುದರಿಂದ ರಾಷ್ಟ್ರಕ್ಕೆ ನಷ್ಟವಿಲ್ಲವೋ, ಅದನ್ನು ಹಿಂದುಳಿದ ಹಿಂದೂಗಳಿಗೆ ಉಳಿದ ಕೆಲ ದಿನಗಳಾದರೂ ಕೊಡುವುದರಲ್ಲಿ ಏನು ಕೆಡುಕಿದೆ? ಪರಸ್ಪರ ಸ್ಪರ್ಧೆಯ ಮಹತ್ವವಿರುವುದು ಸಂಘಟನೆಯಲ್ಲೇ ಹೊರತು, ಸಂಖ್ಯೆಯಲ್ಲಲ್ಲ. ಸಂಘರ್ಷಗಳಿಂದ ವಿಘಟಿತವಾದ ಮತ್ತು ಭಾವನೆಗಳಿಂದ ಪರವಶವಾದ ಸಮಾಜವು, ಸಂಖ್ಯೆಯಲ್ಲಿ ಎಷ್ಟೇ ದೊಡ್ಡದಿದ್ದರೂ, ಆತ್ಮೀಯ ಭಾವನೆಯಿಂದ ಒಂದಾದ, ಹಾಗೂ, ಸ್ವಂತಿಕೆಯಿಂದ ಜಾಗೃತಗೊಂಡ ಸಮಾಜದ ಎದುರಿಗೆ ಅದರ ಯಶಸ್ಸು ಅಶಕ್ಯವೇ ಸರಿ. ಈ ವ್ಯವಹಾರದಲ್ಲಿ ಉಲ್ಲೇಖಿತವಾದ ನಿಯಮದಂತೆ ಸುಸಂಘಟಿತ ಅಲ್ಪಸಂಖ್ಯಾತ ವರ್ಗಕ್ಕೆ ಅವಶ್ಯ ಎಂದು ಕೊಡುವ ಸವಲತ್ತನ್ನು, ಚದುರಿದಂತೆ ಹಿಂದುಳಿದಿರುವ ಕಾರಣಕ್ಕೆ, ಬಹುಸಂಖ್ಯಾತ ವರ್ಗಕ್ಕೂ ನೀಡುವಂತಾಗಬೇಕು. ಈ ಸವಲತ್ತನ್ನು ಅಲ್ಪ ಸಂಖ್ಯಾತರಿಗಲ್ಲದೆ ಬೇರಾರಿಗೂ ಕೊಡಲಾಗದೆಂಬ ನಿರ್ಧಾರವನ್ನು ಕಮಿಟಿಯು ಕೈಗೊಂಡಿದ್ದರೆ,

ಅದೇ ಸವಲತ್ತನ್ನು ಅಸ್ಪೃಶ್ಯ ವರ್ಗದವರಿಗೂ ನೀಡಲಿಲ್ಲ, ಏಕೆ? ಎಲ್ಲರಿಗಿಂತಲೂ ಅಲ್ಪ ಸಂಖ್ಯಾತರು, ಈ ಅಸ್ಪೃಶ್ಯರೇ. ಅಸ್ಪೃಶ್ಯರಷ್ಟು ದಾರಿದ್ರ್ಯ ಪೀಡಿತರು ಹಾಗೂ ಅನ್ಯಾಯದಿಂದ ಸಂತ್ರಸ್ತರಾದವರು ಬೇರಿಲ್ಲ. ಎಲ್ಲಕ್ಕಿಂತ ಹೆಚ್ಚು ಅಜ್ಞಾನದ ಕಾರಣ ಸಂರಕ್ಷಿಸಲಾಗದವರೆಂದರೆ, ಈ ಅಸ್ಪೃಶ್ಯರು. ಅಸ್ಪೃಶ್ಯತೆಯ ಕಳಂಕದಿಂದ ರಾಜಕೀಯ ಹಕ್ಕಿಗೂ ಅಪರಿಚಿತರಾಗಿ ಉಳಿದವರು, ಈ ಅಸ್ಪೃಶ್ಯರು. ಹಿಂದೂ ಸಮಾಜವು ಯಾರ ಉನ್ನತಿಯ ಕಾಳಜಿ, ಸರಕಾರಕ್ಕೆ ಎಂದೂ ಇರಲಿಲ್ಲವೋ, ಮತ್ತು ಯಾರ ಅವನತಿಗೆ ಧರ್ಮದ ಸಬೂಬನ್ನು ಮುಂದು ಮಾಡಿ ಹಿಂದೂ ಸಮಾಜವು ಕಾರಣೀಭೂತವಾ. ಆ ಅಸ್ಪೃಶ್ಯ ಸಮಾಜಕ್ಕೆ ಮುಸಲ್ಮಾನರಿಗಿಂತ ಸಹಸ್ರ ಪಾಲು ಹೆಚ್ಚು ರಾಜಕೀಯ ಸಂರಕ್ಷಣೆಯ ಆವಶ್ಯಕತೆಯಿದೆ. ಕೇವಲ ಮುಳುಗುವವರಿಗೆ ಆಸರೆಯಾಗಬೇಕೆಂಬ ತತ್ವದಂತೆ ಮುಸಲ್ಮಾನರಿಗಿಂತ ಮುಂಚೆ ಅಸ್ಪೃಶ್ಯರಿಗೆ ತಕ್ಕ ವ್ಯವಸ್ಥೆ ಮಾಡುವುದು ಅವಶ್ಯವಾಗಿದೆ. ಆದರೆ ಹಾಗೇನೂ ಮಾಡದೆ, "ತೇಲುವವನಿಗೆ ತೋಳಿನಾಸರೆ, ಮುಳುಗುವವನಿಗೆ ಒದೆತ "ಎಂಬ ಕುಟಿಲನೀತಿಯನ್ನು ಕಮಿಟಿಯು ಅವಲಂಬಿಸಿತು. ಅಸ್ಪಶ್ಯರಿಗೆ ಯಾವ ಸವಲತ್ತೂ ಬೇಡ ; ಅವರ ಸಮಸ್ಯೆ ಸಾಮಾಜಿಕ ಸ್ವರೂಪದ್ದಾದುದರಿಂದ, ಅದು ಶಿಕ್ಷಣದಿಂದ ಪರಿಹರಿಸಲ್ಪಡಬಲ್ಲುದಾಗಿದೆ ಎಂಬ ಅಭಿಪ್ರಾಯ ಹೊಂದಿ, ನೆಹರೂ ಕಮಿಟಿಯು ಮುಕ್ತವಾಗಿದೆ.

ಅಸ್ಪೃಶ್ಯರ ಸಮಸ್ಯೆ ಸಾಮಾಜಿಕವೆಂದಾದರೆ, ಮುಸಲ್ಮಾನರ ಸಮಸ್ಯೆ ಸಾಮಾಜಿಕವಲ್ಲವೇ? ಶ್ರೇಷ್ಠ ಜಾತಿಯ ವಕ್ರದೃಷ್ಟಿಯ ದೋಷ, ಅಸ್ಪೃಶ್ಯರು ಅನುಭವಿಸಬೇಕಾಗಿರುವಂತೆಯೇ, ಮುಸಲ್ಮಾನರೂ



ಅನುಭವಿಸಬೇಕಾಗುತ್ತದೆ. ಅದರ ಹೊರತು, ಮುಸಲ್ಮಾನರಿಗೆ ಬೇರಾವ ಸಂಕಟ ಒದಗಿದೆಯೆಂದು ಅವರ ಸಂರಕ್ಷಣೆ ಅಗತ್ಯ, ಅಸ್ಪಶ್ಯರದು ಅಲ್ಲ, ಎಂದಾಗುತ್ತದೆ? ದೃಷ್ಟಿ ದೋಷದ ಪೀಡೆ ಇಬ್ಬರಿಗೂ ಒಂದೇ ತರಹವಾಗಿದೆ. ಒಂದೆಡೆ ಆ ಪೀಡೆ ಶಿಕ್ಷಣದಿಂದ ನಿವಾರಿಸಲ್ಪಡುವುದು ನಿಶ್ಚಯವೆಂದು ಕಮಿಟಿಗೆ ಅನಿಸಿದರೆ, ಅದನ್ನೇ ಮುಸಲ್ಮಾನರಿಗೂ ಅನ್ವಯಿಸಿ ಕಮಿಟಿಯು ಸುಮ್ಮನಾಗಲಿಲ್ಲವೇಕೆ?

ತನ್ನ ಈ ಕೃತ್ಯಕ್ಕೆ ಸಿಲೋನ್ ಕಮಿಶನ್‌ನ ವರದಿಯನ್ನು ಕಮಿಟಿಯು ಆಧಾರವಾಗಿ ಕೊಟ್ಟಿದೆ. ಆದರೆ,ಸಿಲೋನ್ ಕಮಿಶನ್, ಅಸ್ಪಶ್ಯರಿಗೆ ರಾಜಕೀಯ ಸವಲತ್ತು ಕೊಡದಿರಲು ಕಾರಣ, ಅದು ಆ ಸವಲತ್ತನ್ನು ಯಾರಿಗೂ ಕೊಡದಿರುವುದೇ ಆಗಿದೆ. ಅಸ್ಪೃಶ್ಯರಿಗೆ ಕೊಡದಿರುವಂತೆಯೇ, ಮುಸಲ್ಮಾನರಿಗೂ ಕೊಡಲಾಗಿಲ್ಲ. ಸಿಲೋನ್ ಕಮಿಶನ್‌ನಂತಹ ನಿಷ್ಪಕ್ಷಪಾತತನವನ್ನು ನೆಹರೂ ಕಮಿಟಿಯು ತೋರಿದ್ದರೆ, ಮತ್ತು ಅಸ್ಪೃಶ್ಯರನ್ನು ನಡೆಸಿಕೊಂಡಂತೇ ಮುಸಲ್ಮಾನರನ್ನೂ ನಡೆಸಿಕೊಂಡಿದ್ದರೆ ಆಗ, ಅಸ್ಪೃಶ್ಯರಿಗೆ ಕಾದಿರಿಸಿದ ಸ್ಥಳವನ್ನು ಕಮಿಟಿಯು ಅವರಿಗೆ ಕೊಡದಿರುವ ಬಗ್ಗೆ ನಮಗೆ ವಿಷಾದವೆನಿಸುತ್ತಿರಲಿಲ್ಲ. ಅಸ್ಪಶ್ಯರಿಗೆಂದು ಅಲ್ಪ ಪ್ರಮಾಣದಲ್ಲಿ ಕಾದಿರಿಸಿದ ಸ್ಥಳ, ಅವರ ಕೈ ಸೇರಿದರೆ, ಅವರಿಗೆ ಮೋಕ್ಷ ದೊರೆತಂತೆ ಎಂದುಕೊಳ್ಳುವಷ್ಟು ಮೂರ್ಖತನ ಬೇರಿಲ್ಲ.

ಮೀಸಲು ಸ್ಥಳ ಎಷ್ಟೇ ಹೆಚ್ಚಿಕೊಂಡರೂ, ಕಾಯ್ದೆ ಕೌನ್ಸಿಲ್‌ನಲ್ಲಿ ಅಲ್ಪಸಂಖ್ಯಾತರು, ಅಲ್ಪಸಂಖ್ಯಾತರಾಗಿಯೇ ಉಳಿಯುವವರು. ಬಹುಸಂಖ್ಯಾತರ ದಬ್ಬಾಳಿಕೆಯಿಂದ ಅಲ್ಪಸಂಖ್ಯಾತರಿಗೆ ಮುಕ್ತಿ ದೊರೆಯಲು, ಮೀಸಲಿಟ್ಟ ಸ್ಥಳದ ಪ್ರಮಾಣ ಎಷ್ಟೇ ಆದರೂ ಅದು ಅಸಂಪೂರ್ಣವೇ ಆಗಿರುತ್ತದೆ

ದಬ್ಬಾಳಿಕೆ ನಡೆಸುವ ಬಹುಸಂಖ್ಯಾತರ ವಿರುದ್ಧ ಬಂಡೆದ್ದು, ತಮ್ಮ ಪ್ರಾಣವನ್ನು ತ್ಯಜಿಸುವ, ಇಲ್ಲವೇ ಅವರ ಪ್ರಾಣವನ್ನು ತೆಗೆವ ಕೊನೆಯ ಉಪಾಯವಷ್ಟೇ ಅಲ್ಪಸಂಖ್ಯಾತರ ಕೈಯಲ್ಲಿದೆ ಎಂಬುದನ್ನರಿತಿರುವ ಕಾರಣವೇ ಮೀಸಲು ಸ್ಥಳದ ಸವಲತ್ತಿನ ಬಗ್ಗೆ ನಮಗೆ ವಿಶೇಷ ಭರವಸೆಯಿಲ್ಲ. ಆದರೆ, ನೆಹರೂ ಕಮಿಟಿಯ ಮತದಾರ ಸಂಘದ ಯೋಜನೆ, ನಿಷ್ಪಕ್ಷಪಾತವಾದುದಲ್ಲ ಎಂಬುದೇ ನಮ್ಮ ಮತ. ಹಾಗಲ್ಲವಾದರೆ, ಮುಸಲ್ಮಾನರಿಗೆ ಕೊಡಲಾದ ಸವಲತ್ತನ್ನು ಹಿಂದುಳಿದ ಹಿಂದೂಗಳಿಗೆ ಹಾಗೂ ಅಸ್ಪೃಶ್ಯರಿಗೆ ಕೊಡಲಾಗುತ್ತಿರಲಿಲ್ಲವೇ? ಹಾಗೆ ಕೊಡಲಾಗದಿರಲು, ನೆಹರೂ ಕಮಿಟಿ ಏನಾದರೂ ಕಾರಣ ಕೊಡಲಿ ; ನಮಗೆ ಕಾಣಿಸುವ ಕಾರಣ ಬೇರೆಯೇ ಇದೆ. ಮುಸಲ್ಮಾನರೂ, ಬ್ರಾಹ್ಮಣೇತರರೂ ಇಬ್ಬಗೆಯವರೂ ಹಿಂದುಳಿದವರಾಗಿದ್ದಾರೆ. ಆದರೆ, ಬ್ರಾಹ್ಮಣ್ಯವನ್ನು ಸಂರಕ್ಷಿಸುವ ದೃಷ್ಟಿಯಿಂದ ಇಬ್ಬಗೆಯಲ್ಲೂ ಬಹಳ ಅಂತರವಿದೆ. ಅದೆಂದರೆ, ಮುಸಲ್ಮಾನರಿಗೆ ರಾಜಕೀಯ ವಿಷಯದಲ್ಲಿ ಸವಲತ್ತು ನೀಡುವುದರಿಂದ ದೇಶ ಮುಳುಗಿದರೂ ಮುಳುಗಬಹುದು, ಆದರೆ ಬ್ರಾಹ್ಮಣ್ಯ ಮುಳುಗಲಾರದು. ಅದೇ ಬ್ರಾಹ್ಮಣೇತರರಿಗೆ ಸವಲತ್ತು ನೀಡಿದರೆ, ದೇಶ ಮುಳುಗಲಾರದು, ಆದರೆ ಬ್ರಾಹ್ಮಣ್ಯ ನಾಶವಾಗುವುದು ಖಂಡಿತ. ಬ್ರಾಹ್ಮಣರ ಧಾರ್ಮಿಕ ವರ್ಚಸ್ಸು ಇಂದಿಗೂ ಸ್ಥಿರವಾಗಿರಲು ಕಾರಣ, ಬ್ರಾಹ್ಮಣೇತರರ ಕೈಯೊಳಗಿನ ರಾಜಕೀಯ ಸತ್ತೆಯು, ಧಾರ್ಮಿಕ ಸತ್ತೆಯನ್ನು ಕೈಯೊಳಗಿರಿಸಿರುವ ಬ್ರಾಹ್ಮಣರ ಕಡೆಗಿರುವುದೇ ಆಗಿದೆ. ರಾಜಕೀಯ ಸತ್ತೆ ಜೊತೆಗಿರುವುದರಿಂದಲೇ, ಅವರ ಧಾರ್ಮಿಕ ಸತ್ತೆ ಸ್ಥಿರವಾಗಿದೆ. ರಾಜಕೀಯ ಸತ್ತೆಯ ಆಧಾರ ಮುರಿದೊಡನೆ, ಸಾಮಾಜಿಕ ಹಾಗೂ ಧಾರ್ಮಿಕ ಸತ್ತೆಯ ಅಡಿಪಾಯ

ಕುಸಿಯಲಿದೆ. ಧಾರ್ಮಿಕ ಸತ್ತೆಗೆ ರಾಜಕೀಯ ಸತ್ತೆ ಜೊತೆಯಾದಲ್ಲಿ, ಬ್ರಾಹ್ಮಣ ವರ್ಗ, ನೀರು ಹೊರುವ ಹಾಗೂ ಸ್ವಯಂಪಾಕ ಮಗ್ನವಾಗಿ ಉಳಿದಿದೆ;



ಮತ್ತು ಧಾರ್ಮಿಕ ಸತ್ತೆಗೆ ರಾಜಕೀಯ ಸತ್ತೆಯು ಜೊತೆಯಾದಲ್ಲಿ, ಬ್ರಾಹ್ಮಣರು ರಾಜ್ಯದ ಮೇಲೆ ಅಧಿಕಾರ ನಡೆಸುತ್ತಿದ್ದಾರೆ. ಪೇಶ್ವ ಆಡಳಿತ ಇದಕ್ಕೆ ಸಾಕ್ಷಿ. ಯಾವತ್ತು ಈ ಜೊತೆ ಮುರಿದು, ಬ್ರಾಹ್ಮಣರ ಕೈಯ ರಾಜಕೀಯ ಸತ್ತೆ ಬ್ರಾಹ್ಮಣೇತರರ ಕೈ ಸೇರುವುದೋ, ಆ ದಿನ ಬ್ರಾಹ್ಮಣರ ಕೊಡ ತುಂಬಲಿದೆ. ಹಿಂದುಳಿದ ಹಿಂದೂಗಳಿಗೆ ಅಸ್ಪೃಶ್ಯರಿಗೆಂದು ಕಾದಿರಿಸಿದ ಸ್ಥಳ ಕೊಡಲ್ಪಟ್ಟರೆ, ಆ ಪ್ರಮಾಣದಲ್ಲಿ, ಬ್ರಾಹ್ಮಣರ ರಾಜಕೀಯ ವರ್ಚಸ್ಸು ಕಡಿಮೆಯಾಗಲಿದೆ. ಅಸ್ಪಶ್ಯರು ಹಾಗೂ ಹಿಂದುಳಿದ ಹಿಂದೂಗಳನ್ನು ರಾಜಕೀಯ ಸತ್ತೆಯಿಂದ ದೂರ ಇರಿಸಿದ್ದಲ್ಲದೆ, ಬ್ರಾಹ್ಮಣರ ವರ್ಚಸ್ಸು ಸ್ಥಿರವಾಗಿ ಉಳಿಯದು, ಎಂಬುದು ಬ್ರಾಹ್ಮಣರಿಗೂ, ಅವರ ಸಮಾನರಿಗೂ ತಿಳಿದಿದೆ. ನೆಹರೂ ಕಮಿಟಿಯ ಹಿಂದೂ ಸಭಾಸದರಲ್ಲಿ, ಬ್ರಾಹ್ಮಣರೂ ಅವರಿಗೆ ಸಮಾನರೂ ಆದವರ ಸಂಖ್ಯೆ ದೊಡ್ಡದಿದೆ. ಅರ್ಥಾತ್, ಕಮಿಟಿಯಲ್ಲಿ ತಮ್ಮ ಸಭಾಸದಸ್ಯತ್ವದ ಲಾಭ ಪಡೆವಷ್ಟು ಸ್ವಾರ್ಥವನ್ನು ಅವರು ಸಾಧಿಸದೆ ಬಿಡುವುದಿಲ್ಲ. ಹಿಂದುಳಿದ ಹಿಂದೂಗಳಿಗೂ, ಅಸ್ಪೃಶ್ಯರಿಗೂ ಕಾದಿರಿಸಿದ ಸ್ಥಳವನ್ನು ಕೊಡದಿರುವುದು, ಅವರ ಸ್ವಾರ್ಥತನದ ಉಪಾಯವೇ ಆಗಿದೆ. ಹೀಗಾಗಿ, ನಾವು ಹೇಳುವುದೆಂದರೆ, ನೆಹರೂ ಕಮಿಟಿಯು ಸೂಚಿಸಿದ ಮತದಾರ ಸಂಘದ ಪದ್ಧತಿಯು, ಸರಳ ರಾಜಕಾರಣವಾಗಿರದೆ, ಬ್ರಾಹ್ಮಣ್ಯದ ಕಾರಸ್ಥಾನವೇ ತುಂಬಿಕೊಂಡಿದೆ.

**ಅಸ್ಪೃಶ್ಯರ ತುಳಿತ**

ನೆಹರೂ ಕಮಿಟಿಯು ಹಿಂದುಳಿದ ಹಿಂದೂಗಳ ಹಿತ ಸಾಧಿಸಿದ್ದರೆ, ಸಂತೋಷವೆನಿಸ ಬಹುದಿತ್ತು. ಆದರೆ ಕಮಿಟಿಗೆ ಅದನ್ನು ಸಾಧಿಸುವುದಾಗಲಿಲ್ಲ. ೧೯೧೬ರಲ್ಲಿ, ಕಾಂಗ್ರೆಸ್ ಹಾಗೂ ಮುಸ್ಲಿಂ ಲೀಗ್ ಮಧ್ಯೆ ಲಕ್ನೋದಲ್ಲಿ ನಡೆದ ಒಪ್ಪಂದವೇ ಮುಸಲ್ಮಾನರಿಗೆ ಇಂದು ರಾಜಕೀಯದಲ್ಲಿ ಪ್ರಾಪ್ತವಾಗಿರುವ ಹಕ್ಕಿನ ಉಗಮಸ್ಥಾನ. ಹಿಂದೂಗಳ ಕಾಂಗ್ರೆಸ್ ಮತ್ತು ಮುಸಲ್ಮಾನರ ಲೀಗ್, ಇವೆರಡು ಸಂಸ್ಥೆಗಳ ನಡುವೆ ೧೯೧೬ರ ವರ್ಷ ಪೂರ್ತಿ ಎಷ್ಟೊಂದು ಸವತಿ ಮತ್ಸರ ಹುಟ್ಟಿಕೊಂಡಿತೆಂದರೆ ಒಂದು ಪೂರ್ವದತ್ತ ಮುಖ ಮಾಡಿದರೆ, ಇನ್ನೊಂದು ಪಶ್ಚಿಮದತ್ತ. ಒಂದರ ಮೇಲೆ ಇನ್ನೊಂದರ ನೆರಳು ಬೀಳಬಾರದೆಂದು ಒಂದು ಸಂಸ್ಥೆಯ ಅಧಿವೇಶನ ನಡೆವಲ್ಲಿ ಇನ್ನೊಂದರ ಅಧಿವೇಶನ ಎಂದೂ ನಡೆಯುತ್ತಿರಲಿಲ್ಲ. ೧೦ ಜುಲೈ ೧೯೧೬ರಂದು ಹಿಂದುಸ್ಥಾನದಲ್ಲಿ ಸ್ವರಾಜ್ಯ ಸ್ಥಾಪನೆಯ ಘೋಷಣೆಯು ಪ್ರಸಿದ್ಧವಾದಂದಿನಿಂದ ಇಬ್ಬಗೆಯವರೂ ತಮ್ಮ ಸವತಿ ಮತ್ಸರವನ್ನು ಕಡಿಮೆ ಮಾಡಿಕೊಂಡು, ಜೊತೆಯಾಗುವ ಯತ್ನ ನಡೆಸಿದರು. ಈ ಜೊತೆಗೂಡುವಿಕೆಯಿಂದ ಅಸ್ತಿತ್ವಕ್ಕೆ ಬಂದ ಲಕ್ನೋ ಒಪ್ಪಂದದಂತೆ ಮುಸಲ್ಮಾನರಿಗೆ ಅನೇಕ ಸವಲತ್ತುಗಳನ್ನು ಒದಗಿಸಲಾಯ್ತು. ಮೀಸಲು ಜಾಗದ ಸವಲತ್ತು, ಮುಸಲ್ಮಾನರಿಗೆ ಅಪೂರ್ಣ ಅನಿಸಿತೆಂದು, ಸ್ವತಂತ್ರ ಮತದಾರ ಸಂಘದ ಬೇಡಿಕೆಯು ಕಾಂಗ್ರೆಸ್ ಪಕ್ಷದಿಂದ ಮಾನ್ಯ ಮಾಡಲ್ಪಟ್ಟಿತು. ಸ್ವತಂತ್ರ ಮತದಾರ ಸಂಘದ ಸವಲತ್ತು, ಅಲ್ಪಸಂಖ್ಯಾತರಿಗಾಗಿ ಮಾತ್ರ ಇದೆಯೆಂಬುದು ಸರ್ವಮಾನ್ಯ ವಿಚಾರ. ಅರ್ಥಾತ್, ಎಲ್ಲಿ ಮುಸಲ್ಮಾನರು ಅಲ್ಪಸಂಖ್ಯಾತರಾಗಿರುವರೋ, ಆ ಪ್ರಾಂತ್ಯದಲ್ಲಿ ಮಾತ್ರ ಈ ಸವಲತ್ತು ಅವರಿಗೆ ಕೊಡಬೇಕಿತ್ತು. ಆದರೆ, ಎಲ್ಲಿ ತಾವು ಬಹುಸಂಖ್ಯಾತರೋ, ಅಲ್ಲೂ ತಮಗೆ ಈ ಸವಲತ್ತು ಸಿಗಬೇಕೆಂದು ಮುಸಲ್ಮಾನರು ಆಗ್ರಹಿಸಿದುದರಿಂದ, ಕಾಂಗ್ರೆಸ್ ಪಕ್ಷವು ಅವರಿಗೆ ಈ ಸವಲತ್ತು ಕೊಡಬೇಕಾಯ್ತು. ಸ್ವತಂತ್ರ ಮತದಾರ ಸಂಘ ಪ್ರಾಪ್ತವಾದದ್ದರಿಂದ ಮುಸಲ್ಮಾನರು ತೃಪ್ತರಾಗಲಿಲ್ಲ.



ಪ್ರತಿನಿಧಿಗಳ ಸಂಖ್ಯೆಯ ವಿಷಯದಲ್ಲೂ ಅವರಿಗೆ ಸವಲತ್ತು ಬೇಕಿತ್ತು. ಅವರ ಜನಸಂಖ್ಯೆಯನ್ನು ಪರಿಗಣಿಸಿ, ಕಾಂಗ್ರೆಸ್, ಈ ಸವಲತ್ತು ನೀಡಲು ತಯಾರಾಗಿತ್ತು. ಆದರೆ, ಪ್ರತಿನಿಧಿತ್ವದ ಪ್ರಮಾಣ, ಜನ ಸಂಖ್ಯೆಯನ್ನು ಅವಲಂಬಿಸಿದರೆ, ತಮ್ಮ ಜನಸಂಖ್ಯೆ ಕಡಿಮೆಯಿರುವುದರಿಂದ ಪ್ರತಿನಿಧಿತ್ವವೂ ಕಡಿಮೆಯಾಗ ಬಹುದಲ್ಲದೆ, ಕಾಯಿದೆ ಕೌನ್ಸಿಲ್‌ನಲ್ಲೂ ತಮ್ಮ

ಪ್ರಭಾವ ಕಡಿಮೆಯಾಗಬಹುದೆಂಬ ಕಾರಣಕ್ಕೆ ಮುಸ್ಲಿಮ್ ಸಮಾಜವು ಇದಕ್ಕೆ ತಮ್ಮ ಒಪ್ಪಿಗೆಯೀಯಲಿಲ್ಲ. ತಮ್ಮ ಗತವೈಭವ ಸ್ಥಿರವಾಗಿರುವಂತೆ ತಕ್ಕ ಪ್ರಮಾಣದಲ್ಲಿ ಪ್ರತಿನಿಧಿತ್ವ ಸಿಗಬೇಕೆಂದು ಹಟ ಸಾಧಿಸಿತು, ಹಾಗೂ, ಕಾಂಗ್ರೆಸ್ ಪಕ್ಷವು ಇದನ್ನು ಮಾನ್ಯ ಮಾಡಬೇಕಾಯ್ತು. ೧೯೨೧ರಲ್ಲಿ ಸ್ಥಾಪಿತವಾದ ಹೊಸ ಸ್ವರಾಜ್ಯ ಸಂಘಟನೆಯಲ್ಲಿ ಈ ಲಕ್ನೋ ಒಪ್ಪಂದಕ್ಕೆ ಸಹಜವಾಗಿ ಬೆಂಬಲ ದೊರೆಯಿತು. ಒಪ್ಪಂದವನ್ನು ಇದ್ದುದಿದ್ದಂತೆ ಅಂಗೀಕರಿಸಿ ಕಾಯ್ದೆಯ ಸ್ವರೂಪವನ್ನು ನೀಡಲಾಯ್ತು. ಕೇವಲ ಒಂದೇ ವಿಷಯದಲ್ಲಿ ಆಂಗ್ಲ ಸರಕಾರವು ಒಪ್ಪಂದದಲ್ಲಿ ಬದಲಾವಣೆ ತಂದಿತು; ಅದೆಂದರೆ, ಮುಸಲ್ಮಾನರಿಗೆ ಕಾಯ್ದಿರಿಸಿದ ಪ್ರತಿನಿಧಿತ್ವದ ಪ್ರಮಾಣ . ಲಕ್ನೋ ಒಪ್ಪಂದದಂತೆ ನಿಗದಿಯಾದ ಪ್ರಮಾಣವು , ಯಾವ ದೃಷ್ಟಿಯಿಂದ ನೋಡಿದರೂ ದೋಷಯುಕ್ತವಾಗಿದೆ. ಕೇವಲ ಮುಸಲ್ಮಾನರ ಮರ್ಜಿಗೆ ಹೊಂದುವಂತೆ ಅದನ್ನು ಮಾನ್ಯ ಮಾಡಲಾಗಿತ್ತು. ಖಾಸಗೀ ವ್ಯವಹಾರದಲ್ಲಾದ ತಪ್ಪು ವ್ಯಕ್ತಿ ಮಾತ್ರಕ್ಕೆ ಅಡಚಣೆಯಾಗುತ್ತದೆ. ಯೋಗ್ಯ ವೇಳೆಯಲ್ಲಿ ತಿದ್ದಲ್ಪಟ್ಟರೆ, ಅದು ಸರಿ ಹೋಗುತ್ತದೆ. ಆದರೆ, ರಾಜ್ಯ ವ್ಯವಹಾರದಂತಹ ವ್ಯಾಪಕ ವ್ಯವಹಾರದಲ್ಲಿ ತಪ್ಪಾದರೆ, ಅದರ ಪರಿಣಾಮವನ್ನು ಇಡಿಯ ಸಮಾಜವೇ ಅನುಭವಿಸ ಬೇಕಾಗುತ್ತದೆ. ಹೀಗಿರುವಲ್ಲಿ, ಅದನ್ನು ಸೂಕ್ತ ಸಮಯದಲ್ಲಿ ತಿದ್ದಬೇಕೆಂಬುದನ್ನರಿತು ಆಂಗ್ಲ ಸರಕಾರವು, ಮುಸಲ್ಮಾನರ ಪ್ರತಿನಿಧಿತ್ವದ ಪ್ರಮಾಣದಲ್ಲಿ ಚೆನ್ನಾಗಿಯೇ ಕತ್ತರಿಯಾಡಿಸಿತು. ಮುಸಲ್ಮಾನರ ಪ್ರಾಂತ್ಯಾವಾರು ಜನಸಂಖ್ಯೆ, ಲಕ್ನೋ ಒಪ್ಪಂದದಂತೆ ಅವರ ಪ್ರತಿನಿಧಿತ್ವದ ಬಗ್ಗೆ ನಿಶ್ಚಿತವಾದ ಪ್ರಮಾಣ, ಮತ್ತು ಅದರಲ್ಲಿ ಇಂಗ್ಲಿಷ್ ಸರಕಾರವು ಕೈಯಾಡಿಸಿ ನಿಶ್ಚಿತಗೊಳಿಸಿದ ಸಂಖ್ಯೆ, ಈ ಎಲ್ಲ ಮಾಹಿತಿ, ಕೆಳಗಿನ ಕೋಷ್ಟಕದಲ್ಲಿ ನಮೂದಿಸಲಾಗಿದೆ. ಇದನ್ನು ನೋಡಿದರೆ, ಲಕ್ಷ್ಮೀ ಒಪ್ಪಂದದಂತೆ ಮುಸಲ್ಮಾನರಿಗೆ ಎಷ್ಟು ಹೆಚ್ಚಿನ ಸವಲತ್ತು ಕೊಡಲಾಗಿದೆಯೆಂದು ಸಹಜವಾಗಿಯೇ ತಿಳಿದು ಬರುತ್ತದೆ.

| ರಾಜ್ಯಗಳು | ಪ್ರಾಂತ್ಯ ಮುಸಲ್ಮಾನರ ಒಟ್ಟು ಜನಸಂಖ್ಯೆಯ ಚುನಾಯಿತ ಮುಸ್ಲಿಂ ಪ್ರತಿನಿಧಿಗಳಿಗೆ ಲಕ್ನೋ ಒಪ್ಪಂದದಂತೆ ನಿಶ್ಚಿತವಾದ ಶೇಕಡಾ ಪ್ರಮಾಣ | ಬ್ರಿಟಿಷ್ ಸರಕಾರ ನಿಗದಿ ಪಡಿಸಿದ ಮುಸ್ಲಿಂ ಪ್ರತಿನಿಧಿಗಳ ಶೇಕಡಾ ಪ್ರಮಾಣ | ಶೇಕಡಾ ಪ್ರಮಾಣ |
|---|---|---|---|
| ಮದರಸು | ೬.೭ | ೧೩.೨ | ೧೫ |
| ಮುಂಬಯಿ | ೧೯.೭ | ೩೧.೩ | ೩೩ |
| ಬಂಗಾಳ | ೫೩.೯ | ೩೪.೨ | ೪೦ |
| ಸಂಯುಕ್ತ ಪ್ರಾಂತ | ೧೪.೩ | ೨೯ | ೩೦ |
| ಪಂಜಾಬ್ | ೪೫.೭ | ೪೫.೭ | ೫೦ |
| ಬಿಹಾರ್, ಒರಿಸ್ಸಾ | ೧೦.೯ | ೨೩.೬ | ೨೫ |
| ಮಧ್ಯಪ್ರಾಂತ | ೪ | ೧೨.೭ | ೧೫ |
| ಆಸ್ಸಾಮ್ | ೨೮.೯ | ೩೦.೭ | |

ಈ ಲಕ್ನೋ ಒಪ್ಪಂದದಲ್ಲಿ ನೆಹರೂ ಕಮಿಟಿಯು ಎರಡು ಮಹತ್ವದ ಬದಲಾವಣೆ ತಂದಿತು. ಮೊದಲನೆಯದು, ಸ್ವತಂತ್ರ ಮತದಾರ ಸಂಘದ ಬದಲಿಗೆ ಏಕತ ಮತದಾರ ಸಂಘ ಹಾಗೂ ಮೀಸಲು ಸ್ಥಾನ. ಎರಡನೆಯ ಬದಲಾವಣೆಯೆಂದರೆ, ಜನಸಂಖ್ಯೆ ಆಧಾರಿತ ಪ್ರತಿನಿಧಿತ್ವ. ಇವೆರಡೂ ಮಹತ್ವದ ಬದಲಾವಣೆಯೆಂಬುದನ್ನು ಯಾರೂ ಅಲ್ಲಗಳೆಯಲಾರರು. ನೆಹರೂ ಕಮಿಟಿ ಮಾಡಿದ ಅಲ್ಪ ಉಪಕಾರವನ್ನೂ ಸ್ಮರಿಸಬೇಕಾಗುತ್ತದೆ. ಆದರೆ, ಕಮಿಟಿಯು ನಿರ್ಧರಿಸಿದ ಈ ಲಕ್ನೋ ಒಪ್ಪಂದದ ಬದಲಾವಣೆಯನ್ನು, ಮತ್ತೆ ಜೋಡಿಸಿ ರೂಪಿಸಿದ ಮೂರನೆಯ ಯೋಜನೆಯ ಕಾರಣ, ಈ ಹಿಂದಿನ ಬದಲಾವಣೆಯಿಂದ ಆಗಬೇಕಾಗಿದ್ದ ಸತ್ಪರಿಣಾಮವು, ಸಮೂಲಾಗ್ರವಾಗಿ ನಷ್ಟವಾಗಿ, ಹಿಂದೂ ಸಮಾಜದ ಮೇಲೆ ಉಪಕಾರದ ಬದಲಿಗೆ, ದೊಡ್ಡ ಅಪಕಾರವನ್ನೇ ಮಾಡಿದಂತಾಗಿದೆಯೆಂದು ಹೇಳಬೇಕಾಗಿದೆ. ಈ ಹೊಸ ಯೋಜನೆಯೇ ನವೀನ ಪ್ರಾಂತ್ಯ ರಚನೆಯ ಯೋಜನೆ. ಈ ಯೋಜನೆಯಂತೆ, ಸಿಂಧ್ ಪ್ರಾಂತ್ಯವನ್ನು ಮುಂಬಯಿ ಪ್ರಾಂತ್ಯದಿಂದ ಬೇರೆಮಾಡಿ, ಬಲೂಚಿಸ್ತಾನ ಹಾಗೂ ವಾಯುವ್ಯ ಸರಹದ್ದಿನ ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡಿ, ಅನ್ಯ ಪ್ರಾಂತ್ಯಗಳ ರಾಜ್ಯ ಸಂವಿಧಾನವನ್ನು ಅವುಗಳಿಗೂ ಮಾನ್ಯ ಮಾಡುವದು. ಈ ಪ್ರಾಂತ್ಯ ರಚನೆಯ ಉದ್ದೇಶ ಏನೆಂಬುದು ಇನ್ನೂ ಸ್ಪಷ್ಟವಾಗಿಲ್ಲ. ನೆಹರೂ ಕಮಿಟಿಯ ಬಗ್ಗೆ ಹಿಂದೂಗಳು ಈ ಪರಿಯಲ್ಲಿ ಹಿಂದೆಂದೂ ಮಾರು ಹೋಗಿರಲಿಲ್ಲವೆಂಬುದು ಖಂಡಿತ. ನೆಹರೂ ಕಮಿಟಿಯೂ ಅದನ್ನು ಮುಚ್ಚಿಟ್ಟು ಜನರನ್ನು ದಿಕ್ಕು ತಪ್ಪಿಸುವ ಯತ್ನ ಮಾಡಿತು. ತನ್ನ ಈ ಹೊಸ ಪ್ರಾಂತ್ಯ ರಚನೆಯು ಭಾಷಾವಾರು ತತ್ವಾಧಾರಿತವೆಂದು ನೆಹರೂ ಕಮಿಟಿಯ ಭಾವನೆ. ಭಾಷಾವಾರು ಪ್ರಾಂತ್ಯ ರಚನೆಯ ತತ್ವ ಒಳ್ಳೆಯದೇ. ಆದರೆ ಅದು ಜಾರಿಗೆ ಬಂದರೆ, ದೇಶಕ್ಕೆ ಅಪಾರ ನಷ್ಟವಾಗುವುದು ಖಂಡಿತವೆಂದು ನಮ್ಮ ಪ್ರಾಮಾಣಿಕ ಅಭಿಪ್ರಾಯ

.

ಈ ದೇಶದಲ್ಲಿ ಯಾವುದಾದರೂ ಭಾವನೆಯ ಕೊರತೆಯಿದ್ದರೆ, ಅದು, ರಾಷ್ಟ್ರೀಯ ಭಾವನೆಯದ್ದಾಗಿದೆ. ರಾಷ್ಟ್ರೀಯ ಭಾವನೆ ಈ ದೇಶದಲ್ಲಿ ಉದ್ಭವಿಸದಿರಲು ಮುಖ್ಯ ಕಾರಣ, ಇಲ್ಲಿನ ಅನೇಕ ಭಾಷೆಗಳೇ ಆಗಿವೆ. ಅದು ಇಲ್ಲವಾದ ಹೊರತು, ರಾಷ್ಟ್ರೈಕ್ಯತೆಯ ಭಾವನೆ ಉತ್ಪನ್ನವಾಗುವುದು ಶಕ್ಯವಿಲ್ಲ. ಭಾಷಾವಾರು ಪ್ರಾಂತ್ಯ ರಚನೆಯೆಂದರೆ, ಯಾರದಾದರೂ ಭಾವನೆಗಳ ಮೂಲಕ್ಕೆ ಧಕ್ಕೆಯುಂಟು ಮಾಡಿದಂತೆ. ಕಾರಣ, ಪ್ರಾಂತೀಯ ಭಾವನೆಯನ್ನು ಪೋಷಿಸಿದಷ್ಟೂ ರಾಷ್ಟ್ರೀಯ ಭಾವನೆಯ ಜೀವಜಲ ಬತ್ತಿ ಹೋದಂತೆ. ಈಗಿರುವ ಪ್ರಾಂತ್ಯ ರಚನೆಯಿಂದ

ರಾಷ್ಟ್ರೀಯ ಭಾವನೆ ಉದ್ಭವಿಸಿಲ್ಲವೆಂಬುದು ನಿಜ. ಆದರೆ, ಭಾಷಾವಾರು ಪ್ರಾಂತ್ಯರಚಿಸಲ್ಪಟ್ಟರೆ, ಅದೆಂದೂ ಉದ್ಭವಿಸುವಂತಿಲ್ಲ. ಭಾಷಾವಾರು ಪ್ರಾಂತ್ಯ ರಚನೆ ಮಾಡುವುದರ ಬದಲಿಗೆ, ಇಡಿಯ ದೇಶಕ್ಕೆ ಒಂದೇ ಭಾಷೆ ಪ್ರಾಪ್ತವಾಗುವಂತೆ ಮಾಡಲು ಯತ್ನಿಸುವುದರಲ್ಲಿ ನಿಜವಾದ ರಾಷ್ಟ್ರಹಿತ ಇದೆಯೆಂದು ನಮಗನಿಸುತ್ತದೆ. ಆದರೆ, ಭಾಷಾವಾರು ಪ್ರಾಂತ್ಯ ರಚನೆ ಒಳ್ಳೆಯದೋ, ಕೆಟ್ಟದೋ ಎಂಬ ಪ್ರಶ್ನೆಯನ್ನು ಬದಿಗಿಡುವ ಮುಖ್ಯ ಪ್ರಶ್ನೆಯೆಂದರೆ, ನೆಹರೂ ಕಮಿಟಿಯು ಸೂಚಿಸಿದ ಪ್ರಾಂತ್ಯ ರಚನೆಯ ಮೂಲದಲ್ಲಿ ಭಾಷಾವಾರು ತತ್ವ ಇದೆಯೋ, ಇಲ್ಲಾ ಬೇರೇನಾದರೂ ತತ್ವ ಇದೆಯೋ ಎಂಬುದು. ಕಮಿಟಿಯ ವರದಿಯನ್ನೋದಿ, ನಮಗನಿಸಿರುವುದು, ಅದರ ಮೂಲದಲ್ಲಿ ಭಾಷಾವಾರಿನ ಪ್ರಶ್ನೆ ಇಲ್ಲ, ಎಂದೇ.. ಭಾಷಾವಾರು ಪ್ರಾಂತ್ಯ ರಚನೆಯ ತತ್ವವನ್ನು ಕಮಿಟಿಯು ಅನುಸರಿಸಿದ್ದರೆ, ಈ ದೇಶದಲ್ಲಿ ಒಟ್ಟು ೧೭೯ ಪ್ರಾಂತೀಯ ವಿಭಜನೆಗಳು ಆಗುತ್ತಿದ್ದವು. ಕಾರಣ, ಈ ದೇಶದಲ್ಲಿ



ಅಷ್ಟೊಂದು ಭಾಷೆಗಳನ್ನಾಡುವ ಜನರಿದ್ದಾರೆ. ಆದರೆ, ಕಮಿಟಿಯು ಅಂತಹ ಯೋಜನೆ ಮಾಡಲಿಲ್ಲ. ಬದಲಿಗೆ, ಭಾಷಾವಾರು ಪ್ರಾಂತ್ಯ ರಚಿಸುವುದು ಅತ್ಯಂತ ಕಷ್ಟವೆಂದು ತಿಳಿದು, ಅದನ್ನು ಕೋರಿದ ಕೆಲ ಜನರ ಬೇಡಿಕೆಯನ್ನು ಕಮಿಟಿಯು ತಿರಸ್ಕರಿಸಿದೆ. ಸಿಂಧ್ ಬಲೂಚಿಸ್ತಾನ, ವಾಯುವ್ಯ ಸರಹದ್ದು ಪ್ರದೇಶ, ಈ ಮೂರು ಕ್ಷೇತ್ರಗಳಿಗಷ್ಟೇ ಕೆಲ ಅಡಚಣೆಗಳು ಆಗಬಹುದಿತ್ತು. ಆದರೆ ಆ ಎಲ್ಲ ಅಡಚಣೆಗಳನ್ನು ಬದಿಗಿಟ್ಟು, ಈ ಮೂರು ಕ್ಷೇತ್ರಗಳಿಗೆ ಭಿನ್ನ ಪ್ರಾಂತ್ಯದ ಸ್ವರೂಪವನ್ನು ಕೊಡುವಲ್ಲಿ, ಭಾಷಾವಾರು ತತ್ವವಷ್ಟೇ ಅಲ್ಲದೆ, ಇನ್ನೇನೋ ಪ್ರಬಲ ಕಾರಣ ಇರಬಹುದು, ಎಂಬ ಸಂಶಯ ಸಹಜವಾಗಿ ಮೂಡುತ್ತದೆ. ಭಾಷಾವಾರು ಪ್ರಾಂತ್ಯರಚನೆ ಆಗಬೇಕಿದ್ದರೆ, ವಾಯುವ್ಯ ಸರಹದ್ದು ಪ್ರಾಂತ್ಯ, ಪಂಜಾಬ್ ಹಾಗೂ ಸಂಯುಕ್ತ ಪ್ರಾಂತಗಳಲ್ಲಿನ ಭಾಷೆ ಒಂದೇ. ಅವುಗಳ ಪ್ರಸಕ್ತ ಗಡಿಗಳನ್ನು ಮೀರಿ, ವಿಭಿನ್ನ ಗಡಿಗಳನ್ನು ನಿರ್ಧರಿಸಿ, ವಿಭಿನ್ನ ಪ್ರಾಂತ್ಯಗಳನ್ನು ರಚಿಸ ಬಹುದಿತ್ತು. ಆದರೆ, ಕಮಿಟಿಯು ಹಾಗೆ ಮಾಡಿಲ್ಲ. ಆದ್ದರಿಂದಲೇ, ಪ್ರಾಂತ್ಯರಚನೆಯು, ಭಾಷಾವಾರು ಆಗಿರದೆ, ಬೇರೇನೋ ತತ್ವಾನುಸಾರ ಆಗಿದೆ ಎಂಬ ಅಭಿಪ್ರಾಯ ಮೂಡುತ್ತದೆ, ಈ ತತ್ವ ಯಾವುದೆಂದು ನೆಹರೂ ಕಮಿಟಿಯು ಪ್ರಕಟಿಸಿದ್ದಿದ್ದರೆ, ಮುದುಕಿಯ ಕೋಳಿ ಕೂಗದಿದ್ದರೆ,

ಸೂರ್ಯ ಉದಯವಾಗದಿರುವುದೇ ಎಂಬಂತೆ, ನೆಹರೂ ಕಮಿಟಿಯು ಮುಚ್ಚಿಟ್ಟ ತತ್ವವು ಬೆಳಕಿಗೆ ಬಾರದಿರುತ್ತಿರಲಿಲ್ಲ. ನೆಹರೂ ಕಮಿಟಿಯು ಸಾದರ ಪಡಿಸಿದ ಯೋಜನೆಯು, ಮೂಲದಲ್ಲಿ ಮುಸಲ್ಮಾನರದಾಗಿದ್ದು, ನೆಹರೂ ಕಮಿಟಿಯದ್ದಲ್ಲ , ಎಂಬುದು ಸಾಕಷ್ಟು ಜನರಿಗೆ ಮನವರಿಕೆಯಾಗಿಲ್ಲ. ಆದರೆ,೨೦ ಮಾರ್ಚ್, ೧೯೨೭ರಂದು ದೆಹಲಿಯಲ್ಲಿ ಮುಸಲ್ಮಾನರು ಮುಂದಿಟ್ಟ ಬೇಡಿಕೆಯನ್ನೂ, ನೆಹರೂ ಕಮಿಟಿಯ ಯೋಜನೆಯನ್ನೂ ಪರಿಶೀಲಿಸುವ ಯಾರಿಗೇ ಆದರೂ ಇದನ್ನು ನೆಹರೂ ಕಮಿಟಿಯು ಎಲ್ಲೂ ಇಲ್ಲವೆಂದಾಗಿಸಲಿಲ್ಲ ಎಂಬುದು ತಿಳಿದು ಬರುತ್ತದೆ. ಕೇವಲ ಮುಸಲ್ಮಾನರ ಬೇಡಿಕೆಯನ್ನು ಮನ್ನಿಸಿ, ಅದನ್ನು ತನ್ನ ಯೋಜನೆಯಲ್ಲಿ ಅದು ನಮೂದಿಸಿದೆ. ಆ ಬೇಡಿಕೆಯಲ್ಲಿ ಮುಸಲ್ಮಾನರು, ಸಿಂದ್ ಪ್ರಾಂತ್ಯ, ಬಲೂಚಿಸ್ತಾನ, ಹಾಗೂ ವಾಯುವ್ಯ ಸರಹದ್ದು ಪ್ರಾಂತ್ಯಗಳನ್ನು ಬೇರೆಯಾಗಿಸಿ, ಸ್ವಯಂಸತ್ತೆ ಜಾರಿಗೆ ತಂದಂತೆ, ತಾವು, ಸ್ವತಂತ್ರ ಮತದಾರ ಸಂಘವನ್ನು ಬಿಟ್ಟುಕೊಟ್ಟು, ಏಕತ್ರಿತ ಮತದಾರ ಸಂಘ ಹಾಗೂ ಮೀಸಲು ಸ್ಥಾನವನ್ನು ಸ್ವೀಕರಿಸಲು ಸಿದ್ಧವೆಂದು ಪ್ರಕಟಿಸಿದರು. ಈ ಬೇಡಿಕೆ ನಮಗೆ ಅತ್ಯಂತ ವಿಚಿತ್ರವಾಗಿ ಕಾಣುತ್ತದೆ. ಏಕತ ಮತದಾರ ಸಂಘವನ್ನು ಸ್ವೀಕರಿಸುವುದಕ್ಕೂ, ಸಿಂಧ್, ಬಲೂಚಿಸ್ತಾನ ಮತ್ತು ವಾಯುವ್ಯ ಸರಹದ್ದು ಪ್ರದೇಶಗಳ ಭಿನ್ನ ಪ್ರಾಂತ್ಯ ರಚನೆಗೂ ಏನು ಸಂಬಂಧವೆಂದು ನಮಗೆ ತಿಳಿಯುವುದಿಲ್ಲ. ಸ್ವತಂತ್ರ ಮತದಾರಸಂಘ ರಚಿಸುವುದರಿಂದ ಮುಸಲ್ಮಾನರಿಗಾಗುವ ನಷ್ಟವನ್ನು ಭಿನ್ನ ಪ್ರಾಂತ್ಯ ರಚನೆಯಿಂದ ಹೇಗೆ ತುಂಬಿಸಬಹುದು ಎಂಬುದನ್ನು ವಿಶದ ಪಡಿಸಲಾಗಿಲ್ಲ. ಆದರೆ, ಪಂಜಾಬದಲ್ಲಿ ನಡೆದ ಸೈಮನ್ ಕಮೀಶನ್‌ನ ಸಭೆಯಲ್ಲಿ, ಮುಸಲ್ಮಾನ ಧುರೀಣರ ಸಾಕ್ಷಿಯಲ್ಲಿ ಈ ಎರಡರ ನಡುವಣ ಸಂಬಂಧದ ಬಗ್ಗೆ ಸ್ಪಷ್ಟೀಕರಣ ನೀಡಲಾಗಿದೆ. ಆ ಸ್ಪಷ್ಟೀಕರಣ ಹೀಗಿದೆ : ಪ್ರಸ್ತುತ ಪ್ರಾಂತ್ಯರಚನೆಯಲ್ಲಿ ಕೇವಲ ಪಂಜಾಬ್ ಮತ್ತು ಬಂಗಾಳಗಳಲ್ಲಿ ಮುಸಲ್ಮಾನರು ಹಿಂದೂಗಳಿಗಿಂತ ಅಧಿಕ ಸಂಖ್ಯೆಯಲ್ಲಿದ್ದಾರೆ. ಸಿಂಧ್, ಬಲೂಚಿಸ್ತಾನ ಹಾಗೂ ವಾಯುವ್ಯ ಸರಹದ್ದು ಪ್ರಾಂತ್ಯಗಳು ಬೇರ್ಪಡಿಸಲ್ಪಟ್ಟು ಸ್ವತಂತ್ರವಾದರೆ, ಹಿಂದುಸ್ತಾನದ ಒಟ್ಟು ಒಂಬತ್ತು ಹೊಸ ಪ್ರಾಂತ್ಯಗಳ ಪೈಕಿ, ಇದರಲ್ಲಿ ಮುಸಲ್ಮಾನರ ಪ್ರಾಬಲ್ಯವಾಗುವುದು. ಹೀಗೆ ಪ್ರಾಂತ್ಯರಚನೆಯಾದಲ್ಲಿ, ಮುಸಲ್ಮಾನರು ಅಲ್ಪಸಂಖ್ಯಾತರಾಗಿರುವಲ್ಲಿ, ಹಿಂದೂಗಳು ಮುಸಲ್ಮಾನರ



ಮೇಲೆ ಹಿಂಸೆಗೈದಲ್ಲಿ, ಹಿಂದೂಗಳು ಅಲ್ಪಸಂಖ್ಯಾತರಾಗಿರುವಲ್ಲಿ, ಮುಸಲ್ಮಾನರು ಅವರ ಮೇಲೆ ಹಿಂಸೆಗೈಯಬಹುದು. ಹೀಗೆ ಪರಸ್ಪರರನ್ನು ಎಚ್ಚರಿಸಬಹುದು. ಹೀಗೆ ಎಚ್ಚರಿಸುವುದರಿಂದ ಜಾತಿವಾರು ಸಂಘ ಇಲ್ಲವಾದುದರ ನಷ್ಟವನ್ನು

ತುಂಬಿಸಬಹುದು. ಸ್ಪಷ್ಟೀಕರಣದಲ್ಲಿನ ಇನ್ನೊಂದು ವಿಚಾರವೆಂದರೆ, ನೆಹರೂ ಕಮಿಟಿಯು ಮಾನ್ಯಗೈದ ಪ್ರಾಂತ್ಯರಚನೆಯು, ಭಾಷಾವಾರು ತತ್ವಾಧಾರಿತವಾಗಿರದೆ, ಮುಸಲ್ಮಾನರ ಗಡ್ಡವು ಹಿಂದೂಗಳ ಕೈಯೊಳಗಿರುವಂತೆಯೇ, ಹಿಂದೂಗಳ ಜುಟ್ಟು ಮುಸಲ್ಮಾನರ ಕೈಯಲ್ಲಿರುವಂತೆ ರೂಪಿಸಿದ್ದಾಗಿದೆ. ಪ್ರತಿಯೊಬ್ಬ ಹಿಂದೂವನ್ನು ನಾವು ಕೇಳುವ ಪ್ರಶ್ನೆಯೆಂದರೆ, ಮುಸಲ್ಮಾನರಿಗೆ ಸ್ವತಂತ್ರ ಮತದಾರ ಸಂಘವನ್ನೀಯುವುದು ಒಳ್ಳೆಯದೋ, ಇಲ್ಲ, ಕೆಲವೊಂದು ಮುಸಲ್ಮಾನೀ ಪ್ರಾಂತ್ಯಗಳನ್ನು ರಚಿಸಿ, ಅಲ್ಲಿ ಹಿಂದೂಗಳನ್ನು ಮುಸಲ್ಮಾನರ ಸಾಲಿನಲ್ಲಿರಿಸುವುದು ಒಳ್ಳೆಯದೋ ? ಮುಸಲ್ಮಾನರ ಸ್ವತಂತ್ರ ಮತದಾರಸಂಘ ಇದ್ದರೆ, ಆ ದೃಷ್ಟಿಯಲ್ಲಿ ರಾಜ್ಯಪದ್ಧತಿಯು ಜವಾಬ್ದಾರಿಹೀನವಾಗುವುದು. ಆದರೆ, ಮುಸಲ್ಮಾನರ ಕೈಗೆ ರಾಜಕೀಯ ಆಡಳಿತ ಬಂದರೆ, ಹಿಂದೂಗಳನ್ನು ದಮನಿಸಿದಂತಾಗುವುದಿಲ್ಲ. ಸ್ವತಂತ್ರ ಸಂಘದ ಬದಲಿಗೆ ಏಕತ ಸಂಘ ಮತ್ತು ಮೀಸಲು ಸ್ಥಾನದ ಪದ್ಧತಿ ಜಾರಿಗೆ ಬಂದರೆ, ರಾಜ್ಯಪದ್ಧತಿಯು ಜವಾಬ್ದಾರಿಯುತ ಪದ್ಧತಿಯೇ ಆಗುವುದು ಖಂಡಿತ. ಆದರೆ, ಆ ಯೋಜನೆಗಳನ್ನು ಸೇರಿಸಿ, ಹೊಸ ಪ್ರಾಂತ್ಯ ರಚನೆ ಘಟಿಸಿದರೆ, ಹಿಂದೂಗಳ ದಮನ ನಡೆಯದಿರುವುದಿಲ್ಲ. ಯಾವ ಯೋಜನೆಯಿಂದ ಹಿಂದೂಗಳಿಗೆ ಧಕ್ಕೆಯಾಗುವುದೋ, ಆ ಯೋಜನೆಯಿಂದ ಪ್ರಯೋಜನವೇನು? ಮುಸಲ್ಮಾನರ ಸ್ವತಂತ್ರ ಮತದಾರ ಸಂಘ ಇರಲಿ, ಸರಿ ; ಆದರೆ, ನೆಹರೂ ಕಮಿಟಿಯ ಈ ಹೊಸ ಯೋಜನೆ ಬೇಡವೆಂದೇ ನಮ್ಮ ಸ್ಪಷ್ಟ ಅಭಿಮತ. ಹಿಂದೂಗಳ ಹಿತ ಸಂಬಂಧ, ನೆಹರೂ ಕಮಿಟಿಯು ಎಷ್ಟೊಂದು ಪರಿವೆಯಿಲ್ಲದೆ ವರ್ತಿಸಿದೆಯೆಂದರೆ, ಅಲ್ಪಸಂಖ್ಯಾತ ಮುಸಲ್ಮಾನರಿಗೆ ಕೊಡಲಾದ ಹಕ್ಕುಗಳನ್ನು ಅಲ್ಪಸಂಖ್ಯಾತ ಹಿಂದುಗಳಿಗೆ ಕೊಡಲಾಗಿಲ್ಲ. ಉದಾಹರಣೆಗೆ, ಯಾವ ಯಾವ ಪ್ರಾಂತ್ಯದಲ್ಲಿ ಮುಸಲ್ಮಾನರು ಅಲ್ಪಸಂಖ್ಯಾತರಿದ್ದಾರೋ, ಆ ಆ ಪ್ರಾಂತ್ಯದಲ್ಲಿ ಕಾಯ್ದೆ ಕೌನ್ಸಿಲ್‌ನಲ್ಲಿ ಇಂತಿಷ್ಟು ಸ್ಥಾನ ಕಾದಿರಿಸಲಾಗಿದೆ. ಬಂಗಾಳ ಮತ್ತು ಪಂಜಾಬ ಈ ಎರಡು ಪ್ರಾಂತ್ಯಗಳಲ್ಲಿ ಹಿಂದೂಗಳು ಅಲ್ಪಸಂಖ್ಯಾತರಿದ್ದರೂ, ಅವರಿಗಾಗಿ ನೆಹರೂ ಕಮಿಟಿಯು ಹೀಗೆ ಸ್ಥಾನ ಕಾದಿರಿಸುವ ಯಾವುದೇ ಸವಲತ್ತು ನೀಡಿಲ್ಲ! ಈ ಎರಡು ಪ್ರಾಂತ್ಯಗಳಲ್ಲಿ ಹಿಂದೂಗಳಿಗೆ ಎಂದೂ ಮೀಸಲು ಸ್ಥಾನದ ಅಗತ್ಯವಿಲ್ಲ. ಆದರೆ, ಅಂತಹ ಸವಲತ್ತು ಕೊಡುತ್ತಿದ್ದರೆ ಅದರಿಂದ ಕೆಡುಕೆನೂ ಆಗುತ್ತಿರಲಿಲ್ಲ. ಕಂದಕವನ್ನು ಹಾರಿ ದಾಟಬಹುದಾದರೂ, ಅದರ ಮೇಲೆ ಸೇತುವೆ ಕಟ್ಟುವುದರಲ್ಲೇ ಬುದ್ಧಿವಂತಿಕೆಯಿದೆ. ವ್ಯವಹಾರದಲ್ಲಿ ಧೈರ್ಯಕ್ಕಿಂತಲೂ ಚಾತುರ್ಯಕ್ಕೆ ಹೆಚ್ಚಿನ ಬೆಲೆಯಿದೆ.

ನಾವು ಮೊಳಗಿಸಿದ ಈ ಭಯಸೂಚಕ ಘಂಟೆ ನಿಷ್ಕಾರಣವೆಂದು ಕೆಲವರು ಹೇಳುತ್ತಾರೆ. ಮುಸಲ್ಮಾನರು ಬಹುಸಂಖ್ಯೆಯಲ್ಲಿರುವ ಪ್ರಾಂತ್ಯ ನಿರ್ಮಾಣವಾದರೂ, ಅದನ್ನು ಖಂಡಿಸಲು ಹಿಂದೂಗಳು ಬಹುಸಂಖ್ಯೆಯಲ್ಲಿರುವ ಪ್ರಾಂತ್ಯ ಅಸ್ತಿತ್ವಕ್ಕೆ ಬಂದರೂ, ಮತ್ತು ಮುಸಲ್ಮಾನರು ಬಹು ಸಂಖ್ಯೆಯಲ್ಲಿ ಅಸ್ತಿತ್ವದಲ್ಲಿರುವ ಪ್ರಾಂತ್ಯದಲ್ಲಿ ಮುಸಲ್ಮಾನರು ಆಕ್ರಮಣಕಾರೀ ಧೋರಣೆ ಹೊಂದಿದರೆ, ಹಿಂದೂಗಳು ತಾವು ಬಹುಸಂಖ್ಯೆಯಲ್ಲಿರುವ ಪ್ರಾಂತ್ಯದಲ್ಲಿ

ಸಹಜವಾಗಿ ಮುಯ್ಯ ತೀರಿಸಿ ಕೊಳ್ಳಬಹುದು. ಮುಸಲ್ಮಾನರ ಅಕ್ರಮ ಬೆಳವಣಿಗೆಯಿಂದಲೇ ಪ್ರತೀಕಾರ ಪ್ರವೃತ್ತಿ ಹೆಚ್ಚಿಕೊಂಡಿತು.

ಪರಸ್ಪರ ಭಯದಿಂದ ಎರಡೂ ಸಮಾಜಗಳು ನಿಯಂತ್ರಣದಲ್ಲಿರಬಹುದಾದರೂ, ಇದು



ಸ್ಪೃಹಣೀಯವಲ್ಲ. ಆಡಳಿತವನ್ನು ಸರಿದೂಗಿಸುವ ತತ್ವವು, ಬೇರೆ ಬೇರೆ ರಾಷ್ಟ್ರಗಳ ವ್ಯವಹಾರದಲ್ಲಿ ಲಾಭದಾಯಕವಿರಬಹುದು. ಆದರೆ ಯಾವ ಸಮಾಜಕ್ಕೆ ಒಂದು ದೇಶದಲ್ಲಿ ರೋಗಿಗಳು ರೋಗಿಗಳಾಗೇ ಇರಬೇಕೋ, ಮತ್ತು ಅವರ ಹಿತಸಂಬಂಧ ಇಷ್ಟೊಂದು ಪರಸ್ಪರಾವಲಂಬನ ಇದೆಯೋ, ಅವು ಪರಸ್ಪರ ಸುಖಕ್ಕಾಗಿ ಜೀವಿಸುವ ವ್ಯವಸ್ಥೆ ಮಾಡುವುದರ ಬದಲಿಗೆ, ಸದಾ ಒಬ್ಬರನ್ನೊಬ್ಬರು ವಕ್ರದೃಷ್ಟಿಯಿಂದ ನೋಡುತ್ತಾ, ಪ್ರತೀಕಾರಕ್ಕೆ ತೊಡಗಲು ಸಿದ್ಧ ಮಾಡುವಂತಹ ಇಂತಹ ಮೂರ್ಖ ಯೋಜನೆ ಬೇರೇನಿರಬಹುದು?

ಹಿಂದೂಗಳು ತಮ್ಮ ಪ್ರಾಂತ್ಯದಲ್ಲಿ ತಮ್ಮ ಜಮೀನು ಕೊಟ್ಟವರಿದ್ದಾರೆ, ಹಾಗೆಯೇ, ಮುಸಲ್ಮಾನರು ತಮ್ಮ ಪ್ರಾಂತ್ಯದಲ್ಲಿ ತಮ್ಮ ಜಮೀನು ಕೊಟ್ಟವರಿದ್ದಾರೆ ಎಂದುಕೊಂಡು, ಇಬ್ಬಗೆಯವರೂ ಕೃತ ನಿಶ್ಚಯರಾದರೆ, ಆ ಪ್ರಾಂತ್ಯದ ಜನರಿಗೆ ಸುಖ, ಸ್ವಾಸ್ಥ್ಯ ಸಿಗುವುದೆಂದು ನಮಗೆ ಸ್ವಲ್ಪವೂ ಅನಿಸುವುದಿಲ್ಲ. ಒಂದು ಪ್ರಾಂತ್ಯದ ಬಹುಸಂಖ್ಯಾತರು, ಅಲ್ಲಿನ ಅಲ್ಪಸಂಖ್ಯಾತರನ್ನು ಘಾತಿಸುವ ಮೂರ್ಖತನ ತೋರಿದರೆಂದು, ಇತರ ಪ್ರಾಂತ್ಯಗಳ ಬಹುಸಂಖ್ಯಾತರನ್ನು ಅಲ್ಲಿನ ಅಲ್ಪಸಂಖ್ಯಾತರು ವಿನಾಕಾರಣ ಘಾತಿಸಬೇಕೆಂಬುದು ಶುದ್ಧ ಕೆಡುಕುತನ. ಈಗ ನೆಹರೂ ಕಮಿಟಿಯವರೆನ್ನುವಂತೆ, ಒಂದು ಪ್ರಾಂತ್ಯ, ಒಂದು ಭಾಷೆ ಎಂಬ ತಮ್ಮ ಪ್ರಾಂತ ರಚನೆಯ ಯೋಜನೆಯ ಪರಿಣಾಮವಾಗಿ, ಕೆಲ ಪ್ರಾಂತ್ಯಗಳಲ್ಲಿ ಹಿಂದೂಗಳ ಪ್ರಾಬಲ್ಯವಾದರೆ, ಮತ್ತೆ ಕೆಲ ಪ್ರಾಂತ್ಯಗಳಲ್ಲಿ ಮುಸ್ಲಿಮರ ಪ್ರಾಬಲ್ಯ ಎಂದಾದರೆ, ಅದಕ್ಕೆ ನಿರ್ವಾಹವಿಲ್ಲ. ಇದಕ್ಕೆ ನಮ್ಮ ಉತ್ತರವೆಂದರೆ, ಯಾವುದೇ ಯೋಜನೆ ಒಳ್ಳೆಯದು ಇಲ್ಲವೇ ಕೆಟ್ಟದಿರುವುದು ಅದರ ಮೂಲದಲ್ಲಿರುವ ಕಾರಣದಿಂದಾಗಿ, ವ್ಯವಸ್ಥೆ ನೋಡಲು ಚೆನ್ನಾಗಿದ್ದರೂ, ಅದರ ಮೂಲದ ಕಾರಣ ಕೆಟ್ಟದಿದ್ದರೆ, ಅದರ ಪರಿಣಾಮ ಕೆಟ್ಟದಾಗದಿರುವುದಿಲ್ಲ

.

"ಇಚ್ಛೆಯಂತೆ ಫಲ" ಎಂಬ ಸಂತವಾಣಿ ಪ್ರಸಿದ್ಧವಾಗಿದೆ. ಒಂದು ಭಾಷೆಯನ್ನಾಡುವ ಜನರು ಒಂದೆಡೆ ಸೇರಬೇಕು, ಪರಸ್ಪರ ಅವರು ಸಂಘಟಿತರಾಗಬೇಕು, ಅವರ ಸಂಸ್ಕೃತಿ ಬೆಳೆಯ ಬೇಕು ಮತ್ತು ರಾಷ್ಟ್ರದದ ಸಂಪತ್ತು ವೃದ್ಧಿಸಬೇಕು, ಎಂಬುದೇ ಭಾಷಾವಾರು ಪ್ರಾಂತ್ಯರಚನೆಯ ಉದ್ದೇಶ ವಾಗಿದ್ದರೆ, ನಾವದನ್ನು ಸಹಿಸಿಕೊಳ್ಳಬಹುದಿತ್ತು ; ಆದರೆ, ಭಾಷಾವಾರು ಪ್ರಾಂತ್ಯ ರಚನೆಯ ಉದ್ದೇಶ ಅದಲ್ಲವೆಂದು ಮುಸಲ್ಮಾನರಿಗೆ ಸ್ಪಷ್ಟವಾಗಿ ತಿಳಿಸಿ ಹೇಳಲಾಗಿದೆ.

ಕೆಲವು ಪ್ರಾಂತ್ಯಗಳಲ್ಲಿ ನಮ್ಮ ಗಡ್ಡ ಹಿಂದೂಗಳ ಕೈಯಲ್ಲಿದೆ, ಹಾಗಾಗಿ ಮತ್ತೆ ಕೆಲ ಪ್ರಾಂತ್ಯಗಳಲ್ಲಾದರೂ ಹಿಂದೂಗಳ ಜುಟ್ಟು ನಮ್ಮ ಕೈಯಲ್ಲಿ ಇರಬೇಕು ಎಂಬ ಕಾರಣಕ್ಕೆ ಇಂತಹ ಪ್ರಾಂತ್ಯ ರಚನೆ ನಮಗೆ ಅವಶ್ಯ ಎಂದು ಅವರು ಸ್ಪಷ್ಟ ಶಬ್ದಗಳಲ್ಲಿ ಹೇಳಿದ್ದಾರೆ. ಹಿಂದೂ ಸಮಾಜದಲ್ಲಿ ಹೆಣ್ಣು ಕೊಟ್ಟು ಹೆಣ್ಣು ತರುವ ಸಾಟಿ ಸಂಬಂಧದ ಮದುವೆಗಳಾಗುತ್ತವೆ. ನೆಹರೂ ಕಮಿಟಿಯ ಪ್ರಾಂತ್ಯ ರಚನೆಯೆಂದರೆ, ಒಂದು ರೀತಿಯಲ್ಲಿ ಹಿಂದೂ ಮುಸಲ್ಮಾನರ ನಡುವೆ ಸಾಟಿ ಸಂಬಂಧದ ಮದುವೆ ಎನ್ನಲು ಅಡ್ಡಿಯಿಲ್ಲ. ಯಾವ ಕಾರಣದಿಂದ ಸಾಟಿ ಮದುವೆ ಸಾಧ್ಯವಾಗುತ್ತದೋ, ಅದೇ ಕಾರಣದಿಂದ ಪ್ರಾಂತ್ಯ ರಚನೆ ಸಾಧ್ಯವಾಗುತ್ತದೆ. ಸಾಟಿ ಮದುವೆಗಳು ಇತರ ಮದುವೆಗಳಂತೆಯೇ ಇರುತ್ತವೆ. ಆದರೆ ಅದರ ಕೆಟ್ಟ ಪರಿಣಾಮ ಕೃತಿಯಲ್ಲಿ ಕಾಣದಿರುವುದಿಲ್ಲ. ಇದರ ಅನುಭವ ಎಲ್ಲ ಹಿಂದೂಗಳಿಗೂ ಆಗಿರುತ್ತದೆ. ಅಂತೆಯೇ ಈ ಪ್ರಾಂತ್ಯ ರಚನೆಯೂ ಅಷ್ಟೇ, ಈ ಪ್ರಾಂತ್ಯ ರಚನೆಯ ಮೂಲದಲ್ಲಿ ಮುಸಲ್ಮಾನರೊಡನೆ ಸಾಟಿ ಸಂಬಂಧದ ಉದ್ದೇಶವೇ ಇದೆಯಲ್ಲದೆ, ಬೇರೇನಲ್ಲ. ಪ್ರಾಂತೀಯ ಸರಕಾರ ಹಾಗೂ ಮಧ್ಯವರ್ತಿ ಸರಕಾರ, ಇವೆರಡರ ಪರಸ್ಪರ ಸಂಬಂಧ ಯಾವ



ರೀತಿ ಇರಬೇಕೆಂಬುದು ಅತ್ಯಂತ ಮಹತ್ವದ ಪ್ರಶ್ನೆ, ಪ್ರಾಂತೀಯ ಸರಕಾರ ಮತ್ತು ಮಧ್ಯವರ್ತಿ ಸರಕಾರಗಳ ನಡುವೆ ಅಧಿಕಾರ ವಿಭಜನೆ ಆಗಿದೆ. ಅದಿಲ್ಲದೆ, ಅವೆರಡರಿಂದಲೂ ರಾಜ್ಯ ಕಾರಭಾರವನ್ನು ಸುಗಮವಾಗಿ ಸಾಗಿಸುವುದು ಅಸಾಧ್ಯ. ಆದರೆ ಹೀಗೆ ವಿಭಾಗಿಸುವಲ್ಲಿ ಎರಡು ಪ್ರಶ್ನೆಗಳು ಏಳುತ್ತವೆ. ಪ್ರಾಂತೀಯ ಸರಕಾರಕ್ಕೆ ವಿಭಾಗಿಸಿ ಕೊಡಲ್ಪಟ್ಟ ಅಧಿಕಾರದ ಮೇಲೆ ನಿಯಂತ್ರಣವಿಡುವ ಹಕ್ಕು, ಮಧ್ಯವರ್ತಿ ಸರಕಾರಕ್ಕೆ ಇದೆಯೇ ಇಲ್ಲವೇ ಎಂಬುದು ಮೊದಲ ಪ್ರಶ್ನೆ.

ಎರಡನೆಯದು, ಪರಸ್ಪರರಲ್ಲಿ ಅಧಿಕಾರ ವಿಭಜನೆಯಾದ ನಂತರ ಉಳಿದ ಅಧಿಕಾರ, ಯಾರ ಸ್ವಾಧೀನದಲ್ಲಿರಬೇಕು? ಪ್ರಾಂತೀಯ ಸರಕಾರದ್ದೇ, ಇಲ್ಲ ಮಧ್ಯವರ್ತಿ ಸರಕಾರದ್ದೇ, ಎಂಬುದು. ಒರಾಂತೀಯ ಸರಕಾರಕ್ಕೆ ವಿಭಾಗಿಸಿ ಕೊಟ್ಟ ಅಧಿಕಾರದ ಮೇಲೆ ಮಧ್ಯವರ್ತಿ ಸರಕಾರದ ನಿಯಂತ್ರಣ ಇರಬೇಕೆಂದು ಮುಸಲ್ಮಾನರ ಧೋರಣೆ. ಆದರೆ ಅದೇ ಜನರು, ಈಗ ಬೇರೆಯೇ ಆದ ಬೇಡಿಕೆ ಮುಂದಿಟ್ಟಿದ್ದಾರೆ. ಪ್ರಾಂತೀಯ ಸರಕಾರಕ್ಕೆ ನೀಡಲಾಗುವ ಕೆಲ ಅಧಿಕಾರಗಳ ಮೇಲೆ ಮಧ್ಯವರ್ತಿ ಸರಕಾರದ ನಿಯಂತ್ರಣ ಇರಲೇಬಾರದೆಂದು ಈಗ ಅವರ ಅಂಬೋಣ. ಪ್ರಾಂತೀಯ ಸರಕಾರಕ್ಕೆ ಪ್ರಾಪ್ತವಾಗುವ ಅಧಿಕಾರವನ್ನು ಒಳಿತಿಗೋ, ಕೆಡುಕಿಗೋ ಉಪಯೋಗಿಸುವ ಸ್ವಾತಂತ್ರ್ಯ ಅದಕ್ಕಿರಬೇಕು, ಎಂದು ಅವರ ಅಭಿಮತ. ನೆಹರೂ ಕಮಿಟಿಯು ಮುಸಲ್ಮಾನರ ಈ ಧೋರಣೆಯನ್ನು ಮಾನ್ಯ ಮಾಡಿದೆ. ಈ ಯೋಜನೆಯ ಒಳಿತು, ಕೆಡುಕುಗಳ ಬಗ್ಗೆ ಯಾರಿಗೂ ಯಾವ ದುರಾಗ್ರಹವೂ ಇರುವಂತಿಲ್ಲ. ಕಾರಣ ಇಂತಹ ಯೋಜನೆ ಅನ್ಯ ದೇಶಗಳಲ್ಲೂ ಇದೆ. ಆದರೆ, ಮುಸಲ್ಮಾನರ ದೃಷ್ಟಿಕೋನದಲ್ಲಿ ಇದ್ದಕ್ಕಿದ್ದಂತೆಯೇ ಇಷ್ಟೊಂದು ಬದಲಾವಣೆ ಹೇಗಾಯ್ತೆಂಬುದು ಯೋಚಿಸಬೇಕಾದ ವಿಷಯ. ಇದರ ಕಾರಣ ಯಾರೂ ಏನೇ ಕೊಡಲಿ, ನಮಗೆ ಅನಿಸುವುದೆಂದರೆ, ಮುಸಲ್ಮಾನರ ಈ ಬೇಡಿಕೆ, ಹಿಂದೂ ಮುಸಲ್ಮಾನರ ಮಧ್ಯೆ ಆಡಳಿತದ ಸಮತೋಲನವನ್ನು ಸಾಧಿಸಲು ಯೋಜಿಸಿದ ಪ್ರಾಂತ್ಯ ರಚನೆಯನ್ನು ಪೂರ್ತಿಗೊಳಿಸಲೆಂದೇ ಮಾಡಿದ್ದಾಗಿದೆ. ಪ್ರಾಂತೀಯ ಸರಕಾರವು ಮಧ್ಯವರ್ತಿ ಸರಕಾರದಿಂದ ನಿಯಂತ್ರಿಸಲ್ಪಡದಿದ್ದರೆ, ನವೀನ ಪ್ರಾಂತ್ಯ ರಚನೆಯನುಸಾರ, ಹಿಂದೂಗಳ ಜುಟ್ಟು ಅವರ ಕೈ ಸೇರಿದರೆ, ಅದನ್ನು ಬಿಡಿಸಿಕೊಳ್ಳದೆ ಇವರಿಂದ ಇರಲಾಗದು. ಕಾರಣ, ಪ್ರಾಂತೀಯ ಸರಕಾರದ ಮೇಲೆ ಮಧ್ಯವರ್ತಿಯ ಸರಕಾರದ ನಿಯಂತ್ರಣವಿದ್ದರೆ, ಒಂದು ವೇಳೆ, ಪ್ರಾಂತ್ಯದ ಬಹುಸಂಖ್ಯಾತ ಮುಸಲ್ಮಾನರು, ಅಲ್ಲಿನ ಅಲ್ಪಸಂಖ್ಯಾತ ಹಿಂದೂಗಳ ಮೇಲೆ ಹಲ್ಲೆ ನಡೆಸಿದರೆ, ಮಧ್ಯವರ್ತಿ ಸರಕಾರವು ಅವರನ್ನು ಬಂಧಿಸಬಹುದು.

ಮುಸಲ್ಮಾನರ ಬೇಡಿಕೆಯನ್ನು ಮಾನ್ಯಮಾಡಿ ನೆಹರೂ ಕಮಿಟಿಯು, ಹಿಂದೂ ಸಮಾಜಕ್ಕೆ ಅಹಿತವನ್ನೇ ಮಾಡಿದೆಯೆಂದು ಹೇಳಬೇಕಾಗಿದೆ. ನೆಹರೂ ಕಮಿಟಿಯ ಯೋಜನೆಯು ಹಿಂದೂಗಳಿಗೆ ಮಾಡಿದ ಮೋಸವಷ್ಟೇ ಅಲ್ಲ, ಹಿಂದೂಸ್ತಾನಕ್ಕೆ ಅನಿಷ್ಟವೆಂದು ಹೇಳಬೇಕಾಗಿದೆ. ಪ್ರಾಂತೀಯ ಸರಕಾರ ಮತ್ತು ಮಧ್ಯವರ್ತಿ ಸರಕಾರಗಳ ಅಧಿಕಾರ ಸಂಬಂಧ ಹೇಗಿದೆಯೆಂಬುದು ಬಹು ಮಹತ್ವದ ಪ್ರಶ್ನೆಯಿದ್ದರೂ, ಅದಕ್ಕಿಂತಲೂ ಮಹತ್ವದ ಪ್ರಶ್ನೆಯೆಂದರೆ, ಈ ದೇಶದಲ್ಲಿ ಮಧ್ಯವರ್ತಿ ಸರಕಾರ ಮತ್ತು ಬ್ರಿಟಿಶ್ ಸಾಮ್ರಾಜ್ಯ ಸರಕಾರದ ನಡುವಣ ಸಂಬಂಧ ಹೇಗಿರಬೇಕೆನ್ನುವುದು. ಈ ಸಂಬಂಧವನ್ನು ನಿಶ್ಚಿತಗೊಳಿಸುವಲ್ಲಿ ರಾಷ್ಟ್ರದ ಧ್ಯೇಯ ಏನಿರಬೇಕು, ಸಾಮ್ರಾಜ್ಯದೊಳಗೆ ಸ್ವರಾಜ್ಯ ಇರಬೇಕೆ, ಇಲ್ಲ, ಸ್ವಾತಂತ್ರ್ಯ ಇರಬೇಕೇ ಎಂಬ ಪ್ರಶ್ನೆ ಸಹಜವಾಗೇ ಏಳುತ್ತದೆ. ನೆಹರೂ ಕಮಿಟಿಯು, ಸಾಮಾಜ್ಯಾಂತರ್ಗತ ಸ್ವರಾಜ್ಯವೇ ಹಿಂದೂಸ್ತಾನದ ಧ್ಯೇಯವೆಂದು ಶಿಫಾರಸು ಮಾಡಿತ್ತು.

ಆದರೆ, ೧೯೨೭ನೇ ಇಸವಿಯಲ್ಲಿ ಕಾಂಗ್ರೆಸ್ ಪಕ್ಷವು, ಹಿಂದೂಸ್ತಾನದ ಧ್ಯೆಯ ಸ್ವಾತಂತ್ರ್ಯವೆಂದು ನಿರ್ಧರಿಸಿತ್ತು. ಅರ್ಥಾತ್, ನೆಹರೂ ಕಮಿಟಿ ಹಾಗೂ ಕಾಂಗ್ರೆಸ್ ಪಕ್ಷದ ಧ್ಯೆಯಗಳಲ್ಲಿ ಮಹತ್ವಪೂರ್ಣ ಅಂತರ ಉದ್ಭವಿಸಿ, ಅದು ಎಷ್ಟು ತೀವ್ರವಾಗಿತ್ತೆಂಬುದು ಕಳೆದ ಕಾಂಗ್ರೆಸ್ ಅಧಿವೇಶನದಲ್ಲಿ ಎಲ್ಲರ ಗಮನಕ್ಕೂ ಬಂತು. ಈ ಭಿನ್ನಾಭಿಪ್ರಾಯವನ್ನು ಹೊಡೆದೋಡಿಸಿ, ಐಕ್ಯಮತ್ಯವನ್ನು ಸಾರುವ ಒಪ್ಪಂದವೊಂದನ್ನು ಕೈಗೊಳ್ಳಲಾಯ್ತು. ಈ ಒಪ್ಪಂದ ಎಷ್ಟೊಂದು ಅಸ್ಪಷ್ಟವಿತ್ತೆಂದರೆ, ಯಾವ ಅರ್ಥವನ್ನೂ ಹೊರಡಿಸುವಂತಿತ್ತು. ನೆಹರೂ ಕಮಿಟಿಯ ಯೋಜನೆಗೆ ಧಕ್ಕೆಯಾಗದಂತೆ, ಸ್ವಾತಂತ್ರ್ಯವೇ ಹಿಂದೂಸ್ತಾನದ ಧ್ಯೇಯವೆಂಬುದನ್ನು ಶಾಶ್ವತಗೊಳಿಸುವಂತೆ ಆಯಿತೆಂಬುದು ಮಾತ್ರ ಸತ್ಯ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬೇಡ, ಅದು ಸದಾ ಪಾರತಂತ್ರ್ಯದಲ್ಲೇ ಇರಲಿ, ಎಂದು ಬಯಸುವ ಒಬ್ಬರಾದರೂ ಸ್ವದೇಶಾಭಿಮಾನಿ ವ್ಯಕ್ತಿ ಇರುವುದು ಶಕ್ಯವಿಲ್ಲ. ಸ್ವಾತಂತ್ರ್ಯದ ಧ್ಯೇಯದ ಸಂಬಂಧ ಎಲ್ಲರಿಗೂ ಸಹಾನುಭೂತಿ ಇರುವುದು ಸಹಜ. ಆದರೆ ಈ ಪ್ರಶ್ನೆಯನ್ನು ಕೇವಲ ತಾತ್ವಿಕ ದೃಷ್ಟಿಯಿಂದ ವಿಚಾರ ಮಾಡಬಾರದು. ವ್ಯವಹಾರ ದೃಷ್ಟಿಯಿಂದ, ಸಾಧ್ಯಾಸಾಧ್ಯತೆಯ, ಶಕ್ಯಾಶಕ್ಯತೆಯ, ಇಷ್ಟಾನಿಷ್ಟತೆಯ ದೃಷ್ಟಿಯಿಂದ ವಿಚಾರ ಮಾಡುವುದು ಅವಶ್ಯ. ಕಾಯ್ದೆಯಂತೆ ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನವಾದ ರಾಷ್ಟ್ರಗಳು ಎಷ್ಟೊಂದು ಅತಂತ್ರವಾಗಿ ತೋರುತ್ತವೆಂದರೆ, ಅವಕ್ಕೆ ಸ್ವೇಚ್ಛೆಯಿಂದ ವರ್ತಿಸುವ ಇನಿತೂ ಅವಕಾಶ ಇಲ್ಲವೆಂದೇ ಅನಿಸುತ್ತದೆ. ಅವರು ರೂಪಿಸಿದ ಕಾಯ್ದೆಯನ್ನು ಬ್ರಿಟಿಷ್ ಆಧಿಪತ್ಯ ನಾಮಂಜೂರು ಮಾಡಬಹುದು. ಹಾಗಾಗದಿದ್ದರೆ, ಅವರು ಮಾಡಿದ ಕಾಯ್ದೆ ಹಾಗೂ ಪಾರ್ಲಿಮೆಂಟ್ ರೂಪಿಸಿದ ಕಾಯ್ದೆಯ ನಡುವೆ ವಿರೋಧ ಹುಟ್ಟಿಕೊಂಡರೆ, ಆಗ ಅವರ ಕಾಯ್ದೆ ರದ್ದಾದಂತೆಯೇ, ಅವರಿಗಾಗಿ ಗವರ್ನರ್,ವೈಸ್‌ರಾಯ್ ಮುಂತಾಗಿ ಮುಖ್ಯ ಅಧಿಕಾರಿಗಳನ್ನು ನೇಮಿಸುವ ಅಧಿಕಾರವೂ ಬ್ರಿಟಿಷ್ ಸರಕಾರದ ಕೈಯೊಳಗೇ ಇದೆ. ಅವರಿಗಾಗಿರುವ ಹೈಕೋರ್ಟ್‌ನ ನಿಲುವೂ ಅಂತಿಮವಲ್ಲ. ಅದನ್ನೂ ಬದಲಿಸುವ ಅಧಿಕಾರ ಬ್ರಿಟಿಷ್ ಪ್ರಿವಿ ಕೌನ್ಸಿಲ್‌ಗೆ ಇದೆ. ಇದನ್ನೆಲ್ಲ ಕಂಡು ಸಾಮ್ರಾಜ್ಯಾಂತರ್ಗತ ಸ್ವರಾಜ್ಯ ಸಂಬಂಧಿ ಕೆಲ ಜನರು ಮೂಗು

ಮುರಿಯುತ್ತಾರೆ. ಸಾಮಾಜ್ಯಾಂತರ್ಗತವಿರುವ ರಾಷ್ಟ್ರ, ಸಾಮ್ರಾಜ್ಯದಿಂದ ಹೊರಗೆ ಇದ್ದರೆ ಅದು ಸ್ವತಂತ್ರವಾಗಿರುತ್ತದೆಂಬುದನ್ನು ಅರಿತುಕೊಳ್ಳಬೇಕೆಂಬುದು ಅವರಿಗೆ ಚೆನ್ನಾಗಿಯೂ ತಿಳಿದಿದೆ. ಅವರಿಗಾಗಿ ಕಾಯ್ದೆ ರೂಪಿಸುವ ಅಧಿಕಾರವನ್ನು ಬ್ರಿಟಿಷ್ ಪಾರ್ಲಿಮೆಂಟ್‌ನ ಸಲಹೆಯ ವಿನಹ ಎಂದೂ ಜಾರಿಗೊಳಿಸಲಾಗುವುದಿಲ್ಲವೆಂಬುದು ನಿಶ್ಚಿತವೇ ಇದೆ. ಅದರ ರಾಜ್ಯ ಸಂವಿಧಾನವನ್ನು ತಿದ್ದುವ ಅಧಿಕಾರವೂ ಅದರ ಕೈಯೊಳಗೆ ಇದೆ. ೧೮೮೦ರಿಂದೀಚೆಗೆ ಅವರ ಸಮ್ಮತಿಯ ವಿನಹ ಕೈಗೊಂಡ ವ್ಯಾಪಾರ ವಿಷಯಕ ನಿಬಂಧನೆಗಳು ಅವರ ಪಾಲಿಗೆ ಶಿಕ್ಷಾರ್ಹವಾಗಿಲ್ಲ. ಇಸವಿ ೧೯೧೮ರಿಂದ ಯಾವುದೇ ರಾಜಕೀಯ ನಿಬಂಧನೆ ರಚಿಸುವಲ್ಲಿ ಬ್ರಿಟಿಷ್ ಮಂತ್ರಿಯೊಡನೆ ದೇಶೀಯ ಮಂತ್ರಿಯನ್ನೂ ನಿಯಮಿಸುವ ಪದ್ಧತಿ ಜಾರಿಗೆ ಬಂದಿದೆ, ಹಾಗೂ ಅವರ ಸಹಮತವಿಲ್ಲದೆ, ರಾಜಕೀಯ ನಿಬಂಧನೆಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಮಹಾಯುದ್ಧದ ಬಳಿಕ ಸ್ಥಾಪಿತವಾದ ರಾಷ್ಟ್ರೀಯ ಸಂಘದಲ್ಲಿ ಅವರೆಲ್ಲರೂ ಸಭಾಸದರಾಗಿರುತ್ತಾರೆ. ಬ್ರಿಟಿಷ್ ಸಾಮ್ರಾಜ್ಯದ ಪ್ರತಿನಿಧಿಯಲ್ಲದೆ ಬೇರೆಲ್ಲ ಪ್ರತಿನಿಧಿಗಳು ರಾಷ್ಟ್ರೀಯ ಸಂಘದಲ್ಲಿರುತ್ತಾರೆ. ಅಲ್ಲಿ ಯಾವದೇ ಸಮಸ್ಯೆಯ ಪಕ್ಷದಿಂದಲೂ ಅವರು ಮತ ಚಲಾಯಿಸ ಬಹುದು, ಆದರೆ ತಮ್ಮ ಮರ್ಜಿಯಂತೆ ಯುದ್ಧಕ್ಕಿಳಿಯಬಾರದು. ಬ್ರಿಟಿಷ್ ಸರಕಾರ ಯುದ್ಧಕ್ಕಿಳಿದರೆ,



ನಾವು ತಟಸ್ಥರಾಗಿರಬೇಕು ಎಂದು ಹೇಳುವಂತಿಲ್ಲ. ಆದರೆ, ಇದು ಸಾಮ್ರಾಜ್ಯ ಅಂತರ್ಗತ ಸ್ವರಾಜ್ಯದ ಕಾರಣವೆಂದು ಹೇಳುವಂತಿಲ್ಲ. ಸಾಮ್ರಾಜ್ಯದ ಹೊರಗಿರುವ ಮಿತ್ರರಾಷ್ಟ್ರಗಳಿಗೆ ಈ ನಿಯಮ ಅನ್ವಯಿಸುತ್ತದೆ. ಮಿತ್ರರಾಷ್ಟ್ರಗಳಿಗೆ ಇರದ ರಿಯಾಯತಿ ಸಾಮ್ರಾಜ್ಯದೊಳಗಿನ ರಾಷ್ಟ್ರಗಳಿಗೆ ಇದೆ. ಬ್ರಿಟಿಷ್ ಸರಕಾರ ಯುದ್ಧಕ್ಕಿಳಿದರೆ, ಕಾಯ್ದೆಯಂತೆ, ಸಾಮಾಜ್ಯದೊಳಗಿನ ರಾಷ್ಟ್ರಗಳು, ತಾವು ತಟಸ್ಥರಿರುವೆವೆಂದು ಹೇಳಲಾಗದು, ನಿಜ; ಆದರೆ, ಯುದ್ಧದ ಭಾರವನ್ನು ಮೈಮೇಲೆ ಹೊತ್ತುಕೊಂಡು, ಸೈನ್ಯಕ್ಕೆ ಸಹಾಯ ಮಾಡುವ ಜವಾಬ್ದಾರಿಯೂ ಅವರ ಮೇಲಿರುವುದಿಲ್ಲವೆಂಬುದೂ ನಿಜ. ಬ್ರಿಟಿಷ್ ಸಾಮ್ರಾಜ್ಯದ ಸಂವಿಧಾನದಲ್ಲಿ ಲಿಖಿತವಾದ ಸ್ವರೂಪ ಪ್ರಾಪ್ತವಾಗದಿರುವುದರಿಂದ, ಸಾಮ್ರಾಜ್ಯದಲ್ಲಿ ಸೇರಿದ ರಾಷ್ಟ್ರಗಳು ಹೊರಗೆ ಬಂದು, ಸ್ವತಂತ್ರ ಆಡಳಿತ ನಡೆಸುವ ಅಧಿಕಾರ ಇದೆಯೋ ಇಲ್ಲವೋ ಎಂಬುದು ನಿಶ್ಚಿತವಾಗಿರದಿದ್ದರೂ, ಮಿಸ್ಟರ್ ವಾನರ್ ಲಾ, ಸರ್ ರಾಬರ್ಟ್ ಬೋರ್ಡೆನ್ ಮುಂತಾದ ರಾಜಕಾರಣ ಪಟುಗಳು,

ಸಾಮಾಜ್ಯಾಂತರ್ಗತ ರಾಷ್ಟ್ರಗಳಿಗೆ ಸಾಮ್ರಾಜ್ಯ ತೊರೆದು ಹೋಗುವ ಹಕ್ಕು ಇದೆಯೆಂದು ಅಭಿಪ್ರಾಯ ಪಡುತ್ತಾರೆ. ಒಂದು ವೇಳೆ ಆ ಹಕ್ಕು ಇರದಿದ್ದರೂ, ಅದನ್ನು ಪಡೆವ ಯತ್ನ ಮಾಡುವಲ್ಲಿ ಏನೂ ಅಡ್ಡಿಯಿಲ್ಲ. ಹೀಗಾದರೆ, ಬ್ರಿಟಿಷ್ ಸಾಮ್ರಾಜ್ಯಾಂತರ್ಗತ ಸ್ವರಾಜ್ಯ ಮತ್ತು ಸಂಪೂರ್ಣ ಸ್ವಾತಂತ್ರ್ಯದ ನಡುವೆ ಏನೂ ಅಂತರವಿಲ್ಲವೆಂಬುದು, ವ್ಯಾವಹಾರಿಕ ದೃಷ್ಟಿಯಿಂದ ಯೋಚಿಸುವ ಯಾರಿಗೇ ಆದರೂ ತಿಳಿಯದಿರುವುದಿಲ್ಲ. ಕೆನಡಾ, ಸೌತ್ ಆಫ್ರಿಕಾ, ಆಸ್ಟ್ರೇಲಿಯಾ ಮುಂತಾದ, ಸಾಮ್ರಾಜ್ಯದೊಡನೆ ಸೇರಿದ ರಾಷ್ಟ್ರಗಳಂತೆ, ಸಾಮ್ರಾಜ್ಯಾಂತರ್ಗತ ಸ್ವರಾಜ್ಯ, ಭಾರತಕ್ಕೆ ಪ್ರಾಪ್ತವಾಗಿಲ್ಲ, ನಿಜ ; ಆದರೆ, ಹಾಗೆ ಪ್ರಾಪ್ತವಾಗಬಾರದೆಂದೂ ಇಲ್ಲ. ಪ್ರಶ್ನೆಯೆಂದರೆ, ಈ ಸಾಮ್ರಾಜ್ಯಾಂತರ್ಗತ ಸ್ವರಾಜ್ಯದಿಂದ ಹಿಂದೂಸ್ತಾನವು ಸಂತುಷ್ಟವಾಗಬಹುದೇ, ಇಲ್ಲವೇ, ಎಂಬುದು. ಲಾಲಾಲಜ್ ಪತ್ ರಾಯ್, ದಾಸ್‌ಬಾಬು ಮುಂತಾದವರು ಈ ಸಾಮ್ರಾಜ್ಯಾಂತರ್ಗತ ಸ್ವರಾಜ್ಯದ ಧ್ಯೇಯವನ್ನು ಪುರಸ್ಕರಿಸುತ್ತಿದ್ದರು. ಇವರಿಬ್ಬರು ಎಂದೂ ಕಡಿಮೆ ದೇಶಭಕ್ತಿ ಹೊಂದಿದವರೆಂದೂ, ಅವರ ದೇಶಾಭಿಮಾನ ಅಲ್ಪವೆಂದೂ ಹೇಳುವಂತಹ ಆರೋಪ ಕೇಳಿ ಬಂದುದಿಲ್ಲ. ಅವರು ವಿಚಾರಹೀನರಾಗಿ ತಮ್ಮ ಧ್ಯೇಯವನ್ನು ನಿಶ್ಚಯಿಸಿಕೊಂಡವರಲ್ಲ. ವ್ಯಾವಹಾರಿಕ ದೃಷ್ಟಿಯಿಂದ ಇದೇ ಧ್ಯೇಯವನ್ನು ಕಣ್ಣೆದುರಿಗಿರಿಸಿಕೊಳ್ಳುವುದು ಕಲ್ಯಾಣಕರವೆಂದು ನಮಗೆ ಅನಿಸುತ್ತದೆ. ತತ್ವವೇ ಮುಖ್ಯವೆನ್ನುವವರಿಗೆ ಈ ಧ್ಯೆಯ ತೃಪ್ತಿಯೆನಿಸದು. ಆದರೆ ತಾತ್ವಿಕ ದೃಷ್ಟಿಯಿಂದ ವಿಚಾರ ಮಾಡುವವರಿಗೆ ನಮ್ಮ ಪ್ರಶ್ನೆಯೆಂದರೆ, ಅದಾವ ಸ್ವತಂತ್ರ ರಾಷ್ಟ್ರದ ಸ್ವಾತಂತ್ರ್ಯ ಸೀಮಿತವಾಗಿಲ್ಲ?

ಸ್ವತಂತ್ರ ರಾಷ್ಟ್ರಗಳು, ಇತರ ರಾಷ್ಟ್ರಗಳಿಗಿಂತ ವಿಶೇಷವಾದುದನ್ನು ಸಾಧಿಸಲು, ಅವರ ಕರಾರುಗಳನ್ನೊಪ್ಪಿಕೊಂಡು, ತಮ್ಮ ಸ್ವಾತಂತ್ರ್ಯವನ್ನು ಸೀಮಿತಗೊಳಿಸಿಕೊಳ್ಳುತ್ತವೆ. ದೇಶಗಳು ಪರಸ್ಪರ ಕೊಟ್ಟು - ಕೊಳ್ಳುವುದು ಅನಿವಾರ್ಯ. ಒಂದರ್ಥದಲ್ಲಿ, ಎಲ್ಲ ರಾಷ್ಟ್ರಗಳು ತಾತ್ವಿಕವಾಗಿ ಸ್ವತಂತ್ರರಿದ್ದರೂ, ವ್ಯಾವಹಾರಿಕವಾಗಿ ಅವು ಪರತಂತ್ರವಾಗಿಯೇ ಇರಬೇಕಾಗುತ್ತದೆ. ಆದರೆ, ಎಲ್ಲರೂ ಧ್ಯಾನದಲ್ಲಿರಿಸಿ ಕೊಳ್ಳಬೇಕಾದ ವಿಷಯವೆಂದರೆ, ತಾತ್ವಿಕ ದೃಷ್ಟಿಯಿಂದ ರಾಷ್ಟ್ರವು ಸ್ವಾತಂತ್ರ್ಯದ ಬಗ್ಗೆ ಎಷ್ಟೇ ಕೊಚ್ಚಿ ಕೊಂಡರೂ, ವ್ಯಾವಹಾರಿಕವಾಗಿ ಅದು ಸ್ವಲ್ಪ ಮಟ್ಟಿನ ಪಾರತಂತ್ರ್ಯವನ್ನು ಒಪ್ಪಿಕೊಳ್ಳಲೇಬೇಕು. ಹೀಗಿದ್ದರೂ, ಬ್ರಿಟಿಷ್ ಸಾಮ್ರಾಜ್ಯಾಂತರ್ಗತ ಸ್ವರಾಜ್ಯ ಲಭಿಸಿದರೆ, ಈ ದೇಶಕ್ಕಾಗುವ ನಷ್ಟವೇನೆಂದು ಆಶ್ಚರ್ಯವೆನಿಸುತ್ತದೆ. ಹಾಗೆಯೇ ಲಭಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲಾಗುವುದೋ ಇಲ್ಲವೋ ಎಂಬ ಬಗ್ಗೆಯೂ ವಿಚಾರ ನಡೆಯಬೇಕು. ಹಾಗಾಗದಿದ್ದರೆ, ಸಾಮಾಜ್ಯಾಂತರ್ಗತ

ಕೊಂಡರೂ, ವ್ಯಾವಹಾರಿಕಾಜ್ಯಾಂತರ್ಗತ ಸ್ವರ ಸ್ವಾತಂತ್ರ್ಯವನ್ನು

ಸ್ವಾತಂತ್ರ್ಯವನ್ನಿಟ್ಟುಕೊಂಡು, ಪಾರತಂತ್ರ್ಯವನ್ನೂ ಹೊದ್ದುಕೊಂಡಂತಾಗುವುದಷ್ಟೇ. ಮತ್ತು ಹಾಗಾದರೆ, ಅಂಗೈಯ ರತ್ನ ಕೈ ಬಿಟ್ಟು ಕಲ್ಲು ಕಟ್ಟಿಕೊಂಡಂತಾಗುವುದು. ನಮ್ಮ ವಿಚಾರದಂತೆ, ಕಾಂಗ್ರೆಸಿಗರು, ಆರಂಭಿಸಿದ ಈ ಸ್ವಾತಂತ್ರ್ಯದ ಉಪದ್ವ್ಯಾಪದಿಂದ, ನಾವು ಪುನಃ ಪಾರತಂತ್ರ್ಯವನ್ನನುಭವಿಸುವಂತೆ ಆಗುವುದೆಂಬುದು ಖಾತ್ರಿಯೆನಿಸುತ್ತದೆ. ಏಶಿಯಾ ಖಂಡದ ನಕ್ಷೆಯನ್ನು ನೋಡುವವರಿಗೆ ಈ ದೇಶವು ಹೇಗೆ ಇತ್ತಡಿಯಲ್ಲಿ ಸಿಲುಕಿಕೊಂಡಿದೆಯೆಂದು ತಿಳಿಯುತ್ತದೆ. ಒಂದೆಡೆ, ಚೀನಾ, ಜಪಾನ್‌ಗಳಂತಹ ಭಿನ್ನ ಸಂಸ್ಕೃತಿಯ ರಾಷ್ಟ್ರಗಳು. ಇನ್ನೊಂದೆಡೆ, ಟರ್ಕಿ, ಪರ್ಶಿಯಾ, ಅಫಘಾನಿಸ್ತಾನ್‌ನಂತಹ ಮೂರು ಮುಸ್ಲಿಂ ರಾಷ್ಟ್ರಗಳು.

ಇವೆರಡರ ಮಧ್ಯೆ ಇರುವ ಈ ದೇಶ ತುಂಬ ಎಚ್ಚರಿಕೆಯಿಂದಿರಬೇಕೆಂದು ನಮಗನಿಸುತ್ತದೆ. ಈ ಸರ್ವ ರಾಷ್ಟ್ರಗಳೊಂದಾದ ಸಂಘ ನಿರ್ಮಾಣವಾಗಿ, ನಾವೆಲ್ಲ ಒಂದೇ ಖಂಡದವರೆಂಬ ಭಾವದಿಂದ ಪ್ರೇರಿತರಾಗಿ, ಗುಂಪಿನಲ್ಲಿ ಗೋವಿಂದ ಎಂಬಂತಿರುವ ಎಂದು ಆಶಿಸಲು ಯಾವ ಸಬಲ ಕಾರಣವೂ ಇಲ್ಲ, ಒಂದೇ ಸಂಸ್ಕೃತಿಗೆ ಬದ್ಧರಾದ ಯುರೋಪ್ ಖಂಡದ ಜನರಲ್ಲಿ ಯಾದವೀ ಕಲಹ ಇನ್ನೂ ಮುಗಿದಿಲ್ಲ. ಏಶಿಯಾ ಖಂಡದಲ್ಲಿ ವಿರುದ್ಧ ಸಂಸ್ಕೃತಿಯ ಜನರೂ ಮನೆ ಮಾಡಿದ್ದಾರೆ. ಅವರೆಲ್ಲ ಒಂದಾಗಲೆಂದು ಆಶಿಸುವುದು ಮೃಗಜಲದ ಹಿಂದೆ ಓಡಿದಂತೆ. ವ್ಯರ್ಥ ಆಶಾವಾದಕ್ಕಿಳಿಯಲು ಹೋಗದೆ, ಪರಿಸ್ಥಿತಿಯನ್ನು ಅವಲೋಕಿಸಿ ಮುಂದುವರಿಯುವುದು ಒಳ್ಳೆಯದು. ಈ ಪರಿಸ್ಥಿತಿಯಲ್ಲಿ, ಚೀನಾ ಇಲ್ಲವೇ ಜಪಾನ್ ಈ ಎರಡರಲ್ಲಿ ಯಾರೊಡನಾದರೂ ಕಾದಬೇಕಾಗಿ ಬಂದರೆ, ಆಗ ಪರಾಜಯ ಯಾರದಾಗುವುದು ಎಂದು ಹೇಳಲು ಬರುವಂತಿಲ್ಲವಾದರೂ, ಆ ಕಾದಾಟಕ್ಕೆ ಯಾರೂ ಸಹಕರಿಸಬಹುದೆಂದು ಹೇಳಬಹುದು. ಆದರೆ, ಸ್ವತಂತ್ರವಾದ ಹಿಂದುಸ್ತಾನದ ಮೇಲೆ, ಟರ್ಕಿ, ಪರ್ಶಿಯಾ, ಅಫಘಾನಿಸ್ತಾನಗಳ ಪೈಕಿ ಯಾವುದಾದರೂ ಒಂದು ದೇಶ ಕಾದಲು ಬಂದರೂ, ಆಗ ಉಳಿದವರೆಲ್ಲ ನನ್ನೊಡನೆ ಕೈ ಸೇರಿಸುವರೆಂದು ಯಾರಾದರೂ ಖಾತ್ರಿ ನೀಡಬಹುದೇ? ಹಿಂದೀ ಮುಸಲ್ಮಾನರು ಮುಸಲ್ಮಾನ ಸಂಸ್ಕೃತಿಯ ದೇಶದತ್ತ ವಾಲುವುದು ಸಹಜವೇ ಇದೆ, ಈ ಆಕರ್ಷಣೆ ಎಷ್ಟೊಂದು ಗಾಢವಾಗಿದೆಯೆಂದರೆ ಮುಸ್ಲಿಮ್ ಸಂಸ್ಕೃತಿಯನ್ನು ಎಲ್ಲೆಡೆ ಪಸರಿಸಿ ಮುಸಲ್ಮಾನ ಸಂಘವನ್ನು ರೂಪಿಸಿ, ಇತರ ದೇಶಗಳನ್ನು ಅದರಧೀನಕ್ಕೆ ತರುವುದೇ ಅವರ ಧ್ಯೇಯವಾಗಿದೆ. ಈ ವಿಚಾರದಿಂದಾಗಿಯೇ, ಅವರ ಪಾದ ಹಿಂದೂಸ್ತಾನದಲ್ಲಿದ್ದರೂ, ಕಣ್ಣು ತುರ್ಕಿಸ್ತಾನ ಇಲ್ಲವೇ ಅಫಘಾನಿಸ್ತಾನದ ಕಡೆಗಿದೆ. ಹಿಂದೂಸ್ತಾನವು ನಮ್ಮದೆಂದು ಯಾರಿಗೆ ಅಭಿಮಾನವಿಲ್ಲವೋ, ಅಲ್ಲಿನ ಹಿಂದೂ ಬಂಧುಗಳು ತಮ್ಮವರೆಂಬ ಭಾವನೆಯಿಲ್ಲವೋ, ಅಂತಹವರು ಹಿಂದೂಸ್ತಾನದ ರಕ್ಷಣೆಗೆ ಸಿದ್ಧರಾಗುವರೆಂದುಕೊಳ್ಳುವುದು ಮೋಸವೇ ಸರಿಯೆಂದು

ನಮಗೆ ಅನಿಸುತ್ತದೆ. ಸ್ವಾತಂತ್ರ್ಯ ಸಂರಕ್ಷಣೆಯ ಬಗ್ಗೆ ವಿಚಾರ ಮಾಡುವಾಗ, ಕೇವಲ ಮುಸಲ್ಮಾನರ ಮನೋವೃತ್ತಿಯ ಬಗ್ಗೆ ಯೋಚಿಸುವುದಲ್ಲ. ಈ ದೇಶದಲ್ಲಿ ಪ್ರಾಂತ್ಯ ರಚನೆಯ ಬಗ್ಗೆಯೂ ವಿಚಾರಿಸಬೇಕು. ಎಲ್ಲ ಮುಸ್ಲಿಮ್ ಪ್ರಾಂತ್ಯಗಳು ದೇಶದ ಸರಹದ್ದಿನಲ್ಲೇ ಇವೆ. ವಿಂಧ್ಯ ಪರ್ವತದವರೆಗೆ ಭೂಮಿಯೆಲ್ಲ ಮುಸಲ್ಮಾನಮಯವಾಗಿದೆ. ಹೀಗಾಗಿ ಮುಸಲ್ಮಾನರು ಸ್ವತಂತ್ರ ಭಾರತದ ದ್ವಾರಪಾಲಕರಾಗುತ್ತಾರೆ. ಶತ್ರುಗಳನ್ನು ಅವರು ತಡೆದು ನಿಲ್ಲಿಸಿದರೆ ಸರಿ; ಬದಲಿಗೆ, ಅವರು ಶತ್ರುಗಳಿಗೆ ಸಹಾಯ ಮಾಡಿದರೆ, ಇಲ್ಲವೇ ತಟಸ್ಥರಾಗುಳಿದರೆ, ಅರ್ಧದಷ್ಟರವರೆಗೆ ಅವರನ್ನು ಯಾರೂ ಎದುರಿಸಲಾರರು. ಮತ್ತೆ ಅವರನ್ನು ಹೊರಗೆ ಕಳುಹುವುದೂ ಅಶಕ್ಯ. ಎಲ್ಲ ಹಿಂದೂಗಳು ಇದನ್ನು ಅರಿತಿರುವುದು ಅವಶ್ಯ.



ಮುಸ್ಲಿಮ್ ಗಾಳಿ ಯಾವ ದಿಕ್ಕಿನಿಂದ ಬೀಸುತ್ತಿದೆಯೆಂಬ ಬಗ್ಗೆ ಯಾವ ಸಂಶಯವೂ ಉಳಿದಿಲ್ಲ. ಒಂದೊಮ್ಮೆ ರಾಜನಿಷ್ಠ ಪ್ರಜೆಗಳಲ್ಲಿ ಮುಸಲ್ಮಾನರ ಗಣನೆ ತುಂಬ ಪ್ರಮುಖವಾಗಿತ್ತು. ಬ್ರಿಟಿಷ್ ಸಾಮ್ರಾಜ್ಯದ ಕಟ್ಟಾ ಉಪಾಸಕರೆಂದು ಮುಸಲ್ಮಾನರು, ಅರಾಜಕವೆನಿಸಿದ ಕಾಂಗ್ರೆಸ್ ಪಕ್ಷದೊಡನೆ ಸ್ನೇಹ ಸಂಬಂಧ ಬೆಳೆಸುವುದನ್ನು ತಪ್ಪಿಸಿಕೊಂಡರು, ಅದೇ ಮುಸಲ್ಮಾನರು ಇಂದು ಸ್ವಾತಂತ್ರವಾದಿಗಳಾಗಿದ್ದಾರೆ. ಆದರೆ ಅವರ ಈ ಸ್ವಾತಂತ್ರ್ಯ ಪ್ರೇಮವು ರಾಷ್ಟ್ರಪ್ರೇಮದಿಂದ ಉತ್ಪನ್ನವಾಗಿರದೆ, ಬ್ರಿಟಿಷ್ ಸಾಮ್ರಾಜ್ಯದ ಚೌಕಟ್ಟಿನಲ್ಲಿ ಸುಖದಿಂದ ಇರುವ ಈ ದೇಶವನ್ನು ಮುಸ್ಲಿಮ್ ಸಾಮ್ರಾಜ್ಯದ ಚೌಕಟ್ಟಿನಲ್ಲಿ ತಂದು ನಿಲ್ಲಿಸುವ ಕಾರಸ್ಥಾನವಾಗಿದೆ, ಎಂದು ಮುಸಲ್ಮಾನರ ಧುರೀಣ, ಸರ್ ಅಲಿ ಇಮಾಮ್ ಹೇಳಿದ್ದಾರೆ. ನಮ್ಮ ಮಹಾತ್ಮಾ ಗಾಂಧಿ ಅವರು ಮಾತ್ರ ಇದು ಅವರ ರಾಷ್ಟ್ರಪ್ರೇಮದ ಚಿಹ್ನೆ, ಅಂದುಕೊಂಡು, ಆ ಆಧಾರದಲ್ಲಿ ೧೯೩೧ರಿಂದ ಸ್ವಾತಂತ್ರ್ಯ ಚಳವಳಿ ಆರಂಭಿಸುವವರಿದ್ದಾರೆ. ಮಹಾತ್ಮಾ ಗಾಂಧಿ ಅವರಿಂದ ಈ ದೇಶಕ್ಕೆ ಮುಕ್ತಿ ದೊರಕುವಂತೆ ದೇವನು ಅನುಗ್ರಹಿಸಲಿ.

ನೆಹರೂ ಕಮಿಟಿಯ ಯೋಜನೆಯ ಬಗ್ಗೆ ನಾವು ಮಾಡಿದ ವಿಶ್ಲೇಷಣೆಯ ಕುರಿತು ನಮ್ಮ ದೇಶ ಬಾಂಧವರು ಸಂಪೂರ್ಣ ವಿಚಾರ ಮಾಡಬೇಕೆಂದು ನಮ್ಮ ವಿನಂತಿ. ಇದು ನಾವು ಸ್ವಾರ್ಥದಿಂದ ಮಾಡಿದ್ದಲ್ಲ. ಅಸ್ಪಶ್ಯರನ್ನು ಕಾಲೆಳಗೆ ತುಳಿದ ಕಾರಣದಿಂದ ಮಾಡಿದ್ದಲ್ಲ. ಹಿಂದೂಗಳಿಗಾದ ಮೋಸ ಮತ್ತು ಹಿಂದುಸ್ತಾನಕ್ಕೆ ಕಾದಿರುವ ಅನಿಷ್ಟದ ಕಾರಣ ಮಾಡಿದ್ದಾಗಿದೆ. ಇದರಲ್ಲಿ ಮೋಸವೇನೂ ಇಲ್ಲವೆಂದುಕೊಂಡು ಕೆಲವರು ಇದನ್ನು ಬೆಂಬಲಿಸುತ್ತಿದ್ದಾರೆ. ಕೆಲವರು, ಮೋಸವಿದೆಯೆಂದರಿತೇ ಬೆಂಬಲ ನೀಡುತ್ತಿದ್ದಾರೆ. ಈ ಎರಡೂ ವರ್ಗದವರ ಬಗ್ಗೆ ನಮ್ಮ ಕರ್ತವ್ಯವೇನಿಲ್ಲ. ಆದರೆ,

ಇದರಲ್ಲಿರುವ ಮೋಸವನ್ನರಿಯದೆ ಬೆಂಬಲಿಸುತ್ತಿರುವ ದೊಡ್ಡ ವರ್ಗವೊಂದಿದೆ. ಅವರಿಗಾಗಿ ಈ ಪ್ರಯತ್ನವಷ್ಟೆ. ಈ ಪ್ರಯತ್ನ ಸಿದ್ಧಿಗಾಗಿ ನಾವು ಅತ್ಯಂತ ಸ್ಪಷ್ಟೋಕ್ತಿಗಳನ್ನು ಇಲ್ಲಿ ಬಳಸಬೇಕಾಗಿದೆ. ಈ ಅಗ್ರ ಲೇಖನದ ಸ್ಪಷ್ಟೋಕ್ತಿಗಳನ್ನೋದಿ ಹಲವರು ನಮ್ಮನ್ನು ದೂಷಿಸುತ್ತಾರೆ. ವ್ಯವಹಾರಕ್ಕಾಗಿ ಕೆಲವೊಮ್ಮೆ ಸತ್ಯವನ್ನು ಮುಚ್ಚಿಡುವುದು ಲಾಭಕರವಿರಬಹುದು. ಹೀಗೆ ಸತ್ಯವನ್ನು ಮುಚ್ಚಿಡುವಷ್ಟು ದೊಡ್ಡ ಪಾತಕ ಬೇರೇನಿಲ್ಲ. ಹಿಂದೂ ಸಮಾಜದ ರೋಷ ನಮ್ಮ ಮೇಲಿದೆ. ಅದರ ಮೇಲೆ ಮುಸ್ಲಿಮ್ ಸಮಾಜದ ರೋಷವನ್ನೂ ಹೊತ್ತುಕೊಳ್ಳಬೇಕಾಗಿ ಬರುವುದು ಒಳ್ಳೆಯದಲ್ಲವೆಂದು ನಮಗೆ ತಿಳಿದಿದೆ. ಆದರೆ ಯಾವುದರಿಂದ ನಮ್ಮ ದೇಶಕ್ಕೆ ಕೆಡುಕಾಗುವುದೋ, ಅದರಿಂದ ನಮಗೂ ಕೆಡುಕಾಗುವುದೆಂದು ನಮ್ಮ ಭಾವನೆಯಾಗಿರುವುದರಿಂದಲೇ ಈ ಅಪಾಯವನ್ನು ನಾವು ನಮ್ಮ ತಲೆಯ ಮೇಲೆ ಹೊತ್ತು ಕೊಂಡಿದ್ದೇವೆ. ಅದು ಸಫಲವಾಗಿ ಜನಾಭಿಪ್ರಾಯ ಸುಯೋಗ್ಯವಾಗಿ ರೂಪುಗೊಳ್ಳಲಿ ಎಂದೇ ನಮ್ಮ ಆಶೆ.

*****

## ೮. ಸಮತೆಗಾಗಿಯೇ ಈ ವಿಷಮತೆ

ಡಾ. ಅಂಬೇಡ್ಕರ್ ಅವರು, ಸೈಮನ್ ಕಮಿಶನ್‌ನೆದುರು ಇತ್ತ ಸಾಕ್ಷಿಯಲ್ಲಿ ಬೇರೆ ಬೇರೆ ವಿಷಯಗಳ ಮೇಲೆ ಬೇರೆ ಬೇರೆ ಆಕ್ಷೇಪಗಳನ್ನು ಇದುವರೆಗೆ ಎತ್ತುತ್ತಾ ಬಂದಿದ್ದಾರೆ. ಇವುಗಳ ಪೈಕಿ ಸಾಕಷ್ಟು ಆಕ್ಷೇಪಗಳನ್ನು ಸ್ಪೃಶ್ಯರೂ, ಮತ್ತೆ ಕೆಲವನ್ನು ಅಸ್ಪೃಶ್ಯರೂ ಎತ್ತಿದ್ದಾರೆ. ಮತ್ತವುಗಳ ಪೈಕಿ ಬಹಳಷ್ಟು ಆಕ್ಷೇಪಗಳನ್ನು ನಾವು ಈ ಮೊದಲೇ ಖಂಡಿಸಿದ್ದೇವೆ, ಮತ್ತು ಅಸ್ಪೃಶ್ಯ ಸಮಾಜದ ಪರಿಸ್ಥಿತಿಯನ್ನು ಎಲ್ಲ ಕೋನಗಳಿಂದಲೂ ಪರಿಶೀಲಿಸಿ, ಆ ಸಾಕ್ಷ್ಯಗಳು ಹೇಗೆ ಯಥಾಯೋಗ್ಯವಾಗಿರುತ್ತವೆಂದು ತೋರಿ ಕೊಡುತ್ತಾ ಬಂದಿದ್ದೇವೆ. ನಮ್ಮ ಈ ವಿವೇಚನೆ ಬಹಳಷ್ಟು ಜನರಿಗೆ ಹಿಡಿಸಿದೆ. ವಿಶೇಷತಃ ಅಸ್ಪೃಶ್ಯ ಸಮಾಜದ ಬಗ್ಗೆ ಅಂಬೇಡ್ಕರರ ಸಾಕ್ಷ್ಯಕ್ಕೆ ಮನಃಪೂರ್ವಕ ಬೆಂಬಲ ಸಿಕ್ಕಿದೆ, ಹಾಗೂ ಸಿಗುತ್ತಾ ಇದೆ. ಕೆಲ ಅಸ್ಪೃಶ್ಯರ ಮನದಲ್ಲಿ ಇನ್ನೂ ಸಂಶಯ ತೂಗುಯ್ಯಾಲೆಯಾಡುತ್ತಿಲ್ಲ ಎಂದೇನೂ ಇಲ್ಲ. ಆದರೆ ಅದು ಬೇಗನೇ ಪರಿಹರಿಸಲ್ಪಡುತ್ತದೆಂಬ ಬಗ್ಗೆ ನಮಗೆ ಇನಿತೂ ಸಂಶಯವಿಲ್ಲ. ಆದರೆ ನಮ್ಮ ಸ್ಪಶ್ಯ ಆಕ್ಷೇಪಕರ ಬಾಯಿ ಮಾತ್ರ ಇನ್ನೂ ಮುಚ್ಚಿಲ್ಲ, ಮತ್ತು ಇನ್ನೂ ಬಹುಕಾಲ ಮುಚ್ಚುವ ಸಂಭವವೂ ಇಲ್ಲ. ಅವರ ಆಕ್ಷೇಪವನ್ನು ಖಂಡಿಸುವುದೆಂದರೆ ವ್ಯರ್ಥ ಕಾಲಹರಣವೆಂದೇ ನಮಗನಿಸುತ್ತದೆ. ಹಾಗಿದ್ದರೂ ಅದರಿಂದಾಗಿ ಅಸ್ಪೃಶ್ಯ ಸಮಾಜವು ದಿಕ್ಕು ತಪ್ಪದಂತಾಗಲು, ನಾವು

ಲೇಖನಿ ಕೈಗೆತ್ತಿಕೊಳ್ಳುವ ಅವಶ್ಯಕತೆ ಇದೆ. ನಮ್ಮ ಈ ಪ್ರಯತ್ನವು ಸ್ಪಶ್ಯರ ಸಮಾಧಾನಕ್ಕಾಗಿರದೆ, ಅಸ್ಪೃಶ್ಯರು ದಾರಿತಪ್ಪುವುದನ್ನು ತಪ್ಪಿಸಲೆಂದೇ ಆಗಿದೆ.

ಈ ಆಕ್ಷೇಪಗಳಲ್ಲಿ ಒಂದು ಹೊಸ ಆಕ್ಷೇಪವು ಈ ರೀತಿ ಇದೆ : ಡಾ. ಅಂಬೇಡ್ಕರರು ಸಮಾಜ ಸಮತಾ ಸಂಘದ ಧುರೀಣರಾಗಿದ್ದೂ, ಅಸ್ಪೃಶ್ಯ ಸಮಾಜಕ್ಕಾಗಿ ಜಾತಿವಾರು ಪ್ರತಿನಿಧಿತ್ವದ ಬೇಡಿಕೆಯನ್ನು ಮುಂದಿಟ್ಟರೇಕೆ? ಸಮಾಜಕ್ಕಾಗಿ ಜಾತಿವಾರು ಪ್ರತಿನಿಧಿತ್ವದ ಬೇಡಿಕೆಯೇ ವಿಷಮತೆಯಲ್ಲವೇ? ಈ ಆಕ್ಷೇಪವು ಮೊದಲ ಬಾರಿಗೆ ಪುಣೆಯ ಚಿತ್ರಮಯ ಜಗತ್ತಿನ ಸಂಪಾದಕರಿಂದ ಎತ್ತಲ್ಪಟ್ಟಿತು. ಮತ್ತು ಮುಂದೆ ಅದರ ಪ್ರತಿಧ್ವನಿಯು ಸಾಕಷ್ಟು ಬೇಕಾಬಿಟ್ಟಿ ಪತ್ರಿಕೆಗಳಿಂದಲೂ ಬಂತು. ಇಂದಿಗೂ ಆ ಆಕ್ಷೇಪ ಎತ್ತಲ್ಪಡುತ್ತಿದೆಯೆಂಬುದು ವೃತ್ತಪತ್ರಿಕೆಗಳ ವಾಚಕರಿಗೆ ತಿಳಿದೇ ಇದೆ. ಪ್ರಸ್ತುತ ಆಕ್ಷೇಪವು ಪ್ರತಿಪಕ್ಷಗಳ ಬಾಯಿ ಮುಚ್ಚುವಂತಿದೆಯೆಂದು ಆಕ್ಷೇಪಕರ ತಿಳುವಳಿಕೆ. ಆದರೆ ಇದು ಅವರ ಭ್ರಮೆಯೆಂಬುದು ಯೋಚಿಸಿದರೆ ತಿಳಿಯುತ್ತದೆ.

ಸಮತಾವಾದಿಗಳ ಧ್ಯೇಯ ಏನೆಂಬುದೇ ಸ್ವಲ್ಪವೂ ತಿಳಿಯುತ್ತಿಲ್ಲ. ಅದನ್ನು ತಿಳಿದಿದ್ದರೆ, ಹೀಗೆ ಆಕ್ಷೇಪಿಸುವ ಮೂರ್ಖತನಕ್ಕೆ ಇಳಿಯುತ್ತಿರಲಿಲ್ಲ. ಸರ್ವರನ್ನೂ ಸಮಾನವಾಗಿ ಕಾಣುವುದೇ ಸಮತಾವಾದದ ಧ್ಯೇಯವೆಂದು ಅವರಿಗೆ ತಿಳಿದಿರುತ್ತಿತ್ತು. ಆದರೆ ಇದೇ ಅವರ ತಪ್ಪು ಎಂಬುದನ್ನು ಅವರಿಗೆ ತಿಳಿಸಿ ಕೊಡಲು ನಾವು ಅನುಮತಿ ಕೇಳುತ್ತೇವೆ. ಸಮತಾವಾದದ ಧೈಯ, ಎಲ್ಲರನ್ನೂ ಸಮಾನವಾಗಿ ಕಾಣುವುದಾಗಿರದೆ, ಸಮತೆಯನ್ನು ಪ್ರಸ್ತಾಪಿಸುವುದೇ ಆಗಿದೆ. ಈ ಧೈಯ ಸಾಧಿಸುವಲ್ಲಿ,



ಎಲ್ಲರನ್ನೂ ಸಮಾನವಾಗಿ ಕಂಡು ನಡೆಯುವುದು ಸಾಧ್ಯವೂ ಅಲ್ಲ. ಎಲ್ಲಿ ಎಲ್ಲರೂ ಸಮಾನರೋ, ಅಲ್ಲಿ ಕೆಲವರನ್ನಾದರೂ ಅಸಮಾನತೆಯಿಂದ ನೋಡುವ ವಿಷಮತೆ ಹುಟ್ಟಿಕೊಳ್ಳುತ್ತದೆ. ಆದರೆ ಎಲ್ಲಿ ವ್ಯಕ್ತಿಗಳು ಅಸಮಾನರಿರುತ್ತಾರೋ, ಅಲ್ಲಿ ಅವರನ್ನು ಸಮಾನರೆಂದುಕೊಂಡು ನಡೆಯುವುದೆಂದರೆ, ಸಮತೆಯನ್ನು ಪ್ರಸ್ಥಾಪಿಸುವ ಧ್ಯೇಯವನ್ನು ವಿರೋಧಿಸಿದಂತೆ.

ಈ ವಿಷಯದಲ್ಲಿ ರೋಗಿಗಳ ಉದಾಹರಣೆ ಸರಿಹೋಗುವುದು. ಸದೃಢ ಮನುಷ್ಯರಿಗೆ ಪಕ್ವಾನ್ನ ನಡೆಯುತ್ತದೆ. ಹಾಗೆಂದು ಸದೃಢರೂ, ರೋಗಿಗಳೂ ಸಮಾನರೆಂದುಕೊಂಡು ರೋಗಿಗಳಿಗೂ ಪಕ್ವಾನ್ನ ನೀಡಿದರೆ, ರೋಗಿಗಳ ಪಾಲಿಗೆ ಪ್ರಾಣದಾತರಾಗುವ ಬದಲಿಗೆ ಪ್ರಾಣ ತೆಗೆವವರಾಗುವಂತಾದೀತು.

ಹಾಗೆಯೇ ಶ್ರೀಮಂತರ ಮೇಲಿರುವಷ್ಟೇ ಕರಭಾರ ಬಡವರ ಮೇಲೂ ಇರಲೆಂದು ಸಮಾನತೆಯ ಕಾರಣ ಕೊಟ್ಟು ಯಾರಾದರೂ ಹೇಳಿದರೆ, ಜನರು ಅವರನ್ನು ಹುಚ್ಚರೆನ್ನುವರು. ಸಮಾನರಾಗಿರುವ ಆರ್ಥಿಕ ಸಾಮರ್ಥ್ಯವುಳ್ಳ ಶ್ರೀಮಂತರಲ್ಲಿ, ಹೆಚ್ಚು ಕಡಿಮೆ ಮಾಡಿದಲ್ಲಿ, ಹಾಗೂ ಸದೃಢರಿಗೆ ಪಚನವಾಗುವ ಅನ್ನವನ್ನು ರೋಗಿಗಳಿಗೆ ಕೊಟ್ಟಲ್ಲಿ ಮಾತ್ರ ವಿಷಮತೆಯೆನಿಸುವುದು.

ಈ ಉದಾಹರಣೆಯ ತಾತ್ಪರ್ಯದಂತೆ, ಸಮಾನರನ್ನು ಅಸಮಾನತೆಯಿಂದ ಮತ್ತು ಅಸಮಾನರನ್ನು ಸಮಾನತೆಯಿಂದ ನೋಡದಿರುವುದೇ ಸಮತಾವಾದದ ನಿಯಮವಾಗಿದೆ. ಇದರಂತೆ ನೋಡಿದರೆ, ಡಾ. ಅಂಬೇಡ್ಕರರ ಬೇಡಿಕೆಯು ಅವರ ಸಮತಾವಾದವನ್ನು ಪೂರ್ಣವಾಗಿ ಎತ್ತಿ ಹಿಡಿದಿದೆಯೆಂದು ತಿಳಿದು ಬರುತ್ತದೆ. ಸ್ಪೃಶ್ಯ, ಅಸ್ಪೃಶ್ಯ ಈ ಎರಡೂ ವರ್ಗ ಒಂದೇ ಭೂಮಿಕೆಯಲ್ಲಿದ್ದು, ಅಸ್ಪೃಶ್ಯರಿಗೆ ಜಾತಿವಾರು ಪ್ರತಿನಿಧಿತ್ವ ಬೇಕೆಂದು ಡಾ. ಅಂಬೇಡ್ಕರರು ಬೇಡಿಕೆ ಸಲ್ಲಿಸಿದ್ದರೆ, ಅವರ ಸಮತಾವಾದದ ಬಗ್ಗೆ ಆಕ್ಷೇಪವೆತ್ತುವುದು ಯೋಗ್ಯವೆನ್ನಬಹುದಿತ್ತು. ಒಂದು ವರ್ಗದ ಜನರಿಗೆ, ಅಂಬೇಡ್ಕರರು ಪಕ್ಷಪಾತ ಮಾಡಿದ್ದಾರೆಂದು ಹೇಳಲಾಗಿದೆ. ಆದರೆ, ಸ್ಪೃಶ್ಯ ಹಾಗೂ ಅಸ್ಪೃಶ್ಯ ಈ ಎರಡೂ ವರ್ಗಗಳ ನಡುವೆ ಯಾವುದೇ ಪ್ರಕಾರದ ಸಮಾನತೆ ಇಲ್ಲವೆಂಬುದು ಸ್ಪಷ್ಟವಿದೆ. ಶಿಕ್ಷಣ, ಸಂಪತ್ತು ಮತ್ತು ಜನಸಂಖ್ಯೆ ಈ ಮೂರೂ ವಿಷಯಗಳಲ್ಲಿ ಈ ಎರಡು ವರ್ಗಗಳ ನಡುವೆ, ಭೂಮ್ಯಾಕಾಶಗಳ ಅಂತರವಿದೆ. ಶಿಕ್ಷಣದ ವಿಷಯದಲ್ಲಿ ಸ್ಪೃಶ್ಯರು ಮುಂದುವರಿದವರೆಂದೂ, ಅಸ್ಪೃಶ್ಯರು ಹಿಂದುಳಿದವರೆಂದೂ, ಸಂಪತ್ತಿಯ ವಿಷಯದಲ್ಲಿ ಸ್ಪಶ್ಯರು ಶ್ರೀಮಂತರೆಂದೂ, ಅಸ್ಪಶ್ಯರು ಬಡವರೆಂದೂ, ಜನಸಂಖ್ಯೆಯ ವಿಷಯದಲ್ಲಿ ಸ್ಪೃಶ್ಯರು ಬಲಾಢ್ಯರೆಂದೂ, ಅಸ್ಪೃಶ್ಯರು ದುರ್ಬಲರೆಂದೂ ಇದೆ. ಅಂದರೆ, ಅಸ್ಪೃಶ್ಯ ಸಮಾಜವು ಸ್ಪೃಶ್ಯ ಸಮಾಜಕ್ಕಿಂತ ಎಲ್ಲ ದೃಷ್ಟಿಯಲ್ಲಿ ನಿಕೃಷ್ಟವಿದೆ. ಹೀಗೆ ಅಸಮಾನ ವರ್ಗವನ್ನು ಸಮಾನತೆಯಿಂದ ಕಾಣಬೇಕೆಂದು ನಿಶ್ಚಯಿಸಿದರೂ, ಅವೆರಡರ ಪರಸ್ಪರ ಸಂಬಂಧ ಎಂದೂ ಬದಲಾಗುವುದು ಶಕ್ಯವಿಲ್ಲವೆಂಬುದು ಸ್ಪಷ್ಟವಿದೆ.

ಸಮತೆಯೆಂದರೆ ಸಮಾನತೆಯಿಂದ ಕಾಣುವುದು ಎಂಬ ವಿಚಾರ ಸರಣಿಯಿಂದ ಎಷ್ಟು ಅನರ್ಥವಾಗಿದೆಯೆಂಬುದು, ಮೇಲಿನ ವಿವೇಚನೆಯಿಂದ ತಿಳಿದು ಬರುತ್ತದೆ. ಡಾ. ಅಂಬೇಡ್ಕರರ ಉಕ್ತಿ ಮತ್ತು ಕೃತಿಯಲ್ಲಿ ಅಸಮಂಜಸತೆ ಇದೆ ಎಂದು ತೋರಿಸಲೆಂದು ಹೀಗೆ ದಿಕ್ಕು ತಪ್ಪಿಸುವ, ಅರ್ಥಹೀನ ವಿಚಾರಸರಣಿ ಮುಂದಿಡುವವರಿಗೆ

ನಾವು ಹೇಳುವುದಿಷ್ಟೇ ; ನಾಚಿಕೆಯಿಂದ ತಪ್ಪನ್ನು ಒಪ್ಪಾಗಿಸಿ ಕೊಳ್ಳುವುದಕ್ಕಿಂತ ನಮ್ಮ ತಪ್ಪನ್ನು ಅರಿತುಕೊಂಡು, ನಮ್ಮ ವಿಚಾರಸರಣಿಯನ್ನು ಬದಲಿಸುವುದರಲ್ಲೇ ಹೆಚ್ಚು ಪ್ರಾಮಾಣಿಕತೆ ಇದೆಯೆಂಬುದು ಡಾ. ಅಂಬೇಡ್ಕರರಿಗೆ ತಿಳಿದಿದೆ.



ತಾನು ತಪ್ಪಿದ್ದೇನೆಂದು ಅವರಿಗೆ ತಿಳಿದಿದ್ದರೆ, ಅವರು ಸಮತಾವಾದವನ್ನು ಬಿಟ್ಟು ಬಿಡುತ್ತಿದ್ದರು, ಇಲ್ಲವೇ, ಪ್ರಸ್ತುತ ಬೇಡಿಕೆಯನ್ನು ಮುಂದಿಡುತ್ತಿರಲಿಲ್ಲ. ಆದರೆ, ತಮ್ಮ ಬೇಡಿಕೆಯಲ್ಲೂ , ಸಮತೆಯ ತತ್ವದಲ್ಲೂ ಯಾವುದೇ ವೈರುಧ್ಯವಿಲ್ಲವೆಂದು ಅವರು ಅರಿತಿದ್ದರು. ಪರಿಸ್ಥಿತಿಯ ವಿಷಮತೆಯನ್ನು ನೋಡದೇ , ರೋಗಿ, ನಿರೋಗಿ, ಬಡವ ಶ್ರೀಮಂತ, ಹಿಂದುಳಿದವ ಮುಂದುವರಿದವ , ಅಲ್ಪಸಂಖ್ಯಾತ, ಬಹುಸಂಖ್ಯಾತ ಇವರೆಲ್ಲರನ್ನೂ ಸಮಾನವಾಗಿ ಕಾಣಬೇಕೆನ್ನುವ ಹುಚ್ಚು ಸಮಾಜವಾದಿ ಅವರಾಗಿದ್ದರೆ ಅಸ್ಪೃಶ್ಯರ ದಲಿತಸಮಾಜ ಮತ್ತು ಸ್ಪೃಶ್ಯರ ಅಧಿಕಾರಯುಕ್ತ ಸಮಾಜಗಳ ನಡುವೆ ಯಾವುದೇ ಭೇದವೆಣಿಸದೆ ಅಸ್ಪೃಶ್ಯ ಮತ್ತು ಸ್ಪೃಶ್ಯ ಸಮಾಜ ಸಮಾನ ಬಲ ಹೊಂದಿರಲಿ ಎಂಬ ಬೇಡಿಕೆಯನ್ನೂ ಮುಂದಿಡುತ್ತಿರಲಿಲ್ಲ.

ಈ ಬೇಡಿಕೆಯ ಬಗ್ಗೆ ಆಕ್ಷೇಪವೆತ್ತುವವರ ಮನದ ಸಂತಾಪ ಹರಿಬಿಡಲು ಕಾರಣಗಳು ಯಥೇಚ್ಛವಿವೆ. ಡಾ. ಅಂಬೇಡ್ಕರರ ಉಕ್ತಿ ಮತ್ತು ಕೃತಿಯಲ್ಲಿನ ವಿಸಂಗತತೆಯು, ಆಕ್ಷೇಪಕರ ತೋರಿಕೆಯ ಹಲ್ಲುಗಳಷ್ಟೇ. ಡಾ. ಅಂಬೇಡ್ಕರರ ಬೇಡಿಕೆಯಂತೆ, ರಾಜಕಾರಣದಲ್ಲಿ ಸ್ಪೃಶ್ಯ, ಅಸ್ಪೃಶ್ಯರಿಬ್ಬರೂ ಸಮಾನರೆಂಬುದು. ಅವರ ಮನದಲ್ಲಿ ಅಚ್ಚೊತ್ತಿದ ವಿಚಾರ. ಸ್ಪೃಶ್ಯರಿಗೆ ಇದೇ ಬೇಡವಾಗಿರುವುದು. ಕಾರಣ, ಅಸ್ಪೃಶ್ಯವರ್ಗ, ರಾಜಕಾರಣದಲ್ಲಿ ಸಮಾನಾಧಿಕಾರ ಹೊಂದಿದರೆ, ಸ್ಪೃಶ್ಯರ ಚಾತುರ್ವಣ್ಯದ ಸನಾತನ ಧರ್ಮದ ಅವಸಾನವಾದಂತೆ. ಒಂದುವರ್ಗದ ಮೇಲೆ ಇನ್ನೊಂದು ವರ್ಗದ ವರ್ಚಸ್ಸು ಇರಬೇಕೆಂಬುದೇ ಚಾತುರ್ವಣ್ಯದ ಮರ್ಮ. ಈ ಚಾತುರ್ವಣ್ಯದ ವಿರುದ್ಧ ಈ ವರೆಗೆ ಅನೇಕ ದಂಗೆಗಳಾಗಿವೆ.

ಇವುಗಳಲ್ಲಿ, ಮಹಾರಾಷ್ಟ್ರದಲ್ಲಿನ ಸಾಧು ಸಂತರ ದಂಗೆ ಪ್ರಮುಖವಾದುದು. ಆದರೆ ಈ ದಂಗೆಯ ಸಂಘರ್ಷವು ತುಂಬ ಭಿನ್ನವಾದುದು. ಬ್ರಾಹ್ಮಣರು ಶ್ರೇಷ್ಠರೋ, ಇಲ್ಲಾ, ಭಕ್ತರು ಶ್ರೇಷ್ಠರೋ ಎಂಬ ಸಂಘರ್ಷವಾಗಿತ್ತದು. ಈ ಸಂಘರ್ಷದಲ್ಲಿ ಸಾಧು ಸಂತರಿಗೆ ಜಯವಾಯ್ತು ; ಮತ್ತು ಭಕ್ತರ ಶ್ರೇಷ್ಠತ್ವವನ್ನು ಬ್ರಾಹ್ಮಣರು ಮಾನ್ಯ ಮಾಡಬೇಕಾಯ್ತು. ಆದರೂ ಕೂಡಾ, ಈ ಸಂಘರ್ಷಕ್ಕೆ ಚಾತುರ್ವಣ್ಯ ವಿಧ್ವಂಸದ ದೃಷ್ಟಿಯಿಂದ ಯಾವ ಪ್ರಯೋಜನವೂ ಆಗಲಿಲ್ಲ. ನಿಮ್ಮ ಚಾತುರ್ವಣ್ಯವನ್ನು ನೀವೇ ಇಟ್ಟುಕೊಂಡಿರಿ; ಎಂಬಂತೆ, ಶ್ರೇಷ್ಠರೆಂದು ಪರಿಗಣಿತರಾದ ಬ್ರಾಹ್ಮಣರನ್ನು ನಾಚಿಸುವಂತಹ ಅಹಂಭಾವದಿಂದ ಸಾಧು ಸಂತರು ಚಾತುರ್ವಣ್ಯವನ್ನು ಮುಟ್ಟಲೂ ಹೋಗಲಿಲ್ಲ. ಭಕ್ತಿಯ ಮುಲಾಮಿನಿಂದ ಮನುಷ್ಯತ್ವಕ್ಕೆ ಬೆಲೆ ಬರುತ್ತದೆ, ಎಂದೇನೂ ಅಲ್ಲ. ಅದರ ಬೆಲೆ ಸ್ವಯಂಸಿದ್ಧವಿದೆ ಎಂಬುದನ್ನು ಸಾಧಿಸಿ ತೋರಲು ಸಂತರು ಹೋರಾಡಲಿಲ್ಲ. ಹಾಗೆಂದೇ ಚಾತುರ್ವಣ್ಯ ಪದ್ಧತಿ ಶಾಶ್ವತವಾಗುಳಿಯಿತು. ಸಂತರ ಸಂಘರ್ಷದಿಂದ ಒಂದು ದೊಡ್ಡ ದುಷ್ಪರಿಣಾಮವಾಯ್ತು. ದಲಿತವರ್ಗವನ್ನು ವಂಚಿಸುವಂತಹ ಒಂದು ಹೊಸ ಉಪಾಯ ಬ್ರಾಹ್ಮಣರ ಕೈಗೆ ಬಂತು. ದಲಿತವರ್ಗದಲ್ಲಿ ಕೊರೆಯುವ ಗಂಟಲು ಈ ಉಪಾಯದಿಂದ ಮುಚ್ಚಲ್ಪಡುತ್ತದೆಂದು ಬ್ರಾಹ್ಮಣರ ಅನುಭವವಾಗಿತ್ತು. ಮತ್ತು ಇದೇ ಉಪಾಯದ ಸಹಾಯದಿಂದ ಅವರು ಅಸ್ಪೃಶ್ಯ ಹಾಗೂ ಬ್ರಾಹ್ಮಣೇತರ ಹಿಂದೂಗಳನ್ನು ವಿಷಮತೆಯಲ್ಲಿ ಕೆಡವಿದ್ದಾರೆ. ಚೋಖಾಮೇಳಾನಂತಹ ಸಂತ ಒಂದುವೇಳೆ, ತಮ್ಮ ಸಮಾಜದಲ್ಲಿ ಹುಟ್ಟಿಕೊಂಡರೆ, ಆಗ, ಸಂಬಂಧಿತ ಸಮಾಜ ಉನ್ನತ ದೆಶೆಯನ್ನು ತಲುಪುವುದೋ ಏನೆಂದು, ಹಿಂದುಳಿದ ವರ್ಗದವರು ಯೋಚಿಸಬೇಕು.

ಹಾಗೆ ಅದು ತಲುಪುವುದಿಲ್ಲವೆಂಬುದು ಮುಕ್ತ ವಿಚಾರದಿಂದ ತಿಳಿದು ಬರುತ್ತದೆ. ವೈಯುಕ್ತಿಕ ಕರ್ತವ್ಯಶೀಲತೆ ಆದರಣೀಯವಿರುತ್ತದೆ; ಆದರೆ, ಹಲವೊಮ್ಮೆ ಅದು ಅನುಕರಣೀಯವಾಗಿರುವುದಿಲ್ಲ.



ಹಾಗೆಂದೇ ವೈಯುಕ್ತಿಕ ಕರ್ತವ್ಯಶೀಲತೆ ಹಾಗೂ ಸಾಮುದಾಯಿಕ ಕರ್ತವ್ಯಶೀಲತೆಗಳ ತುಲನೆಯಲ್ಲಿ, ಸಾಮುದಾಯಿಕ ಕರ್ತವ್ಯಶೀಲತೆ ನೂರಾರು ಪಟ್ಟು ಹೆಚ್ಚು ಶ್ರೇಯಸ್ಕರವೆಂದು ನಿಶ್ಚಿತವಾಗಿದೆ. ವೈಯುಕ್ತಿಕ ಕರ್ತವ್ಯಶೀಲತೆ, ಆಕಾಶದಷ್ಟೆತ್ತರವಿದ್ದರೂ, ಸಾಧಾರಣ ಎತ್ತರದ ಸಾಮುದಾಯಿಕ ಕರ್ತವ್ಯಶೀಲತೆಯೆದುರು ಅದು ಸಾಟಿಯಾಗದು. ಹೀಗಿರುವುದರಿಂದ ಯಾವ ಪರಿಸ್ಥಿತಿ, ಸಮಾಜದ ಸಾಮುದಾಯಿಕ ಕರ್ತವ್ಯಶೀಲತೆಯನ್ನು ಕೆಡವಿ ಹಾಕುತ್ತದೋ, ಅದು ಎಂದಿಗೂ ತ್ಯಾಜ್ಯವೇ ಆಗಿರುತ್ತದೆ. ಚೋಖಾಮೇಳಾನಂತಹ ಸಂತ, ಅದನ್ನು ಬಿಟ್ಟು ತುಂಬ ಮುಂದೆ ಬಂದರೂ, ಸಮಾಜದೊಡನೆ ಸಂಬಂಧ ಕೆಡುವುದೇನು?

ಒಬ್ಬ ವ್ಯಕ್ತಿಗಾಗಿ ಸಂಬಂಧಿತ ಸಮಾಜವು ದಲಿತಾವಸ್ಥೆಯಲ್ಲಿ ಇರಬೇಕೇ? ಅಸ್ಪೃಶ್ಯ ಹಾಗೂ ಬ್ರಾಹ್ಮಣೇತರ ಈ ವರ್ಗಗಳ ಇತಿಹಾಸವನ್ನು ನೋಡಿದರೆ, ಆ ಸಮಾಜದಲ್ಲಿ ಆಕಾಶದೆತ್ತರದ ವ್ಯಕ್ತಿಗಳು ಹುಟ್ಟಿಕೊಂಡಿದ್ದರೂ, ಆ ಸಮಾಜದ ಸಾಮುದಾಯಿಕ ಉನ್ನತಿಯನ್ನು ಮಾತ್ರ ಯಾರೂ ಸಾಧಿಸಲಿಲ್ಲ. ಚಾತುರ್ವರ್ಣ್ಯಜನ್ಯ ವಿಷಮತೆಯೇ ಇದಕ್ಕೆ ಕಾರಣ. ಎಷ್ಟೋ ಮಂದಿ ಈ ವಿಷಮತೆಯ ಚೌಕಟ್ಟಿನಲ್ಲಿ ಕಾಲಿಟ್ಟು ಮುಂದೆ ಬರುತ್ತಾರೆ. ಆದರೆ ಶೇಕಡಾ ೯೯ ಜನರ ಕರ್ತವ್ಯಶೀಲತೆ ಇದರಿಂದಾಗಿ ಮರಗಟ್ಟಿ ಹೋಗುತ್ತದೆ. ಬ್ರಾಹ್ಮಣೇತರ ಮತ್ತು ಅಸ್ಪೃಶ್ಯ ಸಮಾಜದ ಕರ್ತವ್ಯಶೀಲತೆ ಹೀಗೆ ಮರಗಟ್ಟಿ ಹೋಗುವುದು ಬ್ರಾಹ್ಮಣರಿಗೆ ಲಾಭದಾಯಕವಾಗಿರುವುದರಿಂದ, ಈ ವಿಷಮತೆ ಇಲ್ಲದಾಗುವುದು ಅವರಿಗೆ ಇಷ್ಟವಲ್ಲ. ಆದರೆ, ಈವರೆಗೆ ಉಳಿದುಕೊಂಡು ಬಂದಂತಹ ವಿಷಮತೆ ಇಲ್ಲವಾಗುವ ಸಮಯ ಈಗ ಬಂದಿದೆ.

## ೯. ಅಸ್ಪೃಶ್ಯ ಸಮಾಜಕ್ಕೆ ಅಸ್ಪೃಶ್ಯತೆಯ ಬ್ರಾಹ್ಮಣ ಧರ್ಮ ಪದ್ಧತಿ ಮತ್ತು ಭೇದಪ್ರಿಯ ಮನೋವೃತ್ತಿಯನ್ನು ನಾಶಗೊಳಿಸಬೇಕಾಗಿದೆ

ಶ್ರೀ ಪ್ರ, ನಾ. ಉಬಾಳೆ ಅವರಿಂದ, ಅಸ್ಪೃಶ್ಯ ಸಮಾಜವನ್ನುದ್ದೇಶಿಸಿ ಬಂದ ಕ್ರಿಸ್ತ ಜಯಂತಿಯ ಸಂದೇಶವನ್ನು ನಾವು ಹಿಂದಣ ಅಂಕಣದಲ್ಲಿ ಪ್ರಕಟಿಸಿದ್ದೇವೆ. ಶ್ರೀ ಉಬಾಳೇ ಅವರು, ಈ ಸಂದೇಶವನ್ನು ಅತ್ಯಂತ ಸಕಾರಣವಾಗಿ, ತೀರ ಕಳಕಳಿಯಿಂದ ಒಪ್ಪಿಸಿರುವ ಬಗ್ಗೆ ಸಂಶಯವಿಲ್ಲ

.

ಅದರೆ, ಸಕಾರಣವಾಗಿ ಹಾಗೂ ಕಳಕಳಿಯಿಂದ ಮುಂದಿಟ್ಟ ಎಲ್ಲ ವಿಚಾರ ದೋಷರಹಿತವಾಗಿರುತ್ತದೆ ಎಂದು ಹೇಳುವಂತಿಲ್ಲ. ಸಕಾರಣವಾದ ವಿಚಾರಸರಣಿಯ ದೋಷಪೂರ್ಣವಾಗಿರಬಹುದು. ಶ್ರೀ ಉಬಾಳೆ ಅವರ ಸಂದೇಶದ ವಿಚಾರಸರಣಿಯಲ್ಲಿ ಹೀಗೇ ಕೆಲವು ತಪ್ಪುಗಳಾಗಿದ್ದು, ಅವನ್ನು ಪ್ರಸಿದ್ಧಗೊಳಿಸುವಲ್ಲಿ ಆ ತಪ್ಪುಗಳನ್ನು ನಾವು ತೋರಿಸದಿದ್ದರೆ, ಸಂಪಾದಕರಾಗಿ ನಾವು ನಮ್ಮ ಕರ್ತವ್ಯ ಮಾಡಿದಂತಾಗುವುದಿಲ್ಲ. ಶ್ರೀ ಉಬಾಳೆ ಅವರು, ಯೇಸುಕ್ರಿಸ್ತನ ಅನನ್ಯ ಅನುಯಾಯಿಯಾಗಿದ್ದು, ಕ್ರಿಸ್ತ ಸಂದೇಶದಿಂದ ಅವರ ಅನುಯಾಯಿಗಳಿಗೆ ಸರ್ವ ಕಲ್ಯಾಣವೂ ಲಭಿಸುವುದೆಂದು ಅವರ ನಂಬಿಕೆ.

ಇದು ವೈಯುಕ್ತಿಕ ಶ್ರದ್ಧೆಯ ವಿಷಯವಾದ್ದರಿಂದ ಈ ಬಗ್ಗೆ ನಾವೇನೂ ಬರೆಯುವ ಕಾರಣವಿಲ್ಲ. ಹಾಗೆಯೇ ಯಾವ ತತ್ವದಲ್ಲಿ ನಮಗೆ ವಿಶ್ವಾಸವಿದೆಯೋ, ಅದನ್ನು ಇತರರಿಗೂ ತಲುಪಿಸಬೇಕೆಂಬ ಇಚ್ಛೆ ಸ್ವಾಭಾವಿಕವಾದ್ದರಿಂದ, ಕ್ರಿಸ್ತಧರ್ಮಾನುಯಾಯಿಯಾಗುವಂತೆ, ಅಸ್ಪೃಶ್ಯರಿಗೆ ಶ್ರೀ ಉಬಾಳೆಯವರು ಇತ್ತ ಸೂಚನೆ ಬಗ್ಗೆ ನಾವು ಆಕ್ಷೇಪ ಎತ್ತುವಂತಿಲ್ಲ. ನಾವು ಹೇಳುವುದಿಷ್ಟೇ ; ಯಾವ ಆಧಾರದ ಮೇಲೆ, ಶ್ರೀ ಉಬಾಳೆ, ಅಸ್ಪೃಶ್ಯರಿಗೆ ಕ್ರಿಸ್ತಾನುಯಾಯಿಯಾಗುವ ಉಪದೇಶ ನೀಡುತ್ತಿರುವರೋ, ಆ ಆಧಾರವೇ ಒಂದಿಷ್ಟು ದೋಷಪೂರ್ಣವಾಗಿದೆ.

ಶ್ರೀ ಉಬಾಳೆ, ಓರ್ವ ಅತ್ಯಂತ ಧಾರ್ಮಿಕ ವೃತ್ತಿಯ, ಭಾವಿಕ ವ್ಯಕ್ತಿಯೆಂದನಿಸುತ್ತದೆ. ತಮ್ಮ ಸಂದೇಶದಲ್ಲಿ ಅವರು ಧರ್ಮದ ಬಗ್ಗೆ ಎಷ್ಟು ಪ್ರಬಲವಾಗಿ ಪ್ರತಿಪಾದಿಸಿದ್ದಾರೋ, ಅಷ್ಟು ಬಲಯುತವಾಗಿ ಸಾಮಾಜಿಕ ಹಕ್ಕುಗಳ ಬಗ್ಗೆ ಪ್ರತಿಪಾದಿಸಿಲ್ಲ. ಆದರೆ, ಅಸ್ಪೃಶ್ಯ ಸಮಾಜದ ಚಳುವಳಿಯು, ಶ್ರೀ ಉಬಾಳೆ ಅವರೆನ್ನುವಂತೆ, ಪಾಪಮುಕ್ತಿ ಮತ್ತು ಈಶ್ವರಪ್ರಾಪ್ತಿಗಾಗಿ ಇರದೆ, ಬದಲಿಗೆ, ಸಾಮಾಜಿಕ ಹಕ್ಕುಸ್ಥಾಪನೆಗಾಗಿಯೇ ಇದೆ. ಪಾಪಮುಕ್ತಿ ಮತ್ತು ಈಶ್ವರ ಪ್ರಾಪ್ತಿಗಾಗಿ ಸಾಮುದಾಯಿಕ ಚಳುವಳಿಯ ಅಗತ್ಯ ಇದೆಯೆಂದು ಯಾರೂ ಹೇಳುವುದಿಲ್ಲ. ಕಾರಣ, ಸಮಾಜಕ್ಕೆ ಸಮಾಜವೇ ಎಂದೂ ಪಾಪಿಯಾಗಿರುವುದಿಲ್ಲ. ಆದರೆ, ಅಸ್ಪೃಶ್ಯರ ಚಳವಳಿ, ಪಾಪಮುಕ್ತಿ ಹಾಗೂ ಈಶ್ವರಪ್ರಾಪ್ತಿಗಾಗಿ ಇದೆಯೆಂದೂ, ಅದಕ್ಕಾಗಿ ಮಧ್ಯಸ್ಥಿಕೆಯ ಅಗತ್ಯವಿದೆಯೆಂದೂ ಒಂದೊಮ್ಮೆ ಅಂದುಕೊಂಡರೂ, ಅದಕ್ಕೆ ಯೇಸುಕ್ರಿಸ್ತನ ಮಧ್ಯಸ್ಥಿಕೆಯ ಹೊರತು ಗತ್ಯಂತರವಿಲ್ಲ, ಎಂದು ನಮಗೆ ಅನಿಸುವುದಿಲ್ಲ. ಯೇಸುಕ್ರಿಸ್ತನ ಬೋಧನೆಯ ಬಗ್ಗೆ, ಹೇಳಿದಂತೆ ನಡೆವ ಆತನ ರೀತಿನೀತಿಯ ಬಗ್ಗೆ, ಪ್ರತಿಯೊಬ್ಬರಿಗೂ ಆದರವಿರಲೇಬೇಕು. ಆದರೆ, ಆತನಲ್ಲದೆ, ಮಧ್ಯಸ್ಥರು ಬೇರಿಲ್ಲ, ಎಂದುಕೊಳ್ಳುವುದು, ಬರಿಯ

ಭಾವುಕತನ ಹಾಗೂ ನಿರಾಧಾರವಾದುದು. ಯೇಸುವು ತನ್ನ ಅನುಯಾಯಿಗಳಿಗೆ ಇತ್ತ ಆಶ್ವಾಸನೆಯ ಮಂತ್ರವನ್ನು ಶ್ರೀ ಉಬಾಳೆ ಉದಾಹರಿಸಿದ್ದಾರೆ; ಮತ್ತು, ಇಂಥ ಆಶ್ವಾಸನೆಯನ್ನು ಬೇರಾರಾದರೂ ಕೊಟ್ಟಿರುವರೇ, ಎಂದು ಕೇಳಿದ್ದಾರೆ. ಈ ಪ್ರಶ್ನೆಗೆ ಉತ್ತರ ,

ಭಗವದ್ಗೀತೆಯಲ್ಲಿದೆ. ಪಾಪಮುಕ್ತಿಯ ವಿಷಯ ಹೇಳಬೇಕೆಂದರೆ, “ಸರ್ವಧರ್ಮಾನ್ ಪರಿತ್ಯಜ್ಯ, ಮಾಮೇಕಂ ಶರಣಂ ವಜ, ಅಹಂ ತ್ವಾ ಸರ್ವ ಪಾಪೇಭೋ, ಮೋಕ್ಷಯಿಷ್ಯಾಮಿ, ಮಾ ಶುಚಃ”, ಎಂಬ ಆಶ್ವಾಸನೆ ಭಗವದ್ಗೀತೆಯಲ್ಲಿದೆ. ಹಾಗೆಯೇ, ತಾನು ಮುಕ್ತಿದಾತನೆಂದು ಯೇಸುಕ್ರಿಸ್ತ, ಹೇಳುವಂತೆಯೇ, ಭಗವದ್ಗೀತೆಯಲ್ಲಿ ಕೃಷ್ಣನೂ ಹೇಳಿದ್ದಾನೆ. ಹಾಗೂ ಈ ಎಲ್ಲ ಆಶ್ವಾಸನೆಯನ್ನು ವಿಶಿಷ್ಟ ವರ್ಗಕ್ಕಾಗಿಯೇ ಕೊಟ್ಟಿರುವರೆಂದೇನೂ ಅಲ್ಲ..

.

ಸ್ತ್ರೀಯರು, ವೈಶ್ಯರು, ಶೂದ್ರರು ಯಥಾಯೋಗ್ಯವಾಗಿ ಗತಿ ಕಾಣುವರೆಂದು ಹೇಳಲಾಗಿದೆ. ಭಗವದ್ಗೀತೆಯಂತಹ ಹಿಂದೂಗಳ ಸಣ್ಣಪುಟ್ಟ ಪುರಾಣಗಳನ್ನು ತೆರೆದು ನೋಡಿದರೆ, ಅಲ್ಲಿ ಪಾರಮಾರ್ಥಿಕ ಮೋಕ್ಷ ಸಂಬಂಧಿ ಅಲ್ಲದಿದ್ದರೂ, ಐಹಿಕ ಸುಖ ಸಮೃದ್ಧಿ ಮತ್ತು ಸಂತತಿ ಸಂಪತ್ತಿಯ ಲಾಭದ ಆಶ್ವಾಸನೆ ಪುಷ್ಕಳವಾಗಿದೆ. ಬೈಬಲ್‌ನ ಆಶ್ವಾಸನೆ ಅಮೋಘವಾಗಿದೆಯೆಂದು ಕೊಂಡರೆ, ಈ ಆಶ್ವಾಸನೆಯನ್ನೂ ಅಮೋಘವೆಂದುಕೊಳ್ಳುವಲ್ಲಿ ಯಾವುದೇ ಅಡ್ಡಿಯಿಲ್ಲ.

ಆದರೆ, ನಿಜವಾಗಿ ನೋಡಿದರೆ, ಅಸ್ಪೃಶ್ಯ ಸಮಾಜಕ್ಕೆ , ಆಶ್ವಾಸನೆಯ ಗೊತ್ತುಗುರಿ ನೀಡುವುದರಲ್ಲಿ ಯಾವ ಅರ್ಥವಿದೆಯೆಂದು ನಮಗೆ ತಿಳಿಯುವುದಿಲ್ಲ. ಅಸ್ಪೃಶ್ಯ ಸಮಾಜ, ಪಾಪಿಯೆಂದು ತಿಳಿಯುವುದೇ ತಪ್ಪು, ಆ ಅಸ್ಪೃಶ್ಯತೆ, ಆ ಪಾಪದ ಪರಿಣಾಮವಾಗಿರದೆ, ಗೆದ್ದವರು ಸೋತವರನ್ನು ಪೂರ್ಣವಾಗಿ ತುಳಿಯಲು ಅವರ ಮೇಲೆ ಹೇರಿರುವ ಸಾಮಾಜಿಕ ಬಹಿಷ್ಕಾರವಾಗಿದೆ. ಹೀಗಿರುವಾಗ, ಅಸ್ಪೃಶ್ಯರಿಗೆ, ಪಾಪಮುಕ್ತಿಗಾಗಿ ತೊಳಲಾಡಿ, ಅದಕ್ಕಾಗಿ ಯೋಗ್ಯ ಮಧ್ಯಸ್ಥರನ್ನು, ದೇವಾಲಯವನ್ನು ಅರಸುವ ಅಗತ್ಯವೇನು? ಅಲ್ಲದೆ, ಅಸ್ಪೃಶ್ಯ ಸಮಾಜದಲ್ಲಿ ಪಾಪಿಯಾಗಿರುವವರು,

ಹಿಂದೂ ಆಗಿದ್ದುಕೊಂಡೇ ಪಾಪಮುಕ್ತಿ ಹಾಗೂ ಈಶ್ವರ ಪ್ರಾಪ್ತಿಯನ್ನು ಸಾಧಿಸಬಲ್ಲರು. ಮೋಕ್ಷಪ್ರಾಪ್ತಿಗೆ ಅಸ್ಪಶ್ಯತೆ ಅಡ್ಡಿ ಬರುವುದಿಲ್ಲವೆಂದು ಅಸ್ಪೃಶ್ಯರಿಗೆ ಹಿಂದೂಗಳ ಆಶ್ವಾಸನೆ ಇದೆ. ಚೋಖಾಮೇಳಾ, ರೋಹಿದಾಸ ಮುಂತಾದ ಸಂತರು ಅಸ್ಪೃಶ್ಯರಿದ್ದೂ, ಅವರಿಗೆ ಮೋಕ್ಷ ಪ್ರಾಪ್ತಿಯಾಗಿದೆ, "ಮೋಕ್ಷ ನಿಮ್ಮ ಕೈಯಲ್ಲಿ" ಎಂಬ ತಾಳ ಮದ್ದಳೆಯ ಗದ್ದಲ ಮೊಳಗುತ್ತಿದ್ದರೂ, ಹಿಂದೂಗಳು, ಅದರ ಸನಿಹಕ್ಕೂ ಸುಳಿಯುವವರಲ್ಲ ಎಂಬುದು ಎಲ್ಲ ಪರಧರ್ಮೀಯರಿಗೆ ಖಾತ್ರಿಯಿದೆ. ಅಸ್ಪೃಶ್ಯ ಹಿಂದೂಗಳನ್ನು ಖಾಸಗೀ ಮಾಲಿಕತ್ವದ ಕೆರೆಯಿಂದ ನೀರೆತ್ತಿಕೊಳ್ಳಲು ಬಿಟ್ಟರೆ, ಸರಕಾರೀ ಶಾಲೆಯಲ್ಲಿ ನಮ್ಮ ಮಕ್ಕಳನ್ನು ನಿಮ್ಮ ಮಕ್ಕಳ ಪಕ್ಕ ಕುಳಿತಿರಲು ಬಿಟ್ಟರೆ, ಭೂತಳದ ಮಹಾನ್ ಹಿಂದೂ ಜಾತಿಯಷ್ಟೇ ಅಲ್ಲ, ಆಕಾಶ, ಪಾತಾಳದಿಂದ ಮೂವತ್ತಮೂರು ಕೋಟಿ ದೇವಗಣ, ಆಯುಧ ಸನ್ನದ್ಧರಾಗಿ, ಅಸ್ಪಶ್ಯರನ್ನು ಆಘಾತಿಸಲು ಧಾವಿಸಿ ಬರುವುದು. ರತ್ನಗಿರಿ ಸ್ಕೂಲ್ ಬೋರ್ಡ್‌ನ ನಿಶ್ಚಯದಂತೆ, ಅಲ್ಲಿನ ಅಸ್ಪೃಶ್ಯರು, ತಮ್ಮ ಮಕ್ಕಳನ್ನು ಸ್ಪಶ್ಯರ ಮಕ್ಕಳ ಪಕ್ಕ ಕುಳಿತಿರಲು ಕಳುಹಿದಾಗ, ದೇವರು ಅವರ ಮೇಲೆ ಕೋಪಿಸಿಕೊಂಡರೆಂಬ ವಿಷಯ, ರತ್ನಗಿರಿಯ ಸತ್ಯ ಶೋಧಕರಲ್ಲಿ ಪ್ರಸಿದ್ಧವಾಗಿದೆ. ಇದು ವಿಚಾರಾರ್ಹವಾದ ವಿಷಯ.

ಮೋಕ್ಷಪ್ರಾಪ್ತಿಗಗಿ ಅಸ್ಪೃಶ್ಯರು ಚಳವಳಿ ನಡೆಸಿದರೂ, ಅವರ ಬಗ್ಗೆ ಸಹಾನುಭೂತಿ ತೋರುವ ಹಿಂದೂಗಳೂ, ದೇವತೆಗಳೂ, ಸಾಮಾಜಿಕ ಹಕ್ಕು ಪ್ರಾಪ್ತಿಗಾಗಿ ಹೋರಾಡುವ ಅಸ್ಪೃಶ್ಯರ ಮೇಲೆ,



ಇಷ್ಟು ಕೋಪಾವಿಷ್ಟರಾಗುವರೇಕೆ ಎಂಬ ಪ್ರಶ್ನೆ ವಿಚಾರಾರ್ಹವೇ ಇದೆ. ಈ ಪ್ರಶ್ನೆಯ ಉತ್ತರ ಯಾರಿಗೆ ಹೊಳೆಯುತ್ತದೋ, ಮತ್ತು ಹಿಂದೂಗಳ ಹಾಗೂ ದೇವತೆಗಳ ಈ ವಿಸಂಗತ ವರ್ತನೆಯ ಇಂಗಿತ ಯಾರಿಗೆ ತಿಳಿಯುವುದೋ, ಅವರಿಗೆ ಬ್ರಾಹ್ಮಣೀ ಧರ್ಮಪದ್ಧತಿಯ ರಹಸ್ಯ ತಿಳಿದಿದೆಯೆನ್ನಲು ಯಾವ ತೊಂದರೆಯೂ ಇಲ್ಲ. ಹಿಂದೂಗಳ ಧಾರ್ಮಿಕ ತತ್ವ ತುಂಬ ಉಜ್ವಲವಾಗಿದೆ ; ಆದರೆ ಈ ತತ್ವದಿಂದ ಅವರ ಸಾಮಾಜಿಕ ವ್ಯವಹಾರವನ್ನು ವಿಶೇಷವಾಗಿ ಪದ್ಧತಿಯಿಂದ ವಿಭಕೀಕರಣ ಮಾಡಲಾಗಿದೆ. ಹೀಗಾಗಿಯೇ ಈ ತತ್ವದ ಗಿಳಿಪಾಠದಂತೆ ಅಸ್ಪೃಶ್ಯರ ಮೇಲಿನ ಸಾಮಾಜಿಕ ಬಹಿಷ್ಕಾರ ಹಿಂದೂ ಸಮಾಜದಲ್ಲಿ ರೂಢಿಯಲ್ಲಿದೆ. ದಲಿತರು ಸಾಮಾಜಿಕ ದಂಗೆಯ ಕರೆ ಕೊಡದಂತೆ, ಅವರೆದುರು ದೊಡ್ಡ ದೊಡ್ಡ ತತ್ವಗಳನ್ನೂ ಆಮಿಷಗಳನ್ನೂ ಇರಿಸಲಾಗಿದೆ. ಇದು ಈ ತತ್ವ ವಿರೋಧಿ ವ್ಯವಹಾರದ ಮರ್ಮ, ಬಹುಕಾಲದ ವರೆಗೆ ಸ್ಪಶ್ಯರ ಲಕ್ಷಕ್ಕೆ ಈ ವಿಷಯ ಬಂದಿರಲಿಲ್ಲ. ಆದರೆ ಈಗ ಅದು ಅವರಿಗೆ ತಿಳಿದಿದೆ, ಹಾಗೂ ತಮ್ಮ ಸಾಮಾಜಿಕ ಹಕ್ಕುಗಳಿಗಾಗಿ ಅವರು ಚಳವಳಿ ಆರಂಭಿಸಿದ್ದಾರೆ. ಮತಾಂತರದ ಬಗ್ಗೆ ಅವರಿಗೆ

ಉಪದೇಶಿಸ ಹೊರಟರೆ, ಇದೇ ಅಡಿಪಾಯದ ಮೇಲೆ ಹಾಗೆ ಮಾಡುವುದು ಸೂಕ್ತ. ಕ್ರಿಸ್ತ ಧರ್ಮದಲ್ಲಿ ಎಲ್ಲ ಮಾನವರಿಗೂ ಸಮಾನ ಹಕ್ಕು, ಸಮಾನ ಅವಕಾಶವಿದೆಯೆಂದುಕೊಂಡು, ಕ್ರಿಸ್ತರಾಗುವಂತೆ ಕರೆ ನೀಡಿದರೆ, ಅಸ್ಪೃಶ್ಯ ಸಮಾಜದಲ್ಲಿ ಸಂಪೂರ್ಣ ಒಪ್ಪಿಗೆಯಲ್ಲದಿದ್ದರೂ ಮಾನ ಸಿಗುವುದು. ಆದರೆ, ಪಾಪಮುಕ್ತಿಗಾಗಿ, ಈಶ್ವರಪ್ರಾಪ್ತಿಗಾಗಿ, ಯೋಗ್ಯ ಮಧ್ಯಸ್ಥರಿಗಾಗಿ ನೀನು ಕ್ರಿಸ್ತಾನುಯಾಯಿಯಾಗು ಎನ್ನುವುದು ಮಾತ್ರ ಯಾರಿಗೂ ಹಿಡಿಸುವಂತಹುದಲ್ಲ. ಕಾರಣ, ಹಿಂದೂ ಧರ್ಮದಲ್ಲಿದ್ದೇ ಇದನ್ನು ಸಾಧಿಸುವುದು ಅವರಿಂದ ಸಾಧ್ಯ. ಅಸ್ಪೃಶ್ಯತಾ ನಿವಾರಣೆಯೇ ಅವರ ಚಳವಳಿಯ ಧ್ಯೆಯವಾಗಿದ್ದರೆ, ಮತಾಂತರವು ಅದನ್ನು ತ್ವರಿತವಾಗಿ ಸಾಧ್ಯವಾಗಿಸುವುದು. ಆದರೆ ಅಸ್ಪೃಶ್ಯ ಸಮಾಜಕ್ಕಾಗಿ ಏನೂ ಮಾಡದಿದ್ದರೂ, ಬ್ರಾಹ್ಮಣ ಧರ್ಮಪದ್ಧತಿ ಹಾಗೂ ಅದರಿಂದ ಹುಟ್ಟಿಕೊಳ್ಳುವ ಭೇದಪ್ರಿಯ ಮನೋವೃತ್ತಿಯನ್ನು ಇಲ್ಲವಾಗಿಸ ಬೇಕಾಗಿದೆ. ಕಾರಣ, ಕ್ರಿಸ್ತರಾದವರಲ್ಲೂ ಬ್ರಾಹ್ಮಣ ಕ್ರಿಸ್ತ, ಮರಾಠಾ ಕ್ರಿಸ್ತ ಇಂತಹ ಭೇದಭಾವ ಇರುತ್ತದೆ. ಹಾಗೆಂದೇ, ಕ್ರಿಸ್ತರಾಗುವ ಯತ್ನಕ್ಕೆ ಹೋಗದೆ, ಹಿಂದೂಗಳಾಗಿದ್ದುಕೊಂಡೇ ಬ್ರಾಹ್ಮಣ ಧರ್ಮನಾಶಕ್ಕೆ ಯತ್ನಿಸುವುದು ಕ್ಷೇಮವೆಂದು ನಮಗನಿಸುತ್ತದೆ.

* * * *

## ೧೦. ದೇಹ ಹತ್ಯೆಗಿಂತಲೂ ಮನದ ಹತ್ಯೆ ಹೆಚ್ಚು ಭಯಂಕರ

.

ಅಸ್ಪೃಶ್ಯೋದ್ದಾರಕರೆಂದು ಮೆರೆಯುವ ಮಣೆಯ ಮಾಟೇ ಮಾಸ್ತರರ ಅಸ್ಪೃಶ್ಯೋದ್ದಾರದಲ್ಲಿ ಯಾವ ಬ್ರಾಹ್ಮಣ್ಯ ಕುತಂತ್ರ ಇದೆಯೆಂದು ನಾವು ಅದಾಗಲೇ ಈ ಹಿಂದೆ ವಾಚಕರ ಗಮನಕ್ಕೆ ತಂದಿದ್ದೇವೆ. ಬ್ರಾಹ್ಮಣೇತರರ ವಿರುದ್ಧ ಬ್ರಾಹ್ಮಣರ ಪಕ್ಷವನ್ನು ಬಲಪಡಿಸುವ ನೆವದಿಂದ , ಅಸ್ಪಶ್ಯರನ್ನು ಪುಣೆಯಲ್ಲಿ ಚಾತುರ್ವಣ್ಯದ ಬಗ್ಗೆ ವ್ಯಾಖ್ಯಾನ ಏರ್ಪಡಿಸಲಾಯ್ತು.

ಇಂದಿನ ಬ್ರಿಟಿಷ್ ರಾಜ್ಯಕ್ಕಿಂತ ಪೇಶ್ವೇಗಳ ರಾಜ್ಯದಲ್ಲಿ ಅಸ್ಪೃಶ್ಯರಿಗೆ ಹೆಚ್ಚು ಸವಲತ್ತಿತ್ತೆಂದು ಅಲ್ಲಿ ಅವರು ಹೇಳಿದ್ದಾರೆ. ವಿಶೇಷ ಲಕ್ಷದಲ್ಲಿರಿಸಬೇಕಾದ ವಿಷಯ ಇದೆಂದು, ಮಾಟೇ ಮಾಸ್ತರರು ಈ ಅದ್ಭುತ ಶೋಧವನ್ನು ತನಗೆ ಆರೋಪಿಸಿಕೊಳ್ಳದೆ, ಒಬ್ಬ ಅಸ್ಪೃಶ್ಯ ನಾಯಕನ ತಲೆಗೆ ಕಟ್ಟಿ ಬಿಟ್ಟಿದ್ದಾರೆ. ಒಬ್ಬ ಅಸ್ಪೃಶ್ಯ ನಾಯಕ ತನಗಿದನ್ನು ಹೇಳಿದನೆಂದೂ, ಅದು ಸತ್ಯವೆಂದೂ ಅವರು ಹೇಳಿಕೊಂಡಿದ್ದಾರೆ. ಈ ಶೋಧವನ್ನು ತಂದ ಅಸ್ಪೃಶ್ಯ ನಾಯಕನ, ಮತ್ತು ಅದನ್ನು ಜಗದೆದುರು ಇರಿಸಿದ ಮಾಟೆ ಮಾಸ್ತರರಿಗೆ ಆರಂಭಿಕ ನಮನವನ್ನು ಸಲ್ಲಿಸಿ, ಅವರ ಈ ಶ್ರಮ ವ್ಯರ್ಥವೆಂದಷ್ಟೇ ನಾನವರಿಗೆ ತಿಳಿಸಬಯಸುತ್ತೇನೆ. ಅವರ ಮೇಲೆ ವಿಶ್ವಾಸ ಇರಿಸುವಷ್ಟು ಅಸ್ಪೃಶ್ಯ ಸಮಾಜವೀಗ ಬುದ್ಧಿಹೀನವಾಗಿಲ್ಲ, ಹಾಗೂ ಅದು ಹಾಗಿದೆಯೆಂದು ನಂಬುವ ಮೌಢ್ಯ ನಿಮಗೂ ಬೇಡವೆಂದಷ್ಟೇ ನಮ್ಮ ಇಚ್ಛೆ,

ಮಾಟೇ ಅನ್ನುವಂತೆ ಈ ಶೋಧ ಒಬ್ಬ ಅಸ್ಪೃಶ್ಯ ನಾಯಕನದೇ, ಇಲ್ಲವೇ, ಮಾಟೇ ಅವರೇ ಒಬ್ಬ ಬುದ್ಧಿಹೀನ ಅಸ್ಪೃಶ್ಯನಿಗೆ ನಾಮಧಾರಿ ನಾಯಕತ್ವದ ಲಾಲಸೆ ತೋರಿ ಆತನ ಕತ್ತಿಗೆ ಇದನ್ನು ಕಟ್ಟಿದರೋ ಸರಿಯಾಗಿ ಹೇಳಲಾಗದು. ಆದರೆ, ಇಂತಹ ಅಸ್ಪೃಶ್ಯ ನಾಯಕನೊಬ್ಬ ಅವರಿಗೆ ಸಿಕ್ಕಿರಲಾರರೆಂದು ನಾವು ಹೇಳಲಾರೆವು. ಹಾಗೂ ಈ ಅಸ್ಪೃಶ್ಯ ನಾಯಕ ಹೆಚ್ಚೆಂದರೆ, ತನ್ನ ಗುರುಜನರನ್ನು ಸಂತುಷ್ಟಗೊಳಿಸುವ ಮಾತುಗಳನ್ನಾಡುವ ತರಬೇತಿ, ಇಂದು ಹೊರತು ಪಡಿಸಿ, ಬೇರಾವ ಅಸ್ಪೃಶ್ಯನಿಗೂ ಆಗಿಲ್ಲವೆಂದರೆ, ಅದು ವಸ್ತುಸ್ಥಿತಿಗಿಂತ ದೂರವಲ್ಲವೆಂದು ನಮಗನಿಸುತ್ತದೆ. ಈ ಮಾತಿರಲಿ; ಮಾಟೇ ಮಾಸ್ತರರ ಅಸ್ಪೃಶ್ಯ ನಾಯಕ ಅನ್ನುವಂತೆ, ಆಂಗ್ಲರಿಗಿಂತ ಪೇಳ್ವೆಯ ಕಾಲದಲ್ಲಿ ಅಸ್ಪೃಶ್ಯರಿಗೆ ಹೆಚ್ಚಿನ ಸವಲತ್ತು ಇತ್ತೆಂಬುದು ಹೇಗೆಂದು ನಮಗೆ ತಿಳಿಯುವುದಿಲ್ಲ. ಮಾಟೇ ಮಾಸ್ತರ್, ಹಾಗೇನೂ ತಮ್ಮ ಕಿಸೆಯಿಂದ ಅಸ್ಪೃಶ್ಯ ನಾಯಕರಿಗೆ ಯಾವುದೇ ಖುಲಾಸೆ ನೀಡಿಲ್ಲ. ಸಾರ್ವಜನಿಕ ಸ್ಥಳಗಳು ಈ ಕರಿಯ ಅಸ್ಪೃಶ್ಯರಿಗೆ ನಿಷಿದ್ಧವಾಗಿರಲಿಲ್ಲವೇ? ನೌಕರರಾಗಿ ದುಡಿಯುವಲ್ಲಿ ಅಸ್ಪೃಶ್ಯತೆ ಅವರಿಗೆ ತಟ್ಟುವುದಿಲ್ಲವೇ? ವಿದ್ಯಾರ್ಜನೆಯಿಂದ ಅವರಿಗೆ ಉತ್ತಮ ದರ್ಜೆ ಪ್ರಾಪ್ತವಾಗದೇ? ನಿಜವಾಗಿ ನೋಡಿದರೆ ಈ ವಿಷಯದಲ್ಲಿ ಅಸ್ಪಶ್ಯರಿಗೆ ಇಂದು ಇರುವಷ್ಟು ಸವಲತ್ತು ಹಿಂದೆಂದೂ ಇರಲಿಲ್ಲ. ಬ್ರಿಟಿಷ್ ಸರಕಾರವು, ಅಸ್ಪೃಶ್ಯತಾ ನಿವಾರಣೆಗೆ ಪೂರ್ಣ ಪ್ರಮಾಣದ ಯತ್ನ ಮಾಡಿಲ್ಲ, ನಿಜ; ಅಲ್ಲದೆ, ಎಷ್ಟೆಲ್ಲ ಯತ್ನ ಮಾಡಿದೆಯೋ ಅದು ಅಸ್ಪಶ್ಯರಿಗೆ ಅವರು ಮಾಡಿದ ದೊಡ್ಡ ಉಪಕಾರ ಎಂದೇನೂ ನಾವು ಎಣಿಸುವುದಿಲ್ಲ. ಆದರೆ, ಬ್ರಿಟಿಷರ ಕೈಯಿಂದಾದ ಅಲ್ಪಸ್ವಲ್ಪ ಕೆಲಸ ಏನಿದೆಯೋ, ಪೇಶ್ವೆಯವರ ಕೈಯಿಂದ ಅಷ್ಟೂ ಅಗಿಲ್ಲ. ಪೇಶ್ವೆಯವರ ಕಾಲದಲ್ಲಿ

ಅಸ್ಪೃಶ್ಯರ ಕೊರಳಿಗೆ ಮಡಕೆ ತೂಗು ಹಾಕಲಾಗುತ್ತಿತ್ತು, ಎನ್ನುವ ಮಾತು, ಒಂದು ಸತ್ಯಶೋಧಕ ಎಂದು ಪೇಶ್ವಾಯಿ ಮುದ್ರೆಯ ಬ್ರಾಹ್ಮಣರಿಗೆ ಅನಿಸುತ್ತದೆ. ಮಾಟೇ ಮಾಸ್ತರರು, ಅಸ್ಪೃಶ್ಯ ನಾಯಕನೊಬ್ಬನ ಸಹಾಯಕ್ಕೆಂದು, ತಂದ ಈ ಶೋಧ, ಪೇಳ್ವೆಯವರ ಇತಿಹಾಸವನ್ನೋದಿ ಬರೆದುದಿರದೆ, ಯಾರೋ ಭಟನೊಬ್ಬನ ಕಾದಂಬರಿ ಕಥೆಯಂತಿದೆಯೆಂದು ಹೇಳಬೇಕಾಗಿದೆ.

ಮಾಟೇ ಮಾಸ್ತರರ ಈ ವ್ಯಾಖ್ಯಾನದ ವೇಳೆ, ಕೇಸರಿಯ ಮಾಜಿ ಸಂಪಾದಕ ಶ್ರೀ ಗ.ವಿ. ಕೇತ್ಕರ್ ಅವರು ಅಧ್ಯಕ್ಷರಾಗಿದ್ದರು. ಮಾಟೇ ಮಾಸ್ತರರು ಪೇಶ್ವೆ ಹಾಗೂ ಬ್ರಿಟಿಶರ ತುಲನೆ ಮಾಡಿ ಪೇಶ್ವ ಉತ್ತಮವೆಂದಿದ್ದರೆ, ಕೇತ್ಕರರು, ಬ್ರಾಹ್ಮಣಧರ್ಮದ ಸ್ಪಶ್ಯ ಹಿಂದೂಗಳು ಮತ್ತು ಆಫ್ರಿಕದ ಬಿಳಿಯರ ತುಲನೆ ಮಾಡಿ, ಸ್ಪೃಶ್ಯ ಹಿಂದೂಗಳು ಉತ್ತಮವೆಂದಿದ್ದಾರೆ. ನೀಗೋ ಮುಂತಾದವರನ್ನು ಬಿಳಿಯರ ಜೈಲುಗಳಲ್ಲಿ ದುಷ್ಟತನದಿಂದ ಮತ್ತು ಕ್ರೌರ್ಯದಿಂದ ನೋಡಿದ್ದರೆ, ತಾವು ಅಸ್ಪೃಶ್ಯರನ್ನು ದಯೆಯಿಂದ ಕಂಡಿರುವುದಾಗಿ ಅವರ ಅಂಬೋಣ. ಇದು ಅವರ ಭ್ರಮೆಯಷ್ಟೇ. ಮೇಲ್ನೋಟಕ್ಕೆ ಆಫ್ರಿಕದ ಬಿಳಿ ಜನರು ಅಲ್ಲಿನ ನೀಗೋ ಗುಲಾಮರನ್ನು ಚಾಲೂಕಿನಿಂದ ಹೊಡೆದು, ಲಾಠಿಯಿಂದ ಬಡಿದು, ಗತಿ ಕಾಣಿಸುತ್ತಾರೆಂದೂ, ನಮ್ಮ ಸ್ಪಶ್ಯ ಹಿಂದೂಗಳು ಅಸ್ಪೃಶ್ಯರನ್ನು ಹಾಗೇನೂ ಮಾಡುವುದಿಲ್ಲವೆಂದೂ, ಎಲ್ಲರಲ್ಲೂ ಅಂತರಾತ್ಮನಿದ್ದಾನೆ ಎಂಬ ತತ್ವವೇ ಇಲ್ಲಿ ಅಡಕವಾಗಿದೆ ಎಂದೂ ಅಂದುಕೊಳ್ಳುವುದು ಶುದ್ಧ ತಪ್ಪು, ಬಿಳಿ ಜನರು ನೀಗೋಗಳ ಮೇಲೆ ನಡೆಸುವ ದೌರ್ಜನ್ಯದ ನೂರು ಪಟ್ಟು ಹೆಚ್ಚಿನ ದೌರ್ಜನ್ಯ, ಅಸ್ಪೃಶ್ಯರ ಮೇಲೆ ನಮ್ಮ ಸ್ಪೃಶ್ಯರಿಂದ ನಡೆಯುತ್ತದೆ. ವ್ಯತ್ಯಾಸವಿಷ್ಟೇ; ನೀಗೋಗಳ ಮೇಲೆ ನಡೆವ ದೌರ್ಜನ್ಯ ಶಾರೀರಿಕವಿದ್ದರೆ, ಅಸ್ಪಶ್ಯರ ಮೇಲೆ ನಡೆವ ದೌರ್ಜನ್ಯ, ಮಾನಸಿಕ ಆಗಿರುತ್ತದೆ. ಹಾಗೂ ಹೆಚ್ಚಾಗಿ ಶಾರೀರಿಕ ಹಲ್ಲೆಯಲ್ಲೇ ಅದರ ಪರ್ಯವಸಾನವಾಗುತ್ತದೆ. ಅಸ್ಪೃಶ್ಯರು ತಮ್ಮ ಸ್ಥಾನಮಾನಕ್ಕೆ ತಕ್ಕಂತೆ ಇರಬೇಕು. ಮೇಲೇರುವ ಯತ್ನಕ್ಕಿಳಿಯ ಬಾರದು; ಒಳ್ಳೆಯ ಉಡುಪು ತೊಡಬಾರದು, ಅವರ ಹೆಂಗಸರು ಆಭರಣ ಕೊಳ್ಳಬಾರದು, ಎಂಬ ಸ್ಪಶ್ಯರ ಇಚ್ಛೆ, ಅಸ್ಪಶ್ಯರ ಮನದ ಕೋಭೆಯಾಗಿ ಮಾರ್ಪಡುತ್ತದೆ. ಅಸ್ಪೃಶ್ಯರು ತಮ್ಮ ಸ್ಥಾನಮಾನಕ್ಕೆ ತಕ್ಕಂತೆ ಇರುವವರೆಗೆ ಸ್ಪೃಶ್ಯರು ಅವರ ಗೊಡವೆಗೆ ಹೋಗಲಾರರು. ಆದರೆ, ಅವರು ತಮ್ಮ ಸ್ಥಾನದಿಂದ ಹೊರ ನಡೆದರೆ, ಅವರನ್ನು ಅಲ್ಲೇ ಇರಿಸಲು ಸ್ಪೃಶ್ಯರು ಅವರ ದಮನಕ್ಕಿಳಿಯುವರು. ಬಿಳಿಯರು ನೀಡೋಗಳನ್ನು ದಮನಿಸುವುದು, ತಮ್ಮ ಸ್ವಾರ್ಥಕ್ಕಾಗಿ, ಆದರೆ ಅಸ್ಪಶ್ಯರು ತಮ್ಮ ಹೆಜ್ಜೆಗಳಿಂದ ಕದಲಿದರೆ, ಸ್ಪೃಶ್ಯರಿಗಾಗುವ ಹಾನಿಯೆನೂ ಇಲ್ಲದಿದ್ದರೂ, ಅವರು ಅಸ್ಪಶ್ಯರನ್ನು ದಮನಿಸುವರು.ಅಂದರೆ,

ಅಸ್ಪೃಶ್ಯರು ಹೀನಸ್ಥಿತಿಯಲ್ಲಿ ಇರುವುದೇ ತಮ್ಮ ದೊಡ್ಡತನವೆಂದು ಸ್ಪೃಶ್ಯರು ಅಂದುಕೊಳ್ಳುತ್ತಾರೆ. ಬಿಳಿಯರ ಮತ್ತು ಸ್ಪೃಶ್ಯರ ಮನೋವೃತ್ತಿಯಲ್ಲಿ ಇದೇ ದೊಡ್ಡ ಅಂತರವಿದೆ.ಬಿಳಿಯರು ಕರಿಯರ ದೇಹ ದಂಡಿಸಿದ್ದರೆ, ಸ್ಪೃಶ್ಯರು ಅಸ್ಪೃಶ್ಯರ ಮನವನ್ನೇ ಘಾತಿಸಿದ್ದಾರೆ. ಮತ್ತು, ದೇಹ ದಂಡನೆಗಿಂತ ಮನದ ದಂಡನೆಯೇ ಹೆಚ್ಚು ಭಯಂಕರವೆಂದು ಯಾರೂ ಹೇಳಬಹುದು.

* * * *

## ೧೧. ಅಸ್ಪೃಶ್ಯರಿಗೆ ಹಿತಕಾರಕವಾಗಿರುವ ಯೋಜನೆಯನ್ನು ಹೊಸಕಿ ಹಾಕುವ ತಂತ್ರ ಸ್ಪೃಶ್ಯ ಸತ್ತಾಧಾರಿಗಳದ್ದು

ಶಿಕ್ಷಣ ಖಾತೆ, ಇಂದಿನವರೆಗೆ ಬ್ರಿಟಿಷ್ ಸರಕಾರದ ಕೈಯಲ್ಲಿತ್ತು. ಬ್ರಿಟಿಷ್ ಸರಕಾರ ಪರಕೀಯವಾದ್ದರಿಂದ, ಪ್ರಜೆಗಳ ಶಿಕ್ಷಣದ ಕಡೆಗೆ ಕೊಡಬೇಕಾದಷ್ಟು ಗಮನವನ್ನು ಕೊಟ್ಟಿಲ್ಲ. ವಿಶೇಷವಾಗಿ ಅಸ್ಪೃಶ್ಯ ಸಮಾಜದ ಶಿಕ್ಷಣದ ಬಗ್ಗೆ ಅದು ನಿರ್ಲಕ್ಷ್ಯವನ್ನೇ ಮಾಡಿದೆ. ಹೊಸ ಸುಧಾರಣಾ ಕಾಯ್ದೆಯ ಅನ್ವಯ ಶಿಕ್ಷಣ ಖಾತೆ ಹಿಂದೀಯರ ಕೈಗೆ ಬಂದರೆ ಆ ಅನ್ಯಾಯ ದೂರವಾದೀತೆಂಬ ಆಶೆ, ಹಲವರಿಗಿತ್ತು. ಆದರೆ ಈ ಆಶೆ ಸಫಲವಾಗುವ ಎಳ್ಳಷ್ಟೂ ಅವಕಾಶವಿಲ್ಲ ಎಂಬುದು, "ಪುಣೆ ಜಿಲ್ಲಾ ಬೋರ್ಡ್ ಮತ್ತು ಅಸ್ಪೃಶ್ಯ ಸಮಾಜ" ಎಂಬ ಪ್ರಕಟಿತ ಪತ್ರ ವ್ಯವಹಾರದಿಂದ ಕಂಡು ಬರುತ್ತದೆ. ಸರಕಾರವು ಖರ್ಚು ಕೊಡುವುದಾದರೆ, ಬೋರ್ಡ್, ಅಸ್ಪೃಶ್ಯರಿಗಾಗಿ ಬೋರ್ಡಿಂಗ್ ನಡೆಸುವುದಲ್ಲದೆ ಶಾಲೆಯಲ್ಲಿ ಅಸ್ಪೃಶ್ಯ ಮ್ಯಾನೇಜರನ್ನೂ ನೇಮಕ ಮಾಡುವುದು. ಇದೇನು ತಪ್ಪೇ? ಸರಕಾರವು ಯಾವ ಅರ್ಥದಲ್ಲಿ ಶಿಕ್ಷಣ

ಖಾತೆಯನ್ನು ಹಿಂದೀಯರ ಕೈಯಲ್ಲಿ ಕೊಟ್ಟಿದೆಯೋ, ಆ ಅರ್ಥದಲ್ಲಿ ಖರ್ಚಿನ ಜವಾಬ್ದಾರಿ, ಸರಕಾರದ ಮೇಲೆ ಯಾವ ರೀತಿಯಲ್ಲೂ ಬಿದ್ದಿಲ್ಲವೆಂಬುದು ಸ್ಪಷ್ಟ. ಹೀಗಿರುವುದರಿಂದ, ಸರಕಾರವು ಖರ್ಚು ನೀಡಲು ಸಿದ್ಧವೆಂದುಕೊಂಡು, ಅದು ಹೀಗೆ ಬೇಡಿಕೆಯಿಟ್ಟಿದೆಯೆಂದು ನಮಗನಿಸುವುದಿಲ್ಲ. ಅದರ ಈ ವಕ್ರ ನೀತಿಯಿಂದಾಗಿ ತಿಳಿಯುವುದೇನೆಂದರೆ ಮುಸಲ್ಮಾನರಂತೆ ಪೂರ್ಣರೀತಿಯಲ್ಲಿ ಸ್ಥಾಪನೆ ಮಾಡಿದ್ದಲ್ಲದೆ, ಅಸ್ಪೃಶ್ಯರಿಗೆ ಬೇರೆ ಗತಿಯಿಲ್ಲ. ಸ್ಪೃಶ್ಯ ಹಿಂದೂಗಳು ಅವರ ಉನ್ನತಿಗಾಗಿ ಶ್ರಮ ವಹಿಸುತ್ತಾರೆಂದುಕೊಳ್ಳುವುದು ವ್ಯರ್ಥ.

* * * *

## ೧೨. ಧನಿಕರಿಂದ ಪಡೆದ ಹಣವನ್ನು ಆಪತ್ತಿನಲ್ಲಿರುವವರಿಗೆ ವಿನಿಯೋಗಿಸುವುದು

ಪಂಜಾಬಿನಲ್ಲಿ ಈಗೊಂದು ವಿಲಕ್ಷಣ ಸತ್ಯಾಗ್ರಹ ಚಾಲನೆಯಲ್ಲಿದೆ. ಸತ್ಯಾಗ್ರಹವೆಂದೊಡನೆ ಗಾಂಧೀಜಿಯವರ ಸತ್ಯಾಗ್ರಹದ ಕಲ್ಪನೆ ಕಣ್ಣೆದುರು ಬರುತ್ತದೆ. ಆದರೆ, ನಾವು ಉಲ್ಲೇಖಿಸಿದ ಸತ್ಯಾಗ್ರಹವು, ಹೀಗಿರದೆ ಅದು ಸೈನಿಕರ ಸತ್ಯಾಗ್ರಹವಾಗಿದೆ. ಲಾಹೋರಿನಲ್ಲಿನ ಮುಸಲ್ಮಾನ, ಸಿಖ್ಖ ಮುಂತಾದ ಮಾಜಿ ಸೈನಿಕರು, ಹಾಗೂ ಮಹಾಯುದ್ಧದಲ್ಲಿ ಬಲಿಯಾದ ಸೈನಿಕರ ಹೆಂಡಂದಿರು, ಮಕ್ಕಳು ಒಟ್ಟು ಸೇರಿ ಸುಮಾರು ಐದಾರು ಸಾವಿರ ಜನರು, ಈ ಸತ್ಯಾಗ್ರಹವನ್ನಾರಂಭಿಸಿದ್ದಾರೆ. ಮಹಾಯುದ್ಧದಿಂದ ಜೀವಸಹಿತ ಹಿಂದಿರುಗಿದ ಸೈನಿಕರಿಗೆ ಸರಕಾರ ರಜೆ

ಸಾರಿದ್ದರಿಂದ ಅವರೀಗ ಕೆಲಸವಿಲ್ಲದೆ, ಅವರ ಕುಟುಂಬ ನಿರ್ಗತಿಕವಾಗಿದೆ. ಅವರ ಹೊಟ್ಟೆ ಬಟ್ಟೆಯನ್ನು ನೋಡಿಕೊಳ್ಳುವುದು ಸರಕಾರದ ಕರ್ತವ್ಯವಾಗಿದೆ. ಆದರೆ ಈ ವರೆಗೆ ಸರಕಾರ ಈ ಕರ್ತವ್ಯವನ್ನು ಹೊರಗಿರಿಸಿರುವುದರಿಂದ, ಈ ಸತ್ಯಾಗ್ರಹ ಆರಂಭವಾಗಿದೆ. ತಮಗೆ ಜಮೀನು ಬೇಕೆಂದು ಸರಕಾರಕ್ಕೆ ಈ ಜನರ ಬೇಡಿಕೆ. ಈ ಬೇಡಿಕೆಯನ್ನು ಪೂರ್ಣ ಗೊಳಿಸುವುದು ಸರಕಾರದಿಂದ ಅಸಾಧ್ಯವಾದರೆ, ಬೇರಾವುದಾದರೂ ರೀತಿಯಲ್ಲಿ ಈ ಸಂಕಟಗ್ರಸ್ತರಿಗೆ ಸರಕಾರ ಸಹಾಯ ಮಾಡಬೇಕು. ಮಹಾಯುದ್ಧಕ್ಕಾಗಿ ಧನಿಕರಿಂದ ಪಡೆದ ಧನವನ್ನು, ಸಾಲವೆಂದುಕೊಂಡು, ಸರಕಾರವೀಗ ಹಿಂದಿರುಗಿಸುತ್ತಿದೆ. ಆದರೆ, ಅದನ್ನು ಸಾಲವೆಂದುಕೊಳ್ಳದೆ, ಸಹಾಯವೆಂದುಕೊಂಡು, ಅದರಿಂದ ಈ ಆಪತ್ತುಗ್ರಸ್ತರ ಸಹಾಯಕ್ಕೆ ತೊಡಗುವುದು ಒಂದು ಉಪಾಯ.

* * * *

## ೧೩. ದೇಶ ದ್ರೋಹಾತ್ಮಕ ಸನಾತನ ಧರ್ಮದ ವಿರುದ್ಧ ಕ್ರಾಂತಿವಾದ

ಅಫ್ಘಾನಿಸ್ತಾನದ ಅಮೀರ್ ಅಮಾನುಲ್ಲಾ ತಮ್ಮ ಕ್ರಾಂತಿವಾದಕ್ಕಾಗಿ ಪ್ರಸಿದ್ಧರು. ಆದರೆ ಅವರು ರಾಜ್ಯವನ್ನು ತ್ಯಜಿಸಬೇಕಾಗಿ ಬಂದುದರಿಂದ ಅವರ ಕ್ರಾಂತಿವಾದವನ್ನು ಜೀರ್ಣಿಸಿಕೊಳ್ಳುವುದು ಅಫ್ಘಾನ್ ಜನರಿಂದ ಸಾಧ್ಯವಾಗಲಿಲ್ಲವೆಂದು ಅನಿಸುತ್ತದೆ. ಅವರ ರಾಜ್ಯತ್ಯಾಗದ ಹಿಂದೆ ಯಾವುದೋ ದೊಡ್ಡ ದೇಶದ ದೊಡ್ಡ ಕಾರಸ್ಥಾನವೇ ಇದೆಯೆಂಬ ಧ್ವನಿ ಆಗೀಗ ಕೇಳಿ ಬಂದಿದೆ. ಅದು ನಿಜವಿರಬಹುದಾದರೂ, ಈ ಕಾರಸ್ಥಾನದಿಂದ ಅಫ್ಘಾನೀಯರ ಪುರಾಣ ಮತವಾದಕ್ಕೆ ಉಪಯೋಗವೇ ಆಯ್ದೆಂಬುದರಲ್ಲಿ ಸಂಶಯವಿಲ್ಲ. ಅಮಾನುಲ್ಲಾರ ಸುಧಾರಣೆಗಳು ಅಲ್ಲಿನ ಮುಲ್ಲಾಮೌಲ್ವಿಗಳಿಗೆ ಬೇಕಿರಲಿಲ್ಲ. ಅದರಿಂದ ಅಫ್ಘಾನೀಯರ ಕಲ್ಯಾಣವಾಗಬಹುದಿತ್ತು, ಆದರೆ, ಮುಲ್ಲಾಮೌಲ್ವಿಗಳಿಗೆ ದೇಶದ ಕಲ್ಯಾಣಕ್ಕಿಂತಲೂ, ಸ್ವಾರ್ಥವೇ ಮುಖ್ಯವಾಯ್ತೆಂಬುದು ಇಂದಿಗೂ ಅನುಭವವೇದ್ಯವಾಗಿದೆ. ಸ್ವಾರ್ಥಕ್ಕಾಗಿ ದೇಶದ ಕಲ್ಯಾಣವನ್ನು ಕಡೆಗಣಿಸುವ ಈ ಜನರು ಎಂದೂ ಮುಂದುವರಿಯಲಾರರು. ಅಮಾನುಲ್ಲಾರ ವಿರುದ್ಧ ಅಫ್ಘಾನ್ ಜನತೆಯನ್ನು ಕೆರಳಿಸಿದ ಅವರು, ತಮ್ಮ ದೇಶದ್ರೋಹಾತ್ಮಕ ಸನಾತನ ಧರ್ಮದ ಬಗ್ಗೆ ಲೋಕಕ್ಕೆ

ನಿದರ್ಶನವಾಗಿದ್ದಾರೆ. ಇಂತಹ ಜನರ ಶಕ್ತಿ ಎಷ್ಟು ಪ್ರಬಲವಾಗಿರುತ್ತದೆ, ಮತ್ತು ಅವರ ವಿರುದ್ಧ ಕ್ರಾಂತಿವಾದವು ಜಯಿಸಬೇಕಾದರೆ , ಅದರ ಪುರಸ್ಕರ್ತರು ಎಷ್ಟೊಂದು ತಯಾರಿ ನಡೆಸಬೇಕೆಂಬುದು ಅಮಾನುಲ್ಲಾರ ಉದಾಹರಣೆಯಿಂದ ತಿಳಿದು ಬರುತ್ತದೆ.

** * *

## ೧೪. ಮುಂಬಯಿ ಪುರಸಭೆಯ ಜನಪ್ರತಿನಿಧಿ

ಕೆಲ ದಿನಗಳ ಹಿಂದೆ ಮುಂಬಯಿ ಪುರಸಭೆಯಲ್ಲಿ ನಗರದ ವಿಭಿನ್ನ ವಾರ್ಡ್‌ಗಳ ಪ್ರತಿನಿಧಿಗಳನ್ನು ಚುನಾಯಿಸಲಾಯ್ತು

.

ತಿಂಗಳು ರೂಪಾಯಿ ಹತ್ತು ಇಲ್ಲವೇ ಅದಕ್ಕಿಂತ ಹೆಚ್ಚು ಮನೆಬಾಡಿಗೆ ಕೊಡುವವರಿಗೆ ಮತಾಧಿಕಾರ ದೊರಕಿದ್ದರಿಂದ, ಸಾಧಾರಣ ಜನಸಮುದಾಯದ ನಡುವೆ, ಮುನಿಸಿಪಾಲಿಟಿಯ ಜನಪ್ರತಿನಿಧಿಗಳ ಕರ್ತವ್ಯದ ಬಗ್ಗೆ ಒಂದಷ್ಟು ಚರ್ಚೆ ನಡೆದಿದೆ. ನಿಜವಾಗಿ ನೋಡಿದರೆ ಮುನಿಸಿಪಾಲಿಟಿಯ ಕಾರ್ಯಕಲಾಪದ ಬಗ್ಗೆ ಶ್ರೀಮಂತರಿಗಿಂತಲೂ, ಮಧ್ಯಮ ಮತ್ತು ಬಡವರ್ಗದ ಜನರಿಗೆ ಹೆಚ್ಚಿನ ಅಗತ್ಯ ಅನಿಸಬೇಕು. ಮಧ್ಯಮ ಮತ್ತು ಬಡವರ್ಗದ ಜನರ ಜೀವಿತ ಮತ್ತು ಮುನಿಸಿಪಾಲಿಟಿಯ ನಡುವೆ ನಿಕಟ ಸಂಬಂಧವಿದೆ. ಸ್ವಚ್ಛತೆ, ಆರೋಗ್ಯರಕ್ಷಣೆ, ಔಷಧೋಪಚಾರದ ವ್ಯವಸ್ಥೆ, ನೀರು ಪೂರೈಕೆ, ಪ್ರಾಥಮಿಕ ಶಿಕ್ಷಣ, ಗೃಹ ನಿರ್ಮಾಣ, ಆಟೋಟ, ಸುತ್ತಾಟಕ್ಕೆ ಸಾರ್ವಜನಿಕ ಸ್ಥಳ ಮುಂತಾದುವು ಮುನಿಸಿಪಾಲಿಟಿಯ ಕಾರ್ಯಕ್ಷೇತ್ರದೊಳಗೆ ಬರುತ್ತವೆ.

ಶ್ರೀಮಂತರು ಇಲ್ಲಿನ ಬಹಳಷ್ಟು ವಿಷಯಗಳಿಗೆ ಪುರಸಭೆಯನ್ನು ಅವಲಂಬಿಸಿರಬೇಕಾಗಿಲ್ಲ. ಮಲಬಾರ್ ಹಿಲ್, ಖಂಬಾಲಾ ಹಿಲ್, ಪೆಡರ್ ರೋಡ್‌ನಂತಹ ಸ್ವಚ್ಛವಾತಾವರಣದ ಸ್ಥಳಗಳಲ್ಲಿ ದೊಡ್ಡ ದೊಡ್ಡ ಬಂಗ್ಲೆಗಳಲ್ಲಿ ಇರುವವರಿಗೆ ತಮ್ಮ ಸೌಕರ್ಯ ತಾವೇ ನೋಡಿಕೊಳ್ಳುವುದು ಗೊತ್ತು. ಸ್ವಚ್ಛತೆ, ನೈರ್ಮಲ್ಯ ಕಾಪಾಡಿಕೊಳ್ಳುವ ಸಾಧನಗಳನ್ನು ಅವರು ಹಣದಿಂದ ಖರೀದಿಸ ಬಲ್ಲರು. ಔಷಧೋಪಚಾರಕ್ಕಾಗಿ ದೊಡ್ಡ ದೊಡ್ಡ ವೈದ್ಯರುಗಳಿಗೆ ಹಣ ತೆರುವುದು ಅವರಿಂದ ಸಾಧ್ಯ. ಪ್ರಾಥಮಿಕ ಶಿಕ್ಷಣಕ್ಕಾಗಿ ಅವರ ಮಕ್ಕಳ ಮೇಲೆ ಯಾವುದೇ ಬಲಪ್ರಯೋಗ ಮಾಡಬೇಕಿಲ್ಲ. ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಅವರು ಎಷ್ಟು ಬೇಕಾದರೂ ಹಣ ಖರ್ಚು ಮಾಡಬಲ್ಲರು. ಆಟಕ್ಕಾಗಿ ಅವರಿಗೆ ಬಂಗ್ಲೆಗಳ ಆವರಣವೋ, ಕ್ಲಬ್‌ಗಳೂ ಇವೆ ; ಊಟ, ತಿಂಡಿಗಳಿಗಾಗಿ ಎಷ್ಟು ದೂರವಿದ್ದರೂ ಪಯಣಿಸಲು ಅವರಲ್ಲಿ ಮೋಟಾರ್ ವಾಹನಗಳಿವೆ.

ಇದಕ್ಕೆ ವಿರುದ್ಧವಾಗಿ, ನಗರದ ಕೊಂಪೆ ಪ್ರದೇಶದಲ್ಲಿ ಚಾಟ್‌ಗಳ ಚಿಕ್ಕ ಚಿಕ್ಕ ಕೋಣೆಗಳಲ್ಲಿರುವ ಬಡ ಮಧ್ಯಮ ವರ್ಗದವರಿಗೆ ತಮ್ಮ ಸೌಕರ್ಯವನ್ನು ತಾವೇ ನೋಡಿಕೊಳ್ಳುವುದು ಅಸಾಧ್ಯ. ಅವರ ಜೀವನವು ಕಿಂಚಿತ್ ಸುಖಮಯವಾಗಬೇಕಿದ್ದರೆ, ಮುನಿಸಿಪಾಲಿಟಿಯಂತಹ ಸಾರ್ವಜನಿಕ ಸಂಸ್ಥೆಗಳು ಅವರ ಸುಖ, ಸೌಕರ್ಯದ ಬಗ್ಗೆ ಲಕ್ಷ್ಮವೀಯುವುದು ಅಗತ್ಯ. ಪರರ ದುಃಖಕ್ಕೆ ದುಃಖಿತರಾಗುವವರು ಈ ಲೋಕದಲ್ಲಿ ಬಹಳ ವಿರಳ. ಅರ್ಥಾತ್, ಮುನಿಸಿಪಾಲಿಟಿಯ ಕೆಲಸಕಾರ್ಯಗಳು, ಮಧ್ಯಮ ಮತ್ತು ಬಡವರ್ಗದ ಜನರಿಂದ ನಡೆಯುವಂತಾಗಬೇಕು. ಮುನಿಸಿಪಾಲಿಟಿಯಲ್ಲಿ ಮಧ್ಯಮ ಹಾಗೂ ಬಡವರ್ಗದವರ ಬಹುಮತವಿರಬೇಕು.ಬಡವರ ದುಃಖದಲ್ಲಿ ಪ್ರಗತಿಯ ಧೋರಣೆಯನ್ನು ಪುರಸ್ಕರಿಸುವವರು, ಎಂದೂ ದನಿಯೆತ್ತದೆ ಮೂಕಸ್ತಂಭದಂತಿರುವವರು, ವರ್ಷದ ಆರು ತಿಂಗಳು ಮುಖ ತೋರುವವರು, ಹೀಗೆ ಸರಕಾರದಿಂದ ಪ್ರತಿಬಾರಿಯೂ ಆರಿಸಿ ಬರುವವರಿದ್ದಾರೆ.



ಇದು ಆಶ್ಚರ್ಯವಲ್ಲ; ಆದರೆ, ವಾರ್ಡ್‌ಗಳ ಚುನಾವಣೆಯಲ್ಲೂ ಅಂಥವರು ಪುನಃ ಪುನಃ ಆರಿಸಿ ಬರುವುದು ವಿಶೇಷ ಆಶ್ಚರ್ಯ ಹಾಗೂ ಖೇದದ ವಿಷಯ. ಇಲ್ಲಿಯ ಮತದಾರರಲ್ಲಿ ತಮ್ಮ ಮೇಲಿನ ಜವಾಬ್ದಾರಿಯ ಅರಿವು ಇನ್ನೂ ಉಂಟಾಗಿಲ್ಲವೆಂಬುದಕ್ಕೆ ಇದೇ ಸಾಕ್ಷಿ.

**ಜಾತ್ಯಭಿಮಾನದ ದಂಗೆ**

ಹೆಚ್ಚಾಗಿ ಇಂತಹ ಆಯ್ಕೆಯ ಹಿಂದೆ ಜಾತಿಭೇದದ ತತ್ವವಿದೆ. ಯಾವ ಉಮೇದ್ವಾರನ ಜಾತಿಯ ಮತದಾರರ ಸಂಖ್ಯೆ ಸಣ್ಣದಿದೆಯೋ, ಆತ ತುಂಬ ಪ್ರಸಿದ್ಧನೂ, ಜನಪ್ರಿಯನೂ ಆಗಿಲ್ಲದ ಹೊರತು, ಇಲ್ಲವೇ, ಹಣದಿಂದ ಮತಗಳನ್ನು ಕೊಳ್ಳುವ ಸಾಮರ್ಥ್ಯ ಉಳ್ಳವನಾಗಿರದ ಹೊರತು, ಆತ ಯಶಸ್ವಿಯಾಗಿ ಆರಿಸಿ ಬರುವುದು ಶಕ್ಯವಿಲ್ಲ. ಮತದಾರರ ಆಕರ್ಷಣೆ ಸಹಜವಾಗಿಯೇ ತಮ್ಮ ಜಾತಿಯ ಉಮೇದ್ವಾರರತ್ತ ಇರುತ್ತದೆ. ತಮ್ಮ ಜಾತಿಯ ಪ್ರತಿನಿಧಿ, ಮುನಿಸಿಪಾಲಿಟಿಯಲ್ಲಿರುವುದು ತಮಗೆ ಭೂಷಣವೆಂದು ಅನೇಕರಿಗೆ ಅನಿಸುತ್ತದೆ. ಜಾತ್ಯಾಭಿಮಾನದ ಎದುರು, ಉಮೇದ್ವಾರನ ಯೋಗ್ಯತೆ, ಅಯೋಗ್ಯತೆಯ ವಿಚಾರ ಬಹಳ ಕೆಲವರ ಮನದಲ್ಲಷ್ಟೇ ಏಳುತ್ತದೆ. ಜಾತಿಭೇದ

ವಿಜೃಂಭಿಸುವ ಉಮೇದ್ವಾರನಿಗೆ ಉದಾರಮತವಾದಿಯಾದ ಉಮೇದ್ವಾರನಿಗಿಂತ ಅಧಿಕ ಮತಗಳು ದೊರೆಯುತ್ತವೆ. ಪುರಸಭೆಯ ಪ್ರಾಥಮಿಕ ಶಾಲೆಗಳಲ್ಲಿ ಬಹಿಷ್ಕೃತ ವಿದ್ಯಾರ್ಥಿಗಳಿಗೆ ಕುಡಿವ ನೀರಿಗೆ ಪ್ರತ್ಯೇಕ ಪಾತ್ರೆಯಿರುತ್ತದೆ, ಮತ್ತು ಪ್ರತ್ಯೇಕ ಪಂಕ್ತಿಯ ವಿಚಾರ, ಕಾರ್ಪೊರೇಶನ್‌ನಲ್ಲಿ ತೀವ್ರ ವಾದವಿವಾದವನ್ನೂ, ಮತಭೇದವನ್ನೂ ಎಬ್ಬಿಸಿತು. ಈ ವಾದವಿವಾದದ ಪರಿಣಾಮ, ಕಳೆದ ಚುನಾವಣೆಯಲ್ಲಿ ಪ್ರತಿಯೊಂದು ವಾರ್ಡ್‌ನಲ್ಲಿ ಚೆನ್ನಾಗಿಯೇ ಆದುದು ಕಂಡು ಬಂದಿದೆ. ಮೇಲಿನ ಪ್ರಶ್ನೆಯು ಗುಜರಾಥಿ ಜನರಲ್ಲಿ ಅತಿಶಯವಾದ ಕಳವಳವನ್ನುಂಟು ಮಾಡಿತು. ರಾ. ಲಖಮೀದಾಸ್ ತೇರಸಿ ಅವರು, ಸಮಾಜಸುಧಾರಣಾ ಪಕ್ಷದವರಾದ್ದರಿಂದ ಪಂಕ್ತಿ ಭೇದದ ವಿರುದ್ಧ ಮತ ನೀಡಿದ್ದರು. ಹೀಗಾಗಿ ಅವರು ಚುನಾವಣೆಯಲ್ಲಿ ಸೋಲುವಂತಾಯ್ತು. ಈ ವಾರ್ಡ್‌ಗಳಲ್ಲಿ ಡಾ. ಜಾವಳೇ ಹಾಗೂ ರಾ. ಪಿ.ಜಿ.ಸಹಸ್ರಬುದ್ಧೆ ಅವರನ್ನು ಪವಿತ್ರರೆಂಬವರು, ವಿಶೇಷತಃ ಬ್ರಾಹ್ಮಣರು ಆರಿಸಿ ತಂದರು. ಈ ಇಬ್ಬರು ಉಮೇದ್ವಾರರ ವಿಷಯದಲ್ಲಿ, ದಾದರ್ ಪ್ರದೇಶದ ಪರಿಶುದ್ಧರೆಂಬ ಬ್ರಾಹ್ಮಣರು, ಹಸ್ತಪತ್ರಿಕೆ ಹಂಚಿ, ಅವರು ಹಳೆಯ ವಿಚಾರದ ಅಭಿಮಾನಿಯಾದ್ದರಿಂದ ಎಲ್ಲರೂ ಅವರಿಗೆ ಮತವಿತ್ತು ಆರಿಸಿ ತರಬೇಕೆಂಬ ಚಳವಳಿಯನ್ನೇ ನಡೆಸಿದರು. ಡಾ. ಜಾವಳೇ ಅವರು ಸರಕಾರೀ ಪಕ್ಷದವರೆಂದು ಪ್ರಸಿದ್ಧರಿದ್ದುದರಿಂದ ಕಾರ್ಪೊರೇಶನ್‌ನಲ್ಲಿ ಅವರೇ ಈ ಪರಿಶುದ್ಧತೆಯನ್ನು ಪುರಸ್ಕರಿಸಿ ಅಸ್ಪೃಶ್ಯತಾ ನಿವಾರಣೆಯ ಕೆಲಸದಲ್ಲಿ ಅಡ್ಡಿಯಾದರೆಂದು ರಾಜಕೀಯವಾಗಿ ತೀವ್ರಗಾಮಿಗಳಾದ ಬ್ರಾಹ್ಮಣರೂ ಅವರಿಗೆ ತಮ್ಮ ಮತ ನೀಡಿದರು. ದಾದರ್ ಭಾಗದ ಒಂದು ಮೇಲ್ಸೇತುವೆಗೆ ತಿಲಕರ ಹೆಸರಿಡುವ ಸೂಚನೆಯನ್ನು ಕಾರ್ಪೊರೇಶನ್‌ನಲ್ಲಿ ತರುವಲ್ಲಿ ಅದರ ಕಾಮಗಾರಿಗಾಗಿ ಸುಧಾರಣೆಯ ವಿರೋಧಿಗಳೆಂದು ಬ್ರಾಹ್ಮಣರೂ, ಜಾತಿಬಾಂಧವರೂ ಸಹಸ್ರಬುದ್ಧೆ ಅವರಿಗೆ ಮತನೀಡಿ ಗೆಲಿಸಿದರು. ಹೀಗೆ ಮುಂಬಯಿಯಂತಹ ನಗರದಲ್ಲೂ ಪುರಸಭೆಯ ಚುನಾವಣೆಯು ಹೇಗೆ ನಡೆಯುತ್ತದೆ, ಮತ್ತು ವಿದ್ಯಾವಂತರೂ ತಮ್ಮ ಮತದಾನದ ಹಕ್ಕನ್ನು ಯಾವ ಧೋರಣೆಯಿಂದ ಚಲಾಯಿಸುತ್ತಾರೆಂಬುದು ತಿಳಿದುಬರುತ್ತದೆ.

ಮುಂಬಯಿ ಪುರಸಭೆಯ ಜನಪ್ರತಿನಿಧಿ ೪೧

**ಹಿಂದೂ, ಮುಸಲ್ಮಾನ ಮತ್ತು ಪಾರ್ಸಿ ಸಮಾಜದ ಯಶಸ್ವೀ ಉಮೇದುವಾರರು**

ಮುಂಬಯಿ ನಗರದಲ್ಲಿನ ಜನಸಂಖ್ಯೆಯ ಶೇಕಡಾ ೧೯ ರಷ್ಟು ಮುಸಲ್ಮಾನರಾಗಿದ್ದು, ೭೬ ಸ್ಥಳಗಳಲ್ಲಿ ೧೪ ಸ್ಥಳಗಳು, ಅಂದರೆ, ಶೇಕಡಾ ೧೮ ರಷ್ಟು ಸ್ಥಳ ಅವರಿಗೆ ಹಂಚ ಬೇಕಾಗಿ ಬಂತು. ಪಾರ್ಸಿಗಳ ಜನಸಂಖ್ಯೆ ಶೇಕಡಾ

ಲರಷ್ಟೇ ಇದ್ದುದರಿಂದ ಅವರಿಗೆ ೧೮ ಸ್ಥಳಗಳು ಅಂದರೆ, ಶೇಕಡಾ ೨೪ಸ್ಥಳಗಳು ಸಿಕ್ಕವು. ಪಾರ್ಸಿ ಮತ್ತು ಮುಸಲ್ಮಾನ ಉಮೇದ್ವಾರರಲ್ಲಿ ಸ್ವತಃ ಖರ್ಚು ಮಾಡಿದ ಹಾಗೂ ಶ್ರಮಿಸಿದ ಧನಿಕ ಉಮೇದುವಾರರಿಗೆ ಸ್ವಜಾತಿಯ ಮತಗಳಷ್ಟೇ ಅಲ್ಲ, ಹಿಂದೂ ಮತದಾರರ ಮತಗಳೂ ದೊರಕಿದವು. ಜಾತಿಭೇದದಂತೆ ಧರ್ಮಭೇದವನ್ನೂ ಗಣಿಸದೆ, ಕೇವಲ ಉಮೇದ್ವಾರನ ಯೋಗ್ಯತೆ ಹಾಗೂ ಅದುವರೆಗಿನ ಸಾರ್ವಜನಿಕ ಸೇವೆಯನ್ನು ಮಾತ್ರ ಲಕ್ಷ್ಯದಲ್ಲಿಟ್ಟುಕೊಂಡು ಮತ ನೀಡುವುದು ಅತ್ಯಂತ ಸ್ಪೃಹಣೀಯ. ಆದರೆ, ಎಲ್ಲ ಹಿಂದೂ ಮತದಾರರು ಈ ಉದಾತ್ತ ತತ್ವವನ್ನು ಲಕ್ಷ್ಯದಲ್ಲಿರಿಸಿಕೊಂಡು ತಮ್ಮ ಮತಗಳನ್ನು ನೀಡಿರುವರೆನ್ನಲು ನಾವು ಸಿದ್ಧರಿಲ್ಲ.

**ಅಸ್ಪೃಶ್ಯರ ಸ್ಥಿತಿ**

ಹಿಂದೂ ಸಮಾಜವು ತನ್ನ ಧರ್ಮದಲ್ಲಿ ಅಸ್ಪೃಶ್ಯವೆಂದುಕೊಂಡಿರುವ ದೊಡ್ಡದೊಂದು ವರ್ಗದ ಪ್ರತಿನಿಧಿಯು ಸದ್ಯದ ವ್ಯವಸ್ಥೆಯಲ್ಲಿ ಮುಂಬಯಿಯ ಮುನಿಸಿಪಲ್ ಕಾರ್ಪೊರೇಶನ್‌ನ ಯಾವುದೇ ವಾರ್ಡ್‌ನಲ್ಲಿ ಆರಿಸಿ ಬರುವುದು ಶಕ್ಯವಿಲ್ಲವೆಂದರೂ ನಡೆಯುತ್ತದೆ. ಒಂದೆಡೆ, ಸದ್ಯ ಮತಾಧಿಕಾರವು, ತಿಂಗಳಿಗೆ ಹತ್ತು ರೂಪಾಯಿ ಇಲ್ಲವೇ ಅದಕ್ಕಿಂತ ಹೆಚ್ಚು ಮನೆಬಾಡಿಗೆ ಕೊಡುವವರಿಗೆ ಮಾತ್ರ ಇದೆ. ಹೀಗಾಗಿ, ಮುಂಬಯಿಯಲ್ಲಿ ಬಹಿಷ್ಕೃತ ವರ್ಗದ ಮತದಾರರ ಸಂಖ್ಯೆಯು, ಆ ವರ್ಗದ ಜನಸಂಖ್ಯೆಯ ಮಟ್ಟಕ್ಕೆ ಹೋಲಿಸಿದರೆ ಅತ್ಯಲ್ಪವಿದೆ. ಈ ವರ್ಗದ ಜನರು ಎಲ್ಲರಿಗಿಂತ ದರಿದ್ರರಾದ್ದರಿಂದ, ತಿಂಗಳಿಗೆ ಹತ್ತು ರೂಪಾಯಿ ಕೊಡುವ ಸಾಮರ್ಥ್ಯ ಸಾವಿರದಲ್ಲಿ ಒಬ್ಬರಿಗಷ್ಟೇ ಇದೆ. ಅಲ್ಲದೆ, ಈ ವರ್ಗದ ಜನರ ವಸತಿಯು ನಗರದ ಯಾವ್ಯಾವುದೋ ಭಾಗದಲ್ಲಿ ಚದುರಿಕೊಂಡಿದೆ. ಮೂರನೆಯದಾಗಿ, ಈ ವರ್ಗದ ಮತದಾರರಲ್ಲಿ ಅಶಿಕ್ಷಿತರೂ, ಅಜ್ಞಾನಿಗಳೂ ತುಂಬಿಕೊಂಡಿರುವುದರಿಂದ, ಎರಡೂ ಸಮಾಜಗಳ ನಿಜವಾದ ಧಾರ್ಮಿಕ, ಪಾಪಭೀರು, ಸಾತ್ತ್ವಿಕ ಜನರ ಅಂತಃಕರಣವು, ನಿರಪರಾಧಿ ಜನರ ಹತ್ಯೆಯನ್ನು ಕಂಡು ಕಳವಳಿಸಿದರೂ, ಕಿಚ್ಚುಹಚ್ಚುವ ನಾಯಕರು ಹತ್ಯಾಕಾಂಡಕ್ಕೆ ಪ್ರೋತ್ಸಾಹ ನೀಡುತ್ತಿರುತ್ತಾರೆ. ಈ ದಂಗೆಯಿಂದ ಯಾವುದೇ ಧರ್ಮಕ್ಕೆ ಲಾಭವಾಗಿಲ್ಲ; ಬದಲಿಗೆ, ಎರಡೂ ಧರ್ಮದ ವಿಚಾರವಂತರು ತಲೆತಗ್ಗಿಸುವಂತಾಗಿದೆ.

* * **

## ೧೫. ಮುಂಬೈ ದಂಗೆ

ಬಹಳ ವರ್ಷಗಳಿಂದ ಮುಂಬೈನಗರಕ್ಕೆ ಹಿಂದೂ-ಮುಸ್ಲಿಂ ದಂಗೆಯ ಕರಿಮಸಿ ಬಳಿದಿರಲಿಲ್ಲ. ಉಳಿದ ಹಲವು ನಗರಗಳಲ್ಲಿ ಹಿಂದೂ-ಮುಸಲ್ಮಾನ ದಂಗೆ ನಡೆದರೂ, ಮುಂಬೈ ನಗರದ ಎರಡೂ ಧರ್ಮದ ಜನರು ಪರಸ್ಪರ ಹೊಂದಿಕೊಂಡು ಸಹಬಾಳ್ವೆಯನ್ನು ನಡೆಸುತ್ತಿದ್ದರು. ಆದರೆ ಆನಿರೀಕ್ಷಿತವಾಗಿ ಫೆಬ್ರವರಿ ಎರಡನೇ ವಾರದಲ್ಲಿ ಮುಂಬೈನಗರದಲ್ಲಿ ಹಿಂದೂ-ಮುಸ್ಲಿಂ ದಂಗೆ ಹೊತ್ತಿಕೊಂಡಿತು. ಶಿವಡಿ ತೈಲ ಕಂಪನಿಯ ಕಾರ್ಮಿಕರ ಸಂಘ ನಡೆದಾಗ, ಆ ಕಂಪನಿಯ ಅಧಿಕಾರಿಗಳು ಆ ಸ್ಥಳದಲ್ಲಿ ಪಠಾಣರನ್ನು ನೇಮಿಸಿ, ಸಂಪು ಮಾಡಿದವರ ಸೊಕ್ಕು ಮುರಿಯುವ ಪ್ರಯತ್ನ ಮಾಡಿದರು. ಹೀಗಾಗಿ ಸಂಪಿನಲ್ಲಿ ನಿರತರಾದ ಮುಸಲ್ಮಾನರು ಮತ್ತು ಅವರ ಬದಲಿಗೆ ಕೆಲಸ ಮಾಡುವ ಪಠಾಣರ ನಡುವೆ ಹೊಡೆದಾಟ ಆರಂಭವಾಯಿತು. ಅಷ್ಟರಲ್ಲಿ ಪಠಾಣರು ಮಕ್ಕಳ ಆಪಹರಣ ಮಾಡುತ್ತಿದ್ದಾರೆಂಬ ವದಂತಿಯು ಗ್ರಾಂಟರೋಡ-ಭೇಂಡಿಬಜಾರ ಮುಂತಾದ ಭಾಗಗಳಲ್ಲಿ ಹರಡಿತು. ನಗರದ ಉಳಿದ ಕಡೆಗಳಲ್ಲೂ ಸುದ್ದಿ ಪಸರಿಸಿತು. ಪರಿಣಾಮ ಪಠಾಣರು ಅಲ್ಲಲ್ಲಿ ಹೊಡೆತ ತಿನ್ನಬೇಕಾಯಿತು. ಕೆಲ ಪಠಾಣರು ಹೊಡೆತದಿಂದ ಅಸು ನೀಗಬೇಕಾಯಿತು. ಪಠಾಣರು ಕಣ್ಣಿಗೆ ಬಿದ್ದರೆ ಸಾಕು, ಅವರಿಗೆ ಹೊಡೆಯುವ ರೀತಿಯೇ ಶುರುವಾಯಿತು. ಹೀಗಾಗಿ ಪಠಾಣರ ಧರ್ಮ ಬಂಧುಗಳಾದ ಮುಸಲ್ಮಾನರು ಅವರ ಪರವಾಗಿ ನಿಂತರು. ಹಿಂದೂ-ಮುಸಲ್ಮಾನರ ಈ ದಂಗೆಗೆ ಭಯಂಕರ ಸ್ವರೂಪ ಪ್ರಾಪ್ತವಾಯಿತು. ಈ ದಂಗೆಯಲ್ಲಿ ಉಭಯ ಪಕ್ಷದವರು ಸೇರಿ ಸುಮಾರು ೧೪೦ ಜನರು ಪ್ರಾಣ ಕಳೆದುಕೊಳ್ಳುವಂತಾಯಿತು. ನೂರಾರು ಜನರು ಗಾಯಾಳುಗಳಾದರು. ಸತ್ತವರು ಮತ್ತು ಗಾಯಾಳುಗಳಲ್ಲಿ ಹಲವರು ನಿರುಪದ್ರವಿಗಳಾದರು, ಹಲವು ಗುಂಪು ಸೇರಿ ಒಂದಿಬ್ಬರನ್ನು ಸೆರೆ ಹಿಡಿದು ಸಾಯುವವರೆಗೆ ಥಳಸುತ್ತಿದ್ದರು ಅಥವಾ ಆಕಸ್ಮಿಕವಾಗಿ ಚೂರಿಯಿಂದ ಇರಿಯುವುದು ಎಂಬ ಕ್ರೂರ ಮಾದರಿಯ ದಂಗೆ ಆರಂಭಗೊಂಡಿತು. ಶಾಂತಗೊಳಿಸಲು ಮುಂದಾದ ಕೆಲವು ತರುಣರೂ ಮತ್ತು ಉದ್ದೇಶ ಪೂರ್ವಕವಾಗಿ ಸ್ವಯಂ ಸೇವಕರು ದಂಗೆಕೋರರಿಗೆ ಬಲಿಯಾದರು. ಆದರೂ ಸಮಾಧಾನದ ಸಂಗತಿ ಎಂದರೆ ನೆರೆ-ಹೊರೆಯ ಧರ್ಮಕ್ಕೆ ಅನುಗುಣವಾಗಿ ಹಿಂದೂಗಳು ಮುಸಲ್ಮಾನರ, ಮುಸಲ್ಮಾನರು ಹಿಂದೂಗಳ ಜೀವರಕ್ಷಣೆ ಮಾಡಿದರು. ಇಲ್ಲದಿದ್ದರೆ ಸಾವಿರಾರು ನಿರಪರಾಧಿಗಳು ಪ್ರಾಣ ಕಳೆದುಕೊಳ್ಳುವಂತಾಗುತ್ತಿತ್ತು. ಉಭಯ ಪಕ್ಷದ ಸುರಕ್ಷಿತರು ಈ ದಂಗೆಯ ಕಾಲದಲ್ಲಿ ಬೆಂಕಿ ಹೊತ್ತಿಕೊಳ್ಳುವ ರೀತಿಯಲ್ಲಿ ಕೆರಳಿಸುವ ಕೆಲಸ ಮಾಡುತ್ತಿದ್ದರು. ಹೀಗಾಗಿಯೇ ಈ ಸಂಪಿನ ವನಾಗ್ನಿಯು ಇಷ್ಟೆಲ್ಲ ಪ್ರಕ್ಷುಬ್ಧಗೊಳ್ಳಲು ಕಾರಣವಾಗುವುದನ್ನು ಇಲ್ಲಿ ನಮೂದಿಸಲೇಬೇಕು. ಉಭಯ ಪಕ್ಷದ ನಿಜವಾದ ಧಾರ್ಮಿಕ ಪಾಪಭೀರು,ಸಾತ್ವಿಕ ಜನರ ಅಂತಃಕರಣವು ಈ ನಿರಪರಾಧಿಗಳ ಹತ್ಯೆಯನ್ನು ಕಂಡು ದುಃಖದಿಂದ ಮರುಗಿತು. ಬೆಂಕಿ ಹಚ್ಚುವ ಪುಢಾರಿಗಳು ಮಾತ್ರ ಹತ್ಯಾಕಾಂಡಕ್ಕೆ ಪ್ರೋತ್ಸಾಹ ನೀಡುತ್ತಿದ್ದರು. ಈ ದಂಗೆಯಿಂದ ಯಾವುದೇ ಧರ್ಮಕ್ಕೆ ಲಾಭವಾಗಲಿಲ್ಲ. ಬದಲಾಗಿ ಎರಡೂ ಧರ್ಮದ ವಿಚಾರವಂತರು ಮಾತ್ರ ನಾಚಿಕೆಯಿಂದ ತಲೆ ತಗ್ಗಿಸುವಂತಾಯಿತು!

* * * *

## ೧೬. ಹಿಂದೂ ದೇವಾಲಯಗಳ ಸಂರಕ್ಷಣೆ ಮಾಡುವ ಅಸ್ಪೃಶ್ಯರು

ಹಿಂದೂ ಸಮಾಜದಲ್ಲಿ ಬಹಿಷ್ಕೃತರಿಗೆ ಸಮತೆಯ ಹಕ್ಕಿಲ್ಲ. ಇಷ್ಟೇ ಅಲ್ಲ, ಪರಧರ್ಮೀಯರಂತೆ ಅಸ್ಪೃಶ್ಯರನ್ನೂ ಹಿಂದೂ ಸಮಾಜವು ತುಚ್ಛವೆಂದೇ ಉಲ್ಲೇಖಿಸಿದೆ. ದೇವಳದ ಆವಾರದೊಳಗೆ ಮುಸಲ್ಮಾನರು ಹೋಗಬಹುದು, ಆದರೆ, ಅಸ್ಪೃಶ್ಯರು ಸನಿಹಕ್ಕೂ ಹೋಗುವಂತಿಲ್ಲ; ದೇವದರ್ಶನವಂತೂ ಸಲ್ಲದ ಮಾತು. ಹಿಂದೂ ಸಮಾಜದಲ್ಲಿ ಬಹಿಷ್ಕೃತ ವರ್ಗದ ಸ್ಥಿತಿ ಹೀಗಿರುವಾಗ ಮುಂಬಯಿಯಲ್ಲಿ ಹಿಂದೂ ಮುಸಲ್ಮಾನರ ದೊಡ್ಡ ದಂಗೆಯ ವೇಳೆ, ಆ ವರ್ಗದ ಜನರು ಹಿಂದೂಧರ್ಮಕ್ಕೆ ಅಂಟಿಕೊಂಡೇ ಇದ್ದುದರಿಂದ, ಇತರ ಹಿಂದೂಗಳಂತೆ ಮುಸಲ್ಮಾನರ ಕ್ರೋಧಕ್ಕೆ ಈಡಾಗಬೇಕಾಯ್ತು. ಇಷ್ಟೇ ಅಲ್ಲ, ಯಾವ ದೇವಾಲಯದಲ್ಲಿ ಅವರಿಗೆ ದೇವದರ್ಶನದ ಅವಕಾಶವಿಲ್ಲವೋ, ಅಂಥಲ್ಲಿ ಅದೃಶ್ಯ ಮೂರ್ತಿಯ ಸಂರಕ್ಷಣೆ, ಮಾಡಲು ಭಾಯ್ಖುಲಾ ಮುಂತಾದೆಡೆ, ಅಸ್ಪೃಶ್ಯರು ಕೇವಲ ಪೂರ್ವಜರ ಧರ್ಮದ ಮೇಲಿನ ಅಭಿಮಾನದಿಂದ, ತಮ್ಮ ಮೇಲೆ ಹಿಂದೂ ಸಮಾಜದಲ್ಲಿ ನಡೆಯುತ್ತಿರುವ ದೌರ್ಜನ್ಯವನ್ನು ಮರೆತು, ಬಡಿಗೆಯೆತ್ತಿ ಸಿದ್ಧರಾದರು. ಹಾಗೆಂದೇ ಮುಸಲ್ಮಾನರಿಂದ ಆ ದೇವಾಲಯಗಳನ್ನು ರಕ್ಷಿಸಿಕೊಳ್ಳುವುದು ಸಾಧ್ಯವಾಯ್ತು. ಈ ಸಂದರ್ಭ, ತಮ್ಮ ಪ್ರಾಣವನ್ನು ಪಣಕ್ಕಿಡುವಲ್ಲಿ ಅವರು ಹಿಂದೆ ಮುಂದೆ ನೋಡಲಿಲ್ಲ. ಈ ವಿಷಮ ಪರಿಸ್ಥಿತಿಯಲ್ಲಿ ಹಿಂದೂ ಸಮಾಜಕ್ಕೆ ಅಸ್ಪೃಶ್ಯರು ಸಲ್ಲಿಸಿದ ಸೇವೆಯನ್ನು ಹಿಂದೂ ಸಂಘಟನೆಗಳೇ ಸ್ತುತಿಸಿವೆ. ಆದರೆ, ಇನ್ನೊಂದೆಡೆ ಅವರಿಗೆ ಅಸ್ಪೃಶ್ಯರ ಧಾರ್ಮಿಕ ಮತ್ತು ಸಾಮಾಜಿಕ ಹಕ್ಕುಗಳ ನೆನಪೇ ಇಲ್ಲ. ಅಸ್ಪೃಶ್ಯರು ಹಿಂದೂಧರ್ಮದಿಂದ ಹೊರಗೆ ಹೋಗಬಾರದು, ಹಿಂದೂ ಸಮಾಜದ ಹೆಗಲಿಗೆ ಹೆಗಲು ಕೊಟ್ಟು ಪರಧರ್ಮೀಯರನ್ನು ಎದುರಿಸಬೇಕು, ಆದರೆ, ಹಿಂದೂ ಸಮಾಜದಲ್ಲಿ ಸಮತೆಯ ಹಕ್ಕನ್ನು ಮಾತ್ರ ಕೇಳಬಾರದು, ಎಂದು ಧರ್ಮಾಭಿಮಾನಿಗಳೆನ್ನುವ ಈ ಸಂಕುಚಿತ ಮನದ ವ್ಯಕ್ತಿಗಳ ಇಚ್ಛೆ.

ಅಸ್ಪೃಶ್ಯರು ಸಮತೆಯ ಬೇಡಿಕೆಯನ್ನು ಮುಂದಿಟ್ಟೊಡನೆ, “ನಾವು ನಿಮ್ಮನ್ನು ಹೇಗೆ ನೋಡಿಕೊಳ್ಳುತ್ತೇವೋ, ಹಾಗೇ ಇರುವುದಾದರೆ ಮಾತ್ರ ಹಿಂದೂ ಧರ್ಮದಲ್ಲಿರಿ; ಇಲ್ಲವಾದರೆ, ಸಂತೋಷದಿಂದ ಪರಧರ್ಮಕ್ಕೆ ಹೋಗಿ, ನಮಗೇನೂ ಚಿಂತೆಯಿಲ್ಲ”, ಎಂದು ಹೇಳಲೂ ಧರ್ಮಾಭಿಮಾನಿಗಳೆನ್ನುವ ಈ ಜನರು ಹಿಂಜರಿಯುವುದಿಲ್ಲ. ದಂಗೆಯ

ವೇಳೆ, ಹಿಂದೂ ಸಮಾಜಕ್ಕೆ ಅಸ್ಪಶ್ಯರ ಅಗತ್ಯವಿತ್ತು. ಎಂದೇ ಆ ದಿನಗಳಲ್ಲಿ ಮುಂಬಯಿಯ ಹಿಂದೂ ಉಪಾಹಾರ ಗೃಹಗಳಲ್ಲಿ ಅಸ್ಪಶ್ಯರನ್ನು ತೆಗೆದುಕೊಳ್ಳಲಾಗುತ್ತಿತ್ತು ಎನ್ನಲಾಗಿದೆ. ಹಾಗಿದ್ದರೆ, ಹಿಂದೂ ಜನರ ಪಾವಿತ್ರ್ಯದ ಹೊಂದಾಣಿಕೆಯನ್ನು ಹೊಗಳಲೇಬೇಕು. ಹಿಂದೂ ಉಪಾಹಾರ ಗೃಹಗಳಲ್ಲಿ ಅಸ್ಪೃಶ್ಯರಿಗೆ ಪ್ರವೇಶವಿಲ್ಲದ್ದರಿಂದ, ಅವರು ಮೊಗಲರ, ಮುಸಲ್ಮಾನರ, ಇರಾನೀಯರ ಹೋಟೆಲ್‌ಗಳಿಗೆ ಹೋಗಬೇಕಾಗುತ್ತದೆ.

ದಂಗೆಯ ವೇಳೆ, ಹಿಂದೂ ಉಪಾಹಾರ ಗೃಹಗಳನ್ನು ಹೋಗಬಲ್ಲವರು, ಈಗ ಮರಳಿ ಪರಧರ್ಮೀಯರ ಹೋಟೆಲ್‌ಗಳನ್ನು ಆಶ್ರಯಿಸಬೇಕಾಗುವುದು ನಿಸ್ಸಂಶಯ. ಕಾರಣ, ಸಂಕಟ ಬಂದರೆ ಮಾತ್ರ ವೆಂಕಟರಮಣ !

## ೧೭. ಸ್ವಾಭಿಮಾನ ಸಂಘದ ಚಳವಳಿ

ಕಳೆದ ಫೆಬ್ರವರಿ ೧೭, ೧೯೨೯ ರಂದು ಮದರಾಸ್ ಇಲಾಖೆಯ ಚೆಂಗಲ್‌ಪೇಟೆಯಲ್ಲಿ ಸ್ವಾಭಿಮಾನ ಸಂಘದ ಮೊದಲ ಸಭೆ ಸೇರಿತು. ಈ ಸಭೆಯಲ್ಲಿ ಮದರಾಸ್ ಸರಕಾರದ ಲಾ ಮೆಂಬರ್, ದಿವಾನ್ ಬಹದ್ದೂರ್ ಕೃಷ್ಣನ್ ನಾಯರ್, ಮುಖ್ಯ ದಿವಾನ್ ಡಾ.ಸುಬ್ಬರಾಯನ್, ಆರೋಗ್ಯ ಖಾತೆಯ ದಿವಾನ್ ಮಿ, ಮುತ್ತಯ್ಯ ಮೊದಲಿಯಾರ್, ಮಿ. ಪಿ.ಟಿ. ರಾಜನ್, ಮಿ. ರಾಮಸ್ವಾಮಿ ನಾಯಕರ್ ಮುಂತಾದ ಧುರೀಣರು ಹಾಜರಿದ್ದರು.

ಮಿ. ರಾಜನ್ ಅವರ ಕೈಯಿಂದ ಸ್ವಾಭಿಮಾನದ ಧ್ವಜವನ್ನು ಹಾರಿಸಲಾಯ್ತು. ಈ ಸಭೆಯ ಉದ್ದೇಶವು ಸಾಮಾಜಿಕ ವಿಷಮತೆ ಹಾಗೂ ಅನ್ಯಾಯದ ನಿರ್ಮೂಲನವೆಂದು ಸಾರಲಾಯ್ತು. ಸಭೆಯ ಕಾರ್ಯಕಲಾಪವನ್ನು ಆರಂಭಿಸುತ್ತಾ, ಡಾ. ಸುಬ್ಬರಾಯನ್ ನುಡಿದರು, “ಸಾಮಾಜಿಕ ಸ್ವಾಭಿಮಾನವಿಲ್ಲದೆ ರಾಜಕೀಯ ಸ್ವಾಭಿಮಾನ ಉತ್ಪನ್ನವಾಗಲಾರದು. ಯಾವ ಸಮಾಜಪದ್ಧತಿಯಲ್ಲಿ ಜಾತಿಭೇದದ ಕೋಲಾಹಲವೆದ್ದಿದೆಯೋ, ಆ ಪದ್ಧತಿಯಲ್ಲಿ ಪ್ರಜಾಪ್ರಭುತ್ವಕ್ಕೆ ಪೋಷಕವಾಗಬಲ್ಲ ಐಕ್ಯಸಂಪನ್ನ ಸಮಾಜ ನಿರ್ಮಾಣವಾಗುವುದು ಎಂದಿಗೂ ಸಾಧ್ಯವಿಲ್ಲ.” ಈ ಸ್ವಾಭಿಮಾನ ಸಂಘದ ಚಳವಳಿಯೆಂದರೆ ಸಮಾಜ ಸಮತಾವಾದದ ಚಳವಳಿಯೇ ಆಗಿದೆ. ಸ್ವಾಭಿಮಾನವೆಂದರೆ ದುರಭಿಮಾನವಲ್ಲ, ಅಹಂಕಾರವಲ್ಲ, ಇತರರನ್ನು ತುಚ್ಛರೆಂದು ನಮೂದಿಸುವ ಪ್ರವೃತ್ತಿಯಲ್ಲ. ಸ್ವಾಭಿಮಾನವೆಂಬುದು ಪವಿತ್ರ ಭಾವನೆ. ಮನುಷ್ಯರಾದ ನಮಗೆ ಮನುಷ್ಯತ್ವದ ಹಕ್ಕಿದೆ, ಅದನ್ನು ನಮ್ಮಿಂದ ಕಿತ್ತುಕೊಳ್ಳುವ ಅಧಿಕಾರ ಯಾರಿಗೂ ಇಲ್ಲ, ಸ್ವಂತ ಉನ್ನತಿಯ ಅವಕಾಶ ಎಲ್ಲರಿಗೂ ಇರಬೇಕು, ಎಂದುಕೊಳ್ಳುವುದೇ ಸ್ವಾಭಿಮಾನ, ನಿಜವಾದ ಸ್ವಾಭಿಮಾನಿಯು ಇತರರ ಸ್ವಾಭಿಮಾನದ ಕಾಳಜಿಯನ್ನೂ ಹೊಂದಿರುತ್ತಾನೆ, ಕಾರಣ, ಆತನಿಗೆ ಸ್ವಾಭಿಮಾನದ ಬೆಲೆ ತಿಳಿದಿರುತ್ತದೆ. ಹಿಂದೂ ಸಮಾಜದಲ್ಲಿ ಸ್ವಾಭಿಮಾನವು ನಶಿಸುತ್ತಾ ಬಂದಿದೆ. ಹಾಗೆಂದೇ ಒಂದು ಜಾತಿಯು

ಇನ್ನೊಂದನ್ನು ಕೀಳಾಗಿ ಕಾಣುತ್ತಿದೆ, ಮತ್ತು ಹಾಗೆ ಕಾಣುವುದೇ ತನ್ನ ದೊಡ್ಡಸ್ತಿಕೆಯೆಂಬ ತಪ್ಪು ತಿಳುವಳಿಕೆಯನ್ನು ಎಲ್ಲೆಡೆ ಹಬ್ಬಿಸಿದೆ. ಈ ತಿಳುವಳಿಕೆಯ ನಿರ್ಮೂಲನಕ್ಕಾಗಿ, ಹಾಗೂ ಹಿಂದೂಸಮಾಜದಲ್ಲಿ ನಿಜವಾದ ತೇಜಸ್ಸನ್ನುಂಟುಮಾಡಲು, ಸ್ವಾಭಿಮಾನ ಸಂಘ, ಸಮಾಜ ಸಮತಾ ಸಂಘ, ಜಾತಿಭೇದ ಖಂಡನಾ ಮಂಡಳಿ ಇಂತಹ ಚಳವಳಿಗಳ ಅವಶ್ಯಕತೆಯಿದೆ.

* * * *

## ೧೮. ಮದರಾಸಿನ ಅಸ್ಪೃಶ್ಯತಾ ನಿವಾರಕ ಸಂಘ

ಸ್ವಾಭಿಮಾನಪರಿಷತ್ತಿನ ಕೆಲವೇ ದಿನಗಳ ಮೊದಲು, ಮದರಾಸ್‌ನಲ್ಲಿ ಅಸ್ಪೃಶ್ಯತಾ ನಿವಾರಕ ಪರಿಷತ್ತಿನ ಎರಡನೇ ಅಧಿವೇಶನ ನಡೆಯಿತು. ಪರಿಷತ್ತಿನ ಅಧ್ಯಕ್ಷ ಸ್ಥಾನದಲ್ಲಿ ಕಲ್ಕತ್ತೆಯ ಕುಮಾರಿ ಜ್ಯೋತಿರ್ಮಯಿ ಗಾಂಗೂಲಿಯವರು ಇದನ್ನು ಯೋಜಿಸಿದ್ದರು. ಸುಪ್ರಸಿದ್ಧ ಟಾಗೋರ್ ಮನೆತನವೇ ಇವರ ತವರಾದ್ದರಿಂದ, ಇವರು ಉದಾರ ಮತವಾದಿಯಾಗಿದ್ದಾರೆ. ಮದರಾಸಿನ ಮುನಿಸಿಪಲ್ ಕಾರ್ಪೊರೇಶನ್‌ನ ಅಧ್ಯಕ್ಷ, ಶ್ರೀ ರಾಮಸ್ವಾಮಿ ಮುದಲಿಯಾರ್ ಅವರು, ಅಸ್ಪೃಶ್ಯತಾ ನಿವಾರಣೆಯ ಧ್ವಜವನ್ನು ಹಾರಿಸಿದರು. ಮದರಾಸ್ ಸರಕಾರದ ಮಾಜಿ ದಿವಾನರಾದ ಸರ್ ಪರಶುರಾಮ ಪಾತ್ರೋ ಅವರು, ಸಭೆಯ ಕಲಾಪವನ್ನು ಆರಂಭಿಸಿದರು. ಅನಂತರ ಅಧ್ಯಕ್ಷರು, ಅಸ್ಪೃಶ್ಯತಾ ನಿರ್ಮೂಲನದ ಅಗತ್ಯವನ್ನು ಪ್ರತಿಪಾದಿಸಿ ಸೊಗಸಾದ ಭಾಷಣ ಗೈದರು. “ಅಸ್ಪೃಶ್ಯತೆಯೆಂದರೆ ಹಿಂದೀ ರಾಷ್ಟ್ರಪುರುಷನಿಗಾದ ಪಕ್ಷವಾತದ ರೋಗ. ಈ ರೋಗದಿಂದಾಗಿ, ರಾಷ್ಟ್ರಪುರುಷನ ದೇಹವು, ನಿಧಾನವಾಗೇ ಆದರೂ, ನಿಶ್ಚಿತವಾಗಿ ಮೃತ್ಯು ಪಥದಲ್ಲಿ ಸಾಗಿದೆ. ಸ್ವಲ್ಪದರಲ್ಲಿ ಹೇಳಬೇಕೆಂದರೆ, ಹಿಂದೂ ಸಮಾಜದ ಸಾಮಾಜಿಕ, ನೈತಿಕ ಮತ್ತು ಆತ್ಮಿಕ ಜೀವನದಲ್ಲಿ ಅಸ್ಪೃಶ್ಯತೆಯು ವಿಷವನ್ನೇ ಬೆರೆಸಿದೆ. ಅಸ್ಪೃಶ್ಯತೆಯ ತ್ವರಿತ ನಿವಾರಣೆಯಾದರೆ ಮಾತ್ರ ಹಿಂದೀ ರಾಷ್ಟ್ರದ ಉದ್ಧಾರವಾಗುವುದು”, ಎಂದು ಅವರು ಹೇಳಿದರು. ಈ ಸಭೆಯಲ್ಲಿ ಅನೇಕ ನಿರ್ಣಯಗಳು ಅಂಗೀಕೃತವಾದವು. ಇವುಗಳಲ್ಲಿ ಮುಖ್ಯವಾದುದೆಂದರೆ, ಅಸ್ಪೃಶ್ಯತೆಯ ನೆವದಿಂದ ವಿಶಿಷ್ಟ ವರ್ಗಕ್ಕೆ ನಾಗರಿಕತ್ವದ ಹಕ್ಕು ನೀಡದಿರುವುದನ್ನು ನಿಷೇಧಿಸುವುದು, ಮತ್ತು ದೇವಾಲಯವೂ ಸೇರಿದಂತೆ ಎಲ್ಲ ಸಾರ್ವಜನಿಕ ಸಂಸ್ಥೆಗಳಲ್ಲಿ ಪ್ರವೇಶಿಸುವ ಹಕ್ಕು ಅಸ್ಪಶ್ಯರಿಗೆ ಇದೆಯೆಂದು ಪ್ರತಿಪಾದಿಸುವುದು. ಪೂರ್ಣ ರಾಜಕೀಯ ಸ್ವಾತಂತ್ರ್ಯವೆಂದಾಡುವ ಎಸ್. ಶ್ರೀನಿವಾಸ ಅಯ್ಯಂಗಾರ್, ಸತ್ಯಮೂರ್ತಿ ಅವರಂಥ ವಿದೂಷಕ ರಾಷ್ಟ್ರೀಯ ನಾಯಕರು, ಈ ಸಭೆಯಲ್ಲಿ ಎಲ್ಲೂ ಕಾಣ

ಬರಲಿಲ್ಲವೆಂಬುದು ಗಮನಿಸಬೇಕಾದ ವಿಷಯ. . ರಾಷ್ಟ್ರ ಪುರುಷನಿಗಾದ ಪಕ್ಷವಾತದ ರೋಗವು ಹಾಸಿಗೆ ಹಿಡಿಸುವಂತಿದೆ. ಕೇವಲ ದೊಡ್ಡದಾಗಿ ಅರಚಿಕೊಂಡರೆ, ರಾಷ್ಟ್ರಪುರುಷ ಸಾಮರ್ಥ್ಯವಂತನಾಗುವನೆಂದು ಈ ದೇಶಭಕ್ತರು ತಿಳಿದಂತಿದೆ.

* * * *

## ೧೯. ಸಕಟರ ಸಂಘ

ಪುಣೆಯ ರಾ. ಕೆ.ಕೆ.ಸಕಟರು, ಅಲ್ಲಿ "ಅಸ್ಪೃಶ್ಯ ಸಮಾಜ ಸಮತಾ ಸಂಘ" ಸ್ಥಾಪಿಸಿದ ಬಗ್ಗೆ "ಭಾಲಾ" ಪತ್ರಿಕೆಯಿಂದ ತಿಳಿದು ಬರುತ್ತದೆ. ಅಸ್ಪೃಶ್ಯ ಸಮಾಜದಲ್ಲಿನ ಮಹಾರ್, ಮಾಂಗ್, ಚಾಂಭಾರ್, ಡೋರ್, ಭಂಗಿ ಮುಂತಾದ ಅನೇಕ ಜಾತಿ, ಉಪಜಾತಿಗಳನ್ನು ಒಂದುಗೂಡಿಸಿ ಸಹಭೋಜನ ಹಾಗೂ ಲಗ್ನಸಂಬಂಧಗಳನ್ನು ಆರಂಭಿಸಿ, ಅಸ್ಪೃಶ್ಯರಲ್ಲಿ ಸಾಮಾಜಿಕ ಸಮತೆಯನ್ನು ಸ್ಥಾಪಿಸುವುದೇ ಈ ಸಂಘದ ಮುಖ್ಯ ಧ್ಯೆಯವೆಂದು ಸಕಟರು ಪ್ರಕಟಪಡಿಸಿದ್ದಾರೆ. ಭೋಜನ, ಲಗ್ನಸಂಬಂಧ, ಹೀಗೆ ಅನೇಕ ನಿರ್ಬಂಧಗಳು ಇರುವ ಜಾತಿಭೇದವನ್ನು ಸಮರ್ಥಿಸುವವರಲ್ಲಿ "ಭಾಲಾ" ಪತ್ರಿಕೆಯ ಈ ವದಂತಿ ಪ್ರಸಿದ್ಧವಾಯ್ತು, ಮತ್ತು , ಸಕಟರ ಪ್ರಯತ್ನವನ್ನು ಅಭಿನಂದಿಸುತ್ತ, ಭಾಲಾಕಾರರು ತಮ್ಮ ಧೋರಣೆಯಂತೆ ಈ ಸಕಟ ಸಮತಾ ಸಂಘದ ಭವಿಷ್ಯವನ್ನೇ ತಿರುಗಿಸಿ ಬಿಟ್ಟರು. ಅಸ್ಪಶ್ಯರ ಎಲ್ಲ ಜಾತಿಗಳ ನಡುವೆ, ಲಗ್ನ ಸಂಬಂಧವೇರ್ಪಡುವುದು ದೂರವೇ ಉಳಿಯಿತು; ಸಹ ಭೋಜನ ಸಾಧಿಸಲೂ ಕಡಿಮೆಯೆಂದರೆ, ಏಳು ಪೀಳಿಗೆಗಳಾದರೂ ಕಳೆಯಬೇಕು ಎನ್ನುತ್ತಾರೆ, ಭಾಲಾಕಾರರು. ಇದು ಅವರ ಶಾಪವೋ, ಆಶೀರ್ವಾದವೋ ಎಂಬುದನ್ನು ಸಕಟರೇ ನಿಶ್ಚಯಿಸಬೇಕು. ಅವರಿಗೆ ಅರಿಯದಿದ್ದರೆ ತಮ್ಮ ಗುರೂಜಿಯನ್ನು ಕೇಳಿಕೊಳ್ಳಬೇಕು. ಸದ್ಯದ ಭವಿಷ್ಯದ ಬಗ್ಗೆ ಹೇಳುವಾಗ ಭಾಲಾಕಾರರ ಮನೋವೃತ್ತಿ ಹೇಗೇ ಇರಲಿ, ನಮಗದರಲ್ಲಿ ಒಂದು ಪ್ರಕಾರದ ಒಪ್ಪಿಗೆಯೇ ಕಾಣಿಸುತ್ತದೆ. ಸ್ಪೃಶ್ಯ ವರ್ಗದ ಜಾತಿಭೇದವು, ಮೂರ್ಕಾಲದಲ್ಲೂ ನಶಿಸುವಂತಹುದಲ್ಲವೆಂದು ಭಾಲಾಕಾರರ ಅಭಿಮತ. ಆದರೆ,ಭಿನ್ನವಾಗಿರುವ ಅಸ್ಪೃಶ್ಯ ವರ್ಗವು ಸಹಭೋಜನದಿಂದ ಒಂದುಗೂಡಿದರೆ, ಭಾಲಾಕಾರರಿಗೆ ಅದು ಅನಿಷ್ಟವಲ್ಲ ಮತ್ತು ಸ್ಪೃಶ್ಯರ ಜಾತಿಭೇದವು ವಜ್ರಲೇಪದಂತಿದ್ದರೂ, ಅಸ್ಪೃಶ್ಯರಲ್ಲಿನ ಜಾತಿಭೇದವು ಏಳು ಪೀಳಿಗೆಯ ಬಳಿಕವಾದರೂ ನಶಿಸಬಹುದೆಂದು ಅವರಿಗೆ ಅನಿಸುತ್ತದೆ. ಅಂದರೆ, ಭಾಲಾಕಾರರ ಬ್ರಾಹ್ಮಣ ಜಾತಿ, ಅಷ್ಟೊಂದು ಭಿನ್ನವೆಂದಂತಾಯ್ತು. ಸ್ಪೃಶ್ಯ ವರ್ಗದವರು ಜಾತಿಭೇದಕ್ಕೆ ಶಾಶ್ವತವಾಗಿ

ಅಂಟಿಕೊಂಡಿರುವಷ್ಟು ದುರಭಿಮಾನಿಗಳೂ, ಅವಿಚಾರಿಗಳೂ ಆಗಿದ್ದರೂ, ಅಸ್ಪೃಶ್ಯ ವರ್ಗವು ಹಾಗೆ ದುರಭಿಮಾನಿಯಾಗಲೀ, ಅವಿಚಾರಿಯಾಗಲೀ ಆಗಿಲ್ಲ. ಇಂದಲ್ಲದಿದ್ದರೆ ನಾಳೆ, ಅದು ಜಾತಿಭೇದದ ಸಂಕೋಲೆಯನ್ನು ಕಳಚಿ ಹಾಕುವುದೆಂದು ಭಾಲಾಕಾರರಿಗೆ ಖಂಡಿತವಿದೆಯೆಂದನಿಸುತ್ತದೆ. ಆದರೆ, ಭಾಲಾಕಾರರು ! ಮಹಾರ್ ಇಲ್ಲವೇ ಚಾಂಭಾರ್ ಜಾತಿಯವ ಭಂಗಿಗಿಂತ ಕೀಳೆನ್ನಲಾರರಾದರೆ, ಬ್ರಾಹ್ಮಣಾದಿ ಜಾತಿಯನ್ನು ತಮಗಿಂತ ಶ್ರೇಷ್ಠರೆಂದು ತಿಳಿಯುವರೇ? ಸಕಟರನ್ನು ಈಗ ಸಾಕಷ್ಟು ಬ್ರಾಹ್ಮಣರು ಎತ್ತಿ ನಿಲಿಸುತ್ತಿದ್ದಾರೆ,ಮತ್ತೆ ಬಹಳಷ್ಟು ಮಂದಿ, ಅವರ ತಲೆಯಲ್ಲಿ ಕಲ್ಪನೆಗಳನ್ನು ತುಂಬಿದ್ದಾರೆ. ಅಸ್ಪೃಶ್ಯ ಸಮಾಜವು, ಅಶಿಕ್ಷಿತ ಹಾಗೂ ಅಜ್ಞಾನಿಯೆಂದು ಅವರಿಗೆ ಚೆನ್ನಾಗಿ ಅರಿವಿದೆ. ಜಾತಿಭೇದವನ್ನು ಗ್ರಾಸವಾಗಿಸಿ ಕೊಂಡಿದ್ದಾರೆ. ಮೊದಲೇ ಎಷ್ಟೋ ದುರಭಿಮಾನಿ ಜನರು, ಬಹಿಷ್ಕೃತ ವರ್ಗದಲ್ಲಿನ ಜಾತಿಭೇದದ ತತ್ವದ ಮೇಲೆ ಬೇರಾಗುವ ಯತ್ನದಲ್ಲಿ ತೊಡಗಿದ್ದಾರೆ, ಅದರೆಡೆಯಲ್ಲಿ ಸಕಟರ ಈ ಸಂಘವೂ ಹೊರಟಿತೆಂದರೆ, ಕಲಹ ಅಧಿಕವಾಗುವುದು;



ಮತ್ತು, ಶ್ರೇಷ್ಠರೆನ್ನುವವರು, ಅಸ್ಪೃಶ್ಯರನ್ನು, “ನಿಮ್ಮಲ್ಲೇ ಸಮತೆಯೆಂಬುದಿರದಿದ್ದರೆ, ನೀವೇ ಪರಸ್ಪರರನ್ನು ಕೀಳಾಗಿ ಕಾಣುವುದಾದರೆ, ಮತ್ತೆ ನಮ್ಮಲ್ಲಿ ಸಮತೆಯ ಹಕ್ಕನ್ನು ಅದಾವ ಮುಖದಿಂದ ಕೇಳುತ್ತೀರಿ?” ಎಂದು ಕೇಳಬಹುದು. ಇಂತಹ ಪ್ರಶ್ನೆಯನ್ನು ಈಗಲೂ ಬಲು ಪ್ರಾಮಾಣಿಕವಾಗಿ ಕೇಳಬಹುದು. ಅದನ್ನೇ ಇನ್ನೂ ಜೋರಾಗಿ ವಿಚಾರಿಸಲಾಗುವಂತೆ, ಸಕಟರ ತಲೆಯಲ್ಲಿ ಈ ಕಲ್ಪನೆಯನ್ನು ತುಂಬಲಾಗಿದೆಯೆಂದು ನಮಗನಿಸುತ್ತದೆ. ಒಳಗಿನ ವಿಚಾರ ಹೇಗೇ ಇರಲಿ, ಸಕಟರ ಈ ಸಮತಾ ಪೋಷಕ ಪ್ರಯತ್ನ ಯಶಸ್ವಿಯಾಗಲೆಂದೇ ನಮ್ಮ ಇಚ್ಛೆ, ಉಳಿದಂತೆ, ಇದುವರೆಗಿನ ಅವರ ಧೋರಣೆಯ ಮೇಲೆ, ಅವರ ಬಗ್ಗೆ ನಮಗೆ ಭರವಸೆಯೆನಿಸುವುದಿಲ್ಲ. ಮತ್ತು, ತಮ್ಮೊಳಗಿನ ಜಾತಿಭೇದವನ್ನು ಇಲ್ಲವಾಗಿಸುವಲ್ಲಿ ಅವರಿಗೆ ಯಶಸ್ಸು ಪ್ರಾಪ್ತವಾದರೂ, ಅಷ್ಟರಲ್ಲಿ ಅವರ ಅಸ್ಪಶ್ಯತೆ ಇಲ್ಲವಾಗುವುದೆಂದುಕೊಳ್ಳುವುದು ವ್ಯರ್ಥ. ಕೇವಲ ಬುದ್ಧಿವಾದದಿಂದ ಈ ಪ್ರಶ್ನೆ ಬಗೆಹರಿಯುವಂತಿದ್ದರೆ ಇದಕ್ಕೆ ಬಹಳ ಹಿಂದೆಯೇ ಅದು ಬಗೆಹರಿಯುತ್ತಿತ್ತು, ಎಂದು ನಾವು ಸ್ಪಷ್ಟ ಹೇಳಬಯಸುತ್ತೇವೆ. ಮತ್ತಿನ್ನು ಹೇಳುವುದೇನು? ಕೈ ಮೇಲೆ ಕೈ ಕಟ್ಟಿ ಕುಳಿತು, ಅಡೆತಡೆಗಳ ಮಾರ್ಗವನ್ನು ಸ್ವೀಕರಿಸಿ, ಎಲ್ಲೆಡೆಯಿಂದಲೂ ಬರುವ ನಿಯಂತ್ರಣದ ನಡುವೆ, ಅಸ್ಪೃಶ್ಯತೆಯ ಗ್ರಹಣ ಬಿಡುವುದೆಂದು ಆಶಿಸುವುದನ್ನೇ ಬಿಟ್ಟು ಬಿಡೋಣ.

* * * *

## ೧೦. ದರೋಡೆಕೋರ ಧರ್ಮಾಭಿಮಾನ

ಬಿಜನೋರಾ ಜಿಲ್ಲೆಯ ದೇವಗಢ ಎಂಬ ಹಳ್ಳಿಯಲ್ಲಿ, ೧೯೨೯ರ ಫೆಬ್ರವರಿ ೧ರಂದು ಅಸ್ಪೃಶ್ಯ ವರ್ಗದ ಮದುವೆ ಮೆರವಣಿಗೆಯೊಂದು ಹೊರಟಾಗ, ಅದಕ್ಕೆ, ಉಚ್ಚ ಜಾತಿಯವರೆನ್ನಲಾಗುವ ಹಿಂದೂಗಳ ವಿರೋಧ ಬಂತು. ಈ ವಿರೋಧವು ಸಾಧಾರಣ ಸ್ವರೂಪದ್ದಾಗಿರಲಿಲ್ಲ. ಮೆರವಣಿಗೆಗೆ ಅಡ್ಡಿ ಪಡಿಸುವ ಹಿಂದೂಗಳ ಹೆಜ್ಜೆಗಳು ಅತ್ಯಾಚಾರದವರೆಗೂ ಹೋಗಿ, ದರೋಡೆಗೂ ಅವರು ಕೈ ಹಾಕಿದರು. ಇದೆಲ್ಲ ನಡೆವಾಗ ಗ್ರಾಮ ಪಟೇಲರೂ ಅಲ್ಲಿ ಹಾಜರಿದ್ದರೆನ್ನಲಾಗುತ್ತದೆ. ಆದರೆ, ಸ್ಥಳೀಯ ಅಧಿಕಾರಿಗಳಿಂದ ಇನ್ನೂ ಈ ಅತ್ಯಾಚಾರದ ಬಗ್ಗೆ ಆರೋಪ ಸಲ್ಲಿಸಲಾಗಿಲ್ಲ. ಸದ್ಯ ಈ ಪ್ರಕರಣವನ್ನು ದೆಹಲಿಯ ಶ್ರದ್ಧಾನಂದ ದಲಿತೋದ್ಧಾರಕ ಸಭೆ ಕೈಗೆತ್ತಿಕೊಂಡಿರುವುದರಿಂದ ಅದರ ಮುಖ್ಯ ಕಾರ್ಯದರ್ಶಿಯು ಬಿಜ್ ನೋರ್‌ನ ಕಲೆಕ್ಟರ್ ಅವರನ್ನು ಆರೋಪ ಸಲ್ಲಿಸುವಂತೆ ಕೇಳಿದ್ದಾರೆಂದು ತಿಳಿದು ಬಂದಿದೆ. ಸಭೆಯು ತನ್ನೊಬ್ಬ ಪ್ರತಿನಿಧಿಯನ್ನು ಪ್ರಸ್ತುತ ಪ್ರಕರಣದ ವಿಚಾರಣೆಗಾಗಿ ಅಲ್ಲಿಗೆ ಕಳುಹಿಸಿತ್ತು. ವಸ್ತುಸ್ಥಿತಿ ಸರಿಯಾಗೇ ಇದೆಯೆಂದು ಅಲ್ಲಿ ವರದಿಯಾಗಿದೆ. ಬಹಿಷ್ಕೃತರೆನಿಸಿಕೊಂಡ ವರ್ಗದ ಜನರ ಮದುವೆ ಮೆರವಣಿಗೆಯಲ್ಲಿ ಅಡಚಣೆ ಉಂಟು ಮಾಡುವುದು ಉಚ್ಚ ವರ್ಣೀಯರೆನಿಸಿಕೊಂಡ ಹಿಂದೂಗಳ ಸನಾತನ ಸಂಪ್ರದಾಯವಾಗಿದೆ. ಅಸ್ಪೃಶ್ಯರ ಮೆರವಣಿಗೆಯಿಂದ ತಮ್ಮ ಮೂಗು ಕತ್ತರಿಸಿದಂತಾಗುತ್ತದೆ, ಎಂದೇ ಈ ಜನರ ತಿಳುವಳಿಕೆ. ಆದರೆ, ಪರಧರ್ಮೀಯರ ಮದುವೆ ಮೆರವಣಿಗೆಯಲ್ಲಿ ಅಡಚಣೆ ತರುವ ಧೈರ್ಯ ಅವರಿಗಿಲ್ಲವಷ್ಟೇ ಅಲ್ಲ, ಅಲ್ಲಿ ವಾದ್ಯಗಾರರಾಗಿಯೂ ಅವರು ಕೆಲಸ ಮಾಡುತ್ತಾರೆ. ಅಸ್ಪೃಶ್ಯರ ಮೆರವಣಿಗೆಗೂ, ಅತಿ ಪುರಾತನವಾದ ಮತ, ಧರ್ಮಕ್ಕೂ ಸಂಬಂಧ ಹೇಗೆ ಎಂಬುದನ್ನು ಅರಿಯುವುದೇ ಕಷ್ಟ, ಯಾವ ರಸ್ತೆಯಲ್ಲಿ ಒಬ್ಬರಿಬ್ಬರೋ, ಇಲ್ಲವೇ ಐದೋ, ಹತ್ತೋ ಅಸ್ಪೃಶ್ಯರು ಸಾಗಬಹುದೋ, ಆ

ರಸ್ತೆಯು ಮೆರವಣಿಗೆಯಿಂದ ಅಪವಿತ್ರವಾಗುವದೇನೂ ಇಲ್ಲ. ಇಲ್ಲಿ ಪಾವಿತ್ರ್ಯದ ಪ್ರಶ್ನೆಯಲ್ಲ; ಅಸ್ಪೃಶ್ಯರ ಆನಂದವನ್ನು ಕಂಡರೇ ಉಚ್ಚವರ್ಣೀಯರಿಗೆ ವಿಷಾದ ಅನಿಸುತ್ತದೆ. ಅಸ್ಪೃಶ್ಯರ ಮದುವೆಯ ಮೆರವಣಿಗೆಯೆಂದರೆ ಇವರ ಸನಾತನ ಧರ್ಮದ ಅಂತ್ಯಯಾತ್ರೆಯೋ ಎಂಬಂತೆ ! ಮೇಲಿನ ಉದಾಹರಣೆಯಂತೆ, ದರೋಡೆ ಒಂದು ಹೊಸ ವಿಶೇಷವಾಗಿದೆ. ಧರ್ಮದ ಹೆಸರಿನಲ್ಲಿ ದರೋಡೆಕೋರ ಗೂಂಡಾಗಳಿಗೆ ಇದು ಒಳ್ಳೆಯ ಅವಕಾಶ ! ಇಷ್ಟೆಲ್ಲ ಆದರೂ, ಅಸ್ಪೃಶ್ಯರಿಗೆ ಶಾಂತಿಪಾಠ ಕಲಿಸಲು ಕಪಟ ಪುರಾಣ ಮತವಾದಿಗಳು ಸಿದ್ಧರಿರುತ್ತಾರೆ, ಮತ್ತು, ಬದಲಿಗೆ ಅಸ್ಪೃಶ್ಯರ ಮೇಲೇ ಅತ್ಯಾಚಾರದ ಆರೋಪ ಹೊರಿಸುತ್ತಾರೆ.

* ** *

## ೧೧. ಹಿಂದೂ ಧರ್ಮಕ್ಕೆ ನೋಟೀಸ್

ಇನ್ನೊಂದೆಡೆ, ವರಾಡ್‌ನ ಜಲ್ ಗಾಂವ್ ಮತ್ತದರ ಸುತ್ತುಮುತ್ತಣ ಹಳ್ಳಿಗಳಲ್ಲಿನ ಐದು ಸಾವಿರ ಮಹಾರ್ ಜನರ ಕಡೆಯಿಂದ, "ಹಿಂದೂಧರ್ಮಕ್ಕೆ ತೆರೆದ ಆಹ್ವಾನ" ಎಂಬ ಶೀರ್ಷಿಕೆಯಡಿಯಲ್ಲಿ ಹೊರ ಬಂದು ಪ್ರಸಿದ್ಧವಾದ ಮಜಕೂರಿನತ್ತ ಹಿಂದೂಧರ್ಮೀಯರೆಂದೂ, ಶ್ರೇಷ್ಠ ವರ್ಣೀಯರೆಂದೂ, ಕರೆದು ಕೊಳ್ಳುವ ಜನರ ಲಕ್ಷ ಸರಿದೀತೆಂದು ನಮ್ಮ ಆಶೆ. ಹಿಂದೂ ಸಮಾಜದಲ್ಲಿನ ಜಾತಿಭೇದಕ್ಕೆ, ಉಚ್ಚ- ನೀಚ ಎಂಬ ವರ್ಗಭೇದಕ್ಕೆ, ಸ್ಪಶ್ಯಾಸ್ಪಶ್ಯ ನಿರ್ಬಂಧಕ್ಕೆ, ಉಚ್ಚವರ್ಣೀಯರೆಂದು ಕರೆದುಕೊಳ್ಳುವವರು ಗೈವ ಅನ್ಯಾಯ, ದಬ್ಬಾಳಿಕೆಗೆ, ಪದೇ ಪದೇ ಕಾಡುವ ವಿಷಮತೆಗೆ ಬೇಸತ್ತು, ಈ ವರೆಗೆ, ಲಕ್ಷಾನುಲಕ್ಷ ಜನರು, ಹಿಂದೂಧರ್ಮವನ್ನು ತ್ಯಜಿಸಿ, ಪರಧರ್ಮವನ್ನು ಅಂಗೀಕರಿಸಿದ್ದಾರೆ. ಯಾವಮಟ್ಟದಲ್ಲಿ ಬಹುಜನ ಸಮಾಜದಲ್ಲಿ ಶಿಕ್ಷಣ ಪ್ರಗತಿಯಾಗುತ್ತದೋ, ವೈಚಾರಿಕ ಪ್ರವೃತ್ತಿ ಹೆಚ್ಚುವುದೋ, ಸ್ವಾಭಿಮಾನ ಜಾಗೃತವಾಗುವುದೋ, ಆ ಮಟ್ಟದಲ್ಲಿ ಅನ್ಯಾಯ ಮತ್ತು ವಿಷಮತೆಯ ಮೇಲೆ ಎದ್ದು ನಿಂತಿರುವ

ಸಮಾಜರಚನೆಯ ಸಂಬಂಧ ಅಸಮಾಧಾನ ಹೆಚ್ಚಬೇಕು, ಅನ್ಯಾಯದ ಬಗ್ಗೆ ಸಿಟ್ಟಾಗಬೇಕು, ವಿಷಮತೆಯಿಂದ ಸಂತಾಪ ಉತ್ಪನ್ನವಾಗಬೇಕು. ಯಾವ ಧರ್ಮ ಮತ್ತು ಸಮಾಜ ತನ್ನ ಮನುಷ್ಯತ್ವದ ಹಕ್ಕನ್ನು ಕಾಲಕೆಳಗೆ ತುಳಿಯುತ್ತದೋ, ಯಾವುದು ತನ್ನ ಮನುಷ್ಯತ್ವವನ್ನು ತೊಡೆದು ಹಾಕಲು ನೋಡುತ್ತದೋ, ಆ ಧರ್ಮ ಮತ್ತು ಸಮಾಜವನ್ನು ಧಿಕ್ಕರಿಸಬೇಕೆನ್ನುವುದು ನಿಜಕ್ಕೂ ಸ್ವಾಭಾವಿಕ. ಒಂದುವೇಳೆ, ಅನ್ಯಾಯವು ಶತಕಗಳಿಂದಲೂ ನಡೆಯುತ್ತಾ ಬಂದಿದ್ದರೂ, ಅಧಿಕಾರಶಾಹಿಯಲ್ಲಿ ಅದು ಕೆತ್ತಲ್ಪಟ್ಟಿದ್ದರೂ, ಜನರ ಅಜ್ಞಾನದಿಂದಾಗಿ ಹಾಗೂ ಧಾರ್ಮಿಕತೆಯ ಕಪಟ ಸೋಗಿನಿಂದಾಗಿ ಶತಕಗಳಿಂದಲೂ ಪ್ರತೀಕಾರ ಸಲ್ಲದಿರುವುದೂ ಅನ್ಯಾಯವೇ, ಆ ಅನ್ಯಾಯಕ್ಕೆ ಧರ್ಮದ ಬೇಗಡೆ ಹಚ್ಚಿದ ಮಾತ್ರಕ್ಕೆ ಅದು ನ್ಯಾಯ ಆಗುವದೆಂದೇನೂ ಇಲ್ಲ. ಮತ್ತು ಎಲ್ಲಿ ಮನುಷ್ಯತ್ವದ ಹಕ್ಕಿನ ಪ್ರಶ್ನೆಯಿದೆಯೋ, ಅಲ್ಲಿ ಪ್ರಸಕ್ತ ವಹಿವಾಟಿನ ಪ್ರಶ್ನೆಯನ್ನು ಮುಂದಿಟ್ಟು, ಇಲ್ಲವೇ ಕಾಲಮಿತಿಯ ಕಾಯ್ದೆಯತ್ತ ಬೊಟ್ಟು ಮಾಡಿ ಅನ್ಯಾಯದ ಸಮರ್ಥನೆ ಮಾಡುವುದೆಂದರೆ ಮನುಷ್ಯತ್ವದ ಪವಿತ್ರ ಹಕ್ಕಿನ ಬಗ್ಗೆ ನಮ್ಮ ಅಜ್ಞಾನವನ್ನು ತೋರಿದಂತೆ. ಯಾವ ವರ್ಗವನ್ನು ಹಿಂದೂ ಸಮಾಜವು ಇದುವರೆಗೆ ತುಳಿದು, ದಬ್ಬಾಳಿಕೆಯ ಹೊರೆಯಡಿ ದಮನಿಸಿ, ಮನುಷ್ಯತ್ವದ ಹಕ್ಕನ್ನೇ ನಷ್ಟಗೊಳಿಸಿತೋ, ಯಾವ ವರ್ಗದ ಭೌತಿಕ ಮತ್ತು ಮಾನಸಿಕ ಅವನತಿಗೆ ಕಾರಣವಾಯ್ತಿ, ಆ ಬಹಿಸ್ಕೃತ ವರ್ಗದ ಮೇಲೆ, ಹಿಂದೂ ಸಮಾಜಕ್ಕೆ ಯಾವುದೇ ಹಕ್ಕು ಇಲ್ಲ. ಬಹಿಷ್ಕೃತ ವರ್ಗದ ಜನರು ಈಗಲೂ ಹಿಂದೂಧರ್ಮಕ್ಕೆ ಅಂಟಿ ಕೊಂಡಿದ್ದರೆ, ಅದು ಹಿಂದೂ ಸಮಾಜದ ಬಗ್ಗೆ ಅವರಲ್ಲಿ ಆತ್ಮೀಯತೆ ಇದೆ ಎಂದೇನೂ ಅಲ್ಲ. ಆ ಆತ್ಮೀಯತೆ ಯಾಕೆ ಅನಿಸಬೇಕು? ಕುರಿಮರಿಗೆ ತೋಳನ ಬಗ್ಗೆ ಆತ್ಮೀಯತೆ ಹುಟ್ಟುವುದು ಎಂದಾದರೂ ಸಾಧ್ಯವೇ? ಹಿಂದೂ ಸಮಾಜದ ಬಗೆಗಲ್ಲ, ಹಿಂದೂಧರ್ಮದ ಬಗ್ಗೆ ಅವರಿಗೆ ಆತ್ಮೀಯತೆ ಇನ್ನೂ ಇದೆ, ಎಂಬುದು ನಿಜ. ಅದಕ್ಕೆ ಕಾರಣವಿಷ್ಟೇ ; ಅದು ಅವರ ಪೂರ್ವಜರ



ಧರ್ಮ.; ಆ ಧರ್ಮದಲ್ಲೇ ಅವರು ಬೆಳೆದು ದೊಡ್ಡವರಾದವರು. ಆದರೆ, ಇದಿಷ್ಟೇ ಕಾರಣ, ಅವರನ್ನು ಹಿಂದೂ ಧರ್ಮದಲ್ಲಿ ಶಾಶ್ವತವಾಗಿ ಉಳಿಸಿಕೊಳ್ಳಲು ಸಾಕಾಗಲಾರದು. ಧರ್ಮ ಬೇರೆ, ಸಮಾಜ ಬೇರೆ. ಧರ್ಮದ ನಿಯಮಗಳು ಸಮಾಜದಲ್ಲಿ ನಡೆಯುವುದಿಲ್ಲ. ಸಾಮಾಜಿಕ ನಿರ್ಬಂಧ, ಧಾರ್ಮಿಕ ವಿಷಯದಲ್ಲಿ ಅಡ್ಡ ಬರುವುದಿಲ್ಲ, ಎಂದೇನೂ ಇಲ್ಲ. ಹಿಂದೂಧರ್ಮ ಹಾಗೂ ಹಿಂದೂ ಸಮಾಜದಲ್ಲಿ ಪರಸ್ಪರ ತುಂಬ ನಿಕಟ ಸಂಬಂಧವಿದೆಯಷ್ಟೇ ಅಲ್ಲ, ಅವು ಒಂದೇ ಜೀವದಂತಿವೆ.ಇತರ ಧರ್ಮಗಳು, ಸಾಮಾಜಿಕ ವಿಷಯಗಳಲ್ಲಿ ಹೀಗೆ ಮಧ್ಯ ಪ್ರವೇಶಿಸುವುದಿಲ್ಲ, ಆದರೆ, ಸಾಮಾಜಿಕ ವಿಷಯಗಳಲ್ಲಿ ಬಾಯಿ ಹಾಕುವುದು, ಸಾಮಾಜಿಕ ಆಚಾರ, ವಿಚಾರಗಳನ್ನು ನಿಯಂತ್ರಿಸಲೆತ್ನಿಸುವುದು ಹಿಂದೂ ಧರ್ಮದ

ವಿಶೇಷ, ತಿನ್ನುವುದೇನು, ಕುಡಿಯುವುದೇನು, ಏಳುವುದು ಹೇಗೆ, ಕೂರುವುದು ಹೇಗೆ, ಮಲಗಿಸುವುದು ಹೇಗೆ? ಎಂಬಂತಹ ವಿಷಯಗಳಲ್ಲೂ ಧರ್ಮದ ನಿಯಂತ್ರಣವಿರುತ್ತದೆ. ದೇವರು ಹಾಗೂ ಮನುಷ್ಯನ ನಡುವಿನ ಸಂಬಂಧ ಹಾಗೂ ನೀತಿನಿಯಮಗಳನ್ನು ವಿಧಿಸುವಲ್ಲಿ, ಇತರ ಧರ್ಮಗಳಂತೆ ಹಿಂದೂ ಧರ್ಮವು ತನ್ನ ಕಾರ್ಯಕ್ಷೇತ್ರವನ್ನು ಸೀಮಿತವಾಗಿರಿಸಿಲ್ಲ.

ಹಿಂದೂ ಧರ್ಮದಂತೆ ಇತರ ಯಾವ ಧರ್ಮದಲ್ಲೂ ಇಷ್ಟೊಂದು ಸಾಮಾಜಿಕ ನಿರ್ಬಂಧಗಳಿಲ್ಲ. ಜಾತಿಭೇದವು ಹಿಂದೂಧರ್ಮದಲ್ಲಿ ಬೇರೊಂದೇ ವಿಧ !

ಇಂತಹ ವೈಚಿತ್ರ್ಯ ಬೇರಾವುದೇ ಧರ್ಮದಲ್ಲಿ ಕಾಣಸಿಗುವುದಿಲ್ಲ. ಜಾತಿಭೇದದಲ್ಲೂ ಅಸ್ಪೃಶ್ಯತೆಯೆಂಬುದನ್ನು ಈ ಜಗತ್ತಿನಲ್ಲಿ ಬೇರೆಲ್ಲೂ ಕಾಣುವಂತಿಲ್ಲ. ಸಾಮಾಜಿಕ ಭೇದ ಇತರೆಡೆ ಇರುತ್ತದೆ; ಅಸ್ಪೃಶ್ಯತೆಗೆ ಪರ್ಯಾಯವಾಗಿರುವಂತಹದೂ ಇತರೆಡೆ ಕಂಡುಬರುತ್ತದೆ; ಆದರೆ ಹಿಂದೂಸಮಾಜದಲ್ಲಿ ಆ ಭೇದದ ಮೇಲೆ ಹಾಗೂ ಅಸ್ಪೃಶ್ಯತೆಯ ಮೇಲೆ ಧರ್ಮದ ಮೊಹರೊತ್ತಲಾಗಿದೆ. ಹಾಗೆಂದೇ ಹಿಂದೂ ಸಮಾಜದಲ್ಲಿ ಧಾರ್ಮಿಕ ಸುಧಾರಣೆಯಾಗದೆ ಸಾಮಾಜಿಕ ಸುಧಾರಣೆ ಆಗುವಂತಿಲ್ಲ. ಹಿಂದೂ ಸಮಾಜಕ್ಕೆ ನೋಟೀಸ್ ಅಂದರೆ, ಹಿಂದೂ ಧರ್ಮಕ್ಕೆ ನೋಟೀಸ್ ಕೊಟ್ಟಂತೆ, ಈಗ ಅಸ್ಪೃಶ್ಯರೆನಿಸಿಕೊಳ್ಳುವ ವರ್ಗದ ಜನರು ಹಿಂದೂ ಸಮಾಜದಲ್ಲೇ ಇರಬೇಕೋ, ಹಿಂದೂ ಸಮಾಜದಿಂದ ಹೊರಗೆ ಹೋಗಿ, ತಮ್ಮ ಜೀವನೋಪಾಯ ನೋಡಿಕೊಳ್ಳಬೇಕೋ ಎಂಬ ನಿರ್ಧಾರ, ಹಿಂದೂ ಧರ್ಮದ ಸುಧಾರಣೆಯನ್ನು ಇಷ್ಟವೆನಿಸುವ ದಿಕ್ಕಿನಲ್ಲಿ ಒಯ್ಯುವುದರ ಮೇಲೆ ಅವಲಂಬಿತವಿದೆ. ಹಾಗೆ ಸುಧಾರಣೆಗೈಯುವುದು ಬಹಿಷ್ಕೃತ ವರ್ಗದ ಕೈಯಲ್ಲಿಲ್ಲ. ಸ್ವತಃ ಉಚ್ಚ ವರ್ಣೀಯರೆಂದು ಕರೆದುಕೊಳ್ಳುವವರು ಮನಸ್ಸು ಮಾಡಿದರಷ್ಟೇ ಇದು ಸಾಧ್ಯ. ಆದರೆ ತಮ್ಮ ಕೃತ್ರಿಮ ಶ್ರೇಷ್ಠತ್ವವನ್ನು ತೊರೆದುದಲ್ಲದೆ, ಅವರ ಕೈಯಿಂದ ಈ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆ ಆಗುವುದು ಶಕ್ಯವಿಲ್ಲ. ಉಚ್ಚ ವರ್ಣೀಯರೆಂದು ಕರೆದುಕೊಳ್ಳುವವರು ತಮ್ಮ ಪಾರಂಪರ್ಯವನ್ನು ಶಾಶ್ವತವಾಗಿರಿಸಿಕೊಂಡಿರುವುದು ಕಾಣಿಸುತ್ತಿರುವುದರಿಂದಲೇ ಹಿಂದೂ ಸಮಾಜದಲ್ಲಿ ಜಾತಿಜಾತಿಗಳೊಳಗೆ ಕಚ್ಚಾಟ ನಡೆದಿದೆ, ಹಾಗೂ ಅಸ್ಪೃಶ್ಯತೆಯ ದಂಗೆ ನಿಲ್ಲುತ್ತಿಲ್ಲ. ಬಹಿಷ್ಕೃತ ವರ್ಗದ ಜನರು ಮತಾಂತರದ ಪ್ರಶ್ನೆ ಎತ್ತಿದರೆಂದರೆ ಹಿಂದೂ ಧರ್ಮದ ತತ್ವಜ್ಞಾನವನ್ನು ಪಾಶ್ಚಾತ್ಯ ದೇಶದ ಜನರೂ ಒಪ್ಪಿಕೊಳ್ಳುವುದಿಲ್ಲ. ಇಂತಹ ಪ್ರಾಚೀನ, ಶ್ರೇಷ್ಠ ಧರ್ಮವನ್ನು ಬಿಡಬೇಡಿರೆಂದು ಸ್ಪಶ್ಯ ಹಿಂದೂಗಳು ಉಪದೇಶಿಸುತ್ತಾರೆ. ಆದರೆ ತತ್ವಜ್ಞಾನವೇನು ಸವಿದು ಮೆಲ್ಲುವಂತಹುದೇ? ವ್ಯಾಕರಣದಿಂದ ಹಸಿವು ಇಂಗುವುದಿಲ್ಲ, ಕಾವ್ಯರಸದಿಂದ ನೀರಡಿಕೆ ತಣಿಯುವುದಿಲ್ಲ, ಎಂಬರ್ಥದ ಸಂಸ್ಕೃತ ಭಾಷೆಯ ನುಡಿಗಟ್ಟು, ಧರ್ಮದ ತತ್ವಜ್ಞಾನಕ್ಕೂ ಅನ್ವಯಿಸುತ್ತದೆ.

ಧರ್ಮದ ವ್ಯಾಖ್ಯೆಯಾದರೂ ಏನು? "ಯತೋಽಭ್ಯುದಯಾನಿ ಶ್ರೇಯಸ್ ಸಿದ್ಧಿ ಸಧರ್ಮ"

ಅಂದರೆ, ಯಾವ ಯೋಗದಿಂದ ಅಭ್ಯುದಯ, ಅಂದರೆ ಐಹಿಕ ಉತ್ಕರ್ಷವೂ, ಮೋಕ್ಷಪ್ರಾಪ್ತಿಯೂ ಆಗುವುದೋ, ಅದೇ ಧರ್ಮ, ಅಂದರೆ, ಐಹಿಕ ಉತ್ಕರ್ಷ ಮೊದಲು, ನಂತರ ಮೋಕ್ಷವೆಂಬುದೇ ಕ್ರಮ. ಬಹಿಷ್ಕೃತ ವರ್ಗದ ಮೇಲೆ ಎಂತಹ ಸಾಮಾಜಿಕ ನಿರ್ಬಂಧ ಹೇರಲ್ಪಟ್ಟಿದೆಯೆಂದರೆ, ಆ ವರ್ಗದ ಜನರು ತಮ್ಮ ಮುಖ ಎತ್ತಿ ನಿಲ್ಲಬಾರದು, ತಮ್ಮ ಬುದ್ಧಿಮತ್ತೆಯನ್ನು ಉಪಯೋಗಿಸುವ ಯೋಗ್ಯತೆ ಅವರಿಗಿದೆಯೆಂದು ತೋರುವ ಅವಕಾಶವೇ ಅವರಿಗೆ ಸಿಗಬಾರದು, ಇದೇ ಅಸ್ಪೃಶ್ಯತೆಯ ಅರ್ಥ. ಉತ್ಕರ್ಷವಂತೂ ಬದಿಗಿರಲಿ, ಆದರೆ, ಸುಲಭ ಸಾಧ್ಯ ಸವಲತ್ತೂ ಅಸ್ಪೃಶ್ಯತೆಯ ಕಾರಣ ಸಿಗುವಂತಿಲ್ಲ. ಅದಕ್ಕಾಗಿ ಅಸ್ಪೃಶ್ಯರು ನಾನಾ ವಿಧದ ವಿಪತ್ತು, ಸಂಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಈ ಸ್ಥಿತಿಯಲ್ಲಿ ಪಾರಮಾರ್ಥಿಕ ಮುಕ್ತಿ ಹಾಗೂ ಮೋಕ್ಷ ಪ್ರಾಪ್ತವಾಗುವ ದಾರಿ ತೆರೆದಿದೆಯೇ? ಮೋಕ್ಷವೆಂಬುದು ಹೇಗಿದೆ? ಈ ಜಗತ್ತಿನಲ್ಲಿ ಮೋಕ್ಷಕ್ಕಾಗಿ ಮುಗಿಬಿದ್ದು, ಐಹಿಕ ಉತ್ಕರ್ಷವನ್ನು ಬೇಡವೆಂದು ಒದೆಯುವವರು ಎಲ್ಲೋ ಒಬ್ಬಿಬ್ಬರಿರಬಹುದು. ಉಳಿದವರೆಲ್ಲರ ಐಹಿಕ ಉತ್ಕರ್ಷ, ಐಹಿಕ ಸುಖದ ಅರಸುವಿಕೆ ಸಾಗಿರುತ್ತದೆ. ಹಿಂದೂ ಧರ್ಮವು ಕೇವಲ ಮೋಕ್ಷ ಸಾಧನೆಗಾಗಿಯೇ ಇದೆ, ಹಿಂದೂ ಸಮಾಜದಲ್ಲಿ ಯಾರೂ ಸುಖದ ಅಪೇಕ್ಷೆ ಮಾಡಬೇಕಿಲ್ಲ, ಎಂದು ಕೊಂಡರೂ, ಧರ್ಮಾಭಿಮಾನದ ಬಗ್ಗೆ ಉದ್ದುದ್ದ ಭಾಷಣ ಬಿಗಿವ, ಅಸ್ಪೃಶ್ಯತೆಯನ್ನು ಸಮರ್ಥಿಸುತ್ತಾ, ಸ್ವಧರ್ಮದಲ್ಲೇ ಉಳಿಯಿರೆಂದು ಬಹಿಷ್ಕೃತ ವರ್ಗಕ್ಕೆ ದೊಡ್ಡದಾಗಿ ಉಪದೇಶಿಸುವ ಉಚ್ಚವರ್ಣೀಯರೆನ್ನುವವರ ಪೈಕಿ, ಒಂದು ದೊಡ್ಡ ಇಸವಮ್ ಹಿಂದೂ ಧರ್ಮದಲ್ಲಿ ಉಳಿಯುವಂತಿಲ್ಲವೆಂದು ನಾವು ಖಂಡಿತವಾಗಿ ಹೇಳುತ್ತೇವೆ. ಧರ್ಮಾಭಿಮಾನದ ವೇದಾಂತವು, ಪರದುಃಖವು ಶೀತಲವೆಂಬ ನ್ಯಾಯದಂತೆ ಇದೆ. ಉಚ್ಚವರ್ಣೀಯರೆನ್ನುವವರು ವಿದೇಶಕ್ಕೆ ಹೋಗಿ ಗೋಮಾಂಸ ತಿಂದು ಬಂದರೆ, ಜಾತಿಬಾಂಧವರು ಸಿಟ್ಟಾಗುವರು. ವ್ಯಕ್ತಿಯೊಬ್ಬ ವಿದೇಶಕ್ಕೆ ಹೋಗಿ ಹಿಂದಿರುಗಿದನೆಂದರೆ, ಅವನು ಅಭಕ್ಷವನ್ನು ಭುಜಿಸಿ, ಅಪೇಯವನ್ನು ಕುಡಿವಂಥವನಾಗಿದ್ದಾನೋ, ಇಲ್ಲವೋ, ಎಂಬುದನ್ನು ಚರ್ಚಿಸದೆ, ಅದು ಖಂಡಿತವಿದ್ದರೂ ಒಂದೋ ಆತನಿಗೆ ಜಾತೀಯರಿಂದ ನಿರೋಪ ಹೊರಡಿಸ ಬಹುದು, ಇಲ್ಲವೇ, ಆತನನ್ನು ಸ್ವಾಗತಿಸ ಬಹುದು.

ಅಸ್ಪೃಶ್ಯನೊಬ್ಬ ಕ್ರೈಸ್ತನೋ, ಮುಸಲ್ಮಾನನೋ ಆಗಿದ್ದರೆ, ಅವನನ್ನು ಅಪವಿತ್ರನೆಂದು ಗಣಿಸದೆಯೇ, ಸಮಾಜದೊಳಗೆ ಕರಕೊಳ್ಳಬಹುದು, ಆದರೆ, ಹಿಂದೂ ಧರ್ಮದಲ್ಲಿದ್ದೇ ಅಸ್ಪೃಶ್ಯರ ಅಸ್ಪೃಶ್ಯತೆಯನ್ನು ಇಲ್ಲವಾಗಿಸೋಣವೆಂದರೆ, ಸ್ಮೃತಿ, ಪುರಾಣಗಳಲ್ಲಿನ ಶಾಸ್ತ್ರಾಧಾರ, ಕಪಟ, ಮೋಸ ಎಲ್ಲ ಮುಂದೆ ಬರುತ್ತದೆ. ಬ್ರಾಹ್ಮಣರಾದಿಯಾಗಿ ಉಚ್ಚ ವರ್ಗದವರೆನ್ನುವವರು ಸ್ಮೃತಿಗ್ರಂಥಗಳನ್ನು, ಶಾಸ್ತ್ರಗಳನ್ನು, ರೂಢಿಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಒಗ್ಗಿಸಿಕೊಳ್ಳುತ್ತಾರೆ. ಆದರೆ, ಬಹಿಷ್ಕೃತರಿಗೆ ಮಾತ್ರ ಶಾಸ್ತ್ರ ರೂಢಿಗಳನ್ನು ಮಹತ್ವದ್ದಾಗಿ ಬಿಂಬಿಸಲಾಗುತ್ತದೆ. ಪ್ರಸ್ತುತ ಕ್ರಿಸ್ತರನ್ನೂ, ವಿಶೇಷವಾಗಿ ಮುಸಲ್ಮಾನರನ್ನೂ ಎತ್ತಿ ಕಟ್ಟುವ ಧೋರಣೆಯಿಂದಾಗಿ, ಉಚ್ಚವರ್ಣೀಯರೆನ್ನುವವರಿಗೆ ಹಿಂದೂಗಳ ಸಂಖ್ಯಾಬಲ ಕಡಿಮೆ ಆಗುತ್ತಿದೆಯೆಂಬ ಅರಿವಿದ್ದು, ಹಾಗಾಗಬಾರದೆಂದು ಸಂಘಟನೆ ಮತ್ತು ಶುದ್ಧಿ ಎಂಬ ಚಳವಳಿಯನ್ನು ಆರಂಭಿಸಿದ್ದಾರೆ. ಆದರೆ, ಪ್ರಸ್ತುತ ಸಂಘಟನೆ ಮತ್ತು ಶುದ್ಧಿ ಎಂಬ ಚಳವಳಿ ಸಂಭಾವಿತ ಲಫಂಗತನವಷ್ಟೇ, ಮಾನವ ಹಕ್ಕುಗಳ ಪವಿತ್ರತೆಯ ಭಾವನೆ ಎಲ್ಲಿ ಇಲ್ಲವೋ, ಎಲ್ಲಿ ಅನ್ಯಾಯ ಮತ್ತು ಸ್ವಾರ್ಥದ ಬಗ್ಗೆ ಸಂತಾಪವಿಲ್ಲವೋ, ಎಲ್ಲಿ ಸಮತೆಯ ಬಗ್ಗೆ ಶ್ರದ್ಧೆಯಿಲ್ಲವೋ,



ಅಂಥಲ್ಲಿ ಸಂಘಟನೆ ಮತ್ತು ಶುದ್ಧಿ, ಕೇವಲ ನಾಟಕವಷ್ಟೇ. ಈ ನಾಟಕದ ಮೇಲೆ ಬಹಿಷ್ಕೃತ ವರ್ಗಕ್ಕೆ ವಿಶ್ವಾಸವಿಲ್ಲವೆಂದು ಹೇಳಬೇಕಾಗಿಯೇ ಇಲ್ಲ. ವ್ಯಕ್ತವಾಗಿ ವಿರೋಧಿಸಲು ಪುರಾಣಮತವಾದಿಗಳು ಕರೆನೀಡಿದರು; ಆದರೆ, ಶುದ್ಧಿ ಸಂಘಟನೆಯವರು ಇದು ಮೋಸವೆಂದು ಇನ್ನೂ ಹೆಚ್ಚು ಭಯಂಕರರಾದರು. ಬಹಿಷ್ಕೃತರ ಸ್ವಾಭಿಮಾನಪರ ಚಳವಳಿಯನ್ನು ದ್ವೇಷಿಸುವವರು, ನಿಜವಾದ ಸಮಾಜ ಸುಧಾರಣೆ ಮತ್ತು ಉದಾರಮತವಾದವನ್ನು ಕದ್ದು ಮುಚ್ಚಿ ಆಘಾತಿಸುವವರೇ ಈಗ ಸಂಘಟನೆಯ ಮುಂಚೂಣಿಯಲ್ಲಿದ್ದಾರೆ. ಬ್ರಹ್ಮಭೂತಸ್ವಾಮಿ ಶ್ರದ್ಧಾನಂದರ ಪವಿತ್ರ ಚಳವಳಿಯನ್ನು ಈ ಕಪಟಿಗಳು ಈಗ ಗೊಂದಲಮಯವಾಗಿಸಿದ್ದಾರೆ. ಪುಕ್ಕಟೆ ಆತ್ಮಪ್ರತಿಷ್ಠೆ ಹೆಚ್ಚಿಸಿಕೊಳ್ಳುವ ಲಫಂಗರೇ ಈ ಚಳವಳಿಯಲ್ಲಿ ತುಂಬಿದ್ದಾರೆ. ಹಿಂದೂ ಮುಸ್ಲಿಮರಲ್ಲಿ ಕಲಹ ತಂದು ಹಾಕುವುದು ಈಗೊಂದು ಧಂದೆಯೇ ಆಗಿದೆ. ಅಂಥವರನ್ನು ಒದ್ದು ಹೊರಹಾಕದ ಹೊರತು, ಈ ಚಳವಳಿಗೆ ನಿಜವಾದ ಬಲ ಬರುವಂತಿಲ್ಲ. ಈ ನಿರ್ಲಜ್ಜ ಜನರು, ಬಹಿಷ್ಕೃತರು ತಮ್ಮ ಪ್ರಸಕ್ತ ಸ್ಥಿತಿಯಿಂದ ಬೇಸತ್ತು, ಪರಧರ್ಮ ಸ್ವೀಕರಿಸುವ ಮಾತೆತ್ತಿದೊಡನೆ, ಹೋಗಿ, ನೀವು ಖುಶಿಯಿಂದ ಪರಧರ್ಮಕ್ಕೆ ಹೋಗಿ ನಮಗೆ ನಿಮ್ಮ ಪರಿವೆಯಿಲ್ಲ; ನಿಮ್ಮ ಬೆದರಿಕೆಯನ್ನು ನಾವೇನೂ

ಕೇಳಿಸಿಕೊಳ್ಳುವುದಿಲ್ಲ. ನಿಮಗೆ ಹಿಂದೂ ಸಮಾಜದಲ್ಲಿ ಇರಬೇಕಾದರೆ, ನಾವು ಹೇಳಿದಂತೇ ಇರಬೇಕು, ಎನ್ನಲು ಹಿಂಜರಿಯುವವರಲ್ಲ. ಯಾರಿಗಾದರೂ ಬೆದರಿಕೆ ಒಡ್ಡುವುದು, ಬಹಿಷ್ಕೃತರ ಇಚ್ಛೆಯಲ್ಲ. ಹಿಂದೂ ಸಮಾಜದಲ್ಲಿರುವುದು ಅಸಹನೀಯವಾದುದರಿಂದಲೇ ಅವರು ಪರಧರ್ಮಕ್ಕೆ ಹೋಗುವುದು ಒಳ್ಳೆಯದೆನ್ನುತ್ತಾರೆ. ಆದರೆ, ಅದು ಅವರ ಬೆದರಿಕೆಯೆಂದು, ಈ ಸ್ವಾರ್ಥಿಗಳು ಮರು ಬೆದರಿಕೆಯೊಡ್ಡುತ್ತಿದ್ದಾರೆ. ಹೀಗೆನ್ನುವ ಧೈರ್ಯ ಅವರಿಗಿರಲು ಕಾರಣ, ಸಾಮಾಜಿಕ ದಬ್ಬಾಳಿಕೆಯಿಂದ ಬಹಿಷ್ಕೃತ ವರ್ಗ ಎಷ್ಟೇ ಬಸವಳಿದಿದ್ದರೂ, ಹಿಂದೂ ಧರ್ಮದ ಮೇಲೆ ಅವರಿಗಿರುವ ಪ್ರೀತಿಯೇ ಅವರು ಮುಂದಕ್ಕೂ ಸಹಿಸುವಂತೆ ಮಾಡುತ್ತದೆಂಬ ನಂಬಿಕೆಯೇ ಆಗಿದೆ. ಆದರೆ ಈ ಕುಟಿಲರ ಬೆದರಿಕೆಗೆ ಈಗ ಬಹಿಷ್ಕೃತರು ಕಿವಿಗೊಡುವಂತಿಲ್ಲವೆಂದು ಜಳ್ಗಾಂವ್‌ನ ಜನರು ತೋರಿಸಿ ಕೊಡುವವರಿದ್ದಾರೆ. ಈ ಐದು ಸಾವಿರ ಜನರು, ಮತಾಂತರ ಮಾಡಿಕೊಂಡರೆ, ಅದರ ಜವಾಬ್ದಾರಿಯು ಎಲ್ಲ ಹಿಂದೂ ಸಮಾಜದ ಮೇಲೆ, ಮತ್ತು ವಿಶೇಷತಃ ಬಹಿಷ್ಕೃತರನ್ನು ಬೆದರಿಸುತ್ತಿರುವ ಕಪಟಿಗಳಾದ ಸಂಘಟನೆಯವರ ಮೇಲೆ ಇದೆಯೆಂದು ಈಗಲೇ ಸಾರಿಬಿಡುತ್ತೇವೆ. ಮತಾಂತರಕ್ಕೆ ಸ್ವತಃ ನಾನು ಈಗಲೇ ಸಿದ್ಧನಿಲ್ಲ, ಕಾರಣ, ಉನ್ನತ್ತ ಜನರ ದೋಷವನ್ನು ತಿದ್ದಿ, ಹಿಂದೂ ಸಮಾಜದಲ್ಲಿ ಬಹಿಷ್ಕೃತ ವರ್ಗದ ಹಕ್ಕು ಸ್ಥಾಪಿಸುವ ಉತ್ಸಾಹ ನನ್ನಲ್ಲಿನ್ನೂ ಇದೆ. ಹಿಂದೂ ಸಮಾಜವು ತನ್ನ ಲಜ್ಜೆಗೇಡಿತನವನ್ನು ಕೊಡವಿಕೊಂಡು ಎದ್ದರೆ, ಯಶಸ್ಸು ಪ್ರಾಪ್ತವಾಗುವುದೆಂಬ ಭರವಸೆ ನಮ್ಮದು. ಹಾಗೆಯೇ, ಹಿಂದೂ ಸಮಾಜದಿಂದ ಬೇಸತ್ತು, ಹಿಂದೂ ಧರ್ಮವನ್ನ ತ್ಯಜಿಸಲು ಪ್ರವೃತ್ತರಾದವರಿಗೆ, ಹಾಗೆ ಮಾಡಬೇಡಿರೆನ್ನಲು ನಮಗೆ ಮನಸ್ಸು ಬರುವುದಿಲ್ಲ. ಇದು ಅವರವರ ಶೋಷಣೆಯ ಪ್ರಶ್ನೆ ; ಹಾಗೆಯೇ ಜಳ್ಗಾಂವ್‌ನ ಐದು ಸಾವಿರ ಮಹಾರ್ ಬಂಧುಗಳಿಗೆ ನಾನು ನೀಡ ಬಯಸುವ ಸೂಚನೆಯೆಂದರೆ ನಿಮಗೆ ಮತಾಂತರ ಮಾಡಲೇಬೇಕಿದ್ದರೆ, ಮುಸಲ್ಮಾನರಾಗಿ, ನಿಮಗೆ ಮೋಕ್ಷಕ್ಕಾಗಿ ಧರ್ಮಾಂತರ ಮಾಡಬೇಕಾಗಿಲ್ಲ. ಯಾವ ಧರ್ಮದ ತತ್ತ್ವ ವಿಶೇಷ ಸಂಯುಕ್ತಿಕವಾಗಿದೆ ಎಂಬುದು ಪ್ರಶ್ನೆಯಲ್ಲ. ಧರ್ಮಾಂತರದಿಂದ ಅಸ್ಪೃಶ್ಯತೆಯನ್ನು ಕಳೆದುಕೊಳ್ಳುವುದೇ ನಿಮ್ಮ ಉದ್ದೇಶ. ಈ ಉದ್ದೇಶವು, ಪ್ರಾರ್ಥನಾ ಸಮಾಜ, ಆರ್ಯ ಸಮಾಜ ಇಲ್ಲವೇ ಬೌದ್ಧ ಧರ್ಮೀಯರಾಗಿಯೂ



ಸಾಧಿಸಲು ಶಕ್ಯವಿಲ್ಲ. ಕಾರಣ, ನೀವು ವ್ಯವಹಾರ ದೃಷ್ಟಿಯಿಂದ ಹಿಂದೂ ಎಂದೇ ತಿಳಿಯಲ್ಪಡುವಿರಿ; ಮತ್ತು ನಿಮ್ಮ ಮನದ ಅಸ್ಪೃಶ್ಯ ಭಾವನೆ ಶಾಶ್ವತವಾಗಿರುವುದು. ಇಷ್ಟೇ ಅಲ್ಲ, ಕ್ರೈಸ್ತರಾದರೂ ನಿಮ್ಮ ಅಸ್ಪೃಶ್ಯತನ ಪೂರ್ಣವಾಗಿ ತೊಲಗಿ ಹೋಗದು. ಹಿಂದೀ ಕ್ರೈಸ್ತರನ್ನೂ ಜಾತಿ ಭೇದವು ಪೂರ್ಣವಾಗಿ ಬಿಟ್ಟು ಹೋಗಿಲ್ಲ. ಮುಸಲ್ಮಾನ ಧರ್ಮಕ್ಕೆ ಮಾತ್ರ ಎಲ್ಲರನ್ನೂ ಒಳಗೊಳ್ಳುವ ಸಾಮರ್ಥ್ಯವಿದೆ. ಮುಸಲ್ಮಾನ ಸಮಾಜವು ಸ್ವಕೀಯರಲ್ಲಿ ಜ್ವಾಜಲ್ಯಮಾನ

ಅಭಿಮಾನವಿರಿಸಿಕೊಂಡು, ಅವರ ಸಹಾಯಕ್ಕೆ ಧಾವಿಸಲು ಸದಾ ಸಿದ್ಧವಿರುತ್ತದೆ. ಹಾಗೆಂದೇ ಏಳು ಕೋಟಿ ಮುಸಲ್ಮಾನರು ಇಪ್ಪತ್ತೆರಡು ಕೋಟಿ ಹಿಂದೂಗಳಿಗೆ ಭಾರೀ ಅನಿಸುತ್ತಾರೆ. ನೀವು ಮುಸಲ್ಮಾನರಾದ ಬಳಿಕವೂ, ಉನ್ನತ ಹಿಂದೂ ಜನರು, ನಿಮ್ಮನ್ನು ಕೆಟ್ಟದಾಗಿ ಜರೆದರೆ, ನಿಮ್ಮ ಬೆಂಬಲಕ್ಕಿರುವ ಏಳು ಕೋಟಿ ಮುಸಲ್ಮಾನರನ್ನು ಅವರು ಎದುರಿಸಬೇಕಾದೀತು, ಮತ್ತು, ಹೇಡಿಗಳಾದ ಹಿಂದೂಗಳು ಹಾಗೆ ಅವರನ್ನೆದುರಿಸಲು ಎಂದೂ ಸಿದ್ಧರಾಗರು. ನಿಮ್ಮತ್ತ ಓರೆಗಣ್ಣಿನಿಂದ ನೋಡುವ ಧೈರ್ಯ ಅವರಿಗಾಗದು. ನೀವು ಮುಸಲ್ಮಾನರಾದರೆ, "ಭಾಯಿ ಭಾಯಿ" ಎಂದು ಪ್ರೀತಿ ತೋರಲು, ನಿಮಗಾಗಿ ಖಿಲಾಫತ್ ಚಳವಳಿಯೆಂದು, ಅಂದು ಶಂಕರಾಚಾರ್ಯರು, ಕರಾಚಿಯಲ್ಲಿ ನಡೆದ ವಿಚಾರಣೆಯಲ್ಲಿ ಕಂಡುಬಂದಂತೆ, ಜೊತೆ ನೀಡುವುದಷ್ಟೇ ಅಲ್ಲ, ನಿಮ್ಮ ಸಭೆಯಲ್ಲಿ ನಿಮಗಿಂತಲೂ ದೊಡ್ಡ ದನಿಯಲ್ಲಿ "ಅಲ್ಲಾ ಹೋ ಅಕ್ಬರ್" ಎಂದು ಜಯಘೋಷ ಕೂಗುವರು.

* * * *

## ೧೧. ಸೈಮನ್ ಕಮೀಶನ್‌ಗೆ ಸಾಷ್ಟಾಂಗ ನಮಸ್ಕಾರ ಹಾಕುವ ಬ್ರಾಹ್ಮಣರು

ಸೈಮನ್ ಕಮೀಶನ್ ಮದರಾಸಿಗೆ ಹೋದಾಗ ಅಲ್ಲಿನ ಸನಾತನ ಬ್ರಾಹ್ಮಣರ ಪ್ರಾತಿನಿಧಿಕ ತಂಡವೊಂದು ಕಮೀಶನ್ ಭೇಟಿಗೆಂದು ಹೋಯಿತು. ಶ್ರೀ ಶ್ರೀನಿವಾಸ ಐಯ್ಯಂಗಾರ್ ಹಾಗೂ ಶ್ರೀ ಸತ್ಯಮೂರ್ತಿ ಅವರೇ ಈ ಸನಾತನ ಬ್ರಾಹ್ಮಣರು. ಈ ಸ್ವಾತಂತ್ರ್ಯವಾದಿ ನಾಯಕರ ಜಾತಿ ಬಂಧುಗಳು, ಆ ಬ್ರಾಹ್ಮಣರ ಪಕ್ಷ ಹಿಡಿದು ಸದ್ಯದ ಕಾಂಗ್ರೆಸ್ ಧುರೀಣರ ಸಮಾಜ ಸುಧಾರಣೆಯ ಕಾಯ್ದೆಯನ್ನು ವಿರೋಧಿಸುತ್ತಿದ್ದಾರೆ. ದೇವಸ್ಥಾನ ಮತ್ತು ಮಠಗಳಿಗೆ ಸಂಬಂಧಿಸಿ, ಅಂದು ಮದರಾಸಿನ ಬ್ರಾಹ್ಮಣೇತರ ಮಂತ್ರಿ ಮಂಡಳ ತಂದ ಉಪಯುಕ್ತ ಕಾಯ್ದೆಯನ್ನು ವಿರೋಧಿಸಿ, ಸನಾತನ ಬ್ರಾಹ್ಮಣರ ಪಕ್ಷದಲ್ಲಿ ಸತ್ಯಮೂರ್ತಿ ಅವರಂಥ ನಾಯಕರು ದನಿಯೆಬ್ಬಿಸಿದರು. ಇಂದಿಗೂ ಆ ಕಾಯ್ದೆಗೆ ಆ ಪಕ್ಷದ ವಿರೋಧವಿದೆ. ಮತ್ತು ಆ ಕಾಯ್ದೆಯನ್ನು ರದ್ದು ಮಾಡುವ ಯತ್ನ ನಿಷ್ಫಲವಾದರೂ, ಈಗಲೂ ಆ ಯತ್ನ ನಡೆದಿದೆ. ಮದರಾಸೀ ಬ್ರಾಹ್ಮಣರು, ರಾಜಕೀಯ ವಿಷಯದಲ್ಲಿ ಸ್ವಾತಂತ್ರ್ಯ ಹಾಗೂ ಸ್ವರಾಜ್ಯದ ಬಗ್ಗೆ ಪಟಪಟನೆ ಮಾತನಾಡಬಲ್ಲರು; ಆದರೆ ಸಾಮಾಜಿಕ ವಿಷಯಗಳಲ್ಲಿ ಅವರಷ್ಟು ಪ್ರಗತಿಗೆ ವಿರೋಧವಾಗಿರುವವರು ಇಡೀ ಲೋಕದಲ್ಲೇ ಬೇರೆ ಸಿಗಲಾರರು. ಧಾರ್ಮಿಕ ಹಾಗೂ ಸಾಮಾಜಿಕ ವಿಷಯಗಳಲ್ಲಿ ಅವರಷ್ಟು ಔದಾರ್ಯ ಹೀನರು

ಬೇರಿಲ್ಲ. ಮದರಾಸು ಇಲಾಖೆಗೆ ಹಿಂದುಳಿದ ಪ್ರಾಂತ್ಯ ಎಂಬ ಹೆಸರು ಬರಲು ಅಲ್ಲಿನ ಬ್ರಾಹ್ಮಣರ ಸಾಮಾಜಿಕ ಮತ್ತು ಧಾರ್ಮಿಕ ವಿಷಯಗಳಲ್ಲಿನ ಹಿಂದುಳಿದ ಧೋರಣೆಯೇ ಕಾರಣ. ಸ್ಪೃಶ್ಯಾಸ್ಪೃಶ್ಯತೆಯಂತೇ ದೊಡ್ಡದೊಂದು ಶಾಸ್ತ್ರವನ್ನೇ ಸಿದ್ಧ ಪಡಿಸಿದ್ದಾರೆ. ಯಾವ ಜಾತಿಯವರು ಎಷ್ಟು ಅಡಿಗಳ ಅಂತರದಲ್ಲಿದ್ದರೆ, ಪಾವಿತ್ರ್ಯ ಕಾಪಾಡಿದಂತೆ ಎಂಬುದರ ಪಟ್ಟಿಯನ್ನು ತಯಾರು ಮಾಡುವುದು, ದೃಷ್ಟಿದೋಷದಂತೆ ಹೊಸ ಹೊಸ ದೋಷಗಳನ್ನು, ಪರಿಹಾರವನ್ನು ಕಂಡು ಹಿಡಿಯುವುದು, ಇತ್ಯಾದಿ ವಿಷಯಗಳಲ್ಲಿ ಮದರಾಸಿ ಬ್ರಾಹ್ಮಣರು ಇಂದಿಗೂ ತಮ್ಮ ಬುದ್ಧಿ ಖರ್ಚು ಮಾಡುತ್ತಾ ಬಂದಿದ್ದಾರೆ. ಈ ಬುದ್ಧಿಯ ಉಪಯೋಗ ಒಂದಿಷ್ಟಾದರೂ ಬೌದ್ಧಿಕ ಶಾಸ್ತ್ರಗಳನ್ನು ಶೋಧಿಸುವಲ್ಲಿ ಉಪಯೋಗಕ್ಕೆ ಬಂದಿದ್ದರೆ, ಇಡಿಯ ದೇಶದ ದಾರಿದ್ರ ಇಂದು ದೂರವಾಗುತ್ತಿತ್ತು. ಇಂದು ದೇಶದಲ್ಲಿ ಸಮಾಜ ಸುಧಾರಣೆಯ ಮಾರ್ಗವನ್ನು ಕಾಯ್ದೆಯ ಮೂಲಕ ಸುಲಭಗೊಳಿಸಲು ನಡೆಯುತ್ತಿರುವ ಯತ್ನದಲ್ಲಿ ಮದರಾಸಿನ ಬ್ರಾಹ್ಮಣರ ತಾರಾಮಂಡಲವೇ ಕಳಚಿ ಬಿದ್ದಿದೆ. ಈಗ ನಮ್ಮ ವರ್ಚಸ್ಸೇ ಇಲ್ಲದಾಗುವುದು ಮತ್ತು ಹಾಗಾದಲ್ಲಿ ಹಿಂದೂ ಧರ್ಮವು ರಸಾತಳಕ್ಕೆ ಕುಸಿಯುವುದು, ಎಂದು ಅವರಿಗೆ ಅನಿಸಲಾರಂಭಿಸಿದೆ. ಸೈಮನ್ ಕಮೀಶನ್‌ಗೆ ಬಹಿಷ್ಕಾರ ಕೂಗಲು, ಶ್ರೀನಿವಾಸ ಅಯ್ಯಂಗಾರ್, ಸತ್ಯಮೂರ್ತಿ, ಸಾಂಬಮೂರ್ತಿ ಮುಂತಾದ ಬ್ರಾಹ್ಮಣ ನಾಯಕರು ಇದ್ದರೂ, ಸೈಮನ್ ಕಮೀಶನ್ ಅಲ್ಲಿಗೆ ತಲುಪಿದಾಗ, ಅವರೆದುರು ಸಾಷ್ಟಾಂಗ ನಮಸ್ಕರಿಸಲು ಸನಾತನ ಬ್ರಾಹ್ಮಣರು ಹಿಂದೆ ಬೀಳಲಿಲ್ಲ. ಇದರಿಂದ ಸಿಟ್ಟಾಗಿ, ಕಾಂಗ್ರೆಸ್‌ನ ಬ್ರಾಹ್ಮಣ ಧುರೀಣರು ಸಮಾಜ ಸುಧಾರಣೆಯನ್ನು ವಿರೋಧಿಸುವವರನ್ನು ಬಹಿಷ್ಕಾರದ ಚಳವಳಿಗೆ ಸೇರಿಸಿಕೊಳ್ಳಲು ಶಕ್ಯರಾಗಲಿಲ್ಲ. ಆದರೆ ಬ್ರಾಹ್ಮಣೇತರ ಮತ್ತು ಬಹಿಷ್ಕೃತ ವರ್ಗದವರು, ತಂತಮ್ಮ



ಕಡೆಯಿಂದ ಕಮೀಶನ್‌ನೆದುರು ಜಮಾಯಿಸಿದರೆಂದು ಅವರನ್ನು ದೋಷಿಗಳೆಂದು, ದೇಶದ್ರೋಹಿಗಳೆಂದು ಆರೋಪಿಸುವ ಅಧಿಕಾರ ಬ್ರಾಹ್ಮಣ ನಾಯಕರಿಗೆ ಹೇಗೆ ಬರುವುದೋ ಅವರೇ ಬಲ್ಲರು. ಸನಾತನ ಬ್ರಾಹ್ಮಣರ ಪ್ರಾತಿನಿಧಿಕ ತಂಡವು, ಬಹಿಷ್ಕಾರ ಚಳವಳಿಯನ್ನು ಗಣಿಸದೆಯೇ, ಸೈಮನ್ ಕಮೀಶನನ್ನು ಭೇಟಿಯಾಗಿ ದೇಶದ ಕಾನೂನು ಮಂಡಳಕ್ಕೆ ಧಾರ್ಮಿಕ ವಿಷಯದಲ್ಲಿ ಕಾನೂನು ರಚಿಸುವ ಅವಕಾಶ ಇಲ್ಲದಿರಲಿ, ಎಂಬ ಬೇಡಿಕೆ ಮುಂದಿಟ್ಟಿತು. ಸ್ವರಾಜ್ಯ ಸಿಗಲಿ, ಸಿಗದಿರಲಿ, ಸ್ವರಾಜ್ಯದ ಸಂವಿಧಾನವು ಹೇಗೇ ಇರಲಿ, ಇವರ ಪಾವಿತ್ರ್ಯದ ಸಂರಕ್ಷಣೆ

ಆಗಲೇಬೇಕು, ಕಾನೂನು ಮಂಡಳದಲ್ಲಾದ ಈವರೆಗಿನ ಕಾನೂನುಗಳಿಂದ, ನಿಜವಾಗಿ ನೋಡಿದರೆ, ಧರ್ಮಕ್ಕೆ ಎಂದಾದರೂ ಧಕ್ಕೆಯಾದುದಿದೆಯೇ? ಆದರೆ, ಧರ್ಮದ ವಿಷಯದಲ್ಲಿ ಸರಕಾರ ಕೈ ಹಾಕಬಾರದೆಂದು ಇವರ ಖಾಯಂ ಮುಕಾರು. ಸರಕಾರ ಪರಧರ್ಮೀಯವಿರಬಹುದು ; ಆದರೆ, ಕಾನೂನು ಮಂಡಳದಲ್ಲಿ ಬಹುಮತವಿರುವುದು ಪರದೇಶಿಗರದ್ದಲ್ಲವಲ್ಲಾ? ವಸ್ತುಸ್ಥಿತಿ ಹೀಗಿದೆ: ಬ್ರಿಟಿಶ್ ಸರಕಾರವು ಸತಿಯನ್ನು ನಿಷೇಧಿಸಿ, ವಿಧವಾ ವಿವಾಹವನ್ನು ಪುರಸ್ಕರಿಸಿ, ವಿವಾಹ ನೋಂದಣಿಯಂತಹ ಕೆಲ ಕಾಯ್ದೆಗಳನ್ನು ಮೊದಲಿಗೆ ತಂದರೂ, ಕ್ರಮೇಣ ಸಾಮಾಜಿಕ ಕ್ಷೇತ್ರದಲ್ಲಿ ಜನಪ್ರಗತಿಯ ದೃಷ್ಟಿಯಿಂದ ಇಷ್ಟ ಅನಿಸುವ ಕಾಯ್ದೆಗಳನ್ನು ರೂಪಿಸುವಲ್ಲಿ ಅನಾಸೆ ತೋರಿತು. ಇಷ್ಟೇ ಅಲ್ಲ, ಕಾನೂನು ಮಂಡಳದಲ್ಲಿ ಜನರಿಂದ ನಿಯುಕ್ತರಾದ ಸಭಾಸದರಿಗೆ ಅಗತ್ಯವಿದ್ದ ಸಾಮಾಜಿಕ ಕಾಯ್ದೆಗಳನ್ನೂ ಸರಕಾರವು ವಿರೋಧಿಸಿದ ಅನೇಕ ನಿದರ್ಶನಗಳನ್ನೂ ಕೊಡಬಹುದು. ಜನರಿಗೆ ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಕಾನೂನು ಬೇಕಿದ್ದರೂ, ಅದನ್ನು ನೀಡುವ ಅಧಿಕಾರ, ಕಾನೂನುಮಂಡಳಕ್ಕೆ ಇಲ್ಲವೆಂದು ಬೆರಳೆಣಿಕೆಯಷ್ಟು ಸನಾತನರು ಹೇಳಿದ್ದರೂ, ಹಾಗೆ ಅಲವತ್ತುಕೊಂಡು ಏನು ಪ್ರಯೋಜನ? ಸರಕಾರವು ಸ್ವರಾಜ್ಯದ ಹಕ್ಕನ್ನು ನೀಡುವಾಗ, ಹೀಗೆ ಶರತ್ತುಗಳನ್ನು ಹಾಕುವಂತಿಲ್ಲ. ಸನಾತನ ಬ್ರಾಹ್ಮಣರಿಗೆ ತಮ್ಮ ಸಾಮಾಜಿಕ ವರ್ಚಸ್ಸಿಗೆ ನೂರು ವರ್ಷ ತುಂಬಿತೆಂದು ಈಗ ತಿಳಿದಾಗಿದೆ. ಸಾಮಾಜಿಕ ಕ್ಷೇತ್ರದಲ್ಲಿ ಸ್ಮೃತಿ ಸಂಹಿತೆಯ ಆಧಾರವೆಂದು ತನ್ನ ಅವನತಿಯಾಗುವುದನ್ನು ಬಹುಜನ ಸಮಾಜವು ಒಪ್ಪಿಕೊಳ್ಳಲು ಸಿದ್ಧವಿಲ್ಲವೆಂದು ಅವರಿಗೆ ಖಂಡಿತವಿದೆ; ಮತ್ತು, ಮತಾಧಿಕಾರದಿಂದಾಗಿ ತಮ್ಮ ವರ್ಚಸ್ಸಿನ ಮೇಲೆ ಬ್ರಾಹ್ಮಣೇತರರು ಹಾಗೂ ಅಸ್ಪೃಶ್ಯರು ಕಾನೂನು ಬದ್ಧರಾಗಿ ತಮ್ಮ ಮೇಲೆ ಹಲ್ಲೆ ಮಾಡಬಹುದೆಂದು, ರಾಜ್ಯಸತ್ತೆಯು ಈ ವರ್ಗದವರ ಕೈ ಸೇರಬಹುದೆಂದು ಅವರಿಗೆ ಸಕಾರಣವಾಗಿ ಭೀತಿ ಹುಟ್ಟಿದೆ. ಆದರೆ ಈ ಕಲ್ಪಿತಕಥೆಯಿಂದ ರಕ್ಷಿಸಲು ಸೈಮನ್ ಕಮೀಶನ್‌ಗೂ ಸಾಧ್ಯವಿಲ್ಲ.

* * * *

# ೧೩. ಸರ್ ಜಾನ್ ಸೈಮನ್ ಮತ್ತು ಅಸ್ಪೃಶ್ಯ ವರ್ಗ

ಸನಾತನ ಬ್ರಾಹ್ಮಣರ ಪ್ರಾತಿನಿಧಿಕ ಮಂಡಳಿ, ಮೇಲೆ ಹೇಳಿದಂತೆ ಸೈಮನ್ ಕಮೀಶನ್ ಬಳಿಗೆ ಹೋದ ಬಗ್ಗೆ ಬ್ರಾಹ್ಮಣ ಪತ್ರಿಕೆಗಳು ಅಷ್ಟೇನೂ ಸುದ್ದಿ ಮಾಡಲಿಲ್ಲ. ಆದರೆ, ಉದಕಮಂಡಲದಲ್ಲಿ ಸೈಮನ್ ಸಾಹೇಬರಿಗೆ ಅಸ್ಪೃಶ್ಯ ವರ್ಗವು ಮಾನಪತ್ರ ಒಪ್ಪಿಸಿದಾಗ, ಅದಕ್ಕುತ್ತರಿಸುತ್ತಾ, ಅಸ್ಪೃಶ್ಯ ವರ್ಗದ ಪ್ರಶ್ನೆಯು ಮುಖ್ಯವಾಗಿ ಸಾಮಾಜಿಕ ಸ್ವರೂಪದ್ದಾಗಿದ್ದು, ರಾಜಕೀಯ ಸ್ವರೂಪದ್ದಲ್ಲವೆಂದು ಸೈಮನ್ ಸಾಹೇಬರು ಹೇಳಿದರೆಂದೂ, ಮತ್ತು ಹಾಗೆನ್ನುವ ಮೂಲಕ ರಾಜಕೀಯ ಕುರಿತಾದ ವಿಚಾರಕ್ಕಾಗಿ ನೇಮಿಸಲ್ಪಟ್ಟ ಕಮೀಶನ್, ಅಸ್ಪಶ್ಯತಾ ಸಂಬಂಧಿತ ವಿಚಾರದಲ್ಲಿ ಸಮಾಧಾನಕರವಾದ ಉತ್ತರ ನೀಡುವುದು ಶಕ್ಯವಲ್ಲವೆಂದರೆಂದೂ ಸಾರಿ, ಅಸ್ಪೃಶ್ಯ ವರ್ಗಕ್ಕೆ ಸೈಮನ್ ಕಮೀಶನ್‌ನ ಸಹಕಾರ ಸಿಗುವಂತೆ ಮಾಡುವ ಬದಲಿಗೆ ಹೀನೈಸುವ ಯತ್ನ ನಡೆದಿದೆ. ಸೈಮನ್ ಕಮೀಶನ್‌ನೊಂದಿಗೆ ಸಹಕರಿಸಿದರೆ, ತಮ್ಮ ಅಸ್ಪೃಶ್ಯತೆಯ ಪ್ರಶ್ನೆ ಬಗೆಹರಿದಂತೆ ಎಂದು ಅಸ್ಪೃಶ್ಯ ವರ್ಗ ಎಂದೂ ತಿಳಿದಿರಲಿಲ್ಲ. ಅಸ್ಪೃಶ್ಯ ವರ್ಗದ ಧುರೀಣರಿಗೆ ಇದು ಮೊದಲೇ ತಿಳಿದಿತ್ತು. ಸೈಮನ್ ಕಮೀಶನನ್ನು ಬಹಿಷ್ಕರಿಸುವ ಚಳವಳಿಯಲ್ಲಿ ಅಸ್ಪೃಶ್ಯ ವರ್ಗ ಯಾಕೆ ಸೇರಿಕೊಳ್ಳಲಿಲ್ಲ ಎಂಬುದು ಸ್ಪಷ್ಟವಿದೆ. ಅಸ್ಪೃಶ್ಯ ವರ್ಗದ ಪ್ರಶ್ನೆ, ಅದರ ಅಡ್ಡಿ, ಅಡಚಣೆ, ಆಪತ್ತುಗಳು ಇತರ ವರ್ಗಕ್ಕಿಂತ ತುಂಬ ಭಿನ್ನವಾಗಿದ್ದು, ಅದರ ನಿವಾರಣೆಗಾಗಿ ಜನರಿಂದ ಹೇಳಿ ಕೊಳ್ಳುವಂತಹ ಯಾವುದೇ ಯತ್ನಗಳಾಗಿಲ್ಲ. ಅಸ್ಪೃಶ್ಯತೆಯ ಪ್ರಶ್ನೆ ಸಾಮಾಜಿಕ ಸ್ವರೂಪದ್ದೇ ಇದ್ದರೂ, ಅದರ ಪರಿಹಾರಕ್ಕೆ ಒಂದಿಷ್ಟು ರಾಜಕೀಯ ಉಪಾಯದ ಉಪಯೋಗವೂ ಆಗಬಹುದಾಗಿದೆ. ಹಿಂದೀಯರಿಗೆ ಸ್ವರಾಜ್ಯದ ವಿಶೇಷ ಹಕ್ಕು ನೀಡುವ ಪ್ರಶ್ನೆ ಬ್ರಿಟಿಶ್ ಪಾರ್ಲಿಮೆಂಟ್‌ನೆದುರಿಗೆ ಬಂದಾಗ, ಅಸ್ಪೃಶ್ಯರ ಸಂಕಷ್ಟವನ್ನು ಗಮನಿಸಿ, ಅವರ ಪ್ರಗತಿ ಸುಗಮವಾಗಲೆಂಬ ದೃಷ್ಟಿಯಿಂದ ಸ್ವರಾಜ್ಯದ ಸಂವಿಧಾನ ರಚಿತವಾದೀತೆಂದೇ ಸೈಮನ್ ಕಮೀಶನ್ ಎದುರು ಮನವಿ ಸಲ್ಲಿಸುವುದು ಅಸ್ಪೃಶ್ಯವರ್ಗಕ್ಕೆ ಇಷ್ಟವೆನಿಸಿತು. ಮುಸಲ್ಮಾನರು, ಬ್ರಾಹ್ಮಣೇತರರು, ಜಮೀನ್ದಾರರೇ ಮೊದಲಾದವರು ಸೈಮನ್ ಕಮೀಶನ್‌ಗೆ ಬಹಿಷ್ಕಾರ ಹಾಕಲಿಲ್ಲ . ಅಷ್ಟೇ ಅಲ್ಲ, ಸನಾತನ ಬ್ರಾಹ್ಮಣರೂ ಕಮೀಶನ್‌ನೆದುರು ಸಾಷ್ಟಾಂಗ ನಮಸ್ಕಾರ ಹಾಕಿಯೇ ಬಿಟ್ಟರು. ಮತ್ತೆ ಅಸ್ಪೃಶ್ಯರೇಕೆ ಹಿಂದೆ ಉಳಿಯಬೇಕು? ಬಹಿಷ್ಕಾರ ಚಳವಳಿಯು ಮುಂದುವರಿದ ವರ್ಗದ್ದಾಗಿದ್ದು, ಆ ವರ್ಗದ ಮೇಲೆ ಇದುವರೆಗಿನ ಅನುಭವದಿಂದ ಬಹಿಷ್ಕತ ವರ್ಗಕ್ಕೆ ಯಾವುದೇ ವಿಶ್ವಾಸವಿಲ್ಲ. ಅಸ್ಪೃಶ್ಯ ವರ್ಗದ ಬೇಡಿಕೆಯನ್ನು, ಕಮೀಶನ್ ಈಗಲೇ ಮನ್ನಿಸಬೇಕೆಂದು ನಮ್ಮ ಅಪೇಕ್ಷೆಯೇನಲ್ಲ. ಸರ್ ಜಾನ್ ಸೈಮನ್ ಅವರು, ಉದಕಮಂಡಲದಲ್ಲಿ ಅಸ್ಪೃಶ್ಯರ ಮಾನಪತ್ರಕ್ಕಿ ಉತ್ತರ, ನಮ್ಮ ದೃಷ್ಟಿಯಿಂದಲೂ ಸಮಾಧಾನಕಾರಕವಲ್ಲ. ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರಗಳೊಳಗಣ ಸಂಬಂಧ ಸರ್ ಜಾನ್ ಸೈಮನ್ ಅವರ ಲಕ್ಷಕ್ಕೆ ಬರಲಿಲ್ಲವೆಂಬುದು ನಿಜವಾದರೂ ಅದರಿಂದ ಅಸ್ಪೃಶ್ಯರು ಕಮೀಶನನ್ನು ಬಹಿಷ್ಕರಿಸುವ ಚಳವಳಿಯಲ್ಲಿ

ಸೇರಿಕೊಳ್ಳಬಾರದೆಂದು ಹಂಗಿಸುವುದು ಜಾಣತನವಲ್ಲ. ಬದಲಿಗೆ, ಹೀಗೆ ಹಂಗಿಸುವ ಯತ್ನ ಮಾಡುವ ಜನರನ್ನು "ಹೀ ಲಾಸ್ಟ್ ಬೆಸ್ಟ್ ಹೂ ಲಾಫ್ಸ್ ಲಾಸ್ಟ್" ಎಂಬ ಆಂಗ್ಲ ನಾಣ್ಣುಡಿಯಿಂದ ನಾವು ಎಚ್ಚರಿಸುತ್ತೇವೆ.

## ೧೪. ಪುಣೆಯ ಮಿಶ್ರ ವಸಾಹತು

ಪುಣೆಯ ಮುನಿಸಿಪಾಲಿಟಿಯು, ಅಲ್ಲಿನ ನದಿದಡದಲ್ಲಿ ಸರಕಾರಿ ನೌಕರರ ವಸಾಹತಿಗೆಂದು ಮೂರು ಎಕ್ರೆ ಜಮೀನಿನಲ್ಲಿ ಎಲ್ಲ ಜಾತಿಗಳ ಎಂಬತ್ತು ಕುಟುಂಬಗಳ ಒಂದು ವಸಾಹತು ಸ್ಥಾಪಿಸಲು ನಿರ್ಧರಿಸಿದೆ. ಬ್ರಾಹ್ಮಣರೇ ಮುಂತಾದ ಜಾತಿಗಳ, ಹಾಗೇ ಅಸ್ಪೃಶ್ಯರೆಂದು ಗಣಿಸಲಾದ ಜಾತಿಗಳ ಕುಟುಂಬಗಳೂ ಇಲ್ಲಿರುವುವು. ಸ್ವಚ್ಛತೆಗೆ ಸಂಬಂಧಿಸಿದ ಜವಾಬ್ದಾರಿಯನ್ನು, ಅಲ್ಲಿಯ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ ವಹಿಸಿಕೊಂಡಿತಾದ್ದರಿಂದ, ಶೌಚಕೂಪಕ್ಕಾಗಿ ಮನೆಮನೆಯಲ್ಲಿ ಭಿನ್ನ ವ್ಯವಸ್ಥೆಮಾಡುವ ಬದಲಿಗೆ, ಸಾಮೂಹಿಕ ವ್ಯವಸ್ಥೆ ಮಾಡುವಂತಾಗಿದೆ. ಈ ಯೋಜನೆಯನ್ನು ಬಹಳಷ್ಟು ಸರಕಾರೀ ಅಧಿಕಾರಿಗಳೂ, ಶ್ರೀಮಂತರೂ ಮುನಿಸಿಪಾಲಿಟಿಯಲ್ಲಿ ಎಷ್ಟು ವಿರೋಧಿಸಿದರೂ, ಕೊನೆಗದು ಬಹುಮತದಿಂದ ಅಂಗೀಕರಿಸಲ್ಪಟ್ಟಿತು.ಮುನಿಸಿಪಾಲಿಟಿಯ ಚೀಫ್ ಆಫೀಸರ್ ಅವರು ಈ ಯೋಜನೆಯ ವಿಷಯದಲ್ಲಿ ಪ್ರಶಂಸನೀಯ ಉತ್ಸಾಹ ತೋರಿದ್ದಾರೆ. ಇದೊಂದು ಪ್ರಯೋಗವೆಂದು ಗಣಿಸಿ, ಈ ಯೋಜನೆಯ ಪುರಸ್ಕರ್ತರು ಮುಂದುವರಿದಿದ್ದಾರೆ, ಆದರೆ, ಈ ಯೋಜನೆ ಯಶಸ್ವಿಯಾಗಿಲ್ಲವೇಕೆಂದು ನಮಗೆ ತಿಳಿದಿಲ್ಲ.

ಅಸ್ಪಶ್ಯರಿಗೆ ಬೇರೆ ವಸಾಹತು ಸ್ಥಾಪಿಸುವುದರಿಂದ ಅಸ್ಪೃಶ್ಯತೆಯ ಪ್ರಶ್ನೆ ಬಗೆಹರಿವಂತಿಲ್ಲ. ಅಸ್ಪೃಶ್ಯತೆಯನ್ನು ಅಳಿಸಿ ಹಾಕಲು ಸಾಮಾಜಿಕ ಸಂವಹನವೇ ಹೆಚ್ಚು ಉಪಯುಕ್ತ. ಇತರ ಜನರ ವಸತಿಯಲ್ಲಿ ವಾಸಿಸುವಂತಾದರೆ, ಅಸ್ಪೃಶ್ಯರ ಜೀವನಕ್ರಮ ಸುಧಾರಿಸುವಲ್ಲಿ ಸಹಾಯಕವಾಗ ಬಹುದು; ಹಾಗೂ ಪ್ರತ್ಯಕ್ಷ ಸಹವಾಸದಿಂದ ಸಾಕಷ್ಟು ತಪ್ಪು ತಿಳುವಳಿಕೆಗಳು ದೂರವಾಗುವುವು. ಇತರ ಸಮಾಜದಿಂದ ದೂರೀಕರಿಸಲ್ಪಟ್ಟಿದ್ದರಿಂದಲೇ ಬಹಿಷ್ಕೃತರ ಜೀವನಕ್ರಮ ಕೆಟ್ಟದಾಗಿದೆ. ಅಲ್ಲದೆ ಒಂದೇ ಸ್ಥಳದಲ್ಲಿ ಭಿನ್ನಜಾತಿಯ ಮಕ್ಕಳು ಕುಳಿತು, ಎದ್ದು, ಆಡಿ, ಮುಂದುವರಿಯುತ್ತಿದ್ದರೆ, ಇಂದಿರುವ ಭಿನ್ನ ಜಾತಿಗಳ ಮಧ್ಯೆ ದೂರ ಭಾವ ಕಂಡು ಬರದು. ಚೀಫ್ ಆಫೀಸರ್ ಮತ್ತು ಯೋಜನೆಯನ್ನು ಬೆಂಬಲಿಸುವ ಮುನ್ಸಿಪಾಲಿಟಿಯ ಸಭಾಸದರಿಗೆ, ಈ ಪ್ರತ್ಯಕ್ಷ ಸುಧಾರಣೋಪಾಯದ ಯೋಜನೆ ಬಗ್ಗೆ ನಾವು ಮನಃಪೂರ್ವಕ ಧನ್ಯವಾದ ಸಲ್ಲಿಸುತ್ತೇವೆ.

* * * *

## ೧೫. ಹಿಂದೂ ಧರ್ಮ ಮತ್ತು ಅಸ್ಪೃಶ್ಯತೆ

ಒಂದು ಮಹತ್ವದ ಬಹಿರಂಗ ಸಭೆಯಲ್ಲಿ ಭಾಷಣ ಮಾಡುತ್ತಾ, ಮಹಾತ್ಮಾ ಗಾಂಧೀಜಿ ಇಂತೆಂದರು, "ಜಗತ್ತಿನ ಎಲ್ಲ ಧರ್ಮಗಳು ಇಂದು ತೊಡಗಿರುವ ಜೀವನದ ಓಟದಲ್ಲಿ, ಒಂದೋ ಹಿಂದೂ ಧರ್ಮವು ಅಳಿಯಬೇಕು, ಇಲ್ಲವೇ, ಅಸ್ಪೃಶ್ಯತೆಯ ಸಂಪೂರ್ಣ ನಿರ್ಮೂಲನ ಆಗಬೇಕು. ಹಾಗಾದರೆ ಮಾತ್ರ, ಅದ್ವೈತ ಹಿಂದೂ ಧರ್ಮದ ಮೂಲಭೂತ ತತ್ವವು ನಿಜಜೀವನದಲ್ಲಿ ಸಾಕಾರಗೊಳ್ಳುವುದು." ಮಹಾತ್ಮಾಜೀ ಅವರ ಈ ಮತವು ಎಷ್ಟು ಜನ ಹಿಂದೂಗಳಿಗೆ ಪಥ್ಯವಾದೀತು? ಈವರೆಗೆ ಅವರು ಅಸ್ಪೃಶ್ಯತೆಯನ್ನು ನಿಷೇಧಿಸುತ್ತಾ ಬಂದಿದ್ದಾರೆ, ಆದರೆ ಈ ನಿಟ್ಟಿನಲ್ಲಿ ಅವರ ಚಳವಳಿಯು ಹೆಚ್ಚು ಕಡಿಮೆ ಅರಣ್ಯರೋದನವೇ ಆಗಿದೆ. ಮಹಾತ್ಮಾ ಗಾಂಧೀಜಿಯವರ ಉಪದೇಶದಂತೆ ಈಗ ಅಲ್ಲಲ್ಲಿ ವಿದೇಶೀ ವಸ್ತಗಳನ್ನು ದಹಿಸಲಾಗುತ್ತಿದೆ. ಈ ಪವಿತ್ರ ಕೆಲಸ ಮಾಡುವ ಎಷ್ಟು ಮಂದಿ ದೇಶಭಕ್ತರು, ಅಸ್ಪೃಶ್ಯತೆಯ ಹೋಳಿ ಮಾಡಲು ಸಿದ್ಧರಿರುವರು? ಅದ್ವೈತ ವಾದದ ಶಂಖನಾದವು ದೇವಳಗಳಲ್ಲೂ, ಮನೆಮನೆಗಳಲ್ಲೂ ಕೇಳಿ ಬರುತ್ತಿದೆ, ಆದರೆ ಪುರಾಣದ ಮಾತು ಪುರಾಣದಲ್ಲಿ ವ್ಯವಹಾರದಲ್ಲಿ ಅದ್ವೈತ ವೇದಾಂತದ ಸುಳುಹೂ ಇಲ್ಲ, ಬದಲಿಗೆ ಎಲ್ಲೆಂದರಲ್ಲಿ ದ್ವೈತವೇ ವಿಜೃಂಭಿಸುತ್ತಿದೆ.

* * * *

# ೬. ಗಿರಣಿಯ ಮಾಲೀಕರು ಮತ್ತು ಕಾರ್ಮಿಕರು

ಕಳೆದ ವರ್ಷ ಮುಂಬಯಿಯ ಗಿರಣಿಗಳ ಮಾಲೀಕರು ಮತ್ತು ನೌಕರರ ಮಧ್ಯೆ ಕಲಹವಿದ್ದು, ಎಲ್ಲ ಗಿರಣಿಗಳಲ್ಲೂ ಕಾರ್ಮಿಕರು ಮುಷ್ಕರ ಹೂಡಿದರು. ಈ ಮುಷ್ಕರ ಆರು ತಿಂಗಳು ನಡೆಯಿತು. ಕೊನೆಗೆ ಮುಂಬಯಿ ಸರಕಾರದ ಜನರಲ್ ಮೆಂಬರ್, ಸರ್ ಗುಲಾಮ್ ಹುಸೇನ್ ಹಿದಾಯತುಲ್ಲಾ ಅವರ ಮಧ್ಯಸ್ಥಿಕೆಯಲ್ಲಿ ತಾತ್ಕಾಲಿಕ ಒಪ್ಪಂದ ನಡೆದು ಮುಷ್ಕರ ಕೊನೆಗೊಳ್ಳುವಂತಾಯ್ತು. ಮಾಲೀಕ ಹಾಗೂ ಕಾರ್ಮಿಕರ ನಡುವಿನ ಕಲಹದ ವಿಚಾರಣೆಗಾಗಿ ಸರಕಾರವು ಸಮಿತಿಯೊಂದನ್ನು ನೇಮಿಸ ಬೇಕೆಂದು ಈ ಒಪ್ಪಂದದ ಷರತ್ತುಗಳಲ್ಲಿ ಒಂದಾಗಿತ್ತು. ಅಂತೆಯೇ ಸರಕಾರವು ಮುಂಬಯಿ ಹೈಕೋರ್ಟ್‌ನ ನ್ಯಾಯಾಧೀಶರಾಗಿದ್ದ ಸರ್ ಚಾರ್ಲ್ಸ್ ಫಾಸೆಟ್, ನಿವೃತ್ತ ಐಸಿಎಸ್ ಅಧಿಕಾರಿ, ಶ್ರೀ ಎಮ್.ಪಿ.ಖಾರೇಗಾಟ್ ಮತ್ತು ಸಭಾಸದ ಶ್ರೀ ಬಾಲಕೃಷ್ಣ ಸೀತಾರಾಮ ಕಾಮತ್ ಈ ತ್ರಿಸದಸ್ಯ ಸಮಿತಿ ಒಂದನ್ನು ನೇಮಿಸಿತು. ಈ ಸಮಿತಿಯು ಎರಡೂ ಕಡೆಯ ಹೇಳಿಕೆ ಮತ್ತು ಪುರಾವೆಗಳನ್ನು ಕೇಳಿಕೊಂಡು ವಾದಕ್ಕೆ ಸಂಬಂಧಿಸಿದ ವಿಭಿನ್ನ ಮುದ್ದೆಗಳನ್ನು ಚರ್ಚಿಸಿತು. ಆ ಚರ್ಚೆಯ ವರದಿ ಕಳೆದ ಶನಿವಾರ ಪ್ರಸಿದ್ಧಿಗೆ ಬಂದಿದೆ. ಸಮಿತಿಯು ಸಾಕಷ್ಟು ವಿಷಯಗಳನ್ನು ಸೂಕ್ಷ್ಮವಾಗಿ ಪರಾಂಬರಿಸಿ, ಎಲ್ಲ ಸಾಧ್ಯತೆಗಳನ್ನೂ ಲಕ್ಷಿಸಿ, ನಿಷ್ಪಕ್ಷಪಾತತನದಿಂದ ಅಭಿಪ್ರಾಯ ನೀಡುವ ಯತ್ನ ಮಾಡಿದ್ದಾರೆ. ಹಾಗೆಯೇ, ನಿರ್ಣಯ ನೀಡುವಾಗ ಎರಡೂ ಪಕ್ಷಗಳನ್ನು ಸಾವರಿಸಿಕೊಂಡು, ಎರಡೂ ಪಕ್ಷಗಳ ಹೇಳಿಕೆಯನ್ನು ಕಿತ್ತು ಹಾಕುವ ಯತ್ನ ನಡೆದುದರಿಂದ, ಹಲವು ವಿಷಯಗಳಲ್ಲಿ ಸಮಿತಿಯ ತೀರ್ಪು ಗೋಜಲಾಗಿದೆ. ಸಮಿತಿಯ ನಿರ್ಣಯದಿಂದ ಎರಡೂ ಪಕ್ಷಗಳಿಗೆ ಪೂರ್ಣ ಸಮಾಧಾನ ಆಗುವುದು ಶಕ್ಯವಿಲ್ಲ. ಹಾಗೆಯೇ, ಎರಡೂ ಪಕ್ಷಗಳು ಪೂರ್ಣ ಅಸಂತೋಷವನ್ನೂ ತೋರುವಂತಿಲ್ಲ. ಕಾರ್ಮಿಕರ ಪಕ್ಷದ ಅನೇಕ ವಿಷಯಗಳನ್ನು ಸಮಿತಿಯು ಒಪ್ಪಿಕೊಂಡರೂ, ಮತ್ತೆ ಹಲವು ವಿಷಯಗಳಲ್ಲಿ ಕಾರ್ಮಿಕರ ವಿರುದ್ಧ ತೀರ್ಪು ನೀಡಿದೆ. ಸಮಿತಿಯ ವರದಿಯನ್ನು ನಾವು ಸವಿಸ್ತಾರವಾಗಿ ಪರೀಕ್ಷಿಸಲು ಹೋಗುವುದಿಲ್ಲ. ಮುಂಬಯಿಯ ಗಿರಣಿ ಕಾರ್ಮಿಕರಲ್ಲಿ ಬಹಿಷ್ಕೃತ ವರ್ಗದ ಸಾವಿರಾರು ಸ್ತ್ರೀಪುರುಷರು ಇರುವ ಕಾರಣ ಈ ವಿಷಯದಲ್ಲಿ ಬಹಿಷ್ಕೃತ ವರ್ಗಕ್ಕೆ ನಿಕಟ ಸಂಬಂಧವಿದೆ. ಆ ಅರ್ಥದಲ್ಲಿ ವರದಿಯ ಬಗ್ಗೆ ಇಲ್ಲಿ ಸ್ವಲ್ಪವಾದರೂ ವಿಚಾರ ಮಾಡುವುದು ಅವಶ್ಯ. ಬಹಿಷ್ಕೃತ ವರ್ಗಕ್ಕೆ ಅತ್ಯಂತ ಕಳಕಳಿಯ ಪ್ರಶ್ನೆಯೆಂದರೆ ನೇಯ್ದೆ ವಿಭಾಗದಲ್ಲಿ ಮಗ್ಗದಲ್ಲಿ ಕೆಲಸ ಮಾಡುವ ಅವಕಾಶ ತಮಗೆ ಸಿಗಬೇಕೆಂಬುದೇ ಆಗಿತ್ತು. ಕಾರ್ಮಿಕರ ಮುಷ್ಕರ ಸಮಿತಿಯ ಹದಿನೇಳು ಬೇಡಿಕೆಗಳಲ್ಲಿ ಇದೂ ಒಂದಾಗಿತ್ತು. ಈ ಬೇಡಿಕೆಯನ್ನು ಮಾಲೀಕರು ವಿರೋಧಿಸಿಲ್ಲ ಮತ್ತು ಅಸ್ಪೃಶ್ಯ ವರ್ಗದ ಜನರು ನೇಯ್ಗೆ ವಿಭಾಗದಲ್ಲಿ ಕೆಲಸ ಮಾಡುವುದಕ್ಕೆ ಯಾರದಾದರೂ ವಿರೋಧವಿದ್ದರೆ, ಅದು ಮರಾಠರೇ ಮುಂತಾದ ಕಾರ್ಮಿಕರಿಂದಲೇ ಇರಬಹುದು, ನಮ್ಮ ಕಡೆಯಿಂದ ಏನೂ ಆಕ್ಷೇಪವಿಲ್ಲ, ಎಂದು ಮಾಲೀಕರ ಅಂಬೋಣ. ಸರಿಯಾಗಿ ನೋಡಿದರೆ ಇದರಲ್ಲಿ ಮಾಲೀಕರ ಪ್ರಶ್ನೆಯೇ ಇಲ್ಲ. ಬಟ್ಟೆ ನೇಯುವ ಕೆಲಸ ಸ್ಪಶ್ಯರು ಮಾಡಿದರೇನು, ಅಸ್ಪಶ್ಯರು ಮಾಡಿದರೇನು, ಇದರಿಂದ

ಮಾಲೀಕರಿಗಾಗುವುದೇನೂ ಇಲ್ಲ; ಅವರ ಸರಕು ಹೊರಬಿದ್ದು ಅವರಿಗೆ ಲಾಭವಾದರೆ ಆಯ್ತಷ್ಟೆ. ಬಹಿಷ್ಕೃತ ವರ್ಗದ ಜನರೊಟ್ಟಿಗೆ ನಾವು ನೇಯ್ಗೆ ವಿಭಾಗದಲ್ಲಿ ಕೆಲಸ ಮಾಡುವಂತಿಲ್ಲವೆಂದು ನೇಯ್ಗೆ ವಿಭಾಗದ ಕಾರ್ಮಿಕರು ಹೇಳಿದರೆ, ಮಾಲೀಕರು ಏನು ಮಾಡಿಯಾರು? ನೂಲುವದೇ ಮುಂತಾದ ಇತರ ವಿಭಾಗಗಳಲ್ಲಿ ಅಸ್ಪೃಶ್ಯರು ಕೆಲಸ ಮಾಡಬಹುದು, ಆದರೆ, ವೇತನ ಹೆಚ್ಚು ಸಿಗುವ ನೇಯ್ ವಿಭಾಗದಲ್ಲಿ ಮಾತ್ರ ಅಸ್ಪಶ್ಯರಿಗೆ ಪ್ರವೇಶವಿಲ್ಲ . ನೇಯ್ಗೆ ವಿಭಾಗದಲ್ಲಿ ಮಹಾರ್, ಚಾಂಭಾರ್ ಮುಂತಾದವರು ಕೆಲಸ ಮಾಡತೊಡಗಿದರೆ ಮರಾಠಾ ಜನರ ಜಾತಿ ಕೆಡುತ್ತದೆ. ಅಲ್ಲಿ ನೂಲನ್ನು ಬಾಯಲ್ಲಿಟ್ಟುಕೊಳ್ಳಬೇಕಾಗುತ್ತದೆಂದೇ ಈ ಗಲಭೆ, ಅಲ್ಲಿ ಕೆಲಸ ಮಾಡುವ ಮುಸಲ್ಮಾನರಿಂದ ಈ ಮರಾಠರ ಜಾತಿ ಕೆಡುವುದಿಲ್ಲ. ಮುಸಲ್ಮಾನರ ಎಂಜಲು ಪವಿತ್ರ, ಅಸ್ಪೃಶ್ಯರದು ಮಾತ್ರ ಅಪವಿತ್ರವೇ? ಸಮಿತಿಯು ಈ ವಿಷಯದಲ್ಲಿ ತೀರ್ಪು ಕೊಟ್ಟ ಕೊಡದಂತಿದೆ. ಮುಷ್ಕರ ಸಮಿತಿಯ ಬೇಡಿಕೆಯನ್ನು ಮಾಲೀಕರು ಮನ್ನಿಸಿದ್ದಾರೆ. ಈ ಮೊದಲೂ ಅವರಿಂದ ಆಕ್ಷೇಪವೇನೂ ಇರಲಿಲ್ಲ. ಈ ಬೇಡಿಕೆಯನ್ನು ಜಾರಿಗೆ ತರುವುದು ಸ್ವತಃ ಕಾರ್ಮಿಕರ ಕೈಯಲ್ಲೇ ಇದೆ.ಮುಂಬಯಿ ಗಿರಣಿ ನೌಕರರ ಸಂಘವು, ಈ ವಿಷಯದಲ್ಲಿ ಸಮಿತಿಯ ವರದಿಯನ್ನು ಬಹಿರಂಗ ಪಡಿಸುವ ಮೊದಲು ಅಸ್ಪೃಶ್ಯ ಕಾರ್ಮಿಕರ ಕಡೆಯಿಂದ ಆ ಪ್ರಯತ್ನಕ್ಕೆ ತೊಡಗಿದೆ. ಪ್ರತಿಯೊಂದು ಗಿರಣಿಯ ಮಾಲಿಕರೂ ಅಸ್ಪೃಶ್ಯರನ್ನು ನೇಯ್ಗೆ ವಿಭಾಗಕ್ಕೆ ಸೇರಿಸಿಕೊಳ್ಳಲು ಒಪ್ಪಿದ್ದಾರೆ. ಎಲ್ಲ ಗಿರಣಿಗಳಲ್ಲೂ ನೇಯ್ಗೆ ವಿಭಾಗವು ಅಸ್ಪೃಶ್ಯರಿಗೆ ತೆರೆದುಕೊಳ್ಳುವುದು ಅವಶ್ಯವೆಂಬುದನ್ನು ಮರೆಯಬಾರದು.

ಬಹಿಷ್ಕತ ವರ್ಗದ ಜನರು ಅದಕ್ಕಾಗಿ ಪ್ರಬಲವಾಗಿಯೇ ಚಳವಳಿ ನಡೆಸಬೇಕು ಮತ್ತು ಮರಾಠರೇ ಮುಂತಾದ ಕಾರ್ಮಿಕರು ಅಡ್ಡ ಬರತೊಡಗಿದರೆ, ಚೆನ್ನಾಗಿಯೇ ಪ್ರತೀಕಾರ ಗೈಯಬೇಕು. ಕೆಂಪು ಬಾವುಟದವರೆಂದು ಕರೆಯಲ್ಪಡುವ ಗಿರಣಿ ಕಾರ್ಮಿಕ ಯೂನಿಯನ್ ಈ ವಿಷಯದಲ್ಲಿ ಇದುವರೆಗೆ ಮುಗ್ಧವಾಗಿದೆ. ಅದರ ಧುರೀಣರು, ಇದುವರೆಗೆ ತಮ್ಮ ಅನುಯಾಯಿಗಳಿಗೆ ಈ ಕುರಿತು ತಕ್ಕ ಶಿಕ್ಷಣ ನೀಡುವ ಇಚ್ಛೆಯನ್ನು ತೋರ್ಪಡಿಸಿಲ್ಲ. ಆದರೆ, ಬಹಿಷ್ಕತ ವರ್ಗದ ಗಿರಣಿ ಕಾರ್ಮಿಕರು ಒಂದಾಗಿ ಸೇರಿ ಸ್ವಂತ ಹಕ್ಕುಗಳಿಗಾಗಿ ಬಲವಾಗಿ ಹೋರಾಡುವ ತಯಾರಿ ತೋರಿದರೆ, ವಿರೋಧ ಪಕ್ಷವು ಸ್ವಲ್ಪ ಮೆತ್ತಗಾಗಬಹುದೆಂದು ನಮಗನಿಸುತ್ತದೆ. ಅಷ್ಟಲ್ಲದೆ, ಬಹಿಷ್ಕೃತ ವರ್ಗದ ಪ್ರಗತಿಪರ, ಕಾರ್ಮಿಕರು ಮುಂದೆ ಬಂದು, ನೇಯ್ಗೆಯ ಕೆಲಸ ಕಲಿವ ಇಚ್ಛೆ ತೋರಬೇಕು. ಆ ತೆರನಾಗಿ, ಯುವ ಪ್ರಗತಿಪರ ಮಂಡಲಿ, ತಮ್ಮ ಹೆಸರನ್ನು

ತಮ್ಮಲ್ಲೇ ಅಂದರೆ, ದಾಮೋದರ್ ಹಾಲ್‌ನಲ್ಲೇ ಗಿರಣಿ ಕಾರ್ಮಿಕರ ಸಂಘದಲ್ಲಿ ನೋಂದಾಯಿಸಿದರೆ, ನೇಯ್ಗೆಯ ಕೆಲಸವನ್ನು ಅವರಿಗೆ ಕಲಿಸುವ ವ್ಯವಸ್ಥೆಯನ್ನೂ ಮಾಡಲಾಗುವುದು. ನೇಯ್ದೆಯವರ ವೇತನದಲ್ಲಿ ಕಡಿತ ಮಾಡುವ ಫಾಸೆಟ್ ಕಮಿಟಿಯ ಮಾಲೀಕರ ಯೋಜನೆಗೆ ಸಮ್ಮತಿ ನೀಡುವುದೋ ಏನೆಂದು ತಿಳಿಯಲು, ಗಿರಣಿ ಕಾರ್ಮಿಕರ ಸಮಿತಿಯ ವರದಿಯತ್ತ ಕಣ್ಣಿಡಲಾಗಿದೆ. ವೇತನವನ್ನು ನಿಗದೀಕರಿಸುವ ಯೋಜನೆಯನ್ನು ಸಮಿತಿಯು ಅಂಗೀಕರಿಸಿದೆ ಮತ್ತು ಗಿರಣಿಯ ಉದ್ಯಮದಲ್ಲಿ ಈಗ ಸದ್ಯ ಜನ ಇರುವುದರಿಂದ, ಮತ್ತು ಇರುವವರು ಅಷ್ಟೇ ಬೇಗನೇ ಇಲ್ಲವಾಗುವುದರಿಂದ ನೇಕಾರರ ವೇತನವನ್ನು ಶೇಕಡಾ ಎಂಟರಷ್ಟು ಕಡಿತ ಮಾಡುವುದರಿಂದ ತಪ್ಪೇನೂ ಇಲ್ಲವೆಂದು ಅಭಿಪ್ರಾಯಿಸಿದ್ದಾರೆ. ಆದರೂ, ಮಾಲಿಕರು ಸ್ವಂತದ ಲಾಭವನ್ನು ಗಮನದಲ್ಲಿರಿಸಿ, ನೇಕಾರರ ವೇತನವನ್ನು ಕಡಿತಗೊಳಿಸುವ ಕಲ್ಪನೆಯನ್ನು ಜಾರಿಗೆ ತರುವುದು ಬೇಡ, ಕಾರಣ, ಶೇಕಡಾ ಎಂಟು ವೇತನ ಕಡಿತಗೊಳಿಸಿ



ಮಜೂರಿಯಲ್ಲಾಗುವ ಉಳಿತದ ಲಾಭದ ಬದಲಿಗೆ, ಯೋಗ್ಯವಾದ ನಿಗದಿತ ವೇತನದ ಯೋಜನೆ ಜಾರಿಗೆ ತರಲು ಕಾರ್ಮಿಕರ ಮುಂದಾಳುಗಳ ಸಹಾಯ ದೊರಕಿದರೆ, ಲಾಭವಾಗುವುದೆಂದು ಸಮಿತಿಯು ಸ್ವತಃ ಹೇಳಿದೆ. ಅದಿಲ್ಲದೆ, ಅಕ್ಟೋಬರ್‌ವರೆಗೆ ಈ ಯೋಜನೆ ಜಾರಿಗೆ ಬರುವಂತಿಲ್ಲವೆಂದು ಪ್ರಸಿದ್ಧವಾಗಿದೆ.

ಒಂದೆಡೆಯಲ್ಲಿ, ವೇತನದ ಒಂದಂಶ ಕಡಿತಗೊಳ್ಳುವ ಪ್ರಸಂಗ ಶೀಘ್ರವೇ ಇಲ್ಲವಾದಂತೆನ್ನಲು ಅಡ್ಡಿಯಿಲ್ಲ. ಮಾಲೀಕರು ರೂಪಿಸಿದ ವೇತನ ನಿಗದೀಕರಿಸುವ ಯೋಜನೆಯನ್ವಯ ನೂಲುವ ವಿಭಾಗದ ಜನರ ಸಂಖ್ಯೆ ಸದ್ಯ ಸ್ವಲ್ಪ ಕಡಿಮೆಯಾಗಲಿದೆ. ಆದರೆ, ಈ ಖಾತೆಯಲ್ಲಿ ಈಗ ತುಂಬ ಅಲ್ಪವಿರುವ ವೇತನ ಸ್ವಲ್ಪ ಹೆಚ್ಚಾಗಲಿದೆ. ನೇಕಾರರ ವೇತನ ಕಡಿತಗೊಳ್ಳುವ ಪ್ರಸಂಗ ಇಲ್ಲವಾದುದು ,ಬಹಿಷ್ಕೃತ ವರ್ಗದಲ್ಲಿ ಗಿರಣಿ ಕಾರ್ಮಿಕರ ದೃಷ್ಟಿಯಿಂದ ಸಮಾಧಾನಕರ ಎಂದೇ ಅಂದುಕೊಳ್ಳಬೇಕು. ಕಾರಣ, ನೇಕಾರರ ವೇತನದಲ್ಲಿ ಕಡಿತ ಮಾಡಿದ್ದರೆ, ಅವರು ಮುಷ್ಕರದ ಕರೆ ನೀಡುತ್ತಿದ್ದರು, ಮತ್ತು ಎಲ್ಲ ಗಿರಣಿಗಳ ನೇಯ್ಗೆ ವಿಭಾಗ ಮುಚ್ಚಿಕೊಂಡು, ನೂಲಿನ ವಿಭಾಗವೂ ತನ್ನಿಂತಾನೇ ಮುಚ್ಚಲ್ಪಡುತ್ತಿತ್ತು. ಪರಿಣಾಮ, ಬಹಿಷ್ಕತ ವರ್ಗದ ಜನರು ಉಪವಾಸ ಬೀಳುವ-ಪ್ರಸಂಗ ಬರುತ್ತಿತ್ತು. ಮೊದಲೇ -ಕಳೆದ

ಹನ್ನೆರಡು ತಿಂಗಳುಗಳಲ್ಲಿ ಆರು ತಿಂಗಳ ದೊಡ್ಡ ಮುಷ್ಕರ ಮತ್ತು ನಂತರ ವಿಭಿನ್ನ ಗಿರಣಿಗಳಲ್ಲಿ ನಡೆದ ಚಿಕ್ಕಪುಟ್ಟ ಮುಷ್ಕರಗಳಿಂದಾಗಿ ತಿಂಗಳುಗಟ್ಟಳೆ ರಜೆಯಾಗಿ ಬಹಿಷ್ಕೃತ ವರ್ಗದ ಕಾರ್ಮಿಕರು ದುಃಸ್ಥಿತಿಯಲ್ಲಿದ್ದು, ಅವರ ತಲೆಯ ಮೇಲೆ ಸಾಲದ ಹೊರೆಯೇ ಬಿದ್ದಿದೆ. ಮೊದಲೇ ಅಲ್ಪ ಸಂಬಳ, ಅದರಲ್ಲೂ ಮತ್ತೆ ಮತ್ತೆ ಮುಷ್ಕರದಿಂದಾಗಿ ಇಂತಹ ಸ್ಥಿತಿಯೊದಗುವುದು ಸ್ವಾಭಾವಿಕವೇ ಆಗಿದೆ. ಮತ್ತಿನ್ನು ಈ ವೇಳೆ, ಗಿರಣಿಗಳ ಸಾರ್ವತ್ರಿಕ ಮುಷ್ಕರದ ಹೊಡೆತ ಬಿದ್ದಿದ್ದರೆ, ಮತ್ತೆ ಈ ಬಹಿಷ್ಕತ ವರ್ಗದ ಕಾರ್ಮಿಕರ ಸಂಕಷ್ಟಗಳಿಗೆ ಸೀಮೆಯೇ ಇರುತ್ತಿರಲಿಲ್ಲ. ಹಾಗೆಂದೇ, ನೇಕಾರರ ವೇತನಕ್ಕೆ ಶೀಘ್ರದಲ್ಲೇನೂ ಕತ್ತರಿ ಬೀಳುತ್ತಿಲ್ಲ ಎಂಬುದು, ಬಹಿಷ್ಕೃತ ವರ್ಗದ ಕಾರ್ಮಿಕರ ದೃಷ್ಟಿಯಿಂದ ಸಮಾಧಾನಕರವೇ ಆಗಿದೆ. ಹಾಗೆಯೇ -ಅಷ್ಟಕ್ಕೇ ಅಜಾಗರೂಕರಾಗಿರದೆ, ಬಹಿಷ್ಕತ ವರ್ಗದ ಗಿರಣಿ ಕಾರ್ಮಿಕರು, ಗಿರಣಿ ಕಾರ್ಮಿಕ ಸಂಘದ ಸದಸ್ಯರಾಗಿ ತಮ್ಮ ಸಂಘಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು, ಮತ್ತು ಇದುವರಗೆ ತಮಗಾದ ತೊಂದರೆ, ಅನುಭವಿಸಿದ ದುಃಖವನ್ನು ಪರಿಹರಿಸಿಕೊಳ್ಳಬೇಕು.

* * * *

## ೧೭. ಹಿಂದೂ ಮಹಾಸಭೆ ಮತ್ತು ಅಸ್ಪೃಶ್ಯತೆ

ಈಗ ಕೆಲವೇ ದಿನಗಳ ಹಿಂದೆ ಸೂರತ್‌ನಲ್ಲಿ ಹಿಂದೂಮಹಾಸಭೆಯ ಅಧಿವೇಶನ ನಡೆಯಿತು, ಮತ್ತೆ ಅದಕ್ಕೆ ಸಮನಾಗಿ ರಾಷ್ಟ್ರೀಯ ಸಭೆಯ ಕೂಟದ ನಿಮಿತ್ತ ಸಾಮಾಜಿಕ ಸಭೆಗಳಂತಹ ಶುದ್ಧ ಸಭೆಗಳು, ಅಸ್ಪಶ್ಯತಾ ನಿವಾರಕ ಸಭೆಗಳು ನಡೆದುವು. ಸೂರತ್‌ನಲ್ಲಿ ನಡೆದ ಹಿಂದೂ ಮುಸಲ್ಮಾನರ ದಂಗೆಗೆ ಸಂಬಂಧಿತ ಖಟ್ಲೆ ಈಗಲೂ ನಡೆದಿರುವ ಕಾರಣ, ಸೂರತ್‌ನ ಹಿಂದೂ ಸಮಾಜದಲ್ಲಿ ಹಿಂದೂ ಮಹಾಸಭೆಯ ಬಗ್ಗೆ ವಿಶೇಷ ಉತ್ಸಾಹ ಇರುವುದು, ಮತ್ತು, ಆ ಕಾರಣದಿಂದಲೇ ಈ ವರ್ಷದ ಅಧಿವೇಶನ ಅಲ್ಲಿ ನಡೆಯುವುದು ಸ್ವಾಭಾವಿಕವಾಗಿದೆ. ಅಲ್ಲಿನ ಹಿಂದೂ ಮಹಾಸಭೆಯ ಶಾಖೆಯ ಓರ್ವ ಪ್ರಮುಖ ಕಾರ್ಯಕರ್ತ ಡಾ. ರಾಮ್‌ಜೀ ಅವರ ಹೆಸರು ಅಲ್ಲಿನ ಹಿಂದೂ ಮುಸಲ್ಮಾನ ದಂಗೆಗೆ ಸಂಬಂಧಿತ ಖಟ್ಲೆಯಲ್ಲಿ ಈಗ ತುಂಬ ಪ್ರಸಿದ್ಧಿಗೆ ಬಂದಿದೆ. ಅವರೇ ಸ್ವಾಗತ ಮಂಡಳಿಯ ಪ್ರಮುಖರೂ ಆಗಿದ್ದರು. ಮಹಾಸಭೆಯ ಅಧ್ಯಕ್ಷಸ್ಥಾನಕ್ಕೆ ಕಲ್ಕತ್ತೆಯ "ಮಾಡರ್ನ್ ರಿವ್ಯೂ' ಪತ್ರಿಕೆಯ ಸ್ಥಾಪಕ ಹಾಗೂ ಸಂಪಾದಕ ಶ್ರೀ ರಾಮಾನಂದ ಚಟರ್ಜಿ ಅವರನ್ನು ಯೋಜಿಸಲಾಗಿತ್ತು. ಶ್ರೀ ಚಟರ್ಜಿ ಅವರು ಒಬ್ಬ ಪ್ರಸಿದ್ಧ ಲೇಖಕರಾಗಿದ್ದು, ಸ್ವತಂತ್ರ ವಿಚಾರ ಹಾಗೂ - ಸ್ಪಷ್ಟವಾದಿತ್ವಕ್ಕೆ ಖ್ಯಾತರಾಗಿದ್ದರು. ಬ್ರಹ್ಮಸಮಾಜದ ಅನುಯಾಯಿಯಾದ ಅವರ ವಿಚಾರಗಳು ಮೊದಲಿನಿಂದಲೂ ಕಷ್ಟಸಾಧ್ಯವೆನ್ನುವಷ್ಟು ಕಟ್ಟಾ ಸುಧಾರಣಾವಾದಿಯಾದವರು, ಅವರು. ಇಂತಹವರು ಹಿಂದೂ ಮಹಾಸಭೆಯ ಅಧ್ಯಕ್ಷಸ್ಥಾನಕ್ಕೆ ಆಯ್ಕೆಯಾದುದು ಆಶ್ಚರ್ಯವೇ, ಅಪೇಕ್ಷಿಸಿದಂತೆ ಅವರ ಭಾಷಣ ಸ್ಪಷ್ಟವೂ,

ನಿರ್ಭಿಡೆಯಿಂದ ಕೂಡಿದುದೂ ಆಗಿತ್ತು. ಹಿಂದೂ ಸಮಾಜಕ್ಕಂಟಿದ ಜಾತಿಭೇದ ಮತ್ತು ಅಸ್ಪೃಶ್ಯತೆಯೆಂಬ ಮಹಾರೋಗವನ್ನು ಪೂರ್ಣ ನಿರ್ಮೂಲನಗೊಳಿಸಬೇಕೆಂದು ಅವರು ಪ್ರತಿಪಾದಿಸಿದರು. ತಮ್ಮ ಭಾಷಣದಿಂದ ಅವರು ಹಿಂದೂ ಸಮಾಜದ ಕಣ್ಣಿಗೆ ಅಂಜನವನ್ನೇನೋ ಚೆನ್ನಾಗಿ ಎರೆದರು, ಆದರೆ, ಅದು ಎಷ್ಟು ಸಮಯ ನಿಲ್ಲುವದೆಂಬ ಬಗ್ಗೆ ನಮಗೆ ಶಂಕೆ ಅನಿಸುತ್ತಿದೆ.ಕಾರಣ, ಹಿಂದೂ ಸಮಾಜವು ಕಲ್ಪನಾತೀತವಾಗಿ ದಪ್ಪ ಚರ್ಮದ್ದಾಗಿದೆ. ಇಂತಹ ಭಾಷಣ ಕೇಳುವಾಗ ಚಪ್ಪಾಳೆ ತಟ್ಟುವುದನ್ನು ಅದು ನಿಲ್ಲಿಸುವುದಿಲ್ಲ, ಅಷ್ಟೇ ಅಲ್ಲ, ಇಂತಹ ವಿಚಾರ ಪ್ರದರ್ಶಿಸುವವರನ್ನು ಉಚ್ಚ - ಸ್ಥಾನದಲ್ಲಿರಿಸಿದರೂ, ತಮ್ಮ ಕೆಲಸಗಳನ್ನು ಮೊದಲಿನಂತೆಯೇ ಮಾಡುವವರೆಂಬುದಕ್ಕೆ, ಗೌತಮ ಬುದ್ಧನಿಂದ ತೊಡಗಿ ಮಹಾತ್ಮಾ ಗಾಂಧಿವರೆಗೆ ನಿದರ್ಶನಗಳಿವೆ. ಗೌತಮ ಬುದ್ಧನು ಜಾತಿಭೇದವನ್ನು ನಿಷೇಧಿಸಿದನು, ಧರ್ಮಕಾಂಡದ ನಿಷ್ಫಲತೆಯನ್ನು ಪ್ರತಿಪಾದಿಸಿದನು, ಆದರೆ ಹಿಂದೂ ಸಮಾಜವು ಅವನನ್ನು ದೇವರ ಒಂದು ಅವತಾರವಾಗಿಸಿ, ಅವನ ಬೋಧೆಯನ್ನು ಅಲ್ಲಿ ಕಾದಿರಿಸಿತು, ಇಂದು ಮಹಾತ್ಮಾ ಗಾಂಧೀ ಅವರ ಬಗೆಗೂ -ಇದೇ ವರ್ತನೆ ತೋರಿದೆ. ನಮ್ಮ ಮಹಾರಾಷ್ಟ್ರದಲ್ಲಿನ ಗಾಂಧೀಪಂಥದ ಜನರೆಡೆಗೆ ನೋಡಿದರೆ ಕಾಣಿಸುವುದೇನು? ಮಹಾತ್ಮಾ ಗಾಂಧಿ ಅವರ ಎಷ್ಟು ಮಂದಿ ಮಹಾರಾಷ್ಟ್ರೀಯ ಅನುಯಾಯಿಗಳು ಅಸ್ಪೃಶ್ಯತಾ ನಿವಾರಣೆಗಾಗಿ ಮನಃಪೂರ್ವಕ ಪ್ರಯತ್ನ ಮಾಡಿದ್ದಾರೆ ? ಪ್ರಯತ್ನ ಮಾಡಿಲ್ಲ, ಅಷ್ಟೇ



ಅಲ್ಲ. ಅಸ್ಪೃಶ್ಯತಾನಿವಾರಣೆಯ ಪ್ರಯತ್ನವನ್ನು ವಿರೋಧಿಸುವುದನ್ನೂ ಅವರಲ್ಲಿ ಹಲವರು ನಿಲ್ಲಿಸಿಲ್ಲ. ದೊಡ್ಡ ದೊಡ್ಡ ಸಮಾಜ ಸುಧಾರಕರು, ಧರ್ಮಸುಧಾರಕರು ತಮ್ಮ ಹೊಟ್ಟೆಯನ್ನು ಸಂಕುಚಿಸಿಕೊಂಡು ಬಾಳುವ ಚತುರತೆಯನ್ನೇನು ತೋರಿದ್ದಾರೋ, ಅದನ್ನು ಲಕ್ಷದಲ್ಲಿರಿಸಿ ಕೊಂಡರೆ, ರಾಮಾನಂದ ಚಟರ್ಜಿ ಅವರಂಥ ಕಟ್ಟಾ ಬ್ರಹ್ಮಸಮಾಜ ವಾದದ ಅನುಯಾಯಿ ಹಿಂದೂ ಮಹಾಸಭೆಯ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾದುದು ಆಶ್ಚರ್ಯವೆನಿಸದು. ಹಿಂದೂ ಸಮಾಜದ ಒಡಲ ಬಡಬಾಗ್ನಿಯಲ್ಲಿ ಬುದ್ಧ, ಬಸವ, ಮಹಾವೀರ, ಚೈತನ್ಯ, ರಮಾನಂದ, ಚಕ್ರಧರ ಎಲ್ಲರೂ ಸುಟ್ಟು ಬೂದಿಯಾದರು. ಭಾಗವತ ಸಂಪ್ರದಾಯದ ಸಾಧುಸಂತರೂ ನಾಶವಾದರು. ನಾನಕ, ಕಬೀರರಿಗೂ ಅದೇ ಗತಿಯಾಯ್ತು. ರಾಮಮೋಹನ, ದಯಾನಂದ, ರಾಮಕೃಷ್ಣ ಪರಮಹಂಸ, ವಿಷ್ಣುಬುವಾ ಬ್ರಹ್ಮಚಾರಿ, ಜೋತಿಬಾ ಫುಲೆ, ರಾನಡೆ, ಭಂಡಾರ್‌ಕರ್, ವಿವೇಕಾನಂದ, ರಾಮತೀರ್ಥ, ಶ್ರದ್ದಾನಂದ,ಇವರೆಲ್ಲರಿಗೂ ಹಿಂದೂ ಸಮಾಜದಿಂದ ಇದೇ

ಗತಿಯಾಯ್ತು. ಮಹಾತ್ಮಾ ಗಾಂಧಿ, ಆಚಾರ್ಯ ರಾಯ್, ರಾಮಾನಂದ ಚಟರ್ಜಿ ಅವರನ್ನೂ ಜೀರ್ಣಿಸಿ ಬಿಡುವ ಸಾಮರ್ಥ್ಯವಿದ್ದಂತೆ. ವ್ಯಕ್ತಿಯ ಮಹಾತ್ಮ ಹೆಚ್ಚಿಸುವ, ಇಲ್ಲವೇ, ನಮಗೆ ಬೇಡವೆಂದಾದರೆ ಆತ ಎಷ್ಟೆ ಉತ್ತಮನಿದ್ದರೂ ಅತ್ತ ಗಮನ ಹರಿಸದೆ, ನಮ್ಮ ಪೂರ್ವರೀತಿಯನ್ನೇ ಮುಂದುವರಿಸುವ ಈ ಕಲೆ ಹಿಂದೂ ಸಮಾಜಕ್ಕೆ ಅದ್ಭುತವಾಗಿ ಸಾಧಿಸಿದೆ. ಹಿಂದೆ ವೈಷ್ಣವ ಪಂಥಿಯಾಗಿದ್ದ ರಾಮಾನಂದರ ಉದಾರಮತವಾದವನ್ನು ನಿಷ್ಕ್ರಿಯಗೊಳಿಸಿದ ಅದೇ ಹಿಂದೂ ಸಮಾಜವು, ಪ್ರಸಕ್ತ ಬ್ರಹ್ಮಪಂಥೀಯ ರಾಮಾನಂದರ ಉದಾರ ಮತವಾದವನ್ನು ನಿಷ್ಕ್ರಿಯಗೊಳಿಸುವ ಧೈರ್ಯವನ್ನು ಹೊಂದಿದ್ದರೆ- ಅದರಲ್ಲಿ ಆಶ್ಚರ್ಯವೇನು? ಹಿಂದೂ ಸಮಾಜವು ಫ್ರಾನ್ಸ್‌ನ ಬೂರ್ಜ್ವಾ ರಾಜಮನೆತನದಂತೆ-ಏನನ್ನೂ ಕಲಿಯುವುದಿಲ್ಲ, ಏನನ್ನೂ ಮರೆಯುವುದಿಲ್ಲ. ಹಿಂದೂ ಸಮಾಜವು-ಇಷ್ಟು ಸಂವೇದನಾಹೀನವಾಗಿದ್ದರೂ, ತನ್ನ ಅಸ್ತಿತ್ವದ ತತ್ಕಾಲಿಕ ಸಂರಕ್ಷಣೆ ಮಾಡುವಷ್ಟು ಮಟ್ಟಿನ ಹೊಂದಾಣಿಕೆ ಗುಣ ಅದಕ್ಕಿದೆಯೆಂದು ಒಪ್ಪಿಕೊಳ್ಳಬೇಕು. ಪರ್ಯಾಯ ಕಂಡು ಹಿಡಿಯುವಲ್ಲಿ ಹಿಂದೂ ಧರ್ಮದ ಶಾಸ್ತ್ರಿ, ಪಂಡಿತರನ್ನು ಮೀರಿಸುವವರಿಲ್ಲ. ಸಮಯ ಬಂದಂತೆ ನಡೆದುಕೊಳ್ಳುವುದು ಮತ್ತು ಬಂದ ಅವಕಾಶವನ್ನು ಹೇಗಾದರೂ ಕೈವಶ ಮಾಡಿಕೊಳ್ಳುವುದು ಹಿಂದೂ ಸಮಾಜದ ಹುಟ್ಟುಗುಣವೇ ಆಗಿದೆ. ಈ ಹೊಂದಾಣಿಕೆ ಗುಣದಿಂದಾಗಿಯೇ ಅದು ಇದುವರೆಗೂ ಉಳಿದುಕೊಂಡು ಬಂದಿದೆ. ಹೀಗೆ ಜೀವಿಸುವುದು ಎಷ್ಟು ಶ್ರೇಯಸ್ಕರ ಎಂಬುದು ಬೇರೆ ಪ್ರಶ್ನೆ, ಈ ಹೊಂದಾಣಿಕೆಯ ಗುಣ ಕೇವಲ ತಾತ್ಕಾಲಿಕವಾಗಿ ಆತ್ಮಸಂರಕ್ಷಣೆಗೆ ಉಪಯುಕ್ತವಾಗುವಂತಿರಬಹುದು.- ಸಮಾಜಪುರುಷನ ದೇಹಪ್ರಕೃತಿ ಸದೃಢವಾಗಲು, ಅವನ ಸಾಮರ್ಥ್ಯ ಹೆಚ್ಚಲು, ಅವನ ದೇಹದ ಎಲ್ಲ ದೋಷಗಳು ಮೊದಲು ಪರಿಹಾರವಾಗಬೇಕು. ಸೂರತ್‌ನಲ್ಲಿ ನಡೆದ ಹಿಂದೂ ಮಹಾಸಭೆಯ ವೇಳೆ ಸ್ಪೃಶ್ಯರ ಜೊತೆಯಲ್ಲೇ ಅಸ್ಪೃಶ್ಯರೆಂಬವರ ಮೆರವಣಿಗೆಯೊಂದು ನಡೆಯಿತು. ಈ ಮೆರವಣಿಗೆಯಲ್ಲಿ ಸುಮಾರು ಎಂಬತ್ತೈದು ಜನರಿದ್ದರು, ಮತ್ತು, ಸ್ಪೃಶ್ಯ, ಅಸ್ಪೃಶ್ಯರು ಜೊತೆಯಾಗಿ ಸಾಗಿದುದರಿಂದ ಹಿಂದೂ ಧರ್ಮದ ಮೇಲೆ ಯಾವುದೇ ಪ್ರಾಣಸಂಕಟ ಬಂದೊದಗಲಿಲ್ಲ. ಅಷ್ಟೇ ಅಲ್ಲ, ಹಿಂದೂ ಧರ್ಮದ ಅವಸಾನವೂ ಇದರಿಂದಾಗಿ ದೂರವೇ ಉಳಿಯಿತು. ಆದರೆ ಇದೇ ಕೆಲವು ಪವಿತ್ರರೆಂಬವರಿಗೆ ಹಿಡಿಸಲಿಲ್ಲ. ವೈಷ್ಣವರೆಂದು ಕರೆಯಲ್ಪಡುವ ಸೂರತ್‌ನ ಹಲವರು, ಈ ಮೆರವಣಿಗೆಯ ವಿರುದ್ಧ-ಹಸ್ತಪತ್ರಿಕೆ ಹಂಚಿ ಭಯಂಕರ ಅಧರ್ಮ ನಡೆಯುತ್ತಿದೆ ಎಂದು ಬೊಬ್ಬಿಟ್ಟರು. ಈ ವೈಷ್ಣವರೆಂಬವರ ಮೇಲೆ ನನಗೆ ನಿಜಕ್ಕೂ

ಅನುಕಂಪವೆನಿಸುತ್ತದೆ. "ವಿಷ್ಣುಮಯ ಜಗ ವೈಷ್ಣವರ ಧರ್ಮ; ಭೇದಾಭೇದದ ಭ್ರಮೆ ಅಮಂಗಳ" ಎಂದು ತುಕೋಬಾರಂತಹ ಮಹಾವೈಷ್ಣವರು ಸಾರಿ ಹೇಳಿದ್ದಾರೆ. ಯಾರ ಜಾತಿ ದುರಭಿಮಾನವು ನಾಶವಾಗುವುದಿಲ್ಲವೋ ಅವರು ವೈಷ್ಣವರಾಗಿರದೆ, ವೈಷ್ಣವ ಧರ್ಮದ ನದೀತಳದ ಒಂದು ಪುಟ್ಟ ಕಲ್ಲಷ್ಟೇ ಎನ್ನಬೇಕಷ್ಟೇ, ಸೂರತ್‌ನಲ್ಲಿ ಹಿಂದೂ ಮಹಾಸಭೆಯ ಜೊತೆಜೊತೆಗೇ ಅಸ್ಪೃಶ್ಯೋದ್ಧಾರ ಪರಿಷತ್ತು-ನಡೆದು, ಅಲ್ಲಿ ಮಾಮೂಲು ನಿರ್ಣಯಗಳು ಅಂಗೀಕರಿಸಲ್ಪಟ್ಟವು. ಅಸ್ಪೃಶ್ಯರಿಗೆ ಶಾಲೆ, ಪಾರ್ಕ್-ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಪ್ರವೇಶ ನಿಷಿದ್ಧವಿರಬಾರದು, ಎಂದು ಮುನಿಸಿಪಾಲಿಟಿ, ಲೋಕಲ್ ಬೋರ್ಡ್ ಮತ್ತು ಇತರ ಸಾರ್ವಜನಿಕ ಸಂಸ್ಥೆಗಳನ್ನು ವಿನಂತಿಸಿಕೊಳ್ಳುವ ನಿರ್ಣಯ ಅದರಲ್ಲಿತ್ತು. ಈ ಒಪ್ಪಂದದ ಅನುಷ್ಠಾನದಲ್ಲಿ ಹಿಂದೂಮಹಾಸಭೆಯ ಸ್ಥಳೀಯ ಶಾಖೆಯು ಎಲ್ಲೆಲ್ಲಿ ಪ್ರತ್ಯಕ್ಷ ಪ್ರಯತ್ನ ಮಾಡಿದೆ ಎಂಬುದನ್ನು ತಿಳಿದರೆ ಒಳ್ಳೆಯದು. ಪ್ರಸಕ್ತ ಅಸ್ಪೃಶ್ಯೋದ್ಧಾರ ಸಭೆ ಎಂದರೆ, ಹಿಂದೂ ಮಹಾಸಭೆಯ ಬಾಲವೇ ಆಗಿದೆ. ಅಸ್ಪೃಶ್ಯರು ತಮ್ಮ ಕಾಲ ಮೇಲೆ ತಾವು ನಿಲ್ಲುವಂತೆ ನಡೆದಿರುವ ಪ್ರಯತ್ನ, ಹಿಂದೂ ಮಹಾಸಭೆಯ ನಾಯಕರಿಗೆ ಇಷ್ಟವಿಲ್ಲವಷ್ಟೇ ಅಲ್ಲ, ಈ ಹಿಂದೂ ಮಹಾಸಭೆಯ ಜನರು ಅಸ್ಪೃಶ್ಯರಲ್ಲಿ ಒಡಕು ಮೂಡಿಸುವ ಪ್ರಯತ್ನವನ್ನೂ ಸ್ವತಃ ಮಾಡುತ್ತಿದ್ದಾರೆ.ನಾವು ಖುಶಿಯಿಂದ ಕೊಟ್ಟುದನ್ನು ಅಸ್ಪೃಶ್ಯರು ತೆಗೆದುಕೊಳ್ಳಬೇಕು, ಅದರಲ್ಲೇ ಸಮಾಧಾನ ಕಂಡುಕೊಂಡು ನಮಗೆ ಕೃತಜ್ಞರಾಗಿರಬೇಕು, ನಾವು ಕುಳ್ಳಿರ ಹೇಳಿದಲ್ಲಿ ಕುಳ್ಳಿರಬೇಕು, ಏಳೆಂದರೆ, "ಜೀ ಹುಜೂರ್" ಎಂದು ಏಳಬೇಕು, ಹೀಗಿದೆ, ಅಸ್ಪೃಶ್ಯರ ಬಗ್ಗೆ ಹಿಂದೂ ಮಹಾಸಭೆಯವರ ಧೋರಣೆ. ಇದರ ಒಂದು ತಾಜಾ ಸಾಕ್ಷ-ಸೂರತ್‌ನ ಹಿಂದೂ ಮಹಾಸಭೆಯ ಅಧಿವೇಶನದಲ್ಲಿ ಅಂಗೀಕೃತವಾದ ನಿರ್ಣಯ. ಈ ನಿರ್ಣಯದಂತೆ, ಅಸ್ಪೃಶ್ಯರಿಗೆ ದೇವಳ, ಶಾಲೆ, ಪಾರ್ಕ್, ಸಭೆ ಮುಂತಾದ ಸ್ಥಳಗಳಲ್ಲಿ ಪ್ರವೇಶಕ್ಕೆ ನಿಷೇಧವಿಲ್ಲದೆ ಸಮತೆಯನ್ನು ಕಾಯಲಾಗಿದೆ ಎಂದರೂ, ಮುನಿಸಿಪಾಲಿಟಿ, ಲೋಕಲ್‌ಬೋರ್ಡ್ ಮುಂತಾದ ಸ್ಥಾನೀಯ ಸಂಸ್ಥೆಗಳಲ್ಲಿ ಹಾಗೆಯೇ ಪ್ರಾಂತಿಕ ಕಾಯ್ದೆ ಕೌನ್ಸಿಲ್ ಮತ್ತು ಲೆಜಿಸ್ಲೇಟಿವ್ ಅಸೆಂಬ್ಲಿಗಳಲ್ಲಿ ಪ್ರತಿನಿಧಿಯನ್ನು ಸರಕಾರ ನೇಮಿಸುವುದು - ಇದು ದೇಶದ ಹಿತಕ್ಕೆ ಮತ್ತು ಸ್ವತಃ ಅಸ್ಪೃಶ್ಯವರ್ಗದ ಸ್ವಾಭಿಮಾನಕ್ಕೆ ಘಾತಕವಾಗಿದೆಯೆಂದು ಹೇಳಲಾಗಿದೆ. ನಮಗೂ ಇದೊಂದು ಗೌಣ ಮಾರ್ಗವೆಂದೇ ಅನಿಸುತ್ತದೆ. ಹಾಗೆಯೇ ಹಿಂದೂ ಮಹಾಸಭೆಯು ಅಸ್ಪೃಶ್ಯರ ಸಹಿತ ಎಲ್ಲ ಹಿಂದೂಗಳಿಗೂ ನೇಮಿಸುವುದೋ, ಇಲ್ಲಾ, ಕೇವಲ ಅಸ್ಪಶ್ಯರಿಗೆ ಮಾತ್ರ ಈ ನೇಮಕವೇ ಏನೆಂದು ತಿಳಿದಿಲ್ಲ. ಅಸ್ಪೃಶ್ಯರಂತಹ ವರ್ಗದ ಜನರ ಪ್ರತಿನಿಧಿಯನ್ನು ಸರಕಾರ ನೇಮಿಸುವುದಕ್ಕೆ ಯಾವ ತತ್ವದ ಮೇಲೆ ವಿರೋಧ ವ್ಯಕ್ತವಾಗಿದೆಯೋ ಅದೇ ತತ್ವದ ಮೇಲೆ, ಮಿಶ್ರ ಮತದಾರ ಸಂಘದ ವತಿಯಿಂದ ಇಲ್ಲೂ ಆಕ್ಷೇಪ ಎತ್ತಬಹುದು. ಹಿಂದೂ ಮಹಾಸಭೆಗೆ ಅಸ್ಪೃಶ್ಯರ ಬಗ್ಗೆ ಇನಿತಾದರೂ ಕಾಳಜಿ ಇದ್ದಿದ್ದರೆ, ಅಸ್ಪೃಶ್ಯರ ಪ್ರತಿನಿಧಿಯನ್ನು ಅದೇ ವರ್ಗದ ಮತದಾರ ಸಂಘದಿಂದ ಆರಿಸಿ ಬರಬೇಕೆಂದು ಸ್ಪಷ್ಟ ನುಡಿಯುತ್ತಿದ್ದರು. ಎಂದು ಅಸ್ಪೃಶ್ಯತೆ ಸಂಪೂರ್ಣ ನಿರ್ಮೂಲನವಾಗುವುದೋ

ಅಂದು ನಾವೂ ಮಿಶ್ರ ಮತದಾರ ಸಂಘವನ್ನು ಬೆಂಬಲಿಸುವೆವು. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಇತರ ಸಮಾಜಗಳ ಮೇಲೆ ವಿಶ್ವಾಸವಿರಿಸಲು ನಾವು ಸಿದ್ಧರಿಲ್ಲ. ಸರಕಾರ ಹಾಗೂ ಅಸ್ಪೃಶ್ಯ ವರ್ಗದ ಹಿತಸಂಬಂಧ ಪರಸ್ಪರ ವಿರೋಧಿಯಲ್ಲ. ಆದರೆ, ಅಸ್ಪೃಶ್ಯ ವರ್ಗ ಮತ್ತು ಇತರ ಸಮಾಜದ ಹಿತಸಂಬಂಧ ಏಕರೂಪಿಯಲ್ಲ. ಇಷ್ಟೇ ಅಲ್ಲ, ಎಲ್ಲಿವರೆಗೆ ಸ್ಪಶ್ಯಾಸ್ಪಶ್ಯದ ಕಲಹ ಹಿಂದೂ ಸಮಾಜದಲ್ಲಿರುವುದೋ ಅಲ್ಲಿವರೆಗೆ ಈ ಎರಡು ವರ್ಗಗಳ



ಹಿತಸಂಬಂಧ ಪರಸ್ಪರ ವಿರುದ್ಧವೇ ಇರುತ್ತದೆನ್ನಲು ಅಡ್ಡಿಯಿಲ್ಲ.

ಮಿಶ್ರ ಮತದಾರ ಸಂಘದಿಂದ ಅಸ್ಪೃಶ್ಯರ ಪ್ರತಿನಿಧಿಯನ್ನು ನೇಮಿಸುವ ವ್ಯವಸ್ಥೆಯಾದರೆ, ಅಲ್ಪಸಂಖ್ಯಾತ ಅಸ್ಪೃಶ್ಯರ ಹಿತದತ್ತ ಲಕ್ಷ್ಯ ನೀಡುವುದು ಸಾಧ್ಯವಾಗದು. ಅಸ್ಪೃಶ್ಯ ಪ್ರತಿನಿಧಿಯೆಂದು ಆರಿಸಿ ಬರುವ ಉಮೇದುವಾರರು ಇತರ ವರ್ಗದ ಜನರ ತಂತ್ರಕ್ಕೊಳಗಾಗಿ - ಅಂದರೆ, ಹಿಂದೂ ಸಭಾದ ಕೈಗೂಸಾಗಿ ಇರಬಲ್ಲವರೇ, ಆರಿಸಿ ಬರುವರು. ಹಾಗಾಯ್ತಿಂದರೆ, ಅಸ್ಪೃಶ್ಯರ ಸ್ವತಂತ್ರ ಸ್ವಾಭಿಮಾನಿ ಚಳವಳಿ ನೆಲ ಕಚ್ಚುವುದು. ಅವರ ಈ ಕುಟಿಲತೆಯಿಂದಾಗಿಯೇ ನಮ್ಮ ಅಸ್ಪೃಶ್ಯ ಬಂಧುಗಳು ಅವರ ಚಳವಳಿಯಿಂದ ದೂರ ವಿರಬೇಕೆಂದು ಬಯಸುತ್ತೇವೆ. ಹಿಂದೂ ಮಹಾಸಭೆಯ ಚಳವಳಿಯು ಕೃತ್ರಿಮವೂ, ಆಕುಂಚಿತ ದೃಷ್ಟಿಯುಳ್ಳದ್ದೂ, ಧೈಯಶೂನ್ಯವೂ, ತತ್ವಪರಾಙ್ಮುಖವೂ ಆಗಿದೆ. ಅಸ್ಪೃಶ್ಯರ ಬಗ್ಗೆ ನಿಜವಾದ ಕಳಕಳಿ ಅವರಲ್ಲಿಲ್ಲ. ಅಸ್ಪೃಶ್ಯರು ಧರ್ಮಾಂತರ ಮಾಡುವುದು ಬೇಡ, ಮತ್ತು ಅದರಿಂದಾಗಿ ಹಿಂದೂಗಳ ಸಂಖ್ಯಾಬಲ ಕಡಿಮೆಯಾಗುವುದು ಬೇಡ, ಎಂಬಿಷ್ಟೇ ಉದ್ದೇಶದಿಂದ ಹಿಂದೂ ಮಹಾಸಭೆಯವರು ಅಸ್ಪೃಶ್ಯತಾನಿವಾರಣೆಯ ಪ್ರಶ್ನೆಯನ್ನು ಕೈಗೆತ್ತಿಕೊಂಡಿದ್ದಾರೆ. ಎಂದು ಕೇವಲ ನ್ಯಾಯ ಮತ್ತು ಸಮತೆಯ ದೃಷ್ಟಿಯಿಂದ ವಿಚಾರ ಮಾಡಲು ಮತ್ತು ಮಾನವ ಹಕ್ಕುಗಳ ಬಗ್ಗೆ ಕಾಳಜಿ ಹೊಂದಲು ಅವರು ಕಲಿತುಕೊಳ್ಳುವರೋ, ಆಗಷ್ಟೇ ಅವರ

ಚಳವಳಿಗೆ ನಿಜವಾದ ಜೀವಂತಿಕೆ ಬರುವುದು. ಇಂದು ಹಿ. ಮ. ಸಭಾವಾಲಾ ಅವರು, ಚಾತುರ್ವಣ್ಯದ ಚೌಕಟ್ಟನ್ನೇ ತಿರುಗಿಸಿ ಬಿಡಿ, ಎಂದಿದ್ದಾರೆ, ಆದರೆ ಅದು ರುಚಿಸುವಂತಹುದಲ್ಲ, ಮತ್ತು ಅವರ ಬುದ್ಧಿಗೆ ಅಳವೂ ಅಲ್ಲ. ಹಿಂದೂ ಸಮಾಜದ ಪ್ರಗತಿಯನ್ನು ಕುಂಠಿತಗೊಳಿಸುವ, ಅದನ್ನು ವಿರೂಪಗೊಳಿಸುವ, ನಿಶ್ಯಕ್ತವಾಗಿಸುವ ಜಾತಿಭೇದಪದ್ಧತಿಯನ್ನು ಶಾಶ್ವತವಾಗಿರಿಸಿಕೊಂಡು ನಿಜವಾದ ಹಿಂದೂ ಸಂಘಟನೆಯಾಗಿರುವುದು ಶಕ್ಯವಿಲ್ಲ. ಅರ್ಥಾತ್, ಜಾತಿಭೇದಜನ್ಯ ಉಚ್ಚ-ನೀಚ ತಾರತಮ್ಯವನ್ನುಳಿಸಿಕೊಂಡು ಇರುವ ಸಂಘಟನೆ ಬರೀ ಕೃತ್ರಿಮವಷ್ಟೆ.

* * * *

## ೧೮. ಧರ್ಮೈಕ್ಯ ಪರಿಷತ್ತು

ಮುಂಬಯಿ ಪ್ರಾರ್ಥನಾ ಸಮಾಜದ ೬೨ನೇ ವರ್ಧಂತ್ಯುತ್ಸವದ ನಿಮಿತ್ತ ಒಂದು ಸಮಾರಂಭ ಜರುಗಿತು. ಆ ಕಾರ್ಯಕ್ರಮದಲ್ಲಿ ವಿಭಿನ್ನ ಧರ್ಮಗಳ ಜನರ ಮಧ್ಯೆ ಸ್ನೇಹವರ್ಧನೆಗಾಗಿ ಇಂಟರ್ ಕಮ್ಯೂನಲ್ ಎಮಿಟಿ ಕಾನ್ಸರೆನ್ಸ್ ಸಹ ನಡೆಯಿತು. ಸಭೆಯಲ್ಲಿ ವಿಭಿನ್ನ ಧರ್ಮಗಳ ವ್ಯಕ್ತಿಗಳ ಭಾಷಣ ನಡೆದು, ಸಭೆಯ ಉದ್ದೇಶಕ್ಕನುಸಾರವಾಗಿ ಕೈಗೊಂಡ ನಿರ್ಣಯಗಳಲ್ಲಿ ಅಸ್ಪೃಶ್ಯತಾ ನಿವಾರಣಾ ನಿರ್ಣಯವೂ ಒಂದಾಗಿತ್ತು. ಸಭೆಯಲ್ಲಿ ನಡೆದ ಭಾಷಣಗಳಲ್ಲಿ "ಬಾಂಬೇ ಕ್ರಾನಿಕಲ್" ನ ಸಂಪಾದಕ ಮಿಸ್ಟರ್ ಬ್ರೆಲ್ ವೀ ಅವರ ಭಾಷಣ ವಿಶೇಷ ಮಹತ್ವದ್ದಾಗಿತ್ತು. ಅಧ್ಯಕ್ಷ ಶ್ರೀ ನಟರಾಜನ್ ಅವರು ತಮ್ಮ ಭಾಷಣದಲ್ಲಿ ಧರ್ಮದಿಂದ ಕಲಹ ಉಂಟಾಗುವುದಿಲ್ಲ, ಆದರೆ, ಧರ್ಮದ ವಿಷಯಕವಾದ ತಪ್ಪು ತಿಳುವಳಿಕೆಯಿಂದ ಕಲಹಗಳೇಳುತ್ತವೆ, ಎಂದು ನುಡಿದರು. ಇದು ಭಾಗಶಃ ನಿಜವಾದರೂ, ಪ್ರತಿಯೊಂದು ಧರ್ಮಕ್ಕೂ ಒಂದಿಲ್ಲೊಂದು ವಿಶಿಷ್ಟ ಮತವಾದ ಇರುತ್ತದೆ, ಮತ್ತು ಧರ್ಮದಿಂದ ಮತವಾದವನ್ನು ಬೇರ್ಪಡಿಸುವುದು ಸರ್ವಥಾ ಸಾಧ್ಯವಿಲ್ಲ ಎಂಬುದನ್ನು ಮರೆಯುವುದೆಂತು? ಹಾಗೆಯೇ ಶ್ರೀ ನಟರಾಜನ್ ಅವರು

ಹಿಂದೂ ಮುಸಲ್ಮಾನರ ಮಧ್ಯದ ಅಸಂತುಷ್ಟಿಯನ್ನು ತೆರೆದ ಕಣ್ಣಿಳಿಂದ ನೋಡಿ ಚರ್ಚಿಸದೆ ಕೇವಲ ಆಶಾವಾದದಿಂದಲೇ ಎಲ್ಲವನ್ನೂ ಮುಗಿಸಿದ್ದಾರೆ. ಆಶಾವಾದ ಒಳ್ಳೆಯದೆಂಬುದರಲ್ಲಿ ಎರಡು ಮಾತಿಲ್ಲ. ಆದರೆ ಕಾರ್ಯಕಾರಣ ಮೀಮಾಂಸೆ ಯೋಗ್ಯರೀತಿಯಲ್ಲಿ ನಡೆಯಬೇಕು. ಚಿಕಿತ್ಸೆ ಸರಿಯಾಗಿ ನಡೆಯಬೇಕಾದರೆ, ರೋಗನಿದಾನ ತಪ್ಪಿಲ್ಲದೆ ಆಗಬೇಕು. ಚಿಕಿತ್ಸೆಯನ್ನು ಮುಂದುವರಿಸಲು ಆಶಾವಾದ ಉಪಯುಕ್ತವೇ ಸರಿ. ಆದರೆ ರೋಗನಿದಾನದಲ್ಲೇ ತಪ್ಪಿದರೆ, ಆಶಾವಾದದಿಂದ ಆಗುವುದೇನೂ ಇಲ್ಲವೆಂಬುದನ್ನು ಮರೆಯಬಾರದು. ಇಂಥ ಸಭೆಗಳಲ್ಲಿ ಸುಶಿಕ್ಷಿತರು ಭಾಗವಹಿಸುತ್ತಾರೆ, ಆದರೆ, ದಂಗೆಗಳಲ್ಲಿ ಭಾಗವಹಿಸುವವರು ಅಶಿಕ್ಷಿತರು. ಸ್ವಾರ್ಥಿಗಳಾದ ಇತರ ಶಿಕ್ಷಿತ ಜನರು, ಜಾತಿಜಾತಿಗಳಲ್ಲಿ ವೈಮನಸ್ಸು ಹೆಚ್ಚಿಸುವವರು, ಅವರೂ ಇಂತಹ ಸಭೆಗಳಲ್ಲಿ ಭಾಗವಹಿಸುವುದಿಲ್ಲ. ಸದ್ಯದ ಹಿಂದೂ ಮುಸಲ್ಮಾನರ ನಡುವಣ ಕಲಹ, ಮೌಲ್ವಿಗಳು, ಶಾಸ್ತ್ರಿಗಳು, ಭಿಕ್ಷುಗಳು, ಮತ್ತು ತಮ್ಮ ತಮ್ಮ ಸಮಾಜದಲ್ಲಿ ನಾಯಕತ್ವಕ್ಕಾಗಿ ಹಪಹಪಿಸುವವರು ಮತ್ತೆ ಸ್ವಲ್ಪ ತಲೆ ತಿರುಕರು ಇಂಥವರಿಂದಾಗಿ ಸೊಕ್ಕುಬೆಳೆದಿದೆ. ಈ ವಿಷಯವನ್ನೊಪ್ಪದೆ, ಕೇವಲ ಒಬ್ಬರಿನ್ನೊಬ್ಬರ ಧರ್ಮದ ಅನಾಭ್ಯಾಸದಿಂದ ವಿಭಿನ್ನ ಧರ್ಮಾನುಯಾಯಿಗಳ ನಡುವೆ ಸ್ನೇಹ, ಐಕ್ಯ ಮತ್ತು ಪ್ರೇಮವನ್ನು ಹುಟ್ಟು ಹಾಕುತ್ತದೆ ಎಂದುಕೊಳ್ಳುವುದು ನಮ್ಮ ದೃಷ್ಟಿಯಿಂದ ಕೇವಲ ಆತ್ಮವಂಚನೆಯಾಗುತ್ತದೆ.

* * * *

## ೧೯. ಅಸ್ಪೃಶ್ಯರಿಗಾಗಿ ವಿಶೇಷ ದೇವಾಲಯ

ರತ್ನಗಿರಿಯಲ್ಲಿ ಶ್ರೀ ಕೀರ್ ಎಂಬ ಧನಿಕರು ಅಸ್ಪೃಶ್ಯರಿಗಾಗಿ ಪತಿತ ಪಾವನ ಮಂದಿರ ಎಂಬ ಹೆಸರಿನ ಖಾಸಗಿ ದೇವಾಲಯ ಒಂದನ್ನು ನಿರ್ಮಿಸ ಹೊರಟಾಗ ಆ ದೇವಾಲಯದ ಅಸ್ತಿಭಾರ ಹಾಕುವ ಸಮಾರಂಭವು ಡಾ. ಕುರ್ತಕೋಟಿ ಅವರ ಅಧ್ಯಕ್ಷತೆಯಲ್ಲಿ ಜರುಗಿತು.

ಡಾ. ಕುರ್ತಕೋಟಿ ಅವರ ಧಾರ್ಮಿಕ ಮತ್ತು ಸಾಮಾಜಿಕ ವಿಚಾರಗಳು ರಬ್ಬರ್‌ನಂತೆ ವಿಕಸನಶೀಲವಾಗಿವೆ. ಅವರು ಅನೇಕ ಬಾರಿ ಅಸ್ಪೃಶ್ಯತಾ ನಿವಾರಣೆಯ ಮತಪ್ರದರ್ಶನಕ್ಕೆಂದು ಗೃಹತ್ಯಾಗಕ್ಕೆ ಸಿದ್ಧರಾದುದು ಪ್ರಸಿದ್ಧವಿದೆ. ನಮಗೆ ಕೇವಲ ಶ್ರೀ ಕೀರ್ ಅವರ ತಿಳುವಳಿಕೆ ಹೀನತೆ ಬಗ್ಗೆ ವಿಚಿತ್ರವೆನಿಸುತ್ತದೆ. ಅವರು ತಮ್ಮ ಹಣವನ್ನು ಹೀಗೆ ಖರ್ಚು ಮಾಡುವ ಬದಲಿಗೆ ಅಸ್ಪೃಶ್ಯರ ಶಿಕ್ಷಣಕ್ಕೆ ಮತ್ತು ಅಸ್ಪೃಶ್ಯತಾ ನಿವಾರಣೆಯ ಚಳವಳಿಗಾಗಿ ಖರ್ಚು ಮಾಡಿದ್ದರೆ ಅದು ಸತ್ಕಾರ್ಯವೆನಿಸುತ್ತಿತ್ತು. ಬಹಿಷ್ಕೃತ ವರ್ಗಕ್ಕಾಗಿ ಖಾಸಗಿ ದೇವಾಲಯದ ಅಗತ್ಯವಿದೆಯೆಂದು ನಮಗನಿಸುವುದಿಲ್ಲ. ಅಷ್ಟೇ ಅಲ್ಲ, ಹೀಗೆ ಖಾಸಗಿ ದೇವಾಲಯ ಕಟ್ಟುವುದರಿಂದ ಅಸ್ಪೃಶ್ಯತಾ ನಿವಾರಣೆ ಇನ್ನೂ ದೂರಸಾಧ್ಯವೆಂದು ನಮಗನಿಸುತ್ತದೆ. ಅಸ್ಪೃಶ್ಯರ ಬೇಡಿಕೆ ಮುಖ್ಯವಾಗಿ ಅಸ್ಪೃಶ್ಯತಾ ನಿವಾರಣೆಯೇ ಆಗಿದೆ. ಅರ್ಥಾತ್ ಈಗ ಅಸ್ತಿತ್ವದಲ್ಲಿರುವ ಇತರ ಹಿಂದೂಸಮಾಜ ಭಜಿಸುವ ದೇವಳದಲ್ಲಿ ಅವರಿಗೂ ಪ್ರವೇಶ ಸಿಗಬೇಕಿದೆ. ದೇವಳವಿಲ್ಲವೆಂದು ದೇವರ ಭಕ್ತಿ ಅಸಾಧ್ಯವೆಂದೇನಿಲ್ಲ. ಮನೆಯಲ್ಲಿ ಕುಳಿತೇ ದೇವರ ಪೂಜೆ ಮಾಡಬಹುದು. ಸ್ಮರಣೆ ಮಾಡಬಹುದು. ಅದಕ್ಕೆ ದೇವಳವೇ ಬೇಕೆಂದೇನಿಲ್ಲ. ಆದರೆ ಅಸ್ಪಶ್ಯರಿಗಾಗಿ ಖಾಸಗಿ ದೇವಳ ನಿರ್ಮಿಸುವುದೆಂದರೆ, ಅಸ್ಪೃಶ್ಯತೆಯನ್ನು ಶಾಶ್ವತವಾಗಿರಿಸಿಕೊಂಡಂತೆ. ರತ್ನಗಿರಿಯ ಹೊಸ ದೇಗುಲ ಮಹಾರ್, ಚಾಂಭಾರ್ ಜನರದೆಂದು ಕರೆಸಿಕೊಳ್ಳುವುದು ಮತ್ತು ಪವಿತ್ರರು ತಮ್ಮ ದೇಗುಲ ಅಪವಿತ್ರವಾಗದೆ ಉಳಿಯಿತೆಂಬ ಸಮಾಧಾನ ಹೊಂದುವರು. ಶ್ರೀ ಕೀರ್ ಅವರು ತಿಳಿಯದೆಯೋ, ಸದುದ್ದೇಶದಿಂದಲೋ ಏನೋ ಕುರ್ತಕೋಟಿ ಯಂತಹವರ ಜೊತೆ ಸೇರಿ ಅಸ್ಪೃಶ್ಯತಾ ನಿರ್ಮೂಲನ ಕಾರ್ಯದಲ್ಲಿ ಸ್ವಂತ ಹಣ ಖರ್ಚು ಮಾಡಿ ದೊಡ್ಡ ಹಾನಿ ಮಾಡಿಕೊಂಡರು, ಎಂದು ನಮ್ಮ ಅಭಿಪ್ರಾಯ, ಮತ್ತು ಅವರಿತ್ತ ಈ ದೇವಳದ ದೇಣಿಗೆಯನ್ನು ರತ್ನಗಿರಿಯ ನಮ್ಮ ಬಹಿಷ್ಕೃತ ಬಂಧುಗಳು ಈಗಲೇ ಆಭಾರ ಮನ್ನಿಸಿ ನಿರಾಕರಿಸ ಬೇಕೆಂದು ಅವರಿಗೆ ನಮ್ಮ ಸೂಚನೆ.

* * * *

## ೩೦. ಪುನಃ ಶಾಲೆಗಳಲ್ಲಿನ ಕುಡಿವ ನೀರಿನ ಚರಿಗೆ

ಮುಂಬಯಿ ಮುನಿಸಿಪಾಲಿಟಿಯು ತನ್ನ ಶಾಲೆಗಳಲ್ಲಿ ಮಕ್ಕಳ ಕುಡಿವ ನೀರಿಗಾಗಿ ಸ್ಪೃಶ್ಯರಿಗೆ ಅಸ್ಪೃಶ್ಯರಿಗೆ ಬೇರೆ ಬೇರೆ ಚರಿಗೆಗಳನ್ನಿಡುವದನ್ನು ನಿಷೇಧಿಸಿದ್ದು, ಪುರಾಣಮತವಾದಿಗಳ ನಿದ್ದೆಯನ್ನೇ ಅಪಹರಿಸಿದೆ. ಈ ನಿರ್ಣಯವನ್ನು ರದ್ದು ಪಡಿಸಲು ಇದುವರೆಗೆ ಯತ್ನ ನಡೆಯುತ್ತಲೇ ಇದೆ. ಇದನ್ನು ಶಾಸನವಾಗಿಸುವ ಯತ್ನ ಹೊಸ ಕಾರ್ಪೊರೇಶನ್‌ನ ಸಭೆಯಲ್ಲಿ ನಡೆದಾಗ, ಈ ಪುರಾಣಮತವಾದಿಗಳ ಯತ್ನವೂ ಪರಾಕಾಷ್ಠೆಗೇರಿತ್ತು. ಈ ನಿರ್ಣಯವನ್ನು ರದ್ದು ಮಾಡಬೇಕೆಂದು ಕಲಹವೆಬ್ಬಿಸಿದ ಸಭಾಸದರಲ್ಲಿ ಗುಜರಾತಿಗಳು ಹೆಚ್ಚು ಸಂಖ್ಯೆಯಲ್ಲಿದ್ದರು, ಮತ್ತು ಬಾಳಭಾಯ್ ದೇಸಾಯಿ, ಮೋಹನ್‌ಲಾಲ್ ದೇಸಾಯಿ ಮುಂತಾದ ಕಾಂಗ್ರೆಸ್ ಜನರೂ ಇದ್ದರು. ದಕ್ಷಿಣದ ಸಭಾಸದರ ಪೈಕಿ, ಡಾ.

ಜಾವಳೇ, ಅವರು ಈ ವಾದದಲ್ಲಿ ಅಸ್ಪೃಶ್ಯರ ವಿರುದ್ಧ ತೀವ್ರವಾಗಿ ಪ್ರಹಾರ ನಡೆಸಿದ್ದರು. ಕೊಂಬು ತಿರುಗಿಸಿಕೊಂಡು ಕರುವಿನತ್ತ ನುಗ್ಗುವ ದನದಂತೆ ವ್ಯವಹರಿಸುವ ಈ ಜನರಿಗೆ ಕೊನೆಗೆ ತಕ್ಕ ಶಾಸ್ತಿಯೇ ಆಯ್ತೆಂಬುದು ಸಮಾಧಾನದ ವಿಷಯ.

* * * *

## ೩೧. ನಡುವೆ ನನ್ನ ಚಾಂದ್‌ಭಾಯಿ

ವರಾಡ್‌ನಲ್ಲಿ ಸುಮಾರು ಐದುಸಾವಿರ ಜನ ಮಹಾರರು, ಹಿಂದೂ ಸಮಾಜವು ತಮ್ಮ ಅಸ್ಪೃಶ್ಯತೆಯನ್ನು ಕಿತ್ತು ಹಾಕದಿದ್ದರೆ, ಧರ್ಮಾಂತರ ಮಾಡುವುದಾಗಿ ಎಚ್ಚರಿಕೆ ನೀಡಿದ್ದು ನಮ್ಮ ಪಾಠಕರಿಗೆ ತಿಳಿದೇ ಇದೆ. ಪ್ರಸಕ್ತ ಮಂಡಳಿಯ ಹಸ್ತಪತ್ರಿಕೆ ಮತ್ತು ಆ ಬಗ್ಗೆ ನಮ್ಮ ವಿಚಾರವನ್ನು ನಾವು ಈ ಮೊದಲೇ ತಿಳಿಯ ಪಡಿಸಿದ್ದೇವೆ. ಈ ವಿಷಯದಲ್ಲಿ ಶ್ರೀ ಜಯರಾಮ್ ನಾನಾ ವೈದ್ಯ ಅವರು, ಬರೋದಾದ "ಜಾಗೃತಿ" ಪತ್ರಿಕೆಯಲ್ಲಿ ಎರಡು ಲೇಖನಗಳನ್ನು ಬರೆದಿದ್ದಾರೆ. ಮೊದಲ ಲೇಖನ ನಮಗೆ ಓದಲು ಸಿಕ್ಕಾಗ ನಾವು ತಿಳಿದೂ ತಿಳಿದೂ ಅತ್ತ ನಿರ್ಲಕ್ಷ್ಯ ಮಾಡಿದೆವು. ಆದರೆ ಮತ್ತೆ ಪುನಃ ಸ್ವಲ್ಪ ಸ್ವಲ್ಪ ಓದಿಕೊಂಡಾಗ ಎರಡು ಶುದ್ಧ ಲೇಖನಗಳು ಇಷ್ಟವಾದವು. ಮಹಾರರಿತ್ತಂತಹ ಎಚ್ಚರಿಕೆಗಳು ಮುಷ್ಕಳವಾಗಿವೆ, ಎಂದು ವೈದ್ಯರು ಅಂದಿದ್ದಾರೆ. ಈ ಆಹ್ವಾನವನ್ನು ಸ್ವೀಕರಿಸುವುದೂ, ಬಿಡುವುದೂ, ಅಂತಹ ಎಚ್ಚರಿಕೆ ಕೊಟ್ಟವರಿಗೆ ಬಿಟ್ಟದ್ದು. ಆದರೆ, ವೈದ್ಯರು ತಮ್ಮ ಲೇಖನದಲ್ಲಿ ಮಾರಿಯಮ್ಮ, ಜಕ್ಕಣಿ ಅಂತಹ ದೇವತೆಗಳ ಉಪಾಸನೆಯಂತಹ ಅಪ್ರಸ್ತುತ ವಿಷಯಗಳನ್ನೆತ್ತಿ, ಅಸ್ಪೃಶ್ಯರಿಗೆ ತಮ್ಮ ಅಸ್ಪೃಶ್ಯತೆಯನ್ನು ಸಂಪೂರ್ಣ ನಾಶ ಮಾಡಬೇಕಾದರೆ, ಅವರು ಪ್ರಾರ್ಥನಾ ಸಮಾಜದ ಅನುಯಾಯಿಗಳಾಗಬೇಕೆಂದು ಕರೆನೀಡಿದ್ದಾರೆ. ಪ್ರಾರ್ಥನಾ ಸಮಾಜದ ಅಭಿಮತ ಇಲ್ಲಿ ಅಪ್ರಸ್ತುತ, ಮತ್ತು ಆ ಸಮಾಜವು ಅಸ್ಪೃಶ್ಯತಾ ನಿವಾರಣೆಗೆ ನಡೆಸಿದ ಯತ್ನವನ್ನು ನಾವು

ಅಲ್ಲಗಳೆಯುವುದೂ ಇಲ್ಲ. ಆದರೆ, ಮುಖ್ಯ ಪ್ರಶ್ನೆಯೆಂದರೆ ಅಸ್ಪೃಶ್ಯ ವರ್ಗವನ್ನು ತಮ್ಮದಾಗಿಸಿಕೊಳ್ಳುವ ಸಾಮರ್ಥ್ಯ ಪ್ರಾರ್ಥನಾ ಸಮಾಜಕ್ಕೆ ಇದೆಯೇ ಇಲ್ಲವೇ ಎಂಬುದು. ಆ ಸಾಮರ್ಥ್ಯ ಇಲ್ಲದಿದ್ದರೆ, ಅಸ್ಪೃಶ್ಯತಾ ನಿರ್ಮೂಲನದ ಉದ್ದೇಶ ಸಾಧಿಸುವುದು ಶಕ್ಯವಲ್ಲ, ಎಂಬುದು ಸ್ಪಷ್ಟ, ಅಸ್ಪೃಶ್ಯರು, ಮೋಕ್ಷಪ್ರಾಪ್ತಿಗಲ್ಲವಾದರೆ, ಅಸ್ಪೃಶ್ಯತೆಯ ಕಳಂಕ ಕಳೆಯಲೆಂದು ಧರ್ಮಾಂತರಕ್ಕೆ ಇಚ್ಛಿಸಬಹುದು. ಪ್ರಾರ್ಥನಾ ಸಮಾಜದ ಸಂಖ್ಯಾಬಲ ಕಡಿಮೆಯಿದೆ. ಹಿಂದೂ ಸಮಾಜವನ್ನೆದುರಿಸುವ ಸಾಮರ್ಥ್ಯ ಅದಕ್ಕಿಲ್ಲ. ಅದರ ಅನುಯಾಯಿಗಳು ಕೇಡಿಗಳಲ್ಲ, ಅಷ್ಟೇ ಅಲ್ಲ, ಪ್ರಾರ್ಥನಾ ಸಮಾಜದ ಸದಸ್ಯರನ್ನು ಹಿಂದೂಗಳೆಂದೇ ತಿಳಿಯಲಾಗುತ್ತದೆ. ಮತ್ತೂ ಹೇಳಬೇಕೆಂದರೆ, ಜಾತಿಭೇದದ ಬಂಧನವನ್ನು ಮುರಿಯುವವರು ಅವರಲ್ಲಿ ಕೈಬೆರಳೆಣಿಕೆಯಷ್ಟಾದರೂ ಇರುವರೋ ಇಲ್ಲವೋ ಎಂಬುದು ಸಂದೇಹ. ಇಂಥಾ ಸ್ಥಿತಿಯಲ್ಲಿ ಅಸ್ಪೃಶ್ಯರು ಪ್ರಾರ್ಥನಾ ಸಮಾಜ ಸೇರಿದರೂ ಅವರ ಅಸ್ಪೃಶ್ಯತೆ ನಾಶವಾಗುವುದೆಂತು? ಶ್ರೀ-ವೈದ್ಯ ಅವರು ಸಮತಾವಾದಿಗಳಿಗೂ, ಬಹಿಷ್ಕೃತ ವರ್ಗಕ್ಕೂ ಸಹಾನುಭೂತಿ ತೋರುವವರು. ಇದು ನಮಗೆ ಗೊತ್ತು. ಆದರೆ ಪ್ರಸ್ತುತ ವಿಷಯದಲ್ಲಿ ಸುಮ್ಮನಿರಬಾರದೇ, ಎಂದು ನಾವು ಅವರನ್ನು ಕೇಳಬೇಕಾಗಿದೆ.

* * * *

## ೩೨. ದೇವರು ಪೂಜಾರಿಗಳದ್ದೇ ಅಥವಾ ಭಕ್ತರದ್ದೇ?

ಮದರಾಸು ಇಲಾಖೆಯ ಈರೋಡು ದೇವಸ್ಥಾನ ಮಂಡಳಿ, ತಮ್ಮ ವಶದಲ್ಲಿರುವ ಐದು ತಾಲೂಕುಗಳಲ್ಲಿರುವ ದೇವಾಲಯಗಳನ್ನು ಅಸ್ಪೃಶ್ಯರ ಸಹಿತ ಎಲ್ಲ ಹಿಂದೂಗಳಿಗೂ ತೆರೆದಿಡುವ ನಿರ್ಧಾರ ಮಾಡಿದೆ. ಆದರೆ, ಇದನ್ನೊಲ್ಲದ ಜೀರ್ಣಮತವಾದಿಗಳು ಅಡ್ಡಿ ಒಡ್ಡುತ್ತಿದ್ದಾರೆ. ಈ ನಿರ್ಣಯದ ಬಗ್ಗೆ ತಿಳಿದಾಗ ಈರೋಡಿನ ಈಶ್ವರ ದೇವಾಲಯದತ್ತ ಹೋಗಲೆಂದು ಬಹಿಷ್ಕೃತ ವರ್ಗದ ಸಾಕಷ್ಟು ಜನರು ೧೯೩೨ರ ಎಪ್ರಿಲ್ ೪ ರಂದು ಒಟ್ಟಾಗಿ ಹೊರಟರು. ಇದರ ಸುಳಿವು ಹತ್ತಿದ ದೇವಳದ ಪೂಜಾರಿಗಳು ಮಂದಿರದ ಗರ್ಭಗುಡಿಯ ಬಾಗಿಲಿಗೆ ಬೀಗವಿಕ್ಕಿ, ಅಸ್ಪೃಶ್ಯರಿಗೆ ದೇವದರ್ಶನವಾಗದಂತೆ

ವ್ಯವಸ್ಥೆ ಮಾಡಿದರು. ಆಗ ಬಹಿಷ್ಕೃತರು ದೇವಳದ ಮೊಗಸಾಲೆಯಲ್ಲಿ ಕುಳಿತು, ಅಲ್ಲಿಂದಲೇ ದೇವರಿಗೆ ತೆಂಗಿನಕಾಯಿಯೇ ಮುಂತಾದ ವಸ್ತುಗಳ ನೈವೇದ್ಯ ಅರ್ಪಿಸಿ ಘಂಟೆ ಬಾರಿಸಿದರು. ಸಮಿತಿಯು ಈ ನಿರ್ಣಯವನ್ನು ಕೈ ಬಿಡದಿದ್ದರೆ, ತಾವು ರಾಜೀನಾಮೆ ಕೊಡುವುದಾಗಿ ಪೂಜಾರಿಗಳು ಬೆದರಿಕೆಯೊಡ್ಡಿದ್ದಾರೆ. ನಿರ್ಣಯವನ್ನು ವಿರೋಧಿಸುವ ಜೀರ್ಣಮತವಾದಿಗಳು ಹೊಡೆದಾಟಕ್ಕೂ ಮುಂದಾಗಿದ್ದಾರೆಂಬ ವದಂತಿಯಿದೆ. ಈರೋಡು ದೇವಳ ಸಮಿತಿಯು ತನ್ನ ನಿರ್ಣಯಕ್ಕೆ ಎಷ್ಟರವರೆಗೆ ಅಂಟಿಕೊಂಡಿರುವುದೆಂದು ನೋಡಬೇಕು. ದೇವರು ಪೂಜಾರಿಗಳದ್ದೇ, ಇತರ ಶ್ರೇಷ್ಠ ವರ್ಗದ್ದೇ ಇಲ್ಲಾ ಅಸ್ಪೃಶ್ಯರ ಸಹಿತ ಎಲ್ಲ ಹಿಂದೂಗಳದ್ದೇ ಎಂಬ ಪ್ರಶ್ನೆ ಎಷ್ಟು ಬೇಗ ಬಗೆಹರಿದರೆ ಅಷ್ಟು ಒಳ್ಳೆಯದು.

* * * *

## ೩೩. ಗೇಣಿ ಪದ್ಧತಿಯೂ, ಕೃಷಿಕ ವರ್ಗದ ಗುಲಾಮಗಿರಿಯೂ

ಭಾರತೀಯ ಬಹಿಷ್ಕೃತ ಸಮಾಜ ಸೇವಕ ಸಂಘದ ವಿದ್ಯಮಾನದಂತೆ ರತ್ನಗಿರಿ ಜಿಲ್ಲೆಯ ಖೇಡ್ ಮತ್ತು ಚಿಪ್ಳೂನ್ ಜಿಲ್ಲೆಗಳಲ್ಲಿನ ರತ್ನಗಿರಿ ಜಿಲ್ಲಾ ಬಹಿಷ್ಕೃತ ಪರಿಷತ್ತಿನ ದ್ವಿತೀಯ ಅಧಿವೇಶನವು ಕಳೆದ ದಿನಾಂಕ ೧೩ರಂದು ಚಿತ್ತೂನ್ ಮುಕ್ಕಾಮಿನಲ್ಲಿ ನಡೆಯಿತು.

ಈ ಅವಕಾಶವನ್ನುಪಯೋಗಿಸಿಕೊಂಡು ಕೃಷಿಕ ವರ್ಗದ ಒಂದು ಸಭೆಯೂ ಅಲ್ಲಿ ಎರಡನೇ ದಿನ ನಡೆಯಿತು. ಈ ಕೃಷಿಕ ಸಭೆಯಲ್ಲಿ ಕುಣಬಿ, ಮರಾಟೆ ಮತ್ತು ಮಹಾರ್ ಜಾತಿಗಳ ಜನರು ಸೇರಿದ್ದರು. ಮೊದಲೇ ಇಡೀ ಹಿಂದೂಸ್ತಾನದಲ್ಲಿ ಕೃಷಿಕ ವರ್ಗದ ಜನರ ಸ್ಥಿತಿ ಶೋಚನೀಯವಾಗಿದ್ದು, ಅದರಲ್ಲೂ ರತ್ನಗಿರಿ ಜಿಲ್ಲೆಯ ರೈತರ ವಿಶಿಷ್ಟ ಪರಿಸ್ಥಿತಿಯಿಂದಾಗಿ ವಿಶೇಷತಃ ಅಲ್ಲಿನ ಗೇಣಿ ಪದ್ಧತಿಯಿಂದಾಗಿ ಹಲವು ಪೀಳಿಗೆಗಳ ಜೀವನ ಸಂಕಷ್ಟಮಯವಾಗಿದೆ. ಕೊಂಕಣದಲ್ಲಿ ರತ್ನಗಿರಿ ಮತ್ತು ಕೊಲಾಬಾ ಜಿಲ್ಲೆಗಳಲ್ಲಿ ಗೇಣಿ ಪದ್ಧತಿ ಚಾಲ್ತಿಯಲ್ಲಿದೆ. ಮುಂಬಯಿ ಇಲಾಖೆಯಲ್ಲಿ ಬೇರೆಲ್ಲೂ ಈ ಪದ್ಧತಿ ಜಾರಿಯಲ್ಲಿಲ್ಲ. ರತ್ನಗಿರಿ ಮತ್ತು ಕೊಲಾಬಾ ಜಲ್ಲೆಗಳ ಗೇಣಿ ಪದ್ಧತಿಯಲ್ಲಿ ವ್ಯತ್ಯಾಸವಿದೆ. ಕೋಲಾಬಾಕಿಂತಲೂ ರತ್ನಗಿರಿ ಜಿಲ್ಲೆಯಲ್ಲಿ ಕೃಷಿಕರಿಗೆ ಹಲವು ಪರೀಕ್ಷೆಗಳಿಗೊಡ್ಡಿಕೊಂಡು ದೌರ್ಜನ್ಯ ಸಹಿಸಬೇಕಾಗುತ್ತದೆ, ಹಾಗೂ ಗೇಣಿಯ ಪ್ರಾಬಲ್ಯ ಅಧಿಕವಿದೆ. ರತ್ನಗಿರಿ ಜಿಲ್ಲೆಯಲ್ಲಿ ಮಾಲ್ವಣ್ ಮತ್ತು ವೆಂಗುರ್ಲಿ ತಾಲೂಕುಗಳನ್ನು ಬಿಟ್ಟು ಉಳಿದೆಲ್ಲ ತಾಲೂಕುಗಳಲ್ಲಿ ಹೆಚ್ಚು ಕಡಿಮೆ ಗೇಣಿ ಪದ್ಧತಿಯ ಪ್ರಾಬಲ್ಯವಿದೆ. ರತ್ನಗಿರಿ ಜಿಲ್ಲೆಯಲ್ಲಿ ಇದು ಹೆಚ್ಚಾಗಿರುವಲ್ಲಿ ಹಾಗೂ ಕಡಿಮೆ ಹಾಗೂ ಇಲ್ಲದೇ ಇರುವಲ್ಲಿ ಕೃಷಿಕರ ಸ್ಥಿತಿಯಲ್ಲಿ ಗಾಢ ವ್ಯತ್ಯಾಸ ಕಂಡು ಬರುತ್ತದೆ. ಗೇಣಿ ಪದ್ಧತಿಯಡಿಯಲ್ಲಿ ಕೃಷಿಕರ ಸಾಂಪತ್ತಿಕ ಸ್ಥಿತಿ ಕೆಟ್ಟದಾಗಿರುವಂತೆ ಇತರ ವಿಷಯಗಳಲ್ಲೂ ಅವರ ಅವನತಿ ಕಂಡುಬರುತ್ತದೆ. ವಿಶೇಷವಾಗಿ ಸ್ವಾಭಿಮಾನ, ಉತ್ಸಾಹ, ಧೈರ್ಯ, ಇಂತಹ ಮನುಷ್ಯರ ಉನ್ನತಿಗೆ ಅವಶ್ಯವಾದ ಗುಣಗಳು ಗೇಣಿ ಪದ್ಧತಿಯ ಗುಲಾಮಗಿರಿಯಲ್ಲಿ ನಷ್ಟವಾಗಿ ಹೋಗುತ್ತವೆ. ಗೇಣಿ ಪದ್ಧತಿಯ ಹಿಂಸಾತ್ಮಕತೆಯ ಅರಿವು, ಅದರ ಮಾಹಿತಿ ಇರುವವರಿಗೆ ಹೊರತು ಬೇರೆಯವರ ಕಲ್ಪನೆಗೆ ನಿಲುಕುವುದೂ ಸಾಧ್ಯವಿಲ್ಲ. ಇದು ಹಳ್ಳಿಯ ಚಿಕ್ಕ ಸುಲ್ತಾನನಂತೆ. ಹಳ್ಳಿಗಳಲ್ಲಿ ವಿಭಿನ್ನ ಜನರ ಮಧ್ಯೆ ಮತ್ತು ಅವರ ಅನೇಕ ಕುಟುಂಬಗಳ ಮಧ್ಯೆ ವಿಭಾಗಿಸಲ್ಪಟ್ಟಾಗ ಅಂತಹ ಹಲವು ಸುಲ್ತಾನರರ ದೌರ್ಜನ್ಯವನ್ನು ಸಹಿಸಬೇಕಾಗಿ ಬರುತ್ತದೆ. ಕೃಷಿಕರು ಸರಕಾರಕ್ಕೆ ಕೊಡುವುದಲ್ಲದೆ ಗೇಣಿಯ ಹಕ್ಕುಗಳಿಗಾಗಿ ಇತರ ಸಂದಾಯವನ್ನೂ ಮಾಡಬೇಕಾಗುತ್ತದೆ. ರೈತವಾರಿ ಪದ್ದತಿಯಲ್ಲಿ ಸರಕಾರಕ್ಕೆ ಮಾತ್ರ ದೇಣಿಗೆ ಕೊಡಬೇಕಾಗ್ತದೆ. ಗೇಣಿ ಪದ್ಧತಿಯಲ್ಲಿ ಈ ರೀತಿ ಕೃಷಿಕರ ಮೇಲೆ ಕರಭಾರ ಬೀಳುತ್ತದೆ. ಇದಲ್ಲದೆ ನಾನಾರೀತಿಯಲ್ಲಿ ಅವರಿಂದ ಹಣ ಕೀಳಲಾಗುತ್ತದೆ.

ಹಣ ಸಲ್ಲಿಸಿದರೂ ರಸೀತಿ ಕೊಡದೆ ಇರುವುದು-ಹೀಗೆ ಗೇಣಿದಾರರ ಜುಟ್ಟು ಕೈ ಯಲ್ಲಿರಿಸಿಕೊಂಡು ಸತಾಯಿಸಲಾಗುತ್ತದೆ. ಒಡೆಯ ಬ್ರಾಹ್ಮಣನಾಗಿದ್ದರಂತೂ ಈತನಿಗೆ ತನ್ನ ಹಿತ್ತಿಲ ಹಲಸೂ-ಒಂದಾದರೂ ಸಿಗುವಂತಿಲ್ಲ. ಪಲ್ಯವೂ ಅಷ್ಟೇ, ಕುಂಬಳದ ಬಳ್ಳಿಯಲ್ಲಿ

ಕುಂಬಳವೂ ಉಳಿವಂತಿಲ್ಲ.

ಗೇಣಿಯೊಡೆಯನು ಮರಾಠನೋ, ಮುಸಲ್ಮಾನನೋ ಆಗಿದ್ದರೆ , ಕೋಳಿ ಸಾಕುವಂತಿಲ್ಲ. ಅಂದರೆ, ಆತನಿಗೆ ಯಾವುದರಲ್ಲೂ ಸ್ವಾತಂತ್ರ್ಯವಿಲ್ಲ. ಸ್ವಾಮಿತ್ವವಿಲ್ಲ. ಅವನ ಮನೆಯಲ್ಲಿರುವುದೆಲ್ಲವೂ ಅವನ ಒಡೆಯನದ್ದು! ಒಂದೊಮ್ಮೆ ರೈತ, ಗೇಣಿಧಣಿಯ ದೌರ್ಜನ್ಯವನ್ನು ಎದುರಿಸಿ ಪ್ರತೀಕಾರಕ್ಕೆಳಸಿದರೆ, ಅವನನ್ನು ದಮನಿಸುವ ಅನೇಕ ಸಾಧನಗಳು ಆ ಒಡೆಯನಲ್ಲಿವೆ. ಒಂದೆಂದರೆ, ಗ್ರಾಮದ ಪೋಲೀಸ್ ಪಾಟೀಲ ಈತನ ಕೈಯೊಳಗೆ ಇರುತ್ತಾನೆ. ಹೀಗಾಗಿ ಬೆದರಿಸುವ, ಸುಳ್ಳು ಆರೋಪ ಹೇರಿ ಪ್ರತೀಕಾರ ತೀರಿಸುವ ದಾರಿ ಮುಷ್ಕಳವಾಗಿದೆ. ಇನ್ನೊಂದೆಂದರೆ ರೈತನ ದನಗಳು ಮೇಯಲು ಹೋದಾಗ ಹಿಡಿದು ಗೂಟಕ್ಕೆ ಕಟ್ಟುವುದು, ದನಗಳು ಮೇಯುವ ಬಯಲಿನ ಮಾಲಿಕತ್ವ ಗೇಣಿಯೊಡೆಯನದ್ದೇ ಆದಕಾರಣ, ಭೂಮಿಯುಳಲು, ರೈತನಿಗೆ ದನ,ಎತ್ತುಗಳು ಅನಿವಾರ್ಯವಾದ ಕಾರಣ, ಸ್ವಾಭಾವಿಕವಾಗಿ ಅವನು ಧಣಿಯ ಮೊರೆ ಹೋಗಬೇಕಾಗುತ್ತದೆ. ಗೇಣಿಯೊಡೆಯನ ದೌರ್ಜನ್ಯದ ಇನ್ನೊಂದು ಎಲ್ಲಕ್ಕೂ ಹೆಚ್ಚು ಅನಿಷ್ಟಕರ ನಿದರ್ಶನ, ರೈತರಿಂದ ಆತ ಪಡೆವ ವೇತನರಹಿತ ದುಡಿಮೆ, ಕಾನೂನು ಇದನ್ನು ನಿಷೇಧಿಸಿದ್ದರೂ ಗೇಣಿಯೊಡೆಯ ತನ್ನ ಸಾಮರ್ಥ್ಯದಿಂದ ಈ ನಿಷೇಧಕ್ಕೆ ಹೊರತಾಗಿ ಇರಬಲ್ಲವ, ತನ್ನ ಸ್ವಂತ ಜಮೀನಿನಲ್ಲಿ ರೈತನನ್ನೂ, ಅವನ ಕುಟುಂಬವನ್ನೂ ದುಡಿಸಿಕೊಂಡು, ಹೊಟ್ಟೆತುಂಬ ತಕ್ಕ ಮಜೂರಿಯನ್ನೂ ನೀಡುವುದಿಲ್ಲ. ಅಕ್ಷರಶಃ ಅವನು ಗ್ರಾಮದ ಸಾಹುಕಾರನಂತಿರುತ್ತಾನೆ. ರೈತರ ಮಕ್ಕಳಿಗೆ ಶಿಕ್ಷಣ ಸಿಗದಂತೆ ಅವನು ಎಲ್ಲ ಪ್ರಯತ್ನವನ್ನೂ ಮಾಡುತ್ತಾನೆ. ಕಾರಣ, ರೈತ ಓದಲು ಬರೆಯಲು ಕಲಿತರೆ ತನ್ನ ಒಡೆತನವನ್ನು ಹೀಗೆ ಸಾಗಗೊಡುವವನಲ್ಲ ಎಂಬುದು ಅವನಿಗೆ ಖಂಡಿತ ತಿಳಿದಿದೆ. ರೈತನ ಮೇಲೆ ನಡೆವ ಸಾಮಾಜಿಕ ದೌರ್ಜನ್ಯ ಹೇಳುವುದೇ ಬೇಡ. ಮುಂಬಯಿಗೆ ಬಂದು ಹಿಂದಿರುಗಿದ ಕುಣುಬಿಯೊಬ್ಬನಿಗೆ ಧೋತರ, ಕೋಟು, ರುಮಾಲು ಧರಿಸುವ ಸಾಮರ್ಥ್ಯ ಬಂದಿದ್ದರೂ ಅಲ್ಲಿ ಅವನು ಧೋತರ ಬಿಟ್ಟು ಲಂಗೋಟಿ ಕಟ್ಟಿಕೊಳ್ಳಬೇಕಾಗ್ತದೆ. ಅವನಿಗೆಂದು ನಿರ್ಧಾರಿತವಾದ ಹೀನ ದರ್ಜೆಯ ಪೋಷಾಕನ್ನೇ ಅವನು ತೊಡಬೇಕೆಂದು ಧಣಿಯ ತಿಳುವಳಿಕೆ, ಕುಡುಬಿಗಳ ಹೆಂಗಸರು ಅವರದೇ ವಿಶಿಷ್ಟ ಪದ್ಧತಿಯಲ್ಲಿ ಸೀರೆ ಸುತ್ತಿಕೊಳ್ಳಬೇಕು. ಮನುಜ ಜಾತಿಯ ಗುರುತಾದ ಈ ಗುಲಾಮಗಿರಿ ಈ ಇಪ್ಪತ್ತನೆಯ ಶತಮಾನದಲ್ಲೂ ನಡೆದಿರುವುದು

ನಿಜಕ್ಕೂ ಹಿಂದೂ ಸಮಾಜಕ್ಕೆ ಲಜ್ಜೆಗೇಡಿನ ವಿಷಯ. ಸದ್ಯ, ರೈತ ಕಾರ್ಮಿಕರ ಪಕ್ಷದ ಚಳವಳವೆಂದು ವರ್ತಮಾನ ಪತ್ರಗಳಲ್ಲೂ, ಸಭೆಗಳಲ್ಲಿನ ಭಾಷಣಗಳಲ್ಲೂ ಕೇಳಿ ಬರುತ್ತದೆ. ಈ ಚಳವಳಿಗಳು ಈಗೊಂದು ಫ್ಯಾಶನ್ ಆಗಿಬಿಟ್ಟಿದೆ. ಈ ಗೇಣಿ ಪದ್ಧತಿಯ ಬಗ್ಗೆ ಈಗ ಲಕ್ಷ್ಯ ಕೊಡುವವರಿಲ್ಲ; ಅಷ್ಟೇ ಅಲ್ಲ, ರೈತ ಕಾರ್ಮಿಕ ಚಳವಳಿಯ ಗುಣಗಾನ ಮಾಡುವ ವರ್ತಮಾನ ಪತ್ರಿಕೆಗಳು ಹಲವು, ಗೇಣಿಪದ್ದತಿಯನ್ನು ಸಮರ್ಥಿಸುವುದಲ್ಲದೆ ರೈತರಿಗೆ ಅದರ ವಿರುದ್ಧ ಇರುವ ತಕರಾರಿನ ಬಗ್ಗೆ ಯಾವುದೇ ಪ್ರಚಾರ ಮಾಡುವುದಿಲ್ಲ. ಈಗಿನ ಪರಿಸ್ಥಿತಿಯಲ್ಲಿ ರೈತರಿಗೆ ನ್ಯಾಯ ಸಿಗುವುದು ಕಷ್ಟವಿದೆ. ಒಂದೆಂದರೆ, ಬಹುತೇಕ ಹಳ್ಳಿಗಳಲ್ಲಿ ಗೇಣಿಯೊಡೆಯನು ಗ್ರಾಮ ಪಟೇಲನೇ ಇರುತ್ತಾನೆ. ತಾಲೂಕು ಹಾಗೂ ಜಿಲ್ಲೆಯ ಅಧಿಕಾರಿಗಳಲ್ಲಿ ಹೆಚ್ಚಿನವರು ಆತನ ಬಂಧುಗಳೇ ಇರುತ್ತಾರೆ. ಆತನ ವಿರುದ್ಧ ಪೋಲೀಸ್ ಕೇಸ್ ದಾಖಲಿಸಬೇಕೆಂದರೆ ವಕೀಲಿಗೆ ಯಾರೂ ಸಿದ್ಧರಿರುವುದಿಲ್ಲ. ಗೇಣಿಯು ಮೂಲಗೇಣಿಯೋ, ಇಲ್ಲಾ ಚಾಲಗೇಣಿಯೋ ಎಂದು ವಿಚಾರಿಸಿದರೆ, ಮತ್ತು ಗೇಣಿ ಪದ್ಧತಿಯ ಇದುವರೆಗಿನ ಇತಿಹಾಸವನ್ನು ಚಿಕಿತ್ಸಕ ದೃಷ್ಟಿಯಿಂದ

* * * *



ನೋಡಿದರೆ, ಗೇಣಿಪದ್ಧತಿಯು ಮೆಲ್ಲ ಮೆಲ್ಲನೆ ಹೆಜ್ಜೆ ಪಸರಿಸುತ್ತಾ ರೈತನ ಹಕ್ಕುಗಳನ್ನು ಕಸಿದು, ಅವನನ್ನು ನಿರ್ಮಾಲ್ಯದಂತಾಗಿಸಿದೆ. ದೇಶದೆಲ್ಲೆಡೆ ಪಾಟೀಲರು ಇರುವಂತೆ ಕೊಂಕಣದಲ್ಲಿ ಈ ಪಟೇಲರು. ಹಳ್ಳಿಗಳಲ್ಲಿ ರೈತರನ್ನು ತಂದು ನೆಲೆ ನಿಲ್ಲಿಸಿದ್ದಕ್ಕಾಗಿ ಅವರಿಗೆ ಗ್ರಾಮಾಡಳಿತದಲ್ಲಿ ಕೆಲವು ವಿಶೇಷ ಹಕ್ಕುಗಳನ್ನು ನೀಡಲಾಯ್ತು. ಜಮೀನು ತೆರಿಗೆಯೆಂದು ಪಟೇಲನು ನಿರ್ಧರಿಸಿದ ಮೊತ್ತವನ್ನು ರೈತನಿಂದ ವಸೂಲು ಮಾಡಿ, ಸರಕಾರಕ್ಕೆ ಸಂದಾಯ ಮಾಡಿ, ಉಳಿದ ಮೊತ್ತವನ್ನು ತಾನೇ ಇಟ್ಟುಕೊಳ್ಳುವನು. ಆತ ಜಮೀನಿನ ಒಡೆಯನಲ್ಲ; ರೈತನೇ ಜಮೀನಿನೊಡೆಯ. ಪಟೇಲನು ಜಮೀನಿನೊಡೆಯನಲ್ಲವೆನ್ನಲು ಸಾಕಷ್ಟು ಸಬಲ ಪುರಾವೆಗಳು ಸಿಗುತ್ತವೆ. ಆತ ಗ್ರಾಮದ ಮಾಲಿಕನೆನ್ನಲು ಎಲ್ಲೂ ಸಾಕ್ಷ್ಯಗಳು ಸಿಗುವುದಿಲ್ಲ. ಕಂದಾಯ ವಸೂಲು ಮಾಡಲು ಪಟೇಲನಿಗೆ ಸರಕಾರದಿಂದ ವೇತನ ಸಿಗುತ್ತದೆ. ವೇತನ ಪಡೆವವನು ಮಾಲೀಕ ಹೇಗಾದಾನು? ನೌಕರರಿಗೆ ಸಂಬಳ ಕೊಡಲಾಗುತ್ತದೆಯೇ ಹೊರತು, ಮಾಲೀಕರಿಗಲ್ಲ. ಗ್ರಾಮ ಲೆಕ್ಕಿಗನಾಗಿ ಅವನು ಮೆಲ್ಲ ಮೆಲ್ಲ ರೈತರ ಹಕ್ಕನ್ನು ಕಸಿಯುತ್ತಾ ಬಂದು, ಕಾಯ್ದೆಯಂತೆ ತನಗಿಲ್ಲದ ಹಕ್ಕನ್ನು

ವಹಿವಾಟಿನ ಮೂಲಕ ಕೈವಶ ಮಾಡಿಕೊಂಡ. ಪಟೇಲಿಕೆಯ ಹಕ್ಕು ವಂಶ ಪಾರಂಪರ್ಯವಾಗಿದ್ದರೂ, ಅಡವಿನ ಮೇಲೆ ಅದನ್ನು ಮಾರಬಹುದಾಗಿದೆ. ಅದರಿಂದಾಗಿ ಮರಾಠರೇ ಮುಂತಾದ ಬ್ರಾಹ್ಮಣೇತರ ಪಟೇಲರ ಸಂಖ್ಯೆ ಕಡಿಮೆಯಾಗಿ ಬ್ರಾಹ್ಮಣರು, ಕಾಯಸ್ಥರು ಮುಂತಾದ ಲೇಖಿಗರ ಸಂಖ್ಯೆ ಹೆಚ್ಚಾಯ್ತು. ಗೇಣಿ ಪದ್ಧತಿಯಲ್ಲಿ ಒಕ್ಕಲಿನ ಅನೇಕ ಪ್ರಕಾರಗಳಿವೆ, ಹಾಗೂ ಅವರ ದರ್ಜೆಯಲ್ಲೂ ವ್ಯತ್ಯಾಸವಿದೆ. ಆ ಬಗ್ಗೆ ಮಾಹಿತಿಗೆ ಇದು ಸ್ಥಳವಲ್ಲ. ಗೇಣಿಪದ್ಧತಿಯಲ್ಲಿ ಖಾಯಂ ಒಕ್ಕಲುಗಳಿಗೆ ಅಂತಹ ತೊಂದರೆಯೇನೂ ಆಗುವುದಿಲ್ಲ. ತಮ್ಮ ಮಟ್ಟಿಗೆ ಅವರು ಅಲ್ಪ ಪ್ರಮಾಣದ ಅಧಿಕಾರ ಹೊಂದಿರುವಂತಿರುತ್ತಾರೆ. ಪಟೇಲನ ಖಾಸಗಿ ಜಮೀನು ಅವನದೇ ಮಾಲಿಕತ್ವದ್ದು. ಆದರೆ ಹೇಗೆ ಸಂಸ್ಥಾನಿಕರು ಸಂಸ್ಥಾನದ ಕಾರುಭಾರದಿಂದ ತಮ್ಮ ಸ್ವಂತ ಸಂಪತ್ತಿಯನ್ನು ಹುಟ್ಟು ಹಾಕುತ್ತಾರೋ, ಹಾಗೆಯೇ ಪಟೇಲರು ತಮ್ಮ ಪಟೇಲತನದ ಲಾಭ ಪಡೆದು, ಹೆಚ್ಚಿನ ಸಂಪಾದನೆ ಗೈದಿದ್ದಾರೆ. ಈ ಖಾಸಗಿ ಜಮೀನಿನ ರೈತನೆಂದರೆ ಶುದ್ಧ ಪರಕೀಯ , ಅವನಿಂದ ಒಂದುವರ್ಷದ ಒಪ್ಪಂದದ ಮೇಲೆ ಜಮೀನಿನ ವಹಿವಾಟನ್ನು ವಹಿಸಿಕೊಳ್ಳಬೇಕು.

ಅನೇಕ ಕಲಹಗಳಿಂದ ಈ ವರೆಗೆ ಸಾವಿರಾರು ರೈತರನ್ನು ಪರಕೀಯರಾಗಿಸಿದ್ದರಿಂದ ಈಗಲೂ ಆ ಕ್ರಮ ಜಾರಿಯಲ್ಲಿದೆ. ರೈತನು ಅಶಿಕ್ಷಿತನೂ, ಅಜ್ಞಾನಿಯೂ, ಬಡವನೂ ಆಗಿರುವುದರಿಂದ ಪಟೇಲನಿಗೆ ಲಾಭವಾಗಿ , ರೈತನು ತನ್ನ ಹಕ್ಕನ್ನು ಕಳಕೊಳ್ಳುತ್ತಾನೆ. ಇದರಿಂದ ರೈತರಲ್ಲಿ ಅಸಂತೋಷ ಹೆಚ್ಚುತ್ತಿದೆ. ಇಂದಲ್ಲ ನಾಳೆ ತಮ್ಮ ಗತಿಯಾಗುತ್ತದೆಂದು ಹೆಚ್ಚಿನ ಗೇಣಿಯೊಡೆಯರಿಗೆ ತಿಳಿದು ಹೋಗಿದೆ. ಹೀಗಾಗಿ ಖಾಸಗಿ ಜಮೀನು ಹೆಚ್ಚಿಸಿ ಕೊಳ್ಳಲು ಹಾಗೂ, ಹಕ್ಕುದಾರರಾದ ರೈತರನ್ನು ಪರಕೀಯರಾಗಿಸಲು ಅವರ ಯತ್ನ ಜೋರಾಗಿಯೇ ನಡೆದಿದೆ. ಗೇಣಿ ಪದ್ಧತಿಯಿರುವಲ್ಲಿ ರೈತರಿಗೆ ಮನುಷ್ಯತ್ವದ ಹಕ್ಕನ್ನು ಪುನಃ ಕೊಡಿಸುವಂತೆ ಆಗಬೇಕಾದರೆ ಗೇಣಿ ಪದ್ದತಿಯು ಸಂಪೂರ್ಣ ನಿರ್ಮೂಲನವಾಗಬೇಕು. ಈಗ ಗೇಣಿ ಪದ್ದತಿಯ ಕಾಯ್ದೆಗಳಿವೆ. ಅವು ಅತ್ಯಂತ ಅಪೂರ್ಣವಿವೆ. ಆದರೆ, ಕಾಯ್ದೆಯ ಪಾಲನೆ ಯೋಗ್ಯರೀತಿಯಲ್ಲಿ ಆಗುವುದು ಸಾಧ್ಯವಲ್ಲ ಮತ್ತು ಎಲ್ಲಿಯವರೆಗೆ ಗೇಣಿ ಪದ್ಧತಿ ಇಲ್ಲದಾಗುವುದಿಲ್ಲವೋ, ಎಲ್ಲಿಯವರೆಗೆ ಅದರ ಉಗುರುಗಳನ್ನು ಕಿತ್ತು ಬಿಸುಡಲಾಗುವುದಿಲ್ಲವೋ, ಹಲ್ಲುಗಳನ್ನು ಕೀಳಲಾಗುವುದಿಲ್ಲವೋ, ಅಲ್ಲಿಯವರೆಗೆ ಆ ಕಾಯ್ದೆಯನ್ನು

ಯೋಗ್ಯ ರೀತಿಯಲ್ಲಿ ಅನುಷ್ಠಾನಕ್ಕೆ ತರುವುದು ಅಸಾಧ್ಯವೇ ಸರಿ. ಈ ಕಾಯ್ದೆಯ ತಾತ್ಕಾಲಿಕ ತಿದ್ದುಪಡಿಯಿಂದ ಯಾವ ಉಪಯೋಗವೂ ಇಲ್ಲ. ಈ ಕುರಿತು ಡಾ. ಅಂಬೇಡ್ಕರರು ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಗೇಣಿಪದ್ಧತಿಗೆ ಸಂಬಂಧಿಸಿ ಒಂದು ಕಟುವಾದ ಬಿಲ್ ಪ್ರಸ್ತುತ ಪಡಿಸಲು ನಿರ್ಧರಿಸಿದ್ದಾರೆ, ಮತ್ತು ಹಾಗೆಂದು ಚಿಪ್ಳೂನ್‌ನ ರೈತ ಸಭೆಯಲ್ಲಿ ಪ್ರಚುರ ಪಡಿಸಿದ್ದಾರೆ.

* * * *

### ೩೪. ಪುನಃ ಎಲ್ಲ ಗಿರಣಿಗಳ ಮುಷ್ಕರ

ಕಳೆದ ವರ್ಷ ಮುಂಬಯಿಯಲ್ಲಿ ಗಿರಣಿಗಳ ಸಾರ್ವತ್ರಿಕ ಮುಷ್ಕರ ಆರಂಭವಾಗಿ ಆರು ತಿಂಗಳು ನಡೆಯಿತು. ಅದು ಹೇಗೋ ಮುಗಿದು, ಗಿರಣಿಗಳು ಪುನಃ ಆರಂಭವಾದರೂ, ಯಾವ್ಯಾವುದೋ ನಿಮಿತ್ತದಿಂದ ವಿಭಿನ್ನ ಗಿರಣಿಗಳಲ್ಲಿ ಮತ್ತು ಅವುಗಳ ಘಟಕಗಳಲ್ಲಿ ಮುಷ್ಕರಗಳು ನಡೆಯುತ್ತಲೇ ಇದ್ದವು. ಕಳೆದ ದೊಡ್ಡ ಮುಷ್ಕರದ ಒಪ್ಪಂದದ ವೇಳೆ ಸರಕಾರವು ಚರ್ಚೆಗಾಗಿ ನಿಯಮಿಸಿದ ಫಾಸೆಟ್ ಕಮಿಟಿಯ ವರದಿಯು ಪ್ರಚುರವಾಗಿ, ಗಿರಣಿಯ ಮಾಲೀಕ ಮತ್ತು ನೌಕರರ ಮಧ್ಯೆ ಆಗಾಗ ಉದ್ಭವಿಸುವ ಚರ್ಚೆಗೆ ಉತ್ತರ ಪಡೆಯುವ ಶಾಶ್ವತ ವ್ಯವಸ್ಥೆ ಆದೀತೆಂಬ ಆಶಾಭಾವನೆ ಇರುವಾಗಲೇ ಎರಡನೇ ದೊಡ್ಡ ಮುಷ್ಕರದ ಕಲ್ಪನೆ ಎದ್ದಿದೆ. ವಾಡಿಯಾ ಬಂಧುಗಳ ಮೋರ್‌ಬಾಗ್, ಟೆಕ್ಸ್ಟೈಲ್ ಮತ್ತು ಸೆಂಚುರಿ - ಈ ಮೂರು ಮಿಲ್‌ಗಳ ಸುಮಾರು ಹದಿನೆಂಟು ಜನರನ್ನು, ಮಾಲೀಕರು ಕೆಲಸಕ್ಕೆ ತೆಗೆದುಕೊಳ್ಳದ್ದರಿಂದ ಆ ಗಿರಣಿಗಳ ಹದಿನೈದು, ಹದಿನಾರು ಸಾವಿರ ಜನರ ಮುಷ್ಕರ ನಡೆಯಬೇಕಾಯ್ತು ಮತ್ತು ಗಿರಣಿ ಕಾರ್ಮಿಕ ಯೂನಿಯನ್ ಮತ್ತು ಮಾಲೀಕರ ನಡುವೆ ಒಪ್ಪಂದವಾಗಿ ಈ ಮುಷ್ಕರ ಮುಗಿಯುವಷ್ಟರಲ್ಲಿ, ಯೂನಿಯನ್, ಏಪ್ರಿಲ್ ದಿನಾಂಕ ೨೬ ರಿಂದ ಮುಂಬಯಿಯ ಎಲ್ಲ ಗಿರಣಿಗಳ ಮುಷ್ಕರಕ್ಕೆ ಕರೆ ನೀಡಿತು, ಹದಿನೈದು ಸಾವಿರ ಜನರ ಮುಷ್ಕರವನ್ನು

ಯಶಸ್ವಿಯಾಗಿಸುವುದು ಯೂನಿಯನ್‌ಗೆ ಸಾಧ್ಯವಾಗಲಿಲ್ಲ. ಹಾಗೆಂದೇ ಎರಡೂವರೆ ಲಕ್ಷ ಜನರ ಮುಷ್ಕರ ಕರೆದು ತಮ್ಮ ಮರ್ಯಾದೆ ಉಳಿಸಲು ಯೂನಿಯನ್ ನಾಯಕರ ಪ್ರಯತ್ನ ನಡೆದಿದೆ.

ನೌಕರನೊಬ್ಬ ಹದಿನೈದು ದಿನ ಕೆಲಸಕ್ಕೆ ಬರಲು ಸಾಧ್ಯವಾಗದೆ ಮತ್ತೆ ಬಂದಾಗ ಅವನನ್ನು ಕೆಲಸಕ್ಕೆ ತೆಗೆದುಕೊಳ್ಳದೆ ಹೋದುದನ್ನು ವಿರೋಧಿಸಿ ಈ ಮುಷ್ಕರ. ಆ ನಂತರ ಟೆಕ್ಸ್ಟೈಲ್ ಮತ್ತು ಸೆಂಚುರಿ ಮಿಲ್‌ಗಳಿಂದಲೂ ಕೆಲ ಜನರನ್ನು ಕೆಲಸದಿಂದ ತೆಗೆಯಲಾಯ್ತು. ಸೆಂಚುರಿ ಮಿಲ್‌ನಲ್ಲಿ ಒಬ್ಬ ಸ್ಥಳೀಯ ಯೂನಿಯನ್ ನಾಯಕನು ಹತ್ತಿ ಮಗ್ಗಗಳನ್ನು ಸ್ವಚ್ಛಗೊಳಿಸುತ್ತಾ ಎಂದಿಗಿಂತ ಒಂದು ಗಂಟೆ ಮುಂಚಿತವಾಗಿಯೇ ಎಲ್ಲ ಖಾತೆಗಳನ್ನೂ ಗಿರಣಿಯ ಅಧಿಕಾರಿಗಳೊಡನೆ ವಿಚಾರಿಸದೇ ತನ್ನ ಆಣತಿಯಿಂದಲೇ ಮುಚ್ಚಿದನೆಂಬ ಕಾರಣಕ್ಕೆ ಅವನನ್ನು ಕೆಲಸದಿಂದ ವಜಾ ಮಾಡಿದಾಗ, ಅದನ್ನು ವಿರೋಧಿಸಿ ಮುಷ್ಕರ ಮಾಡಿದ ಇತರರನ್ನೂ ಕೆಲಸದಿಂದ ತೆಗೆಯಲಾಯ್ತು. ಟೆಕ್ಸ್ಟೈಲ್ ಮಿಲ್‌ನಲ್ಲಿ ರಜೆಯಿರದೆಯೇ ಗೈರುಹಾಜರಾದುದಕ್ಕೆ ಮೂರು ನಾಲ್ಕು ಜನರನ್ನು ಖಾತೆಯ ಅಧಿಕಾರಿಗಳು ಕೆಲಸಕ್ಕೆ ಬರದಂತೆ ಮಾಡಿದರು. ಮೋರ್‌ಬಾಗ್‌ನ ಒಬ್ಬ ವ್ಯಕ್ತಿಯನ್ನು ಕೆಲಸಕ್ಕೆ ತೆಗೆದುಕೊಳ್ಳದಿದ್ದಾಗ, ರಜೆ ತೆಗೆದುಕೊಳ್ಳದೆಯೇ ಗೈರುಹಾಜರಾದ್ದರಿಂದ ಹತ್ತು ನಂಬರ್‌ನ ದಪ್ಪ ನೂಲು ಆಗ ಖಾತೆಯಲ್ಲಿ ತಯಾರಾಗುತ್ತಿದ್ದು, ಮನಃ ಸಪೂರ ನೂಲು ಸಿದ್ಧವಾಗುವಾಗ ಹಿಂದಿರುಗಿದ ಆತ ತನ್ನ ಮಗ್ಗವನ್ನು ಕೇಳತೊಡಗಿದ. ಆದರೆ, ಅದಾಗಲೇ ಬೇರೊಬ್ಬ ವ್ಯಕ್ತಿ ಅವನ ಸ್ಥಾನದಲ್ಲಿ ಖಾಯಂ ನೌಕರನಾಗಿ ನೇಮಿಸಲ್ಪಟ್ಟಿದ್ದನಾದ್ದರಿಂದ ಅವನಿಗೆ ಆ ಮಗ್ಗವನ್ನು ಕೊಡುವುದಾಗಲಿಲ್ಲವೆಂದು ಮಾಲೀಕರ ಹೇಳಿಕೆ.



ಆದರೆ, ವಿರುದ್ಧ ಪಕ್ಷದ ಯೂನಿಯನ್‌ನವರು ಹೇಳುವುದು ಬೇರೆಯೇ, ಆತ ರಜೆ ತೆಗೆದುಕೊಂಡೇ ಗೈರುಹಾಜರಾಗಿದ್ದ; ಆದರೆ ಆತ ಆ ಗಿರಣಿಯಲ್ಲಿ ನಾಯಕನಾಗಿರುವುದರಿಂದಲೇ ಆತನನ್ನು ಕೆಲಸಕ್ಕೆ ತೆಗೆದುಕೊಳ್ಳಲಾಗಲಿಲ್ಲ, ಎಂದು.

ಗಿರಣಿಯಲ್ಲಿ ರಜೆಗಾಗಿ ಲಿಖಿತ ಅರ್ಜಿ ಸಲ್ಲಿಸುವ ಕ್ರಮ ಇಲ್ಲದುದರಿಂದ, ಮತ್ತು ರಜೆಯ ದಾಖಲೆಯಿಡುವ ಪದ್ಧತಿಯೂ ಇಲ್ಲದ ಕಾರಣ, ಮಾಲೀಕರು ಅನ್ನುವುದು ನಿಜವೋ, ಇಲ್ಲ, ಯೂನಿಯನ್‌ನವರು ಹೇಳುವುದು ನಿಜವೋ

ಎಂದು ತಿಳಿಯಲು ಲಿಖಿತ ಪರಾವೆ ಎಲ್ಲೂ ಇಲ್ಲ. ಉಭಯ ಪಕ್ಷದಲ್ಲೂ ಇರುವ ಪುರಾವೆ ಕೇವಲ ಬಾಯಿಮಾತಿನದು. ಇಷ್ಟೇ ಅಲ್ಲ, ಯೂನಿಯನ್‌ನ ಅಂದಿನ ಧುರೀಣ ಡಾಂಗೆ, ಆಳ್ವೆ, ಕಾಸ್ಲೆ ಮುಂತಾದವರು ಮೋರ್‌ಬಾಗ್ ಗಿರಣಿಯ ಕಳೆದ ನವೆಂಬರ್ ತಿಂಗಳ ಮುಷ್ಕರದಲ್ಲಿ, ಕಾರ್ಮಿಕರ ಏನೇ ತಕರಾರು ಇದ್ದರೂ, ಮೊದಲು ಮಾಲೀಕರೆದುರು ಕ್ರಮ ಪ್ರಕಾರ ಅದನ್ನು ಮಂಡಿಸಿ ನ್ಯಾಯ ಸಿಗದೆಂದು ಖಾತ್ರಿಯಾಗದ ಹೊರತು, ಮುಷ್ಕರ ಮಾಡುವುದಿಲ್ಲವೆಂದು ಕಾರ್ಮಿಕರ ಪರವಾಗಿ ಮಾಲೀಕರೊಡನೆ ಕರಾರು ಮಾಡಿಕೊಂಡರು. ಈ ಕರಾರು ಪತ್ರದ ಪ್ರತಿಯನ್ನೂ ಮಾಲೀಕರು ಪ್ರಕಟ ಪಡಿಸಿದ್ದಾರೆ. ಆದರೆ ಮೋರ್‌ಬಾಗ್‌ನ ಮುಷ್ಕರವು ಮಾಲೀಕರ ಮುಂದೆ ಅಹವಾಲು ಸಲ್ಲಿಸದೆಯೇ ಕರೆಯಲ್ಪಟ್ಟಿತು.

ಈ ಬಗ್ಗೆ ಯೂನಿಯನ್‌ನ ಪ್ರಸಕ್ತ ನಾಯಕರು ಈಗ ಕೆಲವೇ ದಿನಗಳ ಹಿಂದೆ ಮಾಲೀಕರಲ್ಲಿ ತಪ್ಪೊಪ್ಪಿಕೊಂಡಿದ್ದಾರೆ. ಹೀಗೆ ಯೂನಿಯನ್ ನಾಯಕರಿಂದ ಒಂದರ ಮೇಲೊಂದು ತಪ್ಪುಗಳಾಗಿ ಈಗ ಎರಡೂವರೆ ಲಕ್ಷ ಜನರೂ, ಅವರ ಕುಟುಂಬದವರೂ ಉಪವಾಸ ಬೀಳುವಂತಾಗಿ, ಈ ತಪ್ಪನ್ನು ಮುಚ್ಚಿಟ್ಟು ಮುಂದೆ ಸಾಗುವ ಯತ್ನ ಸಾಗಿದೆ.

* * * *

## ೩೫. ಬಹಿಷ್ಕೃತ ವರ್ಗದ ಕಾರ್ಮಿಕರ ದುಃಸ್ಥಿತಿ

ಬಹಿಷ್ಕೃತ ವರ್ಗದ ಸಾವಿರಾರು ಜನರು ಗಿರಣಿಗಳಲ್ಲಿ ಕೆಲಸದಲ್ಲಿದ್ದಾರೆ. ನೂಲುವ ಖಾತೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪುರುಷರಿದ್ದಾರೆ. ನೇಯ್ಗೆ ವಿಭಾಗದಲ್ಲಿ ಅಸ್ಪೃಶ್ಯತೆಯ ಕಾರಣ ಅವರಿಗೆ ಪ್ರವೇಶವಿಲ್ಲ. ನೂಲುವ ವಿಭಾಗದಲ್ಲಿ ವೇತನ ಬಹಳ ಕಡಿಮೆ, ನೇಯ್ಗೆ ವಿಭಾಗದಲ್ಲಿ ಅದರ ದುಪ್ಪಟ್ಟು, ನಾಲ್ಕು ಪಟ್ಟು ವೇತನ ಸಿಗುವುದು ಎಲ್ಲರಿಗೂ ತಿಳಿದೇ ಇದೆ. ಬಹಿಷ್ಕತ ವರ್ಗದ ಗಿರಣಿ ಕಾರ್ಮಿಕರಿಗೆ ಸರಾಸರಿ ಲೆಕ್ಕದಲ್ಲಿ ತಿಂಗಳಿಗೆ ಇಪ್ಪತ್ತು ರೂಪಾಯಿಗಿಂತ ಹೆಚ್ಚು ಸಿಗುವುದಿಲ್ಲ. ಅಂದರೆ, ಈ ವೇತನದಿಂದ ಉಳಿತಾಯ ಮಾಡುವುದು ಅಶಕ್ಯವೇ ಸರಿ. ನೂಲುವ ವಿಭಾಗದ ಕಾರ್ಮಿಕರಿಗೆ ಧಾನ್ಯದ ಅಂಗಡಿಗಳಲ್ಲಿ ಕೈಗಡವೂ ಸಿಗುವುದಿಲ್ಲ. ಅಂದರೆ, ಮುಷ್ಕರದಿಂದ ಸುರಕ್ಷಿತವಾಗಿ ಹೊರಬರುವ ದಾರಿಯೇ ಅವನಲ್ಲಿಲ್ಲ. ಈ ವರ್ಗದ ಜನರಿಗೆ ಸಾಲ ಬೇಕಾದಲ್ಲಿ ಪಠಾಣರ ಹೊರತು ಬೇರಾರ ಬಳಿಯೂ ಅದು ಸಿಗುವಂತಿಲ್ಲ. ಪಠಾಣರಿಂದ ಪಡೆದ ಸಾಲವೆಂದರೆ, ತಿಂಗಳು ತಿಂಗಳೂ ರೂಪಾಯಿ ಮೇಲೆ ನಾಲ್ಕಾಣೆ ಬಡ್ಡಿ ! ಗಿರಣಿಯಲ್ಲಿ ಕೆಲಸಕ್ಕೆ ಹೋಗುವ ಎಷ್ಟೋ ಮಹಿಳೆಯರು ಮುಷ್ಕರ ಕಾಲದ ಉಪವಾಸದಿಂದ ತಪ್ಪಿಸಿಕೊಳ್ಳಲು ಪಠಾಣರಿಂದ ಸಾಲ ಪಡೆಯಲೇ ಬೇಕಾಗ್ತದೆ. ಮತ್ತು ಮುಂದಕ್ಕೆ ಇದರ ಪರಿಣಾಮವಂತೂ ಭಯಂಕರ. ಇದು ಯೂನಿಯನ್ ನಾಯಕರಿಗೆ ಮತ್ತು ನಯ್ಗೆ ವಿಭಾಗದಲ್ಲಿ ಭಾರೀ ವೇತನ ಪಡೆವ ಇತರ ಹಿಂದೂಗಳಿಗೆ ಅರಿವಿಲ್ಲ, ಅಥವಾ, ಅರಿವಿದ್ದರೂ, ಅವರಿಗದರ ಪರಿವೆಯಿಲ್ಲ. ಯೂನಿಯನ್‌ನಿಂದ ಕಾರ್ಮಿಕರಿಗೆ ಎರಡು ಪೈಸೆ ಹೆಚ್ಚು ಸಿಗಬೇಕಿತ್ತು, ಅವರ ಸ್ಥಿತಿ ಸುಧಾರಿಸಬೇಕಿತ್ತು, ಆದರೆ, ಕಮ್ಯೂನಿಸ್ಟರ ಕೆಂಪು ಬಾವುಟದವರೆಂದು ತಿಳಿಯಲ್ಪಡುವ ಯೂನಿಯನ್‌ನ ಐದನೇ ಮುಷ್ಕರ ನಡೆದಿರುವ ಕಾರಣ, ಗಿರಣಿ ಕಾರ್ಮಿಕರಿಗೆ ಎರಡು ಪೈಸೆ ಹೆಚ್ಚು ಸಿಗುವ ಬದಲಿಗೆ, ಅವರ ಸಂಪತ್ತಿನ ಸ್ಥಿತಿ ಅಧೋಗತಿಯಾಗುತ್ತಿದೆ. ಮುಷ್ಕರ ಯಾವಾಗ ಮತ್ತು ಯಾಕಾಗಿ ಮಾಡಬೇಕೆಂಬ ಬಗ್ಗೆ ಸಾಕಷ್ಟು ವಿಚಾರ ನಡೆದಿಲ್ಲದಿರುವುದು ಇತರ ವರ್ಗದ ಕಾರ್ಮಿಕರಿಗೆ ತಿಳಿದಿಲ್ಲವೆಂದು ಬಹಿಷ್ಕತ ವರ್ಗದ ಕಾರ್ಮಿಕರು ಅವರಂತೆ ಕುಣಿದರಾಗುತ್ತದೆಯೇ? ಬಹಿಷ್ಕೃತ ವರ್ಗದ ಕಾರ್ಮಿಕರಲ್ಲಿ ಹಲವರು ತಮ್ಮ ಈ ಸ್ಥಿತಿಯನ್ನು ನಿವೇದಿಸಿ ಕೊಂಡಿದ್ದರಿಂದ, ಡಾ. ಅಂಬೇಡ್ಕರರು ಈ ಪ್ರಶ್ನೆಯನ್ನು ಕೈಗೆತ್ತಿಕೊಂಡು, ಬಹಿಷ್ಕೃತ ವರ್ಗದ ಕಾರ್ಮಿಕರ ಪರವಾಗಿ ಚಳವಳಿಯ ಮೂಲಕ ಅವರ ಸಂರಕ್ಷಣೆ ಮಾಡುವಲ್ಲಿ ಭಾಗಿಯಾಗಿದ್ದಾರೆ.

* * * *

## ೩೬. ಚಿಪ್ಳೂನ್‌ನಲ್ಲಿನ ಸಹಭೋಜನ

ಚಿಪ್ಳೂನ್‌ನ ಪರಿಷತ್ತಿನ ವೇಳೆ, ಅಲ್ಲಿನ ಶ್ರೀ ಬರ್ವೆ ವಕೀಲ್ ಅವರ ಮನೆಯಲ್ಲಿ ಪೂರ್ವಾಸ್ಪೃಶ್ಯರ ಸಹಿತ ಎಲ್ಲ ಜಾತಿಯ ಜನರ ಸಹಭೋಜನ ನಡೆಯಿತು. ಮುಂಬಯಿ, ಪುಣೆ ಅಂತಹ ನಗರಗಳಲ್ಲಿ ಈ ಸಹಭೋಜನ ನಡೆದಿದ್ದರೆ, ಆ ಬಗ್ಗೆ ಅಷ್ಟು ಬೆರಗು ವ್ಯಕ್ತ ಪಡಿಸದಿದ್ದರೂ ನಡೆಯುತ್ತದೆ. ಆದರೆ ಪರಶುರಾಮ ಕ್ಷೇತ್ರವೆಂದು ಹೆಸರಾದ ಚಿತ್ಲೂನ್‌ನಂತಹ ಚಿಕ್ಕ ಶಹರದಲ್ಲಿ ಕೊಂಕಣಸ್ಥ ಬ್ರಾಹ್ಮಣರ ಕೋಟೆಯಲ್ಲಿ ಮತ್ತು ಸ್ವತಃ ಓರ್ವ ಬ್ರಾಹ್ಮಣರ ಮನೆಯಲ್ಲಿ ಅವರ ಆಮಂತ್ರಣದ ಮೇರೆಗೆ ಇಂತಹ ಸಂಸ್ಕರಣೀಯ ಸಹಭೋಜನ ಸಮಾರಂಭ ನಡೆದುದು, ಬದಲಾಗುತ್ತಿರುವ ಕಾಲದ ಲಕ್ಷಣವಲ್ಲವೆಂದು ಯಾರು ತಾನೇ ಹೇಳಬಹುದು? ಶ್ರೀ ಬರ್ವೆ ಅಂತಹವರು ಚಿಪ್ಳೂನ್‌ನಂಥ ಸ್ಥಳದಲ್ಲಿ ಸಮತಾವಾದದ ಧ್ವಜಾರೋಹಣ ಮಾಡುವ ಧೈರ್ಯ ತೋರಿದ್ದಕ್ಕೆ ನಾವು ಮನಃಪೂರ್ವಕ ಧನ್ಯವಾದ ಅರ್ಪಿಸುತ್ತೇವೆ. ಜಾತಿಭೇದ ಮತ್ತು ಅಸ್ಪೃಶ್ಯತೆಯ ವಿಷಯದಲ್ಲಿ ಜನರ ಪೂರ್ವಗ್ರಹವು ಎಷ್ಟು ಆಳವಾಗಿ ಬೇರೂರಿದೆಯೆಂದರೆ, ಅದರ ನಿರ್ಮೂಲನೆಗಾಗಿ ಜನಾಭಿಪ್ರಾಯಕ್ಕೆ ಆಗಾಗ ಒಂದು ಪ್ರಬಲ ಹೊಡೆತ ಬೀಳುವುದು ಅವಶ್ಯಕವಾಗಿದೆ. ಬ್ರಾಹ್ಮಣಾದಿ ಜಾತಿಯ ಪಂಜೆಯಲ್ಲಿ ಕುಳಿತು ಉಣ್ಣುವುದರಿಂದ ಮೋಕ್ಷಪ್ರಾಪ್ತಿಯಾಗುತ್ತದೆ, ಇಲ್ಲವೇ, ಅದರಿಂದ ಬಹಿಷ್ಕೃತರಿಗೆ ದೊಡ್ಡಸ್ತಿಕೆಯೋ,

ಧನ್ಯತೆಯೋ ಅನಿಸಿದಂತಾಗುತ್ತದೆ, ಎಂದೇನೂ ಅಲ್ಲ. ಆದರೆ ಸಮತೆಗೆ ಅಡ್ಡ ಬರುವ ಅಡಚಣೆಗಳು ಇಲ್ಲದಾಗುತ್ತವೆ, ಎಂಬುದೇ ಅದರ ವಿಶೇಷ, ಸಮತೆಯ ಸ್ಥಾಪನೆಯಿಂದ ದಲಿತ ವರ್ಗದ ಭೌತಿಕ ಉದ್ಧಾರವಾಗುವುದು. ಆದರೆ, ಶ್ರೇಷ್ಠರೆನ್ನುವ ಜಾತಿಯ ಆತ್ಮೋದ್ಧಾರವಾಗುವುದು. ಸಾಂಪ್ರತ, ಅವರ ಜಾತಿ ದುರಭಿಮಾನವು ಅವರ ಆತ್ಮೋದ್ಧಾರಕ್ಕೆ ಅಡ್ಡ ಬರುವುದಿಲ್ಲವೆಂದು ಯಾರಾದರೂ ಹೇಳುವುದು ಸಾಧ್ಯವೇ? ಅವರಂಥ ಸಮಾಜವೀರರು ಅಲ್ಲಲ್ಲಿ ಹುಟ್ಟಿಕೊಂಡರೆ ಅಸ್ಪೃಶ್ಯತೆ ಗಡಿ ದಾಟಿ ಹೋಗುವುದು, ಮತ್ತು ಬ್ರಾಹ್ಮಣ, ಬ್ರಾಹ್ಮಣೇತರ ವಾದವೂ ಅಡಗಿ ಬಿಡುವುದು.

* * * *

## ೩೭. ಶಂಕರಾಚಾರ್ಯರೋ, ಪ್ರತಿಸಂಕರಾಚಾರ್ಯರೋ

ಕರವೀರ ಪೀಠದ ಮಾಜಿ ಶಂಕರಾಚಾರ್ಯ, ಡಾ. ಕುರ್ತಕೋಟಿ ಅವರು, ಹಿಂದೂ ಸಂಘಟನೆ ಮತ್ತು ಶುದ್ಧಿ ಚಳವಳಿಯ ಪುರಸ್ಕರ್ತರಾಗಿದ್ದು, ಮೊನ್ನೆ ಸೂರತ್‌ನಲ್ಲಿನ ಹಿಂದೂಮಹಾಸಭೆಯ ಅಧಿವೇಶನದೊಡನೆ ನಡೆದ ಶುದ್ಧಿ ಪರಿಷತ್‌ನ ಅಧ್ಯಕ್ಷತೆಯನ್ನೂ ವಹಿಸಿದ್ದರು. ಆ ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ ಹಿಂದೂಸಮಾಜದಲ್ಲಿ ಜಾತಿಸಂಕರ ಆಗದಂತಿರಲು, ಶುದ್ಧೀಕೃತರಾದವರ ಬೇರೆಯೇ ಒಂದು ಜಾತಿ ಆಗುವುದು ಅವಶ್ಯ ಎಂದು ಪ್ರತಿಪಾದಿಸಿದರು. ಉಳಿದ ಹಿಂದೂಸಮಾಜ ಜಾತಿಭೇದಕ್ಕೆ ಅಂಟಿಕೊಂಡೇ ಇರುವುದಾದರೆ, ಶುದ್ಧೀಕೃತರು ಜಾತಿಭೇದ ತ್ಯಜಿಸಿ, ಸಹಭೋಜನ,

ಪರಸ್ಪರ ವಿವಾಹ ಸಂಬಂಧಗಳಿಗೆ ತಯಾರಾಗುವರೇಕೆ? ಅಂದರೆ, ಹಿಂದೂ ಸಮಾಜದಲ್ಲಿ ಎಷ್ಟು ಜಾತಿಗಳಿವೆಯೋ, ಅಷ್ಟು ಶುದ್ಧೀಕೃತ ಮಂಡಳಿಗಳೂ ನಿರ್ಮಾಣವಾಗಬೇಕು. ಇಂಥಾ ಸ್ಥಿತಿಯಲ್ಲಿ ಶುದ್ಧವಾಗಲು ಯಾರು ತಾನೇ ಸಿದ್ದರಾದಾರು? ಹೀಗಿರುವಾಗ ಹಿಂದೂಸಂಘಟನೆ ಚೆನ್ನಾಗಿ ಆದಂತೆಯೇ.! ಕುರ್ತಕೋಟಿ ಅವರಿಗೆ ಶಂಕರಾಚಾರ್ಯ ಅನಿಸಿ ಕೊಳ್ಳುವ ಹಂಬಲವಿದೆ. ಆದರೆ, ಅವರನ್ನು "ಪ್ರತಿಸಂಕರಾಚಾರ್ಯ" ಅನ್ನುವುದು ಹೆಚ್ಚು ಸೂಕ್ತ, "ಪ್ರತಿವಾದಿ ಭಯಂಕರ" ರೆಂದು ಕರೆಸಿ ಕೊಳ್ಳುವ ಮಠಾಧೀಶರೊಬ್ಬರಿದ್ದಾರೆ. ಅವರ ಹೆಸರಿಗೆ "ಸಂಕರ ಭಯಂಕರ" ರೆಂಬ ಪದವಿಯನ್ನೂ ಸೇರಿಸಬಹುದು. ಕುರ್ತಕೋಟಿ ಅವರು ಹಿಂದೂಧರ್ಮದ ಪ್ರಸಾರಾರ್ಥ ಯೂರೋಪ್, ಅಮೆರಿಕಾಗಳಿಗೂ ಭೇಟಿ ಕೊಡಲು ನೋಡುತ್ತಿದ್ದಾರೆಂದು, ವಿಜಯಿ ಮರಾಠರು ಅವರಿಗೆ ಜಗದ್ಗುರುವಿನ ಬದಲಿಗೆ "ಜಗತಿರು" ಎನ್ನೋಣವೆಂದು ಸೂಚಿಸಿದ್ದಾರೆ. ನಾವದಕ್ಕೆ ಸ್ವಲ್ಪ ಒತ್ತು ನೀಡಿ, "ಸಂಕಟಭೀರು ಜಗತಿರು" ಎಂಬ ಪದವಿಯನ್ನು ಅವರಿಗೆ ಪ್ರದಾನಿಸುತ್ತೇವೆ.

* * *  *

### ೩೮. ಜೀರ್ಣಮತವಾದಿಗಳ ನೀರಸತೆ

ಮಹಾಡ್‌ನ ಸಿಹಿನೀರಿನ ಕೆರೆಯ ವಿಷಯದಲ್ಲಿ ಬಹಿಷ್ಕೃತ ವರ್ಗದ ಜನರು ನಡೆಸಿರುವ ಹೋರಾಟದಲ್ಲಿ ತಮಗೆ ಯಶಸ್ಸು ಸಿಗುವ ಭರವಸೆಯಿಲ್ಲ, ಮತ್ತು ಆ ಕೆರೆಯಿಂದ ನೀರೆತ್ತುವ ಬಹಿಷ್ಕೃತ ವರ್ಗದ ಹಕ್ಕು ಸಾಬೀತಾಗುವುದೆಂದು ಖಂಡಿತವಾದುದರಿಂದಲೋ ಏನೋ, ಅಲ್ಲಿನ ಜೀರ್ಣಮತವಾದಿ ಹಿಂದೂಗಳು ಆ ಕೆರೆಗೆ ಬಹಿಷ್ಕಾರ ಹಾಕಲು

ಯೋಜಿಸಿದ್ದರಿಂದ, ಆಸುಪಾಸಿನ ಪರಿಶುದ್ಧರೆಂಬವರು ತಮ್ಮ ತಮ್ಮ ಆವರಣದಲ್ಲಿ ಬಾವಿ ಅಗೆಯಲು ಆರಂಭಿಸಿದ್ದಾರೆ ಎಂಬ ಸುದ್ದಿ ಮಹಾಡ್‌ನಿಂದ ಪ್ರಸಾರವಾಗಿದೆ. ಸಿಹಿನೀರಿನ ಕೆರೆ ಖಾಸಗಿ ಮಾಲಿಕತ್ವದ್ದೆಂದು ಸಾರುವ ಪ್ರಯತ್ನ ಮಾಡಿದುದಕ್ಕೆ ಈಗ ಆ ಕೆರೆಯನ್ನೇ ಬಹಿಷ್ಕರಿಸಿ, ಪರಿಶುದ್ಧ ಹಿಂದೂಗಳು ತಮ್ಮ ಪರಿಶುದ್ಧತೆಯನ್ನು ಕಾಯ್ದು ಕೊಳ್ಳಲು ನೋಡುತ್ತಿದ್ದಾರೆ. ಇದು ಪರಾಜಯದ ವಿಷಯವೆಂದು ಅವರಾಗಿಯೇ ತಿಳಿದು ಕೊಳ್ಳಬೇಕು. ಈ ಕೆರೆಯನ್ನು ಬಹಿಷ್ಕೃತ ವರ್ಗದ ಸ್ವಾಧೀನ ಮಾಡುವ ಅವರ ಕಲ್ಪನೆ ನಮಗೂ ಅನಿಷ್ಟವೆನಿಸುವುದಿಲ್ಲ. ಧರ್ಮಶಾಲೆ, ದೇವಾಲಯವೇ ಮುಂತಾದ ಸಾರ್ವಜನಿಕ ಸ್ಥಳಗಳನ್ನೂ ಅವರು ಬಹಿಷ್ಕೃತರ ವಶಕ್ಕೊಪ್ಪಿಸಿದರೆ ಕೆಡುಕೇನಿಲ್ಲ. ಉಳಿದಂತೆ, ಸಿಹಿನೀರಿನ ಕೆರೆಯ ಪಕ್ಕದ ಭಾಗದಲ್ಲಿ ಬಾವಿ ತೋಡಿದರೆ, ಅದರಲ್ಲಿ ಅದೇ ಕೆರೆಯ ಝರಿ ಬರುತ್ತದೆ. ಅರ್ಥಾತ್, ಅದೇ ಕೆರೆಯ ನೀರು ಪರಿಶುದ್ಧ ಜನರ ಹೊಟ್ಟೆಗೆ ಹೋಗುವುದು. ಆದರೆ, ಜೀರ್ಣಮತವಾದಿಗಳ ಪರಿಶುದ್ಧತೆಗೆ ರಬ್ಬರ್‌ನ ಗುಣವಿರುವ ಕಾರಣ, ಭೂಮಿಯಿಂದ ಶೋಧಿಸಲ್ಪಟ್ಟು ಬರುವ ನೀರು ಪರಿಶುದ್ಧವೆಂದುಕೊಂಡು ಕುಡಿದರೆ , ಅವರ ಧರ್ಮ ನಷ್ಟವಾಗುವುದಿಲ್ಲ ಎಂಬುದು ಇದ್ದುದರಲ್ಲೇ ಸಮಾಧಾನದ ವಿಷಯ.

* * * *

## ೩೯. ಗಿರಣಿ ಕಾರ್ಮಿಕರ ಮುಷ್ಕರ ಮತ್ತು ಬ್ರಾಹ್ಮಣೇತರ ಪತ್ರಿಕೆಗಳು

ಮುಂಬಯಿ ಗಿರಣಿ ಕಾರ್ಮಿಕರ ಈಗಿನ ಮುಷ್ಕರ ಸಂಬಂಧ, ಪ್ರತಿಯೊಂದು ಬ್ರಾಹ್ಮಣೇತರ ಪತ್ರಿಕೆ ಜನರ ತಿಳುವಳಿಕೆಯನ್ನು ಕೆಡಿಸುವ ಪ್ರಯತ್ನ ಮಾಡುತ್ತಿದೆ. ಕಾರ್ಮಿಕರ ಮುಷ್ಕರದ ಬಗ್ಗೆ ಸಹಾನುಭೂತಿ ವ್ಯಕ್ತ ಪಡಿಸಬೇಕು. ಆದರೆ, ಆ ಮುಷ್ಕರ ಯೋಗ್ಯ ಕಾರಣಕ್ಕೋ, ಇಲ್ಲಾ, ತಪ್ಪಾದುದೋ, ಸ್ವತಃ ಕಾರ್ಮಿಕರಿಗೆ ಲಾಭದಾಯಕವೋ, ಇಲ್ಲಾ, ನಷ್ಟ ತರುವುದೋ ಎಂದು ಪತ್ರಕರ್ತರು ತಿಳಿದುಕೊಂಡಿರುವರೆಂದು ಕಾಣುತ್ತದೆ. ವಿಶೇಷ ಆಶ್ಚರ್ಯದ ವಿಷಯವೆಂದರೆ

ಸದ್ಯದ ಮುಷ್ಕರಕ್ಕೆ ಅನುಕೂಲವಿಲ್ಲದ್ದರಿಂದ ಯಾವ ಕಾರ್ಮಿಕರು ಕಮ್ಯುನಿಸ್ಟ್ ಯೂನಿಯನ್‌ನ ವಾಲಂಟಿಯರ್‌ಗಳನ್ನು ಗಣಿಸದೆ ಕೆಲಸಕ್ಕೆ ಹೋಗುತ್ತಾರೋ, ಅವರ ಮೇಲೆ ಜಾತಿಸಂಬಂಧ ಸ್ವಾರ್ಥದ ಆರೋಪ ಹೊರಿಸುವಷ್ಟು ಒಬ್ಬ ಬ್ರಾಹ್ಮಣೇತರ ಪತ್ರಕರ್ತ ಮುಂದೆ ಹೋಗಿದ್ದಾನೆ. ಈ ಗಿರಣಿಗಳ ಸಾರ್ವಜನಿಕ ಮುಷ್ಕರದಿಂದ ಬಹಿಷ್ಕೃತ ವರ್ಗದ, ಹಾಗೂ ಮುಸಲ್ಮಾನ ಕಾರ್ಮಿಕರಿಗೆ ಅನುಕೂಲತೆಯೇನೂ ಆಗಿಲ್ಲವೆಂಬುದು ತಿಳಿದೇ ಇದೆ. ಹಾಗೆಯೇ ಮರಾಠಾ ಮತ್ತು ಅದಕ್ಕೆ ಸಮನಾದ ವರ್ಗಗಳ ಅನೇಕ ಕಾರ್ಮಿಕರು ಪ್ರಸಕ್ತ ಮುಷ್ಕರಕ್ಕೆ ವಿರುದ್ಧವಿದ್ದು, ಅವರೇ ಕೆಲಸಕ್ಕೆ ಹೋಗುತ್ತಿದ್ದಾರೆ.. ಸುಮಾರು ಐವತ್ತು ಗಿರಣಿಗಳಲ್ಲಿ ಕೆಲಸಕ್ಕೆ ಹೋಗುವ ಐವತ್ತು ಸಾವಿರ ಜನರು ಎಲ್ಲರೂ ಮುಸಲ್ಮಾನರೋ, ಮಹಾರ್, ಚಾಂಬಾರರೋ ಆಗಿರುವುದಿಲ್ಲ. ಬೇಜವಾಬ್ದಾರರಾದವರು ತಪ್ಪಿನ ಮೇಲೆ ತಪ್ಪು ಮಾಡುತ್ತಾ ಸಾರ್ವತ್ರಿಕ ಮುಷ್ಕರದಂತಹ ದೊಡ್ಡ ತಪ್ಪನ್ನೇ ನಿಷ್ಕಾರಣವಾಗಿ ಮಾಡಿ, ಎಲ್ಲ ಕಾರ್ಮಿಕರನ್ನೂ ಕಪ್ಪೆಗಳಂತೆ ಅದರಲ್ಲಿ ಶಾಮೀಲಾಗಿಸಿ, ದೊಡ್ಡ ನಷ್ಟವನ್ನೇ ತಂದುಕೊಳ್ಳುವುದು ಇದೆಲ್ಲಿಯ ನ್ಯಾಯ? ಒಬ್ಬರಿನ್ನೊಬ್ಬರಿಗೆ ಜೋತುಬಿದ್ದು ಮುಷ್ಕರದ ಸಮುದ್ರಕ್ಕೆ ಧುಮುಕಿದರಷ್ಟೇ ಅದು ಕಾರ್ಮಿಕ ವರ್ಗದ ಚಳವಳಿಯೆಂದು ಈ ಪತ್ರಕರ್ತರು ತಿಳಿದಿದ್ದಾರೆಯೇ? ಕಮ್ಯುನಿಸ್ಟರ ಕಾರ್ಮಿಕ ಚಳವಳಿ, ನಿಜವಾದ ಕಾರ್ಮಿಕ ಚಳವಳಿಯಾಗಿರದೆ ರಾಜ್ಯಕ್ರಾಂತಿಯ ಉದ್ದೇಶದ ಸಿಧ್ಯರ್ಥ ಒಂದು ಸಾಧನ ಮಾತ್ರವಾಗಿದೆ. ಸದ್ಯದ ಮುಷ್ಕರವನ್ನು ಸಮರ್ಥಿಸಲು ನೋಡುವ ಬ್ರಾಹ್ಮಣೇತರ ಪತ್ರಕರ್ತರಿಗೆ ರಾಜ್ಯಕ್ರಾಂತಿಯ ಧ್ಯೇಯ ಮಾನ್ಯವೇ? ಕಮ್ಯೂನಿಸ್ಟರ ವಿಚಾರಗಳು ಒಪ್ಪಿಗೆಯೇ? ಹೊಟ್ಟೆಪಾಡಿಗಾಗಿ ಸ್ವಲ್ಪ ಜಗಳವಿದ್ದರೂ, ಬಹಿಷ್ಕೃತ ವರ್ಗದ ಮತ್ತು ಮುಸಲ್ಮಾನ ಕಾರ್ಮಿಕರು ಹಿಂದಿನ ಎಲ್ಲ ಮುಷ್ಕರಗಳಲ್ಲಿ ಒಟ್ಟು ಸೇರಿದಂತೆ ಈ ಮುಷ್ಕರದಲ್ಲೂ ಒಟ್ಟಾಗಿದ್ದಾರೆ. ಕಳೆದ ಒಂದು, ಒಂದೂವರೆ ವರ್ಷದ ಕಮ್ಯೂನಿಸ್ಟ್ ಚಳವಳಿಯಿಂದಾಗಿ ಮುಂಬಯಿ ಗಿರಣಿ ಕಾರ್ಮಿಕರಿಗೆ ಎಷ್ಟು ನಷ್ಟವಾಗಿದೆಯೆಂದು ಈ ಬ್ರಾಹ್ಮಣೇತರ ಪತ್ರಕರ್ತರಿಗೆ ಅಂದಾಜಾದರೂ ಇದೆಯೇ? ಉಪವಾಸ, ದಂಗೆ, ಮಾರಾಮಾರಿ, ಪೊಲೀಸ್ ಕೇಸ್ ಮುಂತಾದ ಅನೇಕ ವಿಪತ್ತು ಕಾರ್ಮಿಕರ ಮೇಲೆ ಬಂದೆರಗಿದುವು, ಅದರಿಂದ ತಲೆಯೆತ್ತಲು ಅವರಿಗೆ ಒಂದಿಷ್ಟು ಸಮಯ ಸಿಕ್ಕಿತೋ, ಇಲ್ಲವೋ ಎನ್ನುವಷ್ಟರಲ್ಲಿ, ಈ ಸಾರ್ವತ್ರಿಕ ಮುಷ್ಕರ ಬಂದೆರಗಿತು. ಯಾರಿಗೆ ರಾಜ್ಯಕ್ರಾಂತಿಯ ಚಳವಳಿ ಮಾನ್ಯವಲ್ಲವೋ, ಮತ್ತು ಕಾರ್ಮಿಕ ವರ್ಗಕ್ಕೆ ಎಲ್ಲ ಕ್ಷೇತ್ರಗಳಲ್ಲೂ ಸುಧಾರಣೆ ಆಗಬೇಕೆಂದು

ಯಾರು ಬಯಸುವರೋ, ಆ ಜನರು ಈ ವಿಷಯದಲ್ಲಿ ಹೆಚ್ಚು ಗಲಭೆಯೆಬ್ಬಿಸದೆ, ಆತ್ಮಘಾತುಕ ಧೋರಣೆಯನ್ನು ವಿರೋಧಿಸದೆ, ಕಮ್ಯೂನಿಸ್ಟ್ ನಾಯಕರಿಗೆ ಸುಗ್ರಾಸವಿತ್ತು, ಕಾರ್ಮಿಕರಿಗಾಗುವ ಭಯಂಕರ ನಷ್ಟವನ್ನು ತೆರೆದ ಕಣ್ಣಿಳಿಂದ ನೋಡುತ್ತಿರಬೇಕೆಂದು ಈ ಬ್ರಾಹ್ಮಣೇತರ ಪತ್ರಕರ್ತರ ಇಚ್ಛೆಯೇನು? ಕಾರ್ಮಿಕರನ್ನು ನಿರಾಶೆಯಿಂದ ಸಿಡಿದೇಳುವಂತೆ ಮಾಡುವುದು ಕ್ರಾಂತಿವಾದಿಗಳ ದೃಷ್ಟಿಯಿಂದ ಯುಕ್ತವಿರಬಹುದು, ಆದರೆ ದೇಶದ, ಕೊಂಕಣದ ರೈತರಿಗೆ ಮುಂಬಯಿ ಗಿರಣಿಗಳ ಮಜೂರಿಯ ಪಾಲು ಸಿಗುವುದರಿಂದಾಗುವ ಸಹಾಯ ನಿಂತು ಹೋದರೆ, ಕಾರ್ಮಿಕ ಹಾಗೂ ರೈತ ವರ್ಗದ ಸಾಲಬಾಧೆ ಹೆಚ್ಚಿದರೆ ಸಾಹುಕಾರರು ಮತ್ತು ಪಟೇಲರ ಕೈಗೆ ಬ್ರಾಹ್ಮಣೇತರರ ಜುಟ್ಟು ಹೆಚ್ಚು ಸಿಗುವಂತಾದರೆ, ಮತ್ತು ಮರಾಠರೇ ಮುಂತಾದ ಜನರಿಗೆ ಸಾಲಬಾಧೆಯಿಂದ ಇರುವ ಚೂರುಪಾರು ಭೂಮಿಯನೂ ಮಾರುವಂತಾದರೆ, ಇದು ಈ ಬ್ರಾಹ್ಮಣೇತರ ಪತ್ರಕರ್ತರಿಗೆ ಇಷ್ಟವಾಗುವುದೇ? ಬೆಳಗಾಂವ್ ಇಲ್ಲವೇ ಪುಣೆಯಲ್ಲಿ ಕುಳಿತು ಮುಂಬಯಿ ಗಿರಣಿ ಕಾರ್ಮಿಕರ ಕುರಿತು ಬರೆದು ಸಹಾನುಭೂತಿ ತೋರುವುದನ್ನು ಬಿಟ್ಟು ,ಈ ಮರಾಠಿ ಪತ್ರಕರ್ತರು ಮುಂಬಯಿಗೆ ಬಂದು ತಮ್ಮ ಜಾತಿಬಾಂಧವರ ಸ್ಥಿತಿಯ ಬಗ್ಗೆ ಅರಿಯಲೆತ್ನಿಸಿದ್ದರೆ, ಆಗ ಅವರಿಗೆ ವಸ್ತುಸ್ಥಿತಿ ತಿಳಿಯುತ್ತಿತ್ತು.

ಕಮ್ಯುನಿಸಮ್ ಮತ್ತು ಕಾರ್ಮಿಕ ಸಂಘದ ಚಳವಳಿ ಒಂದೇ ಅಲ್ಲವೆಂಬುದನ್ನು ಅವರು ಕೃಪೆಯಿಟ್ಟು ಲಕ್ಷ್ಯದಲ್ಲಿರಿಸಿಕೊಳ್ಳಬೇಕು. ನಮಗೆ ಕಾರ್ಮಿಕ ಸಂಘದ ಚಳವಳಿ ಅವಶ್ಯಬೇಕು ; ಬಂಡವಾಳಶಾಹಿಗಳು ಕಾರ್ಮಿಕರವತಿಯಿಂದ ಹೋರಾಡುವುದರ ಅವಶ್ಯಕತೆಯೂ ನಮಗೆ ಸಂಪೂರ್ಣ ಮಾನ್ಯ ಇಷ್ಟೇ ಅಲ್ಲ, ಮುಷ್ಕರವು ಕಾರ್ಮಿಕರ ಕಾಯ್ದೆಬದ್ಧ ಶಸ್ತ್ರ , ಎಂದೇ ನಾವು ತಿಳಿಯುತ್ತೇವೆ. ಆದರೆ ಆ ಶಸ್ತ್ರವನ್ನು ಯೋಗ್ಯವೇಳೆಯಲ್ಲೇ ನಿಷ್ಠೆಯಿಂದ ತೊಡಬೇಕಾಗಿದೆ.

* * * *

## ೪೦. ಮೂಗು ಮುಚ್ಚಿದಲ್ಲದೆ ಬಾಯಿ ತೆರೆಯದೆಂಬಂತೆ

ವರಾಡ್‌ನ ಜಳ್ ಗಾಂವ್‌ನಲ್ಲಿ ಸುಮಾರು ಐದು ಸಾವಿರ ಮಹಾರ್ ಜನರು ಈಗ ಕೆಲವೇ ದಿನಗಳ ಹಿಂದೆ ಒಂದು ಪ್ರಕಟಣೆ ಹೊರಡಿಸಿ, ಹಿಂದೂ ಸಮಾಜವು ತಮ್ಮ ಅಸ್ಪೃಶ್ಯತೆಯನ್ನು ಕಿತ್ತುಹಾಕದೆ ಹೋದರೆ, ತಾವು ಪರಧರ್ಮವನ್ನು ಸ್ವೀಕರಿಸಿ ಮುಸಲ್ಮಾನರೋ, ಕ್ರೈಸ್ತರೋ ಆಗುವುದಾಗಿ ಸಾರಿದರು. ಈ ಪ್ರಕಟಣೆಯನ್ನು ನಾವು ಆಗ ನಮ್ಮ ಪತ್ರಿಕೆಯಲ್ಲೂ ಪ್ರಕಟಿಸಿ, ಆ ಬಗ್ಗೆ ಒಂದು ಅಗ್ರಲೇಖವನ್ನೂ ಬರೆದಿದ್ದೆವು. ಜಳ್ಗಾಂವ್‌ನ ಮಹಾರ್ ಜನರ ಈ ಪ್ರಕಟಣೆ, ಕೇವಲ ಒಂದು ಟೊಳ್ಳು ಬೆದರಿಕೆಯಷ್ಟೇ ಎಂದು ಬ್ರಾಹ್ಮಣ ಪತ್ರಿಕೆಗಳಲ್ಲಿ ಅಲ್ಲದಿದ್ದರೂ ಬ್ರಾಹ್ಮಣೇತರ ಚಳವಳಿಯಲ್ಲಿ ಭಾಗವಹಿಸುವ ಶ್ರೀ ಜಯರಾಮ ನಾನಾ ವೈದ್ಯರಂಥವರು ಅಭಿಪ್ರಾಯ ನೀಡಿ ಅಣಕವಾಡುವ ಯತ್ನ ಮಾಡಿದ್ದಾರೆ. ಆದರೆ, ಜಳ್ಗಾಂವ್‌ನ ಮಹಾರ್ ಸಮಾಜದ ಧುರೀಣರು ಪರಿಹಾಸಕ್ಕೆ ಕುಳಿತವರಲ್ಲ, ಅವರದು ಧೃಢ ನಿರ್ಧಾರವಾಗಿತ್ತು. ಇಂದಿಗೆ ನೂರಾರು, ಸಾವಿರಾರು ವರ್ಷಗಳಿಂದ ನಡೆದು ಬಂದಿರುವ ಗುಲಾಮಗಿರಿಯನ್ನು ಅವರಿಗೆ ಇಲ್ಲವಾಗಿಸಬೇಕಿತ್ತು, ಮತ್ತು, ಆ ಬಗ್ಗೆ ಮೊದಲೇ ಪೂರ್ಣ ವಿಚಾರ ಮಾಡಿ ತಮ್ಮ ಪೂರ್ವಜರ ಧರ್ಮಕ್ಕೆ ತನ್ನಲ್ಲಿನ ವಿಷಮತೆ ಮತ್ತು ಅನ್ಯಾಯವನ್ನು ದಮನಿಸುವ ಸಾಮರ್ಥ್ಯ ಇಲ್ಲವೆಂಬುದು ಸಿದ್ದವಾದ ಕಾರಣ, ಕಷ್ಟದಿಂದಲೇ ಕೊನೆಗೂ ಅವರು ಈ ನಿರ್ಧಾರ ತೆಗೆದುಕೊಂಡಿದ್ದಾರೆ. ಅವರ ಈ ಪಂಥಾಹ್ವಾನವು ಪೊಳ್ಳು ಬೆದರಿಕೆಯಲ್ಲ, ಪರಿಹಾಸವಲ್ಲ, ಮಕ್ಕಳಾಟವೂ ಅಲ್ಲ;

ಉಕ್ತ ಪಂಥಾಹ್ವಾನವು ಪ್ರಕಟಗೊಂಡಾಗ ಸ್ಥಳೀಯ ಸ್ಪೃಶ್ಯರ ನಾಯಕರು ಮಹಾರ್ ಜನರನ್ನು ಪೇಚಿನಲ್ಲಿ ಸಿಗಿಸುವ ಉದ್ದೇಶದಿಂದ, " ನೀವು ಅಸ್ಪೃಶ್ಯರಲ್ಲೇ ವಿಭಿನ್ನ ಜಾತಿಗಳಿದ್ದು, ಒಬ್ಬರಿನ್ನೊಬ್ಬರನ್ನು ಉಚ್ಚ ನೀಚರೆಂದು, ಅಪವಿತ್ರರೆಂದು ಕರೆದುಕೊಳ್ಳುವ ಈ ನಿಮ್ಮ ಸ್ಪೃಶ್ಯಾಸ್ಪೃಶ್ಯ ಭೇದವನ್ನು ಮೊದಲು ಕಿತ್ತು ಹಾಕಿ ; ಮತ್ತೆ ನಾವು ನಿಮ್ಮ ಅಸ್ಪೃಶ್ಯತೆಯನ್ನು ಇಲ್ಲವಾಗಿಸಿ, ನಿಮ್ಮ ಬೇಡಿಕೆಯನ್ನು ಒಪ್ಪಿ ಕೊಳ್ಳುವೆವು," ಎಂದು ಉತ್ತರವಿತ್ತರು. ಆದರೆ, ಸ್ಪೃಶ್ಯರೆಂದು ಕರೆದುಕೊಳ್ಳುವ ಪಾವನ ಹಿಂದೂಗಳ ಈ ಕುಟಿಲತೆ, ತಕ್ಷಣ ಜಳ್ಗಾಂವ್‌ನ ಮಹಾರ್ ನಾಯಕರಿಗೆ ತಿಳಿದು ಹೋಯ್ತು.

“ಬೇಡವಾದವರಿಗೆ ವಾರ ಶನಿವಾರ” ಎಂಬ ಮಾತಿನಂತೆ ಉಚ್ಚವರ್ಣೀಯರೆಂಬ ಹಿಂದೂಗಳ ಸಬೂಬಷ್ಟೇ ಇದು. ಅಸ್ಪೃಶ್ಯತೆಯನ್ನು ನಿರ್ಮೂಲನಗೊಳಿಸುವ ಇಚ್ಛೆಯೇ ಅವರಿಗಿಲ್ಲವೆಂದು ಬಹಿಷ್ಕೃತ ವರ್ಗದ ಧುರೀಣರಿಗೆ ಖಂಡಿತವಿದೆ. ಅಲ್ಲದೆ, ತಮ್ಮ ಸಮಾಜದಲ್ಲಿನ ಭೇದಭಾವ, ಪರಸ್ಪರ ವಿಷಮತೆ ಅವರಿಗೆ ಬೇಕಿಲ್ಲ; ಪರಸ್ಪರರಲ್ಲಿ ಜಾತಿಭೇದದ, ಮಾಲಿನ್ಯದ ಭಾವವನ್ನು ಪೋಷಿಸುವುದೂ ಅವರಿಗೆ ಒಪ್ಪಿಗೆಯಿಲ್ಲ. ಅರ್ಥಾತ್, ಸ್ಪಶ್ಯ ವರ್ಗದ ಆಹ್ವಾನವನ್ನು ಅವರು ಸಂತೋಷದಿಂದಲೇ ಒಪ್ಪಿಕೊಂಡರು. ಅವರು ಬಹಿಷ್ಕೃತ ವರ್ಗದ ಮಹಾರ್, ಮಾಂಗ್, ಚಾಂಭಾರ್, ಭಂಗಿಯೇ ಮುಂತಾದ ಎಲ್ಲ ಜಾತಿಗಳ ಸಹಭೋಜನವನ್ನು ಏರ್ಪಡಿಸಿ ಬಹಿಷ್ಕೃತ ವರ್ಗದಲ್ಲಿ ಅಪವಿತ್ರತೆಯಾಗಲೀ, ಸಾಮಾಜಿಕ ವಿಷಮತೆಯಾಗಲೀ ಇಲ್ಲ, ಎಂಬುದನ್ನು ಪವಿತ್ರ ಹಿಂದೂಗಳ



ಗಮನಕ್ಕೆ ತಂದರು. ಪರಸ್ಪರ ಭೇದಭಾವವನ್ನು ತೊಡೆದು ಹಾಕುವಲ್ಲಿ ಬಹಿಷ್ಕೃತ ವರ್ಗದ ಜನರಿಗೆ ಯಶಸ್ಸು ಸಿಗದೆಂದೇ ಪವಿತ್ರ ಹಿಂದೂಗಳ ನಂಬಿಕೆ. ಒಂದು ವೇಳೆ ಹಾಗಾದಲ್ಲಿ , ಧರ್ಮಾಂತರದ ಬೆದರಿಕೆಯೊಡ್ಡುವ ಬಾಯಿಗಳು ಅಲ್ಲೇ ಮುಚ್ಚಿಕೊಳ್ಳುತ್ತವೆ. ಆದರೆ ಪಾವಿತ್ರ್ಯವಂತರ ದುರದೃಷ್ಟದಿಂದ ಅವರುರುಳಿಸಿದ ದಾಳ ವ್ಯರ್ಥವಾಯ್ತು. ಉಪಾಯಕ್ಕೆ ಉಪಾಯವೂ ದಕ್ಕಿತು. ಇದೇ ಸುಮಾರಿಗೆ ಡಾ. ಅಂಬೇಡ್ಕರ್ ಅವರು ಅತ್ತ ಹೋದಾಗ, ಮಹಾರ್‌ನ ಜನರು ಅವರ ಸಲಹೆ ಕೇಳಿದರು. ಧರ್ಮಾಂತರ ಮಾಡಿಕೊಳ್ಳದೆ ಅಸ್ಪೃಶ್ಯತೆಯನ್ನು ದೂರ ಮಾಡುವುದು ಕಠಿಣ; ಅಸ್ಪೃಶ್ಯತಾ ನಿವಾರಣೆಯ ದಾರಿಯಲ್ಲಿ ನಡೆಯಲು ಬೇಕಾದ ಸಹನೆ ಯಾರಲ್ಲಿಲ್ಲವೋ, ಅವರು ಧರ್ಮಾಂತರ ಮಾಡುವುದಕ್ಕೆ ತನ್ನ ವಿರೋಧವಿಲ್ಲ, ಅಸ್ಪೃಶ್ಯತಾ ನಿವಾರಣೆಯ ಪ್ರಶ್ನೆಯನ್ನು ತಮಗೆ ಬೇಕಾದಂತೆ ಬಿಟ್ಟು ಬಿಡಬಹುದು, ಎಂದು ಡಾ. ಅಂಬೇಡ್ಕರ್ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಮತ್ತು ತಮ್ಮ “ಬಹಿಷ್ಕೃತ ಭಾರತ'ದಲ್ಲಿ ಜಳ್ ಗಾಂವ್‌ನ ಮಹಾರ್ ಜನರ ಪ್ರಕಟಣೆಯ ಬಗ್ಗೆ ಅಗ್ರಲೇಖನವನ್ನೂ ಮೊದಲೇ ಬರೆದಿದ್ದಾರೆ. ಪರಿಶುದ್ಧ ಹಿಂದೂಗಳು ಅಸ್ಪೃಶ್ಯತಾ ನಿವಾರಣೆಗೆ ಸಿದ್ಧರಿಲ್ಲವೆಂದು ಕಂಡುಬಂದಾಗ ಈ ಪ್ರಕಟಣೆಯ ಅವಧಿ ಪೂರ್ಣಗೊಂಡು ಆರಂಭಿಕವಾಗಿ ಜಳ್ಗಾಂವ್‌ನ ಹನ್ನೆರಡು ಮಹಾರರು ಮುಸ್ಲಿಮ್ ಧರ್ಮವನ್ನು ಸ್ವೀಕರಿಸಿದರು. ಆಗ ಪರಿಶುದ್ಧ ಹಿಂದೂಗಳ ಕಣ್ಣು ಟಪ್ಪೆಂದು ತೆರೆಯಿತು. ಪ್ರಕಟಣೆಯ ಎಚ್ಚರಿಕೆ ಜೊಳ್ಳಲ್ಲವೆಂದು ಅವರಿಗೆ ಖಾತ್ರಿಯಾಯ್ತು. ಈಗಿನ್ನು ಸಾವಿರಾರು ಅಸ್ಪೃಶ್ಯರು ಮುಸಲ್ಮಾನರೋ, ಕ್ರೈಸ್ತರೋ ಆಗುವರು, ಮತ್ತು ಹಿಂದೂಗಳ ಸಂಖ್ಯಾಬಲ ಕಡಿಮೆಯಾಗುವುದು, ಮುಸಲ್ಮಾನರ ಸಂಖ್ಯೆ ವೃದ್ಧಿಸುವುದು, ಮತ್ತು ಮುಸಲ್ಮಾನರಾದ ಅಸ್ಪೃಶ್ಯರು ತಮ್ಮೆದೆಯ ಮೇಲೆ ಸವಾರಿ ಮಾಡಿ, ಮಾನವೀಯ ಹಕ್ಕುಗಳನ್ನು ಪ್ರಾಪ್ತಿಸಿಕೊಳ್ಳುವರು ಎಂಬ ವಿಚಾರವು ಅವರ ಹೃದಯಗಳಲ್ಲಿ ಪ್ರತಿಧ್ವನಿಸಿತು. ಮಹಾರ್‌ರಂಥ ಅಸ್ಪೃಶ್ಯರು, ತಮಗೆ ದೇವಳ ಪ್ರವೇಶಕ್ಕೆ ನಿಷೇಧವಿದ್ದರೂ, ಇದುವರೆಗೆ ತಮ್ಮ ಜೀವದ ಹಂಗನ್ನೂ ತೊರೆದು, ಆ ದೇವಳಗಳ ಸಂರಕ್ಷಣೆಗಾಗಿ

ಹೋರಾಡುತ್ತಾ ಬಂದರು. ಅದೇ ಜನರು ಈಗ ತಮ್ಮ ಧರ್ಮದ ವೈರಿಗಳಾಗಿ, ಎಂದಾದರೂ ಧಾರ್ಮಿಕ ಕಲಹಗಳಾದಾಗ ಇತರ ಮುಸ್ಲಿಮರೊಡನೆ ದೇವಳಗಳನ್ನು ಒಡೆಯಲು, ಭ್ರಷ್ಟಗೊಳಿಸಲು ತೊಡಗುವರು, ಎಂಬ ಭೀತಿಪ್ರದ ವಿಚಾರ, ಪುರಾಣಮತವಾದಿ ಹಿಂದೂಗಳ ಕಣ್ಣೆದುರು ಸುಳಿಯ ತೊಡಗಿತು. ಗಿಳಿಗಳಂತೆ ಈ ಪರಿಶುದ್ಧ ಹಿಂದೂಗಳು ಪಠಿಸತೊಡಗಿದರು, "ಹೋಗಿ, ಖುಶಿಯಿಂದ ಪರಧರ್ಮಕ್ಕೆ ಸೇರಿಕೊಳ್ಳಿ; ಕ್ರಿಶ್ಚಿಯನರೋ, ಮುಸಲ್ಮಾನರೋ ಆಗಿ ; ನಾವೇನೂ ನಿಮಗೆ ಅಡ್ಡಿ ಬರುವುದಿಲ್ಲ. ಮಹಾರ್ ಸತ್ತ, ಮೈಲಿಗೆ ಹೋಯ್ತು, ಎಂದವರು ನಾವೇ," ಎಂದ ಅದೇ ಜನರು, ಜಳ್ಗಾಂವ್‌ನ ಬಹಿಷ್ಕೃತರು ಧರ್ಮಾಂತರಕ್ಕೆ ಶುರುವಿಟ್ಟು ತೋರಿದಾಗ, ಒಮ್ಮೆಲೆ ಮೆತ್ತಗಾಗಿ ಬಿಟ್ಟರು. ಹನ್ನೆರಡು ಮಹಾರರ ಧರ್ಮಾಂತರವು ಹಿಂದೂ ಸಮಾಜದಲ್ಲಿ ಭಯಂಕರ ಕಳವಳವನ್ನೆಬ್ಬಿಸಿತು. ಮತ್ತು ಹೇಗಾದರೂ ಮಾಡಿ ಈ ಧರ್ಮಾಂತರದ ಪ್ರವಾಹವನ್ನು ಇಲ್ಲಿಗೇ ತಡೆದು ನಿಲ್ಲಿಸಬೇಕೆಂದು ಅವರಿಗೆ ಅನಿಸ ತೊಡಗಿತು. ಒಪ್ಪಂದದ ಮಾತುಕತೆ ತೊಡಗಿ, ಬಹಿಷ್ಕೃತರ ಉಪಯೋಗಕ್ಕಾಗಿ ಎರಡು ಸಾರ್ವಜನಿಕ ಬಾವಿಗಳನ್ನು ಮುಕ್ತಗೊಳಿಸಲಾಯ್ತು. ಇಷ್ಟೇ ಅಲ್ಲ, ಬಹಿಷ್ಕೃತ ನಾಯಕರನ್ನು ವೀಳ್ಯಕ್ಕೆಂದು ಮೂವರು ಉಚ್ಚ ವರ್ಣೀಯರ ಮನೆಗಳಿಗೆ ಕರೆಸಿಕೊಳ್ಳಲಾಯ್ತು. ಸ್ಪೃಶ್ಯಾಸ್ಪೃಶ್ಯದ ಭೇದವೇನೂ ಅಲ್ಲಿರಲಿಲ್ಲ. ಹೀಗೆ ಜಳ್ಗಾಂವ್‌ನ ಬಹಿಷ್ಕೃತ ಧುರೀಣರು ತಮ್ಮ ದೃಢತೆಯಿಂದ ಜಯ ಸಾಧಿಸಿದರು. ಅವರ ಈ ಯಶಸ್ಸಿಗಾಗಿ ನಾವು ಅವರನ್ನು ಮನಃಪೂರ್ವಕ ಅಭಿನಂದಿಸುತ್ತೇವೆ. ವಿಜಯಶ್ರೀಯು



ಯಾವಾಗಲೂ ಶೂರರ ಕೊರಳಿಗೆ ಮಾಲೆ ಹಾಕುತ್ತಾಳೆಂಬುದನ್ನು ಬಹಿಷ್ಕೃತರು ಲಕ್ಷ್ಯದಲ್ಲಿ ಇರಿಸಿ ಕೊಳ್ಳಬೇಕು. ಬೆದರಿಕೆ ಎಂದೂ ಪೊಳ್ಳು ಬೆದರಿಕೆಯಾಗಿರಬಾರದು. ನಿಶ್ಚಿತ ಪೂರ್ವ ತಯಾರಿ ಇರಬೇಕು. ಜಳ್ ಗಾಂವ್‌ನ ಬಹಿಷ್ಕೃತ ನಾಯಕರು ತಾವಿತ ಬೆದರಿಕೆಗೆ ಬದ್ಧರಾಗಿ ಎಲ್ಲ ಬಹಿಷ್ಕೃತ ವರ್ಗದ ಮಾನ ಉಳಿಸಿದರು. ಇಲ್ಲವಾದರೆ, ಧರ್ಮಾಂತರದ

ಬೆದರಿಕೆಯೆಂದರೆ ಪರಿಶುದ್ಧರ ನಡುವೆ ಒಂದು ಪರಿಹಾಸ್ಯದ ಮಾತಾಗಿ, ಅಸ್ಪೃಶ್ಯತಾ ನಿರ್ಮೂಲನವು ದೂರ ದೂರವೇ ಉಳಿಯುತ್ತಿತ್ತು. ಬಹಿಷ್ಕೃತ ವರ್ಗದ ಜನರು ನುಡಿದಂತೆ ನಡೆಯುವರೆಂದು ಪುರಾಣ ಮತವಾದಿಗಳಿಗೆ ಖಂಡಿತವಾಗಬೇಕು. ಬಹಿಷ್ಕೃತರಿಗೆ ದೊರಕಿದ ಜಯದಿಂದ ಪರಿಶುದ್ಧರು ಮೆತ್ತಗಾಗಿ, ಒಪ್ಪಂದದ ಮಾತನ್ನಾಡಿ, ಈವರೆಗೆ ಬಹಿಷ್ಕೃತರ ಮೇಲಾದಂತಹ ಅನ್ಯಾಯವನ್ನು ಅಪ್ರತ್ಯಕ್ಷವಾಗಿ ಒಪ್ಪಿಕೊಂಡಂತಾಗಿರುವುದು ಸ್ವಾಭಾವಿಕವಾಗಿಯೇ ಎಲ್ಲ ಬಹಿಷ್ಕೃತರಿಗೆ ಅಭಿಮಾನದ, ಸಮಾಧಾನದ ವಿಷಯ. ಹನ್ನೆರಡು ಅಸ್ಪಶ್ಯರು ಮುಸಲ್ಮಾನರಾದುದರಿಂದ ಎರಡು ಸಾರ್ವಜನಿಕ ಬಾವಿಗಳು ಬಹಿಷ್ಕತರಿಗಾಗಿ ತೆರೆಯಲ್ಪಟ್ಟವು; ಮೂವರು ಉಚ್ಚವರ್ಣೀಯರ ಮನೆಗಳಲ್ಲಿ ಅಸ್ಪೃಶ್ಯ ನಾಯಕರನ್ನು ಸ್ಪಶ್ಯಾಸ್ಪಶ್ಯ ಭೇದವಿಲ್ಲದೆ, ವೀಳ್ಯ ನೀಡಿ ಸತ್ಕರಿಸಲಾಯ್ತು. ಹೀಗೆಯೇ ಮುಂದೆ ಸ್ವಸಂತೋಷದಿಂದ, ಯಾವುದೇ ಬೆದರಿಕೆಯಿಲ್ಲದೆ, ಕಟ್ಟು ನಿಟ್ಟಿಲ್ಲದೆ ನಡೆಯುವಂತಾದರೆ, ಅದು ಈ ಉಚ್ಚವರ್ಗದ ಜನರ ಮನದ ವೈಶಾಲ್ಯವನ್ನೂ, ಬುದ್ಧಿಯ ಸಮಂಜಸತೆಯನ್ನೂ ತೋರುತ್ತಿತ್ತು. ಜಳ್ಗಾಂವ್‌ನಲ್ಲಿ ಸುಮನಸ್ಕರಾದ ನ್ಯಾಯಪ್ರಿಯ ಸಮತಾವಾದಿ ಉಚ್ಚ ವರ್ಗದವರು ಇದ್ದರಾದರೂ, ಇತರ ಸವರ್ಣೀಯರು ಬಹಿಷ್ಕೃತರ ಬೆದರಿಕೆಯ ಬಳಿಕವಷ್ಟೇ ಅವರ ಮಾತನ್ನು ಗೌರವಿಸಿದರು ಎಂಬುದು ನಿರ್ವಿವಾದ. ಇದು ಹಿಂದೂ ಸಮಾಜದ ದೊಡ್ಡ ಅಧಃಪತನವೆಂದೇ ನಮ್ಮ ಭಾವನೆ. ಇದು ಹೊಂದಿಕೊಳ್ಳುವ ಗುಣ, ಮತ್ತು ಇದರಿಂದಾಗಿಯೇ ಹಿಂದೂ ಸಮಾಜ ಈ ವರೆಗೆ ಹಾಗೂ ಮುಂದೆಯೂ ಉಳಿದುಕೊಂಡು ಬರುವುದೆಂದು ಯಾರಾದರೂ ಹೇಳಿದರೂ, ನಾವಿದನ್ನು ಅಧಃಪತನವೆಂದೇ ತಿಳಿಯುತ್ತೇವೆ. ಮುಸಲ್ಮಾನ ಮತ್ತು ಕ್ರೈಸ್ತಧರ್ಮಗಳು ಭಾರತದಲ್ಲಿ ಇರದಿರದಿದ್ದರೆ, ಹಿಂದೂ ಸಮಾಜದೆದುರು ತಮ್ಮ ಸಂಖ್ಯಾಬಲದ ಪ್ರಶ್ನೆ ಇರದೆ ಹೋಗಿದ್ದರೆ ಅಸ್ಪೃಶ್ಯರ ಸ್ಥಿತಿ ಇಂದು ಏನಾಗಿರುತ್ತಿತ್ತು, ಅಸ್ಪೃಶ್ಯತೆಯನ್ನು ಕೊಡವಿಕೊಳ್ಳುವುದು ಎಷ್ಟು ಕಷ್ಟವಾಗುತ್ತಿತ್ತು, ತಮ್ಮ ಉನ್ನತಿಗಾಗಿ ಹೋರಾಡುವಲ್ಲಿ ಎಷ್ಟು ಸಂಕಟಗಳನ್ನೆದುರಿಸಬೇಕಾಗುತ್ತಿತ್ತು ಎಂಬ ವಿಚಾರ, ಈ ಸಂದರ್ಭದಲ್ಲಿ ಮನಸಿನಲ್ಲಿ ಬರದಿರುವುದಿಲ್ಲ. ಅವರಿಗೆ ನಿಜವಾಗಿಯೂ ನ್ಯಾಯದ, ಸಮತೆಯ, ಮನುಷ್ಯತ್ವದ ಕಾಳಜಿಯಿದ್ದಿದ್ದರೆ, ಅಸ್ಪಶ್ಯರ ಮೇಲಾಗುವ ಸಾಮಾಜಿಕ ಅನ್ಯಾಯವನ್ನು ದೂರಸರಿಸಲು, ಹೀಗೆ ಧರ್ಮಾಂತರದ ಬೆದರಿಕೆ ಒಡ್ಡಲ್ಪಡುವವರೆಗೆ ಕಾಯಬೇಕಾಗಿ ಬರುತ್ತಿರಲಿಲ್ಲ. ಎಲ್ಲಿಯ ವರೆಗೆ ಅವರನ್ನು ಹಿಂಸಿಸಬಹುದೋ, ಅಲ್ಲಿಯವರೆಗೆ ಹಿಂಸಿಸುವಾ, ಎಲ್ಲಿಯವರೆಗೆ ಅನ್ಯಾಯ ಮಾಡಬಹುದೋ, ಅಲ್ಲಿಯವರೆಗೆ ಅನ್ಯಾಯ ಮಾಡುವಾ, ಎಲ್ಲಿಯವರೆಗೆ ಪ್ರತೀಕಾರ ಏಳುವುದಿಲ್ಲವೋ, ಅಲ್ಲಿಯವರೆಗೆ ಖುಶಿಯಿಂದ ದೌರ್ಜನ್ಯವೆಸಗುವಾ, ಎಲ್ಲಿಯವರೆಗೆ ನ್ಯಾಯ ನೀಡುವಲ್ಲಿ ಸರಕ್ಷಿತವಾಗಿ ಅದನ್ನು ತಪ್ಪಿಸಬಹುದೋ ಅಲ್ಲಿಯವರೆಗೆ ತಪ್ಪಿಸುವಾ, ಎಲ್ಲಿಯವರೆಗೆ ಅವರ ಚಳವಳಿ ಬಗ್ಗೆ ಉಪಹಾಸ್ಯ ತೋರಬಹುದೋ, ಅಲ್ಲಿಯವರೆಗೆ ಅದನ್ನು ಹಗುರಾಗಿ ಕಾಣುವಾ, ಎಲ್ಲಿಯವರೆಗೆ ಅವರ ಅಜ್ಞಾನದ ಹಾಗೂ ಸಂಘಟನಾ ಹೀನತೆಯ ಲಾಭ ಪಡೆಯ ಬಹುದೋ, ಅಲ್ಲಿಯವರೆಗೆ ಅದನ್ನು ಪಡೆಯುವಾ, ಬಹಿಷ್ಕೃತರು ಮೂಗು ಮುಚ್ಚಿದರೆ ಬಾಯಿ ತೆರೆದಾರು, ಮತ್ತು ನಮ್ಮ

ಧರ್ಮ ಮತ್ತು ನಮ್ಮ ಸಮಾಜಕ್ಕೆ ಹೊಂದಿಕೊಳ್ಳುವ ಗುಣ ಇದೆ, ಎಂಬ ಈ ಧೋರಣೆ, ಹಿಂದೂ ಸಮಾಜ ಸತ್ತಂತಿರುವ ಲಕ್ಷಣವಷ್ಟೇ. ಹೀಗೆ ಸತ್ತಂತಹ ಸ್ಥಿತಿಯಿಂದ ಎಬ್ಬಿಸುವುದು ಯಾವ ಸಮಾಜಕ್ಕೂ ಭೂಷಣವಲ್ಲ. "ಕಾಕೋಪಿ ಜೀವತಿ ಚಿರಾಯ ಬಲಿಚ ಭುಕ್ತೇ" ಎಂಬಂತೆ ಕಾಗೆಗಳ ಸಾವಿರಾರು ವರ್ಷದ ಬಾಳು, ಮತ್ತು ಹಿಂದೂ ಸಮಾಜದ ಈ ಸಾವಿರಾರು ವರ್ಷದ ಬಾಳು ಒಂದೇ ಸಮಾನ.!

* * * *

### ೪೧. ದೇವನು ಅಡ್ಡ ಬರುವನೇ?

ಜಳ್ಗಾಂವ್‌ನ ವೃತ್ತಾಂತವನ್ನು ಇಂದು ಅಗ್ರಲೇಖವಾಗಿ ಪ್ರಕಟಿಸಲಾಗಿದೆ. ಆದರೆ ಅಷ್ಟರಿಂದಲೇ ಅಸ್ಪೃಶ್ಯತಾ ನಿವಾರಣೆಯ ಪ್ರಶ್ನೆ ಪೂರ್ಣವಾಗಿ ಬಗೆಹರಿಯುವುದಿಲ್ಲ. ದೇವಾಲಯದೊಳಕ್ಕೆ ಪೂರ್ವಾಸ್ಪೃಶ್ಯರನ್ನು ಪ್ರವೇಶಿಸಬಿಡುವುದು ಜೀರ್ಣಮತವಾದಿಗಳಿಗೆ ಈಗಲೂ ಇಷ್ಟವಲ್ಲವೆಂದು ತಿಳಿದಿದೆ. ಅದು ನಿಜವಿರುವುದರಿಂದ ದೇವಾಲಯದೊಳಗೆ ಬಹಿಷ್ಕೃತರು ಹೋಗಬಾರದೆನ್ನುವವರಿಗೆ, ಅವರ ಬುದ್ಧಿ ದೌರ್ಬಲ್ಯಕ್ಕೆ ಏನು ಮಾಡುವುದು, ಅವರನ್ನು ಧೂರ್ತರೆನ್ನುವುದೋ ಏನೆಂದು ನಮಗೆ ತಿಳಿಯುತ್ತಿಲ್ಲ. ಬಹಿಷ್ಕೃತ ವರ್ಗದವರು ಹಿಂದೂಗಳಾಗಿಯೇ

ಉಳಿಯಬೇಕಾದರೆ, ಅವರಿಗೆ ಉಳಿದ ಹಿಂದೂಗಳಂತೆಯೇ ಸಾರ್ವಜನಿಕ ಹಿಂದೂ ದೇವಾಲಯಗಳಲ್ಲಿ ಮುಕ್ತದ್ವಾರವಿರಬೇಕು. ಯಾರದೇ ಖಾಸಗಿ ದೇವಾಲಯದೊಳಗೆ ಸುತ್ತು ಹಾಕುವ ಇಚ್ಛೆ, ಬಹಿಷ್ಕೃತರಿಗಿಲ್ಲ. ಆದರೆ ಸಾರ್ವಜನಿಕ ಹಿಂದೂ ದೇವಾಲಯದಲ್ಲಿ ಯಾವುದೇ ಹಿಂದೂವಿನ ಪ್ರವೇಶಕ್ಕೆ ನಿರ್ಬಂಧ ಏಕಿರಬೇಕು? ಬಹಿಷ್ಕೃತರು ಸಾರ್ವಜನಿಕ ಬಾವಿಗಳಿಂದ ಇತರರೊಡನೆ ನೀರೆತ್ತಲು ಅಡ್ಡಿಯಿಲ್ಲ, ಅವರನ್ನು ವೀಳ್ಯಕ್ಕೆಂದು ಮನೆಗೆ ಕರೆದು ಅವರೊಡನೆ ಬೆರೆತರೆ ಜೀರ್ಣಮತವಾದಿಗಳ ಪಾವಿತ್ರ್ಯ ಕೆಡುವಂತಿಲ್ಲ ಎಂದಾದರೆ, ಹಿಂದೂ ದೇವಳಗಳ ವಿಷಯದಲ್ಲಿ ಮಾತ್ರ ಈ ಅಡ್ಡಿಯೇಕೆಂಬುದಕ್ಕೆ ಕಾರಣವಿದೆಯೇ? ಜಳ್ಗಾಂವ್‌ನ ಪವಿತ್ರರಿಗೆ ಈಗ ತಾವು ಅಪವಿತ್ರರಾಗುವ ಭೀತಿ ಇಲ್ಲದಿರುವಾಗ ದೇವಳದಲ್ಲಿ ದೇವರು ಮಾತ್ರ ಅಶುದ್ಧರಾದಾರೆಂಬ ಭೀತಿ ಇರಬಹುದೆಂದು ತಿಳಿಯಬೇಕೆ? ನಿಜವಾಗಿ ನೋಡಿದರೆ, ದೇವರಿಗೆ ಯಾವುದೇ ಮೈಲಿಗೆಯ ಭೀತಿಯಿಲ್ಲ. ದೇವರು ಬ್ರಾಹ್ಮಣಾದಿ ಹಿಂದೂಗಳಿಗೆ ಸೇರಿದಂತೆ ಬಹಿಷ್ಕೃತರಿಗೂ ಸೇರಿದೆ. ಬಹಿಷ್ಕೃತರ ಸ್ಪರ್ಶದಿಂದ ದೇವಳ ಪ್ರವೇಶಿಸುವ ಇತರರಿಗೆ ಮೈಲಿಗೆ ಆಗುವುದಿಲ್ಲವೆಂದಾದರೆ, ದೇವರ ಮೂರ್ತಿಗೆ ಮೈಲಿಗೆ ಆಗುವುದೆಂದೇಕೆ ಎಣಿಸಬೇಕು? ತಂತಮ್ಮ ಮನೆಗಳಲ್ಲಿ ಅಸ್ಪೃಶ್ಯತೆ ಪಾಲಿಸದೆ, ದೇವಳದಲ್ಲಿ ಮಾತ್ರ ಅಸ್ಪೃಶ್ಯತೆ ಪಾಲಿಸಬೇಕು ಎನ್ನುವುದು ಅನ್ಯಾಯವೆಂದೇ ತಿಳಿಯಬೇಕು. ಇದು ಜೀರ್ಣಮತವಾದಿಗಳ ಎಂದಿನ ಅಪ್ರಯೋಜಕತನದ ಒಂದು ಭಾಗವೇ ಇರಬೇಕು, ಅಥವಾ, ಬಹಿಷ್ಕತರಿಗೆ ಕುಡಿವ ನೀರನ್ನು ಮುಕ್ತವಾಗಿಸಿ, ಅವರನ್ನು ಮನೆಯೊಳಗೆ ಕರೆದು ಸನ್ಮಾನವಿತ್ತುದು ಅವರ ಕಣ್ಣಲ್ಲಿ ನೀರು ತರಿಸಿ ತಾತ್ಕಾಲಿಕ ಸಮಾಧಾನವೀವ ಕಾಪಟ್ಯವಷ್ಟೇ ಇರಬೇಕು. ಬಹಿಷ್ಕೃತರಿಗೆ ತೆರೆದ ಸಾರ್ವಜನಿಕ ಬಾವಿಯನ್ನು ಉಳಿದ ಹಿಂದೂಗಳು ಬಹಿಷ್ಕರಿಸಿ ತಾವು ಬೇರೆ ಖಾಸಗಿ ಇಲ್ಲವೇ ಬಾವಿಯನ್ನಾಶ್ರಯಿಸಿದ್ದು ಕಪಟವಲ್ಲವೇ? ವೀಳ್ಯದ ಆಮಂತ್ರಣ ಸ್ವಂತ ಖುಶಿಯ ವಿಷಯವಾದ್ದರಿಂದ ಹೀಗೆ ಕರೆದು ಭೇದ ಮರೆತು ಸತ್ಕರಿಸಲಾಯ್ತು. ಬಹಿಷ್ಕೃತರಿಗೆ ಸಮಾಧಾನವಾಯ್ತೆಂದು ಮತ್ತೆ ಮೆಲ್ಲನೆ ಹಿಂದಿನ ಭೇದಭಾವವನ್ನು ಶಾಶ್ವತವಾಗಿಸುವುದು. ಬಹಿಷ್ಕತರನ್ನು ಮನೆಗೆ ಸೇರಿಸಿಕೊಂಡವರು ಮತ್ತೆ ಪ್ರಾಯಶ್ಚಿತ್ತಗೈದು ಅದರಿಂದ ಮುಕ್ತರಾಗ ಬಹುದು, ಮತ್ತು ಹಾಗೆ ಮನೆಗೆ ಕರೆದಾಗ ಅಲ್ಲಿ ಹಾಜರಿದ್ದವರೂ ಸ್ನಾನ ಮಾಡಿ ಜನಿವಾರ ಬದಲಿಸಿ ಶುದ್ದರಾಗಬಹುದು. ದೇವಳದ ವಿಷಯ ಹಾಗಲ್ಲ. ಬಹಿಷ್ಕೃತರ ಹೆಜ್ಜೆ ದೇವಳದೊಳಗೆ

ಬಿತ್ತೆಂದರೆ, ಮೈಲಿಗೆ ಶಾಶ್ವತವಾಗಿ ಅಂಟಿದ ಹಾಗೇ, ಅರ್ಥಾತ್, ಜಳ್ ಗಾಂವ್‌ನ ವಿಶಿಷ್ಟ ಪರಿಸ್ಥಿತಿಯನ್ನು ನೋಡಿದರೆ, ದೇವಳದ ವಿಷಯದಲ್ಲಿ ಬಹಿಷ್ಕೃತರಿಗೆ ಶಾಶ್ವತ ಬಹಿಷ್ಕಾರ ವಿಧಿಸಲು ನೋಡುವುದು, ಶುದ್ಧ ಅಪ್ರಯೋಜಕತನ ಹಾಗೂ ಧೂರ್ತತನ ಎಂಬುದರಲ್ಲಿ ಅನುಮಾನವಿಲ್ಲ.

* * * *

## ೪೨. ಲೇಬರ್ ಪಕ್ಷದ ಮಂತ್ರಿ ಮಂಡಳ

ಇದುವರೆಗೆ ಕಳೆದ ಐದು ವರ್ಷಗಳಲ್ಲಿ ಇಂಗ್ಲೆಂಡ್‌ನಲ್ಲಿ ಕನ್ಸರ್ವೇಟಿವ್ ಪಕ್ಷವು ಅಧಿಕಾರದಲ್ಲಿತ್ತು. ನಿಯಮದಂತೆ ಪಾರ್ಲಿಮೆಂಟ್‌ನ ಸಾಧಾರಣ ಚುನಾವಣೆಯು ಇತ್ತೀಚೆಗಷ್ಟೇ ನಡೆದು ಈ ಚುನಾವಣೆಯಲ್ಲಿ ಕನ್ಸರ್ವೇಟಿವ್ ಪಕ್ಷಕ್ಕೆ ಸೋಲಾಗಿ ಲೇಬರ್ ಪಕ್ಷದ ಎಲ್ಲಕ್ಕೂ ಹೆಚ್ಚು ಸಭಾಸದರು ಆರಿಸಿ ಬಂದರು. ಅಂದರೆ, ಕನ್ಸರ್ವೇಟಿವ್ ಪಕ್ಷದ ಮಂತ್ರಿಮಂಡಳ ರಾಜೀನಾಮೆಯಿತ್ತು, ಲೇಬರ್ ಪಕ್ಷದ ಮಂತ್ರಿ ಮಂಡಳಕ್ಕೆ ಜಾಗ ತೆರವು ಮಾಡಬೇಕಾಗಿ ಬಂತು. ಈಗ ಮಿಸ್ಟರ್ ರಾಮ್ಸ ಮಾಕ್‌ಡೊನಾಲ್ಡ್ ಅವರ ಮುಖಂಡತ್ವದಲ್ಲಿ ಬ್ರಿಟನ್‌ನ ನೂತನ ಮಂತ್ರಿ ಮಂಡಳ ಸ್ಥಾಪಿತವಾಗಿದೆ. ಲೇಬರ್ ಪಕ್ಷದ ಅಧಿಕಾರಾರೂಢವಾದುದು ಇದು ಎರಡನೆಯ ಸಲ. ಮೊದಲ ಬಾರಿಗೆ ೧೯೨೪ ರಲ್ಲಿ ಲೇಬರ್‌ಪಕ್ಷ ಅಸ್ತಿತ್ವಕ್ಕೆ ಬಂದಿತು. ಆದರೆ ಆ ಪಕ್ಷದ ಸಭಾಸದರ ಸಂಖ್ಯಾಧಿಕ್ಯ ಪಾರ್ಲಿಮೆಂಟ್‌ನಲ್ಲಿ ಇರಬೇಕಾದಷ್ಟು ಇರದ್ದರಿಂದ ಆ ಮಂತ್ರಿ ಮಂಡಳವು ಹೆದರಿಕೊಂಡೇ ತನ್ನ ಕೆಲಸ ಮಾಡಲಾರಂಭಿಸಿತು, ಮತ್ತು ಇಷ್ಟು ಮಾಡಿಯೂ ಅದು ಅಲ್ಪಾಯುಷಿಯಾಯ್ತು. ಈ ಅವಧಿಯಲ್ಲೂ ಪಾರ್ಲಿಮೆಂಟ್‌ನಲ್ಲಿ ಲೇಬರ್ ಪಕ್ಷದ ಸಭಾಸದರ ಸಂಖ್ಯೆಯು ಕನ್ಸರ್ವೇಟಿವ್ ಇಲ್ಲವೇ ಲಿಬರಲ್ ಈ ಎರಡರಲ್ಲಿ ಯಾವುದಾದರೂ ಒಂದು ಪಕ್ಷದ ಸಭಾಸದರ ಸಂಖ್ಯೆಗಿಂತ ಹೆಚ್ಚಿದ್ದರೆ, ಲಿಬರಲ್ ಪಕ್ಷಕ್ಕಿಂತ ತುಂಬ ಹೆಚ್ಚಿದ್ದರೂ ಸಹ, ಕನ್ಸರ್ವೇಟಿವ್ ಮತ್ತು ಲಿಬರಲ್ ಈ ಎರಡು ಪಕ್ಷಗಳು ಲೇಬರ್ ಪಕ್ಷದ ವಿರುದ್ಧ ಒಂದಾದರೆ ಪಾರ್ಲಿಮೆಂಟ್‌ನಲ್ಲಿ ಲೇಬರ್ ಪಕ್ಷದ ಪರಾಭವವಾಗಬಹುದು. ಕನ್ಸರ್ವೇಟಿವ್ ಪಕ್ಷವು ಬಂಡವಾಳಶಾಹಿ, ಜಮೀನ್ದಾರ್‌ಶಾಹಿ, ಮತ್ತು ಸಾಮ್ರಾಜ್ಯವಾದದ ಕಟ್ಟಾ ಪುರಸ್ಕರ್ತರಿದ್ದು, ಲಿಬರಲ್ ಪಕ್ಷವು ಆ ಪಕ್ಷಕ್ಕೆ ವಿರುದ್ಧವಿದ್ದರೂ, ಅದು ಬಂಡವಾಳಶಾಹಿ, ಜಮೀನ್ದಾರ್ ಶಾಹಿ ಮತ್ತು ಸಾಮ್ರಾಜ್ಯವಾದದ ಪಕ್ಷಪಾತಿಯೇ ಆಗಿದೆ. ಈ ಅವಧಿಯಲ್ಲೂ ಲೇಬರ್ ಪಕ್ಷದ ಮಂತ್ರಿಮಂಡಳ ಶಾಶ್ವತವಲ್ಲ. ಅದನ್ನು ಜಪಿಸುತ್ತಲೇ ಕೆಲಸಕ್ಕೆ ತೊಡಗಿಕೊಳ್ಳಬೇಕು. ಲೇಬರ್ ಪಕ್ಷದ

ಆಡಳಿತವನ್ನು ಆದಷ್ಟು ಬೇಗನೇ ಸುಪುಷ್ಟಗೊಳಿಸಲು ಬಂಡವಾಳಶಾಹಿಯ ಪುರಸ್ಕರ್ತರ ಯತ್ನ ನಡೆದಿರುವುದು ಸ್ಪಷ್ಟವಿದೆ. ನಿಜವಾದ ಜಟಾಪಟಿ ಕನ್ಸರ್ವೇಟಿವ್ ಮತ್ತು ಲೇಬರ್ ಪಕ್ಷಗಳ ಮಧ್ಯೆ ಇದ್ದು, ಲಿಬರಲ್ ಪಕ್ಷವು ಇದರ ಮಧ್ಯಂತರ ಕಾಲದ ಅವಶೇಷವಾಗಿದೆ. ಎಲ್ಲಿಯವರೆಗೆ ಲೇಬರ್ ಪಕ್ಷ ಅಸ್ತಿತ್ವಕ್ಕೆ ಬಂದು ತನ್ನನ್ನು ಉಳಿಸಿಕೊಳ್ಳುವುದಿಲ್ಲವೋ, ಅಲ್ಲಿಯವರೆಗೆ ಲಿಬರಲ್ ಪಕ್ಷದ ಅಸ್ತಿತ್ವಕ್ಕೊಂದು ಕಾರಣವಿರುತ್ತಿತ್ತು, ಅವಶ್ಯಕತೆಯಿರುತ್ತಿತ್ತು. ಈಗ ಲಿಬರಲ್ ಪಕ್ಷದ ಅಸ್ತಿತ್ವದ ಯಾವ ಅವಶ್ಯಕತೆಯೂ ಇಲ್ಲ, ಆ ಪಕ್ಷದ ಉತ್ಸಾಹಿ, ಶ್ರದ್ಧಾವಂತ ಜನರು ಒಬ್ಬೊಬ್ಬರೇ ಕನ್ಸರ್ವೇಟಿವ್ ಪಕ್ಷವನ್ನೋ, ಲೇಬರ್ ಪಕ್ಷವನ್ನೋ ಸೇರುತ್ತಿದ್ದಾರೆ. ಲಿಬರಲ್ ಪಕ್ಷಕ್ಕೆ ಮುಂದೆ ಅಧಿಕಾರಾರೂಢವಾಗುವ ಆಶೆ ಈಗ ಸ್ವಲ್ಪವೂ ಉಳಿದಿಲ್ಲ, ಆದರೆ ಅದರ ಜೊತೆಗೆ ವಿಧಾತಕ ಶಕ್ತಿಯಿದೆ. ಕಾರಣ, ವಿರುದ್ಧ ಪಕ್ಷದೊಂದಿಗೆ ಸೇರಿ, ಅಧಿಕಾರಾರೂಢ ಪಕ್ಷವನ್ನು ಪದಚ್ಯುತಗೊಳಿಸುವ ಕೀಲಿ ಅದರ ಕೈಯಲ್ಲಿದೆ. ಆದ್ದರಿಂದ ಲೇಬರ್ ಪಕ್ಷದ ಮಂತ್ರಿಮಂಡಳವು ತಂತಿಯ ಮೇಲೆ ಕಸರತ್ತು ಮಾಡಿದಂತೆ ತನ್ನ



ರಾಜ್ಯಕಾರುಭಾರದ ತಕ್ಕಡಿಯನ್ನು ತೂಗಬೇಕಾಗಿದೆ.

**ಲೇಬರ್ ಪಕ್ಷದ ರಾಜಕಾರಣ**

ಲೇಬರ್ ಪಕ್ಷದ ರಾಜಕಾರಣ ಬಹು ಅಂಶ ಸಮಾಜಸತ್ತಾವಾದಿ ಆಗಿದೆ. ದೇಶದಲ್ಲಿನ ಉದ್ಯೋಗ ವ್ಯವಹಾರಗಳು ಸಾಮಾಜಿಕ ಒಡೆತನಕ್ಕೆ ಸೇರಿರಲಿ, ಬಂಡವಾಳಶಾಹಿಯ ಕೈಯಲ್ಲಿ ಆಡಳಿತ ಉಳಿಯದಿರಲಿ, ಬಂಡವಾಳಶಾಹಿಯನ್ನು ಇಲ್ಲವಾಗಿಸಿ, ಅದರ ಸ್ಥಾನದಲ್ಲಿ ಪ್ರಜಾಪ್ರಭುತ್ವವನ್ನು ಪ್ರತಿಷ್ಠಾಪಿಸಬೇಕು, ನಿರುದ್ಯೋಗವನ್ನು ಇಲ್ಲವಾಗಿಸಿ, ಯಾರಿಗೆ ಕೆಲಸ ಕೊಡಲಾಗುವದಿಲ್ಲವೋ, ಅವರ ಉದರ ನಿರ್ವಹಣೆಯ ವ್ಯವಸ್ಥೆಯಾಗಲಿ, ದೇಶದ ಪ್ರತಿಯೊಬ್ಬ ವ್ಯಕ್ತಿಗೆ ತನ್ನ ಉನ್ನತಿ ಸಾಧಿಸುವ, ಹಾಗೂ ಕಾರ್ಯಕ್ಷಮತೆಯನ್ನು ತೋರುವ ಪೂರ್ಣ ಅವಕಾಶ ಸಿಗುವಂತಾಗಲಿ, ಎಂದೇ ಲೇಬರ್ ಪಕ್ಷದ ಸ್ವದೇಶೀ ಸಂಬಂಧಿತ ಧೋರಣೆ ಇದ್ದು, ಜಗತ್ತಿನಲ್ಲಿ ಶಾಂತಿ ನೆಲಸುವಂತೆ,

ಯುದ್ಧಗಳಾಗದಂತೆ,ಇತರ ದೇಶಗಳ ಸ್ವಾತಂತ್ರ್ಯವನ್ನು ಮನ್ನಿಸಿ, ಜಗತ್ತಿನ ಎಲ್ಲರ ಹಿತಸಂಬಂಧವನ್ನು ಸಾಧಿಸುವುದೇ ಇದರ ಪರರಾಷ್ಟ್ರೀಯ ಧೋರಣೆಯಾಗಿದೆ. ಹಾಗೆಯೇ ಇಂಗ್ಲೆಂಡ್‌ನಲ್ಲಿ ಲೇಬರ್ ಪಕ್ಷ ಕ್ರಾಂತಿವಾದಿಯಲ್ಲ. ಕಮ್ಯೂನಿಸ್ಟ್ ಪಕ್ಷದ ಕ್ರಾಂತಿವಾದಕ್ಕೆ ಅದು ವಿರುದ್ಧವಿದ್ದು ಲೇಬರ್ ಪಕ್ಷ ಮತ್ತು ಕಾರ್ಮಿಕ ಸಂಘದ ನಡುವಿನಿಂದ ಕಮ್ಯೂನಿಸ್ಟರನ್ನು ಕಿತ್ತುಹಾಕಲಾಗಿದೆ. ನಮ್ಮ ಧ್ಯೆಯವನ್ನು ಸಾಧಿಸಬೇಕು, ಆದರೆ ಕ್ರಮಕ್ರಮವಾಗಿ ಸಾಗಬೇಕು; ಅದಕ್ಕಾಗಿ, ಕುಟಿಲೋಪಾಯ, ಅತ್ಯಾಚಾರ, ರಕ್ತಪಾತಗಳ ಉಪಯೋಗ ಸಲ್ಲ; ಸಂವಿಧಾನಬದ್ಧವಾಗಿ ಜನಾಭಿಪ್ರಾಯವನ್ನು ತಮ್ಮೆಡೆಗೆ ತಿರುಗಿಸಿಕೊಂಡು ತಮಗೆ ಇಷ್ಟವಾದ ಸುಧಾರಣೆಗಳನ್ನು ಸಾಧಿಸುವುದೇ ಲೇಬರ್ ಪಕ್ಷದ ಧೋರಣೆಯಾಗಿದೆ. ಇಂಗ್ಲೆಂಡ್‌ನ ಲೇಬರ್ ಪಕ್ಷದಲ್ಲಿ ಫಾನರ್ ಬ್ರಾಕ್‌ವೇ ಅವರಂತಹ ತೀಕ್ಷ್ಣ ಸ್ಪಷ್ಟವಾದಿಗಳಿದ್ದಾರೆ; ಅಂತೆಯೇ ಥಾಮಸ್ ಟರ್ನರ್ ಅವರಂತಹ ಸೌಮ್ಯ ಹಳೆಯ ಮುತ್ಸದ್ದಿಗಳಿದ್ದಾರೆ.

**ಹಿಂದೂಸ್ಥಾನದ ಬಗೆಗಿನ ಧೋರಣೆ**

ಹಿಂದೂಸ್ತಾನದ ವಿಷಯದಲ್ಲಿ ಲೇಬರ್ ಪಕ್ಷದ ಮಂತ್ರಿ ಮಂಡಳದ ಧೋರಣೆ ಏನಿರಬಹುದೆಂಬ ಪ್ರಶ್ನೆ ಮನದಲ್ಲಿ ಏಳುವುದು ಸ್ವಾಭಾವಿಕ. ಮೇಲೆ ಹೇಳಿದಂತೆ ಲೇಬರ್ ಪಕ್ಷದ ಮಂತ್ರಿ ಮಂಡಳದ ಆಯುಷ್ಯದ ಹಗ್ಗದ ಕುಣಿಕೆ ಲಿಬರಲ್ ಪಕ್ಷದ ಕೈಯಲ್ಲಿದೆ. ತನ್ನದೇ ದೇಶದಲ್ಲಿ ಕಾರ್ಮಿಕ ವರ್ಗದ ಬಗ್ಗೆ ಇಷ್ಟು ಮಹತ್ವದ ಪ್ರಶ್ನೆ ತನ್ನೆದುರು ಬಂದಿರುವಾಗ, ಅದನ್ನು ಕಡೆಗಣಿಸುವುದು ಕಷ್ಟ. ಈ ಬಗ್ಗೆ ಅಲ್ಲಿನ ಕಾರ್ಮಿಕರನ್ನು ಸಮಾಧಾನ ಪಡಿಸುವುದೂ ಕಷ್ಟ. ಸದ್ಯ ಬ್ರಿಟನ್‌ನಲ್ಲಿ ಗಣಿ ಕಾರ್ಮಿಕರ ಪ್ರಶ್ನೆ ಅತ್ಯಂತ ಮಹತ್ವದ್ದಾಗಿದ್ದು, ಪಾರ್ಲಿಮೆಂಟ್‌ನಲ್ಲಿ ಗಣಿ ಕಾರ್ಮಿಕರ ಸಾಕಷ್ಟು ಪ್ರತಿನಿಧಿಗಳು ಆರಿಸಿ ಬಂದಿದ್ದಾರೆ. ಹಾಗೆಯೇ ಆ ಪ್ರಶ್ನೆಯನ್ನು ತಮ್ಮ ಮನಸ್ಸಿಗೆ ಬಂದಂತೆ ಪರಿಹರಿಸಿಕೊಳ್ಳುವುದು ಮತ್ತು ಗಣಿ ಕಾರ್ಮಿಕರನ್ನು ಸಂಪೂರ್ಣ ಸಮಾಧಾನಪಡಿಸುವುದು ಲೇಬರ್ ಪಕ್ಷದ ಮಂಡಳಿಗೆ ಶಕ್ಯವಲ್ಲವೆಂದು ಲೇಬರ್ ಪಕ್ಷದ ಮುಖಂಡರು ಹೇಳುತ್ತಾ ಬಂದಿದ್ದಾರೆ. ಇಂಗ್ಲೆಂಡ್‌ನ ಕಾರ್ಮಿಕ ವರ್ಗದ ಸ್ಥಿತಿಯೇ ಹೀಗಿದ್ದರೆ, ಹಿಂದೂಸ್ಥಾನದ ವಿಷಯದಲ್ಲಿ ಆಸೆಯನ್ನಿರಿಸಿಕೊಳ್ಳುವಂತೆಯೇ ಇಲ್ಲ ಎಂದು ಹೇಳಬೇಕಾಗಿಯೇ ಇಲ್ಲ. ಕನ್ಸರ್ವೇಟಿವ್ ಪಕ್ಷದ ಮಂತ್ರಿ ಮಂಡಳಕ್ಕಿಂತ ಹೆಚ್ಚಿನ ಸಹಾನುಭೂತಿಯಿಂದ ಲೇಬರ್ ಪಕ್ಷದ ಮಂತ್ರಿ ಮಂಡಳ ಭಾರತವನ್ನು

ಕಾಣುತ್ತದೆಂಬುದರಲ್ಲಿ ಸಂಶಯವಿಲ್ಲ. ಕಾರ್ಮಿಕ ವರ್ಗ ಮತ್ತು ಅನ್ಯಾಯ ಪೀಡಿತ ಅಸ್ಪೃಶ್ಯ ವರ್ಗಗಳ ಸಂಬಂಧದಲ್ಲಿ ಎಂದೂ ಲೇಬರ್ ಪಕ್ಷದ ಮಂತ್ರಿ ಮಂಡಳಕ್ಕೆ ಕನ್ಸರ್ವೇಟಿವ್ ಇಲ್ಲವೇ ಲಿಬರಲ್ ಪಕ್ಷದ ಮಂತ್ರಿ ಮಂಡಳಕ್ಕಿಂತ ಹೆಚ್ಚಿನ ಸಹಾನುಭೂತಿ ಇರುವುದು ಸ್ವಾಭಾವಿಕವೇ ಆಗಿದೆ.

* * * *

## ೪೩. ಬ್ರಾಹ್ಮಣ- ಆದಿದ್ರಾವಿಡ ವಿವಾಹ

ದಿನಾಂಕ ೧೦ ರಂದು ಮದರಾಸಿನಲ್ಲಿ ಭಿನ್ನಜಾತಿಯ ವಧೂವರರ ಸಂಸ್ಮರಣೀಯ ವಿವಾಹವೊಂದು ನಡೆಯಿತು. ಈ ವಿವಾಹದಲ್ಲಿ ವರನು ಬ್ರಾಹ್ಮಣನಿದ್ದು, ವಧುವು ಆದಿದ್ರಾವಿಡ ಅಂದರೆ ಅಲ್ಲಿಯ ಬಹಿಷ್ಕೃತ ವರ್ಗದವಳೆಂಬುದು ವಿಶೇಷ. ಈ ವಿವಾಹದಲ್ಲಿ ವಿಭಿನ್ನ ಜಾತಿಗಳ ಜನರು ಹಾಜರಿದ್ದು, ದಿವಾನ್‌ಖಾನೆಯೆಲ್ಲ ಜನರಿಂದ ತುಂಬಿಹೋಗಿತ್ತು. ದಿವಾನ್ ಬಹದ್ದೂರ್ ಆರ್. ರಾಮಚಂದ್ರ ರಾವ್, ಸಿ.ಎಸ್.ಐ, ಮಿ. ಕನಿಂಗ್‌ಹ್ಯಾಮ್, ರಾವ್‌ಬಹದ್ದೂರ್ ಬಿ,ಕಂದಸ್ವಾಮಿ ಚೆಟ್ಟಿ, ರಾವ್‌ಬಹದ್ದೂರ್ ಡಾ. ಸಿ. ನಟೇಶ್ ಮುದಲಿಯಾರ್, ಶ್ರೀ ರಂಗಯ್ಯ ನಾಯ್ಡು, ಶ್ರೀ ವಿ ಗಜೇಂದ್ರ ಮುದಲಿಯಾರ್, ಶ್ರೀ ಜಯವೇಲು ಮುಂತಾದ ಧುರೀಣರು ಈ ವಿವಾಹದಲ್ಲಿ ಹಾಜರಿದ್ದರು. ವಧುವಿನ ಹೆಸರು ಸೀತಾದೇವಿ ಎಂದಿದ್ದು, ಆಕೆಯ ಸೋದರ ಅಲ್ಲಿನ ಸರಕಾರೀ ಮುದ್ರಣಾಲಯದಲ್ಲಿ ನೌಕರಿಯಲ್ಲಿರುವವನು. ವರನ ಹೆಸರು ಶ್ರೀ ನಟೇಶ ಅಯ್ಯರ್ ಎಂದಿದ್ದು, ಆತನ ತಂದೆ ಕ್ಯಾಪ್ಟನ್ ಶ್ರೀಕಂಠ ಶಾಸ್ತ್ರಿ ಅವರು, ಕೊಯಂಬತ್ತೂರಿನಲ್ಲಿ ಹೈಕೋರ್ಟ್ ಜಡ್ಸ್ ಆಗಿದ್ದರು. ವಧೂವರರಿಬ್ಬರ ತಾಯ್ತಂದೆಯರೂ ಜೀವಂತರಿರಲಿಲ್ಲ.

ವಧುವಿನ ಶಿಕ್ಷಣ ಥರ್ಡ್ ಫಾರ್ಮ್‌ವರೆಗೆ ಆಗಿದೆಯಷ್ಟೇ. ವಿವಾಹ ವಿಧಿಗಳು ಆರ್ಯಸಮಾಜ ಪದ್ಧತಿಯಂತೆ ನಡೆದುವು. ವಿಧಿಗಳು ಮುಗಿದೊಡನೆ ಸಭೆ ಸೇರಿ, ಅಧ್ಯಕ್ಷ ಸ್ಥಾನದಲ್ಲಿ ಡಾ. ವರದರಾಜನ್ ನಾಯ್ಡು ಅವರನ್ನು ನಿಯೋಜಿಸಲಾಯ್ತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಈ ವಿವಾಹವು, ಶತ, ಶತಮಾನಗಳಿಂದ ಉಚ್ಚ ಜಾತಿಯವರೆನ್ನುವವರು ಬಹಿಷ್ಕೃತರ ಮೇಲೆ ದೌರ್ಜನ್ಯವೆಸಗಿ ಸಂಪಾದಿಸಿದ ಪಾಪಕ್ಕೆ ಆಂಶಿಕ ಪರಿಹಾರ, ಎಂದು ನುಡಿದರು. ಜಾತಿಭೇದವು ಹಿಂದೂಸಮಾಜವನ್ನು ವಿಚ್ಛಿದ್ರ ಗೊಳಿಸಿದ್ದು, ಅದನ್ನು ಪುನಃ ಜೋಡಿಸುವ ಮಾರ್ಗ ಇದುವೇ ಆಗಿದೆ. ಹೀಗೆ ಮಿಶ್ರ ವಿವಾಹದಲ್ಲಿ ಪರಸ್ಪರ ಬಂಧಿತರಾದ ಜೋಡಿಗಳಿಗೆ ಸಾಕಷ್ಟು ಕಷ್ಟ ಕಾದಿರಬಹುದು, ಕಾನೂನಿನ ತೊಂದರೆ ಪರಿಹರಿಸಲು, ಭಿನ್ನ ಜಾತೀಯ ವಿವಾಹವನ್ನು ಮ್ಯಾರೇಜ್ ರೆಜಿಸ್ಟ್ರೇಶನ್ ಆಕ್ಟ್ ನಂತೆ ನೋಂದಾಯಿಸಿ ಕೊಳ್ಳುವುದು ಒಳ್ಳೆಯದು. ರಾವ್‌ಬಹದ್ದೂರ್ ಡಾ. ನಟೇಶ್ ಮುದಲಿಯಾರ್ ಅವರು, ಇಂತಹ ವಿವಾಹವನ್ನು ಸಂಯೋಜಿಸಿ, ತಾನು ಚೈತನ್ಯ, ರಾಮಾನುಜ, ಸ್ವಾಮಿ ದಯಾನಂದರೇ ಮುಂತಾದವರ ಬೋಧನೆಯನ್ನು ಕಾರ್ಯರೂಪಕ್ಕೆ ತಂದಂತಾಗಿದೆ, ಎಂದು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ದಿವಾನ್ ಬಹದ್ದೂರ್ ರಾಮಚಂದ್ರರಾವ್ ಅವರು ಜಾತಿಭೇದವನ್ನು ಮಥಿಸಿ, ನಾವು ನಮ್ಮ ಸಮಾಜವನ್ನು ನಿಸ್ಸತ್ವಗೊಳಿಸಿದ್ದೇವೆ, ಮತ್ತು ಈ ಜಾತಿಭೇದದ ಕಾರಣ, ಇಡಿಯ ಜಗವೇ ನಮ್ಮನ್ನು ನೋಡಿ ನಗುತ್ತಿದೆ ; ಇಂತಹ ವಿವಾಹದಿಂದ ಜಾತಿಭೇದವು ಕ್ರಮೇಣ ನಾಮಾವಶೇಷವಾಗುವುದರಲ್ಲಿ ಸಂಶಯವಿಲ್ಲ ಎಂದು ಹೇಳಿದ್ದಾರೆ. ಇತರ ಅನೇಕರ ಭಾಷಣಗಳೂ ನಡೆದುವು. ಇಲ್ಲಿ ಹಾಜರಿರುವೆನೆಂದ ಶ್ರೀ ಸತ್ಯಮೂರ್ತಿ ಅವರು ಕೊನೆಗೆ ಬಾರದೇ ಹೋದರು. ಅವರ ಕೊರತೆಯನ್ನು ದಿವಾನ್ ಬಹದ್ದೂರ್ ರಾಮಚಂದ್ರರಾವ್ ಅವರಂತಹ ವಯೋವೃದ್ಧ, ಸನ್ಮಾನ್ಯ ಬ್ರಾಹ್ಮಣ ವಿದ್ವಾಂಸರು



ತುಂಬಿ ಕೊಡುವಂತಾಯ್ತೆಂದು ಡಾ. ಮುದಲಿಯಾರ್ ಅವರು ಆಡಿ ತೋರಿದರು.

ಸತ್ಯಮೂರ್ತಿ ಅವರ ಇದುವರೆಗಿನ ಇತಿಹಾಸವನ್ನು ಗಮನಿಸಿದರೆ, ಅವರ ಅಸ್ಥಿರತೆಯ ಬಗ್ಗೆ ನಮಗೂ ಆಶ್ಚರ್ಯವೆನಿಸುವುದಿಲ್ಲ.ಮದರಾಸಿನಂತೆ ಜಾತಿಭೇದಕ್ಕೆ ಕಠಿಣ ನಿರ್ಬಂಧ ಮತ್ತು ಅಸ್ಪೃಶ್ಯತೆಯ ಪರಾಕಾಷ್ಠೆಯಿಂದ ಗ್ರಸ್ತವಾದ ಪ್ರಾಂತ್ಯದಲ್ಲಿ ಇಂತಹ ಮದುವೆ ನಡೆಯುವುದು ಮತ್ತು ಅಲ್ಲಿ ಬ್ರಾಹ್ಮಣಾದಿ ಸ್ಪೃಶ್ಯವರ್ಗದ ಜನರು ಹಾಜರಿದ್ದು ಸಹಾನುಭೂತಿ ತೋರುವುದು ಭವಿಷ್ಯದ ಶುಭಚಿಹ್ನೆಯೇ ಆಗಿದೆ.

* * * *

## ೪೪. ಸಮಾಜ ಸಮತೆಯ ವಿರೋಧಕ

ಸಮಾಜ ಸಮತಾ ಸಂಘದ ಚಳವಳಿ ಆರಂಭವಾಗಿ, ಆ ಚಳವಳಿಯಿಂದ ಅಸ್ಪೃಶ್ಯತಾ ನಿರ್ಮೂಲನ ಕಾರ್ಯದಲ್ಲಿ ಉಪಯೋಗವಾಗತೊಡಗಿತು. ಅಸ್ಪೃಶ್ಯರೆನಿಸಿದ ಜನರಿಗೆ ಮುಂಜಿಯಾಗಿ ಅವರು ಯಜ್ಞೋಪವೀತ ಧರಿಸತೊಡಗಿದರು, ಗಾಯತ್ರೀ ಮಂತ್ರ ಪಠಿಸ ತೊಡಗಿದರು. ಸಹಭೋಜನಗಳು ನಡೆದು, ಅಂತರ್ಜಾತೀಯ ವಿವಾಹಗಳೂ ಆದವು. ಅದರಿಂದಾಗಿ ಚಾತುರ್ವಣ್ಯದ ಹೆಸರಲ್ಲಿ ಸಮಾಜದಲ್ಲಿನ ವಿಷಮತೆಯ ಸಾಮ್ರಾಜ್ಯ ಅಳಿದು, ತಮ್ಮ ಜಾತಿಯೇ ಮೇಲೆಂದು ಮೆರೆಯುವ ಜನರ ಹೃದಯ ಢವಗುಟ್ಟ ತೊಡಗಿತು. ಸಮತಾ ಸಂಬಂಧದ ಚಳವಳಿಯು, ತನ್ನ ಜಾತಿಭೇದ ಪದ್ಧತಿಯ ಬಾಲಗ್ರಹದಿಂದ ವಕ್ರವಾಗುವುದು ಬೇಡವೆಂದು ಆ ಚಳವಳಿಯನ್ನು ಪರಿಹಾಸ್ಯ ಮಾಡುವ, ಲಘುವಾಗಿ ಕಾಣುವ ಈ ಜನರು ಗಾಬರಿಯಾಗಿದ್ದಾರೆಂಬುದರಲ್ಲಿ ಸಂಶಯವಿಲ್ಲ. ವಿಶೇಷವಾಗಿ ಹಿಂದೂ ಸಂಘಟನೆಯ ಚಳವಳಿಯ ಮುಂಚೂಣಿಯಲ್ಲಿರುವ ಪ್ರತಿಯೊಬ್ಬರ ಕಣ್ಣಲ್ಲೂ ಸಮತಾ ಸಂಘದ ಚಳವಳಿಯು ಸತತ ಚುಚ್ಚುತ್ತಲೇ ಇದೆ. ಬಹಿಷ್ಕೃತ ವರ್ಗದ ಸ್ವತಂತ್ರ ಚಳವಳಿ ಮತ್ತು ಸಮಾಜ ಸಮತಾ ಸಂಘದ ಚಳವಳಿ ಇರದಿದ್ದರೆ ಅಸ್ಪೃಶ್ಯತಾ ನಿವಾರಣೆಯ ಪ್ರಶ್ನೆಯನ್ನು ಪಕ್ಕಕ್ಕೆ ತಳ್ಳಿ ಬಿಡಬಹುದಿತ್ತು. ಬಹಿಷ್ಕತ ವರ್ಗದ ಸ್ಥಿತಿಯಲ್ಲಿ ಹೆಚ್ಚಿನ ಸುಧಾರಣೆ ತರದೆ, ಸ್ವಾಭಿಮಾನದ ಗಾಳಿ ಹೋಗಲು ಬಿಡದೆ, ಮುಸಲ್ಮಾನ ಮತ್ತು ಕ್ರಿಶ್ಚಿಯನ್ ಸಮಾಜಗಳ ಜಗಳವನ್ನು ಅವರಿಗೆ ಬೇಕಿದ್ದಂತೆ ಉಪಯೋಗಿಸಬಹುದಿತ್ತು, ಎಂದು ನಕಲಿ ಹಿಂದೂ ಸಂಘಟನಾವಾದಿಗಳಿಗೆ ಹಾಗೂ ಕಪಟ ಶುದ್ಧಿ ಪ್ರಚಾರಕರಿಗೆ ಅನಿಸುವುದು ಸ್ವಾಭಾವಿಕವೇ ಆಗಿದೆ. ಆದರೆ ಬಹಿಷ್ಕತ ವರ್ಗದ ಸ್ವತಂತ್ರ ಚಳವಳಿ ಮತ್ತು ಸಮಾಜ ಸಮತೆ ಸ್ಥಾಪಿಸುವ ಚಳವಳಿ ಈಗ ದೃಢವಾಗಿ ಬೇರೂರಿದ್ದು, ಆ ಪ್ರಬಲ ತತ್ವಗಳಿಂದ ಮೂಡಿ ಬಂದಿದ್ದು, ಆ ತತ್ವಗಳು

ಬಹುಜನ ಸಮಾಜದಲ್ಲಿ ಪ್ರಸಾರಿತವಾಗುತ್ತಿದ್ದು, ನಿಂದೆ, ಪರಿಹಾಸ್ಯಗಳಿಂದ ಅವು ದಮನಿಸಲ್ಪಡುವ ಶಕ್ಯತೆಯೇ ಇಲ್ಲ. ಈ ಚಳವಳಿಯನ್ನು ನಿಂದಿಸಿ ಪರಿಹಾಸ್ಯ ಮಾಡುವವರು ಹಿಂದೂ ಸಂಘಟನೆಯ ಪ್ರಬಲ ಪರಸ್ಕರ್ತರಾಗಿದ್ದು, ಸಂಘಟನೆಯಲ್ಲಿ ಗಾಢ ಆಸ್ಥೆ ಉಳ್ಳವರಾಗಿದ್ದು, ಸಂಘಟನೆಯ ಧೂರ್ತತನದ ಬಗ್ಗೆ ಸಾರ್ವಜನಿಕರಿಗೆ ತಿಳಿಯದಂತೆ ಸುಮ್ಮನಿರುವುದರಲ್ಲೇ ಅವರ ಜಾಣೆ ಅಡಗಿದೆ. ಡಾ. ಅಂಬೇಡ್ಕರ ಶ್ರೀ ದೇವರಾವ್ ನಾಯಕ್, ಬಾಪೂಸಾಹೇಬ್ ಸಹಸ್ರಬುದ್ಧೆ, ಶ್ರೀ ಪ್ರಧಾನ್ ಬಂಧು, ಶ್ರೀ ಶಿವತರ್‌ಕರ್ ಇತ್ಯಾದಿ ಜನರ ಬಗ್ಗೆ ವೈಯುಕ್ತಿಕ ಟೀಕೆ ಮಾಡಿ, ಅವರ ಬಗ್ಗೆ ಜನರ ಮನವನ್ನು ಕಲುಷಿತಗೊಳಿಸಿ, ಅಸ್ಪೃಶ್ಯತಾ ನಿವಾರಣೆ ಹಾಗೂ ಸಮತಾವಾದದ ಚಳವಳಿಯನ್ನು ನೆಲಸಮ ಮಾಡಬಹುದೆಂಬುದು ಅವರ ಕಲ್ಪನೆಯಾಗಿದ್ದರೆ, ಆ ಬಗ್ಗೆ ಅವರ ಮೇಲೆ ಮರುಕ ಪಡಬೇಕಷ್ಟೆ. ಮಿಸ್ಸ್ ಪಾರ್ಟ್‌ಗ್ರೇಟನ್ ಎಂಬ ಮಹಿಳೆಯೊಬ್ಬಾಕೆ ಹಿಡಿಸೂಡಿ ಕೈಯಲ್ಲಿ ಹಿಡಿದು ಅಟ್ಲಾಂಟಿಕ್ ಮಹಾಸಾಗರವನ್ನು ಹಿಂದಕ್ಕಟ್ಟಲು ಯತ್ನಿಸುತ್ತಿದ್ದಳೆಂಬ ಕಥೆಯಿದೆ. ಈ ಪ್ರಯತ್ನವೂ ಅಷ್ಟೇ ಹಾಸ್ಯಾಸ್ಪದ.. ಸುಳ್ಳು ಗೋಷ್ಠಿಗಳು, ಸುಳ್ಳು ಆರೋಪಗಳು, ಅರ್ಥವಿಲ್ಲದ ಚರ್ಚೆಗಳಿಂದ ಬಹಿಷ್ಕೃತ ವರ್ಗದ ಸ್ವತಂತ್ರ ಚಳವಳಿ ಮತ್ತು ಸಮಾಜ ಸಮತಾವಾದವನ್ನು



ಚಿವುಟಿ ಹಾಕಲು ನೋಡುತ್ತಿರುವವರ ನಿಜರೂಪವನ್ನು ಬಯಲಿಗೆಳೆದು ಲೋಕಕ್ಕೆ ತೋರುವುದು ಕಠಿಣವಲ್ಲ. ಆದರೆ ನಮ್ಮ ಚಳವಳಿಗೆ ಸಂಬಂಧಿಸಿ, ಹೀಗೆ ಈ ಘಾತಕರನ್ನು ಅವರದೇ ಪಟ್ಟಿನಿಂದ ಪ್ರತಿಘಾತಿಸುವ ಅಗತ್ಯ ನಮಗೆ ಕಂಡು ಬರುವುದಿಲ್ಲ. ಅಲ್ಲದೆ ಇದರಲ್ಲಿ ಬಹಳಷ್ಟು ವಿರೋಧಕರು ಈಗಾಗಲೇ ಫಜೀತಿಯನ್ನೆದುರಿಸುತ್ತಿದ್ದು, ಅವರ ಮೇಲೆ ಇನ್ನೂ ಒತ್ತಡ ತಂದು, ಮತ್ತಷ್ಟು ಅಸಹ್ಯವೆನಿಸುವಂತೆ ಮಾಡುವ ಇಚ್ಛೆ ನಮಗಿಲ್ಲ.

ಅಡ್ಡಗಾಲು ಹಾಕುವ ಶಿಖಂಡಿಯನ್ನು ಮುಂದಕ್ಕೆಳೆದು, ಆ ಕಪ್ಪುಮುಖವನ್ನು ಜಗತ್ತಿಗೆ ತೋರುವುದೆಂದರೆ, ಸುಮ್ಮನೆ ಜಾಹೀರಾತು ಕೊಟ್ಟಂತೆ. ಯಾರೋ ಒಬ್ಬ ಗೃಹಸ್ಥ, ಸಮತಾವಾದಿಯೆನ್ನುವವನು ಸಹ ಭೋಜನಕ್ಕೆ ಹಾಜರಿರಲಿಲ್ಲ ; ಮತ್ತು ಭೋಜನಕ್ಕೆಂದು ವಿಭಿನ್ನ ಜಾತಿಯ ಜನರನ್ನು ತನ್ನಲ್ಲಿಗೆ ಆಹ್ವಾನಿಸಿ, ಹೊರಗಿನಿಂದ ಅಡುಗೆ ತಯಾರಿಸಿ ತಂದನೆಂದು ಪ್ರಚಾರ ಮಾಡಿದರೆ, ಸಮತೆಯ ಚಳವಳಿ ಸ್ವಲ್ಪ ಸಮಯ ನಿಲ್ಲುವುದೆಂದು ಆ ಭ್ರಮಿಷ್ಠರ ಯೋಚನೆಯಾದರೆ, ಅದು ಶುದ್ಧ ಭ್ರಮೆ, ಸಹಭೋಜನಕ್ಕೆ ಇಪ್ಪತ್ತೈದು ಬಾರಿ ಹಾಜರಿದ್ದಾತ, ಏನೋ ತೊಂದರೆಯಾಗಿ ಒಂದೊಮ್ಮೆ ಬರಲು ಅಶಕ್ತನಾದರೆ ಆತ ಬೆದರಿದನೆಂದಲ್ಲ; ಹಾಗೆಯೇ ಗೃಹಸ್ಥಿಯ ಏನೋ ಅಡಚಣೆಯಿಂದಾಗಿ, ಒಂದೊಮ್ಮೆ ತನ್ನ ಮನೆಯಲ್ಲಿ ಸ್ವಯಂಪಾಕ ಮಾಡಲಾಗದಿದ್ದರೆ, ಆತ ಡೋಂಗಿಯೆಂದೇನಲ್ಲ.

ಅಸ್ಪೃಶ್ಯರೆನಿಸಿಕೊಂಡವರ ಪಂಕ್ತಿಭೇದ ಪಾಲಿಸದೆ, ಆತ ಭೋಜನಕ್ಕೆ ಕುಳಿತುಕೊಳ್ಳುತ್ತಾನೆ, ಮತ್ತು ಅಸ್ಪೃಶ್ಯನೆನಿಸಿಕೊಂಡವನಿಗೆ ಬಡಿಸುವ ಅನ್ನ ಅವನಿಗೆ ಸೇರುತ್ತದೆಂಬುದೇ ಮಹತ್ವದ ವಿಷಯ. ಅದು ಮಹತ್ವದ್ದಲ್ಲವೆಂದು ಯಾರು ಹೇಳುತ್ತಾರೋ, ಅವರು ಹಾಗೆ ಮಾಡಿ ತೋರಿಸಲಿ. ಆದರೆ ಎಲ್ಲಕ್ಕೂ ಮಹತ್ವದ ವಿಷಯವೆಂದರೆ , ಯಾವುದೇ ಸಾಮಾಜಿಕ ಸುಧಾರಣೆ ಗ್ರಾಹ್ಯವೋ, ಅಗ್ರಾಹ್ಯವೋ ಆಗುವುದು, ಯಾರೋ ಮನುಷ್ಯನ ವರ್ತನೆಯ ಮೇಲಿಂದಲ್ಲ. ನುಡಿದಂತೆ ನಡೆಯುವವನೇ ವಂದ್ಯನು. ಆದರೆ, ಯಾರೋ ಒಬ್ಬಾತನಿಗೆ ತನ್ನ ವಿಚಾರದಂತೆ ನಡೆವ ಧೈರ್ಯವಾಗದಿದ್ದರೆ, ಅದು ಆತನ ದೌರ್ಬಲ್ಯವಷ್ಟೇ. ಹಾಗೆಂದು ಆತನ ವಿಚಾರ ತಪ್ಪೆಂದಲ್ಲ. ವಿಧವಾ ವಿವಾಹದಂತಹ ಸಾಮಾಜಿಕ ಸುಧಾರಣೆಯ ವಿಷಯದಲ್ಲಿ ದುರ್ಬಲ ಮನದ ಸುಧಾರಕರನ್ನು ಟೀಕಿಸಿ, ಆ ಸುಧಾರಣೆಯನ್ನು ತ್ಯಜಿಸುವ ವಹಿವಾಟು ಮಧ್ಯಂತರ ಕಾಲದಲ್ಲಿತ್ತು. ಆದರೆ ಅಂತಹ ವೈಯುಕ್ತಿಕ ಟೀಕೆಗಳು ಸಮಾಜ ಸುಧಾರಣೆಯ ದಾರಿಯಲ್ಲಿ ಅಡ್ಡ ಬರಲಿಲ್ಲ. ಯಾವುದೋ ಒಂದು ಸುಧಾರಣೆ ನಿಮಗೆ ಮಾನ್ಯವೋ ಇಲ್ಲವೋ ಎಂದು ವಿಚಾರಿಸಬೇಕೋ ಇಲ್ಲವೋ ಎಂದು ಸ್ಪಷ್ಟ ಉತ್ತರ ನೀಡುವ ಬದಲು, ಆ ಸುಧಾರಣೆಯನ್ನು ಒಪ್ಪಿಕೊಂಡರೂ, ಅದನ್ನು ಜಾರಿಗೆ ತರುವ ವೇಳೆ ಹಿಂದೆಗೆದುಕೊಳ್ಳಲಾಯ್ತು, ಎನ್ನುವುದು ಸರಿಯಾದ ಉತ್ತರವಲ್ಲ. ಆದರೆ ವ್ಯಕ್ತಿಯನ್ನು ಟೀಕಿಸಿ ತತ್ವವನ್ನು ಕೆಡಹುವ ಮೋಹ ಬೆಳೆದ ಕಾರಣ ,ಟೀಕಿಸುವವರು ಇಂತಹ ಅಸಂಬದ್ಧತೆ ತೋರಲಾಗುತ್ತದೆ. ನುಡಿದಂತೆ ನಡೆಯುವವರು ಲೋಕದಲ್ಲಿ ಎಂದೂ ಸ್ವಲ್ಪವೇ ಇರುತ್ತಾರೆ. ಆದರೆ ಹೇಳಿದಂತೆ ಮಾಡುವ ಧೈರ್ಯ ಇರದವರು, ಹಾಗೆಂದು ಒಪ್ಪಿ ಕೊಂಡರಾಯ್ತು. ಹಾಗೆಯೇ ಪ್ರತಿಯೊಬ್ಬರಿಗೂ ಏನಾದರೂ ಅಡಚಣೆ ಇದ್ದೇ ಇರುತ್ತದೆ. ಎಲ್ಲರೂ ಸಮಾನ ಅಂತರದಲ್ಲಿ ಸಮಾನ ವೇಗದಿಂದ ಓಡುವುದು ಶಕ್ಯವಲ್ಲ. ಆದರೆ ಒಂದು ಸುಧಾರಣೆ ಯೋಗ್ಯವೋ, ಅಯೋಗ್ಯವೋ ಎಂಬುದನ್ನು ಯುಕ್ತಿವಾದದಿಂದ ಸಿದ್ಧ ಪಡಿಸುವ ಕಾರ್ಯವನ್ನು ತಳ್ಳಿಹಾಕಿ, ವ್ಯಕ್ತಿಯ ಆಚರಣೆಯಿಂದ ಆ ಸುಧಾರಣೆಯನ್ನು ಬಿಟ್ಟು ಬಿಡುವ ನಿರ್ಧಾರಕ್ಕೆ ಬರುವುದು



ಹೇಡಿತನವೇ ಆಗಿದೆ. ನುಡಿದಂತೆ ನಡೆವವರು ಸಮಾಜ ಸುಧಾರಕರಲ್ಲಿ ಬಿಡಿ, ಪುರಾಣಮತವಾದಿಗಳಲ್ಲಿ ಎಷ್ಟು ಮಂದಿ ಇದ್ದಾರು? ಒಬ್ಬರಾದರೂ ಪುರಾಣಮತಾಭಿಮಾನಿ ಈಗ ಶಾಸ್ತ್ರದಂತೆ ನಡೆಯುತ್ತಿರುವರೇ? ವೈರಾಗ್ಯದ ಮಹತ್ವವನ್ನು ಹಾಡಿ ಹೊಗಳಿ, ಸಾಧುಸಂತರ ಚರಿತ್ರೆಯನ್ನು, ವಚನಗಳನ್ನು ವ್ಯಾಖ್ಯಾನಿಸುವ ಎಷ್ಟು ಜನರು ಸ್ವತಃ

ವಿರಕ್ತರಾಗಿರುತ್ತಾರೆ? ಅಲ್ಲದೆ, ವ್ಯಕ್ತಿಯ ಬಗೆಗಿನ ಚರ್ಚೆಯಿಂದ ಯಾವುದೇ ಸಮಾಜ ಸುಧಾರಣೆ ವರ್ಜ್ಯವೆನಿಸುವುದಿಲ್ಲ. ನಿಸರ್ಗದಲ್ಲೇ ಸಮತೆ ಇಲ್ಲದಿರುವಾಗ ಸಮತಾವಾದಕ್ಕೆ ಏನು ಅರ್ಥ, ಎಂದು ಶಿಷ್ಟತೆಯಿಂದಲೇ ಆಕ್ಷೇಪ ಎತ್ತಲಾಗುತ್ತಿದೆ. ಆದರೆ ಜಾತಿ ಭೇದವು ನಿಸರ್ಗಜನ್ಯ ಭೇದವಲ್ಲ ಎಂಬುದನ್ನು ಲಕ್ಷ್ಯದಲ್ಲಿರಿಸಬೇಕು .ಯಾವುದೇ ಜಾತಿಯಲ್ಲಿ ಎಲ್ಲರೂ ಬುದ್ಧಿವಂತರೂ, ತೇಜಸ್ವಿಯೂ, ಸದಾಚಾರವಂತರೂ ಆಗಿ ಜನಿಸುವುದಿಲ್ಲ; ಹಾಗೆಯೇ, ಇನ್ನೊಂದು ಜಾತಿಯಲ್ಲಿ ಎಲ್ಲರೂ ಬುದ್ಧಿಹೀನರೂ, ಹೆಡ್ಡರೂ, ದುರಾಚಾರಿಗಳೂ ಆಗಿರುವುದಿಲ್ಲ, ಎಲ್ಲಿಯವರೆಗೆ ತೋರಿಸಿಕೊಡಲಾಗುವದಿಲ್ಲವೋ, ಅಲ್ಲಿಯ ವರೆಗೆ ಜಾತಿಭೇದವನ್ನು ನೈಸರ್ಗಿಕ ಭೇದವೆನ್ನಲಾಗದು.

ಮನುಷ್ಯನೇ ಮಾಡಿದ ಭೇದವನ್ನು ಇಲ್ಲವಾಗಿಸುವುದು ಮನುಷ್ಯನಿಗೆ ಅಸಾಧ್ಯವಲ್ಲ ಮತ್ತು ಸದ್ಯದ ಸಾಮಾಜಿಕ ವಿಷಮತೆ ಮನುಷ್ಯ ಕೃತವಾದ್ದರಿಂದ ಅದನ್ನು ಕಿತ್ತು ಹಾಕುವುದು ಖಂಡಿತ ಸಾಧ್ಯ. ಜಗದಲ್ಲಿ ಯಾವುದಾದರೊಂದು ರೂಪದಲ್ಲಿ ಒಂದಷ್ಟು ವಿಷಮತೆ ಎಲ್ಲಿಯೇ ಆದರೂ ಇದ್ದೇ ಇರುತ್ತದೆಂದು ಹೇಳುತ್ತಾರೆ. ಅಂದರೆ ಅದರರ್ಥ, ಕೃತ್ರಿಮ ವಿಷಮತೆ ಹಾಗೇ ಇರಲೆಂದೇ? ಅದನ್ನು ತೊಲಗಿಸುವುದು ಬೇಡವೆಂದೇ? ಹಾಗೆ ಹೇಳುವುದಾದರೆ ನಮ್ಮ ವಿಚಾರವೇ ಬೇರೆ. ನಿಸರ್ಗದಲ್ಲಿ ನೀತಿ ಎಲ್ಲಿದೆ? ಜಗದಿಂದ ಅನೀತಿಯನ್ನು ಪೂರ್ಣ ಇಲ್ಲವಾಗಿಸುವುದು ಎಂದಾದರೂ ಶಕ್ಯವೇ? ಹೆಚ್ಚು ಕಡಿಮೆ ಈ ಅನೀತಿಯೆಂಬುದು ಜಗದ ಅಂತ್ಯದವರೆಗೂ ಇರುವಂತಹದ್ದೇ ಅಲ್ಲವೇ? ಮತ್ತೆ ಈ ನೀತಿಯ ಉಪದೇಶವೇಕೆ? ನೀತಿತತ್ವಕ್ಕೆ ಮಾನ್ಯತೆ ಕೊಡಲೇಕೆ? ಕಳ್ಳತನವೇ ಮುಂತಾದ ಅಪರಾಧಗಳಿಗೆ ಶಿಕ್ಷೆ ನೀಡುವ ಕಾಯ್ದೆ ಯಾಕೆ ಬೇಕು? ಸಮತೆಗೆ ಆಕ್ಷೇಪವೆತ್ತುವವರು ಈ ಪ್ರಶ್ನೆಗೆ ಉತ್ತರ ಕೊಡುವರೇ? ನೀತಿ ಬೇಕಾದರೆ ಸಮತೆಯೂ ಬೇಕು. ಸಮತೆಯು ಸಾರ್ವಜನಿಕ ನೀತಿಯ ಒಂದು ಮುಖ್ಯ ತತ್ವವಾಗಿದೆ.

ರಾಜಕೀಯ, ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ವಿಷಯಗಳಲ್ಲಿ ಸಮತೆಯ ತತ್ವವನ್ನು ಸ್ಥಾಪಿಸುವುದೆಂದರೆ, ಸಮಾಜ ರಚನಾ ನೀತಿಯ ಅಡಿಪಾಯದ ಮೇಲೇ ನಿಲ್ಲಿಸಿದಂತೆ, ಗೂಬೆಗೆ ಸೂರ್ಯಪ್ರಕಾಶ ಸಹಿಸಲಾಗದಂತೆ, ಸಾಮಾಜಿಕ ವಿಷಮತೆಯ ಕಾರಣ ಜಾತಿ ಶ್ರೇಷ್ಠತೆಯನ್ನು ಮೆರೆಸುವವರಿಗೆ ಜಾತಿಭೇದದ ಮೇಲೆ ಕೊಡಲಿಯೇಟು ಬಿದ್ದುದನ್ನು ಕಾಣುವಾಗ ಸಹಜವಾಗಿಯೇ ಸಂತಾಪವಾಗುತ್ತದೆ. ಹಿಂದೂ ಸಮಾಜವೆಂದರೆ ಅನೇಕ ಭೇದಾನುಭೇದಗಳ ಸೋಪಾನ. ಹೆಜ್ಜೆ ಹೆಜ್ಜೆಗೂ ಇರುವ ಅಂತರಕ್ಕೇ ಖುಶಿ ಪಡುವ ಜಾತಿಗಳು. ಜಾತಿಭೇದವನ್ನು ಸಮರ್ಥಿಸುವವರು ಜಾತಿ ದುರಭಿಮಾನಿಗಳೂ ಆಗಿರುವುದರಿಂದ ಅವರು ಸಮತೆಯ ಭಾವನೆಗೆ ಪರಕೀಯರಾಗಿರುತ್ತಾರೆ. ಜಾತಿಭೇದ ಇಲ್ಲವಾದರೆ ತಮ್ಮ ಶ್ರೇಷ್ಠತೆಯನ್ನು ಮೆರೆಸುವುದೆಂತು ಎಂಬ ಭಯ ಅವರಿಗಿರ ಬಹುದು. ಹಾಗೆಂದೇ ಅವರು ಸಮತಾಸ್ಥಾಪನೆಯ ಚಳವಳದ ವಿರುದ್ಧವಿದ್ದಾರೆ. ಹಿಂದೂ ಸಂಘಟನೆ ಅವರಿಗೆ

ಬೇಕಿರುವುದು ಇದಕ್ಕಾಗಿಯೇ. ಹಿಂದೂ ಸಮಾಜದಲ್ಲಿ ಈ ಭೇದ ಇರಲಿ, ವಿಷಮತೆಯೂ ಹಾಗೇ ಇರಲಿ, ಮತ್ತು ಸಮಾಜದಲ್ಲಿ ವರಿಷ್ಠ ವರ್ಗವೆಂದು ತಾವು ಮೆರೆದಾಡುವಂತಾಗಲಿ,



ಎಂದೇ, ಸಮತೆ ಬೇಕಿರುವವರು ಖುಶಿಯಿಂದ ಪರಧರ್ಮಕ್ಕೆ ಹೋಗಲಿ, ಪೀಡೆ ಕಳೆದಂತಾಯ್ತು, ಎಂದುಕೊಳ್ಳುವಷ್ಟು ಸಮತಾ ದ್ವೇಷಿಗಳು. ಹಿಂದೂ ಸಮಾಜವು ಎಂದು ಬೇಕಾದರೂ ನಾಮಾವಶೇಷವಾಗಲಿ; ಅದು ಅಸ್ತಿತ್ವದಲ್ಲಿರುವವರೆಗೆ ನಮಗೆ ನಮ್ಮ ಶ್ರೇಷ್ಠತೆಯನ್ನು ಮೆರೆಸುವ ಅವಕಾಶ ಸಿಗುತ್ತಿರಬೇಕು, ಎಂಬುದಷ್ಟೇ ಈ ಡೋಂಗಿ ಸಂಘಟನಾವಾದಿಗಳ ಧ್ಯೇಯ. ಹಿಂದೂಧರ್ಮದ ಬಗ್ಗೆ, ಹಳೆಯ ಸ್ಮೃತಿ ಪುರಾಣಾದಿ ಗ್ರಂಥಗಳ ಬಗ್ಗೆ ಅವರಿಗೆ ಪ್ರೀತಿ ಉಕ್ಕುವುದು, ಅದರಿಂದಾಗಿ ತಮ್ಮ ಜಾತಿಯ ಗುಣಗಾನ ಸಾಧ್ಯವಾಗುವುದರಿಂದ, ಆ ಲಾಭ ಇಲ್ಲವಾದರೆ, ಅವರ ಪ್ರೇಮವೂ ಒಣಗುತ್ತದೆ. ಕೆಲವು ಜಾತಿಗಳು ತಾನು ಬ್ರಾಹ್ಮಣ ಎನ್ನುವುದುಂಟು. ಈ ಬ್ರಾಹ್ಮಣರಲ್ಲಿ ಹಲವು ಉಪಜಾತಿಗಳಿದ್ದು, ಪರಸ್ಪರ ಉಚ್ಚ ನೀಚ ಎಂದುಕೊಳ್ಳುತ್ತವೆ. ಎಲ್ಲ ಸೇರಿ ಜಾತಿಭೇದವನ್ನು ಶಾಶ್ವತವಾಗಿರಿಸಿಕೊಂಡಿವೆ. ತಮ್ಮನ್ನು ಜನರು ಬ್ರಾಹ್ಮಣರೆನ್ನಬೇಕು, ಎಂತಹ ಬ್ರಾಹ್ಮಣರೆಂದರೂ ಆದೀತು, ವಿಷಾರಿ ಬ್ರಾಹ್ಮಣ, ಅಶಕುನಿ ಬ್ರಾಹ್ಮಣ, ಆರ್ಯ ಬ್ರಾಹ್ಮಣ, ಅನಾರ್ಯ ಬ್ರಾಹ್ಮಣ, ಷಟ್ಕರ್ಮಿ ಬ್ರಾಹ್ಮಣ, ತ್ರಿಕರ್ಮಿ ಬ್ರಾಹ್ಮಣ, ಆಚಾರೀಘ ಬ್ರಾಹ್ಮಣ, ಪಾಣಕೆ ಬ್ರಾಹ್ಮಣ, ಧೂರ್ತ ಬ್ರಾಹ್ಮಣ, ಮೂರ್ಖ ಬ್ರಾಹ್ಮಣ, ಭಾಜಿತಿನ್ನುವ, ಮಾಂಸ, ಕೋಳಿ ತಿನ್ನುವ ಬ್ರಾಹ್ಮಣ ಹೀಗೆ ಯಾವುದಾದರೂ ಇರಲಿ, ಆದರೆ ಬ್ರಾಹ್ಮಣನೆಂದಿರಲಿ., ಎಂಬುದೇ ಈ ಜನರ ಆಗ್ರಹ. ಆನಂತರ ಬರುವ ಕ್ಷತ್ರಿಯರು ಮತ್ತು ವೈಶ್ಯರನ್ನು ಬ್ರಾಹ್ಮಣರು ತಮ್ಮ ಕಾರ್ಯ ಸಾಧನೆಗಾಗಿ ಹಾಗೆಂದರೂ, ಪ್ರತ್ಯಕ್ಷ ವ್ಯವಹಾರದಲ್ಲಿ ಅವರನ್ನು ಶೂದ್ರರಂತೆಯೇ ಕಾಣುವರು. ಇಷ್ಟೇ ಅಲ್ಲ, ಬ್ರಾಹ್ಮಣರ ಹೊರತಾಗಿ ಉಳಿದ ಎಲ್ಲ ಹಿಂದೂಗಳು ಶೂದ್ರರು ಹಾಗೂ ಅತಿಶೂದ್ರರು ಎಂದರೂ ನಡೆಯುತ್ತದೆ. ಬ್ರಾಹ್ಮಣರು ಕಾಲ್ತೊಳೆದ ಕೊಳಕು ನೀರನ್ನು ಕುಡಿಯಲೂ ಇವರು ಸಿದ್ದರು; ಕೆಳಜಾತಿಯವರ ಮೇಲೆ ದೌರ್ಜನ್ಯ ತೋರಿ, ವರ್ಚಸ್ಸು ಮೆರೆವಂತಾದರಾಯ್ತು. ಈ ಜಗತ್ತಿನಲ್ಲಿ ನಿಜದ ಗುಲಾಮರು ಎಂದಿದ್ದರೆ, ಅದು ಈ ಬ್ರಾಹ್ಮಣರ ಇಂತಹ ಹಿಂಬಾಲಕರೇ ಸರಿ. ವಾರಕರಿ, ರಾಮದಾಸಿ ಮುಂತಾದ ಪಂಥದ ಧರ್ಮಾಭಿಮಾನಿಗಳು ಇದಕ್ಕೆ

ಹೇಳಿ ಮಾಡಿಸಿದಂತಹ ಜನರು. ಇವರು ತಮ್ಮನ್ನು ಸಾಧುಸಂತರ ಅನುಯಾಯಿಗಳೆಂದು ಕರೆದುಕೊಳ್ಳುತ್ತಾರೆ, ಆದರೆ, ಇತರರನ್ನು ಸಮಾನತೆಯಿಂದ ಕಾಣಬೇಕೆಂಬ ಅವರ ಉಪದೇಶವನ್ನು ಮೂಲೆಗಿಟ್ಟಿರುತ್ತಾರೆ. ಏಕನಾಥ, ತುಕಾರಾಮರಂತಹ ಸಾಧುಗಳ ಹೆಸರನ್ನು ಇವರು ಪ್ರೀತಿಯಿಂದಲೇ ಎತ್ತಿಕೊಳ್ಳುತ್ತಾರೆ, ಅವರ ಕವಿತೆಗಳನ್ನು ಹಾಡುತ್ತಾರೆ, ಆ ಸಾಧುಗಳ ಪವಾಡಗಳ ದಂತಕಥೆಯನ್ನು ಶಕ್ಯವಿದ್ದಲ್ಲೆಲ್ಲ ಅತಿಶಯೋಕ್ತಿಯಿಂದ ವರ್ಣಿಸುತ್ತಾರೆ. ಆದರೆ ಅವರು ಪ್ರತಿಪಾದಿಸಿದ ನ್ಯಾಯಬುದ್ಧಿ, ಭೂತದಯೆ, ಸಮತಾವಾದ, ಉದಾರ ವಿಚಾರಗಳನ್ನು ಅತ್ತ ತಳ್ಳಿ ತುಳಿಯುತ್ತಾರೆ. ಕಾರಣ, ಜಾತಿ ದುರಭಿಮಾನವು ಅವರನ್ನು ಕೈವಶ ಮಾಡಿಕೊಂಡಿದೆ. ರಾಮದಾಸಿ ಪಂಥದವರೂ ಜಾತಿ ದುರಭಿಮಾನಿಗಳೆಂದು ಪ್ರಸಿದ್ದರು. ಆ ಪಂಥದ ಸಂಸ್ಥಾಪಕನೂ ಜಾತಿ ದುರಭಿಮಾನಿಯಾಗಿದ್ದು, ಆ ಕಾರಣವೇ ವಾರ್‌ಕರಿ ಸಂಪ್ರದಾಯದೊಡನೆ ಸ್ಪರ್ಧಿಸುವ ಹೊಸಪಂಥವನ್ನು ಹುಟ್ಟು ಹಾಕಿದರು. ಇಂತಹ ಅನೇಕ ಪ್ರಕಾರದ ಸಮತಾ ವಿರೋಧಿಗಳನ್ನು ಅಸ್ಪೃಶ್ಯತಾ ನಿರ್ಮೂಲನ ಮತ್ತು ಸಮಾಜ ಸಮತಾವಾದದ ಚಳವಳಿ ಎದುರಿಸಬೇಕಾಗಿದೆ. ಆದರೆ ಈ ಚಳವಳಿ, ನ್ಯಾಯ, ಸತ್ಯ ಮತ್ತು ವಿವೇಕದ ಅಡಿಗಲ್ಲ ಮೇಲೆ ನಿಂತಿರುವುದರಿಂದ ಆ ಎಲ್ಲ ವಿರೋಧಕರನ್ನೂ ಮೀರಿ ಜಯಿಸುವುದೆಂಬ ವಿಶ್ವಾಸ ನಮಗಿದೆ.

* * * *

## ೪೫, ಬೆದರಿಕೆಯ ಭಾಷೆ

ಜಳ್ ಗಾಂವ್‌ನ ಐದು ಸಾವಿರ ಜನರು ಅಲ್ಲಿನ ಇತರ ಹಿಂದೂ ಸಮಾಜಕ್ಕೆ ತಮ್ಮ ಅಸ್ಪೃಶ್ಯತೆಯನ್ನು ದೂರ ಮಾಡುವಂತೆ ನಿಶ್ಚಿತ ಗಡುವಿನ ನೋಟೀಸ್ ನೀಡಿದ್ದು, ಆ ಗಡುವು ಮುಗಿದ ನಂತರವೂ ಹಿಂದೂ ಸಮಾಜವು ಗಮನಕ್ಕೆ ತೆಗೆದುಕೊಳ್ಳದೆ ಹೋದಾಗ, ನೋಟೀಸಿನಲ್ಲಿ ತಿಳಿಸಿದಂತೆ ಮೊದಲ ಹನ್ನೆರಡು ಜನರು ಮುಸಲ್ಮಾನ ಧರ್ಮದ ದೀಕ್ಷೆ ಪಡೆದುದು, ಮತ್ತೆ ಹಿಂದೂಗಳು ಕರೆದು, ಅವರ ಉಪಯೋಗಕ್ಕಾಗಿ ಎರಡು ಬಾವಿಗಳನ್ನು ಮಹಾರರಿಗಾಗಿ ತೆರೆದುದು, ಈ ಬಗ್ಗೆ ಈ ಮೊದಲು ನಾವು ಬರೆದುದು ಎಲ್ಲರಿಗೂ ರುಚಿಸಲಿಲ್ಲವೆಂದು ಕಾಣುತ್ತದೆ. ಎಲ್ಲರಿಗೂ ರುಚಿಸಬೇಕೆಂದು ನಮ್ಮ

ಆಶೆಯೂ ಇರಲಿಲ್ಲ. ಆದರೆ ಸತ್ಯಮಾರ್ಗದಲ್ಲಿ ನಡೆವಾಗ ಎಲ್ಲರಿಗೂ ರುಚಿಸುತ್ತದೆಯೇ ಎಂದು ವಿಚಾರಿಸಿ ನಡೆಯುವುದಲ್ಲ. ಡಾ. ಅಂಬೇಡ್ಕರ್ ಅವರು ಜಳ್ಗಾಂವ್‌ನ ಮಹಾರರಿಗೆ ಧರ್ಮಾಂತರದಿಂದ ವಿಮುಖರಾಗುವಂತೆ ಉಪದೇಶಿಸಬೇಕಿತ್ತೆಂದು ಈ ಟೀಕಾಕಾರರ ಹೇಳಿಕೆ. ಡಾ. ಅಂಬೇಡ್ಕರರು ಧರ್ಮಾಂತರದ ಉಪದೇಶ ನೀಡಿಲ್ಲ, ಆದರೆ ಯಾರು ಸ್ವಂತ ಬುದ್ಧಿಯಿಂದ ಧರ್ಮಾಂತರಕ್ಕೆಳಸಿ ಹಾಗೆ ಮಾಡಲು ಮುಂದಾದರೆ, ಅವರಿಗೆ, ಹಾಗೆ ಮಾಡಬೇಡಿ, ಧರ್ಮಾಂತರ ಮಾಡದೆಯೇ ಅಸ್ಪೃಶ್ಯತೆಯ ಪ್ರಶ್ನೆಯನ್ನು ಬಿಟ್ಟು ಬಿಡಿ, ಎಂದು ಹೇಳಿಲ್ಲ, ನಿಜ. ಅದಕ್ಕೆ ಕಾರಣವನ್ನೂ ನಾವು ಈ ಮೊದಲೇ ಹೇಳಿದ್ದೇವೆ. ಹಿಂದೂ ಧರ್ಮದಲ್ಲಿದ್ದೇ ಅಸ್ಪೃಶ್ಯತೆಯನ್ನು ಕಳೆಯುವುದು ಸಾಧ್ಯವೆಂದು ಅವರಿಗೆ ಅನಿಸಿದೆ, ಹಾಗೂ ಅದಕ್ಕಾಗಿ ಸಾಕಷ್ಟು ಕಾಲ ಕಾಯಲು ಅವರು ಸಿದ್ದರಿದ್ದರೆಂದು, ಇತರರು ಹಾಗೆ ಕಾಯುವುದು ಶಕ್ಯವೆನ್ನುವ, ಹಾಗಿಲ್ಲ, ಅಲ್ಲದೆ ಅಷ್ಟುಕಾಲ ಸಹನೆ ತೋರುವುದು ಸಾಧ್ಯವೂ ಅಲ್ಲ. ಡಾ. ಅಂಬೇಡ್ಕರರಿಗೆ ಅಷ್ಟೊಂದು ತೀವ್ರ ಅಡಚಣೆಯೇನೂ ಕಾಣಿಸದಿದ್ದರೂ, ಇತರರಿಗೆ ಹಾಗೆ ಕಾಣಿಸಬಾರದೆಂದೇನಿಲ್ಲ. ವಿಭಿನ್ನ ಕಡೆ ವಿಭಿನ್ನ ಪರಿಸ್ಥಿತಿ ಇರುತ್ತದೆ. ಅಲ್ಲದೆ, ಡಾ.ಅಂಬೇಡ್ಕರರಾದರೂ, ಯಾವ ಭರವಸೆಯಿಂದ ಹಿಂದೂಧರ್ಮದಲ್ಲೇ ಇದ್ದು ಅಸ್ಪೃಶ್ಯತೆ ಕಳೆಯುವ ಖಾತ್ರಿ ಕೊಡಬಲ್ಲರು? ಒಂದೆರಡು ಪೀಳಿಗೆಗಳ ಬಳಿಕ ಅಸ್ಪೃಶ್ಯತೆ ಉಳಿಯುವುದಿಲ್ಲವೆಂದು ಆಶೀರ್ವದಿಸುವ, ಮತ್ತು ಡಾ. ಅಂಬೇಡ್ಕರರಿಗೆ ನಿಧಾನ ಹೆಜ್ಜೆಯಿಡುವಂತೆ ಉಪದೇಶಿಸುವ ಭಾಲಾಕಾರರಂತಹ ಟೀಕಾಕಾರರು ದಿನವೂ ತಮ್ಮ ಉದ್ದಾಮ ಲೇಖನ, ಭಾಷಣಗಳಲ್ಲಿ ಬಹಿಷ್ಕೃತ ವರ್ಗವನ್ನು ಉದ್ರೇಕಿಸುತ್ತಾ, ಅವರ ಮಾನವೀಯ ಹಕ್ಕನ್ನು ಧರ್ಮ ಮತ್ತು ರೂಢಿಯ ಹೆಸರಿನಲ್ಲಿ ಒಪ್ಪಿಕೊಳ್ಳದಂತೆ ತಮ್ಮ ಜಾತಿಬಾಂಧವರನ್ನು ಎಚ್ಚರಿಸುತ್ತಾ, ಬೆದರಿಕೆಯ ಭಾಷೆಯನ್ನು ಪ್ರಯೋಗಿಸಿ ಬಹಿಷ್ಕೃತರನ್ನು ಸುಮ್ಮನಿರಿಸಲು ನೋಡುತ್ತಾರೆ.

"ನೀವು ಖುಶಿಯಿಂದ ಮುಸಲ್ಮಾನರಾಗಿ, ನಮ್ಮದೇನೂ ಅಡ್ಡಿಯಿಲ್ಲ. ಆರು ಕೋಟಿ ಅಸ್ಪೃಶ್ಯರನ್ನು ನಾವು ಭಾವೀ ಹಿಂದೂ ಸಮಾಜದಿಂದ ಎಂದೋ ವಜಾ ಮಾಡಿದ್ದೇವೆ. ಹೀಗೆ ಬೆದರಿಕೆಯ ಭಾಷೆ ಪ್ರಯೋಗಿಸುವ ಭಾಲಾಕಾರರು ಹಾಗೆ ಮಾಡುವ ಧೈರ್ಯ ತೋರುತ್ತಾರೆಯೇ ಎಂಬುದಕ್ಕೆ ಅವರ ಮಾತಿನಲ್ಲೇ ಉತ್ತರವಿದೆ ; "ಆದರೆ ಎಲ್ಲ ಅಸ್ಪೃಶ್ಯರೂ ಭ್ರಷ್ಟರಾಗಿ ಮುಸಲ್ಮಾನರಾಗುವುದು

ಸಂಭವವಲ್ಲ." ಒಂದು ವೇಳೆ ಅದು ಸಂಭವವಿದ್ದರೆ ನಿಮ್ಮ ಭಾಷೆ ಬದಲಾಗುವುದೇ ಇಲ್ಲವೇ? ಆರು ಕೋಟಿ ಅಸ್ಪೃಶ್ಯರು ನಿಮ್ಮ ಲೆಕ್ಕದಲ್ಲಿಲ್ಲ; ಆದರೆ ಲಕ್ಷ್ಯದಲ್ಲಿರಲಿ; ಈ ಆರು ಕೋಟಿ ಅಸ್ಪೃಶ್ಯ ಹಿಂದೂಗಳು ಮುಸಲ್ಮಾನರಾದರೆ ,ಮುಸಲ್ಮಾನರನ್ನು ಎದುರಿಸುವಾಗ ಈ ಆರು ಕೋಟಿಯನ್ನು ಸೇರಿಸಿಯೇ ಪ್ರತಿಪಕ್ಷದ ಸಂಖ್ಯಾಬಲವನ್ನು ಗಣಿಸಬೇಕಾಗುವುದು.

ನಿಮ್ಮ ಈ ಬೆದರಿಕೆಯ, ಎಚ್ಚರಿಕೆಯ ಭಾಷೆಯನ್ನು ಬಹಿಷ್ಕೃತ ವರ್ಗ ಎಂದೂ ಕೇಳಿಸಿಕೊಳ್ಳುವುದಿಲ್ಲ. "ಮೂಗು ಮುಚ್ಚಿದ್ದಲ್ಲದೆ ಬಾಯಿ ತೆರೆಯದು" ಎಂಬ ನಮ್ಮ ಕಳೆದ ಅಂಕಣದ ಅಗ್ರಲೇಖನವನ್ನು ಟೀಕಿಸುತ್ತಾ, ಭಾಲೇಕಾರರು, ತಾವು ಮೂಗು ಮುಚ್ಚಿದರೂ ಬಾಯಿ ತೆರೆವವರಲ್ಲ, ಎಂದಿದ್ದಾರೆ. ತೆರೆಯ ಬೇಡಿ; ಖುಶಿಯಿಂದಲೇ ಜೀವಬಿಡಿ. ಎಲ್ಲ ಅಸ್ಪೃಶ್ಯರೂ ಮುಸಲ್ಮಾನರಾಗುತ್ತಾರೆಂದು ಹೇಗೆ ನಿಮಗೆ ಅನಿಸುವುದಿಲ್ಲವೋ, ಹಾಗೇ ಮೂಗು ಮುಚ್ಚಿದರೂ ಬಾಯಿ ತೆರೆಯದಿರುವ ಹಟ ಹಿಡಿದು ಉಳಿದ ಸ್ಪೃಶ್ಯ ಸಮಾಜವು ಆತ್ಮಹತ್ಯೆಗೆ ಹೊರಡುತ್ತದೆಂದು ನಮಗೂ ಅನಿಸುವದಿಲ್ಲ.

* * * *

## ೪೬. ಪ್ರತ್ಯಕ್ಷ ಕಂಡ ಒಂದು ದೃಶ್ಯ

ಅಸ್ಪೃಶ್ಯರಿಗೆ ಮುಸಲ್ಮಾನರಾಗುವ ಪ್ರವೃತ್ತಿ ಏಕೆ ಉಂಟಾಗುತ್ತದೆಂಬುದಕ್ಕೆ ಒಂದು ಉದಾಹರಣೆ ನಮ್ಮ ದೃಷ್ಟಿಗೆ ಕಾಣುತ್ತಿದೆ.

ಧರಮ್‌ತರ ಬಂದರ್‌ನಲ್ಲಿ ಒಬ್ಬ ಬ್ರಾಹ್ಮಣರ ಖಾನಾವಳಿಯಿದೆ. ಈ ಖಾನಾವಳಿಯ ಎದುರು ಮಳೆಯಿಂದ ಕೆಸರಾದ ಜಾಗದಲ್ಲಿ ಮಳೆಯಲ್ಲಿ ಮಿಂದ ಕೆಲ ಹುಡುಗರು ಖಾನಾವಳಿಯಲ್ಲಿ ಉಣ್ಣಲು ಬಂದರು. ಕೆಸರು ನೀರಲ್ಲಿ ಕೈ ಕಾಲು ತೊಳೆದು, ಆಸರೆ ಸಿಕ್ಕಲ್ಲಿ ಕುಳಿತು ಉಂಡರು. ಚೆನ್ನಾದ ಉಡುಪು ತೊಟ್ಟ ಈ ಹುಡುಗರು, ಬ್ರಾಹ್ಮಣೇತರ ಸ್ಪಶ್ಯ ವರ್ಗದವರಂತೆ ಕಾಣುತ್ತಿದ್ದರು.ಆದರೆ ಅವರು ಕೆಸರು ಕೊಳದ ನೀರೆತ್ತ ಬಂದಾಗ, ಅವರು ಬಹಿಷ್ಕತ ವರ್ಗದವರಿರಬಹುದೆಂದು ನಮಗನಿಸಿತು. ಈ ಹಿಂದೂ ಹುಡುಗರು ಹೀಗೆ ಕಂಡು ಬಂದರು, ಆದರೆ ಖಾನಾವಳಿಯ ಬ್ರಾಹ್ಮಣರು ಮುಸಲ್ಮಾನರನ್ನು ಹೀಗೆ ಕಾಣಲಾದೀತೇ? ನಾವು ವಿಚಾರಿಸಿದಾಗ, ಈ ಖಾನಾವಳಿಯ ಉಪಾಹಾರಗೃಹಕ್ಕೇ ಲಾಭವೆಂದು ಮುಸಲ್ಮಾನರಿಗೆ ಅಲ್ಲಿ ಚಹಾ ತಿಂಡಿ ಕೊಡಲಾಗುತ್ತದೆ, ಮುಸಲ್ಮಾನರಿಗಾಗಿ ಒಂದು ಸ್ವತಂತ್ರ ಕೋಣೆಯನ್ನೂ ಕಾದಿಟ್ಟು, ಅವರಿಗೆ ಕುಳಿತುಕೊಳ್ಳುವ ವ್ಯವಸ್ಥೆ ಮಾಡಿದೆ. ಭಾಲಾಕಾರರಂತಹ ಟೀಕಾಕಾರರೇ, ನಿಮ್ಮ ಜಾತಿಬಾಂಧವರು ಎಲ್ಲಿಯವರೆಗೆ ಮೇಲೆ ಹೇಳಿದಂತಹ ಹಿಂದೂ ಸಂಘಟನಾ ಪ್ರೇಮ ತೋರುತ್ತಾರೋ,

ಅಲ್ಲಿಯವರೆಗೆ ಬಹಿಷ್ಕೃತ ವರ್ಗದ ಜನರಿಗೆ ಧರ್ಮಾಂತರದಿಂದ ಮುಸಲ್ಮಾನರಾಗುವುದು ಒಳ್ಳೆಯದೆಂದು ಅನಿಸಬಾರದೇಕೆ ಎಂಬುದಕ್ಕೆ ಉತ್ತರ ಕೊಡಬಹುದೇ?

* * * *

## ೪೭. ಬ್ರಾಹ್ಮಣೇತರ ಸ್ಪಶ್ಯರ ಪರೋಪದೇಶ ಪಾಂಡಿತ್ಯ

ಜಳ್ಗಾಂವ್‌ನ ಹನ್ನೆರಡು ಮಹಾರರು ಮುಸಲ್ಮಾನರಾದ ಬಗ್ಗೆ ಕೊಲ್ಹಾಪುರದಲ್ಲಿನ ಇಂಗ್ಲಿಷ್ ಹೆಸರಿನ ಮರಾಠಿ ಬ್ರಾಹ್ಮಣೇತರ ಪತ್ರಿಕೆಯೊಂದು ತನ್ನ ಅಸಂತುಷ್ಟತೆಯನ್ನು ವ್ಯಕ್ತ ಪಡಿಸಿ ಅಸ್ಪೃಶ್ಯರಿಗೆ ಉಪದೇಶಿಸಲು ಹೊರಟಿದೆ. ಸತ್ಯ ಸಮಾಜದವರೆನ್ನುವ ಈ ಪತ್ರಕರ್ತರಿಗೆ, ವಾಸ್ತವಿಕವಾಗಿ ನೋಡಿದರೆ, ಈ ವಾದಕ್ಕೆ ಇಳಿಯಬೇಕಾದ ಯಾವ ಅಗತ್ಯವೂ ಇರಲಿಲ್ಲ. ಅಸ್ಪೃಶ್ಯರು ಮುಸಲ್ಮಾನರಾಗ ಹೊರಡದೆ ದೇವಳ ಪ್ರವೇಶಕ್ಕಾಗಿ ಸತ್ಯಾಗ್ರಹಕ್ಕಿಳಿದು ತಮ್ಮ ಅಸ್ಪೃಶ್ಯತೆಯನ್ನು ದೂರಮಾಡಬೇಕೆಂದು ಅವರ ಸಲಹೆ. ಅದೇ ಒಂದು ಮಾರ್ಗವೆಂಬುದನ್ನು ನಾವು ಅಲ್ಲಗಳೆಯುವುದಿಲ್ಲ. ಅದನ್ನು ಅನುಸರಿಸುವ ಪ್ರಯತ್ನವನ್ನು ಇದುವರೆಗೆ ಬಹಿಷ್ಕೃತರು ಮಾಡಿರುವರೆಂದೇ ಅದರಿಂದಾಗಿ ಅವರು ಇದುವರೆಗೆ ಬಹಳಷ್ಟು ನಷ್ಟವನ್ನೂ ಅನುಭವಿಸಿದ್ದಾರೆ. ಆದರೆ ಈ ಮಾರ್ಗವು ಕಾಣುವಷ್ಟು ಸುಲಭವಿದೆಯೇ? ದೇವಳ ಪ್ರವೇಶಕ್ಕೆಂದು ಬಹಿಷ್ಕೃತರು ಅಚ್ಚುಕಟ್ಟಾಗಿ ಸತ್ಯಾಗ್ರಹ ಆರಂಭಿಸಿದರೆ, ಮರಾಠರಂತಹ ಬ್ರಾಹ್ಮಣೇತರ ಸ್ಪೃಶ್ಯರು ಅವರ ಸಹಾಯಕ್ಕೆ ಬರುವರೇ, ಇಲ್ಲ ವಿರೋಧಿಸುವರೇ? ಕೇವಲ ಬ್ರಾಹ್ಮಣರು ವಿರೋಧಿಸುವರೆಂದೇನಲ್ಲ.ಸತ್ಯಾಗ್ರಹ ಚಳವಳಿಗೆ ತೊಡಗಿದರೆ ಮರಾಠರೇ ಮುಂತಾದವರು ಬಹಿಷ್ಕೃತರನ್ನು ಹೊಡೆದು

ಬಡಿದು, ಅವರ ಮೇಲೆ ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಸ್ಪೃಶ್ಯರು ಒಂದಾಗಿ ಅವರ ಮೇಲೆ ವ್ಯಾಜ್ಯ ಹೂಡುವರು. ಮತ್ತು ಸತ್ಯಶೋಧಕ ಚಳವಳಿಯ ಧುರೀಣರು ತಮ್ಮ ಜಾತಿಬಂಧುಗಳನ್ನು ಬಿಡದೆ, ಕೇವಲ ಬ್ರಾಹ್ಮಣರ ತಲೆಯ ಮೇಲೆ ಹಂಚು ಒಡೆದು ಮುಕ್ತಿ ಪಡೆವ ಅನುಭವ ಈವರೆಗೆ ಆಗಿಲ್ಲವೇ? ಮರಾಠರೇ ಮುಂತಾದವರ ಮನೋವೃತ್ತಿ ಈ ವಿಷಯದಲ್ಲಿ ಪರರ ದುಃಖ ಶೀತಲ, ಎಂಬಂತಿದೆ. ಅವರಿಗೆ ಬಹಿಷ್ಕೃತರ ಮಟ್ಟಿಗೆ ಸಾಮಾಜಿಕ ವಿಷಮತೆ ಅನ್ನುವದೇನೂ ಕಾಡುವದೇ ಇಲ್ಲ. ನೀರಿಗಾಗಿ ಮೈಲುದೂರ ಅವರಿಗೆ ಬಸವಳಿದು ಸಾಗಬೇಕಾಗಿರುವುದಿಲ್ಲ, ಅವರ ಮಕ್ಕಳು ಬ್ರಾಹ್ಮಣರ ಮಕ್ಕಳೊಡನೆ ಕುಳಿತು ಓದಲು ಅಡ್ಡಿಯಿರುವುದಿಲ್ಲ, ಧರ್ಮಶಾಲೆ, ದೇವಳಗಳಿಗೆ ಯಾರೂ ಅವರ ಪ್ರವೇಶ ನಿರ್ಬಂಧಿಸುವುದಿಲ್ಲ, ಹಾಗೆಂದೇ ಬ್ರಾಹ್ಮಣರ ದೌರ್ಜನ್ಯದ ವಿರುದ್ಧ ಅವರು ಎಷ್ಟು ಬೊಬ್ಬಿಟ್ಟರೂ ನಡೆಯುತ್ತದೆ. ಪುನಃ ಬಹಿಷ್ಕೃತರಿಗೆ ಉಪದೇಶಿಸಲು ಅವರು ತಯಾರು !

* * * *

## ೪೮. ಶುದ್ಧಿ ಯಾಕಾಗಿ ಬೇಕು?

ಶುದ್ಧಿ ಚಳವಳಿಯ ಪುರಸ್ಕರ್ತರು ಉದಾತ್ತ ಧ್ಯೇಯದಿಂದ ಪ್ರೇರಿತರಾಗಿಲ್ಲ ಎಂಬುದಕ್ಕೆ ಇನ್ನೊಂದು ಸಾಕ್ಷ್ಯ ಇಲ್ಲಿ ದೊರೆತಿದೆ. ಕರ್ನಾಟಕದಲ್ಲಿನ ಲಿಂಗಾಯತ ಸ್ವಾಮಿಯೊಬ್ಬರು, ಢೋರ್ ಜಾತಿಯ ಜನರನ್ನು ಶುದ್ಧಿ ಮಾಡಿ, ಅವರನ್ನು ಯಾರೂ ಅಸ್ಪೃಶ್ಯರೆಂದು ತಿಳಿಯಬಾರದೆಂದು ತಮ್ಮ ಅನುಯಾಯಿಗಳಿಗೆ ಆಣತಿಯಿತ್ತರು. ಈ ಸಮಾಚಾರ ಪ್ರಕಟಿಸುತ್ತಾ, ಪ್ರತಿಯೊಬ್ಬ ಮರಾಠಿ ಪತ್ರಕರ್ತರು "ಸ್ವಾಮೀಜಿ ಅವರು ಇದರ ಬದಲಿಗೆ, ಮುಸಲ್ಮಾನ ಹಾಗೂ ಕ್ರೈಸ್ತರ ಶುದ್ಧಿ ಮಾಡಿದ್ದರೆ ಚೆನ್ನಿತ್ತು" ಎಂದರ್ಥ ಬರುವಂತೆ ಉದ್ಧರಿಸಿದ್ದಾರೆ. ಹಿಂದೂ ಸಮಾಜದ ದಲಿತ ವರ್ಗವನ್ನು ಅದೇ ಸ್ಥಿತಿಯಲ್ಲಿ ಇಡುವ, ಮತ್ತು ಹೊರಗಿನ ಮುಸಲ್ಮಾನ ಮತ್ತು ಕ್ರೈಸ್ತರನ್ನು ಮಾತ್ರ ಶುದ್ಧ ಮಾಡಿ ಒಳಗೆ ಕರಕೊಳ್ಳುವ ಧೋರಣೆಯಿದು. ಶುದ್ಧರಾಗಿ ಹಿಂದೂ ಸಮಾಜದೊಳಗೆ ಬರುವ ಮುಸಲ್ಮಾನರು ಮತ್ತು ಕ್ರೈಸ್ತರ ಒಂದು ಭಿನ್ನ ಜಾತಿ ಮಾಡುವ ಹುನ್ನಾರವಿದು. ಕಾರಣ, ಯಾರಿಗೆ ಇತರ ಜಾತಿಯಲ್ಲಿ ಶರೀರ ಸಂಬಂಧ ನಡೆಯುವುದಿಲ್ಲವೋ, ಮತ್ತು

ಅನ್ನೋದಕವೂ ವ್ಯವಹಾರದಲ್ಲಿ ಕಲ್ಮಶಗೊಂಡಿದೆಯೋ, ಅಂತಹವರಿಗೂ ಪ್ರಾಯಶ್ಚಿತ್ತ ಮಾಡಿ ತಮ್ಮ ಮೂಲಜಾತಿಯನ್ನು ಸೇರಿಕೊಳ್ಳುವುದು ಸಾಧ್ಯ. ಉಳಿದ ಶುದ್ಧಿಕೃತರಿಗೆ ತಮ್ಮದೇ ಆದ ಭಿನ್ನ ಜಾತಿ ಮಾಡಿಕೊಳ್ಳದೆ ಗತ್ಯಂತರವಿಲ್ಲ. ಅರ್ಥಾತ್, ಶುದ್ಧಿ ಚಳವಳಿಯೇ ಪೂರ್ಣ ಆತ್ಮಸಾಕ್ಷಾತ್ಕಾರ ನೀಡುವ ಚಳವಳಿಯಾಗಿರದೆ, ಬದಲಿಗೆ ಕೇವಲ ಸಂಖ್ಯಾಬಲ ಹೆಚ್ಚಿಸುವ ಸಾಧನವಾಗಿದೆ. ಶುದ್ಧಿವಾದಿಗಳಿಗೆ ನ್ಯಾಯ ಮತ್ತು ಸಮತೆಯ ಮೇಲೆ ಪ್ರೀತಿಯಿಲ್ಲ, ಭೂತದಯೆಯ ಪರಿವೆಯಿಲ್ಲ, ಹೇಗಾದ್ರೂ ಕೆಲಸಕ್ಕೆ ಬಾರದ್ದನ್ನೆಲ್ಲ ತುಂಬಿಕೊಂಡು ಹಿಂದೂಗಳ ಸಂಖ್ಯೆ ಹೆಚ್ಚಿಸುವುದೇ ಅವರ ಧ್ಯೇಯ. ಅಲ್ಲದೆ, ಯಾರೋ ಲಿಂಗಾಯತ ಸ್ವಾಮಿಯೊಬ್ಬರು ಢೋರ್ ಜನರನ್ನು ಶುದ್ಧೀಕರಿಸಿ ತಮ್ಮ ಸಮಾಜಕ್ಕೆ ತೆಗೆದುಕೊಂಡರೆ, ಬ್ರಾಹ್ಮಣ ವರ್ಚಸ್ಸಿಗೆ ಕುಂದು ಬರುತ್ತದೆನ್ನುವುದು, ಅಂತರ್ಯದ ವೈಷಮ್ಯವೇ ಸರಿ.

* * * *

### ೪೯. ಆನುವಂಶಿಕತೆ ಮಸೂದೆಯ ತಾತ್ಕಾಲಿಕ ಇತಿಶ್ರೀ

ಡಾ. ಅಂಬೇಡ್ಕರ್ ಅವರು ಮುಂಬಯಿ ಕಾಯ್ದೆ ಕೌನ್ಸಿಲ್ ಮುಂದೆ ಇಟ್ಟ ಮಹಾರ್ ಆನುವಂಶಿಕ ಮಸೂದೆಯನ್ನು ಮಹಾರ್ ಜಾಗೀರುದಾರರು ಅಲ್ಲಲ್ಲಿ ಸಭೆ ಸೇರಿ ಬೆಂಬಲಿಸಿದ್ದರು. ಆದರೆ, ಮಹಾರ್ ಸಮಾಜದಲ್ಲಿನ ಕೆಲವರು ಇದನ್ನು ವಿರೋಧಿಸಿ, ಮಹಾರ್ ಸಮಾಜವನ್ನು ದಿಕ್ಕೆಡಿಸುವ ಯತ್ನ ಮಾಡಿದ್ದರು. ಆದರೆ ಡಾ. ಅಂಬೇಡ್ಕರರು ಈ ವಿರೋಧಕ್ಕೆ ಬಗ್ಗದೆ, ಕೌನ್ಸಿಲ್‌ನಲ್ಲಿ ಬಿಲ್ ಅನ್ನು ಮೊದಲ ಬಾರಿಗೆ ಪಾಸ್ ಮಾಡಿಸಿದರು. ಮತ್ತು ಇದೇ ಬಿಲ್ ಅನ್ನು

ಡಾ. ಅಂಬೇಡ್ಕರ್ ಅವರು, ಮೊನ್ನೆ ಪುಣೆಯ ಹಂಗಾಮಿ ಸಭೆಯಲ್ಲಿ ಹಿಂದೆಗೆದು ಕೊಳ್ಳುವ ಅನುಮತಿ ಕೇಳಿದಾಗ, ಕೌನ್ಸಿಲ್ ಈ ಅನುಮತಿ ನೀಡಿತು. ಈ ರೀತಿ ಆನುವಂಶಿಕತೆ ಮಸೂದೆಯಲ್ಲಿ ಸುಧಾರಣೆ ಮಾಡಿ ಮಹಾರರ ಪಾರಂಪರಿಕ ಸೊತ್ತಿನ ಹೆಸರಿನಡಿಯಲ್ಲಿ ನಡೆದಿರುವ ಗುಲಾಮಗಿರಿಯನ್ನು ಅಳಿಸಿ ಹಾಕುವ ಯತ್ನ ಇಂದಿನ ವರೆಗೂ ಕೊನೆಕಂಡಿಲ್ಲ. ಡಾ. ಅಂಬೇಡ್ಕರರು ಈ ವಿಷಯದಲ್ಲಿ ಹಿಂದೆ ಸರಿದರೆಂದು ಅವರ ಹೆಸರಿಗೆ ಸದಾ ಕಲ್ಲೆಸೆಯುತ್ತಾ, ಬಹಿಷ್ಕತ ಸಮಾಜದ ಸ್ವಾತಂತ್ರ್ಯ ಚಳವಳಿಯನ್ನು ಎಲ್ಲ ವಿಧದಲ್ಲಿ ವಿರೋಧಿಸುತ್ತಾ, ಪರಿಹಾಸ ಮಾಡುವವರಿಗೆ ಆನಂದದಿಂದ ಚಪ್ಪಾಳೆ ತಟ್ಟುವಂತಹ ಅವಕಾಶ ಒದಗಿದೆ. ಅವರ ಪೈಶಾಚಿಕ ಸಂತೋಷಕ್ಕೆ ಅಡ್ಡ ಬರಲು ನಾವು ಇಚ್ಛಿಸುವುದಿಲ್ಲ. ಆನುವಂಶಿಕತೆ ಮಸೂದೆ ಸಂಬಂಧದ ಚಳವಳಿಯಲ್ಲಿ ಅವರಿಗೆ ಸಹಾಯ ಮಾಡಿದವರಿಗೆ, ಆ ಬಿಲ್‌ಗೆ ಬೆಂಬಲ ಇತ್ತವರಿಗೆ ಮಾತ್ರ ಇಲ್ಲಿ ಸ್ವಲ್ಪ ಅನುವು ನೀಡುವುದು ಇಷ್ಟ. ಮೊದಲಾಗಿ, ಬಿಲ್‌ನ ಮೂಲ ಸ್ವರೂಪವನ್ನು ಇದ್ದಂತೆಯೇ ಇಟ್ಟು, ಅದು ಕೌನ್ಸಿಲ್‌ನಲ್ಲಿ ಪಾಸ್ ಆಗುವಂತಿದ್ದರೆ, ಆ ಸುಯೋಗವನ್ನು ಡಾ. ಅಂಬೇಡ್ಕರ್ ಅವರು ಎಂದೂ ಕಳೆದುಕೊಳ್ಳುತ್ತಿರಲಿಲ್ಲ. ಆದರೆ, ಸೆಲೆಕ್ಟ್ ಕಮಿಟಿಯತ್ತ ಹೋದರೆ ಮಸೂದೆಯಲ್ಲಿ ಎಷ್ಟೆಲ್ಲ ಬದಲಾವಣೆ ಮಾಡಬೇಕಾಗಿ ಬಂತೆಂದರೆ, ಮಸೂದೆಯ ಸ್ವರೂಪವೇ ಬದಲಾಯ್ತು. ಸೆಲೆಕ್ಟ್ ಕಮಿಟಿಯು ಮೂಲ ಮಸೂದೆಯಲ್ಲಿ ಎರಡು ಮಹತ್ವದ ತಿದ್ದುಪಡಿ ಮಾಡಿತು. ಮೊದಲನೆಯದಾಗಿ ಗೇಣಿ ಸಂದಾಯದ ಪಾಲಿನ ಬದಲಿಗೆ ನಗದು ವೇತನ ಸಿಗಲಿ ಎಂದು ಮೂಲ ಮಸೂದೆಯಲ್ಲಿದ್ದ ಕಾಲಮ್ ಅನ್ನು ತೆಗೆದು ಹಾಕಲಾಯ್ತು. ಎರಡನೆಯ ತಿದ್ದುಪಡಿಯಂತೆ ಪರಂಪರಾಗತ ಜಮೀನನ್ನು ರೈತರದಾಗಿ ಈ ಕಾಲಮ್‌ನಲ್ಲಿ ಮಾಡುವುದಿತ್ತು. ಮೂಲ ಮಸೂದೆಯಲ್ಲಿ ಭೂಕಂದಾಯ ಪಡೆದು ರೈತರದಾಗಿಸುವ ಕಾಲಮ್ ಇದಾಗಿತ್ತು. ಸೆಲೆಕ್ಟ್ ಕಮಿಟಿಯು ಅರ್ಧದಷ್ಟು ತೆಗೆದುಕೊಂಡು ಭೂಮಿಯನ್ನು ರೈತರದಾಗಿ ಮಾಡಲು ಬರುವಂತೆ ದುರುಸ್ತಿ ಮಾಡಲಾಯ್ತು. ಮೂಲ ಮಸೂದೆಯಲ್ಲಿ ಈ ಎರಡು ಬದಲಾವಣೆ ಮಾಡಲಾದುದರಿಂದ ಮಹಾರ್ ಜನರ ಹಿತಕ್ಕಾಗಿ ರೂಪುಗೊಳ್ಳಬೇಕಾಗಿದ್ದ ಬಿಲ್, ಅಹಿತಕಾರಿಯಾಗೇ ಪರಿಣಮಿಸಿತು. ಇವುಗಳಲ್ಲಿ ಮೊದಲ ದುರಸ್ತಿಯ ವಿರುದ್ಧ ವಿಶೇಷ ಆಕ್ಷೇಪ ಎತ್ತುವಂತಿರಲಿಲ್ಲ. ಕಾರಣ, ಗೇಣಿ ಎಷ್ಟು ಮತ್ತು ಯಾವ ಕೆಲಸಕ್ಕಾಗಿ ಎಂಬುದರ ಬಗ್ಗೆ ರೈತ ಮತ್ತು ಸರಕಾರದ ನಡುವೆ ಮತಭೇದ ಇದೆಯೆಂದು ಸೆಲೆಕ್ಟ್ ಕಮಿಟಿಗೆ ತಿಳಿದು ಬಂದುದರಿಂದ, ಈ ಮತಭೇದದ

ಫಲಿತಾಂಶದ ಹೊರತು, ಮಸೂದೆಯಲ್ಲಿನ ಗೇಣಿ ದರದ ಕುರಿತಾದ ಕಾಲಮ್ ,ತುರ್ತು ಕಾಯ್ದೆಯ ರೂಪ ಪಡೆಯದೆಂದು ಸೆಲೆಕ್ಟ್ ಕಮಿಟಿ ಅಭಿಪ್ರಾಯವಿತ್ತಿತು. ಮತ್ತು ಈ ಪ್ರಶ್ನೆಗೆ ಉತ್ತರ ಹುಡುಕಲು ಗೇಣಿ ದರ ಚರ್ಚಾ ಸಮಿತಿಯನ್ನು ನೇಮಿಸುವುದಾಗಿ ಸರಕಾರ ನುಡಿದಂತೆ, ಮಸೂದೆಯಿಂದ ಈ ಕಾಲಮ್ ಕಿತ್ತು ಹಾಕಲು ತನ್ನ ಅಭ್ಯಂತರವಿಲ್ಲವೆಂದು ಡಾ. ಅಂಬೇಡ್ಕರ್ ಅವರೂ ಹೇಳಿದ್ದಾರೆ. ಕಾರಣ, ಹೀಗೆ ಮಾಡುವುದರಿಂದ ಮಹಾರ್ ಸಮಾಜಕ್ಕಾಗುವ ನಷ್ಟವೇನೂ ಇಲ್ಲ. ಒಂದೆರಡು ದಿನದ ವ್ಯತ್ಯಾಸ, ಅಷ್ಟೇ. ಎರಡನೇ ದುರಸ್ತಿ ಮಾತ್ರ ತುಂಬ ವಿಘಾಕವಾದುದು. ಅದರಿಂದಾಗಿ, ಡಾ. ಅಂಬೇಡ್ಕರ್ ಅವರು ತಮ್ಮ ಬಿಲ್‌ನ ರೂಪದಲ್ಲಿ ತಯಾರಿಸಿ ಕೊಟ್ಟ ಗಣಪತಿ ಮೂರ್ತಿಗೆ ಮಂಗನ ರೂಪ ಪ್ರಾಪ್ತವಾಗಿದೆ, ಇದೇ ಮಂಗ ಈಗ ಕೌನ್ಸಿಲ್ ಮುಂದೆ ಬಂದು, ಮಹಾರರ ಕತ್ತಿನ ಮೇಲೆ ಕುಳಿತುಕೊಳ್ಳಲಿದೆ. ಸೆಲೆಕ್ಟ್ ಕಮಿಟಿಯು ಬದಲಿಸಿದ ಬಿಲ್ ಪುನಃ ಕೌನ್ಸಿಲ್ ಮುಂದೆ ಬಂದಾಗ ಅದರಿಂದ ಸೆಲೆಕ್ಟ್ ಕಮಿಟಿಯ ತಪ್ಪು ತಿದ್ದುಪಡಿಗಳನ್ನು ತೆಗೆದು ಹಾಕಿ, ಮೂಲ ಸ್ವರೂಪವನ್ನೇ ಉಳಿಸಿಕೊಂಡು ಮಂಜೂರು ಮಾಡುವ ಆಶೆ ಇರುವುದರಿಂದ ಅಂಬೇಡ್ಕರ್ ಅವರು ಅದನ್ನು ಹಿಂದೆಗೆದುಕೊಳ್ಳಲಿಲ್ಲ. ಆದರೆ ಕಾನ್ಸಿಲ್‌ನಲ್ಲಿನ ಇಂದಿನ ಪರಿಸ್ಥಿತಿಯಲ್ಲಿ ಮೇಲಿನ ಆಶಯಕ್ಕೆ ಇನಿತೂ ಅವಕಾಶವಿಲ್ಲ. ವಿಭಿನ್ನ ಕಾರಣಗಳಿಂದ ಪ್ರೇರಿತರಾಗಿ ಅಂಬೇಡ್ಕರರು ಸೂಚಿಸಿದ ಅನುವಂಶಿಕ ಕಾಯ್ದೆಯ ಸುಧಾರಣೆಯನ್ನು ಅಳಿಸಿಹಾಕಲು ಸರಕಾರ, ಬ್ರಾಹ್ಮಣೇತರರು, ಬ್ರಾಹ್ಮಣರು ಮತ್ತು ಮುಸಲ್ಮಾನರು ಒಟ್ಟಾಗಲಿರುವರೆಂದು ಅವರಿಗೆ ಸ್ಪಷ್ಟ ತಿಳಿದು ಬಂದಾಗ, ಉಪಕಾರ ಮಾಡಲು ಹೋಗಿ ಅಪಕಾರವಾಗುವುದು ಬೇಡವೆಂದು ಅವರು ಹಿಂದೆ ಸರಿದರು. ಬ್ರಾಹ್ಮಣ, ಬ್ರಾಹ್ಮಣೇತರ ಮತ್ತು ಮುಸಲ್ಮಾನ ಸಭಾಸದರಲ್ಲಿ ಎಲ್ಲೋ ಒಂದಿಷ್ಟು ಮಂದಿ ಅಂಬೇಡ್ಕರರ ಮೂಲಬಿಲ್‌ಗೆ ಅನುಕೂಲವಾಗಿದ್ದರು. ಸರಕಾರದಿಂದ ಮೊದಲಿನಿಂದಲೂ ಸಹಾನುಭೂತಿ ಇರಲಿಲ್ಲ. ಮಹಾರರನ್ನು ಈಗಿರುವಂತೆಯೇ ಇಟ್ಟರೆ ಮಾತ್ರ ಅವರ ಮೇಲೆ ತಮ್ಮ ಸುಲ್ತಾನ್‌ಶಾಹಿ ನಡೆಯುವುದೆಂದು ಉಳಿದವರಿಗೆ ಅನಿಸುತ್ತದೆ, ಮತ್ತು ಹಾಗೆಂದೇ ಅವರಿಗೆ ಆನುವಂಶಿಕ ಕಾಯ್ದೆಯಲ್ಲಿ ಮಹಾರರ ಗುಲಾಮಗಿರಿ ತೊಡೆದು ಹಾಕುವ ದೃಷ್ಟಿಯಿಂದ ಸುಧಾರಣೆ ಆಗುವುದು ಇಷ್ಟವಲ್ಲ. ಬ್ರಾಹ್ಮಣ ಹಾಗೂ ಬ್ರಾಹ್ಮಣೇತರರು ತಮ್ಮತಮ್ಮಲ್ಲಿ ಎಷ್ಟೇ ಹೊಡೆದಾಡಿಕೊಂಡರೂ, ಬಹಿಷ್ಕೃತ ವರ್ಗ ತಲೆಯೆತ್ತಬಾರದು, ತಮ್ಮ ಪಂಕ್ತಿಯಲ್ಲಿ ಬಂದು ಕುಳಿತುಕೊಳ್ಳಬಾರದು, ಎಂಬುದು ಅವರಿಬ್ಬರ ಸಮಾನ ಇಚ್ಛೆಯಾಗಿದೆ.

ಕೌನ್ಸಿಲ್‌ನಲ್ಲಿನ ಬ್ರಾಹ್ಮಣ ಸಭಾಸದರಿಗೆ ಕುಲಕರ್ಣಿಗಳ, ಮತ್ತು ಬ್ರಾಹ್ಮಣೇತರ ಸಭಾಸದರಿಗೆ ಪಾಟೀಲರ ಮತಗಳನ್ನು ಸೇರಿಸಿಕೊಡುವಂತೆ, ಬ್ರಾಹ್ಮಣ, ಬ್ರಾಹ್ಮಣೇತರ ಸಭಾಸದರು ಪಾಟೀಲ ಕುಲಕರ್ಣಿಗಳ ಇಚ್ಛೆಯನ್ನನುಸರಿಸಿ ನಡೆಯುವುದು ಸ್ವಾಭಾವಿಕ. ಮೂರನೆಯ ಪಕ್ಷ ಸರಕಾರದ್ದು

ಈ ವಿಷಯದಲ್ಲಿ ಅದಕ್ಕೂ ನಿಕಟ ಹಿತಸಂಬಂಧವಿದೆ. ಮಾಮಲೇದಾರ, ಪೊಲೀಸ್ ಫೌಜ್‌ದಾರ್ ಮುಂತಾದ ಸರಕಾರೀ ಅಧಿಕಾರಿಗಳಿಗೆ ಸುತ್ತಾಟದಲ್ಲಿರುವಾಗ ಮಹಾರ್ ಜನರಿಂದ ತುಂಬ ಉಪಯೋಗವಾಗುತ್ತದೆ. ಗುಲಾಮಗಿರಿಯಲ್ಲಿ ಮುಳುಗಿದ ಮಹಾರರಿಲ್ಲದಿದ್ದಿದ್ದರೆ ಅವರಿಗೆ ಒಂದಿಷ್ಟಾದರೂ ಸುಖ ಸಿಗುತ್ತಿತ್ತಲ್ಲ? ಹಾಗೆಯೇ ಸರಕಾರೀ ಕೆಲಸವನ್ನು ನಾಮಮಾತ್ರ ವೇತನಕ್ಕೆ ಮಹಾರರಿಂದ ಮಾಡಿಸಿಕೊಳ್ಳಬೇಕಿತ್ತು. ಈ ರೀತಿ ಸರಕಾರ ಮತ್ತು ಸರಕಾರೀ ಅಧಿಕಾರಿಗಳಿಗೆ ಈ ವ್ಯವಸ್ಥೆಯನ್ನು ಶಾಶ್ವತವಾಗಿರಿಸಿಕೊಳ್ಳುವುದು ಇಷ್ಟವಿರುವುದು ಸ್ವಾಭಾವಿಕವೇ ಆಗಿದೆ. ಕೌನ್ಸಿಲ್‌ನ



ಮುಸಲ್ಮಾನ ಸಭಾಸದರಿಗೆ ಬಹಿಷ್ಕೃತ ಹಿಂದೂಗಳ ಬಗ್ಗೆ ಅಷ್ಟೇನೂ ಸಹಾನುಭೂತಿ ಅನ್ನಿಸದಿರುವುದರಲ್ಲಿ ಆಶ್ಚರ್ಯವಿಲ್ಲ. ಬಹಿಷ್ಕೃತ ವರ್ಗದ ಬೇಡಿಕೆಗಳು ಜೋರಾಗಿಯೇ ಮುಂದೆ ಬಂದರೆ, ಅದರಿಂದಾಗಿ ಮುಸಲ್ಮಾನರ ಖಾಸಗೀ ಸವಲತ್ತಿನ ಬೇಡಿಕೆಗಳಿಗೆ ತನ್ನಷ್ಟಕ್ಕೆ ಸ್ವಲ್ಪ ಹೊಡೆತ ಬೀಳತೊಡಗಿದೆ.ಎಲ್ಲಿಯ ವರೆಗೆ ಬಹಿಷ್ಕೃತ ವರ್ಗವು ತನ್ನ ಬೇಡಿಕೆಯನ್ನು ಜೋರಾಗಿ ಮಂಡಿಸುವುದಿಲ್ಲವೋ, ಅಲ್ಲಿಯ ವರೆಗೆ ಹಿಂದುಳಿದವರೆಂಬ ಮತ್ತು ಅಲ್ಪಸಂಖ್ಯಾಕರೆಂಬ ಸಬೂಬಿನಿಂದ ಮುಸಲ್ಮಾನರು ತಮ್ಮ ತೀವ್ರ ಬೇಡಿಕೆಗಳನ್ನು ಮುಂದಿಡುವ ಧೈರ್ಯ ತೋರಿದ್ದಾರೆ. ಆದರೆ ಈಗ ಬಹಿಷ್ಕೃತ ವರ್ಗದ ಪ್ರತಿನಿಧಿಗಳು ತಮ್ಮ ವರ್ಗದ ಬೇಡಿಕೆಗಳನ್ನು ಜೋರಾಗಿಯೇ ಮಂಡಿಸತೊಡಗಿದ್ದಾರೆ. ಸೈಮನ್ ಕಮಿಶನ್‌ಗೆ ಸಹಕಾರ ನೀಡಲು ಮುಂಬಯಿ ಸರಕಾರ ನೇಮಿಸಿದ ಕಮಿಟಿಯ ವರದಿಯಲ್ಲಿ ಡಾ. ಅಂಬೇಡ್ಕರರು ಸೇರಿಸಿದ ಭಿನ್ನಮತದ ಪತ್ರಿಕೆಯಲ್ಲಿ ಮುಸಲ್ಮಾನರ ಅವಾಸ್ತವ ಬೇಡಿಕೆಯನ್ನು ಕಿತ್ತುಹಾಕಿರುವುದರಿಂದ ಮತ್ತು

ಬಹಿಷ್ಕೃತ ವರ್ಗದ ಬೇಡಿಕೆಯನ್ನು ಪ್ರಬಲವಾಗಿ ಸಮರ್ಥಿಸಿರುವುದರಿಂದ ಕೌನ್ಸಿಲ್‌ನಲ್ಲಿನ ಮುಸಲ್ಮಾನ ಸಭಾಸದರಿಗೆ ಡಾ. ಅಂಬೇಡ್ಕರ್ ಮತ್ತು ಬಹಿಷ್ಕೃತ ವರ್ಗದ ಮೇಲೆ ಕಡುಕೋಪ ಉಂಟಾಗಿದೆ. ಮತ್ತು ಆನುವಂಶಿಕ ಮಸೂದೆ ಈ ವೇಳೆ ಕೌನ್ಸಿಲ್‌ನಲ್ಲಿ ಪ್ರಸ್ತುತ ಪಡಿಸಲ್ಪಟ್ಟಿದ್ದರೂ, ಪ್ರತೀಕಾರ ಸಾಧಿಸುವ ಅವಕಾಶವನ್ನು ಅವರು ವ್ಯರ್ಥವಾಗಿಸುತ್ತಿರಲಿಲ್ಲ. ಈ ಎಲ್ಲ ವಿಚಾರ ಯೋಚಿಸಿ, ಸೆಲೆಕ್ಟ್ ಕಮಿಟಿಯು ಮಹಾರರ ಕತ್ತಿನಲ್ಲಿ ಸಿಕ್ಕಿಸಲಿದ್ದ ಕಂಟಕವನ್ನು ದೂರ ಮಾಡಲು, ತಮ್ಮ ಮಸೂದೆಯನ್ನು ಅಂಬೇಡ್ಕರರು ಹಿಂದೆಗೆದು ಕೊಳ್ಳಬೇಕಾಯ್ತು. ಇದರಿಂದಾಗಿ, ಮನಃಪೂರ್ವಕವಾಗಿ ಆ ಬಿಲ್ ಅನ್ನು ಸಮರ್ಥಿಸಿದವರಿಗೆ ನಿರಾಶೆಯಾಗಿರುವುದರಲ್ಲಿ ಅನುಮಾನವಿಲ್ಲ. ಆದರೆ ಪರಿಸ್ಥಿತಿ ಹಾಗೆ ಬಂದುದರಿಂದ, ಈ ವೇಳೆ ಆ ಬಿಲ್ ಹಿಂದೆಗೆಯದೆ ಹೋಗಿದ್ದರೆ, ಮಹಾರ್ ಸಮಾಜದ ಕೊರಳಿಗೆ ಕಂಟಕ ಪ್ರಾಪ್ತಿಯಾಗುತ್ತಿತ್ತು, ಎಂಬುದನ್ನು ಲಕ್ಷ್ಮದಲ್ಲಿರಿಸಿಕೊಂಡು, ಈ ಬಿಲ್ ಬಗ್ಗೆ ಆಸ್ಥೆಯಿದ್ದವರು ದುಃಖದಲ್ಲೂ ಸ್ವಲ್ಪ ಸಮಾಧಾನ ಹೊಂದುವರೆಂಬ ಆಶೆಯಿದೆ. ಈ ಮಸೂದೆ ಕೌನ್ಸಿಲ್‌ನಲ್ಲಿ ಪ್ರಸ್ತುತವಾದಾಗ ಸತ್ಯಾಗ್ರಹವನ್ನೇ ಆಶ್ರಯಿಸಿ, ಮಸೂದೆಯನ್ನು ಮಂಜೂರು ಮಾಡಿಕೊಳ್ಳುವ ಸಂಕಲ್ಪ ಅಂಬೇಡ್ಕರರದ್ದಾಗಿತ್ತು. ಹಾಗೆ ಅವರು ಅಲ್ಲಿ ಆಡಿಯೂ ತೋರಿದ್ದರು. ಮಸೂದೆಯ ಉದ್ದೇಶ, ಯಾರದೇ ಪಾರಂಪರಿಕ ಆಸ್ತಿಯನ್ನು ಅವರು ಬಿಟ್ಟುಕೊಡುವಂತೆ ಮಾಡುವುದಲ್ಲ; ಬದಲಿಗೆ ಇದರಿಂದ ಪ್ರಾಪ್ತವಾಗುವ ಗುಲಾಮಗಿರಿ ಬೇಡವಾಗಿ, ಸರಕಾರದ ಸಹಕಾರದಿಂದ ತಮ್ಮ ಪಾರಂಪರಿಕ ಜಮೀನನ್ನು ತಮ್ಮಲ್ಲೇ ಉಳಿಸಿಕೊಳ್ಳುವಂತಾಗಲಿ, ಎಂಬುದಾಗಿತ್ತು. ಹಾಗಿದ್ದರೂ ಪ್ರತಿಯೊಬ್ಬ ಅದೂರದರ್ಶಿ, ವ್ಯಕ್ತಿದ್ವೇಷ ಪ್ರೇರಿತ ಈ ಮಸೂದೆಯ ವಿಷಯದಲ್ಲಿ ಮಹಾರ್ ಸಮಾಜದಲ್ಲಿ ತಪ್ಪು ತಿಳಿವಳಿಕೆಯನ್ನು ಹುಟ್ಟು ಹಾಕಿದುದರಿಂದ ಸತ್ಯಾಗ್ರಹದ ಉಪಾಯವನ್ನು ಕಾರ್ಯರೂಪಕ್ಕೆ ತರುವುದು ಸಾಧ್ಯವಾಗಲಿಲ್ಲ. ಮಹಾರ್ ಸಮಾಜದ ಹೆಚ್ಚಿನ ಜನರು ಅಜ್ಞಾನಿಗಳೂ, ಅಶಿಕ್ಷಿತರೂ ಆಗಿರುವುದರಿಂದ ತಪ್ಪು ತಿಳಿವಳಿಕೆ ಪಸರಿಸಲೆತ್ನಿಸುವವರಿಗೆ ಒಳಿತೇ ಆಯ್ತು. ಹಾಗಿದ್ದರೂ, ಸ್ವಾಭಿಮಾನದ ಜಾಗೃತಿ ಸಮಾಜದಲ್ಲಿ ಹೆಚ್ಚುತ್ತಿರುವುದರಿಂದ ಹೊಸ ಪೀಳಿಗೆಯಾದರೂ ಈ ಪಾರಂಪರಿಕ ಆಸ್ತಿಯ ಪದಕವನ್ನು ಕೊರಳಿಗೆ ಹಾಕಿಕೊಂಡು ಮೆರೆಯುವುದು ಭೂಷಣವೆಂದು ತಿಳಿಯಲಾರರು. ಆ ಶೃಂಖಲೆ ಕಳಚುವವರೆಗೆ ಮಹಾರ್ ಸಮಾಜದ ಪ್ರಗತಿ ಸಾಧ್ಯವಲ್ಲ. ಆ ಗುಲಾಮಗಿರಿಯ ಕೊರಳ ಪಟ್ಟಿಯನ್ನು ಧರಿಸಲಿಚ್ಛಿಸುವವರಿಗೆ, ಅದರಲ್ಲೇ ಧನ್ಯತೆ ಅನುಭವಿಸುವವರಿಗೆ, ದೇಹದಲ್ಲಿ ಸ್ವಾತಂತ್ರ್ಯದ

ಕಸುವಿಲ್ಲದವರಿಗಾಗಿ ಅಲ್ಲ, ಅಂಬೇಡ್ಕರರ ಈ ಮಸೂದೆ. ಆದರೆ ಯಾರಿಗೆ ಮನುಷ್ಯತ್ವದ ಹಕ್ಕು ಬೇಕಿದೆಯೋ, ಯಾರಿಗೆ ಸ್ವಾತಂತ್ರ್ಯ ಇಷ್ಟವೋ, ಯಾರಿಗೆ ತಮಗಾಗಿ, ತಮ್ಮ ಮಕ್ಕಳಿಗಾಗಿ ಪ್ರಗತಿ ಸಾಧಿಸುವ ಉತ್ಕಟ ಇಚ್ಛೆ ಇದೆಯೋ, ಅವರಿಗಾಗಿಯೇ ಅಂಬೇಡ್ಕರ್ ಅವರು ಈ ಮಸೂದೆ ತಂದಿದ್ದಾರೆ. ಇಲ್ಲಿ ಅದು ಯಶಸ್ವಿಯಾಗಿಲ್ಲದಿದ್ದರೂ, ಸ್ವತಃ ಅಂಬೇಡ್ಕರರೂ ಸಂಪೂರ್ಣ ನಿರಾಶರಾಗಿಲ್ಲ. ಮನಃ ಯೋಗ್ಯ ಸಂಧಿ ಬಂದಾಗ ಈ ಸುಧಾರಣೆ ಘಟಿಸಬೇಕೆಂಬ ನಿರ್ಧಾರ, ಅವರದು. ಅದುವರೆಗೆ ಮಹಾರ್ ಸಮಾಜದ ಸ್ವಾಭಿಮಾನಿ ಜನರು ಪ್ರಬಲ ಜನಾಭಿಪ್ರಾಯ ರೂಪಿಸಿ, ಅವಕಾಶವಾದರೆ ಐಕ್ಯಮತ್ಯದಿಂದ ಕಠೋರ ಸತ್ಯಾಗ್ರಹ ಹೂಡುವ ಪ್ರಯತ್ನ ಮಾಡಬೇಕು. ಸರಕಾರವಿರಲಿ, ಇತರ ಜನರಿರಲಿ, ಅನ್ಯಾಯದಿಂದ ಪರಂಪರಾಗತ ಹಿತಸಂಬಂಧಕ್ಕೆ ಇಂತಹ ಸುಧಾರಣೆಯಿಂದ ಧಕ್ಕೆಯಾಗುವಂತಿದ್ದರೆ, ಆಗ ಅದನ್ನು ವಿರೋಧಿಸಬೇಕು. ಇಂಗ್ಲೆಂಡ್ ಮತ್ತು ಇತರ ಪಾಶ್ಚಾತ್ಯ ದೇಶಗಳಲ್ಲಿ ಬಹುಜನ ಸಮಾಜದ ಹಕ್ಕು ಸಂಬಂಧಿತ ಕಾಯ್ದೆಯು ಅನೇಕ ವಿಫಲ ಪ್ರಯತ್ನಗಳ ಬಳಿಕ ಜಾರಿಗೆ ಬಂದಿತು. ಸ್ವತಃ ಹಿಂದೂಸ್ಥಾನದಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣದ ಕಾಯ್ದೆ ಜಾರಿಗೆ ಬರಲು ಎಷ್ಟೊಂದು ಸಮಯ ಹಿಡಿಯಿತೆಂಬುದನ್ನು ನಾವು ಮರೆಯ ಬಾರದು. ನಮಗೆ ಬೇಕಿದ್ದ ಸುಧಾರಣೆ ಇಂದೇ ಆನುವಂಶಿಕ ಮಸೂದೆಯಲ್ಲಿ ಜಾರಿಯಾಗಲಿಲ್ಲವೆಂದು ಹತಾಶರಾಗಿ ಕೈಕಾಲು ಕಟ್ಟಿ ಕುಳಿತುಕೊಳ್ಳುವ ಅವಶ್ಯಕತೆಯಿಲ್ಲ. ನಮ್ಮ ನಿರ್ಧಾರ ದೃಢವಿದ್ದರೆ, ಎಷ್ಟೆಲ್ಲ ವಿರೋಧವಿದ್ದರೂ, ಇಂದಲ್ಲ ನಾಳೆ ನಮಗೆ ಬೇಕಿದ್ದ ಸುಧಾರಣೆಯನ್ನು ನಾವು ಸಾಧ್ಯವಾಗಿಸಬಹುದು. ಈ ಬಗ್ಗೆ ಚಳವಳಿಯನ್ನು ಸತತ ನಡೆಸುತ್ತಿರುವುದು ಮಹಾರ್ ಆನುವಂಶಿಕ ಮಸೂದೆ ಪರಿಷತ್ತಿನ ಕರ್ತವ್ಯ ಆಗಿದೆ. ಈ ಪರಿಷತ್ತಿನ ಕಲ್ಪನೆಗೆ ಮೂರ್ತಿ ರೂಪ ಕೊಡುವುದು ಇನ್ನೂ ಸಾಧ್ಯವಾಗಿಲ್ಲ. ಆದರೆ, ಆ ಮಸೂದೆಯನ್ನು ತುರ್ತಾಗಿ ಹಿಂದೆಗೆಯಲಾಯ್ಕೆಂದು,ಪರಿಷತ್ತಿನ ಅಗತ್ಯ ಇಲ್ಲವೆಂದಲ್ಲ. ಎಲ್ಲಿಯವರೆಗೆ ಮಹಾರ್ ಆನುವಂಶಿಕತೆ ಮಸೂದೆಯಲ್ಲಿ ತೋರಲಾದ ಸುಧಾರಣೆ, ಆ ಸಂಬಂಧದ ಕಾಯ್ದೆಯಲ್ಲಿ ಆಗುವುದಿಲ್ಲವೋ, ಅಲ್ಲಿಯವರೆಗೆ ಚಳವಳಿಯ ಅಗತ್ಯ ಇದೆಯೆಂಬುದು ಸ್ಪಷ್ಟ. ಈ ಸಂಸ್ಥೆಯನ್ನು ಅಲ್ಲಿಯವರೆಗೆ ಶಾಶ್ವತವಾಗಿಟ್ಟು, ಬೇರೆ ಬೇರೆಡೆ ವಾರ್ಷಿಕ ಸಭೆಗಳನ್ನು ನಡೆಸುವುದು, ಸರಕಾರಕ್ಕೆ ನಿಯೋಗವನ್ನು ಕಳುಹಿಸುವುದು, ಈಗಿನ ಕಾಯ್ದೆಯಿಂದ ಮಹಾರ್ ಸಮಾಜಕ್ಕೆ ಹೇಗೆ ನಷ್ಟವಾಗುತ್ತಿದೆಯೆಂದು ತಿಳಿಸುವ ಲೇಖನಗಳನ್ನು ಇಂಗ್ಲಿಷ್ ಹಾಗೂ ದೇಶೀ ಭಾಷೆಗಳ ಪತ್ರಿಕೆಗಳಲ್ಲಿ ಪ್ರಕಟಿಸುವುದು, ಇತರರ ಅಭಿಪ್ರಾಯಗಳು ನಮಗನುಕೂಲವಾಗುವಂತೆ ವಿಭಿನ್ನ ಯತ್ನಗಳನ್ನು ಮಾಡುವುದೇ ಮುಂತಾದ ಕೆಲಸಗಳು ನಡೆಯುತ್ತಿರಬೇಕು. ಆ ಕೆಲಸಕ್ಕಾಗಿ ಒಂದು ಸ್ವತಂತ್ರ ಸಂಸ್ಥೆ ಇರದ ಹೊರತು, ಅದು ನಿಯಮಿತವಾಗಿ ಸತತವಾಗಿ ನಡೆಯುವುದು ಶಕ್ಯವಲ್ಲ. ಮಸೂದೆಯಿಂದ ಉತ್ಪನ್ನವಾದ ಉತ್ಸಾಹದಿಂದ ಪರಿಷತ್ತಿಗಾಗಿ ಸಾಕಷ್ಟು ನಿಧಿಯಿದೆ. ಈ ಹಣದ ವಿನಿಯೋಗವು ಜನರಿಂದ ಯಾವ ಕೆಲಸಕ್ಕಾಗಿ ಬೇಡಿ ಪಡೆಯಲಾಯೋ, ಅದೇ ಕೆಲಸದ ಪ್ರೀತ್ಯರ್ಥ ಆಗಬೇಕಾಗಿದೆ. ಬೇರೆ ಕೆಲಸಕ್ಕಾಗಿ ಆ ಹಣವನ್ನು ವಿನಿಯೋಗಿಸುವ ಯತ್ನ ನಡೆದಿರುವ ಬಗ್ಗೆ ಪರಿಷತ್ತಿನ ಕಾರ್ಯಕಾರಿ ಮಂಡಳಿಯಲ್ಲಿನ ಗುನುಗು ನಮ್ಮ ಕಿವಿಗೆ ಬಿದ್ದಿದೆ. ಹಾಗೆಂದೇ ಈ ಬಗ್ಗೆ ಸ್ಪಷ್ಟ ಸೂಚನೆ ನೀಡುವುದು ಅಗತ್ಯವೆಂದು ನಮಗನಿಸುತ್ತದೆ. ಹಣವನ್ನು ಯಾರಿಂದ ಪಡೆಯಲಾಗಿದೆಯೋ, ಅವರ

ಸಮ್ಮತಿಯಿಲ್ಲದೆ, ಬೇರೆ ಕೆಲಸಕ್ಕೆ ಆ ಹಣವನ್ನು ವಿನಿಯೋಗಿಸುವ ಅಧಿಕಾರ ಯಾರಿಗೂ ಇಲ್ಲ. ಇದು ವಿಶ್ವಾಸಘಾತವೇ ಸರಿ.ಇನ್ನೊಂದು ವಿಷಯ,



ಯಾವ ಕೆಲಸಕ್ಕಾಗಿ ಹಣ ಸಂಗ್ರಹಿಸಲ್ಪಟ್ಟಿದೆಯೋ, ಆ ಕೆಲಸ ಪೂರ್ಣವಾಗದೆ ಬೇರೆ ಕೆಲಸಕ್ಕೆ ಉಪಯೋಗಿಸಲ್ಪಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಆದರೂ ಮಹಾರ್ ಆನುವಂಶಿಕತೆ ಪರಿಷತ್‌ನ ಕೇಸ್‌ನ ನೇತೃತ್ವ ವಹಿಸಿದವರಿಗೆ, ಅದೇರೀತಿ ಆ ಪರಿಷತ್ತಿನ ನಿಧಿಗೆ ಸಹಾಯಹಸ್ತ ನೀಡಿದವರಿಗೆ ನಮ್ಮ ಸೂಚನೆ ಹೀಗಿದೆ. ಪರಿಷತ್ತನ್ನು ಶಾಶ್ವತವಾಗಿರಿಸಿ, ಹೆರಿಡಿಟ್ರ ಆಕ್ಟ್ ನಲ್ಲಿ ಸುಧಾರಣೆ ತರುವ ಚಳವಳಿ ನಡೆಯುತ್ತಿರಲಿ, ಮತ್ತು ಯಾವಾಗ ನಮ್ಮ ಇಷ್ಟದ ಸುಧಾರಣೆ ಸಾಧ್ಯವಾಗುವುದೋ, ಆಗ ಪರಿಷತ್ತಿನ ವಿಸರ್ಜನೆ ಆಗಲಿ, ಕಾಯ್ದೆ ಕೌನ್ಸಿಲ್‌ನ ಸದ್ಯದ ಸಂಘಟನೆ ಅತ್ಯಂತ ಅಸಮಾಧಾನಕರವಾಗಿದೆ ಮತ್ತು ಆ ಕಾರಣವಾಗಿಯೇ ನ್ಯಾಯ ಸುಧಾರಣೆಗೆ ಅಲ್ಲಿ ಬೆಂಬಲ ಸಿಗುವಂತಿಲ್ಲ. ಬಹಿಷ್ಕೃತ ವರ್ಗದ ಪ್ರತಿನಿಧಿತ್ವ ಹೆಚ್ಚಿನ ಪ್ರಮಾಣದಲ್ಲಿ ಕೌನ್ಸಿಲ್‌ನಲ್ಲಿ ಇರುವುದು ಅವಶ್ಯಕ. ಹಾಗೂ ಅಂಬೇಡ್ಕರ್ ಅವರು ಸುಧಾರಣಾ ಸಮಿತಿಯ ವರದಿಯಲ್ಲಿ ಸ್ವತಂತ್ರ ಮತಪತ್ರಿಕೆ ಜೋಡಿಸಿ ತೋರಿದ್ದಾರೆ. ಬಹಿಷ್ಕೃತ ವರ್ಗವು ರಾಜಕೀಯ ಹಕ್ಕಿನ ವಿಷಯದಲ್ಲಿ ಜಾಗರೂಕತೆ ತೋರಬೇಕು, ಮತ್ತು ಆ ಕುರಿತು ಹೋರಾಡಿದರೆ ಮಾತ್ರ ಆನುವಂಶಿಕ ಮಸೂದೆಯಂತಹ ಸುಧಾರಣೆಯ ಮಾರ್ಗ ಸುಗಮವಾಗುತ್ತದೆ. ಕಾಯ್ದೆ ಕೌನ್ಸಿಲ್‌ನಲ್ಲಿ ಈ ಪಾರಂಪರಿಕ ಗೆಯ್ ಪದ್ಧತಿಯ ಉಚ್ಚಾಟನೆಯಾದಲ್ಲಿ, ಬಹಿಷ್ಕೃತರ ಮತ್ತು ಇತರ ದಲಿತ ವರ್ಗದವರ ಶೀಘ್ರ ಪ್ರಗತಿ ಆಗುವುದು.

* * * *

## ೫೦. ಮೂಗಿಲ್ಲದವರ ಪರಸ್ಪರ ಪರಿಹಾಸ

ಪುಣೆ ಶಹರದಲ್ಲಿ ಇತ್ತೀಚೆಗೆ ವಲ್ಲಭ ಭಾಯ್ ಪಟೇಲರ ನೇತೃತ್ವದಲ್ಲಿ ಜಮೀನ್ದಾರ್ ಸಂಘವು {ಲ್ಯಾಂಡ್ ಲೀಗ್) ಅಸ್ತಿತ್ವಕ್ಕೆ ಬಂತು.

ವಲ್ಲಭ ಭಾಯ್ ಅವರನ್ನು ಕರೆಸುವಲ್ಲಿ ಮತ್ತು ಈ ಲೀಗ್‌ನ ಸ್ಥಾಪನೆಯಲ್ಲಿ ಕೇಳ್ ಕರ್, ಭೋಪಟ್ಕರ್ ಮುಂತಾದ ಬ್ರಾಹ್ಮಣ ನಾಯಕರು ಮುಖ್ಯವಾದ ಪಾತ್ರ ವಹಿಸಿದ್ದರಿಂದ, ಬ್ರಾಹ್ಮಣೇತರ ಪಕ್ಷದ ನಾಯಕರು ಅದರಲ್ಲಿ ಭಾಗವಹಿಸಲಿಲ್ಲ. ಅಷ್ಟೇ ಅಲ್ಲ, ಈ ಸಂಘ ಸ್ಥಾಪಿಸುವಲ್ಲಿ ಬ್ರಾಹ್ಮಣ ನಾಯಕರ ಒಳಗುಟ್ಟು ಕರನಿರಾಕರಣೆಯ ಚಳವಳಿಗಿಳಿಯುವುದೇ ಆಗಿದೆಯೆಂದೂ, ಈ ನಿಟ್ಟಿನಲ್ಲಿ ರೈತ ವರ್ಗ ಜಾಗೃತವಾಗಿರಬೇಕೆಂದೂ, ಮತ್ತು ಈ ಚಳವಳಿಗಿಳಿಯಬಾರದೆಂದೂ ಬ್ರಾಹ್ಮಣೇತರ ನಾಯಕರು ಸೂಚನೆ ಇತ್ತಿದ್ದರು. ಹಾಗೆಯೇ ಶ್ರೀ ವಿಠಲ್ ರಾವ್ ಶಿಂದೆ ಮತ್ತು ಶ್ರೀ ಜೇಧೇ ಅವರು ಈ ಸಂಘ ಸ್ಥಾಪನೆಯ ಹೊತ್ತು ಅಲ್ಲಿ ಉಪಸ್ಥಿತರಿದ್ದರು. ಬ್ರಾಹ್ಮಣೇತರ ನಾಯಕರು ಲೀಗ್‌ಗೆ ಬಹಿಷ್ಕಾರ ಹಾಕಿದ್ದರಿಂದ ವಲ್ಲಭ ಭಾಯ್ ಪಟೇಲರು ಭಾಷಣಗೈದು ಪುಣೆಯಲ್ಲಿ ಚೆನ್ನಾಗಿ ಜನ ಕೂಡಿಸಿದ್ದರು. ವಲ್ಲಭ ಭಾಯ್ ಪಟೇಲರು ಸ್ವತಃ ಬ್ರಾಹ್ಮಣೇತರರಾಗಿದ್ದರೂ, ಅವರು ಭಟ್ ಪಂಗಡದವರಾದ ಕಾರಣ, ಬಾರ್ಡೋಲಿ ಪ್ರಕರಣದ ವಿಜಯಕ್ಕಾಗಿ ಅವರನ್ನು ಅಭಿನಂದಿಸಿದ, ಹಾಗೂ ಬ್ರಾಹ್ಮಣೇತರರೆಂದು ತಮ್ಮತನದ ಭಾವನೆಯಿಂದ ಅಭಿಮಾನ ವ್ಯಕ್ತ ಪಡಿಸಿದ ಅದೇ ಬ್ರಾಹ್ಮಣೇತರ ಪತ್ರಕರ್ತರು, ಈಗ ಅವರ ಮೇಲೆ ತಿರುಗಿ ಬಿದ್ದಿದ್ದಾರೆ. ಗುಜರಾತ್‌ನಲ್ಲಿ ದುಬಳಾ ಎಂಬ ಜಾತಿಯ ಜನರಿದ್ದು, ಪಾಟೀದಾರ ಕುಣಬಿಗಳ ಹೊಲಗಳಲ್ಲಿ ಅವರೇ ಗೇಯುತ್ತಾರೆ. ಅವರ ಹೆಂಗಸರು, ಮಕ್ಕಳು ಪಾಟೀದಾರರ ಚಾಕರಿಯಲ್ಲಿ ಹಣ್ಣಾಗುತ್ತಾರೆ. ಪಾಟೀದಾರ ಕುಣಬಿಗಳು ದುಬಳಾ ಜಾತಿಯ ಜನರನ್ನು ಗುಲಾಮಗಿರಿಯಲ್ಲಿರಿಸಿದ್ದಾರೆ. ಮನಬಂದಂತೆ ಅವರ ಮೇಲೆ ದೌರ್ಜನ್ಯವೆಸಗುತ್ತಿದ್ದಾರೆ. ಹಾಗಿದ್ದೂ ವಲ್ಲಭ ಭಾಯ್ ಪಟೇಲರು ತಮ್ಮ ಜಾತಿ ಬಾಂಧವರು ದುಬಳರ ಮೇಲೆ ನಡೆಸಿದ ದೌರ್ಜನ್ಯವನ್ನು ಅಂಕೆಗೆ ತರುವ ಯಾವ ಯತ್ನವನ್ನೂ ಮಾಡುತ್ತಿಲ್ಲ ಎಂದು ಬ್ರಾಹ್ಮಣೇತರ ಪತ್ರಿಕೆಗಳಲ್ಲಿ ವಲ್ಲಭ ಭಾಯ್ ಅವರ ಮೇಲೆ ಆರೋಪ ಗೈದಿವೆ. ವಲ್ಲಭ ಭಾಯ್ ಮತ್ತು ಅವರ ಜಾತಿ ಬಾಂಧವರು ದುಬಳರ ವಿಷಯದಲ್ಲಿ ತೋರಿದ ಸ್ವಾರ್ಥಪೂರ್ಣ ಧೋರಣೆಯನ್ನು ನಾವೂ ಖಂಡಿಸುತ್ತೇವೆ. ದುಬಳರು, ಕೊರಗರು ಮುಂತಾದ ಹಿಂದುಳಿದ ಜನರ ಮೇಲೆ ಹಿಂದೂಗಳು, ಪಾರ್ಸಿಗಳು, ಮುಂತಾದ ಸಿರಿವಂತ ಜನರಿಂದ ಭಯಂಕರ ಅನ್ಯಾಯ ನಡೆಯುತ್ತಿದೆ ಎಂಬುದರಲ್ಲಿ ಇನಿತೂ ಸಂಶಯವಿಲ್ಲ. ಹಾಗಿದ್ದೂ ಮಹಾರಾಷ್ಟ್ರದ ಬ್ರಾಹ್ಮಣೇತರ ಪಕ್ಷವು ಈ ವಿಷಯದಲ್ಲಿ ಮೂಗಿನಲ್ಲೇ ಸಿಟ್ಟಿರುವಂತೆ ವರ್ತಿಸುವುದು ಮಾತ್ರ

ಹಾಸ್ಯಾಸ್ಪದವಾದೀತು.

ಖೋತೀ ಪದ್ಧತಿಯಲ್ಲಿ ಜನರ ಮೇಲೆ ಖೋತಾದಾರರು ಹಾಗೂ ಅವರ ಕೈ ಕೆಳಗಿನವರಿಂದ ಅತಿಶಯ ದೌರ್ಜನ್ಯ ನಡೆದಿದೆಯೆಂಬುದು ಈಗ ಜಗಜ್ಜಾಹೀರಾಗಿದೆ. ಖೋತಾಗಳಲ್ಲಿ ಬ್ರಾಹ್ಮಣ,



ಮರಾಠಾ ಮುಂತಾದ ಸ್ಪೃಶ್ಯ ಹಿಂದೂಗಳಲ್ಲದೆ, ಕೆಲವರು ಮುಸಲ್ಮಾನರೂ ಇದ್ದಾರೆ. ಈ ಎಲ್ಲ ಜಾತಿಯ ಖೋತಾಗಳು ಕುಣಬಿ ಹಾಗೂ ಅಸ್ಪೃಶ್ಯ ವರ್ಗದ ಜನರನ್ನು ನಾನಾ ವಿಧದಿಂದ ನೋಯಿಸುತ್ತಾರೆ. ಅವರ ಮೇಲೆ ಅನ್ಯಾಯವೆಸಗುತ್ತಾರೆ. ಆದರೆ ಜನರ ಹಕ್ಕಿನ ಪ್ರಶ್ನೆ ಬಂತೆಂದರೆ ಬ್ರಾಹ್ಮಣ ಮತ್ತು ಅಬ್ರಾಹ್ಮಣರು ಸೇರಿ, ಅವರ ಗುಲಾಮಗಿರಿಯನ್ನು ಶಾಶ್ವತವಾಗಿರಿಸಲು ಆಕಾಶ ಪಾತಾಳ ಒಂದು ಮಾಡುತ್ತಾರೆ. ಜನರು ಚಳವಳಿ ಆರಂಭಿಸಿದಾಗ ಅದನ್ನು ವಿರೋಧಿಸಲೆಂದು ಮುಂಬಯಿ ಶಹರದಲ್ಲಿ ಬ್ರಾಹ್ಮಣೇತರರರೇ ಸಭೆಯಲ್ಲಿ ಗಲಭೆಯೆಬ್ಬಿಸಿದರು. ಖೋತದಾರರ ಪಕ್ಷ ವಹಿಸಿದವರಲ್ಲಿ ಬ್ರಾಹ್ಮಣೇತರ ಪಕ್ಷದ ನಾಯಕರೆಂಬವರೇ ಸಾಕಷ್ಟು ಮಂದಿ ಶಾಮೀಲಾಗಿದ್ದರು. ಮತ್ತು ಜನರ ಪಕ್ಷ ವಹಿಸಿದ ರಾವ್ ಬಹದ್ದೂರ್ ಬೋಲೇ, ಸುರ್ವೆ ಮುಂತಾದ ಬ್ರಾಹ್ಮಣೇತರ ನಾಯಕರ ಮೇಲೆ ಮರಾಠಿ ಜನರು ತಿರುಗಿ ಬಿದ್ದಿದ್ದರು. ಬ್ರಾಹ್ಮಣೇತರ ಪಕ್ಷದ, ವಿಶೇಷವಾಗಿ ಮರಾಠ ಜಾತಿಯ ಸಹಾನುಭೂತಿ ಸಿಗಲೆಂದು ಕುಣಬಿಗಳು ತೀವ್ರ ಯತ್ನ ನಡೆಸಿದರಾದರೂ, ಅದರಲ್ಲಿ ಅವರಿಗೆ ಜಯ ಸಿಗಲಿಲ್ಲ. ಕೆಲ ವರ್ಷಗಳ ಹಿಂದೆ ಬ್ರಾಹ್ಮಣೇತರ ಪಕ್ಷದ ಮುಕುಟ ಮಣಿಗಳ ನಾಯಕರ ಅಧ್ಯಕ್ಷತೆಯಲ್ಲಿ ಮುಂಬಯಿ ಶಹರದಲ್ಲಿ ಕುಣಬಿಗಳು ಸಭೆ ಸೇರಿದ್ದರು. ಆ ಸಭೆಯಲ್ಲಿ ಮಂಜೂರಾದ ಠರಾವಿನಂತೆ ಖೋತಿ ಪದ್ಧತಿಯನ್ನು ಸಂಪೂರ್ಣ ಇಲ್ಲವಾಗಿಸುವ ವಿನಂತಿಯನ್ನು ಸರಕಾರದ ಮುಂದಿಡುವ ನಿರ್ಧಾರ ಸಭೆಯ ಮುಂದೆ ಬಂದಾಗ, ಅಧ್ಯಕ್ಷರು ಅದಕ್ಕೆ ಯಾವ ವಿರೋಧವನ್ನೂ ತೋರಲಿಲ್ಲ. ಹಾಗೂ ಆ ಠರಾವು ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟಿತು. ಆದರೆ ಈ ನಿರ್ಣಯವನ್ನು ಅಧ್ಯಕ್ಷರ ಸಹಿಯೊಡನೆ ಸರಕಾರಕ್ಕೆ ಸಲ್ಲಿಸುವ ಸಮಯ ಬಂದಾಗ, ಅಧ್ಯಕ್ಷರು, ತಾನು ಸಹಿ ಮಾಡಲಾರೆನೆಂದರು ! ಒಳಗುಟ್ಟೆಂದರೆ, ಅಧ್ಯಕ್ಷರ ಗೆಳೆಯರಲ್ಲಿ ಹಲವರು ಮರಾಠಾ ಖೋತದಾರರೂ ಇದ್ದರು. ಅಸ್ಪೃಶ್ಯರೆಂದು ಕರೆಯಲ್ಪಡುವ ವರ್ಗದ ಉನ್ನತಿಯ ದಾರಿಯಲ್ಲಿ ಬ್ರಾಹ್ಮಣರೇ ಅಡ್ಡ ಬರುತ್ತಾರೆಂದೇನೂ ಅಲ್ಲ, ಬ್ರಾಹ್ಮಣೇತರರೂ ಅಡ್ಡ ಬರುತ್ತಾರೆ. ಅಸ್ಪಶ್ಯರನ್ನು ಹೊಡೆದು ಹಾಕಲು ಹಾಗೂ ಅವರಿಗೆ

ಮೋಸ ಮಾಡಲು ಬ್ರಾಹ್ಮಣೇತರರೇ ಮುಂದಾಳುತ್ವ ವಹಿಸುತ್ತಾರೆ. ಆದರೆ ಬ್ರಾಹ್ಮಣೇತರ ನಾಯಕರು ಬ್ರಾಹ್ಮಣರ ತಲೆಯ ಮೇಲೆಯೇ ಮಡಕೆ ಒಡೆದು ಮುಕ್ತರಾಗಲು ನೋಡುತ್ತಾರೆ. ಮಹಾರ್ ವತನ್ ಬಿಲ್‌ನ ಆಯ್ಕೆಯ ಕಮಿಟಿಯಲ್ಲಿದ್ದ ಒಬ್ಬ ಬ್ರಾಹ್ಮಣೇತರ ನಾಯಕ, ಎಮ್.ಎಲ್.ಸಿ. ಶ್ರೀ ನವಲೇ ಅವರ ಉದಾಹರಣೆಯು ಈ ವಿಷಯದಲ್ಲಿ ಧ್ಯಾನದಲ್ಲಿ ಉಳಿಯುವಂತಿದೆ. ಒಟ್ಟರ್ಥದಲ್ಲಿ ದುರ್ಬಲರಿಗೆ ಪಾಟೀದಾರ ಕುಣಬಿಗಳ ವರ್ತನೆಯಿರುವ ಕಾರಣ, ವಲ್ಲಭ ಭಾಯ್ ಅವರಿಗೆ ದೋಷವನ್ನಾರೋಪಿಸಿ ಅವರ ಅಯೋಗ್ಯತೆಯನ್ನು ಸಿದ್ದ ಪಡಿಸುವುದಾದರೆ, ಅದೇ ರೀತಿ ಮಹಾರಾಷ್ಟ್ರದ ಬ್ರಾಹ್ಮಣೇತರ ಪಕ್ಷದ ನಾಯಕರಿಗೂ ಇದನ್ನು ಅನ್ವಯಿಸಿ, ಅವರ ಅಯೋಗ್ಯತೆಯನ್ನು ಸಹಜವಾಗಿ ಸಾಬೀತುಪಡಿಸಬಹುದು.

* * * *

## ೫೧. ಕಮ್ಯೂನಿಸಮ್ ಬೇಕಿದ್ದರೆ ಕರ ನಿರಾಕರಣೆ ಯಾಕೆ ಬೇಡ?

ಲ್ಯಾಂಡ್‌ಲೀಗ್‌ನ ಚಳವಳಿಯಲ್ಲಿ ಬ್ರಾಹ್ಮಣೇತರರು ಇರಬಾರದೇಕೆಂದರೆ, ಆ ಚಳವಳಿಯ ಒಳಗಿನ ಕಾರಣ ಸರಕಾರದ ವಿರುದ್ಧ ಕರ ನಿರಾಕರಣೆಯ ಚಳವಳಿಯಲ್ಲಿ ತೊಡಗುವುದೇ ಆಗಿದೆಯೆಂದು ಬ್ರಾಹ್ಮಣೇತರ ನಾಯಕರು ಜಾಹೀರು ಪಡಿಸಿದ್ದಾರೆ. ನಿಜವಾಗಿ ನೋಡಿದರೆ, ಮಹಾರಾಷ್ಟ್ರದ ಕೇಳ್ಕರ್, ಭೋಪಟ್ಕರ್ ಮುಂತಾದ ನಾಯಕರು, ಕರ ನಿರಾಕರಣೆಯ ಚಳವಳಿಗೆ ತೊಡಗುವ ಧೈರ್ಯ ತೋರುವರೆಂದು ಇದುವರೆಗಿನ ಅವರ ಇತಿಹಾಸ ಅವಲೋಕಿಸಿದರೆ ತಿಳಿಯುವಂತಹುದಲ್ಲ. ಆದರೆ ಅದು ಹೇಗಿದ್ದರೂ, ಕರ ನಿರಾಕರಣೆಯ ಚಳವಳಿ ಬಗ್ಗೆ ಬ್ರಾಹ್ಮಣೇತರರು ಇಷ್ಟು ಭಯ ಪಡುವುದೇಕೆ? ರೈತರ ಹಿತ ಸಾಧಿಸಬೇಕಾದರೆ, ಸಮಯ ಬಂದರೆ ಕರ ನಿರಾಕರಣೆಯ ಚಳವಳಿ ಮಾಡಬೇಡವೇ? ಬಾಕಿ ಎಲ್ಲ ಉಪಾಯಗಳೂ ಸೋತು, ರೈತರ ತಕರಾರು ಸಕಾರಣವಿದ್ದು, ಸರಕಾರವು ಅಹವಾಲು ಮನ್ನಿಸದಿದ್ದರೆ, ಶಾಂತಿಯಿಂದ ಕರನಿರಾಕರಣೆಯ ಚಳವಳಕ್ಕೆ ತೊಡಗುವುದು ಬೇಡವೆಂದು ಬ್ರಾಹ್ಮಣೇತರ ನಾಯಕರ ಅಂಬೋಣವೇ? ಬಾರ್ಡೋಲಿಯ ಹೋರಾಟದ ವೇಳೆ ಕರ ನಿರಾಕರಣೆಯ ಉಪಾಯವನ್ನು ಆಶ್ರಯಿಸಿರಲಿಲ್ಲವಾದರೆ, ಅಲ್ಲಿಯ ರೈತರ ಸಹಕಾರ ಸಿಗುತ್ತಿತ್ತೇ? ಆ ವೇಳೆ ಬ್ರಾಹ್ಮಣೇತರ ಪತ್ರಿಕೆಗಳೂ ಬಾರ್ಡೋಲಿಯ ವಲ್ಲಭ್‌ಭಾಯ್ ಅಂತಹ ನಾಯಕರ

ಅಭಿನಂದನೆ ಮಾಡಿರಲಿಲ್ಲವೇ? ಮತ್ತೆ ಈಗ ಕರ ನಿರಾಕರಣೆಯ ಬಗ್ಗೆ ಈ ಭಯಕ್ಕೆ ಅರ್ಥವೇನು? ಯಾವ ಬ್ರಾಹ್ಮಣೇತರ ಪತ್ರಕರ್ತರು ಲ್ಯಾಂಡ್‌ಲೀಗ್‌ನ ವಿರುದ್ಧ ಸದ್ಯ ಬರೆಯತೊಡಗಿದ್ದಾರೋ, ಅವರೇ ಇದುವರೆಗೆ ಮುಂಬಯಿಯ ಕಮ್ಯೂನಿಸ್ಟ್ ಚಳವಳಿಯ ಬಗ್ಗೆ ಅಚ್ಚರಿ ವ್ಯಕ್ತಪಡಿಸಿದ್ದಾರೆ. ಕಮ್ಯೂನಿಸಮ್‌ನ ಉದ್ದೇಶ ಮೂಲದಲ್ಲೇ ಇದೆಯೆಂದು ಆರೋಪಿಸಿ, ಯಾರೂ ಕಾರ್ಮಿಕ ಚಳವಳಿಗೆ ಹೆಸರಿಡಬಾರದು, ಮತ್ತು ಕಮ್ಯೂನಿಸ್ಟ್ ಯೂನಿಯನ್ ಕರೆದ ಮುಷ್ಕರದಿಂದ ಕಾರ್ಮಿಕರ ನಾಶಕ್ಕೆ ಕಾರಣವಾಗುವಂತಿದ್ದರೂ, ಎಲ್ಲರೂ ಅದನ್ನು ಬೆಂಬಲಿಸಬೇಕೆಂದು ಪತ್ರಿಪಾದಿಸಿರುವರು. ಈ ಯೂನಿಯನ್ ಸ್ಥಾಪಿಸಿದ ಕಮ್ಯೂನಿಸ್ಟರು ಬ್ರಾಹ್ಮಣರಿದ್ದರೂ, ಆ ಬಗ್ಗೆ ಈ ಪುಣೆ- ಬೆಳ್ಗಾಂವ್‌ನ ಬ್ರಾಹ್ಮಣೇತರ ಪತ್ರಕರ್ತರು ಇದುವರೆಗೆ ಒತ್ತು ಕೊಟ್ಟಿಲ್ಲ. ಕಾರಣ ಸ್ಪಷ್ಟವಿದೆ. ಆ ಗೋಷ್ಠಿ ಪರಭಾರೆಯಾಗಿತ್ತು. ರೈತ ಸಂಘದ ವಿಷಯ ಬ್ರಾಹ್ಮಣೇತರ ನಾಯಕರ ಪಾಲಿಗೆ ಬಂದು, ಅಲ್ಲಿನ ಹಿರಿಯ ನಾಯಕರಿಂದ ಫರ್ಮಾನ್ ಹೊರಟಿತು. ಈ ಹಿರಿಯ ನಾಯಕರು ಸರಕಾರದ ಮರ್ಜಿಯಂತೆ ಸಂಭಾಳಿಸಬೇಕಾಯ್ತು. ಹಾಗೆಂದೇ ಕರ ನಿರಾಕರಣೆಯ ಸಂಬಂಧ, ಈ ಅನಗತ್ಯ ಮಹತ್ವ ನೀಡಿ ಬ್ರಾಹ್ಮಣೇತರ ವರ್ಗವನ್ನ ಲ್ಯಾಂಡ್‌ಲೀಗ್‌ನಿಂದ ಅಲಿಪ್ತವಾಗಿರಿಸುವ ಬಲವಾದ ಪ್ರಯತ್ನ ನಡೆದುದು ಜನರ ಲಕ್ಷ್ಯಕ್ಕೆ ಬರದೇ ಹೋಗಲಿಲ್ಲ ಎಂಬುದನ್ನು ಆ ನಾಯಕರು ಮತ್ತು ಅವರು ಹೇಳಿದಂತೆ ಕುಣಿವ ಪತ್ರಕರ್ತರು ತಿಳಿದಿರಬೇಕು.

* * * *

## ೫೨. 'ಕೋಲಾಬಾ ಸಮಾಚಾರ'ದ ತುಂಟತನ

ಪೇಣ್ ನಿಂದ ಪ್ರಕಟಿಸಲ್ಪಡುತ್ತಿದ್ದ "ಕೊಲಾಬಾ ಸಮಾಚಾರ'ದ ತುಂಟತನವು ಪ್ರಸಿದ್ಧವೇ ಆಗಿದೆ. ವಾಚಾಳಿತನಕ್ಕೆ ತುಂಟತನದ ಜೊತೆ ನೀಡುವಲ್ಲಿ ಮತ್ತು ಹೊಲಸು ವಿಚಾರಗಳ ಲಜ್ಜಾಹೀನತೆಯನ್ನು ಪ್ರದರ್ಶಿಸುವಲ್ಲಿ ಈ ಪತ್ರಕರ್ತರು ಚತುರರಿದ್ದಾರೆ. ಕಳೆದ ಜೂನ್ ೧೭ರಂದು ಕೋಲಾಬಾ ಜಿಲ್ಲಾ ಬೋರ್ಡ್ ಸಭೆ ಸೇರಿದಾಗ ಮೂರನೇ ಪ್ರಹರಿಯ ಚಹಾ ವಿರಾಮದಲ್ಲಿ, ಪ್ರಸಕ್ತ ಬೋರ್ಡ್‌ನ ಒಬ್ಬ ಸರಕಾರೀ ನಿಯುಕ್ತ ಸಭಾಸದರಾದ ಅಸ್ಪೃಶ್ಯ ವರ್ಗದ

ಪ್ರತಿನಿಧಿ, ಶ್ರೀ ಭಾತಣ್ಕರ್ ಅವರು, ಸ್ಪೃಶ್ಯ ಸಭಾಸದರು ಚಹಾ ಕುಡಿಯುತ್ತಿದ್ದಲ್ಲಿಗೆ ಹೋಗಿ ತಾನೂ ಚಹಾ ಕುಡಿಯ ತೊಡಗಿದರು,

ಇದು ಹಲವರಿಗೆ ರುಚಿಸಲಿಲ್ಲವೆಂದು ಬರೆದು, ಇನ್ನು ಮುಂದೆ ಭಾತಣ್ ಕರ್ ಅವರಿಗೆ ಬೇರೆ ಕಡೆ ಚಹಾ ಕೊಡಲಿ, ಎಂದು ಡೋಂಗಿ ಮಿತ್ರತ್ವದಿಂದ ಈ ಸಮಾಚಾರ ಪತ್ರಿಕೆಯಲ್ಲಿ ಸೂಚನೆ ನೀಡಿದ್ದಾರೆ. ಈ ಬಗ್ಗೆ ನಾವು ವಿಚಾರಿಸಿದಾಗ ಕೋಲಾಬಾ ಸಮಾಚಾರವೇ ಈ ಮಿಥ್ಯಾರೋಪ ಹೊರಿಸಿದೆಯೆಂದು ತಿಳಿಯಿತು. ನಿಜವೇನೆಂದರೆ, ಆ ದಿನ ಚಹಾ ವಿರಾಮದಲ್ಲಿ ಉಳಿದ ಎಲ್ಲ ಸಭಾಸದರು ಚಹಾ ಕುಡಿಯಲೆಂದು ಹೋದಾಗ ಭಾತಣ್ಕರ್ ತಮ್ಮ ಸ್ಥಳದಲ್ಲಿ ಕುಳಿತೇ ಇದ್ದರು. ಅಲ್ಲಿ ಬೋರ್ಡ್ನ ಪೇದೆ ಬಂದು, “ನಿಮ್ಮನ್ನ ಪ್ರೆಸಿಡೆಂಟ್ ಸಾಹೇಬರು ಚಹಾ ಕುಡಿಯಲು ಕರೆಯುತ್ತಿದ್ದಾರೆ,” ಎಂದ. ಅಲ್ಲಿಗೆ ಹೋದಾಗ ಬೋರ್ಡ್ನ ಉಳಿದೆಲ್ಲ ಸದಸ್ಯರು ಮತ್ತು ಹೊರಗಿನ ಕೆಲವರೂ ನಿಂತು ಚಹಾ ಕುಡಿಯುತ್ತಿದ್ದುದು ಕಂಡು ಬಂತು. ಭಾತಣ್ಕರ್ ಕೂಡ ಅಲ್ಲಿ ನಿಂತಾಗ, ಪೇದೆ ಆತನ ಕೈಗೆ ಚಹಾ ಕಪ್ ಇತ್ತ. ಆ ವೇಳೆ ಬೋರ್ಡ್‌ನ ಯಾವ ಸಭಾಸದರೂ ಆ ಬಗ್ಗೆ ಏನೂ ಆಡಲಿಲ್ಲ; ಚಹಾ ಕುಡಿಯದೇ ಹಾಗೇ ಬಿಟ್ಟು ಹೋಗಲೂ ಇಲ್ಲ. ಆ ವಿಷಯದಲ್ಲಿ ಆ ದಿನ ಆ ಕೋಣೆಯಲ್ಲಿ ಅಥವಾ ಆನಂತರ ಬೋರ್ಡ್‌ನ ಸಭೆಯಲ್ಲೂ ಏನೂ ಚರ್ಚೆ ನಡೆಯಲಿಲ್ಲ. ಆದರೆ ಕೊಲಾಬಾ ಸಮಾಚಾರ ಪತ್ರ ಕಿಡಿಗೇಡಿತನದ ಕಿಚ್ಚುಹಚ್ಚುವ ಸುದ್ದಿ ಪ್ರಸಾರ ಮಾಡಿದುದು ಮಾತ್ರ ಬೋರ್ಡ್‌ನ ಸಭಾಸದರ ಮೇಲೆ ದುಷ್ಪರಿಣಾಮವನ್ನು ಉಂಟು ಮಾಡಿತು. ಕಾರಣ, ಜೂನ್ ತಿಂಗಳ ದಿನಾಂಕ ೧೭ರಂದು ಬೋರ್ಡ್ ಸಭೆ ಸೇರಿದಾಗ ಚಹಾ ವಿರಾಮದಲ್ಲಿ ಅಧ್ಯಕ್ಷರು ಭಾತರನ್ನು ಪಕ್ಕಕ್ಕೆ ಕರೆದು, “ಹಿಂದಿನಂತೆಯೇ ನಾವು ಸ್ಪಶ್ಯಾಸ್ಪಶ್ಯ ಭೇದ ಪಾಲಿಸದೆ ಈ ಸಲವೂ ಒಟ್ಟಾಗಿ ಚಹಾ ಕುಡಿದರೆ, ಇಂದಿನ ನನ್ನ ಚಹಾದ ಖರ್ಚು ವ್ಯರ್ಥವಾಗುತ್ತದೆ. ಹಾಗಾಗಿ ನೀವು ಬೇರೆಡೆ ಚಹಾ ಕುಡಿಯಿರಿ”, ಎಂದು ಹೇಳಿದರು. ಆಗ ಭಾತಣ್ ಕರ್ ಅವರು, “ನೀವು ಎಲ್ಲರಿಗಾಗಿ ಚಹಾ ಏರ್ಪಾಡು ಮಾಡಿದ್ದಲ್ಲವೇ?” ಎಂದು ಕೇಳಿದರು. ಅಧ್ಯಕ್ಷರು ಹೌದೆಂದಾಗ, ಭಾತಣ್ಕರ್ ಅವರು, “ಹಾಗಾದರೆ ನಾನು ಬೇರೆಡೆ ಖಂಡಿತ ಚಹಾ ಕುಡಿಯಲಾರೆ”, ಅಂದರು.

ತಾವಿಬ್ಬರೂ ಒಟ್ಟಾಗಿ ಒಂದೆಡೆ ಚಹಾ ಕುಡಿಯೋಣವೆಂದು ಅಧ್ಯಕ್ಷರಂದಾಗ, ಹಾಗೆ ಮಾಡಲು ಇದೇನೂ ಖಾಸಗಿ ಸಭೆಯಲ್ಲ, ಹಾಗಾಗಿ ತನಗದು ಒಪ್ಪಿಗೆಯಿಲ್ಲ, ಎಂದು ಇವರಂದರು. ಆಗ

ಅಧ್ಯಕ್ಷರು, ತನಗೇನೂ ಅಭ್ಯಂತರವಿಲ್ಲ, ಆದರೆ ಕೆಲ ಸಭಾಸದರು ತಕರಾರು ಎತ್ತಿದುದರಿಂದ ತಾನೇನೂ ಮಾಡುವಂತಿಲ್ಲ, ಎಂದರು. ಭಾಟೇ ಅದಕ್ಕುತ್ತರಿಸುತ್ತಾ, "ಮಿ, ರೋಹೇ ಮುನಿಸಿಪಾಲಿಟಿಯ ಅಧ್ಯಕ್ಷರಾಗಿದ್ದಾಗ, ಚಹಾದ ವ್ಯವಸ್ಥೆ ನಾನೇ ಮಾಡಿದ್ದೆ, ಮತ್ತು ಆ ವೇಳೆ ಇದೇ ಪ್ರಶ್ನೆ ಎದ್ದಿತ್ತು. ಆದರೆ ಆಗ ನಾನು ಸದಸ್ಯರಿಗಂದೆ," ಚಹಾ ಎಲ್ಲರಿಗಾಗಿ ಮಾಡಿದ್ದು, ಕುಡಿಯುವವರು ಒಟ್ಟಾಗಿಯೇ ಕುಡಿಯಿರಿ. ಯಾರಿಗೆ ಹಾಗೆ ಬೇಡವೋ, ಅವರಿಗಾಗಿ ಬೇರೆ ವ್ಯವಸ್ಥೆ ಮಾಡಲು ಆಗುವುದಿಲ್ಲ. ಹೀಗೆ ಅಭ್ಯಂತರವಿಲ್ಲದವರು ಚಹಾ ಕುಡಿದರು. ತಕರಾರಿದ್ದವರಿಗೆ ಚಹಾ ಸಿಗಲಿಲ್ಲ", ಶ್ರೀ ಭಾಟೇ ತಮ್ಮ ಅನುಭವ ಹೇಳಿಕೊಂಡರೂ, ಮೇಲ್ವರ್ಗದ ಸಭಾಸದರಿಗೆ ಸರಿಯಾದ ಉತ್ತರ ನೀಡುವ ಧೈರ್ಯ ಅಧ್ಯಕ್ಷರಿಗೆ ಬರಲಿಲ್ಲ. ಮತ್ತೆ ಭಾಟಣ್ಕರ್ ಅವರು ಪೇದೆ ಕೈಯಲ್ಲಿ ಹೊರಗೇ ಚಹಾ ಚೂಡಾ ತರಿಸಿಕೊಂಡು ಸೇವಿಸಿದರೆಂಬುದು ನಡೆದ ಸಂಗತಿ. ಇದರಿಂದ ರಾಷ್ಟ್ರೀಯ ವಿಚಾರಗಳನ್ನು ಆಡುತ್ತಾ, ಖಾದಿ ಧರಿಸಿ ಮೆರೆವವರು ಹೇಗೆ ಕಿಚ್ಚು ಹಚ್ಚುವ ಕೆಲಸ ಮಾಡುತ್ತಾರೆಂಬುದು ಕಂಡು ಬರುತ್ತದೆ.

* * * *

## ೫೩. ಭೋಜನ ಭಾಸ್ಕರನ ಉದ್ಧಟತನ

ಭಾಲಾಕಾರರೂ, ಭೋಪಟ್ ಕರರೂ ಪುಣೆಯಲ್ಲಿ ವಾರ್ಷಿಕ ಲೋಕಮಾನ್ಯ ಭೋಜನ ಸಮಾರಂಭ ಏರ್ಪಡಿಸಿದ್ದರು. ಈ ಭೋಜನದ ಜಾಹೀರಾತನ್ನು ತಮ್ಮ ವರ್ತಮಾನ ಪತ್ರಿಕೆಯಲ್ಲಿ ಕೊಡುವಾಗ ಲೋಕಮಾನ್ಯಪಂಥದ ಸ್ಪೃಶ್ಯ ಜನರದೇ ಭೋಜನವಿದು, ಎಂದು ಸಾರಿ, ಅಸ್ಪೃಶ್ಯರನ್ನು ಈ ಭೋಜನಕ್ಕೆ ಕರೆದೊಯ್ಯಬಾರದು ಎಂದೂ ಜಾಹೀರುಪಡಿಸಿದ್ದರು. ಲೋಕಮಾನ್ಯಪಂಥ ಮತ್ತು ಅದರ ಬೋಧನೆ ಬಹಿಷ್ಕೃತ ವರ್ಗಕ್ಕೆ ತಿಳಿದಿದ್ದು, ಈ ಭೋಜನದಲ್ಲಿ ಪಾಲ್ಗೊಳ್ಳಲು ಬಹಿಷ್ಕೃತ ವರ್ಗದವರಾರೂ ಉತ್ಸುಕರಿರುವ ಸಂಭವವೇ ಇರಲಿಲ್ಲ. ಬಹಿಷ್ಕೃತರಿಗೆ ಇದರ ಕಲ್ಪನೆ ಇರಲಿಲ್ಲವೆಂದಲ್ಲ. ಆದರೆ, ಬಹಿಷ್ಕೃತ ವರ್ಗದ ಉದ್ದಟತನವನ್ನು ಅವಮಾನಿಸುವ ಅವಕಾಶವನ್ನು ಈ ಭೋಜನಭಾಸ್ಕರ ವ್ಯರ್ಥವಾಗಿಸಲಿಲ್ಲ. ಜಾತಿಯ ಪ್ರಶ್ನೆ ಉದ್ಭವಿಸಿದಾಗ ಪುಣ್ಯವಶಾತ್, ಬಹಿಷ್ಕೃತ ವರ್ಗದ ಗೃಹಸ್ಥನೊಬ್ಬ "ಪುಕ್ಕಟೆಯಲ್ಲದಿದ್ದರೂ, ನಾಲ್ಕು ನಾಲ್ಕಾಣೆ ದಕ್ಷಿಣೆ ಕೊಟ್ಟಾದರೂ ಈ ಭೋಜನಕ್ಕೆ ಬಹಿಷ್ಕೃತರನ್ನು ಕರೆಯಲಾಗಿದೆ" ಎಂದು "ವಿವಿಧ ವೃತ್ತ ಪತ್ರಿಕೆಯಲ್ಲಿ ಬರೆದ ಕಾರಣವೇ ಅಲ್ಲಿಗೆ ಯಾರೂ ಹೋಗಲಿಲ್ಲ. ಭಾಲಾಕಾರರ ಕುಟಿಲ ಬ್ರಾಹ್ಮಣ್ಯ ನಮಗೆ ತಿಳಿಯದೇ? ಅವರ ಮನೆಗೆ ಉಣ್ಣಲು ಹೋಗುವ ಜೀವ ಸಂಕಟ ನಮಗೆ ಬಂದಿಲ್ಲ. ನರಮೇಧವು ನರ ಮಾಂಸ ಭಕ್ಷಣ ಪದ್ಧತಿಯ ಅವಶೇಷವಷ್ಟೇ. ನರಮೇಧವನ್ನು ಬಹಿರಂಗವಾಗಿ ಮಾಡಲಾಗದ್ದರಿಂದ ಭೋಜನದಲ್ಲಿ ವಿಷವಿಕ್ಕಿ ಮನುಷ್ಯರನ್ನು ಕೊಲ್ಲುವ ಪರ್ಯಾಯ ಹುಟ್ಟಿಕೊಂಡಿತು. ಈ ನರಮೇಧದಲ್ಲಿ ವಿಷವಿಕ್ಕಿ ಕೊಲ್ಲುವುದು ಎಲ್ಲಕ್ಕಿಂತ ಪುಣ್ಯ ಕೆಲಸವೆಂದು ತಿಳಿಯಲಾಗಿದೆ. ಯಾವುದೇ ಅಸ್ಪೃಶ್ಯವೆನಿಸುವ ಜಾತಿಸಂಬಂಧಕ್ಕೆ ಇಂತಹ ನರಮೇಧದ ಪ್ರಭಾವವಿಲ್ಲ. ಯಾವುದಾದರೂ ಒಂದು ಹಿಂದೂ ಜಾತಿಸಂಬಂಧ ಇದ್ದರೂ, ಅದು ಭಾಲಾಕಾರರ ಜಾತಿ ಆಗುತ್ತದೆ. ಮನುಷ್ಯ ಮಾಂಸ ಭಕ್ಷಕರನ್ನು ಪ್ರಸಕ್ತ ಕ್ರೈಸ್ತರು ತಮ್ಮ ಧರ್ಮದ ದೀಕ್ಷೆ ಇತ್ತು ಸುಧಾರಿಸುತ್ತಿದ್ದಾರೆ. ಈ ದೇಶದಲ್ಲಿ ಪ್ರಾಚೀನ ಕಾಲದ ವೈದಿಕ ಧರ್ಮ ಪ್ರಚಾರಕರು ಆ ಕೆಲಸ ಮಾಡಿದ್ದಾರೆ. ಆದರೆ, ಆ ಮೂಲ ಸ್ವಭಾವದ ಅವಶೇಷ ಉಳಿದಿದೆಯೆಂದು ಪ್ರವಾದದಿಂದ ತಿಳಿಯುತ್ತದೆ. ಮನುಷ್ಯ ಮಾಂಸ ಭಕ್ಷಕರ ಪಂಕ್ತಿಯಲ್ಲಿ ಕುಳ್ಳಿರುವುದು ಭೂಷಣವೆಂದು ಯಾವ ಅಸ್ಪೃಶ್ಯರಿಗೆ ಅನಿಸೀತು?

* * * *

## ೫೪. ವೆಂಗುರ್ಲೆಯ ಸತ್ಯನಾರಾಯಣ

ಸಾವಂತ್‌ವಾಡಿಯ "ವೈನತೇಯ' ಪತ್ರಿಕೆಯಲ್ಲಿ ಈ ಸಮಾಚಾರ ಪ್ರಸಾರವಾಯ್ತು: ವೆಂಗುರ್ಲೆಯ ಧನಿಕ ಚಾಂಭಾರ್ ರಾಮನಿಗೆ ಹರಕೆಯ ಸತ್ಯನಾರಾಯಣ ಪೂಜೆ ಮಾಡಿಸುವುದಿತ್ತು. ವೆಂಗುರ್ಲೆ ನಗರದ ಚಾಂಭಾರ್‌ವಾಡಿಯಲ್ಲಿ ಸತ್ಯನಾರಾಯಣನ ಮೊದಲ ಪೂಜೆ ಇದಾದುದರಿಂದ ರೂಢಿಪ್ರಿಯ ಸ್ಥಳೀಯ ಪುರೋಹಿತ ವರ್ಗದಿಂದ ಪೌರೋಹಿತ್ಯ ಮಾಡಲು ಯಾರೂ ಮುಂದೆ ಬರಲಿಲ್ಲ. ಅದರಿಂದಾಗಿ ಶ್ರೀ ಸೀತಾರಾಮಪಂತ ಪಟ್‌ವರ್ಧನ್ ಅವರು ಖುದ್ದಾಗಿ ಬಂದು, ಅವರ ಪೌರೋಹಿತ್ಯದಲ್ಲಿ ಶ್ರೀ ಸತ್ಯನಾರಾಯಣನ ಪೂಜೆ ಕಳೆದ ಆಷಾಢ ಪೌರ್ಣಮಿಯ ದಿನ ಬಲು ಆಡಂಬರದಿಂದ ಜರುಗಿತು. ನಗರದ ಎಲ್ಲ ವರ್ಗಗಳ ಮತ್ತು ಜಾತಿಗಳ ಬಹಳಷ್ಟು ಪ್ರತಿಷ್ಠಿತ ಜನರು, ರಾಮಾ ಚಾಂಭಾರ್‌ನ ಆಮಂತ್ರಣದಂತೆ ಪ್ರಸಾದ ಸ್ವೀಕರಿಸಲು ಬಂದಿದ್ದರು. ಅವರಲ್ಲಿ ಕಿರಾತಕ ಶ್ರೀ ಮರಾಠ, ಶ್ರೀ ಗುಂಡೋಬಾ ಜೋಶಿ, ಶ್ರೀ ಝೂಟ್ಯ, ಶ್ರೀ ಪೇಠ ಮಾಸ್ತರ್, ಖ್ಯಾಲ್‌ಗಿರಿಯ ಬುವಾ ಮುಂತಾದವರು ಪ್ರಮುಖವಾಗಿ ಕಾಣಿಸುತ್ತಿದ್ದರು. ಶ್ರೀ ಶೇಟ್ ಮತ್ತು ಗಾವಡೇ ಅವರಂತಹ ಮರಾಠರು ತಮ್ಮ ಭಜನಾ ಮೇಳವನ್ನೂ ಜತೆಗೆ ತಂದಿದ್ದರು. ಆ ಮೇಳವು ಶ್ರಾವ್ಯವಾಗಿ ಭಜನೆಯನ್ನೂ ಹಾಡಿದರು. ಈ ಸಮಾರಂಭ ಯಶಸ್ವಿಯಾಗುವಲ್ಲಿ ಖಾದಿ ಕಾರ್ಯಾಲಯದ ವ್ಯವಸ್ಥಾಪಕರಾದ ಶ್ರೀ ವಾಲಾವಲ್ಕರ್ ಅವರು ತುಂಬ ಪರಿಶ್ರಮ ವಹಿಸಿದರು. ಒಂದೊಮ್ಮೆ ತುಳಿತಕ್ಕೊಳಗಾದವರೆಂಬ ಕಾರಣಕ್ಕೆ ಇನ್ನು ಮುಂದೆ ಸತ್ಯನಾರಾಯಣನ ಪೂಜೆ ಮಾಡಿಸಲು ಚಾಂಭಾರ್ ವರ್ಗಕ್ಕೆ ಸ್ಥಳೀಯ ಪುರೋಹಿತರು ಸಿಗದೇ ಹೋಗಲಿಕ್ಕಿಲ್ಲವೆಂದು ಅನಿಸುತ್ತದೆ. "ಯಾರು ಈ ಪೂಜಾ ಸಮಾರಂಭದಲ್ಲಿ ಪ್ರತ್ಯಕ್ಷ ಹಾಜರಿದ್ದು ಅಸ್ಪೃಶ್ಯರ ಬಗ್ಗೆ ಸಹಾನುಭೂತಿ ವ್ಯಕ್ತ ಪಡಿಸಿದರೋ ಅವರಿಗೆ, ಹಾಗೇ ಶ್ರೀ ಪಟ್‌ವರ್ಧನ್, ಶ್ರೀ ವಾಲಾವಲ್ಕರ್ ಮುಂತಾದ ಅಸ್ಪೃಶ್ಯ ವರ್ಗದ ನಾಯಕರಿಗೆ ನಾವು ಧನ್ಯವಾದ ಅರ್ಪಿಸುತ್ತೇವೆ. ಆದರೆ ಉಕ್ತ ವಾರ್ತಾಪತ್ರಿಕೆಯ ಲೇಖಕ ವ್ಯಕ್ತ ಪಡಿಸಿದ ಆಶಯ ಫಲಪ್ರದವಾದಲ್ಲಿ ಭಿಕ್ಷುಕ ವರ್ಗಕ್ಕೆ ಲಾಭವಾಗಿ, ಅಸ್ಪೃಶ್ಯ ವರ್ಗದ ಪಾಲಿಗೆ ಒಂದು ಹೊಸ ಖರ್ಚು ರೂಢಿಯಾಗುವುದು ಎಂದು ಮಾತ್ರ ನಮಗೆ ಭಯವೆನಿಸುತ್ತದೆ. ಅಲ್ಲದೆ, ಸತ್ಯನಾರಾಯಣನ ಪುರಾಣ ಕಲ್ಪಕತೆಯಷ್ಟೆ. ಈ ಪ್ರಕರಣವು ಸ್ಕಂದ ಪುರಾಣದ ರೇವಾಖಂಡದಲ್ಲಿದೆಯೆಂದು ಭಾವಿಸಲಾಗಿದೆ. ಆದರೆ ಆ ಮರಾಣದಲ್ಲಿ ಅದು ಇಲ್ಲವೇ ಇಲ್ಲ. ಆ ಪುರಾಣದ ಈಶ್ವರನ ಕಲ್ಪನೆ ಬರೇ ಹೀನ

ಪ್ರಕಾರದ್ದಾಗಿದೆ. ಬದಲಿಗೆ ಚೋಖೋಬಾ ರಾಯ್, ರೋಹಿದಾಸ ಮುಂತಾದ ಸಾಧುಗಳ ಈಶ್ವರನ ಕಲ್ಪನೆ ಎಷ್ಟು ಉದಾತ್ತವಾದುದಾಗಿದೆ ! ಈ ಸಂತರ ದೇವರನ್ನು ಪ್ರಸಕ್ತ ಪುರಾಣದ ಮಾರ್ವಾಡಿ ಸ್ವಭಾವದ, ನಿಷ್ಕಾರಣ ಕೋಪಗೊಳ್ಳುವ, ಕ್ಷುಲ್ಲಕ ಅಪರಾಧಕ್ಕೆ ಭಯಂಕರ ಶಾಪ ನೀಡುವ ದೇವರನ್ನು ಹೋಲಿಸಿ ನೋಡಿದರೆ ಬಹಿಷ್ಕೃತರು ತಮ್ಮ ಚೋಖೋಬಾ ಮತ್ತು ರೋಹಿದಾಸರ ದೇವರನ್ನು ಬಿಟ್ಟುಕೊಟ್ಟು, ಆಧುನಿಕ ಕೃತಕ ದೇವರನ್ನು ಭಜಿಸುವುದು, ಆಧ್ಯಾತ್ಮಿಕ ಹಿಂದೆಗೆತವೆಂದೇ ತಿಳಿಯಬೇಕಾಗಿದೆ.

## ೫೫. ಗಣೇಶೋತ್ಸವದ ಸಾರ್ವಜನಿಕತ್ವದ ವ್ಯಾಖ್ಯೆ

ಗಣೇಶೋತ್ಸವವು ಸಾರ್ವಜನಿಕವೂ, ರಾಷ್ಟ್ರೀಯವೂ ಆಗಿದೆಯೆಂದು ಹೇಳಲಾಗಿದೆ. ವಸ್ತುತಃ ರಾಷ್ಟ್ರೀಯತೆಯೊಡನೆ ಅದರ ಸಂಬಂಧವೇನೂ ಇಲ್ಲ. ಗಣೇಶೋತ್ಸವವು ಧಾರ್ಮಿಕ ವಿಷಯವಾದ್ದರಿಂದ, ಮತ್ತು ಹಿಂದೀ ರಾಷ್ಟ್ರದಲ್ಲಿ ಅಂತರ್ಗತರಾಗಿರುವ ಮುಸಲ್ಮಾನ, ಫಾರಶಿ ಮುಂತಾದ ಅನ್ಯಧರ್ಮೀಯರಿಗೆ ಈ ಉತ್ಸವದಲ್ಲಿ ಯಾವ ಸಂಬಂಧವೂ ಇರುವ ಶಕ್ಯತೆ ಇಲ್ಲದ ಕಾರಣ, ಆ ಉತ್ಸವವನ್ನು ರಾಷ್ಟ್ರೀಯವೆನ್ನುವುದು ರಾಷ್ಟ್ರೀಯ ಶಬ್ದದ ಅವಮಾನವೇ ಸರಿ. ಹಿಂದೂಗಳ ಸಾರ್ವಜನಿಕ ಉತ್ಸವವೆಂದೇನೋ ಹೇಳಬಹುದು. ಉಳಿದಂತೆ ಹಿಂದೂ ಶಬ್ದವನ್ನು ಈಗ ವ್ಯಾಖ್ಯಾನಿಸುವಂತೆ, ಮೂರ್ತಿಪೂಜೆ ಮತ್ತು ಪುರಾಣವನ್ನು ನಂಬದ ಆರ್ಯಸಮಾಜೀ, ಬ್ರಹ್ಮಸಮಾಜೀ ಮತ್ತು ಪ್ರಾರ್ಥನಾಸಮಾಜಿಗಳ, ಅಂತೆಯೇ ವೈದಿಕ ಧರ್ಮದೊಳಗೆ ಬರದ ಲಿಂಗಾಯತ, ಜೈನ, ಸಿಖ್ಖ, ಬೌದ್ಧ ಪಂಥೀಯರನ್ನೂ ಹಿಂದೂಗಳಲ್ಲಿ ಸೇರಿಸಿಕೊಳ್ಳಲಾಗುತ್ತದೆ. ಈ ದೃಷ್ಟಿಯಿಂದ ಗಣೇಶೋತ್ಸವವು ಎಲ್ಲ ಹಿಂದೂಗಳ ಧಾರ್ಮಿಕ ಉತ್ಸವ ಎಂದು ಹೇಳಲಾಗದು. ಆದರೆ, ಈ ಉತ್ಸವದ ಪುರಸ್ಕರ್ತರು ಅದು ಹಿಂದೂಗಳ ಸಾರ್ವಜನಿಕ ಉತ್ಸವೆಂದು ಹೇಳುತ್ತಿದ್ದಾರೆ, ಮತ್ತು ತಮಾಷೆಯೆಂದರೆ, ಸಾರ್ವಜನಿಕವೆಂದು ಅಲ್ಲಿ ಜಾತಿಭೇದವನ್ನು ಪಾಲಿಸಲಾಗುತ್ತದೆ. ಉತ್ಸವವನ್ನು ಸಾರ್ವಜನಿಕವೆನ್ನುವ ಎಲ್ಲ ಜಾತಿಯ ಹಿಂದೂಗಳಿಂದ ಆ ಬಗ್ಗೆ ವರ್ಗೀಕರಿಸುವದು ಮತ್ತು ಒಂದು ವಿಶಿಷ್ಟ ಜಾತಿಯ ಜನರು ಇತರರನ್ನು ತುಚ್ಛರೆಂದು ಕರೆಯುವುದು. ಜಾತಿಭೇದ, ಸ್ಪಶ್ಯಾಸ್ಪಶ್ಯ

ಭೇದಗಳೆಲ್ಲವನ್ನೂ ಹಾಗೇ ಉಳಿಸಿಕೊಳ್ಳುವುದು, ದಾದರ್‌ನಲ್ಲಿ ಕಳೆದ ವರ್ಷದವರೆಗೆ ಇದೇ ರೀತಿ ಸಾರ್ವಜನಿಕ ಗಣಪತಿ ಉತ್ಸವ ನಡೆಸಲಾಯ್ತು. ಕಳೆದ ವರ್ಷ ಬ್ರಾಹ್ಮಣೇತರ ಮತ್ತು ಅಸ್ಪೃಶ್ಯರೆನಿಸಿದ ಜಾತಿಯ ಜನರು ಇಂತಹ ಡೋಂಗಿ ಸಾರ್ವಜನಿಕತನದ ಬಗ್ಗೆ ತಕರಾರು ಎತ್ತಿದರು

.

ಆ ವೇಳೆ, ಸ್ವಾಭಿಮಾನಿ ಜನರ ಬಲವನ್ನು ಕಂಡು, ಉತ್ಸವದ ಪಾರಂಪರಿಕ ಚಾಲಕರು ಮುಂದೆ ಬಂದು ನಡೆದ ಒಪ್ಪಂದವು ಎಲ್ಲರಿಗೂ ಸಮಾಧಾನಕರ ಆಗಿತ್ತೆಂದು ಹೇಳಲಾಗದು. ಆದರೆ, ಇಷ್ಟು ಅವರಿಗೆ ಸಾಕು, ಎಂದೆನಿಸಿ, ಸ್ವಾಭಿಮಾನಿ ಜನರು ವಿಶೇಷ ಆಗ್ರಹಕ್ಕೆ ಮುಂದಾಗಲಿಲ್ಲ. ಹಾಗೆಯೇ ಈ ವರ್ಷ ಆ ಒಪ್ಪಂದವನ್ನು ಅಲಕ್ಷಿಸಿ ಸಮಾನತೆಯನ್ನು ಆರಂಭಿಸಲಾಗಿದೆ. ಉತ್ಸವವನ್ನು ಸಾರ್ವಜನಿಕವೆನ್ನುವುದು, ಅದಕ್ಕಾಗಿ ಎಲ್ಲ ಜಾತಿಯ ಹಿಂದೂಗಳಿಂದ ವಂತಿಗೆ ಒಗ್ಗೂಡಿಸುವುದು ಮತ್ತು ಪುನಃ ಗಣಪತಿಗೆ ಬ್ರಾಹ್ಮಣೇತರರ ಪೂಜೆಯ ಮತ್ತು ನೈವೇದ್ಯದ ಅಶುದ್ಧತೆಯಾಗದಂತೆ ನೋಡುವುದು. ಗಣಪತಿಯೆಂದರೆ ಭಟ್ಟರಿಗೆ ಸೇರಿದ್ದೆಂದು ತಿಳಿದು ಅದಕ್ಕೆ ತಕ್ಕ ಬಂದೋಬಸ್ತು ಮಾಡುವುದು. ಬ್ರಾಹ್ಮಣರು ತಮ್ಮ ದೇವರ ಮನೆಯಲ್ಲಿ ಗಣಪತಿಯನ್ನು ತಮ್ಮಿಷ್ಟದಂತೆ ಶುದ್ಧಿಯಲ್ಲಿಡಲಿ, ಆದರೆ ಸಾರ್ವಜನಿಕ ಗಣಪತಿಗೆ ಬ್ರಾಹ್ಮಣರ ಬಂದೀಖಾನೆಯೇಕೆ? ಶುದ್ಧರೆಂಬವರಿಗೆ ಇತರರ ಸಂಬಂಧ ಪಥ್ಯವಾಗದೆ ಹೋದರೆ, ಅವರು ತಮ್ಮ ಜಾತಿಯೊಳಗೇ ಉತ್ಸವ ಮಾಡಲಿ, ಮತ್ತು ಇತರ ಜಾತಿಯವರಿಂದ ಆ ಉತ್ಸವಕ್ಕಾಗಿ ದೇಣಿಗೆ ಪಡೆಯದಿರಲಿ. ಅವರು ಹಾಗೆ ಮಾಡದಿದ್ದರೆ



ಇತರ ಜಾತಿಯವರು ಇಂತಹ ಕೃತ್ರಿಮ ಸಾರ್ವಜನಿಕ ಉತ್ಸವಕ್ಕೆ ವಂತಿಗೆ ಕೊಡದಿರಲಿ; ಅದನ್ನು ತೀಕ್ಷ್ಣವಾಗಿ ಬಹಿಷ್ಕರಿಸಲಿ.ಸಾರ್ವಜನಿಕ ಮತ್ತು ಧಾರ್ಮಿಕ ಉತ್ಸವವನ್ನು ಈ ರೀತಿ ಮಾಡುವುದಕ್ಕಿಂತ ಮಾಡದಿರುವುದೇ ಲೇಸು. ಸಾಂಪ್ರತ , ಈ ಉತ್ಸವದಿಂದ ಹಿಂದೂಗಳು ಒಂದಾಗುವ ಬದಲಿಗೆ ಅವರೊಳಗಿನ ಭೇದ ಹೆಚ್ಚಿಸಲು ಸಹಾಯವಾಗುತ್ತದೆ. ಹಿಂದೂ ಸಂಘಟನೆಯ ಬಗ್ಗೆ ಮಾತನಾಡುವವರೇ ಈ ಒಡಕನ್ನು ಹೆಚ್ಚಿಸುತ್ತಿದ್ದಾರೆ.

* * * *

## ೫೬. ವರ್ತಮಾನ ಪತ್ರದಲ್ಲಿನ ಜಾಹೀರಾತು

ಬಹಳಷ್ಟು ಪತ್ರಕರ್ತರು ಧನದಾಶೆಗೆ ಬಲಿಬಿದ್ದು, ತಮ್ಮ ವರ್ತಮಾನ ಪತ್ರದಲ್ಲಿ ಜಾಹೀರಾತು ಪ್ರಕಟಿಸುವ ವಿಷಯದಲ್ಲಿ ವಿಧಿ ನಿಷೇಧಗಳನ್ನು ಪಾಲಿಸುವುದಿಲ್ಲ. ಮರಾಠಿ ವರ್ತಮಾನ ಪತ್ರಗಳಲ್ಲಿ ಔಷಧಗಳ ಹೊಲಸು ಜಾಹೀರಾತುಗಳ ಭರಾಟೆ ಮೊದಲಿನಿಂದಲೂ ಇದೆ. ಸಾಕಷ್ಟು ಜಾಹೀರಾತುಗಳು ಮೋಸ ಹಾಗೂ ಅನೀತಿಗೆ ಉತ್ತೇಜನ ಕೊಡುವ, ಶರೀರ ಪ್ರಕೃತಿಗೆ ಮಾರಕವಾದ, ವಾಚಕರ ಕೊಳಕು ವಾಸನೆಗಳನ್ನು ಉದ್ದೀಪಿಸುವಂತಹವೇ ಆಗಿರುತ್ತವೆ. ಹಾಗೆಯೇ ಕೆಲವು ಜಾಹೀರಾತುಗಳು ವಿದೇಶೀ ಮದ್ಯಕ್ಕೆ ಸಂಬಂಧಪಟ್ಟವಾಗಿರುತ್ತವೆ. ಇಂತಹ ಜಾಹೀರಾತುಗಳು ವರ್ತಮಾನ ಪತ್ರಗಳಲ್ಲಿ ಪ್ರಕಟವಾಗದಿರುವುದೇ ಸಾರ್ವಜನಿಕ ಹಿತದೃಷ್ಟಿಯಿಂದ ಒಳ್ಳೆಯದು. ನಾಸಿಕ್‌ನಲ್ಲಿ ಈ ವಿಷಯದಲ್ಲಿ ಕೆಲವರು ಪತ್ರಕರ್ತರು ಕ್ರಮ ಕೈಗೊಂಡಿದ್ದಾರೆ. ಅದು ಶ್ಲಾಘನೀಯವಾದುದು. ಈ ವಿಷಯದ ಮಾಹಿತಿ ನಮ್ಮಲ್ಲಿಗೆ ಪ್ರಕಟಣೆಗಾಗಿ ಬಂದುದರಿಂದ, ನಾವದನ್ನು ಬೇರೆಡೆ ಕೊಟ್ಟಿದ್ದೇವೆ.

ಆ ಮಾಹಿತಿಯ ಮೇಲೆ ಮದ್ಯ ಹಾಗೂ ಕಾಮೋತ್ತೇಜಕ ಔಷಧಿ ಸಂಬಂಧಿತ ಜಾಹೀರಾತಿನ ಮೇಲೆ ಸದರಿ ಪತ್ರಕರ್ತರು ಬಹಿಷ್ಕಾರ ಹೇರಲು ನಿರ್ಧರಿಸಿದಂತೆ ಕಂಡು ಬರುತ್ತದೆ. ದೇಶದಲ್ಲಿನ ಬಹಳಷ್ಟು ವರ್ತಮಾನ ಪತ್ರಿಕೆಗಳಲ್ಲಿ ಗಂಡು ಹೆಣ್ಣಿನ ಪರಸ್ಪರ ಪ್ರಕಟಣೆ ಪ್ರಕಟಿಸಲ್ಪಡುತ್ತದೆ. ಕೆಲವು ಪತ್ರಿಕೆಗಳಲ್ಲಿ ಇಂತಹ ಪ್ರಕಟಣೆಯೊಡನೆ ಇತರ ವರದಿ ಕೇವಲ ಹೆಸರಿಗಾಗಿ ಅಷ್ಟೇ ಇದೆ. ಇಂತಹ ಪ್ರಕಟಣೆಯಲ್ಲೇ ಕೆಲವೊಮ್ಮೆ ಇರುವ ಅಶ್ಲೀಲ ವರದಿಯೂ ಪ್ರಕಟಿಸಲ್ಪಡದಂತೆ ವ್ಯವಸ್ಥೆ ಆಗಬೇಕಿದೆ.

* * * *

## ೫೭. ಸರ್ಪದಲ್ಲಿ ಸಮಗಾರನಿದ್ದಾನೋ ಅಥವಾ ಮನುಷ್ಯರಲ್ಲಿ ಸರ್ಪವಿದೆಯೋ?

೧೯೨೯ ಜೂನ್ ೩ರ ಸೋಮವಾರ ರಾತ್ರಿ ೮ ಗಂಟೆಯ ಸುಮಾರಿಗೆ ಪೇಣ್ ನ ಮಹಾರ್‌ವಾಡೆಯ ಪಿತ್ಯಾ ಮಹಾದೂ ಎಂಬ ಮಹಾರ್ ಯುವಕ ಪ್ರಜ್ಞಾಹೀನ ಸ್ಥಿತಿಯಲ್ಲಿ ಚಿಕಿತ್ಸೆಗೆಂದು ದವಾಖಾನೆಗೆ ತರಲ್ಪಟ್ಟಿದ್ದ. ಡಾ. ಕಾರ್ಣಿಕ್ ಅವರು ಆತನಿಗೆ ಚಿಕಿತ್ಸೆ ನೀಡಲು ಆರಂಭಿಸಿದಾಗ ಆತನಿಗೆ ಫಿಟ್ಸ್ ಬರಲಾರಂಭವಾಯ್ತು. ಡಾಕ್ಟರು ಪೊಲೀಸರಿಗೆ ಹೇಳಿ ಕಳುಹಿದರು. ಆತ ಬಂದು ರೋಗಿಯ ಸ್ಥಿತಿಯನ್ನು ಕಂಡೊಡನೆ, ಸರ್ಪದಂತಹ ವಿಷಜಂತುವೇನೋ ಕಚ್ಚಿರಬೇಕೆಂದು ಅನುಮಾನಿಸಿದರು. ಅಲ್ಲಿನ ಸರ್ಪಮಾಂತ್ರಿಕ ಶ್ರೀ ವಾಸುದೇವಶಾಸ್ತ್ರಿ ಜೋಶಿ ವೈದ್ಯರಿಗೆ ಹೇಳಿ ಕಳುಹಿದ, ಹಾಗೂ ಇನ್ನೋರ್ವ ಸರ್ಪಮಾಂತ್ರಿಕ ಶ್ರೀ ವಿಷ್ಣುಪಂತ್ ಓಕ್ ಅವರಲ್ಲಿಗೆ ಪಿತ್ಯಾನನ್ನು ಕಳುಹಿದ. ಡಾ. ಕಾರ್ಣಿಕ್ ಅವರು ಇದೇ ಜಿಜ್ಞಾಸೆಯಲ್ಲಿ ಅಲ್ಲಿಗೆ ಹೋದರು. ಅಲ್ಲಿ ಶ್ರೀ ಓಕ್ ಅವರು ಮಂತ್ರಜಲ ಪ್ರೋಕ್ಷಿಸಿ ವಿಷಹರಣದ ಪ್ರಯೋಗ ಮಾಡಿದರು. ಸರ್ಪ ಮೈಯಲ್ಲಿ ಬಂದು, ಆತ ತಾನು ಚಮ್ಮಾರ ಜಾತಿಯವನೆಂದು ಹೇಳಿ, ಉಳಿದಂತೆ ಪ್ರಮಾಣ ಮಾಡಿ ಹೊರಟು ಹೋದ, ಶ್ರೀ ವಾಸುದೇವ ಶಾಸ್ತ್ರಿ ಅವರು ದವಾಖಾನೆ ತಲುಪಿ ಓಕ್ ಬಳಿಗೆ ಹೋದಾಗ, ಆತ ಚೇತರಿಸಿಕೊಂಡು ಮನೆಗೆ ಹೊರಟಿದ್ದ. ಮತ್ತೆ ಸ್ವಲ್ಪ ಹೊತ್ತಿನಲ್ಲಿ ಶಾಸ್ತ್ರೀ ಬುವಾ ತನ್ನ ಮನೆ ತಲುಪಿದಾಗ, ಅಲ್ಲಿ ಮನಃ ಪಿತ್ಯಾನನ್ನು ಮೂರ್ಛಾವಸ್ಥೆಯಲ್ಲಿ ಕಂಡು ಅವರಿಗೆ ವಿಚಿತ್ರವೆನಿಸಿತು. ವಿಚಾರಿಸಿದಾಗ, ಪಿತ್ಯಾ ಮನೆ ತಲುಪುವಷ್ಟರಲ್ಲಿ ಪುನಃ , ಮೈ ಮೇಲೆ ಬಂದಂತೆ ಸೆಳೆತ ಬಂದ ಕಾರಣ. ಇದೀಗ ಅವರ ಬಳಿಗೆ ಅದನ್ನಿಳಿಸಲೆಂದು ಕರೆತಂದಿದ್ದರು. ಮಂತ್ರಜಲ ಪ್ರೋಕ್ಷಣೆ ಆರಂಭವಾಯ್ತು. ಡಾ. ಕಾರ್ಣಿಕ್, ಸ್ವತಃ ನಿರೋಪ ಕಳುಹಿಸಿ ಮಾತನಾಡಿಸಿದರು.

ಮಂತ್ರಜಲ ಪ್ರೋಕ್ಷಣೆ ಆರಂಭಿಸಿದೊಡನೆ, ಕಚ್ಚಿಸಿಕೊಂಡಾತನ ದೇಹದಲ್ಲಿ ಸರ್ಪಸಂಚಾರ ಆರಂಭವಾಗಿ ರೋಷದಿಂದ ಭುಸುಗುಡತೊಡಗಿತು. ಈ ರೋಷದಲ್ಲಿ ಎಲ್ಲಾದರೂ ಆತ ಮಾಂತ್ರಿಕನನ್ನು ಕಚ್ಚಿದರೆ, ಆ ಮಾಂತ್ರಿಕ ಸಾಯುವುದು ನಿಶ್ಚಿತ; ಆದ್ದರಿಂದ ಆಗ ಆತನನ್ನು ಎಚ್ಚರದಿಂದ ಕಟ್ಟಿಯೇ ಇಡಬೇಕಾಗುತ್ತದೆ. ಮಂತ್ರ ಜಲ ಪ್ರೋಕ್ಷಣೆಯಿಂದ ಪಿಠಾನ ದೇಹದಲ್ಲಿ ಎಷ್ಟೊಂದು ರೋಷ ಒಕ್ಕಿತೆಂದರೆ, ಅವನನ್ನು ಹಿಡಿದಿಡಲು ೧೦-೧೨ ಮಂದಿಯೇ ಬೇಕಾಯ್ತು. ಸರ್ಪದ ಆವಾಹನೆ ಆದ ಬಳಿಕ ಪ್ರಶೋತ್ತರ ಆರಂಭವಾಯ್ತು ;

೧ ನೀನು ಯಾಕೆ ಕಚ್ಚಿದೆ?

ಬಳ್ಳಿ ಸೆಳೆವಾಗ ನನಗೆ ತಾಕಿತೆಂದೇ ಕಚ್ಚಿದೆ.

೨ ಈಗ ಎಲ್ಲಿರುವೆ?

ಕಾಡಿನಲ್ಲಿ ಇದ್ದೇನೆ.

೩ ನಿನ್ನ ಜಾತಿ ಯಾವುದು?

ಚಮ್ಮಾರ.



೪ ಆಗಷ್ಟೇ ನಿನಗೆ ಮಂತ್ರಜಲ ಪ್ರೋಕ್ಷಿಸಿ, ನೀನು ಶಪಥಗೈದು ಹೋದುದೂ ಆಯ್ತು, ಮತ್ತೆ ಈಗ ಪುನಃ ಏಕೆ ಬಂದೆ?

ನಾನು ಶಪಥಗೈದು ಅವರನ್ನು ವಂಚಿಸಿದೆ.

೫ ಮತ್ತೆ ಈಗ ಹೋಗುತ್ತೀಯೋ ಇಲ್ಲವೋ? ಪುನಃ ನನ್ನನ್ನೂ ಮೋಸಮಾಡ್ತೀಯಾ

ಇಲ್ಲ; ಈಗ ಖಂಡಿತ ಹೋಗೇನೆ.

೬ ನೀನು ಜಾತಿಯಲ್ಲಿ ಚಮಾರ; ಹಾಗಾದರೆ, ನೀನು ಪಾದರಕ್ಷೆಯ ಶಪಥ ತೆಗೆದು ಕೊಳ್ಳಬೇಕು.

ತೆಗೆದುಕೊಳ್ಳುವೆ ; ನೀವು ಹೇಳಿದಂತೆ ತೆಗೆದುಕೊಳ್ಳುವೆ.

೭ ಆಗ ನೀನು ಪಾದರಕ್ಷೆಯನ್ನು ಕೈಯಲ್ಲಿ ತೆಗೆದುಕೊಂಡು ಶಪಥ ಮಾಡಿದೆ, ಮತ್ತದನ್ನು ಮುರಿದೆ; ಈಗ ನೀನು ಪಾದರಕ್ಷೆಯನ್ನು ಬಾಯಲ್ಲಿ ತೆಗೆದುಕೊಂಡು ಶಪಥ ಮಾಡಬೇಕು.

"ಹಾಗೇ ಮಾಡುವೆ." ಎನ್ನುತ್ತಾ ಆತ ತನ್ನ ಬಾಯಿಯಲ್ಲಿ ಚಪ್ಪಲಿಯನ್ನೆತ್ತಿಕೊಂಡು, ಮಾಂತ್ರಿಕ ಹೇಳಿದಂತೆ "ಹೋಗುತ್ತೇನೆ, ಹೋಗುತ್ತೇನೆ" ಎಂದು ನಿಲ್ಲದೆ ಒಂದೇ ಉಸಿರಿನಿಂದ ಹೇಳುತ್ತಾ ನೆಲಕ್ಕೆ ತಲೆಯಿಟ್ಟು ಕ್ರಮದಂತೆ ಶಪಥ ಪೂರೈಸಿದನು. ಅಷ್ಟಾಗಿ ಆತ ಪ್ರಜ್ಞೆಗೆ ಬಂದು, ಮಂತ್ರಜಲ ಕುಡಿದು, ಸ್ವಂತ ಕಾಲ್ಗಳಲ್ಲೇ ನಡೆದು ಮಹಾರ್‌ವಾಡೆಯ ತನ್ನ ಮನೆಗೆ ಹೋದ. ಇಂದಿಗೂ ಅವನು ಕ್ಷೇಮವಾಗಿದ್ದು, ಕೆಲಸ ಕಾರ್ಯದಲ್ಲಿ ತೊಡಗಿದ್ದಾನೆ.

ಇಲ್ಲಿ ಸರಕಾರೀ ವೈದ್ಯ ಡಾ. ಕಾರ್ಣಿಕ್ ಅವರು, ನಡೆದುದೆಲ್ಲವನ್ನೂ ಪ್ರತ್ಯಕ್ಷ ನೋಡಿದುದರಿಂದ, ಆತ ದಾಖಲಿಸಿದ ವಿವರವನ್ನೇ ನಾವು ಪ್ರಕಟಿಸುತ್ತಿರುವುದರಿಂದ, ಅದು ನಿಜವೋ ಎಂಬ ಸಂಶಯಕ್ಕೆ ಇಲ್ಲಿ ಸ್ಥಳವಿಲ್ಲ.

ಹಾಗೆಂದೇ ಮಂತ್ರಶಾಸ್ತ್ರದಲ್ಲಿ ಅವಿಶ್ವಾಸವಿರುವವರು, ತಾವೆಲ್ಲಿ ತಪ್ಪಿದ್ದೇವೆಂದು ತಿಳಿಯಲು ಈ ಘಟನೆಯ ವಿವರ ಉಪಯುಕ್ತವಾಗುವುದೆಂದು ನಮಗೆ ಭರವಸೆಯಿದೆ. ಮನುಷ್ಯರ ಮಧ್ಯೆ ಜಾತಿ ಭೇದವನ್ನು ಖಂಡಿಸ ಹೊರಟಿರುವ ಸತ್ಯ ಸಮಾಜದವರಿಗೆ,ಇಲ್ಲವೇ ಜಾತಿಪಾತಿ ಮುರಿವವರಿಗೆ ತಲೆ ಬಡಿದುಕೊಳ್ಳಲು ಪ್ರಾಣಿವರ್ಗದಲ್ಲೇ ಜಾತಿಭೇದ ಇದೆಯೆಂಬ ಈ ಸತ್ಯದಿಂದ, ಅದನ್ನು ಹೇಗೆ ಕಡಿದೊಗೆಯುವುದೆಂಬ ಹೊಸ ಚಿಂತೆ ಹುಟ್ಟಿಕೊಳ್ಳದಿದ್ದರೆ ಸಾಕು

.

"ಕೋಲಾಬಾ ಸಮಾಚಾರ'

ಸರ್ಪದಲ್ಲಿ ಚಮ್ಮಾsರನಿದ್ದಾನೋ, ಇಲ್ಲಾ, ಮನುಷ್ಯನಲ್ಲಿ ಸರ್ಪವಿದೆಯೋ?

ಇಂತಹ ಉಕ್ತ ಘಟನೆಗಳನ್ನು ಕೆಲ ಜನರು ಆಗಾಗ ಪ್ರಚಾರಕ್ಕೆ ತರುತ್ತಾರೆ, ಮತ್ತು ಅದರಿಂದ ಜನಸಾಮಾನ್ಯರ ಮನದಲ್ಲಿ ಉತ್ಪನ್ನವಾಗುವ ಭ್ರಮೆಯು ಕ್ರಮೇಣ ದೃಢವಾಗುತ್ತಾ ಬರುತ್ತದೆ. ಉಕ್ತ ಘಟನೆಯಿಂದ ಪಿತ್ಯಾ ಮಹಾರ್‌ನಿಗೆ ಸರ್ಪ ಕಚ್ಚಿದ ಮಾಹಿತಿ ಹಾಗೂ, ಅಂತಹ ಸಂಶಯ ಮೊದಲು ಯಾರಿಗೂ ಇಲ್ಲದಿದ್ದರೂ, ಸ್ವತಃ ಪಿತ್ಯಾನಿಗೂ ತನಗೆ ಸರ್ಪ ಕಚ್ಚಿದ ಖಾತರಿ ಇರಲಿಲ್ಲ. ಅವನನ್ನು ದವಾಖಾನೆಗೆ ತಲುಪಿಸಿದವರಿಗೂ ಆ ಮಾಹಿತಿ ಇರಲಿಲ್ಲ. ಅಲ್ಲದೆ, ಡಾಕ್ಟರು ಅವನಿಗೆ ಸರಿಯಾದ ಚಿಕಿತ್ಸೆ ಮಾಡಿರಲಿಲ್ಲ. ಡಾ. ಕಾರ್ಣಿಕ್ ಅವರು ಪಿಠ್ಯಾನಿಗೆ ಸರ್ಪ ಕಚ್ಚಿದಕ್ಕೆ ಅವನನ್ನು ಮಾಂತ್ರಿಕನ ಬಳಿಗೆ ಕಳುಹುವ ಮುನ್ನ ಸ್ವತಃ ಖಚಿತಪಡಿಸಿಕೊಂಡಿರಲಿಲ್ಲ, ಎಂದೇ ಹೇಳಬೇಕಾಗುತ್ತದೆ.

ಸರ್ಪ ಕಡಿತ ಪೂರ್ಣ ಪ್ರಮಾಣದಲ್ಲಿ ಆಗಿರದೆ, ಮನುಷ್ಯದೇಹದಲ್ಲಿ ಪೂರ್ಣವಿಷ ಇಳಿದಿರದಿದ್ದರೆ, ಆ ವಿಷದಿಂದ ಪ್ರಾಣಘಾತಕ ಪರಿಣಾಮವೇನೂ ಆಗುವುದಿಲ್ಲ, ಮತ್ತು ವಿಷ ಕಳೆಯುವ ಶ್ರೇಯ



ಮಾಂತ್ರಿಕನಿಗೋ, ವೈದ್ಯನಿಗೋ ಹೋಗುತ್ತದೆ. ಪಿಠ್ಯಾನಿಗೆ ಸರ್ಪದಂಶನ ಪೂರ್ಣ ಪ್ರಮಾಣದಲ್ಲಿ ಆಗಿತ್ತೇ, ಇಲ್ಲಾ ಆತನ ದೇಹದಲ್ಲಿ ವಿಷ ಅಪೂರ್ಣವಾಗಿ ಹರಿದಿತ್ತೇ, ಅಥವಾ ಸರ್ಪ ಕಡಿದಿರದೇ ಇದ್ದು, ಮನದ ಭಾವನೆ ಹಾಗೂ

ಭೀತಿಯೇ ವಿಷಬಾಧೆಯ ಲಕ್ಷಣವನ್ನು ತೋರಿತೇ, ಏನೆಂದು ಯಾರೂ ಖಚಿತ ಪಡಿಸಿಕೊಂಡಿರಲಿಲ್ಲ. ಅಪೂರ್ಣ ವಿಷದ ಪರಿಣಾಮ ತನ್ನಷ್ಟಕ್ಕೇ ಕೆಲ ಹೊತ್ತಿನಲ್ಲಿ ಕಮ್ಮಿಯಾಗಬಲ್ಲುದು, ಮತ್ತು ಭಾವನೆಯ ಪರಿಣಾಮವಿದ್ದರೆ, ಮಾಂತ್ರಿಕನಿಗೆ ಪುಕ್ಕಟೆ ಶ್ರೇಯ ಲಭಿಸುವುದು, ಎಂಬುದನ್ನು ಮರೆಯಬಾರದು. ಈ ವಿಷಯದಲ್ಲಿ ಪರೇಲ್‌ನ ಲ್ಯಾಬೊರೆಟ್ರಿಯಲ್ಲಿ ಮತ್ತು ಇತರೆಡೆ ಸಂಶೋಧನಾ ಕ್ಷೇತ್ರದ ಡಾಕ್ಟರ್‌ಗಳು ಮಾಡಿರುವ ಪ್ರಯೋಗಗಳಲ್ಲಿ, ಸರ್ಪದ ವಿಷವು ಪೂರ್ಣವಾಗಿ ದೇಹದಲ್ಲಿಳಿದರೆ ಅದನ್ನಿಳಿಸುವ ಮಾಂತ್ರಿಕನಾರೂ ಇನ್ನೂ ಸಿಕ್ಕಿಲ್ಲ

.

ಮಾಂತ್ರಿಕನ ಮಂತ್ರದಿಂದ ಪಿಠ್ಯಾನ ದೇಹದಲ್ಲಿ, ಅವನನ್ನು ಕಚ್ಚಿದ ಸರ್ಪದ ಗಾಳಿ ಬಂದು, ತನ್ನ ಬಗ್ಗೆ ನುಡಿಯಿತು, ಎಂಬುದು ಎಷ್ಟು ಸತ್ಯವೆಂಬುದರ ಬಗ್ಗೆ ಯೋಚಿಸಿದರೆ, ಯಾರಿಗಾದರೂ ಸಂಶಯವಾದೀತು. ಶ್ರದ್ಧಾವಂತನಾದ ಆತ, ತನ್ನ ದೇಹದಲ್ಲಿ ಸರ್ಪದ ಗಾಳಿ ಸುಳಿದಿದೆಯೆಂದು ನಂಬಿ, ಉತ್ತರಿಸುವುದು ಅಸಾಧ್ಯವಲ್ಲ, ಆದರೆ ಅದನ್ನು ಎಷ್ಟು ನಂಬಬಹುದೆಂಬುದೇ ಪ್ರಶ್ನೆ. ಸರ್ಪದ ಆವಾಹನೆಯಾಗಿ ಮಾತನಾಡುವ ಅದೇ ಹೊತ್ತಿನಲ್ಲಿ ಆತನ ಹೇಳಿಕೆಯಂತೆ ಸರ್ಪವು ಕಾಡಿನಲ್ಲಿ ಜೀವಂತವಿತ್ತು. ಸರ್ಪಕ್ಕೇನು ಎರಡು ಆತ್ಮವಿದೆಯೇ? ಹಾಗಿಲ್ಲದೆ, ಒಂದೇ ವೇಳೆ ಎರಡೂ ಕಡೆ ಇರುವುದು ಹೇಗೆ ಸಾಧ್ಯ? ಸರ್ಪಕ್ಕೇನು ಪರಕಾಯ ಪ್ರವೇಶದ ಯೋಗವಿದ್ಯೆಯ ಅರಿವಿದೆಯೇ? ಜೀವಂತ ಮನುಷ್ಯನ ಆತ್ಮವನ್ನು ಯಾರ ದೇಹದಲ್ಲೂ ತರಲಾಗದಿರುವಾಗ, ಜೀವಂತ ಸರ್ಪದ ಆತ್ಮವನ್ನು ಹಾಗೆ ತರುವುದೆಂತು?

ಸರ್ಪವು ತಾನು ಜಾತಿಯಲ್ಲಿ ಚಮ್ಮಾರನೆಂದಿತು. ಚಮ್ಮಾರನಾಗುವುದು ಕುಲಕಸುಬಿನಿಂದ. ಯಾವುದೋ ಒಂದು ಸ್ವಭಾವದಿಂದ ಜಾತಿ ಹುಟ್ಟುವುದಿಲ್ಲ. ಇತರ ಜಾತಿಗಳಂತೆಯೇ ಚಮ್ಮಾರರಲ್ಲೂ ಸುಮವ್ವರಿರುತ್ತಾರೆ. ಮನುಷ್ಯ ಸಮಾಜದಲ್ಲಿ ಚಮ್ಮಾರರದು ಉಪಯುಕ್ತ ವೃತ್ತಿಯೇ ಆಗಿದೆ.

ಆದರೆ, ಸರ್ಪಕ್ಕೆ ಅದರಿಂದ ಪ್ರಯೋಜನವೇನು? ಕಾಲ್ಗಳೇ ಇಲ್ಲದ ಮೇಲೆ ಸರ್ಪಗಳು ಬೂಟು, ಮೆಟ್ಟು ಹೇಗೆ ಉಪಯೋಗಿಸಿಯಾವು? ಸರ್ಪಗಳಲ್ಲಿ ಇಲ್ಲದ ಜಾತಿಯೆಂದರೆ ಚಮ್ಮಾರನದೇ ಸರಿ. ಮನುಷ್ಯನಂತೆ ಸರ್ಪಕ್ಕೆ ಜಾತಿಯಿದ್ದಿದ್ದರೆ, ಅದು ಹೊಟ್ಟೆ ಜಾತಿಯೇ ಯಾಕಲ್ಲ? ಕೆಲವು ಸರ್ಪಗಳು "ಕುಲಾಬಾ ಸಮಾಚಾರ'ಕರ್ತರ ಜಾತಿಯವಾದರೆ, ಮತ್ತೆ ಕೆಲವು ಸುದರ್ಶನಕಾರರ ಜಾತಿಯದ್ದು; ಇನ್ನು ಕೆಲವು ಭಾಲಾಕಾರರ ಜಾತಿಯದ್ದು ಆಗಿರುವ ಸಂಭವವಿದೆ. ಅದೇರೀತಿ ಅವು ಆಹಾರದ ನಿರ್ಬಂಧವನ್ನೂ ಪಾಲಿಸುತ್ತಿರಬಹುದು. ಮೊಟ್ಟೆ, ಕಪ್ಪೆಗಳನ್ನು ತಿನ್ನದ ಬ್ರಾಹ್ಮಣ ಸರ್ಪಗಳು, ಸುದರ್ಶನಕಾರರ ಜಾತಿಬಂಧು ಸರ್ಪಗಳು ನೀರಲ್ಲಿ ಸುತ್ತುತ್ತ, ಎಂದಾದರೊಮ್ಮೆ ಹೆಡೆಯಾಡಿಸುತ್ತಾ ಇರುತ್ತವೆ

.

"ಕೊಲಾಬಾ ಸಮಾಚಾರ'ದಲ್ಲಿ ಪ್ರಕಟವಾದ ಮೇಲಿನ ಘಟನೆಯನ್ನೋದಿ ಸರ್ಪಗಳಂತಹ ಹರಿದಾಡುವ ಪ್ರಾಣಿವರ್ಗದಲ್ಲಿ ಜಾತಿಕ್ರಾಂತಿ ಇದೆಯೆಂದು ನಮಗನಿಸುವುದಿಲ್ಲ. ಆದರೆ, ಆ ಘಟನೆಯ ಸಮಾಚಾರದ ಸಂಪಾದಕೀಯವನ್ನೋದಿ, ಮನುಷ್ಯರಲ್ಲೂ ಇಂತಹ ಸರೀಸೃಪಗಳ ಹಾಗಿರುವ ಜನರಿದ್ದಾರೆ, ಅವರು ತಮ್ಮ ವಿಷಮಯ ವಿಚಾರಗಳಿಂದ ಮುಗ್ಧ ಜನರ ವಿಚಾರಶಕ್ತಿಯನ್ನು ಮೊಟಕುಗೊಳಿಸುವ ಯತ್ನ ಮಾಡುತ್ತಿದ್ದಾರೆ, ಎಂಬುದು ನಮಗೆ ಖಚಿತವಿದೆ.

## ೫೮. ಅಸ್ಪೃಶ್ಯರಿಗೆ ಮಂದಿರ ಪ್ರವೇಶ

**[ಹಿಂದೂ ಸಭೆಯ ಪ್ರಚಾರ ಪತ್ರದಿಂದ]**

ಹಿಂದೂ ಸಭೆಯ ಕಾರ್ಯದ ಪ್ರಚಾರ, ಜಿಲ್ಲೆಯಲ್ಲಿ ತೊಡಗಿದಂದಿನಿಂದ, ಅಸ್ಪೃಶ್ಯ ಬಂಧುಗಳ ವಿಷಯದಲ್ಲಿ ಸ್ಪೃಶ್ಯ ಹಿಂದೂಗಳಿಂದ ಯಾವ ರೀತಿ ಸಹಾನುಭೂತಿ ಉತ್ಪನ್ನವಾಗತೊಡಗಿತೆಂಬುದು ಅಮರಾವತಿ ಜಿಲ್ಲೆಯ ಎಲಿಚ್‌ಪುರದಲ್ಲಿ ಸಾಕಷ್ಟು ಕಂಡು ಬಂದಿದೆ.

ಎಲಿಚ್‌ಪುರದ ಸುಲ್ತಾನ್‌ಪುರದಲ್ಲಿ ಸ್ವಾಮೀ ವಿಮಲಾನಂದರು ಭಿಕ್ಷೆಯಿಂದ ರೂಪಾಯಿ ೮೩,೦೦೦ ಮೊತ್ತ ಸಂಗ್ರಹಿಸಿ, ಅದರಿಂದ ಒಂದು ಸುಂದರ, ಪ್ರೇಕ್ಷಣೀಯ ದತ್ತಮಂದಿರವನ್ನು ಸಾಕಷ್ಟು ದಿನಗಳ ಹಿಂದೆಯೇ

ಕಟ್ಟಿಕೊಟ್ಟಿದ್ದಾರೆ. ಮಂದಿರ ಪ್ರೀತ್ಯರ್ಥ ನೇಮಿಸಲಾದ ಕಮಿಟಿಯ ಸಭಾಸದರು, ಅಸ್ಪೃಶ್ಯರಿಗೆ ಮಂದಿರವನ್ನು ತೆರೆದಿಡಲು ನಿರ್ಧರಿಸಿದ ಆ ಸಂಸ್ಮರಣೀಯ ಪ್ರಸಂಗ, ೩೧ ಜುಲೈ ೧೯೨೯ರಂದು ಶ್ರೀ ಸೇಠ್ ಜಮ್ನಾಲಾಲ್‌ಜೀ ಬಜಾಜ್ ಅವರ ಕೈಯಿಂದ ಸಾಕಾರವಾಯ್ತು.

ಮಾನನೀಯ ಶ್ರೀ ಸೇಠ್ ಜಮ್ನಾಲಾಲ್ ಅವರ ಮೆರವಣಿಗೆಯು ಮಧ್ಯಾಹ್ನ ಹೊರಟು, ಅಸ್ಪೃಶ್ಯರ ಪ್ರವೇಶಕ್ಕಾಗಿ ತೆರೆಯುವ ಮಂದಿರದೆದುರು ಡಾ. ಪಟ್‌ವರ್ಧನ್ ಅವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆದು, ಶ್ರೀ ವಿನೋಬಾಜಿ ಭಾವೆ ಮತ್ತು ಜಮ್ನಾಲಾಲ್‌ಜಿ ಬಜಾಜ್ ಅವರಿಂದ ಸ್ಫೂರ್ತಿದಾಯಕ ಭಾಷಣಗಳು ನಡೆದುವು. ಸಭೆ ಮುಗಿದ ನಂತರ ಜಮ್ನಾಲಾಲ್‌ಜೀ ಅವರ ನೇತೃತ್ವದಲ್ಲಿ ಸರಾಸರಿ ನೂರು ಮಂದಿ ಅಸ್ಪೃಶ್ಯ ಬಂಧುಗಳು ಮಂದಿರ ಪ್ರವೇಶಿಸಿ ಭಕ್ತಿಯುಕ್ತ ಅಂತಃಕರಣದಿಂದ ದೇವರ ದರ್ಶನ ಪಡೆದರು. ಮಂದಿರ ಪ್ರವೇಶಿಸಿ ದೇವರ ದರ್ಶನವಾದ ಬಳಿಕ, ಅಸ್ಪೃಶ್ಯ ಬಂಧುಗಳ ಮುಖದಿಂದ, ಹಿಂದೂಧರ್ಮದಲ್ಲಿ ನಿಷ್ಠೆ ವ್ಯಕ್ತಪಡಿಸುವ, “ಹಿಂದೂ ಧರ್ಮಕ್ಕೆ ಜಯ !” ಎಂಬ ಗಗನಭೇದಿ ಉದ್ಘೋಷ ಹೊರಟಿತು.

ಸಾಯಂಕಾಲ ಸ್ಥಳೀಯ ಹಿಂದೂಗಳು ಸಭೆ ಸೇರಿ, ನಾಗರಿಕರು ಮಾನನೀಯ ಜಮ್ನಾಲಾಲ್‌ಜಿ ಅವರಿಗೆ ಮಾನಪತ್ರ ಅರ್ಪಿಸಿ, ಸಹಾನುಭೂತಿ ವ್ಯಕ್ತಪಡಿಸಿದರು. ಅಲ್ಲಿ ಶ್ರೀ ದಾಸ್ತಾನೇ ವಕೀಲ್, ಶ್ರೀ ಸತ್ಯದೇವ ವಿದ್ಯಾಲಂಕಾರ, ಡಾ. ಭೋಜರಾಜ್, ಡಾ.ಸಬನೀಸ್ ಮುಂತಾದವರು ಹಾಜರಿದ್ದರು.

ಜಿಲ್ಲೆಯ ಪ್ರತಿ ತಾಲೂಕಿನಲ್ಲೂ ಹಿಂದೂಸಭಾಪ್ರೇಮಿ ಜನರು, ಅಸ್ಪೃಶ್ಯ ಬಂಧುಗಳಿಗಾಗಿ ಒಂದಾದರೂ ದೇವಳ ತೆರೆದಿಡಲು ನಿರ್ಧರಿಸಿದರೆ, ಅಮರಾವತಿ ಜಿಲ್ಲೆಯಲ್ಲಿ ಅಸ್ಪೃಶ್ಯತೆ ನಶಿಸಿ ಹೋಗಲು ಎಷ್ಟು ಕಾಲ ಬೇಕು? ಈ ಪ್ರಸಂಗದಲ್ಲಿ ಶ್ರೀಸ್ವಾಮಿ ವಿಮಲಾನಂದರೂ, ದೇವಳದ ಕಮಿಟಿಯ ಸದಸ್ಯರೂ ತೋರಿದ ಔದಾರ್ಯಕ್ಕೆ ಅವರನ್ನು ಯಾರು ತಾನೇ ಅಭಿನಂದಿಸದಿರುವರು!

ಮುಂಬಯಿಯ ಹಿಂದೂಮಹಾಸಭೆಯ ಜನರು ತಮ್ಮ ಬಡಬಡಿಸುವಿಕೆ ಬಿಟ್ಟುಕೊಟ್ಟು, ಅಸ್ಪೃಶ್ಯತಾ ನಿವಾರಣೆಯ ಕಾರ್ಯದಲ್ಲಿ ಮನಃಪೂರ್ವಕವಾಗಿ ತೊಡಗಿಕೊಂಡರೆ, ಮುಂಬಯಿಯಲ್ಲೂ ದೇವಳ ಪ್ರವೇಶ ತಡವಾಗುವುದಿಲ್ಲ. ಆದರೆ, ಅಸ್ಪೃಶ್ಯತಾ ನಿವಾರಣೆಯ ಇಚ್ಛೆ ಅವರ ಮನದಿಂದ

ಹುಟ್ಟಿಕೊಂಡುದಲ್ಲ. ಬಾಯಿವಕೀಲಿ ಮಾಡುತ್ತಾ, ಹಿರಿತನದಿಂದ ಅಸ್ಪೃಶ್ಯತಾ ನಿವಾರಣೆಯ ಡಂಗೂರ ಬಾರಿಸುತ್ತಿರುವುದೇ ಅವರ ಕೆಲಸ. ಅಸ್ಪೃಶ್ಯ ವರ್ಗದಲ್ಲಿ ಒಂದುವೇಳೆ ಚಮ್ಮಾರ, ಮಹಾರ ಮುಂತಾದವರಿಗೆ ತಮ್ಮ ಪ್ರತಿಷ್ಠೆ ಮೆರೆಸಲು ಸಿಗದಿದ್ದರೆ, ತಕ್ಕಂತೆ ಬೇರೇನಾದರೂ ಮಾಡಿ ತೋರಬೇಕು. ಇಚ್ಛೆ ಇದ್ದರೆ ಮಾರ್ಗ ಗೋಚರಿಸುತ್ತದೆ. ಸಭೆಯಲ್ಲಿ ಅಂಗೀಕೃತವಾಗುವ ಕಾಗದದ ನಿರ್ಣಯದಿಂದ ಕೆಲಸವಾಗುವುದಿಲ್ಲ. ಇನ್ನು ಮುಂದಾದರೂ, ಮುಂಬಯಿಯ ಹಿಂದೂ ಮಹಾಸಭೆಯವರು ಮನಃಪೂರ್ವಕವಾಗಿ ಕೆಲಸದಲ್ಲಿ ತೊಡಗುವರು ಮತ್ತು “ನುಡಿದಂತೆ ನಡೆ” ಎಂಬ ಉಕ್ತಿಯ ಸತ್ಯತೆಯನ್ನು ಮನಗಾಣುವರೇನು?

* * * *

## ೫೯. ನಮ್ಮ ಕೈಫಿಯತ್ತು

ಈ ಜಗತ್ತಿನಲ್ಲಿ ಎಲ್ಲರಿಗೂ ಸಮಾಧಾನ ಪಡಿಸುವುದು ಯಾರಿಂದಲೂ ಶಕ್ಯವಿಲ್ಲ. ಎಲ್ಲರನ್ನೂ ಸಮಾಧಾನ ಪಡಿಸಲು ನೋಡುವವರ ಕೈಯಲ್ಲಿ ಏನನ್ನೂ ಸಾಧಿಸಲಾಗುವುದಿಲ್ಲ. ಹಾಗೆಯೇ ಈ ಜಗತ್ತಿನಲ್ಲಿ ಅಜಾತಶತ್ರು ಯಾರೂ

ಇಲ್ಲ. ಧರ್ಮರಾಜ ಯುಧಿಷ್ಠಿರನನ್ನು ಅಜಾತಶತ್ರು ಎನ್ನಲಾಗಿದೆ. ಧರ್ಮರಾಜ ಸ್ವತಃ ಯಾರ ಶತ್ರುತ್ವವನ್ನೂ ಕಟ್ಟಿಕೊಳ್ಳುತ್ತಿರಲಿಲ್ಲ. ಆ ದೃಷ್ಟಿಯಿಂದ ಅವನು ಅಜಾತಶತ್ರುವಾದ.

.

ಆದರೆ ಅವನೊಂದಿಗೂ ಶತ್ರುತ್ವ ಮಾಡುವ, ದುರ್ಯೋಧನನಂತಹ ಅವನ ಬಂಧುಬಾಂಧವರಿದ್ದರು. ಸಾರ್ವಜನಿಕ ಕೆಲಸಕಾರ್ಯಗಳಲ್ಲಿ ತೊಡಗುವವರು ಎಲ್ಲರನ್ನೂ ಸಮಾಧಾನ ಪಡಿಸುವುದು ಅಶಕ್ಯ, ಯಾರಾದರೊಬ್ಬ ಸಾಮಾಜಿಕ ಕಾರ್ಯಕರ್ತ ಜನಸಮೂಹದ ವ್ಯಾಖ್ಯೆಗೈದು ಎಲ್ಲರನ್ನೂ ಸಮಾಧಾನ ಪಡಿಸಲು ಹೊರಟನೆಂದರೆ, ಮೇಲೆ ಹೇಳಿದಂತೆ ಏನು ಮಾಡಲೂ ಅಶಕ್ಯನಾಗುವುದಷ್ಟೇ ಅಲ್ಲ, ಬದಲಿಗೆ ತನ್ನ ತತ್ವನಿಷ್ಠೆ ತ್ಯಜಿಸಬೇಕಾಗಿ ಬರುವುದು. ನಾವು ಸಾರ್ವಜನಿಕ ಕಾರ್ಯಕ್ಕೆ ಇಳಿದಾಗ, ನಮ್ಮ ಮೇಲೆ ಯಾವುದೇ ಟೀಕೆ ಬರಬಾರದೆಂಬ ಅಪೇಕ್ಷೆ ನಮ್ಮಲ್ಲಿ ಇನಿತೂ ಇರಲಿಲ್ಲ. ಎಲ್ಲಾದರೂ ಆ ವೇಳೆ ಸಾರ್ವಜನಿಕ ಆಯುಕ್ರಮದ ಸಮಹಾಸಾಗರದಲ್ಲಿ ಅಡಕವಾಗಿರುವ ಪ್ರವಾಹಗಳು ಮತ್ತು ಒಳಸುಳಿಗಳ ಬಗ್ಗೆ ನಮಗೆ ಸಾಕಷ್ಟು ಕಲ್ಪನೆ ಇರದಿದ್ದರೂ, ಇಂದಿನಂತೆ ಅಂದೂ ನಾವು ಆಶಾವಾದಿಯೇ ಆಗಿದ್ದರೂ, ಸಾರ್ವಜನಿಕ ಆಯುಃಕ್ರಮವೆಂದರೆ ಒಂದು ರೀತಿಯ ರಣಾಂಗಣದಂತೆ. ಅಲ್ಲಿ ಪ್ರತಿಪಕ್ಷಕ್ಕೆ ಸಮನಾಗಿ ಎರಡು ವಿಭಾಗ ಮಾಡಿದರೆ, ಒಂದರಲ್ಲಿ ಮಿತ್ರರಾದವರು ಇನ್ನೊಂದರಲ್ಲಿ ಶತ್ರುಗಳಾಗುವ ಸಂಭವ ಇದೆಯೆಂಬುದನ್ನು ನಾವು ಸಂಪೂರ್ಣ ತಿಳಿದಿದ್ದೇವೆ. ಅರ್ಥಾತ್, ನಮ್ಮ ಬಗ್ಗೆ ವಿಭಿನ್ನ ಪಕ್ಷದ ಜನರಿಂದ ವಿಭಿನ್ನ ಪ್ರಸಂಗಗಳಲ್ಲಿ ನಡೆವ ಟೀಕೆಯ ಬಗ್ಗೆ ನಮಗೆ ಆಶ್ಚರ್ಯವೆನಿಸುವುದಿಲ್ಲ. ನಾವು ಅಂಗೀಕರಿಸಿದ ತತ್ವದ ಮೇಲೆ ನಮಗೆ ಪೂರ್ಣ ವಿಶ್ವಾಸವಿದೆ. ನಮ್ಮ ಉದ್ದೇಶದ ಪಾವಿತ್ರ್ಯದ ಬಗ್ಗೆ ನಮಗೆ ಖಾತ್ರಿಯಿದೆ. ಹಾಗೆಂದೇ ನಮ್ಮ ಮೇಲಾಗುತ್ತಿರುವ ಟೀಕೆ ನಮ್ಮನ್ನು ಚಿಂತೆಗೀಡು ಮಾಡುವುದಿಲ್ಲ. ಪ್ರತಿಕೂಲ ಪರಿಸ್ಥಿತಿಯಲ್ಲಿ ನಿರಾಶೆಯ ಮುಸುಕು ಆಗಾಗ ಮನವನ್ನು ಕವಿಯುತ್ತದೆ, ಆದರೆ ಹಾಗೆ ಕವಿದಿರಲು ನಾವು ಬಿಡುವುದಿಲ್ಲ. ನಮ್ಮ ಕೈಯಿಂದ ತಪ್ಪು ಆಗುವುದಿಲ್ಲವೆಂದು ನಾವು ಹೇಳುತ್ತಿಲ್ಲ, ಯಾರಾದರೂ ಪ್ರಾಮಾಣಿಕವಾಗಿ ನಮ್ಮ ತಪ್ಪನ್ನು ತೋರಿದರೆ ಅದರಿಂದ ನಮಗೆ ಇನಿತೂ ವಿಷಾದವೆನಿಸುವುದಿಲ್ಲ. ಬದಲಿಗೆ, ಅಂತಹವರಿಗೆ ಕೃತಜ್ಞತೆ ಸಲ್ಲಿಸಿ, ಅವರ ಮಾತನ್ನು ಪರಾಮರ್ಶಿಸಲು ಸದಾ ಸಿದ್ಧ ! ಮನುಷ್ಯ ಸಮಾಜದಲ್ಲಿ ಎಲ್ಲವನ್ನೂ ಅರಿತವರು ಹಾಗೂ ಅಸ್ಖಲನಶೀಲರಾದವರು ಯಾರಿದ್ದಾರೆ? ಟೀಕಾಕಾರರನ್ನು ಹಲವು ವರ್ಗಗಳಾಗಿ ವಿಂಗಡಿಸಬಹುದು. ಕೆಲವರು ಸಾರ್ವಜನಿಕ ಮತಭೇದದ ಕಾರಣ ನಮ್ಮ ಮೇಲೆ ಹಲ್ಲೆ ಮಾಡುವವರಾದರೆ, ಇನ್ನು ಹಲವರು ವೈಯುಕ್ತಿಕ ದ್ವೇಷದಿಂದ ಪ್ರೇರಿತರಾಗಿ ಆಘಾತಿಸುವವರು. ಅಸ್ಪೃಶ್ಯತಾ ನಿವಾರಣೆಯ ಉದ್ದೇಶ ಯಾರಿಗೆ ಮಾನ್ಯವೋ,

ಅಂಥವರಲ್ಲಿ ಕೆಲವರಿಗೆ ನಾವು ತುಂಬ ತೀಕ್ಷ್ಣವೆಂದು ಅನಿಸುವುದರಿಂದ ಅವರು ನಮ್ಮ ಮೇಲೆ ಮುಗಿಬಿದ್ದರೆ, ಇನ್ನು ಕೆಲವರು ನಮ್ಮದು ಮೃದು ನಿಲುವೆಂದು ತಿಳಿದು ನಮಗೆದುರಾಗಿ ನಿಲ್ಲುತ್ತಾರೆ. ಸಾಧಾರಣವಾಗಿ ನಮ್ಮ ನಿಂದಕರನ್ನು ಬಹಿಃಶತ್ತು ಮತ್ತು ಅಂತಃಶತ್ರು ಎಂದು ಎರಡು ವಿಧಗಳಾಗಿ ಗಣಿಸಬಹುದು. ಅರ್ಥಾತ್, ನಮ್ಮ ಉದ್ದೇಶದ ಬಗ್ಗೆ ಯಾರಿಗೆ ಮನಃಪೂರ್ತಿ ಸಹಾನುಭೂತಿ ಇದೆಯೋ, ಆದರೂ ತಪಶೀಲಿನ ವಿಷಯದಲ್ಲಿ ನಮ್ಮೊಡನೆ ಮತಭೇದ ಇದೆಯೋ, ನಮ್ಮ ಚಳವಳಿಯನ್ನು ಕೆಡಿಸುವ ಉದ್ದೇಶವಿಲ್ಲವೋ, ಹಾಗೆಯೇ ವೈಯುಕ್ತಿಕ ದ್ವೇಷವೇನೂ ಇರದೆ, ಕೇವಲ ಭಾವನೆಯಿಂದಲೇ ಮತಭೇದ ಪ್ರದರ್ಶಿಸುವರೋ, ಅಂತಹ ಟೀಕಾಕಾರರನ್ನು ನಾವು ನಮ್ಮ ಶತ್ರುವರ್ಗದಲ್ಲಿ ಸೇರಿಸುವುದಿಲ್ಲ. ಬಹಿಃಶತ್ರುಗಳಲ್ಲಿ ಅಸ್ಪೃಶ್ಯವರ್ಗದಿಂದ ಹೊರಗಿರುವ ಎಲ್ಲ ಶತ್ರುಗಳೂ ಸೇರಿರುತ್ತಾರೆ. ಈ ಬಹಿಃಶತ್ರುಗಳಲ್ಲಿ ಅನೇಕ ಉಪಭೇದಗಳಿವೆ. ಅಸ್ಪೃಶ್ಯತೆ ಹಿಂದೂಧರ್ಮದ ಲಾಂಛನವಾಗಿರದೆ, ಅದರ ಶೋಭೆಯೇ ಆಗಿದೆ.; ಜಾತಿಭೇದವು ಹಿಂದೂಧರ್ಮದ ವೈಶಿಷ್ಟವಾಗಿದೆ; ಜಾತಿಭೇದ ಇಲ್ಲವಾದರೆ, ಹಿಂದೂಧರ್ಮವು ಹೆಸರಿಗೆ ಜೀವಂತವಿದ್ದರೂ, ಅದು ನಾಮಾವಶೇಷವಾದಂತೆ ಎಂದೇ ತಿಳಿಯಬೇಕು, ಎಂದನ್ನುವ ಹಿಂದೂಧರ್ಮದ ಅಭಿಮಾನೀ ವರ್ಗ ಎಂದಿದ್ದರೂ ನಮ್ಮ ಶತ್ರುಗಳಾಗುವವರು. ನಿಮ್ಮವರ್ಗದಲ್ಲಿ ವಿವಾಹ ಸಂಬಂಧಕ್ಕೆ ಅಡ್ಡಿಯಿಲ್ಲದಿದ್ದರೂ, ಕೊಡುಕೊಳ್ಳುವ ವ್ಯವಹಾರ ಬೇಡವೆನ್ನುವವರ ಪಕ್ಷವಿದೆ. ಇಲ್ಲೂ ಹಲವರು, ಅಸ್ಪಶ್ಯತೆ ಕಾಲಾಂತರದಲ್ಲಿ ಇಲ್ಲವಾಗುವುದೆಂದು, ಕಾಲದ ಮೇಲೆ ಭಾರ ಹಾಕಿ ಅಸ್ಪಶ್ಯರು ಸುಮ್ಮನಿರಬೇಕೆಂದು ಅವರ ಅನಿಸಿಕೆ. ಅಸ್ಪೃಶ್ಯತೆ ಅನ್ಯಾಯವೆಂಬುದನ್ನು ಒಪ್ಪದಿರುವ ಧೈರ್ಯ ಅವರಿಗಿಲ್ಲ. ಇಂಥವರ ಜೀವಕ್ಕೆ ಅಸ್ಪೃಶ್ಯತಾ ನಿವಾರಣೆಯ ವಿಷಯದಲ್ಲಿ ನಿಷ್ಕ್ರಿಯತೆಯ ಹೊರತು ಬೇರಾವುದರಿಂದಲೂ ಸಮಾಧಾನ ದೊರಕುವಂತಿಲ್ಲ. ಅವರನ್ನು ಸಮಾಧಾನ ಪಡಿಸುವುದು ನಮ್ಮಿಂದ ಖಂಡಿತ ಸಾಧ್ಯವಿಲ್ಲವೆಂದು ಹೇಳಲೇ ಬೇಕಾಗಿಲ್ಲ. "ನಿಧಾನ ಗತಿ" ಎನ್ನುವವರ ಮತ್ತು ಅಂತೆಯೇ ತಿಳಿದಿರುವವರ ವಿಚಾರದಂತೆ, ನಿಧಾನವೆಂದರೆ ಎಷ್ಟು ಮಂದ ಗತಿ ಎಂದು ತಿಳಿಯದು, ಮತ್ತದು ಅವರಿಗೂ ತಿಳಿಯದೆಂಬುದು ಖಂಡಿತ. ಎರಡನೇ ವರ್ಗವು ಹಿಂದೂಮಹಾಸಭಾದವರದು. ಈ ವರ್ಗದವರಿಗೆ ಅಸ್ಪಶ್ಯರ ಸಂಬಂಧದಲ್ಲಿ ಕಳಕಳಿ ಹುಟ್ಟುವುದು, ಅವರು ಮುಸಲ್ಮಾನ ಇಲ್ಲವೇ ಕ್ರೈಸ್ತರಾಗ ಹೊರಟಾಗ ಮಾತ್ರ. ಹಿಂದೂಗಳ ಸಂಖ್ಯಾಬಲ ಕಡಿಮೆಯಾಗದಿರಲಿ, ಹೆಚ್ಚುವುದಾದರೆ ಹೆಚ್ಚಲಿ, ಎಂಬ ಉದ್ದೇಶದಿಂದ ಪ್ರೇರಿತವಾಗಿ, ಸಾಮಾಜಿಕ ನ್ಯಾಯ, ಸಮತೆ, ಬಂಧುತ್ವಗಳಿಗೆ ಇವರಲ್ಲಿ ಯಾವುದೇ ಮಹತ್ವವಿಲ್ಲ. ಬಹಿಷ್ಕೃತರನ್ನು ತುಚೀಕರಿಸಿ, ಅವರ ಕಣ್ಣಲ್ಲಿ ನೀರು ತರಿಸುವುದು, ಬಹಿರಂಗವಾಗಿ ಆಪ್ತತೆ ತೋರುವುದು, ಹಕ್ಕಿನ ಪ್ರಶ್ನೆ ಬಂದೊಡನೆ ಅವರ ಗಂಟಲಲ್ಲಿ ಕೋಲು ತುರುಕುವುದು, ಇದು ಹಿಂದೂಮಹಾಸಭೆಯವರಲ್ಲಿ ಹಲವರ ಧೋರಣೆ ಆಗಿದೆ. ಬಹಿಷ್ಕತವರ್ಗದ ಸ್ವಾತಂತ್ರ್ಯ ಚಳವಳಿ

ಅವರಿಗೆ ಜೀರ್ಣಿಸಿಕೊಳ್ಳುವಂತಹುದಲ್ಲ,; ಆ ಚಳವಳಿಯ ಬಗ್ಗೆ ಅವರಿಗೆ ದ್ವೇಷವಿದೆ; ಆ ಚಳವಳಿಯನ್ನು ಮುನ್ನಡೆಸುವವರನ್ನು ಅವರು ಶತ್ರುಗಳಂತೆ ದ್ವೇಷಿಸುತ್ತಾರೆ, ಬಹಿಷ್ಕೃತರು ಸ್ವಯಂಸ್ಫೂರ್ತಿಯಿಂದ ಯಾವುದೇ ಚಳವಳಿ ಮಾಡಬಾರದು ; ತಮ್ಮ ಮಾನವೀಯ ಹಕ್ಕುಗಳ ಬೇಡಿಕೆ ಮುಂದೊಡ್ಡಬಾರದು; ಮಾಡಿದರೂ, ಅದು ತಮ್ಮ ಹಕ್ಕು ಎನ್ನದೆ,ಯಾಚನಾ ರೂಪದಲ್ಲಿರ ಬೇಕು; ಜಾತಿಭೇದದ ಅಡಿಪಾಯಕ್ಕೆ ಧಕ್ಕೆ ತರುವ ಕೆಲಸ ಮಾಡದಿರಲಿ ; ವರಿಷ್ಠ ವರ್ಗದವರು ನೀಡುವ ಚೂರುಪಾರು ಸವಲತ್ತನ್ನೇ ಕೃತಜ್ಞತೆಯಿಂದ ಸ್ವೀಕರಿಸಿ ಸಮಾಧಾನದಿಂದ ಇರಬೇಕು,



ಪ್ರತಿಯೊಂದು ಸುಧಾರಣಾವಾದಿ ಮತಕ್ಕೆ ಸೇರಿದ, ವಿಶಿಷ್ಠ ಧರ್ಮಪಂಥದ, ಮೂರ್ತಿಪೂಜೆಯನ್ನು ನಿಷೇಧಿಸುವಂಥ ಈ ಎಲ್ಲ ಜನರಿಗೆ ದೇವಳ ಪ್ರವೇಶದ ಹಕ್ಕಿಗಾಗಿ ಅಸ್ಪೃಶ್ಯರು ನಡೆಸುವ ಚಳವಳಿ ಅವರಿಗೆ ಇಷ್ಟವಲ್ಲ. ಅಸ್ಪೃಶ್ಯರು ಪ್ರಾರ್ಥನಾ ಸಮಾಜ, ಆರ್ಯ ಸಮಾಜಕ್ಕೋ ಸೇರಬೇಕೆಂದು ಅವರ ಅನಿಸಿಕೆ. ಕಟ್ಟಾ ಬ್ರಾಹ್ಮಣೇತರರನ್ನು ಬಹಿಷ್ಕೃತರ ಚಳವಳಿಯಲ್ಲಿ ಬ್ರಾಹ್ಮಣೇತರ ಚಳವಳಿಯ ಧುರೀಣರ ಮಾತಿನಂತೆ ಅಸ್ಪೃಶ್ಯರ ನಾಯಕರನ್ನು ಕಾಣಬೇಕು, ಬಹಿಷ್ಕೃತರ ಚಳವಳಿಯಲ್ಲಿ ಬ್ರಾಹ್ಮಣರ, ಅವರು ಉದಾರಮತವಾದಿಗಳೇ ಆಗಿದ್ದರೂ, ಅವರ ನೆರಳೂ ಬೀಳದಂತೆ ನೋಡಬೇಕು, ಮತ್ತು ಬ್ರಾಹ್ಮಣೇತರ ನಾಯಕರೇ ತಮಗೆ ಸುಸ್ಥಿತಿ ಪ್ರಾಪ್ತವಾಗಿಸುವವರು, ಎಂಬ ದೃಢ ಭರವಸೆಯಿಂದ ಸ್ವಾತಂತ್ರ್ಯ ಚಳವಳಿಯ ಗೊಂದಲಕ್ಕೆ ಬೀಳುವುದು ಬೇಡ ಎಂದು ಅವರ ವಿಚಾರ. ಇದು ಬಹಿಷ್ಕೃತ ವರ್ಗದ ಹೊರಗಿರುವವರ ವಿಚಾರ. ಈಗ ನಮ್ಮೊಳಗೇ ಇರುವ ನಮ್ಮ ಆಕ್ಷೇಪಕರತ್ತ ನೋಡಿದರೆ, ಹಲವರು ಜಾತಿಭೇದದಿಂದ ಮತ್ತು ಮತ್ಸರದಿಂದ ಪ್ರೇರಿತರಾಗಿ, ಮತ್ತೆ ಕೆಲವರು ವೈಯುಕ್ತಿಕ ಕಾರಣದಿಂದ ಅಸಂತುಷ್ಟರಾಗಿರುವುದು ಕಂಡು ಬರುತ್ತದೆ. ಬಹಿಷ್ಕೃತ ವರ್ಗದಲ್ಲಿ ಹಲವು ಜಾತಿ, ಉಪಜಾತಿಗಳಿವೆ. ಇಲ್ಲಿ ತಮ್ಮ ತಮ್ಮದು ಶ್ರೇಷ್ಠ ಅಂದುಕೊಳ್ಳುವ, ಮತ್ತು ತಮ್ಮ ಬಂಧುಗಳಿಗೆ ಹಾಗೆ ಹೇಳಿ ಪ್ರತ್ಯೇಕ ಸುಭೆ ಕಟ್ಟಿಕೊಳ್ಳುವಂತೆ ಉಪದೇಶಿಸುವವರು ಅನೇಕರಿದ್ದಾರೆ. ಅಸ್ಪೃಶ್ಯತೆ ದೂರವಾಗಲು ಕಾಲಾವಧಿ ಬಹಳವಾದರೂ ಚಿಂತೆಯಿಲ್ಲ; ತಮ್ಮ ಉಪಜಾತಿಯ ಪ್ರತ್ಯೇಕತೆ ಉಳಿಯಲಿ ಎಂದುಕೊಳ್ಳುವವರಿದ್ದಾರೆ. ಎಲ್ಲ ಉಪಜಾತಿಗಳೂ ಒಂದಾದರೆ, ತಮ್ಮದು ಇತರರಿಗಿಂತ ಮೇಲೆ ಎನ್ನುವುದೆಂತು, ಎಂಬ ಭಯ ಅವರದು. ಅಲ್ಲದೆ, ಎಲ್ಲರೊಂದಾಗಿ ಚಳವಳಿಯಾದರೆ, ತಮ್ಮ ಜಾತಿಬಾಂಧವರಲ್ಲಿ ತಮ್ಮ ಮಹತ್ವ

ಕಡಿಮೆಯಾಗುವುದು ಎಂಬ ಸ್ವಾರ್ಥವೂ ಇಲ್ಲಿ ಅಡಕವಾಗಿದೆ.ಬಹಿಷ್ಕೃತರ ನಾಯಕತ್ವ ತಮ್ಮ ಖಾಸಗಿ ಹಕ್ಕು ಎಂದುಕೊಳ್ಳುವವರೂ ಇದ್ದಾರೆ.

ಜನರು ಅಜ್ಞಾನದಲ್ಲಿದ್ದರೇ ತಮ್ಮ ನಾಯಕತ್ವ ಉಳಿಯುವುದು ಎಂದು ಅವರಿಗನಿಸುವುದು ಸ್ವಾಭಾವಿಕವಾದ್ದರಿಂದ, ಸಮಾಜಜಾಗೃತಿ ಉಂಟುಮಾಡುವ ಚಳವಳಿ ಅವರಿಗೆ ಅಸಹ್ಯವೆನಿಸಿದರೆ ಆಶ್ಚರ್ಯವಿಲ್ಲ. ತಮ್ಮ ನಾಯಕತ್ವದ ಪಟೇಲಿಕೆ ಬಿಟ್ಟು ಹೋಗುವುದನ್ನು ಕಂಡು, ನಮ್ಮ ಚಳವಳಿಗೆ ಕಲ್ಲೆಸೆಯುವ ಕೆಲಸಕ್ಕೆ ಅವರು ತೊಡಗಿದ್ದಾರೆ. ಇತರ ಹಲವರೂ ಡಾ. ಅಂಬೇಡ್ಕರ್ ಅವರ ಮೇಲೆ ಸಿಟ್ಟಾಗಿದ್ದಾರೆ, ಅವರ ಬಗ್ಗೆ ಪ್ರಚ್ಛನ್ನ ಶತ್ರುತ್ವ ತಾಳಿದ್ದಾರೆ. ಅವರ ಖಾಸಗಿ ಮಹತ್ವಾಕಾಂಕ್ಷೆಗೆ ಸಮಾಧಾನವೀಯುವುದು ಅಂಬೇಡ್ಕರರಿಗೆ ಸಾಧ್ಯವಾಗಿಲ್ಲದಿರುವುದೇ ಇದಕ್ಕೆ ಕಾರಣ. ಅಂಬೇಡ್ಕರರು ತಮ್ಮ ಸಾಮರ್ಥ್ಯದಂತೆ ಎಲ್ಲರಿಗೂ ಸಹಾಯ ಮಾಡಲು ತಯಾರಿದ್ದಾರೆ, ಆದರೆ ಅದು ಸಾಧ್ಯವಲ್ಲ. ಅಂಬೇಡ್ಕರರು ಕೇವಲ ದಾರಿ ತೋರುವುದರಿಂದ ಪ್ರಯೋಜನವಿಲ್ಲ, ಕೈ ಹಿಡಿದು ನಡೆಸಿಯೂ ಪ್ರಯೋಜನವಿಲ್ಲ, ಹೆಗಲ ಮೇಲೆ ಕೂರಿಸಿ ಹೊತ್ತೊಯ್ಯ ಬೇಕು. ಆದರೆ ಹಾಗೆ ಯಾರಾರನ್ನೆಂದು ಹೊತ್ತೊಯ್ಯಬಹುದು?

ಮನೆಗೆ ಅತಿಥಿಗಳು ಬಂದರೆ, ಯಜಮಾನನು ಅವರಿಗೆ ಊಟ ನೀಡುವನು, ಆದರೆ ಅವನು ತನ್ನ ಬಾಯಲ್ಲಿ ಸ್ವತಃ ತುತ್ತನ್ನಿಡಬೇಕು ಎಂದು ಪ್ರತಿಯೊಬ್ಬ ಅತಿಥಿಯೂ ಹೇಳಲಾರಂಭಿಸಿದರೆ, ಯಜಮಾನನು ಅವರನ್ನು ಸಮಾಧಾನಪಡಿಸುವುದು ಹೇಗೆ? ಇಂತಹ ಅಸಂತುಷ್ಟರು ಅನೇಕ ಮಂದಿ ಅಂಬೇಡ್ಕರರಿಗೆ ಭೇಟಿಯಾಗುತ್ತಿರುತ್ತಾರೆ. ಖಾಸಗಿ ಕಾರಣದಿಂದ ಅಂಬೇಡ್ಕರ್ ಅವರ ಮೇಲೆ ಸಿಟ್ಟಾದರೆ, ಅವರ ಚಳವಳಿಯನ್ನು ಅವಹೇಳನ ಮಾಡುವುದು,



ಚಳವಳಿಯನ್ನು ನಾಶ ಮಾಡುವವರ ಪಿತೂರಿಯಲ್ಲಿ ಶಾಮೀಲಾಗುವುದಕ್ಕೂ ಹಿಂಜರಿಯುವವರಲ್ಲ. ಇದು ಶತ್ರುತ್ವದ ಸಂಬಂಧದಲ್ಲಿ ನಮ್ಮಂತೆಯೇ ಇರುವ ಜನರ ಬಗ್ಗೆ, ಇನ್ನೊಂದು ಟೀಕಾಕಾರರ ವರ್ಗವಿದೆ. ಅವರು ಶತ್ರುಭಾವದಿಂದ ಟೀಕೆ ಮಾಡುವವರಲ್ಲ,ಅವರ ಟೀಕೆಯಲ್ಲಿ ಸ್ವಲ್ಪವಾದರೂ ಪ್ರಾಮಾಣಿಕ ಮತಭೇದ ಇದೆಯೆಂದು ನಾವು ಅರಿತಿದ್ದೇವೆ.

ಇಲ್ಲಿನ ಪ್ರತಿಯೊಬ್ಬ ಟೀಕಾಕಾರನ ದೃಷ್ಟಿಯಲ್ಲಿ ನಮ್ಮ ಚಳವಳಿ ಸಾಕಷ್ಟು ತೀಕ್ಷ್ಣಎಂದೇ ಆಗಿದೆ, ಮತ್ತು ಉಳಿದವರ ಅಭಿಪ್ರಾಯದಂತೆ ನಮ್ಮ ಚಳವಳಿ ಮೃದು ಧೋರಣೆಯುಳ್ಳದ್ದಾಗಿದೆ. ಈ ಎರಡೂ ಬಗೆಯ ಟೀಕಾಕಾರರು ನಮ್ಮ ಚಳವಳಿಯ ಚಿಂತಕರು, ನಮ್ಮನ್ನು ತೀಕ್ಷ್ಯ ಇಲ್ಲವೇ ಮೃದು ಎಂದು ತಿಳಿಯುತ್ತಾರೆ. ನಿಷ್ಕಾರಣವಾಗಿ ಕಾಠಿಣ್ಯ ತೋರಿ ಇತರರ ಮನ ನೋಯಿಸುವ ಇಚ್ಛೆ ಆಗಲೀ, ಧೋರಣೆಯಾಗಲೀ ನಮ್ಮದಲ್ಲ. ಆದರೆ ಅಸ್ಪೃಶ್ಯತಾ ನಿವಾರಣಾ ಚಳವಳಿಯನ್ನು ತೀವ್ರವಾಗಿ ವಿರೋಧಿಸುವವರು ಇರುವುದರಿಂದ ಪ್ರಸಂಗ ಬಂದಂತೆ ತೀಕ್ಷ್ಣವಾಗದೆ ಉಪಾಯವಿಲ್ಲ. ನಮ್ಮದು ಮೃದು ನಡೆ ಎಂದುಕೊಳ್ಳುವವರ ಉತ್ಸಾಹದ ಬಗ್ಗೆ ನಮಗೆ ಮನಃಪೂರ್ವಕ ಕೌತುಕ ಅನಿಸುತ್ತದೆ. ಆದರೆ ಅವರು ನಮ್ಮ ಅಡಚಣೆಗಳ ಬಗ್ಗೆ ವಿಚಾರ ಮಾಡುವುದಿಲ್ಲ, ಎಂದಷ್ಟೇ ಹೇಳುತ್ತೇವೆ.ನಮ್ಮ ಚಳವಳಿಯ ಜಗಳ ನಡೆದಿರುವಾಗ ಒಪ್ಪಂದದಿಂದ ಕಾಯ್ದೆಬದ್ಧ ಸಾಧನೆಯಾಗುವಂತೆ ಮತ್ತು ನಮ್ಮ ಪಕ್ಷಕ್ಕೆ ಆದಷ್ಟು ಕಮ್ಮಿ ಹಾನಿಯಾಗುವಂತೆ ನಡೆಸುವುದೇ ನಮ್ಮ ಧೋರಣೆ. ಇದು ನಮ್ಮ ತೀವ್ರ ಹಿತಚಿಂತಕರಿಂದ ನಮ್ಮ ಮೇಲೆ ಅವಸಾನಘಾತಕತನದ ಆರೋಪಕ್ಕೆ ಕಾರಣವಾಗಿದೆ. ಆನುವಂಶಿಕ ಮಸೂದೆಯನ್ನು ಡಾ. ಅಂಬೇಡ್ಕರರು ಹಿಂತೆಗೆದುಕೊಂಡುದಕ್ಕೆ ಕಾರಣವನ್ನು ಈ ಮೊದಲು ಬಹಿಷ್ಕತ ಭಾರತದಲ್ಲಿ ತೆರೆದಿಡಲಾಗಿದೆ. ಆದರೂ, ಅಂಬೇಡ್ಕರರು ಈ ಬಿಲ್ ಹಿಂತೆಗೆದುಕೊಂಡು ಅವಸಾನ ಘಾತ ಮಾಡಿದ್ದಾರೆ, ಎಂದು ಟೀಕಾಕಾರರು ಹೇಳುತ್ತಾರೆ. ಕಾಯ್ದೆ ಕೌನ್ಸಿಲ್‌ನಲ್ಲಿ ಯಾವುದಾದರೂ ಬಿಲ್ ಪಾಸ್ ಮಾಡುವುದು ನಮ್ಮ ಕೈಯಲ್ಲಿಲ್ಲ. ಸರಕಾರ, ಮುಸಲ್ಮಾನ, ಬ್ರಾಹ್ಮಣ, ಬ್ರಾಹ್ಮಣೇತರ ಈ ಎಲ್ಲ ಪಕ್ಷಗಳ ಬಹುತೇಕ ಸದಸ್ಯರು ಈ ಬಿಲ್ ತೆಗೆದು ಹಾಕಲು ಕಟಿಬದ್ಧರಾಗಿದ್ದರು. ಹಿತ ಸಂಬಂಧಧ ಪ್ರತ್ಯಕ್ಷ ವಿರೋಧ ಎಲ್ಲಿದೆಯೋ ಮತ್ತು ಇತರ ವಿಷಯಗಳಲ್ಲಿನ ಮತಭೇದವನ್ನು ಲಕ್ಷ್ಯಕ್ಕೆ ತಂದು, ಅಮುಖ್ಯರನ್ನು ಮುಂದಕ್ಕೆ ತರುವ ಬಿಲ್ ಎಂದು ಅದನ್ನು ಕಿತ್ತು ಹಾಕಲು ವಿವಿಧ ಪಕ್ಷಗಳ ಜನರು ಒಟ್ಟಾಗುವಲ್ಲಿ, ಆ ಬಿಲ್ ಪಾಸ್ ಆಗುವ ನಿರೀಕ್ಷೆಯನ್ನು ಇಟ್ಟು ಕೊಳ್ಳುವುದೆಂತು? ಅಂಬೇಡ್ಕರರು ಬಿಲ್ ಹಿಂತೆಗೆದುಕೊಳ್ಳದೆ, ಮತಗಣನೆಯ ಮೇಲೆ ಹಾಕುತ್ತಾ ಬಂದಿದ್ದಾರೆ. ಮಹಾಡ್‌ನ ಸತ್ಯಾಗ್ರಹ ಮತ್ತು ಉಮರಾವತಿಯ ಅಂಬಾದೇವಾಲಯ ಸಂಬಂಧದ ಸತ್ಯಾಗ್ರಹದ ವಿಷಯದಲ್ಲೂ ಅಂಬೇಡ್ಕರರ ಮೇಲೆ ಆರೋಪ ಹೇರುವವರು ಅನೇಕರಿದ್ದಾರೆ. ಏನೇ ಆದರೂ ಈ ವಿಷಯವನ್ನು ವಿಕೋಪಕ್ಕೊಯ್ಯಬಾರದು. ಉಗುರಿನಿಂದ ಎಬ್ಬಿಸಬಲ್ಲುದಕ್ಕೆ ಕೊಡಲಿಯ ಉಪಯೋಗವೇಕೆ? ಬಹಿಷ್ಕೃತ ವರ್ಗದ ಶಕ್ತಿಯೆಲ್ಲವನ್ನು ಯಾವುದೋ ಕೆಲಸಕ್ಕೆ ವ್ಯಯವಾಗಿಸಿ ನಮ್ಮ ಚಳವಳಿಗೆ ಧಕ್ಕೆಯೊದಗುವಂತೆ ಮಾಡಲಾಗದೆಂಬ ನಮ್ಮ ಧೋರಣೆ ಅಧಿಕ ಮೃದುತನದ್ದೆಂದು ಯಾರಿಗಾದರೂ ಅನಿಸಿದರೆ, ಅನಿಸಲಿ. ಆದರೆ ಈ ಧೋರಣೆಯಿಂದ ನೋಡುವಲ್ಲಿ ನಮ್ಮಿಂದ ತಪ್ಪಾಗಿದೆಯೆಂದೋ, ಇಲ್ಲಾ, ನಮ್ಮ ತತ್ವದ ವಿರುದ್ಧ ನಾವು ಹೋದೆವೆಂದೋ ನಮ್ಮ ಅಂತರಾತ್ಮ ನಮಗೆ ಹೇಳುತ್ತಿಲ್ಲ. ನಾವು ಮಧ್ಯಮ ಮಾರ್ಗ ಅನುಸರಿಸಿದ್ದೇವೆ. ಕಟುತ್ವ ಮತ್ತು ಮೃದುತ್ವದ ನಡುವಣ ಮಾರ್ಗವದು, ಧೈರ್ಯ,ಸ್ಥೈರ್ಯ, ಸ್ವಾತಂತ್ರ್ಯದ ದಾರಿಯದು. ಆದರೆ ಅತಿರೇಕಕ್ಕೆ, ಕ್ರೋಧ ಪ್ರವೃತ್ತಿಗೆ ಇಲ್ಲಿ

ಅವಕಾಶವಿಲ್ಲ. ಅಧಿಕ ಮೃದು ಪ್ರವೃತ್ತಿಯ ಜನರು ನಮ್ಮ ಕಾಲೆಳೆಯಲು ಯತ್ನಿಸುತ್ತಿದ್ದಾರೆ, ಮತ್ತು ಅಧಿಕ ತೀಕ್ಷ್ಣ ಪ್ರವೃತ್ತಿಯ ಜನರು ನಮಗೆ ಅಡ್ಡ ಹೆಸರಿಡುತ್ತಿದ್ದಾರೆ. ನಮಗೆ ವ್ಯಕ್ತಿಗತ ಮೋಸವಾಗಿದ್ದರೆ, ನಾವು ಇನಿತೂ ಯೋಚಿಸುತ್ತಿರಲಿಲ್ಲ ; ಆದರೆ ನಮಗೆ ನಮ್ಮ ಚಳವಳಿಯ ಸುರಕ್ಷಿತತೆ ಮತ್ತು ಬಲದ ಬಗ್ಗೆ ಚಿಂತಿಸ ಬೇಕಿದೆ. ಯಾವ ತತ್ವದ ಆಧಾರದ ಮೇಲೆ ನಾವು ನಮ್ಮ ಚಳವಳಿಯ ಕಟ್ಟೋಣವನ್ನು ನಿಲ್ಲಿಸಲು ನೋಡುತ್ತಿದ್ದೇವೋ, ಆ ತತ್ವಕ್ಕೆ ಬಾಧೆ ಬರದಂತೆ ದೇಶದ ಯಾವುದಾದರೂ ಪಕ್ಷ, ಸಮಾಜ ಇಲ್ಲವೇ ವ್ಯಕ್ತಿಗೆ ಸಹಕಾರ ನೀಡುವ ತಯಾರಿ, ನಮ್ಮದು. ನಮಗೆ ಎಷ್ಟು ಸಹಾನುಭೂತಿ ಸಿಕ್ಕಿದರೂ ಕಡಿಮೆಯೇ. ಆದರೆ ನಾವು ಅಂಗೀಕರಿಸಿದ ತತ್ವದ ಬೆಲೆಯಿತ್ತು, ಯಾರದಾದರೂ ಸಹಾನುಭೂತಿಯನ್ನು ಕ್ರಯಕ್ಕೆ ಪಡೆಯಲು ನಾವು ಸಿದ್ಧರಿಲ್ಲ. ಇಂತಹ ತತ್ವವಿಕ್ರಯ ನೀತಿ ಶುದ್ಧವಂತೂ ಅಲ್ಲ, ಪರಿಣಾಮಕರವೂ ಅಲ್ಲ. ಟೀಕಾಕಾರರಲ್ಲಿ ಒಂದು ವರ್ಗವನ್ನು ಸಂತುಷ್ಟ ಪಡಿಸಿದರೆ, ಇನ್ನೊಂದು ವರ್ಗ ಅಸಂತುಷ್ಟವಾಗಿ ಉಳಿಯುವುದೇ, ಮತ್ತು ಅಲ್ಲಿಂದ ಟೀಕೆಯೂ ಬರದಿರದು, ಈ ರೀತಿ ಒಬ್ಬರನ್ನು ಸಂತುಷ್ಟರಾಗಿಸಿ, ಉಳಿದೆಲ್ಲರ ಶತ್ರುತ್ವ ಸಂಪಾದಿಸುವುದಕ್ಕಿಂತ ಅಂಗೀಕೃತ ತತ್ವದಂತೆ ನಡೆದು, ಯಾರು ಬೇಕಾದರೂ ಸಂತುಷ್ಟರಾಗಿರಲಿ, ಇಲ್ಲವೇ ಸಿಟ್ಟಾಗಲಿ ಎಂದುಕೊಳ್ಳುವುದು ವ್ಯವಹಾರ ದೃಷ್ಟಿಯಿಂದ ವಿಶೇಷ ಲಾಭದಾಯಕವಲ್ಲವೇ? ಇನ್ನೂ ಒಂದು ಮಾರ್ಗವಿದೆ; ಅದು ಎಲ್ಲರನ್ನೂ ಖುಶಿ ಪಡಿಸುವ, ಒಬ್ಬರನ್ನೊಂದಾದರೆ ಇನ್ನೊಬ್ಬರನ್ನು ಇನ್ನೊಂದು ಭಾವಿಸುವ ಮಾರ್ಗ, ಅದು ನಮ್ಮಿಂದಾಗದು. ಅಲ್ಲದೆ, ಅದು ದೂರದರ್ಶಿತನವಿಲ್ಲದ ಮಾರ್ಗ, ಒಂದೊಮ್ಮೆ ಮನುಷ್ಯನಾದವನು ಕೆಲ ಕಾಲ ಎಲ್ಲರನ್ನೂ, ಇಲ್ಲವೇ ಕೆಲವರನ್ನು ಮೋಸಗೊಳಿಸಬಹುದು, ಆದರೆ,ಎಲ್ಲ ಕಾಲದಲ್ಲೂ ಎಲ್ಲರನ್ನೂ ಮೋಸಗೊಳಿಸುವುದು ಯಾರಿಂದಲೂ ಶಕ್ಯವಲ್ಲ.

* * * *

## ೬೦. ದತ್ತ ದರ್ಬಾರ್‌ನ ಉದಾಹರಣೆ

ಎಲಿಚ್ ಪುರದ ದತ್ತದರ್ಬಾರ್' ಎಂಬ ಪ್ರಸಿದ್ಧ ಹಿಂದೂ ದೇವಾಲಯದ ದ್ವಾರವನ್ನು ಬಹಿಷ್ಕೃತರ ಸಹಿತ ಎಲ್ಲ ಹಿಂದೂಗಳಿಗೆ ತೆರೆದಿಡುವ ಕ್ರಮ ಜಾರಿಯಲ್ಲಿ ಬಂದಿತು. ಈ ಬಗ್ಗೆ ಬೇರೆಡೆ ವಿವರಿಸಲಾಗಿದೆ. ಪ್ರಸಕ್ತ ಕಮಿಟಿಯಲ್ಲಿ ಈ ಸುಧಾರಣೆಗೆ ಅನುಕೂಲ ಬಹುಮತವಿತ್ತು, ಅಂದರೆ ಕೆಲವರು ವಿರುದ್ಧವಿದ್ದರು. ಆದರೂ ಎಲ್ಲ ದೃಷ್ಟಿಯಿಂದ ಅನುಕೂಲವಿತ್ತು. ಈ ವಿಷಯವಾಗಿ ಸೇತ್ ಜಮ್ನಾಲಾಲ್ ಬಜಾಜ್ ಅವರು ಆಕ್ಷೇಪವೆತ್ತಿದ್ದು, ಹಾಗೂ ಅದು ಯಶಸ್ವಿಯಾದುದು ಸಂತಸದ ವಿಷಯ. ಈ ದೇವಾಲಯವು ವರಾಡ್ ಪ್ರಾಂತ್ಯದ ಪ್ರಮುಖ ದೇವಳವಾದ್ದರಿಂದ ಅದು ಬಹಿಷ್ಕೃತರಿಗೆ ಮುಕ್ತ ದ್ವಾರವಾದುದರ ಅಪ್ರತ್ಯಕ್ಷ ಪರಿಣಾಮ ಇತರ ದೇವಾಲಯಗಳ ಮೇಲಾಗುವ ಸಂಭವವಿದೆ. ಈ ದೇವಳವು ಶ್ರೀ ದತ್ತಾತ್ರೇಯನ ಮಂದಿರವೆಂಬುದು ವಿಶೇಷವಾಗಿ ಲಕ್ಷ್ಮದಲ್ಲಿರಿಸ ಬೇಕಾದ ವಿಷಯ. ಕಾರಣ, ದತ್ತ ಸಂಪ್ರದಾಯವು ಮಡಿಮೈಲಿಗೆಯವರದಾಗಿದ್ದು, ಜಾತಿಭೇದ ವಿಷಯಕ ನಿರ್ಬಂಧವು ಉಳಿದ ಸಾಕಷ್ಟು ಸಂಪ್ರದಾಯಗಳಂತಲ್ಲದೆ, ವಿಶೇಷ ಕಟ್ಟುನಿಟ್ಟಿನಿಂದ ಪಾಲಿಸುವಂಥದಾಗಿದೆ. ವಾರಕರೀ ಸಂಪ್ರದಾಯದಲ್ಲಿ ಅಷ್ಟೊಂದು ಮಡಿಮೈಲಿಗೆ ಪಾಲಿಸಬೇಕಾಗಿ ಬರುವುದಿಲ್ಲವಾದರೂ, ವಿಠೋಬನ ದೇವಾಲಯದ ವಿಷಯದಲ್ಲಿ ಕಾಣಬರದ ಸುಧಾರಣೆಯು, ಈ ಒಂದು ದತ್ತ ದೇವಳದಲ್ಲಿ ಆಚರಣೆಗೆ ಬಂದಿರುವುದು ನಿಜಕ್ಕೂ ವಿಶೇಷ. ವಾಸ್ತವಿಕವಾಗಿ ನೋಡಿದರೆ ದತ್ತ ದೇವರು ಸ್ವತಃ ಮಡಿಯೇನಲ್ಲ. ದತ್ತಾತ್ರೇಯನ ಸಾಕ್ಷಾತ್ಕಾರವು ಏಕನಾಥಾದಿ ಸಾಧುಗಳಿಗೆ ದರವೇಶಿಯ ರೂಪದಲ್ಲಾದುದರ ವರ್ಣನೆ ಹಳೆಯ ಗ್ರಂಥಗಳಲ್ಲಿ ಲಭ್ಯವಿದೆ, ಮತ್ತು ಗುರುಚರಿತ್ರೆಯ ಪುರಾಣದ ಪ್ರಸಾರ ಆಗುವವರೆಗೆ ದತ್ತಸಂಪ್ರದಾಯಕ್ಕೆ ಈಗಿನ ಕಟ್ಟುನಿಟ್ಟಿನ ಸ್ವರೂಪ ಬಂದಿರಲಿಲ್ಲವೆನ್ನಲು ಅಡ್ಡಿಯಿಲ್ಲ. ಮಹಾನುಭಾವ ಪಂಥದಲ್ಲಿ ಕೃಷ್ಣ ಮತ್ತು ದತ್ತದೇವರ ಉಪಾಸನೆ ಹಿಂದಿನಿಂದಲೂ ಚಾಲನೆಯಲ್ಲಿದ್ದು, ಮಹಾನುಭಾವ ಪಂಥವು ಮಹಾರಾಷ್ಟ್ರದಲ್ಲಿ ಮಾತ್ರವಲ್ಲದೆ ಪಂಜಾಬ್, ಅಫ್ಘಾನಿಸ್ಥಾನ ಪರ್ಯಂತ ಆಚರಣೆಯಲ್ಲಿದ್ದುದು ತಿಳಿದು ಬರುತ್ತದೆ. ಎಲ್ಲಕಿಂತ ಪುರಾತನ ಮರಾಠಿ ವಾಯವು ಮಹಾನುಭಾವ ಪಂಥದ್ದೇ ಆಗಿದೆ. ಈ ಪಂಥದಲ್ಲಿ ದತ್ತೋಪಾಸನೆ ಆಚರಣೆಯಲ್ಲಿದ್ದರೂ, ಜಾತಿಭೇದ ಹಾಗೂ ಮಡಿ ಮೈಲಿಗೆಯ ಭರಾಟೆ ಅಲ್ಲಿಲ್ಲ. ಅರ್ಥಾತ್, ಈಗಿನ ಮಡಿಮೈಲಿಗೆಯ ದತ್ತಸಂಪ್ರದಾಯ ಆಧುನಿಕವಾದುದೆಂಬುದು ಶತಃಸಿದ್ಧ.ಯಾವುದೇ ದೇವರನ್ನು ಹೆಚ್ಚು ಇಲ್ಲವೇ ಕಡಿಮೆ ಮಡಿ ಮಾಡುವುದು ಭಕ್ತರ ಕೈಯಲ್ಲೇ ಇದೆ. ಭಕ್ತರ ತಿಳುವಳಿಕೆಯಂತೆ ದೇವರ ಸ್ವರೂಪವಿರುತ್ತದೆ. ತಮ್ಮ ತಿಳುವಳಿಕೆಯನ್ನೇ

ಭಕ್ತರು ತಮ್ಮ ಉಪಾಸನೆಯಲ್ಲಿ ತೊಡಗಿಸುತ್ತಾರೆ. .ಭಕ್ತ ಮಡಿಯಾದರೆ ದೇವರೂ ಮಡಿ; ಭಕ್ತ ಉದಾರಮತವಾದಿಯಾದರೆ ದೇವರೂ ಉದಾರಮತವಾದಿ; ಭಕ್ತ ಹಿಂಸಾಪ್ರಿಯನಾದರೆ ದೇವರೂ ಹಿಂಸಾಪ್ರಿಯ ; ಭಕ್ತ ಲಂಚಕೋರನಾದರೆ ದೇವರೂ ಲಂಚಕೋರ; ಭಕ್ತ ಶೀಘ್ರಕೋಪಿಯಾದರೆ ದೇವರೂ ಶೀಘ್ರಕೋಪಿ, ಹೀಗೇ ಎಲ್ಲೆಡೆ ಕಂಡು ಬರುತ್ತದೆ. ಹಿಂದೂಧರ್ಮದ ಭಕ್ತರಿಗೆ ಬಹಿಷ್ಕೃತರ



ಕರಿ ಬಣ್ಣದಿಂದ ತಾವು ಮೈಲಿಗೆಯಾದಂತೆ ಅನಿಸುತ್ತದೆ, ಆದರೆ, ತಮ್ಮ ದೇವರಿಗೆ ಮೈಲಿಗೆಯ ಬಾಧೆ ಆಗದಿರಲೆಂದು ಅವರು ತಮ್ಮ ದೇವರನ್ನು ಶೃಂಖಲೆಯಲ್ಲಿ ಬಂಧಿಸಿಟ್ಟಿದ್ದಾರೆ. ಬಹಿಷ್ಕೃತರ ಗಾಳಿಯೇ ತಗಲದಂತೆ ನೋಡಬೇಕೆಂದು ಅನಿಸುವುದು ಸ್ವಾಭಾವಿಕವೇ. ಒಟ್ಟಿನಲ್ಲಿ, ದೇವನ ಹೆಸರಿನಲ್ಲಿ ನಡೆಯುವ ಮಡಿ ಮೈಲಿಗೆಯ ಭರಾಟೆ ಮನುಷ್ಯರಿಂದಲೇ ಹುಟ್ಟಿಕೊಂಡುದು. ವರಾಡ್‌ನಲ್ಲಿ ಕೆಲ ದಿನಗಳ ಹಿಂದೆ ಜಮಾದಾಸ್ ಹೋದಾರ್ ಅವರ ರಾಮಮಂದಿರಕ್ಕೆ ದೇವದರ್ಶನಕ್ಕಾಗಿ ಮಹಾರ್ ಜಾತಿಯ ಹೆಂಗಸೊಬ್ಬಳು ಹೋದಳೆಂದು, ಅಲ್ಲಿನ ಬ್ರಾಹ್ಮಣರು ಅವಳನ್ನು ಹೊಡೆದು ಬಡಿದು, ಅವಳಿಂದ ಕ್ಷಮಾಪಣಾ ಪತ್ರ ಬರೆಸಿಕೊಂಡ ಸುದ್ದಿ ಎಲ್ಲೆಡೆ ಪ್ರಸಾರವಾಗಿದೆ. ಅನಾರ್ಯೆ ಶಬರಿಯ ಎಂಜಲು ಬೋರೆಹಣ್ಣು ತಿಂದ ಶ್ರೀ ರಾಮ, ಭಾವುಕ ಮಹಾರ್ ಸ್ತ್ರೀಯೊಬ್ಬಳು ದರ್ಶನ ಮಾಡಿದ ಮಾತ್ರದಿಂದ ಮೈಲಿಗೆಯಾಗುವುದು ಮತ್ತು ಆ ಬಡವೆ ರಾಮಮೂರ್ತಿಯ ವಿಧ್ವಂಸಕ್ಕೆ ಬಂದವಳೆಂದು ಅವಳನ್ನು ಆಘಾತಿಸುವುದು, ಶ್ರೀ ರಾಮಚಂದ್ರನ ದೌರ್ಭಾಗ್ಯವಲ್ಲದೆ ಮತ್ತೇನು? ದಿಲ್ಲಿಯಲ್ಲೂ ಬಹಿಷ್ಕತರು ಹಿಂದೂಗಳ ದೇವಾಲಯ ಹೊಗುವ ಯತ್ನ ಮಾಡಿದಾಗ ಅಲ್ಲಿನ ಮಡಿವಂತರು ಆಕಾಶ ಪಾತಾಳ ಒಂದು ಮಾಡಿದ ಬಗ್ಗೆ ಪತ್ರಿಕೆಗಳು ವರದಿ ಮಾಡಿವೆ.

ಹಿಂದೂ ಸಮಾಜದಲ್ಲಿನ ಜಾತಿಭೇದ ಮತ್ತು ಮಡಿ ಮೈಲಿಗೆಯ ಪೀಡೆ ದೇವರನ್ನೂ ಹೇಗೆ ಕಾಡುತ್ತಿದೆಯೆಂಬುದು ಈ ಉದಾಹರಣೆಯಿಂದ ಕಂಡು ಬರುತ್ತದೆ. ಸೇಠ್ ಜಮ್ನಾಲಾಲ್ ಬಜಾಜ್‌ರಂತಹ ಧುರೀಣರು

ದೇವರೆದುರಿನ ಈ ಅಸ್ಪೃಶ್ಯತೆಯ ಗ್ರಹಣವನ್ನು ಬಿಡಿಸಲು ನಡೆಸಿರುವ ಯತ್ನವು ಖಂಡಿತವಾಗಿಯೂ ಹಿಂದೂಧರ್ಮಕ್ಕೆ ಉಜ್ವಲ ಸ್ವರೂಪವನ್ನು ಕೊಡಲಿದೆ. ಮೂವತ್ತೂರು ಕೋಟಿ ದೇವತೆಗಳನ್ನು ಬಂಧಿಸಿಟ್ಟ ರಾವಣನು ವೇದಪಠಿಸುವ ಹತ್ತು ತಲೆಯ ವಿದ್ವಾಂಸನಾಗಿದ್ದನೆಂದು ಪುರಾಣಗಳು ಹೇಳುತ್ತವೆ. ಆದರೆ ಈಗಿನ ಕಾಲದ ಮಡಿರಾವಣನು ಶ್ರೀ ರಾಮಸಹಿತ ಎಲ್ಲ ದೇವರನ್ನು ಶೃಂಖಲೆಯಲ್ಲಿ ಬಂಧಿಸಿಟ್ಟಿದ್ದಾನೆ,

* * * *

## ೬೧. ಈಗ ಈ ಚಿತ್ರ ನೋಡಿ

ಮಹಾತ್ಮಾ ಗಾಂಧೀ ಅವರ ಅನುಯಾಯಿಗಳಲ್ಲಿ ಶೇಟ್ ಜಮ್ನಾಲಾಲ್ ಬಜಾಜ್ ಮುಂತಾದವರು ಅಸ್ಪೃಶ್ಯರ ವಿಷಯದಲ್ಲಿ ಮಹಾತ್ಮಾಜೀ ಅವರ ಬೋಧನೆಯನ್ನು ಅನುಸರಿಸಿ ಹೇಗೆ ವರ್ತಿಸಿದರೆಂಬುದು ದತ್ತ ದರ್ಬಾರ್‌ನ ಉದಾಹರಣೆಯಿಂದ ವ್ಯಕ್ತವಾಗಿದೆ. ಆದರೆ ದುರ್ದೈವದಿಂದ ಮಹಾತ್ಮಾಜೀ ಅವರ ಬೋಧನೆಯು ಅವರ ಅನುಯಾಯಿಗಳೆಲ್ಲರ ವಿಷಯದಲ್ಲಿ ಈ ರೀತಿ ಫಲಕಾರಿಯಾಗಲಿಲ್ಲ. ಇಷ್ಟೇ ಅಲ್ಲ, ತಮ್ಮನ್ನು ಮಹಾತ್ಮಾಜೀ ಅವರ ಅನುಯಾಯಿಗಳೆಂದು ಕರೆಸಿ ಕೊಳ್ಳುವವರಲ್ಲಿ ಬಹಳಷ್ಟು ಮಂದಿ ಅಸ್ಪೃಶ್ಯತಾ ನಿವಾರಣೆಯ ವಿಷಯದಲ್ಲಿ ಮಹಾತ್ಮಾಜೀ ಅವರ ಉಪದೇಶವನ್ನು ಮೂಲೆಗುಂಪಾಗಿಸಿದವರೇ ಇದ್ದರು. ಬಾರ್ಡೋಲಿ ತಾಲೂಕಿನಲ್ಲಿ ಮಹಾತ್ಮಾಜೀ ಅವರ ಕಾರ್ಯಕ್ರಮ ಪೂರ್ಣರೀತಿಯಲ್ಲಿ ಜಾರಿಗೆ ಬಂದುದರಿಂದ ಅ ತಾಲೂಕಿನಷ್ಟು ದೇಶದ ಇನ್ನಾವುದೇ ಭಾಗದಲ್ಲಿ ಪ್ರಗತಿ ಆಗಿಲ್ಲವೆಂದೇ ಹೇಳಬೇಕು. ಆ ತಾಲೂಕಿನಲ್ಲಿ ಖಾದಿಯ ಪ್ರಚಾರವು ಎಲ್ಲೆಡೆ ಆಗಿದ್ದರೂ, ಜನರಲ್ಲಿ ಸತ್ಯಾಗ್ರಹದ

ಶಿಸ್ತು ಮನೆ ಮಾಡಿದ್ದರೂ, ಅಸ್ಪೃಶ್ಯತಾ ನಿವಾರಣೆಯ ವಿಷಯದಲ್ಲಿ ಮಾತ್ರ ಆ ತಾಲೂಕು ಕತ್ತಲೆಯಲ್ಲೇ ಇದೆಯೆಂದು ಕಂಡು ಬರುತ್ತದೆ.

ಈ ತಾಲೂಕಿನಲ್ಲಿ ಮೋತಾ ಎಂಬ ಹೆಸರಿನ ಒಂದು ದೊಡ್ಡ ಗ್ರಾಮವಿದ್ದು ಅಲ್ಲಿ ಮುಂಬೈ ಶಹರದ ಒಬ್ಬ ಔದಾರ್ಯವಂತ ಧನಿಕನ ಆಶ್ರಯದಲ್ಲಿ ನಡೆಸಲ್ಪಡುವ ಒಂದು ಧರ್ಮಾರ್ಥ ದವಾಖಾನೆಯಿದೆ. ಈ ದವಾಖಾನೆಯಲ್ಲಿ ವೈದ್ಯರ ಕೈಯಿಂದ ಒಂದು ಘೋರ ಅಪರಾಧ ಘಟಿಸಿತು. ಅದೇಂದರೆ ದವಾಖಾನೆಗೆ ಬಂದ ಬಹಿಷ್ಕೃತ ವರ್ಗದ ರೋಗಿಯ ರೋಗ ಪರೀಕ್ಷೆ ಮಾಡುವಲ್ಲಿ ಅವರು ಆ ರೋಗಿಯನ್ನು ಸ್ಪರ್ಶಿಸಬೇಕಾಯ್ತು. ಇದಕ್ಕಾಗಿ ಆ ವೈದ್ಯರ ವಿರುದ್ಧ ಭಯಂಕರ ಗಲಭೆಯೆದ್ದು, ಆ ವೈದ್ಯರು ಗ್ರಾಮದ ಜನರಿಗೆ ಕ್ಷಮಾಪಣೆಯ ಪತ್ರ ಬರೆದುಕೊಟ್ಟುದಲ್ಲದಿದ್ದರೆ ಅವರಿಗೆ ಗಡೀಪಾರೇ ಗತಿಯಾಗುತ್ತಿತ್ತು. ಮಹಾತ್ಮಾಜೀ ಅವರ ಅನುಯಾಯಿಗಳ ಪೈಕಿ ಜಮ್ನಾಲಾಲ್ ಬಜಾಜ್ ಅವರಂಥವರು ಇದಕ್ಕೊಂದು ಅಪವಾದ. ಉಳಿದವರು ಅಸ್ಪೃಶ್ಯತಾ ನಿವಾರಣೆಯ ವಿಷಯವನ್ನು ಮೂಲೆಗುಂಪಾಗಿಸುವವರೇ ಸರಿ. ಮಹಾರಾಷ್ಟ್ರದಲ್ಲಿ "ಭುತಾಳ್" ಪಕ್ಷದ ಜನರು ಗಾಂಧೀಜಿಯವರ ವಿರುದ್ಧ ಇದ್ದು ಜಾತಿಭೇದ ಮತ್ತು ಅಸ್ಪಶ್ಯತೆಯ ಭೂತವನ್ನು ಅವರು ಹೀಗೆ ಹಿಂದೂ ಸಮಾಜದ ತಲೆಯ ಮೇಲೆ ಹೊರಿಸಿಟ್ಟರು. ಗಾಂಧೀ ಪಕ್ಷದ ಚರಕಾ ಭಕ್ತಿಗೆ ಈ ಜನರು "ಸುತಾಳ್" ಎಂದು ನಾಮಕರಣ ಮಾಡಿದ್ದಾರೆ. ಮಹಾರಾಷ್ಟ್ರದಲ್ಲಿ "ಭುತಾಳ್" ಮತ್ತು "ಸುತಾಳ್" ಎರಡೂ ಅಸ್ಪಶ್ಯತೆಯ ವಿಷಯದಲ್ಲಿ ಹೆಚ್ಚು ಕಡಿಮೆ ಒಂದೇ ಸಮ. "ನವಾಕಾಳ್" ಹಾಗೂ "ಚಿತ್ರಮಯ ಜಗತ್‌ನಲ್ಲಿ ಗಾಂಧೀ ಪಕ್ಷವನ್ನು ಚೆನ್ನಾಗಿ ಪುರಸ್ಕರಿಸಲಾಗಿದ್ದರೂ, ಅಸ್ಪೃಶ್ಯತೆಯ ವಿಷಯದಲ್ಲಿ ಮಾತ್ರ ತಪ್ಪದೆ ತೆಗಳಲಾಗಿದೆ. ಒಬ್ಬ ವ್ಯಕ್ತಿಯನ್ನು ದೇವರಂತೆ ಪೂಜ್ಯವೆಂದು ಕೊಳ್ಳುವುದು, ಆದರೆ ಆ ವ್ಯಕ್ತಿಯ ಉಪದೇಶದಲ್ಲಿ ತಮಗೆ ಬೇಕಿದ್ದನ್ನು ಮಾತ್ರ ಇರಿಸಿ ಕೊಂಡು, ಬೇಡದ್ದನ್ನು ಅತ್ತ ಸರಿಸಿ ಬಿಡುವುದು ! ಯಾರೋ ಹೇಳಿದರು ; ಮಹಾತ್ಮಾಜೀ ಏನು ಹೇಳುತ್ತಾರೆ, ಮತ್ತು



ಸ್ವತಃ ಏನು ಮಾಡುತ್ತಾರೆ ಎಂಬುದನ್ನಾದರೂ ನೋಡಿ. ಆದರೆ ಈ ಜನರಲ್ಲಿ ಇದಕ್ಕೆ ಉತ್ತರ ಸಿದ್ಧವಿದೆ. ಮಹಾತ್ಮಾಜೀ ಅವರ ಈ ಉಪದೇಶ ತಮಗಲ್ಲ, ಎಂದು ಅವರು ಥಟ್ಟನೆ ಹೇಳಿ ಬಿಡುತ್ತಾರೆ. "ನ ದೇವ ಚರಿತಂ ಚರೇತ್" ಅಥವಾ "ನ ಸಾಧು ಚರಿತಂ ಚರೇತ್" ಎಂಬ ಮಾತೇ ಇದೆ. ಮಹಾತ್ಮಾಜೀ ತಮ್ಮ ಮನೆಯಲ್ಲಿ ಅಸ್ಪೃಶ್ಯ ವರ್ಗದ ಹುಡುಗಿಯೊಬ್ಬಳನ್ನು ಇರಿಸಿ ಕೊಂಡು ತನ್ನ ಮಗಳಂತೇ ಪಾಲಿಸಿ ಪೋಷಿಸಿದರೆಂದು ಅವರ ಪ್ರತಿಯೊಬ್ಬ

ಅನುಯಾಯಿಯೂ ಹಾಗೆ ಮಾಡಬೇಕೆಂದು ಯಾರು ಹೇಳುತ್ತಾರೆ? ಅದು ಅವರವರ ಖುಶಿ ಮತ್ತು ಸಾಮರ್ಥ್ಯದ ವಿಷಯ. ಮಹಾತ್ಮಾಜೀ ಅವರೇ ಹಾಗೆ ಮಾಡಲೇಬೇಕೆಂದು ಹೇಳುವುದಿಲ್ಲ. ಅಸ್ಪೃಶ್ಯತೆಯೆಂಬುದು ಮಾನವೀಯತೆಯನ್ನೂ, ನ್ಯಾಯ, ಧರ್ಮವನ್ನೂ ಬಿಟ್ಟು ಇರುವಂತಹುದು. ಆದ್ದರಿಂದ ಅದನ್ನು ಸಮಾಜದಿಂದ ಉಚ್ಚಾಟಿಸಬೇಕೆಂದು ಮಹಾತ್ಮಾಜೀ ಹೇಳುತ್ತಾರೆ. ಆದರೆ ಅಲ್ಲಿ "ನ ದೇವ ಚರಿತಂ ಚರೇತ್" ಎಂಬ ಉತ್ತರ ಹೇಗೆ ಅನ್ವಯವಾಗುತ್ತದೆ?

* * * *

## ೬೧. ಹರಿದಾಸರ ಟ್ರೇಡ್ ಯೂನಿಯನ್

ಎರಡು ವರ್ಷಗಳ ಹಿಂದೆ ಮುಂಬಯಿ ಶಹರದಲ್ಲಿ ಬಹಿಷ್ಕೃತ ವರ್ಗದ ಮಕ್ಕಳ ಕುಮಾರ ವಿನಯ ಮಂದಿರದ ಮೆರವಣಿಗೆ , ಬ್ರಾಹ್ಮಣ ಸಭೆಯ ಸಾರ್ವಜನಿಕ ಗಣಪತಿಯೆದುರಿಗೆ ಬರಲು ಬಿಡುವ ವಿಷಯದಲ್ಲಿ ವಾದ ವಿವಾದವೆದ್ದುದು ನಮ್ಮ ವಾಚಕರೆಲ್ಲರಿಗೂ ತಿಳಿದೇ ಇದೆ. ಈ ಮೆರವಣಿಗೆ ಇತರ ಪ್ರತಿಯೊಂದು ಸಾರ್ವಜನಿಕ ಗಣಪತಿಯೆದುರು ತನ್ನ ಪದ ಹಾಡಲು ಬಂದಾಗ, ಪ್ರತಿಯೊಂದು ಚಾಳ್ನ ಉತ್ಸವ ಚಾಲಕರು ಆ ಮೆರವಣಿಗೆಯನ್ನು ಸತ್ಕರಿಸಿದ್ದನ್ನು ಕಂಡು, ಜೀರ್ಣಮತವಾದಿಗಳು ಈಗ ಈ ಧೋರಣೆಯನ್ನು ಅಂಗೀಕರಿಸಲು ಆರಂಭಿಸಿದ್ದಾರೆ. ಉತ್ಸವದ ಕಾರ್ಯಕ್ರಮದ ಮಧ್ಯೆ ಮೆರವಣಿಗೆಯ ಗಾಯನಕ್ಕೆ ತಕ್ಕಂತೆ ವ್ಯಾಖ್ಯಾನ, ಪ್ರವಚನ, ಕೀರ್ತನೆ ಮುಂತಾದವುಗಳ ಅಂತರ್ಭಾವವಿರುತ್ತದೆ. ಹಾಗೆಂದೇ ಓರ್ವ ಹರಿದಾಸನು, ಅಸ್ಪಶ್ಯರ ಮೆರವಣಿಗೆ ಬರುವಲ್ಲಿ ಕೀರ್ತನೆಯ ಆಹ್ವಾನವನ್ನು ತಾನು ಸ್ವೀಕರಿಸಲೊಲ್ಲೆನೆಂದು ಸಾರಿರುವನು. ಆದರೆ ಒಬ್ಬ ಹರಿದಾಸನಿಂದಾಗಿ ಉತ್ಸವದಲ್ಲಿ ಏನೂ ನಡೆವಂತಿಲ್ಲವೆಂಬುದು ಅರಿವಾಗಿ, ಇತರ ಕೆಲ ಹರಿದಾಸರನ್ನೂ ತನ್ನತ್ತ ಸೆಳೆದು, ಈ ಕೆಲಸಕ್ಕಾಗಿ ತಮ್ಮ ಟ್ರೇಡ್ ಯೂನಿಯನ್ ಸ್ಥಾಪಿಸಿದ್ದಾರೆಂದು ಹೇಳಲಾಗಿದೆ.ಜೀರ್ಣಮತವಾದಿಗಳ ಡಂಗುರ ಬಾರಿಸುವ ಈ ನಾಮಧಾರಿ, ಹೊಟ್ಟೆಬಾಕ ಹರಿದಾಸರ ಉಪದ್ಯಾಪದಿಂದ ಸಮಾಜ ಸುಧಾರಣೆ ಈಗ ನಿಂತು ಹೋಗುವುದು ಶಕ್ಯವಲ್ಲ. ಒಂದರ್ಥದಲ್ಲಿ ಇಂತಹ ಹರಿದಾಸರು ಉತ್ಸವಗಳಲ್ಲಿ ಕೀರ್ತನೆ ಹಾಡದಿದ್ದರೆ ಒಳ್ಳೆಯದು. ಕಾರಣ, ಕೀರ್ತನೆಯಲ್ಲಿ ಜೀರ್ಣಮತವಾದವನ್ನು ಪ್ರತಿಪಾದಿಸಿ ಭೋಳೆ ಸ್ವಭಾವದ ಭಾವುಕ ಜನರನ್ನು ದಿಕ್ಕೆಡಿಸುತ್ತಾರವರು. ಆ ಅರ್ಥದಲ್ಲಿ ಅವರ ಬಹಿಷ್ಕಾರವು ಲಾಭಕರವೆಂದೇ ಹೇಳಬೇಕು. ಹಿಂದೂಧರ್ಮದ ಅಭಿಮಾನಿಗಳಾದ ಉದಾರ ಮತವಾದಿಗಳು ಸಮಾಜ ಸುಧಾರಣೆಯ ಸೂರ್ಯಪ್ರಕಾಶವನ್ನು ಕ್ಷಿತಿಜದಲ್ಲಿ ಕಂಡು ಸುಧಾರಣಾವಿರೋಧಿ ಮುಸುಕನ್ನು ಹಾಕಿಕೊಂಡಿದ್ದರೆ, ಅದಕ್ಕಾಗಿ ಇನಿತೂ ವಿಷಾದ ಪಡುವುದು ಬೇಡ.

* * * *

## ೬೩. ಮೊದಲು ಕಳಶ, ಬಳಿಕ ಅಡಿಪಾಯ

ಈ ದೇಶದಲ್ಲಿ ಕಮ್ಯೂನಿಸ್ಟರ ಕಾರ್ಮಿಕ ಚಳವಳಿಯ ಓನಾಮ ಹಾಕಲು ನಡೆದ ಮುಂಬಯಿ ಗಿರಣಿ ಕಾರ್ಮಿಕರ ಕಳೆದ ಬಾರಿಯ ದೊಡ್ಡ ಮುಷ್ಕರದ ಪರಿಣಾಮವಾಗಿ, ಕಾರ್ಮಿಕರಲ್ಲಿ ತಮ್ಮ ಚಳವಳಿಯ ಸೂತ್ರವನ್ನು ಕಮ್ಯೂನಿಸ್ಟ್ ಧೋರಣೆಯ ನಾಯಕರ ಕೈಗೆ ಒಪ್ಪಿಸಬೇಕೇ ಬೇಡವೇ ಎಂಬ ಪ್ರಶ್ನೆ ಅತ್ಯಂತ ಮಹತ್ವದ್ದಾಗಿ ಎದ್ದು ನಿಂತಿದೆ. ಸರಕಾರವು ನ್ಯಾಯಮೂರ್ತಿ ಪಿಯರ್ಸನ್ ಅವರ ನಾಯಕತ್ವದಲ್ಲಿ ನೇಮಿಸಲಾದ ನ್ಯಾಯಪೀಠವು ಗಿರಣಿ ಕಾರ್ಮಿಕರ ಯೂನಿಯನ್ ವಿರುದ್ಧ ತೀರ್ಪಿತ್ತಿದೆ. ಪ್ರಸಕ್ತ ಯೂನಿಯನ್, ತನ್ನ ಕಡೆಗೆ ಸಾಕ್ಷಿಗಳನ್ನು ಒದಗಿಸಿಕೊಳ್ಳಲು ವಿಫಲವಾಯ್ಕೆಂದು ಕೋರ್ಟ್ ಸಾರಿದ್ದರಿಂದ, ಈ ಯೂನಿಯನ್‌ನ ನಾಯಕರು, ವಾಡಿಯಾ ಮತ್ತು ಸಸೂನ್‌ನ ಕಾರ್ಮಿಕರು ಮತ್ತು ಜಾಬರ್ಸ್ ವತಿಯಿಂದ ಮಾಡಲಾದ ಕರಾರಿಗೆ ಬದ್ಧವಾಗಿಲ್ಲವೆಂದು ಕೋರ್ಟ್ ಅಭಿಪ್ರಾಯ ಪಟ್ಟಿದೆ.

ಕಳೆದ ಬಾರಿ ಸದರಿ ಯೂನಿಯನ್ ಎಲ್ಲ ಗಿರಣಿಗಳಲ್ಲಿ ಮುಷ್ಕರ ನಡೆಸಿ ಗಿರಣಿ ಮುಚ್ಚಲು ನಿರ್ಧರಿಸಿದಾಗ ಆ ಮೊದಲಲ್ಲಿ ಧುರೀಣರ ಮಾತಿಗೆ ಬೆಲೆಯಿತ್ತು ಮತ್ತು ಯೂನಿಯನ್‌ನ ಕಮಿಟಿಯ ಸಭಾಸದರು ಮತ್ತು ಸ್ವಯಂಸೇವಕರ ಪ್ರಭಾವದಿಂದ ಜನರು ಗಿರಣಿಗಳಿಂದ ಹೊರ ಬಿದ್ದರು. ಆದರೆ ಈ ಬಾರಿ ಜನರಲ್ಲಿ ಮುಷ್ಕರದ ಉತ್ಸಾಹ ಇರಲಿಲ್ಲ,

ಕುಟುಂಬ ಪೋಷಣೆಯ ಜವಾಬ್ದಾರಿ ತಮ್ಮ ಮೇಲಿದೆಯೆಂದು, ಮುಷ್ಕರ ಅವರಿಗೆ ಬೇಕಿರಲಿಲ್ಲ. ಕಳೆದ ಬಾರಿ ನಡೆದ ಆರು ತಿಂಗಳ ಮುಷ್ಕರದಲ್ಲಿ ಹೊಟ್ಟೆಯ ಪ್ರಶ್ನೆ ಇರಲಿಲ್ಲ ; ಕಾರ್ಮಿಕರ ಮಧ್ಯೆ ಮತಭೇದವೂ ಇರಲಿಲ್ಲ. ಈ ಬಾರಿ ಹೀಗೆ ದೀರ್ಘಕಾಲ ಮುಷ್ಕರ ನಡೆಸುವುದು ಅಸಾಧ್ಯವೆಂದೇ ನಾವಿದನ್ನು ವಿರೋಧಿಸಿದ್ದೇವೆ. ಕಾರ್ಮಿಕ ಚಳವಳಿ ನಮಗೆ ಅವಶ್ಯ ಬೇಕು. ಕಾರ್ಮಿಕರ ಹಿತಸಂಬಂಧದ ಸಂರಕ್ಷಣೆಗಾಗಿ ಕಾರ್ಮಿಕ ಸಂಘವೂ ಅವಶ್ಯ ಬೇಕು ಎಂದೇ ನಮ್ಮ ಅಭಿಮತ. ಆದರೆ ಕಾರ್ಮಿಕ ಚಳವಳಿಯು ನಿಷ್ಕಾರಣವಾಗಿ ಉಪವಾಸ ಮತ್ತು ಸಾಲಸೋಲಗಳ ಮಧ್ಯೆ ಪರ್ಯವಸಾನವಾಗುವುದು ನಮಗೆ ಇಷ್ಟವಿಲ್ಲ. ಗಿರಣಿ ಕಾರ್ಮಿಕರಲ್ಲಿ ಅಸ್ಪೃಶ್ಯರು ಸಾವಿರಾರು ಮಂದಿಯಿದ್ದು, ಅವರ ಸ್ಥಿತಿ ಇತರ ಕಾರ್ಮಿಕರಿಗಿಂತ ಭಿನ್ನವಾಗಿದೆ. ಮೊದಲಿಗೆ ಅವರಿಗೆ ಎಲ್ಲರಿಗಿಂತ ಕಡಿಮೆ ವೇತನದ ಕೆಲಸವೇ ಸಿಗುತ್ತದೆ ಮತ್ತು ಇವರಲ್ಲಿ ಬಹಳಷ್ಟು ಮಂದಿಗೆ ಊರಿನಲ್ಲಿ ಹೊಲಗದ್ದೆಯ ಆಧಾರವೂ ಇಲ್ಲ. ಬಹಳಷ್ಟು ಜನ ಕೈಯಿಂದ ಬಾಯಿಗೆ ಎಂಬಂತಿರುವುದರಿಂದ ಮತ್ತು ಕಳೆದ ಬಾರಿಯ ದೊಡ್ಡ ಮುಷ್ಕರ ಮತ್ತು ಈ ಬಾರಿ ಅಲ್ಲಿ ಇಲ್ಲಿ ಎಂಬಂತೆ ನಡೆದ ಸಣ್ಣಪುಟ್ಟ ಮುಷ್ಕರಗಳು ಅವರ ಸಾಲದ ಬೇಡಿಯನ್ನು ಬಿಗಿದುದರಿಂದ ಈಗಿನ್ನು ಮುಷ್ಕರಕ್ಕೆ ಅವರಲ್ಲಿ ಪ್ರಾಣವೇ ಇರಲಿಲ್ಲ. ಆದರೆ ಈ ವಿಷಯದ ಬಗ್ಗೆ ಯೋಚಿಸದೆ ಗಿರಣಿ ಕಾರ್ಮಿಕ ಯೂನಿಯನ್‌ನ ಧುರೀಣರು ದೊಡ್ಡ ಮುಷ್ಕರದ ಕರೆಯನ್ನೇ ಇತ್ತರು. ಅದರಿಂದ ಆಗಬೇಕಾದ ಪರಿಣಾಮವೇ ಆಯ್ತು. ಮುಷ್ಕರವು ಕಾರ್ಮಿಕರ ದೊಡ್ಡ ಅಸ್ತ್ರ. ಆದರೆ ಅದರ ಉಪಯೋಗವನ್ನು ಜಾಗರೂಕತೆಯಿಂದಲೇ ಮಾಡಬೇಕಾಗುತ್ತದೆ. ಶುದ್ಧ ಕಾರ್ಮಿಕ



ಸಂಘದ ಚಳವಳಿಯಲ್ಲೇ ಮುಷ್ಕರ ನಡೆಯಬೇಕಾಗುತ್ತದೆ ಹಾಗೂ ಆ ಮುಷ್ಕರದ ಉದ್ದೇಶ ಕಾರ್ಮಿಕರ ದುಃಖವನ್ನು ದೂರ ಮಾಡುವುದೇ ಆಗಿರುತ್ತದೆ. ಕ್ರಾಂತಿವಾದಿ ಚಳವಳಿಯಲ್ಲಿ ಕಾರ್ಮಿಕರ ದುಃಖವನ್ನು ದೂರ ಮಾಡುವುದಷ್ಟೇ ಅಲ್ಲ, ಕ್ರಾಂತಿಯ ತಯಾರಿಯ ತರಬೇತಿ ನೀಡುವದು ಮುಖ್ಯ ಉದ್ದೇಶವಾಗಿದೆ. ಕಾರ್ಮಿಕ ಚಳವಳಿಯಲ್ಲಿ ಕಾರ್ಮಿಕರ ಆರ್ಥಿಕ ಸ್ಥಿತಿ ಸುಧಾರಿಸುವತ್ತ ಲಕ್ಷ್ಯ ಕೊಡಲಾಗುತ್ತದೆ, ಆದರೆ ಕ್ರಾಂತಿವಾದಿ ಚಳವಳಿಯಲ್ಲಿ ಕಾರ್ಮಿಕರ ಆರ್ಥಿಕ ಸ್ಥಿತಿ ಸುಧಾರಿಸುವುದು ಕೇವಲ ತೋರಿಕೆಗಾಗಿಯಷ್ಟೇ ಇರುತ್ತದೆ. ಇದರ ಒಳಗಣ ಹೇತು, ಕಾರ್ಮಿಕರ ಮಧ್ಯೆ ಅಸಂತೋಷ ಹೆಚ್ಚಿಸಿ, ಕ್ರಾಂತಿವಾದಕ್ಕೆ ಅವರ ಮನವನ್ನು ಅನುಗೊಳಿಸಿಕೊಳ್ಳುವುದೇ ಆಗಿರುತ್ತದೆ. ಅರ್ಥಾತ್, ಕಾರ್ಮಿಕರು ಉಪವಾಸ ಬಿದ್ದಷ್ಟೂ, ಅವರು ಪಾಡು ಪಟ್ಟಷ್ಟೂ, ಅವರ ಮೇಲಿನ ದೌರ್ಜನ್ಯ ಹೆಚ್ಚಿದಷ್ಟೂ ಕ್ರಾಂತಿವಾದಕ್ಕೆ ಒಳ್ಳೆಯದೇ. ಕಾರಣ, ಬೇಸತ್ತು ಹೋದುದಲ್ಲದೆ ಕ್ರಾಂತಿಗಾಗಿ ಯಾರೂ ಮುಂದಾಗುವುದಿಲ್ಲ. ಅಲ್ಪಕಾಲದಲ್ಲೇ ಕ್ರಾಂತಿಯಾಗಿ ನಮ್ಮ

ಸಮಾಜ ವ್ಯವಸ್ಥೆ ಪೂರ್ಣ ಬದಲಾಗುವುದು ಮತ್ತು ಕಾರ್ಮಿಕರ ರಾಜ್ಯ ಅಸ್ತಿತ್ವಕ್ಕೆ ಬರುವುದೆಂದು ಕ್ರಾಂತಿವಾದಿಗಳಿಗೆ ಭರವಸೆ ಇರುವುದರಿಂದ ಕಾರ್ಮಿಕರ ಈಗಿನ ಸ್ಥಿತಿಯ ಬಗ್ಗೆ ಅವರಿಗೆ ಪರಿವೆಯಿಲ್ಲ. ಇಂತಹ ಝಟ್‌ಪಟ್ ಕ್ರಾಂತಿ ಇಷ್ಟ ಹಾಗೂ ಸಾಧ್ಯ ಎಂದು ನಿರ್ಧರಿಸಿದರೆ, ಕ್ರಾಂತಿವಾದಿ ನಾಯಕರ ಧೋರಣೆ ಸರಿಯೆಂದೇ ಹೇಳಬೇಕು. ಆದರೆ ಅಂತಹ ಝಟ್‌ಪಟ್ ಕ್ರಾಂತಿ ಶಕ್ಯವಲ್ಲ, ಇಷ್ಟವೂ ಅಲ್ಲ ಎಂದೇ ನಮ್ಮ ಪ್ರಾಮಾಣಿಕ ಅಭಿಪ್ರಾಯ. ಇಂದಿನ ಸಮಾಜ ವ್ಯವಸ್ಥೆ ಸಮಾಧಾನಕರವಾಗಿಲ್ಲ, ಸಮಾಜದಲ್ಲಿ ಸಂಪತ್ತಿನ ಹಂಚಿಕೆ ಅತ್ಯಂತ ವಿಷಮತರದ್ದಾಗಿದೆ. ಮತ್ತು ಬೊಗಸೆಯಷ್ಟು ಜನರ ಕೈಯಲ್ಲಿ ಕೋಟ್ಯಾವಧಿ ಜನರ ಜೀವವಿದೆಯೆಂಬುದು ನಿರ್ವಿವಾದ. ಮತಭೇದವಿದ್ದರೆ ಸಮಾಜ ವ್ಯವಸ್ಥೆಯಲ್ಲಿ ಆ ರೋಗ ನಿರ್ಮೂಲನಕ್ಕೆ ಸರಿಯಾದ ಚಿಕಿತ್ಸೆ ಆಗಬೇಕು, ನಿಜ, ಆದರೆ ಹಾಗೆಂದು ರೋಗಿಗೆ ಅಪಾಯವಾದರೂ ಸರಿ, ಎಂದಲ್ಲ. ಹಿಂದುಸ್ಥಾನದ ಸದ್ಯದ ಸ್ಥಿತಿಯಲ್ಲಿ ಕಮ್ಯೂನಿಸಮ್ ಎಷ್ಟು ಹಿತಕರ, ಅವಸರದಲ್ಲಿ ರಾಜ್ಯಕ್ರಾಂತಿ ತರುವುದು ಎಷ್ಟರ ಮಟ್ಟಿಗೆ ಸಾಧ್ಯ ಎಂಬುದನ್ನೆಲ್ಲಾ ನಾವು ಸ್ವಲ್ಪ ಬದಿಗಿಟ್ಟು, ದೇಶದ ಕಾರ್ಮಿಕರ ಮನೋಭೂಮಿಕೆ ಎಷ್ಟರ ಮಟ್ಟಿಗೆ ಸಿದ್ಧವಾಗಿದೆ ಎಂಬ ಬಗ್ಗೆ ಮೊದಲು ವಿಚಾರ ಮಾಡಬೇಕು. ಮೊದಲಿಗೆ ನಮಗೆ ಕಂಡುಬಂದ ವಿಚಾರವೆಂದರೆ ನಾಯಕರು ಕಮ್ಯೂನಿಸ್ಟ್ರೇ ಆಗಿದ್ದರೂ, ಅನುಯಾಯಿಗಳು ಕಮ್ಯೂನಿಸ್ಟರಲ್ಲ. ಕಮ್ಯೂನಿಸ್ಟರನ್ನು ಯಾವ ಕಾರ್ಮಿಕರು ತಮ್ಮ ನಾಯಕರೆಂದು ಗಣಿಸುತ್ತಾರೋ, ಆ ಕಮ್ಯೂನಿಸ್ಟರ ಎಲ್ಲ ವಿಚಾರಗಳ ಅರಿವು ಅವರಿಗಿಲ್ಲವೆಂಬುದನ್ನು ಮರೆಯಬಾರದು. ಕಮ್ಯೂನಿಸಮ್‌ನಲ್ಲಿ ದೇವರು, ಧರ್ಮ ಮತ್ತು ರಾಷ್ಟ್ರವನ್ನು ಗಡೀಪಾರು ಮಾಡಲಾಗಿದೆ. ದೇವರು, ಧರ್ಮ ಮತ್ತು ರಾಷ್ಟ್ರ ಎಂಬ ಸಂಬಂಧದ ಕಲ್ಪನೆ, ಸ್ವಾರ್ಥಿ ಜನರು, ತಮ್ಮ ಶ್ರೇಷ್ಠತ್ವವನ್ನು ಶಾಶ್ವತವಾಗಿರಿಸುವ ಉದ್ದೇಶದಿಂದ ಬಹುಜನ ಸಮಾಜದಲ್ಲಿ ಪಸರಿಸಿದ್ದಾಗಿದೆ. ಈ ಕಲ್ಪನೆಯ ಲಾಭ, ಬಂಡವಾಳಶಾಹಿ, ಜಮೀನ್ದಾರ್‌ಶಾಹಿ, ಮತ್ತು ಸಾಮ್ರಾಜ್ಯಶಾಹಿಗೆ ಸಿಗುವಂತಹುದು, ಮತ್ತು ಆ ಕಲ್ಪನೆಯ ನಿರ್ಮೂಲನವಾಗದ ಹೊರತು, ಜಗತ್ತಿನಲ್ಲಿ ಶಾಶ್ವತ ಶಾಂತಿ ನೆಲಸುವಂತಿಲ್ಲ, ಮತ್ತು ಬಹುಜನ ಸಮಾಜ ಸುಖಿಯಾಗಿರುವಂತಿಲ್ಲ, ಎಂಬುದು ಕಮ್ಯೂನಿಸ್ಟರ ಸಿದ್ಧಾಂತ, ಆದರೆ ಅದರ ಕಲ್ಪನೆ ಎಷ್ಟು ಮಂದಿ ಕಾರ್ಮಿಕರಿಗೆ ಇದೆ? ದೇವರು ಹಾಗೂ ಧರ್ಮದ ಸಂಬಂಧ ಕಮ್ಯೂನಿಸ್ಟರ ವಿಚಾರ ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿದ್ದರೂ, ಕಮ್ಯೂನಿಸ್ಟರಿಗೆ ಸದ್ಯದ ಸ್ಥಿತಿಯಲ್ಲಿ ಒಬ್ಬನಾದರೂ ಅನುಯಾಯಿ ಸಿಗುವಂತಿಲ್ಲ. ಲೆನಿನ್‌ನ ಪುತ್ಥಳಿ ಹಾಗೂ ಚಿತ್ರವನ್ನು



ಗೌರವಿಸುವ ಕಮ್ಯೂನಿಸ್ಟ್ ಧುರೀಣರು, ಶಿವಾಜಿ ಮಹಾರಾಜರ ಚಿತ್ರವನ್ನು ಯೂನಿಯನ್ ಕಾರ್ಯಾಲಯದಲ್ಲಿ ಇಡುವುದನ್ನು ವಿರೋಧಿಸಿದಾಗ, ಅವರ ಪ್ರತಿಯೊಬ್ಬ ಮರಾಠಾ ಅನುಯಾಯಿ ಅವರ ಮೇಲೆ ಮುಗಿಬಿದ್ದರು. ಜಾತಿಭೇದ

ಹಾಗೂ ಸ್ಪೃಶ್ಯಾಸ್ಪೃಶ್ಯತೆ ಕಾರ್ಮಿಕರಲ್ಲಿ ಕಡಿಮೆಯಿಲ್ಲ. ಆದರೂ, ಗಿರಣಿಯ ನೀರಿನ ನಲ್ಲಿಯ ಬಳಿಗೆ ಅಸ್ಪೃಶ್ಯರನ್ನು ಬಿಡದಿರುವಲ್ಲಿ ಕೆಂಪು ಬಾವುಟದ ಕಾರ್ಮಿಕರ ಪಾತ್ರವೂ ಇದೆ. ಜಾತಿಭೇದ ಹಾಗೂ ಅಸ್ಪೃಶ್ಯತೆ ಕಮ್ಯೂನಿಸಮ್‌ನ ಮೂಲತತ್ವಕ್ಕೆ ಪೂರ್ತಿ ಭಿನ್ನವಾಗಿದೆ. ಲೆನಿನ್ ಎಲ್ಲಾದರೂ ಹಿಂದುಸ್ಥಾನದಲ್ಲಿ ಜನಿಸಿದ್ದರೆ, ಮೊದಲಿಗೆ ಜಾತಿಭೇದ ಹಾಗೂ ಅಸ್ಪೃಶ್ಯತೆಯನ್ನು ಸಂಪೂರ್ಣ ಕಿತ್ತು ಹಾಕುತ್ತಿದ್ದರು, ಮತ್ತು ಹಾಗೆ ಮಾಡಿದ್ದಲ್ಲದೆ, ಕ್ರಾಂತಿಯ ಕಲ್ಪನೆಯನ್ನು ಮನಸ್ಸಿಗೂ ತರುತ್ತಿರಲಿಲ್ಲ. ವಾದಕ್ಕಾಗಿ ನಾವು ಒಂದು ಕ್ಷಣ, ಈ ದೇಶದಲ್ಲಿ ಕ್ರಾಂತಿ ತರುವಲ್ಲಿ ಕಮ್ಯೂನಿಸ್ಟರು ಯಶಸ್ವಿಯಾದರೆಂದು ಕೊಳ್ಳೋಣ. ಆದರೆ, ಆ ಕ್ರಾಂತಿ ಬಹುಜನ ಸಮಾಜಕ್ಕೆ ಸುಖ ತಂದೀತೇ? ಕಮ್ಯೂನಿಸ್ಟರ ಧ್ಯೆಯದ ಸಮಾಜ ವ್ಯವಸ್ಥೆ ರೂಢಿಯಲ್ಲಿ ಬರುವುದು ಸಾಧ್ಯವೇ? ಎಂದಾದರೂ ಸಮಾಜದಲ್ಲಿ ವಿಶೇಷ ಗೊಂದಲವೆದ್ದು, ಅಂತಃಕಲಹ ಹೆಚ್ಚಿದರೆ, ಸದ್ಯದ ದುರ್ಬಲ ವರ್ಗವು ಜಾತಿ ದುರಭಿಮಾನಿ ಪ್ರಬಲ ವರ್ಗದ ದೌರ್ಜನ್ಯಕ್ಕೆ ಬಲಿಯಾಗುವುದು.

ರಶ್ಯಾದಂತೆ ಹಿಂದೂಸ್ತಾನದಲ್ಲೂ ಸೋವಿಯೆಟ್ ರಾಜ್ಯ ವ್ಯವಸ್ಥೆ ಆರಂಭವಾದರೆ, ಜಾತಿಭೇದವು ತನ್ನಷ್ಟಕ್ಕೆ ದೂರವಾಗುವುದು; ಯಕ್ಷಿಣಿಯ ಮಂತ್ರದಂಡದಂತೆ ಪರಿಣಾಮವಾಗಿ ವಿಷಮತೆ ತನ್ನಷ್ಟಕ್ಕೇ ಅದೃಶ್ಯವಾಗುವುದು ಎಂದು ಹಿಂದೀ ಕಮ್ಯೂನಿಸ್ಟರು ತಿಳಿದಿದ್ದಾರೆಯೇ? ದೇಶದ ಎಲ್ಲ ಬಂಡವಾಳ ಮತ್ತು ಎಲ್ಲ ಜಮೀನು ಸಮಾಜದ ಮಾಲಿಕತ್ವಕ್ಕೆ ಸೇರಿದ್ದೆಂಬ ಕಮ್ಯೂನಿಸ್ಟರ ತತ್ವ, ಈ ದೇಶದ ರೈತರಿಗೆ ಸುಲಭದಲ್ಲಿ ಅರಗಿಸಿ ಕೊಳ್ಳುವಂತಹದೆಂದು ಕಮ್ಯೂನಿಸ್ಟರು ತಿಳಿದಿರುವರೇ? ರಶಿಯನ್ ರೈತರ ಕೊರಳಲ್ಲೂ ಈ ತತ್ವ ಇಳಿಯುವದಿಲ್ಲವಾಗಿ, ಸೋವಿಯೆಟ್ ಸರಕಾರ, ತತ್ವವನ್ನು ಬಿಟ್ಟು ಕೊಟ್ಟು ಒಪ್ಪಂದದ ಧೋರಣೆ ಅನುಸರಿಸಿದ್ದು ಪ್ರಸಿದ್ಧವೇ ಇದೆ. ಸ್ವಲ್ಪದರಲ್ಲಿ ಹೇಳಬೇಕೆಂದರೆ ದೇಶದ ಕಾರ್ಮಿಕರಿಗೆ ಮತ್ತು ರೈತರಿಗೆ ಕಮ್ಯೂನಿಸ್ಟರ ತತ್ವ ಇಂದೂ ರುಚಿಸುವುದಾಗಲೀ, ಪಚನವಾಗುವುದಾಗಲೀ ಶಕ್ಯವಿಲ್ಲ. ಕಮ್ಯೂನಿಸ್ಟರ ಆದರ್ಶ ಸಮಾಜವನ್ನು ಅಸ್ತಿತ್ವಕ್ಕೆ ತರಲು, ಬಹುಜನ ಸಮಾಜದ ಯಾವ ಮನೋಭೂಮಿಕೆ ತಯಾರಾಗಬೇಕೋ ಅದು ಒಂದಿಷ್ಟೂ ಸಿದ್ಧವಾಗಿಲ್ಲ. ಹಾಗೆಂದೇ ಈ ದೇಶದಲ್ಲಿನ ಕಮ್ಯೂನಿಸ್ಟರ ಪ್ರಸಕ್ತ ಚಳವಳಿ,

"ಮೊದಲು ಕಳಶ, ಬಳಿಕ ಅಡಿಪಾಯ" ಎಂಬಂಥ ವಿಪರೀತ ಕ್ರಮದ್ದಾಗಿದೆ, ಎಂದೇ ನಾನು ಹೇಳುವೆ.

* * * *

## ೬೪. ಒಕ್ಕಣ್ಣಿನ ಹರಿಣಿಯ ಕಥೆ

ಈಸೋಪನ ನೀತಿಕಥೆಗಳಲ್ಲಿ ಒಂದು ಹರಿಣಿಯ ಕಥೆಯಿದೆ. ಈ ಹರಿಣಿಗೆ ಒಂದು ಕಣ್ಣು ಕುರುಡಾಗಿತ್ತು. ತನ್ನ ಈ ಒಕ್ಕಣ್ಣಿನ ಸಹಾಯದಿಂದ ಸುಲಭವಾಗಿ ತಾನು ಬೇಟೆಯಾಡಲ್ಪಡದಂತೆ, ಕಾಡಿನಲ್ಲಿ ಕೆರೆದಂಡೆಯಲ್ಲಿ ಮೇಯುವಾಗ, ಕುರುಡು ಕಣ್ಣು ಕೆರೆಯ ಬದಿಗೆ, ಸರಿಯಿರುವ ಕಣ್ಣು ನೆಲದ ಕಡೆಗೆ ಇರುವಂತೆ ಎಚ್ಚರ ವಹಿಸುತ್ತಿತ್ತು. ಹೀಗಾಗಿ

ಬೇಟೆಗಾರರ ಪ್ರಯತ್ನ ವ್ಯರ್ಥವಾಗುತ್ತಿತ್ತು. ಈ ವಿಷಯ ಶಿಕಾರಿಯೊಬ್ಬನ ಲಕ್ಷ್ಯಕ್ಕೆ ಬಂದು, ಆತ ದೋಣಿಯೊಂದರಲ್ಲಿ ಕುಳಿತು ಕೆರೆ ಮಧ್ಯಕ್ಕೆ ಸಾಗಿ, ಹರಿಣದತ್ತ ಗುರಿಯಿಟ್ಟ, ಕೆರೆಯತ್ತಣಿಂದ ತನಗೆ ಅಪಾಯವಿಲ್ಲವೆಂದುಕೊಂಡ ಹರಿಣವು, ಕೊನೆಗೂ ಬೇಟೆಗೆ ಆಹುತಿಯಾಯ್ತು. ಕಳೆದ ಗಣೇಶೋತ್ಸವದಲ್ಲಿ ಪನ್ವೇಲ್‌ನಲ್ಲಿ ನಡೆದ ಘಟನೆಯ ಹಿನ್ನೆಲೆಯಲ್ಲಿ ಈಸೋಪನ ಈ ನೀತಿಕಥೆ ನೆನಪಾಗದಿರದು. ಪನ್ವೇಲ್‌ನ ಜೀರ್ಣಮತವಾದಿಗಳು ಅಲ್ಲಿನ ಕೆರೆಯ ದೇವಘಾಟ್‌ನಲ್ಲಿ ಅಸ್ಪೃಶ್ಯರ ಗಣಪತಿ ವಿಸರ್ಜನೆಗೆ ಅಡ್ಡಿಯೊಡ್ಡಿ ಸರಕಾರಕ್ಕೆ ವಿನಂತಿಸಿ ಕೊಂಡರು. ಕೆಲವರು ಪೂಜಾರಿಗಳು ಜನರಿಗೆ ಹೇಳಿಕೊಟ್ಟು ತಮ್ಮೆಡೆಗೆ ಮಾಡಿಕೊಂಡರೂ, ದೇವಘಾಟ್‌ನಲ್ಲಿ ಅಸ್ಪೃಶ್ಯರ ಗಣಪತಿ ವಿಸರ್ಜನೆಗೆ ತಮ್ಮ ಅಡ್ಡಿಯೇನೂ ಇಲ್ಲವೆಂದು ನೂರಾರು ಜನರು ಸರಕಾರಕ್ಕೆ ಮನನ ಮಾಡಲು, ಆಗ, ದೇವಘಾಟ್‌ಗೆ ಹೋಗುವ ಬಲ್ಲಾಳೇಶ್ವರನ ಏಕೈಕ ರಸ್ತೆ ದೇವಳದ ಖಾಸಗಿ ಒಡೆತನದ್ದೆಂದು ಸಾರಿ ಆ ರಸ್ತೆಯಲ್ಲಿ ಗಣಪತಿ ವಿಸರ್ಜನೆಯನ್ನು ನಿಷೇಧಿಸಲಾಯ್ತು. ಕೆರೆ ಹಾಗೂ ದೇವಘಾಟ್, ಖಾಸಗಿ ಒಡೆತನದಲ್ಲದಿದ್ದರೂ, ದೇವಘಾಟ್‌ಗೆ ಹೋಗುವ ರಸ್ತೆ ಖಾಸಗಿ ಒಡೆತನದ್ದೆಂದರೆ, ಅಸ್ಪಶ್ಯರು ಸೋತು ಸುಮ್ಮನಾಗುವರೆಂದು ಈ ಉಪಾಯ ಮಾಡಲಾಯ್ತು. ಆದರೆ ಕೊನೆಗೆ ಈ ಯುಕ್ತಿಯೇ ಅವರನ್ನು ಸಿಕ್ಕಿಸಿ ಹಾಕಿತು. ಬಹಿಷ್ಕೃತ ವರ್ಗದ ಗಣಪತಿಯನ್ನು, ಪನ್ವೇಲ್ ಮುನಿಸಿಪಾಲಿಟಿಯ ಅಧ್ಯಕ್ಷ ಶ್ರೀ ಆತ್ಮಾರಾಮ್ ಶೇಡ್ ಆಠವಣೇ ಅವರ ಗಣಪತಿಯ ಜೊತೆಗೇ ದೋಣಿಯಲ್ಲಿರಿಸಿ ದೇವಘಾಟ್‌ಗೆ ಒಯ್ಯಲಾಯ್ತು, ಮತ್ತು ಅಲ್ಲಿ ದೊಡ್ಡ ರೀತಿಯಲ್ಲಿ ವಿಸರ್ಜನಾ ಸಮಾರಂಭ ನಡೆಯಿತು. ಈ ರೀತಿ ದುರಾಗ್ರಹಿ ಮಡಿವಂತ ಜನರ ಪಾಡು ಆ ಒಕ್ಕಣ್ಣ ಹರಿಣಿಯ ಪಾಡಿನಂತಾಯ್ತು. ಕಳೆದ ವರ್ಷ ಬಹಿಷ್ಕೃತರ ಗಣಪತಿ ವಿಸರ್ಜನೆ, ದೇವಘಾಟ್‌ನಲ್ಲಿ ಮಾಡಲಾಯ್ತು, ಮತ್ತು ಆಗ ಯಾರೂ ಅಡ್ಡಿ ಪಡಿಸಲೂ ಇಲ್ಲ, ಅಷ್ಟಲ್ಲದೆ, ಘಾಟ್‌ನ ಶುದ್ಧೀಕರಣಕ್ಕೂ ಯಾರೂ ಮುಂದಾಗಲಿಲ್ಲ.

ಈ ವರ್ಷ, ದೇವಘಾಟ್‌ನಲ್ಲಿ ಮಡಿವಂತರು, ಫಿನಾಯಿಲ್, ಇಲ್ಲವೇ ಗೋಮೂತ್ರ ಸಿಂಪಡಿಸಿ, ನಂತರ ಒಂದಿಷ್ಟು ಬ್ರಾಹ್ಮಣ ಭೋಜನ ಬಡಿಸಿ ಮಡಿಯಾಗಲಿದೆಯೋ ಏನೆಂದು ನೋಡಬೇಕು. ಹಳ್ಳಿಯ ಜನರ ದೇಣಿಗೆ ಬಂದರೆ, ಮಂತ್ರಪಠಣ ಪೂರ್ವಕ, ಬ್ರಾಹ್ಮಣ ಭೋಜನ ಸಹಿತ ಶುದ್ಧೀಕರಣ ಆಗುವುದೆಂದು ಹೇಳಬೇಕಾಗಿಲ್ಲ. ಹೀಗೆ ದೇವಘಾಟ್‌ನಲ್ಲಿ ಬಹಿಷ್ಕೃತರ ಗಣಪತಿ ವಿಸರ್ಜನೆಗೆ ನೆರವಾದವರಿಗೆ ಅಸ್ಪೃಶ್ಯ ವರ್ಗ ಆಭಾರಿ ಆಗಿದೆ, ಈ ವಿಷಯದಲ್ಲಿ ಶ್ರೀ ಆತ್ಮಾರಾಮ ಶೇರ್ ಆಠವಣೆ ಅವರಿಗೆ ವಿಶೇಷ ಧನ್ಯವಾದ ಸಲ್ಲಿಸಬೇಕು. ಅವರು ವಾರ್‌ಕರೀ ಸಂಪ್ರದಾಯಸ್ಥರು,



ಆದರೆ ಅವರ ಧಾರ್ಮಿಕ ಮತ್ತು ಸಾಮಾಜಿಕ ವಿಚಾರ, ಆ ಸಂಪ್ರದಾಯದ ಇತರ ಅನೇಕರಂತೆ ಅನುದಾರವಾದುದಲ್ಲ

ಪನ್ವೇಲ್‌ನ ಈ ಉದಾರ ಮತವಾದಿ ಮಂಡಳಿ ಮತ್ತು ಅಲ್ಲಿನ ಬಹಿಷ್ಕೃತ ಸಮಾಜದ ಈ ಪ್ರಕರಣವನ್ನು ಇಲ್ಲಿಗೇ ನಿಲ್ಲಿಸದೆ, ಬಲ್ಲಾಳೇಶ್ವರನ ದೇವಳದ ಸಮೀಪದಿಂದ ದೇವಘಾಟ್‌ಗೆ ಹೋಗುವ ರಸ್ತೆ ಖಾಸಗಿ ಎಂದ ಆ ದುರಾಗ್ರಹಿಗಳ ದಾವೆ ಶಾಶ್ವತ ಪರಿಹಾರವಾಗಬೇಕು ಎಂದೇ ನಮ್ಮ ಆಸೆ.

* * * *

## ೬೫. ಒಕ್ಕಣ್ಣಿನ ಹಿಂದೂ ಸಮಾಜ

ಈಸೋಪನೀತಿಯ ಒಕ್ಕಣ್ಣ ಹರಿಣದಂತೆಯೇ ಹಿಂದೂ ಸಮಾಜವು ಅನೇಕ ವಿಷಯಗಳಲ್ಲಿ ಒಕ್ಕಣ್ಣಿನದಾಗಿದೆ. ಅದರ ಒಂದು ಕಣ್ಣನ್ನು ರೂಢಿಯೇ ಕಿತ್ತು ಹಾಕಿದೆ.

ಆ ಕಣ್ಣು ಯಾವ ದಿಕ್ಕಿಗಿದೆಯೋ ಆ ದಿಕ್ಕು ಅದಕ್ಕೆ ಕಾಣಿಸುವುದಿಲ್ಲ. ಅಷ್ಟೇ ಅಲ್ಲ, ಆ ಮುಚ್ಚಿದ ಕಣ್ಣ ದಿಕ್ಕಿಗೆ ತಿರುಗಿ ಆತ್ಮ ವಂಚನೆ ಮಾಡಿಕೊಳ್ಳುವ ಕಲೆ ಹಿಂದೂ ಸಮಾಜಕ್ಕೆ ಕರಗತವಾಗಿದೆ. ಇಂಗ್ಲೆಂಡ್‌ನ ಸಶಸ್ತ್ರ ಯೋಧ ನೆಲ್ಸನ್‌ನ ಕಥೆಯಂತೆ, ಒಮ್ಮೆ ಯುದ್ಧದಲ್ಲಿ ಆತ ತನ್ನ ಒಡಕು ಕಣ್ಣಿನಲ್ಲಿ ದುರ್ಬೀನು ಹಚ್ಚಿದ್ದ; ನಮ್ಮ ಮಡಿವಂತರು ತಮ್ಮ ನವ್ಯಾನವ್ಯ ವಾದದಲ್ಲಿ ಹೀಗೆಯೇ ಮಾಡುತ್ತಾರೆ. ವ್ಯತ್ಯಾಸವೆಂದರೆ, ನೆಲ್ಸನ್ ಟ್ರಫಾಲ್ಗರ್‌ನ ಯುದ್ಧವನ್ನು ಜಯಿಸಿದ್ದರೆ, ಇಲ್ಲಿ ಮಾತ್ರ ಹಿನ್ನಡೆಯೇ ಆಗಿದೆ. ಹಿಂದೂ ಸಮಾಜದ ತೆರೆದ ಕಣ್ಣಿಗೆ ಅದ್ವೈತವಾದ ಮತ್ತು ಸಮತಾವಾದ ಹಾಗೂ ತುಕಾರಾಮಬುವಾ ಅವರ ಕೋಟಿಕ್ರಮ ಕಾಣಿಸುತ್ತದೆ, ಆದರೆ, ಸಮಾಜದ ವಿಷಮತೆಯೆಡೆಗೆ ಅದು ತನ್ನ ಒಡೆದ ಕಣ್ಣನ್ನೇ ತಿರುಗಿಸಿದೆ. ತೆರೆದ ಕಣ್ಣಿಗೆ ರಾಜಕೀಯ ಗುಲಾಮಗಿರಿ ಕಾಣಿಸುತ್ತದೆ ಆದರೆ ಸಾಮಾಜಿಕ ಗುಲಾಮಗಿರಿ ಒಡೆದ ಕಣ್ಣಿನ ಪಾಲಿಗೆ ಬಂದಿದೆ. ತೆರೆದ ಕಣ್ಣಿಗೆ ಧರ್ಮಶಾಸ್ತ್ರಗಳಲ್ಲಿನ ಸ್ವಚ್ಛತೆಯ ಉಪದೇಶ ಕಾಣಿಸುತ್ತದೆ, ಆದರೆ ಬ್ರಾಹ್ಮಣರ ಕಾಲು ತೊಳೆದ ನೀರು ಕುಡಿದರೆ ಬ್ರಾಹ್ಮಣೇತರರಿಗೆ ಮೋಕ್ಷಲಾಭವಾಗುತ್ತದೆ ಎಂಬ ಪಾಠವನ್ನು ಒಡೆದ ಕಣ್ಣಿಂದಲೇ ನೋಡಬೇಕಾಗುತ್ತೆ. ತೆರೆದ ಕಣ್ಣಿಗೆ ಮುಸಲ್ಮಾನ ಮತ್ತು ಕ್ರೈಸ್ತ ಧರ್ಮದ ಏಳಿ ಕಾಣಿಸುತ್ತದೆ, ಮತ್ತು ಆ ಕಾರಣ, ಸಂಘಟನೆ ಮತ್ತು ಶುದ್ಧಿಯ ಆವಶ್ಯಕತೆ ಇರುವುದಿಲ್ಲ ; ಆದರೆ ಅಂತಃಸ್ಥ ವಿಘಟನೆ ಮತ್ತು ಅಂತಃಶುದ್ಧಿಯ ಅಭಾವವನ್ನು ಕಾಣುವಾಗ ಒಡಕು ಕಣ್ಣು ಅಡ್ಡ ಬರುತ್ತದೆ. ಈ ಒಡೆದ ಕಣ್ಣಿನ ಮೇಲೆ ರೂಢಿಪ್ರಿಯತೆಯ ಮತ್ತು ಸ್ವಾರ್ಥದ ಪರದೆ ಇಳಿ ಬಿದ್ದಿದೆ ; ಆ ಪರದೆಯನ್ನು ಶಸ್ತ್ರಕ್ರಿಯೆಯಿಂದ ಕಿತ್ತೊಗೆದು ಕಣ್ಣನ್ನು ಸ್ವಚ್ಛವಾಗಿರಿಸಿಕೊಳ್ಳಬಹುದು. ಆದರೆ ಆ ಶಸ್ತ್ರಕ್ರಿಯೆಗೆ

ಹಿಂದೂ ಸಮಾಜವಿನ್ನೂ ಸಿದ್ಧವಾಗಿಲ್ಲ. ಕಾರಣ, ಈ ಒಡಕು ಕಣ್ಣನ್ನು ಅದು ತನ್ನ ಲಾಭಕ್ಕೆ ಹೇಗೆ ಬೇಕೋ ಹಾಗೆ ಬಳಸಿಕೊಳ್ಳಬಹುದಾಗಿದೆ.

* * * *

## ೬೬. ದಾವರ್ ಮತ್ತು ವರಾಡ್ಕರ್

ಕಮ್ಯೂನಿಸ್ಟರ ಧ್ಯೇಯ ಮತ್ತು ಮಾರ್ಗದ ಬಗ್ಗೆ ಸಹಾನುಭೂತಿ ತೋರುವ ಮತ್ತು ಅವರ ಪಕ್ಷ ಹಿಡಿದು ನಿಜವಾದ ಕಾರ್ಮಿಕ ಚಳವಳಿಯ ವತಿಯಿಂದ ಕಮ್ಯೂನಿಸ್ಟರನ್ನು ವಿರೋಧಿಸುವ ಪಕ್ಷದ ಬಗ್ಗೆ ತಮ್ಮ ವರ್ತಮಾನಪತ್ರದಲ್ಲಿ ಪ್ರಕಟಿಸುವ ಕೆಲ ಸಂಪಾದಕರು, ರತ್ನಾಗಿರಿ ಜಿಲ್ಲೆಯ ಮಾಲ್ವಣ್, ದೇವಗಢ ಬಳಿಯ ಕುಣ್ಕವಳೇ ಗ್ರಾಮದಲ್ಲಿ ಅಲ್ಲಿಯ ಜಮೀನ್ದಾರ ವರಾಡ್ಕರ್ ಅವರ ಕೊಲೆಯಾದಾಗ ಮಾತ್ರ, ಆಕಾಶ ಪಾತಾಳ ಒಂದು ಮಾಡಿದರು. ಇಷ್ಟೇ ಅಲ್ಲ, ಸೆಶನ್ ಕೋರ್ಟ್‌ನಲ್ಲಿ ವರಾಡ್ಕರ್ ಕೊಲೆ ಖಟ್ಲೆಯಲ್ಲಿ ಮೂವರು ಆರೋಪಿಗಳಿಗೆ ಫಾಶೀ ಶಿಕ್ಷೆ ಮತ್ತು ಹನ್ನೊಂದು ಆರೋಪಿಗಳಿಗೆ ಆಜೀವ ಶಿಕ್ಷೆಯಾದಾಗ ಈ ಪತ್ರಕರ್ತರು ಸಮಾಧಾನ ವ್ಯಕ್ತ ಪಡಿಸುವಲ್ಲೂ ಹಿಂದೆ ಬೀಳಲಿಲ್ಲ. ಶಿಕ್ಷೆ ಸಾರಲಾದ ಆರೋಪಿಯ ಹೆಂಡತಿ, ಮಕ್ಕಳ ಬಗ್ಗೆ ಸಹಾನುಭೂತಿಯ ಕಪಟ ಅತ್ತು ಹರಿಸಿದ ಈ ಪತ್ರಕರ್ತರು, ಅವರಿಗೆ ಶ್ರೀ ವರಾಡ್ಕರರ ಹೆಂಡತಿ ಮಕ್ಕಳ ನೆನಪು ಮಾಡಿದ್ದಾರೆ. ಕಮ್ಯೂನಿಸ್ಟರ "ಕ್ರಾಂತಿಪತ್ರದಲ್ಲಿ ತಮ್ಮ ತತ್ವವನ್ನು ನೆನೆದುಕೊಂಡು, ವರಾಡ್ಕರ್ ಕೊಲೆ ಸಂಬಂಧದ ವ್ಯಾಜ್ಯದ ತೀರ್ಪಿನ ಬಗ್ಗೆ ಬರೆದ ಲೇಖನವನ್ನೋದಿ ಈ ಪತ್ರಕರ್ತರಿಗೆ ಏನನಿಸಿತೋ ಹೇಳಲಾಗದು. ಕ್ರಾಂತಿಯ ಈ ಲೇಖನದ ಬಗ್ಗೆ ಟೀಕೆ ಮಾಡುವ ಧೈರ್ಯ ಅವರಿಗಾಗಿಲ್ಲವಷ್ಟೇ ಅಲ್ಲ, ಆ ಲೇಖನ ಅವರ ಕಣ್ಣಿಗೆ ಬಿದ್ದಿಲ್ಲವಾದರೆ ಅವಶ್ಯ ಒಮ್ಮೆ ಓದಿ ನೋಡಲಿ, ಮಿಲ್‌ನಲ್ಲಿ ವೀವಿಂಗ್ ಮಾಸ್ತ ದಾವರ್ ಅವರ ಕೊಲೆಯಾದಾಗ ಅತ್ಯಾಚಾರದ ಬಗ್ಗೆ ಈ ಪತ್ರಕರ್ತರ ಹಾಗೂ ಲೇಖಕರ ಕಟುತ್ವ ಎಲ್ಲಿ ಹೋಗಿತ್ತು? ದಾವರ್ ಅವರಿಗೆ ಹೆಂಡತಿ ಮಕ್ಕಳಿಲ್ಲವೇ? ದಾವರ್ ಕೊಲೆಯಲ್ಲಿ ದೋಷಿಯೆಂದು ಸಾಬೀತಾದಾತನಿಗೆ ಗಲ್ಲಾದಾಗ, ಅವರ ಹೆಂಡತಿ ಮಕ್ಕಳ ನೆನಪಾಗಲಿಲ್ಲವೇ? ಆದರೆ, ದಾವರ್ ಅವರ ಜಾತಿಬಂಧುವಲ್ಲ, ಕೊಂಕಣದವನೋ, ಜಮೀನ್ದಾರನೋ, ಸಾವಕಾರನೋ ಅಲ್ಲ ಚೈನಾ ಮಿಲ್‌ನಲ್ಲಿ ಮೂವರು ಪಠಾಣ ಕಾವಲಿನವರ ಕೊಲೆಯಾದಾಗ, ಅವರಿಗಾಗಿ ಅಳಲು ಬಂಧುಗಳಿರಲಿಲ್ಲವೇ? ಆ ಕೊಲೆಯನ್ನು ಇವರು ನಿಷೇಧಿಸಿದರೇನು? ಈ ಮೂರು ಕೊಲೆ, ಹಿಂದೂ ಮುಸಲ್ಮಾನರ ದಂಗೆಗೆ ಮುನ್ನ ನಡೆದು ಪ್ರಸಿದ್ಧವಾದುದನ್ನು ನೋಡುವಾಗ ಇದರಲ್ಲಿ ವೈಯುಕ್ತಿಕ ದ್ವೇಷ ಇತ್ತೆಂದೇನೂ ಅನಿಸುವುದಿಲ್ಲ. ಈ ಕೊಲೆಗೆ ಪೂರ್ವೇತಿಹಾಸವೂ ಇತ್ತು. ಕುವಳರ ಆರೋಪಿಗಳ ಕಡೆಯಿಂದ ಹೈಕೋರ್ಟ್‌ನಲ್ಲಿ ಅಪೀಲು ಹೋದಾಗ ಯಾವ ನಿರ್ಣಯವಾಗುವುದೋ ಆಗಲಿ, ಆ ಬಗ್ಗೆ ನಾವೀಗ ಏನೂ ಬರೆಯುವುದಿಲ್ಲ. ಮುಖ್ಯ ವಿಷಯ ಇಷ್ಟೇ -

ಸ್ವಾರ್ಥ ಮನೋವೃತ್ತಿ ಮತ್ತು ಪರದುಃಖ ಶೀತಲವೆಂದುಕೊಳ್ಳುವ ಧೋರಣೆಯ ಕಾರಣ ನ್ಯಾಯಾನ್ಯಾಯದ ಕಲ್ಪನೆ ಬದಲಾಗುತ್ತಿರುತ್ತದೆ. ಪಟ್ಟಣದ ಬಂಡವಾಳಶಾಹಿಯಿರಲಿ, ಗ್ರಾಮ ಜಮೀನ್ದಾರಶಾಹಿಯಿರಲಿ, ಪಟೇಲಿಕೆಯಿರಲಿ,

ಸಾವುಕಾರಶಾಹಿಯಿರಲಿ, ಅವರೆಲ್ಲರ ಧೋರಣೆ ಬಡವರ ರಕ್ತ ಹೀರುವುದೇ ಆಗಿರುತ್ತದೆ. ಯಾರಿಗೆ ಗ್ರಾಮದ ಜಮೀನ್ದಾರ್‌ಶಾಹಿಯ, ಪಟೇಲಿಕೆಯ



ಮತ್ತು ಸಾಹುಕಾರಶಾಹಿಯ ಪ್ರತ್ಯಕ್ಷ ಇಲ್ಲವೆ ಅಪ್ರತ್ಯಕ್ಷ ಹಿತಸಂಬಂಧ ಇದೆಯೋ, ಅವರು ನಗರದ ಬಂಡವಾಳಶಾಹಿಗಳನ್ನು ಟೀಕಿಸುತ್ತಾರೆ, ಕಾರ್ಮಿಕರ ವಿಷಯದಲ್ಲಿ ಗಾಢ ಕಳವಳ ವ್ಯಕ್ತ ಪಡಿಸುತ್ತಾರೆ, ಕಾರ್ಮಿಕರು ಕಠಿಣ ದಾರಿ ಅನುಸರಿಸಿದರೆ ಕೌತುಕ ಪಡುತ್ತಾರೆ. ಆದರೆ ಗ್ರಾಮದ ತಮ್ಮ ಜಾತಿ ಬಾಂಧವರ ರಾಜ್ಯ ಮಾತ್ರ ಹಾಗೆಯೇ ಅಬಾಧಿತವಾಗಿರಬೇಕೆಂದು ಬಯಸುತ್ತಾರೆ.

ರೈತರು ಬೌದ್ಧಿಕ ಜುಲುಮೆಯನ್ನು ಕಿತ್ತೊಗೆಯಬೇಕು; ಅವರು ತಮ್ಮ ಮನೆಬಾಗಿಲ ಒಡೆತನವನ್ನು ಇಲ್ಲವಾಗಿಸಿದರು, ತಮ್ಮ ಬಡತನದ ಮತ್ತು ಅಜ್ಞಾನದ ಲಾಭಪಡೆದು ತಮಗೆ ಬೇಕಾದಂತೆ ಹಡೆದುಕೊಂಡರು, ತಮ್ಮನ್ನು, ತಮ್ಮ ಹೆಂಡಿರು ಮಕ್ಕಳನ್ನು ಗುಲಾಮರಂತೆ ಕಂಡರೂ, ಅದರಲ್ಲಿ ಸಂತೋಷವನ್ನೇ ಕಾಣಬೇಕೆಂದು ಈ ಸಂಪಾದಕರ ಅಭಿಮತ.

* * * *

## ೬೭. ಉಚ್ಚ ವರ್ಗದ ಸ್ವಹಿತ ಸಹಾನುಭೂತಿ

ರಣಿಯ ಮುಷ್ಕರದಲ್ಲಿ ಪರಕೀಯ ದೃಷ್ಟಿಯಲ್ಲದಿದ್ದರೂ ಸ್ವಹಿತ ದೃಷ್ಟಿಯ ಉಚ್ಚ ವರ್ಗದವರೇ ಕಂಡು ಬರುತ್ತಾರೆ. ಕೊಂಕಣ ಹಾಗೂ ದೇಶದೆಲ್ಲೆಡೆಯ ರೈತರು ಮುಂಬಯಿಗೆ ಬಂದು ಎರಡು ಕಾಸು ಸಂಪಾದಿಸುತ್ತಾರೆ,

ಮತ್ತು ಅದರಿಂದಾಗಿ ಹಳ್ಳಿಯ ಸಾಹುಕಾರರಿಂದ ಸಾಲ ಪಡೆಯಬೇಕಾಗಿ ಬರುವುದಿಲ್ಲ. ಹಾಗೆಯೇ ಜಮೀನ್ದಾರನು ಭೂಮಿಯ ಭಾಗವನ್ನು ಯಾರಿಗೋ ಕೊಟ್ಟುಬಿಟ್ಟರೂ, ಅದನ್ನು ಹಾಗೇ ಬಿಡುವುದು ಸಾಧ್ಯವಾಗುತ್ತದೆ. ಕೃಷಿಯಿಂದ ಸ್ವಲ್ಪವೂ ಪ್ರಯೋಜನವಿಲ್ಲ, ಶ್ರಮ ಪಟ್ಟು ಮಾಲಿಕ, ಸಾಹುಕಾರರಿಗೆ ಒಳಿತು ಮಾಡುವುದು, ಹಾಗಾಗಿಯೇ ಹಲವು ರೈತ ಕುಟುಂಬಗಳು ಹಳ್ಳಿ ಬಿಟ್ಟು ಮುಂಬಯಿಗೆ ಬಂದು ವಾಸವಿದ್ದು, ಕೂಲಿನಾಲಿ ಮಾಡಿ ಹೊಟ್ಟೆ ಹೊರೆಯುತ್ತವೆ. ಹೀಗಾಗಿ ಆಳುಗಳ ಕೊರತೆಯಿಂದ ಆ ಜಮೀನು ಉತ್ಪನ್ನವಿಲ್ಲದೆ ಹಾಗೇ ಉಳಿದು ಬಿಡುತ್ತದೆ.ಅರ್ಥಾತ್, ಗಿರಣಿಯಲ್ಲಿ ಮುಷ್ಕರವಾಗಿ, ಹಳ್ಳಿ ಬಿಟ್ಟು ಮುಂಬಯಿಗೆ ಬಂದ ಜನರು ಪುನಃ ಹಳ್ಳಿಗೆ ಹಿಂದಿರುಗಿದರೆ ಕೃಷಿಯಲ್ಲಿ ತೊಡಗಿಕೊಳ್ಳಬಹುದು ಎಂಬುದು, ಉಚ್ಚ ವರ್ಗದ ಜಮೀನ್ದಾರರ ಆಸೆ. ಆ ರೀತಿ ಮುಂಬಯಿಯ ಆಧಾರ ಇಲ್ಲದೇ ಹೋದಂತಾದರೆ, ಆ ರೈತರು ತಮ್ಮಲ್ಲಿಗೆ ಸಾಲ ಕೇಳಲು ಬರುವಂತಾಗುವುದು, ಮತ್ತು ಆ ಜಮೀನನ್ನು ಒಳಗೆ ಹಾಕಿಕೊಳ್ಳಬಹುದು, ಎಂದು ಅವರ ಅನಿಸಿಕೆ. ಆದರೆ ನಗರದ ಚಳವಳಿ ಕೇವಲ ನಗರಕ್ಕೆ ಸೀಮಿತವಾಗಿರುವಂಥದ್ದಲ್ಲವೆಂದು ಅವರಿಗೆ ತಿಳಿದಿರಬೇಕು. ನಗರದ ಕಾರ್ಮಿಕರು ಆ ಚಳವಳಿಯನ್ನು ತಮ್ಮ ಗ್ರಾಮಗಳಿಗೊಯ್ದು ತಲುಪಿಸುತ್ತಾರೆ, ಮತ್ತು ಉಳಿದ ಜಮೀನ್ದಾರರು, ಪಟೇಲರು, ಸಾಹುಕಾರರಿಗೆ "ತ್ರಾಹಿ ಭಗವಾನ್" ಎನ್ನುವ ಕಾಲ ಬರುತ್ತದೆ. ನಗರದ ಬಂಡವಾಳಶಾಹಿಯ ದೌರ್ಜನ್ಯ ಕಂಡು ತಪಿಸುವ ರಕ್ತ, ಜಮೀನ್ದಾರ್‌ಶಾಹೀ, ಪಟೇಲಶಾಹೀ ಮತ್ತು ಸಾಹುಕಾರಶಾಹಿಗಳ ದೌರ್ಜನ್ಯ ಸಹಿಸುತ್ತಾ ಹಿಮದಂತೆ ತಣ್ಣಗಿರುವರೆಂದು ಅವರಿಗನಿಸಿದರೆ ಅದು ಅವರ ಭ್ರಮೆಯಷ್ಟೇ.

* * * *

## ೬೮. ಹಿಂದೂ ಸಂಸ್ಕೃತಿಯ ಗುಮ್ಮ

.

ಕೆಲ ದಿನಗಳ ಹಿಂದೆ ನಾಯ್ ಗಾಂವನಲ್ಲಿ ಸತ್ಯನಾರಾಯಣನ ಪೂಜಾ ಸಮಾರಂಭದ ವೇಳೆ, ಬ್ರಾಹ್ಮಣ, ಮರಾಠಾ ಮುಂತಾದ ಸ್ಪೃಶ್ಯರು, ಮಹಾರ್, ಮಾಂಗ್, ಚಮ್ಮಾರ ಮುಂತಾದ ಬಹಿಷ್ಕೃ ತರೆನಿಸಿಕೊಂಡವರ ಜೊತೆ ಸಹಭೋಜನ ನಡೆಸುವುದಾಯ್ತು. ಈ ಸಹಭೋಜನದಲ್ಲಿ ಭಾಗವಹಿಸಿದವರಲ್ಲಿ ಡಾ. ಸಾವರ್‌ಕರ್, ಶ್ರೀ ಸುರತಕರ್, ಡಾ. ಉದ್ಧಾಂವಕರ್ ಮುಂತಾದ ಹಿಂದೂಮಹಾಸಭೆಯ ಗೃಹಸ್ಥರಿದ್ದರು. ಈ ಸಹಭೋಜನದ ಅತ್ಯಮೂಲ್ಯ ವಿಷಯ ಪ್ರಸಾರವಾದಾಗ, ಈ ಸ್ಪೃಶ್ಯ ಹಿಂದೂಗಳನ್ನು ಬೆದರಿಸಿ, ಸಹಭೋಜನದಲ್ಲಿ ಪಾಲ್ಗೊಳ್ಳುವಂತೆ ಬಲಾತ್ಕರಿಸಿದ್ದಷ್ಟೇ ಅಲ್ಲ, ಪೂಜಾ ಸಂದರ್ಭದಲ್ಲಿ ನಡೆದ ಭಾಷಣದಲ್ಲಿ ಸತ್ಯನಾರಾಯಣ ಮತ್ತು ಗಣಪತಿ ದೇವರ ನಿಂದನೆಯನ್ನೂ ಮಾಡಲಾಯ್ತು ಎಂಬ ವಿಷಯವನ್ನು ಹಿಂದೂ ಸಮಾಜದ ಮನದಲ್ಲಿ ಸಮತಾವಾದದ ಚಳವಳಿಯ ವಿರುದ್ಧ ಚಿತಾವಣೆ ಹುಟ್ಟಿಸಲೆಂದು ಪತ್ರಿಕೆಯೊಂದು ಪ್ರಕಟಿಸಿತು. ಈ ಬಗ್ಗೆ ಅದೇ ಪತ್ರಿಕೆಯಲ್ಲಿ ಡಾ. ಉದ್ಧಾಂವ್ಕರ್ ಮತ್ತು ಶ್ರೀ ಧಡ್‌ಫಳೇ ಅವರು ತಾವು

ಹಾಗೂ ತಮ್ಮಂತಹ ಇತರ ಸ್ಪೃಶ್ಯ ಹಿಂದೂಗಳು ಬಲಾತ್ಕಾರದಿಂದ ಸಹಭೋಜನದಲ್ಲಿ ಭಾಗವಹಿಸಿದ್ದು ಸುಳ್ಳೆಂದು ತಿಳಿಸಿದ್ದಾರೆ. ಹಾಗೆಯೇ ಈ ಪೂಜೆಯ ವೇಳೆ ಸಮತಾವಾದಿ ಜನರು ಬಂಡುಗೋರರಾಗಿ ಬಂದಿದ್ದರು ಎಂಬುದೆಲ್ಲ ಸುಳ್ಳು ಎಂದು ಈ ಗೃಹಸ್ಥರು ಸಾರಿದರು. ಸಮತಾಸಂಘದ ಹೆಸರಿನಲ್ಲಿ ಸಮಯಾಸಮಯವೆಂದಿಲ್ಲದೆ ನೆಟಿಗೆ ಮುರಿಯುವ ಈ ಪತ್ರಕರ್ತರ ಮಂಗಾಟ ಈ ರೀತಿ ಪರಭಾರೆಯಾಗಿ ಸಾಬೀತಾದಾಗ, ಹಿಂದೂ ಸಂಸ್ಕೃತಿಯ ನೆವದಲ್ಲಿ ಅಸ್ಪೃಶ್ಯರಿಗೆ ಬೆದರಿಕೆಯೊಡ್ಡಿದ್ದಾರೆ. ಸಹಭೋಜನದ ನಂತರ ಮಿಶ್ರವಿವಾಹದ ಪ್ರಶ್ನೆ ಬರುವುದು, ಮತ್ತು ಮಹಾರರು, ಚಮ್ಮಾರರು ಮುಂತಾದವರು ಬ್ರಾಹ್ಮಣರೇ ಮುಂತಾದ ಹಿಂದೂಗಳೊಡನೆ ಲಗ್ನ ಸಂಬಂಧ ಬೆಳೆಸುವರು ಮತ್ತು ಹೀಗಾದಾಗ ಹಿಂದೂ ಸಂಸ್ಕೃತಿ ರಸಾತಳಕ್ಕೆ ಇಳಿಯುವುದು, ಹಾಗಾಗಿ ಹಿಂದೂ ಸಮಾಜದಿಂದ ಅಸ್ಪೃಶ್ಯರು ಹೊರ ಹೋದರೆ ಒಳ್ಳೆಯದೆಂದು ಜೀರ್ಣಮತವಾದಿಗಳ ಅಂಬೋಣ. ಮತ್ತೆ ಜಾತಿಯದ್ದು ಜಾತಿಗೆ, ಒಂದು ಜಾತಿಯ ಹುಡುಗಿಯನ್ನು ಬೇರೆಯವರು ಕೇಳಿದ ಮಾತ್ರಕ್ಕೆ ಕೊಡಬೇಕೆಂದೇನು? ಹಿಂದೂ ಸಂಸ್ಕೃತಿಯೆಂದರೇನು, ಅದರ ವೈಶಿಷ್ಟ್ರ ಯಾವುದರಲ್ಲಿದೆ, ಇದನ್ನಾದರೂ ಆ ಜೀರ್ಣಮತವಾದಿಗಳು ಸ್ಪಷ್ಟ ಪಡಿಸಬೇಕು. ಈಗ ಶಾರದಾ ಬಿಲ್‌ನ ವಿರುದ್ಧ ದನಿಯೆತ್ತಿರುವ ಜನರ ಅಭಿಪ್ರಾಯದಂತೆ ಹಿಂದೂ ಸಂಸ್ಕೃತಿಯ ಅರ್ಥಾತ್, ಹಿಂದೂಧರ್ಮದ ವೈಶಿಷ್ಟ್ಯ ಪಾಲಿಸುವಂತೆ ಎಂಟು ಹತ್ತು ವರ್ಷ ಪ್ರಾಯವಾಗುವಷ್ಟರಲ್ಲಿ ಹುಡುಗಿಯರ ಲಗ್ನ ಮಾಡಿ, ಕೋಮಲ ವಯದ ಹುಡುಗಿಯರನ್ನು ಗರ್ಭಾದಾನದ ಕೊರಡಿಗೆ ನೂಕುವದಿದೆ. ಒಂದೊಮ್ಮೆ ಹಿಂದೂ ಸಂಸ್ಕೃತಿಯು, ಗೋಲು, ಪಗಡಿ ಮತ್ತು ರೇಶೆ ಮುಗುಟದ ಸುತ್ತವೇ ಸುತ್ತುತ್ತಿತ್ತು

ಆದರೆ, ಈಗ ಈ ಗೋಲು, ಪಗಡಿ ಮತ್ತು ರೇಷ್ಮೆ ಮುಗುಟವು ಎಲ್ಲೂ ಕಂಡು ಬರುವುದಿಲ್ಲ, ಬದಲಿಗೆ ಹ್ಯಾಟ್, ನೆಕ್‌ಟೈ, ಕಾಲರ್, ಇಂತಹ ಪೋಷಾಕು ರೂಢಿಯಾಗಿ, ಮೈಮೇಲೆ ಶರ್ಟ್



ತೊಟ್ಟು, ಬ್ರಾಹ್ಮಣ ಊಟಕ್ಕೆ ಕುಳಿತುಕೊಂಡರೂ, ಹಿಂದೂ ಸಂಸ್ಕೃತಿ ಇದುವರೆಗೆ ಜೀವಂತವಿದೆ. ಇರಾನೀಯರ, ಕ್ರೈಸ್ತರ ಮತ್ತು ಮುಸಲ್ಮಾನರ ಹೊಟೇಲ್‌ಗಳಲ್ಲಿ ಬ್ರಾಹ್ಮಣಾದಿ ಜನರು ಬೇಕಿದ್ದನ್ನೂ ಬಿಟ್ಟರೆ, ಮತ್ತೆ ಪರದೇಶಕ್ಕೆ ಹೋಗಿ ಅಲ್ಲಿನವರಂತೆ ಭೋಜನ ಮಾಡಿ, ಅವರ ಕೈಯ ಅನ್ನ ಉಂಡು, ನೂರಾರು ಜನರು ಇತ್ತ ಬಂದರೂ, ಹಿಂದೂ ಸಂಸ್ಕೃತಿ ನಾಮಾವಶೇಷವಾಗದೆ ಉಳಿದಿದೆ. ಕೇವಲ ಮಹಾರರು, ಚಮ್ಮಾರರೊಡನೆ ಸಹಭೋಜನ ಮಾಡಿದಷ್ಟಕ್ಕೆ ಅವರು

ರಸಾತಳಕ್ಕೆ ಹೋಗುವವರಿದ್ದಾರೆ. ಹಿಂದೂ ಸಂಸ್ಕೃತಿಯೆಂದರೆ, ಜಾತಿಭೇದದ ಬಂಡಾಯ, ಎಂದೇ ವ್ಯಾಖ್ಯೆ ಇದ್ದರೂ, ಹಿಂದೂ ಸಂಸ್ಕೃತಿ ಎಷ್ಟು ವೇಗವಾಗಿ ನಾಮಾವಶೇಷವಾಗುವುದೋ, ಅಷ್ಟು ಈ ದೇಶ, ಈ ಜಗತ್ತಿನ ದೃಷ್ಟಿಯಿಂದ ಒಳ್ಳೆಯದೆಂದು ವಿಚಾರಶೀಲರಾದವರು ಹೇಳಲಿಕ್ಕಿಲ್ಲವೇ? ಎಲ್ಲವೂ ಒಂದಾಗುವುದೇ ಅಸ್ಪೃಶ್ಯತಾ ನಿವಾರಣಾ ಚಳವಳಿಯ ಧ್ಯೆಯವಿದ್ದರೂ, ಕೊಡುಕೊಳ್ಳುವ ವಿಚಾರದಲ್ಲಿ ಮಾತ್ರ ಅಸ್ಪಶ್ಯತೆ ಇರದಿರಲಿ, ಎನ್ನುವವರು ಈ ವಿಷಯದಲ್ಲಿ ಪುನಃ ವಿಚಾರಮಾಡುವರು. ಆಗಲಿ, ವಿಚಾರ ನಡೆಯಲಿ. ಮುಷ್ಕರ ಪರ್ಯಂತ ನಿಮ್ಮ ವಿಚಾರ ಬದಲಾಗುತ್ತಾ ಹೋಗುವುದು. ನಿಮ್ಮ ಡೋಂಗಿ ಸಹಾನುಭೂತಿಯ ಪರಿವೆಯಾದರೂ ಬಹಿಷ್ಕೃತರಿಗೇಕೆ? ಸಹಭೋಜನದ ಭರಾಟೆ ಶುರುವಾದಾಗ, “ಕೊಡುಕೊಳ್ಳುವಿಕೆಗೆ ನಮ್ಮ ಅಭ್ಯಂತರವಿಲ್ಲ.” ಎಂದು ನೀವು ಸಾರಿದರೆ, ನಮಗೆ ಖಾತ್ರಿಯಿದೆ, ಮಿಶ್ರವಿವಾಹದ ಭರಾಟೆಗೂ ನಿಮ್ಮ ಅಭ್ಯಂತರವಿಲ್ಲವೆಂದು ನೀವೇ ಹೇಳುತ್ತೀರಿ. ಜಗದೆದುರು ನಿಮ್ಮ ಹಿಂದೂ ಸಂಸ್ಕೃತಿಯ ರಹಸ್ಯ ನೀವು ಸ್ವಂತ ಖುಶಿಯಿಂದ ಮುಂದಕ್ಕೆ ಹೆಜ್ಜೆ ಇಡುವವರಲ್ಲ ; ನಿಮ್ಮನ್ನು ಇತರರು ಎಳೆದು ಮುಂದಕ್ಕೆ ತರಬೇಕು, ಇದೇನು ನಮಗೆ ತಿಳಿಯದೇ?

* * * *

## ೬೯. ಪುಣೆಯಲ್ಲಿನ ಪರ್ವತೀ ಸತ್ಯಾಗ್ರಹ ಪ್ರಕರಣ

ಕಳೆದ ಆಗಸ್ಟ್ ತಿಂಗಳ ದಿನಾಂಕ ೨೮ರಂದು ಶ್ರೀ ಲ. ಬ. ಭೋಪಟ್ಕರ್ ಅವರು ಪರ್ವತಿಯಲ್ಲಿ ದೇವಸ್ಥಾನದ ಪಂಚರಿಗೆ, “ದೇವಸ್ಥಾನದ ಆವಾರದಲ್ಲಿ ಸ್ಪೃಶ್ಯಾಸ್ಪಶ್ಯ ಭೇದ ಭಾವವನ್ನು ಇಂದಿನಿಂದ ತೊಡೆಯಬೇಕು, ಮತ್ತು ಎಲ್ಲ ದೇವಳಗಳು ಮತ್ತು ದೇವರನ್ನು ಎಲ್ಲ ಹಿಂದೂ ಧರ್ಮೀಯರಿಗೆ ಮುಕ್ತವಾಗಿಸಿ ಅವರ ಧನ್ಯವಾದಕ್ಕೆ ಒಡೆಯರಾಗಿರಿ” ಎಂದು ಒಂದು ಪ್ರಕಟಣಾ ಪತ್ರದ ಮೂಲಕ ವಿನಂತಿಸಿಕೊಂಡರು. ಈ ಪತ್ರವನ್ನು ಶ್ರೀ ಭೋಪಟ್ ಅವರು ಪುಣೆಯ ಬ್ರಾಹ್ಮಣ ವರ್ಗದವರು ನಡೆಸುವ ಅಸ್ಪೃಶ್ಯತಾ ನಿವಾರಣಾ ಮಂಡಳಿಯ ವತಿಯಿಂದ ಬರೆದರೆಂದು ತಿಳಿದು ಬರುತ್ತದೆ.

ಎಲ್ಲೋ, ಎಷ್ಟೊ ಅಲ್ಲದಿದ್ದರೂ, ಒಮ್ಮಿಂದೊಮ್ಮೆಲೆ ಮಡಿವಂತರ ಎದೆಗೆ ಕೈಯಿಕ್ಕುವ ಇಂತಹ ಬೇಡಿಕೆಯನ್ನು ಅಸ್ಪೃಶ್ಯತಾ ನಿವಾರಣಾ ಮಂಡಳಿ ಮುಂದಿಟ್ಟುದನ್ನು ಕಂಡು ನಮಗೆ ಸಖತ್ ಆಶ್ಚರ್ಯವಾಗಿದೆ. ವಿಚಾರಿಸಿದಾಗ, ಪತ್ರ ಬರೆವ ಮುನ್ನ, ಪುಣೆಯಲ್ಲಿ ರಾಜಕಾರಣದಲ್ಲಿ ಹೊಕ್ಕು ಬಳಕೆಯಿರುವ ಕೆಲ ಬ್ರಾಹ್ಮಣ ಗೃಹಸ್ಥರು, ಮಹಾರಾಷ್ಟ್ರದಲ್ಲಿನ ತಮ್ಮ ಜಾತಿಬಾಂಧವರೊಡನೆ, ಅಸ್ಪೃಶ್ಯತಾ ನಿವಾರಣಾ ಸಂಬಂಧವಾಗಿ ತಾವೇನು ಮಾಡಬಹುದೋ ಎಂದು ವಿಚಾರ ಮಾಡಲು, ಖಾಸಗಿಯಾಗಿ ಸಭೆ ಸೇರಿದರು, ಮತ್ತು ಅವರಿವರೆಲ್ಲರೂ ತಮ್ಮ ತಮ್ಮ ಸ್ಥಳಗಳಲ್ಲಿ ದೇವಳಗಳನ್ನು ಅಸ್ಪೃಶ್ಯರಿಗೆ ಮುಕ್ತವಾಗಿಸುವ ನಿರ್ಧಾರಕ್ಕೆ ಬಂದರು. ಶ್ರೀ ಭೋಪಟ್ಕರ್ ಅವರು ಬರೆದ ಪತ್ರ, ಇದೇ ಒಪ್ಪಂದದ ಫಲಶ್ರುತಿ ಎಂದು ನಮಗನಿಸುತ್ತದೆ. ಹೇಗೇ ಇರಲಿ, ಅಸ್ಪೃಶ್ಯತಾ ನಿವಾರಣಾ ಮಂಡಳಿ, ಸ್ವೇಚ್ಛೆಯಿಂದ ಒಂದು ಘನಕಾರ್ಯವನ್ನು ತಿಳಿದೇ ಕೈಗೆತ್ತಿಕೊಂಡಿದೆ, ಎಂಬುದು ನಿರ್ವಿವಾದ, ಮತ್ತು ಅದರ ಫಲಪ್ರಾಪ್ತಿಯೆಡೆಗೆ ಎಲ್ಲರ ದೃಷ್ಟಿಯೂ ಸಹಜವಾಗಿ ನೆಟ್ಟಿದೆ. ಸಾಕಷ್ಟು ಕಾಲ ಸಂದರೂ, ಪರ್ವತಿಯ ಪಂಚರು ಇದಕ್ಕೆ ಉತ್ತರವನ್ನು ನೀಡದೆ, ಮುಗ್ಧತೆಯನ್ನು ತೋರಿದ್ದಾರೆ.

ಪಂಚರಿಂದ ಯಾವ ಉತ್ತರವೂ ಬರುವಂತಿಲ್ಲವೆಂಬುದನ್ನು ಕಂಡು, ಪುಣೆಯ ಅಸ್ಪೃಶ್ಯ ವರ್ಗವೇ, ತಮಗಾಗಿ ಪರ್ವತಿಯ ದೇವಳವು ತೆರೆದಿರಲಿ, ಎಂದು ಪ್ರತ್ಯಕ್ಷ ಬೇಡಿಕೆಯಿಟ್ಟಿದೆ. ಆ ವಿನಂತಿಗೆ ಒತ್ತು ಸಿಗಲೆಂದು, ಪುಣೆಯ ಯುವಕ ಸಂಘವು ವಿನಂತಿ ವಜಾಪತ್ರ ಬರೆದಿದೆ, ಆದರೂ ಪಂಚರಿಂದ ಮಾತೇ ಹೊರಟಿಲ್ಲ. ಈ ಮುಗ್ಧತೆಯ ಅರ್ಥ, ಪಂಚರು ಈ ಬೇಡಿಕೆಗೆ ಒಪ್ಪುವವರಲ್ಲ, ಎಂದರಿತು, ಪುಣೆಯ ಅಸ್ಪೃಶ್ಯ ವರ್ಗದ ಧುರೀಣರು ಸತ್ಯಾಗ್ರಹ ಆರಂಭಿಸುವದಾಗಿ ಪ್ರಕಟಿಸಿದ್ದಾರೆ. ಆದರೂ ಬಾಡದ ಪಂಚರು, ಕೊನೆಗೆ ದಿನಾಂಕ ೨-೧೦-೨೯ರಂದು ಅಸ್ಪೃಶ್ಯ ವರ್ಗದ ವತಿಯಿಂದ ಮೂರು ದಿನಗಳೊಳಗೆ ಸ್ಪಷ್ಟ ಉತ್ತರ ನೀಡುವಂತೆ ನೋಟೀಸು ಕೊಡಲಾಯ್ತು. ಹೀಗೆ ನೋಟೀಸು ಹೊರಟಾಗ ಸುಮ್ಮನಿರುವುದು ಶಕ್ಯವಾಗದೆ, ಪಂಚರು, ಅಕ್ಟೋಬರ್ ದಿನಾಂಕ ೮ರ "ಕೇಸರಿ"ಯಲ್ಲಿ ತಮ್ಮ ಉತ್ತರವನ್ನು ಪ್ರಕಟಿಸಿದರು. ಅದರಲ್ಲಿ, "ಸದರಿ ದೇವಸ್ಥಾನವು ಪಂಚ ಕಮಿಟಿಯ ಖಾಸಗಿ ಮಾಲಿಕತ್ವದ್ದಾಗಿದೆ. ಯಾವ ಶ್ರೀಮಂತ ಬಾಳಾಜಿ ಬಾಜಿರಾವ್ ಉರ್ಫ್ ನಾನಾಸಾಹೇಬ್ ಪೇಶ್ವ ಇದನ್ನು ಕಟ್ಟಿದರೋ, ಅವರು ತಮ್ಮ ಖಾಸಗಿ ಖರ್ಚಿನಿಂದ ಕಟ್ಟಿಸಿದರು,



ಮತ್ತು ಅದರಲ್ಲಿ ಅಸ್ಪೃಶ್ಯ ವರ್ಗಕ್ಕೆ ಅವರು ಹಿಂದೂಧರ್ಮೀಯರೇ ಇದ್ದರೂ, ಇತರ ಉಚ್ಚವರ್ಣೀಯ ಹಿಂದೂಗಳು ಹೋಗುವಲ್ಲಿಗೆ, ಪ್ರವೇಶವಿಲ್ಲ ಮತ್ತು ಈವರೆಗೆ ಅಂತಹ ವಹಿವಾಟಿಲ್ಲ; ಮತ್ತು ಸದರಿ ದೇವಸ್ಥಾನದ ವ್ಯವಸ್ಥೆ ಪಂಚ ಕಮಿಟಿಯಲ್ಲಿ ಟ್ರಸ್ಟಿ ಇಲ್ಲವೇ ಬಂಧುಗಳದ್ದಾಗಿರುವುದರಿಂದ ಮೂಲ ಸಂಸ್ಥಾಪಕರ ಕಾರಣದಿಂದ ಹೊರಗೆ ಏನೇ

ಮಾಡಲೂ ಯಾವುದೇ ಪಂಚರಿಗೆ ಖಂಡಿತಾ ಅಧಿಕಾರವಿಲ್ಲ", ಹೀಗೆ ಈ ಕಾರಣದಿಂದ ಈ ಬೇಡಿಕೆಯನ್ನು ಮಾನ್ಯ ಮಾಡುವುದು ಅಸಾಧ್ಯ, ಎಂದು ಹೇಳಿದ್ದಾರೆ. ಈ ಉತ್ತರ ಹೊರ ಬಂದ ಮೇಲೆ ಅಸ್ಪೃಶ್ಯ ವರ್ಗವು ಸತ್ಯಾಗ್ರಹದ ಉಪಾಯವನ್ನು ಜಾರಿಗೆ ತರುವುದು ಸಾಧ್ಯವಾಯ್ತು ಮತ್ತು ಆ ರೀತಿ ಕಳೆದ ತಿಂಗಳ ದಿನಾಂಕ ಹದಿಮೂರರಂದು ಪರ್ವತಿಯಲ್ಲಿ ಸತ್ಯಾಗ್ರಹ ಹೂಡಲಾಯ್ತು.

**ಪುಣೆಯ ಕರ್ಮಠರ ಗೂಂಡಾಗಿರಿ**

ಈ ಸತ್ಯಾಗ್ರಹದಲ್ಲಿ ವಿರುದ್ಧ ಪಕ್ಷದ ವತಿಯಿಂದ ಏನೇನೆಲ್ಲ ನಡೆಯಿತು, ಎಂಬುದನ್ನು ನೋಡಿದರೆ, ಪುಣೆಯೆಂಬುದು ಒಂದು ದುಷ್ಕರ್ಮಿಗಳ ಅಡ್ಡೆಯೆಂದೇ ಹೇಳಬೇಕು. ಪುಣೆಯ ಸತ್ಯಾಗ್ರಹದಲ್ಲಿ ಒಂದು ನೂರು-ನೂರೈವತ್ತು ಜನರಿದ್ದರು. ಅಷ್ಟು ಅಲ್ಪಸಂಖ್ಯಾಬಲದ ಮೇಲೆ ಇಷ್ಟು ದೊಡ್ಡ ಕಾರ್ಯವನ್ನು ಹೊರಿಸುವ ಸಾಹಸ ಮಾಡುವ ಮಣೆಯ ಅಸ್ಪೃಶ್ಯ ಜನರ ಮೇಲೆ ಕೈ ಮಾಡುವ ಬದಲು, ಆ ಬಗ್ಗೆ ಕೌತುಕ ಪಡುವುದೇ ಯೋಗ್ಯವಿತ್ತು. ಹಾಗಲ್ಲದೆ ಈ ಸತ್ಯಾಗ್ರಹ ತುಂಬ ಶಾಂತತೆಯಿಂದ ನಡೆಯುವುದೆಂದು ಮೊದಲೇ ಸಾರಲಾಗಿತ್ತು. ಸತ್ಯಾಗ್ರಹಕ್ಕೆ ಬರುವವರು ಕೈಯಲ್ಲಿ ಬಡಿಗೆ, ಕೊಡೆ ತೆಗೆದುಕೊಳ್ಳಬಾರದೆಂದು ಸಾರಿದ್ದನ್ನು ಅಕ್ಷರಶಃ ಪಾಲಿಸಲಾಗಿತ್ತು. ಹೀಗೆ ನೂರು, ನೂರೈವತ್ತು ಸತ್ಯಾಗ್ರಹಿಗಳ ಹೆಸರು ಕೆಡಿಸಲು ಐದಾರು ಸಾವಿರ ಸ್ಪೃಶ್ಯರನ್ನು ಒಗ್ಗೂಡಿಸಿ, ಸತ್ಯಾಗ್ರಹಿಗಳನ್ನು ಕಲ್ಲು, ದೊಣ್ಣೆ, ಚಪ್ಪಲಿಯ ಮಳೆಗರೆದು, ಪ್ರತೀಕಾರ ಮಾಡದಿರುವ ನಿರ್ಧಾರವನ್ನು ಮೊದಲೇ ಪ್ರಕಟಿಸಿದ ಬಡ ಸತ್ಯಾಗ್ರಹಿಗಳನ್ನು ಈ ಪರಿ ಆಘಾತಿಸಿದ ಅಸುರೀ ಪ್ರವೃತ್ತಿ ಬೇರೆಲ್ಲಿ ಕಂಡು ಬಂದೀತು? ಈ ರೀತಿ ಹಲ್ಲೆ ಮಾಡುವ ಜನರಿಗೆ ನಾವು ಹೇಳುವುದೆಂದರೆ, ಅಸ್ಪಶ್ಯರ ಸತ್ಯಾಗ್ರಹದ ವಿಷಯದಲ್ಲಿ ಸಶಸ್ತ್ರ ಪ್ರತೀಕಾರಕ್ಕೆಳಸುವವರು, ಅಸ್ಪೃಶ್ಯರ ಸತ್ಯಾಗ್ರಹದ ರೂಪಾಂತರಕ್ಕೂ ಕಾರಣರಾಗುತ್ತಾರೆ. ಅಸ್ಪೃಶ್ಯರ ಇಂದಿನ ಸತ್ಯಾಗ್ರಹ ಶಸ್ತಸನ್ಯಾಸಯುಕ್ತವಾದುದು ; ಆದರೆ ಅವರ ವಿರೋಧಿಗಳು ಪ್ರತೀಕಾರ ಧೋರಣೆ ತಳೆದರೆ, ಸತ್ಯಾಗ್ರಹಿಗಳೂ ತಮ್ಮ ಹಕ್ಕು ಸ್ಥಾಪಿಸಲು ಕಲ್ಲು, ದೊಣ್ಣೆ ಕೈಗೆತ್ತಿಕೊಳ್ಳಬೇಕಾಗಿ ಬರುವುದು, ಅಪ್ರತೀಕಾರವನ್ನು ಅವಲಂಬಿಸಿರುವ ಉದಾತ್ತ ವರ್ತನೆಯನ್ನು ದೌರ್ಬಲ್ಯವೆಂದುಕೊಂಡು ಪ್ರತಿಪಕ್ಷದವರು ದೌರ್ಜನ್ಯ ತೋರಲು ಹೆಚ್ಚು ಪ್ರವೃತ್ತರಾಗುವರು ಎಂಬುದನ್ನೂ ಅವರು ಮರೆತಿಲ್ಲ. ತಮ್ಮ ಹಲ್ಲೆಯಿಂದ ಜರ್ಝರಿತರಾಗಿ ಬಹಿಷ್ಕೃತ ವರ್ಗದ ಜನರು ಮಂದಿರ ಪ್ರವೇಶದ ಬೇಡಿಕೆಯನ್ನು

ಬಿಟ್ಟುಕೊಡುವರು, ಎಂಬ ನಂಬಿಕೆಯನ್ನು ಆ ಧರ್ಮಾಂಧರಲ್ಲಿ ಈ ಸನಾತನಿ ನಾಯಕರು ಹುಟ್ಟಿಸಿದ್ದಾರೆ. ಹಾಗೆಂದೇ ಯಾವುದಾದರೂ ಉಪಾಯದಿಂದ ಅಸ್ಪೃಶ್ಯರನ್ನು ಬಂಧಿಗಳಾಗಿಸಬೇಕು, ಎಂಬ ಕರಪತ್ರಿಕೆಗಳನ್ನು ಪುಣೆಯಲ್ಲಿ ಹಂಚಲಾಗಿದೆ. ಆದರೆ ಆ ರೀತಿ ಅತಿಕ್ರಮಣ ಮಾಡಿ ಅಸ್ಪೃಶ್ಯರ ಸತ್ಯಾಗ್ರಹ ನಡೆಯದಂತೆ ಮಾಡುವ ಜನರಿಗೆ ನಮ್ಮ ಸೂಚನೆಯೆಂದರೆ ಭಕ್ತಿಭಾವ ಮತ್ತು ಆತ್ಮೀಯತೆಯಿಂದ ದೇವ ದರ್ಶನಕ್ಕೆ ಬರುವ ಈ ಜನರು, ಘಜನಿ ಮೊಹಮ್ಮದ್‌ನಂತೆ ಮೂರ್ತಿ ಭಂಜಕರಾಗದಿದ್ದರೆ ಸಾಕು.



ನೀರಿನ ಓಘವನ್ನು ತಿರುಗಿಸಬಹುದು, ಆದರೆ ತಡೆಯಲಾಗದು. ಅಣೆಕಟ್ಟು ಕಟ್ಟಿ ಹಿಡಿದಿಡಲೆತ್ನಿಸಿದರೆ ಕಟ್ಟೆ ಒಡೆಯುವುದು.. ಅಜ್ಞ ಸಮಾಜದಲ್ಲಿ ಗೂಂಡಾ ಶಕ್ತಿಯ ಮೇಲೆ ಕುಣಿದು, ಅಸ್ಪೃಶ್ಯರನ್ನು ಹಣಿಸಿ ಅವರ ತೇಜೋವಧೆ ಮಾಡುವ ಈ ಮಹಾಮೂರ್ಖರು, ಯಾವುದೇ ಶಕ್ತಿಯನ್ನು ರಾಕ್ಷಸೀಯವಾಗಿ ಇತರರ ಮೇಲೆ ಪ್ರಯೋಗಿಸಿದರೆ ಸ್ವನಾಶದ ಸಾಧ್ಯತೆಯೇ ಅಧಿಕವೆನ್ನುವುದನ್ನು ಅರಿಯಬೇಕು.

**ಅಸ್ಪೃಶ್ಯರ ಕಪಟ ಕೈವಾರ**

ಜೀರ್ಣಮತವಾದಿಗಳು ಹುಟ್ಟು ಹಾಕಿದ ಈ ಗೊಂದಲ ಮತ್ತು ಅವರು ಮಾಡಿದ ಹಿಂದೂಧರ್ಮದ ವಿಡಂಬನೆ ಅರ್ಥಯಿಸಿಕೊಳ್ಳುವಂತಹುದಾಗಿದೆ, ಆದರೆ ಈ ಸತ್ಯಾಗ್ರಹ ಪ್ರಕರಣದಲ್ಲಿ ಅರ್ಥಯಿಸಿಕೊಳ್ಳಲಾಗದ ವೈಚಿತ್ರ್ಯಪೂರ್ಣ ವಿಷಯ, ಪುಣೆಯ ನವಮತವಾದಿಗಳ ವರ್ತನೆ. ಪುಣೆಯಲ್ಲಿ ನವಮತವಾದಿಗಳ ಎರಡು ಪಕ್ಷಗಳಿವೆ. ಒಂದು, ಸಮಾಜಕಾರಣಕ್ಕಾಗಿ ಅಸ್ಪೃಶ್ಯತಾ ನಿವಾರಕ ಮಂಡಳಿಯಂಥ ಅಸ್ಪೃಶ್ಯರ ಪುರಸ್ಕರ್ತರೆಂಬವರು; ಮತ್ತೊಂದು, ರಾಜಕಾರಣಕ್ಕಾಗಿ ಅಸ್ಪೃಶ್ಯರ ಬಗ್ಗೆ ಸಹಾನುಭೂತಿ ತೋರುವ ಕೇಳ್ಕರರಂತಹ ರಾಜಕೀಯ ನಾಯಕರು. ಈ ಜನರು ಸ್ವತಃ ಸತ್ಯಾಗ್ರಹ ಮಾಡುವ ತಯಾರಿ ಇರಲಿಲ್ಲವೆಂದು ಸಾರಿದ್ದಾರೆ. ಹಾಗಿದ್ದೂ, ಆ ಸತ್ಯಾಗ್ರಹಿಗಳ ಮೇಲಾದ ಹಲ್ಲೆ

ತಮಗೆ ಮಾನ್ಯವಲ್ಲ, ಎಂದು ಸಹಾನುಭೂತಿ ನಟಿಸಿದ್ದಾರೆ. ಅವರ ಈ ಕಳಕಳಿ ತೋರುವಿಕೆಯದ್ದಲ್ಲವಾದರೆ, ಆ ಅನರ್ಥವನ್ನು ತಡೆಯಲು ಅವರು ಮಾಡಿದ್ದೇನೆಂದು ನಾವು ಕೇಳ ಬಯಸುತ್ತೇವೆ.ಅಸ್ಪೃಶ್ಯ ಸತ್ಯಾಗ್ರಹಿಗಳನ್ನು ವಿರೋಧಿಸಲು, ಅಲ್ಲಿ ದೇಹದಂಡನೆಯ ಸಮಾವೇಶ ಆಗದಂತೆ ತಾವು ಮಾಡಿದ್ದೇನು? ಅಲ್ಲಿ ಅತ್ಯಾಚಾರ ಮಾಡದೆ ವಿರೋಧಿಸಲು ಆಗುತ್ತಿರಲಿಲ್ಲವೇನು? ಹಲ್ಲೆಯಾದುದಲ್ಲವಾದರೆ ಅಲ್ಲಿ ನಿಷ್ಠೆಯಿಂದಲೇ ಎದುರಿಸಲಾಗುತ್ತಿತ್ತು. ಹಿಂದೂ ಸಮಾಜದ ನಾಯಕರು, ಅಸ್ಪೃಶ್ಯರ ಸತ್ಯಾಗ್ರಹ ನಡೆಯದಂತೆ ಅಡ್ಡಿಯೊಡ್ಡಿದರು. ಮೇಲಿನೆರಡು ಪಕ್ಷಗಳಲ್ಲಿ ಮೊದಲನೆಯದು, ಅಂದರೆ, ಪರ್ವತೀ ದೇವಳ ಪ್ರವೇಶಕ್ಕೆ ಸೂತ ಉವಾಚ ಮಾಡುವ ಪಕ್ಷಕ್ಕೆ ವಿಶೇಷ ಜವಾಬ್ದಾರಿಯೆಂದು ಯಾರೂ ಹೇಳಬಹುದು. ಆದರೆ, ಆಶ್ಚರ್ಯದ ವಿಷಯವೆಂದರೆ,ಪರ್ವತೀ ಪಂಚರು ತಮ್ಮ ತೀರ್ಪು ಇತ್ತ ದಿನವೇ ಅಸ್ಪೃಶ್ಯತಾ ನಿವಾರಕ ಮಂಡಳಿಯೂ, ತಮಗೆ ಸತ್ಯಾಗ್ರಹ ಚಳವಳಿ ಜೊತೆ ಯಾವ ಸಂಬಂಧವೂ ಇಲ್ಲವೆಂದು ಸಾರಿತು. ತಾವದನ್ನು ಆರಂಭಿಸಿಯೂ ಇಲ್ಲ, ಅದಕ್ಕೆ ಪ್ರೋತ್ಸಾಹ ಕೊಟ್ಟೂ ಇಲ್ಲ, ಹೀಗೆ ಆ ಜವಾಬ್ದಾರಿಯಿಂದ ಕಳಚಿಕೊಂಡ ನಂತರ ಅವರ ಎಲ್ಲ ಜವಾಬ್ದಾರಿ ಸ್ಥಳೀಯ ಅಸ್ಪೃಶ್ಯ ವರ್ಗದ ಮೇಲೆ ಸಹಜವಾಗಿ ಬಂದುಬಿಟ್ಟಿತು.

**ಒಮ್ಮತದ ಪಂಚರು ಮತ್ತು ಡೋಂಗಿ ಕೈವಾರಿಯರು**

ಪರ್ವತೀ ಪಂಚರ ವಿವರಣೆ ಮತ್ತು ಅಸ್ಪೃಶ್ಯತಾ ನಿವಾರಕ ಮಂಡಲಿಯ ವಿವರಣೆ -ಈ ಎರಡೂ ವಿವರಣೆಗಳು ಒಂದೇ ದಿನ ಪ್ರಸಾರವಾದುದು ಮೂಲದಲ್ಲೇ ವಿಚಿತ್ರವಾಗಿ ಕಾಣಿಸುತ್ತದೆ. ಪಂಚರು ಮತ್ತು ಅಸ್ಪಶ್ಯತಾ ನಿವಾರಕ ಮಂಡಲಿ, ಎರಡೂ ಮುನ್ನಾದಿನ ವಿಚಾರ ವಿನಿಮಯ ಮಾಡಿ, ಅಸ ಶ್ಯತಾ ನಿವಾರಕ ಮಂಡಲಿಯ ಮನೋನಿರ್ಧಾರ ತೆಗೆದುಕೊಂಡ ಬಳಿಕವೇ ಪಂಚರು

ನಕಾರಾರ್ಥಿ ಉತ್ತರ ಕೊಟ್ಟರೆಂದು ಹೇಳಿದರೆ, ತಾರ್ಕಿಕ ದೃಷ್ಟಿಯಿಂದ ಅದು ಅಯುಕ್ತವೆಂದು ನಮಗೆ ಅನಿಸುವುದಿಲ್ಲ. ಹಾಗಲ್ಲದಿದ್ದರೆ, ಪುಣೆಯಲ್ಲಿ ಅಸ್ಪೃಶ್ಯರು ಸತ್ಯಾಗ್ರಹ ಮಾಡುವದಾಗಿ ತಿಳಿಸಿದ ದಿನವೇ ಈ ಸತ್ಯಾಗ್ರಹಕ್ಕೆ ತಮ್ಮ ಸಮ್ಮತಿ ಇಲ್ಲವೆಂದೂ, ಯಾವ ತರದ ಬೆಂಬಲವನ್ನೂ ತಾವು ನೀಡುವವರಲ್ಲವೆಂದೂ ಅಸ್ಪೃಶ್ಯತಾ ನಿವಾರಕ ಮಂಡಲಿ ಮೊದಲೇ ಸಾರಲಿಲ್ಲವೇಕೆ? ಹಾಗೆ ಮಾಡಿದ್ದಿದ್ದರೆ ಟ್ರಸ್ಟಿಗಳ ಜೊತೆಸೇರಿ ಅಸ್ಪೃಶ್ಯರಿಗೆ ವಿಶ್ವಾಸಘಾತ ಮಾಡಿದ ಆರೋಪ ಹೊರಲು, ಅಸ್ಪೃಶ್ಯ ವಸ್ತುಸ್ಥಿತಿಯಲ್ಲಿ ಯಾವ ಕಾರಣವೂ ಇರುತ್ತಿರಲಿಲ್ಲ. ಅಸ್ಪೃಶ್ಯರ ಹೊರತು, ಅಸ್ಪೃಶ್ಯತಾ ನಿವಾರಕ ಮಂಡಳಿ ಎಷ್ಟರ ವರೆಗೆ ತಮಗೆ ಸಹಾಯ ಮಾಡಲು ಸಿದ್ದವಿದೆ, ಎಂಬುದು ತಿಳಿಯದೆ ಈ ಪ್ರಸಂಗವು ಯಾರ ಮೇಲೆ ಅವಲಂಬಿತವಾಗಿರುತ್ತದೆ, ಎಂಬುದರ ಅಂದಾಜೂ ಇಲ್ಲ. ಹಾಗಾಗದಿರುವುದರಲ್ಲಿ ಅಸ್ಪೃಶ್ಯತಾ ನಿವಾರಕ ಮಂಡಳಿಯ ಕುಟಿಲ ಹಸ್ತವಿದೆ ಎಂದು ಎದೆಗಾರಿಕೆಯಿಂದಲೇ ಹೇಳಬೇಕು.

**ನೀಚ ಕುಟಿಲ ಭೇದ ನೀತಿ**

ಅಸ್ಪೃಶ್ಯವರ್ಗವು ಮೋಸ ಹೋದಲ್ಲಿಗೆ ಈ ಪ್ರಸಂಗ ಮುಗಿದಿದ್ದರೂ ಸಾಕಿತ್ತು. ಆದರೆ ದುರದೃಷ್ಟವಶಾತ್ ಹಾಗಾಗಲಿಲ್ಲ. ಅಸ್ಪೃಶ್ಯತಾ ನಿವಾರಕ ಮಂಡಳಿಯ ಬೆಂಬಲ ಹೋದರೆ ಹೋಗಲಿ, ಆದರೆ ಅದಕ್ಕೆ ಸರಿಯಾಗಿ ಪುಣೆಯಲ್ಲಿ ಅಸ್ಪೃಶ್ಯ ವರ್ಗವನ್ನು ಆಘಾತಿಸುವ ಯತ್ನವಾಯ್ತು. ಪುಣೆಯ ಮಾತಂಗ ಸಮಾಜದ ನಾಯಕನೆನಿಸಿಕೊಂಡ ಶ್ರೀ ಸಕಟರು, ಸತ್ಯಾಗ್ರಹಕ್ಕೂ ತಮಗೂ ಏನೇನೂ ಸಂಬಂಧವಿಲ್ಲ ಎಂದು ಸಾರಿ, ಒಳ್ಳೆ ಆಯಕಟ್ಟಿನ ಸಮಯದಲ್ಲಿ ಸತ್ಯಾಗ್ರಹಿಗಳಿಗೆ ಮೋಸ ಮಾಡಿದರು. ಅದೇ ರೀತಿ ಪುಣೆಯಲ್ಲಿ ಹರಳೇ ಚಮ್ಮಾರ ಸಮಾಜದ ಕೆಲ ನಾಯಕರು, ತಾವು ಈ ಸತ್ಯಾಗ್ರಹದಲ್ಲಿ ಭಾಗವಹಿಸಲು ಸಿದ್ಧರಿಲ್ಲವೆಂದು ಸಾರಿದರು. ಮತ್ತು ಎಲ್ಲಕ್ಕೂ ಬೇಸರದ ವಿಷಯವೆಂದರೆ, ಆ ಅಸ್ಪೃಶ್ಯ ವರ್ಗದಲ್ಲಿ, ಬಹುಸಂಖ್ಯಾಕರೆಂಬ ಕಾರಣಕ್ಕೆ ಮಹಾರ್ ಜಾತಿಯ ಮೇಲೆ ಸಹಜವಾಗಿ ಎಲ್ಲ ರೀತಿಯ ಜವಾಬ್ದಾರಿ ಬಂದು ಬಿದ್ದಿತು. ಆ ಮಹಾರ್ ಜಾತಿಯ ೬೦ - ೬೫ ಜನರ ಸಹಿಯುಳ್ಳ ಪತ್ರವೊಂದು "ಕೇಸರಿ" ಯಲ್ಲಿ ಪ್ರಕಟಿಸಲ್ಪಟ್ಟು, ಸತ್ಯಾಗ್ರಹಕ್ಕೆ ಮಹಾರ್ ಜಾತಿಯ ವಿರೋಧವಿದೆಯೆಂದು ಸಾರಲಾಯ್ತು. ಇದೆಲ್ಲ ತನ್ನಷ್ಟಕ್ಕೆ ಆಯೋ, ಇಲ್ಲಾ ಇದು ಯಾರದೋ ಕೈವಾಡವೋ, ವಿಚಾರ ಮಾಡಬೇಕಾಗಿದೆ. ಇದು ನಿಜಕ್ಕೂ ಯಾರೋ ನೀಚವ್ಯಕ್ತಿಗಳ

ಕೆಲಸವೆಂದು ನಮಗೆ ಖಂಡಿತವಿದೆ. ನಿಜಕ್ಕೂ ಪುಣೆಯ ಅಸ್ಪಶ್ಯರು ಸತ್ಯಾಗ್ರಹದ ವಿರುದ್ಧವಿದ್ದಿದ್ದರೆ, ಹಾಗೆಂದು ಅವರು ಎಂದೋ ಸಾರುತ್ತಿದ್ದರು. ಇಷ್ಟು ದಿನಗಳ ಕಾಲ ಸುಮ್ಮನಿರುತ್ತಿರಲಿಲ್ಲ.

ಅವರನ್ನು ಮೋಸಗೊಳಿಸಿದವರಾರೆಂದು ತಿಳಿದಿದ್ದರೆ ಒಳ್ಳೆಯದಿತ್ತು. ಹಾಗೆಯೇ ಇದು, ಅಸ್ಪೃಶ್ಯರೊಡನೆ ಸಹಾನುಭೂತಿ ತೋರಲೆಳಸುವವರ ಕೃತ್ಯವೇ ಇರಬೇಕು. ಯಾವ ಮಹಾರರು ಸತ್ಯಾಗ್ರಹದ ವಿರುದ್ಧ ದನಿಯೆತ್ತಿದರೋ, ಅವರು, ಸತ್ಯಾಗ್ರಹದ ದಿನ ಪರಿಸ್ಥಿತಿ ನೋಡಿ, ನಿಶ್ಚಂಕೆಯಿಂದ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದನ್ನು ಕಂಡು ನಮಗೆ ಆನಂದವಾಗಿದೆ. ನಮ್ಮ ಅಸ್ಪೃಶ್ಯ ಬಂಧುಗಳು ತಮ್ಮ ಉನ್ನತಿಯ ವಿಷಯದಲ್ಲಿ ಯಾರೇ ಸ್ಪೃಶ್ಯಜನರ ಸಲಹೆಯಲ್ಲಿ ವಿಶ್ವಾಸವಿಟ್ಟು ನಡೆಯುವುದು ಬೇಡ, ಎಂದು ನನ್ನ ಸಲಹೆ. ಇಲ್ಲವಾದರೆ, ಪುಣೆಯಲ್ಲಾದಂತಹ ಪರಿಸ್ಥಿತಿ ಎಲ್ಲೆಡೆ ಆಗುವುದು ನಿಸ್ಸಂಶಯ.

ಅಸ್ಪೃಶ್ಯತಾ ನಿವಾರಣೆಯ ಪ್ರಸಾರ ಮಾಡಿ ದೇವಳಗಳನ್ನು ಮುಕ್ತವಾಗಿಸಬಹುದೆಂದು

ಪ್ರತಿಪಾದಿಸಿದವರು ಮತ್ತು ಹಾಗೆ ಮಾಡಿ ಸತ್ಯಾಗ್ರಹಿಗಳಾಗಲು ಅಸ್ಪೃಶ್ಯರ ಮನೋಭೂಮಿಕೆ ಸಿದ್ಧ ಮಾಡಲು ಕಾರಣರಾದವರೇ ಕೊನೆಯ ಗಳಿಗೆಯಲ್ಲಿ ಸತ್ಯಾಗ್ರಹಕ್ಕೂ ತಮಗೂ ಸಂಬಂಧವಿಲ್ಲವೆಂದು ಅವಸಾನಘಾತ ಮಾಡಿದರು. ಇಂತಹ ನೀಚರನ್ನು ಪುಣೆಯ ಸನಾತನರ ಸಭೆಯಲ್ಲಿ ನಿಷೇಧಿಸಿದ್ದು ಯುಕ್ತವೇ ಆಗಿದೆ ಎಂದು ನಮಗೆ ಅನಿಸುತ್ತದೆ.

**ವಿಚಿತ್ರ ಕೋಟಿಕ್ರಮ** ಸತ್ಯಾಗ್ರಹಕ್ಕೆ ಬೆಂಬಲ ಕೊಡದಿರುವುದಕ್ಕೆ ಅನೇಕ ಕಾರಣಗಳನ್ನು ಕೊಡಲಾಗಿದೆ. ಅವುಗಳಲ್ಲೊಂದು, ಈ ಸತ್ಯಾಗ್ರಹವು ಕೇವಲ ಹೆಸರಿಗಾಗಿ ಮಾಡುವಂತಹುದು, ಎಂಬುದು. ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವ ರಾಜಭೋಜಾದಿ ಮಂದಿಗೆ, ರಾಜಭೋಜ ಸಂಪ್ರದಾಯದಂತೆ ದೇವಾಲಯವನ್ನು ದ್ವೇಚ್ಛೆಯಿಂದ ಮುಕ್ತವಾಗಿಸುವ ಘನತೆಯಿಲ್ಲ. ಕಾರಣ , ಹಾಗಿರಲು ಬೇಕಾಗಿರುವ ಪರಾಕ್ರಮ ಶ್ರೇಯ ಹಾಗೂ ಸ್ವಾವಲಂಬನ ಶ್ರೇಯ ಅವರಲ್ಲಿಲ್ಲ

.

ಬದಲಿಗೆ, "ಸ್ವೇಚ್ಛೆಯಿಂದ ದೇವಳವನ್ನು ಮುಕ್ತವಾಗಿಸುವವರಿಗೆ, ನೀವು ಕೆಲ ಅಸ್ಪೃಶ್ಯರನ್ನು, ವಿಶೇಷವಾಗಿ ಅವರಲ್ಲಿನ ಪರಾಕ್ರಮೇಚ್ಛು ರಾಜಭೋಜ ಸಂಪ್ರದಾಯದ ನಾಯಕರನ್ನು ಎಂತಾದರೂ ಸತ್ಯಾಗ್ರಹಕ್ಕೆ ಕರೆತಂದು, ಮತ್ತೆ ಸತ್ಯಾಗ್ರಹವನ್ನು ವಿರೋಧಿಸಿ, ಸತ್ಯಾಗ್ರಹದ ಶಾರೀರಿಕ ತ್ರಾಸ ಸಹಿಸಿದ ಶ್ರೇಯ, ವೃತ್ತಪತ್ರಿಕೆಯಲ್ಲಿ ಪ್ರಕಟವಾದ ಬಳಿಕ, ಈ ಪರಾಕ್ರಮಿಗಳ ಪರಾಕ್ರಮದೆದುರು ಸೋತು, ದೇವಳವನ್ನು ತೆರೆದಿಡಬೇಕಾಯ್ತು, ಎನ್ನಿ, ಅಂದರೆ, ಅಸ್ಪೃಶ್ಯತಾ ನಿವಾರಣೆಯೂ ಆದಂತಾಯ್ತು, ರಾಜಭೋಜ ಸಂಪ್ರದಾಯದ ಪರಾಕ್ರಮ ಶ್ರೇಯವನ್ನೂ ಸಾಧಿಸಿದಂತಾಯ್ತು", ಎಂದು ಹೇಳಿ, ಯಾವ ಸ್ಪೃಶ್ಯ ಹಿಂದೂಗಳಿಗೆ ಸ್ವಸಂತೋಷದಿಂದ ದೇವಳವನ್ನು ಮುಕ್ತವಾಗಿಸುವ ಹೃದಯವಂತಿಕೆ ಇರುವುದೋ ಅವರಿಗೆ ಇಂತಹ ಭಾಷೆ ಶೋಭಿಸುವುದು. ಆದರೆ ಯಾರಲ್ಲಿ ಅಂತಹ ಔದಾರ್ಯ ಇಲ್ಲವೋ, ಅಂತಹವರು, ದೈತ್ಯರು ತಮ್ಮನ್ನೇ ದೇವರೆಂದು ಕೊಂಡಂತೆ. ಉಕ್ತ ಹೇಳಿಕೆಯಲ್ಲಿ ಸಾಕಷ್ಟು ತಥ್ಯಾಂಶ ಇದ್ದರೂ, ಅಸ್ಪೃಶ್ಯರು ತಮ್ಮ ಹಕ್ಕು ಸಂಪಾದನೆಯಲ್ಲಿ ಯಾಚಕರಾಗುವುದೇಕೆ? ಬೆಳಿಗ್ಗೆ, ಸಂಜೆ ಪುಕ್ಕಟೆ ಸುಗ್ರಾಸ ಭೋಜನ ಸಿಗುವಂತಿರುವಾಗ, ಅದನ್ನು ಬಿಟ್ಟು, ಸ್ವಕಷ್ಟಾರ್ಜಿತ ರೊಟ್ಟಿಗಾಗಿ ಯತ್ನಿಸುವವನಿಗೆ ಪರಾನ್ನಪುಷ್ಟ ಬ್ರಾಹ್ಮಣನಂತೆ ಯಾವುದೇ ದೋಷ ಬರುವುದೆಂದು ನಮಗನಿಸುವುದಿಲ್ಲ. ಆದರೆ ಯಾಚಕವೃತ್ತಿಯ ಸಂಭಾವನೆಯಿಲ್ಲದೆ ಕ್ಷಾತ್ರತೇಜ ತೋರಿ , ಅಸ್ಪಶ್ಯರು ತಮ್ಮ ಹಕ್ಕಿಗಾಗಿ ಪ್ರಯತ್ನಿಸಿದರೆ ದೋಷವೇನೋ ತಿಳಿಯದು. ಸತ್ಯಾಗ್ರಹ ಮಾಡುವವರ ಕಾರಣ ಎಷ್ಟೇ ದೋಷಾಸ್ಪದವಿದ್ದರೂ, ಅದರಿಂದಾಗಿ ಅವರ ಧ್ಯೇಯ ದೂಷಿತವಾಗುವುದೆಂತು ಎಂದೇ ನಮಗೆ ತಿಳಿಯುತ್ತಿಲ್ಲ. ಸಾಧನೆಯ ಒಳಿತು ಕೆಡುಕು ಎಲ್ಲವೂ ಅದರ ಪರಿಣಾಮದ ಮೇಲೇ ನಿರ್ಧರಿಸಲ್ಪಡಬೇಕು. ಅರ್ಥಾತ್, ಸತ್ಯಾಗ್ರಹದ ವಿರುದ್ಧ ಸಾರಲಾದ ಮಾತು ಸರ್ವಥಾ ಸುಳ್ಳು ಎಂದೇ ಹೇಳಬೇಕು. ಸತ್ಯಾಗ್ರಹದ ವಿರುದ್ಧ ಎದ್ದಿರುವ ಎರಡನೇ ಸಬೂಬು ಕೂಡ ಅಷ್ಟೇ ವ್ಯರ್ಥವಾದುದು. ಅದೆಂದರೆ ಅಸ್ಪೃಶ್ಯತಾ ನಿವಾರಣೆಯ ಪ್ರಶ್ನೆಯನ್ನು

ಮತಪರಿವರ್ತನೆಯಲ್ಲಿಗೆ ಬಿಟ್ಟು ಬಿಡಬೇಕು ; ಸತ್ಯಾಗ್ರಹವನ್ನು ಬಿಟ್ಟು ಹೋಗಬಾರದು. ಹಾಗೆ ಬಿಟ್ಟು ಹೋದರೆ ಇನ್ನೂ ಹೆಚ್ಚು ಬಿಕ್ಕಟ್ಟು ಉಂಟಾಗುವುದು. ಅಸ್ಪೃಶ್ಯತಾ ನಿರ್ಮೂಲನವೆಂದರೆ ಸ್ಪೃಶ್ಯ ಹಿಂದೂಗಳ ಮತಪರಿವರ್ತನೆ ಎಂಬುದೇನೋ ಸರಿ, ಆದರೆ, ಸತ್ಯಾಗ್ರಹ ಮತ್ತು ಮತಪರಿವರ್ತನೆ, ಭಿನ್ನ ಹಾಗೂ ಪರಸ್ಪರ ವಿರೋಧಿ ಎಂದೊಪ್ಪಲು ನಾವು ಸಿದ್ಧರಿಲ್ಲ. ಯಾವ ಜನರು ಮತಪರಿವರ್ತನೆಯ ಮಹಿಮೆಯನ್ನು ಕೀರ್ತಿಸ ತೊಡಗಿರುವರೋ, ಆ ಜನರು, ಮತಪರಿವರ್ತನೆಯ ಹಾದಿ ಯಾವುದೆಂದಾರೂ ನಿಶ್ಚಿತವಾಗಿ



ಹೇಳಲಿ, ವ್ಯಾಖ್ಯಾನದಂತಹ ಉಪಾಯದಿಂದ ಹಿಂದೂ ಜನತೆಯ ಮೇಲೆ ಯಾವ ಪರಿಣಾಮವೂ ಆಗುವುದಿಲ್ಲವೆಂಬ ಅನುಭವ ಎಲ್ಲರಿಗೂ ಆಗಿದೆ. ಕಾರಣ, ಹಿಂದೂ ಜನತೆ, ರಾಮದಾಸರು ಅನ್ನುವಂತೆ ಸಿದ್ಧ, ಸಾಧಕ ಮತ್ತು ಮುಮುಕ್ಷು ಈ ಯಾವ ವರ್ಗದಲ್ಲೂ ಬರುವುದಿಲ್ಲ. ಅದು ಕೇವಲ ಬದ್ಧ ವರ್ಗದಲ್ಲಿ ಮಾತ್ರ ಬರಬಲ್ಲುದು. ಇಂತಹ ಬದ್ಧವರ್ಗದ ಮತಪರಿವರ್ತನೆ ಮಾಡಲು ವ್ಯಾಖ್ಯಾನವಲ್ಲದೆ ಬೇರೇನಾದರೂ ದಾರಿಯಿದ್ದಲ್ಲಿ ಅದನ್ನೂ ಪರಾಂಬರಿಸಿ ನೋಡಲು ನಮ್ಮ ಅಡ್ಡಿಯಿಲ್ಲ. ಆದರೆ ಹಾಗೊಂದು ಮಾರ್ಗ ಇದೆಯೆಂಬ ಕಲ್ಪನೆಯೇ ನಮಗಿಲ್ಲ. ಬದಲಿಗೆ, ಸತ್ಯಾಗ್ರಹ ಮತ್ತು ಮತಪರಿವರ್ತನೆ ಇವೆರಡು ಭಿನ್ನ ಹಾಗೂ ಪರಸ್ಪರ ವಿರೋಧಿ ಮಾರ್ಗಗಳಾಗಿರದೆ, ಸತ್ಯಾಗ್ರಹವು, ಮತಪರಿವರ್ತನೆಯನ್ನು ಸಾಧ್ಯವಾಗಿಸುವ ದೊಡ್ಡ ಸಾಧನ, ಎಂದು ನಮಗೆ ಖಂಡಿತವಿದೆ. ಬದ್ಧ ಜನರ ಯಾವುದೇ ಪ್ರಶ್ನೆಗೆ ಜ್ಞಾನಯುಕ್ತ ಧಾರಣೆಯನ್ನು ತರಲು ಅವರ ಆಚಾರ, ವಿಚಾರಗಳಲ್ಲಿ ದೊಡ್ಡ ಕ್ರಾಂತಿಯಾಗಬೇಕು. ಅದಲ್ಲದೆ ಅವರು ಆತ್ಮನಿರೀಕ್ಷಣೆಗೆ ಉದ್ಯುಕ್ತರಾಗುವುದಿಲ್ಲ, ಮತ್ತು ಹಾಗಾಗುವವರೆಗೆ ಅವರಿಂದ ಮತಾಂತರವಾಗುವುದೂ ಇಲ್ಲ.

ಈ ಯುಕ್ತಿವಾದವು ಗ್ರಾಹ್ಯವೆನಿಸಿದರೆ, ಮತ್ತು ಕಣ್ಣಲ್ಲಿ ಅಂಜನ ಹಾಕದ ಹೊರತು, ಜ್ಞಾನವಿಲ್ಲ, ಎಂಬುದನ್ನು ಒಪ್ಪಿಕೊಂಡರೆ, ಸತ್ಯಾಗ್ರಹದಂತೆ ಸಮಾಜದ ದುರಾಗ್ರಹವನ್ನು ಕಳೆಯುವ ಮಾರ್ಗ ಬೇರಿಲ್ಲ, ಎಂಬುದನ್ನು ಒಪ್ಪಿಕೊಳ್ಳಬೇಕು. ಕಾರಣ, ಅದರ ಆಘಾತ, ಪ್ರತ್ಯಕ್ಷವಾಗಿ ಆಚಾರದ ಮೇಲೆ ಆಗುವುದರಿಂದ ಅದು ಪ್ರತಿಯೊಬ್ಬರನ್ನೂ

ವಿಚಾರಕ್ಕೆ ಹಚ್ಚುತ್ತದೆ.ಇದರ ಪ್ರತ್ಯಂತರವು ಸ್ವತಃ ಮಣೆಯಲ್ಲೇ ಕಾಣ ಸಿಕ್ಕಿದೆ. ಪುಣೆಯಲ್ಲಿ ಈಗ ಎದ್ದಿರುವ ಗೊಂದಲ ಮತ್ತು ಅಸ್ಪೃಶ್ಯತಾ ನಿವಾರಣೆಯ ವಿಷಯದಲ್ಲಿ ಏನೂ ಅರಿಯದವರಾಗಿದ್ದರೋ, ಅವರೇ ಈಗ ಬಹಿಷ್ಕೃತರ ಪಕ್ಷದಲ್ಲಿರುವುದು ಯಾವುದರ ಪರಿಣಾಮ? ಇದಕ್ಕೆ ಒಂದೇ ಉತ್ತರ ಎಂದು ನಮ್ಮ ಅಭಿಪ್ರಾಯ. ಅದುವೇ ಸತ್ಯಾಗ್ರಹವೊಂದೇ ಕಾರಣ ಎಂಬುದು. ಸತ್ಯಾಗ್ರಹವೆಂದರೆ ಮೂಗು ತಿರುಗಿಸುವ ಕೇಸರಿ ಬಳಗ, ಸತ್ಯಾಗ್ರಹದಿಂದ ಒಪ್ಪಂದಕ್ಕೆ ಬರಲು ತನ್ನ ಸಹಮತವಿತ್ತೆಂಬುದನ್ನು ಕೇಸರಿಯಲ್ಲಿ ಅಲ್ಲಗಳೆದಿದ್ದಾರೆ.

ಸತ್ಯಾಗ್ರಹದಿಂದಾಗಿಯೇ ಕೇಸರಿ, ತನ್ನ ಮತದಂತೆ ಕೃತಿಗಿಳಿಯುವುದು ಸಾಧ್ಯವಾಯ್ತು. ಇದು ಸತ್ಯಾಗ್ರಹದ ಸಾಮರ್ಥ್ಯದ ದೊಡ್ಡ  ಸಾಕ್ಷಿಯೇ ಸರಿ. ಯಾವ ಜನರು ಇಂತಹ ಪರಿಣಾಮಕಾರಿ ಉಪಾಯಕ್ಕೆ ಬೆಚ್ಚಿಬೀಳುತ್ತಾರೋ, ಮತ್ತು ಅದರ ಅವಲಂಬನೆ ನಿಷಿದ್ಧವೆನ್ನುತ್ತಾರೋ, ಅಂಥವರಿಗೆ ಧೈಯದ ಬಗ್ಗೆ ನಿಷ್ಠೆ ಇರದೆ, ಬದಲಿಗೆ ಕೇವಲ ವಾಚಾಳಿತನವಿದೆ, ಎನ್ನಬೇಕಾಗಿದೆ.

**ಒಪ್ಪಂದದ ನಿಷ್ಫಲತೆಯ ಕಾರಣಗಳು**

ಈಗ ಈ ಒಪ್ಪಂದ ನಿಷ್ಫಲವೆಂದಾದುದು ನಿಜ. ಅದರ ದೋಷವನ್ನು ಸತ್ಯಾಗ್ರಹದ ಮೇಲೆ ಹೊರಿಸದೆ, ಮಧ್ಯಸ್ಥರ ದೌರ್ಬಲ್ಯದ ಮೇಲೆ ಹೊರಿಸಬೇಕು. ಈ ಒಪ್ಪಂದದ ಕಾರ್ಯವನ್ನು ಶ್ರೀ ಕೇಳ್ಕರ್, ಶ್ರೀ ಭೋಪಟ್ಕರ್ ಮತ್ತು ಶ್ರೀ ಭಾಟೇ ಅವರ ಮೇಲೆ ಹೊರಿಸಲಾಗಿರುವುದು ನಮಗೆ ಆಶ್ಚರ್ಯವಾಗಿದೆ. ಒಪ್ಪಂದ ಮಾಡಿಸುವವರಲ್ಲಿ ಎರಡರಲ್ಲಿ ಒಂದಾದರೂ ಗುಣವಿರಬೇಕು. ಒಂದೋ ಅವರಲ್ಲಿಷ್ಟು ಕಾಠಿಣ್ಯವಿರಬೇಕು, ಅದರಂತೆ ಜನತೆ ಅವರ ಮಾತನ್ನು ಒಪ್ಪಿಕೊಳ್ಳಬೇಕು. ಸಾಮೋಪಚಾರದ ಮಾತುಗಳನ್ನು ಕೇಳದಿದ್ದರೆ, ಒಪ್ಪಂದಕ್ಕೆ ಬರದಿದ್ದರೆ, ಮಧ್ಯಸ್ಥರ ಮನನೊಂದು, ಅವರು ಸತ್ಯದ ಪಕ್ಷ ಹಿಡಿದು, ತಮ್ಮನ್ನೆದುರಿಸಬಹುದೆಂದು ದುರಾಗ್ರಹೀ ಪಕ್ಷಕ್ಕೆ ಭಯವೆನಿಸ

ಬೇಕು. ಈ ಎರಡೂ ದೃಷ್ಟಿಯಿಂದ ನೋಡಿದರೆ ಈ ಮಧ್ಯಸ್ಥರು ಬರೇ ನಿಷ್ಪ್ರ ಯೋಜಕರೆನ್ನದೆ ಗತ್ಯಂತರವಿಲ್ಲ. ಕಾರಣ, ಬಹುಜನಸಮಾಜದ ಮೇಲೆ ಅವರ ಮಾತುಗಳು ಯಾವುದೇ ಪ್ರಭಾವ ಬೀರುವಂತಿಲ್ಲ. ಅಸ್ಥಿರಬುದ್ಧಿ ಮತ್ತು ಅನಿಶ್ಚಿತ ಕೃತಿಯಿಂದಾಗಿ ಶ್ರೀ ಕೇಳ್ಕರ್ ಅವರಿಗೆ ಮಹಾರಾಷ್ಟ್ರದಲ್ಲಿ ಮಾನವಿಲ್ಲ, ಎಂದರೆ ಅದರಲ್ಲಿ ಅತಿಶಯೋಕ್ತಿಯಿಲ್ಲವೆಂದು ನಮಗನಿಸುತ್ತದೆ. ಈ ಮಧ್ಯಸ್ಥರ ಬದಲಿಗೆ ಸರಿಯಾದ ಹಿಂದೂ ಧರ್ಮಜ್ಞಾನವುಳ್ಳ ಶಂಕರಾಚಾರ್ಯರು ಈ ಕೆಲಸವನ್ನು ಕೈಗೆತ್ತಿಕೊಂಡಿದ್ದರೆ, ಎಲ್ಲಾದರೂ ಅದರಲ್ಲಿ ಹೆಚ್ಚಿನ ಯಶ ಪ್ರಾಪ್ತವಾಗುತ್ತಿತ್ತೋ ಇಲ್ಲವೋ ! ಕರಾರುವಾಕ್ಕಾಗಿ ಹೇಳುವುದಾದರೆ, ಶೂನ್ಯವೆಂದೇ ಹೇಳಬೇಕು. ಯಾವ ಮನುಷ್ಯನು ಅನ್ಯಾಯವನ್ನೆದುರಿಸಲು ತಾನೇನೂ ಮಾಡಲಾರೆನೆಂದು ಮೊದಲೇ ಸಾರಿ ಬಿಡುವನೋ, ಅವನು ತನ್ನ ಹಕ್ಕು ಸಂರಕ್ಷಣೆಯ ಪ್ರೀತ್ಯರ್ಥ ನ್ಯಾಯ, ನೀತಿ ಎಂದು ಎಷ್ಟೇ ಬಡಕೊಂಡರೂ, ಯಾರೂ ಆಲಿಸುವವರಿಲ್ಲವೆಂಬ ಅನುಭವ ಎಲ್ಲರಿಗೂ ಆಗಿರುತ್ತದೆ. ಮಾಟೆ, ಕೇಳ್ಕರ್ ಹಾಗೂ ಬೋಪಟ್ಕರ್ ಅವರು ಹೀಗೆ ತಾವು ಸತ್ಯಾಗ್ರಹಕ್ಕಿಳಿಯಲಾರೆವೆಂದು ಸಾರಿದ್ದಾರೆ. ಅಷ್ಟೇ ಅಲ್ಲ, ಸತ್ಯಾಗ್ರಹಕ್ಕಿಳಿವೆವೆಂದವರನ್ನು "ಕೇಸರಿ"ಯಲ್ಲಿ ನಿಂದಿಸಿದ್ದಾರೆ. ಸತ್ಯಾಗ್ರಹವೆಂದರೆ, ಮದ್ಯಪಾನ ಮತ್ತು ವೇಶ್ಯಾಗಮನದಂತಹ ದೊಡ್ಡ ಪಾತಕವೇ?

ಇಂತಹ ದುರ್ಬಲರ ಕೈಯಿಂದ, ಬೇಕಾದ ಒಪ್ಪಂದ ನಡೆಯಲಿಲ್ಲವೆಂದರೆ, ಅದು ಮಧ್ಯಸ್ಥರ ದೌರ್ಬಲ್ಯದ ಪರಿಣಾಮವೇ ಹೊರತು, ಸತ್ಯಾಗ್ರಹದಲ್ಲ ಎಂದೇ ಹೇಳಬೇಕು.

**ಮತಪರಿವರ್ತನೆಯ ತಂಬೂರಿ ಬಾರಿಸುವವರಿಗೊಂದು ಪ್ರಶ್ನೆ**

ಈ ಮತಪರಿವರ್ತನವಾದಿಗಳಿಗೆ ನನ್ನದೊಂದು ಪ್ರಶ್ನೆ ; ಅಸ್ಪೃಶ್ಯರ ದೇವಳ ಪ್ರವೇಶಕ್ಕೆ ಮುನ್ನ, ಎಷ್ಟು ಕಾಲ ಮತ್ತು ಎಷ್ಟು ಜನರ ಮತಪರಿವರ್ತನೆ ಮಾಡುವವರು? ಎಲ್ಲ ಸ್ಪೃಶ್ಯ ಹಿಂದೂಗಳ ಮತಪರಿವರ್ತನೆ ಆಗದ ಹೊರತು, ಅಸ್ಪೃಶ್ಯರಿಗೆ ಮಂದಿರ ಪ್ರವೇಶವಿಲ್ಲ, ಎಂದೇನಾದರೂ ಅವರ ವಿಚಾರವಿದ್ದರೆ, ಅಸ್ಪೃಶ್ಯರು ಅನಂತಕಾಲ ಕಾದಿರಬೇಕಾದೀತು, ಮತ್ತು ಆ ಕಾರಣದಿಂದ ಈ ವಿಚಾರ ಅವ್ಯವಹಾರಿಕ ಎಂದು ಬಿಟ್ಟುಬಿಡಬೇಕು. ಈಗ ಸ್ಪೃಶ್ಯ ಹಿಂದೂ ಸಮಾಜದಲ್ಲಿನ ಬಹುಜನಸಮಾಜದ ಮತಪರಿವರ್ತನೆ ಆಯಿತೆಂದರೆ, ಮತ್ತೆ ಅಸ್ಪೃಶ್ಯರು ಮಂದಿರ ಪ್ರವೇಶದ ಪ್ರಯತ್ನ ಮಾಡಬಹುದೆಂದು ಮತಪರಿವರ್ತನೆವಾದಿಗಳ ಧೈಯವಿದ್ದರೆ, ಅದರಿಂದ ಸತ್ಯಾಗ್ರಹದ ಅಗತ್ಯ ಕಡಿಮೆಯಾಗದೆ, ಬದಲಿಗೆ ಹೆಚ್ಚೇ ಆಗುವುದೆಂದು ಸಾಬೀತಾಗುವುದು. ಕಾರಣ, ಮತಪರಿವರ್ತನೆಯಾಗದ ಹಿಂದೂ

ಸ್ಪಶ್ಯರು, ಅಸ್ಪೃಶ್ಯ ಹಿಂದೂಗಳ ಮಂದಿರ ಪ್ರವೇಶಕ್ಕೆ ಅಡ್ಡಿಯೊಡ್ಡಲು ನಿಶ್ಚಯಿಸಿದರೆ, ಅದರ ವಿರುದ್ಧವೂ ಅಸ್ಪೃಶ್ಯರು ಸತ್ಯಾಗ್ರಹ ಆರಂಭಿಸಬಹುದು. ಈ ದೃಷ್ಟಿಯಿಂದ ನೋಡಿದರೆ ಅಸ್ಪೃಶ್ಯತಾ ನಿವಾರಣೆಗೆ ಸತ್ಯಾಗ್ರಹದ ಹೊರತು ಅನ್ನೋಪಾಯವಿಲ್ಲ, ಸ್ವರಾಜ್ಯ ಸಿಗುವ ವರೆಗೆ ಈ ಸತ್ಯಾಗ್ರಹ ನಿಲ್ಲುವಂತಿಲ್ಲ.

ನಮ್ಮ ಈ ಯುಕ್ತಿವಾದ ಮಾನ್ಯವೆಂದೇ ಸೇಠ್ ಜಮ್ನಾಲಾಲ್ ಬಜಾಜರಂಥ ಕಟ್ಟಾ ಅಸ್ಪೃಶ್ಯತಾ ನಿವಾರಕರು ನಮ್ಮನ್ನು ಮಾನ್ಯ ಮಾಡುತ್ತಾರೆ. ಆದರೆ ಅವರ ವಿಚಾರ ಸರಣಿ ನಮಗೆ ಹಿಡಿಸುವುದಿಲ್ಲ. ಸತ್ಯಾಗ್ರಹಕ್ಕೆ ಅಸ್ಪೃಶ್ಯರು ಸಿದ್ಧವಿದ್ದರೂ, ಸದ್ಯದ ಪರಿಸ್ಥಿತಿಯಲ್ಲಿ ಅದು ಇಷ್ಟವಲ್ಲ, ಎಂದು ಅವರ ಮತ. ದೇಶದ ಪಾರತಂತ್ರ್ಯವನ್ನು ಕಳೆಯುವಲ್ಲಿ, ಇಡೀ ದೇಶವೇ ಒಟ್ಟಾಗಿ ಐಕ್ಯಮತ್ಯದಿಂದ



.

ಅಂಗ್ರೇಜಿ ಸರಕಾರದ ವಿರುದ್ಧ ಹೋರಾಡುತ್ತಿರುವಾಗ, ಅಸ್ಪೃಶ್ಯರು ತಮ್ಮ ಹಕ್ಕಿಗಾಗಿ ಗಲಭೆಯೆಬ್ಬಿಸುವುದು ಯುಕ್ತವಲ್ಲ, ಎನ್ನುವವರಿಗೆ, ನಮ್ಮ ಉತ್ತರ ಹೀಗಿದೆ ; ಅಸ್ಪೃಶ್ಯರ ಗುಲಾಮ ಗಿರಿಯನ್ನು ಶಾಶ್ವತವಾಗಿರಿಸಲು ಸ್ವರಾಜ್ಯ ಸಿಗುವಲ್ಲಿ ಕಟಿಪಟಿಯಿದ್ದರೆ, ಈ ಕಟಪಟಿಗೆ ಎಷ್ಟು ಸಾಧ್ಯವೋ ಅಷ್ಟು ವಿಘ್ನವೊಡ್ಡುವುದು ತಮ್ಮ ಕರ್ತವ್ಯ ಎಂದು ಅಸ್ಪೃಶ್ಯರು ತಿಳಿಯಬೇಕು. ಇಂದು ಅಸ್ಪೃಶ್ಯರಿಗೆ ಹಕ್ಕು ನೀಡಲು ಸ್ಪೃಶ್ಯರು ಸಿದ್ದರಾದರೆ, ನಮ್ಮ ಕಲ್ಯಾಣದಲ್ಲಿ ಅವರಿಗೆ ಆಸ್ಥೆಯಿದೆ, ಎಂಬ ವಿಶ್ವಾಸದಿಂದ ಸ್ವರಾಜ್ಯರಥದ ಹಗ್ಗವನ್ನು ಅವರ ಕೈಗೆ ಕೊಡಲು ಯಾರ ಅಡ್ಡಿಯೂ ಇರುವುದಿಲ್ಲ. ಆದರೆ, ಯಾವ ಜನರು ಇಂದು ನಮಗೆ ಮನುಷ್ಯರ ಸಾದಾ ಹಕ್ಕು ನೀಡಲೂ ಸಿದ್ಧರಿಲ್ಲವೋ, ಅವರು ನಾಳೆ ಸ್ವರಾಜ್ಯ ಸಿಕ್ಕ ಬಳಿಕ, ನಮ್ಮ ಮಾನವೀಯತೆಯನ್ನು ನೋಡಿ, ತಮ್ಮ ಮಾನವೀಯತೆಯನ್ನು ಜಾಗೃತಗೊಳಿಸಿ ಕೊಳ್ಳುವರೆಂದು ತಿಳಿಯುವ ಅಸ್ಪೃಶ್ಯರು, ಒಬ್ಬರಾದರೂ ಇಲ್ಲ. ಆದ್ದರಿಂದಲೇ, ಸ್ಪೃಶ್ಯರು ಭಾಗ್ಯವೆಂದು ಕೊಳ್ಳುವ ಸ್ವಾತಂತ್ರ್ಯವನ್ನು, ಅಸ್ಪೃಶ್ಯರು ದೊಡ್ಡದೊಂದು ಆಪತ್ತೆಂದು ತಿಳಿಯುತ್ತಾರೆ. ಸೇತ್ ಜಮ್ನಾಲಾಲ್ ಬಜಾಜ್ ಅವರ ಯುಕ್ತಿವಾದವು ನಮಗೆ ಕೇವಲ ನೀರಸವಾಗಿ ಕಾಣುತ್ತದೆ. ಸ್ವರಾಜ್ಯ ಸಿಗಲು ಯಾರ ಸಹಾಯ ಬೇಕಿದೆಯೋ, ಅಂಥವರ ಮೇಲಣ ಅನ್ಯಾಯವನ್ನು ದೂರ ಸರಿಸಿ, ಪರಸ್ಪರರಲ್ಲಿ ವಿಶ್ವಾಸದ ಋಣಾನುಬಂಧವನ್ನುಂಟು ಮಾಡುವುದೇ ರಾಜಕಾರಣದ ಏಕೈಕ ರಾಜಮಾರ್ಗ ಎಂದೇ ನಮಗನಿಸುತ್ತದೆ. ಅನ್ಯಾಯ ಪೀಡಿತರಿಗೆ, ಈಗ ನೀವು ಸುಮ್ಮನಿರಿ, ಸ್ವರಾಜ್ಯ ಸಿಕ್ಕ ಬಳಿಕ ನಿಮ್ಮನ್ನು ವಿಚಾರಿಸಿ ಕೊಳ್ಳುತ್ತೇವೆ ಎನ್ನುವುದು ಐಕ್ಯಮತ್ಯ ಸ್ಥಾಪಿಸುವ ಮುಕ್ತ ಮಾರ್ಗವೆಂದೇ ಹೇಳಬೇಕು ಯಾರು ಏನೇ ಹೇಳಲಿ,

ಅಸ್ಪಶ್ಯರು ಯಾವುದೇ ಕಾರಣಕ್ಕೆ ತಮ್ಮ ಸ್ವಾತಂತ್ರ್ಯವನ್ನು ದೂರ ಸರಿಸುವುದು ಬೇಡ,ಎಂದೇ ನಮ್ಮ ಸಲಹೆ, ಶತ್ರುವಿನ ದೌರ್ಬಲ್ಯ ಕಂಡಾಗ ಆಘಾತಿಸುವುದು, ಯುದ್ಧದ ಸರ್ವಸಾಮಾನ್ಯ ನಿಯಮ. ಇದನ್ನು ಎಲ್ಲೆಡೆ ಗೆದ್ದವರು ಸೋತವರ ಮೇಲೆ ಪ್ರಯೋಗಿಸುತ್ತಾ ಬಂದಿದ್ದಾರೆ. ಐರಿಶ್ ಜನರು ಇಂಗ್ಲೆಂಡ್‌ನ ಜನರ ಮೇಲೆ ತಮ್ಮ ಹಕ್ಕು ಸಾಧಿಸಲು ಪದೇ ಪದೇ ಇದನ್ನು ಪ್ರಯೋಗಿಸಿದ್ದಾರೆ. ಸ್ವತಃ ತಿಲಕರೂ ಇದನ್ನೇ ಭಾರತೀಯರಿಗೆ ಕಲಿಸುತ್ತಾ ಬಂದಿದ್ದಾರೆ. ಸ್ವರಾಜ್ಯಕ್ಕಾಗಿ ಉತ್ಸುಕರಾದ ಹಿಂದೂ ನಾಯಕರಿಂದ ತಮ್ಮ ಹಕ್ಕು ಗಳಿಸಿಕೊಳ್ಳಲು ಇದೇ ಅವಕಾಶವೆಂಬುದನ್ನು ಕಂಡುಕೊಂಡು, ಮೊದಲು ನಮ್ಮ ಹಕ್ಕು ಕೊಡಿ, ಮತ್ತೆ ನಿಮ್ಮ ಸ್ವರಾಜ್ಯದ ಬೇಡಿಕೆಗೆ ನಾವು ಹೆಗಲು ಕೊಡುತ್ತೇವೆ, ಎಂದು ಮುಸಲ್ಮಾನರು ಹಿಂದೂಗಳನ್ನು ಕೇಳುತ್ತಿದ್ದಾರೆ. ಆದರೆ, ಪಾಪದ ಅಸ್ಪೃಶ್ಯರು ಮಾತ್ರ ಈ ಧೋರಣೆ ಇರಿಸಿಕೊಳ್ಳಬಾರದು, ಎನ್ನುವುದೇಕೆ? ಈ ವಿಷಯದ ಬೆಂಬಿದ್ದು, ತಮ್ಮ ಸಮಯ ಹಾಳು ಮಾಡಿಕೊಳ್ಳದೆ, ಅಸ್ಪೃಶ್ಯರು ತಮ್ಮ ಹಕ್ಕು ಸಂಪಾದಿಸುವಲ್ಲಿ ಕಾರ್ಯಮಗ್ನರಾಗಿ, ಅದರಲ್ಲಿ ಸಂಪೂರ್ಣ ತೊಡಗಿಸಿಕೊಳ್ಳಲಿ ಮತ್ತು ವಿರುದ್ಧ ಪಕ್ಷದವರನ್ನು ಅವರದೇ ಸಾಧನೆಯಿಂದ ಎದುರಿಸಲಿ, ಎಂದು ನಮ್ಮ ಅಸ್ಪೃಶ್ಯ ಬಂಧುಗಳಿಗೆ ನಮ್ಮ ಸಲಹೆ.

* * * *

## ೭೦. ಕ್ರಾಂತಿ ಅನ್ನುವುದು ಯಾವುದಕ್ಕೆ?

ಕಳೆದ ಬಾರಿ, ನಾವು ಕಮ್ಯುನಿಸ್ಟರ ಚಳವಳಿಯ ಬಗ್ಗೆ ಬರೆದ ಅಗ್ರಲೇಖನದಲ್ಲಿ ವಿಷಯಾನುರೋಧ ಮಾಡುತ್ತಾ, ಸದ್ಯದ ಪರಿಸ್ಥಿತಿಯಲ್ಲಿ ಕ್ಷಿಪ್ರ ಕ್ರಾಂತಿ ಶಕ್ಯವೂ ಅಲ್ಲ , ಇಷ್ಟವೂ ಅಲ್ಲ, ಎಂದು ಹೇಳಿದ್ದೇವೆ. ಇದರ ಬಗ್ಗೆ ನಮ್ಮ ವ್ಯವಸಾಯ ಬಂಧುವೊಬ್ಬರು ಭಾಷ್ಯ ರಚಿಸಿ, ನಮ್ಮ ಮತ, ತತ್ವತಃ ಬಹಿಷ್ಕೃತ ವರ್ಗದ ಕಡೆಯಿಂದ ಬಿರುಸಾಗಿ ನಡೆದಿರುವ ಚಳವಳಿಗೆ ವಿರುದ್ಧವಿದೆ, ಮತ್ತು ಬಹಿಷ್ಕೃತ ವರ್ಗದ ಇಂತಹ ಚಳವಳಿಯಲ್ಲಿ ನಾವು ಭಾಗವಹಿಸಿದರೆ, ಅದು ನಮ್ಮ ತತ್ವವನ್ನು ತೊರೆದೇ ಆಗಿರುತ್ತದೆ, ಎಂದು ಭಾಸವಾಗಿಸುವ ಯತ್ನ ಮಾಡಿದ್ದಾರೆ. ಈ ನಮ್ಮ ವ್ಯವಸಾಯ ಬಂಧುವು, ನಮ್ಮ ಚಳವಳಿಯ ಒಬ್ಬ ನಿಶ್ಚಿತ ಹಿತಶತ್ರುವಾಗಿದ್ದು, ಸಮಾಜ ಸಮತೆಯ ಚಳವಳಿ ಸತತ ಅವರ ಕಣ್ಣಿಗೆ ಕುಕ್ಕುತ್ತಿರುತ್ತದೆ. ಸಮಾಜ ಸಮತೆಯ ಚಳವಳಿಯ ಮೇಲೆ ಮತ್ತು ಅದರ ಪುರಸ್ಕರ್ತರ ಮೇಲೆ ಒಂದೆರಡು ಹನಿ ಹಾರಿಸದಿದ್ದರೆ, ಕೇಳಿಸದಿದ್ದರೆ, ತನ್ನ ಜೀವಿತದ ಕರ್ತವ್ಯ ಅಪೂರ್ಣವಾದಂತೆ ಅವರಿಗೆ ಭಾಸವಾಗುತ್ತದೆ. ಅರ್ಥಾತ್, ನಮ್ಮ ಲೇಖನದೊಂದು ವಾಕ್ಯ ಅವರಿಗೆ ಚುಚ್ಚಿ ಪುಟ್ಟ ಮಕ್ಕಳು, ಕುಲ್ಲಕ ಕಾರಣಕ್ಕೆ “ಹೇಗೆ ಹೊಡೆದೆ”, ಎಂದು ಕೈ ತಟ್ಟಿ ಕುಣಿವಂತೆ, ಈ ಮುದಿ ಹುಲಿ, ಚರ್ಚೆಯಲ್ಲಿ ವಿಜಯಿಯಾದಂಥ ಭಾವವನ್ನು ವ್ಯಕ್ತ ಪಡಿಸಿದ್ದಾರೆ. ಅವರ ಸಮಾಧಾನಕ್ಕೆ

ಅಡ್ಡಿ ಬರಲು ನಾವು ಇಚ್ಛಿಸುವುದಿಲ್ಲ. ಆದರೆ, ಇಂತಹ ಶಬ್ದ ಛಲದಿಂದ ಬಹಿಷ್ಕೃತ ವರ್ಗದ ತೀವ್ರ ಚಳವಳಿಯ ಅಡಿಪಾಯ ಮುರಿಯುವುದೆಂದು ಅವರು ಅಂದುಕೊಂಡಿದ್ದರೆ, ಆ ಭ್ರಮೆಯನ್ನು ಬಿಡುವುದೊಳಿತು, ಎಂದು ಅವರಿಗೂ ಅವರಂಥ ಇತರ ಟೀಕಾಕಾರರಿಗೂ ನಾವು ಹೇಳುತ್ತೇವೆ. ನಮ್ಮ ಲೇಖನವು ಕಮ್ಯೂನಿಸ್ಟರ ಕ್ರಾಂತಿಕಾರಿ ಚಳವಳಿಯ ಬಗ್ಗೆ ಬರೆದುದಾಗಿತ್ತು. ಕಮ್ಯೂನಿಸ್ಟರ ಧ್ಯೆಯ ಆತ್ಯಂತಿಕವಾಗಿದ್ದರೂ, ಅದು ಅಯೋಗ್ಯವೆಂದು ನಾವು ಅಂದಿರಲಿಲ್ಲ. ಕಮ್ಯೂನಿಸಮ್‌ನ ಧ್ಯೆಯವು ರಾಜಕೀಯ ಸ್ವರೂಪದ್ದಾಗಿರುಂತೆ, ಆರ್ಥಿಕ ಹಾಗೂ ಸಾಮಾಜಿಕ ಸ್ವರೂಪದ್ದೂ ಆಗಿದೆ ಮತ್ತು ಸಾಮಾಜಿಕ ವಿಷಯವಾಗಿ, ಜನಾಭಿಪ್ರಾಯದಂತೆ ಆಗಬೇಕಾದ ಕ್ರಾಂತಿ ಇನ್ನೂ ಆಗಿಲ್ಲ. ಅದೇರೀತಿ ಕಮ್ಯೂನಿಸಮ್‌ನ ಆರ್ಥಿಕ ಮತ್ತು ರಾಜಕೀಯ ಧ್ಯೆಯವನ್ನು ಅರಿಯುವಲ್ಲಿ ಬಹುಜನ ಸಮಾಜವಿನ್ನೂ ಶಕ್ಯವಾಗಿಲ್ಲ. ಸೋಶಿಯಲಿಸಮ್ ಮತ್ತು ಕಮ್ಯೂನಿಸಂನ ಧ್ಯೆಯಗಳಲ್ಲಿ ಹೇಳಿಕೊಳ್ಳುವಂತಹ ವ್ಯತ್ಯಾಸವೇನಿಲ್ಲ. ಕಮ್ಯೂನಿಸಮ್‌ಗೆ ಸದ್ಯ ವಿಶಿಷ್ಟ ಅರ್ಥ ಪ್ರಾಪ್ತವಾಗಿದೆ, ಮತ್ತು ಸೋಶಿಯಲಿಸಮ್‌ನ ಅಂತಿಮ ಸಾಧ್ಯತೆ ಯಾರಿಗೆ ಮಾನ್ಯವೋ, ಅಂಥವರೇ ಕಮ್ಯೂನಿಸ್ಟರ ಚಳವಳಿ ವಿರುದ್ಧ ಇದ್ದಾರೆ. ಇದಕ್ಕೆ ಕಾರಣ, ರಶ್ಯನ್ ಕಮ್ಯೂನಿಸ್ಟರ ಮಾರ್ಗ ಹಾಗೂ ಧೋರಣೆ, ಕ್ಷಿಪ್ರ ಕ್ರಾಂತಿಯ ಉದ್ದೇಶದಿಂದ ಯೋಜಿಸಿದ್ದಾಗಿದ್ದು, ಉತ್ಕ್ರಾಂತಿಯ ಮಾರ್ಗದಲ್ಲಿ ಅಡ್ಡ ಬರುತ್ತದೆ. ಕ್ರಾಂತಿಯ ಸಾಧನೆಯ ಪ್ರಯತ್ನದಲ್ಲಿ ಸತ್ಯಾಸತ್ಯ, ನ್ಯಾಯಾನ್ಯಾಯ ಎಂದೇನೂ ನೋಡಲಿಕ್ಕಿಲ್ಲ, ಅತ್ಯಾಚಾರ ನಿಷಿದ್ಧವೆಂದು ತಿಳಿಯ ಬೇಕಿಲ್ಲ ಹಾಗೂ ಸಮಯ ಬಂದರೆ ರಕ್ತಪಾತದಿಂದ ಸೋವಿಯೆಟ್ ಪದ್ಧತಿಯಂತೆ ಹೊಸರಾಜ್ಯ ಸ್ಥಾಪಿಸುವ ಕ್ರಾಂತಿಕಾರಿ ಕಮ್ಯುನಿಸ್ಟರ ಮಾರ್ಗ ನಮಗೆ



ಇಷ್ಟವಲ್ಲದಿದ್ದು, ದೇಶದ ಪ್ರಗತಿಯ ಹಾದಿಯಲ್ಲಿ ಅಡ್ಡ ಬರಲಿದೆ, ಎಂದು ಆ ಲೇಖನದಲ್ಲಿ ನಾವು ಬರೆದಿದ್ದೆವು. ಪರೀಕ್ಷಿಸಿ ನೋಡಿದಾಗ ನಮ್ಮ ಚಳವಳಿಯಲ್ಲಿ ಆಕ್ಷೇಪಕ್ಕೆ ಸ್ಥಳವಿದೆಯೆಂದು ನಮಗೆ ಅನಿಸುವುದಿಲ್ಲ.

ಹಿಂದೂ ಮಹಾಸಭೆಯ ಅಧ್ಯಕ್ಷ ಸ್ಥಾನವನ್ನು ಡಾ.ಅಂಬೇಡ್ಕರರಿಗೆ ಕೊಟ್ಟರೆ ಅವರು ತಮ್ಮ ಅಭಿಪ್ರಾಯವನ್ನು ಬದಲಿಸಿಕೊಳ್ಳುತ್ತಾರೆ, ಎಂಬ ಇವರ ತಿಳುವಳಿಕೆ ಸಂಪೂರ್ಣ ತಪ್ಪು. ನಮ್ಮ ಮಾರ್ಗವು ಕ್ಷಿಪ್ರಕ್ರಾಂತಿ ಮತ್ತು ಅತ್ಯಾಚಾರ ಪ್ರವರ್ತಕವಾದುದಲ್ಲ. ನಮ್ಮ ಚಳವಳಿಯಿರಲಿ, ಅಸ್ಪೃಶ್ಯವರ್ಗದ ಚಳವಳಿಯ ಬಗೆಗೂ ಇಂತಹ ಆಕ್ಷೇಪ ಎತ್ತುವಂತಿಲ್ಲ. ಸಮಾಜ ಸಮತಾ ಸಂಘದ ಚಳವಳಿಯೂ ಅತ್ಯಾಚಾರದ ದೋಷದಿಂದ ಅಲಿಪ್ತವಾಗಿದೆ. ಹಿಂದೂಗಳ ದೇವಳಕ್ಕೆ

ಹೋಗಿ ದೇವದರ್ಶನ ಪಡೆಯಲು, ಹಿಂದೂ ಸಮಾಜದಲ್ಲಿನ ಒಂದು ವರ್ಗಕ್ಕೆ ಸ್ವಾತಂತ್ರ್ಯವಿರಲಿ, ಅನ್ನುವುದು ಯಾವ ಕ್ರಾಂತಿವಾದ? ಜಾತಿಭೇದದ ನಿರ್ಮೂಲನ ಮಾಡುವ ಎನ್ನುತ್ತಾ, ಸಹಭೋಜನದ ಸಮಾರಂಭ ಏರ್ಪಡಿಸುವುದು ಎಂತಹ ಅತ್ಯಾಚಾರ? ಇಂದಿನ ಹಿಂದೂ ಸಮಾಜದ ಸಂವಿಧಾನವನ್ನು ಬದಲಿಸಬೇಕು, ವಿಷಮತೆಯ ಸ್ಥಳದಲ್ಲಿ ಸಮತೆಯನ್ನು ಸ್ಥಾಪಿಸಬೇಕು, ಅನ್ಯಾಯವನ್ನು ನಿರ್ಮೂಲ ಗೊಳಿಸಿ ನ್ಯಾಯ ನೆಲೆಗೊಳಿಸಬೇಕು, ಎಲ್ಲೆಡೆ ಬಂಧುಭಾವ ವೃದ್ಧಿಸಬೇಕು. ನಿರರ್ಥಕ ಒಪ್ಪಂದದಲ್ಲಿ ಭರವಸೆಯಿಟ್ಟು ತತ್ವಭಂಗಕ್ಕೆ ಎಡೆ ಮಾಡಿ ಕೊಡುವುದು ನಮಗೆ ಇಷ್ಟವಲ್ಲ. ನಮ್ಮ ಆಕ್ಷೇಪಕರಿಗೆ ಪ್ರಗತಿ ಇನಿತೂ ಬೇಕಿಲ್ಲ. ಧರ್ಮದ ಹೆಸರಿನಲ್ಲಿ ಅನ್ಯಾಯ, ದೌರ್ಜನ್ಯ, ವಿಷಮತೆ, ಕಲಹ ಸಮಾಜದಲ್ಲಿ ಶಾಶ್ವತವಾಗಿರುವುದೇ ಅವರಿಗೆ ಬೇಕು. ಅರ್ಥಾತ್, ಪ್ರಗತಿಯ ಒಂದಿಷ್ಟು ಚಳವಳಿಯಾದರೇ, "ಕ್ರಾಂತಿ, ಕ್ರಾಂತಿ" ಎಂದು ಅವರು ಕೋಲಾಹಲ ಎಬ್ಬಿಸುತ್ತಾರೆ. ನಿಜ ಹೇಳಬೇಕೆಂದರೆ, ಮಡಿವಂತ ಹಿಂದೂ ಜನರೇ ಬಹಿಷ್ಕತ ವರ್ಗದ ಮೇಲೆ ರಾಜಾರೋಷವಾಗಿ ಅತ್ಯಾಚಾರ ಮಾಡುತ್ತಾ ಬಂದಿದ್ದಾರೆ. ಬಹಿಷ್ಕತರು ತಮ್ಮ ಮಾನವೀಯ ಹಕ್ಕುಗಳಿಗಾಗಿ ಒಂದಿಷ್ಟು ಯತ್ನಿಸಿದರೂ, ಅವರನ್ನು ಅಮಾನುಷವಾಗಿ ನಡೆಸಿಕೊಳ್ಳಲು ಈ ಮಡಿವಂತ ಧರ್ಮಾಭಿಮಾನಿಗಳೆಂಬವರು ಹಿಂಜರಿಯುವುದಿಲ್ಲ. ವರ್ಷದಲ್ಲಿ ಮುನ್ನೂರೈವತ್ತು ದಿನವೂ ಬಹಿಷ್ಕತರ ಮೇಲೆ ಅತ್ಯಾಚಾರ ನಡೆಯುತ್ತಲೇ ಇರುತ್ತದೆ. ಕಳೆದ ಮೂರ್ನಾಲ್ಕು ವರ್ಷಗಳಿಂದ ಬಹಿಷ್ಕೃತರು ತಮ್ಮ ಹಕ್ಕಿಗಾಗಿ ನಡೆಸಿದ ಚಳವಳಿಯಲ್ಲಿ ಅವರು ಉಳಿದ ಹಿಂದೂಗಳ ಮೇಲೆ ಅತ್ಯಾಚಾರ ಮಾಡಿದರೋ, ಇಲ್ಲ, ಉಳಿದ ಹಿಂದೂಗಳು ಅವರ ಮೇಲೆ ಅತ್ಯಾಚಾರ ಮಾಡಿದರೇ? ಮಹಾಡ್ ಮತ್ತು ಪುಣೆಯ ಸತ್ಯಾಗ್ರಹದಲ್ಲಿ ಅತ್ಯಾಚಾರ ಮಾಡಿದವರು ಬಹಿಷ್ಕತರೇ, ಇತರ ಹಿಂದೂಗಳೇ? ಅಲ್ಲಿಂದಿಲ್ಲಿಂದ ಗಳಿಸಿದ ಬುದ್ಧಿಯಿಂದ ವರ್ತಮಾನ ಪತ್ರ ನಡೆಸುವಾತನಿಗೆ, "ಕ್ರಾಂತಿ" ಶಬ್ದದ ವ್ಯಾಖ್ಯೆ ಅರ್ಥವಾಗುವುದೆಂದು ಅಪೇಕ್ಷಿಸುವುದಾದರೂ ಹೇಗೆ?

* * * *

### ೭೧. ಅಸ್ಪೃಶ್ಯರ ಪುಂಡಾಟಿಕೆಯೇ ಅಥವಾ ಸ್ಪಶ್ಯರ ಗೂಂಡಾಗಿರಿಯೇ?

ಪರ್ವತೀ ಸತ್ಯಾಗ್ರಹವನ್ನು ಮುಂಡಾಟಿಕೆ ಎಂದು ಕರೆವಷ್ಟು ಮುಂದುವರಿದಿರುವವರಿಗೆ ,ಅಸ್ಪೃಶ್ಯತಾ ನಿವಾರಣೆಯ ತೀವ್ರ ಚಳವಳಿಯು, ಸಮಾಜಕ್ರಾಂತಿಯ ಭಯಂಕರ ಚಳವಳಿಯಾಗಿ ತೋರುವುದು ಸಹಜವೇ ಆಗಿದೆ. ಈ ಟೀಕಾಕಾರರಿಗೆ ಸನಾತನರ ಗೂಂಡಾಗಿರಿ ಕಾಣಿಸುವುದೇ ಇಲ್ಲ. ಯಾರು ಪೂರ್ಣ ಶಾಂತತೆಯಿಂದ , ಹೊಲಸು ಬಯ್ದುಳು, ಕೋಲು, ಕಲ್ಲು, ಚಪ್ಪಲುಗಳ ಸುರಿಮಳೆಯನ್ನು ಸಹಿಸಿದರೋ, ಅವರು ಪುಂಡರು, ಮತ್ತು ಯಾವ ಗೂಂಡಾಗಳು ಈ ಮುಗ್ಧರ ಮೇಲೆ ಅತ್ಯಾಚಾರ ಮಾಡಿದರೋ, ಅವರು ಸದ್ಗುಣ ಪುತ್ಥಳಿಗಳು! ಎಂಥಾ ನ್ಯಾಯ! ಸಂತರ

ಬೋಧೆ ಇಂತಹ ವೈಪರೀತ್ಯದ ನ್ಯಾಯ ಬುದ್ದಿ ಹುಟ್ಟಿಸುವುದೇ? ಸತ್ಯಾಗ್ರಹಿಗಳು ಮಹಮದ್ ಘಜನಿಯಂತೆ ಮೂರ್ತಿಭಂಜನಕ್ಕೆ ಇಳಿದಿದ್ದರೇ? ದೇವದರ್ಶನದ ಹಕ್ಕಿನ ಆಕಾಂಕ್ಷೆ ಮತ್ತು ಆ ಆಕಾಂಕ್ಷೆಯ ಉತ್ಕಟತೆಯಿಂದ ಮತ್ತು ಸಮಾನ ಹಕ್ಕಿನ ತೀವ್ರ ತಿಳುವಳಿಕೆಯಿಂದ, ಕಾರ್ಯ ಸಾಧಿಸಲಿರುವುದನ್ನೇ ದೇಹ ಪಡೆಯುತ್ತದೆ ಎಂಬ ನಿರ್ಧಾರದಿಂದ ಅನತ್ಯಾಚಾರ ಮತ್ತು ಅಪ್ರತೀಕಾರದ ಬೆಂಬಲದಿಂದ ಮಾಡ ಹೊರಟಿರುವ ಸತ್ಯಾಗ್ರಹವನ್ನು ಮುಂಡಾಟಿಕೆ ಎನ್ನುವುದಾದರೆ, ಏಕನಾಥ, ಚೋಖಾಮೇಳಾ ಮುಂತಾದ ಪೂರ್ವದ ಸಾಧುಗಳು ಮತ್ತು ವರ್ತಮಾನ ಕಾಲದ ಮಹಾತ್ಮಾ ಗಾಂಧೀ ಅಂಥಾ ನಾಯಕರನ್ನೂ ಪಂಡರೆಂದೇ ಗಣಿಸಬೇಕಾದೀತು. ಸದ್ಯದ ದೇವಾಲಯ ಪ್ರವೇಶ ಸಂಬಂಧಿತ ಅಸ್ಪೃಶ್ಯರ ಸತ್ಯಾಗ್ರಹ, ಈ ಸಾಧು ಮಹಾತ್ಮರ ಬೋಧನೆಯ ಪರಿಣಾಮವೇ ಆಗಿದೆ.

* * * *

### ೬೨. ಈಗಾದರೂ ಕಣ್ಣು ತೆರೆಯಿತೇ?

ಡಾ. ಅಂಬೇಡ್ಕರ್ ಮತ್ತು 'ಬಹಿಷ್ಕೃತ ಭಾರತ'ದ ಬಗ್ಗೆ ವೈಯುಕ್ತಿಕ ಕಾರಣದಿಂದ ಅಸಂತುಷ್ಟರಾದ ಮತ್ತು ಬಹಿಷ್ಕೃತ ವರ್ಗದ ಭೇದಭಾವವನ್ನು ಸ್ತುತಿಸುತ್ತಾ ನಾಯಕರೆಂದು ಮೆರೆಯಲು ಹಪಹಪಿಸುವ ಅನೇಕರು, ಅಸ್ಪೃಶ್ಯತಾ ನಿವಾರಣೆಯ ಪ್ರಚ್ಛನ್ನ ಹಾಗೂ ಅಪ್ರಚ್ಛನ್ನ ಶತ್ರುಗಳ ಜೊತೆ ಸೇರುವಲ್ಲಿ ಈವರೆಗೆ ಯಾವ ಕೊರತೆಯನ್ನೂ ಮಾಡಿಲ್ಲ. ಸ್ವಜನ ದ್ರೋಹದ ಪಾಪ ಮಾಡುವಲ್ಲಿ ಹಿಂಜರಿಯದ ಈ ಅದೂರದೃಷ್ಟಿಯ ಜನರ ಉಪಯೋಗವನ್ನು ಇದುವರೆಗೆ ಈ ಶತ್ರುಗಳು ಯಥೇಚ್ಛವಾಗಿ ಮಾಡಿದ್ದಾರೆ. ಆದರೆ ಪರ್ವತೀ ಸತ್ಯಾಗ್ರಹದ ಕಾರಣ, ತಮ್ಮ ನಿಜವಾದ ಮಿತ್ರರಾರು, ಕಪಟ ಮಿತ್ರರಾರು, ಮತ್ತು ನಿಜವಾದ ಶತ್ರುಗಳಾರು ಎಂಬುದು ಈಗ ಬಹಿಷ್ಕತ ವರ್ಗಕ್ಕೆ ಚೆನ್ನಾಗಿ ತಿಳಿದಿದೆ. ಪುಣೆ, ಮುಂಬಯಿಯ ತೋಳ- ಕುರಿಮರಿ ನ್ಯಾಯದಂತೆ ಮತ್ತು ಯಾವುದೇ ವರ್ತಮಾನ ಪತ್ರಿಕೆಯಲ್ಲಿ ಯಾವುದೇ ಕಾರಣದಿಂದ ತಮ್ಮ ಹೆಸರು ಕಾಣಿಸಿಕೊಂಡರೆ ತನ್ನ ಪೂರ್ವಜರನ್ನು ಸ್ವರ್ಗ ಸೇರಿಸಿದ ಪುಣ್ಯ ಪ್ರಾಪ್ತವಾಯ್ತೆಂದು

ಧನ್ಯರಾಗುವ ಜನರ ಕೊಬ್ಬನ್ನು, ಅವರ ಸ್ವಾರ್ಥಿ ಸ್ಪಶ್ಯ ಮಿತ್ರರು, ದೇವಳ ಪ್ರವೇಶದ ಸತ್ಯಾಗ್ರಹವನ್ನು ಮುಂಡಾಟಿಕೆ ಎಂದು, ಮತ್ತು ಸತ್ಯಾಗ್ರಹ ಚಳವಳಿಯನ್ನು ಮುಗಿಸಿ ಬಿಡಲು ಕಾರಸ್ಥಾನ ರಚಿಸಿ, ಚೆನ್ನಾಗಿ ತಿರುವಿಬಿಟ್ಟಿದ್ದಾರೆ:

**ಯಃ ಸ್ವಪಕ್ಷಂ ಪರಿತ್ಯಜ್ಯ ಪರಪಕ್ಷಂ ನಿಷೇಯತೇ ||**
**ಸಃ ಸ್ವಪಕ್ಷೇ ಕ್ಷಯಂ ಯಾತಿ ಪಶ್ಚಾತ್ತೈರೇವ ಹನ್ಯತೇ ||**

ಯಾವಾತನು ಸ್ವಜನರ ಪಕ್ಷವನ್ನು ತ್ಯಜಿಸಿ, ಪರಪಕ್ಷವನ್ನು ಹೋಗಿ ಸೇರುತ್ತಾನೋ, ಅವನು ಸ್ವಪಕ್ಷವನ್ನು ಹೇಗೂ ಕಳಕೊಳ್ಳುತ್ತಾನೆ, ಮಾತ್ರವಲ್ಲ, ಮತ್ತೆ ಪರಪಕ್ಷದಿಂದಲೂ ವಿನಾಶಗೊಳ್ಳುತ್ತಾನೆ.} ಈ ವಾಲ್ಮೀಕಿ ಋಷಿಯ ವಚನವನ್ನು, ಈಗ ಖಾಸಗಿ ದ್ವೇಷ, ಮಹತ್ವಾಕಾಂಕ್ಷೆ ಮತ್ತು ಅಸೂಯೆಗೆ ಬಲಿಬಿದ್ದು, ತನ್ನ ವರ್ಗದ ಹಿತಶತ್ರುವಿನ ಬಗಲಲ್ಲಿ ತಿರುಗುವ ಬಹಿಷ್ಕತರು ಸಂಪೂರ್ಣವಾಗಿ ಲಕ್ಷದಲ್ಲಿರಿಸಿಕೊಳ್ಳಬೇಕು.

* * * *

**೭೩. ಭವಿಷ್ಯವಾದಿ ಭಾಲಾಕಾರ್ ಭೋಪಟ್ಕರ್**

ಪರ್ವತೀ ಸತ್ಯಾಗ್ರಹವನ್ನು ನಿಷೇಧಿಸಲೆಂದು ಪುಣೆಯಲ್ಲಿ ಸನಾತನಿಗಳ ಸಭೆಯೊಂದು ಇತ್ತೀಚೆಗೆ ನಡೆಯಿತು. ಆ ವೇಳೆ ಭಾಷಣ ಮಾಡುತ್ತಾ, ಭಾಲಾಕಾರ್ ಭಾ.ವ, ಭೋಪಟ್ಕರ್ ಅವರು, ಬಹಿಷ್ಕೃತ ವರ್ಗಕ್ಕೆ ದೇವಳ ಪ್ರವೇಶದ ಪೂರ್ಣಾನುಮತಿ ದೊರೆಯಲು ಇನ್ನೂ ಇನ್ನೂರು ವರ್ಷ ತಗಲುತ್ತದೆಂದು ಭವಿಷ್ಯ ನುಡಿದರು. ಜಗದ ಅಂತ್ಯದವರೆಗೆ ಬಹಿಷ್ಕತರಿಗೆ ಹಿಂದೂ ದೇವಳಕ್ಕೆ ಪ್ರವೇಶ ಸಿಗುವಂತಿಲ್ಲ ಎಂದು ಭೋಪಟ್ಕರ್ ಅವರು ಹೇಳಿದ್ದರೂ ಯಾರು ಅವರ ಬಾಯಿ ಮುಚ್ಚುತ್ತಿದ್ದರು? ಇದು ಗಣಿತದ ಆಧಾರದಲ್ಲಿ ನುಡಿದ ಭವಿಷ್ಯವೇ, ಇಲ್ಲಾ, ಇದು ಭೋಪಟ್ಕರ್ ಅವರ ಇಚ್ಛೆ ಎಂದೇ ತಿಳಿಯಬೇಕೇ? ಇನ್ನೂರು ವರ್ಷದ ನಂತರ ದೇವಾಲಯ ಹೊಗಲು ಅಡ್ಡಿಯಿಲ್ಲ, ಎಂದು ಭೋಪಟ್ಕರ್ ಅವರು

ಹೇಳುವುದಾದರೆ ಬಹಿಷ್ಕತರಿಗೆ ದೇವಳ ಪ್ರವೇಶ ನಿಷೇಧಿಸಲು ತತ್ವದ ಮತ್ತು ಧರ್ಮಶಾಸ್ತ್ರದ ಆಧಾರವಿಲ್ಲ ಎಂಬುದನ್ನು ಅಪ್ರತ್ಯಕ್ಷವಾಗಿ ಒಪ್ಪಿಕೊಂಡಿದ್ದಾರೆ, ಎಂದೇ ಹೇಳಬೇಕು. ಕಾರಣ, ಇನ್ನೂರೇನು, ಎರಡು ಸಾವಿರ ವರ್ಷ ಕಳೆದರೂ, ನೀತಿಬಾಹಿರವಾದುದು, ನೀತಿಶುದ್ಧವಾಗುವುದೇ? ಇದು ನೀತಿ ಅನೀತಿಯ ಪ್ರಶ್ನೆ ಅಲ್ಲವಾದರೆ, ಇನ್ನೂರು ವರ್ಷದ ಸೀಮೆಯೇಕೆ? ಜನಾಭಿಪ್ರಾಯದ ಪ್ರತಿಕೂಲತೆಯಿಂದ ಅಡಚಣೆಯಾಗುವುದಾದರೆ ಭೋಪಟ್ಕರ್ ಅಂತಹವರು ಕೊಂಬು ತಿರುಚಿಕೊಂಡು ಕಾಡಿನಲ್ಲಿ ಸುತ್ತಾಡದೆ ಬಹುಜನ ಸಮಾಜಕ್ಕೆ ಎದೆಯುಬ್ಬಿಸಿಕೊಂಡು, ಸತ್ಯ ಹೇಳಲಿ ಮತ್ತು ಜನಾಭಿಪ್ರಾಯವನ್ನು ಅನುಕೂಲಕರವಾಗಿಸಿಕೊಳ್ಳಲಿ. ಆದರೆ ಈ ರೀತಿ ಗಂಭೀರ ಚರ್ಚೆ ಯಾರ ಬಗ್ಗೆ? ಬಫೂನ್ ಬೋಪಟ್ಕರ್ ಅವರ ಮೇಲೆ ಇಂತಹ ಯುಕ್ತಿವಾದದಿಂದ ಏನೂ ಪರಿಣಾಮ ಆಗುವ ಹಾಗಿಲ್ಲ. ಹೇಗೆ ಕಾಗೆಯ ಶಾಪದಿಂದ ಮರಣಭೀತಿ ಉಂಟಾಗುವ ಭಯವಿಲ್ಲವೋ, ಹಾಗೇ ಭಾಸ್ಕರ್ ಭೋಪಟ್ಕರ್ ಅವರ ಭವಿಷ್ಯವಾಣಿಯಿಂದ ಸತ್ಯಾಗ್ರಹ ಚಳವಳಿಗೆ ಬಾಧೆ ಉಂಟಾಗುವ ಭಯಬೇಡ, ಹಿಂದೀಯರು ಸಂಪೂರ್ಣ ಸ್ವಾತಂತ್ರ್ಯದ ವಿಷಯ ಬಿಟ್ಟು ಬಿಡಲಿ; ಡೊಮಿನಿಯನ್ ಸ್ಟೇಟಸ್ ಸಿಗಲೂ ಮುಂದಿನ ಇನ್ನೂರು ವರ್ಷ ಕಾಯಬೇಕು, ಎಂದು ಇಂಗ್ಲಿಷರು ಹೇಳಿದರೆ, ಅದು ಶ್ರೀ ಭೋಪಟ್ಕರ್ ಅವರ ಹೇಳಿಕೆಯಂತೆ ಸಂಯುಕ್ತಿಕ ಎಂದು ಹೇಳ ಬೇಕಿಲ್ಲವಷ್ಟೇ.?

* * * *

೭೪. ಬ್ರಾಹ್ಮಣ ಕನ್ಯೆಯನ್ನು ಕೇಳುವ ಅಸ್ಪೃಶ್ಯರು

ಪುಣೆಯ ಸನಾತನಿಗಳು ಆಯೋಜಿಸಿದ ಸತ್ಯಾಗ್ರಹ ನಿಷೇಧ ಸಭೆಯಲ್ಲಿ ಬಹಿಷ್ಕೃತ ಸಮಾಜದ ಆಕಾಂಕ್ಷೆ ವಿಷಯಕ ಅಜ್ಞ ಜನ ಸಮಾಜದ ದಾರಿ ತಪ್ಪಿಸುವ ಉದ್ದೇಶದಿಂದ ಪ್ರತಿಯೊಬ್ಬ ವ್ಯಕ್ತಿಯೂ ಭಾಷಣ ಮಾಡುತ್ತಾ, "ಅಸ್ಪೃಶ್ಯರು ಸ್ಪಶ್ಯ ಹಿಂದೂಗಳ ದೇವಳ ಪ್ರವೇಶಿಸಿ, ಸುಮ್ಮನಿರುವುದಿಲ್ಲ, ಅವರೀಗ ಬ್ರಾಹ್ಮಣ ಕನ್ಯೆಯನ್ನೂ ಕೇಳಲಾರಂಭಿಸಿದ್ದಾರೆ. ನೀವು ಅವರ ಈ ಬೇಡಿಕೆಯನ್ನೂ ಪೂರೈಸುವವರೇನು?" ಬುದ್ಧಿಗೇಡಿ ಭೋಪಟ್ಕರ್ ಅವರು ಈ ವಿಷಯದಲ್ಲಿ ಡಾ.ಅಂಬೇಡ್ಕರ್ ಅವರ ಹೆಸರು ಉಲ್ಲೇಖಿಸಲೂ ಹಿಂಜರಿಯಲಿಲ್ಲ ! ಬಹುಶಃ ಡಾ. ಅಂಬೇಡ್ಕರರು ಸಮಾಜ ಸಮತಾವಾದಿಯಾಗಿದ್ದು, ಜಾತಿಭೇದದ ನಿರ್ಮೂಲನ ಮಾಡಿ ಹಿಂದೂ ಸಮಾಜದಲ್ಲಿನ ಎಲ್ಲ ವಿಭಿನ್ನ ಜಾತಿಗಳ ನಡುವೆ ಹೆಣ್ಣು ತರುವದಲ್ಲವಾದರೆ ಕೊಡುಕೊಳ್ಳುವ ವ್ಯವಹಾರಕ್ಕಾದರೂ ಅಡ್ಡಿಯಿರಬಾರದು ಎಂದು ಪ್ರತಿಪಾದಿಸುವವರು. ಆ ಅರ್ಥದಲ್ಲಿ ಅಸ್ಪೃಶ್ಯರು ಬ್ರಾಹ್ಮಣ ಹುಡುಗಿಯನ್ನು ಕೇಳುತ್ತಾರೆ, ಎನ್ನಲು ಅಡ್ಡಿಯಿಲ್ಲ.ಇದಕ್ಕೆ ಅನ್ನುವುದು, ತರ್ಕಶಾಸ್ತ್ರ ! ಜಾತಿಭೇದಕ್ಕೆ ಶಾಸ್ತ್ರ ಇಲ್ಲವೇ ಯುಕ್ತಿಯ ಆಧಾರವಿಲ್ಲ . ಮನುಷ್ಯ ಸ್ವಭಾವದ

ಹೀನವೃತ್ತಿಯಿಂದಾಗಿ ಅಸ್ತಿತ್ವಕ್ಕೆ ಬಂದ ಸಂಸ್ಥೆಯದು. ಭೌತಿಕ ಶಾಸ್ತ್ರದ ದೃಷ್ಟಿಯಿಂದ ಜಾತಿಭೇದವು ಕೃತ್ರಿಮ ಅನಿಸುವುದು, ಆದ್ದರಿಂದ ಅದು ಅಧರ್ಮ ಹಾಗೂ ತ್ಯಾಜ್ಯ ಎಂದೇ ಡಾ. ಅಂಬೇಡ್ಕರ್ ಹಾಗೂ ಇತರ ಸಮಾಜ ಸಮತಾವಾದಿಗಳ ಪ್ರಾಮಾಣಿಕ ಅಭಿಪ್ರಾಯ. ಹಾಗೆಯೇ, ವಿಷಮತೆಯ ಅಡಿಪಾಯದ ಮೇಲೆ ಎದ್ದು ನಿಂತ ಜಾತಿಭೇದದ ಕಟ್ಟಡದ ಕಳಶವೆಂದರೆ, ಅಸ್ಪೃಶ್ಯತೆ ಎಂಬುದು, ಎಲ್ಲ ಸಮತಾವಾದಿಗಳ ಅಭಿಪ್ರಾಯ. ಸಮತಾವಾದಿಗಳಲ್ಲಿ ಅಂಬೇಡ್ಕರರಂತೆ ಬಹಿಷ್ಕತ ವರ್ಗದ ಜನರು ಇಲ್ಲವಾದರೂ, ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಸ್ಪಶ್ಯರು ಖಂಡಿತ ಇದ್ದಾರೆ. ಸಮಾಜ ಸಮತಾವಾದವು ಅಂಬೇಡ್ಕರರ ನವ ನಿರ್ಮಾಣವೇನಲ್ಲ. ಈ ಸಮತಾವಾದದ ವಜ್ರಸೂಚಿ, ಉಪನಿಷತ್ತಿನಲ್ಲಿದೆ, ಮಹಾಭಾರತದಲ್ಲಿಯ ಧರ್ಮ-ನಹುಷ ಸಂವಾದದಲ್ಲಿದೆ. ಸಾಧು ಸಂತರ ವಚನಗಳಲ್ಲಿವೆ ಮತ್ತು ಆಧುನಿಕ ಕಾಲದ ರಾಜಾ ರಾಮಮೋಹನ ರಾಯ್, ಸ್ವಾಮಿ ದಯಾನಂದ, ಸ್ವಾಮಿ ವಿವೇಕಾನಂದ, ಸ್ವಾಮಿ ರಾಮತೀರ್ಥ, ರಾನಡೆ, ಭಂಡಾರ್ಕರ್, ರಾಜಾರಾಮಶಾಸ್ತ್ರಿ ಭಾಗವತ, ದಿ. ಬಿ.ಆರ್. ರಘುನಾಥರಾವ್ ಇಂತಹ ಹಿಂದೂಧರ್ಮಶಾಸ್ತ್ರದ ಮಂಥನ ಗೈದ ಮಹಾ ವಿದ್ವನ್ಮಣಿಗಳು, ಈ ಜಾತಿಭೇದ ಪದ್ಧತಿ ಕೃತ್ರಿಮ, ಅಶಾಸ್ತ್ರೀಯ, ವಿಷಮತಾಮೂಲ ಮತ್ತು ಸಮಾಜದ ಪ್ರಗತಿಗೆ ಅಡಚಣೆ ತರುವಂತಹುದೆಂದು ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ. ಜಾತಿಭೇದ ನಶಿಸಿದ ಮೇಲೆ ಬ್ರಾಹ್ಮಣ, ಬ್ರಾಹ್ಮಣೇತರ, ಅಸ್ಪಶ್ಯ, ಈ ಭೇದ ತನ್ನಷ್ಟಕ್ಕೇ ಅಳಿದು ಹೋಗುವುದು. ಎಲ್ಲಿ ಈಗಿನ ಅರ್ಥದಲ್ಲಿ ಬ್ರಾಹ್ಮಣರೂ ಯಾರೂ ಇಲ್ಲ, ಅಸ್ಪಶ್ಯರೂ ಯಾರೂ ಇಲ್ಲ, ಎಂದಿರುವುದೋ, ಅಲ್ಲಿ "ಬ್ರಾಹ್ಮಣರ ಹುಡುಗಿ ಮತ್ತು ಅಸ್ಪೃಶ್ಯರ ಬೇಡಿಕೆ", ಎಂಬ ಭಾಷೆ ತನ್ನಷ್ಟಕ್ಕೇ ಇಲ್ಲವಾಗುತ್ತದೆ.

ಅದ್ವೈತಾನುಭವ ವ್ಯಕ್ತ ಮಾಡಲು ದ್ವೈತರ ಭಾಷೆ ಉಪಯೋಗವಾಗುವುದಿಲ್ಲ.



ಸಮತಾವಾದದಿಂದ ಸಮಾಜದ ವಿಭಿನ್ನ ಕಾರ್ಯಗಳು ನಿಂತು ಹೋಗುವ ಭಯವಿಲ್ಲ.ಅವರವರ ಪ್ರವೃತ್ತಿ, ಕಾರ್ಯಕ್ಷಮತೆ, ಮತ್ತು ಪಾತ್ರತೆ ಇದೆಯೋ, ಅದರಂತೆ, ಅದು ಸಮಾಜದ ವಿಚಾರ ಪ್ರವರ್ತನೆಯ, ಶಾಸ್ತ್ರೀಯ ಸಂಶೋಧನೆಯ, ವಾಯ ಸೇವೆಯ, ರಾಷ್ಟ್ರೀಯ ಸಂರಕ್ಷಣೆಯ, ಸಮಾಜ ಸೇವೆಯ, ಸಂಪತ್ತಿನ ಉತ್ಪಾದನೆ ಮತ್ತು ವಿನಿಮಯದ, ಇನ್ನಿತರ ಎಷ್ಟೋ ಕೆಲಸ ಸಾಗುವುದು. ಆದರೆ ಜಾತಿ ವಿಶಿಷ್ಟ ಉಚ್ಚ ನೀಚತನಕ್ಕೆ ಅವಕಾಶವಿರದು. ಇಂತಹ ಸಮತೆ ಸ್ಥಾಪಿಸಲ್ಪಟ್ಟರೆ, ತಮ್ಮ ತಮ್ಮ ಜಾತಿಯನ್ನು ಮೆರೆಸುವದಾಗದು ಎಂದು ಭೀತರಾಗುವವರು, ಇಂತಹ ಮಾತೆತ್ತುವರು. ನಿಜ ಹೇಳುವುದಾದರೆ ಇದು ಹೆಣ್ಣು ಕೇಳುವ ಕಾಲವಲ್ಲ, ಹಾಗೂ, ಕೇಳಿದರೆಂದು ಅದನ್ನು ಮಾನ್ಯ

ಮಾಡಲು ಬೇರೆ ಕಟ್ಟಿಕೊಂಡೂ ಇಲ್ಲ. ಜಾತಿಯೊಳಗೆ ಬೇಡಿಕೆಯಿಟ್ಟರೆ ಹುಡುಗಿ ಸಿಕ್ಕಿದಂತೆ ಅಂದೇನೂ ಇಲ್ಲ. ಆದರೆ ಅಶಿಕ್ಷಿತ ಜನರನ್ನು ಕೆಣಕಲು ಈ ಕರೆ ಚೆನ್ನಾಗಿ ಉಪಯೋಗಕ್ಕೆ ಬರುವುದು, ಎಂದೇ ಕುಟಿಲತೆಯಿಂದ ಹೀಗೆ ಕರೆ ನೀಡಲಾಗುತ್ತದೆ.

* * * *

### ೭೫. ನರಸೋಬನ ವಾಡಿಯಲ್ಲಿ ಅಸ್ಪಶ್ಯರಿಗೆ ದೇವ ದರ್ಶನ

ಶ್ರೀ ಕ್ಷೇತ್ರ ನರಸೋಬನ ವಾಡಿಯು, ಮಹಾರಾಷ್ಟ್ರದಲ್ಲಿ ದತ್ತಾತ್ರೇಯನ ಸುಪ್ರಸಿದ್ಧ ಸ್ಥಾನವಾಗಿದ್ದು, ಈ ದೇವಳದಲ್ಲಿ ಪೂಜೆ ಮಾಡುವ ಕುರಿತಂತೆ ಬ್ರಾಹ್ಮಣೇತರರು ಚಳವಳಿ ನಡೆಸಿದ್ದರು. ಆ ಚಳವಳಿಗೆ ಪೂಜಾರಿ ಮತ್ತು ಪುರಾಣಮತವಾದಿ ಜನರು ದುರಾಗ್ರಹದಿಂದ ವಿರೋಧವೆತ್ತಿದರು, ಮತ್ತು ಈ ಹಗರಣವು ಮಾರಾಮಾರಿ ಮತ್ತು ಪೋಲೀಸ್ ಕೇಸ್‌ನಲ್ಲಿ ಪರ್ಯವಸಾನವಾಯ್ತು. ಹಾಗಿದ್ದೂ, ಕೊನೆಯಲ್ಲಿ ಎಲ್ಲವೂ ಸುಖಾಂತ್ಯವಾಯ್ತೆಂಬುದು ಸಂತಸದ ವಿಷಯ. ದೇವಾಲಯದಲ್ಲಿ ಕಟಕಟೆ ಕಟ್ಟಿ, ಆ ಕಟಕಟೆಯ ಒಳಗೆ ಪೂಜಾರಿ ಮತ್ತು ಸಹಾಯಕನನ್ನು ಮಾತ್ರ ಬಿಡಬೇಕು, ಮತ್ತು ಹೊರಗೆ, ಬ್ರಾಹ್ಮಣರು, ಬ್ರಾಹ್ಮಣೇತರರು, ಬಹಿಷ್ಕೃತರು, ಹೀಗೆ ಎಲ್ಲ ಹಿಂದೂಗಳು ದರ್ಶನ ಪಡೆಯಲಿ, ಎಂದು ಒಪ್ಪಂದವಾಯ್ತು. ಈ ಒಪ್ಪಂದದಲ್ಲಿ ಎಲ್ಲ ಹಿಂದೂಗಳಿಗೆ ಪೂಜೆಯ ಅವಕಾಶವಿರದೆ, ಬ್ರಾಹ್ಮಣರಿಗೆ ಮಾತ್ರ ಆ ಹಕ್ಕು ನೀಡಲಾದುದು ಒಂದು ರೀತಿಯ ಹಿಂದೆಗೆತವೆನ್ನಬೇಕು. ಹಾಗೆಯೇ ಬಹಿಷ್ಕೃತರಿಗೆ ಮಂದಿರ ಪ್ರವೇಶಕ್ಕಿದ್ದ ನಿಷೇಧವೂ ದೂರವಾಯ್ತು. ಹೀಗೆ ಅಸ್ಪೃಶ್ಯತಾ ನಿವಾರಣೆಯಲ್ಲಿ ಒಂದು ಹೆಜ್ಜೆ ಮುಂದಿಡಲಾಯ್ತು, ಎಂದು ತಿಳಿಯಲು ಅಡ್ಡಿಯಿಲ್ಲ. ವಿಶೇಷತಃ ನರಸಿಂಹನ ವಾಡಿಯ ದೇವಾಲಯ, ಪಂಡರಾಪುರ ದೇವಳಕ್ಕಿಂತಲೂ ಮಡಿಯಲ್ಲಿ ಮಿಗಿಲಾದುದೆಂಬ ಪ್ರತೀಕ ಇದ್ದಾಗ್ಯೂ, ಅಲ್ಲಿ ದೇವಳ ದ್ವಾರ ಬಹಿಷ್ಕೃತರಿಗೆ ತೆರೆಯಲ್ಪಟ್ಟ ಕಾರಣ, ಇತರೆಡೆ ಈ ಮುಕ್ತ ಪ್ರವೇಶದ ದಾರಿ ಬಹಿಷ್ಕೃತರಿಗೆ ತೆರೆಯಲ್ಪಡುವ ಸಂಭವವಿದೆ.

ನರಸೋಬನ ವಾಡಿಯಂತೆ ತೀಕ್ಷ್ಣ ಮಡಿ ಪಾಲನೆಯ ದೇವಳದಲ್ಲಿ ಬಹಿಷ್ಕೃತ ಹಿಂದೂಗಳಿಗೆ ಸಿಗುವ ಸವಲತ್ತು, ಯುರೋಪಿಯನರಿಗೂ ಪ್ರವೇಶವಿರುವ ಪುಣೆಯ ಪರ್ವತೀ ದೇವಳದಂಥಲ್ಲಿ ಬಹಿಷ್ಕೃತರೆಂಬುವರಿಗೆ ಸಿಗುವುದಿಲ್ಲವೇಕೆ? ಈ ಪ್ರಶ್ನೆ, ಈಗ, ಪ್ರತಿಯೊಬ್ಬ ನಿಷ್ಪಕ್ಷಪಾತಿ, ದುರಾಗ್ರಹರಹಿತ ಹಿಂದೂಗಳ ಮನದಲ್ಲಿ ಹುಟ್ಟದೆ ಇರುವುದಿಲ್ಲ.

* * * *

### ೭೬. ರೊಟ್ಟಿ ಬೇಡಿದರೆ-ಕಲ್ಲು ಕೊಟ್ಟರು

ನಾಸಿಕ್‌ನಲ್ಲಿ ರಾಮನವಮಿಯ ದಿನದಂದು ಘಟಿಸಿದಂತಹ ಸಂಗತಿ ನನಗೆ ಇಲ್ಲಿ ತಿಳಿದು ಬಂತು. ಸ್ಥಳೀಯ ಸರಕಾರೀ ಅಧಿಕಾರಿಗಳ ಕೈಯಿಂದ ಘಟಿಸಿದ ಅನ್ಯಾಯ ಮತ್ತು ಪಕ್ಷಪಾತತನದ ವರ್ತನೆಯ ಬಗ್ಗೆ ಸವಿಸ್ತಾರವಾದ ಮಾಹಿತಿ ಮತ್ತೆ ಓದಲು ದೊರಕಿತು. ಅಸ್ಪೃಶ್ಯ ಪ್ರಜೆಯ ದೃಷ್ಟಿಯಿಂದ ವಿಚಾರ ಮಾಡುವಾಗ ಆಂಗ್ಲ ಸರಕಾರದ ಸ್ವಾಮಿತ್ವ, ಮಸುಕಾದ ಸೌಭಾಗ್ಯದಂತೆ ಇದೆ. ಅಸ್ಪೃಶ್ಯ ಜನರೊಡನೆ ಸಂಬಂಧವಿರುವ ಎಲ್ಲ ಸರಕಾರೀ ಅಧಿಕಾರಿಗಳು, ಸ್ಪೃಶ್ಯ ವರ್ಗದವರೇ ಇರುತ್ತಾರೆ. ಮರಾಠಾಶಾಹಿ ಇಲ್ಲವೇ ಪೇಶ್ವಾಯಿ ಹೊರಟು ಹೋಗಿ, ಆಂಗ್ಲೆಯ ಬಂದುದರಿಂದ, ಈ ಜನರ ಉಡುಪು ಬದಲಾದಂತೆ ಕಂಡರೂ, ಅವರ ಅಂತಃಕರಣ ಬದಲಾಗಿಲ್ಲ. ಜಿಲ್ಲೆಯ ಮುಖ್ಯ ಅಧಿಕಾರಿ,ಯುರೋಪ್ ಇಲ್ವೇ ಆಂಗ್ಲನಾಗಿದ್ದರೂ ಅವರು ಈ ವಿಷಯದಲ್ಲಿ ಅಜ್ಞಾನಿ, ತಟಸ್ಥ ಮತ್ತು ಸಂವೇದನಾಶೂನ್ಯರಾಗಿರುತ್ತಾರೆ. ತಮ್ಮ ಕೈಕೆಳಗಿನ ಅಧಿಕಾರಿಗಳು ಹೇಳಿದ್ದಷ್ಟೇ ಅವರಿಗೆ ಕೇಳುತ್ತದೆ, ತೋರಿದ್ದಷ್ಟೇ ಕಾಣುತ್ತದೆ. ಹಾಗಲ್ಲವಾದರೆ, ನಾಸಿಕ್‌ನಲ್ಲಿ ಮೊನ್ನೆ ನಡೆದ ಆ ಘಟನೆ, ಇಂಗ್ಲಿಷರ ರಾಜ್ಯದಲ್ಲೇ ಹೇಗೆ ಮತ್ತು ಯಾಕೆ ನಡೆಯಿತು? ಭಾವುರಾವ್ ಗಾಯಕ್ವಾಡ್, ರಣ್ ಖಾಂಬೇ, ದಾಣಿ ಮುಂತಾದ ಕಾರ್ಯಕರ್ತರು, ಈ ಪ್ರಸಂಗದಲ್ಲಿ ನಿಷ್ಕಾರಣವಾಗಿ ಕಾರಾಗೃಹವಾಸವನ್ನು ಅನುಭವಿಸುವಂತಾಯ್ತು. ಅದರಲ್ಲೂ ಶ್ರೀ ತುಳಸೀರಾಮ್‌ಜೀ ಕಾಳೇ, ಅವರ ವೃದ್ದ ಮಾತೃಶ್ರೀ, ಹಾಗೆಯೇ

ಅಮೃತ್‌ರಾವ ರಣಖಂಬೇ ಅವರ ಮಾತೃಶ್ರೀ, ಬಂದಿಗಳಾದುದನ್ನು ತಿಳಿದು, ದುಃಖವೂ ಆಯ್ತು, ಒಂದು ಪ್ರಕಾರ ಧನ್ಯತೆಯೂ ಅನಿಸಿತು. ನಾಸಿಕ್ ಜಿಲ್ಲೆಯ ನನ್ನ ಅಸ್ಪೃಶ್ಯ ಬಂಧುಗಳ ಬಗ್ಗೆ ನನಗೆ ತುಂಬ ಅಭಿಮಾನವೆನಿಸುತ್ತದೆ. ಅಸ್ಪೃಶ್ಯರ ಸರ್ವತೋಪರಿ ಎಂಬಂತಹ ವಿಪರೀತ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಲಕ್ಷ್ಮದಲ್ಲಿರಿಸಿ, ಅವರು ಕಳೆದ ಮೂರಾಲ್ಕು ವರ್ಷಗಳಲ್ಲಿ ಪ್ರತ್ಯಕ್ಷ ವ್ಯವಹಾರದಲ್ಲಿ ತೋರಿದ ಸ್ವಾವಲಂಬನೆ ಹಾಗೂ ಸಂಘಟನೆ, ಮತ್ತು ಅವರು ತೋರಿದ ಸಹಿಷ್ಣುತೆ ಹಾಗೂ ಧೈರ್ಯ, ಇಡೀ ಘಟನೆಯನ್ನು ಅಪೂರ್ವವೆಂದನಿಸುವಂತೆ ಮಾಡಿತು .ಬೇರೆ ಯಾರೊಬ್ಬರ ಸಹಾಯ, ಸಹಾನುಭೂತಿಯಿಲ್ಲದೆ, ಬದಲಿಗೆ ಯಾವ್ಯಾವುದೋ ಕಾರಣಕ್ಕೆ ಜನರ ಅಸಂತೋಷ, ವಿರೋಧದ ನಡುವೆ, ಅಸ್ಪೃಶ್ಯರು ಅಸ್ಪೃಶ್ಯರಿಗಾಗಿ ಮತ್ತು ಅಸ್ಪೃಶ್ಯರ ಸಹಾಯದಿಂದ ನಾಸಿಕ್ ಸತ್ಯಾಗ್ರಹದಂತಹ ಚಳವಳಿಯನ್ನು ಸತತ ಮೂರಾಲ್ಕು ವರ್ಷ ಇಷ್ಟು ದೊಡ್ಡ ಪ್ರಮಾಣದಲ್ಲಿ, ಇಷ್ಟೊಂದು ಉತ್ಸಾಹದಿಂದ, ಸಂಘಟಿತತನದಿಂದ ನಡೆಸಿದುದು, ಇದು ಹಿಂದೂಸ್ಥಾನದಲ್ಲಷ್ಟೇ ಅಲ್ಲ, ಜಗತ್ತಿನಲ್ಲೇ ಎಲ್ಲ ದಲಿತ ಜನತೆ ಅಭಿಮಾನ ಪಡುವಂತಹ ವಿಷಯ, ಎಂದರೆ, ಅದರಲ್ಲಿ ಇನಿತೂ ಅತಿಶಯೋಕ್ತಿಯಿಲ್ಲ.

ಆದರೆ ಬ್ರಾಹ್ಮಣ ಧರ್ಮವು ಮೂಢ, ಅನಾದಾರ ಹಾಗೂ ಅಸಹಿಷ್ಣುವಾಗಿ ರೂಪಿಸಿದ ಹಿಂದೂ ಸಮಾಜಕ್ಕೆ ಈ ಎಲ್ಲ ವಿಷಯದಿಂದ ಆಗುವುದೇನು? ಈ ಸತ್ಯಾಗ್ರಹದ ರೂಪದಲ್ಲಿ ಅಸ್ಪೃಶ್ಯ ಬಾಂಧವರು, ಸ್ಪೃಶ್ಯ ಹಿಂದೂಗಳೊಡನೆ ಒಂದಿಷ್ಟು ಸಮತೆಯನ್ನು ಕೇಳಿದರು. ತಮ್ಮ



ಹಿಂದೂ ಬಾಂಧವರ ಬಳಿ ಅಸ್ಪೃಶ್ಯರು ಸಮತೆ ಮತ್ತು ಪ್ರೇಮದ ರೊಟ್ಟಿ ಬೇಡಿದರು, ಆದರೆ, ರೊಟ್ಟಿಯ ಬದಲಿಗೆ, ಅವರ ಜೋಳಿಗೆಯಲ್ಲಿ ಬ್ರಾಹ್ಮಣಾದಿ ಸ್ಪೃಶ್ಯ ಹಿಂದೂಗಳು ಕಲ್ಲು, ಚಪ್ಪಡಿ ಸುರಿದರು !

ಭೀಮರಾವ್ ಅಂಬೇಡ್ಕರ್

ಸಿಮ್ಲಾ

೨೭-೪-೧೯೩೨

ಈ ಉದ್ಧೃತ ವರದಿಗೆ ಈ ಕೆಳಗಿನ ಘಟನೆ ಕಾರಣೀಭೂತವಾಗಿದೆ :

೧೯೩೨ರ ರಾಮನವಮಿಯಂದು ಕಾಳೇರಾಮ ಮಂದಿರ, ರಾಮಕುಂಡ ಮತ್ತು ಸೀತಾಕುಂಡ ಕ್ಷೇತ್ರಸಭೆಗಳಲ್ಲಿ ಪುನಃ ಸತ್ಯಾಗ್ರಹ ಮಾಡುವದಾಗಿ ಪ್ರಕಟಿಸಿದ ನಂತರ, ಎಪ್ರಿಲ್ ೧೫ರಂದು ಸತ್ಯಾಗ್ರಹ ನಡೆಯಿತು. ಸತ್ಯಾಗ್ರಹದ ವೇಳೆ, ಹನ್ನೆರಡು ಸ್ತ್ರೀಯರು, ಹದಿಮೂರು ಮರುಷ ಸತ್ಯಾಗ್ರಹಿಗಳು ಮತ್ತು ಸತ್ಯಾಗ್ರಹಿಗಳ ನಾಯಕ, ಸರ್ವಶ್ರೀ ಭಾ. ಕೃ. ಗಾಯಕ್‌ವಾಡ್, ಸಾವಲ್‌ರಾಮ್ ದಾಣಿ, ಅಮೃತರಾವ್ ರಣಖಾಂಬೇ ಇವರನ್ನು ಬಂಧಿಸಲಾಯ್ತು. ಸ್ಪೃಶ್ಯ, ಅಸ್ಪೃಶ್ಯರಲ್ಲಿ ಸತ್ಯಾಗ್ರಹ ಸಂಬಂಧ ಒಡಂಬಡಿಕೆ ತರೋಣವೆಂದು ಕೆಲ ಸವರ್ಣ ನಾಯಕರು ಪ್ರಯತ್ನಿಸಿದರು. ಆದರೆ ಅವರು, ಜೀರ್ಣಮತಾಭಿಮಾನಿ ಸನಾತನರ ದುರಾಗ್ರಹದೆದುರು ಸೋಲಬೇಕಾಯ್ತು. ಅಸ್ಪೃಶ್ಯರು ಮಾತ್ರ ಸನಾತನಿ, ಸುಧಾರಕ ಹಿಂದೂಗಳ ಎದುರು ತಲೆ ಬಾಗಲಿಲ್ಲ.

ಅವರು ತಮ್ಮ ಸತ್ಯಾಗ್ರಹ ಚಳವಳಿಯನ್ನು ಮುಂದುವರಿಸಿದರು.ಈ ಚಳವಳಿ ನಮ್ಮ ಮನುಷ್ಯತ್ವದ ಹಕ್ಕಿಗಾಗಿ ಇದೆ. ಅದೇ ಭಕ್ತಿ ಭಾವ ಮತ್ತು ಆಧ್ಯಾತ್ಮಿಕ ಪ್ರಗತಿ ಮುಂತಾದ ಕಲ್ಪನೆ ಅವರಿಗೆ ಆಧಾರವಾಗಿರಲಿಲ್ಲ. ಈ ಭಾವನೆಯಿಂದ ಅಸ್ಪೃಶ್ಯರನ್ನು ಮುಕ್ತಗೊಳಿಸಬೇಕು, ಕಾರಣ, ಈ ಭಾವನೆಯೇ ಅಸ್ಪೃಶ್ಯರನ್ನು ಮಾನಸಿಕ ಗುಲಾಮಗಿರಿಯ ಶೃಂಖಲೆಯಲ್ಲಿ ಕಳೆದ ಸಾವಿರಾರು ವರ್ಷಗಳಿಂದ ಬಂಧಿಸಿಟ್ಟಿದೆ. ಆ ಭಾವನೆಯನ್ನು ನಷ್ಟ ಗೊಳಿಸಬೇಕೆಂಬ ಧ್ಯೇಯವನ್ನೇ ,ಬಾಬಾಸಾಹೇಬರು ಅಸ್ಪೃಶ್ಯರ ಮುಂದಿಟ್ಟರು, ಮತ್ತು ಈ ಧ್ಯೆಯದಿಂದ ಪ್ರೇರಿತರಾಗಿಯೇ ಅಸ್ಪೃಶ್ಯ ಸತ್ಯಾಗ್ರಹಿಗಳು ನಾಸಿಕ್‌ನಲ್ಲಿ ಹೋರಾಟಕ್ಕೆ ಇಳಿದಿದ್ದರು.

ಸವರ್ಣ ಹಿಂದೂ ಮತ್ತು ಅಸ್ಪೃಶ್ಯ ಸತ್ಯಾಗ್ರಹಿಗಳಲ್ಲಿ ಸಾಮರಸ್ಯ ಇರದುದನ್ನು ಕಂಡು, ಕಲೆಕ್ಟರ್ ಅವರಿಗೆ ಶಾಂತಿರಕ್ಷಣೆಯ ಚಿಂತೆಯಾಯ್ತು. ಅವರು ವಿಚಾರ ಮಾಡಿ, ರಾಮಕುಂಡದ ವಿಷಯದಲ್ಲಿ ಅವರಿಬ್ಬರೊಳಗೆ ಒಪ್ಪಂದವಾಗದಿದ್ದರೆ, ಎರಡೂ ಪಕ್ಷಗಳು ಸರಕಾರದೆದುರು ಹಾಜರಾಗಬೇಕೆಂದು ಆಜ್ಞೆ ಹೊರಡಿಸುವುದಾಗಿ ತಿಳಿಸಿದರು.

ಘಟನಾ ಕ್ರಮ ಈ ಕೆಳಗಿನಂತೆ. ;

ರಣಖಾಂಬೆ- ಗಾಯಕ್‌ವಾಡ್ -ದಾಣೇ ಬಂಧಿಗಳಾದುದು.

ಸತ್ಯಾಗ್ರಹ ಸಂಗ್ರಾಮ ಒಕ್ಕೊರಳಾದುದು.

ದಿ. ೧೨-೪-೧೯೩೨

ನಾಸಿಕ್ ಮಂದಿರ ಪ್ರವೇಶ ಸತ್ಯಾಗ್ರಹ ಸಂಬಂಧದ ಆಮಂತ್ರಣ ಪತ್ರಿಕೆಯನ್ನು ಅಚಾನಕ್ಕಾಗಿ



ಹಳ್ಳಿಯಿಂದ ಹಳ್ಳಿಗೆ ಕಳುಹಬೇಕಾಯ್ತು. ವರ್ಷವರ್ಷವೂ ರಾಮನವಮಿಯ ಉತ್ಸವದಲ್ಲಿ ಕಾಳೇರಾಮ ಮಂದಿರದಲ್ಲಿ ಸತ್ಯಾಗ್ರಹ ಮಾಡುವದೆಂಬ ನಿರ್ಧಾರವನ್ನು ನಾಸಿಕ್ ಜಿಲ್ಲೆಯ ಅಸ್ಪೃಶ್ಯ ಬಾಂಧವರು ಮಾಡಿದರು. ಸತ್ಯಾಗ್ರಹ ಕೇವಲ ಕಾಳೇರಾಮ ಮಂದಿರದಲ್ಲಿ ಮಾತ್ರ ಇದ್ದುದಲ್ಲ. ಅದರ ಕ್ಷೇತ್ರ, ರಾಮಕುಂಡ, ಸೀತಾಕುಂಡ ಪರ್ಯಂತ ಹಬ್ಬಿತ್ತು. ಈ ಎರಡೂ ಕಡೆಗಳಲ್ಲಿ, ಸನಾತನಿಗಳು ಒಂದೆಡೆ ನಿಷೇಧಿಸಿದರೆ, ಇನ್ನೊಂದೆಡೆ ಎಂದು ಸತ್ಯಾಗ್ರಹ ಹೂಡಲಾಯ್ತು. ಹಾಗೆಯೇ, ನಾಸಿಕ್‌ನ ಹೊಸ ಕಲೆಕ್ಟರ್ ಮಿ, ಬ್ರೌನ್ ಅವರು, "ಹೇಗಾದರೂ ಒಳಗೊಳಗೆ ನಿಶ್ಚಿತ ಒಪ್ಪಂದಕ್ಕೆ ಬನ್ನಿ: ಇಲ್ಲದಿದ್ದರೆ, ನಾವು ರಾಮಕುಂಡದ ಮೇಲಿನ ಸರಕಾರೀ ನಿಯಂತ್ರಣದ ಆಜ್ಞೆಯನ್ನು ಇನ್ನೂ ವಿಸ್ತರಿಸುವ ಹಾಗಿಲ್ಲ", ಎಂಬ ಸೂಚನೆಯನ್ನು ಎರಡೂ ಪಕ್ಷಕ್ಕೆ ಕೊಟ್ಟುದರಿಂದ ಅವರು ತಮ್ಮ ಮುಂದಿನ ಧೋರಣೆಯ ಬಗ್ಗೆ ನಿರ್ಧಾರಕ್ಕೆ ಬರಬೇಕಾಯ್ತು. ಸರಕಾರೀ ನಿಯಂತ್ರಣವನ್ನು ತೆಗೆದರೆ, ಸತ್ಯಾಗ್ರಹದ ವೇಳೆ ಎರಡೂ ಪಕ್ಷಗಳಿಗೆ ಏನಾದೀತು, ಪರಿಸ್ಥಿತಿ ವಿಕೋಪಕ್ಕೆ ಹೋದೀತೇ ಏನೆಂಬ ಬಗ್ಗೆ ಯಾರೂ ಸರಿಯಾಗಿ ಗ್ರಹಿಸುವುದು ಸಾಧ್ಯವಿರಲಿಲ್ಲ. ನಾಸಿಕ್‌ನ ವಾತಾವರಣ ಮಾತ್ರ ಗಂಭೀರ ಸ್ವರೂಪದ್ದಾಗಿ ತೋರತೊಡಗಿತು. ಒಂದೆರಡು ದಿನಗಳಲ್ಲಿ ಏನಾಗುವುದೋ ಎಂಬ ಪ್ರಶ್ನೆ ಎಲ್ಲರೆದುರು ನಿಂದಾಗ, ಕಲೆಕ್ಟರ್ ಮಿ, ಬೌನ್ ಅವರು ಸರಕಾರೀ ನಿಯಂತ್ರಣದ ಅವಧಿಯನ್ನು ಒಂದು ತಿಂಗಳಿಗೆ ವಿಸ್ತರಿಸಿದರು. ಸನಾತನಿಗಳಿಗೆ ಜೀವದಲ್ಲಿ ಜೀವ ಬಂದಂತಾಯ್ತು, ಆದರೂ, ರಾಮನವಮಿಗೆ ಕಾಳೇರಾಮ

ಮಂದಿರದಲ್ಲಿ ಅಸ್ಪೃಶ್ಯ ಬಾಂಧವರು ಸತ್ಯಾಗ್ರಹ ಮಾಡುವಲ್ಲಿ ಹಿಂಜರಿಯುವುದಿಲ್ಲ ಎಂಬ ವಿಷಯ ನಿಜವಿದ್ದರಿಂದ ಅದನ್ನೆದುರಿಸುವ ಬಗ್ಗೆ ಸನಾತನಿ ಮಂಡಲದ ಖಾಸಗಿ ಸಭೆ ಕೂಡ ನಡೆದಿತ್ತು.

ಸತ್ಯಾಗ್ರಹದ ಆಮಂತ್ರಣ ಸಿಕ್ಕೊಡನೆಯೇ, ನಾಸಿಕ್ ಜಿಲ್ಲೆಯ ವಿಭಿನ್ನ ಹಳ್ಳಿಗಳಿಂದ ಸತ್ಯಾಗ್ರಹಕ್ಕಾಗಿ ಸತ್ಯಾಗ್ರಹಿ ವೀರರು ತಂಡ ತಂಡವಾಗಿ ವಾಡಿಯಲ್ಲಿ ಜಮಾಯಿಸತೊಡಗಿದ್ದಾರೆ. ಸತ್ಯಾಗ್ರಹ ಕಮಿಟಿ, ತನ್ನ ಸ್ವಾಭಿಮಾನದ ಹೋರಾಟದ ಬಗ್ಗೆ ಯಾವ ಧೋರಣೆ ತಾಳಬೇಕೆಂಬ ಬಗ್ಗೆ ವಿಚಾರ ವಿನಿಮಯ ಮಾಡುತ್ತಿದೆ.

ದಿ. ೧೩-೪-೧೯೩೧

ಮಂದಿರ ಪ್ರವೇಶದ ಸತ್ಯಾಗ್ರಹವನ್ನು ಕೊನೆಗೊಳಿಸುವುದೆಂತು ಎಂಬ ಬಗ್ಗೆ ಸನಾತನಿಗಳೂ, ಅಸ್ಪೃಶ್ಯರೂ ವಿಚಾರ ವಿನಿಮಯ ಮಾಡುತ್ತಿರುವಾಗ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಸರಕಾರದ ವತಿಯಿಂದ ಆಜ್ಞೆ ಹೊರಡಿಸಿದ್ದು ತಿಳಿದು ಬಂತು. ಅದರಂತೆ, "ಒಂದುವೇಳೆ ಪರಿಸ್ಥಿತಿ ಬಿಗಡಾಯಿಸಿ ಭಯಾನಕವಾಗಿ ತೋರಿದರೆ ಸರಕಾರೀ ಹುಕುಮಿನಂತೆ ಎಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ಕಾಳೇರಾಮ ಮಂದಿರದ ಆಸುಪಾಸಿನ ನೂರು ಗಜ ಅಂತರದೊಳಗೆ, ಯಾರೊಬ್ಬರೂ ನಿರರ್ಥಕವಾಗಿ ತಿರುಗಾಡ ಬಾರದು, ಮತ್ತು ಕುಳಿತಿರಬಾರದು. ಮೂರಕ್ಕಿಂತ ಹೆಚ್ಚು ಮಂದಿ ಯಾವುದೇ ಮಂದಿರದ ಬಳಿ ಜಮಾಯಿಸಬಾರದು." ಈ ಆಜ್ಞೆ ೧೪೪ ಕ್ರಿಮಿನಲ್ ಪೀನಲ್ ಕೋಡ್ ಕಾಯ್ದೆಯಂತೆ ಸಾರಲಾಗಿದೆ.ಈ ಆಜ್ಞೆಯ ಅವಧಿ, ಒಂದು ತಿಂಗಳದ್ದಾಗಿದೆ.



ಅಸ್ಪೃಶ್ಯರನ್ನು ಹೋಗದಂತೆ ತಡೆಯಲು, ಸನಾತನಿಗಳು, ಹೊರಗಿನಿಂದ, ವಿಶೇಷವಾಗಿ ಮುಂಬಯಿಯಿಂದ ಸ್ವಯಂಸೇವಕರನ್ನು ದೊರಕಿಸಿಕೊಳ್ಳುವ ಪ್ರಯತ್ನವನ್ನು ಮೊದಲಿನಿಂದಲೇ ಆರಂಭಿಸಿತ್ತು. ಈ ಹೋರಾಟದ ಸಮಾಧಾನಕಾರಕ ಪರಿಹಾರ ಸಿಗುವಂತೆ ಮತ್ತು ಒಪ್ಪಂದದ ಮಾರ್ಗಗಳನ್ನು ಶೋಧಿಸಲೆಂದು ನಾಸಿಕ್ ಮುನಿಸಿಪಾಲಿಟಿಯ ಅಧ್ಯಕ್ಷ, ಶ್ರೀ ಪ್ರಧಾನ್ ಅವರು, ಸನಾತನಿಗಳ ಸಭೆ ಕರೆದು ಪ್ರಯತ್ನಿಸುತ್ತಿರುವುದು ತಿಳಿದು ಬಂದಿದೆ. ಮಂದಿರ ಪ್ರವೇಶದ ಸತ್ಯಾಗ್ರಹವನ್ನು ಯಾವ ರೀತಿ ಯಶಸ್ವಿಗೊಳಿಸಬಹುದು, ಎಂಬ ಬಗ್ಗೆ ಅಸ್ಪೃಶ್ಯ ನಾಯಕರು ಮಾರ್ಗ ಶೋಧಿಸುವ ವಿಚಾರದಲ್ಲಿದ್ದಾರೆ. ಮುಂಬಯಿಯಿಂದ ಬಹಳಷ್ಟು ಸ್ವಯಂಸೇವಕರು ಸತ್ಯಾಗ್ರಹ ಹೋರಾಟದಲ್ಲಿ ಭಾಗವಹಿಸಲೆಂದು ಮೊದಲೇ ಬಂದು ಸತ್ಯಾಗ್ರಹ ಚಾವಡಿಯಲ್ಲಿ ಜಮಾಯಿಸಿದ್ದಾರೆ. ರಾಮನವಮಿಯ ದಿನದಂದು ಬಹಳಷ್ಟು ಕಡೆಗಳಿಂದ ಸ್ವಯಂಸೇವಕರು ನಾಸಿಕ್‌ಗೆ ಬರುತ್ತಾರೆ. ಸತ್ಯಾಗ್ರಹ ಸಂಗ್ರಾಮದ ಬಿರುಗಾಳಿಯು,

ನಾಸಿಕ್‌ನ ಜನರನ್ನು ಕಂಗೆಡಿಸಿದೆ, ಎಂದು ಅಲ್ಲಿನ ಪರಿಸ್ಥಿತಿಯನ್ನೂಹಿಸಿ ಹೇಳಲು ಅಡ್ಡಿಯಿಲ್ಲ. ನಾಸಿಕ್ ಮಾರ್ಗದಲ್ಲಿ, "ಡಾ. ಬಾಬಾಸಾಹೇಬ್ ಅಂಬೇಡ್ಕರ್ ಕೀ ಜೈ" ಎಂಬ ಉದ್ಘೋಷ ಆರಂಭಗೊಂಡಿದೆ.

ದಿ. ೧೪-೪-೧೯೩೧

ಇಂದು ಸತ್ಯಾಗ್ರಹ ಚಾವಡಿಯಲ್ಲಿ ಸತ್ಯಾಗ್ರಹ ವೀರರ ತುಕಡಿಗಳು ಜಮಾಯಿಸತೊಡಗಿವೆ. ವರ್ಷ ವರ್ಷವೂ ಮಹಾರ್‌ವಾಡಾದಿಂದ ಪಂಚವಟಿವರೆಗೆ ಮೆರವಣಿಗೆ ಒಯ್ಯಲು ನಿರ್ಧಾರವಾಗಿತ್ತು, ಮತ್ತು ಆ ರೀತಿ ಮೆರವಣಿಗೆಗೆಂದು ಸಾವಿರಾರು ಜನರು ಸೇರಿದ್ದರು. ನಾಸಿಕ್ ರಸ್ತೆಯತ್ತ ಹೊರಳುವ ಪ್ರತ್ಯೇಕ ರಸ್ತೆಯಲ್ಲಿ, 'ಡಾ. ಅಂಬೇಡ್ಕರ್ ಕೀ ಜೈ" ಎಂಬ ಜಯಜಯಕಾರ ಕೇಳಿಸುತ್ತಿತ್ತು. ಇಂದು ಅಸ್ಪೃಶ್ಯರು ತಮ್ಮ ಧೋರಣೆಯನ್ನು ಯಾವ ರೀತಿ ತೋರುತ್ತಾರೆಂಬ ಕಲ್ಪನೆ ಸನಾತನಿಗಳಿಗಿರಲಿಲ್ಲ. ಅವರು ತಮ್ಮ ಸಂಘಟನೆಯ ಅಭಾವದಿಂದ ಅಶಾಂತರಾಗಿದ್ದರೆಂದು ಕಾಣುತ್ತಿತ್ತು.

ಅಸ್ಪೃಶ್ಯ ಜನರ ಉತ್ಸಾಹ ಎದ್ದು ಕಾಣುತ್ತಿತ್ತು. ಆ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಧೈರ್ಯ ಮತ್ತು ಶಿಸ್ತಿನಿಂದ ಎದುರಿಸಲು ಅವರು ನಿಶ್ಚಯಿಸಿದ್ದರು. ಮಾನವೀಯತೆ ಮತ್ತು ಸ್ವಾಭಿಮಾನದ ಹೋರಾಟದಲ್ಲಿ ಮೃತ್ಯುವಿನ ಪರವೆ ಮಾಡುವುದು ಕೇವಲ ಹೇಡಿಗಳ ಲಕ್ಷಣ ಎಂದು ಅವರಿಗನಿಸುತ್ತಿತ್ತು. ಭೀತಿಯಿಂದ ತೆಗೆದ ಉದ್ಧಾರ ಅವರಿಗೆ ಸ್ವಲ್ಪವೂ ಇಷ್ಟವಿರಲಿಲ್ಲ.

ಮೆರವಣಿಗೆಯ ತಯಾರಿಯಲ್ಲಿ ಎಲ್ಲರೂ ನೆರೆದಿರುವಾಗ ಒಂದು ಅನಿಷ್ಟಕರ, ಅನಿರೀಕ್ಷಿತ ಸುದ್ದಿ, ಆ ಕ್ಯಾಂಪ್ ಒಳಗೆ ಕೇಳಿ ಬಂತು. ಸತ್ಯಾಗ್ರಹ ಚಳವಳಿಯ ಕಾರ್ಯಕರ್ತರೂ, ನಾಸಿಕ್‌ನ ಸಮಾನನೀಯ ನಾಯಕರೂ ಆದ ಶ್ರೀ ಸಾವಲ್‌ರಾಮ್ ದಾಣಿ ಅವರ ತಾಯಿ, ಮೃತ್ಯುಮುಖಿಯಾದರು. ಅವರ ಶೋಚನೀಯ ಮೃತ್ಯುವಿನ ಸುದ್ದಿ ಅಲ್ಲಿ ಹರಡಿದಾಗ ಪ್ರತಿಯೊಬ್ಬರಿಗೂ ದುಃಖವಾಯ್ತು. ತಕ್ಷಣ ಸತ್ಯಾಗ್ರಹ ಕಮಿಟಿಯ ಸಭೆ ನಡೆದು, ಈ ದುಃಖಪ್ರದ ಪ್ರಸಂಗದ ಕಾರಣ, ಇಂದು ಹೊರಡಬೇಕಾಗಿದ್ದ ಅಸ್ಪೃಶ್ಯರ ಮೆರವಣಿಗೆಯನ್ನು ರದ್ದುಪಡಿಸಲಾಯ್ತು.

ಸಾಯಂಕಾಲ ಸತ್ಯಾಗ್ರಹ ಕಮಿಟಿಯ ಇನ್ನೊಂದು ಸಭೆ ಸೇರಿಸಲಾಯ್ತು. ಈ ಸಭೆಯಲ್ಲಿ ರಾಮನವಮಿಯ ದಿನದಂದು ಆರಂಭ ಆಗಲಿರುವ ಸತ್ಯಾಗ್ರಹಕ್ಕಾಗಿ ಕಾಳೇರಾಮ್ ಮಂದಿರದ

.

ಬಳಿ, ಪಂಚವಟಿ ಮುಕ್ಕಾಮ್‌ನಲ್ಲಿ ಒಂದು ಸತ್ಯಾಗ್ರಹ ಚಾವಡಿ ಎಬ್ಬಿಸಲು ನಿರ್ಧರಿಸಲಾಯ್ತು. ಮತ್ತು ಮೂರು ಮೂರು ಮಂದಿ ಕಾಳೇರಾಮ ಮಂದಿರದಲ್ಲಿ ದೇವದರ್ಶನಕ್ಕೆ ಹೋಗಲಾಗುವಂತೆ, ಸತ್ಯಾಗ್ರಹ ಮಾಡಲು ನಿಶ್ಚಯಿಸಲಾಯ್ತು. ಅಸ್ಪೃಶ್ಯರು ತಳೆದ ಈ ನಿರ್ಧಾರವನ್ನು ಕಂಡು, ಸನಾತನಿಗಳೂ ತಮ್ಮ ಜನರನ್ನು ಪ್ರತೀಕಾರಕ್ಕೆ ಸಿದ್ಧ ಪಡಿಸುವ ತಯಾರಿಯಲ್ಲಿದ್ದಾರೆ. ಮಂದಿರದ ನಾಲ್ಕು ದ್ವಾರಗಳಲ್ಲಿ ಎರಡನ್ನು ಮಾತ್ರವೇ ತೆರೆದಿಡಲಾಗಿದೆ. ದರ್ಶನಕ್ಕೆ ಬರುವ ಪ್ರತಿಯೊಬ್ಬರನ್ನೂ ಅವರ ಜಾತಿ ಯಾವುದೆಂದು ಹೇಳಲಾಗುತ್ತದೆ.

ರಾತ್ರೆ, ಅಸ್ಪೃಶ್ಯರ ಬಹಿರಂಗ ಸಭೆಯಲ್ಲಿ ಜನತಾ ಪತ್ರದ ಸಂಪಾದಕ, ಶ್ರೀ ದೇವರಾವ್ ನಾಯಿಕ್ ಅವರಿಂದ ಸತ್ಯಾಗ್ರಹ ಹೋರಾಟದ ವಿಷಯದಲ್ಲಿ ಸವಿಸ್ತಾರವಾದ ಭಾಷಣವಾಯ್ತು. ಎಲ್ಲರೂ ಶಿಸ್ತು ಮತ್ತು ಶಾಂತತೆಯಿಂದ ವರ್ತಿಸಬೇಕೆಂದೂ, ಈ ಸತ್ಯಾಗ್ರಹ ಸಂಗ್ರಾಮದ ಹೋರಾಟ, ಎಲ್ಲ ಯತ್ನದಿಂದ ಸಂಘಟನೆಯ ಬಲದಿಂದ ನಡೆಯಬೇಕೆಂದು ವಿನಂತಿ ಮಾಡಿದರು.

ಕಾಳೇರಾಮ ಮಂದಿರದ ಆಸುಪಾಸಿನ ವಾತಾವರಣ, ಏತಕ್ಕೆ ಮತ್ತು ಹೇಗೆ ವಿಕೋಪಕ್ಕೆ ಹೋದೀತೆಂದು ಹೇಳಲಾಗದ ಕಾರಣ, ಪೊಲೀಸರ ಕಟ್ಟುನಿಟ್ಟಾದ ಬಂದೋಬಸ್ತು ಮಾಡಲಾಗಿದೆ. ರಾತ್ರಿಯೆಲ್ಲ ವಿಭಿನ್ನ ಭೀತಿದಾಯಕ ವದಂತಿಗಳನ್ನು ಹರಡುವ ಯತ್ನ ನಡೆಯಿತು. ಆದರೆ ಸತ್ಯಾಗ್ರಹಿ ವೀರರು ಇಂಥ ಭೀತಿದಾಯಕ ವದಂತಿಗಳಿಗೆ ಕವಡೆ ಬೆಲೆ ನೀಡಲಿಲ್ಲ. ಅವರ ಸಂಕಲ್ಪ ಸ್ಥಿರವಾಗಿದ್ದು, ತಮ್ಮ ನಿರ್ದಿಷ್ಟ ಕೆಲಸವನ್ನು ಶಿಸ್ತು ಮತ್ತು ಧೈರ್ಯದಿಂದ ಪೂರೈಸುವ ಸಿದ್ಧತೆಯಲ್ಲಿ ಅವರಿದ್ದಾರೆ.

## ಸತ್ಯಾಗ್ರಹ ಸಂಗ್ರಾಮದ ಪ್ರಚಾರ

ದಿ. ೧೫-೪-೧೯೩೨

ನಿನ್ನೆ ರಾತ್ರಿ ಸತ್ಯಾಗ್ರಹ ಕ್ಯಾಂಪ್‌ನಲ್ಲಿ ಅಸಂಖ್ಯ ಜನರು ನೆರೆದಿದ್ದರು. ಸತ್ಯಾಗ್ರಹವನ್ನು ಯಶಸ್ವಿಯಾಗಿಸಲು, ಶ್ರೀ ಭಾವುರಾವ್ ಗಾಯಕ್ವಾಡ್, ದಾಣಿ, ರಣಖಂಬೇ ಮತ್ತು ಪತಿತಪಾವನದಾಸ್ ಅವರ ಸ್ಫೂರ್ತಿದಾಯಕ ಭಾಷಣಗಳಾದವು. ಇಂದು ಬೆಳಿಗ್ಗೆ ಮಂದಿರ ಪ್ರವೇಶ ಸತ್ಯಾಗ್ರಹಕ್ಕಾಗಿ ಸಮಾನ ಯತ್ನಗಳು ನಡೆದಿದ್ದವು. ಮೊದಲ ತಂಡದಲ್ಲೇ ಹೋಗಲು, ಸ್ತ್ರೀ, ಪುರುಷ ಸೈನಿಕರ ಉತ್ಸಾಹ ಕೌತುಕಾಸ್ಪದವಿತ್ತು. ಬೆಳಿಗ್ಗೆ, ಮಂದಿರದ ಪ್ರಾಂಗಣದ ವಾತಾವರಣ ಕುಬ್ಧವೂ, ಗಂಭೀರವೂ ಆಗಿರುವಂತೆ ಭಾಸವಾಗುತ್ತಿತ್ತು. ಶಾಂತತೆ ನೆಲೆಸುವಂತೆ ಕಟ್ಟುನಿಟ್ಟಾದ ಬಂದೋಬಸ್ತು ಮಾಡಲಾಗಿತ್ತು.ಮಂದಿರ ಪ್ರವೇಶಕ್ಕಾಗಿ ಜನರು ಒಳಹೋಗಲು ಆರಂಭವಾದೊಡನೆ, ಮೊದಲೇ ನಿರ್ಧರಿಸಿದ್ದಂತೆ ಸತ್ಯಾಗ್ರಹಿ ವೀರರು ಮಂದಿರ ಪ್ರವೇಶಿಸಲೆತ್ನಿಸಿ, ಸತ್ಯಾಗ್ರಹ ಆರಂಭವಾಯ್ತು. ಒಬ್ಬರ ಹಿಂದೊಬ್ಬರಂತೆ ಸತ್ಯಾಗ್ರಹಿ ಸ್ವಯಂಸೇವಕರನ್ನು ಬಂಧಿಸಲಾಯ್ತು.ಸುಮಾರು ಇಪ್ಪತ್ತು ಸ್ವಯಂಸೇವಕರನ್ನು ಬಂಧಿಸಲಾಯ್ತು. ಸತ್ಯಾಗ್ರಹ ಸಂಗ್ರಾಮದ ಧುರೀಣ, ಶ್ರೀ ಗಾಯಕ್‌ವಾಡ್, ದಾಣಿ ಮತ್ತು ರಣಖಾಂಬೆ ಅವರನ್ನು ಬಂಧಿಸಲಾಯ್ತು. ಆ ವೇಳೆ ಅಸ್ಪೃಶ್ಯ ಸಮುದಾಯದಲ್ಲಿ ಕಳವಳವೇರಿತು. ಸ್ಪೃಶ್ಯರನ್ನು ಮಂದಿರ ಹೊಗದಂತೆ ಪೊಲೀಸರು ನಿರ್ಬಂಧಿಸಿದರು, ಮತ್ತು ಕೇವಲ ಸ್ತ್ರೀಯರನ್ನು ಮಾತ್ರ ಒಳಗೆ ಬಿಟ್ಟಾಗ, ಅಸ್ಪೃಶ್ಯ ಸ್ತ್ರೀಯರೂ ಅವರನ್ನು ಹಿಂಬಾಲಿಸಲು

ಎಳಸಿದಾಗ , ಅವರನ್ನು ಬಂಧಿಸಲಾಯ್ತು.

**ಹನ್ನೆರಡು ಸ್ತ್ರೀಯರ ಬಂಧನ.**

ನಮಗೆ ಬಂದ ವರದಿಯಂತೆ ಒಂದೊಮ್ಮೆ ಹನ್ನೆರಡು ಸ್ತ್ರೀಯರನ್ನು ಬಂಧಿಸಲಾಯ್ತು, ಮತ್ತು ಮಂದಿರದ ಬಾಗಿಲನ್ನು ಸರ್ವರಿಗೂ ಮುಚ್ಚಲಾಯ್ತು. ಪೊಲೀಸ ಸಿಪಾಯಿಗಳ ಸರಪಳಿ ಮಾಡಿ, ಜನರನ್ನು ಮಂದಿರದ ಬಾಗಿಲಲ್ಲೇ ತಡೆದು ಪ್ರವೇಶ ನಿಷೇಧಿಸಲಾಯ್ತು. ಪರಿಸ್ಥಿತಿ ಚಿಂತಾಜನಕ ಎನಿಸಿ, ಅಸ್ಪೃಶ್ಯ ನಾಯಕರನ್ನು ಬಂಧಿಸಿದ ಸಮಾಚಾರ ಬಂದಾಗ ಅಸ್ಪೃಶ್ಯರು ಸತ್ಯಾಗ್ರಹ ಸಂಗ್ರಾಮಕ್ಕಾಗಿ ನಾಸಿಕ್‌ಗೆ ಧಾವಿಸಿದರೆಂದು ತಿಳಿಯಿತು. * ನಾಸಿಕ್‌ನಲ್ಲಿ ಪೇಶ್ವಾಯಿ ನಮೂನೆ: ರಾಮನವಮಿಯ ದಿನ ನಾಯಕರನ್ನೂ, ಇತರ ಸತ್ಯಾಗ್ರಹಿಗಳನ್ನೂ ಬಂಧಿಸಿದ ಕಾರಣ, ಆ ದಿನ ನಡೆದುದು ಉದ್ವೇಗಜನಕ ಆಗಿದ್ದರಿಂದ ಮತ್ತು ಅಸ್ಪೃಶ್ಯರ ಶಿಬಿರದಲ್ಲಿ ಎಲ್ಲರೂ ಅದರಿಂದಾಗಿ ಹತಚೇತನರಾದ್ದರಿಂದ ಎಲ್ಲರಿಗೂ ಸರಿಯಾಗಿ ತಿಳಿಯುವಂತಾಗಲೆಂದು ಮಂದಿರ ಪ್ರವೇಶ ಸತ್ಯಾಗ್ರಹ ಮಂಡಲಿಯ ಅಧ್ಯಕ್ಷ, ಶ್ರೀ ಪತಿತಪಾವನದಾಸ್ ಅವರು ಹೇಳಿಕೆಯೊಂದನ್ನು ಅಂದಿನ ದಿನಪತ್ರಿಕೆಯಲ್ಲಿ ಪ್ರಕಟಿಸಿದರು;

ಪತ್ರಿಕಾ ಹೇಳಿಕೆ

----------

ಮೊದಲೇ ಘೋಷಿಸಿದ್ದಂತೆ ಅಸ್ಪೃಶ್ಯ ಸತ್ಯಾಗ್ರಹಿಗಳು ಇಂದು ಬೆಳಿಗ್ಗೆ ೮ ಗಂಟೆಗೆ ಕಾಳೇರಾಮ ಮಂದಿರದ ಬಾಗಿಲಲ್ಲಿ ಸತ್ಯಾಗ್ರಹ ಹೂಡಲೆಂದು ನೆರೆದರು. ಜಾರಿಗೊಳಿಸಲಾಗಿದ್ದ ಕ್ರಿಮಿನಲ್ ಪೀನಲ್ ಕೋಡ್‌ನನ್ವಯ ಮೂರಕ್ಕಿಂತ ಹೆಚ್ಚು ಜನರ ತಂಡ ಒಳ ಹೋಗುವುದಕ್ಕೆ ನಿಷೇಧವಿತ್ತು. ಆದರೆ, ಅಸ್ಪೃಶ್ಯ ಸತ್ಯಾಗ್ರಹಿಗಳು ಅಲ್ಲಿಗೆ ತಲುಪಿದಾಗ, ಸ್ಪಶ್ಯರು ದೊಡ್ಡ ಸಂಖ್ಯೆಯಲ್ಲಿ ತಂಡೋಪತಂಡವಾಗಿ ಒಳಹೊಗುತ್ತಿರುವುದನ್ನೂ, ಪೊಲೀಸರು ಅಲ್ಲೇ ನಿಂತು, ಸರಕಾರೀ ಆಜ್ಞೆಯನ್ನು ಅವರು ಈ ಪರಿ ಕಣ್ಣೆದುರೇ ಉಲ್ಲಂಘಿಸುತ್ತಿರುವುದನ್ನು ನೋಡಿಯೂ ಪೊಲೀಸರು ಸುಮ್ಮನೆ ನಿಂತಿರುವುದನ್ನೂ ಕಂಡರು. ಅಸ್ಪೃಶ್ಯ ಸತ್ಯಾಗ್ರಹಿಗಳು ಈಗಲೂ ಮೂವರ ತಂಡವಾಗಿಯೇ ಒಳ ಹೊಗಲು ಯತ್ನಿಸಿದರು. ಆದರೆ, ಪೊಲೀಸರು ಅವರನ್ನು ಮಾತ್ರ ಬಾಗಿಲ ಬಳಿಗೂ ಬರದಂತೆ ತಡೆದರು. ಹಾಗೂ ಸ್ಪೃಶ್ಯರನ್ನು ಮೊದಲಿನಂತೇ ಒಳ ಹೊಗಲು ಬಿಟ್ಟರು .ಅಷ್ಟೇ ಅಲ್ಲ, ಪೊಲೀಸರು ಸತ್ಯಾಗ್ರಹಿಗಳನ್ನು ಒದೆದು, ಬಡಿದು, ಕಠೋರ ದೌರ್ಜನ್ಯದಿಂದ ನಡೆಸಿಕೊಂಡರು. ಅದುವರೆಗೆ ನಿರ್ಲಿಪ್ತವಾಗಿದ್ದ ಸರಕಾರೀ ಧೋರಣೆಯಲ್ಲಿ ಇಂತಹ ಅನಿರೀಕ್ಷಿತ

ತಿರುವನ್ನು ಕಂಡು ಶ್ರೀ ಗಾಯಕ್‌ವಾಡ, ರಣಖಾಂಬೆ ಮತ್ತು ದಾಣಿ ಅವರು ಸತ್ಯಾಗ್ರಹಕ್ಕೆ ಮುಂದಾಗಿ ಸ್ವತಃ ಬಂಧನಕ್ಕೊಳಗಾದರು. ಆಗ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮಿ. ಬ್ರೌನ್ ಅವರು ಸ್ಥಳದಲ್ಲಿ ಪ್ರತ್ಯಕ್ಷರಾದರು. ಈಗ, ಪೊಲೀಸರು ಸ್ಪೃಶ್ಯ ಮರುಷರನ್ನು ನಿರ್ಬಂಧಿಸಿ, ಸ್ಪೃಶ್ಯ ಮಹಿಳೆಯರನ್ನು ಒಳಹೊಗಲು ಬಿಟ್ಟರು. ಪೊಲೀಸರ ಈ ಬದಲಾದ ತಂತ್ರವನ್ನು ಕಂಡು, ಅಸ್ಪೃಶ್ಯರು ಈಗ ತಮ್ಮ ಮಹಿಳೆಯರನ್ನೂ



ಸತ್ಯಾಗ್ರಹಕ್ಕೆಂದು ಮುಂದೆ ತಂದರು. ಅವರಿಗೂ ಇದೇ ಗತಿಯಾಯ್ತು.

ಪೊಲೀಸರು ಈ ಅಸ್ಪೃಶ್ಯ ಮಹಿಳೆಯರನ್ನೂ ಸೌಜನ್ಯಹೀನವಾಗಿ ನಡೆಸಿಕೊಳ್ಳಲು ಹಿಂಜರಿಯಲಿಲ್ಲ ನಡುಮಧ್ಯಾಹ್ನ ಹನ್ನೆರಡರ ಹೊತ್ತಿಗ'ರಾಮಜನೋತ್ಸವ ಮುಗಿದು ದೇವಳದ ಬಾಗಿಲು ಮುಚ್ಚಿಕೊಂಡಾಗ, ೧೪ ಅಸ್ಪೃಶ್ಯ ಸ್ತ್ರೀಯರೂ, ೨೦ ಅಸ್ಪೃಶ್ಯ ಮರುಷರೂ ಬಂಧನಕ್ಕೊಳಗಾಗಿದ್ದರು.

ತಮ್ಮ ಮಾನವೀಯ ಹಕ್ಕುಗಳ ಹೋರಾಟದಲ್ಲಿ ಸರಕಾರದಿಂದ ಸಹಕಾರ ದೊರೆಯಬಹುದೆಂಬ ಹೆಚ್ಚಿನ ಆಶೆಯನ್ನೇನೂ ಅಸ್ಪೃಶ್ಯರು ಇಟ್ಟುಕೊಂಡಿರಲಿಲ್ಲ. ಆದರೆ ಇದುವರೆಗೆ ಸರಕಾರ, ಇತ್ತಂಡವನ್ನೂ ಸಮನಾಗಿ ಕಾಣುತ್ತಿದ್ದ ಬಗ್ಗೆ ಅವರು ಕೃತಜ್ಞರಾಗಿದ್ದರು. ಆದರೆ ಇಂದು ಈ ಪರಿಯಲ್ಲಿ ಸರಕಾರದ ನೀತಿ ಬದಲಾದುದು ಅವರಿಗೆ ಪರಮಾಶ್ಚರ್ಯವಾಗಿತ್ತು. ಈಗ ತತ್ಕಾಲ, ಅಲ್ಲಿ ಬ್ರಿಟಿಶ್ ಸರಕಾರ ವರ್ಜಿಸಲ್ಪಟ್ಟು, ಹಿಂದೂ ಜಾತಿತ್ವವಾದಿಗಳ ಆಡಳಿತ ಜಾರಿಯಾಗಿದೆಯೆಂದು ಅವರಿಗನಿಸಿದರೆ ಆಶ್ಚರ್ಯವಿಲ್ಲ. ಈ ಬದಲಾವಣೆಯನ್ನು ನೋಡುವಾಗ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮಿ. ಬ್ರೌನ್ ಅವರು ತಮ್ಮ ಕೈಕೆಳಗಿನ ಸನಾತನ ಮನೋವೃತ್ತಿಯ ಜನರಿಂದ ತಪ್ಪು ದಾರಿಗೆಳೆಯಲ್ಪಟ್ಟಿರುವರೋ ಏನೋ ಎಂಬ ಅನುಮಾನವೂ ಉಂಟಾಗುತ್ತದೆ.

ಹಾಗೆಯೇ, ಮಿ. ಬ್ರೌನ್ ಅವರು ಇತ್ತೀಚೆಗಷ್ಟೇ ಅಧಿಕಾರ ವಹಿಸಿಕೊಂಡವರು ಎಂಬುದು ಗಮನಿಸಬೇಕಾದ ವಿಷಯ.

ಅಧ್ಯಕ್ಷರು,
ದೇವಳ ಪ್ರವೇಶ ಸತ್ಯಾಗ್ರಹ ಸಮಿತಿ, ನಾಸಿಕ್,

* * * *

**೭೭. ಅಸ್ಪೃಶ್ಯ ಬಾಂಧವರಿಗೆ ಸಂದೇಶ**

ಸ್ವಾಭಿಮಾನ ಮತ್ತು ಸಮತೆಯ ನಾಶಮಾಡುವ ಮತ್ತು ಸಮಾಜಕ್ಕೆ ಕಳಂಕ ಹಚ್ಚುವ ಕೃತ್ಯ ಮಾಡಬಾರದು

.

ಮಾಘ ಮತು ಫಾಲ್ಗುಣ ಮಾಸಗಳಲ್ಲಿ ಹಲವು ಗ್ರಾಮ ದೇವರುಗಳ ರಥಗಳು ತಾಲ್ಲೂಕು ಇಲ್ಲವೇ ಜಿಲ್ಲೆಗಳ ಮುಖ್ಯ ದೇವಳಗಳತ್ತ ಸಾಗುತ್ತವೆ. ಈ ದೇವರ ರಥವನ್ನೊಯ್ಯುವ ಸ್ಪೃಶ್ಯ ಜನರೊಡನೆ, ಅಸ್ಪೃಶ್ಯ ಸಮಾಜದ ಹಲವರೂ ಪ್ರತಿವರ್ಷ ಹೋಗುತ್ತಾರೆ. ಈ ರಥವನ್ನೊಯ್ಯುವ ಸ್ಪೃಶ್ಯರ ಆತಿಥ್ಯವನ್ನು ಚೆನ್ನಾಗಿಯೇ ಮಾಡಲಾಗುತ್ತದೆ, ಮತ್ತು ಹೋಗುತ್ತಾ ಬರುತ್ತಾ ದೇವರ ಪ್ರಸಾದವೆಂದು ಅವರಿಗೆ ಭೋಜನವನ್ನೂ ನೀಡಬೇಕಾಗುತ್ತದೆ.
ರಥದೊಟ್ಟಿಗೆ ಬಂದವರೆಂದು ಅಸ್ಪೃಶ್ಯ ಯಾತ್ರಿಕರಿಗೂ ಪ್ರಸಾದವೆಂದು ಕೊಡಲಾಗುವ ಭೋಜನವನ್ನು ಗಲೀಜು ಕೊಳಚೆಯಲ್ಲೋ, ಇಲ್ಲವೇ ಅವರ ಜೋಳಿಗೆಗೆಸೆ ನೀಡಲಾಗುತ್ತದೆ. ನಮ್ಮ ಅಸ್ಪೃಶ್ಯ ಬಾಂಧವರು, ಅದನ್ನು ದೇವರ ಪ್ರಸಾದವೆಂದುಕೊಂಡು ಅಂತಹ ಹೊಲಸು ಸ್ಥಳದಲ್ಲಿ ಕುಳಿತು ತಿನ್ನುತ್ತಾರೆ. ಎಸೆದ ಅನ್ನವನ್ನು ಇಸಿದುಕೊಳ್ಳುವುದು, ಮತ್ತು ಆ ಹೊಲಸಿನಲ್ಲಿ ಕುಳಿತು ತಿನ್ನುವುದು, ಸ್ವಾಭಿಮಾನಕ್ಕೆ ಧಕ್ಕೆ ತರುವಂತಹುದೂ, ಮತ್ತು ವೈಷಮ್ಯ ತೋರುವಂತಹುದೂ ಆಗಿದೆ.

ಸ್ವಾಭಿಮಾನ ಮತ್ತು ಸಮತೆ ನಾಶವಾಗುವ ಮತ್ತು ಸಮಾಜಕ್ಕೆ ಕಳಂಕ ತರುವ ಯಾವುದೇ ಕೃತ್ಯವನ್ನೂ ಮಾಡಬಾರದು

.

ದೇವರ ಪ್ರಸಾದವೇ ಆಗಿದ್ದರೂ, ಅದು ಸ್ವಾಭಿಮಾನಕ್ಕೆ ಧಕ್ಕೆ ತರುವುದಾದರೆ, ಅದನ್ನು ತೊರೆಯಲೇಬೇಕು. ಸ್ಪೃಶ್ಯ ಸಮಾಜದ ಜೊತೆಜೊತೆಯಾಗಿ ಕುಳಿತು ಉಣ್ಣುವಂತೆ ಎಲೆ ಜೋಡಿಸಿದ್ದರೆ ಮಾತ್ರ ಅಂಥಲ್ಲಿ ಉಣ್ಣಬೇಕು.

ರಾಮ್‌ಗಢದಲ್ಲಿ ನಾವು ಅಸ್ಪೃಶ್ಯ ಬಾಂಧವರು ಹೇಗೆ ಸ್ಪೃಶ್ಯ ಬಾಂಧವರ ಜೊತೆಯಾಗಿ ಉಂಡೆವೋ, ಹಾಗಾದರೆ ಮಾತ್ರ ದೇವಳಗಳಲ್ಲಿ ಅನ್ನ ಗ್ರಹಣ ಮಾಡ ಬೇಕು, ಇಲ್ಲವೇ ಬಿಟ್ಟುಬಿಡಬೇಕು.

ಮೇಲಿನ ಪಂಚರೂ, ಧುರೀಣರೂ, ಹಳ್ಳಿಯ ಪಂಚರೂ, ಈ ವಿಷಮತೆಯ ಭೋಜನದಲ್ಲಿ ಪಾಲ್ಗೊಳ್ಳಬಾರದೆಂದು ಎಲ್ಲರಿಗೂ ಹೇಳಬೇಕು, ಮತ್ತು ಆ ಸಮಾಜಹಿತ ಘಾತಕ ಮತ್ತು ಕಳಂಕ ತಗಲುವ ದುಷ್ಟ ರೂಢಿಯನ್ನು ನಿಲ್ಲಿಸಬೇಕು. ಜಾತ್ರೆಯಲ್ಲಿ ಉಣ್ಣುವ, ಇಲ್ಲವೆ ಇತರ ಯಾವುದೇ ಕೆಲಸದಲ್ಲಿ ಸ್ಪಶ್ಯ ಹಿಂದೂಗಳು ಸಮಾನತೆಯಿಂದ ಕಾಣದಿದ್ದರೆ, ನಾವು ಅವರ ಯಾವ ಕೆಲಸದಲ್ಲಾದರೂ ಯಾಕೆ ಭಾಗಿಯಾಗಬೇಕು? ನಾವೆಲ್ಲರೂ ಶೀಘ್ರವೇ ಧರ್ಮಾಂತರ ಮಾಡಲಿರುವುದರಿಂದ ನಮಗೆ ಹಿಂದೂ ದೇವರುಗಳ ಯಾವುದೇ ಜಾತ್ರೆ- ಯಾತ್ರೆಗಳಲ್ಲಿ, ಹಬ್ಬಗಳಲ್ಲಿ ಭಾಗವಹಿಸಬೇಕಿಲ್ಲ, ಹಾಗೆಯೇ, ಧರ್ಮಾಂತರಕ್ಕೆ ಮುನ್ನವೇ ನಾವು ನಮ್ಮ ಸಮಾನತೆಯ ಪ್ರತಿಜ್ಞೆಯನ್ನು ಬಿಟ್ಟುಕೊಡಬಾರದು.



ನಮ್ಮ ನಾಯಕರಾದ ಪರಮಪೂಜ್ಯ ಬಾಬಾಸಾಹೇಬ ಅಂಬೇಡ್ಕರರ ಈ ಮೇಲಿನ ಆಜ್ಞೆಯನ್ನು ಲಕ್ಷಕ್ಕೆ ತಂದುಕೊಂಡು ಎಲ್ಲರೂ ಅಂತೆ ನಡೆಯಬೇಕು.

ಡಾ. ಬಾಬಾ ಸಾಹೇಬ ಅಂಬೇಡ್ಕರ್
ಇವರ ಆಜ್ಞೆಯಂತೆ,
ಸುಭೇದಾರ್ ವಿಶ್ರಾಮ್ ಗ, ಸವಾದಕರ್.

* * * *

## ೭೮. ಅಸ್ಪೃಶ್ಯರ ಧರ್ಮಾಂತರ ಮತ್ತು ಅವರ ರಾಜಕೀಯ ಹಕ್ಕು

ಅಸ್ಪೃಶ್ಯರು ಧರ್ಮಾಂತರ ಮಾಡಿಕೊಂಡರೆ ಅವರಿಗೆ ೧೯೩೫ರ ಕಾಯ್ದೆಯಂತೆ ಯಾವ ರಾಜಕೀಯ ಹಕ್ಕುಗಳನ್ನು ಕೊಡಲಾಗಿದೆಯೋ, ಅವುಗಳನ್ನು ಅನುಭವಿಸುವ ಹಕ್ಕು ಇರುವುದೋ ಇಲ್ಲವೋ ಎಂಬುದೊಂದು ದೊಡ್ಡ ವಾದಗ್ರಸ್ತ ಪ್ರಶ್ನೆ. ಧರ್ಮಾಂತರದ ಘೋಷಣೆ ಮಾಡುವ ಮೊದಲು ಈ ಪ್ರಶ್ನೆಯನ್ನು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಎಲ್ಲ ಕೋನಗಳಿಂದಲೂ ವಿಚಾರ ಮಾಡಿದ್ದರು. ಈ ಪ್ರಶ್ನೆಯನ್ನು ಸ್ಪೃಶ್ಯರೂ, ಅಸ್ಪೃಶ್ಯರೂ ಸಭೆಗಳಲ್ಲಿ ಮತ್ತು ವರ್ತಮಾನಪತ್ರಿಕೆಗಳಲ್ಲಿ ಆಗಿಂದಾಗ್ಗೆ ಎತ್ತಿದ್ದಾರೆ. ಆಗೆಲ್ಲ ಸಾಹೇಬರು ಅವರಿಗೆ ಕಡ್ಡಿ ಮುರಿದಂತೆ ಉತ್ತರ ಕೊಟ್ಟಿದ್ದಾರೆ, ಮತ್ತು ಅಸ್ಪೃಶ್ಯರು ಧರ್ಮಾಂತರ ಮಾಡಿದರೆ, ಅವರಿಗೆ ಅಸ್ಪಶ್ಯರೆಂದು ಸಿಗುವ ರಾಜಕೀಯ ಹಕ್ಕು, ಧರ್ಮಾಂತರದ ನಂತರವೂ ಅನುಭವಿಸಲು ಸಿಗುತ್ತದೆ, ಎಂದು ತಮ್ಮ ವಿಚಾರ ಪ್ರಕಟಿಸಿದ್ದಾರೆ. ಈ ವಿಷಯದಲ್ಲಿ ಸಂಶಯ ಇರುವವರ ಸಂದೇಹ ನಿವೃತ್ತಿಗಾಗಿ, “ಜನತೆ”ಯ ೨೫ ಜುಲೈ ಮತ್ತು ೧ ಆಗಸ್ಟ್ ೧೯೩೬ ರ ಜೊತೆ ಅಂಕಣದಲ್ಲಿ ಬರೆದ, ಮೇಲಣ ಶೀರ್ಷಿಕೆಯ ಅಗ್ರಲೇಖನ ಇಂತಿದೆ :

ಅಸ್ಪೃಶ್ಯ ವರ್ಗವು ಹಿಂದೂಧರ್ಮವನ್ನು ತ್ಯಜಿಸಿ, ಪರಧರ್ಮವನ್ನು ಅಂಗೀಕಾರ ಮಾಡುವ ತನ್ನ ಮನೋದಯವನ್ನು ವ್ಯಕ್ತ ಮಾಡಿದಂದಿನಿಂದ ಹಿಂದೂಗಳಲ್ಲಿ ದೊಡ್ಡ ಕಳವಳವೇ ಉಂಟಾಗಿದೆ. ಧರ್ಮಾಂತರದ ಚಳವಳಿಯನ್ನು ಅಡಗಿಸಲು ಹಿಂದೂಗಳು ಬಲವಾದ ಯತ್ನ ಮಾಡುತ್ತಿದ್ದಾರೆ. ಇದಕ್ಕಾಗಿ ಅವರು ಯಾವ ಮಾರ್ಗವನ್ನು ಅವಲಂಬಿಸುತ್ತಿದ್ದಾರೋ, ಆ ಮಾರ್ಗವು ನ್ಯಾಯಾನ್ಯಾಯದ ಪರಿಜ್ಞಾನವಿರುವ ಯಾವುದೇ ವ್ಯಕ್ತಿಗೆ ಶಿಷ್ಟಸಮ್ಮತವಾಗುವಂತಿಲ್ಲ, ಎಂದು ನಮಗೆ ಖಂಡಿತವಿದೆ. ಯಾವ್ಯಾವಾಗ ಅಸ್ಪೃಶ್ಯರು ಸ್ವಾಭಿಮಾನ ಸಂರಕ್ಷಣೆಗಾಗಿ ಸ್ವತಂತ್ರತೆಯ ಮಾರ್ಗದಲ್ಲಿ ಹೆಜ್ಜೆಯಿಟ್ಟು ತಮ್ಮ ಪ್ರಗತಿ ಸಾಧಿಸಿಕೊಳ್ಳುವ ನಿರ್ಧಾರವನ್ನು ಪ್ರಕಟಿಸಿದರೋ, ಆವಾಗೆಲ್ಲ ಹಿಂದೂಗಳು, ಜಾತಿಹಿತದ ಮತ್ತು ಶ್ರೇಷ್ಠತೆಯ ಭಾವನೆಗೆ ಬಲಿಬಿದ್ದು, ಅಸ್ಪೃಶ್ಯರನ್ನು ಸುಮ್ಮನಿರಿಸಲು ಹಿಂದಿನಿಂದಲೂ ಯಾವ ಶಸ್ತ್ರದ ಉಪಯೋಗ ಮಾಡುತ್ತಾ ಬಂದಿದ್ದಾರೋ, ಆ ಶಸ್ತ್ರವನ್ನೇ ಅಸ್ಪಶ್ಯರ ಧರ್ಮಾಂತರದ ಘೋಷಣೆಯನ್ನು ವಿರೋಧಿಸಲು ಉಪಯೋಗಕ್ಕೆ ತರುವ ಉಪಕ್ರಮವನ್ನು ಅವರು ಆರಂಭಿಸಿದ್ದಾರೆ. ಹಿಂದೂ ಜಮೀನ್ದಾರರು

ಅಸ್ಪೃಶ್ಯರಿಂದ ಜಮೀನು ಪಡೆದುಕೊಳ್ಳುತ್ತಾರೆ. ಹಾಗೆಯೇ, ಹಿಂದೂಗಳು ಅಸ್ಪೃಶ್ಯರ ಮೇಲೆ ಸಾಮಾಜಿಕ ಹಾಗೂ ಆರ್ಥಿಕ ಬಹಿಷ್ಕಾರಕ್ಕೆ ಕರೆ ನೀಡಿದ್ದಾರೆ.

ಆದರೆ ಅಸ್ಪೃಶ್ಯರನ್ನು ಗುಲಾಮಗಿರಿಯಲ್ಲಿ ಅದ್ದಿ ಇಡಲೆಂದು ಯೋಜಿಸಿರುವ ಈ ಪುರಾತನ ಉಪಾಯದಿಂದ ಏನೂ ಉಪಯೋಗವಾಗದೆ, ಅಸ್ಪೃಶ್ಯರ ಧರ್ಮಾಂತರದ ಚಳವಳಿ, ಅಪ್ರತಿಹತವಾಗಿ ಎಲ್ಲೆಡೆಯೂ ಪಸರಿಸುತ್ತಿದೆ.

ಅಸ್ಪೃಶ್ಯರನ್ನು ಅಂಕೆಗೆ ತರುವ ಹಳೆಯ ಉಪಾಯವು ಸಾಲದೆಂದು, ಹಿಂದೂಗಳು ಅಸ್ಪೃಶ್ಯರನ್ನು ದಂಗು ಬಡಿಸುವ ಹೊಸದೊಂದು ಉಪಾಯವನ್ನು ಆರಿಸಿ ಕೊಂಡಿದ್ದಾರೆ. ಅಸ್ಪೃಶ್ಯರು ಧರ್ಮಾಂತರ



ಹೊಂದಿದರೆ, ಅವರಿಗೆ ಹೊಸ ಸಂವಿಧಾನದಂತೆ ಪ್ರಾಪ್ತವಾದ ರಾಜಕೀಯ ಹಕ್ಕುಗಳಿಗೆ ಚ್ಯುತಿ ಬಂದಂತೆ ಎಂದು ಸಾರುತ್ತಿದ್ದಾರೆ. ಈ ವರೆಗೆ, ಅಸ್ಪೃಶ್ಯರು ಧರ್ಮಾಂತರ ಮಾಡಿದರೆ ಅವರ ರಾಜಕೀಯ ಹಕ್ಕು ನಷ್ಟವಾಗುವುದು ಎಂಬ ಸೂಚನೆಯನ್ನು, ಅಸ್ಪೃಶ್ಯ ವರ್ಗದೊಡನೆ ಸಹಾನುಭೂತಿಯಿದ್ದ ಕೆಲ ಸ್ಪೃಶ್ಯ ಹಿಂದೂಗಳು ಆಗಾಗ ಕೊಡುತ್ತಾ ಬಂದಿದ್ದಾರೆ. ಇವರು ಅಸ್ಪೃಶ್ಯ ವರ್ಗದ ವಿರೋಧಿಗಳಾಗಿರದೆ, ಹಿತಚಿಂತಕರೇ ಆಗಿದ್ದಾರೆ. ಆದರೆ ಇದನ್ನೇ ಇವರ ವಿರೋಧಿಗಳು ಬೆದರಿಕೆ ಎಂದು ಗ್ರಹಿಸಿದ್ದಾರೆ. ದಿ. ೨೧ರ ಜನ್ಮಭೂಮಿ' ಎಂಬ ಗುಜರಾತಿ ದೈನಿಕದಲ್ಲಿ, ಧರ್ಮಾಂತರವಾದರೆ ತಮಗೆ ಸಿಗಲಿದ್ದ ರಾಜಕೀಯ ಸವಲತ್ತು ನಷ್ಟವಾಗುವುದೆಂದು ಅಸ್ಪಶ್ಯರು, ಭೀತರಾಗಿದ್ದಾರೆ, ಎಂದು ಪ್ರಕಟಿಸಲಾಗಿತ್ತು. ಅಂಬೇಡ್ಕರರೂ ಇದರಿಂದ ಗಲಿಬಿಲಿಗೊಂಡು, ಚುನಾವಣೆಗೆ ಉಮೇದುವಾರನಾಗಿರಲೊಪ್ಪದೆ, ತಮ್ಮ ಅನುಯಾಯಿಗಳಿಗೂ ಅದೇ ಸಲಹೆ ಇತ್ತಿದ್ದಾರೆ. 'ಬಾಂಬ್ ಕ್ರಾನಿಕ್‌ಲ್'ನ ದಿ. ೨೨ರ ಅಂಕಣದಲ್ಲಿ ಈ ಪತ್ರಿಕೆಯ ಪ್ರತಿನಿಧಿಯು, ಡಾ. ಅಂಬೇಡ್ಕರರು, ಧರ್ಮಾಂತರದ ಕಾರಣ, ರಾಜಕೀಯ ಹಕ್ಕು ಹಿಂದೆಗೆಯಲ್ಪಡುವುದೇ, ಏನೆಂದು ತಿಳಿಯಲು ಮುಂಬಯಿ ಸರಕಾರದೊಡನೆ ಪತ್ರವ್ಯವಹಾರ ನಡೆಸಿದಾಗ, ಸರಕಾರವು, ಧರ್ಮಾಂತರ ಮಾಡಿದವರಿಗೆ,ಅಸ್ಪಶ್ಯರಿಗಾಗಿ ಕಾಯ್ದೆ ಕೌನ್ಸಿಲ್‌ನಲ್ಲಿ ಕಾದಿರಿಸಿದ ಸ್ಥಳಕ್ಕೆ ಉಮೇದುವಾರರಾಗುವುದು ಸಾಧ್ಯವಿಲ್ಲವೆಂದು ತಿಳಿಸಿತು, ಎಂದು ಬರೆದಿದ್ದಾರೆ. ಈ ವಿಷಯದಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರರು 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯ ಪ್ರತಿನಿಧಿಗೆ ಕೊಟ್ಟ ಸಂದರ್ಶನ, ಆ ಪತ್ರಿಕೆಯ ದಿ. ೨೪ ರ

ಅಂಕಣದಲ್ಲಿ ಪ್ರಕಟವಾಗಿದೆ. ಈ ಸಂದರ್ಶನದಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರರು, ಅಸ್ಪೃಶ್ಯರಿಗೆ ದೊರಕಿದ ರಾಜಕೀಯ ಹಕ್ಕಿನ ಮೇಲೆ ಧರ್ಮಾಂತರದಿಂದಾಗಿ ಕಾಯ್ದೆಯ ದೃಷ್ಟಿಯಿಂದ ಆಗುವ ಪರಿಣಾಮದ ಬಗ್ಗೆ ತಮ್ಮ ಅಭಿಪ್ರಾಯವನ್ನು ಸವಿಸ್ತಾರವಾಗಿ ವ್ಯಕ್ತ ಪಡಿಸಿದ್ದಾರೆ.

ಧರ್ಮಾಂತರದಿಂದ ಅಸ್ಪೃಶ್ಯರ ರಾಜಕೀಯ ಹಕ್ಕು ನಷ್ಟವಾಗುವುದೆಂದು ಎಚ್ಚರಿಸುವ ವೃತ್ತಪತ್ರಗಳಿಗೆ ತಮ್ಮ ವಿಚಾರ ಸರಣಿ ತಪ್ಪಲ್ಲವೆಂಬುದು ಖಂಡಿತವಿಲ್ಲ.

ಆದರೆ, ಡಾ.ಅಂಬೇಡ್ಕರರು ತಮ್ಮ ಸಂದರ್ಶನವನ್ನು ಪ್ರಕಟಿಸಿದ ನಂತರ, ಯಾರೆಲ್ಲ ಸುಮಾರು ಒಂದು ವಾರದಿಂದ ನಿರ್ಲಜ್ಜರಾಗಿ ಕುಣಿಯುತ್ತಿದ್ದರೋ, ಅವರ್ೆಲ್ಲ ಈಗ ಬಾಯಿಮುಚ್ಚಿ ಸುಮ್ಮನಿರುವುದು ಕಾಣುತ್ತಿದೆ. ಡಾ. ಅಂಬೇಡ್ಕರರು ತಮ್ಮ ತರ್ಕಶುದ್ಧ ವಿಚಾರಸರಣಿಯಿಂದ ಈ ವಿಷಯದ ಚರ್ಚೆಯನ್ನು ಎಷ್ಟೊಂದು ವಸ್ತುನಿಷ್ಠವಾಗಿ ಮಾಡಿದ್ದಾರೆಂದರೆ, ಅಸ್ಪೃಶ್ಯವರ್ಗದ ಪ್ರತಿಸ್ಪರ್ಧಿಗಳಿಗೆ ಧರ್ಮಾಂತರದಿಂದ ಅಸ್ಪೃಶ್ಯರ ರಾಜಕೀಯ ಹಕ್ಕು ನಷ್ಟವಾಗುವುದು ಎಂದಿದ್ದ ವಿಶ್ವಾಸ ಈಗ ಕುಂಠಿತವಾಗಿದೆ. ಎಷ್ಟೆಂದರೆ, ಯಾರೆಲ್ಲ ಮೊದಲ ದಿನ ಅಸ್ಪೃಶ್ಯರನ್ನು ತಬ್ಬಿಬ್ಬಾಗಿಸುವ ಅಗ್ರಲೇಖನ ಬರೆದರೋ, ಅವರೆಲ್ಲ ಮರುದಿನ ನಾಲಗೆ ಕಡಿದುಕೊಂಡು, ತಮ್ಮಿಂದ ತಪ್ಪಾಯ್ತೆಂದು ಪುನಃ ಲೇಖನ ಬರೆದು, ಡಾ.ಅಂಬೇಡ್ಕರರ ವಿವರಣೆ ಹಾಗೂ ಮಂಡಿಸಿದ ವಿಚಾರ ಸರಣಿ ಕಾಯ್ದೆಬದ್ಧವಾಗಿ ಸರಿಯಾಗಿದೆ ಎಂದು ಒಪ್ಪಿಕೊಂಡಿದ್ದಾರೆ.

ಧರ್ಮಾಂತರದಿಂದ ರಾಜಕೀಯ ಹಕ್ಕಿಗೆ ಬಾಧೆ ಬರುತ್ತದೋ ಇಲ್ಲವೋ ಎಂಬ ಬಗ್ಗೆ ಡಾ. ಅಂಬೇಡ್ಕರರು, ಮಹಾರ್ ಪರಿಷತ್ತಿನಲ್ಲಿ ಮಾಡಿದ ಭಾಷಣದಲ್ಲಿ ಸವಿಸ್ತಾರವಾಗಿ ಚರ್ಚಿಸಿದ್ದಾರೆ, 'ಜನತೆ'ಯ ಓದುಗರು ಆ ಭಾಷಣವನ್ನು ಓದಿರುವುದರಿಂದ ಪುನಃ ಆ ವಿಷಯದ ಚರ್ಚೆಯನ್ನು

"ಜನತೆಯಲ್ಲಿ ಮಾಡುವ ಅವಶ್ಯಕತೆಯಿಲ್ಲ. ಆದರೆ ಈ ವಿಷಯ ಅತ್ಯಂತ ಮಹತ್ವದ್ದಾಗಿದ್ದು, ಅಸ್ಪೃಶ್ಯ ಸಮಾಜವು ನವೀನ ರಾಜಕೀಯ ಸಂವಿಧಾನದ ವಿಷಯದಲ್ಲಿ ಜ್ಞಾನಹೀನವಾಗಿರುವುದರಿಂದ ಈ ವಿಷಯದಲ್ಲಿ ಅವರನ್ನು ದಿಕ್ಕು ತಪ್ಪಿಸಲು ಯಾರಿಗೂ ಆಗುವುದಿಲ್ಲವಾಗಿ, ಪುನಃ ಚರ್ಚೆ ಮಾಡಬೇಕಾಗಿ ಬಂದಿದೆ. ಕಳೆದ ವಾರ ಹಿಂದೂ ವಿರೋಧಿಗಳು ಎಬ್ಬಿಸಿದ ಬಿರುಗಾಳಿಯಲ್ಲಿ, ಅನೇಕ ವಿಷಯಗಳು ಮಂಡಿಸಲ್ಪಟ್ಟುವು. ಇವುಗಳಲ್ಲಿ ಮೊದಲ ಪ್ರಮುಖ ವಿಷಯವೆಂದರೆ, ಅಸ್ಪೃಶ್ಯರು ಹಿಂದೂಧರ್ಮವನ್ನು ತ್ಯಜಿಸಿ, ಹಿಂದೂ ದೇವರುಗಳನ್ನೂ, ಧರ್ಮಗ್ರಂಥಗಳನ್ನೂ ಮನ್ನಿಸದಿರುವ ನಿರ್ಧಾರಕ್ಕೆ ಬಂದಿರುವುದರಿಂದ, ಅವರಿಗೆ ಕೊಡಲಾದ ರಾಜಕೀಯ ಹಕ್ಕುಗಳನ್ನು ಉಪಭೋಗಿಸಲು ಅವರು ಅಪಾತ್ರರಾಗಿರುತ್ತಾರೆ, ಎಂಬುದು. ಅಂದರೆ, ಆ ಹಕ್ಕುಗಳನ್ನು ಉಳಿಸಿಕೊಳ್ಳಬೇಕಾದರೆ, ಅಸ್ಪೃಶ್ಯರು ಹಿಂದೂ ಧರ್ಮದಲ್ಲೇ ಉಳಿಯಬೇಕು ಎಂಬುದು ತಾತ್ಪರ್ಯ. ತಾವು ಹಿಂದೂಗಳಲ್ಲವೆಂದು ಅವರು ಅನ್ನುವುದಾದರೆ, ಅವರು ತಮ್ಮ ರಾಜಕೀಯ ಹಕ್ಕನ್ನು ಕಳಕೊಂಡಂತೆಯೇ, ಮೀನುಗಾರನು ಬಲೆಯನ್ನು ಬೀಸಿ ಹರವಿ, ಅದರೊಳಕ್ಕೆ ಬಂದ ಮೀನುಗಳನ್ನು ಹಿಡಿಯಲು ಯತ್ನಿಸುವಂತೆ ಅಸ್ಪೃಶ್ಯರನ್ನೂ ತಮ್ಮ ಜಾಲದಲ್ಲಿ ಸಿಕ್ಕಿಸುವ ಹಿಂದೂಗಳ ಯತ್ನ ಸಫಲವಾಗುವಂತಿಲ್ಲ. ಹಾಗಾಗಲು ಹಿಂದೂ ಅನ್ನುವುದು ಯಾರನ್ನು, ಎಂಬ ಬಗ್ಗೆ ಕಾಯ್ದೆಬದ್ಧ ವ್ಯಾಖ್ಯೆ ಇರುವುದು ಅಗತ್ಯ. ಆದರೆ ಇದುವರೆಗೆ ಹಿಂದೂ ಎಂಬ ಶಬ್ದದ ಸರ್ವಸಾಮಾನ್ಯ ವ್ಯಾಖ್ಯೆಯನ್ನೂ ಯಾರೂ ಕೊಟ್ಟಿಲ್ಲ. ಹಿಂದೂ ಧರ್ಮದ ವ್ಯಾಖ್ಯೆ ಮಾಡುವುದು ಎಷ್ಟು ಕಷ್ಟವೆಂದರೆ ಯಾವುದೇ ಧರ್ಮದ ಅನುಯಾಯಿ ಅಲ್ಲದವರು, ಹಿಂದೂ ಧರ್ಮದ ಅನುಯಾಯಿ, ಎಂದು ತಜ್ಞರೊಬ್ಬರು ವ್ಯಾಖ್ಯಾನಿಸಿದ್ದಾರೆ. ಸ್ವತಃ ಹಿಂದೂ ಮಹಾಸಭೆಯೇ, ಹಿಂದೂಸ್ಥಾನದಲ್ಲಿ ಉತ್ಪನ್ನವಾದ ಯಾವುದೇ ಧರ್ಮದ ಅನುಯಾಯಿ, ಹಿಂದೂ ಎಂದು ವ್ಯಾಖ್ಯಾನಿಸಿದೆ. ಮತ್ತು ಹಿಂದೂ ಎಂಬ ಶಬ್ದದಲ್ಲಿ ಸನಾತನಿ, ಆರ್ಯಸಮಾಜ, ಜೈನ, ಸಿಖ್ಖ, ಬೌದ್ಧ ಮತ್ತು ಬ್ರಾಹೋ ಮುಂತಾದ ಎಲ್ಲರ ಸಮಾವೇಶ ಇದೆಯೆಂದು ತನ್ನ ನಿಯಮಾವಳಿಗಳಲ್ಲಿ ಹೇಳಿದೆ. ಎಲ್ಲಿ ಹಿಂದೂ ಯಾರು, ಮತ್ತು ಯಾರು ಹಿಂದೂ ಅಲ್ಲ ಎಂಬುದೇ ಅನಿಶ್ಚಿತವಿರುವಾಗ ಅಲ್ಲಿ ಅಸ್ಪೃಶ್ಯರನ್ನು ಹಿಂದೂ ಅಥವಾ ಅಲ್ಲ ಅನ್ನುವ ಯತ್ನ ನಿಷ್ಫಲವೇ ಆಗುತ್ತದೆ. ಹಿಂದೂ ಧರ್ಮವು ಎಂಥ ಜಾಲವೆಂದರೆ, ಸಡಿಲ ನಾಲಗೆಯ, ಕೆಚ್ಚೆದೆಯ ವ್ಯಕ್ತಿ ಮಾತ್ರ ಅಲ್ಲಿ ಹೊಕ್ಕು ಹೊರಬರಬಹುದು. ಇಂತಹ ಸ್ಥಿತಿಯಲ್ಲಿ ಹಿಂದೂಗಳು ಎತ್ತಿದ ಈ ಪ್ರಶ್ನೆಯ ಬಗ್ಗೆ ವಿಚಾರ ಮಾಡುವ ಅವಶ್ಯಕತೆಯೇ ಇಲ್ಲ. ಆದರೆ ಪ್ರಶ್ನೆ ಮಹತ್ವದ್ದಾದ್ದರಿಂದ ಇಂತಹ ಪ್ರಾಸ್ತಾವಿಕ ವಿಷಯದ ಬಗ್ಗೆ ಉತ್ತರ ಹುಡುಕಿ ಬಿಟ್ಟು ಬಿಡುವುದು ನಮಗೆ ಯೋಗ್ಯವಾಗಿ ಕಾಣುವುದಿಲ್ಲ.

ರಾಜಕೀಯ ಹಕ್ಕು ಅನುಭವಿಸಲು, ಅಸ್ಪೃಶ್ಯರನ್ನು ಹಿಂದೂಗಳೆಂದೇ ಗಣಿಸಬೇಕೇ, ಎಂಬ ಪ್ರಶ್ನೆಗೆ ಎರಡು ಮಜಲುಗಳಿವೆ. ಒಂದು, ಹಿಂದೂ ಧರ್ಮವನ್ನು ತ್ಯಜಿಸಿದರೆ, ಅವರ ರಾಜಕೀಯ ಹಕ್ಕಿನ ಮೇಲೆ ಯಾವ

ಪರಿಣಾಮವಾಗುವುದೆಂಬುದು, ಮತ್ತಿನ್ನೊಂದು, ಸ್ವಧರ್ಮವನ್ನು ತೊರೆದು ಪರಧರ್ಮವನ್ನು ಅಂಗೀಕರಿಸಿದರೆ, ಅವರ ರಾಜಕೀಯ ಹಕ್ಕಿನ ಮೇಲೆ ಯಾವ ಪರಿಣಾಮ ಆಗುವುದೆಂಬುದು. ಹಿಂದೂಗಳು ಪ್ರಸ್ತುತಪಡಿಸಿದ ವಿಷಯವನ್ನು ವಾಚಕರ ತಿಳುವಳಿಕೆಗಾಗಿ ಒಂದೊಂದಾಗಿಯೇ ವಿಚಾರ ಮಾಡುವುದು ಯುಕ್ತ. ಮೊದಲಾಗಿ, ಹಿಂದೂ ಧರ್ಮವನ್ನು ತ್ಯಜಿಸಿದರೆ ಏನಾಗುವುದು? ಅವರ ರಾಜಕೀಯ ಹಕ್ಕನ್ನು ಕಳಕೊಳ್ಳಬೇಕಾಗುವುದೇ? ಈ ಕುರಿತು ವಿಚಾರ ಮಾಡುವಾಗ, ಗವರ್ಮೆಂಟ್ ಆಫ್ ಇಂಡಿಯಾ ಆಕ್ಟ್ ನಂತೆ ವಿಭಿನ್ನ ಜಾತಿಗಳಿಗೆ ಯಾವ ಪ್ರತಿನಿಧಿತ್ವ



ಕೊಡಲಾಗಿದೆಯೆಂದು ತಿಳಿಸುವ ಕಲಮಿನ ಪರಿಚಯ ಮಾಡಿಕೊಳ್ಳುವುದು ಅತ್ಯಂತ ಅಗತ್ಯ. ಯಾರು ಈ ವಿಷಯವನ್ನೆತ್ತಿರುವರೋ, ಅವರು, ಕಾಯ್ದೆಯಲ್ಲಿ ಮಾಡಲಾಗಿರುವ ಅಸ್ಪೃಶ್ಯ ವರ್ಗದ ವ್ಯಾಖ್ಯೆಯೆಡೆಗೆ ಲಕ್ಷ್ಯ ಹರಿಸಬೇಕೆಂದು ನಮ್ಮ ಸೂಚನೆ. ಈ ವ್ಯಾಖ್ಯೆ, ಗವರ್ಮೆಂಟ್ ಆಫ್ ಇಂಡಿಯಾ ಆಕ್ಟ್ ನ ಮೊದಲನೇ ಪರಿಚ್ಛೇದದ ೨೬ನೇ ಕಲಮಿನಲ್ಲಿ ಕೊಡಲಾಗಿದೆ. ಈ ಕಲಮಿನಲ್ಲಿ ಅಸ್ಪೃಶ್ಯ ವರ್ಗ ಎಂಬ ಪದ ಪ್ರಯೋಗ ಇಲ್ಲವೇ ಇಲ್ಲ. ಇಲ್ಲಿರುವುದು 'ಶೆಡ್ಯೂಲ್ಡ್ ಕಾಸ್ಟ್ " ಅನ್ನುವ ಪದಪ್ರಯೋಗ, ಈ ಶಬ್ದ ಪ್ರಯೋಗದಿಂದ, ೨೬ನೇ ಕಲಮಿನಲ್ಲಿ ಕೊಟ್ಟಿರುವ ವ್ಯಾಖ್ಯೆ, ಧರ್ಮದ ಮೇಲೆ ಅವಲಂಬಿತವಲ್ಲ, ಎಂಬುದು ಸ್ಪಷ್ಟವಿದೆ. ಸಾಮ್ರಾಟ್ ಬಾದಶಹ ಮತ್ತು ಅವರ ಕೌನ್ಸಿಲ್, ಯಾವ ಜಾತಿಯನ್ನು ಈ ಪಟ್ಟಿಯಲ್ಲಿ ಸೇರಿಸಿದೆಯೋ, ಅದನ್ನು ಶೆಡ್ಯೂಲ್ಡ್ ಕಾಸ್ಟ್ ಅನ್ನಲಾಗುತ್ತದೆ. ಶೆಡ್ಯೂಲ್ಡ್ ಕಾಸ್ಟ್ ನ ವ್ಯಾಖ್ಯೆ ಹೀಗಿದೆ. ಶೆಡ್ಯೂಲ್ಡ್ ಕಾಸ್ಟ್ ಅಂದರೆ, ಪೂರ್ವದ ಅಸ್ಪೃಶ್ಯರು ಮತ್ತು ಡಿಪ್ರೆಸ್ಡ್ ಕ್ಲಾಸ್ಸ್ ಎಂದು ವ್ಯಾಖ್ಯೆಯಲ್ಲಿ ಹೇಳಲಾಗಿದೆ. ಹಾಗೆಯೇ ಯಾವ ಜಾತಿಯನ್ನು ಲಿಸ್ಟ್‌ನಲ್ಲಿ ಶೆಡ್ಯೂಲ್ಡ್ ಕಾಸ್ಟ್ ನ ಅಡಿಯಲ್ಲಿ ಸೇರಿಸಲಾಗಿದೆಯೋ, ಅದರ ಉಲ್ಲೇಖ ಮಾಡುತ್ತಾ, ಹಿಂದೂಪೈಕಿ, ಯಾವುದೋ ಒಂದು ಜಾತಿ ಎಂಬ ವಿಶೇಷಣಾತ್ಮಕ ವಚನವನ್ನೇನೂ ಉಪಯೋಗಿಸಿಲ್ಲ. ಇದು, ಪರಿಶಿಷ್ಟ ೧, ಕಲಮು ೨೬ರಲ್ಲಿ ಶೆಡ್ಯೂಲ್ಡ್ ಕಾಸ್ಟ್ ನ ವ್ಯಾಖ್ಯೆಯಲ್ಲಿ ಎದ್ದು ಕಾಣುತ್ತದೆ. ಇಷ್ಟೇ ಅಲ್ಲ, ಶೆಡ್ಯೂಲ್ಡ್ ಕಾಸ್ಟ್ ನ ವಿಷಯದಲ್ಲಿ ಪ್ರಕಟವಾದ ಸಾರ್ವಭೌಮ ಬಾದಶಹರ ಆರ್ಡರ್ ಇನ್ ಕೌನ್ಸಿಲ್‌ನಂತೆ,

ಶೆಡ್ಯೂಲ್ಡ್ ಕಾಸ್ಟ್‌ನಲ್ಲಿ ಪ್ರಾಂತ್ಯ ಪ್ರಾಂತ್ಯಗಳಲ್ಲಿ ಯಾವ್ಯಾವ ಜಾತಿಯ ಸಮಾವೇಶ ನಡೆಸಬೇಕೆಂಬ ಪಟ್ಟಿ ಸಿದ್ಧವಾಗಿದೆಯೋ, ಅಲ್ಲೂ ಹಿಂದೂಗಳಲ್ಲಿ ಯಾವುದೋ ಜಾತಿ ಎಂಬ ವಿಶೇಷಣಾತ್ಮಕ ವಚನವನ್ನೇನೂ ಪ್ರಯೋಗಿಸಿಲ್ಲ. ಕೇವಲ ಜಾತಿಯ ಉಲ್ಲೇಖ ಮಾತ್ರ ಇದೆ. ರಾಜಕೀಯ ಹಕ್ಕಿಗಾಗಿ, ಹಿಂದೂ ಸಮಾಜದಲ್ಲಿ ಇಲ್ಲವೇ ಹಿಂದೂ ಧರ್ಮದಲ್ಲಿ ಉಳಿಯಬೇಕೆಂಬ ಷರತ್ತನ್ನು ಕಾಯ್ದೆ ಹಾಕಿಲ್ಲ, ಎಂಬುದು ಈ ವ್ಯಾಖ್ಯೆಯಿಂದ ಸ್ಪಷ್ಟವಿದೆ.

ಅಸ್ಪೃಶ್ಯರ ರಾಜಕೀಯ ಹಕ್ಕಿನ ವಿಷಯದಲ್ಲಿ, ಹಿಂದೂ ಧರ್ಮತ್ಯಾಗದ ನಿರ್ಧಾರದಿಂದ ಯಾವುದೇ ವಿಘಾತಕ ಪರಿಣಾಮವಾಗುವುದು ಶಕ್ಯವಿಲ್ಲ. ಇದಕ್ಕೆ ಬೇರೆಯೇ ಕಾರಣವಿದೆ, ಈ ಕಾರಣ, ಸುಲಭ ರೀತಿಯಲ್ಲಿ "ಜನತೆ"ಯ ವಾಚಕರ ತಿಳಿವಿಗೆ ಬರುವಂತೆ, ಅದಕ್ಕೂ ಮುನ್ನ, ಜಾತಿವಾರು ಪ್ರತಿನಿಧಿತ್ವದ ಕಾಯ್ದೆ ನಿರ್ಧರಿಸಿದ ಪದ್ಧತಿಯ ರೂಪುರೇಷೆಗಳೇನು, ಎಂಬುದನ್ನು ಮೊದಲು ಹೇಳಬೇಕು. ಹಿಂದೂಸ್ಥಾನದಲ್ಲಿ ಭಿನ್ನ ಭಿನ್ನ ಧರ್ಮಗಳ ಅನುಯಾಯಿಗಳಿದ್ದಾರೆ. ಉದಾಹರಣೆಗೆ, ಹಿಂದೂ, ಜೈನ, ಬೌದ್ಧ, ಪಾರಸೀ, ಮುಸಲ್ಮಾನ ಇತ್ಯಾದಿ, ಆ ಧರ್ಮದ ಅನುಯಾಯಿಗಳು ಇದ್ದಾರೆ. ಹಾಗೆಯೇ, ಯಾವುದೇ ಧರ್ಮವನ್ನೊಪ್ಪದ ನಾಸ್ತಿಕರೂ ಇದ್ದಾರೆ. ಇವರೆಲ್ಲರಿಂದ ಕೂಡಿದ ಒಟ್ಟು ಜನಸಮೂಹ ಇಲ್ಲಿದೆ. ಈ ಸಾಮಾನ್ಯ ಜನಸಮೂಹದಿಂದ ರೂಪಿತವಾದ ಮತದಾರ ಸಂಘವನ್ನು ಸಾಮಾನ್ಯ ಮತದಾರ ಸಂಘ ಎಂದೇ ಕರೆಯಲಾಗಿದೆ. ಜಾತಿವಾರು ಪ್ರಾತಿನಿಧ್ಯದ ತತ್ವ, ಹಿಂದೂಸ್ಥಾನದಲ್ಲಿ ಬಂದುದಲ್ಲದಿದ್ದರೆ ಒಂದೇ ಮತದಾರ ಸಂಘದಲ್ಲಿ ಎಲ್ಲ ಧರ್ಮದ ಜನರು,ಇರುತ್ತಿದ್ದರು. ಅಂದರೆ, ಸಾಮಾನ್ಯ ಮತದಾರ ಸಂಘಕ್ಕೆ ಯಾವುದೇ ಪ್ರಕಾರದ ವಿಧಿನಿಷೇಧ ಇರುತ್ತಿರಲಿಲ್ಲ ಆದರೆ ಜಾತಿವಾರು ಪ್ರತಿನಿಧಿತ್ವದ ತತ್ವ ಮಾನ್ಯವಾದ್ದರಿಂದ ಜಾತೀಯ ನಿರ್ಣಯದಂತೆ ಮೊದಲು, ಸಾಮಾನ್ಯ ಮತದಾರ ಸಂಘದಿಂದ ಕೆಲವು ವಿಶಿಷ್ಟ ಧರ್ಮದ ಜನರನ್ನಾಗಿಸಿ, ಅವರ ಸ್ವತಂತ್ರ ಮತದಾರ ಸಂಘ ಸ್ಥಾಪಿಸಲು ನಿರ್ಧರಿಸಿದರು. ಆ

ರೀತಿ, ಜಾತೀಯ ನಿರ್ಧಾರದಂತೆ ಕ್ರೈಸ್ತ, ಇಸ್ಲಾಂ,ಸಿಖ್ಖ, ಈ ಮೂರು ಧರ್ಮಗಳ ಜನರನ್ನು ಸಾಮಾನ್ಯ ಮತದಾರ ಸಂಘದಿಂದ ಹೊರ ತೆಗೆದು, ಅವರ ಸ್ವತಂತ್ರ ಒಕ್ಕೂಟ ರಚಿಸಲಾಯ್ತು. ಈ ರೀತಿ ಜಾತೀಯ ನಿರ್ಣಯದಂತೆ ಹಿಂದೂಸ್ಥಾನದಲ್ಲಿ ಮತದಾರರ ಎರಡು ವಿಧದ ಸಂಘ ಸ್ಥಾಪಿತವಾಗಿದೆ. ಒಂದು ಸಾಮಾನ್ಯ ಮತದಾರ ಸಂಘ; ಮತ್ತೊಂದು ಸ್ವತಂತ್ರ ಮತದಾರ ಸಂಘ, ಈ ವಿಚಾರದಲ್ಲಿ ಒಂದು ವಿಷಯ ಧ್ಯಾನದಲ್ಲಿಡಬೇಕು. ಧರ್ಮಾವಲಂಬಿ ಸ್ವತಂತ್ರ ಮತದಾರ ಸಂಘದಲ್ಲಿರುವ ರಾಜಕೀಯ ಹಕ್ಕಿನ ಉಪಭೋಗ ಪಡೆಯಲು, ಕ್ರೈಸ್ತ, ಇಸ್ಲಾಂ ಮತ್ತು ಸಿಖ್ಖ ಈ ಮೂರೂ ಧರ್ಮಗಳ ಪೈಕಿ, ಯಾವ ಧರ್ಮಾನುಯಾಯಿಯ ಸಂಘವೋ, ಆ ಧರ್ಮದ ಅನುಯಾಯಿತ್ವವನ್ನು ಮಾನ್ಯ ಮಾಡುವುದು ಒಂದು ಅವಶ್ಯಕ ಷರತ್ತಾಗಿದೆ. ಆದರೆ ಸಾಮಾನ್ಯ ಮತದಾರ ಸಂಘದಲ್ಲಿ ದಾಖಲಾಗಲು ಮತ್ತು ಈ ಮತದಾರ ಸಂಘಕ್ಕೆ ನೀಡಿದ ಹಕ್ಕಿನ ಉಪಭೋಗ ಪಡೆಯಲು, ಅದರಲ್ಲಿ ಸಮಾವಿಷ್ಟವಾದ ಯಾವುದಾದರೂ ಧರ್ಮದ ಅನುಯಾಯಿತ್ವ ಮಾನ್ಯ ಮಾಡುವ ಷರತ್ತನ್ನು ಮಾತ್ರ ಇಟ್ಟಿಲ್ಲ. ಗವರ್ಮೆಂಟ್ ಆಫ್ ಇಂಡಿಯಾ ಆಕ್ಟ್ ನ ೬ನೇ ಪರಿಚ್ಛೇದದಲ್ಲಿ ಮತದಾರನಾಗಲು ಅವಶ್ಯವಿರುವ ಷರತ್ತಿನಂತೆ ಮತದಾರ ೨೧ ವರ್ಷದವನಿರಬೇಕು, ನಿಶ್ಚಿತ ಸ್ಥಳದಲ್ಲಿ ನಿಶ್ಚಿತ ಸಮಯದಿಂದ ವಾಸ್ತವ್ಯವಿರಬೇಕು, ಮತ್ತು ತಕ್ಕಂತೆ ಶಿಕ್ಷಿತನಿರಬೇಕು. ಈ ನಿಬಂಧನೆ, ಸರ್ವಸಾಧಾರಣ ಮತದಾರ ಸಂಘದ ಮತದಾರರಿಗೆ ಅನ್ವಯವಾಗುವಂತೆ ಸ್ವತಂತ್ರ ಮತದಾರ ಸಂಘದ ಮತದಾರರಿಗೂ ಅನ್ವಯವಾಗುತ್ತದೆ. ಆದರೆ ೬ನೇ ಪರಿಚ್ಛೇದದ ೫ ಮತ್ತು ೬ ನೇ ಕಲಮುಗಳತ್ತ ದೃಷ್ಟಿಸಿದರೆ, ಅಲ್ಲಿ ನಿಶ್ಚಿತ ಧರ್ಮದ ಅನುಯಾಯಿತ್ವದ ಷರತ್ತನ್ನೂ ಹಾಕಲಾಗಿದೆ. ಅಂದರೆ ಮುಸಲ್ಮಾನ ಮತದಾರ ಸಂಘಕ್ಕೆ ಸೇರಿದ ವ್ಯಕ್ತಿ, ತಾನು ಮುಸಲ್ಮಾನ ಧರ್ಮದವನೆಂದು ಒಪ್ಪಿಕೊಳ್ಳಬೇಕು. ಹಾಗೆಯೇ, ಕ್ರೈಸ್ತ, ಸಿಖ್ಖರೂ ಸಹ! ಇದರಿಂದಾಗಿ, ಸಾಮಾನ್ಯ ಮತದಾರ ಸಂಘದಲ್ಲಿ, ಧರ್ಮಕ್ಕೆ ಯಾವುದೇ ಪ್ರಕಾರದ ರಾಜಕೀಯ ಮಹತ್ವ ಕೊಡಲಾಗಿಲ್ಲ, ಎಂದು ತಿಳಿಯುತ್ತದೆ. ಅಸ್ಪೃಶ್ಯ ವರ್ಗವನ್ನು ಸರ್ವ ಸಾಮಾನ್ಯ ಮತದಾರ ಸಂಘದಲ್ಲಿ ಸೇರಿಸಲಾಗಿದೆ. ಮೇಲೆ ತಿಳಿಸಿದಂತೆ ಸಾಮಾನ್ಯ ಮತದಾರ ಸಂಘಕ್ಕೆ ಧರ್ಮಾಧರ್ಮದ ಮತ್ತು ಮತದಾರರ ಪಾತ್ರಾಪಾತ್ರತೆಯ ಯಾವುದೇ ಬಗೆಯ ಸಂಬಂಧವಿಲ್ಲ. ಈ ಎರಡು ವಿಷಯಗಳನ್ನು ಸೇರಿಸಿದರೆ, ಅಸ್ಪೃಶ್ಯ ವರ್ಗಕ್ಕೆ ಕೊಡಲಾದ ರಾಜಕೀಯ ಹಕ್ಕು, ಅವರ ಹಿಂದೂ ಧರ್ಮತ್ಯಾಗದ ಬಹಿರಂಗ ಘೋಷಣೆಯ ಕಾರಣ, ಹಿಂದೆಗೆಯಲ್ಪಡುತ್ತದೆ, ಎನ್ನಲು ಯಾರಿಗೂ ಸಾಧ್ಯವಿಲ್ಲ.

ಕಾರಣ, ಆ ಹಕ್ಕು ಧರ್ಮಾವಲಂಬಿಯಲ್ಲ. ಹಿಂದೂ ಧರ್ಮವನ್ನು ತ್ಯಜಿಸುವ ನಿಶ್ಚಯವನ್ನು ಸಾರಿದ್ದರೂ, ಇನ್ನೂ ಪರಧರ್ಮವನ್ನು ಆಯ್ದುಕೊಳ್ಳದ ಅಸ್ಪೃಶ್ಯರನ್ನು ನಿಧರ್ಮೀಯರೆನ್ನಬಹುದು. ಆದರೆ ನಿಧರ್ಮೀಯರನ್ನು ಸಾಮಾನ್ಯ ಮತದಾರ ಸಂಘದಲ್ಲಿ ಸೇರಿಸಲಾಗುವುದಿಲ್ಲವೆಂದು, ಕಾಯ್ದೆಯ ಸಾಮಾನ್ಯ ಜ್ಞಾನವುಳ್ಳ ಯಾರೂ ಹೇಳುವಂತಿಲ್ಲ.

ಅಸ್ಪೃಶ್ಯರ ಮುಂದೆ ಯಾರು ಈ ಭೂತವನ್ನು ತಂದು ನಿಲ್ಲಿಸಿದ್ದಾರೋ, ಅವರು, ಹಿಂದೂಗಳ ಪಾಲಿಗೆ ಬಂದ ಅವಕಾಶವನ್ನು ಅಸ್ಪೃಶ್ಯ ವರ್ಗಕ್ಕೆ ಕೊಡಲಾಗಿದೆಯೆಂದು ತಿಳಿದಿದ್ದಾರೆ. ಆದರೆ ಇದು ಕೇವಲ ಅವರ ಭ್ರಮೆ, ಎಂದು ನಾವು ತಿಳಿದಿದ್ದೇವೆ. ಕಾರಣ, ಹಿಂದೂ ಜಾತಿಗೆ ಕಾಯ್ದೆಯಂತೆ ನಿರ್ಧರಿತವಾದ 'ಸ್ಥಳ ಯಾವುದೇ ಪ್ರಾಂತ್ಯದಲ್ಲೂ ಕೊಡಲಾಗಿಲ್ಲ. ಮುಸಲ್ಮಾನ, ಸಿಖ್ಖ, ಕ್ರೈಸ್ತ ಮತದಾರ ಸಂಘಗಳಿಗೆ ನಿರ್ಧರಿತವಾದ ಸ್ಥಳದ ಹೊರತು, ಉಳಿದ ಅವಕಾಶವನ್ನು ಉಳಿದ



ಸಾಮಾನ್ಯ ಜನತೆಗೆ , ಹಾಗೆಯೇ ಅಸ್ಪೃಶ್ಯರಿಗೂ ಕೊಡಲ್ಪಟ್ಟಿರುವುದರಿಂದ, ಹಿಂದೂಗಳ ಸ್ಥಳವನ್ನು ಕೊಡಲಾಗಿದೆಯೆಂಬುದಕ್ಕೆ ಯಾವ ಆಧಾರವೂ ಇಲ್ಲ ಕಾರಣ, ಯಾವ ಸರ್ವಸಾಧಾರಣ ಮತದಾರ ಸಂಘದ ಪಾಲಿನಿಂದ ಅಸ್ಪೃಶ್ಯ ವರ್ಗಕ್ಕೆ ಕೆಲ ಭಾಗ ಕೊಡಲಾಗಿದೆಯೋ, ಆ ಸರ್ವಸಾಧಾರಣ ಮತದಾರ ಸಂಘದಲ್ಲಿ ಹಿಂದೂಗಳಂತೆ ಜೈನ, ಬೌದ್ಧ, ಪಾರಸಿ, ಯಹೂದೀ, ನಾಸ್ತಿಕರೇ ಮುಂತಾದ ಹಿಂದೂಗಳಲ್ಲದವರನ್ನೂ ಸೇರಿಸಲಾಗಿದೆ.

ಈ ವರೆಗೆ ನಮ್ಮ ವಿಚಾರದ ಸಮರ್ಥನೆಗೆ ಮೂರು ಕಾರಣ ಕೊಟ್ಟಿದ್ದೇವೆ. ಒಂದು, ಶೆಡ್ಯೂಲ್ಡ್ ಕಾಸ್ಟ್ ನ ವ್ಯಾಖ್ಯೆ ನೀಡುವಾಗ, ಹಿಂದೂ ಧರ್ಮಾಂತರ್ಗತ ಜಾತಿ ಎಂಬ ಉಲ್ಲೇಖ, ಕಾಯ್ದೆಯಲ್ಲಿ ಎಲ್ಲೂ ಇಲ್ಲ. ಎರಡನೆಯ ಕಾರಣ, ಸರ್ವಸಾಧಾರಣ ಮತದಾರ ಸಂಘದಲ್ಲಿ ಅಸ್ಪೃಶ್ಯರನ್ನು ಸೇರಿಸಿದ್ದು, ಅದಕ್ಕೆ ಹಿಂದೂ ಧರ್ಮದ ಅನುಯಾಯಿ. ಇಲ್ಲವಾದರೆ, ಯಾವುದಾದರೂ ಧರ್ಮದ ಅನುಯಾಯಿತ್ವದ ಅವಶ್ಯಕತೆ ಇದೆಯೆಂದೇನೂ ಹೇಳಲಾಗಿಲ್ಲ. ಮತ್ತು ಮೂರನೆಯ ಕಾರಣ, ಅಸ್ಪೃಶ್ಯ ವರ್ಗಕ್ಕೆ ಕೊಡಲಾದ ಅವಕಾಶ, ಹಿಂದೂಗಳ ಪಾಲಿನಿಂದಾಗಿರದೆ, ಸರ್ವಸಾಧಾರಣ

ಜನತೆಯ ಪಾಲಿನಿಂದ ಕೊಟ್ಟದ್ದಾಗಿದೆ. ಶೆಡ್ಯೂಲ್ಡ್ ಕಾಸ್ಟ್ ನ ಪಟ್ಟಿಯಲ್ಲಿ ಸೇರಿಸಿದ ಜಾತಿಗೆ ಹಿಂದೂ ಧರ್ಮದಲ್ಲಿ ನಿಷ್ಠೆ ಇದ್ದರೆ ಮಾತ್ರ ಅವರಿಗೆ ಆ ಮೀಸಲಿಟ್ಟ ಸ್ಥಾನದ ಸೌಲಭ್ಯ ಸಿಗುವುದೆಂದು ಹೇಳುವವರು ಒಂದು ಮಹತ್ವದ ವಿಚಾರದ ಕಡೆಗೆ ಗಮನ ನೀಡಿಲ್ಲವೆಂದು ನಮಗನಿಸುತ್ತದೆ. ಈ ಜಾತಿಯ ಜನರಿಗೆ ಮೀಸಲಿಟ್ಟ ಸ್ಥಾನದ ಲಾಭ ನೀಡಲಾಗಿರುವುದು, ಅವರ ಧಾರ್ಮಿಕ ನಿಷ್ಠೆಯನ್ನಾಧರಿಸಿ ಆಗಿರದೆ, ಮತದಾರರ ಜಾತಿತ್ವವನ್ನಾಧರಿಸಿಯೇ ಆಗಿದೆ. ಈ ಮೀಸಲು ಸ್ಥಾನದ ಬಗ್ಗೆ ಪಾತ್ರಾಪಾತ್ರತೆಯ ಸತ್ವಪರೀಕ್ಷೆ ಆಗಬೇಕಾದರೆ, ಅದು ಜಾತಿಯ ಬಗೆಗಲ್ಲದೆ, ಧರ್ಮದ ಬಗೆಗಲ್ಲ. ಈ ಕೆಳಗಿನ ಉದಾಹರಣೆ, ಈ ಮಾತಿನ ಸತ್ಯತೆಯನ್ನು ಮನನ ಮಾಡುವುದು.

ಪಂಜಾಬಿನಲ್ಲಿ ಶೆಡ್ಯೂಲ್ಡ್ ಕಾಸ್ಟ್ ನ ಪಟ್ಟಿಯಲ್ಲಿ ಅರೆಧರ್ಮೀಯರು ಮತ್ತು ರಾಮದಾಸಿಗಳನ್ನೂ ಸೇರಿಸಲಾಗಿದೆ. ಶೆಡ್ಯೂಲ್ಡ್ ಕಾಸ್ಟ್ ಬಗ್ಗೆ ಸರಕಾರೀ ಆರ್ಡರ್ ಇನ್ ಕೌನ್ಸಿಲ್‌ನ ಪ್ರಕಟಣೆಯಲ್ಲಿ ಹೀಗಿದೆ. ಈ ಅರೆಧರ್ಮೀಯರ ಇತಿಹಾಸ ಅತ್ಯಂತ ಉದ್ಬೋಧಕವಾಗಿದೆ, ಎನ್ನಬೇಕು. ಕೆಲ ವರ್ಷಗಳ ಹಿಂದೆ, ಪಂಜಾಬದಲ್ಲಿ ಚಮ್ಮಾರರು ಮತ್ತು ಕ್ಷೌರಿಕರಂಥಾ ಅಸ್ಪೃಶ್ಯ ಜಾತಿಯ ಜನರು, ಅರೆಧರ್ಮ ಮಂಡಳವೆಂಬ ಹೆಸರಿನ ಸಂಸ್ಥೆಯನ್ನು ಆರಂಭಿಸಿದರು. ಈ ಸಂಸ್ಥೆಯ ಮೂಲ ಉದ್ದೇಶ, ಹಿಂದೂಧರ್ಮವನ್ನು ತ್ಯಜಿಸುವುದೇ ಆಗಿತ್ತು. ಸನ್ ೧೯೩೧ರ ಖಾನೇಸುಮಾರಿಯ ವೇಳೆ, ಈ ಸಂಸ್ಥೆಯು, ನಾವು ಹಿಂದೂಧರ್ಮವನ್ನು ತ್ಯಜಿಸಿದ್ದೇವೆ, ಆದ್ದರಿಂದ ನಮ್ಮನ್ನು ಹಿಂದೂಗಳಿಂದ ಬೇರ್ಪಡಿಸಿ, ಸೆನ್ಸಸ್ ವರದಿಯಲ್ಲಿ ನಮ್ಮ ಜನಸಂಖ್ಯೆಯನ್ನು ಅರೆಧರ್ಮೀಯ ಎಂಬ ಹೆಸರಿನಲ್ಲಿ ಸ್ವತಂತ್ರವಾಗಿ ನಮೂದಿಸಬೇಕು ಎಂದು ಪಂಜಾಬ ಸರಕಾರಕ್ಕೆ ಮನವಿ ಮಾಡಿತು. ಈ ಬೇಡಿಕೆಯಿಂದ ಪಂಜಾಬಿನ ಹಿಂದೂ ಜನರು ರೊಚ್ಚಿಗೆದ್ದು, ತುಂಬ ಅತ್ಯಾಚಾರ ಮಾಡಿದರು. ಆದರೆ ಈ ಜನರು ತಮ್ಮ ನಿರ್ಧಾರದಿಂದ ಕದಲದೆ ಇದ್ದುದರಿಂದ ಅರೆಧರ್ಮೀಯರ ಚಳವಳಿ ಯಶಸ್ವಿಯಾಗಿ ಪಂಜಾಬ್‌ನ ಸೆನ್ಸಸ್ ವರದಿಯಲ್ಲಿ ಅವರ ಹೆಸರು ಅರೆಧರ್ಮೀಯರ ಪಟ್ಟಿಯಲ್ಲಿ, ಹಿಂದೂಗಳಿಂದ ಭಿನ್ನವಾಗಿ ದಾಖಲಾಯ್ತು. ರಾಮದಾಸಿಗಳು ಸಿಖ್ಯ ಧರ್ಮದ ಅನುಯಾಯಿಗಳು. ಅಂದರೆ ಅವರು ಹಿಂದೂಗಳಲ್ಲ. ಆದರೂ ಅವರನ್ನು ಶೆಡ್ಯೂಲ್ಡ್ ಕಾಸ್ಟ್‌ನಲ್ಲಿ ಸೇರಿಸಲಾಗಿದೆ. ಈ ಎರಡೂ ಉದಾಹರಣೆಯಿಂದ ಒಂದೇ ನಿಷ್ಕರ್ಷೆಗೆ ಬರಲಾಗುತ್ತದೆ. ಶೆಡ್ಯೂಲ್ಡ್

ಕಾಸ್ಟ್‌ನಲ್ಲಿ ಸೇರಿಸಲ್ಪಟ್ಟ ಜಾತಿ ಮೀಸಲು ರಾಜಕೀಯ ಹಕ್ಕಿಗೆ ಪಾತ್ರವೋ, ಅಲ್ಲವೋ ಎಂದು ತಿಳಿಯಲು , ಅದು ಹಿಂದೂ ಧರ್ಮದಲ್ಲಿದೆಯೋ ಇಲ್ಲವೋ ಎಂಬ ಪ್ರಶ್ನೆ ನಿರರ್ಥಕ. ಉಮೇದುವಾರನು ಶೆಡ್ಯೂಲ್ಡ್ ಕಾಸ್ಟ್ ಪಟ್ಟಿಯಲ್ಲಿರುವ ಯಾವುದೇ ಜಾತಿಗೆ ಸೇರಿದ್ದರೂ ಸರಿ. ಅವರಿಗಾಗಿ ಮೀಸಲಿಟ್ಟ ರಾಜಕೀಯ ಹಕ್ಕು ಅವರಿಗೆ ಸಿಕ್ಕೇ ಸಿಗುತ್ತದೆ.

ಪರಧರ್ಮ ಸೇರಿದರೆ ಏನಾಗುವುದು?

ಅಸ್ಪೃಶ್ಯ ವರ್ಗದ ಹಿತಶತ್ರುಗಳು ಎತ್ತಿದ ಪ್ರಶ್ನೆಯನ್ನು ಕಿತ್ತೆಸೆಯಲು, ಇಲ್ಲಿನ್ನು ಹೆಚ್ಚು ಬರೆಯುವ ಆವಶ್ಯಕತೆ ಇದೆಯೆಂದು ನಮಗನಿಸುವುದಿಲ್ಲ. ಶೆಡ್ಯುಲ್ಡ್ ಕಾಸ್ಟ್ ನ ಪಟ್ಟಿಯಲ್ಲಿನ ಕೆಲ ಜಾತಿಗಳು ಹಿಂದೂ ಧರ್ಮವನ್ನು ತ್ಯಜಿಸಿವೆ, ಅಷ್ಟೇ ಅಲ್ಲ, ಬೇರೆ ಧರ್ಮವನ್ನು ಸ್ವೀಕರಿಸಿದರೆ, ಅವರ ರಾಜಕೀಯ ಹಕ್ಕುಗಳ ಗತಿ ಏನಾಗುವುದು? ಅಸ್ಪೃಶ್ಯ ವರ್ಗದ ವಿರೋಧಿಗಳು ಈ ವಿಷಯದಲ್ಲಿ ಸಾಕಷ್ಟು ಪ್ರಖ್ಯಾತ ಹಿಂದೂ ಕಾಯ್ದೆ ಪಂಡಿತರ ಸಲಹೆ ಕೇಳಿದ್ದಾರೆಂದು ತಿಳಿದು ಬಂದಿದೆ. ಈ ಹಿಂದೂ ಪಂಡಿತರು ಶೆಡ್ಯೂಲ್ಡ್ ಕಾಸ್ಟ್ ನ ಪಟ್ಟಿಯಲ್ಲಿರುವ ಜಾತಿಗಳು ಹಿಂದೂ ಧರ್ಮವನ್ನು ತ್ಯಜಿಸಲಿ, ಎಂಬ ಆಭಾವಾತ್ಮಕ ಧೋರಣೆ ಹೊಂದಿದ ಮಾತ್ರಕ್ಕೆ ಅವರ ರಾಜಕೀಯ ಹಕ್ಕನ್ನು ಹಿಂತೆಗೆಯ ಬೇಕೆನ್ನುವುದು ಕಾಯ್ದೆಯ ದೃಷ್ಟಿಯಿಂದ ಸಬಲ ಕಾರಣವಲ್ಲ, ಅಂದಿದ್ದಾರೆ. ಹೀಗೆ ಅಸ್ಪೃಶ್ಯರ ಹಿತಶತ್ರುಗಳ ಕುಟಿಲನೀತಿಗೆ ಕಡಿವಾಣ ಬಿದ್ದುದು, ನಮಗೆ ಸಂತೋಷವೆನಿಸಿದೆ.ಆದರೆ ಈ ಹಿಂದೂ ಕಾಯ್ದೆ ಪಂಡಿತರು, ಅಸ್ಪೃಶ್ಯರು ಧರ್ಮಾಂತರ ಮಾಡಿದರೆ, ಅವರ ಹಕ್ಕನ್ನು ಕಳಕೊಳ್ಳುತ್ತಾರೆ, ಎಂದಿರುವುದು ಮಾತ್ರ ನಮಗೆ ಅಸಮಾಧಾನವಾಗಿದೆ. ಈ ಹಿಂದೂ ಕಾಯ್ದೆ ಪಂಡಿತರ ವಿಚಾರದಲ್ಲಿ ಅತಿವ್ಯಾಪ್ತಿಯ ದೋಷವಿದೆ, ಹಾಗಾಗಿ ಅದು ಅಗ್ರಾಹ್ಯ ಎಂದು ನಮ್ಮ ಅನಿಸಿಕೆ. ನಮ್ಮ ಕಾಯ್ದೆಯಂತೆ, ಜಾತೀಯ ಪ್ರತಿನಿಧಿತ್ವದ ವಿಷಯದಲ್ಲಿ ಕಾಯ್ದೆ ನಿರ್ಧರಿಸಿದ ವ್ಯವಸ್ಥೆಯಂತೆ, ಅಸ್ಪೃಶ್ಯ ವರ್ಗಕ್ಕೆ ಸಾಮಾನ್ಯ ಮತದಾರ ಸಂಘದಲ್ಲಿರುವ ರಾಜಕೀಯ ಹಕ್ಕು, ಕೆಲಧರ್ಮಗಳನ್ನು ಅಂಗೀಕರಿಸಿದರೆ, ನಷ್ಟವಾಗುವುದು,

ಎಂಬುದು ನಿಜ. ಆದರೆ ಈ ನಿಯಮ ಎಲ್ಲ ಧರ್ಮಕ್ಕೂ ಅನ್ವಯಿಸುವುದೆಂದಿಲ್ಲ. ಅಸ್ಪೃಶ್ಯ ವರ್ಗವು ಸಾಮಾನ್ಯ ಮತದಾರ ಸಂಘದಿಂದ ವಿಭಕ್ತವಾದ ಯಾವುದಾದರೂ ಧರ್ಮವನ್ನು ಅಂಗೀಕರಿಸಿದರೆ ಮಾತ್ರ ಅವರ ರಾಜಕೀಯ ಹಕ್ಕು ನಷ್ಟವಾಗುವುದು. ಎಂದು ನಮ್ಮ ಸ್ಪಷ್ಟ ವಿಚಾರ. ಹೀಗೆ ವಿಭಕ್ತವಾದ ಧರ್ಮ ಯಾವುದೆಂಬುದು, ವಿಭಿನ್ನ ಪ್ರಾಂತಗಳಲ್ಲಿ ಕಾಯ್ದೆ ವ್ಯವಸ್ಥೆ ಮಾಡಿದಂತಿದೆ. ಇಸ್ಲಾಂ ಮತ್ತು ಕ್ರೈಸ್ತ ಧರ್ಮವನ್ನು ಹಿಂದೂಸ್ಥಾನದ ಎಲ್ಲ ಪ್ರಾಂತಗಳಲ್ಲಿಯೂ ಸಾಮಾನ್ಯ ಮತದಾರ ಸಂಘದಿಂದ ವಿಭಕ್ತವಾಗಿಸಿದೆ. ಇದರರ್ಥ, ಅಸ್ಪೃಶ್ಯರು ಮುಸಲ್ಮಾನ ಇಲ್ಲವೇ ಕ್ರೈಸ್ತರಾದರೆ, ಹಿಂದೂಸ್ಥಾನದ ಎಲ್ಲ ಪ್ರಾಂತಗಳಲ್ಲೂ ಅವರ ರಾಜಕೀಯ ಹಕ್ಕು ಶೂನ್ಯವಾಗುವುದು, ಮತ್ತು ಸಿಖ್ಖ ರಾದರೆ, ಕೇವಲ ಪಂಜಾಬ್‌ನಲ್ಲಿ ಅವರ ರಾಜಕೀಯ ಹಕ್ಕು ಇಲ್ಲವಾಗುವುದು. ಅಸ್ಪೃಶ್ಯ ವರ್ಗ, ಬುದ್ಧ, ಜೈನ, ಜ್ಯೂ ಮತ್ತು ಸಿಖ್ಖ  ಧರ್ಮಗಳನ್ನು -ಪಂಜಾಬ್ ಹೊರತು ಪಡಿಸಿ- ಅಂಗೀಕರಿಸಿದರೆ, ಅವರ ರಾಜಕೀಯ ಹಕ್ಕುಗಳಿಗೆ ಯಾವುದೇ ರೀತಿಯ ಬಾಧೆ ಬರುವಂತಿಲ್ಲ ಎಂಬುದು ನಿರ್ವಿವಾದ. ಬಂಗಾಲದಲ್ಲಿ ಮಾತ್ರ, ಬೌದ್ಧ ಧರ್ಮೀಯರು ಶೆಡ್ಯೂಲ್ಡ್ ಕಾಸ್ಟ್ ಆಗಿ ಪರಿಗಣಿಸಲ್ಪಡುವುದಿಲ್ಲವಾದ್ದರಿಂದ, ಅಲ್ಲಿ ಅವರ ರಾಜಕೀಯ ಹಕ್ಕೂ ಇಲ್ಲವಾಗುತ್ತದೆ.

ಈ ಎಲ್ಲ ವಿವೇಚನೆಯ ಮಥಿತಾರ್ಥವನ್ನು ಹೀಗೆ ಕ್ರೋಢೀಕರಿಸಬಹುದು ;



೧. ಹಿಂದೂ ಧರ್ಮವನ್ನು ತ್ಯಜಿಸಿ, ಬೇರೆ ಧರ್ಮವನ್ನವಲಂಬಿಸದೆ, ನಿಧರ್ಮಿಯಾದರೆ, ಅಸ್ಪೃಶ್ಯರ ರಾಜಕೀಯ ಹಕ್ಕು ನಷ್ಟವಾಗುವುದಿಲ್ಲ. ಎಲ್ಲಾ ಪ್ರಾಂತ್ಯಗಳಿಗೆ ಈ ನಿಯಮ ಅನ್ವಯವಾಗುತ್ತದೆ.

೨. ಹಿಂದೂಧರ್ಮವನ್ನು ತ್ಯಜಿಸಿ, ಇಸ್ಲಾಂ ಮತ್ತು ಕ್ರೈಸ್ತ ಧರ್ಮವನ್ನು ಸ್ವೀಕರಿಸಿದರೆ, ಅಸ್ಪೃಶ್ಯರ ರಾಜಕೀಯ ಹಕ್ಕು ನಷ್ಟವಾಗುತ್ತದೆ. ಈ ನಿಯಮ ಎಲ್ಲ ಪ್ರಾಂತ್ಯಗಳಿಗೂ ಅನ್ವಯವಾಗುತ್ತದೆ.

೩. ಬಂಗಾಲ ಹೊರತು ಪಡಿಸಿ ಬೇರೆ ಯಾವುದೇ ಪ್ರಾಂತ್ಯದಲ್ಲಿ ಅಸ್ಪೃಶ್ಯರು ಬೌದ್ಧ ಧರ್ಮವನ್ನು ಸ್ವೀಕರಿಸಿದ್ದರೆ ಅವರ ರಾಜಕೀಯ ಹಕ್ಕು ನಷ್ಟವಾಗುವುದಿಲ್ಲ.

೪. ಯಾವುದೇ ಪ್ರಾಂತ್ಯದಲ್ಲಿ ಅಸ್ಪೃಶ್ಯರು ಜೈನ, ಯಹೂದೀ, ಇಸ್ರೇಲೀ, ಝುರಾಷ್ಟ್ರಿಯನ್ ಮತ್ತು ಪಾರ್ಸಿ ಧರ್ಮ ಸ್ವೀಕರಿಸಿದರೆ ಅವರ ರಾಜಕೀಯ ಹಕ್ಕು ನಷ್ಟವಾಗುವುದಿಲ್ಲ. ಈ ನಿಯಮ ಎಲ್ಲ ಪ್ರಾಂತ್ಯಗಳಿಗೂ ಅನ್ವಯಿಸುತ್ತದೆ.

ಅಸ್ಪೃಶ್ಯರನ್ನು ಎಷ್ಟು ಸಾಧ್ಯವೋ ಅಷ್ಟು ಕಂಗೆಡಿಸಲು, ಹಿಂದೂಗಳ ಮೊದಲ ಉಪದ್ವ್ಯಾಪವೇನಲ್ಲ, ಇದು. ಪುಣೆ ಒಪ್ಪಂದದ ನಂತರ ಅದನ್ನು ನಿಷ್ಫಲಗೊಳಿಸುವ, ಮತ್ತು ಒಪ್ಪಂದದ ಹೆಚ್ಚಿನ ಲಾಭ ಅವರಿಗೆ ಸಿಗದಂತೆ ಮಾಡುವ ಶಕ್ಯವಿದ್ದಷ್ಟೂ ಯತ್ನವನ್ನು ಹಿಂದೂಗಳು ಮಾಡಿದರು

ಅಸ್ಪೃಶ್ಯರ ಪ್ರಾಥಮಿಕ ಚುನಾವಣೆಯಲ್ಲಿ ಕಡಿಮೆಯೆಂದರೆ ನಾಲ್ವರು ಉಮೇದುವಾರರಾದರೂ ಇರಬೇಕಿತ್ತು. ನಾಲ್ಕಕ್ಕಿಂತ ಕಡಿಮೆ ಇದ್ದರೆ ಪುಣೆ ಒಪ್ಪಂದಕ್ಕೆ ಬಾಧೆ ಬರುವುದೆಂದು ಹಿಂದೂಗಳು ಹ್ಯಾಮಂಡ್ ಕಮೀಷನ್‌ನೆದುರು ಆಗ್ರಹಿಸಿದ್ದರು. ನಾಲ್ವರು ಉಮೇದುವಾರರಾದರೆ, ಅಸ್ಪೃಶ್ಯರ ಮತಗಳು ಹರಿದು ಹಂಚಿ ಹೋಗುವುದೆಂಬುದು ಅವರ ಹುನ್ನಾರವಾಗಿತ್ತು. ಆದರೆ ಅವರ ದುರ್ದೈವದಿಂದ ಹ್ಯಾಮಂಡ್ ಕಮಿಟಿಯ ಸದಸ್ಯರು ಅಂತಹ ಮೂರ್ಖರೇನಿರಲಿಲ್ಲ. ಅವರು ಹಿಂದೂಗಳ ಈ ವಿಚಾರ ಸರಣಿ ಅಯೋಗ್ಯವೆಂಬ ತೀರ್ಪನ್ನಿತ್ತರು. ಆ ಸೋಲಿನ ಬಳಿಕ ಇದೀಗ ಈ ಮರಳಿಯತ್ನ

ಹಿಂದೂಗಳು ಅಸ್ಪೃಶ್ಯರ ಧರ್ಮಾಂತರದ ವಿಷಯದಲ್ಲಿ ನಡೆಸಿರುವ ಕರಾಮತ್ತು, ಮಾಲೀಕರು ಗುಲಾಮರ ಬಗ್ಗೆ ಹೊಂದಿರುವ ಮನೋವೃತ್ತಿಯಂತೇ ಇದೆ. ಅಸ್ಪೃಶ್ಯ ವರ್ಗದ ಕಲ್ಯಾಣದ ಬಗ್ಗೆ ಹಿಂದೂಗಳಿಗೆ ನಿಜವಾದ ಕಳಕಳಿ ಇದ್ದಿದ್ದರೆ, ಅವರು, "ಇದುವರೆಗೆ ನಿಮ್ಮನ್ನು ಗುಲಾಮರಂತೆ ನಡೆಸಿಕೊಂಡ ಬಗ್ಗೆ ನಮಗೆ ಬೇಸರವೆನಿಸುತ್ತದೆ. ನಮ್ಮ ಕೈಯಿಂದ ನಿಮ್ಮ ಉದ್ದಾರವಾಗುವುದು ಸಾಧ್ಯವಾಗಲಿಲ್ಲ. ಆದರೆ ಇಂದು ನಾವು ನಿಮ್ಮನ್ನು ಸ್ವತಂತ್ರರಾಗಿಸುತ್ತೇವೆ. ನಿಮ್ಮ ಉದ್ದಾರದ ಬಗ್ಗೆ ನಮ್ಮಲ್ಲೆದ್ದಿರುವ ತಳಮಳ, ಮತ್ತು ನಿಮ್ಮ ಬಗ್ಗೆ ನಮ್ಮಲ್ಲುದಿಸಿದ ಸದಿಚ್ಛೆಯಿಂದ, ರಾಜಕೀಯ ಸತ್ತೆಯ ಇಷ್ಟು ಭಾಗ ನಿಮಗೊಪ್ಪಿಸುತ್ತೇವೆ. ನಿಮ್ಮ ಇಚ್ಛೆಯಂತೆ ಮುಂದೆ ಸಾಗಿರಿ, ಮತ್ತು ನಿಮ್ಮ ಸಾಮರ್ಥ್ಯದಿಂದ ಸಮಾಜದಲ್ಲಿ ಯೋಗ್ಯ ಸಮ್ಮಾನ ಪಡೆಯಿರಿ" ಎಂದು ತಾವಾಗಿಯೇ ಹೇಳುತ್ತಿದ್ದರು. ಆದರೆ ಹಿಂದೂಗಳ ಮನೋವೃತ್ತಿ ಹೀಗಿಲ್ಲ. ಗುಲಾಮರಿಂದ ಸೇವೆ ಮಾಡಿಸಿಕೊಳ್ಳುವಂತೆಯೇ, ಅವರಿಗೆ ಅನ್ನ ನೀಡುವಲ್ಲೂ ಮಾಲೀಕರ ಮನೋವೃತ್ತಿಯಂತೆ ಇದೆ.

ಅಸ್ಪೃಶ್ಯ ವರ್ಗದ ನಮ್ಮ ಮಿತ್ರರಿಗೆ ಹಿಂದೂಗಳ ಸಹಾನುಭೂತಿ ಬೇಕಿದ್ದರೆ, ಅವರ ಮನೋವೃತ್ತಿಯಂತೆ ನಡೆಯಲಿ. ಹಿಂದೂಗಳಿಗೆ ನಮ್ಮ ಉತ್ತರ ಸರಳವಿದೆ. ನಾವು ಸಂಪಾದಿಸಿದ ರಾಜಕೀಯ ಹಕ್ಕು, ಹಿಂದೂಗಳ ದೇಣಿಗೆಯೇನಲ್ಲ. ಅದು ನಮ್ಮ ಜನ್ಮಸಿದ್ಧ ಹಕ್ಕು, ಕ್ರಿಶ್ಚಿಯನ್, ಮುಸಲ್ಮಾನ, ಸಿಖ್ಖರಂತೆ ನಮ್ಮದೂ ನೈಸರ್ಗಿಕ ಹಕ್ಕು. ಈವರೆಗೆ ದಕ್ಕಿಲ್ಲವಾದರೆ, ಈಗ

ಸಿಗಬಾರದೆಂದೇನಿಲ್ಲ. ಹಿಂದೂಗಳು ಈವರೆಗೆ ಅನ್ಯಾಯದಿಂದ ದಮನಿಸಿದ್ದನ್ನು ನಾವು ಹಕ್ಕಿನಿಂದ ಪಡೆಯೋಣ. ಅದಕ್ಕೆ ನಾವು ಅವರಿಗೆ ಕೃತಜ್ಞರಾಗಿರಬೇಕಿಲ್ಲ. ನಾವು ಕೃತಜ್ಞರಾಗಿರಬೇಕಾದ್ದು, ಬ್ರಿಟಿಷ್ ಸರಕಾರಕ್ಕೆ ನಮ್ಮ ಸಂಕಟದ ವೇಳೆ ಅವರು ನಮ್ಮ ಸಹಾಯಕ್ಕೆ ಧಾವಿಸಿದರು. ನಮಗೆ ನ್ಯಾಯ, ಹಕ್ಕು ದೊರಕಿಸುವಲ್ಲಿ ಸಹಾಯ ಮಾಡಿದರು. ಅಸ್ಪೃಶ್ಯ ವರ್ಗದವರ ಸಂಬಂಧ ಮಹಾತ್ಮಾ ಗಾಂಧೀ ಅವರು ಮಾಡಿದ್ದು ಜಗಜ್ಜಾಹೀರೇ ಆಗಿದೆ. ಕಾಂಗ್ರೆಸ್ ಮತ್ತು ಮುಸಲ್ಮಾನರ ಸಂಯುಕ್ತ ಯತ್ನದಲ್ಲಿ ಅಸ್ಪೃಶ್ಯ ವರ್ಗದ ಬೇಡಿಕೆಯನ್ನು ಹೊಡೆದು ಹಾಕಲು ಮುಸಲ್ಮಾನರೊಡನೆ ಶಾಮೀಲಾದುದನ್ನು ಹಿಂದೂಸ್ಥಾನದ ಇತಿಹಾಸದಲ್ಲಿ ಓದಿದವರು ಲಜ್ಜೆಯಿಂದ ತಲೆ ತಗ್ಗಿಸದಿರರು. ಈ ವಿಶ್ವಾಸಘಾತಕ್ಕೆ ಸಮನಾದುದು, ಜಗತ್ತಿನ ಇತಿಹಾಸದಲ್ಲೇ ಬೇರಿಲ್ಲ. ಕಾಂಗ್ರೆಸ್ ಮತ್ತು ಅಸ್ಪೃಶ್ಯ ವರ್ಗದ ಒಡಕು ಇನ್ನೂ ಹೆಚ್ಚಲು ಕಾರಣೀಭೂತವಾದುದು ದುಂಡುಮೇಜಿನ ಪರಿಷತ್ತು, ಅಲ್ಲಿ ನಡೆದ ವಿಶ್ವಾಸಘಾತ ! ಹಾಗೆಂದೇ ಹಿಂದೂಗಳಿಗೆ ಕೃತಜ್ಞತೆ ತೋರದಿದ್ದರೆ, ಅದರಲ್ಲೇನೂ ಆಶ್ಚರ್ಯವಿಲ್ಲ. ಅಸ್ಪೃಶ್ಯತೆ ತೋಲಗುವಂತೆ ಅವರು ಏನನ್ನೂ ಮಾಡಿಲ್ಲ.

ಈ ವಿಷಯದ ಬಗ್ಗೆ ಜುಲೈ ೨೮ರ 'ಕೇಸರಿ' ಅಂಕಣದಲ್ಲಿ, 'ಧರ್ಮದ ವಿಚಿತ್ರ ಹರಾಜು' ಎಂಬ ಶೀರ್ಷಿಕೆಯಡಿ ಒಂದು ಅಗ್ರಲೇಖನ ಬರೆಯುತ್ತಾ, ಸಂಪಾದಕರು, ತಮ್ಮ ಬುದ್ಧಿಮತ್ತೆಯ ಪ್ರದರ್ಶನ ಮಾಡಿದ್ದಾರೆ. ಈ ಅಗ್ರಲೇಖನದಲ್ಲಿ ವ್ಯಕ್ತವಾದ ಹೀನ ಮನೋವೃತ್ತಿ ಮತ್ತು ಹಳಿಯುವಿಕೆ, ಬಗ್ಗೆ ಏನನ್ನೋಣ? ಸ್ವಂತ ಮಗನನ್ನೇ ಅವನ ಅಮ್ಮನೆದುರೇ "ಸೂಳೆಮಗ" ಎಂದು ಕರೆಯಲು ಹೇಸದವರ ಕೊಳಕು ಭಾಷೆ ಬಗ್ಗೆ ಯಾರಿಗೇನು ಆಶ್ಚರ್ಯ ಅನಿಸಬಹುದು? ಕೇಸರಿಯ ಸಂಪಾದಕರು ಎತ್ತಿದ ಸಮಸ್ಯೆಗಳಲ್ಲಿ ಎರಡಕ್ಕೆ ಮಾತ್ರ ನಾವು ಉತ್ತರಿಸ ಬಯಸುತ್ತೇವೆ. ಕಮ್ಯೂನಲ್ ಅವಾರ್ಡ್ ವಿಭಾಗದಲ್ಲಿ ಅಸ್ಪೃಶ್ಯರಿಗಾಗಿ ೭೧ ಸ್ಥಾನ ಕಾದಿರಿಸಲಾಗಿತ್ತು. ಅದರ ಹೊರತಾಗಿ ಪುಣೆ ಒಪ್ಪಂದದಲ್ಲಿ ಅಸ್ಪೃಶ್ಯರಿಗೆ ೧೪೮ ಸ್ಥಾನಗಳನ್ನು ಕೊಡಬೇಕಾಗಿ ಬಂತು.

ಅಂದರೆ ಹೆಚ್ಚಿಗೆ ೭೧ ಸ್ಥಾನಗಳನ್ನು ಕೊಡಬೇಕಾಯ್ತು. ಇದೊಂದು ದೊಡ್ಡ ಸ್ವಾರ್ಥ ತ್ಯಾಗ, ಎಂದ ಕೇಸರಿಯ ಸಂಪಾದಕರು, ಇದಕ್ಕಾಗಿ ಹಿಂದೂಗಳಿಗೆ ಆಭಾರವನ್ನೂ ಸಲ್ಲಿಸದ ಅಸ್ಪೃಶ್ಯರು, ಕೃತಘ್ನರು, ಎಂದು ಹೇಳಿದ್ದಾರೆ. ಅಸ್ಪೃಶ್ಯರಿಗೆ ಅದಕ್ಕೂ ಹೆಚ್ಚಿನ ರಾಜಕೀಯ ಹಕ್ಕನ್ನೂ ಕೊಡಲಾಗಿದೆ. ಮತ್ತೆ ಸಾರ್ವಜನಿಕ ಮತದಾರ ಸಂಘ ದಲ್ಲೂ

ಮತನೀಡುವ ಹಕ್ಕನ್ನೂ ಅವರಿಗೆ ನೀಡಲಾಗಿದೆಯೆಂಬುದನ್ನು ಹೆಚ್ಚಿನ ಹಿಂದೂಗಳು ಮರೆಯುತ್ತಾರೆ. ಕಮ್ಯೂನಲ್ ಅವಾರ್ಡ್‌ನಲ್ಲಿ ಅಸ್ಪೃಶ್ಯ ಮತದಾರರಿಗೆ ಎರಡು ಮತಗಳನ್ನು ನೀಡುವ ಅವಕಾಶವಿದೆ. ಒಂದು ಸ್ವತಂತ್ರ ಮತದಾರ ಸಂಘದಲ್ಲಿ ತಮ್ಮ ಪ್ರತಿನಿಧಿಯನ್ನು ಆರಿಸಲು. ಮತ್ತಿನ್ನೊಂದು, ಸರ್ವಸಾಧಾರಣ ಮತದಾರ ಸಂಘದಲ್ಲಿ ಸರ್ವಸಾಧಾರಣ ಮತದಾರನನ್ನು ಆರಿಸಿ ಕೊಡಲು. ಈ ಎರಡು ಮತಗಳ ಸವಲತ್ತು ಹಿಂದೂಸ್ಥಾನದಲ್ಲಿ, ಬೇರೆ ಯಾವುದೇ ವರ್ಗ ಮತ್ತು ಧರ್ಮದ ಜನರಿಗೆ ಕೊಡಲಾಗಿಲ್ಲ. ಪುಣೆ ಒಪ್ಪಂದದಂತೆ ೭೭ ಅಧಿಕ ಸ್ಥಾನಗಳನ್ನು ಕೊಡಬೇಕಾಯ್ತು ಎಂಬುದು ನಿಜ. ಆದರೆ ಪುಣೆ ಕರಾರಿನಂತೆ ಅಸ್ಪಶ್ಯರ ದುಪ್ಪಟ್ಟು ಮತ ಹಾಕಬೇಕಾಯ್ತೆಂಬುದೂ ಅಷ್ಟೇ ನಿಜ. ಇದರಲ್ಲಿ ಯಾರಿಗೆ ಲಾಭವಾಯ್ತು, ಯಾರಿಗೆ ನಷ್ಟವಾಯ್ತೋ ಎಂಬುದನ್ನು ತಕ್ಕಡಿಯಲ್ಲಿ ತೂಗಿ ನಿಖರವಾಗಿ ಹೇಳುವುದು ಯಾರಿಗೂ ಸಾಧ್ಯವಿಲ್ಲ. ಡಾ. ಅಂಬೇಡ್ಕರರು ಮಂಡಿಸಿದ ಈ ಧರ್ಮದ ಹರಾಜು ಎಷ್ಟು ವಿಚಿತ್ರವೆಂಬುದನ್ನು ತೋರಲೋಸುಗ, “ಕೇಸರಿ”ಯ ಸಂಪಾದಕರು, ಸಿಖ್ಖ ಮತ್ತು ಬೌದ್ಧರಾದರೆ



ಅಸ್ಪೃಶ್ಯತೆಯ ಕಳಂಕ ಹೋಗುವುದು, ಆದರೆ, ಅಸ್ಪೃಶ್ಯ ವರ್ಗದ ಮತದಾರ ಸಂಘಕ್ಕೆಂದು ಕಾದಿರಿಸಿದ ಸ್ಥಾನ ಮಾತ್ರ ಕೈ ತಪ್ಪಿ ಹೋಗಬಾರದೆಂದು ಡಾ. ಅಂಬೇಡ್ಕರರ ಮರು ಬೇಡಿಕೆ.. ಧರ್ಮಾಂತರದ ಬಳಿಕ, ರಾಜಕೀಯ ಹಕ್ಕಿನ ಬಗ್ಗೆ ಯಾವುದೇ ಮಹತ್ವ ಕೊಡುವುದಿಲ್ಲ, ಎಂದು ಡಾ. ಅಂಬೇಡ್ಕರರು, ಇತ್ತೀಚಿನ ಮಹಾರ್ ಪರಿಷತ್ತಿನ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದರು. ಆದರೆ ಕೇಸರಿ'ಪತ್ರಿಕೆ ಹೇಳುವಂತೆ, ಡಾ. ಅಂಬೇಡ್ಕರರಿಗೆ ಎರಡನ್ನೂ ಸಾಧಿಸಬೇಕಾಗಿದೆ, ಎಂದನಿಸಿದರೆ, ಅದರಲ್ಲಿ ವಿಚಿತ್ರವೇನು? ಕ್ರೈಸ್ತರ, ಮುಸ್ಲಿಮರ ಪಾಲಿಗೆ ಮೀಸಲಿಟ್ಟ ಸ್ಥಾನಗಳ ಬಗ್ಗೆ * ಕೇಸರಿ” ಎಂದೂ ಆಕ್ಷೇಪವೆತ್ತಿಲ್ಲ. ಆದರೆ ಅಸ್ಪೃಶ್ಯರು, ಅಸ್ಪೃಶ್ಯತೆಯ ಕಳಂಕ ತೊಡೆದು ಮೀಸಲು ಸ್ಥಾನದ ಉಪಯೋಗ ಪಡೆಯಲು ಯತ್ನಿಸಿದರೆ, ಕೇಸರಿಗೇಕೆ ಹೊಟ್ಟೆಯುರಿ?

ಮೀಸಲು ಸ್ಥಾನದ ವಿಷಯದಲ್ಲಿ ಹಿಂದೂ ಜನರ ಮನದಲ್ಲೆದ್ದಿರುವ ಭ್ರಮೆಯನ್ನು ನಾವು ಪರಿಹರಿಸಲು ಇಚ್ಛಿಸುತ್ತೇವೆ. ಧರ್ಮಾಂತರದಿಂದಾಗಿ ಅಸ್ಪೃಶ್ಯರಿಗೆ ದೊರಕಿದ ಸ್ಥಾನ, ಅವರ ಕೈ ಬಿಟ್ಟು ಹೋಗುವುದೆಂದು ಬೆದರಿಸುವುದು, ಅವರ ಧರ್ಮಾಂತರದ ಯತ್ನ ಯಶಸ್ವಿಯಾದರೆ, ಅವರು ಕಳೆದುಕೊಳ್ಳುವ ಸ್ಥಾನ ತಮ್ಮ ಜೋಳಿಗೆಗೆ ಬೀಳುವುದೆಂದು ಆಶೆ ಪಡುವುದು, ಇವೆರಡೂ ನಿಷ್ಫಲವೆಂಬುದನ್ನು ಹಿಂದೂಗಳು ಮರೆಯಬಾರದು.ಮಹತ್ವದ

ವಿಷಯವೆಂದರೆ, ಅಸ್ಪೃಶ್ಯರು ಮುಸಲ್ಮಾನ ಇಲ್ಲವೇ ಕ್ರೈಸ್ತ ಧರ್ಮಾನುಯಾಯಿಗಳಾದರೆ, ಶೆಡ್ಯೂಲ್ಡ್ ಕಾಸ್ಟ್ ಕೂಟದ ಜಾತಿಯೆಂದು ತಮಗಿರುವ ಹಕ್ಕನ್ನು ಕಳಕೊಂಡರೂ, ಕ್ರೈಸ್ತ ಮತ್ತು ಮುಸಲ್ಮಾನರ ಹಕ್ಕು ಅವರಿಗೆ ಪ್ರಾಪ್ತವಾಗುತ್ತದೆ. ಹಾಗಾಗದೆಂದು ಯಾರೂ ಹೇಳುವಂತಿಲ್ಲ, ಇಸ್ಲಾಂ ಮತ್ತು ಕ್ರೈಸ್ತ ಧರ್ಮ ಸೇರಿದ ಹೊಸಬರಿಗೆ, ರಾಜಕೀಯ ಹಕ್ಕು ನೀಡುವ ವ್ಯವಸ್ಥೆ ಆಗಲಿದ್ದರೆ, ಸಾಮಾನ್ಯ ಮತದಾರ ಸಂಘದ ಶೆಡ್ಯೂಲ್ಡ್ ಕಾಸ್ಟ್ ಕೂಟಕ್ಕೆ ಕೊಡಲ್ಪಟ್ಟ ಸ್ಥಾನ ಮತ್ತು ಧರ್ಮಾಂತರದ ಕಾರಣ, ಖಾಲಿಬಿದ್ದ ಸ್ಥಾನ, ಕ್ರಿಶ್ಚಿಯನ್ ಮತ್ತು ಮುಸಲ್ಮಾನ ಮತದಾರ ಸಂಘಕ್ಕೆ ಹೋಗುವುದು.

ಇಂದು ಅಸ್ಪೃಶ್ಯ ವರ್ಗಕ್ಕೆ ಕೊಡಲಾದ ಸ್ಥಾನವನ್ನು ಹಿಂತೆಗೆದುಕೊಳ್ಳುವುದು ಎಂದಿಗೂ ಶಕ್ಯವಿಲ್ಲ ಮತ್ತು ಮತ್ತೆಂದೂ ಅದು ಹಿಂದೂಗಳಿಗೆ ಸಿಗುವುದೂ ಸಾಧ್ಯವಿಲ್ಲ ಎಂಬುದನ್ನು ಎಲ್ಲ ಹಿಂದೂಗಳೂ ಲಕ್ಷದಲ್ಲಿಡಬೇಕು. ಜಾತೀಯ ಪ್ರತಿನಿಧಿತ್ವದಂತೆ ಜಮೀನಿನ ಕರಾರುಪತ್ರವೂ ಇರುವುದು. ಅಸ್ಪೃಶ್ಯ ಹಿಂದೂಗಳು ಅಸ್ಪೃಶ್ಯರ ರಾಜಕೀಯ ಹಕ್ಕಿನ ವಿಷಯದಲ್ಲಿ ಸ್ವೀಕರಿಸಿದ ಧೋರಣೆ, ನಿಜಕ್ಕೂ ಮೂರ್ಖತನದ್ದಾಗಿದೆ. ಧರ್ಮಾಂತರದ ಚಳವಳಿಯನ್ನು ತಡೆಯಬಯಸುವ ಹಿಂದೂಗಳಿಗೆ ಈ ಧೋರಣೆಯಿಂದ ಯಾವ ಉಪಯೋಗವೂ ಇಲ್ಲ. ಈ ಧೋರಣೆಯಿಂದಾಗುವ ನಿಶ್ಚಿತ ಪರಿಣಾಮವೆಂದರೆ, ಗುಲಾಮರ ಮನದಲ್ಲಿ ತಮ್ಮ ಧನಿಗಳ ಬಗ್ಗೆ ಯಾವ ತಿರಸ್ಕಾರ ಮತ್ತು ಸಂತಾಪದ ಭಾವನೆ ಇದೆಯೋ, ಅದೇ ಭಾವನೆ ಹಿಂದೂಗಳ ಬಗ್ಗೆ ಅಸ್ಪಶ್ಯರ ಮನದಲ್ಲಿ ಉತ್ಪನ್ನವಾಗುತ್ತದೆ.

ಅಸ್ಪೃಶ್ಯ ವರ್ಗವು, ಹಿಂದೂಗಳು, ಮತ್ತು ಅವರ ಹಿಂದೂ ಧರ್ಮದೊಡನೆ ಇದ್ದ ಎಲ್ಲ ಸಂಬಂಧವನ್ನೂ ಮುರಿಯಬೇಕೆಂದು ಅವರಿಗೆ ನಾವು ಸಲಹೆಯಿತ್ತಿದ್ದೇವೆ. ಹಿಂದೂಗಳ ಮತ್ತು ಅವರೊಡನೆ ಯಾವ್ಯಾವ ಜಾತಿಯ ರಾಜಕೀಯ ಭವಿತವ್ಯ ನಿಗದಿತವಾಗಿದೆಯೋ, ಅವರ ಕಲ್ಯಾಣವಾಗಲೆಂದು ಅವರು ಯಾವ ಧೋರಣೆ ತಳೆಯಬೇಕೆಂದು ಹೇಳುವ ಜವಾಬ್ದಾರಿ ನಮ್ಮ ಮೇಲೆ ಬರಲಾಗದು. ಆದರೆ ಈ ವಿಷಯದಲ್ಲಿ ಹಿಂದೂಗಳ ಕೈಯಿಂದ ಇಷ್ಟೊಂದು ಅಕ್ಷಮ್ಯ

ಅಪರಾಧ ನಡೆದಿದೆಯೆಂದರೆ, ಅವರು ತಮ್ಮ ಮಾರ್ಗ ಬದಲಿಸದಿದ್ದರೆ, ಅವರ ಸರ್ವಸ್ವವೂ ನಾಶವಾಗಿ ಹೋಗುವುದೆಂದು ನಮಗೆ ಭಯವೆನಿಸುತ್ತಿದೆ. ಕೇವಲ ಈ ಭಾವನೆಯಿಂದಲೇ, ನಮ್ಮ ಹಿಂದೂಗಳಿಗೆ ಎರಡು ಉಪದೇಶದ ಮಾತು ಹೇಳಬೇಕೆಂದು ಅನಿಸುತ್ತಿದೆ, ಮತ್ತು, ಅವರದನ್ನು ಶಾಂತ ಚಿತ್ತದಿಂದ ಮತ್ತು ನಿರ್ವಿಕಲ್ಪ ಮನದಿಂದ ವಿಚಾರ ಮಾಡುವರೆಂದು ನಮ್ಮ ಆಕಾಂಕ್ಷೆ. ಸಾಮಾಜಿಕ ಜೀವನ ಅವಿರೋಧದಿಂದ ಸುರಕ್ಷಿತವಾಗಿ ಸಾಗಲು ಒಂದು ಮೂಲಭೂತ ತತ್ವ ಸರ್ವಮಾನ್ಯವಾಗಬೇಕು. ಅದೆಂದರೆ, ಯಾಲ್ಯಾರ ಬಳಿ ಸಂಪತ್ತು ಇದೆಯೋ, ಅವರು ಅದನ್ನು ಇಲ್ಲದವರೊಡನೆ ಹಂಚಿ ತಿನ್ನಲು ಕಲಿಯಬೇಕು. ಪುರಾತನ ಕಾಲದಿಂದಲೂ, ಜಗತ್ತಿನ ಇತಿಹಾಸದಲ್ಲಿ ನಡೆದ ಬಂಡಾಯದ ಬಗ್ಗೆ ವಿಚಾರ ಮಾಡಿದಾಗ, ಸಮಾಜದಲ್ಲಿ ಅಧಿಕಾರಾರೂಢರು, ತಮ್ಮ ಕೈಯ ಅಧಿಕಾರ ಮತ್ತು ಆಡಳಿತವನ್ನು, ಇಲ್ಲದವರೊಡನೆ ಹಂಚಿಕೊಳ್ಳಲು ನಿರಾಕರಿಸಿದರೋ, ಆಗೆಲ್ಲ ಕ್ರಾಂತಿ ನಡೆಯಿತು. ಕ್ರಾಂತಿಯ ಮಾರ್ಗವನ್ನು ತಡೆಯಲು ಇರುವ ಒಂದೇ ಉಪಾಯವೆಂದರೆ, ಸಮಾಜದಲ್ಲಿ ಅಧಿಕಾರ ಮತ್ತು ಆಡಳಿತೆಯ ಸಮನಾದ ಹಂಚಿಕೆಯೊಂದೇ.

ಯೂರೋಪ್ ಖಂಡದ ಕೆಲದೇಶಗಳಲ್ಲಿ ಕ್ರಾಂತಿಯಾದಷ್ಟು ಇಂಗ್ಲೆಂಡ್‌ನಲ್ಲಿ ಆಗಿಲ್ಲ. ಯೂರೋಪ್‌ನಲ್ಲಿ ಅರಿಸ್ಟೋಕ್ರಸಿ ನಾಶವಾಯ್ತು; ಆದರೆ ಇಂಗ್ಲೆಂಡ್‌ನಲ್ಲಿ ಅದು ಈಗಲೂ ಜೀವಂತವಿದೆ. ಕಾರಣ, ಇಂಗ್ಲೆಂಡ್‌ನಲ್ಲಿ ಅರಸೊತ್ತಿಗೆಗೆ ತನ್ನ ಅಧಿಕಾರ ಮತ್ತು ಸಂಪತ್ತನ್ನು ಉಳಿಸಿಕೊಳ್ಳುವುದೆಂತೆಂದು ಚೆನ್ನಾಗಿಯೂ ತಿಳಿದಿದೆ. ನಮ್ಮ ಹಿಂದೂ ಮಿತ್ರರಿಗೆ ನಮ್ಮ ಸೂಚನೆ ಇಷ್ಟೇ ; ಅಧಿಕಾರಶಾಹಿ ವರ್ಗವು ಸ್ವಾರ್ಥಬುದ್ಧಿಗೆ ಬಲಿಬಿದ್ದು ರಾಜ್ಯ, ಕೋಶಗಳೆರಡನ್ನೂ ತಮ್ಮ ಜೋಳಿಗೆಗೇ ಸುರಿದುಕೊಳ್ಳುವ ಅಭಿಲಾಷೆಯಿಂದ ಸರ್ವಸ್ವವನ್ನೂ ನಾಶಮಾಡಿಬಿಟ್ಟರು. ಅದೇ ಗತಿ ಹಿಂದೂಗಳದ್ದೂ ಆಗದಿರುವುದಿಲ್ಲ.

* * * *

## ೭೯. ಮಹಾರಾಜರು - ಒಬ್ಬ ಉತ್ಕೃಷ್ಟ ನ್ಯಾಯಾಧೀಶರು

ಸಾವಂತವಾಡಿಯ ಜನಪ್ರಿಯ ರಾಜಾ ಶ್ರೀಮಂತ ಬಾಪ್ ಸಾಹೇಬ ಮಹಾರಾಜಾ ಅವರ ಅಕಾಲಿಕ ಮರಣದ ಶೋಕಜನಕ ವಾರ್ತೆಯನ್ನೋದಿ ನಮಗೆ ಆಘಾತವೇ ಆಯ್ತು. ರಾಜೇ ಸಾಹೇಬರು ಮರಣಿಸಿದ ಆ ದುರ್ದೈವೀ ಪರಿಸ್ಥಿತಿಯ ವರ್ಣನೆ ಶಬ್ದಗಳಿಗೆ ಸಿಲುಕುವಂತಹುದಲ್ಲ! ಮಹಾರಾಜರ ಸಹವಾಸವನ್ನು ದೀರ್ಘಕಾಲ ಅನುಭವಿಸುವ ಭಾಗ್ಯ ನಮ್ಮ ಪಾಲಿಗೆ ಬಂದಿರಲಿಲ್ಲ. ಬಡವರ ಕೈವಾರಿ ಮತ್ತು ಒಬ್ಬ ಕರ್ತವ್ಯನಿಷ್ಠ, ಪ್ರಗತಿಪರ ವಿಚಾರಗಳ ಸಂಸ್ಥಾನಿಕರಾಗಿ ಅವರ ಪರಿಚಯ ನನಗಿತ್ತು. ಮಹಾರಾಜರ ಪ್ರತ್ಯಕ್ಷ ಪರಿಚಯ ಮಾಡಿಕೊಂಡು, ಅವರೊಡನೆ ಸಂಬಂಧ ಬೆಳೆಸುವ ಅವಕಾಶ ನಮ್ಮ ಪಾಲಿಗೆ ಒಮ್ಮೆ ಮಾತ್ರ ಬಂತು. ಆದರೂ, ಈ ಅಲ್ಪ ಪರಿಚಯದಲ್ಲೇ ನನ್ನ ಮನದ ಮೇಲಾದ ಅವರ ಸದ್ಗುಣದ ಪ್ರಭಾವವು ಎಂದಿಗೂ ಅಳಿಸಿ ಹೋಗುವಂತಹುದಲ್ಲ. ಸಾವಂತ್‌ವಾಡಿ ಸಂಸ್ಥಾನದಲ್ಲಿನ ಪಡದೇ ಗ್ರಾಮದ ಜಮೀನ್ದಾರ ಶ್ರೀ ವರಾಡ್ಕರ್ ಅವರ ಕೊಲೆ ಖಟ್ಲೆಯಲ್ಲಿ ಆರೋಪಿಯ ವಕೀಲ ಮತ್ತು ಬಂಧುವಾಗಿ ಮಹಾರಾಜರೆದುರು ಅಪೀಲು ಸಲ್ಲಿಸಲು ಹೋಗಿದ್ದೆ. ಅಷ್ಟೇ ನಮ್ಮ ನಡುವಿನ ಸಂಬಂಧ, ಆದರೆ ಸತತ ಮೂರು ದಿನಗಳ ಕಾಲ ಈ ಅಪೀಲ್‌ನ ಕೆಲಸ ನಡೆದಿತ್ತು ಮತ್ತು ಮಹಾರಾಜರು, ಮಧ್ಯಾಹ್ನ ಹನ್ನೊಂದರಿಂದ ಸಂಜೆ ಐದು ಮೂವತ್ತರವರೆಗೆ ಅಪೀಲ್‌ನ ವಿಷಯವನ್ನು ಲಕ್ಷ್ಯಗೊಟ್ಟು ಆಲಿಸುತ್ತಾ ಕುಳಿತಿರುತ್ತಿದ್ದರು. ಮಧ್ಯದಲ್ಲಿ ಅವರು ಪಡೆಯುತ್ತಿದ್ದ ಅರ್ಧ ತಾಸಿನ ವಿರಾಮವೇ ಅವರ ವಿಶ್ರಾಂತಿ. ದೊಡ್ಡ ದೊಡ್ಡ ಹೆಸರಾದ ನ್ಯಾಯಮೂರ್ತಿಗಳಲ್ಲೂ ಕಾಣಸಿಗದ ಇಂತಹ ಏಕಾಗ್ರತೆಯಿಂದ ಓರ್ವ ಮಹಾರಾಜರು, ದಿನವೂ ಸತತ ಆರು ಗಂಟೆಗಳ ಕಾಲ, ವಕೀಲರ ಯುಕ್ತಿವಾದವನ್ನಾಲಿಸುತ್ತಾ ಕುಳಿತಿರುವುದು, ಮತ್ತು ನಡುನಡುವೆ, ವಿಷಯಕ್ಕೆ ಸಂಬಂಧಪಟ್ಟ ಬೇರೇನಾದರೂ ಮಾರ್ಮಿಕ ಪ್ರಶ್ನೆಯಿಂದ ತನ್ನ ಶಂಕೆ ಬಗೆಹರಿಸಿಕೊಳ್ಳುವ ಕಳಕಳಿ ತೋರುತ್ತಿದ್ದುದು, ನಿಜಕ್ಕೂ ನಮಗೊಂದು ಅಸಾಮಾನ್ಯ ಅನುಭವ. ಅಪೀಲಿನ ಕೆಲಸ ನಡೆದಿರುವಾಗ, ಇವರು, ಎರಡೂ ಕಡೆಯ ವಕೀಲರ ಮಾತುಗಳನ್ನಾಲಿಸಿ ಸುಮ್ಮನೆ ಕುಳಿತಿರುತ್ತಿರಲಿಲ್ಲ, ಬದಲಿಗೆ, ತಮ್ಮ ಸೂಕ್ಷ್ಮ ದೃಷ್ಟಿಗೆ ಎಲ್ಲೆಲ್ಲಿ ಶಂಕೆಯೆನಿಸಿತೋ, ಅಲ್ಲೆಲ್ಲ ವಕೀಲರಿಂದ ಅವಕ್ಕೆ ತಕ್ಕ ಸಮಾಧಾನವನ್ನೂ ಪಡೆಯುತ್ತಿದ್ದರು, ಹಾಗೂ ಇದು ಅವರ ಬುದ್ಧಿಮತ್ತೆಯನ್ನು ಸೂಚಿಸುತ್ತಿತ್ತು.

ಅನಂತರ ಮಹಾರಾಜರು ತಮ್ಮ ಜಡ್ಜ್ ಮೆಂಟ್ ಸಿದ್ಧಪಡಿಸಿದರು ಮತ್ತು ಈ ಜಡ್ಜ್‌ಮೆಂಟ್‌ನಿಂದಾಗಿಯೇ, ಅವರ ಶ್ರೇಷ್ಠ ಬುದ್ಧಿಮತ್ತೆಯ ಪರಿಚಯ ನಮಗಾಯ್ತು, ಈ ಜಡ್ಜ್ ಮೆಂಟ್ ಅತ್ಯಂತ ಉಚ್ಚಶ್ರೇಣಿಯದಾಗಿತ್ತು, ಮತ್ತು ಎಲ್ಲ

ವಿಷಯಗಳನ್ನೂ ಕೂಲಂಕಶವಾಗಿ ನಿಷ್ಕರ್ಷಿಸಲಾಗಿತ್ತು. ಮಹಾರಾಜರೇನೂ ಸ್ವತಃ ಕಾನೂನು ಪಂಡಿತರಿರಲಿಲ್ಲ, ಆದರೂ, ಕಾನೂನಿನ ವಿಷಯದಲ್ಲಿ ಅವರ ಹಿಡಿತ ಮತ್ತು ಯೋಗ್ಯ ನಿರ್ಣಯ ತೆಗೆದುಕೊಳ್ಳುವ ಕ್ಷಮತೆ ಅವರಲ್ಲಿ ಅಂತರ್ಗತವಿತ್ತು.

ಹಾಗಿದ್ದೂ ನಮಗೆ ಅಧಿಕ ಕೌತುಕವೆನಿಸಿದ್ದು, ಅವರ ಧರ್ಮಶೀಲತೆ ! ತಮ್ಮ ಕೆಲಸದ



ಆರಂಭದಲ್ಲಿ, ಅವರು ನತಮಸ್ತಕರಾಗಿ, ಕೈಜೋಡಿಸಿ, ಕಣ್ಮುಚ್ಚಿ ಭಗವಂತನ ನಾಮಸ್ಮರಣೆ ಮಾಡುತ್ತಿದ್ದರು, ಮತ್ತು ಬಾಯಲ್ಲಿ ಏನೋ ಗುಣುಗುಣಿಸುತ್ತಿದ್ದರು. ತನ್ನ ಕರ್ತವ್ಯವನ್ನು ಸರಿಯಾಗಿ ತಿಳಿದುಕೊಂಡು, ತಾನು ಉತ್ಕೃಷ್ಟ ರೀತಿಯಲ್ಲಿ ಕರ್ತವ್ಯ ಪೂರೈಸುವಂತಾಗಲೆಂದು ಭಾವುಕನಾಗಿ ದೇವರ ಕರುಣೆಗಾಗಿ ಬೇಡುವ ಇಂತಹ ಪಾಪಭೀರು, ನ್ಯಾಯಪ್ರಿಯ ನೃಪತಿ, ಈ ಭೂ ಮಂಡಲದಲ್ಲಿ ಬೇರೆ ಕಾಣಸಿಗಬಹುದೇ? ಇಂತಹ ಶ್ರೇಷ್ಠ, ಕರ್ತವ್ಯ ತತ್ಪರ, ವಂದನೀಯರ ಜೀವಿತವು ಹೀಗೆ ಆಕಸ್ಮಿಕವಾಗಿ ಮಧ್ಯದಲ್ಲಿಯೇ ಕುಂಠಿತವಾದುದು, ನಿಜಕ್ಕೂ ದುರ್ದೈವವೆಂದೇ ಹೇಳಬೇಕು. ಈ ದುರ್ದೈವದಿಂದ ಆಹತರಾಗಿರುವ ರಾಜಕುಟುಂಬದ ಬಗ್ಗೆ ನಮಗೆ ಅತ್ಯಂತ ಸಹಾನುಭೂತಿಯೆನಿಸುತ್ತದೆ. ಮಹಾರಾಜರ ಪ್ರಜೆಗಳಿಗೂ ಅವರ ಬಗ್ಗೆ ಅಭಿಮಾನ, ಆದರ, ಪ್ರೇಮಭಾವನೆ ಇದೆಯೆಂದು ನಮಗೆ ತಿಳಿದಿದೆ. ಈ ಪ್ರಜೆಗಳೂ ತಮ್ಮ ನಿಜವಾದ ಹಿತಚಿಂತಕನನ್ನು ಕಳಕೊಂಡ ಬಗ್ಗೆ ನಮಗೆ ಖೇದವೆನಿಸುತ್ತದೆ. ಭಗವಂತನು ಬಾಪೂಸಾಹೇಬರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ.

* * * *

## ೮೦. ರ್‍ಯಾಮ್ಸೇ ಮ್ಯಾಕ್‌ಡೊನಾಲ್ಡ್ ಮತ್ತು ಹಿಂದೂಸ್ಥಾನ

"ಮ್ಯಾಕ್‌ಡೊನಾಲ್ಡ್, ನೀವು ಮರಳಿ ನಿಮ್ಮ ಪಕ್ಷಕ್ಕೆ ಹೋಗುವುದಿಲ್ಲವೇಕೆ?

- ವರ್ಷದ ಹಿಂದೆ ಕಳೆದ ನವೆಂಬರ್‌ನಲ್ಲಿ, ನಾನು ಲಂಡನ್‌ನಲ್ಲಿ ವಾಸ್ತವ್ಯವಿದ್ದಾಗ, ಅಲ್ಲಿ ರ್‍ಯಾಮ್ಸೇ ಮ್ಯಾಕ್‌ಡೊನಾಲ್ಡ್ ಅವರ ಭೇಟಿಗೆ ಹೋಗಿದ್ದಾಗ, ಅವರನ್ನು ಈ ಪ್ರಶ್ನೆ ಕೇಳಿದ್ದೆ. ನನ್ನ ಪ್ರಶ್ನೆ ಕೇಳಿ ಕ್ಷಣಕಾಲ ಯೋಚಿಸಿ, ಖಿನ್ನತೆಯಿಂದ ಅವರು ಅಂದಿದ್ದರು ; "ಹಾಂ, ಅದೇನೋ ಸರಿ, ಆದರೆ ಅವರು ನನ್ನನ್ನು ಮರಳಿ ಸ್ವೀಕರಿಸಬೇಕಲ್ಲ?" ಬ್ರಿಟಿಶ್ ಲೇಬರ್ ಪಾರ್ಟಿಯ ಬಗ್ಗೆ. ನಾನು ಅಭ್ಯಸಿಸಿದ್ದೇನೆ, ಮತ್ತು ಆ ಪಕ್ಷದ ಉತ್ಕರ್ಷ ಅಪಕರ್ಷದ ಬಗ್ಗೆ ಆಸಕ್ತಿಯಿಂದ ಗಮನಿಸುತ್ತಿದ್ದೇನೆ. ಈ ಪಕ್ಷದಲ್ಲಿ ೧೯೩೧ರಲ್ಲಿ ಮೂಡಿದ ಒಡಕಿನಿಂದಾಗಿ ನಮ್ಮ ಮನಕ್ಕೆ ತುಂಬ ಖೇದವುಂಟಾಗಿದೆ. ಯಾರು ಕಷ್ಟಪಟ್ಟು ಆ ಪಕ್ಷಕ್ಕೊಂದು ಹೆಸರು ರೂಪ ಕೊಟ್ಟು ನಿಲ್ಲಿಸಲು ಕಾರಣರಾದರೋ, ಪಕ್ಷಕ್ಕೆ ಪ್ರಾಣದಾತರೇ ಆದರೋ, ಆ ರ್‍ಯಾಮ್ಸೇ ಮ್ಯಾಕ್‌ಡೊನಾಲ್ಡ್ ಅವರ ಕೈಯಿಂದ ಸ್ವತಃ ತಮಗೂ ತಮ್ಮ ಪಕ್ಷಕ್ಕೂ ವಿನಾಶಕಾರಿ ಆಗುವಂತಹ ವರ್ತನೆ ಹೇಗೆ ಘಟಿಸಿತೋ, ಎಂದು ನಮಗೆ ಸಖತ್ ಆಶ್ಚರ್ಯವಾಗುತ್ತದೆ. ೧೯೩೧ರಲ್ಲಿ ಲೇಬರ್ ಪಕ್ಷದ ಮೇಲೆ ದೊಡ್ಡ ಗಂಡಾಂತರವೇ ಬಂದಿತ್ತೆಂಬುದರಲ್ಲಿ ಸಂಶಯವಿಲ್ಲ. ಈ ಗಂಡಾಂತರವು, ಬಂಡವಾಳಶಾಹಿ ವರ್ಗದ ಕೈಯಲ್ಲಿ ರಾಜಕೀಯ ಸತ್ತೆ ಇಲ್ಲದಿದ್ದರೂ, ಬಹುಸಂಖ್ಯಾತ ಶ್ರಮಜೀವಿ ವರ್ಗಕ್ಕೆ ರಾಜ್ಯ ಕಾರುಭಾರವನ್ನೊಪ್ಪಿಸಲು ಸಹಜವಾಗಿಯೇ ವಿರೋಧ ಒಡ್ಡಬಹುದೆಂಬುದನ್ನು ಸ್ಪಷ್ಟವಾಗಿ ತಿಳಿಸಿದೆ.

### ಪ್ರೇಮ ಪ್ರಸಂಗ

ಗ್ರೇಟ್ ಬ್ರಿಟನ್, ಧನಿಕ ರಾಷ್ಟ್ರವಾಗಿದ್ದರೂ, ೧೯೩೧ರ ಬ್ರಿಟಿಶ್ ಅಂದಾಜುಪತ್ರದ ಖರ್ಚಿನ ತಕ್ಕಡಿ ತುಂಬ ನೀರಸವಾಗಿತ್ತು. ಈ ಅಂದಾಜುಪತ್ರದಲ್ಲಿ ಖರ್ಚಿನ ಎರಡು ಪ್ರಮುಖ ಬಾಬ್ತುಗಳಲ್ಲಿ, ಉತ್ಪನ್ನದ ದೊಡ್ಡ ಮೊತ್ತವನ್ನೇ ಕಸಿದುಕೊಂಡಿದ್ದರು. ಮಹಾಯುದ್ಧದ ಖರ್ಚಿಗಾಗಿ ತೆಗೆದ ಸಾಲ ಬೆಟ್ಟವಾಗುವಂತಹ ಅಮಿತ ಬಡ್ಡಿ ಒಂದು

ವಿಷಯವಾದರೆ, ಅನ್‌ಎಮ್‌ಪ್ಲಾಯ್‌ಮೆಂಟ್ ಇನ್ ಶೂರೆನ್ಸ್ ಆಕ್ಟ್ ಅಡಿಯಲ್ಲಿ ನಿರುದ್ಯೋಗಿಗಳಿಗೆ ಕೊಡಲಾಗುವ ಭತ್ಯ ಇನ್ನೊಂದು ವಿಷಯ. ಬಂಡವಾಳಶಾಹಿ ವರ್ಗದ ಮೇಲಿನ ಕರಭಾರವನ್ನು ಹಗುರವಾಗಿಸಿಕೊಳ್ಳಲು, ಖರ್ಚು ಕಡಿಮೆ ಮಾಡಲು ಅವರು ಉತ್ಸುಕರಿದ್ದರು. ತಮಗೆ ನಷ್ಟವಾಗದಂತೆ ಹೇಗಾದರೂ ಈ ಕಡಿತ ಮಾಡಿಕೊಳ್ಳಲು ಈ ಬಂಡವಾಳಶಾಹಿಗಳು ನಿರ್ಧರಿಸಿದ್ದರು. ಯುದ್ಧಸಾಲದ ವ್ಯಾಜ್ಯದಿಂದ ಕಡಿತ ಮಾಡಿಕೊಳ್ಳ ಬೇಕೆಂದೇನೂ ಅವರ ಮನದಲ್ಲಿರಲಿಲ್ಲ. ಕಾರಣ, ಆ ಹಣ ಹೇಗಿದ್ದರೂ ಅವರ ಕಿಸೆಯಿಂದಲೇ ಹೋಗುವುದಿತ್ತು. ಹಾಗಾಗಿ, ಅವರು, ಅನ್‌ಎಮ್‌ಪ್ಲಾಯ್ಮೆಂಟ್ ಇನ್ಸುರೆನ್ಸ್ ಆಕ್ಟ್ನ ಅಡಿಯಲ್ಲಿ ನಿರುದ್ಯೋಗಿ ಕಾರ್ಮಿಕರಿಗೆ ಕೊಡುವ ಭತ್ಯೆಯಲ್ಲಿ ಕಡಿತ ಮಾಡಿ, ಅಂದಾಜು ಪತ್ರದಲ್ಲಿ ಕಲಬೆರಕೆ



ಮಾಡುವ ಯುಕ್ತಿ ಹೂಡಿದರು. ಆದರೆ, ಈ ಯುಕ್ತಿ ಮುಕ್ತವಾಗಿ ಜಾರಿಗೆ ಬರುವುದು ಎಲ್ಲಿ ಸಾಧ್ಯ? ಆಗ ಅವರು ತಮ್ಮ ವಿಚಾರವನ್ನು ಅಪ್ರತ್ಯಕ್ಷವಾಗಿ, ಆದರೆ, ರಾಮಬಾಣದಷ್ಟೇ ಪರಿಣಾಮಕಾರಿಯಾಗಿ ಜಾರಿಗೆ ತರುವ ಯೋಜನೆ ಮಾಡಿದರು. ಇಂಗ್ಲಿಷ್ ಜಮಾಬಂದಿ ಖಾತೆಯಲ್ಲಿನ ವಹಿವಾಟಿನಂತೆ ಕೆಲವೊಮ್ಮೆ ಖಜಾನೆಯಲ್ಲಿ ಪ್ರತ್ಯಕ್ಷ ಖರ್ಚಿಗೆ ತಗಲುವ ಮೊತ್ತಕ್ಕಿಂತ ತುಂಬ ಹೆಚ್ಚು ಹಣ ಜಮಾ ಆಗಿರುತ್ತದೆ. ಕೆಲವೊಮ್ಮೆ ಪರಿಸ್ಥಿತಿ ತದ್ವಿರುದ್ಧವಿರುತ್ತದೆ. ಖಜಾನೆಯಲ್ಲಿ ಆದಿಯಲ್ಲಿದ್ದ ಹಣಕ್ಕೆ ಸಮನಾಗಿ ಖರ್ಚಿನ ಪ್ರಮಾಣ ಏರುತ್ತದೆ. ಇಂತಹ ಪರಿಸ್ಥಿತಿಯಲ್ಲಿ, ಖಜಾನೆ ಖಾಲಿ ಬಿದ್ದಂತಹ ಪರಿಸ್ಥಿತಿಯಲ್ಲಿ, ಸರಕಾರ ಖರ್ಚಿಗಾಗಿ ಬ್ಯಾಂಕ್‌ನಿಂದ ಸಾಲ ಪಡೆಯುತ್ತದೆ.

* ವೇಸ್ ಆಂಡ್ ಮೀನ್ಸ್" ಎಂಬ ಹೆಸರಿನಿಂದ ಸರಕಾರದ ಈ ವ್ಯವಹಾರ ಪ್ರಸಿದ್ಧವಾಗಿದೆ. ಲಂಡನ್‌ನ ಬಂಡವಾಳಶಾಹಿಗಳಿಗೆ ಈ ವ್ಯವಹಾರದ ಪೂರ್ಣ ಮಾಹಿತಿಯಿತ್ತು. ಅದರ ಲಾಭ ಪಡೆದು, ಲಂಡನ್‌ನ ಬಂಡವಾಳದಾರರು ಲೇಬರ್ ಪಕ್ಷದ ಸರಕಾರಕ್ಕೆ ಕೆಲವು ಷರತ್ತುಗಳನ್ನೊಡ್ಡಿ ಕೆಲವು ಸವಲತ್ತುಗಳನ್ನು ಪಡೆಯಲು ನಿರ್ಧರಿಸಿದರು. ಸರಕಾರಕ್ಕೆ ಬ್ಯಾಂಕ್‌ನಿಂದ ಸಿಗುವ ಸಾಲ ಬೇಕಿದ್ದರೆ, ಸರಕಾರವು ಅನ್‌ಎಂಪ್ಲಾಯ್ಮೆಂಟ್ ಇನ್ಶೂರೆನ್ಸ್ ಆಕ್ಟ್ ನಂತೆ ಕಾರ್ಮಿಕರಿಗೆ ಸಿಗುವ ವೇತನದಲ್ಲಿ ಕಡಿತ ಮಾಡಬೇಕೆಂಬುದೇ ಷರತ್ತಾಗಿತ್ತು. ಇದರಿಂದಾಗಿ ಕಾರ್ಮಿಕರು

ಅಡಕತ್ತರಿಯಲ್ಲಿ ಸಿಕ್ಕಂತಾದರು. ಕೈಯಲ್ಲಿ ಹಣವಿರದ ಕಾರಣ, ಒಂದೋ ದಿವಾಳಿಖೋರರೆನಿಸುವುದು, ಇಲ್ಲವೇ, ನಿರುದ್ಯೋಗದ ಭತ್ಯೆಯಲ್ಲಿ ಕಡಿತ ಮಾಡಿ, ತಾವೇ ಕಾಲ ಮೇಲೆ ಕಲ್ಲೆತ್ತಿ ಹಾಕುವುದು, ಇದರ ಹೊರತು ಬೇರೆ ಮಾರ್ಗವಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಯಾವ ದಾರಿಯನ್ನಾಯ್ದುಕೊಳ್ಳುವುದು ಎಂಬ ಬಗ್ಗೆ ಸಹಮತ ಏರ್ಪಡಲಿಲ್ಲ. ರ್‍ಯಾಮ್ಸೇ ಮ್ಯಾಕ್‌ಡೊನಾಲ್ಡ್, ಸ್ನೋಡನ್, ಜಿಮಿ ಥಾಮಸ್, ಈ ಮೂವರೂ ನಿರುದ್ಯೋಗ ಭತ್ಯೆಯಲ್ಲಿ ಕಡಿತ ಮಾಡಿ ಅಧಿಕಾರಕ್ಕೆ ಅಂಟಿಕೊಂಡಿರುವುದೆಂದು ತೀರ್ಮಾನಿಸಿದರು. ಆದರೆ ಮಿ, ಹ್ಯಾಂಡರ್ಸನ್ ಮತ್ತು ಇತರ ಲೇಬರ್ ಮಂತ್ರಿಗಳ ಮತ ಭಿನ್ನವಿತ್ತು.

ನಿರುದ್ಯೋಗ ವೇತನ ಕಡಿಮೆ ಮಾಡಬಾರದೆಂದೂ, ಲೇಬರ್ ಪಕ್ಷವು ಮಂತ್ರಿಮಂಡಳದ ರಾಜೀನಾಮೆ ಕೊಟ್ಟು, ಕನ್ಸರ್ವೆಟಿವ್ ಪಕ್ಷವನ್ನು ಅಧಿಕಾರಕ್ಕೆ ಬರಲು ಬಿಡಲಿ, ಮತ್ತು ನಿರುದ್ಯೋಗ ಭತ್ಯೆಯನ್ನು ಕಡಿತಗೊಳಿಸುವ ಪಾಪಮಾಡಿ, ಅಂದಾಜು ಪತ್ರದಲ್ಲಿ ಕಲಬೆರಕೆ ಮಾಡಲಿದ್ದರೆ, ಆ ಜವಾಬ್ದಾರಿ ಅವರ ಪಾಲಿಗೆ ಇರಲಿ.ಎಂಬುದು ಅವರ ಅಂಬೋಣ.

**ಸಮಸ್ಯೆ ಬಗೆಹರಿಯುವುದಿಲ್ಲ**

ಈ ಮತಭೇದದ ಸಂಬಂಧದಲ್ಲಿ, ಮಿ. ಹ್ಯಾಂಡರ್ಸನ್ ಅವರ ಮಾತು ನ್ಯಾಯಯುತವಾಗಿತ್ತು, ಮತ್ತು ಮಿ. ರ್‍ಯಾಮ್ಸೇ ಮ್ಯಾಕ್‌ಡೊನಾಲ್ಡ್ ಮತ್ತು ಅವರ ಸಂಗಡಿಗರ ವಿಚಾರ ತಪ್ಪಾಗಿತ್ತು, ಎಂದೇ ನಮಗನಿಸುತ್ತದೆ. ನಿರುದ್ಯೋಗಿಗಳ ವೇತನ ಕಡಿತಗೊಳಿಸುವ ಪಾಪಕೃತ್ಯ ಗೈದ ಲೇಬರ್ ಪಕ್ಷಕ್ಕೆ, ಪ್ರಧಾನಸಂಪುಟ ರಚಿಸತಕ್ಕ ಸಂಖ್ಯಾಬಲ ಚುನಾವಣೆಯಲ್ಲಿ ಸಿಗುವುದೆಂತು? ಕ್ಯಾನ್ಸ ಮ್ಯಾಕ್‌ಡೊನಾಲ್ಡ್ ಅವರು ಅಂದು ಸ್ವೀಕರಿಸಿದ ಧೋರಣೆ ಹಾಗೂ ಅದಕ್ಕೆ ಕಾರಣವಾದುದು ಏನೆಂದು ನಮಗೆ ಇನ್ನೂ ತಿಳಿಯುತ್ತಿಲ್ಲ. ಆದರೆ, ಅದರೊಡನೆ ಗಮನಿಸಬೇಕಾದ ವಿಷಯವೆಂದರೆ ಆಗ ಲೇಬರ್ ಪಕ್ಷಕ್ಕೆ ರ್‍ಯಾಮ್ಸೇ ಅವರ ಅಗತ್ಯ ಎಷ್ಟೊಂದಿತ್ತು, ಎಂಬುದು ಸ್ಪಷ್ಟವಾಗಿ ಕಂಡು ಬಂದಿತ್ತು. ! ಮಿ.

ಹ್ಯಾಂಡರ್ಸನ್ ಮುಂತಾದ ಸಚಿವರು ನಿರುದ್ಯೋಗ ವೇತನದಲ್ಲಿ ಕಡಿತ ಮಾಡುವುದನ್ನು ಎಷ್ಟು ವಿರೋಧಿಸಿದರು, ಆದರೆ, ಹೀಗಿದ್ದೂ ತಾವು ಚುನಾವಣೆಯಲ್ಲಿ ಯಶಸ್ವಿ ಆಗುವಂತಿಲ್ಲವೆಂದೇ ಅವರಿಗನಿಸಿತ್ತು, ಈ ವಿಲಕ್ಷಣ ಘಟನೆಯನ್ನು ಬಗೆಹರಿಸುವುದು ಕಷ್ಟವೇ ಆದರೂ ಈ ವಿಷಯದ ಬಗ್ಗೆ ನಮ್ಮ ನಿಷ್ಕರ್ಷೆ ಇಂತಿದೆ ; ಯಾವುದೇ ರಾಜಕೀಯ ಪಕ್ಷಕ್ಕೂ ಕಾರ್ಯಕ್ರಮ, ಶಿಸ್ತು ಮತ್ತು ಸಾಧನಾ ಸಾಮಗ್ರಿಯ ಅಗತ್ಯ ಎಷ್ಟಿರುತ್ತದೋ, ಅದಕ್ಕಿಂತ ಹೆಚ್ಚು ತನ್ನ ಕರ್ತೃತ್ವದಿಂದ ಜನಾಭಿಪ್ರಾಯವನ್ನು ಪ್ರಭಾವಿಸುವ ನಾಯಕನ ಅಗತ್ಯ ಇರುತ್ತದೆ.

ಲೇಬರ್ ಪಕ್ಷದ ೧೯೩೧ರ ಚುನಾವಣೆಯ ನಂತರ ಎಂತಹ ಸಂಕಷ್ಟ ಎದ್ದಿತೋ, ಅದಕ್ಕೆ ಕಾರಣ, ಲ್ಯಾಮೇ ಮ್ಯಾಕ್‌ಡೊನಾಲ್ಡ್ ಅವರ ಪಕ್ಷಾಂತರದ ಬಳಿಕ ಖಾಲಿಯಾದ ಅವರ ಸ್ಥಾನವನ್ನು ತುಂಬಲು, ಸಮರ್ಥರಾದ ನಾಯಕರಾರೂ ಇರದಾದುದು. ಮ್ಯಾಕ್‌ಡೊನಾಲ್ಡ್‌ರಿಂದಾಗಿಯೇ ಲೇಬರ್ ಪಕ್ಷ ಎದ್ದು ನಿಂತಿತ್ತು ; ಅವರು ಹೋದೊಡನೆ ಕುಸಿದು ಬಿತ್ತು.

ನ್ಯಾಯವೇ ಆದರೂ ಅನುದಾರ ಧೋರಣೆ

* * * *

ಲೇಬರ್ ಪಕ್ಷವು ತನ್ನನ್ನು ಮರಳಿ ಸ್ವೀಕರಿಸಲಾರದು, ಎಂದು ಮ್ಯಾಕ್‌ಡೊನಾಲ್ಡ್ ಅವರು ನನ್ನೊಡನೆ ಅಂದಾಗ, ಲೇಬರ್ ಪಕ್ಷದ ಈ ಧೋರಣೆ ಆತ್ಮಘಾತಕವಷ್ಟೇ, ಎಂದು ನನಗೆ ಅನಿಸದಿರಲಿಲ್ಲ. ಆ ಪಕ್ಷದ ಈ ಧೋರಣೆ ನ್ಯಾಯಯುತವೇ ಇದ್ದರೂ ಉದಾರತನದ್ದೆನ್ನಲಾಗದು. ರ್ಯಾಮ್ಸೇ ಅವರ ಸಹಕಾರದಲ್ಲಾದ ಮೊದಲ ಒಡಕೇನೂ ಆಗಿರಲಿಲ್ಲ, ಅದು. ೧೯೧೪ರಲ್ಲೇ ಅವರ ಸಹಕಾರದಿಂದ ಇಂತಹುದೇ ಒಡಕು ಉಂಟಾಗಿತ್ತು. ಬಂಡವಾಳಶಾಹಿಗಳು ಸ್ವಾರ್ಥ ಸಾಧಿಸಲೆಂದು ಹುಟ್ಟುಹಾಕಿದ ಯುದ್ಧ ಈ ದೃಷ್ಟಿಕೋನದಿಂದ ಮಹಾಯುದ್ಧದೆಡೆಗೆ ದಿಟ್ಟಿಸುತ್ತಿತ್ತು. ಮತ್ತು

ಹಾಗಾಗಿಯೇ ಮಹಾಯುದ್ದಕ್ಕೆ ಭಯಂಕರ ವಿರೋಧವಿತ್ತು. ಆದರೆ ಲೇಬರ್ ಪಕ್ಷದ ಇತರರಿಗೆ, ಯುದ್ಧವನ್ನಾರಂಭಿಸಿದವರು ಯಾರು, ಅಥವಾ, ಅದರಿಂದ ಯಾರ ಹಿತ ಸಾಧಿಸಿದಂತಾಗುತ್ತದೆ, ಎಂಬೆಲ್ಲ ಯೋಚನೆಗೆ ಈಗ ಸಮಯವಿಲ್ಲ, ಎಂದನಿಸುತ್ತಿತ್ತು.ತಮ್ಮ ದೇಶದ ಭವಿತವ್ಯದ ಮೇಲೆ ಆಪತ್ತು ಬರುವಾಗ ಲೇಬರ್ ಪಕ್ಷ ಮತ್ತು ಬಂಡವಾಳಶಾಹಿಗಳು ಕೈ ಕೈ ಜೋಡಿಸಿ ಒಂದಾಗಿ ದೇಶದ ಸ್ವಾತಂತ್ರ್ಯದ ರಕ್ಷಣೆ ಮಾಡಬೇಕೆಂದು ಅವರ ಅಂಬೋಣವಿತ್ತು.

ಕೇವಲ ಶಾಸ್ತ್ರೋಕ್ತ ಲೇಬರ್ ಪಕ್ಷದ ತತ್ವದ ದೃಷ್ಟಿಯಿಂದ ವಿಚಾರಿಸುವಾಗ ಮಿ, ಮ್ಯಾಕ್‌ಡೊನಾಲ್ಡ್ ಅವರ ವಿಚಾರಸರಣಿ ಸರಿಯಾದುದೋ, ಇಲ್ಲಾ, ಅವರ ವಿರೋಧಕರ ವಿಚಾರಸರಣಿ ಲೇಬರ್ ಪಕ್ಷದ ವಿಚಾರಗಳಿಗೆ ದ್ರೋಹ ಬಗೆವಂತಹುದೋ, ಎನ್ನಬೇಕಾಗುವುದು. ಆದರೂ, ಮಹಾಯುದ್ಧ ಮುಗಿದ ಬಳಿಕ, ಲೇಬರ್ ಪಕ್ಷದವರು, ಮರಳಿ ಸಂಘಟನೆಗೆ ಉದ್ಯುಕ್ತರಾಗಿ ಒಟ್ಟಾದಾಗ, ಮ್ಯಾಕ್‌ಡೋನಾಲ್ಡ್ ಅವರು, ಉದಾರಮನದಿಂದ ಆ ತಮ್ಮೆಲ್ಲ ಸಹಚರರನ್ನು ಕ್ಷಮಿಸಿ, ಲೇಬರ್ ಪಕ್ಷದ ಮರುಸ್ಥಾಪನೆಗಾಗಿ ಅವರೊಡನೆ ಒಂದಾದರು. ಮ್ಯಾಕ್‌ಡೊನಾಲ್ಡ್ ಅವರ ಆ ಉಮೇದನ್ನು ಕಾಣುವಾಗ, ೧೯೩೧ರಲ್ಲಿ ಅವರೊಡನೆ ಸಹಕರಿಸಿದ ಸಹಚರರು ಈ ಬಾರಿ ಅವರನ್ನು ಕ್ಷಮಿಸಿ, ಔದಾರ್ಯ ತೋರುವುದು ಸರಿಯಾದುದೆಂದು ನಮಗನಿಸುತ್ತದೆ.

**ಸ್ವಾರ್ಥ ?**

ಮಿ, ಮ್ಯಾಕ್‌ಡೊನಾಲ್ಡ್ ಅವರ ಮಾತು ಮತ್ತು ಧೋರಣೆಯಿಂದ ಲೇಬರ್ ಪಕ್ಷದಲ್ಲಿ



ಉಂಟಾದ ಒಡಕು, ಪಕ್ಷಕ್ಕೆ ಕಪ್ಪು ಹಚ್ಚುವಂತಾಯ್ತೆಂದು ತಿಳಿಯಲಾಗಿದೆ. ಯಾವ ಲೇಬರ್ ಪಕ್ಷವನ್ನು ಹುಟ್ಟುಹಾಕಿ, ಬೆಳೆಸಿದರೋ, ಆ ಪಕ್ಷದ ನಾಶಕ್ಕೆ ಅವರು ಸ್ವತಃ ಕಾರಣರಾದುದು,

ಮಿ. ಮ್ಯಾಕ್‌ಡೊನಾಲ್ಡ್ ಅವರಿಂದಾದ ಅಕ್ಷಮ್ಯ ಅಪರಾಧ ಎಂಬುದರಲ್ಲಿ ಸಂಶಯವಿಲ್ಲ. ಅವರ ಈ ಕೃತ್ಯದ ಬಗ್ಗೆ ಅವರ ಟೀಕಾಕಾರರು, ಇದು ಹೇಗಾದರೂ ಪ್ರಧಾನಪದವಿಗೆ ಅಂಟಿ ಉಳಿಯುವ ಅವರ ಮಹತ್ವಾಕಾಂಕ್ಷೆಯಷ್ಟೇ, ಎಂದು ಟೀಕಿಸಿದ್ದಾರೆ. ಅವರ ಈ ಟೀಕೆ ಯೋಗ್ಯವೋ ಅಯೋಗ್ಯವೋ ಅನ್ನಲಾಗುವಂತಹ ಸಾಧನವೇನೂ ಲಭ್ಯವಿಲ್ಲ. ಆದರೆ, ಮ್ಯಾಕ್‌ಡೊನಾಲ್ಡ್ ಅವರು ಲೇಬರ್ ಪಕ್ಷಕ್ಕೆ ಮಾಡಿದ ಮೋಸವು, ಯಾವುದೇ ವೈಯುಕ್ತಿಕ ಸ್ವಾರ್ಥದಿಂದಲ್ಲದೆ, ಕೇವಲ ಹಿಂದೂಸ್ಥಾನದ ಹಿತ ಸಾಧಿಸಲೆಂದೇ ಆಗಿತ್ತು.. ಎಂದು ಅವರ ನಿಕಟ ಸ್ನೇಹಿತ, ಹಾಗೂ ಸಹಕಾರಿ ಆಗಿದ್ದ ಗೃಹಸ್ಥರೋರ್ವರು ಹೇಳಿದ್ದಾರೆ. ಆತನ ಹೇಳಿಕೆಯಂತೆ, ಮುಂದಕ್ಕೆ ಹೆಜ್ಜೆಯಿಟ್ಟರೆ, ಕನ್ಸರ್ವೇಟಿವ್ ಪಕ್ಷ ಅಧಿಕಾರಕ್ಕೆ ಬರುವುದು, ಮತ್ತು, ಅದು ಹಿಂದೀ ಸುಧಾರಣೆಯ ಯೋಜನೆಗೆ ಮಧ್ಯವರ್ತಿಯಾಗಿ ಜವಾಬ್ದಾರಿ ಹೊರುವಷ್ಟು ವಿಸ್ತೃತವಾಗದಂತೆ, ಸೈಮನ್ ಕಮಿಶನ್‌ನ ಶಿಫಾರಸಿನಂತೆ ಸ್ವಾಯತ್ತತೆಯನ್ನು ಮಾನ್ಯ ಮಾಡುವುದೆಂದು ರ್‍ಯಾಮ್ಸೇ ಅವರಿಗೆ ಭಯವೆನಿಸಿತ್ತು.

### ಗಾಂಧಿ ಅವರ ಪತ್ರಿಕೆ

ಇದೇ ಸರಿಯಾದ ಕಾರಣವೆಂದು ನಾವು ಹೇಳಲಾರೆವು. ಆದರೂ ಎರಡನೇ ದುಂಡು ಮೇಜಿನ ಪರಿಷತ್ತಿನ ವೇಳೆ ಹಿಂದೂಸ್ಥಾನದ ಪ್ರಾಂತಿಕ ಸ್ವಾಯತ್ತತೆಯ ಬಗ್ಗೆ ಮಾತನಾಡುವ ಪ್ರಕ್ರಿಯೆ ನಡೆದಿದ್ದು, ಅದು ಮ್ಯಾಕ್‌ಡೊನಾಲ್ಡರ ಉಪಸ್ಥಿತಿಯ ಕಾರಣವೇ ಫಲಿಸಿತು. ಎರಡನೇ ದುಂಡು ಮೇಜಿನ ಪರಿಷತ್ತಿನ ವೇಳೆ ಕೆಲ ಧೂರ್ತ ಬ್ರಿಟಿಶ್ ಮುತ್ಸದ್ದಿಗಳು ಗಾಂಧಿ ಅವರನ್ನು ಮಥಿಸಿ, ಅವರ ಕಡೆಯಿಂದ ನಮಗೆ ಪ್ರಾಂತಿಕ ಸ್ವಾಯತ್ತೆ ಕೊಡುವಂತಾದರೆ ಸಾಕು. ಈ ಬೇಡಿಕೆಯನ್ನು ವಿರೋಧಿಸಲು ಉಳಿದ ಹಿಂದೀ ಪ್ರತಿನಿಧಿಗಳು ಒಂದು ಕರಪತ್ರ ಹೊರಡಿಸಿ "ಹಿಂದೀಯರು ಸಂಪೂರ್ಣ ಪ್ರಾಂತಿಕ ಸ್ವಾಯತ್ತತೆಗೆ ಒಪ್ಪುತ್ತಿಲ್ಲ" ಎಂದು ಸಾರಲಿದ್ದರು ಮತ್ತು ಅದೇ ಪತ್ರದಲ್ಲಿ ಗಾಂಧಿ ಅವರು ಸಹಿ ಮಾಡಲಿದ್ದರು. ಇದು ಹಲವರಿಗೆ ತಿಳಿದಿದ್ದರೂ, ಜನತೆಯವರೆಗೆ ತಲುಪದಂತೆ ಅದೇ ಆಗ ಘಟನೆಯೊಂದು ನಡೆಯಿತು. ಹಿಂದೂಸ್ಥಾನಕ್ಕೆ ಸೈಮನ್ ಸಾಹೇಬರ ಶಿಫಾರಸು ಹೊರತಾಗಿ ಒಂದಿಷ್ಟೂ ಸ್ಥಳ ಕೊಡಲು ಸಿದ್ಧವಿಲ್ಲದ ಕನ್ಸರ್ವೇಟಿವ್ ನಾಯಕರು, ಗಾಂಧಿ ಅವರ ಪ್ರಾಂತಿಕ ಸ್ವಾಯತ್ತತೆಯ ಬೇಡಿಕೆಗೆ ಅಂಟಿಕೊಂಡು, ಇತರ ಪ್ರತಿನಿಧಿಗಳು ಹೊರತಂದ ಪತ್ರಿಕೆಯನ್ನು ತೆರೆಯಲೂ ಒಪ್ಪಲಿಲ್ಲ. ಹಿಂದೂಸ್ಥಾನಕ್ಕೆ ಗಾಂಧಿ ಒಬ್ಬರೇ ಎಂಬ ಕಾರಣವನ್ನೇ ಅವರು ಕೊಟ್ಟರು. ಈ ಮೂರ್ಖ ಕರಪತ್ರದಿಂದ ಹಿಂದೂಸ್ಥಾನವನ್ನು ಯಾರಾದರೂ ಬ್ರಿಟಿಶ್ ಮುತ್ಸದ್ದಿ ರಕ್ಷಿಸುವುದಿದ್ದರೆ, ಅದು ಬೇರಾರೂ ಅಲ್ಲ, ಮ್ಯಾಕ್‌ಡೊನಾಲ್ಡ್ ಅವರೇ,

ಬ್ರಿಟಿಷ್ ಮಂತ್ರಿಮಂಡಳವು ಕೊನೆಗೆ ಗಾಂಧಿ ಅವರ ಕರಪತ್ರದ ಪೂರ್ಣ ಲಾಭ ಪಡೆದು, ತಮ್ಮ ಉಳಿದ ಯೋಜನೆಯ ನಿಶ್ಚಯಕ್ಕೆ ಮುನ್ನ, ದುಂಡು ಮೇಜಿನ ಪರಿಷತ್ತಿಗೆ ಕರೆಯಲಾದ ವಿಭಿನ್ನ ಪ್ರತಿನಿಧಿಗಳನ್ನು ಸಂದರ್ಶನ ಗೈದು, ಅವರ ವಿಚಾರಗಳನ್ನು ಪರಿಶೀಲಿಸಲು ನಿರ್ಧರಿಸಿತು. ಹೀಗೆ ಸಂದರ್ಶನ ಪಡೆಯಲು, ಮಿ. ಮ್ಯಾಕ್‌ಡೊನಾಲ್ಡ್, ಸರ್ ಸ್ಯಾಮ್ಯುವಲ್ ಹೋವರ್ ಮತ್ತು



ಲಾರ್ಡ್ ಸಂಕೀ, ಈ ಮೂವರ ಸಮಿತಿ ರಚಿಸಲ್ಪಟ್ಟು, ಆ ಸಮಿತಿಯ ವತಿಯಿಂದ ಪ್ರತಿನಿಧಿಗಳನ್ನು ಭೇಟಿಯಾಗಿ, ಗಾಂಧಿ ಅನ್ನುವಂತೆ ಹಿಂದೂಸ್ಥಾನವು ಪ್ರಾಂತಿಕ ಸ್ವಾಯತ್ತತೆ ಸ್ವೀಕರಿಸಲು ತಯಾರಿದೆಯೋ ಏನೆಂದು ಅಂದಾಜು ಮಾಡಲಾಯ್ತು. ಈ ಸಮಿತಿಯು ಎಷ್ಟು ಮಂದಿ ಪ್ರತಿನಿಧಿಗಳನ್ನು ಭೇಟಿ ಮಾಡಿತೆಂಬ ಬಗ್ಗೆ ಸರಿಯಾದ ಮಾಹಿತಿ ಇಲ್ಲ . ಆಗಾಖಾನ್, ಸರ್ ತೇಜ್ ಬಹದ್ದೂರ್ ಸಪ್ರು ಮತ್ತು ನಾನು, ಹೀಗೆ ಮೂವರ ಸಂದರ್ಶನ ಪಡೆಯಲಾಯ್ತು. ಹಿಂದೂಸ್ಥಾನವು ಕೇವಲ ಪ್ರಾಂತಿಕ ಸ್ವಾಯತ್ತತೆಯನ್ನು ಒಪ್ಪಿಕೊಳ್ಳಬಾರದು, ಜೊತೆಗೆ ಮಧ್ಯವರ್ತಿ ಜವಾಬ್ದಾರಿಯಾದರೂ ಕೊಡಲಾಗದಿದ್ದರೆ, ಹಿಂದೂಸ್ಥಾನದಲ್ಲಿ ಶಾಂತತೆಯನ್ನು ನಿರೀಕ್ಷಿಸಲಾಗದು, ಎಂದು ನಾನು ನನ್ನ ಸಂದರ್ಶನದಲ್ಲಿ ಎಚ್ಚರಿಸಿದ್ದೆ. ಗಾಂಧಿ ಅವರು ಕನ್ಸರ್ವೇಟಿವ್ ಪಕ್ಷದೊಡನೆ ಸೇರಿದ್ದು, ಯಶಸ್ವಿ ಆಗಬಹುದಿತ್ತಾದರೂ, ಆಗ ಹಿಂದೂಸ್ಥಾನದಲ್ಲಿ ಅಲ್ಲೋಲ ಕಲ್ಲೋಲವಾಗುತ್ತಿತ್ತು, ಎಂಬುದರಲ್ಲಿ ತಿಲಮಾತ್ರವೂ ಸಂಶಯವಿಲ್ಲ. ಈ ಸಂಬಂಧ, ನಾ. ಜಯಕರ್ ಅವರ ಮನನೀಯ ಉದ್ಧಾರವನ್ನು ಇಲ್ಲಿ ನಮೂದಿಸಬೇಕು. ;

**ಗಾಂಧಿ ಪ್ರತಿಮೆ**

“ಏನು, ಅಂಬೇಡ್ಕರ್, ಈ ಕನ್ಸರ್ವೇಟಿವ್‌ಗಳು ಗಾಂಧಿ ಪ್ರತಿಮೆಯನ್ನು ನಿಲ್ಲಿಸುವ ದೃಶ್ಯ ಬೇಗನೇ ಕಾಣಲಿದೆ ಎಂದು ನಿಮಗನಿಸುವುದಿಲ್ವೇ?”

ನಾ. ಜಯಕರ್ ಅವರ ಮಾತು ಅಕ್ಷರಶಃ ಸತ್ಯವಿತ್ತು.ಕನ್ಸರ್ವೇಟಿವ್ ಪಕ್ಷಕ್ಕೆ ಗಾಂಧಿ ಅವರಿಂದಾದ ಉಪಕಾರಕ್ಕೆ ಪ್ರತಿಯಾಗಿ, ಕೃತಜ್ಞತೆಯಿಂದ ಅವರು ಗಾಂಧಿ ಅವರ ಪ್ರತಿಮೆ ನಿಲಿಸಲು ಹೊರಟಿದ್ದರು. ಆದರೆ ಮಿ, ಮ್ಯಾಕ್‌ಡೊನಾಲ್ಡ್ ಅವರಿಂದಾಗಿ ಇದು ತಪ್ಪಿ ಹೋಯ್ತು ...ಅವರೇ ಈ ಮಹಾತ್ಮರಿಂದ ಹಿಂದೂಸ್ಥಾನದ ಭವಿತವ್ಯವನ್ನು ಸಂಭಾಳಿಸಿದವರು.ಮ್ಯಾಕ್‌ಡೊನಾಲ್ಡ್ ವಿಷಯದಲ್ಲಿ ಪ್ರತಿಕೂಲ ಭಾವ ತಳೆದ ಹಿಂದೀ ಪ್ರತಿನಿಧಿಗಳು, ಈ ಘಟನೆಯ

ಬಗ್ಗೆ ಚಿಂತಿಸಿ ಮತ್ತೆ ತಮ್ಮ ಅಭಿಪ್ರಾಯ ರೂಪಿಸಿಕೊಳ್ಳಲಿ. ಹಲವು ಹಿಂದೀಯರಿಗೆ ಮ್ಯಾಕ್‌ಡೊನಾಲ್ಡ್ ಅವರ ಧೋರಣೆಯ ಬಗ್ಗೆ ಆಕ್ಷೇಪವಿದೆ. ಫೆಡರೇಶನ್‌ನ್ ಯೋಜನೆ ಮತ್ತು ಜಾತೀಯ ನಿರ್ಧಾರ ಇವೆರಡನ್ನೂ ಮ್ಯಾಕ್‌ಡೊನಾಲ್ಡ್ ಅವರ ತಲೆಗೇ ದಿನವೂ ಒಡೆಯಲಾಗುತ್ತಿದೆ. ಆದರೆ ಇವೆರಡೂ ದೋಷಗಳು ಅವರಿಗೆ ತಟ್ಟುವಂತಹುದಲ್ಲ, ಎಂಬುದು ನನ್ನ ಅಭಿಪ್ರಾಯ. ಕಾರಣ, ಫೆಡರೇಶನ್‌ನ ಸದ್ಯದ ವಿಕೃತ ಸ್ವರೂಪಕ್ಕೆ ಕಾರಣರು, ಗಾಂಧಿ, ಸಪ್ರೂ ಮತ್ತು ಶಾಸ್ತ್ರಿ, ಜವಾಬ್ದಾರಿ ರಾಜ್ಯಪದ್ಧತಿ ಅಸ್ತಿತ್ವಕ್ಕೆ ಬರುವುದೂ, ಬಿಡುವುದೂ, ಸಂಸ್ಥಾನಿಕ ಫೆಡರೇಶನ್‌ನಲ್ಲಿ ದಾಖಲಾಗುವುದು, ಬಿಡುವುದರ ಮೇಲೆ ಅವಲಂಬಿತವಾಗಿದೆ. ಈ ದುರ್ಗತಿಗೆ ಕಾರಣ, ಮ್ಯಾಕ್‌ಡೊನಾಲ್ಡ್ ಅವರ ಕ್ರಮವಲ್ಲ, ಬದಲು, ಹಿಂದೂಸ್ಥಾನದ ಮೇಲೆ ಹೇಳಿದ ವಿಶ್ವಸನೀಯ ನಾಯಕರು, ಬ್ರಿಟಿಷ್ ಹಿಂದೂಸ್ಥಾನದ ಹಿತಸಂಬಂಧ ಬುದ್ಧಿಪೂರ್ವಕ ಸಂಸ್ಥಾನಿಕರನ್ನು ಬಿಟ್ಟು ಕೊಟ್ಟುದೇ ಕಾರಣ.

ದುಂಡುಮೇಜಿನ ಪರಿಷತ್ತಿನ ಬ್ರಿಟಿಷ್ ಪ್ರತಿನಿಧಿಯನ್ನು ಮಧ್ಯವರ್ತಿ ಜವಾಬ್ದಾರಿ ಸ್ಥಾಪಿಸುವ ಸಂಬಂಧ, ಮಧ್ಯವರ್ತಿ ಕಾಯ್ದೆಮಂಡಳದ ಬ್ರಿಟಿಷ್ ಹಿಂದುಸ್ಥಾನದ ಪ್ರತಿನಿಧಿಯ ಅತಿರೇಕಗಳಿಗೆ ಕಡಿವಾಣ ಹಾಕುವ ಯಾವುದಾದರೂ ವ್ಯವಸ್ಥೆ ಅಥವಾ ಬಂಧನ ಮಧ್ಯವರ್ತಿ ಸಂವಿಧಾನದಲ್ಲಿ



ಇರಬೇಕೆಂದು ಅನಿಸುತ್ತದೆ. ಹೀಗೆ ಕಡಿವಾಣ ಹಾಕುವ ಯೋಜನೆಯೊಂದು ಬೇಕಿದ್ದರೆ, ಅದನ್ನು ಯಾವ ರೀತಿ ಅಸ್ತಿತ್ವಕ್ಕೆ ತರುವುದು, ಎಂಬ ಬಗ್ಗೆ ನಾನೊಂದು ಯೋಜನೆ ಮಂಡಿಸಿದ್ದೆ. ಸಂಸ್ಥಾನಿಕರ ಪ್ರತಿನಿಧಿಯಲ್ಲದೆ, ಮಧ್ಯವರ್ತಿ ಕಾಯ್ದೆ ಮಂಡಳದಲ್ಲಿ ಸರಕಾರದಿಂದ ನಿಯುಕ್ತ ಕೂಟವೊಂದನ್ನು ರಚಿಸಬೇಕೆಂಬುದೇ ಆ ಯೋಜನೆ. ಇದರಿಂದ ಎರಡು ಉದ್ದೇಶ ಸಾಧಿಸಿದಂತಾಗುತ್ತದೆ. ಒಂದು, ಬ್ರಿಟಿಶ್ ಪ್ರತಿನಿಧಿಯ ನಿಯಂತ್ರಣದ ಬೇಡಿಕೆ ಪೂರೈಸಿದಂತಾಗುವುದು, ಮತ್ತು ಎರಡನೆಯದು, ಮಧ್ಯವರ್ತಿ ಜವಾಬ್ದಾರಿಯ ಸ್ಥಾಪನೆ, ಸಂಸ್ಥಾನಿಕರು ಬರುವ, ಬರದೆ ಇರುವದರ ಮೇಲೆ ಅವಲಂಬಿಸಿರುವುದಿಲ್ಲ. ಅಲ್ಲದೆ, ಅದರಿಂದಾಗಿ ಮಧ್ಯವರ್ತಿ ಜವಾಬ್ದಾರಿಯ ಸ್ಥಾಪನೆಯಲ್ಲಿ ಭಯವೇನೂ ಇರದೆ, ಬ್ರಿಟಿಶ್

ಹಿಂದುಸ್ಥಾನಕ್ಕೆ ಸಂಸ್ಥಾನಿಕರ ಸಮಾನ ಸಂಬಂಧದಿಂದ ಸವಲತ್ತಿನ ವಿಷಯದಲ್ಲಿ ಲಾಭದಾಯಕವಾಗುವುದು. ಮತ್ತು ಸಂಸ್ಥಾನದ ಪ್ರಜೆಗಳಿಗೆ ತಮ್ಮ ಪ್ರತಿನಿಧಿಯನ್ನಾರಿಸುವ ಹಕ್ಕು, ಉತ್ತಮ ರೀತಿಯಲ್ಲಿ ಪ್ರಾಪ್ತವಾಗುವುದು. ನಾನು ಮಂಡಿಸಿದ ಈ ಯೋಜನೆ ಈ ರೀತಿಯಲ್ಲಿ ಬ್ರಿಟಿಶ್ ಪ್ರತಿನಿಧಿಗಳು ಮಂಡಿಸಿದ ಮತ್ತು ಈಗ ಸಂವಿಧಾನದಲ್ಲಿ ನಮೂದಿತವಾದ ಯೋಜನೆಗಿಂತ ಭಿನ್ನ, ಆದರೂ ಸಂಪೂರ್ಣ ಹೇಗಾಗುವುದು, ಎಂಬುದು ಇದರಿಂದ ಕಾಣಬರುತ್ತದೆ.

**ಮ್ಯಾಕ್ಡೊನಾಲ್ಡ್ ದೋಷಿಯಲ್ಲ.**

ನನ್ನ ಈ ಯೋಜನೆ ಸ್ವೀಕೃತವಾಗಲಿಲ್ಲ, ನಿಜ, ಆದರೆ, ಇದು ಮಿ. ಮ್ಯಾಕ್‌ಡೊನಾಲ್ಡ್ ಅವರ ಉಪೇಕ್ಷೆಯಿಂದಾದುದೆಂದು ನಾನೆಂದೂ ಹೇಳಲಾರೆ. ಆದರೆ, ಸಪ್ರೂ, ಶಾಸ್ತ್ರಿ ಮತ್ತು ಗಾಂಧಿ ಈ ಮೂವರು ಬ್ರಿಟಿಶ್ ಹಿಂದುಸ್ಥಾನದ ಪ್ರತಿನಿಧಿಗಳು ಬೆಂಬಲಿಸದಿದ್ದುದರಿಂದಲೇ ನನ್ನ ಈ ಸೂಚನೆ ತಿರಸ್ಕರಿಸಲ್ಪಟ್ಟಿತು. ಸರ್ ತೇಜ್ ಬಹಾದುರ್ ಸತ್ತು ಅವರು ಸರಕಾರ ನಿಯುಕ್ತ ಕೂಟಕ್ಕಾಗಿ ಸಂಸ್ಥಾನಿಕರ ಪ್ರತಿನಿಧಿಗಳ ಯೋಜನೆಗೆ ತಮ್ಮ ಒಲವು ತೋರಿದ್ದನ್ನು ಕಂಡು ನಮಗೆ ಆಶ್ಚರ್ಯವೆನಿಸುತ್ತದೆ. ಸಪ್ರೂವಿನಂತಹ ನಾಯಕರು ಬೇಕೆಂದಾಗ ಇಲ್ಲವಾಗಿಸುವ ಸರಕಾರ ನಿಯುಕ್ತ ಕೂಟದ ಬದಲಿಗೆ ಸಂಸ್ಥಾನಿಕರ ಶಾಶ್ವತ ಕೂಟಕ್ಕೆ ಮಾನ್ಯತೆ ನೀಡಿದ್ದಕ್ಕೆ ಏನನ್ನೋಣ? ಅವರ ಈ ವಿಚಾರ ಸರಣಿ ನಮಗೆ ಈಗಲೂ ಸಮಸ್ಯೆಯೇ.

ಸರ್ ಮ್ಯಾಕ್‌ಡೊನಾಲ್ಡ್ ಅವರ ತಲೆಯ ಮೇಲೆ ಕಮ್ಯೂನಲ್ ಅವಾರ್ಡ್ ನ ಮಡಕೆ ಒಡೆದಿದೆ. ಆದರೆ ಈ ಬಗೆಗೂ ಅವರು ದೋಷಿ ಅನ್ನುವಂತಿಲ್ಲ. ಕಮ್ಯೂನಲ್ ಅವಾರ್ಡ್ ನ ಅನಿಷ್ಟ ಯೋಜನೆಗೆ ಸ್ವತಃ ಹಿಂದೀ ಜನರೇ ಕಾರಣರು. ನನ್ನ ಈ ವಿಚಾರ ಔದಾರಹೀನವೆನಿಸ ಬಹುದು, ನಿಜ; ಆದರೆ, ನಿಜ ಹೇಳಬೇಕೆಂದರೆ, ಜಗತ್ತಿನ ಇತರರಿಗೆ ತಿಳಿದುದು, ಹಿಂದೂಗಳಿಗೆ ಇದುವರೆಗೆ ತಿಳಿದಿಲ್ಲ, ಎಂಬುದು ನನ್ನ ಪ್ರಾಮಾಣಿಕ ತಿಳುವಳಿಕೆ, ದುಂಡು ಮೇಜಿನ ಪರಿಷತ್ತಿನಲ್ಲಿ ಹಿಂದೂಗಳ ಜಾತೀಯ ಒಪ್ಪಂದಕ್ಕೆ ಸಂಬಂಧಿತ ಧೋರಣೆ, ಇದುವರೆಗೆ ಮೂರ್ಖತನದ್ದಾಗಿದೆ. ಈ ಧೋರಣೆಯ ವಿಧಾಯಕವು ಯಾರ ಪಕ್ಷದಲ್ಲೂ ಇಲ್ಲ. ಹಿಂದೂಗಳು ಇಷ್ಟೆಲ್ಲ ಹಾರಾಡುವಂತಹುದು ಆ ಅವಾರ್ಡ್‌ನಲ್ಲಿ ಏನಿದೆಯೆಂದು ನನಗೆ ಇನ್ನೂ ತಿಳಿದಿಲ್ಲ. ಅವಾರ್ಡ್‌ಗೆ ನಮ್ಮ ವಿರೋಧವಿದೆಯೆಂದು ಸಾಧಾರಣ ಎಲ್ಲರೂ ಹೇಳುತ್ತಾರೆ. ಆದರೆ, ಅದರಲ್ಲಿನ ಒಂದು ವಿಷಯ ಹಾನಿಕಾರಕವಿದೆ ಎಂದು ಮಾತ್ರ ಯಾರೂ ಸ್ಪಷ್ಟವಾಗಿ ತೋರಿಸಿ ಕೊಟ್ಟಿಲ್ಲ. ನನ್ನ ಸ್ವಂತ ದೃಷ್ಟಿಗೆ ಅಕ್ಷಮ್ಯ ಹಾಗೂ ಅಸಮರ್ಥನೀಯ

ಎಂದು ತೋರುವ ಈ ಕಮ್ಯೂನಲ್ ಅವಾರ್ಡ್‌ನಲ್ಲಿ ಒಂದೇ ವಿಷಯವಿದೆ. ಅದೆಂದರೆ, ಈ ಅವಾರ್ಡ್, ಅಲ್ಪಸಂಖ್ಯಾತರ ವಿರೋಧವಿದ್ದೂ, ಕೆಲ ಪ್ರಾಂತ್ಯಗಳಲ್ಲಿ ಬಹುಸಂಖ್ಯಾತ ವರ್ಗಕ್ಕೆ ಕಾಯ್ದೆಬದ್ಧವಾಗಿ ಸ್ವತಂತ್ರ ಮತದಾರ ಸಂಘ ನೀಡಿದೆ. ಆದರೆ ಹೀಗಾಗಲು ಕಾರಣರಾರು? ಸ್ವತಃ ಹಿಂದೂಗಳೇ ಜವಾಬ್ದಾರರೆಂದು ನಾನು ಹೇಳುತ್ತೇನೆ.ಸ್ವತಂತ್ರ ಮತದಾರ ಸಂಘಕ್ಕೆ ಸಮ್ಮತಿ ಕೊಡುವಂತಿಲ್ಲವೆಂದು ವಿರೋಧಿ ಹಿಂದೂಗಳು ಪಟ್ಟು ಹಿಡಿದು ಕುಳಿತಿದ್ದರು. ಆದರೆ ಈ ಅವಾರ್ಡ್ ಮುಸಲ್ಮಾನರಿಗೆ ಗ್ರಾಹ್ಯ ಅಷ್ಟೇ ಅಲ್ಲ, ಕಡಿಮೆ ಹಾನಿಕಾರಕ ಆಗುವಂತಹ ಒಂದಾದರೂ ವಿಧಾಯಕದ ಸೂಚನೆಯನ್ನು ಮಂದಿಡುವ ತತ್ಪರತೆಯನ್ನು ಅವರು ತೋರಿಲ್ಲ. ಈ ಜಾತಿಯ ಪ್ರಶ್ನೆಯ ಗೊಂದಲದಿಂದ ಹೊರಬರಲು ನನ್ನದೊಂದು ಯೋಜನೆಯಿತ್ತು, ಮತ್ತು ನಾನದನ್ನು ಆಕ್ಸ್‌ಫರ್ಡ್‌ನ ಪ್ರೊಫೆಸರ್ ಮಿ. ಎಡ್ವರ್ಡ್ ಥಾಮ್ಸನ್ ಅವರ ಕಿವಿಗೂ ಹಾಕಿದ್ದೆ. ಅದು ಹೀಗಿದೆ ; ಸ್ವಯಂ ನಿರ್ಣಯದ ತತ್ವದಂತೆ ಪ್ರತಿ ಪ್ರಾಂತ್ಯದಲ್ಲಿ ಅಲ್ಪಸಂಖ್ಯಾತ ಸಮಾಜಕ್ಕೆ ಸ್ವತಂತ್ರ ಇಲ್ಲವೇ ಸಂಯುಕ್ತ ಮತದಾರ ಸಂಘ ನಿಶ್ಚಿತಗೊಳಿಸುವ ಹಕ್ಕು ಕೊಡುವಂತಾಗಲಿ ; ಮತದಾರ ಸಂಘದ ಪ್ರಶ್ನೆಯನ್ನು ಬಹು ಸಂಖ್ಯಾತ ಸಮಾಜಕ್ಕೆ ಒಪ್ಪಿಸಬಾರದು. ನನ್ನ ಈ ಸೂಚನೆ ಜಾರಿಗೆ ಬಂದಿದ್ದರೆ, ಇಂದು ಕಾಣುತ್ತಿರುವ ಕಮ್ಯೂನಲ್ ಅವಾರ್ಡ್ನ ಸ್ವರೂಪ ಬೇರೆ ಆಗಿರುತ್ತಿತ್ತು.

**ನನ್ನ ಯೋಜನೆಯ ಲಾಭ**

ನನ್ನ ಈ ಯೋಜನೆಯಿಂದ ಏನು ಲಾಭವಾಗುತ್ತಿತ್ತೋ ನೋಡೋಣ. ಪಂಜಾಬ, ಬಂಗಾಲ, ಸಿಂಧ, ಮತ್ತು ಗಡಿನಾಡ ಪ್ರಾಂತಗಳ ಅಲ್ಪ ಸಂಖ್ಯಾತ ಹಿಂದೂ ಸಮಾಜದ ಇಚ್ಛೆಯಂತೆ ಈ ಪ್ರಾಂತ್ಯದಲ್ಲಿ ಸಂಯುಕ್ತ ಮತದಾರ ಸಂಘ ಅಸ್ತಿತ್ವಕ್ಕೆ ಬಂತು ಮತ್ತು ಇತರ ಪ್ರಾಂತ್ಯಗಳಲ್ಲಿನ ಅಲ್ಪಸಂಖ್ಯಾತ ಮುಸಲ್ಮಾನರ ಇಚ್ಛೆಯಂತೆ ಸ್ವತಂತ್ರ ಮತದಾರ ಸಂಘ ಸ್ಥಾಪನೆಯಾದುದು ಕಂಡು ಬರುತ್ತದೆ. ನನ್ನ ಈ ಯೋಜನೆಯಿಂದಾಗಿ, ಒಟ್ಟು ಸಂಯುಕ್ತ ಮತದಾರ ಸಂಘವಿರಲೆಂಬ ಹಿಂದೂ ಬೇಡಿಕೆ, ಒಟ್ಟು ಸ್ವತಂತ್ರ ಮತದಾರ ಸಂಘವಿರಲೆಂಬ ಮುಸಲ್ಮಾನರ ಬೇಡಿಕೆ, ಈ ಇಬ್ಬರ ಬೇಡಿಕೆಯಿಂದ ಮಧ್ಯಮ ಮಾರ್ಗವನ್ನು ಸಾಧಿಸಲಾಯ್ತು. ಪ್ರೊ, ಥಾಮ್ಸನ್ ಅವರಿಗೆ ಈ ಯೋಜನೆ ಇಷ್ಟವಾಗಿತ್ತಷ್ಟೇ ಅಲ್ಲ, ಕೂಡಲೇ ಅದನ್ನು ಪಂಡಿತ ಮಾಲವೀಯರಿಗೆ ತಿಳಿಸಿ ಕೊಡಲೆಂದು ಅವರು ನನ್ನನ್ನು ಕರೆದೊಯ್ದರು. ಆದರೆ ದುರ್ದೈವವೆಂದರೆ, ಪಂಡಿತ ಮಾಲವೀಯರು ನಮಗೆ ದಾರುಣ ನಿರಾಶೆಯನ್ನು ಉಂಟು ಮಾಡಿದರು. ಎಲ್ಲೆಡೆ ಸಂಯುಕ್ತ ಮತದಾರ ಸಂಘ ಅಸ್ತಿತ್ವಕ್ಕೆ ತರುವ ಬೇಡಿಕೆಯನ್ನು ಕೈ ಬಿಡಲಿಲ್ಲವಷ್ಟೇ ಅಲ್ಲ, ಬ್ರಿಟಿಶ್ ಸರಕಾರವು ಹಿಂದುಸ್ಥಾನದಲ್ಲಿ ಯಾವುದೇ ಜಾತಿಯ ಸ್ವತಂತ್ರ ಮತದಾರ ಸಂಘ ಆರಂಭಿಸಲಾಗದೆಂದು ಅವರಿಗನಿಸಿದ್ದರಿಂದ ನನ್ನ ಸೂಚನೆಯನ್ನು ಪರಿಗಣಿಸುವ ಅವಶ್ಯಕತೆ ಅವರಿಗೆ ಕಾಣಲಿಲ್ಲ. ಹಿಂದೂ ಪ್ರತಿನಿಧಿಗಳು ನನ್ನ ಬೇಡಿಕೆಗೆ ಬೆಂಬಲ ಇತ್ತಿದ್ದರೆ, ಬ್ರಿಟಿಶ್ ಸರಕಾರದಿಂದ ಅದಕ್ಕೆ ಮಾನ್ಯತೆ ದೊರೆಯುತ್ತಿತ್ತೆಂಬುದರಲ್ಲಿ ಸಂಶಯವಿಲ್ಲ. ಇದು ಖಂಡಿತವೆನ್ನಲು ಎರಡು ಆಧಾರಗಳಿವೆ. ಜಾಯಿಂಟ್ ಪಾರ್ಲಿಮೆಂಟರಿ ಕಮಿಟಿಯ ಸಭೆಗೆ ಮುನ್ನ ಕಮಿಟಿಯ ಹಲವು ಸದಸ್ಯರನ್ನು ನಾನು ಭೇಟಿಯಾದಾಗ ,ಕಮ್ಯೂನಲ್ ಅವಾರ್ಡ್ ನಿಂದಾಗುವ ಅನ್ಯಾಯದ ಬಗ್ಗೆ ತಿಳಿಸಿ ಹೇಳಿದ್ದೆ. ಪಕ್ಷಪಾತದಿಂದಲ್ಲ, ನ್ಯಾಯಪ್ರೇಮದಿಂದ.ಆಗ ಹಲವರು ನನ್ನ



ಸೂಚನೆಯನ್ನು ಬೆಂಬಲಿಸಿದ್ದರು. ಲಾರ್ಡ್ ಝೇಟ್‌ಲ್ಯಾಂಡ್ ಅವರೂ ಅದನ್ನು ಇಷ್ಟಪಟ್ಟರು , ಮತ್ತು ಚರ್ಚೆಗೆ ಬಂದಾಗ, ನನ್ನ ಸೂಚನೆಯಂತೆ ಕಮ್ಯೂನಲ್ ಅವಾರ್ಡ್‌ಗೆ ಉಪಸೂಚನೆ ತರುವ ಅಭಯವನ್ನೂ ಇತ್ತರು, ಮತ್ತು ಹಾಗೆ ಮಾಡಿದರು, ಕೂಡ. ಮ್ಯಾಕ್‌ಡೊನಾಲ್ಡ್ ಅವರೂ ನನ್ನ ಯೋಜನೆಯ ಉಪಯುಕ್ತತೆಯನ್ನು ಒಪ್ಪಿಕೊಂಡು, ತಮ್ಮ ಸ್ವಂತ ಉಪಯೋಗಕ್ಕಾಗಿ ಕಮ್ಯೂನಲ್ ಅವಾರ್ಡ್ ನ ಮೇಲೆ ಒಂದು ವಿಸ್ಕತ, ಮುಕ್ತ ಟಿಪ್ಪಣಿ ತಯಾರಿಸುವಂತೆ ಹೇಳಿದ್ದರು. ಅಂತೆಯೇ ಬರೆದು ಸಿದ್ಧಪಡಿಸಿ ನಾನು ಅವರಿಗೆ ಒಪ್ಪಿಸಿದ್ದೆ.

ಆದರೆ ಮತ್ತೆ ಅವರು ನನಗೆ ಪತ್ರ ಬರೆದು, ಕಮ್ಯುನಲ್ ಅವಾರ್ಡ್ ಬಗ್ಗೆ ತಾನೇನೂ ಮಾಡಲಾಗುವುದಿಲ್ಲವೆಂದು ತಿಳಿಸಿದರು.

ಅಂದರೆ ನನ್ನ ಯೋಜನೆ ಅಮಾನ್ಯವೆಂದೇನೂ ಇದರರ್ಥವಲ್ಲ. ನನ್ನ ಯೋಜನೆ ಜಾರಿಗೆ ತಂದರೆ ಮುಸಲ್ಮಾನರು ಕುಪಿತರಾಗುವರು ಮತ್ತು ಹಿಂದೂಗಳು ಅಸಂತುಷ್ಟರಾಗುವರು, ಎಂದೇ ಅವರು ಈ ಬಗ್ಗೆ ಏನೂ ಮಾಡದಿರಲು ನಿಶ್ಚಯಿಸಿದರು. ನನ್ನ ಯೋಜನೆಗೆ ಪಂಡಿತ ಮಾಲವೀಯ ಅವರಂತಹವರ ಬೆಂಬಲ ಇದ್ದರೂ, ಮಿ. ರ್‍ಯಾಮ್ಸೇ ಮ್ಯಾಕ್‌ಡೊನಾಲ್ಡರು ಅದನ್ನು ಜಾರಿಗೆ ತರಲು ಅತಿಶಯ ಯತ್ನ ಗೈದರೆಂಬುದರಲ್ಲಿ ಸಂಶಯವಿಲ್ಲ. ಇದನ್ನೆಲ್ಲ ನಾನು ಇಲ್ಲಿ ಹೇಳಲು ಕಾರಣ, ಮ್ಯಾಕ್‌ಡೊನಾಲ್ಡ್ ಅವರ ಧೋರಣೆಯ ಬಗ್ಗೆ ಹಬ್ಬಿದ ತಪ್ಪು ತಿಳುವಳಿಕೆಯನ್ನು ದೂರ ಮಾಡುವುದೇ ಆಗಿದೆ.

ಮ್ಯಾಕ್‌ಡೊನಾಲ್ಡರು ಪಕ್ಷದ್ರೋಹಿ ಇರಬಹುದು, ಆದರೆ ಅವರು ಹಿಂದುಸ್ಥಾನದ ಮಿತ್ರರಾಗಿದ್ದರು, ಮತ್ತು ತಮ್ಮ ಸ್ನೇಹಭಾವವನ್ನು ಕೃತಿಗಿಳಿಸಲು ಪ್ರಾಮಾಣಿಕವಾಗಿ ಯತ್ನಿಸಿದ್ದರು.

* * * *

## ೮೧. ಗಾಂಧಿ ಮಹಾತ್ಮರೇನು?

ಈ ಪ್ರಶ್ನೆಯಿಂದ ನನಗೆ ಜಿಗುಪ್ಸೆ ಅನಿಸುತ್ತಿದೆ. ಇದಕ್ಕೆ ಕಾರಣಗಳು ಎರಡು. ಒಂದು, ನಾನು ಎಲ್ಲ ಮಹಾತ್ಮರ ದ್ವೇಷಿ, ಮತ್ತು ಎಲ್ಲ ಮಹಾತ್ಮರನ್ನೂ ತೆಗೆದು ಹಾಕಬೇಕೆಂದು ನನ್ನ ಅಭಿಪ್ರಾಯ. ಅವರ ಅಸ್ತಿತ್ವ ಯಾವುದೇ ರಾಷ್ಟ್ರಕ್ಕಾದರೂ ಶಾಪವೇ. ಕಾರಣ, ಅದು ಬುದ್ದಿ ಮತ್ತು ಬುದ್ಧಿವಾದದ ಜಾಗದಲ್ಲಿ ಅಂಧಶ್ರದ್ದೆಯನ್ನು ಪ್ರತಿಷ್ಠಾಪಿಸಲು ನೋಡುತ್ತದೆ. ಎರಡನೆಯದೆಂದರೆ, ಮಹಾತ್ಮಾ ಎಂಬ ಶಬ್ದದ ನಿಜವಾದ ಅರ್ಥ, ಜನರ ದೃಷ್ಟಿಯಲ್ಲಿ ಏನೆಂದು ನನಗೆ ತಿಳಿದಿಲ್ಲ. ಆದ್ದರಿಂದ ಈ ಪ್ರಶ್ನೆಯ ಉತ್ತರ ಕೊಡುವುದು ಅಸಾಧ್ಯ. ಆದರೂ `ಚಿತ್ರಾ' ಪತ್ರಿಕೆಯ ಸಂಪಾದಕರು, ಈ ಪ್ರಶ್ನೆಯ ಉತ್ತರಕ್ಕಾಗಿ ಮುಷ್ಕರ ಹಿಡಿದು ಕುಳಿತಿರುವುದರಿಂದ, ಉತ್ತರಿಸಲು ನಾನು ಯತ್ನಿಸುತ್ತೇನೆ.

ಸರ್ವಸಾಧಾರಣ ಹಿಂದೂಗಳ ದೃಷ್ಟಿಯಲ್ಲಿ ಯಾವುದೇ ಮಹಾತ್ಮನಲ್ಲಿ ಮೂರು ವಿಷಯಗಳಿರಬೇಕಾದುದು ಅಗತ್ಯ. ಆತನ ಉಡುಪು, ಆತನ ಶೀಲ ಮತ್ತು ಆತನ ಶಿಕ್ಷಣ. ಅವುಗಳಲ್ಲಿ ಉಡುಪೇ ಮಹಾತ್ಮನ ಪರೀಕ್ಷಕ ಎಂದುಕೊಂಡರೂ, ಸ್ವಂತದ ಮೋಕ್ಷಕ್ಕಾಗಿ ಇತರರ ಮುಖದತ್ತ ನೋಡುವ ಅಜ್ಞಾನಿಯ ಅಭಿಪ್ರಾಯದಲ್ಲಿ ಬಹುಶಃ ಮೋಹನದಾಸ ಗಾಂಧಿ ಮಹಾತ್ಮ ಅನಿಸಬಹುದು. ವೇಷ ಬದಲಿಸಿ ಮಹಾತ್ಮ ಅನಿಸುವುದು ಹಿಂದುಸ್ಥಾನದಲ್ಲಿ ಬಹಳ ಸುಲಭ. ಸಾಮಾನ್ಯ ರೀತಿಯಲ್ಲಿ ಜೀವನ ಸಾಗಿಸುವ ಸಾಮಾನ್ಯ ಮನುಷ್ಯ ಎಷ್ಟೇ ಒಳ್ಳೆಯ ಕಾರ್ಯ ಮಾಡಿದರೂ ಅವರ ಬಗ್ಗೆ ಹಿಂದೂಗಳ ಮನದಲ್ಲಿ ಯಾವ ಆದರ ಭಾವನೆ ಹುಟ್ಟುವುದಿಲ್ಲ. ಆದರೆ ಅದೇ ಸಾಮಾನ್ಯ ಮನುಷ್ಯ ಒಳ್ಳೆಯದೇನೂ ಮಾಡದೆ ಅಸಾಮಾನ್ಯ ವಿಚಿತ್ರವಾಗಿ ಕಾಣಿಸಿದರೆ, ಅಷ್ಟಕ್ಕಾಗಿ ಆತ ಸಂತನಾಗುತ್ತಾನೆ, ಮಹಾತ್ಮನಾಗುತ್ತಾನೆ, ಆದರ್ಶವಾಗುತ್ತಾನೆ. ಸೂಟು ಬೂಟು, ಕೋಟು ಧೋತರದ ಸಾದಾ ಪೋಷಾಕು ತೊಟ್ಟರೆ, ಜನರು ನಿಮ್ಮೆಡೆಗೆ ಇಣಿಕಿಯೂ ನೋಡುವುದಿಲ್ಲ. ಆದರೆ ಅದೇ ನೀವು ದಿಗಂಬರರಾದರೆ, ಜಟೆ ಬಿಟ್ಟರೆ, ಗಟಾರದ ನೀರು ಕುಡಿದರೆ, ಜನ ನಿಮ್ಮ ಕಾಲಿಗೆ ಬೀಳ ತೊಡಗುತ್ತಾರೆ. ಮತ್ತೆ ಹಿಂದೂಸ್ಥಾನದಲ್ಲಿ ಗಾಂಧೀ ಮಹಾತ್ಮನಾದರೆ ಅದರಲ್ಲೇನು ಹೊಸತು? ಬೇರೆ ಯಾವುದೇ ದೇಶದಲ್ಲಾದರೂ, ಇಂತಹ ಮಹಾತ್ಮನನ್ನು ಅಸಹ್ಯ ಹುಚ್ಚನೆಂದು ವಡಿ ಮಾಡುವ ರು.

ಗಾಂಧೀ ಅವರ ಬೋಧನೆ ನೋಡಲೇನೋ ಸಿಹಿಯಾಗಿದೆ. ಸತ್ಯ ಹಾಗೂ ಅಹಿಂಸೆ ಉದಾತ್ತ ತತ್ವಗಳೇ ಆಗಿವೆ; ಮತ್ತು ಗಾಂಧಿ ಅವರು ಆಧುನಿಕ ಜಗತ್ತಿಗೆ ಅದರ ಜಯಘೋಷವನ್ನು ಅಪೂರ್ವ ಆಡಂಬರದಿಂದಲೇ ಮಾಡುತ್ತಾರೆ. ಈ ತತ್ವವನ್ನು ಅವರು ಉಚ್ಚರಿಸಿದ ಮಾತ್ರಕ್ಕೆ ಹಿಂದೂಗಳು ಅವರ ಹಿಂದೆ ಓಡುತ್ತಾರೇಕೆಂದು ತಿಳಿಯುತ್ತಿಲ್ಲ. ಈ ತತ್ವವನ್ನು ಬುದ್ಧನು ಬಹಳ ಹಿಂದೆಯೇ ಬೋಧಿಸಿದ್ದಾನೆ. ಬುದ್ಧಿಹೀನರ ವಿನಃ ಬೇರಾರೂ ಇದರ ಶ್ರೇಯವನ್ನ ಗಾಂಧಿ ಅವರಿಗೆ ಕೊಡಲಾರರು. ಮಾನವೀಯ ಸಂಸ್ಕೃತಿಯ ರಕ್ಷಣೆಗೆ ಸತ್ಯ ಮತ್ತು ಅಹಿಂಸೆ, ಈ ಎರಡು ತತ್ವಗಳ ಅಗತ್ಯ ಇದೆಯೆಂದು ಯಾರೂ ಹೊಸದಾಗಿ ತಿಳಿಸಬೇಕಾಗಿಲ್ಲ. ಇದರಲ್ಲಿ ಗಾಂಧಿಯದು



ಹೊಸತೇನೂ ಇಲ್ಲ.ಸತ್ಯ ಮತ್ತು ಅಹಿಂಸೆಯ ಪ್ರಯೋಗದ ಬಗ್ಗೆ ಆಗಾಗ ಏಳುವ ಒಟ್ಟು ಪ್ರಶ್ನೆಗಳ ಮೇಲೆ ಗಾಂಧಿ ಅವರು ಒಂದಿಷ್ಟು ಬೆಳಕು ಚೆಲ್ಲಿದರೆಂದು ಅವರು ಮಹಾತ್ಮಾ ಪದವಿಗೆ ಪ್ರಾಪ್ತರಾಗಿದ್ದಾರೆ, ಮತ್ತು ಜಗತ್ತು ಅವರಿಗೆ ಸದಾ ಋಣಿಯಾಗಿದೆ. ಯಾವಾಗ ಸತ್ಯ ನುಡಿಯಬೇಕು? ಯಾವಾಗ ಹಿಂಸೆ ಸಮರ್ಥನೀಯವಾಗಿರುತ್ತದೆ? ಈ ಎರಡು ಪ್ರಶ್ನೆಗಳ ಉತ್ತರಕ್ಕಾಗಿ ಜಗತ್ತು ಕಾಯುತ್ತಿದೆ. ಸತ್ಯ ಮತ್ತು ಅಹಿಂಸೆಯ ಪ್ರಯೋಗವನ್ನು ಸಾಧ್ಯವಾದಂತೆ ಮಾಡಬೇಕೆಂದು ಬುದ್ಧನ ಮತ. ಏಸುಕ್ರಿಸ್ತ ಈ ಬಗ್ಗೆ ಏನು ಹೇಳಿರುವನೆಂದು ತಿಳಿಯುವ ದಾರಿಯಿಲ್ಲ. ಬಹುಶಃ, ಉತ್ತರಿಸತಕ್ಕೆ ಸಮಯಾವಕಾಶವನ್ನು ಪಿಲಾತ ಆತನಿಗೆ ಕೊಟ್ಟಿರಲಿಕ್ಕಿಲ್ಲ. ಗಾಂಧೀ ಇದಕ್ಕೆ ಉತ್ತರಿಸಿರುವರೇನು? ಹಾಗೇನೂ ಕಾಣಿಸುತ್ತಿಲ್ಲ. ಅವರ ಬೋಧನೆಯ ಬಗ್ಗೆ ವಿಚಾರ ಮಾಡಿದರೆ, ಅದು ಇತರರಿಂದ ಎರವಲು ತಂದುದೆಂದು ಸುಲಭವಾಗಿ ಹೇಳಬಹುದು. ಸತ್ಯ ಮತ್ತು ಅಹಿಂಸೆ ಅವರ ಶೋಧವೇನಲ್ಲ.

ಗಾಂಧಿ ಅವರ ಶೀಲದ ಬಗ್ಗೆ ಹೇಳುವುದಾದರೆ, ಅವರ ಕೃತ್ಯಗಳೆಲ್ಲ ಸುಳ್ಳು ನಾಣ್ಯದಂತೆ, ನಮ್ರತೆಯೂ ಕಪಟ ನಾಟಕದಂತೆ ಅನಿಸುತ್ತದೆ.ಸ್ವತಃ ಎಲ್ಲರಿಗಿಂತ ಮುಂದೆ ಇರುವಲ್ಲಿ ಅವರು ವಿಶೇಷ ಕೌಶಲ್ಯ ಸಾಧಿಸಿದ್ದಾರೆ. ಯಾವಾತನಿಗೆ ತನ್ನ ಕರ್ತವ್ಯಪರತೆಯ ಬಗ್ಗೆ, ಕಳಕಳಿಯ ಬಗ್ಗೆ ಮತ್ತು ತನ್ನ ಸಂದೇಶದ ಸತ್ಯತೆಯ ಬಗ್ಗೆ ಅತುಲ

ವಿಶ್ವಾಸವಿದೆಯೋ, ಅಂತಹ ವ್ಯಕ್ತಿ ಎದುರಿನಿಂದ ಹಲ್ಲೆಗೈದು ತನ್ನ ಸ್ಥಾನ ದೃಢ ಪಡಿಸಿಕೊಳ್ಳುತ್ತಾನೆ. ಪಕ್ಕದಿಂದ ಆಘಾತಿಸುವ ಅಗತ್ಯ ಆತನಿಗಿರುವುದಿಲ್ಲ. ಹಾಗೆ ಮಾಡುವುದು ದುರ್ಬಲ ಸೇನಾನಿಯೊಬ್ಬ ಶೋಧಿಸಿದ ತಂತ್ರವಷ್ಟೇ.

ಗಾಂಧಿ ಅವರು ನಿತ್ಯವೂ ಇದೇ ತಂತ್ರವನ್ನು ಅವಲಂಬಿಸುತ್ತಿದ್ದಾರೆ. ಅನೇಕ ವರ್ಷಗಳ ವರೆಗೆ ಅವರು ತಮ್ಮನ್ನು ಗೋಖಲೆ ಅವರ ವಿನಮ್ರ ಅನುಯಾಯಿ ಎಂದು ಹೇಳಿಕೊಳ್ಳುತ್ತಿದ್ದರು. ಮತ್ತೆ ಕೆಲ ಕಾಲ ತಿಲಕರ ಗುಣಗಾನದಲ್ಲಿ ನಿರತರಾಗಿದ್ದರು. ಅವರು ತಿಲಕರನ್ನು ದ್ವೇಷಿಸುತ್ತಿದ್ದರೆಂಬುದು ಎಲ್ಲರಿಗೂ ಗೊತ್ತು. ಆದರೂ ತಿಲಕರ ಹೆಸರಿನ ಉಪಯೋಗ ಮಾಡಿದ್ದಲ್ಲದೆ ತಮಗೆ ಒಂದು ಕೋಟಿಯ ಸ್ವರಾಜ್ಯ ನಿಧಿ ಬರುವಂತಿಲ್ಲವೆಂದರಿತು, ತನ್ನ ಖಾಸಗಿ ಭಾವನೆಯನ್ನು ಬದಿಗಿಟ್ಟು ನಡೆದರು. ನಿಜವಾಗಿ ನೋಡಿದರೆ ಭಾರತದಲ್ಲಿ ಕ್ರೈಸ್ತಧರ್ಮದ ಕಡುವಿರೋಧಿ ಅವರಾಗಿದ್ದರು. ಆದರೂ, ಪಾಶ್ಚಾತ್ಯ ಜಗತ್ತನ್ನು ಖುಶಿ ಪಡಿಸಲು, ಸಂಕಟ ಸಮಯದಲ್ಲಿ ತಾನು ನಿತ್ಯವೂ ಬೈಬಲ್ ಪಠಿಸುವುದಾಗಿ ಹೇಳುತ್ತಿದ್ದರು. ಅವರ ಕಪಟತನದ ಇನ್ನೆರಡು ಉದಾಹರಣೆಗಳನ್ನು ನಾನು ಕೊಡಬಲ್ಲೆ. ದುಂಡು ಮೇಜಿನ ಪರಿಷತ್ತಿನ ವೇಳೆ ಅಲ್ಪಸಂಖ್ಯಾತ ಕಮಿಟಿಯ ಸಭೆಯಲ್ಲಿ, ಅವರು, ಇತರ ಪ್ರತಿನಿಧಿಗಳು ದಲಿತ ವರ್ಗದ ಪ್ರತಿನಿಧಿತ್ವದ ಬೇಡಿಕೆಗೆ ಮಾನ್ಯತೆಯಿತ್ತರೆ, ಅದಕ್ಕೆ ತಮ್ಮ ಅಡ್ಡಿಯಿಲ್ಲ, ಎಂದು ಹೇಳಿದ್ದರು. ಮತ್ತೆ ಇತರೆಲ್ಲರು ಆ ಮಾನ್ಯತೆಯಿತ್ತಾಗ, ಅವರು ಮಾಡಿದ್ದು ವಿಶ್ವಾಸಘಾತವಲ್ಲದೆ ಬೇರೇನಲ್ಲ. ಅವರು ಮುಸಲ್ಮಾನರ ಬಳಿಗೆ ಹೋಗಿ, “ನೀವು ದಲಿತ ವರ್ಗದ ಬೇಡಿಕೆಯನ್ನು ವಿರೋಧಿಸಲು ಒಪ್ಪಿದರೆ ನಾನು ನಿಮ್ಮ ಬೇಡಿಕೆಯನ್ನು ಪೂರ್ಣವಾಗಿ ಮನ್ನಿಸುತ್ತೇನೆ” ಎಂದು ಅವರ ಕಿವಿಯಲ್ಲುಸುರಿದರು. ಎಂತಹ ದುರುಳರೂ ಇಂತಹ ನೀಚ ಕಪಟ ಮಾಡಿರಲಾರರು. ಈಗಿನ ಹಿಂದೂ ಮುಸ್ಲಿಮ್ ಬಿಕ್ಕಟ್ಟು, ಅವರ ಇಂತಹುದೇ ಕಪಟಾಚರಣೆಯ ಫಲ. ನೆಹರೂ ಕಮಿಟಿಯ ವರದಿಯು, ಕಾಂಗ್ರೆಸ್‌ನ ಮುಕ್ತ ಅಧಿವೇಶನದಲ್ಲಿ ಚರ್ಚೆಗೆ ಬಂದಾಗ, ಅದಕ್ಕೆ ಕೆಲ ತಿದ್ದುಪಡಿಗಳನ್ನು ಸೂಚಿಸಲಾಗಿತ್ತೆಂಬುದು ಹಲವರಿಗೆ ತಿಳಿದಿದೆ. ಅದನ್ನು ಜಯಕರ್ ಅವರು ವಿರೋಧಿಸಿದ್ದೂ ಹಲವರಿಗೆ ತಿಳಿದಿದೆ. ಇದೆಲ್ಲವೂ ಗಾಂಧಿ ಅವರು ತಮ್ಮ ಸಹಕರ್ತ ಮೋತಿಲಾಲ

ನೆಹರೂ ಮತ್ತು ಮುಸಲ್ಮಾನ ಸಮಾಜದೊಡನೆ ಮಾಡಿದ ವಿಶ್ವಾಸಘಾತದ ಪರಿಣಾಮ. ನೆಹರೂ ಕಮಿಟಿಯ ವರದಿಯಲ್ಲಿ ಸೂಚಿತವಾದ ತಿದ್ದುಪಡಿಯು ಮುಸಲ್ಮಾನರಿಗೆ ಸ್ವೀಕಾರಾರ್ಹವಾಗಿರಲೆಂದು ಪ. ಮೋತಿಲಾಲ್ ನೆಹರೂ ಮತ್ತು ಜಿನ್ನಾ ಅವರಿಗೂ ಪರಸ್ಪರ ಮಾನ್ಯವಾಗಿತ್ತು. ಗಾಂಧಿ ಅವರು ಇದನ್ನರಿತಾಗ, ಪ, ಮೋತಿಲಾಲರನ್ನು ಮೀರಿಸಬೇಕೆಂದು. ಈ ತಿದ್ದುಪಡಿಯನ್ನು ವಿರೋಧಿಸಲು ಜಯಕರ್ ಅವರನ್ನು ಉಪಯೋಗಿಸಿಕೊಂಡರು. ದಲಿತರ ಮತ್ತು ಮುಸಲ್ಮಾನರ ಮಿತ್ರರೆಂದು ಮೆರೆಯುವವರು, ಕೊಟ್ಟ ಮಾತಿಗೆ ತಪ್ಪುವ ಗುಪ್ತ ಮಾರ್ಗವನ್ನನುಸರಿಸುವುದು, ನಿಜಕ್ಕೂ ಉದ್ವೇಗಜನಕ ವಿಷಯ. "ಬಾಯಲ್ಲಿ ರಾಮ ; ಬಗಲಲ್ಲಿ ಚೂರಿ" ಎಂಬಂತಿರುವವರನ್ನು ಮಹಾತ್ಮನೆನ್ನಬಹುದಾದರೆ, ಮೋಹನ್‌ದಾಸ್ ಗಾಂಧಿಯೂ ಒಬ್ಬ ಮಹಾತ್ಮ.

"ಚಿತ್ರಾ'ದ ಸಂಪಾದಕರಿಗೆ ಅವರು ಕೇಳಿದ್ದಕ್ಕಿಂತ ಹೆಚ್ಚೇ ನಾನು ಕೊಟ್ಟಿದ್ದೇನೆ. ಮತ್ತು ಅದರ ವಾಚಕರಿಗೆ ಜಗಿದು ಜೀರ್ಣಿಸಿಕೊಳ್ಳುವುದಕ್ಕಿಂತ ಹೆಚ್ಚೇ ಹೇಳಿದ್ದೇನೆ. ಇನ್ನೆರಡು ವಿಷಯಗಳನ್ನು ತಿಳಿಸಿ ಈ ಲೇಖನ ಮುಗಿಸುತ್ತೇನೆ. ರಾನಡೆ, ಗೋಖಲೆ, ಅಗರ್ಕರ್ ಮತ್ತು ತಿಲಕ್ ಇವರ ಯುಗ ಎಂದೂ ಗಾಂಧೀಯುಗದಷ್ಟು ಆಂದೋಲನಮಯವೂ, ಅಪೇಕ್ಷಣೀಯವೂ ಆಗಿರಲಿಲ್ಲವಾದರೂ, ಅದು ಜ್ಞಾನಯುಗವಾಗಿತ್ತು, ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಗಾಂಧೀಯುಗವು ಭಾರತದ ತಮೋಯುಗವಾಗಿದೆ.; ಇಲ್ಲಿ ರಾಜಕಾರಣ ಅಪ್ರಾಮಾಣಿಕವಾಗಿದೆ. ರಾಜಕಾರಣದ ಆಧ್ಯಾತೀಕರಣದ ಪುಣ್ಯಾಹವಾಚನೆ ಮಾಡಿ, ವ್ಯಾಪಾರೀಕರಣದಿಂದ ಪರಿಸಮಾಪ್ತಿ ಮಾಡಿದ್ದಾರೆ. ಆದರೆ ಇದರಲ್ಲಿ ಹೊಸದೇನು? ರಾಜಕೀಯದಲ್ಲಿ ಗಾಂಧೀ ಅವರ ಈ ಮೋಸದಾಟದ ಅಂತ್ಯ ಹೇಗೆ ಮಾಡುವುದೆಂಬುದು ಈ ಹೊತ್ತಿನ ಅತ್ಯಂತ ಮಹತ್ವದ ಪ್ರಶ್ನೆ, ಹಿಂದೀ ಜನತೆ ಈ ಮಹಾತ್ಮನ ಲಹರಿಗೆ ತಕ್ಕಂತೆ ಕುಣಿಯುವುದನ್ನು ಬಿಟ್ಟು, ಸ್ವತಂತ್ರರಾಗಿ ತಮ್ಮ ಅಭಿಪ್ರಾಯ ರೂಪಿಸಿಕೊಳ್ಳುವ ಸಮಯ ಬರುವಾಗ ಬಹಳಷ್ಟು ಕಾಲ ಕಳೆಯಬಹುದು. ಬಹುಸಂಖ್ಯ ಜನತೆ ಇದುವರೆಗೆ ಪಶುಗಳಿಗೆ ಸಮನಾಗಿ ಉಳಿದಿದೆ. ಇದೆಲ್ಲ ಅವರ ದೋಷವಲ್ಲ. ವರಿಷ್ಠ ವರ್ಗವು ಅವರನ್ನು ಅಜ್ಞಾನದಲ್ಲಿ ಮುಳುಗಿಸಿಟ್ಟಿದೆ. ಕಾರಣ ಏನೇ ಇರಲಿ, ವಸ್ತುಸ್ಥಿತಿ ಹೀಗಿದೆ. ಕೇವಲ ಬುದ್ಧಿಬಲದಿಂದ ಈ ಮಹಾತ್ಮನ ವಿರುದ್ಧ ಹೋರಾಡುವುದು ಶಕ್ಯವಲ್ಲ. ದೈವೀ ಚಮತ್ಕಾರದೆದುರು ಶುಷ್ಕ ತರ್ಕವಾದದಂತೆ, ಈ ಹೋರಾಟ. ಈ ಮಹಾತ್ಮನಿಂದ ಬಿಡುಗಡೆ ಪಡೆಯಲು ಇತರ ಮಹಾತ್ಮರು ರಾಜಕೀಯ ಪ್ರವೇಶಿಸಿ, ತಂತಮ್ಮ ರಾಜಕೀಯ ಪಕ್ಷ ಕಟ್ಟಿಕೊಳ್ಳಬೇಕೆಂದು ಅವರ ಮನವೊಲಿಸಬೇಕು. ಹಿಂದೂಸ್ಥಾನದಲ್ಲಿ ಇಂತಹ ಮಹಾತ್ಮರುಗಳಿಗೆ ಏನೂ ಬರವಿಲ್ಲ. ಉಪಾಸನೀಬುವಾ, ದಾದಾಮಹಾರಾಜ, ಮೆಹರ್‌ಬಾಬಾ, ನಾರಾಯಣಬುವಾ, ಕೇಡ್‌ಗಾಂವ್‌ಕರ್, ಹಾಗೂ ಇವರಂಥ ಇತರ ಅನೇಕ ಸ್ವಾಮಿಗಳು ಹಿಂದೂಸ್ಥಾನದಲ್ಲಿದ್ದಾರೆ. ಅನೇಕ ಅಜ್ಞರನ್ನು ತನ್ನ ಬಲೆಯಲ್ಲಿ ಸಿಲುಕಿಸುವ ಕಲೆ ಅವರಿಗೆ ಕರಗತವಾಗಿದೆ.

ಗಾಂಧಿಯಂತಲ್ಲದೆ, ಇವರ ಅನುಯಾಯಿಗಳ ಸಂಖ್ಯೆ ಸಣ್ಣದಿದೆ. ಆದರೆ ಇದಕ್ಕೆ ಕಾರಣ, ಅವರ ಅಯೋಗ್ಯತೆಯಲ್ಲ. ಹಿಂದೀ ಜನತೆಗೆ ಮೋಕ್ಷ ಮಾತ್ರವಲ್ಲದೆ ರಾಜಕೀಯ ಸ್ವಾತಂತ್ರ್ಯವನ್ನೂ ದಕ್ಕಿಸಿ ಕೊಡುವಂತಹ ಸಾಮರ್ಥ್ಯ ತಮಗೆ ಇರುವುದೆಂದು ಅವರು ಅರಿತಿಲ್ಲದಿರುವುದೇ ಇದಕ್ಕೆ ಕಾರಣ. ಗಾಂಧಿ ಅವರ ಪ್ರಭಾವ, ಅವರ ಇಬ್ಬಗೆಯ ಧೋರಣೆಯ ಕಾರಣವೇ ಸಾಧ್ಯವಾಗಿದೆ. ಅವರು ಜನರಿಗೆ ಆಧ್ಯಾತ್ಮಿಕ ಹಾಗೂ ರಾಜಕೀಯ ಮೋಕ್ಷಗಳೆರಡನ್ನೂ ದೊರಕಿಸಿ ಕೊಡುವ



ಆಶ್ವಾಸನೆ ಕೊಡುತ್ತಾರೆ. ಉಪಾಸನೀ, ದಾದಾಮಹಾರಾಜ, ಮೆಹರ್‌ಬಾಬಾ, ನಾರಾಯಣ್ ಮಹಾರಾಜ ಮುಂತಾದ ಸಾಧುಗಳು ಗಾಂಧೀ ಅವರ ಧೋರಣೆ ಸ್ವೀಕರಿಸಿದರೆ, ಗಾಂಧೀ ಹೆಸರಿನ ತಿಲಕ ತೊಡುವ ಪಕ್ಷವನ್ನು ಎದುರಿಸುವಂಥ ಪಕ್ಷ ಸ್ಥಾಪಿಸುವುದು ಖಂಡಿತ. ಅನೇಕ ಪಕ್ಷಗಳು ಅಸ್ತಿತ್ವಕ್ಕೆ ಬರುವುದರಿಂದ ದೇಶದ ಕಲ್ಯಾಣವೇ ಆಗುವುದು. ಇದರಿಂದ ಸ್ಪರ್ಧೆ ನಿರ್ಮಾಣವಾಗಿ, ಗಾಂಧೀ, ಉಪಾಸನೀ ಬುವಾ, ಮುಂತಾದವರು, ಪುರಾಣದ ಸುಂದೋಪಸುಂದರು, ಒಬ್ಬ ಅಪ್ಸರೆಗಾಗಿ ಪರಸ್ಪರರನ್ನು ಕೊಂದುಕೊಂಡಂತೆ, ಇವರೂ ಪರಸ್ಪರರ ನಾಶ ಮಾಡುವರು. ದೇಶದ ಇನ್ಯಾರಾದರೂ ಮಹಾತ್ಮರನ್ನ ಮುಂದೆ ಮಾಡಿ, ತಮ್ಮ ವಿಶಿಷ್ಟ ಧ್ಯೇಯದ ಪತಾಕೆ ಹಾರಿಸುವುದರಲ್ಲಿ, ಹಿಂದೂಸ್ಥಾನದ ಬೌದ್ಧಿಕನ ಮೋಕ್ಷವಿದೆ. ಇದೇನೂ ತಮಾಷೆಯಲ್ಲ, ನಾನು ಗಂಭೀರವಾಗಿಯೇ ಹೇಳುತ್ತಿದ್ದೇನೆ. ಉಪಾಸನಿ, ದಾದಾ ಮಹಾರಾಜ, ಮೆಹರ್‌ಬಾಬಾ ಮತ್ತು ನಾರಾಯಣಗುರು ಇಂತಹವರ ಶಿಷ್ಯರು ಹಿಂದೀಯರ ಮೇಲೆ ಉಪಾಯ ಹೂಡುವರೇ?ಇತರರು ಅವರಿಗೆ ಧನ್ಯವಾದ ಅರ್ಪಿಸಲಿ, ಬಿಡಲಿ, ನಾನಂತೂ ಈ ಕೃಪೆಗಾಗಿ, ಸದಾ ಅವರಿಗೆ ಋಣಿಯಾಗಿರುತ್ತೇನೆಂದು ಆಶ್ವಾಸನೆಯಿಯುತ್ತೇನೆ.

* * * *

## ೮೨. ಮೋಸಗಾರ ಯಾರು? ಕಾಂಗ್ರೆಸ್ ಪಕ್ಷವೇ ಅಥವಾ ಕಾರ್ಮಿಕ ನಾಯಕರೇ?

ಮುಷ್ಕರ ಕಾಯ್ದೆ ಸಂಬಂಧವಾಗಿ ಕಾಂಗ್ರೆಸ್ ಸರಕಾರ ಮತ್ತು ಕಾರ್ಮಿಕ ನಾಯಕರ ನಡುವೆ ನಡೆದಿರುವ ಯುದ್ಧದ ಅರಿವು ಎಲ್ಲರಿಗೂ ಇದೆ. ಈ ಯುದ್ಧದಲ್ಲಿ ಕಾರ್ಮಿಕರು ಈ ಕಾರ್ಮಿಕ ನಾಯಕನ ಹಿಂದೆ ಇದ್ದಾರೆ, ಮತ್ತು ಅವರಿಗೆ ಈ ಮುಷ್ಕರ ಕಾಯ್ದೆ ಇಷ್ಟವಲ್ಲವೆಂಬುದು ಎಲ್ಲರಿಗೆ ತಿಳಿದಿದೆ. ಹಾಗಿದ್ದೂ ಕಾಂಗ್ರೆಸಿಗರು, ಈ ಬಿಲ್ ಕಾರ್ಮಿಕರಿಗೆ ಒಪ್ಪಿಗೆಯೆಂದು ಸುಳ್ಳು ಹೇಳುತ್ತಿದ್ದಾರೆ.

ಸಭೆಯಲ್ಲಿನ ಜನಸಮುದಾಯದ ಮೇಲಿಂದ ಈ ವಿಷಯದ ನಿರ್ಣಯವಾಗಬೇಕಿದ್ದರೆ, ಕಾರ್ಮಿಕರಿಗೆ ಈ ಕಾಯ್ದೆ ಬೇಡವೆಂಬುದು, ಈಗ ಸೂರ್ಯಪ್ರಕಾಶದಷ್ಟೇ ನಿಚ್ಚಳವಾಗಿದೆ. ಇದುವರೆಗೆ ನಡೆದ ಕಾರ್ಮಿಕ ಸಭೆಗಳಲ್ಲಿ ಇಪ್ಪತ್ತು, ಮೂವತ್ತು ಸಾವಿರ ಜನ ಸೇರುತ್ತಿದ್ದರು. ಬದಲಿಗೆ, ಒಂದೈವತ್ತು ಜನರ ಸಭೆಯನ್ನೂ ಮುಂಬಯಿಯಂತಹ ಶಹರದಲ್ಲಿ ಈ ಕಾಂಗ್ರೆಸಿಗರಿಗೆ ಸೇರಿಸಲಾಗಿಲ್ಲವೆಂದರೆ, ಇದು ಏನನ್ನು ಸೂಚಿಸುತ್ತದೆ? ಸರಕಾರ, ಪೊಲೀಸ್, ಹಣ, ಮುಂಬಯಿಯ ದಾದಾಗಳು ಈ ಎಲ್ಲ ಯುದ್ಧಸಾಮಗ್ರಿಯಿದ್ದೂ, ಕಾಂಗ್ರೆಸಿಗರಿಗೆ ಬೊಗಸೆ ತುಂಬ ಜನರನ್ನೂ ಸೇರಿಸಲಾಗಿಲ್ಲವೆಂದರೆ, ಇದು ಯಾವುದರ ದ್ಯೋತಕ?

ಈ ಬಿಲ್‌ಗೆ ಸಂಬಂಧಿಸಿ ಕಾಂಗ್ರೆಸ್‌ನ ಪಕ್ಷದಲ್ಲಿ ನ್ಯಾಯ ಇದ್ದಿದ್ದರೆ, ಅದು ಬಲವಾಗಿದ್ದರೆ, ಕಾಂಗ್ರೆಸಿಗರ ಪಾಡು ಹೀಗಾಗುತ್ತಿರಲಿಲ್ಲ. ಹೀಗೆ ಅವರು ಮಣ್ಣು ತಿನ್ನಬೇಕಾಗುತ್ತಿರಲಿಲ್ಲ. ಇದೊಂದರಿಂದಲೇ, ಈ ಕಾಯ್ದೆ ಎಷ್ಟು ಅಯೋಗ್ಯವಾದುದು ಮತ್ತು ಕಾರ್ಮಿಕ ಹಿತಕ್ಕೆ ಎಷ್ಟು ವಿಘಾತಕ ಎಂಬುದು ತಿಳಿದು ಬರುತ್ತದೆ. ಈ ಬಿಲ್ ಬಗೆಗಿನ ವಿರೋಧವನ್ನು ಲೋಕಕ್ಕೆ ತಿಳಿಯ ಪಡಿಸಲು ಏಳನೇ ದಿನಾಂಕ ಎಲ್ಲೆಡೆಯೂ ಕಾರ್ಮಿಕ ಸಭೆಯಲ್ಲಿ ನಿಶ್ಚಿತವಾದಂತೆ

ಕಾರ್ಮಿಕರು ಮುಷ್ಕರ ಹೂಡುವುದು ಖಂಡಿತವೆಂದು ಕಾಂಗ್ರೆಸ್ ನಾಯಕರಿಗೆ ಕಂಡ ಬಳಿಕ ಅವರು ಕಾರ್ಮಿಕರನ್ನು ದಿಕ್ಕು ತಪ್ಪಿಸುವ ಉದ್ದೇಶದಿಂದ, ಒಂದೈವತ್ತು ಕಾರ್ಮಿಕರ ಕೈಗೆ ಪತ್ರವೊಂದನ್ನು ಕೊಟ್ಟು, ಸಹಿ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಈ ಪತ್ರದ ಬಗ್ಗೆ ಕಾರ್ಮಿಕರಿಗೆ ಅರಿವಿಲ್ಲದಿರುವ ಸಂಭವವಿರುವುದರಿಂದ ಆ ಬಗ್ಗೆ ಎರಡು ಮಾತು ಬರೆಯುವುದು ಅವಶ್ಯಕವೆನಿಸುತ್ತದೆ.

ಈ ಪತ್ರದಲ್ಲಿ, "ಯಾವ ಬಿಲ್ ಬಗ್ಗೆ ಕಾರ್ಮಿಕ ನಾಯಕರು ಇಷ್ಟೊಂದು ಜೋರಾಗಿ ವಿರೋಧಿಸುತ್ತಿದ್ದಾರೋ, ಅದೇ ಬಿಲ್‌ನ ಮುಖ್ಯ ತತ್ವವನ್ನು ಅವರು ಆರಂಭದಲ್ಲಿ ಬೆಂಬಲಿಸಿದ್ದರು, ಹಾಗಾಗಿ ಈಗಿನ ವಿರೋಧ ಅಪ್ರಾಮಾಣಿಕತನದ್ದಾಗಿದೆ", ಎಂದು ಆಕ್ಷೇಪಿಸಲಾಗಿದೆ. ಈ ಆರೋಪವು ಯಾರಿಗೆ ಸಂಬಂಧಿಸಿದ್ದೆಂದು ಕಾರ್ಮಿಕರು ಪರಿಶೀಲಿಸುವುದು ಅಗತ್ಯ. ಮುಷ್ಕರ ಕಾಯ್ದೆಯ ಸಂಬಂಧ ಕಾರ್ಮಿಕರ ವತಿಯಿಂದ ಹೋರಾಡುತ್ತಿರುವ ನಾಯಕರಲ್ಲಿ ಎರಡು ಬಣಗಳಿವೆ ಎಂಬುದನ್ನು ಕಾರ್ಮಿಕರು ಧ್ಯಾನದಲ್ಲಿಡಬೇಕು. ಒಂದು ಟ್ರೇಡ್ ಯೂನಿಯನ್ ಕಾಂಗ್ರೆಸ್‌ನಲ್ಲಿ ಸೇರಿರುವ ಕಾರ್ಮಿಕ



ನಾಯಕರದು, ಇನ್ನೊಂದು, ಸ್ವತಂತ್ರ ಕಾರ್ಮಿಕ ಪಕ್ಷದೊಡನೆ ಸೇರಿಕೊಂಡಿರುವ ಕಾರ್ಮಿಕ ನಾಯಕರದು, ಚಂಚಲತೆ ಮತ್ತು ಗೃಹತ್ಯಾಗದ ಈ ಆರೋಪ, ಯಾವುದೇ ಇತರ ಕಾರ್ಮಿಕ ನಾಯಕರ ಮೇಲೆ ಮಾಡುವುದು ಯೋಗ್ಯವೋ, ಇಲ್ಲ, ಅಯೋಗ್ಯವೋ, ಅದು ಕಾರ್ಮಿಕ ಚಳವಳಿಯ ಮುಖ್ಯ ಆಧಾರಸ್ತಂಭವಾದ ಸ್ವತಂತ್ರ ಕಾರ್ಮಿಕ ಪಕ್ಷದ ಮೇಲೆ, ಇಲ್ಲವೇ ಅದರ ಯಾವುದೇ ಕಾರ್ಯಕರ್ತರ ಮೇಲೆ ಮಾಡುವಂತಿಲ್ಲವೆಂದು ಸ್ಪಷ್ಟವಾಗಿ ಹೇಳಬಿಚ್ಛಿಸುತ್ತೇನೆ. ಈ ವಿಷಯದಲ್ಲಿ ಸ್ವತಂತ್ರ ಕಾರ್ಮಿಕ ಪಕ್ಷದ ಭೂಮಿಕೆ ತೊಳೆದ ಅಕ್ಕಿಯಂತೆ ಸ್ವಚ್ಛವಿದೆ. ಯಾರನ್ನೂ ತಮ್ಮ ಪಕ್ಷಕ್ಕೆ ಪಕ್ಷಾಂತರಿಸಿಕೊಂಡ ಆರೋಪ ಅವರ ಮೇಲೆ ಬರುವಂತಿಲ್ಲ. ಸ್ವತಂತ್ರ ಕಾರ್ಮಿಕ ಪಕ್ಷಕ್ಕೆ ಈ ಬಿಲ್ ಎಂದಿಗೂ ಒಪ್ಪಿಗೆ ಆಗಿರಲಿಲ್ಲ. ಹೀಗಾಗಿ ಆ

ಪಕ್ಷದ ವಿರೋಧವು ಅಪ್ರಾಮಾಣಿಕವೆಂದು ಯಾರೂ ಅನ್ನುವಂತಿಲ್ಲ. ಕಾರ್ಮಿಕರ ಇತರ ನಾಯಕರು ಹೇಳಬೇಕಾದುದನ್ನು ಹೇಳಲು ಸಮರ್ಥರಿದ್ದಾರೆ. ಅವರ ವಕೀಲಿ ಮಾಡಬೇಕಾದ ಅವಶ್ಯಕತೆಯಿಲ್ಲ. ಯಾರು ಈ ಪತ್ರಿಕೆ ಹೊರಡಿಸಿ ಕಾರ್ಮಿಕ ನಾಯಕರ ಸಂಬಂಧ ತಪ್ಪು ತಿಳುವಳಿಕೆ ಹಬ್ಬಿಸುವ ಪ್ರಯತ್ನ ಮಾಡಿರುವರೋ, ಅವರನ್ನೊಂದು ಪ್ರಶ್ನೆ ಅವಶ್ಯವಾಗಿ ಕೇಳಬೇಕಿದೆ.

ಟ್ರೇಡ್ ಯೂನಿಯನ್ ಕಾಂಗ್ರೆಸ್‌ನಲ್ಲಿ ಸೇರಿರುವ ಕಾರ್ಮಿಕ ನಾಯಕರು ಬೆಂಬಲ ಕೊಟ್ಟಿರುವರೆಂದು ಹೇಳುವವರು, ಅವರು ಆ ಬೆಂಬಲವನ್ನು ಯಾವ ತತ್ವದ ಮೇಲೆ ಕೊಟ್ಟಿರುವರೆಂದು ತೆರೆದು ಹೇಳುವುದು ಅಗತ್ಯ.

ಬೆಂಬಲ ಕೊಟ್ಟಿರುವರೆಂಬ ಭ್ರಮೆಯಿಂದ ಸ್ವತಃ ತಪ್ಪು ತಿಳುವಳಿಕೆಯಲ್ಲಿರುವುದು ಮತ್ತು ಜನರನ್ನು ದಿಕ್ಕೆಡಿಸುವುದರಲ್ಲಿ ಯಾವ ಅರ್ಥವೂ ಇಲ್ಲ, ಈ ಬಿಲ್‌ನ ಮೂಲದಲ್ಲಿ ಒಟ್ಟು ಐದು ತತ್ವಗಳಿವೆ. ೧. ಒತ್ತಾಯದ ಒಪ್ಪಂದ ೨. ಒತ್ತಾಯದ ಮಧ್ಯಸ್ಥಿಕೆ. ೩. ಮುಷ್ಕರದ ತಪ್ಪು, ಮತ್ತದಕೆ ಶಿಕ್ಷೆ, ೪, ಕಾರ್ಮಿಕ ಸಂಘ ಸ್ಥಾಪನೆಗೆ ಮಾಲಕರ ಮಾನ್ಯತೆ ೫. ಸರಕಾರ ಹೇಳಿದವರಿಗೇ ಯೂನಿಯನ್‌ನ ಕಾರ್ಮಿಕ ಪ್ರತಿನಿಧಿಯಾಗುವ ಹಕ್ಕು, ಈ ಐದು ತತ್ವಗಳಲ್ಲಿ ಯಾವ ತತ್ವಕ್ಕೆ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನಲ್ಲಿನ ಕಾರ್ಮಿಕ ನಾಯಕರು ಮಾನ್ಯತೆ ಇತ್ತಿರುವರೆಂದು ಬಿಡಿಸಿಡದ ಹೊರತು, ಇಂದಿನ ಈ ವಿರೋಧ ಅಪ್ರಾಮಾಣಿಕ, ಎನ್ನುವುದು ಅಯುಕ್ತವಾಗದೇ? ಈ ವಿಷಯದಲ್ಲಿ ನಿಜ ಪರಿಸ್ಥಿತಿಯೇನೆಂದು ಟ್ರೇಡ್ ಯೂನಿಯನ್ ಕಾಂಗ್ರೆಸ್‌ನಲ್ಲಿ ಶಾಮೀಲಾಗಿರುವ ಕಾರ್ಮಿಕ ನಾಯಕರು ಬಯಲಾಗಿಸುವುದು ಅಗತ್ಯ. ಜನರಲ್ಲಿ ಇಂತಹ ತಪ್ಪು ತಿಳುವಳಿಕೆ ಅನರ್ಥಕಾರಕ, ಅಷ್ಟೆ.

“ಈ ನಾಯಕರಿಗೆ ಬಿಲ್‌ನಲ್ಲಿ ಸಂಪೂರ್ಣ ಸ್ವಾತಂತ್ರ್ಯ ಕೊಡಲಾಗಿದೆ. ಬಿಲ್‌ನ ಯಾವುದೇ ತತ್ವಕ್ಕೆ ಅಡ್ಡಿ, ಆಕ್ಷೇಪ ತೆಗೆಯುವಂತಿಲ್ಲ.”, ಎಂದು ಕಾಂಗ್ರೆಸ್ ಸರಕಾರ ಹೇಳುತ್ತದೆ. ಈ ಆರೋಪ ಸುಳ್ಳೆಂದೂ, ತಾವು ಅಂತಹ ಬೆಂಬಲ ಕೊಟ್ಟಿಲ್ಲವೆಂದೂ , ಕಾಂಗ್ರೆಸ್‌ನ ಚುನಾವಣೆಯ ಕರಪತ್ರಕ್ಕೆ ಮಾತ್ರ ಕೊಟ್ಟುದೆಂದೂ ಟ್ರೇಡ್ ಯೂನಿಯನ್ ಕಾಂಗ್ರೆಸ್ ನಾಯಕರು ಹೇಳುತ್ತಿದ್ದಾರೆ, ಕಾರ್ಮಿಕರಲ್ಲಿ ಹಲವು ನಾಯಕರು ಅಯೋಗ್ಯರಿದ್ದಾರೆ, ಆದರೆ ಕಾಂಗ್ರೆಸ್‌ನಲ್ಲಿನ ಸಾವಿರಾರು ನಾಯಕರು, ಕಾರ್ಮಿಕ ನಾಯಕರಿಗಿಂತ ಸಾವಿರಾರು ಪಾಲು ಹೆಚ್ಚು ಅಯೋಗ್ಯರಿದ್ದಾರೆ. ಆದರೆ ಕಾಂಗ್ರೆಸ್‌ನಲ್ಲಿ ಅಯೋಗ್ಯರಿದ್ದಾರೆಂದು, ಕಾಂಗ್ರೆಸ್‌ನ ಎಲ್ಲ ಭೂಮಿಕೆ ಅಯೋಗ್ಯವೆಂದರೆ, ಕಾಂಗ್ರೆಸಿಗರು ಒಪ್ಪುವರೇ? ಅಪ್ರಾಮಾಣಿಕತೆಯನ್ನು ಸಿದ್ಧ ಪಡಿಸಲು ವಿಸಂಗತತೆಯೊಂದೇ ಕಾರಣ ಸಾಕೆಂದರೆ, ಕಾಂಗ್ರೆಸ್

ಧೋರಣೆಯಲ್ಲಿ ವಿಸಂಗತತೆಯನ್ನು ತೋರಿಸಿ ಕೊಡುವುದು ಅಶಕ್ಯವಲ್ಲ. ಈ ಬಿಲ್ ಬಗ್ಗೆ ಕಾಂಗ್ರೆಸ್‌ನ ಇಂದಿನ ಧೋರಣೆ, ಮತ್ತು ಅಸಹಕಾರ ಚಳವಳಿ ಆರಂಭಿಸುವಾಗ ಕಾರ್ಮಿಕ ಚಳವಳಿ ಸಂಬಂಧ ಕಾಂಗ್ರೆಸ್‌ನ ಧೋರಣೆ ಬಗ್ಗೆ ಧ್ಯಾನಿಸಬೇಕು. ೧೯೨೦ ರ ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವರಾಜ್ಯದ ಬೇಡಿಕೆಯ ನಿರ್ಧಾರ ಅಂಗೀಕರಿಸಲ್ಪಟ್ಟಿತು. ಅದೇ ಕಾಂಗ್ರೆಸ್ ಅಧಿವೇಶನದಲ್ಲಿ ಕಾರ್ಮಿಕರ ಸಂಬಂಧ, ಈ ಎರಡು ನಿರ್ಧಾರ ಅಂಗೀಕೃತವಾದವು;

**[೧೯೨೦] ನಾಗಪುರ ಕಾಂಗ್ರೆಸ್ ಠರಾವು ನ. ೭ ಮತ್ತು ೮**

- - - - - - - - -

“ತಮ್ಮ ನ್ಯಾಯಯುತ ಹಕ್ಕುಗಳಿಗಾಗಿ ತಮ್ಮ ಟ್ರೇಡ್ ಯೂನಿಯನ್ ವತಿಯಿಂದ ಹಿಂದೀ ಕಾರ್ಮಿಕರು ನಡೆಸಿರುವ ಹೋರಾಟಕ್ಕೆ ಕಾಂಗ್ರೆಸ್ ತನ್ನ ಪೂರ್ಣ ಸಹಾನುಭೂತಿ ವ್ಯಕ್ತಪಡಿಸುತ್ತಿದೆ. ಶಾಂತತೆ ಮತ್ತು ಸುವ್ಯವಸ್ಥೆಯ ಕಪಟ ಹೆಸರಿನಡಿಯಲ್ಲಿ ಹಿಂದೀ ಕಾರ್ಮಿಕರ ಜೀವಕ್ಕೆ ಯಾವ ಬೆಲೆಯೂ ಇಲ್ಲದಾಗಿದೆ. ಇಂತಹ ಪಶುತುಲ್ಯ ಧೋರಣೆಯನ್ನು ಕಾಂಗ್ರೆಸ್ ನಿಷೇಧಿಸುತ್ತದೆ.

ಕಾಂಗ್ರೆಸ್‌ನ ಅಭಿಪ್ರಾಯದಂತೆ, ಅವರ ಸ್ಥಿತಿ ಸುಧಾರಣೆಗಾಗಿ, ಅವರ ನ್ಯಾಯವಾದ ಹಕ್ಕುಗಳನ್ನು ಕೊಡಮಾಡಲು, ಮತ್ತು ಅವರ ಶೋಷಣೆಯನ್ನು ನಿಲ್ಲಿಸಲು ಮತ್ತು ಹಿಂದೀಯರ ಉತ್ಪನ್ನಗಳನ್ನು ಪರಕೀಯರು ಉಪಯೋಗಿಸುವುದವನ್ನು ನಿಲ್ಲಿಸಲು ಕಾರ್ಮಿಕರ ಸಂಘಟನೆ ಮಾಡುವುದು ಅವಶ್ಯವಾಗಿದೆ ಮತ್ತು ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಈ ಕಾರ್ಯವನ್ನು ಪ್ರಭಾವಪೂರ್ಣವಾಗಿ ಕೈಗೊಳ್ಳಲು ಸಮಿತಿ ಒಂದನ್ನು ನೇಮಿಸಿದೆ.

ಈ ಠರಾವನ್ನು ಜಾರಿಗೆ ತರಲು ೧೯೨೨ ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಈ ಕೆಳಗಿನಂತೆ ಒಂದು ಠರಾವು ಅಂಗೀಕರಿಸಲ್ಪಟ್ಟಿತು. ;

**ಗಯಾ ಕಾಂಗ್ರೆಸ್ ಠರಾವು ೧೯೨೨ | ೧೩**

---------

ಹಿಂದೀ ಕಾರ್ಮಿಕರ ಸ್ಥಿತಿ ಸುಧಾರಿಸಲು, ಅವರ ನ್ಯಾಯಯುತ ಹಕ್ಕನ್ನು ಅವರಿಗೆ ಒದಗಿಸಿ ಕೊಡಲು, ಅವರ ಮತ್ತು ಅವರ ಸಾಮಗ್ರಿಗಳ ಶೋಷಣೆ ನಿಲ್ಲಿಸಲು ಹಿಂದೀ ಕಾರ್ಮಿಕ ವರ್ಗದ ಸಂಘಟನೆ ಅಗತ್ಯವೆಂಬ ತನ್ನ ಅಭಿಪ್ರಾಯದಂತೆ, ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ ಮತ್ತು ಅನೇಕ ರೈತಸಭೆಗಳನ್ನು ಹಿಂದೀ ಕಾರ್ಮಿಕ ವರ್ಗದಲ್ಲಿ ಸಂಘಟಿಸಲು ಆರಂಭಿಸಿದ ಚಳವಳಿಯನ್ನು ಸ್ವಾಗತಿಸುತ್ತದೆ ಮತ್ತು ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಕಾರ್ಯಕಾರಿ ಮಂಡಳಿಯಲ್ಲಿ ಗದ್ದೆಕೂಲಿಗಳು ಮತ್ತು ಔದ್ಯೋಗಿಕ ಕಾರ್ಮಿಕರ ಸಂಘಟನೆಗಾಗಿ ಈ ಕೆಳಗಿನ ಸದಸ್ಯರ ಸಮಿತಿಯನ್ನು ನೇಮಿಸುತ್ತದೆ. ಇದಕ್ಕೆ ಇನ್ನೂ ಹೆಚ್ಚಿನ ಸದಸ್ಯರನ್ನು ಆಯುವ ಹಕ್ಕು ಇದೆ.

೧. ಚಿ.ಎಫ, ಆಂಡೂಸ್

೨. ಜೆ.ಎನ್. ಸೇನ್‌ಗುಪ್ತಾ

೩. ಎಸ್. ಎನ್. ಹಲಧರ್



೪. ಸ್ವಾಮಿ ದೀನಾನಾಥ

೫, ಡಾ. ಢೀ ಢೀ ಶಟೆ

೬. ಎಸ್. ಸಿಂಗಾರವೇಲು ಚೆಟ್ಟಿಯಾರ್

ಈ ಠರಾವಿನಲ್ಲಿ ಕಾರ್ಮಿಕ ಚಳವಳಿ ಸಂಬಂಧ ಕಾಂಗ್ರೆಸ್ ತೆಗೆದುಕೊಂಡ ಭೂಮಿಕೆ ಮತ್ತು ಈ ಬಿಲ್‌ನಲ್ಲಿ ಶಾಮೀಲಾದ ತತ್ವಗಳ ಮಧ್ಯೆ ಭೂಮ್ಯಾಕಾಶದ ಅಂತರವಿದೆ, ಎಂಬುದು ವಾಚಕರಿಗೆ ಸಹಜವಾಗಿ ತಿಳಿದು ಬರುತ್ತದೆ. ಈ ಠರಾವಿನ ಪ್ರಸ್ತುತ ಬಿಲ್‌ನಲ್ಲಿನ ಅನಿಷ್ಟ ತತ್ವಗಳ ನೆರಳು ನೋಟಕ್ಕೆ ಕಾಣ ಬರುವುದಿಲ್ಲ. ಕಾಂಗ್ರೆಸ್‌ನ ಠರಾವಿನಲ್ಲಿ

ಕಾರ್ಮಿಕ ಚಳವಳಿ ಸ್ವತಂತ್ರವಿರಬೇಕು, ಅದರ ರಕ್ತಶೋಷಣೆ ಆಗಬಾರದು, ಎಂದು ಸ್ಪಷ್ಟವಾಗಿ ಹೇಳಿದೆ. ಅದೇ ಕಾಂಗ್ರೆಸ್ ಇಂದಿನ ಈ ಬಿಲ್‌ನಲ್ಲಿ ಕಾರ್ಮಿಕರನ್ನು ಗುಲಾಮರಾಗಿಸುವ ಅಧಮ ಕಾರ್ಯಕ್ಕಿಳಿದಿದೆ. ಕೇವಲ ಠರಾವು ಮಾಡುವುದಷ್ಟೇ ಅಲ್ಲ, ಕಾಂಗ್ರೆಸಿಗರು ಮುಷ್ಕರದಲ್ಲಿ ಭಾಗವಹಿಸಿದ್ದರು, ಕೂಡ. ಇಷ್ಟೇ ಅಲ್ಲ, ಕಾರ್ಮಿಕರಿಗೆ ಮುಷ್ಕರ ಹೂಡಲು ಪ್ರೋತ್ಸಾಹವನ್ನೂ ಕೊಟ್ಟ ದಾಖಲೆಗಳಿವೆ. ಸ್ವತಃ ಗಾಂಧೀ ಅವರೂ ಮುಷ್ಕರಕ್ಕೆ ಬದ್ಧರಾಗಿರುವಂತೆ ಅನೇಕ ವೇಳೆ ಉಪದೇಶಿಸಿದ್ದಾರೆ. ಹೀಗಿರುವಾಗ ಮೋಸಗಾರ ಯಾರೆಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಕಾಂಗ್ರೆಸ್ ಹೌದೇ, ಇಲ್ಲಾ, ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ನಾಯಕರೇ? ಕೇವಲ ವಿಸಂಗತತೆಯ ಕಾರಣ, ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ನಾಯಕರನ್ನು ಮೋಸಗಾರರೆನ್ನುವುದಾದರೆ, ಕಾಂಗ್ರೆಸ್ ಕಾರ್ಯಕರ್ತರನ್ನು ಮೋಸಗಾರರೆನ್ನ ಬಾರದೇಕೆ ? ಕಾಂಗ್ರೆಸ್‌ನವರು ಹೆಚ್ಚು ಮೋಸಗಾರರು, ಅವರು ಕಾರ್ಮಿಕರನ್ನು ಮೋಸ ಮಾಡಿದ್ದಾರೆ, ಎಂದೇ ನಮ್ಮ ಅಭಿಪ್ರಾಯ.

ಸ್ವರಾಜ್ಯ ಸಿಗಲು ಅವರಿಗೆ ಕಾರ್ಮಿಕರ ಬೆಂಬಲ ಅಗತ್ಯವಿತ್ತು. ಹಾಗೆಂದೇ ಅವರು, ೧೯೨೦ - ೨೨ರ ಕಾಂಗ್ರೆಸ್ ಅಧಿವೇಶನದಲ್ಲಿ ಮೇಲೆ ನಮೂದಿಸಿದ ಠರಾವು ಜಾರಿ ಮಾಡಿದರು, ಮತ್ತು ಆಡಳಿತ ಕೈಗೆ ಬಂದೊಡನೆ ಅದೇ ಮಜೂರರನ್ನು ಮರಳಿ ಮನೆಗೆ ಕಳುಹಿದರು. ಇವರನ್ನು ಮೋಸಗಾರರೆನ್ನದೆ ಮತ್ತೇನೆನ್ನುವುದೆಂದು ನಮಗೆ ತಿಳಿಯುತ್ತಿಲ್ಲ. ಕಾರ್ಮಿಕ ಬಾಂಧವರು, ಪ್ರಾಮಾಣಿಕರಾರು, ಅಪ್ರಾಮಾಣಿಕರಾರು ಎಂದು ಶೋಧಿಸುತ್ತಾ ಇರುವ ಬದಲು, ಬಿಲ್ ತಮ್ಮ ಹಿತದಲ್ಲಿದೆಯೇ, ಇಲ್ಲವೇ ಎಂಬ ಬಗ್ಗೆ ಮುಖ್ಯವಾಗಿ ವಿಚಾರ ಮಾಡಲಿ, ಮತ್ತು ಹಾಗೆ ಮಾಡುವುದರಿಂದ ಈ ಬಿಲ್‌ನ ನಿಷೇಧಕ್ಕೆ ನಿರ್ಧರಿಸಿದ ನವೆಂಬರ್ ೭ರಂದು ಒಂದು ದಿನದ ಮುಷ್ಕರ ನಡೆಸುವುದೇ ಹಿತಕರ, ಸ್ವಾಭಿಮಾನದ ಮಾರ್ಗವೆಂದು ಅವರಿಗನಿಸುವುದೆಂದು ನಮಗೆ ಖಾತ್ರಿಯಿದೆ.

* * * *

## ೮೩. ಸರ್ ಸಯ್ಯಾಜಿರಾವ್ ಗಾಯಕ್ ವಾಡ್- ರಾಷ್ಟ್ರೀಯ ವೃತ್ತಿಯ ದೇಶಭಕ್ತ

ಸರ್ ಸಯ್ಯಾಜಿರಾವ್ ಮಹಾರಾಜರು ದೀರ್ಘ ಅಸೌಖ್ಯದ ನಂತರ ೧೯೩೯ರ ಫೆಬ್ರವರಿ ೬, ಸೋಮವಾರ ರಾತ್ರಿ ಮುಂಬಯಿಯಲ್ಲಿ ಅವರ ಜಯ್ ಮಹಲ್ ಪ್ಯಾಲೇಸ್‌ನಲ್ಲಿ ದಿವಂಗತರಾದರು. ಅವರ ಸಾವಿನ ಸುದ್ದಿಯನ್ನು ಜಗತ್ತಿನ ಪ್ರಮುಖ ಪತ್ರಿಕೆಗಳು ಪ್ರಕಟಿಸಿದವು, ಮತ್ತು ಅವರಿಗೆ ಗೌರವಪೂರ್ಣ ನುಡಿನಮನ ಸಲ್ಲಿಸಿದವು. ಕಾರಣ, ಅವರೊಬ್ಬ ಪ್ರಬುದ್ಧ, ಶೀಲವಂತ, ಪುರೋಗಾಮಿ, ಮತ್ತು ಪ್ರಜಾಹಿತ ತತ್ಪರ ರಾಜನೆಂದು ಎಲ್ಲೆಡೆ ಪ್ರಸಿದ್ಧರಾಗಿದ್ದರು. ವಿದ್ಯಾರ್ಜನೆಗಾಗಿ, ರಾಜ್ಯಕಾರುಭಾರಕ್ಕಾಗಿ ಅವರು ಯಾರಾರನ್ನು ಆರಿಸಿದರೋ, ಅವರೆಲ್ಲ ತಮ್ಮ ತಮ್ಮ ಸ್ಥಾನದಲ್ಲಿ ಕೀರ್ತಿವಂತರಾದರು. ಬಾಬಾಸಾಹೇಬರರನ್ನು ಅವರು ೧೯೧೩ರ ಮಾರ್ಚ್ ತಿಂಗಳಲ್ಲಿ ವಿದೇಶೀ ಶಿಕ್ಷಣ ಪಡೆಯಲೆಂದು ಆರಿಸಿದರು, ಮತ್ತು ಬಾಬಾಸಾಹೇಬರು ಜುಲೈ ತಿಂಗಳಲ್ಲಿ ಉಚ್ಚ ಶಿಕ್ಷಣ ಪಡೆಯಲೆಂದು ಅಮೆರಿಕೆಗೆ ತೆರಳಿದರು. ೧೯೧೩ ರಿಂದ ೧೯೧೭ ರವರೆಗೆ ಅವರು ಅಲ್ಲಿ ಎಷ್ಟೊಂದು ಉತ್ತಮ ಅಭ್ಯಾಸ ನಡೆಸಿದರೆಂದರೆ, ಅವರ ಶಿಕ್ಷಕರೇ ಅಲ್ಲಿ ಅವರ ಬೆನ್ನುತಟ್ಟಿದರು. ಆ ಸಮಯದಲ್ಲೇ ಅವರು ಅಲ್ಲಿ ಮೂರು ಗ್ರಂಥಗಳನ್ನೂ ಬರೆದರು. ಅವರ ಈ ಅಪಾರ ಕರ್ತವ್ಯಶೀಲತೆಯನ್ನು ಮನಗಂಡು, ಮಹಾರಾಜರು ಅವರ ಬಗ್ಗೆ ತುಂಬ ಸಂತುಷ್ಟರಾದರು. ಮಹಾರಾಜರ ಔದಾರ್ಯದ ಬಗ್ಗೆ ಬಾಬಾಸಾಹೇಬರು ಕೃತಜ್ಞತಾಪೂರ್ವಕವಾಗಿ ಗೌರವದ ನುಡಿಗಳನ್ನಾಡಿದ್ದಾರೆ.

**ಮುಂಬಯಿ, ದಿನಾಂಕ ೮. :** ಡಾ. ಅಂಬೇಡ್ಕರರಿಗೆ ಶ್ರೀಮಂತ ಸಯ್ಯಾಜಿರಾವ್ ಗಾಯಕ್ವಾಡ್ ಅವರ ನಿಧನದ ಶೋಕವಾರ್ತೆ ತಿಳಿದಾಗ, ಬಾತ್ಮೀದಾರರೆದುರು ಅವರು ಹೀಗೆ ಉದ್ಧರಿಸಿದರು. “ಶ್ರೀ ಸಯ್ಯಾಜಿರಾವ್ ಗಾಯಕ್ವಾಡ್ ಅವರ ನಿಧನದಿಂದ ನನಗೆ ವೈಯುಕ್ತಿಕವಾಗಿ ತುಂಬ ದೊಡ್ಡ ಹಾನಿ ಆಗಿದೆ. ಅವರ ಉಪಕಾರವನ್ನು ನಾನು ಎಂದಿಗೂ ಮರೆಯಲಾರೆ. ಅವರು ನನಗಿತ್ತ ಶಿಕ್ಷಣದಿಂದ ಇಂದು ನನಗೀ ಯೋಗ್ಯತೆ ಪ್ರಾಪ್ತವಾಗಿದೆ. ಅಸ್ಪೃಶ್ಯ ಜಾತಿಯ ಮೇಲೆ ಅವರಿಂದ ತುಂಬ ದೊಡ್ಡ ಉಪಕಾರವೇ ಆಗಿದೆ. ಅವರಷ್ಟು ಅಸ್ಪೃಶ್ಯ ಜಾತಿಗಾಗಿ ದುಡಿದವರು ಬೇರೆ ಇಲ್ಲ. ಅವರು ದೊಡ್ಡ ಸಮಾಜ ಸುಧಾರಕರಾಗಿದ್ದರು, ಮತ್ತು ಬರೋಡಾ ಸಂಸ್ಥಾನದಲ್ಲಿ ಸಮಾಜ ಸುಧಾರಣೆಯ ವಿಷಯದಲ್ಲಿ ತರಲಾದ ಕಾಯ್ದೆಯು, ಯುರೋಪ್, ಅಮೆರಿಕೆಗಳ ಯಾವುದಾದರೂ ಸುಧಾರಿತ ರಾಷ್ಟ್ರಗಳ ಕಾಯ್ದೆಯಂತೆ

ಮುಂಚೂಣಿಯಲ್ಲಿದೆ. ಅವರು ಎಲ್ಲ ಸಾಮಾಜಿಕ ಸಮಸ್ಯೆಗಳನ್ನು ಅಭ್ಯಸಿಸಿ, ಅದರ ದೋಷ ನಿವಾರಿಸುವಲ್ಲಿ ಮುಂದಿದ್ದರು. ಸ್ವಂತ ಪ್ರಜೆಯ ಕಲ್ಯಾಣಕ್ಕಾಗಿ ಹೀಗೆ ಸತತ ಪ್ರಯತ್ನಮಾಡಿದ ಸಂಸ್ಥಾನಿಕರು ಬೇರಿಲ್ಲ. ರಾಷ್ಟ್ರೀಯ ವೃತ್ತಿಯಲ್ಲಿದ್ದು, ಅವರು ದೇಶಭಕ್ತರಾಗಿದ್ದರು. ಈ ಸದ್ಗುಣ, ಸಂಸ್ಥಾನಿಕರಲ್ಲಿ ಕಾಣಸಿಗುವುದೇ ಅಪರೂಪ. ಪ್ರತಿಯೊಂದು ವಿಷಯದಲ್ಲಿ ಅವರು ಬ್ರಿಟಿಶರಿಗೆ ಮಾದರಿಯಾದರು ಮತ್ತು ಅವರ



ಆಜ್ಞೆಯನ್ನು ಸದಾ ಪಾಲಿಸಲಾಗುತ್ತಿತ್ತು. ಅವರನ್ನೂ ಅಸಂತುಷ್ಟರಾಗಿಸುವ ಪ್ರಯತ್ನ ಮಾಡಲಾಯ್ತೆಂಬುದು ದುಃಖದ ವಿಷಯ. ಅವರು ಮಹಾರಾಷ್ಟ್ರೀಯರಾಗಿದ್ದರೂ, ತಮ್ಮ ಗುಜರಾಥಿ ಪ್ರಜೆಗಳ ವಿರುದ್ಧ ಪಕ್ಷಪಾತ ಮಾಡಲಿಲ್ಲವೆಂಬುದನ್ನು ಅವರನ್ನರಿತ ಎಲ್ಲರೂ ಒಪ್ಪುತ್ತಾರೆ. ನನಗೆ ತಿಳಿದಿರುವಂತೆ ಇಂತಹ ಅಶುದ್ದ ವಿಚಾರ ಅವರ ಮನದಲ್ಲುದಿಸುವುದು ಶಕ್ಯವಿರಲಿಲ್ಲ.

ಸಯ್ಯಾಜಿರಾವ್ ಮಹಾರಾಜರ ಮರಣದಿಂದ ಹಿಂದೂಸ್ಥಾನದ ಒಬ್ಬ ಮಹಾಪುರುಷ ಇಲ್ಲವಾದರು ಮತ್ತು ಬರೋಡಾ ಸಂಸ್ಥಾನವು ಒಬ್ಬ ಶ್ರೇಷ್ಠ ರಾಜಕಾರಣಿಯನ್ನು ಕಳಕೊಂಡಿತು. ಮಹಾರಾಷ್ಟ್ರದ ವಿಭೂತಿ ಪುರುಷರೊಬ್ಬರು ಇಲ್ಲವಾದರು. ಅಸ್ಪೃಶ್ಯರ ಏಕಮೇವ ಆಸರೆ ಇಲ್ಲವಾಯ್ತು. ಸಂಸ್ಥಾನಿಕರಲ್ಲಿ ದ್ರಷ್ಟಾರರಾದವರನ್ನು ಕಳಕೊಂಡೆವು.

* * * *

**೮೪. ಸ್ವತಂತ್ರ ಕಾರ್ಮಿಕ ಪಕ್ಷದ ಯುದ್ಧವಿಷಯಕ ಧೋರಣೆ**

ಸ್ವತಂತ್ರ ಕಾರ್ಮಿಕ ಪಕ್ಷದ ಕಾರ್ಯಕಾರಿ ಮಂಡಳಿಯು ಆ ಪಕ್ಷದ ಅಧ್ಯಕ್ಷರಿಗೆ ತನ್ನ ಯುದ್ದ ವಿಷಯಕ ಧೋರಣೆಯನ್ನು ಪ್ರಕಟಪಡಿಸುವ ಅಧಿಕಾರವಿತ್ತಿದೆ. ಆ ಪಕ್ಷದ ಯುರೋಪಿಯನ್ ಯುದ್ಧಸಂಬಂಧೀ ಮನೋವೃತ್ತಿಯನ್ನು ಈ ಧೋರಣೆ ಬಹಿರಂಗಪಡಿಸುತ್ತದೆ. ಹಿಂದೂಸ್ಥಾನವು ಗ್ರೇಟ್ ಬ್ರಿಟನ್‌ಗೆ ಈ ಯುದ್ಧದಲ್ಲಿ ಸಹಾಯ ಮಾಡಬೇಕೆಂಬುದು ಈ ಧೋರಣೆಯ ಪ್ರಮುಖ ಧ್ವನಿಯಾಗಿದೆ. ಆದರೆ ಇದಕ್ಕೆ ತಕ್ಕಂತಹ ಉತ್ಸಾಹವೇನೂ ಕಂಡು ಬರುತ್ತಿಲ್ಲ.

ಬದಲಿಗೆ, ಈ ಧೋರಣೆಯ ಮೇಲೆ, ಬ್ರಿಟನ್‌ನೊಂದಿಗೆ ಕೆಲಸ ಮಾಡುವಲ್ಲಿ ನಿಶ್ಚಯದ ಅಭಾವ ಮತ್ತು ಅನಿಚ್ಛೆಯೇ ದೃಗ್ಗೋಚರವಾಗುತ್ತದೆ. ಬ್ರಿಟನ್‌ಗೆ ಸಹಾಯ ಮಾಡಲು ಮೈತ್ರಿಯ ಅಭಾವವಿರುವಾಗ ಏನೂ ಆಗುವಂತಿಲ್ಲ. ಹಿಂದುಸ್ಥಾನದ ರಕ್ಷಣೆಗಾಗಿ ಸೋಮಾರಿ ಜನರ ಸೀಮಿತ ಸಹಕಾರ್ಯ ಮತ್ತು ವಿರೋಧಕರ ನಿಷ್ಕ್ರಿಯ ವಿರೋಧದಿಂದಾಗಿ ಉತ್ಪನ್ನವಾಗುವ ವಿಘ್ನಗಳು ಪರಸ್ಪರ ಮಾರಕವಾಗಿ, ಬ್ರಿಟನ್‌ಗೆ ಕೊಡಬೇಕಾಗಿದ್ದ ಸಹಾಯ ಸ್ಥಗಿತವಾಯಿತು. ಹಾಗಾಗಿ, ಎಲ್ಲ ಹಿಂದೀಯರ ಬೆಂಬಲ ಸಿಗುವಂತಹ ವ್ಯವಸ್ಥೆಯಾಗಬೇಕು. ಹೀಗಾಗಲು, ಜನರಲ್ಲಿ ಅನುತ್ಸಾಹ ಹುಟ್ಟಲು ಕಾರಣವೇನೆಂದು ಮೊದಲಿಗೆ ನೋಡಬೇಕು. ಸ್ವತಂತ್ರ ಕಾರ್ಮಿಕ ಪಕ್ಷದ ದೃಷ್ಟಿಯಲ್ಲಿ , ಈ ಕಾರಣದ ಪೃಥಕ್ಕರಣ ಮಾಡಿದರೆ ಈ ನಿರುತ್ಸಾಹದ ನಿಜವಾದ ಕಾರಣ, ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳ ಪೂರ್ವಾರ್ಜಿತದ, ಮಧ್ಯೆ ಕಾಣಸಿಗುತ್ತದೆ.ಜರ್ಮನ್ ಅನ್ಯಾಯದ ಪ್ರತೀಕಾರವನ್ನು, ಈ ಎರಡೂ ದೇಶಗಳು ಆಮೆ ವೇಗದಲ್ಲಿ ಈಗಲೂ ಮಾಡುತ್ತಾ ಬಂದಿವೆ. ಜರ್ಮನಿಯ ಮೊದಲ ಅನ್ಯಾಯದ ಸಹಕಾರ್ಯಕ್ಕೆ ಪ್ರತೀಕಾರ ಮಾಡದೆ, ಜರ್ಮನಿಗೆ ಒಂದರ ಹಿಂದೊಂದು ಅನ್ಯಾಯ ಮಾಡಲು ಅವಕಾಶವಿತ್ತಿತು. ಮತ್ತು ಝೆಕೋಸ್ಲೊವಾಕಿಯಾದ ರಕ್ಷಣೆ ಮಾಡುವುದು ತನ್ನ ಪವಿತ್ರ ಕರ್ತವ್ಯವಾಗಿದ್ದರೂ, ಅದು ಆ ದೇಶದ ಬಲಿಕೊಟ್ಟು, ಜರ್ಮನಿಯ ಆರಾಧನೆಗೈಯುವ, ಅಶ್ಲಾಘ್ಯ ಕೆಲಸವನ್ನೇ ಮಾಡಿತು. ಈವರೆಗೆ ಹಿಟ್ಲರ್‌ನ ಐದು ಕೊಲೆಗಳನ್ನು ಮನ್ನಿಸಿದೆ. ಪೋಲೆಂಡ್ ಮೇಲಿನ ಆಕ್ರಮಣ, ಅವನ ಆರನೇ ಪಾತಕ, ಈಗ ಹಿಟ್ಲರ್‌ನನ್ನು ವಿರೋಧಿಸ ಹೊರಟ ರಾಷ್ಟ್ರಗಳು ಈ ಮೊದಲೇ ಹಾಗೆ ವಿರೋಧಿಸಬೇಕಿತ್ತು, ಎಂದು ಸ್ವತಂತ್ರ ಕಾರ್ಮಿಕ ಪಕ್ಷದ ಸ್ಪಷ್ಟ ಅಭಿಪ್ರಾಯ. ಚಿಕ್ಕ ರಾಷ್ಟ್ರಗಳನ್ನು ಜರ್ಮನಿಗೆ ಬಲಿಕೊಟ್ಟು, ಈವರೆಗೆ ಗಳಿಸಿದ ಶಾಂತತೆಯಿಂದ ಈ ಹೋರಾಟಕ್ಕೆ ಸಹಕಾರ ಬೇಡುವ ನೈತಿಕ ಅಧಿಕಾರ ಸಂಪುಟಕ್ಕೆ ಬಂದಿದೆ.

ಯುದ್ಧನಂತರ ನ್ಯಾಯವನ್ನು ಹಿಡಿದು ಒಪ್ಪಂದಕ್ಕೆ ಬರಲೆಂದು ಹೋರಾಡುವುದಲ್ಲ, ಎಂದು ಸ್ವತಂತ್ರ ಕಾರ್ಮಿಕ ಪಕ್ಷದ ಅಭಿಮತ. ಶಾಂತತೆಯ ನಂತರ ಒಪ್ಪಂದದ ಷರತ್ತನ್ನು ಬದಲಿಸಲಾಗುವುದಿಲ್ಲ, ಎಂಬ ಕಾಳಜಿಯನ್ನೂ ಆ ರಾಷ್ಟ್ರಗಳು ತೆಗೆದುಕೊಳ್ಳುವುದಿಲ್ಲ. ನಿವ್ವಳ ಸಹಕಾರೀ ಸುರಕ್ಷತೆಯಿಂದ ಕಾರ್ಯ ಭಾಗವಾಗುವುದಿಲ್ಲ. ಸನ್ ೧೯೧೪

ನಲ್ಲಿ ಇಂತಹ ಸಹಕಾರ್ಯ ನಡೆದಿತ್ತು. ಅನೇಕ ರಾಷ್ಟ್ರಗಳು ಒಂದಾಗಿ ಜರ್ಮನಿಯನ್ನೆದುರಿಸಿದುವು. ಆದರೆ, ಆ ಜರ್ಮನಿಯ ಪುನರುತ್ಥಾನವಾಗಿ



ಇಂದು ಅದು ಜಗದೆದೆಯ ಮೇಲೆ ಕುಣಿಯುತ್ತಿದೆ,

೧. ಯುದ್ಧದಲ್ಲಿ ಜಯಗಳಿಸಿದ ನಂತರ ಒಪ್ಪಂದಕ್ಕೆ ಬರುವುದು ನ್ಯಾಯದ ತತ್ವದೊಡನೇ ಆಗಬೇಕು.

೨. ಯುದ್ಧ ಪ್ರಮಾಣದಲ್ಲಿ ಒಪ್ಪಂದದ ವಿಷಯದಲ್ಲಿ ರಾಷ್ಟ್ರಗಳು ಸಹಕರಿಸಬೇಕು.

೩. ಒಪ್ಪಂದ ಮುರಿದು ಬಿದ್ದರೆ, ಮುರಿದವರಿಗೆ ಶಿಕ್ಷೆಯಾಗಬೇಕು.

ಈ ವಿಷಯದಲ್ಲಿ ಭಂಗವೊಡ್ಡುವವರು ಯಾರು, ಅನ್ಯಾಯವಾದುದಾರಿಗೆ, ಇದು ಸಮೀಪದ ದೇಶದಲ್ಲಿ ನಡೆಯಿತೊ, ದೂರ ದೇಶದಲ್ಲೇ ಎಂಬುದನ್ನು ವಿಚಾರಿಸದೆ, ಅನ್ಯಾಯದ ಪ್ರತೀಕಾರ ಹೇಗಾದರೂ, ಎಲ್ಲಾದರು ಆಗಬೇಕು. ಇಂತಹ ಕಾಳಜಿ ತೆಗೆದುಕೊಳ್ಳದೆ ಯುದ್ದ ಪ್ರವೃತ್ತಿಯ ನಾಶ ಆಗಲಾರದು. ಸ್ವತಂತ್ರ ಕಾರ್ಮಿಕ ಪಕ್ಷಕ್ಕೆ ಈ ವಿಷಯ ಅತ್ಯಂತ ಮಹತ್ವದ್ದಾಗಿದ್ದು, ಈ ಯುದ್ಧದಲ್ಲಿ ಭಾಗವಹಿಸುವ ಸಹಕಾರೀ ರಾಷ್ಟ್ರಗಳು ಒಂದು ಪ್ರಾತಿನಿಧಿಕ ಮಂಡಲಿ ನೇಮಿಸಿ, ತಮ್ಮ ಒಪ್ಪಂದದ ಷರತ್ತನ್ನು ಜಾಹೀರುಪಡಿಸಬೇಕೆಂದು ಈ ಪಕ್ಷದ ಅಭಿಮತ. ಇಂತಹ ಘೋಷಣೆಯಿಂದ ಈ ಯುದ್ಧವು, ಯುದ್ದದ ನಾಶಕ್ಕಾಗಿಯೇ ಮಾಡಿದ್ದೆಂದು ಹೇಳಬಹುದು. ಮತ್ತೆ ಈ ಯುದ್ಧದಲ್ಲಿ ಭಾಗವಹಿಸಲು ಯಾರೂ ವಿಚಾರವಂತರು ಹಿಂದೆಮುಂದೆ ನೋಡಬೇಕಾಗಿಲ್ಲ.

ಬ್ರಿಟನ್‌ಗೆ ಸಹಾಯ ಮಾಡಲು ಹಿಂದೆ ಮುಂದೆ ನೋಡುತ್ತಿರುವುದಕ್ಕೆ ಇನ್ನೊಂದು ಕಾರಣವೂ ಇದೆಯೆಂದು ಸ್ವತಂತ್ರ ಕಾರ್ಮಿಕ ಪಕ್ಷದ ಮತ. ಹಿಂದೂಸ್ಥಾನವಿಂದು ಬ್ರಿಟಿಶ್ ಮಂತ್ರಿಮಂಡಳದ ಜಗನ್ನಾಥ ರಥಕ್ಕೆ ಕಟ್ಟಲ್ಪಟ್ಟು, ಅದರೊಡನೆ ಎಳೆಯಲ್ಪಟ್ಟು ಸಾಗುತ್ತಿದೆ.

ಇಂಗ್ಲಿಷ್ ಮುತ್ಸದ್ದಿಗಳಿಗೆ ಅಂತರರಾಷ್ಟ್ರೀಯ ಧೋರಣೆ ನಿರ್ಧರಿಸುವ ಪೂರ್ಣ ಸ್ವಾತಂತ್ರ್ಯವಿದ್ದು ತಮಗೆ ಬೇಕಾದಂತೆ ಮಾಡಲು ಬರುತ್ತದೆ. ಯುದ್ಧ ಆರಂಭಿಸುವುದು, ಬಿಡುವುದು,ಒಪ್ಪಂದ ಮಾಡುವುದು, ಬಿಡುವುದು ಎಲ್ಲ ಅವರ ಮರ್ಜಿಯಂತೆ. ಈ ಅಂತರರಾಷ್ಟ್ರೀಯ ರಾಜಕಾರಣದಲ್ಲಿ ಹಿಂದೂಸ್ಥಾನವನ್ನು ಕೇಳುವವರು ಯಾರೂ ಇಲ್ಲ. ಯುದ್ದ, ಒಪ್ಪಂದದ ವಿಷಯದಲ್ಲಿ ಹಿಂದೂಸ್ಥಾನದ ಅಭಿಪ್ರಾಯ ಯಾರೂ ಕೇಳುವುದಿಲ್ಲ. ಅಂತರರಾಷ್ಟ್ರೀಯ ರಾಜಕಾರಣ ಯಶಸ್ವಿಯಾದರೆ, ಅದರಲ್ಲಿ ಭಾರತಕ್ಕೇನೂ ಲಾಭವಿಲ್ಲ. ಆದರೆ, ಯುದ್ದ ಪ್ರಸಂಗ ಬಂದರೆ, ಹಿಂದೂಸ್ಥಾನ, ಹಣ ಹಾಗೂ ಮನುಷ್ಯಬಲ ಎರಡನ್ನೂ ಕೊಡಬೇಕು. ಇದು ಹಿಂದೂಸ್ಥಾನದ ವಿಷಯದಲ್ಲಿ ಅನ್ಯಾಯವೆಂದು ಯಾರೂ ಒಪ್ಪಿಕೊಳ್ಳಬೇಕು. ವರ್ಸಾಯ್ ಒಪ್ಪಂದಕ್ಕೆ ಹಿಂದೂಸ್ಥಾನವೂ ಸಹಿ ಮಾಡಿತ್ತು, ನಿಜ; ಆದರೆ ಒಪ್ಪಂದದ ವಿಷಯದಲ್ಲಿ ವಿಚಾರ ಮಾಡದಿರುವುದು ಯಾರಿಗೂ ಸಮಾಧಾನಕರವಲ್ಲ. ಅಂತರರಾಷ್ಟ್ರೀಯ ರಾಜಕಾರಣದಲ್ಲಿ ಹಿಂದೂಸ್ಥಾನಕ್ಕೆ ಮತಾಧಿಕಾರವಿರುವುದು, ಸಾಮ್ರಾಜ್ಯದ ಇತರ ದೇಶಗಳಿಗೆ ಆ ಅಧಿಕಾರ ಇರುವಷ್ಟೇ ಅಗತ್ಯದ ವಿಷಯ. ಸಾಮ್ರಾಜ್ಯದಲ್ಲಿ ವಸಾಹತಿಗೆ ಯೋಗ್ಯವಾದಂತೆ ತಟಸ್ಥವಿರುವ ಅಧಿಕಾರವಿದೆ. ಅದೇ ಹಿಂದೂಸ್ಥಾನಕ್ಕಿಲ್ಲ. ಯುದ್ಧದಲ್ಲಿ ಭಾಗವಹಿಸುವುದು ಹಿಂದೂಸ್ಥಾನದ ಮರ್ಜಿಯನ್ನವಲಂಬಿಸಿಲ್ಲ. ಹಾಗೆಂದೇ ಯುದ್ದಕ್ಕೆ ಮುನ್ನ ಈ ದೇಶದ ಅಭಿಪ್ರಾಯ ಪಡೆಯುವುದು ಅವಶ್ಯ. ಆದರೆ ಈ ವರೆಗೆ ಈ ವಿಷಯವನ್ನೆತ್ತಿಕೊಂಡಿಲ್ಲ.

ಯುದ್ಧದ ಬಗ್ಗೆ ಹಿಂದೆಮುಂದೆ ನೋಡುವ ಎಲ್ಲ ಕಾರಣಗಳನ್ನೂ ಸ್ವತಂತ್ರ ಕಾರ್ಮಿಕ ಪಕ್ಷ ವಿಚಾರ ಮಾಡಿದೆ. ಈ ಕಾರಣಗಳು ಸಂಯುಕ್ತಿಕವೆಂಬುದನ್ನು ಯಾರೂ ಅಲ್ಲಗಳೆಯಲಾಗದು. ಪೋಲೆಂಡ್‌ನ ಸಂರಕ್ಷಣೆಯೇ ಯುದ್ಧದ ಕಾರಣವಾಗಿದ್ದರೆ, ಅದಕ್ಕೊಂದು ಬಲ ಬರುತ್ತಿತ್ತು.

ಈ ಯುದ್ಧದಲ್ಲಿ ಪೋಲೆಂಡ್‌ನತ್ತ ಯುದ್ಧದ ತಕ್ಕಡಿ ಬಾಗುತ್ತಿದೆ, ಎಂದು ಸ್ವತಂತ್ರ ಕಾರ್ಮಿಕ ಪಕ್ಷದ ಅಭಿಪ್ರಾಯವಲ್ಲ. ಪೋಲೆಂಡ್ ಎಂದು ಪ್ರಜಾರಾಜ್ಯದ ಶ್ರಾದ್ಧ ಮಾಡಿಬಿಟ್ಟಿತೋ, ಯಹೂದಿಗಳ ಮೇಲೆ ಅದು ಜರ್ಮನಿಗಿಂತ ಕಡಿಮೆ ಅನ್ಯಾಯವನ್ನೇನೂ ಮಾಡಿಲ್ಲ. ಸದ್ಯದ ಭೀಷಣ ಪರಿಸ್ಥಿತಿಯಲ್ಲಿ ಪೋಲೆಂಡ್, ರಷ್ಯಾದ ಸಹಾಯ ಪಡೆದು ಉಳಿಯುವುದಕ್ಕಿಂತ ಮರಣವೇ ಲೇಸೆಂಬ ಧೋರಣೆ ತಳೆದಿದೆ. ಈ ಯುದ್ಧ ಕೇವಲ ಪೋಲೆಂಡ್‌ನ ರಕ್ಷಣೆಗಾಗಿ ಕರೆದುದಲ್ಲವೆಂದು ಸ್ವತಂತ್ರ ಕಾರ್ಮಿಕ ಪಕ್ಷದ ಅಭಿಮತ. ಈ ಯುದ್ಧಕ್ಕೆ ಅದೂ ಒಂದು ಕಾರಣವಷ್ಟೇ.ಪೋಲೆಂಡ್ ಮತ್ತು ಜರ್ಮನಿಯ ಯುದ್ಧದ ಮೂಲದಲ್ಲೇ ಒಂದು ವ್ಯಾಪಕ, ಗಂಭೀರ ಪ್ರಶ್ನೆಯಿದೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಜಗತ್ತಿನ ಹಲವು ರಾಷ್ಟ್ರಗಳ ಪೈಕಿ ತಾನೊಂದು ಎಂಬಂತಿರಲು ಜರ್ಮನಿ ತಯಾರಿಲ್ಲ. ತಾನು ಉಚ್ಚವರ್ಗದ ರಾಷ್ಟ್ರವೆಂದು ಜಗತ್ತಿಗೆ ತೋರಿಸಿಕೊಡಬೇಕಿದೆ. ತನ್ನ ಮಾತು ಇತರ ರಾಷ್ಟ್ರಗಳಿಗೆ ಮಾನ್ಯವಾಗಬೇಕು ಎಂಬ ಆಗ್ರಹ, ಜರ್ಮನಿಯದು. ಇದು ಪೋಲೆಂಡ್‌ಗೆ ಮಾತ್ರ ಇತ್ತ ಆಹ್ವಾನವಲ್ಲ, ಇಡಿಯ ಜಗತ್ತಿಗೇ ಇತ್ತ ಆಹ್ವಾನ. ಇಂಥಾ ಪರಿಸ್ಥಿತಿಯಲ್ಲಿ ಎಲ್ಲ ರಾಷ್ಟ್ರಗಳಿಗೂ ಸಮಾನತೆಯ ಹಕ್ಕು ಇದೆಯೆಂದು ಒಪ್ಪುವ ರಾಷ್ಟ್ರಗಳು ಜಗತ್ತಿನ ಸಂಸ್ಕೃತಿಯಲ್ಲಿ ತಮ್ಮ ಪಾಲೂ ಇದೆಯೆಂದು ಸಹಕಾರದಿಂದ ಜರ್ಮನಿಯ ಉದ್ಧಟತನಕ್ಕೆ ಮೂಗುದಾರ ಹಾಕುವುದೇ ಅವುಗಳ ಕರ್ತವ್ಯ.

ಹಿಂದೂಸ್ಥಾನದ ಇಚ್ಛೆ ಹಾಗೂ ಮಹತ್ವಾಕಾಂಕ್ಷೆಗೆ ಜರ್ಮನಿಯ ಉದ್ಧಟತನದ ಕೋರಿಕೆಯಿಂದ ಹಿಡಿಮಣ್ಣು ಸಿಗುವುದಷ್ಟೆ, ಸ್ವರಾಜ್ಯದ ಬೇಡಿಕೆಯಲ್ಲಿ ಎಷ್ಟೇ ಸಂಕಟ ಬಂದರೂ, ಅದನ್ನು ಪಡೆದೇ ತೀರುವುದು, ಮತ್ತದನ್ನು ಉಳಿಸಿಕೊಳ್ಳುವದು ಹಿಂದೂಸ್ಥಾನದ ನಿರ್ಧಾರ. ನಾರ್ಡಿಕ್ ವಂಶದವರು ಮಾತ್ರ ಜಗತ್ತನ್ನಾಳಬೇಕೆಂಬ, ಇತರರು ಅವರ ಅಂಕಿತದಲ್ಲಿರಬೇಕೆಂಬ ಜರ್ಮನಿಯ ಧೋರಣೆ ಇತರೆಲ್ಲರಿಗೊಂದು ಪಂಥಾಹ್ವಾನವೇ ಸೈ. ಇಂತಹ ಸ್ಥಿತಿಯಲ್ಲಿ ಈ ಆಹ್ವಾನವನ್ನೆದುರಿಸಿ, ನಮ್ಮ ಹಕ್ಕು ಸಾಬೀತಾಗಿಸದೆ ಹಿಂದೂಸ್ತಾನಕ್ಕೆ ಗತ್ಯಂತರವಿಲ್ಲ.

ಇತರ ಪಕ್ಷಗಳ ಜನರೂ ಬ್ರಿಟನ್‌ಗೆ ಸಹಾಯ ಮಾಡುವ ವಿಷಯದಲ್ಲಿ ಹಿಂದೆಮುಂದೆ ನೋಡುತ್ತಿರುವುದು ಸ್ವತಂತ್ರ ಕಾರ್ಮಿಕ ಪಕ್ಷಕ್ಕೆ ತಿಳಿದಿದೆ. ಆ ಪಕ್ಷಗಳ ಧೋರಣೆ ತತ್ವಾಧಾರಿತವಾಗಿರದೆ ಪೇಚಿಗೆ ಸಿಲುಕಿಸಲು ಸ್ವೀಕರಿಸಿದ್ದಾಗಿದೆ. ಇಂಗ್ಲೆಂಡ್‌ನ ಈ ಆಪತ್ತಿಯೇ ಹಿಂದೂಸ್ತಾನದ ಸುಸಂಧಿಯೆಂದು ಅವರಿಗನಿಸುತ್ತದೆ. ಮುಸ್ಲಿಮ್ ಲೀಗ್ ಮತ್ತು ಹಿಂದೂಸಭಾಗಳು ಇಂಗ್ಲೆಂಡ್‌ನ ಆಪತ್ತಿಯ ಪ್ರಯೋಜನ ಪಡೆದು ತಮ್ಮ ತಕ್ಕಡಿಯಲ್ಲಿ ಹೆಚ್ಚು ಹಕ್ಕು ಹಾಕಿಕೊಂಡು ಜಾತಿನಿರ್ಣಯವನ್ನು ತಮ್ಮ ತಮ್ಮ ದೃಷ್ಟಿಗೆ ತಕ್ಕಂತೆ ಹೊಂದಿಸಿ ಕೊಳ್ಳಲು ನೋಡುತ್ತಾರೆ. ಇಂಗ್ಲೆಂಡ್‌ನ ಅಗತ್ಯವು ಹಿಂದೂಸ್ಥಾನದ ಸ್ವಾತಂತ್ರ್ಯದ ಸಂಧಿಯಾಗಲಿ, ಎಂದು ಮತ್ತೊಂದು ಮಹತ್ವದ ಪಕ್ಷದ ಅಭಿಪ್ರಾಯ. ಹಿಂದೂಸ್ಥಾನವು ತನ್ನ ಶಕ್ತಿಯ ಬಲದಿಂದ ತನಗೆ ಬೇಕಾದುದನ್ನು ಪಡೆವ ಅವಕಾಶವಿದು ಎಂದು ಆ ಪಕ್ಷದ ಹೇಳಿಕೆ. ಮನೆಗೆ

ಕರೆಸಿಕೊಂಡ ಅತಿಥಿಯೇ ಮನೆಯೊಡೆಯನಾಗುವ ಸಂಭವವಿರುವುದರಿಂದ, ಭಾವನಾವಶವಾಗದ ಯಾರಾದರೂ ವಿಚಾರವಂತರಿಂದ ಹೀಗೆ ಮಾಡುವುದು ಬುದ್ಧಿವಂತಿಕೆ ಅನಿಸದು. ಸನಿಹದ ಭವಿಷ್ಯದತ್ತ ಕಣ್ಣು ಹಾಯಿಸಿದರೆ, ತ್ರಿಶಂಕುವಿನಂತೆ ಇರುವ ಇಚ್ಛೆಯಿರದ ಯಾರೇ ಆದರೂ ಹಿಂದೂಸ್ಥಾನವು ಬ್ರಿಟಿಶ್ ಸಾಮ್ರಾಜ್ಯದಲ್ಲೇ ಇದ್ದು, ಬ್ರಿಟನ್‌ನಿಂದ ಸಮಾನತೆಯ ಹಕ್ಕು ಪ್ರಾಪ್ತವಾಗಿಸಿಕೊಳ್ಳುವ ಪ್ರಯತ್ನ ಮಾಡಲೆಂದೇ ಅನಿಸುವುದೆಂದು ಸ್ವತಂತ್ರ ಕಾರ್ಮಿಕ ಪಕ್ಷಕ್ಕೆ



ವಿಶ್ವಾಸವಿದೆ.

ಸ್ವಾತಂತ್ರ್ಯಕ್ಕಾಗಿ ಹಿಂದೂಸ್ಥಾನದ ಪರಕೀಯ ಮಿತ್ರರಿಗೆ ಆಮಂತ್ರಣ ನೀಡುವುದು ಆತ್ಮಘಾತಕವಲ್ಲದಿದ್ದರೂ, ಕೈಯಲ್ಲಿರುವುದನ್ನು ಬಿಟ್ಟು, ಓಡುತ್ತಿರುವುದರ ಹಿಂದೆ ಬಿದ್ದಂತಹ ಮೂರ್ಖತನವಷ್ಟೆ. ಈ ಅನಿಶ್ಚಿತ ಧೋರಣೆ ಯನ್ನು, ಸರ್ವನಾಶವಾಗುವುದಿದ್ದರೂ ಅಂಗೀಕರಿಸಿ ಎಂದು ಯಾರೂ ಸ್ವಸ್ಥ ತಲೆಯವರು ಹೇಳಲಾರರು.

ಹಿಂದೂಸ್ಥಾನದ ಜನರು ತಮ್ಮ ಹಿತಾರ್ಥ ನಡೆದಿರುವ ಯುದ್ಧದಲ್ಲಿ ಬ್ರಿಟನ್‌ಗೆ ಸಹಕರಿಸುವುದು ಅಗತ್ಯವಾಗಿದೆ. ಬ್ರಿಟನ್ ಸಹ ಹಿಂದೂಸ್ಥಾನ ಸಂಬಂಧ ತನ್ನ ಕರ್ತವ್ಯವನ್ನು ಹಿಂಜರಿಯದೆ ಮಾಡಿ ಮುಗಿಸಬೇಕು.

ಹಿಂದೂಸ್ಥಾನದ ಜನರನ್ನು ತಮ್ಮ ದೇಶದ ಸಂರಕ್ಷಣೆಗೆ ಸಿದ್ಧಗೊಳಿಸುವುದು ಬ್ರಿಟನ್‌ನ ಪ್ರಥಮ ಕರ್ತವ್ಯ. ಹಿಂದೂಸ್ಥಾನದ ಮೇಲೆ ಎಲ್ಲ ದಿಕ್ಕುಗಳಿಂದಲೂ ಹಲ್ಲೆಯಾಗುವಂತಿದೆ. ಇದರಷ್ಟು ಅಸುರಕ್ಷಿತವಾದ ದೇಶ, ಬೇರೊಂದಿಲ್ಲ. ಭೂಮಿ, ಸಮುದ್ರ ಮತ್ತು ಹವೆ ಈ ಮೂರು ಮಾರ್ಗಗಳಲ್ಲಿ ಯಾವೊಂದರಿಂದ ಹಲ್ಲೆಯಾದರೂ, ಪ್ರತೀಕಾರ ಮಾಡುವಂತಹ ಸಾಧನ ಲಭ್ಯವಿಲ್ಲ. ಸಂರಕ್ಷಣೆಗಾಗಿ, ಈ ದೇಶವಿಂದು ಬ್ರಿಟಿಷ್ ಸೈನ್ಯ, ಬ್ರಿಟಿಷ್ ಆರ್ಮರಿ ಮತ್ತು ಬ್ರಿಟಿಷ್ ವಿಮಾನಗಳನ್ನೇ ಅವಲಂಬಿಸಿದೆ. ದುಂಡು ಮೇಜಿನ ಪರಿಷತ್ತಿನಲ್ಲಿ ಹಿಂದೂ ಸ್ಥಾನದ ಸಂರಕ್ಷಣೆಯ ಜವಾಬ್ದಾರಿಯನ್ನು

ಹಿಂದೂಸ್ಥಾನದ ಮೇಲೆ ಹೊರಿಸುವ ನಿರ್ಧಾರವಾಗಿತ್ತು. ಆದರೆ ಈವರೆಗೆ ಇದನ್ನು ಜಾರಿಗೆ ತರಲು ಉಪಾಯವನ್ನು ಯೋಜಿಸಲಾಗಿಲ್ಲ. ಸೈನಿಕ ಶಾಲೆ ಮತ್ತು ಸೈನಿಕರಿಗೆ ಅಧಿಕಾರ ಕೊಡುವ ಬಗ್ಗೆ ಸಾಕಷ್ಟು ಮಾತುಗಳಾಗಿವೆ. ಹಿಂದೀಯರನ್ನು ದೇಶದ ಸಂರಕ್ಷಣೆಗೆ ಸಿದ್ಧಗೊಳಿಸುವ ವಿಷಯದೆದುರು ಮೇಲಿನೆರಡು ವಿಷಯಗಳೂ ಗೌಣವೆಂದು ಕಾರ್ಮಿಕ ಪಕ್ಷದ ಅಭಿಮತ. ಎಲ್ಲ ಹಿಂದೀಯರಿಗೆ ಜಾತಿ, ಧರ್ಮ, ಮುಂತಾದವುಗಳನ್ನು ಗಣಿಸದೆ, ಕಡ್ಡಾಯ ಸೈನಿಕ ಶಿಕ್ಷಣ ಕೊಡುವುದೇ ಮಹತ್ವದ ವಿಷಯ. ಈ ಧೋರಣೆಯಿಂದಲೇ ದೇಶರಕ್ಷೆಯ ಪ್ರಶ್ನೆ ಬಗೆಹರಿಯುವುದು. ಬ್ರಿಟಿಶ್ ಸರಕಾರವು ಹಿಂದೀಯರಿಗೆ ಯುದ್ಧ ಕಾಲದಲ್ಲೂ, ನಂತರವೂ ಸೈನಿಕ ಶಿಕ್ಷಣ ಕೊಡಿಸಲು ಯಾಕೆ ಸಿದ್ಧವಿಲ್ಲವೆಂಬುದು ಅಚ್ಚರಿಯ ವಿಷಯ. ಹಿಂದೀಯರಲ್ಲಿ ವಿಶ್ವಾಸ ಇಲ್ಲವೆಂದೇ ಅವರಿಗೆ ಈ ಶಿಕ್ಷಣ ಕೊಡುತ್ತಿಲ್ಲವೆಂದು ಸರ್ವರೂ ತಿಳಿದಿದ್ದಾರೆ. ವಿಶ್ವಾಸವಿಡುವುದರಿಂದಲೇ ವಿಶ್ವಾಸ ಹೆಚ್ಚುತ್ತದೆ. ಹಿಂದೀಯರಿಗೆ ಅಧಿಕಾರ ನೀಡುವಾಗ ಪಕ್ಷಪಾತವಾಗದಂತೆ ನೋಡುವ ವ್ಯವಸ್ಥೆಯಾಗಬೇಕು.ಬ್ರಿಟಿಶ್ ಸರಕಾರಕ್ಕೆ ಜನತೆಯ ವಿಶ್ವಾಸ ಗಳಿಸಬೇಕಿದ್ದರೆ, ಸೇನೆಯ ಉನ್ನತ ಸ್ಥಾನಗಳಿಗೆ ಶ್ರೀಮಂತರು ಮತ್ತು ವಿಶಿಷ್ಟ ಜನರನ್ನು ಮಾತ್ರ ಆಯುವ ಆ ಧೋರಣೆಯನ್ನು ಬಿಟ್ಟು ಬಿಡಬೇಕು.

ಬ್ರಿಟಿಶ್ ಸಾಮ್ರಾಜ್ಯದಲ್ಲಿ ಹಿಂದೂಸ್ಥಾನದ ದರ್ಜೆ ಸಮಾನತೆಯದಾಗಿದೆ. ಹಾಗೆಂದು ಖಾತ್ರಿ ಮಾಡಿ ಕೊಡುವುದು ಬ್ರಿಟಿಷ್ ಸರಕಾರದ ಇನ್ನೊಂದು ಜವಾಬ್ದಾರಿಯಾಗಿದೆ. ಹಿಂದೀ ರಾಜ್ಯಘಟನೆಯ ಕಾಯ್ದೆಯಲ್ಲಿ ಹಿಂದೂಸ್ಥಾನಕ್ಕೆ ಡೊಮಿನಿಯನ್ ಸ್ಟೇಟಸ್ ಸಿಗದಿರುವ ಬಗ್ಗೆ ಬಹಳಷ್ಟು ಜನರಿಗೆ ವಿಷಾದವಾಗಿದೆ. ಲಾರ್ಡ್ ಇರ್ವಿನ್ ಅವರು ಸನ್ ೧೯೨೯ರಲ್ಲಿ ಕೊಟ್ಟ ಆಶ್ವಾಸನೆಯನ್ನು ಪಾರ್ಲಿಮೆಂಟ್, ೧೯೩೫ರಲ್ಲಿ ಹರತಾಳದಲ್ಲಿ ಕಳೆದುದರಿಂದ ಜನರಿಗೆ ಬ್ರಿಟಿಶರಲ್ಲಿ ವಿಶ್ವಾಸ ಹೊರಟು ಹೋಗಿದೆ. ತತ್ವಕ್ಕಾಗಿ ಹಿಂದೂಸ್ಥಾನವು ಯುದ್ಧಕ್ಕಿಳಿದರೂ, ಗೆದ್ದ ನಂತರ ಈ ತತ್ವದ ಫಲ ಅವರ ಜೋಳಿಗೆಯಲ್ಲಿ ಬೀಳಲೇ ಬೇಕು.

ಮೇಲಿನ ವಿವೇಚನೆಯಿಂದ ಸ್ವತಂತ್ರ ಕಾರ್ಮಿಕ ಪಕ್ಷದ ಧೋರಣೆ ಸ್ಪಷ್ಟವಿದೆ. ವೈಸರಾಯ್ ಸಾಹೇಬರು ಬ್ರಿಟನ್‌ಗೆ ಸಹಾಯ ಮಾಡುವಂತೆ ಕೋರಿದ್ದನ್ನು ಲಕ್ಷಿಸಿ, ಸ್ವತಂತ್ರ ಕಾರ್ಮಿಕ ಪಕ್ಷವು ಪೂರ್ಣ ಬೆಂಬಲವಿತ್ತಿದೆ. ಈ ಸಹಾಯಕ್ಕೆ ಮುನ್ನ ಷರತ್ತು ಒಡ್ಡುವುದು ಯೋಗ್ಯವಲ್ಲವೆಂದು ಈ ಪಕ್ಷದ ಅಭಿಮತ. ಆದರೂ, ಬ್ರಿಟಿಶರೂ, ಹಿಂದೀಯರೂ, ತಾವು ಒಟ್ಟಾಗಿ ಹೋರಾಡುತ್ತಿರುವುದೇಕೆಂದೂ, ಪರಸ್ಪರರಿಂದ ಏನನ್ನು ಅಪೇಕ್ಷಿಸುತ್ತಿರುವರೆಂಬುದನ್ನೂ ಅರಿಯುವುದು ಅಗತ್ಯ ಎಂದು ಸ್ವತಂತ್ರ ಕಾರ್ಮಿಕ ಪಕ್ಷದ ಅನಿಸಿಕೆ.

* * * *

## ೮೫. ಅಸ್ಪೃಶ್ಯತೆಯ ವಂಶಾವಳಿ

ಹಿಂದೂಸ್ಥಾನದಲ್ಲಿ ಜನರು ಕೃಷಿ ಆರಂಭಿಸಿದ್ದು ಇತ್ತೀಚೆಗೆಲ್ಲೋ, ಅಷ್ಟೇ, ಹೀಗೆ ಪ್ರಾಚೀನ ಕಾಲದಿಂದ ನಾವು ಈ ಅಸ್ಪೃಶ್ಯತೆಯ ವಂಶಾವಳಿಯ ವಿಚಾರ ಮಾಡಬೇಕು. ತುಂಬ ಪ್ರಾಚೀನಕಾಲದಲ್ಲಿ ಸ್ಥಾನಬದ್ಧ ರೈತರಂತೆ ದನಕರು ಕಟ್ಟಿಕೊಂಡಿದ್ದು, ಮೇವಿಗಾಗಿ ಅಲ್ಲಲ್ಲಿ ತಿರುಗಾಡುತ್ತಿದ್ದ ದನಗಾಹಿ ಕುರುಬರು, ಇವರು. ಈ ಕುರುಬರಲ್ಲಿ ಮೇವಿಗಾಗಿ ನಿತ್ಯವೂ ಕಲಹ ನಡೆಯುತ್ತಿತ್ತು. ಎಷ್ಟೋ ಸಲ ಸ್ಥಾನಬದ್ಧ ರೈತರೊಡನೆಯೂ ಸೆಣಸಬೇಕಾಗಿ ಬರುತ್ತಿತ್ತು. ಈ ನಿತ್ಯಕಲಹದಿಂದ ಈ ಅಲೆಮಾರಿ ಕುರುಬರ ಸಂತತಿ ಕ್ಷೀಣಿಸುತ್ತಾ ಬರುತ್ತಿತ್ತು; ಸಂಚಾರ ಸಾಧನಗಳೂ ಇಲ್ಲದೆ, ಪರಿಸ್ಥಿತಿಯನ್ನು ನಿಭಾಯಿಸುವುದು ಕಷ್ಟವೇ ಆಗಿತ್ತು.

ಮೇಲೆ ಹೇಳಿದಂತೆ ಆ ಕಾಲದಲ್ಲಿ ಬಹಳಷ್ಟು ಜನರು ರೈತರಾಗಿದ್ದು, ಸ್ಥಾನಬದ್ಧರಾಗಿದ್ದರು. ಈ ಜನರಿಗೆ ತಮ್ಮ ಹೊಲಗದ್ದೆ, ಮನೆ ಮಠ, ಫಸಲು ಮತ್ತು ಉಚ್ಚ ಸಂಸ್ಕೃತಿಯನ್ನು ಈ ಅಲೆಮಾರಿಗಳಿಂದ ರಕ್ಷಿಸುವ, ಶಾಂತಿಯನ್ನೂ

ಕಾಪಾಡುವ ತೀವ್ರ ಇಚ್ಛೆಯಿತ್ತು. ಆದರೆ ಈ ಅಲೆಮಾರಿಗಳನ್ನು ಎದುರಿಸುವ ಸಾಮರ್ಥ್ಯ ಮಾತ್ರ ಅವರಲ್ಲಿರಲಿಲ್ಲವೆಂದು ಹೇಳಬೇಕಾಗಿಲ್ಲ.

ಈ ಅಲೆಮಾರಿಗಳ ಉಪದ್ರವದಿಂದ ತಮ್ಮ ಮಾಲನ್ನು ರಕ್ಷಿಸಲು, ಆ ಕಾಲದ ರೈತ ವರ್ಗವು, ಅವ್ಯವಸ್ಥಿತರೂ, ಜರ್ಝರಿತರೂ ಆದವರ ಗ್ರಾಮರಕ್ಷಕರಾಗಿ ನಿಯಮಿಸಿ, ಗ್ರಾಮದ ಹೊರಗೆ ಭೂಮಿಯಿತ್ತು, ಶಾಂತತೆ ಮತ್ತು ಸುವ್ಯವಸ್ಥೆ ಕಾಪಾಡುವ ಕೆಲಸವನ್ನು ಅವರಿಗೊಪ್ಪಿಸಿದರು ಗ್ರಾಮರಕ್ಷಣೆಯ ತಮ್ಮ ಕರ್ತವ್ಯವನ್ನು ಈ ರಕ್ಷಕರು ಪರಂಪರಾಗತವಾಗಿ ಮಾಡುತ್ತಾ ಬಂದಿದ್ದಾರೆ. ಆ ಕಾಲದಲ್ಲಿ ಗ್ರಾಮ ಸೀಮೆಯಲ್ಲಿ ವಾಸವಾಗಿದ್ದ ಈ ಸಂರಕ್ಷಕರು ಮತ್ತು ಗ್ರಾಮದ ರೈತರ ಮಧ್ಯೆ ಅನ್ಯೋನ್ಯ ಮಾನವೀಯ ಸಂಬಂಧವಿದ್ದು, ಅಸ್ಪೃಶ್ಯತೆಯ ಕಲ್ಪನೆಯೂ ಇರಲಿಲ್ಲ. ಮತ್ತೆ ಈ ಅಸ್ಪೃಶ್ಯತೆ ಹುಟ್ಟಿಕೊಂಡಿತಾದರೂ ಹೇಗೆ? ಅಸ್ಪೃಶ್ಯತೆಯ ಉಗಮ ಹೇಗಾಯಿತೆಂಬುದನ್ನು ಅರಿಯಲು ಬೌದ್ಧಧರ್ಮದ ವಿಕಾಸದ ಇತಿಹಾಸದತ್ತ ನೋಟ ಹರಿಸಬೇಕು.

ಹಿಂದೂಸ್ಥಾನದ ಇತಿಹಾಸದಲ್ಲಿ ಯಾರಿಗೂ ಸಿಗದಷ್ಟು ಯಶಸ್ಸು ಬೌದ್ಧಧರ್ಮಕ್ಕೆ ದೊರಕಿತು. ಅದು ಈ ದೇಶದ ಮೂಲೆ ಮೂಲೆಗಳಿಗೆ ವೇಗದಲ್ಲಿ ಪಸರಿಸಿತು. ಸ್ವಲ್ಪದರಲ್ಲೇ ಹಿಂದೂಸ್ಥಾನದ ರೈತರೂ, ವ್ಯಾಪಾರಿಗಳೂ, ಉದ್ದಿಮೆದಾರರೂ ಬೌದ್ಧಧರ್ಮವನ್ನು ಸ್ವೀಕರಿಸಿದರು.

ಬೌದ್ಧಧರ್ಮದ ಪ್ರಚಾರದಿಂದ ಬ್ರಾಹ್ಮಣ ಧರ್ಮಕ್ಕೆ ತುಂಬ ಭೀತಿಯುಂಟಾಗತೊಡಗಿತು. ಬ್ರಾಹ್ಮಣರು ಮಹಾಧೂರ್ತತೆಯಿಂದ ತಮಗೆ ಪ್ರಿಯವಾದ ತಮ್ಮ ಪುರಾತನ ಸಾಮಾಜಿಕ ಮತ್ತು ಧಾರ್ಮಿಕ ಸಂಪ್ರದಾಯಗಳನ್ನು ಕಿತ್ತೊಗೆದು ಹೊಸ ಪರಿಸ್ಥಿತಿಗೆ ಹೊಂದಿಕೊಂಡುದಲ್ಲದೆ ಹೋಗಿದ್ದರೆ, ಬ್ರಾಹ್ಮಣಧರ್ಮವು ರಸಾತಳಕ್ಕೆ ಇಳಿದು ಹೋಗುತ್ತಿತ್ತು. ಅವರ ಈ ಧೋರಣೆಯೇ ಅವರ ಧರ್ಮವನ್ನುಳಿಸಿತು.

ಬ್ರಾಹ್ಮಣರು ಆಗ ಏನು ಮಾಡಿದರೆಂದು ನೋಡುವಾ. ಬೌದ್ಧಧರ್ಮದ ಬೋಧೆಯು

ಮುಖ್ಯವಾಗಿ ತ್ರಿವಿಧ ಸ್ವರೂಪದ್ದಾಗಿತ್ತು, ಮತ್ತು ಜನಮನಕ್ಕೆ ಹಿಡಿಸಿತ್ತು. ಬೌದ್ಧಧರ್ಮದ ಸಮತೆಯ ಘೋಷಣೆ, ಹಿಂಸೆ, ಚಾತುರ್ವರ್ಣ್ಯ ಮತ್ತು ಯಜ್ಞ ಯಾಗಗಳ ನಿಷೇಧ, ಇವೆಲ್ಲ ಜನಮನವನ್ನು ಆಕರ್ಷಿಸಿತ್ತು. ಬ್ರಾಹ್ಮಣ ಧರ್ಮದ ಯಜ್ಞ ಯಾಗಗಳು ಜನತೆಯನ್ನು ಶೋಷಿಸುತ್ತಿದ್ದುದರಿಂದ ಈ ಧಾರ್ಮಿಕ ಕಾರ್ಯಗಳ ಬಗ್ಗೆ ಜನಮನದಲ್ಲಿ ಜಿಗುಪ್ಸೆ ಎದ್ದಿತ್ತು.

ಅಂದಿನ ಬ್ರಾಹ್ಮಣರು ಶಾಕಾಹಾರಿಗಳೇನೂ ಆಗಿರಲಿಲ್ಲ. ದೇವರ ಹೆಸರಲ್ಲಿ ಹಸು ಮತ್ತು ಇತರ ಪಶುಗಳನ್ನು ಯಜ್ಞಕ್ಕೆ ಆಹುತಿ ಕೊಟ್ಟು, ಮತ್ತೆ ತಾವೇ ಭುಜಿಸುತ್ತಿದ್ದರು.

ಈ ಮಾಂಸಭಕ್ಷಣೆಯ ಅತಿರೇಕದಿಂದ ಪಶುಹತ್ಯೆಯಾಗಿ ರೈತರು ಸಂಕಷ್ಟದಲ್ಲಿ ಬೀಳುತ್ತಿದ್ದರು. ತಮ್ಮ ಹಸುಗಳನ್ನು ಕಳಕೊಂಡು, ತತ್ಪರಿಣಾಮವಾಗಿ, ಹಾಲು, ಮೊಸರು ಮತ್ತಿತರ ಉತ್ಪನ್ನಗಳಿಗೆ ತತ್ವಾರವಾಗಿ ಅವರ ಅನ್ನಮಲಕ್ಕೂ ಕುತ್ತು ಬಂದೆರಗುತ್ತಿತ್ತು.

ಬುದ್ಧನ ಅವತಾರವಾದಾಗ, ಅವನು ಈ ಯಜ್ಞಯಾಗಾದಿಗಳ, ಹಿಂಸೆಯ ವಿರುದ್ಧ ಬಂಡೆದ್ದನು. ಜನತೆಗೆ, ಆರ್ಥಿಕ ಮತ್ತು ನೈತಿಕ ದೃಷ್ಟಿಯಿಂದ ಬುದ್ಧನ ಬೋಧೆ ಚೆನ್ನಾಗಿ ಹಿಡಿಸಿತು, ಮತ್ತು ಅವರು ಬ್ರಾಹ್ಮಣ ಧರ್ಮವನ್ನು ಬಿಟ್ಟುಕೊಟ್ಟು, ಬೌದ್ಧ ಧರ್ಮವನ್ನು ಅಂಗೀಕರಿಸಿದರು.

ಬೌದ್ಧಧರ್ಮದ ಉತ್ಕರ್ಷವನ್ನು ಕಂಡು ಬ್ರಾಹ್ಮಣ ಧರ್ಮವು ತನ್ನನ್ನು ಹೇಗೆ ರಕ್ಷಿಸಿಕೊಂಡಿತೆಂಬುದು ನೋಡುವಂತಿದೆ. ಆ ಧರ್ಮವು ಅದುವರೆಗಿನ ತನ್ನ ಯಜ್ಞ ಯಾಗಾದಿಗಳನ್ನು ಧಾರ್ಮಿಕ ವಿಧಿತಂತ್ರಗಳನ್ನು ಕೊಡವಿಕೊಂಡಿತು. ಗೋಮಾಂಸ ಭಕ್ಷಕರಾದ ಈ ಬ್ರಾಹ್ಮಣರು, ಬೌದ್ಧ ಧರ್ಮದ ಮೇಲೆ ಜಯ ಸಾಧಿಸುವ ಪಾಪಿ ದೃಷ್ಟಿಯಿಂದ ಗೋವನ್ನು ತಮ್ಮ ಪವಿತ್ರ ಗೋಮಾತೆಯನ್ನಾಗಿಸಿಬಿಟ್ಟರು.

ಈ ರೀತಿಯಾಗಿ ಮಾಂಸಭಕ್ಷಕ ಬ್ರಾಹ್ಮಣರು ಶಾಕಾಹಾರಿಗಳಾಗಿ, ಸೋಮರಸ ಕುಡಿದು ತೂರಾಡುವವರ ರೂಪಾಂತರವಾಗಿ, ಸುರಾಪಾನವು ಮಹಾಪಾತಕ ಎಂದವರು ಸಾರಿದರು. ಕ್ಷತ್ರಿಯರನ್ನು ಬುದ್ಧಧರ್ಮದಿಂದ ಪರಾವೃತ್ತರಾಗಿಸಲು ಮತ್ತು ಅವರನ್ನು ಬ್ರಾಹ್ಮಣಧರ್ಮದಲ್ಲೇ ಉಳಿಸಿಕೊಳ್ಳಲು, ಅವರಿಗೆ ತಮ್ಮ ಸಮಾನ ಹಕ್ಕು

ನೀಡಿದರು. ವೈಶ್ಯ ಶೂದ್ರರೂ ಬ್ರಾಹ್ಮಣ ಧರ್ಮ ತೊರೆದು ಹೋಗದಂತೆ ಬ್ರಾಹ್ಮಣರೂ, ಕ್ಷತ್ರಿಯರೂ ಪೊಲೀಸ್ ಸಿಪಾಯಿಗಳಂತೆ ಅವರ ಅತ್ತಿತ್ತ ಕಾವಲು ನಿಂತಿರಬೇಕೆಂಬರ್ಥದ ವಚನಗಳು ಬ್ರಾಹ್ಮಣ ಧರ್ಮಗ್ರಂಥಗಳಲ್ಲಿವೆ.

ಗೋವನ್ನು ಪವಿತ್ರವೆಂದು ಕರೆದು, ಬೌದ್ಧಧರ್ಮದ ಬೋಧನೆಗಳನ್ನು ಬ್ರಾಹ್ಮಣ ಧರ್ಮದಲ್ಲಿ ಆವಿರ್ಭವಿಸಿಕೊಂಡು, ಯಜ್ಞಯಾಗಾದಿಗಳನ್ನು ಕೈ ಬಿಟ್ಟು, ಬೌದ್ಧಧರ್ಮಕ್ಕೆ ಹೋದವರನ್ನು ಮರಳಿ ತಮ್ಮ ಧರ್ಮಕ್ಕೆ ಸೇರಿಸಿಕೊಂಡರು. ಬುದ್ಧನ ಸಮತೆಯನ್ನು ಸ್ವೀಕರಿಸಿ, ಚಾತುರ್ವರ್ಣ್ಯದ ಚೌಕಟ್ಟು ಇಲ್ಲವಾಗುವಂತೆ ಮಾತ್ರ ಮಾಡಲಿಲ್ಲ, ಎಂಬುದನ್ನು ಗಮನಿಸಬೇಕು. ಕ್ಷತ್ರಿಯರಿಗೆ ತಮ್ಮ ಸಮಾನ ಹಕ್ಕು ಕೊಟ್ಟು, ಬ್ರಾಹ್ಮಣ ವೈದಿಕ ದೇವತೆಗಳಾದ ಇಂದ್ರ, ವರುಣ, ಅಗ್ನಿ ಮುಂತಾದವರನ್ನು ಉಚ್ಚಾಟಿಸಿ, ಅವರ ಸ್ಥಳದಲ್ಲಿ ಕ್ಷತ್ರಿಯರಿಗೆ ಪ್ರಿಯವಾದ ರಾಮ, ಕೃಷ್ಣ ಮುಂತಾದ ದೇವರನ್ನು ಸ್ಥಾಪಿಸಿದರು. ಹೀಗೆ ಹಲವು ಹೊಂದಾಣಿಕೆಗಳಿಂದ ತಮ್ಮ ಉದ್ದೇಶ ಸಾಧಿಸಿದರು.

ಈ ಹೊಂದಾಣಿಕೆಯ ಚಾಣಕ್ಯ ಬುದ್ಧಿಯಿಂದ ಬೌದ್ಧಧರ್ಮವನ್ನು ತಿರಸ್ಕರಿಸುವಂತಹ ಸಂಗತಿ ನಡೆಯಿತು. ಬುದ್ಧನೇ ಗೋಯಜ್ಞವನ್ನು ನಿಲ್ಲಿಸಿದ್ದ, ಹಿಂದೂಗಳೂ ಗೋವಧೆ ತ್ಯಜಿಸಿದ್ದರು. ಇಂದು ನಾವು ಅಸ್ಪೃಶ್ಯರೆಂದುಕೊಳ್ಳುವವರೇ ಗೋವಧೆ ನಿಲ್ಲಿಸಿದ್ದರು. ಆದರೆ, ದಾರಿದ್ರ್ಯದ ಕಾರಣ, ಇವರು



ತಾಜಾ ಮಾಂಸ ಕೊಳ್ಳಲು ಅಶಕ್ಯರಾಗಿದ್ದರು. ಮೃತ ಮಾಂಸ ಭಕ್ಷಿಸುವ ತಮ್ಮ ಹಳೆಯ ಅಭ್ಯಾಸವನ್ನು ಮಾತ್ರ ಅವರು ಮುಂದುವರಿಸಿದರು.

ಮೃತ ಮಾಂಸ ಭಕ್ಷಣೆಯನ್ನು ಬುದ್ಧರಾಗಲೀ, ಬ್ರಾಹ್ಮಣರಾಗಲೀ ನಿಲ್ಲಿಸಿರಲಿಲ್ಲ. ಆದರೆ, ಇಂದಿನ ಅಸ್ಪೃಶ್ಯರು ಒಂದು ದೊಡ್ಡ ತಪ್ಪು ಮಾಡಿದ್ದಾರೆ. ದಾರಿದ್ರದಿಂದ ಪೀಡಿತವಾದ ಸಮಾಜದ ಹೊರೆಯಲ್ಲಿ ದೀರ್ಘಕಾಲ ಬೌದ್ಧಧರ್ಮ ಅಂಟಿಕೊಂಡಿರುವ ದೊಡ್ಡ ತಪ್ಪನ್ನು ಅವರು ಮಾಡಿದ್ದಾರೆ.ಅವರನ್ನು ದಾರಿಗೆ ತರಲು ವರ್ಷಾನುವರ್ಷ ಮಹಾಪ್ರಯಾಸವನ್ನೇ ಮಾಡಬೇಕಾಯಿತು. ಮತ್ತು ಕಠಿಣ ಬಹಿಷ್ಕಾರ ಹಾಕಿ, ಮರಳಿ ಅವರನ್ನು ಅಸ್ಪೃಶ್ಯತೆಯ ಕೂಪಕ್ಕೆ ತಳ್ಳಲಾಯ್ತು.

ಅವರ ಮೃತಮಾಂಸ ಭಕ್ಷಣೆಯನ್ನೇ ಅವರ ವಿರುದ್ಧ ಶಸ್ತ್ರವಾಗಿ ಬಳಸಲಾಯ್ತು. ಈ ಪರಿಸ್ಥಿತಿಯ ಸಂಪೂರ್ಣ ಲಾಭ ಪಡೆದು, ಕೋಟ್ಯಾವಧಿ ಜನರನ್ನು ಅಸ್ಪೃಶ್ಯರೆಂದು ತಳ್ಳಿ ಹಾಕಿದರು. ಇತರ ಜನರು ಬೌದ್ಧಧರ್ಮ ತ್ಯಜಿಸಿದಂತೆ ಈ ಜನರೂ ತಮ್ಮ ಪಗಡಿ ಬಿಚ್ಚಲಿಲ್ಲವೆಂದು ಜನುಮ ಜನುಮದ ವಂಶಪರಂಪರಾಗತ ಶಿಕ್ಷೆ ಅನುಭವಿಸುವಂತಾಯ್ತು. ಅಸ್ಪೃಶ್ಯತೆಯ ಪಾರಂಪರಿಕ ಕಥೆ ಹೀಗಿರುವಾಗ, ಇಂದಿನ ಸುಶಿಕ್ಷಣದ, ಸ್ವಾತಂತ್ರ್ಯ ಧೈಯದ ಮತ್ತು ಸಮಾಜ ಸಮತೆಯ ನವಯುಗದಲ್ಲೂ ಅವರು ಸುಖರೂಪದಿಂದಿರುವುದು ಆಶ್ಚರ್ಯವಲ್ಲವೇ?

* * * *

## ೮೬. ವೃತ್ತಪತ್ರಗಳ ಸ್ವಾತಂತ್ರ್ಯ ರಕ್ಷಣೆಯ ಮಾರ್ಗ

ಹಿಂದೂಸ್ಥಾನದಲ್ಲಿ ಪ್ರಜಾಸತ್ತೆ ಯಶಸ್ವಿಯಾಗ ಬೇಕಿದ್ದರೆ, ಹಾಗಾಗಲು ಯೋಗ್ಯ ರಾಜಕೀಯ ಯಂತ್ರವೊಂದು ನಿರ್ಮಾಣವಾಗಬೇಕು.

ಹಿಂದೂಸ್ಥಾನದ ಸಾಮಾಜಿಕ ಪರಿಸ್ಥಿತಿ, ಇಲ್ಲಿನ ಜಾತಿಭೇದ, ಎಲ್ಲೆಡೆ ಹಬ್ಬಿದ ದೈವವಾದ, ದಾರಿದ್ರ್ಯ ಮತ್ತು ಶ್ರೀಮಂತಿಕೆಯ ನಡುವಣ ಘೋರ ಕಂದರ, ಇವೆಲ್ಲದರ ಬಗ್ಗೆ ವಿಚಾರ ಮಾಡಿಯೇ ಈ ರಾಜಕೀಯ ಯಂತ್ರ ನಿರ್ಮಾಣವಾಗಬೇಕು.

ಈ ದೃಷ್ಟಿಯಿಂದ ಪ್ರಾಂತಿಕ ಸರಕಾರದ ವಿಚಾರ ಮಾಡಲು ತೊಡಗಿದರೆ ಪ್ರಜಾಸತ್ತೆಯ ದೃಷ್ಟಿಯಿಂದ ವಿರೋಧೀ ಪಕ್ಷವು ಪ್ರಜಾಸತ್ತೆಯಷ್ಟೇ ಅವಶ್ಯಕವೆಂಬುದು ತಿಳಿದು ಬರುತ್ತದೆ. ಈ ವಿರೋಧ ಪಕ್ಷ ಮತ್ತು ಸರಕಾರೀ ಪಕ್ಷದ ದರ್ಜೆ ಸಮಾನವಾಗಿರತಕ್ಕುದು. ಪ್ರಧಾನಿಗೆ ಸಿಗುವಷ್ಟೇ ವೇತನ ವಿರೋಧ ಪಕ್ಷದ ನಾಯಕರಿಗೂ ಸಿಗಬೇಕು. ಕೆನಡಾದಲ್ಲಿ ಎಷ್ಟೋ ವರ್ಷಗಳಿಂದ ಮಾಡಲಾಗಿದೆ. ಇಂಗ್ಲೆಂಡ್‌ನಲ್ಲೂ ಇತ್ತೀಚೆಗೆ ಈ ಪದ್ಧತಿ ಆರಂಭಿಸಲ್ಪಟ್ಟಿದೆ.

ಇಂಗ್ಲೆಂಡ್ ಮತ್ತು ಇತರ ಪ್ರಜಾಸತ್ತಾತ್ಮಕ ದೇಶಗಳಲ್ಲಿ ವಿರೋಧ ಪಕ್ಷದ ನಾಯಕರೊಂದಿಗೆ ವಿಚಾರ ವಿನಿಮಯ ಮಾಡದೆ, ಯಾವುದೇ ಮಹತ್ವದ ಕಾಯ್ದೆ ಇಲ್ಲವೇ ಕ್ರಿಯೆ ಮಾಡಲಾಗುವುದಿಲ್ಲ. ವಿರೋಧೀ ಪಕ್ಷದ ನಾಯಕರು ಪ್ರಧಾನಿಯಂತೆಯೇ ರಾಷ್ಟ್ರೀಯ ಸಮಸ್ಯೆಗಳನ್ನು ಅಭ್ಯಸಿಸಬೇಕು.

ತಮ್ಮ ಸಮಯವನ್ನೆಲ್ಲ ಅವರು ಹೀಗೆಯೇ ಕಳೆಯಬೇಕು. . ಹಿಂದೀ ಪ್ರಾಂತ್ಯದ ವಿರೋಧ ಪಕ್ಷದ ನಾಯಕರು ತಮ್ಮ ಪಕ್ಷದ ಪ್ರಜಾಸತ್ತೆಯ ಕೆಲಸಗಳನ್ನು ಯಥಾಯೋಗ್ಯ ಮಾಡಬೇಕಾಗಿರುವುದರಿಂದ ಅದಕ್ಕೂ ಅವರು ತಮ್ಮ ಸಮಯವೆಲ್ಲವನ್ನೂ ವ್ಯಯಿಸಬೇಕು. ಹಾಗಾಗುವುದಾದರೆ, ಪ್ರಧಾನಿಯ ಸಮಾನ ವೇತನ ಅವರಿಗೆ ಸಿಗುವುದು, ಅವರ ಕಾರ್ಯದರ್ಶಿಯೇ ಮುಂತಾದ ಸರಕಾರೀ ಸಾಮಗ್ರಿಯೆಲ್ಲ ಆಡಳಿತ ಪಕ್ಷದಂತೆಯೇ ಸರಕಾರದ ಖರ್ಚಿನಲ್ಲಿ ಪೂರೈಸಲ್ಪಡ ಬೇಕು, ಮತ್ತು ಪ್ರತಿಯೊಂದು ಮಹತ್ವದ ವಿಷಯದಲ್ಲಿ ಅವರ ಸಲಹೆ ಪಡೆಯಬೇಕು.

ಪ್ರಜಾಸತ್ತೆಯಲ್ಲಿ ಚುನಾವಣೆಗಾಗಿ ಎಷ್ಟೊಂದು ದೊಡ್ಡ ಪ್ರಮಾಣದ ಖರ್ಚು ಮಾಡಬೇಕಾಗುತ್ತದೆಂದರೆ, ಕಾಂಗ್ರೆಸ್‌ನಂತಹ ಬಂಡವಾಳಶಾಹಿಗಳಿಗಲ್ಲದೆ, ಇತರರಿಂದ ಅದು ಸಾಧ್ಯವೂ ಅಲ್ಲ. ಪ್ರತಿಯೊಬ್ಬ ಉಮೇದುವಾರರಿಗೆ ಐದರಿಂದ ಇಪ್ಪತ್ತು ಸಾವಿರ ಖರ್ಚು ಮಾಡಿದ್ದಲ್ಲದೆ, ಈ ಚುನಾವಣೆಯಲ್ಲಿ ಹೋರಾಡುವುದು ಅಸಾಧ್ಯ. ಪ್ರಸಕ್ತ ಚುನಾವಣೆಯ ಪದ್ಧತಿ ಹೀಗೇ ಇರುವುದರಿಂದ, ಈ ಚುನಾವಣೆ ಅಮೆರಿಕಾದಂತೆ ಬಂಡವಾಳಗಾರರ ಆಣತಿಯಂತೆ ನಡೆಸಲ್ಪಡುವುದು ಅಪರಿಹಾರ್ಯ, ಈಗಿನ ಕಾಂಗ್ರೆಸ್ ಸರಕಾರಕ್ಕೂ ಕಾಯ್ದೆಮಂಡಳದ ಹೊರಗಿನ ಜವಾಬ್ದಾರಿಹೀನ ಪ್ರಭತಿಗಳ ಆಣತಿ ಪಾಲಿಸಬೇಕಾಗುವುದು ನಿಚ್ಚಳವಿದೆ. ಈ ಪರಿಸ್ಥಿತಿ ಇನ್ನೂ ಹೆಚ್ಚು ಭಯಾನಕವಾಗುವುದರಲ್ಲಿ ಸಂಶಯವಿಲ್ಲ. ಚುನಾವಣೆಯ ಅಗತ್ಯ ಪ್ರಜಾಸತ್ತಾತ್ಮಕ ಸರಕಾರಕ್ಕಿರುವುದರಿಂದ, ಅದರ ಖರ್ಚಿನ ಹೊಣೆಹೊರುವ ಜವಾಬ್ದಾರಿಯೂ ಅದರದ್ದೇ ಆಗಿದೆ.

ಚುನಾವಣೆಗೆ ನಿಲ್ಲುವ ಪ್ರತಿಯೊಬ್ಬ ಉಮೇದುವಾರರಿಗೆ ಅವರು ನಿಶ್ಚಯಿಸಿದಂತೆ ಮತ ಸಿಗುವುದು, ಮತ್ತು, ಚುನಾವಣೆಯ ಪ್ರೀತ್ಯರ್ಥ ನಡೆದ ಖರ್ಚಿನ ಮೊತ್ತವನ್ನು ಸರಕಾರ ಕೊಡಬೇಕು.

ಹೀಗೆ ಮಾಡುವುದರಿಂದ ಯಃಕಶ್ಚಿತ ಉಮೇದುವಾರರಿಗೆ ಚುನಾವಣೆಗೆ ನಿಲ್ಲುವುದು ಕಠಿಣವಾಗಿ, ಮಧ್ಯಮ ಮತ್ತು ಬಡವರ್ಗದ ಯೋಗ್ಯ ಉಮೇದುವಾರರಿಗೆ ಬಂಡವಾಳದಾರ ಜಮೀನ್ದಾರರೇ ಮುಂತಾದವರ ಬಲವಿಲ್ಲದೆ ಆರಿಸಿ ಬರುವುದು ಶಕ್ಯವಾದೀತೆಂದು ಹೇಳುವುದೇ ಬೇಡ.

ಇದರ ಹೊರತು, ವೃತ್ತಪತ್ರಗಳಿಗೆ ಪೂರ್ಣ ಸ್ವಾತಂತ್ರ್ಯ ಕೊಡಿಸಲು, ಒಂದೈವತ್ತು ಲಕ್ಷಬಂಡವಾಳದ ಸಮಿತಿ ನಿರ್ಮಿಸಿ, ಅದೇ ಕಾಯ್ದೆಗೆ ಮಾನ್ಯತೆ ಕೊಡುವುದು ಅವಶ್ಯಕವಾಗಿದೆ. ಈ ಸಮಿತಿಯ ವಿಶ್ವಸ್ತರನ್ನು, ಸರಕಾರವು ಎರಡೂ ಕಾಯ್ದೆ ಮಂಡಳಗಳ ಮತಗಳಿಂದ ನೇಮಿಸುತ್ತದೆ.

ವೃತ್ತಪತ್ರಿಕೆಯ ಸಂಪಾದಕರನ್ನೂ ಈ ಪದ್ದತಿಯಲ್ಲೇ ನೇಮಿಸಲಾಗುತ್ತದೆ. ಆದರೆ, ಈ ವಿಶ್ವಸ್ತರು ಮತ್ತು ಸಂಪಾದಕರಿಗೆ ಹೈಕೋರ್ಟ್‌ನ ನ್ಯಾಯಾಧೀಶರಷ್ಟೇ ಮತಸ್ವಾತಂತ್ರ್ಯ ಕೊಡಬೇಕು. ಅವರ ಮೇಲೆ ಸರಕಾರೀ ನಿಯಂತ್ರಣ ಇರಬಾರದು.

ಈ ವಿಶ್ವಸ್ತರಿಗೆ ಮತ್ತು ಸಂಪಾದಕರಿಗೆ ಅಯೋಗ್ಯ ವರ್ತನೆಯ ಬಗ್ಗೆ ತಮ್ಮ ಸ್ವಂತ ರಕ್ಷಣೆಗಾಗಿ ಏನು ಹೇಳಲಿದೆಯೋ, ಅದನ್ನು ಕೇಳಿದ ನಂತರ ಎರಡೂ ಕಾಯ್ದೆ ಮಂಡಳಗಳ ಒಪ್ಪಂದವನ್ನು ಅಗತ್ಯ ಬಿದ್ದರೆ ಹಿಂತೆಗೆಯಬಹುದು.

ಅಮೆರಿಕಾದಲ್ಲಿ ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರನ್ನು ನೇಮಿಸುವ ವಿಷಯದಲ್ಲಿ ಯಾವ ಪದ್ದತಿಯನ್ನು ಅಂಗೀಕರಿಸಲಾಗುತ್ತದೋ, ಅದೇ ಪದ್ಧತಿಯನ್ನು ಮೇಲಿನ ವಿಶ್ವಸ್ತ ಮತ್ತು ಸಂಪಾದಕ ವರ್ಗದ ನೇಮಕದ ವಿಷಯದಲ್ಲಿ ಸೂಚಿಸಲಾಗಿದೆ. ವರ್ತಮಾನ ಪತ್ರವನ್ನು ನಡೆಸುವವರಿಗೆ ತಮ್ಮ ವಿಚಾರವನ್ನು ಪ್ರತಿಪಾದಿಸಲು ಮತ್ತು ಸಾರ್ವಜನಿಕ ಸಮಸ್ಯೆಯನ್ನು ನಿಷ್ಕರ್ಷಿಸಲು ಪೂರ್ಣ ಸ್ವಾತಂತ್ರ್ಯವಿರಬೇಕು.

ಹೊರಗಿನ ಉಪಾಧಿಗಳ ನಿಯಂತ್ರಣದಿಂದ ಅವರ ನಿರ್ಣಯದ ಮೇಲೆ ಬಾಧೆ ಬರಬಾರದು.

ಹಿಂದೀ ವರ್ತಮಾನಪತ್ರದ ಚಾಲಕವರ್ಗ, ಬಂಡವಾಳಶಾಹಿಯ ಮುಷ್ಟಿಗೊಳಗಾಗುವ ಭೀತಿ ಹೆಚ್ಚಿದೆ. ಹಿಂದೂಸ್ಥಾನದಷ್ಟು ಈ ಭೀತಿ ಬೇರಾವ ದೇಶಕ್ಕೂ ಇಲ್ಲ. ಇಂದಿನ ಕಾಂಗ್ರೆಸ್ ಪತ್ರಿಕೆಯಲ್ಲಿ ಕಾರ್ಮಿಕರು ಮತ್ತು ರೈತರ ಬಗ್ಗೆ ಹಲವಾರು ವಿಷಯಗಳನ್ನು ಮುದ್ರಿಸಲಾಗಿದೆ ಎಂಬುದು ನಿಜ.

ಆದರೆ ಪರಕೀಯ ಬಂಡವಾಳದಾರರ ವಿರುದ್ಧ, ನಡೆದಿರುವ ಹಿಂದೀ ಬಂಡವಾಳದಾರರ ಯುದ್ಧದಲ್ಲಿ ಕಾರ್ಮಿಕರ ಮತ್ತು ರೈತರ ಸಹಾಯ ಸಿಗಲೆಂದೇ ಈ ಬಗ್ಗೆ ಬರೆಯಲಾಗಿದೆ. ಈ ಯುದ್ಧ ನಿಂತು, ಹಿಂದೀ ಬಂಡವಾಳದಾರರ ಪಕ್ಷಪಾತಿ ಕಾಂಗ್ರೆಸ್‌ನ ಕೈಗೆ ರಾಜ್ಯಸೂತ್ರ ಬಂದ ಬಳಿಕ, ಈ ಕಾರ್ಮಿಕ, ರೈತ ಸಹಾನುಭೂತಿಯ ಅಲೆ ಇಂಗಿಹೋಗಿ, ಬಂಡವಾಳಶಾಹಿಯ ನಿಜಸ್ವರೂಪ ಪ್ರಕಟವಾದೀತೆಂಬುದರಲ್ಲಿ ಸಂಶಯವಿಲ್ಲ.

ಇಂದಿನ ಪರಿಸ್ಥಿತಿಯಿಂದಾಗಿಯೇ ಕಾಂಗ್ರೆಸ್ ವಿರುದ್ಧ ರಾಜಕೀಯ ಕಾರ್ಯಕರ್ತರಿಗೆ ಕಾಂಗ್ರೆಸ್ ಪತ್ರಕರ್ತರಿಂದ ನ್ಯಾಯ ಸಿಗುವುದು ಅಶಕ್ಯವಾಗಿದೆ. ಈಗ ವರ್ಷಗಳಿಂದಲೂ ನನ್ನನ್ನೂ ಈ ಪತ್ರಕರ್ತರು ಅನ್ಯಾಯದಿಂದಲೇ ನೋಡುತ್ತಾ ಬಂದಿದ್ದಾರೆ. ಹಲವು ವರ್ಷಗಳಿಂದ ನಾನು ಮತ್ತು ನನ್ನ ಮತೀಯರ ಮಾತುಗಳನ್ನು ಕೇಳಲೂ ಅವರು ಸಿದ್ಧರಿಲ್ಲ. ನಮ್ಮ ಬಗ್ಗೆ ತಪ್ಪು



ತಿಳುವಳಿಕೆ ಹುಟ್ಟಿಸಿ, ಅದನ್ನು ನಿರಾಕರಿಸುವ ಅವಕಾಶವನ್ನೂ ನಮಗೆ ಕೊಡದಿರುವ ಧೋರಣೆ, ಇವರದು. ಈ ಚಳವಳಿಯಿಂದ ಹಿಂದೀ ಬಂಡವಾಳದಾರರ ಮನೋರಥ ಸಿದ್ದಿಸಿದರೆ, ಈ ಸ್ಥಿತಿ, ನೂರುಪಟ್ಟು ಭೀಷಣವಾಗುವುದು ಎಂಬುದರಲ್ಲಿ ಸಂಶಯವಿಲ್ಲ.

ಕೆನಡಾ ಹಾಗೂ ಇತರ ದೇಶಗಳಲ್ಲಿ ಸಾರ್ವಜನಿಕ ಕಾರ್ಯಕರ್ತರ ಮೇಲೆ ವರ್ತಮಾನ ಪತ್ರಿಕೆಯಲ್ಲಿ ಹಲ್ಲೆಯಾದಾಗ, ಈ ಕಾರ್ಯಕರ್ತರಿಗೆ, ಈ ಹಲ್ಲೆಗೆ ನೀಡಿದ ತಮ್ಮ ಉತ್ತರವನ್ನು ಮುದ್ರಿಸಿ ತೆಗೆದುಕೊಳ್ಳುವ ಸಂಪೂರ್ಣ ಹಕ್ಕಿದೆ.

ಈ ರೀತಿ, ಸರಕಾರ ನಿರ್ಮಿಸಿದ ಸಮಿತಿ ನಡೆಸುವ ವೃತ್ತಪತ್ರದಲ್ಲಿ ಯಾವುದೇ ಪಕ್ಷದ ಆಣತಿ ನಡೆಯಲಿಲ್ಲವಾದ್ದರಿಂದ ಪೂರ್ಣ ಮತಸ್ವಾತಂತ್ರ್ಯ ಅನುಭವಿಸಲು ಸಿಗುವುದು. ಬೇರೆ ಖಾಸಗಿ ಪತ್ರಿಕೆಗಳಿಗೆ ಈ ಪತ್ರಿಕೆ ಆದರ್ಶಭೂತವಾಗಿ, ಅದರಿಂದಾಗಿ ಜನತೆಗೆ ಎಲ್ಲ ಮಹತ್ವದ ಸಮಸ್ಯೆಗಳ ಬಗ್ಗೆ, ಸರಕಾರಿ ಹಾಗೂ ವಿರೋಧಪಕ್ಷಗಳ ಮತ ಏನೇ ಇದ್ದರೂ, ಯೋಗ್ಯ ಮಾರ್ಗದರ್ಶನವಾಗುವುದು. ಎಲ್ಲ ಪಕ್ಷಗಳು ಮತ್ತು ಭಿನ್ನಮತಗಳ ರಾಜಕೀಯ ಧುರೀಣರಿಗಾಗಿ ಇಂತಹ ಪತ್ರಿಕೆಗಳು ತಟಸ್ಥವಾಗುಳಿದು, ಪಕ್ಷಾಂಧತೆಯ ಜಾಹೀರಾತಿಗೆ ಕಡಿವಾಣ ಹಾಕುವುದು ಸಾಧ್ಯವಾಗುವುದು.

ಅರ್ಥಾತ್, ಇತರ ಪಕ್ಷಗಳಿಗೆ ಜೀವಂತವಿರುವ ಹಕ್ಕು ಇಲ್ಲವೆಂದು ಕಾಂಗ್ರೆಸ್‌ಗೆ ಅನಿಸಿದರೆ, ಈ ಕಲ್ಪನೆ ಅವರಿಗೆ ಮಾನ್ಯವಾಗುವಂತಿಲ್ಲ. ಶಕ್ಯವಾಗುವಂತಿದ್ದರೆ, ಇತರೆಲ್ಲ ಪಕ್ಷಗಳು ಮತ್ತು ಸ್ವತಂತ್ರ ಮತವಾದಿ ಜನರು, ಇದನ್ನು ನಾಮಾವಶೇಷವಾಗಿಸಲು ಸತತ ಪ್ರಯತ್ನ ಮಾಡುವರು. ಆದರೆ, ಶುದ್ಧ ಸಾರ್ವಜನಿಕ ಜೀವನದ ಪ್ರಜ್ಞೆ ನಮಗಿರುವುದರಿಂದಲೇ ಹಿಂದೂಸ್ಥಾನದ ಹೊಸ ಸಂಘಟನೆಯಲ್ಲಿ ವೃತ್ತಪತ್ರಗಳ ಸ್ವಾತಂತ್ರ್ಯ ಅಬಾಧಿತವಾಗಿ ಇರಲು, ಇಂತಹ ಕಾಯ್ದೆಬದ್ಧ ಸಮಿತಿ ನಿರ್ಮಿಸುವ ಯೋಜನೆಯನ್ನು ನೆನಪಿಗೆ ತಂದು, ನಿಜವಾದ ಪ್ರಜಾಸತ್ತೆಯ ಸಂರಕ್ಷಣೆ ಮಾಡುವ ಉಮೇದು, ನಮ್ಮದು.

* * * *

## ೮೭. ರಾಷ್ಟ್ರ ನಿರ್ಮಾಣ ಇನ್ನೂ ಆಗಬೇಕಷ್ಟೆ ?

ಲೀಗ್‌ನ ಮುಕ್ತಿದಿನ ಸಮಾರಂಭದ ನಂತರ ಇತರ ಜಾತಿಗಳಲ್ಲೂ ರಾಜಕೀಯ ಹಕ್ಕಿನ ಸಂಬಂಧ ಹೋರಾಡುವ ಪ್ರವೃತ್ತಿ ಉಂಟಾಯಿತು. ಈ ಸಂಬಂಧ ವಿಚಾರ ವಿನಿಮಯ ಮಾಡಲು, ಪಾರ್ಸಿ ಜಾತಿಯ ಹಲವರ ಸಭೆ, ಡಾ. ಎಫ್.ಕೆ. ದಾದಾಚಂದ್‌ಜೀ, ಶ್ರೀ ಎನ್.ಎಚ್, ಎಹನ್‌ವಾಲಾ ಮತ್ತು ಶ್ರೀ. ಫಿರೋಜ್ ಶಾಹ್ ಮೆಹತಾ, ಈ ಮೂವರು ಪ್ರೆಸಿಡೆನ್ಸಿ ಅಸೋಸಿಯೇಶನ್ ಕಛೇರಿಯಲ್ಲಿ ಸೇರಿದರು. ಆ ಸೋಮವಾರ ೫-೨-೧೯೪೦ರ ಸಾಯಂಕಾಲವಾಗಿತ್ತು. ಪಾರ್ಸಿ ಜಾತಿಯ ೩೦ ಪ್ರಮುಖ ಗೃಹಸ್ಥರನ್ನು ಆ ಸಭೆಗೆ ಕರೆಯಲಾಗಿತ್ತು. ಬ್ಯಾ. ವಿ.ದಾ. ಸಾವರ್ಕರ್, ಮತ್ತು ಡಾ. ಬಾಬಾಸಾಹೇಬ್ ಅಂಬೇಡ್ಕರರಿಗೂ ಆಮಂತ್ರಣವಿದ್ದುದರಿಂದ ಅವರು ಸಭೆಯಲ್ಲಿ ಹಾಜರಿದ್ದರು. ಪಾರ್ಸಿ ಜನರು ಮಂಬಯಿಯಲ್ಲಿ ಅಧಿಕ ಇದ್ದಾರೆ ಮತ್ತು ಇಲ್ಲಿನ ದೈನಂದಿನ ಆಗುಹೋಗುಗಳಲ್ಲಿ ಅವರು ಭಾಗವಹಿಸಬೇಕಾಗುತ್ತದೆ. ಅವರು ಯಾವ ಪಕ್ಷದಿಂದ ಇದರಲ್ಲಿ ಭಾಗವಹಿಸುವರೆಂಬುದು ಮುಖ್ಯವಲ್ಲ. ಆದರೆ, ಸುಮ್ಮನಿರದೆ, ಭಾಗವಹಿಸುವುದು ಮುಖ್ಯ. ಅವರು ಕಾಂಗ್ರೆಸ್ ವಿರುದ್ಧ ಪಕ್ಷ ಕಟ್ಟಲು, ಅಸ್ಪೃಶ್ಯರು, ಮುಸಲ್ಮಾನರು, ಹಿಂದೂ ಮಹಾಸಭೆಯ ಹಿಂದೂಗಳು ಮೊದಲಾದವರ ಕೂಟವನ್ನು ಒಗ್ಗೂಡಿಸಿದರೆ, ಕಾಂಗ್ರೆಸ್, ಹಾಗೂ ಅದರ ವಿರೋಧ ಪಕ್ಷಗಳು ಫಲಿಸಿದ ಚಿತ್ರ ಕಂಡು ಬರುತ್ತದೆ. ರಾಜಕೀಯ ದೃಷ್ಟಿಯಿಂದ ಇದು ಇಷ್ಟವಾದುದೇ. ವಿರೋಧಿ ಪಕ್ಷಕ್ಕೆ ಇಂಗ್ಲೆಂಡ್‌ನಲ್ಲಿ ಮಹತ್ವವಿದೆ. ಹಿಂದುಸ್ಥಾನದಲ್ಲಿ ಅಂತಹ ಪರಿಸ್ಥಿತಿಯಿಲ್ಲ. ಅದು ಉಂಟಾಗುವುದು ಅಗತ್ಯ ಎಂದು ಅಂಬೇಡ್ಕರ್ ಸಾಹೇಬರು ಸಲಹೆಯಿತ್ತರು.

ಪಾರ್ಸಿಗಳಿಗೆ ಅಸ್ಪೃಶ್ಯರ ಕಡೆಯಿಂದ ಭರ್ಜರಿ ಮತದಾನವಾಗಿ, ಅವರ ಉಮೇದುವಾರರು ಆರಿಸಿ ಬರುವರೆಂದು ಬಾಬಾಸಾಹೇಬ್ ಅಂಬೇಡ್ಕರರು ತಮ್ಮ ಭಾಷಣದಲ್ಲಿ ವಿಚಾರಿಸಿದ ಪ್ರಶ್ನೆಗೆ ಉತ್ತರಿಸಿದ್ದರು.

ಪಾರ್ಸಿಗಳು ಮುಸ್ಲಿಂ ಲೀಗ್‌ನೊಡನೆ ಸಹಕರಿಸದೆ, ಹಿಂದೂ ಮಹಾಸಭೆಯೊಡನೆ ಸೇರಬೇಕೆಂದೂ, ಅದರಲ್ಲೇ ಅವರ ಹಿತವಿದೆಯೆಂದೂ ಬ್ಯಾ, ಸಾವರ್ಕರರು ಸಲಹೆಯಿತ್ತರು.

ಕಾಂಗ್ರೆಸ್ ಮತ್ತು ಲೀಗ್‌ನ ಭಾರತೀಯ ಸ್ವಾತಂತ್ರ್ಯ ಕುರಿತಾದ ದೃಷ್ಟಿಕೋನದ ಕುರಿತಾಗಿ ಡಾ. ಅಂಬೇಡ್ಕರ್ ಅವರ ವಿಚಾರವನ್ನು ಪರಾಮರ್ಶಿಸಲು ಟೈಮ್ಸ್‌ನ ಪ್ರತಿನಿಧಿಯು ಆ ಸೋಮವಾರ, ೫-೧-೧೯೪೦ರ ರಾತ್ರಿ ಅವರ ಸಂದರ್ಶನ ಪಡೆದಾಗ, ಅಂಬೇಡ್ಕರರು ಅಂದರು; "ಮಿ, ಗಾಂಧೀ ಮತ್ತು ಕಾಂಗ್ರೆಸ್, ಇಂಡಿಯಾ ಒಂದು ರಾಷ್ಟ್ರ, ಅನ್ನುವುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಹಾಗೆಯೇ, ಮುಸ್ಲಿಂ ಲೀಗ್‌ನ ಫಾರಿನ್ ರಿಲೇಶನ್ ಕಮಿಟಿಯು, ಹಿಂದೂ ಮುಸ್ಲಿಮರು ಒಂದು ರಾಷ್ಟ್ರವಾಗಿ ರೂಪುಗೊಳ್ಳುವುದು ಅಸಾಧ್ಯವೆಂದು ಹೇಳುವುದನ್ನೂ ನಾನು ಒಪ್ಪಿಕೊಳ್ಳುವುದಿಲ್ಲ. ನನ್ನ ನಂಬಿಕೆಯಂತೆ ನಾವು ಒಂದು ರಾಷ್ಟವೇನಲ್ಲ. ಆದರೆ, ಎರಡೂ ಸಮಾಜಗಳಲ್ಲಿ ಐಕ್ಯ ಸಾಧಿಸುವದಕ್ಕಾಗಿ, ಯೋಗ್ಯವಾದ ಸಾಮಾಜಿಕ ಪುನರಚನೆಯನ್ನು ಸಾಧಿಸಲಾದರೆ, ಆಗ ನಾವೊಂದು ರಾಷ್ಟ್ರವೆನ್ನಬಹುದು.



"ಹಿಂದೂ ಸಮಾಜ ಒಂದು ರಾಷ್ಟ್ರವಲ್ಲ; ಮುಸ್ಲಿಮ್ ಸಮಾಜವೂ ಒಂದು ರಾಷ್ಟ್ರವಲ್ಲ. ಹಿಂದೂ-ಮುಸ್ಲಿಮ್ ಸಮಾಜವೂ ಒಂದು ರಾಷ್ಟ್ರವಲ್ಲ.

ರಾಷ್ಟ್ರ ನಿರ್ಮಾಣ ಇನ್ನು ಆಗಬೇಕಷ್ಟೆ. ಹಿಂದೂ ಸಮಾಜಕ್ಕೆ ಬೇಕಿದ್ದಂತೆ ಭಿನ್ನ ರಾಷ್ಟ್ರ ಕಟ್ಟಿಕೊಳ್ಳಬಹುದು. ಮುಸಲ್ಮಾನರಿಗೂ ಬೇಕಿದ್ದಂತೆ ಭಿನ್ನ ರಾಷ್ಟ್ರ ಕಟ್ಟಿಕೊಳ್ಳಬಹುದು. ರಾಷ್ಟ್ರವು ಜನ್ಮಜಾತವೇನಲ್ಲ. ಅದು ರೂಪಿಸಲ್ಪಟ್ಟುದಾಗಿದೆ. ಇಚ್ಛೆಯಿಂದ ಅದು ರೂಪಿಸಲ್ಪಡುತ್ತದೆ. ಒಂದೇ ಮತದಾರ ಸಂಘದಿಂದ ಇದು ಆಗುವುದಲ್ಲ. ಐದು ವರ್ಷಗಳ ಅವಧಿಯಲ್ಲಿ ಪರಸ್ಪರ ತಿರಸ್ಕಾರ ಮಾಡುವವರು, ಚುನಾವಣೆಯಲ್ಲಿ ಒಂದೆಡೆ ಬಂದು ಮತದಾನ ಮಾಡಿದರೆ, ಒಂದು ರಾಷ್ಟ್ರವಾಗುವದು ಎನ್ನುವವರು ಶತಮೂರ್ಖರಷ್ಟೇ, ಅನ್ನಬೇಕು."

ಈ ಮೇಲಿನ ವಿಚಾರದಲ್ಲಿ ಆಕ್ಷೇಪಿಸುವಂಥದು ಏನಾದರೂ ಇದೆಯೆಂದು ಯಾರಿಗೂ ಅನಿಸುವಂತಿಲ್ಲ. ಆದರೆ ಕಾಂಗ್ರೆಸ್‌ನ ಆಮಿಷದಿಂದ ಯಾರ ಬುದ್ಧಿ ವಿಕೃತವಾಗಿದೆ, ಅವರ ವಿದ್ವತ್ತು ಕುಂಬಳಕಾಯಿಯಷ್ಟು ದೊಡ್ಡದಿದೆ, ತಲೆ

ನಿರಾಸಕ್ತಿಯಿಂದ ಅತ್ತ ತಿರುಗಿದೆ, ಮತ್ತು ಶರೀರ ಮತ್ತು ಮನಸು, ಹುಣ್ಣು ಹತ್ತಿದ ನಾಯಿಯಂತೆ ಕೊಳೆತಿದೆ. ಯಾರು ವಿದೂಷಕರಂತಿದ್ದು ಸ್ವಾರ್ಥ ಸಾಧಿಸುವುದರಾಚೆಗೆ ತಮ್ಮ ಆಯುಷ್ಯದಲ್ಲಿ ಬೇರೇನೂ ಮಾಡಿಲ್ಲವೋ, ಅಂತಹ ಮರ್ಕಟರಿಗೆ, ಉಕ್ತ ಸುವಿಚಾರವು ಕುತರ್ಕದಂತೆ ಕಂಡರೆ, ಅದು ಯಾರ ತಪ್ಪು? ಅಂತಹ ಮರ್ಕಟರಿಗೆ ಇತರರ ಸುವಿಚಾರವು ಕುತರ್ಕದಂತೆ ಕಾಣುವುದೇ.

* * * *

**೮೮. ಹಿಂದೀ ರಾಜಕಾರಣದ ಗೊಂದಲ**

ಕಳೆದ ಜೂನ್-ಜುಲೈ ತಿಂಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಎರಡು ಮಹತ್ವದ ನಿರ್ಣಯ ಕೈಗೊಂಡರು. ಆ ಪೈಕಿ ಮೊದಲ ನಿರ್ಣಯವು ಜೂನ್ ೨೨ರಂದು ವರ್ಧಾದಲ್ಲಿ ನಡೆದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯಲ್ಲಿ ಜಾರಿಗೆ

ಬಂದಿತು. ಅಹಿಂಸೆಗೆ ಹಿಂದೂಸ್ಥಾನದ ರಾಜ್ಯ ಕಾರುಭಾರದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮತದಂತೆ ಎಂತಹ ಸ್ಥಾನ ಇರಬಹುದು, ಎಂಬ ವಿಷಯದಲ್ಲಿ ಆ ನಿರ್ಣಯವು ತನ್ನ ಭೂಮಿಕೆಯನ್ನು ಸ್ಪಷ್ಟ ಪಡಿಸಿದೆ. ಎರಡನೇ ನಿರ್ಣಯವು, ಜುಲೈ ೭ರಂದು ದಿಲ್ಲಿಯಲ್ಲಿ ನಡೆದ ವರ್ಕಿಂಗ್ ಕಮಿಟಿಯ ಸಭೆಯಲ್ಲಿ ಜಾರಿಗೆ ಬಂತು. ಆ ನಿರ್ಣಯದಂತೆ, ನಡೆದಿರುವ ಯುದ್ಧ ಮತ್ತು ಆ ಸಂಬಂಧ ಕಾಂಗ್ರೆಸ್‌ನ ಧೋರಣೆ ಏನೆಂಬುದನ್ನು ಜಾಹೀರು ಪಡಿಸಲಾಗಿದೆ. ಮೇಲಿನ ಈ ಎರಡೂ ನಿರ್ಣಯಗಳನ್ನು ಇತ್ತೀಚೆಗೆ ಪುಣೆಯಲ್ಲಿ ಸೇರಿದ ಕಾಂಗ್ರೆಸ್‌ನ ಆಲ್ ಇಂಡಿಯಾ ಕಮಿಟಿಯ ಎದುರು ಮಂಡಿಸಲಾಯ್ತು. ಹಾಗೂ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯು ಅವನ್ನು ಬಹುಮತದಿಂದ ಅಂಗೀಕರಿಸಿತು. ಅವುಗಳಲ್ಲಿ ಮೊದಲನೆಯದಾದ ಅಹಿಂಸೆಯ ಬಗೆಗಿನ ನಿರ್ಣಯವು, ೯೧ - ೬೩ ಮತಗಳಿಂದ ಅಂಗೀಕೃತವಾದರೆ, ಎರಡನೆಯ ಯುದ್ಧ ವಿಷಯಕ ನಿರ್ಣಯವು ೯೫-೪೭ ಮತಗಳಿಂದ ಅಂಗೀಕೃತವಾಯ್ತು.

ಮೇಲಿನ ಎರಡೂ ನಿರ್ಣಯಗಳು ಅತ್ಯಂತ ಮಹತ್ವದ್ದೆಂದು ಹೇಳುವುದೇ ಬೇಡ. ಕಾಂಗ್ರೆಸ್‌ನ ಇದುವರೆಗಿನ ಇತಿಹಾಸದಲ್ಲಿ ಇಷ್ಟೊಂದು ಮಹತ್ವದ ಬೇರಾವುದೇ ನಿರ್ಣಯ ಇದುವರೆಗೆ ಜಾರಿಯಾಗಿಲ್ಲ ಅಂದರೆ ಅದು ಅತಿಶಯೋಕ್ತಿಯಲ್ಲ. ಈ ಮಹತ್ವದ ಕಾರಣ ಸ್ಪಷ್ಟವಿದೆ. ಕಾಂಗ್ರೆಸ್ ಸಂಸ್ಥೆಯು ಗಾಂಧಿಯ ಅಡಿಯಲ್ಲಿ, ಕಳೆದ ೧೯೨೦ರಿಂದ ೧೯೪೦ರ ವರೆಗೆ, ಗಾಂಧಿ ಅಂದರೆ ಕಾಂಗ್ರೆಸ್, ಕಾಂಗ್ರೆಸ್ ಅಂದರೆ ಗಾಂಧಿ ಅನ್ನುವಂತೆ ಅನ್ಯೋನ್ಯ ಸಂಬಂಧವಿತ್ತು. ಗಾಂಧಿ ಹೇಳುವುದನ್ನು ಕಾಂಗ್ರೆಸ್ ಮಾನ್ಯ ಮಾಡುವುದು, ಗಾಂಧಿ ಹೇಳಿದಂತೆ ಕಾಂಗ್ರೆಸ್ ನಡೆಯುವುದು, ಎಂಬಂತೆ ಈ ಗುರುಶಿಷ್ಯ ಸಂಬಂಧವಿತ್ತು. ದಾಸ್ ಬಾಬು ಮತ್ತು ಪಂಡಿತ ಮೋತೀಲಾಲರು, ಗಾಂಧಿ ವಿರುದ್ಧ ಸ್ವತಂತ್ರ ನಿಲುವು ತಳೆದು, ಸ್ವರಾಜ್ಯ ಪಕ್ಷ ರೂಪಿಸಿದರು. ಆದರೆ ಈ ನಿರ್ಣಯಗಳ ವಿಷಯದಲ್ಲಿ ಗಾಂಧಿ ಮತ್ತು ಕಾಂಗ್ರೆಸ್ ಮಧ್ಯೆ ಮತಭೇದ ಉಂಟಾಗಿ, ಗಾಂಧಿ ಒಂದುಕಡೆಯಾದರೆ ಅವರ ಶಿಷ್ಯೋತ್ತಮರು ಇನ್ನೊಂದೆಡೆ, ಹೀಗೆ ಎರಡು ವಿಭಿನ್ನ ಪಕ್ಷಗಳಾದವು. ಗಾಂಧಿಗೆ ಇವೆರಡೂ ನಿರ್ಣಯಗಳು ಅಮಾನ್ಯವಿದ್ದವು. ಕಾಂಗ್ರೆಸ್ ಅಹಿಂಸೆಯ ತತ್ವವನ್ನು ಬಿಡಬಾರದು ಹಾಗೆಯೇ, ಮಂತ್ರಿಮಂಡಳ ಸ್ಥಾಪನೆಯ ವಿಷಯಕ್ಕೆ ಮಾನ್ಯತೆ ಕೊಡಬಾರದು. ಕಾರಣ, ಹಾಗೆ ಮಾಡಿದರೆ ಯುದ್ಧದಲ್ಲಿ ಇಂಗ್ಲಿಷರಿಗೆ ಸಹಾಯ ಮಾಡಿದಂತಾಗುವುದು, ಮತ್ತು ಅದು ಅಹಿಂಸೆಗೆ ದಾರಿಯಾಗುವುದು, ಎಂದು ಗಾಂಧಿ ಅವರ ಅಂಬೋಣ. ಆದರೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಇದು ಹಿಡಿಸದೆ, ಗಾಂಧಿ ಅವರ ಮಾತಿಗೆ ವಿರುದ್ಧವಾಗಿ, ಈ ಎರಡು ನಿರ್ಣಯಗಳನ್ನು ಅಂಗೀಕರಿಸಲಾಯ್ತು. ಆದರೆ ಈ ಜಗಳದಲ್ಲಿ ಯಾವುದು ರಾಷ್ಟ್ರಕ್ಕೆ ಪೋಷಕ, ಯಾವುದು ಅಲ್ಲ,

ಎಂಬ ಬಗ್ಗೆ ನಮ್ಮ ನಿಲುವನ್ನು ಸ್ಪಷ್ಟ ಪಡಿಸುವುದು ಅವಶ್ಯಕವಿದೆ. ಪುಣೆಯಲ್ಲಿ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯಲ್ಲಿ ಮಾನ್ಯವಾದ ಯುದ್ದ ವಿಷಯಕ 'ನಿಲುವಿನ ಬಗ್ಗೆ ಮೊದಲು ವಿಚಾರ ಮಾಡೋಣ.

ಈ ನಿರ್ಣಯದಲ್ಲಿ, ತಾನು ಸರ್ವಪಕ್ಷೀಯ ಮಧ್ಯವರ್ತಿ ಮಂತ್ರಿಮಂಡಳದ ಸ್ಥಾಪನೆಗೆ ಸಿದ್ದವೆಂದು ಕಾಂಗ್ರೆಸ್ ಪ್ರಕಟಪಡಿಸಿತ್ತು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಈ ಧೋರಣೆಗೆ ನಮ್ಮ ಅಭಿನಂದನೆ ಸಲ್ಲುತ್ತದೆ. ಆದರೆ ಅದರ ಜೊತೆಗೇ ಈ ಕಮಿಟಿಯನ್ನೆಚ್ಚರಿಸುವುದೂ ಅಗತ್ಯ. ನಿಜ ಹೇಳಬೇಕೆಂದರೆ, ಈ ಧೋರಣೆ, ವೈಸರಾಯ್ ಲಾರ್ಡ್ ಲಿನ್‌ಲಿತ್ ಅವರದು. ಯುದ್ದ ಆರಂಭವಾದಾಗ, ಸೆಪ್ಟೆಂಬರ್ ಐದರಂದು, ವೈಸರಾಯ್ ಅವರು ಗಾಂಧೀ ಅವರನ್ನು ಭೇಟಿಗೆ ಕರೆದು, ಹಿಂದೀಯರು ಯುದ್ಧದಲ್ಲಿ ಪೂರ್ಣ ಸಹಕಾರ ನೀಡಬೇಕೆಂದು ವಿನಂತಿಸಿದರು. ಸೆಪ್ಟೆಂಬರ್ ೨೬ರಂದು ಪುನಃ, ಮತ್ತೆ ಅಕ್ಟೋಬರ್ ಒಂದರಂದು ಮೂರನೆಯ ಬಾರಿ, ಹಾಗೂ, ಈ ಫೆಬ್ರವರಿ ಎರಡರಂದು ನಾಲ್ಕನೆಯ ಭೇಟಿ ನಡೆಯಿತು. ಪತ್ರ ಮುಖೇನ ವೈಸರಾಯ್ ಅವರು, ಎರಡು ವಿಷಯಗಳು ತಮಗೆ ಸಮ್ಮತವೆಂದು ತಿಳಿಸಿದರು. ಮೊದಲಿಗೆ, ಹಿಂದೂಸ್ಥಾನಕ್ಕೆ ವಸಾಹತು ದರ್ಜೆ ಕೊಡಲೊಪ್ಪಿ, ಹಾಗೆಂದು ಜಾಹೀರು ಪಡಿಸುವ ಆಶ್ವಾಸನೆಯಿತ್ತರು. ಯುದ್ಧ ಮುಗಿದೊಡನೆ, ವಸಾಹತು ಸ್ವರಾಜ್ಯದ ಯೋಜನೆ ಜಾರಿಗೆ ತರುವ ಆಶ್ವಾಸನೆಯನ್ನೂ ಇತ್ತರು. ಈ ಯೋಜನೆಯ ನಿರ್ಣಯವನ್ನು ವೈಸರಾಯ್ ಅವರು ಸರ್ವಪಕ್ಷಗಳೊಡನೆ ಒಂದಾಗಿ ೫೨ ನಾಯಕರ ಎದುರಲ್ಲೇ ಕೈಗೊಂಡರು. ಅವರೆಲ್ಲರೂ ಈ ಯೋಜನೆಗೆ ಬೆಂಬಲವಿತ್ತರು, ಮತ್ತು ಮುಸಲ್ಮಾನರೂ ತಮ್ಮ ಸಮ್ಮತಿಯಿತ್ತರು. ಆದರೂ, ಜನವರಿ ಹನ್ನೊಂದರಂದು ಮುಂಬಯಿಯ ಓರಿಯೆಂಟ್ ಕ್ಲಬ್‌ನಲ್ಲಿ ಭಾಷಣ ಮಾಡುತ್ತಾ, ಕಾಂಗ್ರೆಸ್ ಇನ್ನೂ ತನ್ನ ಯೋಜನೆಯನ್ನು ಜಾರಿಗೊಳಿಸುವ ತಯಾರಿಯಲ್ಲಿರುವುದರಿಂದ, ತಾನದನ್ನು ಜಾರಿಗೊಳಿಸಲು ಸಿದ್ದವೆಂದು ಸಾರಿದರು. ಮತ್ತೆ ಪ್ರತಿ ಭೇಟಿಯಲ್ಲೂ ಗಾಂಧೀ ಅವರ ಮುಂದೂ ಮಂಡಿಸಿದರು. ಆದರೆ ಪ್ರತಿಸಲವೂ ಗಾಂಧಿ ಅವರು ಆ ಯೋಜನೆಯನ್ನು ನಿರಾಕರಿಸಿದರು. ಒಂಬತ್ತು ಹತ್ತು ತಿಂಗಳ ಬಳಿಕ ಆ ಯೋಜನೆ ಜಾರಿಯಾಗುವುದೆಂದರೆ ಆಶ್ಚರ್ಯವೇ ಸರಿ. ಕಾಂಗ್ರೆಸ್‌ನ ಈವರೆಗಿನ ಇತಿಹಾಸವನ್ನು ನೋಡಿದರೆ, ಒಂದು ವಿಷಯ ಸ್ಪಷ್ಟವಾಗುತ್ತದೆ. ಯಾವುದೇ ಪ್ರಶ್ನೆ ದೇಶದ ಮುಂದೆ ಬಂದಾಗ, ಅನ್ಯ ನಾಯಕರು ವ್ಯಕ್ತಪಡಿಸುವ ಅಭಿಪ್ರಾಯಗಳಿಗಿಂತ ಭಿನ್ನಮತ ಕಾಂಗ್ರೆಸ್ ನಾಯಕರು ವ್ಯಕ್ತಪಡಿಸುವುದು ಬಹುತೇಕ ನಿಶ್ಚಿತವೇ ಇದೆ. ಪಾರತಂತ್ರದಲ್ಲಿರುವ ಜನರಿಗೆ ತೀಕ್ಷ್ಣ ವಿಚಾರ, ತೀಕ್ಷ್ಣ ಕಾರ್ಯಕ್ರಮ, ತೀಕ್ಷ್ಣ ಭಾಷೆ, ಮನರಂಜನೆಗೆ ಕಾರಣೀಭೂತವಾಗುತ್ತವೆ. ಏನೇ ಇರಲಿ, ಕಾಂಗ್ರೆಸ್ ವರ್ಕಿಂಗ್

ಕಮಿಟಿಯು ತಡವಾಗಿಯೇ ಆದರೂ, ತಿರಸ್ಕರಿಸಿದ ಯೋಜನೆಯನ್ನು ಪುನಃ ಸ್ವೀಕರಿಸುವ ಧೈರ್ಯ ತೋರಿದ್ದು ಶ್ಲಾಘನೀಯ ಎಂದೇ ನಮಗನಿಸುತ್ತದೆ.

ಇನ್ನೊಂದು ದೃಷ್ಟಿಯಿಂದಲೂ ಈ ನಿರ್ಣಯವನ್ನು ವಿಮರ್ಶಿಸಬೇಕು. ಸರ್ವಪಕ್ಷೀಯ ಮಂತ್ರಿಮಂಡಳ ಸ್ಥಾಪಿಸುವ ನಿರ್ಣಯಕ್ಕೆ ಕಾಂಗ್ರೆಸ್ ಬೆಂಬಲವಿತ್ತುದು ಅಭಿನಂದನೀಯ ಹೌದಾದರೂ, ಅದರಿಂದ ದೇಶಕ್ಕೆ ಯಾವುದೇ ತತ್ಕಾಲೀನ ಲಾಭ ಆಗುವಂತೆ ಕಾಣುತ್ತಿಲ್ಲ. ಈ ಯೋಜನೆ ಮತ್ತು ಆಂಗ್ಲ ಸರಕಾರ ಸ್ವಾತಂತ್ರ್ಯ ಘೋಷಿಸಲೆಂಬ ಬೇಡಿಕೆ, ಈ ಎರಡೂ ಒಂದಾದ ಯೋಜನೆ ಜಾರಿಗೆ ಬರುವುದೆಂದು ಅನಿಸುವುದಿಲ್ಲ. ಈ ಯೋಜನೆಯೊಡನೆ ಕಾಂಗ್ರೆಸ್ ಮುಂದಿಟ್ಟ ಸ್ವಾತಂತ್ರ್ಯ



ಘೋಷಣೆಯ ಬೇಡಿಕೆ ಪೂರ್ಣ ವಿಚಾರ ಮಾಡಿ ಮುಂದಿಟ್ಟುದಲ್ಲವೆಂದು ನಮಗನಿಸುತ್ತದೆ.

ಈ ಸಂಪೂರ್ಣ ಸ್ವಾತಂತ್ರ್ಯದ ಬೇಡಿಕೆಯ ಇತಿಹಾಸ ಎಷ್ಟು ಜಟಿಲವೋ ಅಷ್ಟೇ ಉದ್ಬೋಧಕವೂ ಆಗಿದೆ, ಸಂಪೂರ್ಣ ಸ್ವಾತಂತ್ರ್ಯ ಹಿಂದೂಸ್ಥಾನದ ಧ್ಯೇಯವಾಗಿದೆ. ಇಂಥಾ ಘೋಷಣೆ, ಮೊದಲ ಬಾರಿಗೆ ೧೯೨೭ ರಲ್ಲಿ ಮದರಾಸಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಮಾಡಲಾಯ್ತು. ಈ ಬೇಡಿಕೆಯ ಇನ್ನೊಂದು ಮಗ್ಗುಲು ಹೆಚ್ಚಿನವರಿಗೆ ಅರಿಯದು. ಅದರ ಮಹತ್ವದ ಕಾರಣ, ಆ ಬಗ್ಗೆ ತಿಳಿಸುವುದು ಅಗತ್ಯವೆಂದು ನಮಗನಿಸುತ್ತದೆ.

ಪಂಡಿತ್ ಮೋತಿಲಾಲ್ ನೆಹರೂ ಮತ್ತು ಶ್ರೀನಿವಾಸ ಐಯ್ಯಂಗಾರರು ಕಾಂಗ್ರೆಸ್‌ನ ಮಹತ್ವದ ವ್ಯಕ್ತಿಗಳೆಂದು ತಿಳಿಯಲಾಗಿದೆ. ಗಾಂಧೀ ಅವರಿಗೂ ಅವರ ಬಗ್ಗೆ ಗೌರವವಿದೆ. ಇವರಿಬ್ಬರು ಕಾಂಗ್ರೆಸ್‌ನ ಆಧಾರಸ್ತಂಭವಾಗಿ ಬಂಧು

ಭಾವದಿಂದಿದ್ದಾರೆ. ಆದರೆ ಬಹಳ ಕಾಲದಿಂದ ಅವರಲ್ಲಿ ವಿರಸವುಂಟಾಗಿ ಅಸಂತುಷ್ಟರಾಗಿದ್ದಾರೆ. ಪರಸ್ಪರರನ್ನು ದೂಷಿಸುತ್ತಾ, ಒಬ್ಬರಿನ್ನೊಬ್ಬರನ್ನು ಪೇಚಿಗೆ ಸಿಲುಕಿಸಲು ನೋಡುತ್ತಾರೆ. ಈ ವ್ಯಕ್ತಿವಾದದಲ್ಲಿ ಮೋತಿಲಾಲರಿಗೆ ಗಾಂಧಿ ಅವರು ಜೊತೆಯಾದುದರಿಂದ, ಐಯ್ಯಂಗಾರರ ಪ್ರತಿಷ್ಠೆ ಕಡಿಮೆಯಾಗತೊಡಗಿತು. ಆಗ, ತನ್ನ ಕೈ ಮೇಲಾಗಲೆಂದು, ಐಯ್ಯಂಗಾರರು, ಉಳಿದವರು ಕೇವಲ ಸ್ವರಾಜ್ಯ ಬೇಡಿದರೆ, ತಾನು ಸಂಪೂರ್ಣ ಸ್ವರಾಜ್ಯ ಬೇಡುವವನೆಂದಾದರೆ, ತನ್ನ ತೂಕ ಹೆಚ್ಚಾಗುವುದೆಂದು, ಮದರಾಸ್ ಅಧಿವೇಶನದಲ್ಲಿ ಸಂಪೂರ್ಣ ಸ್ವರಾಜ್ಯ ಬೇಡಿ ಘೋಷಣೆ ಕೂಗಿದರು. ಪೇಚಿಗೆ ಸಿಲುಕಿದ ಗಾಂಧಿ ಹಾಗೂ ಮೋತಿಲಾಲರೂ ನಿರ್ವಾಹವಿಲ್ಲದೆ, ಅವರಿಗೆ ಸಮನಾದ ದೇಶಭಕ್ತರು ತಾವೆಂದು ತೋರಿಸಿಕೊಡಲು, ಐಯ್ಯಂಗಾರರ ಭಾಷಣವನ್ನು ಸ್ವೀಕರಿಸಿ, ತಮ್ಮದಾಗಿಸಿಕೊಂಡರು. ಹೀಗೆ ಸಂಪೂರ್ಣ ಸ್ವಾತಂತ್ರ್ಯದ ನಿರ್ಣಯದ ಪ್ರಸೂತಿ ವೇದನೆಯು ಬಂಜೆಯ ಪ್ರಸೂತಿ ವೇದನೆಯಂತಾಯ್ತು.

೧೯೨೭ರಲ್ಲಿ ಈ ನಿರ್ಣಯ ಅಂಗೀಕೃತವಾದ ಬಳಿಕ, ಒಂದೇ ವರ್ಷದಲ್ಲಿ ಕಾಂಗ್ರೆಸ್‌ನ ಸರ್ವಪಕ್ಷ ಕಮಿಟಿ, ಪಂಡಿತ್ ಮೋತೀಲಾಲ್ ನೆಹರೂ ಅಧ್ಯಕ್ಷತೆಯಲ್ಲಿ ಸ್ಥಾಪನೆಯಾಯ್ತು.

ಹಿಂದೂಸ್ಥಾನದ ಸ್ಟೇಟ್ ಸೆಕ್ರೆಟರಿ ಲಾರ್ಡ್ ಬರ್ಕನ್ ಹೈಡ್, ೧೯೨೮ರಲ್ಲಿ ಹಿಂದೀಯರನ್ನುದ್ದೇಶಿಸಿ, ರಾಜಕೀಯ ಸಂವಿಧಾನ ತಯಾರಿಸುವ ಪ್ರಾಜ್ಞತೆ ಹಿಂದೀಯರಲ್ಲಿ ಇಲ್ಲವೆಂದೂ, ತಾವು ಆಂಗ್ಲರು ತಯಾರಿಸುವ ಯೋಜನೆ ಹಿಂದೀಯರಿಗೆ ಮಾನ್ಯವಾಗದಿದ್ದರೆ, ಅವರೇ ತಮ್ಮ ಯೋಜನೆ ತಯಾರಿಸಿ ತೋರಲಿ, ಎಂದಂದರು. ಅದಕ್ಕೆ ಉತ್ತರವಾಗಿ ಒಂದು ಸರ್ವಪಕ್ಷೀಯ ಕಮಿಟಿ ಸ್ಥಾಪಿಸಲಾಯಿತು. ಆಶ್ಚರ್ಯವೆಂದರೆ, ೧೯೨೭ ರಲ್ಲಿ ಸಂಪೂರ್ಣ ಸ್ವಾತಂತ್ರ್ಯದ ನಿರ್ಣಯ ಅಂಗೀಕೃತವಾದಾಗ, ಆ ಕಮಿಟಿಯು ಸಂಪೂರ್ಣ ಸ್ವಾತಂತ್ರ್ಯದ ಯೋಜನೆಯ ಬದಲಿಗೆ ವಸಾಹತು ಸ್ವರಾಜ್ಯದ ಯೋಜನೆಯನ್ನು ಅಂಗೀಕರಿಸಿತು ಮತ್ತು ೧೯೨೯ರಲ್ಲಿ ಲಾಹೋರ್‌ನಲ್ಲಿ ಸೇರಿದ ಅಧಿವೇಶನದಲ್ಲಿ ಮಾನ್ಯತೆಯನ್ನೂ ನೀಡಿತು.

ಇದರಿಂದ ಸಂಪೂರ್ಣ ಸ್ವಾತಂತ್ರ್ಯದ ಬಗ್ಗೆ ಕಾಂಗ್ರೆಸ್‌ಗೆ ಎಷ್ಟು ಅಚಲ ವಿಶ್ವಾಸವಿತ್ತೆಂದು ಸಹಜವಾಗಿಯೇ ತಿಳಿದು ಬರುತ್ತದೆ. ೧೯೨೯ರಲ್ಲಿ ಅಂಗೀಕೃತವಾದ ನಿರ್ಣಯದಲ್ಲಿ, “೧೯೨೯ರ ಡಿಸೆಂಬರ್ ೩೧ರ ಒಳಗೆ ಬ್ರಿಟಿಶ್ ಸರಕಾರವು ನೆಹರೂ ಕಮಿಟಿಯ ಯೋಜನೆಯನ್ನು ಮಾನ್ಯ ಮಾಡಿದರೆ, ಕಾಂಗ್ರೆಸ್, ಸಂಪೂರ್ಣ ಸ್ವಾತಂತ್ರ್ಯದ ಬೇಡಿಕೆಯನ್ನು ಬಿಟ್ಟುಕೊಟ್ಟು, ವಸಾಹತು ಸ್ವರಾಜ್ಯದಷ್ಟಕ್ಕೇ ಸಮಾಧಾನ ಪಟ್ಟುಕೊಳ್ಳುವುದು” ಎಂದು ಹೇಳಲಾಗಿದೆ. ಸಂಪೂರ್ಣ ಸ್ವಾತಂತ್ರ್ಯದ

ಧ್ಯೇಯದ ವಿಷಯದಲ್ಲಿ ಕಾಂಗ್ರೆಸ್‌ನ ವರ್ತನೆ ಎಷ್ಟು ಬಾಲಿಶವಾದದ್ದೆಂದು ಇದರಿಂದ ತಿಳಿದು ಬರುತ್ತದೆ.

ಈ ಸಂಪೂರ್ಣ ಸ್ವಾತಂತ್ರ್ಯದ ಧ್ಯೇಯದ ಬೇಡಿಕೆಯ ಇತಿಹಾಸ ನೋಡಿದರೆ, ಈ ಮಹತ್ವದ ವಿಷಯದಲ್ಲಿ ಕಾಂಗ್ರೆಸ್ ಹೇಗೆ ದುರ್ಬಲತೆ ತೋರಿದೆ ಎಂಬುದು ಸ್ಪಷ್ಟವಾಗುತ್ತದೆ. ಎರಡು ವರ್ಷಗಳ ಹಿಂದೆ, ಬಾಬು ಚಿತ್ತರಂಜನದಾಸರು ಈ ವಿಷಯದ ಬಗ್ಗೆ ಚರ್ಚಿಸಿದ್ದರು.

೧೯೨೫ ರ ಮೇ ೨ ರಂದು, ಫರೀದ್‌ಪುರದಲ್ಲಿ ಪ್ರಾವಿನ್ಶಿಯಲ್ ಕಾಂಗ್ರೆಸ್‌ನ ಅಧಿವೇಶನ ಸೇರಿತ್ತು. ಆ ಅಧಿವೇಶನದ ಅಧ್ಯಕ್ಷರಾಗಿ ಈ ವಿಷಯವನ್ನು ಅವರು ಸಾಂಗೋಪಾಂಗವಾಗಿ ಚರ್ಚಿಸಿದ್ದರು. ಅಷ್ಟೊಂದು ಮಹತ್ವಪೂರ್ಣವೂ, ಸಮಂಜಸವೂ ಆಗಿತ್ತು, ಅವರ ಮಾತು.

ಅವರ ಉತ್ತರದಿಂದ, ಸಂಪೂರ್ಣ ಸ್ವಾತಂತ್ರ್ಯಕ್ಕಿಂತ ವಸಾಹತು ಸ್ವರಾಜ್ಯವೇ ಹಿಂದೂಸ್ಥಾನದ ದೃಷ್ಟಿಯಿಂದ ಶ್ರೇಯಸ್ಕರವೆಂಬ ಶ್ರೀಯುತ ದಾಸ್ ಅವರ ಮತ, ಕಾಂಗ್ರೆಸ್ ಸಂಪೂರ್ಣ ಸ್ವಾತಂತ್ರ್ಯದ ಧ್ಯೆಯ ಮಂಡಿಸುವ ಎರಡು ವರ್ಷಗಳ ಮೊದಲೇ ಪ್ರಕಟಿಸಲ್ಪಟ್ಟಿತ್ತು. ಎರಡು ವರ್ಷಗಳಲ್ಲೇ ಇಷ್ಟು ದೊಡ್ಡ ಬದಲಾವಣೆಯಾಗಲು, ಹಿಂದೂಸ್ಥಾನದ ಇತಿಹಾಸದಲ್ಲಿ ಅಂತಹ ಮಹತ್ವದ್ದೇನೋ ಘಟಿಸಿದೆಯೆಂದು ಯಾರೂ ಹೇಳುವಂತೆ ಇರಲಿಲ್ಲ. ಬಾಬು ಚಿತ್ತರಂಜನದಾಸ್ ಅವರು ಇತರ ಕಾಂಗ್ರೆಸಿಗರಂತಿರದೆ, ಮೃದು ಧೋರಣೆಯವರಾಗಿದ್ದರು, ಎಂದೂ ಯಾರೂ ಹೇಳುವಂತಿರಲಿಲ್ಲ.

ಅವರ ವಿಚಾರ ಅಲ್ಪಮಾತ್ರದ್ದು, ಎಂದುಕೊಂಡರೂ, ಕಾಂಗ್ರೆಸ್ ತನ್ನ ಸಂಪೂರ್ಣ ಸ್ವಾತಂತ್ರ್ಯದ ಧೋರಣೆಯಲ್ಲಿ ಮಾಡಿದ ಬದಲಾವಣೆ, ಶ್ರೇಷ್ಠತಮ, ಸುವಿಚಾರಿ, ಸಮಂಜಸ ಮತ್ತು ಕಟ್ಟಾ ಕಾಂಗ್ರೆಸ್ ಕಾರ್ಯಕರ್ತರ ದೃಷ್ಟಿಯಿಂದ ತೀರ ಬಾಲಿಶವಾಯ್ಕೆನ್ನಲು ಅಡ್ಡಿಯಿಲ್ಲ. ಕೊನೆಗೆ ೧೯೩೦ರಲ್ಲಿ ಗಾಂಧಿ ಅವರು, ತನ್ನ ಸಹಕಾರಿ ಮಿತ್ರ

ಮಿಸ್ಟರ್ ಪೊಲಕ್ ಅವರಿಗೆ ಪತ್ರ ಬರೆದು, "ಬ್ರಿಟಿಶ್ ಸರಕಾರವು ಹಿಂದೂಸ್ಥಾನಕ್ಕೆ ವಸಾಹತು ಸ್ವರಾಜ್ಯ ಕೊಟ್ಟರೆ ಅದರಲ್ಲೇ ನಾವು ಸಮಾಧಾನ ಕಾಣುವೆವು" ಎಂದರಹಿದರು.

ಸಂಪೂರ್ಣ ಸ್ವಾತಂತ್ರ್ಯದ ವಿಷಯದಲ್ಲಿ ಗಾಂಧಿ ಮತ್ತು ಕಾಂಗ್ರೆಸ್ ಕಾರ್ಯಕರ್ತರು ನಡೆಸಿದಾಟ ಕಂಡು, ಸಂಪೂರ್ಣ ಸ್ವಾತಂತ್ರ್ಯದ ಧ್ಯೇಯದಲ್ಲಿ ಅವರಿಗೆ ಅಚಲ ವಿಶ್ವಾಸವಿದೆ, ಅದಲ್ಲದೆ ಬೇರಾವುದೇ ಧ್ಯೇಯವನ್ನು ಮಾನ್ಯ ಮಾಡಲಾರರು, ಎಂಬುದರಲ್ಲಿ ಯಾರಿಗೂ ವಿಶ್ವಾಸ ಮೂಡದು. ಇದೇ ಕಾರಣದಿಂದ ಇಂಗ್ಲಿಷ್ ಸರಕಾರವು ಇದುವರೆಗೆ ಈ ಬೇಡಿಕೆಗೆ ಮಹತ್ವ ನೀಡಿಲ್ಲ. ಹಾಗೆಂದೇ, ಕಾಂಗ್ರೆಸ್, ತನ್ನ ಸಂಪೂರ್ಣ ಸ್ವಾತಂತ್ರ್ಯದ ನಾಟಕವನ್ನು ಬಿಟ್ಟುಕೊಟ್ಟು, ವಸಾಹತು ಸ್ವರಾಜ್ಯದ ಬೇಡಿಕೆಯನ್ನು ಮುಂದಿಟ್ಟಿದ್ದರೆ, ಅದು ಹೆಚ್ಚು ಧೈರ್ಯ ಹಾಗೂ ಜಾಣೆ ತೋರಿದಂತಾಗುವುದು.

ಸಂಪೂರ್ಣ ಸ್ವಾತಂತ್ರ್ಯದ ಧ್ಯೇಯ ಒಮ್ಮೆ ಪ್ರಕಟಿಸಿದ ನಂತರ ಮತ್ತೆ ಹಿಂತೆಗೆದುಕೊಳ್ಳುವುದು ಮನುಷ್ಯ ಮಾತ್ರದವರ ಸ್ವಭಾವದಂತೆ ಅತ್ಯಂತ ಕಠಿಣವೆಂಬುದನ್ನು ನಾನೊಪ್ಪುತ್ತೇನೆ. ತಪ್ಪು ಮಾಡುವುದು ಮನುಷ್ಯಧರ್ಮ; ತಪ್ಪು ಮಾಡಿದೆವೆಂದು ಒಪ್ಪಿಕೊಳ್ಳುವುದು ಮನುಷ್ಯಮಾತ್ರರಿಗೆ ನಿಜಕ್ಕೂ ಕಠಿಣ. ಆದರೆ ಮಾಡಿದ ತಪ್ಪನ್ನು ಸರಿಪಡಿಸದೆ ಹಾಗೇ ಮುಂದುವರಿಯುವುದು ದೇಶಕ್ಕೆ ಘಾತುಕವಾದರೆ, ಆ ತಪ್ಪನ್ನು ಒಪ್ಪಿಕೊಳ್ಳುವುದೇ ಭೂಷಣಪ್ರಾಯವಾದುದು.

"ಕ್ಷಣ ಹೊತ್ತಿನ ಲಜ್ಜೆಗೇಡಿತನ, ಮತ್ತು ಆಜನ್ಮ ಆರಾಮ", ಅನ್ನುವುದು ಉರ್ದು ಭಾಷೆಯಲ್ಲಿ

ಒಂದು ಅತ್ಯಂತ ವ್ಯಾವಹಾರಿಕ ಹೇಳಿಕೆ. ಈ ದೃಷ್ಟಿಯಿಂದ ನೋಡಿದರೆ, ವರ್ಕಿಂಗ್ ಕಮಿಟಿಯು ಈ ಸಂಬಂಧ ಸಂಪೂರ್ಣ ಸ್ವರಾಜ್ಯದ ಬೇಡಿಕೆ ಮಂಡಿಸದೆ, ವಸಾಹತು ಸ್ವರಾಜ್ಯದ ಬೇಡಿಕೆ ಮುಂದಿಟ್ಟ ತಪ್ಪನ್ನು ಸರಿಪಡಿಸಿದ್ದರೆ, ಅದು ಜಾಣತನವೆನಿಸುತ್ತಿತ್ತು.

ಇನ್ನೊಂದು ದೃಷ್ಟಿಯಿಂದಲೂ ಈ ಸಮಸ್ಯೆಯನ್ನು ನೋಡಬೇಕು. ಸಂಪೂರ್ಣ ಸ್ವಾತಂತ್ರ್ಯ ಅನುಭವಿಸುತ್ತಿರುವ ರಾಷ್ಟ್ರಗಳದ್ದು ಈಗ ಎಂತಹ ದುರ್ದಶೆಯಾಗಿದೆ ಎಂಬುದು ಈಗ ಈ ಯುದ್ಧದ ನಿಜಸ್ಥಿತಿಯಿಂದ ತಿಳಿದು ಬರುತ್ತದೆ. ಯುದ್ಧಕ್ಕೆ ಮುನ್ನ, ಬೆಲ್ಜಿಯಮ್, ಹಾಲೆಂಡ್,ಡೆನ್ಮಾರ್ಕ್, ನಾರ್ವೆ, ಪೋಲೆಂಡ್, ಫಿನ್‌ಲೆಂಡ್, ಜೆಕೊಸ್ಲೊವಾಕಿಯಾ ಈ ರಾಷ್ಟ್ರಗಳು ಸಂಪೂರ್ಣ ಸ್ವಾತಂತ್ರ್ಯವನ್ನು ಅನುಭವಿಸಿದ್ದವು. ಒಂಬತ್ತು ತಿಂಗಳಲ್ಲಿ ಹಿಟ್ಲರನು ಅವುಗಳ ಸ್ವಾತಂತ್ರ್ಯ ಹರಣ ಮಾಡಿ ತನ್ನ ಅಂಕಿತದಲ್ಲಿ ತಂದನು, ಭಾರತಕ್ಕೂ ಇದೇ ಗತಿಯಾದರೆ ಮಾಡುವದೇನು? ಅಹಿಂಸೆಯ ತತ್ವವನ್ನು ಬಿಟ್ಟುಕೊಡುವಲ್ಲಿ ಧೈರ್ಯ ತೋರಿದಂತೆ, ಸಂಪೂರ್ಣ ಸ್ವಾತಂತ್ರ್ಯದ ವಿಷಯದಲ್ಲೂ ಧೈರ್ಯ ತಳೆದು, ವಸಾಹತು ಸ್ವರಾಜ್ಯ ಸಾಕೆಂದಿದ್ದರೆ, ಯಾರೂ ದೋಷಿಯೆನ್ನುತ್ತಿರಲಿಲ್ಲ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಆಂಗ್ಲ ಸರಕಾರ ಅಂತಹ ಘೋಷಣೆ ಹೊರಡಿಸಲು ಸಿದ್ಧವಾದೀತೆನ್ನುವ ಭರವಸೆ ಕವಡೆಯನ್ನೂ ಇಲ್ಲ. ಇಂಗ್ಲಿಷರು ದೇವದೂತರೇನಲ್ಲ, ವೈಷ್ಣವರಲ್ಲ ; ಅವರು ಸಾದಾ ವ್ಯವಹಾರಿಗಳು, ಸಂಸಾರಸ್ಥರು. ಅಂಥವರು ತಮ್ಮ ಕೈಯಲ್ಲಿನ ನಿಧಿಯನ್ನು ಹಾಗೆ ಸುಮ್ಮನೆ ಹೋಗಗೊಡುವುದಿಲ್ಲ. ಇದರಲ್ಲಿ ಇಂಗ್ಲಿಷ್ ಸರಕಾರವನ್ನು ದೂಷಿಸುವಂತಹುದು ಏನೂ ಇಲ್ಲ. ಕಾಂಗ್ರೆಸ್ ಬಳಿ ಇಂಗ್ಲಿಷ್ ಸರಕಾರವನ್ನು ದಾರಿಗೆ ತರುವಂತಹುದು ಏನೂ ಇಲ್ಲ. ಹೋಗುತ್ತಾ, ಬರುತ್ತಾ ಕಾಂಗ್ರೆಸ್‌ನ ಬಲವೆಲ್ಲ ಸತ್ಯಾಗ್ರಹವೆಂಬ ಶಸ್ತದ ಮೇಲಿದೆ. ಆದರೆ ಈಗ ಆ ಶಸ್ತ್ರ ಎಷ್ಟೊಂದು ದುರ್ಬಲವಾಗಿದೆಯೆಂದರೆ, ಅದರಿಂದ ಇಂಗ್ಲಿಷರಿಗೆ ಯಾವುದೇ ಅಪಾಯವಾಗುವಂತಿಲ್ಲ. ಹಾಗೆಂದೇ ಸತ್ಯಾಗ್ರಹ ಉದ್ದಕ್ಕೆ ನಡೆದಿದೆ. ಮೊನ್ನೆಯಷ್ಟೇ ಪುಣೆಯಲ್ಲಿ ಸೇರಿದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಸಭೆಯಲ್ಲಿ ಶ್ರೀ, ರಾಜಗೋಪಾಲಾಚಾರಿ ಅವರಿಗೆ ಕೆಲ ಪ್ರಶ್ನೆಗಳನ್ನು ಕೇಳಲಾಯ್ತು. ಅವುಗಳಲ್ಲಿ, " ಇಂಗ್ಲಿಷ್ ಸರಕಾರವು ನಿಮ್ಮ ಬೇಡಿಕೆಯಂತೆ ಸ್ವಾತಂತ್ರ್ಯದ ಘೋಷಣೆ ಮಾಡದಿದ್ದರೆ, ಹಾಗೆ ಮಾಡುವಂತೆ ನೀವು ಏನಾದರೂ ಮಾಡಲಿದ್ದೀರಾ?" ಎಂಬುದೊಂದು. ಇದಕ್ಕೆ ಶ್ರೀ ರಾಜಗೋಪಾಲಾಚಾರಿ ಅವರು ಇತ್ತ ಉತ್ತರ, ಕಾಂಗ್ರೆಸ್ ಕಾರ್ಯಕರ್ತರಿಗೂ ವಿಸ್ಮಯವನ್ನುಂಟು ಮಾಡಿತು.

"ಇಂಗ್ಲಿಷ್ ಜನರ ಮೇಲೆ ಈಗಲೇ ಅವಿಶ್ವಾಸ ತೋರಿಸಬೇಕಾದ ಅಗತ್ಯವಿಲ್ಲ." ಈ ಉತ್ತರದಿಂದ ಪ್ರಶ್ನಿಸಿದವರನ್ನು ಅವರು ಸುಮ್ಮನಾಗಿಸಿದರು. ಈ ಉತ್ತರದಿಂದ ಯಾವ ಶಾಂತಿವಾದಿಗಳಿಗೆ ಶಾಂತಿಯಾಗುವುದೊ,

ಆಗಲಿ. ಆದರೆ, ಇದರಿಂದ ಯಾರೂ ಮೋಸಹೋಗುವಂತಿಲ್ಲ. ಕಾಂಗ್ರೆಸ್ ಈ ವಿಷಯದಲ್ಲಿ ಇಂಗ್ಲಿಷರೊಡನೆ ಕಾದಲು ಸಿದ್ಧವಿಲ್ಲ, ಕಾದಲು ಬೇಕಾದ ಸಾಮಗ್ರಿಯೂ ಅವರಲ್ಲಿಲ್ಲ. ಕಾಂಗ್ರೆಸ್‌ನ ಬೇಡಿಕೆಯೆಂದರೆ ಕೋಗಿಲೆಯ ಕೂಜನವಷ್ಟೇ, ಸಿಂಹದ ಘರ್ಜನೆಯಲ್ಲ, ಎಂಬುದನ್ನು ಇಂಗ್ಲಿಷ್ ಸರಕಾರ ಚೆನ್ನಾಗಿ ಅರಿತಿದೆ. “ಅರ್ಧ ಮುಲ್ಲಾ ಧರ್ಮಕ್ಕೆ ಕೇಡು”, ಎಂದು ಪರ್ಶಿಯನ್ ಧರ್ಮದಲ್ಲಿ ಗಾದೆಮಾತಿದೆ. ಹಾಗೇ ಅರ್ಧ ರಾಜಕಾರಣಿ ರಾಷ್ಟ್ರಕ್ಕೆ ಕೇಡು. ಈ ಅರ್ಧಾಂಶದಿಂದ ಯಾವ ಉಪಯೋಗವೂ ಇಲ್ಲ, ಹಾಗೆಂದೇ ವರ್ಕಿಂಗ್ ಕಮಿಟಿ ಸರ್ವಪಕ್ಷೀಯ ಮಂತ್ರಿಮಂಡಳಕ್ಕೆ ಮಾನ್ಯತೆಯೀಯುವ ನಿರ್ಧಾರ ಮಾಡಿ ತನ್ನ ಜಾಣ್ಮೆ



ತೋರಿದಂತೆ, ಸಂಪೂರ್ಣ ಸ್ವಾತಂತ್ರ್ಯದ ವಿಷಯದಲ್ಲಿ ತಮ್ಮ ಆಗ್ರಹವನ್ನು ತ್ಯಜಿಸಿ, ಪ್ರಾಪ್ತವಾಗುವಂತಿರುವ ವಸಾಹತು ಸ್ವರಾಜ್ಯವನ್ನು ನಮ್ಮದಾಗಿಸಿಕೊಂಡು, ಆಡಳಿತವನ್ನ ಹಸ್ತಗತವಾಗಿಸುವ ಈ ಸುವರ್ಣ ಸಂಧಿಯನ್ನು ತಿರಸ್ಕರಿಸಬಾರದೆಂದು ನಮ್ಮ ಸೂಚನೆ.

**ಅಹಿಂಸೆಯ ಅತಿರೇಕ ಮತ್ತು ದೇಶದ ಮಾನಹಾನಿ.**

ಕಳೆದ ಅಂಕದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಹೊರಡಿಸಿದ ಯುದ್ಧವಿಷಯಕ ನಿರ್ಣಯ ಸಂಬಂಧ ನಮ್ಮ ಮತವನ್ನು ನಾವು ಪ್ರಕಟಿಸಿದ್ದೇವೆ. ಈ ಅಂಕದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಅಹಿಂಸೆಗೆ ಸಂಬಂಧಿಸಿದ

ನಿರ್ಣಯದ ಬಗ್ಗೆ ನಮ್ಮ ವಿಚಾರವನ್ನು ಮಂಡಿಸುವ ಯೋಜನೆ, ನಮ್ಮದು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯು, ಅಹಿಂಸೆಯ ಬಗೆಗಿನ ತನ್ನ ಮತವನ್ನು ಕಳೆದ ಜೂನ್ ತಿಂಗಳ ೨೧ರಂದು ಪ್ರಕಟಿಸಿತು.

ಸದ್ಯದ ಪರಿಸ್ಥಿತಿಯಲ್ಲಿ ಇಂತಹ ಪತ್ರಿಕೆ ಪ್ರಕಟಿಸಿ, ಅಹಿಂಸೆಯ ಸಂಬಂಧ ತಮ್ಮ ಮತ ಏನೆಂಬುದನ್ನು ಜಗಜ್ಜಾಹೀರು ಮಾಡುವುದರಿಂದ ಪ್ರಯೋಜನವೇನೂ ಇಲ್ಲವೆಂದು ಹಲವರಿಗೆ ಅನಿಸುವುದು ಸಹಜ. ಆದರೆ, ಕಾಂಗ್ರೆಸ್ ವರ್ಕಿಂಗ್ ಕಮಿಟಿ, ತನ್ನ ಮತವನ್ನು ಪ್ರಕಟಪಡಿಸಲು ಕಾರಣವೇನೆಂಬುದು, ಪುಣೆಯಲ್ಲಿ ಸೇರಿದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಸಭೆಯಲ್ಲಿ ಮೌಲಾನಾ ಅಜಾದ್ ಅವರು ಮಾಡಿದ ಭಾಷಣದಲ್ಲಿ ಸ್ಪಷ್ಟವಾಗಿದೆ, ಮೌಲಾನಾ ಅವರು ಹೇಳಿದಂತೆ ೧೯೩೮ ಸಪ್ಟೆಂಬರ್‌ನಲ್ಲಿ ಗಾಂಧಿ ಅವರು, ವರ್ಕಿಂಗ್ ಕಮಿಟಿಯು ಈ ವಿಷಯದಲ್ಲಿ ತನ್ನ ಮತ ವ್ಯಕ್ತಪಡಿಸಲಿ ಎಂದು ಹೇಳಿದರು. ಆಗಲೇ ಮೂನಿಕ್ ಒಪ್ಪಂದವಾದುದರಿಂದ ಆ ಪ್ರಶ್ನೆ ಹಾಗೇ ಉಳಿಯಿತು. ಯುದ್ಧ ಆರಂಭವಾದ ನಂತರ ಕಳೆದ ನವೆಂಬರ್ ತಿಂಗಳಲ್ಲಿ ಪುನಃ ಗಾಂಧಿ ಅವರು ಈ ಪ್ರಶ್ನೆ ಎತ್ತಿದರು, ಆದರೆ ಮೌಲಾನಾ ಅವರು ಅಲ್ಲೇ ತಡೆ ಹಿಡಿದರು. ಪುನಃ ಕಳೆದ ಜೂನ್ ತಿಂಗಳಲ್ಲಿ ಗಾಂಧಿ ಅವರು ವಿಷಯ ಪುನ ರ್ಪಟಿಸಿ, ಈ ವಿಷಯವಾಗಿ ನಿರ್ಣಯ ತೆಗೆದುಕೊಳ್ಳಲೇಬೇಕೆಂದು ಆಗ್ರಹಿಸಿದರು.

**ವಾಸ್ತವ ನಿರ್ಣಯ ಕೊಡಲು ವರ್ಕಿಂಗ್ ಕಮಿಟಿ ಸೇರಬೇಕಾಯ್ತು.**

೧೯೨೦ ರಲ್ಲಿ ಮೊತ್ತಮೊದಲಾಗಿ ಅಹಿಂಸೆಯ ತತ್ವವು ಹಿಂದೀ ರಾಜಕಾರಣವನ್ನು ಪ್ರವೇಶಿಸಿತು. ಅಂದಿನಿಂದ ಎಲ್ಲೆಂದರಲ್ಲಿ ಕಾಂಗ್ರೆಸ್‌ನ ವೇದಿಕೆಯ ಮೇಲೆ ಅಹಿಂಸೆಯ ತತ್ವಕ್ಕೆ "ಉಧೋ ಉಧೋ?" ಎನ್ನಲಾಯ್ತು. ಹಾಗಿದ್ದೂ ಗಾಂಧಿ ಮತ್ತು ಕಾಂಗ್ರೆಸಿಗರಲ್ಲಿ ಐಕ್ಯಮತ ಇರಲಿಲ್ಲ. ತಾವು ಅಹಿಂಸೆಯನ್ನು ಧ್ಯೆಯವೆಂದುಕೊಳ್ಳುತ್ತೇವೆ, ಎನ್ನುತ್ತಿದ್ದ ಉಳಿದ ಜನರು, ಕೇವಲ ಧೋರಣೆಯೆಂದು ಉಚ್ಚರಿಸುತ್ತಾರೆಂದು ಗಾಂಧಿ ಅರಿತಿದ್ದರಿಂದ ಕಳೆದ ೨೦ ವರ್ಷಗಳಲ್ಲಿ ಅವರು ಅದರ ತಂಟೆಗೆ ಹೋಗಿರಲಿಲ್ಲ. ಇಂದು ಅದನ್ನು ಎಳೆ ತಂದು ಒಂದು ವಿಚಿತ್ರ ಪರಿಸ್ಥಿತಿಯನ್ನುಂಟು ಮಾಡಿದಂತಾಗಿದೆ. ಯುದ್ಧದ ಆರಂಭದಲ್ಲಿ ಒಂದಾಗಿ ಇಂಗ್ಲಿಷರನ್ನೆದುರಿಸಲು ಸಿದ್ಧರಾದ ಕಾಂಗ್ರೆಸಿಗರು, ಮುಖ್ಯ ಪ್ರಶ್ನೆಯನ್ನು ಬದಿಗಿಟ್ಟು, ಒಬ್ಬರಿನ್ನೊಬ್ಬರ ಶತ್ರುವಲ್ಲದಿದ್ದರೂ, ವಿರೋಧಿಗಳಾಗಿದ್ದಾರೆಂಬುದು ಸ್ಪಷ್ಟವಾಗಿ ಕಾಣುತ್ತದೆ. ಆರಂಭದಲ್ಲಿ ಗಾಂಧಿ ಮತ್ತು ವರ್ಕಿಂಗ್ ಕಮಿಟಿ ಒಂದಾಗಿ ಇಂಗ್ಲಿಷರನ್ನು ಎದುರಿಸುವ ತೋರಿಕೆಯ ಹೊರತಾಗಿಯೂ, ಅವೆರಡೂ ಒಂದರೊಡನೊಂದು ಘರ್ಷಿಸುವ ನೋಟ ಇಂದು ಕಾಣ ಬರುತ್ತದೆ. ಹಿಂಸೆ- ಅಹಿಂಸೆಯ ಪ್ರಶ್ನೆ, ಗಾಂಧಿ ಅವರ ರಾಜಕಾರಣದಲ್ಲಿ ಕೇವಲ ತಾತ್ವಿಕ ವಿಚಾರದ ಪ್ರಶ್ನೆ ಎಂದು ಯಾರೂ ಹೇಳುವಂತಿಲ್ಲ. ಆ ಸ್ವರಾಜ್ಯವು ಪ್ರಾಂತೀಯ ಮತ್ತು ರಾಷ್ಟ್ರೀಯ ಸಂರಕ್ಷಣಾ

ಸಾಧನೆಯ ಪ್ರಶ್ನೆಯಾಗಿ ಉಳಿದಿದೆ. ಈ ದೃಷ್ಟಿಯಿಂದ ನೋಡುವಾಗ ಅಹಿಂಸೆಯ ಪ್ರಶ್ನೆಯ ಸಂಬಂಧದಲ್ಲಿ ಜನರ ನಿಜವಾದ ಅಭಿಪ್ರಾಯ ಏನೆಂಬುದರ ಕೊನೆಯ ಉತ್ತರ ಪಡೆಯುವುದು ಅತ್ಯಂತ ಅವಶ್ಯಕವಾಗಿದೆ.

ಗಾಂಧಿ ಅವರ ಅಹಿಂಸೆಯ ಸ್ವರೂಪ ಎಂತಹುದೆಂದು ತಿಳಿದುಕೊಳ್ಳುವುದು ಅವಶ್ಯಕ. ಜರ್ಮನರು ಇಂಗ್ಲೆಂಡನ್ನು ಆಕ್ರಮಿಸಿದಾಗ, ಇಂಗ್ಲಿಷರು ತಮ್ಮನ್ನು ಹೇಗೆ ರಕ್ಷಿಸಿಕೊಳ್ಳಬೇಕೆಂಬ ಬಗ್ಗೆ ಗಾಂಧಿ ಅವರು ಜುಲೈ ತಿಂಗಳ ೬ ರಂದು ಬರೆದ ಮುಕ್ತಪತ್ರದಿಂದ ಗಾಂಧಿ ಅವರ ಅಹಿಂಸೆ ಯಾವ ಸ್ವರೂಪದ್ದೆಂದು ತಿಳಿಯುತ್ತದೆ. ಆ ಪತ್ರದಲ್ಲಿ ಬ್ರಿಟಿಷ್ ಜನತೆ ಶಸ್ತ್ರವಿಲ್ಲದೆಯೇ ಜರ್ಮನ್ ರಾಷ್ಟ್ರದ ಪ್ರತೀಕಾರ ಮಾಡುವ ನಿರ್ಧಾರ ಮಾಡಬೇಕು. ಹಿಟ್ಲರ್ ಇಲ್ಲವೇ ಮುಸೊಲಿನಿ, ಇಂಗ್ಲಿಷ್ ಭೂಮಿಯ ಮೇಲೆ ಆಕ್ರಮಣ ಮಾಡುವ ಮೊದಲೇ, "ಬನ್ನಿ, ನಿಮಗೆ ಏನು ಬೇಕೋ ತೆಗೆದುಕೊಳ್ಳಿ, ಎಂದು ಹೇಳಿ, ಹಾಗೇ ಹಿಟ್ಲರ್ ಕೂಡ ತನಗೆ ಬೇಕಾದ್ದನ್ನು ಕೊಂಡು ಹೋಗಲಿ. ನಿಮ್ಮ ಮನೆ ಬಾಗಿಲನ್ನು ಅವರಿಗೆ ತೆರೆದಿಡಿ. ನಿಮಗೆ ಇರಲು ಸ್ಥಳವಿಲ್ಲವೆಂದಾದರೆ, ದೇಶಬಿಟ್ಟು ಹೋಗಲೂ ಬಿಡಲಾರರಾದರೆ, ಮರಣಕ್ಕೂ ಸಿದ್ಧರಾಗಿರಿ. ಆದರೆ ಆತ್ಮರಕ್ಷಣೆಗಾಗಿ ಯಾವುದೇ ಶಸ್ತದ ಉಪಯೋಗ ಮಾಡದಿರಿ." ಗಾಂಧಿ ಅವರ ಈ ವಿಧಾನ ನಮಗೆ ಸ್ವೀಕೃತವಲ್ಲ. ಅವರ ಅಹಿಂಸೆಯ ಸ್ವರೂಪ ಎಂತಹುದೆಂಬುದು, ಅವರು ಬ್ರಿಟಿಶ್ ಜನತೆಯೆದುರು ಮಂಡಿಸಿದ ಈ ಯೋಜನೆಯಿಂದ ಎಲ್ಲರಿಗೂ ಸ್ಪಷ್ಟವಾಗುವಂತಿದೆ.

ಇಂಗ್ಲಿಷರಿಗೆ ಅಹಿಂಸೆಯ ಪಾಠವಿತ್ತಷ್ಟಕ್ಕೇ ಗಾಂಧಿ ಅವರು ಸುಮ್ಮನಾಗಲಿಲ್ಲ. ಈ ದೇಶಕ್ಕೂ ಅವರು ಅದೇ ಉಪದೇಶವಿತ್ತರು ಮತ್ತು ಈ ಮಾರ್ಗವನ್ನವಲಂಬಿಸಿ, ದೇಶವನ್ನು ಜಗತ್ತಿಗೆ ಆದರ್ಶಪ್ರಾಯವಾಗಿಸುವ ಸಲಹೆಯನ್ನಿತ್ತರು. ಇದು ಶಕ್ಯವಲ್ಲವಾದುದರಿಂದ ವರ್ಕಿಂಗ್ ಕಮಿಟಿ ಗಾಂಧಿ ಅವರ ಮಾತನ್ನು ಒಪ್ಪಿಕೊಳ್ಳಲಿಲ್ಲ. ಇಂಗ್ಲಿಷರ ಆ ಪರಿ ಅಹಿಂಸೆ ಅಂದರೆ, ಮನೆಯವರ ಮತ್ತು ಹೊರಗಿನವರ ಹಿಂಸೆ ಎಂಬಂತಹ ಅವರ ಮನೋವೃತ್ತಿಯು ಅವರ ಕುಟಿಲ ನೀತಿಯನ್ನು ಮೆರೆಸುವಂತಿದೆ. ಆದರೆ ಈ ಭೇದಭಾವವನ್ನು ಬದಿಗಿಟ್ಟು, ಮುಖ್ಯಪ್ರಶ್ನೆಯೆಡೆಗೆ ದೃಷ್ಟಿ ಹರಿಸಿದರೆ, ಹಿಂದೂಸ್ಥಾನವನ್ನು ಪರಾಧಿಪತ್ಯದಿಂದ ಹೇಗೆ ಪಾರು ಮಾಡುವುದೆಂಬ ಬಗ್ಗೆ ಗಾಂಧಿ ಹಾಗೂ ವರ್ಕಿಂಗ್ ಕಮಿಟಿ ಮಧ್ಯೆ ದೊಡ್ಡ ಭಿನ್ನಾಭಿಪ್ರಾಯ ಉತ್ಪನ್ನ ಆಗಿರುವುದರಲ್ಲಿ ಸಂಶಯವಿಲ್ಲ.

ಈ ಹಿಂಸೆ-ಅಹಿಂಸೆಯ ವಾದದಲ್ಲಿ ಗಾಂಧಿ ಅವರ ಪಕ್ಷ ಹಿಡಿಯುವವರು, ಗಾಂಧಿ ಅವರು ಪ್ರಾಮಾಣಿಕರೆಂಬ ವಾದವನ್ನು ಮುಂದು ಮಾಡುತ್ತಾರೆ. ಈ ಸಮಸ್ಯೆಯ ನಿರ್ಣಯಕ್ಕೆ ಬರುವಲ್ಲಿ ಪ್ರಾಮಾಣಿಕತೆಗೆ ಮಹತ್ವವೇನೂ ಇಲ್ಲವೆಂದು ನಮಗನಿಸುತ್ತದೆ. ಗಾಂಧೀ ಅವರ ಪ್ರಾಮಾಣಿಕತೆ, ಅಪ್ರಾಮಾಣಿಕತೆ ಬಗ್ಗೆ ವಿಚಾರ ಮಾಡುವುದರಿಂದ

ಪ್ರಯೋಜನವೇನೂ ಇಲ್ಲ. ಅವರಂಥ ಪ್ರಾಮಾಣಿಕರು ಮುಗ್ಧರೋ, ಮೂರ್ಖರೋ ಇರುವ ಶಕ್ಯತೆ ಇದೆಯೆಂಬುದನ್ನು ಮರೆಯಲಾಗದು. ಅವರ ಅಹಿಂಸೆಯ ಬಗ್ಗೆ ಯೋಚಿಸುವಾಗ ಎರಡು ಮಹತ್ವದ ವಿಷಯಗಳನ್ನು ಗಮನದಲ್ಲಿರಿಸಿಕೊಳ್ಳಬೇಕು.

ಒಂದೆಂದರೆ, ಅಹಿಂಸೆ ಅಥವಾ ನಿಃಶಸ್ತ್ರ ಪ್ರತೀಕಾರ, ಗೋಸ್‌ಬಾರಿ ಇಲ್ಲವೇ ಅವಹೇಳನದ ವಿಷಯವಲ್ಲ. ಕೆಲವರು ನಿಯೋರ್ಜಚನೆಯಿಂದಿರುತ್ತಾರೆ. ಅವರಪ್ರಕಾರ ಎಲ್ಲ ದೇಶಗಳ ರಾಜಕಾರಣವೂ ದೋಷಪೂರ್ಣವಾಗಿರುತ್ತದೆ. ಎಲ್ಲ ರಾಷ್ಟ್ರಗಳೂ ಸ್ವಾರ್ಥಲೋಲುಪವಾಗಿರುತ್ತವೆ, ಮತ್ತು ಅವರ ದೋಷಪೂರಿತ, ಸ್ವಾರ್ಥಲಂಪಟ ರಾಜಕಾರಣದಿಂದ ಹೊರಗುಳಿಯುವುದು ಸಾಧ್ಯವಲ್ಲವಾದ್ದರಿಂದ,



ಯುದ್ಧವೋ, ಶಾಂತಿಯೋ ಎಂಬ ವಿಷಯದ ಬಗ್ಗೆ ಯೋಚಿಸಿ ಪ್ರಯೋಜನವಿಲ್ಲ. ಯುದ್ಧದಂತಹ ಭಯಂಕರ ಆಪತ್ತು, ನಿಸರ್ಗ ಪ್ರಕೋಪದಂತೆಯೇ ಎಂದು ಮನಗಂಡು ಸುಮ್ಮನಿರುವುದಕ್ಕಿಂತ ಮಾಡಬಹುದಾದ್ದು ಏನೂ ಇಲ್ಲ.

ಇನ್ನೊಂದು ವಿಚಾರದಂತೆ ಯುದ್ಧವೆಂಬುದು ಅನಿವಾರ್ಯ, ಅಷ್ಟೇ ಅಲ್ಲ, ಇಷ್ಟವೂ ಕೂಡ. ಅಂತಹವರಿಗೆ ರಾಷ್ಟ್ರವೆಂದರೆ ದೇವರಂತೆ. ಅದರ ಸಮ್ಮಾನ, ವೈಭವ ಮತ್ತು ವ್ಯಾಪ್ತಿ ಹೆಚ್ಚಿಸಲು ಯುದ್ಧ ಮಾಡುವ ಪ್ರಸಂಗ ಬಂದರೆ, ಹಿಂಜರಿಯದೆ ರಾಷ್ಟ್ರದ ಉತ್ಕರ್ಷಕ್ಕಾಗಿ ಎಲ್ಲರೂ ಯುದ್ಧದಲ್ಲಿ ಪಾಲ್ಗೊಳ್ಳ ಬೇಕು. ಆ ಯುದ್ದಕ್ಕಾಗಿ ದೇಶದ ಅಸಂಖ್ಯ ಕೋಟಿ ಧನ, ದೈವೀ ಸಂಪತ್ತು ನಾಶವಾದರೂ ಅಡ್ಡಿಯಿಲ್ಲ. "ಯುದ್ದದ ಕಥೆಯೇ ರಮ್ಯ" ಎಂಬ ದೃಷ್ಟಿಯಿಂದ ಅದೆಲ್ಲವೂ ಸರಿಯೇ, ಯುದ್ದದಲ್ಲಿ ಪಾಶವೀ ಶಕ್ತಿಯ ಪ್ರಯೋಗವಾಗುವುದರಿಂದ ಅದರ ಘೋರ ಪರಿಣಾಮ ನೋಡಿದವರಿಗೆ, ಕೇಳಿದವರಿಗೆ, ಅನುಭವಿಸಿದವರಿಗೆ ಯುದ್ಧವೆಂದರೆ ಮನುಷ್ಯ ಮಾತ್ರದವರಿಗೆ ಎಂತಹ ಭಯಂಕರ ಆಪತ್ತೆಂಬುದನ್ನು ಹೇಳಬೇಕಾಗಿಲ್ಲ. ಹಿಟ್ಲರ್‌ನಂತಹ ನಿರ್ದಯ ಕಾಲಪುರುಷನ ಮನೋಭಾವನೆ, ಹಿಂದೂಸ್ಥಾನದ ಆರ್ಯಸಂಸ್ಕೃತಿಯ

ಅಭಿಮಾನಿಗಳ ಮನೋಭಾವನೆಯನ್ನು ಬದಿಗಿಟ್ಟರೆ, ಜಗದಲ್ಲಿ ಎಲ್ಲಿಯೂ, ಪಾಶವೀ ಶಕ್ತಿ ಮತ್ತು ಯುದ್ದ ಒಳ್ಳೆಯದೆನ್ನುವವರು ಒಬ್ಬರಾದರೂ ಸಿಗಲಿಕ್ಕಿಲ್ಲ.

ಯುದ್ಧ ಮತ್ತು ಅಹಿಂಸೆಯ ಬಗೆಗಿನ ಚರ್ಚೆಯಲ್ಲಿ ನಿಃಶಸ್ತ್ರ ಪ್ರತೀಕಾರದ ಯೋಜನೆ ಗಾಂಧಿ ಅವರೊಬ್ಬರದೇ ಎಂದು ಜನರು ತಿಳಿದಿದ್ದಾರೆ. ಆದರೆ ಇದು ಬರೀ ತಪ್ಪು ತಿಳುವಳಿಕೆ. ಗಾಂಧಿ ಅವರೊಡನೆ ಸಹಮತ ಹೊಂದಿದ ಅನೇಕರು, ಯುದ್ದದ ಪಾಶವೀ ಶಕ್ತಿಯ ವಿರುದ್ದವಿದ್ದಾರೆ, ನಿಃಶಸ್ತ್ರ ಪ್ರತೀಕಾರದ ಯಶಸ್ಸಿನ ಬಗ್ಗೆ ಅವರಲ್ಲಿ ವಿಶ್ವಾಸವಿದೆ. ಸುಪ್ರಸಿದ್ದ ಬರ್ಟ್ ರ್‍ಯಾಂಡ್ ರಸೆಲ್, ಅವರು, ಅದಕ್ಕೊಂದು ಉದಾಹರಣೆ.

ಪ್ರೊಫೆಸರ್ ಬರ್ಟ್ ರ್‍ಯಾಂಡ್ ರಸೆಲ್‌ರಂತಹ ಜಗದ್ವಿಖ್ಯಾತ ವಿದ್ವಾಂಸರೇ, ಕಳೆದ ಯುದ್ಧದಲ್ಲಿ ಬ್ರಿಟಿಷ್ ಜನತೆಯೆದುರು "ಅಟ್ಲಾಂಟಿಕ್ ಮಂತ್ಲೀ" ಎಂಬ ಮಾಸಿಕದ ೧೯೧೫ರ ಆಗಸ್ಟ್ ತಿಂಗಳ ಅಂಕಣದಲ್ಲಿ, ಗಾಂಧೀ ಅವರಂತಹುದೇ ಆದ ಯೋಜನೆಯನ್ನು ಮಂಡಿಸಿದ್ದರು. ಬ್ರಿಟಿಷರು ನಿಃಶಸ್ತ್ರ ಪ್ರತೀಕಾರ ಮಾಡುವುದಾಗಿ ಹೇಳಿದರೆ, ಇಂಗ್ಲೆಂಡ್ ಮೇಲೆ ಆಕ್ರಮಣ ಮಾಡುವ ಮನೋಧೈರ್ಯ ಜರ್ಮನರಿಗಾಗದು. ಸೈನ್ಯವಿಲ್ಲದ, ನೌಕಾಬಲವಿಲ್ಲದ ನಿಃಶಸ್ತ್ರ ಇಂಗ್ಲಿಷ್ ಪ್ರಜೆಗಳ ಮೇಲೆ ಆಕ್ರಮಣ ಮಾಡಲು ಜರ್ಮನರಿಗೆ ಕಾರಣವೇ ಇಲ್ಲದಾಗಿ ಅವರು ಹಿಂತಿರುಗ ಬೇಕಾಗುವುದು. ಹೀಗೆ ಪರರ ಆಕ್ರಮಣದಿಂದ ದೇಶವನ್ನು ರಕ್ಷಿಸಬಹುದು.

ಪ್ರೊ. ಬರ್ಟ್‌ಲ್ಯಾಂಡ್ ರಸೆಲ್ ಮತ್ತು ಗಾಂಧೀ ಅವರ ಯೋಜನೆಯಲ್ಲಿ ಏನೂ ವ್ಯತ್ಯಾಸವಿಲ್ಲ. ವ್ಯತ್ಯಾಸವೆಂದರೆ, ಪ್ರೊ. ರಸೆಲ್ ಅವರು ತಮ್ಮ ಯೋಜನೆಯನ್ನು ಜಾರಿಗೆ ತರಲು ಒಂದು ಪೀಳಿಗೆಯ ಅವಕಾಶವಿತ್ತಿದ್ದರು. ನಿಃಶಸ್ತ್ರ ಪ್ರತೀಕಾರದ ತತ್ವದ ಶಿಕ್ಷಣವನ್ನು ಒಂದು ಪೀಳಿಗೆ ಪರ್ಯಂತ ಜನರಿಗಿತ್ತ ಬಳಿಕವೇ ಈ ಯೋಜನೆಯನ್ನು ಜ್ಯಾರಿಗೆ ತರಬೇಕೆಂದು ವ್ಯವಹಾರಬದ್ದ ನಿರ್ಬಂಧ ಹೇರಿದ್ದರು. ಗಾಂಧಿ ಅವರು, ಒಂದು ಪೀಳಿಗೆಯೇನು, ಒಂದು ಘಳಿಗೆಯ ಅವಕಾಶವನ್ನು ಕೊಡಲೂ ಸಿದ್ಧರಿರಲಿಲ್ಲ. ಅವರ ಈ ಆತ್ಯಂತಿಕವಾದ ವಿಚಾರಸರಣಿಯ ದೋಷ ಅವರಿಗೆ ತಟ್ಟುತ್ತದೆ.

ಜಗತ್ತಿಗೆ ಮಾದರಿಯಾಗಲು ಹಿಂದುಸ್ಥಾನದ ಜನರು ತಮ್ಮ ಬಲಿ ಕೊಡಲೇಕೆ? ಆದರೆ ಪ್ರೊ. ಬರ್ಟ್ ರ್‍ಯಾಂಡ್ ರಸೆಲ್‌ರಂಥ ವ್ಯವಹಾರೀ ಮನುಷ್ಯರ ಬೆಂಬಲ ಇರುವಂತಹ ಯೋಜನೆ

ಮೂರ್ಖತನದ್ದೆಂದು ಯಾರೂ ಹೇಳುವಂತಿಲ್ಲ.

ಗಾಂಧೀ ಅವರ ನಿಶ್ಯಸ್ತ್ರ ಪ್ರತೀಕಾರದ ಯೋಜನೆ ಮನುಷ್ಯ ಮಾತ್ರರಿಗೆ ಎಷ್ಟು ಉಪಯುಕ್ತವೆಂಬ ನಿರ್ಣಯ ಮಾಡುವುದು ಸುಲಭವಲ್ಲ. ಆದರೆ, ಇದರಿಂದ ಯಾರಿಗೆ ಲಾಭವಾಗುತ್ತೋ, ಇಲ್ಲಾ, ಪಾಶವೀ ಶಕ್ತಿಯಿಂದ ಯಾರಿಗೆ ಹಾನಿಯಾಗುತ್ತದೋ ಎಂದು ತುಲನಾತ್ಮಕವಾಗಿ ಅಧ್ಯಯನ ಮಾಡುವುದರಿಂದ, ಈ ಬಗ್ಗೆ ನಿರ್ಣಯ ನೀಡುವುದು ಹೆಚ್ಚು ಕಠಿಣವಾಗಲಾರದು.

ಇದು ಗಾಂಧಿ ಅವರ ವಿಚಾರ ಸರಣಿಯಾಗಿದ್ದು, ಇಲ್ಲಿ ಇದನ್ನು ಪರಾಮರ್ಶಿಸುವುದು ಅಗತ್ಯ. ಪ್ರತಿಯೊಬ್ಬರೂ ಚಿತ್ತಶುದ್ಧಿ ಮಾಡಿಕೊಂಡು, ಅಹಿಂಸೆಯ ತತ್ವವನ್ನು ಮೈಗೂಡಿಸಿಕೊಂಡರೆ ಎಲ್ಲ ಆದಂತೆ, ಎನ್ನುವುದರಲ್ಲಿ ಮುಖ್ಯವಾಗಿ ಎರಡು ದೋಷಗಳು ಕಂಡು ಬರುತ್ತವೆ. ಮೊದಲಿನದೆಂದರೆ, ಪ್ರತಿಯೊಬ್ಬರಲ್ಲಿ ಮೂಡುವ ಪ್ರಥಮ ಪ್ರಶ್ನೆ, ಈ ಯುದ್ಧದಲ್ಲಿ ಭಾಗವಹಿಸಬೇಕೋ ಬೇಡವೋ ಎಂಬುದಾಗಿರದೆ, ಇದರಲ್ಲಿ ಇತರರನ್ನು ಹೇಗೆ ನೋಡಬಹುದು, ಎಂಬುದಾಗಿದೆ. ಸ್ವಾರ್ಥ ಬಿಟ್ಟು ಪರಹಿತ ಸಾಧಿಸುವ ಮಂತ್ರ ಜಪಿಸಿದರೆ, ನಿರ್ವೈರ ಮನೋದಶೆ ಸಿದ್ಧವಾಗುವುದು, ಆದರೆ ಇದರಿಂದ ಪರಾರ್ಥ ಸಾಧಿಸಲಾಗುವುದೆಂದು ಹೇಳಲಾಗದು. ಯುದ್ಧದಲ್ಲಿ ಜನಜೀವನದ ಮೇಲೆ ಆಘಾತವಾಗುತ್ತದೆ, ಸಂಕಟದಲ್ಲಿ ಬೀಳುತ್ತದೆ ಮತ್ತು ನಾಶವಾಗುವ ಸಂಭವವೂ ಇರುತ್ತದೆ. ಬೇಡವೆಂದ ಮಾತ್ರಕ್ಕೆ ಹಾಳಾಗದಿರದು. ಇನ್ನೊಂದೆಂದರೆ, ಜಗತ್ತಿನಲ್ಲಿ ಕೇವಲ ನ್ಯಾಯತತ್ವದ ಸ್ಥಾಪನೆಯಾಗಿ ಫಲವಿಲ್ಲ, ಬದಲಿಗೆ ಅದನ್ನು ಕೃತಿಗಿಳಿಸಿ, ಅದಕ್ಕೆ ಆಘಾತವಾದಾಗಲೆಲ್ಲ ಆಖಾಡಕ್ಕಿಳಿದು ಪ್ರತೀಕಾರ ಸಾಧಿಸದೆ ನಡೆಯುವಂತಿಲ್ಲ.

ನಿರ್ವೈರ ಮನೋದಶೆಯಿಂದ ಯಾವ ಉಪಯೋಗವೂ ಇಲ್ಲ. ಮನೋವೃತ್ತಿಗೆ ಸರಿಯಾಗಿ ಕೈಯಿಂದ ಕೆಲಸವಾಗಬೇಕು ಮತ್ತು ಹಾಗೆ ಕೆಲಸವಾಗಬೇಕಾದರೆ, ಶಕ್ತಿಯ ಉಪಯೋಗವಾಗದೆ ಗತ್ಯಂತರವಿಲ್ಲ.

ನಿಶ್ಯಸ್ತ್ರ ಪ್ರತೀಕಾರದ ಪುರಸ್ಕರ್ತರು ಶಕ್ತಿಯ ಉಪಯೋಗ ಮಾಡುವುದಿಲ್ಲವೆನ್ನುವುದು ಭ್ರಮೆಯಷ್ಟೇ. ಆದರೆ ನಮ್ಮ ಶಕ್ತಿ ನೈತಿಕವಾದುದು; ಪಾಶವೀ ಶಕ್ತಿಯಲ್ಲ, ಎಂಬುದು ಮಾತ್ರ ಸರಿ. ಆದರೆ, ಮೊದಲಾಗಿ, ಪಾಶವೀ ಶಕ್ತಿಯು

ನೈತಿಕ ಶಕ್ತಿಗಿಂತ ಎಷ್ಟು ಭಿನ್ನ, ಮತ್ತು ನೈತಿಕ ಶಕ್ತಿಯು ಪಾಶವೀ ಶಕ್ತಿಗಿಂತ ಕಡಿಮೆ ಕ್ರೂರ ಸ್ವರೂಪದ್ದೇ ಎಂದು ಯಾವಾಗಲೂ ಹೇಳಲಾಗುವುದೇ?

ಪಾಶವೀ ಶಕ್ತಿಯಿಂದ ತುಂಬ ನಾಶವಾಗುತ್ತದೆಂಬುದು ಸ್ಪಷ್ಟವಿದೆ. ಹಾಗೆಂದೇ ಹಲವರಿಗೆ ಅದರ ಬಗ್ಗೆ ತಿರಸ್ಕಾರವಿದೆ. ಆದರೆ ನೈತಿಕ ಶಕ್ತಿಯೂ ಅಷ್ಟೇ ನಾಶ ಮಾಡಬಲ್ಲುದು, ಅಷ್ಟೇ ಕ್ರೂರ ಸ್ವರೂಪದ್ದಾಗಬಹುದು, ಎಂಬುದು ಹಲವರಿಗೆ ಕಾಣಿಸುವುದಿಲ್ಲ. ಆದರದು ನಿಜ. ಉದಾಹರಣೆಗೆ, ಒಂದು ಹಳ್ಳಿಯಲ್ಲಿ ಮನುಷ್ಯನೊಬ್ಬ ಭಿನ್ನ ರೀತಿಯಿಂದ, ಭಿನ್ನ ವಿಚಾರಗಳಿಂದ ಜೀವನ ಸಾಗಿಸ ತೊಡಗಿದನೆಂದು ಕೊಳ್ಳುವ. ಹಳ್ಳಿಯ ಜನರು ಅವನನ್ನು ಕೊಲ್ಲಲಿಲ್ಲ. ಆದರೆ, ಅವನಿಗೆ ಅನ್ನ, ನೀರು ಸಿಗದಂತೆ ಮಾಡಿ, ಎಲ್ಲ ರೀತಿಯಿಂದಲೂ ಬಹಿಷ್ಕಾರ ಹೇರಿ, ಅವನ ಜೀವಿತವನ್ನೇ ಅಸಾಧ್ಯವಾಗಿಸಿದರು. ಬಹಿಷ್ಕಾರದಲ್ಲಿ ಕೊಲೆ ಮಾಡಲಾಗುವುದಿಲ್ಲವೆಂದು, ಅದು ಪಾಶವೀ ಶಕ್ತಿ ಅಲ್ಲ, ಎನ್ನಬಹುದೇ? ಆದರೆ, ಪ್ರತ್ಯಕ್ಷ ಕೊಲೆಗೂ ಬಹಿಷ್ಕಾರಕ್ಕೂ ಏನು ದೊಡ್ಡ ವ್ಯತ್ಯಾಸ, ಅಂದರೆ, ಉತ್ತರ ಹೇಳುವಂತಿರದು.

ಎರಡನೆಯ ಪ್ರಶ್ನೆ - ನೈತಿಕ ಶಕ್ತಿ ಸಾಲದಿದ್ದರೆ, ಆಗ ಪಾಶವೀ ಶಕ್ತಿಯ ಪ್ರಯೋಗ



ಮಾಡಬಾರದೇ, ಎಂಬುದು. ನೈತಿಕ ಬಲಕ್ಕೆ ನಾಚಿ, ಶತ್ರು ಹಿಮ್ಮೆಟ್ಟದಿರುವುದಿಲ್ಲ, ಅವರ ಮನ ಕರಗದಿರುವುದಿಲ್ಲ, ಆಗ ಈ ಘೋರ ಪ್ರಸಂಗ ಕಳೆದು ಹೋಗುವುದು ಎಂದು ಅವರ ಅಪೇಕ್ಷೆ. ಒಂದು ವೇಳೆ ನಿಶ್ಯಸ್ತ್ರ ಪ್ರತೀಕಾರಕ್ಕೆ ಮಣಿಯದೇ ಶತ್ರು ಆಕ್ರಮಣಶೀಲರಾದರೆ ಏನು ಮಾಡುವುದು? ಪಾಶವೀಶಕ್ತಿಯ ಆಘಾತದಿಂದ ಸಾಯುವುದು ಮತ್ತು ಆತ್ಮಹತ್ಯೆ ಮಾಡುವುದು ಇವೆರಡರಲ್ಲಿ ಏನು ವ್ಯತ್ಯಾಸ? ನಿಶ್ಯಸ್ತ ಪ್ರತೀಕಾರ ಯೋಜನೆಯ ಯಶಸ್ಸು ಶತ್ರುವಿನ ಬಗ್ಗೆ ಜಾಗೃತವಾಗುವ ನೈತಿಕ ಬಲದ ಮೇಲೆ ಅವಲಂಬಿತವಾಗಿದೆ, ಇಲ್ಲವೇ, ನಿಶ್ಯಸ್ತ್ರ ಪ್ರತೀಕಾರವಾದದ ಆತ್ಮಬಲ ಮತ್ತು

ಶತ್ರುವಿನ ಅಸಹಕಾರ ಇವೆರಡರ ಮೇಲೆ ಅವಲಂಬಿತವಾಗಿದೆ. ಹಾಗೆಂದೇ ಅದರ ಯಶಸ್ಸಿನ ಬಗ್ಗೆ ಅವರಿಗೆ ಖಾತ್ರಿಯೆನಿಸುತ್ತದೆ. ಪ್ರೊ, ರಸೆಲ್ ಅವರ ಯೋಜನೆಯ ಮೂಲದಲ್ಲೇ ಈ ಯುಕ್ತಿವಾದವಿದೆ.

ನಿಶ್ಯಸ್ತ್ರ ಪ್ರಜೆಗಳ ಅಸಹಕಾರ ಪ್ರತೀಕಾರದ ದೃಷ್ಟಿಯು ಎಲ್ಲಿಯವರೆಗೆ ಹೋಗಬಹುದೋ ಎಂಬುದರ ಅನುಭವವನ್ನು ಹಿಂದೂಸ್ಥಾನದ ಜನರಿಗೆ ಹೇಳುವ ಅಗತ್ಯವೇ ಇಲ್ಲ. ಅಸಹಕಾರದ ಭಾಷೆ ತುಂಬ ಸುಲಭವಿದೆ. ಆದರೆ ಕೃತಿ ಕಠಿಣವಿದೆ. ಮತ್ತು ಅದರ ಪರಿಣಾಮ, ಪ್ರತಿಪಕ್ಷದ ಮೇಲೆ ಕವಡೆಯಷ್ಟೂ ಆಗುವುದು ಶಕ್ಯವಿಲ್ಲವೆಂದು ಇಪ್ಪತ್ತು ವರ್ಷಗಳ ಅನುಭವದಿಂದ ದೇಶದ ಜನತೆ ತಿಳಿದಿದೆ. ನೈತಿಕ ಬಲ ಮತ್ತು ಅದಕ್ಕೆ ಸಮನಾದ ಅಸಹಕಾರ, ಈ ಜೋಡುಗುಂಡಿನ ಉಪಯೋಗ ಆಗುತ್ತಿರುವುದು ಸಿದ್ಧವಾದ ಬಳಿಕ, ಪಾಶವೀ ಶಕ್ತಿಯ ಉಪಯೋಗ ಆಗಬೇಕೆಂದು ಯಾರೂ ದುರಾಗ್ರಹ ಮಾಡುವುದಿಲ್ಲ.

ಪಾಶವೀ ಶಕ್ತಿಯ ಶಾಶ್ವತ ಉಚ್ಚಾಟನೆ ಅಹಿಂಸಕರ ಧ್ಯೆಯವಾಗಿದೆ, ಮತ್ತು ಅದು ನಿಶ್ಯಸ್ರ  ಪ್ರತೀಕಾರದ ಉಪಾಯದಿಂದ ಸಾಧ್ಯವಾಗದಿದ್ದರೆ ಪಾಶವೀ ಶಕ್ತಿಯ ಉಪಯೋಗ ಮಾಡಬೇಕೇ ಬೇಡವೇ ಎಂಬ ಮೂರನೆಯ ಪ್ರಶ್ನೆಯೊಂದು ಎದ್ದು ನಿಲ್ಲುತ್ತದೆ. ಇದು ಹಿಂದಿಗಿಂತ ಭಿನ್ನವಾದ ಪ್ರಶ್ನೆ, ಪಾಶವೀ ಶಕ್ತಿಯ ನಿರ್ಮೂಲನ ಹೇಗೆಂಬ ಈ ಪ್ರಶ್ನೆಯಲ್ಲಿ ನಿಶ್ಯಸ್ತ್ರ  ಪ್ರತೀಕಾರದ ಶಸ್ತ್ರಕ್ಕೆ ದನಿ ನೀಡುವುದಷ್ಟೇ ಅಹಿಂಸಾವಾದಿಗಳ ಕಾರ್ಯಕ್ರಮ ಇದ್ದರೆ, ನಿಶ್ಯಸ್ತ್ರ ಪ್ರತೀಕಾರ ಒಂದು ದೊಡ್ಡ ಉಪದ್ರವ ಎಂದಷ್ಟೇ ಹೇಳಬೇಕು. ಒಂದು ಪೀಳಿಗೆಗೆ ನಿಶ್ಯಸ್ತ್ರ ಪ್ರತೀಕಾರದಿಂದ ಸಿಕ್ಕ ಲಾಭವು, ಇನ್ನೊಂದು ಪೀಳಿಗೆಗೆ ಸಿಗುವುದು ಸಾಧ್ಯವಿಲ್ಲವಾದರೆ, ಪಾಶವೀ ಶಕ್ತಿಯ ಕೋಪದಿಂದ ಯಾರೂ ಹೊರ ಬೀಳುವಂತಿಲ್ಲ, ಮತ್ತು ಅಹಿಂಸೆಯ ತತ್ವದ ವಿಜಯವಾಗಿದೆ ಎಂದೂ ಯಾರೂ ಹೇಳುವಂತಿಲ್ಲ.

ಪಾಶವೀ ಶಕ್ತಿಯ ಉಪಯೋಗ ಎಂದೂ ಮಾಡಲಾರೆವೆನ್ನುವುದು ಅವಿಚಾರತನವಷ್ಟೇ. ಅಮೆರಿಕಾದಲ್ಲಿ ನೀಗ್ರೊಗಳು ಅನೇಕ ವರ್ಷಗಳ ಪರ್ಯಂತ ಗುಲಾಮಗಿರಿಯಲ್ಲಿ ಮುಳುಗಿದ್ದರು. ಅದರ ಉಚ್ಚಾಟನೆಗಾಗಿ ಪಾಶವೀ ಶಕ್ತಿಯ ಪ್ರಯೋಗ ಮಾಡಬೇಕಾಯ್ತು. ನೈತಿಕ ಬಲವನ್ನೇ ನಂಬಿಕೊಂಡಿದ್ದರೆ, ಈ ನೀಗ್ರೊಗಳು ಗುಲಾಮಗಿರಿಯಿಂದ ಇದುವರೆಗೆ ಮುಕ್ತರಾಗುತ್ತಿದ್ದರೋ, ಇಲ್ಲವೋ ಎಂಬುದು ಸಂಶಯ. ಹಾಗೆಯೇ ಅವರಿಗೆ ಸ್ವಾತಂತ್ರ್ಯ ಸಂಪಾದಿಸಿ ಕೊಡುವಂತಾಗಲು, ಯಾವ ಪಾಶವೀ ಶಕ್ತಿಯ ಉಪಯೋಗ ಮಾಡಲಾಯ್ಕೆ, ಅದರಲ್ಲಿ ಅಮೆರಿಕಾ ದೇಶಕ್ಕೆ ಜನರು ನೈತಿಕ ದೋಷ ಉಂಟಾಯಿತೆನ್ನುವ, ನೈತಿಕ ವೃತ್ತಿಯ ಜನರು ಎಲ್ಲಾದರೂ ಸಿಗುವರೆಂದು ನಮ್ಮ ವಿಶ್ವಾಸ, ಇಂದು ಜಗತ್ತಿನಲ್ಲಿ ಹಲವು ರಾಷ್ಟ್ರಗಳು ಗುಲಾಮಗಿರಿಯಲ್ಲಿವೆ. ಅವೆಲ್ಲ ಮುಕ್ತವಾಗ ಬೇಕು. ನೈತಿಕ ಬಲದಿಂದ ಅದು

ಸಾಧ್ಯವಾಗುವಂತಿದ್ದರೆ, ವಿನಾಕಾರಣ, ಪಾಶವೀಶಕ್ತಿಯ ಪ್ರಯೋಗ ಮಾಡಬೇಕೆನ್ನುವುದು ಹುಚ್ಚತನವೇ ಸರಿ. ಧ್ಯೇಯವು ನಿಷ್ಕಳಂಕವೂ, ಪರಿಶುದ್ಧವೂ ಆಗಿದ್ದರೆ,



ಆ ಧ್ಯೆಯದ ಸಿದ್ಧಿಗಾಗಿ ಆತ್ಯಂತಿಕ ಸಾಧನದ ಪ್ರಯೋಗದಲ್ಲಿ ನೀತಿಯ ತತ್ವವು ಅಡ್ಡ ಬರದು; ಹಾಗೆ ಬಂದರೆ ಆ ತತ್ವ ಹೊಳೆನ್ನ ಬಹುದು. ಅಹಿಂಸೆಯು ಒಂದು ಸಾಧನವಷ್ಟೇ; ಧ್ಯೇಯವಲ್ಲ, ಮತ್ತು ಧ್ಯೇಯಾನುಸಾರ ಸಾಧನದ ಯುಕ್ತಾಯುಕ್ತತೆಯನ್ನು ನಿರ್ಧರಿಸಬಹುದು. ಧ್ಯೇಯವನ್ನು ಸಾಧಿಸುವಲ್ಲಿ, ಅಹಿಂಸೆಯ ಸಾಧನೆ ಅಪೂರ್ಣವಾಗುವುದಾದರೆ, ಧ್ಯೇಯದ ನಾಶವಾಗುವುದಿದ್ದರೆ, ಆಗಲೂ ಅಹಿಂಸೆಯನ್ನು ಬಿಟ್ಟು ಬೇರಾವ ಸಾಧನವನ್ನೂ ಬಳಸಬಾರದೆನ್ನುವುದು ಮೂರ್ಖತನವಷ್ಟೇ.

ಎರಡನೆಯ ಸಿದ್ಧಾಂತದಂತೆ ಪಾಶವೀ ಶಕ್ತಿಯ ಪ್ರಯೋಗ, ಇನ್ನೊಬ್ಬರಿಗೆ ಅನ್ಯಾಯ ಮಾಡಲೆಂದಾಗುವುದಾದರೆ, ಅದು ಪಾಪ; ಆದರೆ, ಪಾಶವೀ ಶಕ್ತಿಯ ನಿವಾರಣೆಗಾಗಿ ಅದನ್ನು ಉಪಯೋಗಿಸುವುದರಲ್ಲಿ ಯಾವ ಪಾಪವೂ ಇಲ್ಲ. ಪಾಶವೀ ಶಕ್ತಿಯ ಪ್ರತೀಕಾರ ಮಾಡದೆ ಇರುವುದೆಂದರೆ, ಪಾಶವೀ ಶಕ್ತಿಗೆ ನಿರ್ಣಯ ತೆಗೆದುಕೊಳ್ಳುವ ಅವಕಾಶ ಮಾಡಿ ಕೊಡುವಂತೆ, ಸಹಾಯ ಮಾಡುವಂತೆ. ನಿಜ ವಿಚಾರವೆಂದರೆ, ನಿಮ್ಮ ಮೇಲೆ ಯಾರಾದರೂ ಪಾಶವೀ ಶಕ್ತಿಯನ್ನು ಪ್ರಯೋಗಿಸಿದರೆ, ಅವಶ್ಯಕವೆನಿಸಿದರೆ, ಪಾಶವೀ ಶಕ್ತಿಯಿಂದಲೇ ಪ್ರತೀಕಾರ ಮಾಡಿ. ಆದರೆ ಪಾಶವೀ ಶಕ್ತಿಯಿಂದ ಪ್ರತಿಪಕ್ಷವನ್ನು ಸೋಲಿಸಿದ ಬಳಿಕ, ಪರಾಜಿತರ ಮೇಲೆ ಅನ್ಯಾಯವೆಸಗಲು ಆ ಗೆಲುವನ್ನು ಉಪಯೋಗಿಸಬೇಡಿ.

ಪಾಶವೀ ಸಶಕ್ತಿಯ ಪ್ರಯೋಗದಿಂದ ಇನ್ನೊಬ್ಬರನ್ನಾಳುವುದು ಭಿನ್ನ ಪ್ರಶ್ನೆ, ಎಂಬ ಅರಿವು ಇಲ್ಲದ ಕಾರಣವೇ, ಎಲ್ಲೆಡೆ ವಿಚಾರದ ಗೊಂದಲವಿದೆ. ಜಗತ್ತಿನಲ್ಲಾಗುತ್ತಿರುವ ಅನ್ಯಾಯವು, ಪಾಶವೀ ಶಕ್ತಿಯ ವಿರುದ್ಧ ಪಾಶವೀ ಶಕ್ತಿಯ ಪ್ರಯೋಗದಿಂದಾಗುವುದಾಗಿರದೆ, ಪರಾಜಿತರ ಮೇಲೆ ವಿಜೇತರು ಹೇರುವ ನಿರ್ಬಂಧದಿಂದಾಗಿ ಆಗುವುದೆಂದು ಹಲವರು ಮರೆಯುತ್ತಾರೆ. ಶಾಂತಿಪ್ರಿಯ ಜನರು ಪಾಶವೀ ಶಕ್ತಿಯ ಎದುರು ದಂಗೆಯೇಳದೆ, ಯುದ್ಧ ಮುಗಿದ ಬಳಿಕ,

ಪಾಶವೀ ಶಕ್ತಿಯಿಂದ ವಿಜಯ ಸಂಪಾದಿಸಿದ ರಾಷ್ಟ್ರವು, ಪರಾಜಿತ ರಾಷ್ಟ್ರದ ಮೇಲೆ ಅನ್ಯಾಯವೆಸಗಿದರೆ, ಪ್ರತೀಕಾರದ ಸಿದ್ಧತೆ ತೋರಿದರೆ, ಜಗತ್ತಿನಲ್ಲಿ ಅನ್ಯಾಯ ಇಲ್ಲದಾಗುವುದು. ಅನ್ಯಾಯ ಇಲ್ಲವಾದರೆ, ಯುದ್ದ ಇಲ್ಲದಾಗುವುದು ಮತ್ತು ಯುದ್ಧವಿಲ್ಲವಾದರೆ, ಪಾಶವೀ ಶಕ್ತಿಯ ಉಪಾಸನೆಗೆ ಯಾವ ಕಾರಣವೂ ಇರುವುದಿಲ್ಲ. ಅಹಿಂಸೆಯನ್ನು ಸ್ಥಾಪಿಸುವಲ್ಲಿ ಇದು ಮಹತ್ವದ ಸಿದ್ಧಾಂತವೆಂದು ನಮಗನಿಸುತ್ತದೆ.

ಮೂರನೆಯ ಸಿದ್ಧಾಂತವೆಂದರೆ, ನಿಶ್ಯಸ್ತ್ರ ಪ್ರತೀಕಾರದ ಮಾರ್ಗವನ್ನು ಒಂದು ರಾಷ್ಟ್ರವು ಸ್ವೀಕರಿಸಿ, ಉಳಿದ ರಾಷ್ಟ್ರಗಳು ಸ್ವೀಕರಿಸದೆ ಹೋದರೆ ಅದರಿಂದ ಉಪಯೋಗವೇನೂ ಇಲ್ಲ. ಹೊಸ ಮಾರ್ಗವು ಸುಲಭವಿದ್ದರೆ, ಜನರು ಅದನ್ನು ಅನುಸರಿಸುತ್ತಾರೆ, ದುರ್ಗಮವಿದ್ದರೆ ಅನುಸರಿಸುವುದಿಲ್ಲ. ಉದಾಹರಣೆಗೆ, ಒಂದೆಡೆ ಸೋಶಿಯಲಿಸಮ್ ಜಾರಿಗೆ ಬಂದರೆ ಎಲ್ಲೆಡೆ ಬರುವುದೇನೂ ಶಕ್ಯವಲ್ಲ. ಎಲ್ಲರೂ ಅನುಸರಿಸಿದರೆ ಮಾತ್ರ ಸೋಶಿಯಲಿಸಮ್ ಜಾರಿಗೆ ಬರುವುದು. ನಿಶ್ಯಸ್ತ್ರ ಪ್ರತೀಕಾರದ ತತ್ವದಲ್ಲೂ ಇದೇ ನ್ಯಾಯ ಅನ್ವಯವಾಗುತ್ತದೆ. ಎಲ್ಲ ರಾಷ್ಟ್ರಗಳು ಒಂದಾಗಿ ನಿಶ್ಯಸ್ತ್ರ ಪ್ರತೀಕಾರವನ್ನು ಅಂಗೀಕರಿಸಬೇಕು. ಅದರ ಸಲುವಾಗಿ ಜಾಗತಿಕ ಸಂಘಟನೆಯೊಂದು ರೂಪುಗೊಳ್ಳಬೇಕು. ಇದು ಒಂದೆರಡು ರಾಷ್ಟ್ರಗಳು ಮಾಡುವ ಕೆಲಸವಲ್ಲ.

ಅಹಿಂಸೆಯ ತತ್ವವು ಹಿಂದೂಸ್ಥಾನದಲ್ಲಿ ಆದಿಕಾಲದಿಂದಲೂ ಚಾಲನೆಯಲ್ಲಿದೆ. ಆರ್ಯರು, ಧೈಯದಲ್ಲೂ, ಕೃತಿಯಲ್ಲೂ ಹಿಂಸಾವಾದಿಗಳಾಗಿದ್ದರು. ಯಜ್ಞವು ಅವರ ಧರ್ಮದ ಮುಖ್ಯ



ಅಡಿಪಾಯವಾಗಿತ್ತು. ಆ ಯಜ್ಞದಲ್ಲಿ ಹಿಂಸೆ ಮತ್ತು ಮದ್ಯಪಾನದ ಹೊರತು ಬೇರೇನೂ ಇರಲಿಲ್ಲ. ಈ ಹಿಂಸಕ ಆರ್ಯಧರ್ಮದಿಂದ ಬೇಸತ್ತು, ಮಹಾವೀರನು ಅಹಿಂಸಾವಾದಿ ಜೈನಧರ್ಮವನ್ನು ಸ್ಥಾಪಿಸಿದನು. ಆದರೆ ಇವೆರಡೂ ತತ್ವಗಳು ಅತಿರೇಕಕ್ಕೆ ಹೋದವು. ಒಂದು ಅತಿರೇಕದ ಹಿಂಸೆಯಾದರೆ ಮತ್ತೊಂದು ಅತಿರೇಕದ ಅಹಿಂಸೆ ! ಹಾಗೆಂದೇ ಗೌತಮ ಬುದ್ಧನು ತನ್ನ ಬೌದ್ಧ ಧರ್ಮವನ್ನು ಸ್ಥಾಪಿಸಿದನು. ಇವೆರಡೂ ಅತಿರೇಕಗಳನ್ನು ಕೈಬಿಟ್ಟು, ಮಧ್ಯಮ ದಾರಿಯನ್ನು ಅನುಸರಿಸಿದನು. “ಶಕ್ಯವಾದರೆ ಅಹಿಂಸೆ; ಇಲ್ಲವಾದರೆ ಹಿಂಸೆ” ಎಂಬುದು ಬುದ್ಧನ ಭೂಮಿಕೆಯಾಗಿತ್ತು. ಬೌದ್ಧಧರ್ಮ ಉಳಿದಿದ್ದರೆ, ಅಹಿಂಸೆಯ ಕುರಿತಾದ ಇಂದಿನ ಈ ಪ್ರಶ್ನೆ ಏಳುತ್ತಿರಲಿಲ್ಲ. ಬ್ರಾಹ್ಮಣ ಬಂಧುಗಳ ಹಿಂಸೆಯಿಂದ ಬೇಸತ್ತ ಜನತೆ ಬುದ್ಧನನ್ನನುಸರಿಸಿ ಅಹಿಂಸೆಯನ್ನಾಂತು, ಅದಕ್ಕೆ ಸಾಕ್ಷಿಯಾಗಿ ಗೋಮಾಂಸ ತ್ಯಜಿಸಿ

ಶಾಖಾಹಾರಿಗಳಾದರು. ಹೀಗೆ ಬುದ್ಧನ ವಿಚಾರ ಸರಣಿಯ ಲೋಪವಾಗಿ ಆತ್ಯಂತಿಕ ಅಹಿಂಸೆಯೇ ಹಿಂದೂಗಳಿಗೆ ಶಿರೋಭೂಷಣವಾಯ್ತು. ಸಾವಿರಾರು ವರ್ಷಗಳಿಂದ ಹೀಗಿರುವುದರಿಂದಲೇ ಈ ಜನರು ಹೀಗೆ ದುರ್ಬಲರಾಗಿರುವುದು.

ಮಾನವ ಜೀವನಕ್ಕೆ ಯಾವುದಾದರೂ ನೈತಿಕ ತತ್ವದ ಅಡಿಪಾಯ ಇರಬೇಕೆಂಬುದನ್ನು ನಾವು ಒಪ್ಪುತ್ತೇವೆ. ಸಂಸಾರೀ ಜೀವನದಲ್ಲಿ ಅಲ್ಲದಿದ್ದರೂ, ರಾಜಕಾರಣದಲ್ಲಾದರೂ ಹಾಗಿರುವುದು ನಮಗೆ ಸಮ್ಮತ. ಹಿಂದೆ ಗಾಂಧಿ ಹಾಗೂ ತಿಲಕರ ನಡುವೆ ಈ ಪ್ರಶ್ನೆಯ ಬಗ್ಗೆ ವಾದವೆದ್ದಿತ್ತು. ರಾಜಕಾರಣದಲ್ಲಿ ಮೋಸಕ್ಕೆ ಪ್ರತಿಯಾಗಿ ಮೋಸ ಎಂಬ ಇದೇ ತತ್ವದ ಆಧಾರದ ಮೇಲೆ ನೋಡಬೇಕೆಂದು ತಿಲಕರು ಪ್ರತಿಪಾದಿಸಿದ್ದರು. “ಇತರರ ಕ್ರೋಧವನ್ನು ನಿಮ್ಮ ಶಾಂತಿಯಿಂದ ಜಯಿಸಿ, ದುಷ್ಟರನ್ನು ಸಾಧುತನದಿಂದ ಜಯಿಸಿ, ಅಸತ್ಯವನ್ನು ಸತ್ಯದಿಂದ ಜಯಿಸಿ, ಎಂಬ ಗೌತಮ ಬುದ್ಧನ ತತ್ವ ಮಾನ್ಯವಲ್ಲ, ಆದರೆ, ಗೀತೆಯಲ್ಲಿ ಹೇಳಿದ, “ನನ್ನನ್ನು ಯಾವ ಸ್ವರೂಪದಲ್ಲಿ ಭಜಿಸುವರೋ, ಅದೇ ರೀತಿ ಫಲವನ್ನು ಕೊಡುವೆ.” ಎಂಬ ತತ್ವದಂತೆ ನಡೆಯುವುದೇ ತಮ್ಮ ಭೂಮಿಕೆ ಎಂದು ಅವರು ನಂತರ ಸ್ಪಷ್ಟ ಪಡಿಸಿದ್ದಾರೆ. ಇದಕ್ಕೆ ಗಾಂಧಿ ಅವರು, ಗೀತೆಯ ತತ್ವಕ್ಕಿಂತ ಬುದ್ಧನ ತತ್ವವೇ ಲಾಭದಾಯಕ, ಅಂದಿದ್ದರು. ಇದಕ್ಕೆ ನಮ್ಮ ಸಹಮತವಿದೆ. ಗೀತೆಯ ತತ್ವ ಮತ್ತು ನಾನಾ ಫಡ್ನವೀಸನ ಮೋಸಕ್ಕೆ ಪ್ರತಿಯಾಗಿ ಮೋಸ ಎಂಬುದರಲ್ಲಿ ವ್ಯತ್ಯಾಸವೇನೂ ಕಾಣುವುದಿ್ಲ್ಲ . ಆದರೆ, ಗಾಂಧಿ ಅವರು ಬುದ್ಧನ ಪಕ್ಷ ಹಿಡಿದರೂ, ಅಹಿಂಸೆಯ ವಿಷಯದಲ್ಲಿ ಬುದ್ಧ ಮತ್ತು ಗಾಂಧಿಯರಲ್ಲಿ ದೊಡ್ಡ ವ್ಯತ್ಯಾಸವಿದೆ ಎಂಬುದನ್ನು ಮರೆಯಬಾರದು. ಅದು ತತ್ವ ಮತ್ತು ನಿಯಮದ ವ್ಯತ್ಯಾಸ, ಬುದ್ಧನು ಅಹಿಂಸೆಯನ್ನ ತತ್ವವೆಂದುಕೊಳ್ಳುತ್ತಾನೆ, ನಿಯಮವೆಂದಲ್ಲ. ಗಾಂಧಿ ಅವರು, ಅಹಿಂಸೆಯೇ ತತ್ವವೆನ್ನುತ್ತಾರೆ. ತತ್ವ ಮತ್ತು ನಿಯಮಗಳ ನಡುವಣ ವ್ಯತ್ಯಾಸ ದೊಡ್ಡದಿದೆ. ನಿಯಮ ಪಾಲಿಸಲು ಇರುತ್ತದೆ. ಅದು ಮನುಷ್ಯನನ್ನು ಗುಲಾಮನನ್ನಾಗಿಸುತ್ತದೆ. ತತ್ವದ ಉಪಾಸಕನಾಗುತ್ತಾನೆ. ಈ ವ್ಯತ್ಯಾಸವನ್ನರಿಯದ ಅನೇಕ ಸಮಾಜಗಳು ರಸಾತಳಕ್ಕಿಳಿದಿವೆ. ತತ್ವ ಪ್ರಗತಿಗೆ ಬಾಧೆ ತರುವುದಿಲ್ಲ. ನಿಯಮ ಗತಿಯನ್ನು ಕುಂಠಿತವಾಗಿಸುತ್ತದೆ. ಈ ಮಹತ್ವದ ವ್ಯತ್ಯಾಸವನ್ನು ಗಾಂಧೀ ಅವರು ಅರಿಯಲಿಲ್ಲವೆಂದು ಕಾಣುತ್ತದೆ.

ಅಹಿಂಸೆ ಎಂಬ ಗಂಭೀರ ವಿಷಯದಲ್ಲಿ ಗಾಂಧಿ ಅವರ ವಿಚಾರದಲ್ಲಾದ ಬದಲಾವಣೆ , ಅವರ ಲೇಖನಗಳಿಂದ ತಿಳಿದು ಬರುತ್ತದೆ.

೧೯೨೨ರ ಮಾರ್ಚ್ ದಿನಾಂಕ ೨ರ “ಯಂಗ್ ಇಂಡಿಯಾ'ದ ಅಂಕಣದಲ್ಲಿ ಈ ವಿಷಯವಾಗಿ

ಗಾಂಧಿ ಬರೆದಿದ್ದಾರೆ.

"ನನಗೆ ಖೇದವೆನಿಸುವುದೆಂದರೆ, ಕೆಲ ಹಿಂದೂಗಳು ಹಾಗೂ ಮುಸ್ಲಿಮರು ನಾನು ಅವರ ಧರ್ಮಶ್ರದ್ಧೆಯನ್ನು ಕಡೆಗಣಿಸಿರುವೆನೆಂದೂ, ಅಹಿಂಸೆಯ ತತ್ವದ ಬಗ್ಗೆ ರಾಜಿ ಮಾಡಿಕೊಳ್ಳದೆ, ಇಂಡಿಯಾ ದೇಶಕ್ಕೆ ಮಹಾಹಾನಿಯನ್ನುಂಟು ಮಾಡಿರುವೆನೆಂದೂ ಅಂದುಕೊಂಡಿದ್ದಾರೆ.

ಹಿಂಸೆಯು ಯಾವುದೇ ಧರ್ಮದ ಶಾಸನವಲ್ಲವೆಂದು ನಾನು ದಿಟ್ಟವಾಗಿಯೇ ಹೇಳುತ್ತೇನೆ,ಮತ್ತು, ಅಹಿಂಸೆಯು ಬಹುತೇಕ ಎಲ್ಲ ಧರ್ಮಗಳಲ್ಲೂ ಕಡ್ಡಾಯವಿದ್ದು, ಪ್ರಸಂಗ ವಿಶೇಷವಾಗಿ ಹಿಂಸೆಯು ಆಪದ್ಧರ್ಮಕರ್ಮವೆಂದು ಮಾನ್ಯತೆ ಪಡೆದಿದೆ. ಆದರೆ, ಅಹಿಂಸೆಯ ಆತ್ಯಂತಿಕ ಸ್ವರೂಪವನ್ನೇನೂ ನಾನು ಇಂಡಿಯಾದೆದುರು ತೆರೆದಿಟ್ಟಿಲ್ಲ. ಕಾಂಗ್ರೆಸ್ ವೇದಿಕೆಯಿಂದ ನಾನು ನೀಡಿರುವ ಅಹಿಂಸೆಯ ಬೋಧೆ, ಕೇವಲ ಧೋರಣೆ ಮಾತ್ರದ್ದಾಗಿದೆ.

ಅಹಿಂಸಾಪಾಲನೆಯಲ್ಲಿ ನಂಬಿಕೆಯಿಲ್ಲದವರು, ಅದನ್ನು ನೇರವಾಗಿ ಧಿಕ್ಕರಿಸಬೇಕೇ ಹೊರತು, ಕಪಟ ವಿಶ್ವಾಸ ತೋರಬಾರದು. ಹಿಂಸೆ ಅವಶ್ಯಕವಾಯ್ತೆಂದೇ ಇಟ್ಟುಕೊಳ್ಳಿ. ಆದರೆ, ಅದರಲ್ಲಿ ವಿಶ್ವಾಸವಿಲ್ಲದೆ, ಬರಿದೆ ಕೋವಿಯನ್ನು ಕೈಯಲ್ಲಿ ಹಿಡಿದು ಸುಮ್ಮನೆ ನಿಂತರೆ , ಅದು ಮೋಸವಲ್ಲವೇ? ನಾನು ನೊಣವನ್ನೇನೋ ಕೊಲ್ಲಬಲ್ಲೆ. ಆದರೆ, ನೊಣವನ್ನೂ ನಾನು ಕೊಲ್ಲುವವನಲ್ಲ. ಆದರೆ ಅಂತಹ ಕಾರ್ಯಕ್ಕೆ ನಿಯುಕ್ತನಾದಲ್ಲಿ ಹಾಗೆ ಮಾಡಬೇಕೆಂದು ಅಪೇಕ್ಷಿಸಲಾಗುವುದಿಲ್ಲವೇ? ಕಾಂಗ್ರೆಸ್ ಹಾಗೂ ಖಿಲಾಫತ್ ಕಮಿಟಿಯಲ್ಲಿರುವವರು, ಈ ಸರಳ ಸತ್ಯವನ್ನು ಅರಿತರೆ, ಖಂಡಿತವಾಗಿಯೂ ಈ ಹೋರಾಟವನ್ನು ಈ ವರ್ಷವೇ ಯಶಸ್ವಿಯಾಗಿ ಕೊನೆಗೊಳಿಸುವರು, ಇಲ್ಲವೇ, ಅಹಿಂಸೆಯ ಬಗ್ಗೆ ಹೇಸಿ, ಈ ಕಪಟನಾಟಕವನ್ನು ತ್ಯಜಿಸಿ, ಬೇರಿನ್ನೇನಾದರೂ ಯೋಜನೆಗೆ ತೊಡಗುವರು". ಬಳಿಕ ಮಾರ್ಚ್ ೧ ರ "ಯಂಗ್ ಇಂಡಿಯಾ" ಅಂಕಣದಲ್ಲಿ ಈ ವಿಚಾರವಾಗಿ ಅವರ ಮಾತುಗಳು ಇನ್ನೂ ಸ್ಪಷ್ಟವಿವೆ.

**ಲಾಹೋರ್‌ನಿಂದ ವರದಿ ;**

"ಬಾರ್ಡೋಲಿ ನಿರ್ಣಯದ ಬಗ್ಗೆ ಬೆಳಕಿಗೆ ಬಂದಿರುವ ಅಂಶದಿಂದ ತಿಳಿಯುವುದೆಂದರೆ, ಈ ನಿರ್ಧಾರವು, ಒಂದೇ ಪಂಡಿತ್ ಮಾಲವೀಯ ಅವರ ಪ್ರಭಾವದಿಂದ, ಇಲ್ಲವೇ ಅಹಿಂಸೆಯ ಬಗೆಗಿನ ಅವಾಸ್ತವ ಕಲ್ಪನೆಯಿಂದ ಮೂಡಿದ್ದಾಗಿದೆ. ಇದು ಮಾಲವೀಯ ಅವರಿಗೆ ಶೋಭಿಸುವುದಲ್ಲ, ಅಷ್ಟೇ ಅಲ್ಲ, ತಿಳುವಳಿಕೆ ಹೀನವೂ ಆಗಿದೆ. ಕಾಂಗ್ರೆಸ್‌ನ ಆದರ್ಶ, ಸ್ವರಾಜ್ಯವೇ ಹೊರತು, ಅಹಿಂಸೆ ಅಲ್ಲವಲ್ಲ? ಲೇಖಕನ ಬಗ್ಗೆ ಸಹಾನುಭೂತಿ ಅನಿಸದಿರುವುದು ಸಾಧ್ಯವೇ ಇಲ್ಲ. ದಿಲ್ಲಿಯಲ್ಲಿ ಕಾಣಬಂದ ಮನೋವೃತ್ತಿಯ ಪ್ರತೀಕ ಅವರ ಈ ಪತ್ರ, ಬಾರ್ಡೋಲಿ ನಿರ್ಣಯಕ್ಕೂ, ಪಂಡಿತ ಮಾಲವೀಯ ಅವರಿಗೂ ಯಾವ ಸಂಬಂಧವೂ ಇಲ್ಲ. ಹಾಗೆಂದು ಮೊದಲೇ ಹೇಳಿದ್ದೇವೆ. ಹಾಗೆಯೇ, ಅಹಿಂಸೆಯ ಅವಾಸ್ತವ ಕಲ್ಪನೆಗೂ ಏನೂ ಸಂಬಂಧವಿಲ್ಲ. ಈ ಪತ್ರವೇ ಅದಕ್ಕೊಂದು ಉತ್ಕೃಷ್ಟ ಪುರಾವೆ. ನನ್ನ ಕಲ್ಪನೆಯಂತೆ ತರ್ಕಶುದ್ಧ ದೃಷ್ಟಿಯಿಂದ ವಿಚಾರಿಸಿದರೆ, ಬಾರ್ಡೋಲಿ ನಿರ್ಣಯವು ಸೀಮಿತ ಅಹಿಂಸೆಯೆಂಬ ರಾಷ್ಟ್ರೀಯ ಶಪಥದಿಂದ ಉಗಮವಾದುದು. ರಾಷ್ಟ್ರದ ಧ್ಯೆಯ, ಅಹಿಂಸೆಯಲ್ಲ, ಸ್ವರಾಜ್ಯ, ಎಂಬುದಕ್ಕೆ ನನ್ನ ಪೂರ್ಣ ಸಮ್ಮತಿಯಿದೆ. ಅಹಿಂಸೆಯಷ್ಟೇ ಸ್ವರಾಜ್ಯವೂ ನನ್ನ ಧ್ಯೆಯ; ಅಹಿಂಸೆಯನ್ನು ಅವಲಂಬಿಸದೆ, ಜನತೆಗೆ ಸ್ವರಾಜ್ಯ ಪ್ರಾಪ್ತಿಯಾಗುವುದು ಅಸಾಧ್ಯ. ಆದರೆ, ಇಂಡಿಯಾ ದಾಸ್ಯದ ಶೃಂಖಲೆಯಲ್ಲೇ ಇರುವುದಕ್ಕಿಂತ ಹಿಂಸಾಮಾರ್ಗದಿಂದಲಾದರೂ ಸ್ವತಂತ್ರವಾಗಲೆಂಬ



ನನ್ನ ಇಚ್ಛೆಯನ್ನು ಎಷ್ಟೋ ಸಲ ವ್ಯಕ್ತಪಡಿಸಿದ್ದೇನೆ".

೧೯೨೪ ಮೇ ೨೯ರ ಯಂಗ್ ಇಂಡಿಯಾದ ಅಂಕಣದಲ್ಲಿ ಹಿಂದೂ-ಮುಸ್ಲಿಮ್ ದಂಗೆಯ ಬಗ್ಗೆ ಬರೆಯುತ್ತಾ, ಹೀಗೆ ವಿಚಾರ ವ್ಯಕ್ತಪಡಿಸಿದ್ದಾರೆ. ಇಂದು ನಾನು ಸುತ್ತಲೂ ಕಾಣುತ್ತಿರುವುದು ಅಹಿಂಸೆಯ ವಿರೋಧದ ಪ್ರತಿಕ್ರಿಯೆ.. ಹಿಂಸೆಯ ಅಲೆಯೊಂದೆದ್ದಿರುವುದು ಭಾಸವಾಗುತ್ತಿದೆ. ಹಿಂದೂಮುಸ್ಲಿಮ್ ಕ್ಷೋಭೆ ಉತ್ತುಂಗಕ್ಕೇರಿದೆ.

ದೇಶದೆದುರು ನಾನೆಂದೂ ಅಹಿಂಸೆಯ ಆತ್ಯಂತಿಕ ಸ್ವರೂಪವನ್ನು ತೆರೆದಿಟ್ಟಿಲ್ಲ ; ಆ ಪುರಾತನ ಸಂದೇಶವನ್ನು ಪುನಃ ಸಾರತಕ್ಕೆ ಯೋಗ್ಯತೆ ನನ್ನಲ್ಲಿಲ್ಲ. ನನ್ನ ಬುದ್ಧಿಶಕ್ತಿಗೆ ನಿಲುಕುವಂತಿದ್ದರೂ, ಗೃಹೀತವಿದ್ದರೂ, ಅದಿನ್ನೂ ನನ್ನೊಳಗೆ

ಸೇರಿಲ್ಲ. ನನ್ನ ಕರ್ಮವೇ ನನ್ನ ಬೋಧನೆ, ಕೋಮುಗಳ ನಡುವೆ ಸೌಹಾರ್ದ ನೆಲಸುವಂತಾಗಲು ಮತ್ತು ಸ್ವರಾಜ್ಯ ಸ್ಥಾಪಿಸಲು, ನಾನಿಂದು ಅಹಿಂಸೆಯನ್ನೇ ತಮ್ಮ ಮತವಾಗಿ ಸ್ವೀಕರಿಸುವಂತೆ ದೇಶಬಾಂಧವರನ್ನು ಕೇಳುತ್ತಿದ್ದೇನೆ. ಹಿಂದೂ, ಮುಸ್ಲಿಮ್, ಕ್ರೈಸ್ತ, ಸಿಖ್ಖ, ಪಾರಸೀಯರು ಪರಸ್ಪರ ಹಿಂಸಾತ್ಮಕ ಕಲಹದಲ್ಲಿ ತೊಡಗಬಾರದು ಮತ್ತು ಸ್ವರಾಜ್ಯವನ್ನು ಅಹಿಂಸೆಯಿಂದಲೇ ಗಳಿಸಬೇಕು.

ಕಳ್ಳಕಾಕರೊಡನೆ, ದೇಶವನ್ನಾಕ್ರಮಿಸ ಬರುವ ಪರದೇಶಗಳೊಡನೆ ಅಹಿಂಸೆ ಪಾಲಿಸಿ, ಎಂದೇನೂ ನಾನು ಹೇಳುತ್ತಿಲ್ಲ. ಆದರೆ ಆ ಕ್ಷಮತೆಗಾಗಿ ನಾವು ಸಂಯಮವನ್ನು ಪಾಲಿಸಬೇಕು. ಕುಲ್ಲಕ ಕಾರಣಕ್ಕೆ ಕೈಯಲ್ಲಿ ಕೋವಿ ತೆಗೆದುಕೊಳ್ಳುವುದು ದೌರ್ಬಲ್ಯದ ಲಕ್ಷಣ, ಕೈ ಕೈ ಮಿಲಾಯಿಸುವುದರಿಂದ ನಪುಂಸಕತನ ಬೆಳೆಯುತ್ತದೆ. ನನ್ನ ಅಹಿಂಸಾ ಮಾರ್ಗದಿಂದ ಎಂದೂ ಶಕ್ತಿಯ ನಾಶವಾಗದು, ಬದಲಿಗೆ ಸಮಯ ಬಂದಾಗ ದೇಶ ಬಯಸಿದರೆ, ಶಿಸ್ತು, ಒಗ್ಗಟ್ಟಿನ ಹೋರಾಟ ಸಾಧ್ಯವಾಗುವುದು".

ಮೇಲಿನ ಲೇಖನದಲ್ಲಿ ವ್ಯಕ್ತವಾದ ಅವರ ಹಳೆಯ ವಿಚಾರಕ್ಕೂ ಮತ್ತು ಇಂದು ಅವರು ಮಂಡಿಸಿದ ವಿಚಾರಕ್ಕೂ ಎಷ್ಟು ವ್ಯತ್ಯಾಸ ಇದೆಯೆಂಬುದನ್ನು ಹೇಳಬೇಕಿಲ್ಲ. ಈ ವ್ಯತ್ಯಾಸ ಯಾಕಾಯ್ತೆಂಬುದು ಅತ್ಯಂತ ಉದ್ಬೋಧಕವಾಗಿದೆ, ಎಂಬುದರಲ್ಲಿ ಸಂಶಯವಿಲ್ಲ. ನಮಗನಿಸುವಂತೆ, ಈ ಪರಿವರ್ತನೆಗೆ ಮಹತ್ವದ ಕಾರಣ, ಅವರಿಗೆ ಹಿಂದೂಸ್ಥಾನದ ನಾಯಕನೆನ್ನುವುದು ಕಡಿಮೆ ಪ್ರತಿಷ್ಠೆಯದಾಗಿ ಕಂಡು, ಅದಕ್ಕಿಂತ ಜಗತ್ತಿನ ಉದ್ಧಾರಕನೆಂದು ಮೆರೆವ ಅಹಂಭಾವ ಉತ್ಪನ್ನವಾದುದು. ಗಾಂಧಿ ಅವರಿಗೆ ಪ್ರಸಿದ್ದಿ ಮತ್ತು ದೊಡ್ಡತನದ ಹಸಿವು ಎಷ್ಟೊಂದಿದೆ ಎಂಬುದನ್ನು ಅವರ ಭಕ್ತಗಣ ಒಪ್ಪದಿದ್ದರೂ, ಇದು ಅವರಿಗೆಲ್ಲ ತಿಳಿದಿರುವ ವಿಷಯವೇ ಆಗಿದೆ. ನಿಶ್ಯಸ್ತ್ರ ಪ್ರತೀಕಾರದ ಅಮೂಲ್ಯ ಅಮೃತ ಬಳ್ಳಿಯನ್ನು ತಾನು ಶೋಧಿಸಿದೆನೆಂದು ಅವರಿಗೆ ಅನಿಸುತ್ತಿದೆ. ಇದು ಹಿಂದೂಸ್ಥಾನದ ಅಷ್ಟೇ ಏಕೆ, ಜಗತ್ತಿನ ಉದ್ಧಾರಕ್ಕೂ ಉಪಯುಕ್ತವಾಗುವುದೆಂದು ಅವರ ಮಹತ್ವಾಕಾಂಕ್ಷೆ. ಹಿಂದೂಸ್ಥಾನದ ಮೇಲೆ ಅದನ್ನು ಪ್ರಯೋಗಿಸಿ, ಜಗತ್ತಿಗೇ ಅದರ ಸಿದ್ಧಿಯನ್ನು ತೋರುವ ಇಚ್ಛೆ ಅವರದು. ಹಾಗಾದರೆ, ಜಗತ್ತಿನಲ್ಲೇ ಅದ್ವಿತೀಯ ಪುರುಷರೆಂಬ ಕೀರ್ತಿ ತಮ್ಮದಾಗುವುದು ಎಂಬ ಮನೋಕಾಮನೆ, ಅವರದು. ಜಗದ ಉದ್ಧಾರಕರ್ತನಾಗುವ ಆಸೆಯೇ ಅಹಿಂಸೆಯ ವಿಷಯದಲ್ಲಿ ಅವರ ವಿಚಾರದಲ್ಲಿ ಬದಲಾವಣೆಯಾಗಲು ಕಾರಣ.

೧೯೨೨ರ ಫೆಬ್ರವರಿ ೨೩ರ "ಯಂಗ್ ಇಂಡಿಯಾದ ಅಂಕಣ ಲೇಖನ, "ನನ್ನ ದುಃಖಕ್ಕೆ ಕೊನೆಯಿಲ್ಲ", ಇದುವೇ ಇದಕ್ಕೆ ಸಾಕ್ಷಿ.ಬಾರ್ಡೋಲಿ ಕಾಯ್ದೆ ಭಂಗ ಕಾರ್ಯಕ್ರಮವನ್ನು ಮುಂದೂಡಬೇಕಾಗಿ ಬಂದ ಬಗ್ಗೆ, ಮಿ. ಪೌಲ್ ರಿಚರ್ಡ್ ಅವರೊಡನೆ ನಡೆದ ಚರ್ಚೆಯಲ್ಲಿ

ಗಾಂಧಿ ಅವರು ಹೀಗಂದರು; "ನಾನು ಹಿಂದೂಸ್ಥಾನದ ಸ್ವಾತಂತ್ರ್ಯಕ್ಕಾಗಿ ದುಡಿಯುತ್ತಿಲ್ಲ, ಜಗತ್ತಿನಲ್ಲಿ ಅಹಿಂಸೆ ನೆಲಸಲೆಂದು ದುಡಿಯುತ್ತಿದ್ದೇನೆ. ತಿಲಕರಿಗೂ, ನನಗೂ ಅದೇ ವ್ಯತ್ಯಾಸ. ಮಿ.. ತಿಲಕರು ದೇಶದ ಸ್ವಾತಂತ್ರ್ಯಕ್ಕಾಗಿ ಸತ್ಯವನ್ನೂ ತ್ಯಜಿಸುವುದಾಗಿ ಹೇಳಿದ್ದಾರೆ. ಆದರೆ, ನಾನು ಸತ್ಯಕ್ಕಾಗಿ ದೇಶದ ಸ್ವಾತಂತ್ರ್ಯವನ್ನೂ ತ್ಯಜಿಸಬಲ್ಲೆ".

ಮಿ. ರಿಚರ್ಡ್ ಅವರು ಅಂದಿನ 'ಲೋಕಮಾನ್ಯ' ವೃತ್ತ ಪತ್ರಿಕೆಯ ಪ್ರತಿನಿಧಿಯೊಡನೆ ಈ ಬಗ್ಗೆ ಮಾತನಾಡುತ್ತಾ, ಗಾಂಧಿ ಅವರಿಗೆ ಹಿಂದುಸ್ಥಾನಕ್ಕಿಂತ ಜಗತ್ತಿನ ನಾಯಕನಾಗುವ ಇಚ್ಛೆ ಹೆಚ್ಚು, ಹೌದೇ, ಎಂಬ ಪ್ರಶ್ನೆ ಕೇಳಿದ್ದರು. ಅದಕ್ಕೆ ಉತ್ತರವಾಗಿ ಗಾಂಧಿ ಅವರು ಆ ಲೇಖನ ಬರೆಯತೊಡಗಿದರು. ಮತ್ತು ಕಷ್ಟದಿಂದಲೇ, "ಮಿ. ರಿಚರ್ಡ್ ಅವರು ನನ್ನಿಂದ ಹೊರಡಿಸಿದ ಆ ಶಬ್ದದ ಅಂತರ್ಯದಲ್ಲಿರುವ ಸತ್ಯವನ್ನು ನಾನು ಅಲ್ಲಗಳೆಯಲಾರೆ", ಎಂದರು.

ಗಾಂಧಿ ಅವರು ಈ ದೇಶದ ಬಹಿರಂಗ ಮಾನಹಾನಿಗಾಗಿ ಕೈಗೊಂಡ ಉಪಕ್ರಮಗಳಲ್ಲಿ ಇದೊಂದು. ಮತಾಂಧರಾಗಿ ತಮ್ಮ ಪತ್ನಿಯರ ಬಹಿರಂಗ ಮಾನಹಾನಿ ಮಾಡುವ ಗಂಡಸರು ಎಲ್ಲೆಡೆ ಸಿಗುವರು. ಆದರೆ ದೇಶದ ಮಾನಹಾನಿ ಮಾಡುವವರು, ಹಿಂದೂಸ್ಥಾನದ ಹೊರಗೆ ಎಲ್ಲೂ ಸಿಗಲಾರರು. ಮಹಾತ್ಮನಾಗುವ ಪಿಪಾಸೆ ಮದ್ಯದಷ್ಟೇ ಮದವೇರಿಸುತ್ತದೆ, ಎಂಬುದನ್ನು ಗಾಂಧಿ ಅವರು ಸಿದ್ದ ಮಾಡಿ ತೋರಿದ್ದಾರೆ.

**ಯುದ್ಧದಲ್ಲಿ ಸಹಾಯ ಮಾಡುವವರ ಮೂರು ಪಂಥಗಳು**

ಹಿಂದೂಸ್ಥಾನ ಮತ್ತು ಇಂಗ್ಲಿಷರ ಸಂಬಂಧ ಎಷ್ಟು ಅನ್ಯೋನ್ಯವಾಗಿದೆಯೆಂದರೆ, ಯುದ್ಧ ಆರಂಭವಾದೊಡನೆ, ಯುದ್ದದಲ್ಲಿ ಇಂಗ್ಲಿಷರಿಗೆ ಸಹಾಯ ಮಾಡಬೇಕೇ, ಬೇಡವೇ ಎಂಬ ಪ್ರಶ್ನೆ ಈ ದೇಶದ ಜನರೆದುರು ಎದ್ದು ನಿಲ್ಲುವುದು ಅಪರಿಹಾರ್ಯ. ಆದರೆ, ಈ ಮಹತ್ವದ ವಿಷಯದ ಬಗ್ಗೆ ಈವರೆಗೆ ಈ ಜನರಲ್ಲಿ ಐಕ್ಯಮತ ಉಂಟಾಗಲಿಲ್ಲ ಎಂಬುದು ಎಲ್ಲರಿಗೂ ತಿಳಿದಿದೆ. ಯುದ್ದ ಆರಂಭವಾದಂದಿನಿಂದ ಇದುವರೆಗೆ ಕಳೆದ ಜೂನ್ ತಿಂಗಳ ತನಕ ಯುದ್ದದಲ್ಲಿ ಸಹಾಯ ಮಾಡಬೇಕೇ ಬೇಡವೇ ಎಂಬ ಬಗ್ಗೆ ಎರಡು ಪಂಥಗಳು ಹುಟ್ಟಿಕೊಂಡಿವೆ.

ಯುದ್ಧದಲ್ಲಿ ಬ್ರಿಟಿಷ್‌ರಿಗೆ ಬೇಶರತ್ ಸಹಾಯ ಮಾಡುವ ವಿಚಾರದ ಪಂಥ, ಒಂದು. ಸ್ವತಂತ್ರ ಲೇಬರ್ ಪಕ್ಷ ಮತ್ತು ನೇಮಸ್ತರ ಪಕ್ಷ ಇಂಥವು. ಸ್ವತಂತ್ರ ಲೇಬರ್ ಪಕ್ಷದ ಕಡೆಯಿಂದ ನಾವು ೧೯೩೯ರ ಸೆಪ್ಟೆಂಬರ್ ೧೩ ರಂದು ಒಂದು ಪತ್ರಿಕೆ ಹೊರಡಿಸಿ ಇಂಗ್ಲಿಷ್ ಸರಕಾರದ ಕೈಯಿಂದ ಹಿಂದೂಸ್ಥಾನದ ಹಿತದೃಷ್ಟಿಯಿಂದ ಸಾಕಷ್ಟು ನಿರ್ಲಕ್ಷ್ಯವಾಗಿದೆ, ಮತ್ತು ದೇಶದ ಸಂರಕ್ಷಣೆಯ ದೃಷ್ಟಿಯಿಂದಲೂ ಸಾಕಷ್ಟು ಉಪೇಕ್ಷೆ ಮಾಡಲಾಗಿದೆ ಎಂದು ಸಾರಲಾಯ್ತು. ಬ್ರಿಟಿಶರೊಂದಿಗಿನ ಸಂಘರ್ಷ ಯುದ್ಧಾನಂತರ ಮುಂದುವರಿಸಬಹುದು; ಆದರೆ ಈಗ ಈ ಸಹಾಯದ ಬಗ್ಗೆ ಶರತ್ತುಗಳೇನೂ ಇರಬಾರದು, ಎಂಬಂತಹ ಪತ್ರವನ್ನು ಲಿಬರಲ್ ಪಕ್ಷದ ವತಿಯಿಂದ ಸರ್ ಚಿಮಣಿಲಾಲ್ ಸೆಟ್ ಲ್ ವಾಡ್ ಅವರು ೧೯ರ್೩ರ ಸಪ್ಟೆಂಬರ್ ೧೧ರಂದು ಪ್ರಕಟಿಸಿದರು. ಬ್ರಿಟಿಶರ ವಿರುದ್ಧ ಈ ದೇಶದಲ್ಲಿ ಅನೇಕ ತಕರಾರುಗಳಿದ್ದರೂ ತೆರೆದ ಹೃದಯದಿಂದ ಯುದ್ದದಲ್ಲಿ ಸಹಾಯ ಮಾಡಬೇಕು, ಎಂಬ ಆಶಯದ ಪತ್ರವದು.

ಷರತ್ತುಗಳೊಂದಿಗೆ ಸಹಾಯ ಮಾಡಬೇಕೆನ್ನುವವರದು ಇನ್ನೊಂದು ಪಂಥ. ಮುಸ್ಲಿಮ್ ಲೀಗ್ ಮತ್ತು ಕಾಂಗ್ರೆಸ್, ಇವೆರಡೂ ಇದರಲ್ಲಿ ಸೇರುತ್ತವೆ. ಮುಸ್ಲಿಮ್ ಲೀಗ್, ತನ್ನ ಕಾರ್ಯಕಾರಿ



ಮಂಡಳಿಯ ಸಭೆ ಕರೆದು, ೧೯೩೯ ಸಪ್ಟೆಂಬರ್ ೧೯ ರಂದು ತನ್ನ ಭೂಮಿಕೆಯನ್ನು ಸ್ಪಷ್ಟ ಪಡಿಸಿತ್ತು. ಸದ್ಯ ಯೋಜಿತವಾದ ಆದರೆ ಇನ್ನೂ ಜಾರಿಗೆ ಬಂದಿರದಿದ್ದ ಫೆಡರೇಶನ್ ಅಳಿಸಿ ಹಾಕಿ, ರಾಜ್ಯ ಸಂವಿಧಾನ ಯಾವ ರೀತಿಯದ್ದಾಗಿರಬೇಕೆಂದು ವಿಚಾರ ನಡೆಸಿ, ಇನ್ನು ರೂಪುಗೊಳ್ಳಲಿರುವ ಸಂವಿಧಾನವು ಮುಸಲ್ಮಾನರ ಸಮ್ಮತಿ ವಿರುದ್ಧ ಆಗಬಾರದೆಂದೂ, ಬ್ರಿಟಿಷ್‌ರು ಈ ಷರತ್ತನ್ನು ಒಪ್ಪಿಕೊಂಡರೆ ಮಾತ್ರ ಯುದ್ಧದಲ್ಲಿ ಸಹಾಯ ನೀಡುವುದೆಂದೂ ನಿರ್ಧಾರಕ್ಕೆ ಬರಲಾಯ್ತು. ಮುಸ್ಲಿಮ್ ಲೀಗ್‌ನಂತೆಯೇ ಕಾಂಗ್ರೆಸ್ ಕೂಡ ತನ್ನ ಷರತ್ತನ್ನು ೧೯೩೯ ಸೆಪ್ಟೆಂಬರ್ ೧೫ ರಂದು ಹೊರಡಿಸಿದ ಠರಾವಿನಲ್ಲಿ ಪ್ರಕಟಿಸಿತು. ಅದರಲ್ಲಿ ಬ್ರಿಟಿಷ್‌ರು ಯುದ್ಧದಲ್ಲಿ ತಮ್ಮ ಧ್ಯೆಯ ಏನೆಂದು ಸ್ಪಷ್ಟಪಡಿಸ ಬೇಕೆಂದೂ, ಮತ್ತು ಆ ಧ್ಯೇಯ ಹಿಂದೂಸ್ಥಾನಕ್ಕೆ ಹೇಗೆ ಅನ್ವಯಿಸುತ್ತದೆಂದು ತಿಳಿಸುವಂತೆಯೂ ಹೇಳಲಾಯ್ತು.

ಹಾಗೆಯೇ, ಹಿಂದೂಸ್ಥಾನವು ಸ್ವತಂತ್ರ ದೇಶವಾಗಿದ್ದು, ಇಲ್ಲಿನ ರಾಜ್ಯ ಸಂವಿಧಾನ ರೂಪಿಸುವ ಹಕ್ಕು, ಇಲ್ಲಿನ ಜನರಿಗೇ ಸೇರಿದ್ದು, ಈ ದೇಶವು ಆರಿಸಿ ತಂದ ನಿರ್ಣಾಯಕ ಮಂಡಳಿಯಿಂದ ರೂಪುಗೊಳ್ಳುವುದೆಂದೂ ಮತ್ತು ಪಾರ್ಲಿಮೆಂಟ್ ಅದನ್ನು ಮಾನ್ಯ ಮಾಡುವುದೆಂದೂ ಇಂಗ್ಲಿಷರು ಒಪ್ಪಿ ಪ್ರಕಟಪಡಿಸಿದರೆ ಮಾತ್ರ ಕಾಂಗ್ರೆಸ್ ಯುದ್ಧದಲ್ಲಿ ಬ್ರಿಟಿಶರಿಗೆ ಸಹಾಯ ಮಾಡಲು ಸಿದ್ಧವಾಗುವುದು, ಎಂದು ಸಾರಿತು.

ಬಹುಜನ ಸಮಾಜದ ಮನವೂ ನಿಶ್ಚರ್ತ ಸಹಾಯ ಮಾಡುವುದು ಬೇಡ, ಅನ್ನುವವರ ಕಡೆಗಿದೆ. ಇದನ್ನು ಅಲ್ಲಗಳೆಯುವಂತಿಲ್ಲ.

ಆದ್ದರಿಂದಲೇ ಈ ಭೂಮಿಕೆಯನ್ನು ಪರಿಶೀಲಿಸಬೇಕು. ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್, ಇವೆರಡರ ಭೂಮಿಕೆಯೂ ಒಂದೇ ಉದ್ದೇಶದ್ದಾಗಿದ್ದರೂ, ಮುಸ್ಲಿಮ್ ಲೀಗ್‌ನ ಭೂಮಿಕೆಯ ವಿಚಾರ ಮಾಡಬೇಕಾದ ಕಾರಣವಿಲ್ಲ. ಫೆಡರೇಶನ್, ಯಾರಿಗೂ ಬೇಡ. ಮುಸ್ಲಿಮ್ ಲೀಗ್‌ಗೆ ಬೇಡದಂತೆ ಕಾಂಗ್ರೆಸ್‌ಗೂ ಬೇಡ. ಮುಸ್ಲಿಮ್ ಲೀಗ್‌ನ ಸಮ್ಮತಿಯಿಲ್ಲದೆ ಹೊಸ ರಾಜ್ಯ ಸಂವಿಧಾನ ಜಾರಿಗೆ ಬರಬಾರದೆಂಬ ಷರತ್ತಿನಲ್ಲೂ ಅಂತಹ ಸಮಸ್ಯೆಯೇನೂ ಇದೆಯೆಂದು ನಮಗನಿಸುವುದಿಲ್ಲ. ಇಂಗ್ಲಿಷ್ ಸರಕಾರದಿಂದ ಇಂತಹ ಆಶ್ವಾಸನೆ ಬೇಡುವ ಮುನ್ನ, ಕಾಂಗ್ರೆಸ್, ಅಲ್ಪಸಂಖ್ಯಾತರ ಸಂರಕ್ಷಣೆಯ ಷರತ್ತು ಇಲ್ಲದ ರಾಜ್ಯ ಸಂವಿಧಾನವನ್ನು ಕಾಂಗ್ರೆಸ್ ಮಾನ್ಯ ಮಾಡದೆಂದು ಎಲ್ಲ ಅಲ್ಪ ಸಂಖ್ಯಾತರಿಗೂ ಆಶ್ವಾಸನೆಯಿತ್ತಿತು. ಹಿಂದೂ ಬಹುಜನ ಸಮಾಜದ ಹೊರತು, ಮತ್ತೆಲ್ಲ ಮನೋವೃತ್ತಿ, ಕಾಂಗ್ರೆಸ್‌ನ ಭೂಮಿಕೆಯತ್ತ ಇದೆ. ಮುಸ್ಲಿಮ್ ಲೀಗ್‌ನ ಷರತ್ತಿಗೆ ಹಿಂದೂಗಳ ವಿರೋಧವಿದೆ. ಕಾರಣ, ಈ ಷರತ್ತು ಬ್ರಿಟಿಷ್ ಸರಕಾರದ ವಿರುದ್ಧವಿರದೆ, ಹಿಂದೂಗಳ ವಿರುದ್ಧವಿದೆಯೆಂಬುದು ಕಾಂಗ್ರೆಸ್‌ನ ಭೂಮಿಕೆಯಿಂದ ತಿಳಿಯುತ್ತದೆ. ದೇಶದ ಜನರು ಆರಿಸಿ ತಂದ ನಿರ್ಣಾಯಕ ಮಂಡಳಿ, ರಾಜ್ಯ ಸಂವಿಧಾನ ಸಿದ್ಧಗೊಳಿಸಲೆಂಬ ಷರತ್ತು, ಹಿಂದೂಸ್ಥಾನದಲ್ಲಿ ಕಾಂಗ್ರೆಸ್‌ನವರನ್ನು ಬಿಟ್ಟರೆ ಬೇರಾರಿಗೂ ಮಾನ್ಯವಾಗಿಲ್ಲ. ಎಲ್ಲೆಡೆಯಿಂದ ಇದಕ್ಕೆ ವಿರೋಧ ಬಂದುದರಿಂದ ಗಾಬರಿಯಾಗಿ ಕಾಂಗ್ರೆಸ್, ಪುನಃ ಈ ಷರತ್ತನ್ನು ಮುಂದು ಮಾಡದೆ ಸುಮ್ಮನಾಯ್ಕೆಂದು ಕಾಣುತ್ತದೆ. ಸ್ವಾತಂತ್ರ್ಯದ ವಿಷಯದಲ್ಲೂ ಹೆಚ್ಚು ಕಡಿಮೆ ಹೀಗೇ ಆಗಿದೆಯೆನ್ನಲು ಯಾವ ಅಡ್ಡಿಯೂ ಇಲ್ಲ.

ಇತ್ತೀಚೆಗೆ ಕಾಂಗ್ರೆಸ್‌ನ ಡೆಪ್ಯುಟಿ ಮಹಾತ್ಮಾ ಶ್ರೀ ರಾಜಗೋಪಾಲಾಚಾರಿ ಅವರು ಮಾಡಿದ ಭಾಷಣದಲ್ಲಿ, "ಹಿಂದೂಸ್ಥಾನವು ಇಂದಿನಿಂದ ಸ್ವತಂತ್ರವಾಗಿದೆ ಎಂಬ ಬೇಡಿಕೆಯನ್ನು ನಾವೆಂದೂ

ಬ್ರಿಟಿಶರೆದುರು ಇಟ್ಟಿಲ್ಲ. ನಾವು ಬೇಡುತ್ತಿರುವುದು ಇಷ್ಟೇ; ಹಿಂದೂಸ್ಥಾನಕ್ಕೆ ಹಿಂದೆ ಮುಂದೆ ಎಂದಾದರೂ ಸ್ವತಂತ್ರರಾಗಬೇಕೆಂದು ಅನಿಸಿದರೆ, ಹಾಗೆ ಸ್ವತಂತ್ರರಾಗುವ ಹಕ್ಕು ಇದೆ, ಎಂದಷ್ಟೇ ಇಂಗ್ಲಿಷರು ಒಪ್ಪಿಕೊಳ್ಳಬೇಕು. ಇದಕ್ಕಿಂತ ಹೆಚ್ಚಿನದೇನನ್ನೂ ಕಾಂಗ್ರೆಸ್ ಇಂದು ಬೇಡಿಕೊಳ್ಳುತ್ತಿಲ್ಲ". ಎಂದು ಸ್ಪಷ್ಟ ಪಡಿಸಿದ್ದಾರೆ.

ಹುಲಿಯು ತನ್ನ ಮರಿಯನ್ನು ತಾನೇ ತಿನ್ನುವಂತೆ, ಕಾಂಗ್ರೆಸ್ ತನ್ನ ಶರತ್ತನ್ನು ತಾನೇ ನುಂಗಿತು. ಹಾಗಿದ್ದೂ, ಹಿಂದೂ ಬಹುಜನ ಸಮಾಜವು ನಿರ್ತವಾಗಿ ಸಹಾಯ ಮಾಡಲು ಸಿದ್ಧವಿಲ್ಲವೆಂಬುದು ಸ್ಪಷ್ಟವಿದೆ. ಹಿಂದೂ ಸಮಾಜದ ಈ ಭಾವನೆಗೆ ಯಾರಿಗೂ ಆಶ್ಚರ್ಯವಾಗಬೇಕಿಲ್ಲ. ಬ್ರಿಟಿಶ್ ಸಾಮ್ರಾಜ್ಯದ ಬಹುಭಾಗ, ಇಂದು ಇಂಗ್ಲಿಷರ ಸಹಾಯಕ್ಕೆ ಧಾವಿಸುತ್ತಿರುವಂತೆ, ಈ ದೇಶದ ಜನರೂ ಧಾವಿಸುವರೆಂದುಕೊಳ್ಳುವದು ವ್ಯರ್ಥವಷ್ಟೇ,

ಹಿಂದೂಸ್ಥಾನೀಯರಿಗೂ, ಬ್ರಿಟಿಶರಿಗೂ ಪರಸ್ಪರ ಕಾಳಜಿಯಿರಬೇಕಾದ ಕಾರಣವಿಲ್ಲ. ಅವರೊಳಗೆ ರಕ್ತಮಾಂಸದ ಸಂಬಂಧವಿಲ್ಲ. ಇದಕ್ಕೊಂದು ಕಾರಣವಿದೆಯೆಂದು ನಮಗನಿಸುತ್ತದೆ. ಇಂಗ್ಲಿಷ್ ರಾಜ್ಯವೊಂದು ಸಾಮ್ರಾಜ್ಯವಾಗಿದ್ದು, ಅದರ ವಿಸ್ತಾರದ ಮೇಲೆ ಅನೇಕರ ಕಣ್ಣಿದೆ. ಪೃಥ್ವಿಯ ಪೃಷ್ಠಭಾಗದ ವಿಸ್ತೀರ್ಣ ೫ ಕೋಟಿ, ೫೫ ಲಕ್ಷ ಚದರ ಮೈಲು. ಇದರ ಪೈಕಿ ೧ ಕೋಟಿ ४೦ ಲಕ್ಷ ಚದರ ಮೈಲು ಪ್ರದೇಶ ಇಂಗ್ಲಿಷರ ಅಧೀನದಲ್ಲಿದೆ. ೮೨ ಲಕ್ಷ, ೫೦ ಸಾವಿರ ಚದರ ಮೈಲು ಸೋವಿಯೆಟ್ ರಷ್ಯಾದ ಕೈಯಲ್ಲಿದೆ. ४೩ ಲಕ್ಷ ೩೦ ಸಾವಿರ ಚದರ ಮೈಲು ಪ್ರದೇಶ ಫ್ರೆಂಚರ ಕೈಯಲ್ಲಿದೆ. ४೩ ಲಕ್ಷ, ೫೦ ಸಾವಿರ ಪ್ರದೇಶ ಚೀನೀಯರ ವಶದಲ್ಲಿದೆ ಮತ್ತು ೩೮ ಲಕ್ಷ, ೫೦ ಸಾವಿರ ಅಮೆರಿಕಾದ ವಶದಲ್ಲಿದೆ. ಉಳಿದ ದೇಶಗಳ ವಿಸ್ತೀರ್ಣ ತುಂಬ ಸಣ್ಣದಿದೆ. ೫ ಕೋಟಿ ವಿಸ್ತೀರ್ಣದಲ್ಲಿ ಇಂಗ್ಲಿಷರಿಗೇ ೧ ಕೋಟಿ ವಿಸ್ತೀರ್ಣ ಇರುವುದು ಯಾರಿಗೇ ಆದರೂ, ಆಶ್ಚರ್ಯ ಮತ್ತು ಜಿಗುಪ್ಸೆ ಹುಟ್ಟಿಸದಿರದು. ಇಂತಹ ಇಂಗ್ಲಿಷರ ಸಾಮ್ರಾಜ್ಯಕ್ಕಾಗಿ ನಾವು ಹೋರಾಡುವುದೆಂದರೆ, ಆ ಸಾಮ್ರಾಜ್ಯವನ್ನು ಶಾಶ್ವತವಾಗಿರಿಸಲು ಯತ್ನಿಸಿದಂತೆ ಎಂದು ಹಿಂದೂಗಳಿಗೆ ಅನಿಸಿದರೆ ಅದರಲ್ಲಿ ಆಶ್ಚರ್ಯವಿಲ್ಲ.

ಹಿಂದೀಯರ ಈ ಯೋಚನೆ ತಪ್ಪು, ಮತ್ತು ಅದರಿಂದಾಗಿ ಅವರ ಕೈಯಿಂದಾಗುವ ಕೆಲಸ, ಅವರಿಗೇ ಘಾತುಕವಾಗುವಂತಿದೆ, ಎಂದು ನಮಗನಿಸುತ್ತದೆ. ಹಾಗೆಂದೇ ಈ ಕೆಳಗಿನ ಪ್ರಶ್ನೆಗಳ ಬಗ್ಗೆ ಯೋಚಿಸಿ, ನಿರ್ಧಾರಕ್ಕೆ ಬನ್ನಿ, ಎಂದು ನಮ್ಮ ಸೂಚನೆ. ಕೆನಡಾ ದೇಶವು ಬ್ರಿಟಿಶ್ ಸಾಮ್ರಾಜ್ಯದ ಭಾಗವಾಗಿದೆ, ಆದರೆ ಇಂದು ಕೆನಡಾ ಬ್ರಿಟಿಶರ

ಆಳ್ವಿಕೆಯಲ್ಲಿದೆ, ಎನ್ನಬಹುದೇ? ಸೌತ್ ಆಫ್ರಿಕಾ, ಬ್ರಿಟಿಷ್ ಸಾಮ್ರಾಜ್ಯದ ಒಂದು ಭಾಗ ನಿಜ, ಆದರೆ ಅದು ಬ್ರಿಟಿಷರ ಆಳ್ವಿಕೆಯಲ್ಲಿದೆ, ಎನ್ನಬಹುದೇ? ಹಾಗೆಯೇ ಆಸ್ಟ್ರೇಲಿಯಾ, ಐಯರ್ಲ್ಯಾಂಡ್ ದೇಶಗಳೂ ಸಹ? ಇದೇ ಪ್ರಶ್ನೆಯನ್ನು ವಿಭಿನ್ನ ರೀತಿಯಲ್ಲಿ ಕೇಳುವುದಾದರೆ, ಕೆನಡಾ ಬ್ರಿಟಿಷ್ ಸಾಮ್ರಾಜ್ಯದ ಭಾಗವಾಗಿದ್ದರೂ ಇಂಗ್ಲಿಷರಿಗೆ ಕೆನಡಾ ಕೊಡುವ ಸೌಲಭ್ಯವನ್ನು ಜರ್ಮನರಿಗೆ ಕೊಡಲಾಗದೇ? ಆಸ್ಟ್ರೇಲಿಯಾ ಬ್ರಿಟಿಶರಿಗೆ ಕೊಡುವ ಸೌಲಭ್ಯವನ್ನು ಜರ್ಮನರಿಗೆ ಕೊಡಲಾಗದೇ? ಹಾಗೆಯೇ ಸೌತ್ ಆಫ್ರಿಕಾ, ಐಯರ್ಲ್ಯಾಂಡ್ ಸಹ? ಹಾಗೆಯೇ ಈ ಎಲ್ಲ ದೇಶಗಳು ಮಾಡಲು ಬಯಸಿಯೂ, ಇಂಗ್ಲೆಂಡ್, ಮಾಡಲು ಬಿಡದಂತಹುದು ಏನಿರಬಹುದು? ಈ ಎಲ್ಲ ದೃಷ್ಟಿಯಿಂದ ನೋಡಿದರೆ, ಇಂಗ್ಲಿಷರ ರಾಜ್ಯ ಪದ್ಧತಿಯನ್ನು ಸಾಮ್ರಾಜ್ಯಶಾಹಿ ಎನ್ನುವುದು ತಪ್ಪು ತಿಳುವಳಿಕೆ ಎಂದು ನಮಗನಿಸುತ್ತದೆ. ಸಾಮ್ರಾಜ್ಯಶಾಹಿ ಎನ್ನುವುದು ಒಂದು ರೀತಿಯ ಸಾರ್ವಭೌಮ ಪದ್ಧತಿ ಎಂದು ನಮಗನಿಸುತ್ತದೆ. ಇಂಗ್ಲಿಷರ ಸಾಮ್ರಾಜ್ಯಶಾಹಿಯಲ್ಲಿ



ಇದಕ್ಕೆ ಶಾಶ್ವತ ಸ್ಥಾನವಿಲ್ಲ. ಅವರ ಆಳ್ವಿಕೆಯಲ್ಲಿರುವ ದೇಶವು ಸ್ವತಂತ್ರವಾಗಬಲ್ಲುದು, ಎಂಬುದೇ ಅವರ ಇತಿಹಾಸವನ್ನು ಸಿದ್ಧಗೊಳಿಸುತ್ತದೆ.

ಕೆನಡಾ, ಆಸ್ಟ್ರೇಲಿಯಾ, ನ್ಯೂಝಿಲ್ಯಾಂಡ್, ಸೌತ್ ಆಫ್ರಿಕಾ, ಐಯರ್ಲ್ಯಾಂಡ್ ಮುಂತಾದ ದೇಶಗಳು ಇಂಗ್ಲೆಂಡ್‌ನ ಸಾರ್ವಭೌಮತ್ವದ ಅಡಿಯಲ್ಲಿ ನಡೆಸಲ್ಪಡುತ್ತವೆ. ಇಂದು ಅವೇ ದೇಶಗಳು ಯಾವುದೇ ಪ್ರಕಾರದ ರಕ್ತಪಾತ ಇಲ್ಲವೇ ಯಾದವೀ ಕಲಹಕ್ಕಿಳಿಯದೆ ಈ ಇಂಗ್ಲಿಷ್ ಸಾರ್ವಭೌಮತ್ವದಿಂದ ಸ್ವತಂತ್ರವಾಗಿವೆ ಮತ್ತು ಅವರ ಮೇಲೆ ಯಾವುದೇ ರೀತಿಯ ಅಂಕೆ ಉಳಿದಿಲ್ಲ. ಆ ದೃಷ್ಟಿಯಿಂದ ನೋಡಿದರೆ ಬ್ರಿಟಿಷ್ ಸಾಮ್ರಾಜ್ಯವನ್ನು ಇಷ್ಟೊಂದು ವಿಸ್ತಾರವೆನ್ನುವುದರಲ್ಲಿ ಅರ್ಥವೇ ಇಲ್ಲ. ಈಗದು ಸಾಕಷ್ಟು ಕಿರಿದಾಗಿದೆ.

ಉಳಿದ ದೇಶಗಳು ಬ್ರಿಟಿಷ್‌ರ ಸಾರ್ವಭೌಮತ್ವದಿಂದ ಮುಕ್ತವಾಗಿದ್ದರೂ, ಹಿಂದೂಸ್ಥಾನವು ಈಗಲೂ ಅದರಡಿಯಲ್ಲಿ ದಮನಿಸಲ್ಪಟ್ಟಿಲ್ಲವೇ? ಮತ್ತೇಕೆ ಯುದ್ಧದಲ್ಲಿ ಬ್ರಿಟಿಶರ ಸಹಾಯಕ್ಕೆ ಹೋಗಬೇಕು? ಇದಕ್ಕೆ ಎರಡು ಉತ್ತರಗಳಿವೆ.

ಮೊದಲ ಉತ್ತರ, ಹಿಂದೂಸ್ಥಾನವು ಬ್ರಿಟಿಷರ ಸಾರ್ವಭೌಮತ್ವದಿಂದ ಮುಕ್ತವಾಗುವ ದಾರಿಯಲ್ಲಿದೆ. ಇಂದಲ್ಲ ನಾಳೆ, ಕೆನಡಾ, ಆಸ್ಟ್ರೇಲಿಯಾದ ದರ್ಜೆ ಈ ದೇಶಕ್ಕೆ ಪ್ರಾಪ್ತವಾಗದೆ ಇರುವುದಿಲ್ಲ. ಇದು ಕತ್ತಲಲ್ಲೂ ಕಾಣುವಷ್ಟು ಸ್ಪಷ್ಟವಿದೆ. ಹೀಗಿರುವಾಗ, ಹಿಂದೀಯರು ಯುದ್ಧದಲ್ಲಿ ಸಹಾಯ ಮಾಡದೆ ಇರುವುದು ಅನುಚಿತವಾಗುವುದು. ಇಂದಿಗೆ ಇಂದೇ ಈ ಸ್ವಾತಂತ್ರ್ಯ ಸಿಗಬೇಕೆಂದು ಕಿಡಿ ಕಾರುವುದರಲ್ಲಿ ಯಾವ ಅರ್ಥವೂ ಇಲ್ಲ. ಈ ವಿಳಂಬದ ಎಲ್ಲ ಹೊಣೆಯನ್ನೂ ಬ್ರಿಟಿಶರ ಮೇಲೆ ಹೊರಿಸುವುದರಲ್ಲಿ ಅರ್ಥವಿಲ್ಲ. ಹಿಂದೀಯರ ಒಳಗಿನ ಕಲಹವೇ ಈ ವಿಳಂಬಕ್ಕೆ ಕಾರಣ, ಎಲ್ಲರ ಐಕಮತ್ಯವಿದ್ದರೆ ಆ ದರ್ಜೆ ಪ್ರಾಪ್ತವಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಎರಡನೆಯ ಉತ್ತರ, ಯುದ್ದದಲ್ಲಿ ಇಂಗ್ಲಿಷರ ಪರಾಭವವಾಗಿ, ಹಿಂದೂಸ್ಥಾನದಲ್ಲಿ ಹಿಟ್ಲರನ ರಾಜ್ಯವಾದರೆ, ಹಿಂದೀಯರು ರಾಜಕಾರಣದಲ್ಲಿ ಪುನಃ ಶ್ರೀ ಗಣೇಶದಿಂದಾರಂಭಿಸಬೇಕಾಗುವುದು, ಹಾಗಾದರೆ, ಹಿಂದೀಯರ ಗತಿ ಏನಾಗುವುದೋ, ಹೇಳಲಾಗದು. ಕರಿವರ್ಣದವರ ವಿಷಯದಲ್ಲಿ ಹಿಟ್ಲರನ ಮನ ಹೇಗಿರುವುದೋ ಅರಿಯುವುದು ಅವಶ್ಯ. ಅದರ ಪೂರ್ಣ ಕಲ್ಪನೆ ಸಿಗಲು, ಅವನ "ಮೈನ್ ಕಾಫ್" ಪುಸ್ತಕದ ವಾಕ್ಯಗಳನ್ನು ನೋಡಬಹುದು. -

"ಕಪ್ಪು ಜನಾಂಗವನ್ನು ವಿದ್ಯೆಯಿತ್ತು ಉದ್ಧರಿಸುವುದು ಜಗದಾದಿ ಪರಮೇಶ್ವರನ ವಿರುದ್ಧ ಮಾಡುವ ಪಾತಕ. ಅವರನ್ನು ನಾಯಿಗಳಂತೆ ತರಬೇತಿಗೊಳಿಸಬೇಕು. ಪುರಾತನ ಮಾನವ ಜನಾಂಗದ ನಾಗರಿಕತೆ, ಪ್ರಾಣಿಗಳಿಗಿಂತಲೂ ಹೆಚ್ಚಾಗಿ ಕೀಳು ಜನಾಂಗದವರನ್ನು ಮಣಿಸುವುದರಿಂದ ಸಾಧ್ಯ ಆಗಿದೆ. ವಿಶ್ವವನ್ನಾಳುವ ಆ ಅನಂತ ಶಕ್ತಿಯ ಇಚ್ಛೆಯಂತೆ ಉತ್ತಮವೂ, ಬಲಾಢ್ಯವೂ ಆದುದು, ಅಧಮ, ದುರ್ಬಲರನ್ನಾಳುವುದು ಪ್ರಕೃತಿ ನಿಯಮ",

ಹಾಗೆಯೇ ಹಿಟ್ಲರ್‌ನ ಆಳ್ವಿಕೆಯಲ್ಲಿ ರಾಜಕೀಯ ಚಳವಳಿಗೆ ಎಷ್ಟು ಅವಕಾಶ ಸಿಗುವುದು ಮತ್ತು ಯುದ್ದ ರಾಜಕಾರಣ ಎಷ್ಟರ ಮಟ್ಟಿಗೆ ನಡೆಯುವುದು ಎಂಬುದರ ಕಲ್ಪನೆಗಾಗಿ ಇ.ಟಿ. ರೊಬ್ಯಾಶ್ ಬರೆದ, 'ಜರ್ಮನಿ ಇನ್ ದ ಕ್ಯಾಮರೂನ್ಸ್' ಕೃತಿಯ ಆಯ್ದ ಭಾಗವನ್ನು ಕೊಡುತ್ತಿದ್ದೇವೆ.

"ಜರ್ಮನರು ಶ್ರೇಷ್ಠರಾದುದರಿಂದ ನಾಡವರು ಹೇಗೆ ಬದುಕಬೇಕೆಂದು ನಿರ್ಧರಿಸುವ ಹಕ್ಕು ಅವರಿಗಿದೆ. ಮತ್ತು ಆ ನಾಡವರ ಬದುಕು, ಕೆಲಸ ಮತ್ತು ಚಟುವಟಿಕೆ ಜರ್ಮನರ ಇಚ್ಛಾನುಸಾರ

ಅವರ ಅಂಕೆಯಲ್ಲಿರಬೇಕು. ಬ್ರಿಟಿಷರು ಈ ನಾಡವರನ್ನು ವಿದ್ಯಾವಂತರಾಗುವಂತೆ ಪ್ರೋತ್ಸಾಹಿಸುವುದನ್ನು, ಕಾಲೇಜ್ ವಿಶ್ವವಿದ್ಯಾಲಯಗಳಲ್ಲಿ ಅವರಿಗೆ ಪ್ರವೇಶವೀಯುವುದನ್ನು ನಮ್ಮಿಂದ ಸಹಿಸಲಾಗುವುದಿಲ್ಲ. ತಮ್ಮ ಕಾಲೊನಿಗಳಲ್ಲೇ ಅವರು ಸರಕಾರೀ ಸೇವೆಗೆ ಸೇರುವುದಂತೂ ವಿಪರ್ಯಾಸವೇ ಸರಿ. ಈಗಲೇ ತಡೆಯದಿದ್ದರೆ ಅವರು ಕಾರ್ಯಕಾರಿ ಸ್ಥಾನಗಳನ್ನೂ ಆಕ್ರಮಿಸುವರು. ಮುಂದೆ ಉಚ್ಚ ನ್ಯಾಯಾಲಯಗಳನ್ನೂ ಪ್ರವೇಶಿಸಿ ನ್ಯಾಯಾಧೀಶರಾದರೆ, ಬಿಳಿಯರು ಅವರ ಮುಂದೆ ತಲೆಬಾಗ ಬೇಕಾಗುವುದು ನಂಬಲಾಗದ ವಿಷಯ.

ದೇವರ ದಯೆ; ಜರ್ಮನರು ಹೃದಯದಿಂದಲ್ಲ, ತಲೆಯಿಂದಲೇ ಆಳುತ್ತಾರೆ. ತಮ್ಮ ನಾಡವರನ್ನು, ಆಳಾಗಿ ಅವರು ಎಲ್ಲಿರಬೇಕೆಂಬುದನ್ನು ಚೆನ್ನಾಗಿಯೂ ಅರಿತಿದ್ದಾರೆ. ನಮ್ಮ ಪ್ರತಿಷ್ಠೆ, ಸ್ಥಾನವನ್ನು ಕಾಯಲು, ಜರ್ಮನರು ತಪ್ಪಿತಸ್ಥರಿದ್ದರೂ ಅವರನ್ನು ಶಿಕ್ಷಿಸಲಾಗಲಿಲ್ಲ. ಒಂದೋ ಸ್ಥಳಾಂತರಿಸ ಬೇಕಾಯ್ತು; ಇಲ್ಲವೇ ಮನೆಗೆ ಕಳುಹಬೇಕಾಯ್ತು.

ಚಾಟಿಯೇಟಿನ ಭಾಷೆಯೊಂದನ್ನೇ ಈ ನಾಡವರು ಅರಿಯುತ್ತಾರೆ. ಚೆನ್ನಾಗಿ ಹೊಡೆದು ಬಡಿದು ಮಾಡಿದರೆ ನೇರ ದಾರಿಯೇ 'ಉತ್ತಮ,ಎಂದು ಅವರು ತಿಳಿಯುತ್ತಾರೆ."

ಇಂಗ್ಲಿಷರಿಗೆ ಸೋಲಾಗಲಿ, ಹಿಟ್ಲರನಿಗೆ ಜಯವಾಗಲಿ, ಹಿಟ್ಲರ್ ಬಂದರೆ ನಮಗೆ ಸ್ವರಾಜ್ಯ ನೀಡುವನು, ಕಾಯ್ದೆಭಂಗ ಚಳವಳಿ ಮಾಡಗೊಡುವನು, ಜೈಲಿಗೆ ಹೋದರೆ 'ಎ' ದರ್ಜೆಯಲ್ಲಿರಿಸುವನು, ಎಂದು ಆಶಿಸುವ ಹಿಂದೂಗಳಿಗೆ, ಹಿಟ್ಲರ್ ಮತ್ತು ಅವನ ಜೊತೆಗಾರರ ಮನೋರಚನೆಯ ಬಗ್ಗೆ ಮೊದಲು ತಿಳಿದುಕೊಂಡು, ಮತ್ತೆ ಇಂಗ್ಲಿಷರಿಗೆ, ಸಹಾಯ ಮಾಡುವುದೋ ಬೇಡವೋ ಎಂದು ನಿರ್ಧರಿಸಿ, ಎಂದು ನಾವು ಸೂಚಿಸುತ್ತೇವೆ.

ಕಳೆದ ಜೂನ್ ತಿಂಗಳಿಂದ ಹಿಂದುಸ್ಥಾನದಲ್ಲಿ ಎರಡು ಪಂಥಗಳಿವೆ. ಷರತ್ತಿಲ್ಲದೆ ಸಹಾಯ ಮಾಡುವವರದು ಒಂದು, ಮತ್ತು ಷರತ್ತಿನಂತೆ ಸಹಾಯ ಮಾಡುವವರದು ಇನ್ನೊಂದು. ಆದರೆ ಕಳೆದ ಜೂನ್ ತಿಂಗಳಿಂದ ಮೂರನೆಯ ಪಂಥವೊಂದು ಹುಟ್ಟಿ ಕೊಂಡಿದೆ. ಅದು ಗಾಂಧಿ ಅವರ ಮೂರನೆಯ ಪಂಥ.

ಇದು ಮೇಲಣ ಎರಡು ಪಂಥಗಳಿಗಿಂತ ತುಂಬ ಭಿನ್ನವಾಗಿದೆ. ಕಳೆದ ಜೂನ್ ತಿಂಗಳಲ್ಲಿ ದಿಲ್ಲಿಯಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಜಾರಿಗೆ ತಂದ ಯುದ್ದ ವಿಷಯದ ಒಪ್ಪಂದ ಮತ್ತು ಅದರಲ್ಲಿ ಇಂಗ್ಲಿಷರು ಕೆಲವು ವಿಷಯಗಳನ್ನು ಮಾನ್ಯ ಮಾಡಿದರೆ ನಾವು ಅಧಿಕಾರ ಗ್ರಹಣ ಮಾಡುವ ಮತ್ತು ಯುದ್ಧದಲ್ಲಿ ಸಹಾಯ ಮಾಡುವ" ಎಂದುದನ್ನು ಗಾಂಧೀ ಅವರು ವಿರೋಧಿಸಿದ್ದು ಎಲ್ಲರಿಗೂ ತಿಳಿದಿದೆ.

ತಾವು ಇದನ್ನು ವಿರೋಧಿಸಿದ್ದು ಏಕೆಂದು ಗಾಂಧೀ ಸ್ಪಷ್ಟಪಡಿಸಿದ್ದು, ಅದರಿಂದ ಗಾಂಧೀ ಪಂಥದ ಭೂಮಿಕೆ ಏನೆಂದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಸ್ವಲ್ಪದರಲ್ಲಿ ಹೇಳಬೇಕೆಂದರೆ, "ನಾವು ಅಹಿಂಸಾವಾದಿಗಳು, ಇಂಗ್ಲಿಷರು ಅಹಿಂಸೆಯ ಮಾರ್ಗದಲ್ಲಿ ಹಿಟ್ಲರ್‌ಗೆ ಪ್ರತೀಕಾರ ಮಾಡಬೇಕು". ಎಂಬುದು ಗಾಂಧೀ ಅವರ ಭೂಮಿಕೆಯಾಗಿದ್ದು, ಅದರಂತೆ, ಕಾಂಗ್ರೆಸ್ ಈ ವೇಳೆ ಅಧಿಕಾರ ಗ್ರಹಣ ಮಾಡಿ, ಮಂತ್ರಿಮಂಡಳ ರೂಪಿಸುವ ಯೋಜನೆ ಮಾಡಬಾರದು. ಹಾಗೆ ಮಾಡಿದರೆ, ಈ ಮಂತ್ರಿ ಮಂಡಳವು ಯುದ್ಧದಲ್ಲಿ ಇಂಗ್ಲಿಷರಿಗೆ ಸಹಾಯ ಮಾಡಲು ಅವಶ್ಯವಿರುವುದನ್ನೆಲ್ಲ ಮಾಡುವುದು, ಮತ್ತು ಹಾಗೆ ಮಾಡಿದಲ್ಲಿ ಕಾಂಗ್ರೆಸ್ ಮಂತ್ರಿ ಮಂಡಳಕ್ಕೆ ಹಿಂಸೆಯಲ್ಲಿ ಪಾಲುಗೊಂಡ



ಪಾತಕ ಬರುವುದು, ಮತ್ತು ಈವರೆಗೆ ಪಾಲಿಸಿಕೊಂಡು ಬಂದ ಅಹಿಂಸೆಯ ತತ್ವಕ್ಕೆ ಹಿಡಿಮಣ್ಣು ಹಾಕಿದಂತಾಗುವುದು. ಅರ್ಥಾತ್, ಇಂಗ್ಲಿಷರು ಈ ಯುದ್ದದಲ್ಲಿ ಹಿಂಸಾತ್ಮಕ ಸಾಧನಗಳನ್ನು ಉಪಯೋಗಿಸುವುದರಿಂದ, ಈ ದೇಶದ ಜನರು ಅವರಿಗೆ ಸಹಾಯ ಮಾಡಬಾರದು. ಇದು ಈ ಗಾಂಧೀ ಪಂಥದ ವಿಚಾರ ವೈಶಿಷ್ಟ್ಯ.

ಗಾಂಧೀ ಅವರ ವಿಚಾರ ಸರಣಿಯಿಂದ ಹಲವರು ಆಶ್ಚರ್ಯ ಚಕಿತರಾದುದರಲ್ಲಿ ಸಂಶಯವಿಲ್ಲ. ಅಹಿಂಸೆಯ ತತ್ವಕ್ಕೆ ಬಾಧೆ ಬರುವುದೆಂದು ಇಂಗ್ಲಿಷರಿಗೆ ಸಹಾಯ ಮಾಡಬಾರದೆನ್ನುವ ಗಾಂಧೀ ಅವರು, ಖಿಲಾಫತ್ ಚಳವಳಿಯಲ್ಲಿ ಯಾವ ಭೂಮಿಕೆ ವಹಿಸಿದರು, ಮತ್ತು ಅವರ ಅಹಿಂಸೆಯ ತತ್ವವು ಆಗ ಅವರಿಗೆ ಸಹಾಯ ಮಾಡುವಲ್ಲಿ ಅಡ್ಡ ಬರಲಿಲ್ಲವೇ ಎಂದು ನಾವು ಕೇಳ ಬಯಸುತ್ತೇವೆ.

ಈ ಪ್ರಶ್ನೆ ನಾವು ಇಂದಷ್ಟೇ ಎತ್ತಿರುವುದಲ್ಲ. ೧೯೨೧ ರಲ್ಲಿ ಖಿಲಾಫತ್ ಚಳವಳಿ ಆರಂಭವಾದಾಗ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಸದಸ್ಯ, ಮಿ. ಝಕೆರಿಯಸ್ ಅವರು, ಗಾಂಧೀ ಅವರನ್ನು, ನೀವು ಅಹಿಂಸಾವಾದಿ ಆಗಿದ್ದು, ಹಿಂಸಾತ್ಮಕ ಸಾಧನದಿಂದ ಖಿಲಾಫತ್‌ನ ಸಂರಕ್ಷಣೆ ಮಾಡ ಬಯಸುವ ಮುಸಲ್ಮಾನ ಖಿಲಾಫತ್ವಾದಿಗಳಿಗೆ ಹೇಗೆ ಸಹಾಯ ಮಾಡುವಿರಿ, ಎಂದು ನೇರವಾಗಿ ಪ್ರಶ್ನಿಸಿದ್ದರು. ಅದಕ್ಕೆ ಗಾಂಧೀ ಅವರಿತ್ತ ಉತ್ತರ ತುಂಬ ಉದ್ಬೋಧಕವಾಗಿದೆ;

'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ'ಯಲ್ಲಿ ಮಿ. ಝಕಾರಿಯಸ್ ಅವರು, ಖಿಲಾಫತ್ ಚಳವಳಿ ಹಿಂಸೆಯ ತತ್ವದ ಮೇಲೆ ಆಧರಿಸಿದೆ, ಎಂದು ಹೇಳಿದ್ದಾರೆ. ಖಿಲಾಫತ್, ಇಸ್ಲಾಮ್ ಧರ್ಮದ ಇಹದ ಪ್ರತಿನಿಧಿಯಾಗಿದ್ದು, ಖಡ್ಗ ದಿಂದಲಾದರೂ ಅದರ ಸಂರಕ್ಷಣೆಗೆ ಬದ್ಧವಾಗಿದೆ.

ಅಹಿಂಸೆಯ ತತ್ವದಲ್ಲಿ ನಂಬಿಕೆಯಿಟ್ಟಿರುವ ನಾನು, ಸ್ವರಕ್ಷಣೆಗಾಗಿ ದೈಹಿಕ ಬಲ ಪ್ರಯೋಗಕ್ಕೆ ಸಮ್ಮತಿಸುವ ಸಂಸ್ಥೆಯ ಉಳಿವಿಗಾಗಿ ಹೋರಾಡುವುದೆಂತು? ಮಿ. ಝಕಾರಿಯಾಸ್ ಅವರ ಖಿಲಾಫತ್‌ನ ವರ್ಣನೆ ಸರಿಯಾದುದು. ಅಹಿಂಸಾ ವ್ರತ ಧಾರಣೆ ಮಾಡುವ ಬಗ್ಗೆ ಅವರ ಅಂದಾಜು ಮಾತ್ರ ತಪ್ಪು, ಯಾವುದೇ ವಿಷಯದ ಸಂರಕ್ಷಣೆಗಾಗಿ ಪ್ರತ್ಯಕ್ಷ ಇಲ್ಲವೇ ಅಪ್ರತ್ಯಕ್ಷ ರೀತಿಯಲ್ಲಿ ಅತ್ಯಾಚಾರ ಮಾರ್ಗದಲ್ಲಿ ಭೌತಿಕ ಶಕ್ತಿಯ ಉಪಯೋಗ ಮಾಡುವುದು ಅಹಿಂಸಾವಾದಿಗಳಿಗೆ ಸಲ್ಲುವುದಲ್ಲದಿದ್ದರೂ, ಒಂದು ಸಂಸ್ಥೆ ಅಹಿಂಸೆಯನ್ನಾಧರಿಸಿಲ್ಲವೆಂದು ಅದಕ್ಕೂ ಅದರ ಜನರಿಗೂ ಸಹಾಯ ಮಾಡುವಲ್ಲಿ ಅಹಿಂಸಾವಾದಿಗಳು ಪ್ರತಿಬಂಧ ತೋರಲಾಗುವುದಿಲ್ಲ. ಹೀಗಲ್ಲದಿದ್ದರೆ, ಹಿಂದೂಸ್ಥಾನಕ್ಕೆ ಸ್ವರಾಜ್ಯ ಸಿಗುವಂತೆ ಸಹಾಯ ಮಾಡುವಲ್ಲಿ ನನ್ನ ವಿರೋಧವಿರುತ್ತಿತ್ತು. ಕಾರಣ, ಹಿಂದೂಸ್ಥಾನದ ಭಾವೀ ಸ್ವರಾಜ್ಯದಲ್ಲಿ ಪಾರ್ಲಿಮೆಂಟ್, ಸೈನಿಕರನ್ನೂ, ಪೋಲೀಸರನ್ನೂ ನಿಯುಕ್ತಿಗೊಳಿಸುವುದೇ ಇದೆ.

ಮಿ. ಝಕಾರಿಯಸ್ ಅವರ ವಾದವನೊಪ್ಪಿದರೆ ಅಹಿಂಸಾವಾದಿಗಳ ಎಲ್ಲ ವ್ಯಾಪಾರ ವಹಿವಾಟು ಅಶಕ್ಯವಾಗುವುದು. ಪೂರ್ಣ ಅಹಿಂಸೆಯೆಂದರೆ, ಪೂರ್ಣ ನಿಷ್ಕ್ರಿಯತೆ ಅಂದುಕೊಳ್ಳುವವರು ಕಡಿಮೆಯಿಲ್ಲ, ನನ್ನ ಅಹಿಂಸಾತತ್ವ ಮಾತ್ರ ಹೀಗಲ್ಲ. ಯಾವುದೇ ಹಿಂಸೆಯಿಂದ ದೂರವುಳಿದು, ನನ್ನ ನಂಬಿಕೆ ಮತ್ತು ನಡೆವ ಹಾದಿಯಲ್ಲಿ ಆದಷ್ಟೂ ಜನರನ್ನು ಒಗ್ಗೂಡಿಸಿಕೊಂಡು ಸಾಗುವುದೇ ನನ್ನ ಕೆಲಸ , ಅಹಿಂಸೆಯ ತತ್ವಕ್ಕೆ ಪೂರ್ಣ ಬದ್ಧರಾಗದವರನ್ನೂ ನ್ಯಾಯದುದ್ದೇಶದಲ್ಲಿ ಸಹಕರಿಸದಿದ್ದರೆ, ನಾನು ನನ್ನ ನಂಬಿಕೆಗೆ ಬದ್ಧನಾದಂತಾಗುವುದಿಲ್ಲ. ಮುಸಲ್ಮಾನರು ನ್ಯಾಯದ

ಪಥದಲ್ಲಿದ್ದಾರೆಂದು ಅರಿತೂ, ಇಸ್ಲಾಮ್‌ನ ಘನತೆಯನ್ನು ನಾಶ ಪಡಿಸಲು ಹೊರಟವರ ವಿರುದ್ಧ ಅವರ ಸಹಾಯಕ್ಕೆ ಹೋಗದಿದ್ದರೆ, ಹಿಂಸೆಯನ್ನು ಬೆಂಬಲಿಸಿದಂತಾಗುವುದು. ಎರಡೂ ಪಕ್ಷಗಳೂ ಹಿಂಸೆಯಲ್ಲಿ ನಂಬಿಕೆ



ಇಟ್ಟಿದ್ದರೂ, ನ್ಯಾಯವು ಯಾವುದಾದರೂ ಒಂದೇ ಪಕ್ಷದಲ್ಲಿರುತ್ತದೆ. ದೋಚಲ್ಪಟ್ಟವನು, ಕಳೆದುದನ್ನು ಹಿಂದಕ್ಕೆ ಪಡೆಯಲು ಬಲವನ್ನು ಪ್ರಯೋಗಿಸಿದರೂ, ನ್ಯಾಯವು ಅವನ ಪಕ್ಷದಲ್ಲೇ ಇರುವುದು. ಸತ್ಯಾಗ್ರಹದ ಮೂಲಕ ಕಳೆದುದನ್ನು ಹಿಂದಕ್ಕೆ ಪಡೆವುದು ಸಾಧ್ಯವಾದರೆ, ಅದು ಅಹಿಂಸೆಯ ವಿಜಯವಾಗುವುದು.

ಈ ಎಲ್ಲ ಇತಿಮಿತಿಗಳೊಡನೆ ನನ್ನನ್ನು ಅಹಿಂಸೆಯ ಪೂಜಾರಿ ಎಂದು ಪರಿಗಣಿಸುವುದು ಮಿ. ಝಕಾರಿಯಸ್ ಅವರಿಗೆ ಬಿಟ್ಟದ್ದು. ಜೀವನವು ಬಲು ಸಂಕೀರ್ಣವಾದುದು, ಮತ್ತು ಸತ್ಯ, ಅಹಿಂಸೆಯಂತಹ ಸಮಸ್ಯೆಗಳು ಪೂರ್ಣ ವಿಶ್ಲೇಷಣೆ ಮತ್ತು ನಿರ್ಣಯಕ್ಕೆ ನಿಲುಕುವುದಿಲ್ಲ. ಸತ್ಯದ ಅನ್ವೇಷಣೆ ಮತ್ತು ಸತ್ಯಾಗ್ರಹದ ಆಚರಣೆ ಸಹನೆ ಶಾಂತಿಯ ಪ್ರಾರ್ಥನೆಯಾಗಿ ಸಾಗಬೇಕು. ಸತ್ಯದ ಅನ್ವೇಷಣೆಯ ದಾರಿಯಲ್ಲಿ ಯಾವ ಕಷ್ಟವನ್ನೂ ನಾನು ಸಹಿಸಬಲ್ಲೆ, ಮತ್ತು ಈ ಅನ್ವೇಷಣೆಯ ತ್ರಾಸದಾಯಕ, ಆದರೂ ಸುಂದರ ಪಥದಲ್ಲಿ ವಿನಮ್ರ ಆದರೂ ಸತತ ಯತ್ನ ಹಾಗೂ ಮೌನ ಪ್ರಾರ್ಥನೆ ಸದಾ ನನ್ನ ಸಹಚರರು." ಈ ಮೇಲಿನ ವಿಚಾರಸರಣಿ ಕೇವಲ ತಾತ್ವಿಕ ದೃಷ್ಟಿಯಿಂದ ಪ್ರತಿಪಕ್ಷಗಳಿಗೆ ಉತ್ತರ ನೀಡಲೆಂದು ಹೆಣೆದದ್ದಾದರೆ, ಆ ಬಗ್ಗೆ ನನಗೇನೂ ಹೇಳುವುದಿಲ್ಲ. ಈ ವಿಚಾರ ಸರಣಿ ಪ್ರಾಮಾಣಿಕವೇ ಆಗಿದ್ದರೂ, ಹಿಂಸಾವಾದಿ ಮುಸಲ್ಮಾನ ಖಿಲಾಪತ್‌ವಾದಿಗಳಿಗೆ ಸಹಾಯ ಮಾಡಲು ಅಹಿಂಸಾವಾದಿ ಗಾಂಧಿಗೆ ಯಾವುದೇ ಪ್ರಕಾರದ ನೈತಿಕ ಅಡಚಣೆ ಅಡ್ಡ ಬರುವುದಿಲ್ಲವಾದರೆ, ಇಂಗ್ಲಿಷರಿಗೆ ಈ ಯುದ್ಧದಲ್ಲಿ ಸಹಾಯ ಮಾಡಲು ಅಹಿಂಸೆ ಅಡ್ಡ ಬರುವುದೇಕೆ? ಈ ಪ್ರಶ್ನೆಗೆ ಗಾಂಧಿಯ ಉತ್ತರ ನೋಡಲು ಹಲವರು ಕಾದಿದ್ದಾರೆ. ೧೯೧೪ ರ ಮಹಾಯುದ್ದದಲ್ಲಿ ತಿಲಕರು, ಯುದ್ದದಲ್ಲಿ ಷರತ್ತಿಲ್ಲದೆ ಸಹಾಯ ಮಾಡಬಾರದೆಂದು ದೇಶದಲ್ಲೆಲ್ಲ ಪ್ರಸಾರ ಮಾಡಿದ್ದರು. ಆ ವೇಳೆ ಗಾಂಧೀ ಅವರು ತಿಲಕರನ್ನು ವಿರೋಧಿಸಿ, ಷರತ್ತಿಲ್ಲದೆ ಸಹಾಯವನ್ನು ಪುರಸ್ಕರಿಸಿದ್ದರು. ಆ ವೇಳೆ ಅವರು ಮುಂಬಯಿಯ ನಾಮದಾರ್ ಶಾಸ್ತ್ರಿ ಅವರಿಗೆ ಬರೆದ ಪತ್ರ "ಟೈಮ್ಸ್ ಆಫ್ ಇಂಡಿಯಾ'ದ ೧೯೧೮ ಜುಲೈ ೧೯ರ ಸಂಚಿಕೆಯಲ್ಲಿ

ಪ್ರಕಟವಾಯ್ತು. “ನನ್ನ ಮಾತುಗಳನ್ನು ಮುಗಿಸುತ್ತಾ, ನಮ್ಮ ಮತವನ್ನು ಜಾರಿಗೊಳಿಸುವ ಸರ್ವೋತ್ತಮ ದಾರಿ ಯಾವುದೆಂಬುದನ್ನು ನಾನಿಲ್ಲಿ ಹೇಳದಿರಲಾರೆ. ಹಿಂದೀ ರಾಜಕೀಯ ಕ್ಷೇತ್ರದ ಸಹಸ್ರಾರು ಕಾರ್ಯಕರ್ತರು ಇಂದು ಉತ್ಸುಕತೆಯಿಂದ ಮನನ ಮಾಡುತ್ತಿರುವ ರಾಜಕೀಯ ಸುಧಾರಣೆಯ ಈ ಐತಿಹಾಸಿಕ ಮಸೂದೆ ಸಿದ್ಧಗೊಳಿಸುತ್ತಿರುವವರು ಹೊರತಂದ ನಿಷ್ಕರ್ಷೆ ನನಗೆ ಸರ್ವತೋಪರಿ ಸಮ್ಮತವಾಗಿದೆ. ಯಾವ ಯೋಜನೆಯ ಪರಿಣಾಮ ಕಲ್ಪನೆಗೂ ಸಿಗದಷ್ಟು ದೊಡ್ಡದಾಗಿದೆಯೋ, ಆ ಯೋಜನೆಯ ಬಗ್ಗೆ ಶಿಫಾರಸು ಮಾಡುವಲ್ಲಿ ನಮ್ಮ ಮೇಲಿರುವ ಜವಾಬ್ದಾರಿಯ ಅರಿವು ಇದ್ದೂ, ಒಂದು ಕಾರಣದಿಂದ ನಮ್ಮ ಮನ ಶಂಕಿತವಾಗುತ್ತಿದೆ. ಅದೆಂದರೆ, ನಮ್ಮ ಅಹವಾಲು ಪೂರ್ಣಗೊಳ್ಳುವ ಮೊದಲ ಹಿಂದೀ ರಾಜಕೀಯ ಸುಧಾರಣೆಯ ಪ್ರಶ್ನೆಗಿಂತ ಅಧಿಕ ಗಂಭೀರ ಪ್ರಶ್ನೆ, ಫ್ರಾನ್ಸ್‌ನ ರಣಾಂಗಣದಲ್ಲಿ ಎದ್ದಿದೆ. ಹಿಂದೂಸ್ಥಾನದ ಭವಿಷ್ಯಕ್ಕೆ ಸಂಬಂಧಿಸಿ ತೆಗೆದುಕೊಳ್ಳುವ ನಿರ್ಣಯ ದಿಲ್ಲಿ ಇಲ್ಲವೇ ವೈಟ್‌ಹಾಲ್‌ನಲ್ಲಾಗದೆ, ಫ್ರಾನ್ಸ್‌ನ ರಣಭೂಮಿಯಲ್ಲಿ ರೂಪುಗೊಳ್ಳಲಿದೆ. ನಮ್ಮ ಸ್ವರಾಜ್ಯದ ಕಿಂಡಿಬಾಗಿಲು ಫ್ರಾನ್ಸ್‌ನ ಭೂಮಿಯ ಮೇಲಿದೆ. ರಕ್ತಪಾತವಾಗದೆ, ವಿಜಯ ಇನ್ನೂ ಪ್ರಾಪ್ತವಾಗುವಂತಿಲ್ಲ. ಮಿತ್ರರ ವಿಜಯಕ್ಕಾಗಿ ಸೆಣಸುವ ಸ್ವಾತಂತ್ರ್ಯವಾದಿಗಳ ಅಜೇಯ ಸೇನೆಯನ್ನು ಫ್ರಾನ್ಸ್‌ನ ರಣಭೂಮಿಗೆ ಕಳುಹಲು ಶಕ್ಯವಾದರೆ, ನಾವು ನಮ್ಮ ಹಿತಕ್ಕಾಗಿಯೇ ಕಾದುವಂತಾದರೆ, ಭವಿಷ್ಯದಲ್ಲಲ್ಲ, ಈಗಲೇ



ಸ್ವಾಯತ್ತತೆ ಸಿಗುವಂತಹ ಪರಿಸ್ಥಿತಿ ನಿರ್ಮಾಣವಾಗುವುದು.

ಹಾಗೆಂದೇ ನನಗೆ ದೇಶಕ್ಕೆ ಹೇಳಲಿದೆ - ಬ್ರಿಟನ್‌ನ ವಿಜಯಕ್ಕಾಗಿ ಮರಣದ ಪರಿವೆಯನ್ನೂ ಮಾಡದೆ, ಯುದ್ಧಕ್ಕೆ ಎದ್ದು ನಿಲ್ಲಿ ಮತ್ತು ಅದರೊಡನೆ ನಮಗೆ ಯೋಗ್ಯ ಸುಧಾರಣೆ ಸಿಗುವಂತೆ ಚಳವಳಿ ಮಾಡಿ. ನೌಕರಶಾಹಿಯ ಕಡು ವಿರೋಧದಲ್ಲಿ ಸಮ್ಮಾನನೀಯ ವಿಜಯ ಪ್ರಾಪ್ತವಾಗಲು ಇದುವೇ ನಿಜವಾದ ಮಾರ್ಗ, ಕೇವಲ ಅಡೆತಡೆಯ ವಿಧ್ವಂಸಕ ಮಾರ್ಗದಿಂದ ಧ್ಯೆಯ ಪ್ರಾಪ್ತಿಯಾಗುವುದು ಅಶಕ್ಯವಲ್ಲ, ಆದರೆ ಅದರಿಂದ ಬ್ರಿಟಿಶರ ಹಾಗೂ ನಮ್ಮ ನಡುವೆ ಪರಸ್ಪರ ವೈರಭಾವ ಹುಟ್ಟಿಕೊಳ್ಳುವುದು ಮತ್ತು ಮುಂದಕ್ಕೆ ಯಾವರೀತಿಯಲ್ಲೂ ಪರಸ್ಪರ ಪೋಷಕವಾಗುವುದಿಲ್ಲ.” ಇದರಿಂದ ಗಾಂಧೀ ಅವರು, ಯುದ್ಧದಲ್ಲಿ ಬ್ರಿಟಿಶರಿಗೆ ಸಹಾಯ ಮಾಡುವುದನ್ನು ಬೆಂಬಲಿಸಿ ಎಷ್ಟು ಪ್ರಚಾರ ಮಾಡಿದರೆಂಬ ಕಲ್ಪನೆ ವಾಚಕರಿಗೆ ಬರುತ್ತದೆ. ೧೯೧೫ರ ಏಪ್ರಿಲ್ ತಿಂಗಳಲ್ಲಿ ಮದರಾಸಿನಲ್ಲಿ ವಕೀಲರ ವಾರ್ಷಿಕ

ಭೋಜನ ಸಮಾರಂಭ ನಡೆಯಿತು. ಗಾಂಧಿ ಅವರಿಗೂ ಇದರ ಆಮಂತ್ರಣ ಹೋಗಿತ್ತು. ಇಷ್ಟೇ ಅಲ್ಲ, ಬ್ರಿಟಿಷ್ ಸಾಮ್ರಾಜ್ಯಕ್ಕೆ ದೀರ್ಘಾಯುಷ್ಯ ಸಿಗಲೆಂದು ಭಾಷಣ ಮಾಡುವಂತೆ ಅವರನ್ನು ವಿನಂತಿಸಲಾಯ್ತು. ಅವರು ಆ ಪ್ರಸಂಗ ಸಾಧಿಸಿ, ನಿಶ್ಶರ್ತ ವಿರೋಧಕರಿಗೆ ಹೀಗೆ ಉತ್ತರ ನೀಡಿದರು." "ನನ್ನ ಮೂರು ತಿಂಗಳ ಇಂಡಿಯಾ, ಸೌತ್ ಆಫ್ರಿಕಾ ಸುತ್ತಾಟದಲ್ಲಿ, ಈ ಪ್ರಶ್ನೆಯನ್ನು ಅನೇಕ ಬಾರಿ ಕೇಳಲಾಗಿದೆ; ಆಧುನಿಕ ನಾಗರಿಕತೆಯ ಕಡು ವಿರೋಧಿಯೂ, ಪರಮ ದೇಶಭಕ್ತನೂ ಆದ ನಾನು, ಬ್ರಿಟಿಷ್ ಸಾಮ್ರಾಜ್ಯಕ್ಕೆ ನಿಷ್ಠನಾಗುವುದು ಹೇಗೆ ಸಾಧ್ಯವಾಯ್ತು, ಮತ್ತು ಪರಸ್ಪರ ಲಾಭಕ್ಕಾಗಿ ಇಂಡಿಯಾ, ಇಂಗ್ಲೆಂಡ್ ಜೊತೆಗೂಡಿ ಕೆಲಸ ಮಾಡಬಹುದೆಂದು ಯೋಚಿಸುವುದೂ ಹೇಗೆ ಸಾಧ್ಯವಾಯ್ತು, ಎಂಬುದೇ ಆ ಪ್ರಶ್ನೆ. ಈ ಸಂಜೆಯ ಈ ಮಹತ್ವದ ಮಹಾಸಭೆಯಲ್ಲಿ, ಬ್ರಿಟಿಷ್ ಸಾಮ್ರಾಜ್ಯಕ್ಕೆ ನನ್ನ ನಿಷ್ಠೆಯನ್ನು ಪುನಃ ಸಾರಲು ನನಗೆ ಸಂತೋಷವೆನಿಸುತ್ತದೆ ಮತ್ತು ನನ್ನ ನಿಷ್ಠೆ ಬಹು ಸ್ವಾರ್ಥಪರವಾಗಿದೆ. ನಾನೊಬ್ಬ ನಿಸ್ಸಹ ಪ್ರತಿರೋಧಕನಾಗಿದ್ದು, ಹಾಗೆಂದು ಎಂತಹುದೇ ಸಂದರ್ಭದಲ್ಲೂ ಸಾಧಿಸಿ ತೋರುವುದು ಅಗತ್ಯ ಎಂದರಿವಾಗಿದೆ. ಬ್ರಿಟಿಷ್ ಸಾಮ್ರಾಜ್ಯದ ಕೆಲ ಆದರ್ಶಗಳಿಗೆ ನಾನು ಮನ ಸೋತಿದ್ದೇನೆ. ಅವುಗಳಲ್ಲೊಂದು, ಬ್ರಿಟಿಷ್ ಸಾಮ್ರಾಜ್ಯದ ಪ್ರತಿ ಪ್ರಜೆಯೂ ತನ್ನ ಶಕ್ತಿ, ಗೌರವ, ಆತ್ಮ ಸಮ್ಮಾನಕ್ಕೆ ಪಾತ್ರನೆಂಬ ಆದರ್ಶ, ಬೇರಾವ ಸರಕಾರಕ್ಕೂ ಇದು ಅನ್ವಯಿಸದು. ಯಾವ ಸರಕಾರವೂ ನನಗೆ ಪ್ರಿಯವಲ್ಲವೆಂದು ನೀವು ಬಲ್ಲಿರಿ, ಯಾವ ಸರಕಾರ ಅತ್ಯಂತ ಕಡಿಮೆ ಆಳುತ್ತದೋ, ಅದೇ ಉತ್ತಮ ಸರಕಾರ ಎಂದು ನಾನು ಹೇಳಿದ್ದೇನೆ. ಮತ್ತು, ಬ್ರಿಟಿಶ್ ಸರಕಾರದ ಅಡಿಯಲ್ಲಿ ಅತ್ಯಂತ ಕಡಿಮೆ ಆಳಿಸಿಕೊಳ್ಳುವುದು ಸಾಧ್ಯ ಎಂದು ನಾನರಿತಿದ್ದೇನೆ."

೧೯೧೪ರ ಯುದ್ದದಲ್ಲಿ ಗಾಂಧಿ ಅವರ ಈ ಅಭಿಪ್ರಾಯದ ಬಗ್ಗೆ ಯಾರಿಗೇನೂ ಹೇಳಲಿಕ್ಕಿಲ್ಲ. ಈ ಯುದ್ಧದಲ್ಲಿ ಬ್ರಿಟಿಷರಿಗೆ ಸಹಾಯ ಮಾಡುವುದೋ ಬೇಡವೋ ಎಂಬ ಬಗ್ಗೆ ಕಳೆದ ಹತ್ತು ವರ್ಷಗಳಲ್ಲಿ ಅವರು ಮೂರು ಬಾರಿ ಪರಸ್ಪರ ವಿರೋಧಿ ಮತ ವ್ಯಕ್ತ ಪಡಿಸಿದ್ದು ಕಂಡು ಬರುತ್ತದೆ. ಗಾಂಧೀ ಅವರ ನಿಜವಾದ ಮತ ಏನೆಂದು ತಿಳಿಯುವುದು ಅತ್ಯಂತ ಕಠಿಣ ಲಹರಿ ಬಂದಂತೆ ಮನುಷ್ಯ ಹಿಂದಿನದು ಮುಂದಿನದು ಏನನ್ನೂ ಯೋಚಿಸದೆ ಮನ ಬಂದಂತೆ ವರ್ತಿಸುವಂತೆ, ಮೂರ್ಖರು ಆಗಿಂದಾಗ ಮನಸ್ಸಿಗೆ ತೋಚಿದಂತೆ ಒದರುವಂತೆ, ಗಾಂಧಿ ಅವರ ವಿಚಾರವೂ ಅದೇ ರೀತಿಯದೆಂದು ಖೇದದಿಂದಲೇ ಹೇಳಬೇಕಾಗುತ್ತದೆ. ಗತಕಾಲದಲ್ಲಿ ಅವರ ವಿಚಾರವು

ಹೇಗೆ ಬದಲಾಗುತ್ತಾ ಹೋಯಿತೆಂಬುದನ್ನು ಸಂಶೋಧಿಸ ಹೊರಟರೆ, ಅದು ತುಂಬ ಮನರಂಜಕವಾಗಿರುವುದೆಂದು ನಮಗನಿಸುತ್ತದೆ. ಆದರೆ ಹಿಂದಿನದೆಲ್ಲವನ್ನು ಬಿಟ್ಟುಕೊಟ್ಟು, ಈ ಯುದ್ಧ ಸಂಬಂಧ ವಿಷಯವನ್ನಷ್ಟೇ ತೆಗೆದುಕೊಂಡರೂ, ಅದರ ಬಗ್ಗೆ ಈ ಹತ್ತು ತಿಂಗಳಲ್ಲೇ ಮೂರು ಬಾರಿ ಅವರ ವಿಚಾರ ಪರಸ್ಪರ ವಿರೋಧವಾಗಿ ಬದಲಾಗಿರುವುದು ಕಂಡು ಬರುತ್ತದೆ. ಯುದ್ಧ ಅರಂಭವಾದ ಎರಡು ಮೂರು ದಿನಗಳಲ್ಲೇ ಗಾಂದಿ ಹಾಗೂ ವೈಸರಾಯ್ ಅವರು ಸಿಮ್ಲಾದಲ್ಲಿ ಒಟ್ಟಾದರು. ಗಾಂಧಿ ಅವರ ವಿರುದ್ಧ ಕಾಂಗ್ರೆಸ್‌ನ ಅವರ ಅನುಯಾಯಿಗಳೇ ಹೇಳುವಂತೆ, ಗಾಂಧಿ ಅವರು ಕಾಂಗ್ರೆಸ್ ನಾಯಕರೆಂದು ಕಾಂಗ್ರೆಸ್ ವತಿಯಿಂದ ವೈಸರಾಯ್ ಅವರನ್ನು ಭೇಟಿಯಾದರೂ, ವೈಸರಾಯ್ ಅವರು ಏನೆಂದರೆಂಬುದನ್ನು ಕಾಂಗ್ರೆಸಿಗರಿಗೆ ತಿಳಿಯ ಪಡಿಸುವುದೇ ಇಲ್ಲ, ಆದರೆ ಈ ಬಾರಿ ಮಾತ್ರ ಅವರು, ತಮ್ಮ ಭೇಟಿಯಲ್ಲಿ ವೈಸರಾಯ್ ಅವರು ಏನೆಂದರೆಂಬುದನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ ; "ವೈಸರಾಯ್ ಅವರಿಗೆ ಕಾಂಗ್ರೆಸ್‌ನ ಸಂಬಂಧ ನನ್ನ ಸ್ಥಾನವನ್ನು ಸ್ಪಷ್ಟ ಪಡಿಸುತ್ತಾ, ಇಂಗ್ಲೆಂಡ್, ಫ್ರಾನ್ಸ್‌ನೊಡನೆ ಮಾನವೀಯ ನೆಲೆಯಲ್ಲಿ ನನ್ನ ಸಹಾನುಭೂತಿ ಇದೆಯೆಂದೂ, ಇದುವರೆಗೆ ಅಭೇದ್ಯವಾಗಿದ್ದ ಲಂಡನ್‌ನ ನಾಶ, ನನ್ನನ್ನು ಆಳವಾಗಿ ಕಲಕಿದೆ ಎಂದೂ ತಿಳಿಸಿದೆ. ಹೌಸ್ ಆಫ್ ಪಾರ್ಲಿಮೆಂಟ್ ಮತ್ತು ವೆಸ್ಟ್ ಮಿನಿಸ್ಟರ್ ಅಬೆಯ ನಾಶದ ಸಾಧ್ಯತೆಯ ಬಗ್ಗೆ ಹೇಳುತ್ತಿದ್ದಂತೆ ನಾನು ವಿವಶನಾಗಿ ಅತ್ತು ಬಿಟ್ಟೆ. ಇಂತಹ ಸಂಭವಗಳ ಬಗ್ಗೆ ಭಗವಂತನ ಜೊತೆ ನನ್ನ ಸತತ ಸಂಘರ್ಷ ನಡೆಯುತ್ತಿರುತ್ತದೆ. ನನ್ನ ಅಹಿಂಸೆ ನಿರ್ವೀರ್ಯ್ರವೆನಿಸುತ್ತಿದೆ. ಆದರೂ ದಿನದ ಜಗಳದ ಕೊನೆಗೆ, ದೇವರಾಗಲೀ, ಅಹಿಂಸೆಯಾಗಲೀ ಎರಡೂ ನಿರ್ವೀರ್ಯವಲ್ಲ, ಎಂದನಿಸುತ್ತದೆ. ನಿರ್ವೀರ್ಯತೆಯಿರುವುದು ಮನುಷ್ಯರಲ್ಲಿ ನಂಬಿಕೆ ಕಳೆದುಕೊಳ್ಳದೆ ಸತತ ಪ್ರಯತ್ನಿಸುತ್ತಿರ ಬೇಕು, ಆ ಯತ್ನದಲ್ಲಿ ಕುಸಿದು ಬಿದ್ದರೂ ಸರಿಯೇ.

"ಸದ್ಯ ನಾನು ಹಿಂದೂಸ್ಥಾನದ ಮುಕ್ತಿಯ ಬಗ್ಗೆ ಯೋಚಿಸುತ್ತಿಲ್ಲ. ಅದಂತೂ ಆಗುವುದು. ಆದರೆ, ಇಂಗ್ಲೆಂಡ್ ಮತ್ತು ಫ್ರಾನ್ಸ್‌ನ ಪತನವಾದರೆ, ಮತ್ತೇನುಳಿದಂತಾಯ್ತು?" ಈ ಉದ್ಧಾರ ಗಾಂಧಿ ಅವರದೇ. ೧೯೮೩ ಸಪ್ಟೆಂಬರ್ ೫ ರಂದು ವೈಸರಾಯ್ ಅವರನ್ನು ಭೇಟಿಯಾದ ನಂತರ, ಪತ್ರಕರ್ತರೊಡದೆ ಅವರು ಹಾಗೆಂದು ಉದ್ಗಾರ ತೆಗೆದರು.

ಇದು ಅವರ ಪ್ರಥಮ ಭೂಮಿಕೆ. ಯುದ್ದದ ಆರಂಭದಲ್ಲಿ ಬ್ರಿಟಿಷರಿಗೆ ಈ ದೇಶದ ಜನರು ಷರತ್ತಿಲ್ಲದೆ ಸಹಾಯ ಮಾಡಬೇಕೆಂದು ಅವರ ವಿಚಾರವಿತ್ತು. ಆ ಬಳಿಕ ೧೪-೯-೧೯೩ ರಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆ ಸೇರಿತು. ಅ ಸಭೆಯಲ್ಲಿ, ವರ್ಕಿಂಗ್ ಕಮಿಟಿಯು, ಬ್ರಿಟಿಷರು ಈ ಯುದ್ದದಲ್ಲಿ ಪ್ರಜಾಸತ್ತೆಯ ಮತ್ತು ಸಾಮ್ರಾಜ್ಯಶಾಹಿಯ ಸಂಬಂಧದ ವಿಷಯದಲ್ಲಿ ತಮ್ಮ ಧ್ಯೇಯ ಮತ್ತು ಆ ಧ್ಯೇಯದ ಲಾಭ ಹಿಂದೂ ಸ್ಥಾನೀಯರಿಗೆ ಎಷ್ಟು ಸಿಗುವುದೆಂದು ಸ್ಪಷ್ಟ ಶಬ್ದಗಳಲ್ಲಿ ಮತ್ತು ನಿಸ್ಸಂಧಿಗ್ಧ ಭಾಷೆಯಲ್ಲಿ ತೆರೆದಿಡಲಿ; ಮತ್ತು ಹಾಗೆ ಮಾಡುವವರೆಗೆ ಯುದ್ಧದಲ್ಲಿ ಕಾಂಗ್ರೆಸ್ ಸಹಾಯ ಮಾಡಲಾಗದು ಎಂದು ಸಾರಿತು.

ಹೀಗೆ ಒಂದೇ ತಿಂಗಳಲ್ಲಿ ಭಿನ್ನ ವಿಚಾರ ವ್ಯಕ್ತಗೊಂಡಾಗ ಜನರಿಗೆ ಆಶ್ಚರ್ಯವಾಗದಿರಲಿಲ್ಲ. ೨೩ ಸಪ್ಟೆಂಬರ್ ೧೯೩ರಲ್ಲಿ "ಹರಿಜನ' ಪತ್ರಿಕೆಯಲ್ಲಿ ಪ್ರಕಟಿಸಿದ ಗಾಂಧಿ ಅವರ ವಿಚಾರದ ಅವತರಣಿಕೆ ಇಲ್ಲಿದೆ.

"ಜಾಗತಿಕ ಆಪತ್ತಿನ ಬಗ್ಗೆ ವರ್ಕಿಂಗ್ ಕಮಿಟಿಯ ಹೇಳಿಕೆ, ತನ್ನ ಅಂತಿಮ ಸ್ವರೂಪ



ಪಡೆಯಲು ನಾಲ್ಕು ದಿನಗಳು ಹಿಡಿದುವು. ಕಮಿಟಿಯ ಆಮಂತ್ರಣದಂತೆ ಪಂಡಿತ ಜವಾಹರಲಾಲರಿಂದ ರೂಪಿತವಾದ ಡ್ರಾಫ್ಟ್ ಬಗ್ಗೆ ಪ್ರತಿ ಸದಸ್ಯರೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಬ್ರಿಟಿಷರಿಗೆ ಕೊಡಬೇಕಾದ ಸಹಾಯ ಏನಿದ್ದರೂ, ಅದು ಷರತ್ತಿಗೊಳಪಟ್ಟಿರಬಾರದು ಎಂದು ಯೋಚಿಸುವವನು ನಾನೊಬ್ಬನೇ ಎಂದು ನನಗೆ ಖೇದವೆನಿಸಿತು. ಇದು ಕೇವಲ ಅಹಿಂಸೆಯ ಮೂಲಕವೇ ಆಗಬೇಕಿತ್ತು. ಆದರೆ ಕಮಿಟಿಗೆ ಅಗಾಧ ಜವಾಬ್ದಾರಿಯಿದೆ. ಪ್ರತಿಸ್ಪರ್ಧಿಯ ಸಂಕಟದ ಲಾಭ ಪಡೆಯುವುದು ತಿರಸ್ಕರಣೀಯ ಅನಿಸುವಂತಹ ಮಾನಸಿಕ ಸಾಮರ್ಥ್ಯ ಪ್ರಾಪ್ತವಾಗಲು ಅಗತ್ಯವಾದ ಅಹಿಂಸಾವೃತ್ತಿ ರಾಷ್ಟ್ರದಲ್ಲಿ ಇದುವರೆಗೆ ಬಿಂಬಿತವಾಗಿಲ್ಲ. ಆದರೆ ಕಮಿಟಿಯು ತೆಗೆದುಕೊಂಡ ಈ ನಿರ್ಣಯದ ಕಾರಣವನ್ನು ನಮೂದಿಸುವಲ್ಲಿ ಇಂಗ್ಲಿಷರ ಬಗ್ಗೆ ಅತಿ ಹೆಚ್ಚು ಕಾಳಜಿಯನ್ನು ಕಮಿಟಿಯು ವ್ಯಕ್ತ ಮಾಡಿತು.

"ಈ ವೇಳೆ ಕುಲ್ಲಕ ಕಾರಣಕ್ಕಾಗಿ ಪಕ್ಷದಲ್ಲಿ ಜಗಳ ಕಾಯಲು ಕಾಂಗ್ರೆಸ್ ಅನುಯಾಯಿಗಳು ಸಿದ್ದರಿರುವುದು ಖೇದದ ವಿಷಯ. ಕಮಿಟಿಯು ತೆಗೆದುಕೊಂಡ ನಿರ್ಣಯದಿಂದ ಏನಾದರೂ ಮಹತ್ವದ, ಯಥಾಯೋಗ್ಯ ಪರಿಣಾಮ

ಉಂಟಾಗ ಬೇಕಾದರೆ ಪ್ರತಿಯೊಬ್ಬ ಕಾಂಗ್ರೆಸ್ ಅನುಯಾಯಿ, ಕಮಿಟಿ ಮೇಲೆ ಅವಿಭಕ್ತ, ಅಸಂಧಿಗ್ಧ ನಿಷ್ಠೆ ತೋರುವುದು ಅವಶ್ಯಕ. ಅದೇರೀತಿ ಬ್ರಿಟಿಶ್ ಸರಕಾರವು ತನ್ನ ಧೋರಣೆಯನ್ನು ಸ್ಪಷ್ಟ ಪಡಿಸಬೇಕು, ಮತ್ತು ಅದನ್ನು ಅನುಸರಿಸಿ, ಸದ್ಯದ ಯುದ್ಧದ ಪರಿಸ್ಥಿತಿಯಲ್ಲಿ ಶಕ್ಯವಿರುವುದನ್ನು ಮಾಡಿ ತೋರಲಿ, ಎಂದು ಕಮಿಟಿಯು ಮಂಡಿಸಿದ ಬೇಡಿಕೆಯನ್ನು ಎಲ್ಲ ರಾಜಕೀಯ ಪಕ್ಷಗಳೂ, ಜಾತಿಗಳೂ ಬೆಂಬಲ ನೀಡುವುದೆಂದು ನಾವು ಆಶಿಸುತ್ತೇವೆ.

"ಈಗ ಅಗತ್ಯವಿರುವುದು ಬ್ರಿಟಿಶ್ ಮುತ್ಸದ್ದಿಗಳ ಮಾನಸಿಕ ಕ್ರಾಂತಿ.. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಅಗತ್ಯವಿರುವುದು ಯುದ್ಧದ ಆರಂಭದಲ್ಲಿ ಮಾಡಿದ, ಮತ್ತು ಪುನಃ ಪುನಃ ಬ್ರಿಟಿಷ್ ವೇದಿಕೆಗಳಲ್ಲಿ ಪಠಿಸಿದ ಪ್ರಜಾಸತ್ತೆಯಲ್ಲಿನ ನಂಬಿಕೆಯನ್ನು ಕಾರ್ಯರೂಪಕ್ಕೆ ತರುವ ಪ್ರಾಮಾಣಿಕ ಪ್ರಯತ್ನ, ಗ್ರೇಟ್ ಬ್ರಿಟನ್, ಹಿಂದೂಸ್ಥಾನವನ್ನು ಅದರ ಇಚ್ಛೆಯ ವಿರುದ್ಧ ಯುದ್ಧ ಕ್ಷೇತ್ರಕ್ಕೆಳೆಯುವುದೇ ಇಲ್ಲ, ನಿಜವಾದ ಪ್ರಜಾಸತ್ತೆಯ ರಕ್ಷಣೆಯ ಕೆಲಸದಲ್ಲಿ ಸ್ವಸಂತೋಷದಿಂದ ಸಹಕರಿಸುವ ಮಿತ್ರನೆಂದು ಬರಮಾಡಿಕೊಳ್ಳುವರೇ?"

ಮೊದಲ ಮತ ನಿ

ಸಶ್ರೃರ್ತ ಶರ್ತ; ಎರಡನೆಯದು ಸಶರ್ತ ಶರ್ತ, ಎರಡನೇ ಮತ ಪ್ರತಿಪಾದಿಸಿದ ನಂತರ ಮೂರನೆಯದು, ಸಹಾಯ ಮಾಡಿದರೆ ಅಹಿಂಸೆಯ ತತ್ವಕ್ಕೆ ಬಾಧೆ ಬರುವುದೆಂಬ ಕಾರಣದಿಂದ ಸ್ವಲ್ಪವೂ ಸಹಾಯ ಮಾಡದಿರುವುದು. ಗಾಂಧೀ ಅವರ ಮೊದಲ ಮತ, ನಮ್ಮ ಮತದಂತೆಯೇ ಇದ್ದು, ಅದೇ ಒಳ್ಳೆಯದೆಂದು ನಮಗನಿಸುತ್ತದೆ. ಎರಡನೆಯದು ಮೊದಲಿನದಕ್ಕಿಂತ ಭಿನ್ನವಿದ್ದರೂ ಅದು ವ್ಯವಹಾರಿಕವಾಗಿದೆ ಎಂಬುದು ನಮಗೆ ಒಪ್ಪಿಗೆ. ಆದರೆ ಮೂರನೆಯದು ಮಾತ್ರ ಬರೀ ಮೂರ್ಖತನದ್ದಾಗಿದೆ. ಹಿಂಸಾವಾದಿ ಖಿಲಾಫತ್‌ವಾಲಾಗಳಿಗೆ ಸಹಾಯ ನೀಡಲು ಮುಂದಾಗುವ ಗಾಂಧಿ, ಇಂಗ್ಲಿಷರಿಗೆ ಸಹಾಯ ನೀಡುವಲ್ಲಿ ಅಹಿಂಸೆ ಅಡ್ಡ ಬರುತ್ತದೆನ್ನುವುದು ಎಲ್ಲರಿಗೂ ಆಶ್ಚರ್ಯವೇ ಸರಿ.

ಯುದ್ಧದ ವಿಷಯದಲ್ಲಿ ನನ್ನ ಭೂಮಿಕೆ ನಾನು ಸ್ಪಷ್ಟಪಡಿಸಿದ್ದೇನೆ. ನಿರ್ಧಾರ ಡೋಲಾಯಮಾನವಾಗಿರುವುದಕ್ಕಿಂತ ಈ ದೇಶದ ಜನರು ಯುದ್ಧದಲ್ಲಿ ಇಂಗ್ಲಿಷರ ಸಹಾಯ ಮಾಡುವುದು ಒಳ್ಳೆಯದು. ಅದು ಅಪ್ರಾಮಾಣಿಕ ವಿಚಾರವೆಂದು ಯಾರಾದರೂ ಹೇಳಿದರೆ

ಹೇಳಲಿ. ನಮ್ಮ ಈ ವಿಚಾರವೇ ೧೯೧೪ರಲ್ಲಿ ಗಾಂಧಿ ಅವರದೂ ಆಗಿತ್ತು, ಎನ್ನುವೆ. ನಾನು ನನ್ನ ಭೂಮಿಕೆ ಬದಲಿಸುವಂತಹ ತಪ್ಪೇನೂ ಬ್ರಿಟಿಷರಿಂದ ಆಗಿಲ್ಲ.

ನಾಯಕರೆನಿಸಿಕೊಂಡವರು ವಿನಾಕಾರಣ ತಮ್ಮ ವಿಚಾರ ಬದಲಿಸುತ್ತಿದ್ದರೆ ಇಂತಹುದನ್ನು ಕಿತ್ತೊಗೆಯುವುದು ನಮ್ಮ ಕರ್ತವ್ಯವೇ ಆಗಿದೆ.

೨೦-೯-೧೯೪೨ರ "ಹರಿಜನ" ಪತ್ರಿಕೆಯ ಅಂಕಣದಲ್ಲಿ ಗಾಂಧಿ ಬರೆಯುತ್ತಾರೆ ;

"ಬರೆಯುತ್ತಿರುವಾಗ ಹಿಂದೇನು ಬರೆದಿರುವೆನೆಂದು ನಾನು ಯೋಚಿಸುವುದೇ ಇಲ್ಲ. ಪ್ರಶ್ನೆಯೊಂದಕ್ಕೆ ಉತ್ತರಿಸುವಾಗ ನನ್ನ ಹಿಂದಣ ಹೇಳಿಕೆಗಳಿಗೆ ಬದ್ಧವಾಗಿರುವುದರ ಬದಲಿಗೆ, ಸತ್ಯವು ನನಗಿಂದು ಹೇಗೆ ಗೋಚರಿಸುವುದೋ, ಹಾಗೆ ಸ್ವೀಕರಿಸುವ ಉದ್ದೇಶ, ನನ್ನದು. ಸತ್ಯದಿಂದ ಸತ್ಯಕ್ಕೆ ನಾನು ಬೆಳೆದಿದ್ದೇನೆ. ನನ್ನ ನೆನಪನ್ನೂ ಉಳಿಸಿಕೊಂಡಿದ್ದೇನೆ. ನನ್ನ ಐವತ್ತು ವರ್ಷಗಳ ಹಿಂದಿನ ಬರಹವನ್ನು ಇಂದಿನ ಬರಹದೊಂದಿಗೆ ಹೋಲಿಸುವಾಗ ಅಪೂರಕವಾದುದೇನೂ ಕಂಡು ಬರುವುದಿಲ್ಲ. ಆದರೆ ಅಪೂರಕವೆನ್ನುವ ಗೆಳೆಯರು, ಅವರು ಮೆಚ್ಚುವ ಹಳತರಷ್ಟೇ ಇತ್ತೀಚಿನದೂ ಸಲ್ಲುವುದೆಂದು ತಿಳಿಯಬೇಕು. ಆದರೆ ಇವೆರಡರ ನಡುವೆ ಆಯ್ದುಕೊಳ್ಳುವ ಮೊದಲು ಅಲ್ಲಿ ಅಂತಹ ಸಾತತ್ಯದ ಪೂರಕತೆ ಇರುವುದನ್ನು ಕಾಣುವ ಪ್ರಯತ್ನ ಮಾಡಿ ನೋಡಬೇಕು." ನಾಯಕರು ದಿಗ್ದರ್ಶಿಗಳೂ, ಸತ್ಯಶೋಧಕರೂ ಆಗಿರಬೇಕಲ್ಲವೇ? ಆದರೆ ಗಾಂಧೀ ಈ ಬಗ್ಗೆ ಯೋಚಿಸುವರೇಕೆ? ಗಾಂಧಿ ಅವರಿಂದ ಉತ್ತರ ಕೇಳುವವರು ಯಾರಾದರೂ ಇದ್ದಿದ್ದರೆ, ಇಂತಹ ಮಹಾತ್ಮದ ಉತ್ತರ ನೀಡುವುದು ಅವರಿಂದ ಶಕ್ಯವಾಗುತ್ತಿರಲಿಲ್ಲ. ಯಾರೂ ಇಲ್ಲವೆಂದೇ ಅವರ ರಾಜಕಾರಣದ ಈ ಸ್ವೇಚ್ಛಾಚಾರ ನಡೆದಿದೆ. ಮಹಾತ್ಮರು ಏನೇ ಮಾಡಿದರೂ ಅವರು ಮಹಾತ್ಮರೇ ಎಂದು ಜನರು ತಿಳಿಯುತ್ತಾರೆ.

ಜನರು ಮುಗ್ಧರಾಗಿದ್ದು ಅಧಿಕಾರಿಗಳ ಮೇಲೆ ಪೂರ್ಣ ವಿಶ್ವಾಸವಿಟ್ಟಿದ್ದರೆ, ಅಧಿಕಾರಿಗಳ ಜವಾಬ್ದಾರಿ ಇನ್ನೂ ಹೆಚ್ಚಾಗಬೇಕು. ಜನರು ಗಾಂಧಿ ಅವರ ಬಗ್ಗೆ ಎಚ್ಚರದಿಂದಿರಬೇಕೆಂದು ನಮ್ಮ ಸೂಚನೆ. ಹಾಗೆಯೇ ಕಾಂಗ್ರೆಸ್ ವರ್ಕಿಂಗ್

ಕಮಿಟಿ ಬಗ್ಗೆ ಕೂಡ ಎಚ್ಚರದಿಂದಿರಬೇಕೆನ್ನುವುದು ಅವಶ್ಯ. ಸ್ಪರ್ಧಾತ್ಮಕ ಕರಾರುಗಳಿಂದ ಏನೂ ಆಗುವಂತಿಲ್ಲ. ಅಡೆತಡೆಗಳನ್ನೊಡ್ಡುವ ಇಚ್ಛೆ ಎಷ್ಟೇ ಇದ್ದರೂ ಇಂಗ್ಲಿಷರನ್ನು ತಡೆಯಲಾಗುವುದಿಲ್ಲ. ಸೇನೆಯಲ್ಲಿ ಭರ್ತಿಯಾಗುವುದನ್ನು ಕಾಂಗ್ರೆಸ್ ನಿಲ್ಲಿಸಲಾಗದು. ಕಾಂಗ್ರೆಸ್ ಹಾಗೆ ಅಡ್ಡ ಬಂದರೂ, ಇತರ ಪಕ್ಷಗಳು ಸಹಾಯ ಮಾಡಲು ಮುಂದೆ ಬರುವುವು. ಹಾಗೆ ಅಡ್ಡಿ ಮಾಡುವವರೇ ಹಾಳಾಗುವರು. ಉಳಿದೆಲ್ಲ ಪಕ್ಷಗಳು ಸಹಾಯ ಮಾಡಲು ಸಿದ್ಧವಿವೆ. ಕಾಂಗ್ರೆಸ್ ಒಂದೇ ಅಡ್ಡಿಯೊಡ್ಡುತ್ತಿದ್ದು, ಕಾಂಗ್ರೆಸ್ ಎಂದರೆ ಹಿಂದೂ ಆದ್ದರಿಂದ ನಷ್ಟವಾಗುವುದು ಹಿಂದೂಗಳದೇ ಆದ್ದರಿಂದ, ಎಲ್ಲವನ್ನೂ ನಿರ್ವಿಕಾರವಾಗಿ ವಿಚಾರ ಮಾಡಬೇಕೆಂದು ನಮ್ಮ ಸೂಚನೆ.

* * * *

## ೮೯. ಕ್ರಾಂತಿಯ ಉಪಾಸನೆಯೋ ಅಥವಾ ಧ್ಯೇಯದ ರಕ್ಷಣೆಯೋ

ಮೊದಲ ಮಹಾಯುದ್ಧ ಮುಗಿದ ನಂತರ ಯೂರೋಪ್‌ನ ಬಹುತೇಕ ದೇಶಗಳಿಗೆ ಪ್ರಜಾಸತ್ತೆಯು ದೇಶಕ್ಕೂ ಸಮಾಜಕ್ಕೂ ಹಿತವಲ್ಲವೆಂದು ಅನಿಸತೊಡಗಿತು. ರಷ್ಯಾ ದೇಶವು ಕಮ್ಯೂನಿಸಮ್‌ನ ತತ್ತ್ವಜ್ಞಾನವನ್ನು ಸ್ವೀಕರಿಸಿ, ಅದುವೇ ಎಲ್ಲ ದೇಶಗಳಿಗೆ ಶ್ರೇಯವೆಂದು ಪ್ರಚಾರ ಮಾಡಿತು. ಜರ್ಮನಿಯಲ್ಲಿ ನಾಝಿಸಮ್ ಆರಂಭವಾಗಿ, ಅದೂ ಅಂತೆಯೇ ಪ್ರಚಾರ ನಡೆಸಿ, ಯೂರೋಪ್‌ನಲ್ಲಿ ಪ್ರಜಾಸತ್ತೆ, ಸಾಮ್ಯವಾದ, ದಂಡಾಧಿಪತ್ಯ [ಫ್ಯಾಸಿಸಮ್ - ನಾಸಮ್] ಹೀಗೆ ಮೂರು ಗುಂಪುಗಳಾಗಿ, ಅವು ಪರಸ್ಪರ ವೈರಿಗಳಾದವು. ದಂಡಾಧಿಪತ್ಯದ ಗುಂಪು, ಪ್ರಜಾಸತ್ತೆ ಹಾಗೂ ಸೌಮ್ಯವಾದವನ್ನು ನಾಶಮಾಡುವುದಾಗಿ ಘೋಷಿಸತೊಡಗಿತು. ಹಿಟ್ಲರ್ ಮತ್ತು ಮುಸೊಲಿನಿ, ಪ್ರಜಾಸತ್ತೆಯನ್ನು ನಷ್ಟಗೊಳಿಸಿದರೆ, ಅದು ತಮ್ಮನ್ನೂ ನಷ್ಟಗೊಳಿಸುವುದೆಂದು ಸ್ಟಾಲಿನ್‌ಗೆ ಭೀತಿಯಾಗತೊಡಗಿತು. ಮತ್ತು ಆ ಇಬ್ಬರು ದಂಡಾಧಿಕಾರಿಗಳು ಸ್ಟಾಲಿನ್‌ನ ಸಾಮ್ಯವಾದವನ್ನು ನಾಶಪಡಿಸಿದರೆ, ಮತ್ತೆ ತಮ್ಮನ್ನೂ ನಾಶಪಡಿಸಬಹುದೆಂದು ಪ್ರಜಾಸತ್ತಾತ್ಮಕ ರಾಷ್ಟ್ರಗಳಿಗೆ ಅನಿಸತೊಡಗಿತು. ಸ್ವಶಕ್ತಿಯನ್ನು ಹೆಚ್ಚಿಸಲೆಂದೇ ಈ ಮೂರು ಗುಂಪಿನ ಸ್ಪರ್ಧೆ

ಆರಂಭವಾಯ್ತು. ಇಟಲಿಯು ಅಬಿಸೀನಿಯಾ ಮೇಲೆ ದಾಳಿ ಮಾಡಿ ಆ ದೇಶವನ್ನು ತನ್ನ ವರ್ಚಸ್ಸಿನಡಿಯಲ್ಲಿ ತಂದಿತು. ಜರ್ಮನಿಯು, ಪೋಲೆಂಡ್, ಜೆಕೊಸ್ಲೊವಾಕಿಯಾ, ಆಸ್ಟ್ರಿಯಾ ದೇಶಗಳನ್ನು ಜಯಿಸಿತು ಮತ್ತು ಎರಡನೇ ಮಹಾಯುದ್ಧಕ್ಕೆ ದನಿಯಿತ್ತಿತು. ಜರ್ಮನಿ ಮತ್ತು ಇಟಲಿಯ ಮೇಲೆ ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳು ಯುದ್ಧ ಸಾರಿದುವು. [೩-೯-೧೯೩೯] ಜರ್ಮನ್ ಮತ್ತು ರಷ್ಯಾಗಳ ನಡುವೆ ಮೈತ್ರಿಯ ಒಪ್ಪಂದವಾಯ್ಕೆಂದೇ ರಷ್ಯಾ ಯುಧಕ್ಕಿಳಿಯಲಿಲ್ಲ. [ಆಗಸ್ಟ್ ೧೯೩೦] ಆದರೆ ಈ ಒಪ್ಪಂದವನ್ನು ಜರ್ಮನಿ ಮುರಿದು ರಷ್ಯಾದ ಮೇಲೆ ಆಕ್ರಮಣ ಮಾಡಿದಾಗ ರಷ್ಯಾವು ಜರ್ಮನಿ ಮತ್ತು ಇಟಲಿಯ ಮೇಲೆ ಯುದ್ಧ ಸಾರಿತು. ಈ ಎರಡನೇ ಮಹಾಯುದ್ಧವು ಸಾಮ್ರಾಜ್ಯವಾದಿ ರಾಷ್ಟ್ರಗಳದ್ದೆಂದು ಅದರಲ್ಲಿ ಭಾರತ ಭಾಗವಹಿಸುವುದಿಲ್ಲವೆಂದು ಭಾರತ ರಾಷ್ಟಸಭೆ ಸಾರಿತು. ಏಳು ಪ್ರಾಂತ್ಯಗಳ ಕಾಂಗ್ರೆಸ್ ಮಂತ್ರಿಮಂಡಳಗಳು ೧೯೩೯ ನವೆಂಬರ್‌ನಲ್ಲಿ ರಾಜೀನಾಮೆ ಕೊಟ್ಟವು. ಎಲ್ಲಿಯವರೆಗೆ ರಷ್ಯಾವು ಈ ಯುದ್ಧದಲ್ಲಿ ಭಾಗವಹಿಸಲಿಲ್ಲವೋ, ಅಲ್ಲಿಯವರೆಗೆ ಹಿಂದೀ ಕಮ್ಯೂನಿಸ್ಟ್ ಪಾರ್ಟಿಯು, ಇದು ರಕ್ತಪಿಪಾಸು ಸಾಮ್ರಾಜ್ಯವಾದಿಗಳ ಯುದ್ದವೆಂದೂ ಕಾರ್ಮಿಕರು ಸಹಾಯ ಮಾಡಲಾಗದೆಂದೂ ಸಾರಿತು. ಕಾಂಗ್ರೆಸ್ ಮತ್ತು ಕಮ್ಯೂನಿಸ್ಟ್ ಪಕ್ಷಗಳ ಭೂಮಿಕೆ ಎಷ್ಟು ತಪ್ಪು, ಮತ್ತು ಸ್ವತಂತ್ರ ಪಕ್ಷದ ಭೂಮಿಕೆ ಎಷ್ಟು ಸರಿ, ಮತ್ತು ದೇಶಕ್ಕೆ ಪರಿಣಾಮಕಾರಿ ಹಾಗೂ ಎಲ್ಲ ಜಗತ್ತಿಗೆ ಹಿತಕಾರಿ ಎಂಬುದರ ಬಗ್ಗೆ ಸಾಧಕ- ಬಾಧಕ ಮಾಹಿತಿ ಇತ್ತು ಬಾಬಾಸಾಹೇಬರು ೯-೧೧-೧೯೪೦ರ ಅಂಕಣದಲ್ಲಿ ಅಗ್ರಲೇಖನವೊಂದನ್ನು ಬರೆದರು.

ಪ್ರತಿ ವರ್ಷ ನವೆಂಬರ್ ೮ ರಂದು ರಷ್ಯನ್ ರಾಜ್ಯಕ್ರಾಂತಿಯ ದಿನವೆಂದು ಜಗತ್ತಿನ ಎಲ್ಲ ಕಾರ್ಮಿಕರು ಉತ್ಸಾಹದಿಂದ ಆಚರಿಸುತ್ತಾರೆ. ಹಿಂದೂಸ್ಥಾನದಲ್ಲಿ ರಷ್ಯನ್ ಕ್ರಾಂತಿಯ ಉಪಾಸಕರು

ಹೆಚ್ಚಲ್ಲದಿದ್ದರೂ ಸಾಕಷ್ಟು ಇದ್ದಾರೆ, ಎನ್ನಲು ಅಡ್ಡಿಯಿಲ್ಲ, ಮತ್ತು ಹಿಂದೂಸ್ಥಾನದಲ್ಲೂ ಅದರ ಆಚರಣೆ ಆಗಲೆಂಬ ಯತ್ನ ನಡೆದಿದೆ. ಹಾಗೇ ಈ ವರ್ಷ ಸ್ವಲ್ಪ ಮಟ್ಟಿಗೆ ಇಲ್ಲೂ ಆಚರಣೆ ನಡೆದಿದೆ. *

ರಷ್ಯಾದಲ್ಲಿ ಸ್ಥಾಪಿಸಲಾದ ಕಮ್ಯೂನಿಸ್ಟ್ ಸಮಾಜ ಪದ್ಧತಿ ಸಂಬಂಧ ಯಾರ ವಿಚಾರ ಏನೇ ಇರಲಿ, ರಷ್ಯನ್ ಕ್ರಾಂತಿಯ ದಿನ ಮಾನವ ಸಮಾಜದ ಇತಿಹಾಸದಲ್ಲಿ ಅತ್ಯಂತ ಮಹತ್ವದ ದಿನವಾಗಿದೆ. ಮಾನವ ಸಮಾಜದ ಇತಿಹಾಸದಲ್ಲಿ ಆರಂಭದಿಂದ ಇದುವರೆಗೆ ಯಾರಾದರೂ ಶೋಧಿಸ ಹೊರಟರೆ, ಫ್ರೆಂಚ್ ರಾಜ್ಯಕ್ರಾಂತಿಯ ದಿನ ಮೊದಲನೆಯದೆಂದು ಯಾರಾದರೂ ಒಪ್ಪಿಕೊಳ್ಳಬೇಕು. ಮಾನವ ಸಮಾಜದ ಇತಿಹಾಸದಲ್ಲಿ ಸಮಾಜದ ರಚನೆ ಪ್ರಥಮವಾಗಿ ಸಮತೆ ಮತ್ತು ಸ್ವಾತಂತ್ರ್ಯ ಈ ತತ್ವದ ಮೇಲೆ ಆಗಬೇಕೆಂದು ಮೊದಲಿಗೆ ಘೋಷಿಸಿದವರು, ಫ್ರೆಂಚ್ ಕ್ರಾಂತಿಕಾರರು.

ಫ್ರೆಂಚ್ ಕ್ರಾಂತಿಗೆ ಮೊದಲು ಸಮಾಜದ ರಚನೆ ಗುಲಾಮಗಿರಿಯ ತತ್ವದ ಮೇಲೆ ಆಧರಿಸಿತ್ತು. ಶ್ರೇಷ್ಠ, ಕನಿಷ್ಠ, ಉಚ್ಚ, ನೀಚ, ಇಂತಹ ಭೇದಭಾವವಿತ್ತು. ಅದರಲ್ಲಿನ ಅಸಂಖ್ಯ ದರಿದ್ರ, ವಿದ್ಯಾಹೀನ ಜನರಿಗೆ ಸ್ವಾತಂತ್ರ್ಯದ ಮಾಹಿತಿ ಇರಲಿಲ್ಲ. ಹಕ್ಕೂ ಇರಲಿಲ್ಲ. ಶ್ರಮ ಪಟ್ಟು, ಹಣ ಸಂಪಾದಿಸಿ ಅದನ್ನು ಮಾಲಿಕರಿಗೆ ಕೊಡುವುದು, ಮಾಲಿಕ ಕೊಟ್ಟುದನ್ನು ತೆಗೆದುಕೊಳ್ಳುವುದು ಬಿಟ್ಟರೆ, ಅವನ ಮನುಷ್ಯತ್ವಕ್ಕೆ, ಜೀವನಕ್ಕೆ ಯಾವ ಬೆಲೆಯೂ ಇರಲಿಲ್ಲ. ದಾರಿದ್ರದಲ್ಲಿ ಸಿಲುಕಿ ಸಂಸ್ಕೃತಿಯ ಸುಗಂಧವೂ ಇರದಿದ್ದುದರಿಂದ, ಸಮತೆಯನ್ನು ಬೇಡುವ ಅಪೇಕ್ಷೆಯಾಗಲೀ, ಹಕ್ಕಾಗಲೀ ಅವರಿಗಿರಲಿಲ್ಲ. ಈ ಅಸಮಾನತೆಯ ಸಮೂಲ ಉಚ್ಚಾಟನೆ ಮಾಡಿ ಸಮತೆ ಮತ್ತು ಸ್ವಾತಂತ್ರ್ಯದ ತತ್ವವನ್ನು ಪುರಸ್ಕರಿಸಿದ ಫ್ರೆಂಚ್‌ಕ್ರಾಂತಿಯ ದಿನ ಆಚರಿಸಲ್ಪಡದಿದ್ದರೂ, ಅದರ ಮಹತ್ವ ದೊಡ್ಡದಿದೆ. ಒಂದು ದೃಷ್ಟಿಯಿಂದ ನೋಡಿದರೆ ಫ್ರೆಂಚ್ ಕ್ರಾಂತಿ ಮತ್ತು ರಷ್ಯನ್ ಕ್ರಾಂತಿಯ ನಡುವೆ ನಿಕಟ ಸಂಬಂಧವಿದೆ. ಫ್ರೆಂಚ್ ಕ್ರಾಂತಿಯಲ್ಲಿ ಸಾಮಾಜಿಕ ಸ್ವಾತಂತ್ರ್ಯ ಮತ್ತು ಸಮತೆಯ ಮೇಲೆ ಒತ್ತು ಕೊಡಲಾಗಿತ್ತು. ಆರ್ಥಿಕ ಸ್ವಾತಂತ್ರ್ಯ ಮತ್ತು ಸಮತೆಯನ್ನು ಸ್ಥಾಪಿಸುವ ಪ್ರಯತ್ನ ಆಗಿರಲಿಲ್ಲ. ರಷ್ಯನ್ ಕ್ರಾಂತಿಯ ಮಹತ್ವವು, ಆರ್ಥಿಕ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಸ್ಥಾಪಿಸುವ ಪ್ರಯತ್ನ ಮಾಡಿದುದರಿಂದಲೇ ಬಂದುದು. ಆರ್ಥಿಕ ಸಮಾನತೆಯಿಲ್ಲದೆ ಸಾಮಾಜಿಕ ಸಮಾನತೆ ಮತ್ತು ಸ್ವಾತಂತ್ರ್ಯ ಇವೆರಡೂ ನಿಷ್ಫಲವಾಗುವುದು, ಎಂಬುದು ಫ್ರೆಂಚ್ ಕ್ರಾಂತಿಯ ಇತಿಹಾಸವನ್ನು ಪರಿಶೀಲಿಸಿದವರಿಗೆ ತಿಳಿಯುವುದು. ಹಣವಿಲ್ಲದವನಿಗೆ ಮಾನವಿಲ್ಲ. ಪರಾವಲಂಬಿಯಾದವ ಎಂದೂ ಸ್ವತಂತ್ರನಾಗಲಾರ. ಸಮತೆ ಸ್ಥಾಪಿಸಲೆಂದು ರಷ್ಯಾ ವ್ಯಕ್ತಿ ಸ್ವಾತಂತ್ರ್ಯವನ್ನು ನಷ್ಟಪಡಿಸಿತು. ಇದು ಯೋಗ್ಯವೇ ಎಂದು ಕೇಳಬಹುದು, ಆದರೆ, ಎಲ್ಲಿ ಆರ್ಥಿಕ ಅಸಮಾನತೆ ಅಪರಿಮಿತವಾಗಿದೆಯೋ, ಅಲ್ಲಿ ನಿಜವಾದ ಸ್ವಾತಂತ್ರ್ಯ ಇರುವುದಿಲ್ಲವೆಂದು ಎಲ್ಲರೂ ಒಪ್ಪಿಕೊಳ್ಳಬೇಕು. ಈರೀತಿ

ನೋಡಿದರೆ, ರಷ್ಯನ್ ಕ್ರಾಂತಿಯ ಮಹತ್ವ ಫ್ರೆಂಚ್ ಕ್ರಾಂತಿಗಿಂತ ಏಕೆ ಹೆಚ್ಚೆಂದು ತಿಳಿಯುವುದು. ಫ್ರೆಂಚ್ ಕ್ರಾಂತಿ ಹೋಳಿಗೆಯಾದರೆ, ರಷ್ಯನ್‌ಕ್ರಾಂತಿ, ಹೋಳಿಗೆಯೊಳಗಿನ ಹೂರಣವಾಗಿದೆ. ಫ್ರೆಂಚ್ ಕ್ರಾಂತಿ ಮೊಗ್ಗಾದರೆ, ರಷ್ಯನ್ ಕ್ರಾಂತಿ ಒಂದು ವಿಕಸಿತ ಪುಷ್ಪ, ಮನುಷ್ಯಮಾತ್ರರ ಇತಿಹಾಸದಲ್ಲಿ ಅದರ ಮಹತ್ವ ಅಷ್ಟಿರುವುದರಿಂದಲೇ ರಷ್ಯನ್ ಕ್ರಾಂತಿಯ ದಿನ ಫ್ರೆಂಚ್‌ಕ್ರಾಂತಿಯ ದಿನಕ್ಕಿಂತ ಹೆಚ್ಚಾಗಿ ಆಚರಣೆ ಆಗುತ್ತಿರುವುದು ಸಹಜವಾಗಿದೆ.

ಭಾರತದಲ್ಲಿ ರಷ್ಯನ್ ಕ್ರಾಂತಿಯ ಉಪಾಸಕರಲ್ಲಿ ಸಾಕಷ್ಟು ಕ್ಷುಲ್ಲಕ, ಢೋಂಗಿ, ಹೊಟ್ಟೆಬಾಕ



ಜನರಿದ್ದಾರೆ. ಆದರೆ ಹಾಗೆಯೇ ಈ ದೇಶದ ರಾಜಕಾರಣದಲ್ಲಿ ಅಗ್ರಭಾಗಿಗಳಾದವರು ಹಲವರಿದ್ದಾರೆಂಬುದೂ ನಿಜ. ಪಂಡಿತ್ ಜವಾಹರ್‌ಲಾಲ್ ನೆಹರೂ, ಜಯಪ್ರಕಾಶ್ ನಾರಾಯಣ್, ಮುಂತಾದ ಧುರೀಣರು ರಷ್ಯನ್ ಕ್ರಾಂತಿಯ ಉಪಾಸಕರೇ ಇದ್ದಾರೆ. ಆದರೆ ಇಂಥವರಲ್ಲಿ ನಮ್ಮ ಸವಾಲೆಂದರೆ, ನೀವು ಬರೀ ಈ ದಿನವನ್ನಾಚರಿಸಿ ಸುಮ್ಮನೆ ಇರುವವರೇ, ಇಲ್ಲಾ, ಆ ಕ್ರಾಂತಿಯ ತತ್ವದ ಸಂರಕ್ಷಣೆಗಾಗಿ ಪ್ರಯತ್ನ ಮಾಡುವವರೇ? ಈ ಯುದ್ಧದಲ್ಲಿ ರಷ್ಯನ್ ಕ್ರಾಂತಿಯ ಉಪಾಸಕರು ಪ್ರಜಾಸತ್ತೆಯ ಕಡೆಯಿಂದ ಹೋರಾಡಿ ಪ್ರಜಾಸತ್ತೆಯನ್ನು ಗೆಲ್ಲಿಸುವುದು ಅವರ ಕರ್ತವ್ಯವೆಂದು ನಮಗನಿಸುತ್ತದೆ. ಆದರೆ ಆಶ್ಚರ್ಯವೆಂದರೆ ಈ ರಷ್ಯನ್ ಕ್ರಾಂತಿಯ ಉಪಾಸಕರು, ಈ ಯುದ್ಧದಲ್ಲಿ ಬ್ರಿಟಿಷರು ಪ್ರಜಾಸತ್ತೆಯ ವತಿಯಿಂದ ಹೋರಾಡುತ್ತಿದ್ದಾರೆಂದು ಅರಿತೂ ಅವರಿಗೆ ಸಹಾಯ ಮಾಡಲು ಸಿದ್ಧರಿಲ್ಲ.

ಗುರುವು ವರ್ತಿಸಿದಂತೆಯೇ ಶಿಷ್ಯನೂ ವರ್ತಿಸಬೇಕು ಎಂಬುದೇ ಧ್ಯೆಯವಾದರೆ, ಈ ವಿಚಾರಸರಣಿ ತರ್ಕಶುದ್ಧವಾದುದೆಂದು ಒಪ್ಪಿಕೊಳ್ಳಬೇಕು. ಈ ಯುದ್ದದಲ್ಲಿ ರಷ್ಯಾದ ವರ್ತನೆ ದುರ್ಬೋಧವಿದೆಯೆಂದು ಎಲ್ಲರಿಗೂ ಕಾಣಿಸುವಂತಿದೆ. ಇಪ್ಪತ್ತು ವರ್ಷಗಳ ಹಿಂದೆಯೇ ಜರ್ಮನಿಯೊಂದಿಗೆ ಧರ್ಮಯುದ್ಧ ಸಾರಿದ ರಷ್ಯಾ, ಅದೇ ಸಾಮ್ರಾಜ್ಯಶಾಹಿಯೊಂದಿಗೆ ಒಪ್ಪಂದ ಮಾಡಿಕೊಂಡು ಪೋಲೆಂಡ್ ಮೇಲೆ ಅತಿಕ್ರಮಣ ಮಾಡಿ, ಅದನ್ನು ವಿಚ್ಛೇದಿಸಿ,

ಅದರ ಸ್ವಾತಂತ್ರ್ಯ ಹರಣ ಮಾಡಿ, ಆ ದೇಶದ ಅರ್ಧಭಾಗವನ್ನು ತನ್ನಲ್ಲಿ ವಿಲೀನ ಗೊಳಿಸಿತು. ಬಳಿಕ ರಷ್ಯಾ, ಫಿನ್‌ಲ್ಯಾಂಡ್ ಮೇಲೆ ಆಕ್ರಮಣ ಮಾಡಿ ಐದಾರು ತಿಂಗಳ ನಂತರ ಅದರ ಸ್ವಾತಂತ್ರ್ಯವನ್ನೂ ಕಸಿಯಿತು. ಬಳಿಕ, ಎಸ್ಟೋನಿಯಾ, ಲಟವಿಯಾ ಮುಂತಾದ ಬಾಲ್ಟಿಕ್ ಸಮುದ್ರ ತಟದ ಸ್ವತಂತ್ರ ರಾಷ್ಟ್ರಗಳನ್ನು ಆಕ್ರಮಿಸಿ ಅವುಗಳ ಸ್ವಾತಂತ್ರ್ಯ ಹರಣ ಮಾಡಿತು. ಮತ್ತೆ ಕಪ್ಪು ಸಮುದ್ರದ ಮೇಲೆ ತನ್ನ ವರ್ಚಸ್ಸು ಸ್ಥಾಪಿಸಲು ಅತ್ತ ತನ್ನ ದೃಷ್ಟಿ ಹೊರಳಿಸಿ ರುಮೇನಿಯಾದ ಡವ್‌ನ್ಯೂಜ್ ಎಂಬ ಪ್ರಾಂತ್ಯವನ್ನು ಗುಳಂಕರಿಸಿತು. ರಷ್ಯಾದ ಈ ಆಕ್ರಮಣಶೀಲತೆಯಿಂದ ಹಿಟ್ಲರ್‌ಗೆ, ದೊಡ್ಡ ಲಾಭವಾಯ್ತು.

ಜರ್ಮನಿಯ ಪೂರ್ವ ಭಾಗದ ಗಡಿ ಪ್ರದೇಶವು ನಿರ್ವೈರಿಯಾದ್ದರಿಂದ, ಜರ್ಮನಿಯು ತನ್ನೆಲ್ಲ ಸೈನ್ಯ ಹಾಗೂ ಯುದ್ಧ ಸಾಮಗ್ರಿಯನ್ನು ಒಂದುಗೂಡಿಸಿ ಪಶ್ಚಿಮ ಗಡಿಪ್ರದೇಶದ ರಾಷ್ಟ್ರಗಳನ್ನು ಆಕ್ರಮಿಸುವುದು ಸುಲಭವೂ, ಸರಳವೂ ಆಯ್ತು. ಫ್ರಾನ್ಸ್, ಬೆಲ್ಸಿಯಮ್, ನಾರ್ವೆ, ಹಾಲೆಂಡ್ ದೇಶಗಳನ್ನು, ಜರ್ಮನಿ ತುಳಿಯಲು ಶಕ್ಯವಾಯ್ತು; ಇದರ ಜವಾಬ್ದಾರಿ ರಷ್ಯಾದ ಮೇಲೇ ಬರುತ್ತದೆಂದು ನಮಗನಿಸುತ್ತದೆ. ಜರ್ಮನಿಯು ಫ್ರಾನ್ಸ್, ಬೆಲ್ಜಿಯಮ್, ನಾರ್ವೆ ಮುಂತಾದ ಪಶ್ಚಿಮ ಸರಹದ್ದಿನ ರಾಷ್ಟ್ರಗಳ ಸ್ವಾತಂತ್ರ್ಯ ನಷ್ಟ ಮಾಡಿದ್ದಷ್ಟೇ ಅಲ್ಲ, ಎಲ್ಲ ಬಾಲ್ಕಮ್ ರಾಷ್ಟ್ರಗಳ ಮೇಲೆ ತಮ್ಮ ಆಧಿಪತ್ಯ ಸ್ಥಾಪಿಸುವ ಉಪಕ್ರಮಕ್ಕೆ ತೊಡಗಿದರು. ಝೆಕೊಸ್ಲೊವಾಕಿಯಾ ಕೂಡ ಅಸ್ತಂಗತವಾಗುತ್ತಾ ಬಂದಿತು..ರುಮಾನಿಯಾ ಜರ್ಮನಿಯ ಹಸ್ತಗತವಾಯ್ತು. ಜರ್ಮನಿಯ ಜೊತೆಗಾರ ಇಟಲಿಯು ಗ್ರೀಸ್‌ನ ಮೇಲೆ ಆಕ್ರಮಣ ಮಾಡಿದೆ. ಈ ಎಲ್ಲ ಭಾಗ ಜರ್ಮನಿ ಮತ್ತು ಇಟಲಿಯ ಸ್ವಾಧೀನವಾದರೆ ರಷ್ಯಾಕ್ಕೆ ಯಾವ ಆಸೆಯೂ ಉಳಿಯುವುದಿಲ್ಲ. ಕ್ರಮೇಣ ರಷ್ಯಾ ದುಸ್ಥಿತಿಗೀಡಾಗುವುದು ಎಂದು ರಷ್ಯನ್ ಕ್ರಾಂತಿಯ ಉಪಾಸಕರೇ ಒಪ್ಪಿಕೊಳ್ಳುತ್ತಾರೆ. ರಷ್ಯಾ ಮಾಡಿದ ಅತಿಕ್ರಮಣ ಒಂದುವೇಳೆ ಕ್ಷಮ್ಯವೆನ್ನಬಹುದು. ಈ ಯುದ್ಧದಲ್ಲಿ ಕಸಿದ ಪ್ರದೇಶವೆಲ್ಲವೂ ಹಿಂದೆ ಅದರದೇ ಆಗಿತ್ತು. ರಷ್ಯಾದ ಕ್ಷೇತ್ರ, ಸಂಖ್ಯಾಬಲ, ಶಸ್ತ್ರಾಗಾರ ಕಡಿಮೆಯಾಗಲೆಂದು, ಕಳೆದ ಯುದ್ಧದಲ್ಲಿ ರಷ್ಯಾದ ದುರವಸ್ಥೆಯ

ಲಾಭ ಪಡೆದು, ಆ ಪ್ರಾಂತ್ಯವನ್ನು ಇಂಗ್ಲೆಂಡ್ ಮತ್ತು ಫ್ರಾನ್ಸ್, ಒಪ್ಪಂದದ ವೇಳೆ ರಷ್ಯಾದಿಂದ ಕಿತ್ತು ಸ್ವತಂತ್ರ ರಾಷ್ಟ್ರವಾಗಿಸಿದರು. ಅದನ್ನು ರಷ್ಯಾ ಈ ಯುದ್ಧದಲ್ಲಿ ಹಿಂದೆ ಪಡೆದು ತಮ್ಮ ಈಗಿನ ಗಡಿ ಪ್ರದೇಶವನ್ನು ಪೂರ್ವ ಗಡಿ ಪ್ರದೇಶದೊಡನೆ ಸೇರಿಸಿತು. ರುಮೇನಿಯಾ ಮತ್ತು ಗ್ರೀಸ್ ಪ್ರಾಂತ್ಯವನ್ನು ಜರ್ಮನಿ ಆಕ್ರಮಿಸಿದಾಗ ರಷ್ಯಾ ತನ್ನ ಧೋರಣೆಯನ್ನು ಬದಲಿಸಬಹುದೆಂಬ ಆಶೆ ಹಲವರಿಗಿತ್ತು. ಆದರೆ ಮಾಸ್ಕೋದಿಂದ ನವೆಂಬರ್ ಆರರಂದು ಸೋವಿಯೆಟ್ ಸರಕಾರದ ಸುಪ್ರೀಮ್ ಕೌನ್ಸಿಲ್‌ನ ಅಧ್ಯಕ್ಷ ಕಾಲಿನಿನ್, ಮಾಸ್ಕೋ ಶಹರದಲ್ಲಿ ಸೋವಿಯೆಟ್ ಸಭಾಸದರೆದುರು ಮಾಡಿದ ಭಾಷಣ ದಿನಾಂಕ೧೩ ರಂದು ಇಲ್ಲಿಗೆ ಬಂದಿದೆ. ಅದರಲ್ಲಿ ಅಂತಹ ಆಸೆ ಹುಟ್ಟುವಂಥ ಕುರುಹೇನೂ ಕಂಡು ಬಂದಿಲ್ಲ. ಆ ಭಾಷಣದಲ್ಲಿ, “ಈ ಯುದ್ದದಲ್ಲಿ ಯಾವ ಪಕ್ಷವನ್ನೂ ತೆಗೆದುಕೊಳ್ಳುವ ಇರಾದೆ ರಷ್ಯಾಕ್ಕಿಲ್ಲ. ಈ ಯುದ್ಧದಲ್ಲಿ ರಷ್ಯಾ ತಟಸ್ಥವಾಗಿರುವುದು” ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಒಂದೊಮ್ಮೆ ರಷ್ಯನ್ ಕ್ರಾಂತಿಯ ನಾಯಕರು, ರಷ್ಯಾದಲ್ಲಿ ಸಮತೆ ಸ್ಥಾಪಿಸಿ ಓಡಿಹೋಗಲಿಕ್ಕಿಲ್ಲ, ಎಂದು ಹೇಳಿದ್ದರು. ಮಿಶನರಿಗಳು ಜಗದಲ್ಲೆಲ್ಲಾ ತಮ್ಮ ಧರ್ಮದ ಪ್ರಚಾರವನ್ನು ಮಾಡುತ್ತಿರುವಂತೆ ರಷ್ಯಾ ಕೂಡ ತನ್ನ ಸಮತೆಯ ಪ್ರಚಾರವನ್ನು ಜಗತ್ತಿನಲ್ಲೆಲ್ಲ ಮಾಡಬೇಕು. ಇದಕ್ಕಾಗಿ ಅವರು ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಜಗತ್ತಿನಲ್ಲೆಲ್ಲ ಹಸ್ತಕರನ್ನು ನೇಮಿಸಿ ನಿಷ್ಠೆಯಿಂದ ಆ ಕಾರ್ಯಕ್ಕೆ ತೊಡಗಿದ್ದರು. ಕಾಲಿನಿನ್ ಅವರ ಭಾಷಣವನ್ನು ನೋಡಿದರೆ, ಅಂದಿನ ಮತ್ತು ಇಂದಿನ ರಷ್ಯಾದ ಧೋರಣೆಯಲ್ಲಿ ಭೂಮ್ಯಾಕಾಶದ ಅಂತರ ಗೋಚರಿಸುತ್ತದೆ. ಧ್ಯೈಯದ ದೃಷ್ಟಿಯಿಂದ ರಷ್ಯಾ ಇಂದು ಶೂನ್ಯವೇ ಆಗಿದೆ. ಇಂಗ್ಲಿಷರ ದ್ವೇಷವೆಂದು ಅವರ ಜೊತೆಗೂಡಿ ಕಾದಲಿಕ್ಕಿಲ್ಲ ಎಂದರೆ ಬೇರೆ ವಿಷಯ. ಈ ಯುದ್ದ ಇಂಗ್ಲಿಷ್ ಜನರ ಮೂರ್ಖತೆಯ ಪರಮಾವಧಿ ಎಂಬುದನ್ನು ಯಾರೂ ಅಡಗಿಸಿಡುವಂತಿಲ್ಲ.

ಆದರೆ ಹೀಗೆ ಸ್ವಲ್ಪವೂ ಇಂಗ್ಲೆಂಡ್‌ಗೆ ಸಹಾಯ ಮಾಡುವುದಿಲ್ಲವೆಂದೇ ರಷ್ಯಾ ಹೇಳುವುದಾದರೆ, ಮತ್ತೆ ಯಾವ ಬಾಯಿಯಿಂದ ಹಿಟ್ಲರ್‌ನೊಡನೆ ಸ್ನೇಹ ಬೆಳೆಸುವುದೆಂದು ನಮಗೆ ತಿಳಿಯುತ್ತಿಲ್ಲ. ಹಿಟ್ಲರ್ ರಷ್ಯಾವನ್ನು ಕಡಿಮೆಯೇನೂ ದ್ವೇಷಿಸಿರಲಿಲ್ಲ. ರಷ್ಯಾದ ದ್ವೇಷದಿಂದಲೇ ನಾಝಿ ಪಕ್ಷವನ್ನು ಎತ್ತಿ ನಿಲ್ಲಿಸಲಾಯಿತು. ರಷ್ಯಾದ ನಾಶವೊಂದೇ ತನ್ನ ಧ್ಯೇಯವೆಂದು ಹಗಲು, ರಾತ್ರಿ ಹಿಟ್ಲರ್ ಘೋಷಿಸಿದ್ದ. ಈ ಯುದ್ಧದಲ್ಲಿ ರಷ್ಯಾದ ವರ್ತನೆ ಎಷ್ಟು ದೋಷಪೂರ್ಣವೆಂಬುದನ್ನು ನಾನಿಲ್ಲಿ ಹೇಳಿದ್ದೇನೆ. ರಷ್ಯನ್ ಕ್ರಾಂತಿಯ ಉಪಾಸಕರಿಗೆ ಇದು ಇಷ್ಟವಾಗಲೂಬಹುದು, ಆಗದಿರಲೂ ಬಹುದು. ಆದರೆ ಅವರೆಲ್ಲರನ್ನು ನಾನು ಕೇಳಬಯಸುತ್ತೇನೆ, ; ನೀವು ಹೀಗೆ ಕ್ರಾಂತಿಯ ಉಪಾಸನೆ ಮಾಡುತ್ತಾ ಕುಳಿತಿರುವವರೋ, ಇಲ್ಲಾ, ಸಮತೆ, ಸ್ವಾತಂತ್ರ್ಯದ ಧ್ಯೈಯದ ರಕ್ಷಣೆ ಮಾಡುವವರೋ? ಕ್ರಾಂತಿ ದೊಡ್ಡದೋ, ಧ್ಯೇಯ ದೊಡ್ಡದೋ ಎಂಬುದನ್ನು ಎಲ್ಲರೂ ನಿರ್ಧರಿಸಬೇಕು. ಮತ್ತು ಕ್ರಾಂತಿಗಿಂತ ಧ್ಯೇಯ ದೊಡ್ಡದೆಂಬುದು ನಿರ್ವಿವಾದವಾದ್ದರಿಂದ, ರಷ್ಯಾ ಏನು ಮಾಡುವುದೋ, ಬಿಡುವುದೋ ಎಂಬತ್ತ ಲಕ್ಷ್ಯ ತಿರುಗಿಸಿ ಧ್ಯೇಯದ

ಸಂರಕ್ಷಣೆಗಾಗಿ, ನಡೆದಿರುವ ಯುದ್ಧದಲ್ಲಿ ಮನಃಪೂರ್ವಕವಾಗಿ ಭಾಗವಹಿಸುವುದು ಎಲ್ಲರ ಪರಮ ಕರ್ತವ್ಯ ಮತ್ತು ರಷ್ಯನ್ ಕ್ರಾಂತಿಯ ನಿಜವಾದ ಉಪಾಸನೆ. * * * *

**೯೦. ಕಾರ್ಮಿಕಶಾಹಿಗೆ ಜಯವಾಗಲಿ**

ನವೆಂಬರ್ ೮ ರಂದು ರಷ್ಯನ್ ರಾಜ್ಯಕ್ರಾಂತಿಯ ದಿನಾಚರಣೆ. ಅಂದು ಜಗತ್ತಿನ ರೈತರೂ, ಕಾರ್ಮಿಕರೂ ಒಂದೆಡೆ ಸೇರಿ ಕಾರ್ಮಿಕಶಾಹಿಯ ಘೋಷಣೆ ಕರೆಯುವ ಕ್ರಮವಿದೆ. ಮುಂಬಯಿಯ ಕಾರ್ಮಿಕರು ಸಹ ಈ ದಿನವನ್ನು ಎಂದೂ ಮರೆಯಲಾರರು. ಕೆಲ ವರ್ಷಗಳ ಹಿಂದೆ ಮುಂಬಯಿಯಲ್ಲಿ ನಡೆದ ಒಂದು ದಿನದ ಮುಷ್ಕರದಲ್ಲಿ ಕಾಂಗ್ರೆಸ್ ಆಡಳಿತವು ಇಬ್ಬರು ಕಾರ್ಮಿಕರನ್ನು ಬಲಿ, ತೆಗೆದುಕೊಂಡು ತಮ್ಮ ತೋರಿಕೆಯ ಅಹಿಂಸೆಯ ಸ್ವರೂಪವನ್ನು ಜಗಜ್ಜಾಹೀರು ಮಾಡಿದ್ದಾರೆ. ಜಗತ್ತಿನ ಯಾವುದೇ ದೇಶದಲ್ಲಿ ರೈತರೂ, ಕಾರ್ಮಿಕರೂ ಬಹುಸಂಖ್ಯೆಯಲ್ಲಿದ್ದು ನಿಜವಾದ ಪ್ರಜಾಸತ್ತೆಯನ್ನು ಜಗತ್ತಿನಲ್ಲಿ ಹುಟ್ಟುಹಾಕಬೇಕಿದ್ದರೆ, ಕಾರ್ಮಿಕಶಾಹಿಯ ಉದಯವೇ ಆಗಬೇಕೆಂಬುದರಲ್ಲಿ ಸಂಶಯವಿಲ್ಲ. ಜಗತ್ತಿನಲ್ಲಿ ಮಾನವ ಸಮಾಜದಲ್ಲಿ ಕ್ರಾಂತಿ ಯಶಸ್ವಿ ಆಗಬೇಕಿದ್ದರೆ, ನಿಜವಾದ ಪ್ರಜಾಸತ್ತೆಯ, ಅಂದರೆ, ಕಾರ್ಮಿಕಶಾಹಿಯ ಪ್ರಚಾರ ಆಗಬೇಕು. ಈ ದೃಷ್ಟಿಯಿಂದ ನೋಡಿದರೆ ಜಗತ್ತಿನಲ್ಲಿ ಈ ವರೆಗೆ ನಡೆದ ಕ್ರಾಂತಿ ವ್ಯರ್ಥವೇ ಆಗಿದೆ. ಇಂಗ್ಲೆಂಡ್‌ನಲ್ಲಿ ಕ್ರಾಂತಿಯಾಗಿ ಅಲ್ಲಿನ ರಾಜ್ಯಸೂತ್ರ ಬರೇ ಧನಿಕ ವರ್ಗದ ಕೈಗೆ ಹೋಗಿ, ನಿಜವಾದ ಪ್ರಜಾಸತ್ತೆ ಅಸ್ತಿತ್ವಕ್ಕೆ ಬರುವುದು ಸಾಧ್ಯವಾಗಲಿಲ್ಲ. ಫ್ರೆಂಚ್ ರಾಜ್ಯಕ್ರಾಂತಿಯು: ಸಮತೆ, ಸ್ವಾತಂತ್ರ್ಯ ಮತ್ತು ಬಂಧುತ್ವ" ಎಂಬ ಪ್ರಜಾಸತ್ತೆಯ ತತ್ವದ ಘೋಷಣೆ ಮಾಡಿತು. ಆದರೆ ಬಂಡವಾಳಶಾಹಿಗಳ ಕೈಗೆ ರಾಜ್ಯಸತ್ತೆ ಹೋಗಿ, ಆ ಘೋಷಣೆಯೂ ವ್ಯರ್ಥವಾಯ್ತು. ರಷ್ಯನ್ ಕ್ರಾಂತಿಯು ಒಂದು ಹೆಜ್ಜೆ ಮುಂದೆ ಹೋಯೆನ್ನಬಹುದು ಆದರೆ ರಷ್ಯನ್ ಕ್ರಾಂತಿಯು ಬಂಡವಾಳಶಾಹಿಯ ಬಂದೋಬಸ್ತ್ ಮಾಡಿದ್ದರೂ, ರಷ್ಯಾದಲ್ಲಿ ಕಾರ್ಮಿಕ ವರ್ಗದ ಕೈಗೆ ರಾಜ್ಯಸತ್ತೆ ಬರದುದು ಆ ಕ್ರಾಂತಿಯ ದೊಡ್ಡ ವೈಫಲ್ಯ. ರಷ್ಯಾದಲ್ಲಿ ಎಲ್ಲ ರಾಜ್ಯಸತ್ತೆಯೂ ಒಂದೇ ಬೂರ್ಜ್ವಾ ಪಕ್ಷದ ಆಳ್ವಿಕೆಯಲ್ಲಿದೆ. ಜಗತ್ತಿನಲ್ಲಿ ನಿಜವಾದ ಕಾರ್ಮಿಕಶಾಹಿ ತರಬೇಕಿದ್ದರೆ, ಅದರ ಅಡಿಪಾಯ ಪ್ರಜಾಸತ್ತೆಯ ತತ್ವದ ಮೇಲೆ ರಚಿಸಲ್ಪಟ್ಟಿರಬೇಕು. ಸರ್ವಾಧಿಕಾರದ ಬೂರ್ಜ್ವಾಶಾಹಿಯ ಮೇಲೆ ನಿರ್ಮಿತವಾದ ಕ್ರಾಂತಿ ಎಂದಿಗೂ ಚಿರಸ್ಥಾಯಿಯಾಗುವುದು ಶಕ್ಯವಿಲ್ಲ.

ಮೇಲಿನ ವಿಚಾರಸರಣಿ ಸರಿಯಿದ್ದು, ನಮಗೆ ಯಾವ ಕಾರ್ಮಿಕಶಾಹಿ ಬೇಕಿದೆಯೋ ಅದು ಪ್ರಜಾಸತ್ತೆಯಲ್ಲಿ ಸಮಾಜಸತ್ತೆಯ ತತ್ವದ ಮೇಲೆ ಆಧಾರಿತವಾಗಿರಬೇಕು. ನಮಗೆ ಬೇಕಿರುವ ಪ್ರಜಾಸತ್ತೆಯ ಕಾರ್ಮಿಕಶಾಹಿಯು ಮುಷ್ಟಿಯಷ್ಟು ಬಂಡವಾಳದಾರರಿಂದ ಮತ್ತು ಬೂರ್ಜ್ವಾಶಾಹಿಯಿಂದ ಅಲಿಪ್ತವಾಗಿರಬೇಕು. ಹೀಗಾಗದೆ ಕೇವಲ ನಾಮಮಾತ್ರ ಕಾರ್ಮಿಕಶಾಹಿಯಿಂದ ಕಾರ್ಮಿಕವರ್ಗದ ನಿಜವಾದ ಕಲ್ಯಾಣವಾಗುವುದು ಮೃಗಜಲದಿಂದ ಬಾಯಾರಿಕೆ

ತಣಿಸಿದಷ್ಟೇ ಅಶಕ್ಯವಾದುದು. ಹಾಗೆಂದೇ ಜಗತ್ತಿನಲ್ಲಿ ನಿಜವಾದ ಹೊಸ ಕಾರ್ಮಿಕಶಾಹಿ ಸಂಭವವಾಗಬೇಕಿದ್ದರೆ, ಜಗತ್ತಿನ ಪ್ರಜಾಸತ್ತಾತ್ಮಕ ರಾಷ್ಟ್ರಗಳು ತಮ್ಮ ಬಂಡವಾಳಶಾಹಿ ಧೋರಣೆ ಬಿಟ್ಟುಬಿಡಬೇಕು. ಹಾಗಾದರೆ ಸಮಾಜಸತ್ತಾವಾದಿ ರಷ್ಯಾ ಮತ್ತು ಪ್ರಜಾಸತ್ತಾತ್ಮಕ ರಾಷ್ಟ್ರಗಳು ಒಂದಾಗಿ, ಜಗತ್ತಿನಲ್ಲಿ ಹೊಸಯುಗ ಆರಂಭವಾದೀತೆಂದು ಅನಿಸುತ್ತದೆ.



ಜಾಗತಿಕ ಕಲ್ಯಾಣಕ್ಕಾಗಿ ಮೇಲೆ ತೋರಿದಂತೆ ರಷ್ಯಾ ಮತ್ತು ಜಗತ್ತಿನ ಇತರ ಪ್ರಜಾಸತ್ತಾತ್ಮಕ ರಾಷ್ಟ್ರಗಳ ಸಹಕಾರ ಅಗತ್ಯ. ಆದರೆ, ಇಂದಿಗೂ ಅಂತಹ ಸುಯೋಗದ ಸಂಭವ ಕಾಣಿಸುತ್ತಿಲ್ಲ. ಪ್ರಸಕ್ತ ಪ್ರಜಾಸತ್ತೆಯ ವಿರುದ್ಧ ಹಿಟ್ಲರ್‌ಶಾಹಿಯ, ಈ ಮಧ್ಯೆ ನಡೆದಿರುವ ಮಹಾಯುದ್ಧದಲ್ಲಿ ರಷ್ಯಾದ ಸ್ಟಾಲಿನ್‌ಶಾಹಿಯ, ಜರ್ಮನಿಯ ಹಿಟ್ಲರ್‌ಶಾಹಿಯ ಜೊತೆಯಾಟ ನಡೆದಿದೆ. ಈ ಪರಿಸ್ಥಿತಿಯಲ್ಲಿ ಪ್ರಜಾಸತ್ತಾತ್ಮಕ ರಾಷ್ಟ್ರಗಳು ಹಿಟ್ಲರ್‌ಶಾಹಿಗೆ ದನಿ ಕೊಡಬೇಕಾಗಿ ಬಂದಿದೆ. ಜಗತ್ತಿನಲ್ಲಿ ಹಿಟ್ಲರ್‌ಶಾಹಿಗೆ ಜಯವಾಗುವುದೇ? ಪ್ರಜಾಸತ್ತೆ ಯಶಸ್ವಿಯಾಗಿ ಹೊಸಜಗದ, "ಸ್ವಾತಂತ್ರ್ಯ, ಸಮತೆ ಮತ್ತು ಬಂಧುತ್ವ" ಎಂಬ ತ್ರಿಕಾಲಬಾಧಿತ ತತ್ವದ ಮೇಲೆ ಮನರ್ಘಟನೆ ಆಗುವುದೇ ಎಂಬ ಪ್ರಶ್ನೆಯನ್ನು ಈ ಯುದ್ಧ ಹುಟ್ಟು ಹಾಕಿದೆ. ಈ ಸಂಧರ್ಭ, ಎಲ್ಲ ಪ್ರಜಾಸತ್ತಾತ್ಮಕ ಮತ್ತು ಕಾರ್ಮಿಕಶಾಹಿಯ ಮುತ್ಸದ್ದಿಗಳು, ಈ ಯುದ್ಧದಲ್ಲಿ ಪ್ರಜಾಸತ್ತಾತ್ಮಕ ರಾಷ್ಟ್ರಗಳಿಗೆ ಸಾಧ್ಯವಿದ್ದಷ್ಟು ಶಾರೀರಿಕ, ಮಾನಸಿಕ ಮತ್ತು ಆರ್ಥಿಕ ಸಹಾಯವನ್ನಿತ್ತು ಈ ಹಿಟ್ಲರ್‌ಶಾಹಿಯ ಪಿಶಾಚಿಗಳಿಗೆ ಕೋಳ ತೊಡಿಸುವುದೇ ಅವರ ನಿಜವಾದ ಕರ್ತವ್ಯವಲ್ಲವೇ?

* * * *

## ೯೧. ಪ್ರತಿಯೊಬ್ಬರ ಕಟಾಕ್ಷ ಮಹಾರರ ಮೇಲೆ

ಏನೇ ಇರಲಿ ಮಹಾರ ಜಾತಿಯ ಜನರು ಎಲ್ಲರ ಕಣ್ಣಿಗೆ ಚುಚ್ಚುತ್ತಾರೆ. ಪೇಶ್ವೆಕಾಲದಲ್ಲಿ ಆಸ್ಪೃಶ್ಯತೆ ತುಂಬ ಕಠೋರವಾಗಿತ್ತು. ಅದರ ಧಗೆ ಮಹಾರರಿಗೆ ಹತ್ತಿಕೊಂಡಷ್ಟು ಉಳಿದ ಯಾವ ಆಸ್ಪೃಶ್ಯ ಜಾತಿಯವರಿಗೆ ಹತ್ತಿಕೊಳ್ಳಲಿಲ್ಲ. ಆಸ್ಪೃಶ್ಯರು ನೋಡಿದ ಕೂಡಲೇ ಗುರುತು ಸಿಗಲೆಂಬ ಕಾರಣಕ್ಕೆ ಕೊರಳಲ್ಲಿ ಕರಿದಾರ ಕಟ್ಟುವ ನಿಯಮ ಜಾರಿಗೆ ಬಂತು. ಆದರೆ ಕಟ್ಟಿದ್ದು ಮಾತ್ರ ಮಹಾರರ ಕೊರಳಿಗೆ! ಆಸ್ಪೃಶ್ಯರ ಹೆಜ್ಜೆಯ ಗುರುತಿನಿಂದ ಮೈಲಿಗೆಯಾದ ಧೂಳನ್ನು ಅಳಿಸಿಹಾಕಲು ಅವರ ಸೊಂಟಕ್ಕೆ ಕಸಬರಿಗೆ ಕಟ್ಟಬೇಕೆಂಬ ಆಜ್ಞೆಯನ್ನು ಪೇಳ್ವೆಯವರು ಹೊರಡಿಸಿದರು. ಆದರೆ ಅವನ್ನೂ ಕಟ್ಟಿದ್ದು ಕೇವಲ ಮಹಾರರ ಸೊಂಟಕ್ಕೆ ಆಸ್ಪಶ್ಯರ ಉಗುಳು ನೆಲಕ್ಕೆ ಬಿದ್ದರೆ, ಆದರ ಮೇಲೆ ಕಾಲಿಟ್ಟರೆ ಮೈಲಿಗೆಯಾಗುತ್ತದೆ ಎಂಬ ಕಾರಣಕ್ಕಾಗಿ ಅವರ ಉಗುಳನ್ನು ಸಂಗ್ರಹಿಸಲು, ಅದು ರಸ್ತೆಯ ಮೇಲೆ ಬೀಳದಂತೆ ತಡೆಗಟ್ಟಲು ಅವರ ಕೊರಳಿಗೆ ಮಡಕೆ ಕಟ್ಟುವ ಆಜ್ಞೆ ಹೊರಬಿತ್ತು. ಮತ್ತೆ ಮಡಕೆ ಕಟ್ಟಿದ್ದು ಮಹಾರರ ಕೊರಳಿಗೆ, ಅಸ್ಪೃಶ್ಯ ಹಿಂದೂಗಳು ಮಹಾರರಿಗೆ ಕೊಟ್ಟ ಉಪಟಳವನ್ನು ಇತರ ಯಾವ ಆಸ್ಪೃಶ್ಯ ಜಾತಿಯವರಿಗೂ ಕೊಡಲಿಲ್ಲ. ಹಿಂದೂಗಳು ಮಹಾರರ ಮೇಲೆ ಇಷ್ಟೆಲ್ಲ ಕಟಾಕ್ಷವಿಡಲು ಏನು ಕಾರಣ ಎನ್ನುವದು ಗೊತ್ತಾಗುತ್ತಿಲ್ಲ. ಆದರೆ ಉಭಯತರಲ್ಲಿರುವ ಶತ್ರುತ್ವ ಮಾತ್ರ ತೀರ ಪುರಾತನ ಎನ್ನುವದು ಮಾತ್ರ ಸತ್ಯ. ಇದಕ್ಕೆ ಮಹಾರರ ಜಾತಿ ಚಳವಳಿ ಕಾರಣವಾಗಿರಬಹುದು. ಆಂಗ್ಲ ಸರಕಾರ ಬಂದ ಮೇಲೂ ಮಹಾರರು ತಮ್ಮ ಚಳವಳಿಯನ್ನು ದಿಟ್ಟತನದಿಂದ ಮುಂದುವರಿಸಿದರು. ಆಸ್ಪೃಶ್ಯರ ಉನ್ನತಿಯ ಕಾದಾಟಕ್ಕೆ ಅವರು ಕಂಕಣಬದ್ಧರಾದರು. ೧೮೮೯ರಲ್ಲಿ ಪುಣೆಯಲ್ಲಿ ಕಾಂಗ್ರೆಸ ಆಧಿವೇಶನ ನಡೆದಾಗ ಮಹಾರರು ಹಿಂದೂ ಧರ್ಮದ ಪ್ರತಿಕೃತಿಯನ್ನು ಸುಟ್ಟರು. ಆಸ್ಪೃಶ್ಯರನ್ನು ಗುಲಾಮಗಿರಿಯಲ್ಲಿರಿಸಿ ಸ್ವರಾಜ್ಯವನ್ನು ಬೇಡುವ ಅಧಿಕಾರ ನಿಮಗೆಲ್ಲಿದೆ ಎಂದು ಅಧಿವೇಶನದಲ್ಲಿ ಪ್ರಶ್ನೆ ಕೇಳಿದ್ದೂ ಮಹಾರರೇ. ಇದರಿಂದಾಗಿ ಸನಾತನ ಹಿಂದೂಗಳ ವಿರೋಧಕ್ಕೆ ರಾಜಕಾರಣದ ಹಿಂದೂಗಳ ಬೆಂಬಲ ಸಿಕ್ಕಂತಾಯಿತು. ಆಸ್ಪಶ್ಯರ ಉನ್ನತಿಯ ಕಾಯಕವನ್ನು ಗಾಂಧೀಜಿಯವರು ಕೈಗೆತ್ತಿಕೊಂಡಾಗ ಹಿಂದೂಗಳು ಮಹಾರರುಗಳನ್ನು ಒಳಗೆ ಕರೆದುಕೊಳ್ಳಬಹುದು ಎಂದುಕೊಂಡಿದ್ದೆವು. ಆದರೆ ಆಸೆಯೂ ವಿಫಲವಾಯಿತು. ಗಾಂಧಿಯವರು ಸ್ಥಾಪಿಸಿದ ಹರಿಜನ ಸೇವಕ ಸಂಘದ ಪ್ರಣೇತರಾದ ಠಕ್ಕರ ಬಾಪ್ಪಾ (ಠಕ್ಕ ಬಾಪ್ಪಾ ಅಲ್ಲ) ಅವರು, ಸರಕಾರದ ಸೌಲತ್ತಿನ ಲಾಭವನ್ನು ಮಹಾರರೇ ಪಡೆಯುತ್ತಿರುವುದರಿಂದ ಇದನ್ನು ನಿರ್ಬಂಧಿಸಬೇಕೆಂದು ಮುಂಬೈ ಇಲಾಖೆಯ ಬ್ಯಾಕ್‌ವರ್ಡ್ ಕ್ಲಾಸ್ ಬೋರ್ಡಿಗೆ ತಕರಾರು ಸಲ್ಲಿಸಿದರು. ಸತ್ಯ ಸಂಗತಿ ಏನು ಅನ್ನುವದು ವಿಚಾರಣೆಯ ಬಳಿಕ ಗೊತ್ತಾಗುತ್ತದೆ. ಆದರೆ ಮಹಾರರ ಬಗೆಗೆ ಹಿಂದೂಗಳ ಉದರದಲ್ಲಿ ಅದೆಷ್ಟು ನಂಜು ತುಂಬಿಕೊಂಡಿದೆ ಎನ್ನುವದು ಸ್ಪಷ್ಟವಾಗುತ್ತದೆ. ಇಷ್ಟು

* ಪರಿಶಿಷ್ಟ ಕ್ರಮಾಂಕ - ೨೦. ನೋಡಿ



ದಿನ ಕೇವಲ ಹಿಂದೂಗಳಷ್ಟೇ ಮಹಾರರನ್ನು ದ್ವೇಷಿಸುತ್ತಿದ್ದರು. ಅವರ ಜೊತೆಗೆ ಈಗ ಸಮಗಾರರೂ ಮಾದಿಗರೂ ಸೇರಿದ್ದಾರೆ. ಅವರೂ ಮಹಾರರನ್ನು ದ್ವೇಷಿಸಲು ಆರಂಭಿಸಿದ್ದು ಕಂಡುಬರುತ್ತಿದೆ. ಮಹಾರರನ್ನು ದ್ವೇಷಿಸುವುದನ್ನು ಬಿಟ್ಟು ಬೇರೆ ಯಾವ ಕಾರ್ಯವನ್ನು ಮಾಡಿದ್ದೂ ಕಂಡು ಬರುವುದಿಲ್ಲ. ಮಹಾರರ ವಿರುದ್ಧ ಸಮಗಾರರೂ ಮಾದಿಗರೂ ಸಿಡಿದೇಳಲು ಹಿಂದೂಗಳೇ ಕಾರಣವೆಂಬ ವಿಶ್ವಾಸ ನನ್ನದು. ಆದರೆ ಮಹಾರರ ವಿರುದ್ಧ ಎದ್ದ ಸಮಗಾರ ಮಾದಿಗರಿಗೆ ನಾನು ಕೇಳುವದಿಷ್ಟೇ: ಮಹಾರರ ಶ್ರಮದಿಂದ, ಚಳವಳಿಯಿಂದಾಗಿಯೇ ಈ ಸವಲತ್ತುಗಳೂ ಸಿಕ್ಕಿವೆ. ಮಹಾರರ ಮೇಲೆ ಆರೋಪ ಮಾಡುವದೇ ಆಗಿದ್ದರೆ, ಯಾವುದು ಸತ್ಯವೋ ಅದನ್ನಷ್ಟೇ ಮಾಡಿ. ಹುರುಳಿಲ್ಲದ ವಿಷಯವನ್ನು ಪ್ರಸ್ತಾಪ ಮಾಡಬೇಡಿ. ಸದ್ಯಕ್ಕಂತೂ ಎಲ್ಲೆಡೆ ಮಹಾರರ ವಿರುದ್ಧ ಅಸಮಾಧಾನ ಕಂಡುಬರುತ್ತಿದೆ. ಈಗಷ್ಟೇ ನಾಗಪುರದ ನವಮತವಾದಿ ಮಾತಂಗ ಸಮಾಜದವರು ಕೌಂಡಣ್ಯಪುರ ಎಂಬಲ್ಲಿ ಕಳೆದ ನವೆಂಬರ್ ತಿಂಗಳಲ್ಲಿ ಮಧ್ಯಪ್ರಾಂತ ವರಾಡ ಮಹಾರೇತರ 'ಹರಿಜನ' ಪರಿಷತ್ತನ್ನು ಆಯೋಜಿಸಲಾಗಿತ್ತು. ಅಲ್ಲಿ ಹುಸಿ ಆರೋಪದ ಮಾತು ಕೇಳಿಬಂತು. ಆ ಪರಿಷತ್ತಿನಲ್ಲಿ ಮಹಾರ ಸಮಾಜವು "ಮಹಾರೇತರ ಹರಿಜನರನ್ನು ಶೋಷಣೆ ಮಾಡುತ್ತಿದೆ, ಡಾ. ಅಂಬೇಡ್ಕರರು ಮಹಾರೇತರ ಹರಿಜನರ ಪುಢಾರಿಯಲ್ಲ' ಎಂಬ ಎರಡು ಗೊತ್ತುವಳಿಯನ್ನು ಸ್ವೀಕರಿಸಲಾಯಿತು. ಈ ಕಾರ್ಯ ಯಾರದ್ದು ಎನ್ನುವದು ಪ್ರಾಜ್ಞರಿಗೆ ಗೊತ್ತೇ ಆಗುತ್ತದೆ. ನಾನು ಮೇಲೆ ಹೇಳಿದಂತೆ ಇದೇನು ಹೊಸದಲ್ಲ. ತೀರ ಹಳೆಯದೇ, ಆದರೆ ಈಗ ಅನಿರೀಕ್ಷಿತ. ಏಕೆಂದರೆ, ಕಾಂಗ್ರೆಸ್ ಕಾರ್ಯಾಲಯದಿಂದ ತಾವು ಆರಂಭಿಸಿದ ಸತ್ಯಾಗ್ರಹದಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದರೆ, ಅಂಥವರು ನೂಲುವದು, ಗ್ರಾಮೋದ್ಧಾರದ ಕಾರ್ಯಮಾಡುವದು ಮತ್ತು ಜಾತಿ-ಜಾತಿಯಲ್ಲಿ ಐಕ್ಯತೆ ನಿರ್ಮಾಣ ಮಾಡುವಂಥ ವಿಧಾಯಕ ಕಾರ್ಯಕ್ರಮವನ್ನು ಪ್ರಾಮಾಣಿಕವಾಗಿ ಮಾಡುವಂತೆ ಗಾಂಧೀಜಿಯು ಆದೇಶ ಅಥವಾ ಆಜ್ಞೆ ನೀಡಿದ್ದಾರೆ. ಮಗಳಿಗೆ ಮಾತಾಡಿದ್ದು ಸೊಸೆಗೆ ನೋವಾದಂತೆ ಗಾಂಧಿಯವರ ಭಾಷೆಯು

ಇಬ್ಬಂದಿತನದ್ದಲ್ಲದ್ದು ಎಂಬ ನಂಬಿಕೆ ಹಲವರಿಗೆ ಇರುವದರಿಂದ, ಗಾಂಧಿಗಣ ಸವೆದರೂ ಕಾದಾಡಿದರೂ, ಅದು ದೇಶ ಕಲ್ಯಾಣಕ್ಕಾಗಿಯೇ ಎಂದು ಹಲವರು ಭಾವಿಸುವದು ಸಹಜ. ಆದರೆ ಮೇಲಿನ ಪರಿಷತ್ತು ಕಾಂಗ್ರೆಸ್ ಪಕ್ಷದ ಚಳವಳಿಯಲ್ಲೇ ಹುಟ್ಟಿಕೊಂಡಿದ್ದು. ಇದನ್ನು ನೋಡಿದರೆ ಸಾಮಾನ್ಯ ಜನರ ಬುದ್ದಿ ಕುಂಠಿತವಾಗದೇ ಇರದು.

ಈ ಆರೋಪಕ್ಕೆ ಮಹಾರ ಜನರು ಉತ್ತರ ನೀಡುವರು. ಇಲ್ಲವೆಂದೇನಲ್ಲ. ಆದರೆ ಅನ್ಯರೇ ಕಿವಿ ಚುಚ್ಚುವದು ಶ್ರೇಯಸ್ಕರ. ಹೀಗಾಗಿ ರಾಷ್ಟ್ರವೀರರೇ ಈ ಪರಿಷತ್ತಿನ ಗೊತ್ತುವಳಿಯನ್ನು ಟೀಕಿಸಿದ್ದಾರೆ. ಅಲ್ಲಿಯ ಪರಿಚ್ಛೇದವನ್ನು ನಮ್ಮ ಸಮಗಾರ, ಮಾತಂಗ ಬಂಧುಗಳ ಕಣ್ಣು ತೆರೆಯಲೆಂದು ಇಲ್ಲಿ ನೀಡುತ್ತಿದ್ದೇನೆ. ಅವರು ಸರಿಯಾಗಿ ಯೋಚಿಸಬೇಕು. ರಾಷ್ಟ್ರವಾದಿಕಾರ ಹೇಳುತ್ತಾರೆ

“ಮಹಾರ ಸಮಾಜವು ಮಹಾರೇತರ ಹರಿಜನರನ್ನು ಶೋಷಣೆ ಮಾಡುತ್ತಿದೆ ಎಂದು ಹೇಳುವದು ಅತಿಶಯೋಕ್ತಿಯದು! ಇದರ ಮೇಲಿಂದ ಮೇಲಿನ ಮಹಾರೇತರ ಹರಿಜನ ಪರಿಷತ್ತಿನ ಒಬ್ಬ ಮನುಷ್ಯನಿಗೂ ಯಾವುದೇ ಸ್ವಾತಂತ್ರ್ಯವಿರಲಿಲ್ಲ, ಎಲ್ಲರೂ ಕಾಂಗ್ರೆಸ್ ಪುಢಾರಿಗಳ ಸಾಕಿದ ಗಿಳಿಯಾಗಿದ್ದರು ಎನ್ನುವದು ಸಿದ್ದವಾಗುವದಿಲ್ಲವೇ? ಸವರ್ಣಿಯರ ಕಾಲ್ತುಳಿತಕ್ಕೆ ಸಿಕ್ಕು, ಮಹಾರ ಸಮಾಜವೂ ಸಹ ಈಗಲೂ ಚಿಂದಿಚಿಂದಿಯಾಗುತ್ತಿದೆ. ಅವರ ಹಲ್ಲು, ಕೈ ಎರಡೂ ಮುರಿದಿವೆ. ಅಂದರೆ ಅವನೂ ಸಹ ಸವರ್ಣಿಯರಿಗಾಗಿ ಬೆವರು ಸುರಿಸಿ ದುಡಿಯುತ್ತಿದ್ದಾನೆ. ಇಂಥ ಸ್ಥಿತಿಯಲ್ಲಿ



ಅವನು ಮಹಾರೇತರ ಹರಿಜನರ ಶೋಷಣೆ ಮಾಡುತ್ತಿದ್ದಾನೆ ಎಂದು ಆಸ್ಪೃಶ್ಯ ಸಮಾಜದವರೇ ಮಾತಾಡುತ್ತಿರುವದು ದೇಶದ ದೌರ್ಭಾಗ್ಯ ಮಹಾರ ಜನರ ಕೈಯಲ್ಲಿ ಸಾವಕಾರಿತನ, ಕಾರಖಾನೆ, ಡಾಕ್ಟರ್, ವಕೀಲ, ದಲಾಲ ಮತ್ತು ಅಮಲದಾರರ ಒಂದು ಉದ್ಯೋಗವೂ ಅರ್ಧದಷ್ಟಲ್ಲ, ಕಾಲು ಅಂಶದಷ್ಟೂ ಇಲ್ಲ. ಮನೆಯ ಸೊಸೆಯ ಮಾತನ್ನೂ ಲೆಕ್ಕಿಸದೆ, ನೆಲ್ಲಿನಲ್ಲಿದ್ದ ಬೆಣ್ಣೆಯನ್ನು ಕಬಳಿಸುವಾಗ, ಅತ್ತೆ ಬರುವದನ್ನು ಕಂಡು ಗೋಪಾಲಕೃಷ್ಣನು ಕೊನೆಯ ತುತ್ತು

ತಿಂದು ಮುಗಿಸಿ, ಬೆರಳಿಗೆ ಮೆತ್ತಿಕೊಂಡಿದ್ದ ಬೆಣ್ಣೆಯನ್ನು ಸೊಸೆಯ ಮುಖಕ್ಕೆ ಒರೆಸಿದಂತಹದೇ ಚಾಣಕ್ಯ ಚಂಡೀರಾಮನ ಕಾರಸ್ತಾನ ಅಲ್ಲವೇ ಇದು?

ಪರಿಷತ್ತಿನಲ್ಲಿ ಅಧ್ಯಕ್ಷರಾದ ಮಿ. ವರ್ಹಾಡೆಯವರು ಹೇಳಿದಂತೆ ಬೋರ್ಡ್, ಅಸೆಂಬ್ಲಿ ಮುಂತಾದ ಚುನಾವಣೆಯಲ್ಲಿ ಆಸ್ಪೃಶ್ಯ ಸಮಾಜದಲ್ಲಿಯ ಮಹಾರ ಜಾತಿಯ ಅಭ್ಯರ್ಥಿಗಳು ಮಹಾರೇತರರಿಗಿಂತ ಹೆಚ್ಚು ಯಶಸ್ವಿಯಾಗುತ್ತಿರಲೂಬಹುದು, ಆಗಲಿಕ್ಕೂ ಇಲ್ಲ. ಆದರೆ ಮಹಾರ ಜನರು ಬಹುಸಂಖ್ಯೆಯಲ್ಲಿರುವದರ ಪರಿಣಾಮವಿದು. ಚುನಾವಣೆಯಲ್ಲಿ ಉಪಜಾತಿಗಳಿಗೆ ಸರಿಯಾಗಿ ಪಾಲು ಹಂಚಿ ನೀಡುವಷ್ಟು ನಾಯಕತ್ವವು ಎಂದಿಗೂ ನಿರ್ಮಾಣವಾಗುವದು ಸಾಧ್ಯವಿಲ್ಲ. ಗಾಂಧಿನೆಹರೂರಂತಹ ಮಹಾನ್ ಪುಢಾರಿಗಳು ಕಾಂಗ್ರೆಸ್ ಪಕ್ಷದಲ್ಲಿದ್ದೂ ಏಳೂ ಪ್ರಾಂತಗಳಿಗೆ ಅಲ್ಪಸಂಖ್ಯಾತ ಬ್ರಾಹ್ಮಣ ಜಾತಿಯವರೇ ಮುಖ್ಯ ಪ್ರಧಾನರಾದರು! ಹೀಗಿರುವಾಗ ಚುನಾವಣೆಯಲ್ಲಿ ಮಹಾರೇತರ ಹರಿಜನರಿಗೆ ವಾಸ್ತವಿಕ ಪಾಲುಕೊಡುವಲ್ಲಿ ಡಾ. ಅಂಬೇಡ್ಕರ್ ಸಮರ್ಥರಾಗಿಲ್ಲವಾದ್ದರಿಂದ ಅವರು ಆಸ್ಪೃಶ್ಯ ಜಾತಿಯ ಪುಢಾರಿಯಲ್ಲ ಎಂದು ಆಟವಾಡಿಸುವ ಧಣಿಗಾಗಿ ಅಪಸ್ವರ ಎತ್ತುವದು ಎಂದರೆ ಸ್ವಂತಕ್ಕೇ ಘಾತ ಮಾಡಿಕೊಂಡಂತೆ ಆಗುತ್ತದೆ. ಆದ್ದರಿಂದಲೇ ಅಸ್ಪೃಶ್ಯರ ಮಾತಂಗ ಸಮಾಜಕ್ಕೆ ಡಾ. ಅಂಬೇಡ್ಕರ ದೂರದವರಾಗಿ ಉಮರಾವತಿಯ ಡಾ. ಸಬನೀಸ್‌ರಂತಹ ಜನರು ಸನಿಹದವರೂ ಕಲ್ಯಾಣ ಮಾಡುವಂತಹವರೂ ಆದರುಒಟ್ಟಿನಲ್ಲಿ ಬಹು ಜನ ಸಮಾಜದ ಉದ್ಧಾರ ಮಾಡುವದು ಮತ್ತು ಅವರನ್ನು ಸವರ್ಣಿಯರ ಕಪಿಮುಷ್ಟಿಯಿಂದ ಹೊರತರುವಂಥ ಕೆಲಸ ತುಂಬ ಕಷ್ಟದಾಯಕವಾಗಿದ್ದರೂ ಸಮಾಜಸೇವಕರು ಅದನ್ನು ಮಾಡಲೇಬೇಕು."

* * * *

ಈ ಲೇಖನವು ೪.೧.೧೯೪೧ರ ಸಂಚಿಕೆಯಲ್ಲಿ 'ಸಂಕೀರ್ಣ ಸಮಾಲೋಚನೆ' ಎಂದು ಪ್ರಕಟಗೊಂಡಿದೆ.

## ೯೨. ರಾಜಕೀಯದಲ್ಲಿ ಹೊಸ ಸಂಪ್ರದಾಯ*

ಲಿಬರಲ್ ಜನರ ರಾಜಕೀಯವು ನಿಷ್ಕ್ರಿಯವಾಗಿದೆ ಎಂಬ ನಿಮಿತ್ತದಿಂದ ಅದು ನಗೆಪಾಟಲಿನ ಸಂಗತಿಯಾಗಿಬಿಟ್ಟಿದೆ. ಇದನ್ನು ಕುರಿತು ನಾವೇನೂ ಅನ್ನಬೇಕಿಲ್ಲ. ಇಂಥ ನಿಷ್ಕ್ರಿಯತೆಯಿಂದಾಗಿಯೇ ಲಿಬರಲ್ ಪಕ್ಷ ಅಸ್ಥಿಪಂಜರವಾಗಿ ಉಳಿದಿದೆ. ನಿಷ್ಕ್ರಿಯ ರಾಜಕೀಯಕ್ಕಿಂತ ನಿಷ್ಠೆ ಇಲ್ಲದ ರಾಜಕೀಯ ತೀರ ನಿಂದನೀಯ ಎಂಬುದನ್ನು ಕುರಿತು ಯಾರೂ ಯೋಚಿಸುವುದೇ ಇಲ್ಲ. ಇಂದು ಇಂಥ ನಿಷ್ಠೆ ಇಲ್ಲದ ರಾಜಕೀಯವು ಅದೆಷ್ಟು ಹಬ್ಬುತ್ತಿದೆ, ಎನ್ನುವುದನ್ನು ಯಾರಿಗೂ ಹೇಳಬೇಕಿಲ್ಲ. ಒಬ್ಬ ಮನುಷ್ಯನೇ ಎರಡೆರಡು, ಮೂರು ಮೂರು ಸಂಸ್ಥೆಗಳನ್ನು ಪ್ರವೇಶಿಸಿ ತಲೆಯೆತ್ತಿ ನಡೆಯುತ್ತಾನಲ್ಲದೆ ಎರಡೂ ಕಡೆಗಳ ಅಧಿಕಾರಪದವನ್ನು ಅನುಭವಿಸುತ್ತಾನೆ. ಆ ಸಂಸ್ಥೆಗಳ ಗುರಿಯಲ್ಲಿ ಸಮಾನತೆ ಇದೆಯೇ ಅಥವಾ ವಿರೋಧವಿದೆಯೇ, ಎನ್ನುವ ಯೋಚನೆ ಕೂಡ ಅವನ ಮನಸ್ಸನ್ನು ಸ್ಪರ್ಶಿಸುವುದಿಲ್ಲ. ಸ್ವತಃ ಹಿಂದೂ ಮಹಾಸಭೆಯ ಅಧ್ಯಕ್ಷರ ಸ್ಥಿತಿಯೂ ಇದೇ ಬಗೆಯದು ಎಂದೆನ್ನುತ್ತಾರೆ. ಅವರು ಬಹುಮಟ್ಟಿಗೆ ಹಿಂದೂ ಮಹಾಸಭೆಯ ಕಾಯಮ್ ಅಧ್ಯಕ್ಷರಂತೂ ಅಹುದು. ಆದರೆ ಅವರು ಚಿತ್ಪಾವನ (ಕೊಂಕಣಸ್ಥೆ) ಬ್ರಾಹ್ಮಣ ಸಭೆಯ ಅಧ್ಯಕ್ಷರೂ ಆಗಿದ್ದಾರೆಂದು ತಿಳಿದುಬರುತ್ತದೆ. ನಾಮದಾರ್ ಬೆಳವಿ ಇವರ ಸಂದರ್ಭದಲ್ಲೂ ಇಂಥದೇ ಹೊಸದೊಂದು ಸಂಗತಿಯು ನಡೆದುದು ಬೆಳಕಿಗೆ ಬಂದಿದೆ. ಒಂದು ಕಾಲಕ್ಕೆ ಅವರು ಕಾಂಗ್ರೆಸ್ಸಿನ ಭಕ್ತರಾಗಿದ್ದರು. ಆಮೇಲೆ ಕಾಂಗ್ರೆಸ್ಸಿನಿಂದ ಹೊರಬಿದ್ದರು. ಕಳೆದ ವರ್ಷ ನವೆಂಬರ್ ತಿಂಗಳಿನಲ್ಲಿ ಬೆಳಗಾವಿ ಜಿಲ್ಲೆಯ ಹಿಂದೂ ಮಹಾಸಭೆಯ ಅಧ್ಯಕ್ಷರಾದರು. ಇಷ್ಟರಲ್ಲಿಯೇ ಕರ್ನಾಟಕದ ಬ್ರಾಹ್ಮಣ ಸಭೆಯ ಒಂದು ಶಾಖೆಯನ್ನು ಬೆಳಗಾವಿಯಲ್ಲಿ ತೆರೆಯಲಾಗಿದೆ. ಅವರು ಇದರ ಅಧ್ಯಕ್ಷ ಪದವನ್ನು ಸ್ವೀಕರಿಸಲೂ ಮುಂದಾದರು. ಇಂಥ ವಿಚಿತ್ರವಾದ ನಿದ್ದೆ ಇಲ್ಲದ ರಾಜಕೀಯ ಎಳ್ಳಷ್ಟೂ ಅರ್ಥವಾಗದ ಸಂಗತಿ. ಇದರ ಕಾರಣ ಅಗ್ಗದ ಜನಪ್ರಿಯತೆಯೋ ಅಥವಾ ಜಾತಿಯ ಸ್ವಾರ್ಥವೋ ಎನ್ನುವುದು ಸ್ಪಷ್ಟವಾಗಬೇಕಾದ್ದು ತೀರ ಅವಶ್ಯಕ. ಇದನ್ನು ಕುರಿತು 'ರಾಷ್ಟ್ರವೀರ'ದವರು ವ್ಯಕ್ತಪಡಿಸಿದ ವಿಚಾರಗಳು ಚಿಂತನಯೋಗ್ಯವಾದವುಗಳು. ಅವರು ಹೀಗೆನ್ನುತ್ತಾರೆ :

"ಮೇಲಿನ ಸಭೆಯ ಬೆಳಗಾವಿ ನಗರ-ಶಾಖೆ ಶುರುವಾಗಿದ್ದು, ಶ್ರೀಯುತ ದತ್ತೋಪಂತ ಬೆಳವಿಯವರು ಅದರ ಅಧ್ಯಕ್ಷರಾಗಿದ್ದಾರೆ. ಬೆಳವಿಯವರ ಮುಕ್ಕಾಲು ಪಾಲು ಆಯುಷ್ಯವು ಕಾಂಗ್ರೆಸ್ಸಿನ ನಾಯಕತ್ವವನ್ನು ಅನುಭವಿಸುವುದರಲ್ಲಿ ಕಳೆದಿದ್ದು, ಅವರನ್ನು ತಾರೀಖು ೧೪ ನವೆಂಬರ್ ೧೯೪೦ರಂದು ಬೆಳಗಾವಿ ಜಿಲ್ಲೆಯ ಹಿಂದೂ ಮಹಾಸಭೆಯ ಅಧ್ಯಕ್ಷರನ್ನಾಗಿಯೂ ಮಾಡಲಾಗಿದೆ. ಹೀಗಿರುವಾಗ, ಮೇಲಿನ ಸಂಗತಿಯು ಮುಂದೆ ಬಂದಿರುವುದು ಬಹುಜನ ಸಮಾಜಕ್ಕೆ ಒಂದು ಒಗಟಾಗಿರಲು ಸಾಕು. ಆದರೆ ಕೊನೆಗೂ ಹಾರುವನು ತನ್ನ ಜಾತಿಗೆ ತಕ್ಕಂತೆಯೇ

ನಡೆದುಕೊಳ್ಳುವನು. ತನ್ನ ಸ್ವಾರ್ಥ ಸಿದ್ದಿಯಾಚೆ ರಾಷ್ಟ್ರ ಮತ್ತು ಧರ್ಮಗಳ ಬಗೆಗಿನ ಮಮತೆ ಅವನಲ್ಲಿಲ್ಲ ಎಂಬುದು ನಮ್ಮಲ್ಲಿಯ ಬಹಳಷ್ಟು ಜನರ

* 'ಡ್ಯಾಚಾ ತ್ಯಾಚಾ ಮಹಾರಾವರ ಕಟಾಕ್ಷ ('ಪ್ರತಿಯೊಬ್ಬನ ಕಣ್ಣು ಹೊಲೆಯನ ಮೇಲೆ') ಎಂಬ ಲೇಖನದ ಅಡಿಯ ಸಂಪಾದಕನ ಟಿಪ್ಪಣಿಯನ್ನು ನೋಡಿ,



ಸ್ಪಷ್ಟ ಅಭಿಪ್ರಾಯವಾಗಿದೆ. ಅದು ಎದ್ದು ಕಾಣುವ ಈ ಉದಾಹರಣೆಯಿಂದ ಹದಿನಾರಾಣೆ ನಿಜವೆನ್ನಿಸಿತು. ಶ್ರೀ ಬೆಳವಿಯವರು ವಿಶಿಷ್ಟ ಜಾತಿಯ ಚಳವಳಿಗೆ ಹೆಸರು ಇಡದೆ ಹೋಗಿದ್ದರೆ ಅವರನ್ನು ಹೀಗೆ ಬಹಿರಂಗವಾಗಿ ಎಳೆಯುವ ಅದಾವ ಅಗತ್ಯವೂ ನಮಗಿರಲಿಲ್ಲ. ಆದರೆ ಇವರು ಕಾಂಗ್ರೆಸ್ಸಿನ ನಿಲುವಿನಿಂದ ಜಾತಿಗೆ ಸಂಬಂಧಪಟ್ಟ ಚಳವಳಿಗೆ ಮಾಡಿದ ವಿರೋಧದಿಂದಾಗಿ ಬಹುಜನ ಸಮಾಜಕ್ಕೆ ಈವರೆಗೆ ಬಹಳಷ್ಟು ನಷ್ಟವಾಗಿದೆ. ಅಲ್ಲದೆ ಪರರ ಸ್ವತ್ತನ್ನು ಅಪಹರಿಸುವ ಮನೋವೃತ್ತಿಯ ಒಲವು ಮುಂದುವರಿದ ವರ್ಗದಲ್ಲಿ ಭಯಂಕರವಾಗಿ ಹೆಚ್ಚಿದೆ. ಹೀಗಾಗಿ, ಬಹುಜನ ಸಮಾಜದಲ್ಲಿ ಯಾರಿಗೆ ತಾವು ಅರಿವುಳ್ಳವರು ಎಂದೆನ್ನಿಸುತ್ತದೋ, ಅವರು ತಮ್ಮ ಹಿತಕ್ಕಾಗಿಯಾದರೂ ಸಮಾಜದ ಸಂಘಟನೆಯನ್ನು ಕಟ್ಟಿಕೊಳ್ಳಬೇಕೆನ್ನುವುದು ಅಪರಿಹಾರ್ಯವಾಗಿಲ್ಲವೆ?

ಇಂಥ ಈ ದಾಖಲೆಯಿಂದಾಗಿ ಹಿಂದೂ ಮಹಾಸಭೆಯ ಪ್ರಶ್ನೆಯು ಗಂಭೀರ ಸ್ವರೂಪ ದ್ದಾಗಿಲ್ಲವೆ? ಏಕೆಂದರೆ ಸರ್ ಸಿದ್ದಪ್ಪ ಕಾಂಬಳಿ ಇವರು ಕರ್ನಾಟಕ ಹಿಂದೂ ಮಹಾಸಭೆಯ ಅಧ್ಯಕ್ಷರಿದ್ದು ರಾ. ಬ. ಅಣ್ಣಾಸಾಹೇಬ ಚೌಗುಲೆ ಅವರು ಹಿಂದೂ ಮಹಾಸಭೆಯ ಬೆಳಗಾವಿ ಜಿಲ್ಲೆಯ ಅಧ್ಯಕ್ಷರು. ತಮ್ಮ ಧರ್ಮ ಹಾಗೂ ಸಂಸ್ಕೃತಿಗಳು ಹಿಂದೂಗಳಿಗಿಂತ ಭಿನ್ನವಾದುವು, ಬರುವ ಜನಗಣತಿಯ ಕಾಲಕ್ಕೆ ಹಾಗೆಂದು ಬೇರೆ ನೋಂದಾಯಿತವಾಗಬೇಕೆಂದು ಜೈನ ಹಾಗೂ ಲಿಂಗಾಯತ ಸಮಾಜಗಳ ಚಳವಳಿ ಜೋರಿನಿಂದ ಸಾಗಿದೆ. ಹೀಗಾಗಿ, ಮುಸಲ್ಮಾನರಂತೆಯೇ ಹಿಂದೂ ಮಹಾಸಭೆಯ ಕಾರ್ಯವು ಸಂಘಟಿತವಾದ ಧೋರಣೆಯಿಂದ ನಡೆಯಲಿದೆಯೇ ಎಂದು ಆಕ್ಷೇಪಿಸಲಾಗುತ್ತಿದೆ. ಅಂಥದರಲ್ಲಿ ಶ್ರೀ ದತ್ತೋಪಂತ ಬೆಳವಿ ಅವರು ಬ್ರಾಹ್ಮಣರಿಗಾಗಿ ಪ್ರತ್ಯೇಕವಾಗಿ ನಡೆಸಲಿರುವ ಅನಿಷ್ಟ ಸಂಗತಿಯೂ ಸೇರ್ಪಡೆಗೊಳ್ಳುವುವುದಿಲ್ಲವೆ? ಮುಂದುವರಿದ ವರ್ಗದ ಬ್ರಾಹ್ಮಣ ಮೊದಲಾದ ಸಮಾಜಗಳು ಸಾರ್ವಜನಿಕ ಮೊಗವಾಡಗಳಿಂದ ಹಿಂದೂಗಳ ಇತರ ಜಾತಿಗಳ ಹಕ್ಕುಗಳನ್ನು ಕಾಲ್ಕೆಳಗೆ ತುಳಿದು, ಅವುಗಳ ಪ್ರಗತಿಗೆ

ಅಡ್ಡಿಯನ್ನುಂಟು ಮಾಡುತ್ತಾರೆ. ಅದರಿಂದಾಗಿ ಬಹುಜನ ಸಮಾಜದಲ್ಲೂ ಆಯಾ ಜಾತಿಯ ಚಳವಳಿಗಳು ಹುಟ್ಟಿ ಬರುತ್ತವೆ. ಹೀಗಾಗಿಯೇ ಹಿಂದೂವೆಂಬ ಒಂದು ಸಂಘಟನೆ ತಯಾರಾಗುವುದು ಕಷ್ಟದ್ದಾಯಿತು. ಅದು ಘಾತಕವೆನ್ನಿಸಿತೆಂಬುದೂ ನಿಜ. ಹೀಗಾಗಿ ಮತ್ತೆ ಇನ್ನಷ್ಟು ದೃಢವಾದ ಹಿಂದೂ ಸಂಘಟನೆಯ ಆವಶ್ಯಕತೆಯನ್ನು ಹುಟ್ಟುಹಾಕಲಾಗುತ್ತಿದೆ. ಹಿಂದೂಗಳಲ್ಲಿರುವ ಮುಂದುವರಿದ ಜಾತಿಗಳ ಧರ್ಮವೈಶಿಷ್ಟ್ಯಗಳ ಮೇಲೆ ಎಳ್ಳುನೀರು (ತಿಲಾಂಜಲಿ) ಬಿಡದ ಹೊರತು ಇನ್ನು ಮುಂದೆ ಹಿಂದೂಗಳ ಶಕ್ತಿಯುತವಾದ ಒಗ್ಗಟ್ಟು ಅಸಾಧ್ಯವೆಂಬ ಸಂಗತಿಯನ್ನೂ ಯಾರೂ ಒಪ್ಪದಿರುವುದಿಲ್ಲ. ಇಂಥ ಸ್ಥಿತಿಯಲ್ಲಿ, ಶ್ರೀ ದತ್ತೋಪಂತ ಬೆಳವಿಯವರ ಬ್ರಾಹ್ಮಣ್ಯ ಪ್ರೀತಿಯು ದುಪ್ಪಟ್ಟು ಪುಟಿದೇಳುವುದೆಂದರೆ ಹಿಂದೂ ಮಹಾಸಭೆಗೆ ಮೊದಲ ಸುತ್ತಿನಲ್ಲಿಯೇ ಮಕ್ಷಿಕಾಪಾತ ನೊಣಬಿದ್ದಂತೆ ಆದಂತಲ್ಲವೆ? ಹಿಂದು ಮಹಾಸಭೆಯ ನೊಗವನ್ನು ಹೆಗಲ ಮೇಲೆ ಹೊರುವ ಬಹುಜನ ಸಮಾಜದ ಭಾವನಾಪ್ರಧಾನರಾದ ಜನರಿಗೆ ಸ್ವಲ್ಪ ತಾಳ್ಮೆಯಿಂದಿರಿ ಎಂದು ನಾವು ಸಲಹೆಯನ್ನು ನೀಡಿದರೆ ತಪ್ಪಾದೀತೆ?' ೧

೧ : 'ಜನತಾ , ೪ ಜನವರಿ ೧೯೪೧.

### ೯೩, ಒಳ್ಳೆಯದಾಯಿತು, ಮಹಾತ್ಮ ಹೋದ, ಮನುಷ್ಯ ಉಳಿದ

"ಪ್ರತಿಯೊಬ್ಬ ಇಂಗ್ಲಿಷ್ ಮನುಷ್ಯನು ಹಿಂಸೆಯ ಬದಲು ಅಹಿಂಸೆಯ ದಾರಿಯನ್ನು ಸ್ವೀಕರಿಸಬೇಕು, ಎದ್ದಿರುವ ವಾದ-ಜಗಳಗಳನ್ನು ಅಹಿಂಸೆಯ ದಾರಿಯಿಂದಲೇ ಬಗೆಹರಿಸಿಕೊಳ್ಳಬೇಕೆಂದು ಕೋರುತ್ತೇನೆ. ನಿಮಗೆ ಉಪದೇಶವನ್ನು ಮಾಡುವ ಧೈರ್ಯ ಈ ವರೆಗೆ ನನ್ನಲ್ಲಿರಲಿಲ್ಲ. ದೇವರ ದಯೆಯಿಂದ ಈವತ್ತು ನನಗೀ ಧೈರ್ಯ ಪ್ರಾಪ್ತವಾಯಿತು. ಹೀಗಾಗಿ ನಿಮಗೆ ಈ ಉಪದೇಶವನ್ನು ಮಾಡುತ್ತಿದ್ದೇನೆ. ಈ ಯುದ್ಧವನ್ನು ನಿಲ್ಲಿಸಿ, ಎಂದು ನಿಮಗೆ ಹೇಳಬಯಸುತ್ತೇನೆ. ನೀವು ಯುದ್ಧವನ್ನು ಕೈಕೊಳ್ಳಲು ಅಸಮರ್ಥರೆಂದು ನಾನು ನಿಮಗೆ ಹೇಳುತ್ತೇನೆ, ಎಂದಲ್ಲ. ಬದಲು ಯುದ್ಧವು ತೀರ ಕೆಟ್ಟ ಸಂಗತಿಯಾದ್ದರಿಂದ ಇದನ್ನು ನಿಮಗೆ ಹೇಳುತ್ತಿದ್ದೇನೆ. ಯಾವುದೇ ಕೆಲಸವು ಎಷ್ಟೇ ಪವಿತ್ರವಾಗಿದ್ದರೂ ಅದಕ್ಕಾಗಿ ಅಸಂಖ್ಯ ಜನರನ್ನು ಸಂಹರಿಸುವುದು ಸರಿಯಾಗಲಾರದು. ಇಷ್ಟೇ ಅಲ್ಲದೆ, ಯಾವ ಕಾರ್ಯದ ಪೂರ್ತತೆಗಾಗಿ ಇಷ್ಟೊಂದು ಸಂಹಾರವನ್ನು ಮಾಡಬೇಕಾದರೆ ಆ ಕಾರ್ಯವು ಪವಿತ್ರವಾಗಿದೆಯೋ, ಇಲ್ಲವೋ ಎಂಬ ಬಗೆಗೆ ನನಗೆ ತುಂಬ ಸಂದೇಹವಿದೆ. ನೀವು ಜರ್ಮನ್ನರ ವಿರುದ್ಧ ಹೋರಾಡಬಯಸುತ್ತೀರಿ. ನಾನು ಅದನ್ನು ಒಪ್ಪುತ್ತೇನೆ. ಅದರಲ್ಲಿ ಇಂಗ್ಲಿಷ್‌ರಿಗೆ ಸೋಲಾಗಲಿ ಎಂಬ ಇಚ್ಛೆ ಸುತರಾಂ ನನ್ನಲ್ಲಿಲ್ಲ. ನೀವು ನಾಝಿಗಳೊಡನೆ ಖಂಡಿತ ಹೋರಾಡಿ, ಆದರೆ ಅಹಿಂಸಾತ್ಮಕ ಸಾಧನಗಳಿಂದ ಹೋರಾಡಿ, ಎಂದಿಷ್ಟೇ ನಿಮಗೆ ಹೇಳಬಯಸುತ್ತೇನೆ. ಕತ್ತಿ, ಬಂದೂಕು, ಮದ್ದುಗುಂಡು, ಮೊದಲಾದ ಹಿಂಸಾತ್ಮಕ ಸಾಧನಗಳನ್ನು ಬಳಸಬೇಡಿ. ನೀವು ಇಂಗ್ಲಿಷ್ ಜನ ಹಿಟ್ಲರ್ ಹಾಗೂ ಮುಸಲೋನಿಗೆ, 'ನಿಮಗೆ ನಮ್ಮಿಂದ ಏನೇನು ಬೇಕಿದೆಯೋ ಅದನ್ನೆಲ್ಲ ಬಂದು ಒಯ್ಯಿರಿ' ಎಂದು ಕರೆ ಕಳುಹಿಸಬೇಕೆಂದು ಬಯಸುತ್ತೇನೆ. ಅವರು

ಬರಲಿ, ನಿಮ್ಮ ದೇಶದಲ್ಲಿ ಬೇಕಿದ್ದುದು ಹಾಗೂ ಇಷ್ಟವಾದುದನ್ನೆಲ್ಲ ತೆಗೆದುಕೊಳ್ಳಲಿ. ಹಿಟ್ಲರ್ ಹಾಗೂ ಮುಸಲೋನಿಗೆ ನಿಮ್ಮ ಮನೆಮಠ ಬೇಕಿದ್ದರೆ ಅವುಗಳನ್ನು ತೆರವುಗೊಳಿಸಿ ಅವರ ವಶಕ್ಕೆ ಕೊಡಿ. ಅವರು ಮನೆಯಿಂದ ಹೊರಹೋಗಲು ನಿಮಗೆ ಅಪ್ಪಣೆ ಕೊಡದಿದ್ದರೆ ನಿಮ್ಮ ಗಂಡಸರು, ಹೆಂಗಸರು, ಮಕ್ಕಳ ಕೊಲೆಯಾಗಲು ಬಿಡಿ. ಆದರೆ ಹಿಂಸಾತ್ಮಕ ಪ್ರತಿಕಾರವನ್ನು ಮಾಡಬೇಡಿ. ನಿಮಗೀ ಉಪದೇಶವನ್ನು ಮಾಡುವ ನನ್ನನ್ನು ಒಬ್ಬ ತಿಳಿಗೇಡಿ ಎಂದು ಭಾವಿಸದಿರಿ. ಕಳೆದ ಐವತ್ತು ವರ್ಷಗಳ ಕಾಲ ಒಂದೇಸಮನೆ ಅಹಿಂಸೆಯ ಸಾಧನಗಳ ಅನುಭವವನ್ನು ಪಡೆದಿದ್ದೇನೆ. ನನ್ನ ಜೀವನದ ವ್ಯವಹಾರದಲ್ಲಿ ಅಲ್ಲದೆ ಮನೆಯ, ಸಾರ್ವಜನಿಕ, ಆರ್ಥಿಕ, ಹಾಗೂ ರಾಜಕೀಯದ ಪ್ರತಿಯೊಂದು ಸನ್ನಿವೇಶದಲ್ಲಿ ನಾನೀ ಮಾರ್ಗವನ್ನು ಅವಲಂಬಿಸಿದೆ. ಅದರಲ್ಲಿ ನನಗೆಂದಿಗೂ ಅಪಯಶ ಬಂದಿಲ್ಲ." (ಗಾಂಧಿ)

ಗಾಂಧಿಯವರು ಅಹಿಂಸೆಯನ್ನು ಕುರಿತು ಕಳೆದ ಒಂದು-ಒಂದೂವರೆ ತಿಂಗಳಲ್ಲಿ ಹಲವು ಹೇಳಿಕೆಗಳನ್ನು ನೀಡಿದುದು ಕಂಡುಬರುತ್ತದೆ. ಕರ್ನಲ್ ಎಮರಿ ಇವರು ಕಳೆದ ತಿಂಗಳ ೧೩ನೆಯ ತಾರೀಖಿನಂದು ಪಾರ್ಲಿಮೆಂಟ್ನಲ್ಲಿ ಮಾಡಿದ ಭಾಷಣಕ್ಕೆ ಪ್ರತಿಕ್ರಿಯಿಸುತ್ತ ಗಾಂಧಿಯವರು ತಾ.



೧೮ ಎಪ್ರಿಲ್‌ರಂದು ಒಂದು ದೀರ್ಘವಾದ ಹೇಳಿಕೆಯನ್ನು ಪ್ರಕಟಿಸಿದರು. ಅವರು ತಮ್ಮ ಹೇಳಿಕೆಯಲ್ಲಿ ಕರ್ನಲ್ ಎಮರಿ ಅವರನ್ನು ಉದ್ದೇಶಿಸಿ ಈ ಕೆಳಗಿನಂತೆ ಉದ್ಧರಿಸಿರುವರು.

ಗಾಂಧಿಯವರು ಹೀಗೆನ್ನುತ್ತಾರೆ : "ಬ್ರಿಟಿಷ್ ಸರಕಾರಕ್ಕೆ ನಾನೊಂದು ಪ್ರಶ್ನೆಯನ್ನು ಕೇಳಬಯಸುತ್ತೇನೆ. ಬ್ರಿಟಿಷ್‌ರು ತಮ್ಮ ರಾಜ್ಯವನ್ನು ಸ್ಥಾಪಿಸಿ ನೂರೈವತ್ತು ವರ್ಷಗಳು ಕಳೆದ ತರುವಾಯವೂ ಬೆರಳೆಣಿಕೆಯಷ್ಟು ಕೆಲವು ಗೂಂಡಾಗಳನ್ನು ಎದುರಿಸುವ ಸಾಮರ್ಥವು ಹಿಂದಿ ಜನರಲ್ಲಿ ಬರಲಿಲ್ಲವೇಕೆ? ಸಾವಿರಾರು ಜನರು ಕೆಲವು ಗೂಂಡಾಗಳ ಹೆದರಿಕೆಗೆ ಅಂಜಿ ತಮ್ಮ ಮನೆಮಠಗಳನ್ನು ತೊರೆದು ಓಡಿಹೋಗುತ್ತಾರೆಂಬ ಕಾರಣಕ್ಕೆ ಹಿಂದಿ ಜನಗಳಿಗಿಂತಲೂ ಬ್ರಿಟಿಶ್ ಜನರಿಗೆ ನಿಜವಾಗಿಯೂ ಹೆಚ್ಚು ನಾಚಿಕೆಯಾಗಬೇಕು! ರಾಜ್ಯವನ್ನು ಆಳುವವರ ಮೊದಲ ಹೊಣೆಯೆಂದರೆ ಪ್ರಜೆಗಳಿಗೆ ಆತ್ಮಸಂರಕ್ಷಣೆಯ ತರಬೇತಿಯನ್ನು ನೀಡುವುದು. ಆದರೆ, ಹಿಂದಿ ಪ್ರಜೆಗಳಿಗೆ ಸಂರಕ್ಷಣೆಯ ಬಗೆಗೆ

ಪರಕೀಯ ಬ್ರಿಟಿಶ್ ಸರಕಾರಕ್ಕೆ ಯಾವುದೇ ಹೊಣೆ ಎನ್ನಿಸಲಿಲ್ಲ. ಹೀಗಾಗಿ ಅದು ಪ್ರಜೆಗಳು ಶಸ್ತ್ರಗಳನ್ನು ಇರಿಸಿಕೊಳ್ಳುವುದನ್ನು ನಿಷೇಧಿಸಿತು."

''ಕರ್ನಲ್ ಎಮರಿ ಅವರು ಹಿಂದಿ ಸೈನ್ಯದ ಶೌರ್ಯವನ್ನು ಕುರಿತು ಪಾರ್ಲಿಮೆಂಟ್‌ದಲ್ಲಿ ವ್ಯಕ್ತಪಡಿಸಿದ ಮೆಚ್ಚುಗೆ ಹಾಗೂ ಅಭಿನಂದನೆಗಳು ಹಿಂದೂಸ್ಥಾನದಲ್ಲಿ ಯಾವುದೇ ಬಗೆಯ ಪರಿಣಾಮವನ್ನು ಬೀರಲು ಸಾಧ್ಯವಿಲ್ಲ. ಏಕೆಂದರೆ, ಹಿಂದೂಸ್ಥಾನ ದೇಶವನ್ನು ಯುದ್ಧ ಸಾಮಗ್ರಿಯ ದೃಷ್ಟಿಯಿಂದ ಸಮೃದ್ಧಗೊಳಿಸಿದ್ದರೆ ಹಾಗೂ ಜನರಿಗೆ ಸೈನಿಕ ತರಬೇತಿಯನ್ನು ನೀಡಿದ್ದರೆ ಯುರೋಪಿನ ಯಾವುದೇ ದೇಶವು ಬ್ರಿಟಿಶ್ ಸಾಮ್ರಾಜ್ಯವನ್ನು ಕೆಣಕುವಂತಿರಲಿಲ್ಲ."

ಕಳೆದ ತಿಂಗಳ ೨ನೆಯ ತಾರೀಖಿನಂದು ಅಹಮ್ಮದಾಬಾದಿನಲ್ಲಿ ನಡೆದ ಹಿಂದೂ-ಮುಸಲ್ಮಾನರ ದಂಗೆಯ ಸಂದರ್ಭದಲ್ಲಿ ಗಾಂಧಿಯವರು ಒಂದು ಕಮಿಟಿಯನ್ನು ಸ್ಥಾಪಿಸಿರುವರು. ಅವರು ಈ ಕಮಿಟಿಯ ಅಧ್ಯಕ್ಷರಾದ ಶ್ರೀ ಭೋಗೀಲಾಲ್ ಇವರಿಗೆ ಒಂದು ಪತ್ರವನ್ನು ಬರೆದಿರುವರು. ಅದರಲ್ಲಿ ಅವರು ಹಿಂಸೆ-ಅಹಿಂಸೆಗಳನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವರು. ಅದರಲ್ಲಿಯ ಕೆಳಗಿನ ಮಾತುಗಳನ್ನು ಗಮನಕ್ಕೆ ತಂದುಕೊಳ್ಳುವಂತಿದೆ.

"ಗೂಂಡಾಗಳ ಭಯದಿಂದ ಜನರು ಜೀವವನ್ನು ತಮ್ಮ ಮುಷ್ಠಿಯಲ್ಲಿ ಹಿಡಿದುಕೊಂಡು ಓಡುವುದು ಸಹಿಸಲಾಗದ ಸಂಗತಿ. ಗೂಂಡಾಗಳನ್ನು ಹಿಂಸೆ ಹಾಗೂ ಅಹಿಂಸೆಯಿಂದ ಎದುರಿಸುವ ಸಾಮರ್ಥವು ಅವರಲ್ಲಿ ಇರತಕ್ಕದ್ದು. ನಾನು ಅರಿತುಕೊಂಡ `ಬ್ರೀದ್' ('ಸಂಕಲ್ಪ ) ಪದದ ಅರ್ಥವು ನಿಜವಾಗಿದ್ದರೆ, ಕಾಂಗ್ರೆಸ್‌ನವರು ಅಹಿಂಸೆಯಿಂದಲೇ ಪ್ರತಿಕಾರವನ್ನು ಕೈಕೊಳ್ಳತಕ್ಕದ್ದು. ಅದರಲ್ಲಿ ಅವರು ಯಶಸ್ವಿಯಾಗುವರು. ಆದರೆ ಓಡಿಹೋಗುವುದು ತೀರ ಹೇಡಿತನ ಎಂಬುದನ್ನು ನಾವು ಜನರಿಗೆ ಬಲು ಸ್ಪಷ್ಟವಾಗಿ ಹೇಳತಕ್ಕದ್ದು. ಅವರು ಅಹಿಂಸೆಯಿಂದ ಪ್ರತಿಕಾರವನ್ನು ಕೈಕೊಳ್ಳಲು ಅಸಮರ್ಥರಾಗಿದ್ದರೆ ಹಿಂಸೆಯಿಂದ ಪ್ರತಿಕಾರವನ್ನು ಕೈಕೊಳ್ಳುವುದು ಅವರ ಕರ್ತವ್ಯವಾಗಿದೆ."

"ತಮ್ಮ ಇಲ್ಲವೆ ಇನ್ನೊಬ್ಬರ ಸಂರಕ್ಷಣೆಯನ್ನು ಹಿಂಸೆಯಿಂದ ಕೈಕೊಳ್ಳಬೇಕೆನ್ನುವ ಎಷ್ಟು ಜನ ಕಾಂಗ್ರೆಸ್ಸಿನಲ್ಲಿ ಇರುವರೆಂಬುದನ್ನು ಕಂಡುಕೊಳ್ಳಬೇಕು. ಗೂಂಡಾಗಳ ದಾಳಿಗೆ ಹಿಂಸಾತ್ಮಕವಾದ ಪ್ರತಿಕಾರವನ್ನು ಕೈಕೊಳ್ಳಲೇಬೇಕು, ಅದು ಕಾಂಗ್ರೆಸ್ಸಿನ ಗುರಿಗೆ ವಿರುದ್ಧವಾದುದಲ್ಲ, ಎಂಬುದು ಕಾಂಗ್ರೆಸ್ಸಿಗರ ಬಹುಮತದ ಅಭಿಪ್ರಾಯವಾಗಿದ್ದರೆ ಅವರು ಅದನ್ನು ಪ್ರಕಟವಾಗಿ ಘೋಷಿಸಿ ಜನರಿಗೆ ಅದರಂತೆ ಮಾರ್ಗದರ್ಶನವನ್ನು ಮಾಡಬೇಕು."

''ಜೀವದ ರಕ್ಷಣೆಗಾಗಿ ಗೂಂಡಾಗಳಿಗೆ ಹೆದರಿ ಜನ ಓಡಿಹೋಗುವುದನ್ನು ಸಹಿಸಲಾಗದು. ಅದನ್ನು ಹಿಂಸಾತ್ಮಕ ಅಥವಾ ಅಹಿಂಸಾತ್ಮಕ ಬಗೆಯಿಂದ ಎದುರಿಸುವ ಸಾಮರ್ಥ್ಯವು ಆವಶ್ಯಕವಾದುದು."

''ಕಾಂಗ್ರೆಸ್ ಸೈನ್ಯ ಇಲ್ಲವೆ ಪೋಲೀಸರ ನೆರವನ್ನು ಕೇಳಕೂಡದು. ಅಹಿಂಸೆಯನ್ನು ನಂಬುವವರು ಸರಕಾರದ ನೆರವನ್ನು ಕೇಳತಕ್ಕದ್ದು."

"ಯಾವ ತಾಣದಲ್ಲಿ ಹಿಂಸಾತ್ಮಕವಾದ ದೈಹಿಕ ತರಬೇತಿಯನ್ನು ನೀಡಲಾಗುತ್ತದೋ ಅಂಥ ವ್ಯಾಯಾಮದ ಕಣದೊಂದಿಗೆ (ಅಖಾಡ) ಕಾಂಗ್ರೆಸ್ ಸಂಬಂಧವನ್ನು ಇರಿಸಕೂಡದು."

"ಕಾಂಗ್ರೆಸ್ ದಂಗೆಯಲ್ಲಾದ ನಷ್ಟಕ್ಕಾಗಿ ಪರಿಹಾರವನ್ನು ಕೇಳುವುದಿಲ್ಲ. ಅದು ಕಾಂಗ್ರೆಸ್ಸಿನ ಕಾರ್ಯವಲ್ಲ. ಜನತೆಯು ಸ್ವಸಂರಕ್ಷಣೆಯ ಬಗೆಗೆ ದುರ್ಬಲವಾಗಿದ್ದರಿಂದ ನಷ್ಟವನ್ನು ಅನುಭವಿಸಲೇ ಬೇಕು, ಅದನ್ನು ಸಹಿಸಿಕೊಳ್ಳಬೇಕು."

'ಭಯ್ಯಾ, ಶೀಖ್ ಅಥವಾ ಠಾಕೂರರಿಂದ ಸಂರಕ್ಷಣೆ ಪಡೆಯುವುದನ್ನು ಊಹಿಸಲಾರೆ."

"ಮುಸಲ್ಮಾನ ವಸತಿಗಳಲ್ಲಿ ಇರುವ ಹಿಂದೂಗಳು ಅಲ್ಲಿಂದ ಕದಲಕೂಡದು. ಜೀವವನ್ನು ಅಪಾಯಕ್ಕೆ ಒಡ್ಡಿಯಾದರೂ ಸರಿಯೇ, ಅವರು ಅಲ್ಲಿಯೇ ಇರತಕ್ಕದ್ದು."

"ಹಿಂದೂಗಳು ಹಿಂದು ವಸತಿಯಲ್ಲಿರುವ ಮುಸಲ್ಮಾನರಿಗೆ ಪೂರ್ತಿ ಸಂರಕ್ಷಣೆಯನ್ನು ಒದಗಿಸತಕ್ಕದ್ದು."

ಗಾಂಧಿಯವರು ೧೯೪೦ರಲ್ಲಿ ಇಂಗ್ಲಿಷ್ ಜನರಿಗೆ ಬರೆದ ಪತ್ರ ಹಾಗೂ ೧೯೪೧ರಲ್ಲಿ ನೀಡಿದ ಈ ಮೇಲಿನ ಹೇಳಿಕೆಗಳನ್ನು ಹೊಂದಿಸಿ ನೋಡಿದವನು ಏನೆಂದಾನು? ಯಾವ ಗಾಂಧಿ ಒಂದು ಕಾಲಕ್ಕೆ ನಿಮ್ಮ ಶಸ್ತ್ರಾಸ್ತ್ರಗಳನ್ನು ಎಸೆದು ಬಿಡಿ, ಸೈನಿಕ ಮನೋಧರ್ಮವನ್ನು ತ್ಯಜಿಸಿ, ಎಂದು ಇಂಗ್ಲಿಷ್ ಜನರಿಗೆ ಹೇಳುತ್ತಿದ್ದರೋ ಅದೇ ಗಾಂಧಿ ಹಿಂದೂಸ್ಥಾನದ ಜನರಿಗೆ ಸೈನಿಕ ತರಬೇತಿಯನ್ನು ಏಕೆ ನೀಡಲಿಲ್ಲ, ಶಸ್ತ್ರಾಸಗಳನ್ನು ಏಕೆ ನಿರ್ಮಿಸಲಿಲ್ಲ, ಹಿಂದಿ ಜನರಿಗೆ ಹಿಂಸಕರಿಂದ ಸಂರಕ್ಷಣೆಯನ್ನು ಮಾಡಲು ಏಕೆ ಕಲಿಸಲಿಲ್ಲ , ಎಂದು ಹಲ್ಲು ಕಚ್ಚುತ್ತಾರೆ, ತುಂಬ ಕೋಪಿಸಿಕೊಳ್ಳುತ್ತಾರೆ. ಈ ಮನುಷ್ಯನಿಗೆ ಯಾವುದಾದರೂ ತತ್ತ್ವ ಇದೆಯೇ, ಇಲ್ಲವೇ, ಇವನ ಬುದ್ಧಿ ಸ್ಥಿರವಾಗಿ ಇದೆಯೇ, ಇಲ್ಲವೇ, ಎಂಬ ಬಗೆಗೆ ಯಾರದೇ ಮನಸ್ಸಿನಲ್ಲಿ ಸಂದೇಹ ಮೂಡಿದರೆ ಅಂಥವನ ಮೇಲೆ ಯಾರು ತಪ್ಪು ಹೊರಿಸುವರು? ಯಾವ ಗಾಂಧಿ ಒಂದು ವರ್ಷದ ಕೆಳಗೆ, ನೀವು ಸಶಸ್ತವಾದ ಪ್ರತಿಕಾರವನ್ನು ಮಾಡಬೇಡಿ, ಹಿಟ್ಲರ್ ಮತ್ತು ಮುಸೋಲಿನಿ ಅವರಿಗೆ ಕರೆ ಕೊಡಿ, ಅವರು ಬಂದರೆ ಮನೆಮಠಗಳನ್ನು ತೆರೆದು, ಅವರು ತಮಗೆ ಬೇಕಿದ್ದುದನ್ನು ಒಯ್ಯಲು ಬಿಡಿ, ಎಂದು ಇಂಗ್ಲಿಷ್ ಜನರಿಗೆ ಉಪದೇಶವನ್ನು ಮಾಡುತ್ತಿದರೋ ಅದೇ ಗಾಂಧಿ ಅಹಮ್ಮದಾಬಾದಿನ ಜನರಿಗೆ ಇಂದು, ನೀವು ನಿಮ್ಮ ಮನೆಮಠಗಳನ್ನು ಬಿಟ್ಟು ಓಡಿ ಹೋಗಬೇಡಿ, ಓಡಿ ಹೋಗುವುದು ಹೇಡಿತನ, ನೀವು ಅಹಿಂಸೆಯಿಂದ ಪ್ರತಿಕಾರವನ್ನು ಮಾಡಲು ಸಾಧ್ಯವಿಲ್ಲದಿದ್ದರೆ ಹಿಂಸೆಯಿಂದ ಮಾಡಿ, ಎಂದು ಸ್ಪಷ್ಟವಾಗಿ ಹೇಳುತ್ತಾರೆ. ಇವರು ಇಂಥ ಚಂಚಲ ಮನೋಧರ್ಮದವರು. ಜನ ಇವರನ್ನು ಮಾರ್ಗದರ್ಶಕರೆಂದು ಹೇಗೆ ಒಪ್ಪಿಕೊಳ್ಳಬೇಕು? - ಎಂದು ಯಾರಾದರೂ ಪ್ರಶ್ನೆ ಕೇಳಿದರೆ ಅವರನ್ನು ತಪ್ಪಿತಸ್ಥರು ಎನ್ನಲಾದೀತೆ? ಯಾವ ಗಾಂಧಿ ಪ್ರತಿಕಾರವನ್ನು ಮಾಡದಿರುವುದು, ಪರಪೀಡೆಯನ್ನು ಸಹಿಸುವುದು ತನ್ನ ತತ್ತ್ವ  ಎಂದು ಹೇಳುತ್ತ ಕುಳಿತಿದ್ದರೋ, ಅದೇ ಗಾಂಧಿ ಪ್ರತಿಕಾರವನ್ನು ಮಾಡುವುದು ಆವಶ್ಯಕ, ಇಷ್ಟೇ ಅಲ್ಲದೆ ಅಹಿಂಸೆಯ ಮಾರ್ಗದಿಂದ

ಪ್ರತಿಕಾರವನ್ನು ಮಾಡಲು ಬಾರದಿದ್ದರೆ ಹಿಂಸಾತ್ಮಕ ಮಾರ್ಗದಿಂದ ಅದನ್ನು ಮಾಡುವುದು ಆವಶ್ಯಕ, ಎಂದು ಹೇಳುತ್ತಾರೆ. ಅಂದ ಬಳಿಕ ಅವರ ಬುದ್ಧಿ ಕೆಟ್ಟಿದೆ, ಎಂದು ಯಾರಾದರೂ ಸಂದೇಹಪಟ್ಟರೆ ಅದು ಅರ್ಥವಿಲ್ಲದ್ದು, ವಿಕಾರದಿಂದ ಕೂಡಿದ್ದು ದು, ಎಂದೆನ್ನಲಾದೀತೆ? ಯಾವ ಗಾಂಧಿ ಎಲ್ಲರೂ ಅಹಿಂಸೆಯನ್ನು ಪಾಲಿಸಲೇಬೇಕೆಂದು ಆಗ್ರಹಿಸುತ್ತ ಕುಳಿತಿದ್ದರೋ ಅದೇ ಗಾಂಧಿ ಕಾಂಗ್ರೆಸ್ಸಿಗರು ಮಾತ್ರ ಅಹಿಂಸೆಯನ್ನು ಪಾಲಿಸಬೇಕೆಂದು ಅನ್ನುತ್ತಾರೆ! ಒಮ್ಮೆ ಯಾವ ಗಾಂಧಿ, ಕಾಂಗ್ರೆಸ್ ಜನ ಅಹಿಂಸೆಯನ್ನು ಪಾಲಿಸಲೇಬೇಕೆಂದು ಅನ್ನುತ್ತಿದ್ದರೋ ಈಗ ಅದೇ ಗಾಂಧಿ, ಹಿಂಸೆಯ ಮಾರ್ಗವನ್ನು ಹಿಡಿಯದೆ ಗೂಂಡಾಗಿರಿಯನ್ನು ಎದುರಿಸುವುದು ಸಾಧ್ಯವಿಲ್ಲವೆಂದು ಕಾಂಗ್ರೆಸ್ ಜನರು ಬಹುಮತದಿಂದ ತೀರ್ಮಾನಿಸಿದರೆ ಅವರು ಜನರಿಗೆ ಹಿಂಸೆಯ ಮಾರ್ಗವನ್ನು ಅವಲಂಬಿಸುವಂತೆ ಹೇಳಲು ಅಭ್ಯಂತರವಿಲ್ಲವೆಂದು ಅನ್ನುತ್ತಾರೆ! ಇದರಿಂದ, ಗಾಂದಿಯವರಿಗೆ ಅಹಿಂಸೆಯ ತತ್ತ್ವದ ಬಗೆಗೆ ವಿಶ್ವಾಸವೇ ಇರಲಿಲ್ಲ, ಎಂದು ಅಪಾದನೆಯನ್ನು ಮಾಡಿದರೆ ತಪ್ಪಾದೀತೆ? ಅಹಿಂಸೆಯನ್ನು ಕುರಿತು ಗಾಂಧಿಯವರ ಪರಸ್ಪರ ವಿರೋಧಿ ವಿಚಾರಗಳನ್ನು ಕೇಳಿದ ಬಳಿಕ ಯಾವ ಮನುಷ್ಯನಾದರೂ ಗೊಂದಲಕ್ಕೆ ಈಡಾಗದೆ ಇರಲಾರ. ಈ ಮಾತುಗಳನ್ನು ಒಬ್ಬ ಜವಾಬ್ದಾರ ಮನುಷ್ಯನ ಘೋಷಣೆ ಎಂದು ಮನ್ನಿಸಬೇಕೋ, ಒಬ್ಬ ತಲೆಕೆಟ್ಟವನ ಬಡಬಡಿಕೆ ಎಂದು ತಿಳಿಯಬೇಕೋ, ಮಹಾತ್ಮನ ಲಹರಿ ಎನ್ನಬೇಕೋ, ಒಬ್ಬ ವ್ಯಾಪಾರಿಯ ಲೆಕ್ಕಾಚಾರದ ಮನೋಧರ್ಮವು ರಚಿಸಿದ ಪುರಾಣ ಎನ್ನಬೇಕೋ, ಎನ್ನುವುದು ಎಳ್ಳಷ್ಟೂ ಅರ್ಥವಾಗದಂತಿದೆ.

ಅದೇನಿದ್ದರೂ ಗಾಂಧಿಯವರ ಅಹಿಂಸೆಯನ್ನು ಕುರಿತಾದ ಇತ್ತೀಚಿಗಿನ ಮನೋಧರ್ಮವು ಅವರ ದುರ್ದೆಸೆಯಾಗಿದೆ, ಎಂದೆನ್ನಲು ಯಾವುದೇ ಅಭ್ಯಂತರವಿಲ್ಲ. ಏಕೆಂದರೆ, ಒಮ್ಮೆ ಒಂದು ಅಭಿಪ್ರಾಯ ಹಾಗೂ ಇನ್ನೊಮ್ಮೆ ಅದಕ್ಕೆ ತಿರುಗುಮುರುಗಾದ ಇನ್ನೊಂದು ಅಭಿಪ್ರಾಯವನ್ನು ನೀಡುವ ಹೊತ್ತು ಬರುವಂತಹ ಇನ್ನಾವ ದುರ್ದೆಸೆ ಸಾಧ್ಯ? ಒಂದೊಂದು ಸಲ ಮನುಷ್ಯ ತನ್ನ ಅಭಿಪ್ರಾಯವನ್ನು ಬದಲಾಯಿಸಬೇಕಾಗುತ್ತದೆ. ಏಕೆಂದರೆ ಅಭಿಪ್ರಾಯವು ಪರಿಸ್ಥಿತಿಯನ್ನು ಅವಲಂಬಿದೆ. ಪರಿಸ್ಥಿತಿಯು ಬದಲಾಯಿಸಿದರೆ ಅಭಿಪ್ರಾಯವನ್ನೂ ಬದಲಾಯಿಸಬೇಕಾಗುತ್ತದೆ. ಆದರೆ, ಅಭಿಪ್ರಾಯ ಬದಲಾದರೂ ಮನುಷ್ಯ ತನ್ನ ತತ್ತ್ವಗಳನ್ನು ಬದಲಾಯಿಸಲಾರ. ಅಭಿಪ್ರಾಯವನ್ನು ಬದಲಾಯಿಸುವ ಮನುಷ್ಯನನ್ನು ಯಾರೂ ವಂಚಕನೆಂದು ಅನ್ನದಿದ್ದರೂ ತತ್ವಗಳನ್ನು ಬದಲಾಯಿಸುವ ಮನುಷ್ಯನನ್ನು ವಂಚಕನೆಂದು ಅನ್ನದೆ ಇರಲಾರರು. ಅಹಿಂಸೆಯನ್ನು ಕುರಿತು ಗಾಂಧಿಯವರ ನಿಲುವಿನಲ್ಲಾದ ವ್ಯತ್ಯಾಸವು ಅಭಿಪ್ರಾಯದ ಬದಲಾವಣೆಯದಾಗಿರದೆ ಅದು ತತ್ತ್ವದ ಸ್ವರೂಪವನ್ನು ಕುರಿತಾಗಿದೆ, ಎಂಬಲ್ಲಿ ಸಂದೇಹವಿಲ್ಲ. ಒಮ್ಮೆ ಹೇಳಿದ ತತ್ತ್ವವನ್ನು ಹಿಂತೆಗೆದುಕೊಳ್ಳಬೇಕಾಗುವ ಸನ್ನಿವೇಶ ಬರುವಂತಹ ದುರ್ದೆಸೆ ಇನ್ನಾವುದು? ಈ ದುರ್ದೆಸೆಯ ಕಾರಣಗಳನ್ನು ಅರಿತುಕೊಳ್ಳುವುದು ಆವಶ್ಯಕ. ಗಾಂಧಿಯವರ ಅಹಿಂಸೆಯು ಮೂಲದಲ್ಲಿ

ಅಹಿಂಸೆಯ ಅಪಹಾಸ್ಯವೇ ಆಗಿತ್ತು. ಹಿಂದೂಸ್ಥಾನದಲ್ಲಿ ಮೊದಲಿನಿಂದಲೂ ಪ್ರತಿಪಾದಿತವಾಗುತ್ತ ಬಂದಿರುವ ಅಹಿಂಸೆಯ ವ್ಯಾಖ್ಯೆ, ಅದರ ಮಿತಿ ಹಾಗೂ ಅದರ ವ್ಯಾಪ್ತಿಗಳನ್ನು ತುಕಾರಾಮನು ತನ್ನ ಒಂದು ಅಭಂಗದಲ್ಲಿ ಹಿಂದೆಯೇ ಹೇಳಿಬಿಟ್ಟಿದ್ದಾನೆ.

ದಯಾ ತೇಚಿ ನಾಂವ ಭೂತಾಂ ಚೇ ಪಾಲನ |
ಆಣಿಕ ನಿರ್ದಳಣ ಕಂಟಕಾಂ ಚೇ |



**(ಜೀವಿಗಳ ಪಾಲನೆ ಮತ್ತು ಕಂಟಕರ ನಿರ್ದಳನೆಗೆ |**
**ದಯೆ ಎಂಬ ಹೆಸರು 11)**

ತುಕಾರಾಮನು ಮಾಡಿದ ಈ ವ್ಯಾಖ್ಯೆಯೇ ಅಹಿಂಸೆಯ ನಿಜವಾದ ವ್ಯಾಖ್ಯೆ, ತುಕಾರಾಮನ ವ್ಯಾಖ್ಯೆಯ ಮತ್ತು ಕಂಟಕರ ನಿರ್ದಳನೆಎನ್ನುವ ಭಾಗವು ತುಂಬ ಮಹತ್ವದ್ದು. ಗಾಂಧಿಯವರು ಈ ಭಾಗವನ್ನು ಕಿತ್ತೆಸೆದು ಅಹಿಂಸೆ ಎಂದರೆ 'ಜೀವಿಗಳ ಪಾಲನೆ' ಎಂಬ ಭಾಗವನ್ನಷ್ಟೇ ತೆಗೆದುಕೊಂಡು, `ಮತ್ತು ಕಂಟಕರ ನಿರ್ದಳನೆ ಯ ಭಾಗವನ್ನು ಕೈಬಿಟ್ಟು ಅಹಿಂಸೆಯನ್ನು ಅತಿವ್ಯಾಪ್ತಿಗೆ ಒಳಪಡಿಸಿದರು.

ಅಹಿಂಸೆಯನ್ನು ಹೀಗೆ ಅತಿ ವ್ಯಾಪ್ತಿಗೆ ಒಳಪಡಿಸುವಲ್ಲಿ ಗಾಂಧಿಯವರ ಸ್ವಾರ್ಥವಿತ್ತು. ಜಗದ್ವಂದ್ಯರಾಗುವ, ಜಗನ್ಮಾನ್ಯರಾಗುವ ಅತ್ಯಾಸೆಯು ಗಾಂಧಿಯವರಷ್ಟು ಇನ್ನಾರಲ್ಲೂ ಇರಲಿಕ್ಕಿಲ್ಲ. ಜಗತ್ಪ್ರಸಿದ್ಧರಾಗುವ ಸುಲಭ ಮಾರ್ಗವೆಂದು ಗಾಂಧಿಯವರು ತುದಿಮುಟ್ಟಿದ ಅಹಿಂಸೆಯನ್ನು ಘೋಷಿಸಿದರು. ನಮಗಂತೂ ಇದರ ಹೊರತಾಗಿ ಬೇರಾವ ಕಾರಣವೂ ಕಾಣುತ್ತಿಲ್ಲ. ತುದಿಮುಟ್ಟಿದ ಅಹಿಂಸೆ, ಶತ್ರುವನ್ನು ಎದುರಿಸದೆ ಅವನಿಗೆ ಪ್ರಾಣನಾಶ, ದ್ರವ್ಯನಾಶ, ಲೂಟಿ, ಕೊಳ್ಳೆ ಇಕ್ಕುವಿಕೆಗಳನ್ನು ಮಾಡಗೊಡುವುದು ವಿಘಾತಕವಾದುದು. ಇದು ಗಾಂಧಿಯವರಿಗೆ ತಿಳಿಯುವುದಿಲ್ಲ , ಎಂದೆನ್ನಲಾಗದು.

ಕಳೆದ ಇಪ್ಪತ್ತು ವರ್ಷಗಳ ಕಾಲ ಹಿಂದೂಸ್ತಾನದಲ್ಲಿ ಹಿಂದೂ-ಮುಸಲ್ಮಾನರ ಸಾವಿರಾರು ದಂಗೆಗಳಾಗಿವೆ. ಅವುಗಳಲ್ಲಿ, ಮುಂಬಯಿ ಇಲಾಖೆ ಮತ್ತು ಮುಂಬಯಿ ನಗರಗಳಲ್ಲಿ ಹಿಂದೂಮುಸಲ್ಮಾನರ ದಂಗೆಗಳ ಸಂಖ್ಯೆ ಎಲ್ಲ ಕ್ಕೂ ಹೆಚ್ಚು, ಎಂದೆನ್ನಲು ಯಾವ ಅಭ್ಯಂತರವೂ ಇಲ್ಲ. ಆ ಹಿಂದೂ-ಮುಸಲ್ಮಾನರ ದಂಗೆಗಳಲ್ಲಿ ಮುಂಬಯಿ ನಗರದ ಹಿಂದೂಗಳ ಪ್ರಾಣನಷ್ಟ ಮತ್ತು ದ್ರವ್ಯನಷ್ಟ ಆಯಿತು. ಅದು ಗಾಂಧಿಯವರಿಗೆ ಪೂರ್ತಿ ತಿಳಿದಿತ್ತು. ಆದರೆ ಆಗ ತಮ್ಮ ಅಹಿಂಸೆಗೆ ಕಡಿವಾಣ ಹಾಕಿ, ಪ್ರತಿಕಾರ ಮಾಡಿ, ಎಂದು ಉಪದೇಶಿಸಲು ಗಾಂಧಿಯವರಿಗೆ ಹೊಳೆಯಲಿಲ್ಲ. ಇದಕ್ಕೆ ಕಾರಣವೆಂದರೆ, ಅಹಿಂಸೆಯ ಘೋರ ಪರಿಣಾಮಗಳತ್ತ ನೋಡುವುದರಿಂದ ಗಾಂಧಿಯವರಿಗೆ ಯಾವ ಪ್ರಯೋಜನವಿರಲಿಲ್ಲ. ಆದರೆ ಅಹಮ್ಮದಾಬಾದಿನ ಹಿಂದೂಗಳು ಗಾಂಧಿಯವರಿಗೆ ಹೊರಗಿನವರಾಗಿರಲಿಲ್ಲ. ಅಲ್ಲದೆ ಅಹಮ್ಮದಾಬಾದಿನ ಮುಸಲ್ಮಾನರು ಹಿಂದೂಗಳ ಮೇಲೆ ಮಾಡಿದ ದುರಾಚಾರವೇನೂ ಪರಕೀಯರ ಮೇಲೆ ನಡೆದ ದುರಾಚಾರವಲ್ಲ. ಅಹಮ್ಮದಬಾದಿನ ಹಿಂದೂಗಳೇನೂ ಪರಕೀಯರಲ್ಲ. ಗಾಂಧಿಯವರು ಸಂನ್ಯಾಸಿಯಾಗಿದ್ದರೂ ಗುಜರಾತ ತಮ್ಮ ನೆಲ, ಅಹಮ್ಮದಾಬಾದಿನ ಹಿಂದೂಗಳೆಂದರೆ ತಮ್ಮ ಹೊಟ್ಟೆಯ ಮಕ್ಕಳು, ಎಂಬ ಭಾವನೆ ಅವರನ್ನು ಬಿಟ್ಟಿರಲಿಲ್ಲ. ಅಹಿಂಸೆಯಿಂದ ಹೊಟ್ಟೆಯ ಮಕ್ಕಳಿಗೆ ಮೋಸವಾಯಿತು!! ಜಗತ್ತಿಗೆ ಮಾರ್ಗದರ್ಶನವನ್ನು ಮಾಡಿದ ಅಹಿಂಸೆಯ ದೀವಟಿಗೆಯಿಂದಲೇ ತಮ್ಮ ಮನೆಗೆ ಬೆಂಕಿಬಿದ್ದುದನ್ನು ಕಂಡು, ಗಾಂಧಿಯವರು ಎಚ್ಚೆತ್ತುಕೊಂಡು, ಅಹಿಂಸೆಯ ಮೇಲೆ ಎಳ್ಳುನೀರು ಬಿಡಲು ಸಿದ್ಧರಾದರು!!

ಹಿಂದೂಸ್ಥಾನದಲ್ಲಿ ಶಂಕರಾಚಾರ್ಯ, ಮಾಧವಾಚಾರ್ಯ, ರಾಮಾನುಜಾಚಾರ್ಯರಂಥ ಆಚಾರ್ಯರಾದರು. ಹಿಂದೂಸ್ಥಾನದಲ್ಲಿ ತುಕಾರಾಮ, ಗೋರಾ ಕುಂಭಾರ, ಚೋಖಾಮೇಳಾ, ಮೊದಲಾದ ಸಾಧು-ಸಂತರಾದರು. ಆದರೆ ಗಾಂಧಿಯವರಿಗಿಂತ ಮೊದಲು ಯಾರೂ ಮಹಾತ್ಮರಾಗಲಿಲ್ಲ, ಎಂದು ಸಾಕಷ್ಟು ಜನ ಗೌರವದಿಂದ ಹೇಳುತ್ತಾರೆ. ಆಚಾರ್ಯರು, ಸಾಧು-ಸಂತರು ಸುಮ್ಮನೆ ಜನ್ಮ ತಳೆದರೆಂದು ಈಗಿನ ಸಾಕಷ್ಟು ಜನರಿಗೆ ಅನ್ನಿಸುತ್ತದೆ. ಅವರು ದೇಶದ ಉನ್ನತಿಗಾಗಿ ಏನನ್ನೂ ಮಾಡಲಿಲ್ಲವೆಂಬ ಅಪಾದನೆ ಅವರ ಮೇಲಿದೆ. ಈ ಸಂಗತಿ ನಿಜವಾದರೂ ಆಚಾರ್ಯರು, ಸಾಧು-

ಸಂತರು ಈ ದೇಶದಲ್ಲಿ ಸುಮ್ಮನೆ ಜನ್ಮ ತಳೆದುದನ್ನು ಒಂದು ಆಪತ್ತು, ಎನ್ನಲಾಗದು. ಆದರೆ, ಈ ದೇಶದಲ್ಲಿ ಒಬ್ಬ ಮಹಾತ್ಮನು ಜನ್ಮ ತಳೆದುದನ್ನು ಒಂದು ದೊಡ್ಡದಾದ ಆಪತ್ತೆಂದು ನಾವು ತಿಳಿಯುತ್ತೇವೆ. ಯಾವ ದಿನ ಗಾಂಧಿಗೆ ಮಹಾತ್ಮನೆಂಬ ಪದವಿಯನ್ನು ನೀಡಲಾಯಿತೋ, ಆ ದಿನವನ್ನು ದೇಶದ ಇತಿಹಾಸದ ದೊಡ್ಡ ದುರ್ಭಾಗ್ಯದ ದಿನವೆಂದು ಹಾಗೂ ಗಾಂಧಿಗೆ ಮಹಾತ್ಮನೆಂಬ ಪದವಿಯನ್ನು ನೀಡಬೇಕೆನ್ನುವ ದುರ್ಬುದ್ಧಿಯು ಯಾವ ಮನುಷ್ಯನಲ್ಲಿ ಹುಟ್ಟಿತೋ ಅಂಥವನನ್ನು ಕಾಲಪುರುಷನೆಂದು ತಿಳಿಯಲು ಅಡ್ಡಿಯಿಲ್ಲ ಎಂಬುದು ನಮ್ಮ ಸ್ಪಷ್ಟವಾದ ಅಭಿಪ್ರಾಯ. ಮಹಾತ್ಮನೆಂದರೆ ಜನರ ಮೇಲೆ ಎಲ್ಲ ಬಗೆಯಲ್ಲೂ ಒಂದು ಆಪತ್ತು. ಜನತೆಗೆ ಯಮ ಬೇಕು, ನಿಯಮ ಬೇಕು. ಜನತೆಯು ಯಾವುದೇ ಸಂಗತಿಯನ್ನು ಕೈಕೊಳ್ಳುವ ಮೊದಲು ಅದನ್ನು ಪರೀಕ್ಷಿಸಿ ನೋಡದೆ ಬೇರೆ ವಿಧಿಯಿಲ್ಲ. ಸತ್ಯ ಎಂದ ಕೂಡಲೆ ಅದಕ್ಕಾಗಿ ಸಾಕ್ಷ್ಯವನ್ನು ಕೇಳತಕ್ಕದ್ದು. ಆಜ್ಞೆ ಎಂದರೂ ಅದರ ಪರಿಣಾಮವನ್ನು ಪರೀಕ್ಷಿಸಿ ನೋಡಬೇಕು. ಆದರೆ ಮಹಾತ್ಮನಿಗೆ ಯಮವಿಲ್ಲ, ನಿಯಮವಿಲ್ಲ. ಮಹಾತ್ಮನು ಹೇಳುವುದೇ ಸತ್ಯ, ಅವನು ಅನ್ನುವುದೇ ಆಜ್ಞೆ ಆಚಾರ್ಯರು ಹಾಗೂ ಸಾಧು-ಸಂತರ ಮಾತು ಹಾಗಲ್ಲ. ಆಚಾರ್ಯರು ಹಾಗೂ ಸಾಧು-ಸಂತರೊಡನೆ ನಿಜ-ಸುಳ್ಳು, ಒಳ್ಳೆಯದು-ಕೆಟ್ಟದ್ದು ಎಂಬುದನ್ನು ಕುರಿತು ವಾದ ಹೂಡಲು ಸಾಧ್ಯ. ಅವರು ಯಮ-ನಿಯಮ, ತರ್ಕಶಾಸ್ತ್ರದ ಬಂಧನಗಳಾಚೆ ಇಲ್ಲ. ಒಮ್ಮೆ ಮಹಾತ್ಮನೆಂದು ಒಪ್ಪಿಕೊಂಡ ಬಳಿಕ, 'ಇದು ಹೀಗೇಕೆ?' ಎಂದು ಅವನನ್ನು ವಿಚಾರಿಸುವ ಸಾಮರ್ಥವೇ ಉಳಿಯದು. ಏಕೆಂದರೆ, ಮಹಾತ್ಮ ಹಾಗೂ ಪರಮೇಶ್ವರನಲ್ಲಿ ವ್ಯತ್ಯಾಸವೇ ಉಳಿಯದು. ಮಹಾತ್ಮನೆಂದರೆ ಪರಮ ಆತ್ಮ, ಅಂದರೆ ಪರಮೇಶ್ವರನೆಂದು ಪ್ರಪಂಚವು ನಂಬುತ್ತದೆ. ಆಚಾರ್ಯರು ಹಾಗೂ ಸಾಧುಸಂತರು ಹಾಗಲ್ಲ. ಅವರು ಮಾರ್ಗದರ್ಶಕರು. ಮೋಕ್ಷದಾತರಲ್ಲ. ಮಹಾತ್ಮನು ಬರಿ ಮಾರ್ಗದರ್ಶಕನಾಗಿರದೆ ಅವನು ಮೋಕ್ಷದಾತನೂ ಅಹುದು, ಎಂದು ಸಾಮಾನ್ಯ ಜನರು ನಂಬುತ್ತಾರೆ. ಜನ, ಆಚಾರ್ಯರು ಹಾಗೂ ಸಾಧು-ಸಂತರನ್ನು ವಂದಿಸುತ್ತಾರೆ. ಜನ ಅನನ್ಯಭಾವದಿಂದ ಮಹಾತ್ಮರಿಗೆ ಶರಣು ಹೋಗುತ್ತಾರೆ.

ಶರಣಾಗತಿ ಎಂದರೆ ಒಂದು ಸಂಕಟವೇ ಅಹುದು. ಅದರಷ್ಟು ದೊಡ್ಡ ಸಂಕಟ ಬೇರೊಂದು ಇರಲಾರದು. ಏಕೆಂದರೆ, ಅದು ಮಾನಸಿಕ ದಾಸ್ಯವಾಗಿರುತ್ತದೆ. ಮಾನಸಿಕ ದಾಸ್ಯಕ್ಕೆ ಸಿಕ್ಕಿಕೊಂಡವರ ಪ್ರಗತಿಯು ನಿಂತುಬಿಡುತ್ತದೆ, ಎಂಬುದಕ್ಕೆ ಇಡಿಯ ಪ್ರಪಂಚದ ಇತಿಹಾಸವು ಸಾಕ್ಷಿಯಾಗಿದೆ.

ಜನರು ಹುಚ್ಚರಾಗಿರದ ಹೊರತು ಮಹಾತ್ಮಾಗಿರಿ ನಡೆಯದು. ಅಲ್ಲದೆ ಜನರ ಮೇಲೆ ಮಹಾತ್ಮಾಗಿರಿಯ ಹಿಡಿತ ಕುಳಿತಿತೆಂದರೆ ಅವರು ಹುಚ್ಚರಾಗುತ್ತಾರೆ ದಾಸರಾಗುತ್ತಾರೆ. ಸಂಕಟದಿಂದ ಬಿಡುಗಡೆ ಹೊಂದಬೇಕಿದ್ದರೆ

ಮಹಾತ್ಮಾಗಿರಿಯು ನಾಶ ಹೊಂದುವುದೊಂದೇ ಉಪಾಯ. ಗಾಂಧಿಯ ಮಹಾತ್ಮಾಗಿರಿಂರು ಅಹಿಂಸೆಯನ್ನು ಆಧರಿಸಿತ್ತು. ಅಹಿಂಸೆಯ ಘೋಷಣೆಯಿಂದ ಅದು ಉಳಿದುಕೊಂಡಿತ್ತು. ಅಹಮ್ಮದಾಬಾದಿನ ದಂಗೆ ನಡೆಯದೆ ಇದ್ದರೆ ಸಾಯುವವರೆಗೂ ಗಾಂಧಿ ಅಹಿಂಸೆಯ ಘೋಷಣೆಯನ್ನು ಕೈಬಿಡುತ್ತಿರಲಿಲ್ಲ. ಅಲ್ಲದೆ ಅಹಿಂಸೆಯ ಘೋರ ಪರಿಣಾಮಗಳು ತಿಳಿದಿದ್ದರೂ ಅವರು ಪ್ರಪಂಚವನ್ನು ಕಾಪಾಡುವ-ಅಹಿಂಸೆಯ-ಹೊಸ ಮಾರ್ಗವನ್ನು ಹೇಳುವ ಮಹಾತ್ಮನೆಂದು ಸಾಯಬೇಕೆನ್ನುವ ತಮ್ಮ ಹವ್ಯಾಸವನ್ನು ಪೂರೈಸಿಕೊಳ್ಳುತ್ತಿದ್ದರು, ಎಂಬ ಖಾತ್ರಿ ನಮಗಿದೆ. ಆದರೆ ಗಾಂಧಿ ಶುದ್ಧ ದುರ್ದೆವಿ ಎನ್ನಿಸಿದರು. ಏಕೆಂದರೆ ಗಾಂಧಿಯವರ ಬಾಗಿಲಲ್ಲಿ ಕುಳಿತ ಪರಮೇಶ್ವರನೂ ಅವರಿಗೆ ನೆರವಾಗಲಿಲ್ಲ. ಅಹಮ್ಮದಾಬಾದಿನ ದಂಗೆಯ ಪ್ರಸಂಗವೆಂದರೆ



ಗಾಂಧಿಯವರ ಬಲು ದೊಡ್ಡ ದುರ್ದೈವ ಎನ್ನಬೇಕು. ಎಷ್ಟು ಪರಿಯಿಂದ ಗಾಂಧಿಯವರ ದುರ್ದೈವವೋ, ಅಷ್ಟೇ ಪರಿಯಿಂದ ಅದು ದೇಶದ ದುರ್ದೈವವೂ, ಎಂದೆನ್ನಬೇಕಾಗುತ್ತದೆ. ಅಹಮ್ಮದಾಬಾದಿನ ಪ್ರಸಂಗದ ನಿಮಿತ್ತವಾಗಿ ಒಂದು ಸಂಗತಿ ಖಚಿತವಾಯಿತು. ಅದೆಂದರೆ, ಅಹಿಂಸೆಯೆಂದರೆ, ಮಹಾತ್ಮಾಗಿರಿಯನ್ನು ನಡೆಸಿಕೊಂಡು ಹೋಗಲು ಗಾಂಧಿ ತಮ್ಮ ಮೈಗೆ ಪೂಸಿಕೊಂಡ ಬೂದಿ, ಎಂದು ಸಿದ್ಧವಾಯಿತು. ಸ್ವಂತದ ದೊಡ್ಡಸ್ತಿಕೆಯನ್ನು ಮೆರೆಯಲೆಂದು ಅಹಿಂಸೆಯ ಚಿತೆಯನ್ನು ಹೊತ್ತಿಸಿ, ತನ್ನವರನ್ನು ಕಾಪಾಡಲೆಂದು ಅವರು ಅದನ್ನೀಗ ನಂದಿಸಿದರು! ಒಟ್ಟಿನಲ್ಲಿ ಗಾಂಧಿಯವರ ಅಹಿಂಸೆ ಎಂದರೆ ಒಂದು ದೊಡ್ಡ ದಂಭವಾಗಿತ್ತು, ಎಂಬುದನ್ನು ಅಹಮ್ಮದಾಬಾದು ಸಿದ್ದ ಮಾಡಿತು. ದೇಶದ ಸುದೈವವು ಉದಯಕ್ಕೆ ಬಂದಿತೆಂದು ನಾವು ತಿಳಿಯುತ್ತೇವೆ.

ಅಹಿಂಸೆಯ ಸಂದರ್ಭದಲ್ಲಿ ಯಾವ ದಿನ ಗಾಂಧಿ ಅಂಜಿ ಹಿಂಜರಿಯುವರೋ ಆ ದಿನದಿಂದ ಅವರ ಮಹಾತ್ಮಾಗಿರಿ ಮುಗಿಯಲು ಶುರುವಾಗಲಿದೆ, ಎಂಬುದು ಬಹಳ ದಿನಗಳ ಕೆಳಗೆಯೇ ನಾವು ಹೇಳಿದ ಭವಿಷ್ಯವಾಣಿಯಾಗಿದೆ. ಈ ದೃಷ್ಟಿಯಿಂದ ನೋಡಿದರೆ ಅಹಮ್ಮದಾಬಾದಿನ ದಂಗೆ ಒಂದು ಇಷ್ಟವಾದ ಆಪತ್ತೆಂದು ನಾವು ಭಾವಿಸುತ್ತೇವೆ. ಏಕೆಂದರೆ, ಅಹಮ್ಮದಾಬಾದಿನಲ್ಲಿ ಹಿಂದೂ-ಮುಸಲ್ಮಾನ ದಂಗೆ ನಡೆಯದೇ ಹೋಗಿದ್ದರೆ, ಅಹಿಂಸೆಯಿಂದಾಗಿ ಅಲ್ಲಿಯ ಹಿಂದೂಗಳ ಧೂಳೀಪಟವಾಗದೆ ಹೋಗಿದ್ದರೆ, ಗಾಂಧಿ ತಮ್ಮ ದೊಡ್ಡಸ್ತಿಕೆಯನ್ನು ಮೆರೆಯಲಿಕ್ಕಾಗಿ ಅಹಿಂಸೆಯ ದಂಭವನ್ನು ಹಾಗೆಯೇ ಎದೆಯಲ್ಲಿ ಕಾಪಿಟ್ಟುಕೊಂಡು ಕುಳಿತಿರುತ್ತಿದ್ದರು.

ಅಹಮ್ಮದಾಬಾದಿನ ದಂಗೆಯಿಂದ ಬೂದಿ ಹಾರಿ ಹೋಗಿ, ಇದ್ದಿಲು ಉಳಿದುಕೊಂಡುದು ಒಳ್ಳೆಯದೇ ಆಯಿತು, ಮಹಾತ್ಮ ಹೋದ, ಮನುಷ್ಯ ಉಳಿದ, ಎಂದು ಉದ್ಧರಿಸಲು ಅನುಕೂಲ ಒದಗಿತು. ಆದುದರಿಂದ, ನಾವು ಅಹಮ್ಮದಾಬಾದಿನ ಹಿಂದೂಗಳು ಹಾಗೂ ಮುಸಲ್ಮಾನರನ್ನು ಅಭಿನಂದಿಸ ಬಯಸುತ್ತೇವೆ.

ಸಂಪಾದಕೀಯ : 'ಜನತಾ'. ತಾ. ೧೧ ಮೇ ೧೯೪೧.

ಉದ್ದರಣೆ : ಗಾಂಜರೆ, ಸಂಪುಟ-೪, ಪು-೧೮೬-೧೯೨.

## ೯೪, ಬುದ್ಧಜಯಂತಿ ಹಾಗೂ ಅದರ ರಾಜಕೀಯ ಮಹತ್ವ

ಹಿಂದೂಸ್ಥಾನದ ಜನರು ಉತ್ಸವಪ್ರಿಯರು, ಎಂಬುದನ್ನು ಯಾರಿಗೂ ಹೇಳುವ ಅಗತ್ಯವಿಲ್ಲ. ಅವರ ವರ್ಷದ ಅರ್ಧಕ್ಕಿಂತಲೂ ಹೆಚ್ಚು ದಿನಗಳು ಉತ್ಸವ ಮತ್ತು ಹಬ್ಬಗಳಲ್ಲಿ ಕಳೆಯುತ್ತವೆ. ಅದರಲ್ಲೂ ಅವರು ದೇಶದ ಮಹತ್ವದ ವ್ಯಕ್ತಿಗಳ ಹುಟ್ಟು-ಸಾವುಗಳ ಉತ್ಸವಗಳಿಗೆ ಇನ್ನಷ್ಟು ಹೆಚ್ಚು ಮಹತ್ವವನ್ನು ಕೊಡುತ್ತಾರೆ. ಕೃಷ್ಣಜನ್ಮಾಷ್ಟಮಿ, ಹನುಮಜಯಂತಿಗಳು ಅವರ ಮನೋಧರ್ಮದ ಸಾಕ್ಷ್ಯಗಳು. ಹೀಗಿರುವಲ್ಲಿ ಹಿಂದೂಸ್ಥಾನದ ಜನ ಬುದ್ಧನ ಜಯಂತಿಯನ್ನು ಆಚರಿಸದೇ ಇರುವುದು ಯಾವ ಪರಕೀಯನಿಗೂ ಆಶ್ಚರ್ಯದ ಸಂಗತಿ, ಎನ್ನಿಸದೆ ಇರದು. ಹಿಂದೂಸ್ತಾನದಲ್ಲಿ ಆಗಿ ಹೋದ ವಿಭೂತಿಗಳಲ್ಲಿ ಬುದ್ಧನ ಸ್ಥಾನ ತೀರ ಮೇಲಿನದು. ಅವನೆಂದರೆ ಜಗತ್ತಿಗೆ ಪ್ರಕಾಶವನ್ನು ಬೀರುವ ತೇಜಸ್ವಿ ಸೂರ್ಯನೆಂದು ಅವನ ಮಹಾತ್ಮೆಯನ್ನು ಹೊಗಳುವ ಭಕ್ತಗಣಗಳಿವೆ. ಬುದ್ಧನ ಬಗೆಗೆ ಅಸೂಯೆ ಪಡುವ ಕ್ರಿಸ್ತೀಯರೂ ಕೂಡ ಅವನಿಗೆ ಏಶಿಯಾ ಖಂಡಕ್ಕೆ ಪ್ರಕಾಶವನ್ನು ನೀಡುವ ಸೂರ್ಯನೆಂದು ಉಪಮೆಯನ್ನು ಕೊಡುತ್ತಾರೆ. ಹಿಂದೂಗಳು ಕೂಡ ಅವನನ್ನು ವಿಷ್ಣುವಿನ ಅವತಾರನೆಂದು ಮನ್ನಿಸುತ್ತಾರೆ. ಈ ದೇಶದ ಜನರಿಗೆ ಇಂಥ ಹೆಸರುವಾಸಿಯಾದ ಮನುಷ್ಯನ ನೆನಪೂ ಕೂಡ ಉಳಿದಿಲ್ಲ. ಬಾಜೀರಾವ ಪೇಶವಾ ಇವನು ಇಟ್ಟುಕೊಂಡ ರಂಡೆ, ಮಸ್ತಾನಿಯ ಹೆಸರು ಗೊತ್ತಿರುವ ಸಾಕಷ್ಟು ಜನ ಸಾಮಾನ್ಯರು ಇಂದು ಸಿಕ್ಕಬಹುದು. ಆದರೆ ಇವರಿಗಿಂತ, ಬುದ್ಧನ ಹೆಸರನ್ನು ಅರಿತಿರುವ ಅತ್ಯಲ್ಪ ಜನ ಸಾಮಾನ್ಯರು ಕಾಣಲು ಸಿಕ್ಕಬಹುದೆಂಬ ಸಂದೇಹ ನನಗಿದೆ. ಇಷ್ಟೊಂದು ದೊಡ್ಡ ವಿಭೂತಿಯ ಬಗೆಗೆ ಎಷ್ಟೊಂದು ದೊಡ್ಡ ಮರೆವು! ಇದೊಂದು ದೊಡ್ಡ ದುಃಖ ಹಾಗೂ ಬೆರಗಿನ ಸಂಗತಿ. ಪರಿಸ್ಥಿತಿ ಹೀಗಿರುವಾಗ ಬಂಗಾಲ ಹಾಗೂ ಇತರ ಪ್ರಾಂತಗಳಲ್ಲಿ ಬುದ್ಧಜಯಂತಿಯ ಆಚರಣೆಗಳನ್ನು ಆರಂಭಿಸಿರುವುದೊಂದು ಸಂತೋಷದ ಸಂಗತಿ. ಇದು ತುಂಬ ಸ್ತುತ್ಯರ್ಹವಾದುದು. ನಮ್ಮ ದೃಷ್ಟಿಯಿಂದ ಈ ಉತ್ಸವಕ್ಕೆ ತುಂಬ ರಾಜಕೀಯ ಮಹತ್ವವಿದೆ. ಇದನ್ನು ಮನಗಾಣಿಸಲೆಂದು ಇಂದು ಗೌತಮಬುದ್ಧನ ಚರಿತ್ರೆಯನ್ನು ಜನರಿಗೆ ಪರಿಚಯಿಸಲು ಯೋಜಿಸಿದ್ದೇವೆ.

ಎರಡೂವರೆ ಸಾವಿರ ವರ್ಷಗಳ ಕೆಳಗೆ ಶುದ್ಧೋಧನ ಎಂಬ ಸಾಕ್ಯವಂಶದ ರಾಜನು ಕಪಿಲವಸ್ತು ಎಂಬಲ್ಲಿ ರಾಜ್ಯವನ್ನು ಆಳುತ್ತಿದ್ದನು. ಶುದ್ಧೋಧನ ರಾಜನ ಕುಲದ ಹೆಸರು ಗೌತಮ ಎಂದಿತ್ತು. ಕಪಿಲವಸ್ತುವು ಹಿಂದೂಸ್ಥಾನದ ಇಂದಿನ ಸಂಯುಕ್ತ ಪ್ರಾಂತ, ಎಂಬ ಪ್ರಾಂತದಲ್ಲಿತ್ತು. ಅದು ವಸತಿ ಹಾಗೂ ಅಯೋಧ್ಯೆಗಳ ನಟ್ಟನಡುವೆ ಇದ್ದು ಫೈಜಾಬಾದಿನ ಪೂರ್ವ ದಿಸೆಯಲ್ಲಿ ೫೦ ಮೈಲುಗಳ ದೂರದಲ್ಲಿತ್ತು. ಶುದ್ಧೋಧನ ರಾಜನಿಗೆ ಇಬ್ಬರು ಮಡದಿಯರು. ಒಬ್ಬಳ ಹೆಸರು ಮಾಯಾದೇವಿ, ಇನ್ನೊಬ್ಬಳದು ಪ್ರಜಾಪತಿ, ಶುದ್ಧೋಧನ ಹಾಗೂ ಮಾಯಾದೇವಿಯ ಮದುವೆಯಾದ ಕೆಲವು ದಿನಗಳಲ್ಲಿ ಮಾಯಾದೇವಿ ಬಸುರಾದಳು. ಅವಳು ಬಸುರಾದ ಬಳಿಕ, ಮೊದಲಿನಿಂದ ನಡೆದು ಬಂದ

ಪದ್ಧತಿಯಂತೆ ಮೊದಲ ಬಾಣಂತಿತನ ತವರುಮನೆಯಲ್ಲಿ ಆಗಬೇಕೆಂದೂ ಮಗಳನ್ನು ಬಾಣಂತಿತನಕ್ಕಾಗಿ ತಮ್ಮ ಊರಿಗೆ ಕಳಿಸಬೇಕೆಂದೂ ಹೇಳಿ ಮಾಯಾದೇವಿಯ ಅಪ್ಪನಾದ ಸುಬುದ್ಧನು ತನ್ನ ಅಳಿಯನಾದ



ಶುದ್ಧೋಧನನಿಗೆ ಸಂದೇಶವನ್ನು ಕಳಿಸಿದನು. ಅದರಂತೆ ಮಾಯಾದೇವಿ ಹಾಗೂ ಅವಳ ತಂಗಿ ಪ್ರಜಾಪತಿಯರು ತಮ್ಮ ಆಳುಕಾಳುಗಳೊಡನೆ ತವರಿನತ್ತ ಹೊರಟರು. ದಾರಿಯಲ್ಲಿ ಲುಂಬಿಣಿಯ ಕಾಡಿಗೆ ಬಂದು ತಲುಪಿದರು. ಅಲ್ಲಿ ಮಾಯಾದೇವಿಗೆ ಹೆರಿಗೆಯ ನೋವು ಶುರುವಾಯಿತು. ಹೆರಿಗೆಯಾಗಿ ಅವಳು ಒಬ್ಬ ಪುತ್ರರತ್ನನಿಗೆ ಜನ್ಮವಿತ್ತು ಸಾವನ್ನಪ್ಪಿದಳು. ಅವಳ ತಂಗಿ ಪ್ರಜಾಪತಿಯು ಆ ಮಗುವನ್ನು ಪೋಷಿಸಿ ಬೆಳೆಸಿದಳು. ಮಗುವಿಗೆ ಸಿದ್ಧಾರ್ಥ ಎಂಬ ಹೆಸರನ್ನು ಇರಿಸಲಾಯಿತು. ಮುಂದೆ ಇವನೇ ಗೌತಮಬುದ್ಧನೆಂದು ಹೆಸರುವಾಸಿಯಾದನು.

ಕ್ಷತ್ರಿಯ ಕುಲ ಹಾಗೂ ಅರಸುಮನೆತನದಲ್ಲಿ ಜನ್ಮವೆತ್ತ ಕಾರಣ ಸಿದ್ಧಾರ್ಥನಿಗೆ ತಕ್ಕ ಶಿಕ್ಷಣವನ್ನು ನೀಡಲಾಯಿತು. ಅವನಿಗೆ ಕ್ಷತ್ರಿಯರಂತೆ ಸೈನ್ಯ ತರಬೇತಿಯನ್ನಷ್ಟೇ ನೀಡದೆ ವೇದಾಭ್ಯಾಸವನ್ನೂ ಚೆನ್ನಾಗಿ ಮಾಡಿಸಲಾಯಿತು. ಆದರೆ ಒಟ್ಟಿನಲ್ಲಿ ಸಿದ್ಧಾರ್ಥನ ಮನಸ್ಸಿನ ಒಲವು ಏಕಾಂತದತ್ತ ಇದ್ದಿತು. ಅವನು ರಾಜವೈಭವವನ್ನು ಅಷ್ಟಾಗಿ ಉಪಭೋಗಿಸುತ್ತಿರಲಿಲ್ಲ. ತನ್ನ ಮಗನು ಸಂನ್ಯಾಸಿಯಾಗಿ ಸಲ್ಲದ ದಾರಿಯನ್ನು ಹಿಡಿದಾನೆಂಬ ಹೆದರಿಕೆಯಿಂದ ಶುದ್ಧೋಧನನು ಮದುವೆ ಮಾಡಿ ಅವನನ್ನು ಸಂಸಾರಕ್ಕೆ ಕಟ್ಟಿಹಾಕಲು ತೀರ್ಮಾನಿಸಿದನು. ಅದರಂತೆ, ದಂಡಪಾಣಿಯ ಮಗಳು, ತವರು ಹೆಸರಿನ ಗೋಪಿ ಹಾಗೂ ಅತ್ತೆಮನೆಯ ಹೆಸರಿನ ಯಶೋಧರೆಯೊಡನೆ ಅವನ ಮದುವೆಯನ್ನು ನೆರವೇರಿಸಿದನು. ಆ ಮದುವೆಯಿಂದ ಸಿದ್ಧಾರ್ಥ ಗೌತಮನಿಗೆ ರಾಹುಲ ಎಂಬ ಮಗನು ಹುಟ್ಟಿದನು. ತನ್ನ ಮಗನಿಗೆ ಸುಖವಿಲಾಸದಲ್ಲಿರಲು ಅನುಕೂಲವಾಗಲೆಂದು ಶುದ್ಧೋಧನನು ಮೂರು ದೊಡ್ಡ ದೊಡ್ಡ ಅರಮನೆಗಳನ್ನು ಕಟ್ಟಿಸಿದನು. ಅವನ ವಿಲಾಸಕ್ಕೆ ಯಾವುದೇ ಬಗೆಯ ಕೊರತೆ ಆಗಬಾರದೆಂದು ಎಲ್ಲ ಬಗೆಯ ವ್ಯವಸ್ಥೆಗಳನ್ನು ಮಾಡಿದನು.

ಒಂದು ದಿನ ಗೌತಮನು ಊರಲ್ಲಿ ಸುತ್ತಿ ಒಟ್ಟು ಸಾಮಾಜಿಕ ಪರಿಸ್ಥಿತಿಯನ್ನು ಅವಲೋಕಿಸಲು ತೀರ್ಮಾನಿಸಿದನು. ಅದರಂತೆ ಅವನು ರಥವನ್ನೇರಿ ಅರಮನೆಯಿಂದ ಹೊರಟನು. ನಗರವನ್ನು ಹೊಕ್ಕ ತರುವಾಯ ನಾಲ್ಕು ಸಂಗತಿಗಳು ಅವನ ಕಣ್ಣಿಗೆ ಕಂಡವು. ಮೊದಲು, ಮುಪ್ಪಡರಿದ, ಸಣಕಲು ದೇಹದ, ಹಲ್ಲುದುರಿದ, ಸುಕ್ಕುಗಟ್ಟಿದ ಮುಖದ, ನರೆತ ತಲೆಗೂದಲಿನ, ಕಮಾನಿನಂತೆ ಬೆನ್ನು ಬಾಗಿದ, ಕೈಯಲ್ಲಿ ಕೋಲು ಹಿಡಿದ, ತನ್ನಷ್ಟಕ್ಕೇ ಬಡಬಡಿಸುವ,

ದೇಹವಿಡಿ ಕಂಪಿಸುವ, ನಿಧಾನವಾಗಿ ಹೆಜ್ಜೆ ಇಕ್ಕುವ, ಒಬ್ಬ ತೀರ ಹಣ್ಣು ಮುದುಕನು ಅವನ ಕಣ್ಣಿಗೆ ಕಂಡನು. ಮುಂದೆ ಹೋದ ಬಳಿಕ ಅವನಿಗೆ ಇನ್ನೊಂದು ದೃಶ್ಯ ಕಂಡಿತು. ತೀವ್ರ ಜ್ವರದಿಂದ ಬಳಲುವ, ತೀರ ದುರ್ಬಲನಾದ, ಎಚ್ಚರದಪ್ಪಿ ದಾರಿಯ ಮೇಲೆ ನಿರಾಶ್ರಿತನಾಗಿ ಬಿದ್ದ ಒಬ್ಬ ಮನುಷ್ಯ ಕಂಡನು. ಇನ್ನಷ್ಟು ಮುಂದೆ ಸಾಗಿದ ಬಳಿಕ, ಜನರ ಒಂದು ಗುಂಪು ಒಬ್ಬ ಮನುಷ್ಯನ ಹೆಣವನ್ನು ಚಟ್ಟದ ಮೇಲೆ ಕಟ್ಟಿ ಹೊತ್ತೊಯ್ಯುತ್ತಿದ್ದುದು ಕಂಡಿತು. ಸತ್ತವನ ಬಳಗದವರು ಹಾಗೂ ಸ್ನೇಹಿತರು ಗುಂಪಿನಲ್ಲಿದ್ದರು. ಅದಕ್ಕೂ ಮುಂದೆ ಒಬ್ಬ ಸಂನ್ಯಾಸಿಯು ಪ್ರಫುಲ್ಲಿತ ಮನಸ್ಸು ಹಾಗೂ ಶಾಂತ ಚಿತ್ತದಿಂದ ಕೈಯಲ್ಲಿ ಭಿಕ್ಷಾಪಾತ್ರೆಯನ್ನು ಹಿಡಿದು ಹೊರಟಿದ್ದನು. ಇವನು ಈ ನಾಲ್ಕನೆಯ ದೃಶ್ಯವನ್ನು ಕಂಡನು. ಈ ನಾಲ್ಕೂ ದೃಶ್ಯಗಳನ್ನು ಕಂಡು ಗೌತಮನ ಮನಸ್ಸಿಗೆ ಬಲು ದೊಡ್ಡ ಆಘಾತವಾಯಿತು. ಅವನು ಈ ನಾಲ್ಕು ದೃಶ್ಯಗಳಿಂದ ಜಗತ್ತಿನಲ್ಲಿ ದುಃಖವಿದೆ, ಎಂಬ ಪಾಠವನ್ನು ಕಲಿತನು. ಮನುಷ್ಯನ ಜೀವನ ಅಶಾಶ್ವತ. ಇಲ್ಲವಾದರೆ ಹುಟ್ಟಿ ಬಂದ ಮನುಷ್ಯನು ರೋಗಗ್ರಸ್ತನಾಗುತ್ತಿರಲಿಲ್ಲ! ಮುದುಕನಾಗುತ್ತಿರಲಿಲ್ಲ!! ಸಾಯುತ್ತಿರಲಿಲ್ಲ!!! ನಾಲ್ಕನೆಯ ದೃಶ್ಯ, ಅಂದರೆ ಸಂನ್ಯಾಸ ಮನೋಧರ್ಮವೇ ಅವನಿಗೆ ಒಟ್ಟಿನಲ್ಲಿ ನಿಜವಾದ ಗುರಿಯಾಗಿ ಕಂಡಿತು.



ಆದುದರಿಂದಲೇ ಅವನಿಗೆ, ಯಾವ ಜಗತ್ತಿನಲ್ಲಿ ದುಃಖವಿದೆಯೋ, ಮುಪ್ಪು ಇದೆಯೋ, ಸಾವು ಇದೆಯೋ, ಅಂಥ ಜಗತ್ತಿನ ಸಂಸಾರಕ್ಕೆ ಯಾವ ಅರ್ಥವೂ ಇಲ್ಲವೆಂದು ಅನ್ನಿಸತೊಡಗಿತು. ಅವನು ಇಂಥ ವಿಚಾರಗಳ ಗೋಜಲಿಗೆ ಸಿಕ್ಕು ಅರಮನೆಗೆ ಹಿಂದಿರುಗಿದನು. ಅರಮನೆಗೆ ಬರುತ್ತಲೇ, ಅವನ ಮಡದಿ ಯಶೋಧರಾಳ ಹೆರಿಗೆಯಾಗಿ ಗಂಡು ಮಗು ಹುಟ್ಟಿದ ವಾರ್ತೆಯನ್ನು ತಿಳಿಸಲಾಯಿತು. ತನ್ನ ಕಾಲಿಗೆ ಇದೊಂದು ಹೆಚ್ಚಿನ ಸಂಕೋಲೆ ಬಿತ್ತೆಂದು ಭಾವಿಸಿದನು. ಆದರೂ ಸಂನ್ಯಾಸವನ್ನು ಸ್ವೀಕರಿಸಬೇಕೆನ್ನುವ ನಿರ್ಧಾರವು ಅವನಲ್ಲಿ ಭದ್ರವಾಗಿತ್ತು. ಅದರಂತೆ ಅವನು ಅಪ್ಪ ಶುದ್ಧೋಧನನ್ನು ಕಂಡು, ಅವನಿಗೆ ತನ್ನ ನಿರ್ಧಾರವನ್ನು ತಿಳಿಸಿದನು. ಗೌತಮನು ಹೀಗೆಲ್ಲ ಮಾಡಬಾರದೆಂದು, ಅರಮನೆಯಲ್ಲಿ ನಾನಾ ಪ್ರಕಾರದ ಮನರಂಜನೆಯ ಪ್ರಯೋಗಗಳನ್ನು ಮಾಡಿ ಗೌತಮನನ್ನು ಈ ನಿಶ್ಚಯದಿಂದ ಪರಾವೃತ್ತಗೊಳಿಸಲು ಯತ್ನಿಸಲಾಯಿತು. ಆದರೆ ಗೌತಮನ ನಿರ್ಧಾರ ಗಟ್ಟಿಯಾಗಿತ್ತು. ಆದರೂ ರಾಜನಿಗೆ ತಿಳಿಸದೆ

ಓಡಿ ಹೋಗುವುದು ಸರಿಯಲ್ಲ, ತನ್ನ ನಿರ್ಧಾರವನ್ನು ಅನುಷ್ಠಾನಕ್ಕೆ ತರಲು ತೀರ್ಮಾನಿಸಿದುದನ್ನು ಹೇಳಲೆಂದು ಅವನು ಅರಮನೆಗೆ ಹೋಗಿ, ಅಪ್ಪನಿಗೆ, "ನನ್ನನ್ನು ತಡೆಯಬೇಡಿ. ನಿಮ್ಮ ರಾಜ್ಯ, ನಿಮ್ಮ ಪ್ರಜೆ, ನಿಮ್ಮ ಸಂಪತ್ತೆಲ್ಲವನ್ನೂ ನೀವೇ ಇರಿಸಿಕೊಳ್ಳಿ. ನನಗೇನೂ ಬೇಡ", ಎಂದನು. ಮಾರನೆಯ ದಿನ ಶುದ್ಧೋಧನನು ತನ್ನ ಮಾಂಡಲಿಕರ ಸಭೆಯನ್ನು ಕರೆದು, ಅವರಿಗೆ ಗೌತಮನು ಕೈಕೊಂಡ ನಿರ್ಧಾರದ ವಾರ್ತೆಯನ್ನು ಅರುಹಿದನು. ಇದನ್ನು ತಿಳಿದ ಬಳಿಕ ಆ ಮಾಂಡಲಿಕರು, "ನಾವು ಅವನ ಮೇಲೆ ಕಾವಲನ್ನು ಇರಿಸುವೆವು. ಅಂದರೆ ಅವನು ನಮ್ಮ ಕೈಯಿಂದ ಪಾರಾಗಿ ಹೋಗಲು ಹೇಗೆ ಸಾಧ್ಯ? ಎಂಬುದನ್ನು ನೋಡಿಯೇ ಬಿಡುವೆವು", ಎಂದರು. ಇಂಥ ಕಟ್ಟುನಿಟ್ಟಿನ ಕಾವಲಿನಿಂದ ತಪ್ಪಿಸಿಕೊಂಡು ಹೋಗಲು ಸಾಧ್ಯವಿಲ್ಲದ ಕಾರಣ ಅವನು ಆ ಹಗಲನ್ನು ಹಾಗೆಯೇ ಹೋಗಲು ಬಿಟ್ಟನು. ಅವನು ನಡುರಾತ್ರಿಯಲ್ಲಿ ಎಚ್ಚೆತ್ತನು. ತನ್ನ ಕುದುರೆಯ ಸೇವಕನಾದ ಚಂಡಕನನ್ನು ನಿದ್ರೆಯಿಂದ ಎಬ್ಬಿಸಿದನು. 'ನಾನು ಹೊರಡಬೇಕು. ನನ್ನ ಕುದುರೆಯನ್ನು ತಾ, ಅವನಿಗೆ ಅಂದನು. ಚಂಡಕನು ಮೊದಲಿಗೆ ಒಪ್ಪಿಕೊಳ್ಳಲು ಸಿದ್ಧನಾಗಲಿಲ್ಲ. ಅವನು ಹೋಗಬೇಡಿರೆಂದು ಗೋಗರೆಯತೊಡಗಿದನು. ಆದರೆ ಗೌತಮನ ನಿರ್ಧಾರ ಅಚಲವಾಗಿರುವುದನ್ನು ಗಮನಿಸಿ, ಕಂಥಕ ಎಂಬ ಕುದುರೆಯನ್ನು ತಂದನು. ಗೌತಮನು ತನ್ನ ಮಡದಿ, ಮಗು ಮಲಗಿದ ಕೋಣೆಯ ಬಾಗಿಲನ್ನು ಹಗುರಾಗಿ ತಳ್ಳಿ, ಕೊನೆಯ ಬಾರಿಗೆಂಬಂತೆ ಅವರ ಮೇಲೆ ಕಣ್ಣು ಹಾಯಿಸಿ, ಕಂಥಕವನ್ನೇರಿ, ಆ ರಾತ್ರಿ ಕಪಿಲವಸ್ತುವನ್ನು ತೊರೆದು ಹೊರಟನು.

ಗೌತಮನು ಮನೆಬಿಟ್ಟು ಹೊರಟ ಬಳಿಕ ಇಬ್ಬರು ಗುರುಗಳ ಶಿಷ್ಯತ್ವವನ್ನು ಸ್ವೀಕರಿಸಿ, ಜಗತ್ತಿನಲ್ಲಿ ದುಃಖವೇಕೆ? ಎನ್ನುವ ಪ್ರಶ್ನೆಗೆ ಉತ್ತರ ಸಿಕ್ಕುವುದೇ? ಎಂಬುದನ್ನು ಕಂಡುಕೊಳ್ಳಲು ಯತ್ನಿಸಿದನು. ಅವನು ಮೊದಲಿಗೆ ಆರಾದ್ ಕಲಾಮ್ ಹಾಗೂ ತರುವಾಯ ಉದ್ರಕ ರಾಮಪುತ್ರ ಎನ್ನುವವರ ಶಿಷ್ಯತ್ವವನ್ನು ಸ್ವೀಕರಿಸಿದನು. ಅವನು ಈ ರೀತಿ ಅವರೀರ್ವರ ಸಾನ್ನಿಧ್ಯಗಳಲ್ಲಿ ಏಳು ವರ್ಷಗಳ ಕಾಲ ಕಳೆದನು. ಆದರೆ ಅವರ ಉಪದೇಶಗಳಿಂದ ಅವನಿಗೆ ಸಮಾಧಾನವಾಗಲಿಲ್ಲ. ಆದುದರಿಂದ ಅವರನ್ನು ತೊರೆದು ಮಗಧ ದೇಶದ ಉರುವೇಲ (ಈಗ ಅದಕ್ಕೆ ಬುದ್ಧಗಯಾ ಎನ್ನುತ್ತಾರೆ) ಎಂಬಲ್ಲಿಗೆ ಹೋಗಿ ವಾಸಿಸಹತ್ತಿದನು. ಅವನಂತೆಯೇ ಸಂಸಾರವನ್ನು ತ್ಯಜಿಸಿ ಬಂದ ಐದು ಜನ ಸಂನ್ಯಾಸಿಗಳು ಆ ತಾಣದಲ್ಲಿ ಅರಣ್ಯವಾಸಿಗಳಾಗಿ ಕುಳಿತಿದ್ದರು. ಗೌತಮನು ಅವರ ಜೊತೆಗೆ ದೇಹದಂಡನೆ ಹಾಗೂ ಕಠೋರವಾದ ತಪಸ್ಸನ್ನು ಆಚರಿಸತೊಡಗಿದನು. ಆರು ವರ್ಷಗಳ ದೇಹದಂಡನೆಯಿಂದ ಅವನ ದೇಹವು ತೀರ

ಕೃಶವಾಯಿತು. ಅವನಲ್ಲಿ ನಡೆಯಲೂ ಶಕ್ತಿ ಉಳಿಯಲಿಲ್ಲ. ಒಂದು ದಿನ ಹತ್ತಿರದ ಫಾಲ್ಕು ನದಿಯಲ್ಲಿ ಸ್ನಾನ ಮಾಡಿ ತನ್ನ ಆಶ್ರಮಕ್ಕೆ ಬರುವಾಗ ದಾರಿಯಲ್ಲಿ ಕಣ್ಣಿಗೆ ಕತ್ತಲು ಕವಿದು ಎಚ್ಚರದಪ್ಪಿ ಬಿದ್ದು ಬಿಟ್ಟನು. ಹತ್ತಿರದಲ್ಲಿಯೇ ಒಬ್ಬ ಕುರುಬರವನು ಇರುತ್ತಿದ್ದನು. ಅವನ ಹಿರಿಯ ಮಗಳಾದ ಸುಜಾತಾ ಇವಳು ಗೌತಮನನ್ನು ಆ ಸ್ಥಿತಿಯಲ್ಲಿ ಕಂಡಳು. ಅವಳು ಮನೆಯಿಂದ ಹಾಲನ್ನವನ್ನು ತಂದು ಕೊಟ್ಟಳು. ಎಚ್ಚರ ತಿಳಿದೆದ್ದ ಬಳಿಕ, ಈ ಜಗತ್ತಿನಲ್ಲಿ ದುಃಖ ಏಕಿದೆ? ಎಂಬುದು ದೇಹದಂಡನೆಯಿಂದ ಅರ್ಥವಾಗಲು ಸಾಧ್ಯವಿಲ್ಲ, ಎಂದು ಅನ್ನಿಸತೊಡಗಿತು. ಗೌತಮನು ಅನ್ನವನ್ನು ಸೇವಿಸಿದ ಕಾರಣ ಅವನು ಯೋಗಭ್ರಷ್ಟನಾದನೆಂದು ಬಗೆದು, ಐವರು ಸಂಗಡಿಗರು ಅವನನ್ನು ತೊರೆದು ಹೊರಟು ಹೋದರು. ಬುದ್ಧನೊಬ್ಬನೇ ಆ ಬುದ್ಧಗಯೆಯಲ್ಲಿ ಉಳಿದನು.

ಒಂದು ರಾತ್ರಿ ಗೌತಮನು ಒಂದು ಮರದಡಿ ಕುಳಿತಾಗ, ಈ ಜಗತ್ತಿನಲ್ಲಿ ದುಃಖ ಏಕೆ? ಅದನ್ನು ನಿವಾರಿಸುವ ದಾರಿ ಯಾವುದು? ಎಂಬ ಪ್ರಶ್ನೆಯು ಅವನಿಗೆ ಅರ್ಥವಾಯಿತು. ಜನರು ಮಾನವ ಜೀವನಕ್ರಮದ ಸದ್ಯಕ್ಕೆ ಎರಡು ದಾರಿಗಳನ್ನು ಅನುಸರಿಸಿ ಮುನ್ನಡೆಯುತ್ತಾರೆ, ಎಂಬುದು ಕಂಡಿತು. ಒಂದು, ಜೈನಿ ಮಾಡುತ್ತ ಕಾಲ ಕಳೆಯುವುದು. ಇನ್ನೊಂದು, ದೇಹದಂಡನೆಯನ್ನು ಮಾಡುತ್ತ ಸಾವಿನ ನಿರೀಕ್ಷೆಯಲ್ಲಿ ಇರುವುದು. ಇವೆರಡೂ ತಪ್ಪು ದಾರಿಗಳು. ಇವೆರಡೂ ದಾರಿಗಳಿಂದ ಸಂಸಾರದಲ್ಲಿ ಇರುವ ಮಾನವನ ದುಃಖದ ನಿವಾರಣೆ ಸಾಧ್ಯವಿಲ್ಲ, ಎಂಬ ದಿವ್ಯದೃಷ್ಟಿಯು, ಆ ರಾತ್ರಿ ಆ ಮರದಡಿ ಕುಳಿತಿರುವ ಗೌತಮನಿಗೆ ಲಭಿಸಿತು. ಆ ದಿವ್ಯ ದೃಷ್ಟಿಯಿಂದ ಗೌತಮನು ಜ್ಞಾನಿಯಾದ ಕಾರಣ ಜನರು ಅವನಿಗೆ ಬುದ್ಧ (ಜ್ಞಾನಿ) ಎಂದೆನ್ನತೊಡಗಿದರು. ಅಲ್ಲದೆ, ಯಾವ ವೃಕ್ಷದಡಿ ಅವನಿಗೆ ಜ್ಞಾನವು ಪ್ರಾಪ್ತವಾಯಿತೋ, ಆ ವೃಕ್ಷಕ್ಕೆ ಜಗಪ್ರಸಿದ್ಧವಾದ ಬೋಧಿವೃಕ್ಷ ಎಂಬ ಹೆಸರು ಲಭಿಸಿತು.

ಈ ಹೊಸ ದಿವ್ಯದೃಷ್ಟಿಯಿಂದಾದ ಪರಿಣಾಮವೆಂದರೆ ಬುದ್ಧನು ದೇಹದಂಡನೆಯನ್ನು ತೊರೆದುಬಿಟ್ಟನು. ಅವನು ಮತ್ತೆ ಸಂಸಾರಕ್ಕೆ ಮರಳಲಿಲ್ಲ. ಆದರೆ ಮತ್ತೆ ಸಮಾಜಕ್ಕೆ ಮರಳಿಬಂದು, ಸಮಾಜದ ಉದ್ಧಾರಕ್ಕಾಗಿ ಧರ್ಮಸಂಸ್ಥಾಪನೆಯ ಕಾರ್ಯವನ್ನು ಆರಂಭಿಸಿದನು. ಅವನು ಹಿಂದೂಸ್ಥಾನವಿಡಿ ಕಾಲ್ನಡಿಗೆಯಲ್ಲಿ ಅಲೆಯುತ್ತ ಮಕ್ಕಳು-ಮುದುಕರು, ಸ್ತ್ರೀ-ಪುರುಷರಿಗೆಲ್ಲ ತನ್ನ ಬಾಯಿಯಿಂದ ಧರ್ಮವನ್ನು ಹೇಳಿದನು. ಅವನು ಈ ಕಾರ್ಯವನ್ನು ಪೂರ್ತಿ ನಲವತ್ತು ವರ್ಷಗಳ ಕಾಲ ಮಾಡಿದನು. ಬುದ್ಧನು ಧರ್ಮಪ್ರಚಾರಕ್ಕಾಗಿ ಅಲೆಯುತ್ತ ಕೊನೆಯಲ್ಲಿ ಪಾವಾ ಎಂಬಲ್ಲಿಗೆ ಹೋಗಿ ಉಳಿದುಕೊಂಡನು. ಆ ಊರಿನಲ್ಲಿ ಕೂಡಾ ಎಂಬ ಒಬ್ಬ ಕಮ್ಮಾರನಿದ್ದನು. ಅವನು ಬುದ್ಧನನ್ನು ಊಟಕ್ಕೆ ಬರುವಂತೆ ಒತ್ತಾಯಿಸಿದನು. ಚೂಡಾನ ಮನೆಯ ಊಟದಿಂದ ಅವನಿಗೆ ತೊಂದರೆಯಾಯಿತು. ಅವನು ಬೇನೆ ಬಿದ್ದನು.

ಅಂಥ ಬೇನೆಯ ಅವಸ್ಥೆಯಲ್ಲಿಯೇ ಬುದ್ದನು ನೇಪಾಳದ ಪೂರ್ವ ದಿಕ್ಕಿನ ಕುಶೀನಾರಾ ಎಂಬ ಊರಿಗೆ ಹೋಗಿ, ಅಲ್ಲಿಯೇ ದೇಹವಿಟ್ಟನು.

ಬುದ್ದನು ಏನೂ ಕ್ರಿಸ್ತನಿಗಿಂತ ೫೬೩ ವರ್ಷ ಮೊದಲು ರಾಜಪುತ್ರನೆಂದು ಜನ್ಮವೆತ್ತು, ಕ್ರಿ. ಪೂ. ೪೮೩ನೆಯ ವರ್ಷ ಧರ್ಮಸಂಸ್ಥಾಪಕನೆಂದು ಸಾವನ್ನಪ್ಪಿದನು.

## ಬುದ್ಧನ ಕಾರ್ಯ

ಬುದ್ಧನ ಧರ್ಮದ ಮೂಲ ತತ್ವಗಳು ಯಾವವು? ಅವನು ಸಾಧಿಸಿದ ಕಾರ್ಯ ಯಾವುದು? ಎಂಬುದನ್ನು ಗ್ರಹಿಸದೆ ಬುದ್ಧನ ಮಹತ್ವವು ತಿಳಿದು ಬಾರದು. ಅಂದ ಮಾತ್ರಕ್ಕೆ ಸ್ಥಳಾಭಾವದಿಂದಾಗಿ,



ಈ ಪ್ರಶ್ನೆಯನ್ನು ಕುರಿತು ಸವಿಸ್ತರವಾಗಿ ಇಲ್ಲಿ ವಿವರಿಸಲು ಸಾಧ್ಯವಾಗಲಾರದು, ಎಂದು ಮಾತ್ರ ಅನ್ನಲಾಗದು. ಬುದ್ಧನ ಕಾಲದಲ್ಲಿ ಬ್ರಾಹ್ಮಣ ಧರ್ಮಕ್ಕೆ ಮೂರು ಆಧಾರಸ್ತಂಭಗಳಿದ್ದವು. ವೇದಪ್ರಾಮಾಣ್ಯ ಮೊದಲ ಆಧಾರಸ್ತಂಭ, ಯಜ್ಞ-ಬಲಿದಾನ, ಎರಡನೆಯದು ಹಾಗೂ ವರ್ಣಾಶ್ರಮ ಮೂರನೆಯದು. ವೇದಗಳಲ್ಲಿ ಇರುವುದೆಲ್ಲ ಸತ್ಯ, ಬುದ್ಧಿಯು ಅದನ್ನು ಮನಗಾಣಲಿ, ಇಲ್ಲವೆ ಬಿಡಲಿ. ಬುದ್ಧನು, ವೇದಗಳಲ್ಲಿ ಇರುವುದೆಲ್ಲ ನಿಜ, ಎನ್ನುವುದು ಬ್ರಾಹ್ಮಣ ಧರ್ಮಕ್ಕೆ ಆಧಾರಸ್ತಂಭವೆಂದು ಮನ್ನಿಸಲಾಗುವ ಸಂಗತಿ ಎಂದರೆ, ಮನುಷ್ಯನ ಜ್ಞಾನ ಮಾರ್ಗದಲ್ಲಿ ಎದುರಾಗುವ ಮೊದಲ ಬಂಡೆಗಲ್ಲೆಂದು ತಿಳಿದಿದ್ದನು. ವೇದಗಳಲ್ಲಿರುವುದೆಲ್ಲ ನಿಜ ಎನ್ನುವ ಬ್ರಾಹ್ಮಣ ಧರ್ಮದ ತತ್ವಕ್ಕೆ ಎದುರಾಗಿ, ಜ್ಞಾನವು ಒಪ್ಪಿಕೊಳ್ಳುವ ಸಂಗತಿಯೇ ನಿಜವಾದುದು, ಎಂಬುದು ಬುದ್ಧನ ತತ್ತ್ವ. ಪರಮೇಶ್ವರ ಪ್ರಾಪ್ತಿಯೇ ಧರ್ಮದ ಗುರಿ, ಎಂದು ಬ್ರಾಹ್ಮಣ ಧರ್ಮದಲ್ಲಿ ನಂಬಲಾಗಿತ್ತು. ಪರಮೇಶ್ವರನಿಗೆ ಬಲಿದಾನವನ್ನು ನೀಡದೆ ಅವನನ್ನು ಪಡೆಯಲಾಗದು. ಹೀಗಾಗಿ, ಯಜ್ಞವನ್ನು ಮಾಡುವುದು, ಅದರಲ್ಲಿ ಬಲಿಯನ್ನು ನೀಡುವುದೇ ನಿಜವಾದ ಧರ್ಮವೆಂದು ನಂಬಲಾಗಿತ್ತು. ತೀರ

ಹಿಂದಕ್ಕೆ ಬ್ರಾಹ್ಮಣ ಧರ್ಮದ ಯಜ್ಞದಲ್ಲಿ ಮನುಷ್ಯನನ್ನು ಬಲಿ ಕೊಡಲಾಗುತ್ತಿದ್ದ ಕಾರಣ, ಯಜಮಾನನು ಆ ನರಮಾಂಸವನ್ನು ಸೇವಿಸಬೇಕಿತ್ತು. ಬುದ್ಧನ ಕಾಲದಲ್ಲಿ ನರಬಲಿಯ ರೂಢಿ ನಿಂತಿತ್ತಾದರೂ ಯಜ್ಞದಲ್ಲಿ ಪಶುಬಲಿಯನ್ನು ಕೊಡುವ ಪದ್ಧತಿ ರೂಢಿಯಲ್ಲಿತ್ತು. ಇಂದಿನ ಬ್ರಾಹ್ಮಣರ ಪೂರ್ವಜರು ಯಜ್ಞಕ್ಕಾಗಿ ಅಸಂಖ್ಯ ಹಸುಗಳನ್ನು ಹೇಗೆ ಸಂಹರಿಸುತ್ತಿದ್ದರೆಂಬ ಸಂಗತಿಯು ಆ ಕಾಲದ ವಾಙ್ಮಯವನ್ನು ಓದಿಕೊಂಡವರಿಗೆ ತಿಳಿದಿರಲೇಬೇಕು. ಈ ವಾಙ್ಮಯವನ್ನು ಓದಿದಾಗ, ಬ್ರಾಹ್ಮಣರು ಯಜ್ಞದಲ್ಲಿ ಎಷ್ಟು ಹಸುಗಳನ್ನು ಕೆಯ್ದಿರಬಹುದೋ, ಮುಸಲ್ಮಾನರು ಅವುಗಳ ಒಂದು ನೂರನೆಯ ಅಂಶದಷ್ಟಾದರೂ ಕೊಯ್ದಿರಬಹುದೇ, ಎಂಬ ಸಂದೇಹ ತಲೆದೋರುತ್ತದೆ. ಬುದ್ದನು ವೇದಪ್ರಾಮಾಣ್ಯದ ಮೇಲೆ ದಾಳಿ ಇಕ್ಕಿದಂತೆಯೇ, ಯಜ್ಞದ ಮೇಲೂ ದಾಳಿ ಇಕ್ಕಿದನು. ಈ ಬಗೆಗೆ ಬುದ್ದನ ನಿಲುವು ತುಂಬ ಕ್ರಾಂತಿಕಾರಿಯಾದುದು, ಎಂದೇ ಅನ್ನಬೇಕಾಗುತ್ತದೆ. ಧರ್ಮಕ್ಕೂ, ಪರಮೇಶ್ವರ ಪ್ರಾಪ್ತಿಗೂ ಯಾವುದೇ ಸಂಬಂಧವಿಲ್ಲ ಎಂಬುದು ಬುದ್ಧನ ಬೋಧೆಯಾಗಿತ್ತು. ಮನುಷ್ಯನು ಮನುಷ್ಯನೊಡನೆ ಹೇಗೆ ನಡೆದುಕೊಳ್ಳಬೇಕು, ಎಂಬುದನ್ನು ಕುರಿತು ಸೂಕ್ತವಾದ ಕಟ್ಟಳೆಗಳನ್ನು ತಯಾರಿಸುವುದೇ ಧರ್ಮದ ಕ್ಷೇತ್ರ, ಎನ್ನುವುದು ಬುದ್ಧನ ನಿಲುವಾಗಿತ್ತು. ಪರಮೇಶ್ವರ ಪ್ರಾಪ್ತಿಯು ಧರ್ಮದ ಕ್ಷೇತ್ರ, ಎನ್ನುವ ನಿಲುವು ಬುದ್ಧನಿಗೆ ಒಪ್ಪಿತವಾಗಿರಲಿಲ್ಲ. ಒಂದು ಬದಿಗೆ ಪರಮೇಶ್ವರ ಪ್ರಾಪ್ತಿಗಾಗಿ ಯಜ್ಞ ಮಾಡುವುದು, ಇನ್ನೊಂದು ಬದಿಗೆ ತನ್ನ ನೆರೆಯವನನ್ನು ಪೀಡಿಸುವುದು, ಅವನಿಗೆ ತೊಂದರೆಯಾಗುವಂತೆ ನಡೆದುಕೊಳ್ಳುವುದೆಂದರೆ ಧರ್ಮದ ಅಣಕವಾಗಿದೆಯೆಂದು ಬುದ್ಧನು ಅನ್ನುತ್ತಿದ್ದನು. ಬುದ್ಧನು ಬ್ರಾಹ್ಮಣ ಧರ್ಮದ ಮೂರನೆಯ ಆಧಾರಸ್ತಂಭವಾದ ವರ್ಣಾಶ್ರಮ ಧರ್ಮದ ಮೇಲಂತೂ ಬಲು ದೊಡ್ಡ ದಾಳಿಯನ್ನು ನಡೆಸಿದನು. ಬ್ರಾಹ್ಮಣ ಧರ್ಮದ ಒಟ್ಟು ಗುಟ್ಟು ಈ ವರ್ಣಾಶ್ರಮ ಧರ್ಮದ ಕಲ್ಪನೆಯಲ್ಲಿ ಅಡಕವಾಗಿದೆ. ಜಾತಿಭೇದಗಳ, ಹುಟ್ಟನ್ನಾಧರಿಸಿದ ಉಚ್ಚನೀಚತೆಯ ಕಲ್ಪನೆ ಹಬ್ಬಲು ವರ್ಣಾಶ್ರಮ ಧರ್ಮವೇ ಕಾರಣವೆನ್ನಿಸಿದೆ. ಈ ಬ್ರಾಹ್ಮಣ ಧರ್ಮದಲ್ಲಿ ಸ್ತ್ರೀಯರು ಹಾಗೂ ಶೂದ್ರರಿಗೆ ಮಾರ್ಯಾದೆಯ ಸ್ಥಾನವಿಲ್ಲ, ಅವರಿಗೆ ಹೊಟ್ಟೆ ಹೊರೆದುಕೊಳ್ಳುವ ದಾರಿಗಳು ತೆರೆದಿಲ್ಲ, ಯಾವುದರ ಮೇಲೂ ಒಡೆತನವಿಲ್ಲ. ಹೀಗಾಗಿ ಇವೆರಡೂ ವರ್ಗಗಳಿಗೆ ಸ್ವಾತಂತ್ರ್ಯವಿಲ್ಲ. ಬದುಕಿರುವಾಗಲೇ ಅವರಿಗೆ ಈ ದುರ್ದೆಸೆ, ಸತ್ತ ಬಳಿಕವೂ ಈ ದುರ್ದೆಸೆ ಅವರ ಬೆನ್ನು ಬಿಡದು! ಬ್ರಾಹ್ಮಣ ಧರ್ಮದಲ್ಲಿ

ಸ್ತ್ರೀಯರು ಹಾಗೂ ಶೂದ್ರರು ಸತ್ತ ಬಳಿಕ ಅವರಿಗೆ ಮೋಕ್ಷವಿಲ್ಲ. ಏಕೆಂದರೆ ಬ್ರಾಹ್ಮಣ ಧರ್ಮದ ತತ್ತ್ವದಂತೆ, ಯಾವನು ಸಂನ್ಯಾಸವನ್ನು ಸ್ವೀಕರಿಸಬಲ್ಲನೋ ಅವನೇ ಮೋಕ್ಷವನ್ನು ಹೊಂದಬಲ್ಲನು. ಬ್ರಾಹ್ಮಣ ಧರ್ಮವು ಸ್ತ್ರೀಯರು ಹಾಗೂ ಶೂದ್ರರಿಗೆ ಸಂನ್ಯಾಸವನ್ನು ನಿಷೇಧಿಸಿದೆ. ಬುದ್ಧನು ಉಚ್ಚನೀಚ ಭಾವವನ್ನು ಒಪ್ಪುತ್ತಿರಲಿಲ್ಲ. ಬುದ್ಧನು, ಒಬ್ಬನು ಬ್ರಾಹ್ಮಣನಿದ್ದರೂ ಭ್ರಷ್ಟನೇ, ಮೂಲೋಕದಲ್ಲೂ ಅವನು ಶ್ರೇಷ್ಠನೇ ಎನ್ನುವ ಭಯಂಕರ ತತ್ತ್ವವನ್ನು ಬೇರುಸಹಿತ ಕಿತ್ತೆಸೆಯಲು ತುಂಬ ಹೆಣಗಿದನು. ಜಗತ್ತಿನಲ್ಲಿ ಈವರೆಗೂ ಬುದ್ಧನಷ್ಟು ಸಾಮಾಜಿಕ ಸಮತೆಯನ್ನು ಎತ್ತಿ ಹಿಡಿಯುವವರು ಬೇರಾರೂ ಆಗಿಲ್ಲ, ಎಂದರೆ ಅತಿಶಯೋಕ್ತಿಯಲ್ಲ. ಬ್ರಾಹ್ಮಣ ಧರ್ಮದಲ್ಲಿ ಸ್ತ್ರೀಯರಿಗೆ ಮೋಕ್ಷವಿರಲಿಲ್ಲ. ಆದರೆ ಬುದ್ಧನು ಸ್ತ್ರೀಯರನ್ನು ಭಿಕ್ಷುಣಿಯರನ್ನಾಗಿ ಮಾಡಿದನು. ಬ್ರಾಹ್ಮಣ ಧರ್ಮದಲ್ಲಿ ಶೂದ್ರರಿಗೆ ಮೋಕ್ಷವಿರಲಿಲ್ಲ. ಬುದ್ಧನು ಶೂದ್ರರನ್ನು ಭಿಕ್ಷುಗಳನ್ನಾಗಿ ಮಾಡಿದನು. ಇದರಿಂದ ಅವನು ಕೇವಲ ಸಮತೆಯ ತತ್ವವನ್ನು ಪುರಸ್ಕರಿಸುತ್ತ ತೆಪ್ಪಗೆ ಕುಳಿತುಕೊಳ್ಳಲಿಲ್ಲ. ಬದಲು ಅವನು ಸಮತೆಯನ್ನು ಅನುಷ್ಠಾನಕ್ಕೆ ತರಲು ಯತ್ನಿಸಿದನು. ಅವನು ಕೇವಲ ಸ್ತ್ರೀಯರು ಹಾಗೂ ಶೂದ್ರರನ್ನು ಭಿಕ್ಷುಗಳನ್ನಾಗಿ ಮಾಡಿದನೆಂದಲ್ಲ, ಅಂತ್ಯಜರನ್ನೂ ಕೂಡ ಭಿಕ್ಷುಗಳ ಉಚ್ಚ ಪದಗಳ ಮೇಲೆ ಕೂರಿಸಿದನು.

ಮೇಲಿನ ವಿವರಣೆಯು ಚಿಕ್ಕದಾದರೂ ಬುದ್ಧನು ಈ ದೇಶದಲ್ಲಿ ಅದೆಷ್ಟು ತುಂಬ ಮಹತ್ವದ ಕಾರ್ಯವನ್ನು ಮಾಡಿದನೆಂಬುದು ಓದುಗರ ಗಮನಕ್ಕೆ ಬಂದೀತೆಂದು ನಮಗೆ ಅನ್ನಿಸುತ್ತದೆ. ಬೌದ್ಧ ಧರ್ಮದ ತತ್ವಗಳು ಓಜಸ್ವಿ ಹಾಗೂ ಕಲ್ಯಾಣಕರವಾಗಿದ್ದು, ಬೌದ್ಧ ಧರ್ಮದ ಪ್ರಸಾರವು ಅಷ್ಟೇ ಬೃಹತ್ ಪ್ರಮಾಣದಲ್ಲಿ ಹೆಚ್ಚಿತು. ಬುದ್ಧನ ಧರ್ಮವು ದಕ್ಷಿಣದ ಸಿಲೋನ್ ಮತ್ತು ಪ್ಯಾಸಿಫಿಕ್ ಮಹಾಸಾಗರದ ಅಸಂಖ್ಯ ದ್ವೀಪಗಳಲ್ಲಿ ತನ್ನ ಅಧಿಷ್ಠಾನವನ್ನು ಸ್ಥಾಪಿಸಿಕೊಂಡಿತು. ಬುದ್ಧ ಧರ್ಮದ ಪ್ರಸಾರವು ಪಶ್ಚಿಮದತ್ತ ಬ್ರಹ್ಮದೇಶ, ಆಸಾಮ, ಸಯಾಮ, ಚೀನ, ಜಪಾನುಗಳವರೆಗೆ ಚಾಚಿತು. ಅದು ಉತ್ತರಕ್ಕೆ ತಿಬೆಟ್, ನೇಪಾಳ, ತುರ್ಕಸ್ತಾನಗಳವರೆಗೆ ಹೋಗಿ ತಲುಪಿತು. ಇಷ್ಟೇ ಅಲ್ಲದೆ ಅಫಗಾ ಜನರನ್ನು ಬೌದ್ಧ ಧರ್ಮಿಯರನ್ನಾಗಿ ಮಾಡಲಾಯಿತು. ಇನ್ನಾವ ಧರ್ಮದ ಪ್ರಸಾರವೂ ಇಷ್ಟೊಂದು ಮಟ್ಟಿಗೆ ನಡೆಯಲಿಲ್ಲ. ಬುದ್ಧನ ಧರ್ಮದ ಇನ್ನೊಂದು ವೈಶಿಷ್ಟ್ಯ ಹೇಳುವಂತಿದೆ. ಎಲ್ಲ ಧರ್ಮಗಳೂ ತಮ್ಮ ಗುಣವಂತಿಕೆಯಿಂದಾಗಿ ಪ್ರಸಾರ ಹೊಂದಿಲ್ಲ. ಮುಸಲ್ಮಾನ ಧರ್ಮವು ಕತ್ತಿಯ ಬಲದಿಂದ ಬೆಳೆಯಿತು. ಕ್ರಿಸ್ತ ಧರ್ಮವು ಕಾನೂನಿನ ಬಲದಿಂದ ಬೆಳೆಯಿತು. ಬರಿ ಬುದ್ಧ ಒಬ್ಬನ ಧರ್ಮದ ಪ್ರಸಾರ ಮಾತ್ರ ತನ್ನ ಗುಣಗಳಿಂದಾಗಿ ಬೆಳೆಯಿತು. ಅದಕ್ಕೆ ಕತ್ತಿ ಇಲ್ಲವೆ ಕಾನೂನಿನ ಅಗತ್ಯ ಕಂಡುಬರಲಿಲ್ಲ. ಜನರನ್ನು ಹಿಡಿದು ತಂದು ಬುದ್ಧನ ಧರ್ಮದ ದೀಕ್ಷೆಯನ್ನು ಕೊಡುವ ಅಗತ್ಯ ಕಾಣಲಿಲ್ಲ. ಜನ ತಾವಾಗಿಯೇ ಅದಕ್ಕೆ ಧುಮುಕಿದರು.

ಹೀಗಿರುವಾಗಲೂ ಜನರು ಬುದ್ದನ ಹೆಸರನ್ನು ಮರೆತುದು ಹೇಗೆ? ಎಂಬ ಪ್ರಶ್ನೆ ತಲೆದೋರುತ್ತದೆ. ಹಿಂದೂಸ್ಥಾನದ ಹೊರಗೆ ಬೌದ್ಧ ಧರ್ಮ ಇಂದಿಗೂ ಜೀವಂತವಾಗಿದೆ. ಅದರ ಸಂಖ್ಯೆಯೇನೂ ಕಮ್ಮಿಯದಲ್ಲ. ಹಿಂದೂಸ್ಥಾನದಲ್ಲಿ ಅದರ ಉಚ್ಚಾಟನೆ ಆಯಿತು. ಸ್ಥಳಾಭಾವದಿಂದಾಗಿ ಇಲ್ಲಿ ಅದರ ಕಾರಣಗಳನ್ನು ಹೇಳಲಾಗದು. ಆದರೆ ಸ್ವಲ್ಪದರಲ್ಲಿ ಅದರ ದಿಕ್ಕನ್ನು ತೋರಿಸುವುದು ಆವಶ್ಯಕ. ಬುದ್ಧನ ಹೆಸರಿನ ಮರೆವು ಕಾಲದಿಂದಲೂ ಸಾಧ್ಯವಿಲ್ಲ. ಬುದ್ದ ಅಜರಾಮರನು, ಅಮರನು, ಅಕಾಲನು. ಕಾಲವು ಅವನ ಹೆಸರನ್ನು ಲೋಪಗೊಳಿಸಲು ಹೇಗೆ ಸಾಧ್ಯ? ಚೀನದಲ್ಲಿ ಬುದ್ಧನ ಮರೆವು ಆಗಲಿಲ್ಲ. ಜಪಾನಿನಲ್ಲಿ ಆಗಲಿಲ್ಲ. ಬ್ರಹ್ಮದೇಶದಲ್ಲಿ ಆಗಲಿಲ್ಲ. ಬರಿ ಹಿಂದೂಸ್ಥಾನದಲ್ಲಷ್ಟೇ ಆಯಿತು. ಅದಕ್ಕೆ



ಕಾಲ ಕಾರಣವಲ್ಲ, ಬುದ್ಧನ `ಶತ್ರು ಗಳು ಕಾರಣರೆಂಬುದು ಸ್ಪಷ್ಟ. ಒಟ್ಟಿನಲ್ಲಿ ಬ್ರಾಹ್ಮಣರು ಬುದ್ಧನ ವೈರಿಗಳು. ಬ್ರಾಹ್ಮಣರ ಜಗಳ ಕೇವಲ ಬುದ್ಧನೊಂದಿಗೆ ಮಾತ್ರ ಇತ್ತೆಂದೇನೂ ಅಲ್ಲ. ಜೈನ ಧರ್ಮದ ಸಂಸ್ಥಾಪಕನಾದ ಮಹಾವೀರನೊಂದಿಗೂ ಅವರ ಜಗಳ ಇದ್ದಿತು. ಮಹಾವೀರನೂ ಬುದ್ದನಂತೆಯೇ ಯಜ್ಞಕ್ಕೆ ವಿರೋಧಿಯಾಗಿದ್ದನು. ಆದರೆ ಬ್ರಾಹ್ಮಣರು ಬುದ್ದನ ಮೇಲೆ ನಿಷ್ಠುರ ಹಾಗೂ ತೀವ್ರವಾಗಿ ದಾಳಿಯನ್ನು ಮಾಡಿದಂತೆ ಮಹಾವೀರನ ಮೇಲೆ ಮಾಡಲಿಲ್ಲ. ಅದಕ್ಕೆ ಕಾರಣವೆಂದರೆ ಬುದ್ದನು ಹೇಗೆ ಚಾತುರ್ವರ್ಣ್ಯಕ್ಕೆ ವಿರೋಧಿಯಾಗಿದ್ದನೋ ಹಾಗೆ ಮಹಾವೀರನಾಗಿರಲಿಲ್ಲ. ಬುದ್ಧನ ವೇದನಿಂದೆಯ ಬಗೆಗೆ ಬ್ರಾಹ್ಮಣರಿಗೆ ಕೆಡಕೆನ್ನಿಸುತ್ತಿದ್ದರೂ ಆ ಬಗೆಗೆ ಅವರಲ್ಲಿ ಅಂತಹ ಹೆಚ್ಚಿನ ರೊಚ್ಚೇನೂ ಇರಲಿಲ್ಲ. ವೇದಗಳ ಪ್ರಾಮಾಣ್ಯ ಹೊರಟುಹೋದರೂ ಬಾಹ್ಮಣರಿಗೆ ಅಂತಹ ನಷ್ಟವೇನೂ ಇರಲಿಲ್ಲ. ಯಜ್ಞದ ಬಗೆಗೂ ಅವರಲ್ಲಿ ಸಾಧಾರಣವಾಗಿ ಇದೇ ತರಹ ಭಾವನೆ ಇದ್ದಿತು. ಯಜ್ಞ ಉಳಿದರೂ ಸರಿ, ಹೋದರೂ ಸರಿ, ಅದರಿಂದ ಅಂತಹ ಯಾವ ದೊಡ್ಡ ಆಪತ್ತೂ ಇಲ್ಲವೆಂದು ಅವರಿಗೆ ಅನ್ನಿಸುತ್ತಿತ್ತು. ಆದರೆ ಚಾತುರ್ವರ್ಣ್ಯದ ಬಗೆಗೆ ಮಾತ್ರ ಅವರ ಮನೋಧರ್ಮ ಬೇರೆ ಬಗೆಯಾಗಿತ್ತು. ಚಾತುರ್ವಣಕ್ಕೆ ಹೋದರೆ ಬ್ರಾಹ್ಮಣ್ಯವೇ

ಹೋಯಿತೆಂಬುದನ್ನು ಅವರು ಗುರುತಿಸಿದ್ದರು. ಅವರು ಚಾತುರ್ವಣ್ರ್ಯವನ್ನು ತಮ್ಮ ಪ್ರಾಣ ಎಂದು ತಿಳಿಯುತ್ತಿದ್ದರು. ಬ್ರಾಹ್ಮಣರಿಗೆ ಬುದ್ಧನ ಚಾತುರ್ವಣ್ರ್ಯವನ್ನು ವಿಧ್ವಂಸ ಮಾಡುವ ಹೋರಾಟವೆಂದರೆ 'ಮೂಲೇ ಕುಠಾರಃ' ಆಗಿ ಕಂಡುದು ಸಹಜ. ಅದು ಆ ಕಾಲದ ಬ್ರಾಹ್ಮಣ-ಬ್ರಾಹ್ಮಣೇತರರ ಚಳುವಳಿಯಾಗಿತ್ತೆನ್ನಲು ಯಾವ ಅಭ್ಯಂತರವೂ ಇಲ್ಲ. ಅಲ್ಲದೆ ಅವರು ಚಳುವಳಿಯ ಅಧಿ ಷ್ಠಾತನಾದ ಬುದ್ಧನನ್ನು ಕೊಲೆಗಡುಕ ಅಥವಾ ಕಾಲಪುರುಷನೆಂದು ಕೂಡ ಭಾವಿಸುತ್ತಿದ್ದರು. ಅವನನ್ನು ಹೇಳಹೆಸರಿಲ್ಲದಂತೆ ಮಾಡಲು ಎಲ್ಲ ಬಗೆಯಿಂದಲೂ ಯತ್ನಿಸಿದರು. ಅವರು ತಮ್ಮ ವೈದಿಕ ದೇವತೆಗಳಾದ ಬ್ರಹ್ಮ, ವಿಷ್ಣು, ಮಹೇಶರನ್ನು ಪಕ್ಕಕ್ಕೆ ತಳ್ಳಿ, ಕ್ಷತ್ರಿಯ ರಾಜರನ್ನು ದೇವತೆಗಳನ್ನಾಗಿ ಮಾಡಿ, ಬುದ್ದನ ಚಳುವಳಿಯನ್ನು ಕೊಲೆಗೈದರು. ಬ್ರಾಹ್ಮಣರು ಈವತ್ತು ಜೇಧೆ ಅವರನ್ನು ಹೇಗೆ ಭಜಿಸುವರೋ ಹಾಗೆಯೇ ಅಂದು ಕ್ಷತ್ರಿಯ ರಾಮನನ್ನು ಪೂಜಿಸತೊಡಗಿದರು. ರಾಮನೊಬ್ಬನನ್ನೇ ಕೈಲಿ ಹಿಡಿದುಕೊಂಡರೆ ಸಾಲದೆನ್ನಿಸಿ ಬ್ರಾಹ್ಮಣರು ಬೇರೆ ಕ್ಷತ್ರಿಯ ರಾಜ-ಕೃಷ್ಣನನ್ನು ಮುಂದೆ ಮಾಡಿ, ಅವನನ್ನು ದೇವನನ್ನಾಗಿ ಮಾಡಿದರು. ಬ್ರಾಹ್ಮಣರು ತಮ್ಮ ರಾಜನನ್ನೇ ಭಜಿಸತೊಡಗಿದರು. ಬ್ರಾಹ್ಮಣೇತರರರಲ್ಲಿ, ಇನ್ನು ಮುಂದೆ ಬ್ರಾಹ್ಮಣರ ವಿರುದ್ದ ಹೋರಾಟಕ್ಕೆ ಕಾರಣವಿಲ್ಲ, ಎಂಬ ಮನೋಧರ್ಮವನ್ನು ಹುಟ್ಟಿಸಿ, ಬುದ್ಧನು ಆರಂಭಿಸಿದ ಬ್ರಾಹ್ಮಣೇತರರ ಚಳುವಳಿಯ ಮೊನಚನ್ನು ತೆಗೆದು ಹಾಕಿ, ಅದನ್ನು ಮೊಂಡು ಮಾಡಿಬಿಟ್ಟರು. ಬ್ರಾಹ್ಮಣರು, 'ಬುದ್ಧ ನಿಮ್ಮವನೇನೋ ಅಹುದು, ಆದರೆ ನಾವೂ ಕೂಡ ಅವನನ್ನು ನಮ್ಮ ವಿಷ್ಣುವಿನ ಹತ್ತನೆಯ ಅವತಾರವೆಂದು ಮನ್ನಿಸುತ್ತೇವೆ , ಎಂದು ಅನ್ನತೊಡಗಿದರು. ಜನರು ಖುಷಿ ಪಟ್ಟರು. ಬ್ರಾಹ್ಮಣರು ನಮ್ಮ ಬುದ್ಧನನ್ನು ಹತ್ತನೆಯ ಅವತಾರನೆಂದು ಒಪ್ಪಿಕೊಂಡರು. ಆಯಿತು! ಇನ್ನು ಬ್ರಾಹ್ಮಣರೊಡನೆ ಜಗಳ ಕಾಯಲು ಕಾರಣವೇನು? ಒಂದು ಬದಿಗೆ ಬ್ರಾಹ್ಮಣರು ಬ್ರಾಹ್ಮಣೇತರ ಜನತೆಯೊಡನೆ ಸಾಮ, ದಾಮವನ್ನು ಮಾಡಿದರು. ಎರಡನೆಯ ಬದಿಗೆ ಅವರು ಬುದ್ಧನನ್ನು ಅನುಕರಿಸುತ್ತ, ಬ್ರಾಹ್ಮಣ ಧರ್ಮ ಹಾಗೂ ಬುದ್ಧ ಧರ್ಮಗಳೆರಡೂ ಒಂದೇ, ಎಂಬುದಾಗಿ ಜನರನ್ನು ದಾರಿ ತಪ್ಪಿಸಲು ಶುರುಮಾಡಿದರು. ಬುದ್ಧನು ವಿಹಾರಗಳನ್ನು ಕಟ್ಟಿಸಿದನು. ಜನರ ದೃಷ್ಟಿಯಿಂದ ವಿಹಾರಗಳೆಂದರೆ ಬುದ್ಧ ಧರ್ಮದ ಜಾಗೃತವಾದ ಜ್ಯೋತಿಯ ಕುರುಹುಗಳು. ಬ್ರಾಹ್ಮಣರು ಬುದ್ಧನ ವಿಹಾರಗಳ

ಪಕ್ಕದಲ್ಲಿಯೇ ತಮ್ಮ ವಿಹಾರಗಳನ್ನು ಕಟ್ಟಲು ಶುರು ಮಾಡಿದರು. ಈ ಬಾಹ್ಯ ಸಾಮ್ಯದಿಂದಾಗಿ ಜನರ ಮನದಲ್ಲಿ ಬೌದ್ಧ ಧರ್ಮ ಹಾಗೂ ಬ್ರಾಹ್ಮಣ ಧರ್ಮಗಳ ನಡುವೆ ವ್ಯತ್ಯಾಸ ಕಾಣದಂತಾಗಿ, ಧರ್ಮದ ಬಗೆಗಿನ ಪೃಥಕತೆ ಇಲ್ಲವಾಗಿ ಎಲ್ಲವೂ ಒಂದೇ ಗೋಲಾಕಾರ, ಎನ್ನುವಂತಾಯಿತು. ಕೊನೆಗೆ, ಮುಸಲ್ಮಾನರ ದಾಳಿಗಳು ಬುದ್ಧ ವಿಹಾರಗಳನ್ನು ನಾಶಪಡಿಸಿ, ಬುದ್ಧ ಭಿಕ್ಷುಗಳು ದೇಶವನ್ನು ತೊರೆದು ಹೋಗಿ, ಅವರಿಲ್ಲದಂತಾದ ಬಳಿಕ ಬ್ರಾಹ್ಮಣರು ಬುದ್ಧನ ಹೆಸರನ್ನು ಬೇರುಸಹಿತ ಕಿತ್ತೆಸೆಯುವ ಉದ್ದೇಶದಿಂದ ಬುದ್ಧ ವಿಹಾರಗಳನ್ನು ಪಾಂಡವರ ಗುಹಾಲಯ (ಲೇಣಿ)ಗಳೆಂದು ಕರೆಯತೊಡಗಿ, ಬುದ್ಧನ ವಿಗ್ರಹಗಳನ್ನು ಒಡೆದು ಹಾಕಿ, ಅವುಗಳ ಸ್ಥಾನಗಳಲ್ಲಿ ಶಿವಲಿಂಗಗಳನ್ನು ಸ್ಥಾಪಿಸತೊಡಗಿದರು.

ಬ್ರಾಹ್ಮಣರು ಬುದ್ಧನ ಹೆಸರನ್ನು ಈ ದೇಶದಿಂದ ತೊಲಗಿಸಲು ಯತ್ನಿಸಿದುದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ, ಅವನು ಹೇಳಿಕೇಳಿ ಅವರ ವೈರಿಯೇ ಆಗಿದ್ದನು. ಅವರಿಗೆ ಅವನ ಜಯಂತ್ಯುತ್ಸವವನ್ನು ಆಚರಿಸಬೇಕೆಂಬ ವಿಚಾರ ಹೇಗೆ ಇಷ್ಟವಾದೀತು? ಆದರೆ ಯಾವನು ಬ್ರಾಹ್ಮಣೇತರರ ಹಿತಕ್ಕಾಗಿ ಎಂದು, ಅವರನ್ನು ಮೂಢ ನಂಬಿಕೆಯ ಕಪಿಮುಷ್ಟಿಯಿಂದ ಬಿಡಿಸಲೆಂದು, ಜಂತರ ಮಂತರಗಳ ಸುಳ್ಳು ಧರ್ಮದ ಜಾಲದಿಂದ ಬಿಡುಗಡೆ ಮಾಡಿ ಅವರನ್ನು ನಿಜವಾದ ಮಾನವ ಧರ್ಮದ ದಾರಿಗೆ ತರಲೆಂದು, ಅವರ ಮಾನವೀಯತೆಯ ಪ್ರಸ್ತಾಪನೆಗೆಂದು, ಅವರ ಸ್ವಾಭಿಮಾನದ ದೀಪವು ಪ್ರಜ್ವಲಿತವಾಗಿ ಉರಿಯುವಂತೆ ಮಾಡಲೆಂದು ಹೆಣಗಾಡಿದನೋ, ಯಾವನು ಬ್ರಾಹ್ಮಣೇತರ ಜನರ ಹಿತಕ್ಕಾಗಿ ರಾಜವೈಭವವನ್ನು ತ್ಯಜಿಸಿದನೋ, ಯಾವನು ತನ್ನ ಕೀರ್ತಿಯಿಂದ ದೇಶದ ಪ್ರತಿಷ್ಠೆಯನ್ನು ಹೆಚ್ಚಿಸಿದನೋ, ಅಂಥ ಮಹಾಪುರುಷನನ್ನು ಬ್ರಾಹ್ಮಣೇತರರು ಪೂರ್ತಿ ಮರೆತು ಬಿಡುವುದೆಂದರೆ ಬಲು ದೊಡ್ಡ ದುರ್ದೈವದ ಸಂಗತಿ. ಅವರಾದರೂ ಬುದ್ಧನ ಸ್ಮೃತಿಯನ್ನು ಜೀವಂತವಾಗಿ ಇಡುವುದು ಆವಶ್ಯಕವಾಗಿತ್ತು.

ಬುದ್ಧ ಜಯಂತಿಯನ್ನು ಆಚರಿಸಿರೆಂದು ಹಿಂದು ಸ್ನೇಹಿತರಿಗೆ ಹೇಳಲು ನಮ್ಮ ಬಳಿ ಇದೊಂದೇ ಕಾರಣವಿದೆ, ಎಂದು ಯಾರೂ ಭಾವಿಸಕೂಡದು. ನಮ್ಮ ಮುಖ್ಯ ಕಾರಣವು ಇದಕ್ಕಿಂತ ಬೇರೆಯಾಗಿದ್ದು ಅದು ಶಕ್ತಿಯುತವಾದುದೆಂದು ನಮಗೆ ಅನ್ನಿಸುತ್ತದೆ. ಹಿಂದೂ ಸಂಸ್ಕೃತಿಯ ಅಡಿಗಲ್ಲ ಮೇಲೆ ಹಿಂದೂಗಳಿಗೋಸ್ಕರ ರಾಜಕೀಯದಲ್ಲಿ ಪ್ರಜಾಸತ್ತೆಯನ್ನು ಸ್ಥಾಪಿಸಬೇಕೆನ್ನುವ ಇಚ್ಛೆಯು ಅವರಲ್ಲಿರುವ ಸುಶಿಕ್ಷಿತ ಜನರಲ್ಲಿ ಹುಟ್ಟಿಕೊಂಡಿದ್ದು, ಅದಕ್ಕಾಗಿ ಅವರೆಲ್ಲರ ಯತ್ನಗಳು ನಡೆದಿವೆ. ನಮ್ಮಲ್ಲಿ ಹಿಂದೂಗಳ ಇಂಥ ಬುದ್ಧಿಯ ಬಗೆಗೆ ಮರುಕ ಉಂಟಾಗುತ್ತದೆ. ಈ ದೇಶದಲ್ಲಿ ಪ್ರಜಾಸತ್ತೆಯನ್ನು ಸ್ಥಾಪಿಸುವೆವು, ಎಂದು ಅನ್ನುವ ಜನ ಖಂಡಿತ ಮೂರ್ಖರು ಇಲ್ಲವೆ ಮೋಸಗಾರರು. ಆದರೆ ಅವರ ಈ ಠಕ್ಕುತನ ಬಹಳ ದಿನ ನಡೆಯಲಾರದು. ಬ್ರಾಹ್ಮಣ ಧರ್ಮ ಹಾಗೂ ಪ್ರಜಾಸತ್ತೆಗಳು ಪರಸ್ಪರ ವಿರೋಧಿ, ಒಂದಕ್ಕೊಂದು ವಿರೋಧಿಯಾದ ಸಂಗತಿಗಳೆಂಬುದು ಅನುಭವದಿಂದ ಕಂಡುಬಂದೀತು. ಪ್ರಜಾಸತ್ತೆ ಬೇಕಿದ್ದರೆ ಚಾತುರ್ವಣ್ರ್ಯ ಇಲ್ಲದಂತಾಗಬೇಕು. ಚಾತುರ್ವಣ್ರ್ಯದ ಈ ಜಂತುವನ್ನು ಕಿತ್ತೆಸೆಯಲು ಬುದ್ಧನ ತತ್ತ್ವಜ್ಞಾನದಂಥ ಮಾರಕ ರಸಾಯನ ಇನ್ನೊಂದಿಲ್ಲವೆಂದು

ನಮಗೆ ಅನ್ನಿಸುತ್ತದೆ. ಹೀಗಾಗಿ ನಾವು ಅನ್ನುವುದೇನೆಂದರೆ, ರಾಜಕೀಯದ ರಕ್ತಶುದ್ಧಿಯನ್ನು ಮಾಡಲಿಕ್ಕಾಗಿ ಹಿಂದುಗಳೆಲ್ಲರೂ ಬುದ್ಧಜಯಂತಿಯನ್ನು ಆಚರಿಸುವುದು ಹಿತದ ಹಾಗೂ ಆವಶ್ಯಕ ಸಂಗತಿ, ಎಂದು.

ಇಂದು ರಾಜಕೀಯದ ದೃಷ್ಟಿಯಿಂದ ಹಿಂದೂಸ್ಥಾನವು ಒಬ್ಬ ರೋಗಿಯಂತಿದೆ. ಹಿಂದೂಸ್ಥಾನ ನೆನಪಾಯಿತೆಂದರೆ ಬೊಜ್ಜು ಹೊಟ್ಟೆಯ, ಕಡ್ಡಿಯಂತಹ ಕೈಕಾಲುಗಳ, ಸಪ್ಪೆ ಮುಖದ, ಒಳಸೇರಿದ



ಕಣ್ಣುಗಳ, ಎಲುವಿನ ಹಂದರವಾದ ಗಂಡಸಿನ ಚಿತ್ರವು ಕಣ್ಣೆದುರು ನಿಲ್ಲುತ್ತದೆ. ಪ್ರಜಾಸತ್ತೆಯ ವಾಹನವನ್ನು ಚಲಾಯಿಸುವ ತಾಕತ್ತು ಇವನಲ್ಲಿಲ್ಲ. ಆದರೆ ಇವನಿಗೆ ಪ್ರಜಾಸತ್ತೆಯ ವಾಹನವನ್ನು ಓಡಿಸುವ ಎಲ್ಲಿಲ್ಲದ ಹವ್ಯಾಸ. ಹವ್ಯಾಸವನ್ನು ಪೂರೈಸಿಕೊಳ್ಳಬೇಕಿದ್ದರೆ ಅದಕ್ಕೆ ಸಾಮರ್ಥ್ಯವೂ ಅವಶ್ಯವಾಗಿ ಬೇಕು. ಔಷಧದ ಹೊರತಾಗಿ ಅದನ್ನು ಪಡೆಯಲು ಸಾಧ್ಯವಿಲ್ಲ. ಆದರೆ ಔಷಧವನ್ನು ಸೇವಿಸಿಯಾದರೂ ಪ್ರಯೋಜನವೇನು? ಯಾವುದೇ ಔಷಧವನ್ನು ಸೇವಿಸುವ ಮೊದಲು ಹೊಟ್ಟೆಯನ್ನು ಹಸನುಗೊಳಿಸಬೇಕೆಂಬುದು ಎಲ್ಲರಿಗೂ ಗೊತ್ತು. ಅದಕ್ಕಾಗಿ ಹೊಟ್ಟೆಯ ಹೊಲಸನ್ನು ತೊಲಗಿಸಬೇಕಾಗುತ್ತದೆ. ಹಾಗೆ ಮಾಡದೆ ಔಷಧದಿಂದ ಗುಣ ಬರಲು ಸಾಧ್ಯವಿಲ್ಲ. ನಮ್ಮ ಹಿಂದೂಗಳೆಲ್ಲರ ಹೊಟ್ಟೆ ಸರಿಯಿಲ್ಲ. ಅದೆಷ್ಟೋ ದಿನಗಳಿಂದ ಬ್ರಾಹ್ಮಣ ಧರ್ಮದ ಹೊಲಸು ಅದರಲ್ಲಿ ಮನೆಮಾಡಿ ಕುಳಿತಿದೆ. ಯಾವ ವೈದ್ಯನು ಈ ಹೊಲಸನ್ನು ತೊಳೆದು ತೆಗೆಯುವನೋ ಅವನೇ ಈ ದೇಶಕ್ಕೆ ಪ್ರಜಾಸತ್ತೆಯನ್ನು ಸ್ಥಾಪಿಸಲು ನೆರವಾಗಬಲ್ಲನು. ಆ ವೈದ್ಯನೆಂದರೆ ಗೌತಮ ಬುದ್ಧನೊಬ್ಬನೇ. ರಾಮನ ಜಯಂತಿಯನ್ನು ಆಚರಿಸಿ, ಕೃಷ್ಣನ ಜಯಂತಿಯನ್ನು ಆಚರಿಸಿ ಇಲ್ಲವೆ ಗಾಂಧಿಯ ಜಯಂತಿಯನ್ನು ಆಚರಿಸಿ ಹಿಂದುಗಳ ರಕ್ತಶುದ್ಧಿ ಆಗಲಾರದು. ರಾಮ, ಕೃಷ್ಣ, ಗಾಂಧಿ, ಇವರೆಲ್ಲರೂ ಬ್ರಾಹ್ಮಣ ಧರ್ಮದ ಉಪಾಸಕರು. ಪ್ರಜಾಸತ್ತೆಯ ಪ್ರಾಣಪ್ರತಿಷ್ಠಾಪನೆಗೆ ಇವರಾರಿಂದಲೂ ಪ್ರಯೋಜನವಿಲ್ಲ. ಪ್ರಯೋಜನ ಆಗುವುದೇ ಇದ್ದರೆ, ಅದು ಬುದ್ಧನೊಬ್ಬನಿಂದಲೇ ಎಂಬುದನ್ನು ನೆನಪಿಟ್ಟುಕೊಂಡು, ಅವನ ಮಾತ್ರೆಯನ್ನು ಸ್ವೀಕರಿಸುವುದೇ ಹಿಂದೂಗಳೆಲ್ಲರ ರಾಜಕೀಯ ಹಾಗೂ ಸಾಮಾಜಿಕ ರಕ್ತಶುದ್ಧಿಯ ಉಪಾಯವೆಂದು ನಮಗೆ ಖಚಿತವಾಗಿ ಅನ್ನಿಸುತ್ತದೆ. ಅಂದರೆ ಅವರು,

ಬುದ್ದಮ್ ಸರಣಮ್ ಗಚ್ಛಾಮಿ ।

ಧಮ್ಮಮ್ ಸರಣಮ್ ಗಚ್ಚಾಮಿ ||

ಸಂಘಮ್ ಸರಣಮ್ ಗಚ್ಚಾಮಿ 11

ಎಂಬ ಮಂತ್ರವನ್ನೇ ಜಪಿಸಬೇಕೆಂಬುದು ನಮ್ಮ ಅಭಿಪ್ರಾಯ.''

ಜನತಾ', ತಾ, ೧೭ ಮೇ ೧೯೪೧.

**೯೫. ದಂಗೆ ನಡೆಯಿತು ! ದಂಗೆ ನಡೆಯಿತು !**

**ಯಾವುದೇ ಉಪಾಯವಿಲ್ಲ !**

ಕಳೆದ ಎಪ್ರಿಲ್ ತಿಂಗಳ ಶುರುವಿನಿಂದಲೇ ಮುಂಬಯಿ ನಗರದಲ್ಲಿ ಹಿಂದೂ, ಮುಸಲ್ಮಾನರ ದಂಗೆಗಳು ಶುರುವಾದವು. ಇದಕ್ಕೆ ಮೊದಲು ಅಹಮ್ಮದಾಬಾದ ನಗರದಲ್ಲಿ ಹಿಂದೂ, ಮುಸಲ್ಮಾನ ದಂಗೆ ನಡೆಯಿತು. ಅಹಮ್ಮದಾಬಾದಿನ ದಂಗೆ ನಡೆದಾಗಲೇ ಕಾನಪುರದಲ್ಲಿ ಹಿಂದೂ, ಮುಸಲ್ಮಾನ ದಂಗೆ ನಡೆಯಿತು. ಆಮೇಲೆ ಕೂಡಲೇ ಬಿಹಾರದಲ್ಲಿ ಕೂಡ ಹಿಂದೂ, ಮುಸಲ್ಮಾನ ದಂಗೆಗಳು ನಡೆದವು. ಈ ದಂಗೆಗಳಾಗುವ ಮುನ್ನ ಬಂಗಾಲ ಪ್ರಾಂತದ ಢಾಕ್ಕಾ ನಗರದಲ್ಲಿ ಹಿಂದೂ, ಮುಸಲ್ಮಾನ ದಂಗೆ ಶುರುವಾಗಿ ಅದರ ಕಾಡುಬೆಂಕಿ ತುಂಬ ಹರಡಿಕೊಂಡಿತ್ತು. ಹಿಂದೂ, ಮುಸಲ್ಮಾನರ ದಂಗೆ ಎಂದರೆ ಎಂದಿನ ವಿಶಿಷ್ಟ ಬಗೆಯ ಒಂದು ಧಾರ್ಮಿಕ ನಿಯಮವಾಗಿ ಬಿಟ್ಟಿದೆ. ಜನರು ಯಾತ್ರೆಗಾಗಿ ಯಾವ ರೀತಿಯಾಗಿ ಒಂದೆಡೆ ಸೇರುವರೋ ಅದೇ ರೀತಿಯಾಗಿ ದಂಗೆಗೂ ಹಾಜರಾಗುತ್ತಾರೆ, ಎಂಬಂತಾಗಿದೆ. ಒಂದು ವ್ಯತ್ಯಾಸವೆಂದರೆ ಯಾತ್ರೆಗಾಗಿ ದಿನ, ವೇಳೆಗಳು ಮೊದಲೇ ತೀರ್ಮಾನವಾಗಿರುತ್ತವೆ. ಆದರೆ

ದಂಗೆ ಯಾವಾಗ, ಎಲ್ಲಿ, ಎಂಬುದನ್ನು ಮಾತ್ರ ಯಾರೂ ಹೇಳಲಾರರು. ದಂಗೆ ನಡೆದಾಗ ಯಾರಿಗೂ ಅದರಲ್ಲಿ ಅಂತಹ ವಿಶೇಷವೇನೂ ಕಾಣಿಸದು. ಒಬ್ಬರು ಇನ್ನೊಬ್ಬರ ಮೇಲೆ ವರ್ಚಸ್ಸನ್ನು ಬೀರುವುದು, ಕೊಲ್ಲುವುದು, ಸಾಯುವುದೆಲ್ಲ ಹಿಂದೂ-ಮುಸಲ್ಮಾನರ ಸಂಯುಕ್ತ ಜೀವನ ಕ್ರಮವಾಗಿ ಬಿಟ್ಟಿದೆ. ಆದುದರಿಂದ ಇದನ್ನು ಕುರಿತು ಬರೆಯುವುದು ಆವಶ್ಯಕ. ಮುಂಬಯಿಯಲ್ಲಿ ನಡೆದಿರುವ ದಂಗೆ ಈ ಮೊದಲಿಗಿಂತ ತುಸು ಬೇರೆಯಾದುದೆಂದು ಮೊದಲಿನಿಂದಲೇ ನಮಗೆ ಅನ್ನಿಸುತ್ತಿತ್ತು. ಈ ದಂಗೆಯಲ್ಲಿ ಹಿಂದಿನಂತೆ ದೊಡ್ಡ ನಾಶ ಇಲ್ಲವೆ ಪ್ರಾಣಹಾನಿ ನಡೆದಿದೆ, ಎಂದೆನ್ನಲಾಗದು. ಈ ದಂಗೆ ಶುರುವಾದಂದಿನಿಂದ ಈ ವರೆಗೆ ೪೨ ಜನರ ಹತ್ಯೆ ನಡೆದಿದೆ. ೨೨೨ ಜನ ಗಾಯಗೊಂಡಿರುವರು. ೧೮೫೦ ಗೂಂಡಾಗಳನ್ನು ಸೆರೆಹಿಡಿಯಲಾಗಿದೆ. ಮೊದಲಿನ ದಂಗೆಗಳಿಗೆ ಹೋಲಿಸಿದರೆ ಇದು ಸಣ್ಣದು ಎನ್ನಬಹುದು. ಆದರೆ ಈ ದಂಗೆಗೆ ಮಹತ್ವ ಲಭಿಸಿದೆ. ಅದಕ್ಕೆ ಕಾರಣವೆಂದರೆ ಈ ದಂಗೆಗೆ ಯಾವುದೇ ಕಾರಣವಿಲ್ಲ. ಈ ಮೊದಲು ನಡೆದ ದಂಗೆಗಳ ಮುನ್ನ, ಎರಡೂ ಬದಿಗಳಲ್ಲಿ ಹಗೆತನ ಹುಟ್ಟಲು ಇರಬಹುದಾದ ತಾತ್ಕಾಲಿಕ ಕಾರಣವನ್ನು ಹೇಳಬಹುದಿತ್ತು. ಕೆಲವೊಮ್ಮೆ ಹಿಂದೂಗಳು ವಾದ್ಯಗಳನ್ನು ಬಾರಿಸುತ್ತ ಮಸೀದಿಯ ಎದುರಿನಿಂದ ಮೆರವಣಿಗೆ ಹೊರಡಿಸಿದುದರಿಂದ ದಂಗೆ ನಡೆದಿದೆ. ಕೆಲವೊಮ್ಮೆ ಮುಸಲ್ಮಾನರು ಈದ್ ದಿನ ಹಸುವನ್ನು ಹತ್ಯೆಗೈದ ಕಾರಣ ದಂಗೆ ನಡೆದಿದೆ. ಆದರೆ ಈ ದಂಗೆಗೆ ಅಂತಹ ಯಾವುದೋ ನಿಮಿತ್ತ ಆಯಿತೆಂದು ಯಾರೂ ಹೇಳಲಾರರು. ಈ ದಂಗೆಯ ವೈಶಿಷ್ಟ್ಯ ಇರುವುದು ಇಲ್ಲಿಯೇ.

ಈ ದಂಗೆ ರಾಜಕೀಯವಾದುದೆಂದು ನಮಗೆ ಮೊದಲಿನಿಂದಲೂ ಅನ್ನಿಸುತ್ತಿದೆ. ಮದ್ರಾಸಿನಲ್ಲಿ ಮುಸ್ಲಿಮ್ ಲೀಗ್‌ದ ಸಮಾವೇಶ ನಡೆದ ಬಳಿಕ ಈ ದಂಗೆಯ ಸೋಂಕು ಎಲ್ಲೆಡೆಗೆ ಹಬ್ಬಿತೆನ್ನುವ ಮಟ್ಟಿಗೆ ತರ್ಕ ಕಟ್ಟಿದ್ದೆವು. ಆದರೆ ಈಗ ತರ್ಕದ ಆವಶ್ಯಕತೆಯೇ ಉಳಿದಿಲ್ಲ. ಎರಡೂ ಪಕ್ಷಗಳು



ಈ ಬಗೆಗೆ ತಪ್ಪೊಪ್ಪಿಗೆಯ ಹೇಳಿಕೆಗಳನ್ನು ನೀಡಿವೆ. ಈ ದಂಗೆಯು ಒಂದು ದಂಗೆಯಾಗಿರದೆ ಅದು ಹಿಂದೂಗಳ ವಿರುದ್ಧ ಮುಸಲ್ಮಾನರ ಬಂಡಾಯವಾಗಿದೆ, ಎಂದು ಹಿಂದೂ ಮಹಾಸಭೆಯ ನಾಯಕರಾದ ಬ್ಯಾರಿಸ್ಟರ್ ಸಾವರಕರ ಇವರು ದಂಗೆಯನ್ನು ಕುರಿತು ತಮ್ಮ ಪ್ರಕಟಣೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಮುಸಲ್ಮಾನರ ನಾಯಕರಾದ ಬ್ಯಾರಿಸ್ಟರ್ ಜಿನಾ

ಕೂಡ ಒಂದು ಪ್ರಕಟಣೆಯನ್ನು ಹೊರಡಿಸಿ, ಮುಂಬಯಿಯ ದಂಗೆಯು ಧಾರ್ಮಿಕ ಸ್ವರೂಪದ್ದಾಗಿರದೆ ರಾಜಕೀಯ ಸ್ವರೂಪದ್ದಾಗಿದೆ, ಎಂದು ಸ್ಪಷ್ಟಪಡಿಸಿದರು. ಈ ದಂಗೆಯ ಮುಖ್ಯಗುರಿ ಎಂದರೆ ಹಿಂದೂಗಳಿಂದ ರಾಜಕೀಯ ಅಧಿಕಾರವನ್ನು ಕಿತ್ತುಕೊಳ್ಳುವುದಾಗಿದೆ. ಇಲ್ಲಿಯವರೆಗೆ ಇದನ್ನು ಗೂಂಡಾಗಳು ನಡೆಸಿದ ದಂಗೆ ಎಂದು ನಂಬಿ ಮುಂಬಯಿಯ ಸರಕಾರಿ ಅಧಿಕಾರಿಗಳು ತಮ್ಮ ಕೃತಿಯೋಜನೆಗಳನ್ನು ಕೈಕೊಂಡಿದ್ದರು. ಅವರಿಗೂ ತಮ್ಮ ದಿಕ್ಕು ತಪ್ಪಿದ ಅರಿವು ಆಗಿರಲು ಸಾಕು. ಏಕೆಂದರೆ ಇಂದಿನ ಟೈಮ್ಸ್ ಆಫ್ ಇಂಡಿಯಾದ ಬರವಣಿಗೆಯಿಂದಂತೂ ದಂಗೆಯನ್ನು ಹುಟ್ಟುಹಾಕಿದವರು ಗೂಂಡಾಗಳಾಗಿರದೆ ದಂಗೆಯ ವ್ಯೂಹವನ್ನು ರಚಿಸಿರುವ ಸಂಚುಕೋರರು ಅದರ ಮೂಲದಲ್ಲಿ ಇರುವುದನ್ನು ಒಪ್ಪಿಕೊಳ್ಳಬೇಕಾಗಿದೆ. ಇಂಥ ದಂಗೆಗೆ (ತಡೆಯಲು) ಉಪಾಯವೇನು? ಎಂಬ ಪ್ರಶ್ನೆಯನ್ನು ಕಂಡಕಂಡವರೆಲ್ಲರೂ ವಿಚಾರಿಸುವಲ್ಲಿ ಅಚ್ಚರಿಯೇನಿಲ್ಲ. ನಾಯಕರಲ್ಲಂತೂ ಈ ದಂಗೆ ಮುಗಿಯಬೇಕೆಂಬ ಇಚ್ಛೆ ಇಲ್ಲ. ಮಿ. ಜಿನಾ ಇವರು ಇದನ್ನು ರಾಜಕೀಯ ದಂಗೆ ಎಂದರಷ್ಟೇ ಹೊರತು, ನೀವು ದಂಗೆ ಮಾಡಬೇಡಿ, ಎಂದು ತಮ್ಮ ಮುಸ್ಲಿಮ್ ಬಾಂಧವರು ಹಾಗೂ ಅನುಯಾಯಿಗಳಿಗೆ ಹೇಳಲಿಲ್ಲ. ನೀವು ಮುಸಲ್ಮಾನರಿಗೆ ದಂಗೆಯನ್ನು ನಿಲ್ಲಿಸಲು ಹೇಳಿ, ಆಮೇಲೆ ನಾವು ಹಿಂದೂಗಳಿಗೆ ದಂಗೆಯನ್ನು ನಿಲ್ಲಿಸಲು ಹೇಳುತ್ತೇವೆ, ಎಂದು ಬ್ಯಾ. ಸಾವರಕರರು ಬಾಬು ರಾಜೇಂದ್ರ ಪ್ರಸಾದರೊಂದಿಗೆ ವಾದ ಹಾಕುತ್ತ ಕುಳಿತಿದ್ದಾರೆ. ಗಾಂಧಿಯವರಂತೂ ವಿಚಿತ್ರವಾಗಿ ನಡೆದುಕೊಂಡಿದ್ದಾರೆ. ಅವರು ಹೊರಡಿಸಿದ ಪ್ರಕಟಣೆಯಿಂದಂತೂ ದಂಗೆ ನಿಲ್ಲುವ ಬದಲು ಇನ್ನಷ್ಟು ಕೆರಳಿದೆ, ಎನ್ನಲು ಅಡ್ಡಿಯಿಲ್ಲ. ಅಹಮ್ಮದಾಬಾದಿನ ಹಿಂದೂಗಳ ಮೇಲೆ ಅಹಿಂಸೆಯಿಂದಾದ ಭಯಂಕರ ಪರಿಣಾಮದಿಂದ ವಿಹ್ವಲರಾದ ಗಾಂಧಿಯವರು, ದಂಗೆ ಮುಗಿದ ಬಳಿಕ ಹಿಂಸೆ-ಅಹಿಂಸೆಗಳನ್ನು ಕುರಿತಾದ ತಮ್ಮ ಹೊಸ ಹಾಗೂ ಸುಧಾರಿತ ವಿಚಾರಗಳನ್ನು ಎತ್ತಬಹುದಿತ್ತು. ದಂಗೆ ನಡೆದಿರುವಾಗಲೇ ಅವನ್ನು ಎತ್ತಿದ್ದರಿಂದ ತುಂಬ ನಾಶವಾಯಿತು, ಎಂದೆನ್ನಲು ಯಾವುದೇ ಬಗೆಯ ಅಡ್ಡಿಯಿಲ್ಲ. ಏಕೆಂದರೆ ಗಾಂಧಿಯವರ ಪ್ರಕಟಣೆ ಎಂದರೆ, ನೀವು ಮುಸಲ್ಮಾನ ಗೂಂಡಾಗಳ ವಿರುದ್ಧ ಹಿಂಸೆ ಮಾಡಿ, ನಿಮ್ಮನ್ನು ರಕ್ಷಿಸಿಕೊಳ್ಳಿ, ಎಂದು ಹಿಂದುಗಳನ್ನು ಪ್ರೋತ್ಸಾಹಿಸುವುದನ್ನು ಬಿಟ್ಟು ಇನ್ನೇನೂ ಆಗಿರಲಿಲ್ಲ. ಗೂಂಡಾಗಳು ಏರಿಬಂದರೆ ಓಡಿ ಹೋಗಬೇಡಿ', ಎಂದಿಷ್ಟೇ ಗಾಂಧಿಯವರು ಅಂದಿದ್ದರೂ, ಓಡಿಹೋಗಬೇಡಿ, ಅವರನ್ನು ಕೊಲ್ಲಿ, ಎನ್ನುವ ಗರ್ಭಿತ ಮಾತ್ರವಲ್ಲ, ಪ್ರಕಟ ಸೂಚನೆಯೇ ಅದರಲ್ಲಿದೆ, ಎಂದು ಎಲ್ಲರ ತಿಳುವಳಿಕೆಯಾಗಿದೆ. ಮುಸಲ್ಮಾನರದಂತೂ ಹಾಗಾಗಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ನಿಂತುಹೋದ ದಂಗೆ ಗಾಂಧಿಯವರ ಪ್ರಕಟಣೆಯ ತರುವಾಯ ಮತ್ತೆ ಶುರುವಾದುದು ಇದಕ್ಕೆ ಸಾಕ್ಷ್ಯ ನಾಯಕರಲ್ಲಿ ದಂಗೆಯನ್ನು ನಿಲ್ಲಿಸುವ ಇಚ್ಛೆ ಕಾಣುತ್ತಿಲ್ಲ. ಹಾಗೆಯೇ, ದಂಗೆಯನ್ನು ನಿಲ್ಲಿಸಲೆಂದು ಸ್ಥಾಪನೆಗೊಂಡ ಸಮಿತಿಗಳು ಅದನ್ನು ನಿಲ್ಲಿಸಬಲ್ಲವು, ಎಂದೆನ್ನಿಸುತ್ತಿಲ್ಲ. ಈ ಸಮಿತಿಗಳ ಪೈಕಿ PEACE ಕಮಿಟಿ ಎಂದೆನ್ನಲಾದ ಸಮಿತಿಯು, ಯಾರು ದಂಗೆಯನ್ನು ಶುರು ಮಾಡಿದರು, ಎಂಬ ಪ್ರಶ್ನೆಯನ್ನು ಮುಖ್ಯವಾಗಿ ಎತ್ತಿದಂತಿದೆ. ಕಮಿಟಿಯ ಮುಸಲ್ಮಾನ ಸದಸ್ಯರು ದಂಗೆಯ ಹೊಣೆಯನ್ನು ಹಿಂದೂಗಳ ಮೇಲೆ ಹೊರಿಸಲು ಇಚ್ಛಿಸಿದರೆ ಹಿಂದೂ

ಸದಸ್ಯರು ಅದನ್ನು ಮುಸಲ್ಮಾನರ ಮೇಲೆ ಹೊರಿಸಲು ಇಚ್ಛಿಸುತ್ತಾರೆ. ದಂಗೆಯ ಮೂಲ ಹೊಣೆ ಯಾರದೆಂಬುದನ್ನು ಕಂಡುಹಿಡಿಯುವವರೆಗೆ ಅದನ್ನು ನಿಲ್ಲಿಸಲು ಸಾಧ್ಯವಿಲ್ಲ, ಎಂಬ ವಿಚಾರದಿಂದ ಸಮಿತಿಯ ಸದಸ್ಯರು ಪ್ರಭಾವಿತರಾದುದರಿಂದ ಈ ದಂಗೆಯನ್ನು ಶಮಿಸುವಲ್ಲಿ ಈ ಸಮಿತಿಗೆ ಯಶ ಲಭಿಸುವುದೆಂದು ಆಶಿಸಲು ಅವಕಾಶ ತೀರ ಕಡಿಮೆ. ಈ PEACE ಕಮಿಟಿಯ ಹೊರತಾಗಿ ದಂಗೆಯಲ್ಲಿ ಸಿಕ್ಕಿಕೊಂಡವರಿಗಾಗಿ ನೆರವು ನೀಡಲೆಂದು ಹಿಂದೂಗಳು ಒಂದು ರಿಲೀಫ್ ಕಮಿಟಿಯನ್ನು ಸ್ಥಾಪಿಸಿದ್ದಾರೆ. ಮುಸಲ್ಮಾನರಿಗೆ ನೆರವು ನೀಡಲೆಂದು ಎರಡನೆಯದನ್ನು ಸ್ಥಾಪಿಸಲಾಗಿದೆ. ಈ ಸಮಿತಿಗಳು ದಂಗೆಗಳನ್ನು ಶಮಿಸುವಲ್ಲಿ ನಿರುಪಯುಕ್ತವಷ್ಟೇ ಅಲ್ಲದೆ ಅವುಗಳಿಂದಾಗಿ ದಂಗೆ ಹೆಚ್ಚು ಕಾಲ ಮುಂದುವರೆಯುವ ಸಾಧ್ಯತೆಯೂ ಇದೆ, ಎಂದೆನ್ನಿಸುತ್ತದೆ. ಎರಡು ರಾಷ್ಟ್ರಗಳ ನಡುವೆ ಯುದ್ಧ ಶುರುವಾದ ಬಳಿಕ ಅದು ಮುಂದುವರೆಯುವುದಾಗಲಿ, ಅದರಲ್ಲಿ ಯಶ ದೊರೆಯುವುದಾಗಲಿ ಪೂರ್ತಿ supply ಡಿಪಾರ್ಟ್‌ಮೆಂಟ್‌ನ್ನು ಅವಲಂಬಿಸಿದೆ. ಹೀಗಾಗಿ ಯುದ್ಧದಲ್ಲಿ ಪ್ರತಿಯೊಂದು ಬದಿಯು ತನ್ನ ಸೈನಿಕನ ಬೆನ್ನಿಗೆ ದೊಡ್ಡದಾದ ಒಂದು supply ಡಿಪಾರ್ಟ್‌ಮೆಂಟ್‌ನ್ನು ಸ್ಥಾಪಿಸುತ್ತದೆ. ನಮ್ಮ ದೃಷ್ಟಿಯಲ್ಲಿ ಈ ರಿಲೀಫ್ ಕಮಿಟಿಗಳೆಂದರೆ ಇಂಥ supply ಡಿಪಾರ್ಟ್‌ಮೆಂಟ್‌ಗಳೇ ಸರಿ. ಹಿಂದೂಗಳು ಮುಸಲ್ಮಾನರಿಗಾಗಿ ಹಾಗೂ ಮುಸಲ್ಮಾನರು ಹಿಂದೂಗಳಿಗಾಗಿ ರಿಲೀಫ್ ಕಮಿಟಿಗಳನ್ನು ಸ್ಥಾಪಿಸಿದ್ದರೆ, ಅವರ ಕೈಯಿಂದ ದಂಗೆಯನ್ನು ಶಮಿಸುವ ಕೆಲಸವು ಬಹಳಷ್ಟು ಮಟ್ಟಿಗೆ ನೆರವೇರಬಹುದಿತ್ತೆಂಬುದು ನಮ್ಮ ಅಭಿಪ್ರಾಯ. ಆದರೆ ಅವುಗಳ ಇಂದಿನ ಸ್ವರೂಪ ಹಾಗೂ ಅವುಗಳ ಮತಾಧಾರಿತ ಗುರಿಗಳನ್ನು ಗಮನಿಸಲಾಗಿ ದಂಗೆಯನ್ನು ಉಳಿಸಿಕೊಳ್ಳಲು ಅವುಗಳಿಂದ ಹೆಚ್ಚಿನ ಉಪಯೋಗವಾದೀತು, ಎನ್ನಲು ಅಡ್ಡಿ ಇಲ್ಲ. ಈ ದೃಷ್ಟಿಯಿಂದ ನೋಡಿದರೆ ಈ ಗ್ರಹಣ ಬಿಡುವುದು ಹೇಗೆ? ಎನ್ನುವುದು ಬಲು ದೊಡ್ಡ ಕಠಿಣ ಪ್ರಶ್ನೆಯಾಗಿ ಕುಳಿತಿದೆ. ದಂಗೆ ರಾಜಕೀಯ ಸ್ವರೂಪದ್ದು, ಎನ್ನುವ ಬಗೆಗೆ ಎಲ್ಲರಲ್ಲಿ ಒಮ್ಮತವಾಗಿದೆ. ಹೀಗಾಗಿ ಹಿಂದೂ ಮುಸಲ್ಮಾನರ ರಾಜಕೀಯ ಪ್ರಶ್ನೆ ಬಗೆಹರಿಯದ ಹೊರತು ಈ ಗ್ರಹಣ ಬಿಡುವ ಸಾಧ್ಯತೆ ಕಂಡು ಬರುತ್ತಿಲ್ಲ. 'ದಾನ ಕೊಡು, ಅಂದ್ರೆ ಗ್ರಹಣ ಬಿಡುತ್ತೆ,' ಎನ್ನುವುದು ಮುಸಲ್ಮಾನರ ಮನೋವೃತ್ತಿಯಾದಂತೆ ಕಂಡುಬರುತ್ತಿದೆ. ಏನಾದರೂ ದಾನ ಕೊಡದ ಹೊರತು ಈ ಗ್ರಹಣ ಬಿಡುವಂತೆ ಕಾಣುತ್ತಿಲ್ಲ. ಈ ರಾಹು ಆ ಬಗೆಯ ದಾನವನ್ನು ನೀಡಿದ ಬಳಿಕವೇ ಸಂತುಷ್ಟನಾಗುವನು, ಎನ್ನುವ ಬಗೆಗೆ ಯಾರಲ್ಲೂ ಅಂತಹ ಸಂದೇಹ ಉಳಿದಿಲ್ಲ, ಎನ್ನುವಂತಿಲ್ಲ. ಪಾಕಿಸ್ತಾನ ಕೊಡಿ

ಅಥವಾ ಎಲ್ಲೆಡೆಗೆ ಅರ್ಧ ಅರ್ಧ ಭಾಗ ಕೊಡಿ, ಎನ್ನುವುದು ಮುಸಲ್ಮಾನರ ಬೇಡಿಕೆ, ಎನ್ನುವುದು ಈಗ ಎಲ್ಲರಿಗೆ ತಿಳಿದಿದೆ. ಹಿಂದೂಗಳು ಯಾವ ಭಾಗವನ್ನು ಕೊಡಲು ಸಿದ್ದರಾಗುವರು, ಎನ್ನುವುದಷ್ಟೇ ಪ್ರಶ್ನೆಯಾಗಿದೆ. ಹಿಂದುಗಳು ಇವೆರಡರಲ್ಲಿ ಯಾವ ಒಂದು ಸಂಗತಿಯನ್ನೂ ಒಪ್ಪಿಕೊಳ್ಳಲು ಸಿದ್ಧರಿಲ್ಲವೆಂಬುದು ಈ ವರೆಗಿನ ಅವರ ಧೋರಣೆಯಿಂದ ಸ್ಪಷ್ಟವಾಗಿ ಕಂಡುಬರುತ್ತಿದೆ. ಹಿಂದೂಗಳು ಪಾಕಿಸ್ತಾನವನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲ. ಪಾಕಿಸ್ತಾನಕ್ಕೆ ಒಪ್ಪಿಗೆಯನ್ನು ನೀಡತಕ್ಕದ್ದಲ್ಲ, ಎಂದು ಅವರು ತೀರ್ಮಾನಿಸಿದಂತಿದೆ. ಕಮ್ಯುನಲ್ ಅವಾರ್ಡ್ ಸೂಚಿಸಿದ್ದಕ್ಕಿಂತ ಹೆಚ್ಚು, ಸೂಜಿಯ ಮೊನೆಯ ಮೇಲಿನ ಮಣ್ಣಿನಷ್ಟು ಸವಲತ್ತನ್ನು ಕೂಡ ಮುಸಲ್ಮಾನರಿಗೆ ಕೊಡಕೂಡದು, ಎನ್ನುವ ನಿರ್ಧಾರ ಅವರದಾಗಿದೆ. ಈ ದೃಷ್ಟಿಯಿಂದ ನೋಡಿದರೆ ಹಿಂದೂಸ್ತಾನದ ಭವಿಷ್ಯವು ನಿರಾಶಾಮಯವಾಗಿದೆ, ಎಂಬುದನ್ನು ಯಾರಾದರೂ ಹೇಳಬಹುದು. ಹಿಂದೂಗಳು ದಾನವನ್ನು ಕೊಡದೆ ಗ್ರಹಣವನ್ನು ಬಿಡಿಸುವ ಎರಡು ಮಾರ್ಗಗಳನ್ನು ನಿರ್ಧರಿಸಿದುದು ಮುಸಲ್ಮಾನರಿಗೆ ಅನುಮಾನದ್ದಾಗಿ



ಕಾಣುತ್ತದೆ. ಇಲ್ಲಿ ಕಾಂಗ್ರೆಸ್ ಹಾಗೂ ಹಿಂದು ಮಹಾಸಭೆಯ ಮಾರ್ಗಗಳು ತೀರ ಭಿನ್ನ. ತಮ್ಮ ಚಳುವಳಿಯ ಸಾಮರ್ಥದಿಂದ ಇಂಗ್ಲಿಷ್ ಸರಕಾರಕ್ಕೆ ಸಾಕು ಸಾಕಾಗುವಂತೆ ಮಾಡಿ, ಅವರ ಮೂಲಕ ಮುಸಲ್ಮಾನರನ್ನು ಪೇಚಿಗೆ ಸಿಲುಕಿಸುವುದು ಕಾಂಗ್ರೆಸ್ಸಿನ ರಣನೀತಿಯಾಗಿರುವಂತೆ ತೋರುತ್ತದೆ. ಹಿಂದೂ ಮಹಾಸಭೆಯ ಮಾರ್ಗವು

ಬೇರೆಯದಾಗಿ ಕಾಣುತ್ತದೆ. ನಾಲ್ಕನೆಯ ಪಾನಿಪತ್ ಯುದ್ದ ಮಾಡಿ ಮುಸಲ್ಮಾನರನ್ನು ಸದೆಬಡಿಯುವುದು ಅದರ ನೀತಿಯಾಗಿ ಕಾಣುತ್ತದೆ. ಇವರಿಬ್ಬರಲ್ಲಿ ಯಾರ ದಾರಿಯಿಂದಲೂ ಯಶಸ್ಸು ಲಭಿಸೀತೆಂದು ನಮಗೆ ಅನ್ನಿಸುವುದಿಲ್ಲ. ಒಂದು ಕಪ್ಪೆ ಅದೆಷ್ಟೇ ಊದಿಕೊಂಡರೂ ಅದು ಎತ್ತಿನಷ್ಟು ದೊಡ್ಡದಾಗದು. ಕಾಂಗ್ರೆಸ್ಸಿನ ಚಳುವಳಿಯು ಅದೆಷ್ಟೇ ಹಬ್ಬಿದರೂ, ಅದೆಷ್ಟೇ ಶಕ್ತಿಯುತವಾದರೂ ಅದು ಇಂಗ್ಲಿಷ್ ಸರಕಾರವನ್ನು ಬಗ್ಗಿಸುವಷ್ಟು ತೇಜಸ್ವಿ ಹಾಗೂ ಶಕ್ತಿಯುತವಾಗಲಿದೆ, ಎಂದು ಕಾಂಗ್ರೆಸ್ಸಿಗರು ಮಾತ್ರ ಅನ್ನಲು ಸಾಧ್ಯ. ಕಾಂಗ್ರೆಸ್ಸಿನ ಶಕ್ತಿ ಎಷ್ಟು ದೊಡ್ಡದು, ಎಂಬುದನ್ನು ಕಂಡುಕೊಳ್ಳಲು ಬಹಳ ದೂರ ಹೋಗಬೇಕಿಲ್ಲ. ಇದಕ್ಕೆ, ಇಷ್ಟರಲ್ಲಿಯೇ ನಡೆದ ಆಯರ್ಲಂಡಿನ ಉದಾಹರಣೆ ಸಾಕು. ಸರಕಾರವು ಆಯರ್ಲಂಡಿನ ಉತ್ತರ ವಿಭಾಗದಲ್ಲಿ ಕಡ್ಡಾಯದ ಸೈನ್ಯ-ಭರತಿಯ ನೀತಿಯನ್ನು ಅನುಷ್ಠಾನಕ್ಕೆ ತರುವ ತನ್ನ ನಿರ್ಧಾರವನ್ನು ಇಷ್ಟರಲ್ಲಿಯೇ ಪ್ರಕಟಪಡಿಸಿತ್ತು. ಆಯರ್ಲಂಡಿನ ಉತ್ತರ ಹಾಗೂ ದಕ್ಷಿಣ ವಿಭಾಗಗಳಲ್ಲಿ ಇಂದು ಯಾವುದೇ ಬಗೆಯ ಸಂಬಂಧವಿಲ್ಲ. ಇವೆರಡೂ ವಿಭಾಗಗಳು ರಾಜಕೀಯ ದೃಷ್ಟಿಯಿಂದ ತೀರ ಬೇರ್ಪಟ್ಟವುಗಳು. ಮಿ. ಡೀ. ವ್ಯಾಲೆರೊ ಇವರ ಯಾವುದೇ ಬಗೆಯ ಸತ್ತೆ ಆಯರ್ಲಂಡಿನ ಉತ್ತರ ವಿಭಾಗದ ಮೇಲೆ ಇಲ್ಲ. ಹೀಗಿರುವಾಗ, ಮಿ, ಡೀ. ವ್ಯಾಲೆರೊ ಇವರು ಒಂದೇ ಒಂದು ಸಲ, ಒಂದೇ ಒಂದು ಭಾಷಣ ಮಾಡಿ ಬ್ರಿಟಿಷ್ ಸರಕಾರದ ಕಡ್ಡಾಯದ ಸೈನ್ಯ-ಭರತಿಯ ನೀತಿಯನ್ನು ಪ್ರತಿಭಟಿಸಿದರು. ಅದರಿಂದಾಗಿ ಬ್ರಿಟಿಶ್ ಸರಕಾರ ತನ್ನ ಕಡ್ಡಾಯದ ಸೈನ್ಯ-ಭರತಿಯ ನೀತಿಯನ್ನು ಹಿಂತೆಗೆದುಕೊಳ್ಳಬೇಕಾಯಿತು. ಯುದ್ಧ ಶುರುವಾದ ಕಳೆದ ಎರಡು ವರ್ಷಗಳಿಂದ ಕಾಂಗ್ರೆಸ್ ತನ್ನ ರಾಜಕೀಯ ಘೋಷಣೆಯನ್ನು ಇಂಗ್ಲಿಷ್ ಸರಕಾರದ ಮುಂದೆ ಇರಿಸುತ್ತಿದೆ. ಆದರೆ ಬ್ರಿಟಿಶ್ ಸರಕಾರ ಅದರತ್ತ ಕಣ್ಣು ಹಾಯಿಸಿಲ್ಲ. ಈ ದೃಷ್ಟಿಯಿಂದ ನೋಡಲಾಗಿ, 'ಎಲ್ಲಿ ಡೀ. ವ್ಯಾಲೆರಾ, ಎಲ್ಲಿ ಗಾಂಧಿ, ಎಲ್ಲಿ ರಾಜ, ಎಲ್ಲಿ ದೀವಟಿಗೆಯ ತಿರುಕ (ಪೋತರಾಜ), ಎಲ್ಲಿ ರಾಜ ಭೋಜ, ಎಲ್ಲಿ ಗಂಗಾ ಗಾಣಿಗ, ಎನ್ನುವ ಹೊತ್ತು ಬರುತ್ತದೆ. ಇದಕ್ಕಾಗಿ ನಮಗೆ ಕೆಡಕೆನ್ನಿಸುತ್ತದೆ. ಆದರೆ ಇಂಗ್ಲಿಷ್‌ರನ್ನು ಬೆದರಿಕೆಯಲ್ಲಿ ಇರಿಸಿ, ಮುಸಲ್ಮಾನರು ಮಾಡಿದ ಪಾಕಿಸ್ತಾನದ ಬೇಡಿಕೆಯ ಬಂಡಾಯವನ್ನು ಬಗ್ಗು ಬಡಿಯುವಷ್ಟು ಶಕ್ತಿ ಕಾಂಗ್ರೆಸ್ಸಿನ ಚಳುವಳಿಯಿಂದ ಹುಟ್ಟಿತೆಂದು ನಂಬುವುದು ಸಾಹಸದ ಮಾತಾದೀತು, ಎಂದೆನ್ನಲು ನಮಗಂತೂ ಯಾವುದೇ ಅಡ್ಡಿ ಕಾಣುತ್ತಿಲ್ಲ. ಹಿಂದೂ ಮಹಾಸಭೆಯ ಧೋರಣೆಯನ್ನು ಕಂಡು, ಅದರ ಮಾರ್ಗವೂ ಯಶಸ್ವಿಯಾಗಬಹುದೆಂದು ನಮಗೆ ಅನ್ನಿಸುತ್ತಿಲ್ಲ. ಹಿಂದೂ ಮಹಾಸಭೆ ಎಂದರೆ ಮರದ ಒಂದು ಪೆಟ್ಟಿಗೆ ಇದ್ದು ಅದರ ಮೇಲೆ ಅಚ್ಚಾದ ಬ್ಯಾ. ಸಾವರಕರರ ಹೆಸರನ್ನಷ್ಟು ಬಿಟ್ಟರೆ ಹಿಂದೂ ಮಹಾಸಭೆಯಲ್ಲಿ ಹೆಚ್ಚಿನ ಶಕ್ತಿ ಇದೆಯೆಂದು ನಮಗೆ ಕಾಣುತ್ತಿಲ್ಲ. ಇಂದು ಹಬ್ಬಿದಂತೆ ಕಾಣುವ ಹಿಂದೂ ಮಹಾಸಭೆಯ ವಾತಾವರಣ ಹೆಚ್ಚು ಕಾಲ ತಾಳೀತು, ಎಂದೆನ್ನುವಂತಿಲ್ಲ. ಹಿಂದೂ ಮಹಾಸಭೆಯ ವಾತವರಣವು ಆಕಾಶದಲ್ಲಿರುವ ಒಂದು ಮೋಡದಂತಿದೆ. ಇಂಥ ಮೋಡಗಳು ಎರಡು ಕಡೆಗಳಲ್ಲಿ ಬರಲು ಸಾಧ್ಯ. ಈ ಮೋಡಗಳು ಹಿಂದೂ-ಮುಸಲ್ಮಾನರ ಕಲಹವಿದ್ದಲ್ಲಿ ಕಂಡುಬರುತ್ತವೆ. ಇಂಥ ಮೋಡಗಳು ಬ್ರಾಹ್ಮಣ ಧರ್ಮದ ರಭಸ ಇದ್ದೆಡೆಯಲ್ಲಿ ಕಂಡುಬರುತ್ತವೆ. ಮದ್ರಾಸ ಪ್ರಾಂತದಲ್ಲಿ ಕಾಣುವ ಹಿಂದು

ಮಹಾಸಭೆಯ ಮೋಡಗಳೆಂದರೆ ಬ್ರಾಹ್ಮಣ ಧರ್ಮದ ಉಗಿ ಮಾತ್ರ, ಹಿಂದು-ಮುಸಲ್ಮಾನರ ದಂಗೆಯಿಂದಾಗಿ ಬಂಗಾಲದಲ್ಲಿ ಹಿಂದೂ ಮಹಾಸಭೆಯ ಶಕ್ತಿ ಇದೆ. ಹಿಂದು ಮಹಾಸಭೆಯ ಸಸಿ ಬೇರೆಡೆಯಲ್ಲಿ ಬದುಕಲಾರದು. ಬೇರೆ ಪ್ರಾಂತಗಳ ಪರಿಸ್ಥಿತಿಯನ್ನು ಅವಲೋಕಿಸುವವನಿಗೆ ಇದೆಲ್ಲ ಕಂಡುಬಂದೀತು. ಈ

ಮೇಲಿನ ಕಾರಣಗಳಿಂದಾಗಿ ಹಿಂದೂ ಮಹಾಸಭೆಯ ಸಸಿ ಜೀವ ಹಿಡಿದು, ದೊಡ್ಡ ಮರವಾಗಿ, ಆ ಮರದಡಿ ಕುಳಿತ ಹಿಂದೂಗಳೆಲ್ಲ ತಮ್ಮದೊಂದು ಕ್ಯಾಂಪ್ ಮಾಡಿಕೊಂಡು, ಮುಸಲ್ಮಾನರ ಮೇಲೆ ದಾಳಿ ಮಾಡಿ, ಅವರನ್ನು ಸೋಲಿಸಬಹುದು, ಎನ್ನುವ ಆಸೆ ಸೋಲುಣ್ಣದೆ ಇರದು. ದಂಗೆ ಒಂದು ರಾಜಕೀಯ ಗ್ರಹಣ, ದಾನ ನೀಡದೆ ಅದು ಬಿಡಲಾರದು. ಹಿಂದೂಗಳು ದಾನ ಕೊಡಲು ಸಿದ್ಧರಿಲ್ಲ, ಅಲ್ಲದೆ ದಾನ ಕೇಳುವ ತಿರುಕರನ್ನು ಬೆದರಿಕೆಯಲ್ಲಿ ಇಟ್ಟುಕೊಳ್ಳಲಾರರು. ಈ ದೇಶ ಇಂಥ ಪೇಚಿಗೆ ಸಿಲುಕಿಕೊಂಡಿದೆ. ನಮಗೆ ಇದನ್ನು ಕುರಿತು ತುಂಬ ಖೇದವೆನ್ನಿಸುತ್ತದೆ. ಮನುಷ್ಯನ ಕೈಲಿ ಈ ದಂಗೆಯನ್ನು ನಿಲ್ಲಿಸುವುದು ಸಾಧ್ಯವೆಂದು ಈಗಂತೂ ಅನ್ನಿಸುತ್ತಿಲ್ಲ. ಅದು ನಿಲ್ಲುವುದಿದ್ದರೆ ವರುಣನ ಕೃಪೆಯಿಂದ ಮಾತ್ರ ಸಾಧ್ಯ ಎನ್ನಿಸುತ್ತದೆ. ಆದುದರಿಂದ

ಬಾರೋ ಬಾರೋ ಮಳೆರಾಯ |
ಬಾರೋ ನಿನಗೊಂದ್ ಕಾಸ್ ಕೊಡ್ತೀನಿ ||

ಎಂದು ಮಕ್ಕಳಷ್ಟೇ ಅಲ್ಲ, ಮಕ್ಕಳಿಂದ ಹಿಡಿದು ಮುಪ್ಪಿನವರವರೆಗೆ ಎಲ್ಲರೂ ಪ್ರಾರ್ಥಿಸಬೇಕು, ಎಂಬುದು ಅವರಿಗೆ ನಮ್ಮ ಸೂಚನೆ.

ಸಂಪಾದಕೀಯ : 'ಜನತಾ , ತಾ, ೭ ಜೂನ್ ೧೯೪೧

ಉದ್ಧೃತ : ಗಾಂಜರೆ, ಸಂಪುಟ : ೫, ಪುಟ : ೩೨-೩೮

## ೯೭. ಒಬ್ಬ ಮಾದಿಗ ಗೃಹಸ್ಥನ ಪತ್ರಕ್ಕೆ ಉತ್ತರ

"ಶ್ರೀ ದೇವೀದಾಸರಾವ ನಾಮದೇವರಾವ ಕಾಂಬಳೆ (ನಿಜಾಮ್ ಸ್ಟೇಟ್) ಎನ್ನುವ ಒಬ್ಬ ಮಾದಿಗ ಸಮಾಜಸೇವಕ ವಿದ್ಯಾರ್ಥಿಯು ಬಾಬಾಸಾಹೇಬರಿಗೆ (ಡಾ. ಅಂಬೇಡಕರ) ಪತ್ರ ಬರೆದು ಹಲವಾರು ಪ್ರಶ್ನೆಗಳನ್ನು ಎತ್ತಿದ್ದನು. ಅವುಗಳಲ್ಲಿ ಮುಖ್ಯ ಪ್ರಶ್ನೆ ಎಂದರೆ ಬಾಬಾಸಾಹೇಬರು ಹೊಲೆಯ ಜಾತಿಯವರಿಗಾಗಿ ಅಷ್ಟೆ ಸಾಮಾಜಿಕ ಕಾರ್ಯವನ್ನು ಮಾಡುತ್ತಾರೆ, ಹೋಲೆಯ ಜನರನ್ನಷ್ಟೇ ಹತ್ತಿರಕ್ಕೆ ಕರೆದುಕೊಳ್ಳುತ್ತಾರೆ. ಅವರು ಈ ಧೋರಣೆಯನ್ನು ಬಿಟ್ಟು ಅಸ್ಪೃಶ್ಯ ಸಮಾಜದ ಎಲ್ಲ ಜಾತಿಗಳಿಗಾಗಿ ಕಾರ್ಯವನ್ನು ಮಾಡಬೇಕು, ಆ ಸಮಾಜ ಸೇವಕರನ್ನು ಹತ್ತಿರಕ್ಕೆ ಕರೆದುಕೊಳ್ಳಬೇಕು. ಬಾಬಾಸಾಹೇಬರು ಪತ್ರದ ಈ ಅಂಶಗಳಿಗೆ ಉತ್ತರಗಳನ್ನು ನೀಡಿದರು. ಆ ಉತ್ತರದಲ್ಲಿ ಅವರ ಅರೆದುಃಖ ಹಾಗೂ ಅರೆಕೋಪದ ಉದ್ವೇಗಗಳ ಪಡಿನೆಳಲು ಎದ್ದು ಕಾಣುವುದಲ್ಲದೆ ಹೊಲೆಯರಲ್ಲದ ಜಾತಿಯ ಸಮಾಜಸೇವಕರತ್ತ ನೋಡುವ ಅವರ ದೃಷ್ಟಿಕೋನ ಹೇಗಿತ್ತು, ಅದು ಹಾಗೇಕಿತ್ತು, ಎನ್ನುವುದರ ಚಿತ್ರವೂ ಕಾಣಸಿಕ್ಕುತ್ತದೆ. ಸಾಮಾನ್ಯವಾಗಿ ಭಾವನೆಗಳಲ್ಲಿ ಸಿಕ್ಕಿಕೊಳ್ಳದ ಬಾಬಾಸಾಹೇಬರು ತಮ್ಮ ಭಾವನೆಗಳು ಸಿಡಿದೆದ್ದು ಬರುವ ಸನ್ನಿವೇಶ ಎದುರಾದಾಗ, ಅದರಲ್ಲೂ ಅದು ಒಬ್ಬ ಕಿಡಿಗೇಡಿಯಿಂದಾಗಿ ಎದುರಾದಾಗ, ತಮ್ಮ ಭಾವನೆಗಳನ್ನು ಅನಿಯಂತ್ರಿತವಾಗಿ ಹಾಗೂ ಮನಬಂದಂತೆ ಹರಿಯಲು ಬಿಡದೆ (ವಕ್ರೋಕ್ತಿ) ಕೊಂಕುನುಡಿ, (ವ್ಯಾಜೋಕ್ತಿ) ಇನ್ನೊಬ್ಬರ ಮೇಲೆ ಹಾಯಿಸಿ ಆಡಿದ ಮಾತು, ಅಪಹಾಸ್ಯ ಮೊದಲಾದ ಸಾಹಿತ್ಯಕ ಅಲಂಕಾರಗಳ ಮೂಲಕ ಅವುಗಳನ್ನು ಚೆಂದವಾದ ಹಾಗೂ ಸಶಕ್ತವಾದ ಪದಗಳಲ್ಲಿ ವ್ಯಕ್ತಪಡಿಸುತ್ತಿದ್ದರು, ಎನ್ನುವುದಕ್ಕೆ ಇದೊಂದು ಶ್ರೇಷ್ಠ ಮಾದರಿ, ಶ್ರೀ ಕಾಂಬಳೆ ಅವರ ಈ ಪತ್ರವು ೧೪-೬-೧೯೪೧ರ ಜನತಾ ದಲ್ಲಿ (ಪು. ೫) ಅಚ್ಚಾಗಿತ್ತು. ಅಲ್ಲದೆ ಬಾಬಾಸಾಹೇಬರ ಉತ್ತರವನ್ನು ಸಂಪಾದಕೀಯವೆಂದು ಅದೇ ಸಂಚಿಕೆಯಲ್ಲಿ ಪ್ರಕಟಿಸಲಾಗಿತ್ತು." ಡಾ. ಬಾಬಾಸಾಹೇಬರರ ಉತ್ತರ ಹಾಗೂ ಆ ಪತ್ರಗಳು ಕೆಳಗಿನಂತಿವೆ

:

"ರಾಜಮಾನ್ಯ ರಾಜಶ್ರೀ, ದೇವೀದಾಸರಾವ ಕಾಂಬಳೆ ಇವರಿಗೆ ಅನೇಕ ...,

ತಮ್ಮನ್ನು ಏನೆಂದು ಸಂಬೋಧಿಸಬೇಕು, ಎನ್ನುವ ಬಗೆಗೆ ಗೊಂದಲಕ್ಕೆ ಈಡಾಗಿದ್ದೇನೆ. ನಮಸ್ಕಾರ ಎನ್ನಬೇಕೆಂದರೆ ನಾವಿಬ್ಬರೂ ಬ್ರಾಹ್ಮಣರಲ್ಲ. ಜೊಹಾರ್ ಎನ್ನಬೇಕೆಂದರೆ ತಾವು ಮಾದಿಗರು. ಫುರಮಾನ್ ಎನ್ನಬೇಕೆಂದರೆ ನಾನು ಹೊಲೆಯ, ಆಶೀರ್ವಾದ ಎನ್ನಬೇಕೆಂದರೆ ಮಾದಿಗನಿಗೆ ಆಶೀರ್ವಾದ ನೀಡುವ ಹೊಲೆಯ

ಶ್ರೇಷ್ಠನೇ ಎನ್ನುವ ಅಪಾದನೆ ಬಂದೀತು. ಹೀಗಾಗಿ ಏನನ್ನೂ ಬರೆಯದೆ ಚಾಂಗದೇವನಂತೆ (ಹುಲಿಯ ಸವಾರಿ ಮಾಡಿ ಸಂತ ಜ್ಞಾನೇಶ್ವರರ ದರ್ಶನಕ್ಕೆ ಬಂದ ತಪಸ್ವಿ.) ಖಾಲಿ ಜಾಗ ಬಿಟ್ಟು, ತಮ್ಮ ಪತ್ರಕ್ಕೆ ಉತ್ತರವನ್ನು ನೀಡುತ್ತಿದ್ದೇನೆ. ಹೊಲೆಯ ಸಮುದಾಯ ಹಾಗೂ ಹೊಲೆಯ ನಾಯಕರು ಮಾದಿಗ ಜಾತಿಯ ಮೇಲೆ ಅನ್ಯಾಯ ಮಾಡುತ್ತಿರುವರು, ಎಂಬುದನ್ನು ಕುರಿತು ತಮ್ಮ ಮನಸ್ಸಿನಲ್ಲಿರುವ 'ಖಡಖುಡಿ'ಯನ್ನು (ಇದು ಮರಾಠಿ “ಖುಮಖುಮೀ' -ಜಗಳದ ತೀಟೆ- ಶಬ್ದದ ನಿಜಾಮಶಾಹಿಯ ಅಪಭ್ರಂಶವಾಗಿರಲು ಸಾಕು) ತೆಗೆದುಹಾಕಲು ಹಾಗೂ ಒಂದೇ ಸಲಕ್ಕೆ



“ಕೊನೆಮುಟ್ಟಿಸುವ ಸಲುವಾಗಿ ಪತ್ರವನ್ನು ಬರೆಯಲು ತೀರ್ಮಾನಿಸಿದೆ. ತಾವು ಇದರಲ್ಲಿ ಅಯೋಗ್ಯವಾದುದನ್ನೇನೂ ಮಾಡಿಲ್ಲ. ತಾವು ನನ್ನನ್ನು 'ಪರಮಪೂಜ್ಯ' ಎಂಬ ಶಬ್ದದಿಂದ ಸಂಬೋಧಿಸಿರುವಿರಿ. ಅದಕ್ಕಾಗಿ ನಾನು ತಮಗೆ ತುಂಬ ಋಣಿಯಾಗಿದ್ದೇನೆ. ಹೊಲೆಯರು ಯಾವಾಗಲೂ 'ಪರಮಪೂಜ್ಯ' ವಿಶೇಷಣವನ್ನು ಬಳಸಿ ನನ್ನನ್ನು ಸಂಬೋಧಿಸುತ್ತಾರೆ. ಆದರೆ ಅದರಲ್ಲಿ ಅಂತಹ ವಿಶೇಷವೇನೂ ಇಲ್ಲ. ಹೊಲೆಯನು ಹೊಲೆಯನನ್ನು ಹೊಗಳಿದರೆ ಅದಕ್ಕೇನು ಬೆಲೆ? ತಾವು ಮಾದಿಗರು ಹಾಗೂ ನಾನು ಹೊಲೆಯನಿದ್ದೂ ತಾವು ನನ್ನನ್ನು 'ಪರಮಪೂಜ್ಯ ಬಾಬಾಸಾಹೇಬ' ಎನ್ನುವಲ್ಲಿಯ ಪ್ರೀತಿ ಹಾಗೂ ಸ್ವಾರಸ್ಯಗಳು ಹೇಳಲಾಗದಷ್ಟು ಶ್ರೇಷ್ಠ.

ಗಾಂಧಿಯವರು ನನ್ನ ಪತ್ರಕ್ಕೆ ಉತ್ತರವನ್ನು ನೀಡಲಿಲ್ಲೆಂದು ನಾನು ಅವರನ್ನು ತಿರಸ್ಕರಿಸುತ್ತೇನೆಂದು ಯಾರು ತಮಗೆ ತಪ್ಪು ತಿಳುವಳಿಕೆಯನ್ನು ಮಾಡಿಕೊಟ್ಟರೋ ನನಗೆ ಅರ್ಥವಾಗುತ್ತಿಲ್ಲ. ನಾನು ಗಾಂಧಿಯವರನ್ನು ತಿರಸ್ಕರಿಸುತ್ತಿದ್ದರೂ ಅದರ ಕಾರಣಗಳೇ ಬೇರೆ. ಅವರು ನನ್ನ ಪತ್ರಕ್ಕೆ ಉತ್ತರ ನೀಡಲಿಲ್ಲ ಎನ್ನುವುದಲ್ಲ. ತಮ್ಮ ಹಾಗೆಯೇ ಇನ್ನೂ ಹಲವು ಜನ ನನಗೆ ಪತ್ರಗಳನ್ನು ಬರೆಯುತ್ತಾರೆ. ಆದರೆ ನಾನೆಂದಿಗೂ ಅವರಿಗೆ ಉತ್ತರಗಳನ್ನು ನೀಡುವ ಅಭ್ಯಾಸವನ್ನು ಇರಿಸಿಕೊಂಡಿಲ್ಲ. ಅದರಿಂದ ಬಹಳಷ್ಟು ಜನರಿಗೆ ಕೆಡುಕೆನಿಸುತ್ತದೆ. ಆದರೆ ಅದಕ್ಕಾಗಿ ಅವರು ನನ್ನನ್ನು ತಿರಸ್ಕರಿಸುವುದಿಲ್ಲ. ನಾನು ಹಗಲಿರುಳು ಕೆಲಸದಲ್ಲಿ ಇರುತ್ತೇನೆ, ಎನ್ನುವುದು ಅವರಿಗೆ ಗೊತ್ತು. ನನಗೆ ಜೈನಿ, ಐಷಾರಾಮು ಗೊತ್ತಿಲ್ಲ. ನಾನು ನಾಟಕ, ಸಿನೇಮಾಗಳಲ್ಲಿ ಕಾಲ ಕಳೆಯುವುದಿಲ್ಲ. ನನ್ನ ವೃತ್ತಿ, ಓದು ಇಲ್ಲವೆ ಸಾರ್ವಜನಿಕ ಕಾರ್ಯಗಳಲ್ಲಿ ಸತತವಾಗಿ ತೊಡಗಿಸಿಕೊಳ್ಳುತ್ತೇನೆ. ನನಗೆ ಗಾಂಧಿಯವರಂತೆ ಸೆಕ್ರೆಟರಿಗಳಿಲ್ಲ. ನಾನೇ ನನ್ನ ಕೆಲಸವನ್ನು ಮಾಡಿಕೊಳ್ಳಬೇಕಿದೆ. ಇದನ್ನರಿತೇ ನನ್ನ ಸ್ನೇಹಿತರು, ಸಹಕಾರಿಗಳು ನನ್ನನ್ನು ಕ್ಷಮಿಸುತ್ತಾರೆ,

ತಿರಸ್ಕರಿಸುವುದಿಲ್ಲ. ಉತ್ತರವನ್ನು ನೀಡದಿದ್ದರೆ ನಾನು ನಿಮ್ಮನ್ನು ತಿರಸ್ಕರಿಸುವೆನು', ಎಂದು ತಾವು ಬರೆದಿರುವುದು ಮನುಷ್ಯನ ಸ್ವಭಾವಕ್ಕೆ ತಕ್ಕಂತೆಯೇ ಇದೆ. ತಮ್ಮ ಯೋಗ್ಯತೆ ಎಂಥದೋ, ನಾನರಿಯೆ. ನಾನು ನಿಜಾಮ ಇಲಾಖೆಯ ಮರಾಠವಾಡಾ ವಿಭಾಗದವನು, ಮಾದಿಗ ಸಮುದಾಯದವನು, ಓದು ಕಲಿತವನು, ಎಲ್ಲರಲ್ಲಿ ಮೊದಲ ವಿದ್ಯಾರ್ಥಿ' ಎಂದು ತಮ್ಮನ್ನು ವರ್ಣಿಸಿಕೊಂಡಿರುವಿರಿ. ತಿರಸ್ಕರಿಸುವ ಹೊತ್ತು ಬರುವುದು ಕೆಟ್ಟದ್ದು, ಆದರೆ ತಾವು ಬರಿ ವಿದ್ಯಾರ್ಥಿಯಾಗಿದ್ದರೆ ತಮ್ಮ ತಿರಸ್ಕಾರವನ್ನು ಲೆಕ್ಕಿಸಬೇಕಿರಲಿಲ್ಲ. ಆದರೆ ತಾವು, 'ಮಾದಿಗ ಸಮುದಾಯದ ಸುಧಾರಣೆಯ ಇಡಿಯ ಜವಾಬ್ದಾರಿ ನನ್ನ ತಲೆಯ ಮೇಲೆಯೇ ಇದೆ ಎಂದು ಖಡಾಖಂಡಿತವಾಗಿ ಹೇಳಿರುವಿರಿ. ನಾನು ತಮ್ಮನ್ನು ಒಬ್ಬ ಸಾಮಾನ್ಯ ವಿದ್ಯಾರ್ಥಿ ಎಂದು ಬಗೆದು ಪತ್ರವನ್ನು ಕಳಿಸುತ್ತಿರದೆ, ನಿಜಾಮ ಸ್ಟೇಟಿನ ಮಾದಿಗ ಸಮುದಾಯದ ಒಬ್ಬ ಭಾವಿ ಮುಂದಾಳು, ಎಂದು ಬಗೆದು ಪತ್ರವನ್ನು ಕಳಿಸುತ್ತಿದ್ದೇನೆ. ಹೀಗಾಗಿ ತಾವು ಮಾರುತ್ತರವನ್ನು ರವಾನಿಸಲು ಅನುಮಾನಿಸಕೂಡದು. ಜೂ ಜನರಲ್ಲಿ ಮೋಜೆಸ್ ಇದ್ದ ಹಾಗೆ ಮಾದಿಗರಲ್ಲಿ ತಾವು, ಎನ್ನುವುದು ತಮ್ಮ ಭಾಷೆಯಿಂದ ಸ್ಪಷ್ಟ, ಅಂದ ಬಳಿಕ ತಮ್ಮ ಪತ್ರಕ್ಕೆ ಯಾರು ಉತ್ತರವನ್ನು ಕೊಡಲಿಕ್ಕಿಲ್ಲ! ತಮ್ಮ ಮನಸ್ಸಿನಲ್ಲಿ ನನ್ನ ಬಗೆಗೆ ತಿರಸ್ಕಾರ ಹುಟ್ಟಿಕೊಂಡರೆ ಇಡಿಯ ಮಾದಿಗ ಸಮುದಾಯ ನನ್ನನ್ನು ತಿರಸ್ಕರಿಸಿತು. ಅದನ್ನು ತಪ್ಪಿಸದಿದ್ದರೆ ಅದು ನನ್ನ ಅನರ್ಥಕ್ಕೆ ಕಾರಣವಾಗಲಿಕ್ಕಿಲ್ಲ, ಎಂದು ಯಾರು ಹೇಳಬಲ್ಲರು? ನಾನಂತೂ ಹೇಳಲಾರೆ. ಅದನ್ನು ತಪ್ಪಿಸಲೆಂದು ನನ್ನ ವಾಡಿಕೆಯನ್ನು ಮುರಿದು ನಾನು ತಮ್ಮ ಪತ್ರಕ್ಕೆ ಉತ್ತರವನ್ನು ಕಳಿಸುತ್ತಿದೇನೆ.

ಮೊಟ್ಟಮೊದಲಿಗೆ, ಎರಡು ಸಂಗತಿಗಳಿಗಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸದೆ ಇರಲಾಗದು.



ಹೊಲೆಯರು ನನ್ನನ್ನು ಈಶ್ವರನ ಅವತಾರವೆಂದು ಮನ್ನಿಸಿ ನನ್ನ ಫೋಟೋಕ್ಕೆ ಪೂಜೆ ಸಲ್ಲಿಸುತ್ತಾರೆ, ಅಲ್ಲದೆ ನನ್ನ ಹೊರತು ಇನ್ನಾರೂ ಹಾಗೆ ಆಗಲಾರರೆಂದು ನಂಬುತ್ತಾರೆ, ಎಂಬ ಸಂಗತಿಯ ಮೇಲೆ ತಾವು ಕಣ್ಣಿರಿಸಿದುದು ಸ್ತುತ್ಯವಾದುದು. ಇಂಥ ಅಂಧಶ್ರದ್ಧೆ ಹಾಗೂ ಭೋಳೇತನಗಳ ಅನುಕರಣೆಗಳನ್ನು ಮಾದಿಗ ಸಮುದಾಯಕ್ಕೆ ಮಾಡಗೊಡುವುದಿಲ್ಲ ಎಂದು ತಾವು ಮಾಡಿದ ನಿರ್ಧಾರವನ್ನು ತಾವು ಕೃತಿಯಲ್ಲಿ ಇಳಿಸಬೇಕೆಂದು ತಮಗೆ ನನ್ನ ಆಗ್ರಹದ ಸೂಚನೆ, ವಿಭೂತಿಪೂಜೆಯು ಮಾನವನಿಗೆ ಕೀಳುತನವನ್ನು ತಂದುಕೊಡುವ ಸಂಗತಿಯಾಗಿದೆ. ನಾನು

ಸಮತೆಯನ್ನು ತುಂಬ ಇಷ್ಟಪಡುವವನಷ್ಟೇ ಅಲ್ಲ, ಅದನ್ನು ಎತ್ತಿಹಿಡಿಯುವವನು. ನಾನು ದೇವನಲ್ಲ, ಮಹಾತ್ಮನಲ್ಲ ಎಂದು ಹೇಳಿ ದಣಿದೆ. ಆದರೆ ಅದರಿಂದ ಅವರ ಮೇಲೆ ಯಾವುದೇ ಬಗೆಯ ಪರಿಣಾಮ ಆದಂತೆ ಕಾಣುತ್ತಿಲ್ಲ. ತಾವು ಮಾದಿಗ ಸಮುದಾಯದವರಿಗೆ ನನ್ನ ಫೋಟೋವನ್ನು ಪೂಜಿಸಲು ಬಿಡುವುದಿಲ್ಲ, ಎನ್ನುವುದಂತೂ ಒಳ್ಳೆಯದೇ ಆಯಿತು. ಮಾದಿಗರು ಅಮಾವಾಸ್ಯೆ (ಅವಸ್), ಹುಣ್ಣಿಮೆ (ಪುನವ್), ಗ್ರಹಣಗಳನ್ನು ನಂಬುವ ಬದಲು ನನ್ನ ಫೋಟೋವನ್ನು ಪೂಜಿಸುವುದು ಕೆಟ್ಟ ಸಂಗತಿ, ಎಂಬ ಬಗೆಗೆ ನನ್ನಲ್ಲಿ ಯಾವುದೇ ಸಂದೇಹವಿಲ್ಲ. ತಾವು ತಮ್ಮ ದೃಷ್ಟಿಯನ್ನು ಸಂಕುಚಿತಗೊಳಿಸಿದ್ದೀರಿ, ಎಂಬ ಬಗೆಗೆ ನನಗೆ ಕೆಡಕೆನಿಸುತ್ತದೆ. ತಾವು ಹೋಲೆಯ ಸಮುದಾಯದವರ ತಲೆಯಿಂದ ಈ ಫೋಟೋ ಪೂಜೆಯ ಹುಚ್ಚನ್ನು ತೆಗೆದು ಹಾಕುವ ವ್ರತವನ್ನು ಆಚರಿಸಬೇಕೆಂದು ತಮಗೆ ಹೇಳುವುದು ನನಗೆ ಆವಶ್ಯಕ, ಎನ್ನಿಸುತ್ತದೆ. ಇದು ತಮ್ಮ ಬಲು ದೊಡ್ಡ ಪರಾಕ್ರಮ ಎನ್ನಿಸೀತು, ಎನ್ನುವಲ್ಲಿ ಯಾವುದೇ ಸಂದೇಹವಿಲ್ಲ. ಇಷ್ಟೊಂದು ಪರಾಕ್ರಮವನ್ನು ಮೆರೆದ ಬಳಿಕ ಮಾದಿಗ ಸಮುದಾಯವು ತಮ್ಮ ಫೋಟೋವನ್ನು ಪೂಜಿಸಲು ಆರಂಭಿಸೀತೆಂಬ ಹೆದರಿಕೆ ತಮ್ಮಲ್ಲಿದ್ದರೆ ಹಾಗೇನೂ ಹೆದರುವ ಕಾರಣವಿಲ್ಲ. ತಮ್ಮ ಫೋಟೋ ಪೂಜೆಯ ಸಂಪ್ರದಾಯವು ನನ್ನ ಫೋಟೋ ಪೂಜೆಯ ಸಂಪ್ರದಾಯದಷ್ಟು ಕೆಟ್ಟ ಪರಿಣಾಮವನ್ನು ಬೀರಲಿಕ್ಕಿಲ್ಲ.

ಇನ್ನೊಂದು ಮಾತಿಗಾಗಿಯೂ ನಾನು ತಮಗೆ ಆಭಾರಿಯಾಗಿದ್ದೇನೆ. ನಾನು ಸತ್ತ ಬಳಿಕ ಹೇಗಾದೀತು? ಎನ್ನುವ ಚಿಂತೆಯನ್ನು ಹಲವು ಸಲ ಪ್ರಕಟಪಡಿಸಿದ್ದೇನೆ, ಎನ್ನುವುದು ನಿಜ. ಹೊಲೆಯರ ಪೈಕಿ ಒಬ್ಬನೂ, "ಯಾವ ಅಭ್ಯಂತರವೂ ಇಲ್ಲ, ನೀವು ಸಾಯಿರಿ. ನಾವು ನಡೆಸುತ್ತೇವೆ' ಎಂದು ನನಗೆ ಹೇಳಲು ಧೈರ್ಯ ಮಾಡಲಿಲ್ಲ. ತಾವು ಕೊಟ್ಟ ಮಾತಿನಿಂದ ನಮಗೆ ಸಮಾಧಾನವಾಯಿತು. ದ್ರೋಣನು ಕೌರವ, ಪಾಂಡವರಿಗೆ ಧನುರ್ವಿದ್ಯೆಯನ್ನು ಕಲಿಸಿದ ಬಳಿಕ, ಯಾರು ನನಗೆ ಗುರುದಕ್ಷಿಣೆ ಕೊಡುವಿರಿ?" ಎಂದು ಕೇಳಿದರು. ಅದಕ್ಕೆ ಯಾರೂ ಉತ್ತರವನ್ನು ನೀಡಲಿಲ್ಲ. ಗುರು ಏನು ಕೇಳುವನೋ, ಪ್ರಾಣವನ್ನು ಕೇಳಿದರೆ? ಎನ್ನುವ ಭಯದಿಂದ ಎಲ್ಲರೂ ಸುಮ್ಮನಿದ್ದರು. ಅರ್ಜುನ ಒಬ್ಬನಲ್ಲಿ ಮಾತ್ರ ಧೈರ್ಯ ಮೂಡಿತು. ಅವನು, "ಏನನ್ನು ಕೇಳುವಿರೋ, ಕೇಳಿ, ಕೊಡುವೆ" ಎಂದನು. ದ್ರೋಣನ ಜಾಗದಲ್ಲಿ ನಾನು, ಅರ್ಜುನನ ಜಾಗದಲ್ಲಿ ತಾವಿರುವಿರಿ, ಎಂದೆನ್ನಿಸಿ ನನ್ನ ತರುವಾಯ ಯಾರಾದರೂ ಇರುವರೆಂಬ ವಿಶ್ವಾಸದಿಂದ ನನಗೆ ಶಾಂತಿ ಲಭಿಸಿತು. ದ್ರೋಣನು ಶಿಷ್ಯನ ಕೈಯಿಂದ ದ್ರುಪದನನ್ನು ಸೆರೆ ಹಿಡಿದು ತರುವೆನೆಂದು ಪಣ ತೊಟ್ಟಿದ್ದನು. ಹಾಗೆ ಬ್ರಾಹ್ಮಣರನ್ನು ನಾಶಪಡಿಸುವುದು ನನ್ನ ಪಣವಾಗಿದೆ. ಅದು ನನ್ನ ಆಯುಷ್ಯದಲ್ಲಿ ನನ್ನ ಕೈಯಿಂದ ಪೂರ್ತಿಯಾಗುವ ಸಾಧ್ಯತೆ ಇಲ್ಲ. ತಾವು ಅದನ್ನು ಪೂರ್ತಿಗೊಳಿಸಲು ಸಿದ್ಧರಿರುರುವುದು ನನ್ನ ಬಲು ದೊಡ್ಡ ಭಾಗ್ಯವೆಂದು ತಿಳಿಯುತ್ತೇನೆ, ಅದಕ್ಕಾಗಿ ತಮಗೆ ಆಭಾರಿಯಾಗಿದ್ದೇನೆ. ತಮ್ಮಿಂದ ಇದನ್ನು ಮಾಡಲು ಸಾಧ್ಯವಾದರೆ ಇತಿಹಾಸದಲ್ಲಿ

ಮಾದಿಗ ಸಮುದಾಯಕ್ಕೆ ದೊಡ್ಡ ಸ್ಥಾನ ಪ್ರಾಪ್ತವಾಗಲಿದೆ. ನಾಂದಿಯಲ್ಲೇ ತುಂಬ ಎಣ್ಣೆ ಸುಟ್ಟಿತು! ಇನ್ನು ತಾವು ಮಾಡಿದ ಅಪಾದನೆಗಳಿಗೆ ಉತ್ತರ ನೀಡಲು ಯತ್ನಿಸುವೆ. ತಮ್ಮ ಅಪಾದನೆಗಳು ಎರಡು ಬಗೆಯವು. ಅವುಗಳಲ್ಲಿ ಕೆಲವು ವ್ಯಕ್ತಿಗತವಾಗಿ ನನ್ನ ಮೇಲೆ ಹೊರಿಸಲಾದವುಗಳು, ಇನ್ನುಳಿದವು ಹೊಲೆಯ ಸಮುದಾಯಕ್ಕೆ ಸಂಬಂಧಪಟ್ಟವುಗಳು.

ನನ್ನ ಮೇಲಿರುವ ನೇರ ಆಪಾದನೆ ಯಾವುದೆಂಬುದು ನನಗಿನ್ನೂ ಅರ್ಥವಾಗಿಲ್ಲ. ನಾನು ಕೇವಲ ಮಹಾರಾಷ್ಟ್ರದ ಮುಂದಾಳು, ಎಂಬುದಾಗಿ ಮಧ್ಯಪ್ರದೇಶದ ಮಾದಿಗ ಸಮುದಾಯದವರು ಒಂದು ಗೊತ್ತುವಳಿಯ ಮೂಲಕ ನನ್ನ ಮೇಲೆ ಅಪಾದನೆಯನ್ನು ಹೊರಿಸಿರುವುದನ್ನು ವೃತ್ತಪತ್ರಗಳಲ್ಲಿ ಓದಿದೆ. ಈ ಹೇಳಿಕೆಯನ್ನು ಕುರಿತು ನಾನು ತಾ. ೪ ಜನೆವರಿ ೧೯೪೧ರ ಜನತಾ ದಲ್ಲಿ ಬರೆದಿರುವುದನ್ನು ತಾವು ಅವಶ್ಯವಾಗಿ ಓದಿ ನೋಡಬೇಕು. ನಾನು ಕೇವಲ ಹೊಲೆಯರ ಮುಂದಾಳು, ಎನ್ನುವುದು ಕಾಂಗ್ರೆಸ್ಸಿನವರ ಕೂಗು, ಮಾದಿಗರ ಮುಂದಾಳುಗಳು ಅದಕ್ಕೆ ದನಿಗೂಡಿಸಿದ್ದಾರೆ. ಹೊಟ್ಟೆಪಾಡಿಗಾಗಿ, ಕಾಸಿಗಾಗಿ ಹೀಗೆಲ್ಲ ಬೇಕಾದ್ದನ್ನು ಮಾಡುವ ಅದೆಷ್ಟೋ ಜನ ಹೊಲೆಯರು-ಮಾದಿಗರಿರುವರು. 'ಪುಣೆಯ ಕರಾರು? ಆಯಿತು. ಆ ಕಾಲಕ್ಕೆ ಕಾಂಗ್ರೆಸ್ಸು ನನ್ನನ್ನು ಇಡಿಯ ಹಿಂದುಸ್ಥಾನದ ಅಸ್ಪೃಶ್ಯರ ನಾಯಕ ನೆಂದು ಒಪ್ಪಿಕೊಳ್ಳುತ್ತಿತ್ತು. ತರುವಾಯ ನಾನು ಕೇವಲ ಮುಂಬಯಿ ಇಲಾಖೆಯ ಅಸ್ಪೃಶ್ಯ ಸಮುದಾಯದ ಮುಂದಾಳುವಾಗಿದ್ದೇನೆಂದು ಅನ್ನತೊಡಗಿತು. ಇನ್ನು ಕೆಲವು ದಿನಗಳ ತರುವಾಯ ನಾನು ಕೊಂಕಣಸ್ಥ ಹೊಲೆಯರ ಮುಂದಾಳು ಹಾಗೂ ಆಮೇಲೆ ನಾನು ಕೇವಲ ದಾಪೋಲಿ ತಾಲೂಕಿನ ಹೊಲೆಯರ ಮುಂದಾಳು, ಎಂಬುದಾಗಿ ಕಾಂಗ್ರೆಸ್ಸು ಪ್ರಚಾರ ಮಾಡಬಹುದು. ಇದಕ್ಕಾಗಿ ಅವರಿಗೆ ಹೊಲೆಯ ಸಮುದಾಯದ ಜನರೇ ಸಿಕ್ಕುವರು, ಎಂದೆನ್ನಲು ಅಡ್ಡಿಯಿಲ್ಲ. ಯಾರೇ ಆಗಲಿ, ಕಾಂಗ್ರೆಸ್ಸನ್ನು ವಿರೋಧಿಸಿ ನೋಡಲಿ, ಅಂದರೆ ನನ್ನ ಹೇಳಿಕೆಯ ಸತ್ಯತೆ ಅರ್ಥವಾದೀತು. ಚಮಗಾರರ ಒಬ್ಬ ಮುಂದಾಳು ಕಾಂಗ್ರೆಸ್ಸನ್ನು ವಿರೋಧಿಸಲು ಹೊರಡಲಿ. ಅಂದರೆ ಇದೇ ಸಂಗತಿ ಕಂಡುಬಂದೀತು. ಅವನು ದಾಭೋಳ್ಯಾ ಜಾತಿಯವನಾಗಿದ್ದರೆ, ಅವನು ಸಮಗಾರ ಜಾತಿಯ ಮುಂದಾಳುವಾಗಿರದೆ ದಾಭೋಳ್ಯಾ ಜಾತಿಯ ಮುಂದಾಳು, ಎಂದಾರು. ಮಾದಿಗರಲ್ಲಿ ಸುಮಾರು ೧೨ ಉಪಜಾತಿಗಳಿವೆ, ಎಂದು ತಿಳಿದುಬರುತ್ತದೆ. ಮಾದಿಗರಲ್ಲಿ ಕೂಡ ಯಾರಾದರೂ ಕಾಂಗ್ರೆಸ್ಸನ್ನು ವಿರೋಧಿಸಲು ಮುಂದಾದರೆ ಅವರ ಅವಸ್ಥೆಯೂ ಬೇರೇನೂ

ಆಗಲಿಕ್ಕಿಲ್ಲ. ಅವನು ಕೇವಲ ತನ್ನ ಜಾತಿಯ ಮುಂದಾಳು, ಎಂಬ ಕೂಗಾಟ ನಡೆಯದಿರದು. ನಾನು ಈ ವಾಸ್ತವವನ್ನು ಅರಿತಿದ್ದರಿಂದ ಹೊಲೆಯರ ಮುಂದಾಳು ಎಂದರೆ ನನಗಾವ ಅಚ್ಚರಿಯೂ ಆಗದು. ಅಲ್ಲದೆ ಉಳಿದವರು ನನ್ನನ್ನು ಮುಂದಾಳುತನವನ್ನು ಬಿಟ್ಟು, ಕೇವಲ ಹೊಲೆಯ ಸಮುದಾಯದವರಷ್ಟೇ ಮನ್ನಿಸಿದರೂ ಅದರಲ್ಲಿ ಕೆಡಕೆನ್ನಿಸಿಕೊಳ್ಳುವಂಥದೇನೂ ಇಲ್ಲವೆಂದು ನನ್ನ ಭಾವನೆ. ಎಲ್ಲಾದರೂ ಕೆಲಸ ಮಾಡುವುದಕ್ಕೆ ಅವಕಾಶ ಸಿಕ್ಕರೆ ಸಾಕು. ಹೊಲೆಯರ ದುರ್ದೆಸೆಯೇನೂ ಕಮ್ಮಿಯದಲ್ಲ. ಇಷ್ಟರಲ್ಲೇ ಮಹಾರಾಷ್ಟ್ರ ಪ್ರಾಂತಿಕ ಹರಿಜನ ಸೇವಕ ಸಂಘವು ಪ್ರಕಟಿಸಿದ ರಿಪೋರ್ಟಿನಲ್ಲಿ, “'ಹೊಲೆಯರ ಪರಿಸ್ಥಿತಿಯು ಎಲ್ಲಕ್ಕೂ ಹೆಚ್ಚು ದಯನೀಯವಾದುದೆ” ಎಂದು ಒಪ್ಪಿಕೊಳ್ಳಲಾಗಿದೆ. ನನಗೆ ಅವರ ದುಃಸ್ಥಿತಿಯನ್ನು ನಿವಾರಿಸುವ ಅವಕಾಶ ದೊರೆತರೂ ಸಾಕೆಂದು ಭಾವಿಸಿ ನಾನು ಆ ಕೆಲಸವನ್ನು ಮಾಡಲು ಸಿದ್ಧ. 'ನಾಮಕೇ ವಾಸ್ತೆ ಮತ್ತು ಕಾಮಕೇ ವಾಸ್ತೆ' ('ಹೆಸರಿನ ಮಟ್ಟಿಗೆ ಹಾಗೂ ಕೆಲಸದ ಮಟ್ಟಿಗೆ ) ಎಂಬುದಾಗಿ ಎರಡು ಬಗೆಯ ಮುಂದಾಳುಗಳು ಇರುವರು. ನಾನು ನಾಮಕೇ ವಾಸ್ತೆ ಮುಂದಾಳುವಲ್ಲ. ನನಗೆ ಕೆಲಸ ಬೇಕು.



ನಾನು ಮುಂದಾಳು, ಸಮಾಜ ಸೇವಕನಲ್ಲ. ಮುಂದಾಳುವಾಗಿ ಚಾಲನೆಯನ್ನು ನೀಡುವುದು, ಜನಾಭಿಪ್ರಾಯವನ್ನು ತಯಾರಿಸುವುದಷ್ಟೇ ನನ್ನ ಕೆಲಸ. ಅದರಲ್ಲಿ ನಾನು ಜಾತಿಭೇದಕ್ಕೆ ಅವಕಾಶ ನೀಡಿದೆನೆಂದು ನನ್ನ ವೈರಿ ಕೂಡ ಹೇಳಲಾರನು. ನಾನು ಎಲ್ಲ ಅಸ್ಪೃಶ್ಯ ಜಾತಿಗಳ ಮನೆಗಳಲ್ಲೂ ಉಂಡಿದ್ದೇನೆ. ಅಸ್ಪೃಶ್ಯರಲ್ಲಿ ಸಹಭೋಜನ, ಸಹವಿವಾಹ ನಡೆಯಬೇಕೆಂಬ ಸಂಗತಿಯನ್ನು ಪುರಸ್ಕರಿಸಿದ್ದೇನೆ. ಸಹವಿವಾಹವು ಜಾರಿಗೆ ಬಂದಿಲ್ಲ. ಸಮಗಾರರು ಸಹಭೋಜನಕ್ಕೂ ಸಿದ್ಧರಿಲ್ಲ. ಆದರೆ ಹೊಲೆಯ-ಮಾದಿಗರು, ಹೊಲೆಯ-ಭಂಗಿಗಳಲ್ಲಿ ಸಹಭೋಜನ ಸಾರಾಸಗಟಾಗಿ ನಡೆಯುತ್ತಿದೆ. ಇದು ನನ್ನ ಕಲಿಸುವಿಕೆಯ ಪರಿಣಾಮ, ಎಂದು ನಿರ್ಭಯತೆಯಿಂದ ಹೇಳಬಲ್ಲೆ. ನನ್ನ ಅಧ್ಯಕ್ಷತೆಯಲ್ಲಿ ನಡೆದ ಸಭೆಗಳ ಮಸೂದೆಗಳು ಎಂದಿಗೂ ಹೊಲೆಯರ ಮಟ್ಟಿಗೆ ಮಾತ್ರ ಅಂಗೀಕೃತವಾಗಿಲ್ಲ. ನಾನು ಹೋಲೆಯ ಜಾತಿಗಾಗಿ ಎಂದು ಹೋರಾಡಿದವನಲ್ಲ. ಅದೇ ರೀತಿ ಈ ಬಗೆಯ ಹೋರಾಟಗಳ ಫಲವಾಗಿ ದೊರೆತ ಲಾಭದ ಹೆಚ್ಚಿನ

ಪಾಲನ್ನು ಹೊಲೆಯರಲ್ಲದವರೇ ಪಡೆದುಕೊಂಡರೆಂಬುದನ್ನೂ ಸಿದ್ಧಪಡಿಸಿ ತೋರಿಸಲು ಸಾಧ್ಯ. ನಾನು ತೆರೆದ ಬೋರ್ಡಿಂಗ್‌ಗಳಲ್ಲಿ ಎಂದಿಗೂ ಜಾತಿಭೇದವನ್ನು ಇಟ್ಟುಕೊಳ್ಳಲಿಲ್ಲ. ಇತರ ಹೊಲೆಯರು ತೆರೆದವುಗಳಲ್ಲೂ ಜಾತಿಭೇದವನ್ನು ಇಟ್ಟುಕೊಂಡುದು ನನ್ನ ಕಿವಿಗೆ ಬಂದಿಲ್ಲ.

ಸ್ವತಂತ್ರ ಮಜೂರ (ಕಾರ್ಮಿಕ) ಪಕ್ಷವು ಹೊಲೆಯರ ಪಕ್ಷವಾಗಿದೆ, ಎಂದು ನಂಬಲಾಗಿದೆ. ಆದರೆ ಅದು ಸುಳ್ಳು. ಸ್ವತಂತ್ರ ಮಜೂರ ಪಕ್ಷದಲ್ಲಿ ಹೊಲೆಯರು-ಹೊಲೆಯರೇತರರು, ಎಂಬ ತಾರತಮ್ಯವಿಲ್ಲ. ಸ್ವತಂತ್ರ ಮಜೂರ ಪಕ್ಷವು ಜಾತಿಪಾತಿಗಳನ್ನು ಗಮನಿಸುವುದಿಲ್ಲ, ಗುಣವತ್ತೆಯನ್ನು ಗಮನಿಸುತ್ತದೆ. ಗುಣವತ್ತೆಯನ್ನು ಹೊಂದಿದವನಿಗೆ ಅವನ ಯೋಗ್ಯತೆಗೆ ತಕ್ಕ ಸ್ಥಾನ ಸ್ವತಂತ್ರ ಮಜೂರ ಪಕ್ಷದಲ್ಲಿ ಲಭಿಸುತ್ತದೆ. ರಾಜಕೀಯ ಎಂದರೆ ಪಂಕ್ತಿಯೂಟವಲ್ಲ. ಮಾದಿಗನಿಲ್ಲವೆಂದು ಮಾದಿಗನನ್ನು ತೆಗೆದುಕೊಳ್ಳಿ, ಭಂಗಿಯವನಿಲ್ಲವೆಂದು ಭಂಗಿಯವನನ್ನು ತೆಗೆದುಕೊಳ್ಳಿ. ಸ್ವತಂತ್ರ ಪಕ್ಷವು ಇಂಥ ನಿಯಮವನ್ನು ಒಪ್ಪುವುದಿಲ್ಲ . ಯಾವ ರಾಜಕೀಯ ಪಕ್ಷವೂ ಇದನ್ನು ಒಪ್ಪಿಕೊಳ್ಳಲಾರದು. ರಾಜಕೀಯದಲ್ಲಿ ಬರಿ ಶಿಕ್ಷಣಕ್ಕೆ ಬೆಲೆಯಿಲ್ಲ. “ನಾನು ಗ್ರ್ಯಾಜುಯೆಟ್, ನನ್ನನ್ನು ಕೌನ್ಸಿಲ್‌ಗೆ ತೆಗೆದುಕೊಳ್ಳಿ ಎನ್ನುವ ನಿಯಮವು ಸ್ವತಂತ್ರ ಮಜೂರ ಪಕ್ಷಕ್ಕೆ ಒಪ್ಪಿತವಲ್ಲ. ಈ ನಿಯಮವು ಯಾವ ರಾಜಕೀಯ ಪಕ್ಷಕ್ಕೂ ಒಪ್ಪಿಗೆಯಾಗದು. ರಾಜಕೀಯದಲ್ಲಿ ಶಿಕ್ಷಣ ಬೇಕು, ಆದರೆ ಅದಕ್ಕಿಂತ ಶೀಲದ ಅವಶ್ಯಕತೆ ಹೆಚ್ಚಿದೆ. ಸ್ವತಂತ್ರ ಮಜೂರ ಪಕ್ಷವು ಅಭ್ಯರ್ಥಿಯ ಜಾತಿ, ಶಿಕ್ಷಣ ಹಾಗೂ ಶೀಲಗಳೆಂಬ ಮೂರೂ ಸಂಗತಿಗಳನ್ನು ಗಮನಿಸಿ ಅವನನ್ನು ಕೌನ್ಸಿಲ್‌ಗೆ ತೆಗೆದುಕೊಳ್ಳುತ್ತದೆ. ಅಸ್ಪೃಶ್ಯರನ್ನು ಕುರಿತಾದ ಜಗಳಗಳನ್ನು ಕಾಯಲೆಂದು ಸ್ವತಂತ್ರ ಮಜೂರ ಪಕ್ಷವನ್ನು ಕಟ್ಟಲಾಗಿದೆ. ಅದರಲ್ಲಿ ಯಾವೊಬ್ಬ ಮಾದಿಗನಿಗೆ ಜಾಗ ಸಿಕ್ಕಿರಲಿಕ್ಕಿಲ್ಲ. ಹಾಗೆ ನೋಡಿದರೆ ನಾಸಿಕ ಜಿಲ್ಲೆಯ ಅಸ್ಪೃಶ್ಯರ ಪೈಕಿ ಒಬ್ಬ ಸ್ಥಿತಿವಂತ ಹಾಗೂ ಕಾರ್ಯಕರ್ತನಾದ ಅಮೃತರಾವ ರಣಖಾಂಬೆ ಅವನಂತಹ ಮನುಷ್ಯನಿಗೆ ಮತ್ತು ಸಾತಾರಾ ಜಿಲ್ಲೆಯ ಒಬ್ಬ ಸ್ಥಿತಿವಂತ ಮನುಷ್ಯನ ಮಗನಿಗೆ ಸ್ವತಂತ್ರ ಮಜೂರ ಪಕ್ಷದಲ್ಲಿ ಸ್ಥಾನ ಸಿಕ್ಕಲಿಲ್ಲ. ಇಷ್ಟರಿಂದಲೇ, ಸ್ವತಂತ್ರ ಮಜೂರ ಪಕ್ಷವು ಮಾದಿಗರು ಹಾಗೂ ಚಮಗಾರರ ವಿರುದ್ಧ ಎಂದು ತಿಳಿಯುವುದರಲ್ಲಿ ಯಾವ ಅರ್ಥವೂ ಇಲ್ಲ. ಸ್ವತಂತ್ರ ಮಜೂರ ಪಕ್ಷವು ಅಯೋಗ್ಯರ ವಿರುದ್ಧವಿದೆ. ಅವರು ಯಾವುದೇ ಜಾತಿಯವರಿದ್ದರೂ ಸರಿಯೇ, ಮಾದಿಗರು-ಚಮಗಾರರು ಸ್ವತಂತ್ರ ಮಜೂರ ಪಕ್ಷದಲ್ಲಿ ಇಲ್ಲವೆಂಬ ಕಾರಣದಿಂದ ಮಾದಿಗರು ಇಲ್ಲವೆ ಚಮಗಾರ ಜಾತಿಯವರಿಗೆ ಯಾವುದೇ ಬಗೆಯ ನಷ್ಟವಾಗಿದೆಯೆಂದು ನನಗೆ ಕಾಣುತ್ತಿಲ್ಲ. ಸ್ವತಂತ್ರ ಮಜೂರ ಪಕ್ಷವು ಹೊಲೆಯರದಾಗಿದ್ದರೂ ಅದು ಕೇವಲ ಹೊಲೆಯರಿಗಾಗಿ

ಮಾತ್ರ ಹೋರಾಡುತ್ತಿಲ್ಲ. ಅದು ಇಡಿಯ ಅಸ್ಪೃಶ್ಯರಿಗಾಗಿ ಕಾದಾಡುತ್ತಿದೆ. ಕಾದಾಟದಿಂದ ಲಭಿಸುವ ಫಲವನ್ನು ಹಂಚುವುದು ಅದರ ಕೈಯಲ್ಲಿಲ್ಲ. ಅದು ಕಾಂಗ್ರೆಸ್ಸಿನ ಕೈಯಲ್ಲಿದೆ. ಹೊಲೆಯರ ಕೈಗೆ ಸೊನ್ನೆ. ಕಾಂಗ್ರೆಸ್ಸು ಈ ಬಗೆಯಾಗಿ ಪಾಲು ಮಾಡದಿದ್ದರೆ ಅದೆಂಥ ಕಾಂಗ್ರೆಸ್ಸು ! ಸ್ವತಂತ್ರ ಮಜೂರ ಪಕ್ಷವು ಹಾನಿಯನ್ನು ಮಾಡಿದಿದ್ದರೆ, ಆ ಹಾನಿಯು ಹೊಲೆಯರದೇ, ಹೊಲೆಯರು ಮಾದಿಗರ ಮೇಲೆ ಅನ್ಯಾಯವನ್ನು ಮಾಡುತ್ತಾರೆ, ಎಂದು ತಾವು ಬರೆದಿದ್ದೀರಿ. ಅದು ನಮ್ಮಲ್ಲಿಲ್ಲ. ಬದಲು ನಮ್ಮಲ್ಲಿ ತಿರುವುಮುರುವಾಗಿದೆ. ಚಮಗಾರರಾಗಲಿ ಇಲ್ಲವೆ ಮಾದಿಗರಾಗಲಿ ಕಾಲು ಕೆದರಿ ಕೆಣಕಿದರೂ ಹೊಲೆಯರು ತೆಪ್ಪಗಿರುತ್ತಾರೆ. ಈ ಬಗೆಗೆ ನಾನು ಅವರ ಬದಿಯನ್ನು ಎತ್ತಿ ಹಿಡಿಯುವವನಲ್ಲ, ಎಂಬುದು ಅವರಿಗೆ ಗೊತ್ತಿದೆ. ತಾವು ಬಹುಸಂಖ್ಯರಾದ ಕಾರಣ ತಾವದನ್ನು ಸಹಿಸಲೇಬೇಕೆಂಬ ಹೊಣೆಗಾರಿಕೆಯ ಅರಿವು ಅವರಲ್ಲಿದೆ. ಇದು ನಮ್ಮಲ್ಲಿ ತಿರುವುಮುರುವಾದುದನ್ನು ಕಂಡು ಕೆಡಕೆನ್ನಿಸುತ್ತದೆ. ತಾವು ಹೊಲೆಯರ ವಿರುದ್ದ ನಿಜಾಮ ಸರಕಾರಕ್ಕೆ ದೂರು ಸಲ್ಲಿಸಬೇಕು ಅಥವಾ ಸತ್ಯಾಗ್ರಹವನ್ನು ಕೈಕೊಳ್ಳಬೇಕು. ಅದಕ್ಕೆ ನನ್ನ ಬೆಂಬಲವಿದ್ದೀತು.

ಕೊನೆಯಲ್ಲಿ, ಹೀಗೆ ಮಾಡಿ, ಹಾಗೆ ಮಾಡಿ, ಇಲ್ಲದಿದ್ದರೆ ತಮ್ಮ ಮಾರ್ಗ ಭಿನ್ನ ಎಂಬುದಾಗಿ ತಾವು ಬಳಸಿದ ಆವೇಶದ ಭಾಷೆಯನ್ನು ಕುರಿತು ಎರಡು ಮಾತುಗಳನ್ನು ಬರೆಯುವುದು ಆವಶ್ಯಕ. ತಾವು ಇಂಥ ಭಾಷೆಯನ್ನು ಬಳಸಿದಿದ್ದರೆ ಒಳ್ಳೆಯದಿತ್ತು. ಮನಬಂದಾಗ ತಡೆಹಿಡಿಯುವ ಗೋವೆಯವಳು ಅಥವಾ ಬೈಗುಳಗಳನ್ನು ಮಳೆಗರೆಯುತ್ತ, 'ತಗೋ ಮುಠ್ಠಾಳಾ, ನಿನ್ನ ಗುಳದಾಳಿ (ಮಾಂಗಲ್ಯ) ಎಂದು ಅದನ್ನು ಕಿತ್ತೆಸೆಯಲು ಸಿದ್ಧಳಾಗುವ ಲಂಗುಲಗಾಮಿಲ್ಲದ ಹೆಂಡತಿಗೆ, 'ಜಾಓ ಜಹನ್ನಮ್ ಮೇ (ನರಕಕ್ಕೆ ಹೋಗು)' ಎಂದೆನ್ನುವ ಸರದಿ ಬರುತ್ತದೆ. ಇಂಥ ಸನ್ನಿವೇಶ ತಲೆದೋರುವಂತೆ ಮಾಡುವುದು ಒಳ್ಳೆಯದಲ್ಲ. ಬೇರೆ ದಾರಿಯನ್ನು ಹಿಡಿದು ಹೋಗುವುದಿದ್ದರೆ ಅಗತ್ಯವಾಗಿ ಹೋಗಬಹುದು. ನಾನು ಅದನ್ನು ತಡೆಯಲಾರೆ ಅಥವಾ ಈ ಬಗೆಗೆ ಔದಾಸೀನ್ಯ ತಳೆದು ನಾನು ಮಾಡಬೇಕೆಂದುಕೊಂಡಿರುವುದನ್ನು ನಿಲ್ಲಿಸಲಾರೆ. ಆದರೆ ಬೇರೆ ದಾರಿ ಯಾವುದು ? ಎಂಬುದನ್ನು ಕುರಿತು ಯೋಚಿಸಿ ಅದನ್ನು ಸ್ವೀಕರಿಸಬೇಕು. ಮಾದಿಗರ ಏಳಿಗೆಯನ್ನು ಮಾಡಿ ಅವರ ಸ್ವಾಭಿಮಾನವನ್ನು ಎಚ್ಚರಿಸುವುದು ಈ ಭಿನ್ನ ಮಾರ್ಗದ ಗುರಿಯಾಗಿದ್ದರೆ ಅದು ಸ್ತುತ್ಯವಾದುದೇ ಸರಿ. ಆದರೆ ಹೊಲೆಯರಿಂದ ವಿಚ್ಛೇದನೆ ಪಡೆದು ಸನಾತನಿ ಹಿಂದುಗಳು ಇಲ್ಲವೆ ಕಾಂಗ್ರೆಸ್ಸಿನ ಗುಲಾಮಗಿರಿಯನ್ನು ಸ್ವೀಕರಿಸುವುದೇ ಈ ಭಿನ್ನ ಮಾರ್ಗದ ಗುರಿಯಾಗಿದ್ದರೆ ಅದರಿಂದ ಕೆಲವು ಜನ ಮಾದಿಗರಿಗೆ ಲಾಭ ದೊರೆಯುವುದೇನೋ ನಿಜವಾದರೂ ಅದರಿಂದ ಮಾದಿಗ ಜಾತಿಗೆ ನಷ್ಟ ತಪ್ಪಿದ್ದಲ್ಲ ಎಂಬ ಬಗೆಗೆ ನನಗಂತೂ ಯಾವುದೇ ಬಗೆಯ ಸಂದೇಹವಿಲ್ಲ. ಹೀಗಾಗಿ ಮನಬಂದ ದಾರಿಯನ್ನು ಹಿಡಿಯಬೇಕು. ಪತ್ರ ತುಂಬ ದೀರ್ಘವಾಯಿತು. ಆದರೆ ನನ್ನ ಮಾರುತ್ತರ ಸವಿಸ್ತರವಾಗಿರಬೇಕೆಂದು ತಾವು ಫರ್ಮಾನು ಹೊರಡಿಸಿದ್ದರಿಂದ ಸಂಕ್ಷಿಪ್ತವಾಗಿ ಬರೆಯಲು ಸಾಧ್ಯವಾಗಲಿಲ್ಲ.

ತಮ್ಮ ಕೃಪಾಭಿಲಾಷಿ,

(ಸಹಿ)

ಭೀಮರಾವ ರಾಮಜೀ ಆಂಬೇಡಕರ'

ತಾ, ೧೩-೭-೧೯೪೧



**ಡಾ. ಬಾಬಾಸಾಹೇಬ ಅಂಬೇಡಕರ ಇವರಿಗೆ**

**ದೇ, ನಾ, ಕಾಂಬಳೆ (ಮಾದಿಗರು) ಅವರು ಬರೆದ ಪತ್ರ**

**ಓಂ**

"ಪಾಥ್ರೀ : ೨೦-೫-೧೯೪೧

ಪರಮಪೂಜ್ಯರಾದ ಬಾಬಾಸಾಹೇಬ ಅಂಬೇಡಕರ ಇವರಿಗೆ ದೇವೀದಾಸ ಬುವಾ ಪಾಥೀಕರನ ಆದರಪೂರ್ವಕ ಪ್ರಣಾಮಗಳು. ಈಗ ಪತ್ರ ಬರೆಯಲು ಕಾರಣವೇನೆಂದರೆ, ತಮಗೊಂದು ಪತ್ರ ಬರೆದು ತಮ್ಮಿಂದ ವಿವರಣೆಯನ್ನು ಕೇಳಿಕೊಳ್ಳಬೇಕೆಂಬ ಯೋಚನೆ ಬಹಳ ದಿನಗಳಿಂದ ನನ್ನಲ್ಲಿದೆ. ಇದನ್ನು ಕುರಿತು ಈಗಲೇ ಇತ್ಯರ್ಥಪಡಿಸಿಕೊಳ್ಳಬೇಕು, ಮನದಲ್ಲಿರುವ ಸದ್ದು ಗದ್ದಲವನ್ನು ಕಿತ್ತೆಸೆಯಬೇಕೆನ್ನಿಸಿದ್ದರಿಂದ ತಮಗೆ ಈ ಪತ್ರವನ್ನು ಬರೆಯುತ್ತಿದ್ದೇನೆ. ಇದನ್ನು ಪೂರ್ತಿ ಓದಿಕೊಂಡು, ಯೋಚಿಸಿ ತಮ್ಮ ನಿಜವಾದ ಉತ್ತರವನ್ನು ನೀಡಬೇಕು. ಈ ಪತ್ರಕ್ಕೆ ಮಾರುತ್ತರ ಬಾರದಿದ್ದರೆ, ತಾವು ವಿದೇಶಕ್ಕೆ ತೆರಳುವಾಗ ಗಾಂಧಿಯವರಿಗೆ ಬರೆದ ೧೭ ಪುಟಗಳ ಪತ್ರಕ್ಕೆ ಗಾಂದಿಯವರು ತಮ್ಮ ಅಧಿಕಾರಪದದ ಮದ, ಅಹಂಕಾರ, ತುಚ್ಛತೆ ಇಲ್ಲವೆ ಅಲಕ್ಷ್ಯದಿಂದಾಗಿ ಮಾರುತ್ತರವನ್ನು ನೀಡದಾಗ ತಮಗೆ ಕೆಡುಕೆನ್ನಿಸಿ, ಗಾಂಧಿಯವರ ಬಗೆಗೆ ತಮ್ಮಲ್ಲಿ ತಿರಸ್ಕಾರ ಹುಟ್ಟಿದ್ದರ ಸಾವಿರ ಪಟ್ಟು ಹೆಚ್ಚಿನ ತಿರಸ್ಕಾರವು ತಮ್ಮ ಬಗೆಗೆ ನನ್ನಲ್ಲಿ ಹುಟ್ಟಿಕೊಳ್ಳುವುದು.

ನಾನು ನಿಜಾಮ ಇಲಾಖೆಯ ಮರಾಠವಾಡಾ ಭಾಗದ ಮಾದಿಗ ಸಮುದಾಯದ ಓದುಕಲಿತ ಮೊದಲ ವಿದ್ಯಾರ್ಥಿಯಾಗಿದ್ದು ಮಾದಿಗ ಸಮುದಾಯದ ಸುಧಾರಣೆಯ ಪೂರ್ತಿ ಹೊಣೆ ನನ್ನ ತಲೆಯ ಮೇಲಿದೆ. ನಾನೊಬ್ಬ

ಸಾಮಾನ್ಯ ವಿದ್ಯಾರ್ಥಿಯಾಗಿ ತಮಗೆ ಪತ್ರವನ್ನು ಬರೆಯುತ್ತಿರದೆ ನಿಜಾಮ ಸ್ಟೈಟಿನ ಮಾದಿಗ ಸಮುದಾಯದ ಭಾವೀ ಮುಂದಾಳುವೆಂದು ಈ ಪತ್ರವನ್ನು ಕಳಿಸುತ್ತಿದ್ದೇನೆ. ಆದುದರಿಂದ ತಾವು ಉತ್ತರವನ್ನು ಬರೆಯಲು ಅನುಮಾನಿಸಕೂಡದು.

ಮಾದಿಗ ಸಮುದಾಯ ಹಾಗೂ ಹೊಲೆಯ ಸಮುದಾಯಗಳ ನಡುವೆ ದೇವ-ದಾನವರ ನಡುವೆ ಇರುವಂತಹ ತೀವ್ರ ವೈರತ್ವವಿದೆ. ಅಲ್ಲದೆ ಅವೆರಡೂ ಸಮುದಾಯಗಳಲ್ಲಿ ಪರಸ್ಪರರ ಬಗೆಗೆ ವೈರತ್ವ, ತಿರಸ್ಕಾರ, ದ್ವೇಷ, ಮತ್ಸರ ಮತ್ತು ಕೆಟ್ಟ ಭಾವನೆಗಳಿವೆ. ಇದಕ್ಕೆ ಕಾರಣ -

(೧) ಹೊಲೆಯ ಸಮುದಾಯವು ಮಾದಿಗ ಸಮುದಾಯವನ್ನು ತುಚ್ಛ ಹಾಗೂ ಕೀಳೆಂದು ಬಗೆಯುತ್ತದೆ. (೨) ಮಾದಿಗ ಸಮುದಾಯವು ಹಂದಿಯನ್ನು ಪವಿತ್ರವೆಂದು ಬಗೆಯುತ್ತದೆ. ಆ ಪ್ರಾಣಿಯು ಶೂರ ಹಾಗೂ ಗಂಡಸುತನದಿಂದ ಕೂಡಿರುವುದರಿಂದ ಆ ಸಮುದಾಯವು ಅದನ್ನು (ಕಾಡುಹಂದಿಯನ್ನು) ಬೇಟೆಯಾಡುತ್ತದೆ. ಆದರೆ ಹೊಲೆಯ ಸಮುದಾಯವು ಹಂದಿಯನ್ನು ಅಪವಿತ್ರವೆಂದು ಬಗೆಯುವಲ್ಲಿ ಮುಸಲ್ಮಾನರಿಗಿಂತಲೂ ಮುಂದು. ಈ ಹಾಗೂ ಇಂಥ ಚಿಲ್ಲರೆ ಕಾರಣಗಳಿಂದ ಇವೆರಡೂ ಸಮುದಾಯಗಳ ನಡುವೆ ಸುಮ್ಮನೆ ಕಾದಾಟಗಳು ನಡೆಯುತ್ತವೆ. (೩) ಮರಾಠರಂತೆಯೇ ಮಾದಿಗರಿಗೂ ಹಿಂದೂಧರ್ಮ ಶಾಸ್ತ್ರವನ್ನು ಅನುಸರಿಸಿ ಎಲ್ಲ ಬಗೆಯ ಹಬ್ಬ, ಮದುವೆಯ ಸಮಾರಂಭ ಹಾಗೂ ಮೆರವಣಿಗೆಗಳನ್ನು ಹೊರಡಿಸುವ ಅಧಿಕಾರ ಇದೆ. ಹೀಗಾಗಿ, ಮಾದಿಗರ ಮದುಮಗ ಕುದುರೆ ಸವಾರಿ ಮಾಡುತ್ತ ಊರೊಳಗೆ ಹನುಮಂತನ ದರ್ಶನಕ್ಕೆ ಹೊರಡುತ್ತಲೇ ಹೊಲೆಯರು ಊರಿನ ಅಗಸೆ ಬಾಗಿಲಲ್ಲಿ ಅವನನ್ನು ತಡೆದು ಪಂಚಾರತಿಯಲ್ಲಿ ಉಗುಳುತ್ತಾರೆ. ಇದರಿಂದಾಗಿ ಭಯಂಕರವಾದ

ಹೊಡೆದಾಟ, ಬಡಿದಾಟಗಳಾಗಿ ತಲೆಗಳು ಒಡೆದು ಅವರಿಬ್ಬರಲ್ಲಿ ಇನ್ನಷ್ಟು ವೈರತ್ವ ಬೆಳೆಯುತ್ತದೆ. (೪) ಮಾದಿಗರು ಯಾವುದೇ ಬಗೆಯ ಸುಧಾರಣೆಯ ಮಾತೆತ್ತಿದರೆ ಹೊಲೆಯರು ಅದನ್ನು ಮಾಡಗೊಡುವುದಿಲ್ಲ. ಅಲ್ಲದೆ ಅದನ್ನು ಹೊಸಕಿ ಹಾಕಲೆಂದು ಜೋರಾಗಿ ವಿರೋಧಿಸುತ್ತಾರೆ. ಹೀಗಾಗಿ ಮಾದಿಗರು ಹಾಗೂ ಹೊಲೆಯರಲ್ಲಿ ಹಗೆತನವಿದೆ. (೫) ಜನಸಂಖ್ಯೆಯ ದೃಷ್ಟಿಯಿಂದ ಹೊಲೆಯರ ಸಂಖ್ಯೆ ಹೆಚ್ಚಿರುವುದರಿಂದ ಪ್ರತಿಯೊಂದು ಊರಲ್ಲಿ ಹೊಲೆಯರ ಸಂಖ್ಯೆ ಹೆಚ್ಚಿದ್ದು ಮಾದಿಗರದು ಕಡಿಮೆ. ಅವರು ಹೊಲೆಯರ ಇಚ್ಛೆಗೆ ತಕ್ಕಂತೆ ನಡೆದುಕೊಳ್ಳದಿದ್ದರೆ ಹೊಲೆಯರು ವಿನಾಕಾರಣ ಅವರಿಗೆ ತೊಂದರೆ ಕೊಡುತ್ತಾರೆ. ಅಲ್ಲದೆ, ಅಸ್ಪೃಶ್ಯ ಸಮುದಾಯವು ಹಿಂದೂ ಜನರ ದಾಸ್ಯವನ್ನು ಒಪ್ಪಿಕೊಂಡಂತೆಯೇ ಮಾದಿಗ ಸಮುದಾಯವು ತಮ್ಮ ದಾಸ್ಯವನ್ನು ಒಪ್ಪಿಕೊಳ್ಳಬೇಕೆಂದು ಹೊಲೆಯ ಸಮುದಾಯವು ಬಯಸುತ್ತದೆ. ಅಸ್ಪೃಶ್ಯ ಸಮುದಾಯದಲ್ಲಿ ಓದುಕಲಿತ ಹಾಗೂ ಏಳಿಗೆಯನ್ನು ಸಾಧಿಸಿದ ಹೊಲೆಯ ಜನರಿರುವರು. ಇವರು ತಮ್ಮ ಹಿತವನ್ನಷ್ಟೇ ಸಾಧಿಸುವ ಸ್ವಾರ್ಥಿಗಳಾಗಿದ್ದು ಬೇರೆ ಸಮುದಾಯದ ಜನರಿಗೆ ಮುಂದುವರೆಯಲು ಹಾಗೂ ಸುಧಾರಿಸಲು ಆಸ್ಪದವನ್ನು ನೀಡುವುದಿಲ್ಲ. ಇದಕ್ಕೆ ಸಾಕ್ಷ್ಯವೆಂದರೆ, ಇರುವಷ್ಟು ಬೋರ್ಡಿಂಗ್ಸ್‌ಗಳಲ್ಲೆಲ್ಲ ಹೊಲೆಯ ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ತುಂಬಿರುವರು. ಇರುವಷ್ಟು ಎಮ್. ಎಲ್. ಎ.ಗಳಲ್ಲಿ (ಶಾಸಕರಲ್ಲಿ ) ಹೊಲೆಯ ಮೆಂಬರುಗಳೇ ಹೆಚ್ಚಿನ ಸಂಖ್ಯೆಯಲ್ಲಿ ತುಂಬಿರುವರು. ಕೆಲವೆಡೆಯಲ್ಲಿ ಹೆಸರಿಗೆ ಮಾತ್ರ ಸೂತ್ರದ ಗೊಂಬೆಯಂತಹ ಕೆಲವು ಜನ ಮಾದಿಗ ಮೆಂಬರರು ಆಯ್ಕೆ ಹೊಂದಿದ್ದು ಅವರು ತಳವಿಲ್ಲದ ಪಾತ್ರೆಯಂತಿರುವರು. (೭) ತಾವು ಖುದ್ದಾಗಿ ಹೊಲೆಯ ಸಮುದಾಯದ ಕಲ್ಯಾಣದ ಬಗೆಗೆ ಹೆಚ್ಚು ಕಾಳಜಿ ವಹಿಸುವಿರೆಂಬ ತಪ್ಪು ತಿಳುವಳಿಕೆ ಮಾದಿಗ ಸಮುದಾಯದಲ್ಲಿ ಹುಟ್ಟಿದೆ. ಬೇರೆ ಸಮುದಾಯದ ಬಗೆಗೆ ತಾವು ಅಷ್ಟಾಗಿ ಕಾಳಜಿ ವಹಿಸುವುದಿಲ್ಲ. ಹೀಗಾಗಿ, ಮಧ್ಯಪ್ರಾಂತದ ಮಾತಂಗ ಪರಿಷತ್ತು, ಅಂಬೇಡಕರರು ಹೊಲೆಯ ಸಮುದಾಯದ ನಾಯಕರು, ಮಾದಿಗ ಸಮುದಾಯದ ಮುಂದಾಳುವಲ್ಲ, ಎಂಬುದಾಗಿ ಒಂದು ಗೊತ್ತುವಳಿಯನ್ನು ಅಂಗೀಕರಿಸಿತು. (೮) ಮೊದಲಿಗೆ ಬಂದು ದೂರು ಸಲ್ಲಿಸುವವನ ಬದಿಯನ್ನು ಸರಿಯೆಂದು ಒಪ್ಪಿಕೊಳ್ಳುವುದು ತಮ್ಮ ಮನೋಧರ್ಮವಾಗಿದೆ. ಹೀಗಾಗಿ ಹೊಲೆಯ ಸಮುದಾಯದವರು ಮೊದಲಿಗೆ ಬಂದು ತಮ್ಮಲ್ಲಿಗೆ ದೂರು ಸಲ್ಲಿಸುತ್ತಾರೆ. ತಾವು ಅವರ ಬದಿಯನ್ನು ಎತ್ತಿ ಹಿಡಿಯುತ್ತೀರಿ. ಹೀಗಾಗಿ ತಾವು ಉಳಿದ ಸಮುದಾಯದವರಿಗೆ ಪಕ್ಷಪಾತಿಗಳಾಗಿ ಕಾಣುತ್ತೀರಿ. ಅದರಿಂದಾಗಿ ತಾವು ಹೊಲೆಯ ಸಮುದಾಯದ ಹಿತಚಿಂತಕರೆಂದು ಅವರಿಗೆ ಅನ್ನಿಸುತ್ತದೆ.

ತಮಗೆ ನಿಜವಾಗಿಯೂ ಅಸ್ಪೃಶ್ಯ ಸಮುದಾಯದ ಕಲ್ಯಾಣವನ್ನು ಸಾಧಿಸುವುದಿದ್ದರೆ, ಹೊಲೆಯಮಾದಿಗ ಸಮುದಾಯಗಳ ಐಕ್ಯವನ್ನು ಸಾಧಿಸಿ, ಅವರಲ್ಲಿ ಹೊಂದಾಣಿಕೆಯನ್ನು ಉಂಟುಮಾಡಿ, ಹೊಸ ದಾರಿಯನ್ನು ಕಂಡುಕೊಳ್ಳುವುದಿದ್ದರೆ, ಕೆಳಕಂಡ ಷರತ್ತುಗಳಂತೆ, ವಿಶೇಷವಾದ ಗಮನ ನೀಡಬೇಕು ಹಾಗೂ ಆ ಪ್ರಕಾರ

ಮನಃಪೂರ್ವಕವಾಗಿ ಕಾರ್ಯವನ್ನು ಎಸಗಬೇಕು. ಏಕೆಂದರೆ ಹೊಲೆಯ ಸಮುದಾಯವು ತಮ್ಮನ್ನು ದೇವರೆಂದು ಭಾವಿಸುತ್ತಿದ್ದು ಅದು ತನ್ನ ಜೀವವನ್ನು ಪಣಕ್ಕೆ ಒಡ್ಡಿ ತಮ್ಮ ಮಾತನ್ನು ಪೂರ್ತಿಗೊಳಿಸಲು ಶಕ್ತಿಯುತವಾಗಿ ಯತ್ನಿಸುತ್ತದೆ.

ನನ್ನ ಅಭಿಪ್ರಾಯದಂತೆ, ರಿಚರ್ಡ್ ಲಾಯನ್ ಹಾರ್ಟ್ ಅವರ ಕಾರ್ಯಕಾಲದಲ್ಲಿ ನಾರ್ಮನ್ (Norman) ಹಾಗೂ ಸ್ಯಾಕ್ಸನ್ (Saxon) ಎಂಬ ಪರಸ್ಪರ ವಿರುದ್ಧ ಜಾತಿಗಳು ಸಮ್ಮಿಲನಗೊಂಡು ತಯಾರಾದ ಮಿಶ್ರಣದಿಂದ ಧೈರ್ಯಶಾಲಿ ಹಾಗೂ ವೀರ್ಯಶಾಲಿಯಾದ ಅರ್ವಾಚೀನ ಇಂಗ್ಲಿಷ್



ಸಮಾಜವು ತಯಾರಾಯಿತು. ತಾವೂ ಅದೇ ರೀತಿ (ಅಂಥ ಸಮಾಜವನ್ನು) ತಯಾರಿಸಬೇಕು. ಅದರ ಹೆಸರನ್ನು ಕೇಳಿ ಎಲ್ಲ ಜಾತಿಗಳು ಹಾಗೂ ಇಡಿಯ ಸಮಾಜ ಮೇಲೆ ಭಯದಿಂದ ಕೂಡಿದ ವರ್ಚಸ್ಸು ಉಂಟಾಗಬೇಕು. ಅದರ ಧರ್ಮ ಹಾಗೂ ಕರ್ಮಗಳು ಇತರರಿಂದ ಭಿನ್ನವಾಗಿರಬೇಕು. ಇದಕ್ಕಾಗಿ ತಾವು ಈ ಕೆಳಕಂಡ ಸಂಗತಿಗಳತ್ತ ಗಮನ ಹರಿಸಬೇಕು.

[ (೧) ಈ ಅಂಶವನ್ನು ಬಿಟ್ಟು ಬಿಟ್ಟಂತೆ ಕಾಣುತ್ತದೆ.] (೨) ಹೊಲೆಯ ಸಮುದಾಯವು ಮಾದಿಗ ಸಮುದಾಯವನ್ನು ತನ್ನ ಜೊತೆಯದು ಹಾಗೂ ಸರಿಸಮಾನವೆಂದು ಬಗೆದು ಅದರೊಡನೆ ಬಂಧುಭಾವದಿಂದ ನಡೆದುಕೊಳ್ಳಬೇಕು. (೩) ಮುಂದೆ ಬರಬೇಕೆನ್ನುವ ಮಾದಿಗ ಸಮುದಾಯದ ಮನುಷ್ಯನಿಗೆ ಮುಂದೆ ಬರಲು ತಕ್ಕ ಆಸ್ಪದವನ್ನು ನೀಡಬೇಕು. (೪) ಮಾದಿಗರ ಮದುಮಗನನ್ನು ಊರ ಅಗಸೆಯ ಬಾಗಿಲಲ್ಲಿ ಅಡ್ಡಗಟ್ಟಬಾರದು. ಅವರ ಸಮಾರಂಭ ಹಾಗೂ ಮೆರವಣಿಗೆಗಳಲ್ಲಿ ಅಡ್ಡಿಯುಂಟುಮಾಡಬಾರದು. (೫) ಹೊಲೆಯರು ಮಾದಿಗರಿಂದ ಯಾವುದೇ ಬಗೆಯ ಆಸ್ತಿಗೆ ಸಂಬಂಧಪಟ್ಟ ಹಕ್ಕುಗಳನ್ನು ವಶಪಡಿಸಿಕೊಳ್ಳಬಾರದು. (ಹೊಲೆಯರು ಹಿಂದೂ ಸಮಾಜದಿಂದ

ಪಡೆಯುತ್ತಿದ್ದರು.) (೬) ತಾವು ಹೊಲೆಯ ಸಮುದಾಯದ ಬಗೆಗೆ ಕಾಳಜಿ ವಹಿಸುವಂತೆ, ಅಷ್ಟೇ ಅಲ್ಲದೆ ಅದಕ್ಕಿಂತಲೂ ಹೆಚ್ಚಿನ ಕಳಕಳಿಯನ್ನು ಮಾದಿಗ ಸಮುದಾಯದ ಬಗೆಗೆ ತೋರಿಸಬೇಕು. ಏಕೆಂದರೆ ತಾವು ಹೊಲೆಯ ಸಮುದಾಯದಲ್ಲಿ ಹುಟ್ಟಿ ಬಂದ ಕಾರಣ ತಮ್ಮ ಮೇಲೆ ಜಾತೀಯತೆಯನ್ನು ಅಪಾದಿಸಲಾಗುತ್ತದೆ. ಅಲ್ಲದೆ ತಾವು ಹೊಲೆಯ ಸಮುದಾಯದ ಹಿತಚಿಂತಕರೆಂಬ ಧೂರ್ತ ಕೂಗು ಕೇಳಿಬರುತ್ತದೆ. (೭) ಹಂದಿಯನ್ನು ಕುರಿತಾಗಿ ಹೊಲೆಯರಲ್ಲಿರುವ ತಿರಸ್ಕಾರ, ಇತರ ಚಿಲ್ಲರೆ ಕಾರಣಗಳಿಂದಾಗಿ ಜಗಳ, ದ್ವೇಷಭಾವನೆಗಳನ್ನು ಹುಟ್ಟುಹಾಕುವ ಸಾಧನಗಳನ್ನು ನಾಶಪಡಿಸುವುದು ಹಾಗೂ ಪರಸ್ಪರರಲ್ಲಿ ಪ್ರೀತಿ, ಬಂಧುಭಾವವನ್ನು ನಿರ್ಮಿಸುವ ಸಾಧನಗಳನ್ನು ಯೋಜಿಸುವುದು. (೮) ಹೊಲೆಯ ಸಮುದಾಯವು ಮೌಢ್ಯ ಹಾಗೂ ಅಜ್ಞಾನದಿಂದಾಗಿ ತಮ್ಮನ್ನು ಈಶ್ವರನ ಅವತಾರನೆಂದು ಮನ್ನಿಸಿ ತಮ್ಮ ಫೋಟೋವನ್ನು ಪೂಜಿಸುತ್ತದೆ. ತಾವಲ್ಲದೆ ಇನ್ನಾರೂ ಹುಟ್ಟಿಬರಲಾರರೆಂಬ, ಬುದ್ಧಿವಂತರಿಗೆ ಆಸ್ಪದ ನೀಡದ ನಂಬಿಕೆಯನ್ನು ಇರಿಸಿಕೊಳ್ಳುತ್ತದೆ. ಇದು ನನಗೆ ಇಷ್ಟವಿಲ್ಲ. ಮಾದಿಗ ಸಮುದಾಯಕ್ಕೆ ಇಂಥ ಮೂಢನಂಬಿಕೆಯನ್ನು ಹೊಂದಲು ಅಥವಾ ಭೋಳೇತನದ ಅನುಕರಣೆಯನ್ನು ಮಾಡಲು ಕೊಡಗೊಡಲಾರೆ.

ಇವೆಲ್ಲ ಷರತ್ತುಗಳು ತಮಗೆ ಒಪ್ಪಿಗೆಯಾದರೆ, ತಮಗೆ ಅಖಿಲ ಭಾರತೀಯ ಅಸ್ಪೃಶ್ಯ ಸಮುದಾಯದ ಮುಂದಾಳುತನವನ್ನು ವಹಿಸುವುದಿದ್ದರೆ, ನಾನು ತಮ್ಮ ಶಿಷ್ಯನಾಗಲು ಸಿದ್ಧ. ತಮ್ಮ ಉಪನ್ಯಾಸವನ್ನು ಆಲಿಸಿ ಹೋದಂದಿನಿಂದ ನನಗೆ ಒಂದೇ ಚಿಂತೆ. ಅದೆಂದರೆ ತಮ್ಮ ಕೃಪೆಯಿಂದ ನಾನು ಅದನ್ನು ದೂರಪಡಿಸುವೆನು, ತಮ್ಮ ಮನದಂತೆ ಕಾರ್ಯವನ್ನು ಮಾಡಿ ತೋರಿಸುವೆನೆಂಬುದು. ಆದುದರಿಂದ ಪೂರ್ತಿ ಯೋಚಿಸಿ, ತಮ್ಮ ಸಹಿಯೊಂದಿಗೆ ಮಾರುತ್ತರವನ್ನು ನೀಡಬೇಕು. ಅದಕ್ಕಾಗಿ ೧೫ ದಿನ ಕಾಯುವೆನು. ಉತ್ತರ ಬಾರದಿದ್ದರೆ ತಮ್ಮ ದಾರಿ ಬೇರೆ, ನನ್ನದು ಬೇರೆ ಎಂದು ತಿಳಿಯುವೆನು. ಹೀಗಾಗಿ ಅವಮಾನ ಮಾಡದೆ ತಮ್ಮ ಅಭಿಪ್ರಾಯ ಹಾಗೂ ವಿಚಾರಗಳನ್ನು ಸವಿಸ್ತರವಾಗಿ ಪತ್ರ ಬರೆದು ತಿಳಿಸಬೇಕು. ಏಕೆಂದರೆ ಇನ್ನೊಂದು ತಿಂಗಳಿನಲ್ಲಿ ಹೈದರಬಾದಿನ ಅಂಬೇಡಕರರೆನ್ನಿಸಿದ ಬಿ. ಎಸ್. ವೆಂಕಟರಾವ್ ಅವರ ಅಧ್ಯಕ್ಷತೆಯಲ್ಲಿ ಹೈದರಬಾದ ದಲಿತವರ್ಗ ಪರಿಷತ್ತು ಸಮಾವೇಶಗೊಳ್ಳಲಿದೆ. ನಾನು ಮಾದಿಗ ಸಮುದಾಯದ ಪ್ರತಿನಿಧಿಯಾಗಿ ಅದಕ್ಕೆ ಹೋಗಲಿದ್ದೇನೆ.

ಹೀಗಾಗಿ, ಬೇಗನೆ ಹೊಲೆಯ ಹಾಗೂ ಮಾದಿಗರ ಭಾವೀ ಜೀವನದ ಬಗೆಗೆ ವಿವರಣೆಯನ್ನು ನೀಡಬೇಕು ಅಥವಾ ತೀರ ಬೇರೆ ಬೇರೆ ಬಣಗಳನ್ನು ತಯಾರಿಸಬೇಕು. ಏನಿದ್ದರೂ ಹೀಗೆ ಅರೆಬರೆ, ಇತ್ತಲೂ ಇಲ್ಲ, ಅತ್ತಲೂ ಇಲ್ಲ, ಹಸಿಯಲ್ಲ, ಹಣ್ಣಲ್ಲ, ಎಂಬುದಾಗಿ ಉಳಿಸಬಾರದು.

ತಮ್ಮ ಕೃಪಾಭಿಲಾಷಿ,

ದೇವೀದಾಸರಾವ ನಾಮದೇವರಾವ ಕಾಂಬಳೆ

ತಾ, ಪಾಥೀ, ಮೈಹಲಾಮಾಜೀ ವಾಡಾ, ಜಿ. ಪರಭಣಿ (ನಿಜಾಮ್‌ಸ್ಟೇಟ್)

ನೋಟ್ : ಪತ್ರವನ್ನು ಪೂರ್ತಿ ಓದಿಕೊಂಡು, ಪೂರ್ತಿ ಯೋಚಿಸಿ, ಅನುಮಾನಿಸದೆ ಉತ್ತರವನ್ನು ನೀಡಬೇಕು. ಆತುರತೆಯಿಂದ ದಾರಿ ಕಾಯುತ್ತಿದ್ದೇನೆ. ಸಂಕ್ಷಿಪ್ತವಾಗಿ ಉತ್ತರಿಸಬೇಡಿ. ಸವಿಸ್ತರವಾಗಿ ಬರೆಯಿರಿ. ಇಲ್ಲದೆ ಹೋದರೆ ತಮ್ಮ ಹಾಗೂ ನನ್ನ ಮಾರ್ಗಗಳು ಭಿನ್ನವಾದವುಗಳು.

'ಜನತಾ', ದಿನಾಂಕ ೧೪ ಜೂನ್ ೧೯೪೧

ಉದ್ಧೃತ, ಬೈರಮೋಡೆ, ಸಂಪುಟ ೯, ಪು. ೯೧-೯೯

## ೯೭, ಇದು ನಿಜವೇ ಅಥವಾ ಒಂದು ಸಂಚೇ ?

“ಕೃಪಲಾನಿಯವರು ಇಪ್ಪತ್ತು ವರ್ಷ ಗಾಂಧಿಯವರ ತತ್ತ್ವವಿಚಾರದಲ್ಲಿ ನೆನೆಯುತ್ತ ಹಾಗೂ ಮಾಗುತ್ತಲಿದ್ದೂ ಒಣಕಲು ಆಗಿಯೇ ಉಳಿದರೆ ? ಜನತೆಯು ತನ್ನ ಶಾಂತಿಪ್ರಧಾನವಾದ ಪ್ರಯತ್ನದಿಂದ ಸ್ವತಃ ಸರಕಾರ ಆಗುವುದು, ಎನ್ನುವುದು ಗಾಂಧಿಯವರ ರಾಜಕೀಯದ ಸಾರ, ರಾಜ್ಯಸತ್ತೆ ಎಂದರೆ ಸಾವೆರೆನಿಟಿಯು 'ಸರಕಾರದಲ್ಲಿ ಇರದೆ ಜನತೆಯಲ್ಲಿ ಇರುತ್ತದೆ, ಎಂಬುದು ಗಾಂಧಿ ಹಾಗೂ ಇಂಗ್ಲೆಂಡಿನಲ್ಲಿರುವ ಲಿಬರಲ್‌ರ ತತ್ತ್ವಿಚಾರ. ಆಯಾ ಕಾಲದ ಸರಕಾರವು (ಗವರ್ನ್‌ಮೆಂಟ್) ಇಂಥ ರಾಜ್ಯಸತ್ತೆಯ ಇಚ್ಛೆಯನ್ನು ಪೂರೈಸುವ ಯಂತ್ರವಾಗಿರುತ್ತದೆ. ಇಂಥ 'ಸರಕಾರವು ತನ್ನ ಕೆಲಸವನ್ನು ಪೂರೈಸುವಲ್ಲಿ ಪೂರ್ತಿ ನಿರುಪಯೋಗಿ ಎನ್ನಿಸಿದರೆ ಜನತೆಯ ಇಚ್ಛಾಶಕ್ತಿಯು ಪ್ರತ್ಯಕ್ಷ ಕೃತಿಯಿಂದ ರಾಜ್ಯ ಸಂಸ್ಥೆ ಹಾಗೂ ಸರಕಾರದ ರೂಪವನ್ನು ಬದಲಾಯಿಸಿ ಬಿಡುತ್ತದೆ. (ಬಾಲ ಗಂಗಾಧರ) ತಿಲಕರ ಇದೇ ಕೆಲಸವನ್ನು ಮುಂದುವರಿಸಲೆಂದು ಗಾಂಧಿಯವರು ನಾಯಕತ್ವವನ್ನು ವಹಿಸಿಕೊಂಡರು. ಅವರ ತಂತ್ರವು ನಿಶ್ಚಿತವಾದುದು. ರೈತರು, ಕಾರ್ಮಿಕರು, ಮಧ್ಯಮ ವರ್ಗ ಹಾಗೂ ತಮ್ಮ ನೆರವಿಗೆ ಒದಗುವ ಎಲ್ಲ ಮೇಲ್ವರ್ಗಗಳನ್ನು ಸಂಘಟಿಸಿ ರಾಜ್ಯಸತ್ತೆಯು ಜನಮತಕ್ಕೆ ತಕ್ಕಂತೆ ವರ್ತಿಸುವಂತೆ ಸರಕಾರದ ಮೇಲೆ ಒತ್ತಡವನ್ನು ತರುವುದು. ಗಾಂಧಿಯವರದು ಇದೇ ಮಾರ್ಗವಾಗಿತ್ತು, ಈಗಲೂ ಇದೆ.

ಆದರೆ ಇಂದು ಗಾಂಧಿಸಹಿತ ಎಲ್ಲ ಕಾಂಗ್ರೆಸ್ ನಾಯಕರು ಜನತೆಯನ್ನು ಮೂಢರನ್ನಾಗಿ ಇರಿಸಿ ಅವರ ಕರ್ತೃತ್ವವನ್ನು ನಾಶಪಡಿಸಿ ಬಿಡುವ ಧೋರಣೆಯನ್ನು ಅವಲಂಬಿಸಿರುವರು. ಒಂದು ವರ್ಷಕ್ಕಿಂತಲೂ ಹೆಚ್ಚು ಕಾಲದಿಂದ ಹದಿನಾರು ಕೋಟಿ ಪ್ರಜೆಗಳ ಮೇಲೆ ಹೊಣೆಗೇಡಿ ಹಾಗೂ ಅಪ್ರಾತಿನಿಧಿಕ ಗವರ್ನ್ರ ಶಾಹಿ ನಡೆದಿದ್ದರೂ ಜನ ಅದಕ್ಕೆ ಮನಸೋತಿದ್ದಾರೆ ! ಇಂಗ್ಲೆಂಡಿನಲ್ಲಾದರೆ ಇಂಥ ಸಂಗತಿ ನಡೆಯುತ್ತಿರಲಿಲ್ಲ, ಎಂದು ಅಮೇರಿ ಅವರು ಸ್ವಂತದ ಮೀಸೆಯನ್ನಲ್ಲ, ಝೆಟ್ ಲಂಡ್ ನ ಮೀಸೆಯನ್ನು ಹುರಿಮಾಡಿ ಹೇಳಿದರು. ಆ ವ್ಯಂಗ್ಯ ನಿಜವಾಗಿತ್ತು. ಇಂದು ಅಹಿಂಸೆಯು ಹಿಂದೀ ಜನತೆಗೆ ಒಂದು ತಡೆಗೋಡೆಯಾಗಿಲ್ಲ. ಅದನ್ನೊಂದು ಕುರಿಯ ಪಾತ್ರವನ್ನಾಗಿ ಮಾಡಲಾಗಿದೆ. ಹೀಗಾಗಲು ಕಾಂಗ್ರೆಸ್ ನಾಯಕರೇ ಹೊಣೆ. ಈ ಹೊಣೆಯನ್ನು ಗಮನಕ್ಕೆ ತಂದುಕೊಂಡು ದಾರಿಯನ್ನು ಬದಲಾಯಿಸಬೇಕು. ಬದಲು ಕೃಪಲಾನಿಯವರು ಒಂದು ಪವಾಡಕ್ಕಾಗಿ ಕಾದಿದ್ದಾರೆ ! ಪವಾಡಕ್ಕಾಗಿ ಕಾದಿರುವವನ ಕೈಗೆ ಏನು ದಕ್ಕುತ್ತದೆ, ಎನ್ನುವುದು ರೆನೋದ ಉದಾಹರಣೆಯಿಂದ ತಿಳಿದಿದೆ. ಈವರೆಗೂ ನಮ್ಮಲ್ಲಿ ರೆನೊದಂತಹ ಪರಿಸ್ಥಿತಿ ಬಂದಿಲ್ಲ. ಮುಪ್ಪಿನ

ಮುಂದಾಳುಗಳು ಧೈರ್ಯ ಕಳೆದುಕೊಂಡಿದ್ದರೆ ಕಾಂಗ್ರೆಸ್ಸಿನಲ್ಲಿರುವ ಯುವಕರಾದರೂ ಇನ್ನುಮುಂದೆ ಸ್ವಂತದ ಸಾಮರ್ಥದಿಂದ ಮುಂದಕ್ಕೆ ಹೆಜ್ಜೆ ಇಕ್ಕಬೇಕು -"

ಮೇಲಿನ ಮಾತುಗಳನ್ನು ಓದಿ, ಅವು ಜನತಾ ಪತ್ರದ ಸಂಪಾದಕನವೆಂದು ಓದುಗರಿಗೆ ಅನ್ನಿಸಿದರೆ ಅದರಲ್ಲೇನಾದರೂ ಅಚ್ಚರಿ ಇದೆಯೆಂದು ಯಾರಿಗೂ ಅನ್ನಿಸಲಾರದು. ಆದರೆ ಈ ಮಾತುಗಳು



ಜನತಾದ ಸಂಪಾದಕರವಾಗಿರದೆ ಅವು ಕಳೆದ ಭಾನುವಾರದ ಲೋಕಮಾನ್ಯ ಸಂಚಿಕೆಯ ಸಂಪಾದಕೀಯದಿಂದ ಎತ್ತಿಕೊಂಡ ಅವತರಣಿಕೆಗಳಾಗಿವೆ. ಮೇಲಿನ ಮಾತುಗಳನ್ನು ಓದಿ, ಲೋಕಮಾನ್ಯದ ಅಭಿಪ್ರಾಯ ಪ್ರಣಾಳಿಕೆಯಲ್ಲಿ ಅದೆಷ್ಟು ಅಭಿಪ್ರಾಯಪರಿವರ್ತನೆಯಾಗಿದೆ, ಎನ್ನುವುದು ಯಾರಿಗಾದರೂ ತಿಳಿದೀತು. ನಾವು ಅದೆಷ್ಟೋ ದಿನಗಳಿಂದ ಪ್ರತಿಪಾದಿಸುತ್ತ ಬಂದ ಸಂಗತಿಯೇ ನಿಜವೆನ್ನಿಸಿ ಕೊನೆಗೂ ಪೂರ್ತಿ ಕಾಂಗ್ರೆಸ್ಸಿಗಾಗಿ ಮೀಸಲಾಗಿಟ್ಟ ಲೋಕಮಾನ್ಯದಂತಹ ವೃತ್ತಪತ್ರವೂ ಕೂಡ ಅದರ ಸತ್ಯತೆಯನ್ನು ಕುರಿತು ಸಾಕ್ಷಿಯನ್ನು ನೀಡಬೇಕಾಯಿತು, ಎನ್ನುವ ಸಂಗತಿಯು ನಮಗೆ ಸಂತಸವನ್ನು ತಂದಿದೆ. ಆದರೆ ಲೋಕಮಾನ್ಯ ಕ್ಕೆ ಕಣ್ಣು ತೆರೆಯಲು ಇಷ್ಟೊಂದು ಕಾಲ ಬೇಕಾಯಿತಲ್ಲ, ಎಂದು ನಮಗೆ ಕೆಡಕೆನ್ನಿಸುತ್ತಿದೆ. ಲೋಕಮಾನ್ಯವು ಇಂದು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಈ ಮೊದಲೇ ಪ್ರಕಟಿಸಿ, ಅದನ್ನು ಜನತೆಯಲ್ಲಿ ಹರಡಿದ್ದರೆ ಜನತೆಯ ಸ್ಥಿತಿ ಇಂದಿನಂತೆ ಇರುತ್ತಿರಲಿಲ್ಲ. ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾದ ಆಚಾರ್ಯ ಕೃಪಲಾನಿಯವರು ಇಷ್ಟರಲ್ಲೇ "ಸೋಸಿಯಲ್ ವೆಲ್‌ಫೇಯರ್' ಮಾಸಪತ್ರಿಕೆಯಲ್ಲಿ ಬರೆದ ಲೇಖನದಿಂದ ಈ ಸ್ಥಿತಿಯು ಅದೆಷ್ಟು ಹದಗೆಟ್ಟಿದೆ ಎಂಬುದು ಯಾರಿಗಾದರೂ ತಿಳಿಯುವಂತಿದೆ. ಆಚಾರ್ಯ ಕೃಪಲಾನಿಯವರು ತಮ್ಮ ಲೇಖನಕ್ಕೆ ಇತ್ತೀಚಿನ ಇಕ್ಕಟ್ಟನ್ನು ಬಗೆಹರಿಸುವ ದಾರಿ ಯಾವುದು' ಎಂಬ ಶೀರ್ಷಿಕೆಯನ್ನು ಕೊಟ್ಟಿದ್ದಾರೆ. ಅವರು, 'ಪರಕೀಯರ ದಾಳಿಯಾದರೆ ಹಿಂದೂಸ್ಥಾನವನ್ನು ಹೇಗೆ ರಕ್ಷಿಸುವುದು , ಎಂಬುದನ್ನು ಕುರಿತು ಚರ್ಚಿಸಿರುವರು. ಇಂಗ್ಲೆಂಡಿನ ಬದಿ ಹಿಮ್ಮೆಟ್ಟಿದ ವಾರ್ತೆ ಬಂತೆಂದರೆ ಕೆಲವು ಕಾಂಗ್ರೆಸ್ ಪರ ಜನರಿಗೆ ಸಂತೋಷವಾಗುತ್ತದೆ. ಆದರೆ ಇಂಗ್ಲೆಂಡಿನ ಬದಿ ಹಿಮ್ಮೆಟ್ಟಿದ ವಾರ್ತೆ ಬಂತೆಂದರೆ ಜನರು ಹತಾಶರಾಗುತ್ತಾರೆಂಬುದು ಆಚಾರ್ಯ ಕೃಪಲಾನಿಯವರ ಅಭಿಪ್ರಾಯ. ರಾಜಶ್ರೀ ಕೃಪಲಾನಿಯವರು ಈ ಸತ್ಯವನ್ನು ಹೊರತಂದುದು ಒಳ್ಳೆಯದಾಯಿತೆಂಬುದು ನಮ್ಮ ಅಭಿಪ್ರಾಯ. ಅವರು, ಹತಾಶರಾಗಲು ಇರುವ ಕಾರಣಗಳು ಹಾಗೂ ಅವುಗಳ ಪರಿಹಾರ ಯೋಜನೆಗಳು ಯಾವವು, ಎಂಬುದನ್ನು ಕುರಿತು ಯೋಚಿಸುತ್ತ ನಿರಾಶೆಗೆ ಮೂರು ಕಾರಣಗಳಿವೆ, ಎಂದಿದ್ದಾರೆ.

(೧) ಪರಕೀಯರ ದಾಳಿಯನ್ನು ಎದುರಿಸಲು ಸಾಕಷ್ಟು ಹಿಂದೂಸ್ಥಾನದ ಸೈನಿಕ ಸಿದ್ಧತೆ ಇಲ್ಲ. (೨) ಸರಕಾರವು ಪರಕೀಯರ ದಾಳಿಯನ್ನು ಎದುರಿಸಲು ಸಾಧ್ಯವಾಗುವಂತೆ ದೇಶದ ಸಿದ್ಧತೆಯನ್ನು ಕೈಕೊಳ್ಳಲು ಏನನ್ನೂ ಮಾಡುತ್ತಿಲ್ಲ. (೩) ಸರಕಾರವು ಹಿಂದೀ ಜನತೆಯನ್ನು ನಂಬದ ಕಾರಣ ಅದು ಜನರ ನೆರವನ್ನು ಪಡೆಯುತ್ತಿಲ್ಲ. ಆಚಾರ್ಯ ಕೃಪಲಾನಿಯವರು ಸರಕಾರದ ಯುದ್ಧದ ಪ್ರಯತ್ನಗಳನ್ನು ಪರೀಕ್ಷಿಸಿ, ಈ ಮೂರು ಕಾರಣಗಳು ಹೇಗೆ ನಿಜವಾಗಿವೆ, ಎಂಬುದನ್ನು ಸಪ್ರಮಾಣವಾಗಿ ಸಿದ್ಧಪಡಿಸಿದ್ದಾರೆ. ಸರಕಾರದ ಬದಿಯಿಂದ ನಿರಾಶರಾದ ಜನರು ಕಾಂಗ್ರೆಸ್ಸಿನತ್ತ ನೋಡುತ್ತಾರೆ. ಆದರೆ ಕೃಪಲಾನಿಯವರು ದೀನವಾಣಿಯಲ್ಲಿ ಹೀಗೆನ್ನುತ್ತಾರೆ : "ಕಾಂಗ್ರೆಸ್ ಆದರೂ ಏನು ಮಾಡೀತು ? ಖಾಸಗಿ ಸಂಸ್ಥೆಯ ಮೂಲಕ ಸೈನಿಕ ಸಂಘಟನೆಯನ್ನು ತಯಾರಿಸಲು ಸಾಧ್ಯವಿಲ್ಲ. ಸರಕಾರವಂತೂ ನಮ್ಮ ಸಹಕಾರವನ್ನು ತಿರಸ್ಕರಿಸುತ್ತದೆ. ಅಂದ ಬಳಿಕ ಮಾಡುವುದೇನು ? ಅಳುತ್ತ ಕೂರಬಾರದು. ಈಗಲೂ ಒಂದು ಪವಾಡ ನಡೆದು ಅನುಕೂಲ ಕಾಲ ಒದಗಿ ಬಂದೀತೆಂದು ಕಾಯುತ್ತ ಕುಳಿತಿರಬೇಕಷ್ಟೆ. ಕೊನೆಗೆ ಈಶ್ವರ ಹಾಗೂ ಪ್ರಕೃತಿಯನ್ನು ಪ್ರಾರ್ಥಿಸುತ್ತ ಸಿದ್ಧರಾಗಿರಬೇಕು. "

ಈ ಲೇಖನದಲ್ಲಿ ರಾ. ಕೃಪಲಾನಿಯವರು ಸೂಚಿಸಿದ ಮಾರ್ಗವನ್ನು ಗಮನಿಸಲಾಗಿ ಕಾಂಗ್ರೆಸ್ಸಿನ ಶಕ್ತಿ ಅದೆಷ್ಟು ಕ್ಷೀಣಿಸಿದೆ, ಎಂಬುದು ಕಂಡುಬರುವಂತಿದೆ. ಪರಕೀಯರ ದಾಳಿಯನ್ನು ತಪ್ಪಿಸಲು



ಪರಮೇಶ್ವರನನ್ನು ಪ್ರಾರ್ಥಿಸುತ್ತಿರುವುದನ್ನು ಬಿಟ್ಟರೆ ದೇಶಕ್ಕೆ ಬೇರಾವ ದಾರಿಯೂ ಇಲ್ಲ, ಎನ್ನುವುದು ನಿಜವಿದ್ದರೆ ಕಾಂಗ್ರೆಸ್ ಆಗಲಿ ಇನ್ನಾವ ರಾಜಕೀಯ ಸಂಸ್ಥೆಯಾಗಲಿ ಯಾವ ಕೆಲಸಕ್ಕೂ ಬಾರದು, ಇಡಿಯ ರಾಜಕೀಯವೇ ವ್ಯರ್ಥ, ಎಂದೆನ್ನಬೇಕಾದೀತು. ಕಾಂಗ್ರೆಸ್ಸಿನಂತಹ ಬಲಿಷ್ಠ ಸಂಸ್ಥೆಯ ಅವಸ್ಥೆ ಹೀಗಾದುದು ನಮಗೂ ಶೋಚನೀಯವಾಗಿ ಕಾಣುತ್ತದೆ. ಕಾಂಗ್ರೆಸ್ಸು ಗಾಂಧಿಯವರ ಅಂಕಿತದಲ್ಲಿ ಇರುವವರೆಗೆ ಅದರ ಕೈಯಿಂದ ರಾಜಕೀಯ ಕ್ರಾಂತಿ ಇಲ್ಲವೆ ರಾಜಕೀಯ ಪ್ರಗತಿ ಸಾಧ್ಯವಿಲ್ಲ, ಎಂದು ನಾವು ಹಲವು ದಿನಗಳಿಂದ ಹೇಳುತ್ತ ಬಂದಿದ್ದೇವೆ. ಇದು ಸಾಕಷ್ಟು ಜನರಿಗೆ

ಮನದಟ್ಟಾಗುತ್ತಿತ್ತು. ಆದರೆ ಅವರಲ್ಲಿ ಕೆಲವರ ವಾದ ಏನಿತ್ತೆಂದರೆ, ಟೀಕಾಕಾರರು ಒಳಗೆ ಬಂದು ತಮಗೆ ಅನ್ನಿಸಿದಂತೆ ಸುಧಾರಣೆಯನ್ನು ಮಾಡಬೇಕೆಂಬುದು. ಈ ವಾದವು ನಮಗೆ ಅದೆಂದಿಗೂ ಒಪ್ಪಿಗೆಯಾಗಲಿಲ್ಲ. ಬಲೆಯಲ್ಲಿ ಸಿಕ್ಕುಬಿದ್ದ ಇಲಿಯು ಹೊರಗೂ ಹೋಗಲಾರದು, ಬಲೆಯನ್ನೂ ಮುರಿಯಲಾರದೆಂಬಂತೆ ಹೊರಗಿನಿಂದ ಕಾಂಗ್ರೆಸ್ಸನ್ನು ಟೀಕಿಸುವವರು ಒಳಹೊಕ್ಕು ಅದನ್ನು ಸುಧಾರಿಸಲಾರರು, ಅದರಿಂದ ಹೊರಕ್ಕೂ ಬರಲಾರರು. ಒಂದೆಂದರೆ ಗಾಂಧಿ ಹಾಗೂ ಕಾಂಗ್ರೆಸ್ಸು ಬೇರ್ಪಡಬೇಕು, ಇಲ್ಲವೆ ಅದು ಗಾಂಧಿ-ತತ್ವಗಳ ಮೇಲೆ ಎಳ್ಳು, ನೀರು ಬಿಟ್ಟು ಅವರ ಮುಂದಾಳುತನವನ್ನು ನಿರಾಕರಿಸಿ, ಮಾನವನ ಅನುಭವಗಳ ತಳಹದಿಯ ಮೇಲೆ ತನ್ನ ಜೀವನವನ್ನು ರಚಿಸಿ, ಕಾರ್ಯವನ್ನು ಕೈಕೊಳ್ಳಲು ಆರಂಭಿಸತಕ್ಕದ್ದು. ಗಾಂಧಿಗಿಂತ ದೇಶ ದೊಡ್ಡದೆಂಬ ದೃಢವಾದ ಭಾವನೆಯನ್ನು ಹೊಂದಿದವರು ಕಾಂಗ್ರೆಸ್ಸಿನಿಂದ ಹೊರಬಂದು ದೇಶಕ್ಕಾಗಿ ತಮ್ಮಿಂದಾದಷ್ಟನ್ನು ಮಾಡಬೇಕು. ಲೋಕಮಾನ್ಯಕಾರರು ಈ ವಿಚಾರಸರಣಿಯನ್ನು ತಮ್ಮ ಸಂಪಾದಕೀಯದಲ್ಲಿ ಮಂಡಿಸಿದ ಬಗೆಗೆ ನಾವು ಅವರನ್ನು ಅಭಿನಂದಿಸುತ್ತೇವೆ. ಬೆಕ್ಕಿನ ಮರಿಗಳು ಹುಟ್ಟಿದಾಗ ಅವುಗಳ ಕಣ್ಣುಗಳು ಮುಚ್ಚಿರುತ್ತವೆ. ಆದರೆ ಕೆಲವೇ ದಿನಗಳಲ್ಲಿ ಅವು ಕಣ್ಣು ತೆರೆದು ಪ್ರಕೃತಿಯನ್ನು ಅನುಭವಿಸಲು ಸಿದ್ಧವಾಗುತ್ತವೆ. ನಮ್ಮ ಕಾಂಗ್ರೆಸ್ ಭಕ್ತರ ಕಣ್ಣುಗಳು ಎಂದಿಗಾದರೂ ತೆರೆದುಕೊಳ್ಳಬಹುದೆಂಬ ಆಸೆ ಎಂದಿಗೂ ನಮ್ಮಲ್ಲಿರಲಿಲ್ಲ. ಅದರೆ ನಿರಾಶೆಯಲ್ಲೇ ಆಸೆಯ ಒಂದು ಕಿರಣ ಕಂಡು ಬಂದದ್ದರಿಂದ ನಮಗೂ ಕೂಡ ತುಂಬ ಸಮಾಧಾನ ಲಭಿಸಿದೆ.

ಮೇಲಿನ ವಿಚಾರಗಳನ್ನು ವ್ಯಕ್ತಪಡಿಸುವಾಗ ನಮ್ಮ ಓದುಗರಿಗೆ ಒಂದು ಸಂಗತಿಯನ್ನು ಕುರಿತು ಎಚ್ಚರಿಕೆಯನ್ನು ನೀಡುವುದು ತುಂಬ ಆವಶ್ಯಕವೆಂದು ನಮಗೆ ಅನ್ನಿಸುತ್ತದೆ. ರಾ. ಮುನಶಿ ಅವರು ಕಾಂಗ್ರೆಸ್ಸಿನಿಂದ ಹೊರಬಂದುದರಿಂದ ಬಹಳಷ್ಟು ಜನರಿಗೆ ಬಲು ದೊಡ್ಡ ಸಮಾಧಾನ ಲಭಿಸಿದುದು ಕಂಡುಬರುತ್ತದೆ. ರಾ. ಮುನಶಿ ಅವರು ಕಾಂಗ್ರೆಸ್ಸನ್ನು ತ್ಯಜಿಸಿದ ಬಗೆಗೆ ನಮಗಂತೂ ಸಮಾಧಾನ ಆಗಿಯೇ ಇಲ್ಲ. ಆದರೆ ಅವರ ನಡತೆಯ ಬಗೆಗೆ ದೊಡ್ಡ ಸಂದೇಹ ತಲೆದೋರುತ್ತಿದೆ. ನಾವು ಸಮಾಧಾನವನ್ನು ವ್ಯಕ್ತಪಡಿಸಿದ್ದುದು, ಕಾಂಗ್ರೆಸ್ಸಿಗಾಗಿ ತನ್ನನ್ನೇ ಇಡಿಯಾಗಿ ಮುಡಿಪಾಗಿರಿಸಿಕೊಂಡ ಲೋಕಮಾನ್ಯದಂತಹ ವೃತ್ತಪತ್ರದ ಕಣ್ಣು ತೆರೆದುಕೊಂಡದ್ದಕ್ಕಾಗಿ ! ರಾ. ಮುನಶಿಯವರು ಕಾಂಗ್ರೆಸ್ಸಿನಿಂದ ಹೊರಬಂದರೆಂಬ ತಪ್ಪು ತಿಳುವಳಿಕೆ ಎಲ್ಲೆಡೆಗೆ ಹಬ್ಬಿದಂತಿದೆ. ಹಾಗೆಯೇ ಅವರು ಕಾಂಗ್ರೆಸ್ಸನ್ನು ತ್ಯಜಿಸಿದ ಕಾರಣವು ವೈಯಕ್ತಿಕವಾಗಿರದೆ ತಾತ್ವಿಕ ನೆಲೆಯದಾಗಿದೆ, ಎಂಬ ತಿಳುವಳಿಕೆ ಎಲ್ಲೆಡೆಗೆ ಹಬ್ಬಿದಂತೆ ಕಾಣುತ್ತದೆ. ಆದರೆ ಇವೆರಡೂ ಸಂಗತಿಗಳು ನಿಜ, ಎಂದು ನಮಗೆ ಖಂಡಿತ ಅನ್ನಿಸುವುದಿಲ್ಲ. ಮುನಶಿಯವರು ಕಾಂಗ್ರೆಸ್ಸಿನಿಂದ ಹೊರಬಂದರು, ಎನ್ನುವ ಬದಲು ಗಾಂಧಿಯವರು ಒಂದು ವಿಶಿಷ್ಟವಾದ ಕಾರ್ಯಕ್ರಮವನ್ನು ಸಾಧಿಸುವುದಕ್ಕಾಗಿ ಅವರನ್ನು ಬೇಕೆಂದೇ ಕಾಂಗ್ರೆಸ್ಸಿನಿಂದ ಹೊರಕ್ಕೆ ಬಿಟ್ಟಿದ್ದಾರೆ,

ಎನ್ನುವುದೇ ನಮಗೆ ಹೆಚ್ಚು ಸೂಕ್ತವೆನ್ನಿಸುತ್ತದೆ. ಇಲ್ಲಿಯವರೆಗೆ ಕಾಂಗ್ರೆಸ್ಸಿನಿಂದ ಬಹಳಷ್ಟು ಜನರು ಹೊರಗೆ ಹೋಗಿದ್ದಾರೆ. ಶ್ರೀ ನರೀಮನ್, ಡಾ. ಖರೆ, ಸುಭಾಷಚಂದ್ರ ಬೋಸ್, ಎಮ್. ಎನ್. ರಾಯ್ ಅವರ ಉದಾಹರಣೆಗಳು ಎಲ್ಲರೆದುರು ಇವೆ. ಈ ಜನ ಕಾಂಗ್ರೆಸ್ಸಿನಿಂದ ಹೊರಹೋದರು. ಆದರೆ ಹೊರಹೋಗುವಾಗ ಅವರಾರೂ ಗಾಂಧಿಯವರ ಅಪ್ಪಣೆ ಇಲ್ಲವೆ ಆಶೀರ್ವಾದಗಳನ್ನು ಕೇಳಿದಂತಿಲ್ಲ. ಗಾಂಧಿಯವರ ದೃಷ್ಟಿಯಿಂದ ನೋಡಿದರೆ ಮುನಶಿಯವರು ಕಾಂಗ್ರೆಸ್ಸಿನಿಂದ ಹೊರಬಂದ ಮೇಲಿನ ವ್ಯಕ್ತಿಗಳಿಗಿಂತ ಕಡಿಮೆ ಪಾಪಿ ಎನ್ನಿಸುತ್ತಾರೆಂದು ಯಾರೂ ಅನ್ನಲಾರರು. ಅಹಿಂಸೆಯ ತತ್ತ್ವವು ಗಾಂಧಿಯವರ ಧರ್ಮವಾಗಿದೆ. ಆ ತತ್ತ್ವವನ್ನು ಲೆಕ್ಕಿಸದೆ ಹೊರಹೋಗುವ ಮನುಷ್ಯನು ಗಾಂಧಿಯವರ ದೃಷ್ಟಿಯಿಂದ ಅಧರ್ಮಿಯೇ ಎನ್ನಬೇಕು. ಹೀಗೆ, ಶ್ರೀ ಮುನಶಿ ಅವರು ಅಧರ್ಮಿ ಹಾಗೂ ಪಾತಕಿಯಾಗಿರುವಾಗಲೂ ಅವರು ಕಾಂಗ್ರೆಸ್ಸಿನಿಂದ ಹೊರಹೋಗುವಾಗ ಗಾಂಧಿಯವರು ಅವರಿಗೆ ಆಶೀರ್ವಾದಗಳನ್ನು ನೀಡುವುದು, ಅವರಿಗೆ ಶುಭ ಕೋರುವುದು, ಒಂದು ದೊಡ್ಡ ನಿಗೂಢ ಸಂಗತಿಯಾಗಿದೆ. ಇಲ್ಲಿಯವರೆಗೆ ಗಾಂಧಿಯವರನ್ನು ವಿರೋಧಿಸಿ ಕಾಂಗ್ರೆಸ್ಸನ್ನು ತ್ಯಜಿಸಿದವರನ್ನೆಲ್ಲ ತಮ್ಮ ಹಗೆಗಳೆಂದು ಭಾವಿಸಿ, ಅವರನ್ನು ನಾಶಪಡಿಸಲು ಅವರು ಹೇಗೆ ತಮ್ಮ ಶಕ್ತಿಯನ್ನೆಲ್ಲ ವ್ಯಯಿಸಿದರೆಂಬ ಖೇದಜನಕ ಇತಿಹಾಸವು ಎಲ್ಲರಿಗೂ ತಿಳಿದಿದೆ. ಮುನಶಿಯವರ ಬಗೆಗೆ ಭಸ್ಮಾಸುರನಂತಹ ತಮ್ಮ ನಡತೆಯನ್ನು ಬಿಟ್ಟು ಮುನಶಿಯವರ ದ್ರೋಹವನ್ನು ತಮ್ಮ ಹೊಟ್ಟೆಗೆ ಹಾಕಿಕೊಂಡು, ಅವರ ಬಗೆಗೆ ಇಷ್ಟೊಂದು ಆತ್ಮೀಯತೆಯನ್ನು ತೋರುವುದರ ಮೂಲದಲ್ಲಿ ಯಾವುದಾದರೂ ಉದ್ದೇಶ ಇರಲೇಬೇಕೆಂಬ ಸಂದೇಹ ನಮಗಂತೂ ಇದೆ.

ಗಾಂಧಿ ಮತ್ತು ಮುನಶಿಯವರು ಸೇರಿ ಹಿಂದೂ ಮಹಾಸಭೆಗೆ ತಡೆಯೊಡ್ಡಲೆಂದು ಈ ಆಟವನ್ನು ಹೂಡಿರಬಹುದೆಂದು, ಊಹಿಸಿದರೆ ಅದು ತಪ್ಪೆಂದು ಇಂದಂತೂ ನಮಗೆ ಅನ್ನಿಸುವುದಿಲ್ಲ. ಒಂದು ಸಂಗತಿಯಂತೂ ಖಚಿತ. ಅದೆಂದರೆ ಮುಂಬಯಿ ಹಾಗೂ ಹೈದರಾಬಾದುಗಳಲ್ಲಿ ಹಿಂದೂ - ಮುಸಲ್ಮಾನರಲ್ಲಿ ನಡೆದ ದಂಗೆಗಳಿಂದಾಗಿ ಕಾಂಗ್ರೆಸ್ಸಿನ ಮೇಲಿನ ಗುಜರಾತಿ ಪ್ರಜೆಗಳ ವಿಶ್ವಾಸವು ಪೂರ್ತಿ ಹಾರಿಹೋಗಿದೆ. ಎರಡನೆಯ ಸಂಗತಿ ಎಂದರೆ,

ಕಾಂಗ್ರೆಸ್ಸಿನ ಬಗೆಗೆ ಅಸಂತೋಷಗೊಂಡ ಗುಜರಾತಿ ಪ್ರಜೆಗಳು ಶ್ರೀಮಂತರು. ಯಾವ ಸಂಸ್ಥೆಯೂ ಯಾವ ರಾಜಕೀಯ ಸಂಸ್ಥೆಯೂ ಅವರ ದುಡ್ಡಿನ ಬೆಂಬಲವಿಲ್ಲದೆ ನೆಲೆಯನ್ನು ಕಂಡುಕೊಳ್ಳಲಾರದು. ನಾಲ್ಕನೆಯ ಸಂಗತಿ, ಹಿಂದೂ ಮಹಾಸಭೆಯ ನಾಯಕರು ಹಾಗೂ ಸಾವರಕರರು ಕಾಂಗ್ರೆಸ್ಸಿನ ಬದ್ಧ ವೈರಿಗಳು. ಈ ಸಂಗತಿಯು ಗಾಂಧಿ ಹಾಗೂ ಅವರ ಸಹಕಾರಿಗಳಿಗೆ ಪೂರ್ತಿ ತಿಳಿದಿರಲೇಬೇಕು. ಗುಜರಾತಿ ಸಮುದಾಯದ ಒಲವು ಹಿಂದೂ ಮಹಾಸಭೆಯತ್ತ ಹೊರಳಿದರೆ ಅದು ಕಾಂಗ್ರೆಸ್ಸಿಗೆ ಸವಾಲೊಡ್ಡುವಷ್ಟು ಪ್ರಬಲವಾದೀತೆಂಬ ಸಂಗತಿ ಕೂಡ ಗಾಂಧಿ ಹಾಗೂ ಅವರ ಸಹಕಾರಿಗಳಿಗೆ ತಿಳಿಯದಂತಹುದು, ಎಂದೆನ್ನಲಾಗದು.

ಇವೆಲ್ಲ ಸಂಗತಿಗಳನ್ನು ಕುರಿತು ಯೋಚಿಸಿ ಗಾಂಧಿಯವರು ಗುಜರಾತಿ ಸಮಾಜದ ಒಲವನ್ನು ಹಿಂದೂ ಮಹಾಸಭೆಯತ್ತ ಹೊರಳಲು ಬಿಡುವ ಬದಲು ತಮ್ಮವನೇ ಆದ ಒಬ್ಬ ಶಿಷ್ಯನ ಕೈಲಿ ಇರುವಂತೆ ಯತ್ನಿಸುವುದು ಈ ಸನ್ನಿವೇಶದಲ್ಲಿ ಆವಶ್ಯಕ, ಎಂದರಿತು ಶ್ರೀ ಮುನಶಿಯವರನ್ನು ಬೇಕೆಂದೇ ಕಾಂಗ್ರೆಸ್ಸಿನ ಹೊರಕ್ಕೆ ಹೋಗಲು ಬಿಟ್ಟಿರಬೇಕು, ಎಂದಂದರೆ ಅದರಲ್ಲಿ ತಪ್ಪೇನಾದರೂ ಆದೀತೆಂದು ನಮಗೆ ಅನ್ನಿಸುವುದಿಲ್ಲ. ಗಾಂಧಿಯವರು ಮಹಾತ್ಮರಾದರೂ ಸರ್ವಸಾಧಾರಣ ಮನುಷ್ಯಮಾತ್ರರಲ್ಲಿರುವ ವಿಕಾರಗಳಾದ ಮದ, ಮತ್ಸರ, ದಂಭ, ಅಹಂಕಾರ, ಮೊದಲಾದವುಗಳು ಅವರಲ್ಲಿಲ್ಲ, ಎಂದು



ಯಾರೂ ಅನ್ನಲಾರರು. ಯಾವ ಗುಜರಾತಿ ಸಮಾಜದ ಆಶ್ರಯದ ಮೇಲೆ ಗಾಂಧಿಯವರು ಯಾವ ತಮ್ಮ ರಾಜಕೀಯ ಕಟ್ಟಡವನ್ನು ಕಟ್ಟಿದರೋ, ಅಂಥದರ ತಳಪಾಯವು ಈ ರೀತಿಯಾಗಿ ಕುಸಿಯುತ್ತಿರುವುದನ್ನು ಕಂಡು ಅವರು ನಾವನ್ನುವ ಉದ್ದೇಶದಿಂದ ಶ್ರೀ ಮುನಶಿಯವರನ್ನು ಕಾಂಗ್ರೆಸ್ಸಿನಿಂದ ಹೊರಕ್ಕೆ ಕಳಿಸುವಂಥ ಉದ್ದೇಶಪೂರ್ವಕವಾದ ಯೋಜನೆಯನ್ನು ಮಾಡುವುದು ಸ್ವಾಭಾವಿಕ. ನಮ್ಮ ಅಂದಾಜು ತಪ್ಪಲೆಂದು ನಾವು ಬಯಸುತ್ತೇವೆ. ಭವಿಷ್ಯದಲ್ಲಿ ಏನು ನಡೆಯುವುದೂ ಅದೇ ನಿಜ. ಆದರೆ ಮುನಶಿಯವರ ಕಾಂಗ್ರೆಸ್ ತ್ಯಾಗದ ಬಗೆಗೆ ಯಾರಿಗೆ ಆಶ್ಚರ್ಯವಾಗುವುದೋ ಅವರಿಗಾಗಿ ಈ ಘಟನೆಯನ್ನು ಕುರಿತು ನಮ್ಮಲ್ಲಿ ತಲೆದೋರಿರುವ ಸಂಶಯವನ್ನು ವ್ಯಕ್ತಪಡಿಸುವುದು ನಮ್ಮ ಕರ್ತವ್ಯವಾಗಿದೆ.

ಸಂಪಾದಕೀಯ : 'ಜನತಾ ತಾ, ೫ ಜುಲೈ ೧೯೪೧.

ಉದ್ಧೃತ : ಗಾಂಜರೆ, ಸಂಪುಟ ೫, ಪು. ೩೭-೪೧.

## ೯೮, ಆಂಗ್ಲರ ಪಿತೂರಿ

ಯುದ್ಧ ಶುರುವಾದಂದಿನಿಂದಲೇ ಗೌರವಾನ್ವಿತ ವಾಯಿಸ್‌ರಾಯ್ ಅವರ ಕಾರ್ಯಕಾರಿ ಮಂಡಲಿಯ ಪುನರಚನೆ ನಡೆಯಲಿರುವುದನ್ನು ಕುರಿತು ಮಾತುಕತೆ ನಡೆದಿತ್ತು. ಸಾಕಷ್ಟು ಚರ್ಚೆ ನಡೆದು ಕೊನೆಗೊಮ್ಮೆ ಹೊಸ ಕಾರ್ಯಕಾರಿ ಮಂಡಲಿಯನ್ನು ರಚಿಸಲಾಯಿತು. ಈ ಹೊಸ ಕಾರ್ಯಕಾರಿ ಮಂಡಲಿಯನ್ನು ಕುರಿತು ಜನರಲ್ಲಿ ಯಾವುದೇ ಬಗೆಯ ಹೆಚ್ಚಿನ ಉತ್ಸಾಹ ಮೂಡಿತ್ತೆಂದು ಯಾರೂ ಅನ್ನಲಾರರು. ಜನರು ಅದಕ್ಕೆ 'ಘಡೀಭರ ಕೀ ಮೌಜ' ('ಕ್ಷಣ ಹೊತ್ತಿನ ಮಜ') ಎನ್ನುವುದಕ್ಕಿಂತ ಹೆಚ್ಚಿನ ಮಹತ್ವವನ್ನು ನೀಡಿಲ್ಲ. ಇಂದಿನ ಯುದ್ಧದ ಪರಿಸ್ಥಿತಿಯನ್ನು ಗಮನಿಸಿದರೆ ದೇಶದ ಸುರಕ್ಷೆಯ ದೃಷ್ಟಿಯಿಂದ ಈ ಯೋಜನೆಗೆ ಯಾವುದೇ ಬಗೆಯ ಮಹತ್ವವಿದೆ, ಎಂದೆನ್ನಲಾಗದು. ಯುದ್ಧ ಬಹುಮಟ್ಟಿಗೆ ಮುಗಿಯುತ್ತ ಬಂದಿದೆ. ಐದಾರು ತಿಂಗಳಲ್ಲಿ ಒಪ್ಪಂದವಾಗಿ ಎಲ್ಲೆಡೆ ನೀರವತೆ ನೆಲೆಸಲಿದೆ. ಹೀಗೆಂದ ಮಾತ್ರಕ್ಕೆ ಅದರಲ್ಲೇನೂ ಅಸಂಭವನೀಯವಲ್ಲ, ಎಂದೆನ್ನಲಾಗದು. ಕಾಲಮಾನದ ದೃಷ್ಟಿಯಿಂದ ನೋಡಲಾಗಿ ಯಾರ ಕಾರ್ಯಕಾರಿ - ಮಂಡಲಿಯನ್ನು ಕುರಿತಾಗಿ ಯೋಜನೆಯನ್ನು ತಯಾರಿಸಲಾಗಿದೆಯೋ ಅವರಿಗೆ ಹೆಣಗಳನ್ನು ಸಾಗಿಸಲು ಕರೆಯಿಸಲಾದ ಮುರ್ದೆಫರಸ್‌ಗಿಂತ ಹೆಚ್ಚಿನ ಕೆಲಸವನ್ನು ಮಾಡುವ ಅವಕಾಶ ದೊರೆತೀತೋ, ಇಲ್ಲವೋ ಎಂದಂದರೆ ತಪ್ಪಾದೀತೆಂದು ನಮಗೆ ಅನ್ನಿಸುವುದಿಲ್ಲ.

ಮೇಲಿನಂತೆ ನೋಡಲಾಗಿ, ಎಲ್ಲೆಡೆಗೆ ಈ ಕಾರ್ಯಕಾರಿ ಮಂಡಲಿಯನ್ನು ಕುರಿತು ಯಾವ ಬಗೆಯ ಔದಾಸೀನ್ಯ ಹರಡಿದೆಯೋ ಅದು ಸೂಕ್ತವೇ ಸರಿ. ಅದಕ್ಕೆ ಈ ಯೋಜನೆಯನ್ನು ಸಫಲಗೊಳಿಸುವಷ್ಟು ಮಹತ್ವವಿಲ್ಲ. ಹೀಗಾಗಿ ಅದರ ಒಳಿತು, ಕೆಡಕನ್ನು ಕುರಿತು ಬರೆಯುವ ಇರಾದೆ ನಮ್ಮಲ್ಲಿರಲಿಲ್ಲ. ಆದರೆ ಅದಕ್ಕೆ ಅಸ್ಪೃಶ್ಯರು ಹಾಗೂ ಹಿಂದೂಗಳ ದೃಷ್ಟಿಯಿಂದ ಹೆಚ್ಚಿನ ಮಹತ್ವವಿದೆ. ಅದನ್ನು ಅರಿತುಕೊಳ್ಳುವುದು ಎಲ್ಲರ ಹಿತದ್ದು.

ಮೊಟ್ಟಮೊದಲಿಗೆ, ಈ ಕಾರ್ಯಕಾರಿ ಮಂಡಲಿಯ ಯೋಜನೆಯಿಂದ ಅಸ್ಪೃಶ್ಯ ವರ್ಗದ ಜನರು ಒಂದು ಪಾಠವನ್ನು ಕಲಿತುಕೊಳ್ಳುವುದು ಅಗತ್ಯದ್ದು, ಕಾರ್ಯಕಾರಿ ಮಂಡಲಿಯ ಪುನರಚನೆ ಆಗಲಿದೆ, ಎಂದು ಬ್ರಿಟಿಶ್ ಸರಕಾರದ ವತಿಯಿಂದ ಘೋಷಿಸಲಾದ ದಿನದಿಂದ ಅಸ್ಪೃಶ್ಯ ವರ್ಗದ ಒಬ್ಬನಾದರೂ ಪ್ರತಿನಿಧಿಯನ್ನು ಈ ಕಾನೂನು ಕೌನ್ಸಿಲ್‌ಗೆ ಸೇರ್ಪಡಿಸಿಕೊಳ್ಳುವ ಬಗೆಗೆ ಎಂದಿಗೂ, ಯಾರಲ್ಲೂ ಸಂದೇಹ ತಲೆದೋರಿರಲಿಲ್ಲ. ೧೯೨೭ರಿಂದ ಇಂದಿನವರೆಗಿನ ಹಿಂದೂಸ್ಥಾನದ ರಾಜಕೀಯ ಇತಿಹಾಸವನ್ನು ಪರೀಕ್ಷಿಸಿ ನೋಡಿದರೆ ಒಂದು ಮಹತ್ವದ ಸಂಗತಿ ಕಂಡುಬರುವುದು. ಅದೆಂದರೆ, ಹಿಂದೂ ಸಮಾಜಕ್ಕೆ ಒಳಪಟ್ಟುದೆಂದು ಪರಿಗಣಿಸಲಾಗುತ್ತಿದ್ದ ಅಸ್ಪೃಶ್ಯ ಸಮುದಾಯವನ್ನು ಬೇರೆ ಸಮುದಾಯವೆಂದು ಪರಿಗಣಿಸಲು ಶುರುವಾದುದು. ಇದಲ್ಲದೆ ರಾಜ್ಯಾಧಿಕಾರ ಇರುವಲ್ಲೆಲ್ಲ ಅವರಿಗಾಗಿ ಬೇರೆ ವ್ಯವಸ್ಥೆಯನ್ನು ಮಾಡಲಾಗಿತ್ತು. ಇದೆಂದರೆ, ಹಿಂದೂಗಳಿಂದ ಅಗಲಿದ ಹಾಗೂ ಬೇರೆ ಎಂದು ತೀರ್ಮಾನಿಸಲಾದ ಅವರ ಸಾಮಾಜಿಕ ಜೀವನದ ಪುರಾವೆಯೇ ಎನ್ನಬೇಕು. ಅಸ್ಪೃಶ್ಯರು ರಾಜಕೀಯ



ದೃಷ್ಟಿಯಿಂದಲಾದರೂ ಹಿಂದೂಗಳಿಂದ ಬೇರೆ, ಸ್ವತಂತ್ರರು, ಎನ್ನುವ ಸಂಗತಿಯು ಎಷ್ಟೊಂದು ಸಾಮಾನ್ಯವಾಯಿತೆಂದರೆ ಕಾರ್ಯಕಾರಿ ಮಂಡಲಿಯಲ್ಲಿ ಮುಸಲ್ಮಾನರಂತೆಯೇ ಅಸ್ಪೃಶ್ಯ ಸಚಿವರೂ ಇರಬೇಕೆಂಬ ರಾಜಕೀಯ ಕಟ್ಟಳೆಯನ್ನು ಗವರ್ನಮೆಂಟ್ ಆಫ್ ಇಂಡಿಯಾ ಆ್ಯಕ್ಟ್ ದಲ್ಲಿ ಸೇರ್ಪಡಿಸಲಾಗಿತ್ತು. ಆದರೆ ಕಾಂಗ್ರೆಸ್ಸಿನವರು ದುರಹಂಕಾರದಿಂದ ಅಸ್ಪೃಶ್ಯರನ್ನು ತಮ್ಮ ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಲಿಲ್ಲ, ಎನ್ನುವುದು ಬೇರೆ ಸಂಗತಿ. ಆದರೆ ಸಚಿವ ಸಂಪುಟದಲ್ಲಿ ಸ್ಥಾನವನ್ನು ಪಡೆಯುವುದು ಅವರ ಹಕ್ಕು, ಎಂಬ ಬಗೆಗೆ ಯಾರಿಂದಲೂ ಸಂದೇಹ ಪಡಲು ಸಾಧ್ಯವಿಲ್ಲ.

ಈ ಹಿನ್ನೆಲೆಯಲ್ಲಿ, ವಾಯಿಸ್ ರಾಯ್ ಅವರು ತಯಾರಿಸಿದ ಕಾರ್ಯಕಾರಿ ಕೌನ್ಸಿಲ್‌ನ ಯೋಜನೆಯನ್ನು ಕಾಣಲಾಗಿ, ಆಂಗ್ಲ ಸರಕಾರವು ದೊಡ್ಡ ಅನ್ಯಾಯವನ್ನು ಮಾಡಿದೆ, ಎನ್ನುವಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಇದು ಬರಿ ಅನ್ಯಾಯವಷ್ಟೇ ಆಗಿದ್ದರೆ ಸರಿ. ಆದರೆ ಇದು ನಂಬಿಕೆ ಬಗೆಯಲಾದ ದ್ರೋಹವಾಗಿತ್ತು, ಎನ್ನದೆ ವಿಧಿಯಿಲ್ಲ. ಯುದ್ಧ ಶುರುವಾದಂದಿನಿಂದ ಈಗಿನ ಲಾರ್ಡ್ ಲಿನ್‌ಲಿಥ್‌ಗೊ ಅವರು ಪ್ರಕಟಿಸಿದ ರಾಜಕೀಯ ಸುತ್ತೋಲೆಗಳನ್ನು ಗಮನಿಸಿದರೆ

ಅವರೂ ಕೂಡ ಅಸ್ಪೃಶ್ಯ ವರ್ಗದ ರಾಜಕೀಯ ದರ್ಜೆಯನ್ನು ಒಪ್ಪಿಕೊಂಡುದು ಸ್ವಯಂಸಿದ್ಧ. ಮುಸಲ್ಮಾನ ಸಮುದಾಯವು ಹಿಂದೂಸ್ಥಾನದ ರಾಜಕೀಯದ ಒಂದು ಘಟಕವಾಗಿರುವಂತೆಯೇ ಅಸ್ಪೃಶ್ಯ ವರ್ಗವೂ ಹಿಂದೂಸ್ತಾನದ ರಾಜಕೀಯದ ಒಂದು ಘಟಕವಾಗಿದೆಯೆಂದು ಅವರು ತಮ್ಮ ಬಾಯಿಂದಲೇ ಒಪ್ಪಿಕೊಂಡಾಗಿದೆ. ಅವರು ತಾವಾಗಿಯೇ ಎಲ್ಲ ರಾಜಕೀಯ ಘಟಕಗಳ ಸಮ್ಮತಿಯಿಂದಲೇ ಹಿಂದೂಸ್ಥಾನದ ರಾಜಕೀಯ ನಡೆಯಬೇಕೆಂಬ ಭರವಸೆಯನ್ನು ಕೊಟ್ಟಿದ್ದರು. ಹೀಗಿರುವಾಗ, ಹೊಸ ಕಾರ್ಯಕಾರಿ ಮಂಡಲಿಯಲ್ಲಿ ಹಿಂದೂಗಳ ಮೂವರು ಪ್ರತಿನಿಧಿಗಳು, ಮುಸಲ್ಮಾನರ ಮೂವರು ಪ್ರತಿನಿಧಿಗಳು, ಪಾರಸಿಗಳ ಒಬ್ಬ ಪ್ರತಿನಿಧಿಯ ಆವಶ್ಯಕತೆ ಇದೆ ಹಾಗೂ ಅಸ್ಪೃಶ್ಯರ ಒಬ್ಬ ಪ್ರತಿನಿಧಿಯೂ ಇಲ್ಲದಿದ್ದರೂ ನಡೆದೀತು, ಎಂದೆನ್ನಿಸುವ ಬ್ರಿಟಿಶ್ ಸರಕಾರದ ಈ ಮನೋಭಾವ ಹಾಗೂ ರಾಜನೀತಿಗೆ ಏನೆನ್ನಬೇಕೋ ತಿಳಿಯುತ್ತಿಲ್ಲ , ಯುರೋಪಿನ ತುಂಬೆಲ್ಲ ಆಂಗ್ಲರವನಿಗೆ “ಮೋಸಗಾರ ಆಂಗ್ಲ ನೆಂಬ ವಿಶೇಷಣ ಪದವನ್ನು ಬಳಸಲಾಗುತ್ತದೆ. ಅದರಿಂದ ಅವನು ಕೆರಳುವುದೂ ಇದೆ. ಆದರೆ ಇಂಥ ದಾಖಲೆಗಳನ್ನು ಕಂಡಾಗ, ಮೇಲಿನ ವಿಶೇಷಣವನ್ನು ಬಳಸಲು ಶುರು ಮಾಡುವವರಿಗೆ ಆ ಬಗೆಯ ಒಂದು ಗಟ್ಟಿ ಆಧಾರ ಲಭಿಸಿರಬೇಕೆಂದು ಅನ್ನಿಸತೊಡಗುತ್ತದೆ. ಆಂಗ್ಲರು ದುರ್ಬಲವಾದ ಅಸ್ಪೃಶ್ಯ ವರ್ಗಕ್ಕೆ ಕೊಟ್ಟ ಮಾತನ್ನು ಮುರಿದು ಅವರ ಸೂಕ್ತ ಅಧಿಕಾರಕ್ಕೆ ಸಂಚಕಾರವನ್ನು ತರುವಲ್ಲಿ ದೊಡ್ಡ ಪುರುಷಾರ್ಥವಿದೆಯೆಂದು ಬಗೆಯಕೂಡದು.

ಆಂಗ್ಲ ಸರಕಾರದ ಈ ನೀಚ ಮತ್ತು ವಿಚಿತ್ರ ನಡತೆಯ ಬಗೆಗೆ ಜಿಗುಪ್ಸೆ ಬರುವಂತೆಯೇ ಹಿಂದೂ ಮುಂದಾಳುಗಳು ಮತ್ತು ಹಿಂದೂ ವೃತ್ತಪತ್ರಗಳು ತಳೆದ ಮೌನವನ್ನು ಕಂಡು ಅಷ್ಟೇ ಏಕೆ, ಅದಕ್ಕಿಂತಲೂ ಹೆಚ್ಚಿನ ಕೋಪ ಬಾರದಿರದು. ಅಸ್ಪೃಶ್ಯ ವರ್ಗದ ಪ್ರತಿನಿಧಿಯನ್ನು ಸಪ್ರು ಪರಿಷತ್ತಿನಲ್ಲಿ ಸೇರ್ಪಡಿಸದಿರುವ ಬಗೆಗೆ ಕ್ಷಮಾಪಣೆಯನ್ನು ಕೇಳಲಾಗಿಲ್ಲ. ಆದರೆ ಸಪ್ರು ಪರಿಷತ್ತು ಯಾವುದಾದರೂ ರಚನಾತ್ಮಕ ಕಾರ್ಯವನ್ನು ಕೈಕೊಂಡೀತೆಂಬ ಆಸೆ ನಮಗಂತೂ ಇರಲಿಲ್ಲ. ಹೀಗಾಗಿ ಆ ಬಗೆಗೆ ನಿರಾಶೆಯೂ ಅನ್ನಿಸುತ್ತಿಲ್ಲ. ಆದರೆ ಹಿಂದೂ ಮಹಾಸಭೆ ಹಾಗೂ ಅದರ ಮುಂದಾಳುವಾದ ಬ್ಯಾರಿಸ್ಟರ್ ಸಾವರಕರರ ನಡತೆಯಿಂದ ಮಾತ್ರ ಆಶ್ಚರ್ಯವೆನ್ನಿಸುತ್ತದೆ. ಬ್ಯಾ. ಸಾವರಕರರು ಒಂದು ಕಾಲಕ್ಕೆ ಬ್ರಿಟಿಶ್ರ ತೀವ್ರ ವೈರಿಯಾಗಿದ್ದರು. ಬ್ರಿಟಿಷ್‌ರ ರಾಜ್ಯವನ್ನು ಕಿತ್ತೆಸೆಯಲೆಂದು ಅವರು ಶಸ್ತ್ರಾಸ್ತ್ರ

ಸಾಮಗ್ರಿಯನ್ನು ಕಲೆಹಾಕಲೆಂದು ತಮ್ಮ ಅರ್ಧಕ್ಕಿಂತಲೂ ಹೆಚ್ಚಿನ ಆಯುಷ್ಯವನ್ನು ವ್ಯಯಿಸಿದರು. ಹೀಗಿರುವಾಗ ಇಂದು ಬ್ಯಾ. ಸಾವರಕರರೆಂದರೆ ಬ್ರಿಟಿಶ್ ರ ಊಟದ ತಟ್ಟೆಯ ಎದುರು ಆಸೆಗಣ್ಣಿನಿಂದ ಕುಳಿತ ಬೆಕ್ಕಿನಂತಾಗಿದ್ದಾರೆ, ಎಂದೆನ್ನಲು ಯಾವುದೇ ಅಭ್ಯಂತರವಿಲ್ಲ. ವಾಯಿಸ್‌ರಾಯ್ ಸಾಹೇಬರು ಘೋಷಣೆಯನ್ನು ಮಾಡಬೇಕು, ಸಾವರಕರರು ಕೊಂಬು ಊದುತ್ತ, ಜಗತ್ತಿಗೆ ತಮ್ಮ ಒಪ್ಪಿಗೆಯನ್ನು ಸಾರಬೇಕು ಎಂಬುದನ್ನು ಬಿಟ್ಟರೆ ಸಾವರಕರರು ಬೇರೇನನ್ನಾದರೂ ಮಾಡುತ್ತಿರಬಹುದೆಂದು ಈವರೆಗಿನ ಅವರ ರಾಜಕೀಯದಿಂದಂತೂ ಕಾಣುತ್ತಿಲ್ಲ. ಅವರು ಮಾಡುತ್ತಿರುವ ಈ ಬಾಲಬಡುಕತನಕ್ಕೆ ಸಾರ್ವಜನಿಕ ಹಿತಾಸಕ್ತಿಯ ಆಧಾರವೇನಾದರೂ ಇದ್ದಿದ್ದರೆ ಅದಕ್ಕಾಗಿ ಯಾರೂ ಅವರ ಮೇಲೆ ತಪ್ಪು ಹೊರಿಸುತ್ತಿರಲಿಲ್ಲ. ಆದರೆ ಆಂಗ್ಲರ ದೃಷ್ಟಿ ಹಿಂದೂಗಳ ಬಗೆಗೆ ಹೇಗಿದೆ, ಎಂದು ಯೋಚಿಸಿದರೆ, ಅವರು ಹಿಂದುಗಳ ಹಿತಾಸಕ್ತಿಗಳಿಗಾಗಿ ಏನು ಮಾಡುತ್ತಾರೆ, ಎಂಬ ಪ್ರಶ್ನೆಯ ಬಗೆಗೆ ಸಾವರಕರರಿಗೆ ಯಾವುದೇ ಬಗೆಯ ಚಿಂತೆ ಅನ್ನಿಸುತ್ತಿರಲಿಕ್ಕಿಲ್ಲ, ಎಂದೇ ಅನ್ನಬೇಕಾಗುತ್ತದೆ. ವಾಯಿಸ್‌ರಾಯ್ ಸಾಹೇಬರು ತಮ್ಮೊಂದಿಗೆ ಪತ್ರವ್ಯವಹಾರವನ್ನು ಇರಿಸಿಕೊಂಡಿದ್ದಾರೆ, ಎಂಬಷ್ಟರಿಂದಲೇ ಸಾವರಕರರು ಬೀಗಿಹೋಗಿ ಖುಷಿಪಡುವಂತೆ ಕಾಣುತ್ತದೆ. ಇಲ್ಲದಿದ್ದರೆ, ವಾಯಿಸ್‌ರಾಯ್‌ರಿಂದ ತಯಾರಿಸಲಾದ ಕಾರ್ಯಕಾರಿ ಮಂಡಲಿಯ ಯೋಜನೆಗೆ ಬೆಂಬಲವನ್ನು ನೀಡುವಾಗ ಹಿಂದೂ ಮಹಾಸಭೆಯನ್ನು ಸಮರ್ಥಿಸುವ ಯಾವನಿಗಾದರೂ ಸಾವರಕರರ ಈ ಇಡಿಯ ರಾಜಕೀಯವು ಅದೆಷ್ಟು ವಿಚಿತ್ರವಾಗಿ ಕಾಣುತ್ತದೆಂದರೆ ಅವರಿಗೆ ರಾಜಕೀಯ ಅರ್ಥವಾಗುತ್ತದೋ ಇಲ್ಲವೋ ಎಂಬ ಬಗೆಗೆ ನಮಗಂತೂ ಸಂಶಯ.

ಕಮ್ಯೂನಲ್ ಅವಾರ್ಡ್ ನ್ನು ವಿರೋಧಿಸಲೆಂದು ಹಿಂದೂ ಮಹಾಸಭೆ ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಬ್ರಿಟಿಷ್ ಸರಕಾರವು ಕಾನೂನು ಕೌನ್ಸಿಲ್ ಹಾಗೂ ಕಾರ್ಯಕಾರಿ ಮಂಡಲಿಯಲ್ಲಿ ಮುಸಲ್ಮಾನರಿಗೆ ಅವರ ಜನಸಂಖ್ಯೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಪ್ರತಿನಿಧಿಗಳನ್ನು ನೀಡಿತೆಂಬುದೇ ಹಿಂದೂ ಮಹಾಸಭೆಯ ದೊಡ್ಡ ದೂರು. ಹಿಂದೂ ಮಹಾಸಭೆಯ ದೃಷ್ಟಿಯಿಂದ ಇದನ್ನೇ ಬ್ರಿಟಿಶರು ಮಾಡಿದ ಬಲು ದೊಡ್ಡ ಪಾಪವೆಂದು ತಿಳಿಯಲಾಗುತ್ತಿತ್ತು. ಈ ತಪ್ಪನ್ನು ಸರಿಪಡಿಸಿ ಮುಸಲ್ಮಾನರಿಗೆ ನೀಡಲಾದ ಹೆಚ್ಚಿನ ಪ್ರತಿನಿಧಿಗಳನ್ನು ಕಡಿಮೆ ಮಾಡಹಚ್ಚಿ ಜನಸಂಖ್ಯೆಯ ಪ್ರಮಾಣದಲ್ಲಿ ಪ್ರತಿನಿಧಿಗಳ ಕೋಷ್ಟಕವನ್ನು ತಯಾರಿಸಿಕೊಳ್ಳುವುದೇ ಹಿಂದೂ ಮಹಾಸಭೆಯ ತುಂಬ ಮಹತ್ವದ ಕೆಲಸವಾಗಿಬಿಟ್ಟಿತ್ತು. ಕಳೆದ ವರ್ಷ ಕಾರ್ಯಕಾರಿ ಮಂಡಲಿಯ ಹೊಸ ಸಂವಿಧಾನದ ಸಿದ್ಧತೆ ಸಾಗಿದಾಗ, ಜಿನ್ನಾ ಅವರು ಮುಸಲ್ಮಾನರಿಗೆ ಶೇಕಡಾ ೫೦ ಪ್ರತಿನಿಧಿತ್ವ ಸಿಕ್ಕಬೇಕೆಂಬ ಬೇಡಿಕೆಯನ್ನು ಮುಂದಿರಿಸಿದಾಗ ಸಾವರಕರರು ಹಿಂದೂ

ಮಹಾಸಭೆಯ ವತಿಯಿಂದ ಅದನ್ನು ವಿರೋಧಿಸಿಯೂ ಇದ್ದರು. ಅದೇ ರೀತಿಯಾಗಿ, ಆ ಕಾಲಕ್ಕೆ ತಯಾರಾಗಲಿದ್ದ ಕಾರ್ಯಕಾರಿ ಮಂಡಲಿಯಲ್ಲಿ ಒಬ್ಬ ಅಸ್ಪೃಶ್ಯ ಹಾಗೂ ಒಬ್ಬ ಸಿಖ್ಖ್ ಪ್ರತಿನಿಧಿಯನ್ನು ತೆಗೆದುಕೊಳ್ಳಬೇಕೆಂದು ಘೋಷಿಸಲಾಗಿತ್ತು. ಆಶ್ಚರ್ಯದ ಸಂಗತಿ ಎಂದರೆ, ಆಂಗ್ಲ ಸರಕಾರವು ಇಂದು ಅನುಷ್ಠಾನಕ್ಕೆ ಬಂದ ಕಾರ್ಯಕಾರಿ ಮಂಡಲಿಯಲ್ಲಿ ಮುಸಲ್ಮಾನರಿಗೆ ಸುಮಾರು ಶೇಕಡಾ ೫೦ರಷ್ಟು ಪ್ರತಿನಿಧಿತ್ವವನ್ನು ನೀಡಿದೆ. ಆದರೆ, ಅಸ್ಪೃಶ್ಯ ಇಲ್ಲವೆ ಸಿಖ್ಖ್ ರಿಗೆಗೆ ಒಬ್ಬನ ಪ್ರತಿನಿಧಿತ್ವವನ್ನೂ ನೀಡಲಾಗಿಲ್ಲ. ಹೀಗಿರುವಲ್ಲಿ ಬ್ಯಾರಿಸ್ಟರ್ ತಾತ್ಯಾರಾವ್ ಸಾವರಕರರು ಮುಸಲ್ಮಾನರಿಗೆ ಶೇಕಡಾ ೫೦ರಷ್ಟು ಪ್ರತಿನಿಧಿತ್ವವನ್ನು ನೀಡಲಾದ ವ್ಯವಸ್ಥೆ ಚೆನ್ನಾಗಿದೆಯೆಂದು ಕೊಂಡಾಡುತ್ತಿರುವರು! ಈ ವಿಚಾರವೈಚಿತ್ರವನ್ನು ಕಂಡು ಸಾವರಕರರಿಗೆ ಬುದ್ಧಿಭ್ರಂಶವಾಗಿದೆ ಎಂದು ಯಾರಿಗಾದರೂ ಅನ್ನಿಸಿದರೆ



ಆಶ್ಚರ್ಯವೇನಿಲ್ಲ. ಅಸ್ಪೃಶ್ಯರು ಹಾಗೂ ಸಿಖ್ಖ್ ರ ಪ್ರತಿನಿಧಿತ್ವವನ್ನು ಕುರಿತು ಸಾವರಕರರ ದೃಷ್ಟಿಕೋನದಲ್ಲಿ ತುಂಬ ವ್ಯತ್ಯಾಸ ಉಂಟಾದುದು ಕಂಡುಬರುತ್ತದೆ. ಕಳೆದ ವರ್ಷ ಕಾರ್ಯಕಾರಿ ಮಂಡಲಿಯಲ್ಲಿ ಅಸ್ಪೃಶ್ಯರ ಜೊತೆಗೆ ಸಿಖ್ಖ ಪ್ರತಿನಿಧಿತ್ವ ಬೇಕೆಂದು ಒತ್ತು ಕೊಟ್ಟು ಹೇಳುವ ಸಾವರಕರರು ಇಂದು ಸಿಖ್ಖ ಪ್ರತಿನಿಧಿಯನ್ನು ಸೇರ್ಪಡಿಸದ ಕುರಿತು ಮಾತ್ರ ಖೇದವನ್ನು ವ್ಯಕ್ತಪಡಿಸುತ್ತ ಸಿಖ್‌ರ ಮೇಲಾದ ಅನ್ಯಾಯವನ್ನು ದೂರಗೊಳಿಸಬೇಕೆಂಬ ಬೇಡಿಕೆಯನ್ನು ಸಲ್ಲಿಸುತ್ತಿರುವರು. ಆದರೆ ಅವರು ಅಸ್ಪೃಶ್ಯರ ಒಬ್ಬನೂ ಪ್ರತಿನಿಧಿಯನ್ನು ಸೇರ್ಪಡಿಸದ ಬಗೆಗೆ ಚಕಾರವನ್ನೂ ಎತ್ತಿಲ್ಲ. ಒಂದು ವರ್ಷದಲ್ಲೆಂದರೆ ಸಾವರಕರರ ದೃಷ್ಟಿಕೋನದಲ್ಲಿ ಅಸ್ಪೃಶ್ಯರನ್ನು ಕುರಿತು ಇಷ್ಟೊಂದು ಬದಲಾವಣೆಯಾಗಲು ಯಾವ ಪ್ರಬಲ ಕಾರಣವಿದೆಯೋ, ನಾವು ಹೇಳಲಾರೆವು. ಹಿಂದೂ ಮಹಾಸಭೆಯು ಪೂರ್ತಿ ಬ್ರಾಹ್ಮಣಶಾಹಿಯ ವರ್ಚಸ್ಸಿಗೆ ಒಳಪಟ್ಟುದು ಅವರೀ ನಡತೆಯಿಂದ ಕಂಡುಬರುತ್ತದೆ. ಇಲ್ಲದೆ ಹೋದರೆ ಸಾವರಕರರಿಂದ ಇಂತಹ ದೊಡ್ಡ ತಪ್ಪು ಆಗಲು ಸಾಧ್ಯವಿಲ್ಲ.

ಇದನ್ನು ಕುರಿತು ಹಿಂದೂ ಜನರಿಗೆಲ್ಲ ಒಂದು ಸೂಚನೆಯನ್ನು ಮಾಡಬಯಸುತ್ತೇವೆ. ಇಂದು ಹಿಂದೂಸ್ಥಾನದ ರಾಜಕೀಯವನ್ನು ಸೂಕ್ಷ್ಮವಾಗಿ ನಿರೀಕ್ಷಿಸುವವನಿಗೆ ಒಂದು ಸಂಗತಿ ಕಂಡುಬರುತ್ತದೆ. ಅದೇಂದರೆ ಇಂಗ್ಲಿಷ್ ಸರಕಾರವು ಮುಸಲ್ಮಾನರ ಮನೆಯಲ್ಲಿ ಅಡವು ಬಿದ್ದಿದ್ದು ಅದು ಪೂರ್ತಿ ಮುಸಲ್ಮಾನರ ವಶಕ್ಕೆ ಹೋಗಿದೆಯೆಂಬುದು. ಆಂಗ್ಲರ ಮನದಲ್ಲಿ ಹಿಂದೂಗಳ ಬಗೆಗೆ ಕೇಡಿನ ಭಾವನೆ ಹುಟ್ಟಿಕೊಂಡಂತಿದೆ. ಯುದ್ಧದ ಸಂದರ್ಭದಲ್ಲಿ ಗಾಂಧಿಯವರು ಆಂಗ್ಲರೊಡನೆಯ ಅಸಹಕಾರಕ್ಕೆ ಕರೆಕೊಟ್ಟಿರುವರು. ಜಿನ್ನಾ ಇವರು ಆಂಗ್ಲರೊಡನೆ ಇದಕ್ಕಿಂತಲೂ ಹೆಚ್ಚು ಕಠೋರವಾದ ಅಸಹಕಾರವನ್ನು ಆರಂಭಿಸಿರುವರು. ಹೀಗಿದ್ದ ಕಾರಣ ಆಂಗ್ಲರು ಜಿನ್ನಾರಿಂದ ಮುಸಲ್ಮಾನರನ್ನು ಒಡೆದು ತಮ್ಮ ವಶಕ್ಕೆ ತೆಗೆದುಕೊಳ್ಳಲು ಬಗೆಬಗೆಯಾಗಿ ಹೆಣಗುತ್ತಿದ್ದಾರೆ. ಇಷ್ಟೇ ಅಲ್ಲದೆ, ಅವರು ಮುಸಲ್ಮಾನರಿಗೆ ಶೇಕಡಾ ೫೦ರಷ್ಟು ಪ್ರತಿನಿಧಿತ್ವವನ್ನು ನೀಡಿ ಪಾಕಿಸ್ತಾನದ ಸಂಭಾವನೆಯನ್ನು ಮುಂಗಡವಾಗಿಯೇ ಕೊಟ್ಟುಬಿಟ್ಟಿದ್ದಾರೆ. ಆದರೆ ಆಂಗ್ಲರು ಹಿಂದೂಗಳನ್ನು ಗಾಂಧಿಯವರಿಂದ ಪರಾವೃತ್ತಗೊಳಿಸಲು ಯಾವುದೇ ಪ್ರಯತ್ನವನ್ನು ಮಾಡುತ್ತಿಲ್ಲವಲ್ಲದೆ ಹಾಗೆ ಮಾಡುವ ಇಚ್ಛೆಯೂ ಅವರಲ್ಲಿ ಇದ್ದಂತೆ ತೋರುತ್ತಿಲ್ಲ. ಹಿಂದೂಸ್ಥಾನದ ಇಂದಿನ ರಾಜಕೀಯವು, ಆಂಗ್ಲರು ಹಾಗೂ ಮುಸಲ್ಮಾನರ ನಡುವಿನ ಸಹಕಾರ, ಗುಪ್ತಾಲೋಚನೆ ಹಾಗೂ ಪಾಲುಗಾರಿಕೆಯ ಮೂಲಕ ನಡೆದಿದೆ. ಈ ಪಾಲುಗಾರಿಕೆಯಲ್ಲಿ ಆಂಗ್ಲ ಸರಕಾರವು ಒಬ್ಬ ಅಧೀನ ಪಾಲುಗಾರನಂತೆ ಕಂಡುಬರುತ್ತದೆ. ಅವರಿಗೆ ಮುಸಲ್ಮಾನರು ಹೇಳುವಂತೆ ನಡೆಯುವುದನ್ನು ಬಿಟ್ಟರೆ ಬೇರೆ ಮಾರ್ಗೋಪಾಯವೇ ಉಳಿದಿಲ್ಲ. ಮುಸಲ್ಮಾನ-ಆಂಗ್ಲರ ಈ ಪಾಲುಗಾರಿಕೆಯು ಹಿಂದೂಗಳಿಗೆ ತುಂಬ ಹಾನಿಕರ, ಎಂಬುದನ್ನು ಹೇಳಬೇಕಿಲ್ಲ. ಒಟ್ಟಿನಲ್ಲಿ ಅವರೀರ್ವರ ಇಂದಿನವರೆಗಿನ ಧೋರಣೆಯೆಂದರೆ ಈ ದೇಶಕ್ಕೆ ಸ್ವರಾಜ್ಯ ಲಭಿಸದ ಹಾಗೆ ಮಾಡುವುದು. ಒಂದು ವೇಳೆ ಸ್ವರಾಜ್ಯವನ್ನು ಕೊಡಲೇ ಬೇಕಾದರೆ ದೇಶವನ್ನು ದುರವಸ್ಥೆಗೆ ನೂಕಿ ಆಮೇಲೆ ಸ್ವರಾಜ್ಯವನ್ನು ಕೊಡುವುದು. ಅವರ ಪಾಲುಗಾರಿಕೆಯಿಂದ ಇಂಥದೇ ಪರಿಣಾಮ ಉಂಟಾಗಲಿದೆ. ಹಿಂದೈಗಳಿಗೆ ಈ ಘೋರ ಪರಿಣಾಮದಿಂದ ತಮ್ಮನ್ನು ಬಚಾವು ಮಾಡಿಕೊಳ್ಳಬೇಕೆಂದಿದ್ದರೆ, ಅವರು ಅಸ್ಪೃಶ್ಯರೊಡನೆ ಸಮಾನ ಬುದ್ಧಿಯಿಂದ ನಡೆದುಕೊಳ್ಳುವ ಉದಾರಬುದ್ಧಿಯನ್ನು ತೋರಿಸಬೇಕಿದೆ. ನಡೆದ ಈ ಸಂಗತಿಯಿಂದಾಗಿ ಅಸ್ಪೃಶ್ಯ ವರ್ಗಗಳು ಪಾಠ ಕಲಿತುಕೊಳ್ಳಬೇಕೆನ್ನುವ ಒಂದು ಬೃಹತ್ ಸನ್ನಿವೇಶ ಎದುರಾಗಿದೆಯೆನ್ನಲು ಯಾವುದೇ ಅಭ್ಯಂತರವಿಲ್ಲ. ಇಬ್ಬರೂ ಪಿತೂರಿ ಮಾಡಿದ್ದಾರೆ. ಅಸ್ಪೃಶ್ಯರು

ಆಂಗ್ಲ ಸರಕಾರ ಹಾಗೂ ಹಿಂದೂಗಳನ್ನು ಅದೆಷ್ಟರ ಮಟ್ಟಿಗೆ ನಂಬಬೇಕೆಂಬುದನ್ನು ಕುರಿತು ಯೋಚಿಸುವ ಹೊತ್ತು ಬಂದಿದೆ, ಎಂದು ನಮಗೆ ಅನ್ನಿಸುತ್ತದೆ. ಇದನ್ನು ಕುರಿತು ಎಂದಾದರೂ ಬರೆಯುವ ಇರಾದೆ ನಮಗಿದೆ. ಆದರೆ ಇಂದು ಮಾತ್ರ ಆಂಗ್ಲ ಸರಕಾರ ಹಾಗೂ ಹಿಂದೂ ಮಹಾಸಭೆ ಇವೆರಡನ್ನೂ ಜೋರಾಗಿ ಪ್ರತಿಭಟಿಸಲೇಬೇಕೆಂಬುದು ಅಸ್ಪೃಶ್ಯರ ಈ ಕ್ಷಣದ ಒಂದು ದೊಡ್ಡ ಕರ್ತವ್ಯವಾಗಿಬಿಟ್ಟಿದೆ.

ಸಂಪಾದಕೀಯ : 'ಜನತಾ ತಾ. ೯ ಆಗಸ್ಟ್ ೧೯೪೧.

ಉದ್ಧೃತ : ಗಾಂಜರೆ, ಸಂಪುಟ ೫, ಪು. ೪೩-೪೭.

### ೯೯. ಪ್ರಜಾಪ್ರಭುತ್ವವಾದ ಅಥವಾ ನಾಜೀವಾದ

ಭಾರತೀಯ ಸರಕಾರದ ಶ್ರಮ ಸದಸ್ಯರಾದ ಮಾನನೀಯ ಡಾಕ್ಟರ್ ಬಿ ಆರ್ ಅಂಬೇಡಕರ ಅವರು ಪ್ರಕಟಣೆಗೆಂದು ೨೭ ಜುಲೈ ಸನ್ ೧೯೪೨ರಂದು ವೃತ್ತಪತ್ರಗಳಿಗೆ ನೀಡಿದ ಹೇಳಿಕೆ :

"ಯಾರೂ ಗಾಂಧೀಜಿಯವರ ಯೋಚನೆಗಳು ಯಾವಾಗಲೂ ಒಂದೇ ಬಗೆಯಾಗಿ ಇರುವವೆಂದು ನಿರೀಕ್ಷಿಸುವುದಿಲ್ಲ. ಆದರೆ ಅವರು ತಮ್ಮ ಜವಾಬ್ದಾರಿಯನ್ನು ಅರ್ಥ ಮಾಡಿಕೊಳ್ಳುವರೆಂದು ಎಲ್ಲರೂ ಆಶಿಸಿದ್ದರು. ಅಲ್ಲದೆ ಎಲ್ಲರಿಗೂ ಹೀಗೆ ಆಶಿಸುವ ಅಧಿಕಾರ ಇದೆ. ಗಾಂಧೀಜಿಯವರು ನಡೆಯಿಸುತ್ತಿರುವ ಜನ-ಆಂದೋಲನೆಯು ಹೊಣೆಗೇಡಿತನದ್ದು ಹಾಗೂ ಹುಚ್ಚುತನದ್ದು, ಎನ್ನುವಲ್ಲಿ ಯಾವುದೇ ಸಂದೇಹವಿಲ್ಲ.

"ಇಂತಹ ದೊಡ್ಡ ಸಂಕಟಕಾಲದಲ್ಲಿ, ಇಂತಹ ಅನರ್ಥಕರವಾದ ಯೋಜನೆಯನ್ನು ನಡೆಯಿಸುವುದು ಆವಶ್ಯಕವೆಂದು ಗಾಂಧೀಜಿಯವರು ಏಕೆ ಬಗೆದರೆಂಬುದನ್ನು ಅರ್ಥಮಾಡಿಕೊಳ್ಳುವುದು ಕಷ್ಟ, ನನಗೆ ಕೆಲವು ಸಂಗತಿಗಳು ಸ್ಪಷ್ಟವಾಗಿವೆ. ಭಾರತೀಯರು ರಾಜಕೀಯ ಉದ್ದೇಶಗಳನ್ನು ಪಡೆದುಕೊಳ್ಳುವ ಕುರಿತು, ಆಂಗ್ಲರು ಆಡಳಿತವನ್ನು ನಡೆಯಿಸುವ ಅಧಿಕಾರವನ್ನು ಅವರಿಗೆ ಹೊತ್ತು ಹೊತ್ತಿಗೆ ನೀಡುತ್ತಲೇ ಬಂದಿರುವರೆಂಬುದನ್ನು ಹಾಗೂ ಇತ್ತೀಚೆಗೆ ಇಂಥ ಅಧಿಕಾರಗಳು ಶೀಘ್ರವಾಗಿ ಲಭಿಸುತ್ತಿವೆ, ಎಂಬ ಸಂಗತಿಯನ್ನು ಯಾರಾದರೂ ಒಪ್ಪಿಕೊಳ್ಳದೆ ಇರಲಾರರು, ಹೀಗೆಯೇ ಇನ್ನೊಂದು ಸಂಗತಿಯೂ ಸ್ಪಷ್ಟವಿದೆ. ಅದೆಂದರೆ, ಆಂಗ್ಲರು ಕೊನೆಯ ಹೊಂಡವನ್ನು ತಲುಪಿದ ಬಳಿಕ ಯುದ್ಧವನ್ನು ಸ್ವೀಕರಿಸಲು ಬಯಸುವುದಿಲ್ಲವಲ್ಲದೆ ಭಾರತದ ರಾಜಕೀಯ ಉನ್ನತಿಯಲ್ಲಿ ಯಾವುದೇ ಬಗೆಯ ಅಡೆತಡೆಯನ್ನು ಒಡ್ಡಲು ಇಚ್ಚಿಸುವುದಿಲ್ಲ. ಈ ಸಂಗತಿಗಾಗಿ ಪುರಾವೆ ಅಗತ್ಯದ್ದೆನ್ನಿಸಿದರೆ ಅದಕ್ಕಾಗಿಕ್ರಿಪ್ಸ್ರವರ

ಮಸೂದೆಗಳು ಹಾಜರಿವೆ. ಕಾಂಗ್ರೆಸ್ಸಿನ ಬೇಡಿಕೆಗಳಾದ (೧) ಸ್ವಾತಂತ್ರ್ಯ ಮತ್ತು (೨) ಸಂವಿಧಾನ-ಸಮಾವೇಶ, ಇವೆರಡನ್ನೂ ಅವುಗಳಲ್ಲಿ ಒಪ್ಪಿಕೊಳ್ಳಲಾಗಿದೆ.

"ಕ್ರಿಪ್ಸ್ ಮಸೂದೆಗಳು ಆಗಲೇ ಬಂದಿರುವಾಗ, ಆಂಗ್ಲರು ಭಾರತೀಯರಿಗೆ ಅಧಿಕಾರವನ್ನು ಕೊಡಲು ಇಚ್ಛಿಸುವುದಿಲ್ಲವೆಂಬ ಗಾಂಧೀಜಿಯವರ ಹೇಳಿಕೆಯನ್ನು ಒಪ್ಪಿಕೊಳ್ಳುವುದು ಕಷ್ಟ. ತಿಳಿದೂ ತಿಳಿದೂ ಬೇಕೆಂದೇ ಈ ಸುಳ್ಳು ಮಾತನ್ನು ಹೇಳಲಾಗಿದೆ. ನನ್ನ ಅರಿವಿನಂತೆ, ಭಾರತೀಯರು ವಸಾಹತುಶಾಹಿಯ ಸ್ವರಾಜ್ಯಕ್ಕಿಂತ ಸ್ವಾತಂತ್ರವನ್ನು ಹೆಚ್ಚು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಿದ್ದರೆ, ಕ್ರಿಪ್ಸ್ ಅವರ ಮಸೂದೆಯನ್ನು ತಳ್ಳಿ ಹಾಕುವುದೆಂದರೆ, ಬ್ರಿಟಿಶ್ ಸರಕಾರವು ಸ್ವಾತಂತ್ರ್ಯವನ್ನು ಕೊಡುವ ಬಾಧ್ಯತೆಯನ್ನು ಹೊಂದಿಲ್ಲ ಎಂದಲ್ಲ. ಕ್ರಿಪ್ಸ್ ಮಸೂದೆಗಳಿಂದಾಗಿ ಸ್ವಾತಂತ್ರ ಹಾಗೂ ಸಂವಿಧಾನಸಮಾವೇಶಗಳು ಲಭಿಸುತ್ತಿವೆಯಾದರೂ ಕಾಂಗ್ರೆಸ್ಸು ಅವನ್ನು ಒಪ್ಪಿಕೊಳ್ಳುತ್ತಿಲ್ಲವೇಕೆ, ಎನ್ನುವ ಮಾತು ನನಗೆ ಅರ್ಥವಾಗುತ್ತಿಲ್ಲ. ಭಾರತೀಯರಿಗೆ ಭದ್ರತಾ ಇಲಾಖೆಯನ್ನು ಕೊಡಲಾಗುತ್ತಿಲ್ಲ, ಎನ್ನುವುದು ಸವಿನಯ ಕಾನೂನು ಭಂಗ ಚಳುವಳಿಯನ್ನು ನಡೆಸಲು ಕಾರಣವಾಗಿದ್ದರೆ, ಮುಂದಾಲೋಚನೆಯಿಲ್ಲದ ಇಂಥ ವಿಚಾರಗಳನ್ನು ಸೂಕ್ತವೆಂದು ತೀರ ಕಡಿಮೆ ಜನ ಬಗೆಯುವರೆಂಬ ವಿಶ್ವಾಸ ನನ್ನಲ್ಲಿದೆ.



ಮೊದಲಿಗಂತೂ ಕಾಂಗ್ರೆಸ್ಸು, ಆಂಗ್ಲರು ಯುದ್ಧದ ಹಿಂದಿರುವ ತಮ್ಮ ಉದ್ದೇಶಗಳನ್ನು ಹೇಳಿಬಿಡಬೇಕೆಂದು ಅವರೆದುರು ತನ್ನ ಬೇಡಿಕೆಯನ್ನು ಮುಂದಿಟ್ಟಿತ್ತು, ಆದರೆ ಅದು, ಯುದ್ಧ ನಡೆಯುತ್ತಿರುವಾಗಲೇ ಅವುಗಳನ್ನು ಅನುಷ್ಠಾನಕ್ಕೆ ತರಬೇಕೆಂಬ ಬೇಡಿಕೆಯಾಗಿರಲಿಲ್ಲ. ಎರಡನೆಯ ಸಂಗತಿಯೆಂದರೆ, ನನಗೆ ತಿಳಿದಿರುವ ಮಟ್ಟಿಗೆ, ಭದ್ರತೆಯ ಕಲೆಯನ್ನರಿತ ಹಾಗೂ ಸೈನಿಕ ಕಾರ್ಯಾಚರಣೆಯನ್ನು ನಡೆಯಿಸಬಲ್ಲ ಭಾರತೀಯ ರಾಜಕೀಯ ತಜ್ಞನು ಒಬ್ಬನೂ ಇಲ್ಲ .

## ಯಾವುದೇ ಬಗೆಯ ಸಹಾನುಭೂತಿ ಇಲ್ಲ

ಮೂರನೆಯ ಸಂಗತಿ ಯಾವುದೆಂದರೆ, ಕ್ರಿಪ್ಸ್ ಮಸೂದೆಯಂತೆ ಎಲ್ಲ ಇಲಾಖೆಗಳನ್ನೂ ಒಪ್ಪಿಸಿ, ಭದ್ರತಾ ಇಲಾಖೆಯನ್ನು ಮಾತ್ರ ನೀಡಿದ್ದಕ್ಕಾಗಿ ಜಗಳಾಡುವುದೆಂದರೆ ಹುಡುಗಾಟಿಕೆಯಾಯಿತು. ಹಸ್ತಾಂತರಗೊಂಡ

ಇಲಾಖೆಗಳು ಆವಶ್ಯಕ ಹಾಗೂ ಸೂಕ್ತ ಸಂಗತಿಗಳಿಗೆ ಒತ್ತು ನೀಡಿದ್ದರೆ ಸುರಕ್ಷಿತವಾದ ಇಲಾಖೆಗಳು ಹಠ ಹಿಡಿಯುತ್ತಿರಲಿಲ್ಲ, ಎಂಬುದನ್ನು ತಿಳುವಳಿಕೆಯುಳ್ಳ ಯಾವನಾದರೂ ಅರ್ಥಮಾಡಿಕೊಳ್ಳಬಲ್ಲನು. ಗವರ್ನರರ ವಿಧೇಷಾಧಿಕಾರಗಳನ್ನು ಕಾರ್ಯಾನ್ವಿತಗೊಳಿಸುವಾಗ ಕಾಂಗ್ರೆಸ್ಸು ಅಧಿಕಾರ ಗ್ರಹಣವನ್ನು ಮಾಡಿದ ಕಾಲಕ್ಕೂ ಇಂಥದೇ ಸಂಗತಿ ನಡೆಯಿತು. ಕಾಂಗ್ರೆಸ್ಸು ಆಗಿನ ತನ್ನ ಅನುಭವಗಳನ್ನು ಮರೆತೇಬಿಟ್ಟಿರುವುದು ತುಂಬ ಅಚ್ಚರಿಯ ಸಂಗತಿ.

"ಕಾಂಗ್ರೆಸ್ಸಿನ ಈ ಸವಿನಯ ಕಾನೂನು ಭಂಗ ಚಳುವಳಿಯು ಯಾವುದೇ ಬಗೆಯ ಸಹಾನುಭೂತಿಗೆ ತಕ್ಕುದಲ್ಲವೆಂದು ನನ್ನ ಸ್ಪಷ್ಟ ಅಭಿಪ್ರಾಯ. ಅದು ತನಗೆ ಒದಗಿಸಲಾದ ದೇಶಸೇವೆಯ ಅವಕಾಶವನ್ನು ತಳ್ಳಿಹಾಕಿತು. ಇದನ್ನು ಕಂಡು, ಗಾಂಧೀಜಿಯವರ ಈ ಕೆಲಸವು ಯಾವ ರೀತಿಯಾಗಿ ದೇಶಕ್ಕೆ ಹಿತಕರವೆಂಬುದು ನನಗೆ ತಿಳಿಯದಂತಾಗಿದೆ. ಗಾಂಧೀಜಿ ಹಾಗೂ ಅವರ ಕಾಂಗ್ರೆಸ್ಸು ಯುದ್ಧ ಶುರುವಾಗುವ ಹೊತ್ತಿನಲ್ಲಿ ಕಳೆದುಕೊಂಡ ಗೌರವವನ್ನು ಮತ್ತೆ ಮರಳಿ ಪಡೆಯಲು ಯತ್ನಿಸುತ್ತಿರುವರೆಂದು ನನಗೆ ತಿಳಿದು ಬಂದಿದೆ. ಕಾಂಗ್ರೆಸ್ಸು ಇವೆರಡರಲ್ಲಿ ಯಾವುದೇ ಒಂದು ಬಗೆಯಾಗಿ ಗೌರವದಿಂದ ಇರಬಲ್ಲುದು. ಪ್ರಕಟ ಆಂದೋಲನ ಇಲ್ಲವೆ ಅಧಿಕಾರವನ್ನು ಸ್ವೀಕರಿಸುವ ಮೂಲಕ ಅದು ಜೀವಿಸಬಲ್ಲುದು. ಗಾಂಧೀಜಿಯವರು ಕಾಂಗ್ರೆಸ್ಸಿಗೆ ಅಧಿಕಾರವನ್ನು ತ್ಯಜಿಸಹಚ್ಚಿ, ಸತ್ಯಾಗ್ರಹದಲ್ಲಿ ಪಾಲ್ಗೊಳ್ಳದಂತೆ ಅದನ್ನು ತಡೆದರು. ಏನನ್ನೂ ಮಾಡದ ತಮ್ಮ ನೀತಿಯಿಂದಾಗಿ ಗಾಂಧೀಜಿಯವರು ಕಾಂಗ್ರೆಸ್ಸಿನ ಗೌರವಕ್ಕೆ ಉಂಟುಮಾಡಿದ ಗಾಯವು ಅವರಿಗೂ, ಕಾಂಗ್ರೆಸ್ಸಿಗೂ ಅನರ್ಥಕಾರಿಯಾಯಿತು. ತಮ್ಮ ಹಳೆಯ ಸ್ಥಾನವನ್ನು ಮರಳಿ ಪಡೆಯಲೆಂದೇ ಅವರು ಇಂಥ ದುಸ್ಸಾಹಸದ ನಡೆಯನ್ನು ಆರಂಭಿಸಿದರು. ಈ ನಡೆಯು ಕಾಂಗ್ರೆಸ್ ಪಕ್ಷಕ್ಕೆ ಹಿತಕರವೆಂದು ಅನ್ನಿಸಬಹುದಾದರೂ ಅದು ದೇಶ-ಸೇವೆಯ ಬಗೆಯಂತೂ ಖಂಡಿತ ಅಲ್ಲ. ಗಾಂಧೀಜಿಯವರ ಈ ಹೊತ್ತಿನ ನಡೆಯು ಕೀಟಲೆಯದು. ಇದರಿಂದ ದೇಶಕ್ಕೆ ಖಂಡಿತ ಬಲು ದೊಡ್ಡ ನಷ್ಟವಾಗಲಿದೆ.

"ಈ ದೇಶದ ಉನ್ನತಿಗಾಗಿ ಕಾಂಗ್ರೆಸ್ಸಿನೆದುರು ಎರಡು ದಾರಿಗಳಿವೆ : (೧) ಪ್ರಕಟವಾಗಿ ಆಂದೋಲನೆಯನ್ನು ಹೂಡುವುದು (೨) ದೇಶದ ಬೇರೆ ಪಕ್ಷಗಳನ್ನು ಪ್ರತಿನಿಧಿಸುವ ಎಲ್ಲ ಪಕ್ಷಗಳ ಒಟ್ಟು ಬೇಡಿಕೆಯನ್ನು ಮುಂದೆ ಮಾಡುವುದು. ಗಾಂಧೀಜಿ ಹಾಗೂ ಕಾಂಗ್ರೆಸ್ಸು ಮೊದಲ ದಾರಿಯನ್ನು ಹಿಡಿಯಲು ತುಂಬ ಉತ್ಸುಕರಾಗಿದ್ದಾರೆ. ಇಂಥ ಯೋಜನೆಯನ್ನು ಸಿದ್ಧಪಡಿಸಲು ಆಲೋಚನೆಯ ಅಗತ್ಯವಿಲ್ಲ. ಈ ಯೋಜನೆಯು ಕೆಲ ಕಾಲ ಕೆಲಸ ಮಾಡಿದ ಬಳಿಕ ತೀರ ನಿರುಪಯುಕ್ತವೆನ್ನಿಸಲಿದೆ, ಅದು ಯಶಸ್ವಿ ಎನ್ನಿಸಿದರೂ ಬ್ರಿಟಿಷ್ ಸರಕಾರವು ನಾಜಿ ಸರಕಾರದ ಹಾಗೆ ಪಾಶವಿ ಶಕ್ತಿಯನ್ನು

ಬಳಸುವ ಅಭ್ಯಾಸವನ್ನು ಹೊಂದಿಲ್ಲವಲ್ಲದೆ ಅದು ಆಂದೋಲನೆಯನ್ನು ಹತ್ತಿಕ್ಕಲು ನೈತಿಕವಲ್ಲದ ಯಾವುದೇ ಕೃತ್ಯವನ್ನು ಮಾಡುವುದಿಲ್ಲ, ಎಂಬ ಸಂಗತಿಯು ಗಾಂಧೀಜಿಯವರನ್ನುಳಿದು ಎಲ್ಲರಿಗೂ ಗೊತ್ತಿದೆ.

"ಗಾಂಧೀಜಿ ಈ ಮಾತನ್ನು ಒಪ್ಪಿಕೊಳ್ಳಲಾರರು, ನಾಜಿಗಳು ಅವರ ಆಂದೋಲನದೊಂದಿಗೆ ಹೇಗೆ ನಡೆದುಕೊಳ್ಳಬಹುದೆಂಬ ಅನುಭವ ಅದೃಷ್ಟದಿಂದ ಅವರಿಗೆ ಇಲ್ಲದಿರುವುದೇ ಇದಕ್ಕೆ ಕಾರಣ. ಗಾಂಧೀಜಿಯವರನ್ನು ದಮನಿಸಲು ನಾಜಿಗಳಿಗೆ ಹೆಚ್ಚು ವೇಳೆ ಬೇಕಿಲ್ಲವಲ್ಲದೆ ಪ್ರಕಟ ಆಂದೋಲನ ಶುರುವಾಗುವಾಗಲೇ ಮುಗಿಯಲು ಸಾಧ್ಯವೆಂದು ಅವರು ಸಿದ್ಧಪಡಿಸಿ ತೋರಿಸಬಲ್ಲರು.

## ಸುಳ್ಳು ಅಪಾದನೆಗಳು

"ಪ್ರಕಟ ಆಂದೋಲನವು ಇಷ್ಟೊಂದು ನಿರುಪಯೋಗಿಯೆಂದು ಸಿದ್ದವಾಗಿರುವಾಗಲೂ ಗಾಂಧೀಜಿಯವರು ಅದನ್ನೇಕೆ ನಡೆಯಿಸುತ್ತಿರುವರೆಂಬ ಪ್ರಶ್ನೆಯಿಂದ ಆತಂಕಕ್ಕೆ ಒಳಗಾಗಿದ್ದೇನೆ. ಎರಡನೆಯ ಉಪಾಯವಾದ ಎಲ್ಲ ಪಕ್ಷಗಳನ್ನು ಒಂದುಗೂಡಿಸಲು ಅವರೇಕೆ ಯತ್ನಿಸುತ್ತಿಲ್ಲ? ಗಾಂಧೀಜಿಯವರು ದೇಶದ ಬೇರೆ ಬೇರೆ ಪಕ್ಷಗಳ ನಾಯಕರ ಒಂದು ಕಾನ್‌ಫರೆನ್ಸ್ ನ್ನು ಏಕೆ ಕರೆಯುತ್ತಿಲ್ಲ? ತಮ್ಮ ಬೇಡಿಕೆಗಳನ್ನು ಕುರಿತು ಆ ನಾಯಕರಲ್ಲಿ ಜಗಳಗಳಿದ್ದರೆ ಏಕೆ ಅವುಗಳನ್ನು ಬಗೆಹರಿಸುತ್ತಿಲ್ಲ ? ಈ ಬಗೆಯ ಒಂದು ಉಪಾಯವನ್ನು ಕೈಕೊಳ್ಳಲು ಯತ್ನಿಸಬೇಕಾದುದು ಆವಶ್ಯಕ. ಇದು, ರಾಜಕಾರಣಿಗಳು ಜಾತಿ ಜಾತಿಗಳಲ್ಲಿ ಕಾಯಮ್ಮಾಗಿ ಶಾಂತಿ ನೆಲೆಸುವಂತೆ ಮಾಡಲೆಂದು ಬಳಸುವ ವಿಧಾನ. ಆದರೆ ಗಾಂಧೀಜಿಯವರು ಎಂದಿಗೂ ಇಂಥ ಯತ್ನವನ್ನು ಮಾಡಲೇ ಇಲ್ಲ. ಅವರು ಈ ಸಮಸ್ಯೆಯನ್ನು ಏಕೆ ಈ ರೀತಿಯಾಗಿ ಬಗೆಹರಿಸಲಿಲ್ಲ, ಎಂಬ ಸಂಗತಿ ನನಗೆಂದಿಗೂ ಅರ್ಥವಾಗಲೇ ಇಲ್ಲ. ಆಂಗ್ಲರು ಭಾರತದಲ್ಲಿ ಇರುವವರೆಗೆ ಯಾವುದೇ ಬಗೆಯ ಒಪ್ಪಂದ ಸಾಧ್ಯವಿಲ್ಲ ಎನ್ನುವ ಸಂಗತಿಯನ್ನು ಕುರಿತು ಎರಡು ಬಗೆಯ ಅರ್ಥಗಳು ಸಾಧ್ಯ ; (೧) ಅಲ್ಪಸಂಖ್ಯ ಜಾತಿಯ ನಾಯಕರು ಆಂಗ್ಲರ ಕೈಗೊಂಬೆಗಳೇ ? (೨) ಬ್ರಿಟಿಷ್ ಸರಕಾರ ಹೊರಟು ಹೋದ ಬಳಿಕ

ಸಾಂಪ್ರದಾಯಿಕ ಒಪ್ಪಂದಗಳನ್ನು ಕುರಿತು ಮಾತುಕತೆ ನಡೆಸುವುದು ಒಳ್ಳೆಯದಾದೀತೆಂದು ಕಾಂಗ್ರೆಸ್ಸು ಬಗೆಯುತ್ತದೆ. ಏಕೆಂದರೆ ಆಗ ಶಾಂತಿಯನ್ನು ಸ್ಥಾಪಿಸುವ ಅಧಿಕಾರವು ಕಾಂಗ್ರೆಸ್ಸಿನ ಕೈಯಲ್ಲಿ ಇರಲಿದೆ. ಅದನ್ನು ಬಳಸಿಕೊಂಡು ಅದು ತನ್ನ ಷರತ್ತುಗಳನ್ನು ಒಪ್ಪಿ ಒಪ್ಪಂದವನ್ನು ಮಾಡಿಕೊಳ್ಳುವಂತೆ ಅಲ್ಪಸಂಖ್ಯ ಜಾತಿಯವರನ್ನು ಒತ್ತಾಯಕ್ಕೆ ಒಳಪಡಿಸುವ ಒಳ್ಳೆಯ ಅವಕಾಶವನ್ನು ಪಡೆಯಲಿದೆ.

"ಇದರ ಅರ್ಥವು ಮೊದಲಿನ ಸಂಗತಿಗೆ ಸಂಬಂಧಪಟ್ಟದ್ದಾದರೆ ಇದು ಅಲ್ಪಸಂಖ್ಯ ಜಾತಿಯ ನಾಯಕರ ನಡತೆಯನ್ನು ಕುರಿತಾದ ಬಲು ಕೆಟ್ಟ ಹಾಗೂ ಅಶಿಷ್ಟವಾದ ಅಪಾದನೆಯಾಗಿದೆ. ತಾನು ಧರ್ಮದ ಪಥದ ಮೇಲಿದ್ದೇನೆಂಬ ವಿಚಾರವನ್ನು ಕಾಂಗ್ರೆಸ್ಸು ಬಿಟ್ಟುಕೊಟ್ಟು, ತನ್ನೊಂದಿಗೆ ಭಿನ್ನಾಭಿಪ್ರಾಯಗಳನ್ನು ಹೊಂದಿದವರು ಕೂಡ ಹೆಚ್ಚಲ್ಲದಿದ್ದರೂ ತನ್ನಷ್ಟೇ ದೇಶಭಕ್ತರೆಂಬುದನ್ನು ಒಪ್ಪಿಕೊಳ್ಳತಕ್ಕದ್ದು. ಕಾಂಗ್ರೆಸ್ಸು ಹಾಗೂ ಅದರ ವೃತ್ತಪತ್ರಗಳು ಒಂದೇ ಸಮನೆ ಅಲ್ಪಸಂಖ್ಯ ಜಾತಿಗಳ ನಾಯಕರ ಮೇಲೆ ಮೂರ್ಖತನದಿಂದ ಕೂಡಿದ ಆಪಾದನೆಗಳನ್ನು ಹೊರಿಸುತ್ತಿದ್ದು, ಅದರಿಂದಾಗಿ ಸಾಂಪ್ರದಾಯಿಕ ಒಪ್ಪಂದಗಳ ಪ್ರಶ್ನೆಯು ಇನ್ನಷ್ಟು ಬಿಕ್ಕಟ್ಟಾಗಿದೆಯೆಂದು ಭಾವಿಸುತ್ತೇನೆ. ಇದು ಎರಡನೆಯ ಸಂಗತಿಗೆ ಸಂಬಂಧಪಟ್ಟದ್ದಾದರೆ, ಖಂಡಿತ ಇದೊಂದು ದಾರಿ ತಪ್ಪಿಸಲೆಂದು ಹೂಡಿದ ಹೂಟವಾಗಿದೆ.



ಇವೆರಡೂ ಸಂಗತಿಗಳಿಂದ, ಗಾಂಧೀಜಿಯವರ ರಾಜಕೀಯವು ದಿವಾಳಿ ತೆಗೆದಿದೆಯೆಂಬುದು ಕಂಡುಬರುತ್ತದೆ.

"ಒಂದು ಸಂಗತಿಯು ಮಾತ್ರ ಗಾಂಧೀಜಿಯವರ ಗಮನಕ್ಕೆ ಬಂದಂತಿಲ್ಲ. ಅವರು ಆದಷ್ಟು ಬೇಗ ಅದನ್ನು ಅರಿತುಕೊಂಡರೆ ಒಳ್ಳೆಯದು. ಅವರ ರಾಜಕೀಯ ಗುಣಗಳನ್ನು ಕುರಿತು ಬಹಳಷ್ಟು ಡಂಗುರ ಸಾರಲಾದ ಸಂಗತಿಗಳು ಹೀಗಿದ್ದವು : ಹಿಂದೂ-ಮುಸಲ್ಮಾನರ ಒಕ್ಕಟ್ಟನ್ನು ಸಾಧಿಸುವುದು ಹಾಗೂ ಅಸ್ಪೃಶ್ಯರ ಸೇವೆಯನ್ನು ಮಾಡುವುದು. ೨೦ ವರ್ಷಗಳ ತರುವಾಯ ಇಂದು ಮುಸಲ್ಮಾನರಾಗಲಿ, ಅಸ್ಪೃಶ್ಯರಾಗಲಿ ಗಾಂಧೀಜಿಯವರನ್ನು ನಂಬುತ್ತಿಲ್ಲ.

"ಇದೊಂದು, ಗಾಂಧೀಜಿಯವರ ಜೀವನದ ಬಲು ದೊಡ್ಡ ದುರ್ಘಟನೆಯಾಗಿದೆ. ಅವರು ಆದಷ್ಟು ಬೇಗನೆ ಇದನ್ನು ತಿಳಿದುಕೊಂಡರೆ ಒಳ್ಳೆಯದು. ಇನ್ನು ಅವರು ಅಲ್ಪಸಂಖ್ಯರ ಮುಂದಾಳುಗಳನ್ನು ಸಲಹೆಗಾಗಿ ಕರೆಯಬಹುದು. ಆದರೆ ಆ ಮುಂದಾಳುಗಳು ಪೂರೈಸಲಾಗದ ಬೇಡಿಕೆಗಳನ್ನು ಮುಂದಿರಿಸಬಹುದೆಂದು ಯೋಚಿಸುವುದು ವ್ಯರ್ಥ.

ಏಕೆಂದರೆ, ಗಾಂಧೀಜಿಯವರು ತಮ್ಮ ಇಚ್ಛೆಯ ಮೇರೆಗೆ, ಅಲ್ಪಸಂಖ್ಯರು ತಮ್ಮಿ ವಿವಾದಗಳನ್ನು ತೀರ್ಮಾನಕ್ಕಾಗಿ ಆಂತಾರಾಷ್ಟ್ರೀಯ ಪಂಚಾಯತಿಗೆ ಕಳುಹಿಸಿ ಕೊಡಲು ಒಪ್ಪಿಕೊಳ್ಳಬೇಕೆಂದು ಯಾವಾಗ ಬೇಕಾದರೂ ಹೇಳಬಲ್ಲವರಾಗಿದ್ದರು.

"ಗಾಂಧೀಜಿಯವರ ಈ ಬಗೆಯ ಕೆಲಸವನ್ನು ಸಮರ್ಥಿಸಲು ಸಾಮಾನ್ಯ ಮನುಷ್ಯರ ಬಳಿ ಯಾವುದೇ ಕಾರಣವಿಲ್ಲ. ಇಂಥ ಕೆಲಸವು ನಡೆಯಬಾರದಿತ್ತು. ಗಾಂಧೀಜಿಯವರನ್ನು ಕಾಣಲು ಅಲ್ಪಸಂಖ್ಯರ ಬಳಿ ಯಾವುದೇ ಕಾರಣವಿರಲಿಲ್ಲ. ಏಕೆಂದರೆ ಗಾಂಧೀಜಿಯವರು ಹೊಸ ಸಂವಿಧಾನದಲ್ಲಿ ಅಲ್ಪಸಂಖ್ಯರ ಹಿತಾಸಕ್ತಿಗಳನ್ನು ಕಾಪಾಡುವ ಬಗೆಗೆ ಯಾವುದೇ ಸ್ವಚ್ಛ ಹಾಗೂ ಪ್ರಾಮಾಣಿಕ ಭರವಸೆಯನ್ನು ನೀಡಲು ಸಿದ್ಧರಿರಲಿಲ್ಲ.

"ಗಾಂಧೀಜಿಯವರೊಡನೆಯ ನಮ್ಮ ಭಿನ್ನಾಭಿಪ್ರಾಯಗಳನ್ನು ಕೇವಲ ವ್ಯಕ್ತಪಡಿಸಿದರೆ ನಮ್ಮ ಕರ್ತವ್ಯ ಮುಗಿದುಬಿಟ್ಟಿತು, ಎಂದೆನ್ನಲಾಗದ ಸಂಕಟ ಕಾಲದಲ್ಲಿ ಇಂದು ನಾವಿದ್ದೇವೆ. ಗಾಂಧೀಜಿಯವರ ಆಂದೋಲನ ಶುರುವಾಗದಂತೆ ಮಾಡುವುದು ಆಂದೋಲನವನ್ನು ನಂಬದ ನಮ್ಮಂಥ ಜನರ ಕರ್ತವ್ಯ. ಏಕೆಂದರೆ ಮುಸಲ್ಮಾನರು ಹಾಗೂ ಅಸ್ಪೃಶ್ಯರು ಇ. ಸ. ೧೯೩೦ರ ಸವಿನಯ ಕಾನೂನು ಭಂಗ ಚಳುವಳಿಯಲ್ಲಿ ಯಾವುದೇ ಬಗೆಯಾಗಿ ಪಾಲ್ಗೊಂಡಿರಲಿಲ್ಲವಾದರೂ, ಅವರು ಉದಾರಬುದ್ಧಿಯಿಂದ ಅದರ ಬಗೆಗೆ ತಟಸ್ಥ ನೀತಿಯನ್ನು ತಳೆದಿದ್ದರು. ಇ. ಸ. ೧೯೩೦ರ ಸ್ಥಿತಿ ಇಂದಿನ ಸ್ಥಿತಿಗಿಂತ ಭಿನ್ನವಾಗಿತ್ತು. ಇ. ಸ. ೧೯೩೦ರ ಸವಿನಯ ಕಾನೂನು ಭಂಗ ಚಳುವಳಿಯಲ್ಲಿ ಕೇವಲ ಎರಡು ಸಾಧ್ಯತೆಗಳಿದ್ದವು : ರಾಜಕೀಯ ಸಾಮರ್ಥವು ಒಂದೆಂದರೆ ಆಂಗ್ಲರ ಕೈಯಲ್ಲಿ ಇರುತ್ತಿತ್ತು ಇಲ್ಲವೆ ಅದು ಭಾರತೀಯರ ಕೈಗೆ ಹೋಗುತ್ತಿತ್ತು. ಜಪಾನ ಇಲ್ಲವೆ ಜರ್ಮನಿಗೆ ಭಾರತವರ್ಷಕ್ಕೆ ಬಂದು ಅದರ ಒಡೆಯನಾಗುವ ಯಾವುದೇ ಬಗೆಯ ಸಾಧ್ಯತೆ ಆಗ ಇರಲಿಲ್ಲ. ಇಂದು ನಮ್ಮೆದುರು ಅಂಥ ಸಾಧ್ಯತೆ ಇದೆ. ಇಂದು ಕಾಡು ಜಾತಿಗಳು ನಮ್ಮ ಬಾಗಿಲೆದುರು ಬಂದು ನಿಂತಿದ್ದು, ಅವುಗಳ ಇರಾದೆಯು ಆಂಗ್ಲರನ್ನು ಸೋಲಿಸುವುದಷ್ಟೇ ಆಗಿರದೆ ನಮ್ಮನ್ನು ಗುಲಾಮರನ್ನಾಗಿ ಮಾಡುವುದೂ ಆಗಿರುವಾಗ ಇಲ್ಲಿಯ ಶಾಂತಿಗೆ ಭಂಗ ತರುವಂಥ ಯಾವುದೇ ಸಂಗತಿಗಾಗಿ ಯತ್ನಿಸುವುದೆಂದರೆ ಅದು ನಮ್ಮ ಹುಚ್ಚುತನವಾದೀತು. ಇದೇ ಈ ಹೊತ್ತು ಗಾಂಧೀಜಿಯವರು ಬೆದರಿಕೆಯನ್ನು ಒಡ್ಡುತ್ತಿರುವ ಜನಾಂದೋಲನಕ್ಕೂ ಇ. ಸ. ೧೯೩೦ರ ಆಂದೋಲನಕ್ಕೂ ಇರುವ ಎಲ್ಲಕ್ಕೂ ದೊಡ್ಡ ವ್ಯತ್ಯಾಸ.

“ತಾವು ದೇಶದ ವತಿಯಿಂದ ಮಾತನಾಡುತ್ತಿರುವುದಾಗಿ ಕಾಂಗ್ರೆಸ್ಸು ಹಾಗೂ ಗಾಂಧೀಜಿಯವರು ಬೆದರಿಕೆಯನ್ನು ಹಾಕುತ್ತಿರುವರು. ಇದೊಂದು ಸುಳ್ಳುವಾದ. ಆದರೆ ಯಾರಲ್ಲೂ ಇದನ್ನು ಖಂಡಿಸಬೇಕೆಂಬ ಪರಿವೆಯೇ ಇರಲಿಲ್ಲ. ಇದಕ್ಕೆ ಕಾರಣ ಹೀಗಿದೆ : ದೇಶದ ಹಿತಕ್ಕೆ ಯಾವುದೇ ಬಗೆಯ ನಷ್ಟವನ್ನು ಉಂಟುಮಾಡದೆ ಕಾಂಗ್ರೆಸ್ಸು ದೇಶದ ಹೆಸರಿನಿಂದಾಗಲಿ ಇಲ್ಲವೆ ತನ್ನ ಹೆಸರಿನಿಂದಾಗಲಿ ಮಾತನಾಡುವ ಹಕ್ಕನ್ನು ನಡೆಸುವವರೆಗೆ ಯಾರಿಗೂ ಯಾವುದೇ ಬಗೆಯ ಅಭ್ಯಂತರವಿಲ್ಲ. ಆದರೆ ಕೇವಲ ಒಂದು ಪಕ್ಷವಾಗಿರುವ ಕಾಂಗ್ರೆಸ್ಸು ದೇಶದ ಸುರಕ್ಷೆ ಹಾಗೂ ಅದರ ಸ್ವಾತಂತ್ರಗಳನ್ನು ಅಪಾಯಕ್ಕೆ ಈಡು ಮಾಡುವಂಥ ನೀತಿಯನ್ನು ಅನುಸರಿಸಲು ಹೇಳುತ್ತಿರುವಾಗ ತಮ್ಮ ಉದಾರ, ತಟಸ್ಥ ನೀತಿಯನ್ನು ಕೈಬಿಟ್ಟು ಕಾಂಗ್ರೆಸ್ಸನ್ನು ವಿರೋಧಿಸುವುದು ಇತರ ಪಕ್ಷಗಳ ಕರ್ತವ್ಯವಾಗಿದೆ.

“ಭಾರತದ ಜನರು ಎರಡು ಸಂಗತಿಗಳನ್ನು ಅರ್ಥಮಾಡಿಕೊಳ್ಳಬೇಕೆಂದು ಇಚ್ಛಿಸುತ್ತೇನೆ. ಮೊದಲನೆಯದಾಗಿ, ತಮ್ಮ ಅದೃಷ್ಟವು ಪ್ರಜಾಪ್ರಭುತ್ವದ ನಾಜೀವಾದದ ಮೇಲಿನ ಗೆಲವಿನೊಡನೆ ತಳಕುಹಾಕಿಕೊಂಡಿದೆ ಎನ್ನುವುದನ್ನು ಅವರು ಮೊಟ್ಟಮೊದಲಿಗೆ ತಿಳಿದುಕೊಳ್ಳಬೇಕಿದೆ. ಎರಡನೆಯ ಸಂಗತಿ ಎಂದರೆ, ಭಾರತೀಯರು ಒಕ್ಕಟ್ಟಾಗಿ, ಅದರ ಮೂಲಕ ಪ್ರಜಾಪ್ರಭುತ್ವವಾದವು ವಿಜಯವನ್ನು ಪಡೆಯಿತೆಂದರೆ, ಪ್ರಪಂಚದ ಯಾವುದೇ ಶಕ್ತಿಯು ಭಾರತವನ್ನು ಸ್ವತಂತ್ರವಾಗದಂತೆ ತಡೆಯಲಾರದು. ಪ್ರಜಾಪ್ರಭುತ್ವವಾದದ ವಿಜಯವಾಯಿತೆಂದರೆ ಯಾವನೇ ಆಗಲಿ ಭಾರತದ ಸ್ವಾತಂತ್ರ್ಯದ ದಾರಿಯಲ್ಲಿ ತಡೆಯನ್ನು ಒಡ್ಡಲಾರನು. ಗಾಂಧೀಜಿಯವರು ಯಾವುದೇ ಬಗೆಯ ಇಂಥ ಕೆಲಸವನ್ನು ಮಾಡಲೇಬಾರದಿತ್ತು ಎಂದು ನಂಬಿದ್ದೇನೆ. ಭಾರತೀಯರು ಈ ಕಾಲಕ್ಕೆ ಮಾಡಬೇಕಿದ್ದ ಎಲ್ಲಕ್ಕೂ ದೊಡ್ಡ ಕೆಲಸವೆಂದರೆ ಅವರು ಪ್ರಜಾತಂತ್ರಕ್ಕೆ ಯಶಸ್ಸು ಲಭಿಸುವಂತೆ ಯತ್ನಿಸಬೇಕು. ಅವರು ಕೇವಲ ಸಿದ್ಧಾಂತಕ್ಕಾಗಿ ಹೀಗೆ ಮಾಡಬಾರದು. ನಮ್ಮ ದೇಶದ ಭವಿಷ್ಯಕ್ಕಾಗಿ ಇದನ್ನು ಮಾಡುವುದು ನಮ್ಮ ಕರ್ತವ್ಯವಾಗಿದೆ.

ಗಾಂಧೀಜಿ ಮುಪ್ಪಿನವರಿದ್ದು ಅವಸರದಲ್ಲಿರುವರು. ಭಾರತೀಯರು ಅವಸರದಲ್ಲಿ ಯಾವುದೇ ಕೆಲಸವನ್ನು ಮಾಡಿ, ತರುವಾಯ ಪರಿತಪಿಸುವ ಸರದಿ ತಮ್ಮದಾಗದಂತೆ ಎಚ್ಚರ ವಹಿಸತಕ್ಕದ್ದು.” 1

1. Printed by the Assistant Superintendent-in-charge, Government Branch Press, Lucknow.

## ೧೦೦. ಕಾರ್ಮಿಕ-ವರ್ಗವು ಮರುಳುಗೊಳಿಸುವ ರಾಷ್ಟವಾದದ ಸುಳ್ಳು ಹಾಗೂ ಪೊಳ್ಳು ಘೋಷಣೆಗಳಿಗೆ ಮೋಸಹೋಗಕೂಡದು

ಡಾ. ಬಾಬಾಸಾಹೇಬ ಅಂಬೇಡ್ಕರರು ಕಾರ್ಮಿಕ ಪರಿಷತ್ತಿಗೆ ನೀಡಿದ ಸಂದೇಶ

ಹಿಂದೀ ಕಾರ್ಮಿಕ ಫೆಡರೇಶನ್ನಿನ ವಾರ್ಷಿಕ ಅಧಿವೇಶನವು ತಾ. ೨೭, ೨೮ ಹಾಗೂ ೨೯ ಡಿಸೆಂಬರದಂದು ಮುಂಬಯಿಯಲ್ಲಿ ಜರುಗಲಿದೆ. ಈ ಅಧಿವೇಶನದ ನಿಮಿತ್ತವಾಗಿ ಮಂಗಳವಾರ ತಾ, ೨೮ ಡಿಸೆಂಬರದಂದು* ಸಂಜೆಯ ಆರೂವರೆ ಗಂಟೆಗೆ ಕಾರ್ಮಿಕರ ಬೃಹತ್ ಜಾಹೀರು ಸಭೆಯು ವರಳಿಯ ಜೇಲ್ ಹತ್ತಿರದ ಬಯಲಿನಲ್ಲಿ ಜರುಗಲಿದೆ. ಹಿಂದುಸ್ತಾನ ಸರಕಾರದ ಕಾರ್ಮಿಕ-ಸಚಿವರಾದ ಡಾ. ಬಾಬಾಸಾಹೇಬ ಅಂಬೇಡಕರರು ಹಿಂದೀ ಕಾರ್ಮಿಕ ಫೆಡರೇಶನ್ನಿನ ಈ ಅಧಿವೇಶನಕ್ಕಾಗಿ ಕೆಳಗಿನ ಸಂದೇಶವನ್ನು ಕಳುಹಿಸಿರುವರು :

"ಈ ಅಧಿವೇಶನಕ್ಕೆ ಹಾಜರಾಗಲು ಸಾಧ್ಯವಾಗದುದಕ್ಕಾಗಿ ನನಗೆ ತುಂಬ ಕೆಡಕೆನ್ನಿಸಿದೆ. ಹಿಂದೀ ಕಾರ್ಮಿಕ ಫೆಡರೇಶನ್ ಸಂಸ್ಥೆಯು ಕಾರ್ಮಿಕ-ಪರಿಷತ್ತನ್ನು ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿಗಿಂತ ಬೇರೆ ಬಗೆಯಲ್ಲಿ ಸಮಾವೇಶಗೊಳಿಸುತ್ತಿರುವುದರಿಂದ ನನಗೆ ಹೆಚ್ಚಿನ ಸಂತೋಷವಾಗಿದೆ. ಕಾರ್ಮಿಕ ವರ್ಗವು ಕಾರ್ಮಿಕ ಸಂಘದ ಮಿತಿಗೊಳಪಟ್ಟ ಕೆಲಸದಲ್ಲಿಯೇ ಸಿಕ್ಕುಬೀಳಬಾರದೆಂಬ ಪಾಠವು ಹಿಂದೀ ಕಾರ್ಮಿಕ ಫೆಡರೇಶನ್ನಿನಿಂದ ಕಾರ್ಮಿಕರಿಗೆ ದೊರೆತೀತೆಂದು ಆಶಿಸುತ್ತೇನೆ. ಹಾಗೆಯೇ ಕಾರ್ಮಿಕವರ್ಗವು ಮರುಳುಗೊಳಿಸುವ ರಾಷ್ಟ್ರವಾದದ ಸುಳ್ಳು ಹಾಗೂ ಪೊಳ್ಳು ಘೋಷಣೆಗಳಿಗೆ ಮೋಸಹೋಗಕೂಡದು. ಏಕೆಂದರೆ ಕಾರ್ಮಿಕರನ್ನು ಶೋಷಿಸುವುದೇ ಇಂಥ ರಾಷ್ಟ್ರೀಯವಾದದ ಕೆಲಸ, ಹಿಂದೀ ಕಾರ್ಮಿಕ ಫೆಡರೇಶನ್ನಿನ ಇಂಥ ಪ್ರಯತ್ನದಿಂದಾಗಿ ಈ ಸತ್ಯವು ಕಾರ್ಮಿಕರಿಗೆ ಮನದಟ್ಟಾದೀತೆಂಬ ಭರವಸೆ ನನಗಿದೆ.

ಎಮ್. ಎನ್. ರಾಯ್ ಅವರಂಥ ಸ್ವತಂತ್ರ ವಿಚಾರದ, ದೃಢ ಮನಸ್ಸಿನ ಮತ್ತು ನಿರ್ದಾಕ್ಷಿಣ್ಯ ಮನೋಧರ್ಮದ ಬುದ್ಧಿವಂತ ನಾಯಕರು ಕಾರ್ಮಿಕರಿಗೆ ಲಭಿಸಿದುದು ಹೆಚ್ಚಿನ ಸಂತೋಷದ ಸಂಗತಿ. ಎಮ್. ಎನ್. ರಾಯ್ ಅವರ ನಾಯಕತ್ವದಲ್ಲಿ ಕಾರ್ಮಿಕರ ಒಂದು ಪ್ರಬಲವಾದ ರಾಜಕೀಯ ಪಕ್ಷವು ತಯಾರಾದೀತಲ್ಲದೆ, ಈ ಪಕ್ಷವು ದೇಶದ ಅಧಿಕಾರ-ಸೂತ್ರಗಳನ್ನು ಕೈಗೆ ತೆಗೆದುಕೊಳ್ಳುವ ಮಟ್ಟಿಗೆ ಶಕ್ತಿಶಾಲಿಯಾದೀತೆಂಬ ಆಸೆ ನನ್ನದು.

ನಿಮ್ಮ ಪರಿಷತ್ತು ಯಶಸ್ವಿಯಾಗಲಿ !

(ಸಹಿ)

ಬಿ. ಆರ್. ಅಂಬೇಡಕರ'

ಈ ವರ್ಷವನ್ನು ನಮೂದಿಸಲಾಗಿಲ್ಲ.

ವಾರ್ಷಿಕ ಪರಿಷತ್ತಿನ ಸ್ವಾಗತಾಧ್ಯಕ್ಷರಾದ ಮಣಿಬೆನ್ ಕಾರಾ ಇವರ ಮೂಲಕ ಮೇಲಿನ ಈ ಪರಿಷತ್ತನು. ಆಯೋಜಿಸಲಾಗಿತ್ತು.

## ೧೦೧. ನಮಗೆ ಸ್ವಾತಂತ್ರವೂ ಬೇಕು ! ಅದರ ಜೊತೆಗೆ ಗುಲಾಮಗಿರಿಯನ್ನೂ ಒದ್ದೋಡಿಸುವೆವು !

ಡಾ. ಬಾಬಾಸಾಹೇಬ ಅಂಬೇಡಕರರು ಸತ್ಯಾಗ್ರಹಿಗಳಿಗೆ ತೇಜಸ್ಸಿನಿಂದ ಕೂಡಿದ ಒಂದು ಸಂದೇಶವನ್ನು ನೀಡಿರುವರು :

“ಯಾವಾಗಲೂ ತತ್ಯಕ್ಕಾಗಿ ನಮ್ಮ ಹೋರಾಟ ನಡೆಯುವುದು. ನಮ್ಮ ಜಗಳ ೬ ಕೋಟಿ ಅಸ್ಪೃಶ್ಯ ಸಮುದಾಯದ ವತಿಯಿಂದ ನಡೆಯುವುದು, ನಮಗೆ ರಾಜಕೀಯ ಸುರಕ್ಷೆ ಬೇಕಿದೆ. ನಮಗೆ ಮೂರ್ಖರು ಇಲ್ಲವೆ ಮೋಸಗಾರರಿಂದ ಯಾವುದೇ ಬಗೆಯ ಹಾನಿ ತಟ್ಟಕೂಡದು. ಮೂರ್ಖ ಇಲ್ಲವೆ ಮೋಸಗಾರನಿಗೆ ನಮ್ಮ ಚಳುವಳಿಯಲ್ಲಿ ಸ್ವಲ್ಪ ಮಟ್ಟಿಗೂ ಆಸ್ಪದವಿಲ್ಲ. ನಮಗೆ ಧೂರ್ತಘಟಿಂಗನಿಗೆ ಆಸ್ಪದ ಸಿಕ್ಕದ ಹಾಗೆ ಚಳುವಳಿಯನ್ನು ನಡೆಯಿಸುವುದಿದೆ. ಇತರ ಜನರಂತೆ ನಮಗೂ ಸ್ವಾತಂತ್ರ್ಯ ಬೇಕು. ನಮ್ಮವರ ಇಲ್ಲವೆ ಪರರ ಗುಲಾಮಗಿರಿ ನಮಗೆ ಬೇಕಿಲ್ಲ. ನಮಗೆ ಸ್ವಾತಂತ್ರ್ಯ ಬೇಕಿದೆ. ಅದರೊಟ್ಟಿಗೆ ನಮಗೆ ಪ್ರಜಾಪ್ರಭುತ್ವವೂ ಬೇಕು.”

“ನಾವೆಲ್ಲರೂ ತನು-ಮನ-ಧನಗಳನ್ನು ಅರ್ಪಿಸಿ ನಮ್ಮ ಸ್ವಾತಂತ್ರ ಯುದ್ಧದಲ್ಲಿ ಭಾಗ ವಹಿಸಬೇಕಿದೆ. ನಮ್ಮ ವಿಜಯ ಸ್ವಾರ್ಥತ್ಯಾಗದಲ್ಲಿಯೇ ಇದೆ. ಕಾಂಗ್ರೆಸ್ಸಿಗರು, 'ಝುಂಡಾ (ಪತಾಕೆ) ಊಂಚಾ ರಹೇ ಹಮಾರಾ', ಎಂದೆನ್ನುತ್ತಾರೆ. ನಾವು ನಮ್ಮ ಝುಂಡಾಕ್ಕಾಗಿ ಹೋರಾಡಬೇಕಿದೆ. ಯಾವುದೇ ಪರಿಸ್ಥಿತಿಯಲ್ಲೂ ನಮ್ಮ ಝುಂಡಾ 'ನೀಚಾ (ಕೆಳಕ್ಕೆ)' ಆಗಬಾರದು. ನಾವೆಲ್ಲರೂ ಆತ್ಮೀಯತೆಯಿಂದ ಇದಕ್ಕಾಗಿ ಯತ್ನಿಸತಕ್ಕದ್ದು, ನಮ್ಮ ಪತಾಕೆಯು ಹಾರಾಡುತ್ತಿರುವಂತೆ ನೋಡಿಕೊಳ್ಳತಕ್ಕದ್ದು.” ೧೧

೧: 'ಡಾ. ಬಾಬಾಸಾಹೇಬ ಅಂಬೇಡಕರ ಯಾಂಚೀ ಆತ್ಮಕಥಾ' - ಶಂಕರರಾವ ಖರಾತ, ಪು. ೨೭೭. 'ಜನತಾ'. ದಿ. ೨೭ ಜುಲೈ ೧೯೪೭ ಚೌಕಟ್ಟಿನಲ್ಲಿರುವ ಮಜಕೂರು.

## ೧೦೨, ಯುವಕರು ಎರಡು ಸಂಗತಿಗಳನ್ನು ಸಾಬೀತುಪಡಿಸಬೇಕು !

ಹೆಸರಾಂತ ಜೋಗೇಂದ್ರನಾಥ ಮಂಡಲ್ ಅವರ ಅಧ್ಯಕ್ಷತೆಯಲ್ಲಿ ದಿನಾಂಕ ೨೫ ಡಿಸೆಂಬರ್ ೧೯೪೭ರಂದು ನಾಗಪೂರಿನಲ್ಲಿ ಸೇರಿದ ಅ. ಭಾ. ದಲಿತ ವರ್ಗ ವಿದ್ಯಾರ್ಥಿ ಪರಿಷತ್ತಿಗೆ ಡಾ. ಬಾಬಾಸಾಹೇಬ ಅಂಬೇಡಕರರು ಒಂದು ಸಂದೇಶವನ್ನು ಕಳುಹಿಸಿದ್ದರು. ಅದು ಹೀಗಿತ್ತು

"ನೀವು ಅಖಿಲ ಭಾರತೀಯ ಶೆಡ್ಯೂಲ್ಡ್ ಕಾಸ್ಟ್ ಸ್ ಸ್ಟೂಡಂಟ್ಸ್ ಫೆಡರೇಶನ್‌ನ ಅಧಿವೇಶನವನ್ನು ಸಮಾವೇಶಗೊಳಿಸಲು ತೀರ್ಮಾನಿಸಿದ್ದನ್ನು ಕಂಡು ನನಗೆ ಸಂತೋಷವಾಗಿದೆ. ನಿಮೀ ವಿಚಾರವು ಸ್ತುತ್ಯವಾದುದು. ನಾನು ಅದರೊಂದಿಗೆ ಒಮ್ಮತ ಹೊಂದಿದ್ದೇನೆ. ಹೆಸರಾಂತ ಮಂಡಲ್ ಅವರೊಂದಿಗೆ ಮಾತನಾಡಿದ್ದೇನೆ. ಅವರು ನಿಮ್ಮ ಅಧಿವೇಶನಕ್ಕೆ ಅಧ್ಯಕ್ಷರಾಗಿ ಖಂಡಿತ ಹಾಜರಾಗುವರು. ನಿಮ್ಮ ಅಧಿವೇಶನಕ್ಕೆ ಹಾಜರಾಗಲು ನನಗೆ ಸಾಧ್ಯವಾಗಿದ್ದರೆ ತುಂಬ ಒಳ್ಳೆಯದಿತ್ತು. ಆದರೆ ಅದು ಸಾಧ್ಯವಾಗುವಂತೆ ತೋರುತ್ತಿಲ್ಲ. ನಿಮ್ಮಿ ಅಧಿವೇಶನವು ಉತ್ತಮ ರೀತಿಯಿಂದ ನೆರವೇರಲೆಂದು ಶುಭೇಚ್ಛೆಗಳನ್ನು ಸಲ್ಲಿಸುತ್ತೇವೆ.-

ನಮ್ಮ ಯುವಕರು ಎರಡು ಸಂಗತಿಗಳನ್ನು ಕಲಿತುಕೊಳ್ಳಬೇಕಿದೆ. ಮೊದಲನೆಯದಾಗಿ, ಸೂಕ್ತ ಅವಕಾಶ ಲಭಿಸಿದರೆ ನಮ್ಮ ಯುವಕರು ಬುದ್ಧಿಮತ್ತೆ ಹಾಗೂ ಕರ್ತವ್ಯಗಳಲ್ಲಿ ಯಾರಿಂದಲೂ ಸೋಲುಣ್ಣುವವರಲ್ಲ. ಎರಡನೆಯದಾಗಿ, ನಮ್ಮ ಯುವಕ ವರ್ಗವು ವೈಯಕ್ತಿಕ ಸುಖದ ಬೆನ್ನುಹತ್ತಿದುದಲ್ಲ. ಬದಲು ಅವರು ತಮ್ಮ ಕೋಮು ಸ್ವತಂತ್ರ ಮತ್ತು ಕರ್ತತ್ವವಂತವಾಗಬೇಕು, ಉಳಿದವರಿಂದ ಮಾನ್ಯತೆಯನ್ನು ಪಡೆಯುವಂತಾಗಬೇಕೆಂದು

ಯತ್ನಿಸುತ್ತಿರುವರು, ಎನ್ನುವ ಸಂಗತಿಯನ್ನು ಅವರು ಸಾಬೀತುಪಡಿಸಬೇಕು. ಇವೆರಡು ಸಂಗತಿಗಳನ್ನು ಈ ಅಧಿವೇಶನದಲ್ಲಿ ಅವರಿಗೆ ಮನಗಾಣಿಸಲು ಸಾಧ್ಯವಾದರೆ ಸಾರ್ಥಕವಾದಂತೆ, ಎನ್ನಲು ಅಡ್ಡಿಯಿಲ್ಲ.

ಅದು ಅವರನ್ನು ಮನಗಾಣಿಸಿತೆನ್ನುವ ವಿಶ್ವಾಸ ನನಗಿದೆ.

ತಮಗೆ ಸುಯಶಸ್ಸನ್ನು ಕೋರುತ್ತೇನೆ. "

'ಗರುಡ', ದಿನಾಂಕ ೯ ಫೆವರಿ ೧೯೪೭.

## ೧೦೩. ಯಾವ ಜನರಲ್ಲಿ ನಮ್ಮ ಜನ್ಮವಾಗಿದೆಯೋ ಅಂಥವರನ್ನು ಉದ್ಧರಿಸುವುದು ನಮ್ಮ ಕರ್ತವ್ಯ

ನವಯುಗ : ಅಸ್ಪೃಶ್ಯರಿಗೆ ನೀಡಲೆಂದು ಡಾ. ಬಾಬಾಸಾಹೇಬ ಅಂಬೇಡಕರರು ಅಂಬೇಡಕರ ವಿಶೇಷ ಸಂಚಿಕೆಗೆ ರವಾನಿಸಿದ ಸಂದೇಶ।

“ನೀವು ನನ್ನ ಎಪ್ಪತ್ತೈದನೆಯ ಹುಟ್ಟುಹಬ್ಬದ ದಿನದಂದು ಒಂದು ವಿಶೇಷ ಸಂಚಿಕೆಯನ್ನು ಪ್ರಕಟಿಸುತ್ತಿರುವಿರಿ. ಅದಕ್ಕಾಗಿ ನಿಮಗೊಂದು ಸಂದೇಶ ಬೇಕಿದೆ. ನಮ್ಮಿ ಹಿಂದೂಸ್ಥಾನದಲ್ಲಿ ರಾಜಕೀಯ ಮುಂದಾಳುವಿಗೆ ಅವತಾರ ಪುರುಷನಂಥ ಗೌರವವನ್ನು ತೋರಲಾಗುವುದು ಒಂದು ದುರದೃಷ್ಟದ ಸಂಗತಿ. ಹಿಂದೂಸ್ಥಾನದ ಹೊರಗಡೆಯಲ್ಲಿ

ಮಹಾಪುರುಷರ ಜಯಂತಿಗಳನ್ನು ಮಾತ್ರ ಆಚರಿಸಲಾಗುತ್ತದೆ. ಆದರೆ ಹಿಂದೂಸ್ಥಾನದಲ್ಲಿ ಅವತಾರ ಪುರುಷರು ಹಾಗೂ ರಾಜಕೀಯ ಪುರುಷರು ಇವರೀರ್ವರ ಜಯಂತಿಗಳನ್ನೂ ಆಚರಿಸಲಾಗುತ್ತದೆ. ಇದು ದುಃಖದ ಸಂಗತಿ. ವ್ಯಕ್ತಿಗತವಾಗಿ ನನಗೆ ನನ್ನ ಹುಟ್ಟುಹಬ್ಬದ ಆಚರಣೆಯು ಎಳ್ಳಷ್ಟೂ ಇಷ್ಟವಾಗದು. ನಾನು ಪ್ರಜಾಪ್ರಭುತ್ವದ ನಿಷ್ಠಾವಂತನಾದ ಒಬ್ಬ ಪುರಸ್ಕರ್ತನು. ನನಗೆ ವಿಭೂತಿಪುರುಷನ ಪೂಜೆ ಇಷ್ಟವಾಗಲು ಹೇಗೆ ಸಾಧ್ಯ ? ಅದು ಪ್ರಜಾಪ್ರಭುತ್ವದ ವಿಪರ್ಯಾಸವೆನ್ನಿಸಿದೆ. ನಾಯಕನು ಯೋಗ್ಯತೆಯುಳ್ಳವನಾಗಿದ್ದರೆ ಅವನ ಬಗೆಗೆ ಮೆಚ್ಚುಗೆ, ಪ್ರೀತಿ, ಗೌರವದಂತಹ ಭಾವನೆಗಳನ್ನು ಹೊಂದಲು ಅಭ್ಯಂತರವಿಲ್ಲ. ಅಷ್ಟರಿಂದಲೇ ಆ ನಾಯಕ ಹಾಗೂ ಅವನ ಅನುಯಾಯಿಗಳಿಗೆ ಸಮಾಧಾನವಾಗಲು ಸಾಕು. ಆದರೆ ಮುಂದಾಳುಗಳನ್ನು ದೇವರಂತೆ ಪೂಜಿಸುವುದನ್ನು ಮಾತ್ರ ನಾನು ಸುತರಾಂ ಒಪ್ಪಲಾರೆ. ಅದರಿಂದಾಗಿ ಆ ನಾಯಕನೊಂದಿಗೆ ಅವನ ಭಕ್ತರೂ ಅಧಃಪತನವನ್ನು ಹೊಂದುವರು. ಆದರೆ ಇದನ್ನಿಲ್ಲಿ ಹೇಳಿ ಪ್ರಯೋಜನವೇನು ? ಒಂದು ಸಲಕ್ಕೆ ರಾಜಕೀಯ ಮುಂದಾಳುವನ್ನು ಅವತಾರ ಪುರುಷನ ಆಸನದ ಮೇಲೆ ಏರಿಸಿ ಕುಳ್ಳಿರಿಸಿದ ಬಳಿಕ ಅವನು ತನ್ನ ಸೋಗನ್ನು ಉತ್ತಮವಾದ ರೀತಿಯಲ್ಲಿ ನಿರ್ವಹಿಸಲೇಬೇಕು, ತನ್ನ ಅನುಯಾಯಿಗಳಿಗೆ ಸಂದೇಶವನ್ನು ನೀಡಲೇ ಬೇಕು !

ಅಸ್ಪೃಶ್ಯರಿಗೆ ನಾನಾವ ಸಂದೇಶವನ್ನು ನೀಡಲಿ ? ಸಂದೇಶವನ್ನು ನೀಡುವ ಬದಲು ಅವರಿಗೆ ಗ್ರೀಕ್ ಪುರಾಣದ ಒಂದು ಕಥೆಯನ್ನು ಹೇಳುವೆನು. ಹೋಮರ್‌ನು ಡಿಮೇಟರ್ ಎಂಬ ಗ್ರೀಕ್ ದೇವತೆಯನ್ನು ಕುರಿತು ಬರೆದ ಸ್ತೋತ್ರದಲ್ಲಿ ಈ ಕಥೆಯಿದೆ.

“ತನ್ನ ಮಗಳನ್ನು ಶೋಧಿಸಲೆಂದು ಈ ಡಿಮೇಟರ್ ದೇವತೆಯು ಅಂಡಲೆಯುತ್ತ ಕೆಲಿಯೋಸ್‌ನ ರಾಜ್ಯಕ್ಕೆ ಬರುತ್ತಾಳೆ. ಅವಳು ದಾದಿಯ ವೇಷವನ್ನು ತೊಟ್ಟಿದ್ದಳು. ಹೀಗಾಗಿ ಯಾರೂ ಅವಳನ್ನು ಗುರುತಿಸಲಿಲ್ಲ. ರಾಣಿ ಮೆಹೋವೈರ್ ಇವಳು ತನ್ನ `ಡಿಮೋಫೋನ್' ಹೆಸರಿನ ಎಳೆಯ ಮಗುವನ್ನು ಸಲುಹಲೆಂದು ಇವಳನ್ನು ನೇಮಿಸಿದಳು. ದಿನಾಲು ರಾತ್ರಿಯಾಗುತ್ತಲೇ ಅರಮನೆಯವರೆಲ್ಲರೂ ಮಲಗಿದ ಬಳಿಕ ಡಿಮೇಟರ್ ದೇವತೆಯು ಬಾಗಿಲುಗಳನ್ನು ಮುಚ್ಚಿ, ಈ ಗಂಡುಮಗುವನ್ನು ತೊಟ್ಟಿಲಿಂದ ಹಗುರಾಗಿ ಎತ್ತಿಕೊಂಡು, ಅವನ ಬಟ್ಟೆಗಳನ್ನು ಕಳಚಿ, ಆ ಮಗುವನ್ನು ಉರಿಯುವ ಬೆಂಕಿಯ ಕೆಂಡಗಳ

ಮೇಲೆ ಹಿಡಿಯುತ್ತಿದ್ದಳು. ಕೇಳುಗರಿಗೆ ಇದು ತುಂಬ ಕ್ರೂರ ಸಂಗತಿ ಎನ್ನಿಸಬಹುದು. ಆದರೆ ಆ ಮಗುವನ್ನು ದೇವ ನನ್ನಾಗಿ ಮಾಡಲೆಂದು ಅವಳು ಬಲು ಕಳಕಳಿ ಹಾಗೂ ಪ್ರೀತಿಯಿಂದ ಹೀಗೆಲ್ಲ ಮಾಡುತ್ತಿದ್ದಳು. ನಿಧಾನವಾಗಿ ಆ ಮಗುವಿನಲ್ಲಿ ಬೆಂಕಿಯ ಧಗೆಯನ್ನು ಸಹಿಸಿಕೊಳ್ಳುವ ಸಾಮರ್ಥ ಬಂದಿತು. ಅವನ ಸಾಮರ್ಥ ಹೆಚ್ಚತೊಡಗಿತು. ಒಂದು ಬಗೆಯಾದ ತೇಜಸ್ಸು, ದಿವ್ಯ, ಅತಿಮಾನವೀಯ ಅಂಶವು ಅವನಲ್ಲಿ ವಿಕಸನಗೊಳ್ಳತೊಡಗಿತು. ಆದರೆ ಒಂದು ರಾತ್ರಿ ಅಚಾನಕ್ಕಾಗಿ ಮಗುವಿನ ಅಮ್ಮನು ಕೋಣೆಯನ್ನು ಪ್ರವೇಶಿಸಿದಳು. ಮಗುವನ್ನು ನಾರಾಯಣ ನನ್ನಾಗಿ ಮಾಡುವ ದಾದಿಯ ಪ್ರಯೋಗವನ್ನು ಕಂಡವಳೇ ಆಕೆ ಆ ದೇವತೆಯನ್ನು ಅತ್ತ ದೂಡಿ, ಮಗುವನ್ನು ಬೆಂಕಿಯ ಮೇಲ್ಬದಿಯಿಂದ ಎತ್ತಿಕೊಂಡಳು. ಮಗುವೇನೋ ಅವಳಿಗೆ ಲಭಿಸಿತಾದರೂ ಅವಳೊಬ್ಬ ಅತಿಮಾನವೀಯತೆಯ ಮಗನನ್ನು, ದೇವನನ್ನು ಕಳೆದುಕೊಂಡಳು, ”

ಈ ಕಥೆ ಏನು ಹೇಳುತ್ತದೆ ? ಬೆಂಕಿಯ ಕೆಂಡದಲ್ಲಿ ಹಾಯದ ಹೊರತು ಪೌರುಷ ಇಲ್ಲವೆ ದೇವತ್ವವು ಲಭಿಸದೆಂದು ! ಬೆಂಕಿಯ ಮೂಲಕ ಹಾಯದ ಹೊರತು ಮನುಷ್ಯನ ಶುದ್ಧಿಯಾಗದು, ಅವನ ಬಲವರ್ಧನೆ ಆಗದು. ಹಾಗೆಯೇ ಪದದಲಿತರು ಕಷ್ಟಕಾರ್ಪಣ್ಯ ಹಾಗೂ ತ್ಯಾಗದ ಅಗ್ನಿದಿವ್ಯವನ್ನು ಎದುರಿಸದೆ ಅವರಿಗೆ ದೊಡ್ಡಸ್ತಿಕೆ ಲಭಿಸದು ! ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲೆಂದು ಅವರು, “ವರ್ತಮಾನ ಕಾಲದ ಸುಖ ಹಾಗೂ ಆವಶ್ಯಕತೆಗಳನ್ನು ತ್ಯಜಿಸಬೇಕಿದೆ. ಬಾಳಿನ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಎಲ್ಲರಿಗೂ ಅಹ್ವಾನ ಇದೆಯೆಂದು ಬಾಯ್ಬಲ್ ಹೇಳುತ್ತದೆ. ಆದರೆ ಬಲು ದೊಡ್ಡ ಜನರಷ್ಟೇ ಅದರಲ್ಲಿ ಯಶಸ್ವಿಗಳಾಗುತ್ತಾರೆ. ಹೀಗೇಕೆ ? ಅದಕ್ಕೆ ಕಾರಣವೆಂದರೆ ಭವಿಷ್ಯಕ್ಕಾಗಿ ವಿಲಾಸಗಳನ್ನು ತ್ಯಜಿಸಲು ಬೇಕಿರುವ ಧೈರ್ಯ ಇಲ್ಲವೆ ನಿರ್ಧಾರಗಳು ಪದದಲಿತರಲ್ಲಿ ಇಲ್ಲದಿರುವುದು. ಹೀಗಾಗಿ ಅವರಿಗೆ ಬದುಕಿನ ಸ್ಪರ್ಧೆಯಲ್ಲಿ ಯಶಸ್ಸು ಲಭಿಸದು. ಈ ಗ್ರೀಕ್ ಕಥೆಗಿಂತ ಹಿರಿದಾದ ಸಂದೇಶ ಬೇರಾವುದು ? ನನ್ನ ಅಭಿಪ್ರಾಯದಂತೆ ಇದು ಅಸ್ಪೃಶ್ಯರಿಗಾಗಿಯಂತೂ ಸರ್ವೋತ್ತಮವಾದ ಸಂದೇಶವಾಗಿದೆ. ಅವರ ಹೋರಾಟ ಹಾಗೂ ದುರವಸ್ಥೆಗಳ ಅರಿವು ನನಗಿದೆ. ಸ್ವಾತಂತ್ರವನ್ನು ಪಡೆಯಲೆಂದು ಅವರು ನನಗಿಂತಲೂ ಹೆಚ್ಚು ಯಾತನೆಯನ್ನು ಅನುಭವಿಸಿರುವರು. ಹೀಗಿದ್ದೂ ನಾನವರಿಗೆ, 'ಹೋರಾಡಿ, ಇನ್ನಷ್ಟು ಹೋರಾಡಿ, ತ್ಯಾಗ ಮಾಡಿ. ಇನ್ನಷ್ಟು ತ್ಯಾಗ ಮಾಡಿ, ತ್ಯಾಗ ಹಾಗೂ ಪೀಡೆಗಳನ್ನು ಲೆಕ್ಕಿಸದೆ ಒಂದೇ ಸಮನೆ ಹೋರಾಟವನ್ನು ಮುಂದುವರೆಸಿದರೆ ಮಾತ್ರ ನಿಮಗೆ ಮುಕ್ತಿ ದೊರೆತೀತು !' ಎಂಬ ಸಂದೇಶವನ್ನೇ ನೀಡಬಯಸುತ್ತೇನೆ. ಅಸ್ಪೃಶ್ಯರಲ್ಲಿ ಎಚ್ಚರ ತಳೆದು ಪ್ರತೀಕಾರವನ್ನು ಮಾಡುವ ಸಾಮುದಾಯಿಕ ಇಚ್ಛಾಶಕ್ತಿಯು ಬೆಳೆಯಬೇಕಿದೆ ! ತಮ್ಮ ಕಾರ್ಯ ಪವಿತ್ರವಾದುದೆಂಬ ದೃಢ ವಿಶ್ವಾಸವು ಅವರಲ್ಲಿ ಇರಬೇಕಿದೆ. ಸಂಘಟಿತರಾಗಿ ಅವರು ತಮ್ಮ ಗುರಿಯನ್ನು ತಲುಪಲು ನಿರ್ಧರಿಸತಕ್ಕದ್ದು. ಅಸ್ಪೃಶ್ಯರ ಕಾರ್ಯ ಎಷ್ಟು ಮಹತ್ತರ ಹಾಗೂ ಅವರ ಗುರಿ ಎಷ್ಟೊಂದು ಉದಾತ್ತವಾದುದೆಂದರೆ ಅವರು ಒಕ್ಕೊರಲಿನಿಂದ, ''ಯಾವ ಜನರಲ್ಲಿ ನಮ್ಮ ಜನ್ಮವಾಗಿದೆಯೋ ಆ ಜನರನ್ನು ಉದ್ಧರಿಸುವುದು ನಮ್ಮ ಕರ್ತವ್ಯವಾಗಿದೆ, ಎಂಬ ಅರಿವುಳ್ಳವರೇ ಧನ್ಯರು !

ಗುಲಾಮಗಿರಿಯ ಮೇಲೆ ದಾಳಿ ಇಕ್ಕಲು ಯಾರು ತನು, ಮನ, ಧನ ಹಾಗೂ ಯೌವ್ವನಗಳನ್ನು ಬಲಿಕೊಡುವರೋ ಅವರೇ ಧನ್ಯರು. ಅಸ್ಪೃಶ್ಯರಿಗೆ ತಮ್ಮ ಮಾನವೀಯತೆಯು ಪೂರ್ತಿಯಾಗಿ ಸಿಕ್ಕುವವರೆಗೆ ಯಾರು ಒಳ್ಳೆಯ, ಕೆಟ್ಟ, ಸುಖ, ದುಃಖ, ಸಂಕಟ, ಬಿರುಗಾಳಿ, ಮರ್ಯಾದೆ, ಅವಮಾನಗಳನ್ನು ಲೆಕ್ಕಿಸದೆ ಒಂದೇ ಸಮನೆ ಹೋರಾಟ ನಡೆಸುವರೋ ಅವರೇ ಧನ್ಯರು !" " ಎಂದು ಪ್ರಾರ್ಥಿಸಬೇಕು.

೧ : 'ನವಯುಗ'.. ಅಂಬೇಡಕರ ವಿಶೇಷ ಸಂಚಿಕೆ ೧೩ ಎಪ್ರಿಲ್ ೧೯೪೭.

## ೧೦೪. ಪರಮಪೂಜ್ಯರಾದ ಡಾ. ಬಾಬಾಸಾಹೇಬ ಅಂಬೇಡಕರರಿಂದ 'ಅರುಣ'ಕ್ಕಾಗಿ ಸಂದೇಶ

'ಶ್ರೀ ಗಂ. ಮ. ರವರೆ ಅವರ ಯತ್ನದಿಂದಾಗಿ ನಾಗಪೂರಿನಲ್ಲಿ 'ಅರುಣ" ಎಂಬ ಮರಾಠಿ ವಾರಪತ್ರಿಕೆ ಶುರುವಾಗಲಿರುವುದು ನನಗೆ ಸಂತೋಷದ ಸಂಗತಿ. ಅದರಲ್ಲೂ ಮುಂಬಯಿಯ 'ಜನತಾ ಪತ್ರಿಕೆಯ ಪ್ರಕಟಣೆಯು ನಿಂತ ಕಾರಣ ದಲಿತ ವರ್ಗಕ್ಕೆ ಮೇಲಿನ ವಾರಪತ್ರಿಕೆಯು ತುಂಬ ಆವಶ್ಯಕವಾಗಿತ್ತು. ಮುಖ್ಯವಾಗಿ ಮಧ್ಯಪ್ರಾಂತ ಹಾಗೂ ವಾಡಗಳಲ್ಲಂತೂ ವೃತ್ತಪತ್ರದ ಆವಶ್ಯಕತೆ ತುಂಬ ಇದೆ. ಈ ವೃತ್ತಪತ್ರವು ಹೊತ್ತು ಹೊತ್ತಿಗೆ ಎದುರಾಗುವ ಹಲವಾರು ಪ್ರಶ್ನೆಗಳನ್ನು ಕುರಿತು ಜನರಿಗೆ ಸೂಕ್ತವಾದ ಮಾರ್ಗದರ್ಶನವನ್ನು ಮಾಡುವ ಹೊಣೆಯನ್ನು ಉತ್ತಮವಾದ ಬಗೆಯಲ್ಲಿ ನಿಭಾಯಿಸುವುದೆಂಬ ಆಸೆಯಿದೆ. ನನ್ನ ದಲಿತ ವರ್ಗವು 'ಅರುಣ ಕ್ಕೆ ಪೂರ್ತಿ ಸಹಕಾರವನ್ನು ನೀಡಬೇಕೆಂಬುದು ನನ್ನ ಹೃತ್ಪೂರ್ವಕವಾದ ಇಚ್ಛೆಯಾಗಿದೆ.

ಬಿ. ಆರ್. ಅಂಬೇಡಕರ

ರಾಜಗೃಹ, ದಾದರ :

ಮುಂಬಯಿ, ತಾ. ೨೯ ಮೇ ೧೯೪೭.೧

೧ : ವಾರಪತ್ರಿಕೆ 'ಅರುಣ', ನಾಗಪೂರ-ಸಂಪಾದಕರು, ನಾ, ಖಂ, ತಿರಪುಡೆ, ಬಿ.ಎ.ಎಲ್.ಎಲ್.ಬಿ.(ವಕೀಲರು) ಸೋಮವಾರ ದಿನಾಂಕ ೯ ಜೂನ್ ೧೯೪೭.

## ೧೦೫, ಬುವಾ ಅವರ ನಿಧನದ ವಾರ್ತೆಯಿಂದ ತುಂಬ ಆಘಾತವಾಯಿತು

ಡಾ. ಬಾಬಾಸಾಹೇಬ ಅಂಬೇಡಕರರ ಚಳುವಳಿಯ ತುಂಬ ನಿಷ್ಠಾವಂತ ಕಾರ್ಯಕರ್ತರಾದ ಜಿ. ಎಮ್. ಜಾಧವ ಉರಫ್ ಮಡಕೆ ಬುವಾ ಅವರು ಭಾನುವಾರ ದಿನಾಂಕ ೨೮ ಮಾರ್ಚ್ ೧೯೪೮ರಂದು ಬೆಳಗಿನ ಜಾವ ಹೃದಯಾಘಾತದಿಂದ ನಿಧನರಾದರು. ಅವರ ಅಂತ್ಯಯಾತ್ರೆಗೆ ಅರವತ್ತು ಸಾವಿರದಷ್ಟು ಜನಸಮುದಾಯವು ಹಾಜರಿತ್ತು. ಇದರಿಂದ ದಲಿತ ಸಮುದಾಯದಲ್ಲಿ ಅವರಿಗಿರುವ ಸ್ಥಾನವು ಸ್ಪಷ್ಟವಾಗುತ್ತದೆ. ಈ ದುಃಖದ ವಾರ್ತೆಯನ್ನು ಕೂಡಲೇ ಫೋನಿನ ಮೂಲಕ ದಿಲ್ಲಿಯಲ್ಲಿದ್ದ ಡಾ. ಬಾಬಾಸಾಹೇಬ ಅಂಬೇಡಕರರಿಗೆ ತಿಳಿಸಲಾಯಿತು. ಬಾಬಾಸಾಹೇಬ ಅಂಬೇಡಕರರು ಈ ಸನ್ನಿವೇಶದಲ್ಲಿ ಸಂತಾಪ ಸಂದೇಶವನ್ನು ಕಳುಹಿಸಿದರು. ಅದು ಹೀಗಿದೆ -

### ಮಡಕೆಬುವಾರ ನಿಧನದ ನಿಮಿತ್ತವಾಗಿ ಡಾ. ಬಾಬಾಸಾಹೇಬ ಅಂಬೇಡಕರರಿಂದ ಸಂತಾಪ ಸಂದೇಶ

"ಬುವಾ" ರ ನಿಧನದ ವಾರ್ತೆಯನ್ನು ಕೇಳಿ ತುಂಬ ಆಘಾತವಾಯಿತು. ಅಸ್ಪೃಶ್ಯರ ಒಬ್ಬ ದೊಡ್ಡ ಕಾರ್ಯಕರ್ತ, ಕಾರ್ಮಿಕರ ಒಬ್ಬ ದೊಡ್ಡ ಟ್ರೇಡ್ ಯೂನಿಯನಿಸ್ಟ್ ಹಾಗೂ ಶೆಡ್ಯೂಲ್ಡ್ ಕಾಸ್ಟ್ಸ್ ಫೆಡರೇಶನ್ನಿನ ಪ್ರಭಾವಿಯಾದ ಒಬ್ಬ ಸಂಘಟಕರು ಇಲ್ಲವಾಗಿರುವರು. ಬುವಾರ ಅಂತ್ಯಯಾತ್ರೆಯ ಜನಸಮೂಹದೆದುರು ಈ ಸಂದೇಶವನ್ನು ವಾಚಿಸಬೇಕು. (ಬುವಾರ ನಿಧನದಿಂದಾಗಿ ಬಂದೆರಗಿದ) ಆಪತ್ತಿನಲ್ಲಿ ನಾನು ಸಹಭಾಗಿಯಾಗಿರುವೆನೆಂದು ಅವರ ಮಡದಿಗೆ ತಿಳಿಸಿ."

**ಡಾ. ಅಂಬೇಡಕರ**

೧ ನೋಡಿ, ಪರಿಶಿಷ್ಟ ಕ್ರಮಾಂಕ : ೨೧

'ಜನತಾ : ತಾ. ೩ ಎಪ್ರಿಲ್ ೧೯೪೮

## ೧೦೬. ಬುದ್ಧ ಹಾಗೂ ಅವನ ಧಮ್ಮದ ಭವಿಷ್ಯತ್ತು

ಇ.ಸ.೧೯೫೦ರ ವೈಶಾಖ ಹುಣ್ಣಿಮೆಯ ನಿಮಿತ್ತವಾಗಿ ಕಲಕತ್ತೆಯ ಮಹಾಬೋಧಿ ಸೋಸಾಯ್ಟಿಯು " ಡಾ. ಬಾಬಾಸಾಹೇಬ ಅಂಬೇಡಕರರ "Buddha and the future of his Religion?" ಶೀರ್ಷಿಕೆಯ ಲೇಖನವನ್ನು ತನ್ನ `ಮಹಾಬೋಧಿ' ಎಂಬ ಮಾಸಪತ್ರಿಕೆಯಲ್ಲಿ ಪ್ರಕಟಿಸಿತ್ತು. ಇದು ಅದರ ಮರಾಠಿಯ (ಕನ್ನಡದಲ್ಲಿ ಮುಕ್ತ ಅನುವಾದವು.

''ಭೂತಕಾಲದಲ್ಲಿ ಪೃಥ್ವಿಯ ಮೇಲೆ ಆಗಿ ಹೋಗಿರುವ ಎಷ್ಟೆಲ್ಲ ಧರ್ಮಸಂಸ್ಥಾಪಕರಲ್ಲಿ ನಾಲ್ವರು ಮಾತ್ರ ಹೆಸರುವಾಸಿಯಾದವರು. ಇಷ್ಟೇ ಅಲ್ಲದೆ ಅವರು ವರ್ತಮಾನ ಕಾಲವನ್ನು ಕೂಡ ಬಡಿದೆಬ್ಬಿಸಿ ಜನಮನಗಳ ಮೇಲೆ ತಮ್ಮ ಧರ್ಮಾಭಿಪ್ರಾಯಗಳ ಹಿಡಿತವನ್ನು ಕಾಯಮ್ಮಾಗಿ ಸಾಧಿಸಿರುವರು. ಬುದ್ಧ, ಕ್ರಿಸ್ತ, ಮಹಮ್ಮದ ಹಾಗೂ ಕೃಷ್ಣರೇ ಈ ನಾಲ್ವರು ಧರ್ಮಪ್ರಮುಖರು ಹಾಗೂ ಧರ್ಮಪ್ರಸಾರಕರು. ಈ ನಾಲ್ವರ ವ್ಯಕ್ತಿತ್ವಗಳನ್ನು ಹಾಗೂ ಅವರ ಧರ್ಮಪ್ರಸಾರದ ವಿಧಾನಗಳನ್ನು ಹೋಲಿಸಿ ನೋಡಿದರೆ ಆ ಪರಸ್ಪರರಲ್ಲಿ ಸಾಕಷ್ಟು ವಿರೋಧ ಕಂಡುಬರುತ್ತದೆ.

ಈ ನಾಲ್ವರಲ್ಲಿ ಕೇವಲ ಬುದ್ಧನಲ್ಲಿ ಮಾತ್ರ ಆತ್ಮಸ್ತುತಿ ಹಾಗೂ ಅಹಂಭಾವಗಳ ಬಗೆಗಿನ ಅಲಿಪ್ತತೆಯ ವಿಶೇಷ ವೈಶಿಷ್ಟ್ಯವು ಸಾಕಷ್ಟು ಎದ್ದು ಕಾಣುತ್ತದೆ. ಬಾಯ್ಬಲ್ ನ್ನು ಓದಿದರೆ ಅದರಲ್ಲಿ ಎಲ್ಲೆಡೆ ಏಸು ಕ್ರಿಸ್ತನು ತನ್ನನ್ನು ಪರಮೇಶ್ವರನ ಅಸಾಮಾನ್ಯ ಮಗನೆಂದುಕೊಂಡುದಲ್ಲದೆ ತನ್ನನ್ನು ಮನ್ನಿಸದವರು ಆಕಾಶದಲ್ಲಿರುವ ದೇವರ ರಾಜ್ಯವನ್ನು ಪ್ರವೇಶಿಸಲು ಸಾಧ್ಯವಿಲ್ಲೆಂದು ಹೇಳಿದುದು ಕಂಡುಬರುತ್ತದೆ.

ಮಹಮ್ಮದ ಪೈಗಂಬರನು ಕ್ರಿಸ್ತನಿಗಿಂತ ಒಂದು ಹೆಜ್ಜೆ ಮುಂದು. ಅವನು ತನ್ನನ್ನು ಅಲ್ಲಾನ (ಪರಮೇಶ್ವರನ) ಪ್ರವಾದಿ ಅಥವಾ ದೂತ ಎಂದು ಹೇಳಿಕೊಂಡಿರುವನು. ಅವನೇ ಕೊನೆಯವನಂತೆ, ಬೇರೆ. ಆತನ ತರುವಾಯ ಯಾರೂ ಅಲ್ಲಾನ ಪ್ರವಾದಿ ಆಗಲಾರ ಅಥವಾ ಇರಲಾರ. ಹೀಗಾಗಿ ಸಂಸಾರದಿಂದ ಮುಕ್ತಿ ಹಾಗೂ ಜನ್ನತ್

(ಸ್ವರ್ಗ)ವನ್ನು ಪಡೆಯಲಿಚ್ಛಿಸುವವನು ಯಾವುದೇ ಬಗೆಯ ಸಂದೇಹವನ್ನು ತಳೆಯದೆ ಮಹಮ್ಮದ ಪೈಗಂಬರನನ್ನೇ ಮನ್ನಿಸತಕ್ಕದ್ದೆಂದು ಅವನು ಸ್ಪಷ್ಟವಾಗಿ ಹೇಳಿರುವನು.

ಶ್ರೀಕೃಷ್ಣನಂತೂ ಏಸು ಕ್ರಿಸ್ತ ಹಾಗೂ ಮಹಮ್ಮದ ಪೈಗಂಬರ ಇವರಿಬ್ಬರಿಗಿಂತಲೂ ಒಂದು ಕೈ ಮೇಲು. ಈಶ್ವರನ ಮಗ ಅಥವಾ ಕೊನೆಯ ಪ್ರವಾದಿ ಮುಂತಾಗಿ ಅಂದುಕೊಳ್ಳದೆ, ತಾನು ದೇವನೆಂದು ಕೂಡ ಅಂದುಕೊಳ್ಳದೆ, ಶ್ರೀಕೃಷ್ಣನು ತನ್ನನ್ನೇ ಪರಮೇಶ್ವರ, ಅಂದರೇನೇ ದೇವಾಧಿದೇವ (ದೇವರ ದೇವ) ಎಂದು ಹೇಳಿಕೊಂಡಿದ್ದಾನೆ. ಹೀಗಾಗಿ ಎಲ್ಲರೂ ಅವನನ್ನೇ ಪೂಜಿಸತಕ್ಕದ್ದು, ಅವನನ್ನೇ ಭಜಿಸತಕ್ಕದ್ದು. ಅಂದರೇನೇ ಎಲ್ಲರಿಗೂ ಮುಕ್ತಿ ಪ್ರಾಪ್ತವಾಗಿ ಸ್ವರ್ಗವು ಲಭಿಸುವುದೆಂದು ಹೇಳಿರುವನು.

ಆದರೆ ಬುದ್ಧನು ಇಂಥ ಯಾವುದೇ ಸಂಗತಿಯನ್ನು ಪ್ರತಿಪಾದಿಸಿಲ್ಲ. ಬುದ್ಧನು ಕ್ರಿಸ್ತ, ಪೈಗಂಬರ ಇಲ್ಲವೆ ಶ್ರೀಕೃಷ್ಣನಂತಹ ಅಹಂಭಾವವನ್ನು ಹೊಂದಿಲ್ಲ. ಅವನು ತನ್ನ ಹಿರಿಮೆಯನ್ನು ಹೊಗಳಿಕೊಂಡೂ



ಇಲ್ಲ. ಅವನು ತಾನೊಬ್ಬ ಮಾನವನ ಮಗನೆಂದು ಹೇಳುತ್ತಲೇ ತನ್ನ ಧರ್ಮಮತ ಹಾಗೂ ತತ್ತ್ವಜ್ಞಾನಗಳ ಪ್ರಚಾರವನ್ನು ಕೈಕೊಂಡಿರುವನು. ಅವನು ಉಳಿದವರಂತೆ ಸುಮ್ಮನೆ ತನ್ನ ದೈವೀಕರಣವನ್ನು ಕೈಕೊಂಡಿಲ್ಲ, ತಾನು ಅಲೌಕಿಕವಾದ ಪವಾಡಗಳನ್ನು ಮಾಡಿದ್ದೇನೆಂದು ಹೇಳಿ ಜನರನ್ನು ಮರುಳುಗೊಳಿಸಿಲ್ಲ, ಯಾರನ್ನೂ ವಂಚಿಸಿಲ್ಲ. ತಥಾಗತ ಬುದ್ಧನು 'ಮಾರ್ಗದಾತ' ಮತ್ತು 'ಮೋಕ್ಷದಾತ'ರಲ್ಲಿ ಸ್ಪಷ್ಟವಾಗಿ ವ್ಯತ್ಯಾಸವನ್ನು ಮಾಡಿರುವನು. ತಾವು ಹೇಳಿದಂತೆ ನಡೆದುಕೊಂಡರೇನೇ ಮುಕ್ತಿ, ಸ್ವರ್ಗ ಲಭಿಸುವುದೆಂಬ ನಿಲುವನ್ನು ಕ್ರಿಸ್ತ, ಪೈಗಂಬರ ಹಾಗೂ ಶ್ರೀಕೃಷ್ಣರು ತಳೆದಿದ್ದರು. ಬದಲು ತಾನೊಬ್ಬ ಮಾರ್ಗದರ್ಶಕನು ಮಾತ್ರ, ಅದಕ್ಕೆ ತಕ್ಕಂತೆ ನಡೆದುಕೊಳ್ಳುವುದೋ, ಇಲ್ಲವೋ, ಎಂಬುದನ್ನು ಜನರೇ ತೀರ್ಮಾನಿಸತಕ್ಕದ್ದೆಂಬುದು ತಥಾಗತ ಬುದ್ಧನ ನಿಲುವು. ಜನರು ತನ್ನ ಹೇಳಿಕೆಯನ್ನು ಒಪ್ಪಿಕೊಳ್ಳಲೆಂದು ಬುದ್ಧನು ಕ್ರಿಸ್ತ, ಪೈಗಂಬರ ಹಾಗೂ ಶ್ರೀಕೃಷ್ಣರಂತೆ ಮೋಕ್ಷ, ಸ್ವರ್ಗ ಇಲ್ಲವೆ ಮುಕ್ತಿಯ ಆಸೆಯನ್ನು

ತೋರಿಸಿಲ್ಲ. ಪ್ರತಿಯೊಬ್ಬನೂ ಜೀವನದ ದುಃಖವನ್ನು ನಾಶಗೊಳಿಸಿ ಸುಖವನ್ನು ಪಡೆಯಬಲ್ಲನೆಂಬ ಸಂಗತಿಗೆ ಬುದ್ಧನು ಒತ್ತು ಕೊಟ್ಟಿರುವನು.

ಈ ನಾಲ್ವರಲ್ಲಿ ಇನ್ನೊಂದು ಮುಖ್ಯ ವ್ಯತ್ಯಾಸವು ಕಂಡುಬರುತ್ತದೆ. ಕ್ರಿಸ್ತ ಹಾಗೂ ಪೈಗಂಬರರು ಅನುಕ್ರಮವಾಗಿ ತಮ್ಮನ್ನು ಪರಮೇಶ್ವರನ ಒಬ್ಬನೇ ಒಬ್ಬ ಮಗ ಹಾಗೂ ಅಸಾಧಾರಣವಾದ ದೂತನೆಂದುಕೊಳ್ಳುತ್ತಿದ್ದ ಕಾರಣ ತಾವು ಹೇಳಿದ ಪ್ರತಿಯೊಂದು ವಚನವು ದೇವರ ಬಾಯಿಂದ ಬಂದುದು, ದೇವನೇ ತಮಗೆ ನೇರವಾಗಿ ಹೇಳಿದುದೆಂದು ಸಾಧಿಸುತ್ತಾರೆ. ಅವನ ವಚನವು ಎಂದಿಗೂ ಸುಳ್ಳಾಗಲಾರದು. ಅಂತೆಯೇ ಅವರೀರ್ವರೂ, ಪ್ರಪಂಚದ ಯಾವನೇ ವ್ಯಕ್ತಿಯು ಕ್ರಿಸ್ತ ಇಲ್ಲವೆ ಪೈಗಂಬರರ ವಚನದ ಬಗೆಗೆ ಅಪನಂಬಿಕೆ ಇಲ್ಲವೆ ಸಂದೇಹವನ್ನು ತಳೆಯಬಾರದೆಂದು ಒತ್ತಾಯಿಸುತ್ತಾರೆ. ಕೃಷ್ಣನ ಸಂದರ್ಭದಲ್ಲಿ ಇದೆಲ್ಲವೂ ಬೇರೆ. ಅವನು ತನ್ನನ್ನೇ ಪರಮೇಶ್ವರನೆಂದು ಅಂದುಕೊಳ್ಳುತ್ತಿದ್ದ ಕಾರಣ ಅವನು ಹೇಳಿದ ಪ್ರತಿಯೊಂದು ವಚನವು ಅಂತಿಮ ಸತ್ಯ. ಹೀಗಾಗಿ ಅದು ಶಂಕಾತೀತವಾದ, ತಪ್ಪಿಲ್ಲದ ಆದೇಶವಾಗಿದೆ. ತಥಾಗತ ಬುದ್ದನಾದರೋ ಇಂಥ ಯಾವುದೇ ಬಗೆಯ ಸಂಗತಿಯನ್ನು ಸಾಧಿಸಹೋಗಿಲ್ಲ. ತನ್ನ ಧಮ್ಮವು ಬುದ್ಧಿವಾದ ಹಾಗೂ ಅನುಭವವನ್ನು ಆಧರಿಸಿದುದು, ಹೀಗಾಗಿ ತಥಾಗತ ಬುದ್ಧನು 'ಮಹಾಪರಿನಿರ್ವಾಣ ಸುತ್ತ ದಲ್ಲಿ ಆನಂದನಿಗೆ, 'ನನ್ನ ಅನುಯಾಯಿಗಳು ನಾನು ಹೇಳುವುದನ್ನು ಸತ್ಯವೆಂದು ಬಗೆದು ಅದರ ಅಂಧಾನುಕರಣೆಯನ್ನು ಮಾಡಕೂಡದು. ಬುದ್ಧಿ ಪ್ರಾಮಾಣ್ಯ ಹಾಗೂ ಅನುಭವಗಳು ನನ್ನ ಧಮ್ಮದ ಮೂಲಭೂತ ತಳಹದಿಯಾಗಿದೆ. ಆದುದರಿಂದ ಅವರು ಕಾಲಮಾನ ಹಾಗೂ ಪರಿಸ್ಥಿತಿಗೆ ತಕ್ಕಂತೆ ಅದರಲ್ಲಿ ಬದಲಾವಣೆಯನ್ನು ಮಾಡಿಕೊಳ್ಳಬಹುದು. ಇಷ್ಟೇ ಅಲ್ಲದೆ ಅವರು ಕಾಲ ಹಾಗೂ ಪರಿಸ್ಥಿತಿಗಳಿಗೆ ಸೂಕ್ತವಲ್ಲದ ಅಭಿ ಪ್ರಾಯಗಳನ್ನು ಕಿತ್ತೆಸೆದುಬಿಡಬಲ್ಲರು' ಎಂದು ಹೇಳಿರುವನು. ಈ ಕಾರಣದಿಂದಾಗಿಯೇ ತಥಾಗತ ಬುದ್ಧನು ಬೌದ್ಧ ಧರ್ಮವನ್ನು ಒಣಗಿದ ಕಟ್ಟಿಗೆಯೆಂದು ಬಗೆಯದೆ, ಯಾವತ್ತೂ ಹಸಿರು ಮತ್ತು ಚಿರತರುಣವೆಂದು ಅದನ್ನು ಬೆಯತಕ್ಕದೆಂದು ತಾನು ನಿರೀಕ್ಷಿಸುತ್ತಿರುವೆನೆಂದನು. ಹೀಗಾಗಿ ಅವನು ತೀರ ಅಗತ್ಯ ಕಂಡುಬಂದಾಗ ಬೌದ್ಧ ಅಭಿಪ್ರಾಯಗಳನ್ನು ಪರಿವರ್ತನಶೀಲವನ್ನಾಗಿ ಮಾಡುವ ಪೂರ್ತಿ ಸ್ವಾತಂತ್ರವನ್ನು ತನ್ನ ಅನುಯಾಯಿಗಳಿಗೆ ನೀಡಿರುವನು. ಬೇರಾವ ಧರ್ಮಗುರುವೂ ಈ ಬಗೆಯ ಸ್ವಾತಂತ್ರವನ್ನು ತನ್ನ ಅನುಯಾಯಿಗಳಿಗೆ ನೀಡಿಲ್ಲ, ನೀಡುವಂಥ ಸಾಹಸವನ್ನೂ ತೋರಿಲ್ಲ. ಏಕೆಂದರೆ ಈ ಬಗೆಯ ಮುಕ್ತ ಸ್ವಾತಂತ್ರ್ಯದಿಂದಾಗಿ, ತಾವು ಪ್ರಸ್ಥಾಪಿಸಿದ ಧರ್ಮಮತದ ಟೊಳ್ಳು ಗೋಪುರವು ಕುಸಿದು

ಬಿದ್ದು, ಮಣ್ಣುಗೂಡಿ, ಅದರ ಕುರುಹು ಕೂಡ ಉಳಿಯಲಿಕ್ಕಿಲ್ಲವೆಂಬ ಭಯ ಅವರನ್ನು ಕಾಡಿರಬಹುದು. ಆದರೆ ಇಂಥ ಭಯವು ಬುದ್ಧನನ್ನು ಅದೆಂದಿಗೂ ಕಾಡಲೇ ಇಲ್ಲ. ಏಕೆಂದರೆ ಅವನ ಧರ್ಮಮತಗಳ ಕಟ್ಟಡವನ್ನು ಮೊದಲೇ ಭದ್ರವಾದ ಬುನಾದಿಯ ಮೇಲೆ ಕಟ್ಟಲಾಗಿತ್ತು. ಪ್ರಪಂಚದ ಯಾವುದೇ ಚಂಡಮಾರುತವು ತನ್ನ ಧಮ್ಮವನ್ನು ನೆಲಕ್ಕುರುಳಿಸಲಾರದೆಂಬ ಖಚಿತ ವಿಶ್ವಾಸ ಬುದ್ಧನಿಗಿತ್ತು. ಇದುವೇ ತಥಾಗತ ಬುದ್ಧನ ಅದ್ವಿತೀಯ ವ್ಯಕ್ತಿತ್ವದ ನಿದರ್ಶಕ.

ಬುದ್ಧನ ಅಸಾಧಾರಣ ವ್ಯಕ್ತಿತ್ವವನ್ನು ಅರಿತುಕೊಂಡ ತರುವಾಯ ಇನ್ನು ಅವನ ಧಮ್ಮದ ವಿಚಾರಸರಣಿ ಹೇಗಿತ್ತು, ತತ್ತ್ವಜ್ಞಾನವು ಹೇಗಿತ್ತು, ಪಟ್ಟಭದ್ರ ಧರ್ಮಗಳ ತುಲನೆಯಲ್ಲಿ ಬೌದ್ಧ ಧರ್ಮದ ಸ್ಥಾನ ಯಾವುದಿತ್ತೆಂಬುದನ್ನು ಅರಿತುಕೊಳ್ಳುವುದು ಆವಶ್ಯಕ.

ಭಾರತದ ಮಟ್ಟಿಗೆ ಯೋಚಿಸುವಾಗ ಬೌದ್ಧ ಧರ್ಮ ಹಾಗೂ ಹಿಂದೂ ಧರ್ಮಗಳ ತುಲನೆಗಾಗಿ ಮುಖ್ಯವಾಗಿರುವ ಕೆಲವೇ ಅಂಶಗಳಲ್ಲಿ ಎರಡೇ ಎರಡು ಅಂಶಗಳನ್ನು ಮಾತ್ರ ಪರಾಮರ್ಶಿಸುವುದು ಸೂಕ್ತವಾದೀತು. ಇವೆರಡು ಅಂಶಗಳೆಂದರೆ ಧರ್ಮಕ್ಕೆ ಸಂಬಂಧಪಟ್ಟ ಕರ್ಮಕಾಂಡ ಮತ್ತು ಚಾತುರ್ವರ್ಣ್ಯ .

ಹಿಂದೂ ಧರ್ಮವನ್ನು ಅಭ್ಯಸಿಸಿದ ಬಳಿಕ ಎದ್ದು ಕಾಣುವ ಸಂಗತಿ ಎಂದರೆ ನೀತಿಮತ್ತೆಯು ಹಿಂದೂ ಧರ್ಮದ ತಳಹದಿಯಲ್ಲವೆಂಬುದು. ಹಿಂದೂ ಧರ್ಮದ ತುಸು ಮಟ್ಟಿಗಿನ ನೀತಿಮತ್ತೆಯು ಅದರ ಅವಿಭಾಜ್ಯ ಭಾಗವೆನ್ನಿಸಿಲ್ಲ. `ಧರ್ಮ' ಶಬ್ದದ ಚಾಲ್ತಿಯಲ್ಲಿರುವ ಅರ್ಥದಲ್ಲಿ ಮೊದಲಿನಿಂದಲೇ ನೀತಿಮತ್ತೆಗೆ ಸ್ಥಾನವಿಲ್ಲ. ನೀತಿಮತ್ತೆಯನ್ನು ಖಂಡಿತವಾಗಿಯೂ ಸಮಾಜದ ಆರೋಗ್ಯದೊಡನೆ ಅರ್ಥೈಸಲಾಗಿದೆ. ಆದರೆ ಅದನ್ನು ಹಿಂದೂ ಧರ್ಮದೊಡನೆ ಅರ್ಥೈಸಲಾಗಿಲ್ಲವೆಂಬುದು ತೀರ ಅಚ್ಚರಿಯ ಸಂಗತಿಯಾಗಿದೆ. ಬದಲು ಬೌದ್ಧ ಧರ್ಮವನ್ನು ಮೊದಲಿನಿಂದಲೇ ನೀತಿವಂತ ಧರ್ಮವೆಂದು ಮನ್ನಿಸಲಾಗಿದೆ. ನೀತಿಮತ್ತೆಯನ್ನು ಬೌದ್ಧಧರ್ಮದ ಎಲ್ಲಕ್ಕೂ ಮೊದಲ ಹಾಗೂ ಮುಖ್ಯ ಅಡಿಗಲ್ಲೆಂದು ಮನ್ನಿಸಲಾಗಿದೆ. ಇತರ ಧರ್ಮಗಳು ಈಶ್ವರನನ್ನು ಧರ್ಮದ ಪ್ರಮುಖ ಹಾಗೂ ಮೂಲಭೂತ ಅಂಗವೆಂದು ನಂಬುತ್ತವೆ. ಆದರೆ ಬೌದ್ಧ ಧರ್ಮದಲ್ಲಿ ಮೊದಲಿನಿಂದಲೂ ಈಶ್ವರನಿಗೆ ಸ್ಥಾನವೇ ಇಲ್ಲ. ನೀತಿಮತ್ತೆಯು

ಬೌದ್ಧ ಧರ್ಮದಲ್ಲಿ ಈಶ್ವರನ ಸ್ಥಾನವನ್ನು ಲಪಟಾಯಿಸಿದೆ. ಬೌದ್ಧ ಧರ್ಮವು, ಬೇರೆಲ್ಲ ಧರ್ಮಗಳು ಈಶ್ವರನಿಗೆ ನೀಡಿದ ಪ್ರಾಮುಖ್ಯತೆಗಿಂತ ತುಸು ಹೆಚ್ಚಿನ ಪ್ರಾಮುಖ್ಯತೆಯನ್ನೇ ನೀತಿಮತ್ತೆಗೆ ನೀಡಿದೆ.

ಬುದ್ಧನು 'ಧಮ್ಮ' ಶಬ್ದದಲ್ಲಿ ಒಳಗಾಗಿಸಿರುವ ಕ್ರಾಂತಿಕಾರಿ ವಿಚಾರವನ್ನು ಬೇರೆ ಧರ್ಮಗಳಲ್ಲಿ ಮೊದಲಿನಿಂದಲೂ ತಪ್ಪಿಸಲಾಗಿದೆ, ಮರೆಮಾಚಲಾಗಿದೆ. ವೈದಿಕರು ಬಳಸುವ 'ಧರ್ಮ' ಶಬ್ದವು ಬುದ್ದನ 'ಧಮ್ಮ ಶಬ್ದಕ್ಕಿಂತ ಪೂರ್ತಿ ಬೇರೆಯಾದುದು. ಅದೆಂದಿಗೂ ನೈತಿಕ ಮೌಲ್ಯಕ್ಕೆ ಸಂಬಂಧಿಸಿದ ಅರ್ಥವು ವೈದಿಕ ಧರ್ಮ' ಶಬ್ದದೊಡನೆ ಸೂತ್ರಬದ್ಧವಾಗಿಲ್ಲ. ಬ್ರಾಹ್ಮಣರು ಹಾಗೂ ಪೂರ್ವಮೀಮಾಂಸಾಕಾರ ಜೈಮಿನಿಯು ಈಶ್ವರನಿಗೆ ಸಂಬಂಧಿಸಿದ ಧರ್ಮಕಾಂಡವನ್ನು ಆಚರಿಸುವುದನ್ನಾಗಲಿ, ರೋಮನ್ ಪುರೋಹಿತರ ಜಪಜಾಪ್ಯಕ್ಕೆ ಸಂಬಂಧಿಸಿದ ಪರಿಭಾಷೆಯ ವಿಧಿಯನ್ನು ಆಚರಿಸುವುದನ್ನಾಗಲಿ ಧರ್ಮವೆಂದು ಅರ್ಥೈಸಿರುವರು. ಬ್ರಾಹ್ಮಣರ ಧರ್ಮಕಲ್ಪನೆಯ ಮೇರೆಗೆ, ಈಶ್ವರನನ್ನು ಸಂತುಷ್ಟಗೊಳಿಸಲೆಂದು ಯಜ್ಞಯಾಗಗಳನ್ನು ಮಾಡಿ ಬಲಿಯನ್ನು ಪ್ರದಾನಿಸುವುದು ಹಾಗೂ ಜಪಜಾಪ್ಯಾದಿ ಪೂಜೆ ಅರ್ಚೆಗಳನ್ನು ಮಾಡುವಂತಹ ಧ ರ್ಮಕಾಂಡಗಳೆಲ್ಲ ಧರ್ಮಕ್ಕೆ



ಬದ್ಧವಾಗಿರುವುದರಿಂದ ಬ್ರಾಹ್ಮಣೀ ಧರ್ಮ ಅಥವಾ ವೈದಿಕ ಧರ್ಮಗಳಿಗೂ, ನೀತಿಮತ್ತೆಗೂ ಸುತರಾಂ ಸಂಬಂಧವಿಲ್ಲ.

ಬುದ್ಧನು ಧಮ್ಮವನ್ನು ಇದಕ್ಕೆ ವಿರುದ್ಧವಾಗಿ ಅರ್ಥೈಸಿರುವನು. ಅವನು ಹೇಳಿದ ಧಮ್ಮಕ್ಕೂ ಪೂಜೇಅರ್ಚನೆ, ಜಪಜಾಪ್ಯ, ಯಜ್ಞಯಾಗ, ಮೊದಲಾದ ಈಶ್ವರನಿಗೆ ಸಂಬಂಧಪಟ್ಟ ಕರ್ಮಕಾಂಡಗಳಿಗೂ ಎಳ್ಳಷ್ಟೂ ಸಂಬಂಧವಿಲ್ಲ. ಬುದ್ಧನು ಈಶ್ವರನನ್ನು ಕುರಿತಾದ ಕರ್ಮಕಾಂಡಗಳನ್ನು ಮಾಡುವುದೆಂದರೆ ಧರ್ಮವೆನ್ನುವ ಸಂಗತಿಯನ್ನು ಇಡಿಯಾಗಿ ನಿರಾಕರಿಸಿರುವನು. ಈಶ್ವರನನ್ನು ಕುರಿತಾದ ಕರ್ಮಕಾಂಡದ ಬದಲು ಆಚಾರಶೀಲತೆಯೇ ಧರ್ಮದ ತಿರುಳೆಂದು ತಥಾಗತನು ಸ್ಥಾಪಿಸಿರುವನು. ಬ್ರಾಹ್ಮಣ ಆಚಾರ್ಯ ಹಾಗೂ ತಥಾಗತ ಬುದ್ಧ ಇವರೀರ್ವರೂ ಧರ್ಮವೆಂಬ ಒಂದೇ ಶಬ್ದವನ್ನು ಬಳಸಿದ್ದರೂ ಅವುಗಳ ಮೂಲಭೂತವಾದ ಅರ್ಥಗಳಲ್ಲಿ ಮಾತ್ರ ಮೇಲೆ ನಿರ್ದೇಶಿಸಿದಂತೆ ವ್ಯತ್ಯಾಸವಿದೆ. ತಥಾಗತ ಬುದ್ಧನೊಬ್ಬನೇ ನೀತಿತತ್ತ್ವಗಳನ್ನು ಧರ್ಮದ ಒಂದು ಆಧಾರಭೂತವಾದ ಅಡಿಪಾಯವೆಂದು ಬಗೆಯುವ ಧರ್ಮವೇತ್ತನಾಗಿ ಹೋದನು.

ಭಗವದ್ಗೀತೆಯನ್ನು ಅಭ್ಯಸಿಸಲಾಗಿ, ಸಾಂಪ್ರದಾಯಿಕ ಧಾರ್ಮಿಕ ವಿಧಿ ಮತ್ತು ಜಪಜಾಪ್ಯ, ಮೊದಲಾದ ಕರ್ಮಕಾಂಡಗಳಿಂದ ತನ್ನನ್ನು ಅಲಿಪ್ತನನ್ನಾಗಿ ಇರಿಸಿಕೊಳ್ಳಲು ಕೃಷ್ಣನಿಗೂ ಸಾಧ್ಯವಾಗಲಿಲ್ಲವೆಂಬುದು ಕಂಡುಬರುತ್ತದೆ. ತಾನು ಭಗವದ್ಗೀತೆಯಲ್ಲಿ ಉಪದೇಶಿಸಿದಂತೆ ಅವನು ಜನರ ಮನಸ್ಸುಗಳ ಮೇಲೆ ನಿಷ್ಕಾಮ ಕರ್ಮ ಇಲ್ಲವೆ ಅನಾಸಕ್ತಿ ಯೋಗದ ಮೋಡಿ ಮಾಡಿ, ಕರ್ಮಕಾಂಡದ ಜಯಜಯಕಾರವನ್ನೇ ಮಾಡಿರುವನು. ಬಾಲವೀರನು (ಸ್ಕೌಟ್) ಯಾವುದೇ ಬಗೆಯ ನಿರೀಕ್ಷೆಯನ್ನು ಇರಿಸಿಕೊಳ್ಳದೆ ಪರೋಪಕಾರವನ್ನು ಮಾಡುವ ಬಗೆಯಲ್ಲಿಯೇ ನಿಷ್ಕಾಮ ಕರ್ಮ ಶಬ್ದದ ವ್ಯಾಖ್ಯಾನವೂ ಇದೆ, ಎಂದೆನ್ನಲಾಗುತ್ತದೆ. ಆದರೆ ನಿಷ್ಕಾಮ ಕರ್ಮ ಶಬ್ದವನ್ನು ಬಳಸಿದ ಬಗೆಯಿಂದಾಗಿ ಅದು ಮೂಲ ಅರ್ಥವನ್ನು ದಿಕ್ಕುತಪ್ಪಿಸುವಂತಿದೆ. ನಿಷ್ಕಾಮ ಕರ್ಮದ ಪದಪ್ರಯೋಗದಲ್ಲಿ 'ಕರ್ಮ' ಶಬ್ದವನ್ನು ಉದಾತ್ತ ಭಾವನೆಯಿಂದ ಬಳಸಲಾಗಿಲ್ಲ. ಬ್ರಾಹ್ಮಣರಾಗಲಿ ಇಲ್ಲವೆ ಜೈಮಿನಿಯಾಗಲಿ ಈಶ್ವರನನ್ನು ಕುರಿತಾದ ಆಚಾರ, ಎಂಬ ಅರ್ಥದಲ್ಲಿ ಅದನ್ನು ಬಳಸಿರುವರು. ಪೂರ್ವಮೀಮಾಂಸಾಕಾರನಾದ ಜೈಮಿನಿ ಹಾಗೂ ಭಗವದ್ಗೀತಾಕಾರನಾದ ಕೃಷ್ಣ ಇವರೀರ್ವರೂ ಧಾರ್ಮಿಕ ವಿಧಿಯ ದೃಷ್ಟಿಕೋನದಿಂದ ಕೇವಲ ಒಂದು ಸಂಗತಿಯ ಬಗೆಗೆ ಮಾತ್ರ ತಮ್ಮ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿರುವರು.

ಬ್ರಾಹ್ಮಣರು ಧಾರ್ಮಿಕ ಜಪಜಾಪ್ಯ ಮತ್ತು ಪೂಜೆಅರ್ಚೆಗಳ ವಿಧಿಯಲ್ಲಿ ಎರಡು ವಿಭಾಗಗಳನ್ನು ಮಾಡಿರುವರು. ಒಂದು ನಿತ್ಯ ಕರ್ಮ, ಎರಡನೆಯದು ನೈಮಿತ್ತಿಕ ಕರ್ಮ. ದಿನಾಲು ನಿಯಮಿತ ಸ್ವರೂಪದಲ್ಲಿ ಮಾಡಲಾಗುವ ವಿಧಿಗಳು ನಿತ್ಯ ಕರ್ಮದಲ್ಲಿ ಸಮಾವೇಶಗೊಳ್ಳುತ್ತವೆ. ಅವುಗಳನ್ನು ಯಾವುದೇ ಬಗೆಯ ಫಲದೊಡನೆ ತಳಕು ಹಾಕಿಲ್ಲ. ಇದೇ ಕಾರಣಕ್ಕಾಗಿ ಅವುಗಳನ್ನು ನಿಷ್ಕಾಮ ಕರ್ಮ ಎಂದೆನ್ನಲಾಯಿತು. ಇದಕ್ಕೆ ಎದುರಾಗಿ ಯಾವುದೇ ವಿಶಿಷ್ಟವಾದ ಉದ್ದೇಶದಿಂದ ಕೈಕೊಳ್ಳಲಾಗುವ ಕೃತಿಗೆ ನೈಮಿತ್ತಿಕ ಕರ್ಮ ಎಂದೆನ್ನಲಾಯಿತು. ಮನದಲ್ಲಿ ಒಂದು ವಿಶಿಷ್ಟ ಫಲದ ಆಸೆ

ಇಲ್ಲವೆ ಇಚ್ಛೆಯನ್ನು ಇರಿಸಿಕೊಂಡೇ ಈ ಬಗೆಯ ನೈಮಿತ್ತಿಕ ಕರ್ಮಗಳನ್ನು ಮಾಡಲಾಗುತ್ತಿತ್ತು. ಹೀಗಾಗಿಯೇ ಅವಕ್ಕೆ 'ಕಾಮಾಯಕರ್ಮಎಂದೂ ಅನ್ನಲಾಗುತ್ತಿತ್ತು. ಕೃಷ್ಣನು ಭಗವದ್ಗೀತೆಯಲ್ಲಿ ಧಿಕ್ಕರಿಸಿದುದು ಇದೇ ಕಾಮಾಯಕರ್ಮವನ್ನು, ಕೃಷ್ಣನು ಫಲದ ನಿರೀಕ್ಷೆ ಇಲ್ಲದೆ ಮಾಡಲಾಗುವ ಜಪಜಾಪ್ಯಾದಿ



ನಿತ್ಯಕರ್ಮಗಳನ್ನು ಎಂದಿಗೂ ನಿಷೇಧಿಸಿಲ್ಲ. ಬದಲು ಅವನ್ನು ಕೊಂಡಾಡಿದ್ದಾನೆ. ಕೃಷ್ಣನ ನಿಷ್ಕಾಮ ಕರ್ಮದ ಬಗೆಗಿನ ವಿಚಾರಸರಣಿಯನ್ನು ಗಮನಕ್ಕೆ ತಂದುಕೊಂಡರೆ ಅವನು ನಿತ್ಯ ಕರ್ಮಗಳಾದ ಜಪಜಾಪ್ಯ ಹಾಗೂ ಪೂಜೆಅರ್ಚೆಗಳನ್ನು ಮಾಡುವ ಸಂದರ್ಭದಲ್ಲಿ ನೈತಿಕ ಆಚಾರಕ್ಕೆ ಎಂದಿಗೂ ಒತ್ತು ಕೊಟ್ಟಿಲ್ಲವೆಂಬ ನಿಷ್ಕರ್ಷೆಗೆ ಬರಬೇಕಾಗುತ್ತದೆ. ಕೃಷ್ಣನ ದೃಷ್ಟಿಕೋನದಲ್ಲಿ ಧರ್ಮವು ನೈತಿಕ ಬಾಬತ್ತಾಗಿರದೆ ಅದು ಕೇವಲ ಒಂದು ಕರ್ಮಕಾಂಡವಾಗಿದೆ. ಈ ಕರ್ಮಕಾಂಡವೂ ಎಂಥದೆಂದರೆ, ನಿಷ್ಕಾಮ ಕರ್ಮದೊಡನೆ ಸುತಾರಾಂ ಸಂಬಂಧವನ್ನು ಹೊಂದಿರದ ಜಪಜಾಪ್ಯ ಅಥವಾ ಯಜ್ಞಯಾಗ ಮೊದಲಾದವನ್ನು ಒಳಗೊಂಡಿರುವಂಥದು.

ಬೌದ್ಧ ಧರ್ಮ ಹಾಗೂ ಹಿಂದೂಧರ್ಮಗಳಲ್ಲಿ ಇನ್ನೊಂದು ಮಹತ್ವದ ವ್ಯತ್ಯಾಸವಿದೆ. ಹಿಂದೂಧರ್ಮವು ಅಸಮಾನತೆಯನ್ನು ಪುರಸ್ಕರಿಸುವಂಥದು. ಹಿಂದೂ ಧರ್ಮವು ಒಪ್ಪಿಕೊಂಡ ಚಾತುರ್ವರ್ಣ್ಯದ ಸಮಾಜ ಪದ್ಧತಿಯೇ ಅಸಮಾನತೆಯ ಮೂಲಭೂತವಾದ ಅಡಿಗಲ್ಲಾಗಿದೆ. ಚಾತುರ್ವಣ್ರದ ಸಮಾಜ ಪದ್ಧತಿಯಿಂದಾಗಿಯೇ ಜಾತಿಭೇದಗಳು ನಿರ್ಮಾಣಗೊಂಡು ಜನರಲ್ಲಿ ಉಚ್ಚನೀಚತೆಯ ಭಾವನೆ ನೆಲೆಯೂರಿತು. ಇದಕ್ಕೆದುರಾಗಿ ಸಮತೆಯನ್ನು ಪುರಸ್ಕರಿಸಲೆಂದೇ ಬುದ್ದನು ಎದ್ದು ನಿಂತನು. ಅವನು ಚಾತುರ್ವರ್ಣ್ಯದ ವಿರುದ್ಧ ಕೇವಲ ಧ್ವನಿಯನ್ನು ಎತ್ತಿದನೆಂದಲ್ಲ, ಚಾತುರ್ವಣ್ರವನ್ನು ಬೇರುಸಹಿತ ಕಿತ್ತೆಸೆಯಲೆಂದು ಅವನೊಂದು ಮಹಾನ್ ಹೋರಾಟಕ್ಕೆ ಕರೆಕೊಟ್ಟು, ಅದಕ್ಕಾಗಿ ತನ್ನ ಕೈಮೀರಿ ಯತ್ನಿಸಿದನು. ಹಿಂದೂ ಧರ್ಮದ ಶಾಸ್ತ್ರವನ್ನನುಸರಿಸಿ ಶೂದ್ರರು ಹಾಗೂ ಸ್ತ್ರೀಯರಿಗೆ ವಿದ್ಯೆಯನ್ನು ನಿರಾಕರಿಸಲಾಯಿತು. ಇಷ್ಟೇ ಅಲ್ಲದೆ ಅವರಿಗೆ ಸಂನ್ಯಾಸವನ್ನೂ ನಿರಾಕರಿಸಲಾಗಿದೆ. ಆದರೆ ಬುದ್ಧನು ಇಂಥ ಯಾವುದೇ ಬಗೆಯ ಬಂಧನಗಳನ್ನು ಹೇರಿಲ್ಲ, ಯಾರಿಗೂ ತಡೆಯೊಡ್ಡಿಲ್ಲ . ಇತರರೊಡನೆ ಶೂದ್ರರನ್ನು ಕೂಡ ತನ್ನ

ಭಿಕ್ಕು ಸಂಘಕ್ಕೆ ಸೇರಿಸಿಕೊಂಡನು. ಅವನು ಚಾತುರ್ವಣ್ರ್ಯದಂತೆ ಯಾವುದೇ ಬಗೆಯ ತಾರತಮ್ಯವನ್ನು ಮಾಡಲಿಲ್ಲ. ಇಷ್ಟೇ ಅಲ್ಲದೆ ಸ್ತ್ರೀಯರಿಗಾಗಿಯೂ ಭಿಕ್ಕುಣಿ ಸಂಘಗಳನ್ನು ಸ್ಥಾಪಿಸಿದನು. ಪುರುಷರ ಜೊತೆಗೆ ಅವರಿಗೂ ಸಮಾನತೆಯ ಅಧಿಕಾರವನ್ನು ನೀಡಿದನು. ಈ ರೀತಿಯಾಗಿ ಅಸಮಾನತೆಯನ್ನು ಆಧರಿಸಿದ ಚಾತುರ್ವಣ್ರ್ಯವನ್ನು ಸದೆಬಡಿದು, ಸಮಾನತೆಯನ್ನು ಪುರಸ್ಕರಿಸಿ ಬುದ್ಧನು ಜನರ ಮೇಲೆ ತನ್ನ ಧರ್ಮಮತಗಳ ಪ್ರಭಾವವನ್ನು ಬೀರತೊಡಗುತ್ತಲೇ ಸ್ವಾಭಾವಿಕವಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲೆಂದು ಹಿಂದೂ ಧರ್ಮವು ತುಂಬ ಹೆಣಗಬೇಕಾಯಿತು. ಹೀಗಾಗಿ ಅದು ಹಿಂಸೆಯನ್ನು ತ್ಯಜಿಸಿ, ಬುದ್ದನು ಪುರಸ್ಕರಿಸಿದ ಅಹಿಂಸೆಯನ್ನು ಸ್ವೀಕರಿಸಿ, ಮಾಂಸಭಕ್ಷಣೆಯನ್ನು ತ್ಯಜಿಸಬೇಕಾಯಿತು. ಇಷ್ಟೇ ಅಲ್ಲದೆ ಹಿಂದೂ ಧರ್ಮವು ವೇದಪ್ರಾಮಾಣ್ಯವನ್ನೂ ಕಿತ್ತೆಸೆಯುವ ಸಿದ್ಧತೆಯನ್ನು ತೋರ್ಪಡಿಸಿತು. ಆದರೆ ಹಿಂದೂ ಧರ್ಮವು ಚಾತುರ್ವಣ್ರ್ಯದ ಮೇಲಿನ ತನ್ನ ಹಿಡಿತವನ್ನು ಬಿಡಲು ಮಾತ್ರ ಸಿದ್ಧವಾಗಲಿಲ್ಲ. ಬುದ್ಧನಿಗೆ ಚಾತುರ್ವಣ್ರ್ಯ ಒಪ್ಪಿಗೆಯಾಗದ ಕಾರಣ ಅವನು ಸತತವಾಗಿ ಅದನ್ನು ವಿರೋಧಿಸುತ್ತಲಿದ್ದವು. ಇದೇ ಕಾರಣದಿಂದ ಹಿಂದೂ ಧರ್ಮವು ಯಾವಾಗಲೂ ಜೈನ ಧರ್ಮಕ್ಕಿಂತ ಹೆಚ್ಚು ಬೌದ್ಧ ಧರ್ಮವನ್ನು ದ್ವೇಷಿಸುತ್ತ, ಅದರ ಬಗೆಗೆ ವೈರಭಾವವನ್ನು ತಳೆಯುತ್ತ ಬಂದಿತು. ಚಾತುರ್ವಣ್ರ್ಯದ ವಿರುದ್ಧ ಬುದ್ಧನು ಎತ್ತಿದ ಧ್ವನಿಯನ್ನು ಹತ್ತಿಕ್ಕಲೆಂದು ಹಿಂದೂ ಧರ್ಮವು ತಾರ್ಕಿಕ ದೃಷ್ಟಿಕೋನದಿಂದಲ್ಲ, ತಾತ್ವಿಕ ದೃಷ್ಟಿಕೋನದಿಂದ ಚಾತುರ್ವಣ್ರ್ಯವನ್ನು ಸಮರ್ಥಿಸಿಕೊಳ್ಳತೊಡಗಿತು. ನಾವಿನ್ಯಪೂರ್ಣವಾದ ಈ ಸಮರ್ಥನೆಯನ್ನು ಎಲ್ಲಕ್ಕೂ ಮೊದಲಿಗೆ ಭಗವದ್ಗೀತೆಯಲ್ಲಿ ಮಾಡಲಾಯಿತು.



ಭಗವದ್ಗೀತೆಯು ಖಚಿತವಾಗಿ ಏನನ್ನು ಸಮರ್ಥಿಸುತ್ತದೆ, ಎಂಬುದನ್ನು ಸರಿಯಾಗಿ ಹೇಳಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಭಗವದ್ಗೀತೆಯು ಚಾತುರ್ವರ್ಣ್ಯವನ್ನು ಸಾಕಷ್ಟು ಮಟ್ಟಿಗೆ ಸಮರ್ಥಿಸುತ್ತದೆ, ಎಂಬ ಒಂದು ಸಂಗತಿಯಂತೂ ಖಂಡಿತ. ಭಗವದ್ಗೀತೆಯನ್ನು ಬರೆಯುವುದರ ಹಿಂದಿರುವ ಮುಖ್ಯವಾದ ಗುರಿಯು ಚಾತುರ್ವಣ್ರ್ಯವನ್ನು ಎತ್ತಿ ಹಿಡಿಯುವುದೇ ಆಗಿದೆ. ಭಗವದ್ಗೀತೆಯು ಅದಾವ ಹೊಸ ಬಗೆಯಿಂದ ಚಾತುರ್ವರ್ಣ್ಯವನ್ನು ಸಮರ್ಥಿಸಿಕೊಂಡಿದೆ ?

ಕೃಷ್ಣನು ಹೀಗೆನ್ನುತ್ತಾನೆ : "ನಾನೇ ಪರಮೇಶ್ವರನಿದ್ದ ಕಾರಣ ನಾನೇ ಈ ಚಾತುರ್ವಣ್ರವನ್ನು ನಿರ್ಮಿಸಿದ್ದೇನೆ. ಅದು ಗುಣಕರ್ಮಗಳ ತತ್ವಪ್ರಣಾಲಿಯನ್ನು ಆಧರಿಸಿದೆ. ಇದರ ಅರ್ಥವೇನೆಂದರೆ ಪ್ರತಿಯೊಬ್ಬ ಮನುಷ್ಯನಲ್ಲಿರುವ ಗುಣಗಳನ್ನು ಆಧರಿಸಿ ಸಮಾಜದಲ್ಲಿ ಅವನ ಸ್ಥಾನ ಮತ್ತು ವೃತ್ತಿಯನ್ನು ತೀರ್ಮಾನಿಸಲಾಗಿದೆ. ಇದರಿಂದಾಗಿ ಎರಡು ಸಂಗತಿಗಳು ಬೆಳಕಿಗೆ ಬರುತ್ತವೆ.

ಮೊದಲ ಸಂಗತಿ ಹೀಗಿದೆ : 'ಗುಣಕರ್ಮಶಃ ಆಧರಿತವಾದ ಚಾತುರ್ವಣ್ರ ಪದ್ಧತಿಯನ್ನು ಹೊಸ ತತ್ತ್ವ ಪ್ರಣಾಲಿ ಎಂದು ಮಂಡಿಸಲಾಗಿದೆ. ಪುರಾತನ ತತ್ವ ಪ್ರಣಾಲಿಯಂತೆ ಚಾತುರ್ವಣ್ರವು ವೇದ ಪ್ರಾಮಾಣ್ಯವನ್ನು ಆಧರಿಸಿದ್ದಾಗಿದೆ. ವೇದಗಳನ್ನು ಈಶ್ವರಪ್ರಣೀತ ಹಾಗೂ ಅಪರಿವರ್ತನೀಯವೆಂದು ನಂಬಲಾಗಿದೆ. ಬುದ್ಧನು ವೇದಗಳ ಅಪೌರುಷೇಯ ಹಾಗೂ ಅಪರಿವರ್ತನೀಯತೆಗಳ ಮೇಲೆ ಪ್ರಹಾರವನ್ನು ಮಾಡಿದ್ದರಿಂದ ಪರ್ಯಾಯವಾಗಿ ಚಾತುರ್ವಣ್ರದ ಮೇಲೂ ಪ್ರತ್ಯಾಘಾತವನ್ನು ಮಾಡಿ, ಅದರ ಪುರಾತನ ಅಡಿಪಾಯವನ್ನೇ ಕಿತ್ತೆಸೆದಿರುವನು. ಈ ಕಾರಣದಿಂದಾಗಿಯೇ, ಅವಿಭಾಜ್ಯವೆಂದು ತೋರುವ ಚಾತುರ್ವಣ್ರವನ್ನು ಕಾಪಾಡಿಕೊಳ್ಳಲೆಂದು ಹಿಂದು ಧರ್ಮವು ಭಗವದ್ಗೀತೆಯಿಂದ ಪುರಸ್ಕರಿಸಲಾದ ತತ್ವಪ್ರಣಾಲಿಯ ಹೊಸದಾದ ಹಾಗೂ ಭದ್ರವಾದ ಆಧಾರವನ್ನು ಪಡೆದುಕೊಳ್ಳುವುದು ಅಗತ್ಯದ್ದಾಯಿತು. ಆದರೆ ಕೃಷ್ಣನು ಭಗವದ್ಗೀತೆಯಲ್ಲಿ ಹೇಳಿದ ಈ ಹೊಸ ತತ್ವ ಪ್ರಣಾಲಿಯನ್ನು ಸಮರ್ಥಿಸಿಕೊಳ್ಳುವುದು ಎಷ್ಟರ ಮಟ್ಟಿಗೆ ಸೂಕ್ತ ? ಈ ತತ್ವಪ್ರಣಾಲಿಯು ತುಂಬ ಸಮರ್ಥನೀಯ ಹಾಗೂ ನಿರುತ್ತರಗೊಳಿಸುವುದಾಗಿ ಹಲವು ಜನ ಹಿಂದೂಗಳಿಗೆ ಕಾಣುತ್ತದೆ. ಇಷ್ಟೇ ಅಲ್ಲದೆ ಅದು ಅಹಿಂದೂಗಳಿಗೆ ಕೂಡ ಸತ್ಯ ಮತ್ತು ಚೇತೋಹಾರಿಯಾಗಿ ಕಾಣಿಸುತ್ತದೆ. ಕೇವಲ ವೇದಪ್ರಾಮಾಣ್ಯವನ್ನು ಅವಲಂಬಿಸಿದ ಚಾತುರ್ವರ್ಣ್ಯವನ್ನುಇರಿಸಲಾಗಿದ್ದರೆ ಅದೆಂದಿಗೋ ರಸಾತಳವನ್ನುತಲುಪುತ್ತಿತ್ತೆಂಬ ಗಟ್ಟಿಯಾದ ಭರವಸೆ ನನ್ನದು. ಭಗವದ್ಗೀತೆಯಿಂದ ತಯಾರಿಸಲಾದ, ಶಾಶ್ವತ ಜೀವನದ ಸತ್ಯಾಭಾಸವನ್ನು ನಿರ್ಮಿಸುವ ಚಾತುರ್ವರ್ಣ್ಯದ ಈ ಹೊಸ ಸಮರ್ಥನೆಯು ತೀರ ದಿಕ್ಕುತಪ್ಪಿಸುವಂಥದೂ, ತಪ್ಪಾದುದೂ ಆಗಿದೆ. ಏಕೆಂದರೆ, ಈ ಹೊಸ ಸಮರ್ಥನೆಯೇ ಜಾತಿಸಂಸ್ಥೆಗೆ ಜನ್ಮ ಕೊಟ್ಟಿದೆ.

ಚಾತುರ್ವರ್ಣ್ಯವೆಂಬ ಹೊಸ ಸಿದ್ಧಾಂತವನ್ನು ಸಾಂಖ್ಯ ದರ್ಶನದಿಂದ ತೆಗೆದುಕೊಳ್ಳಲಾಗಿದೆ. ಶ್ರೀ ಕೃಷ್ಣನೇನೂ ಅದನ್ನು ಮೊದಲಾಗಿ ಹೇಳಿಲ್ಲ. ಚಾತುರ್ವಣಕ್ಕೆ ಬೆಂಬಲ ನೀಡಲೆಂದು ಅವನು ಅದನ್ನು ಸಾಂಖ್ಯ ತತ್ತ್ವಜ್ಞಾನದಿಂದ ಕೈಗಡವಾಗಿ ಪಡೆದುಕೊಂಡಿರುವನು. ಈ ಕೈಗಡವನ್ನು ಎತ್ತುವಾಗ ಅವನು ತನ್ನ ಕಲ್ಪನೆಯಂತೆ ಹಲವು ಯುಕ್ತಿವಾದಗಳನ್ನು ಅದರಲ್ಲಿ ತುರುಕಿರುವನು. ಸಾಂಖ್ಯ ತತ್ತ್ವಜ್ಞಾನದ ಉದ್ಘೋಷಕನಾದ ಕಪಿಲನು ಈಶ್ವರನ ಅಸ್ತಿತ್ವವನ್ನೇ ನಿರಾಕರಿಸಿದ್ದನು. ವಸ್ತುವನ್ನು ಅಜಡವೆಂದು ಒಪ್ಪಿಕೊಂಡರೆ ಈಶ್ವರನ ಅಸ್ತಿತ್ವವನ್ನು ಒಪ್ಪಿಕೊಳ್ಳಲು

ಯಾವುದೇ ಕಾರಣವಿಲ್ಲ. ವಸ್ತುವು ಜಡವಲ್ಲ, ಅದು ಅಜಡವಾದುದು, ಅಸ್ಥಿರವಾದುದು. ವಸ್ತುವು ರಜ, ತಮ ಹಾಗೂ ಸತ್ವ ಎಂಬ ಮೂರು



ಗುಣಗಳಿಂದ ಪರಿಪೂರ್ಣವಾದುದು. ಪ್ರಕೃತಿಯು ಈ ಮೂರು ಗುಣಗಳ ಸಂತುಲನೆಯಿಂದಾಗಿ ಜಡವೆಂದು ತೋರುತ್ತದೆ. ಮೂರು ಗುಣಗಳಲ್ಲಿ ಯಾವುದಾದರೂ ಒಂದು ಗುಣವು ಉಳಿದೆರಡಕ್ಕಿಂತ ಪ್ರಬಲವಾದರೆ ಪ್ರಕೃತಿಯ ಸಮತೋಲವು ಹಾಳಾಗಿ ಅದರಲ್ಲಿ ಕ್ರಿಯಾಶೀಲತೆ ಹುಟ್ಟಿಕೊಳ್ಳುತ್ತದೆ. ಇದೇ ಸಾಂಖ್ಯ ತತ್ತ್ವಜ್ಞಾನದ ಸಾರ. ಈ ಸಿದ್ಧಾಂತವನ್ನು ಕುರಿತು ಯಾವುದೇ ಬಗೆಯ ವಾದವಿರಲು ಸಾಧ್ಯವಿಲ್ಲ. ಈ ಸಿದ್ಧಾಂತವು ಬಹುಮಟ್ಟಿಗೆ ನಿಜವೂ ಆಗಿದೆ. ವ್ಯಕ್ತಿಗತವಾಗಿ ಪ್ರತಿಯೊಬ್ಬನೂ ಪ್ರಕೃತಿಯ ಭಾಗವಾದ್ದರಿಂದ ಸತ್ವ, ರಜ ಮತ್ತು ತಮ ಎಂಬ ತ್ರಿಗುಣಗಳಿಂದ ಪರಿಪೂರ್ಣನು. ಇಷ್ಟೇ ಅಲ್ಲದೆ ಈ ಮೂರು ಗುಣಗಳು ಅಧಿಕಾರವನ್ನು ಪಡೆಯಲೆಂದು ಒಂದರಮೇಲೊಂದು ಪೈಪೋಟಿಯನ್ನು ನಡೆಯಿಸುತ್ತಿರಬಹುದೆಂಬ ಸಂಗತಿಯನ್ನು ಕೂಡ ಒಪ್ಪಬಹುದಾಗಿದೆ. ಆದರೆ ಯಾವೊಬ್ಬ ವ್ಯಕ್ತಿಯ ಹುಟ್ಟಿನ ವೇಳೆಗೆ ಅವನ ಒಂದು ವಿಶಿಷ್ಟ ಗುಣವು ಇತರ ಗುಣಗಳ ಮೇಲೆ ಪ್ರಭುತ್ವವನ್ನು ಪಡೆದು, ಸರ್ವಕಾಲಕ್ಕಷ್ಟೇ ಅಲ್ಲದೆ ಅವನ ಮರಣದ ಅಂತಿಮ ಕ್ಷಣದವರೆಗೂ ಒಂದೇಸಮನೆ ಅವನಲ್ಲಿ ವಾಸಿಸುತ್ತಿರಬಹುದೆಂದು ಒಪ್ಪಿಕೊಳ್ಳಲು ಹೇಗೆ ಸಾಧ್ಯ ? ಸಾಂಖ್ಯ ತತ್ವಜ್ಞಾನದಲ್ಲಾಗಲಿ, ಪ್ರತ್ಯಕ್ಷ ಅನುಭವದಲ್ಲಾಗಲಿ ಈ ತರ್ಕಕ್ಕೆ ಯಾವುದೇ ಬಗೆಯ ಆಧಾರವಿಲ್ಲ. ಕೃಷ್ಣನು ಚಾತುರ್ವಣ್ರ್ಯದ 'ಗುಣಕರ್ಮಶಃ ಕಲ್ಪನೆಯನ್ನು ಒಪ್ಪಿಕೊಂಡ ಕಾಲಕ್ಕೆ ಹಿಟ್ಲರ್ ಅಥವಾ ಮುಸಲೋನಿ ಹುಟ್ಟಿ ಬಂದಿದ್ದರೆ, ಅವರಲ್ಲಿ ಬಣ್ಣ ಬಳಿಯುವವನ ಮಗನಾದ ಒಬ್ಬನು ಅಥವಾ ಉಪ್ಪಾರನ ಮಗನಾದ ಇನ್ನೊಬ್ಬನು ಜಗತ್ತನ್ನು ಮಣಿಸುವ ಸರ್ವಾಧಿಕಾರಿಯಾಗಲು ಹೇಗೆ ಸಾಧ್ಯವಾಯಿತೆಂಬ ಒಡವನ್ನು ಬಿಡಿಸಲು ಆ ಕೃಷ್ಣನಿಗೂ ಕಷ್ಟದ್ದಾಗುತ್ತಿತ್ತು.

ವಸ್ತುವಿಗೆ ಸಂಬಂಧಿಸಿದಂತೆ ಹೀಗೊಂದು ಅಂಶವಿದೆ. ಅದೆಂದರೆ, ಪ್ರಕೃತಿಯು ಪ್ರತಿಯೊಬ್ಬ ವ್ಯಕ್ತಿಗೆ ತಕ್ಕಂತೆ ಒಂದೇಸಮನೆ ಬದಲಾಯಿಸುತ್ತದೆ, ಎಂಬುದು. ಏಕೆಂದರೆ ಗುಣಗಳ ಸಾಪೇಕ್ಷ ಸ್ಥಿತಿಯೂ ಕೂಡ

ಪರಿವರ್ತನಶೀಲವಾಗಿದೆ. ಗುಣಗಳು ಪ್ರಭುತ್ವವನ್ನು ಪಡೆಯುವ ಸಾಪೇಕ್ಷ ಸ್ಥಿತಿಯಲ್ಲೂ ಕೂಡ ಒಂದೇ ಸಮನೆ ಬದಲಾಯಿಸುವಂತಿದ್ದರೆ, ಮನುಷ್ಯನನ್ನು ವರ್ಣಗಳಲ್ಲಿ ವಿಭಜಿಸುವಂಥ ಚಿರಕಾಲ ಹಾಗೂ ಸ್ಥಾಯಿ ಸ್ವರೂಪದ ಚಾತುರ್ವರ್ಣ್ಯ ಪದ್ಧತಿಯನ್ನು ಇಲ್ಲವೆ ವೃತ್ತಿ ಪದ್ಧತಿಯನ್ನು ಒಪ್ಪಿಕೊಳ್ಳಲಾಗದು. ಹೀಗಾಗಿ ಭಗವದ್ಗೀತೆಯ ವಿಚಾರಸರಣಿಯು ಸಂಪೂರ್ಣವಾಗಿ ಕುಸಿದು ಬೀಳುತ್ತದೆ. ಆದರೆ ಈ ಮೊದಲು ನಾನು ಹೇಳಿದ ಹಾಗೆ ತನ್ನ ಸತ್ಯಾಭಾಸ ಹಾಗೂ ತೋರಿಕೆಯ ಒಳ್ಳೆಯತನದಿಂದ ಅದು ಹಿಂದೂಗಳಿಗೆ ಮೋಡಿ ಮಾಡಿದೆ. ಅವರು ಅದರ ಗುಲಾಮರಾಗಿರುವರು. ಇದರಿಂದಾಗಿ ಹಿಂದೂ ಧರ್ಮವು ಒಂದೇಸಮನೆ ಚಾತುರ್ವಣ್ಯದ ಜಯಜಯಕಾರವನ್ನು ಮಾಡುತ್ತ, ಅಸಮಾನತೆಯನ್ನಾಧರಿಸಿದ ಜಾತಿವ್ಯವಸ್ಥೆಯನ್ನು ತಬ್ಬಿ ಕುಳಿತಿದೆ. ಬೌದ್ಧ ಧರ್ಮವು ಹಿಂದೂ ಧರ್ಮದ ಇವೆರಡು ದುರ್ಗುಣಗಳಿಂದ ಪೂರ್ತಿ ಅಲಿಪ್ತವಾಗಿ ಉಳಿದಿದೆ.

ಬೌದ್ಧ ತತ್ತ್ವಜ್ಞಾನವು ಹಿಂದೂಗಳನ್ನು ಕಾಪಾಡಬಲ್ಲುದೆಂಬುದು ಹಲವರ ಅನ್ನಿಸಿಕೆ. ಆದರೆ ಅವರು ಕೆಲಮಟ್ಟಿಗೆ ಉದಾಸೀನರು, ಬೌದ್ಧ ಧರ್ಮವು ಭಾರತದಲ್ಲಿ ಮತ್ತೆ ನೆಲೆಯೂರಲಾರದು ಅಥವಾ ಅದರ ಪುನರುಜೀವನ ಸಾಧ್ಯವಿಲ್ಲೆಂದು ಅವರಿಗೆ ಅನ್ನಿಸುತ್ತದೆ. ಆದರೆ ನಾನು ಅವರ ಈ ನಿರಾಶಾವಾದವನ್ನು ಒಪ್ಪಿಕೊಳ್ಳುವುದಿಲ್ಲ.

ಹಿಂದೂ ಧರ್ಮವನ್ನು ಒಪ್ಪಿಕೊಳ್ಳುವ ಜನರು ಎರಡು ವಿಚಾರಸರಣಿಯವರು. ಎಲ್ಲ ಧರ್ಮಗಳು ನಿಜವಾದವುಗಳು. ಇಷ್ಟೇ ಅಲ್ಲದೆ ಒಂದೇ ಬಗೆಯಾಗಿವೆ ಎಂದು ಮೊದಲ ವಿಚಾರಸರಣಿಯವರು



ನಂಬುವರು. ಹಲವರು ಇತರ ಧರ್ಮಿಯರು ಈ ವಿಚಾರಸರಣಿಗೆ ಬೆಂಬಲವನ್ನು ನೀಡುವರು. ಆದರೆ ಎಲ್ಲ ಧರ್ಮಗಳು ಒಂದೇ ಬಗೆಯವೆಂದು ಹೇಳುವ ಮಟ್ಟಿಗಿನ ಬೇರೊಂದು ಮಿಥ್ಯಾವಾದ ಇರಲಿಕ್ಕಿಲ್ಲ. ಹಿಂದೂ ಧರ್ಮದಲ್ಲಿ ಹಲವು ಬಗೆಯ ಟೊಳ್ಳು ಹಾಗೂ ಸುಳ್ಳು ಸಂಗತಿಗಳಿವೆ, ಎಂದು ಎರಡನೆಯ ವಿಚಾರಸರಣಿಯ ಹಿಂದೂಗಳಿಗೆ ಅನ್ನಿಸುತ್ತದೆ. ಆದರೆ ಈ ಜನ ಇಂಥ ಸಂಗತಿಗಳನ್ನು ಸಾರ್ವಜನಿಕವಾಗಿ ಒಪ್ಪಿಕೊಳ್ಳುವ ಇಲ್ಲವೆ ಉಚ್ಚರಿಸುವ ಧೈರ್ಯವನ್ನು ತೋರುವುದಿಲ್ಲ. ಹೀಗೇಕೆ ಆಗಬೇಕೆಂಬುದು ಮಾತ್ರ ಅರ್ಥವಾಗುತ್ತಿಲ್ಲ!

ಧರ್ಮವು ಸಮಾಜ ಜೀವನದ ವಾರಸಿನ ಒಂದು ಭಾಗವಾಗಿರುತ್ತದೆ. ಮನುಷ್ಯನ ಜೀವನ, ಅವನ ಪ್ರತಿಷ್ಠೆ, ಅವನ ಸ್ವಾಭಿಮಾನ, ಮೊದಲಾದ ಸಂಗತಿಗಳು ಅದರೊಂದಿಗೆ ತಳಕು ಹಾಕಿಕೊಂಡಿರುತ್ತವೆ. ಹೀಗಾಗಿಯೇ ಯಾವೊಬ್ಬನು ತನ್ನ ಧರ್ಮವನ್ನು ತ್ಯಜಿಸಲು ಸಹಜವಾಗಿ ಸಿದ್ಧನಾಗಲಾರನು. ಸರಿಯೋ ತಪ್ಪೋ, ಆದರೆ ನನ್ನ ದೇಶ ಎನ್ನುವಲ್ಲಿ ಒಂದು ಬಗೆಯ ಸ್ವಾಭಿಮಾನ ನಮ್ಮೊಳಗೆ ಇರುವಂತೆಯೇ ಸರಿಯೋ ತಪ್ಪೋ, ಆದರೆ ನನ್ನ ಧರ್ಮ ಎಂದೆನ್ನುವಾಗಲೂ ಒಂದು ಬಗೆಯ ಜ್ವಲಂತವಾದ ಸ್ವಾಭಿಮಾನವು ಅಂತಃಕರಣದಲ್ಲಿ ಅಡಗಿರುತ್ತದೆ. ಈ ಕಾರಣದಿಂದಾಗಿಯೇ, ಧರ್ಮದ ಹಲವು ಅರಿಷ್ಟ ಮತ್ತು ಅಹಿತಕರ ಸಂಗತಿಗಳ ಅರಿವಿದ್ದೂ ಹಿಂದೂ ಧರ್ಮದ ಹಲವು ಜನರು ತಮ್ಮ ಧರ್ಮವನ್ನು ತ್ಯಜಿಸುವ ಸಾಹಸವನ್ನು ತೋರದೆ ಅದನ್ನೇ ಬಿಗಿದಪ್ಪಿ ಕುಳಿತಿರಲೆಂದು ಹಲವು ಬಗೆಯ ದಾರಿಗಳನ್ನು ಶೋಧಿಸುತ್ತಿರುತ್ತಾರೆ. ಎಲ್ಲ ಧರ್ಮಗಳೂ ದೋಷದಿಂದ ಕೂಡಿದವುಗಳೆಂಬ ಯೋಚನೆಯಿಂದ ತಮ್ಮನ್ನು ತಾವು ಸಂತೈಸಿಕೊಳ್ಳುತ್ತಾರೆ. ಹೀಗಾಗಿ ಈ ಧರ್ಮ ಕೆಟ್ಟದ್ದೋ, ಆ ಧರ್ಮ ಕೆಟ್ಟದ್ದೋ, ಎಂಬುದಾಗಿ ಯೋಚಿಸಲೇಕೂಡದು. ಸ್ವದೇಶಪ್ರೀತಿಯ ಟೊಳ್ಳು ಅಭಿಮಾನದಿಂದಾಗಿಯೂ ಕೆಲವು ಜನರಿಗೆ ಬೌದ್ಧ ಧರ್ಮವನ್ನು ಅತ್ಯುತ್ತಮವೆಂದು ಸ್ವೀಕರಿಸಲು ನಾಚಿಕೆ ಎನ್ನಿಸುತ್ತದೆ. ಕಾಲಾಂತರದಲ್ಲಿ ಹಿಂದೂ ಧರ್ಮವು ಲಯ ಹೊಂದಿ ಅದು ಜೀವನಧಾರಣಕ್ಕೆ ಅಯೋಗ್ಯವೆನ್ನಿಸಲಿದೆ. ನೂರಾರು ತುಣುಕುಗಳಾಗುವ ಮಟ್ಟಿಗೆ ಹಿಂದೂ ಧರ್ಮದಲ್ಲಿ ಒಂದು ಬಗೆಯ ನಿರ್ವಾತವು ತಯಾರಾಗಲಿದೆ. ಇಂಥ ಪರಿಸ್ಥಿತಿಯು ಎದುರಾದಾಗಲೇ ಥಟ್ಟನೆ ಹಿಂದೂಗಳ ಕಣ್ಣುಗಳು ತೆರೆದು, ಇನ್ನು ಮುಂದಾದರೂ ಯಾವುದಾದರೂ ರಚನಾತ್ಮಕ ಹಾಗೂ ಸೂಕ್ತವಾದ ಹೆಜ್ಜೆಗಳನ್ನು ಇಕ್ಕಬೇಕೆಂದು ಅನ್ನಿಸತೊಡಗಿತು. ಆಗ ಅವರ ಹೆಜ್ಜೆಗಳು ಖಂಡಿತ ಬೌದ್ಧ ಧರ್ಮದತ್ತ ಮುನ್ನಡೆಯುವವೆಂಬ ಬಗೆಗೆ ನನಗೆ ಭರವಸೆ ಇದೆ. ಆಗ ಜೀವನಧಾರಣವನ್ನು ಗಟ್ಟಿಯಾಗಿ ಉಳಿಸಲು ಬೌದ್ಧ ತತ್ತ್ವಜ್ಞಾನವೇ ಅವರಿಗೆ ಮಾರ್ಗದರ್ಶಕವಾಗಲಿದೆ. ಇದೊಂದು ಆಸೆಯ ಕಿರಣವು ಹಿಂದೂಗಳ ಜೀವನವನ್ನು ಪ್ರಫುಲ್ಲಿತವನ್ನಾಗಿ ಮಾಡಲಿದೆ. ಇಷ್ಟೇ ಅಲ್ಲದೆ ಬೌದ್ಧ ಧರ್ಮವೇ ಅವರ ಜೀವನವನ್ನು ಫಲವತ್ತಾಗಿ ಮಾಡಲು ಕಾರಣ ಎನ್ನಿಸಲಿದೆ.

ಇಂದು, ಪ್ರತಿಯೊಂದು ಧರ್ಮವೂ ಒಂದು ಪ್ರಶ್ನೆಯನ್ನು ಉತ್ತರಿಸಬೇಕಿದೆ. ಅದೆಂದರೆ, ಯಾವ ಧರ್ಮದಲ್ಲಿದೆ ಪೀಡಿತ ಹಾಗೂ ಪದದಲಿತ ಜನರ ಮಾನಸಿಕ ಹಾಗೂ ನೈತಿಕ ಅಭ್ಯುದಯವನ್ನು ಉಂಟುಮಾಡುವ ಸಾಮರ್ಥವಿದೆ ? ಎಂಬುದು. ಇಂದು ಬದುಕಿರುವ ಧರ್ಮಗಳಲ್ಲಿ ಅಂಥ ಸಾಮರ್ಥ ಇಲ್ಲದೇ ಹೋದರೆ ಆ ಧರ್ಮವು ನಿರುಪಯುಕ್ತವೇ ಸರಿ.

ಹಿಂದೂ ಧರ್ಮ ಎನ್ನಿಸಿಕೊಂಡ ಧರ್ಮವು ಲಕ್ಷಗಟ್ಟಳೆಯ ದಲಿತ ಹಾಗೂ ಅಸ್ಪೃಶ್ಯರೆಂದು ಎಣಿಸಲಾದ ಜನರ ಮಾನಸಿಕ ಹಾಗೂ ನೈತಿಕ ಸ್ಥಿತಿಯನ್ನು ಸುಧಾರಿಸಲು ಸಾಧ್ಯವೇ ? ದುರ್ದೈವದಿಂದ

ಇದಕ್ಕೆ 'ಇಲ್ಲ' ವೆಂಬ ಉತ್ತರವನ್ನೇ ಹೇಳಬೇಕಾಗುತ್ತದೆ. ಅಂದ ಬಳಿಕ ಲಕ್ಷಗಟ್ಟಳೆಯ ದಲಿತ ಹಾಗೂ ಅಸ್ಪೃಶ್ಯ ಜನರು ಕೊಳೆಯುತ್ತ ಹಿಂದೂ ಧರ್ಮದಲ್ಲಿಯೇ ಬಿದ್ದು ಕೊಂಡಿರಲಿ, ಎಂದು ನಿರೀಕ್ಷಿಸಬೇಕೆ? ಈ ಬಗೆಯ ನಿರೀಕ್ಷೆ ಪೂರ್ತಿ ಅಯೋಗ್ಯವಾದುದು. ನಿಜವಾಗಿ ನೋಡಿದರೆ ಹಿಂದೂ ಧರ್ಮವು ಇಂದು ನಿಧಾನವಾಗಿ ಜ್ವಾಲಾಮುಖಿಯ ಬಾಯಿಯತ್ತ ಸರಿಯುತ್ತಿದೆ. ಹಿಂದೂ ಧರ್ಮದ ಅಸ್ತಿತ್ವವು ಇಂದಿನ ಮಟ್ಟಿಗೆ ಕಂಡುಬರುತ್ತಿದ್ದರೂ ಯಾವಾಗ ಜ್ವಾಲಾಮುಖಿಯು ಉದ್ರೇಕಗೊಂಡು ಆ ಧರ್ಮವು ರಸಾತಳಕ್ಕೆ ಹೋದೀತೆಂಬುದು ತಿಳಿದಿಲ್ಲ. ಏಕೆಂದರೆ ಲಕ್ಷಗಟ್ಟಳೆಯ ಪದದಲಿತರ ಅಸ್ಮಿತೆಯು ಜಾಗೃತಗೊಂಡು ತಮ್ಮ ಅಧೋಗತಿಗೆ ಹಿಂದೂ ಧರ್ಮವೇ ಕಾರಣ ಎನ್ನುವ ಕಟುಸತ್ಯವನ್ನು ಕಂಡುಕೊಂಡಿತೆಂದರೆ ಆಗ ಬಂಡಾಯದ ಅಲೆಯೆದ್ದು ಹಿಂದೂ ಧರ್ಮವನ್ನು ನಾಶಪಡಿಸಿಬಿಡಬಲ್ಲುದು. ಈ ಸಂದರ್ಭದಲ್ಲಿ ಇತಿಹಾಸದ ಹಿನ್ನೋಟವನ್ನು ಕೈಕೊಂಡರೆ, ಕ್ರಿಶ್ಚಿಯನ್ ಧರ್ಮವು ರೋಮ್ ಸಾಮ್ರಾಜ್ಯದಲ್ಲಿ ಮೂರ್ತಿಪೂಜೆಯನ್ನು ಒಪ್ಪಿಕೊಳ್ಳುವ ಹಾಗೂ ಗುಲಾಮಗಿರಿಯನ್ನು ಕಠೋರವಾಗಿ ಸಮರ್ಥಿಸಿಕೊಳ್ಳುವ ಸನಾತನ ಧರ್ಮದ ಅಳಿವನ್ನು ಹೇಗೆ ಉಂಟುಮಾಡಿತೆಂಬುದು ನೆನಪಾಗದೆ ಇರದು. ಸೂಕ್ತವಲ್ಲದ ರೂಢಿಪ್ರಿಯ ಸನಾತನ ಧರ್ಮವು ಸರ್ವಸಾಮಾನ್ಯರಿಗೆ ಮಾನಸಿಕ ಹಾಗೂ ನೈತಿಕ ಸ್ವಾತಂತ್ರವನ್ನು ದಯಪಾಲಿಸಲು ಸಾಧ್ಯವಿಲ್ಲ ಎಂಬುದನ್ನು ಕಂಡಬಳಿಕವೇ ರೋಮ್ ಸಾಮ್ರಾಜ್ಯದ ಪ್ರಜೆಗಳು ಕ್ರಿಸ್ತನ ಧರ್ಮವನ್ನು ಸ್ವೀಕರಿಸಿದರು. ರೋಮ್ ಸಾಮ್ರಾಜ್ಯದಲ್ಲಿ ನಡೆದ ಇತಿಹಾಸದ ಪುನರಾವರ್ತನೆಯು ಭಾರತದಲ್ಲಿಯೂ ಖಂಡಿತ ನಡೆಯಲಿದೆ. ಭಾರತದ ಸರ್ವಸಾಮಾನ್ಯ ಜನರು ಸತ್ಯವನ್ನು ಮನಗಾಣುತ್ತಲೇ, ಬೌದ್ಧ ಧರ್ಮದ ದಾರಿಯನ್ನು ತಾವಾಗಿಯೇ ಹಿಡಿಯಲಿರುವರು.

ಹಿಂದೂ ಧರ್ಮ ಮತ್ತು ಬೌದ್ಧ ಧರ್ಮಗಳನ್ನು ಕುರಿತು ತೌಲನಿಕವಾಗಿ ಯೋಚಿಸಲಾಗಿ ಇತರ ವಿಚಾರಸರಣಿಗಳ ಹಿನ್ನೆಲೆಯಲ್ಲಿ ಬೌದ್ಧ ವಿಚಾರಧಾರೆ ಎಂಥದೆಂಬುದನ್ನು ಸಂಕ್ಷಿಪ್ತವಾಗಿ ನೋಡೋಣ.

ಮೊದಲನೆಯದಾಗಿ, ಯಾವುದೇ ಒಂದು ಸಮಾಜವ್ಯವಸ್ಥೆಯು ತನ್ನನ್ನು ಉಳಿಸಿಕೊಳ್ಳಬೇಕಿದ್ದರೆ ಅದು ಕಾನೂನು ಇಲ್ಲವೆ ನೀತಿಮತ್ತೆಯ ಆಧಾರವನ್ನು ಪಡೆದುಕೊಳ್ಳಬೇಕಿದೆ. ಕಾನೂನು ಹಾಗೂ ನೀತಿಮತ್ತೆಗಳಲ್ಲಿ

ಒಂದಾದರೂ ಸಂಗತಿ ಇಲ್ಲದೇ ಹೋದರೆ ಸಮಾಜವ್ಯವಸ್ಥೆಯು ಸುರಕ್ಷಿತವಾಗಿ ಉಳಿಯಲಾರದು. ಯಾವುದೇ ಸಮಾಜದಲ್ಲಿ ಕಾನೂನಿಗೆ ತೀರ ಕಡಿಮೆ ಆಸ್ಪದವನ್ನು ಕೊಡಲಾಗುತ್ತದೆ. ಕೆಲವು ಜನರನ್ನು ಸಾಮಾಜಿಕ ಶಿಸ್ತಿನಲ್ಲಿ ಕಟ್ಟಿಹಾಕಲೆಂದೇ ಕಾನೂನುಗಳನ್ನು ಯೋಜಿಸಬೇಕಾಗುತ್ತದೆ. ಆ ಕಾನೂನುಗಳನ್ನು ಆಧರಿಸಿ ಅವರನ್ನು ಸರಿಯಾಗಿ ನಡೆದುಕೊಳ್ಳಲು ಹಚ್ಚಿದರೆ ಸಮಾಜವ್ಯವಸ್ಥೆಯನ್ನು ಉಳಿಸಿಕೊಳ್ಳಲು ಸಾಧ್ಯ. ನೀತಿಮತ್ತೆಯ ಬೆದರಿಕೆಯಿಂದ ಬಹುಸಂಖ್ಯ ಜನರನ್ನು ಸಮಾಜ ಜೀವನವನ್ನು ಸುಸ್ಥಿರವಾಗಿ ಉಳಿಸುವಂತೆ ಪ್ರವೃತ್ತರನ್ನಾಗಿ ಮಾಡಲು ಸಾಧ್ಯ. ಈ ಸಂಗತಿಯನ್ನು ಗಮನಕ್ಕೆ ತಂದುಕೊಂಡರೆ ನೀತಿಮತ್ತೆಯನ್ನು ಆಧರಿಸಿದ ಧರ್ಮವು ಸಮಾಜ ಜೀವನವನ್ನು ಸುಸ್ಥಿರಗೊಳಿಸುವ ಮತ್ತು ಸಮಾಜ ಸ್ವಾಸ್ಥ್ಯವನ್ನು ಉಳಿಸುವ ಪ್ರಮುಖ ತತ್ಯವಾಗಿದೆ, ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಎರಡನೆಯ ಸಂಗತಿ. ಧರ್ಮವು ವಿಜ್ಞಾನದೊಡನೆ ಅಸಂಗತವಾಗಿದ್ದು ನಡೆಯದು. ವಿಜ್ಞಾನದೊಡನೆ ಅಸಂಗತವಾದರೆ ಅದು ಜನರ ಗೌರವಕ್ಕೆ ಪಾತ್ರವೆನ್ನಿಸದೆ ನಗೆಪಾಟಲಿಗೆ ಈಡಾಗಿ ಜೀವನವನ್ನು ಕುರಿತಾದ ತತ್ತ್ವಜ್ಞಾನವನ್ನು ಬೇರೂರಿಸಲು ಅಸಮರ್ಥವಾಗುತ್ತದೆ. ಬೇರೆ ಮಾತಿನಲ್ಲಿ ಹೇಳುವುದಾದರೆ ಧರ್ಮವು ಕಾರ್ಯಪ್ರವಣವಾಗಬೇಕಿದ್ದರೆ ಅದು ಕಾರ್ಯಕಾರಣ, ಅಂದರೇನೇ



ವಿಜ್ಞಾನದೊಡನೆ ದೃಢ ಸಂಬಂಧವನ್ನು ಹೊಂದಿರತಕ್ಕದ್ದು.

ಮೂರನೆಯ ಸಂಗತಿ. ಧರ್ಮವು ಸಾಮಾಜಿಕ ನೀತಿಮತ್ತೆಯ ದೃಷ್ಟಿಯಿಂದ ಒಂದು ವಿಶಿಷ್ಟ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕಿದೆ. ಧರ್ಮವು ಕೇವಲ ನೀತಿಬದ್ಧವಾಗಿದ್ದು ನಡೆಯದು. ಬದಲು ಅದು ಸ್ವಾತಂತ್ರ್ಯ, ಸಮತೆ ಹಾಗೂ ಬಂಧುತ್ವಗಳ ಮೂರೂ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಬೇಕಿದೆ. ಈ ಮೂರೂ ಸಂಗತಿಗಳ ಹೊರತು ಯಾವುದೇ ಧರ್ಮವು ಸಮಾಜಧಾರಣಕ್ಕೆ ನಿರುಪಯೋಗಿ ಎನ್ನಿಸುತ್ತದೆ.

ನಾಲ್ಕನೆಯ ಸಂಗತಿ. ಧರ್ಮವು ಬಡತನದ ಮುಖಸ್ತುತಿಯನ್ನು ಮಾಡಿ ಅದರ ಉದಾತ್ತೀಕರಣವನ್ನು ಮಾಡುವುದು ಎಂದಿಗೂ ಒಳ್ಳೆಯದಲ್ಲ. ಧರ್ಮದ ಹೆಸರಿನಲ್ಲಿ ಶ್ರೀಮಂತರ ಸಂನ್ಯಾಸ ಪ್ರವೃತ್ತಿಯ ಹುಸಿ ಹೊಗಳಿಕೆಯನ್ನು ಮಾಡಿದರೆ ಒಂದೊಮ್ಮೆ ಒಪ್ಪಿಕೊಳ್ಳಬಹುದು. ಆದರೆ ಬಡತನವು ಪೂರ್ವಜನ್ಮದ ಫಲವೆಂಬ ಹುಸಿ

ಹೊಗಳಿಕೆ ನಡೆದರೆ ಅದು ಧರ್ಮದ ವಿಪರ್ಯಾಸವೆನ್ನಿಸುತ್ತದಲ್ಲದೆ, ಅನೈತಿಕತೆ ಹಾಗೂ ಅಕ್ರಮ ನಡತೆಗಳಿಗೆ ಚಿರಸ್ಥಾಯಿಯಾದ ಸ್ವರೂಪವನ್ನು ಒದಗಿಸುತ್ತದೆ. ಇಷ್ಟೇ ಅಲ್ಲದೆ ಅದರಿಂದಾಗಿ ನರಕದ ಕಲ್ಪನೆಯಂತಹ ಯಾತನೆಯಿಂದ ಕೂಡಿದ ಜೀವನಕ್ಕೆ ಮನ್ನಣೆಯನ್ನು ಒದಗಿಸಿದಂತಾಗುತ್ತದೆ.

ಯಾವ ಧರ್ಮವು ಮೇಲಿನ ಇವೆಲ್ಲ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಲು ಸಾಧ್ಯ ? ಎಂಬ ಪ್ರಶ್ನೆಗೆ ಉತ್ತರವನ್ನು ಶೋಧಿಸುವಾಗ ಒಂದು ಸಂಗತಿಯನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದು ಅಗತ್ಯದ್ದು. ಇಂದಿನ ಕಾಲದಲ್ಲಿ ಮಹಾತ್ಮ ನು ಅವತರಿಸಲು ಸಾಧ್ಯವಿಲ್ಲ. ಹೀಗಾಗಿ ಒಂದು ಹೊಸ ಧರ್ಮವು ಹುಟ್ಟಿಬರುವ ಸಾಧ್ಯತೆಯೂ ಸುತಾರಾಂ ಉಳಿದಿಲ್ಲ. ಇಂದು ಪೃಥ್ವಿತಲದ ಮೇಲಿರುವ ಧರ್ಮಗಳಲ್ಲಿಯೇ ಒಂದು ಸೂಕ್ತವಾದ ಧರ್ಮವನ್ನು ಆಯ್ದುಕೊಂಡು ಅದರ ಅನುಯಾಯಿತ್ವವನ್ನು ಸ್ವೀಕರಿಸುವುದು ಅಪರಿಹಾರ್ಯವಾಗಿದೆ.

ಅಸ್ತಿತ್ವದಲ್ಲಿರುವ ಧರ್ಮಗಳಲ್ಲಿ ಒಂದು ಇಲ್ಲವೆ ಎರಡು ಧರ್ಮಗಳು ಮೇಲೆ ಹೇಳಿದ ಪರೀಕ್ಷೆಗಳ ಪೈಕಿ ಒಂದು ಇಲ್ಲವೆ ಎರಡು ಪರೀಕ್ಷೆಗಳನ್ನು ತೇರ್ಗಡೆಯಾಗಬಲ್ಲವು. ಆದರೆ ಎಲ್ಲ ಬಗೆಯಿಂದಲೂ ಒರೆಗೆ ಹಚ್ಚಬಹುದಾದ ಧರ್ಮವು ಯಾವುದಾದರೂ ಇದೆಯೇ ? ಎಂಬುದೊಂದು ಪ್ರಶ್ನೆ. ನನ್ನ ಮಾಹಿತಿಯಂತೆ ಕೇವಲ ಬೌದ್ಧ ಧರ್ಮವು ಮಾತ್ರ ಮೇಲಿನ ಎಲ್ಲ ಬಗೆಯ ಒರೆಗಳಿಗೆ ಹಚ್ಚಲು ಪೂರ್ತಿ ಸೂಕ್ತವಾದ ಧರ್ಮವಾಗಿದೆ. ಇಂದು ಪ್ರಪಂಚದೆದುರು ಬೌದ್ಧ ಧರ್ಮವನ್ನು ಹಿಂಬಾಲಿಸುವುದನ್ನು ಬಿಟ್ಟು ಬೇರೆ ದಾರಿಯಿಲ್ಲ. ಇಂದಿನ ಆಧುನಿಕ ಪ್ರಪಂಚವು ಪ್ರಾಚೀನ ಪ್ರಪಂಚಕ್ಕಿಂತ ತೀರ ಬೇರೆಯಾಗಿದೆ. ಇಂದು ನಿಜವಾಗಿಯೂ ಅದಕ್ಕೆ ಧರ್ಮದ ಆವಶ್ಯಕತೆ ಇದೆ. ತನ್ನ ಇಂಥ ಆವಶ್ಯಕತೆಯನ್ನು ಪೂರೈಸಿಕೊಳ್ಳಲೆಂದು ಅದು ಬುದ್ಧನ ಧರ್ಮವನ್ನೇ ಆಯ್ದುಕೊಳ್ಳಬೇಕಿದೆ.

ನನ್ನೀ ಪ್ರತಿಪಾದನೆಯು ಜನರಿಗೆ ಮನವರಿಕೆಯಾಗದು. ಹಲವು ಜನರು ತಥಾಗತ ಬುದ್ಧನನ್ನು ಕುರಿತು ಬರೆಯುವಾಗ ಅವನು ಕೇವಲ ಅಹಿಂಸೆಯನ್ನು ಪ್ರತಿಪಾದಿಸಿರುವನು, ಇದನ್ನುಳಿದು ಬೇರಾವ ವಿಚಾರವನ್ನೂ ಪ್ರದರ್ಶಿಸಿಲ್ಲವೆಂದು ಹೇಳಿದುದು ಕಂಡುಬರುತ್ತದೆ. ಅದರಿಂದಾಗಿ ಬೌದ್ಧ ಧರ್ಮವು ಇಂದಿನ ಪ್ರಪಂಚದ ಆವಶ್ಯಕತೆಯನ್ನು ಪೂರೈಸಲಾರದೆಂದು ಅವರಿಗೆ ಅನ್ನಿಸುವ ಸಾಧ್ಯತೆ ಇದೆ. ಆದರೆ ಈ ಯೋಚನೆಯು ದಿಕ್ಕುತಪ್ಪಿಸುವಂಥದು. ಬುದ್ಧನು ಅಹಿಂಸೆಯ ತತ್ತ್ವವನ್ನು ಪ್ರತಿಪಾದಿಸಿದುದು ನಿಜ. ಆದರೆ ಅದರ ಮಹತ್ವವನ್ನು ಕಡಿಮೆ ಎಂದು ನಾನು ಸುತಾರಾಂ ಒಪ್ಪುವುದಿಲ್ಲ. ಏಕೆಂದರೆ

ಅಹಿಂಸೆಯ ತತ್ವವು ಮಹಾನ್ ತತ್ತ್ವವಾಗಿದೆ. ಅದನ್ನು ಅಂಗೀಕರಿಸದೆ ಪ್ರಪಂಚವನ್ನು ವಿಧ್ವಂಸದಿಂದ ರಕ್ಷಿಸಲಾಗದು. ಬುದ್ಧನು ಅಹಿಂಸೆಯ ಹೊರತು ಇನ್ನೂ ಹಲವಾರು ಸಂಗತಿಗಳನ್ನು ಕುರಿತು ಹೇಳಿರುವನೆಂದು ನನಗೆ ಅನ್ನುವುದಿದೆ. ಬುದ್ಧನು ಸಾಮಾಜಿಕ, ವೈಯಕ್ತಿಕ, ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರಗಳನ್ನು ಧಮ್ಮದ ಭಾಗವಾಗಿ ಪುರಸ್ಕರಿಸಿರುವನು. ಸಮಾನತೆಯನ್ನು ಕೇವಲ ಪುರುಷರ ಮಟ್ಟಿಗೆ ಮಿತಿಗೊಳಿಸದೆ ಅವನು ಅದನ್ನು ಸ್ತ್ರೀ ಪುರುಷರಿಬ್ಬರಿಗೂ ಅನ್ವಯಿಸಿರುವನು. ಬುದ್ಧನು ಜನರ ಸಮಾಜ ಜೀವನದ ಹಲವು ಬಗೆಯ ಅಂಗೋಪಾಂಗಗಳನ್ನು ಕುರಿತು ಆಳವಾಗಿ ಅಭ್ಯಸಿಸಿರುವನು. ಅವನ ತತ್ವಜ್ಞಾನವು ಅತ್ಯಾಧುನಿಕವಾಗಿದ್ದು ಮನುಷ್ಯನಿಗೆ ಐಹಿಕ ಜೀವನದಲ್ಲಿ ಸುಖ, ಸಮಾಧಾನಗಳನ್ನು ದೊರಕಿಸಿ ಕೊಡುವುದು ಅವನ ಧಮ್ಮದ ಮುಖ್ಯ ಗುರಿಯಾಗಿದೆ. ಇದೇ ಜಗತ್ತಿನಲ್ಲಿ, ಇದೇ ಕಣ್ಣಿಗೆ ಕಾಣುವಂತೆ ಇಂಥ ಸಮಾಧಾನವನ್ನು ದೊರಕಿಸಿ ಕೊಡಬೇಕಿದೆ, ಮರಣಾನಂತರದ ಸ್ವರ್ಗವೆಂಬ ಕಣ್ಣಿಗೆ ಕಾಣದ ಸ್ಥಳದಲ್ಲಲ್ಲ. ಬುದ್ಧನೊಡನೆ ಹೋಲಿಸಬಹುದಾದ ಯಾವನೇ ಒಬ್ಬ ಧರ್ಮಗುರುವೂ ಈ ಜಗತ್ತಿನಲ್ಲಿ ಸಿಕ್ಕಲಾರನು. ಇದು ಬುದ್ಧನ ವಿಶೇಷವಾದ ವೈಶಿಷ್ಟ್ಯ.

ಇವೆಲ್ಲ ಬೌದ್ಧ ಧರ್ಮದ ಶ್ರೇಷ್ಠತ್ವದ ಸಂಗತಿಗಳನ್ನು ಕುರಿತು ಯೋಚಿಸಿದ ಬಳಿಕ ಸಹಜವಾಗಿಯೇ ಒಂದು ಪ್ರಶ್ನೆ ಎದುರಾಗುತ್ತದೆ. ಅದೆಂದರೆ ಬೌದ್ಧ ಧರ್ಮದ ಪ್ರಸಾರದ ಕನಸನ್ನು ನನಸಾಗಿಸುವುದು ಹೇಗೆ ? ಎಂಬುದು. ಇಡಿಯ ಪ್ರಪಂಚದಲ್ಲಿ ಬೌದ್ಧ ಧಮ್ಮವನ್ನು ಪ್ರಕೃತಗೊಳಿಸುವುದಿದ್ದರೆ ಮುಂದಿನ ಮೂರು ಸಂಗತಿಗಳನ್ನು ಕುರಿತು ಗಂಭೀರವಾಗಿ ಯೋಚಿಸುವುದು ಆವಶ್ಯಕ.

ಮೊದಲ ಸಂಗತಿ ಎಂದರೆ, ಬಾಯ್ಬ್ಲ್ ತರಹ ಬೌದ್ಧ ಧರ್ಮದ ಒಂದೇ ಒಂದು ಪ್ರಮಾಣ ಗ್ರಂಥವನ್ನು ತಯಾರಿಸುವುದು. ಎರಡನೆಯ ಸಂಗತಿ, ಬೌದ್ಧ ಬಿಕ್ಕು ಸಂಘದ ಸಂಘಟನೆ, ಧ್ಯೇಯಧೋರಣೆ ಹಾಗೂ ಕಾರ್ಯಪ್ರಣಾಲಿಗಳಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ಮಾಡುವುದು. ಮೂರನೆಯ ಸಂಗತಿ, ಅಂತರರಾಷ್ಟ್ರೀಯ ಬೌದ್ಧ ಸೇವಾ ಸಂಘವನ್ನು ಸ್ಥಾಪಿಸುವುದು,

ಬೌದ್ಧ ಧರ್ಮದ ಪ್ರಸಾರದ ದೃಷ್ಟಿಯಿಂದ ಬೌದ್ಧ ಧರ್ಮಕ್ಕಾಗಿ ಬಾಯ್ಬಲ್ತರಹ ಒಂದೇ ಒಂದು ಪ್ರಮಾಣ ಗ್ರಂಥವನ್ನು ನಿರ್ಮಿಸುವುದು, ಎಲ್ಲಕ್ಕೂ ಮೊದಲ ಆವಶ್ಯಕತೆಯಾಗಿದೆ. ಬೌದ್ಧ ವಾಲ್ಮೀಯ ಅಸೀಮ. ಒಬ್ಬನು ಬೌದ್ಧ ಧರ್ಮದ ಸಾರವನ್ನು ಅರಿತುಕೊಳ್ಳಲೆಂದು ಬೌದ್ಧ ಧರ್ಮದ ವಿಶಾಲವಾದ ಸಾಗರದಲ್ಲಿ ಅದೆಷ್ಟೇ ಮುಳುಗು ಹಾಕಿದರೂ ಅದನ್ನು ವಶಪಡಿಸಿಕೊಳ್ಳಲಾರನು. ಬೌದ್ಧ ಧರ್ಮದೊಡನೆ ಹೋಲಿಸಿದರೆ ಇತರ ಧರ್ಮಗಳಲ್ಲಿ ಒಂದು ಒಳ್ಳೆಯ ಅನುಕೂಲತೆ ಇದೆ. ಅದೆಂದರೆ, ಆಯಾ ಧರ್ಮದ ಸಾರಭೂತವಾದ ಒಂದು ಗ್ರಂಥವನ್ನು ಬಗಲಲ್ಲಿಟ್ಟುಕೊಂಡು ಎಲ್ಲಿಗೆ ಬೇಕಾದರೂ ಒಯ್ಯಬಹುದಾದ ಹಾಗೂ ಅದರ ವಾಚನವನ್ನು ಮಾಡಬಹುದಾದ ಅನುಕೂಲತೆಯಿದೆ. ಆದರೆ ಬೌದ್ಧ ಧರ್ಮದಲ್ಲಿ ಇಂಥ ಒಂದೇ ಗ್ರಂಥವಿಲ್ಲದ ಕಾರಣ ಸಾಮಾನ್ಯ ಬೌದ್ಧ ಅನುಯಾಯಿಗಳು ತುಂಬ ಪಾಡು ಪಡಬೇಕಾಗುತ್ತದೆ. ಬೌದ್ಧ ಧರ್ಮಸಮೂಹದಲ್ಲಿರುವ 'ಧಮ್ಮಪದ' ಎಂಬ ಗ್ರಂಥವು ಕೆಲಮಟ್ಟಿಗೆ ಈ ಕೊರತೆಯನ್ನು ನೀಗಿಸುತ್ತದೆ. ಆದರೆ ಭಾರತದಲ್ಲಿ, ಹಿಂದಿಯಲ್ಲಿ ತಯಾರಿಸಲಾದ 'ಧಮ್ಮಪದ ವು ಈ ನಿರೀಕ್ಷೆಯನ್ನು ಪೂರೈಸಲು ಸಾಕಿಲ್ಲ. ಪ್ರತಿಯೊಂದು ಧರ್ಮವು ಒಂದಿಲ್ಲೊಂದು ಬಗೆಯ ಶ್ರದ್ಧೆಯನ್ನು ಆಧರಿಸಿದೆ. ಆದರೆ ಪರಂಪರೆಯಿಂದ ಬಂದ ಸಾಂಪ್ರದಾಯಿಕ ಸ್ವರೂಪದಲ್ಲಿ ಈ ಶ್ರದ್ಧೆಯನ್ನು ಗ್ರಹಿಸಲು ಸಾಧ್ಯವಿಲ್ಲ. ಪುರಾಣ, ಮಹಾಕಾವ್ಯ ಇಲ್ಲವೆ ಸಾಹಿತ್ಯದ ಕಲ್ಪನಾವಿಲಾಸದಿಂದ ಸಿಂಗರಿಸಲಾದ ಕಥಾವಸ್ತುಗಳಂಥ ಸಂಗತಿಗಳು ಈ ಶ್ರದ್ಧೆಗೆ ಬೇಕಾಗುತ್ತವೆ. ಭಾರತೀಯ 'ಧಮ್ಮಪದ' ವನ್ನು



ಇಂಥ ಪ್ರಸನ್ನವಾದ ಭಾಷೆಯಲ್ಲಿ ಪವಣಿಸದಿದ್ದ ಕಾರಣ ಅದು ಶುಷ್ಕ ತತ್ತ್ವಜ್ಞಾನವನ್ನು ಚರ್ಚಿಸುತ್ತ, ಶ್ರದ್ಧೆಯನ್ನು ನಿರ್ಮಿಸಲು ಯತ್ನಿಸುತ್ತದೆ.

ಈ ಕಾರಣದಿಂದಾಗಿ, ಬುದ್ಧನ ಜೀವನ ಚರಿತ್ರೆ, ಚೀನೀ ಧಮ್ಮಪದ, ಬುದ್ಧನ ಮಹತ್ವದ ಕೆಲವು ಸಂಭಾಷಣೆಗಳು, ಬೌದ್ಧ ಧರ್ಮಿಯರ ಜನ್ಮ, ಮೃತ್ಯು, ಮದುವೆಯಂತಹ ಸಾಮಾಜಿಕ ವಿಧಿಗಳ ವಿವರಗಳನ್ನು ನಿಯೋಜಿಸಲಾದ ಬೌದ್ಧ ಧರ್ಮದ ಒಂದೇ ಒಂದು ಗ್ರಂಥದಲ್ಲಿ ಸಂಕ್ಷಿಪ್ತವಾಗಿ ಸಮಾವೇಶಗೊಳಿಸುವುದು ಆವಶ್ಯಕ. ಆದರೆ ಇಂಥ ಗ್ರಂಥವನ್ನು ತಯಾರಿಸುವಾಗ ಅದರ ಭಾಷೆಯತ್ತಲೂ ಅಲಕ್ಷ್ಯವಾಗಕೂಡದು. ಆ ಗ್ರಂಥವನ್ನು ಮಾನವನ ಮನ ಮಿಡಿಯುವಂಥ, ಅದನ್ನು ಮೋಡಿಗೆ ಒಳಪಡಿಸುವಂಥ ಜೀವಂತಿಕೆಯುಳ್ಳ ಭಾಷೆಯಲ್ಲಿ ಬರೆಯತಕ್ಕದ್ದು. ಆ ಭಾಷೆಯು ರಗಳೆ, ಬೇಸರ ತರಿಸುವಂಥದು ಇಲ್ಲವೆ ಸುಮ್ಮನೆ ಗಂಭೀರ, ಘನತೆಯದು ಆಗಿರಬಾರದು. ಗ್ರಂಥದ ಭಾಷಾಶೈಲಿಯು ಲಾಲಿತ್ಯ, ಮಾಧುರ್ಯಗಳಿಂದ ಕೂಡಿರಬೇಕು. ಆ ಭಾಷೆಯು ಪ್ರಸನ್ನತೆ, ಮನಮೋಹಕತೆ ಹಾಗೂ ಓಜಸ್ಸುಗಳಿಂದ ಕೂಡಿರಬೇಕು. ಅಂದರೇನೇ ಅದು ಜನರಿಗೆ ಮನವರಿಕೆಯನ್ನು ಮಾಡಬಲ್ಲುದು, ಅವರ ಮನಸ್ಸಿನ ಮೇಲೆ ಅಷ್ಟೊತ್ತಬಲ್ಲುದು.

ಹಿಂದೂ ಸಂನ್ಯಾಸಿ ಹಾಗೂ ಬೌದ್ಧ ಭಿಕ್ಕುಗಳಲ್ಲಿ ನೆಲಮುಗಿಲುಗಳ ವ್ಯತ್ಯಾಸವಿದೆ. ಹಿಂದೂ ಸಂನ್ಯಾಸಿಗೆ ಜನರು ಹಾಗೂ ಸಮಾಜಗಳ ಬಗೆಗೆ ಯಾವುದೇ ಬಗೆಯ ಕರ್ತವ್ಯ ಇರದು. ಅವನು ಪ್ರಪಂಚದಿಂದ ಪರಾಙ್ಮುಖನು, ಸಮಾಜಜೀವನದಿಂದ ದೂರಕ್ಕೆ ಓಡಿಹೋದವನು. ಹೀಗಾಗಿ ಜಗದ ಕಣ್ಣಲ್ಲಿ ಅವನು ಸತ್ತಂತೆಯೇ. ಆದರೆ, ಬೌದ್ಧ ಭಿಕ್ಕು ಹಾಗಲ್ಲ. ಅವನು ಜಗತ್ತು ಹಾಗೂ ಸಮಾಜಗಳೊಡನೆ ಘನಿಷ್ಠ ಸಂಬಂಧವನ್ನು ಹೊಂದಿರುತ್ತಾನೆ. ಅವನು ಸಮಾಜಕ್ಕೆ ಕರ್ತವ್ಯದಿಂದ ಬದ್ಧನು. ಸಂನ್ಯಾಸಿಯಂತೆ ಭಿಕ್ಕುವನ್ನು ಒಂಟಿಯಾಗಿ ಇಲ್ಲವೆ ಇಬ್ಬರಾಗಿ ಇರಲು ಬಿಡದೆ ಅವನು ಸಂಘಟನೆಯಲ್ಲಿ ಇರತಕ್ಕದ್ದು, ಅವನದೆಂಬ ಒಂದು ಸಂಘವಿರಬೇಕು, ಎನ್ನುವುದರ ಹಿಂದಿರುವ ಉದ್ದೇಶವಾದರೂ ಏನು ?

ಬೌದ್ಧ ಧರ್ಮದಲ್ಲಿ ಹೇಳಲಾದ ಆದರ್ಶ ತತ್ವಪ್ರಣಾಲಿಯಂತೆ ಸಮಾಜವನ್ನು ನಿರ್ಮಿಸುವುದು, ಸಮಾಜದ ಪ್ರತಿಯೊಂದು ಘಟಕವನ್ನು ನೀತಿತತ್ವಗಳಂತೆ ನಡೆದುಕೊಳ್ಳಲು ಹಚ್ಚುವುದು ಹಾಗೂ ಸ್ವಂತದ ಆದರ್ಶವತ್ತಾದ ನಡತೆಯ ಮೂಲಕ ಜನರೆದುರು ಉತ್ತಮವಾದ ಒಂದು ಮಾದರಿಯನ್ನು ಇರಿಸುವುದು, ಮೊದಲಾದ ಸಂಗತಿಗಳು ಬೌದ್ಧ ಭಿಕ್ಕುವನ್ನು ತಯಾರಿಸುವಲ್ಲಿ ಇರುವ ಮುಖ್ಯ ಗುರಿಯಾಗಿದ್ದವು. ಬೌದ್ಧ ತತ್ತ್ವಜ್ಞಾನವು ಸರ್ವಸಾಮಾನ್ಯ ಮನುಷ್ಯನಿಗೆ ಸಹಜವಾಗಿ ಅರ್ಥವಾಗುವಂತಿಲ್ಲ, ಎಂಬುದನ್ನು ಬುದ್ಧನು ಅರಿತಿದ್ದನು. ಆದರೂ ಅವರು ಇದನ್ನು ಅರಿತುಕೊಳ್ಳಬೇಕು, ಅದಕ್ಕಾಗಿ ಬೌದ್ಧ ವಿಚಾರಪ್ರಣಾಲಿಯೊಡನೆ ಬದ್ಧತೆಯನ್ನು ಹೊಂದಿರುವ ಸುಸಂಘಟಿತವಾದ ಬೌದ್ಧ ಭಿಕ್ಕುಗಳ ಒಂದು ಆದರ್ಶ ತಂಡವು ಅವರ ಕಣ್ಣೆದುರು ಇರಬೇಕೆಂಬುದು ಭಿಕ್ಕು ಸಂಘವನ್ನು ನಿರ್ಮಿಸಲು ಕಾರಣ. ಈ ಕಾರಣದಿಂದಾಗಿಯೇ ವಿನಯ ಎಂಬ ಆದರ್ಶ ನಿಯಮಗಳಿಂದ ಭಿಕ್ಕು ಸಂಘವನ್ನು ಬಾಧ್ಯತೆಗೆ ಒಳಪಡಿಸಲಾಗಿದೆ.

ಬೌದ್ಧ ಭಿಕ್ಕು ಸಂಘದ ಸ್ಥಾಪನೆಯ ಕಾಲಕ್ಕೆ ಬುದ್ಧನ ಮನದಲ್ಲಿ ಹಲವು ಬಗೆಯ ಬೇರೆ ಗುರಿಗಳಿದ್ದವು. ಸರ್ವಸಾಮಾನ್ಯರಿಗೆ ಸತ್ಯ ಹಾಗೂ ನಿರಪೇಕ್ಷವಾದ ಮಾರ್ಗದರ್ಶನವನ್ನು ಮಾಡುವಂಥ ಬುದ್ಧಿವಾದಿಗಳ ಸಂಘಟನೆಯನ್ನು ತಯಾರಿಸುವುದು ಆವಶ್ಯಕವೆಂದು ಅವನಿಗೆ ಅನ್ನಿಸುತ್ತಿತ್ತು. ಭಿಕ್ಕು ಸಂಘವು ಯಾವುದೇ ನಿರೀಕ್ಷೆ ಇಲ್ಲದೆ ಜನಸೇವೆಯನ್ನು ಮಾಡಬೇಕೆಂಬ ಮುಖ್ಯ ಉದ್ದೇಶವನ್ನು ಗಮನದಲ್ಲಿ ಇರಿಸಿಕೊಂಡು ಭಿಕ್ಕುವು ಸ್ವಂತದ ಸೊತ್ತುಗಳನ್ನು



ಹೊಂದಕೂಡದೆಂಬ ನಿಯಮವನ್ನು ತಯಾರಿಸಿದ್ದನು. ಸೊತ್ತುಗಳನ್ನು ಹೊಂದುವ ಮನೋಧರ್ಮದಿಂದ ಮನುಷ್ಯನ ಸ್ವತಂತ್ರ ವಿಚಾರ ಪ್ರೇರಣೆ ಹಾಗೂ ವಿಚಾರ ಪ್ರವೃತ್ತಿಗೆ ಬಾಧೆ ತಟ್ಟುವುದಲ್ಲದೆ ಅಡ್ಡಿಯುಂಟಾಗುವುದು. ಭಿಕ್ಷುವು ಸೊತ್ತುಗಳನ್ನು ಹೊಂದುವ ಪ್ರವೃತ್ತಿಯು ಘಾತಕವಾಗಿರುವಂತೆಯೇ ಅವನು ಮದುವೆ ಮಾಡಿಕೊಂಡರೆ ನಿರೀಕ್ಷೆಯಿಲ್ಲದೆ ಜನಸೇವೆಯನ್ನು ಮಾಡಲು ಸಾಧ್ಯವಿಲ್ಲ. ಇದರಿಂದಾಗಿ ಭಿಕ್ಕುವು ಸಾಮಾಜಿಕ ಬಂಧನಕ್ಕೆ ಸಿಕ್ಕುಬೀಳದೆ ತನು ಮನ ಧನಗಳಿಂದ ಜನಸೇವೆಯನ್ನು ಮಾಡಲೆಂದು ಮುಕ್ತನಾಗಿರಬೇಕೆಂದು ಅವನು ಮದುವೆಯನ್ನು ಮಾಡಿಕೊಳ್ಳಬಾರದೆಂಬ ಕಟ್ಟಳೆಯನ್ನು ಬುದ್ಧನು ತಯಾರಿಸಿದ್ದನು.

ಇಂದಿನ ಭಿಕ್ಕು ಸಂಘವು ಇವೆಲ್ಲ ಆದರ್ಶಗಳಿಗೆ ತಕ್ಕಂತೆ ಇದೆಯೇ ? ಎನ್ನುವುದರ ಸ್ಪಷ್ಟವಾದ ಉತ್ತರ ಇಲ್ಲೆಂಬುದಾಗಿದೆ. ಭಿಕ್ಕು ಸಂಘವು ಜನರಿಗೆ ಮಾರ್ಗದರ್ಶನವನ್ನಂತೂ ಮಾಡುವುದೇ ಇಲ್ಲವಷ್ಟೇ ಅಲ್ಲದೆ ಜನಸೇವೆಯನ್ನೂ ಮಾಡುತ್ತಿಲ್ಲ. ಈಗಿರುವ ಭಿಕ್ಕುಸಂಘವು ಸದ್ಯದ ಪರಿಸ್ಥಿತಿಯಲ್ಲಿ, ಬೌದ್ಧ ಧರ್ಮದ ಪ್ರಸಾರಕ್ಕಾಗಿ ನಿರುಪಯೋಗಿಯಾಗಿದೆ. ಇಂದು ಭಿಕ್ಕುಸಂಘಗಳು ಪ್ರಪಂಚದ ತುಂಬೆಲ್ಲ ಅಗಾಧ ಸಂಖ್ಯೆಯಲ್ಲಿವೆ. ಕೇವಲ ಸಾಧುಗಳು ಹಾಗೂ ಸಂನ್ಯಾಸಿವೃತ್ತಿಗಳಿಂದಿರುವ ಭಿಕ್ಕುಗಳು ಅವುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತುಂಬಿರುವರು. ಅವರೆಲ್ಲ ಕೇವಲ ಧ್ಯಾನ ಇಲ್ಲವೆ ಸೋಮಾರಿತನಗಳಲ್ಲಿ ತಮ್ಮ ವೇಳೆಯನ್ನು ಕಳೆಯುತ್ತಾರೆ. ಜನರಿಗೆ ಜ್ಞಾನವನ್ನು ನೀಡಬೇಕು, ಅವರ ಸೇವೆಯನ್ನು ಕೈಕೊಳ್ಳಬೇಕೆಂಬ ಪ್ರವೃತ್ತಿಯೇ ಭಿಕ್ಕುಗಳಲ್ಲಿ ಉಳಿದಿಲ್ಲ. ಸೇವಾಪ್ರವೃತ್ತಿಯ ಸಂದರ್ಭದಲ್ಲಿ ಯಾರ

ಮನದಲ್ಲಾಗಲಿ ರಾಮಕೃಷ್ಣ ಮಿಶನ್ ಎದ್ದು ನಿಲ್ಲುತ್ತದೆ. ಆದರೆ ಭಿಕ್ಕುಗಳ ನಿಜವಾದ ಕರ್ತವ್ಯವು ಸೇವಾವೃತ್ತಿಯಾಗಿದ್ದಾಗಲೂ ಭಿಕ್ಕುಸಂಘವು ಯಾರ ನೆನಪಿಗೂ ಬರುವುದಿಲ್ಲ. ಪರಿಸ್ಥಿತಿ ಹೀಗಿರುವಾಗ ಯಾರ ಸೇವಾಭಾವವು ಆದರಣಿಯವಾದುದೆನ್ನಬೇಕು ? ಭಿಕ್ಕುಸಂಘದೋ ಇಲ್ಲವೆ ರಾಮಕೃಷ್ಣ ಮಿಶನ್ನಿನದು ? ಭಿಕ್ಕುಸಂಘವು ಇಂದು ಬರಿ ಸೋಮಾರಿಗಳ ಒಂದು ದೊಡ್ಡ ಸೈನ್ಯವಾಗಿದೆ. ಇಂದು ಕಡಿವೆ. ಜನ ಭಿಕ್ಕುಗಳಿದ್ದರೂ ನಡೆದೀತು, ಆದರೆ ಅವರು ಸುಶಿಕ್ಷಿತರು ಹಾಗೂ ಕಾರ್ಯಪ್ರವೃತ್ತರಾಗಿರತಕ್ಕದ್ದು, ಪರಪುಷ್ಟರಾಗಲಿ, ಮೈಗಳ್ಳರಾಗಲಿ ಆಗಿರಕೂಡದು. ಈ ಬಗೆಗೆ ಭಿಕ್ಕುಸಂಘವು ಜೆಸುಇಟ್ ಕ್ರಿಸ್ತ ಪಾದ್ರಿಗಳಿಂದ ಪ್ರೇರಣೆಯನ್ನು ಪಡೆಯಲು ಯಾವುದೇ ಬಗೆಯ ಅಭ್ಯಂತರವಿಲ್ಲ. ಅವರು ಶೈಕ್ಷಣಿಕ ಹಾಗೂ ವೈದ್ಯಕೀಯ ಸೇವೆಗಳ ಮೂಲಕ ಏಶಿಯಾ ಖಂಡದ ತುಂಬೆಲ್ಲ ಕ್ರಿಸ್ತ ಧರ್ಮದ ಪ್ರಸಾರವನ್ನು ಮಾಡಿದರು. ಅವರು ಕೇವಲ ಕ್ರಿಸ್ತ ಧರ್ಮವನ್ನು ಹಾಡಿಹೊಗಳಲಿಲ್ಲ. ಅದರೊಟ್ಟಿಗೆ ಕಲೆ ಹಾಗೂ ವಿಜ್ಞಾನಗಳನ್ನು ಅಂದವಾಗಿ ಜೊತೆಗೂಡಿಸಿ ಅವುಗಳ ಪ್ರಸಾರವನ್ನೂ ಮಾಡಿದರು. ಪುರಾತನ ಕಾಲದ ಬೌದ್ಧ ಭಿಕ್ಕುಗಳ ಆದರ್ಶವೂ ಇದೇ ಆಗಿತ್ತು. ಭಿಕ್ಕುಗಳೇ ಪ್ರಪಂಚದ ತುಂಬೆಲ್ಲ ಹೆಸರುವಾಸಿಯಾದ ನಾಲಂದಾ ಹಾಗೂ ತಕ್ಷಶಿಲಾ ವಿಶ್ವವಿದ್ಯಾಲಯಗಳನ್ನು ನಡೆಯಿಸುತ್ತಿದ್ದರು. ಆ ಭಿಕ್ಕುಗಳು ಅಲ್ಲಿಯೇ ವಾಸಿಸುತ್ತಿದ್ದರು, ಜ್ಞಾನಪಠನವನ್ನು ಮಾಡಿಸುತ್ತಿದ್ದರು. ಅವರು ಸ್ವಾಭಾವಿಕವಾಗಿಯೇ ಸುಶಿಕ್ಷಿತರು ಹಾಗೂ ಬುದ್ಧಿವಂತರಾಗಿರುತ್ತಿದ್ದರು. ಅವರು ಸ್ವಧರ್ಮದ ಪ್ರಸಾರಕ್ಕಾಗಿ ಸಮಾಜಸೇವೆಯನ್ನು ಮಾಡುವುದು ಅತ್ಯಾವಶ್ಯಕವೆಂಬ ಸಂಗತಿಯನ್ನು ಮನಗಂಡಿದ್ದರು. ಸದ್ಯದ ಭಿಕ್ಕುಗಳು ಇವೇ ಹಳೆಯ ಆದರ್ಶಗಳನ್ನು ಪಾಲಿಸತಕ್ಕದ್ದು.

ಬೌದ್ಧ ಭಿಕ್ಕುಸಂಘದ ಇಂದಿನ ರಚನೆಯನ್ನು ಗಮನಿಸಿದರೆ ಅದರಿಂದ ಜನಸಾಮಾನ್ಯರ ಸೇವೆಯನ್ನು ಮಾಡಲು ಸಾಧ್ಯ, ಎಂದೆನ್ನಲಾಗದು. ಹೀಗಾಗಿ ಬೌದ್ಧ ಭಿಕ್ಕು ಸಂಘಕ್ಕೆ ಜನರನ್ನು ತನ್ನತ್ತ ಸೆಳೆದುಕೊಳ್ಳಲು



ಆಗುತ್ತಿಲ್ಲ. ಭಾರತದಲ್ಲಿ ಇಂದಿನ ಮಟ್ಟಿಗಂತೂ ಬೌದ್ಧ ಧರ್ಮವು ಮಿಶನರಿ ಪದ್ಧತಿಯ ಹೊರತು ಬೆಳೆಯುವುದು ಕಷ್ಟ, ಶಿಕ್ಷಣ ಪ್ರಸಾರದ ಜೊತೆಗೆ ಧರ್ಮ ಪ್ರಸಾರವೂ ಆಗಬೇಕಿದ್ದುದು ಇಂದಿನ ಅಗತ್ಯವಾಗಿದೆ. ಮನುಷ್ಯಶಕ್ತಿ ಹಾಗೂ ದುಡ್ಡಿನಶಕ್ತಿಯ ಹೊರತು ಧರ್ಮಪ್ರಸಾರ ಸಾಧ್ಯವಿಲ್ಲ, ಎಂಬುದೂ ಅಷ್ಟೇ ನಿಜ. ಆದರೆ ಯಾರು ಇಂಥ ಶಕ್ತಿಯನ್ನು ಒದಗಿಸಬಲ್ಲರು ? ಇಂದು ಯಾವ ದೇಶಗಳಲ್ಲಿ ಬೌದ್ಧಧರ್ಮ ಇದೆಯೋ ಅಂಥ ದೇಶಗಳೇ ಈ ಸಂಗತಿಯನ್ನು

ಮಾಡಬಲ್ಲವು. ಬೌದ್ಧ ಧರ್ಮದ ಈ ದೇಶಗಳು ಶುರುವಿನಲ್ಲಿ ಕೆಲಮಟ್ಟಿಗಿನ ಮನುಷ್ಯಬಲ ಹಾಗೂ ದ್ರವ್ಯಬಲಗಳನ್ನು ಒದಗಿಸಿದರೆ ಬಹಳಷ್ಟು ಕೆಲಸ ಸಾಧ್ಯವಾದೀತು. ಆದರೆ ಆ ದೇಶಗಳು ಇದನ್ನು ಮಾಡಬಲ್ಲವೆ ? ಸದ್ಯದ ಪರಿಸ್ಥಿತಿಯನ್ನ ಗಮನಕ್ಕೆ ತಂದುಕೊಂಡರೆ ಆ ದೇಶಗಳು ಬೌದ್ಧ ಧರ್ಮದ ಪ್ರಸಾರದ ಬಗೆಗೆ ಅಷ್ಟೊಂದು ಉತ್ಸಾಹವನ್ನು ತೋರುವಂತೆ ಕಾಣುತ್ತಿಲ್ಲ. ಬದಲು ಅವು ಅದನ್ನು ಉದಾಸೀನ ಮಾಡುವಂತೆ ಕಾಣುತ್ತಿದೆ.

ವಾಸ್ತವದಲ್ಲಿ ಇಂದಿನ ಕಾಲವು ಬೌದ್ಧ ಧರ್ಮದ ಪ್ರಸಾರಕ್ಕೆ ತುಂಬ ಅನುಕೂಲದ್ದಾಗಿ ಕಾಣುತ್ತದೆ. ಮೊದಲು ಒಂದು ಕಾಲದಲ್ಲಿ ಧರ್ಮವು ಮನುಷ್ಯನ ವಾರಸು ಹಕ್ಕಿನ ಒಂದು ಭಾಗವಾಗಿತ್ತು. ಮಗನಾಗಲಿ, ಮಗಳಾಗಲಿ ವಾರಸು ಹಕ್ಕಿನಿಂದ ತಮ್ಮ ತಂದೆತಾಯಿಯರ ಸಂಪತ್ತಿನೊಡನೆ ಅವರ ಧರ್ಮವನ್ನೂ ಪಡೆಯುತ್ತಿದ್ದರು. ಧರ್ಮದ ವಾರಸು ಹಕ್ಕನ್ನು ಸ್ವೀಕರಿಸುವಾಗ ಆ ಧರ್ಮದ ಸರಿ, ತಪ್ಪುಗಳು ಯಾವವೆಂಬುದನ್ನು ಕುರಿತು ಕೂಡ ಕೂಲಂಕಷವಾಗಿ ಚರ್ಚಿಸಲಾಗುತ್ತುತ್ತು. ಎಸ್ಟೇಟಿಗೆ ಸಂಬಂಧಪಟ್ಟಂತೆ ಅದನ್ನು ಸ್ವೀಕರಿಸುವುದು ಒಳ್ಳೆಯದೋ, ಕೆಟ್ಟದ್ದೋ ಎಂಬ ಪ್ರಶ್ನೆಯನ್ನೂ ಯಾರೂ ಕೇಳಬಹುದಿತ್ತು. ಆದರೆ ಧರ್ಮದ ಸಂದರ್ಭದಲ್ಲಿ ಮಾತ್ರ ಅದು ಸ್ವೀಕರಿಸಲು ತಕ್ಕದೋ, ಅಲ್ಲವೋ ಎಂದು ಯಾರೂ ತಪ್ಪಿಯೂ ಕೇಳುತ್ತಿರಲಿಲ್ಲ. ಆದರೆ ಇಂದು ಕಾಲ ತುಂಬ ಬದಲಾಗಿದೆ. ಇಡಿಯ ಪ್ರಪಂಚದ ತುಂಬ ಹಲವರು ಧರ್ಮದ ವಾರಸು ಹಕ್ಕಿನ ಬಗೆಗೆ ಅಸಾಮಾನ್ಯವಾದ ಧೈರ್ಯವನ್ನು ಮೆರೆದಿದ್ದಾರೆ. ಅವರು ಹಿರಿಯರಿಂದ ಬಂದ ಧರ್ಮವೆಂದ ಮಾತ್ರಕ್ಕೆ ಅದನ್ನು ಸ್ವೀಕರಿಸಲೇಬೇಕೆಂಬ ಬಂಧನವನ್ನು ಕಿತ್ತೆಸೆದಿರುವರು. ಕೆಲವರಂತೂ ತುಂಬ ಕ್ರಾಂತಿಕಾರಕವಾದ ವಿಚಾರವನ್ನು ವ್ಯಕ್ತಪಡಿಸಿರುವರು. ವೈಜ್ಞಾನಿಕ ಜ್ಞಾನದಿಂದ ಪ್ರಭಾವಿತರಾಗಿ ಕೆಲವರು, ಧರ್ಮವು ಕೆಲಸಕ್ಕೆ ಬಾರದುದು, ಧರ್ಮದಲ್ಲಿ ಯಾವುದೇ ತಥ್ಯಾಂಶವಿಲ್ಲ, ಅದನ್ನು ಬಿಸುಟಬಿಡಬೇಕು, ಎಂಬ ತೀರ್ಮಾನಕ್ಕೆ ಬಂದಿರುವರು. ಮಾರ್ಕ್ಸಾದಿ ವಿಚಾರಸರಣಿಯಿಂದಾಗಿ ಕೆಲವರು, ಧರ್ಮವು ಶ್ರೀಮಂತರಿಗೆ ಶರಣು ಹೋಗುವಂತೆ ಬಡವರನ್ನು ಪ್ರಭಾವಿತಗೊಳಿಸುವ ಅಫೀಮಿನ ಮಾತ್ರೆ, ಹೀಗಾಗಿ ಧರ್ಮವನ್ನು ಕಿತ್ತೆಸೆಯಬೇಕು, ಎಂದೆನ್ನತೊಡಗಿರುವರು. ಕಾರಣ ಏನೇ ಇರಲಿ, ಇಂದು ಜನರು ಧರ್ಮದ ಬಗೆಗೆ ಕೂಲಂಕಷವಾಗಿ ಯೋಚಿಸುವ ಸಾಹಸವನ್ನು ತೋರುತ್ತಿರುವರು. ಅವರ ಮನದಲ್ಲಿ ಮುಖ್ಯವಾಗಿ ಇಂಥವೇ ಪ್ರಶ್ನೆಗಳು ತಲೆದೋರುತ್ತಿವೆ. ಧರ್ಮ ನಿಜವಾಗಿಯೂ ಆವಶ್ಯಕವೇ ? ಆವಶ್ಯಕವಿದ್ದರೆ ಯಾವ ಧರ್ಮ ಸೂಕ್ತವಾದುದು ?

ಇಂಥ ವೈಚಾರಿಕ ನಿಲುವನ್ನು ಗಮನಿಸಿದ ತರುವಾಯ, ಪ್ರಶ್ನೆ ಇರುವುದು ಕೇವಲ ಇಚ್ಛೆಯದು, ಎಂದೆನ್ನುವ ಹೊತ್ತು ಬಂದು ತಲುಪಿದೆ, ಎಂದೆನ್ನಬೇಕಿದೆ. ಇಂದು ಬೌದ್ಧ ಧರ್ಮದ ದೇಶಗಳು ಮನಸ್ಸು ಮಾಡಿದರೆ ಮತ್ತು ಜನರ ಮನೋಧರ್ಮವನ್ನು ಅರಿತುಕೊಂಡರೆ ಬೌದ್ಧ ಧರ್ಮವು ಪ್ರಪಂಚದ ತುಂಬೆಲ್ಲ ಹಬ್ಬಲು ಹಾಗೂ ಅದರ

ಬೆಳವಣಿಗೆಯಾಗಲು ಎಳ್ಳಷ್ಟೂ ಕಷ್ಟವಿಲ್ಲ. ತಾನು ಆದರ್ಶ ಬೌದ್ಧನಾಗಿದ್ದು ಕರ್ತವ್ಯಚ್ಯುತನಾಗುವುದು ಮಾತ್ರ ನಿಜವಾದ ಬೌದ್ಧನ ಲಕ್ಷಣವಲ್ಲ. ಬೌದ್ಧ ಧರ್ಮದ



ಪ್ರಸಾರಕ್ಕಾಗಿ ಹಗಲಿರುಳು ಹೆಣಗುವುದೇ ಆದರ್ಶ ಬೌದ್ಧನ ನಿಜವಾದ ಕರ್ತವ್ಯವಾಗಿದೆ. ಬೌದ್ಧ ಧರ್ಮದ ಪ್ರಚಾರ ಹಾಗೂ ಪ್ರಸಾರವನ್ನು ಮಾಡುವುದೆಂದರೆ ಮಾನವ ಜಾತಿಗೆ ಸೇವೆಯನ್ನು ಸಲ್ಲಿಸುವುದು. ಬೌದ್ದ ರಾಷ್ಟ್ರಗಳು ಈ ಸಂಗತಿಯನ್ನು ಗಮನಕ್ಕೆ ತಂದುಕೊಂಡರೆ ಬೌದ್ಧ ಧರ್ಮದ ಅಭಿವೃದ್ಧಿಯ ಅಲೆಯನ್ನು ಎಂದಿಗೂ ತಡೆಹಿಡಿಯಲಾಗದೆಂಬ ವಿಶ್ವಾಸ ನನಗಿದೆ.

೧ : ನೋಡಿ, ಪರಿಶಿಷ್ಟ ಕ್ರ, ೧೧

# : ನೋಡಿ, ಪರಿಶಿಷ್ಟ ಕ್ರ,೧೨

$ : ನೋಡಿ, ಪರಿಶಿಷ್ಟ ಕ್ರ, ೧೪

೧ : ನೋಡಿ, ಪರಿಶಿಷ್ಕಕ್ರ, ೧೫ 'ಬುದ್ದ, ಮಾರ್ಕ್ ಆಣಿ ಧಮಾಚೇ ಭವಿತವ್ಯ' - ರತ್ನಮಿತ್ರಾ ಗಣವೀರ.

ಪು. ೯-೧೮

## ೧೦೭. ಬ್ರಾಹ್ಮಣೇತರರ ವರ್ಗವು ಮಹಾತ್ಮಾ ಫುಲೆ ಅವರ

## - ಸ್ಮೃತಿಯನ್ನು ಅಳಿಸಿಬಿಟ್ಟಿತು

.

ಕೊಲ್ಲಾಪುರ, ತಾ. ೨೯ ಮೇ ೧೯೫೦ :- ಡಾ. ಬಾಬಾಸಾಹೇಬ ಅಂಬೇಡಕರರು ಸತ್ಯಶೋಧಕ ಸಮಾಜ ಪರಿಷತ್ತಿನ ನಿಮಿತ್ತವಾಗಿ ಈ ಪರಿಷತ್ತಿನ ಮುಂದಾಳುಗಳಾದ ಶ್ರೀ ಭಾಸ್ಕರರಾವ ಜಾಧವ ಇವರಿಗೆ ಒಂದು ಪತ್ರವನ್ನು ಕಳಿಸಿದ್ದರು. ಡಾ. ಬಾಬಾಸಾಹೇಬ ಅಂಬೇಡಕರರು ಈ ಪತ್ರದಲ್ಲಿ ಹೀಗೆನ್ನುತ್ತಾರೆ : 'ಬ್ರಾಹ್ಮಣೇತರರ ವರ್ಗವು ಮ. ಫುಲೆ ಅವರ ಸ್ಮೃತಿಯನ್ನು ಅಳಿಸಿಬಿಟ್ಟಿತಷ್ಟೇ ಅಲ್ಲದೆ ನಾಚಿಕೆಗೇಡಿಯಂತೆ ಅದು ಅವರ ತತ್ತ್ವಜ್ಞಾನಕ್ಕೆ ದ್ರೋಹವನ್ನು ಕೂಡ ಬಗೆದಿದೆ. ಹಿಂದೂಸ್ಥಾನಕ್ಕೆ ಸ್ವಾತಂತ್ರವು ಲಭಿಸಿದ್ದರೂ, ಹಿಂದೂ ಜನತೆಗೆ ಅದರಿಂದ ನಿಜವಾದ ಲಾಭ ಆಗಬೇಕಿದ್ದರೆ ಈ ಜನತೆಯ ಕತ್ತಿನ ಮೇಲಿನ ಭೋಳೇತನದ ನಂಬಿಕೆಗಳ ನೊಗವನ್ನು ಕಿತ್ತೆಸೆಯತಕ್ಕದ್ದು. ಸತ್ಯಶೋಧಕ ಸಮಾಜವು ಈ ಮಹತ್ವದ ಕೆಲಸವನ್ನು ಮಾಡುವುದು ಅಗತ್ಯದ್ದಾಗಿದೆಯೆಂದು ಡಾಕ್ಟರ ಸಾಹೇಬರು ತಮ್ಮೀ ಪತ್ರದಲ್ಲಿ ನಮೂದಿಸಿರುವರು.

"ಜನತಾ' : ೩ ಜೂನ್ ೧೯೫೦.

## ೧೦೮, ಹಿಂದೂ ಸ್ತ್ರೀಯರ ಉನ್ನತಿ ಮತ್ತು ಅವನತಿ :

## ಯಾರು ಹೊಣೆಗಾರರು ?

“ಮಹಾಬೋಧಿ' ನಿಯತಕಾಲಿಕೆಯ ಮೇ-ಜೂನ್ ೧೯೫೧ರ ಸಂಚಿಕೆಯಲ್ಲಿ ಪ್ರಕಟಗೊಂಡ, ಡಾ. ಬಾಬಾಸಾಹೇಬ ಅಂಬೇಡಕರರ “The Rise and fall of the Hindu Women : Who Was responsible for it ?” ಎಂಬ ಶೀರ್ಷಿಕೆಯ ಇಂಗ್ಲಿಷ್ ಲೇಖನದ ಅನುವಾದವಿದು - ಸಂಪಾದಕ.

ಭಾರತೀಯ ಸ್ತ್ರೀಯ ಅವನತಿಗೆ ಮುಖ್ಯವಾಗಿ ಬುದ್ಧನ ಧರ್ಮೋಪದೇಶವೇ ಕಾರಣವೆಂದು ಆಪಾದಿಸುವ ಒಂದು ಲೇಖನವು “ ಈವ್ಸ್ ವೀಕ್ಲಿ”ಯ ಜನವರಿ ೨೧, ೧೯೫೧ರ ಸಂಚಿಕೆಯಲ್ಲಿ ಪ್ರಕಟಗೊಂಡಿತ್ತು. ಲಾಮಾ ಗೋವಿಂದ ಇವರು ಈ ಆಪಾದನೆಯನ್ನು ಖಂಡಿಸಲೆಂದು 'ಹಿಂದೂ ಧರ್ಮ ಹಾಗೂ ಬೌದ್ಧ ಧರ್ಮಗಳಲ್ಲಿ ಸ್ತ್ರೀಯರ ಸ್ಥಾನ' ಎಂಬ ಶೀರ್ಷಿಕೆಯ ಇಂಗ್ಲಿಷ್‌ದಲ್ಲಿ ಬರೆದ ಲೇಖನವು* ಮಹಾಬೋಧಿ' ನಿಯತ ಕಾಲಿಕೆಯ ಮಾರ್ಚ್ ೧೯೫೦ರ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಇಂಥ ಆಪಾದನೆಗಳನ್ನು ಖಂಡಿಸುವುದು ಪ್ರತಿಯೊಬ್ಬ ಬೌದ್ಧ ಧರ್ಮೀಯನ ಕರ್ತವ್ಯವಾಗಿದ್ದು ಲಾಮಾ ಗೋವಿಂದರು ಅದನ್ನು ನಿರ್ವಹಿಸಿರುವರು. ಆದರೆ ಈ ಪ್ರಶ್ನೆಯನ್ನು ಇಲ್ಲಿಗೇ

ಮುಗಿಸಲಾಗದು. ಬುದ್ಧನ ಮೇಲೆ ಆಪಾದನೆಯನ್ನು ಹೊರಿಸುವುದು ಇದೇ ಮೊದಲ ಸನ್ನಿವೇಶವಲ್ಲ. ಬುದ್ಧನ ಘನತೆಯನ್ನು ಸಹಿಸದ 'ಈವ್ಸ್ ವೀಕ್ಲಿ ಯ ಲೇಖಕನಿಗಿಂತ ಹೆಚ್ಚಿನ ಹಿತಸಕ್ತಿಯನ್ನು ಹೊಂದಿದ ಅಧಿಕಾರವಾಣಿಯ ವ್ಯಕಿಗಳಿಂದಲೂ ಈ ಬಗೆಯ ಆಪಾದನೆಗಳನ್ನು ಸಾಮಾನ್ಯವಾಗಿ ಮಾಡಲಾಗುತ್ತದೆ. ಹೀಗಾಗಿ ಈ ಬಗೆಯ ಪ್ರಶ್ನೆಯ ಮೂಲವನ್ನು ತಲುಪಿಯೇ, ಮೇಲಿಂದ ಮೇಲಾಗುವ ಇಂಥ ಆಪಾದನೆಗಳನ್ನು ಕುರಿತು ಅನ್ವೇಷಿಸುವುದು ಅಗತ್ಯದ್ದಾಗಿದೆ. ಈ ಆಪಾದನೆಯು ತುಂಬ ಗಂಭೀರವೂ ತಿರಸ್ಕರಣೀಯವೂ ಆದುದರಿಂದ ಅದನ್ನು ಕುರಿತು ಕೈಕೊಳ್ಳಲಾಗುವ ಇನ್ನಷ್ಟು ಅನ್ವೇಷಣೆಯನ್ನು 'ಮಹಾಬೋಧಿ ಯ ಓದುಗರು ಸ್ವಾಗತಿಸುವರೆಂಬ ಭರವಸೆ ನನಗಿದೆ.

ಬುದ್ಧನ ವಿರುದ್ಧ ಮಾಡಲಾಗುವ ಈ ಆಪಾದನೆಗಳಿಗೆ ಎರಡು ಎಡೆಗಳಲ್ಲಿ ಮಾತ್ರ ಆಧಾರ ಲಭಿಸುವುದು :

ಇರಬಹುದಾದ ಮೊದಲ ಆಧಾರವೆಂದರೆ, 'ಮಹಾಪರಿನಿಬ್ಬಾಣ ಸುತ್ತಾ'ದ ಐದನೆಯ ಪ್ರಕರಣದಲ್ಲಿ, ಬುದ್ಧನು ಆನಂದನ ಪ್ರಶ್ನೆಗೆ ನೀಡಿದನೆಂದು ಹೇಳಲಾಗುವ ಉತ್ತರ. ಅದು ಹೀಗಿದೆ :

೯. ಆನಂದನು, ಸ್ತ್ರೀಯರೊಡನೆ ಹೇಗೆ ನಡೆದುಕೊಳ್ಳಬೇಕು ?' ಎಂದು ಕೇಳಿದನು. "ಆನಂದನೇ, ಅವರತ್ತ ನೋಡುತ್ತಲೂ ಇಲ್ಲದ ಹಾಗೆ.

* Reprinted in Dr. Babasaheb Ambedkar Writings and speeces. Volume 17, Part Two. Appendix-II, P.p. 495-498-Editions.



"ಆದರೆ ಅವರನ್ನು ನೋಡಲೇಬೇಕಾದರೆ ನಾವೇನು ಮಾಡಬೇಕು ?'

*ಆನಂದನೇ, ಮಾತಾಡಬಾರದು.'

"ಆದರೆ ಭಗವಂತನೇ, ಅವರು ನಮ್ಮ ಜೊತೆ ಮಾತಾಡಿದರೆ ನಾವೇನು ಮಾಡಬೇಕು ?? "ಆನಂದನೇ, ನೀವು ಪೂರ್ತಿ ಎಚ್ಚರದಿಂದಿರಬೇಕು.

ಈ ಭಾಗವು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಪ್ರೆಸ್‌ನಿಂದ ಪ್ರಕಟಿಸಲಾದ 'ಮಹಾಪರಿನಿಬ್ಬಾಣ ಸುತ್ತಾ' ದ ಮೂಲ ಭಾಗದಲ್ಲಿ ಕಾಣಲು ಸಿಕ್ಕುವುದೆಂಬುದನ್ನು ಅಲ್ಲಗಳೆಯುವಂತಿಲ್ಲ. ಆದರೆ ಈ ಅವತರಣಿಕೆಯು ಅದರಲ್ಲಿ ಇದೆಯೋ, ಇಲ್ಲವೋ ಎಂಬುದು ಮುಖ್ಯ ಸಂಗತಿಯಲ್ಲ. ಇಲ್ಲಿರುವ ಮುಖ್ಯ ಅಂಶವೆಂದರೆ ಯಾವುದೊಂದು ಯುಕ್ತಿವಾದವು ಈ ಅವತರಣಿಕೆಯನ್ನು ಆಧರಿಸಿ ನಿಲ್ಲುವಂತಿದ್ದರೆ, ಮೂಲದಲ್ಲಿ ಆ ಅವತರಣಿಕೆಯೇ ನಿಜವಾದುದೋ ಅಥವಾ ತರುವಾಯದ ಕಾಲದಲ್ಲಿ ಭಿಕ್ಕುಗಳು ಸೇರಿಸಿದ್ದಲ್ಲವಲ್ಲ, ಎನ್ನುವುದನ್ನು ಸ್ಥಾಪಿಸುವುದು ಅಗತ್ಯದ್ದಲ್ಲವೆ ?

ತೀರ ಪರಕೀಯವಾದ ಬ್ರಾಹ್ಮಣೀ ವಿಚಾರಗಳನ್ನು ಸೇರಿಸುವ ಹಾಗೂ ಮಠಶಾಹಿಯ ವಿಚಾರಗಳನ್ನು ಪ್ರಸ್ಥಾಪಿಸುವ ಉದ್ದೇಶದಿಂದ, ಮೂಲ ಬೌದ್ಧ ವಿಚಾರಸರಣಿಗೆ ಸುಳ್ಳು ಸಂಗತಿಗಳ ಮುಸುಕನ್ನು ಹಾಕಿ ಸುತ್ಯಪಿಟಕವನ್ನು ಪೂರ್ತಿಯಾಗಿ ವಿರೂಪಗೊಳಿಸಲಾಗಿದೆ. ಭಗವಾನ್ ಬುದ್ಧನ ಮೂಲ ಧರ್ಮೋಪದೇಶಗಳನ್ನು ಬಲ್ಲವನು ಇಂಥ ಸುತ್ತಪಿಟಕವನ್ನು ಓದಿ ಹುಚ್ಚನಾಗದೆ ಇರಲಾರ. ಇಷ್ಟೇ ಅಲ್ಲದೆ ಅವನೂ ಮಿಸೆಸ್ ಹಿಸ್ ಡೆವಿಡ್ಸ್ ಅವರಿಗೆ ಆದ ಅಚ್ಚರಿಯಲ್ಲಿ ಪಾಲ್ಗೊಂಡು ಹೀಗೆಂದು ವಿಚಾರಿಸಿಯಾನು :

"ಸುತ್ತಪಿಟಕದ ಈ ಭಾಗದಲ್ಲಿ ಬುದ್ಧನ ವಿಚಾರಗಳು ಎಲ್ಲೆಲ್ಲಿ ಇವೆ? ಇದರ ಎಷ್ಟು ಭಾಗದಲ್ಲಿ ಬುದ್ಧನ ಮೂಲ ವಿಚಾರಗಳನ್ನು ಸ್ಪಷ್ಟವಾಗಿ ಮಂಡಿಸಲಾಗಿದೆ? ಅಲ್ಲದೆ ಒಬ್ಬರಾದ ಮೇಲೊಬ್ಬರಂತೆ ಅದೆಷ್ಟೋ ವರ್ಷಗಳಲ್ಲಿ ಆಗಿ ಹೋದ ನಿರೂಪಕರು, ಸ್ಮೃತಿಬದ್ಧ ಹಾಗೂ ಕಂಠಬದ್ಧ ಮಾಡುವ ಬಹುಸಂಖ್ಯ ಶಿಕ್ಷಕರು, ಮೌಖಿಕ ಶಿಕ್ಷಣವನ್ನು ಪಡೆಯುವ ವಿದ್ಯಾರ್ಥಿಗಳು, ಅರಿತುಕೊಳ್ಳಲು ಕಷ್ಟದ್ದಾದ ಹಾಗೂ ಕಠೋರ ಆಯಾಸದ ಅಗತ್ಯವಿದ್ದ ಹಾಗೂ ಯಾವುದೋ ಕಾಲಕ್ಕೆ ಸಂಪಾದಕರು ಸಂಪಾದಿಸಿದ ಇಷ್ಟೊಂದು ವರ್ಷಗಳ ತರುವಾಯ ಈ ಧರ್ಮೋಪದೇಶವನ್ನು, ಇದರ ಉಳಿದ ಅದೆಷ್ಟು ಭಾಗದಲ್ಲಿ ಚಾಚೂ ತಪ್ಪದಂತೆ ಮಂಡಿಸಲು ಸಾಧ್ಯ? ಈ ನಿರೂಪಕರು, ಶಿಕ್ಷಕರು, ಅದೇ ರೀತಿ ಸಂಪಾದಕರೆಲ್ಲರ ಜೀವನ ಮತ್ತು ಅವರ ಆದರ್ಶಗಳು ಸಮಾಜದ ಇತರ ಜನರಿಗಿಂತ ತೀರ ಬೇರೆ ಬಗೆಯಾಗಿದ್ದವು. ಕೆಲವಂತೂ ಬೌದ್ಧ ಜಗತ್ತಿಗೆ ಸಂಬಂಧಪಟ್ಟಿರಲೂ ಇಲ್ಲ. ಯಾರಾದರೂ ವಿಪರ್ಯಾಸದಿಂದ ಕೂಡಿದ ಇಂಥ ಮಾಧ್ಯಮಗಳ ಅಧ್ಯಯನವನ್ನು ಮಾಡಬೇಕು. ಈ ವಚನಗಳ ಸಂದರ್ಭದಲ್ಲಿ ಧರ್ಮೋಪದೇಶಗಳನ್ನು ಸಂಪಾದಿಸಿದ ವ್ಯಕ್ತಿಯು ಸರ್ವಮಾನ್ಯ ಶಿಕ್ಷಕ ಹಾಗೂ ಮಾರ್ಗದರ್ಶಕರನ್ನು ಒಪ್ಪಿಕೊಳ್ಳಲು ಬಾಧ್ಯರನ್ನಾಗಿ ಮಾಡಿ ಅವನ್ನೇ ಸತ್ಯವೆಂದು ಪ್ರತಿಪಾದಿಸಿರುವ ಸಾಧ್ಯತೆ ಇಲ್ಲವೆ? - ಎಂಬುದನ್ನು ಅವರು ಸ್ವಂತಕ್ಕೆ ಕೇಳಿಕೊಳ್ಳಬೇಕು.

ಹೀಗಾಗಿ ತರುವಾಯದ ಕಾಲದಲ್ಲಿ ಭಿಕ್ಕುಗಳು ಈ ಅವತರಣಿಕೆಯನ್ನು ಪ್ರಕ್ಷಿಪ್ತಗೊಳಿಸಿದರೆಂಬ ಹೇಳಿಕೆಯಲ್ಲಿ ಹೆಚ್ಚಿನ ಅತಿಶಯೋಕ್ತಿ ಇಲ್ಲ. ಮೊದಲ ಸಂಗತಿ ಎಂದರೆ ಸುತ್ತಪಿಟಕವನ್ನು ಬರೆಯುವಲ್ಲಿ

೦. Preface (xiii) to Kindred Saying. Vol. II.



ಬುದ್ಧನ ಮೃತ್ಯುವಿನ ತರುವಾಯದ ನಾಲ್ಕು ನೂರು ವರ್ಷಗಳ ಕಾಲ ಕಳೆದಿತ್ತು. ಎರಡನೆಯದಾಗಿ, ಸಂಕಲನ ಹಾಗೂ ಸಂಪಾದನೆಯನ್ನು ಮಾಡಿದ ಸಂಪಾದಕರು ಭಿಕ್ಕುಗಳಾಗಿದ್ದರಲ್ಲದೆ ಅವರು ಭಿಕ್ಕುಗಳಿಗಾಗಿಯೇ ಅದರ ಸಂಕಲನ ಹಾಗೂ ಸಂಪಾದನೆಗಳನ್ನು ಮಾಡಿದ್ದರು. ಬ್ರಹ್ಮಚರ್ಯೆಯ ನಿಯಮಗಳನ್ನು ಸುರಕ್ಷಿತವಾಗಿ ಉಳಿಸುವ ಉದ್ದೇಶದಿಂದ ಭಿಕ್ಕುಗಳಿಗೆ ಬುದ್ಧನನ್ನು ಕುರಿತು ಇಂಥ ಹೇಳಿಕೆಯನ್ನು ನೀಡುವುದು ಮಹತ್ವದ್ದಾಗಿ ಕಂಡದ್ದರಿಂದ ಆ ಪರಿಸ್ಥಿತಿಯಲ್ಲಿ ಭಿಕ್ಕು ಸಂಪಾದಕರು ಹೀಗೆ ಬರೆಯುವುದು ಅಸಂಭವನೀಯವೆನ್ನಿಸದು.

ತರುವಾಯದ ಕಾಲದಲ್ಲಿ ಈ ಅವತರಣಿಕೆಯನ್ನು ಪ್ರಕ್ಷಿಪ್ತಗೊಳಿಸಲಾಯಿತೆಂಬ ಹೇಳಿಕೆಯ ಪುಷ್ಟಿಗಾಗಿ ಬೇರೆರಡು ಅಂಶಗಳು ನೆರವಾಗುತ್ತವೆ.

(೧) ಮೊದಲನೆಯದು. ಪ್ರಸ್ತುತ ಸುತ್ತಕ್ಕೆ ನೀಡಲಾದ ಮುನ್ನುಡಿಯ ತಖ್ಯೆಯಿಂದ (ಡೆವಿಡ್ಸ್ ನ ಎಸ್.ಬಿ.ಬಿ. ಸರಣಿಯ ದೀರ್ಘ ನಿಕಾಯ ಭಾಗ 1ರ ೭೨ನೆಯ ಪುಟದ ಮೇಲೆ ಕಾಣಲು ಸಿಕ್ಕುವುದು.) ಖಚಿತವಾಗಿ ಕಂಡುಬರುವುದೇನೆಂದರೆ, ಈ ಸುತ್ತದ ಬಹಳಷ್ಟು ಭಾಗವು ಬೇರೆ ಸುತ್ತದಲ್ಲೂ ಕಂಡುಬರುತ್ತದೆಂಬುದು. ಆದರೆ ಪ್ರಸ್ತುತ ಅವತರಣಿಕೆಯು ಬೇರಾವ ಸುತ್ತದಲ್ಲೂ ಕಂಡುಬರುವುದಿಲ್ಲ, ಎಂಬುದನ್ನು ಅರಿತುಕೊಳ್ಳುವುದು ಮಹತ್ವದ್ದು. ಇಷ್ಟಾಗಿಯೂ ಈ ಸುತ್ತದಲ್ಲಿರುವ ಬಹಳಷ್ಟು ಅವತರಣಿಕೆಗಳನ್ನು ಬೇರೆ ಸುತ್ತಗಳಲ್ಲಿ ಸೇರ್ಪಡಿಸಿರುವುದು ವಾಸ್ತವ.

(೧) ಈ ಸುತ್ತದ ಚೀನಿ ಭಾಷೆಯ ಅನುವಾದವು ಅಸ್ತಿತ್ವದಲ್ಲಿದ್ದ ಕಾರಣ ಈ ಸುತ್ತದ ಮುನ್ನುಡಿಯ ಪುಟ, xxxviii ರಿಂದ (ಡೆವಿಡ್ಸ್‌ನ ಎಸ್.ಬಿ.ಬಿ.ಯ ಸಂಪುಟ xi ರಲ್ಲಿ ಪ್ರಕಟಿತ.) ಎರಡನೆಯದು ಗಮನಕ್ಕೆ ಬರುತ್ತದೆ. ಆದರೆ ಮೇಲಿನ ವಿಶಿಷ್ಟವಾದ ಅವತರಣಿಕೆಯನ್ನು ಈ ಚೀನಿ ಭಾಷೆಯ ಗ್ರಂಥದಲ್ಲೂ ಸೇರ್ಪಡಿಸಿದುದು ಕಂಡುಬರುವುದಿಲ್ಲ.

ನಾವು ಇದನ್ನು ಸತ್ಯದ ಒರೆಗೆ ಹಚ್ಚಿ ನೋಡುವಾ. ಆನಂದನು ಇಂಥ ಪ್ರಶ್ನೆಯನ್ನು ಕೇಳಲು ವಿಶಿಷ್ಟವಾದ ಅಗತ್ಯವೇನಾದರೂ ಇತ್ತೆ? ಎಲ್ಲರಿಗೂ ತಿಳಿದಂತೆ ಬುದ್ದನ, ಸ್ತ್ರೀಯರೊಡನೆಯ ಸಂಬಂಧವನ್ನು ಗಮನಕ್ಕೆ ತಂದುಕೊಂಡು ಕೇಳಿದ ಪ್ರಶ್ನೆ ಇದಾಗಿತ್ತೆ? ಆನಂದನು ಈ ಪ್ರಶ್ನೆಯನ್ನು ಕೇಳುವ ಸಾಧ್ಯತೆಯು ನಿಜವಾಗಿಯೂ ಇಲ್ಲ. ಆದರೆ ಅವನು ಇಂಥ ಪ್ರಶ್ನೆಯನ್ನು ಕೇಳಿಯೇ ಇದ್ದರೆ ಬುದ್ದನು ಹೀಗೆ ಉತ್ತರಿಸುತ್ತಿರಲಿಲ್ಲ, ಎಂಬುದನ್ನು ಪುರಾವೆಯೊಂದಿಗೆ ಹೇಳಲು ಸಾಧ್ಯ, ಪಿಟಕದಲ್ಲಿ ನಮೂದಿಸಲಾದಂತೆ ಸ್ತ್ರೀಯರ ಜೊತೆಗಿನ, ಆನಂದ ಹಾಗೂ ಬುದ್ಧರ ನಡತೆ ಹಾಗೂ ಆ ಕುರಿತು ನಿರ್ಮಿಸಲಾದ ಪ್ರಶ್ನೆ ಮತ್ತು ಅದಕ್ಕೆ ನೀಡಲಾದ ಉತ್ತರಗಳು ತೀರ ಅಸಂಗತವಾಗಿವೆ.

ಆನಂದನು ಹೀಗೆ ಪ್ರಶ್ನೆ ಕೇಳುವುದು ನಿಜವಾಗಿಯೂ ಅಗತ್ಯದ್ದಾಗಿತ್ತೆ, ಎಂಬ ಅಂಶದ ಸಂದರ್ಭದಲ್ಲಿ ಮೇಲೆ ಉಲ್ಲೇಖಿಸಲಾದ ಮಹಾಪರಿನಿಬ್ಬಾಣ ಸುತ್ತದ ಅದೇ ಪ್ರಕರಣದ ಕೆಲವೇ ಗಾಥೆಗಳನ್ನು ಕೈಬಿಡಲಾಗಿದೆ, ಎಂಬುದನ್ನು ನಮೂದಿಸುವುದು ಪ್ರಸಂಗೋಚಿತವಾದೀತು. ಬುದ್ದನು ಆನಂದನ ನಡತೆ ಅದೆಷ್ಟು ಆಹ್ಲಾದಕರವಿತ್ತು, ಅವನು ಎಲ್ಲರಿಗೆ ಅದೆಷ್ಟು ಅಚ್ಚುಮೆಚ್ಚಿನವನಾಗಿದ್ದನು, ಎಂಬುದನ್ನು ವರ್ಣಿಸಿರುವನು. ಇವುಗಳಲ್ಲಿ ಎರಡು ಗಾಥೆಗಳನ್ನು ಕೆಳಕ್ಕೆ ನಮೂದಿಸುವೆನು :

“೧೬. ಸೋದರರರೇ, ಆನಂದನಲ್ಲಿ ನಾಲ್ಕು ಅತುಲನೀಯ ಹಾಗೂ ಸ್ಫೂರ್ತಿದಾಯಕವಾದ ಸದ್ಗುಣಗಳಿವೆ.

ಹೀಗಾಗಿ ಸೋದರರರೇ, ಸಂಘದ ಭಿಕ್ಕುಗಳು ಆನಂದನನ್ನು ಭೇಟಿಯಾಗಲು ಬರುತ್ತಿದ್ದರು.

ಅವರು ಅವನನ್ನು ಕಂಡು ಪ್ರಫುಲ್ಲಿತರಾಗುತ್ತಿದ್ದರು. ಆನಂದನು ಅವರಿಗೆ ಧಮ್ಮವನ್ನು ಕಲಿಸುವಾಗಲೂ, ಅವನ ಪ್ರವಚನವನ್ನು ಆಲಿಸುವಾಗಲೂ ಅವರು ಆನಂದತುಂದಿಲರಾಗುತ್ತಿದ್ದರು. ಸೋದರರೇ, ಅದೇ ರೀತಿಯಾಗಿ ಆನಂದನು ಮೌನ ತಳೆದರೆ ಅವರು ಕಳವಳಕ್ಕೀಡಾಗುತ್ತಿದ್ದರು.

ಅಲ್ಲದೆ ಸೋದರರೇ, ಸಂಘದ ಭಿಕ್ಷುಣಿಯರು..... ಧರ್ಮೋಪದೇಶಕರು..... ಇಲ್ಲವೆ ಧರ್ಮೋಪದೇಸಿಕೆಯರಾಗಲಿ ಆನಂದನನ್ನು ಭೇಟಿಯಾಗಿ, ಅವನು ಧಮ್ಮವನ್ನು ಕಲಿಸಿದ ಬಳಿಕ ಅವರೆಲ್ಲರೂ ಪ್ರಫುಲ್ಲಿತರಾಗುತ್ತಿದ್ದರು. ಮತ್ತು ಸೋದರರೇ, ಆನಂದನು ಮೌನ ತಳೆದರೆ ಮಾತ್ರ ಅವರು ತುಂಬ ಕಳವಳಕ್ಕೀಡಾಗುತ್ತಿದ್ದರು."

ಇದರಿಂದ ಸ್ಪಷ್ಟವಾಗುವ ಸಂಗತಿ ಏನೆಂದರೆ, ಆನಂದನು ಸ್ತ್ರೀಯರನ್ನು ಭೇಟಿಯಗುವುದು, ಇಷ್ಟೇ ಅಲ್ಲದೆ ಧರ್ಮೋಪದೇಸಿಕಾ ಸಂಘದ ಸದಸ್ಯೆಯರಲ್ಲದ ಸ್ತ್ರೀಯರನ್ನು ಭೇಟಿಯಾಗುವುದು ಕೂಡ ನಿತ್ಯದ ಸಾಮಾನ್ಯ ಸಂಗತಿಯಾಗಿತ್ತು. ಅವನು ಅವರನ್ನು ಕಾಣುತ್ತಿದ್ದನು, ಭೇಟಿಯಾಗುತ್ತಿದ್ದನಲ್ಲದೆ ಅವರೊಡನೆ ಮಾತನಾಡುತ್ತಿದ್ದನು. ಹೀಗಿರುವಲ್ಲಿ ಆನಂದನು ಇಂಥ ಪ್ರಶ್ನೆಯನ್ನು ಏಕೆ ಕೇಳಿದನು? ಸ್ತ್ರೀಯರು ಆನಂದನನ್ನು ಕಾಣುವುದು ಬುದ್ಧನಿಗೆ ತಿಳಿದಿತ್ತು. ಅವನು ಇದಕ್ಕಾಗಿ ಎಂದಿಗೂ ಆಕ್ಷೇಪಿಸಲಿಲ್ಲ. ಹೀಗಿರುವಾಗಲೂ ಬುದ್ದನ ಮನದಲ್ಲಿ ಸ್ತ್ರೀಯರೊಡನೆಯ ಎಲ್ಲ ಬಗೆಯ ಸಂಬಂಧಗಳನ್ನು ಹರಿದೊಗೆಯುವ ಹಾಗೂ ಅವನ್ನು ಪ್ರತಿಬಂಧಿಸುವ ಯೋಚನೆ ಏಕೆ ಬಂದಿರಬಹುದು? ಈ ಇಡಿಯ ಭಾಗವು ಅದೆಷ್ಟು ಕೃತಕವಾಗಿದೆ ಎಂದರೆ ಮಠಶಾಹಿಯು ತರುವಾಯದ ಕಾಲದಲ್ಲಿ ಅದನ್ನು ಪ್ರಕ್ಷಿಪ್ತ ಮಾಡಿದೆಯೆಂದು ಖಚಿತವಾಗಿ ತಿಳಿಯಬೇಕು.

ಆನಂದನ ಜೀವನದ ತುಂಬ ವಿರೋಧಾಭಾಸದ ಒಂದು ಸನ್ನಿವೇಶವು ಮಹಾಪರಿನಿಬ್ಬಾಣದ ಸುತ್ತಕ್ಕೆ ಸಂಬಂಧಿಸಿದ ಭಾಗದಲ್ಲಿ ಬಂದಿದೆ.

ಮೊದಲ ಸಂಗಿತಿ(ಪರಿಷತ್ತು)ಯಲ್ಲಿ ಆನಂದನ ಬಗೆಗೆ ಐದು ದೂರುಗಳು ಬಂದಿದ್ದವೆಂಬುದು ಸರ್ವವಿದಿತ. ಅವು ಹೀಗಿದ್ದವು :

(೧) ಬುದ್ಧನ ಅಭಿಪ್ರಾಯದಂತೆ ವಿನಯದ ಯಾವ ಭಾಗದಲ್ಲಿ ಏರುಪೇರು ಮತ್ತು

ದುರಸ್ತಿಗಳನ್ನು ಮಾಡುವ ಅಧಿಕಾರವನ್ನು ಸಂಘಕ್ಕೆ ನೀಡಲಾಯಿತು ಎಂಬುದನ್ನು ಕೇಳುವಲ್ಲಿ ಅವನು ಅಯಶಸ್ವಿಯಾದನು. (೨)ಭಗವಂತನ ಉತ್ತರೀಯವನ್ನು ಸ್ಪರ್ಶಿಸುತ್ತ ಹಿಂದಕ್ಕೆ ಸರಿಯುವಾಗ ಅವನ ಕಾಲು ಆ ಬಟ್ಟೆಯ ಮೇಲೆ ಬಿದ್ದಿತು.

(೩) ಭಗವಂತನ ಪರಿನಿರ್ವಾಣದ ತರುವಾಯ ಅವನ ಪಾರ್ಥಿವಕ್ಕೆ ವಂದನೆಯನ್ನು ಸಲ್ಲಿಸಲು ಸ್ತ್ರೀಯರಿಗೆ ಮೊದಲ ಅವಕಾಶವನ್ನು ನೀಡಿದ್ದರಿಂದ ಅವರ ಕಣ್ಣೀರಿನಿಂದ ಭಗವಂತನಪಾರ್ಥಿವ ಶರೀರಕ್ಕೆ ಆದ ಅವಮಾನಕ್ಕೆ ಅವನು ಕಾರಣನು.

(೪) ಇನ್ನಷ್ಟು ಕಾಲ ಬಾಳಿರೆಂದು ಅವನು ಭಗವಂತನಿಗೆ ಹೇಳಲಿಲ್ಲ.

(೫) ಅವನು ಸ್ತ್ರೀಯರನ್ನು ಸಂಘಕ್ಕೆ ಸೇರ್ಪಡಿಸಿಕೊಳ್ಳಲು ತಾತ್ವಿಕವಾಗಿ ಹೊಣೆಗಾರನಾಗಿದ್ದನು.

ಆನಂದನು ಇವೆಲ್ಲವನ್ನು ಒಪ್ಪಿಕೊಂಡನು.

ಅವನು ಈ ಆಪಾದನೆಗಳನ್ನು ಒಪ್ಪಿಕೊಳ್ಳುವುದೋ, ಬಿಡುವುದೋ ಎನ್ನುವುದು ಬೇರೆ ಸಂಗತಿ.



ಮೂರನೆಯ ಆಪಾದನೆ ಮಹತ್ವದ್ದಾಗಿದೆ. ಈಗಿನ ಚರ್ಚೆಯಲ್ಲಿ ಅದು ಮಹತ್ವದ ಅಂಶವಾಗಿದೆ. ಮಹಾಪರಿನಿಬ್ಬಾಣ ಸತ್ಯದಲ್ಲಿ ಉಲ್ಲೇಖಿಸಲಾದ ಭಗವಂತನ ಉಪದೇಶವು ಸತ್ಯವೆಂಬ ಸಂಗತಿಯು ವಾಸ್ತವವಾಗಿದ್ದರೆ ಆವಂದನು ಭಗವಂತನ ಪಾರ್ಥಿವವನ್ನು ಸ್ಪರ್ಶಿಸಲು ಸ್ತ್ರೀಯರಿಗೆ ಅಪ್ಪಣೆ ನೀಡಿದ್ದೇಕೆ? ಬುದ್ಧನು ಸ್ವಲ್ಪ ಹೊತ್ತಿನ ಮೊದಲು ಮಾಡಿದ ಉಪದೇಶವನ್ನು ಅವನು ಬೇಕೆಂದೇ ಇಷ್ಟೊಂದು ಪ್ರಕಟವಾಗಿ ನಿರಾಕರಿಸುತ್ತಿದ್ದನೆ? ಖಂಡಿತವಾಗಿಯೂ ಇಲ್ಲವೆಂಬುದೇ ಇದಕ್ಕೆ ಉತ್ತರವಾಗಿದೆ. ಈ ಋಣಾತ್ಮಕ ಉತ್ತರದಿಂದ ಏನು ಸಿದ್ಧವಾಗುತ್ತದೆ? ಆನಂದನ ಮೇಲೆ ಹೊರಿಸಲಾದ ಆಪಾದನೆಯಂತೆ ಯಾವುದೇ ಉಪದೇಶವನ್ನು ಬುದ್ಧನು ಅವನಿಗೆ ಮಾಡಿಯೇ ಇರಲಿಲ್ಲವೆಂದು ಸಿದ್ಧವಾಗುತ್ತದೆ. ಒಂದು ವೇಳೆ ಬುದ್ಧನು ಹೀಗೆ ಉಪದೇಶವನ್ನು ಮಾಡಿದ್ದರೆ ಆನಂದನು ಅದಕ್ಕೆ ಎದುರಾಗಿ ನಡೆದುಕೊಳ್ಳುತ್ತಲೇ ಇರಲಿಲ್ಲ.

ಇದರಿಂದಾಗಿ, ಬುದ್ದನು ಇಂಥ ಯಾವುದೇ ಉಪದೇಶವನ್ನು ಆನಂದನಿಗೆ ಮಾಡಿರಲಿಲ್ಲವೆಂದು ಖಚಿತವಾಗಿ ಹೇಳಬಹುದು. ಬುದ್ಧನ ಈ ಪ್ರಶ್ನೆಯನ್ನು ಕುರಿತಾದ ದೃಷ್ಟಿಕೋನವನ್ನು ಗಮನಿಸಲಾಗಿ ಅವನು ಇಂಥ ಉತ್ತರವನ್ನು ನೀಡಬಹುದಿತ್ತೆ? ಸ್ತ್ರೀಯರನ್ನು ಕುರಿತಾದ ಬುದ್ದನ ನಡುವಳಿಕೆಯೇ ಈ ಪ್ರಶ್ನೆಗೆ ಉತ್ತರವಾಗಿದೆ. ಬುದ್ಧನು ಸ್ತ್ರೀಯರನ್ನು ಭೇಟಿಯಾಗುವುದನ್ನು ಕುರಿತು ಆನಂದನಿಗೆ ಉಪದೇಶವನ್ನು ನೀಡಿದನೆಂದು ಹೇಳಲಾಗುತ್ತದೆ. ಆದರೆ ಅವನಾದರೂ ಆದನ್ನು ತಪ್ಪಿಸುತ್ತಿದ್ದನೇ? ಈ ಬಗೆಗಿನ ವಾಸ್ತವತೆ ಏನು?

ತಕ್ಷಣ ಎರಡು ಸನ್ನಿವೇಶಗಳು ಕಣ್ಣೆದುರು ಬರುತ್ತಿವೆ. ಅವುಗಳಲ್ಲಿ ಒಂದು ವಿಶಾಖಾಳದು. ಅವಳು ಬುದ್ದನ ಎಂಬತ್ತು ಜನ ಪ್ರಮುಖ ಶಿಷ್ಯರಲ್ಲಿ ಒಬ್ಬಳು. ಅವಳನ್ನು "ದಾನದಾತರ ಪ್ರಮುಖ'ಳೆಂಬ ಪದವಿಯಿಂದ ಗೌರವಿಸಲಾಗಿತ್ತು. ವಿಶಾಖಾಳು ಬುದ್ದನ ಪ್ರವಚನವನ್ನು ಆಲಿಸಲು ಎಂದಿಗಾದರೂ ಹೋಗಿರಲಿಲ್ಲವೆ? ಅವಳು ಅವರ ಸಂಘಾರಾಮವನ್ನು ಪ್ರವೇಶಿಸಿರಲಿಲ್ಲವೆ? ಸ್ತ್ರೀಯರೊಡನೆ ಹೇಗೆ ನಡೆದುಕೊಳ್ಳಬೇಕೆಂದು ಬುದ್ಧನು ಆನಂದನಿಗೆ ನೀಡಿದ್ದನೆಂದು ಹೇಳಲಾಗುವ ಉಪದೇಶದಂತೆಯೇ ತಾನೂ ವಿಶಾಖಾಳೊಂದಿಗೆ ನಡೆದುಕೊಂಡಿದ್ದನೆ? ಆಗ ಪ್ರವಚನಕ್ಕೆ ಹಾಜರಿದ್ದ ಭಿಕ್ಕುಗಳು ಏನು ಮಾಡಿದರು? ಅವರು ಪ್ರವಚನದಿಂದ ಹೊರನಡೆದರೆ?

ಕಣ್ಣೆದುರು ಬರುವ ಎರಡನೆಯ ಸನ್ನಿವೇಶವು ವೈಶಾಲಿಯ ಅಮ್ರಪಾಲಿಯದು. ಅವಳು ಬುದ್ಧನನ್ನು ಕಾಣಲು ಹೋಗಿ ಬುದ್ಧ ಹಾಗೂ ಭಿಕ್ಕುಗಳನ್ನು ಭೋಜನಕ್ಕಾಗಿ ತನ್ನ ಸೌಧಕ್ಕೆ ಬರಲು ಆಹ್ವಾನಿಸಿದಳು. ಅವಳೊಬ್ಬ ವಾರಾಂಗನೆಯಾಗಿದ್ದಳು. ಅವಳು ವೈಶಾಲಿಯಲ್ಲಿ ಎಲ್ಲರಿಗಿಂತಲೂ ಹೆಚ್ಚು ಚೆಲುವೆಯಾಗಿದ್ದಳು. ಬುದ್ಧ ಹಾಗೂ ಭಿಕ್ಕುಗಳು ಅವಳನ್ನು ತಪ್ಪಿಸಿದ್ದರೆ? ಅದೇ ವೇಳೆಗೆ ಲಿಚ್ಛವಿಯವರು ನೀಡಿದ ಆಹ್ವಾನವನ್ನು ನಿರಾಕರಿಸಿದ್ದರಿಂದ ಅವರಿಗೆ (ಲಿಚ್ಛವಿಯವರಿಗೆ) ತುಂಬ ಅವಮಾನ ಆದಂತೆ ಅನ್ನಿಸುತ್ತಿರುವಾಗಲೂ, ಬುದ್ಧನು ಅವಳ ಆಹ್ವಾನವನ್ನು ಸ್ವೀಕರಿಸಿ, ಅವಳ ಸೌಧಕ್ಕೆ ಹೋಗಿ, ಅವಳು ನೀಡಿದ ಭೋಜನ ಕೂಟದಲ್ಲಿ ಪಾಲ್ಗೊಂಡನು.

ಇದಲ್ಲದೆ ಇನ್ನಷ್ಟು ಉದಾಹರಣೆಗಳು ಬೇಕಿಲ್ಲ. ನಂದಕೋವದ ಸುತ್ತದಲ್ಲಿ ಹೇಳಿದಂತೆ ಬುದ್ಧನು ಶ್ರಾವಸ್ತಿಯಲ್ಲಿ ಉಳಿದುಕೊಂಡಾಗ ಮಹಾಪ್ರಜಾಪತಿ ಗೌತಮಿಯು ತನ್ನ ಜೊತೆಗೆ ದಾನಿಗಳಾದ ಐದು ನೂರು ಜನ ಸ್ತ್ರೀಯರನ್ನು ಕರೆತಂದಳು. ಅವಳು ಧಮ್ಮದ ಬಗೆಗೆ ಮಾರ್ಗದರ್ಶನ ಮಾಡಬೇಕೆಂದು ಬುದ್ಧನನ್ನು ಕೇಳಿಕೊಂಡಳು. ಆಗ ಬುದ್ಧನು ಅವರೆಲ್ಲರಿಂದ ಪಲಾಯನ ಮಾಡಿದ್ದನೆ? ಪಟ್ಟುನನ ಮಗಳಾದ ಕೋಕನದಾಳ ಸೌಂದರ್ಯದ ತೇಜಸ್ಸು ಇಡಿಯ ಮಹಾ ವನದಲ್ಲಿ ಹಬ್ಬಿತ್ತು. ಬುದ್ದನು

ವೈಶಾಲಿಯಲ್ಲಿ ಇರುವಾಗ ಅವಳು ಅವನನ್ನು ಭೇಟಿಯಾಗಲು ಪ್ರಾತಃಕಾಲದಲ್ಲಿ ಬಂದಿದ್ದಳೆಂದು ಸಂಯುಕ್ತ ನಿಕಾಯದಲ್ಲಿ ನಮೂದಿಸಲಾಗಿದೆ.

ರಾಜಾ ಪ್ರಸೇನಜಿತನ ಪತ್ನಿಯಾದ ರಾಣಿ ಮಲ್ಲಿಕಾ ಇವಳು ಧಮ್ಮವನ್ನು ಕುರಿತಾದ ಉಪದೇಶವನ್ನು ಪಡೆಯಲು ಬುದ್ಧನಲ್ಲಿಗೆ ಮೇಲಿಂದ ಮೇಲೆ ಬರುತ್ತಿದ್ದಳೆಂಬ ಉಲ್ಲೇಖಗಳು ಪಿಟಿಕಾಗಳಲ್ಲಿ ಅಲ್ಲಲ್ಲಿ ಇವೆ.

ಬುದ್ಧನು ಸ್ತ್ರೀಯರ ಭೇಟಿಯನ್ನು ನಿಷೇಧಿಸಿರಲಿಲ್ಲ, ಎಂಬುದು ಈ ಘಟನೆಗಳಿಂದ ಸ್ಪಷ್ಟವಾಗುತ್ತದೆ. ಅದೇ ರೀತಿಯಾಗಿ ಸ್ತ್ರೀಯರಿಗೂ ಬುದ್ಧನಲ್ಲಿಗೆ ಹೋಗಲು ಸಂಕೋಚ ಎನ್ನಿಸುತ್ತಿರಲಿಲ್ಲ.

ಸ್ತ್ರೀಯರೊಡನೆ ಮೇಲಿಂದ ಮೇಲಾಗುವ ಭೇಟಿಗಳು ಹಾಗೂ ಮಾನವನ ಸ್ವಭಾವದ ದೌರ್ಬಲ್ಯಗಳನ್ನು ಗಮನಿಸಿ ಬುದ್ದನು ಭಿಕ್ಕುಗಳಿಗೆ ಸಾಮಾನ್ಯ ಅನುಯಾಯಿಗಳನ್ನು ಭೇಟಿಗೆಂದು ಮೇಲಿಂದ ಮೇಲೆ ಮನೆಗೆ ಕರೆಯಬಾರದೆಂದು ಉಪದೇಶಿಸಿದ್ದುದು ನಿಜ. ಆದರೆ ಅವನು ಇಂಥ ಭೇಟಿಗಳನ್ನು ನಿಷೇಧಿಸಿರಲಿಲ್ಲ. ಇಷ್ಟೇ ಅಲ್ಲದೆ ಅವನೆಂದಿಗೂ ಸ್ತ್ರೀಯರನ್ನು ಕುರಿತು ತಿರಸ್ಕಾರವನ್ನು ತೋರಿರಲಿಲ್ಲ.

ಬ್ರಹ್ಮಚರ್ಯೆಯನ್ನು ಕಾಪಾಡಿಕೊಳ್ಳುವ ಬಗೆಗೆ ಬುದ್ದನ ನಿಲುವು ತುದಿಮುಟ್ಟಿದುದಾಗಿತ್ತೆಂಬುದೂ ಅಷ್ಟೇ ನಿಜ. ಅವನ ಮಾತುಗಳಲ್ಲಿ ಹೇಳುವುದಾದರೆ : ಸ್ತ್ರೀಯರು ಬ್ರಹ್ಮಚರ್ಯೆಯ ಜೀವನವನ್ನು ಕಲಂಕಿತಗೊಳಿಸಲು ಕಾರಣರಾಗಬಲ್ಲರು", ಎಂಬ ಬಗೆಗೆ ಬುದ್ಧನು ತುಂಬ ಜಾಗರೂಕನಾಗಿದ್ದನು. ಆದರೆ ಅವನು ಎಂಥ ಉಪದೇಶವನ್ನು ಮಾಡಿದನು? ಸ್ತ್ರೀಯರೊಡನೆಯ ಎಲ್ಲ ಬಗೆಯ ಸಂಬಂಧಗಳನ್ನು ಹರಿದೊಗೆಯಬೇಕೆಂದು ಬುದ್ಧನು ಭಿಕ್ಕುಗಳಿಗೆ ಉಪದೇಶವನ್ನು ಮಾಡಿದ್ದನೆ? ಇಲ್ಲವೇ ಇಲ್ಲ. ಅವನು ಇಂಥ ಯಾವುದೇ ಬಗೆಯ ಬಂಧನವನ್ನು ಹೇರಲಿಲ್ಲ. ಬದಲು

ಸ್ತ್ರೀಯನ್ನು ಕಂಡಾಗಲೆಲ್ಲ ಆಯಾ ವ್ಯಕ್ತಿಗನುಸರಿಸಿ ಅವಳನ್ನು ಅಮ್ಮ, ಸೋದರಿ ಹಾಗೂ ಮಗಳೆಂದು ಭಾವಿಸಬೇಕೆಂದು ಅವನು ಭಿಕ್ಕುಗಳಿಗೆ ಹೇಳಿದನು.

ಸ್ತ್ರೀಯರು ಭಿಕ್ಕು ಸಂಘವನ್ನು ಪ್ರವೇಶಿಸುವುದು ಹಾಗೂ ಅವರು ತಮ್ಮ ಸಂಘವನ್ನು ಕಟ್ಟುವುದಕ್ಕೆ ಬುದ್ದನ ವಿರೋಧವಿತ್ತು, (ಕೊಟ್ಟಕೊನೆಗೆ ಅವನು ಅಪ್ಪಣೆ ನೀಡಿದನು.) ಅವನ ವಿರೋಧಕರು, ಅವನು ಭಿಕ್ಕು ಸಂಘಕ್ಕಿಂತ ಭಿಕ್ಕುಣಿ ಸಂಘಕ್ಕೆ ಕೆಳಮಟ್ಟದ ಸ್ಥಾನವನ್ನು ನೀಡಿದನೆಂಬ ಅಪಾದನೆಯ ಆಧಾರವನ್ನು ಪಡೆದುಕೊಳ್ಳುತ್ತಾರೆ. ಇದೇ ಎರಡನೆಯ ಕಾರಣವಾಗಿರುವ ಸಾಧ್ಯತೆ ಹೆಚ್ಚು.

ಇಲ್ಲಿ ಮತ್ತೆ ಈ ಪರಿಸ್ಥಿಯನ್ನು ವಿಶ್ಲೇಷಿಸುವುದು ಅಗತ್ಯದ್ದು, ಪರಿವ್ರಜೆಯರನ್ನು ತೆಗೆದುಕೊಳ್ಳಬೇಕೆಂಬ ಮಹಾಪ್ರಜಾಪತಿಯ ಬೇಡಿಕೆಯನ್ನು ಬುದ್ಧನು ವಿರೋಧಿಸಿದ್ದೇಕೆ? ಸ್ತ್ರೀಯರು ಕೆಳವರ್ಗದವರು. ಅವರ ಪ್ರವೇಶದಿಂದ ಜನರ ಮನಗಳಲ್ಲಿ ಭಿಕ್ಕು ಸಂಘದ ಮಟ್ಟವು ಇಳಿಮುಖವಾದೀತೆಂದು ಬುದ್ಧನು ಭಾವಿಸುತ್ತಿದ್ದುದರಿಂದ ಅವನು ಅದನ್ನು ವಿರೋಧಿಸಿದನೆ? ಇಲ್ಲವೆ, ಸ್ತ್ರೀಯರು ಬುದ್ದನ ತತ್ವಜ್ಞಾನ ಹಾಗೂ ಧರ್ಮೋಪದೇಶಗಳನ್ನು ಆಚರಿಸಲು ಬೌದ್ಧಿಕ ಹಾಗೂ

೦: Majjhama Nikaya. II. P. 309.

೨ : Vol. 1. P 40.

Q : Anguttara Nkaya. III. P. 190.

♡ : Samyutta Nikaya. I. P. 53. ⁕ :

೫:Kindred Sayings IV. P. 68.

ನೈತಿಕ ದೃಷ್ಟಿಗಳಿಂದ ಅಸಮರ್ಥರು, ಎಂಬ ಅಭಿಪ್ರಾಯವನ್ನು ಅವನು ಹೊಂದಿದ್ದ ಕಾರಣ ಅವನು ಅದನ್ನು ವಿರೋಧಿಸಿದನೆ? ಬುದ್ಧನ ಚರ್ಚೆಯ ಕಾಲದ ಬಗೆಗಿನ ಸ್ವಲ್ಪ ಮಟ್ಟಿಗಿನ ಕಠೋರವಾದ ಈ ನಿಲುವನ್ನು ಗಮನಿಸಿದರೆ, ಆನಂದನೇ ಎರಡು ಪ್ರಶ್ನೆಗಳ ಪೈಕಿ ಎರಡನೆಯ ಪ್ರಶ್ನೆಯನ್ನು ಬುದ್ಧನಿಗೆ ಖಂಡಿತ ಕೇಳಿದನಲ್ಲದೆ ಸಂದೇಹ ಇಲ್ಲವೆ ವಾದಕ್ಕೆ ಆಸ್ಪದವಿರಕೂಡದೆಂದು ಬಗೆದು ಬುದ್ಧನು ಸಂದೇಹಕ್ಕೆ ಎಡೆಯಿಲ್ಲದಂತೆ ಅದಕ್ಕೆ ಉತ್ತರವನ್ನು ನೀಡಿದನು. ಸ್ತ್ರೀಯರು ತನ್ನ ತತ್ವಜ್ಞಾನ ಹಾಗೂ ಧರ್ಮೋಪದೇಶಗಳನ್ನು ಅರ್ಥಮಾಡಿಕೊಳ್ಳಲು ಸಂಪೂರ್ಣವಾಗಿ ಸಮರ್ಥರಿದ್ದು, ಪರಿವ್ರಜ್ಜೆಯನ್ನು ಪಡೆಯಬೇಕೆನ್ನುವ ಅವರ ಬೇಡಿಕೆಯನ್ನು ವಿರೋಧಿಸಲು ಇದು ಕಾರಣವಲ್ಲ, ಎಂದು ಬುದ್ಧನು ಹೇಳಿದನು. ಇದರಿಂದ, ಪುರುಷನ ತುಲನೆಯಲ್ಲಿ ಸ್ತ್ರೀಯು ಬೌದ್ಧಿಕವಾಗಿ ಇಲ್ಲವೆ ನೈತಿಕವಾಗಿ ಕಡಿಮೆ ಮಟ್ಟದವಳೆಂಬ ನಿಲುವು ಬುದ್ಧನದಾಗಿರಲಿಲ್ಲ, ಎಂಬ ಸಂಗತಿಯು ಸ್ಪಷ್ಟವಾಗುತ್ತದೆ. ಅವರ ಮಟ್ಟವು ಕಡಿಮೆಯದಾದ ಕಾರಣ ಅವರು ಸಂಘದ ಪ್ರತಿಷ್ಠೆಗೆ ಕುಂದು ತರುವರೆಂಬ ಭಯದಿಂದ ಅವನು ಅವರ ಪ್ರವೇಶವನ್ನು ವಿರೋಧಿಸಿದನೆನ್ನುವ ವಾದದಲ್ಲಿ ಯಾವುದೇ ಹುರುಳಿಲ್ಲ. ಅವನ ಅಭಿಪ್ರಾಯವು ಇದೇ ಬಗೆಯದಾಗಿದ್ದರೆ
ಅವನೆಂದಿಗೂ ಅವರಿಗೆ ಸಂಘಕ್ಕೆ ಪ್ರವೇಶವನ್ನು ನೀಡುತ್ತಿರಲಿಲ್ಲ.

ಅವನು ಭಿಕ್ಕು ಸಂಘದ ತುಲನೆಯಲ್ಲಿ ಭಿಕ್ಷುಣಿಯರ ಸಂಘಕ್ಕೆ ಕೆಳಸ್ಥಾನವನ್ನು ನೀಡಿದನೆಂಬ ವಾದಕ್ಕೆ ಉತ್ತರ ಹೀಗಿದೆ : ಈ ವ್ಯವಸ್ಥೆಯ ಹಿಂದೆ ಯಾವುದೇ ಶ್ರೇಷ್ಠತೆ ಇಲ್ಲವೆ ಕನಿಷ್ಠತೆಯ ವಿಚಾರವಿರದೆ ಪೂರ್ತಿಯಾಗಿ ವ್ಯಾವಹಾರಿಕ ನಿಲುವು ಇದಾಗಿತ್ತು. ಬುದ್ಧನು ಸ್ತ್ರೀಗೆ ಪರಿವ್ರಾಜಕಿಯೆಂದು ಪ್ರವೇಶವನ್ನು ನೀಡುವಾಗ ಎರಡು ಪ್ರಶ್ನೆಗಳನ್ನು ಎದುರಿಸಬೇಕಾಯಿತು. ಸ್ತ್ರೀಯರು ಹಾಗೂ ಪುರುಷರಿಗೆ ಒಂದೇ ಸಂಘವಿರಬೇಕೆ ? ಅವನು ಎರಡು ಸಂಘಗಳಿರಬೇಕೆಂದು ತೀರ್ಮಾನಿಸಿದನು. ಪುರುಷರು ಹಾಗೂ ಸ್ತ್ರೀಯರನ್ನು ಒಟ್ಟಿಗೆ ಇರಿಸಿದರೆ ಬ್ರಹ್ಮಚರ್ಯೆಯ ನಿಯಮವು ಪೂರ್ತಿ ಹಾಳಾಗುವುದೆಂದು ಅವನು ಭಯಪಡುತ್ತಿದ್ದನು. ಹೀಗಾಗಿ ಸ್ತ್ರೀಯರಿಗೆ ಪ್ರವೇಶವನ್ನು ನೀಡುವ ಸಂದರ್ಭದಲ್ಲಿ ತನ್ನ ಅಭಿಪ್ರಾಯವನ್ನು ಬಳಸಿಕೊಳ್ಳಬೇಕೆಂದು ಅನ್ನಿಸಿ ಸ್ತ್ರೀ-ಪುರುಷರ ಬೇರೆ ಬೇರೆಯಾದ ಎರಡು ಸಂಘಗಳಿರತಕ್ಕದ್ದು ಹಾಗೂ ಅವುಗಳ ನಡುವೆ ವೇಗನಿರೋಧಕಗಳಿರತಕ್ಕದ್ದೆಂಬ ನಿಲುವನ್ನು ತಳೆದನು. ಎರಡು ಪ್ರತ್ಯೇಕ ಸಂಘಗಳನ್ನು ನಿರ್ಮಿಸಲು ತೀರ್ಮಾನಿಸಿದ ತರುವಾಯ ಅವನು ಇನ್ನೊಂದು ಪ್ರಶ್ನೆಯನ್ನು ಎದುರಿಸಬೇಕಾಯಿತು. ಅದೆಂದರೆ, ಸ್ತ್ರೀ ಹಾಗೂ ಪುರುಷರ ಸ್ವತಂತ್ರವಾದ ಸಂಘಗಳು ತಯಾರಾದ ಬಳಿಕ ಅವೆರಡರ ನಡುವೆ ಯಾವುದೇ ಬಗೆಯ ಒಳಸಂಬಂಧವು ಇರಬೇಕೆ, ಬೇಡವೆ? ಎನ್ನುವುದು.

ಮೊದಲನೆಯ ಪ್ರಶ್ನೆಗೆ, ಸ್ತ್ರೀಯರ ಸಂಘವು ಪುರುಷರ ಸಂಘದಿಂದ ಬೇರೆಯಾಗಿರತಕ್ಕದ್ದು, ಅದರ ಹೊರತು ಎರಡನೆಯ ತೀರ್ಮಾನ ಸಾಧ್ಯವಿರಲಿಲ್ಲ. ಇಬ್ಬರಿಗೂ ಅನಿವಾರ್ಯವಾದ ಬ್ರಹ್ಮಚರ್ಯೆಯ ನಿಯಮಗಳ

ಅನಿವಾರ್ಯವಾದ ನಿಷ್ಪತ್ತಿ ಇದಾಗಿತ್ತು. ಪುರುಷರು ಹಾಗೂ ಸ್ತ್ರೀಯರ ಜೀವನದಲ್ಲಿ ಹುಟ್ಟು ನೈಸರ್ಗಿಕವಾದ ವಿಷಯವಾಸನೆಯ ಸ್ಥಾನವು ಅದೆಷ್ಟು ಪ್ರಭಾವಿಯಾದುದು, ಎಂಬುದರ ಅರಿವು ಬುದ್ಧನಿಗಿತ್ತು. ಬುದ್ಧನ ಮಾತುಗಳನ್ನೇ ಬಳಸಿಕೊಳ್ಳುವುದಾದರೆ, ಈ ವಾಸನೆಯು ಪುರುಷನನ್ನು ಸ್ತ್ರೀಯ ಹಾಗೂ ಸ್ತ್ರೀಯನ್ನು ಪುರುಷನ ದಾಸ್ಯದತ್ತ ಎಳೆಯುತ್ತದೆ. ಈ ಪ್ರಭಾವಕ್ಕೆ ಸ್ವಲ್ಪ ಅವಕಾಶವನ್ನು ನೀಡಿದರೂ ಸಾಕು, ಬ್ರಹ್ಮಚರ್ಯೆಯ ನಿಯಮವು ಕ್ಷಣಮಾತ್ರವೂ ಅಸ್ತಿತ್ವದಲ್ಲಿ ಉಳಿಯಲಾರದು. ಬ್ರಹ್ಮಚರ್ಯೆಯ ನಿಯಮಗಳನ್ನು ಕಾಪಾಡಲೆಂದು ಅವನು ಎರಡು ಸಂಘಗಳನ್ನು ಬೇರೆ ಬೇರೆಯಾಗಿ ಯೋಜಿಸಬೇಕಾಯಿತು.



ಎರಡನೆಯ ಪ್ರಶ್ನೆಯನ್ನು ಕುರಿತು ಯೋಚಿಸಲಾಗಿ, ಬುದ್ಧನು ಮಾಡಿದ ತೀರ್ಮಾನಕ್ಕಿಂತ ಬೇರೆ ತೀರ್ಮಾನ ಸಾಧ್ಯವಿತ್ತೆ? ಅವನ ಧಮ್ಮವನ್ನು ಸ್ವೀಕರಿಸಿದ ಸ್ತ್ರೀಯರು ಅಪಕ್ವರಾಗಿದ್ದರು. ಅವರಿಗೆ ಧಮ್ಮದ ತತ್ತ್ವಜ್ಞಾನವನ್ನು ಕಲಿಸುವುದು ಹಾಗೂ ಅವರನ್ನು ಸಂಘದ ನಿಯಮಗಳ ಬಗೆಗೆ ತರಬೇತುಗೊಳಿಸುವುದು ಆವಶ್ಯಕವಾಗಿತ್ತು. ಯಾರು ಈ ಹೊಣೆಯನ್ನು ಹೊರಬಲ್ಲವರಾಗಿದ್ದರು? ಅವನು ಬೇರಾರಿಗೆ ಈ ಹೊಣೆಯನ್ನು ಒಪ್ಪಿಸಲು ಸಾಧ್ಯವಿತ್ತು? ಅವನ ಸಂಘದ ಪುರುಷ ಭಿಕ್ಕುಗಳನ್ನು ಬಿಟ್ಟು ಬೇರಾರಿಗಲ್ಲ. ಏಕೆಂದರೆ ಅವರಿಗೆ ಧಮ್ಮತತ್ವಜ್ಞಾನವನ್ನು ಕಲಿಸಿ, ಸಂಘದ ನಿಯಮಗಳ ಬಗೆಗೆ ತರಬೇತಿಯನ್ನು ನೀಡಿ, ಅವರನ್ನು ಮೊದಲು ತಯಾರಿಸಲಾಗಿತ್ತು. ಹೀಗಾಗಿ ಅವನು ಇದನ್ನೇ ಮಾಡಿದನು. ಭಿಕ್ಷುಣಿಯರ ತರಬೇತಿಯ ಹೊಣೆಯನ್ನು ಭಿಕ್ಕುಗಳಿಗೆ ಒಪ್ಪಿಸುವಾಗ ಯಾವ ಬಗೆಯ ನಂಟನ್ನು ಅವರಲ್ಲಿ ನಿಶ್ಚಿತಗೊಳಿಸಲಾಯಿತೆನ್ನುವ ಮಹತ್ವದ ಪ್ರಶ್ನೆಯನ್ನು ಕೇಳುವುದು ಆವಶ್ಯಕ. ಅದರ ಹೊರತು ಭಿಕ್ಕು ಸಂಘಕ್ಕಿಂತ ಭಿಕ್ಕುಣಿ ಸಂಘವು ಕೆಳಮಟ್ಟದಲ್ಲಿರುವ ಸಂಗತಿಯನ್ನು ವಿವರಿಸಲಾಗದು. ಈ ಪ್ರಶ್ನೆಯ ನೇರ ಉತ್ತರ ಹೀಗಿದೆ : ಭಿಕ್ಕುಣಿಯರನ್ನು ತರಬೇತುಗೊಳಿಸುವ ಹೊಣೆಯನ್ನು ಭಿಕ್ಕುಗಳಿಗೆ ಒಪ್ಪಿಸಿದ್ದರಿಂದ ಅವರ ನಂಟು ಶಿಕ್ಷಕ ಹಾಗೂ ವಿದ್ಯಾರ್ಥಿಗಳಂತಾಯಿತು. ಶಿಕ್ಷಕ ಹಾಗೂ ವಿದ್ಯಾರ್ಥಿಗಳ ನಂಟಿನಲ್ಲಿ ಶಿಕ್ಷಕರಿಗೆ ವಿದ್ಯಾರ್ಥಿಗಳ ಬಗೆಗಿನ ಕೆಲವು ಅಧಿಕಾರಗಳು ಹಾಗೂ ವಿದ್ಯಾರ್ಥಿಗಳು ಶಿಕ್ಷಕರ ಬಗೆಗೆ ಆಧೀನತೆ ಹಾಗೂ ಕೆಳಮಟ್ಟದ ನಿಲುವನ್ನು ತಳೆಯುವುದನ್ನು ಒಳಗೊಂಡಿಲ್ಲವೆ? ಬುದ್ಧನು ಇದನ್ನು ಬಿಟ್ಟು ಬೇರೇನನ್ನು ಮಾಡಿದನು?

ಈ ಸಂದರ್ಭದಲ್ಲಿ ಕ್ರಿಶ್ಚಿಯನ್ ಪಾದ್ರಿ ಹಾಗೂ ಮಾದ್ರಿಗಳ ನಡುವಿನ ನಂಟನ್ನು ಹೋಲಿಸಿ ನೋಡುವುದು ಅನುಕೂಲದ್ದು. ಮಾದ್ರಿಯರು ಪಾದ್ರಿಗಳಿಗಿಂತ ಕೆಳಮಟ್ಟದಲ್ಲಿಲ್ಲವೆ? ಹೌದು, ಅವರಿರುವುದೇ ಹಾಗೆ." ಇದರಿಂದಾಗಿ ಕ್ರಿಸ್ತ ಧರ್ಮವು ಸ್ತ್ರೀಯರನ್ನು ಪುರುಷರಿಗಿಂತ ಕಡಿಮೆಯೆಂದು ಲೆಕ್ಕಿಸುತ್ತದೆ, ಎಂದು ಯಾರಾದರೂ ಅನ್ನಬಹುದೆ? ಬುದ್ಧನು ಭಿಕ್ಕು ಹಾಗೂ ಭಿಕ್ಷುಣಿಯರ ನಂಟನ್ನು ನಿಯಮಿತಗೊಳಿಸಲೆಂದು ಯಾವುದೋ ಒಂದು ಬಗೆಯ ಏರ್ಪಾಡನ್ನು ಮಾಡಿದ್ದರೆ ಅದನ್ನು ಬೇರೆ ಬಗೆಯಾಗಿ ಅರ್ಥೈಸಬೇಕೇಕೆ? ಸುತ್ತಪಿಟಕಕ್ಕೆ ಸಂಬಂಧಪಟ್ಟಂತೆ, ಬುದ್ಧನ ದೃಷ್ಟಿಕೋನವು ಸ್ತ್ರೀಯರನ್ನು ಕುರಿತು ತಾರತಮ್ಯದಿಂದ ಕೂಡಿತ್ತು. ಆದರೆ ಪುರುಷರು ಸ್ತ್ರೀಯರ ಬಗೆಗೆ ಎಚ್ಚರ ತಳೆಯಬೇಕೆಂಬ ಆಗ್ರಹದ ಪ್ರತಿಪಾದನೆಯನ್ನು ಮಾಡುವ ಆಪಾದನೆಗೆ ಯಾವುದೇ ಬಗೆಯ ಆಧಾರವಿಲ್ಲ

೨.

ವಿಶಿಷ್ಟ ಘಟನೆಗಳನ್ನು ಬದಿಗಿಟ್ಟು ಸ್ತ್ರೀಯರತ್ತ ನೋಡುವ ಬುದ್ಧನ ಸರ್ವಸಾಮಾನ್ಯ ದೃಷ್ಟಿಕೋನವು ಹೇಗಿತ್ತೆಂಬುದರತ್ತ ಹೊರಳೋಣ. ಬುದ್ಧನು ಸ್ತ್ರೀಯರನ್ನು ಕೆಳಮಟ್ಟದವರೆಂದು ಬಗೆಯುತ್ತಾನೆಯೆ? ಬುದ್ದನು ಸ್ತ್ರೀ ವರ್ಗವನ್ನು ಕುರಿತು ಬೌದ್ಧರ ಶ್ರೇಷ್ಠ ಸಾಹಿತ್ಯದಲ್ಲಿ ಮಾಡಿದ ಉಲ್ಲೇಖಗಳನ್ನು ಓದುವವನಿಗೆ, ಅವನು ಸ್ತ್ರೀಯರು ಕೆಳಮೆಟ್ಟಲಿಗೆ ಇಳಿಯುವಂತೆ ಏನನ್ನಾದರೂ ಮಾಡುವುದಂತೂ ದೂರ, ಬದಲು ಅವರಿಗೆ ಉದಾತ್ತತೆ ಲಭಿಸಬೇಕು, ಉಚ್ಚ ಮಟ್ಟ ಲಭಿಸಬೇಕೆಂದು ಸತತವಾಗಿ ಪ್ರಯತ್ನಶೀಲನಾಗಿದ್ದನೆಂಬುದು ಖಾತ್ರಿಯಾಗದಿರದೆಂಬ ಖಾತ್ರಿ ನನಗಿದೆ. ಈ ದೃಷ್ಟಿಕೋನದ ಪುಷ್ಟಿಗಾಗಿ ಕೆಲವು ಉದಾಹರಣೆಗಳನ್ನು ಕೊಡಬಯಸುತ್ತೇನೆ.

0: See Article "Nuns" in the Catholic Encyclopaedia. Vol. xi. P. 164.

ಸಾಮಾನ್ಯವಾಗಿ ಭಾರತೀಯರಿಗೆ ಪ್ರಾಚೀನ ಕಾಲದಿಂದಲೂ ಹೆಣ್ಣು ಮಗುವಿನ ಜನ್ಮವು ಬಲು ದುಃಖದ ಸಂಗತಿಯಾಗಿ ಕಂಡಿದೆ. ಬುದ್ಧನು ಈ ಭಾವನೆಯನ್ನು ಒಪ್ಪಿಕೊಳ್ಳುತ್ತಿದ್ದನೆ? ಅವನು ಪ್ರಸೇನಜಿತ ರಾಜನಿಗೆ ಮಾಡಿದ ಉಪದೇಶದಿಂದ ಈ ಪ್ರಶ್ನೆಯನ್ನು ಕುರಿತಾದ ಅವನ ದೃಷ್ಟಿಕೋನವು ಸಾಂಪ್ರದಾಯಿಕ ದೃಷ್ಟಿಕೋನಕ್ಕೆ ತೀರ ವಿರುದ್ಧವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಬುದ್ಧನು ಶ್ರಾವಸ್ತಿಯ ಜೇತವನದಲ್ಲಿ ಇರುವಾಗ ಒಂದು ಸಲ ಪ್ರಸೇನಜಿತ ರಾಜನು ಬಂದು ಅವನನ್ನು ಭೇಟಿಯಾದನು. ಅರಮನೆಯಿಂದ ಒಬ್ಬ ಸೇವಕನು ಬಂದು ಅವನ ರಾಣಿ ಮಲ್ಲಿಕಾ ಇವಳು ಒಂದು ಹೆಣ್ಣು ಮಗುವಿಗೆ ಜನ್ಮ ಕೊಟ್ಟುದನ್ನು ಅವನಿಗೆ ಹೇಳುತ್ತಾನೆ. ಈ ವಾರ್ತೆಯನ್ನು ಆಲಿಸಿ ರಾಜನ ಮುಖವು ಕಳೆಗುಂದಿತು. ಅವನು ದುಃಖಿತ ಹಾಗೂ ವಿಷಣ್ಣನಾಗಿ ಕಾಣತೊಡಗಿದನು. ಬುದ್ದನು ಅವನ ಮುಖದ ಮೇಲಾದ ಬದಲಾವಣೆಯನ್ನು ಗಮನಿಸಿದನು. ಅದಕ್ಕೇನು ಕಾರಣವೆಂದು ಅವನು ರಾಜನನ್ನು ಕೇಳಿದನು. ಅವನಿಂದ ತಿಳಿದ ಬಳಿಕ ಬುದ್ದನು ಹೀಗೆಂದನು : ෆ ದುಃಖಿಸುವುದೇಕೆ? ಅಯ್ಯಾ ರಾಜಪುರುಷನೆ, ಮಗನಿಗಿಂತಲೂ ಮಗಳು ಒಳ್ಳೆಯ ಸಂತಾನ ಎನ್ನಿಸಬಹುದು. ಅವಳು ಜ್ಞಾನಿ ಹಾಗೂ ಸದ್ಗುಣಿಯಾಗಬಲ್ಲಳು.... ಅವಳು ಜನ್ಮ ಕೊಡುವ ಮಗನ ಕೈಯಿಂದ ಮಹತ್ತರ ಕೆಲಸಗಳು ನೆರವೇರಬಹುದು. ಅವನು ದೊಡ್ಡ ದೊಡ್ಡ ರಾಜ್ಯಗಳ ಮೇಲೆ ತನ್ನ ಅಧಿಸತ್ತೆಯನ್ನು ಮೆರೆಯಬಹುದು. ...."

ಕೆಲವು ಕುಟುಂಬಗಳು ಏಳಿಗೆಯನ್ನು ಹೊಂದಿದರೆ ಕೆಲವು ನಾಶ ಹೊಂದುತ್ತವೆ, ಎನ್ನುವ ಪ್ರಶ್ನೆಗಳಿಗೆ ಬುದ್ದನು ಹೀಗೆಂದು ಉತ್ತರಿಸಿದನೆಂದು ನಮೂದಿಸಲಾಗಿದೆ :

"ಭಿಕ್ಕುಗಳೇ, ಆಸ್ತಿಪಾಸ್ತಿಗಳಿಂದ ದೊಡ್ಡಸ್ತಿಕೆಯನ್ನು ಗಳಿಸುವ ಕುಟುಂಬಗಳು ತಮ್ಮ ದೊಡ್ಡಸ್ತಿಕೆಯನ್ನು ದೀರ್ಘಕಾಲ ಉಳಿಸಿಕೊಳ್ಳಲಾರವು. ಇದಕ್ಕೆ ಕಾರಣವೆಂದರೆ ಅವು ತಾವು ಕಳೆದುಕೊಂಡುದನ್ನು ಮರಳಿ ಪಡೆಯಲು ಯತ್ನಿಸುವುದಿಲ್ಲ, ತಮಗಾದ ನಷ್ಟವನ್ನು ತುಂಬಿಕೊಳ್ಳುವುದಿಲ್ಲ. ಅತಿಯಾದ ಊಟ, ತಿಂಡಿಗಳಲ್ಲಿ ಮೈಮರೆಯುವವರು, ಅನೈತಿಕರಾದ ಪುರುಷ ಹಾಗೂ ಸ್ತ್ರೀಯರನ್ನು ಅವಲಂಬಿಸುವ ಕುಟುಂಬಗಳು ದೀರ್ಘಕಾಲ ಉಳಿಯಲಾರವು. ಇದೆಲ್ಲಕ್ಕೆ ಮೇಲಿನ ನಾಲ್ಕರಲ್ಲಿ ಒಂದು ಅಥವಾ ಇನ್ನಿತರ ಕಾರಣಗಳಿರುತ್ತವೆ.

ಭಿಕ್ಕುಗಳೇ, ದೀರ್ಘ ಕಾಲ ಉಳಿಯುವ ಕುಟುಂಬಗಳು ತಾವು ಕಳೆದುಕೊಂಡದ್ದನ್ನೆಲ್ಲ ಮರಳಿ ಪಡೆಯಲು ಯತ್ನಿಸುತ್ತವೆ, ಆದ ನಷ್ಟವನ್ನು ತುಂಬಿಕೊಳ್ಳುತ್ತವೆ. ಅವು ತಿಂಡಿ ತಿನಿಸುಗಳನ್ನು ಮಿತಿಯಲ್ಲಿರಿಸುತ್ತವೆ. ಅವು

ಸದ್ಗುಣಿಗಳಾದ ಸ್ತ್ರೀ ಹಾಗೂ ಪುರುಷರಿಗೆ ಹೊಣೆಯನ್ನು ಒಪ್ಪಿಸುತ್ತವೆ. ಇಂಥ ಕುಟುಂಬಗಳು ದೀರ್ಘ ಕಾಲ ಉಳಿಯುತ್ತವೆ. ಇವೆಲ್ಲ ಸಂಗತಿಗಳಿಗಾಗಿ ನಾಲ್ಕರಲ್ಲಿ ಒಂದು ಇಲ್ಲವೆ ಇನ್ನಿತರ ಕಾರಣಗಳಿರುತ್ತವೆ.

ಒಬ್ಬ ರಾಜನು ಎಲ್ಲ ಬಗೆಯ ಕ್ರಾಂತಿಕಾರಕ ಪರಿವರ್ತನೆಯ ಕಾರ್ಯವನ್ನು ಮಾಡಿ ಪ್ರಪಂಚದ ಚಕ್ರವರ್ತಿ(ಸಾಮ್ರಾಟ್)ಯಾಗಲು ಸಂಕಲ್ಪವನ್ನು ಮಾಡುವ ಕಾಲಕ್ಕೆ ಏನಾಗುತ್ತದೆ, ಎನ್ನುವುದನ್ನು ಬುದ್ಧನು ಭಿಕ್ಕುಗಳಿಗೆ ಹೀಗೆ ಹೇಳಿದನೆಂದು ನಮೂದಿಸಲಾಗಿದೆ

ಇಂಥ ಒಬ್ಬನು ಚಕ್ರವರ್ತಿಯಾಗುತ್ತಲೆ ಏಳು ಸಾಂಪತ್ತಿಕ (ಭಂಡಾರಗಳು) ಲಕ್ಷಣಗಳು

೧ : Samyutta Nikaya. Vol. 1. P. 110.

೨ : Anguttara Nikaya, Vol. 11. P p. 254-255.

೩ : Ibid. Vol. V. P 83.



ಅಸ್ತಿತ್ವಕ್ಕೆ ಬರುತ್ತವೆ. ಈ ಸಾಂಪತ್ತಿಕ ಲಕ್ಷಣಗಳೆಂದರೆ ರಥ, ಆನೆ, ಕುದುರೆ, ರತ್ನ, ಸ್ತ್ರೀ, ಗೃಹಪಿತಾ ಮತ್ತು ವಾರಸುದಾರರು."

ಇನ್ನೊಂದು ಸನ್ನಿವೇಶದಲ್ಲಿ, ಬುದ್ಧನು ಸ್ತ್ರೀಯ ಘನತೆಯನ್ನು ವಿವರಿಸುತ್ತ ಪ್ರಪಂಚಕ್ಕೆ ಹೀಗೆ ಹೇಳುವನು."೨

"(ಭಾಷ್ಯಕಾರನು ಸೂಚಿಸಿದಂತೆ) ಬೋಧಿಸತ್ತ್ವ ಹಾಗೂ ಚಕ್ರವರ್ತಿಯು ಸ್ತ್ರೀಯಿಂದಲೇ ಜನ್ಮ ತಳೆಯುವುದರಿಂದ ಅವಳು ಸರ್ವೋಚ್ಚ ಉಪಯುಕ್ತಳು. ಅವಳು ಅಪರಿಹಾರ್ಯವಾಗಿಯೂ ಉಪಯುಕ್ತಳು."

ಯಾವ ಕುಟುಂಬದಲ್ಲಿ ಹೆಣ್ಣು ಮಗುವಿನ ಜನ್ಮವು ದುಃಖದ ಸನ್ನಿವೇಶವಾಗಿರದೆ ಸಂತೋಷದ್ದಾಗಿರುತ್ತದೋ, ಯಾವ ಕುಟುಂಬಗಳು ಸ್ತ್ರೀಯನ್ನು ಅವಲಂಬಿಸಿ ಇರುತ್ತವೋ ಅಂಥ ಕುಟುಂಬಗಳು ನಾಶ ಹೊಂದುವುದು ತಪ್ಪುತ್ತದೆ. ಸರ್ವೋಚ್ಚ ಮೌಲ್ಯಯುತವಾದ ಏಳು ವಸ್ತುಗಳಲ್ಲಿ ಸ್ತ್ರೀ ಒಬ್ಬಳೆಂದು ನಿಸ್ಸಂಕೋಚರಾಗಿ ಪ್ರತಿಪಾದಿಸುವವರನ್ನು ಸ್ತ್ರೀಯರನ್ನು ದ್ವೇಷಿಸುವವರು ಮತ್ತು ತುಚ್ಛರೆಂದು ಕಾಣುವವರೆಂದು ಬಗೆಯಬೇಕೆ? ಬುದ್ಧನು ಸಾಮಾನ್ಯರಲ್ಲಿ ಸ್ತ್ರೀಯರನ್ನು ಕುರಿತು ಇರುವ ಭಾವನೆಗಳನ್ನು ಅರಿತುಕೊಂಡನು. ಹೀಗಾಗಿ ಯಾರಾದರೂ, ಸ್ತ್ರೀಯರ ಅಪಹಾಸ್ಯ ಹಾಗೂ ಅಗೌರವಕ್ಕಾಗಿ ಇದೆಲ್ಲವನ್ನು ಯೋಜಿಸಲಾಗಿತ್ತೆಂದು ಅನ್ನಲು ಸಾಧ್ಯವೇ?

೩.

ಬುದ್ಧನು ಭಿಕ್ಷುಣಿಯರನ್ನು ಭಿಕ್ಕುಗಳ ಅಧಿಪತ್ಯದಲ್ಲಿ ಇರಿಸಿ ಸಾಮಾಜಿಕ ತಪ್ಪು ಮಾಡಿದನೆಂದು ಅನ್ನಿಸುವವರು, ಸಂನ್ಯಾಸ ಅಥವಾ ಪರಿವ್ರಜೆಯ (ಭಿಕ್ಷುಣಿಯ)ರ ದೀಕ್ಷೆಯನ್ನು ಪಡೆಯಲು ಸ್ತ್ರೀಯರಿಗೆ ಅಪ್ಪಣೆ ನೀಡಿದಂತಹ, ಅವನು ಎಸಗಿದ, ಕ್ರಾಂತಿಕಾರಕ ಕಾರ್ಯವನ್ನು ಗಮನಿಸುವುದಿಲ್ಲ. ಬ್ರಾಹ್ಮಣೀ ತತ್ವಜ್ಞಾನವನ್ನು ಅನುಸರಿಸಿ ಸ್ತ್ರೀಯರಿಗೆ ಮೊದಲಿನಿಂದಲೇ ಜ್ಞಾನಾರ್ಜನೆಯ ಹಕ್ಕನ್ನು ನಿಷೇಧಿಸಲಾಗಿತ್ತು. ಭಾರತೀಯ ಸ್ತ್ರೀಯರು ಸಂನ್ಯಾಸವನ್ನು ಸ್ವೀಕರಿಸುವ ಪ್ರಶ್ನೆ ಎದುರಾದಾಗ ಅವರು (ಬ್ರಾಹ್ಮಣರು) ಎರಡನೆಯ ತಪ್ಪು ಮಾಡಿದರು. ವೇದಪೂಜೆಯನ್ನು ಮಾಡುವ ಬ್ರಾಹ್ಮಣರು ದೀರ್ಘ ಕಾಲ ಉಪನಿಷತ್ತುಗಳ ಪೂಜೆಯನ್ನು ನಿರಾಕರಿಸಿದ್ದರೆಂದು ಇತಿಹಾಸವು ಹೇಳುತ್ತದೆ. `ಸಂನ್ಯಾಸ ವು ಅವರ ದೃಷ್ಟಿಯಿಂದ ಆದರ್ಶವಾಗಿರಲಿಲ್ಲ. ಸಂನ್ಯಾಸವು ಉಪನಿಷತ್ತುಗಳ ಆದರ್ಶವಾಗಿತ್ತು. ಸಂನ್ಯಾಸದ ಫಲವೆಂದರೆ 'ಆತ್ಮನೇ ಬ್ರಹ್ಮನು' ಎನ್ನುವ ಉಪನಿಷತ್ತಿನ ತತ್ತ್ವಜ್ಞಾನವನ್ನು ಅನುಭವಿಸುವುದು. ಬ್ರಾಹ್ಮಣರಿಂದ ಸಂನ್ಯಾಸಿ ಜೀವನಕ್ಕೆ ತೀವ್ರ ವಿರೋಧವಿತ್ತು. ಕೊಟ್ಟಕೊನೆಗೆ ಅವರು ಮಣಿದರು. ಕೆಲವು ಷರತ್ತುಗಳೊಂದಿಗೆ ಅವರು ಅದಕ್ಕೆ ಮನ್ನಣೆಯನ್ನು ಇತ್ತರು. ಅವುಗಳಲ್ಲಿ ಒಂದು ಷರತ್ತೆಂದರೆ, ಸ್ತ್ರೀಯರು (ಮತ್ತು ಶೂದ್ರರು) ಸಂನ್ಯಾಸಕ್ಕೆ ಪಾತ್ರರಲ್ಲ, ಎಂಬುದು.

ಸ್ತ್ರೀಯರನ್ನು ಕುರಿತಾದ ಬ್ರಾಹ್ಮಣರ ಮನೋಧರ್ಮವು ಬುದ್ಧನದಕ್ಕೆ ತೀರ ವಿರುದ್ಧವಾಗಿತ್ತು. ಹೀಗಾಗಿ, ಬ್ರಾಹ್ಮಣರು ಸ್ತ್ರೀಯರ ಸಂನ್ಯಾಸವನ್ನು ವಿರೋಧಿಸಿದ್ದೇಕೆ, ಎಂಬ ಸಂಗತಿಯ ಮಹತ್ವದ ಕಾರಣವನ್ನು ಅರಿತುಕೊಳ್ಳುವುದು ಉಪಯುಕ್ತವೆನ್ನಿಸೀತು. ಮನುವು ಇದರ ಕಾರಣಗಳನ್ನು ನೀಡಿರುವನು.
ಅವು ಹೀಗಿವೆ :

೧: Samyutta Nikaya. Vol. I. P. 62



೯.೧೮ ಸ್ತ್ರೀಯರಿಗೆ ವೇದಗಳನ್ನು ಕಲಿಯುವ ಅಧಿಕಾರವಿಲ್ಲ. ಆದುದರಿಂದ ವೇದಮಂತ್ರಗಳಿಂದ ಅವರ ಸಂಸ್ಕಾರಗಳನ್ನು ಮಾಡಬೇಕು. ಸ್ತ್ರೀಯರಿಗೆ ಧರ್ಮದ ಜ್ಞಾನವು ಇಲ್ಲದಿರಲು ಕಾರಣವೆಂದರೆ ಅವರಿಗೆ ವೇದಗಳನ್ನು ಕಲಿಯುವ ಅಧಿಕಾರವಿಲ್ಲ. ವೇದಮಂತ್ರಗಳ ಉಚ್ಚಾರಣೆಗಳು ಪಾಪಕ್ಷಾಲನಕ್ಕಾಗಿ ಉಪಯುಕ್ತವಾಗಿವೆ. ಸ್ತ್ರೀಯರು ವೇದಮಂತ್ರಗಳನ್ನು ಉಚ್ಚರಿಸಲಾರರೆಂದ ಮೇಲೆ ಅವರು ಅಸತ್ಯರು (ಪಾಪಮಯರು),

ಮನುವು ಬುದ್ಧನ ತರುವಾಯ ಆಗಿಹೋದವನಾದರೂ ಅವನು ಹಳೆಯ ಧರ್ಮಗ್ರಂಥಗಳಲ್ಲಿ ವ್ಯಕ್ತಪಡಿಸಲಾದ ದೃಷ್ಟಿಕೋನವನ್ನೇ ಪ್ರತಿಪಾದಿಸಿರುವನು. ಸ್ತ್ರೀಯರನ್ನು ಕುರಿತಾದ ಈ ದೃಷ್ಟಿಕೋನವು ಭಾರತೀಯ ಸ್ತ್ರೀಯರನ್ನು ಅವಮಾನಗೊಳಿಸುವಂಥದೂ, ಅವರ ಮೇಲೆ ಅನ್ಯಾಯವನ್ನು ಮಾಡುವಂಥದೂ ಆಗಿದೆ. ವಿದ್ಯಾರ್ಜನೆಯನ್ನು ಮಾಡುವುದು ಪ್ರತಿಯೊಬ್ಬ ಮಾನವನ ಜನ್ಮಸಿದ್ಧ ಹಕ್ಕು, ಯಾವುದೇ ಸೂಕ್ತವಲ್ಲದ ಕಾರಣದಿಂದಾಗಿ ಸ್ತ್ರೀಯರಿಗೆ ಅದನ್ನು ನಿರಾಕರಿಸಲಾಯಿತು. ಇದು ಸ್ತ್ರೀಯರ ಮೇಲೆ ಎಸಗಲಾದ ಅನ್ಯಾಯ. ಮೊದಲು ಸ್ತ್ರೀಯರಿಗೆ ವಿದ್ಯಾರ್ಜನೆಯ ಅಧಿಕಾರವನ್ನು ನಿರಾಕರಿಸುವುದು, ಅವಳಿಗೆ ಜ್ಞಾನವಿಲ್ಲದ ಕಾರಣ ಅವಳು ಅಶುದ್ಧಳು ಹಾಗೂ ಅಸತ್ಯಳೆಂದು (ಪಾಪಮಯಳು) ಘೋಷಿಸುವುದು, ಹೀಗಾಗಿ ಬ್ರಹ್ಮನ ಬಳಿಗೆ ತೆರಳುವ ಮಾಧ್ಯಮವಾದ ಸಂನ್ಯಾಸದ ಅಪ್ಪಣೆಯನ್ನು ಅವಳಿಗೆ ನಿರಾಕರಿಸುವುದೆಂದರೆ ಅವಳನ್ನು ಅವಮಾನಿಸುವುದಾಗಿದೆ. ಬ್ರಾಹ್ಮಣರು ಸ್ತ್ರೀಯರಿಗೆ ಆಧ್ಯಾತ್ಮಿಕ ಶಕ್ತಿಯ ಅನುಭವವನ್ನು ಪಡೆಯುವ ಹಕ್ಕನ್ನು ನಿರಾಕರಿಸಿದರೆಂದಷ್ಟೇ ಅಲ್ಲದೆ ಅವಳಲ್ಲಿ ಆಧ್ಯಾತ್ಮಿಕ ಶಕ್ತಿಯ ಕೊರತೆಯಿದೆ, ಎಂದೂ ಸಾರಿದರು.

ಇದೆಂದರೆ ಸ್ತ್ರೀಯರೊಡನೆಯ ಕ್ರೂರ ನಡೆವಳಿಕೆ, ಇತಿಹಾಸದಲ್ಲಿ ಇದಕ್ಕೆ ಸರಿಸಾಟಿ ಇನ್ನಿಲ್ಲ. ಪ್ರೊ. ಮ್ಯಾಕ್ಸ್ ಮುಲ್ಲರ್" ಅವರು ಹೇಳಿದಂತೆ, "ಮಾನವನು ದೈವೀಶಕ್ತಿಯಿಂದ ಅದೆಷ್ಟೇ ದೂರವಿದ್ದರೂ ಪುರುಷನನ್ನು ಬಿಟ್ಟರೆ ಈ ಪೃಥ್ವಿಯ ಮೇಲೆ ಈಶ್ವರನ ಸಮ ಯಾರೂ ಇಲ್ಲ. ಪುರುಷನನ್ನು ಬಿಟ್ಟರೆ ಈ ಪೃಥ್ವಿಯ ಮೇಲೆ ಈಶ್ವರನಂಥವರು

ಯಾರೂ ಇಲ್ಲ." ಇದು ಪುರುಷನ ಬಗೆಗೆ ನಿಜವಾಗಿದ್ದರೆ ಸ್ತ್ರೀಯ ಬಗೆಗೆ ನಿಜವಲ್ಲವೇಕೆ? ಬ್ರಾಹ್ಮಣರ ಬಳಿ ಇದಕ್ಕೆ ಉತ್ತರವಿಲ್ಲ.

ಬುದ್ಧನು ಸ್ತ್ರೀಯರಿಗೆ ಪರಿವ್ರಾಜಕಿಯ ಜೀವನವನ್ನು ಪ್ರವೇಶಿಸುವ ಸ್ವಾತಂತ್ರವನ್ನು ನೀಡಿ ಇವೆರಡೂ ಅನ್ಯಾಯಗಳನ್ನು ಒಂದೇ ಗಳಿಗೆಯಲ್ಲಿ ತೊಲಗಿಸಿದನು. ಅವನು ಅವರಿಗೆ ಜ್ಞಾನಾರ್ಜನೆಯ ಹಕ್ಕನ್ನು ನೀಡುವ ಮೂಲಕ ಪುರುಷರಿಗೆ ಸರಿಸಮನಾದ ಆಧ್ಯಾತ್ಮಿಕ ಶಕ್ತಿಯ ಅನುಭವವನ್ನು ಪಡೆಯುವ ಹಕ್ಕನ್ನು ಕೂಡ ಅವರಿಗೆ ನೀಡಿದನು. ಇದು ಭಾರತೀಯ ಸ್ತ್ರೀಯರ ದೃಷ್ಟಿಯಿಂದ ಕ್ರಾಂತಿ ಹಾಗೂ ಅವರ ಬಿಡುಗಡೆ, ಎರಡೂ ಆಗಿತ್ತು. ಪ್ರೊ. ಮ್ಯಾಕ್ಸ್ ಮುಲ್ಲರ್‌ರ ಮಾತಿನಲ್ಲಿ

'ಬ್ರಾಹ್ಮಣರ ಹಳೆಯ ಗುಲಾಮಿ ನಿಯಮಗಳ ಹಿಂಸೆಯ ಸರಪಳಿಗಳು ಕೊಟ್ಟಕೊನೆಗೊಮ್ಮೆ ಹರಿದೊಗೆಯಲ್ಪಟ್ಟವೆಂದು ಭಾರತೀಯ ಇತಿಹಾಸವು ನಮಗೆ ಕಲಿಸುತ್ತದೆ. ಬೌದ್ಧ ತತ್ತ್ವಜ್ಞಾನವು ಮುಖ್ಯವಾಗಿ ಸಾಮಾಜಿಕ ವಿಷಮತೆಯ ಪಾಶದಿಂದ ಬಿಡುಗಡೆ ಮಾಡುವ ವೈಯಕ್ತಿಕ ಸ್ವಾತಂತ್ರದ ಹಕ್ಕು ಹಾಗೂ ತನ್ನಿಚ್ಛೆಯಂತೆ ಕಾಡಿಗೆ ತೆರಳಿ ಸ್ವತಂತ್ರವಾಗಿ ಆಧ್ಯಾತ್ಮಿಕ ಜೀವನವನ್ನು ನಡೆಸುವ ಹಕ್ಕನ್ನು ಸ್ಥಾಪಿಸಿತೆಂಬುದನ್ನು ಒಪ್ಪಿಕೊಳ್ಳಲು ಎಳ್ಳಷ್ಟೂ ಸಂದೇಹ ಬೇಕಿಲ್ಲ."

೧ : Hibbert Lectures on Religion. P. 379.

೨ : Ibid. P. 373.



ಭಿಕ್ಷುಣಿಯರ ಸಂಘವನ್ನು ಭಿಕ್ಕುಗಳ ಸಂಘದ ಅಧಿಪತ್ಯದಲ್ಲಿ ಇರಿಸಲಾದ ಸಂಗತಿಯ ನಾಚಿಕೆಗೇಡು ತುಲನೆಯಲ್ಲಿ ಗಮನಿಸಿದರೆ ಬುದ್ಧನು ಭಾರತೀಯ ಸ್ತ್ರೀಯರಿಗೆ ನೀಡಿದ ಸ್ವಾತಂತ್ರ್ಯವು ಅದೆಷ್ಟೋ ಮಹತ್ವದ್ದು ಹಾಗೂ ಶ್ರೇಷ್ಠವಾದುದು. ಇದು ಕೇವಲ ಪೊಳ್ಳು ಸ್ವಾತಂತ್ರವಾಗಿರಲಿಲ್ಲ. ಭಿಕ್ಕುಣಿಯರು ಈ ಸ್ವಾತಂತ್ರ್ಯವನ್ನು ಮನಸಾರೆ ಬರಮಾಡಿಕೊಂಡು ಅದನ್ನು ಕೊಂಡಾಡಿದರು. "ನಿಜವಾಗಿಯೂ ನಾನು ಸ್ವತಂತ್ರನಾಗಿದ್ದೇನೆ! ನಾನು ಮಿತಿಯಿಲ್ಲದ ಸ್ವತಂತ್ರಳು", ಎಂದು ಬ್ರಾಹ್ಮಣರನ್ನೆಯಾದ ಮುಕ್ತಾ* ಭಿಕ್ಷುಣಿಯು ಗುಣಗಾನವನ್ನು ಮಾಡಿರುವಳು. ಇನ್ನೊಬ್ಬಳು ಬ್ರಾಹ್ಮಣಕನ್ನೆಯಾದ ಮೆತ್ತಿಕಾ ಭಿಕ್ಕುಣಿಯೂ ಇದೇ ಬಗೆಯಾಗಿ ಗುಣಗಾನವನ್ನು ಮಾಡಿದಳು. ನಾನಿಲ್ಲಿ ಈ ಬಂಡೆಗಲ್ಲಿನ ಮೇಲೆ ಕುಳಿತು ಮನಸಾರೆ ಸ್ವಾತಂತ್ರ್ಯವನ್ನು ಉಸಿರಾಡುತ್ತಿದ್ದೇನೆ" ಎಂದಿರುವಳು.

ಮಿಸೆಸ್ ಹ್ರಿಸ್ ಡೆವಿಡ್ಸ್ ರ ಹೇಳಿಕೆಯ ಮೇರೆಗೆ" :

"ಈ ಐಹಿಕ ಸ್ವಾತಂತ್ರ್ಯವನ್ನು ಉಪಭೋಗಿಸಲೆಂದು ಅವರು (ಸ್ತ್ರೀಯರು) ತರುವಾಯದ ಕ್ರಿಶ್ಚಿಯನ್ ಸೋದರಿಯರಂತೆ, ತಮ್ಮೆಲ್ಲ ಸಾಮಾಜಿಕ ಪ್ರತಿಷ್ಠೆ, ಐಹಿಕ ವೈಭವ ಹಾಗೂ ತಮ್ಮ ಮೊದಲ ಜೀವನವನ್ನು ಪೂರ್ತಿಯಾಗಿ ತ್ಯಜಿಸಿದರು. ಆದರೆ ಇದಕ್ಕೆ ಬದಲಾಗಿ ಅನುಬಂಧಿತ ಜೀವನವನ್ನು ಅದೆಷ್ಟೇ ಉದಾತ್ತೀಕರಿಸಲಾಗಿದ್ದರೂ, ಅದಕ್ಕೆ ಅದೆಷ್ಟೇ ಉತ್ತೇಜನೆಯನ್ನು ನೀಡಲಾಗಿದ್ದರೂ ಅಥವಾ ಅದಕ್ಕೆ ಅದೆಷ್ಟೇ ದೊಡ್ಡ ಆಶ್ರಯ ದೊರೆತಿದ್ದರೂ, ಅವುಗಳೊಂದಿಗೆ ಹೋಲಿಸಿದರೆ ಅವರು ವೈಯಕ್ತಿಕ ಪ್ರತಿಷ್ಠೆಯನ್ನು ಪಡೆದಿದ್ದರು. ಈ ಭಗಿನಿಯು ಧಾರ್ಮಿಕ ಪುರುಷರಂತೆ ಬಟ್ಟೆಗಳನ್ನು ತೊಟ್ಟುಕೊಂಡು ಹಾಗೂ ಮುಂಡನ ಮಾಡಿಸಿಕೊಂಡು ಮುಕ್ತಳಾದಳು. ಅವಳು ತನಗೆ ಬೇಕಾದಲ್ಲಿ ಸಂಚರಿಸಲು ಮುಕ್ತಳಾದಳು. ಒಬ್ಬಳೇ ದಟ್ಟ ಕಾಡಿನಲ್ಲಿ ಹೋಗಬಲ್ಲವಳು ಅಥವಾ ಗಿರಿಶಿಖರಗಳನ್ನು ಏರಬಲ್ಲವಳಾದಳು."

ಬುದ್ಧನು ಸ್ತ್ರೀಯರಿಗೆ ಭಿಕ್ಕುಣಿಯರಾಗುವ ಅಪ್ಪಣೆಯನ್ನು ನೀಡಿ, ಅವರಿಗೆ ಸ್ವಾತಂತ್ರ್ಯದ ದಾರಿಯನ್ನು ತೆರೆದನೆಂದಷ್ಟೇ ಅಲ್ಲ, ಲಿಂಗಭೇದರಹಿತ ಪ್ರತಿಷ್ಠೆಯನ್ನು ಪಡೆದುಕೊಳ್ಳುವ ಸ್ವತಂತ್ರ ಮತಾಧಿಕಾರವನ್ನೂ ಅವರಿಗೆ ನೀಡಿದನು. ಮಿಸೆಸ್ ಹ್ರಿಸ್ ಡೆವಿಡ್ಸ್ ಮಾತುಗಳಲ್ಲಿ :

"ಬುದ್ಧಿ ಪ್ರಾಮಾಣ್ಯವನ್ನು ಹೊಂದಿದ ಅವಳ 'ಅರ್ಹಂತ ಬಂಧುಗಳು ಅವಳಿಗೆ ಲಭಿಸಿದ ಸ್ವಾತಂತ್ರ ದಿಂದಾಗಿ ಅವಳೊಡನೆ ಲಿಂಗಭೇದದಿಂದ ನಡೆದುಕೊಳ್ಳದೆ, ಅವಳ ಸಂನ್ಯಾಸಿ ಜೀವನಕ್ಕೆ ಮನ್ನಣೆಯನ್ನು ನೀಡಿದರು. ಈ ಸ್ವಾತಂತ್ರ್ಯದಿಂದಾಗಿ ಅವಳಿಗೆ ಆಧ್ಯಾತ್ಮಿಕ ವಿಶ್ವದ ಅನುಭವವನ್ನು ಪಡೆದುಕೊಳ್ಳಲು ಸಾಧ್ಯವಾಯಿತು. ಹೀಗಾಗಿ ಪಿಟಕಗಳಲ್ಲಿ ವರ್ಣಿಸಲಾದಂತೆ ಅವಳು ಬೌದ್ಧ ಜಗತ್ತಿನಲ್ಲಿ ತುಂಬ ಜಾಗೃತರೆಂದು ಸಂಬೋಧಿಸಲಾದ ಕೆಲವೇ ಆಯ್ದ ಶ್ರೇಷ್ಠ ಅರಿಯೋ'ರ ಜೊತೆಗೆ ಬೌದ್ಧಿಕ ಸಂವಾದವನ್ನು ನಡೆಸಬಲ್ಲವಳಾದಳು, ಅವರಂತೆಯೇ ಎಲ್ಲ ಅಂಶಗಳನ್ನೂ ಸತ್ಯಸ್ವರೂಪದಲ್ಲಿ ಕಾಣುವ ಸಾಮರ್ಥವನ್ನು ಪಡೆದುಕೊಳ್ಳಬಲ್ಲವಳಾದಳು.

೩ : Psaims of the Sisters. XI.

೪ : Ibid No. XXIV.

೫: Preface to Therigatha.

* ಅರಿಯೋ:Avenerable or holy man ; A Saint ; an Arahata (ಆರ್ಯ)

Dr. Saheb Ambedkar written as and speeces Vol. 16. P. 50: Editions.



ಭಿಕ್ಕುಣಿ ಸೋಮಾ ೧ 'ಸ್ತ್ರೀಯ ನೈಸರ್ಗಿಕ ಜೀವನವು ನಮ್ಮ ಹಾಗೂ ಅರಿಯೋ ಇವರ ನಡುವೆ ತಡೆಯಾಗಲು ಹೇಗೆ ಸಾಧ್ಯ?' ಎನ್ನುತ್ತಾಳೆ.

"ಅದು ಯಾರಲ್ಲಿ ಏನಿದೆ ಎನ್ನುವುದನ್ನು ಸೂಚಿಸುತ್ತದೆ
ಅಂತರ್ಜಾನವು ಸತ್ಯದ ಪ್ರಮಾಣವನ್ನು ತಿಳಿಸುವುದೆ?
ಇದರ ಬಗೆಗೆ ಒಬ್ಬನಲ್ಲಿ,
ಹೀಗಿರುವಲ್ಲಿ ನಾನು ಸ್ತ್ರೀಯೇ, ಅಥವಾ ನಾನೊಬ್ಬ ಪುರುಷನೆ?
ಅಥವಾ ನಾನು ಏನೂ ಆಗಿಲ್ಲವೆ? ಎಂಬ ಪ್ರಶ್ನೆ ತಲೆದೋರಿದರೆ,
ಆಗ 'ಮಾರ ನೇ ಅದನ್ನು ಕುರಿತು ಹೇಳಲು ಸಮರ್ಥನು !"

ಇದೆಂದರೇನೇ ಎಲ್ಲವೂ ಅಲ್ಲ. ಬುದ್ಧನು ಸ್ತ್ರೀಯರಿಗೆ ಭಿಕ್ಷುಣಿಯರಾಗಲು ಅಪ್ಪಣೆ ನೀಡುವ ಮೂಲಕ ಪುರುಷರ ಜೊತೆಗೆ ಸಮಾನವಾದ ದಾರಿಯನ್ನು ಅವರಿಗಾಗಿ ತೆರೆದನು. ಮಿಸೆಸ್ ಹಿಸ್ ಡೆವಿಡ್ಸ್ ನಿಷ್ಕರ್ಷೆಯಂತೆ :

“ತಾಂತ್ರಿಕ ದೃಷ್ಟಿಯಿಂದ, ಭಿಕ್ಕಣಿಯರನ್ನು ಭಿಕ್ಕುಗಳಿಗಿಂತ ಕಾಯಮ್ಮಾಗಿ ಕೆಳಮಟ್ಟದಲ್ಲಿ ನೇಮಕ ಮಾಡಲಾದುದು ನಿಜ. ಥೇರಿ ಇವಳು ತನ್ನ ಬೌದ್ಧಿಕ ಹಾಗೂ ಲೌಕಿಕ ಸಾಮರ್ಥ್ಯದಿಂದ ಸಂಘದ ಸರ್ವೋಚ್ಚ ವ್ಯಕ್ತಿಗೆ ಸರಿಸಮಾನ ಸ್ಥಾನವನ್ನು ಪಡೆದುಕೊಳ್ಳಲು ಸಾಧ್ಯವಾಯಿತೆನ್ನುವುದೂ ಅಷ್ಟೇ ನಿಜ. Psaimsದ ಘಟನೆಯಂತೆ, `ಭದ್ರಾ ಇವಳು XXXVII ಬುದ್ಧನ ತರುವಾಯ ಸಂಘದ ಉತ್ತರಾಧಿಕಾರಿಯಾದ ಕಶ್ಯಪನಿಗೆ ಸಮಾನವಾದ ಆಧ್ಯಾತ್ಮಿಕ ಪಾತ್ರತೆಯನ್ನು ಪಡೆದಿದ್ದಳು. ಆಕೆಯು ವಿವಾಹಿತೆ, ಅವಿವಾಹಿತೆ, ಪರಿತ್ಯಕ್ಕೆ ಹಾಗೂ ವಾರಾಂಗನೆಯರಂತಹ ಎಲ್ಲ ವರ್ಗಗಳ ಸ್ತ್ರೀಯರಿಗಾಗಿ ಅವರವರ ದಾರಿಯನ್ನು ತೆರೆದಿಟ್ಟಿದ್ದಳು. ಹೀಗಾಗಿ ಅವರೆಲ್ಲರಿಗೆ ಪುರುಷನ ಸಮಾನವಾದ ಯೋಗ್ಯತೆ, ಸ್ವಾತಂತ್ರ್ಯ, ಪ್ರತಿಷ್ಠೆ ಮತ್ತು ಸಮತೆಗಳನ್ನು ಪಡೆದುಕೊಳ್ಳಲು ಸಾಧ್ಯವಾಯಿತು.

೪.

ಒಂದು ಕಾಲಕ್ಕೆ ಭಾರತೀಯ ಸ್ತ್ರೀಯರಿಗೆ ಇದ್ದ ಸ್ಥಾನವು ತೀರ ಅಧಃಪತನಗೊಂಡಿತೆನ್ನುವಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಪ್ರಾಚೀನ ಕಾಲದಲ್ಲಿ ಅವರು ರಾಜಕೀಯ ವಿದ್ಯಮಾನಗಳಲ್ಲಿ ವಹಿಸಿದ ಪಾತ್ರದ ಬಗೆಗೆ ಹೆಚ್ಚೇನನ್ನೂ ಹೇಳಲಾಗದು. ಆದರೆ ದೇಶವನ್ನು ಬೌದ್ಧಿಕ ಹಾಗೂ ಸಾಮಾಜಿಕವಾಗಿ ರೂಪಿಸುವಲ್ಲಿ ಅವರು ಅತ್ಯುಚ್ಚವಾದ ಸ್ಥಾನವನ್ನು ಪಡೆದಿದ್ದರೆನ್ನುವಲ್ಲಿ ಸಂದೇಹವೇ ಇಲ್ಲ.

ಅಥರ್ವ ವೇದದನುಸಾರ, ಒಂದು ಕಾಲಕ್ಕೆ ಸ್ತ್ರೀಯು ಉಪನಂದನ ವಿಧಿಗೆ ಪಾತ್ರಳಾಗಿದ್ದಳೆನ್ನುವುದು ಸ್ಪಷ್ಟವಾಗಿದೆ. ಇದರಿಂದಾಗಿ ಮಗಳ ಬ್ರಹ್ಮಚರ್ಯೆ ಮುಗಿದ ಬಳಿಕ ಅವಳು ಮದುವೆಗೆ ಯೋಗ್ಯಳಾದಳೆಂದು ಅನ್ನಲಾಗುತ್ತಿತ್ತು. ಪ್ರೌತ ಸೂತ್ರದನ್ವಯು, ಸ್ತ್ರೀಯರು ವೇದಮಂತ್ರೋಚ್ಚಾರವನ್ನು ಮಾಡಬಲ್ಲವರಾಗಿದ್ದರು. ಅವರಿಗೆ ವೇದಗಳನ್ನು ಕಲಿಸಲಾಗುತ್ತಿತ್ತು, ಎನ್ನುವುದು ಸ್ಪಷ್ಟ. ಸ್ತ್ರೀಯರು ಗುರುಕುಲ(ವಿಶ್ವವಿದ್ಯಾಲಯ)ಕ್ಕೆ ಹೋಗಿ ವೇದಗಳ ವಿವಿಧ ಶಾಖೆಗಳನ್ನು ಅಭ್ಯಸಿಸಿ ಅವುಗಳ ಮೀಮಾಂಸೆಯನ್ನು ಮಾಡುವಲ್ಲಿ ನಿಷ್ಣಾತರಾಗಿದ್ದರು. ಪಾಣಿನಿಯ ‘ಅಷ್ಟಾಧ್ಯಾಯ’ ವು

n : Psalms No. XVI.

೧.: Preface to Tharigatha Pp. XVI-XXVII.

ಈ ಸಂಗತಿಗೆ ಸಾಕ್ಷ್ಯವನ್ನು ಒದಗಿಸುತ್ತದೆ. ಸ್ತ್ರೀಯರು ಶಿಕ್ಷಕಿಯರಾಗಿದ್ದರು. ಅವರು ವಿದ್ಯಾರ್ಥಿನಿಯರಿಗೆ ವೇದಗಳನ್ನು ಕಲಿಸುತ್ತಿದ್ದರೆಂದು ಪತಂಜಲಿಯ ಮಹಾಭಾಷ್ಯದಿಂದ ಕಂಡುಬರುತ್ತದೆ. ಸ್ತ್ರೀಯರು ಧರ್ಮ, ತತ್ತ್ವಜ್ಞಾನ ಮತ್ತು ಮಾನಸ ಶಾಸ್ತ್ರ, ಮೊದಲಾದ ಗಹನವಾದ ವಿಷಯಗಳನ್ನು ಕುರಿತು ಪುರುಷರೊಡನೆ ಚರ್ಚಿಸುತ್ತಿದ್ದರು, ಎನ್ನುವ ಕಥೆಗಳಿಗೆ ಕೊರತೆಯಿಲ್ಲ. ಮನುಪೂರ್ವ ಕಾಲದಲ್ಲಿ ಭಾರತೀಯ ಸ್ತ್ರೀಯರು ಜ್ಞಾನ ಮತ್ತು ವಿದ್ವತ್ತೆಯ ಬಲದಿಂದ ಅತ್ಯುಚ್ಚವಾದ ಶಿಖರಗಳನ್ನು ತಲುಪಿದ್ದರೆನ್ನುವುದು ಜನಕ ಹಾಗೂ ಸುಲಭಾ, ಯಾಜ್ಞವಲ್ಕ ಮತ್ತು ಗಾರ್ಗಿ, ಯಾಜ್ಞವಲ್ಕ್ಯ ಮತ್ತು ಮೈತ್ರಾಯಿ, ಅದರಂತೆಯೇ ಶಂಕರಾಚಾರ್ಯ ಮತ್ತು ವಿದ್ಯಾಧರಿಯರಲ್ಲಿ ಪ್ರಕಟವಾಗಿ ನಡೆದ ವಾದವಿವಾದಗಳ ಕಥೆಗಳಿಂದ ಕಂಡುಬರುತ್ತದೆ.

ಒಂದು ಕಾಲಕ್ಕೆ ಸ್ತ್ರೀಯರನ್ನು ತುಂಬ ಗೌರವಿಸಲಾಗುತ್ತಿತ್ತು, ಎಂಬ ಬಗೆಗೆ ಭಿನ್ನಾಭಿಪ್ರಾಯವಿಲ್ಲ. ಪ್ರಾಚೀನ ಭಾರತದಲ್ಲಿ ರಾಜನ ಪಟ್ಟಾಭಿಷೇಕದ ಸನ್ನಿವೇಶದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಿದ್ದ ರತ್ನಗಳಲ್ಲಿ ರಾಣಿಯನ್ನೂ ಸಮಾವಿಷ್ಟಗೊಳಿಸಲಾಗಿತ್ತಲ್ಲದೆ ಅವನು ಉಳಿದವರಂತೆ ರಾಣಿಗೂ ಕಪ್ಪಕಾಣಿಕೆಗಳನ್ನು ಕೊಡುತ್ತಿದ್ದನು." ಆಯ್ಕೆ ಹೊಂದಿದ ಈ ರಾಜನು ಕೇವಲ ರಾಣಿಯನ್ನಷ್ಟೇ ಸನ್ಮಾನಿಸಿದನೆಂದಲ್ಲ, ಬದಲು ಅವನು ಕನಿಷ್ಠ ಜಾತಿಯ ಇತರ ರಾಣಿಯರನ್ನೂ ಸನ್ಮಾನಿಸಿದ್ದನು. ಅದೇ ರೀತಿ ಪಟ್ಟಾಭಿಷೇಕ ಸಮಾರಂಭದ ತರುವಾಯ ರಾಜನು ಪ್ರತಿಷ್ಠಿತ ಸ್ತ್ರೀಯರನ್ನು ವಂದಿಸುತ್ತಿದ್ದನು. ಇಡಿಯ ಜಗತ್ತಿನಲ್ಲಿಯೇ ಇದು ಸ್ತ್ರೀಯರ ಅತ್ಯುಚ್ಚವಾದ ಮಟ್ಟವಾಗಿದೆ. ಹೀಗಿದ್ದ ಮೇಲೆ ಯಾರು ಅವರ ಅವನತಿಗೆ ಹೊಣೆಗಾರರು? ಹಿಂದುಗಳ ಕಾನೂನುಗಳನ್ನು ತಯಾರಿಸುವ 'ಮನು' ಅದಕ್ಕೆ ಹೊಣೆಗಾರನು. ಇದನ್ನು ಬಿಟ್ಟರೆ ಬೇರೆ ಯಾವುದೇ ಉತ್ತರವಿಲ್ಲ. ಈ ಬಗೆಗೆ ಯಾವುದೇ ಸಂದೇಹ ಉಳಿಯಕೂಡದೆಂಬ

ದೃಷ್ಟಿಯಿಂದ, ಮನುವು ಸ್ತ್ರೀಯರಿಗಾಗಿ ತಯಾರಿಸಿದ ಹಾಗೂ ಮನುಸ್ಮೃತಿಯಲ್ಲಿ ಕಾಣುವ ಕೆಲವು ಕಾನೂನುಗಳನ್ನು ಉಲ್ಲೇಖಿಸುವೆನು.

೨..೨೧೩. ಪುರುಷರನ್ನು ಆಕರ್ಷಿಸಿ ಭ್ರಷ್ಟರನ್ನಾಗಿ ಮಾಡುವುದು ಸ್ತ್ರೀಯರ ವೈಶಿಷ್ಟ್ಯವಾಗಿದೆ. ಈ ಕಾರಣದಿಂದಾಗಿ ಜ್ಞಾನಿ ಜನರು ಸ್ತ್ರೀಯರ ಸಾನ್ನಿಧ್ಯದಲ್ಲಿ ಎಂದಿಗೂ ಎಚ್ಚರಗೇಡಿಗಳಾಗಿರುವುದಿಲ್ಲ.

೨.೨೧೪. ಸ್ತ್ರೀಯರು ಕೇವಲ ಮೂರ್ಖರನ್ನಷ್ಟೇ ವಾಮ ಮಾರ್ಗದತ್ತ ಕೊಂಡೊಯ್ಯುವರೆಂದಲ್ಲ, ಅವರು ಜ್ಞಾನಿ ಪುರುಷರನ್ನು ಕೂಡ ಕಾಮ ಮತ್ತು ಕ್ರೋಧಗಳ ಗುಲಾಮರನ್ನಾಗಿ ಮಾಡುತ್ತಾರೆ.

೨..೨೧೫, ಕಾಮ ವಾಸನೆಗಳು ಪ್ರಬಲವಾಗಿರುವುದರಿಂದ ಅವು ಜ್ಞಾನಿ ಪುರುಷನನ್ನು ಕೂಡ ಗುಲಾಮನನ್ನಾಗಿ ಮಾಡುತ್ತವೆ. ಹೀಗಾಗಿ ಯಾವನೂ ತನ್ನ ಮಾತೆ, ಭಗಿನಿ ಇಲ್ಲವೆ ಕನ್ನೆಯೊಡನೆ ಏಕಾಂತದಲ್ಲಿ ಇರಕೂಡದು.

೯.೧೪, ಸ್ತ್ರೀಯರು ಪುರುಷನ ಸೌಂದರ್ಯದತ್ತ ಗಮನವನ್ನು ನೀಡುವುದಿಲ್ಲ. ಅಥವಾ ಅವರ ವಯಸ್ಸಿನತ್ತಲೂ ನೋಡುವುದಿಲ್ಲ. ಸ್ತ್ರೀಯರು 'ಇವನು ಪುರುಷನು' ಎಂಬುದನ್ನಷ್ಟೇ ಮನದಲ್ಲಿ ಗಮನಿಸಿ ಆ ಪುರುಷರಿಗೆ ಸ್ವಾಧೀನರಾಗುತ್ತಾರೆ, - ಅವನು ಸುಂದರನಿರಲಿ ಇಲ್ಲವೆ ಕುರೂಪನಿರಲಿ.

೧: Jaiswal Indian Polity Part-II; P. 16.

೨ : Ibid P. 17.

೩ : Ibid P 82.

೯.೧೫. ಸ್ತ್ರೀಯರನ್ನು ಅದೆಷ್ಟೇ ಹದ್ದುಬಸ್ತಿನಲ್ಲಿ ಇಟ್ಟರೂ ಪುರುಷರ ಬಗೆಗೆ ಅವರಲ್ಲಿರುವ ಕಾಮವಾಸನೆ, ಅವರ ಚಂಚಲ ಸ್ವಭಾವ, ಹಾಗೆಯೇ ನಿಸರ್ಗದತ್ತವಾದ ಅವರ ನಿರ್ದಯತೆಗಳಿಂದಾಗಿ ಅವರು ತಮ್ಮ ಪತಿಗೆ ವಿಶ್ವಾಸಘಾತವನ್ನು ಕೂಡ ಮಾಡುತ್ತಾರೆ.

೯.೧೬. ನಿರ್ಮಾತೃವಾದ ಈಶ್ವರನು ಸ್ತ್ರೀಯರನ್ನು ನಿರ್ಮಿಸುವ ಕಾಲಕ್ಕೆ ಅವರ ರಚನೆಯನ್ನು ಹೇಗೆ ಮಾಡಿರುವನೆಂದರೆ, ಅವರನ್ನು ಹದ್ದುಬಸ್ತಿನಲ್ಲಿಡಲು ಪ್ರತಿಯೊಬ್ಬ ಪುರುಷನು ಪ್ರಯತ್ನಗಳ ಪರಾಕಾಷ್ಠೆಯನ್ನು ಮಾಡಬೇಕಿದೆ.

೯.೧೭. ಮನುವು ಕಾಮವಾಸನೆಯ ತೀವ್ರ ಇಚ್ಛೆ, ಶೃಂಗಾರ, ಅಪವಿತ್ರ ಕಾಮವಾಸನೆ, ಕ್ರೋಧ, ಅಪ್ರಾಮಾಣಿಕತೆ, ಮತ್ಸರ, ಮತ್ತು ದುರ್ವತ್ರನೆಗಳನ್ನು ಸ್ತ್ರೀಯರಿಗೆ ದಯಪಾಲಿಸಿರುವನು. ಮನುವಿನ ದೃಷ್ಟಿಯಿಂದ ಸ್ತ್ರೀ ಅದೆಷ್ಟು ನೀಚಳಾಗಿದ್ದಳೆಂಬುದು ಇದರಿಂದ ಕಂಡುಬರುತ್ತದೆ.

ಸ್ತ್ರೀಯರ ವಿರುದ್ಧವಾಗಿರುವ ಮನುವಿನ ಕಾನೂನುಗಳೆಂದರೆ ಅವನೀ ದೃಷ್ಟಿಕೋನದ ಪುರಾವೆ ಎನ್ನಿಸಿದೆ. ಯಾವುದೇ ಪರಿಸ್ಥಿತಿಯಲ್ಲೂ ಸ್ತ್ರೀಯರು ಸ್ವತಂತ್ರರಾಗಿ ಇರಕೂಡದು. ಮನುವಿನ ಅಭಿಪ್ರಾಯದಂತೆ :

೯.೨, ಪುರುಷರು ಹಗಲಿರುಳೆನ್ನದೆ ಕುಟುಂಬದ ಸ್ತ್ರೀಯರನ್ನು ತಮ್ಮ ಮೇಲೆ ಅವಲಂಬಿತರನ್ನಾಗಿ ಮಾಡಬೇಕು. ಅವರಲ್ಲಿ ವಿಷಯವಾಸನೆ ತಯಾರಾಗುತ್ತಿದ್ದರೆ ಅವರನ್ನು ಹದ್ದುಬಸ್ತಿನಲ್ಲಿ ಇಡಬೇಕು.

೯.೩. ಸ್ತ್ರೀಯು ಬಾಲ್ಯದಲ್ಲಿ ತನ್ನ ಪಿತ, ತಾರುಣ್ಯದಲ್ಲಿ ತನ್ನ ಪತಿ ಹಾಗೂ ಮುಪ್ಪಿನಲ್ಲಿ ತನ್ನ ಪುತ್ರರ ನಿಯಂತ್ರಣದಲ್ಲಿರುತ್ತಾಳೆ. ಅವಳೆಂದಿಗೂ ಸ್ವತಂತ್ರಳಾಗಿ ಇರಲಾರಳು.

೯.೫, ಸ್ತ್ರೀಯನ್ನು ವಿಶೇಷವಾಗಿ ಪಾಪಮಯ ಪ್ರವೃತ್ತಿಯಿಂದ ಪರಾವೃತ್ತಳನ್ನಾಗಿ ಮಾಡಲೇಬೇಕು. ಅವಳನ್ನು ಪರಾವೃತ್ತಗೊಳಿಸದಿದ್ದರೆ ಎರಡೂ ಕುಟುಂಬಗಳು ತೀರ ಚಿಲ್ಲರೆ ಕಾರಣಗಳಿಂದಲೂ ದುಃಖಕ್ಕೆ ಈಡಾಗುತ್ತವೆ.

೯.೬. ಎಲ್ಲ ಜಾತಿಗಳ ಎಲ್ಲಕ್ಕೂ ಹೆಚ್ಚು ಮಹತ್ವದ ಕರ್ತವ್ಯವೆಂದರೆ ದುರ್ಬಲರಾದ ಪತಿಗಳೂ ಕೂಡ ತಮ್ಮ ಪತ್ನಿಯರ ಸುರಕ್ಷೆಗಾಗಿ ಯತ್ನಗಳ ಪರಾಕಾಷ್ಠೆಯನ್ನು ಮಾಡತಕ್ಕದ್ದು.

೫.೧೪೭. ಮಗಳು, ಯುವತಿ ಇಲ್ಲವೆ ವೃದ್ಧೆಯು ಕೂಡ ತನ್ನ ಮನೆಯಲ್ಲಿ ಸ್ವತಂತ್ರವಾಗಿ ಏನನ್ನೂ ಮಾಡಕೂಡದು.

೫.೧೪೮, ಸ್ತ್ರೀಯು ಬಾಲ್ಯದಲ್ಲಿ ತನ್ನ ಪಿತ, ಯೌವನದಲ್ಲಿ ತನ್ನ ಪತಿ, ಅವನ ಮೃತ್ಯುವಿನ ತರುವಾಯ ತನ್ನ ಮಗನನ್ನು ಅವಲಂಬಿಸಿರತಕ್ಕದ್ದು.ಅವಳೆಂದಿಗೂ ಸ್ವತಂತ್ರಳಾಗಿ ಇರಲಾರಳು.

೫.೧೪೯, ಅವಳು ಪಿತ, ಪತಿ ಇಲ್ಲವೆ ಪುತ್ರರಿಂದ ಬೇರೆಯಾಗಲು ಯತ್ನಿಸಕೂಡದು. ಅವಳು ಅವರಿಂದ ಬೇರ್ಪಟ್ಟಳೆಂದರೆ (ತನ್ನ ಹಾಗೂ ತನ್ನ ಪತಿಯ) ಎರಡೂ ಬದಿಯ ಕುಟುಂಬಗಳಲ್ಲಿ ತಿರಸ್ಕರಣೀಯಳೆನ್ನಿಸುತ್ತಾಳೆ.

**ಸ್ತ್ರೀಗೆ ವಿವಾಹ ವಿಚ್ಛೇದನೆಯನ್ನು ನೀಡುವ ಅಧಿಕಾರವಿಲ್ಲ.**

೯.೪೫. ಪತಿಯು ಪತ್ನಿಯೊಂದಿಗೆ ಇರುವುದು ಬಂಧನಕಾರಕವಿದೆ. ಒಮ್ಮೆ ಮದುವೆಯಾದ ಬಳಿಕ ಪತ್ನಿಯು ಬೇರೆಯಾಗಲಾರಳು.

ಮನುವು ಸಂಸ್ಕಾರಗೊಂಡ ಮದುವೆಗಷ್ಟೇ ಗೌರವಯುತವಾದ ಮನ್ನಣೆಯನ್ನು ನೀಡಿದ್ದರಿಂದ ವಿಚ್ಛೇದನೆಗೆ ಅಪ್ಪಣೆಯನ್ನು ನೀಡಲಿಲ್ಲ. ಬಹಳಷ್ಟು ಜನ ಹಿಂದೂಗಳು ವಿವಾಹ ವಿಚ್ಛೇದನೆಗೆ ಸಂಬಂಧಿಸಿ ಮನುವಿನ ಕಾನೂನೇ ಏನೆಲ್ಲವೆಂದು ತಿಳಿದು ಅಲ್ಲಿಗೇ ನಿಲ್ಲುತ್ತಾರೆ. ಈ ವಿಚಾರದಿಂದ ಅವರು ತಮ್ಮ ವಿವೇಕವನ್ನು ಸಮಾಧಾನಪಡಿಸಿ, ಅದನ್ನು ಈಶ್ವರನದೆಂದೇ ಮನ್ನಿಸುತ್ತಾರೆ. ಆದರೆ ಇದು ಸತ್ಯದಿಂದ ಅದೆಷ್ಟೋ ದೂರದಲ್ಲಿದೆ. ವಿಚ್ಚೇದನೆಗೆ ವಿರೋಧಿಯಾದ ಮನುವಿನ ಕಾನೂನಿನ ಉದ್ದೇಶವು ತೀರ ಭಿನ್ನವಾದುದು. ಇಲ್ಲಿ ಪುರುಷನನ್ನು ಸ್ತ್ರೀಯ ಬಂಧನದಲ್ಲಿ ಇರಿಸುವುದಾಗಿರದೆ ಸ್ತ್ರೀಯನ್ನು ಪುರುಷನ ಬಂಧನದಲ್ಲಿ ಇರಿಸುವುದಲ್ಲದೆ ಪುರುಷನನ್ನು ಮಾತ್ರ ಸ್ವತಂತ್ರವಾಗಿ ಬಿಟ್ಟುಬಿಡುವ ಪ್ರಕ್ರಿಯೆ ಇದಾಗಿತ್ತು

ಪುರುಷನು ಪತ್ನಿಯನ್ನು ಬಿಟ್ಟುಬಿಡುವ ಬಗೆಗೆ ಮನುವು ಯಾವುದೇ ಬಗೆಯ ಬಂಧನವನ್ನು ಹಾಕಿಲ್ಲ. ನಿಜ ಹೇಳಬೇಕೆಂದರೆ ಅವನು (ಮನುವು) ಪತ್ನಿಯನ್ನು ಪೂರ್ತಿಯಾಗಿ ತ್ಯಜಿಸುವ ಸ್ವಾತಂತ್ರವನ್ನು ಪುರುಷನಿಗೆ ನೀಡಿದನು. ಇಷ್ಟೇ ಅಲ್ಲದೆ ಅವನು ಅವಳನ್ನು ಮಾರುವ ಅಧಿಕಾರವನ್ನೂ ನೀಡಿದನು. ಆದರೆ ಅವನು ಪತ್ನಿಯನ್ನು ಸ್ವತಂತ್ರಳಾಗುವುದರಿಂದ ಪೂರ್ತಿಯಾಗಿ ತಡೆಯುತ್ತಾನೆ. ಮನು ಏನೆನ್ನುತ್ತಾನೆ, ಎಂಬುದನ್ನು ನೋಡಿ :

೯.೪೬. ಪತ್ನಿಯನ್ನು ಮಾರಿದ ತರುವಾಯ ಇಲ್ಲವೆ ಅವಳನ್ನು ಅಸ್ವೀಕರಿಸಿದ ತರುವಾಯವೂ ಅವಳು ಪತಿಯ ಬಂಧನದಿಂದ ಮುಕ್ತಳಾಗುವುದಿಲ್ಲ.

ಇದರ ಅರ್ಥ ಹೀಗಿದೆ : ಪತಿಯು ಪತ್ನಿಯನ್ನು ಮಾರಿದರೆ ಇಲ್ಲವೆ ಅವಳನ್ನು ಅಸ್ವೀಕರಿಸಿದರೂ ಕೂಡ ಅವಳು ಅದೆಂದಿಗೂ ಇನ್ನೊಬ್ಬನ (ಅವಳನ್ನು ಕೊಂಡುಕೊಂಡವನ ಅಥವಾ ಅವಳಿಗೆ ಆಶ್ರಯವನ್ನು ಇತ್ತವನ) ಕಾನೂನುಬದ್ಧ ಪತ್ನಿಯಾಗಲಾರಳು. ಇದರಷ್ಟು ಕ್ರೂರವಾದುದು ಇನ್ನೇನೂ ಇರಲು ಸಾಧ್ಯವಿಲ್ಲ. ಕಾನೂನನ್ನು ತಯಾರಿಸುವಾಗ ಮನುವು ನ್ಯಾಯ, ಅನ್ಯಾಯಗಳ ಅರಿವನ್ನು ಇರಿಸಿಕೊಳ್ಳುವ ಬಗೆಗೆ ಚಿಂತಿಸುತ್ತಿರಲಿಲ್ಲ. ಅವನು, ಸ್ತ್ರೀಯರು ಬೌದ್ಧ ಕಾಲದಲ್ಲಿ ದೊರೆತ ತಮ್ಮ ಸ್ವಾತಂತ್ರಕ್ಕೆ ಎರವಾಗುವಂತೆ ಮಾಡಬಯಸಿದ್ದನು. ಮನು ಅವಳಿಗೆ ದೊರೆತ ಸ್ವಾತಂತ್ರದಿಂದ ನೊಂದುಕೊಂಡಿದ್ದನು. ಹೀಗಾಗಿ ಅವನು ಅದನ್ನು ಪೂರ್ತಿ ನಿಷೇಧಿಸಿ, ಅವಳು ತನಗೆ ಲಭಿಸಿದ ಸ್ವಾತಂತ್ರಕ್ಕೆ ಎರವಾಗುವಂತೆ ಮಾಡಿದನು.

**ಮನುವು ಸಂಪತ್ತಿನ ಸಂದರ್ಭದಲ್ಲಿ ಪತ್ನಿಯನ್ನು ಗಲಾಮಳ ಮಟ್ಟಕ್ಕೆ ತಂದನು.**

೯.೪೧೬ ಪತ್ನಿ, ಪುತ್ರ ಮತ್ತು ಗುಲಾಮ ಈ ಮೂವರಿಗೂ ಯಾವುದೇ ಬಗೆಯ ಸಂಪತ್ತನ್ನು ಸಂಪಾದಿಸುವ ಹಕ್ಕಿಲ್ಲ. ಅವರು ಗಳಿಸಿದ ಸಂಪತ್ತು ತಮ್ಮ ಒಡೆಯರಿಗೆ ಸೇರಿದ್ದು. ಪತಿಯು ಸಂಯುಕ್ತ ಕುಟುಂಬದವನಾಗಿದ್ದು ಪತ್ನಿಯು ವಿಧವೆಯಾದರೆ ಮನುವು ಒಬ್ಬ ಪೋಷಕನನ್ನು ಹೊಂದಲು ಅಪ್ಪಣೆಯನ್ನು ಅವಳಿಗೆ ಕೊಡುತ್ತಾನೆ. ಪತಿಯು ಕುಟುಂಬದಿಂದ ವಿಭಕ್ತನಾಗಿದ್ದರೆ ಅವಳನ್ನು ಅವನ ಸೊತ್ತಿನ ಭಾಗವೆಂದು ಪರಿಗಣಿಸಲಾಗುತ್ತದೆ. ಆದರೆ ಮನು ಸಂಪತ್ತಿನ ಮೇಲಿನ ಅವಳ ವರ್ಚಸ್ಸಿಗೆ ಎಂದಿಗೂ ಒಪ್ಪಿಗೆಯನ್ನು ಕೊಡುವುದಿಲ್ಲ.

ಮನುವಿನ ಕಾನೂನಿನಂತೆ ಸ್ತ್ರೀಯು ದೇಹದಂಡಕ್ಕೆ ಅರ್ಹಳು. ಹಾಗೆಯೇ, ಮನು ಪತ್ನಿಯನ್ನು ಕೊಲ್ಲುವ ಅಧಿಕಾರವನ್ನು ಪತಿಗೆ ಕೊಡುತ್ತಾನೆ.

೮.೨೯೯, ಪತ್ನಿ, ಪುತ್ರ, ಗುಲಾಮ, ವಿದ್ಯಾರ್ಥಿ ಮತ್ತು ಸ್ವಂತದ ತಮ್ಮಂದಿರು ಏನಾದರೂ

ತಪ್ಪು ಮಾಡಿದರೆ ಅವರನ್ನು ಹಗ್ಗ ಇಲ್ಲವೆ ಬಿದಿರಿನಿಂದ ಹೊಡೆಯಲು ಸಾಧ್ಯ.

**ಮನುವಿನ ಹೇಳಿಕೆಯಂತೆ, ಸ್ತ್ರೀಗೆ ಜ್ಞಾನಾರ್ಜನೆಯ ಅಧಿಕಾರವಿಲ್ಲ.**

ಮನುವು ವೇದಗಳನ್ನು ಕಲಿಯುವ ಅವಳ ಅಧಿಕಾರವನ್ನು ಪೂರ್ತಿ ನಿಷೇಧಿಸಿರುವನು.
೨.೬೬ ಸ್ತ್ರೀಯರೂ ಸಂಸ್ಕಾರಗಳನ್ನು ಮಾಡಿಸಿಕೊಳ್ಳುವುದು ಅಗತ್ಯದ್ದು. ಅವನ್ನು ಮಾಡಬೇಕು. ಆದರೆ ವೇದಮಂತ್ರಗಳಿಲ್ಲದೆ ಅವನ್ನು ಮಾಡಬೇಕು.

ಬ್ರಾಹ್ಮಣರ ತತ್ತ್ವಜ್ಞಾನದ ಪ್ರಕಾರ ಯಜ್ಞವನ್ನು ಮಾಡುವುದು ಧರ್ಮದ ಮೂಲ ಆತ್ಮವೆನ್ನಿಸಿದೆ. ಮನು ಸ್ತ್ರೀಯರನ್ನು ಯಜ್ಞ ಮಾಡದಂತೆ ತಡೆಯುತ್ತಾನೆ. ಅವನು ಹೀಗೆಂದು ಕಾನೂನನ್ನು ಮಾಡಿರುವನು:

೬.೩೬-೩೭ ಸ್ತ್ರೀಯು, ವೇದಗಳು ನಿರ್ಧರಿಸಿದ ದೈನಂದಿನ ಯಜ್ಞಯಾಗಾದಿಗಳನ್ನು ಮಾಡಬಾರದು. ಹಾಗೆ ಮಾಡಿದರೆ ಅವಳು ಪಾಪಯೋನಿಗೆ ಹೋಗುತ್ತಾಳೆ.

ಸ್ತ್ರೀಗೆ ಈ ಬಗೆಯ ಯಜ್ಞಯಾಗಾದಿಗಳನ್ನು ಮಾಡಲು ಸಾಧ್ಯವಾಗಬಾರದೆಂದು ಮನುವು ಅವಳನ್ನು ಬ್ರಾಹ್ಮಣರ ನೆರವು ಹಾಗೂ ಉಪಯೋಗವನ್ನು ಪಡೆದುಕೊಳ್ಳದಂತೆ ತಡೆಹಿಡಿದಿರುವನು.

೪.೨೦೫-೨೦೬. ಬ್ರಾಹ್ಮಣರು, ಸ್ತ್ರೀಯು ಯಜ್ಞವನ್ನು ಮಾಡಿದ ಬಳಿಕ ನೀಡಿದ ಅನ್ನವನ್ನು ಸ್ವೀಕರಿಸಕೂಡದು. ಸ್ತ್ರೀಯರು ಮಾಡಿದ ಯಜ್ಞವು ಅಮಂಗಲವಾಗಿದ್ದು ಅದು ದೇವರಿಗೆ ಒಪ್ಪಿಗೆಯಾಗದು. ಹೀಗಾಗಿ ಅದನ್ನು ತಪ್ಪಿಸಬೇಕು. ಕೊನೆಯಲ್ಲಿ, ಮನುವು ಸ್ತ್ರೀಯೆದುರು ಇರಿಸಿದ ಜೀವನದ ಗುರಿಯನ್ನು ಅವನ ಮಾತುಗಳಲ್ಲಿಯೇ ಹೇಳುವುದು ಸೂಕ್ತ :

೫.೧೫೧. ಪಿತನು ಅಥವಾ ಪಿತನ ಒಪ್ಪಿಗೆಯಿಂದ ಅವನ ಸೋದರನು ಅವಳನ್ನು ಯಾವ ಪುರುಷನಿಗೆ ದಾನವಾಗಿ ಕೊಟ್ಟಿರುವನೋ ಆ ಪುರುಷನು ಜೀವಿಸಿರುವವರೆಗೆ ಅವಳು ಅವನ ಅಪ್ಪಣೆಯನ್ನೇ ಪಾಲಿಸತಕ್ಕದ್ದು, ಅವನು ಮರಣ ಹೊಂದಿದ ತರುವಾಯ ಅವಳು ಅವನ ಸ್ಮೃತಿಗೆ ಕೂಡ ಅವಮಾನವನ್ನು ಮಾಡಕೂಡದು.

೫.೧೫೪. ತನ್ನ ಪತಿ ಅದೆಷ್ಟೇ ದುರ್ಗುಣಿ, ವ್ಯಭಿಚಾರಿ ಅಥವಾ ಸದ್ಗುಣವಿರಹಿತವಾಗಿದ್ದರೂ ಪ್ರಾಮಾಣಿಕಳಾದ ಪತ್ನಿಯು ಅವನನ್ನು ಈಶ್ವರ ಸಮಾನನೆಂದು ಬಗೆದು ಅವನನ್ನು ಸತತವಾಗಿ ಪೂಜಿಸಬೇಕು.

೫.೧೫೫. ಸ್ತ್ರೀಯು ತನ್ನ ಪತಿಯ ಹೊರತು ಯಜ್ಞ, ಹರಕೆ, ಉಪವಾಸಗಳನ್ನು ಕೈಕೊಳ್ಳಕೂಡದು. ಅವಳು ಪತಿಯ ಆಜ್ಞೆಯನ್ನು ಪಾಲಿಸುತ್ತಿದ್ದರೆ, ಕೇವಲ ಇದೊಂದು ಕಾರಣದಿಂದಲೇ ಅವಳು ಸ್ವರ್ಗಲೋಕದಲ್ಲಿ ಗೌರವಕ್ಕೆ ಪಾತ್ರಳೆನ್ನಿಸುತ್ತಾಳೆ. ತದನಂತರ ಮನುವು ಸ್ತ್ರೀಯರಿಗಾಗಿ ಮಾಡಿದ ಮೂಲಭೂತವಾದ ವಿಶಿಷ್ಟ ಕಾನೂನುಗಳಿವೆ :

೫.೧೫೩. ಯಾವ ಪುರುಷನು ಪವಿತ್ರ ಮಂತ್ರೋಚ್ಚಾರದೊಂದಿಗೆ ಅವಳೊಡನೆ ವಿವಾಹಬದ್ಧನಾಗುವನೋ ಅವನು ಅನುಕೂಲ ಹಾಗೂ ಪ್ರತಿಕೂಲ ಪರಿಸ್ಥಿತಿಗಳಲ್ಲದೆ ಈ ಜನ್ಮ ಹಾಗೂ ಮುಂದಿನ ಜನ್ಮದಲ್ಲಿ ಸತತವಾಗಿ ಅವಳಿಗೆ ಸುಖದ ಜನಕನೆನ್ನಿಸುತ್ತಾನೆ.

೫.೧೫೦, ಅವಳು ಯಾವಾಗಲೂ ಸಂತೋಷದಿಂದ ಇರಬೇಕು, ಮನೆಯ ಕೆಲಸಗಳು ಹಾಗೂ



ಆಡಳಿತೆಯಲ್ಲಿ ಕುಶಲಳಾಗಿರತಕ್ಕದ್ದು, ಎಚ್ಚರದಿಂದ ಪಾತ್ರೆಗಳನ್ನು ತೊಳೆಯಬೇಕು, ಮಿತವ್ಯಯಿಯಾಗಿರಬೇಕು. ಹಿಂದುಗಳು ಇದನ್ನು ಸ್ತ್ರೀಯರಿಗಾಗಿ ಇರುವ ಒಂದು ಉದಾತ್ತವಾದ ಆದರ್ಶವೆಂದು ಬಗೆಯುತ್ತಾರೆ ! ! !

'ಸ್ತ್ರೀ ಹತ್ಯೆ' ಯು ಕೇವಲ ಒಂದು ಉಪಪಾತಕ, ಅಂದರೆ ಚಿಲ್ಲರೆ ಅಪರಾಧವಾಗಿದೆಯೆಂದು ಮನುವು ಒಂದು ಹೊಸ ನಿಯಮವನ್ನು ಮಾಡಿ, ಸ್ತ್ರೀಯರ ನಿರ್ಬಲೀಕರಣದ ಕಟ್ಟಡದ ಮೇಲೆ ಕಳಸವನ್ನು ಏರಿಸಿರುವನು.

೧೧.೬೭. ಸ್ತ್ರೀ, ಶೂದ್ರ, ವೈಶ್ಯ, ಕ್ಷತ್ರಿಯ ಹಾಗೂ ನಿರೀಶ್ವರವಾದಿಗಳ ತಲೆದಂಡ ಹಾಗೂ ಮದ್ಯಪಾನಗಳೆಲ್ಲ ಚಿಲ್ಲರೆ ಅಪರಾಧಗಳು.

ಮನುವು ಶೂದ್ರ, ವೈಶ್ಯ ಹಾಗೂ ಕ್ಷತ್ರಿಯರ ಹತ್ಯೆಗಳು ಕೇವಲ ಉಪಪಾತಕಗಳೆಂದು ಏಕೆ ಹೇಳಿದನೆಂಬುದು ಯಾರಿಗಾದರೂ ಸಹಜವಾಗಿ ಅರ್ಥವಾದೀತು. ಬ್ರಾಹ್ಮಣನು ಇವರೆಲ್ಲರಿಗಿಂತಲೂ ಶ್ರೇಷ್ಠನು. ಅವನ ಹತ್ಯೆ ಮಾತ್ರ ಮಹಾಪಾತಕ ಎನ್ನಿಸುತ್ತದೆ, ಎಂಬುದನ್ನು ಸ್ಥಾಪಿಸುವ ಯತ್ನ ಇದಾಗಿತ್ತು. ಆದರೆ ಅವನು ಸ್ತ್ರೀಯರಿಗಾಗಿ ಅಂಥ ನಿಯಮಗಳನ್ನೇ ಏಕೆ ಬಳಸಿದನು? ಅದಕ್ಕಿರುವ ಒಂದೇ ಒಂದು ಕಾರಣವೆಂದರೆ, ಮನುವಿನ ದೃಷ್ಟಿಯಿಂದ 'ಸ್ತ್ರೀ' ಯು ಯಾವುದೇ ಬೆಲೆಯಿಲ್ಲದ ವಸ್ತುವಾಗಿದ್ದಳು.

ಮೇಲಿನ ಉದಾಹರಣೆಗಳ ವೈಶಿಷ್ಟ್ಯಗಳಿಂದ, ಮನುವು ಭಾರತೀಯ ಸ್ತ್ರೀಯರ ಅವನತಿಗೆ ಕಾರಣನಾಗಿದ್ದನೆಂಬ ಬಗೆಗೆ ಯಾರಾದರೂ ಸಂದೇಹಪಡಲು ಸಾಧ್ಯವೆ? ಬಹಳಷ್ಟು ಜನರಿಗೆ ಈ ಸಂಗತಿಗಳ ಅರಿವು ಇದೆ. ಆದರೆ ಎರಡು ಸಂಗತಿಗಳು ಅವರಿಗೆ ಗೊತ್ತಿಲ್ಲದಿರುವುದು ಕಂಡುಬರುತ್ತದೆ. ಇದರಲ್ಲಿ ಅಂಥ ವಿಶೇಷವೇನಿದೆ, ಎನ್ನುವುದು ಅವರಿಗೆ ತಿಳಿದಿಲ್ಲ. ಮನುವಿನ ಕಾನೂನಿನಲ್ಲಿ ಸ್ತ್ರೀಯರನ್ನು ಕುರಿತಾಗಿ ಹೊಸದು ಅಥವಾ ಆಶ್ಚರ್ಯಕರವಾದುದೇನೂ ಇಲ್ಲ. ಭಾರತದಲ್ಲಿ ಬ್ರಾಹ್ಮಣೀ ತತ್ತ್ವಜ್ಞಾನದ ಉದಯವಾದಂದಿನಿಂದ ಅವರ ದೃಷ್ಟಿಕೋನವು ಇದೇ ಬಗೆಯಾಗಿದೆ. ಮನುವಿನ ಮೊದಲು ಅದು ಬರೀ ಸಾಮಾಜಿಕ ಸಿದ್ಧಾಂತವಾಗಿತ್ತು. ಮನುವು ಈ ಸಾಮಾಜಿಕ ಸಿದ್ಧಾಂತವನ್ನು ರಾಜ್ಯದ ಕಾನೂನಾಗಿ ಪರಿವರ್ತಿಸುವ ಕೆಲಸವನ್ನು ಮಾಡಿದನು. ಎರಡನೆಯ ಸಂಗತಿ ಎಂದರೆ, ಮನುವು ಸ್ತ್ರೀಯರ ಮೇಲೆ ನಿರ್ಬಲೀಕರಣದ ಕಾನೂನನ್ನು ಏಕೆ ಹೇರಿದನೆಂಬುದು ಅವರಿಗೆ ತಿಳಿಯದಿರುವುದು. ಆರ್ಯ ಸಮಾಜದಲ್ಲಿ ಶೂದ್ರರು ಹಾಗೂ ಸ್ತ್ರೀಯರು ಎರಡು ಮಹತ್ವದ ಘಟಕಗಳಾಗಿದ್ದರು. ಅವರು ಬ್ರಾಹ್ಮಣೀ ಧರ್ಮದ ಮೂಲಭೂತ ತತ್ವಗಳಿಗೆ ಸಿಡಿಮದ್ದನ್ನು ಇಕ್ಕಿ ತಂಡತಂಡಗಳಲ್ಲಿ ಬೌದ್ಧ ಧಮ್ಮವನ್ನು ಪ್ರವೇಶಿಸಲು ಹೋಗುತ್ತಿದ್ದರು. ಮನುವು, ಸ್ತ್ರೀಯರ ಈ ಅಲೆಗಳು ಬೌದ್ಧ ಧಮ್ಮದತ್ತ ಹೋಗುವುದನ್ನು ತಡೆಯ ಬಯಸಿದ್ದನು.

ಇದಕ್ಕಾಗಿ ಮನುವು ಸ್ತ್ರೀಯರ ಮೇಲೆ ನಿರ್ಬಲೀಕರಣದ ಕಾನೂನುಗಳನ್ನು ಹೇರಿ ಖಾಯಮ್ಮಾಗಿ ಅವರನ್ನು ಹೆಳವರನ್ನಾಗಿ ಮಾಡಿದನು. ಈ ಬಗೆಗೆ ಸಂದೇಹವುಳ್ಳವರು ಮನುಸ್ಮೃತಿಯ ಈ ಕೆಳಗಿನ ಅಪ್ಪಣೆಗಳನ್ನು ಕುರಿತು ಯೋಚಿಸಬೇಕು :

೫.೮೮, ಮಿಶ್ರ ವಿವಾಹ, ಸಂನ್ಯಾಸಿ ಹಾಗೂ ಆತ್ಮಹತ್ಯೆಯನ್ನು ಮಾಡಿಕೊಂಡ ವ್ಯಕ್ತಿಯಿಂದ ಹುಟ್ಟಿ ಬಂದವರನ್ನು, ಮೃತ್ಯು ಮತ್ತು ತದನಂತರದ ಸಂಸ್ಕಾರಗಳನ್ನು ಸಾಮಾನ್ಯ ವ್ಯಕ್ತಿಗಳ ಮೃತ್ಯು ಹಾಗೂ ಅಂತ್ಯಸಂಸ್ಕಾರಗಳ ಬಗೆಯಲ್ಲಿ ಮಾಡುವುದನ್ನು ನಿಷೇಧಿಸಲಾಗಿದೆ.

೫.೮೯, ನಿರೀಶ್ವರವಾದಿ (Heretic Sect) ಸಂಪ್ರದಾಯವನ್ನು ಪ್ರವೇಶಿಸಿದ, ಸ್ವಚ್ಛಂದರಾಗಿ



ನಡೆದುಕೊಳ್ಳುವ, ಗರ್ಭದಲ್ಲಿರುವ ಮಗು ಹಾಗೂ ತನ್ನ ಪತಿಗೆ ನೋವನ್ನು ಉಂಟುಮಾಡುವ, ಅಲ್ಲದೆ ಮದ್ಯಪಾನವನ್ನು ಮಾಡುವ ಸ್ತ್ರೀಯರಿಗೂ ಮೇಲಿನ ಸಂಸ್ಕಾರಗಳನ್ನು ನಿರಾಕರಿಸಬೇಕು.

(೧) ಸಂನ್ಯಾಸಿ ಪ್ರವೃತ್ತಿಯವರು ಮತ್ತು (೨) ನಿರೀಶ್ವರವಾದಿ ಸಂಪ್ರದಾಯದಲ್ಲಿ ಪ್ರವೇಶವನ್ನು ಪಡೆದ ಸ್ತ್ರೀಯರನ್ನು ಗಮನದಲ್ಲಿ ಇರಿಸಿಕೊಂಡು ಉಳಿದ ಅಪ್ಪಣೆಗಳಲ್ಲದೆ ಈ ಅಪ್ಪಣೆಗಳನ್ನು ಬೇಕೆಂದೇ ಮಾಡಲಾಗಿದೆ. ಈ ಅಪ್ಪಣೆಯಲ್ಲಿ ಸಂನ್ಯಾಸಿ ಪದವು ಪರಿವ್ರಾಜಕರು, ಅಂದರೇನೆ ತಮ್ಮ ಮನೆಯನ್ನು ತೊರೆದು ಸಂನ್ಯಾಸವನ್ನು ಸ್ವೀಕರಿಸಿದವರನ್ನು ಕುರಿತಾಗಿದೆ. ಮನುವು ನಿರೀಶ್ವರವಾದಿ ಸಂಪ್ರದಾಯವನ್ನು ಉಲ್ಲೇಖಿಸುವಾಗ ಬೌದ್ಧ ಧರ್ಮವೇ ಅವನ ಮನದಲ್ಲಿತ್ತು, ಎನ್ನುವಲ್ಲಿ ಯಾವುದೇ ಬಗೆಯ ಸಂದೇಹವಿಲ್ಲ. ಇದರಿಂದ ಸ್ಪಷ್ಟವಾಗುವ ಸಂಗತಿ ಎಂದರೆ, ಯಾವ ಸ್ತ್ರೀಯಾಗಲಿ ಇಲ್ಲವೆ ಸಂನ್ಯಾಸಿಯಾಗಲಿ ನಿರೀಶ್ವರವಾದಿ ಸಂಪ್ರದಾಯವನ್ನು ಪ್ರವೇಶಿಸಿದ್ದರೆ ಅವರ ಮೇಲೆ ಅಂತ್ಯ ಇಲ್ಲವೆ ಬೇರೆ ಯಾವುದೇ ಬಗೆಯ ಉತ್ತರ ಸಂಸ್ಕಾರಗಳನ್ನು ಮಾಡಲಾಗುವುದಿಲ್ಲ, ಇಷ್ಟೇ ಅಲ್ಲದೆ ಬೌದ್ಧ ಧರ್ಮವನ್ನು ಪ್ರವೇಶಿಸಿದ ಪುರುಷ ಇಲ್ಲವೆ ಸ್ತ್ರೀಯ ಕುಟುಂಬದ ಇತರ ಸದಸ್ಯರ ಅಂತ್ಯ ಮತ್ತು ಉತ್ತರ ಸಂಸ್ಕಾರಗಳನ್ನು ಮಾಡುವುದನ್ನು ನಿಷೇಧಿಸಲಾಗಿದೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಅಂಥವರು ತಮ್ಮ ಕುಟುಂಬದೊಡನೆ ನಂಟನ್ನು ಹೊಂದಿದವರಲ್ಲ ಹಾಗೂ ಅವರು ಆ ಕುಟುಂಬದ ಘಟಕರೇ ಅಲ್ಲವೆಂಬ ನಡುವಳಿಕೆಯು ಅವರಿಗೆ ದೊರೆಯಬೇಕೆಂದು ಮನು ಬಯಸಿದ್ದನು. ಮನುವು ಬೌದ್ಧ ಧರ್ಮದ ತೀವ್ರ ವಿರೋಧಕನಾಗಿದ್ದನು. ಸ್ತ್ರೀಯರ ಮೇಲೆ ಹೇರಲಾದ ಹಲವು ಅನ್ಯಾಯಗಳ ಮರ್ಮವಿದು. ತನ್ನ ಮನೆಯನ್ನು ಬೌದ್ಧ ತತ್ತ್ವಜ್ಞಾನದ ಆಕ್ರಮಣದಿಂದ ಸುರಕ್ಷಿತವಾಗಿ ಇರಿಸುವುದಿದ್ದರೆ ಸ್ತ್ರೀಯನ್ನು ಬಂಧನದಲ್ಲಿ ಇರಿಸುವುದು ಆವಶ್ಯಕವೆಂಬುದು ಅವನಿಗೆ ತಿಳಿದಿತ್ತು. ಹೀಗಾಗಿ

ಅವನು ಹಾಗೆ ಮಾಡಿದನು. ಭಾರತೀಯ ಸ್ತ್ರೀಯ ಅವನತಿ ಹಾಗೂ ನಶಿಸುವಿಕೆ ಕಾರಣವಾದ ದೋಷವು ಬುದ್ಧನದಾಗಿರದೆ ಸಂಪೂರ್ಣವಾಗಿ ಮನುವಿನದಾಗಿದೆ.

ಈ ಕೆಲವು ಪುಟಗಳಲ್ಲಿ ಹಿಂದೂ ಸ್ತ್ರೀಯರ ಉತ್ಥಾನ ಹಾಗೂ ಪತನಗಳನ್ನು ಕುರಿತು ವಿವರಿಸಲು. ಅವರ ಅವನತಿಯ ಜನಕನು ಯಾರು ಹಾಗೂ ಅವನು ಇದೆಲ್ಲವನ್ನು ಏಕೆ ಮಾಡಿದನೆಂಬುದನ್ನು ಕುರಿತು ವಿಶದೀಕರಿಸಲು ಯತ್ನಿಸಿರುವೆನು. ಪೂರ್ವಗ್ರಹವಿಲ್ಲದ ಹಾಗೂ ನಿಃಪಕ್ಷಪಾತಿಗಳಾದ ಜನರು ಇದೆಲ್ಲ ದುರಂತಕ್ಕೆ ಬುದ್ಧನನ್ನು ಹೊಣೆಗಾರನನ್ನಾಗಿ ಮಾಡಲು ಬಾರದೆನ್ನುವುದನ್ನು ಅರಿತುಕೊಳ್ಳುವರೆಂದು ನಿರೀಕ್ಷಿಸುತ್ತೇನೆ. ಬುದ್ಧನು ಸ್ತ್ರೀಯರಿಗೆ ಪ್ರತಿಷ್ಠೆ ಹಾಗೂ ಅವರಿಗೆ ಪುರುಷರಿಗೆ ಸರಿಸಮನಾದ ಮಟ್ಟವನ್ನು ದೊರಕಿಸಿ ಕೊಡಲು ಹೆಣಗಿದನು ! !

ಅನುವಾದಕ : ಸಂಪಾದಕ ಮಂಡಳ, ಡಾ. ಕೃಷ್ಣಾ ಎಮ್. ಕಾಂಬಳೆ ಮತ್ತು ಪ್ರಾ. ಆನಂದ ಆರ್. ಗಜವೆ.

## ೧೦೯. ಹಿಂದೂ ಸಮಾಜದ ವರ್ಗ ವರ್ಗಗಳ ಉಚ್ಚ ನೀಚತೆ ಮತ್ತು

**ಲಿಂಗ ಭೇದಗಳನ್ನು ಉಳಿಸಿಕೊಂಡು ಸುಧಾರಣೆಯ ಯಾವುದೇ**

**ಕಾನೂನನ್ನು ತಯಾರಿಸುವುದೆಂದರೆ ಹೊಲಸನ್ನು ತೆಗೆಯದೆ ಅದರ**

**ಮೇಲೆಯೇ ಇಸ್ಪೀಟುಗಳ ಬಂಗ್ಲೆಯನ್ನು ಕಟ್ಟಿದಂತೆ !**

ನಾನೀಗ ಸಚಿವಸಂಪುಟದಲ್ಲಿ ಸಚಿವನಾಗಿ ಉಳಿದಿಲ್ಲ, ಎಂಬುದು ಲೋಕಸಭೆಗೆ ಅಧಿಕೃತವಾಗಿ ಅಲ್ಲದಿದ್ದರೂ ಅನಧಿಕೃತವಾಗಿ ತಿಳಿದಿದೆ. ಗುರುವಾರ ತಾ. ೨೭ ಸೆಪ್ಟೆಂಬರ್ ೧೯೫೧ರಂದು ನನ್ನ ಸಚಿವ ಪದದ ರಾಜೀನಾಮೆಯನ್ನು ಪ್ರಧಾನಮಂತ್ರಿಯವರಿಗೆ ಸಲ್ಲಿಸಿ, ಕೂಡಲೇ ಅದನ್ನು ಸ್ವೀಕರಿಸಿ ನನ್ನನ್ನು ಈ ಹೊಣೆಯಿಂದ ಬಿಡುಗಡೆ ಮಾಡಿರೆಂದು ಅವರನ್ನು ಕೋರಿದೆ. ಪ್ರಧಾನಮಂತ್ರಿಯವರು ದಯೆತೋರಿ ಮಾರನೆಯ ದಿನವೇ ಅದನ್ನು ಸ್ವೀಕರಿಸಿದರು. ನಾನು ಶುಕ್ರವಾರ ತಾರೀಖು ೨೮ರಿಂದ ಸಚಿವನಾಗಿದ್ದೆ. ಇದಕ್ಕೆ ಕಾರಣವೆಂದರೆ, ಪ್ರಧಾನ ಮಂತ್ರಿಯವರು ಲೋಕಸಭೆಯ ಪ್ರಸ್ತುತ ಅಧಿವೇಶನ ಮುಗಿಯುವವರೆಗೆ ನಾನು ಸಚಿವನಾಗಿ ಮುಂದುವರೆಯಬೇಕೆಂದು ಕೋರಿದ್ದರು.

ಸಂವಿಧಾನದ ನಡೆದು ಬಂದ ಸಂಪ್ರದಾಯದಂತೆ ಪ್ರಧಾನಮಂತ್ರಿಯವರ ಕೋರಿಕೆಯನ್ನು ಮನ್ನಿಸುವುದು ನನ್ನ ಕರ್ತವ್ಯವಾಗಿತ್ತು.

ಒಬ್ಬ ಸಚಿವನು ತನ್ನ ಸಚಿವ ಪದಕ್ಕೆ ರಾಜೀನಾಮೆಯನ್ನು ನೀಡಿದರೆ ಅವನು ಅದನ್ನು ಕುರಿತು ಲೋಕಸಭೆಯಲ್ಲಿ ತನ್ನ ನಿರೂಪಣೆಯನ್ನು ಮಾಡಬೇಕೆಂಬ ಏರ್ಪಾಡನ್ನು ಲೋಕಸಭೆಯ ನಿಯಮಗಳಲ್ಲಿ ಮಾಡಲಾಗಿದೆ. ನಾನು ಸಚಿವನಾಗಿದ್ದಾಗ ಹಲವು ಜನ ಸಚಿವರು ರಾಜೀನಾಮೆ ನೀಡಿರುವರು. ರಾಜೀನಾಮೆಯನ್ನು ನೀಡುವ ಸಚಿವರು ತಮ್ಮ ನಿರೂಪಣೆಯನ್ನು ಹೇಗೆ ಸಲ್ಲಿಸಬೇಕೆಂಬ ಬಗೆಗೆ ಸೂಕ್ತವಾದ ಸಂಪ್ರದಾಯ ಇನ್ನೂ ತಯಾರಾಗಿಲ್ಲ. ಈವರೆಗೆ ರಾಜೀನಾಮೆಯನ್ನು ಸಲ್ಲಿಸಿದ ಕೆಲವು ಜನ ಸಚಿವರು ಲೋಕಸಭೆಯಲ್ಲಿ ನಿರೂಪಣೆಯನ್ನು ಮಾಡದೆ ಹಾಗೆಯೇ ಹೊರಟುಹೋದರೆ, ಇನ್ನು ಕೆಲವರು ನಿರೂಪಣೆಯನ್ನು ಮಾಡಿದ ತರುವಾಯ ಹೋದರು. ಈ ಬಗೆಗೆ ನಾನೇನು ಮಾಡಬೇಕೆಂಬ ಬಗೆಗೆ ನನ್ನಿಂದ ಬೇಗನೆ ತೀರ್ಮಾನವನ್ನು ಕೈಗೊಳ್ಳಲು ಆಗಲಿಲ್ಲ. ಇಡಿಯ ಪರಿಸ್ಥಿತಿಯನ್ನು ಕುರಿತು ಯೋಚಿಸಿ, ತನ್ನ ಹುದ್ದೆಗೆ ರಾಜೀನಾಮೆಯನ್ನು ಸಲ್ಲಿಸುವ ಸದಸ್ಯನು ಲೋಕಸಭೆಯಲ್ಲಿ ತನ್ನ ನಿರೂಪಣೆಯನ್ನು

ಸಲ್ಲಿಸುವುದು ಅವನ ಕರ್ತವ್ಯ ಕರ್ಮವಾಗಿದ್ದು, ಈ ತತ್ತ್ವವನ್ನನುಸರಿಸಿ ನಾನೀಗ ನನ್ನ ರಾಜೀನಾಮೆಯನ್ನು ಕುರಿತು ಲೋಕಸಭೆಯಲ್ಲಿ ನಿರೂಪಣೆಯನ್ನು ಮಾಡುವುದು ಆವಶ್ಯಕವಾಗಿದೆಯೆಂದು ತೀರ್ಮಾನಿಸಿದ್ದೇನೆ.

ಸಚಿವ ಸಂಪುಟವು ತನ್ನ ಕಾರ್ಯವನ್ನು ಹೇಗೆ ಮಾಡುತ್ತದೆ, ಸಚಿವರೆಲ್ಲರೂ ಪ್ರತಿಯೊಂದು ಸಂಗತಿಯ ಬಗೆಗೂ ಒಮ್ಮತವನ್ನು ಹೊಂದಿರುವರೇ, ಅವರಲ್ಲಿ ವಾಗ್ವಾದಗಳು ನಡೆಯುತ್ತವೆಯೇ,

**ಹಿಂದೂ ಸಮಾಜದ ವರ್ಗವರ್ಗಗಳ ಉಚ್ಚ ನೀಚತೆ ಮತ್ತು ಲಿಂಗ ಭೇದಗಳನ್ನು ಉಳಿಸಿಕೊಂಡು ಸುಧಾರಣೆಯ ಯಾವುದೇ ಕಾನೂನನ್ನು ತಯಾರಿಸುವುದೆಂದರೆ ಹೊಲಸನ್ನು ತೆಗೆಯದೆ ಅದು ಮೇಲೆಯೇ ಇಸ್ಪೀಟುಗಳ ಬಂಗ್ಲೆಯನ್ನು ಕಟ್ಟಿದಂತೆ !**

ಎಂಬ ಸಂಗತಿಯು ಲೋಕಸಭೆಗೆ ಎಂದಿಗೂ ತಿಳಿದು ಬರುವುದೇ ಇಲ್ಲ. ಸಚಿವ-ಸಚಿವರಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿದರೂ ಸಚಿವ ಸಂಪುಟದ ಯಾವ ಒಬ್ಬ ಸಚಿವನಿಗೆ ಬಹುಮತದ ಬೆಂಬಲ ಸಿಕ್ಕದೆ ಹೋದಾಗ ಅಂಥ ಸಚಿವನು ತನ್ನ ಭಿನ್ನಾಭಿಪ್ರಾಯಗಳನ್ನು ಸಚಿವ ಸಂಪುಟದ ಹೊರಗೆ ವ್ಯಕ್ತಪಡಿಸಬಾರದು, ಪ್ರತಿಯೊಬ್ಬ ಸಚಿವನು ಸಚಿವ ಸಂಪುಟದ ಸಂಯುಕ್ತ ಹೊಣೆಗಾರಿಕೆಗೆ ತಲೆಬಾಗಬೇಕು, ಎನ್ನುವ ಉಡದ ಹಿಡಿತದಂತಹ ಬಂಧನವನ್ನು ಆ ಸಚಿವನ ಕೊರಳಿಗೆ ಕಟ್ಟಿದ್ದರಿಂದ ಅವನು ಹೊರಗಡೆಯಲ್ಲಿ ತನ್ನ ಅಭಿಪ್ರಾಯಗಳನ್ನು ಪ್ರಕಟಪಡಿಸಲಾರನು, ಹೀಗಾಗಿ ಸಚಿವ ಸಂಪುಟದ ಕಾರ್ಯವಿಧಾನದ ಮಾಹಿತಿಯು ಲೋಕಸಭೆಗೆ ಲಭಿಸುವುದಿಲ್ಲ. ಹೀಗಾಗಿ ಸಚಿವ ಸಂಪುಟದಲ್ಲಿ ಭಿನ್ನಾಭಿಪ್ರಾಯದ ಬೆಂಕಿ ಹೊಗೆಯಾಡುತ್ತಿದ್ದರೂ ಸಚಿವ ಸಂಪುಟವು ಸರಾಗವಾಗಿ ಸಾಗಿದೆ ಎಂದು ಲೋಕಸಭೆಗೆ ಅನ್ನಿಸುತ್ತದೆ. ಸಚಿವ ಸಂಪುಟವನ್ನು ತೊರೆಯಬೇಕೆನ್ನುವ ಸಚಿವನು ತಾನು ಹಾಗೇಕೆ ಮಾಡುತ್ತಿದ್ದೇವೆ, ಎಂಬುದರ ಸವಿ ಸ್ತಾರವಾದ ಮಾಹಿತಿಯನ್ನು ಲೋಕಸಭೆಗೆ ನೀಡುವುದು ಅವನ ಕರ್ತವ್ಯ ಕರ್ಮವಾಗಿದೆ.

ಇದರ ಹೊರತಾಗಿ ಎರಡನೆಯ ಕಾರಣವೆಂದರೆ, ಒಬ್ಬ ಸಚಿವನು ತನ್ನ ಸತ್ಯದ ಬದಿಯನ್ನು ಜನರೆದುರು ನಿರೂಪಿಸದೆ ಹೊರಟುಹೋದರೆ, ಅವನ ಖಾಸಗಿ ಇಲ್ಲವೆ ಸಾರ್ವಜನಿಕ ಸಂಗತಿಯನ್ನು ಕುರಿತು ಜನರಲ್ಲಿ ಸಂದೇಹದ ಭಾವನೆ ತಲೆದೋರುವುದು. ರಾಜೀನಾಮೆಯನ್ನು ನೀಡುವ ಸಚಿವನು ಜನರಿಗೆ ತರ್ಕ-ಕುತರ್ಕಗಳನ್ನು ಮಾಡಲು ಅವಕಾಶವನ್ನು ಕೊಡಬಾರದು. ಇದಕ್ಕಾಗಿ ಇರುವ ಉತ್ತಮವಾದ ಮಾರ್ಗವೆಂದರೆ ಜನರೆದುರು ತನ್ನ ಕೃತಿಯನ್ನು ಕುರಿತು ನಿರೂಪಣೆಯನ್ನು ಮಾಡುವುದು.

ಮೂರನೆಯ ಕಾರಣವೆಂದರೆ, ನಮ್ಮ ಕೆಲವು ವೃತ್ತಪತ್ರಗಳು ಸಾರ್ವಜನಿಕ ಕಾರ್ಯಕರ್ತನನ್ನು ಕುರಿತು ಯಾವಾಗಲೂ ಪೂರ್ವಗ್ರಹದಿಂದ ಬರೆಯುತ್ತವೆ, ಕೆಲವಂತೂ ಕೇವಲ ಟೀಕೆಗಳನ್ನೇ ಮಳೆಗರೆಯುತ್ತವೆ.

ತರುವಾಯದಲ್ಲಿ ಎಂದಿಗೂ ಈ ಪತ್ರಿಕೆಗಳಿಗೆ ಪ್ರತಿಯೊಬ್ಬ ಕಾರ್ಯಕರ್ತನ ಗುಣಾವಗುಣಗಳ ಮೇಲೆ ಸೂಕ್ತವಾದಷ್ಟೇ ಬೆಳಕು ಬೀರಲು ಸಾಧ್ಯವಾಗದು. ರಾಜೀನಾಮೆ ಪ್ರಕರಣದಲ್ಲಿ ಅವುಗಳಿಗೆ ಎಷ್ಟೊಂದು ದೋಷಗಳು ಕಂಡು ಬರುವವೋ ಅವಷ್ಟನ್ನೇ ಕುರಿತು ಅವು ಜನರೆದುರು ಮಂಡಿಸುತ್ತ ಹೋಗುತ್ತವೆ. ಈ ಪತ್ರಿಕೆಗಳು ರಾಜೀನಾಮೆಯ ನಿಜವಾದ ಕಾರಣಗಳನ್ನು ಮಂಡಿಸದೆ ತಮ್ಮ ಕಪೋಲಕಲ್ಪಿತ ಸಂಗತಿಗಳನ್ನು ಅವಕ್ಕೆ ತುರುಕಿಬಿಡುತ್ತವೆ. ವೃತ್ತಪತ್ರಗಳಿಗೆ ಇಷ್ಟೆಲ್ಲ ಉಪದ್ವ್ಯಾಪವನ್ನು ಮಾಡುವ ಅಗತ್ಯವೇನಿದೆ? ಏಕೆಂದರೆ ತಮಗೆ ಪ್ರಿಯವೆನ್ನಿಸುವ ಸಚಿವನನ್ನು ಹಾಡಿಹೊಗಳಿ, ಜನರಲ್ಲಿ ಅವನ ಒಣಪ್ರತಿಷ್ಠೆಯನ್ನು ಬೆಳೆಸುವುದಿರುತ್ತದೆ. ಅಲ್ಲದೆ ಅವುಗಳಿಗೆ ಅಪ್ರಿಯರೆನ್ನಿಸಿದ ಸಚಿವರನ್ನು ಕುರಿತು ಅತಿರಂಜಿತವಾದ ವರ್ಣನೆಗಳನ್ನು ಮಾಡಿ ಜನರ ಕಣ್ಣಲ್ಲಿ ಆ ಸಚಿವರು ಇಳಿಯುವಂತೆ ಮಾಡುತ್ತವೆ!

ಸಚಿವಸಂಪುಟದಿಂದ ಹೊರಬೀಳುವ ಮುನ್ನ ನಾನು ಲೋಕಸಭೆಯಲ್ಲಿ ಮಂಡಿಸಬೇಕು ಎಂದಿರುವ ನಿರೂಪಣೆಯ ಕಾರಣಗಳು ಹೀಗಿವೆ.

ನಾನು ಕಾನೂನು ಸಚಿವನಾಗಬೇಕೆಂದು ಪ್ರಧಾನಮಂತ್ರಿಯವರು ನನಗೆ ಸೂಚಿಸಿ ಇಂದಿಗೆ ೪ ವರ್ಷ, ೧ ತಿಂಗಳು ಮತ್ತು ೨೬ ದಿನಗಳಾದವು. ನನ್ನೆದುರು ಸಚಿವ ಪದದ ಸೂಚನೆಯನ್ನು ಮಂಡಿಸಲಾದಾಗ ನನಗೆ ತುಂಬ ಅಚ್ಚರಿಯಾಗಿತ್ತು. ನಾನು ಪ್ರತಿಪಕ್ಷದ ಮನುಷ್ಯ. ಅದರಲ್ಲೂ ಆಗಸ್ಟ್ ೧೯೪೬ರಲ್ಲಿ ತಾತ್ಕಾಲಿಕ ಸರಕಾರ ಬಂದಾಗಲಂತೂ ನಾನು ಅದರಲ್ಲಿ ಕುಳಿತುಕೊಳ್ಳಲು ಪೂರ್ತಿ



ಯೋಗ್ಯನಲ್ಲ, ಎಂದು ನನ್ನ ಬಗೆಗೆ ನಾಲ್ಲೆಸೆಗಳಲ್ಲೂ ಡಂಗುರವನ್ನು ಸಾರಲಾಗಿತ್ತು. ಪರಿಸ್ಥಿತಿಯು ಹೀಗಿರುವಾಗ ಪ್ರಧಾನಮಂತ್ರಿಯವರು ನನಗೆ ಸಚಿವ ಸಂಪುಟಕ್ಕೆ ಬರಲು ಆಹ್ವಾನಿಸುವುದನ್ನು ಕಂಡು ನನಗೆ ಅಚ್ಚರಿಯಾಯಿತು, ಆದರೆ ಪ್ರಧಾನಮಂತ್ರಿಗಳು ಹೀಗೆ ಮಾಡಲು ಯಾವ ಕಾರಣದಿಂದ ಉದ್ಯುಕ್ತರಾದರು, ಎಂಬುದನ್ನು ಕುರಿತು

ತರ್ಕವಿತರ್ಕ ಮಾಡಲು ನನಗೆ ಒಂದು ವಿಷಯ ಸಿಕ್ಕಿತು. ಪ್ರಧಾನಮಂತ್ರಿಯವರ ಮನದಲ್ಲಿ ಇಷ್ಟೊಂದು ಮಾರ್ಪಾಟು ಆದುದು ಹೇಗೆ? ಎಂಬ ಈ ಸಂಗತಿಯ ಬಗೆಗೆ ನಾನು ಸಂದೇಹಕ್ಕೆ ಒಳಗಾದೆ. ನನ್ನೊಡನೆ ಎಂದಿಗೂ ಸ್ನೇಹ ಭಾವದಿಂದ ನಡೆದುಕೊಳ್ಳದ ಸಚಿವರೊಡನೆ ಹೇಗೆ ಹೊಂದಿಕೊಳಬಲ್ಲೆ, ಎಂಬುದು ನನಗೆ ಅರ್ಥವಾಗಲಿಲ್ಲ. ಇದಲ್ಲದೆ ನನಗಿಂತ ಮೊದಲು ಕಾನೂನು ಸಚಿವರಾಗಿದ್ದ ವ್ಯಕ್ತಿಯಲ್ಲಿ ಅಪಾರ ಜ್ಞಾನವಿತ್ತು. ಅವರು ಕಾನೂನು ಇಲಾಖೆಯ ಕಾರ್ಯದಲ್ಲಿ ಒಂದು ಉಚ್ಚ ಮಟ್ಟವನ್ನು ತಯಾರಿಸಿದ್ದರು. ಅದರೆದುರು ನನ್ನ ಗತಿ ಏನು! ಆದರೆ ನನ್ನೀ ಸಂದೇಹ ಹಾಗೂ ನನ್ನೆಲ್ಲ ತರ್ಕವಿತರ್ಕಗಳನ್ನೆಲ್ಲ ನನ್ನ ಬಳಿಯಲ್ಲೇ ಇರಿಸಿಕೊಂಡೆ. ತಾನಾಗಿಯೇ ನಡೆದು ಬಂದ ಕಾನೂನು ಸಚಿವ ಹುದ್ದೆಯನ್ನು ಸ್ವೀಕರಿಸಿದೆ. ಈ ಹುದ್ದೆಯನ್ನು ಸ್ವೀಕರಿಸುವಲ್ಲಿ ನನ್ನ ಮುಖ್ಯ ಉದ್ದೇಶವೆಂದರೆ ಈ ಜನರು ರಾಷ್ಟ್ರಾಭಿವೃದ್ಧಿಯ ಕೆಲಸದಲ್ಲಿ ಸಹಕಾರದ ಕೈಯನ್ನು ನನ್ನೆದುರು ಬಿಚ್ಚಿದ್ದಾರೆ, ಎಂದಬಳಿಕ ಆ ಕೈಯನ್ನು ಹಿಡಿದುಕೊಳ್ಳದೆ ಇರುವುದು ಸೂಕ್ತವಲ್ಲ. ಸಚಿವಸಂಪುಟದ ಸದಸ್ಯ ಹಾಗೂ ಕಾನೂನು ಸಚಿವ ಎಂಬ ಎರಡು ಬಗೆಯ ಸ್ವರೂಪದಲ್ಲಿ ನನ್ನ ಕರ್ತವ್ಯವನ್ನು ಅದೆಷ್ಟು ಮಟ್ಟಿಗೆ ಚೊಕ್ಕಟವಾಗಿ ನಿಭಾಯಿಸಿದೆನೆನ್ನುವುದನ್ನು ತೀರ್ಮಾನಿಸುವುದು ನನ್ನ ಕೈಯಲ್ಲಿಲ್ಲ. ಅದು ಜನರ ಕೈಯಲ್ಲಿದೆ. ಜನ ತಪ್ಪದೆ ಅದನ್ನು ಕುರಿತು ನಿರ್ಧರಿಸದಿರರು.

ನಾನು ಸಹಕಾರದಿಂದ ಹರಿದುಕೊಂಡು ದೂರಾಗಲು ಕಾರಣಗಳೇನು ಎಂಬುದನ್ನು ಕುರಿತು ಇನ್ನು ಮೇಲೆ ಹೇಳುವೆನು. ಸಚಿವ ಸಂಪುಟದಿಂದ ಹೊರಬೀಳಬೇಕೆಂಬ ಚಿಂತೆಯು ಬಹಳ ದಿನಗಳಿಂದ ನನ್ನನ್ನು ಪೀಡಿಸುತ್ತಿತ್ತು. ಹೀಗೆ ಚಿಂತೆ ಎನ್ನಿಸಲು ಒಂದರ ಹಿಂದೊಂದು ಹಲವು ಕಾರಣಗಳಾದವು.

ಮೊದಲು, ನನ್ನ ವೈಯಕ್ತಿಕ ಕಾರಣಗಳತ್ತ ಹೊರಳುವೆನು. ಆದರೆ ಈ ವೈಯಕ್ತಿಕ ಸಂಗತಿಗಳು ನನ್ನ ರಾಜೀನಾಮೆಗೆ ಸಂಪೂರ್ಣ ಕಾರಣಗಳಾಗಲಿಲ್ಲ, ಎಂದು ಮಾತ್ರ ಮೊದಲೇ ಹೇಳುತ್ತೇನೆ. ಈ ಮೊದಲು ವಾಯಿಸ್ ರಾಯ್ ಅವರ ಕಾರ್ಯಕಾರಿ ಮಂಡಲಿಯಲ್ಲಿ ಸದಸ್ಯನಾಗಿದ್ದೆ. ಹೀಗಾಗಿ ಕಾನೂನು ಸಚಿವ ಹುದ್ದೆಯು ಅನುಷ್ಠಾನದ ದೃಷ್ಟಿಯಿಂದ ಮಹತ್ವದ ಹುದ್ದೆ ಅಲ್ಲವೆಂಬುದನ್ನು ಚೆನ್ನಾಗಿ ಬಲ್ಲವನಾಗಿದ್ದೆ, ಭಾರತ ಸರಕಾರದ ನೀತಿಗಳನ್ನು ನಿರ್ಧರಿಸುವ ಅವಕಾಶವು ಕಾನೂನು ಇಲಾಖೆಗೆ ಎಂದಿಗೂ ಲಭಿಸಿಲ್ಲ, ಲಭಿಸದು. ಈ ಇಲಾಖೆ ಎಂದರೆ, ಮುದಿ ವಕೀಲನೊಬ್ಬನ ಮನರಂಜನೆಗಾಗಿ ನೀಡಲಾದ ಒಂದು ಪೊಳ್ಳು ಆಟಿಕೆಯೇ ಸರಿ, ಎಂದು ನಾವು ಕಾನೂನು ಇಲಾಖೆಯನ್ನು ಕುರಿತಾದ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೆವು. ಹೀಗಾಗಿ, ಪ್ರಧಾನಮಂತ್ರಿಯವರು ನನ್ನೆದುರು ಸಚಿವ ಪದದ ಕೊಡುಗೆಯನ್ನು ಇರಿಸಿದಾಗ ನಾನವರಿಗೆ, "ವೃತ್ತಿಯಿಂದ ನಾನು ವಕೀಲನೇನೋ ಅಹುದು, ಆದರೆ ನಾನು ಪಡೆದ ಉಚ್ಚ ಮಟ್ಟದ ಶಿಕ್ಷಣ ಹಾಗೂ ನನಗಿರುವ ಕಾರ್ಯಕಲಾಪಗಳ ನೇರ ಅನುಭವ ನನಗಿರುವುದರಿಂದ ಎರಡೆರಡು ಇಲಾಖೆಗಳನ್ನು ನಿಭಾಯಿಸಲು ಸಮರ್ಥನಾಗಿದ್ದೇನೆ. ವಾಯಿಸ್ ರಾಯ್ ಅವರ ಕಾರ್ಯಕಾಲದಲ್ಲಿ ನಾನು

ಅನುಷ್ಠಾನಕ್ಕೆ ಸಂಬಂಧಪಟ್ಟ ಎರಡು ಇಲಾಖೆಗಳನ್ನು ನಡೆಯಿಸುತ್ತಿದ್ದೆ - ಒಂದು ಕಾರ್ಮಿಕ ಇಲಾಖೆ, ಎರಡನೆಯದು ಪಬ್ಲಿಕ್ ವರ್ಕ್ ಡಿಪಾರ್ಟ್‌ಮೆಂಟ್. ಹೀಗಾಗಿ ಕಾನೂನು ಇಲಾಖೆಯ ಜೊತೆಗೆ ಅನುಷ್ಠಾನಕ್ಕೆ ಸಂಬಂಧಿಸಿದ ಇನ್ನೊಂದು ಇಲಾಖೆಯನ್ನೂ ನನಗೆ

**ಹಿಂದೂ ಸಮಾಜದ ವರ್ಗವರ್ಗಗಳ ಉಚ್ಚ ನೀಚತೆ ಮತ್ತು ಲಿಂಗ ಭೇದಗಳನ್ನು ಉಳಿಸಿಕೊಂಡು ಸುಧಾರಣೆಯ ಯಾವುದೇ ಕಾನೂನನ್ನು ತಯಾರಿಸುವುದೆಂದರೆ ಹೊಲಸನ್ನು ತೆಗೆಯದೆ ಅದು ಮೇಲೆಯೇ ಇಸ್ಪೀಟುಗಳ ಬಂಗ್ಲೆಯನ್ನು ಕಟ್ಟಿದಂತೆ !**

ಕೊಡಿ" ಎಂದೆ. ಪ್ರಧಾನ ಮಂತ್ರಿಗಳು ನನ್ನ ಬೇಡಿಕೆಯನ್ನು ಒಪ್ಪಿಕೊಂಡು, "ಇಷ್ಟರಲ್ಲೇ ಯೋಜನಾ ಇಲಾಖೆಯನ್ನು ನಿರ್ಮಿಸಲಾಗುವುದು, ಅದನ್ನು ನಿಮಗೆ ಒಪ್ಪಿಸಲಾಗುವುದು" ಎಂದರು. ದುರದೃಷ್ಟದಿಂದ ಈ ಇಲಾಖೆಯನ್ನು ಬಲು ತಡವಾಗಿ ನಿರ್ಮಿಸಲಾಯಿತು. ಅಲ್ಲದೆ ಅದನ್ನು ನನ್ನನ್ನು ಬಿಟ್ಟು ಇನ್ನೊಬ್ಬರಿಗೆ ನೀಡಲಾಯಿತು. ನಾನು ಸಚಿವನಾಗಿರುವ ಕಾಲದಲ್ಲಿ ಹಲವು ಇಲಾಖೆಗಳನ್ನು ಒಬ್ಬ ಸಚಿವನಿಂದ ಇನ್ನೊಬ್ಬ ಸಚಿವನ ಕೈಗೆ ದಾಟಿಸಲಾಯಿತು. ಈ ದಾಟಿಸುವ ಕ್ರಿಯೆ ನಡೆದಾಗಲೆಲ್ಲ ಅವರು ಒಂದು ಹೆಚ್ಚಿನ ಇಲಾಖೆಯನ್ನು ನನ್ನ ಕೈಗೆ ಕೊಡಬಹುದೆಂದು ಅನ್ನಿಸಿತು. ಆದರೆ ಇದೆಲ್ಲ ಗೊಂದಲದಲ್ಲಿ ಅವರು ನನ್ನ ಕೈಬಿಟ್ಟುದು ನನ್ನ ಗಮನಕ್ಕೆ ಬಂದಿತು. ಸಾಕಷ್ಟು ಜನ ಸಚಿವರಿಗೆ ಎರಡು ಇಲ್ಲವೆ ಮೂರು ಇಲಾಖೆಗಳನ್ನು ಕೊಡಲಾಗಿದೆ. ಈ ಇಲಾಖೆಗಳ ಕೆಲಸಗಳು ಅವರಿಗೆ ಹೊರೆಯಾಗಿವೆ. ನನ್ನ ಹಾಗೆಯೇ ಇನ್ನು ಕೆಲವು ಸಚಿವರಿಗೆ ಕೈತುಂಬ ಕೆಲಸವಿಲ್ಲ. ತಮಗೆ ಕೈತುಂಬ ಕೆಲಸ ದೊರೆಯಲೆಂದು ಹೆಚ್ಚಿನ ಇಲಾಖೆಗಳನ್ನು ಕೊಡಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಯಾವನೊಬ್ಬ ಸಚಿವನು ವಿದೇಶಗಳಿಗೆ ಹೋದಾಗಲಾದರೂ ಅವನ ಇಲಾಖೆಯನ್ನು ಅಷ್ಟು ದಿನಗಳ ಕಾಲದ ಮಟ್ಟಿಗೆ ನನಗೆ ನೀಡಬೇಕೆಂಬ ಸಂಗತಿಯು ಪ್ರಧಾನಮಂತ್ರಿಯವರಿಗೆ ಹೊಳೆಯಲಿಲ್ಲ. ಪ್ರಧಾನಮಂತ್ರಿಯವರು ಸಚಿವರಿಗೆ ಬೇರೆ ಬೇರೆ ಇಲಾಖೆಗಳನ್ನು ಹಂಚುವಾಗ ಯಾವ ತತ್ವವನ್ನು ಅವಲಂಬಿಸುತ್ತಾರೆ, ಎಂಬುದನ್ನು ಹೇಳುವುದು ಕಷ್ಟ, ಸಚಿವರ ಯೋಗ್ಯತೆಯೇ, ನಂಬಿಗಸ್ಥತನವೇ, ಸ್ನೇಹವೇ, ಇಲ್ಲವೆ ನೆಲಕ್ಕೆ ಉದುರಿ ಬೀಳುವ ಹಣ್ಣಿನಂತೆ ತಮಗೆ ಅನುಕೂಲಕರವಾದ ಅಪ್ಪಣೆಯನ್ನು ಪಾಲಿಸುವ ಪ್ರವೃತ್ತಿಯನ್ನು

ಗಮನಿಸಿಯೇ ಪ್ರಧಾನಮಂತ್ರಿಗಳು ಅವರಿಗೆ ವಿಶಿಷ್ಟವಾದ ಇಲಾಖೆಗಳನ್ನು ಕೊಡುತ್ತಿದ್ದರೇ? ಪ್ರಧಾನ ಮಂಡಲವು ವಿದೇಶ ವ್ಯವಹಾರ ಸಮಿತಿ, ಮೊದಲಾದ ಮಹತ್ವದ ಸಮಿತಿಗಳನ್ನು ನೇಮಿಸುತ್ತದೆ. ಆದರೆ ನನ್ನನ್ನು ಅಂಥ ಯಾವುದೇ ಸಮಿತಿಯಲ್ಲಿ ನೇಮಿಸಲಾಗಲಿಲ್ಲ. ನಾನು ಅರ್ಥಶಾಸ್ತ್ರ ಹಾಗೂ ಹಣಕಾಸಿನ ವ್ಯವಹಾರದ ವಿಷಯಗಳನ್ನು ಆಳವಾಗಿ ಅಭ್ಯಸಿಸಿದವನಾದ ಕಾರಣ ಆರ್ಥಿಕ ವ್ಯವಹಾರ ಸಮಿತಿಯನ್ನು ನಿರ್ಮಿಸಲಾದಾಗ, ನನ್ನ ನೇಮಕ ಆ ಸಮಿತಿಯಲ್ಲಿ ನಡೆದೀತೆಂದು ಲೆಕ್ಕ ಹಾಕಿದ್ದೆ. ಆದರೆ ಆ ಸಲವೂ ನನ್ನನ್ನು ತಪ್ಪಿಸಲಾಯಿತು. ಪ್ರಧಾನಮಂತ್ರಿಗಳು ವಿದೇಶಕ್ಕೆ ಹೋದಾಗ ನನ್ನನ್ನು ಈ ಸಮಿತಿಯಲ್ಲಿ ನೇಮಿಸಲಾಯಿತು. ಆದರೆ ಅವರು ವಿದೇಶದಿಂದ ಮರಳಿ ಬಂದ ಕೂಡಲೇ ಪ್ರಧಾನ ಮಂಡಲವನ್ನು ಪುನರಚಿಸಲೆಂದು ಅವರು ಕೈಕೊಂಡ ಯೋಜನೆಗಳ ಫಲವಾಗಿ ನನ್ನನ್ನು ಆ ಸಮಿತಿಯಿಂದ ಕೈಬಿಡಲಾಯಿತು. ಪ್ರಧಾನಮಂತ್ರಿಯವರು ಪ್ರಧಾನ ಮಂಡಲವನ್ನು ಪುನರಚಿಸಿದ ಬಳಿಕ ನನ್ನನ್ನು ಮತ್ತೆ ಆ ಸಮಿತಿಯಲ್ಲಿ ನೇಮಕ ಮಾಡಿದರು. ಮುಖ್ಯ ಪ್ರಧಾನರ ನನ್ನ ಬಗೆಗಿನ ನಡತೆಯನ್ನು ಅವರೆದುರು ಪ್ರತಿಭಟಿಸಿದಾಗ ಅವರ ಕಣ್ಣುಗಳು ತೆರೆದುಕೊಂಡು, ಅವರು ನನ್ನನ್ನು ಆ ಸಮಿತಿಯಲ್ಲಿ ನೇಮಿಸಿದರು.

ನನ್ನ ಬಗೆಗೆ ಬೇಕೆಂದೇ ತಾರತಮ್ಯವನ್ನು ಮಾಡಲಾಗುತ್ತಿತ್ತು. ಅದನ್ನು ಕುರಿತು ನಾನು ಮುಖ್ಯ ಪ್ರಧಾನರ ಬಳಿ ದೂರಿಕೊಳ್ಳಲಿಲ್ಲ. ಈ ಬಗೆಗೆ ಮುಖ್ಯ ಪ್ರಧಾನರೇ ಸಾಕ್ಷ್ಯ ನೀಡುವರೆಂಬ ಭರವಸೆ ನನಗಿದೆ. ಸತ್ತೆಯ ರಾಜಕೀಯ ಮಾಡಲೆಂದು ಇಲ್ಲವೆ ಯಾವೊಬ್ಬ ಸಚಿವನ ಪದ ಬರಿದಾದಾಗ ಅದನ್ನು ತಮ್ಮತ್ತ ಸೆಳೆದುಕೊಳ್ಳಲೆಂದು ಪ್ರಧಾನ ಮಂಡಲದ ಸದಸ್ಯರು ಜೀವದ ಹಂಗುದೊರೆದು ಹೆಣಗುತ್ತಿದ್ದರು. ನಾನು ಅದರಿಂದ ಅಲಿಪ್ತನಾಗಿರುತ್ತಿದ್ದೆ. ಮೌನ ತಳೆದು, ಸೇವೆಯನ್ನು ಮಾಡುವುದೇ ಶ್ರೇಷ್ಠ ಕರ್ತವ್ಯವೆಂಬ ವಿಶ್ವಾಸ ನನ್ನದು. ಆ ರೀತಿಯಾಗಿ ಪ್ರಧಾನಮಂತ್ರಿಯವರು ನನಗೆ ಒಪ್ಪಿಸಿದ



ಇಲಾಖೆಯ ಸೇವೆಯನ್ನು ಮನಸಾರೆ ಮಾಡಿದೆ. ಇಂಥ ಪರಿಸ್ಥಿತಿಯಲ್ಲೂ ನನ್ನ ಮೇಲೆ ಅನ್ಯಾಯ ವಾದುದು ನನಗೆ ಕಾಣಿಸಲಿಲ್ಲ ಎಂದು ನಾನೆಂದಿದ್ದರೆ ಅದು ಮನುಷ್ಯ ಸ್ವಭಾವಕ್ಕೆ ಹೊರತಾಗುತ್ತಿತ್ತು.

ನಮ್ಮ ಸರಕಾರದ ಬಗೆಗೆ ನಾನೇಕೆ ಅಸಮಾಧಾನಿಯಾದೆ, ಎನ್ನಲು ಎರಡನೆಯ ಇನ್ನೊಂದು ಬದಿಯಿದೆ. ಅದೆಂದರೆ ಹಿಂದುಳಿದ ವರ್ಗ ಹಾಗೂ ವರ್ಗೀಕೃತ ವರ್ಗಗಳ ಹಿತದ ಬಗೆಗೆ ಸರಕಾರವು ತೋರಿದ ಅನಾಸ್ಥೆ,

ಸಂವಿಧಾನದಲ್ಲಿ ಹಿಂದುಳಿದ ವರ್ಗಗಳ ಹಿತದ ಬಗೆಗೆ ಯಾವುದೇ ಬಗೆಯ ಏರ್ಪಾಡನ್ನು ಮಾಡಲಾಗಿಲ್ಲ ಎಂಬ ಸಂಗತಿಯಿಂದ ನನಗೆ ತುಂಬ ದುಃಖವಾಗುತ್ತದೆ. ರಾಷ್ಟ್ರಾಧ್ಯಕ್ಷರು ನೇಮಕ ಮಾಡಬೇಕಿದ್ದ ಮಂಡಲಿಯು ಈ ಬಗೆಗೆ ಮಾಡಬೇಕಿದ್ದ ಉಪಾಯ ಯೋಜನೆಗಳನ್ನು ಸೂಚಿಸಬೇಕು ಮತ್ತು ಮುಂದೆ ಅವುಗಳ ಅನುಷ್ಠಾನ ಆಗಬೇಕೆಂದು ಸಂವಿಧಾನವನ್ನು ತಯಾರಿಸುವಾಗ ತೀರ್ಮಾನಿಸಲಾಗಿತ್ತು. ನಾವು ಸಂವಿಧಾನವನ್ನು ಮಂಜೂರು ಮಾಡಿ ಒಂದು ವರ್ಷ ಕಳೆದು ಹೋಯಿತು. ಆದರೆ ಈ ಮಂಡಲವನ್ನು ನೇಮಿಸುವ ಅವಶ್ಯಕತೆಯು ಈಗಲೂ ಸರಕಾರಕ್ಕೆ ಕಾಣುತ್ತಿಲ್ಲ. ನಾನು ೧೯೪೭ರಲ್ಲಿ ಸಚಿವ ಸಂಪುಟದಲ್ಲಿ ಇರಲಿಲ್ಲ. ನಾನು ಹಾಗೂ ದಲಿತ ವರ್ಗದ ಪ್ರಮುಖ ಸಮಾಜಸೇವಕರು ತುಂಬ ಚಿಂತಾಕ್ರಾಂತ ಮನಸ್ಥಿತಿಯಲ್ಲಿ ಈ ವರ್ಷವನ್ನು ಕಳೆದೆವು.

ಬ್ರಿಟಿಶ್ ರಾಜ್ಯಕರ್ತರು ದಲಿತ ವರ್ಗಗಳ ಹಿತಾಸಕ್ತಿಗಳನ್ನು ಕಾಪಾಡುವ ಬಗೆಗಿನ ಭರವಸೆಯನ್ನು ಸಂವಿಧಾನದಲ್ಲಿ ನಮೂದಿಸಿದ್ದರು. ಆದರೆ ಸತ್ತೆಯನ್ನು ತ್ಯಜಿಸಿದ ಬಳಿಕ ಅವರ ಹೊಣೆ ಮುಗಿಯಿತು. ಭಾರತೀಯ ಸಂವಿಧಾನ ಪರಿಷತ್ತು ಈ ಬಗೆಗೆ ಯಾವ ನೀತಿಯನ್ನು ಅವಲಂಬಿಸಲಿದೆ, ಎನ್ನುವ ಬಗೆಗೆ ದಲಿತ ವರ್ಗಕ್ಕೆ ಬಲು ದೊಡ್ಡ ಚಿಂತೆಯಾಗಿತ್ತು. ಇಂಥ ಚಿಂತಾಗ್ರಸ್ತ ಮನಸ್ಥಿತಿಯಲ್ಲಿರುವಾಗಲೇ ದಲಿತ ವರ್ಗದ ಅನುಕಂಪನೀಯವಾದ ಪರಿಸ್ಥಿತಿಯನ್ನು ಪರಿಶೀಲಿಸಿ ನಾನೊಂದು ವರದಿಯನ್ನು ತಯಾರಿಸಿ ಸಂಯುಕ್ತ ರಾಷ್ಟ್ರ ಸಂಘಕ್ಕೆ ಕಳಿಸಬೇಕೆಂದು ಯೋಜಿಸಿದೆ. ಆದರೆ ನಾನು ಆ ವರದಿಯನ್ನು ಸಂಯುಕ್ತ ರಾಷ್ಟ್ರ ಸಂಘಕ್ಕೆ ಕಳಿಸಿಕೊಡಲಿಲ್ಲ. ಇದಕ್ಕೆ ಕಾರಣವೆಂದರೆ, ಸಂವಿಧಾನ ಪರಿಷತ್ತು ಹಾಗೂ ಲೋಕಸಭೆ ಎಂಬ ಸಂಸ್ಥೆಗಳು ದಲಿತ ವರ್ಗಗಳ ಹಿತಾಸಕ್ತಿಯನ್ನು ಕಾಪಾಡಲು ಹಾಗೂ ಅವರ ಪ್ರಗತಿಗಾಗಿ ಯಾವ ನೀತಿಯನ್ನು ಸ್ವೀಕರಿಸಲಿವೆ, ಯಾವ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಿವೆ, ಎನ್ನುವುದನ್ನು ಮೊದಲು ಕಂಡುಕೊಳ್ಳುವುದು ಸೂಕ್ತವೆಂದು ನನಗೆ ಅನ್ನಿಸಿತು. ದಲಿತ ವರ್ಗಗಳನ್ನು ಕುರಿತು ಸಂವಿಧಾನದಲ್ಲಿ ಮಾಡಿದ ಏರ್ಪಾಡು ಏನೇನೂ ಸಾಲದೆಂಬುದು ನನ್ನ ಅಭಿ ಪ್ರಾಯ. ಅಸಮಾಧಾನಕರವಿದ್ದೂ ಅದಕ್ಕೆ ಒಪ್ಪಿಗೆಯನ್ನು ನೀಡಿದೆನು. ಸರಕಾರವು ಈ ಏರ್ಪಾಡುಗಳನ್ನು ಮನಃಪೂರ್ವಕವಾಗಿ ಅನುಷ್ಠಾನಕ್ಕೆ ತಂದರೆ, ದಲಿತ ವರ್ಗಗಳ ಉನ್ನತಿಯ ಕೆಲಸವು ಅಷ್ಟಾಗಿ ಆಗದಿದ್ದರೂ ಅ ಕಾರ್ಯದ ಅಡಿಗಲ್ಲಾದರೂ ಇರಿಸಲಾಗುವುದೆಂಬುದು ನನ್ನ ಉದ್ದೇಶವಾಗಿತ್ತು. ಸದ್ಯಕ್ಕೆ ದಲಿತ ವರ್ಗಗಳ ಅವಸ್ಥೆ ಹೇಗಿದೆ? ಎನ್ನುವುದನ್ನು ಕುರಿತು ನನಗೆ ತಿಳಿದಿರುವ ಮಟ್ಟಿಗೆ ಹೇಳುವುದಾದರೆ, ಅವರ ಅವಸ್ಥೆಯು ೧೯೪೭ರಲ್ಲಿದ್ದ ಹಾಗೆಯೇ ಇಂದಿಗೂ ಇದೆ. ಅದರಲ್ಲಿ ಯಾವುದೇ ಬಗೆಯ ವ್ಯತ್ಯಾಸ ಉಂಟಾಗಿಲ್ಲ. ಮೇಲ್ವರ್ಗಗಳವರಿಂದ ದಲಿತ ವರ್ಗಗಳ ಮೇಲೆ ಮೊದಲು ನಡೆಯುವಂಥ ಹಿಂಸೆ, ದೌರ್ಜನ್ಯ, ಭಯೋತ್ಪಾದನೆಗಳಂಥ ಹಿಂಸೆ, ದೌರ್ಜನ್ಯ, ಭಯೋತ್ಪಾದನೆಗಳು ತೀರ ಅಮಾನವೀಯ ಸ್ವರೂಪದಲ್ಲಿ ಇಂದಿಗೂ ನಡೆಯುತ್ತಿವೆ. ಈ ಬಗೆಗಿನ ನೂರಾರು ಉದಾಹರಣೆಗಳನ್ನು ಕೊಡಬಲ್ಲೆ. ದಿಲ್ಲಿಯ ಸುತ್ತಲಿನ ಸಾವಿರಾರು ಜನ ದಲಿತ

ವರ್ಗದವರು ತಮ್ಮ ದುಃಖಕರ ಪರಿಸ್ಥಿತಿಯ ವಾರ್ತೆಗಳನ್ನು ಹೇಳಲು ನನ್ನಲ್ಲಿಗೆ ಬರುತ್ತಾರೆ. ಸವರ್ಣೀಯ ಹಿಂದೂಗಳು ಹೊತ್ತು ಹೊತ್ತಿಗೆ ನಮ್ಮ ಮೇಲೆ

**ಹಿಂದೂ ಸಮಾಜದ ವರ್ಗವರ್ಗಗಳ ಉಚ್ಚ ನೀಚತೆ ಮತ್ತು ಲಿಂಗ ಭೇದಗಳನ್ನು ಉಳಿಸಿಕೊಂಡು ಸುಧಾರಣೆಯ ಯಾವುದೇ ಕಾನೂನನ್ನು ತಯಾರಿಸುವುದೆಂದರೆ ಹೊಲಸನ್ನು ತೆಗೆಯದೆ ಅದು ಮೇಲೆಯೇ ಇಸ್ಪೀಟುಗಳ ಬಂಗ್ಲೆಯನ್ನು ಕಟ್ಟಿದಂತೆ !**

ದೌರ್ಜನ್ಯವನ್ನು ಮಾಡುತ್ತಾರೆ, ನಾವು ಅವರ ವಿರುದ್ಧ ಪೋಲೀಸರಿಗೆ ದೂರು ಸಲ್ಲಿಸಿದರೂ ಅವರು ಅವುಗಳನ್ನು ನೋಂದಾಯಿಸಿಕೊಳ್ಳುವುದಿಲ್ಲ. ಹೀಗಾಗಿ ನಮ್ಮ ಬವಣೆ ಸಾರ್ವಜನಿಕವಾಗುವುದಿಲ್ಲ. ನಮಗೆ ಪೋಲೀಸರಿಂದ ರಕ್ಷಣೆ ದೊರೆಯುತ್ತಿಲ್ಲ, ಎನ್ನುವ ದೈನ್ಯದ ಕಥೆಗಳನ್ನು ನನಗೆ ಹೇಳುತ್ತಾರೆ. ಭಾರತದ ದಲಿತ ವರ್ಗಗಳ ಶೋಚನೀಯ ಹಾಗೂ ದಯನೀಯ ಪರಿಸ್ಥಿತಿಯನ್ನು ಭೋಗಿಸುವಂಥ ಇನ್ನೊಂದು ಮಾನವ ಜನಾಂಗವು ಈ ಪೃಥ್ವಿಯ ಮೇಲಿದೆಯೋ ಇಲ್ಲವೋ ಎಂದು ಹೇಳುವುದು ಕಷ್ಟ, ನಾನಂತೂ ಈವರೆಗೂ ಇಂಥ ಒಂದು ವರ್ಗವನ್ನು ಕಂಡಿಲ್ಲ. ಹೀಗಿರುವಲ್ಲಿ ಸರಕಾರವು ದಲಿತ ವರ್ಗಗಳ ದುಃಖವನ್ನು ಕಡಿಮೆ ಮಾಡಲು ಏಕೆ ಸಿದ್ಧವಾಗುತ್ತಿಲ್ಲ? ಸರಕಾರವು ಮುಸಲ್ಮಾನರ ಹಿತಾಸಕ್ತಿಗಳನ್ನು ಕಾಪಾಡಲು ತೋರುವ ಆಸ್ಥೆಯನ್ನು, ಕೈಕೊಳುವ ಹೆಣಗಾಟವನ್ನು ಗಮನಕ್ಕೆ ತಂದುಕೊಳ್ಳಿ. ಸರಕಾರವು ದಲಿತ ವರ್ಗಗಳ ಬಗೆಗೆ ತಳೆಯುತ್ತಿರುವ ಔದಾಸೀನ್ಯವನ್ನು ಗಮನಿಸಿ. ಅಂದರೆ ಸರಕಾರದ ಇವೆರಡು ಮನೋವೃತ್ತಿಗಳಲ್ಲಿರುವ ನೆಲಮುಗಿಲುಗಳಂಥ ವ್ಯತ್ಯಾಸವು ನಿಮಗೆ ಮನದಟ್ಟಾದೀತು. ಮುಖ್ಯ ಪ್ರಧಾನರ ಗಮನ ಹಾಗೂ ವೇಳೆಯೆಲ್ಲ ಮುಸಲ್ಮಾನರ ಹಿತಾಸಕ್ತಿಯ ರಕ್ಷಣೆಗಾಗಿ ಖರ್ಚಾಗುತ್ತಿವೆ. ಭಾರತೀಯ ಮುಸಲ್ಮಾನರಿಗೆ ಯಾವುದೇ ಬಗೆಯ ಹಿತಾಸಕ್ತಿಯ ರಕ್ಷಣೆ ಅಗತ್ಯದ್ದಾಗಿ ಕಂಡು ಬಂದಾಗಲೆಲ್ಲ ಅದನ್ನು ಅವರಿಗೆ ನೀಡಬೇಕೆಂಬುದು ಪ್ರಧಾನಮಂತ್ರಿಯವರ ಇಚ್ಛೆಯಾಗಿದ್ದು ಅದಕ್ಕಿಂತಲೂ ಹೆಚ್ಚಿನ ಇಚ್ಛೆ ನನ್ನದಾಗಿದೆ. ಈ ಬಗೆಗೆ ನಾನು ಯಾರೆದುರಿಗೇ ಆಗಲಿ ತಲೆಬಾಗಲಾರೆ. ಆದರೆ, ಹಿತಾಸಕ್ತಿಗಳನ್ನು ಕಾಪಾಡಲು ಭಾರತದಲ್ಲಿ ಮುಸಲ್ಮಾನ ಕೋಮು ಮಾತ್ರ ಸೂಕ್ತವಾಗಿದೆಯೆ, ಎಂಬುದನ್ನು ಸರಕಾರದಿಂದ ತಿಳಿದುಕೊಳ್ಳುವ ಇಚ್ಛೆ ನನಗೆ ಇದೆ. ದಲಿತ ವರ್ಗ, ವರ್ಗೀಕೃತ ವರ್ಗ, ಇತರ ಜಾತಿಗಳು ಹಾಗೂ ಭಾರತೀಯ ಕ್ರಿಸ್ತರ ಹಿತಾಸಕ್ತಿಯನ್ನು ಕಾಪಾಡುವುದು ಅಗತ್ಯದ್ದೆಂದು ಸರಕಾರಕ್ಕೆ ಅನ್ನಿಸುವುದೆ? ಪ್ರಧಾನಮಂತ್ರಿಯವರು ಈ ಜನರ ಹಿತವನ್ನು ಕುರಿತು ಎಂದಾದರೂ ಕಳಕಳಿಯನ್ನು ವ್ಯಕ್ತಪಡಿಸಿರುವರೆ? ನನಗೆ ತಿಳಿದಿರುವಮಟ್ಟಿಗೆ ಪ್ರಧಾನಮಂತ್ರಿಯವರು ಎಂದಿಗೂ ಈ ಮನೋಧರ್ಮವನ್ನು ವ್ಯಕ್ತಪಡಿಸಿಲ್ಲ.

ಮುಸಲ್ಮಾನರಿಗಿಂತಲೂ ಹೆಚ್ಚಿನ ರಕ್ಷಣೆಯು ಯಾರಿಗಾದರೂ ಸರಕಾರದಿಂದ ಬೇಕಿದ್ದರೆ ಅದು ಮೇಲೆ ನಮೂದಿಸಲಾದ ಜನರಿಗೇ ಸರಿ.

ಸರಕಾರವು ವರ್ಗೀಕೃತ ಜನರ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ ತೋರಿದ ಅನಾಸ್ಥೆಯಿಂದ ನಾನು ತುಂಬ ಕೆರಳಿದ್ದೆ. ನಾನು ಕುದಿಯುವ ಈ ಕೋಪವನ್ನು ಮನದಲ್ಲಿ ಹಾಗೆಯೇ ಉಳಿಸಿಕೊಂಡಿದ್ದೆ. ಕೆಲವು ದಿನಗಳ ಕೆಳಗೆ ವರ್ಗೀಕೃತ ಜನರ ಸಭೆಯನ್ನು ಕರೆಯಲಾಗಿತ್ತು. ಬಹಳ ದಿನಗಳ ತರುವಾಯ ಅದರಲ್ಲಿ ಈ ನನ್ನ ಪ್ರಚಂಡ ಕೋಪವನ್ನು ಹೊರಗೆಡಹಿದೆ. ಸರಕಾರಿ ನಿಯಮದಂತೆ ವರ್ಗೀಕೃತ ಜನರಿಗಾಗಿ ಕಾದಿರಿಸಲಾದ ಶೇಕಡಾ ಹನ್ನೆರಡೂವರೆ ಸ್ಥಾನಗಳಿಂದ ಅವರಿಗೆ ಅಂಥ ಲಾಭವೇನೂ ಆಗಿಲ್ಲವೆಂದು ಯಾವಾಗಲೂ ಸರಕಾರವನ್ನು ದೂರುತ್ತೇನೆ. ಈ ಅಪಾದನೆಯಲ್ಲಿ ಏನಾದರೂ ನಿಜಾಂಶ ಇದೆಯೇ, ಎಂದು ಯಾರೋ ಸರಕಾರವನ್ನು ಕೇಳಿದರು. ಅದರ ಉತ್ತರವೆಂದು ಗೃಹಸಚಿವ ಮಹಾಶಯರು ಈ ಅಪಾದನೆಯು ನಿರಾಧಾರವಾದುದು, ಎಂದರು. ಈ ಪ್ರಶ್ನೆಗೆ ತಾವು ನೀಡಿದ ಉತ್ತರದ ಪುರಾವೆಗಳನ್ನು ಕಲೆಹಾಕಲೆಂದಾಗಲಿ ಇಲ್ಲವೆ ತಾವು ನೀಡಿದ ಹಾರಿಕೆಯ ಉತ್ತರದಿಂದ ಅವರ ಸದಸದ್ವಿವೇಕ ಬುದ್ಧಿಯು ಅವರ ಮನಸ್ಸನ್ನು ಒಂದೇ ಸಮನೆ ಇರಿಯುತ್ತಿತ್ತೆಂದಾಗಲಿ, ಗೃಹಸಚಿವ ಮಹಾಶಯರು ಒಂದು ಸರ್ಕುಲರ್‌ನ್ನು ಹೊರಡಿಸಿ, ಇತ್ತೀಚೆಗೆ ಸರಕಾರಿ ನೌಕರಿಗಾಗಿ ವರ್ಗೀಕೃತರ ಅದೆಷ್ಟು ಜನ ಅಭ್ಯರ್ಥಿಗಳನ್ನು ತೆಗೆದುಕೊಳ್ಳಲಾಗಿದೆ, ಎಂದು ಕೇಳಿದ್ದರು. ಪ್ರತಿಯೊಂದು ಇಲಾಖೆಯಿಂದ



ನಮ್ಮಲ್ಲಿ ಒಂದಿಬ್ಬರು ಅಭ್ಯರ್ಥಿಗಳನ್ನು ಯಾವುದಾದರೂ ಒಂದು ಆಫೀಸಿನಲ್ಲಿ ತೆಗೆದುಕೊಂಡಿದ್ದೇವೆ, ಆದರೆ ಒಟ್ಟಿನಲ್ಲಿ ಹೆಚ್ಚಿನ ಅಭ್ಯರ್ಥಿಗಳನ್ನು ಖಂಡಿತ ಸೇರಿಸಿಕೊಂಡಿಲ್ಲವೆಂದು ಸರ್ಕ್ಯುಲರಕ್ಕೆ ಬಂದ ಉತ್ತರವನ್ನು ಕುರಿತು ನನಗೆ ಲಭ್ಯವಾದ ಮಾಹಿತಿಯನ್ನಾಧರಿಸಿ ನಾನು ಹೀಗೆ ಪ್ರತಿಪಾದಿಸಬಲ್ಲೆ. ನನಗೆ ದೊರೆತ ಮಾಹಿತಿಯು ನಿಜವಾಗಿದ್ದರೆ, ಗೃಹಸಚಿವರು ಪ್ರಶ್ನೆಯನ್ನು ಕೇಳುವವನಿಗೆ ನೀಡಿದ ಉತ್ತರವನ್ನು ಕುರಿತು ಯಾವುದೇ ಬಗೆಯ ಭಾಷ್ಯವನ್ನು ಮಾಡುವ ಆವಶ್ಯಕತೆಯು ನನಗಿಲ್ಲ.

ನಾನು ವರ್ಗೀಕೃತ ಜನರಲ್ಲಿ ಹುಟ್ಟಿವನಾದರಿಂದ ಆ ಜನರ ಪ್ರಗತಿಯನ್ನು ಸಾಧಿಸಲು ನನ್ನ ಆಯುಷ್ಯವನ್ನು ವ್ಯಯಿಸುವೆನೆಂದು ಚಿಕ್ಕಂದಿನಲ್ಲಿಯೇ ಪ್ರತಿಜ್ಞೆಯನ್ನು ಮಾಡಿದ್ದೇನೆ. ನನ್ನ ಈ ಪ್ರತಿಜ್ಞೆಯಿಂದ ದೂರಕ್ಕೆ ಸರಿಯಬಹುದಾದ ಹಲವು ಸನ್ನಿವೇಶಗಳು ನನ್ನ ಬಾಳಿನಲ್ಲಿ ಬಂದು ಹೋದವು. ಚಿಕ್ಕಂದಿನಲ್ಲಿ ನಾನು ಸ್ವಂತದ ಏಳಿಗೆಯನ್ನಷ್ಟೇ ಬಯಸಿದ್ದರೆ ನನಗೆ ಬೇಕಿದ್ದ ಯಾವುದೇ ಪ್ರತಿಷ್ಠೆಯ ಪದದ ಮೇಲೆ ವಿರಾಜಮಾನನಾಗಬಹುದಿತ್ತು. ನಾನು ಕಾಂಗ್ರೆಸ್ಸನ್ನು ಸೇರಿಕೊಂಡಿದ್ದರೆ ಅಲ್ಲಿಯ ಎಲ್ಲಕ್ಕೂ ಮೇಲಿನ ಹುದ್ದೆಯನ್ನು ಉಪಭೋಗಿಸಬಹುದಿತ್ತು. ಆದರೆ ವರ್ಗೀಕೃತ ಜನರ ಉನ್ನತಿಗಾಗಿ ನನ್ನ ಇಡಿಯ ಆಯುಷ್ಯವನ್ನು ಮುಡುಪಾಗಿಸಲು ನಿರ್ಧರಿಸಿ, ಆ ಗುರಿಯನ್ನು ಕಣ್ಣು ಮುಂದೆ ಇರಿಸಿಕೊಂಡು, ಅದಕ್ಕಾಗಿ ಒಂದು ತತ್ತ್ವವನ್ನು ಅವಲಂಬಿಸುತ್ತ ಬಂದಿದ್ದೇನೆ. ಯಾವೊಬ್ಬನಿಗೆ ಯಾವೊಂದು ಕೆಲಸವನ್ನು ಸಫಲಗೊಳಿಸಬೇಕೆನ್ನುವ ತುಂಬು ಉತ್ಸಾಹವಿದ್ದು, ಆ ಕಾರ್ಯವನ್ನು ಪೂರ್ತಿಗೊಳಿಸುವುದೇ ಅವನ ಮನಸ್ಸಿಗೆ ಒಂದೇ ಸಮನೆ ಹತ್ತಿದ ಧ್ಯಾನವಾಗಿದ್ದು, ಆ ಕಾರ್ಯವನ್ನು ಪೂರ್ತಿಗೊಳಿಸಲೆಂದು ಅವನು ಆಕುಂಚಿತ ವಿಚಾರಸರಣಿ ಹಾಗೂ ಕೃತಿಯನ್ನು ಅವಲಂಬಿಸಿದರೂ ಶ್ರಾವ್ಯವೇ ಸರಿ, ಎಂಬುದು ಈ ತತ್ತ್ವ, ಸರಕಾರವು ಬಹಳ ದಿನಗಳಿಂದ ವರ್ಗೀಕೃತ ಜನರ ಹಿತಾಹಿತಗಳ ಪ್ರಶ್ನೆಯನ್ನು ಹಾಗೆಯೇ ನೇತು ಬಿಟ್ಟಿರುವ ಕಾರಣ, ಅದನ್ನು ಕಂಡು ನನ್ನ ಮನಸ್ಸಿಗೆ ಅದೆಷ್ಟು ಯಾತನೆ ಆಗುತ್ತಿರಬಹುದೆಂಬುದರ ಸ್ಪಷ್ಟ ಕಲ್ಪನೆಯು ಮೇಲಿನ ಸಂಗತಿಯಿಂದ ನಿಮಗೆ ಬಂದಿರಲು ಸಾಕು.

ಮೂರನೆಯ ಸಂಗತಿ. ಸರಕಾರದ, ವಿದೇಶಗಳನ್ನು ಕುರಿತಾದ ನೀತಿಯು ನನ್ನನ್ನು ಅಸಮಾಧಾನಕ್ಕೆ ಈಡುಮಾಡಿದೆ. ಅದು ನನ್ನನ್ನು ಚಿಂತೆ ಹಾಗೂ ಮಾನಸಿಕ ಯಾತನೆಗಳ ಕಂದರಕ್ಕೂ ತಳ್ಳಿದೆ. ಉಳಿದ ದೇಶಗಳು ಭಾರತದೊಡನೆ ಇರಿಸಿಕೊಂಡಿದ್ದ ಸಂಬಂಧಗಳಲ್ಲಿ ಒಮ್ಮೆಲೆ ಬದಲಾವಣೆಗಳನ್ನು ಮಾಡಿವೆ. ಈ ಸಂಗತಿಯು ಈ ನೀತಿಯನ್ನು ಕುರಿತು ಆಳವಾಗಿ ಯೋಚಿಸುವವನಿಗೆ ಹಾಗೂ ಬೇರೆ ದೇಶಗಳು ಭಾರತದೊಡನೆ ಇರಿಸಿಕೊಂಡ ಸಂಬಂಧಗಳನ್ನು ಕುರಿತು ಹೆಚ್ಚಿನ ಮಾಹಿತಿಯನ್ನು ಕಲೆಹಾಕುವವನಿಗೆ ಕಂಡು ಬಂದೀತು. ನಾವು ೧೫ ಆಗಸ್ಟ್ ೧೯೪೭ರಿಂದ ಒಂದು ಸ್ವತಂತ್ರ ದೇಶವಾಗಿ ನಡೆದುಕೊಳ್ಳತೊಡಗಿದೆವು. ಆಗ ಒಂದು ದೇಶವೂ ನಮಗೆ ಕೇಡು ಬಗೆಯುವಂತೆ ಇರಲಿಲ್ಲ. ಪ್ರಪಂಚದ ಪ್ರತಿಯೊಂದು ದೇಶವು ನಮ್ಮ ಸ್ನೇಹಭಾವನೆಯಿಂದ ನೋಡುತ್ತಿತ್ತು. ನಾಲ್ಕು ವರ್ಷಗಳ ತರುವಾಯ ಇಂದು ಆ ಸ್ನೇಹಿತರೆಲ್ಲರೂ ನಮ್ಮನ್ನು ಬಿಟ್ಟು ದೂರ ಹೋಗಿರುವರು. ಈಗ ಪ್ರಪಂಚದ ಒಂದು ದೇಶವೂ ನಮ್ಮ ಸ್ನೇಹಿತ ದೇಶವಾಗಿ ಉಳಿದಿಲ್ಲ. ನಾವು ನಮ್ಮ ಕೃತಿಯಿಂದಲೇ ಇನ್ನೊಬ್ಬರೊಂದಿಗಿನ ಸಂಬಂಧಗಳನ್ನು ಕಡಿದುಕೊಂಡೆವು. ನಾವು ಸಂಯುಕ್ತ ರಾಷ್ಟ್ರ ಸಂಘದಲ್ಲೂ ಜಂಭದಿಂದ ಮೆರೆಯುತ್ತಿದ್ದೇವೆ. ಅಲ್ಲಿ ನಾವೊಂದು ಮಸೂದೆಯನ್ನು ಮಂಡಿಸಿದರೆ ಅದಕ್ಕೆ ಅನುಮೋದನೆ ನೀಡಲು ಒಬ್ಬನೂ ಮುಂದೆ ಬರುವುದಿಲ್ಲ. ನಮ್ಮ ವಿದೇಶ

ನೀತಿಯ ಅವಸ್ಥೆ ಹೀಗಿದೆ. ಈ ಸ್ಥಿತಿಯನ್ನು ಕುರಿತು ಯೋಚಿಸಿದಾಗಲೆಲ್ಲ ನನಗೆ ಬಿಸ್ಮಾರ್ಕ್ ಹಾಗೂ ಬರ್ನಾರ್ಡ್ ಶಾ ಅವರ ಮಾತುಗಳು ನೆನಪಾಗುತ್ತವೆ.

ಹಿಂದೂ ಸಮಾಜದ ವರ್ಗವರ್ಗಗಳ ಉಚ್ಚ ನೀಚತೆ ಮತ್ತು ಲಿಂಗ ಭೇದಗಳನ್ನು ಉಳಿಸಿಕೊಂಡು ಸುಧಾರಣೆಯ ಯಾವುದೇ ಕಾನೂನನ್ನು ತಯಾರಿಸುವುದೆಂದರೆ ಹೊಲಸನ್ನು ತೆಗೆಯದೆ ಅದು ಮೇಲೆಯೇ ಇಸ್ಪೀಟುಗಳ ಬಂಗ್ಲೆಯನ್ನು ಕಟ್ಟಿದಂತೆ !

ಬಿಸ್ಮಾರ್ಕ್ ಇವನು, "ರಾಜಕೀಯವೆಂದರೆ ಅಸಂಭವನೀಯವಾದ ಒಂದು ಸಂಗತಿಯನ್ನು ಸಾಧಿಸುವ ಆಟವಲ್ಲ. ರಾಜಕೀಯವೆಂದರೆ ಸಂಭವನೀಯವಾದ ಸಂಗತಿಯನ್ನು ಸಾಧ್ಯಗೊಳಿಸುವ ಆಟ", ಎಂದಿರುವನು. ಕೆಲವೇ ದಿನಗಳ ಕೆಳಗೆ ಬರ್ನಾರ್ಡ್ ಶಾ ಇವನು, ಒಳ್ಳೆಯ ಗುರಿಗಳನ್ನು ಕಣ್ಣೆದುರು ಇರಿಸಿಕೊಳ್ಳುವುದು ಒಳ್ಳೆಯದು. ಆದರೆ ಯಾವಾಗಲೂ ಒಳ್ಳೆಯತನದ ಬೆನ್ನು ಹತ್ತುವುದು ತುಂಬ ಅಪಾಯಕರವೆಂಬುದನ್ನು ಗಮನದಲ್ಲಿ ಇರಿಸಿಕೊಳ್ಳಬೇಕು, ಎಂದು ಹೇಳಿರುವನು. ನಮ್ಮ ವಿದೇಶ ನೀತಿಯು ಪ್ರಪಂಚದ ಸರ್ವಶ್ರೇಷ್ಠರಾದ ವ್ಯಕ್ತಿಗಳು ಹೇಳಿದುದರ ಪೂರ್ತಿ ವಿರುದ್ಧ ದಿಕ್ಕಿನಲ್ಲಿದೆ.

ಸೇನೆಗಾಗಿ ಆಗುವ ಅಂಕೆಯಿಲ್ಲದ ದುಂದುವೆಚ್ಚಗಳು, ಹಸಿವು ಪೀಡಿತರಾದ ಲಕ್ಷಗಟ್ಟಲೆ ಜೀವಗಳಿಗೆ ಅನ್ನವನ್ನು ನೀಡಲು ಪಡಬೇಕಾದ ಪಾಡು ಹಾಗೂ ನಮ್ಮ ದೇಶದ ಉದ್ಯಮೀಕರಣಕ್ಕಾಗಿ ಬೇಕಿರುವ ಅರ್ಥಿಕ ನೆರವನ್ನು ದೊರಕಿಸಲು ಆಗುತ್ತಿರುವ ತೊಂದರೆಗಳು, ಅಸಂಭಾವ್ಯವಾದ ಸಂಗತಿಗಳನ್ನು ಮಾಡಲು ಬೆನ್ನುಹತ್ತುವ ಹಾಗೂ ಯಾವಾಗಲೂ ಸಂತತನದ ಅವತಾರವನ್ನು ಧರಿಸುವ ನೀತಿಯಿಂದಾಗಿ ನಮಗೆ ಅದೆಷ್ಟು ನಷ್ಟವಾಗಿದೆ, ಎನ್ನುವುದಕ್ಕೆ ಸಾಕ್ಷ್ಯಗಳನ್ನು ಒದಗಿಸುತ್ತವೆ.

ನಾವು ಮುನ್ನೂರೈವತ್ತು ಕೋಟಿ ವಾರ್ಷಿಕ ಆದಾಯದಲ್ಲಿ ಒಂದು ನೂರಾಎಂಬತ್ತು ಕೋಟಿ ರೂಪಾಯಿಗಳನ್ನು ಸೇನೆಗಾಗಿ ವ್ಯಯಿಸುತ್ತಿದ್ದೇವೆ. ಇಂಥ ಪ್ರಚಂಡವಾದ ವೆಚ್ಚಕ್ಕೆ ಸರಿಸಾಟಿಯಾದ ಉದಾಹರಣೆ ಬೇರೊಂದಿಲ್ಲ. ಇದು ನಮ್ಮ ವಿದೇಶ ನೀತಿಯ ಪರಿಣಾಮ. ನಮ್ಮ ರಕ್ಷಣೆಯ ವೆಚ್ಚದ ಹೊರೆಯನ್ನು ಇಳಿಸಬಲ್ಲ ಒಬ್ಬ ಸ್ನೇಹಿತನೂ ನಮಗಿಲ್ಲ. ನಾವೇ ಅದನ್ನು ಭರಿಸಬೇಕು. ಹೀಗಾಗಿ ಈ ವಿದೇಶ ನೀತಿಯು ಅದೆಷ್ಟು ಜಾಣತನದ್ದು ಎಂಬುದನ್ನು ನೋಡಿ,

ಪಾಕಿಸ್ಥಾನದೊಡನೆಯ ವೈಮನಸ್ಸು ನಮ್ಮ ವಿದೇಶ ನೀತಿಯ ಒಂದು ಅಂಗವಾಗಿದೆ. ಈ ವೈಮನಸ್ಸು ನನಗೆ ವರ್ಜಿತವಾದುದು.

ಪಾಕಿಸ್ತಾನದೊಡನೆ ವೈಮನಸ್ಸು ಬರಲು ಮುಖ್ಯವಾಗಿ ಎರಡು ಕಾರಣಗಳು. ಒಂದು ಕಾಶ್ಮೀರ ಪ್ರಕರಣ. ಇನ್ನೊಂದು, ಪೂರ್ವ ಬಂಗಾಲದ ಭಾರತೀಯ ಜನರ ಪರಿಸ್ಥಿತಿ. ಅದು ಕಾಶ್ಮೀರದ ಜನಕ್ಕಿಂತಲೂ ದಯನೀಯವಾಗಿರುವುದು ವೃತ್ತಪತ್ರಗಳಿಂದ ತಿಳಿದು ಬರುತ್ತದೆ. ಹೀಗಿರುವಲ್ಲಿ, ನಾವು ಬರಿ ಕಾಶ್ಮೀರದ ಡೋಲನ್ನು ಬಾರಿಸುತ್ತೇವೆ. ಇಷ್ಟಾಗಿಯೂ ನಾವು ನಿಜವಾದ ತತ್ತ್ವವನ್ನು ಆಧರಿಸಿ ಜಗಳಾಡುತ್ತಿಲ್ಲವೆಂದೇ ನಾನು ಸಾಧಿಸುತ್ತೇನೆ. ಯಾರು ನಿಜ ಎನ್ನುವುದು ಮೂಲ ಪ್ರಶ್ನೆಯಾಗಿರದೆ ಏನು ಸೂಕ್ತವಾದುದು, ಎನ್ನುವುದೇ ನಿಜವಾದ ಅಂಶವಾಗಿದೆ. ಹೀಗಾಗಿ ಕಾಶ್ಮೀರದ ವಿಭಜನೆಯೇ ಸೂಕ್ತವಾದುದೆಂಬುದು ನನ್ನ ಪ್ರಾಮಾಣಿಕ ಅಭಿಪ್ರಾಯ. ಭಾರತದ ವಿಭಜನೆಯಂತೆಯೇ ಕಾಶ್ಮೀರದ ಬುದ್ಧಧರ್ಮಿಯರು ಹಾಗೂ ಹಿಂದಿ ಭಾಗಗಳು ಭಾರತದತ್ತ ಇರಬೇಕು ಹಾಗೂ ಬಹುಸಂಖ್ಯ ಮುಸಲ್ಮಾನರ ವಿಭಾಗವನ್ನು ಪಾಕಿಸ್ಥಾನಕ್ಕೆ ಜೋಡಿಸಬೇಕು. ನಿಜವಾಗಿಯೂ ಕಾಶ್ಮೀರದ ಮುಸಲ್ಮಾನರ ಪ್ರಶ್ನೆಯು ನಮಗೆ ಸಂಬಂಧ ಪಟ್ಟುದಲ್ಲ. ಅದು ಪಾಕಿಸ್ಥಾನ ಹಾಗೂ ಅಲ್ಲಿಯ ಸ್ಥಳೀಯ ಮುಸಲ್ಮಾನರಿಗೆ ಸಂಬಂಧಪಟ್ಟುದು. ಅವರು ತಮಗೆ ತೋಚಿದಂತೆ ಅದನ್ನು ಬಿಡಿಸಬೇಕು. ಇಲ್ಲವಾದರೆ ಕಾಶ್ಮೀರದಲ್ಲಿ ಕಾಶ್ಮೀರ ಕಣಿವೆ, ಜಮ್ಮು-ಲಡಾಖ ವಿಭಾಗ ಮತ್ತು ಯುದ್ಧ ವಿರಾಮ ವಿಭಾಗವೆಂದು ಮೂರು ವಿಭಾಗಗಳನ್ನು ಮಾಡಿ, ಕೇವಲ ಕಾಶ್ಮೀರ ಕಣಿವೆಯ ವಿಭಾಗದಲ್ಲಿ ಜನಾಭಿಪ್ರಾಯವನ್ನು ಪಡೆಯಬೇಕು. ಸದ್ಯಕ್ಕೆ ಜನಾಭಿಪ್ರಾಯವನ್ನು ಕುರಿತು ಯೋಚಿಸಲಾಗುತ್ತಿದ್ದು ಅದರಿಂದಾಗಿ ಕಾಶ್ಮೀರದ ಹಿಂದಿ ಹಾಗೂ ಬುದ್ಧ ಸಂಸ್ಕೃತಿಯ ಭಾಗವು ಪಾಕಿಸ್ಥಾನಕ್ಕೆ ಹೋಗಬಹುದೆಂದು ಹುಟ್ಟಿಕೊಳ್ಳುವ ಭಯವು



ಸಾಧಾರವಾದುದು. ಅದರಿಂದಾಗಿ ಇಂದು ಪೂರ್ವ ಬಂಗಾಲದಲ್ಲಿ ಎದುರಿಸಬೇಕಾಗಿ ಬಂದಿರುವ ಘಟನೆಗಳಂಥವೇ ಪ್ರಶ್ನೆಗಳು ಪಾಕಿಸ್ಥಾನದ ಬದಿಯಲ್ಲಿರುವ ಹಿಂದಿ ಹಾಗೂ ಬುದ್ದ ಜನರೆದುರಿಗೆ ಆ ಎಂದು ಬಾಯಿ ತೆರೆದು ನಿಲ್ಲುವವು.

ಇನ್ನು, ನನ್ನ ರಾಜೀನಾಮೆಗೆ ಕಾರಣವಾದ ಬೇರೆ ಪ್ರಶ್ನೆಗಳತ್ತ ತಿರುಗುವೆನು. ಸರಕಾರದ ಸಚಿವಸಂಪುಟವೆಂದರೆ ಬೇರೆ ಬೇರೆ ಸಮಿತಿಗಳು ಮೊದಲೇ ನಿರ್ಧರಿಸಿದ ಕಾರ್ಯದ ರೂಪುರೇಷೆಗಳನ್ನು ನೋಂದಾಯಿಸುವ ಹಾಗೂ ಮುದ್ರಾಬದ್ಧಗೊಳಿಸುವ ಕೇಂದ್ರವಾಗಿದೆ. ಸಚಿವ ಸಂಪುಟವು ಈ ಸಮಿತಿಗಳ ತಂತ್ರದಿಂದಲೇ ನಡೆಯುತ್ತದೆ. ಒಂದು ಸುರಕ್ಷಾ ಸಮಿತಿಯಿದೆ. ಒಂದು ವಿದೇಶೀ ಚಟುವಟಿಕೆಗಳ ಸಮಿತಿ. ಈ ಸಮಿತಿಯು ವಿದೇಶಗಳ ಎಲ್ಲ ಮಹತ್ವದ ಘಟನೆಗಳ ಬಗೆಗೆ ಉಪಾಯಗಳನ್ನು ಯೋಜಿಸುತ್ತದೆ. ಹಾಗೆಯೇ ಸುರಕ್ಷಾ ಸಮಿತಿಯು ರಕ್ಷಣೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ನೋಡಿಕೊಳ್ಳುತ್ತದೆ. ಕೆಲವು ಸಚಿವರನ್ನು ಇವುಗಳ ಸದಸ್ಯರನ್ನಾಗಿ ನೇಮಿಸಲಾಗುತ್ತದೆ. ನಾನು ಇವುಗಳಲ್ಲಿ ಯಾವುದೇ ಸಮಿತಿಯ ಸದಸ್ಯನಾಗಿರಲಿಲ್ಲ,

ಈ ಸಮಿತಿಗಳು ಗುಟ್ಟಾಗಿ ತಮ್ಮ ಕೆಲಸಗಳನ್ನು ಮಾಡುತ್ತವೆ. ದೇಶದ ನೀತಿಯನ್ನು ನಿರ್ಧರಿಸುವಲ್ಲಿ ಸದಸ್ಯರಲ್ಲದ ಸಚಿವರು ಪಾಲ್ಗೊಳ್ಳಲಾರರು. ಆದರೆ ಅವರೆಲ್ಲ ಸಂಯುಕ್ತ ಹೊಣೆಗಾರಿಕೆಯನ್ನು ಮಾತ್ರ ಹೊರಬೇಕಾಗುತ್ತದೆ. ನನಗೆ ಇಂತಹ ವಿಚಿತ್ರ ಹಾಗೂ ಅಸಾಧ್ಯವಾದ ಸಂಗತಿಯನ್ನು ಮಾಡಬೇಕಾಗುತ್ತಿತ್ತು.

ಇನ್ನು, ಕೊನೆಯದಾಗಿ ರಾಜೀನಾಮೆಯನ್ನು ಕೊಡಲು ಕಾರಣವಾದ ಸಂಗತಿಯ ಬಗೆಗೆ ಹೇಳುವೆನು. ಅದೆಂದರೆ, ಹಿಂದೂ ಕೋಡ್ ಬಿಲ್ ಬಗೆಗಿನ ಸರಕಾರದ ಮುಂದೂಡುವಿಕೆ ಹಾಗೂ ಅದರ ಪರಿವೆಗೇಡಿತನಗಳು. ಈ ಬಿಲ್ಲನ್ನು ೧೧ ಎಪ್ರಿಲ್ ೧೯೪೭ರಂದು ಮೊದಲ ಬಾರಿಗೆ ಮಂಡಿಸಲಾಯಿತು. ಅದು ನಾಲ್ಕು ವರ್ಷಗಳ ಕಾಲ ಜೀವ ಹಿಡಿದುಕೊಂಡಿರಲು ಸಾಧ್ಯವಾಯಿತು, ಅದರ ನಾಲ್ಕು ಕಲಮುಗಳು ಅಂಗೀಕೃತವಾದ ಬಳಿಕ ಆ ಬಿಲ್ಲನ್ನು ಅಕ್ಷರಶಃ ಕೊಲೆ ಮಾಡುವಾಗ ಯಾರಿಗೂ ತಪ್ಪೆನ್ನಿಸಲಿಲ್ಲ. ಬಿಲ್ಲಿನ ಶುರುವಾತೇ ಅಪಸ್ಮಾರದಿಂದಾಯಿತು! ಸರಕಾರಕ್ಕೆ ಸುಮಾರು ಒಂದು ವರ್ಷದ ಕಾಲ ಆ ಬಿಲ್ಲನ್ನು ಸೆಲೆಕ್ಟ್ ಕಮಿಟಿಗೆ ಕಳಿಸಿಕೊಡಬೇಕೆನ್ನುವ ಅವಶ್ಯಕತೆಯೇ ಕಾಣಲಿಲ್ಲ.

ಬಿಲ್ಲನ್ನು ೯ ಎಪ್ರಿಲ್ ೧೯೪೮ರಂದು ಸೆಲೆಕ್ಟ್ ಕಮಿಟಿಗೆ ಕಳಿಸಲಾಯಿತು. ೧೨ ಆಗಸ್ಟ್ ೧೯೪೮ರಂದು ಅದು ತನ್ನ ಅಭಿಪ್ರಾಯವನ್ನು ಪಾರ್ಲಿಮೆಂಟಿಗೆ ಸಲ್ಲಿಸಿತು. ಅದರ ಮಸೂದೆಯನ್ನು ದಿನದ ಕಲಾಪಕ್ಕೆ ಸೇರ್ಪಡಿಸುವಲ್ಲಿ ಇಷ್ಟೊಂದು ಕಾಲ ಕಳೆಯಿತು. ೧೯೪೯ರ ಫೆಬ್ರುವರಿಯ ಅಧಿವೇಶನದವರೆಗೆಂದರೆ ಈ ಮಸೂದೆಯನ್ನು ಕೈಬಿಡಲಾಗಿ ಅದನ್ನು ಕುರಿತು ಚರ್ಚಿಸಲು ನಿರಾಕರಿಸಲಾಯಿತು. ಹೀಗಾಗಿ ಆ ಚರ್ಚೆ ಹತ್ತು ತಿಂಗಳು ಮುಂದಕ್ಕೆ ಹೋಯಿತು. ಚರ್ಚೆಯು ನಾಲ್ಕು ದಿನ ಫೆಬ್ರುವರಿಯಲ್ಲಿ, ಒಂದು ದಿನ ಮಾರ್ಚದಲ್ಲಿ, ಎರಡು ದಿನ ಎಪ್ರಿಲ್ ೧೯೪೯ ರಲ್ಲಿ, ಎಂಬುದಾಗಿ ವಿಭಾಗಿಸಲ್ಪಟ್ಟಿತು! ಆ ಮೇಲೆ ೧೯ ಡಿಸೆಂಬರ್ ೧೯೪೯ರ ಒಂದೇ ದಿನವನ್ನು ನೀಡಲಾಯಿತು. ಸೆಲೆಕ್ಟ್ ಕಮಿಟಿಯು

ಒಪ್ಪಿಕೊಂಡ ನನ್ನ ಹಿಂದೂ ಬಿಲ್ ದ ಮಸೂದೆಯು ಪಾರ್ಲಿಮೆಂಟಿನ ಎದುರು ಬರಬೇಕೆಂಬ ನನ್ನ ಗೊತ್ತುವಳಿಯನ್ನು ಆ ದಿನ ಗಮನಕ್ಕೆ ತಂದುಕೊಳ್ಳಲಾಯಿತು. ಹಿಂದೂ ಕೋಡ್ ಬಿಲ್‌ಗೆ ೧೯೫೦ರಲ್ಲಿ ಆಸ್ಪದವನ್ನೇ ನೀಡಲಾಗಲಿಲ್ಲ! ಮುಂದೆ ಆ ಬಿಲ್ ಐದು ಫೆಬ್ರುವರಿ ೧೯೫೧ರಂದು ಚರ್ಚೆಗೆ ಬಂದು ಒಂದೊಂದು ಕಲಮನ್ನು ಕುರಿತು ಚರ್ಚೆಗೆ ಶುರುವಾಯಿತು. ಅದಕ್ಕಾಗಿ ಕೇವಲ

**ಹಿಂದೂ ಸಮಾಜದ ವರ್ಗವರ್ಗಗಳ ಉಚ್ಚ ನೀಚತೆ ಮತ್ತು ಲಿಂಗ ಭೇದಗಳನ್ನು ಉಳಿಸಿಕೊಂಡು ಸುಧಾರಣೆಯ ಯಾವುದೇ ಕಾನೂನನ್ನು ತಯಾರಿಸುವುದೆಂದರೆ ಹೊಲಸನ್ನು ತೆಗೆಯದೆ ಅದು ಮೇಲೆಯೇ ಇಸ್ಪೀಟುಗಳ ಬಂಗ್ಲೆಯನ್ನು ಕಟ್ಟಿದಂತೆ !**

ಐದು, ಆರು ಮತ್ತು ಏಳು ಈ ಮೂರೇ ದಿನಗಳನ್ನು ಕೊಡಲಾಯಿತು. ಮತ್ತೆ ಬಿಲ್ಲನ್ನು ಕೈಬಿಡಲಾಯಿತು!

ಇದು ಈ ಪಾರ್ಲಿಮೆಂಟಿನ ಕೊನೆಯ ಅಧಿವೇಶನವಾಗಿದೆ. ಹೀಗಾಗಿ ಸಚಿವ ಸಂಪುಟವು ಹಿಂದೂ ಕೋಡ್ ಬಿಲ್ಲನ್ನು ಕುರಿತು ತೀರ್ಮಾನಿಸಬೇಕಿತ್ತು. ಅದನ್ನು ಈಗಿನ ಪಾರ್ಲಿಮೆಂಟು ಪೂರ್ತಿಗೊಳಿಸಬೇಕೆ, ಹೊಸ ಪಾರ್ಲಿಮೆಂಟಿನ ಎದುರು ಇರಿಸಬೇಕೆ, ಎಂಬುದನ್ನು ಕುರಿತು ಯೋಚಿಸಬೇಕಿತ್ತು. ಅದನ್ನು ಕುರಿತು ಇದೇ ಪಾರ್ಲಿಮೆಂಟಿನಲ್ಲಿ ಇತ್ಯರ್ಥಪಡಿಸಬೇಕೆಂದು ತೀರ್ಮಾನವಾಯಿತು. ಹೀಗಾಗಿ ೧೭ ಸೆಪ್ಟೆಂಬರ್ ೧೯೫೧ರಂದು ಬಿಲ್ಲನ್ನು ಚರ್ಚೆಗಾಗಿ ಎತ್ತಿಕೊಳ್ಳಲಾಯಿತು. ಈ ಚರ್ಚೆ ನಡೆದಿರುವಾಗಲೇ ಪ್ರಧಾನ ಮಂತ್ರಿಯವರು ಹೊಸದೊಂದು ಯೋಜನೆಯನ್ನು ನಡುವೆಯೇ ಮಂಡಿಸಿದ್ದರಿಂದ ವೇಳೆಯ ಅಭಾವ ಉಂಟಾಗಿ, ಬಿಲ್ಲಿನ ಎಲ್ಲ ಕಲಮುಗಳು ಪಾಸ್ ಆಗಲು ಸಾಧ್ಯವಿಲ್ಲದ ಕಾರಣ ಅದರ ಒಂದು ಭಾಗವನ್ನಾದರೂ ಪಾಸ್ ಮಾಡಿಸಿಕೊಂಡು ಕಾನೂನಾಗಿ ಮಾರ್ಪಡಿಸಿದರೆ ಇಡಿಯ ಬಿಲ್ಲು ಕೊಳೆಯುತ್ತ ಬಿದ್ದಿರಲಾರದು. ಇದಂತೂ ಒಂದು ದೊಡ್ಡ ಬಿಕ್ಕಟ್ಟು ಆಗಿತ್ತು. ಆದರೆ ನಾನು ಅದನ್ನು ಒಪ್ಪಿಕೊಂಡೆ. ಏಕೆಂದರೆ, ಎಲ್ಲವೂ ನಾಶ ಹೊಂದುವಾಗ ಸ್ವಲ್ಪವಾದರೂ ಉಳಿಸಿಕೊಳ್ಳಬೇಕು!' ಈ ಬಿಲ್ಲಿನಲ್ಲಿರುವ ಮದುವೆ ಮತ್ತು ವಿಚ್ಛೇದನೆಯ ವಿಭಾಗಗಳನ್ನು ಆಯ್ದುಕೊಳ್ಳಬೇಕೆಂದು ಪ್ರಧಾನಿಗಳು ಸೂಚಿಸಿದರು. ಹೀಗೆ ಕತ್ತರಿಸಲಾದ ಬಿಲ್ಲನ್ನು

ಮಂಡಿಸಲಾಯಿತು. ಎರಡು ಮೂರು ದಿನಗಳ ತರುವಾಯ ಪ್ರಧಾನಿಯವರು ಇನ್ನೊಂದು ಯೋಜನೆಯನ್ನು ಹೊರತೆಗೆದರು. ಅದೆಂದರೆ, ಇಡಿಯ ಬಿಲ್ಲನ್ನೇ ಕೈಬಿಡಬೇಕು, ಎಂಬುದು! ಇದಂತೂ ನನಗೆ ಅಚ್ಚರಿಯ ಬಲು ದೊಡ್ಡ ಪೆಟ್ಟಾಗಿತ್ತು. ನಾನು ತೆಪ್ಪಗಾಗಿಬಿಟ್ಟೆ, ವೇಳೆಯ ಅಭಾವದಿಂದಾಗಿ ಕತ್ತರಿಸಲಾದ ಈ ಬಿಲ್ಲನ್ನು ಮುಂದೂಡಲಾಗುತ್ತಿದೆ, ಎಂಬ ಸಂಗತಿಯು ನನಗೆ ಮನದಟ್ಟಾಗುವಂತೆಯೂ, ಒಪ್ಪಿಗೆಯಾಗುವಂತೆಯೂ ಇರಲಿಲ್ಲ. ಏಕೆಂದರೆ, ಪ್ರಭಾವಿಗಳಾದ ಬೇರೆ ಸಚಿವರು ತಮ್ಮ ತಮ್ಮ ಬಿಲ್ಲುಗಳನ್ನು ಮುಂದಕ್ಕೆ ಸರಿಸಲು ಹೆಣಗುವುದನ್ನು ಕಂಡಿದ್ದೆ.

ಪೂರ್ಣಾವಸ್ಥೆಯಲ್ಲಿರುವ ಹಿಂದೂ ಕೋಡ್ ಬಿಲ್ಲನ್ನು ತಳ್ಳಿ, ಬನಾರಸ, ಅಲೀಗಡ ವಿಶ್ವವಿದ್ಯಾಲಯಗಳ ಅಪೂರ್ಣಾವಸ್ಥೆಯ ಬಿಲ್ಲುಗಳನ್ನು ಪಾರ್ಲಿಮೆಂಟಿನೆದುರು ಮಂಡಿಸಲು ವೇಳೆಯನ್ನು ಹೇಗೆ ಕೊಡಲಾಯಿತೆನ್ನುವುದು ನನಗೆ ತಿಳಿಯದು. ಈ ವಿಶ್ವವಿದ್ಯಾಲಯಗಳನ್ನು ನಡೆಯಿಸಲು ಬೇಕಿದ್ದ ಯಾವುದೇ ಕಾನೂನು ಅಸ್ತಿತ್ವದಲ್ಲಿ ಇರಲಿಲ್ಲವೆಂದೇನೂ ಅಲ್ಲ. ಈ ಬಿಲ್‌ಗಳು ಇಷ್ಟರಲ್ಲಿಯೇ ಪಾಸ್ ಆಗಿರದಿದ್ದರೂ ಇವೆರಡೂ ವಿಶ್ವವಿದ್ಯಾಲಯಗಳೇನೂ ರಸಾತಳವನ್ನು ತಲುಪುತ್ತಿರಲಿಲ್ಲ. ಪ್ರೆಸ್ ಬಿಲ್ಲನ್ನು ಕೂಡ ಇಷ್ಟೊಂದು ಅವಸರದಿಂದ ಮುಂದಕ್ಕೆ ತರಲು ಕಾರಣವಿರಲಿಲ್ಲ. ಈ ಬಿಲ್ಲುಗಳನ್ನು ತಡೆಹಿಡಿಯಬಹುದಿತ್ತು. ಪ್ರಧಾನಿಗಳು ಹಿಂದೂ ಕೋಡ್ ಬಿಲ್ಲಿನ ಬಗೆಗೆ ಪ್ರಾಮಾಣಿಕರಾಗಿರಲಿಲ್ಲವೆಂದಲ್ಲ. ಆದರೆ ಅದನ್ನು ಪಾಸ್ ಮಾಡಲು ಬೇಕಿದ್ದ ವಿಶೇಷವಾದ ತಾಳ್ಮೆ ಹಾಗೂ ಆಸ್ಥೆ ಅವರಲ್ಲಿ ಇರಲಿಲ್ಲ.

ಹಿಂದೂ ಕೋಡ್ ಸಂದರ್ಭದಲ್ಲಿ ನನ್ನನ್ನು ಹಿಂಸಿಸಲಾಯಿತು, ಎಂದಂದರೆ ಅದೊಂದು ಅತಿಶಯೋಕ್ತಿ ಎನ್ನಿಸಲಾರದು. ಸಚಿವಸಂಪುಟದಲ್ಲಿ ನನಗೆ ರಾಜ್ಯಕರ್ತರ ಪಕ್ಷದ ಬೆಂಬಲ ಇರಲಿಲ್ಲ. ಪ್ರಧಾನಿಯವರು ಈ ಬಿಲ್ ಸಂದರ್ಭದಲ್ಲಿ ಬಿಚ್ಚುಮನದಿಂದ ಮತದಾನವನ್ನು ಮಾಡಲು ಕಾಂಗ್ರೆಸ್ ಪಕ್ಷಕ್ಕೆ ಸ್ವಾತಂತ್ರವನ್ನು ಕೊಟ್ಟಿದ್ದರು. ಇದೊಂದು ಅನಿರೀಕ್ಷಿತವಾದ ಸಂಗತಿಯಾಗಿತ್ತು. ಪಕ್ಷದ ಇತಿಹಾಸದಲ್ಲಿ ಇದೊಂದು ಹೊಸ ಪದ್ಧತಿಯಾಗಿತ್ತು. ಏನಿಲ್ಲೆಂದರೂ ಪಾರ್ಲಿಮೆಂಟ್ ಪಕ್ಷದ

ನಾಯಕನಾದರೂ ಭಾಷಣಗಳ ವೇಳೆಗಳಿಗೆ ನಿರ್ಬಂಧನೆಯನ್ನು (Whip) ಹಾಕುವನೆಂದು ನಿರೀಕ್ಷಿಸಲಾಗಿತ್ತು. ಆವಶ್ಯಕವಿದ್ದ ಚರ್ಚೆ ಮುಗಿದ ತರುವಾಯವಾದರೂ ವಾದವಿವಾದಗಳನ್ನು ನಿಲ್ಲಿಸುವಂತೆ ಪ್ರಮುಖ ಪಕ್ಷದ ನಾಯಕನಿಗೆ ಸೂಚನೆಯನ್ನು ನೀಡಲಾಗುವುದೆಂದು ಭಾವಿಸಿದ್ದೆ. ಇಂಥ ನಿರ್ಬಂಧದಿಂದಾಗಿ ಹೊತ್ತಿಗೆ ಸರಿಯಾಗಿ ಬಿಲ್ ಪಾಸ್ ಆಗಬಹುದಿತ್ತು. ಆದರೆ ಎಂದಿಗೂ ಇಂಥ ಸೂಚನೆಯನ್ನು ನೀಡಲಾಗಲಿಲ್ಲ. ಪಾರ್ಲಿಮೆಂಟಿನ ಕಾರ್ಯಸಚಿವ ಹಾಗೂ ಸರಕಾರಿ ಪಕ್ಷದ ಪ್ರತಿನಿಧಿಗಳನ್ನು ಕುರಿತು ಕಡಿಮೆ ಹೇಳಿದಷ್ಟು ಒಳ್ಳೆಯದು. ಅವರು ಹಿಂದೂ ಕೋಡ್ ಬಿಲ್ಲನ್ನು ದ್ವೇಷಿಸುವವರಾಗಿದ್ದರು! ಅವರು ಅದಕ್ಕೆ ಅಪ್ಪಟ ವಿರೋಧಕರಾಗಿದ್ದರು. ಪ್ರಸ್ತುತ ಬಿಲ್ಲು ಚರ್ಚೆಗೆ ಬಂದಾಗ ಅವರು ಹಾಜರಿದ್ದು, ಶಿಷ್ಟಾಚಾರದಂತೆ ಚರ್ಚೆಯನ್ನು ಮುಗಿಸಲು ನನಗೆ ನೆರವಾಗುವುದನ್ನು ಬೇಕೆಂದೇ ತಪ್ಪಿಸಿದರು. ಒಂದೊಂದು ಶಬ್ದವನ್ನು ಹಿಡಿದು ನಿರರ್ಥಕವಾಗಿ ಚರ್ಚೆಯು ಶುರುವಾಗಿ ಅದು ಹಲವು ದಿನಗಳವರೆಗೆ ಸಾಗಿತು. ಸರಕಾರದ ವೇಳೆಯನ್ನು ಉಳಿಸುವುದು ಹಾಗೂ ಸರಕಾರದ ಬಿಲ್ಲುಗಳು ಮತ್ತು ಇತರ ಕೆಲಸಗಳು ಹೇಗೆ ಬೇಗನೆ ಮುಗಿದಾವು ಎನ್ನುವತ್ತ ಗಮನ ಹರಿಸುವುದು ಸರಕಾರಿ ಪ್ರತಿನಿಧಿಯ ಕೆಲಸ. ಆದರೆ ಈ ಪ್ರತಿನಿಧಿಯು ವ್ಯವಸ್ಥಿತವಾಗಿ ಹಿಂದಕ್ಕೆ ಸರಿದುಕೊಂಡರು. ಪ್ರಧಾನಿಗೆ ನಿಷ್ಠನಾಗಿರದ ಪ್ರತಿನಿಧಿ ಹಾಗೂ ಇಂಥ ಪ್ರತಿನಿಧಿಗೆ ನಿಷ್ಠನಾಗಿರುವ ಪ್ರಧಾನಿ, ಎಂಬ ಸನ್ನಿವೇಶವನ್ನು ನಾನೆಲ್ಲಿಯೂ ಕಾಣಲಿಲ್ಲ! ಶಿಸ್ತು ಮುರಿಯುವ ಹಾಗೂ ಸಂವಿಧಾನಕ್ಕೆ ತಕ್ಕಂತೆ ನಡೆದುಕೊಳ್ಳದ ಈ ಪ್ರತಿನಿಧಿಯು ಪ್ರಧಾನಮಂತ್ರಿಗೆ ಬಲು ಅಚ್ಚುಮೆಚ್ಚಿನವನಾಗಿದ್ದನು! ಅವನ ಅಶಿಸ್ತಿನ ಈ ನಡುವಳಿಕೆಯನ್ನು ಗಮನಕ್ಕೆ ತಂದುಕೊಳ್ಳುವ ಬದಲು ಅವನಿಗೆ ಪಕ್ಷದಲ್ಲಿ ಬಡ್ತಿ ಸಿಕ್ಕಿತು. ಇಂಥ ಪರಿಸ್ಥಿತಿಯಲ್ಲಿ ಯಾವಾಗಲಾದರೂ ಕೆಲಸವನ್ನು ಮಾಡುವುದು ಅಸಾಧ್ಯವೇ ಸರಿ.

ಹಿಂದೂ ಕೋಡ್ ಬಿಲ್‌ನ ವಿರುದ್ಧ ಬಹುಮತವಿತ್ತೆಂದು ಹೇಳಲಾಗುತ್ತಿದೆ. ಆದರೆ ಎಷ್ಟು ಜನ ಇಂಥ ವಿರೋಧಕರಿದ್ದರು? ಹಿಂದೂ ಕೋಡ್ ಬಿಲ್ ಕುರಿತು ಪಾರ್ಲಿಮೆಂಟರಿ ಕಾಂಗ್ರೆಸ್ ಪಕ್ಷದಲ್ಲಿ ಹಲವು ಸಲ ಚರ್ಚೆ ನಡೆಯಿತು. ವಿರೋಧಕರು ಮತದಾನದ ಕಾಲಕ್ಕೆ ಕುಸಿದು ಬಿದ್ದರು. ಕಟ್ಟಕೊನೆಯಲ್ಲಿ ಅದನ್ನು ಗಮನಕ್ಕೆ ತಂದುಕೊಂಡಾಗ ಪಕ್ಷದ ಒಂದುನೂರು ಇಪ್ಪತ್ತು ಜನ ಸಂಸದರಲ್ಲಿ ಕೇವಲ ಇಪ್ಪತ್ತು ಜನರು ಮಾತ್ರ ವಿರೋಧದಲ್ಲಿದ್ದುದು ಕಂಡುಬಂದಿತು. ಅದನ್ನು ಈ ಪಕ್ಷದಲ್ಲಿ ಚರ್ಚೆಗೆ ಎತ್ತಿಕೊಂಡಾಗ ಅದರ ನಲವತ್ನಾಲ್ಕು ಕಲಮುಗಳು ಕೇವಲ ಮೂರೂವರೆ ಗಂಟೆಗಳಲ್ಲಿಯೇ ಅಂಗೀಕೃತವಾದವು. ಇದರಿಂದ ಸತ್ತಾಧಾರಿ ಪಕ್ಷದಲ್ಲಿ ಎಷ್ಟು ವಿರೋಧವಿತ್ತೆಂಬುದರ ಕಲ್ಪನೆ ಬರುವುದು!

ಪಾರ್ಲಿಮೆಂಟಿನಲ್ಲಿ ಕೂಡ ಎರಡು, ಮೂರು ಹಾಗೂ ನಾಲ್ಕನೆಯ ಕಲಮುಗಳ ಸಂದರ್ಭದಲ್ಲಿ ಮತಗಳು ವಿಭಜಿಸಲ್ಪಟ್ಟವು. ಪ್ರತಿ ಸಲವೂ ಅದು ಪ್ರಚಂಡವಾದ ಮತಗಳಿಂದ ಪಾಸಾಯಿತು. ಹಿಂದೂ ಕೋಡ್ ಬಿಲ್ಲಿನ ಆತ್ಮವೆನ್ನಿಸಿದ ನಾಲ್ಕನೆಯ ಕಲಮು ಕೂಡ ಪಾಸಾಯಿತು.

ಹೀಗಿರುವಾಗಲೂ ನಾನು ಪ್ರಧಾನಿಯವರ ವೇಳೆಯ ನೆಪವನ್ನು ಹೇಗೆ ಒಪ್ಪಿಕೊಳ್ಳಲಿ? ನನ್ನ ರಾಜೀನಾಮೆಯನ್ನು ಕುರಿತು ಇಷ್ಟೊಂದು ಸವಿಸ್ತರವಾಗಿ ವಿವರಿಸಲು ಕಾರಣವೆಂದರೆ ನಾನು ಅನಾರೋಗ್ಯದ ಕಾರಣದಿಂದಾಗಿ ರಾಜೀನಾಮೆಯನ್ನು ಕೊಡುತ್ತಿದ್ದೇನೆಂದು ಕೆಲವರು, ವದಂತಿಯನ್ನು ಹುಟ್ಟಿಸಿರುವುದು. ಅನಾರೋಗ್ಯದ ನಿಮಿತ್ತವನ್ನು ಹೇಳಿ ನನ್ನ ಕರ್ತವ್ಯದಿಂದ ತುಸುವೂ ಕದಲುವ ಇಲ್ಲವೆ ಹಿಂಜರಿಯುವ ಮನುಷ್ಯ ನಾನಲ್ಲ.

ನನ್ನ ರಾಜೀನಾಮೆಯು ವಸ್ತುಸ್ಥಿತಿಗೆ ತಕ್ಕಂತಿಲ್ಲವೆಂದು ಕೆಲವರ ಹೇಳಿಕೆ. ಸರಕಾರದ ವಿದೇಶ

**ಹಿಂದೂ ಸಮಾಜದ ವರ್ಗವರ್ಗಗಳ ಉಚ್ಚ ನೀಚತೆ ಮತ್ತು ಲಿಂಗ ಭೇದಗಳನ್ನು ಉಳಿಸಿಕೊಂಡು ಸುಧಾರಣೆಯ ಯಾವುದೇ ಕಾನೂನನ್ನು ತಯಾರಿಸುವುದೆಂದರೆ ಹೊಲಸನ್ನು ತೆಗೆಯದೆ ಅದು ಮೇಲೆಯೇ ಇಸ್ಪೀಟುಗಳ ಬಂಗ್ಲೆಯನ್ನು ಕಟ್ಟಿದಂತೆ !**

ನೀತಿಯಾಗಲಿ ಇಲ್ಲವೆ ಹಿಂದುಳಿದ ವರ್ಗಗಳಿಗೆ ನೀಡಲಾಗುತ್ತಿರುವ ವರ್ತನೆಯಾಗಲಿ ಇಷ್ಟವಾಗದಿದ್ದಲ್ಲಿ ನಾನು ಈ ಮೊದಲೇ ರಾಜೀನಾಮೆಯನ್ನು ಕೊಡಬೇಕಿತ್ತು. ಕೆಲವರಿಗೆ ಈ ಆಪಾದನೆಯು ನಿಜವೆಂದು ತೋರೀತು. ಆದರೆ ರಾಜೀನಾಮೆ ಕೊಡುವುದನ್ನು ಮುಂದೂಡಲು ಕೆಲವು ಬಲವತ್ತರವಾದ ಕಾರಣಗಳಿವೆ. ಒಂದೆಂದರೆ, ನನ್ನ ಸಚಿವ ಪದದ ಹೆಚ್ಚಿನ ವೇಳೆಯು ಭಾರತದ ಸಂವಿಧಾನವನ್ನು ತಯರಿಸುವುದರಲ್ಲಿ ಖರ್ಚಾಯಿತು. ನಾನು ೨೬ ಜನವರಿ ೧೯೫೦ರ ವರೆಗೆ ಅದರಲ್ಲಿ ತನ್ಮಯನಾಗಿದ್ದೆ. ತರುವಾಯದಲ್ಲಿ ನಾನು ಜನರ ಪ್ರತಿನಿಧಿತ್ವದ ಬಿಲ್ ಹಾಗೂ ಡೀಲಿಮಿಟೇಶನ್ ಆರ್ಡರ್‌ಗಳ ಕೆಲಸದಲ್ಲಿದ್ದೆ. ಹೀಗಾಗಿ ವಿದೇಶ ನೀತಿಯತ್ತ ಗಮನ ಹರಿಸಲು ನನಗೆ ವೇಳೆ ಸಿಕ್ಕಲಿಲ್ಲ. ಕೈಗೆತ್ತಿಕೊಂಡ ಕೆಲಸವನ್ನು ಬಿಸುಟಿ ಬೇರೆ ಕಡೆಗೆ ಗಮನ ಹರಿಸುವುದು ಸೂಕ್ತವಾದುದಲ್ಲ.

ನಾನು ಕೇವಲ ಹಿಂದೂ ಬಿಲ್‌ಗೋಸ್ಕರ ಉಳಿದೆ. ಈ ಕಾರಣವು ಕೆಲವರಿಗೆ ತಪ್ಪೆನ್ನಿಸಬಹುದು. ಆದರೆ ನನ್ನ ದೃಷ್ಟಿ ಬೇರೆಯಾಗಿತ್ತು. ಪಾರ್ಲಿಮೆಂಟ್‌ದ ಎದುರಿನ ಹಿಂದೂ ಕೋಡ್ ಬಿಲ್ ಒಂದು ಮಹತ್ವದ ಘಟನೆಯಾಗಿತ್ತು. ಅಲ್ಲದೆ ದೇಶದ ಯಾವುದೇ ಅಧಿವೇಶನದಲ್ಲೂ ಅದನ್ನು ಕುರಿತು ಯೋಚಿಸಲಾಗಿರಲಿಲ್ಲ. ಇಷ್ಟೇ ಅಲ್ಲದೆ ಈ ಮೊದಲಾಗಲಿ ಇಲ್ಲವೆ ಇನ್ನು ಮುಂದೆಯಾಗಲಿ ಪಾರ್ಲಿಮೆಂಟಿನಲ್ಲಿ ಬರುವ ಯಾವುದೇ ಕಾನೂನು ಹಿಂದೂ ಕೋಡ್ ಬಿಲ್ಲನ್ನು ಸರಿಗಟ್ಟದಷ್ಟು ಮಟ್ಟಿಗಿನ ಮಹತ್ವವು ಅದಕ್ಕಿದೆ. ಹಿಂದೂ ಸಮಾಜದ ವರ್ಗ-ವರ್ಗಗಳ ಉಚ್ಚನೀಚತೆ ಮತ್ತು ಲಿಂಗಭೇದಗಳನ್ನು ಉಳಿಸಿಕೊಂಡು ಸುಧಾರಣೆಯ ಯಾವುದೇ ಕಾನೂನನ್ನು ತಯಾರಿಸುವುದೆಂದರೆ ಹೊಲಸನ್ನು ತೆಗೆಯದೆ ಅದರ ಮೇಲೆಯೇ ಇಸ್ಪೀಟುಗಳ ಬಂಗ್ಲೆಯನ್ನು ಕಟ್ಟಿದಂತೆ ! ಇದಾದರೆ ಸಂವಿಧಾನದ ಅಪಹಾಸ್ಯ. ಇದರಿಂದ, ನಾನು ಹಿಂದೂ ಕೋಡ್ ಬಿಲ್ಲಿಗೆ ಇಷ್ಟೊಂದು ಮಹತ್ವವನ್ನೇಕೆ ನೀಡುತ್ತೇನೆ, ಎನ್ನುವುದರ ಕಲ್ಪನೆ ಬಂದೀತು. ಹೀಗಾಗಿ ನಾನು ತೀವ್ರವಾದ ಭಿನ್ನಾಭಿಪ್ರಾಯಗಳಿರುವಾಗಲೂ ಸಚಿವ ಸಂಪುಟದಲ್ಲಿ ಉಳಿದೆ. ಇದರಲ್ಲಿ ನಾನೇನಾದರೂ ತಪ್ಪು ಮಾಡಿದ್ದರೆ ಅದು ಒಂದು ಘನವಾದ ಮತ್ತು ಒಳ್ಳೆಯ ಕೆಲಸಕ್ಕಾಗಿಯೇ ಸರಿ. ಹಿಂದೂ ಕೋಡ್ ಬಿಲ್‌ನ್ನು ವಿರೋಧಿಸುವವರನ್ನು ಪೇಚಿಗೆ ಸಿಕ್ಕಿಸುವ ಹುಮ್ಮಸ್ಸು ನನ್ನಲ್ಲಿ ಇರಲಿಕ್ಕಿಲ್ಲವೆ? ಪ್ರಧಾನಿಯವರು ಪಾರ್ಲಿಮೆಂಟಿನಲ್ಲಿ ಇದನ್ನು ಕುರಿತು ಮೂರು ಸಲ ನೀಡಿದ ವಿವರಣೆಯತ್ತ ಎಲ್ಲರ ಗಮನವನ್ನು ಸೆಳೆಯಬಯಸುತ್ತೇನೆ.

ತಾ. ೨೮ ನವೆಂಬರ್ ೧೯೪೯ರಂದು ಪ್ರಧಾನಿಯವರು , "ಸರಕಾರವು ಹಿಂದೂ ಕೋಡ್ ಬಿಲ್ಲನ್ನು ಪಾಸ್ ಮಾಡಲು ನಿರ್ಧರಿಸಿದೆ. ಅದು ಆ ದಾರಿಯಲ್ಲಿದೆ........... ಸರಕಾರ ಅದನ್ನು ಪಾಸ್ ಮಾಡಿಸಿಕೊಳ್ಳಲಿದೆ. ಆದರೆ ಈ ಅಧಿಕಾರವು ಪಾರ್ಲಿಮೆಂಟಿನದು. ಸರಕಾರವು ಮಂಡಿಸಿದ ಮಹತ್ವದ ಬಿಲ್ಲಿಗೆ ಪಾರ್ಲಿಮೆಂಟು ಒಪ್ಪಿಗೆಯನ್ನು ನೀಡದಿದ್ದರೆ ಪಾರ್ಲಿಮೆಂಟಿಗೆ ಸದ್ಯದ ಸರಕಾರ ಬೇಡವಾಗಿದೆ, ಎಂಬುದು ಅದರ ಸ್ಪಷ್ಟವಾದ ಅರ್ಥ, ಹೊಸ ಸರಕಾರವೇನೋ ಆ ಸ್ಥಾನವನ್ನು ತುಂಬುವುದು. ಆದುದರಿಂದ, ಹಿಂದೂ ಕೋಡ್ ಬಿಲ್ ಒಂದು ಮಹತ್ವದ ಬಿಲ್ ಆಗಿದ್ದು ಸರಕಾರದ ಅಸ್ತಿತ್ವವು ಅದನ್ನು ಅವಲಂಬಿಸಿದೆ, ಎನ್ನುವುದನ್ನು ಸದಸ್ಯರು ಗಮನದಲ್ಲಿ ಇರಿಸಿಕೊಳ್ಳುವುದು ಒಳ್ಳೆಯದು. ಸರಕಾರದ ಅಸ್ತಿತ್ವವು ಅದನ್ನು ಅವಲಂಬಿಸಿದೆ. ಅದು ಸರಕಾರಕ್ಕೆ ಅಷ್ಟೊಂದು ಮಹತ್ವದ್ದಾಗಿ ಕಾಣುತ್ತದೆ."

ಇದಾದ ಬಳಿಕ, ತಾ. ೧೯ ಡಿಸೆಂಬರ್ ೧೯೪೯ರಲ್ಲಿ ಪ್ರಧಾನಿಯವರು, "ಸರಕಾರವು ಹಿಂದೂ ಕೋಡ್ ಬಿಲ್ಲಿಗೆ ಹೆಚ್ಚಿನ ಮಹತ್ವವನ್ನು ಕೊಡುತ್ತಿಲ್ಲವೆಂದು ಯಾರೂ ತಪ್ಪಾಗಿ ಭಾವಿಸಕೂಡದು. ಈ

ಬಿಲ್ ಸರಕಾರಕ್ಕೆ ತುಂಬ ಮಹತ್ವದ್ದೆನ್ನಿಸಲು ಕಾರಣ ಅದರ ಕೆಲವು ವಿಶಿಷ್ಟ ಕಲಮುಗಳಲ್ಲ, ಬದಲು ಅದು ಆರ್ಥಿಕ ಹಾಗೂ ಸಾಮಾಜಿಕ ಪ್ರಶ್ನೆಗಳನ್ನು ಮೂಲಭೂತವಾಗಿ ಗುರುತಿಸಿದೆ, ಎಂಬುದು. ನಾವು ಪರಕೀಯರಿಂದ ಬಿಡುಗಡೆ ಹೊಂದಿ ರಾಜಕೀಯ ಸ್ವಾತಂತ್ರವನ್ನು ಪಡೆದೆವು. ಸ್ವಾತಂತ್ರದ ಈ ಪ್ರಯಾಣದಲ್ಲಿ ಹಲವು ಹಂತಗಳಿವೆ. ಆರ್ಥಿಕ ಹಾಗೂ ಸಾಮಾಜಿಕದವಂತೂ ಮಹತ್ವದವುಗಳು. ಇವೆಲ್ಲ ಮುಂಚೂಣಿಗಳಲ್ಲಿ ಪುರೋಗಾಮಿಯಾದ ಪ್ರಗತಿ ಆಗಬೇಕಿದೆ. ಅಂದರೇನೆ ಸಮಾಜ ಸುಧಾರಿಸುವುದು."

ತಾ, ೧೬ ಸೆಪ್ಟೆಂಬರ್ ೧೯೫೧ರಲ್ಲಿ ಮತ್ತೆ ಪ್ರಧಾನಿಯವರು ಹೀಗೆನ್ನುತ್ತಾರೆ :

"ಈ ಬಿಲ್ ಚರ್ಚೆಗೆ ಬರಬೇಕು. ಅದು ಪ್ರಗತಿ ಹೊಂದುತ್ತ ಹೋಗುವುದು ಸರಕಾರಕ್ಕೆ ಬೇಕಿದೆ, ಎಂಬ ಬಗೆಗೆ ಸರಕಾರವು ಪ್ರತ್ಯೇಕವಾಗಿ ಭರವಸೆಯನ್ನು ನೀಡುವ ಕಾರಣವಿಲ್ಲ. ಸಾಧ್ಯವಿದ್ದ ಮಟ್ಟಿಗೆ ಪ್ರಗತಿಯನ್ನು ಹೊಂದುವುದು ಆವಶ್ಯಕ. ಆದರೆ ಸದ್ಯಕ್ಕೆ ಅದನ್ನು ಕುರಿತಾದ ಚರ್ಚೆಯನ್ನು ನಿಲ್ಲಿಸಬೇಕೆಂದು ನಮಗೆ ಅನ್ನಿಸುತ್ತದೆ. ಮುಂದೆ ಅವಕಾಶ ಸಿಕ್ಕುತ್ತಲೇ ಅದನ್ನು ಚರ್ಚೆಗೆ ಎತ್ತಿಕೊಳ್ಳಬೇಕು. ಅಂದರೆ, ಅದು ಇದೇ ಪಾರ್ಲಿಮೆಂಟಿನಲ್ಲಿ ಪಾಸಾಗುವುದು.''

ಬಿಲ್ಲನ್ನು ಮುಂದಿರಿಸಿದ ತರುವಾಯ ಪ್ರಧಾನಿಯವರು ಈ ಭರವಸೆಯನ್ನು ನೀಡಿದರು. ಪ್ರಧಾನಿಯವರ ಈ ಭರವಸೆಯನ್ನು ಯಾರು ತಾನೆ ನಂಬಲಿಕ್ಕಿಲ್ಲ ? ಪ್ರಧಾನಿಯವರ ಭರವಸೆಗಳು ಹಾಗೂ ಪ್ರಾತ್ಯಕ್ಷಿಕೆಗಳಲ್ಲಿ ವ್ಯತ್ಯಾಸವಿರುವುದು ನನಗೆ ಕಂಡರೆ ಆ ಅಪರಾಧ ನನ್ನದಂತೂ ಅಲ್ಲ.

ನಾನು ಸಚಿವ ಸಂಪುಟದಿಂದ ಹೊರ ಹೋಗುವುದು ಯಾರಿಗೂ ಅಷ್ಟೊಂದು ಮಹತ್ವದ್ದಾಗಿ ಕಾಣಲಿಕ್ಕಿಲ್ಲ. ಆದರೆ ನಾನು ಸತ್ಯಕ್ಕೆ ನಿಷ್ಠನಾಗಿದ್ದರೆ ಇಲ್ಲಿಂದ ಹೊರ ಬೀಳುವುದೇ ಸೂಕ್ತ. ಅದಕ್ಕೂ ಮುನ್ನ, ನನ್ನ ಸಹಕಾರಿಗಳು ನನಗೆ ತೋರಿದ ಪ್ರೀತಿ ಹಾಗೂ ಶಿಷ್ಟಾಚಾರಗಳಿಗಾಗಿ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಾನು ನನ್ನ ಪಾರ್ಲಿಮೆಂಟ್ ಸದಸ್ಯತ್ವವನ್ನು ಉಳಿಸಿಕೊಳ್ಳುವೆನು. ಪಾರ್ಲಿಮೆಂಟಿನ ಸದಸ್ಯರು ನನ್ನ ಬಗೆಗೆ ತೋರಿದ ಸಹನೆಯನ್ನು ಕುರಿತು ಅವರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಜನತಾ' : ೨೦ ಆಕ್ಟೋಬರ್ ೧೯೫೧.

## ೧೧೦, ಡಾ. ಬಾಬಾಸಾಹೇಬ ಅಂಬೇಡಕರರ ವ್ರತ

“ನನ್ನ ಸ್ವಂತದ ಅನುಭವದಿಂದ ನನ್ನ ಸಮುದಾಯದ ಜೀವನದ ಮಾಹಿತಿ ನನಗೆ ತಿಳಿದಿದೆ. ದುಃಖ, ದಾರಿದ್ರಗಳ ನಮ್ಮ ಸಮುದಾಯಕ್ಕಾಗಿ ಏನನ್ನಾದರೂ ಮಾಡಬೇಕೆಂಬ ಪ್ರೇರಣೆಯಿಂದಲೇ ನಾನು ಹೆಣಗಿದ್ದೇನೆ. ನನ್ನಲ್ಲಿ ಇರಬಹುದಾದ ಸರ್ವೋತ್ಕೃಷ್ಟತೆಯನ್ನು ಅವರಿಗಾಗಿ ಧಾರೆ ಎರೆದಿದ್ದೇನೆ. ಆದರೆ ಇದನ್ನು ಮಾಡುವಾಗ ಪೂರ್ತಿಯಾಗಿ ಯೋಚಿಸಿ, ಅರಿವಿನಿಂದಲೇ ಪ್ರತಿಯೊಂದು ಹೆಜ್ಜೆಯನ್ನು ಇಟ್ಟಿದ್ದೇನೆ. ನಾನೆಂದಿಗೂ ಯಾರ ರಾಗ ಲೋಭಗಳನ್ನೂ ಲೆಕ್ಕಿಸಲಿಲ್ಲ. ಸದಸದ್ವಿವೇಕ ಬುದ್ಧಿಗೆ ಸರಿ ಕಂಡುದನ್ನೇ ಮಾಡಿದ್ದೇನೆ. ನಾನೊಬ್ಬನೇ ಗಾಂಧಿಯವರನ್ನು ಎದುರಿಸಿ ನಿಂತೆ, ಹಲವರು ನನ್ನನ್ನು ಹೇಳಹೆಸರಿಲ್ಲದಂತೆ ಮಾಡಲು ಯತ್ನಿಸಿದರು. ಆದರೆ ಅವರು ಯಶಸ್ವಿಗಳಾಗಲಿಲ್ಲ. ಇಂದು ಕೂಡ ನನ್ನ ಸಾಮರ್ಥ್ಯದಿಂದಲೇ ನಾನು ರಾಜಕೀಯದಲ್ಲಿ ಇದ್ದೇನೆ. ನಾನು ಯಾರ ಕೈಗೊಂಬೆಯಲ್ಲ, ಮುಂದೆಯೂ ಆಗಲಾರೆ.

- ಡಾ. ಬಾಬಾಸಾಹೇಬ ಅಂಬೇಡಕರ

(ಕಿರ್ಲೋಸ್ಕರ, ದಿಲ್ಲಿ ವಿಶೇಷ ಸಂಚಿಕೆ)

'ಜನತಾ' : ೨ ಫೆಬ್ರವರಿ ೧೯೫೨.

**೧೧೧. ಹಳೆಯ ವಾಙ್ಮಯದ ಜೀರ್ಣೋದ್ಧಾರ**

ಮರಾಠಿ ವಾಙ್ಮಯವು ಹಲವು ದಿಕ್ಕುಗಳಲ್ಲಿ ಪ್ರಗತಿಯನ್ನು ಹೊಂದುತ್ತಿರುವುದು ಮರಾಠಿಯ ಹಲವು ಸಾಹಿತಿಗಳಿಂದ ಕೇಳಿಬರುತ್ತಿದೆ. ಹಳೆಯ ವಾಙ್ಮಯದಿಂದ ಪೋಷಿತನಾದ ನನ್ನಂಥವನು ಇದನ್ನು ಕುರಿತು ತನ್ನ ಅಭಿಪ್ರಾಯವನ್ನು ನೀಡುವುದು ಸೂಕ್ತವಾಗಲಾರದು. ಆದರೂ, ಹಳೆಯ ಹಾಗೂ ಹೊಸ ಮರಾಠಿ ವಾಲ್ಮಯದ ಪರಿಧಿಯನ್ನು ಪರೀಕ್ಷಿಸಲಾಗಿ ಕೆಲವು ಪ್ರಕಾರದ ಹಳೆಯ ವಾಙ್ಮಯವು ಇಂದಿನ ಹೊಸ ಬಗೆಯ ವಾಹ್ಮಯದಿಂದ ಕಳಚಿ

ಬಿದ್ದಿದೆ, ನಾಶ ಹೊಂದಿದೆ, ಎಂದು ಅಂದರೆ ಅದೊಂದು ಅವಸರದ ಮಾತಾಗಲಿಕ್ಕಿಲ್ಲವೆಂದು, ಖಂಡಿತ ನನಗೆ ಅನ್ನಿಸುತ್ತದೆ. ಹಳೆಯ ವಾಜ್ಯದಲ್ಲಿ ಲಾವಣಿ ಮತ್ತು 'ಗಾರ್ಹಾಣೆ' ಗಳು (ಗೋಳುಗಳು) ಸಾಕಷ್ಟು ದೊಡ್ಡ ಪ್ರಮಾಣದಲ್ಲಿದ್ದವು. ಆದರೆ ಇಂದಿನ ವಾಙ್ಮಯವನ್ನು ಅವಲೋಕಿಸಿದರೆ ಇವೆರಡೂ ಬಗೆಯ ವಾಹ್ಮಯಗಳು ಕೂದಲೆಳೆಯಷ್ಟೂ ಅದರಲ್ಲಿ ಇಲ್ಲವಲ್ಲದೆ ಅವುಗಳ ಹೆಸರೂ ಕೂಡ ಕಾಣಸಿಕ್ಕುವುದಿಲ್ಲ. ಲಾವಣಿ ಮತ್ತು ಗಾರ್ಹಾಣೆ ಗಳು ಕಡಿಮೆ ಮಟ್ಟದವೆಂದು ಒಪ್ಪಿದರೂ ಲಾಲಿತ್ಯ ಹಾಗೂ ಬೆರಗುಗಳ ದೃಷ್ಟಿಯಿಂದ ಇಂಥ ವಾಹ್ಮಯವನ್ನು ಕಡಿಮೆ ಮಟ್ಟದ್ದೆಂದು ಬಗೆಯಲಾಗದು. ಈ ವಾಙ್ಮಯಗಳು ನಾಶವಾದುದನ್ನು ಕಂಡು ನನಗೆ ಕೆಡಕೆನ್ನಿಸುತ್ತಿದೆ. ಒಂದು ಕಾಲಕ್ಕೆ ಈ ವಾಯವನ್ನು ಸಂಗ್ರಹಿಸಬೇಕೆಂದು ಅಂದುಕೊಂಡಿದ್ದೆ. ಆದರೆ ಹಲವು ಬಗೆಯ ಕೆಲಸಗಳ ಒತ್ತಡದಿಂದಾಗಿ ಅದನ್ನು ಪೂರ್ತಿಗೊಳಿಸಲು ಸಾಧ್ಯವಾಗಲಿಲ್ಲ. ಇವುಗಳ ಪೈಕಿ 'ಗಾರ್ಹಾಣೆ' ಎಂಬುದು ಎಂಥ ವಾಙ್ಮಯ ಪ್ರಕಾರವೆಂಬುದನ್ನು ಜನರಿಗೆ ಪರಿಚಯಿಸುವ ದೃಷ್ಟಿಯಿಂದ 'ಸಾಳೆಬಾಚೇ ಗಾರ್ಹಾಣೆ' ('ಸಾಳೆಬನ ಗಾರ್ಹಾಣೆಗಳು )ಯನ್ನು ಪ್ರಕಟಣೆಗಾಗಿ ಕಳಿಸುತ್ತಿದ್ದೇನೆ. ಸಾವಂತವಾಡಿ ಸಂಸ್ಥಾನದಲ್ಲಿ ಝೂರಾಪ್ ಎಂಬ ಊರಿನಲ್ಲಿ ಪಂಡೂಚೇ ಪಾಥರ್ ಎಂಬ ಒಂದು ಸ್ಥಾನವಿದೆ. ಈ ಸ್ಥಾನದ ದೇವತೆಯ ಹೆಸರು “ಚಾಳೋಬಾ , ಪ್ರತಿವರ್ಷ ಈ ಚಾಳೋಬಾನ ಹೆಸರಿನಿಂದ ಸಮಾರಾಧನೆಯನ್ನು ಏರ್ಪಡಿಸುವ ಸಂಪ್ರದಾಯವಿದೆ. ತರುವಾಯ ಭೋಜನವನ್ನು ನೀಡಲಾಗುತ್ತದೆ. ಭೋಜನದ ತರುವಾಯ ಚಾಳೋಬಾನ ಎದುರಿಗೆ ಒಂದು ತೆಂಗಿನ ಕಾಯಿಯನ್ನು ಇರಿಸಿ 'ಗಾರ್ಹಾಣೆ ಯನ್ನು ಹೇಳಲಾಗುತ್ತದೆ. ಸ್ಥಳೀಯ ಹೊಲೆಯ ಜಾತಿಯ ಮನುಷ್ಯನು ಈ 'ಗಾರ್ಹಾಣೆ ಯನ್ನು ಹೇಳಬೇಕಿದೆ. 'ಗಾರ್ಹಾಣೆ ಯಲ್ಲಿ ಇಪ್ಪತ್ತೇಳು ಕಲಮುಗಳಿವೆ.

ಆ ಹೊಲೆಯರವನು ಪ್ರತಿಯೊಂದು ಕಲಮನ್ನು ಕ್ರಮವಾಗಿ ಉಚ್ಚರಿಸಬೇಕು. ಅವನು ಅದನ್ನು ಉಚ್ಚರಿಸಿಯಾದ ಬಳಿಕ ಅದರ ಕೊನೆಯಲ್ಲಿ ಉಳಿದವರು 'ಹೋಯ್ ಮ್ಹಾರಾಜ್ಯಾ' ('ಹೌದು, ಮಹಾರಾಜ ) ಎಂದೆನ್ನಬೇಕು. ಈ 'ಗಾರ್ಹಾಣೆ ಯ ಕಲಮುಗಳು ಕೆಳಗಿನಂತಿವೆ :

೧ ಅಪ್ಪ ದೇವ ಮ್ಹಾರಾಚ್ಯಾ ಚಾಳೋಬಾ. ಹೌದು ಮಹಾರಾಜ

೨ ಏಳು ನೂರು ಊರುಗಳ ಚಾಳ್ಯಾ ನೀನು. ಹೌದು ಮಹಾರಾಜ



೩ ಈ ಮೂರು ಊರುಗಳ ಆದಿಸ್ಥಾನದ ಮಹಾರಾಜ ಹೌದು ಮಹಾರಾಜ

೪ ನೀನು ರಾಜನ ದೇವನು ಚಾಳೋ. ಹೌದು ಮಹಾರಾಜ

೫ ಅಂತೆಯೇ ನೀ ಹೊಲೆಯರ ಪೋಟಕರಾಚ್ಯಾ ಹೆಸರಿಂದ ಧಾವಿಸುವಿ. ಹೌದು ಮಹಾರಾಜ ೬ ಅಂತೆಯೇ ಮಹಾರಾಜನೆ ನಿನಗಿಂದು ಸಮಾರಾಧನೆ, ತೆಂಗನ್ನಿಟ್ಟೆ,

ಒಪ್ಪಿಕೋ ಅದನ್ನು ಹೌದು ಮಹಾರಾಜ

೭ ಊರಲ್ಲಿ ದೇಸ ಧಾಮ (ಮಾರಿಬೇನೆ) ಬಂದರೆ ನಾಲ್ಕು ಗಡಿಯಾಚೆಗೆ

ಲಾನ್ಥವೀ (ಹೊಡೆದೊಡಿಸು.) ಹೌದು ಮಹಾರಾಜ

೮ ಊರು ಗ್ರಾಮಗಳ ಕಲ್ಯಾಣವ ಮಾಡು. ಹೌದು ಮಹಾರಾಜ

೯ ಅದರಂತೆ ಈವತ್ತು ಆ ಅರವತ್ತು ಊರುಗಳ ಚಾಳೋ. ಹೌದು ಮಹಾರಾಜ

೧೦ ಅವನ್ನು ಕಾಪಾಡಲು ಒಪ್ಪಿಕೋ. ಹೌದು ಮಹಾರಾಜ

೧೧ ಅಣ್ಣಾ, ಭಗವತೀನ್ನ ಒಪ್ಪಿಸು .ಹೌದು ಮಹಾರಾಜ

೧೨ ಆ ರಾಮೇಶ್ವರನನ್ನ ಒಪ್ಪಿಸು. ಹೌದು ಮಹಾರಾಜ

೧೩ ಇಂದು ನೀನು ರವಳನಾಥನಿಗೆ ತಿಳಿಸಿ ಹೇಳು .ಹೌದು ಮಹಾರಾಜ

೧೪ ಇಂದು ನೀನು ಕಲ್ಯಾಣ ಪುರುಷನಿಗೆ ತಿಳಿಸಿ ಹೇಳು. ಹೌದು ಮಹಾರಾಜ

೧೫ ಈ ಭೂಮಿಯ ಬ್ರಾಹ್ಮಣನಿಗೆ ತಿಳಿಸಿ ಹೇಳು. ಹೌದು ಮಹಾರಾಜ

೧೬ ಇಂದು ನೀನು ಬೇತಾಳನಿಗೆ ತಿಳಿಸಿ ಹೇಳು .ಹೌದು ಮಹಾರಾಜ

೧೭ ಪಿಶಾಚಿಗಳಿಗೆ ತಿಳಿಹೇಳು .ಹೌದು ಮಹಾರಾಜ

೧೮ ಹನ್ನೆರಡು ಐದರ ಲೆಕ್ಕವನ್ನು ಒಂದು ಮಾಡು .ಹೌದು ಮಹಾರಾಜ

೧೯ ಹನ್ನೆರಡವರನ್ನು ಮೊದಲಿನಂತೆ ಒಂದು ಮಾಡು. ಹೌದು ಮಹಾರಾಜ

೨೦ ಹೊಲೆಗಿಲಿಯರಿಗೆಲ್ಲ ತಿಳಿಸಿ ಹೇಳು. ಹೌದು ಮಹಾರಾಜ

೨೧ ಊರಿನ ಗಿರೋಬನಿಗೆ ತಿಳಿಸಿ ಹೇಳು .ಹೌದು ಮಹಾರಾಜ

೨೨ ಇಂದು ನೀನು ನಿತಕರಿಗೆ ತಿಳಿಹೇಳು. ಹೌದು ಮಹಾರಾಜ

೨೩ **ಸೀಮಘಡಿ ದೇವನನ್ನು ಒಪ್ಪಿಸು. ಹೌದು ಮಹಾರಾಜ

೨೪ ಮತ್ತು ಈ ತೆಂಗಿನಕಾಯಿ ಇಡ್ತೀನಿ ಅದನ್ನ ಒಪ್ಪಿಕೋ. ಹೌದು ಮಹಾರಾಜ

೨೫ ಮತ್ತು ಊರುಗ್ರಾಮಗಳ ಕಲ್ಯಾಣ ಮಾಡು. ಹೌದು ಮಹಾರಾಜ

೨೬ ಸೇವೆ ಚಾಕರಿಗಳನ್ನು ಮಾಡಿಸಿಕೊ. ಹೌದು ಮಹಾರಾಜ

೨೭ ಮತ್ತು ಮಾಡಿದ ಕೆಲಸಕ್ಕೆ ಯಶ ಕೊಟ್ಟು ಕಲ್ಯಾಣ ಮಾಡೋ ಹೌದು ಮಹಾರಾಜ

ಸಂಗ್ರಾಹಕರು - ಭೀಮರಾವ ರಾಮಜೀ ಅಂಬೇಡಕರ

* ಟಿಪ್ಪಣಿ :-ತೀನ ಗಾವ ಆಕೆ, ರೀನೇಮಳೆ ಮತ್ತು ಝುರೋಪಿ, ಈ ಮೂರು ಊರುಗಳು.

** ಟಿಪ್ಪಣಿ :-ಸೀಮಘಡ್ಯಾಕರಾಜೀಕರ-ಊರಿನ ಗಡಿಯಲ್ಲಿದ್ದ ದೇವರು.

'ಜನತಾ' : ೨ ಆಗಸ್ಟ್ ೧೯೫೨.



, ಹೊಲೆಯ ಸಮುದಾಯದ ಐತಿಹಾಸಿಕ ಮಹತ್ವದ ಸ್ಥಾನವನ್ನು ಗಮನಕ್ಕೆ ತಂದುಕೊಂಡರೆ ಇಂಥ ಸಂಪ್ರದಾಯವು ಇದ್ದಿತೆಂದು ಕೆಳಗಿನ ಪುರಾವೆಯಿಂದ ಸಾಬೀತಾಗುತ್ತದೆ -

ಸಂಪಾದಕರು.

"ಒಂದು ಕಾಲಕ್ಕೆ ಕೊಂಕಣದಲ್ಲಿ ಹೊಲೆಯರ ಸ್ವತಂತ್ರವಾದ ಒಂದು ರಾಜ್ಯವಿತ್ತು. ಆರ್ಯ ಮೊದಲಾದವರು ಅವರನ್ನು ಗೆದ್ದುಕೊಂಡು, ಅವರಿಗೆ ಬಂಡು ಹೂಡಲು ಎಳ್ಳಷ್ಟೂ ಆಸ್ಪದ ಲಭಿಸದಷ್ಟು ಶರಣಾಗತಿಯ ಷರತ್ತುಗಳನ್ನು ಅವರ ಮೇಲೆ ಹೇರಿದರು. ಈ ಐತಿಹಾಸಿಕ ಘಟನೆಗಳ ಮುದ್ರೆಯ ಕುರುಹುಗಳೆಂದರೆ ಕೊಂಕಣದ ಊರುಗಳಲ್ಲಿ ಹೊಲೆಯರಿಗೆ ತುಂಬ ಮರ್ಯಾದೆ ಹಾಗೂ ಮಹತ್ವದ ಸ್ಥಾನವನ್ನು ನೀಡಲಾದುದು. ಅದು ಸಾವಿರಾರು ವರ್ಷಗಳ ಕಾಲ ಉಳಿದುಕೊಂಡಿದೆ. ಹೊಲೆಯರಿಗೆ ನೀಡಲಾದ 'ಭೂಮಿಪುತ್ರ' ಎಂಬ ಹೆಸರು ಕೊಂಕಣದಲ್ಲಿ ಇಂದಿಗೂ ಬಳಕೆಯಲ್ಲಿದೆ. ಊರಿನ ದೇವರ ವಿಧಿಗಳನ್ನು ಹೊಲೆಯರ ಕೈಯಿಂದಲೇ ಪೂರ್ತಿಗೊಳಿಸಲಾಗುತ್ತದೆ. ಹೊಲೆಯರು ದೇವದೇವತೆಯರನ್ನು ಕೂಗಿ ಕರೆದು ಎಚ್ಚರಗೊಳಿಸಬೇಕಾಗುತ್ತದೆ. ಅವರ ಕೋಲು ಕುಳಿತುಕೊಳದ ಹೊರತು ದೇವ-ದೇವತೆಗಳ ಮೈಯಲ್ಲಿ ದೇವತ್ವವು ಬರುವುದಿಲ್ಲ. 'ದೇವಚಾರ' ಎಂಬ ಒಬ್ಬ ದೇವತೆಯು ಕೊಂಕಣದಲ್ಲಿ ಇರುವಳು. ಅವಳನ್ನು ಶಾಂತಗೊಳಿಸಲು ಮಾಡಬೇಕಿದ್ದ ವಿಧಿಯು ಹೊಲೆಯನಿಗೆ ಕಂಬಳಿ ಮತ್ತು ಅನ್ನವನ್ನು ನೀಡದ ಹೊರತು ಪೂರ್ತಿಯಾಗಲಾರದಲ್ಲದೆ ಅಲ್ಲಿಯತನಕ ದೇವತೆಯೂ ಸಂತುಷ್ಟಳಾಗಲಾರಳು. ಊರಿನ ದೇವ-ದೇವತೆಗಳೆದುರು 'ಗಾರ್ಹಾಣೆ ಯನ್ನು (ಬವಣೆಯನ್ನು ತೋಡಿಕೊಳ್ಳು)ಮಾಡಿಸುವುದಿದ್ದರೆ ಮರಾಠ, ಮೊದಲಾದ ಸ್ಪೃಶ್ಯ ಗ್ರಾಮಸ್ಥರು

ಹೊಲೆಯರನ್ನು ನಮ್ರತೆಯಿಂದ ವಿನಂತಿಸಬೇಕಾಗುತ್ತದೆ. ಅಲ್ಲದೆ ಹೊಲೆಯರು ಗಾರ್ಹಾಣೆಯನ್ನು ಹಾಕಿದರೆ ಮಾತ್ರ ದೇವ-ದೇವತೆಗಳು ಪ್ರಸನ್ನರಾಗುತ್ತಾರೆಂಬ ಸಂಪ್ರದಾಯವು ಸಾವಿರಾರು ವರ್ಷಗಳಿಂದ ನಡೆದು ಬಂದಿದೆ. ಸುಶಿಕ್ಷಿತ ಹಾಗೂ ಅಶಿಕ್ಷಿತ ಕೊಂಕಣಸ್ಥರು ಇದನ್ನು ನಂಬುತ್ತಾರೆ.*

ಮಹಾರಾಷ್ಟ್ರದ ಹೊಲೆಯ ಸಮುದಾಯ, ಅವರ ಐತಿಹಾಸಿಕ ಮತ್ತು ಸದ್ಯದ ಸ್ಥಿತಿಯಲ್ಲಿರುವ ಅವರ ನೆಲೆಗಳ ಚಿತ್ರಣವನ್ನು ಮಹಾರಾಷ್ಟ್ರ ರಾಜ್ಯ ಗ್ಯಾಜೆಟಿಯರಿ ನಲ್ಲಿ ಕೆಳಗಿನಂತೆ ನಮೂದಿಸಲಾಗಿದೆ.

"Mahars

This is the most numerous of the Untoucabale castes of Maharashtra. There is almost no village in this region where there are no Mahars. One finds them from the Arebian sea-coast to the jungles of Raipur and Bastar. Everywhere they speak the Marathi language and are hereditary village servants. Though a small bit of land is given to the Mhara community of each village, it is never sufficient to procure the livelihood of the community which has to depend on the good-will of the villagers for their subsistence. The hereditary work of the Mahars is to remove the dead cattle from the village, to

೧ : ಬೈರಮೋಡೆ, ಸಂಪುಟ ೩ ಪುಟ ೧೫.



sweep the village streets, to run errands for the village officers, and to keep a watch on village property etc. The Mahar is generally the principal witness in dispute about boundries of fields etc. It is said that the

Mahar walks more than all the villagers put together. In modern times the cities with their growing factories have offered the Mahars the opportunity to escape from the narrow tyranny of the hereditary serfdom and untouchability and they have availed themseves greedily of this opportunity. The main labour force in the Nagpur Textile Mills is that of Mahars. The makers of native leaf-cigarettes in the eastern districts of Bhandara and Gondia are mostly Mahars. The textile mills of Bombay have drawn Mahar labour and the sugar mills of Nagr district are also manned to a large extent by the Mahars. They are thus becoming rapidly urbanised. A large number was also converted to Chistianity in the last century but conversions have practically stopped now except in Eastern Maharashtra where the Missions are still very active. The Mahar sample is drawn from Nagpur, Poona and Belapur (near Nagar). The Bavane sample is drawn from the region east of the Wainaganga river called the Bavan Thadi and is treated seperately. The Mahars are divided into numerous endogamous regional divisions. The septs are not always clearly defined. The surnames which are used as clannames are in many cases the same as those of Marathas and Kunbis. Crosscousin marriage is allowed. Divorce and widow remarriage are also allowed. A widow does not marry her husband's brother. The Mahars claim to be about ten per cent of the whole Marathi population. It is a very mixed community ranging in skin colour from very fair to dark and cannot genarally be distinguished from other communities except through their poverty and dress."

* ಹೊಲೆಯರು

ಮಹಾರಾಷ್ಟ್ರದ ಹಲವಾರು ಅಸ್ಪೃಶ್ಯ ಜಾತಿಗಳಲ್ಲಿ ಇದು ಒಂದು ಜಾತಿ, ಈ ನಾಡಿನಲ್ಲಿ ಹೊಲೆಯರಿಲ್ಲದ ಓಂದೂ ಹಳ್ಳಿ ಇರಲಿಕ್ಕಿಲ್ಲ. ಅವರನ್ನು ಅರಬಿ ಸಮುದ್ರದ ದಡದಿಂದ ಹಿಡಿದು ರಾಯಪೂರ ಹಾಗೂ ಬಸ್ತರದ ಕಾಡುಗಳ ವರೆಗೆ ಎಲ್ಲೆಡೆಗಳಲ್ಲಿ ಕಾಣಬಹುದು. ಅವರು ಇವೆಲ್ಲೆಡೆಗಳಲ್ಲಿ ಮರಾಠಿ ಭಾಷೆಯನ್ನು ಮಾತಾಡುತ್ತಾರೆ. ತಲೆಮಾರುಗಳಿಂದ ಅವರು ಹಳ್ಳಿಯ ಸೇವಕರು. ಪ್ರತಿಯೊಂದು ಹಳ್ಳಿಯಲ್ಲಿ ಹೊಲೆಯ ಸಮುದಾಯದವರಿಗೆ ಒಂದು ತುಂಡು ನೆಲವನ್ನು ನೀಡಲಾಗಿದೆ. ಅವರಿಗೆ ಹೊಟ್ಟೆ ಹೊರೆಯುವಷ್ಟು ಉತ್ಪನ್ನಗಳನ್ನು ನೀಡಲು ಅದು ಎಳ್ಳಷ್ಟೂ ಸಾಲದು. ಹೀಗಾಗಿ ಅವರು

1: Maharashtra State Gazetteer, 1968. P. 32.

ತಮ್ಮ ಬದುಕಿಗಾಗಿ ಹಳ್ಳಿಯ ಜನರ ಸದ್ಭಾವನೆಯನ್ನು ಅವಲಂಬಿಸಬೇಕಿದೆ. ಸತ್ತ ದನಗಳನ್ನು ಊರಿನಿಂದ ಹೊರಕ್ಕೆ ಸಾಗಿಸುವುದು, ಬೀದಿಗಳನ್ನು ಗುಡಿಸುವುದು, ಹಳ್ಳಿಯ ಅಧಿಕಾರಿಗಳ ಓಲೆಕಾರರಾಗಿ ಕೆಲಸವನ್ನು ಮಾಡುವುದು ಹಾಗೂ ಹಳ್ಳಿಯ ಸಂಪತ್ತನ್ನು ಕಾಯುವುದು, ಮೊದಲಾದವು, ಹೊಲೆಯರ ತಲೆತಲಾಂತರಗಳಿಂದ ನಡೆದು ಬಂದ ವೃತ್ತಿಗಳಾಗಿವೆ. ಹೊಲಗಳ ಗಡಿರೇಷೆ, ಮೊದಲಾದ ತಂಟೆಗಳಲ್ಲಿ ಸಾಮಾನ್ಯವಾಗಿ ಹೊಲೆಯರ ಸಾಕ್ಷಿಯು ಮುಖ್ಯವಾದುದು. ಇಡಿಯ ಹಳ್ಳಿಗರು ಸೇರಿ ನಡೆಯದಷ್ಟು ಅಂತರವನ್ನು ಸಾಮಾನ್ಯವಾಗಿ ಹೊಲೆಯನೊಬ್ಬನೇ ಕಾಲ್ನಡಿಗೆಯಲ್ಲಿ ಕ್ರಮಿಸುತ್ತಾನೆಂದು ಹೇಳಲಾಗುತ್ತದೆ. ಆಧುನಿಕ ಕಾಲದಲ್ಲಿ, ಬೆಳೆಯುತ್ತಿರುವ ಕಾರ್ಖಾನೆಗಳಿಂದ ಕೂಡಿದ ನಗರಗಳು ತಮ್ಮ ತಲೆಮಾರುಗಳ ಸಂಕುಚಿತ ಜೀತದ ದೌರ್ಜನ್ಯ ಹಾಗೂ ಅಸ್ಪೃಶ್ಯತೆಗಳಿಂದ ತಪ್ಪಿಸಿಕೊಳ್ಳಲು ಹೊಲೆಯರಿಗೆ ಅವಕಾಶಗಳನ್ನು ಒದಗಿಸಿವೆ. ಅವರು ಆಸೆಬುರುಕರಂತೆ ಅವುಗಳನ್ನು ತಪ್ಪದೆ ಬಳಸಿಕೊಂಡಿದ್ದಾರೆ. ನಾಗಪೂರಿನ ಹೆಚ್ಚಿನ ಜವಳಿ ಮಿಲ್ಲುಗಳಲ್ಲಿ ಹೊಲೆಯರದೇ ಮುಖ್ಯವಾದ ಕಾರ್ಮಿಕ ಸಾಮರ್ಥವಿದೆ. ಪೂರ್ವ ದಿಕ್ಕಿನ ಭಂಡಾರಾ ಹಾಗೂ ಗೊಂಡ ಜಿಲ್ಲೆಗಳಲ್ಲಿ ಸ್ಥಳೀಯ ಎಲೆಗಳಿಂದ ಬೀಡಿಗಳನ್ನು ತಯಾರಿಸುವವರೆಲ್ಲ ಹೆಚ್ಚಾಗಿ ಹೊಲೆಯರು. ಮುಂಬಯಿಯ ಜವುಳಿ ಮಿಲ್ಲುಗಳು ಹೊಲೆಯರ ಕಾರ್ಮಿಕರನ್ನು ಸೆಳೆದಿವೆ. ಅಲ್ಲದೆ (ಅಹಮ್ಮದ) ನಗರ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳೂ ಕೂಡ ಹೆಚ್ಚಿನ ಹೊಲೆಯ ಕಾರ್ಮಿಕರನ್ನು ಹೊಂದಿವೆ. ಹೀಗಾಗಿ ಅವರು ಶೀಘ್ರವಾಗಿ ನಾಗರೀಕರಣಕ್ಕೆ ಒಳಗಾಗುತ್ತಿರುವರು. ಅವರು ಕಳೆದ ಶತಮಾನದಲ್ಲಿ ಬಲು ದೊಡ್ಡ ಸಂಖ್ಯೆಯಲ್ಲಿ ಕ್ರಿಸ್ತ ಮತಕ್ಕೆ ಮತಾಂತರ ಹೊಂದಿದರು. ಇಂದು ಮತಾಂತರವು ಬಹುಮಟ್ಟಿಗೆ ನಿಂತಿದೆ. ಮಹಾರಾಷ್ಟ್ರದ ಪೂರ್ವ ಭಾಗದಲ್ಲಿ ಮಿಶನರಿಗಳು ತುಂಬ ಸಕ್ರಿಯರಾಗಿರುವ ಕಾರಣ ಅಲ್ಲಿ ಇಂದಿಗೂ ಮತಾಂತರವು ಸಾಗಿದೆ. ನಾಗಪೂರ, ಪುಣೆ ಹಾಗೂ ಬೇಲಾಪೂರ(ಅ. ನಗರದ ಬಳಿಯ)ಗಳಿಂದ ಹೊಲೆಯರ ಈ ಮಾದರಿಗಳನ್ನು ಕಲೆಹಾಕಲಾಗಿದೆ. ಬವನೆ ಮಾದರಿಯನ್ನು ವೈನಗಂಗಾ ನದಿಯ ಹತ್ತಿರದ ಬವನ ಥಾಡಿ ಎಂಬ ಪ್ರದೇಶದಿಂದ ಆಯ್ದುಕೊಂಡಿದ್ದು ಅದನ್ನು ಕುರಿತು ಬೇರೆಡೆಯಲ್ಲಿ ಪ್ರಸ್ತಾಪಿಸಲಾಗಿದೆ. ಹೊಲೆಯರು ಅಸಂಖ್ಯವಾದ ಸಗೋತ್ರ ಪ್ರಾದೇಶಿಕ ಗುಂಪುಗಳಾಗಿ ವಿಭಜನೆ ಹೊಂದಿರುವರು. ಈ ಕುಲಗಳು ಯಾವತ್ತೂ ಸ್ಪಷ್ಟವಾಗಿ ವ್ಯಾಖ್ಯಾನಿಸಲಾದವಲ್ಲ.

ವಂಶದ ಹೆಸರೆಂದು ಬಳಸಲಾಗುವ ಅಡ್ಡಹೆಸರುಗಳು ಬಹುಮಟ್ಟಿಗೆ ಮರಾಠಾ ಹಾಗೂ ಕುಣಬಿ(ರೈತ) ವರ್ಗಗಳು ಬಳಸುವಂಥವುಗಳೇ ಆಗಿರುತ್ತವೆ. ಸೋದರರ ಮಕ್ಕಳ ನಡುವಿನ ಮದುವೆಗೆ ಮನ್ನಣೆಯಿದೆ. ವಿವಾಹ ವಿಚ್ಛೇದನೆ ಹಾಗೂ ಮರುಮದುವೆಗಳಿಗೂ ಒಪ್ಪಿಗೆಯಿದೆ. ವಿಧವೆಯು ತನ್ನ ಭಾವ ಇಲ್ಲವೆ ಮೈದುನನನ್ನು ಮದುವೆಯಾಗುವುದಿಲ್ಲ. ಹೊಲೆಯರ ಜನಸಂಖ್ಯೆಯು ಒಟ್ಟು ಮರಾಠಿ ಸಮುದಾಯದ ಶೇಕಡಾ ಹತ್ತರಷ್ಟು ಇದೆಯೆಂದು ಹೇಳಲಾಗುತ್ತದೆ. ಇದು ತುಂಬ ಮಿಶ್ರ ಸಮುದಾಯವಿದ್ದು, ಇವರ ಮೈಬಣ್ಣದ ವ್ಯಾಪ್ತಿಯು ಬಲು ಗೌರವರ್ಣದಿಂದ ಹಿಡಿದು ಕಪ್ಪುಬಣ್ಣದವರೆಗೆ ಇದೆ. ಈ ಸಮುದಾಯದವರ ಬಡತನ ಹಾಗೂ ಬಟ್ಟೆಬರೆಗಳನ್ನು ಬಿಟ್ಟರೆ ಇತರ ಸಮುದಾಯಗಳಿಂದ ಅವರನ್ನು ಸಾಮಾನ್ಯವಾಗಿ ಬೇರ್ಪಡಿಸಲಾಗದು.

೧ : ಮಹಾರಾಷ್ಟ್ರ ಸ್ಟೇಟ್ ಗೆಜೆಟಿಯರ್, ೧೯೬೮, ಪು. ३೨.

## ೧೧೨. ಸ್ವಾಭಿಮಾನದ ಜ್ಯೋತಿಯನ್ನು ಉರಿಸುತ್ತಿರಿ !

ಸ್ವಾಭಿಮಾನದ ಜ್ಯೋತಿಯನ್ನು ಉರಿಸುತ್ತಿರಿ ! ಸುಸಂಘಟಿತರಾಗಿ ! ಅಲ್ಲದೆ ಯಾವತ್ತೂ ಅನ್ಯಾಯದ ವಿರುದ್ಧ ಹೋರಾಡುತ್ತಿರಿ ! ತಮ್ಮ ಹುಟ್ಟುಹಬ್ಬದ ದಿನವಾದ ೧೪ ಎಪ್ರಿಲ್ ೧೯೫೩ರಂದು ಡಾ. ಬಾಬಾಸಾಹೇಬ ಅಂಬೇಡಕರರು ಈ ಸಂದೇಶವನ್ನು ನೀಡಿದರು. ನಾವು ಹೂಹಾರವನ್ನು ತೆಗೆದುಕೊಂಡು ಮುಂಬಯಿಯ ಜನರ ವತಿಯಿಂದ ಅವರನ್ನು ಕಾಣಲು ಹೋದಾಗ ನಮಗೆ ಈ ಸಂದೇಶ ಕೇಳಲು ಸಿಕ್ಕಿತು. ಆ ದಿನ ಡಾಕ್ಟರಸಾಹೇಬರ ಹಲವು ಅಭಿಮಾನಿಗಳು ಹಾಗೂ ಸ್ನೇಹಿತರ ಬಳಗ ಬಂದು, ಅವರನ್ನು ಕೈಕುಲುಕಿ, ಅವರಿಗೆ ದೀರ್ಘಾಯುಷ್ಯ ಲಭಿಸಲೆಂದು ಕೋರುತ್ತಿದ್ದರು. ಹೊರಬದಿಯಲ್ಲಂತೂ ಅವರ ದರ್ಶನಕ್ಕಾಗಿ ನೂರಾರು ಜನ ಸ್ತ್ರೀ-ಪುರುಷರು ಹೂಹಾರಗಳನ್ನು ಹಿಡಿದು ಕಾದು ನಿಂತಿದ್ದರು. ಡಾ. ಬಾಬಾಸಾಹೇಬರು ಪ್ರಸನ್ನಚಿತ್ತರಾಗಿ ಎಲ್ಲರಿಗೂ ಭೇಟಿಯನ್ನು ನೀಡಿದರು. 'ಪರಬ್ರಹ್ಮನು ಪುಂಡಲಿಕನ ಭೇಟಿಗಾಗಿ ಬರುತ್ತಿದ್ದನು' ಎಂಬ ಉಕ್ತಿಯಂತೆ, ಜನತಾಜನಾರ್ದನನ ತುಂಬು ಪ್ರೀತಿಯನ್ನು ಕಂಡು ಅವರ ಅಂತಃಕರಣ ಸಂತೋಷದಿಂದ ಕರಗಿತು. ಅವರು ಎಲ್ಲರ ಕುಶಲವನ್ನು ಕುರಿತು ವಿಚಾರಿಸಿದರು. ನಿಕಟ ಪರಿಚಿತರೊಡನೆ ಹಾಸ್ಯ ವಿನೋದದ ಮಾತುಗಳನ್ನು ಆಡಿದರು. ಶಿಕ್ಷಕ ವೃತ್ತಿಯಲ್ಲಿ ಇರುವವರಿಗೆ ಮಿತವ್ಯಯಿಗಳಾಗಿರಲು ಸಲಹೆ ನೀಡಿದರು.

ನಿಧಾನವಾಗಿ ಜನರ ಗುಂಪು ಚೆದರಿತು. ನಮ್ಮ ಒಬ್ಬ ಸ್ನೇಹಿತನು ಕೆಲವು ದಿನಗಳ ಕೆಳಗೆ ನಮಗೆ ಹೀಗೆಂದು ಹೇಳಿದ್ದನು : "ಡಾ. ಬಾಬಾಸಾಹೇಬರು ಬಹಳಷ್ಟು ಮಟ್ಟಿಗೆ ಬುದ್ಧಮಯರಾಗಿರುವರು. ಬುದ್ಧನ ವಿಚಾರಸರಣಿಯು ಅವರ ಮೇಲೆ ತುಂಬ ಹಿಡಿತವನ್ನು ಸಾಧಿಸಿದೆ. ಅವರು ಹಗಲಿರುಳು ಅದೇ ಗುಂಗಿನಲ್ಲಿರುತ್ತಾರೆ. ಈ ಸಲವೂ ನಮಗೆ ಅದೇ ಬಗೆಯ ಅನುಭವ ಬಂದಿತು. ಡಾ. ಬಾಬಾಸಾಹೇಬರ ಸುತ್ತು ವಿಚಾರಗಳ ವಲಯಗಳು ಸುತ್ತುತ್ತಿರುವಾಗಲೇ, ಹೆದರುತ್ತ ಹೆದರುತ್ತಲೇ ನಾವು, 'ಸಾಹೇಬರೇ, ಏನಾದರೂ ಸಂದೇಶವನ್ನು ನೀಡುವಿರಾದರೆ ಒಳ್ಳೆಯದು !' ಎಂದೆವು. ಈ ವರೆಗೆ ಅವರ ಹಲವಾರು ಜಯಂತಿಗಳಾಗಿ ಹೋದವು. ಆದರೆ ಅವರು ತಮ್ಮ ಹುಟ್ಟುಹಬ್ಬದ ದಿನ ಯಾರಿಗೇ ಆಗಲಿ, ಯಾವುದೇ ಬಗೆಯ ಸಂದೇಶವನ್ನು ನೀಡಿದುದನ್ನು ಕೇಳಿರಲಿಲ್ಲ, ಓದಿರಲಿಲ್ಲ. ಈ ಸಲ ಮಾತ್ರ ವಿಚಾರಮಗ್ನ ಅವಸ್ಥೆಯಲ್ಲಿಯೇ ಅವರು ಮೇಲಿನಂತೆ ಉದ್ಧರಿಸಿದರು. ಬಾಬಾಸಾಹೇಬರು ದಲಿತ ವರ್ಗದ ಎದುರಿರುವ ಸಮಸ್ಯೆಗಳನ್ನು ಕುರಿತು ಹಗಲಿರುಳು ಯೋಚಿಸುತ್ತಿರಬಹುದು, ಶೀಘ್ರದಲ್ಲಿಯೇ ಅವರು ಯಾವುದಾದರೂ ಕ್ರಾಂತಿಕಾರಕವಾದ ತೀರ್ಮಾನವನ್ನು ಘೋಷಿಸುವರೆಂದು ನಮಗೆ ಅನ್ನಿಸಿತು.

**ಸದ್ಯದಲ್ಲಿ ನಡೆಯುತ್ತಿದೆಯಾದರೂ ಏನು?**

ಅವರು ಮಾತನಾಡುತ್ತ ಆಡುತ್ತ ಹೀಗೆಂದರು : "ಸದ್ಯಕ್ಕೆ ಇದೇನು ನಡೆದಿದೆ? ಸರಕಾರವು ಮದ್ಯಪಾನ ನಿಷೇಧಕ್ಕಾಗಿ ಲಕ್ಷಗಟ್ಟಳೆ, ಕೋಟಿಗಟ್ಟಳೆ ರೂಪಾಯಿಗಳ ನಷ್ಟವನ್ನು ಅನುಭವಿಸುತ್ತಿದೆ.



ಆದರೆ ಜನರು ವಿಷಮತೆಯಿಂದ ಬೆಂದುಹೋಗುತ್ತಿರುವುದು ಮಾತ್ರ ಇಂದು ಸರಕಾರಕ್ಕೆ ಕಾಣುತ್ತಿಲ್ಲ. ಕಾಗದದ ಹಾಳೆಯ ಮೇಲಿನ ಯೋಜನೆಗಳಿಗಾಗಿ ಲಕ್ಷಗಟ್ಟಳೆ ರೂಪಾಯಿಗಳು ಖರ್ಚಾಗುತ್ತಿವೆ. ಆದರೆ ಸರಕಾರವು ದಲಿತ

ವರ್ಗಕ್ಕಾಗಿ ಗಟ್ಟಿಯಾದ ಒಂದೂ ಯೋಜನೆಯನ್ನು ಅನುಷ್ಠಾನಕ್ಕೆ ತರುತ್ತಿಲ್ಲ. ನೆಹರೂರಂಥ ಹೊಣೆಗಾರ ವ್ಯಕ್ತಿಯು, "ನಾನು ಕನ್ಯಾಕುಮಾರಿಯಿಂದ ಹಿಡಿದು ಹಿಮಾಲಯದವರೆಗೆ ಅಲೆದಾಡಿದೆ. ಆದರೆ ನನಗೆಲ್ಲೂ ಅಸ್ಪೃಶ್ಯತೆ ಎನ್ನುವುದು ಕಾಣಸಿಕ್ಕಲೇ ಇಲ್ಲ!" ಎನ್ನುತ್ತಾರೆ. ದೇಶದಲ್ಲಿ ಲಕ್ಷಗಟ್ಟಳೆ ಎಕರೆಯಷ್ಟು ಭೂಮಿಯು ಉಳದೆ ಪಾಳು ಬಿದ್ದಿರುವಾಗಲೂ ಬಡಬಗ್ಗರಿಗಾಗಲಿ ದಲಿತರಿಗಾಗಲಿ ಅದನ್ನು ಉಳಲು ಕೊಡಲಾಗುತ್ತಿಲ್ಲ. ಗೇಣುದ್ದದ ವತನದ ಭೂಮಿಗೆ ಬದಲಾಗಿ ಊರಿನ ಹೊಲೆಯರನ್ನೆಲ್ಲ ದುಡಿಸಿಕೊಳ್ಳಲಾಗುತ್ತದೆ. ಪವಿತ್ರವಾದ ಸಂವಿಧಾನವನ್ನು ಕಾಲ್ಕೆಳಗೆ ಮೆಟ್ಟಲಾಗುತ್ತಿರುವುದು ನಿಜಕ್ಕೂ ವಿಷಾದನೀಯ! ಇಂದಿನ ರಾಜ್ಯ ಸರಕಾರಗಳು, ಸಂವಿಧಾನವು ದಲಿತ ವರ್ಗಕ್ಕೆ ನೀಡಿದ ಅಧಿಕಾರಗಳನ್ನು ಸಾರಾಸಗಟಾಗಿ ತಳ್ಳಿಹಾಕುತ್ತಿವೆ. ಪ್ರಜಾಪ್ರಭುತ್ವದ ಇದೆಲ್ಲ ಫಾರ್ಸ್ ನ್ನು ಕಂಡು, ಈಗಿನ ಪ್ರಜಾಪ್ರಭುತ್ವದ ಸರಕಾರವನ್ನು ಎಷ್ಟರ ಮಟ್ಟಿಗೆ ನಂಬಬೇಕೋ ಎಂದು ಹೊಟ್ಟೆಯಲ್ಲಿ ಕಿಚ್ಚು ಉರಿಯುತ್ತಿದೆ."

ಡಾಕ್ಟರಸಾಹೇಬರ ಈ ವಿಚಾರಗಳನ್ನು ಗಮನಿಸಿದರೆ ಇಲ್ಲವೆ ಆಲಿಸಿದರೆ ಈ ದೇಶದ ದಲಿತ ವರ್ಗದೆದುರು ಇರುವ ಸಮಸ್ಯೆ ಅರ್ಥವಾಗುತ್ತದೆ. ಸರಕಾರವು ದಿನದಿನಕ್ಕೆ ಹೆಚ್ಚುತ್ತಿರುವ ನಿರುದ್ಯೋಗದ ಸಮಸ್ಯೆಗೆ ಕಡಿವಾಣವನ್ನು ಹಾಕಲಾರದು. ನಿರುದ್ಯೋಗದ ಆ ಕಂದರಕ್ಕೆ ಹೆಚ್ಚು ಹೆಚ್ಚಾಗಿ ತಳ್ಳಲಾಗುತ್ತಿರುವ ವರ್ಗವೆಂದರೆ ಅಸ್ಪೃಶ್ಯ ವರ್ಗ, ಹಳ್ಳಿಹಳ್ಳಿಗಳಲ್ಲಿ ಪರಿಸ್ಥಿತಿಯ ಹೊಂಡದಲ್ಲಿ ಸಿಕ್ಕಿಕೊಂಡಿರುವ ವರ್ಗವೆಂದರೆ ದಲಿತ ವರ್ಗವೇ ಸರಿ ! ಕಾನೂನಿನಂತೆ ಸರಕಾರಿ ನೌಕರಿಗಳಲ್ಲಿ ಶೇಕಡಾವಾರು ಸ್ಥಳಗಳನ್ನೇನೋ ಮೀಸಲಾಗಿರಿಸಲಾಗಿದೆ, ಆದರೆ ಅದನ್ನು ಅನುಷ್ಠಾನಕ್ಕೆ ತರಲಾಗುತ್ತಿದೆಯೋ ಇಲ್ಲವೋ ಎಂಬುದನ್ನು ನಿಯಂತ್ರಿಸಲು ಸರಕಾರವು ಸಿದ್ಧವಿಲ್ಲ. ಪಾಳು ಬಿದ್ದ ನೆಲವನ್ನು ದಲಿತ ವರ್ಗಕ್ಕೆ ಉಳುಮೆಗಾಗಿ ಕೊಡಬೇಕೆಂದರೆ ಅವು ಅವರಿಗೆ ದೊರೆಯದಂತೆ ನೋಡಿಕೊಳ್ಳಲಾಗುತ್ತಿದೆ. ಇಂಥ ಹಲವಾರು ದೂರುಗಳು ನಮ್ಮಲ್ಲಿಗೆ ಬರುತ್ತವೆ. ಇದಲ್ಲದೆ ಬ್ರಿಟಿಶರ ಸಂಪ್ರದಾಯವನ್ನು ಮುಂದುವರಿಸಲೋ ಎಂಬಂತೆ ಒಡೆ ಮತ್ತು ಹೊಡೆ ನೀತಿಯನ್ನು ಅನುಸರಿಸಿ ಸರಕಾರವು ದಲಿತ ವರ್ಗದ ಸಂಘಟನೆಯನ್ನು ಗೊಂದಲಕ್ಕೆ ಈಡುಮಾಡಲು ಬಯಸುತ್ತಿದೆ. ಸ್ವಾತಂತ್ರ್ಯ ಬಂದ ತರುವಾಯ ಎಲ್ಲವೂ ಒಳ್ಳೆಯದಾಗಲಿದೆ ಎಂದು ಅನ್ನುವ ಹಾಗೂ ಇಂದು ಸರಕಾರದ ಹೊಣೆ ಹೊತ್ತಿರುವ ಜನ ಇವರೇನೇ, ಎಂಬ ಸಂದೇಹ ತಲೆದೋರುತ್ತಿದೆ.

**ಇದಕ್ಕೆ ಉಪಾಯವೆಂದು ಸುಸಂಘಟಿತರಾಗಿ !**

ರಾಜ್ಯಕರ್ತರ ಹೂಟವನ್ನು ಹಾಳುಗೆಡಹುವುದಿದ್ದರೆ ದಲಿತ ವರ್ಗವು ತನ್ನೆಲ್ಲ ಭಿನ್ನಾಭಿಪ್ರಾಯಗಳನ್ನು ಮರೆತು ಸುಸಂಘಟಿತವಾಗಬೇಕು. ನಮ್ಮ ಸಾಮರ್ಥವನ್ನು ಪಣಕ್ಕೊಡ್ಡಿ ನಾವು ನಮ್ಮ ಸಾಮರ್ಥದ ಪ್ರಭಾವವನ್ನು ತೋರಿಸಬೇಕು. ಬಾಬಾಸಾಹೇಬರು ಯಾವತ್ತೂ ಹೀಗೆನ್ನುತ್ತಾರೆ: * ಸಾವಿರಾರು ಜನ ಕೆಲಸಕ್ಕೆ ಬಾರದ ಸೈನಿಕರಿಗಿಂತ ಹತ್ತು ಜನ ಶಿಸ್ತಿನ, ಪ್ರಾಮಾಣಿಕ ಸೈನಿಕರಿದ್ದರೂ ನನಗೆ ಸಾಕು. ೮೫ ವರ್ಷ ವಯಸ್ಸಿನ ಶೇಲಾರ ಮಾಮಾ ಇವರು

ಕೋಂಡಾಣಾ ಕೋಟೆಯ ಮೇಲೆ ದಾಳಿ ಇಕ್ಕಿದಾಗ ಕೇವಲ ಇಪ್ಪತ್ತೈದು ಜನ ಯುವಕ ಸೈನಿಕರು ತಮ್ಮ ಜೀವದ ಹಂಗುದೊರೆದು



ಮುನ್ನುಗ್ಗಿದ್ದರು. ಬೆರಳೆಣಿಕೆಯ ಆಂಗ್ಲರು ನೂರೈವತ್ತು ವರ್ಷಗಳ ಕಾಲ ಇಷ್ಟೊಂದು ದೊಡ್ಡ ದೇಶವನ್ನು ಆಳಿದುದು ಯಾವ ಸಾಮರ್ಥ್ಯವನ್ನಾಧರಿಸಿ! ಅದೆಂದರೆ ಸಂಘಟನೆ ಹಾಗೂ ಶಿಸ್ತು. ಹೀಗಾಗಿ ನಮಗೆ ಬರಿ ಸಂಘಟನೆ ಬೇಡ, ಸುಸಂಘಟನೆ ಬೇಕು. ಈರ್ಷೆ ಹಾಗೂ ಸ್ವಾಭಿಮಾನದ ಬೆಂಕಿಯು ಅದರಲ್ಲಿ ಸತತವಾಗಿ ಧಗಧಗನೆ ಉರಿಯುತ್ತಿರಬೇಕು.

ಈ ಬೆಂಕಿಯನ್ನು ಧಗಧಗಿಸುವಂತೆ ಇರಿಸಬೇಕಿದ್ದರೆ ನಮ್ಮ ಸಂಘಟನೆಯಾದ ಫೆಡರೇಶನ್ನನ್ನು ಶಕ್ತಿಶಾಲಿಯನ್ನಾಗಿ ಮಾಡಬೇಕು. ಫೆಡರೇಶನ್ನನ್ನು ಶಕ್ತಿಶಾಲಿಯನ್ನಾಗಿ ಮಾಡಬೇಕಿದ್ದರೆ ಎಲ್ಲ ವಯಸ್ಸಿನ ಸ್ತ್ರೀ-ಪುರುಷರು ವರ್ಷಕ್ಕೆ ನಾಲ್ಕಾಣೆಯನ್ನು ಭರಿಸಿ ಅದರ ಸದಸ್ಯರಾಗಬೇಕು. ಹೀಗೆ ನೂರಾರು, ಅಲ್ಲ ಸಾವಿರಾರು, ಅಲ್ಲ ಲಕ್ಷಗಟ್ಟಳೆಯ ಜನರು ಸದಸ್ಯರಾಗಿ ಅದರ ನೀಲಿ ಬಣ್ಣದ ಪತಾಕೆಯನ್ನು ಹಾರಿಸಬೇಕು. ಆ ನೀಲಿ ಪತಾಕೆಯೇ ಸ್ವಾಭಿಮಾನಿಯಾದ ನಮ್ಮ ಚಳುವಳಿಯ ಪ್ರತೀಕ ವೆನ್ನಿಸಿದೆ. ನಾವು ಈ ನೀಲಿ ಪತಾಕೆಯಡಿಯೇ ಹಲವು ಆವೇಶಪೂರ್ಣವಾದ ಹೋರಾಟಗಳನ್ನು ಕೈಕೊಂಡಿದ್ದೇವೆ. ಅದೇ ನಮ್ಮಲ್ಲಿ ಸೋದರಭಾವ ಹಾಗೂ ಆತ್ಮೀಯತೆಗಳನ್ನು ಹುಟ್ಟುಹಾಕಿ ಮಾನವೀಯತೆಯನ್ನು ಜಾಗೃತವಾಗಿ ಇರಿಸಿತು. ಕೇವಲ ಮುಂಬಯಿಯಲ್ಲಿಯೇ ದಲಿತ ವರ್ಗದ ಜನಸಂಖ್ಯೆಯು ಮೂರರಿಂದ ನಾಲ್ಕು ಲಕ್ಷದಷ್ಟು ಇದ್ದೀತು. ಒಂದು ಲಕ್ಷದಷ್ಟು ಮಕ್ಕಳು, ಕೂಸುಗಳನ್ನು ಬಿಟ್ಟರೂ ಕೂಡ ಮೂರು ಲಕ್ಷ ಜನರು ಫೆಡರೇಶನ್ನಿನ ನೀಲಿಯ ಪತಾಕೆಯಡಿ ಒಟ್ಟಿಗೆ ಬಂದರೆ ನಾವು ಪ್ರಪಂಚದ ಮಾನಬಿಂದುವನ್ನು ತಲುಪಿದವೆಂದೇ ತಿಳಿಯಿರಿ.

**ಪರಿಣಾಮ ಏನಾದೀತು**

ಇಂದು ಈ ದೇಶದಲ್ಲಿ ಹಲವಾರು ರಾಜಕೀಯ ಪಕ್ಷಗಳಿವೆ. ಅವೆಲ್ಲವುಗಳ ಬಂಡವಾಳವು ಮಂಬಯಿಯಂತಹ ನಗರಗಳಲ್ಲಿಯೇ ಇದೆ. ಬರಿ ಮುಂಬಯಿ ಒಂದರಲ್ಲೇ ಕಾಂಗ್ರೆಸ್, ಸಮಾಜವಾದಿ, ಕಮ್ಯುನಿಸ್ಟ್, ಹಿಂದೂ ಮಹಾಸಭಾ,

ಮೊದಲಾದ ಪಕ್ಷಗಳು ತಳವೂರಿ ಕುಳಿತಿವೆ. ಪ್ರತಿಯೊಬ್ಬರ ಕಚೇರಿಗೆ ಹೋಗಿ ಆ ಪಕ್ಷದ ಸದಸ್ಯರನ್ನು ನೋಂದಣಿಯ ರಿಜಿಸ್ಟರನ್ನು ನೋಡಿದರೆ ಯಾರ ಸದಸ್ಯ ಸಂಖ್ಯೆಯೂ ಕೂಡ ಒಂದು ಲಕ್ಷವನ್ನು ತಲುಪಲು ಸಾಧ್ಯವಿಲ್ಲ. ಇದಕ್ಕೆ ಕಾರಣವೆಂದರೆ ಈ ಪಕ್ಷಗಳ ರಾಜಕೀಯ ಅಧಿಷ್ಠಾನ ಈ ದೇಶದ ಬಂಡವಾಳದಾರರು, ಜಮೀನುದಾರರು, ಜಹಗೀರುದಾರರು, ಕಾರ್ಖಾನೆದಾರರು ಹಾಗೂ ಧರ್ಮಮಾರ್ತಂಡರಂಥ ಪ್ರತಿಗಾಮಿ ವಿಚಾರ ಸರಣಿಯ ಜನರನ್ನು ಅವಲಂಬಿಸಿದೆ. ಫೆಡರೇಶನ್ನು ಹಾಗೆ ಅವರಾರೊಂದಿಗೂ ಸಂಬಂಧವನ್ನು ಹೊಂದಿದುದಲ್ಲ. ಈ ವಿಚಾರ ಸರಣಿಗೆ ಫೆಡರೇಶನ್ನಿನಲ್ಲಿ ಸ್ಥಾನವೇ ಇಲ್ಲ. ಸ್ವಲ್ಪದರಲ್ಲಿ, ಈ ದೇಶದಲ್ಲಿ ಫೆಡರೇಶನ್ನಿನಂತಹ ಶಾಲೀನ ಸ್ವರೂಪದ ಪಕ್ಷವೇ ಅಸ್ತಿತ್ವದಲ್ಲಿಲ್ಲ, ಎಂಬುದು ನಮ್ಮ ಖಚಿತವಾದ ಅಭಿಪ್ರಾಯ. ಇಂಥ ಈ ಶಾಲೀನ ಮತ್ತು ಸ್ವಂತದ ಸಾಮರ್ಥದಿಂದ ಮುಂದಕ್ಕೆ ಹೆಜ್ಜೆ ಇಕ್ಕುವ ಪಕ್ಷದ ಭವಿಷ್ಯವು ಸೂರ್ಯಪ್ರಕಾಶದಷ್ಟು ಸ್ಪಷ್ಟ. ಹೀಗಾಗಿ ಮುಂಬಯಿಯ ಫೆಡರೇಶನ್ನು ಒಂದು ಲಕ್ಷ ಸದಸ್ಯರನ್ನು ನೋಂದಾಯಿಸುವ ಅಭಿಯಾನವನ್ನು ಶುರು ಮಾಡಿದೆ. ಈ ಅಭಿಯಾನವು ಯಶಸ್ವಿಯಾದರೆ ಫೆಡರೇಶನ್ನಿನ ಕೆಲಸವನ್ನು ಎತ್ತಿಕೊಳ್ಳಲು ನಮಗೆ ಹಗುರಾಗುವುದಲ್ಲದೆ ನಮ್ಮ ಪಕ್ಷದ ಸಾಮರ್ಥವು ಗಣನೀಯವಾಗಿ ಚೇತರಿಸಿಕೊಳ್ಳಲಿದೆ. ಸರಕಾರವು ಇಷ್ಟರಲ್ಲಿಯೇ ದಲಿತ ವರ್ಗಗಳ ಪರಿಸ್ಥಿತಿಯ ಸರ್ವೇಕ್ಷಣೆಯನ್ನು ಮಾಡಲೆಂದು ಕೆಲವು ಹೊಗಳುಭಟ್ಟರ ಒಂದು ಕಮೀಶನ್ನನ್ನು ನೇಮಿಸಿದೆ. ಫೆಡರೇಶನ್ನು ಇದೇ



ಬಗೆಯ, ಅದರೆ ವಿಶಿಷ್ಟವಾಗಿ ಅಸ್ಪೃಶ್ಯರ ಜೀವನದೊಂದಿಗೆ ಹತ್ತಿರದ ನಂಟುಳ್ಳ, ತಮ್ಮ ರಕ್ತಮಾಂಸಗಳ ಸಂಬಂಧವುಳ್ಳವರೇ ಆದ, ಅವರ ಹೊಟ್ಟೆಯಿಂದಲೇ ಹುಟ್ಟಿ ಬಂದು ಹಗಲಿರುಳು ಹೋರಾಡುತ್ತಿರುವ, ಇಂಥ ನಿಜವಾದ ಅಸ್ಪೃಶ್ಯರ ಒಂದು ಕಮೀಶನ್ನನ್ನು ನೇಮಿಸಲಿದೆ. ಈ ಕಮೀಶನ್ನು ಅಸ್ಪೃಶ್ಯರ ಜೀವನವನ್ನು ಕೂಲಂಕಷವಾಗಿ ಜಾಲಾಡಿಸಿ ಅವರ ಸಂಪೂರ್ಣವಾದ ವಿವರಗಳ ವರದಿಯನ್ನು ತಯಾರಿಸುವುದು. ಫೆಡರೇಶನ್ನು ಈ ವರದಿಯನ್ನು ಪುಸ್ತಕ ರೂಪದಲ್ಲಿ ಮುದ್ರಿಸಿಕೊಳ್ಳುವುದು, ಅದರ ಒಂದೊಂದು ಪ್ರತಿಯನ್ನು ಭಾರತ ಸರಕಾರ ಹಾಗೂ ಬೇರೆ ರಾಷ್ಟ್ರಗಳಿಗೂ ಕಳಿಸಲಾಗುವುದು. ಇಷ್ಟೆಲ್ಲವನ್ನು ಮಾಡಿಯೂ ಭಾರತ ಸರಕಾರದ ದೃಷ್ಟಿಕೋನದಲ್ಲಿ ಯಾವುದೇ ಬಗೆಯ ಬದಲಾವಣೆ ಆಗದಿದ್ದರೆ, ಬ್ಯಾ, ಕಾಂಬಳೆ ಅವರಂತಹ ಸಮರ್ಥ ಬ್ಯಾರಿಸ್ಟರರನ್ನು ನೇಮಿಸಿ, ವಿಶ್ವ ನ್ಯಾಯಾಲಯ(ಯುನೊ)ದಲ್ಲಿ ವ್ಯಾಜ್ಯವನ್ನು ಆರಂಭಿಸಿ ರಾಜ್ಯಕರ್ತರು ಹಾಗೂ ಹಿಂದ್ ಎನ್ನಿಸಿಕೊಳ್ಳುವವರ

ಚಿಂದಿಬಟ್ಟೆಗಳನ್ನು ಪ್ರಪಂಚದ ಅಗಸೆಯ ಬಾಗಿಲಿಗೆ ನೇತು ಬಿಡೋಣ. ಇದು ನಮ್ಮ ಪಕ್ಷದ ಕಾನೂನುಬದ್ಧವಾದ ಮಾರ್ಗವಾಗಿದೆ.

ರಾಜ್ಯಕರ್ತರು ಈ ಸಂಗತಿಯನ್ನು ಗಮನಕ್ಕೆ ತಂದುಕೊಂಡರೆ ಇದು ಆರು ತಿಂಗಳ ಕೆಳಗೆ ಬಾಬಾಸಾಹೇಬರು ನೀಡಿದ ಇಶಾರೆ ಎನ್ನಿಸಲಿದೆ.

ಶಬ್ದಾಂಕನ - ರಾಮಚಂದ್ರ ಆಂ. ಜಾಧವ

. 'ಜನತಾ' : ತಾ. ೯ ಮೇ ೧೯೫೩.

**೧೧೩. ಭಾಷಾವಾರು ಪ್ರಾಂತ ರಚನೆ ಅಖಂಡತೆ ಎಂದರೆ ತಾನು**

**ಸ್ವತಂತ್ರನು, ಬೇರೆಯವರಿಗಿಂತ ಭಿನ್ನನು ಎಂಬುದಾಗಿ ಅರ್ಥ**

**ಮಾಡಿಕೊಂಡರೆ ತುಸು ಅವಧಿಯಲ್ಲೇ ಹಿಂದೂಸ್ಥಾನವು ಒಡೆದು**

**ಹೋಳುಗಳಾಗಲಿದೆ**

ಬ್ರಿಟಿಷರು ನೂರೈವತ್ತಕ್ಕಿಂತಲೂ ಹೆಚ್ಚು ವರ್ಷಗಳ ಕಾಲ ಭಾರತವನ್ನು ಆಳಿದರು. ಈ ಆಳ್ವಿಕೆಯ ಕಾಲಕ್ಕೂ, ಭಾಷಾವಾರು ಪ್ರಾಂತ ರಚನೆಯ ಪ್ರಶ್ನೆಯು ಸತತವಾಗಿ ತಮ್ಮೆದುರಿಗೆ ಇರುವಾಗಲೂ ಬ್ರಿಟಿಷರು ಅದನ್ನು ಮಾಡಲಿಲ್ಲ. ಅವರು ಬಹು ಭಾಷೆಗಳುಳ್ಳ ಪ್ರಾಂತಗಳ ಜನರ `ಸಂಸ್ಕೃತಿಯ ಐಕ್ಯ ದ ಕೂಗಾಟವನ್ನು ಲೆಕ್ಕಿಸದೆ, ಗಟ್ಟಿಯಾದ ಆಳ್ವಿಕೆ, ಕಾನೂನು ಮತ್ತು ಶಾಂತಿಗಳನ್ನು ಸ್ಥಾಪಿಸುವತ್ತಲೇ ಹೆಚ್ಚಿನ ಗಮನವನ್ನು ಹರಿಸಿದರು. ತಾವು ನಿರ್ಮಿಸಿದ ಆಡಳಿತೆಯ ಯಂತ್ರದಲ್ಲಿ ಜಗಳಗಳಿದ್ದಲ್ಲೆಲ್ಲ ಕಡೆಗಳಲ್ಲಿ ಭಾಷಾವಾರು ಪ್ರಾಂತ ರಚನೆಯ ದೃಷ್ಟಿಯಿಂದ ಕೆಲವೊಂದು ಸುಧಾರಣೆಗಳು ತುಂಬ ಆವಶ್ಯಕವಾಗಿವೆಯೆಂದು ತಮ್ಮ ಆಳ್ವಿಕೆಯ ಉತ್ತರಾರ್ಧದಲ್ಲಿ ಅವರಿಗೆ ತಿಳಿದುಬಿಟ್ಟಿತ್ತು. ಇಂಗ್ಲಿಷರು ಹೊರಟುಹೋಗುವ ಮುನ್ನ ಬಂಗಾಲ, ಬಿಹಾರ ಮತ್ತು ಓರಿಸಾ ಭಾಷಾವಾರು ಪ್ರಾಂತಗಳನ್ನು ರಚಿಸಿದುದು ಈ ಸಂಗತಿಗೆ ಉದಾಹರಣೆಯಾಗಿದೆ. ಇಂಗ್ಲಿಷ್ ಸತ್ತೆಯು ಭಾರತದಲ್ಲಿ ಮುಂದುವರೆದಿದ್ದರೆ ಅವರು ಸಾಮಾನ್ಯ ತರ್ಕವನ್ನುನಸರಿಸಿ ಭಾಷಾವಾರು ಪ್ರಾಂತ ರಚನೆಯನ್ನು ಮುಂದುವರಿಸುತ್ತಿದ್ದರೋ, ಇಲ್ಲವೋ ಎನ್ನುವುದನ್ನು ಹೇಳುವುದು ಕಷ್ಟ.

ಬ್ರಿಟಿಷರು ಭಾಷಾವಾರು ಪ್ರಾಂತ ರಚನೆಯನ್ನು ಕುರಿತು ಯೋಚಿಸುವ ಮೊದಲೇ ಕಾಂಗ್ರೆಸ್ಸು ೧೯೨೦ರಲ್ಲಿ ಗಾಂಧಿಯವರ ನಾಯಕತ್ವದಲ್ಲಿ ಭಾಷಾವಾರು ಪ್ರಾಂತ ರಚನೆಯನ್ನು ಆಧರಿಸಿದ ಒಂದು ಸಂವಿಧಾನವನ್ನು ತಯಾರಿಸಿತು. ೧೯೨೦ರಲ್ಲಿ ತಯಾರಿಸಿದ ಈ ಸಂವಿಧಾನಕ್ಕೆ ಆಧಾರಭೂತವಾದ ವಿಚಾರಪ್ರಣಾಲಿಯು ವಿಶುದ್ಧವಾದ ವಿಚಾರವಿನಿಮಯದ ಮೂಲಕ ತಯಾರಾಯಿತೋ, ಜನರನ್ನು ಕಾಂಗ್ರೆಸ್ಸಿನ ಬಣಕ್ಕೆ ಸೆಳೆಯಲೆಂದು ಈ ಮಾಟವನ್ನು ಮಾಡಲಾಯಿತೊ, ಎಂಬುದನ್ನು ಕಂಡುಹಿಡಿಯಲೆಂದು ಯಾರೂ ತಮ್ಮ ವೇಳೆಯನ್ನು ಹಾಳು ಮಾಡಬೇಕಿಲ್ಲ. ಆದರೆ ಬ್ರಿಟಿಷರು ಮಾತ್ರ ಭಾಷಾವಾರು ಪ್ರಾಂತ ರಚನೆಯ ಮಹತ್ವವನ್ನು ಗುರುತಿಸಿ, ಕೆಲವು ಪ್ರಾಂತಗಳನ್ನು ಶೀಘ್ರವಾಗಿ ಭಾಷಾವಾರಾಗಿ ರಚಿಸಿದರು ಕೂಡ.

೧೯೨೦ರ ಸಂವಿಧಾನದಂತೆ ಕಾಂಗ್ರೆಸ್ಸು ತನ್ನ ತಲೆಯ ಮೇಲೆ ಹೊತ್ತುಕೊಂಡ ಹೊಣೆಯನ್ನು ಕುರಿತು ೧೯೪೫ರ ತನಕ ಉಲ್ಲೇಖಿಸಲೂ ಇಲ್ಲ. ಆದರೆ ೧೯೪೫ರಲ್ಲಿ ಅಧಿಕಾರವನ್ನು ಸ್ವೀಕರಿಸುವ ಹೊತ್ತು ಬರುತ್ತಲೇ ಕಾಂಗ್ರೆಸ್ ಎಂಬ ಮುದುಕಿಯ ಹುಂಜವನ್ನು ಮುಚ್ಚಿಡಲಾಗಿದ್ದರೂ ಭಾಷಾವಾರು ಪ್ರಾಂತ ರಚನೆಯ ಸೂರ್ಯ ಮಾತ್ರ ತಪ್ಪದೆ ಮೂಡಿದನು! ಇತ್ತೀಚೆಗಷ್ಟೇ ಭಾರತೀಯ ಸಂಸತ್ತಿನ



ಒಬ್ಬ ಸದಸ್ಯನು ಭಾಷಾವಾರು ಪ್ರಾಂತರಚನೆಯ ಮಸೂದೆಯನ್ನು ತಂದು ಸಂಸತ್ತಿನಲ್ಲಿ ಈ ಪ್ರಶ್ನೆಗೆ ಅಗತ್ಯವಿದ್ದ ವೇಗವನ್ನು ದೊರಕಿಸಿ ಕೊಟ್ಟನು. ಸಂಸತ್ತಿನಲ್ಲಿ ನಡೆದ ಚರ್ಚೆಯ ಕಾಲಕ್ಕೆ ಈ ಪ್ರಶ್ನೆಗೆ ಸರಕಾರದ ವತಿಯಿಂದ ಉತ್ತರವನ್ನು ನೀಡುವ ಹೊಣೆ ಪ್ರತಿನಿಧಿಯಾದ ನನ್ನ ಮೇಲೆಯೇ ಬಂದಿತು. ಸ್ವಾಭಾವಿಕವಾಗಿಯೇ ವರಿಷ್ಠ ಪದಾಧಿಕಾರಿಗಳ ದೃಷ್ಟಿಕೋನವನ್ನು ಖಚಿತಪಡಿಸಿಕೊಳ್ಳಲೆಂದು ನಾನು ಈ ಸಂಗತಿಯನ್ನು ಅವರಲ್ಲಿಗೆ ಒಯ್ದೆ. ಅಚ್ಚರಿಯ ಸಂಗತಿ ಎಂದರೆ ಈ ಮೇಲಿನ(High Cmmand)ವರು ಭಾಷಾವಾರಾಗಿ ಕೆಲವು ಪ್ರಾಂತಗಳನ್ನು ರಚಿಸುವುದಕ್ಕೆ ಪೂರ್ತಿ ವಿರೋಧಿಗಳಾಗಿದ್ದರು. ಇಂಥ ಪರಿಸ್ಥಿತಿಯಲ್ಲಿ ಪ್ರಧಾನ ಮಂತ್ರಿಯವರೇ ಈ ಹೊಣೆಯನ್ನು ಹೊತ್ತುಕೊಳ್ಳುವುದು ಸೂಕ್ತ ದಾರಿಯಾಗಿತ್ತು. ಹಾಗೆ ಅವರು ಉತ್ತರವನ್ನು ನೀಡಿದರು ಕೂಡ. ಅವರು ಕೂಡಲೇ ಆಂಧ್ರ ಪ್ರಾಂತವು ಸ್ಥಾಪನೆಗೊಳ್ಳಲಿದೆ, ಎಂಬ ಭರವಸೆಯನ್ನೂ ನೀಡಿದರು. ಅವರೀ ಭರವಸೆಯಿಂದಾಗಿ ಭಾಷಾವಾರು ಪ್ರಾಂತ ರಚನೆಯ ಮಸೂದೆಯನ್ನು ಹಿಂದಕ್ಕೆ ತೆಗೆದುಕೊಳ್ಳಲಾಯಿತು, ಆ ಪ್ರಶ್ನೆ ಅಲ್ಲೇ ತಣ್ಣಗಾಯಿತು ಕೂಡ.

ಸಂವಿಧಾನದ ಮಸೂದೆಯು ತಯಾರಾದ ಬಳಿಕ ನನ್ನೆದುರು ಈ ಪ್ರಶ್ನೆಯನ್ನು ಎದುರಿಸುವ ಸನ್ನಿವೇಶವು ಬಂದಿತು. ನಾನು ಆಂಧ್ರ ಪ್ರಾಂತನ್ನು ಸಂವಿಧಾನದ 'ಅ' ವಿಭಾಗದಲ್ಲಿ ಸೇರ್ಪಡಿಸಬೇಕೆ, ಬೇಡವೆ, ಎಂಬುದನ್ನು ಪತ್ರದ ಮೂಲಕ ಅವರನ್ನು ವಿಚಾರಿಸಿದೆ. ಅದಕ್ಕೆ ಪುಷ್ಟಿಯನ್ನು ಒದಗಿಸಲೆಂದು ಅದನ್ನು ಕುರಿತು ಸಂಸತ್ತಿನಲ್ಲಿ ನಡೆದ ಚರ್ಚೆ ಹಾಗೂ ಅವರು ನೀಡಿದ ಭರವಸೆಗಳನ್ನು ಕೂಡ ಅವರಿಗೆ ನೆನಪು ಮಾಡಿಕೊಟ್ಟೆ. ಆದರೆ ಈ ಸಂದರ್ಭದಲ್ಲಿ ಎಲ್ಲಿ ನೊಣ ಸೀನಿತೋ, ನಾ ಕಾಣೆ. ಸಂವಿಧಾನ ಸಮಿತಿಯ ಅಧ್ಯಕ್ಷರಾದ ಡಾ. ರಾಜೇಂದ್ರಪ್ರಸಾದರು ಉತ್ತರ ಪ್ರಾಂತದ ಒಬ್ಬ ವಕೀಲರಾದ ಶ್ರೀ ಧಾರ್ ಅವರ ಮುಂದಾಳತ್ವದಲ್ಲಿ ಭಾಷಾವಾರು ಪ್ರಾಂತ ರಚನೆಯ ವಿಚಾರಣೆಯನ್ನು ನಡೆಸಲೆಂದು ಒಂದು ಸಮಿತಿಯನ್ನು ನೇಮಿಸಿದರು, ಎನ್ನುವುದಂತೂ ನಿಜ!

ಭಾಷಾವಾರು ಪ್ರಾಂತ ರಚನೆಯಮೇರೆಗೆ ಸಂಯುಕ್ತ-ಮಹಾರಾಷ್ಟವು ನಿರ್ಮಾಣವಾದರೆ ಯಾವುದೇ ಪರಿಸ್ಥಿತಿಯಲ್ಲೂ ಮುಂಬಯಿ ನಗರವು ಅದರಲ್ಲಿ ಸೇರ್ಪಡೆಗೊಳ್ಳಲಾರದೆಂದು ಧಾರಸಮಿತಿಯು ನೀಡಿದ ಅಭಿಪ್ರಾಯದಿಂದಾಗಿ ಧಾರ ಸಮಿತಿಯು ನಮ್ಮ ನೆನಪಿನಿಂದ ಮಾಸಿಹೋಗಲು ಸಾಧ್ಯವೇ ಇಲ್ಲ. ಕಾಂಗ್ರೆಸ್ಸಿನ ಜಯಪೂರಿನ ಅಧಿವೇಶನದಲ್ಲಿ ಧಾರ-ಸಮಿತಿಯ ವರದಿಯನ್ನು ಗಮನಿಸಲಾಯಿತು. ಜಯಪೂರ ಅಧಿವೇಶನದಲ್ಲಿ ವಿಶೇಷವಾಗಿ ಈ ಕೆಲಸಕ್ಕೆಂದು ಸ್ವತಃ ಪ್ರಧಾನಮಂತ್ರಿ, ವಲ್ಲಭ ಭಾಯಿ ಪಟೇಲ್ ಮತ್ತು ಡಾ. ಪಟ್ಟಾಭಿ ಸೀತಾರಾಮಯ್ಯ ಈ ಮೂವರನ್ನು ಆಯ್ಕೆ ಮಾಡಲಾಯಿತು. ಅವರು ಬರೆದ ವರದಿಯ ಸಾರಾಂಶವೆಂದರೆ, ಶೀಘ್ರವಾಗಿ ಆಂಧ್ರ ಪ್ರಾಂತದ ರಚನೆ ಆಗಬೇಕು, ಮದ್ರಾಸ್ ನಗರವನ್ನು ಮಾತ್ರ ತಮಿಳರಿಗೇನೆ ಕೊಡಬೇಕು! ಇದರ ವಿವರಗಳನ್ನು ಪರಿಶೀಲಿಸಲೆಂದು ಒಂದು ಸಮಿತಿಯನ್ನು ಕೂಡ ನೇಮಿಸಲಾಯಿತು. ಈ ಸಮಿತಿಯು ಬಹುಮತದಿಂದ ಒಂದು ವರದಿಯನ್ನು ತಯಾರಿಸಿತು. ಆದರೆ ಈ ವರದಿಗೆ ಶ್ರೀ ಪ್ರಕಾಶಮ್ ಅವರಂಥ ಪ್ರಮುಖ ವ್ಯಕ್ತಿಯದೇ ವಿರೋಧವಿತ್ತು. ಏಕೆಂದರೆ ಅವರಿಗೆ ಮದ್ರಾಸಿನಂತಹ ಪ್ರಮುಖ ನಗರವನ್ನು ಕಳೆದುಕೊಳ್ಳುವುದು ಬೇಕಿರಲಿಲ್ಲ. ಹೀಗಾಗಿ ಆಂಧ್ರ ಪ್ರಾಂತ ರಚನೆಯ ವಾಹನ ಇಲ್ಲಿಯೇ ಸಿಕ್ಕುಬಿದ್ದಿತು.

ತರುವಾಯದಲ್ಲಿ ಶ್ರೀ ಪೊಟ್ಟಿ ಶ್ರೀರಾಮುಲು ಅವರ ಮೃತ್ಯುವಿನ ಘಟನೆ ನಡೆಯಿತು. ಅವರು ಆಂಧ್ರ ಪ್ರಾಂತಕ್ಕಾಗಿ ತಮ್ಮ ಜೀವ ತೆತ್ತರು. ಕಾಂಗ್ರೆಸ್ ವಾಲರೆಲ್ಲರೂ ಆಂಧ್ರ ಪ್ರಾಂತದ ನಿರ್ಮಾಣಕ್ಕೆ

**ಭಾಷಾವಾರು ಪ್ರಾಂತ ರಚನೆ ಅಖಂಡತೆ ಎಂದರೆ ತಾನು ಸ್ವತಂತ್ರನು, ಬೇರೆಯವರಿಗಿಂತ ಭಿನ್ನನು ಎಂಬುದಾಗಿ ಅರ್ಥ ಮಾಡಿಕೊಂಡರೆ ತುಸು ಅವಧಿಯಲ್ಲೇ ಹಿಂದೂಸ್ಥಾನವು ಒಡೆದು ಹೋಳುಗಳಾಗಲಿದೆ**

ಒಪ್ಪಿಗೆಯನ್ನು ನೀಡಿಯೂ ಸಾಮಾನ್ಯವಾದ ಸಂಗತಿಗಳಿಂದಾಗಿ ಸುಮ್ಮನೆ ತಡ ಮಾಡುತ್ತ ಶ್ರೀ ಶ್ರೀರಾಮುಲು ಅವರನ್ನು ಮೃತ್ಯುವಿನ ಕಂದರಕ್ಕೆ ನೂಕಿದರೆಂಬುದು ತುಂಬ ದುಃಖದಾಯಕ ಸಂಗತಿ. ಈಗ ನಿರ್ಮಾಣವಾಗುತ್ತಿರುವ ಆಂಧ್ರ ಪ್ರಾಂತವೆಂದರೆ ಪ್ರಧಾನಿಯವರು ಶ್ರೀ ಶ್ರೀರಾಮುಲು ಅವರ ಗತಾತ್ಮಕ್ಕೆ ಪ್ರದಾನಿಸುತ್ತಿರುವ ಪಿಂಡವಷ್ಟೆ. ಪ್ರಪಂಚದಲ್ಲಿ ಇನ್ನೆಲ್ಲೂ ಜನ ಇಂಥ ಘಟನೆಯನ್ನು ಸಹಿಸಿಕೊಳ್ಳುವರೆಂದು ಊಹಿಸಲೂಕೂಡದು!

ಭಾಷಾವಾರು ಪ್ರಾಂತ ರಚನೆಯನ್ನು ಮಾಡುವ ಮುನ್ನ ಮೂರು ಸಂಗತಿಗಳ ಪೂರ್ತಿ ಆಗಬೇಕು. ಮೊದಲ ಸಂಗತಿ ಎಂದರೆ ತನ್ನ ಹೊಟ್ಟೆಹೊರೆದುಕೊಳ್ಳುವ ಮಟ್ಟಿಗೆ ಆ ಪ್ರಾಂತವು ಸ್ವಯಂಪೂರ್ಣವಾಗಿರತಕ್ಕದ್ದು. ಸಂವಿಧಾನ-ನಿರ್ಮಿತಿಯ ಕಾಲಕ್ಕೆ ಸಂಸ್ಥಾನಗಳ ವಿಲೀನೀಕರಣದ ಪ್ರಶ್ನೆಯು ತಲೆದೋರಿದಾಗ, ಆರ್ಥಿಕ ದೃಷ್ಟಿಯಿಂದ ಸ್ವಾವಲಂಬನೆಯು ಅಗತ್ಯದ್ದಾಗಿ ಕಂಡುದರಿಂದಲೇ ಇದ್ದ ಸಂಸ್ಥಾನಗಳಿಗೇನೆ ಸ್ವತಂತ್ರ ಪ್ರಾಂತದ ಸ್ಥಾನವು ಲಭಿಸಿತು. ಉಳಿದವುಗಳನ್ನು ಹತ್ತಿರದ ಪ್ರಾಂತಗಳಿಗೆ ಜೋಡಿಸಿಕೊಳ್ಳಲಾಯಿತು.

ಆಂಧ್ರವು ಸ್ವಯಂಪೂರ್ಣವಾದ ಪ್ರಾಂತವೆ? ಆಂಧ್ರ ಪ್ರಾಂತದ ವಾರ್ಷಿಕ ಮುಂಗಡ ಪತ್ರದಲ್ಲಿ ಸುಮಾರು ಐದು ಕೋಟಿ ರೂಪಾಯಿಗಳ ಕೊರತೆ ಉಂಟಾಗಲಿದೆ, ಎಂದು ನ್ಯಾ. ವಾಂಚ್ಛೂಅವರು ಸ್ಪಷ್ಟವಾಗಿ ಅಭಿಪ್ರಾಯ ಪಟ್ಟಿದ್ದರು. ಹೀಗಿರುವಲ್ಲಿ ಹುಟ್ಟಿ ಬರಲಿರುವ ಆಂಧ್ರ ಪ್ರಾಂತವು ತೆರಿಗೆಯ ಮೂಲಕ ಸಂಪಾದನೆಯನ್ನು ಹೆಚ್ಚಿಸಿಕೊಂಡು ಇಲ್ಲವೆ ವೆಚ್ಚಗಳನ್ನು ಕಡಿತಗೊಳಿಸಿ ಈ ಕೊರತೆಯನ್ನು ನೀಗಿಸಿಕೊಳ್ಳಬಲ್ಲುದೆ? ಇಂದು ಆಂಧ್ರದೆದುರು ಇದೊಂದು ಯಕ್ಷಪ್ರಶ್ನೆಯಾಗಿದೆ. ಮಧ್ಯ (ಕೇಂದ್ರ) ಸರಕಾರವು ಈ ಕೊರತೆಯನ್ನು ತುಂಬಿಕೊಡುವ ಭರವಸೆಯನ್ನು ನೀಡಲಿದೆಯೆ? ಮಧ್ಯ ಸರಕಾರವು ಇಂಥ ಹೊಣೆಯನ್ನು ಹೊರುವುದಾದರೆ ಅದು ಆಂಧ್ರದ ಮಟ್ಟಿಗೆ ಮಾತ್ರವೋ ಅಥವಾ ಇದೇ ರೀತಿಯಾಗಿ ಪೇಚಿನಲ್ಲಿರುವ ಎಲ್ಲ ಪ್ರಾಂತಗಳಿಗೂ ಅದು ಈ ಬಗೆಯ ನೆರವು ನೀಡುವುದೆ? ಎಂಬೆಲ್ಲ ಪ್ರಶ್ನೆಗಳನ್ನು ಇಂದೇ ಬಗೆಹರಿಸಿಕೊಳ್ಳಬೇಕಿದೆ.

ಆಂಧ್ರ ಪ್ರಾಂತದ ಬಳಿ ಖಚಿತವಾದ ಬಂಡವಾಳವಿಲ್ಲ. ಬಂಡವಾಳವಿಲ್ಲದೆಯೇ ಒಂದು ರಾಜ್ಯ ನಿರ್ಮಾಣವಾಗಬಲ್ಲದು, ಎನ್ನುವುದನ್ನು ಎಲ್ಲಿಯೂ ಕೇಳಿಲ್ಲ. ತಮಿಳರ ನಿಷ್ಠಾವಂತ ಮುಂದಾಳುವಾದ ಶ್ರೀ ರಾಜಗೋಪಾಲಾಚಾರಿ ಅವರು ಆಂಧ್ರ ಪ್ರಾಂತದ ಹೊಸ ಸರಕಾರಕ್ಕೆ ಮದ್ರಾಸಿನಲ್ಲಿ ಒಂದು ದಿನದ ಮಟ್ಟಿಗೂ ಆಸರೆ ನೀಡಲು ಸಿದ್ಧರಿಲ್ಲ. ತಮ್ಮ ಹಿಂದೂ ಧರ್ಮದ ಸಾದಾ 'ಆತಿಥ್ಯ' ವನ್ನು ತೋರುವ ಔಪಚಾರಿಕತೆ ಕೂಡ ಅವರಲ್ಲಿಲ್ಲ. ಹೊಸ ಆಂಧ್ರ ಸರಕಾರವು ತನ್ನ ಕಾರ್ಯಕಲಾಪಗಳಿಗಾಗಿ ಬೇರೊಂದು ಜಾಗೆಯನ್ನು ಹುಡುಕಿಕೊಳ್ಳಬೇಕಿದೆ, ಗುಡಿಸಲುಗಳಲ್ಲಿ ತನ್ನ ಕಚೇರಿಗಳನ್ನು ಶುರು ಮಾಡಿಕೊಳ್ಳಬೇಕಾಗಿ ಬಂದಿದೆ. ಆಂಧ್ರವು ಯಾವ ಊರನ್ನು ತನ್ನ ರಾಜಧಾನಿಗಾಗಿ ಆಯ್ದುಕೊಳ್ಳಲಿದೆ? ಆಂಧ್ರವು ಸಹಾರಾ ಮರುಭೂಮಿಯಂತಿದೆ. ಅವರಿಗೆ ಎಲ್ಲೂ ಹುಲ್ಲುಗಾವಲು ಕಾಣುತ್ತಿಲ್ಲ. ಆಂಧ್ರವು ಇಂಥ ಮಳಲುಗಾಡಿನಲ್ಲೂ ತನಗಾಗಿ ಒಂದು ಒಳ್ಳೆಯ ಹಾಗೂ ಆರೋಗ್ಯಕರವಾದ ನೆಲೆಯನ್ನು ಕಂಡುಕೊಳ್ಳಬೇಕಿದ್ದು, ತಾತ್ಕಾಲಿಕ ಕಚೇರಿಗಳ ಕಟ್ಟಡಗಳಿಗಾಗಿ ದುಂದುವೆಚ್ಚ ನಡೆದಿದೆ. ಸರಕಾರವು ಈ ಸಂಗತಿಯನ್ನು ಕುರಿತು ಎಂದಾದರೂ ಯೋಚಿಸಿದೆಯೆ? ಸರಕಾರವು ಆಂಧ್ರಕ್ಕೆ ಕಾಯಮ್ ಆಗಿ ಒಂದು ಜಾಗೆಯನ್ನು ನೀಡಬಾರದೇಕೆ?

ರಾಜಧಾನಿಯಾಗಲು ವಾರಂಗಲ್ಲು ಸೂಕ್ತವಾದ ನಗರ. ಅದು ಪ್ರಾಚೀನ ಕಾಲದಲ್ಲಿ ಆಂಧ್ರದ



ರಾಜಧಾನಿಯಾಗಿತ್ತು. ಅದು ರೈಲು ಜಂಕ್ಕನ್ ಕೂಡ ಆಗಿದೆ. ಅಲ್ಲದೆ ಈ ನಗರದಲ್ಲಿ ಸಾಕಷ್ಟು ಕಟ್ಟಡಗಳಿವೆ. ಈ ನಗರವು ಆಂಧ್ರದ ಭಾಗವಾಗಿದ್ದರೂ ಇಂದು ಹೈದ್ರಾಬಾದ ಸಂಸ್ಥಾನದಲ್ಲಿದೆ. ತಾತ್ವಿಕವಾಗಿ ಹೈದ್ರಾಬಾದ ಸಂಸ್ಥಾನವನ್ನು ಒಡೆದು ಅದರಲ್ಲಿರುವ ಆಂಧ್ರದ ಭಾಗವನ್ನು ಸೇರಿಸಿ ಹೊಸ ಆಂಧ್ರ ಪ್ರಾಂತವು ತಯಾರಾಗಬೇಕು. ಹೈದ್ರಾಬಾದ ಸಂಸ್ಥಾನವನ್ನು ಒಡೆಯದಿರುವಲ್ಲಿ ಪ್ರಧಾನಿಯವರ ಸ್ವಾರ್ಥ ಇದ್ದಿರಬಹುದಾದರೂ ಆಂಧ್ರಕ್ಕಾಗಿ ಹೈದ್ರಾಬಾದಿನ ಕೆಲವು ಭಾಗವನ್ನು ಕಿತ್ತುಕೊಂಡು ವಾರಂಗಲ್ಲನ್ನು ರಾಜಧಾನಿಯನ್ನಾಗಿ ಮಾಡುವ ಅನುಕೂಲವನ್ನು ಒದಗಿಸಲು ಅಡ್ಡಿಯೇನಿದೆ? ಪರರಾಜ್ಯದಿಂದ ಒಂದು ಭಾಗವನ್ನು ಕಿತ್ತುಕೊಳ್ಳುವುದು ಭಾರತಕ್ಕೆ ಹೊಸದೇನಲ್ಲ. ಆದರೆ ಪ್ರಧಾನಿಯವರಿಗೆ ಹೈದ್ರಾಬಾದ ಹಾಗೂ ಕಾಶ್ಮೀರ ಇವೆರಡೂ ಸಂಸ್ಥಾನಗಳ ಬಗೆಗೆ ಈಶ್ವರಾಜ್ಞೆಗೆ ವಿರುದ್ಧವಾಗಿಯೇ ನಡೆದುಕೊಳ್ಳುವುದಿದೆ. ಆದರೆ ಶೀಘ್ರದಲ್ಲಿಯೇ ಪ್ರಧಾನಿಗಳು ಸ್ವಂತದ ಕಣ್ಣುಗಳಿಂದಲೇ ಇದರ ದುಷ್ಪರಿಣಾಮವನ್ನು ನೋಡಬೇಕಾಗಲಿದೆ, ಎನ್ನುವಲ್ಲಿ ನನಗೆ ಸಂದೇಹವಿಲ್ಲ.

ಇಲ್ಲಿ ಸ್ವಲ್ಪ ವಿಷಯಾಂತರವಾಯಿತು. ನನ್ನ ಆಶಯವೆಂದರೆ ಆ ರಾಜ್ಯವು ಆರ್ಥಿಕ ದೃಷ್ಟಿಯಿಂದ ಸ್ವಯಂಪೂರ್ಣವಾಗಬೇಕಲ್ಲದೆ ಭವಿಷ್ಯದಲ್ಲಿ ಭಾಷಾವಾರು ಪ್ರಾಂತ ರಚನೆಯನ್ನು ಮಾಡುವಾಗ ಈ ಅಂಶವು ಹೆಚ್ಚು ಮಹತ್ವದ್ದು. ಎರಡನೆಯ ಅಂಶವೆಂದರೆ, ಭಾಷಾವಾರು ಪ್ರಾಂತ ರಚನೆ ಆಗುವಾಗ ಸಂಭವಿಸಬಹುದಾದ ಇಷ್ಟಾನಿಷ್ಟ ಘಟನೆಗಳನ್ನು ಕುರಿತು ಮೊದಲೇ ಅರಿತಿರಬೇಕು. ಈ ವರ್ಗೀಕರಣಕ್ಕೆ ತಕ್ಕಂತೆ, ಹಿಂದೂಸ್ಥಾನದ ಜನವಸತಿಗಳ ಹುಟ್ಟು-ಸಾವು, ಜಾತಿ-ವಂಶಗಳ ವಿವರವಾದ ಪರಿಶೀಲನೆ, ಕರಾರುವಾಕ್ಕಾದ ಸಂಶೋಧನೆ ಹಾಗೂ ಸರ್ವೇಕ್ಷಣೆಗಳನ್ನು ಕೈಕೊಳ್ಳಬಹುದಾದ ಅಧ್ಯಯನಶೀಲರಾದ ವಿದ್ಯಾರ್ಥಿಗಳಿಲ್ಲ, ಎಂಬುದು ದುರದೃಷ್ಟದ ಸಂಗತಿ. ನಮ್ಮ ದಶವಾರ್ಷಿಕ ಜನಗಣತಿಯ ವರದಿಯನ್ನು ಆಧರಿಸಿ ಮುಸಲ್ಮಾನರೆಷ್ಟು, ಹಿಂದೂಗಳೆಷ್ಟು, ಅಸ್ಪೃಶ್ಯರೆಷ್ಟು, ಜ್ಯೂಗಳೆಷ್ಟು ಮತ್ತು ಕ್ರಿಶ್ಚನ್ನರೆಷ್ಟು, ಎನ್ನುವ ಮಾಹಿತಿಯಷ್ಟೇ ಲಭ್ಯ. ದೇಶದಲ್ಲಿ ಒಟ್ಟು ಧರ್ಮಗಳೆಷ್ಟು, ಎಂದು ತಿಳಿದು ಯಾವ

ಪ್ರಯೋಜನವೂ ಇಲ್ಲ. ಪ್ರತಿಯೊಂದು ಭಾಷಾ ವಿಭಾಗದಲ್ಲಿ ಜಾತಿವಿಭಜನೆ ಹೇಗಿದೆ, ಎಂಬ ಮಾಹಿತಿ ನಮಗೆ ಬೇಕು. ಇದನ್ನು ಕುರಿತು ನಮ್ಮಲ್ಲಿ ತೀರ ಸ್ವಲ್ಪ ಮಾಹಿತಿ ಇದೆ. ಹೀಗಾಗಿ ಒಬ್ಬನು ತನ್ನ ಜ್ಞಾನ ಹಾಗೂ ಮಾಹಿತಿಯನ್ನು ಅವಲಂಬಿಸಬೇಕಿದೆ. ಒಂದು ಪ್ರಾಂತದಲ್ಲಿ ಬಹುಮಟ್ಟಿಗೆ ಒಂದು ಇಲ್ಲವೆ ಎರಡು ಜಾತಿಗಳ ಸಂಖ್ಯಾಪ್ರಾಬಲ್ಯವಿದ್ದು ಉಳಿದವುಗಳು ತೀರ ಅಲ್ಪಸಂಖ್ಯವಾದವುಗಳು. ಅವು ಈ ಬಹುಸಂಖ್ಯ ಜಾತಿಗಳನ್ನು ಅವಲಂಬಿಸಿ ಇರುತ್ತವೆಂದರೆ ತಪ್ಪಾಗಲಿಕ್ಕಿಲ್ಲ.

ಉದಾಹರಣೆಗೆಂದು ಹೇಳುವುದಾದರೆ ಪಂಜಾಬಿನ ಪೆಪ್ಸು ಪ್ರಾಂತವನ್ನು ನೋಡಿ, ಅಲ್ಲಿ ಜಾಟರ ಸಂಖ್ಯಾಪ್ರಾಬಲ್ಯವಿದ್ದು ಅಲ್ಲಿಯ ಅಸ್ಪೃಶ್ಯರು ಪೂರ್ತಿಯಾಗಿ ಅವರನ್ನು ಅವಲಂಬಿಸಿದ್ದಾರೆ. ಆಂಧ್ರದ ಎಲ್ಲೆಡೆಗಳಲ್ಲಿ ಮುಖ್ಯವಾಗಿ ಎರಡು ಇಲ್ಲವೆ ಮೂರು ಜಾತಿಗಳು ಕಾಣಸಿಗುತ್ತವೆ. ರೆಡ್ಡಿ, ಕಮ್ಮ ಹಾಗೂ ಕಪ್ಪು ಈ ಮೂರು ಜಾತಿಗಳು. ಜಮೀನುದಾರಿ, ಸರಕಾರಿ ನೌಕರಿ, ವ್ಯಾಪಾರ, ಉದ್ದಿಮೆಗಳಲ್ಲೆಲ್ಲ ಅವರೇ ಸ್ವಾಮಿತ್ವವನ್ನು ಮೆರೆಯುತ್ತಾರೆ. ಅಲ್ಲಿ ಅಸ್ಪೃಶ್ಯರಿಗೆ ಕೆಳಮಟ್ಟದ ಪರಾವಲಂಬಿ ಸ್ಥಾನವಿದೆ. ಮಹಾರಾಷ್ಟ್ರವನ್ನು ತೆಗೆದುಕೊಳ್ಳಿ, ಮಹಾರಾಷ್ಟ್ರದ ಗ್ರಾಮಾಂತರಗಳಲ್ಲೆಲ್ಲ ಮರಾಠರ ವಸತಿ ಅಪಾರವಾಗಿದೆ. ಬ್ರಾಹ್ಮಣ, ಗುಜರ, ಅಸ್ಪೃಶ್ಯ ಹಾಗೂ ಮೀನುಗಾರರು ಅಮುಖ್ಯ ಸ್ಥಾನದಲ್ಲಿ ಇರುವರು. ಒಂದು ಕಾಲಕ್ಕೆ ಬ್ರಾಹ್ಮಣರು ಹಾಗೂ ಬನಿಯಾ(ವ್ಯಾಪಾರಿ)ಗಳು ನಿರ್ಭಯರಾಗಿ ಇದ್ದರು. ಆದರೆ ಈಗ ಕಾಲ ಬದಲಾಯಿಸಿದೆ. ಗಾಂಧೀಜಿಯವರ ಹತ್ಯೆಯ ತರುವಾಯ ಬ್ರಾಹ್ಮಣರು ಹಾಗೂ ಬನಿಯಾಗಳು

**ಭಾಷಾವಾರು ಪ್ರಾಂತ ರಚನೆ ಅಖಂಡತೆ ಎಂದರೆ ತಾನು ಸ್ವತಂತ್ರನು, ಬೇರೆಯವರಿಗಿಂತ ಭಿನ್ನನು ಎಂಬುದಾಗಿ ಅರ್ಥ ಮಾಡಿಕೊಂಡರೆ ತುಸು ಅವಧಿಯಲ್ಲೇ ಹಿಂದೂಸ್ಥಾನವು ಒಡೆದು ಹೋಳುಗಳಾಗಲಿದೆ**

ಮರಾಠರ ಪ್ರಕೋಪಕ್ಕೆ ಹೆದರಿ, ಹಳ್ಳಿಪಳ್ಳಿಗಳಿಂದ ಮುಷ್ಟಿಯಲ್ಲಿ ಜೀವ ಹಿಡಿದುಕೊಂಡು ಓಡಿಹೋಗಿ ನಗರಗಳಲ್ಲಿ ಆಸರೆಯನ್ನು ಕಂಡುಕೊಂಡರು. ದುರ್ದೆವಿಗಳಾದ ಅಸ್ಪೃಶ್ಯರು, ಮೀನುಗಾರರು ಹಾಗೂ ಮಾಳಿ ಜನ ಮರಾಠರ ಸೊಕ್ಕು ಹಾಗೂ ಅನ್ಯಾಯಗಳನ್ನು ಸಹಿಸಿಕೊಳ್ಳುತ್ತ ಬಾಳನ್ನು ಸವೆಯಿಸುತ್ತಿರುವರು. ವಿಚಿತ್ರವಾದ ಈ ಜಾತಿ-

ರಚನೆಯನ್ನು ಅರಿಯದವರು ಇಂಥ ಅನ್ಯಾಯವನ್ನು ಸಹಿಸಿಕೊಳ್ಳಲೇಬೇಕು. ಭಾಷಾವಾರು ಪ್ರಾಂತ ರಚನೆಯಲ್ಲಿ ಅಲ್ಪಸಂಖ್ಯ ಜಾತಿಯವರಿಗೆ ಎಂಥ ನೆಲೆಯಿದೆ? ಅವರು ಕಾನೂನು ಮಂಡಲಿಗೆ ಚುನಾಯಿತರಾಗಿ ಬರುವ ಸಾಧ್ಯತೆಯಾದರೂ ಇದೆಯೇ? ಅವರು ಆರ್ಥಿಕ ಪ್ರಗತಿಯನ್ನು ನಿರೀಕ್ಷಿಸಬಹುದೆ? ಅವರಿಗೆ ಪ್ರಾಂತದ ಸರಕಾರಗಳಲ್ಲಿ ನೌಕರಿಗಳು ಲಭಿಸಲಿವೆಯೇ? ಪರಿಸ್ಥಿತಿಯು ಹೀಗಿರುವಲ್ಲಿ ಭಾಷಾವಾರು ಪ್ರಾಂತ ರಚನೆಯೆಂದರೆ 'ಸ್ವರಾಜ್ಯವನ್ನು ಬಹುಸಂಖ್ಯ ಜಾತಿಯವರ ಕೈಗೆ ಕೊಟ್ಟಂತೆ, ಇದೇ ತಾನೆ ಗಾಂಧೀಜಿಯವರ ಸ್ವರಾಜ್ಯದ ಅವಸ್ಥೆ!

ಈ ಪ್ರಶ್ನೆಯ ಬದಿಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದವರಿಗೆ ಭಾಷಾವಾರು ಪ್ರಾಂತ ರಚನೆ ಎಂಬ ಶಬ್ದ ಪ್ರಯೋಗ ಅರ್ಥವಾಗದು. ಇಂಥ ಪ್ರಾಂತಗಳನ್ನು ಜಾಟ ಪ್ರಾಂತ, ರೆಡ್ಡಿ ಪ್ರಾಂತ ಇಲ್ಲವೆ ಮರಾಠಾ ಪ್ರಾಂತ ಎಂದರೇನೆ ಅವರಿಗೆ ಸರಿಯಾಗಿ ಅರ್ಥವಾದೀತು.

ಮೂರನೆಯ ಅಂಶ. ಅದೆಂದರೆ ಒಂದು ಭಾಷೆಯನ್ನು ಆಡುವವರದು. ಒಂದು ಪ್ರಾಂತದಲ್ಲಿ ಸೇರ್ಪಡೆ ಮಾಡುವುದರಿಂದ ಅವರಲ್ಲಿ ಅಖಂಡತೆ ನಿರ್ಮಾಣವಾದೀತೆ? ಮಹಾರಾಷ್ಟ್ರದಲ್ಲಿ ಎಲ್ಲ ಮಹಾರಾಷ್ಟ್ರೀಯರು ಒಗ್ಗಟ್ಟಾಗುವರೆ? ಎಲ್ಲ ಆಂಧ್ರರು ಆಂಧ್ರಪ್ರದೇಶದಲ್ಲಿ ಒಳಗೊಳ್ಳಲಾಗುವರೆ? ಅಖಂಡತೆ ಎಂದರೆ ಹೊಸದೊಂದು ಬಣವನ್ನು ತಯಾರಿಸುವುದಲ್ಲ. ಇದು ಉತ್ತರ ಪ್ರದೇಶ, ಬಿಹಾರ, ಪ. ಬಂಗಾಲಗಳ ಅಖಂಡತೆಗೂ ಸಂಬಂಧಪಟ್ಟುದು. ಉತ್ತರ ಪ್ರದೇಶದ ಹಾಗೆ ಇಡಿಯ ಹಿಂದಿ ಮಾತನಾಡುವ ಸಮುಚ್ಚಯದವರ ಒಂದು ಪ್ರಾಂತ ಏಕಿರಬಾರದು? ಆದರೆ ಹೀಗೆ ಅಖಂಡತೆಯನ್ನು ಬೆಂಬಲಿಸುವವರು ಇತರ ಪ್ರಾಂತಗಳೊಡನೆ ಜಗಳ ಕಾಯಬಯಸುತ್ತಾರೆಯೆ? ಅಖಂಡತೆ ಎಂದರೆ ತಾನು ಸ್ವತಂತ್ರನು, ಬೇರೆಯವರಿಗಿಂತ ಭಿನ್ನನು, ಎಂದು ಅರ್ಥ ಮಾಡಿಕೊಂಡರೆ ಮೌರ್ಯ ಸಾಮ್ರಾಜ್ಯ ಒಡೆದು ಹೋದಹಾಗೆ ಹಿಂದೂಸ್ಥಾನವೂ ಕೂಡ ತುಸು ಕಾಲಾವಧಿಯಲ್ಲೇ ಒಡೆದು ಹೋಳುಗಳಾಗಲಿದೆ.

ಅಂದ ಮಾತ್ರಕ್ಕೆ ಭಾಷಾವಾರು ಪ್ರಾಂತ ರಚನೆಯ ಬೇಡಿಕೆಗೆ ಯಾವುದೇ ಬದಿಯಿಲ್ಲ ಎಂದಲ್ಲ. ಭಾಷಾವಾರು ಪ್ರಾಂತ ರಚನೆಯ ಪರದೆಯ ಹಿಂದೆ, ಆಯಾ ಪ್ರಾಂತಗಳ ಬಹುಸಂಖ್ಯ ಜಾತಿಗಳ ಕೈಯಿಂದ ಭಾಷಾವಾರು ಪ್ರಾಂತ ರಚನೆಯ ಹೆಣ ಬೀಳುವಂತಾಗಬಾರದೆಂಬುದಾಗಿ ಸೂಕ್ತ, ಖಚಿತ ಸ್ವರೂಪದ ಮುನ್ನೆಚ್ಚರಿಕೆ ಹಾಗೂ ಸಮತೋಲನೆಯನ್ನು ಉಳಿಸಿಕೊಳ್ಳುವುದನ್ನು ಕುರಿತಾದ ಸೂಚನೆಯಿದು.

'ಜನತಾ' : ತಾ. ೨ ಮೇ ೧೯೫೩.

**೧೧೪. ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ**

ಡಾ. ಬಾಬಾಸಾಹೇಬ ಅಂಬೇಡಕರರು ಯೆವಲೆ ಊರಿನಲ್ಲಿ ೧೩ ಅಕ್ಟೋಬರ್ ೧೯೩೫ರಂದು ಪ್ರತಿಜ್ಞೆಯನ್ನು ಮಾಡುವಾಗ ಹೀಗೆಂದರು : " ನನ್ನ ದುರದೃಷ್ಟದಿಂದಾಗಿ ಹಿಂದು-ಅಸ್ಪೃಶ್ಯನೆಂಬ ಕಲಂಕವನ್ನು ಹೊತ್ತು ಹುಟ್ಟಿಬಂದೆ. ಆದರೆ ಅದು ನನ್ನ ಕೈಯಲ್ಲಿರಲಿಲ್ಲ...... ಹಿಂದೂವೆಂದು ಅನ್ನಿಸಿಕೊಳ್ಳುತ್ತ ಸಾಯಲಾರೆನೆಂದು ಮಾತ್ರ ಸ್ಪಷ್ಟವಾಗಿ ನಿಮಗೆ ಹೇಳುತ್ತೇನೆ." ಇದಾದ ಬಳಿಕ ಅವರು ಯಾವ ಧರ್ಮವನ್ನು ಸ್ವೀಕರಿಸಬೇಕು, ಎಂದು ತೌಲನಿಕ ದೃಷ್ಟಿಯಿಂದ ಹಲವು ಧರ್ಮಗಳನ್ನು ಅಭ್ಯಸಿಸತೊಡಗಿದರು. ಈ ಮಧ್ಯೆ ಅವರು 'ಸ್ವತಂತ್ರ ಮಜೂರ (ಕಾರ್ಮಿಕ) ಪಕ್ಷ' ಹಾಗೂ 'ಅ, ಭಾ. ಶೆಡ್ಯೂಲ್ಡ್ ಕಾಸ್ಟ್ಸ್ ಫೆಡರೇಶನ್ , ಎಂಬೆರಡು ರಾಜಕೀಯ ಪಕ್ಷಗಳನ್ನು ಸ್ಥಾಪಿಸಿದರು. ಅವರು ಎಲ್ಲ ಧರ್ಮಗಳನ್ನು ಪರಿಶೀಲಿಸಿದ ತರುವಾಯ ಬೌದ್ಧ ಧಮ್ಮವನ್ನು ಸ್ವೀಕರಿಸುವುದೆಂದು ತೀರ್ಮಾನಿಸಿದರು. ಆ ಬಗೆಯ ಒಂದು ಮನವಿಯನ್ನು ತಾರೀಖು ೨೦ ಆಗಸ್ಟ್ ೧೯೫೫ರ 'ಜನತಾ ದ ಸಂಚಿಕೆಯಲ್ಲಿ ಪ್ರಕಟಿಸಿದರು.

ಡಾ. ಬಾಬಾಸಾಹೇಬ ಅಂಬೇಡಕರರು ಬೌದ್ಧ ಧಮ್ಮವನ್ನು ಸ್ವೀಕರಿಸಿದ ತರುವಾಯ ಜಾತಿವಾಚಕವಾದ `ಶೆಡ್ಯೂಲ್ಡ್ ಕಾಸ್ಟ್ಸ್ ಫೆಡರೇಶನ್' ಎಂಬೀ ರಾಜಕೀಯ ಪಕ್ಷವನ್ನು ಉಳಿಸಿಕೊಳ್ಳಲಾಗದೆಂಬ ಕಾರಣದಿಂದ ಸರ್ವಸಮಾವೇಶಕವಾದ ಒಂದು ಹೊಸ ರಾಷ್ಟ್ರೀಯ ಪಕ್ಷವನ್ನು ಸ್ಥಾಪಿಸುವುದನ್ನು ಕುರಿತು ಯೋಚಿಸತೊಡಗಿದರು. ಈ ಕುರಿತು 'ಜನತಾ', ತಾರೀಖು ೧೦ ಡಿಸೆಂಬರ್ ೧೯೫೫ರ ಸಂಚಿಕೆಯಲ್ಲಿ ಪ್ರಕಟಗೊಂಡ ಅವರ ನಿಲುವು ಸ್ಪಷ್ಟವಾಗಿದೆ. ಅದನ್ನು ಈ ಕೆಳಗೆ ನಮೂದಿಸಲಾಗಿದೆ.

''ಡಾ. ಬಾಬಾಸಾಹೇಬ ಅಂಬೇಡ್ಕರರು ಡಿಸೆಂಬರ್ ೧೯೫೫ರಲ್ಲಿ ಔರಂಗಾಬಾದಿನಲ್ಲಿ ಕಾಯಿಲೆ ಬಿದ್ದಿದ್ದರು. ಆ ಕಾಲಕ್ಕೆ ಅವರು, 'ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ' ಎಂಬ ಒಂದು ಹೊಸ ರಾಜಕೀಯ ಪಕ್ಷವನ್ನು ಶುರು ಮಾಡಬೇಕೆಂದು ಯೋಚಿಸುತ್ತಿದ್ದೇವೆ. ಭಾರತೀಯ ಸಂವಿಧಾನವನ್ನು ನಿಜವಾದ ಅರ್ಥದಲ್ಲಿ ಬಳಕೆಗೆ ತರಲೆಂದು ಈ ಪಕ್ಷವನ್ನು ಸ್ಥಾಪಿಸಲಾಗುವುದು, ಸಮಾನತೆ, ಸ್ವಾತಂತ್ರ್ಯ ಮತ್ತು ಬಂಧುಭಾವಗಳು ಅದರ ಮುಖ್ಯ ಗುರಿಯಾಗಲಿವೆ.

ಭಾರತದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷವನ್ನು ವಿರೋಧಿಸಲೆಂದು ಈ ಪಕ್ಷವು ಎಲ್ಲ ಚಿಕ್ಕಪುಟ್ಟ ಪಕ್ಷಗಳನ್ನು ತನ್ನಲ್ಲಿ ಏಕೀಕರಣಗೊಳಿಸಿಕೊಂಡು ಅಮೇರಿಕನ್ ವಿಧಾನದಿಂದ ಕಾರ್ಯವನ್ನು ನಿರ್ವಹಿಸಲಿದೆ.

ಅಮೇರಿಕೆಯ ವ್ಯಾಪಾರಿ ವರ್ಗದಂತೆ ಭಾರತದ ವ್ಯಾಪಾರಿ ವರ್ಗವು ಸತ್ತ್ಯಾಧಾರಿ ಪಕ್ಷ ಹಾಗೂ ವಿರೋಧಿ ಪಕ್ಷಗಳಿಗೆ ಆರ್ಥಿಕ ನೆರವನ್ನು ನೀಡಿದರೆ ಅವೆರಡೂ ಪಕ್ಷಗಳು ಭದ್ರವಾದ ಅಡಿಪಾಯದ ಮೇಲೆ ಕೆಲಸವನ್ನು ಮಾಡಬಲ್ಲವು. ಪ್ರಜಾಪ್ರಭುತ್ವದ ಅಭಿವೃದ್ಧಿಗೆ ಇದರಿಂದ ದೊಡ್ಡ ನೆರವು ಆಗಲಿದೆ.

ಚಿಕ್ಕಪುಟ್ಟ ಪಕ್ಷಗಳ ಬಳಿ ಇರುವ ಚಿಲ್ಲರೆ ನಿಧಿ, ಕಾರ್ಯಕರ್ತರ ಕೊರತೆಯಂತಹ ಸಂಗತಿಗಳನ್ನು



ಗಮನಕ್ಕೆ ತಂದುಕೊಂಡರೆ ಸದ್ಯದ ರಾಜಕೀಯ ವಾತಾವರಣದಲ್ಲಿ ಇಂಥ ರಾಜಕೀಯ ಪಕ್ಷಗಳಿಗೆ ಭವಿಷ್ಯಕಾಲ ಎಂಬುದೇ ಇಲ್ಲ," ಎಂಬುದಾಗಿ ಅಭಿಪ್ರಾಯಟ್ಟರು.

ಸರಕಾರ ಹಾಗೂ ದೇಶಭಕ್ತರು ಕಾಂಗ್ರೆಸ್ ಹಾಗೂ ರಿಪಬ್ಲಿಕನ್ ಇವೆರಡು ಪಕ್ಷಗಳ ಬೆಳೆವಣಿಗೆಗಾಗಿ ಅಮೇರಿಕೆಯಲ್ಲಿ ಇರುವಂತಹ ಪ್ರೋತ್ಸಾಹನೆಯನ್ನು ನೀಡಬೇಕೆಂದು ಕೂಡ ಅವರಿಗೆ ಅನ್ನಿಸುತ್ತದೆ.

ಉದಾಹರಣೆಯನ್ನು ನೀಡಲೆಂದು ಅವರು ಹೀಗೆಂದರು : "ಕಳೆದ ಚುನಾವಣೆಯಲ್ಲಿ 'ಶೆಡ್ಯೂಲ್ಡ್ ಕಾಸ್ಟ್ಸ್ ಫೆಡರೇಶನ್ನಿ ಗೆ ಕೆಲವು ಸಾವಿರ ರೂಪಾಯಿಗಳನ್ನು ವ್ಯಯಿಸಲು ಕೂಡ ಸಾಧ್ಯವಾಗಲಿಲ್ಲ. ತದ್ವಿರುದ್ಧವಾಗಿ `ಶೆಡ್ಯೂಲ್ಡ್ ಕಾಸ್ಟ್ಸ್ ಫೆಡರೇಶನ್ನನ್ನು ಕೆಡವಲೆಂದು ಕಾಂಗ್ರೆಸ್ಸು ಎಣಿಕೆಯಿಲ್ಲದಷ್ಟು ದುಡ್ಡನ್ನು ಖರ್ಚು ಮಾಡಿತು."

ಈ ದೃಷ್ಟಿಯಿಂದ ಡಾ. ಬಾಬಾಸಾಹೇಬ ಅಂಬೇಡ್ಕರರ ಹೊಸ ದಿಲ್ಲಿಯ ನಿವಾಸಸ್ಥಾನದಲ್ಲಿ ತಾರೀಖು ೩೦ ಸೆಪ್ಟೆಂಬರ್ ೧೯೫೭ರಂದು ಅವರ ಅಧ್ಯಕ್ಷತೆಯಲ್ಲಿ 'ಅ, ಭಾ. ಶೆಡ್ಯೂಲ್ಡ್ ಕಾಸ್ಟ್ಸ್ ಫೆಡರೇಶನ್ನಿ ನ ಕಾರ್ಯಕಾರಿ ಸಮಿತಿಯ ಸಭೆಯನ್ನು ಏರ್ಪಡಿಸಲಾಯಿತು. ಅ. ಭಾ. ರಿಪಬ್ಲಿಕನ್ ಪಾರ್ಟಿ'ಯನ್ನು ಸ್ಥಾಪಿಸಬೇಕೆಂದು ಒಂದು ಗೊತ್ತುವಳಿಯ ಮೂಲಕ ತೀರ್ಮಾನಿಸಲಾಯಿತು. ಈ ಸಭೆಯ ವೃತ್ತಾಂತವು 'ಪ್ರಬುದ್ಧ ಭಾರತ' ದ ತಾರೀಖು ೬ ಮತ್ತು ೧೩ ಅಕ್ಟೋಬರ್ ೧೯೫೭ರ ಸಂಚಿಕೆಗಳಲ್ಲಿ ಪ್ರಕಟವಾಯಿತು. ಅದು ಕೆಳಗಿನಂತಿದೆ -

“ಅಖಿಲ ಭಾರತೀಯ ದಲಿತ ಫೆಡರೇಶನ್ನಿ ನ ಕಾರ್ಯಕಾರಿ ಸಮಿತಿಯ ಸಭೆಯು ದಿಲ್ಲಿಯಲ್ಲಿ ತಾರೀಖು ೩೦ ಸೆಪ್ಟೆಂಬರ್ ೧೯೫೬ರಂದು ಡಾ. ಬಾಬಾಸಾಹೇಬ ಅಂಬೇಡಕರರ ಅಧ್ಯಕ್ಷತೆಯಲ್ಲಿ ಅವರ ನಿವಾಸಸ್ಥಾನದಲ್ಲಿ ನೆರವೇರಿತು. ಭಾರತದ ಬೇರೆ ಬೇರೆ ಪ್ರದೇಶಗಳ 'ದಲಿತ ಫೆಡರೇಶನ್ನಿ ನ ಕಾರ್ಯಕಾರಿ ಸಮಿತಿಯ ಸದಸ್ಯರು ಹಾಜರಿದ್ದರು. ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಸದ್ಯದ ರಾಜಕೀಯ ಪರಿಸ್ಥಿತಿಯನ್ನು ಕುರಿತು ಚರ್ಚೆ ನಡೆದು ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದ ಗೊತ್ತುವಳಿಗಳನ್ನು ಅಂಗೀಕರಿಸಲಾಯಿತು. 'ದಲಿತ ಫೆಡರೇಶನಿನ ರಾಜಕೀಯ ಪಕ್ಷದ ಬದಲು *ಅಖಿಲ ಭಾರತೀಯ ರಿಪಬ್ಲಿಕನ್ ಪಾರ್ಟಿ', ಎಂಬ ಹೆಸರಿನ ರಾಜಕೀಯ ಪಕ್ಷವನ್ನು ಸ್ಥಾಪಿಸುವ ಮಹತ್ವದ ತೀರ್ಮಾನವನ್ನು ಕೈಗೊಳ್ಳಲಾಯಿತು

### ಕಾಂಗ್ರೆಸ್ಸಿಗೆ ಹೊರತಾದ ಪಕ್ಷಗಳೊಡನೆ ಸಹಕಾರ

ಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಹೊರತಾದ ಪಕ್ಷಗಳೊಡನೆ ಸಹಕರಿಸುವುದನ್ನು ಕುರಿತು ಅಂಗೀಕರಿಸಲಾದ ಒಂದು ಗೊತ್ತುವಳಿಯಲ್ಲಿ ನಮೂದಿಸಲಾಗಿದೆ. ಕಾಂಗ್ರೆಸ್ಸಿಗೆ ಹೊರತಾದ ಇತರ ಯಾವುದೇ ರಾಜಕೀಯ ಪಕ್ಷವು 'ಅ, ಭಾ. ದಲಿತ ಫೆಡರೇಶನ್ನಿ ನೊಡನೆ ಚುನಾವಣೆಗಾಗಿ ಒಡಂಬಡಿಕೆಯನ್ನು ಮಾಡಿಕೊಳ್ಳಬಯಸಿದರೆ ಫೆಡರೇಶನ್ನು ಅದಕ್ಕೆ ಸಿದ್ಧ. ಒಡಂಬಡಿಕೆಗಾಗಿ ಇರಬಹುದಾದ ಷರತ್ತು ಹಾಗೂ ಅಂಶಗಳನ್ನು ಕುರಿತು ಕಾಂಗ್ರೆಸ್ಸಿಗೆ ಹೊರತಾದ ಇಂಥ ಪಕ್ಷದೊಡನೆ ಯೋಚಿಸಲಾಗುವುದು.

ಕಾರ್ಯಕಾರಿ ಸಮಿತಿಯು ಅಂಗೀಕರಿಸಿದ ಗೊತ್ತುವಳಿಗಳಲ್ಲಿ ಹೊಸ 'ಭಾರತೀಯ ರಿಪಬ್ಲಿಕನ್

೧ : 'ಜನತಾ', ತಾ. ೧೦ ಡಿಸೆಂಬರ್ ೧೯೫೫.

ಪಕ್ಷ ವನ್ನು ಶುರು ಮಾಡುವ ಬಗೆಗಿನ ಗೊತ್ತುವಳಿ, ರಾಜ್ಯ ಪುನರಚನೆಯ ಪ್ರಶ್ನೆಯನ್ನು ಕುರಿತಾದ ಗೊತ್ತುವಳಿ, ಸದ್ಯದ ಭಾರತೀಯ ವಿದೇಶ ನೀತಿಯನ್ನು ಕುರಿತಾದ ಗೊತ್ತುವಳಿ ಮತ್ತು ಸುಯೇಜ್ ಕಾಲುವೆಯನ್ನು ಕುರಿತಾದ ಗೊತ್ತುವಳಿ, ಮೊದಲಾದ ಸದ್ಯದ ಮಹತ್ವದ ವಿಷಯಗಳಿದ್ದವು.

**'ರಿಪಬ್ಲಿಕನ್ ಪಕ್ಷ'ದ ಸ್ಥಾಪನೆ ನಡೆಯಲಿದೆ**

ಕಾರ್ಯಕಾರಿ ಸಮಿತಿಯು ಹೊಸ 'ಭಾರತೀಯ ರಿಪಬ್ಲಿಕನ್ ಪಕ್ಷದ ಸ್ಥಾಪನೆಯನ್ನು ಕುರಿತಾದ ತನ್ನ ಗೊತ್ತುವಳಿಯಲ್ಲಿ, ಮುಂಬರುವ ಸಾರ್ವತ್ರಿಕ ಚುನಾವಣೆಯ ಮಟ್ಟಿಗೆ ಮಾತ್ರ ಕಾಂಗ್ರೆಸ್ಸಿಗೆ ವಿರೋಧಿಯಾದ ಒಂದು ಸಂಯುಕ್ತ ರಂಗವನ್ನು ನಿರ್ಮಿಸುವ ರಾಜಕೀಯ ಹೊತ್ತು ಬಂದಿದೆ, ಎಂದು ನಮೂದಿಸಿದೆ. ಇಷ್ಟೇ ಅಲ್ಲದೆ ಕಾರ್ಯಕಾರಿಣಿಯು ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಒಂದು ರಾಜಕೀಯ ಪಕ್ಷದ ಮೂಲಕ, ಕಾಂಗ್ರೆಸ್-ವಿರೋಧದಲ್ಲಿರುವ ಭಾರತೀಯ ಮತದಾರರನ್ನು ಕರೆತಂದು ಒಂದು ಸಂಘಟನೆಯನ್ನು ನಿರ್ಮಿಸುವುದು ಅಗತ್ಯದ್ದಾಗಿದೆ; ಅಸ್ಪೃಶ್ಯ ಜಾತಿಗಳು, ಕಾಡು ಜಾತಿಗಳೆಂದು ಬಗೆಯಲಾದವುಗಳು ಮತ್ತು ಇತರ ಹಿಂದುಳಿದ ಸಮುದಾಯಗಳು ಒಂದೇ ಬಗೆಯ ಅಂತಃಕರಣದ ಘಟಕಗಳಾಗಿದ್ದು ಮುಂದಿನ ಸಾರ್ವತ್ರಿಕ ಚುನಾವಣೆಯ ಮುನ್ನ ಹಾಗೂ ತದನಂತರವೂ ಅವುಗಳ ಪರಿಷತ್ತನ್ನು ಕರೆಯಬೇಕೆಂಬ ಆದೇಶವನ್ನೂ ತನ್ನ ಗೊತ್ತುವಳಿಯಲ್ಲಿ ನೀಡಿದೆ. ಹೊಸ ಭಾರತೀಯ ರಿಪಬ್ಲಿಕನ್ ಪಕ್ಷವನ್ನು ಶುರು ಮಾಡುವ ಕೆಲಸವನ್ನು ಈ ಪರಿಷತ್ತಿನ ಮೂಲಕ ಕೈಕೊಳ್ಳಲಾಗುವುದು.'

ಡಾ. ಬಾಬಾಸಾಹೇಬ ಅಂಬೇಡಕರರು 'ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ' ವನ್ನು ಸ್ಥಾಪಿಸಲೆಂದು ಭಾರತೀಯ ರಾಜಕೀಯದ ಸಮವಿಚಾರದ ಹಲವು ಪ್ರಮುಖ ವ್ಯಕ್ತಿಗಳೊಡನೆ ಮಾತುಕತೆ ಹಾಗೂ ಪತ್ರವ್ಯವಹಾರವನ್ನು ಆರಂಭಿಸಿ, ಮುಂದುವರೆಸಿದ್ದರು. ಅವರಲ್ಲಿ ಪ್ರಮುಖರೆಂದರೆ ಸೋಸಿಯಾಲಿಸ್ಟ್ ಪಾರ್ಟಿಯ ಮುಖ್ಯಸ್ಥರಾದ ರಾಮಮನೋಹರ ಲೋಹಿಯಾ. ಈ ಬಗೆಗೆ ಡಾ. ರಾಮಮನೋಹರ ಲೋಹಿಯಾ, ಅವರ

ಕಾರ್ಯಕರ್ತರು ಹಾಗೂ ಡಾ. ಬಾಬಾಸಾಹೇಬ ಅಂಬೇಡಕರರಲ್ಲಿ ನಡೆದ ಪತ್ರವ್ಯವಹಾರದಲ್ಲಿ 'ರಿಪಬ್ಲಿಕನ್ ಪಾರ್ಟಿ ಯ ಸ್ಪಷ್ಟವಾದ ಉಲ್ಲೇಖವಿದೆ.*

ಡಾ. ಬಾಬಾಸಾಹೇಬ ಅಂಬೇಡಕರರು 'ರಿಪಬ್ಲಿಕನ್ ಪಾರ್ಟಿ ಯ ಅಡಿಗಲ್ಲು ಯಾವ ವಿಚಾರಧಾರೆಯನ್ನು ಅವಲಂಬಿಸಿ ಇರಲಿದೆ, ಎಂಬುದನ್ನು ಕುರಿತು ಭಾರತೀಯ ಜನರಿಗಾಗಿ ಒಂದು ಮನವಿಯನ್ನು ತಯಾರಿಸಿದ್ದರು. ಡಾ. ಬಾಬಾಸಾಹೇಬ ಅಂಬೇಡಕರರು 'ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ , ಎಂಬೀ ಭಾರತದ ಪ್ರಜಾಸತ್ತಾತ್ಮಕ ಪಕ್ಷಕ್ಕೆ ಬೆಂಬಲವನ್ನು ನೀಡಬೇಕೆಂದು ಭಾರತೀಯ ಜನರಿಗೆ ಮಾಡಿದ ಈ ಮನವಿಯನ್ನು ತೆರೆದ ಪತ್ರವೆಂದು ಕರೆಯಲಾಯಿತು.

ಡಾ. ಬಾಬಾಸಾಹೇಬ ಅಂಬೇಡ್ಕರರು ನಾಗಪೂರಿನಲ್ಲಿ ನೆರವೇರಲಿರುವ ಧಮ್ಮ ದೀಕ್ಷೆಗಾಗಿ ಬಂದಾಗ ತಾರೀಖು ೧೩ ಅಕ್ಟೋಬರ್ ೧೯೫೬ರಂದು ವೃತ್ತಪತ್ರಗಳ ಸುದ್ದಿಗಾರರೊಡನೆ ನಡೆದ ಅವರ ಸಂದರ್ಶನವು ಕೆಳಗಿನಂತಿದೆ -

೧ : 'ಪ್ರಬುದ್ಧ ಭಾರತ'. ತಾ, ೬ ಅಕ್ಟೋಬರ್ ೧೯೫೬

+ : ನೋಡಿ ಪರಿಶಿಷ್ಟ ಕ್ರಮಾಂಕ-೨೬.



ಪ್ರಶ್ನೆ : ಧರ್ಮಾಂತರದ ತರುವಾಯ ಶೆಡ್ಯೂಲ್ಡ್ ಕಾಸ್ಟ್ಸ್ ಫೆಡರೇಶನ್' ಏನಾಗಲಿದೆ?

ಉತ್ತರ : ಬಹುಮಟ್ಟಿಗೆ ಕಾಯಮ್ಮಾಗಿ ಉಳಿದೀತು ಇಲ್ಲವೆ ಹೊಸ ಪಕ್ಷದ ಸ್ಥಾಪನೆಯಾದೀತು. ಬೌದ್ಧ ಧರ್ಮವನ್ನು ಪ್ರವೇಶಿಸಿದ ಬಳಿಕ ನಾನಂತೂ `ಶೆಡ್ಯೂಲ್ಡ್ ಕಾಸ್ಟ್ಸ್ ಫೆಡರೇಶನ್ನಿ ನ ಸದಸ್ಯನಾಗಿ ಉಳಿಯಲಾರೆ.

ಪ್ರಶ್ನೆ : ಬೌದ್ಧ ಧರ್ಮವನ್ನು ಸ್ವೀಕರಿಸಿದ ತರುವಾಯ ತಾವೇನು ಮಾಡುವಿರಿ?

ಉತ್ತರ : ನಾನು 'ಮಿಶನರಿ ಯಾಗಲಿರುವೆ. ಆದರೆ ರಾಜಕೀಯದಿಂದ ಮಾತ್ರ ಸಂನ್ಯಾಸವನ್ನು ಸ್ವೀಕರಿಸೆನು. ಚುನಾವಣೆಗೆ ಖಂಡಿತ ನಿಲ್ಲುವೆ.

ಪ್ರಶ್ನೆ : ತಾವು 'ರಿಪಬ್ಲಿಕನ್ ಪಾರ್ಟಿ ಯನ್ನು ಸ್ಥಾಪಿಸಲು ತೀರ್ಮಾನಿಸಿರುವಿರಾ?

ಉತ್ತರ : ಹೌದು. ಹಾಗೆಂದು ಖಂಡಿತ ತೀರ್ಮಾನಾಗಿದೆ. ಆ ಪಕ್ಷದ ಸಂವಿಧಾನವನ್ನು ಕೂಡ ತಯಾರಿಸಿಯಾಗಿದೆ. ಈ ಪಕ್ಷವು ಸ್ವಾತಂತ್ರ್ಯ, ಸಮತೆ ಮತ್ತು ಬಂಧುತ್ವಗಳ ತತ್ತ್ವವನ್ನು ಆಧರಿಸಿರುವುದೆಂಬುದನ್ನು ಅದರ ಪ್ರಿಂಬಲ್‌ದಲ್ಲಿ ಸ್ಪಷ್ಟಗೊಳಿಸಲಾಗಿದೆ. ಪಾರ್ಲಿಮೆಂಟಿಗೆ ಬರುವ ಪ್ರತಿಯೊಂದು ಮಸೂದೆಯನ್ನು ಕೆಳಗಿನ ಮೂರು ಒರೆಗಳಿಗೆ ಹಚ್ಚಿ ನೋಡಲಾಗುವುದು.

ಪ್ರಶ್ನೆ : ಆದರೆ ಪಕ್ಷದ ತತ್ತ್ವಜ್ಞಾನವೇನು?

ಉತ್ತರ : ಪಕ್ಷದ ಮುಖವಾದ ಆವಶ್ಯಕತೆ ಎಂದರೆ ಗಟ್ಟಿಯಾದ ನಾಯಕತ್ವ.

ಪ್ರಶ್ನೆ : ಈ ಪಕ್ಷದ ಸ್ವರೂಪವು ವ್ಯಾಪಕವಾದುದೆ?

ಉತ್ತರ : ಹೌದು! ಎಲ್ಲರಿಗೂ ಈ ಪಕ್ಷಕ್ಕೆ ಪ್ರವೇಶವನ್ನು ನೀಡಲಾಗುವುದು." ೧

ಇದರಿಂದ, ಡಾ. ಬಾಬಾಸಾಹೇಬ ಅಂಬೇಡಕರರು 'ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ' ಎಂಬೀ ಪಕ್ಷವನ್ನು ಸ್ಥಾಪಿಸಲು ಖಚಿತವಾದ ತೀರ್ಮಾನವನ್ನು ಮಾಡಿದ್ದರಲ್ಲದೆ ಅದಕ್ಕಾಗಿ ಆವಶ್ಯಕವಿದ್ದ ಸಂಗತಿಗಳ ಪರಿಪೂರ್ತಿಯನ್ನು ಮಾಡಿದ್ದರೆಂಬುದು ಕಂಡುಬರುತ್ತದೆ. ಆದರೆ ತಮ್ಮ ಆಕಸ್ಮಿಕ ನಿಧನದಿಂದಾಗಿ ಆ ಪಕ್ಷದ ಸ್ಥಾಪನೆಯನ್ನು ಸಾರ್ವಜನಿಕವಾಗಿ ಘೋಷಿಸಲು ಅವರಿಂದ ಆಗಲಿಲ್ಲ. ಈ ಬಗೆಗೆ ಅವರು ನಿರುಪಾಯರಾದರು.

ಈ ಪಕ್ಷದ ವೈಶಿಷ್ಟ್ಯಗಳನ್ನು ತೋರಿಪಡಿಸುವಾಗ 'India votes ಗ್ರಂಥದ ಸಂಪಾದಕರಾದ R. Chandidas, Ward Morehouse, Leon Clark, Richard Fontera ಇವರು ಹೀಗೆನ್ನುತ್ತಾರೆ:

"Republican Party of India' is an All-India Political Party founded by Late Dr. Babasaheb Ambedkar who was the great constitutional expert, he dedicated his life to the cause of reconstructing the Indian society on liberty, equality and fraternity. 'The Republican Party of India' dedicates itself to this great task :

'Republican Party of India' stands for Parlimentary Democracy -

1 'The Republican Party of India' will stand for the Parlimentary system of Government as being the best form of Government both in the interest of the public and in the interest of the idividual.

೧ : 'ಪ್ರಬುದ್ಧ ಭಾರತ'. ಅಂಬೇಡಕರ ಬೌದ್ಧ ವಿಶೇಷಾಂಕ, ೨೭ ಆಕ್ಟೋಬರ್ ೧೯೫೬. ಪು. ೨೫-೨೬.



## Secularism upheld

2 The Republican Party of India' upholds the secular character of the state." 1

ಡಾ. ಬಾಬಾಸಾಹೇಬ ಅಂಬೇಡಕರರು 'ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಪಕ್ಷವನ್ನು ಸ್ಥಾಪಿಸಲೆಂದು ನೆಡಲಾದ ಮುಹೂರ್ತದ ಕಂಬದ ವೈಚಾರಿಕ ನೆಲೆಗಟ್ಟು ಅದೆಷ್ಟು ಪ್ರಭಾವಿ ಹಾಗೂ ಕಾರ್ಯದಕ್ಷತೆಯದಾಗಿದೆ ಎಂದರೆ, ಈ ಪಕ್ಷವು ಕ್ರಿಯಾಶೀಲವಾಗಿ ಇದನ್ನನುಸರಿಸಿದರೆ ಅದು ಪ್ರಪಂಚ ಹಾಗೂ ಭಾರತವನ್ನು ರಕ್ತಪಾತದಿಂದ ಕಾಪಾಡಬಲ್ಲುದು. ಡಾ. ಅಂಬೇಡಕರರ ಚಳುವಳಿಯ ಕಾಲದಲ್ಲಿ ಅವರ ಧೈರ್ಯಶಾಲಿ ಕಾರ್ಯಕರ್ತರು, ವಿಚಾರವಂತರು ಹಾಗೂ ಮಾಜಿ ಸಂಸದರಾದ ಆ್ಯಡ್, ಬಿ. ಸಿ. ಕಾಂಬಳೆ ಅವರು ಇಂಥ ನಿಷ್ಕರ್ಷೆಗೆ ಬರುವಾಗ ತಮ್ಮ 'ಆ ಮನವಿಯ ಪ್ರಶೋತ್ತರ-ರೂಪದ ಹಗುರಾದ ಹಾಗೂ ಯಥಾರ್ಥವಾದ ವಿವೇಚನೆ ಯಲ್ಲಿ ಹೀಗೆನ್ನುತ್ತಾರೆ :

"............ ಡಾ. ಬಾಬಾಸಾಹೇಬ ಅಂಬೇಡಕರರ 'ತೆರೆದ ಪತ್ರದ ಸಂದೇಶವನ್ನು ಭಾರತದ ಮೂಲೆಮೂಲೆಗಳು ಹಾಗೂ ಭಾರತದ ಜನರಿಗೆ ತಲುಪಿಸುವುದು ತುಂಬ ಆವಶ್ಯಕ. ಇದೇ ರೀತಿಯಾಗಿ ಈ ಪತ್ರವು ಪ್ರಪಂಚದ ಜನರಿಗಾಗಿಯೂ ಇದೆಯೆಂದು ಬಗೆದು ಈ 'ತೆರೆದ ಪತ್ರ'ದ ಸಂದೇಶವನ್ನು ರಾಷ್ಟ್ರಸಂಘ ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಪ್ರಪಂಚದ ಜನರಿಗೆ ತಲುಪಿಸುವುದೂ ಅಷ್ಟೇ ಮುಖ್ಯ.

"ಈ ಕಾರ್ಯವನ್ನು ಎಸಗುವವರು ಪ್ರಪಂಚದ ಕೃತಜ್ಞತೆಗೆ ಪಾತ್ರರಾಗುವರು. ಯಾರೇ ಇದನ್ನು ಮಾಡಲಿ ಇಲ್ಲವೆ ಬಿಡಲಿ, 'ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ವನ್ನು ಮನ್ನಿಸುವ ಜನರೆಲ್ಲರೂ ಸೇರಿ ಈ ಕಾರ್ಯವನ್ನು ಮಾಡಲು ಮುಂದೆ ಬಂದು ಪ್ರಪಂಚ ಹಾಗೂ ಭಾರತವನ್ನು ರಕ್ತಪಾತದಿಂದ ಕಾಪಾಡಬೇಕು."

ಮಾನನೀಯರಾದ ದಾ. ತಾ, ರೂಪವತೆ ಅವರು ಈ ಮನವಿಯನ್ನು ಅನುವಾದಿಸಿ ಪ್ರಬುದ್ಧ ಭಾರತ : 'ರಿಪಬ್ಲಿಕನ್ ಪಾರ್ಟಿ ಸ್ಥಾಪನಾ ವಿಶೇಷ ಸಂಚಿಕೆ , ೧೯೫೭ರಲ್ಲಿ ಪ್ರಕಟಿಸಿದರು. ಅದು ಈ ರೀತಿಯಾಗಿದೆ -

1 : India Votes : P. 85.

## ಪರಮಪೂಜ್ಯರಾದ ಡಾ. ಬಾಬಾಸಾಹೇಬ ಅಂಬೇಡಕರರಿಂದ ಭಾರತೀಯ ಜನರಿಗೆ 'ತೆರೆದ ಪತ್ರ' 'ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ' (ಭಾರತೀಯ - ಪ್ರಜಾಸತ್ತಾತ್ಮಕ ಪಕ್ಷ) ಪಕ್ಷವನ್ನು ಸೇರಲು ಆಹ್ವಾನ

[ಪರಮಪೂಜ್ಯರಾದ ಬಾಬಾಸಾಹೇಬ ಅಂಬೇಡಕರರು 'ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಎಂಬ ಹೊಸ ಪಕ್ಷವನ್ನು ಸ್ಥಾಪಿಸುವ ಸಲುವಾಗಿ ಮುಹೂರ್ತದ ಕಂಬವನ್ನು ನೆಟ್ಟಿದ್ದರು. ಅವರು ಈ ಕುರಿತು ಭಾರತೀಯ ರಾಜಕೀಯದ ಕೆಲವು ಮುಖ್ಯ ಜನರೊಡನೆ ಮಾತುಕತೆಗಳನ್ನು ಆರಂಭಿಸಿದ್ದರು. ಅವರು ಬದುಕಿರುವಾಗಲೇ ಭಾರತೀಯ ಜನರಿಗೆ ಪ್ರಜಾಪ್ರಭುತ್ವದ ಮಹತ್ವವನ್ನು ಮನಗಾಣಿಸುವ, ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷಗಳ ಆವಶ್ಯಕತೆ ಎಷ್ಟೆಂಬುದನ್ನು ನಿರ್ದೇಶಿಸುವ, ರಿಪಬ್ಲಿಕನ್ ಪಾರ್ಟಿಯನ್ನು ಏಕೆ ಸ್ಥಾಪಿಸಲಾಗುತ್ತಿದೆ ಎಂಬುದನ್ನು ತಿಳಿಸುವ, ಈ ಹೊಸ ಪಕ್ಷದ ಗುರಿ ಹಾಗೂ ನೀತಿಗಳನ್ನು ವಿವರಿಸುವ ವಿಸ್ತ್ರತವಾದ ಒಂದು ಪತ್ರವನ್ನು ಬರೆದಿರಿಸಿದ್ದರು. 'ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ' ಎಂಬೀ ಹೊಸ ಪಕ್ಷಕ್ಕೆ ಬೆಂಬಲವನ್ನು ನೀಡಬೇಕೆಂದು ಬಾಬಾ ಅವರು ಭಾರತೀಯ ಜನರಿಗೆ ಆಹ್ವಾನವನ್ನು ಮಾಡುವ 'ತೆರೆದ ಪತ್ರ ಇದು. ಅವರು ಬದುಕಿದ್ದರೆ ಅದನ್ನು ಪರಿಷ್ಕರಿಸಬಹುದಿತ್ತು. ಅದು ಪೂರ್ಣವಾಗಲೆಂದು ಅವರು ಅದರಲ್ಲಿ ಕೆಲವು ಮಾರ್ಪಾಟುಗಳನ್ನೂ ಮಾಡಬಹುದಿತ್ತೇನೋ, ಹಾಗೆಯೇ ಅದರಲ್ಲಿ ಕೆಲವು ಸೇರ್ಪಡೆಗಳನ್ನೂ ಮಾಡಬಹುದಿತ್ತು. ನಡುವೆಯೇ ಅವರ ಮಹಾನಿರ್ವಾಣವಾದ್ದರಿಂದ ಅದಾಗಲಿಲ್ಲ. ಈಗಿರುವ ಪತ್ರವನ್ನು ಇದ್ದ ಹಾಗೆಯೇ ಮುದ್ರಿಸುವುದು ಅಗತ್ಯದ್ದಾದ್ದರಿಂದ ನಾನು ಅದನ್ನು ಶಬ್ದಶಃ ಭಾಷಾಂತರ ಮಾಡಿ ಇಲ್ಲಿ ಮುದ್ರಿಸಿದ್ದೇನೆ. ಮೂಲ ಬರವಣಿಗೆಯು ಇಂಗ್ಲಿಷ್‌ನಲ್ಲಿದೆ.- ದಾ ರೂಪವತೆ]

**[೧] ಚಳುವಳಿಗೆ ರಾಜಕೀಯ ಸ್ವರೂಪ ಲಭಿಸುವುದು ಹೇಗೆ**

೧೮೮೫ರಲ್ಲಿ ಹಿಂದಿ ಕಾಂಗ್ರೆಸ್ಸಿನ ಸ್ಥಾಪನೆಯಾಯಿತು. ಅದು ೧೯೪೭ ರವರೆಗೆ ಸ್ವರಾಜ್ಯ ಪ್ರಾಪ್ತಿಯ ಚಳುವಳಿಯಾಗಿ ಕೆಲಸ ಮಾಡಿತು. ಶುರುವಿನಲ್ಲಿ ಅದು ಸ್ಪಷ್ಟವಾದ ಗುರಿಯನ್ನು ಹೊಂದಿರಲಿಲ್ಲ. ಅದು ಮೊದಲಿಗೆ ಸುರಾಜ್ಯದ (ಒಳ್ಳೆಯ ರಾಜ್ಯಾಡಳಿತೆಗಾಗಿ) ಬೇಡಿಕೆಯನ್ನು ಮುಂದಿಟ್ಟಿತು. ಆ ಮೇಲೆ ಈ ಗುರಿಯನ್ನು ಬದಲಾಯಿಸಿ ಅದು 'ಸ್ವರಾಜ್ಯ'ದ ಬೇಡಿಕೆಯನ್ನು ಮುಂದಿಟ್ಟಿತು. ಈ ಸ್ವರಾಜ್ಯದ ಪರಿಕಲ್ಪನೆಯನ್ನು ಬ್ರಿಟಿಷ್ ರಾಜಕೀಯ ವಲಯಗಳಲ್ಲಿ ಎರಡು ಪರ್ಯಾಯಗಳಾಗಿ ಅರ್ಥೈಸಲಾಯಿತು. (೧) ವಸಾಹತಿಯ ಸ್ವರಾಜ್ಯ (Dominion Status) (೨) ಸಂಪೂರ್ಣ ಸ್ವಾತಂತ್ರ (Independence), ಸಮಾನ (ಒಬ್ಬನೇ) ರಾಜನಿಗೆ ರಾಜನಿಷ್ಠರಾಗಿದ್ದು ಸ್ವಾತಂತ್ರ್ಯವನ್ನು ಉಪಭೋಗಿಸುವುದೆಂದರೆ ವಸಾಹತಿಯ ಸ್ವಾತಂತ್ರ್ಯ, ರಾಜನಿಷ್ಠೆ ಇಲ್ಲದ ಸ್ವಾತಂತ್ರ್ಯವೆಂದರೆ ಪೂರ್ಣ ಸ್ವಾತಂತ್ರ್ಯ, ಎಂದಾಗಿತ್ತು.

ಹಿಂದಿ ರಾಷ್ಟ್ರಸಭೆಯು (ಕಾಂಗ್ರೆಸ್) ಶುರುವಿನಲ್ಲಿ ಕೆಲಕಾಲ ವಸಾಹತಿಯ ಸ್ವರಾಜ್ಯವನ್ನು ಒಪ್ಪಿಕೊಳ್ಳುತ್ತಿತ್ತು. ಆದರೆ ಆ ಕಾಲಾವಧಿ ತೀರ ಕಡಿಮೆ ಇತ್ತು.

೧೯೩೦ರಲ್ಲಿ ಅದು ತೀರ ನಾಟಕೀಯ ಹಾಗೂ ಅನಿರೀಕ್ಷಿತವಾಗಿ ಸಂಪೂರ್ಣ ಸ್ವಾತಂತ್ರದ ಗೊತ್ತುವಳಿಯನ್ನು ಅಂಗೀಕರಿಸಿತು. ೧೯೪೭ರಲ್ಲಿ ಈ ಸ್ವಾತಂತ್ರವು ಲಭಿಸಿತು.



ಕಾಂಗ್ರೆಸ್ಸಿನ ಇಲ್ಲಿಯವರೆಗಿನ ಸ್ವರೂಪವು ಸಂಸದೀಯ ಪ್ರಜಾಪ್ರಭುತ್ವವನ್ನು (Parlimentary Democracy) ಯಶಸ್ವಿಗೊಳಿಸಲೆಂದು ತಯಾರಿಸಲಾದ ಸೈನ್ಯದಂತಿರದೆ ಪರಕೀಯ ಸತ್ತೆಯ ವಿರುದ್ಧ ಹೋರಾಡಲು ತಯಾರಿಸಲಾದ ಪ್ಲಟೂನಿನಂತಿತ್ತು. ಶ್ರೀ ಗಾಂಧಿಯವರಿಗೆ ಈ ಸಂಗತಿ ತಿಳಿದಿದ್ದರಿಂದ ಅವರು ಕಾಂಗ್ರೆಸ್ ಸಂಸ್ಥೆಯನ್ನು ವಿಸರ್ಜಿಸಿ, ಸ್ವರಾಜ್ಯದ ಸರಕಾರವನ್ನು ನಡೆಯಿಸಲು ಹೊಸ ಪಕ್ಷವನ್ನು ಪಕ್ಷಪದ್ಧತಿಯಿಂದ ಕಟ್ಟಬೇಕೆಂದು ಬಲು ಸೋಜ್ಞವಾದ ಸೂಚನೆಯನ್ನು ನೀಡಿದ್ದರು. ಆದರೆ ಸರಕಾರದ ಕಾರ್ಯಕಲಾಪಗಳ ಸೂತ್ರಗಳನ್ನೆಲ್ಲ ತಮ್ಮ ಕೈಗೆ ತೆಗೆದುಕೊಳ್ಳಲೆಂದು ಕಾಂಗ್ರೆಸ್ ಪಕ್ಷದ ನಾಯಕರು ಶಸ್ತ್ರಾಸ್ತ್ರಗಳೊಡನೆ ಸನ್ನದ್ಧರಾಗಿ ತಮ್ಮ ತಮ್ಮ ಡೇರೆಗಳಲ್ಲಿ ಕುಳಿತಿದ್ದರು ! ಅವರು ಶ್ರೀ ಗಾಂಧಿಯವರ ಸಲಹೆಗೆ ಸೊಪ್ಪು ಹಾಕಲಿಲ್ಲ. ಯುದ್ಧ ಕಾಲದಲ್ಲಿ ತಯಾರಿಸಿದ ಸೈನ್ಯವನ್ನು ಶಾಂತಿ ಸ್ಥಾಪನೆಯಾದ ಬಳಿಕ ವಿಸರ್ಜಿಸಬೇಕೆಂಬುದು ಸಾಮಾನ್ಯವಾಗಿ ರಾಜನೀತಿಯ ಸಂಪ್ರದಾಯ, ಅದರ ಕಾರಣವೂ ಸ್ಪಷ್ಟ. ಯುದ್ಧದ ಕಾಲಕ್ಕೆ ಸೈನಿಕರ ನೇಮಕದ ಬಗೆಗೆ ಸೂಕ್ತವಾದ ಎಚ್ಚರವನ್ನು ವಹಿಸಲಾಗದು. ಹೀಗಾಗಿ ಅದರ ಮಟ್ಟವು ತೀರ ಕೆಳಗಿಳಿದಿರುತ್ತದೆ. ಭಾರತ ಸಂದರ್ಭದಲ್ಲಿ ಈ ಸೈನ್ಯವನ್ನು ವಿಸರ್ಜಿಸುವದಂತೂ ದೂರ, ಬದಲು ಅದು ಇಡಿಯ ಸತ್ತೆಯನ್ನೇ ವಶಪಡಿಸಿಕೊಂಡು ಬಿಟ್ಟಿದೆ.

ನಮಗೀಗ ಕಾಂಗ್ರೆಸ್ಸಿನ ಕಳೆದ ಹತ್ತು ವರ್ಷಗಳ ಆಳ್ವಿಕೆಯ ಅನುಭವ ಬಂದಿದೆ. ಯಾರೇ ಆದರೂ ಆಡಳಿತೆ ಶೋಭಿಸುವಂಥದಲ್ಲವೆಂದು ಅನ್ನುವಂತಿದೆ.

ಶ್ರೀ ಗಾಂಧಿಯವರ ಸಲಹೆಯನ್ನು ಕುರಿತು ಗಂಭೀರತೆಯಿಂದ ಯೋಚಿಸುವ ಹಾಗೂ ಸಂಸದೀಯ ಪ್ರಜಾಪ್ರಭುತ್ವದಲ್ಲಿ ವಿರೋಧಿ ಪಕ್ಷವೆಂದು ಕೆಲಸವನ್ನು ಮಾಡಬಲ್ಲ ಒಂದು ಪಕ್ಷವನ್ನು ಕಟ್ಟುವ ಹೊತ್ತು ಈಗ ಬಂದಿದೆ.

**[೨] ಆಧುನಿಕ ಸಂಸದೀಯ ಪ್ರಜಾಪ್ರಭುತ್ವದ Parlimentary Democracyಯ ಯಶಕ್ಕಾಗಿ ಆವಶ್ಯಕವಿದ್ದ ಸಂಗತಿಗಳು**

ಪ್ರಜಾಪ್ರಭುತ್ವದ ವಿಧಾನದಿಂದ ಶಾಸನ ಸಂಸ್ಥೆಯನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತರಲು ಆವಶ್ಯಕವಿದ್ದ ಸಂಗತಿಗಳಾವವು?

ಈ ವಿಷಯವನ್ನು ಕುರಿತು ಇಲ್ಲಿ ಚರ್ಚಿಸಲು ತೀರ್ಮಾನಿಸಿದ್ದೇನೆ.

**ಈ ವಿಷಯದ ಹಿನ್ನೆಲೆ**

ಪ್ರತ್ಯಕ್ಷವಾಗಿ ವಿಷಯವನ್ನು ಕುರಿತು ಚರ್ಚಿಸುವ ಮೊದಲು ಅದನ್ನು ಕುರಿತಾದ ಹಿನ್ನೆಲೆಯ ಬಗೆಗೆ ಕೆಲವು ಪ್ರಾಥಮಿಕ ಸಂಗತಿಗಳನ್ನು ಇಲ್ಲಿ ನಮೂದಿಸುವೆನು.

ಮೊದಲ ಸಂಗತಿ ಎಂದರೆ, `ಪ್ರಜಾಪ್ರಭುತ್ವ ದ ಸ್ವರೂಪವು ನಿರಂತರವಾಗಿ ಬದಲಾಯಿಸುತ್ತ ಬಂದಿದೆ. ನಾವು ಯಾವ ಪ್ರಜಾಪ್ರಭುತ್ವವನ್ನು ಕುರಿತು ಮಾತನಾಡುವೆವೋ ಆ ಪ್ರಜಾಪ್ರಭುತ್ವವು ಒಂದೇ ಸ್ವರೂಪದ್ದಾಗಿ ಉಳಿದಿಲ್ಲ. ಗ್ರೀಕ್ ಜನರ ಆಥೇನಿಯನ್ ಪ್ರಜಾಪ್ರಭುತ್ವ ವನ್ನೇ (Athenian Democracy) ತೆಗೆದುಕೊಳ್ಳಿ. ಈ ಆ್ಯಥೇನಿಯನ್ ಪ್ರಜಾಪ್ರಭುತ್ವ' ಹಾಗೂ ಇಂದಿನ ನಮ್ಮ ಪ್ರಜಾಪ್ರಭುತ್ವದ ಪರಿಕಲ್ಪನೆಗಳಲ್ಲಿ ಮಹದಂತರವಿದೆ. 'ಆ್ಯಥೇನಿಯನ್ ಪ್ರಜಾಪ್ರಭುತ್ವ ದಲ್ಲಿ ಶೇಕಡಾ ಐವತ್ತರಷ್ಟು ಜನ ಗುಲಾಮರು. ನಿಜವಾಗಿ 'ಸ್ವತಂತ್ರ ರಾದ ಜನ ಶೇಕಡಾ ಐವತ್ತರಷ್ಟು ಮಾತ್ರ. ಉಳಿದ ಶೇಕಡಾ ಐವತ್ತು ಗುಲಾಮರಿಗೆ ಶಾಸನ ಸಂಸ್ಥೆಯಲ್ಲಿ ಯಾವುದೇ ಬಗೆಯ ಸ್ಥಾನವಿರಲಿಲ್ಲ. "ಆ್ಯಥೇನಿಯನ್ ಪ್ರಜಾಪ್ರಭುತ್ವ" ಹಾಗೂ ಆಧುನಿಕ ಪ್ರಜಾಪ್ರಭುತ್ವಗಳಲ್ಲಿರುವ ವ್ಯತ್ಯಾಸವನ್ನು ತೋರಿಸಲು

ಇದೊಂದೇ ಸಂಗತಿ ಸಾಕು. ನಿಮ್ಮ ಗಮನವನ್ನು ಸೆಳೆಯಬೇಕೆಂದು ಮೊದಲಿಗೆ ನನಗನ್ನಿಸುವ ಮೂರನೆಯ ಸಂಗತಿ ಎಂದರೆ, ಯಾವ ಒಂದು ದೇಶದಲ್ಲೂ ಕೂಡ ಪ್ರಜಾಪ್ರಭುತ್ವದ ಸ್ವರೂಪವು ಒಂದೇ ಬಗೆಯದಾಗಿ ಉಳಿದಿಲ್ಲವೆಂಬುದು. ಇಂಗ್ಲೆಂಡಿನ ಉದಾಹರಣೆಯನ್ನು ತೆಗೆದುಕೊಳ್ಳಿ. ೧೬೮೮ ರಲ್ಲಿ ಆ ದೇಶದಲ್ಲಿ ನಡೆದ ಕ್ರಾಂತಿಗೆ ಮೊದಲಿನ ಅಲ್ಲಿಯ ಪ್ರಜಾಪ್ರಭುತ್ವ ಹಾಗೂ ತದನಂತರದ ಅಲ್ಲಿಯ ಪ್ರಜಾಪ್ರಭುತ್ವದ ಸ್ವರೂಪವು ಒಂದೇ ಆಗಿದೆಯೆಂದು ಯಾರೂ ಅನ್ನಲಾರರು. ೧೬೮೮ ರಿಂದ ಹಿಡಿದು ೧೮೩೨ ರ ನಡುವಿನ ಕಾಲದ ಇಂಗ್ಲೆಂಡಿನ ಪ್ರಜಾಪ್ರಭುತ್ವ ಹಾಗೂ ೧೮೩೨ ರಲ್ಲಿ ಅಂಗೀಕರಿಸಲಾದ 'ಮೊದಲ ಸುಧಾರಣೆಯ ಕಾನೂನು' (First Re-form Bill) ಅನುಷ್ಠಾನಕ್ಕೆ ಬಂದ ತರುವಾಯದ ಪ್ರಜಾಪ್ರಭುತ್ವ ಒಂದೇ ಎಂದು ಯಾರಾದರೂ ಅನ್ನಬಹುದು. ಪ್ರಜಾಪ್ರಭುತ್ವದ ಸ್ವರೂಪವು ಒಂದೇ ಸಮನೆ ಬದಲಾಯಿಸುತ್ತ ಬಂದಿದೆ. ಮೂರನೆಯ ಸಂಗತಿ ಎಂದರೆ, ಪ್ರಜಾಪ್ರಭುತ್ವದ 'ಸ್ವರೂಪ ವಷ್ಟೇ (Form) ಬದಲಾಯಿಸಿದೆ ಎಂದಲ್ಲ; ಕಾಲಪ್ರವಾಹದಲ್ಲಿ ಅದರ 'ಗುರಿ'ಯೂ (Purpose) ಬದಲಾಯಿಸುತ್ತ ಬಂದಿದೆ. ಪುರಾತನ ಇಂಗ್ಲಿಷ್ ಪ್ರಜಾಪ್ರಭುತ್ವದ ಉದಾಹರಣೆಯನ್ನೇ ಮತ್ತೆ ತೆಗೆದುಕೊಳ್ಳಿ. ಆಗ ಅಲ್ಲಿಯ ಪ್ರಜಾಪ್ರಭುತ್ವದ 'ಗುರಿ' ಏನಿತ್ತು? ರಾಜನ ಅನಿರ್ಬಂಧದ ಸತ್ತೆಗೆ ಕಡಿವಾಣವನ್ನು ಹಾಕುವುದು, ಅವನ ವಿಶಿಷ್ಟವಾದ ಹಕ್ಕುಗಳ (Prerogative rights) ಅನುಷ್ಠಾನದಿಂದ ಅವನನ್ನು ಪರಾವೃತ್ತನನ್ನಾಗಿ ಮಾಡುವುದು, ಎಂಬಿವೇ ಗುರಿಗಳಿದ್ದವು. ಆ ಕಾಲದ 'ರಾಜ' ನು ಈ ಮಟ್ಟಕ್ಕೆ ಹೋಗಿ ಹೀಗೆನ್ನುತ್ತಿದ್ದನು : "ಕಾನೂನುಗಳನ್ನು ತಯಾರಿಸುವ ಹಕ್ಕು ಪಾರ್ಲಿಮೆಂಟಿಗೆ ಇದ್ದರೂ ರಾಜನಾದುದರಿಂದ ನಾನು ಕಾನೂನುಗಳನ್ನು ತಯಾರಿಸಬಲ್ಲೆ. ನನ್ನ ಕಾನೂನುಗಳಿಗೆ ಮೇಲಿನ ಸ್ಥಾನವನ್ನು ಕೊಡಲಾಗುವುದು !" ರಾಜನ ಈ ಬಗೆಯ ದಬ್ಬಾಳಿಕೆಯಿಂದಾಗಿ (Autocracy) ಪ್ರಜಾಪ್ರಭುತ್ವಕ್ಕೆ ತನ್ನ ನಿಜ ಸ್ವರೂಪದಲ್ಲಿ ಬರಲು ಸಾಧ್ಯವಾಗಲಿಲ್ಲ.

ಇಂದು ಪ್ರಜಾಪ್ರಭುತ್ವದ ಗುರಿ ಏನು? **ಅನಿಯಂತ್ರಿತವಾದ ರಾಜಸತ್ತೆಗೆ ಕಡಿವಾಣವನ್ನು ಹಾಕುವುದು ಆಧುನಿಕ ಪ್ರಜಾಪ್ರಭುತ್ವದ ಗುರಿಯಾಗಿರದೆ, 'ಜನಕಲ್ಯಾಣ'ವನ್ನು ಸಾಧಿಸುವುದು ಅದರ ಗುರಿಯಾಗಿದೆ.**

ಪ್ರಜಾಪ್ರಭುತ್ವದ ಗುರಿಯಲ್ಲಾದ ಈ ಬದಲಾವಣೆಯು ಮಹತ್ವಪೂರ್ಣವಾದುದು. ಹೀಗಾಗಿಯೇ ನಾನು ಪ್ರಸಕ್ತ ವಿಷಯವನ್ನು ಆಧುನಿಕ ಪ್ರಜಾಪ್ರಭುತ್ವದ ಯಶಸ್ವಿ ಪ್ರಯೋಗಕ್ಕಾಗಿ ಆವಶ್ಯಕವಿದ್ದ ಸಂಗತಿಗಳು' ಎಂದು ಬೇಕೆಂದೇ ಕರೆದಿದ್ದೇನೆ.

**"ಪ್ರಜಾಪ್ರಭುತ್ವ'ದ ವ್ಯಾಖ್ಯೆ**

"ಪ್ರಜಾಪ್ರಭುತ್ವ'ದ ವ್ಯಾಖ್ಯೆಯಾದರೂ ಏನು? ಈ ಚರ್ಚೆಯನ್ನು ಮುಂದುವರಿಸುವ ಮೊದಲು "ಪ್ರಜಾಪ್ರಭುತ್ವ ದ ಪದಪ್ರಯೋಗದಲ್ಲಿ ಬರುವ ಪರಿಕಲ್ಪನೆಯ ಸ್ಪಷ್ಟವಾದ ಸ್ವರೂಪವನ್ನು ಅರಿತುಕೊಳ್ಳುವಾ. ರಾಜ್ಯಶಾಸ್ತ್ರವೇತ್ತರು, ಲೇಖಕರು, ಸಮಾಜಶಾಸ್ತ್ರಿಗಳು ಹಾಗೂ ಬೇರೆ ಅದೆಷ್ಟೋ ಜನರು ತಮ್ಮ ತಮ್ಮ ಪರಿಯಿಂದ ಪ್ರಜಾಪ್ರಭುತ್ವ ದ ವ್ಯಾಖ್ಯೆಯನ್ನು ಮಾಡಿರುವರು. ನನ್ನ ಅಂಶವನ್ನು ಸ್ಪಷ್ಟಗೊಳಿಸಲೆಂದು ಇಂಥವುಗಳ ಪೈಕಿ ಕೇವಲ ಎರಡನ್ನು ಇಲ್ಲಿ ಕೊಡುತ್ತಿದ್ದೇನೆ. ವಾಲ್ಟರ್ ಬೆಗ್ಹೋಟ್ ಅವರು ಇಂಗ್ಲಿಷ ಸಂವಿಧಾನವನ್ನು ಕುರಿತು (English Constitution) ಒಂದು ಹೆಸರಾದ ಗ್ರಂಥವನ್ನು ಬರೆದಿದ್ದಾರೆ. ಅದರಲ್ಲಿ ಪ್ರಜಾಪ್ರಭುತ್ವ ದ ಸುಸ್ಪಷ್ಟವಾದ ಚಿತ್ರವನ್ನು ಬರೆಯಲು ಯತ್ನಿಸಲಾಗಿದೆ. ಈ ಗ್ರಂಥದಲ್ಲಿ ಅವರು "ಚರ್ಚೆಯನ್ನಾಧರಿಸಿ ನಡೆಯುವ ಶಾಸನ ವ್ಯವಸ್ಥೆ" (Government by



discussion) ಎಂಬುದಾಗಿ ಪ್ರಜಾಪ್ರಭುತ್ವದ ವ್ಯಾಖ್ಯೆಯನ್ನು ಮಾಡಿರುವರು. ಇನ್ನು ಅಬ್ರಾಹಮ್ ಲಿಂಕನ್ನನು ಮಾಡಿದ ವ್ಯಾಖ್ಯೆಯನ್ನು ನೋಡುವಾ, ದಕ್ಷಿಣದ ರಾಜ್ಯಗಳೊಡನೆ ನಡೆದ ಯುದ್ಧವು ಮುಗಿದ ತರುವಾಯ ಗ್ಯಾಟಿಸ್ ಬರ್ಗ್ ಎಂಬಲ್ಲಿ ಮಾಡಿದ ತನ್ನ ಹೆಸರಾದ ಭಾಷಣದಲ್ಲಿ ಅವನು ಪ್ರಜಾಪ್ರಭುತ್ವದ ವ್ಯಾಖ್ಯೆಯನ್ನು ಜನರ ಸರಕಾರ, ಜನರು ನೇಮಕ ಮಾಡಿದ ಸರಕಾರ ಮತ್ತು ಜನರಿಗಾಗಿ ದುಡಿಯುವ ಸರಕಾರ" ("A Goovernment of the people, by the people and for the people") ಎಂದು ಮಾಡಿದನು. ಇನ್ನೂ ಇಂಥ ಅವೆಷ್ಟೋ ವ್ಯಾಖ್ಯೆಗಳನ್ನು ಹೆಸರಿಸಬಹುದು. ನನ್ನ

ಮಟ್ಟಿಗೆ ಹೇಳುವುದಾದರೆ, ನಾನು ಪ್ರಜಾಪ್ರಭುತ್ವದ ವ್ಯಾಖ್ಯೆಯನ್ನು ಬೇರೆ ಪದಗಳಲ್ಲಿ ಮಾಡುವೆನು. **ಇಂದು ಅದೇ ಪ್ರಜಾಪ್ರಭುತ್ವದ ನಿಜವಾದ ವ್ಯಾಖ್ಯೆಯಾಗಲು ಸಾಧ್ಯವೆಂದು ನನಗೆ ಅನ್ನಿಸುತ್ತದೆ. ನನ್ನ ವ್ಯಾಖ್ಯೆ ಹೀಗಿದೆ : "ಜನರ ಆರ್ಥಿಕ ಹಾಗೂ ಸಾಮಾಜಿಕ ಜೀವನದಲ್ಲಿ ರಕ್ತವಿರಹಿತವಾದ ಮಾರ್ಗಗಳಿಂದ ಕ್ರಾಂತಿಕಾರಕವಾದ ಬದಲಾವಣೆಗಳನ್ನು ಉಂಟುಮಾಡುವ ಶಾಸನ ಪದ್ಧತಿ ಎಂದರೇನೆ ಪ್ರಜಾಪ್ರಭುತ್ವ.**" ಯಾವ ಶಾಸನ ವಿಧಾನದಿಂದ ಸತ್ತಾರೂಢರಾದವರಿಗೆ ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರದಲ್ಲಿ ಮೂಲಭೂತವಾದ ಬದಲಾವಣೆಗಳನ್ನು ಮಾಡಲು ಸಾಧ್ಯವಾಗುವುದೋ, ಇಂಥ ಬದಲಾವಣೆಗಳನ್ನು ಸ್ವೀಕರಿಸುವಾಗ ಜನರು ರಕ್ತ ಲಾಂಛಿತವಾದ (ಹಿಂಸಾತ್ಮಕ) ಮಾರ್ಗವನ್ನು ಅವಲಂಬಿಸುವುದಿಲ್ಲವೋ, ಅಲ್ಲಿ ಪ್ರಜಾಪ್ರಭುತ್ವವು ನೆಲೆಸುತ್ತದೆ. ಇದೇ ಪ್ರಜಾಭುತ್ವದ ನಿಜವಾದ ಒರೆಗಲ್ಲು, ಎಂದು ನಾನು ಅನ್ನುತ್ತೇನೆ. ನೀವು ಒಂದು ಪದಾರ್ಥದ ಗುಣಗ್ರಹಣವನ್ನು ಮಾಡುವಾಗ ಅದನ್ನು ಕಠೋರವಾದ ಒರೆಗಲ್ಲಿಗೆ ಹಚ್ಚುವುದು ಆವಶ್ಯಕ. ಅಂದಾಗಲೇ ಅದರ ನಿಜವಾದ ಪರೀಕ್ಷೆಯಾಗುತ್ತದೆ. ನಾನು ಪ್ರಜಾಪ್ರಭುತ್ವದ ಈ ವ್ಯಾಖ್ಯೆಯನ್ನೇ ಒರೆಗಲ್ಲೆಂದು ಬಳಸುವವನಿದ್ದೇನೆ.

ಇಂಥ ಪ್ರಜಾಪ್ರಭುತ್ವವು ಯಶಸ್ವಿಯಾಗುವುದು ಹೇಗೆ? ಎಂಬುದನ್ನು ಕುರಿತು ಮುಖ್ಯವಾಗಿ ಬರೆಯಲಿದ್ದೇನೆ. ಪ್ರಜಾಪ್ರಭುತ್ವ ವನ್ನು ಕುರಿತು ಬರೆದ ಯಾವ ಲೇಖಕನೂ ಅದು ಯಶಸ್ವಿಯಾಗಲು ಆವಶ್ಯಕವಿದ್ದ ಅಂಶಗಳು ಯಾವುವು, ಎಂಬ ಬಗೆಗೆ ಮೂಲಭೂತವಾದ ಅಧಿಷ್ಠಾನಗಳನ್ನು ಸ್ಪಷ್ಟವಾಗಿ ಹೇಳಿಟ್ಟಿಲ್ಲ. ಹೀಗಾಗಿ ಪ್ರಜಾಪ್ರಭುತ್ವದ ಪ್ರಯೋಗಗಳು ನಡೆದ ದೇಶಗಳ ಇತಿಹಾಸಗಳನ್ನು ಪರಿಶೀಲಿಸಿ, ಪ್ರಜಾಪ್ರಭುತ್ವದ ಅಪಯಶದ ಕಾರಣಗಳನ್ನು ಕಂಡುಹಿಡಿದು, **ಸೂಕ್ತವಾದ ತೀರ್ಮಾನಗಳನ್ನು** ಕೈಕೊಳ್ಳಬೇಕಾದೀತು.

ನಾವಿನ್ನು ಪ್ರಜಾಪ್ರಭುತ್ವವು ಯಶಸ್ವಿಯಾಗಲು ಆವಶ್ಯಕವಿರುವ ಸಂಗತಿಗಳನ್ನು ಕುರಿತು ಕ್ರಮವಾಗಿ ಯೋಚಿಸುವಾ.

(೧) ಪ್ರಜಾಪ್ರಭುತ್ವವನ್ನು ಯಶಸ್ವಿಗೊಳಿಸಲು ಬೇಕಿದ್ದ **ಮೊದಲ ಆವಶ್ಯಕ ಅಂಶವೆಂದರೆ ಸಮಾಜ ವ್ಯವಸ್ಥೆಯಲ್ಲಿ ವಿಷಮತೆ ಇರಕೂಡದೆಂಬುದು.** ಪೀಡಿತ-ತುಳಿತಕ್ಕೆ ಒಳಪಟ್ಟ ವರ್ಗವು ಸಮಾಜದಲ್ಲಿ ಇರಕೂಡದು. ಎಲ್ಲ ಬಗೆಯ ಹಕ್ಕು ಮತ್ತು ಸತ್ರೆಗಳು ಕೇಂದ್ರೀಕೃತಗೊಂಡ ವರ್ಗ ಒಂದು ಬದಿಗೆ ಹಾಗೂ ಎಲ್ಲ ಬಗೆಯ ಹೊರೆಯನ್ನು ಹೊರುವ ವರ್ಗ ಇನ್ನೊಂದು ಬದಿಗೆ, ಎಂಬ ವಿಭಜನೆ ಇರಕೂಡದು. ಹಿಂಸಾತ್ಮಕವಾದ ಕ್ರಾಂತಿಯ ಬೀಜಗಳು ಈ ಬಗೆಯ ವಿಷಮತೆ, ಈ ಬಗೆಯ ಅನ್ಯಾಯಕಾರಕ ವಿಭಜನೆ ಮತ್ತು ಅದನ್ನಾಧರಿಸಿದ ಸಮಾಜರಚನೆಗಳಲ್ಲಿ ಇರುತ್ತವೆ. ಹೀಗಾಗಿ

`ಪ್ರಜಾಪ್ರಭುತ್ವ ಕೈ ಅವುಗಳ ಪರಿಮಾರ್ಜನೆಯನ್ನು ಮಾಡುವುದು ಅಸಾಧ್ಯವೆನ್ನಿಸುತ್ತದೆ. **ಲಿಂಕನ್ನನು ತನ್ನ ಇದೇ ಗ್ಯಾಟಿಸ್‌ಬರ್ಗ್‌ದ ಭಾಷಣದಲ್ಲಿ ಹೀಗೆಂದಿದ್ದನು : "ಸ್ವಂತದ ವಿರುದ್ಧ ವಿಭಜಿಸಲ್ಪಟ್ಟ**



**ಮನೆಯು ತಾಳಿಕೆಗೆ ಬರಲಾರದು." (A house divided against itself cannot stand.) ಎನ್ನುವ ಅವನ ಮಾತಿನ ಅರ್ಥವು ಜನರಿಗೆ ಪೂರ್ತಿಯಾಗಿ ತಿಳಿಯಲಿಲ್ಲ.** ಅವನು ಹೇಳಿದ್ದೇನೋ ಅಮೇರಿಕೆಯ ಉತ್ತರ ಹಾಗೂ ದಕ್ಷಿಣದ ಸಂಸ್ಥಾನಗಳ ನಡುವಿನ ಜಗಳಗಳನ್ನು ಕುರಿತು, "ವಿಭಜಿಸಲ್ಪಟ್ಟ ಮನೆಯು ತಾಳಿಕೆಗೆ ಬರಲಾರದು" ಎಂದೆನ್ನುವಲ್ಲಿ, "ನೀವು ದಕ್ಷಿಣದ ಕಡೆಯ ಜನ ಹಾಗೂ ನಾವು ಉತ್ತರದ ಕಡೆಯ ಜನ ವಿಭಜಿಸಲ್ಪಟ್ಟರೆ-ಒಬ್ಬರ ವಿರುದ್ಧವಾಗಿ ಒಬ್ಬರು ನಿಂತರೆ- ನಾವು ಪರಕೀಯ ಹಗೆಗಳ ವಿರುದ್ಧ ತಡೆದು ನಿಲ್ಲಲಾರೆವು' ಎಂದೇ ಅವನು ಹೇಳಬಯಸಿದ್ದನು. ಆದರೆ ಇದಕ್ಕಿಂತಲೂ **ಹೆಚ್ಚು ಆಳ ಹಾಗೂ ಮಹತ್ವಪೂರ್ಣವಾದ ಅರ್ಥವು ಅವನ ಈ ಮಾತಿನಲ್ಲಿ ತುಂಬಿದೆಯೆಂದು ನನಗೆ ಅನ್ನಿಸುತ್ತದೆ. ವರ್ಗ-ವರ್ಗಗಳಲ್ಲಿ ಇರುವ ಮಹದಂತರ ಹಾಗೂ ವರ್ಗಸಂಘರ್ಷಗಳು ಪ್ರಜಾಪ್ರಭುತ್ವದ ಯಶಸ್ಸಿದ್ಧಿಯ ಮಾರ್ಗದ ಮೇಲಿನ ಎಲ್ಲಕ್ಕೂ ದೊಡ್ಡ ಅಡೆತಡೆಗಳಾಗಿವೆ, ಎಂಬುದೇ ಈ ಅರ್ಥವೆಂಬುದು ನನ್ನ ಅಭಿಪ್ರಾಯ.** ಕಾರಣ ಸ್ಪಷ್ಟ. ಪ್ರಜಾಪ್ರಭುತ್ವದಲ್ಲಿ ನಡೆಯುವುದೇನು? ತಮ್ಮ ಹಕ್ಕುಗಳನ್ನು ಕಸಿದುಕೊಳ್ಳಲಾದ, ಹೊರೆ ಹೊರುವ ಪೀಡಿತರು, ದಲಿತರು ಹಾಗೂ ಹಕ್ಕುಗಳ ಸಮುಚ್ಚಯಗಳನ್ನು ತಮ್ಮ ಬಳಿ ಇಟ್ಟುಕೊಂಡಿರುವವರಿಗೂ ಪ್ರಜಾಪ್ರಭುತ್ವದಲ್ಲಿ ಮತದಾನದ ಸಮಾನ ಹಕ್ಕು ಲಭಿಸುತ್ತದೆ. ಸಮರ್ಥರ ವರ್ಗವು (Privileged Class) ಪೀಡಿತ ವರ್ಗಕ್ಕಿಂತ ಬಹಳಷ್ಟು ಮಟ್ಟಿಗೆ ಕಡಿಮೆ ಸಂಖ್ಯೆಯದು. ಅಲ್ಲದೆ ನಾವು ತೀರ್ಮಾನಗಳನ್ನು ಮಾಡುವಾಗ "ಬಹುಮತ'ದ ತತ್ತ್ವವನ್ನು ಒಪ್ಪುವ ಕಾರಣ, ಈ ಸುರಕ್ಷಿತ [ಸಮರ್ಥರ] ವರ್ಗವು ಸಹಜವಾಗಿ ಹಾಗೂ ಸ್ವೇಚ್ಛೆಯಿಂದ ವಿಶೇಷವಾದ ತಮ್ಮ ಹಕ್ಕುಗಳನ್ನು ಬಿಟ್ಟುಕೊಡದಿದ್ದಾಗ ಅವರ ಮತ್ತು ಕೆಳವರ್ಗಗಳ ನಡುವಿನ ಅಂತರವು ಇಮ್ಮಡಿಯಾಗುತ್ತದೆ. ಅದು (ಅಂತರ) ಪ್ರಜಾಪ್ರಭುತ್ವದ ಶಾಸನದ ನಾಶ ಹಾಗೂ ಸಲ್ಲದ ರಾಜ್ಯಾಡಳಿತೆಗೆ ಜನ್ಮ ನೀಡಲು ಕಾರಣವಾಗಬಲ್ಲುದು. **ಹೀಗಾಗಿ, ಪ್ರಪಂಚದ ಬೇರೆ ಬೇರೆ ಭಾಗಗಳ ಪ್ರಜಾಪ್ರಭುತ್ವದ ಇತಿಹಾಸವನ್ನು ಅಭ್ಯಸಿಸಲಾಗಿ, ಸಾಮಾಜಿಕ ವಿಷಮತೆ,**

**ವರ್ಗವರ್ಗಗಳಲ್ಲಿ ತಲೆ ಎತ್ತಿರುವ ಅಸಮತೆಯ ಕಂದರಗಳೇ ಪ್ರಜಾಪ್ರಭುತ್ವದ ಅಪಯಶಕ್ಕೆ ಕಾರಣವೆಂಬುದು ಕಂಡುಬಂದೀತೆಂದು ನಿಸ್ಸಂಕೋಚವಾಗಿ ಹೇಳಬಲ್ಲೆ.**

**(೨) ಪ್ರಜಾಪ್ರಭುತ್ವದ ಯಶಸ್ಸಿಗೆ ಆವಶ್ಯಕವಾದ ಎರಡನೆಯ ಸಂಗತಿ ಎಂದರೆ ವಿರೋಧಿ ಪಕ್ಷದ ಅಸ್ತಿತ್ವ !** ಈ ಸಂದರ್ಭದಲ್ಲಿ ಪಕ್ಷ ಪದ್ಧತಿಯ (Party System) ವಿರೋಧದಲ್ಲಿ ಮಾತನಾಡುವ ಹಲವರನ್ನು ಇದೇ ದೇಶದಲ್ಲಿ ಮಾತ್ರವಲ್ಲ, ಇಂಗ್ಲೆಂಡಿನಲ್ಲಿಯೂ ಕಂಡಿದ್ದೇವೆ. ಇಂಗ್ಲೆಂಡಿನ ಹೆನ್ಸಾರ್ಡ್ ಸೊಸೈಟಿಯು ಪ್ರಕಟಿಸಿದ ಗ್ರಂಥದಲ್ಲಿ ಪಾರ್ಟಿ ಸಿಸ್ಟಮ್ (ಪಕ್ಷ ಪದ್ಧತಿ) ಕುರಿತು ಇಡಿಯ ಒಂದು ಪ್ರಕರಣವನ್ನೇ ಬರೆಯಲಾಗಿದೆ. ಪಕ್ಷ ಪದ್ಧತಿಯು ಒಳ್ಳೆಯದೇ, ಅಲ್ಲವೇ, ಅದನ್ನು ಅನುಷ್ಠಾನಕ್ಕೆ ತರಬೇಕೇ, ಬೇಡವೇ, ಎಂಬ ಪ್ರಶ್ನೆಗಳನ್ನು ಕೇಳಿ, ಅವನ್ನು ಕುರಿತು ಅದರಲ್ಲಿ ಚರ್ಚಿಸಲಾಗಿದೆ. ಈ ಪ್ರಶ್ನೆಯನ್ನು ಕುರಿತು ಹಲವಾರು ದೃಷ್ಟಿಕೋನಗಳನ್ನು ಮಂಡಿಸಲಾಗಿದೆ. 'ಪಕ್ಷ ಪದ್ಧತಿ ಗೆ ವಿರೋಧಿಯಾದವರು ಹಾಗೂ ಅದರಿಂದಾಗಿ ವಿರೋಧಿ ಪಕ್ಷದ ಆವಶ್ಯಕತೆಯು ಕಂಡುಬಾರದವರಿಗೆ “ಪ್ರಜಾಪ್ರಭುತ್ವ ಎಂದರೇನೆಂಬುದು ಪೂರ್ತಿಯಾಗಿ ಅರ್ಥವಾಗಿರಲಿಕ್ಕಿಲ್ಲ. ಪ್ರಜಾಪ್ರಭುತ್ವ ಎಂದರೇನು? ಇಲ್ಲಿ ನಾನೇನೂ ಅದರ ವ್ಯಾಖ್ಯೆಯನ್ನು ಹೇಳುತ್ತಿಲ್ಲ. ಬದಲು, ಅದರ ಕಾರ್ಯ-ಮೀಮಾಂಸೆಯನ್ನು ಮಾಡುತ್ತಿದ್ದೇನೆ. ಈ ಅರ್ಥದಿಂದ ಪ್ರಜಾಪ್ರಭತ್ವವನ್ನು 'ಸತ್ತೆಯ ಮೇಲಿನ ನಿಯಂತ್ರಣ (Veto of Power) ಎಂದೆನ್ನಬಹುದು. ವಂಶಪರಂಪರೆಯಿಂದ ಬಂದ ಸತ್ತೆಹಾಗೂ ಊಳಿಗಮಾನ್ಯ ಪದಗಳಿಗೆ

(ಸನಾತನಶಾಹಿ) ವಿರುದ್ಧವಾದ ಪದವೆಂದರೆ ಪ್ರಜಾಪ್ರಭುತ್ವ, ಪ್ರಜಾಪ್ರಭುತ್ವದ ಅರ್ಥವೆಂದರೆ ಸತ್ತಾರೂಢರ ಅನಿರ್ಬಂಧವಾದ ಸತ್ತಿಗೆ ಹಾಕಲಾದ ಒಂದು ಬಗೆಯ ಕಡಿವಾಣ, ದಬ್ಬಾಳಿಕೆಯಲ್ಲಿ ನಿಯಂತ್ರಣಕ್ಕೆ ಆಸ್ಪದವೇ ಇರಲಾರದು. ರಾಜನು ಒಂದು ಸಲ ಆಯ್ಕೆಯಾದನೆಂದರೆ ತನ್ನ ಹುಟ್ಟು ಮತ್ತು ದೈವಿಕ ಅಧಿಕಾರದಿಂದ ಅವನು ರಾಜ್ಯವನ್ನು ಆಳುತ್ತಾನೆ. ಅವನು ಪ್ರತಿ ಐದು ವರ್ಷಗಳಿಗೊಮ್ಮೆ ತನ್ನ ಪ್ರಜೆಗಳಲ್ಲಿಗೆ ಹೋಗಿ, “ಏನಪ್ಪ, ನಾನು ಒಳ್ಳೆಯ ಮನುಷ್ಯ, ಹೌದು ತಾನೆ? ಕಳೆದ ಐದು ವರ್ಷಗಳ ನನ್ನ ಆಳ್ವಿಕೆ ನಿಮಗೆ ಮೆಚ್ಚಿಗೆಯಾಗಿದೆ ತಾನೆ? ಅದು ನಿಮಗೆ ಇಷ್ಟವಾಗಿದ್ದರೆ ನನ್ನನ್ನು ಮತ್ತೆ ರಾಜನೆಂದು ಚುನಾಯಿಸುವಿರಾ?” ಎಂದೆನ್ನಬೇಕಿಲ್ಲ. ರಾಜನ ಸತ್ತೆಯ ಮೇಲೆ ಯಾರ ನಿಯಂತ್ರಣವೂ ಇರದು. ಆದರೆ ಪ್ರಜಾಪ್ರಭುತ್ವದಲ್ಲಿ, ಸತ್ತಾರೂಢರಾದವರು ಐದು ವರ್ಷಗಳಿಗೊಮ್ಮೆ ಜನರೆದುರು ಹೋಗಬೇಕಾಗುವಂಥ ಒಂದು ವ್ಯವಸ್ಥೆಯನ್ನು ಮಾಡಿರುತ್ತೇವೆ. ಹಾಗೆ ಹೋಗಿ ತಾವು ಸತ್ತಾಸ್ಥಾನದಲ್ಲಿ ಇರಲು ಯೋಗ್ಯರೋ, ಅಲ್ಲವೋ, ಜನರನ್ನು ಪೋಷಿಸಲು ಹಾಗೂ ರಕ್ಷಿಸಲು ಸಮರ್ಥರು ಹೌದೋ, ಅಲ್ಲವೋ ಎನ್ನುವುದನ್ನು ಕುರಿತು ಅವರು ಜನರಿಂದ ತೀರ್ಪನ್ನು ಪಡೆಯಬೇಕಿದೆ. ನಾನು ಇದನ್ನೇ ಸತ್ತೆಯ ಮೇಲಿನ ನಿಯಂತ್ರಣ (Veto), ಎನ್ನುತ್ತೇನೆ. ಆದರೆ ಪ್ರತಿ ಐದು ವರ್ಷಗಳಿಗೆ ಒಮ್ಮೆ ಮಾತ್ರ ಜನಾಭಿಪ್ರಾಯದ ತೀರ್ಪನ್ನು ಪಡೆಯುವ ಮುನ್ನ ನಡುವಿನ ಕಾಲದಲ್ಲಿ ಅನಿಯಂತ್ರಿತವಾದ ಸತ್ತೆಯನ್ನು ಬಳಸಿಕೊಳ್ಳುವ ಈ 'ಪಂಚವಾರ್ಷಿಕ ನಿಯಂತ್ರಣದಿಂದ ನಿಜವಾದ ಪ್ರಜಾಪ್ರಭುತ್ವವು ಬರಲಾರದು. ಪ್ರಜಾಪ್ರಭುತ್ವದಲ್ಲಿ ರಾಜ್ಯಸತ್ತೆಯ ಮೇಲೆ ಬರಿ ಜನಾಭಿಪ್ರಾಯದ ನಿಯಂತ್ರಣ ಬೇಕೆಂದಲ್ಲ, ಅದು ತತ್ಕಾಲಿಕವಾಗಿಯೂ ಸತತವಾಗಿಯೂ ಬೇಕು. ಲೋಕಸಭೆಯಲ್ಲಿ (ಪಾರ್ಲಿಮೆಂಟ್-ಕಾನೂನು ಮಂಡಳ) ಸರಕಾರವನ್ನು ಅಲ್ಲಿಂದಲ್ಲಿಯೇ ತಡೆದು, ಸವಾಲೊಡ್ಡುವಂಥ ಜನರು ಬೇಕಾಗುತ್ತಾರೆ. ಯಾರಿಗೂ ನಿರಂತರವಾಗಿ ಸತ್ತೆಯನ್ನು ಮೆರೆಯುವ ಅಧಿಕಾರ ಇಲ್ಲೆಂಬುದು ಈ ವಿವೇಚನೆಯಿಂದ ನಿಮಗೆ ತಿಳಿದುಬಂದೀತು. ಆದರೆ ಶಾಸನಸಂಸ್ಥೆಯು (ಸರಕಾರ) ಜನಾನುವರ್ತಿಯಾಗಿ ವರ್ತಿಸತಕ್ಕದ್ದು. ಅದನ್ನು ತಡೆಯುವವರು, ಅದಕ್ಕೆ ಸವಾಲೊಡ್ಡುವವರು ಸಭಾಗೃಹದಲ್ಲಿಯೇ (ಕಾನೂನು ಮಂಡಳ) ಇರತಕ್ಕದ್ದು. ಇದರಿಂದ ನಿಮಗೆ ವಿರೋಧಿ ಪಕ್ಷದ ಮಹತ್ವ ತಿಳಿದೀತು. ವಿರೋಧಿ ಪಕ್ಷದ ಅಸ್ತಿತ್ವದಿಂದಾಗಿ ಸತ್ತಾರೂಢ ಪಕ್ಷದ ಧೈಯಧೋರಣೆಗಳನ್ನು ಕಾಯಿಸಿ, ಬಡಿಗಲ್ಲ ಮೇಲಿರಿಸಿ ಬಡಿದು, ಅವು ನೀಟಾಗುವಂತೆ ನೋಡಿಕೊಳ್ಳುವ ವ್ಯವಸ್ಥೆ ಇರುತ್ತದೆ. ಸತ್ತಾಧಾರಿ ಪಕ್ಷವು ತನ್ನ ಧೋರಣೆ ಹಾಗೂ ರಾಜ್ಯಾಡಳಿತೆಯ ಸಮರ್ಥನೆ ಹಾಗೂ ತನ್ನ ಪಕ್ಷದಲ್ಲಿ ಇಲ್ಲದವರ ಸಂದೇಹಗಳಿಗೆ ನಿರಂತರವಾಗಿ ಪರಿಹಾರಗಳನ್ನು ಒದಗಿಸಬೇಕಾಗುತ್ತದೆ. ದುರದೃಷ್ಟದ ಸಂಗತಿ ಎಂದರೆ ನಮ್ಮ ದೇಶದ ಬಹುಮಟ್ಟಿಗಿನ ವೃತ್ತಪತ್ರಗಳು ಸರಕಾರಿ ಜಾಹಿರಾತುಗಳಿಂದ ಬರುವ ಆದಾಯಕ್ಕಾಗಿ ಎನ್ನಿ, ಅಥವಾ ಬೇರೆ ಕಾರಣಗಳಿಂದಾಗಿ, ಹೆಚ್ಚಾಗಿ ಸರಕಾರಿ ಪಕ್ಷವನ್ನು ಎತ್ತಿಹಿಡಿಯುತ್ತವೆ. ಅವು ವಿರೋಧಿ ಪಕ್ಷಗಳಿಗೆ ಹೆಚ್ಚು ಪ್ರಸಿದ್ದಿಯನ್ನು ಕೊಡುವುದಿಲ್ಲ. ವಿರೋಧಿ ಪಕ್ಷಗಳಿಂದ ಅವುಗಳಿಗೆ ಸಿಕ್ಕುವುದಾದರೂ ಏನು? ಸರಕಾರದಿಂದ ಅವುಗಳಿಗೆ ದುಡ್ಡು ಬರುತ್ತದೆ. ಅಂದ ಬಳಿಕ ಕೇಳುವುದೇನು ? ಈ ವೃತ್ತಪತ್ರಗಳು ಸತ್ತಾರೂಢ ಪಕ್ಷದ ಸದಸ್ಯರ ಭಾಷಣಗಳ ವರದಿಗಳನ್ನು ಅಂಕಣಗಳ ತುಂಬೆಲ್ಲ ಪ್ರಕಟಿಸುತ್ತವೆ.

ವಿರೋಧಿ ಪಕ್ಷದ ಸದಸ್ಯರ ಭಾಷಣಗಳನ್ನು ಕೊನೆಯ ಪುಟದ ಮೂಲೆಯಲ್ಲಿ ಸ್ವಲ್ಪದರಲ್ಲಿ ಮುದ್ರಿಸಲಾಗುತ್ತದೆ. **ಹೀಗಾಗಿಯೇ, ಪ್ರಜಾಪ್ರಭುತ್ವವು ಯಶಸ್ವಿಯಾಗಬೇಕಿದ್ದರೆ ವಿರೋಧಿ ಪಕ್ಷಗಳು ಆವಶ್ಯಕ, ಇಂಗ್ಲೆಂಡಿನಲ್ಲಿ ವಿರೋಧಿ ಪಕ್ಷಕ್ಕೆ ಬರಿ ಒಪ್ಪಿಗೆಯನ್ನು ನೀಡಲಾಗುತ್ತದೆ,** ಎಂದಲ್ಲದೆ



ತನ್ನ ಪಕ್ಷದ ಚಟುವಟಿಕೆಗಳನ್ನು ನಡೆಸಲೆಂದು ವಿರೋಧಿ ಪಕ್ಷದ ನಾಯಕನಿಗೆ ಸಂಬಳವನ್ನು ಕೂಡ ನೀಡಲಾಗುತ್ತದೆ. ಅವನಿಗೆ ಸೆಕ್ರೆಟರಿ (ಕಾರ್ಯದರ್ಶಿ), ಬೆರಳಚ್ಚುಗಾರ, ಗುಮಾಸ್ತ, ಮೊದಲಾದ ಸಹಾಯಕರನ್ನು ಒದಗಿಸಲಾಗುತ್ತದೆ. 'ಹೌಸ್ ಆಫ್ ಕಾಮನ್ಸ್ 'ದ ಕಟ್ಟಡದಲ್ಲಿಯೆ ಅವನಿಗಾಗಿ ಒಂದು ಆಫೀಸ್‌ನ್ನು ತಯಾರಿಸಿ ಕೊಡಲಾಗುತ್ತದೆ. ಕೆನಡಾದಲ್ಲಿಯೂ ವಿರೋಧಿ ಪಕ್ಷದ ನಾಯಕನಿಗೆ ಪ್ರಧಾನ ಮಂತ್ರಿಯಷ್ಟೇ ಸಂಬಳವನ್ನು ನೀಡಲಾಗುತ್ತದೆ. ಕಾರಣ ಸ್ಪಷ್ಟ. ಅಲ್ಲಿಯ ಸರಕಾರ ತಪ್ಪು ದಾರಿ ಹಿಡಿದಿದೆಯೇ, ಎಂಬುದನ್ನು ಹೇಳುವವರ ಆವಶ್ಯಕತೆ ಇವೆರಡೂ ದೇಶಗಳ ಜನರಿಗೆ ಇದೆ. ಈ ಕೆಲಸವು ತಡೆಯಿಲ್ಲದೆ ಒಂದೇ ಸಮನೆ ನಡೆಯುತ್ತಿರಬೇಕೆಂಬುದು ಅಗತ್ಯದ್ದಾಗಿ ಅವರಿಗೆ ಅನ್ನಿಸುತ್ತದೆ. ಹೀಗಾಗಿ ಅವರು ವಿರೋಧಿ ಪಕ್ಷದ ಸಲುವಾಗಿ ಕೂಡ ಖರ್ಚು ಮಾಡಲು ತತ್ಪರರಾಗಿರುತ್ತಾರೆ. (೩) **ಪ್ರಜಾಪ್ರಭುತ್ವದ ಯಶಕ್ಕಾಗಿ ಆವಶ್ಯಕವಿದ್ದ ಮೂರನೆಯ ಅಂಶವೆಂದರೆ ಕಾನೂನು ಹಾಗೂ ಆಡಳಿತೆಗಳನ್ನು ಕುರಿತಾದ ಕ್ಷೇತ್ರಗಳಲ್ಲಿ ಪಾಲಿಸಬೇಕಿದ್ದ ಸಮತೆ,** 'ಕಾನೂನಿನ ಎದುರು ಸಮತೆ ( Equality before law) ಎಂಬ ವಿಷಯವನ್ನು ಕುರಿತು ಹೆಚ್ಚು ಚರ್ಚಿಸಬೇಕೆಂದಿಲ್ಲ. ಆದರೆ ಈ ತತ್ತ್ವಗಳನ್ನು ಆಚರಿಸುವಾಗ ಕೆಲವೆಡೆ ಅನ್ಯಾಯಗಳು ಆಗುತ್ತವೆ. ಆದರೆ ರಾಜ್ಯಾಡಳಿತೆಯನ್ನು ಮಾಡುವಾಗ ಪಾಲಿಸಬೇಕಿದ್ದ ಸಮತಾ-ದೃಷ್ಟಿಯೇ ಇಂದು ತುಂಬ ಮಹತ್ವದ್ದಾಗಿದೆ. ನಮ್ಮಲ್ಲಿ ಹಲವರಿಗೆ ರಾಜಕೀಯದಲ್ಲಿ ಸಾಕಷ್ಟು ವಶೀಲಿಯನ್ನು ಅನುಭವಿಸಲು ಅಥವಾ ಕಾಣಲು ಸಿಕ್ಕುತ್ತಿರಬೇಕು. ಸತ್ತಾರೂಢ ಪಕ್ಷದ ಬಣದವರಿಗೆ ಲಾಭ ದೊರೆಯುವಂತೆ ರಾಜ್ಯಾಡಳಿತೆಯನ್ನು ನಡೆಯಿಸಲಾದ ಹಲವಾರು ಹಗರಣಗಳು ನಿಮ್ಮ ಗಮನಕ್ಕೆ ಬಂದಿರಲು ಸಾಕು. ನನಗೆ ಇಂಥ ಅದೆಷ್ಟೋ ಉದಾಹರಣೆಗಳು ನೆನಪಿನಲ್ಲಿವೆ. ಇಂಥ ಒಂದು ವಸ್ತುವಿನ ವ್ಯಾಪಾರವನ್ನು ಲೈಸೆನ್ಸ್ (ಪರವಾನಿಗೆ) ಇಲ್ಲದೆ ಯಾರೂ ಮಾಡಕೂಡದೆಂಬ ಒಂದು ಕಾನೂನು ಇದೆಯೆಂದು ತಿಳಿಯಿರಿ. ಇಂಥ ಕಾನೂನು ವಾಸ್ತವದಲ್ಲಿ ಎಲ್ಲರಿಗೂ ಸಮಾನ ರೂಪದಲ್ಲಿ ಅನ್ವಯವಾಗಬೇಕಿದ್ದ ಕಾರಣ ಅದನ್ನು

ಕುರಿತು ಯಾರೂ ದೂರಿಕೊಳ್ಳುವಂತಿಲ್ಲ. ಇಲ್ಲಿ ವಶೀಲಿಗೆ ಎಳ್ಳಷ್ಟೂ ಆಸ್ಪದವಿಲ್ಲ. ಆದರೆ ತುಸು ಮುಂದಕ್ಕೆ ಹೋಗಿ ಕಾನೂನಿನ ಅನುಷ್ಠಾನ ಹೇಗೆ ನಡೆಯುತ್ತದೆಂಬುದನ್ನು ಕಂಡುಕೊಳ್ಳುವಾ. ಈ ಕಾನೂನಿನನ್ವಯ ಪರವಾನಿಗೆಯನ್ನು ಕೇಳಲು ಬೇರೆ ಬೇರೆ ಜನರು ಸರಕಾರಿ ಅಧಿಕಾರಿ ಇಲ್ಲವೆ ಸಚಿವನ ಬಳಿಗೆ ಹೋದರೆನ್ನಿ. ಆಗ ಸಚಿವ ಮಹಾಶಯರು ಬಂದವರ ಟೊಪ್ಪಿಗೆಗಳ ಬಣ್ಣಗಳನ್ನು ನೋಡಿ ತೀರ್ಮಾನಿಸತೊಡಗಿ, ತಮ್ಮ ಪಕ್ಷದ ಮುದ್ರೆಯ ಟೊಪ್ಪಿಗೆಯವರಿಗೆ ಮಾತ್ರ ಲೈಸೆನ್ಸ್ ಕೊಡಲು ಶುರು ಮಾಡಿದರೆ ಅದು ವಶೀಲಿ ಎನ್ನಿಸುತ್ತದೆ. ಅದರಿಂದಾಗಿ ಆಡಳಿತೆಯಲ್ಲಿ ಸಮತೆ ಉಳಿಯಲಾರದು. ಹಾಗೆ ಲೈಸೆನ್ಸಿನ ಈ ಪ್ರಕರಣ ತೀರ ಸಣ್ಣದು. ಇದರ ವಶೀಲಿಯಿಂದ ತೀರ ಕಡಿಮೆ ಜನರ ಮೇಲೆ ಪರಿಣಾಮವಾಗಲಿದೆ. ಆದರೆ ಇದೇ ವಶೀಲಿಯು ರಾಜ್ಯಾಡಳಿತೆಯನ್ನು ಇನ್ನಷ್ಟು ಆಳವಾಗಿ ಹೊಕ್ಕರೆ ಎಂಥ ದುರವಸ್ಥೆ ತಲೆದೋರೀತು? ಪಕ್ಷದ ಒಬ್ಬ ಸದಸ್ಯನ ಮೇಲೆ ಮೊಕದ್ದಮೆಯನ್ನು ಹೂಡಬೇಕಾಗಿ ಬಂದಿತೆಂದು ತಿಳಿಯಿರಿ. ಸರಕಾರಿ ಅಧಿಕಾರಿಯ ಬಳಿ ಅಗತ್ಯವಿದ್ದ ಸಾಕಷ್ಟು ಪುರಾವೆಗಳಿವೆ ಎನ್ನಿ. ಹೀಗಿರುವಲ್ಲಿ ಆ ಭಾಗದ ಪಕ್ಷದ ನಾಯಕನು ಹೋಗಿ ಜಿಲ್ಲಾಧಿಕಾರಿಯನ್ನು ಕಂಡು, ''ನೋಡಿ, ನೀವು ನಮ್ಮ ಇದೊಂದು ಕೆಲಸವನ್ನು ಮಾಡದಿದ್ದರೆ ಸಚಿವರಿಗೆ ಹೇಳಿ ದೂರದ ಊರಿಗೆ ನಿಮ್ಮ ವರ್ಗಾವಣೆಯನ್ನು ಮಾಡಿಸುವೆ" ಎಂದು ಅಂದರೆ, ರಾಜಕೀಯವು ಅದೆಷ್ಟು ಅನ್ಯಾಯದ್ದು ಹಾಗೂ ಗೊಂದಲದ್ದಾದೀತು, ಎಂಬುದನ್ನು ಊಹಿಸಿಕೊಳ್ಳುವುದೇ ಉತ್ತಮ ! ಅಮೇರಿಕೆಯಲ್ಲಿ ಹಿಂದಕ್ಕೆ `ಸ್ಪಾಯ್‌ಲ್ಸ್ ಸಿಸ್ಟಿಮ್ (**Spoils**



System) ಎನ್ನುವ ಒಂದು ರಾಜ್ಯಾಡಳಿತೆಯ ವಿಧಾನವಿತ್ತು. ಹೊಸ ಪಕ್ಷವು ಸತ್ತೆಗೆ ಬರುತ್ತಲೇ ಹಳೆಯ ಸರಕಾರವು ನೇಮಕ ಮಾಡಿದ ಗುಮಾಸ್ತ, ಪೇದೆಯನ್ನು ಹಿಡಿದು ನೌಕರರನ್ನೆಲ್ಲ ಕೆಲಸದಿಂದ ದೂರ ಸರಿಸಿ, ತಮ್ಮ ಕೃಪೆಯಲ್ಲಿರುವ ಹಾಗೂ ಚುನಾವಣೆಯಲ್ಲಿ ತಮ್ಮ ಪಕ್ಷಕ್ಕೆ ನೆರವಾದವರನ್ನು ನೇಮಿಸುತ್ತಿತ್ತು. ಈ ವಿಧಾನದಿಂದಾಗಿ ಅಮೇರಿಕೆಗೆ ಅದೆಷ್ಟೋ ವರ್ಷಗಳ ಕಾಲ ಒಳ್ಳೆಯ ಆಡಳಿತ ಯಂತ್ರ ಲಭಿಸಲೇ ಇಲ್ಲ. ಇದು ಪ್ರಜಾಪ್ರಭುತ್ವಕ್ಕೆ ಪೋಷಕವಲ್ಲ, ಎಂಬುದನ್ನು ಮನಗಂಡು ಮುಂದೆ ಈ ವಿಧಾನವನ್ನು ಕೈಬಿಡಲಾಯಿತು. ಇಂಗ್ಲೆಂಡಿನಲ್ಲಿ ರಾಜ್ಯಾಡಳಿತೆಯು ನಿಷ್ಕಲಂಕ,

ನಿಃಪಕ್ಷಪಾತಿ ಹಾಗೂ ರಾಜಕೀಯದಿಂದ ಅಲಿಪ್ತವಾಗಿ ಇರಬೇಕೆಂದು ಅಲ್ಲಿಯ ಜನರು ನೌಕರಿಗಳನ್ನು ರಾಜಕೀಯ ಹಾಗೂ ಪೌರ ಎಂಬುದಾಗಿ ವರ್ಗೀಕರಿಸಿದರು. ಪೌರ (ಆಡಳಿತೆಯನ್ನು ಕುರಿತಾದ) ನೌಕರಿಗಳು ಕಾಯಮ್ ಸ್ವರೂಪದವು, ಅದರ ನೌಕರವರ್ಗವು ಯಾವುದೇ ಪಕ್ಷದ ಸರಕಾರ ಬಂದರೂ ಆಡಳಿತೆಯನ್ನು ನಡೆಸುತ್ತದೆ. ಸಚಿವ ಸಂಪುಟ ಕೂಡ ಅದರಲ್ಲಿ ಕೈ ಹಾಕುವುದಿಲ್ಲ. ಬ್ರಿಟಿಷರು ನಮ್ಮ ದೇಶಲ್ಲಿ ಇದ್ದ ಕಾಲಕ್ಕೆ ಅವರೂ ಇದೇ ವಿಧಾನವನ್ನು ಅವಲಂಬಿಸುತ್ತಿದ್ದರು. ನಾನು ಮಧ್ಯವರ್ತಿ (ಭಾರತ) ಸರಕಾರದ ಸಚಿವನಾಗಿದ್ದಾಗ ಪಡೆದ ಒಂದು ಅನುಭವವು ಈಗಲೂ ತಾಜಾ ಆಗಿ ಉಳಿದಿದೆ. ಪ್ರತಿಯೊಬ್ಬ ವಾಯಿಸ್‌ರಾಯ್ನ ಹೆಸರಿನ ಒಂದಿಲ್ಲೊಂದು ರಸ್ತೆ ಇಲ್ಲವೆ ಕ್ಲಬ್ ದಿಲ್ಲಿಯಲ್ಲಿದೆ. ಲಾರ್ಡ್ ಲಿನೊಲಿಥಗೊ ಇವರು ಮಾತ್ರ ಯಾವುದೇ ಸ್ಥಳಕ್ಕಾಗಲಿ, ಸಂಸ್ಥೆಗಾಗಲಿ ತಮ್ಮ ಹೆಸರನ್ನು ಇರಿಸಿಕೊಂಡಿಲ್ಲ. ಅವರ ಖಾಸಗಿ ಕಾರ್ಯದರ್ಶಿಯು ನನ್ನ ಸ್ನೇಹಿತನಾಗಿದ್ದನು. ಆಗ ನಾನು ಲೋಕೋಪಯೋಗಿ (P. WN. D.) ಇಲಾಖೆಯ ಸಚಿವನಾಗಿದ್ದು ನನ್ನ ಪರಿಧಿಯಲ್ಲಿ ಸಾಕಷ್ಟು ಕಾಮಗಾರಿಗಳು ನಡೆದಿದ್ದವು. ಅವನು ನನ್ನ ಬಳಿ ಬಂದು, "ಡಾಕ್ಟರ ಸಾಹೇಬರೇ, ಯಾವುದಾದರೂ ಸ್ಥಳ ಇಲ್ಲವೆ ಸಂಸ್ಥೆಗೆ ಲಾರ್ಡ್ ಲಿನ್‌ಲಿಥಗೋರ ಹೆಸರು ನೀಡುವ ಬಗೆಗೆ ಏನಾದರೂ ಮಾಡಲು ನಿಮ್ಮಿಂದ ಸಾಧ್ಯವಿಲ್ಲವೇ? ಉಳಿದ ವಾಯಿಸ್‌ರಾಯರೆಲ್ಲರ ಹೆಸರುಗಳನ್ನು ಯಾವುದಾದರೂ ಸ್ಥಳ ಇಲ್ಲವೆ ಸಂಸ್ಥೆಗೆ ನೀಡಲಾಗಿವೆ. ಲಾರ್ಡ್ ಲಿನ್‌ಲಿಥಗೋರ ಹೆಸರು ಮಾತ್ರ ಎಲ್ಲಿಲ್ಲ" ಎಂದನು. ಯೋಚಿಸುವುದಾಗಿ ಭರವಸೆಯನ್ನಿತ್ತೆ. ಆ ಕಾಲಕ್ಕೆ ದಿಲ್ಲಿ ನಗರದಲ್ಲಿ ಬೇಸಿಗೆಯಲ್ಲಿ ನೀರಿನ ಕೊರತೆ ಕಂಡುಬರುತ್ತಿತ್ತು. ಅದನ್ನು ನೀಗಿಸುವುದನ್ನು ಕುರಿತು ಯೋಚಿಸುತ್ತಿದ್ದೆ. ಇದನ್ನು ಕುರಿತು ನನ್ನ ಯುರೋಪಿಯನ್ ಸೆಕ್ರೆಟರಿ, ಶ್ರೀ ಪ್ರಾಯರ್ ಇವನಿಗೆ, "ನೋಡು, ವಾಯಿಸ್‌ರಾಯ್ ಅವರ ಸೆಕ್ರೆಟರಿಯು ನನಗೊಂದು ಸೂಚನೆಯನ್ನು ಮಾಡಿರುವನು. ನಾವು ಈ ಬಗೆಗೆ ಏನನ್ನೂ ಮಾಡಲಾರೆವೆ?'' ಎಂದೆ. ಅದಕ್ಕೆ ಅವನೇನು ಅಂದನು, ಗೊತ್ತೆ? ಅವನು, ''ಸಾಹೇಬರೇ, ತಾವು ಇಂಥದೇನನ್ನೂ ಮಾಡಕೂಡದು" ಎಂದನು. ಸದ್ಯದ ಪರಿಸ್ಥಿತಿಯಲ್ಲಿ ದೇಶದಲ್ಲಿ ಈ ಬಗೆಯ ಉತ್ತರ ಸಿಕ್ಕುವುದು ತುಂಬ ಕಷ್ಟ. ಯಾವ ಸೆಕ್ರೆಟರಿಯೂ ಸಚಿವನ ಅಭಿಪ್ರಾಯಕ್ಕೆ ಎದುರಾಗಿ ಮಾತನಾಡಲಾರ. ಕಾರಣ ಸ್ಪಷ್ಟ. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ನಾವು ಕೂಡ ಸರಕಾರವು ಆಡಳಿತೆಗೆ ಸಂಬಂಧಪಟ್ಟ ಕೆಲಸದಲ್ಲಿ ಕೈ ಹಾಕಬಾರದೆಂದು ಗ್ರೇಟ್ ಬ್ರಿಟನ್ನಿನಂತೆಯೇ ನಿಯಮವನ್ನು ಮಾಡಿಬಿಟ್ಟಿದ್ದೆವು. ಸರಕಾರದ ಕೆಲಸ ಧೋರಣೆಯನ್ನು ನಿರ್ಧರಿಸುವುದು, ಕೈ ಹಾಕುವುದಾಗಲಿ ಇಲ್ಲವೆ ಪಕ್ಷಪಾತವನ್ನು ಮಾಡುವುದಲ್ಲ. ಈ ಅಂಶವು ಮೂಲಭೂತವಾದುದಿದ್ದು ನಾವಿಂದು ಅದರಿಂದ ದೂರಕ್ಕೆ ಹೋಗುತ್ತಿದ್ದೇವೆ, ಅದನ್ನು ತ್ಯಜಿಸುತ್ತಿದ್ದೇವೆ.

**(೪) ಪ್ರಜಾಪ್ರಭುತ್ವದಲ್ಲಿ ಯಶಸ್ಸನ್ನು ಪಡೆಯಲು ಆವಶ್ಯಕವಿದ್ದ ನಾಲ್ಕನೆಯ ಸಂಗತಿ ಎಂದರೆ ಸಾಂವಿಧಾನಿಕ ನೈತಿಕತೆಯನ್ನು (Constitutional Morality) ಪಾಲಿಸುವುದು.** ಬಹಳಷ್ಟು ಜನರು

ನಮ್ಮ ಸಂವಿಧಾನದ ಬಗೆಗೆ ಅತಿ ಉತ್ಸಾಹಿಗಳಾಗಿ ಕಾಣುತ್ತಾರೆ. ನನ್ನದಂತೂ ಹಾಗಲ್ಲ. ಸದ್ಯದ ಭಾರತೀಯ ಸಂವಿಧಾನವನ್ನು ಕಿತ್ತೆಸೆಯಬೇಕೆನ್ನುವ, ಕನಿಷ್ಠ ಮಟ್ಟಿಗೆ, ಅದನ್ನು **ಸಂಪೂರ್ಣವಾಗಿ ಸರಿಪಡಿಸಲೆಂದು ಹೆಣಗುವ ಜನರನ್ನು ಸೇರಿಕೊಳ್ಳಲು ನಾನು ಸಿದ್ಧ**. ನಾವು ಒಂದು ಸಂಗತಿಯನ್ನು ಮಾತ್ರ ಒಪ್ಪಿಕೊಳ್ಳಬೇಕಿದೆ. ಅದೆಂದರೆ, **ಇಂದಿನ ನಮ್ಮ ಸಂವಿಧಾನವು ಕಾನೂನಿನ್ವಯದ ವ್ಯವಸ್ಥೆ ಹಾಗೂ ತತ್ವಗಳ ಎಲುಬಿನ ಗೂಡು ಮಾತ್ರವಾಗಿದೆ. ಸಾಂವಿಧಾನಿಕ ನೀತಿಮತ್ತೆಯ ಪಾಲನೆಯಿಂದಲೇ ಈ ಎಲುಬಿನ ಗೂಡಿಗೆ ಆವಶ್ಯಕವಿದ್ದ ರಕ್ತಮಾಂಸಗಳು ಲಭಿಸುವುವು.** ಇಂಗ್ಲೆಂಡಿನಲ್ಲಿ ಈ ಸಾಂವಿಧಾನಿಕ ನೀತಿಮತ್ತೆಯನ್ನೇ ಸಾಂವಿಧಾನಿಕ ಸಂಕೇತಗಳೆಂದು (Conventions of the Constitution) ಗುರುತಿಸುತ್ತಾರೆ. ಜನರು ಆ ಸಂಕೇತಗಳನ್ನು ತಾವಾಗಿಯೇ ಪಾಲಿಸುತ್ತಾರೆ. ನನಗೆ ಖಚಿತವಾಗಿ ನೆನಪಾಗುವ ಎರಡು ಸನ್ನಿವೇಶಗಳನ್ನು ಇಲ್ಲಿ ನಮೂದಿಸುತ್ತಿದ್ದೇವೆ. ಅಮೇರಿಕೆಯ ೧೩ ಘಟಕ ರಾಜ್ಯಗಳು ಬಂಡಾಯವನ್ನು ಹೂಡಿದಾಗ ವಾಶಿಂಗ್ಟನ್ನನ ಕೈಯಲ್ಲಿ ಅಮೇರಿಕೆಯ ಸೂತ್ರಗಳಿದ್ದವು. ಅವನು ಅಮೇರಿಕೆಯ 'ನಾಯಕ ನಾಗಿದ್ದನು, ಎಂಬ ಹೇಳಿಕೆಯಿಂದ ಆ ಕಾಲದ ಅಮೇರಿಕೆಯ ಸಮಾಜದ ಜೀವನದಲ್ಲಿ ಅವನಿಗಿರುವ ಸ್ಥಾನವನ್ನು ಪೂರ್ತಿಯಾಗಿ ವರ್ಣಿಸಲು ಸಾಧ್ಯವಿಲ್ಲ. ಅವನು ಅಮೇರಿಕನ್ ಜನರಿಗೆ ಪ್ರತ್ಯಕ್ಷ ದೇವರೆಂದೇ ಅನ್ನಿಸುತ್ತಿದ್ದನು. ಅಮೇರಿಕೆಯ ಸಂವಿಧಾನವನ್ನು ಬರೆದಾದ ಬಳಿಕ ವಾಶಿಂಗ್ಟನ್ನನನ್ನು ಮೊದಲ ಅಧ್ಯಕ್ಷನನ್ನಾಗಿ ಚುನಾಯಿಸಲಾಯಿತು. ತನ್ನ ಅಧ್ಯಕ್ಷ ಪದದ ಮೊದಲ ಅವಧಿ ಮುಗಿಯುತ್ತಲೇ ಅವನು ಅಧ್ಯಕ್ಷನಾಗಲು ನಿರಾಕರಿಸಿದನು. ವಾಶಿಂಗ್ಟನ್ನನು ಇನ್ನೂ ಹತ್ತು ಸಲ ಅಧ್ಯಕ್ಷನ ಆಯ್ಕೆಯ ಅಭ್ಯರ್ಥಿಯಾಗಿ ನಿಂತಿದ್ದರೂ ಅವನಿಗೆ ಯಾರೂ ಎದುರಾಳಿಯಾಗಿ ನಿಲ್ಲುತ್ತಿರಲಿಲ್ಲ, ಜನರು ಬಲು ಸಂತೋಷದಿಂದ ಹಾಗೂ ಒಮ್ಮತದಿಂದ ಅವನನ್ನು ಚುನಾಯಿಸುತ್ತಿದ್ದರೆನ್ನುವಲ್ಲಿ ಯಾವುದೇ ಬಗೆಯ ಸಂಶಯವಿಲ್ಲ. ಆದರೆ ಅವನು ಮಾತ್ರ ಎರಡನೆಯ ಸಲ ಚುನಾವಣೆಗೆ ನಿಲ್ಲಲು ಒಪ್ಪಲಿಲ್ಲ. ಇದಕ್ಕೆ ಕಾರಣವೇನೆಂದು ಅವನನ್ನು ಕೇಳಲಾಗಿ ಅವನು ಹೀಗೆಂದು ಉತ್ತರಿಸಿದನು : "ನನ್ನ ಪ್ರಿಯ ದೇಶಬಂಧುಗಳೇ, ನಾವು ಈ ಸಂವಿಧಾನವನ್ನು ತಯಾರಿಸಿದ್ದುದು ಯಾವ ಉದ್ದೇಶಕ್ಕಾಗಿ, ಎಂಬುದನ್ನೇ ನೀವು ಮರೆತಂತಿದೆ. ವಂಶಪರಂಪರೆಯಿಂದ ನಡೆಯುವ ರಾಜಶಾಹಿಯಾಗಲಿ, ವಂಶಪರಂಪರೆಯಿಂದ ಬರುವ ರಾಜ ಇಲ್ಲವೆ ಸರ್ವಾಧಿಕಾರಿ ಬೇಡವಾದದ್ದರಿಂದಲೇ ನಾವು ಈ

ಸಂವಿಧಾನವನ್ನು ತಯಾರಿಸಿದೆವು. ಈ ಉದ್ದೇಶದಿಂದ ಪ್ರೇರಿತರಾಗಿಯೇ ನೀವು ಇಂಗ್ಲಿಷ್ ರಾಜನೊಂದಿಗಿನ ನಂಟನ್ನು ಕಡಿದುಕೊಂಡಿರುವಿರಿ. ಅಂದ ಬಳಿಕ ನೀವು ನನ್ನನ್ನು ಪೂಜಿಸುತ್ತ ವರ್ಷಾನುಗಟ್ಟಳೆ ನನ್ನನ್ನೇ ಅಧ್ಯಕ್ಷನನ್ನಾಗಿ ಮಾಡತೊಡಗಿದಿರೆಂದರೆ ನಿಮ್ಮ ತತ್ತ್ವ ಗಳ ಗತಿಯೇನು? ಇಂಗ್ಲಿಷ್ ರಾಜನ ಸ್ಥಾನದಲ್ಲಿ ನನ್ನನ್ನು ಕೂರಿಸಿ, ನೀವು ಆ ರಾಜನ ಸತ್ತೆಯ ವಿರುದ್ಧ ಬಂಡೆದ್ದದ್ದು ಸೂಕ್ತವಿತ್ತೆಂದು ಅನ್ನಬಹುದೆ? ಹಾಗೆ ಹೇಳಲು ನಿಮಗೆ ಬಾಯಿ ಎಲ್ಲಿದೆ? ನನ್ನ ಬಗೆಗಿನ ಮಮತೆ ಹಾಗೂ ಶ್ರದ್ಧೆಗಳಿಂದಾಗಿ ನೀವು ಎರಡನೆಯ ಬಾರಿಗೆ ಅಧ್ಯಕ್ಷಸ್ಥಾನಕ್ಕೆ ಅಭ್ಯರ್ಥಿಯಾಗಬೇಕೆಂದು ನನಗೆ ಬಲವಂತ ಮಾಡುತ್ತಿದ್ದರೂ, ವಂಶಪರಂಪರೆಯಿಂದ ಬಂದ ಸತ್ತ್ಯಾಶಾಹಿಯನ್ನು ಬಗ್ಗು ಬಡಿಯಬೇಕೆನ್ನುವ ತತ್ತ್ವಜ್ಞಾನದ ಉದ್ಗಾತನಾದ ನಾನು ಕರ್ತವ್ಯ ಬುದ್ಧಿಯಿಂದ ನಿಮ್ಮ ಭಾವವಿವಶತೆಗೆ ಬಲಿಯಾಗದಿರುವ ಕೆಲಸವನ್ನು ಪೂರೈಸುವುದು ಆವಶ್ಯಕವೇ ಆಗಿದೆ." ಇಷ್ಟಾಗಿಯೂ ಜನರ ಆಗ್ರಹದಿಂದಾಗಿ ಅವನು ಎರಡನೆಯ ಬಾರಿ ಅಧ್ಯಕ್ಷನಾಗಲೇಬೇಕಾಯಿತು. ಆದರೆ ಜನರು ಮೂರನೆಯ ಸಲವೂ ಅವನನ್ನು ಬಲವಂತ ಪಡಿಸಲು ಹೋದಾಗ ಅವನು



ನಿರ್ದಾಕ್ಷಿಣ್ಯವಾಗಿ ಅವರ ಈ ಬೇಡಿಕೆಯನ್ನು ತಳ್ಳಿಹಾಕಿದನು.

ಇನ್ನೊಂದು ಉದಾಹರಣೆಯನ್ನು ಕೊಡುವೆನು. ನಿಮಗೆ ಎಂಟನೆಯ ಎಡ್ವರ್ಡ್ ನ ಕಥೆ ಗೊತ್ತಿರಬಹುದು. ದುಂಡುಮೇಜಿನ ಪರಿಷತ್ತಿಗಾಗಿ ಲಂಡನ್ನಿಗೆ ಹೋಗಿದ್ದೆ. ಆ ರಾಜನು ತನಗೆ ಬೇಕಿದ್ದ ಸ್ತ್ರೀಯನ್ನು ಮದುವೆಯಾಗಬೇಕೆ, ಬೇಡವೆ, ಅಲ್ಲದೆ ಅವನು ಜನಾಭಿಪ್ರಾಯ ಹಾಗೂ ನಿಗದಿತವಾದ ಸಂಕೇತದ ವಿರುದ್ಧವಾಗಿ ಮದುವೆಯಾದರೆ ಅವನನ್ನು ಸಿಂಹಾಸನದ ಮೇಲೆ ಉಳಿಸಬೇಕೆ, ಬೇಡವೆ, ಎಂಬ ಪ್ರಶ್ನೆಗಳನ್ನು ಕುರಿತು ಆಗ ಆ ದೇಶದಲ್ಲಿ ದೊಡ್ಡ ರಂಪ ನಡೆದಿತ್ತು. ರಾಜನಿಗೆ ಮದುವೆಯ ಬಗೆಗೆ ಇಷ್ಟರ ಮಟ್ಟಿಗೆ ವೈಯಕ್ತಿಕ ಸ್ವಾತಂತ್ರ್ಯವನ್ನು ಕೊಡಬೇಕೆ, ಬೇಡವೆ? ಎನ್ನುವ ಪ್ರಶ್ನೆಯೂ

ತಲೆದೋರಿತ್ತು. ಮಿ. ಬಾಲ್ಡ್ವಿನ್ ಇವರಂತೂ (ಆ ಕಾಲದ **ಕಾನ್ಸರ್ವೇಟಿವ್ /ಸಂಪ್ರದಾಯ** ಪಕ್ಷದ ಪ್ರಧಾನ ಮಂತ್ರಿ) ರಾಜನ ಈ ಮದುವೆಗೆ ವಿರೋಧಿಯಾಗಿದ್ದರು. ಅವರು ರಾಜನಿಗೆ, " ನೀವು ನನ್ನ ಮಾತನ್ನು ಕೇಳದಿದ್ದರೆ ನಿಮ್ಮ ರಾಜ್ಯಪದವನ್ನು ಬಿಡಬೇಕಾದೀತು" ಎಂದೆನ್ನುತ್ತಿದ್ದರು. ಮಿ. ಚರ್ಚಿಲ್ ಅವರು ಎಡ್ವರ್ಡ್ ರಾಜನ ಸ್ನೇಹಿತರು. ಅವರು ರಾಜನ ಬೆಂಬಲಕ್ಕೆ ನಿಲ್ಲಲು ಸಿದ್ಧರಿದ್ದರು. ಆಗ ಲೇಬರ್ ಪಾರ್ಟಿಯು (ಕಾರ್ಮಿಕ ಪಕ್ಷ) ವಿರೋಧಿ ಪಕ್ಷವಾಗಿತ್ತು. ಈ ಪ್ರಶ್ನೆಯನ್ನು ಕುರಿತಾದ ಸಂಪ್ರದಾಯ ಪಕ್ಷದೊಳಗಿನ ಒಡಕನ್ನು ಬಳಸಿಕೊಂಡು ಬಾಲ್ ವಿನ್ನರನ್ನು ಸೋಲಿಸಬೇಕೆ, ಬೇಡವೆ, ಎನ್ನುವುದನ್ನು ಕುರಿತು ಕಾರ್ಮಿಕ ಪಕ್ಷದಲ್ಲಿ ಯೋಚನೆ ನಡೆದಿತ್ತೆಂಬುದು ನನಗಿನ್ನೂ ನೆನಪಿದೆ. ಏಕೆಂದರೆ ಸಂಪ್ರದಾಯ ಪಕ್ಷದ ಅದೆಷ್ಟೋ ಜನ ಸದಸ್ಯರು ತಮ್ಮ ರಾಜನಿಷ್ಠೆಯಿಂದಾಗಿ ಎಡ್ವರ್ಡ್ ನ ಬದಿಯನ್ನು ವಹಿಸಲು ಸಿದ್ಧರಿದ್ದರು. ಆಗ ಪ್ರೊಫೆಸರ್ ಲಾಸ್ಕಿ ಅವರು (ಕಾರ್ಮಿಕ ಪಕ್ಷ) 'ಹೆರಾಲ್ಡ್' ನಿಯತಕಾಲಿಕೆಗೆ ಒಂದಾದ ಮೇಲೆ ಒಂದರಂತೆ ಲೇಖನಗಳನ್ನು ಬರೆದು ಕಾರ್ಮಿಕ ಪಕ್ಷವು ಹಾಗೆ ಮಾಡಬಾರದೆಂದು ತಾಕೀತು ಕೊಡುತ್ತಿದ್ದರು. ಅವರು ಇಂಥ ಚಟುವಟಿಕೆಗಳನ್ನು ನಿಷೇಧಿಸುತ್ತಿದ್ದರು. ಅವರು, "ರಾಜನು ಪ್ರಧಾನ ಮಂತ್ರಿಯ ಸಲಹೆಯನ್ನು ಮನ್ನಿಸಬೇಕು, ಅವನು ಅದನ್ನು ಮನ್ನಿಸದಿದ್ದರೆ ಪ್ರಧಾನಿಯು ರಾಜನನ್ನು ಕಿತ್ತೆಸೆಯಬಲ್ಲನೆಂಬ ಸಾಂವಿಧಾನಿಕ ಸಂಕೇತದ ಒಂದು ಸಂಗತಿಯನ್ನು ಒಪ್ಪಿಕೊಂಡಿದ್ದೇವೆ. ಇದು ನಾವೆಲ್ಲ ಒಪ್ಪಿಕೊಂಡ ಸಂಕೇತವಾಗಿರುವುದರಿಂದ, ರಾಜನ ಅಧಿಕಾರದ ಕ್ಷೇತ್ರವನ್ನು ಹೆಚ್ಚಿಸುವಂತೆ ನಡೆದುಕೊಂಡು ಈ ಪ್ರಶ್ನೆಯ ಸಂದರ್ಭದಲ್ಲಿ ಬಾಲ್ಡ್ವಿನ್ನರನ್ನು ಸೋಲಿಸುವುದು ತಪ್ಪು" ಎಂದು ಅನ್ನುತ್ತಿದ್ದರು. ಕಾರ್ಮಿಕ ಪಕ್ಷವು ಈ ಸಲಹೆಯನ್ನು ಒಪ್ಪಿಕೊಂಡಿತು. ಸಂಕೇತಗಳನ್ನು ಕ್ರೀಡಾಭಾವದಿಂದ ಪಾಲಿಸಲೇಬೇಕೆಂದು ತೀರ್ಮಾನಿಸಿತು. ಇಂಗ್ಲೆಂಡಿನ ಇತಿಹಾಸವನ್ನು ಓದುವಾಗ ಇಂಥ ಅದೆಷ್ಟೋ ಉದಾಹರಣೆಗಳು ಕಂಡುಬರುತ್ತವೆ. **ಸಂವಿಧಾನ ಮತ್ತು ಪ್ರಜಾಪ್ರಭುತ್ವಗಳಿಗೆ ನಷ್ಟವಾಗಬಾರದೆಂದು ಪಕ್ಷದ ನಾಯಕರು ತಾತ್ಕಾಲಿಕವಾದ ಅಧಿಕಾರದ ಆಸೆಯಿಂದ ಸತ್ತೆಯ ಮೇಲಿರುವ ಇಲ್ಲವೆ ವಿರೋಧಿ ಪಕ್ಷವೆಂದು ಕೆಲಸ ಮಾಡುತ್ತಿರುವ ತಮ್ಮ ವಿರೋಧಕರನ್ನು ಕತ್ತರಿಗೆ ಸಿಕ್ಕಿಸುವ ಸನ್ನಿವೇಶಗಳನ್ನು ಎಚ್ಚರದಿಂದ ತಪ್ಪಿಸಿದ್ದಾರೆ.**

(ಜ) ಪ್ರಜಾಪ್ರಭುತ್ವವು ಯಶಸ್ವಿಯಾಗಲು ಇನ್ನೊಂದು ಸಂಗತಿ ಅಗತ್ಯದ್ದೆಂದು ನನಗೆ ಅನ್ನಿಸುತ್ತದೆ. ಅದೆಂದರೆ, **ಪ್ರಜಾಪ್ರಭುತ್ವದ ಹೆಸರಿನಲ್ಲಿ ಬಹುಮತದವರಿಂದ ಅಲ್ಪಸಂಖ್ಯರನ್ನು (ಅಲ್ಪಮತಗಳುಳ್ಳವರು) ಕತ್ತು ಹಿಸುಕುವ ಕೆಲಸ ನಡೆಯಬಾರದೆಂಬುದು. ಅಲ್ಪಸಂಖ್ಯರಿಗೆ ಸುರಕ್ಷೆ** ಎನ್ನಿಸಬೇಕು. ಬಹುಸಂಖ್ಯರು ಆಳುತ್ತಿದ್ದರೂ ತಮಗೆ ಧಕ್ಕೆ ತಗಲಕೂಡದು, ತಮ್ಮ ಮೇಲೆ ಅನ್ಯಾಯ ಆಗಬಾರದೆಂಬ ಭರವಸೆ ಅಲ್ಪಸಂಖ್ಯರಿಗೆ ಸಿಕ್ಕಬೇಕು. ಇಂಗ್ಲೆಂಡಿನ ಹೌಸ್ ಆಫ್ ಕಾಮನ್ಸ್ ದಲ್ಲಿ

(ಲೋಕಸಭೆ) ಈ ತತ್ವವನ್ನು ತುಂಬ ಮರ್ಯಾದೆಯಿಂದ ಕಾಣಲಾಗುತ್ತದೆ. ಇಂಗ್ಲೆಂಡಿನ ೧೯೩೧ ರ ಸಾರ್ವಜನಿಕ ಚುನಾವಣೆಯ ತರುವಾಯ ಕಾರ್ಮಿಕ ಪಕ್ಷದ ನಾಯಕರಾದ ಶ್ರೀ ಶ್ಯಾಮ್ಸೆ ಮ್ಯಾಕ್ಡೋನಾಲ್ಡ್ ಅವರ ನಾಯಕತ್ವದಲ್ಲಿ ರಾಷ್ಟ್ರೀಯ ಸಚಿವ ಸಂಪುಟವನ್ನು ತಯಾರಿಸಲಾಯಿತು. ತದನಂತರ ನಡೆದ ಚುನಾವಣೆಗಳ ಕಾಲಕ್ಕೆ ಕಾರ್ಮಿಕ ಪಕ್ಷದ ಸದಸ್ಯರ ಸಂಖ್ಯೆಯು ೧೫೦ ರಿಂದ ೫೦ ಕ್ಕೆ ಇಳಿಯಿತು. ಶ್ರೀ ಬಾಲ್ಡ್ವಿನ್ ಅವರು ಪ್ರಧಾನ ಮಂತ್ರಿಗಳಾದರು. ಆಗ ನಾನು ಇಂಗ್ಲೆಂಡಿನಲ್ಲಿ ಇದ್ದೆ. ಕಾನ್ಸರ್ವೇಟಿವ್ ಪಕ್ಷದ ಪ್ರಚಂಡ ಬಹುಮತದ ಒತ್ತಡದಡಿ ಕೆಲಸವನ್ನು ಮಾಡುತ್ತಿದ್ದ ಈ ಅಲ್ಪಸಂಖ್ಯ ಕಾರ್ಮಿಕ ಸದಸ್ಯರ ಭಾಷಣ, ಮುಂದೂಡುವಿಕೆ ಇಲ್ಲವೆ ಇನ್ನಾವುದೇ ಬಗೆಯ ವಿರೋಧವನ್ನು ಮಾಡುವ ವಿಧಾನವನ್ನು ಕುರಿತು ಬಹುಮತದ ಸಂಪ್ರದಾಯ ಪಕ್ಷದಿಂದ ಕತ್ತು ಹಿಸುಕುವಿಕೆ ಇಲ್ಲವೆ ಅನ್ಯಾಯ ನಡೆದ ದೂರನ್ನು ಕೇಳಲು ನನಗೆಂದಿಗೂ ಸಿಕ್ಕಲಿಲ್ಲ. ನಮ್ಮ ಲೋಕಸಭೆಯ ಉದಾಹರಣೆಯನ್ನೇ ತೆಗೆದುಕೊಳ್ಳಿ. ವಿರೋಧಿ ಪಕ್ಷದ ಸದಸ್ಯರು ಯಾವತ್ತೂ ಮಂಡಿಸುತ್ತಿರುವ ನಿಂದಕ ಗೊತ್ತುವಳಿ, ತಡೆ ಸೂಚನೆ ಅಥವಾ ಅಂಥದೇ ಬೇರೆ ಬಗೆಗಳನ್ನು ನಾನು ಒಪ್ಪುತ್ತೇನೆಂದಲ್ಲ. ಸತತವಾಗಿ ತಡೆ ಸೂಚನೆಯನ್ನು ಮಂಡಿಸುವದು ಒಳ್ಳೆಯ ಲಕ್ಷಣವಲ್ಲ. ಇದೇನೇ ಇದ್ದರೂ ಯಾವುದೇ ಸೂಚನೆಯನ್ನು ಒಪ್ಪಿಕೊಂಡು ಅದನ್ನು ಕುರಿತಾದ ಚರ್ಚೆಗೆ ಅಪ್ಪಣೆಯನ್ನು ನೀಡಲಾದುದನ್ನು ನೀವು ಅಪರೂಪಕ್ಕೊಮ್ಮೆ ಕೇಳಬಹುದು. ಈ ಸಂಗತಿಯ ಬಗೆಗೆ ನನಗೆ ಅಚ್ಚರಿಯಾಗುತ್ತದೆ. ಇಂಗ್ಲಿಷ್ ಪಾರ್ಲಿಮೆಂಟಿನ ಕಲಾಪಗಳನ್ನು ಕುರಿತಾದ ನನ್ನ ಓದಿನಲ್ಲಿ ತಡೆ ಸೂಚನೆಯನ್ನು ತಳ್ಳಿಹಾಕಲಾದ ಉದಾಹರಣೆ ಅಪರೂಪಕ್ಕೊಮ್ಮೆ ಇದ್ದಿರಲು ಸಾಕು. ನಾನು ಮುಂಬಯಿಯ ವಿಧಾನಸಭೆಯ ಶಾಸಕನಾಗಿದ್ದಾಗ ಶ್ರೀ ಮುರಾರಜಿ ದೇಸಾಯಿ, ಶ್ರೀ ಮುನ್ಶಿ, ಶ್ರೀ ಖೇರ ಮೊದಲಾದವರು ಸತ್ತ್ಯಾಧಾರಿಗಳಾಗಿದ್ದರು. ಅವರು ಒಂದೂ ತಡೆ ಸೂಚನೆಯನ್ನು ಚರ್ಚೆಗೆ ಬರಲು ಬಿಡಲಿಲ್ಲ. ಆ ಕಾಲದ ಸ್ಪೀಕರ್ (ಅಧ್ಯಕ್ಷರು) ಶ್ರೀ ಮಾವಲಣಕರರು ತಾವೇ ಇಂಥ ಸೂಚನೆಗಳನ್ನು ತಳ್ಳಿ ಹಾಕುತ್ತಿದ್ದರು. ಅವರು ತಪ್ಪಿ ಒಪ್ಪಿಗೆಯನ್ನಿತ್ತರೆ ಸಚಿವರು ಅದನ್ನು ವಿರೋಧಿಸುತ್ತಿದ್ದರು. ಸಚಿವರು ವಿರೋಧಿಸದಿರುವಾಗ ತಡೆ ಸೂಚನೆಯನ್ನು ಮಂಡಿಸುವ ಸದಸ್ಯನು ನಿರ್ಧರಿಸಲಾದ ೩೦/೪೦ ಅಥವಾ ಇದ್ದಷ್ಟು ಜನ ಸದಸ್ಯರ ಬೆಂಬಲವನ್ನು ದೊರಕಿಸಬೇಕು. ಸಣ್ಣ **ಅಲ್ಪಸಂಖ್ಯ ಕೋಮಿನ ೪/೬ ಜನ ಸದಸ್ಯರ ಗುಂಪು ಮಂಡಿಸಿದ ತಡೆ ಸೂಚನೆಗಳಿಗೆ ಸರಕಾರಿ ಪಕ್ಷದಿಂದ ಒಂದೇಸವನೆ ವಿರೋಧವಾದರೆ ಈ ಅಲ್ಪಸಂಖ್ಯರಿಗೆ ತಮ್ಮ ದುಃಖಗಳನ್ನು ತೋಡಿಕೊಳ್ಳುವ ಅವಕಾಶವೇ ದೊರೆಯದಂತಾಗುವುದು. ಸ್ವಾಭಾವಿಕವಾಗಿಯೇ ಇಂಥ ಪರಿಸ್ಥಿತಿಯಲ್ಲಿ ಈ ಅಲ್ಪಸಂಖ್ಯರಲ್ಲಿ ಕಾನೂನುಬಾಹ್ಯ**

**ದಾರಿಯನ್ನು ಹಿಡಿಯುವ, ಕ್ರಾಂತಿಕಾರಕ ಬಂಡಾಯವನ್ನು ಹೂಡುವ ಗಾಳಿ ಬೀಸತೊಡಗುತ್ತದೆ.** ಹೀಗಾಗಿ, ಪ್ರಜಾಪ್ರಭುತ್ವದ ಆಳ್ವಿಕೆಯಲ್ಲಿ ಬಹುಮತದವರಿಂದ ಎಂದಿಗೂ ಈ ಬಗೆಯ ದಬ್ಬಾಳಿಕೆ ನಡೆಯಕೂಡದು.

(೬) ಈ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ವಿವರಿಸುವುದು ಆವಶ್ಯಕ. **ರಾಜ್ಯಾಡಳಿತಿಗಾಗಿ ನೀತಿವಂತ ಸಮಾಜ ವ್ಯವಸ್ಥೆಯು (Moral Order) ತೀರ ಆವಶ್ಯಕವಾದುದು, ಎಂಬುದು ನನ್ನ ಅಭಿಪ್ರಾಯ.** ನಮ್ಮ ರಾಜಕೀಯ ಶಾಸ್ತ್ರವೇತ್ತರು ಇದನ್ನು ಕುರಿತು ಯೋಚಿಸಿದಂತೆ ಕಾಣುವುದಿಲ್ಲ. **ನೀತಿಶಾಸ್ತ್ರವು ರಾಜಶಾಸ್ತ್ರಕ್ಕಿಂತ ತೀರ ಬೇರೆ ಎಂದು ನಂಬಲಾಗಿದೆ.** ಅವುಗಳಲ್ಲಿ ಅನ್ನೋನ್ಯವಾದ ಸಂಬಂಧವಿಲ್ಲವೆಂದು ತಿಳಿಯಲಾಗುತ್ತದೆ. **ನೀತಿಮತ್ತೆಯ ಹೊರತು ರಾಜಕೀಯವನ್ನು ಮಾಡಬಹುದೆಂಬ ನಂಬಿಕೆಯಿಂದಾಗಿ ರಾಜಕೀಯದ ಅಧ್ಯಯನವನ್ನು ಮಾಡುವವನಿಗೆ**



**ನೀತಿಶಾಸ್ತ್ರದ ಅರಿವು ಇಲ್ಲದಿದ್ದರೂ ನಡೆದೀತೆಂಬ ವದಂತಿಯಿದೆ. ನನ್ನ ಅಭಿಪ್ರಾಯದಲ್ಲಿ ಇಂಥ ವದಂತಿಯು ತುಂಬ ಭಯಂಕರ ಹಾಗೂ ಗಂಭೀರ ಸ್ವರೂಪದ್ದು.** ಪ್ರಜಾಪ್ರಭುತ್ವದಲ್ಲಿ ನಡೆಯವುದಾದರೂ ಏನು? ಪ್ರಜಾಪ್ರಭುತ್ವವನ್ನು ಸ್ವತಂತ್ರ ಸರಕಾರವೆಂದು ಕರೆಯಲಾಗುತ್ತದೆ. ಇಂಥ ಸರಕಾರ ಎಂದರಾದರೂ ಏನು? ಸ್ವತಂತ್ರ ಸರಕಾರ ಎಂದರೆ, ಕಾನೂನು ನಡುವೆ ಕೈಹಾಕದೆಯೇ ಹೆಚ್ಚು ಹೆಚ್ಚು ಸಾಮಾಜಿಕ ಕ್ಷೇತ್ರಗಳಲ್ಲಿರುವ ಜನರು ಸಹಜ ಜೀವನವನ್ನು ಸಾಗಿಸಲು ಸಾಧ್ಯವಾಗುವುದು. ಕಾನೂನನ್ನು ತಯಾರಿಸುವುದು ಅಗತ್ಯದ್ದೇ ಆದರೆ ಅಂಥ ಕಾನೂನನ್ನು ಪಾಲಿಸುವ ಮಟ್ಟಿಗಿನ ಸಾಮಾಜಿಕ ನೀತಿಯು ಸಮಾಜದಲ್ಲಿ ತಯಾರಾಗಿದೆಯೆಂಬ ಭರವಸೆ ಅವರಿಗೆ ಲಭಿಸತಕ್ಕದ್ದು. ಪ್ರೊಫೆಸರ್ 'ಲಾಸ್ಕಿ' ಅವರು ಮಾತ್ರ ಪ್ರಜಾಪ್ರಭುತ್ವದ ಈ ಬದಿಯನ್ನು ಕುರಿತು ಉಲ್ಲೇಖಿಸಿರುವರು. ತಮ್ಮ ಒಂದು ಗ್ರಂಥದಲ್ಲಿ ಅವರು ಹೀಗೆನ್ನುತ್ತಾರೆ : **"ಪ್ರಜಾಪ್ರಭುತ್ವದ ರಾಜ್ಯ ಪದ್ಧತಿಯಲ್ಲಿ ಸಮಷ್ಟಿಯ ನೀತಿವಂತ ಜೀವನವನ್ನು**

**ಕಲ್ಪಿಸಿಕೊಳ್ಳಲಾಗುತ್ತದೆ. ಸಾಮಾಜಿಕ ನೀತಿಮತ್ತೆಯ ಕೊರತೆಯಿಂದಾಗಿ ಅದು ಯಶಸ್ವಿಯಾಗಲಾರದೆ, ಒಡೆದು ತುಣುಕು ತುಣುಕುಗಳಾಗಿ ಬಿಡುವುದು. ನಮ್ಮ ದೇಶದಲ್ಲಿ ನಮಗೆ ಇಂಥ ಅನುಭವ ಬರುತ್ತಿದೆ."**

(೭) ಪ್ರಜಾಪ್ರಭುತ್ವದ ಸ್ಥಾಪನೆಗಾಗಿ **ಆವಶ್ಯಕವಿದ್ದ ಇನ್ನೊಂದು ಅಂಶವೆಂದರೆ, ವಿಚಾರವಂತ (ವಿವೇಕಿ) ಜನಮತ** (Public Conscience). ಪ್ರತಿಯೊಂದು ದೇಶದಲ್ಲಿ ಅನ್ಯಾಯಗಳು ನಡೆಯುತ್ತಿರುವ ಬಗೆಗೆ ಸಂದೇಹವಿಲ್ಲ. ಅಂದ ಮಾತ್ರಕ್ಕೆ ಎಲ್ಲೆಡೆಗೂ ಅದು ಸಮಪ್ರಮಾಣದಲ್ಲಿ ನಡೆಯುತ್ತದೆಂದೇನೂ ಇಲ್ಲ.

**ಅನ್ಯಾಯದ ಬಿಸಿ ಸಮಾಜದ ಕೆಲವರಿಗೆ ತುಸು ಮಟ್ಟಿಗೆ ಮಾತ್ರ ತಗಲುತ್ತದೆ. ಆದರೆ ಕೆಲವರು ಅದರ ಬೇಗೆಯಲ್ಲಿ ಬೆಂದುಹೋಗಬೇಕಾಗುತ್ತದೆ**. ಅವರು ಅನ್ಯಾಯದ ಹೊರೆಯಡಿಗೆ ಸಿಕ್ಕು ನಲುಗುತ್ತಾರೆ.

ಈ ಸಂದರ್ಭದಲ್ಲಿ ಇಂಗ್ಲೆಂಡಿನ ಜ್ಯೂ ಜನರ ಉದಾಹರಣೆಯನ್ನು ಕೊಡಬಹುದು. ಈ ಜನರು, ಅಲ್ಲಿಯ ಕ್ರೈಸ್ತ ಮತದವರು ಅನುಭವಿಸದ ಬೇರೊಂದು ಬಗೆಯ ಅನ್ಯಾಯಕ್ಕೆ ಈಡಾದರು. ಹೀಗಾಗಿ ಜ್ಯೂ ಜನರು ತಮ್ಮ ಮೇಲಾಗುವ ಅನ್ಯಾಯದ ವಿರುದ್ಧ ಒಂಟಿಯಾಗಿ ಹೋರಾಡಬೇಕಾಯಿತು. ಇಂಗ್ಲಿಷ್ ಕ್ರಿಶ್ಚನ್ ಜನರು ಅವರಿಗೆ ನೆರವಾಗಲಿಲ್ಲ. ಬದಲು ಜೂಗಳ ಮೇಲಾಗುವ ಅನ್ಯಾಯವನ್ನು ಕಂಡು ಅವರಿಗೆ ಸಂತೋಷವಾಗುತ್ತಿತ್ತು. ಜೂ ಜನರಿಗೆ ನೆರವು ನೀಡುವ ಇಂಗ್ಲೆಂಡಿನ ಒಬ್ಬನೇ ವ್ಯಕ್ತಿ ಎಂದರೆ ಅಲ್ಲಿಯ ರಾಜನು. ಇದರಿಂದ ಕೆಲವರಿಗೆ ಅಚ್ಚರಿ ಎನ್ನಿಸಿತು. ಆದರೆ ಅದರ ಕಾರಣವೂ ಅಷ್ಟೇ ಮೋಜಿನದು. ಹಳೆಯ ಕ್ರಿಶ್ಚನ್ ಕಾನೂನಿನ ಮೇರೆಗೆ ಜೂ ಜನರ ವಂಶದವರಿಗೆ ಅವರು ಜೂ ಎಂಬ ಕಾರಣದಿಂದಾಗಿ ವಾರಸಿನ ಆಸ್ತಿಯು (ಎಸ್ಟೇಟು) ಲಭಿಸುತ್ತಿರಲಿಲ್ಲ. ಅದು ರಾಜನ ಸೊತ್ತಾಗಿ ಸರಕಾರಕ್ಕೆ ಜಮೆಯಾಗುತ್ತಿತ್ತು. ಸ್ವಾಭಾವಿಕವಾಗಿಯೇ ಇದರಿಂದ ರಾಜನಿಗೆ ಸಂತೋಷವಾಗುತ್ತಿತ್ತು. ಮೃತರಾದ ಜ್ಯೂಗಳ ಮಕ್ಕಳು ಇಂಥ ಎಸ್ಟೇಟಿಗಾಗಿ ರಾಜನಿಗೆ ಅರ್ಜಿಗಳನ್ನು ಸಲ್ಲಿಸುತ್ತಿದ್ದರು. ಆಗ ರಾಜನು ಉದಾರವಾಗಿ ಸ್ವಲ್ಪ ಪಾಲನ್ನು ಅವರಿಗೆ ನೀಡಿ, ಉಳಿದೆಲ್ಲವನ್ನು ತಾನು ಇರಿಸಿಕೊಳ್ಳುತ್ತಿದ್ದನು. ಜೂ ಜನರ ಮೇಲೆ ಇಷ್ಟೆಲ್ಲ ಅನ್ಯಾಯ ನಡೆದಿದ್ದರೂ ಒಬ್ಬನೂ ಇಂಗ್ಲಿಷ್ ವ್ಯಕ್ತಿಯು ಅವರ ನೆರವಿಗೆ ಧಾವಿಸಲಿಲ್ಲ. ಸಾರ್ವಜನಿಕ ವಿವೇಕ ಬುದ್ಧಿಯು (Publicconscience) ಜಾಗೃತವಾಗಿ ಇಲ್ಲದುದರ ಪರಿಣಾಮ ಇದಾಗಿತ್ತು. **ಯಾರ ಮೇಲೆ ಅನ್ಯಾಯವಾದರೂ ಅದನ್ನು ಕಂಡ ಕೂಡಲೇ**

**ಜಾಗೃತಗೊಂಡು ಎದ್ದೇಳುವ ಶಕ್ತಿಯೆಂದರೆ ಸಮಷ್ಟಿಯ ಸದಸದ್ವಿವೇಕ ಬುದ್ಧಿ, ಸಾರ್ವತ್ರಿಕ ವಿವೇಕ ಬುದ್ಧಿಯು ತಲೆದೋರುತ್ತಲೇ, ಅದು ಸಮಾಜದಲ್ಲಿ ಅನ್ಯಾಯಕ್ಕೆ ಈಡಾದ ಅಥವಾ ಈಡಾಗದ ಪ್ರತಿಯೊಬ್ಬ ವ್ಯಕ್ತಿಯು ಪೀಡಿತರ ಮೇಲಾಗುವ ಅನ್ಯಾಯವನ್ನು ತೊಡೆದು ಹಾಕಲೆಂದು ಅವರಿಗೆ ಬೆಂಬಲವನ್ನು ನೀಡುವಂತೆ ಮಾಡುತ್ತದೆ.** ತೀರ ಇತ್ತೀಚಿನ ಉದಾಹರಣೆಯನ್ನು ನೀಡುವುದಾದರೆ ದಕ್ಷಿಣ ಆಫ್ರಿಕೆಯತ್ತ ಬೆರಳು ತೋರಬಹುದು. ಅಲ್ಲಿ ಅನ್ಯಾಯಕ್ಕೆ ಬಲಿಯಾಗುವವರು ಹಿಂದೀಯರು. ಅವರಿಂದ ಅಲ್ಲಿಯ ಬಿಳಿಯರಿಗೆ ಯಾವುದೇ ಬಗೆಯ ಬಿಸಿ ತಲುಪದು. ಇಷ್ಟಿದ್ದರೂ ಮಿ, ಸ್ಕಾಟ್ ಎನ್ನುವ ಬಿಳಿಯನು ಈ ಅನ್ಯಾಯವನ್ನು ತೊಲಗಿಸಲೆಂದು ಜೀವದ ಹಂಗುದೊರೆದು ಯತ್ನಿಸುತ್ತಿರುವುದನ್ನು ಕಾಣುತ್ತೇವೆ. ಹಲವು ಜನ ಬಿಳಿಯ ಯುವಕ ಯುವತಿಯರು ದಕ್ಷಿಣ ಆಫ್ರಿಕೆಯ ಹಿಂದಿ ಜನರ ಚಳುವಳಿಯಲ್ಲಿ ಸೇರ್ಪಡೆಗೊಳ್ಳುತ್ತಿರುವುದನ್ನು ಕಾಣುತ್ತೇವೆ. ಇಂಥ ದೃಶ್ಯ ಕಾಣುವುದೇಕೆ? ಅದು ಜನರಲ್ಲಿರುವ ಸಾರಾಸಾರ ವಿವೇಕ ಬುದ್ಧಿಯ ಫಲ. **ನಾನು ನಿಮ್ಮನ್ನು ಇರಿಯಬಯಸುವುದಿಲ್ಲ. ಆದರೆ ಅದೆಷ್ಟೋ ಸಲ ನಮಗೆ ನಮ್ಮ ಮರೆಗುಳಿತನದ ಬಗೆಗೆ ಅಚ್ಚರಿಯಾಗುತ್ತದೆ. ನಾವು ದಕ್ಷಿಣ ಆಫ್ರಿಕೆಯಲ್ಲಿ ನಡೆದ ಅನ್ಯಾಯವನ್ನು ಕುರಿತು ತುಂಬ ಆವೇಶದಿಂದ ಮಾತನಾಡುತ್ತೇವೆ. ಆದರೆ ಆಫ್ರಿಕೆಯಲ್ಲಿರುವ ವಿಭಕ್ತ (ಬೇರ್ಪಟ್ಟ) ಜನವಸತಿಗಳ (Segregation) ಧೋರಣೆಯ ವಿರುದ್ಧ ಮಾತನಾಡುವ ನಾವು ನಮ್ಮ ದೇಶದಲ್ಲಿ ಸುತ್ತಲೂ ದೃಷ್ಟಿಯನ್ನು ಹಾಯಿಸಿದರೆ ಪ್ರತಿಯೊಂದು ಊರಲ್ಲಿ ಇಂಥ ವಿಭಕ್ತ ವಸತಿಯ ತತ್ತ್ವಜ್ಞಾನವು ಕಾರ್ಯಾಚರಣೆಯಲ್ಲಿ ಇಳಿದುದನ್ನು ಕಾಣುವುದಿಲ್ಲವೆ? 'ದಕ್ಷಿಣ ಆಫ್ರಿಕೆ'ಯು ನಮ್ಮ ಪ್ರತಿಯೊಂದು ಹಳ್ಳಿಯಲ್ಲಿಯೂ ಇಳಿದು ಬಂದಿದೆ.** ಇಷ್ಟಿದ್ದರೂ ಯಾರಾದರೂ, ವಿಭಕ್ತ ವಸತಿಯಲ್ಲಿ ಇರುವ ಅಸ್ಪೃಶ್ಯ (ದಲಿತ) ಜಾತಿಯವರ ಪ್ರಶ್ನೆಯನ್ನು ಕೈಗೆತ್ತಿಕೊಳ್ಳಲೆಂದು ಹಾಗೂ ಅವರ ಮೇಲಾಗುವ ಅನ್ಯಾಯಗಳನ್ನು ಪರಿಹರಿಸಲೆಂದು ಮುಂದೆ ಬಂದುದು ತೀರ ಕಡಿಮೆ. ಹೀಗೇಕಾಗುತ್ತಿದೆ? ಇದರ ಕಾರಣ ಸ್ಪಷ್ಟ. ಸಾಮಾಜಿಕ ವಿವೇಕ ಬುದ್ಧಿಯ ಕೊರತೆ ! ಇದು ಹೀಗೆಯೇ ಮುಂದುವರಿಯುತ್ತ ಅನ್ಯಾಯಗಳು ಆಗುತ್ತಲೇ ಇದ್ದರೆ, ಬೇರೆ ಜನರು ಅಲ್ಪಸಂಖ್ಯರ ಮೇಲೆ ಆಗುವ ಅನ್ಯಾಯವನ್ನು ಎದುರಿಸಲು ಮುಂದೆ ಬಾರದಿದ್ದರೆ ಅಲ್ಪಸಂಖ್ಯರ ತಲೆಯಲ್ಲಿ ಕ್ರಾಂತಿಯ ಗಾಳಿಯು ಮತ್ತೆ ಬೀಸತೊಡಗುತ್ತದೆ.

ಮೇಲಿನ ವಿವೇಚನೆ ಎಂದರೆ, ಬೇರೆ ಬೇರೆ ರಾಜಕೀಯ ತತ್ತ್ವಗಳ ಒಣಕೊರಡಿನಂತಹ ವಿವರಣೆಯಲ್ಲ. ಬದಲು ಬೇರೆ ಬೇರೆ ದೇಶಗಳ ಇತಿಹಾಸವನ್ನು ಓದಿದ ತರುವಾಯ ನನ್ನ ಮನಸ್ಸಿನ ಮೇಲೆ ಅಷ್ಟೊತ್ತಿದ ಸಂಗತಿಗಳ ಅನುಭವವದು.

ನಮಗೆ ಸ್ವಾತಂತ್ರ್ಯ ಲಭಿಸಿದೆ. ಬ್ರಿಟಿಶರು ಹೊರಟಿದ್ದಾರೆ. ನಾವು ಪ್ರಜಾಪ್ರಭುತ್ವವನ್ನು ಘೋಷಿಸುವ ಸಂವಿಧಾನವನ್ನು ತಯಾರಿಸಿದ್ದೇವೆ. ಅಂದ ಬಳಿಕ ಈ ಬಗೆಗೆ ನಮಗೆ ಇನ್ನೇನು ಬೇಕು? ನಾವಿನ್ನು ನಿಶ್ಚಿಂತರಾಗಿ ಕುಳಿತುಕೊಳ್ಳೋಣ, ಎನ್ನುವ ಭಾವನೆ ಈ ದೇಶದ ಜನರಲ್ಲಿ ಬೆಳೆಯುತ್ತಿದೆ. **ಸಂವಿಧಾನವನ್ನು ತಯಾರಿಸಿದೆವೆಂದ ಮಾತ್ರಕ್ಕೆ ನಮ್ಮ ಕೆಲಸ ಮುಗಿಯಿತು, ಎನ್ನುವ ಆತ್ಮಘಾತಕ ಭಾವನೆಯ ಬಗೆಗೆ ಎಲ್ಲರಿಗೂ ಅಪಾಯದ ಎಚ್ಚರಿಕೆಯನ್ನು ನೀಡಬಯಸುತ್ತೇನೆ. ನಮ್ಮ ಕೆಲಸ ಈಗಲ್ಲಿ ಶುರುವಾಗುತ್ತಲಿದೆ**. ಪ್ರಜಾಪ್ರಭುತ್ವದ ಮರ ಎಲ್ಲೆಡೆಗಳಲ್ಲಿ ಸರಿಯಾಗಿ, ಪುಷ್ಟವಾಗಿ ಬೆಳೆಯುಬಲ್ಲುದೆಂದಲ್ಲ, ಎಂಬುದನ್ನು ನಾವು ಗಮನದಲ್ಲಿ ಇರಿಸಿಕೊಳ್ಳಬೇಕು. ಅದು ಅಮೇರಿಕೆಯಲ್ಲಿ ಬೆಳೆದಿದೆ. ಇಂಗ್ಲೆಂಡಿನಲ್ಲಿ ಅದರ ಬೆಳವಣಿಗೆ ಆಯಿತು. ಅದು ಕೆಲಮಟ್ಟಿಗೆ ಫ್ರಾನ್ಸಿನಲ್ಲೂ ಬೇರುಬಿಟ್ಟಿದೆ.



ಬೇರೆಡೆಗಳಲ್ಲಿ ನಡೆದ ಆಶಾದಾಯಕವಾದ ಈ ಘಟನೆಗಳಿಂದಲೇ ನಮಗೆ ಧೈರ್ಯ ಬಂದೀತು.

ಮೊದಲ ಮಹಾಯುದ್ಧದ ಪರಿಣಾಮವೆಂದು ಹಾಗೂ ಆಸ್ಟ್ರಿಯಾ-ಹಂಗೇರಿಯ ಸಾಮ್ರಾಜ್ಯದ ವಿಘಟನೆಯನ್ನು ಮಾಡಿದ್ದರಿಂದ, ವಿಲ್ಸನ್ನನು ಸ್ವಯಂನಿರ್ಣಯದ (Self determination) ತತ್ವಕ್ಕನುಸರಿಸಿ ಆಸ್ಟ್ರಿಯಾದಿಂದ ಬೇರೆಯಾದ ಸಣ್ಣ, ಸಣ್ಣ ರಾಷ್ಟ್ರಗಳನ್ನು ತಯಾರಿಸಿದನೆಂಬುದು ನಿಮಗೆ ನೆನಪಿರಬಹುದು. ಪ್ರಜಾಪ್ರಭುತ್ವದ ಸಂವಿಧಾನ, ಪ್ರಜಾಪ್ರಭುತ್ವದ ಸರಕಾರ ಮತ್ತು ವರ್ಸೆಲ್ಸ್ ಎಂಬಲ್ಲಿಯ ಒಡಂಬಡಿಕೆಯ ಮೇರೆಗೆ ಮೂಲಭೂತ ಹಕ್ಕುಗಳ ಏರ್ಪಾಡನ್ನು ಮಾಡುವ ಸಂವಿಧಾನಗಳು ಅವುಗಳಿಗೆ ಇದ್ದವು. ಆ ಪ್ರಜಾಪ್ರಭುತ್ವಗಳ ಗತಿ ಏನಾಯಿತು? ಅಲ್ಲಿ ಅವುಗಳ

ಲವಲೇಶವಾದರೂ ನಿಮಗೆ ಕಾಣುತ್ತಿದೆಯೇ? ಅವೆಲ್ಲ ಈಗ ಕಣ್ಮರೆಯಾಗಿವೆ, ಪೂರ್ತಿ ನಾಶವಾಗಿವೆ. ಅವೆಲ್ಲ ರಾಷ್ಟ್ರಗಳು ಇಂದು ಬೇರೆಯವರ ದಾಸ್ಯ ಇಲ್ಲವೆ ಕಪಿಮುಷ್ಟಿಗೆ ಸಿಕ್ಕಿಕೊಂಡಿವೆ.

ಇತ್ತೀಚಿನ ಕೆಲವು ಉದಾಹರಣೆಗಳನ್ನು ಗಮನಿಸುವಾ. ಸೀರಿಯಾದಲ್ಲಿ ಪ್ರಜಾಪ್ರಭುತ್ವನಿಷ್ಠವಾದ ಸರಕಾರವಿತ್ತು. ಕೆಲವು ವರ್ಷಗಳ ತರುವಾಯ ಅಲ್ಲಿ ಸೇನೆಯ ಬಂಡಾಯ ನಡೆಯಿತು. ಸೇನೆಯ ದಂಡನಾಯಕನು ಸೀರಿಯಾದ ರಾಜ್ಯಪ್ರಮುಖನಾದನು. ಅಲ್ಲಿಯ ಪ್ರಜಾಪ್ರಭುತ್ವವು ಹವೆಯಲ್ಲಿ ಕರಗಿ ಹೋಯಿತು. ಎರಡನೆಯ ಉದಾಹರಣೆಯನ್ನು ತೆಗೆದುಕೊಳ್ಳುವಾ. ಈಜಿಪ್ತಿನಲ್ಲಿ ಏನಾಯಿತು? ೧೯೨೨ ರಿಂದ ಅಲ್ಲಿಯೂ ನಿರಂತರವಾಗಿ ಇಪ್ಪತ್ತು ವರ್ಷಗಳ ಕಾಲ ಪ್ರಜಾಪ್ರಭುತ್ವವು ಚಾಲ್ತಿಯಲ್ಲಿತ್ತು. ಒಂದು ರಾತ್ರಿ ಫರೂಕಿಯನ್ನು ಹೊರದೂಡಲಾಯಿತು. ನಾಗಿಬ್ ಇವನು ಸರ್ವಾಧಿಕಾರಿಯಾದನು. ಅವನು ಸಂವಿಧಾನವನ್ನು ವಿಸರ್ಜಿಸಿದನು.

ಇವೆಲ್ಲ ಉದಾಹರಣೆಗಳು ನಮ್ಮೆದುರು ಇರುವುದರಿಂದ ನಾವು ನಮ್ಮ ಭವಿಷ್ಯ ಕಾಲದ ಬಗೆಗೆ ತುಂಬ ಎಚ್ಚರವುಳ್ಳವರು ಹಾಗೂ ವಿಚಾರಿಗಳಾಗಬೇಕು. ಪ್ರಜಾಪ್ರಭುತ್ವವನ್ನು ಸುರಕ್ಷಿತಪಡಿಸಲೆಂದು, ಅದರ ದಾರಿಯ ಮೇಲಿನ ಕಲ್ಲು ಬಂಡೆಗಳನ್ನು ದೂರ ಸರಿಸಲೆಂದು, ಕೆಲವು ಖಚಿತವಾದ ಹೆಜ್ಜೆಗಳನ್ನು ಎತ್ತುವೆವೋ, ಇಲ್ಲವೋ ಎಂಬುದನ್ನು ಕುರಿತು ಯೋಚಿಸಬೇಕಿದೆ.

ನಾನು ಮಾಡಿದ ವಿವೇಚನೆಯಿಂದಾಗಿ ನೀವೆಲ್ಲರೂ ಈ ಪ್ರಶ್ನೆಯತ್ತ ಅಲಕ್ಷ್ಯವನ್ನು ತೋರಲಿಕ್ಕಿಲ್ಲ. ಇಷ್ಟನ್ನು ಮಾಡಿದರೂ ನನಗೆ ನೆಮ್ಮದಿ ಲಭಿಸೀತು.

**[೩] ಸಾಂಸದಿಕ ರಾಜ್ಯಾಡಳಿತೆಯಲ್ಲಿ ವಿರೋಧಿ ಪಕ್ಷದ ಆವಶ್ಯಕತೆಯು ಇರುವುದೇಕೆ?**

ಸೃಜನಶೀಲವಾದ ಜನಾಭಿಪ್ರಾಯದ ಕೊರತೆಯಿಂದಾಗಿ ಪ್ರಜಾಪ್ರಭುತ್ವವನ್ನು ಅನುಷ್ಠಾನಕ್ಕೆ ತರುವಲ್ಲಿ ಕೆಲವು ಅಡಚಣೆಗಳು ಎದುರಾಗುತ್ತವೆ. ಸರಕಾರ ಹಾಗೂ ಕಾನೂನು ಮಂಡಲಗಳ ಕಾರ್ಯಕಲಾಪಗಳು ಸೂಕ್ತವಾಗಿ ನಡೆಯಲೆಂದು ಜನಾಭಿಪ್ರಾಯವನ್ನು ಗುರುತಿಸಲು ತಿಳಿಯಬೇಕು. ಈ ಅಂಶವನ್ನು ಸ್ಪಷ್ಟಪಡಿಸಲೆಂದು, ಶಿಕ್ಷಣ ಹಾಗೂ ಪ್ರಚಾರಗಳ ನಡುವಿನ ವ್ಯತ್ಯಾಸವನ್ನು ಕುರಿತು ಹೇಳುವುದು ಆವಶ್ಯಕ. ಪ್ರಚಾರಾಧಿಷ್ಠಿತ ಸರಕಾರ ಹಾಗೂ ಜನಶಿಕ್ಷಣದ ಅಡಿಪಾಯವನ್ನು ತಯಾರಿಸುವ ಸರಕಾರಗಳ ನಡುವೆ ಮಹದಂತರವಿದೆ. ಪ್ರಚಾರ ಎಂದರೆ ಯಾವುದೇ ಸಂಗತಿಯ ಒಂದು ಬದಿ ಮಾತ್ರ, ಜನಶಿಕ್ಷಣವನ್ನು ಆಧರಿಸಿದ ಸರಕಾರ ಎಂದರೆ ಪ್ರತಿಯೊಂದು ಪ್ರಶ್ನೆಯ ಎರಡೂ ಬದಿಗಳನ್ನು ಕೂಲಂಕಷವಾಗಿ ಪರಾಮರ್ಶಿಸಿ ಆಡಳಿತೆಯನ್ನು ನಡೆಯಿಸುವ ಸರಕಾರ, ಕಾನೂನು ಮಂಡಲಿಯು

ತೀರ್ಮಾನಿಸಬೇಕಿದ್ದ ಪ್ರಶ್ನೆಗಳ ಎರಡೂ ಬದಿಗಳು ಜನರೆದುರಿಗೆ ಬರುವುದು ಆವಶ್ಯಕ. ಇದಕ್ಕಾಗಿ ಎರಡು ಪಕ್ಷಗಳು ಆವಶ್ಯಕ. ಒಂದೇ ಪಕ್ಷವು ಎರಡೂ ಬದಿಗಳನ್ನು ಮಂಡಿಸಲಾರದು. ಏಕಪಕ್ಷದ



ಆಡಳಿತೆ ಎಂದರೆ ಸರ್ವಾಧಿಕಾರಶಾಹಿಯೇ ಸರಿ. ಸರ್ವಾಧಿಕಾರಶಾಹಿಯನ್ನು ತಪ್ಪಿಸಬೇಕಿದ್ದರೆ ಎರಡನೆಯ ಪಕ್ಷ ಬೇಕೇ ಬೇಕು. ಇದು ಮೂಲಭೂತ ಅಂಶ, ಜನರಿಗೆ ಒಳ್ಳೆಯ ಕಾನೂನಿಗಿಂತ ಒಳ್ಳೆಯ ಆಡಳಿತೆ ಮುಖ್ಯ. ಕಾನೂನುಗಳೇನೋ ಚೆನ್ನಾಗಿರಬಹುದು. ಆದರೆ ಅವುಗಳ ಅನುಷ್ಠಾನ ಕೆಟ್ಟದ್ದಾಗಿರಲು ಸಾಧ್ಯ.

ರಾಜ್ಯಾಡಳಿತೆಯು ಚೆನ್ನಾಗಿದೆಯೋ, ಇಲ್ಲವೋ ಎನ್ನುವುದು ಅದರ ಅನುಷ್ಠಾನಕ್ಕಾಗಿ ನೇಮಿಸಿದ ಅಧಿಕಾರಿಗೆ ಎಷ್ಟು ಸ್ವಾತಂತ್ರ್ಯವಿದೆ, ಎನ್ನುವುದನ್ನು ಅವಲಂಬಿಸಿದೆ. ಒಂದೇ ಪಕ್ಷವಿದ್ದರೆ ಯಾವನೇ ಅಧಿಕಾರಿಯು, ಸಚಿವನೆಂದು ಗುರುತಿಸಲಾಗುವ ತನ್ನ ರಾಜಕೀಯ ನಾಯಕನ ಮನದಂತೆ ನಡೆದುಕೊಳ್ಳುವ ಪ್ರಾಣಿಯಾಗಿರುತ್ತಾನೆ. ಸಚಿವನ ಅಸ್ತಿತ್ವವು ಮತದಾರರನ್ನು ಅವಲಂಬಿಸಿರುತ್ತದೆ. ಹೀಗಾಗಿ ಮತದಾರರನ್ನು ಖುಷಿಪಡಿಸಲೆಂದು ಸಚಿವ ಮಹಾಶಯರು ಅಧಿಕಾರಿಗಳಿಂದ ವಿಚಿತ್ರ (ತಪ್ಪು) ಆಡಳಿತೆಯನ್ನು ಮಾಡಿಸುತ್ತಾರೆ. ವಿರೋಧಿ ಪಕ್ಷವಿದ್ದರೆ ಅದು ಸಚಿವನ ಈ ತಪ್ಪು ಕೃತ್ಯಗಳನ್ನು ಬೆಳಕಿಗೆ ತರುವ ಕಾರಣ ಇಂಥ ಸಂಗತಿಗಳಿಗೆ ಕಡಿವಾಣವನ್ನು ಹಾಕಲು ಸಾಧ್ಯ.

ಒಳ್ಳೆಯ ಆಡಳಿತೆಯಲ್ಲಿರುವ ಜನರಿಗೆ ಭಾಷಣ ಸ್ವಾತಂತ್ರ ಹಾಗೂ ವಿಚಾರಣೆಯಿಲ್ಲದ ಸೆರಮನೆ ವಾಸದಿಂದ ಬಿಡುಗಡೆಯಂತಹ ಸಂಗತಿಗಳು ಆವಶ್ಯಕವೆನ್ನಿಸುತ್ತವೆ. ವಿರೋಧಿ ಪಕ್ಷವಿದ್ದರೆ ಭಾಷಣಸ್ವಾತಂತ್ರ್ಯ ಮತ್ತು ಆಚಾರ ಸ್ವಾತಂತ್ರ್ಯಗಳು ಲಭಿಸುತ್ತವೆ. ವಿರೋಧಿ ಪಕ್ಷ ಇಲ್ಲದಿದ್ದರೆ ಜನರ ಈ ಮೂಲಭೂತ ಹಕ್ಕುಗಳು ಅಪಾಯಕ್ಕೆ ಈಡಾಗುತ್ತವೆ. ಏಕೆಂದರೆ ಯಾರೂ ಹಕ್ಕುಗಳನ್ನು ಕಾಲ್ಕೆಳಗೆ ಮೆಟ್ಟುವ ಇಂಥ ಸತ್ತಾರೂಢ ಪಕ್ಷದಿಂದ ವಿವರಣೆಯನ್ನು ಕೇಳಲಾರರು.

ವಿರೋಧಿ ಪಕ್ಷ ಏಕೆ ಬೇಕೆನ್ನಲು ಇರುವ ಕೆಲವು ಕಾರಣಗಳಿವು. ಸಾಂಸದಿಕ ಪ್ರಜಾಪ್ರಭುತ್ವದ ರಾಜ್ಯಾಡಳಿತೆ (Parlimenatary Government) ಇರುವ ದೇಶಗಳಲ್ಲೆಲ್ಲ ವಿರೋಧಿ ಪಕ್ಷವು ಸರಕಾರ ಮಾನ್ಯವಾದ ರಾಜಕೀಯ ಸಂಸ್ಥೆ (Recognised Political Institution) ಆಗಿರುತ್ತದೆ.

ಇಂಗ್ಲೆಂಡ್ ಹಾಗೂ ಕೆನಡಾಗಳಲ್ಲಿ ವಿರೋಧಿ ಪಕ್ಷವು ಕಾನೂನಿನಿಂದ ಅಧಿಕೃತಗೊಳಿಸಲಾದ ಸಂಸ್ಥೆಯಾಗಿದೆ. ಅಲ್ಲದೆ ಪಾರ್ಲಿಮೆಂಟಿನ ಕೆಲಸಗಳನ್ನು ನಿರಾಯಾಸವಾಗಿ ಮಾಡಲು ಅನುಕೂಲವಾಗಲೆಂದು ವಿರೋಧಿ ಪಕ್ಷದ ನಾಯಕನಿಗೆ ಸರಕಾರದ ಬೊಕ್ಕಸದಿಂದ ಸಂಬಳವನ್ನು ನೀಡಲಾಗುತ್ತದೆ.

**[೪] ಪಕ್ಷ ಎಂದರೇನು?**

**ಪಕ್ಷವು ಸೈನ್ಯದಂತಿರುತ್ತದೆ. ಅದಕ್ಕೆ ಕೆಳಗಿನ ಸಂಗತಿಗಳು ಆವಶ್ಯಕ.**

(೧) ದಂಡನಾಯಕನಂತಹ ಮುಂದಾಳು (ನಾಯಕ).

(೨) ಸಂಘಟನೆ ಹಾಗೂ ಅದರಲ್ಲಿ

(ಅ) ಸದಸ್ಯರು.

(ಬ) ಮೂಲಭೂತ ಯೋಜನೆಗಳು.

(ಕ) ಒಳಗೊಳ್ಳಲಾದ ಶಿಸ್ತೆಂಬ ಸಂಗತಿ.

(೩) ಗುರಿ ಮತ್ತು ನೀತಿ, ತತ್ವಜ್ಞಾನ.

(೪) ಕಾರ್ಯಕ್ರಮ.

(೫) ರಾಜಕೀಯ ರಣನೀತಿ ಮತ್ತು ಮುತ್ಸದ್ದಿತನ. [ಅಂದರೆ ಗುರಿ ತಲುಪಲೆಂದು ಯಾವ ಸಂಗತಿಯನ್ನು, ಯಾವಾಗ ಮತ್ತು ಹೇಗೆ ಮಾಡಬೇಕೆಂಬ ಯೋಜನೆ]

**ಹಗುರಾದ ಮಾತುಗಳಲ್ಲಿ ಹೇಳುವುದಾದರೆ, ಮತದಾರರು ವಿಶಿಷ್ಟವಾದ ಧ್ಯೇಯದಿಂದ ಪ್ರೇರಿತರಾಗಿ ತಯಾರಿಸಿದ ಸಂಘಟನೆ ಎಂದರೆ ಪಕ್ಷ.**

'ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ' (ಭಾರತೀಯ ಪ್ರಜಾಸತ್ತಾತ್ಮಕ ಪಕ್ಷ) ಸಂಸ್ಥೆಯು, ಪಕ್ಷ ಒಪ್ಪುವ ತತ್ತ್ವಜ್ಞಾನ ಹಾಗೂ ಉದ್ದೇಶಗಳ ಪೂರ್ತಿಗಾಗಿ ಮತದಾರರ (ಜನರ) ಸಂಘಟನೆಯನ್ನು ತಯಾರಿಸಬೇಕಿದೆ. ಈ ಪಕ್ಷ ಸಂಘಟನೆಯು ಮುಂದಿನಂತೆ ಕೆಲಸವನ್ನು ಮಾಡಲಿದೆ:

(೧) ಪಕ್ಷ ಸಂಘಟನೆ ಹಾಗೂ ಅದರ ಸಂಘಟಿತವಾದ ಅಭಿವೃದ್ಧಿಗಾಗಿ ಹೆಣಗುವುದು;
ಪಕ್ಷದ ತತ್ತ್ವಜ್ಞಾನ ಹಾಗೂ ಧ್ಯೇಯಧೋರಣೆಗಳ ಪ್ರಚಾರವನ್ನು ಮಾಡುವುದು;

(೨) ವೃತ್ತಪತ್ರಗಳು, ಸಭೆ ಸಮ್ಮೇಲನೆಗಳು, ಉಪನ್ಯಾಸಗಳು, ಲೇಖನ, ಮೊದಲಾದವುಗಳ
ಮೂಲಕ ಪಕ್ಷದ ತತ್ಯ ಹಾಗೂ ವಿಚಾರ ಸರಣಿಗಳನ್ನು ಪ್ರಚುರಪಡಿಸುವುದು;

(೩) ಸಂಯುಕ್ತ ರಾಜಕೀಯ ಚಳುವಳಿ ಹಾಗೂ ರಾಜಕೀಯ
ಕೃತಿಗಳನ್ನು ಮಾಡಲೋಸುಗಪಕ್ಷ ಸದಸ್ಯರ ವತಿಯಿಂದ ಚುನಾವಣೆಗಳಲ್ಲಿ ಪಾಲ್ಗೊಳ್ಳುವುದು.

**[೫] 'ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ' -- ಧ್ಯೆಯ ಹಾಗೂ ಉದ್ದೇಶಗಳು**

(೧) ಭಾರತೀಯ ಸಂವಿಧಾನದ ಪೀಠಿಕೆಯು (Preamble) ಮುಂದಿನಂತಿದೆ – **"ನಾವು ಭಾರತದಲ್ಲಿರುವ ಜನರು ಪ್ರತಿಜ್ಞಾಪೂರ್ವಕವಾಗಿ ಹೀಗೆಂದು ತೀರ್ಮಾನಿಸುತ್ತೇವೆ : ಭಾರತವು ಸ್ವತಂತ್ರ, ಸಾರ್ವಭೌಮ, ಪ್ರಜಾಸತ್ತಾತ್ಮಕ**

**ರಾಷ್ಟ್ರವಾಗಿ ಉಳಿದೀತು ಮತ್ತು ಅದರಲ್ಲಿರುವ ನಾಗರಿಕರಿಗೆಲ್ಲ - ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ, ವಿಚಾರ, ಭಾಷಣ, ಮತ ಮತ್ತು ಧಾರ್ಮಿಕ ಸ್ವಾತಂತ್ರ; ಅವಕಾಶ ಮತ್ತು ಸಾಮಾಜಿಕ ಪ್ರತಿಷ್ಠೆಗಳನ್ನು ಕುರಿತಾದ ಸಮತೆ, ವ್ಯಕ್ತಿಸ್ವಾತಂತ್ರ್ಯ ಹಾಗೂ ರಾಷ್ಟ್ರೈಕ್ಯವನ್ನು ಸಾಧಿಸುವ ಬಂಧುಭಾವದಂಥ ಸಂಗತಿಗಳನ್ನು ದೊರಕಿಸಿ ಕೊಡಲು ಹೆಣಗುವೆವು.**

ಭಾರತೀಯ ಸಂವಿಧಾನದ ಈ ಪೀಠಿಕೆಯ ಧ್ಯೇಯ ಮತ್ತು ಉದ್ದೇಶಗಳನ್ನು ನ್ಯಾಯ, ಸ್ವಾತಂತ್ರ್ಯ, ಸಮತೆ ಮತ್ತು ಬಂಧುತ್ವ] ಸಾಧ್ಯಗೊಳಿಸುವುದೇ 'ರಿಪಬ್ಲಿಕನ್ ಪಕ್ಷ ದ ಧ್ಯೇಯ ಮತ್ತು ಉದ್ದೇಶ.

ಈ ಉದೇಶಗಳನ್ನು ಸಾಧಿಸಲೆಂದು 'ರಿಪಬ್ಲಿಕನ್ ಪಕ್ಷವು ಸಾರ್ವಜನಿಕ ವ್ಯವಹಾರದಲ್ಲಿ ಕೆಳಗಿನ ತತ್ತ್ವಗಳಿಗೆ ಬದ್ಧವಾಗಿರಲಿದೆ.

(೧) ಭಾರತೀಯರೆಲ್ಲರಿಗೂ ಸಮಾನವಾದ ನ್ಯಾಯ ಲಭಿಸಲಿದೆ; ಇಷ್ಟೇ ಅಲ್ಲದೆ ಸಮಾನವಾದ ನ್ಯಾಯವು ಪ್ರತಿಯೊಬ್ಬ ಭಾರತೀಯನ ಹಕ್ಕು, ಎಂದು ಭಾವಿಸಲಾಗುವುದು. ಹೀಗಾಗಿ ಪಕ್ಷವು ಇಂಥ ಹಕ್ಕು ಇಲ್ಲದಿಲ್ಲ ಅದನ್ನು ತರಲು ಹೆಣಗುವುದು. ಅದನ್ನು ನಿರಾಕರಿಸಿದಲ್ಲೆಲ್ಲ ಅದನ್ನು ಒದಗಿಸಲೆಂದು, ಅನುಷ್ಠಾನಕ್ಕೆ ತರಲೆಂದು ಹೋರಾಟವನ್ನು ಕೈಗೊಳ್ಳುವುದು.

(೨) ಪ್ರತಿಯೊಬ್ಬ ವ್ಯಕ್ತಿಯ ಸುಖವನ್ನು ಕೇಂದ್ರ ಬಿಂದುವೆಂದು ಪರಿಗಣಿಸಲಾಗುವುದು. ಪ್ರತಿಯೊಬ್ಬ ವ್ಯಕ್ತಿಗೂ ತನ್ನನ್ನು ಉದ್ಧರಿಸಿಕೊಳ್ಳುವ ಸಮಾನಾವಕಾಶ ಲಭಿಸಲಿದೆ. ಈ ಗುರಿಯನ್ನು ತಲುಪಲೆಂದು ಆವಶ್ಯಕವಿದ್ದ ಒಂದು ಸಾಧನ ಎಂದರೆ, ಶಾಸನ ಸಂಸ್ಥೆ (State).

(೩) ಈ ಪಕ್ಷವು ಇತರ ದೇಶ ಬಾಂಧವರ ಹಾಗೂ ಶಾಸನಸಂಸ್ಥೆಯ ಅಗತ್ಯವಿದ್ದ ಅಧಿಕಾರಗಳನ್ನು ಕಾಪಾಡುವುದಲ್ಲದೆ, ಪ್ರತಿಯೊಬ್ಬ ನಾಗರಿಕನಿಗೆ ಧಾರ್ಮಿಕ, ಆರ್ಥಿಕ, ರಾಜಕೀಯ ಸ್ವಾತಂತ್ರ್ಯವು ಲಭಿಸಬೇಕೆಂದು ಒಪ್ಪುವುದು.

(೪) ಈ ಪಕ್ಷವು ಪ್ರತಿಯೊಬ್ಬ ಭಾರತೀಯ ನಾಗರಿಕನಿಗೆ ಸಮಾನಾವಕಾಶ ಇರಬೇಕೆಂಬುದನ್ನು ಒಪ್ಪುತ್ತದೆ. ಈ ಪಕ್ಷವು ಅವಕಾಶ ಲಭಿಸಿದವರಿಗಿಂತ ಮೊದಲು ತಮ್ಮ ಆತ್ಮೋನ್ನತಿಯ ಅವಕಾಶವು ಎಂದಿಗೂ ಲಭಿಸದಿದ್ದವರಿಗೆ ಅಗ್ರ ಕ್ರಮವನ್ನು ನೀಡಬೇಕೆನ್ನುವ ತತ್ತ್ವವನ್ನು ಅಂಗೀಕರಿಸಲಿದೆ.

(೫) ಈ ಪಕ್ಷವು ಪ್ರತಿಯೊಬ್ಬ ವ್ಯಕ್ತಿಯ ಜೀವನದ ಆವಶ್ಯಕತೆ ಹಾಗೂ ಭಯದಿಂದ ಮುಕ್ತಿಯನ್ನು ದೊರಕಿಸಿ ಕೊಡಬೇಕೆಂದು ಶಾಸನ ಸಂಸ್ಥೆಯ ಕರ್ತವ್ಯವನ್ನು ಸರಕಾರಕ್ಕೆ ನೆನಪು ಮಾಡಿಕೊಡಲಿದೆ.

(೬) ಈ ಪಕ್ಷವು ಸ್ವಾತಂತ್ರ್ಯ, ಸಮತೆ ಹಾಗೂ ಬಂಧುತೆಗಳ ಸ್ಥಾಪನೆಗೆ ಒತ್ತು ನೀಡಲಿದೆ. ಅದು ಒಬ್ಬನಿಂದ ಇನ್ನೊಬ್ಬನ, ಒಂದು ವರ್ಗದಿಂದ ಇನ್ನೊಂದು ವರ್ಗದ, ಇಲ್ಲವೆ ಒಂದು ರಾಷ್ಟ್ರದಿಂದ ಇನ್ನೊಂದು ರಾಷ್ಟ್ರದ ಶೋಷಣೆ ಹಾಗೂ ದಬ್ಬಾಳಿಕೆಗಳಿಗೆ ಕಡಿವಾಣ ಹಾಕಲಿದೆ.

(೭) ವ್ಯಕ್ತಿ ಹಾಗೂ ಸಮಾಜದ ಹಿತದ ದೃಷ್ಟಿಯಿಂದ ಸಾಂಸದಿಕ ರಾಜ್ಯ ಪದ್ಧತಿಯು (Parlimentary System of Government) ಸರ್ವೋತ್ತಮವಾದ ರಾಜ್ಯಪದ್ಧತಿಯಾಗಿದೆ, ಎಂಬುದು ಈ ಪಕ್ಷದ ನಂಬಿಕೆ.

**೧೧೫, 'ಬುದ್ಧ ಅಂಡ್ ಹಿಸ್ ಧಮ್ಮ"**

**ಮೂರರ ಪೈಕಿ ಒಂದು ಗ್ರಂಥ**

ಡಾ. ಬಾಬಾಸಾಹೇಬ ಅಂಬೇಡ್ಕರರು ದಿನಾಂಕ ೧೫ ಮಾರ್ಚ್ ೧೯೫೬ರಂದು 'ಬುದ್ಧ ಆ್ಯಂಡ್ ಹೀಸ್ ಧಮ್ಮ' ಗ್ರಂಥಕ್ಕಾಗಿ ಮುನ್ನುಡಿಯನ್ನು ಬರೆದರು. ಈ ಮುನ್ನುಡಿಯಂತೆ 'ಬುದ್ಧ ಆ್ಯಂಡ್ ಹೀಸ್ ಧಮ್ಮ' ಗ್ರಂಥವು (೧) ಬುದ್ಧ ಆ್ಯಂಡ್ ಕಾರ್ಲ್ ಮಾರ್ಕ್ಸ್' ಮತ್ತು (೨) 'ರಿವೊಲ್ಯೂಶನ್ ಆ್ಯಂಡ್ ಕೌಂಟರ್ ರಿವೊಲ್ಯೂಶನ್ ಇನ್ ಏನ್ಸಿಯೆಂಟ್ ಇಂಡಿಯಾ', ಗ್ರಂಥಗಳ ಹೊರತು ಪೂರ್ತಿಯಾಗಲಾರದು, ಎಂದು ಸ್ಪಷ್ಟವಾಗಿ ನಮೂದಿಸಿರುವರು. ಅದು ಕೆಳಗಿನಂತಿದೆ -- ಸಂಪಾದಕ.

***** [ಅನುವಾದಕನ ಸೂಚನೆ : ಇಲ್ಲಿ ಮೂಲ ಕೈ ಬರಹದ ಫೋಟೋ ಪ್ರತಿಯನ್ನು ಸೇರ್ಪಡಿಸಬೇಕು.]**

I may mention that this is one of the three books which will form a group for the proper understanding of Buddhism. The other two books are (1) Buddha and karl Marx and (2) Revolution and Counter Revolution in ancient India. They are written out in parts. I hope to publish them soon.

15th March 1956. (Sd.) B. R. AMBEDKAR

ಇದು ಬುದ್ಧ ಧಮ್ಮವನ್ನು ಸೂಕ್ತವಾಗಿ ಅರಿತುಕೊಳ್ಳಲು ಇರುವ ಮೂರು ಗ್ರಂಥಗಳಲ್ಲಿ ಒಂದು, ಎಂದು ನಮೂದಿಸ ಬಯಸುತ್ತೇನೆ. ಉಳಿದೆರಡು ಗ್ರಂಥಗಳೆಂದರೆ (೧) 'ಬುದ್ಧ ಮತ್ತು ಕಾರ್ಲ್ ಮಾರ್ಕ್ಸ್ ಮತ್ತು (೨) 'ಪ್ರಾಚೀನ ಭಾರತದಲ್ಲಿ ನಡೆದ ಕ್ರಾಂತಿ ಹಾಗೂ ಪ್ರತಿಕ್ರಾಂತಿಗಳು', ಅವುಗಳನ್ನು ಬಾಗಗಳಲ್ಲಿ ಬರೆಯಲಾಗಿದೆ. ಅವುಗಳನ್ನು ಬೇಗನೆ ಪ್ರಕಟಿಸುವ ಇಚ್ಛೆ ನನ್ನದು.

ದಿನಾಂಕ : ೧೫ ಮಾರ್ಚ್ ೧೯೫೬ (ಸಹಿ) ಬಿ. ಆರ್. ಅಂಬೇಡಕರ ೧

೦ : Rattu Nanakcand, Last few days of Dr. Ambedkar P. 197.

## ೧೧೬, ಟ್ರೇನಿಂಗ್ ಸ್ಕೂಲ್ ಫಾರ್ ಎಂಟ್ರನ್ಸ್ ಟು ಪಾಲಿಟಿಕ್ಸ್

ಭಾರತೀಯ ಸಂವಿಧಾನವು ಅಂಗೀಕರಿಸಿದ ಸಾಂಸದಿಕ ಪ್ರಣಾಲಿಯ ಕೇಂದ್ರೀಯ ಹಾಗೂ ಪ್ರಾಂತೀಯ ಕಾನೂನು ಮಂಡಲದ ಪ್ರತಿನಿಧಿಗಳ ವ್ಯಕ್ತಿತ್ವ ಹಾಗೂ ಶೀಲಗಳು ಪ್ರಜ್ಞೆಯಿಂದ ಕೂಡಿದವುಗಳಾಗಿರಬೇಕೆಂದು ಡಾ. ಬಾಬಾಸಾಹೇಬ ಅಂಬೇಡಕರರು ಮನಸ್ಸಿನಲ್ಲಿ ಇಚ್ಛಿಸಿದ್ದರು. ಈ ಸಂದರ್ಭದಲ್ಲಿ ೨೩ ನವೆಂಬರ್ ೧೯೫೦ರಂದು ಸಂಸತ್ತಿನಲ್ಲಿ ಅವರು ನೀಡಿದ ಭಾಷಣದಲ್ಲಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿರುವರು.*

ಉತ್ಕೃಷ್ಟರಾದ ಸಂಸತ್ಪಟುಗಳು ತಯಾರಾಗಲು ಆವಶ್ಯಕವಿದ್ದ ಗುಣಗಳು ಈ ಕ್ಷೇತ್ರದಲ್ಲಿ ಕೆಲಸವನ್ನು ಮಾಡುವ ನಾಯಕತ್ವದಲ್ಲಿ ನಿರ್ಮಾಣವಾಗಬೇಕೆಂಬ ಉದ್ದೇಶದಿಂದ ಅವರು 'ಟ್ರೇನಿಂಗ್ ಸ್ಕೂಲ್ ಫಾರ್ ಎಂಟ್ರನ್ಸ್ ಟು ಪಾಲಿಟಿಕ್ಸ್ ವನ್ನು ಮುಂಬಯಿಯಲ್ಲಿ ಶುರು ಮಾಡಿದರು. ಸ್ವತಃ ಡಾ. ಬಾಬಾಸಾಹೇಬ ಅಂಬೇಡಕರರು ಈ ಸಂಸ್ಥೆಯ ಸಂಚಾಲಕರಾಗಿದ್ದರೆ, ಶಾ. ಶಂ. ರೇಗೆ ಅವರು ರಜಿಸ್ಟಾರ್ ಆಗಿದ್ದರು. ಇದನ್ನು ಕುರಿತಾದ ಮಾಹಿತಿ ಕೆಳಗಿನಂತಿದೆ - ಸಂಪಾದಕ.

''ದೇಶದ ಪ್ರಜಾಪ್ರಭುತ್ವವನ್ನು ಕುರಿತಾದ ವಿಚಾರ ಮತ್ತು ಕಾರ್ಯಗಳಿಗೆ ಪರಿಣಾಮಕರವಾದ ಚಾಲನೆ ದೊರೆಯಬೇಕು, ಯುವಕರನ್ನು ಯೋಜಿಸಲಾದ ನಮ್ಮ ರಿಪಬ್ಲಿಕನ್ ಪಕ್ಷಕ್ಕೆ ಸೇರಿಸಿಕೊಳ್ಳುವ ಸಲುವಾಗಿ ಹಾಗೂ ರಾಜಕೀಯದಲ್ಲಿ ಪ್ರತ್ಯಕ್ಷವಾಗಿ ಪಾಲ್ಗೊಳ್ಳಬಯಸುವ ಜನರಿಗಾಗಿ ಮುಂಬಯಿಯಲ್ಲಿ ಒಂದು ತರಬೇತಿ ವಿದ್ಯಾಲಯವನ್ನು (ಟ್ರೇನಿಂಗ್ ಸ್ಕೂಲ್) ಶುರು ಮಾಡಬೇಕೆಂದು ಡಾ. ಅಂಬೇಡ್ಕರರು ತೀರ್ಮಾನಿಸಿದರು. ಅವರು ಗ್ರಂಥಪಾಲರಾದ ಶಾ. ಶಂ. ರೇಗೆ ಅವರ ನೆರವಿನಿಂದ ಈ ತರಬೇತಿ ವಿದ್ಯಾಲಯವನ್ನು ಸ್ಥಾಪಿಸಲು ಯತ್ನಿಸುತ್ತಿದ್ದರು. ಈ ತರಬೇತಿ

ವಿದ್ಯಾಲಯದಲ್ಲಿ, ವಿಧಿಮಂಡಲದಲ್ಲಿ ಕಾರ್ಯಕಲಾಪಗಳನ್ನು ಎಸಗಬೇಕೆಂಬ ಮಹತ್ವಾಕಾಂಕ್ಷೆಯನ್ನು ಹೊಂದಿದವರಿಗಾಗಿ ಏರ್ಪಾಡನ್ನು ಮಾಡಬೇಕಿತ್ತು. ಈ ತರಬೇತಿ ವಿದ್ಯಾಲಯದ ಮುಖ್ಯಾಧ್ಯಾಪಕನ ಜಾಗೆಗಾಗಿ ಒಳ್ಳೆಯ ಯೋಗ್ಯತೆಯುಳ್ಳ ಒಬ್ಬ ವ್ಯಕ್ತಿಯೊಬ್ಬರು ಅವರಿಗೆ ಬೇಕಾಗಿದ್ದರು. ಶಿಕ್ಷಕನಾಗಬಯಸುವ ವ್ಯಕ್ತಿಯು ತನ್ನ ವಿಷಯದಲ್ಲಿ ಪರಿಣತನಾಗಿರಬೇಕು. ಅವನು ಉತ್ತಮವಾಗಿ ಉಪನ್ಯಾಸವನ್ನು ನೀಡಬಲ್ಲವನಾಗಿರಬೇಕು. ಅವನ ವ್ಯಕ್ತಿತ್ವವು ಆಕರ್ಷಕವಾಗಿರಬೇಕು. ವಿದ್ಯಾಲಯದ ಕೀರ್ತಿಯು ಬಹುಮಟ್ಟಿಗೆ ಶಿಕ್ಷಕನ ಕರ್ತತ್ವ ಹಾಗೂ ವಾಙ್ಮಿತೆಗಳ ಸಾಮರ್ಥಗಳನ್ನು ಅವಲಂಬಿಸಿರುತ್ತದೆ, ಎಂದು ವಿವರಿಸಿ ಅವರು ರೇಗೆ ಅವರಿಗೆ ಪತ್ರ ಬರೆದರು. ಆ ತರಬೇತಿ ವಿದ್ಯಾಲಯವು ಶಾ. ಶಂ. ರೇಗೆಯವರ ಮೇಲ್ವಿಚಾರಣೆಯಲ್ಲಿ ೧ ಜುಲೈ ೧೯೫೬ ರಿಂದ ಮಾರ್ಚ್ ೧೯೫೮ ರವರೆಗೆ ನಡೆಯಿತು. ಅದರ ಸಂಸ್ಥಾಪಕರು ಹಾಗೂ ಸಂಚಾಲಕರಾದ ಡಾ. ಅಂಬೇಡ್ಕರರು ಆ ವಿದ್ಯಾಲಯಕ್ಕೆ ಭೇಟಿ ಕೊಡಲು ಸಾಧ್ಯವಾಗದಿದ್ದುದು ದುರದೃಷ್ಟದ ಸಂಗತಿ. ಅವರ ಮೃತ್ಯುವಿನ ತರುವಾಯ ತಬ್ಬಲಿಯಾದ ಆ ಸಂಸ್ಥೆಯನ್ನು ಮುಚ್ಚಲಾಯಿತು. ಆ ವಿದ್ಯಾಲಯವು ತುಂಬ ಉಪಯುಕ್ತವೆನ್ನಿಸಬಹುದಿತ್ತು. ರಾಜಕೀಯಕ್ಕೆ ಸರಿಯಾದ ದಿಕ್ಕನ್ನು

* Dr. Babasaheb Ambedkar Writings and Speeces. Vol. 15. P. p. 188-192.



ತೋರಿಸಲೆಂದು ಅದು ಪ್ರಜ್ಞೆ ಹಾಗೂ ಯೋಗ್ಯತೆಯುಳ್ಳ ತಜ್ಞರು, ಕರ್ತತ್ವವಂತರಾದ ಶಾಸಕರು ಹಾಗೂ ಸಂಸದರನ್ನು ಅನುಕ್ರಮವಾಗಿ ವಿಧಿಮಂಡಲ ಹಾಗೂ ಲೋಕಸಭೆಗಳಿಗೆ ಪೂರೈಸಬಹುದಿತ್ತು!"೧

"ತನ್ನ ಸೌಮ್ಯ ಇಲ್ಲವೆ ತೀಕ್ಷ್ಣ,, ತರ್ಕಶುದ್ಧ ಹಾಗೂ ಮಾಹಿತಿಪೂರ್ಣವಾದ ಭಾಷಣದಿಂದ ಸಭಾಗೃಹವನ್ನು ಪ್ರಭಾವಿತಗೊಳಿಸಬಲ್ಲ ಸದಸ್ಯನೇ ಸಾಂಸದಿಕ ಸಂಸ್ಥೆಯಲ್ಲಿ ಯಶಸ್ವಿಯಾಗಬಲ್ಲನು." ಸಾಂಸದಿಕ ವಾಸ್ಮಿತೆಯನ್ನು ಕುರಿತಾದ ಈ ಉದ್ಗಾರವನ್ನು ಬಾಬಾಸಾಹೇಬರು ತಮ್ಮ ಕಾರ್ಯಕಾಲದಲ್ಲಿಯೇ ಅರ್ಥಪೂರ್ಣತೆಯಿಂದ ಮಾಡಿ ತೋರಿಸಿದರು. ಯಾವುದೇ ಸಾಂಸದಿಕ ಸಂಸ್ಥೆಗೆ ಚುನಾಯಿತನಾದ ಪ್ರತಿನಿಧಿಯು ಕಾರ್ಯದಕ್ಷನಾಗಿರಲೇ ಬೇಕು. ಅವನು, ಜನರನ್ನು ಪೀಡಿಸುವ ಪ್ರಶ್ನೆಗಳನ್ನು ಬಗೆಹರಿಸುವ ಸಾಮರ್ಥ ಹಾಗೂ ಯೋಚನಾಸಾಮರ್ಥವನ್ನು ಪಡೆದುಕೊಳ್ಳಲೇಬೇಕು. ಇದೇ ಅರಿವಿನಿಂದಾಗಿಯೇ ಡಾ. ಅಂಬೇಡ್ಕರರು ಸಾಂಸದಿಕ ತರಬೇತಿಯನ್ನು ನೀಡಲೆಂದು ತಮ್ಮ ಜೀವನದ ಕೊನೆಯ ಪರ್ವದಲ್ಲಿ ಒಂದು ಮಾದರಿ ಸಂಸ್ಥೆಯಾದ ಟ್ರೇನಿಂಗ್ ಸ್ಕೂಲ್ ಫಾರ್ ಎಂಟ್ರನ್ಸ್ ಟು ಪಾಲಿಟಿಕ್ಸ್ ವನ್ನು ಜುಲೈ ೧೯೫೬ರಲ್ಲಿ ಮುಂಬಯಿಯಲ್ಲಿ ಸ್ಥಾಪಿಸಿದ್ದರು. ಅಲ್ಲಿ ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಮುಂಗಡಪತ್ರ, ಕಾರ್ಮಿಕ ಸಂಘಟನೆ, ಸಾಂಸದಿಕ ಕಾರ್ಯಕಲಾಪಗಳ ನಿಬಂಧನೆ ಹಾಗೂ ಸಂಪ್ರದಾಯ, ಮೊದಲಾದ

ಆವಶ್ಯಕವಾದ ವಿಷಯಗಳ ಜೊತೆಗೆ ವಾಸ್ಮಿತೆಯ ಸಾಧನೆಗೆ ಪ್ರಾಮುಖ್ಯತೆಯನ್ನು ನೀಡಿದ್ದರು. ಸ್ವತಃ ಬಾಬಾಸಾಹೇಬರೇ ಈ ಸಂಸ್ಥೆಯ ಸಂಚಾಲಕರಾಗಿದ್ದರು. ಅವರು ವಾಗ್ಮಿತೆಯನ್ನು ಕುರಿತು ಡಿಸೆಂಬರ್ ೧೯೫೬ರಲ್ಲಿ ಒಂದು ಉಪನ್ಯಾಸವನ್ನು ನೀಡಲು ತೀರ್ಮಾನಿಸಿದ್ದರು. ದುರದೃಷ್ಟದಿಂದಾಗಿ ಅಕಸ್ಮಾತ್ತಾಗಿ ಆದ ಅವರ ಪರಿನಿರ್ವಾಣದಿಂದಾಗಿ ಈ ಸಂಸ್ಥೆ ಹಾಗೂ ಕುತೂಹಲಿಗಳಾದ ಅದರ ವಿದ್ಯಾರ್ಥಿಗಳು ಪ್ರಭಾವಿಯಾದ ಒಬ್ಬ ವಾಗ್ಮಿಯ ಮಾರ್ಗದರ್ಶನಕ್ಕೆ ಎರವಾದರು."೨

೧ : ಕೀರ, ಪು. ೫೧೧, ೫೧೨.

೨ : ರೇಗೆ, ಪು. ೮೦-೮೧.

## ೧೧೭. ಪರಮಪೂಜ್ಯ ಡಾ. ಬಾಬಾಸಾಹೇಬ ಅಂಬೇಡಕರರ ಕ್ರಾಂತಿಯ ದಿಶಾದರ್ಶಕ ಸೂತ್ರಗಳು

**ಡಾ. ಬಾಬಾಸಾಹೇಬ ಅಂಬೇಡಕರರ ಗ್ರಂಥಾಲಯದಲ್ಲಿದ್ದ ಘೋಷಣೆಯ ವಾಕ್ಯಗಳು –** "(೧) ಮಾತಿನಲಿ ಜಾಣ್ಮೆ,

ಯೋಚನೆಯಲಿ ನಿಷ್ಠೆ,

ನಡತೆಯಲಿ ಶೀಲಗಳು

ಇದ್ದರೆ ಭಾರತವು ಶ್ರೇಷ್ಠವಾಗಬಲ್ಲುದು.

(೨) ನಿನಗೆ ಮನುಷ್ಯನಾಗ ಬೇಕೆಂದಿದ್ದರೆ.

ನೀನು ನಿನ್ನೊಂದಿಗೆ ಕಠೋರ ಶಿಸ್ತಿನಿಂದ ನಡೆದುಕೊಳ್ಳಬೇಕು.

(೩) ಸತ್ಯವನ್ನು ಸತ್ಯವೆಂದೇ ಗುರುತಿಸಿ,

ಅಸತ್ಯವನ್ನು ಅಸತ್ಯವೆಂದೇ ಗುರುತಿಸಿ,

(೪) ಧರ್ಮವು ಮನುಷ್ಯನಿಗಾಗಿ ಇದೆ, ಮನುಷ್ಯನು ಧರ್ಮಕ್ಕಾಗಿ ಅಲ್ಲ.

**" ಡಾ. ಬಾಬಾಸಾಹೇಬ ಅಂಬೇಡಕರರು ತಮ್ಮ ಗ್ರಂಥದಲ್ಲಿ ಉದಾಹರಿಸಿದ ಇಂಗ್ಲಿಷ್ ವಚನಗಳ ಮರಾಠಿಯ (ಕನ್ನಡದ) ಅನುವಾದ –**

(೧) ನೀವು ಎಷ್ಟು ಅಂತರವನ್ನು ಕ್ರಮಿಸಿ ಮುಂದಕ್ಕೆ ಹೋದಿರೆಂಬುದು ಕಡಿಮೆ

ಮಹತ್ವದ್ದು. ನೀವು ಸರಿಯಾದ ದಿಕ್ಕಿನಲ್ಲಿ ಸಾಗಿದರೇ, ಎನ್ನುವುದು ಹೆಚ್ಚು ಮಹತ್ವದ್ದು.

**- ಟಾಲ್‌ಸ್ಟಾಯ್**

(೨) ನೀವು ನಮ್ಮ ಒಡೆಯರಾಗುವುದು ನಿಮ್ಮ ಹಿತದ್ದಿರಬಹುದು,

ಆದರೆ ನಾವು ನಿಮ್ಮ ಗುಲಾಮರಾಗುವುದು ನಮ್ಮ ಹಿತದ್ದಾಗಲು ಹೇಗೆ ಸಾಧ್ಯ?

**- ಥುಸಿಡಾಯಸ್**

(೩)ವಿವೇಚನೆಯನ್ನು ಮಾಡದವನು ಹಟಮಾರಿ.

ವಿವೇಚನೆಯನ್ನು ಮಾಡಲು ಬಾರದವನು ಮೂರ್ಖನು

ವಿವೇಚನೆಯನ್ನು ಮಾಡುವ ಸಾಹಸವನ್ನು ಮಾಡದವನು ಗುಲಾಮನು.

**ಡ್ರಮಂಡ್"೨೨**

೧ : ಸಮಗ್ರ ಅಂಬೇಡಕರ ಚರಿತ್ರ - ಬಿ. ಸಿ. ಕಾಂಬಳೆ, ಖಂಡ ೧೦, ಪು. ೧೭-೧೮.

೨ : ಸಮಗ್ರ ಅಂಬೇಡಕರ ಚರಿತ್ರೆ - ಬಿ, ಸಿ, ಕಾಂಬಳೆ, ಖಂಡ ೩.

## ಪರಿಶಿಷ್ಟಗಳು

## ಪರಿಶಿಷ್ಟ-೧

### ಬ್ಯಾ, ಜಯಕರ ಅವರ ಭಾಷಣ

ಹಿಂದಿ ರಾಷ್ಟ್ರೀಯ ಸಾಮಾಜಿಕ ಪರಿಷತ್ತಿನ ಅಧ್ಯಕ್ಷರಾದ ಬ್ಯಾ. ಜಯಕರರು ಮಾಡಿದ ಭಾಷಣದ ಸಂಕ್ಷಿಪ್ತ ರೂಪವನ್ನು ಕೆಳಗೆ ಕೊಡಲಾಗಿದೆ.

### ಸುಧಾರಣೆಯ ಇತಿಹಾಸ

ಒಂದು ಕಾಲಕ್ಕೆ ಸಾಮಾಜಿಕ ಸುಧಾರಣೆಯ ಚಳುವಳಿಯನ್ನು ಮಾಡುವುದು ತುಂಬ ಕಷ್ಟದ ಕೆಲಸವಾಗಿತ್ತು. ಅದರಲ್ಲಿ ಭಾಗವಹಿಸುವವರು ಪುರಾಣಮತವಾದಿಗಳಿಂದ ಚಿತ್ರಹಿಂಸೆ ಹಾಗೂ ಅಪಹಾಸ್ಯಗಳನ್ನು ಸಹಿಸಿಕೊಳ್ಳಬೇಕಿತ್ತು. ಆಗ ಸಾಮಾಜಿಕ ಪರಿಷತ್ತಿಗಾಗಿ ರಾಷ್ಟ್ರೀಯ ಸಭೆಯ ಮಂಟಪವು ಸಿಕ್ಕುವುದೂ ಕಷ್ಟಸಾಧ್ಯವಿತ್ತು. ಆದರೆ ಈಗ ಆ ಕಾಲ

ಉಳಿದಿಲ್ಲ. ರಾಜಕೀಯ ಸುಧಾರಣೆ ಮೊದಲೋ, ಸಾಮಾಜಿಕ ಸುಧಾರಣೆ ಮೊದಲೋ, ಎನ್ನುವ ವಾದವೂ ಹಿಂದೆ ಬಿದ್ದಿದೆ. ಎರಡೂ ಬಗೆಯ ಸುಧಾರಣೆಗಳು ಒಂದೇ ಕಾಲಕ್ಕೆ ನಡೆಯುತ್ತಿರಬೇಕೆಂಬ ತತ್ತ್ವ ವು ಎಲ್ಲರಿಗೂ ಮನದಟ್ಟಾಗಿದೆ.

**ಹಿಂದಕ್ಕೆ ಹಾಗೂ ಇಂದು**

ಸುಧಾರಣೆಯನ್ನು ಕುರಿತಾದ ಆದ್ಯ ಸುಧಾರಕರ ಯತ್ನವು ಮೂಲಗಾಮಿಯಾಗಿರಲಿಲ್ಲ. ಅವರ ದೃಷ್ಟಿಯು ಸ್ತ್ರೀಯರ ಪುನರ್ವಿವಾಹ, ವರದಕ್ಷಿಣೆ, ಶಿಕ್ಷಣ, ಮೊದಲಾದ ಪ್ರಶ್ನೆಗಳಾಚೆಗೆ ತಲುಪಲಿಲ್ಲ. ಆದರೆ ಇಂದು ನಡೆದಿರುವ ಸುಧಾರಣೆಯ ಚಳುವಳಿಯ ಹರಹು ತುಂಬ ದೊಡ್ಡದು. ಸಾಮಾಜಿಕ ವ್ಯವಹಾರದಲ್ಲಿ ಆಮೂಲಾಗ್ರವಾದ ಕ್ರಾಂತಿಯನ್ನು ಉಂಟುಮಾಡುವುದು ಅದರ ಗುರಿಯಾಗಿದೆ. ಅಸ್ಪೃಶ್ಯರು ಹಾಗೂ ಬ್ರಾಹ್ಮಣೇತರರ ಚಳುವಳಿಯತ್ತ ನೋಡಿದರೆ ಈ ಸಂಗತಿಯು ನಮ್ಮ ಗಮನಕ್ಕೆ ಬಂದೀತು. ಈ ವರ್ಗಗಳು ಸಾಮಾಜಿಕ ಸಮತೆಗಾಗಿ ಹೋರಾಡುತ್ತಿವೆ. ಈ ಚಳುವಳಿಗಳು ಸಮತೆಗೆ ಮಾರಕವೆನ್ನಿಸಿದ ಧಾರ್ಮಿಕ ಕಟ್ಟಳೆಗಳೆಲ್ಲವುಗಳ ವಿರುದ್ಧ ಪ್ರತಿಭಟನೆಗಳನ್ನು ಕೈಕೊಳ್ಳುತ್ತಿವೆ.

**ರಾಜಕೀಯ ಹಕ್ಕು ಹಾಗೂ ಸಾಮಾಜಿಕ ಸಮತೆ**

ಸಾಮಾಜಿಕ ಸಮತೆಯ ಈ ಚಳುವಳಿಯು ರಾಜಕೀಯ ಪ್ರಗತಿಯಿಂದಾಗಿ ಇಂದಿನ ಸ್ವರೂಪಕ್ಕೆ ಬಂದು ತಲುಪಿದೆ. ಹಿಂದೂಸ್ಥಾನದಲ್ಲಿ ಪ್ರಾತಿನಿಧಿಕ ಸಂಸ್ಥೆಗಳ ಪ್ರವೇಶವಾದ ಕಾರಣ ವ್ಯಕ್ತಿಗಳ ಮಟ್ಟವು ಮೇಲಕ್ಕೇರಿತು. ಅದರಿಂದಾಗಿ ಸಾಮಾಜಿಕ ಸಮತೆಯ ಬೇಡಿಕೆ ಶುರುವಾಯಿತು. ಜಾತಿಭೇದದ ಬಂಧನಗಳು ಅಸಹ್ಯವೆನ್ನಿಸುವುದೂ ಕೂಡ ಅದು ಅಪರಿಹಾರ್ಯವೇ ಆಗಿದ್ದಿತು. ಜಾತಿಭೇದದ ಉತ್ಪತ್ತಿ



ಹಾಗೂ ಪ್ರಾಚೀನ ಕಾಲದಲ್ಲಿ ಅವುಗಳ ಉಪಯುಕ್ತತೆ ಏನಿದ್ದಿತೋ, ಇರಲಿ. ಆದರೆ ಇಂದು ಜಾತಿಭೇದವು ನಮ್ಮ ರಾಜಕೀಯ ಪ್ರಗತಿಯ ದಾರಿಯಲ್ಲಿ ಒಂದು ವಿಘ್ನವಾಗಿ ಕುಳಿತಿದೆ. ಜಾತಿಗಳು ಪರಸ್ಪರರೊಡನೆ ಪ್ರೀತಿಯಿಂದ ನಡೆದುಕೊಳ್ಳಬೇಕು, ಎನ್ನುವ ಹೇಳಿಕೆಗೆ ಯಾರೂ ಬೆಲೆ ಕೊಡುತ್ತಿಲ್ಲ. ಜಾತಿಭೇದವು ಪೂರ್ತಿ ನಾಶ ಹೊಂದಬೇಕು,

ವ್ಯಕ್ತಿಸಮತೆಯು ಪ್ರಸ್ಥಾಪಿತವಾಗಬೇಕೆಂಬ ಅಭಿಪ್ರಾಯವು ಜಾರಿಯಲ್ಲಿದೆ. ಸಾಮಾಜಿಕ ಸಮತೆಗಾಗಿ ಸತ್ಯಾಗ್ರಹವನ್ನು ಕೂಡ ಮಾಡುವ ಸಿದ್ಧತೆಯು ಶೂದ್ರಾತಿಶೂದ್ರರೆಂದು ಪರಿಗಣಿಸಲಾದ ಸಮುದಾಯದಲ್ಲೂ ಕಂಡುಬರುತ್ತಿದೆ. ಈ ದಿಕ್ಕಿನಲ್ಲಿ ಶುದ್ಧಿ ಸಂಘಟನೆಯ ಚಳುವಳಿಗಳ ಅನುಕೂಲ ಪರಿಣಾಮ ಆಗುತ್ತಿದೆ. ಪುರಾಣಮತವಾದಿಗಳು ಈ ಚಳುವಳಿಗಳನ್ನು ನಡೆಯಿಸುತ್ತಿದ್ದರೂ ಅವುಗಳ ಪರಿಣಾಮ ಹೊಸಮತಗಳಿಗೆ ಚಾಲನೆ ನೀಡುವತ್ತ ಆಗುತ್ತಿದೆ.

## ಸರಕಾರ ಮತ್ತು ಸಮಾಜ ಸುಧಾರಣೆ

ಜನರ ಸಾಮಾಜಿಕ ದೃಷ್ಟಿಕೋನದಲ್ಲಿ ಈ ಬಗೆಯಾಗಿ ಕ್ರಾಂತಿಯಾಗುತ್ತಿರುವಾಗ ಈ ಸರಕಾರ ಮಾತ್ರ ಹಳೆಯದಕ್ಕೇನೇ ಅಂಟಿಕೊಂಡು ಕುಳಿತಿದೆ. ಸಾಮಾಜಿಕ ಸುಧಾರಣೆಗಾಗಿ ಕಾನೂನು ಮಾಡಿದರೆ ಜನಾಭಿಪ್ರಾಯ ಕೆರಳೀತೆಂದು ಸರಕಾರದ ಸನಾತನ ಆಕ್ಷೇಪ. ಆದರೆ ಈ ಆಕ್ಷೇಪವೆಂದರೆ ಕೇವಲ ಅಪ್ರಾಮಾಣಿಕತೆಯೇ ಸರಿ. ಏಕೆಂದರೆ, ಸರಕಾರವು ಜನರ ಅಭಿಪ್ರಾಯ ಕೆರಳಿ ಕಲ್ಲೋಲವಾಗುವಂತಹ ಹಲವಾರು ಕಾನೂನುಗಳನ್ನು ಪಾಸು ಮಾಡಿದೆ. ಆದರೆ ಯಾವಾಗ? ಸರಕಾರವು ತೊಂದರೆಯಲ್ಲಿರುವಾಗ! ಸಾಮಾಜಿಕ ಸುಧಾರಣೆಯ ಪ್ರಶ್ನೆಯು ಕೌನ್ಸಿಲ್ ಎದುರಿಗೆ ಬಂದಾಗ ಮಾತ್ರ ಈ ಸರಕಾರ ತಟಸ್ಥವಾಗಿ ಉಳಿಯುತ್ತದೆ. ಸರಕಾರವು ಜನರಲ್ಲಿ ಹೆಚ್ಚಿನ ಭಿನ್ನಾಭಿಪ್ರಾಯವಿಲ್ಲದ ಕಾನೂನುಗಳಿಗೂ ಎಂದೂ ಬೆಂಬಲವನ್ನು ಕೊಟ್ಟಿಲ್ಲ, ಎಂಬ ಅನುಭವವಿದೆ. ಇತರ ದೇಶಗಳಲ್ಲಿ ಸಾಮಾಜಿಕ ಸುಧಾರಣೆಯು ಸರಕಾರಿ ಕಾನೂನುನಿಂದಲೇ ಆಗುತ್ತದೆ. ಆದರೆ ಈ ದೇಶದ ಸರಕಾರವು ಈ ಬಗೆಗೆ ಶುದ್ಧ ಮಡಿವಂತಿಕೆಯದಾಗಿದೆ. ತಾನು ಪರಕೀಯ ಎಂಬ ಭಾವನೆಯಿಂದ ಅದು ನಡೆದುಕೊಳ್ಳುತ್ತದೆ. ಅದರ ಮನದಲ್ಲಿರುವ ಪರಕೀಯತೆಯಿಂದಾಗಿ ಜನರು ಹಾಗೂ ಸರಕಾರಗಳ ನಡುವಿನ ತಾನು ಪರರೆಂಬ ಭಾವವು ಹೆಚ್ಚು ದೃಢವಾಗುತ್ತಿದ್ದು ಅದು ಸರಕಾರಕ್ಕೆ ಘಾತಕವಾದದ್ದು.

## ಸ್ತ್ರೀಯರ ಚಳುವಳಿ

ಪ್ರಾಚೀನ ಕಾಲದಲ್ಲಿ ನಮ್ಮಲ್ಲಿ ಸ್ತ್ರೀಯರ ಮಟ್ಟವು ಮೇಲಿನದಾಗಿತ್ತು. ಅವರಿಗೆ ಸ್ವಾತಂತ್ರ್ಯವಿತ್ತು. ಆಗ ಬಾಲ್ಯವಿವಾಹದ ಪದ್ಧತಿ ಇರಲಿಲ್ಲ. ಸ್ತ್ರೀಯ ಮನಸ್ಸಿನಲ್ಲಿ ತಾನು ಅವಿವಾಹಿತಳಾಗಿ ಉಳಿಯಬೇಕೆಂದಿದ್ದರೆ ಅವಳು ಹಾಗೆ ಇರಬಹುದಿತ್ತು. ಅವರಿಗೆ ಬಹಳಷ್ಟು ಆರ್ಥಿಕ ಹಕ್ಕುಗಳೂ ಇದ್ದವು. ಸ್ವಂತಕ್ಕೆ ಎಸ್ಟೇಟನ್ನು ಕೊಂಡುಕೊಳ್ಳಲು ಅವರಿಗೆ ಯಾವುದೇ ತಡೆ ಇರಲಿಲ್ಲ. ತಂದೆಯ ಎಸ್ಟೇಟಿನ ಮೇಲೆ ಮಗಳಿಗೂ ಹಕ್ಕು ಇದ್ದಿತು. ಆದರೆ ಕಾಲಾಂತರದಲ್ಲಿ ಈ ಪರಿಸ್ಥಿತಿಯು ನಾಶ ಹೊಂದಿ ಸ್ತ್ರೀಯರು ಪುರುಷರ ಗಲಾಮರಾದರು. ಅವರ ಧಾರ್ಮಿಕ ಹಕ್ಕುಗಳು ಇಲ್ಲವಾದವು. ಎಸ್ಟೇಟಿನ ಮೇಲಿನ ಅವರ ಹಕ್ಕನ್ನು ಪೂರ್ತಿ ಕಿತ್ತು ಹಾಕಲಾಯಿತು. ಬಾಲವಿವಾಹ ಪದ್ಧತಿಯಿಂದಂತೂ ದೈಹಿಕ ಹಾಗೂ

ಮಾನಸಿಕ ದೃಷ್ಟಿಯಿಂದ ಸ್ತ್ರೀಯರ ಪ್ರಾಸವು ಭಯಂಕರವಾಗಿ ನಡೆಯಿತು. ಇತ್ತೀಚೆಗೆ ಸ್ತ್ರೀಯರು ಇವೆಲ್ಲ ರೂಢಿಗಳ ವಿರುದ್ಧ ಚಳುವಳಿಗಳನ್ನು ಮಾಡುತ್ತಿರುವರು. ವಿಧವೆಗೆ ಗಂಡನ



ಎಸ್ಟೇಟಿನ ವಾರಸು ಸಿಗಬೇಕು. ಮಗಳಿಗೆ ತಂದೆಯ ಎಸ್ಟೇಟು ಸಿಗಬೇಕು. ಹುಡುಗಿಯ ಮದುವೆಯ ವಯಸ್ಸಿನ ಮಿತಿಯನ್ನು ಹದಿನಾರು ವರ್ಷಕ್ಕೆ ಏರಿಸಬೇಕು, ವಿವಾಹ-ವಿಚ್ಛೇದನೆ ರೂಢಿಗೆ ಬರಬೇಕು, ಎಂಬವು ಸ್ತ್ರೀಯರ ಬೇಡಿಕೆಗಳಾಗಿವೆ. ಹಾಗೆಯೇ ವರನ ಆಯ್ಕೆಯ ಕ್ಷೇತ್ರವು ಈಗಿನದಕ್ಕಿಂತ ಹೆಚ್ಚು ವಿಸ್ತ್ರತವಾಗಬಾರದೇಕೆ, ಎಂದು ಇಂದಿನ ಸ್ತ್ರೀಯರು ಪ್ರಶ್ನೆ ಕೇಳುತ್ತಿರುವರು. ಸದ್ಯದ ವರಪರೀಕ್ಷೆಯ ಪದ್ಧತಿಯು ದೋಷಾರ್ಹವಾಗಿದೆ. ಅದರಲ್ಲೂ ಯಾವ ಸಮಾಜದ ಕ್ಷೇತ್ರವು ಚಿಕ್ಕದಾಗಿದೆಯೋ, ಯಾವ ಸಮುದಾಯದಲ್ಲಿ ತೀರ ಕಡಿಮೆ ಜನ ಗಂಡಸರಿರುವರೋ ಅಂಥ ಸಮುದಾಯದ ಸ್ತ್ರೀಯರು ಪಾಡು ಪಡುತ್ತಿರುವರು. ಉದಾಹರಣೆಗೆ, ಮುಂಬಯಿಯ ಪಾಠಾರೆ ಪ್ರಭು ಸಮುದಾಯವನ್ನು ತೆಗೆದುಕೊಳ್ಳಿ, ಈ ಸಮುದಾಯದ ಸ್ತ್ರೀ-ಪುರುಷರ ಪ್ರಮಾಣವು ಸುಮಾರಾಗಿ ಒಂದೇ ಆಗಿದೆ. ಅವರ ಒಟ್ಟು ಸಂಖ್ಯೆ ನಾಲ್ಕರಿಂದ ಐದು ಸಾವಿರಕ್ಕಿಂತ ಕಡಿಮೆ ಇದೆ. ಈ ಕ್ಷೇತ್ರವು ಇಷ್ಟೊಂದು ಚಿಕ್ಕದಾದುದರಿಂದ ಈ ಸಮುದಾಂತದ ಹೆಣ್ಣು ಮಕ್ಕಳು ಹತ್ತಿರದ ನೆಂಟರನ್ನು ಮದುವೆಯಾಗಬೇಕಾಗುತ್ತದೆ! ಇದರಿಂದಾಗಿ ಆ ಜಾತಿಯು ಇಳಿಮುಖವಾಗುತ್ತದೆ. ಹೀಗಾಗಿ ಸದ್ಯಕ್ಕೆ ನಮ್ಮ ವಿವಾಹ ಸಂಸ್ಥೆಯಲ್ಲಿ ಸುಧಾರಣೆಯನ್ನು ಮಾಡುವ ಆವಶ್ಯಕತೆ ದೊಡ್ಡ ಪ್ರಮಾಣದಲ್ಲಿ ಕಂಡುಬರತೊಡಗಿದೆ. ಸಮಾನವಾದ ರೂಢಿಪರಂಪರೆ, ಅಭ್ಯಾಸಗಳುಳ್ಳ, ತಮ್ಮ ಜಾತಿಯ ಹೊರಗಿನ ಹೆಣ್ಣು ಇಲ್ಲವೆ ಗಂಡನ್ನು ಮದುವೆಯಾಗಲು ಸ್ವಾತಂತ್ರವಿರುವ ರಿಯಾಯತಿ ದೊರೆಯಬೇಕಾದುದು ಆವಶ್ಯಕವಿದ್ದು ಅದಕ್ಕೆ ತಕ್ಕಂತೆ ಕಾನೂನುಗಳನ್ನು ಬದಲಾಯಿಸಬೇಕಿದೆ. ಮುಂಬಯಿ ಹೈಕೋರ್ಟಿನ ಒಬ್ಬ ಮಾಜಿ ಜಡ್ಡರಾದ ನಾ. ಶಹಾ ಅವರು ಒಂದು ಮೊಕದ್ದಮೆಯಲ್ಲಿ, ಉಚ್ಚ ವರ್ಣಿಯ ಪುರುಷನು ಕನಿಷ್ಠ ಜಾತಿಯ ಹುಡುಗಿಯನ್ನು ಮದುವೆಯಾದುದನ್ನು ಮುಂಬಯಿ ಇಲಾಖೆಯಲ್ಲಿ ಕಾನೂನುಬದ್ಧವೆಂದು ಮನ್ನಿಸಬೇಕೆಂದು ತೀರ್ಪು ನೀಡಿ ಸುಧಾರಣೆಯನ್ನು ಎತ್ತಿ ಹಿಡಿದಿರುವರು. ಆದರೆ ಸ್ತ್ರೀ ಸಮುದಾಯಕ್ಕೆ ಇಷ್ಟರಿಂದಲೇ ಸಮಾಧಾನವಾಗಲಿಲ್ಲ. ಪ್ರತಿಲೋಮ ಪದ್ಧತಿಯ ಮದುವೆಗಳನ್ನು ಸಿಂಧುವೆಂದು ಮನ್ನಿಸತಕ್ಕದ್ದು, ತಮ್ಮ ಮನಸ್ಸಿಗೊಪ್ಪುವ ವರನನ್ನು ಆಯ್ಕೆ ಮಾಡುವ ಅಧಿಕಾರ ತಮಗಿರಬೇಕು, ಜಾತಿಗೀತೆಗಳ ಸಂಕುಚಿತ ಪ್ರಶ್ನೆಗಳು ತಮಗೆ ಅಡ್ಡ ಬರಬಾರದು, ಎನ್ನುವುದಷ್ಟೇ ಸ್ತ್ರೀಯರ ಬೇಡಿಕೆಯಾಗಿರುತ್ತದೆ,

“ಬಹಿಷ್ಕೃತ ಭಾರತ', ತಾ, ೪ ಜನೆವರಿ ೧೯೨೯.

## ಪರಿಶಿಷ್ಟ-೨

### ಕೊಂಕಣ ಪ್ರಾಂತದ ಪೂರ್ವಾಸ್ಪೃಶ್ಯ ಶಿಕ್ಷಣ ಪರಿಷತ್ತು, ಮಾಲವಣ

ಕೊಂಕಣ ಪ್ರಾಂತದ ಎಲ್ಲ ಪೂರ್ವಾಸ್ಪೃಶ್ಯರ ಪರಿಷತ್ತು ಬೇಸಿಗೆಯ ರಜೆಯ ಕಾಲದಲ್ಲಿ ಹೆಸರಾಂತ ನಾಯಕರಾದ ಡಾ. ಬಾಬಾಸಾಹೇಬ ಅಂಬೇಡಕರರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಹೀಗಾಗಿ ಎಲ್ಲ ಪೂರ್ವಾಸ್ಪೃಶ್ಯ ಬಂಧುಭಗಿನಿಯರು ಸ್ವಾಗತ ಮಂಡಳದ ಸದಸ್ಯರಾಗಿ ಪರಿಷತ್ತನ್ನು ಯಶಸ್ವಿಯನ್ನಾಗಿ ಮಾಡಬೇಕಾದ ಕಾಯಕಕ್ಕೆ ನೆರವಾಗಬೇಕೆಂದು ಅವರಿಗೆ ವಿನಂತಿ.

### ಸ್ವಾಗತ ಮಂಡಳ

ಅಧ್ಯಕ್ಷರು :- ಡಾ. ರಾಜಾರಾಮ ಕೇಶವ ಗವಂಡೆ, ಮಾಲವಣ.

ಉಪಾಧ್ಯಕ್ಷರು :- ಶ್ರೀ ಗಂಗಾಧರ ಕೃಷ್ಣಾಜೀ ರಾಉಳ, ನಾಮದೇವ ದಾಸ ವೇರಲಕರ, ವೇರಲಿ, ತ, ಮಾಲವಣ, ಸಾವಳಾ ಗೇನೂಜೀ ಯೇಡಗಾವಕರ (ಕಲಲ ಹವಾಲದಾರ), ಮುಕುಂದ ಧಾಕೂ ಚವ್ಹಾಣ ಲೋ, ಬೋ, ಮೆಂಬರ್ ತಾ. ಮಾಲವಣ, ಭಾಗುಜೀ ಗಂಗಾರಾಮ ಪೋಇಪಕರ ಮು, ಪೋಇಪ.

ಎ. ಸೆಕ್ರೆಟರಿ :- ಲಕ್ಷ್ಮಣ ಸಗುಣ ಚವ್ಹಾಣ.

ಅ. ಸೆಕ್ರೆಟರೀಸ್ :- ಶ್ರೀ ಭಿವಾ ಸೋಮಾ ಜಾಧವ, ಕಣಕವಲೀ ತಾ. ದೇವಗಡ, ಗೋವಿಂದ ಯೇಸೂ ಮಾಲವಣಕರ ನಾಂದಗಾವ ತಾ. ದೇವಗಡ, ಶಂಕರ ಲಕ್ಷ್ಮಣ ಭಿಲವಡಕರ ಪುರಳ ತಾ. ದೇವಗಡ, ಕೃಷ್ಣಾ ಧಾಕೂ ಚವ್ಹಾಣ ಪರುಳೇ ಪೇಠಾ ವೆಂಗುರ್ಲೆ.

ಕೋಶಾಧ್ಯಕ್ಷ :- ಕೃಷ್ಣಾ ಬಾಬಾಜೀ ಚವ್ಹಾಣ.

ಅ. ಕೋಶಾಧ್ಯಕ್ಷ:- ಖಾಪರನಾರಕ ಬಾಬೂ ಜಾಧವ, ಕಾಂದಳಗಾವ ತಾ. ಮಾಲವಣ. ತಾ, ಕ, - ಎಲ್ಲ ಪತ್ರವ್ಯವಹಾರವನ್ನು ಸೆಕ್ರೆಟರಿಯ ಹೆಸರಿಗೆ ಮಾಡಬೇಕು. ಪರಿಷತ್ತಿನ ಖಚಿತ ತಾರೀಕನ್ನು ತರುವಾಯದಲ್ಲಿ ತಿಳಿಸಲಾಗುವುದು.

“ಬಹಿಷ್ಕೃತ ಭಾರತ', ತಾ, ೪ ಜನೆವರಿ ೧೯೨೯.

**ಪರಿಶಿಷ್ಟ-೩**

**ಅಖಿಲ ಹಿಂದೂಸ್ಥಾನದೊಳಗಿನ ಅಸ್ಪೃಶ್ಯರು ಮತ್ತು ಅವರ**
**ನಾಯಕರಾದ ಡಾ. ಬಾಬಾ ಸಾಹೇಬ ಅಂಬೇಡಕರ ಇವರಿಗೆ, ಕ್ರಿಸ್ತ**
**ಜಯಂತಿಯ ಸಂದೇಶ**

(ಶ್ರೀ, ಪ್ರಭಾಕರ ನಾ. ಉಬಾಳೇ ಇವರಿಂದ)

ಬಂಧುಜನರೇ, ಇಂದು ನಮ್ಮ ಸಮುದಾಯದ ದುರ್ದೆಸೆ ನಡೆದಿರುವುದನ್ನು ಕಂಡು ನಮ್ಮ ಅಂತಃಕರಣದಲ್ಲಿ ತುಂಬ ದುಃಖವಾಗುತ್ತಿದೆ. ಆದುದರಿಂದ ಕ್ರಿಸ್ತ ಜಯಂತಿಯ ಈ ಸಂದೇಶವನ್ನು ತಮ್ಮಲ್ಲಿಗೆ ಕಳಿಸುತ್ತಿರುವೆವು, ಈ

ಸಂದೇಶದಿಂದಾಗಿ ನಮ್ಮ ಸಮುದಾಯದ ಕಲ್ಯಾಣವಾಗಿದೆ, ಎಂದು ನಮಗೆ ಖಂಡಿತವಾಗಿ ಅನ್ನಿಸುತ್ತಿದೆ. ನಿಮ್ಮದೂ (ಕಲ್ಯಾಣ) ಆದೀತೆಂಬಲ್ಲಿ ನಮಗೆ ಎಳ್ಳಷ್ಟೂ ಸಂದೇಹವಿಲ್ಲ. ನಿರ್ವಿಕಾರ ಮನದಿಂದ, ತೆರೆದ ಅಂತಃಕರಣದಿಂದ ಮತ್ತು ದುರಾಗ್ರಹವನ್ನು ಬಿಟ್ಟು ಹಾಗೂ ನಿಮ್ಮೆಲ್ಲ ಸಮುದಾಯದ ದಯನೀಯ ಪರಿಸ್ಥಿತಿಯನ್ನು ಗಮನಕ್ಕೆ ತಂದುಕೊಂಡು ನೀವು ಈ ಸಂದೇಶವನ್ನು ಕುರಿತು ಯೋಚಿಸುವಿರೆಂದು ಆಶಿಸುತ್ತೇವೆ.

ಧರ್ಮವು ನಮ್ಮ ಇಷ್ಟದ ವಿಷಯವಾದ್ದರಿಂದ ನಮ್ಮಲ್ಲಿ ಅದರತ್ತ ಸೆಳೆತ ಇರುವುದು ಸಹಜ. ಹಾಗಿದೆ ಎಂದೇ ಇಂದು ನೀವು ಹಿಂದೂ ಧರ್ಮಿಯರನ್ನು ಧಾರ್ಮಿಕ ಮತ್ತು ಸಾಮಾಜಿಕ ಹಕ್ಕುಗಳಿಗಾಗಿ ಕೇಳುತ್ತಿರುವಿರಿ. ಆದರೆ ನೀವು ಯಾರನ್ನು ಯಾವ ಹಕ್ಕುಗಳಿಗಾಗಿ ಕೇಳುತ್ತಿರುವಿರೋ ಅವರು ನಿಮಗೆ ಅವನ್ನು ಕೊಡಲು ಸಿದ್ಧರಿಲ್ಲ. ಇದಕ್ಕೆ ಕಾರಣವೆಂದರೆ ಧರ್ಮದಿಂದ ನೀವು ಹಿಂದೂಗಳಲ್ಲ. ನೀವು ಹಿಂದುಗಳಾಗಿದ್ದರೆ ಅವರು ಅದೆಂದಿಗೋ ನಿಮ್ಮನ್ನು ತಮ್ಮವರನ್ನಾಗಿ ಮಾಡಿಕೊಂಡು ನೀವು ಕೇಳುತ್ತಿರುವ ಹಕ್ಕುಗಳನ್ನು ನಿಮಗೆ ಕೊಟ್ಟುಬಿಡುತ್ತಿದ್ದರು. ಹೀಗಾಗಿ, ನೀವು ಹಿಂದೂಗಳಲ್ಲಿ ಮಾಡುತ್ತಿರುವ ಬೇಡಿಕೆ ಪೂರ್ತಿ ತಪ್ಪು ಹಾಗೂ ವ್ಯರ್ಥ. ಆದುದರಿಂದ ನಿಷ್ಕಾರಣವಾಗಿ ಹಿಂದೂಗಳ ಕಾಲುಗಳನ್ನು ಹಿಡಿದುಕೊಂಡು ನೀವು ನಿಮ್ಮ ಮನುಷ್ಯತ್ವಕ್ಕೆ ಕುಂದು ತಂದುಕೊಳ್ಳಬೇಡಿ. ಆದರೆ ನಿಮ್ಮ ಸಾಮಾಜಿಕ ಸುಧಾರಣೆ ಹಾಗೂ ಉನ್ನತಿಯತ್ತ ಗಮನವನ್ನು ನೀಡಿ, ಅಂಥ ಯತ್ನಗಳನ್ನೂ ಕೂಡ ಯಾವ ಕ್ರೈಸ್ತ ಅಂಗ್ಲರ ರಾಜ್ಯದಲ್ಲಿ ಮಾಡಲಾಗುತ್ತಿವೆಯೋ ಅಂಥವರ ಧರ್ಮದ ಬಗೆಗೆ ಯೋಚಿಸಿ, ಕ್ರೈಸ್ತ ಆಂಗ್ಲರ ರಾಜ್ಯವು ಹಿಂದೂಸ್ಥಾನದಲ್ಲಿ ಇಲ್ಲದೆ ಹೋಗಿದ್ದರೆ ಇಂದು ಡಾ. ಅಂಬೇಡಕರರಂಥ ವಿದ್ವಾಂಸರೂ ಅಸ್ಪೃಶ್ಯರೆಂಬ ಕಾರಣದಿಂದ ಪ್ರಪಂಚದೆದುರು ಬರಲು ಅಸಾಧ್ಯವೇ ಆಗುತ್ತಿತ್ತು, ಎಂಬ ಸಂಗತಿ ಸಮಸ್ತ ಅಸ್ಪೃಶ್ಯರಿಗೆ ಒಪ್ಪಿಗೆಯಾದೀತು. ಆದರೆ ಆಶ್ಚರ್ಯದ ಸಂಗತಿ ಎಂದರೆ, ಯಾವ ಧರ್ಮದ ಜನರು ನಮ್ಮ ಅಸ್ಪೃಶ್ಯ ಬಂಧುಗಳನ್ನು ತಮ್ಮ ಹತ್ತಿರಕ್ಕೆ ಬರಮಾಡಿಕೊಳ್ಳಲು ಬಯಸುವುದಿಲ್ಲವೋ, ನಾಲ್ಕು ಮಾರು ದೂರದಲ್ಲಿ ಇರಬಯಸುತ್ತಾರೆಯೋ, ಅವರನ್ನು ನಾಯಿ ಬೆಕ್ಕುಗಳಿಗಿಂತಲೂ ಕೀಳೆಂದು ಬಗೆದು ದೂರ ಇರಿಸುವರೋ ಅಂಥವರ ಹಿಂದೆ

ಹೋಗಲು ಇಚ್ಚಿಸುತ್ತಾರೆ. ಅವರ ಈ ಅಜ್ಞಾನ ಹಾಗೂ ಸ್ವಾಭಿಮಾನಶೂನ್ಯತೆಯನ್ನು ಕಂಡು ಯಾರಿಗಾದರೂ ಅವರಮರುಕ ವೇ ಬರುವುದು.

**ಪಾಪಮುಕ್ತಿಯನ್ನು ಕುರಿತ ವಿಚಾರ**

ಧರ್ಮವನ್ನು ಕುರಿತು ಮಾತನಾಡತೊಡಗಿದ ಬಳಿಕ ಯೋಚಿಸಬೇಕಿದ್ದ ತುಂಬ ಮಹತ್ವದ ಸಂಗತಿ, ಎಂದರೆ ನಮಗೆ ಪಾಪಮುಕ್ತಿ ಅಥವಾ ಮೋಕ್ಷವು ಹೇಗೆ ಪ್ರಾಪ್ತವಾದೀತೆಂಬುದು. ಈ ಯೋಚನೆಯನ್ನು ಮಾಡುವ ಮುನ್ನ ಮನುಷ್ಯನಿಗೆ ತನ್ನ ಪಾತಕದ ಬಗೆಗಿನ ಅರಿವು ಇರುವುದು ಆಗತಕ್ಕದ್ದು. ಅದಾಯಿತೆಂದರೆ ಸ್ವಾಭಾವಿಕವಾಗಿಯೇ ಅವನು ಆ ಪಾತಕದಿಂದ ಬಿಡುಗಡೆಯನ್ನು ಹೊಂದಲು ಯೋಚಿಸುವನು. ಹೀಗೆ ಯೋಚಿಸುತ್ತಿರುವಾಗ ಯಾವ ಸಂಗತಿಯತ್ತ ಗಮನವನ್ನು ನೀಡಬೇಕೆಂಬುದನ್ನು ಕುರಿತು ಒಬ್ಬ ಕವಿಯು ಕೆಳಗಿನ ಕವಿತೆಯಲ್ಲಿ ಹೇಳಿರುವನು :-

ರಕ್ಷಣೆ ಎಂದರೇನು? ಏಕೆ?
ಸತ್ಯ ಯಾವುದರಿಂದ ಆದೀತು?
ರಕ್ಷಕನು ಹೇಗಿರಬೇಕು? ಯಾರಿರಬೇಕು?
ಎಂಬುದನ್ನು ಕುರಿತೇ ಯೋಚಿಸಿ.

ಗದ್ಯಭಾಷೆಯಲ್ಲಿ ಹೇಳುವುದಾದರೆ ರಕ್ಷಣೆ ಅಥವಾ ಪಾಪಮುಕ್ತಿ ಎಂದರೇನು, ಅದು ಯಾರಿಂದ ಸಿಕ್ಕೀತು, ಮುಕ್ತಿದಾತನು ಹೇಗಿರಬೇಕು, ಎಂಬ ಸಂಗತಿಗಳನ್ನು ಕುರಿತು ಯೋಚಿಸಬೇಕು. ಆದರೆ ಅಸ್ಪೃಶ್ಯ ಸಮುದಾಯವು ಸಂಪ್ರದಾಯಕ್ಕೆ ಕಟ್ಟುಬಿದ್ದ ಕಾರಣ ಅದು ಆತ್ಮೋನ್ನತಿಯನ್ನು ಕುರಿತು ಯೋಚಿಸುತ್ತಿಲ್ಲ. ಎಲ್ಲಿಯವರೆಗೆ ಅಸ್ಪೃಶ್ಯ ಬಾಂಧವರಲ್ಲಿ ಪ್ರಪಂಚದೆದುರು ಬರಬೇಕೆನ್ನುವ ಆಸೆಯು ಎಚ್ಚೆತ್ತುಕೊಳ್ಳುವುದಿಲ್ಲವೋ, ಎಲ್ಲಿಯವರೆಗೆ ಸತ್ತುಹೋದ ಅವರ ಅಭಿಮಾನವು ಎಚ್ಚೆತ್ತುಕೊಳ್ಳುವುದಿಲ್ಲವೋ, ಅಲ್ಲಿಯವರೆಗೆ ಅವರಲ್ಲಿ ವಿಚಾರಕ್ರಾಂತಿ ಉಂಟಾಗಲು ಸಾಧ್ಯವೇ ಇಲ್ಲ. ಹೀಗಾಗಿ, ಎದ್ದೇಳಿ, ಎಚ್ಚೆತ್ತುಕೊಳ್ಳಿ, ಪಾಪಮುಕ್ತಿ, ಸಾಮಾಜಿಕ ಹಾಗೂ ಧಾರ್ಮಿಕ ಉನ್ನತಿಯನ್ನು ಕುರಿತು ಕ್ರಿಸ್ತ ಜಯಂತಿಯ ಈ ಮಂಗಲ ಸಮಯದಲ್ಲಿ ಯೋಚಿಸಿ, ಎಂಬ ನಮ್ಮ ಸಂದೇಶ ಅವರಿಗೆ.

**ಪಾಪಮುಕ್ತಿಯ ಸಾಧನ**

ಈ ಪ್ರಪಂಚದಲ್ಲಿ ಯಾವುದೇ ವಸ್ತುವು ಸಾಧನೆಯ ಹೊರತು ಸಿಕ್ಕಲಾರದು. ಇದೇ ನಿಯಮ ಪಾಪಮುಕ್ತಿಗೂ ಅನ್ವಯಿಸುತ್ತದೆ. ಪಾಪಮುಕ್ತರಾಗಬೇಕೆನ್ನುವ ಉತ್ಕಂಠತೆಯು ಅಂಟಿಕೊಂಡಿರುವವರು ಅದಕ್ಕಾಗಿ ಬಗೆ ಬಗೆಯ ಸಾಧನಗಳನ್ನು ಬಳಸಿಕೊಂಡಿರುವರು, ಬಳಸಿಕೊಳ್ಳುತ್ತಿರುವರು. ಜನರು ಕಲ್ಲಿನ ವಿಗ್ರಹವನ್ನು ತಯಾರಿಸಿ ಅದನ್ನು ಪೂಜಿಸುವುದು, ಅದಕ್ಕೆ ಪಂಚಪಕ್ವಾನ್ನಗಳ ನೈವೇದ್ಯವನ್ನು ತೋರಿಸುವುದು, ಅದರೆದುರಿಗೆ ಕುರಿ-ಕೋಳಿಗಳನ್ನು ಬಲಿ ಕೊಡುವುದು, ಗುರುವನ್ನು ಮಾಡಿಕೊಂಡು ಅವನ ಸೇವೆಯನ್ನು ಮಾಡುವುದು, ಮೊದಲಾದ ಹಲವು ಬಗೆಯ ಸಾಧನಗಳನ್ನು ಬಳಸಿಕೊಂಡು, ಪಾಪಮುಕ್ತಿಯನ್ನು ಪಡೆಯಲು ಯತ್ನಿಸುತ್ತಾರೆ. ತಮ್ಮ ಗುರಿಗಳನ್ನು ಸಿದ್ಧಿಸಿಕೊಳ್ಳಲೆಂದು ಮುಕ್ತಿಸಾಧಕರು ತಮ್ಮ ಕೈಗೆತ್ತಿಕೊಂಡಿರುವ ಇಂಥ ಸಾಧನಗಳಿಂದ ಅವರ ಗುರಿ ಕೈಗೂಡುವುದೋ, ಇಲ್ಲವೋ,



ಎಂಬುದನ್ನು ಕುರಿತು ಅವರು ಯೋಚಿಸಬೇಕು. **ಭಾವವಿದ್ದಲ್ಲಿ ದೇವ, ಎಂಬ ಭೋಳೇತನದ ಕಲ್ಪನೆಗೆ ಯಾವ ಅರ್ಥವೂ ಇಲ್ಲ.** ವಿಗ್ರಹವೆಂಬ ಸಾಧನವನ್ನು ಕುರಿತು ಯೋಚಿಸುವುದಾದರೆ, ವಿಗ್ರಹವೆಂದರೆ ಮನುಷ್ಯನು ವಿಶಿಷ್ಟವಾದ ಅಕಾರವನ್ನು ನೀಡಿದ ಒಂದು ನಿರ್ಜೀವವಾದ ಕಲ್ಲೆಂಬುದನ್ನು ಬೇರೆ ಹೇಳಬೇಕಿಲ್ಲ. ಅದರಲ್ಲಿ ದೇವತ್ವವಿರದು. ಕಣ್ಣು ಮುಚ್ಚಿಕೊಂಡು ವಿಗ್ರಹದೆದುರು ಕುಳಿತರೆ ಆ ಕಲ್ಲಿನ ವಿಗ್ರಹವೇ ಕಣ್ಣೆದುರು ಬಂದೀತು; ಈಶ್ವರನ ಸತ್ಯಸ್ವರೂಪವು ಗಮನಕ್ಕೆ ಬರಲು ಸಾಧ್ಯವಿಲ್ಲ. ಹೀಗಾಗಿ ಪಾಪಮುಕ್ತಿ ಲಭಿಸುವುದಂತೂ ದೂರ. ತೀರ್ಥಕ್ಷೇತ್ರಗಳಲ್ಲಿ ಮಾಡಿದ ಸ್ನಾನದ್ದೂ ಇದೇ ಗತಿ, ಸ್ನಾನ ಮಾಡುವುದರಿಂದ ಭ್ರಷ್ಟವಾದ ಅಂತಃಕರಣ ಸ್ವಚ್ಛವಾಗಲಾರದು. ಕುರಿ-ಕೋಳಿಗಳ ಬಲಿದಾನವನ್ನು ಕುರಿತು ಯೋಚಿಸಲಾಗಿ ಪಾಪ, ಆ ಪ್ರಾಣಿಗಳನ್ನು ಕೊಂದು ಪಾಪಗಳಿಗೆ ಕ್ಷಮೆ ದೊರೆಯಲು ಹೇಗೆ ಸಾಧ್ಯ, ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. ಪಾಪಮುಕ್ತಿಗಾಗಿ ಸಂತರ ಹಾಗೂ ತತ್ತ್ವಜ್ಞಾನಿಗಳ ಶಿಷ್ಯತ್ವವನ್ನು ಸ್ವೀಕರಿಸುವುದರಲ್ಲೂ ಸೂಚ್ಯತೆ ಇಲ್ಲ. ಏಕೆಂದರೆ, ಅವರು ಗೂಢ ಹಾಗೂ ಗಹನವಾದ ಧರ್ಮತತ್ತ್ವಗಳನ್ನು ಕುರಿತು ಚರ್ಚಿಸಿದ್ದರೂ ಅವರು ತಮ್ಮ ತಮ್ಮ ಜ್ಞಾನವನ್ನು ಅಭ್ಯಸಿಸುವವರಿಗೆ ಪಾಪಮುಕ್ತಿಯನ್ನು ನೀಡುವೆವೆಂದು ಹೇಳಿಲ್ಲ. ಸ್ವಲ್ಪದರಲ್ಲಿ ಹೇಳಬೇಕೆಂದರೆ, ಜನರು ಪಾಪಮುಕ್ತಿಗಾಗಿ ಯಾವ ಸಾಧನಗಳನ್ನು ಬಳಸುವರೋ ಅವು ಒಂದಿಲ್ಲೊಂದು ಬಗೆಯಲ್ಲಿ ಟೊಳ್ಳೆನ್ನಿಸುತ್ತಿವೆ. ಮುಕ್ತಿಯನ್ನು ದೊರಕಿಸಿ ಕೊಡುವೆನೆಂದು ಮಾತು ಕೊಡುವಂಥ ಒಂದು ಸಾಧನೆ ಬೇಕು.

**ಏಕೇಶ್ವರಿ ಮತದತ್ತ ವಾಲಬೇಡಿ**

ಶುದ್ಧಾದ್ವೈತವಾದಿ ಅಥವಾ ಏಕೇಶ್ವರಿ ಎಂಬ ಪಂಥವಿದೆ. ಪಾಪಮುಕ್ತಿ ಅಥವಾ ದೇವಪ್ರಾಪ್ತಿಗಾಗಿ ಸಾಧನಗಳ ಆವಶ್ಯಕತೆ ಇಲ್ಲ; ದೇವನು ದಯಾಳುವು ಹಾಗೂ ಪ್ರೀತಿಯುಳ್ಳವನು, ಅವನೆದುರು ತಮ್ಮ ಪಾತಕಗಳ ಬಗೆಗೆ ಪಶ್ಚಾತ್ತಾಪವನ್ನು ವ್ಯಕ್ತಪಡಿಸಿದರೆ ಅವನು ಪಾತಕಗಳನ್ನು ಕ್ಷಮಿಸುವನಲ್ಲದೆ ಪಾತಕಿಯ ಅಂತಃಕರಣಕ್ಕೆ ಸಮಾಧಾನವನ್ನು ನೀಡುವನೆಂಬುದು ಅವರ ಹೇಳಿಕೆಯಾಗಿದೆ. ಆದರೆ ಅವರ ಈ ಹೇಳಿಕೆಯು ವ್ಯವಹಾರವನ್ನು ಅನುಸರಿಸಿಲ್ಲದ ಕಾರಣ ಅದು ಅಂತಃಕರಣಕ್ಕೆ ಮನದಟ್ಟಾಗದು. ಸಾಧನದ ಹೊರತಾಗಿ ಯಾವುದೇ ವ್ಯವಹಾರವು ನಡೆಯದೆಂದ ಬಳಿಕ ಸಾಧನವಿಲ್ಲದೆ ದೇವಪ್ರಾಪ್ತಿಯಾಗಲಿ ಇಲ್ಲವೆ ಪಾಪಮುಕ್ತಿಯಾದರೂ ಹೇಗೆ ಸಾಧ್ಯ? ಕೆಲವರು ಈ ಸಾಧನವನ್ನು ಮಧ್ಯಸ್ಥ ಅಥವಾ ಪ್ರತಿನಿಧಿ ಎನ್ನುತ್ತಾರೆ. ಈ ಸಾಧನಗಳಲ್ಲಿ ಕೆಲವನ್ನು ಕುರಿತು ಹಿಂದಕ್ಕೆ ವಿವೇಚಿಸಲಾಗಿದೆ. ಎಲ್ಲ ಧರ್ಮಗಳು ಈ ಮಧ್ಯಸ್ಥ ಇಲ್ಲವೆ ಪ್ರತಿನಿಧಿಯ ತತ್ತ್ವವನ್ನು ಒಪ್ಪಿಕೊಂಡಿವೆ! ಇಷ್ಟೇ ಅಲ್ಲದೆ ಕೆಲವು ಜನ ಶುದ್ಧಾದ್ವೈತವಾದಿಗಳೂ ಇದನ್ನು ಒಪ್ಪಿಕೊಳ್ಳಬೇಕಾಯಿತು. ಸರ್ ಫ್ರಾನ್ಸಿಸ್ ನ್ಯೂಪೋರ್ಟ್ ಎಂಬ ಒಬ್ಬ ಹೆಸರಾಂತ ಶುದ್ಧಾದೈತವಾದಿ ಇದ್ದನು. ಅವನು ಹಾಸಿಗೆ ಹಿಡಿದು ಬಿದ್ದುಕೊಂಡಾಗ ಹೀಗೆಂದನು : 'ನಾನು ಹಗಲಿರುಳು ದೇವನ ಕೋಪದ ಪರಿಣಾಮವನ್ನು ಅನುಭವಿಸುತ್ತಿರುವೆನು . . . . . ಚಿಕ್ಕಂದಿನಲ್ಲಿ ನನಗೆ ಉಳಿದವರಿಗಿಂತ ಹೆಚ್ಚು ಕ್ರಿಸ್ತ ಧರ್ಮದ ಶಿಕ್ಷಣ ಸಿಕ್ಕಿದ್ದರೂ ನಾನು ದಯೆಯ ಆತ್ಮದ (ಪವಿತ್ರ ಆತ್ಮದ) ಧಿಕ್ಕಾರವನ್ನು ಮಾಡಿದುದೇ ಇದಕ್ಕೆ ಕಾರಣವಿರಬಹುದು .....” ಏಕನಿಷ್ಠನಾದ ಈ ಶುದ್ಧಾದೈತವಾದಿಯು ಮಧ್ಯಸ್ಥನ ತತ್ವಕ್ಕೆ ಸೊಪ್ಪು ಹಾಕದೆ ಈಶ್ವರನೆದುರು ತನ್ನ ಪಾತಕದ ಬಗೆಗೆ ತೀವ್ರ ಪಶ್ಚಾತ್ತಾಪವನ್ನು ವ್ಯಕ್ತಪಡಿಸಿದ್ದನು. ಅಂದ

ಬಳಿಕ ತನ್ನ ಪಾತಕಕ್ಕಾಗಿ ಕ್ಷಮೆ ದೊರೆತು ಅವನ ಅಂತಃಕರಣಕ್ಕೆ ಸಮಾಧಾನ ಸಿಕ್ಕಲಿಲ್ಲವೇಕೆ? ಅವನ ಆತ್ಮ ಅಪಾರವಾಗಿ ತಳಮಳಿಸಿದ್ದೇಕೆ? ಇದಕ್ಕೆ ಇರುವ ಒಂದೇ ಕಾರಣವೆಂದರೆ ಮಧ್ಯಸ್ಥನ ಹೊರತು ತಾನು ಮಾಡಿದುದೆಲ್ಲ ವ್ಯರ್ಥವೆಂದು ಅವನಿಗೆ ಮನದಟ್ಟಾದುದು. ಹೀಗಾಗಿ ಇದರಿಂದ ಏಕೇಶ್ವರನ ಇಚ್ಛೆಯು ಅಗ್ರಾಹ್ಯವಾದುದೆಂಬುದು ಗಮನಕ್ಕೆ ಬರುವಂತಿದೆ.

**ಈಶ್ವರ ಹಾಗೂ ಮಾನವರ ಮಧ್ಯಸ್ಥನೆಂದರೆ ಏಸು ಕ್ರಿಸ್ತನು**

ಬೇರೆ ಬೇರೆ ಜನರು ಪಾಪಮುಕ್ತಿ ಹಾಗೂ ದೇವಪ್ರಾಪ್ತಿಯನ್ನು ಹೊಂದಲೆಂದು ಕೈಗೆತ್ತಿಕೊಳ್ಳುವ ಬಗೆಬಗೆಯ ಸಾಧನಗಳಿಂದ ಅವರ ಇಚ್ಛೆಯು ಪ್ರಾಪ್ತವಾಗಲಾರದೆನ್ನುವುದನ್ನು ಹಿಂದೆಯೇ ತೋರಿಸಲಾಗಿದೆ. ಹೀಗಿರುವುದರಿಂದಲೇ ಏಸು ಕ್ರಿಸ್ತನು ಜನರಿಗೆ ಈಶ್ವರಪ್ರಾಪ್ತಿಯನ್ನು ಮಾಡಿ ಕೊಡಲೆಂದು ಹಾಗೂ ಅವರ ಪಾತಕಗಳನ್ನು ಕ್ಷಮಿಸಲೆಂದು, ಅಂದರೆ ಅವರಿಗೆ ಪಾಪಮುಕ್ತಿಯನ್ನು ನೀಡಲೆಂದು ದೇಹವನ್ನು ಧರಿಸಿ ಪಾತಕಿಯಾದ ಈ ಪ್ರಪಂಚಕ್ಕೆ ಬಂದನು. ಬರುವಾಗ ಅವನು ಹೀಗೆಂದನು: "ಹೋಮ ಹಾಗೂ ಅರ್ಪಣೆಗಳ ಇಚ್ಛೆ ನಿನಗಿಲ್ಲ. ಅವುಗಳಿಂದ ನಿನಗೆ ಸಂತೋಷವಾಗಲಿಲ್ಲ. . . . . ನಾನು ನಿನ್ನಿಚ್ಛೆಯನ್ನು ಪೂರ್ತಿಗೊಳಿಸಲು ಬಂದಿದ್ದೇನೆ. ಇದೇ ವೇಳೆಗೆ ಸ್ವರ್ಗದಲ್ಲಿರುವ ದೂತರು ಹರ್ಷದಿಂದ ಹೀಗೆನ್ನತೊಡಗಿದರು : 'ಊರ್ಧ್ವ ಲೋಕದಲ್ಲಿ ದೇವತೆಗಳಿಗೆ ಹಾಗೂ ಪೃಥ್ವಿಯ ಮೇಲೆ ಮನುಷ್ಯರಿಗೆ ಶಾಂತಿ ಲಭಿಸಿದೆ. ಅವರ ಮೇಲೆ ಅವನ ಪ್ರಸಾದವಾಗಿದೆ." ಸ್ವತಃ ಏಸು ಕ್ರಿಸ್ತ ಹೀಗೆನ್ನುತ್ತಾನೆ : "ಪ್ರಭು ಪರಮೇಶ್ವರನ ಆತ್ಮವು ನನ್ನ ಮೇಲೆ ಬಂದಿದೆ. ಪರಮೇಶ್ವರನು ದೀನರಿಗೆ ಸುವಾರ್ತೆಯನ್ನು ಹೇಳಲೆಂದು ನನಗೆ ಅಭಿಷೇಕವನ್ನು ಮಾಡಿರುವನು. ಪತಿತರಿಗೆ ಮುಕ್ತಿಯನ್ನು ನೀಡಬೇಕು, ಸೆರೆಯಾಳುಗಳ ಬಿಡುಗಡೆಯನ್ನು ಮಾಡಬೇಕು ಹಾಗೂ ಶೋಕಗ್ರಸ್ತರಿಗೆ ಸಮಾಧಾನವನ್ನು ನೀಡಬೇಕೆಂದು ಅವನು ನನ್ನನ್ನು ಕಳಿಸಿರುವನು." ಪರಮೇಶ್ವರನು ಕ್ರಿಸ್ತನ ಬಗೆಗೆ ಹೀಗೆನ್ನುತ್ತಾನೆ : "ನೀನು ಯುಗಾನುಯುಗಗಳ ಕಾಲ (ನಾನು ಹಾಗೂ ಮಾನವರ ನಡುವೆ) ಮಧ್ಯಸ್ಥನಾಗಿರುವಿ." ಏಸುವಿನ ಒಬ್ಬ ಶಿಷ್ಯನು ಹೀಗೆನ್ನುತ್ತಾನೆ : "ನೋಡಿ ಪ್ರಪಂಚದ ಪಾಪಹರಣವನ್ನು ಮಾಡುವ ದೇವನ ಮರಿಯನ್ನು." ಎರಡನೆಯ ಶಿಷ್ಯ ಹೀಗೆನ್ನುತ್ತಾನೆ : "ಇಂಥ ಮಧ್ಯಸ್ಥನೇ ನಮಗೆ ಸೂಕ್ತನಾಗಿದ್ದನು." ಈ ಪುರಾವೆಯಿಂದ ಸಿದ್ಧವಾಗುವ ಸಂಗತಿ ಎಂದರೆ, ಏಸುವೇ ದೇವ ಹಾಗೂ ಮಾನವರ ನಡುವಿನ ಮಧ್ಯಸ್ಥನಿದ್ದು ಸ್ವತಃ ಪರಮೇಶ್ವರನೇ ಮಾನವನಿಗೆ ಪಾಪಮುಕ್ತಿ ಹಾಗೂ ಈಶ್ವರಪ್ರಾಪ್ತಿಯನ್ನು ಮಾಡಿ ಕೊಡಲೆಂದು ಅವನನ್ನು ಯೋಜಿಸಿರುವನು ಎಂಬುದು.

**ಅಸ್ಪೃಶ್ಯ ಬಾಂಧವರು ಏಸುವಿನ ಶಿಷ್ಯತ್ವವನ್ನು ಏಕೆ ಸ್ವೀಕರಿಸಬೇಕು?**

(೧) ಅವನು ಮಾನವ ಪ್ರಾಣಿ ಹಾಗೂ ಈಶ್ವರರ ನಡುವಿನ ಮಧ್ಯಸ್ಥನಿರುವನು.

(೨) ಅವನು ನೀಡಿದ ಶಿಕ್ಷಣವು ತುಂಬ ಉದಾತ್ತವಾದುದು. ಅವನ ವಿಶೇಷತೆ ಎಂದರೆ

ಅವನು ಜನರಿಗೆ ಕಲಿಸಿದಂತೆಯೇ ತಾನೂ ಆಚರಿಸುತ್ತಿದ್ದನು. "ಆಡಿದಂತೆ ನಡೆಯುವವ' ಎನ್ನುವುದು ಅವನ ಶೀಲದ ವೈಶಿಷ್ಟ್ಯವಾಗಿದೆ.

(೧) ಅವನು ಎಲ್ಲ ಮಾನವ ಪ್ರಾಣಿಗಳನ್ನು ಸರಿಸಮಾನರೆಂದು ಭಾವಿಸಿದ್ದು ಎಲ್ಲರೂ ಒಬ್ಬರನ್ನೊಬ್ಬರು ಪ್ರೀತಿಸಬೇಕೆಂದು ಒತ್ತಿ ಹೇಳಿರುವನು. ಇದೊಂದೇ ಅಂಶವು



ಎಲ್ಲ ಪಾಪಿ ಮಾನವರಿಗೆ ತುಂಬ ಲಾಭ ಹಾಗೂ ಮೌಲ್ಯದ್ದಾಗಿದೆ. ಹೀಗಾಗಿ ಅಸ್ಪೃಶ್ಯರಷ್ಟೇ ಅಲ್ಲದೆ ಇಡಿಯ ಪ್ರಪಂಚವೇ ಏಸುವಿನ ಶಿಷ್ಯತ್ವವನ್ನು ಏಕೆ ಸ್ವೀಕರಿಸಬೇಕು, ಎಂಬುದನ್ನು ತೋರಿಸುವಂಥದಾಗಿದೆ.

(೩) ನಾನು ಮಾನವನ ಮುಕ್ತಿದಾತನು, ಎಂದು ಅವನು ಇಡಿಯ ಪ್ರಪಂಚಕ್ಕೆ ಪ್ರಕಟವಾಗಿ ಘೋಷಿಸಿರುವನು. ನಾನು ಪಾಪಿಗಳನ್ನು ಕರೆಯಲು ಬಂದಿರುವೆನೆಂದು ಅವನು ಅನ್ನುತ್ತಾನೆ. ಎಲೈ ಕಷ್ಟಗಳಲ್ಲಿರುವ ಹಾಗೂ ಹೊರೆಯಡಿ ತೊಳಲುತ್ತಿರುವ ಜನರೇ, ನೀವೆಲ್ಲರೂ ನನ್ನ ಕಡೆಗೆ ಬನ್ನಿ, ಅಂದರೆ 'ನಾನು ನಿಮಗೆ ವಿಶ್ರಾಂತಿಯನ್ನು ಕೊಡುವೆ. ಪಾಪಗಳನ್ನು ಕ್ಷಮಿಸುವ ಹಕ್ಕು ನನಗಿದೆ." ಇನ್ನಷ್ಟು ಮುಂದೆ ಅವನು ಅನ್ನುತ್ತಾನೆ : "ನಾನು ಸ್ವರ್ಗದ ಬಾಗಿಲು, ನನ್ನಲ್ಲಿಗೆ ಬಾರದೆ ಯಾವನೂ ಸ್ವರ್ಗದ ರಾಜ್ಯದಲ್ಲಿ ಹೋಗಲಾರನು."

ಈ ಬಗೆಯಾಗಿ ಏಸುಕ್ರಿಸ್ತನು ಪಾಪ ಮುಕ್ತಿ ಹಾಗೂ ಈಶ್ವರಪ್ರಾಪ್ತಿಗಳನ್ನು ಈಡೇರಿಸುವಂಥವನು. ಅಸ್ಪೃಶ್ಯ ಬಂಧುಗಳೇ, ನೀವು ಪಾಪಮುಕ್ತಿ ಹಾಗೂ ಈಶ್ವರಪ್ರಾಪ್ತಿಗಾಗಿ ಕೈಯಲ್ಲಿ ಹಿಡಿದಿರುವ ಸಾಧನಗಳು ಪಾಪಮುಕ್ತಿಯನ್ನು ಮಾಡುವ ಮಾತು ಕೊಡುತ್ತಿರಲಿಲ್ಲವೆಂದ ಮೇಲೆ, ಅಲ್ಲದೆ ಈಶ್ವರನ ಪರಿಚಯವನ್ನೂ ಮಾಡಿಕೊಡದಿದ್ದರೆ ಕುರುಡು ನಂಬಿಕೆಯಿಂದ ಅವುಗಳನ್ನು ಹಿಂಬಾಲಿಸುತ್ತ ನಿಮ್ಮ ಆತ್ಮಗಳನ್ನು ನಾಶ ಪಡಿಸಿಕೊಳ್ಳಬೇಡಿ. ಅದಕ್ಕಿಂತ, "ಪಾಪಗಳನ್ನು ಕ್ಷಮಿಸುವ ಹಕ್ಕು ನನಗಿದೆ,'' ಎನ್ನುವ ಭರವಸೆಯನ್ನು ನೀಡುವ ಏಸುವಿನನ್ನು ಅರಿತು, ಗುರುತಿಸಿ ಅವನಲ್ಲಿಗೆ ಬನ್ನಿ, ಅವನ ಶಿಷ್ಯತ್ವವನ್ನು ಸ್ವೀಕರಿಸಿ, ಬೇರಾವ ಅವತಾರವೂ ಕ್ರಿಸ್ತನಂತೆ ಭರವಸೆಯನ್ನು ನೀಡುತ್ತಿದ್ದರೆ, ಮೊದಲಿಗೆ ಅವನ ಆಚರಣೆಯನ್ನು ನೋಡಿ, ಅವನ ಭರವಸೆಗಳು ಯಾವಯಾವವು ಎಂಬುದನ್ನು ಕುರಿತು ಚೆನ್ನಾಗಿ ಯೋಚಿಸಿ, ಆದರೆ

ಏಸುಕ್ರಿಸ್ತನ ಹಾಗೆ ಬೇರಾರೂ ಭರವಸೆಯನ್ನು ನೀಡಿಲ್ಲವೆಂದು ನಮಗೆ ಭರವಸೆಯಿದೆ. ಆದುದರಿಂದ ಏಸುಕ್ರಿಸ್ತನ ಜಯಂತಿಯ ನಿಮಿತ್ತವಾಗಿ ನಿಮ್ಮಲ್ಲಿಗೆ ಕಳಿಸಲಾದ ಈ ಸಂದೇಶವನ್ನು ಕುರಿತು ಸರಿಯಾಗಿ ಯೋಚಿಸಿ, ಎಂದು ವಿನಂತಿಸುತ್ತೇವೆ.

'ಬಹಿಷ್ಕೃತ ಭಾರತ', ತಾ. ೧೮ ಜನವರಿ ೧೯೨೯.

## ಪರಿಶಿಷ್ಟ-೪

## ಪುಣೆ ಜಿಲ್ಲಾ ಬೋರ್ಡ್ ಹಾಗೂ ಅಸ್ಪೃಶ್ಯ ಸಮುದಾಯ

ಸರಕಾರವು ಸುಧಾರಣೆಯ ಹೊಸ ಕಾನೂನಿನನ್ವಯ ಸ್ವರಾಜ್ಯದ ಸ್ವಲ್ಪ ಸ್ವಲ್ಪ ಭಾಗವನ್ನು ಜನತೆಗೆ ಒಪ್ಪಿಸಿ ಕೊಡಲು ತೀರ್ಮಾನಿಸಿ, ಅದರಲ್ಲಿ ತೀರ ಮಹತ್ವದ ಇಲಾಖೆಯಾದ ಶಿಕ್ಷಣ ಇಲಾಖೆಯನ್ನು ೪-೫ ವರ್ಷಗಳಲ್ಲಿ ಇಂದು ಡಿಸ್ಟಿಕ್ಸ್ ಬೋರ್ಡಿನ ಕೈಗೆ ನೀಡಿದೆ. ಈ ೪-೫ ವರ್ಷಗಳಲ್ಲಿ ಪುಣೆ ಬೋರ್ಡಿನ ಅಸ್ಪೃಶ್ಯ ಸಮುದಾಯವನ್ನು ಕುರಿತಾದ ಕೆಲಸದ ಮಾದರಿಯು (ಫಾರ್ಸು) ಕೆಳಗಿನಂತಿದೆ!

(೧) ಪುಣೆ ಜಿಲ್ಲಾ ಸ್ಕೂಲ್ ಬೋರ್ಡು ಫೆಬ್ರುವರಿ ೧೯೨೮ ರಲ್ಲಿ ಅಸ್ಪೃಶ್ಯ ಸಮುದಾಯದಬಗೆಗೆ ಜೀವಂತಿಕೆಯ ಸಹಾನುಭೂತಿಯನ್ನು ತೋರಿ ಒಂದು ಗೊತ್ತುವಳಿಯನ್ನು ಪಾಸ್ಮಾಡಿತು. ಅದು ಹೀಗಿದೆ :

"ಇ. ೫ ರಿಂದ ೭ ರವರೆಗಿನ ಪ್ರಾಥಮಿಕ ಶಿಕ್ಷಣಕ್ಕಾಗಿ ಜಿಲ್ಲೆಯಲ್ಲಿ ಒಂದು ಉಚಿತ ಬೋರ್ಡಿಂಗ್‌ನ್ನು ಶುರು ಮಾಡತಕ್ಕದ್ದು." ಈ ಗೊತ್ತುವಳಿಯು ಅಂಗೀಕೃತವಾಗಿ ಡಿ. ಬೋರ್ಡಿಗೆ ಹೋಯಿತು. ಅಲ್ಲಿಯವರು ಖರ್ಚಿನ ಬಾಬತ್ತನ್ನು ಮುಂದೆ ಮಾಡಿ, ಸರಕಾರವು ಖರ್ಚನ್ನು ನೀಡುವಂತಿದ್ದರೆ ನಮ್ಮ ಸಮ್ಮತಿ ಇದೆಯೆಂದು ತೀರ್ಮಾನಿಸಿದರು. ಅವರು ಇಂಥ ಆಶಯದ ಒಂದು ಗೊತ್ತುವಳಿಯನ್ನು ತಯಾರಿಸಿ ಸರಕಾರದತ್ತ ಕಳಿಸಿದರು.

ಪ್ರಾಥಮಿಕ ಶಿಕ್ಷಣವು ಪೂರ್ತಿಯಾಗಿ ಉಚಿತವಾಗಬೇಕೆಂದು ಹಿಂದಕ್ಕೆ ಸರಕಾರವನ್ನು ಟೀಕಿಸಲಾಗುತ್ತಿತ್ತು. ಈಗ ಸರಕಾರ ಆ ಕಾಟದಿಂದ ಬಿಡುಗಡೆ ಹೊಂದಿದೆ. ಹೀಗಿರುವಲ್ಲಿ ಈ ಬೇಡಿಕೆ. ಅಂದ ಬಳಿಕ ಸರಕಾರವು ಅದಕ್ಕೆ ನೇತ್ಯಾತ್ಮಕ ಉತ್ತರವನ್ನೇ ನೀಡುವುದು !! ಆ ಬಗೆಯಾಗಿ ಸರಕಾರವು ಇಂಥದೇ ಉತ್ತರವನ್ನು ನೀಡಿತು. ಈಗ ನಮ್ಮ ಹಿತಚಿಂತಕ ಡಿಸ್ಟ್ರಿಕ್ಟ್ ಬೋರ್ಡು ಕೃತಕೃತ್ಯವಾಯಿತು!! ಒಂದು ಸಲಕ್ಕೆ ಅಸ್ಪೃಶ್ಯರ ಬೇಡಿಕೆಯಿಂದ ಪಾರಾಯಿತು !!!

(೨) ಮೊದಲನೆಯ ಈ ಅಂಕ ಮುಗಿಯುತ್ತಿರುವಂತೆಯೇ ಡಿ. ಸ್ಕೂಲ್ ಬೋರ್ಡು ಇಷ್ಟರಲ್ಲಿಯೇ ಎರಡನೆಯ ಪ್ರಸಾದವನ್ನು ಈ ರೀತಿಯಾಗಿ ಅಸ್ಪೃಶ್ಯ ಸಮುದಾಯಕ್ಕೆ ಹಂಚಿತು : * ಅಸ್ಪೃಶ್ಯರ ಶಾಲೆಯ ತಪಾಸಣೆಯನ್ನು ಮಾಡಲು ಅಸ್ಪೃಶ್ಯ ಸೂಪರವೈಸರ್‌ನ ನೇಮಕ ಹಾಗೂ ಅವನ ವೆಚ್ಚವನ್ನು ಸರಕಾರವೇ ನೋಡಿಕೊಳ್ಳಬೇಕು. ಇನ್ನು ಈ ಗೊತ್ತುವಳಿಯು ಅಂಗೀಕೃತವಾಗಿ ಮುಂದಿನ ತಿಂಗಳು ಸರಕಾರಕ್ಕೆ ಹೋಗುವುದು. ಸರಕಾರದಿಂದ ನೇತ್ಯಾತ್ಮಕ ಉತ್ತರ ಬರುತ್ತಲೇ ಎರಡನೆಯ ಅಂಕ ಮುಗಿಯಲಿದೆ ! ಈ ಮೇಲಿನ ಸಂಗತಿಯನ್ನು ಸಹಾನುಭೂತಿ ಎನ್ನಬೇಕೋ, ತಮಾಷೆ ಎನ್ನಬೇಕೋ, ಎನ್ನುವುದನ್ನು ಡಿ. ಬೋರ್ಡೆ ತೀರ್ಮಾನಿಸಲಿ.

ಬೋರ್ಡಿಗೆ ಅಸ್ಪೃಶ್ಯ ಸಮುದಾಯದ ಬಗೆಗೆ ನಿಜವಾದ ಕಳಕಳಿ ಇದ್ದರೆ ಮೇಲಿನ ಎರಡೂ

ಯೋಜನೆಗಳು ಅಸ್ಪೃಶ್ಯ ಸಮುದಾಯಕ್ಕೆ ತುಂಬ ಹಿತದ್ದಾಗಿವೆ. ಅಸ್ಪೃಶ್ಯ ಸಮಾಜದ ಸೂಪರವೈಸರ್‌ನ ಹೊರತು ಬೇರಾವ ಸ್ಪೃಶ್ಯ ಸೂಪರವೈಸರ್‌ನೂ ಅಸ್ಪೃಶ್ಯ ಸಮುದಾಯದಲ್ಲಿ ಬೆರೆತು ಅವರ ಮನಸ್ಸುಗಳನ್ನು ಶಿಕ್ಷಣದತ್ತ ಒಲಿಸಲಾರನು, ಎಂಬುದನ್ನು ಡಿ. ಬೋರ್ಡ್ ಅರಿತೇ ಇದೆ. ಹೀಗಾಗಿ ಡಿ. ಬೋರ್ಡು ಮೇಲುಮೇಲೆ ಸಹಾನುಭೂತಿಯನ್ನು ತೋರದೆ ಅಸ್ಪೃಶ್ಯರ ಸುಧಾರಣೆಯ ಯತ್ನವನ್ನು ಕೃತಿಯಲ್ಲಿ ತೋರೀತೆಂದು ಆಶಿಸುತ್ತೇವೆ.

(೧) ರಂಭಾಜೀ ರಾಘುಜೀ ಬಗಾರೇ

ಊರು : ಗಾಜೂಬಾರ್ (ಬಾರಾಮತೀ)

ಜಿ. ಪುಣೆ

. (೨) ಶಂಕರ ದಗಡೂ ರೌಂಡೇ

ಊರು : ಬೇಸರ, ಜಿ. ಪುಣೆ.

"ಬಹಿಷ್ಕೃತ ಭಾರತ', ತಾ, ೧ ಫೆಬ್ರುವರಿ ೧೯೨೯.

**ಪರಿಶಿಷ್ಟ-೫**

**|| ಸತ್ಯಮೇವ ಜಯತೇ ||**

**ಹಿಂದೂ ಸಮುದಾಯಕ್ಕೆ ಜಾಹೀರು ವಿನಂತಿ**

**ನಾವು ೫೦೦೦ ಜನರು ಹಿಂದೂ ಧರ್ಮವನ್ನು ತೊರೆವೆವು?**

ಸದ್ಯಕ್ಕೆ ಹಿಂದೂ ಧರ್ಮದಲ್ಲಿ ರೂಢಿಯಲ್ಲಿದ್ದ ಜಾತಿ ಭೇದದಿಂದಾಗಿ ಹಿಂದೂ ಧರ್ಮದ ಬೆಂಬಲವು ವಿಭಜಿಸಲ್ಪಟ್ಟಿದೆ.

ಕಳೆದ ಸಾವಿರಾರು ವರ್ಷಗಳಿಂದ ಹಿಂದೂ ಧರ್ಮದಲ್ಲಿ ಇದ್ದ ಕಾರಣ ಹೊಲೆಯ ಮಾದಿಗ ಮೊದಲಾದ ನಮ್ಮ ಅಸ್ಪೃಶ್ಯರು ಪ್ರತಿ ಗಳಿಗೆಗೆ ಅವಮಾನಕ್ಕೆ ಈಡಾಗುತ್ತಿರುವರು. ಮೂರ್ತಿಭಂಜಕರು ಹಾಗೂ ಗೋಮಾಂಸ ಭಕ್ಷಕರಾದ ಪರಧರ್ಮಿಯ ಮುಸಲ್ಮಾನರು ಅಥವಾ ಕ್ರೈಸ್ತರು ಹಿಂದೂಗಳ ದೇವಾಲಯಗಳಿಗೆ ಹೋಗಬಹುದು. ಆದರೆ ಹಿಂದೂ

ದೇವತೆಗಳನ್ನು ಪೂಜ್ಯರೆಂದು ಭಾವಿಸುವ ಗೋಭಕ್ತರಾದ ನಮ್ಮ ಅಸ್ಪೃಶ್ಯರು ದೇವಾಲಯದ ಮೆಟ್ಟಿಲುಗಳನ್ನು ಏರುವಂತಿಲ್ಲ.

ನಿಜ ಹೇಳಬೇಕೆಂದರೆ ನಾವಿರುವ ಹಿಂದೂ ಧರ್ಮದ ಜನರೇ ನಮ್ಮನ್ನು ದ್ವೇಷಿಸುತ್ತಿದ್ದು ಅವರೇ ನಮ್ಮ ನಿಜವಾದ ವೈರಿಗಳು, ಜಳಗಾವ ಊರಿನ ಒಬ್ಬ ಹೊಲೆಯನು ಆರು ತಿಂಗಳ ಕೆಳಗೆ ಮತಾಂತರಗೊಂಡು ಮುಸಲ್ಮಾನನಾದನು. ಮೊದಲಿನ ಆ ಪಿರಾಜಿಯು ಈಗ ಶೇಖ ಪಿರನ್ ಆಗಿ ಕಟುಕತನದ ಕಸಬಿನಲ್ಲಿ ಇರುವನು. ಅವನು ಬುಟ್ಟಿಯಲ್ಲಿ ಗೋಮಾಂಸವನ್ನು ಇರಿಸಿಕೊಂದು ಹಿಂದೂಗಳೆದುರು ಅದನ್ನು ಮಾರುತ್ತ ದಿನಾಲು ಬೀದಿ ಬೀದಿ ಅಲೆಯುತ್ತಾನೆ. ಅದೇ ಶೇಖ ಪಿರನ್ ಹಿಂದೂಗಳ ಬಾವಿಯ ನೀರನ್ನು ರಾಜಾರೋಷವಾಗಿ ಸೇದುತ್ತಾನೆ. ಹಿಂದೂಗಳು ಅವನನ್ನು ತಡೆಯುವುದಿಲ್ಲ. ನಾವು ನೂರಾರು ಜನ ಹೊಲೆಯ, ಮಾದಿಗರು ಮಾನಭಾವ ಹಾಗೂ ವೈಷ್ಣವ ಪಂಥದವರಿದ್ದು ಹಸುವಿನದಷ್ಟೇ ಏಕೆ, ಯಾವುದೇ ಬಗೆಯ ಮಾಂಸವನ್ನೂ ತಿನ್ನುವುದಿಲ್ಲ. ಆದರೂ ಹಿಂದೂಗಳು ನಮ್ಮನ್ನು ಸ್ಪರ್ಶಿಸಲು ಸಿದ್ಧರಿಲ್ಲ. ನಮ್ಮ ಸ್ಪರ್ಶವಾದರೆ ಹಿಂದೂಗಳ ಧರ್ಮ ಹಾಗೂ ದೇವರುಗಳು ಜಾತಿಗೆಡುತ್ತಾರೆ. ಹೀಗಾಗಿ ಇಂಥ ಜಾತಿಗೆಟ್ಟ ಧರ್ಮ ಹಾಗೂ `ಜಾತಿಗೆಟ್ಟ ದೇವರನ್ನು ನಮ್ಮವರೆಂದು ಒಪ್ಪಿಕೊಳ್ಳಲು ನಮಗೆ ನಾಚಿಕೆ ಎನ್ನಿಸುತ್ತದೆ. ನಾವು ಯಾವ ಹಿಂದೂ ಧರ್ಮದಲ್ಲಿ ಇರುವೆವೋ ಆ ಧರ್ಮವು ಇಷ್ಟು ದಿನಗಳಲ್ಲಿ ನಮಗಾಗಿ ಏನು ಮಾಡಿದೆ? ಎಂಬುದು ಹಿಂದೂ ಧರ್ಮದ ನಾಯಕರಿಗೆ ನಮ್ಮ ಜಾಹೀರು ಪ್ರಶ್ನೆಯಾಗಿದೆ.

ಹೊಲೆಯ ಮಾದಿಗರಷ್ಟೇ ಏಕೆ, ಉಳಿದವರಾರೂ ಇಂಥ ಉಚ್ಚ ಧರ್ಮದಲ್ಲಿ ಇರಕೂಡದು, ಎಂಬುದು ಎಲ್ಲರಿಗೆ ನಮ್ಮ ಸೂಚನೆ. ಈ ನೋಟೀಸಿನ ಮೂಲಕ ನಾವು ಸಮಸ್ತ ಹಿಂದೂ ಜನರಿಗೆ

ಒಂದು ಜಾಹೀರು ಸೂಚನೆಯನ್ನು ನೀಡಬಯಸುತ್ತೇವೆ. ಅದೆಂದರೆ, ೧ ಜೂನ್ ೧೯೨೯ ರ ಒಳಗಾಗಿ ನೀವು ನಮ್ಮ ಸ್ಪರ್ಶಾಸ್ಪರ್ಶ ಭೇದವನ್ನು ತೊಲಗಿಸದಿದ್ದರೆ, ನಿಮ್ಮ ಸಮುದಾಯದಲ್ಲಿ ನಮಗೆ ಕಡಿಮೆ ಎಂದರೆ ಮುಸಲ್ಮಾನರಷ್ಟಾದರೂ ಸಾಮಾಜಿಕ ಸ್ಥಾನವನ್ನು ನಮಗೆ ನೀಡದಿದ್ದರೆ; ತಾ. ೨ ಜೂನ್ ತಿಂಗಳು ೧೯೨೯ ರಂದು ನಾವು ಜಳಗಾವ ಹಾಗೂ ಆಸುಪಾಸಿನ ಹಳ್ಳಿಗಳನ್ನು ಹಿಡಿದು ೫೦೦೦ ಜನರು ಮಕ್ಕಳುಮರಿಗಳೊಂದಿಗೆ ಮುಸಲ್ಮಾನ ಅಥವಾ ಕ್ರೈಸ್ತ ಧರ್ಮವನ್ನು ಸ್ವೀಕರಿಸುವೆವು. ಹಿಂದೂಸ್ಥಾನದ ಕೆಲವು ಜನ ನಾಯಕರು ಅಸ್ಪೃಶ್ಯರಿಗಾಗಿ ಹೆಣಗುತ್ತಾರೆ. ಆದರೆ ಬಹಳಷ್ಟು ಜನ ಶ್ರೀಮಂತರು ಅವರ ಮೇಲೆ ಕೋಪಿಸಿಕೊಂಡುದರಿಂದ ಅವರು ಸಹಿಸಲಾಗದಷ್ಟು ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಅದರಿಂದ ಅವರ ಮನಸ್ಸಿಗೆ ತುಂಬ ನೋವು ಆಗುತ್ತಿರಬಹುದು. ಹಿಂದೂ ಸಭಾ, ಸತ್ಯಶೋಧಕ ಸಮಾಜ, ಆರ್ಯಸಮಾಜ, ಮೊದಲಾದವರು ನಮ್ಮೊಡನೆ ಪತ್ರವ್ಯವಹಾರವನ್ನು ಮಾಡಲು ಇಚ್ಛಿಸಿದರೆ ಅದನ್ನು ಭಿಕು ಇಸಾಜೀ ಖಂಡೇರಾವ, ಮು. ಪೋಷ್ಟ ಜಳಗಾವ (ಜಾಮೋದ), ಜಿಲ್ಲಾ ಬುಲಢಾಣಾ ಎಂಬ ಅಂಚೆವಿಳಾಸಕ್ಕೆ ಪತ್ರವ್ಯವಹಾರವನ್ನು ಮಾಡಬೇಕು. ತಮ್ಮ,

- ಐದು ಸಾವಿರ ಜನರ ವತಿಯಿಂದ ಸಹಿಗಳು

೧. ಪುನಾಜಿ ಸೋನಾಜಿ ಮಹಾರ ದ. ಖೂ.

೨. ಮೋತೀರಾಮ ಮತ್ತು ಜಾಮಾ ಮಹಾರ ನಿ.ಖೂ.

೩. ಭಾವಜಿ ಮತ್ತು ರಾಮಜಿ ಮಹಾರ ನಿ. ಖೂ.

'ಬಹಿಷ್ಕೃತ ಭಾರತ', ತಾ. ೧೫ ಮಾರ್ಚ ೧೯೨೯.

## ಪರಿಶಿಷ್ಟ-೬

### ಚವದಾರ ಕೆರೆಯ ಮೊಕದ್ದಮೆ

### ಮಹಾಡದ ವಾರ್ತಾಪತ್ರ

### (ನಮ್ಮ ಸುದ್ದಿಗಾರನಿಂದ)

ಚವದಾರ ಮೊಕದ್ದಮೆಯ ಎರಡೂ ಪಕ್ಷಗಳು ತಮ್ಮ ತಮ್ಮ ಸಾಕ್ಷಿಗಳ ಪಟ್ಟಿಗಳನ್ನು ನೀಡಿವೆ. ಮೊಕದ್ದಮೆಯ ಕಲಾಪವು ಜೂನಿನಲ್ಲಿ ನಡೆಯಲಿದೆ. ಚವದಾರ ಕೆರೆಯ ಮ್ಯುನಿಸಿಪಾಲಿಟಿಯ ಒಡೆತನದ ಪ್ರಾಕಾರದ ಒಂದು ಗೋಡೆಯು ಕಳೆದ ವರ್ಷ ಮಳೆಯಿಂದ ಕುಸಿದಿತ್ತು. ಊರಿನ ಒಂದು ದಾರಿ ಈ ಗೋಡೆಯ ಪಕ್ಕದಲ್ಲಿ ಹಾಯುತ್ತದೆ. ಕುಸಿದು ಬಿದ್ದ ಈ ದಾರಿಯಿಂದಾಗಿ ಇಂದಿಗೆ ೭/೮ ತಿಂಗಳಿಂದ ಈ ಸಾರ್ವಜನಿಕ ರಸ್ತೆಯು ಸಾರಿಗೆಗಾಗಿ ಮುಚ್ಚಿತ್ತು. ಆದರೆ ಇಷ್ಟರಲ್ಲಿಯೇ ಮುನಿಸಿಪಾಲಿಟಿಯು ಚವದಾರ ಕೆರೆಯ ಗೋಡೆಯನ್ನು ಕಟ್ಟಲು ಶುರು ಮಾಡಿದ್ದರಿಂದ ಗೋಡೆಗೆ ಅಂಟಿಕೊಂಡಿರುವ ಎರಡನೆಯ ದಾರಿಯನ್ನು ಸರಿಪಡಿಸುವ ಕೆಲಸವು ಬೇಗನೆ ಪೂರ್ತಿಯಾದೀತೆಂದು ಅನ್ನಿಸುತ್ತದೆ, ೭/೮ ತಿಂಗಳು ಕಾಲ ರಸ್ತೆ ಕೆಟ್ಟಿದ್ದು ಅದರಿಂದಾಗಿ ಒಂದೂವರೆ ಆಳದ ತಗ್ಗು ಬಿದ್ದಿದೆ ! ಇಂಥ ಸ್ಥಿತಿಯಲ್ಲಿ ರಾತ್ರಿಯ ಹೊತ್ತು ಯಾರೂ ಆ ತಗ್ಗಿನಲ್ಲಿ ಬೀಳಲಿಲ್ಲವೆನ್ನುವುದೇ ನಾಗರಿಕರ ಸುದೈವ ! ಮಹಾಡ ಮ್ಯುನಿಸಿಪಾಲಿಟಿಯು ಈ ಬಗೆಗೆ ಬಲು ಬೇಗನೆ ಎಚ್ಚೆತ್ತುಕೊಂಡಿತು ! “ಹೊಲೆಯರು ಚವದಾರ ಕೆರೆಯಿಂದ ಸಂತೋಷದಿಂದ ನೀರು ತುಂಬಿಕೊಳ್ಳಬಹುದು. ಅದಕ್ಕೂ ನಮಗೂ ಸಂಬಂಧವಿಲ್ಲ” ಎಂದು ಅನ್ನುವ ಒಬ್ಬ ಹೊಸ ಉಪ ಪಕ್ಷವೇ ಇಲ್ಲಿ ನಿರ್ಮಾಣಗೊಂಡಿದೆ. ಈ ಉಪ

ಪಕ್ಷಾಭಿಮಾನಿಗಳು ತಮ್ಮ ತಮ್ಮ ಆವಾರದಲ್ಲಿ ಬಾವಿಗಳನ್ನು ಅಗೆದು ಚವದಾರ ಕೆರೆಯ ನೀರನ್ನು ನಿಷೇಧಿಸಲು ತೀರ್ಮಾನಿಸಿರುವರು. ಈ ಉಪ ಪಕ್ಷದ ಹುಟ್ಟಿನಿಂದಾಗಿ ಪುರಾಣಮತವಾದಿ, ಸನಾತನಾಭಿಮಾನಿಗಳ ಬದಿಯವರು ಹೆದರಿ ಕಂಗಾಲಾಗಿರುವರು.

ಕೆಲವು ಜನರು, "ಚವದಾರ ಕೆರೆಯ ಒಟ್ಟು ಪರಿಸ್ಥಿತಿ ಮತ್ತು ಸುಧಾರಣೆಯ ಕಾಲಾವಧಿಯ ಭವಿಷ್ಯವನ್ನು ಗಮನಕ್ಕೆ ತಂದುಕೊಂಡು ಮನೆ ಮನೆಗಳಲ್ಲಿ ಬೇಗನೆ ಬಾವಿಗಳನ್ನು ಅಗೆಯಬೇಕು? ಎಂದು ಇಲ್ಲಿ ಪ್ರಚಾರವನ್ನು ಮಾಡುತ್ತಿರುವರು. ಪ್ರಚಾರಕ್ಕೆ ತಕ್ಕಂತೆ ಸನಾತನ ತತ್ತ್ವ ಗಳ ಸಂರಕ್ಷಣೆಗಾಗಿ ಬಾವಿಗಳನ್ನು ಅಗಿಯುವ ಕೆಲಸ ರಭಸದಿಂದ ನಡೆದಿದೆ. ಇಲ್ಲಿಯ ನಿವಾಸಿಯಾದ ಮಾಮಾರಾವ ಭೋಳೆ ಅವರು ಈ ಕಾರ್ಯಯೋಜನೆಯ ಅಗ್ರಮರ್ಯಾದೆಯನ್ನು ಪಡೆದಿರುವರು. ಅವರು ಚವದಾರ ಕೆರೆಗೆ ಅಂಟಿಕೊಂಡಿರುವ ಜಾಗೆಯಲ್ಲಿ ಒಂದು ಗುಂಡಿಯನ್ನು ಅಗೆದಿದ್ದು ಚವದಾರ ಕೆರೆಯ ಸಂಪರ್ಕದ ನೀರನ್ನು ಮುಚ್ಚುಮರೆಯಿಂದ ಆ ಗುಂಡಿಗೆ ತಂದುಕೊಂಡಿರುವರು ! ಅಲ್ಲದೆ ತಮ್ಮ ಮಡಿವಂತಿಕೆಯನ್ನೂ ಉಳಿಸಿಕೊಂಡಿರುವರು.

"ಬಹಿಷ್ಕೃತ ಭಾರತ', ತಾ. ೨೧ ಮೇ ೧೯೨೯.

## ಪರಿಶಿಷ್ಟ-೭

## ಜಳಗಾಂವದ (ವರ್ಹಾಡ) ಹೊಲೆಯರು ಮುಸಲ್ಮಾನರಾದರು

**(ನಮ್ಮ ಸುದ್ದಿಗಾರನಿಂದ)**

ಜಳಗಾಂವದ (ವರ್ಹಾಡ)* ಸುಮಾರು ಒಂದು ಸಾವಿರದಷ್ಟು ಹೊಲೆಯರ ಸಹಿಯೊಂದಿಗೆ ಸ್ಪೃಶ್ಯರನ್ನು ಉದ್ದೇಶಿಸಿ ಕೊನೆಯದಾಗಿ ಒಂದು ಜಾಹೀರುನಾಮೆಯನ್ನು ಹೊರಡಿಸಲಾದುದು ಜಾಹೀರಾಗಿಯೇ ಇದೆ. ಆ ಜಾಹೀರುನಾಮೆಯಲ್ಲಿ, ಒಂದು ವಿಶಿಷ್ಟವಾದ ಕಾಲಾವಧಿಯಲ್ಲಿ ನಮಗೆ ಇತರ ಹಿಂದೂಗಳಂಥ ಸಮಾನತೆಯ ಹಕ್ಕನ್ನು ನೀಡದಿದ್ದರೆ ನಾವು ಕ್ರೈಸ್ತ ಇಲ್ಲವೆ ಮುಸಲ್ಮಾನ ಧರ್ಮವನ್ನು ಪ್ರವೇಶಿಸುವೆವೆಂದು ಜಾಹೀರುಪಡಿಸಿದ್ದರಿಂದ ಅಲ್ಲಿ ಬಹಳಷ್ಟು ಕೋಲಾಹಲ ಎದ್ದಿತ್ತು. ಈ ಜಾಹೀರುನಾಮೆಯನ್ನು ಪ್ರಕಟಿಸಲು ಕಾರಣವೆಂದರೆ ಕೆಲವು ಜನ ಬ್ರಾಹ್ಮಣರು, ಹಿಂದೂಸಭೆ ಮತ್ತು ಆರ್ಯ ಸಮಾಜಿಸ್ಟರು ಸಭೆಗಳಲ್ಲಿ ಮೇಲಿಂದ ಮೇಲೆ ಅಸ್ಪೃಶ್ಯ ನಿವಾರಣೆಯ ಗೊತ್ತುವಳಿಯನ್ನು ಪಾಸ್ ಮಾಡುತ್ತಿದ್ದರು. ಅವರ ಈ ಗೊತ್ತುವಳಿಯನ್ನು ಒರೆಗೆ ಹಚ್ಚಲೆಂದು ಹೊಲೆಯರ ಕೆಲವು ಜನ ಮುಂದಾಳುಗಳು ಬ್ರಾಹ್ಮಣರು ಹಾಗೂ ಹಿಂದೂ ಮಹಾಸಭೆಯವರಿಗೆ ಕೇವಲ ಗೊತ್ತುವಳಿಯನ್ನು ಪಾಸ್ ಮಾಡಿ ಪ್ರಯೋಜನವಿಲ್ಲ, ಪ್ರತ್ಯಕ್ಷವಾಗಿ ಕೃತಿಯನ್ನು ಮಾಡಿ ತೋರಿಸಿ, ಎಂದು ಜಾಹೀರಾಗಿ ಸವಾಲೊಡ್ಡಿದರು. ಈ ಸವಾಲಿಗೆ ಅವರು, 'ನೀವು ಅಸ್ಪೃಶ್ಯ ವರ್ಗದ ಹೊಲೆಯರು ಮಾದಿಗರು, ಚಮಗಾರರು, ಮೊದಲಾದ ಜಾತಿಯವರು ಒಟ್ಟಿಗೆ ಕುಳಿತು ಊಟವನ್ನು ಮಾಡಿದರೆ ನಾವು ಸಭೆಯಲ್ಲಿ ಪಾಸ್ ಮಾಡಿದ ಗೊತ್ತುವಳಿಯಂತೆ ಪ್ರತ್ಯಕ್ಷ ಕೃತಿಯನ್ನು ಮಾಡಿ ತೋರಿಸುವೆವು,' ಎಂದು ಉತ್ತರ ನೀಡಿದರು. ಆ ಪ್ರಕಾರ ಜಳಗಾಂವದ ಹೊಲೆಯ ಮುಂದಾಳುಗಳು ಅಂಥ ಸನ್ನಿವೇಶವನ್ನು ತಯಾರಿಸಿ ಒಟ್ಟಿಗೆ ಭೋಜನವನ್ನು ಮಾಡಿದರು. ಆದರೆ ಸ್ಪೃಶ್ಯ ವರ್ಗದ ಕೆಲವು ಮೂರ್ಖರು ಬೇರೆ ಬೇರೆ ಬಗೆಯಾಗಿ ಈ ಸಂಗತಿಯ ಲಾಭವನ್ನು ಪಡೆದರು. ಅವರು ಸುತ್ತಲಿನ ಊರುಗಳಿಗೆ ಹೋಗಿ, ಜಳಗಾಂವದ ಹೊಲೆಯರು ಮಾದಿಗರೊಡನೆ ಒಟ್ಟಿಗೆ ಊಟ ಮಾಡಿದರು. ನಿಮಗೆ ಈ ಭ್ರಷ್ಟಾಚಾರ ಇಷ್ಟವೆ? ನಿಮ್ಮ ಹಿರಿಯರು ಎಂದಿಗೂ ಹೀಗೆ ಮಾಡಿರಲಿಲ್ಲ. ಆದುದರಿಂದ ನೀವು ಜಳಗಾಂವದ ಹೊಲೆಯರನ್ನು ಬಹಿಷ್ಕರಿಸಿ, ಎಂದು ಅಲ್ಲಿಯ ಹೊಲೆಯರನ್ನು ರೇಗಿಸಿದರು. ಅದರಂತೆ ಆ ತಿಳಿಗೇಡಿ ಹೊಲೆಯರು ಜಳಗಾಂವದ ಹೊಲೆಯರನ್ನು ಬಹಿಷ್ಕರಿಸಿದರು. ಈ ಕೃತ್ಯವು ಯಾರ ಚಿತಾವಣೆಯಿಂದ

ನಡೆಯಿತೆನ್ನುವುದು ಮುಂದೆ ತಿಳಿದುಬಂದ ಕಾರಣ, ಬ್ರಾಹ್ಮಣ ಹಾಗೂ ಇತರ ಹಿಂದೂಗಳ ಆತ್ಮಘಾತಕ ನಡತೆಯಿಂದ ಆದ ಅನ್ಯಾಯದ ಬಗೆಗೆ ಕೆರಳಿ, ಮೇಲಿನ ಜಾಹೀರುನಾಮೆಯನ್ನು ಪ್ರಕಟಿಸಲಾಗಿತ್ತು. ತಾ. ೨೯-೫-೧೯೨೯ ರಂದು ಪಾತುರ್ಡಾ ಊರಿನಲ್ಲಿ ಸೇರಿದ ಪರಿಷತ್ತು ಕೂಡ ಅವರ ಈ ಧರ್ಮಾಂತರಕ್ಕೆ ಬೆಂಬಲವನ್ನು ನೀಡಿತು. ಗೊತ್ತುಪಡಿಸಿದಂತೆ ತಾ. ೪ ಜೂನ್ ೧೯೨೯ ರಂದು



ಬಹಳಷ್ಟು ಜನ ಹೊಲೆಯರು ಮುಸಲ್ಮಾನರಾದರು. ಅವರು ಮುಸಲ್ಮಾನರಾಗಬಾರದೆಂದು ಹಿಂದೂಮಹಾಸಭೆಯವರು ಆರ್ಯಸಮಾಜಿಸ್ಟರು ತುಂಬ ಯತ್ನಿಸಿದರು. ಆದರೆ ಯಾರೂ ಅವರ ಮಾತನ್ನು ನಂಬಲಿಲ್ಲ. ಆಗ ಅಲ್ಲಿಯ ಸ್ಪೃಶ್ಯ ಹಿಂದೂಗಳು, 'ನಿಮಗೆ ಸಾರ್ವಜನಿಕ ಬಾವಿಗಳನ್ನು ತೆರವುಗೊಳಿಸುತ್ತೇವೆ, ದೇವಾಲಯಗಳ ಪ್ರಶ್ನೆಯನ್ನು ಕೆಲವೇ ದಿನಗಳಲ್ಲಿ ಬಿಡಿಸುವೆವು, ಎಂದೆಲ್ಲ ಸುಳ್ಳು ಹೇಳಲು ಶುರು ಮಾಡಿದರು. ಎರಡು ಬಾವಿಗಳನ್ನು ಬಿಟ್ಟರೆ ಹೆಚ್ಚೇನೂ ಆಗಿಲ್ಲ. ಆದರೂ ಜಳಗಾಂವದ ಹೊಲೆಯ ಮುಂದಾಳುಗಳು ಈ ಪ್ರಶ್ನೆಯನ್ನು ಕೊನೆಯವರೆಗೂ ಒರೆಗೆ ಹಚ್ಚಲಿರುವರು.

* ಜಿಲ್ಲಾ ಬುಲ್ಡಾಣಾ (ಮಹಾರಾಷ್ಟ್ರ) ಬಹಿಷ್ಕೃತ ಭಾರತ', ತಾ. ೨೧ ಜೂನ್ ೧೯೨೯.

**ಪರಿಶಿಷ್ಟ-ಲ**

## ಹಿಂದೂ ದೇವಾಲಯಗಳು ಹಾಗೂ ಅಸ್ಪೃಶ್ಯತೆ

## ಸೇಠ ಜಮನಾಲಾಲ್ ಬಜಾಜ್ ಅವರ ಭಾಷಣ

ರಾಷ್ಟ್ರೀಯ ಸಭೆಯ ಅಸ್ಪೃಶ್ಯತಾ ವಿರೋಧಕ ಕಮಿಟಿಯ ವತಿಯಿಂದ ಕಳೆದ ತಾ. ೩೧ ಜುಲೈ ದಿನದಂದು ಹಿಂದೂಗಳಂತೆಯೇ ಅಸ್ಪೃಶ್ಯ ಎಂದು ಪರಿಗಣಿಸಲಾದ ವರ್ಗಕ್ಕಾಗಿಯೂ ಮೊಗಲರ ಕಾಲದಲ್ಲಿ ವರ್ಹಾಡದ ರಾಜಧಾನಿಯಾದ ಎಲಿಚಪೂರದ 'ದತ್ತ ದರಬಾರ' ವೆಂದು ಹೆಸರಾದ ಶ್ರೀ ದತ್ತಮಂದಿರದ ಬಾಗಿಲುಗಳನ್ನು ತೆರೆಯುವ ಸಮಾರಂಭ ನೆರವೇರಿತು. ದೇವಾಲಯವನ್ನು ಅಸ್ಪೃಶ್ಯರಿಗಾಗಿ ಮುಕ್ತದ್ವಾರವನ್ನಾಗಿ ಮಾಡಲಾದ ಬಗೆಗೆ ಎಲ್ಲ ಟ್ರಸ್ಟಿಗಳಲ್ಲಿ ಒಮ್ಮತವಿದೆಯೆಂದು ಆ ಸಂದರ್ಭದಲ್ಲಿ ಘೋಷಿಸಿ, ದೇವಾಲಯಕ್ಕೆ ಬಹಿಷ್ಕೃತರನ್ನು ಒಳಗೊಂಡು ಎಲ್ಲ ಹಿಂದೂಗಳಿಗೆ ಮುಕ್ತದ್ವಾರ ಇರುವುದನ್ನು ಕುರಿತಾದ ಫಲಕವನ್ನು ಅಂಟಿಸಿ, ಸೇಠ ಜಮ್ನಾಲಾಲ್ ಬಜಾಜ್ ಅವರ ಕೈಯಿಂದ ಅದನ್ನು ಅನಾವರಣಗೊಳಿಸಲಾಯಿತು. ಸೇಠ ಜಮ್ನಾಲಾಲ್ ಬಜಾಜ್ ಅವರು ಫಲಕದ ಮೇಲಿನ ಪರದೆಯನ್ನು ಸರಿಸಿ ನೆರೆದ ಜನರೊಡನೆ ದೇವಾಲಯವನ್ನು ಪ್ರವೇಶಿಸಿದರು. ಈ ಜನರಲ್ಲಿ ಬಹಿಷ್ಕತ ವರ್ಗದ ಸುಮಾರು ೫೦ ಜನರಿದ್ದರು. ಈ ಸಂದರ್ಭದಲ್ಲಿ ಸೇಠ ಜಮ್ನಾಲಾಲ್ ಬಜಾಜ್ ಅವರು ಮುಂದಿನ ಆಶಯದ ಭಾಷಣವನ್ನು ಮಾಡಿದರು :

ಈವರೆಗೂ ಅಲಕ್ಷಕ್ಕೀಡಾದ ನಮ್ಮ ಧರ್ಮಬಾಂಧವರಿಗಾಗಿ ಇಂದು ಈ ದೇವಾಲಯದ ಬಾಗಿಲುಗಳನ್ನು ತೆರೆಯಲಾಯಿತು. ಈ ಸನ್ನಿವೇಶದಲ್ಲಿ ನೀವೆಲ್ಲ ನನ್ನಿಂದ ವಿದ್ವತ್ಪಚುರವಾದ ಭಾಷಣವನ್ನು ನಿರೀಕ್ಷಿಸುತ್ತಿಲ್ಲವೆಂದು ಭಾವಿಸುತ್ತೇನೆ. ನಾನೇನೂ ಒಬ್ಬ ಶಾಸ್ತ್ರಿಯಾಗಲಿ ಇಲ್ಲವೆ ಪಂಡಿತನಾಗಲಿ ಅಲ್ಲವೆಂಬುದು ನಿಮಗೆಲ್ಲ ತಿಳಿದೇ ಇದೆ. ಧರ್ಮಶಾಸ್ತ್ರದ ವಚನಗಳನ್ನು ಎತ್ತಿಕೊಂಡು ಅವುಗಳನ್ನು ಕುರಿತು ಪಾಂಡಿತ್ಯದ ಕಸರತ್ತನ್ನು ಮಾಡುವುದು ನನ್ನಿಂದಾಗದು. ಹೆಚ್ಚೇನು ಹೇಳಲಿ, ನನಗೆ ಸಂಸ್ಕೃತ ಭಾಷೆ ಕೂಡ ತಿಳಿದಿಲ್ಲ. ನಾವು ಯಾವ ವರ್ಗವನ್ನು ಅಸ್ಪಶ್ಯವೆಂದು ಬಗೆದು ಅವರನ್ನು ಹಾಗೆ ನಡೆಯಿಸಿಕೊಳ್ಳುತ್ತಿರುವೆವೋ ಅಂಥವರನ್ನು ಕುರಿತಾದ ಈ ಪ್ರಶ್ನೆಯು ನಿಜವಾಗಿಯೂ ತುಂಬ ಹಗುರ ಹಾಗೂ ಸಾದಾ ಆದುದು. ಅದಕ್ಕಾಗಿ ಯಾವುದೇ ಪಾಂಡಿತ್ಯ ಇಲ್ಲವೆ ವಕೀಲಿ ಬೇಕೆಂದು ಇಲ್ಲ. ಇದು ಕೇವಲ ನ್ಯಾಯದಿಂದ ನಡೆಯಿಸಿಕೊಳ್ಳುವುದನ್ನು ಕುರಿತಾದ ಪ್ರಶ್ನೆಯಾಗಿದೆ. ಇಷ್ಟೇ ಅಲ್ಲದೆ, ಮೇಲ್ವರ್ಗದವರಾದ ನಾವು ಹಿಂದೂಗಳು ತಮ್ಮ ಪಾಪಕ್ಷಾಲನೆಗಾಗಿ ಈ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕಿದೆ, ಎನ್ನುತ್ತೇನೆ. ಈ ವರೆಗೂ ನಾವು ಅಸ್ಪೃಶ್ಯರನ್ನು ಯಾವ ಬಗೆಯಲ್ಲಿ ನಡೆಯಿಸಿಕೊಂಡೆವೋ, ಈಗಲೂ ನಡೆಯಿಸಿಕೊಳ್ಳುತ್ತಿರುವೆವೋ ಅದು ಪೂರ್ತಿ

ಅಕ್ಷಮ್ಯವಾದುದು, ಎಂಬುದನ್ನು ಯಾರಾದರೂ ಒಪ್ಪಿಕೊಳ್ಳದೆ ಇರಲಾರರು. ಕುಟುಂಬದ ಹಿರಿಯರು ಹಾಗೂ ಅರಿವುಳ್ಳ ವ್ಯಕ್ತಿಯೇ ತಮ್ಮ ಕುಟುಂಬದ ಯೋಗಕ್ಷೇಮದ ಹೊಣೆಯನ್ನು ಹೊತ್ತುಕೊಳ್ಳಬೇಕೆಂಬುದು ನಮ್ಮ



ಕೌಟುಂಬಿಕ ಧರ್ಮವಾಗಿದೆ. ಕುಟುಂಬದಲ್ಲಿ ದುರ್ಬಲರು, ತಮ್ಮ ಕಾಳಜಿಯನ್ನು ವಹಿಸಿಕೊಳ್ಳಲು ಅಸಮರ್ಥರಾದವರ ಕಾಳಜಿಯನ್ನು ವಹಿಸಿಕೊಳ್ಳಬೇಕು. ಇಷ್ಟೇ ಅಲ್ಲದೆ ಕುಟುಂಬದಲ್ಲಿ ಒಬ್ಬ ಹುಚ್ಚ ಇಲ್ಲವೆ ಕೆಲಸಕ್ಕೆ ಬಾರದವನು ಇದ್ದರೆ ಅವನನ್ನು ಕಾಪಾಡಬೇಕಿದೆ. ಕುಟುಂಬದ ಎಲ್ಲ ಸದಸ್ಯರನ್ನು ಸಮತೆಯಿಂದ ನಡೆಯಿಸಿಕೊಳ್ಳಬೇಕಿದೆ. ನಮ್ಮ ಕೌಟುಂಬಿಕ ಧರ್ಮವು 'ಕೊಡುಕೊಳ್ಳುವಿಕೆ ಯ ನ್ಯಾಯವನ್ನು ಅವಲಂಬಿಸಿರದೆ ಪ್ರೀತಿಯನ್ನು ಆಧರಿಸಿದೆ. ಸಮಾಜ ಎಂದರೆ ಒಂದು ದೊಡ್ಡ ಕುಟುಂಬವೇ ಸರಿ. ಅಲ್ಲಿಯೂ ಇದೇ ಧರ್ಮವು ಅನ್ವಯವಾಗತಕ್ಕದ್ದು. ಸಮಾಜದ ಅರಿವುಳ್ಳವರು, ಮುಂದಾಳುಗಳು ಹಾಗೂ ಮೇಲ್ವರ್ಗದವರು ಕೀಳೆಂದು ಬಗೆಯಲಾದ ವರ್ಗಗಳೊಡನೆ ಪ್ರೀತಿ ಹಾಗೂ ಮಮತೆಯಿಂದ ನಡೆದುಕೊಳ್ಳಬೇಕೆನ್ನುವುದು ಅವರ ಹೊಣೆ. ಮೇಲಿನವರು ಅಥವಾ ಮುಂದಾಳುಗಳೆಂದ ಬಳಿಕ ಇದು ಅವರ ಜವಾಬ್ದಾರಿಯೇ ಸರಿ. ಅಸ್ಪೃಶ್ಯರೆಂದು ಬಗೆಯಲಾದ ವರ್ಗಗಳ ಜನರು ಅಜ್ಞಾನಿಗಳು, ತಲೆ ಸರಿಯಿಲ್ಲದವರು, ಧರ್ಮಕಲ್ಪನೆಗಳಿಗೆ ಅಂಟಿಕೊಂಡು ಕುಳಿತವರು, ಅಸ್ವಚ್ಛತೆಯಿಂದ ನಡೆದುಕೊಳ್ಳುವವರು, ಎಂದು ನಾವು ಅವರನ್ನು ಅಲಕ್ಷ್ಯಕ್ಕೆ ಈಡುಮಾಡುವುದು ಸೂಕ್ತವಲ್ಲ. ಬದಲು, ಅಸ್ಪೃಶ್ಯರೆಂದು ಬಗೆಯಲಾದ ಜನರು ಅಜ್ಞಾನ ಹಾಗೂ ಅಸ್ವಚ್ಛತೆಯಿಂದ ಇರುತ್ತಾರೆಂಬ ಕಾರಣಕ್ಕೆ ನಾವು ಅವರ ಬಗೆಗೆ ಹೆಚ್ಚಿನ ಕಾಳಜಿಯನ್ನು ವಹಿಸಬೇಕಿದೆ. ಅವರನ್ನು ಸಜ್ಞಾನಿಗಳನ್ನಾಗಿ ಮಾಡಬೇಕಿದೆ. ಸ್ವಚ್ಛತೆಯಿಂದ ಇರಲು ಅವರಿಗೆ ಕಲಿಸಬೇಕಿದೆ. ಸ್ವಲ್ಪದರಲ್ಲಿ ಹೇಳಬೇಕೆಂದರೆ, ನಾವು ಅವರಲ್ಲಿ ಮನುಷ್ಯತ್ವದ ಅಭಿಮಾನವನ್ನು ಹುಟ್ಟಿಸಬೇಕು. ಆದರೆ ನಿಜವಾಗಿ ನೋಡಿದರೆ, ನಾವು ಹಾಗೆ ಮಾಡುತ್ತೇವೆಯೇ? ನಾವು ಅವರನ್ನು ಪರಮೇಶ್ವರನ ಮನೆ-ದೇವಾಲಯದಲ್ಲಿ ಹೋಗದಂತೆ ತಡೆಯುತ್ತೇವೆ. ಈಶ್ವರನನ್ನು 'ಜಗತಾ', 'ಜಗನ್ಮಾತಾ', 'ಪತಿತಪಾವನ ನೆಂಬ ಹೆಸರುಗಳಿಂದ ಕರೆಯಲಾಗುವ ಆ ಪರಮೇಶ್ವರನು ಯಾವ ಒಬ್ಬ ಅಸ್ಪೃಶ್ಯನನ್ನು ತನ್ನ ದರ್ಶನದಿಂದ ಪಾವನನ್ನಾಗಿ ಮಾಡುವ ಬದಲು ಅವನ ಸಂಪರ್ಕದಿಂದ ಮೈಲಿಗೆಯಾಗುತ್ತಾನೆ, ಅವನಿಗೆ ತನ್ನ ಹೀನ-ದೀನ ಬಾಲಕನ ಸಂಸರ್ಗವು ನಡೆಯಲಾರದು, ಎಂದು ಮೇಲು ಜಾತಿಗಳ

ಹಿಂದೂಗಳಾದ ನಾವು ಭಾವಿಸುತ್ತೇವೆ. ಇದೊಂದು ಬಗೆಯ ದೈವೀ ದುರ್ವಿಲಾಸವಲ್ಲವೆ? ಮೇಲು ಜಾತಿಯ ಹಿಂದೂಗಳಾದ ನಮಗೆ ಇದು ನಾಚಿಕೆಗೇಡಲ್ಲವೆ?

**ಪರಮೇಶ್ವರನ ಪೀಡೆ !**

ನಮ್ಮ ಕೌಟುಂಬಿಕ ಧರ್ಮವು ಯಾವ ಬಗೆಯದೆಂಬುದನ್ನು ಈಗಾಗಲೇ ಹೇಳಿದ್ದೇನೆ. ನೀವು ತನ್ನ ಮಕ್ಕಳಲ್ಲಿ ತಾರತಮ್ಯವನ್ನು ಎಸಗುವ ತಂದೆಗೆ ಏನೆನ್ನುವಿರಿ? ಅಥವಾ ಕುಟುಂಬದ ಹಿರಿಯ ಮಕ್ಕಳು ತಮ್ಮ ದುರ್ಬಲರಾದ ತಮ್ಮಂದಿರನ್ನು ಅಮ್ಮನನ್ನು ಕಾಣಲು ಹೋಗಗೊಡದಿದ್ದರೆ, ಅವರನ್ನು ಕಾಯಮ್ಮಾಗಿ ಬೇರೆಯಾಗಿ ಇರಿಸಲು ಯತ್ನಿಸಿದರೆ ನೀವು ಅವರಿಗೆ ಏನೆನ್ನುವಿರಿ? ತನ್ನ ಚಿಕ್ಕ ಮಕ್ಕಳನ್ನು ತನ್ನ ಹತ್ತಿರಕ್ಕೆ ಬರಗೊಡದ ಹಿರಿಯ ಮಕ್ಕಳನ್ನು ಕಂಡು ಆ ತಾಯಿಗೆ ಅದೆಷ್ಟು ಕೆಡಕೆನ್ನಿಸೀತು, ಎಂಬುದನ್ನು ನೀವೇ ಕಲ್ಪಿಸಿಕೊಳ್ಳಿ, ನಮ್ಮವರೇ ಆದ ಧರ್ಮಬಾಂಧವರನ್ನು ದೇವಾಲಯಕ್ಕೆ ಹೋಗದಂತೆ ತಡೆಯುವುದೆಂದರೆ ದೇವಾಲಯದ ಉದ್ದೇಶಕ್ಕೇನೇ ಕೊಡಲಿ ಏಟು ಹಾಕಿದಂತೆ. ನಮ್ಮ ಪರಿಸ್ಥಿತಿ ಹೆಚ್ಚು ಚೆನ್ನಾಗಿದೆ. ಹೀಗಾಗಿ ನಾವು ನಮಗಿಂತ ಕೆಟ್ಟ ಸ್ಥಿತಿಯಲ್ಲಿರುವ ನಮ್ಮ ಧರ್ಮಬಾಂಧವರಿಗೆ ನೆರವು ನೀಡಬೇಕೋ ಅಥವಾ ದೇವಾಲಯಕ್ಕೆ ಹೋಗಿ ದೇವದರ್ಶನವನ್ನು ಪಡೆಯುವ ಅವರ ಹುಟ್ಟು ಹಕ್ಕು ಹಾಗೂ ದೇವರ ಉಪಾಸನೆಯನ್ನು ಮಾಡುವ ಅವರ ಹಕ್ಕನ್ನು ಕೂಡ ಅವರಿಂದ



ಕಿತ್ತುಕೊಳ್ಳಬೇಕು? 'ದೇವಾಲಯ' ಎಂದದು, ಕೆಲವೇ ಜನರಿಗೆ ಅದರಲ್ಲಿ ಪ್ರವೇಶವನ್ನು ಕೊಡುವುದರ ಅರ್ಥವೇನು? ದೇವರೇನು ಕೆಲವೇ ಸ್ಥಿತಿವಂತರಿಗೆ ಸೇರಿದವನಾಗಿದ್ದಾನೆಯೆ? ದೇವರು ಎಲ್ಲರವನು. ಅವನಿಗೆ ಬಡವರು, ಶ್ರೀಮಂತರು, ವಿದ್ವಾಂಸರು, ಅವಿದ್ವಾಂಸರು, ಉಚ್ಚ, ನೀಚರೆಲ್ಲ ಸಮಾನರು ! ಇದಲ್ಲದೆ ಶ್ರೀಮಂತರಿಗಿಂತ ಬಡವರಿಗೆ, ವಿದ್ವಾಂಸರಿಗಿಂತ ಅವಿದ್ವಾಂಸರಿಗೆ, ಉಚ್ಚವರ್ಗದವರಿಗಿಂತ ಕೆಳವರ್ಗದವರಿಗೆ ಹೆಚ್ಚು ದೇವನ ಆವಶ್ಯಕತೆ ಇದೆ. ಅಮ್ಮನ ಒಲವು ಜಾಣ, ನಿರೋಗಿ ಮಗನಿಗಿಂತ ಬುದ್ಧಿಗೇಡಿ ಮತ್ತು ರೋಗಿ ಮಗನತ್ತ ಹೆಚ್ಚು, ಅಲ್ಲವೆ?

**ಅರ್ಥವತ್ತಾದ ದೇವಾಲಯಗಳು"**

ದೇವಾಲಯಗಳು ನಿಜವಾಗಿಯೂ ದೇವಾಲಯಗಳು, ಪರಮೇಶ್ವರನ ವಸತಿಸ್ಥಾನಗಳು ಎನ್ನಿಸಬೇಕಿದ್ದರೆ ಅವುಗಳ ಮೂಲ ಉದ್ದೇಶ ಸಫಲವಾಗಬೇಕು. ನಾವು ಆಕುಂಚನಗೊಂಡ ಸ್ವಂತದ ವಿಚಾರಗಳನ್ನು ದೇವರ ಮೇಲೆ ಹೇರಿ ಪ್ರಪಂಚದ ಇತರ ದೇಶಗಳಲ್ಲಿ ನಗೆಪಾಟಲಿಗೆ ಈಡಾಗಿದ್ದೇವೆ. ನಮ್ಮ ಆತ್ಮಿಕ ಗುರಿ ಹಾಗೂ ಅದರೊಳಗಿನ ಉದಾರಮತವಾದವು ದೇವಾಲಯಗಳಲ್ಲಿ ಪ್ರತಿಬಿಂಬಿತಗೊಳ್ಳಬೇಕು. ಇಲ್ಲದಿದ್ದರೆ ಅದರಲ್ಲಿ ನಮ್ಮ ಡಾಂಭಿಕತೆಯೇ ಪ್ರತಿಬಿಂಬಿತಗೊಂಡು ಬೇರೆಯವರು ನಮ್ಮನ್ನು ತಮಾಷೆಗೆ ಈಡುಮಾಡುವರು.

ಅಸ್ಪೃಶ್ಯರೆಂದು ಬಗೆಯಲಾದವರಿಗೆ ನಮ್ಮ ದೇವಾಲಯಗಳಿಗೆ ಪ್ರವೇಶದ ಪೂರ್ತಿ ಸ್ವಾತಂತ್ರ್ಯವನ್ನು ನೀಡುವುದೆಂದರೆ ಅಮ್ಮನಿಂದ ಬಲವಂತದಿಂದ ಕಿತ್ತುಕೊಳ್ಳಲಾದ ಚಿಕ್ಕ ಮಕ್ಕಳನ್ನು ಮತ್ತೆ ಅವಳಿಗೆ ಭೇಟಿ ಮಾಡಿಸುವುದು, ಅವರನ್ನು ಅವಳ ಹೃದಯದ ಹತ್ತಿರಕ್ಕೆ ಹೋಗಗೊಡುವುದು. ಪರಮೇಶ್ವರನು ನಮ್ಮೆಲ್ಲರ ಅಮ್ಮ, ಮಾತೆ. ನಾವು ಅವಳ ಈ ದುರ್ಬಲ ಮಕ್ಕಳನ್ನು ಅವಳಿಂದ ದೂರ ಮಾಡಿ ಅವಳ ಹೃದಯಕ್ಕೆ ಭಯಂಕರವಾದ ವೇದನೆಯನ್ನು ಕೊಟ್ಟಿದ್ದೇವೆ, ಎಂಬುದನ್ನು ಮರೆಯತಕ್ಕದ್ದಲ್ಲ.

ಇಷ್ಟು ಹೇಳಿ, ಈ 'ದತ್ತ ದರಬಾರ ವು ಹಿಂದೂ ಸ್ತ್ರೀಪುರುಷರಿಗೆಲ್ಲ ಮುಕ್ತದ್ವಾರವಾಗಿದೆ ಎಂದು ಘೋಷಿಸುತ್ತೇನೆ. ಇನ್ನು ಮುಂದೆ ಈ ದರಬಾರದಲ್ಲಿ ಹಿಂದೂಧರ್ಮಿಯರೆಲ್ಲರೂ ಭೇದಾಭೇದಗಳನ್ನು ಪಾಲಿಸದೆ ಒತ್ತಟ್ಟಿಗೆ ಕುಳಿತುಕೊಳ್ಳುವರು, ಮತ್ತು ನಾರಾಯಣನ ಕೃಪಾದೃಷ್ಟಿಯಿಂದ ಅವನ ಬಾಲಕರೆಲ್ಲರೂ ಅವನೊಂದಿಗೆ ತಾದಾತ್ಮ್ಯವನ್ನು ಹೊಂದಿ ಸಂಸಾರದ ಬಗೆ ಬಗೆಯ ತಾಪಗಳನ್ನು ಸಹಿಸಿಕೊಳ್ಳಲು ಅಗತ್ಯವಿರುವ ಪ್ರೇರಣೆ ಮತ್ತು ಆಧ್ಯಾತ್ಮಿಕ ಜ್ಞಾನವನ್ನು ಸಂಪಾದಿಸಿಕೊಳ್ಳುವರು. ಇಂದಿನ ಈ ಪುಣ್ಯಕೃತ್ಯವನ್ನು ನೆರವೇರಿಸಿದವರನ್ನು ಅಭಿನಂದಿಸುತ್ತೇನೆ. ಪರಮೇಶ್ವರನ ಆಶೀರ್ವದಗಳು ಅವರಿಗೆ ಲಭಿಸಲಿ. ಪರಮೇಶ್ವರನು ಆ ಪುಣ್ಯದ ದಾರಿಯಲ್ಲಿ ಮುಂದೆ ಸಾಗಲು ಅವರ ಸಂಗಡಿಗನಾಗಲಿ!

“ಬಹಿಷ್ಕೃತ ಭಾರತ', ತಾ, ೬ ಸೆಪ್ಟೆಂಬರ್ ೧೯೨೯.

**ಪರಿಶಿಷ್ಟ-೯**

**ಮುಷ್ಕರದ ವಿಚಾರಣೆಯ ತೀರ್ಪು**

ಕಳೆದ ತಾ, ೩ ಜುಲೈಯಂದು ಮುಂಬಯಿ ಸರಕಾರವು ಟ್ರೇಡ್ ಡಿಸ್ಪ್ಯೂಟ್ಸ್ ದ ನಾಲ್ಕನೆಯ ಕಲಮಿನನ್ವಯ ಮುಂಬಯಿಯ ಗಿರಣಿಗಳ ಮುಷ್ಕರವನ್ನು ಕುರಿತು ಯೋಚಿಸಲು ವಿಚಾರಣಾ ಮಂಡಳವನ್ನು (ಕೋರ್ಟ್) ನೇಮಿಸಿತು. ನ್ಯಾ. ಪಿಯರ್ಸನ್ (ಅಧ್ಯಕ್ಷರು), ಬ್ಯಾ, ತಲಿಯಾರಖಾನ್ ಮತ್ತು ರೂಪಚಂದ ಬಿಲಾರಾಮ ಈ ಮೂವರನ್ನು ಮಂಡಳಕ್ಕೆ

ನೇಮಿಸಲಾಯಿತು. ಈ ಮಂಡಳಕ್ಕೆ ನಾಲ್ಕು ಪ್ರಶ್ನೆಗಳ ಬಗೆಗೆ ತೀರ್ಪನ್ನು ನೀಡುವ ಕೆಲಸವನ್ನು ಒಪ್ಪಿಸಲಾಯಿತು. ಈ ಪ್ರಶ್ನೆಗಳು ಹೀಗಿದ್ದವು

(೧) ೧೯೨೯ರ ಮಾರ್ಚ್-ಎಪ್ರಿಲ್ ತಿಂಗಳಲ್ಲಿ ಮುಂಬಯಿಯ ಗಿರಣಿಗಳಲ್ಲಿ ಕಾರ್ಮಿಕರುಹೂಡಿದ ಮುಷ್ಕರಗಳಿಗೆ ಕಾರಣವಾದ ಒಡೆಯ ಹಾಗೂ ಕಾರ್ಮಿಕರ ವಾದದ ಬಗೆಗೆ ವಿಚಾರಣೆಯನ್ನು ಮಾಡಿ ಆ ವಾದದ ಖಚಿತ ಸ್ವರೂಪವು ಏನಾಗಿತ್ತೆಂಬುದನ್ನುಖಚಿತಪಡಿಸುವುದು.

(೨) ಇಂಥ ವಾದ ಕಂಡುಬಂದರೆ ಅದಕ್ಕೆ ಒಡೆಯರು ಇಲ್ಲವೆ ಕಾರ್ಮಿಕರು ಅಥವಾ ಇಬ್ಬರೂ ಹೊಣೆಯೇ, ಇದ್ದರೆ ಯಾವ ಪ್ರಮಾಣದಲ್ಲಿ?

(೩) ಮುಷ್ಕರ ದೀರ್ಘಾವಧಿ ಮುಂದುವರಿಯಲು ಕಾರಣಗಳಾವವು? ಇದಕ್ಕಾಗಿ ಯಾರು ಹೊಣೆ, ಒಡೆಯರೋ, ಕಾರ್ಮಿಕರೋ? ಅಥವಾ ಇಬ್ಬರೂ? ಹಾಗೂ ಎಷ್ಟುಪ್ರಮಾಣದಲ್ಲಿ ?

(೪) ಒಡೆಯರು ಹಾಗೂ ಕಾರ್ಮಿಕರ ವಾದವನ್ನು ಬಗೆಹರಿಸುವಲ್ಲಿ ಇರುವ ಅಡೆತಡೆಗಳಾವವು?

ತಾ, ೬ ಜುಲೈಯಿಂದ ಈ ಮಂಡಳದ ಸಭೆಗಳು ನಡೆಯತೊಡಗಿದವು. ತಾ. ೨೧ ಆಗಸ್ಟ್‌ವರೆಗೆಂದರೆ ಒಟ್ಟು ೨೯ ಸಲ ಸಭೆಗಳು ನಡೆದು ೩೫ ಸಾಕ್ಷಿದಾರರಿಂದ ಸಾಕ್ಷಿಗಳನ್ನು ಪಡೆಯಲಾಯಿತು. (೧) ಮಿಲ್ ಓನರ್ಸ್ ಅಸೋಸಿಯೆಶನ್ (೨) ಗಿರಣಿ ಕಾಮಗಾರ (ಕಾರ್ಮಿಕ) ಯೂನಿಯನ್ (೩) ಮುಂಬಯಿ ಟೆಕ್ಸಟಾಮ್ಸ್ ಲೇಬರ್ ಯೂನಿಯನ್ (೪) ಗಿರಣಿ ಕಾಮಗಾರ (ಕಾರ್ಮಿಕ) ಮಹಾಮಂಡಳ (೫) ಮುಂಬಯಿ ಮಿಲ್ ವರ್ಕಸ್ ್ರ ಯೂನಿಯನ್ (೬) ಜಾಮ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ ಲಿ. ಇವರ ವತಿಯಿಂದ ಸಾಕ್ಷಿಗಳಾದವು. ವಿಚಾರಣಾ ಮಂಡಳವು ಮೀರತ್ತ ಮೊಕದ್ದಮೆಯಲ್ಲಿ ಎದುರಾದ ಪ್ರಶ್ನೆಗಳನ್ನು ಕುರಿತು, ಅಂದರೆ ಗಿರಣಿ ಕಾಮಗಾರ ಯೂನಿಯನ್ ಕೂಡ ಕಮ್ಯುನಿಸ್ಟ್ ಬಗೆಯದೋ, ಹೇಗೆ, ಎಂಬ ಪ್ರಶ್ನೆಯನ್ನು ಕುರಿತು ಪುರಾವೆಗಳನ್ನು ಕಲೆಹಾಕಲು ಹಾಗೂ ವಿಚಾರಿಸಲು ನಿರಾಕರಿಸಿತು.

**ವಿಚಾರಣಾ ಮಂಡಳಿಯ ತೀರ್ಪು**

ಮಂಡಳದ ತೀರ್ಪು ಸ್ವಲ್ಪದರಲ್ಲಿ ಮುಂದಿನಂತಿದೆ -

(೧) ಆಕ್ಟೋಬರ್ ೧೯೨೮ ರ ಸುಮಾರಿಗೆ ಗಿರಣಿ ಕಾರ್ಮಿಕರಲ್ಲಿ ಅಸಂತೋಷ ಹೆಡೆ ಎತ್ತಿತ್ತು. ತಮ್ಮ ದಿನಗೂಲಿಯನ್ನು ಕಡಿತಗೊಳಿಸಲಾದೀತು, ಎಲ್ಲ ಗಿರಣಿಗಳಿಗೆ ಒಂದೇ ಪ್ರಮಾಣೀಕರಣವನ್ನು (ಸ್ಟಾಂಡರ್ಡಾಯ್ ಸೇಶನ್) ಅನ್ವಯಿಸಿದರೆ ತಮ್ಮಲ್ಲಿ ಕೆಲವರ ಮೇಲೆ ನಿರುದ್ಯೋಗದ ಪ್ರಸಂಗ ಬಂದೆರಗೀತು, ಎಂಬ ಭಯದಿಂದ ಕಾರ್ಮಿಕರು ಅಸಂತುಷ್ಟರಾಗಿದ್ದರು. ಗಿರಣಿ ಕಾಮಗಾರ ಯೂನಿಯನ್ನಿನ ಮುಂದಾಳುಗಳು ಈ ಅಸಂತೋಷದ ಲಾಭವನ್ನೆತ್ತಿದರು. (೨) ಮಿಲ್ ಕಮಿಟಿಗಳು ಸಲಹೆಗಾರ ಸಮಿತಿಗಳಾಗಿದ್ದವು. ಆದರೆ ಗಿರಣಿ ಕಾಮಗಾರ ಸಂಘವು ಕಾನೂನುಬಾಹಿರವಾಗಿ ಅವುಗಳನ್ನು ಕಾರ್ಯಕಾರಿ ಸಮಿತಿಗಳನ್ನಾಗಿ ಮಾರ್ಪಡಿಸಿ, ಈ ಮಿಲ್ ಕಮಿಟಿಯ ಸದಸ್ಯನಿಗೆ ವ್ಯಕ್ತಿಗತವಾಗಿ ಮುಷ್ಕರ ಹೂಡಲು ಉತ್ತೇಜನ ನೀಡಿತು. ಕಮಿಟಿಯು ಮುಷ್ಕರ ಹೂಡುವುದು ಕಾನೂನು ಸಮ್ಮತವಾದರೂ ಕಮಿಟಿಯ ಯಾವ ಒಬ್ಬ ಸದಸ್ಯನು ಅದನ್ನು ಹೂಡುವುದು ಕಾನೂನುಬಾಹಿರ. ಅವರು ಕಾರ್ಮಿಕರು ಹಾಗೂ ಗಿರಣಿಯವರ ನಡುವೆ ದ್ವೇಷವನ್ನು ಬೆಳೆಸಿ, ಕಾರ್ಮಿಕರಿಂದ ಚಿಕ್ಕಪುಟ್ಟ ಮುಷ್ಕರಗಳನ್ನು ಹೂಡಿಸಿದರು. ಅವರಿಗೆ ೧೯೨೮ ರ ಅಕ್ಟೋಬರ್ ತಿಂಗಳಲ್ಲಿ ಸಾರ್ವತ್ರಿಕವಾಗಿ ಮುಷ್ಕರವನ್ನು ಹೂಡುವುದಿತ್ತು. ಅದರ ಪೂರ್ವ ತಯಾರಿಯೆಂದು ಅವರು ಚಿಕ್ಕಪುಟ್ಟ ಮುಷ್ಕರಗಳನ್ನು ಶುರು ಮಾಡಿದ್ದರು. ಅದರಂತೆ, ಅವರು ನಿರ್ಧಾರಿತ ವೇಳೆಗೆ ಮುಷ್ಕರ ಹೂಡಿದರು. ೨೪ ಎಪ್ರಿಲ್‌ರಂದು ಗಿರಣಿಯವರು ಹಾಗೂ ಗಿರಣಿ ಕಾಮಗಾರ ಸಂಘದವರ ಸಭೆ ನಡೆಯಿತು. ಆದರೆ ಕಾರ್ಮಿಕ ಸಂಘವು ಸಾರ್ವತ್ರಿಕ ಮುಷ್ಕರಕ್ಕೆ ಕರೆಕೊಡಬೇಕೆನ್ನುವಂತಹ ಯಾವುದೇ ಬಗೆಯ ಕಾಲುಕೆದರುವ ಜಗಳವು ಗಿರಣಿಯ ಪ್ರತಿನಿಧಿಗಳಿಂದ ಮೇಲಿನ ಸಭೆಯಲ್ಲಿ ನಡೆದಿರಲಿಲ್ಲ. ಅವರು ಗಿರಣಿಯ ಕಾಮಗಾರ ಸಂಘದ ಮೊದಲ ಬೇಡಿಕೆಯನ್ನು ಒಪ್ಪಿಕೊಂಡಿದ್ದರು. ಅವರು ಎರಡನೆಯ ಬೇಡಿಕೆಯನ್ನು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲವೆಂದಲ್ಲ. ಆದರೆ ಮಾತುಕತೆ ಮೂರನೆಯ ಹಾಗೂ ನಾಲ್ಕನೆಯ ಬೇಡಿಕೆಯವರೆಗೆ ಮುಂದುವರಿಯಲೇ ಇಲ್ಲ. ಗಿರಣಿಯವರು ತಮ್ಮ ಅಧಿಕಾರಿಗಳನ್ನು ಸೇಡಿನ ಭಾವನೆಯಿಂದ ನಡೆಯಿಸಿಕೊಂಡರೆಂದು ಸಾಬೀತುಪಡಿಸಲು ಕಾಮಗಾರ ಸಂಘಕ್ಕೆ ಸಾಧ್ಯವಾಗಲಿಲ್ಲ; ಅಲ್ಲದೆ ವಾಡಿಯಾ ಮಿಲ್ಲಿನಿಂದ ತೆಗೆದು ಹಾಕಲಾದ ಕಾರ್ಮಿಕನನ್ನು ಮತ್ತೆ ಕೆಲಸಕ್ಕೆ ಏಕೆ ಕರೆದುಕೊಳ್ಳಬೇಕು, ಎಂಬುದಕ್ಕೆ ಸೂಕ್ತವಾದ ಕಾರಣವನ್ನು ವಿವರಿಸಲು ಆಗಲಿಲ್ಲ. (೩) ಯಾವ ಜಗಳದಿಂದಾಗಿ ಮುಷ್ಕರ ನಡೆಯಿತೋ ಅಂಥ ಜಗಳ ಅಥವಾ ವಾದ ಗಿರಣಿಯವರು ಹಾಗೂ ಗಿರಣಿಯ ಕಾರ್ಮಿಕರ ನಡುವೆ ಇದ್ದಿತೋ ಇಲ್ಲವೋ ಎಂಬುದನ್ನು ಹೇಳುವುದು ಕಷ್ಟ, ಜಗಳ ಇದ್ದುದೇ ಆದರೆ ಅದು ಕಾಮಗಾರಸಂಘದ ಅಧಿಕಾರಿಗಳು ಹಾಗೂ

ಗಿರಣಿವಾಲರ ನಡುವೆ ಇದ್ದಿತು. ಅದು ಸಂಘದ ಅಧಿಕಾರಿಗಳು ಹಾಗೂ ಮಿಲ್ ಕಮಿಟಿಗಳ ಅಧಿಕಾರಿಗಳ ಧೋರಣೆ ಹಾಗೂ ಚಲನವಲನೆಗಳಿಂದಾಗಿ ಹುಟ್ಟಿಕೊಂಡಿತ್ತು. ಈ ಜಗಳದಲ್ಲಿ ತಮ್ಮನ್ನು ಕಾಪಾಡಿಕೊಳ್ಳುವುದಷ್ಟೇ ಗಿರಣಿವಾಲರ ಧೋರಣೆ ಆಗಿತ್ತು. ಗಿರಣಿವಾಲರು ಮತ್ತು ಅವರ ಅಧಿಕಾರಿಗಳು ಕೆಲವು ಸಂಗತಿಗಳ ಬಗೆಗೆ ಎಷ್ಟು ವಿಚಾರಪೂರ್ವಕವಾಗಿ ನಡೆದುಕೊಳ್ಳಬೇಕಿತ್ತೊ ಅಷ್ಟು ನಡೆದುಕೊಳ್ಳಲಿಲ್ಲ. ಆದರೂ ತಪ್ಪಿನ ಹೊರೆಯನ್ನೆಲ್ಲ ಸಂಘದ ತಲೆಯ ಮೇಲೆ ಹೊರಿಸಲಾಯಿತು.



**ಮುಷ್ಕರ ದೀರ್ಘವಾದದ್ದೇಕೆ ?**

(೧) ಗಿರಣಿ ಕಾಮಗಾರ ಸಂಘದ ಮುಂದಾಳುಗಳು ಆಕ್ರಮಕತೆ ಮತ್ತು ಕುಚೋದ್ಯದಿಂದ ಕೂಡಿದ ಚಳುವಳಿ ಹಾಗೂ ಕಾರ್ಮಿಕರನ್ನು ಕೆಣಕುವ ಅವರ ಲೇಖನ ಮತ್ತು ಭಾಷಣಗಳು. (೨) ಮುಷ್ಕರದವರು ಮಾಡಿದ ಪಿಕೆಟಿಂಗ್, ಒಡ್ಡಲಾದ

ಬೆದರಿಕೆ ಮತ್ತು ಮುಷ್ಕರವನ್ನು ಸೇರಿಕೊಳ್ಳದವರ ಮೇಲೆ ಮಾಡಿದ ದಬ್ಬಾಳಿಕೆಯಂತಹ ಕಾರಣಗಳಿಂದಾಗಿ ಮುಷ್ಕರ ದೀರ್ಘವಾಯಿತು.

ತಮ್ಮ ತಮ್ಮ ಊರುಗಳಿಗೆ ತೆರಳಿದ ಮುಷ್ಕರದವರು ಮಳೆಗಾಲ ಮುಗಿದರೂ ತಿರುಗಿ ಬಾರದಿದ್ದ ಕಾರಣ ಗಿರಣಿಗಳು ಪೂರ್ತಿ ರಭಸದಿಂದ ಶುರುವಾಗಲಿಲ್ಲ. ಮುಷ್ಕರ ದೀರ್ಘವಾಗಲು ಕಾರಣ ಗಿರಣಿ ಕಾಮಗಾರ ಸಂಘದ ಅಧಿಕಾರಿಗಳೇ ಅಹುದೆಂಬುದು ನಮ್ಮ ಅಭಿಪ್ರಾಯ. ಗಿರಣಿವಾಲರು ಹಾಗೂ ಗಿರಣಿಯ ಕಾರ್ಮಿಕರ ನಡುವಿನ ವಾದವನ್ನು ಮುಗಿಸುವಲ್ಲಿ ಇರುವ ಮುಖ್ಯ ತೊಂದರೆ ಹೀಗಿದೆ, ಗಿರಣಿ ಕಾಮಗಾರ ಸಂಘದ ಅಧಿಕಾರಿಗಳು ಹಟಮಾರಿಗಳು, ನೇಕಾರರ ದಿನಗೂಲಿಯಲ್ಲಿ ಶೇಕಡ ೭॥ ಕಡಿತವನ್ನು ಮಾಡಿದ್ದರಿಂದ ಕಾರ್ಮಿಕರು ಮನದಲ್ಲೇ ಅಸಂತುಷ್ಟರಾಗಿರುವರೆಂದು ನಮಗೆ ಅನ್ನಿಸುತ್ತದೆ. ಇದೇ ರೀತಿ, ಯೋಗ್ಯತೆಯ ಯೋಜನೆಯನ್ನು ಅನುಷ್ಠಾನಕ್ಕೆ ತಂದರೆ ತಾವು ಕೆಲಸವನ್ನು ಕಳೆದುಕೊಳ್ಳುವ ಭಯ ಹಾಗೂ ಎಪ್ರಿಲ್ ತಿಂಗಳ ಸಂಬಳವನ್ನು ನೀಡಿರದ ಕಾರಣಗಳಿಂದ ಕಾರ್ಮಿಕರು ಅಸಂತುಷ್ಟರಾಗಿರುವರು. ಕಾಮಗಾರ ಸಂಘವು ಇದರಿಂದ ಸಾಕಷ್ಟು ಲಾಭವನ್ನು ಪಡೆದಿದೆ. ಗಿರಣಿವಾಲರು ಹಾಗೂ ಗಿರಣಿ ಕಾರ್ಮಿಕರಲ್ಲಿ ಸಂಬಂಧ ಬರಲು ಯಾವುದೇ ಸಾಧನವಿಲ್ಲ; ಜಗಳ ತಲೆದೋರಿದರೆ ಅದನ್ನು ಬಗೆ ಹರಿಸಲು ಮಧ್ಯಸ್ಥರ ಸ್ಥಾಪನೆಯಿಲ್ಲ. ಇದರಿಂದಾಗಿ ಒಡಂಬಡಿಕೆಯನ್ನು ಮಾಡಿಸಲು ಕಷ್ಟದ್ದಾಗಿದೆ.

'ಕೇಸರಿ', ತಾ. ೨೧ ಸೆಪ್ಟೆಂಬರ್ ೧೯೨೯, ಸಾರಸಂಗ್ರಹ ಅರ್ಥಾತ್ ಕೇಸರಿಯ ಸಣ್ಣ ಫಾಯಿಲು. ೧೯೨೯, ಪು. ೩೯೧-೩೯೨.

ಉದ್ಧತ : `ಗಣವೀರ' ಪು. ೫೨೯-೫೩೧.

## ಪರಿಶಿಷ್ಟ-೧೦

## ಪನವೇಲದ ಗಣೇಶೋತ್ಸವ

ಕಳೆದ ವರ್ಷ ರಾಮಕೃಷ್ಣ ಗಂಗಾರಾಮ ಭಾತನಕರ ಅವರು ವಡಾಳಿ ಕೆರೆಯ ದೇವಘಟ್ಟದ ಮೇಲೆ ಗಣಪತಿಯ ವಿಸರ್ಜನೆಯನ್ನು ಮಾಡಿದಾಗ ಕೆರೆಗೆ ಹೊಂದಿಕೊಂಡು ಇದ್ದ ಬಲ್ಲಾಳೇಶ್ವರನ ದೇವಾಲಯದ ಪಂಚರಾಗಲಿ, ಇನ್ನಾರೇ ಬ್ರಾಹ್ಮಣರಾಗಲಿ ತಡೆಯೊಡ್ಡಿರಲಿಲ್ಲ. ಹಾಗೆಯೇ ಇಡಿಯ ವರ್ಷ ಅಸ್ಪೃಶ್ಯತೆಯನ್ನು ಕುರಿತು ಯಾವುದೇ ಬಗೆಯ ವಾದವನ್ನು ಹೂಡಲಿಲ್ಲ. ಆದರೆ ಈ ವರ್ಷದ ಗಣೇಶೋತ್ಸವದ ಮೊದಲು ಈ ಬಲ್ಲಾಳೇಶ್ವರ ದೇವಾಲಯದ ಬ್ರಾಹ್ಮಣ ಪಂಚರು ಕೆಲವು ಜನರ ಸಹಿಗಳೊಂದಿಗೆ ಒಂದು ಅರ್ಜಿಯನ್ನು ತಯಾರಿಸಿ ಅದನ್ನು ಪನವೇಲದ ತಹಶೀಲದಾರರಿಗೆ ಕಳಿಸಿದರು. ಅವರು ಅದರಲ್ಲಿ, 'ಕಳೆದ ವರ್ಷ ಗಣಪತಿ ವಿಸರ್ಜನೆಯನ್ನು ರಾ.ಭಾನಕರ ಎಂಬ ಅಸ್ಪೃಶ್ಯ ಗೃಹಸ್ಥರು ವಡಾಳಿ ಕೆರೆಯ ದೇವಘಟ್ಟದ ಮೇಲೆ ಮಾಡಿದರು, ಮೇಲಿನ ಘಟ್ಟದಲ್ಲಿ ವಿಸರ್ಜನೆ ಮಾಡುವ ವಾಡಿಕೆ ಅಸ್ಪೃಶ್ಯರಲ್ಲಿಲ್ಲ. ಅವರು ಈ ಸಲ ಹೀಗೆ ಮಾಡಿದರೆ ಶಾಂತಿಗೆ ಭಂಗ ಉಂಟಾಗಲಿದೆ. ಹೀಗಾಗಿ ಸರಕಾರವು ತಕ್ಕ ಏರ್ಪಾಡನ್ನು ಮಾಡಬೇಕು, ಎಂದು ನಮೂದಿಸಿದ್ದರು. ಆಂಗ್ಲ ಸರಕಾರವನ್ನು ಸೈತಾನನ ಸರಕಾರ ಎನ್ನುವ ಬ್ರಾಹ್ಮಣರು ಕೊನೆಗೆ ಅದೇ ಸರಕಾರದ ಬೂಟುಗಳನ್ನು ನೆಕ್ಕಿದರು.

ಈ ಅರ್ಜಿಯಿಂದಾಗಿ ಊರಲ್ಲಿ ತುಂಬ ಗೊಂದಲ ಉಂಟಾಯಿತು. ದೇವಾಲಯದ ಪಂಚರನ್ನುಳಿದು ಹಿಂದೂಗಳೆಲ್ಲರೂ ರಾ. ಭಾನಕರರು ವಡಾಳಿ ಕೆರೆಯ ದೇವಘಟ್ಟದಲ್ಲಿ ವಿಸರ್ಜನೆ ಮಾಡಲು ಯಾವುದೇ ಬಗೆಯ ಅಭ್ಯಂತರವಿಲ್ಲೆಂದು ಅನ್ನತೊಡಗಿದರು. ಅದರಂತೆ ಗುಜರಾತಿ ಹಾಗೂ ದಕ್ಷಿಣದ ಹಿಂದೂಗಳು ರಾ. ಭಾನಕರರನ್ನು ಕುರಿತು ತಮಗೆ ಯಾವುದೇ ಅಭ್ಯಂತರವಿಲ್ಲೆಂದು ಸಹಿಗಳನ್ನು ಮಾಡಿದರು. ಇತ್ತ ಹೀಗೆ ನಡೆದಿರುವಾಗ ತಾ. ೮-೯-೧೯೨೯ ರಂದು ಗಾಣಿಗ ಸಮುದಾಯದವರ ಮೇಳವು ಮಾರುಕಟ್ಟೆಯ ಮುಸಲ್ಮಾನರ ವಸತಿಯಲ್ಲಿ ಹಾಯ್ದು ಹೋಗುವಾಗ ಆ ದಾರಿಯಾಗಿ ಹೋಗಕೂಡದೆಂದು ಮುಸಲ್ಮಾನರು ಅವರನ್ನು ತಡೆದರು. ಇದರಿಂದ ಹಿಂದೂಗಳೆಲ್ಲರೂ

ಮನನೊಂದು ಅದೇ ದಿನ ಸಭೆ ಸೇರಿದರು. ಆ ಸಭೆಯಲ್ಲಿ, ತಾ. ೧೧-೯-೧೯೨೯ ರಂದು ಎಲ್ಲ ಮೇಳಗಳು ಗುಂಪುಗೂಡಿ ಮುಸಲ್ಮಾನರ ವಸತಿಯ ಮೂಲಕ ಹೋಗಲು ತೀರ್ಮಾನಿಸಲಾಯಿತು.

ಆ ಸಭೆಯಲ್ಲಿ ಬ್ರಾಹ್ಮಣರು, ಮೊದಲಾದವರೆಲ್ಲ, ನೀವು ಅಸ್ಪೃಶ್ಯರು ನಮಗೆ ನೆರವಾಗುವಿರೋ, ಇಲ್ಲವೋ?' ಎಂದು ರಾ. ಭಾತನಕರರನ್ನು ಕೇಳಿದರು. ತಾವು ಹಿಂದೂಧರ್ಮಕ್ಕಾಗಿ ನೆರವಾಗಲು, ಹಿಂದೂಧರ್ಮಕ್ಕಾಗಿ ಜೀವ ತೆರಲೂ ಸಿದ್ಧರಿದ್ದೇವೆ, ನೀವು ಕರೆ ನೀಡಿದಾಗಲೆಲ್ಲ ನಾವು ಹಿಂದೂ ಧರ್ಮದ ನೆರವಿಗೆ ಬರಲು ಸಿದ್ದರು, ಆದರೆ ನೀವು ನಮ್ಮ ಹಕ್ಕುಗಳನ್ನು ಅಲಕ್ಷಿಸಕೂಡದು, ಎಂದು ಭಾನಕರರು ಅಸ್ಪೃಶ್ಯರೆಲ್ಲರ ವತಿಯಿಂದ ಉತ್ತರವನ್ನು ನೀಡಿದರು. ಅವರು ಹೀಗೆನ್ನುತ್ತಲೇ ಹಿಂದೂ ಮುಂದಾಳುಗಳೆಲ್ಲರೂ, 'ನಾವು ಇಂದಿನಿಂದಲೇ ನಿಮಗೆ ನಿಮ್ಮ ಹಕ್ಕುಗಳನ್ನು ನೀಡಿದ್ದೇವೆ. ನಾವು



ಸಭೆಗೆ ಬರುವ ಮುನ್ನವೇ ನಿಮ್ಮ ಪ್ರಶ್ನೆಯನ್ನು ಬಗೆಹರಿಸಿದ್ದೇವೆ. ಅದರ ಬಗೆಗೆ ಚಿಂತಿಸಬೇಡಿ, ಎಂದರು. ಇತ್ತ ತಹಸೀಲ್ದಾರ ಸಾಹೇಬರು ಕಲೆಕ್ಟರ್, ಪ್ರಾಂತ ಹಾಗೂ ಡಿ. ಎಸ್. ಪಿ. ಅವರಿಗೆ ತಂತಿಗಳನ್ನು ಕಳಿಸಿದರು. ಅದರಂತೆ ಕಲೆಕ್ಟರ್, ಪ್ರಾಂತ ಹಾಗೂ ಡಿ. ಎಸ್. ಪಿ. ಅವರು ಆವತ್ತು ಪೋಲೀಸರೊಡನೆ ಬಂದು ಹಾಜರಾದರು. ರಾ. ಭಾತನಕರರ ಕರೆಯ ಮೇರೆಗೆ ಒಂದು ಸಾವಿರ ಜನ ಅಸ್ಪೃಶ್ಯ ಬಂಧುಗಳು ಬಂದು ಮೆರವಣಿಗೆಯನ್ನು ಸೇರಿದರು. ಸ್ಪೃಶ್ಯ-ಅಸ್ಪೃಶ್ಯ ಬಂಧುಗಳಿಂದ ಕೂಡಿದ ಹತ್ತು ಸಾವಿರ ಜನರ ಮೆರವಣಿಗೆಯು ದೊಡ್ಡ ದಿಮಾಖಿನಿಂದ ಮುಸಲ್ಮಾನ ವಸತಿ ಹಾಗೂ ಮಸೀದೆಯ ಮುಂದೆ ಹಾಯ್ದು ಹೋಯಿತು. ಹಿಂದೂಗಳು ಸಂತೋಷದಿಂದ ಕುಣಿದಾಡಿದರು. ಆದರೆ ಅಸ್ಪೃಶ್ಯರ ಪಾಲಿಗೆ ದುರದೃಷ್ಟ ಎದುರಾಯಿತು ! ಗುರುವಾರ ಮುಂಜಾನೆ ತಹಶೀಲಾರ ಸಾಹೇಬರು ೧೪೪ ಕಲಮನ್ನು ಅನ್ವಯಿಸಿ ನೋಟೀಸನ್ನು ಹೊರಡಿಸಿ ಅದನ್ನು ರಾಮಕೃಷ್ಣ ಭಾತನಕರರ ಮೇಲೆ ಜಾರಿ ಮಾಡಲಾಯಿತು. ಈ ನೋಟೀಸಿನಲ್ಲಿ, ವಡಾಳಿ ಊರಿನ ದೇವಘಟ್ಟದಮೇಲೆ ಗಣಪತಿಯ ವಿಸರ್ಜನೆಯನ್ನು ಮಾಡಲು ಅಭ್ಯಂತರವಿಲ್ಲ. ಆದರೆ ಬಲ್ಲಾಳೇಶ್ವರನ ಖಾಸಗಿ ಜಾಗದ ಮೂಲಕ ಹೋಗತಕ್ಕದ್ದಲ್ಲ. ಹೋದರೆ ೧೮೮ ನೆ ಕಲಮಿನನ್ವಯ ಮೊಕದ್ದಮೆಯನ್ನು ಹೂಡಲಾಗುವುದು. ಈ ನೋಟೀಸಿನಿಂದಾಗಿ ಹಿಂದೂಗಳೆಲ್ಲ ಯೋಚನೆಗೀಡಾದರು. ಅವರು, 'ನಾವೆಲ್ಲ ಇಂದು ನಿಮ್ಮ ಗಣಪತಿ ವಿಸರ್ಜನೆಗೆ ಬರುವೆವು, ಚಿಂತಿಸಬೇಡಿ,' ಎಂದು ರಾ. ಭಾನಕರರಿಗೆ ಭರವಸೆಯನ್ನಿತ್ತರು. ಪನವೇಲ ಮುನಿಸಿಪಾಲಿಟಿಯ ಅಧ್ಯಕ್ಷರಾದ ಆತ್ಮಾರಾಮಶೇಠ ಆಠವಣೆ ಅವರು, ಅಸ್ಪೃಶ್ಯರ ಗಣಪತಿ ವಿಸರ್ಜನೆ

ನಡೆಯುವಲ್ಲಿಯೇ ತಮ್ಮ ಗಣಪತಿಯನ್ನೂ ವಿಸರ್ಜಿಸುವೆನೆಂದು ವಚನವಿತ್ತರು. ಆಯಿತು, ಸಂಜೆಯ ೪ ಗಂಟೆಗೆ ಶ್ರೀ ಸವತರಕರ ಹಾಗೂ ಸುಭೇದಾರ ಶಿರಾವಲೆ ಅವರ ಮುಂದಾಳತ್ವದಲ್ಲಿ ಅಸ್ಪೃಶ್ಯರ ಬಾಳ ಸುಧಾರಕ ಮೇಳಾ ಮತ್ತು ಗಣಪತಿಯ ಮೆರವಣಿಗೆ ಹೊರಟವು.

ಅಸ್ಪೃಶ್ಯರ ಸ್ಥಳೀಯ ಮುಂದಾಳುಗಳಾದ ರಾ. ಬಳೀರಾಮ ಭಾತನಕರ, ರಾಮಕೃಷ್ಣ ಭಾತನಕರ, ಹಾಗೂ ಯಶವಂತ ಭಾತನಕರ, ವಿಷ್ಣು ಪೋಶೀರಕರ, ಮೊದಲಾದವರು ಮೆರವಣಿಗೆಯಲ್ಲಿದ್ದರು. ಮೆರವಣಿಗೆಯು ಶಂಕರಾವ ಪತ್ಕಿ ವಕೀಲರ ಮನೆಯೆದುರು ಬರುತ್ತಲೇ ಅವರು ಬಲು ಮಮತೆಯಿಂದ ಅದನ್ನು ಬರಮಾಡಿಕೊಂಡರು. ಆಮೇಲೆ ಮೆರವಣಿಗೆಯು ಪತ್ಕಿ ವಕೀಲ, ರೇಂಜರ್ ಗುಪ್ತ, ಜೋಶಿ ವಕೀಲ, ಮೊದಲಾದವರು ಕಾ. ಪ್ರಭು ಜನರು ಮತ್ತು ಮರಾಠರು ಹಾಗೂ ಗುಜರಾತಿ ಬಂಧುಗಳೊಡನೆ ಶ್ರೀ ಆಟವಣೆ ಶೇಠರ ಮನೆಯ ಮುಂದೆ ಬಂದಿತು. ಮೆರವಣಿಗೆಯು ಮನೆಯೆದುರು ಬರುತ್ತಲೇ ಅವರು ಬಂದೂಕಿನಿಂದ ಸದ್ದು ಮಾಡಿ ಅದನ್ನು ಸ್ವಾಗತಿಸಿದರು. ಆಮೇಲೆ ಅವರು ತಮ್ಮ ಹಾಗೂ ಇತರರ ಗಣಪತಿಗಳನ್ನು ಆ ಮೆರವಣಿಗೆಯೊಡನೆ ತೆಗೆದುಕೊಂಡು ಹೊರಟರು. ಇತ್ತ ಜೋಶಿ ವಕೀಲ ಮೊದಲಾದ ಬ್ರಾಹ್ಮಣ, ಬ್ರಾಹ್ಮಣೇತರ ಜನರ ಸಮುದಾಯವು ಮೆರವಣಿಗೆಯೊಡನೆ ಬೆಳೆಯುತ್ತ ನಡೆಯಿತು. ಕೊನೆಗೆ ಮೆರವಣಿಗೆಯು ಬಲ್ಲಾಳೇಶ್ವರ ದೇವಾಲಯದೆದುರು ಬಂದ ಬಳಿಕ ಆ ದೇವಾಲಯದ ಆಂಗ್ಲ ಸರಕಾರದ ಕಾಲೆಳಗಿನ ಹೊಗಳುಭಟ್ಟಂಗಿಗಳು, ಪುರಾಣಿಕಶಾಹಿಯ ಕೈಗೂಸುಗಳಾದ ಇಬ್ಬರು ಮೂವರು ಮುಂದಕ್ಕೆ ಬಂದು, 'ನಾವು ಒಪ್ಪಂದವನ್ನು ಮಾಡಿಕೊಳ್ಳುವಾ. ನಿಮ್ಮ ಗಣಪತಿಗಳನ್ನು ದೇವಾಲಯದ ನಿಷೇಧಿಸಲಾದ ಜಾಗೆಯ ಅಂಚಿನವರೆಗೆ ತನ್ನಿ. ಅಲ್ಲಿ ಆರತಿಯನ್ನು ಬೆಳಗಿ, ಆಮೇಲೆ ನಾವು ದೇವಘಟ್ಟದಮೇಲೆ ನಿಮ್ಮ ಗಣಪತಿಗಳನ್ನು ನಮ್ಮ ಕೈಯಿಂದ ವಿಸರ್ಜಿಸೋಣ, ಎಂದೆನ್ನತೊಡಗಿದರು. ರಾ. ಶಿವತರಕರ, ರಾ. ಭಾತನಕರ, ಹೋಶಿ ಹಾಗೂ ಪತ್ಕಿ ವಕೀಲರು ಇದನ್ನು

ಒಪ್ಪಿಕೊಳ್ಳಲಿಲ್ಲ.

ಸ್ಪೃಶ್ಯ ಹಿಂದೂಗಳೂ ಬ್ರಾಹ್ಮಣ ಪಂಚರ ತಿರಸ್ಕಾರದಿಂದ ಕೂಡಿದ ಭಾಷೆಯನ್ನು ತಿರಸ್ಕರಿಸತೊಡಗಿದರು. ಕೊನೆಗೆ ಶಿವತರಕರರು, 'ನಾವು ನಮ್ಮ ಎಲ್ಲ ಗಣಪತಿಗಳನ್ನು ದೇವಘಟ್ಟದ ಮೇಲೆಯೇ ವಿಸರ್ಜಿಸುವೆವು,' ಎಂದು ಹೇಳಿದರು. ಕಾಂಗ್ರೆಸ್ಸನ್ನು ಸೇರಿಕೊಳ್ಳುವ ಹಾಗೂ ಸ್ವರಾಜ್ಯವನ್ನು ಕೇಳುವ ಬ್ರಾಹ್ಮಣರು ಎಂಥ ಅಂತಃಕರಣದವರೆಂಬುದನ್ನು ನಾವು ಚೆನ್ನಾಗಿ ಗುರುತಿಸುತ್ತೇವೆ. ಆದುದರಿಂದ 'ನಾವು ಕೊಳಕು ತಲೆಯ ಜನರೊಡನೆ ಒಪ್ಪಂದವನ್ನು ಮಾಡಿಕೊಳ್ಳಲು ಇಚ್ಛಿಸುವುದಿಲ್ಲ,' ಎಂದರು. ಕೂಡಲೇ ಆಟವಣೆ ಶೇಠರು ನಾವೆಯನ್ನು ತರಿಸಿಕೊಂಡರು. ಆಟವಣೇ ಶೇಠ, ರಾಮಕೃಷ್ಣ ಭಾತನಕರ ಹಾಗೂ ಇತರ ಅಸ್ಪೃಶ್ಯರ ಗಣಪತಿಗಳನ್ನು, ಗೌರಿಗಳನ್ನು ಆ ನೌಕೆಯಲ್ಲಿ ಇರಿಸಿಕೊಂಡು ದೇವಘಟ್ಟಕ್ಕೆ ಒಯ್ದರು. ಅಲ್ಲಿ ಗಣಪತಿಗಳನ್ನು ಘಟ್ಟದ ಮೇಲೆ ಇಳಿಸುತ್ತಲೇ ಹಿಂದೂಗಳೆಲ್ಲ 'ಗಜಾನನ ಮಹಾರಾಜಕೀ ಜಯ, ಶಿವಾಜಿ ಮಹಾರಾಜಕೀ ಜಯ,' ಎಂದು ಘೋಷಿಸಿ ಪ್ರಚಂಡ ಚಪ್ಪಳೆ ತಟ್ಟಿದರು. 'ಡಾ. ಅಂಬೇಡಕರ ಮಹಾರಾಜಕೀ ಜಯ ಘೋಷಣೆಯೊಂದಿಗೆ ಗಣಪತಿಗಳನ್ನು ವಿಸರ್ಜಿಸಿದರು. ತರುವಾಯ ಅಸ್ಪೃಶ್ಯರು ತಯಾರಿಸಿ ತಂದ ಪ್ರಸಾದವನ್ನು ಎಲ್ಲರಿಗೆ ಹಂಚಲಾಯಿತು. ಆಗ ಇಡಿಯ ಹಿಂದೂ ಜನತೆ ಹಾಗೂ ಅಶಿಕ್ಷಿತರಾದ ರೈತರೂ ಕೂಡ ದೇವಾಲಯದ ಪಂಚ ಬ್ರಾಹ್ಮಣರನ್ನು ಧಿಕ್ಕರಿಸತೊಡಗಿದರು. ಬ್ರಾಹ್ಮಣರು ತಮ್ಮ ಜಾತಿಯ ಬಣ್ಣ ತೋರಿಸಿದರು, ಎಂದೆನ್ನತೊಡಗಿದರು.

ರಾತ್ರಿ ಎಲ್ಲ ಸ್ಪೃಶ್ಯ-ಅಸ್ಪೃಶ್ಯ ಹಿಂದೂಗಳಿಗಾಗಿ ಎಲೆಯಡಿಕೆ ಸಮಾರಂಭವನ್ನು ಏರ್ಪಡಿಸಲಾಯಿತು. ಎಲೆಯಡಿಕೆ ಸಮಾರಂಭಕ್ಕಾಗಿ ಮೇ. ತಹಶೀಲ್ದಾರ ಸಾಹೇಬರು, ಆಟವಣೆ ಶೇಠರು, ಮೆಸರ್ಸ್ ಪತ್ಕಿ, ಮತ್ತು ಜೋಶಿ ವಕೀಲರು, ವೇದಕ, ಪಾಟೀಲ, ಮೇಘಜೀ, ಬಾಳಾಸಾಹೇಬ ಪಟವರ್ಧನ, ಗುಪ್ತ ವಕೀಲರು, ಮೋಹನಲಾಲ ಶೇಠರು, ಸಂಭೂ ಶೇಠರು, ಮೊದಲಾದ ಗುಜರಾತಿ ಜನರು ಹಾಗೂ ಮಹಾರಾಷ್ಟ್ರೀಯ ಹಿಂದೂ ಮುಂದಾಳುಗಳು ಹಾಜರಿದ್ದರು. ಅಸ್ಪೃಶ್ಯರೂ ಹೊಲೆಯರು ಚಮಗಾರರಾದಿಯಾಗಿ ಬಲು ದೊಡ್ಡ ಸಂಖ್ಯೆಯ ಸಮುದಾಯದಲ್ಲಿ ಬಂದಿದ್ದರು. ಆಗ, ಮೆಸರ್ಸ್ ಶಿವತರಕರ, ಪಾಟೀಲ, ಜೋಶಿ, ಗುಪ್ತೆ, ಆಟವಣೆ ಶೇಠ ಹಾಗೂ ತಹಶೀಲ್ದಾರ ಸಾಹೇಬರ ಭಾಷಣಗಳಾದ ಬಳಿಕ ಸಮಾರಂಭವು ಮುಗಿಯಿತು. ಆಗ ರಾ. ಶಿವತರಕರ ಅವರು, ಇನ್ನು ಮುಂದೆ ನಾವು ಪ್ರತಿವರ್ಷ ಘಟ್ಟದ ಮೇಲೆಯೇ ನಮ್ಮ ಗಣಪತಿಗಳನ್ನು ವಿಸರ್ಜಿಸುವೆವು,' ಎಂದು ಘೋಷಿಸಿದರು.

“ಬಹಿಷ್ಕೃತ ಭಾರತ', ತಾ, ೪ ಆಕ್ಟೋಬರ್ ೧೯೨೯.

## ಪರಿಶಿಷ್ಟ-೧೧

## ಪರ್ವತಿ ದೇವಾಲಯದ ಪಂಚರಿಗೆ ವಿನಂತಿ

ನಾನು ಮಹಾರಾಷ್ಟ್ರದ ಎಲ್ಲ ದೇವಾಲಯಗಳ ಒಡೆಯರು ಹಾಗೂ ಚಾಲಕರಿಗೆ ಮಾಡಿದ ವಿನಂತಿಯ ಮೇರೆಗೆ ಬೇರೆ ಬೇರೆಡೆಗಳಿಂದ ನನ್ನಲ್ಲಿಗೆ ಉತ್ತೇಜನೆಯ ಪತ್ರಗಳು ಬರುತ್ತಿದ್ದು, ಕೆಲವೆಡೆಗಳಲ್ಲಿ ನನ್ನ ಸೂಚನೆಗಳನ್ನು ಕಾರ್ಯಾನುಷ್ಠಾನಕ್ಕೆ ತರಲು ಜಾಗ್ರತೆಯಿಂದ ಸಿದ್ಧತೆಗಳು ಸಾಗಿವೆ. ಇದರಿಂದಾಗಿ ಮೂರು-ನಾಲ್ಕು ವರ್ಷಗಳಲ್ಲಿ ದೇವಾಲಯಗಳ ಪ್ರವೇಶವನ್ನು ಕುರಿತಾದ ಅಸ್ಪೃಶ್ಯತೆಯ ಪೂರ್ತಿ ನಿವಾರಣೆ ಆಗಲಿದೆ, ಎಂಬ ಆಸೆ ಒಟ್ಟುಗೂಡುತ್ತಿದೆ.

ಪರ್ವತಿ ದೇವಾಲಯಕ್ಕೆ ಮುಖ್ಯವಾಗಿ ಪುಣೆ ನಗರ ಹಾಗೂ ಸುತ್ತಲ ಪ್ರದೇಶದಲ್ಲಿ ದೊಡ್ಡ ಕೀರ್ತಿ ಇದೆ. ಪ್ರತಿವರ್ಷ ಶ್ರಾವಣ ಮಾಸದ ಸೋಮವಾರದಂದು ಅದರ ಹೆಸರು ಮಕ್ಕಳಿಂದ ಹಿಡಿದು ಮುಪ್ಪಿನವರವರೆಗೆ ವಿಶೇಷವಾಗಿ ಎಲ್ಲರ ಬಾಯಲ್ಲಿ ಕೇಳಿಬರುತ್ತದೆ. ಪರ್ವತಿ ದೇವಾಲಯವು ಸಾರ್ವಜನಿಕ ಸ್ವರೂಪದ್ದಾಗಿದ್ದು ಪಂಚರ ಮೂಲಕ ಅದರ ಆಡಳಿತೆ ನಡೆಯುತ್ತದೆ. ಅದೃಷ್ಟದಿಂದಾಗಿ ಈ ದೇವಾಲಯದ ಇಂದಿನ ಪಂಚರು ಸುಶಿಕ್ಷಿತರು ಹಾಗೂ ದೇಶಕಾಲ ಪರಿಸ್ಥಿತಿಗಳನ್ನು ಅರಿತವರು. ಈ ದೇವಾಲಯದ ಕೀರ್ತಿ ಹಿಂದೂಧರ್ಮದವರಲ್ಲಿ ಹೆಚ್ಚಬೇಕೆಂದು ಪಂಚರು ಹಗಲಿರುಳು ದುಡಿದುಕೊಳ್ಳುತ್ತಾರೆ. ಅಲ್ಲದೆ ಪರಧರ್ಮಿಯರಿಂದಲೂ ಸಹಾನುಭೂತಿಯನ್ನು ಗಳಿಸಲು ಅವರು ಯಾವಾಗಲೂ ದಕ್ಷರಾಗಿರುವರು.

ಹಿಂದೂ ಸಮುದಾಯದ ಪೈಕಿ ಅಸ್ಪೃಶ್ಯರೆಂದು ಪರಿಗಣಿಸಲಾದ ಒಳಸಮುದಾಯವು ಹಿಂದೂ ಧರ್ಮದ್ದೇ ಆಗಿರುವುದರ ಬಗೆಗೆ ಪಂಚರಿಗೆ ಪೂರ್ತಿ ಅರಿವಿದೆ, ಎಂದು ತಿಳಿಯಲು ಅಡ್ಡಿಯಿಲ್ಲ. | ಅಭ್ಯಂತರವಿಲ್ಲ. ಪರ್ವತಿಯ ಮೆಟ್ಟಿಲುಗಳನ್ನು ಏರುವಾಗ ದೇವಸ್ಥಾನದ ಗಡಿಯಲ್ಲಿ ಒಂದು ಚಿಕ್ಕ ಪೀರ ಕಣ್ಣಿಗೆ ಕಾಣುತ್ತದೆ. ಪಂಚರು ಅದನ್ನು ಸಹಿಸಿಕೊಳ್ಳುತ್ತಾರೆ. ಅಂಥ ದೇವಾಲಯ ಹಾಗೂ ಅದರ ಪಂಚರು ಸ್ವಧರ್ಮಿಯರ ಬಗೆಗೆ ಅಸಹಿಷ್ಣುಗಳಾಗಿರುವ ಸಾಧ್ಯತೆ ಕಾಣದು. ಅಸ್ಪೃಶ್ಯ ಸಮುದಾಯದ ಅಸ್ಪೃಶ್ಯತೆಯನ್ನು ತೆಗೆದು ಹಾಕಲು ಎಲ್ಲ ರಾಷ್ಟ್ರೀಯ ಪಕ್ಷಗಳು ಒಕ್ಕೊರಲಿನಿಂದ ವಿನಂತಿಸಿಕೊಳ್ಳುತ್ತಿರುವಾಗ ಅದರ ಧ್ವನಿ-ಪ್ರತಿಧ್ವನಿಯು ಪಂಚರ ಕಿವಿಗಳನ್ನು ತಲುಪಿದ್ದು ಅದರ ಸ್ಪಂದನೆಯು ಅವರ ಅಂತಃಕರಣಗಳಲ್ಲಿ ಮೂಡುತ್ತಿರಲೇಬೇಕು. ಸದ್ಯದ ಪಂಚರು ಸ್ವಾರ್ಥತ್ಯಾಗಿಗಳು, ಕರ್ಮನಿಷ್ಠರು ಹಾಗೂ ಸಾಹಸಿಗಳೆಂದು ಹೆಸರಾಗಿದ್ದಾರೆ.

ಆದುದರಿಂದ, ನಾನು ಈ ಪತ್ರದ ಮೂಲಕ ಅವರಿಗೆ ಪ್ರಕಟವಾಗಿ ವಿನಂತಿಯನ್ನು ಮಾಡಿಕೊಳ್ಳಲು ಇಚ್ಛಿಸುತ್ತೇನೆ. ಅವರು ಎಲ್ಲ ದೃಷ್ಟಿಯಿಂದಲೂ ವಿವೇಕ ದಿಂದ ಅಲೋಚಿಸಿ ಈ ವರ್ಷದಿಂದ ದೇವಾಲಯದ ಆವಾರದಲ್ಲಿ ಅಸ್ಪೃಶ್ಯಾಸ್ಪೃಶ್ಯತೆಯ ತಾರತಮ್ಯವನ್ನು ನಾಶಪಡಿಸಬೇಕೆಂದು, ಇಡಿಯ ದೇವಾಲಯ ಹಾಗೂ ದೇವತೆಗಳನ್ನು ಹಿಂದೂಧರ್ಮಿಯರಿಗೆಲ್ಲ

ತೆರವುಗೊಳಿಸಬೇಕು ಹಾಗೂ ಅವರ ಧನ್ಯವಾದಗಳಿಗೆ ಒಡೆಯರಾಗಬೇಕೆಂದು ಕೋರುತ್ತೇನೆ ! ಇಡಿಯ ಹಿಂದೂ ಜನತೆಯು ಅವರ ಈ ಕೃತ್ಯ ಹಾಗೂ ಸಾಹಸಗಳಿಗಾಗಿ ಅವರನ್ನು ಗೌರವಿಸುವುದು. ಇಷ್ಟೇ ಅಲ್ಲದೆ ಅವರು ಮುಂಬರುವ ಹಿಂದೂ ತಲೆಮಾರುಗಳಿಂದ ಅನಂತವಾದ ಕೃತಜ್ಞತೆಗಳನ್ನು ಸಂಪಾದಿಸುವರೆನ್ನುವಲ್ಲಿ ಸಂದೇಹವಿಲ್ಲ!

**ಲ, ಬ, ಭೂಪಟಕರ**

('ಕೇಸರಿ', ತಾ. ೨೭ ಆಗಸ್ಟ್ ೧೯೨೯ : `ಸಾರಸಂಗ್ರಹ ಅರ್ಥಾತ್ ಕೇಸರೀಚೇ ಭೋಟೇ ಫಾಈಲ್, ವರ್ಷ ೧೯೨೯.' ಪು. ೩೭೪.)

ಉದ್ಧೃತ : `ಗಣವೀರ', ಪು. ೫೪೪.

## ಪರಿಶಿಷ್ಟ-೧೨

## ಪರ್ವತಿಯ ಮೇಲೆ ಅಸ್ಪೃಶ್ಯರ ಸತ್ಯಾಗ್ರಹ

ಪರ್ವತಿ ಗುಡ್ಡದ ಮೇಲಿನ ದೇವಾಲಯಕ್ಕೆ ಹೋಗಲೆಂದು ಅಸ್ಪೃಶ್ಯರ ಸತ್ಯಾಗ್ರಹ ಶುರುವಾಗಲಿದೆ ಎಂಬ ವಾರ್ತೆಯಿಂದ ಆಕ್ಟೋಬರ್, ಭಾನುವಾರ ತಾ. ೧೩ ರಂದು ಮುಂಜಾವಿನಿಂದಲೇ ಪುಣೆ ನಗರದ ಬೇರೆ ಬೇರೆ ಭಾಗಗಳ ಜನರಮನಗಳಲ್ಲಿ ಅಲ್ಲೋಲಕಲ್ಲೋಲ ನಡೆದುದು ಸ್ಪಷ್ಟವಾಗಿ ಕಂಡು ಬರುತ್ತಿತ್ತು. ಕಂಡವರ ಮಾತಿನಲ್ಲೆಲ್ಲ ಇದೇ ವಿಷಯವಿತ್ತು. ಭಾನುವಾರ ಬೆಳಿಗ್ಗೆ ಏಳು ಗಂಟೆಯ ಮುನ್ನವೇ **ಪರ್ವತಿ ಗುಡ್ಡದತ್ತ ಜನರ ಪ್ರವಾಹ** ಹರಿಯಲು ಶುರುವಾಗಿತ್ತು. ನಗರದ ದಕ್ಷಿಣದ ಭಿಕಾರದಾಸ ಗೇಟ್, ಚಿಂಚೇಟೆ ತಾಲೀಮ್, ಸ್ವಾರರೇಟ್, ಮೊದಲಾದ ಹಲವು ದಾರಿಗಳಲ್ಲಿ ಜನರು ತಂಡೋಪತಂಡಗಳಾಗಿ ಪರ್ವತಿಯ ಮೆಟ್ಟಿಲುಗಳು ಬಂದು ಅಪ್ಪಳಿಸತೊಡಗಿದ್ದರಿಂದ ಒಂದು ಯಾತ್ರೆಯಂತಹ ದೃಶ್ಯವೇ ಎಲ್ಲೆಡೆಗೆ ಕಾಣತೊಡಗಿತು. ಶ್ರಾವಣ ಮಾಸದ ಕೊನೆಯ ಸೋಮವಾರದಂದು ಕೂಡ ಆಗದಷ್ಟು ಜನದಟ್ಟಣೆ ಇಂದು ಅಲ್ಲಿ ಕಾಣತೊಡಗಿದ್ದರಿಂದ ಇಂದು ಇಲ್ಲಿ ಏನಾದರೂ ವಿಶೇಷವಾದ ಸಂಗತಿ ನಡೆಯಲಿದೆ ಎಂಬುದು ಸ್ಪಷ್ಟವಾಗಿ ಕಾಣುತ್ತಿತ್ತು. ಎಂಟು, ಎಂಟೂವರೆಯ ಹೊತ್ತಿಗೆಂದರೆ ಸುಮಾರು ಎರಡು, ಎರಡೂವರೆ ನೂರರಷ್ಟು ಜನ ಅಸ್ಪೃಶ್ಯರು ಹಾಗೂ ಅವರ ಸತ್ಯಾಗ್ರಹಕ್ಕೆ ಅಂತಃಕರಣಪೂರ್ವಕವಾಗಿ ನೆರವಾಗಲೆಂದು ಕೆಲವು ಜನ ಅಸ್ಪೃಶ್ಯರು ಕೂಡ ಪರ್ವತಿಯ ಅಡಿಭಾಗದಲ್ಲಿದ್ದ ಧರ್ಮಶಾಲೆಯ ಹತ್ತಿರದಲ್ಲಿ ಕಟ್ಟಲಾಗುತ್ತಿರುವ ಹೊಸ ದೇವಾಲಯದ ಎದುರಿನ ಪರ್ವತಿಯ ಬದಿಯ ಬಯಲಲ್ಲಿ ಸೇರಿದ್ದರು. ಎಂಟೂವರೆ, ಒಂಭತ್ತು ಗಂಟೆಯ ಸುಮಾರಿಗೆ ಅಸ್ಪೃಶ್ಯರ **ಒಂದು**

**ದಿಂಡಿಯ (ಪಲ್ಲಕ್ಕಿ ಯಾತ್ರೆ) ಭಜನೆಯ** ಪರ್ವತಿಯ ಅಡಿಯ ಹತ್ತಿರ ಸತ್ಯಾಗ್ರಹಿಗಳನ್ನು ಸೇರಿಕೊಳ್ಳಲೆಂದು ದಂಡಿನ ವಲಯದಿಂದ ಬಂದಿತು. ರಾ. ಥೋರಾತ, [ಹೊಲೆಯರು] ರಾ. ಲಾಂಡಗೆ [ಮಾದಿಗರು] ಮೊದಲಾದ ಇಪ್ಪತ್ತೈದು, ಮೂವತ್ತು ಜನರು ಹಾಗೂ **ಅಸ್ಪೃಶ್ಯ ಸಮುದಾಯದ ಕೆಲವು ಸ್ತ್ರೀಯರು** ಈ ದಿಂಡಿಯೊಡನೆ ಬಂದು ತಲುಪಿದರು. ದಾರಿಯಲ್ಲಿ ಅವರು ನಡುನಡುವೆ ಹಾರ್ಮೋನಿಯಮ್ದ ತಾಳಸ್ವರಗಳೊಂದಿಗೆ ಭಜನೆಗಳನ್ನು ಹೇಳುತ್ತಿದ್ದರು. ದಿಂಡಿಯ **ಜನರು 'ಛತ್ರಪತಿ ಶಿವಾಜಿ ಮಹಾರಾಜಕೀ ಜಯ,' 'ಚೋಖಾಮೇಳಾ ಕೀ ಜಯ**,' ಎಂದು ಜಯ ಜಯಕಾರವನ್ನು ಮಾಡುತ್ತ ಪರ್ವತಿಯ ಅಡಿಗೆ ಬಂದು ಅಲ್ಲಿಯ ಸತ್ಯಾಗ್ರಹಿಗಳನ್ನು ಸೇರಿಕೊಂಡರು.

ಇತ್ತ ಸತ್ಯಾಗ್ರಹದ ವಿರೋಧಿಗಳಾದ ಮತ್ತು ಯಾವುದೇ ಬದಿಯನ್ನು ವಹಿಸದೆ ಏನು ನಡೆದಿದೆ ಎಂದು ಕುತೂಹಲದಿಂದ ನೋಡಲು ಸೇರಿದ ನೂರಾರು ಜನರು ಪರ್ವತಿಯ ಮೆಟ್ಟಿಲುಗಳನ್ನು ಏರುತ್ತ ಮೇಲಕ್ಕೆ ಹೋಗುತ್ತಿದ್ದರು. ಆಗ ಬಿಸಿಲಿನ ಬೇಗೆ ತುಂಬ ಹೆಚ್ಚಿತ್ತು. ಹೀಗಾಗಿ ಪರ್ವತಿಯ ಅಡಿಯ ಗಿಡಮರಗಳ ನೆಳಲಿನ ಜಾಗಗಳೆಲ್ಲ ಜನರ ದಟ್ಟಣೆಯಿಂದ ತುಂಬಿಬಿಟ್ಟಿದ್ದವು. ಮೆಟ್ಟಿಲುಗಳ ಮೇಲೆಲ್ಲ ಒಂದೇ ಸಮನೆ ಜನರ ನಡೆದಾಟ ನಡೆದೇ ಇದ್ದಿತು. **ಸ್ಪೃಶ್ಯರ ತಂಡಗಳು** ದಾರಿಯ



ತಿರುವು ತಿರುವುಗಳಲ್ಲಿ ಕಾಯಮ್ಮಾಗಿ ಇರಿಸಿದ ಕಬ್ಬಿಣದ ಬೆಂಚುಗಳ ಮೇಲೆಲ್ಲ ಜಾಗ ಹಿಡಿದು ಕುಳಿತಿದ್ದವು. ಪರ್ವತಿಯ ಮುಖ್ಯ ದೇವಾಲಯದತ್ತ ಹೋಗುವ ಕೊನೆಯ ತಿರುವಿನಲ್ಲಿರುವ ಕಲ್ಲಿನ ನಂದಿಯ ಹತ್ತಿರದ ಜನರ ಗದ್ದಲವಂತೂ **ಪರ್ವತಿಯ ಮೇಲೆ ಹೋಗುವ ದಾರಿಯನ್ನು** ಮುಚ್ಚಿ ಬಿಟ್ಟಿತ್ತು. ಕೆಲವರು ಎರಡೂ ಬದಿಗಳ ಕುಳ್ಳನೆಯ ಕೊತ್ತಳಗಳ ಮೇಲೆ ತೆರೆದ ಕೊಡೆಗಳನ್ನು ಹಿಡಿದುಕೊಂಡು ನಿಂತಿದ್ದರು. ಬಹಳಷ್ಟು ಜನರು ಅಲ್ಲಿಯ ಮೆಟ್ಟಿಲುಗಳ ಮೇಲೆಲ್ಲ ದಟ್ಟೈಸಿ ಕುಳಿತಿದ್ದರು.

ಪುಣೆಯ ಕಲೆಕ್ಟರಸಾಹೇಬರಾದ ಮಿ. ಗುಲ್ಸ್, ಅಸಿ. ಕಲೆಕ್ಟರ್ ಮಿ, ಇರ್ಝ್ಯೂಕೆಲ್, ರಾ. ಹಸಬನೀಸ ತಹಶೀಲ್ದಾರರು ಹಾಗೂ ಇನ್ನೂ ಕೆಲವು ಅಧಿಕಾರಿಗಳು ಪರ್ವತಿ ಗುಡ್ಡದ ನೆತ್ತಿಯ ಮೇಲಿನ ಎಲ್ಲ ವ್ಯವಸ್ಥೆಗಳನ್ನು ತೀರ ಮೊದಲಿನಿಂದಲೇ ನೋಡಲೆಂದು ಮುಂಜಾವಿನಲ್ಲಿಯೇ ಅಲ್ಲಿಗೆ ಹೋಗಿ ಹಾಜರಿದ್ದರು. ಸತ್ಯಾಗ್ರಹಿಗಳನ್ನು ತಡೆಯಲೆಂದು ಟ್ರಸ್ಟಿಗಳು ಹಿಂದಿನ ದಿನದಿಂದಲೇ **ಪರ್ವತಿಯ ಮೇಲಿನ ಎಲ್ಲ ದೇವಾಲಯಗಳ ಬಾಗಿಲುಗಳನ್ನು ಮುಚ್ಚಿ** ಅವುಗಳಿಗೆ

ಬೀಗಗಳನ್ನು ಹಾಕಿದ್ದರಿಂದ ಸ್ಪೃಶ್ಯರಾಗಲಿ, ಅಸ್ಪೃಶ್ಯರಾಗಲಿ ಒಳಕ್ಕೆ ಪ್ರವೇಶಿಸುವಂತಿರಲಿಲ್ಲ. ಪರ್ವತಿಯ ಮೇಲಿನ ಶ್ರೀ ಮಹಾದೇವನ ಮುಖ್ಯ ದೇವಾಲಯದ ಬಾಗಿಲುಗಳನ್ನು ಒಳಬದಿಯಿಂದ ಮುಚ್ಚಲಾಗಿತ್ತು. ಪ್ರಾಚೀನ ಕಾಲದಿಂದಲೂ ಈ ದೇವಾಲಯದ ಮಹಾದೇವನಿಗೆ **ಶ್ರೀ ದೇವದೇವೇಶ್ವರ** ಎನ್ನುವ ಹೆಸರು ರೂಢಿಯಲ್ಲಿದೆ. ಈ ದೇವಾಲಯವನ್ನು ಐತಿಹಾಸಿಕ ದಸ್ತಾವೇಜುಗಳಲ್ಲೂ ಇದೇ ಹೆಸರಿನಿಂದ ಉಲ್ಲೇಖಿಸಿರುವುದು ಕಂಡು ಬರುತ್ತದೆ. ಆದರೆ ಇತ್ತೀಚೆಗೆ ಈ ಹೆಸರು ಹಿಂದೆ ಬಿದ್ದು ಈ ದೇವಾಲಯವು ಪರ್ವತಿಯ ದೇವಾಲಯ, ಎಂಬ ಹೆಸರಿನಿಂದಲೇ ಸಾಮಾನ್ಯವಾಗಿ ಗುರುತಿಸಲ್ಪಡುತ್ತದೆ. ಪರ್ವತಿ ಗುಡ್ಡದ ನೆತ್ತಿಯ ಮೇಲಿನ ಸಮತಟ್ಟಾದ ನೆಲದ ಮೇಲೆ ಶ್ರೀವಿತ್ತಲ ರಖುಮಾಯಿ, ಕಾರ್ತಿಕೇಯಸ್ವಾಮಿ ಮತ್ತು ಶ್ರೀವಿಷ್ಣುವಿನ ದೇವಾಲಯಗಳನ್ನೂ ಸತ್ಯಾಗ್ರಹಕ್ಕೆ ಮೊದಲೇ, ಎಂದರೆ ಶನಿವಾರದಿಂದಲೇ ಪೂರ್ತಿ ಮುಚ್ಚಲಾಗಿದ್ದು ಸುರಕ್ಷೆಗಾಗಿ ಟ್ರಸ್ಟಿಗಳ ವಿನಂತಿಯ ಮೇರೆಗೆ ಅಲ್ಲಿ **ಶನಿವಾರದಿಂದ ಪೋಲೀಸ್ ಪಹರೆ** ಇದ್ದಿತು. ಭಾನುವಾರ ಮುಂಜಾನೆಯಂತೂ ರಾ. ಪಾಟೀಲ ಫೌಜದಾರರು ಇನ್ನೂ ಕೆಲವು ಜನ ಪೋಲೀಸ್ ಅಧಿಕಾರಿಗಳು ಹಾಗೂ ಸುಮಾರು ನಲವತ್ತು, ಐವತ್ತು ಜನರ ಪೋಲೀಸ್ ತುಕಡಿಯನ್ನು ತೆಗೆದುಕೊಂಡು ಅಲ್ಲಿಗೆ ಬಂದರು. ಅವರು ಅಲ್ಲಲ್ಲಿ ಬಂದೋಬಸ್ತು ಮಾಡುತ್ತ ತಿರುಗುತ್ತಿದ್ದರು. ಒಂಬತ್ತು ಗಂಟೆಗೆ ಸೂರ್ಯ ಮೇಲಕ್ಕೆ ಏರತೊಡಗಿದಂತೆ ಬಿಸಿಲಿನ ಬೇಗೆ ಹೆಚ್ಚುತ್ತ ಹೋಯಿತು. ಅದೇ ರೀತಿಯಾಗಿ ಇತ್ತ ಎಲ್ಲ ಸ್ಪೃಶ್ಯ ಜಾತಿಯವರ ಗದ್ದಲವೂ ಬೆಳೆದು ಸುಮಾರು ಮೂರು ನಾಲ್ಕು **ಸಾವಿರದಷ್ಟರ** ಜನಸಮೂಹವು ಪರ್ವತಿಯ ಮೇಲೆ ಕಾಣತೊಡಗಿತು. ಬಹಳಷ್ಟು ಜನರು ಮೊದಲು ಪರ್ವತಿ ದೇವಾಲಯದ **ಹೆಬ್ಬಾಗಿಲಿನ ಎದುರು ದಟ್ಟವಾಗಿ** ಕುಳಿತಿದ್ದರು. ಅದೆಷ್ಟೋ ಜನರು ನಗಾರಖಾನೆಯತ್ತ ಹೋಗುವ ಕಲ್ಲಿನ ಮೆಟ್ಟಲುಗಳನ್ನು ಪೂರ್ತಿ ತುಂಬಿದ್ದರು. ಕೆಲವು ಹೊತ್ತಿನ ತರುವಾಯ ಪೋಲೀಸ್ ಅಧಿಕಾರಿಗಳು ಅಲ್ಲಿಗೆ ಬಂದು, ನಗಾರಖಾನೆಯವರಿಗೆ ಅಲ್ಲಿಯ **ಜಾಗ ತೆರವು ಮಾಡಿ ಹೊರಟು ಹೋಗಬೇಕೆಂಬ ಆದೇಶವನ್ನು** ಜಾರಿಗೊಳಿಸಿದರು. ಆ ಪ್ರಕಾರ ಜನರು ನಿಧಾನವಾಗಿ ಅಲ್ಲಿಂದ ಹೊರಟುಹೋಗಿ, ಹೆಬ್ಬಾಗಿಲ ಎದುರಿನ ಮೆಟ್ಟಿಲುಗಳು ಹಾಗೂ ನಗಾರಖಾನೆಯ ನೆಲಮಾಳಿಗೆಯನ್ನು ತೆರವು ಮಾಡಿದರು. ಈ ಹೊತ್ತಿನವರೆಗೆಂದರೆ **ಕಲೆಕ್ಟರ್ ಮಿ. ಗುಲ್ಫ್ ಅವರು ನಾನಾಸಾಹೇಬ ಪೇಶವೆ ಅವರ ಸ್ಮಾರಕ ಮಂದಿರದೆದುರಿನ** ತೆರವಿದ್ದ ಜಾಗೆಯಲ್ಲಿ ಮರದ ನೆಳಲಲ್ಲಿ ಕುರ್ಚಿಯ ಮೇಲೆ ಕುಳಿತು ಸುತ್ತಲೂ ಕಣ್ಣಿರಿಸಿದ್ದರು. ಕಲೆಕ್ಟರ್ ಸಾಹೇಬರ ಪರ್ಸನಲ್ ಅಸಿಸ್ಟಂಟ್

ಮಿ, ಇರಿಕೆಲ್, ಇನಸ್ಪೆಕ್ಟರ್ ಮಿಲ್ಸ್, ರಾ. ಪಾಟೀಲ ಫೌಜದಾರ ಮತ್ತು ರಾ. ಹಸಬನೀಸ್ ಮ್ಯಾಜಿಸ್ಟ್ರೇಟ್, ಮೊದಲಾದ ಅಧಿಕಾರಿಗಳು ಅಲ್ಲಿಗೆ ಬಂದುಹೋಗುತ್ತಿದ್ದರು. ಅವರು ತಮ್ಮ ತಮ್ಮಲ್ಲಿ ಮಾತಾಡಿಕೊಳ್ಳುತ್ತಲೂ ಇದ್ದರು. ತರುವಾಯ ಕಲೆಕ್ಟರ್ ಸಾಹೇಬರು ಅಲ್ಲಿಂದೆದ್ದು ಮುಖ್ಯ ದೇವಾಲಯದ ಕಲ್ಲುಹಾಸಿನ ಮೇಲೆ ಬಂದರು. ಇಲ್ಲಿಂದ ಪರ್ವತಿಯ ಮೆಟ್ಟಿಲುಗಳ ದಾರಿಯು ಕೆಳಬದಿಗೆ ಬಲು ದೂರದವರೆಗೆ ಕಾಣುತ್ತಿದ್ದ ಕಾರಣ ಅಲ್ಲಿ ನಿಂತುಕೊಳ್ಳಲೆಂದು ಅವರು ಆ ಜಾಗವನ್ನು ಆಯ್ದು ಕೊಂಡರೆಂದು ಕಾಣುತ್ತದೆ. ಈ ರೀತಿಯಾಗಿ ಸರಕಾರಿ ಅಧಿಕಾರಿಗಳು ಹಾಗೂ ಪೋಲೀಸರ ಸಿದ್ಧತೆ ಪೂರ್ತಿಯಿತ್ತು. ಇತ್ತ ವಿಷ್ಣುವಿನ ದೇವಾಲಯದ ಎದುರು ಮುಚ್ಚಬಹುದಾದ ಬಾಗಿಲು ಇಲ್ಲವೆ ಗೇಟು ಕೂಡ ಇಲ್ಲದರಿಂದ **ಬಿದಿರಿನ ಗಳಗಳನ್ನು ಅಡ್ಡಕ್ಕೆ ಕಟ್ಟಿ ಅಲ್ಲಿಯ ದಾರಿಯನ್ನು** ಮುಚ್ಚಲಾಗಿತ್ತು. ಹೀಗಾಗಿ ಜನರು ಒಳಕ್ಕೆ ಹೋಗದಂತಿತ್ತು. ಆದರೆ ಒಂದು ಬಿಡಾಡಿ ನಾಯಿ ಮಾತ್ರ ಯಾವುದೇ ತಡೆಯಿಲ್ಲದೆ ಪ್ರವೇಶಪಡೆದು ಮಹಾವಿಷ್ಣುವಿನ ದೇವಾಲಯದ ಎದುರಿನ ಹಾಸುಗಲ್ಲಿನ ಮೇಲೆ ತೆಪ್ಪಗೆ ಕುಳಿತುದು ಕಾಣುತ್ತಿತ್ತು. ಅದು ಒಳಗೆ ಕುಳಿತುದನ್ನು ಕಂಡು ತಡೆಹಿಡಿಯಲಾದ ಸ್ಪೃಶ್ಯರಿಂದ ಏನೇನೋ ಮಾತುಗಳು ಹೊರಬೀಳುತ್ತಿದ್ದವು. ಯಾರೋ, **ನಾಯಿಗೂ ಪ್ರವೇಶವಿದ್ದ ಎಡೆಯಲ್ಲಿ ಸ್ಪೃಶ್ಯರಿಗೆ ಇರಬಾರದೆ ?** ಎನ್ನುತ್ತಿದ್ದರೆ, ಇನ್ನಾರೋ 'ಶ್ವಾನೋ ಯುವಾನೋ ಮಘವಾನ್' ಎನ್ನುವ ಸೂತ್ರವನ್ನು ಸ್ಮರಿಸಿ ಅಲ್ಲಿಂದ ಹಿಂತಿರುಗುತ್ತಿದ್ದರು. ಇತ್ತ ಮೆಟ್ಟಿಲುಗಳ ಮುಖ್ಯ ದಾರಿಯು ಗುಡ್ಡದ ಮೇಲೆ ಮುಗಿಯುವಲ್ಲಿ ಜನರ ಗಲಭೆ ನಡೆದಿತ್ತು. ಅದೆಷ್ಟೋ ಜನ ಫೋಟೋಗ್ರಾಫರರು **ತಮ್ಮ ಕೆಮೆರಾಗಳನ್ನು ಸಿಂಗರಿಸಿ** ಜನಸಂದಣಿ ಹಾಗೂ ದೇವಾಲಯಗಳ ಬೇರೆ ಬೇರೆ ಬದಿಗಳ ಫೋಟೋಗಳನ್ನು ಕ್ಲಿಕ್ಕಿಸುತ್ತ ಮೈಮರೆತಿದ್ದರು.

**ಪರ್ವತಿಯ ಅಡಿಗೆ ಕುಳಿತ ಸತ್ಯಾಗ್ರಹಿಗಳು** ಒಬ್ಬರಿಗೊಬ್ಬರು ಈ ವೇಳೆಗೆ ಶಾಂತಿ ಹಾಗೂ ಶಿಸ್ತಿನಿಂದ ನಡೆದುಕೊಳ್ಳಲು ಹೇಳುತ್ತಿದ್ದರು. ಅಸ್ಪೃಶ್ಯರ ಸತ್ಯಾಗ್ರಹದಲ್ಲಿ ಹಲವು ಜನ ಸ್ಪೃಶ್ಯರೂ ಪಾಲುಗೊಂಡಿದ್ದರು. ಅಸ್ಪೃಶ್ಯರ ಭಜನಿ ಮಂಡಳಗಳಿಂದ ನಿರಂತರವಾಗಿ ಹರಿನಾಮದ ಘೋಷ ನಡೆದಿತ್ತು. ರಾ. ಶ್ರೀ ರಾ. ಥೋರಾತ್ ಅವರ ಭಜನಿ ದಿಂಡಿಯು ಸಡಗರವನ್ನು ಮೆರೆಯಿತು. ಅದರ ಒಟ್ಟು ನೋಟವು ತುಂಬ ಅಂದವಾಗಿತ್ತು. ಮಂದಿರಪ್ರವೇಶಕ್ಕಾಗಿ ಹಂಬಲಿಸಿದ ಅಸ್ಪೃಶ್ಯ ಬಾಂಧವರ ಮುಖಗಳ ಮೇಲೆ ಒಂದು ಬಗೆಯ ಹೊಸ ಚೈತನ್ಯವು ಮೂಡಿತ್ತು.

**ಭಜನರಂಗದ ತರುವಾಯ ಭಾಷಣಗಳು** ಶುರುವಾದವು. ರಾ. ಶಿವರಾಮ ಜಾನಬಾ ಕಾಂಬಳೆ, ರಾ. ರಾಜಭೋಜ, ರಾ. ಥೋರಾತ್, ಮೊದಲಾದ ಅಸ್ಪೃಶ್ಯರ ಮುಂದಾಳುಗಳ ಹೃದಯಸ್ಪರ್ಶಿಯಾದ ಭಾಷಣಗಳಾಗಿ ಅವರು ಅಸ್ಪೃಶ್ಯ ಬಾಂಧವರಿಗೆಲ್ಲ ಶಾಂತಿ ಹಾಗೂ ಶಿಸ್ತಿನಿಂದ ನಡೆದುಕೊಳ್ಳಲು ಕಳಕಳಿಯ ಕರೆಕೊಟ್ಟರು. ನಾವು ನಿಮ್ಮ ಮಾತನ್ನು ಎಳ್ಳಷ್ಟೂ ಮೀರುವವರಲ್ಲ' ಎಂಬ ಅರ್ಥದ ಕೂಗುಗಳು ಕೇಳಿ ಬರತೊಡಗಿದವು. ರಾ. ರಾಜಭೋಜ ಅವರು

ತಮ್ಮ ಭಾಷಣದಲ್ಲಿ ಸತ್ಯಾಗ್ರಹದ ವಿರೋಧಿಗಳನ್ನೆಲ್ಲ ಧಿಕ್ಕರಿಸಿದರು. ಇಂಗಳೆ, ಲಾಂಡಗೆ ಮೊದಲಾದ ಮಾದಿಗ ಸಮುದಾಯದ ಪ್ರಮುಖರು ತಮಗೆ ಒಂದು ಪತ್ರವನ್ನು ರವಾನಿಸಿದ್ದು, ಅದರಲ್ಲಿ ಜ್ಞಾತಿಯವರು 'ಸಕಟ ವಾಯದಂಡೆ ಅವರನ್ನು ನಂಬುತ್ತಿಲ್ಲವೆಂದು ತಿಳಿಸಿರುವರೆಂದರು. ತರುವಾಯ ರಾ. ಥೋರಾತ್ ಅವರು, 'ಆ ಪತ್ರವು 'ಕೇಸರಿ ಯಲ್ಲಿ ಪ್ರಕಟವಾಗಿದ್ದು ಅದಕ್ಕೆ ನನ್ನ ಸಹಿ ಇದೆ, ಆದರೆ ಆ ಪತ್ರವನ್ನು 'ಕೇಸರಿ'ಯಲ್ಲಿ ಪ್ರಕಟಣೆಗಾಗಿ ಕಳಿಸಲಾಗುತ್ತದೆಂಬುದು ನನಗೆ ತಿಳಿದಿರಲಿಲ್ಲ. ನಮ್ಮಲ್ಲಿಯ ವೈಯಕ್ತಿಕವಾದ



ಭಿನ್ನಾಭಿಪ್ರಾಯದಿಂದಾಗಿ ನಾನು ಆ ಮನವಿಗೆ ಸಹಿ ಮಾಡಿದ್ದೆ. ಆದರೆ ಯಾರೂ ದಯವಿಟ್ಟು ನನ್ನನ್ನು ತಪ್ಪಾಗಿ ತಿಳಿಯಬಾರದು. ನಾನು ಸತ್ಯಾಗ್ರಹವನ್ನು ಪೂರ್ತಿ ಪುರಸ್ಕರಿಸುವವನು. ನಾನು ಹಾಗೂ ನನ್ನ ಹೆಂಡತಿ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದೇವೆ. ಈ ಸತ್ಯಾಗ್ರಹವು ಯಶಸ್ವಿಯಾಗಲೆಂದು ನಾನು ಎರಡು ರೂಪಾಯಿಗಳ ನೆರವನ್ನು ನೀಡುತ್ತಿದ್ದೇನೆ. ಎರಡನೆಯ ಸಂತೋಷದ ಸುದ್ದಿಯೆಂದರೆ ದಂಡಿನ ಭಾಗದ ಒಬ್ಬ ಗುಜರಾತಿ ವ್ಯಾಪಾರಿಯಾದ ಭಗನಭಾಯಿ ಭಿಕಾಭಾಯಿ ಬೀಡಿ ಮರ್ಚಂಟ್ ಇವರು ಸತ್ಯಾಗ್ರಹದ ನೆರವಿಗಾಗಿ ರೂ. ೫ ರ ಕೊಡುಗೆಯನ್ನು ನೀಡಿರುವರು. ಅದೇ ರೀತಿಯಾಗಿ ರಾ. ಥೋರಾತ್ ಅವರ ಭಾಷಣ ಮುಗಿದ ಬಳಿಕ ರಾ. ನ. ವಿ. ಗಾಡಗೀಳ ಅವರ ಭಾಷಣವಾಯಿತು. ಅವರು ಅಸ್ಪೃಶ್ಯರಿಗೆ ಸಹಾನುಭೂತಿಯನ್ನು ತೋರಿಸುವುದನ್ನು ಕುರಿತು ಸ್ಪೃಶ್ಯರಿಗೆ ವಿನಂತಿಯನ್ನು ಮಾಡಿಕೊಂಡರು. ಭಾಷಣಗಳೆಲ್ಲ ಇದೇ ರೀತಿಯಾಗಿ ನಡೆದವು.

ಅಸ್ಪೃಶ್ಯ ಸಮುದಾಯದ ಈ ಮುಂದಿನ ಜನರು ಸತ್ಯಾಗ್ರಹದ ಸಂದರ್ಭದಲ್ಲಿ ಹಾಜರಿದ್ದುದು ಕಾಣುತ್ತಿತ್ತು. ರಾ. ಪಾಂ, ನಾ. ರಾಮಭೋಜ, ಶಿವರಾಮ ಜಾನಬಾ ಕಾಂಬಳೆ, ಮಿಸೆಸ್ ತಾನುಬಾಯಿ ಕಾಂಬಳೆ ಮತ್ತು ಅವರ ಕನ್ನೆಯಾದ ಮಿಸೆಸ್ ಶೇವಂತೀಬಾಯಿ ಓಗಳೆ, ಸ. ಕಂ. ದ ಉಪಾಧ್ಯಕ್ಷರಾದ ಲಾಂಡಗೆ, ಜ, ಸ, ರಣಪಿಸೆ, ಶ್ರೀ ರಾ. ಥೋರಾತ್, ಆರ್. ಕೆ. ಕದಮ್, ಮೊದಲಾದ ಸುಮಾರು ೧೫೦ ಜನ ಅಸ್ಪೃಶ್ಯ ಸ್ತ್ರೀ-ಪುರುಷರು ಗುಡ್ಡದ ಅಡಿಗೆ

ಒಕ್ಕಟ್ಟಾಗಿ ಶಾಂತಿಯಿಂದ ನಿಂತಿದ್ದರು. ಪರ್ವತಿಯ ದಾರಿಯನ್ನು ಅಕ್ರಮಿಸಲೆಂದು ಸತ್ಯಾಗ್ರಹಿಗಳು ಮೊದಲಿಗೆ ೧೨ ಜನರ ತಂಡವನ್ನು ಆಯ್ಕೆ ಮಾಡಿದರು. ಅದರಲ್ಲಿ ನಾಲ್ವರು ಸ್ತ್ರೀಯರಿದ್ದರು. ತರುವಾಯ ಮೂವರು ಮೂವರಂತೆ ನಾಲ್ಕು ತಂಡಗಳನ್ನು ಮಾಡಲಾಯಿತು. ಅವು ಮುಂದಿನಂತಿವೆ :

**ಮೊದಲ ತಂಡ**

ರಾ. ಗಾಡಗೀಳ, ರಾಜಭೋಜ, ಭುಸ್ಕುಟೆ.

**ಎರಡನೆಯ ತಂಡ**

ಕಾಂಬಳೆ ಅವರ ಪತ್ನಿ, ಕಾಂಬಳೆ ಅವರ ಕನ್ನೆ.

**ಮೂರನೆಯ ತಂಡ**

ಕಾಂಡಗೆ, ಕೋಥಳೇಕರ, ಸ್ವಾಮಿ ಯೋಗಾನಂದ.

**ನಾಲ್ಕನೆಯ ತಂಡ**

ಈಶ್ವರಾ, ಭಾವು ವಾಘಚೌರೆ, ಕೋಥಳೇಕರ ಅವರ ತಾಯಿ.

**ಐದನೆಯ ತಂಡ**

**ಪೈಸಾ ಫಂಡ್‌ದ ರಾನಡೆ ಅವರು ಎಲ್ಲರಿಗಿಂತ ಹಿಂಬದಿಯಲ್ಲಿ** ನಡೆಯುತ್ತಿದ್ದರು. ಇದಲ್ಲದೆ, ರಾ. ಕೇಶವರಾವ ಜೇಧೆ, ರಾ. ರಾ. ಮಾಧವರಾವ ಶ್ರೀಪತಿರಾವ ಶಿಂದೆ, ಮಜೂರದ ಸಂಪಾದಕರಾದ ರಾ. ಲಾಡ, ಮೊದಲಾದ ಬ್ರಾಹ್ಮಣೇತರ ಪಕ್ಷದವರೂ ಸತ್ಯಾಗ್ರಹಕ್ಕೆ ನೆರವಾಗಲೆಂದು ಅಲ್ಲಿ ಹಾಜರಿದ್ದರು. ಒಂಬತ್ತು ಗಂಟೆಯಾಗಲು ಬಂದಿತ್ತು. ಆಗ ಪರ್ವತಿಯ ಅಡಿಯ ಬಳಿಯ ಮೆಟ್ಟಲುಗಳಿಂದ ಜಯಜಯಕಾರದ ಗರ್ಜನೆ ಕೇಳಿಬರತೊಡಗಿತು. ಅದರೊಟ್ಟಿಗೆ ಸತ್ಯಾಗ್ರಹಿಗಳು ಮೇಲೇರಲು ಹೊರಟ ಸೂಚನೆಯು ತಾನಾಗಿಯೇ ಎಲ್ಲರನ್ನೂ ತಲುಪಿತು. ಸತ್ಯಾಗ್ರಹಿಗಳು ನಿಧಾನವಾಗಿ ಮೇಲೇರಲು ಶುರು ಮಾಡುತ್ತಲೆ ದಾರಿಯ ಇಬ್ಬದಿಗಳಲ್ಲಿ ಹಾಗೂ ಸುತ್ತಲ ಗುಡ್ಡದ ಭಾಗದ ಮೇಲೆ ನಿಂತುಕೊಂಡಿದ್ದ



ಸ್ಪೃಶ್ಯ ಜನರ ತಂಡಗಳಿಂದ ವಿರೋಧದ ಗರ್ಜನೆ ಹಾಗೂ ಕೈಬೀಸುವಿಕೆಗಳು ಶುರುವಾದವು. ಸತ್ಯಾಗ್ರಹಿಗಳನ್ನು ಹೀಯಾಳಿಸಲು ಶುರುವಾಯಿತು. **ಈ ಹೊಲೆಯರು ದೇವಾಲಯವನ್ನು ಹೇಗೆ ಪ್ರವೇಶಿಸುತ್ತಾರೋ, ನೋಡಿಯೇ ಬಿಡ್ತೀವಿ**

ಎಂಬ ಬೆದರಿಕೆಯೊಡ್ಡುವ ಮಾತುಗಳೂ ಅದೆಷ್ಟೋ ಜನರ ಬಾಯಿಗಳಿಂದ ಹೊರಡುತ್ತಿದ್ದವು. ಹೀಗೆ ಆಗುತ್ತ ಅಗುತ್ತ, ಸತ್ಯಾಗ್ರಹವನ್ನು ಮಾಡುವವರಾದ **“ರಾ, ಭುಸ್ಕುಟೆ, ರಾಜಭೋಜ, ಗಾಡಗೀಳ, ಲಾಂಡಗೆ, ಮೊದಲಾದವರು”** ಕಲ್ಲಿನ ಮೆಟ್ಟಿಲುಗಳನ್ನು ಏರುತ್ತ ಬಹಳಷ್ಟು ದಾರಿಯನ್ನು ಕ್ರಮಿಸಿ ತೀರ ಕೊನೆಯ ತಿರುವಿನ ಹತ್ತಿರಕ್ಕೆ ಬಂದರು. ಅಲ್ಲಿ ಮಾತ್ರ ಸನಾತನಿ ಸ್ಪೃಶ್ಯ ತಂಡಗಳ ವಿರೋಧವು ಬಹಳೇ ಹೆಚ್ಚಿದ್ದರಿಂದ ಅವರು ಒಂದು ಹೆಜ್ಜೆಯನ್ನೂ ವಂದಿಕ್ಕಲಾರದಾದರು. ಸತ್ಯಾಗ್ರಹಿಗಳಿಗೆ ಬೆದರಿಕೆಯೊಡುವ ಘೋಷಣೆ ಗಳು ಹೊರಹೊಮ್ಮತೊಡಗಿದವು. ಇಷ್ಟೇ ಅಲ್ಲದೆ ಮೈಗೆ ಮೈ ಅಂಟಿಕೊಂಡು ಒಂದೇ ಸಮನೆ ಕೆಳಕ್ಕೆ ನೂಕಲು ಶುರುವಾಯಿತು. ಈ ರೀತಿಯಾಗಿ ಗಲಭೆ ಶುರುವಾಗುತ್ತಲೇ ಮೇಲಕ್ಕೆ ಹೋಗುವ ದಾರಿಯೂ ಮುಚ್ಚಿ ಅವರಿಗೆ ಅಲ್ಲಿ ನಿಲ್ಲುವುದೂ ಅಸಾಧ್ಯವಾಯಿತು. ಸಾದಾ ಆಗಿದ್ದ ನೂಕು ನುಗ್ಗಲು **ಹೊಡೆದಾಟದಲ್ಲಿ ರೂಪಾಂತರಗೊಳ್ಳಲು** ಹೆಚ್ಚು ಸಮಯ ಬೇಕಾಗಲಿಲ್ಲ. ಕೆರಳಿದ ಅದೆಷ್ಟೋ ಜನ ಸನಾತನಿಗಳು ಸ್ಪೃಶ್ಯ ಸತ್ಯಾಗ್ರಹಿಗಳನ್ನು (ಅಂದರೆ ರಾ. ನರಹರಪಂತ ಗಾಡಗೀಳ ಹಾಗೂ ರಾ. ವಿನಾಯಕರಾವ ಭುಸ್ಸುಟೆ) ಒದೆತ, ಗುದ್ದುಗಳಿಂದ ಥಳಿಸತೊಡಗಿದರು. ಅದೆಷ್ಟೋ ಜನ ಪರಸ್ಪರರನ್ನು ಅವರ ಮೈ ಮೇಲೆ ನೂಕುವಂಥ **ಹಳ್ಳಿಯ ಗಾಂಪರ ಆಟವನ್ನು** ಶುರು ಮಾಡಿದರು. ಸತ್ಯಾಗ್ರಹಿಗಳು ತುಂಬ ಶಾಂತಿಯಿಂದ ಇದನ್ನು ಸಹಿಸಿಕೊಳ್ಳುತ್ತಿದ್ದರು. ಮೆಟ್ಟಿಲಿನ ಮೇಲಿನ ಬದಿಯಲ್ಲಿ ರಾ. ನಾರಾಯಣರಾವ ಗುಂಜಾಳ, ರಾ. ವಿಶ್ವಾಸರಾವ ಡಾವರೆ, ಶ್ರೀಮಂತ ಅಪ್ಪಾಸಾಹೇಬ ಗದ್ದೆ, ರಾ. ಗೋ, ಪಾ. ಮಹಾಜನ, ರಾ. ಬಾಬೂರಾವ ಫುಲೆ, ರಾ. ಗಣಪತರಾವ ದೇವಧರ, ಡಾ. ಜೆಜೂರೀಕರ, ರಾ. ಝೂಂಝುಲೆ, ರಾ. ನಲಾವಡೆ, ರಾ. ದೇಡಗಾವಕರ, ಮೊದಲಾದ ಸನತನಿ ಮತದ ಮುಂದಾಳುಗಳು ಅತ್ತಿತ್ತ ಅಲೆದಾಡುತ್ತಿದ್ದರು. ಅವರ ಆಚೆಗೆಯೇ ಹತ್ತು ಹನ್ನೆರಡು ಮೆಟ್ಟಿಲುಗಳ ಕೆಳಕ್ಕೆ ಒಂದೇ ಸವನೆ ಗಲಭೆ ನಡೆದಿತ್ತು. ಒಟ್ಟಿನಲ್ಲಿ ಪರಿಸ್ಥಿತಿಯು ತೀರ ಬಿಕ್ಕಟ್ಟಿನದಾಗುವ ಚಿಹ್ನೆಗಳು ಕಂಡುಬರತೊಡಗಿದವು. ಸನಾತನಿಗಳು ನೂಕುನುಗ್ಗಲು ಮಾಡುತ್ತ ಗಾಡಗೀಳ, ಭುಸ್ಕುಟೆ, ರಾಜಭೋಜ, ಲಾಂಡಗೆ ಅವರನ್ನು **ಮೆಟ್ಟಿಲುಗಳಿಂದ ಕೆಳಕ್ಕೆ ಪಾಪಾಸುಕಳ್ಳಿಯ ಮೇಲೆ ಕೆಡವಲು** ಯತ್ನಿಸುತ್ತಿದ್ದರು. ಹೀಗಾಗಿ ಈ ಜನರನ್ನು ಮೇಲಿನಿಂದ ಆಳದ ಕಂದಕಕ್ಕೆ ನೂಕಿಬಿಡಲಾಗುವುದೋ, ಏನೋ ಎನ್ನುವ ಹೆದರಿಕೆ ಅರೆಕ್ಷಣ ಹುಟ್ಟಿಕೊಂಡಿತು. ಆದರೆ ರಾ. ಗಾಡಗೀಳ ಮತ್ತು ಭುಸಕುಟೆಯವರು ಮತ್ತೆ ರಭಸದಿಂದ ಎದ್ದು ನಿಂತು ಸತ್ಯಾಗ್ರಹವನ್ನು ಆರಂಭಿಸಿದರು. ಅದೇ ವೇಳೆಗೆ **ದೇವಾಲಯದಿಂದ ಬಂದ ಒಂದು ದೊಡ್ಡ ಕಲ್ಲು ರಾ. ರಾಜಭೋಜರ ಹೆಗಲಿನ ಮೇಲೆ** ಅಪ್ಪಳಿಸಿತು. ಅದರಿಂದಾಗಿ ಅವರು ವಿಹ್ವಲರಾದರು. ಪಾಪಾಸುಕಳ್ಳಿಯ ಪ್ರಸಾದ ಎಲ್ಲರಿಗೂ ಸಿಕ್ಕಿತು. ಆದರೆ ಸತ್ಯಾಗ್ರಹಿಗಳು ಅದಕ್ಕೆ ಸೊಪ್ಪು ಹಾಕದೆ ಸನಾತನಿಗಳನ್ನು ಎದುರಿಸತೊಡಗಿದರು. ಆಗ ಸಣ್ಣ ಸಣ್ಣ ಕಲ್ಲುಗಳನ್ನು ಎಸೆಯಲಾಗುತ್ತಿತ್ತು. **ಕೆಲವು ಸನಾತನಿಗಳಿಗೂ ಕಲ್ಲಿನ ಪ್ರಸಾದ** ಲಭಿಸಿತು. ಆದರೆ ಅದು ಅವರ ಬದಿಯವರಿಂದಲೇ ಅವರಿಗೆ ಸಿಕ್ಕಿತ್ತು. ಸತ್ಯಾಗ್ರಹಿಗಳು ಜಿಗುಟುತನವನ್ನು ಬಿಡಲು ಸಿದ್ಧರಿಲ್ಲದುದನ್ನು ಕಂಡು ಸನಾತನಿಗಳು ಕೆರಳಿದಂತೆ ಕಂಡರು. ಈ ಹೊತ್ತಿಗೆಂದರೆ ಸೂರ್ಯನ ಕಿರಣಗಳು ಸಾಕಷ್ಟು ಪ್ರಖರವಾಗತೊಡಗಿದ್ದವು. ಅಷ್ಟರಲ್ಲಿ ಇದೇ ವೇಳೆಗೆ **ರಾ. ರಾಜಭೋಜ ಅವರು ಮೂರ್ಛೆ ಹೋದರು,** ಎಂಬ ವಾರ್ತೆ ಬಂದಿತು.

ಅವರಿಗೆ ತಲೆಯ ಮೇಲೆ, ಕತ್ತಿನ ಮೇಲೆ ಮತ್ತು ಇತರೆಡೆಗಳಲ್ಲೂ ಬಹಳಷ್ಟು ಪೆಟ್ಟು ಬಿದ್ದುದರಿಂದ ಕೊನೆಯಲ್ಲಿ ಅವರು ಮೂರ್ಛೆ ಹೋದರು. ಕೆಲವರು ಅವರನ್ನು ಅಲ್ಲಿಂದ ಹೊರಕ್ಕೆ ಸಾಗಿಸಲು ಯತ್ನಿಸಿದರು. ಬೊಕ್ಕ ತಲೆಯ **ದೇಶದಾಸ ರಾನಡೆ** ಅವರು ಎಂದಿನಂತೆ ಒಂದು ಖಾದಿ ಬಟ್ಟೆಯನ್ನು ಹೊದ್ದುಕೊಂಡು ಬಂದಿದ್ದರು. ಅವರ ಬರಿಗೂ ಕೋಲು, ಕೊಡೆ, ಕಲ್ಲು, ಇಟ್ಟಿಗೆ, ಮೊದಲಾದವುಗಳಿಂದ ಬಹಳಷ್ಟು ಏಟುಗಳು ಬಿದ್ದವು**. ರಾ. ನ. ವಿ. ಗಾಡಗೀಳ** ವಕೀಲರ ಮೇಲೆ ಗಲಭೆಕೋರ ಗೂಂಡಾಗಳ ಹೆಚ್ಚಿನ ಗುರಿ ಕಾಣುತ್ತಿತ್ತು. ಹೀಗಾಗಿ ಅವರೂ ಬಹಳಷ್ಟು ಹೊಡೆತ ಬಡಿತಗಳನ್ನು ಸಹಿಸಿಕೊಳ್ಳಬೇಕಾಯಿತು. ಎಸೆಯಲಾದ ಕಲ್ಲು ಬಡಿದ ಕಾರಣ ಅವರ ಕಾಲಿನಿಂದ ರಕ್ತ ಸುರಿಯತೊಡಗಿತು. ರಾ. ಭುಸಕುಟೆ ಹಾಗೂ ಇತರ ಸತ್ಯಾಗ್ರಹಿಗಳ ಅವಸ್ಥೆಯೂ ಇದೇ ಬಗೆಯದಾಯಿತು. ಆದರೆ ಸತ್ಯಾಗ್ರಹಿಗಳು ಪ್ರತಿ ಕಾರವನ್ನು ಮಾಡಲಿಲ್ಲ. ಅಭಿನಂದನೀಯವಾದ ಅವರು ಶಾಂತಿಯಿಂದ ಅದನ್ನು ಸಹಿಸಿಕೊಂಡರು. ಗೂಂಡಾಗಳ ಗುಂಪು ಸತ್ಯಾಗ್ರಹಿಗಳನ್ನು ಮೇಲೆಕ್ಕೇರಲು ಬಿಡದೆ ಅವರ ದಾರಿಯನ್ನು ತಡೆ ಹಿಡಿದು, ಅವರನ್ನು ಒಂದೇ ಸಮನೆ ಕೆಳಕ್ಕೆ ನೂಕಲು ಶುರು ಮಾಡಿತು. ಕೊನೆಯಲ್ಲಿ ಈ ಜನ ಮುಖ್ಯ ಬೀದಿಯ ಎಡ ಬದಿಯ ಕವಲು ಕಾಲುದಾರಿಯತ್ತ ತಿರುಗಿದರು. ಆದರೆ ಅಲ್ಲಿಯೂ ಹೊಡೆತ ಬೀಳುತ್ತಲೇ ಇದ್ದವು. ಮೆಟ್ಟಿಲು ದಾರಿಯ ಇಬ್ಬದಿಗಳಲ್ಲಿ ಬಹಳಷ್ಟು ಸೀತಾಫಲದ ಗಿಡಗಳಿವೆ. ಅಲ್ಲಿ ಯಾರೂ ಗಿಡಕ್ಕೆ ಕೈ ಹಚ್ಚ ಕೂಡದು. ಹಾಗೆ ಮಾಡಿದರೆ ಕಾನೂನಿನ ಕ್ರಮವನ್ನು ಕೈಕೊಳ್ಳಲಾಗುವುದು." ಎಂಬ ಬೋರ್ಡುಗಳನ್ನು ತಗಲಿಸಲಾಗಿತ್ತು. ಆದರೆ ಅದು ವ್ಯರ್ಥವಾಗಿ ಸತ್ಯಾಗ್ರಹಿಗಳ ಮೇಲೆ ಎರಡೂ ಬದಿಯವರಿಂದ **ಹಸಿ ಸೀತಾಫಲಗಳ ಎಸೆತ** ಶುರುವಾಯಿತು. ಸತ್ಯಾಗ್ರಹವಿರೋಧಿ ಪಕ್ಷದ ಕೆಲವು ಜನರು ತಮಾಷೆ ನೋಡಲು ಅನುಕೂಲದ ಜಾಗವೆಂದು ಮೊದಲೇ ಮರಗಳನ್ನು ಏರಿ ಕುಳಿತಿದ್ದರು. ಅವರು ಹತ್ತಿರದ ಟೊಂಗೆಗಳಿಂದ ಬಿರುಸಾದ ಸೀತಾಫಲದ ಕಾಯಿಗಳನ್ನು ಕಿ, ಎಸೆಯಲು ಶುರು ಮಾಡಿದರು. ಆಮೇಲೆ ಕೂಡಲೇ ಆಕಾಶದಲ್ಲಿ ಕಲ್ಲು, ಇಟ್ಟಿಗೆಗಳ ಸಂಚಾರ ಕಂಡುಬರತೊಡಗಿತು. ಕಾವಿ ಬಟ್ಟೆ ತೊಟ್ಟ **ಆರ್ಯಸಮಾಜದ ಸ್ವಾಮಿ ಯೋಗಾನಂದರು** ಸತ್ಯಾಗ್ರಹಿಗಳ ಬದಿಯಿಂದ ಮೇಲಕ್ಕೆ ಏರತೊಡಗಿದರು. ಜನರು ದಾರಿಯಲ್ಲಿ ಅವರನ್ನು ತಡೆದರು. ಒಬ್ಬನು ಅವರ ತಲೆಯ ಮೇಲಿನ ಕಾವಿ ರುಮಾಲನ್ನು ಹಾರಿಸಿಬಿಟ್ಟನು. ಅದರೊಟ್ಟಿಗೆ ಸ್ವಾಮಿಗಳು ಗಲಭೆ ಗೊಂದಲ ಮಾಡುವ ಜನರನ್ನು ಧಿಕ್ಕರಿಸಿ ಬಿಡುಗಡೆ ಹೊಂದಿ, ಮಿಸುಕಾಡಬಾರದೆಂಬ ಇರಾದೆಯಿಂದ ಅಲ್ಲಿಯ ಮೆಟ್ಟಿಲ ಮೇಲೆ

ಪದ್ಮಾಸನ ಹಾಕಿ ಕುಳಿತುಬಿಟ್ಟರು. ಕೂಡಲೇ ಗಲಭೆ ಮಾಡುವವರು ಅವರನ್ನು ಸುತ್ತುವರೆದರು. ಅವರಲ್ಲಿ ಒಬ್ಬನು ಸ್ವಾಮಿಗಳಿಗೆ ತಿಳಿಹೇಳಿ ಹಿಂತಿರುಗಿ ಹೋಗುವಂತೆ ಸಲಹೆ ನೀಡಿದನು. ಆದರೆ ಸ್ವಾಮಿಗಳ ನಿರ್ಧಾರವು ಕದಲದಂತಾಗಲು ಯಾರೋ **ಸ್ವಾಮಿಗಳನ್ನು ಎತ್ತಿ ಮೆಟ್ಟಿಲುಗಳಿಂದ ಕೆಳಕ್ಕೆ ನೂಕಿಬಿಟ್ಟರು**. ಅದರಿಂದಾಗಿ ಅವರು ಗಡ ಗಡನೆ ನಾಲ್ಕಾರು ಮೆಟ್ಟಿಲು ಕೆಳಕ್ಕೆ ಉರುಳಿ, ತಮ್ಮನ್ನೇ ಸಾವರಿಸಿಕೊಂಡು ಮತ್ತೆ ಮೇಲಕ್ಕೆ ಏರತೊಡಗಿದರು. ಆಗಲೇ ಇನ್ನಾರೋ ಅವರನ್ನು **ಕೆಳಕ್ಕೆ ನೂಕಿ ಬಿಟ್ಟರು**. ಈ ರೀತಿಯಾಗಿ ಬಹಳ ಹೊತ್ತು ಹೊಡೆದಾಟ ನಡೆದಾಗ ಪೊಲೀಸರು ದೇವಾಲಯದ ಬದಿಯಿಂದ ಕೆಳಕ್ಕೆ ಇಳಿದು ಬಂದು ಇದನ್ನು ತಡೆಯಲು ಯತ್ನಿಸಿದರು. ಸ್ವತಃ ಕಲೆಕ್ಟರ್ ಹಾಗೂ ಅವರ ಪರ್ಸನಲ್ ಅಸಿಸ್ಟಂಟ್ ರೂ ಕೂಡ ತುಂಬು ಗದ್ದಲದ ಸ್ಥಳದ ಮೆಟ್ಟಿಲಿಗೆ ಬಂದು ಗಲಭೆಯ ಜನರಿಗೆ ತಿಳಿಹೇಳಿ ಅವರನ್ನು ಶಾಂತಗೊಳಿಸಿದರು. ಆದರೆ ಒಂದೆಡೆ ಶಾಂತಿ ನೆಲೆಸಿದರೆ ಇನ್ನೊಂದೆಡೆಗೆ ಗಲಭೆ ಶುರುವಾಗಿ ಹೊಡೆದಾಟ ನಡೆಯುತ್ತಿತ್ತು. ಕೊನೆಗೆ ಪೊಲೀಸ ಅಧಿಕಾರಿಗಳು



**ರಾ. ಗಾಡಗೀಳ, ರಾಜಭೋಜ ಮೊದಲಾದ** ಸತ್ಯಾಗ್ರಹಿಗಳನ್ನು ದಂಗೆಕೋರರ ಕಪಿಮುಷ್ಟಿಯಿಂದ ಬಿಡಿಸಿ, ಕತ್ತಿಮೊನೆಯ ಬಂದೂಕು ಧಾರಿ ಏಳೆಂಟು ಜನ ಪೋಲೀಸರ ಸುರಕ್ಷೆಯಲ್ಲಿ ಅವರನ್ನು ಮೇಲಿನ ದೇವಾಲಯದ ಬಾಗಿಲಿನತ್ತ ಕರೆದೊಯ್ದರು. ಆದರೆ ಅದನ್ನು ಮಾಡುವ ಸ್ವಲ್ಪ ಹೊತ್ತು ಮುನ್ನ ದೇವಾಲಯದ ವರೆಗಿನ **ಮೆಟ್ಟಿಲುಗಳ ದಾರಿಯು ಸಾರ್ವಜನಿಕವಾದುದು** ಎಂಬುದಾಗಿ ಕಲೆಕ್ಟರರ ಜಾಹೀರುನಾಮೆಯನ್ನು ಘೋಷಿಸಲಾಯಿತು. ಈ ದಾರಿಯು ಸಾರ್ವಜನಿಕವಾದ ಕಾರಣ ಯಾರೂ ಅದರ ಮೇಲೆ ನಡೆದು ಹೋಗುವ ಸತ್ಯಾಗ್ರಹಿಗಳನ್ನು ತಡೆಯಕೂಡದೆಂದು ಮೇ. ಕಲೆಕ್ಟರರು ಜಾಹೀರು ಮಾಡುತ್ತಲೇ ಮೆಟ್ಟಿಲುಗಳ ಮೇಲಿನ ಜನದಟ್ಟಣೆಯು ನಿಧಾನವಾಗಿ ಕಡಿಮೆಯಾಗತೊಡಗಿತು. ಆದರೂ ಕೂಡ ತಮಗೆ ಇನ್ನೂ ಅವರಿಗೆ ತೊಂದರೆಯಾದೀತೆಂಬ ಭಯವಿದ್ದ ಕಾರಣ ಸತ್ಯಾಗ್ರಹಿಗಳು ಪೋಲೀಸರ

ಸುರಕ್ಷೆಯಲ್ಲಿಯೇ ಮೇಲಕ್ಕೆ ಏರಿಹೋಗಬೇಕಾಯಿತು. ಆದರೆ ಸತ್ಯಾಗ್ರಹಿಗಳು ಪೊಲೀಸರ ರಕ್ಷಣೆಯನ್ನು ಕೇಳಿರಲಿಲ್ಲ. ಈ ಜನರು ಮೇಲಕ್ಕೆ ಹೋಗಿ ನೋಡಿದರೆ ಶ್ರೀದೇವದೇವೇಶ್ವರನ ದೇವಾಲಯದ **ಹೆಬ್ಬಾಗಿಲು ಪೂರ್ತಿ ಮುಚ್ಚಿದ್ದುದು ಕಂಡಿತು**. ಹೀಗಾಗಿ ಅವರು ಮೆಟ್ಟಿಲುಗಳ ಮೇಲೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಹಿಂತಿರುಗಿ ಕೆಳಕ್ಕಿಳಿದರು. ರಾ. ರಾಜಭೋಜರು ತುಂಬ ಬಳಲಿದ್ದರು. ಹೀಗಾಗಿ ಅವರು ಗಾಡಗೀಳರ ಹೆಗಲ ಮೇಲೆ ಕತ್ತನ್ನು ಇರಿಸಿ, ಕಣ್ಣು ಮುಚ್ಚಿಕೊಂಡು, ಬಲು ಕಷ್ಟದಿಂದ ಒಂದೊಂದಾಗಿ ಮೆಟ್ಟಿಲುಗಳನ್ನು ಇಳಿಯತೊಡಗಿದರು. ರಾ. ಗಾಡಗೀಳ ಮತ್ತು ಇತರರೂ ಕೂಡ ಪೆಟ್ಟು ಬಿದ್ದ ಕಾರಣ ತುಂಬ ದಣಿದಿದ್ದರು.

ಸತ್ಯಾಗ್ರಹಿಗಳು ಪರ್ವತಿಯಿಂದ ಕೆಳಕ್ಕೆ ಇಳಿಯುವಾಗ ಎಂಟು, ಹತ್ತು ಜನ ಪೊಲೀಸರು ಅವರ ಜೊತೆಗಿದ್ದರು. ಇದರಿಂದಾಗಿಯೇ ಬಹುಮಟ್ಟಿಗೆ ಜನರಿಂದ ಅವರಿಗೆ ತೊಂದರೆಯಾಗಲಿಲ್ಲ. ಆದರೂ ಇಬ್ಬದಿಯ ಜನರಿಂದಲೂ ಧಿಕ್ಕಾರಗಳ ಕೂಗುಗಳು ಮಾತ್ರ ಒಂದೇ ಸಮನೆ ಕೇಳಿಬರುತ್ತಿದ್ದವು.

ಈ ರೀತಿಯಾಗಿ ರಾಜಭೋಜ, ಗಾಡಗೀಳ, ಮೊದಲಾದವರು ಮೆಟ್ಟಿಲುಗಳನ್ನು ಇಳಿದು ಕೆಳಕ್ಕೆ ಬರುತ್ತಲೇ **ರಾ. ಮಾನುರಕರರ ಮೋಟಾರಿನಲ್ಲಿ** ಅವರನ್ನು ಮನೆಗೆ ಕರೆದೊಯ್ಯಲಾಯಿತು. ರಾ. ರಾಜಭೋಜ ಅವರಿಗೆ ಬಹಳಷ್ಟು ಪೆಟ್ಟಾದ ಕಾರಣ ಚಿಕಿತ್ಸೆಗಾಗಿ ಅವರನ್ನು ಆಸ್ಪತ್ರೆಗೆ ಸೇರಿಸುವುದು ಆವಶ್ಯಕವಿತ್ತು. ಹೀಗಾಗಿ **ರಾ. ರಾಜಭೋಜ ಅವರನ್ನು ಪರ್ವತಿಯ ಹತ್ತಿರದ ಮಿಶನ್ ಆಸ್ಪತ್ರೆಗೆ** ತಲುಪಿಸಲಾಯಿತು. ರಾ. ಗಾಡಗೀಳ ವಕೀಲರು ಮೋಟಾರಿನಲ್ಲಿ ಕುಳಿತು ಶನಿವಾರ ಪೇಟೆಯ ತಮ್ಮ ಮನೆಗೆ ಬಂದರು. ರಾ. ಭುಸಕುಟೆ, ರಾ. ರಾನಡೆ, ರಾ. ಲಾಂಡಗೆ, ಮೊದಲಾದವರು ಕೂಡ ಗಂಭೀರ ಮುಖಮುದ್ರೆಗಳನ್ನು ಹೊತ್ತು ಹಿಂತಿರುಗಿ ಬಂದರು.

ಸತ್ಯಾಗ್ರಹಕ್ಕೆ ಬೆಂಬಲ ನೀಡುವ ಅದೆಷ್ಟೋ ಜನರು ಪರ್ವತಿಯ ಅಡಿಯ ಹತ್ತಿರ ಕುಳಿತಿದ್ದರು. ಅವರು ಹಿಂತಿರುಗಿ ಹೋಗುವಾಗ ಅವರಿಗೂ ಸಾಕಷ್ಟು ಹೊಡೆತಗಳು ಬಿದ್ದು ಅಲ್ಲಲ್ಲಿ ತುಂಬ ಗಲಭೆ ಉಂಟಾಯಿತು. ಅಸ್ಪೃಶ್ಯರ ಭಜನಿಯ ಮೇಳದ ಜೊತೆಗೆ ಒಬ್ಬ ತೆಲಗು ವ್ಯಕ್ತಿ ಬಂದಿದ್ದರು. ಜನರು ಕಾಲುವೆಯ ಮೇಲಿನ ಸೇತುವೆಯ ಹತ್ತಿರ ಅವರನ್ನು ತುಂಬ ಹೊಡೆದರು. ಅವರ **ಹಾರ್ಮೋನಿಯಮ್‌ನ್ನು ಸೇತುವೆಯ ಕೆಳಕ್ಕೆ ಎಸೆಯಲಾಯಿತು**. ಅದು ಒಡೆದು ಹೋಳುಗಳಾಗಿ ಹೋಯಿತು. ಹೀಗೆ ಸತ್ಯಾಗ್ರಹಿಗಳು ಪರ್ವತಿಯಿಂದ ಹೊರಟು ಹೋಗುತ್ತಲೇ ಪುರಾಣಮತವಾದಿಗಳ ಗುಂಪುಗಳು ಕೂಡ ವಿಜಯಶ್ರೀಯ ಸಂತಸದಿಂದ ತಮ್ಮ ತಮ್ಮ ಮನೆಗಳತ್ತ ಹೊರಟರು. ಮಧ್ಯಾಹ್ನದ ಹನ್ನೆರಡು ಗಂಟೆಯಾದರೂ ಪರ್ವತಿಯ ದೇವಾಲಯದ ಬಾಗಿಲುಗಳು ಮುಚ್ಚಿಯೇ ಇದ್ದವು. ಊರಲ್ಲಿ

ದಿನವಿಡೀ ಇದೇ ಮಾತಿನ ವಿಷಯವಾಗಿತ್ತು. ಬಹಳಷ್ಟು ಜನರು **ಸತ್ಯಾಗ್ರಹಿಗಳನ್ನು ಅಭಿನಂದಿಸಲೆಂದು** ರಾ. ಗಾಡಗೀಳ, ರಾ. ಭುಸ್ಕುಟೆ, ರಾ. ರಾಜಭೋಜ ಅವರಲ್ಲಿಗೆ ಹೋದರು. ನಡೆದ ಸಂಗತಿ ಎಂದರೆ ಸತ್ಯಾಗ್ರಹದ ನೈತಿಕ ವಿಜಯವೆಂಬುದೇ ಈ ಜನರ ಸ್ಪಷ್ಟವಾದ ಅಭಿಪ್ರಾಯವಾಗಿದೆ. ಅಸ್ಪೃಶ್ಯ ವರ್ಗದ ಜನರು ರಾ. ರಾಜಭೋಜರನ್ನು ಕಾಣಲು ಆಸ್ಪತ್ರೆಗೆ ಹೋಗುತ್ತಿದ್ದರು. ಅವರ ಆರೋಗ್ಯವು ತುಂಬ ಹದಗೆಟ್ಟಿದೆ. ಆದರೆ ಚಿಂತಾಜನಕವಲ್ಲ. ಸತ್ಯಾಗ್ರಹಿಗಳು ಚಳುವಳಿಯನ್ನು ಇನ್ನೂ ಮುಂದುವರಿಸಲು ನಿರ್ಧರಿಸಿರುವರೆಂದು ರಾ. ಗಾಡಗೀಳರು ಒಂದು ಸಂದರ್ಶನದಲ್ಲಿ, ಹೇಳಿದರು.

**ಸೇನೆಯ ತುಕಡಿಗಳನ್ನು ಕರೆಯಿಸಲಾಯಿತು**.

ಪರ್ವತಿಯ ಮೆಟ್ಟಿಲುಗಳ ಮೇಲೆ ಜನರಿಗೆ ಹೊಡೆತ-ಬಡಿತಗಳು ಶುರುವಾದಾಗ ಗಲಭೆಯ ಸ್ವರೂಪವು ಹೆಚ್ಚು ಭಯಂಕರವಾಗಿ ರಕ್ತಪಾತದ ಸನ್ನಿವೇಶ ತಯಾರಾಗುವುದೇನೋ ಎಂಬ ಭಯವೂ ತಲೆದೋರಿತು. ಕಲೆಕ್ಟರ್ ಸಾಹೇಬರ ಅಪ್ಪಣೆಯ ಮೇರೆಗೆ ಹತ್ತಿರದ ಪೋಲೀಸ್ ಠಾಣೆಯಿಂದ ಫೋನು ಕರೆಯ ಮೂಲಕ ಸಂದೇಶವನ್ನು ರವಾನಿಸಿ ಸಶಸ್ತ್ರ ಸೈನಿಕ ತುಕಡಿಗಳನ್ನು ಕರೆಯಿಸಲಾಗಿತ್ತೆಂದು ತಿಳಿದು ಬರುತ್ತದೆ. ಆದರೆ ಅವುಗಳನ್ನು ಬಳಸುವ ಅಗತ್ಯ ಕಂಡುಬಾರದ್ದರಿಂದ ಅವನ್ನು ಮರಳಿ ಕಳಿಸಲಾಯಿತು.

**ಪರ್ವತಿಯ ಮೇಲೆ ಸಶಸ್ತ್ರ ಪೊಲೀಸರ ಪಹರೆ.**

**ಇನ್ನೂ ಬಾಗಿಲುಗಳು ಮುಚ್ಚಿವೆ. ಸೋಮವಾರದ ಪರಿಸ್ಥಿತಿ.**

ಪುಣೆಯ ಪರ್ವತಿ ದೇವಾಲಯಗಳ ಹೆಬ್ಬಾಗಿಲು ಸೋಮವಾರ ತಾ. ೧೩ರಂದು ಕೂಡ ಮುಚ್ಚಿಕೊಂಡೇ ಇದ್ದವು. ದೇವಾಲಯದೆದುರು ಸಶಸ್ತ್ರ ಪೋಲೀಸು ಪಹರೆಯನ್ನು ಇರಿಸಲಾಗಿತ್ತು. ದೇವಾಲಯಗಳ ಬಾಗಿಲುಗಳನ್ನು ಮುಚ್ಚಿ ಇಂದಿಗೆ ಮೂರು ದಿನ. ಕಳೆದ ೧೫೦ ವರ್ಷಗಳಲ್ಲಿ ಎಂದಿಗೂ ಇಂಥ ಸನ್ನಿವೇಶ ಕಂಡು ಬಂದಿರಲಿಲ್ಲ. ಟ್ರಸ್ಟಿಗಳ ಪೈಕಿ ಕೆಲವರು
ಪರ್ವತಿಯ ಮೇಲೆ ಹೋಗಿದ್ದರು. ಇತರರಿಗೆ ನಿಷೇಧವಿತ್ತು.

**ಪರ್ವತಿಯ ಮೇಲಿನ ಸಂಸ್ಥಾನ ಖಾಸಗಿಯದೆ?**

**ಖಾಸಗೀಕರಣದ ವಿರುದ್ಧ ವಿಶೇಷ ಪುರಾವೆ.**

(ಒಬ್ಬ ಮಾರ್ಮಿಕ ಇತಿಹಾಸ ಸಂಶೋಧಕನಿಂದ)

ಸದ್ಯಕ್ಕೆ ಸಂಸ್ಥಾನದ ಒಬ್ಬ ಪಂಚನ ಒಂದು ಸಣ್ಣ ಪತ್ರದಿಂದಾಗಿ ಈ ಪ್ರಶ್ನೆ ಎದುರಾಗಿದೆ. ಆದುದರಿಂದ ಸರಪಂಚರಾದ ಶ್ರೀಮಂತ ಸರದಾರ ಮುಜುಮದಾರರು ಒಬ್ಬ ಇತಿಹಾಸ ಸಂಶೋಧಕರಾದ ಕಾರಣ ಪಂಚರ ಈ ಪತ್ರಕ್ಕೆ ಐತಿಹಾಸಿಕ ದೃಷ್ಟಿಯಿಂದ ಮಹತ್ವ ಲಭಿಸಿದೆ. ಹೀಗಾಗಿ ಈ ಪ್ರಶ್ನೆಯನ್ನು ಕುರಿತು ಶಾಂತಿಯಿಂದ ಯೋಚಿಸುವುದು ಆವಶ್ಯಕ.

ರಾ. ಸರದೇಸಾಯಿ ಅವರ ರಿಯಾಸತ ಮಧ್ಯ ಭಾಗ ೩ (ಇ. ಸ. ೧೯೨೨ರ ಆವೃತ್ತಿ) ಪುಟ ೨೫೭ ರ ಮೇಲೆ ಪರ್ವತಿ ಸಂಸ್ಥಾನದ ಸವಿಸ್ತರವಾದ ಮಾಹಿತಿಯನ್ನು ನಮೂದಿಸಲಾಗಿದೆ. ಅದರಲ್ಲಿ ಸದ್ಯದ ಪ್ರಕರಣಕ್ಕೆ ಉಪಯುಕ್ತವಾದ ಭಾಗವನ್ನಷ್ಟೇ ಕೆಳಕ್ಕೆ ಕೊಡುತ್ತಿರುವೆನು :

“ಪುಣೆಯ ಹತ್ತಿರದ ಒಂದು ಸುಂದರವಾದ ಗುಡ್ಡದ ಮೇಲೆ ಚಿಕ್ಕದಾದ ಒಂದು ದೇವಾಲಯವು ಮೊದಲಿನಿಂದಲೂ ಇತ್ತು. ಅಲ್ಲಿಂದ ಕಾಣುವ ರಮ್ಯವಾದ ನೋಟವನ್ನು ಕಂಡು ನಾನಾಸಾಹೇಬ ಪೇಶವೆ ಅವರು ಅಲ್ಲಿ ದೇವದೇವೇಶ್ವರನ ಒಂದು ಭವ್ಯವಾದ ದೇವಾಲಯ ಹಾಗೂ ಅದರ ನಾಲ್ಕು

ಮೂಲೆಗಳಲ್ಲಿ ನಾಲ್ಕು ಸಣ್ಣ ದೇವಾಲಯಗಳನ್ನು ಕಟ್ಟಿಸಿ ಅವುಗಳಲ್ಲಿ ದೇವಿ, ಗಣಪತಿ, ಸೂರ್ಯ ಮತ್ತು ವಿಷ್ಣುವನ್ನು ಸ್ಥಾಪಿಸಿದರು. **ಪರ್ವತಿಯಮ್ಮನ ಹಳೆಯ ವಿಗ್ರಹವನ್ನು ದೇವಿಂದು ದೇವಾಲಯದಲ್ಲಿ ಇರಿಸಿದುದು ಈಗಲೂ ಕಂಡೀತು.** ಪೇಶವೆ ಅವರು ಶಾಹೂ ಛತ್ರಪತಿ ಅವರ ಪಾದುಕೆಗಳನ್ನು ಕೂಡ ದೇವದೇವೇಶ್ವರನ ದೇವಾಲಯದಲ್ಲಿ ಇರಿಸಿದ್ದರಿಂದ ಈ ಪರ್ವತಿ ದೇವಾಲಯಕ್ಕೆ ಹೆಚ್ಚಿನ ಶೋಭೆ ಝುಭಿಸಿದೆ. ಈ ದೇವಾಲಯದ ವೆಚ್ಚದ ವಿವರವು ನಾನಾಸಾಹೇಬರ ದಿನಚರಿಯ ೨ನೆಯ ಭಾಗದ ೩೪೩ನೆಯ ಪುಟದ ಮೇಲೆ ಈ ಮುಂದಿನಂತೆ ನೀಡಲಾಗಿದೆ :

"ಖರ್ಚು ರೂ. ೯,೦೨೦ **ಧಾರ್ಮಿಕ ದತ್ತಿ ಒಡವೆಗಳಲ್ಲಿ** ಪರ್ವತಿಯ ಮೇಲಿನ ಶ್ರೀ ದೇವನ ಸ್ಥಾಪನೆಗಾಗಿ ಇರುವ ಬೆಳ್ಳಿಯ ಶ್ರೀ ದೇವದೇವೇಶ್ವರ ಮಹಾದೇವನ ತೂಕ ೬೭೩೪ ತೋಲ, ತೊಡೆಯ ಮೇಲಿನ ಚಿನ್ನದ ವಿಗ್ರಹಗಳು, ಬಲಬದಿಗೆ ಗಣಪತಿ, ಎಡಬದಿಗೆ ಪಾರ್ವತಿ ತೂಕ ೬೮೬ ತೋಲ. ಹೊರಗೆ ಶಿಲೆಯ ಗಣಪತಿ ಮತ್ತು ಪಾರ್ವತಿ ಭವಾನಿ "

**ಇವುಗಳಲ್ಲಿ ಧಾರ್ಮಿಕ ದತ್ತಿ ಒಡವೆಗಳಲ್ಲಿ** ಎಂಬ ಸ್ಪಷ್ಟವಾದ ವಿವರವಿದೆ. ಧಾರ್ಮಿಕ ದತ್ತಿ ಎಂದರೆ ಖಾಸಗಿ ಅಲ್ಲ, ಎನ್ನುವುದನ್ನು ಯಾರಾದರೂ ಹೇಳಬಹುದು. ಇಂಥ ಸ್ಥಿತಿಯಲ್ಲಿ ನಾನಾಸಾಹೇಬರ ಖಾಸಗಿತನದಿಂದ ಈ ದೇವಾಲಯವನ್ನು ಕಟ್ಟಿಸಲಾಯಿತೆಂದು ಇತಿಹಾಸ ಸಂಶೋಧಕರು ಹಾಗೂ ಭಾರತ ಇತಿಹಾಸ ಸಂಶೋಧಕ ಮಂಡಳದ ಕಾರ್ಯದರ್ಶಿಗಳಾದ ಶ್ರೀಮಂತ ಮುಜುಮದಾರರು ಯಾವ ಆಧಾರದಿಂದ ಅನ್ನುತ್ತಾರೆ, ಎಂಬುದನ್ನು ಅವರು ಜಾಹೀರುಪಡಿಸಬೇಕು. ಶ್ರೀ ಮುಜುಮದಾರರಿಗೆ ಅನುಕೂಲವಿದ್ದ ಪುರಾವೆಯು ಅವರ ಮಂಡಳದಲ್ಲಿ ಹೊಸದಾಗಿ ತಯಾರಾಗುವುದಿಲ್ಲ ತಾನೆ !

ಎರಡನೆಯದಾಗಿ, ಪರ್ವತಿಯ ಮೇಲೆ ಮೊದಲಿನಿಂದಲೂ ಒಂದು ದೇವಾಲಯವಿದ್ದೇ ಇತ್ತು. ಆ ದೇವಾಲಯದ ದೇವಿಯು ಈಗಲೂ ಅಲ್ಲಿಯೇ ಇರುವಳು. ಆ ದೇವಿಯಾದರೂ ನಾನಾಸಾಹೇಬರ ಖಾಸಗಿಯವಳಲ್ಲ ತಾನೆ ! ಅಂದ ಬಳಿಕ ಪಂಚರು ಅವಳ ದರ್ಶನಕ್ಕೆ ಹೇಗೆ ತಡೆಯೊಡ್ಡಬಲ್ಲರು ? ಸಾರಾಂಶವೆಂದರೆ, ಇದು ಪಂಚರ ಔದ್ಧತ್ಯವಾಗಿದ್ದು ಜನರು ಇದನ್ನು ನಡೆಯಗೊಡುವುದು ಪ್ರಯೋಜನವಿಲ್ಲದ್ದು.

“ಬಹಿಷ್ಕೃತ ಭಾರತ', ತಾ. ೧೫ ನವೆಂಬರ್ ೧೯೨೯.

## ಪರಿಶಿಷ್ಟ-೧೩

## ವಜ್ರಸೂಚಿ

ಭಾರತೀಯ ವಿದ್ವಾಂಸರಾದ ಭದಂತ ಅಶ್ವಘೋಷರು ರಚಿಸಿದ 'ಸೌಂದರನಂದ' ಎಂಬ ಮಹಾಕಾವ್ಯದ ಪುಷ್ಟಿಕೆಯಲ್ಲಿ ಉಪಲಬ್ಧವಿರುವ 'ಆರ್ಯಸುವರ್ಣಾಕ್ಷೀಪುತ್ರಸ್ಯ ಸಾಕೇತಸ್ಯ ಭಿಕ್ಷೀರಾಚಾರ್ಯ ಭದಂತಾಸ್ವಾಘೋಷಸ್ಥ

ಮಹಾಕವೇರ್ಮಹಾವದಿನಃ ಕೃತಿರಿಯಮ್ , ಎನ್ನುವ ಉಲ್ಲೇಖದಿಂದಾಗಿ ಅವನು ಸಾಕೇತವಾಸಿಯಾದ ಸುವರ್ಣಾಕ್ಷಿಯ ಮಗನಾಗಿದ್ದು ಮಹಾನ್ ತಾರ್ಕಿಕ ವಿದ್ವಾಂಸ ಮಹಾಕವಿಯಾದ ಬೌದ್ಧಭಿಕ್ಷುವಾಗಿದ್ದನೆಂದು ನಿಸ್ಸಂಶಯವಾಗಿ ಅನ್ನಬಹುದು.

## ಅಶ್ವಘೋಷರ ಕಾಲ ಹಾಗೂ ಕಾಲಿದಾಸನ ಮೇಲೆ ಪ್ರಭಾವ

ಅವರ ಹೆಸರು ದಾರ್ಶನಿಕ ಸಂಪ್ರದಾಯದಲ್ಲಿ ಆಚಾರ್ಯ ನಾಗಾರ್ಜುನ ಹಾಗೂ ಆರ್ಯದೇವರಿಗಿಂತಲೂ ಮೊದಲು ಬರುತ್ತದೆ. ಚೀನೀ ಪರಂಪರೆಯು ಚರಕನನ್ನು ಕುಷಾಣ ರಾಜ ಕನಿಷ್ಕನ ಚಿಕಿತ್ಸಕ-ಗುರು ಹಾಗೂ ಮಹಾಕವಿ ಅಶ್ವಘೋಷರನ್ನು ಧರ್ಮಗುರುವೆಂದು ಮನ್ನಿಸುತ್ತದೆ. ಅಂದರೇನೆ ಅಶ್ವಘೋಷರು ಕನಿಷ್ಕನ ಸಮಕಾಲೀನರು. ಕನಿಷ್ಕನ ಕಾಲ ಇ. ಸ. ೭೮-೧೦೧, ಎಂದು ಒಪ್ಪಿಕೊಳ್ಳಲಾಗುತ್ತದೆ. ಕನಿಷ್ಕನ ಆಳ್ವಿಕೆಯಲ್ಲಿ ಕಾಶ್ಮೀರದ ಕುಂಡಲವನ, ಎಂಬ ವಿಹಾರದಲ್ಲಿ ನಾಲ್ಕನೆಯ ಬೌದ್ಧ ಸಂಗೀತೆಯನ್ನು ನೆರವೇರಿಸಲಾಗಿತ್ತು. ಮಹಾಕವಿ ಅಶ್ವಘೋಷರು ಈ ಸಂಗೀತಿಯ ಉಪಾಧ್ಯಕ್ಷ ಪದದಮೇಲೆ ವಿರಾಜಮಾನರಾಗಿದ್ದರು. ಅದರಲ್ಲಿ ತ್ರಿಪಿಟಕವನ್ನು ಕುರಿತು ಬರೆಯಲಾದ ವಿಭಾಷಾಶಾಸ್ತ್ರದ ಸಂಪಾದನೆಯ ಕಾರ್ಯದಲ್ಲಿ ಅವರದು ಸಿಂಹದ ಪಾಲಿತ್ತು. ಅಶ್ವಘೋಷರ ಕಾಲನಿರ್ಣಯವು ತೀರ ವಿವಾದ್ಯವೆನ್ನಿಸಿದೆ. ಅಶ್ವಘೋಷರ ಕಾಲವನ್ನು ನಿರ್ಧರಿಸುವಾಗ ಮಹಾಕವಿ ಕಾಳಿದಾಸನನ್ನು ಗಮನಿಸದೆ ಮುಂದಕ್ಕೆ ಹೆಜ್ಜೆಯನ್ನು ಇಕ್ಕಲಾಗದು. ಸಮಯವನ್ನು ನಿರ್ಧರಿಸುವಾಗ ಇವರಿಬ್ಬರ ಪೌರ್ವಾಪೌರ್ವತ್ವವು ಧುತ್ತೆಂದು ಮುಂದೆ ಬಂದು ನಿಲ್ಲುತ್ತದೆ. ಬಹಳಷ್ಟು ಜನ ಪಾಶ್ಚಾತ್ಯ ಹಾಗೂ ಭಾರತೀಯ ವಿದ್ವಾಂಸರು ಭದಂತ ಅಶ್ವಘೋಷರು ಕಾಲಿದಾಸನ ಮೊದಲು ಆಗಿಹೋದರೆಂದು ಸ್ಥಾಪಿಸುತ್ತಾರೆ. ಡಾ. ಜಾನ್ಸಟನ್‌ನ ಅಭಿಪ್ರಾಯದಂತೆ ಅಶ್ವಘೋಷರು ಮೊದಲ ಶತಮಾನದ ಪೂರ್ವಾರ್ಧದಲ್ಲಿ ಆಗಿಹೋಗಿರುವಂತೆ ಕಾಣುತ್ತದೆ. ಮ. ಮ. ಮಿರಾಶಿ ಅವರು ತಮ್ಮ ಸಂಶೋಧನ ಮುಕ್ತಾವಲಿಯಲ್ಲಿ ಅಶ್ವಘೋಷರ ಕಾಲಿದಾಸಪೂರ್ವತ್ವವನ್ನು ಸ್ಥಾಪಿಸಿದರು. ಇಷ್ಟೇ ಅಲ್ಲದೆ ಅಶ್ವಘೋಷರ ಪ್ರಭಾವವು ಕಾಲಿದಾಸನ ಮೇಲೆ ಹೇಗೆ ಆಯಿತೆಂಬುದನ್ನೂ ಸಪ್ರಮಾಣವಾಗಿ ತೋರಿಸಿ ಕೊಟ್ಟಿರುವರು. ಅವರು ಹೀಗೆಂದು ಬರೆದಿರುವರು : 'ಕಾಲಿದಾಸನು ಅಶ್ವಘೋಷನ ಕಾವ್ಯವನ್ನು ಚೆನ್ನಾಗಿ ಅಭ್ಯಸಿಸಿದ್ದುದು ಕಂಡು ಬಂದೀತು. ಈ ಅಧ್ಯಯನದಿಂದಾಗಿ ರಮಣೀಯ ಕಲ್ಪನೆಗಳು ಹಾಗೂ ಕೆಲವು ವಿಶಿಷ್ಟ ಬಗೆಗಳು ಕಾಲಿದಾಸನ ಕಾವ್ಯದಲ್ಲಿ ಬಂದುದು ಕಾಣುತ್ತದೆ. ಈ ಹೇಳಿಕೆಯ ಪುಷ್ಟಿಗಾಗಿ ಅವರು ಕೆಲವು ಉದಾಹರಣೆಗಳನ್ನು ಉದ್ದರಿಸುತ್ತ ಮತ್ತೆ ಹೀಗೆಂದು ಬರೆಯುತ್ತಾರೆ : `ಕಾಲಿದಾಸನು ಅಶ್ವಘೋಷನ ದೋಷಗಳನ್ನು

ತಪ್ಪಿಸಿ, ಅವನ ಕಾವ್ಯದ ಒಳ್ಳೆಯದಾದ ಭಾಗವನ್ನಷ್ಟೇ ಮಧುರ ಮನೋಭಾವದಿಂದ ಎತ್ತಿಕೊಂಡು ತನ್ನ ಗ್ರಂಥವನ್ನು ರಚಿಸಿದನು. (ಪು.೪೦) ಕಾಲಿದಾಸನು ಅಶ್ವಘೋಷರನ್ನು ಅನುಕರಿಸಿದನೆ, ಎಂದಿಷ್ಟೇ ಸ್ಥಾಪಿಸಿ ನಿಲ್ಲದೆ ಮ. ಮ. ಮಿರಾಶಿ ಅವರು ಶೇಂಬವಣಕರರ, 'ಅಶ್ವಘೋಷನು ಕಾಲಿದಾಸನನ್ನು ಅನುಕರಿಸಿದನು ಎಂಬ ಅಭಿಪ್ರಾಯವನ್ನು ಅಪಹಾಸ್ಯದಿಂದ ಖಂಡಿಸುತ್ತ, ಡಾ. ಸುಶೀಲಕುಮಾರ ಡೇ ಅವರ ಅಭಿಪ್ರಾಯದ ಕಾಣಿಕೆಯನ್ನು ಮುಂದೆ ಮಾಡಿದ್ದು ಹೀಗೆ : 'Toargue thatAshvaghosha is later than Kalidas is to presume without sufficient reason a retrogressive phase in literary evolution (The History of Sanskrit literature, page-124)' ಅಂದರೆ, ಅಶ್ವಘೋಷನು ಕಾಲಿದಾಸನ ತರುವಾಯ ಆಗಿ ಹೋದವೆಂದು ಅನ್ನುವುದೆಂದರೆ ಪೂರ್ತಿ ಕಾರಣವಿಲ್ಲದಾಗಲೂ ವಾಙ್ಮಯದ ವಿಕಾಸಕ್ರಮವು ಬಾಲದ ದಿಕ್ಕಿನಲ್ಲಿ ನಡೆಯಿತೆಂದು ಅನ್ನಬೇಕಾದೀತು. ಪ್ರಾ, ಸೂರ್ಯನಾರಾಯಣ ಚೌಧರಿಯವರ ಅಭಿಪ್ರಾಯವೂ ಈ ದೃಷ್ಟಿಯಿಂದ ವಿಚಾರಾರ್ಹವಾದುದು. ಅವರು ಹೀಗೆನ್ನುತ್ತಾರೆ : "all Hda + +al 3gp वाल्मीकि व कालिदास की कोटि का कवि था। काव्य विकास के क्रम में वह वाल्मीकि के बाद और कालिदास के पहले आता है। काव्य में जिस तरह वह वाल्मीकि का ऋणी और उत्तराधिकारी था वैसे ही कालिदास भी उसका ऋणी था।' (3qTRA T, ៩), 'ಅಶ್ವಘೋಷನು ಕೇವಲ ಬೌದ್ಧ ಭಿಕ್ಷು ಆಗಿರುವುದರ ಹೊರತಾಗಿ ವಾಲ್ಮೀಕಿ ಹಾಗೂ ಕಾಲಿದಾಸರ ಮಟ್ಟದ ಒಬ್ಬ ಕವಿಯಾಗಿದ್ದನು. ಅವನು ಕಾವ್ಯದ ವಿಕಾಸಕ್ರಮದಲ್ಲಿ ವಾಲ್ಮೀಕಿಯ ತರುವಾಯ ಹಾಗೂ ಕಾಲಿದಾಸನಿಗಿಂತ ಮೊದಲು ಬರುತ್ತಾನೆ. ಅವನು ಕಾವ್ಯದಲ್ಲಿ ವಾಲ್ಮೀಕಿಗೆ ಋಣಿಯೂ ಉತ್ತರಾಧಿಕಾರಿಯೂ ಆಗಿದ್ದಂತೆ ಕಾಲಿದಾಸನೂ ಅವನಿಗೆ ಋಣಿಯಾಗಿದ್ದನು. (ಬುದ್ಧಚರಿತ ಪು. ೬)'

ಪ್ರೊ. ಕಾವೆಲ್ನ ಅಭಿಪ್ರಾಯದ ಮೇರೆಗೆ ಕೂಡ ಕಾಲಿದಾಸನೇ ಅಶ್ವಘೋಷನನ್ನು ಅನುಕರಿಸಿರುವನು. ಕಿಇನ ಅಭಿಪ್ರಾಯದ ಮೇರೆಗಂತೂ ಕೇವಲ ಕಾಲಿದಾಸನಷ್ಟೇ ಅಲ್ಲದೆ ಕವಿ, ನಾಟಕಕಾರಾದ ಭಾಸರೂ ಕೂಡ ಅಶ್ವಘೋಷನ ಉತ್ತರಾಧಿಕಾರಿಯಾಗಿದ್ದರು.

ಭದಂತ ಅಶ್ವಘೋಷರು ಕಾವ್ಯಸಂಗೀತಶಾಸ್ತ್ರಪ್ರವೀಣರೂ ಅನನ್ಯಸಾಧಾರಣರೂ ಆದ ಬೌದ್ಧಧರ್ಮ ಪ್ರಸಾರಕರಾಗಿದ್ದರು. ಅವರದೊಂದು ಸ್ವಂತದ ಸಂಗೀತ ಮಂಡಳವಿದ್ದು ಅದು ವೃತ್ತ, ವೃತ್ತಗಳು ಹಾಗೂ ಸಂತೆಗಳಲ್ಲಿ ಬೌದ್ಧ ಧರ್ಮದ ಅತಿಗೂಢವಾದ ಸಿದ್ಧಾಂತಗಳನ್ನು ಲಯ ಹಾಗೂ ರಾಗಗಳನ್ನು ಜೊತೆಗೂಡಿಸಿ ಕಾವ್ಯರೂಪದಲ್ಲಿ ಬಲು ಇಂಪಾಗಿ ಹಾಡುತ್ತ ತಿರುಗಾಡುತ್ತಿದ್ದರೆಂದು ಚೀನೀ ಪ್ರಯಾಣಿಕರ ವೃತ್ತಾಂತಗಳಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ.

ಅವರು ಅದಕ್ಕಾಗಿ ಏಕತಾರಿಯಂಥ ಒಂದು ವಾದ್ಯವನ್ನು ಬಳಕೆಗೆ ತಂದಿದ್ದರು. ಅವರ ಗಾಯನ ಶೈಲಿ ಅದೆಷ್ಟು ಆಕರ್ಷಕವೂ, ಸವಿಯಾದುದೂ ಆಗಿತ್ತೆಂದರೆ ಶೋತೃಗಳು ಮೈಮರೆತು ಆಲಿಸುತ್ತ ನಿಲ್ಲುತ್ತಿದ್ದರು. ಅವರ ಎದೆ ತುಂಬಿಬರುತ್ತಿತ್ತು. ಅಶ್ವಘೋಷರ ಗಂಭೀರವಾದ ಪ್ರವಚನದಿಂದ ಶೋತೃಗಳ ಮೇಲಾಗುವ ಪ್ರಭಾವವನ್ನು ವರ್ಣಿಸುತ್ತ 200098 (Si-Yu-Ki) Senibogo 0 : 'Ashwaghosha preached so eloquently that the entire congregation was moved to tears'. ಅವರ ಉಪದೇಶವನ್ನು ಆಲಿಸಿ ಶ್ರೋತೃಗಳ ಕಣ್ಣುಗಳು ಹನಿಗೂಡುತ್ತಿದ್ದವು. ಬಿಲ್ ಅವರ ಗ್ರಂಥದಲ್ಲಿ ಭದಂತ ಅಶ್ವಘೋಷರ ಬಹುಶ್ರುತತೆಯನ್ನು



ಕುರಿತು ಗೌರವಪೂರ್ಣವಾದ ಉಲ್ಲೇಖಗಳು ಕಂಡು ಬರುತ್ತವೆ. ಇದರಿಂದ ಬಗೆ ಬಗೆಯ ಶಾಸ್ತ್ರಗಳಲ್ಲಿ ಅವರ ಪಾರಂಗತತೆ ಕಂಡು ಬರುತ್ತದೆ. ಅದಕ್ಕೆ ಅಯಸ್ಕಾಂತ ವಾತೆಯ ಜೊತೆ ಲಭಿಸಿತ್ತು. ಅವರ ಪ್ರವಚನ ನಡೆದಾಗ ಮನುಷ್ಯರಷ್ಟೇ ಏಕೆ, ಕುದುರೆಗಳೂ ಕೂಡ ಸದ್ದು (ಘೋಷ) ಮಾಡುತ್ತಿರಲಿಲ್ಲ. ಅದರಿಂದಾಗಿ ಅವರಿಗೆ ಅಶ್ವಘೋಷ ಎಂಬ ಸಾರ್ಥಕ ಹೆಸರು ಪ್ರಾಪ್ತವಾಯಿತೆಂದು ನಂಬಲಾಗುತ್ತಿತ್ತು.

## ಅಶ್ವಘೋಷರ ಗ್ರಂಥಸಂಪತ್ತು

**ಕವಿಕುಲಗುರುಗಳಾದ ಅಶ್ವಘೋಷರು 'ಬುದ್ಧಚರಿತ' ಮತ್ತು 'ಸೌಂದರನಂದ' ಎಂಬ ಎರಡು ಮಹಾಕಾವ್ಯಗಳ ಹೊರತಾಗಿ 'ಮಹಾಯಾನ ಶ್ರದ್ಯೋತ್ಪಾದನ ಸಂಗ್ರಹ ವಾ ಶಾಸ್ತ್ರ, 'ಜಾತಿಭೇದವಿಧ್ವಂಸಕ', 'ವಜ್ರಸೂಚಿ',**

'ಸಾರಿಪುತ್ರಪ್ರಕರಣ', 'ಸೂತ್ರಾಲಂಕಾರ' ಮತ್ತು “ಗಾಂಡಿಸ್ತೋತ್ರಗಾಥಾ' ಎಂಬ ಗ್ರಂಥಗಳನ್ನೂ ರಚಿಸಿರುವರು. 'ಸೂತ್ರಾಲಂಕಾರ'ದಲ್ಲಿ ಬೌದ್ಧ ಧರ್ಮದ ತತ್ತ್ವಜ್ಞಾನವನ್ನು ಹಗುರ ಹಾಗೂ ಹೃದಯಂಗಮವಾಗಿ ಮಾಡಲೆಂದು ಸಮಗ್ರವಾದ ಜಾತಕಕಥೆಗಳು ಹಾಗೂ ಅವಧಾನ ಕಥೆಗಳನ್ನು ಸಂಕಲನಗೊಳಿಸಿರುವರು.

### ವಜ್ರಸೂಚಿ

ವಜ್ರದ ಸೂಜಿ ಅಂದರೆ ಡೈಮಂಡ್ ನೀಡಲ್ ತರಹ ಸೂಕ್ಷ್ಮ ದೃಷ್ಟಿಯಿಂದ ಸಂಚಲಿತವಾಗುತ್ತಿರುವ ಕಾರಣ ಈ ಗ್ರಂಥಕ್ಕೆ ವಜ್ರಸೂಚಿ ಎನ್ನುತ್ತಾರೆ. ಈ ಗ್ರಂಥವನ್ನು ವಜ್ರಚ್ಛೇದಿಕಾ ಅಥವಾ ವಜ್ರಸೂಚಿಕೋಪನಿಷದ್ ಎನ್ನುವ ಹೆಸರಿನಿಂದಲೂ ಗುರುತಿಸುತ್ತಾರೆ. ಈ ಕೃತಿಯು ವರ್ಣಾಶ್ರಮ ಮತ್ತು ಜಾತಿಭೇದದ ಸಮರ್ಥಕರನ್ನು ಸೂಜಿಯಂತೆ ತೀವ್ರವಾಗಿ ಚುಚ್ಚುತ್ತದೆ. ಇದರಲ್ಲಿ ವರ್ಣವ್ಯವಸ್ಥೆ ಹಾಗೂ ಜಾತಿಭೇದಗಳನ್ನು ಭಯಂಕರ ಅಪಾಯಕರವಾದ ವಿಧಾನದಿಂದ 'ಪೋಸ್ಟ್‌ಮಾರ್ಟಮ್' ಮಾಡಲಾಗಿದೆ. ಬಿ. ಎಚ್. ಹಾಡ್ಸನ್ ಅವರು ಸಾವಿರದ ಎಂಟುನೂರು ಇಪ್ಪತ್ತೊಂಬತ್ತನೆಯ ವರ್ಷ 'ವಜ್ರಸೂಚಿ ಯನ್ನು ಅನುವಾದಿಸಿದರು. ತರುವಾಯ ಡಾ. ಎಲ್. ವಿಲ್ಸೈಸನ್ ಅವರು ೧೮೩೯ ರಲ್ಲಿ ಎಲ್ಲಕ್ಕೂ ಮೊದಲು 'ವಜ್ರಸೂಚಿ' ಯನ್ನು ಸಂಪಾದಿಸಿದರು. ಈ ಗ್ರಂಥದ ಮುಖ್ಯ ಗುರಿಯನ್ನು ವಿಶದಪಡಿಸುತ್ತ ಪ್ರೊ. ಸಂಘಸೇನ ಅವರು ಹೀಗೆನ್ನುತ್ತಾರೆ : “ ग्रंथ का मुख्य उद्देश जन्म के आधार पर, वह शील कि प्रधानता पर बड़ा जोर देता है।" ಇಸ್ ಗ್ರಂಥ್ ಕಾ ಮುಖ್ಯ ಉದ್ದೇಶ ಜನ್ಮ ಕೇ ಆಧಾರ ಪರ್, ವಹ ಶೀಲ ಕೀ ಪ್ರಧಾನತಾ ಪರ ಬಡಾ ಜೋರ್ ದೇತಾ ಹೈ ” “ಈ ಗ್ರಂಥದ ಮುಖ್ಯ ಗುರಿ ಎಂದರೆ, ಅದು ಹುಟ್ಟನ್ನು ಆಧರಿಸಿದ ಶೀಲದ ಪ್ರಾಮುಖ್ಯತೆಗೆ ಹೆಚ್ಚಿನ ಒತ್ತು ಕೊಡುತ್ತದೆ, ಎಂಬುದು.” ಮಹಾಕವಿ ಅಶ್ವಘೋಷರು ಚಾತುರ್ವಣ್ರದ ವ್ಯವಸ್ಥೆಗೆ ಮರ್ಮಘಾತಕವಾದ ಪೆಟ್ಟು ಕೊಟ್ಟು ಸಮತೆ ಹಾಗೂ ಮಾನವತೆಗಳನ್ನು ಪುರಸ್ಕರಿಸಿರುವರು. ವೈದಿಕ ಗ್ರಂಥಗಳಿಂದ ಆವಶ್ಯಕವಿದ್ದ ಪ್ರಾಮಾಣಿಕವಾದ ಉದ್ದರಣೆಗಳನ್ನು ತೆಗೆದುಕೊಂಡು ಬ್ರಾಹ್ಮಣ್ಯದ ವರ್ಚಸ್ಸವನ್ನು ಕುರಿತು ಇದರಲ್ಲಿ ತೀರ ತರ್ಕಶುದ್ಧವಾದ ವಿಧಾನದಿಂದ ಅದ್ವಿತೀಯವಾಗಿ ಖಂಡಿಸಲಾಗಿದೆ. ಇಡಿಯ ಮಾನವ ಜಾತಿಯ ಏಕಾತ್ಮತೆ ಹಾಗೂ ಕಲ್ಯಾಣಕಾರಕ ಸಮತೆಯ ವಿಚಾರವನ್ನು ಈ ಗ್ರಂಥದಲ್ಲಿ ಔದಾರ್ಯಪೂರ್ಣ ದೃಷ್ಟಿಯಿಂದ ಸಮರ್ಥವಾಗಿ ಮಂಡಿಸಲಾಗಿದೆ. ಹೀಗಾಗಿ ಪಾಶ್ಚಿಮಾತ್ಯ ದೇಶಗಳ ವಿದ್ವಾಂಸರು ಈ ಗ್ರಂಥವನ್ನು ತಲೆಯ ಮೇಲೆ ಎತ್ತಿಕೊಂಡಿರುವರು. ಈ ಗ್ರಂಥದಲ್ಲಿ ಪ್ರತಿಪಾದಿತವಾದ ಸಮತಾಭಾವನೆಯ ಸಮರ್ಥನೆಯಿಂದಾಗಿ

ಪಾಶ್ಚಾತ್ಯ ವಿಮರ್ಶಕರು ಇದಕ್ಕೆ ತುಂಬ ಮರುಳಾಗಿರುವರು. ಇಂಥ ಅನನ್ಯಸಾಧಾರಣವಾದ ಈ ಗ್ರಂಥದ ಮಹಾತ್ಮ್ಯೆಯನ್ನು ವರ್ಣಿಸುತ್ತ ಡಾ. ದ್ವಿವೇದಿ ಅವರು ಹೀಗೆ ಬರೆಯುತ್ತಾರೆ : [ ಬ್ರಾಹ್ಮಣ ಧರ್ಮ ಕೀ ಮಾನ್ಯ ವರ್ಣವ್ಯವಸ್ಥಾ ಏವಂ ಜಾತಿಭೇದ ಕೀ ವಿಚಾರಧಾರಾ ಕಾ ಉಸಮೇಂ ಅತ್ಯಂತ ಬುದ್ಧಿಮತ್ತಾ ಏವಂ ಯುಕ್ತಿ ಸೇ ಖಂಡನ ಕಿಯಾ ಗಯಾ ಹೈ, ಜೋ ವಸ್ತುತಃ ಸ್ವಾಭಾವಿಕ ಹೈ I ಕಾರಣ ಯಹ ಹೈ ಕಿ ಸಭೀ ದೃಷ್ಟಿಯೋಂ , ಜೀವನ-ಮರಣ, ಸುಖ-ದುಃಖ, ಹಾನಿ-ಲಾಭ ಆದಿ ಮೇಂ, ಜಬ್ ಸಮಗ್ರ ಮಾನವ ಸಮಾನ ಹೈಂ, ತೋ ಫಿರ್ ಉನೇ ಸಮಾನಾಧಿಕಾರ್ ಸೇ ವಂಚಿತ ಕರನಾ ಕಂಹಾ ಕೀ ಬುದ್ಧಿಮತ್ತಾ ಹೈ ? ಅಸ್ತು ಇಸ್ ಸಂಸಾರ ಮೇಂ ಸಮಸ್ತ ಪ್ರಾಣಿ-ವರ್ಗ ಕೊ ಪ್ರಕೃತಿ ಸೇ ಜೋ ಸಮಾನಾಧಿಕಾರ ಪ್ರಾಪ್ತ ಹೈಂ, ಉಷ್ಟೇ ಅವಶ್ಯ ಪ್ರಾಪ್ತ ಹೋನಾ ಚಾಹಿಯೇ I ಯಹೀ ಸಚ್ಚ ಮಾನವತಾ ಕೇ ಲಿಯೇ ಸಮುಚಿತ ಏವಂ ಸಾರ್ವಭೌಮ ಸಿದ್ಧಾಂತ ಹೈ I ಯಹೀ ಲೋಕ ಮೇಂ ಪರಿದೃಶ್ಯಮಾನ ಪಾರಸ್ಪರಿಕ ಭೇದ ಕೀ ಖಾಈ ಕೋ ಪಾರ ಸಕತಾ ಹೈ, ಜೋ ಸಚ್ಚೇ ಲೋಕತಂತ್ರ ಕಾ ಆಧಾರ ಹೈ ತಥಾ ಜೋ ಭಾರತೀಯ ಲೋಕತಂತ್ರ ಮೇಂ ಸಹಾಯ್ಯಕ ಸಿದ್ದ ಹೋ ಸಕತಾ ಹೈ I ಇಸೀ ಮಹನೀಯ ಸಿದ್ಧಾಂತ ಕಾ ಆದರ್ಶ ಇಸ್ ಗ್ರಂಥ ಮೇಂ ಪ್ರಸ್ತುತ ಹೈ 1] "ಇದರಲ್ಲಿ, ಬ್ರಾಹ್ಮಣ ಧರ್ಮದ ಮನ್ನಣೆಯನ್ನು ಹೊಂದಿದ ವರ್ಣವ್ಯವಸ್ಥೆ ಹಾಗೂ ಜಾತಿಭೇದಗಳ ವಿಚಾರಪ್ರವಾಹವನ್ನು ತುಂಬ ಬುದ್ಧಿಮತ್ತೆ ಹಾಗೂ ಯುಕ್ತಿಯಿಂದ ಖಂಡಿಸಲಾಗಿದ್ದು, ವಾಸ್ತವಿಕವಾಗಿ ಅದು ಸ್ವಾಭಾವಿಕವೂ ಅಹುದು. ಕಾರಣವು ಹೀಗಿರುವಾಗ, ಎಲ್ಲ ದೃಷ್ಟಿಗಳಿಂದಲೂ ಜೀವನಮರಣ, ಸುಖ-ದುಃಖ, ಲಾಭ-ನಷ್ಟ, ಮೊದಲಾದವುಗಳಲ್ಲಿ, ಮಾನವರೆಲ್ಲರೂ ಸಮಾನರಾಗಿರುವಾಗ, ಅವರನ್ನು ಸಮಾನಾಧಿಕಾರಕ್ಕೆ ಎರವಾಗುವಂತೆ ಮಾಡುವುದು ಎಲ್ಲಿಯ ಬುದ್ದಿವಂತಿಕೆ ? ಇರಲಿ. ಈ ಪ್ರಪಂಚದಲ್ಲಿ ಸಮಸ್ತ ಪ್ರಾಣಿವರ್ಗಕ್ಕೆ ಪ್ರಕೃತಿಯಿಂದ ದೊರೆತ ಸಮಾನಾಧಿಕಾರಗಳು ಅವಶ್ಯವಾಗಿ ಅವರಿಗೆ ದೊರೆಯತಕ್ಕದ್ದು. ನಿಜವಾದ ಮಾನವತೆಗಾಗಿ ಇದೇ ಎಲ್ಲಕ್ಕೂ ಸೂಕ್ತವೂ ಸಾರ್ವಭೌಮವೂ ಆದ ಸಿದ್ಧಾಂತವಾಗಿದೆ. ಲೋಕದಲ್ಲಿ ಕಂಡುಬರುವ ಪರಸ್ಪರರ ನಡುವಿನ ತಾರತಮ್ಯದ ಕಂದರವನ್ನು ದಾಟಬಲ್ಲ, ನಿಜವಾದ ಪ್ರಜಾಸತ್ತೆಯ ಆಧಾರವನ್ನು ಒದಗಿಸಬಲ್ಲ, ಭಾರತೀಯ ಪ್ರಜಾಸತ್ತೆಗೆ ನೆರವಾಗಬಲ್ಲ, ಸಿದ್ಧಾಂತ ಇದೇ ಎನ್ನಿಸಬಹುದಾಗಿದೆ. ಇದೇ ಮಹತ್ತರವಾದ ಸಿದ್ಧಾಂತದ ಆದರ್ಶವನ್ನು ಈ ಗ್ರಂಥದಲ್ಲಿ ನಿರೂಪಿಸಲಾಗಿದೆ.

**೨೬, ಕಿಂ ಚಾನ್ಯತ್ I ಶೂದ್ರೋಽಪಿ ಬ್ರಾಹ್ಮಣೋ ಭವತಿ I ಇಹ ಹಿ ಮಾನವೇ**
**ಧರ್ಮೇಽಭಿಹಿತಂ**
**ಅರಣೀ ಗರ್ಭಸಂಭೂತಃ ಕಠೋ ನಾಮ ಮಹಾಮುನಿಃ I**
**ತಪಸಾ ಬ್ರಾಹ್ಮಣೋ ಜಾತಸ್ತಸ್ಮಾಜ್ಜಾತಿರಕಾರಣಮ್ II೨೧I**
**ಕೈವರ್ತೀಗರ್ಭಸಂಭೂತೋ ವ್ಯಾಸ ನಾಮ ಮಹಾಮುನಿಃ I**

ತಪಸಾ ಬ್ರಾಹ್ಮಣೋ ಜಾತಸ್ತಸ್ಮಾಜ್ಞಾತಿರಕಾರಣಮ್ |೨೨|

ಉರ್ವಶೀಗರ್ಭಸಂಭೂತೋ ವಸಿಷೋಽಪಿ ಮಹಾಮುನಿಃ |

ತಪಸಾ ಬ್ರಹ್ಮಜಾತಸ್ತಸ್ಮಾಜ್ಞಾತಿರಕಾರಣಮ್ ||೨೩||

ಹರಿಣೀಗರ್ಭಸಂಭೂತೋ ಋಷ್ಯಶೃಣೋ ಮಹಾಮುನೀಃ |



ತಪಸಾ ಬ್ರಾಹ್ಮಣೋ  ಜಾತಸ್ತಸ್ಮಾಜ್ಞಾತಿರಕಾರಣಮ್ ||೨೪||

ಚಂಡಾಲೀಗರ್ಭಸಂಭೂತೋ ವಿಶ್ವಾಮಿತ್ರೋ ಮಹಾಮುನಿಃ |

ತಪಸಾ ಬ್ರಾಹ್ಮಣೋ  ಜಾತಸ್ತಸ್ಮಾಜ್ಞಾತಿರಕಾರಣಮ್ ||೨೫||

ತಾಂಡೂಲೀಗರ್ಭಸಂಭೂತೋ ನಾರದೇಹಿ ಮಹಾಮುನಿಃ |

ತಪಸಾ ಬ್ರಾಹ್ಮಣೋ ಜಾತಸ್ತಸ್ಮಾಜ್ಞಾತಿರಕಾರಣಮ್ ||೨೬||

ಜಿತಾತ್ಮಾ ನಿಷ್ಪತಿದ್ವಂದ್ವಃಪಂಚ ಜಿತ್ವಾ ಯತೇಂದ್ರಿಯಃ |

ತಪಸಾ ತಾಪಸೋ ಜಾತೋ ಬ್ರಾಹ್ಮಚರ್ಯೇಣ ಬ್ರಾಹ್ಮಣಃ ||೨೭।

ನ ಚ ತೇ ಬ್ರಾಹ್ಮಣೀ ಪುತ್ರಾಸ್ತೇ  ಚ ಲೋಕಸ್ಯ ಬ್ರಾಹ್ಮಣಾಃ |

ಶೀಲಶೌಚಮಯಂ ಬ್ರಹ್ಮ ತಸ್ಮಾತ್ಕುಲಂ ನ ಕಾರಣಮ್ ||೨೮||

ಶೀಲಪ್ರ ಧಾನಂ ನ ಕುಲಂ ಪ್ರಧಾನಂ ಕುಲೇನ ಕಿಂ ಶೀಲಾವಿವರ್ಜಿತೇನ |

ಬಹವೋ  ನರಾ ನೀಚಕುಲ ಪ್ರಸುತಾಃ ಸ್ವರ್ಗಗತಾಃ ಶೀಲಮುಪೇತ್ಯ ಧೀರಾಃ ||೨೯||

೨೭. ಕೇ ಪುನಸ್ತೇ  ಕಠ ವ್ಯಾಸವಸಿಷ್ಠ ಋಷ್ಯಶೃಂಗ ವಿಶ್ವಾಮಿತ್ರಪ್ರಭೃತಯೋ

ಬ್ರಹ್ಮಾರ್ಷಯೋ್ರ ನೀಚಕುಲಪ್ರಸೂತಾಸ್ತೇ ಚ ಲೋಕಸ್ಯ ಬ್ರಾಹ್ಮಣಾಃ|

ತಸ್ಮಾದಸ್ಯವಚನಸ್ಯಪ್ರಾಮಾಣ್ಯಾದಪ್ಯನಿಯತೋಽಯಂಬ್ರಾಹ್ಮಣಪ್ರಸಂಗಇತಿ ಶೂದ್ರಕುಲೋಽಪಿ ಬ್ರಾಹ್ಮಣೋ ಭವತಿ |

ಇಂದಿಗೂ ಒಬ್ಬ ಶೂದ್ರನಾದರೂ ಶೂದ್ರ ಬ್ರಾಹ್ಮಣನಾಗುವಂತಿದೆ. ಇದಕ್ಕೆ ಕಾರಣವೇನು ? ಏಕೆಂದರೆ, ಮನುಸ್ಮೃತಿಯಲ್ಲಿ ಹೀಗೆಂದಿದೆ -

-

ಅರಣಿಯ ಬಸಿರಿನಿಂದ ಜನ್ಮ ತಳೆದ ಮಹಾನ್ ಋಷಿಯಾದ 'ಕಠ' ನು ತನ್ನ ತಪಶ್ಚರ್ಯೆಯಿಂದ ಬ್ರಾಹ್ಮಣನಾದನು. ಹೀಗಾಗಿ ಬ್ರಾಹ್ಮಣತ್ವಕ್ಕೆ ಕಾರಣ ಜಾತಿಯಲ್ಲ. ಮೀನುಗಾರ ಸ್ತ್ರೀಯ ಹೊಟ್ಟೆಯಿಂದ ಹುಟ್ಟಿ ಬಂದ ವ್ಯಾಸನು ಒಬ್ಬ ಮಹಾನ್ ಋಷಿಯಾದನು. ಹೀಗಾಗಿ ಬ್ರಾಹ್ಮಣತ್ವಕ್ಕೆ ಕಾರಣ ಜನ್ಮವಲ್ಲ. ಊರ್ವಶಿಯ ಮಗನಾದ ವಸಿಷ್ಠನು ತನ್ನ ತಪಸ್ಸಿನಿಂದ ಬ್ರಾಹ್ಮಣನಾದನು. ಆದುದರಿಂದ ಬ್ರಾಹ್ಮಣತ್ವಕ್ಕೆ ಕಾರಣ ಜಾತಿಯಲ್ಲ. ಜಿಗರೆಯ ಬಸಿರಿನಿಂದ ಹುಟ್ಟಿಬಂದ ಮಗನಾದ ಋಷ್ಯಶೃಂಗನು ತನ್ನ ತಪಸ್ಸಿನಿಂದ ಮಹಾನ್ನನಾದನು. ಆದುದರಿಂದ ಬ್ರಾಹ್ಮಣತ್ವಕ್ಕೆ ಕಾರಣ ಹುಟ್ಟು ಅಲ್ಲ. ಚಾಂಡಾಲ ಸ್ತ್ರೀಯ ಹೊಟ್ಟೆಯಿಂದ ಹುಟ್ಟಿ ಬಂದ ವಿಶ್ವಾಮಿತ್ರನು ಒಬ್ಬ ಮಹಾನ್ ಋಷಿಯಾದನು. ಆದುದರಿಂದ ಬ್ರಾಹ್ಮಣತ್ವಕ್ಕೆ ಕಾರಣ ಜಾತಿಯಲ್ಲ. ತಾಂಡುಲಿಯ ಮಗನಾದ ನಾರದನು ತನ್ನ ತಪಸ್ಸಿನಿಂದ ಒಬ್ಬ ಮಹಾನ್ ಋಷಿಯಾದನು. ಹೀಗಾಗಿ ಅವನ ಬ್ರಾಹ್ಮಣತ್ವಕ್ಕೆ ಕಾರಣ ಜಾತಿಯಲ್ಲ. ಶೀಲ ಹಾಗೂ ಸದಾಚಾರದಿಂದ ಕೂಡಿದ ಸಂಯಮಿ, ಆತ್ಮಸಂಯಮ ಮತ್ತು ಆತ್ಮದಮನಗಳನ್ನು ಮಾಡಿದ ಮನುಷ್ಯನೇ ಜಿತೇಂದ್ರಿಯನಾಗುತ್ತಾನೆ. ಮನುಷ್ಯನು ತಪಸ್ಸಿನಿಂದ ತಾಪಸನು ಹಾಗೂ ಬ್ರಹ್ಮಚರ್ಯೆಯಿಂದ ಬ್ರಾಹ್ಮಣನಾಗುತ್ತಾನೆ. ಈ ಪ್ರಪಂಚದಲ್ಲಿ ಬ್ರಾಹ್ಮಣ ಸ್ತ್ರೀಯ ಹೊಟ್ಟೆಯಿಂದ ಹುಟ್ಟಿದ ಮಾತ್ರಕ್ಕೆ ಯಾವನೂ ಬ್ರಾಹ್ಮಣನೆನ್ನಿಸಲಾರನು. ಆ (ಕಠ ಮೊದಲಾದ) ಮಹಾಪುರುಷರ ತಾಯಂದಿರು



ಬ್ರಾಹ್ಮಣಿಯರಾಗಿರಲಿಲ್ಲ. ಆದರೆ ಅವರು ಜನರಿಗೆ ಬ್ರಾಹ್ಮಣರೆಂದೇ ಎನ್ನಿಸಿದ್ದರು. ಬ್ರಾಹ್ಮಣತ್ವವು ಸದಾಚಾರ ಹಾಗೂ ಪಾವಿತ್ರದಲ್ಲಿಯೇ ಸಂಚಯಗೊಂಡಿದೆ. ಹೀಗಾಗಿ ಬ್ರಾಹ್ಮಣತ್ವಕ್ಕಾಗಿ ಜನ್ಮವು ಕಾರಣ ಎನ್ನಿಸುವುದಿಲ್ಲ. ಜನ್ಮ ಇಲ್ಲವೆ ವಂಶಕ್ಕೆ ಪ್ರಾಧಾನ್ಯವಿರದೆ ಕೇವಲ ಶೀಲಕ್ಕೆ (ಸದಾಚಾರ) ಮಾತ್ರ ಪ್ರಾಧಾನ್ಯವಿದೆ. ಮನುಷ್ಯನು ಸದಾಚಾರದಿಂದ

ಪತಿತನಾದರೆ ಅವನ ಜಾತಿ ಅಥವಾ ವಂಶದಿಂದೇನು ಪ್ರಯೋಜನ ? ಏಕೆಂದರೆ, ಕೆಳಕುಲದಲ್ಲಿ ಹುಟ್ಟಿಯೂ ಶೀಲಸಂಪನ್ನರಾದ ಹಲವರು ಸ್ವರ್ಗವನ್ನು ಪ್ರವೇಶಿಸಿರುವರು.

೧೮. ಕಿಂ ಚಾಪ್ಯ ನ್ಯದ ಭವದೀಯ ಮತಂ-
-ಮುಖತೋ ಬ್ರಾಹ್ಮಣೋ ಜಾತೋ ಬಾಹುಭ್ಯಾಂ ಕ್ಷತ್ರಿಯಸ್ತಥಾ ।
ಉರೂಭ್ಯಾ ವೈಶ್ಯಃ ಸಂಜಾತಃ ಪದಭ್ಯಾಂ ಶೂದ್ರಕ ಏವ ಚ ॥೩೦॥

ಇದನ್ನು ಬಿಟ್ಟು ನಮ್ಮ ಅಭಿಪ್ರಾಯ ಬೇರೆಯದೆ ? ಹೇಗೆಂದರೆ - ಬ್ರಾಹ್ಮಣನು ಬ್ರಹ್ಮನ ಬಾಯಿಯಿಂದ, ಕ್ಷತ್ರಿಯರು ತೋಳಿನಿಂದ ಹುಟ್ಟಿರುವರು. ವೈಶ್ಯನು ತೊಡೆಯಿಂದ ಹಾಗೂ ಶೂದ್ರನು ಕಾಲಿನಿಂದ ಹುಟ್ಟಿರುವರು.

೧೮. ಅತ್ರೋಚ್ಯತೇ । ಬ್ರಾಹ್ಮಣ ಬಹವೋ ನ ಜ್ಞಾಯಂತೇ ಕುತೋ ಮುಖತೋ
ಜಾತಾ ಬ್ರಾಹ್ಮಣಾ ಇತಿ । ಇಹ ಹಿ ಕೈವರ್ತರಜಕ ಚಂಡಾಲ ಕುಲಷ್ವಪಿ ಬ್ರಾಹ್ಮಣಾಃ
ಸಂತಿ । ತೇಷಾಮಪಿ ಚೂಡಾಕರಣಮುಂಜದಂಡ ಕಾಷ್ಠಾದಿಭಿಃ ಸಂಸ್ಕಾರಾಃ ಕ್ರಿಯಂತೇ । ತೇಷಾಮಪಿ ಬ್ರಾಹ್ಮಣಸಂಜ್ಞಾ ಕ್ರಿಯತೇ । ತಸ್ಮಾದ್ ಬ್ರಾಹ್ಮಣವತ್
ಕ್ಷತ್ರಿಯಾದಯೋಃಪೀತಿ ಪಶ್ಯಾಮ ಏಕವರ್ಣೋ ನಾಸ್ತಿ, ಚಾತುರ್ವರ್ಣ್ಯಮಿತಿ ।

ಇದನ್ನು ಕುರಿತು ಇಲ್ಲಿ ಹೀಗೆ ಎನ್ನಲಾಗುತ್ತದೆ. ಈ ರೀತಿಯಾಗಿ, ಹಲವು ಬಗೆಯ ಬ್ರಾಹ್ಮಣರ ಅಸ್ತಿತ್ವದ ಮಾಹಿತಿಯು ಲಭಿಸುತ್ತದೆ. ಹೀಗಾಗಿ ಬಾಯಿಯಿಂದ ಹುಟ್ಟಿದ ಬ್ರಾಹ್ಮಣ ಎಲ್ಲಿದ್ದಾನೆ, ಎನ್ನುವುದರ ಸುಳಿವೇ ಸಿಕ್ಕುತ್ತಿಲ್ಲ. ಮೀನುಗಾರ, ಮಡಿವಾಳ, ಹಾಗೂ ಚಾಂಡಾಲ ಕುಲದಲ್ಲಿ ಹುಟ್ಟಿದ ಬ್ರಾಹ್ಮಣರು ಕೂಡ ಅಸ್ತಿತ್ವದಲ್ಲಿ ಇರುವರು. 'ಮುಂಜಿವೆ' , 'ಆಹುತಿ ಯನ್ನು ಕೊಡುವುದು ಮತ್ತು ಯಜ್ಞೋಪವೀತ (ಜನಿವಾರ) ಮೊದಲಾದ ಪ್ಣಾನುಷ್ಠಾನದ ಬ್ರಾಹ್ಮಣೆಚಿತವಾದ ಕ್ರಿಯಾಕರ್ಮಗಳನ್ನು ಅವರಿಗೂ ಮಾಡಲಾಗುತ್ತದೆ. ಆದುದರಿಂದ ಬ್ರಾಹ್ಮಣರ ಹಾಗೆಯೇ ಕ್ಷತ್ರಿಯರು ಹಾಗೂ ವೈಶ್ಯರೂ ಕೂಡ ಒಂದೇ ವರ್ಣದವರೆಂದು (ಒಂದೇ ಬಗೆಯವರು) ಅನ್ನಿಸುತ್ತಾರೆ. ಹೀಗಾಗಿ ನಾಲ್ಕು ವರ್ಣಗಳಿರದೆ ಒಂದೇ ವರ್ಣವಿದೆ.

೩೦.  ಅಪಿ ಚ । ಏಕಪುರುಷೋತ್ಪಜ್ಞಾಃ ಕಥಂ ಚಾತುರ್ವರ್ಣ್ಯಮ್ ಇಹ ಕಶ್ಚಿದ್ದೇವದತ್ತ ಏಕಸ್ಯಾಂ ಸ್ತ್ರಿಯಾಂ ಚತುರಃ ಪುತ್ರಾಂ ಜನಯತಿ । ನ ಚ ವರ್ಣಭೇದೋಸ್ತಿ । ಅಯಂ ಬ್ರಾಹ್ಮಣೋऽಯಂ ಕ್ಷತ್ರಿಯೋऽಯಂ ವೈಶ್ಯೋऽಯಂ ಶೂದ್ರ ಇತಿ । ಕಸ್ಮಾತ್ ಏಕಪಿತೃಕತ್ವಾತ್ । ಏವಂ ಬ್ರಾಹ್ಮಣಾದೀನಾ ಕಥಂ ಚಾತುರ್ವರ್ಣ್ಯ ಮ್ ॥



ಅಂದ ಬಳಿಕ ಒಬ್ಬ ಮನುಷ್ಯನಿಂದಲೇ (ಬ್ರಹ್ಮನಿಂದ) ಹುಟ್ಟಿದ ಜನರಲ್ಲಿ ನಾಲ್ಕು ಜಾತಿಗಳು (ವರ್ಣ) ಇರಲು ಹೇಗೆ ಸಾಧ್ಯ ? ದೇವದತ್ತನೆಂಬವನಿಂದ ಒಬ್ಬಳ ಹೊಟ್ಟೆಯಲ್ಲಿ ನಾಲ್ವರು ಗಂಡು ಮಕ್ಕಳು ಹುಟ್ಟುತ್ತಾರೆ. ವರ್ಣವನ್ನಾಧರಿಸಿದ ಭೇದವು (ವ್ಯತ್ಯಾಸ) ಆ ಮಕ್ಕಳಲ್ಲಿ ಇರದು. ಅವರನ್ನು ಕುರಿತು ಈತ ಬ್ರಾಹ್ಮಣ, ಈತ ಕ್ಷತ್ರಿಯ, ಈತ ವೈಶ್ಯ ಮತ್ತು ಈತ ಶೂದ್ರನೆಂದು ಹೇಳಲು ಹೇಗೆ ಸಾಧ್ಯ ? ಏಕೆಂದರೆ ಅವರು ಒಬ್ಬ ತಂದೆಯಿಂದಲೇ ಹುಟ್ಟಿದವರು. ಹೀಗಿರುವಲ್ಲಿ ಬ್ರಾಹ್ಮಣಾದಿ ನಾಲ್ಕು ಜಾತಿಗಳು ಇರಲು ಹೇಗೆ ಸಾಧ್ಯ ?" ೧

೧ : ಲೋಖಂಡೆ, ಪು. ೧-೪, ೧೪-೧೫ ಮತ್ತು ೨೯-೩೧.

**ಪರಿಶಿಷ್ಟ-೧೪**

**ಮಹಾರಾಜ ಸಯಾಜೀರಾವ ಗಾಯಕವಾಡ**

ಶ್ರೀಮಂತ ಸಯಾಜೀರಾವ ಮಹಾರಾಜರ ಜನ್ಮವು ನಾಸಿಕ ಜಿಲ್ಲೆಯ ಮನಮಾಡದಿಂದ ಸುಮಾರು ೧೮ ಮೈಲುಗಳ ಮೇಲಿರುವ ಕವಳಾಣೆ ಎಂಬ ಊರಿನಲ್ಲಿ ೧೭ ಮಾರ್ಚ್ ೧೮೬೩ ರಂದು ಆಯಿತು. ಸಯಾಜೀರಾವ ಅವರು ಗಾಯಕವಾಡ ಮನೆತನದ ಸುಪ್ರಸಿದ್ಧರಾದ ದಮಾಜಿ ಗಾಯಕವಾಡ ಅವರ ಪ್ರತಾಪರಾವ ಎಂಬ ಸೋದರನಿಂದ ಮುಂದಿನ ಐದನೆಯ ತಲೆಮಾರಿನವರಾದ ಕಾಶೀರಾವ ಗಾಯಕವಾಡ ಎನ್ನುವವರ ಎರಡನೆಯ ಮಗನಾಗಿದ್ದರು. ಸಯಾಜಿರಾವ ಮಹಾರಾಜರ ತಂದೆ ಕಾಶೀರಾವ ಅವರ ಸ್ಥಿತಿ ಶ್ರೀಮಂತಿಕೆಯದಾಗಿರಲಿಲ್ಲ; ಆದರೆ ಅದು ಕವಳಾಣೆ ಊರಿನಲ್ಲಿ ಕುಲೀನ, ಮರ್ಯಾದಸ್ಥ, ತಿಂದುಂಡು ಸುಖಿ ಕುಟುಂಬವೆಂದು ತಿಳಿಯಲಾಗುತ್ತಿತ್ತು. ಕಾಶೀರಾವ ಅವರ ಇಬ್ಬರು ಸೋದರರು ಉಖಾಜೀ ಮತ್ತು ಸಖಾರಾಮರು ಬಡತನಕ್ಕೆ ಬೇಸತ್ತು, ಬಡೋದೆಯ ಗಾಯಕವಾಡರೊಂದಿಗಿನ ತಮ್ಮ ನಂಟನ್ನು ನೆನೆಸಿ ಅವರನ್ನು ಭೇಟಿಯಾದರು. ಉಖಾಜಿ ಅವರು ಮಲ್ಹಾರರಾವ ಗಾದಿಗೆ (ಗದ್ದುಗೆ) ಬಂದ ಬಳಿಕ ಮತ್ತೆ ಅವರನ್ನು ಕಂಡರು. ಅವರೂ ಕೂಡ ಇವರಿಗೆ ಭರ್ಜರಿ ಪೋಷಾಕನ್ನು ನೀಡಿ ತುಂಬಿದ ಓಲಗದಲ್ಲಿ ಉಖಾಜಿ

ಅವರನ್ನು ಗೌರವಿಸಲು ನಿರ್ಧರಿಸಿದರು; ಆದರೆ ಉಖಾಜಿಯವರು ತಮ್ಮ ಅಣ್ಣನಾದ ಕಾಶೀರಾವ ಅವರಿಗೆ ಈ ಮರ್ಯಾದೆಯು ದೊರೆಯಬೇಕೆಂದು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದ್ದರಿಂದ ಮಲ್ಹಾರರಾವ ಅವರು ಕಾಶೀರಾವ ಅವರನ್ನು ಕರೆತಂದು ಪೋಷಕು ಹಾಗೂ ಸ್ವಲ್ಪ ಪೆನ್ಸನ್ ನೀಡಿ ಅವರನ್ನು ಸಾಗಹಾಕಿದರು. ಕಾಶೀರಾವರಿಗೆ ಆನಂದರಾವ, ಗೋಪಾಳರಾವ ಮತ್ತು ಸಂಪತರಾವ ಎಂಬ ಮೂರು ಜನ ಗಂಡುಮಕ್ಕಳಿದ್ದರು. ಗೋಪಾಳರಾವ ಎಂದರೇನೇ ಶ್ರೀಮಂತ ಸರ್ ಸಯಾಜೀರಾವ ಗಾಯಕವಾಡ, ಬಡೋದೆಯ ಮಹಾರಾಜರು, ಗಾಯಕವಾಡ ಮನೆತನಕ್ಕೆ ಸಂಬಂಧಿಸಿದ ಬಡೋದೆ ಹಾಗೂ ಕವಳಾಣೆಯ ಗಂಡು ಮಕ್ಕಳನ್ನು ಕುರಿತು ವಿಚಾರಿಸಿ ಅವರ ಪೈಕಿ ಗೋಪಾಳರಾವ ಅವರನ್ನು ಇಷ್ಟಪಟ್ಟು ಆಯ್ದುಕೊಂಡು ಸಯಾಜಿರಾವ ಎಂಬ ಹೆಸರಿನಿಂದ ತಾ. ೨೭ ಮೇ ೧೮೭೫ಳರಂದು ವಿಧಿಪೂರ್ವಕವಾಗಿ ದತ್ತು ಪಡೆಯಲಾಯಿತು.

ಇ. ಸ. ೧೮೮೧ರ ಡಿಸೆಂಬರ್ ತಿಂಗಳಿನಲ್ಲಿ ಮಹಾರಾಜರ ಶಿಕ್ಷಣಕ್ರಮ ಮುಗಿಯಿತು. ಇಲಿಯಟ್ ಎಂಬ ಆಂಗ್ಲ ಸಾಹೇಬನ ಶಿಕ್ಷಣದಿಂದ ಮಹಾರಾಜರ ಮನಸ್ಸಿನ ಮೇಲೆ ಸೂಕ್ತವಾದ ಸುಪರಿಣಾಮ ಉಂಟಾಯಿತು. ಆಂಗ್ಲ ವಿದ್ಯೆಯಿಂದಾಗಿ ಮಹಾರಾಜರು ನಾಸ್ತಿಕರಾದರೆಂದು ಕೆಲವರ ಅಭಿಪ್ರಾಯ. ಆದರೆ ಮಹಾರಾಜರಿಗೆ ಎಲ್ಲ ಬದಿಗಳಿಂದಲೂ ಶಿಕ್ಷಣ ದೊರೆಯಿತು, ಎಂಬುದನ್ನು ಯಾರಾದರೂ ಒಪ್ಪದೆ ಇರಲಾರರು. ಮಹಾರಾಜರ ಬುದ್ದಿಯು ನಾಲ್ಕು ಆಯಾಮಗಳನ್ನು ಹೊಂದಿದುದು. ಅವರ ದೃಷ್ಟಿಯು ವ್ಯಾಪಕವಾದರೂ ಸೂಕ್ಷ್ಮವಾಗಿತ್ತು. ಇಂಗ್ಲಿಷ್ ಶಿಕ್ಷಣ ಹಾಗೂ ಇತಿಹಾಸದ



ಪರಿಶೀಲನೆಯಿಂದ ಅವರ ಬುದ್ದಿಯು ವಿಕಸನಗೊಂಡಿತು. ಪ್ರತಿಯೊಂದು ಸಂಗತಿಯನ್ನು ಬುದ್ದಿ ರೂಪದ ತಕ್ಕಡಿಯಿಂದ ತೂಗಿ ಅದರ (ಬುದ್ದಿಯ) ಮುಳ್ಳು ವಾಲಿದತ್ತಲಿನ ಸಂಗತಿಯನ್ನು ಮಾಡುವ ಅಭ್ಯಾಸ ಅವರಿಗೆ ಆಯಿತು. ಅವರು ದೃಢನಿಶ್ಚಯ, ಉದ್ಯಮಶೀಲತೆ, ನೇರ ನಡೆನುಡಿ, ಕಠೋರ ಶಿಸ್ತು, ಇನ್ನೊಬ್ಬರನ್ನು ತಮ್ಮ ಹಿಡಿತದಲ್ಲಿ ಇರಿಸಿಕೊಳ್ಳುವ ಕಲೆ, ಮೊದಲಾದ ಸಂಗತಿಗಳನ್ನು ತಮ್ಮ ಯುರೋಪಿಯನ್ ಶಿಕ್ಷಕನಿಂದ ಕಲಿತರು. ರಾಜಕೀಯ ಪರಿಸ್ಥಿತಿಯನ್ನು ಸರಿಯಾಗಿ ಗ್ರಹಿಸಿ ಹಾಗೂ ನಿರೀಕ್ಷಿಸಿ ಅದರಲ್ಲಿರುವ ಕುಂದುಕೊರತೆಗಳನ್ನು ನಿವಾರಿಸಿ, ಸುನಿಯಂತ್ರಿತವಾಗಿ

ಆಳುವುದು ಅವರ ಗುರಿಯಾಯಿತು. ಮಹಾರಾಜರು ಕೇವಲ ರೂಢಿ, ಕುರುಡು ನಂಬಿಕೆ ಅಥವಾ ನಡೆದು ಬಂದ ನಂಬಿಕೆ ಎಂದು ಯಾವೊಂದು ಸಂಗತಿಯನ್ನು ಒಪ್ಪಿಕೊಳ್ಳದೆ ಸುರಾಜ್ಯಕ್ಕೆ ಪರಿಪೋಷಕವಿದ್ದ ಹಾಗೂ ಬುದ್ಧಿಗೆ ಒಪ್ಪಿಗೆಯಾಗುವಂಥದನ್ನು ಮಾತ್ರ ಉಳಿಸಿಕೊಳ್ಳುವುದು, ನಿರುಪಯೋಗಿಯಾದ ಭಾಗವನ್ನು ತೆಗೆದು ಹಾಕುವುದು, ಎಂಬಂಥ ಧೋರಣೆಯನ್ನು ತಯಾರಿಸಿಕೊಂಡರು. "ಯಾರೇ ಆದರೂ ಇಂದಿನ* ಬಡೋದೆಯಲ್ಲಾದ ಸುಧಾರಣೆ ಎಂದರೆ ಮಹಾರಾಜರಿಗೆ ದೊರೆತ ಸುಶಿಕ್ಷಣದ ದೃಶ್ಯಫಲವೇ ಅಹುದು, ಎಂಬುದನ್ನು ಒಪ್ಪಿಕೊಳ್ಳಬಹುದು." ೧ ಇಷ್ಟೇ ಅಲ್ಲದೆ ತದನಂತರ ಅವರು ತಮ್ಮ ನಿಧನದ ವರೆಗೂ ಸಂಸ್ಥಾನದ ಸರ್ವಾಂಗೀಣ ಉನ್ನತಿಗಾಗಿ ಇರುವ ಒಬ್ಬ ಆದರ್ಶ ಲೋಕಕಲ್ಯಾಣಕಾರಿ ರಾಜನೆಂಬ ತಮ್ಮ ಸ್ಥಾನವನ್ನು ಉಳಿಸಿಕೊಂಡಿರುವರು. ಅವರು ೫ ಮಾರ್ಚ್ ೧೯೦೭ ರ ತಮ್ಮ ಭಾಷಣದಲ್ಲಿ ಸ್ಪಷ್ಟವಾಗಿ ಹೀಗೆನ್ನುತ್ತಾರೆ : ಪ್ರಜೆಯ ಕಲ್ಯಾಣವೇ ನನ್ನ ಕರ್ತವ್ಯ, ಅದೇ ನನ್ನ ಮೋಕ್ಷ" ಶಿಕ್ಷಣವು ಸಾರ್ವತ್ರಿಕವಾಗಿ ಇರುವುದರ ಹಿಂದಿರುವ ತಮ್ಮ ವಿಚಾರಗಳನ್ನು ಸ್ಪಷ್ಟಪಡಿಸುತ್ತ ಅವರು ೧೯ ಜೂನ್ ೧೯೦೪ ರ ತಮ್ಮ ಭಾಷಣದಲ್ಲಿ ಹೀಗೆನ್ನುತ್ತಾರೆ : 'ವಿದ್ಯೆಯು ಒಬ್ಬನೇ ವ್ಯಕ್ತಿ ಅಥವಾ ಒಂದೇ ವರ್ಗಕ್ಕೆ, ಇಷ್ಟೇ ಏಕೆ, ಒಂದೇ ಸಮುದಾಯಕ್ಕೆ ದೊರೆತು ಲಾಭವಿಲ್ಲ. ಅದು ಸಾರ್ವತ್ರಿಕವಾಗಿರತಕ್ಕದ್ದು. ಅಂದರೇನೇ ನಮ್ಮ ಹೆಜ್ಜೆ ಮುಂದಕ್ಕೆ ಸಾಗೀತೆಂಬುದನ್ನು ಗಮನದಲ್ಲಿ ಇರಿಸಿಕೊಳ್ಳಿ, ಇಡಿಯ ರಾಷ್ಟ್ರದ ಉತ್ಕರ್ಷೆ ಆಗಬೇಕಿದೆ. ಅದು ಒಂದು ಸಮುದಾಯದಿಂದ ಕೈಗೂಡದು. ನೀವು ಚಿಕ್ಕವರಿಂದ ಹಿಡಿದು ದೊಡ್ಡವರವರೆಗಿನ ಎಲ್ಲರನ್ನೂ ವಿದ್ಯೆ ಕಲಿತವರನ್ನಾಗಿ ಮಾಡಲು ಹೆಣಗಬೇಕು; ಅಂದರೇನೇ ರಾಷ್ಟ್ರ ಮುನ್ನಡೆದೀತು ...... ಯಾರೂ ಹುಟ್ಟಿನಿಂದ ದೊಡ್ಡವರಲ್ಲ, ಎಂಬುದನ್ನು ನೀವು ಮನದಲ್ಲಿ ಇರಿಸಿಕೊಳ್ಳಬೇಕು. ವಿದ್ಯಾಪ್ರಸಾರದ ಈ ಕೆಲಸವು ಹಳ್ಳಿ ಹಳ್ಳಿಗಳಲ್ಲೂ ಒಂದೇ ಸಮನೆ ಹಾಗೂ ಶಿಸ್ತಿನಿಂದ (ಸುಯಂತ್ರ) ನಡೆಯತಕ್ಕದ್ದು. ನಮ್ಮ ದೇಶಲ್ಲಿ ಹೊಲೆಯರ ಮಗನಿಂದ ಹಿಡಿದು ತೀರ ಮೇಲಿನ ಮೆಟ್ಟಿಲಿನ ವರೆಗಿನ ಎಲ್ಲ ಜನರಿಗೂ ಕಾರ್ಯಕಾರಣ ಭಾವ ಅರ್ಥವಾಗಲು ಶುರುವಾದಾಗಲೇ ನಮ್ಮ ಉರ್ಜಿತಕಾಲ ಹತ್ತಿರಕ್ಕೆ ಬಂದಿದೆ, ಎಂದೆನ್ನಲು ಯಾವುದೇ ಬಗೆಯ ಅಭ್ಯಂತರವಿಲ್ಲ."

ಅವರು ಶಿಕ್ಷಣದ ಅನಿವಾರ್ಯತೆಯನ್ನು ವಿಶದಪಡಿಸುತ್ತ ಹೀಗೆನ್ನುತ್ತಾರೆ : "Education is absolutely necessary for the realisation of my ambition and wishes and for the success of my policy."

"Education is the basis of all reforms and is the only way of solution for our present condition."

# ಇ. ಸನ್ ೧೯೩೩ ರವರೆಗೆ ಅಂದರೆ ಮಹಾರಾಜರ ಚರಿತ್ರೆಯನ್ನು ಬರೆಯುತ್ತಿರುವವರೆಗೆ.

೧ : ಶ್ರೀ ಸಯಾಜೀ ಗೌರವ ಗ್ರಂಥ - ೧೯೩೩.



'ಭಾರತೀಯ ಸಂಸ್ಥಾನಿಕರ ಪೈಕಿ ಪುಣ್ಯಶ್ಲೋಕರಾದ ಸಯಾಜೀರಾವ ಗಾಯಕವಾಡ ಅವರ ಅಸ್ಪೃಶ್ಯತಾ ನಿವಾರಣೆಯ ಕ್ಷೇತ್ರದ ಕೆಲಸವು ತುಂಬ ಗಟ್ಟಿ ಹಾಗೂ ಪರಿಣಾಮಕರವೆನ್ನಿಸಿತು. ಅರ್ವಾಚೀನ ಭಾರತದಲ್ಲಿ ಪ್ರಜಾಹಿತರಕ್ಷನೂ ಜ್ಞಾನದಾತನೂ ಹಾಗೂ ಪ್ರಗತಿಪ್ರಿಯನೂ ಆದ ಇಂಥ ನರೇಶನು ಕ್ವಚಿತ್ತಾಗಿ ಆಗಿರಬಹುದು. ಸ್ಪೃಶ್ಯ ಹಿಂದೂಗಳ ಹೃದಯಶೂನ್ಯತೆಯಿಂದಾಗಿ ಅಸ್ಪೃಶ್ಯರಿಗಾಗಿ ತೆರೆದ ಶಾಲೆಗಳಿಗೆ ಸ್ಪೃಶ್ಯ ಹಿಂದು ಶಿಕ್ಷಕರು ಸಿಕ್ಕದಂತಾಗಲು, ಸಯಾಜಿ ಮಹಾರಾಜರಿಗೆ ಮುಸಲ್ಮಾನ ಶಿಕ್ಷಕರನ್ನು ನೇಮಿಸುವ ಹೊತ್ತು ಬಂದಿತು.

ಮಹಾರಾಜರು ಬರಿ ವಿಚಾರವನ್ನು ಮಂಡಿಸದೆ ಅದನ್ನನುಸರಿಸಿ ಕೃತಿಯನ್ನೂ ಮಾಡಿದರು. ಡಾ. ಬಾಬಾಸಾಹೇಬ ಅಂಬೇಡಕರರ ಜೀವನದ ಈ ಕೆಳಗಿನ ಪ್ರಸಂಗವು ಈ ಸಂದರ್ಭದಲ್ಲಿ ಉದ್ಬೋಧಕವೆನ್ನಿಸೀತು.

"ಭೀಮರಾವ ಅಂಬೇಡ್ಕರರ ತಂದೆಯ ಸಾವಿನಿಂದಾಗಿ ಇದ್ದ ಅವರ ಆಧಾರ ಕಳಚಿ ಬಿದ್ದಿತು. ದುಡ್ಡಿನ ಬೆಂಬಲವಿಲ್ಲ, ಬಳಗದವರ ಆಧಾರವಿಲ್ಲ, ಎನ್ನುವ ಅವಸ್ಥೆ. ಬಡೋದೆಯ ನೌಕರಿಗೆ ಹಾಜರಾಗುವ ಮನಸ್ಥಿತಿಯು ಅವರಲ್ಲಿ ಇರಲಿಲ್ಲ. ಆ ನೌಕರಿಯ ಅನುಭವ ಅಷ್ಟೇನೂ ಚೆನ್ನಾಗಿರಲಿಲ್ಲ. ಇನ್ನು ತಮ್ಮ ಕಾಲಮೇಲೆ ನಿಂತುಕೊಳ್ಳದ ಹೊರತು ಬೇರೆ ವಿಧಿಯಿರಲಿಲ್ಲ. ಅವರಲ್ಲಿ ಜ್ಞಾನವನ್ನು ಸಂಪಾದಿಸಬೇಕೆನ್ನುವ ತೀವ್ರ ಇಚ್ಛೆಯಿತ್ತು. ಪ್ರಪಂಚದಲ್ಲಿ ಯಾವುದಾದರೂ ಮಹತ್ತರವಾದ ಕೆಲಸವನ್ನು ಮಾಡಬೇಕೆಂಬ ಮೌನ ಮಹತ್ವಾಕಾಂಕ್ಷೆಯು ಅವರಲ್ಲಿತ್ತು. ಹೀಗಾಗಿ ಅವರ ಮನಸ್ಸು ಅಲ್ಲೋಲಕಲ್ಲೋಲಕ್ಕೆ ಒಳಗಾಗಿರುತ್ತಿತ್ತು. ಕುಟುಂಬದ ಪಾಲನೆ ಪೋಷಣೆಯನ್ನಂತೂ ಮಾಡಲೇಬೇಕು.

ಶಿಕ್ಷಣವನ್ನು ಮುಂದುವರಿಸಬೇಕೆಂದರೆ ಹತ್ತಿರ ಒಂದು ಕಾಸಿಲ್ಲ. ತಂದೆಯ ಕೊನೆಯ ದಿನಗಳಲ್ಲಿ ಸಾಲವಾಗಿತ್ತು. ಹೀಗೆ ಜೀವನದ ತೀವ್ರ ಹೆಣಗಾಟದಲ್ಲಿ ದಾರಿಯನ್ನು ಹೇಗೆ ಕಂಡುಕೊಳ್ಳುವುದೆಂಬ ಚಿಂತೆಯಲ್ಲಿ ಇದ್ದಾಗ ಅವರು ಮುಂಬಯಿಯಲ್ಲಿ ಬಡೋದೆಯ ನರೇಶರನ್ನು ಕಂಡರು. ಅದೇ ಸುಮಾರಿಗೆ ಬಡೋದೆಯ ಸರಕಾರವು ಶಿಷ್ಯವೇತನ ನೀಡಿ ನಾಲ್ಕು ವಿದ್ಯಾರ್ಥಿಗಳನ್ನು ಉಚ್ಚ ಶಿಕ್ಷಣಕ್ಕಾಗಿ ಅಮೇರಿಕೆಗೆ ಕಳಿಸಲು ಯೋಚಿಸಿತ್ತು. ಮಹಾರಾಜರು ಭೀಮರಾವ ಅವರಿಗೆ ಶಿಷ್ಯವೇತನಕ್ಕಾಗಿ ಅರ್ಜಿ ಸಲ್ಲಿಸಲು ಹೇಳಿದರು. ಆ ನಾಲ್ಕು ವಿದ್ಯಾರ್ಥಿಗಳಲ್ಲಿ ಅವರು ಭೀಮರಾವ ಅವರನ್ನು ಆಯ್ದರು.''೨

ಡಾ. ಬಾಬಾಸಾಹೇಬ ಅಂಬೇಡಕರರು ನಿಯಮಕ್ಕೆ ತಕ್ಕಂತೆ ಬ್ರಿಟಿಷ್ ಭಾರತದ ಪ್ರಾಂತಿಕ ವಿತ್ತೀಯ ಉತ್ಕ್ರಾಂತಿ' (ದಿ ಇವೊಲ್ಯೂಶನ್ ಆಫ್ ಪ್ರಾವಿನ್ಸಿಯಲ್ ಫೈನಾನ್ಸ್ ಇನ್ ಬ್ರಿಟಿಷ್ ಇಂಡಿಯಾ) ಎಂಬ ಹೆಸರಿನಿಂದ ಪ್ರಕಟವಾದ ಗ್ರಂಥದ ಪ್ರತಿಗಳನ್ನು ಕೋಲಂಬಿಯಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಲೇ ರೀತಿಗೆ ತಕ್ಕಂತೆ ಆ ವಿಶ್ವವಿದ್ಯಾಲಯವು ಅವರಿಗೆ 'ಡಾಕ್ಟರ್ ಆಫ್ ಫಿಲಾಸಫಿ' ಎಂಬ ಅತ್ಯುಚ್ಚ ಪದವಿಯನ್ನು ನೀಡಿತು. ಡಾ. ಅಂಬೇಡಕರರು ಶ್ರೀಮಂತ ಸಯಾಜೀರಾವ ಮಹಾರಾಜರ ಬಗೆಗಿನ ತಮ್ಮ ಕೃತಜ್ಞತೆಯ ದ್ಯೋತಕವೆಂದು ಮೇಲಿನ ಪ್ರಬಂಧವನ್ನು ಅವರಿಗೆ ಅರ್ಪಿಸಿದರು.

ಶ್ರೀಮಂತ ಸಯಾಜೀರಾವ ಮಹಾರಾಜರೂ ಮೊದಲನೆಯ ದುಂಡು ಮೇಜಿನ ಪರಿಷತ್ತಿಗೆ ಹೋಗಿದ್ದರು. ಡಾ. ಬಾಬಾಸಾಹೇಬ ಅಂಬೇಡ್ಕರರ ಭಾಷಣವೂ ಆ ಪರಿಷತ್ತಿನಲ್ಲಿ ಆಯಿತು. ಅದರಿಂದ

೧ : ಮಹಾರಾಷ್ಟ್ರೀಯ ಜ್ಞಾನಕೋಶ, ವಿಭಾಗ ೭, ಪು. ೬೪೪, ಉದ್ಧೃತ - ಕೀರ, ಪು. ೫.

೨ : ಕೀರ, ಪು. ೩೧,

೩ : ತತ್ರೈವ್ಯ, ಪು. ೩೪-೩೫.

ಆ ಇಡಿಯ ಸಭಾಗೃಹವು ಪ್ರಭಾವಿತವಾಗಿತ್ತು. ಡಾ. ಅಂಬೇಡಕರರ ಭಾಷಣವನ್ನು ಕೇಳಿ ಬ್ರಿಟಿಷ್ ಪ್ರಧಾನಿ ಮ್ಯೆಕ್ಡೋನಾಲ್ಡ್ ಅವರಂತೂ ತುಂಬ ಬೆರಗಾದರು. ಅವರು ತಮ್ಮ ಉಪಸಂಹಾರದ ಭಾಷಣದಲ್ಲಿ ಹಾಗೆಂದು ಪ್ರಕಟವಾಗಿ ಹೇಳಿಯೂ ಹೇಳಿದರು. ಡಾ. ಅಂಬೇಡಕರರ ಈ ಭೀಮ ಪರಾಕ್ರಮದಿಂದಾಗಿ ಪರಿಷತ್ತಿನಲ್ಲಿದ್ದ ಇನ್ನೊಬ್ಬ ದೊಡ್ಡ ವ್ಯಕ್ತಿಯು ಅವರ ಮೇಲೆ ತುಂಬ ಖುಷಿಯಾದರು. ಆ ವ್ಯಕ್ತಿಯ ಕಣ್ಣುಗಳು ಸಂತಸದಿಂದ ಹನಿಗೂಡಿದವು. ಸಮಾಧಾನ, ಮೆಚ್ಚುಗೆ ಮತ್ತು ಕೃತಾರ್ಥತೆಗಳಿಂದ ಅವರ ಎದೆ ತುಂಬಿ ಬಂದಿತು. ತಮ್ಮ ಅರಮನೆಯಂತಹ ಸೌಧವನ್ನು ತಲುಪುತ್ತಲೇ ಅವರು ತಮ್ಮ ರಾಣಿಗೆ, ತಮ್ಮೆಲ್ಲ ಯತ್ನ ಹಾಗೂ ದುಡ್ಡು ಸಾರ್ಥಕವಾಯಿತು, ಎಂದರು. ಇಂದು ಒಂದು ಮಹತ್ಕಾರ್ಯವು ಸಫಲವಾದುದನ್ನು ಕಂಡೆ. ಯಶ ಲಭಿಸಿತು. ಡಾ. ಅಂಬೇಡ್ಕರರ ಈ ಅಭಿಮಾನಿಯು ಇನ್ನಾರೂ ಆಗಿರದೆ ಯಾವ ಬಡೋದೆಯ ಮಹಾರಾಜರು ಅಂಬೇಡಕರರ ಶಿಕ್ಷಣಕ್ಕಾಗಿ ನೆರವನ್ನು ನೀಡಿದ್ದರೋ ಅದೇ ಬಡೋದೆಯ ನರೇಶರಾದ ಸಯಾಜಿರಾವ ಗಾಯಕವಾಡ ಅವರಾಗಿದ್ದರು. ಸಯಾಜೀರಾವ ಗಾಯಕವಾಡರು ಡಾ. ಅಂಬೇಡಕರರ ಈ ಯಶಸ್ಸಿಗಾಗಿ ತಮ್ಮ ಆಯ್ದ ಸ್ನೇಹಿತರಿಗೆ ಒಂದು ದೊಡ್ಡ ಮೇಜವಾನಿಯನ್ನು ಕೊಟ್ಟರು. ಹಲವು ವರ್ಷಗಳ ಅಗಲುವಿಕೆಯ ತರುವಾಯ ನರೇಶ ಹಾಗೂ ಈ ನರವೀರರು ಭಾವನೆಯನ್ನು ಉಕ್ಕೇರಿಸುವ ಇಂಥ ಒಂದು ಸನ್ನಿವೇಶದಲ್ಲಿ ಪರಸ್ಪರರನ್ನು ಭೇಟಿಯಾದುದು ವಿಧಿಯ ಬಲು ರೋಮಾಂಚಕಾರಿ ಅಚ್ಚರಿಯಾಗಿತ್ತು."

ಶ್ರೀಮಂತ ಸಯಾಜೀರಾವ ಮಹಾರಾಜರಲ್ಲಿ ಬೌದ್ಧ ಧರ್ಮದ ವಿಶೇಷವಾದ ಸೆಳೆತವಿತ್ತು. ಈ ದೃಷ್ಟಿಯಿಂದ Dr. A. L. Nairರು ಅವರ ೭೧ ನೆಯ ಹುಟ್ಟುಹಬ್ಬದ ನಿಮಿತ್ತವಾಗಿ ಬರೆದ "The Maharaja's Love of Buddha's Teachings' ಎಂಬ ಲೇಖನದಲ್ಲಿ ಅವರು ಮಾಡಿದ ಕೆಲಸದ ವರ್ಣನೆಯನ್ನು ಮಾಡಿರುವರು. ಅವರು ಹೀಗೆನ್ನುತ್ತಾರೆ :

**"ದುಲ್ಲ ಭೋ ಪುರಿಸೋ ಜಇಞ್ಞ ನ ಸೋ ಸಬ್ಬತ್ಥ ಜಾಯತಿ.**

[It is with feelings of admiration, great appreciation and devotion to His Highness that I tender my sincere homage and greatfulness to His Highness on his witnessing the 71 at Birth-day. A ruler of a State and in fact a model and all-progrssive State has so many and varied calls on his powers of body and mind that in his sincerity of purpose and generous and keen desire to do good to his subjects, he has scarcely and any time left to devote to his health and personal comforts. It is with the heartfelt blesssings and devoted love of his subjects that a ruler lives long, and this fact is most eloquently proved in the case of His Highness. It is on this auspcious occasion that I take the opportunity of expressing my own sentiment and appreciative greatfulness for the service that His Highness has first rendered to the cause of Bhagawan Buddha on this side of India. I propose, therefore, to do it by emphasising on the great love that the Maharaja entertains towards my Bhagawan.

೧ : ಕೀರ, ಪು. ೧೬೧.

When I recall to my mind the past history of Buddhism, I feel sad and disappointed to see how the Bhagawan Buddha, who, for the first time, taught loving service and selfisacrifice at the alter of suffering humanity and entire creation of life as the end-all of religion, should have been entirely neglected and forgotten in the hand of His birth where, He first began the work of conveying a message of hope and inspiration to the suffering and ignorant masses of India, to all those "who had ears to listen." He then extended His sphere of self-less activity through his devoted Bhikkus outside India and in the known world. He reduced all speculation in religion to practical love and piety, irrespective of any considerations of caste, creedor sex, touchable or untouchable. On the broadest principles of universal love, brotherhood and Ahimsa, Bhgawan Buddha effected a tremendous revolution in the political, social, moral and religious aims and ideals, and it was due to Him and His methods of teaching that Art was first applied to religion and religious purposes. It is the happiest signs of the times that India has been showing renewed and appreciative interest in the Bhagawan Buddha and His times and teaching. But my admiration for His Highness is still further intensified by the fact that long before this renaissance of Buddhism in India, His Highness had taken great interest in Bhagawan Buddha, and showed the greatest love for him. His Highness had on many occasions to come to my place, and always enviced great reverence for Him in talks with me. His Highness really desired that Bhagawan Buddha's teachings should be studied in India and His ideals of self-conquest, Ahimsa and humanitarian and altruistic work on the basis of Universal Brotherhood should be widely known and given prominence to. Out of great love His Highness has installed I the Jubilee

Garden of Baroda a big bronze statue of Bhagawan Buddha and arranged lectures on Buddha and Buddhism in the year 1910; and Prof. Dharmanand Kosambi delivered 5 lectures in Marathi. His Highness introduced Pali as a second langauge in the Baroda College first and then in the High School, and for the first time appointed the late Prof. C. V. Rajvade, who was entrusted with the work of translating into Marathi three volumes of the Dighnikaya in the Shree Sayaji Sahityamala and instituted scholarships for Pali in Fergusson and the Baroda Colleges. His Highness assimilated many of the Buddhistic principles, like removing untouchability, giving equal status to all castes, and gave them practical shape in his State. His Highness expressed a desire to translate Pali Books into Marathi and edit Pali texts in the Devanagari characters, and to this effect His Highness spoke to me, when I had privilege of meeting His Highness in 1931. His Highness has in fact



instructed Mr. Yande to give first preference for the publication of Pali books in Translation form as the best means of educating the pubic in the life and teachings of Bhagawan Buddha. His Highness' proof of Bhagawan's love is further given when His Highness kindly consented to open the Anand Vihar in Bombay on the occasion of the 2,555th Birthday of the Bhagawan solemnised by the Buddha Society. On this occasion His Highness in his speech paid an eloquent tribute to Bhgawan Buddha's teachings. "His doctrines," remarked His Highness, “have been the consolation in life and in death to untold millions, softening wild and savage races, by tender words of loving kindness, raising the despairing to the higher

things and sharing the blessedness of the Noble Aryan Middle Path." By His Holiness' pronouncement, the Buddha Society has been greatly assured and helped, and I, as a resident of that Society and as humble and devoted servant of the Bhagawan, and am filled with emotion of greatfulness." ']

ಮಹಾರಾಜರ ಹಾಜರಿಯಲ್ಲಿ ಅವರ ೭೧ನೆಯ ಹುಟ್ಟು ಹಬ್ಬದಂದು ಅವರ ಬಗೆಗಿನ ಮೆಚ್ಚುಗೆ, ಹಿರಿದಾದ ಗೌರವ ಹಾಗೂ ಭಕ್ತಿಭಾವನೆಗಳಿಂದ ನನ್ನ ನಿದ್ದೆ ಹಾಗೂ ಉಪಕೃತತೆಯ ಗೌರವದ ಕಾಣಿಕೆಯನ್ನು ಸಲ್ಲಿಸುತ್ತೇನೆ. ಸರ್ವತೋಮುಖಿಯಾಗಿ ಪ್ರಗತಿಪರ ಸಂಸ್ಥಾನದಿಂದ ಒಂದು ಸಂಸ್ಥಾನದ ರಾಜರೂ, ನಿಜವಾದ ಮಾದರಿಯೂ ಆದ ಅವರಿಗೆ ಬರುವ ಹಲವು ಬಗೆಯ ಕರೆಗಳ ಒತ್ತಡವು ಅವರ ದೈಹಿಕ ಶಕ್ತಿ ಹಾಗೂ ಮನಸ್ಸಿನ ಮೇಲಿರುತ್ತದೆ. ಗುರಿಯ ಬಗೆಗಿನ ನಿಷೆ, ಔದಾರ್ಯ ಹಾಗೂ ಪ್ರಜೆಗಳಿಗೆ ಕಲ್ಯಾಣವನ್ನು ಮಾಡಬೇಕೆನ್ನುವ ತೀವ್ರವಾದ ಇಚ್ಛೆಯಿಂದಾಗಿ ಅವರಿಗೆ ತಮ್ಮ ಆರೋಗ್ಯ ಹಾಗೂ ವ್ಯಕ್ತಿಗತವಾದ ಐಷಾರಾಮಗಳತ್ತ ಗಮನ ಹರಿಸಲು ಪುರಸೊತ್ತೇ ಸಿಕ್ಕುವುದಿಲ್ಲ. ಒಬ್ಬ ರಾಜನು ದೀರ್ಘ ಕಾಲ ಬಾಳಬೇಕಿದ್ದರೆ ಪ್ರಜೆಗಳ ಹತ್ತೂರ್ವಕ ಆಶೀರ್ವಾದ ಹಾಗೂ ಭಕ್ತಿಪೂರ್ವಕವಾದ ಪ್ರೀತಿಗಳು ಅವನಿಗೆ ಲಭಿಸುವುದು ಆವಶ್ಯಕ. ಮಹಾರಾಜರ ಸಂದರ್ಭದಲ್ಲಿ ಈ ಸಂಗತಿಯು ಶ್ರೇಷ್ಠ ಸಂದರ್ಭೋಚಿತವಾದ ಮಾತುಗಳ ಮೂಲಕ ಸಿದ್ಧವಾಗಿದೆ. ಈ ಶುಭ ಸನ್ನಿವೇಶದಲ್ಲಿ, ಮಹಾರಾಜರು ಭಾರತದ ಈ ಭಾಗದಲ್ಲಿ ಭಗವಾನ್ ಬುದ್ಧನ ಉದ್ದೇಶಕ್ಕಾಗಿ ಮೊಟ್ಟ ಮೊದಲಿಗೆ ಸಲ್ಲಿಸಿದ ಸೇವೆಗಾಗಿ ನನ್ನ ಭಾವನೆ ಹಾಗೂ ಉತ್ಕೃಷ್ಟವಾದ ಮೆಚ್ಚಿಕೆಯನ್ನು ವ್ಯಕ್ತಪಡಿಸುವ ಅವಕಾಶವನ್ನು ಪಡೆಯಬಯಸುತ್ತೇನೆ, ಹೀಗಾಗಿ, ಮಹಾರಾಜರು ನನ್ನ ಭಗವಾನನ ಬಗೆಗೆ ಇರಿಸಿಕೊಂಡಿರುವ ಹಿರಿದಾದ ಪ್ರೀತಿಗೆ ಒತ್ತು ಕೊಡುವ ಮೂಲಕ ಇದನ್ನು ಕೈಗೊಳ್ಳಲಿರುವೆನೆಂದು ಪ್ರತಿಪಾದಿಸುತ್ತೇನೆ.

ನಾನು ಬೌದ್ಧ ಧರ್ಮದ ಗತಕಾಲದ ಇತಿಹಾಸವನ್ನು ನೆನಪಿಸಿಕೊಂಡಾಗಲೆಲ್ಲ, ಸಂಕಷ್ಟಕ್ಕೆ ಈಡಾದ ಮಾನವತೆಯ ಹಾಗೂ ಇಡಿಯ ಜೀವಸೃಷ್ಟಿಯ ವೇದಿಕೆಯ ಮೇಲೆ ಧರ್ಮದ ತಿರುಳು ಮತ್ತು ಅಂತಿಮ ಗುರಿಯಾದ ಸೇವೆ ಹಾಗೂ ಸ್ವಾರ್ಥತ್ಯಾಗವನ್ನು ಪ್ರೀತಿಸಲು ಮೊದಲ ಬಾರಿಗೆ ಬೋಧಿಸುವ ಮೂಲಕ ಭಾರತದ ಪೀಡಿತರು ಹಾಗೂ ಅಜ್ಞಾನಿಗಳು, "ಆಲಿಸಲು ಕಿವಿಗಳಿದ್ದ"

೧ : ಶ್ರೀ ಸಯಾಜೀ ಗೌರವ ಗ್ರಂಥ - ೧೯೩೩, ಪು. ೫೭-೬೦.

೧ : ಕೀರ್, ಪು. ೧೬೧.

ಜನಸಮೂಹಕ್ಕೆ, ಆಸೆ ಹಾಗೆ ಸ್ಫೂರ್ತಿಯ ಸಂದೇಶವನ್ನು ತಲುಪಿಸುವ ಕೆಲಸವನ್ನು ಮೊದಲಿಗೆ ಶುರು ಮಾಡಿದ ಭಗವಾನ ಬುದ್ಧನು ತನ್ನ ಹುಟ್ಟು ನಾಡಿನಲ್ಲೇ ಪೂರ್ತಿ ಅಲಕ್ಷ್ಯ ಹಾಗೂ ಮರೆವೆಗೆ ಈಡಾದುದನ್ನು ಕಂಡು ದುಃಖಿತನೂ ನಿರಾಶನೂ ಆಗುತ್ತೇನೆ. ತರುವಾಯದಲ್ಲಿ ಅವನು ತನ್ನ ನಿಸ್ವಾರ್ಥದ ಚಟುವಟಿಕೆಗಳ ವೃತ್ತವನ್ನು ದೃಢ ನಿಷ್ಠೆಯ ಭಿಕ್ಕುಗಳ ಮೂಲಕ ಭಾರತದಾಚೆಗಿನ ಅಂದಿಗೆ ತಿಳಿದಿದ್ದ ವಿಶ್ವದ ತುಂಬೆಲ್ಲ ವಿಸ್ತರಿಸಿದನು. ಅವನು ಜಾತಿ, ಪಂಥ ಅಥವಾ ಲಿಂಗ, ಸ್ಪೃಶ್ಯ ಅಥವಾ ಅಸ್ಪೃಶ್ಯತೆಗಳನ್ನು ಮೀರಿ ಧರ್ಮದಲ್ಲಿರುವ ಊಹೆಯನ್ನೆಲ್ಲ ಮೊಟಕುಗೊಳಿಸಿ ಅದನ್ನು ವ್ಯಾವಹಾರಿಕ ಪ್ರೀತಿ ಹಾಗೂ ನಿಷ್ಠೆಗಳ ಮಟ್ಟಕ್ಕೆ ತಂದನು. ಭಗವಾನ ಬುದ್ಧನು ಎಲ್ಲ ಕ್ಕೂ ಹೆಚ್ಚು ವಿಸ್ತೀರ್ಣವಾದ ವೈಶ್ವಿಕ ಪ್ರೀತಿ, ಬಂಧುಭಾವ ಹಾಗೂ ಅಹಿಂಸೆಗಳ ತತ್ತ್ವಗಳನ್ನಾಧರಿಸಿ ರಾಜಕೀಯ, ಸಾಮಾಜಿಕ, ನೈತಿಕ ಮತ್ತು ಧಾರ್ಮಿಕ ಗುರಿ ಹಾಗೂ ಆದರ್ಶಗಳಲ್ಲಿ ಕ್ರಾಂತಿಯನ್ನು ಉಂಟುಮಾಡಿದನು. ಅವನು ಹಾಗೂ ಧರ್ಮವನ್ನು ಬೋಧಿಸುವ ಅವನ ವಿಧಾನಗಳಿಂದಾಗಿಯೇ ಮೊದಲ ಬಾರಿಗೆ ಕಲೆಯನ್ನು ಧರ್ಮ ಹಾಗೂ ಧಾರ್ಮಿಕ ಉದ್ದೇಶಗಳಿಗಾಗಿ ಅನ್ವಯಿಸಲಾಯಿತು. ಆಧುನಿಕ ಭಾರತವು ಭಗವಾನ ಬುದ್ಧ, ಅವನ ಕಾಲ ಹಾಗೂ ಬೋಧನೆಗಳತ್ತ ಹೊಸದಾಗಿ ಹಾಗೂ ಮೆಚ್ಚಿಕೆಯಿಂದ ಕೂಡಿದ ಆಸ್ಥೆಯನ್ನು ತೋರುತ್ತಿರುವುದು ಈ ಕಾಲದ ಎಲ್ಲ ಕ್ಕೂ ಹೆಚ್ಚಿನ ಸಂತೋಷದ ಸಂಗತಿಯಾಗಿದೆ. ಆದರೆ ಮಹಾರಾಜರ ಬಗೆಗಿನ ನನ್ನ ಮೆಚ್ಚಿಕೆಯು ಇನ್ನಷ್ಟು ಹೆಚ್ಚಲು ಕಾರಣವೆಂದರೆ ಭಾರತದಲ್ಲಿ ಬೌದ್ಧ ಧರ್ಮದ ಪುನರುತ್ಥಾನವು ನಡೆಯುವ ತೀರ ಮೊದಲೇ ಮಹಾರಾಜರು ಭಗವಾನ ಬುದ್ಧನಲ್ಲಿ ತೀವ್ರವಾದ ಆಸಕ್ತಿಯನ್ನು ತಳೆದು ಅವನ ಬಗೆಗೆ ಎಲ್ಲಕ್ಕೂ ಶ್ರೇಷ್ಠವಾದ ಪ್ರೀತಿಯನ್ನು ತೋರಿದ್ದರೆಂಬುದು. ಮಹಾರಾಜರು ಹಲವು ಪ್ರಸಂಗಗಳಲ್ಲಿ ನನ್ನ ಮನೆಗೆ ದಯಮಾಡಿಸಿದಾಗಲೆಲ್ಲ ಅವನ ಬಗೆಗೆ ಉತ್ತುಂಗವಾದ ಗೌರವವನ್ನು ನನ್ನೆದುರು ವ್ಯಕ್ತಪಡಿಸಿರುವರು. ಭಗವಾನ ಬುದ್ಧನ ಬೋಧನೆಯನ್ನು ಭಾರತದಲ್ಲಿ ಅಭ್ಯಸಿಸುವುದು ತೀರ ಅಗತ್ಯದ್ದೆಂದು, ಅವನ ಬಂಧುಭಾವದ ಅಡಿಪಾಯವನ್ನಾಧರಿಸಿದ ಆದರ್ಶಗಳಾದ ಆತ್ಮವಿಜಯ, ಅಹಿಂಸೆ ಮತ್ತು ಮಾನವೀಯ ಹಾಗೂ ಪರೋಪಕಾರ ಬುದ್ಧಿಯ ಕಾರ್ಯಗಳು ಎಲ್ಲೆಡೆಗೂ ತಿಳಿಯಬೇಕು ಹಾಗೂ ಅವಕ್ಕೆ ಪ್ರಾಮುಖ್ಯತೆ ದೊರೆಯಬೇಕೆಂದು ಅವರು ನಿಜವಾಗಿಯೂ ಆಶಿಸಿದ್ದರು. ಮಹಾರಾಜರು ಬಡೊದೆಯ ಜುಬಿಲಿ ಗಾರ್ಡನ್ನಿನಲ್ಲಿ ಭಗವಾನ ಬುದ್ಧನ ಒಂದು ದೊಡ್ಡದಾದ ಕಂಚಿನ ವಿಗ್ರಹವನ್ನು ಬಲು ಪ್ರೀತಿಯಿಂದ ಸ್ಥಾಪಿಸಿ, ಇ, ಸ. ೧೯೧೦ ರಲ್ಲಿ ಬುದ್ಧ ಹಾಗೂ ಬೌದ್ಧ ಧರ್ಮವನ್ನು ಕುರಿತು ಉಪನ್ಯಾಸಗಳನ್ನು ಏರ್ಪಡಿಸಿದರು. ಪ್ರೊ. ಧರ್ಮಾನಂದ ಕೊಸಂಬಿ ಅವರು ಮರಾಠಿಯಲ್ಲಿ ೫ ಉಪನ್ಯಾಸಗಳನ್ನು ನೀಡಿದರು. ಮಹಾರಾಜರು ಮೊದಲಿಗೆ ಬಡೋದೆಯ ಕಾಲೇಜಿನಲ್ಲಿ ಪಾಲಿಯನ್ನು ಎರಡನೆಯ ಕಲಿಕೆಯ ಭಾಷೆಯನ್ನಾಗಿ ಶುರು ಮಾಡಿ ತರುವಾಯದಲ್ಲಿ ಅದನ್ನು ಪ್ರೌಢ ಶಾಲೆಯಲ್ಲಿ ಶುರು ಮಾಡಿದರು. ಮೊದಲ ಬಾರಿಗೆ ಅವರು ಶ್ರೀ ಸಯಾಜೀ ಸಾಹಿತ್ಯಮಾಲೆಗಾಗಿ 'ದಿಘ್ನಿಕಾಯ' ದ ಮೂರು ಸಂಪುಟಗಳನ್ನು ಮರಾಠಿಯಲ್ಲಿ ಅನುವಾದಿಸಲೆಂದು ದಿ. ಪ್ರೊ. ಸಿ. ವಿ. ರಾಜವಾಡೆ ಅವರನ್ನು ನೇಮಕ ಮಾಡಿದರು. ಅವರು ಬಡೋದೆಯ ಫರ್ಗ್ಯೂಸನ್ ಹಾಗೂ ಬಡೋದೆ ಕಾಲೇಜುಗಳಲ್ಲಿ ಪಾಲಿಯ ವಿದ್ಯಾರ್ಥಿಗಳಿಗಾಗಿ ಶಿಷ್ಯವೇತನಗಳನ್ನು ಶುರು

ಮಾಡಿದರು. ಅಸ್ಪೃಶ್ಯತಾ ನಿವಾರಣೆ, ಎಲ್ಲ ಜಾತಿಗಳಿಗೂ ಸಮಾನ ಸ್ಥಾನಮಾನ ಮೊದಲಾದ ಬೌದ್ಧ ಧರ್ಮದ ಹಲವಾರು ತತ್ತ್ವಗಳನ್ನು ಹೀರಿಕೊಂಡು ಮಹಾರಾಜರ ತಮ್ಮ ಸಂಸ್ಥಾನದಲ್ಲಿ ಅವುಗಳಿಗೆ ವ್ಯಾವಹಾರಿಕ ಆಕಾರವನ್ನು ನೀಡಿದರು. ಮಹಾರಾಜರನ್ನು ಕಾಣುವ ಸದವಕಾಶವು ಇ. ಸ. ೧೯೩೧ ರಲ್ಲಿ ನನಗೆ ಲಭಿಸಿದಾಗ ಅವರು ಪಾಲಿಯ ಗ್ರಂಥಗಳನ್ನು



ಮರಾಠಿಗೆ ಅನುವಾದಿಸುವ ಹಾಗೂ ಪಾಲಿಯ ಪಠ್ಯಗಳನ್ನು ದೇವನಾಗರಿ ಲಿಪಿಯಲ್ಲಿ ಸಂಪಾದಿಸಬೇಕೆನ್ನುವ ಇಚ್ಛೆಯನ್ನು ವ್ಯಕ್ತಪಡಿಸಿದರು. ಹಾಗೆ ನೋಡಿದರೆ, ಭಗವಾನ ಬುದ್ಧನ ಜೀವನ ಹಾಗೂ ಬೋಧನೆಗಳನ್ನು ಕುರಿತು ಜನಸಾಮಾನ್ಯರಿಗೆ ತರಬೇತಿಯನ್ನು ನೀಡುವ ಉತ್ತಮವಾದ ಉಪಾಯವೆಂದು ಬಗೆದು ಮಹಾರಾಜರು ಅನುವಾದಿತ ಪಾಲಿ ಗ್ರಂಥಗಳ ಪ್ರಕಟಣೆಗೆ ಆದ್ಯತೆಯನ್ನು ನೀಡುವಂತೆ ಶ್ರೀ ಯಾಂಡೆ ಅವರಿಗೆ ಸೂಚನೆಯನ್ನಿತ್ತಿದ್ದರು. ಭಗವಾನ ಬುದ್ದನ ಬಗೆಗಿನ ಮಹಾರಾಜರ ಪ್ರೀತಿಯ ಪುರಾವೆ ಎಂದರೆ, ಅವರು ಭಗವಾನನ ೨,೫೫೫ ನೆಯ ಜಯಂತಿಯ ನಿಮಿತ್ತವಾಗಿ ಬುದ್ಧ ಸೊಸೈಟಿಯಿಂದ ಮುಂಬಯಿಯಲ್ಲಿ ಸ್ಥಾಪಿಸಲಾದ “ಆನಂದ ವಿಹಾರ ವನ್ನು ಉದ್ಘಾಟಿಸಲು ಒಪ್ಪಿಕೊಂಡದ್ದು. ಮಹಾರಾಜರು ಈ ಸಮಾರಂಭದ ತಮ್ಮ ಭಾಷಣದಲ್ಲಿ ವಿದ್ವತ್ಪಚುರವಾದ ಶೈಲಿಯಲ್ಲಿ ಭಗವಾನ ಬುದ್ಧನ ಬೋಧನೆಗಳಿಗೆ ತಮ್ಮ ಗೌರವಾದರಗಳನ್ನು ಸಲ್ಲಿಸಿದರು. ಮಹಾರಾಜರು ಹೀಗೆಂದರು: “ಪ್ರೀತಿ, ಕರುಣೆಯ ಕೋಮಲವಾದ ನುಡಿಗಳಿಂದ ಕಾಡು ಹಾಗೂ ಅಸಂಸ್ಕೃತ ಜನಾಂಗಗಳನ್ನು ನಯಗೊಳಿಸಿ, ನಿರಾಶರಾದವರನ್ನು ಮೇಲ್ಮಟ್ಟಕ್ಕೆ ಎತ್ತುತ್ತ, ಶ್ರೇಷ್ಠವಾದ ಆರ್ಯರ ಮಧ್ಯಮ ಮಾರ್ಗದ ದಿವ್ಯಾನಂದವನ್ನು ಹಂಚಿಕೊಳ್ಳುತ್ತ, ಲಕ್ಷಾವಧಿಯ ಅನಾಮಧೇಯರ ಜೀವನ ಹಾಗೂ ಮರಣಗಳಲ್ಲಿ “ಅವನ ತತ್ತ್ವಗಳು” ಬಲು ದೊಡ್ಡ ನೆಮ್ಮದಿಯನ್ನಿತ್ತಿವೆ.” ಬುದ್ಧ ಸೊಸೈಟಿಯು ಮಹಾರಾಜರ ಈ ಉದ್ಘೋಷಣೆಯಿಂದ ತುಂಬ ಭರವಸೆ ಹಾಗೂ ನೆರವನ್ನು ಹೊಂದಿದೆ. ಅಲ್ಲದೆ ಈ

ಸಂಸ್ಥೆಯ ಸದಸ್ಯನೂ, ಭಗವಾನ ಬುದ್ಧನ ನಮ್ರ ಹಾಗೂ ನಿಷ್ಠಾವಂತ ಸೇವಕನಾದ ನಾನು ಧನ್ಯತೆಯ ಭಾವದಿಂದ ತುಂಬಿಹೋಗಿದ್ದೇನೆ. " ೧

೧ : ಸಯಾಜೀ ಗೌರವ ಗ್ರಂಥ - ೧೯೩೩, ಪು. ೫೭-೬೦.

## ಪರಿಶಿಷ್ಟ-೧೫

## ಬೆನಿತೋ ಮುಸೋಲಿನಿ

**ಮುಸೋಲಿನಿ ಬೆನಿತೋ :** (೨೯ ಎಪ್ರಿಲ್ ೧೮೮೩ - ೨೮ ಎಪ್ರಿಲ್ ೧೯೪೫) ಇಟಲಿಯ ಸರ್ವಾಧಿಕಾರಿ (೧೯೨೨-೪೩) ಹಾಗೂ ಫ್ಯಾಸಿಸಮ್ ತತ್ತ್ವಪ್ರಣಾಲಿಯ ಪ್ರವರ್ತಕ. ಅವನ ಜನ್ಮವು ದೋವಿಯಾ (ಿದಾಪ್ಯಾ) ಎಂಬ ಊರಿನ ಒಂದು ಸಾಮಾನ್ಯ ಕಮ್ಮಾರ ಕುಟುಂಬದಲ್ಲಿ ಆಯಿತು. ಅವನ ತಂದೆ ಆಲೆಸ್ಸಾಂದ್ರೋ ಸಮಾಜವಾದಿಗಳಾಗಿದ್ದು ಕಮ್ಮಾರ ಕೆಲಸವನ್ನು ಮಾಡುತ್ತಿದ್ದರು. ತಾಯಿ ರಾಝಾ ಪ್ರಾಥಮಿಕ ಶಾಲೆಯ ಶಿಕ್ಷಕಿಯಾಗಿದ್ದಳು. ಮುಸೊಲಿನಿಯು ಫಾರ್ಲಿಮ್ ಪಾಪಾಲಿ ಊರಿನ ಶಾಲೆಯಿಂದ ಅಧ್ಯಾಪನದ ಪದವಿಕೆಯನ್ನು (ಡಿಪ್ಲೊಮಾ) ಪಡೆದನು (೧೯೦೧). ಅವನು ಕೆಲವು ದಿನ ಅಧ್ಯಾಪಕನಾಗಿ ಕೆಲಸ ಮಾಡಿದ ಬಳಿಕ ಸ್ವಿಝರ್ಲಂಡಿಗೆ ಓಡಿ ಹೋದನು (೧೯೦೨), ಆದರೆ ಸುಳ್ಳು ಪಾಸ್‌ಪೋರ್ಟ್‌ದಿಂದಾಗಿ ಇಟಲಿಗೆ ತಿರುಗಿ ಬರಬೇಕಾಯಿತು. ಈ ಕಾಲದಲ್ಲಿ ಅವನು ಕಾರ್ಲ್ ಮಾರ್ಕ್, ಸೊರೆಲ್, ಪೈಯರ್ ಪ್ರೊ, ಲುಯಿ ಬ್ಲಾಂಕಿ, ಪ್ಯಾಟರ್ ಕಪಾಟನ್ ಮುಂತಾದ

ವಿಚಾರವಂತರ ಸಾಹಿತ್ಯವನ್ನು ಓದಿಕೊಂಡು ಕಟ್ಟುನಿಟ್ಟಿನ ಕಾರ್ಮಿಕ ನೇತಾರನಾದನು. ರಾಜಕೀಯ ಪ್ರಚಾರಕ್ಕೆಂದು ಟೆಂಟ್ ಎಂಬಲ್ಲಿ ಇದ್ದ 'ಲಾಲೋತಾ ದಿ ಕ್ಲಾಸ್ ಎಂಬ ವೃತ್ತಪತ್ರದ ಸಂಪಾದಕತ್ವವನ್ನು ಸ್ವೀಕರಿಸಿದನು. ಆ ಮೇಲೆ ಅವನನ್ನು ಸಮಾಜವಾದಿ ಪಕ್ಷದ ಸಂಚಾಲಕನೆಂದು ಆಯ್ಕೆ ಮಾಡಲಾಯಿತು. ಅವನು ಮುಂದೆ ಬಲು ಬೇಗ ಮಿಲಾನ್ ಎಂಬಲ್ಲಿ 'ಅವಚಿತಿ' ವೃತ್ತಪತ್ರದ ಸಂಪಾದಕನಾದನು (೧೯೧೨). ಮುಲಾಜಿಲ್ಲದ ಅವನ ಸ್ಪಷ್ಟ ಲೇಖನದಿಂದಾಗಿ 'ಅವಂತಿ' ಯ ಪ್ರತಿಗಳ ಮಾರಾಟವು ನಾಲ್ಕು ಪಟ್ಟು ಬೆಳೆಯಿತು. ಇಟಲಿಯು ಮೊದಲ ಮಹಾಯುದ್ಧದಲ್ಲಿ ತಟಸ್ಥವಾಗಿರಬೇಕೆಂಬ ತನ್ನ ಮೊದಲಿನ ನಿಲುವನ್ನು ಬಿಟ್ಟು ದೇಶವು ಮಹಾಯುದ್ಧವನ್ನು ಪ್ರವೇಶಿಸುವುದನ್ನು ಸಮರ್ಥಿಸಿದನು. ಅದರಿಂದಾಗಿ ಅವನನ್ನು ಸಮಾಜವಾದಿ ಪಕ್ಷ ಹಾಗೂ 'ಅವಂತಿ'ಯಿಂದ ಹೊರದೂಡಲಾಯಿತು (೧೯೧೪), ಆ ನಂತರ ಅವನು ತನ್ನ ವಿಚಾರಗಳ ಪ್ರಚಾರಕ್ಕೆಂದು 'ಪೋಪೋಲೊ ದ ಇತಾಲಿಯಾ' ಎಂಬ ಬೇರೆ ವೃತ್ತಪತ್ರವನ್ನು ಆರಂಭಿಸಿದನು.

ಮುಸೋಲಿನಿಯು ೨೩ ಮಾರ್ಚ್ ೧೯೧೯ ರಂದು ಮಿಲಾನ್‌ನಲ್ಲಿ ಫ್ಯಾಸಿಸ್ಟ್ ಪಕ್ಷ ವನ್ನು ಸ್ಥಾಪಿಸಿದನು. ತರುವಾಯ ೧೯೨೧ ರಲ್ಲಿ ಅವನು ಸಂಸತ್ತಿಗೆ ಚುನಾಯಿತನಾದನು. ಫ್ಯಾಸಿಸ್ಟರು ಆಂದೋಲನೆಯ ಮೂಲಕ ಬೋಲೋನ್ಯಾ ಹಾಗೂ ಮಿಲಾನ್ ನಗರಗಳನ್ನು ವಶಪಡಿಸಿಕೊಂಡರು. ಆಡಳಿತ ಯಂತ್ರವು ಅವರ ಹಿಂಸೆಯ ಕೃತ್ಯಗಳನ್ನು ತಡೆಹಿಡಿಯಲು ಅಸಮರ್ಥವಾಯಿತು. ಇಂಥ ವೇಳೆಗೆ ಫ್ಯಾಸಿಸ್ಟರ ಅಧಿವೇಶನವು ನೇಪಲ್ಸ್ ದಲ್ಲಿ ನೆರವೇರಿತು (೧೯೨೨). ಅದರಲ್ಲಿ ಲುಯಿಜೀ ಫಾಕ್ತಾ ಸರಕಾರದ ರಾಜೀನಾಮೆಯನ್ನು ಕೇಳಲಾಯಿತು. ಅವರಿಗೆ ಕಾರ್ಖಾನೆಯವರೊಡನೆ ಉಚ್ಚ ಮಧ್ಯಮ ವರ್ಗದವರ ಬೆಂಬಲ ದೊರೆಯಿತು. ಹೀಗಾಗಿ ಅವರು ರೋಮಿನ ಮೇಲೆ ಪ್ರತಿಭಟನೆಯ



ಮೆರವಣಿಗೆಯನ್ನು ಹೊರಡಿಸಿದರು (೨೮ ಆಕ್ಟೋಬರ್ ೧೯೨೨). ರಾಜನು ಸೈನಿಕ ಕಾನೂನನ್ನು ಜಾರಿಗೊಳಿಸುವ ಬದಲು ಫಾಕ್ತಾನಿಂದ ರಾಜೀನಾಮೆಯನ್ನು ಪಡೆದು ಮುಸೋಲಿನಿಗೆ ಹೊಸ ಸಚಿವಸಂಪುಟವನ್ನು ತಯಾರಿಸುವಂತೆ ಆದೇಶ ನೀಡಿದನು. ಅವನು ಫ್ಯಾಸಿಸ್ಟರು ಹಾಗೂ ರಾಷ್ಟ್ರೀಯ ಪಕ್ಷಗಳ ಸಂಯುಕ್ತ ಸರಕಾರವನ್ನು ಸ್ಥಾಪಿಸಿದನು. ರಾಜ ಹಾಗೂ ಸಂಸತ್ತು ಸೇರಿ ಮುಸೋಲಿನಿಯನ್ನು ಪ್ರಧಾನಮಂತ್ರಿಯನ್ನಾಗಿ ಮಾಡಿ ಅವನಿಗೆ ಸರ್ವಾಧಿಕಾರವನ್ನು ನೀಡಿದರು. ಶುರುವಿನಲ್ಲಿ ಅವನು ಸಂವಿಧಾನಕ್ಕೆ ಒಳಪಟ್ಟು ಶಾಂತಿಯನ್ನು ಸ್ಥಾಪಿಸಿ, ಆಂತರಿಕ ಆಡಳಿತೆಗಾಗಿ ಫ್ಯಾಸಿಸ್ಟ್ ಅಧಿಕಾರಿಗಳನ್ನು ನೇಮಿಸಿದನು. ಇದಲ್ಲದೆ ರಾಜನಿಂದ ತನ್ನ ಸೈನಿಕ ಸಂಘಟನೆಗೆ ಮಾನ್ಯತೆಯನ್ನು ಪಡೆದನು.

ಮುಸೋಲಿನಿಯು ಮತದಾನವನ್ನು ಕುರಿತು ನಿಧಾನವಾಗಿ ಹೊಸ ಕಾನೂನನ್ನು ಅಂಗೀಕರಿಸಿ ಸಂಸತ್ತಿನಲ್ಲಿ ತನ್ನ ಪಕ್ಷದ ವರ್ಚಸ್ವವನ್ನು ಸ್ಥಾಪಿಸಿದನು (೧೯೨೪).

ಸಮಾಜವಾದಿ ಸದಸ್ಯನಾದ ಜಾಕೋಮೊ ಮಾತ್ತೆವಾತ್ತಿ ಇವನು 'ಫ್ಯಾಸಿಸ್ಟೀ ಎಕ್ಸಪೋಸ್ಡ್' ಎಂಬ ಗ್ರಂಥದಲ್ಲಿ ಅಪರಾಧಗಳ ಪಟ್ಟಿಯನ್ನು ಕೊಟ್ಟು ಫ್ಯಾಸಿಸ್ಟ್ ಭಯೋತ್ಪಾದನೆಗೆ ಕಠೋರ ವಿರೋಧವನ್ನು ವ್ಯಕ್ತಪಡಿಸಿದನು. ಅವನನ್ನು ಕೊಲೆಗೈಯಲಾಯಿತು (೧೦ ಜೂನ್ ೧೯೨೪). ಮುಸೋಲಿನಿಯ ಜನಪ್ರಿಯತೆಗೆ ಕೆಲವು ದಿನಗಳ ಕಾಲ ಧಕ್ಕೆ ತಗಲಿತು. ಅವನು ವೃತ್ತಪತ್ರಗಳ ಮೇಲೆ ನಿರ್ಬಂಧನೆಗಳನ್ನು ಹೇರಿ ವಿರೋಧಿಗಳ ಸಭೆಗಳನ್ನು ನಿಷೇಧಿಸಿದನು. ಉದಾರಮತವಾದಿಗಳು ಹಾಗೂ ಕಮ್ಯುನಿಸ್ಟರು ಇದನ್ನು ಉಗ್ರವಾಗಿ ಪ್ರತಿಭಟಿಸಿದರು. ಆದರೆ ಅವುಗಳನ್ನು ಕಠೋರತೆಯಿಂದ ಸದೆಬಡಿಯಲಾಯಿತು. ಕೊನೆಗೆ ಮುಸೋಲಿನಿಯು ೩೧ ಜನವರಿ ೧೯೨೬ ರಂದು ಸಂಸತ್ತಿನಿಂದ ಅಧಿಕೃತ ಕಾನೂನಿನನ್ವಯ ರಾಜ್ಯಾಡಳಿತೆಯನ್ನು ನಡೆಯಿಸುವ ಸಂಪೂರ್ಣವಾದ ಅಧಿಕಾರವನ್ನು ಪಡೆದನು. ಅವನು ಮುಷ್ಕರ ಹಾಗೂ ಲಾಕೌಟ್‌ಗಳನ್ನು ಅನಧಿಕೃತವೆಂದು ಸಾರಿ ಫ್ಯಾಸಿಸ್ಟ್ ಯುವಕರ ಸಂಘಟನೆಗಳನ್ನು ಸ್ಥಾಪಿಸಿದನು. ಆರ್ಥಿಕ ಪುನಾರಚನೆಯನ್ನು ಆಧರಿಸಿ ಇಟಲಿಯಲ್ಲಿ ಅಡಕಲು ವ್ಯವಸ್ಥೆಯ (ಕಾರ್ಪೊರೇಟಿವ್ ಸ್ಟೇಟ್) ರಾಜ್ಯವನ್ನು ಸ್ಥಾಪಿಸುವುದು ಅವನ ಗುರಿಯಾಗಿತ್ತು. ಪ್ರಜಾಸತ್ತೆಗೆ ವಿರೋಧದ ಅವನ ನಿಲುವಿನಿಂದಾಗಿ ಮೂರು-ನಾಲ್ಕು ಸಲ ಅವನ ಮೇಲೆ ಪ್ರಾಣಘಾತಕ ಹಲ್ಲೆಗಳು ನಡೆದು ಸೋತವು. ಒಂದು ಕಾನೂನಿನನ್ವಯ ಕಾರ್ಮಿಕರ ಕೆಲಸದ ವೇಳೆಯ ಅವಧಿಯನ್ನು ಹೆಚ್ಚಿಸಿ ಅವನು ನಗರಪಾಲಿಕೆ, ಪ್ರಾಂತು ಹಾಗೂ ಮುಂದೆ ಸಾರ್ವತ್ರಿಕ ಚುನಾವಣೆಗಳನ್ನು ರದ್ದು ಮಾಡಿದನು. ಪೋಲೀಸ್ ಹಾಗೂ ಸೈನಿಕ ಯಂತ್ರಗಳಲ್ಲಿ ಸ್ಥಾಯಿ ಸೇವೆಗಾಗಿ ಫ್ಯಾಸಿಸ್ಟ್ ಸ್ವಯಂಸೇವಕರನ್ನು ನೇಮಿಸಿದನು. ೧೯೨೮ ರಲ್ಲಿ ಫ್ಯಾಸಿಸ್ಟ್ ಗ್ರ್ಯಾಂಡ್ ಕೌನ್ಸಿಲ್ಲೇ (ಪಕ್ಷದ ಶೃಂಗ ಮಂಡಲಿಯೇ) ಆಡಳಿತೆಯ ಸೂತ್ರಧಾರವೂ, ಮುಸೋಲಿನಿಯೇ ಸರ್ವಾಧಿಕಾರಿಯೂ ಆದರು.

ವಿದೇಶ ನೀತಿಯ ಸಂದರ್ಭಲ್ಲಿ ಮುಸೋಲಿನಿಯ ಕಣ್ಣೆದುರು ಇಟಲಿಯ ಸಾಮ್ರಾಜ್ಯ - ರೋಮನ್ ಎಂಪಾಯರ್ ಇದ್ದ ಕಾರಣ ಅವನು ಸಾಮ್ರಾಜ್ಯವನ್ನು ವಿಸ್ತರಿಸಲು ಆರಂಭಿಸಿದನು. ಇಥಿಯೋಪಿಯಾದ ಮೇಲೆ ದಾಳಿ ಮಾಡಿ (೧೯೩೫) ಅದನ್ನು ಇಟಲಿಯ ಸಾಮ್ರಾಜ್ಯಕ್ಕೆ ಸೇರ್ಪಡಿಸಿಕೊಂಡನು. ೧೯೩೯ ರಲ್ಲಿ ಅಬಿಸೀನಿಯವನ್ನು ಮೆಟ್ಟಿನಿಂತನು. ಶುರುವಿನಲ್ಲಿ ಹಿಟ್ಲರನ ಬಗೆಗೆ ಅವನಲ್ಲಿ ಆಸ್ಥೆ ಇರಲಿಲ್ಲ. ರಾಷ್ಟ್ರ ಸಂಘವು ಇಟಲಿಯ ಸದಸ್ಯತ್ವವನ್ನು ರದ್ದುಪಡಿಸಿತು. ಅದೇ ಕಾಲಕ್ಕೆ ಮುಸೋಲಿನಿಯು ಸ್ಪ್ಯಾನಿಶ್ ಯಾದವಿ ಯುದ್ಧದಲ್ಲಿ ಬಂಡಾಯಕೋರ ನಾಯಕನಾದ ಫ್ಯಾಂಕೊ ಇವನಿಗೆ ಸಹಕಾರ ನೀಡಿದನು. ಹೀಗಾಗಿ ಅವನು ಇಂಗ್ಲೆಂಡ್ ಹಾಗೂ ಫ್ರಾನ್ಸ್ ದೇಶಗಳ

ಹಗೆತನವನ್ನು ಕಟ್ಟಿಕೊಳ್ಳಬೇಕಾಯಿತು. ಅದರಿಂದಾದ ಪರಿಣಾಮವೆಂದರೆ ಅವನು ಹೆಚ್ಚಾಗಿ ಜರ್ಮನಿಯನ್ನು ಅವಲಂಬಿಸತೊಡಗಿದನು. ಅವನು ಅಂದಿನ ವಿಶ್ವದ ಪರಿಸ್ಥಿತಿಗೆ ತಕ್ಕಂತೆ ಹಿಟ್ಲರನ ಬಾಲಬಡುಕತನವನ್ನು ಮಾಡತೊಡಗಿದನು. ಹಿಟ್ಲರನ ಜ್ಯೂ ದ್ವೇಷ ಹಾಗೂ ಇತರ ಧೋರಣೆಗಳಿಗೆ ಬೆಂಬಲ ನೀಡಿದನು. ಇಟಲಿಯ ಸೈನ್ಯದ ಸಿದ್ಧತೆ ಇಲ್ಲದಾಗಲೂ ಅವನು ಎರಡನೆಯ ವಿಶ್ವಯುದ್ಧಕ್ಕೆ ಧುಮುಕಿದನು. ಅಮೇರಿಕೆಯು ಯುದ್ಧವನ್ನು ಪ್ರವೇಶಿಸಿದ ಬಳಿಕ ಇಟಲಿಯ ಸೈನ್ಯದ ಹಿನ್ನಡೆ ಶುರುವಾಯಿತು. ಮಹಾಯುದ್ಧ ಹಾಗೂ ಸಾಮ್ರಾಜ್ಯವಾದಿ ಧೋರಣೆಗಳಿಂದಾಗಿ ಜನಸಾಮಾನ್ಯರ ಮೇಲೆ ತೆರಿಗೆಗಳ ಹೊರೆ ಹೆಚ್ಚಿ, ವ್ಯಕ್ತಿಸ್ವಾತಂತ್ರದ ಕತ್ತು ಹಿಸುಕಲಾಯಿತು. ಹೀಗಾಗಿ ಸಂತ್ರಸ್ತರಾದ ಜನಸಾಮಾನ್ಯರು ಮುಸೋಲಿನಿಯಿಂದ ರಾಜೀನಾಮೆ ಕೇಳಿದರು. ಫ್ಯಾಸಿಸ್ಟ್ ಪಕ್ಷದಲ್ಲಿ ಅಸ್ಥಿರತೆ ಉಂಟಾಯಿತು. ತನ್ನ ಕೈಮೀರಿದ ಆಂತರಿಕ ಪರಿಸ್ಥಿತಿಯನ್ನು ಕಂಡು ಮುಸೋಲಿನಿಯು ರಾಜೀನಾಮೆಯನ್ನಿತ್ತನು. ಅವನು ಹಾಗೂ ಅವನ ಸಹಕಾರಿಗಳನ್ನು ಸೆರೆ ಹಿಡಿಯಲಾಯಿತು. ಆದರೆ ಜರ್ಮನ್ ಸೈನಿಕರು ಅವರನ್ನು ಬಿಡುಗಡೆಗೊಳಿಸಿದರು. ಅವನು ಜರ್ಮನ್-ವ್ಯಾಪ್ತ ಉತ್ತರ ಇಟಲಿಯಲ್ಲಿ ಕೆಲವು ಕಾಲ ಫ್ಯಾಸಿಸ್ಟ್ ಪಕ್ಷದ ವತಿಯಿಂದ ರಾಜ್ಯವಾಳಿದನು. ಆದರೆ ಜರ್ಮನ್ನರ ಸೋಲಾಗುತ್ತಲೇ ಇವನು ವಿಷ ಭಾವಿಯಾದನು. ಅವನು ೨೮ ಎಪ್ರಿಲ್ ೧೯೪೫ ರಂದು ಸ್ವಿಟ್ಜರ್ಲಂಡಿಗೆ ಓಡಿಹೋಗುವ ಯೋಜನೆಯನ್ನು ಮಾಡಿದನು. ಆದರೆ ವಿರೋಧಕರು ಅವನನ್ನು ಹಿಡಿದು ಅವನ ಪ್ರೇಯಸಿ ಕ್ಲಾರೆಟ್ಟಾ ಇವಳೊಡನೆ ದಾಂಗ್ಗಾ (ಕೊಮೊ) ಎಂಬಲ್ಲಿ ಅವನಿಗೆ ಗುಂಡು ಹೊಡೆದು ಕೊಂದರು.

ಯುರೋಪಿನ ರಾಜಕೀಯ ಸಂದರ್ಭದಲ್ಲಿ ಫ್ಯಾಸಿಸಮ್ ಸೋಲುಂಡಿತು. ಪ್ರಾಚೀನ ರೋಮನ್ ಸಾಮ್ರಾಜ್ಯದ ಅವನ ಕನಸು, ಅವನ ಉಗ್ರ ರಾಷ್ಟ್ರವಾದ ಹಾಗೂ ಸೈನಿಕ ಸಾಮರ್ಥಗಳಂಥ ಸಾಧನಗಳು ಇಪ್ಪತ್ತನೆಯ ಶತಮಾನದ ಯುರೋಪಿಯನ್ ಸಂಸ್ಕೃತಿಗೆ ಅಸಂಗತವೆನ್ನಿಸುವಂತಿದ್ದವು. ಆ ಕಾಲಕ್ಕೆ ಬ್ರಿಟಿಷ್ ಮೊದಲಾದ ಸಾಮ್ರಾಜ್ಯಗಳೇ ಜರ್ಜರಿತವಾಗಿದ್ದವು. ರಾಷ್ಟ್ರವಾದದ ಉದಯದಿಂದಾಗಿ ಪ್ರಾದೇಶಿಕ ವಿಸ್ತಾರವಾದ, ಅಸಾಧ್ಯವೂ, ಅನ್ಯಾಯದ್ದೂ ಎನ್ನಿಸುತ್ತಿತ್ತು. ಅಲ್ಲದೆ ಸೈನ್ಯಬಲದ ದೃಷ್ಟಿಯಿಂದ ಇಟಲಿ ಅಂಥ ಸಾಮರ್ಥಶಾಲಿ ಆಗಿರಲಿಲ್ಲ. ಇತಿಹಾಸದ ಒಲವು ಹಾಗೂ ದಿಕ್ಕುಗಳ ಅಜ್ಞಾನದ ನಿದರ್ಶನ ಅದಾಗಿತ್ತು. ಮುಸೋಲಿನಿಯ ಚರಿತ್ರೆಯ ಮೂಲಕ ಸರ್ವಾಧಿಕಾರಿ ವ್ಯಕ್ತಿತ್ವದ ರೂಪುಗೊಳ್ಳುವಿಕೆಯ ಕೊನೆಯ ವಿಚಿತ್ರ ಸ್ವರೂಪ ಕಂಡುಬರುತ್ತದೆ. ಆದರೂ ಸಮಾಜವಾದದಿಂದ ಸರ್ವಾಧಿಕಾರಿ ಮಹತ್ವಾಕಾಂಕ್ಷೆಯ ಅವನಲ್ಲಿ ಅಕಸ್ಮಾತ್ತಾಗಿ ನಡೆದ ಪರಿವರ್ತನೆಯು ಅವನ ಚರಿತ್ರೆಯ ಚಿದಂಬರ ರಹಸ್ಯವೆನ್ನಿಸಲಿದೆ. ಅದೇ ರೀತಿಯಾಗಿ ಪ್ರಪಂಚದ ಇತಿಹಾಸದಲ್ಲಿ ಪ್ರಜಾಪ್ರಭುತ್ವದ ಮೂಲಕ ಮುಸೋಲಿನಿಯ ಸರ್ವಾಧಿಕಾರಿ ಪ್ರವೃತ್ತಿಗೆ ಎದುರೇಟು ಕೊಡಲು ಸಾಧ್ಯ ಎಂಬುದನ್ನೂ ಅವನ ಚರಿತ್ರೆಯೇ ಸೂಚಿಸಿದೆ. ಕಾರ್ಮಿಕ ಚಳುವಳಿ, ಸಮಾಜವಾದದ ಸಮರ್ಥನೆ, ಸಮಾಜವಾದಕ್ಕೆ ವಿರೋಧ, ರಾಷ್ಟ್ರೀಯತೆಯನ್ನು ಪ್ರತಿಪಾದಿಸುವ, ಫ್ಯಾಸಿಸ್ಟ್ ಪ್ರವೃತ್ತಿಯ ಪ್ರಸಾರವನ್ನು ಮಾಡುವ ಹಲವಾರು ಪ್ರಖರ ಮತ್ತು ಉಗ್ರ ಲೇಖನಗಳು ಅವನ ಬೇರೆ ಬೇರೆ ವೃತ್ತಪತ್ರಗಳ ಮೂಲಕ ಪ್ರಕಟಗೊಂಡವು. ಅವನು ಆತ್ಮಚರಿತ್ರೆಯನ್ನು (೧೯೨೮) ಬರೆದನು. ಮುಂದೆ ಅವನ ಪತ್ರಗಳು ಪ್ರಕಟಗೊಂಡವು.

ಮರಾಠೀ ವಿಶ್ವಕೋಶ : ೧೩, ಪು. ೭೮೩-೭೮೪.

## ಪರಿಶಿಷ್ಟ-೧೬

## ಫ್ಯಾಸಿಸಮ್

ಮೊದಲ ಮಹಾಯುದ್ಧದ ತರುವಾಯ ಇಟಲಿಯಲ್ಲಿ ಉದಯಕ್ಕೆ ಬಂದ ಸಂಪೂರ್ಣ ಆಧುನಿಕ ಸರ್ವಾಧಿಕಾರಿ ರಾಜಕೀಯ ವಿಚಾರಪ್ರಣಾಲಿ. ಇಟಲಿಯ ಅಡಚಣೆ ಹಾಗೂ ಗೊಂದಲದ ಪರಿಸ್ಥಿತಿಯಲ್ಲಿ ಫ್ಯಾಸಿಸಮ್ ಹುಟ್ಟಿಕೊಂಡಿತು. ಬೆನಿತೊ ಮುಸೋಲಿನಿಯು ಹೊಸದಾಗಿ ಬೆಳೆಯುವ ಈ ಚಳುವಳಿ ಹಾಗೂ ಸಂಘಟನೆಯ ಮುಂದಾಳುತನವನ್ನು ವಹಿಸಿದನು. ಶುರುವಿನಲ್ಲಿ ಅವನು ಸಮಾಜವಾದಿಯಾಗಿದ್ದನು. “ಅವಂತಿ' (Avanti) ಎಂಬ ದಿನಪತ್ರಿಕೆಯ ಸಂಪಾದಕನೂ ಆಗಿದ್ದನು. ಆದರೆ ತರುವಾಯದಲ್ಲಿ ಅವನು ಮನಸ್ಸು ಬದಲಾಯಿಸಿ ಸಮಾಜವಾದವನ್ನು ಪ್ರಬಲವಾಗಿ ವಿರೋಧಿಸುವ 'ಫ್ಯಾಸಿಸ್ಟ್ ಪಕ್ಷ ದ ನಿರ್ಮಾತೃ ಹಾಗೂ ನಾಯಕನಾದನು. ಇದಾದುದು ೧೯೨೦ರ ಸುಮಾರಿಗೆ ಫ್ಯಾಸಿಸಮ್ ಶಬ್ದವು 'ಫ್ಯಾಸಿಯೋ ದಿಂದ ತಯಾರಾಗಿದೆ. ಫ್ಯಾಸಿಯೊ ಅಂದರೆ ಕಟ್ಟಿಗೆಯ ಕಟ್ಟಿನಲ್ಲಿ ಕಟ್ಟಲಾದ ಕೊಡಲಿ. ಅದು ರೋಮನ್ ಸಾಮ್ರಾಜ್ಯದ ಲಾಂಛನವಾಗಿತ್ತು. ಮುಂದೆ ಬೆಳೆದ ಸಾಮ್ರಾಜ್ಯವಾದ ಹಾಗೂ ಯುದ್ಧಕೋರ ಪ್ರವೃತ್ತಿಗಳು ಫ್ಯಾಸಿಸಮ್‌ದ ಈ ಲಾಂಛನದಿಂದ ಚೆನ್ನಾಗಿ ಅರ್ಥವಾಗುವಂತಿವೆ.

ನಿರುದ್ಯೋಗಿ ಕಾರ್ಮಿಕರು ಹಾಗೂ ಮಧ್ಯಮವರ್ಗದ ದಿಕ್ಕುಗೇಡಿ ಯುವಕರು ಮುಸೋಲಿನಿ ಕಟ್ಟಿದ ಫ್ಯಾಸಿಸ್ಟ್ ಪಕ್ಷದಲ್ಲಿ ಮುಖ್ಯವಾಗಿ ತುಂಬಿದ್ದರು. ಶುರುವಿನಲ್ಲಿ ಈ ಪಕ್ಷವು ಚಿಕ್ಕದಿತ್ತು. ಬಂಡವಾಳದಾರರು ಹಾಗೂ ಶ್ರೀಮಂತರ ನೆರವಿನಿಂದ ಅದು ನಿಧಾನವಾಗಿ ಬೆಳೆಯತೊಡಗಿತು. ರಾಜಕೀಯ ಸತ್ತೆ ಕೈಗೆ ಬಂದಬಳಿಕ ಅದರ ನಿಜವಾದ ಬೆಳವಣಿಗೆಯಾಯಿತು. ಫ್ಯಾಸಿಸ್ಟರು ರಾಜಕೀಯ ಸತ್ತೆಯನ್ನು ಕೈವಶ ಮಾಡಿಕೊಳ್ಳಲೆಂದು ೨೮ ಆಕ್ಟೋಬರ್ ೧೯೨೨ ರಂದು ರಾಜಧಾನಿಯಾದ ರೋಮಿನತ್ತ ಮೆರವಣಿಗೆಯನ್ನು ಹೊರಡಿಸಿದರು. ಫ್ಯಾಸಿಸ್ಟ್ ಚಳುವಳಿಯಲ್ಲಿ ರೋಮಿನ ಈ ಮೆರವಣಿಗೆಯನ್ನು ದೊಡ್ಡ ವೀರಶ್ರೀಯ ಘಟನೆ ಎಂದು ಉಲ್ಲೇಖಿಸಲಾಗುತ್ತದೆ. ಆದರೆ ಆ ಮೆರವಣಿಗೆಯಲ್ಲಿ ಶೌರ್ಯವನ್ನು ಮೆರೆಯುವ ಅವಶ್ಯಕತೆ ಉಂಟಾಗಲಿಲ್ಲ. ಯಾರೂ ಈ ಮೆರವಣಿಗೆಯನ್ನು ವಿರೋಧಿಸಲಿಲ್ಲ. ಫ್ಯಾಸಿಸ್ಟರಿಗೆ ವಿರೋಧವಿಲ್ಲದೆಯೆ ರೋಮಿನಲ್ಲಿ ಪ್ರವೇಶ ದೊರೆಯಿತು. ರಾಜನು ಅಧಿಕಾರದ ಸೂತ್ರಗಳನ್ನು ತಾನಾಗಿಯೇ ಮುಸೋಲಿನಿಯ ಕೈಗಿತ್ತನು. ಮುಸೋಲಿನಿಯು ರಾಜನ ಕರೆಯಮೇರೆಗೆ ದೇಶದ ಪ್ರಧಾನಮಂತ್ರಿಯಾದನು. ಅಂದಿನಿಂದ ಇಟಲಿಯಲ್ಲಿ ಫ್ಯಾಸಿಸ್ಟರ ರಾಜ್ಯ ಶುರುವಾಯಿತು.

ಈ ಕಾಲದಲ್ಲಿ ಇಟಲಿಯಲ್ಲಿ ಸಮಾಜವಾದಿ ಹಾಗೂ ಅರಾಜ್ಯವಾದಿ ಎಡ ಪಕ್ಷಗಳಿದ್ದವು. ಇವಲ್ಲದೆ ಬಲ ವಿಚಾರಸರಣಿ ಹಾಗೂ ಮಧ್ಯಮ ಮಾರ್ಗದ ಇನ್ನು ಕೆಲವು ಪಕ್ಷಗಳೂ ಇದ್ದವು. ಇವೆಲ್ಲ ಪಕ್ಷಗಳ ಸದಸ್ಯರ ಸಂಖ್ಯೆಯು ಫ್ಯಾಸಿಸ್ಟ್ ಪಕ್ಷದ ಸದಸ್ಯರಿಗಿಂತ ಅದೆಷ್ಟೋ ಪಟ್ಟು ಹೆಚ್ಚಿತ್ತು.



ಎಲ್ಲರೂ ಒಕ್ಕಟ್ಟಾಗಿ ಫ್ಯಾಸಿಸ್ಟ್ ಪಕ್ಷವನ್ನು ವಿರೋಧಿಸಿದ್ದರೆ ಆ ಪಕ್ಷ ಹೆಚ್ಚು ಮುಂದುವರಿಯುವಂತಿರಲಿಲ್ಲ. ಆದರೆ ಆ ಪಕ್ಷಗಳೆಲ್ಲ ತಮ್ಮ ತಮ್ಮಲ್ಲಿ ಜಗಳಾಡುತ್ತಿದ್ದವು. ಅದರಲ್ಲೂ ಸಮಾಜವಾದಿ ಹಾಗೂ ಸಾಮ್ಯವಾದಿ ಪಕ್ಷಗಳ ನಡುವೆ ತೀವ್ರವಾದ ಜಗಳವಿತ್ತು. ಹೀಗಾಗಿ ಅವು ಸತ್ವಹೀನವಾಗಿ, ದೇಶಕ್ಕೆ ಫ್ಯಾಸಿಸ್ಟ್ ಪಕ್ಷದ ಸರ್ವಾಧಿಕಾರಿ ಆಳ್ವಿಕೆಯ ಬಂದೊದಗಿತು.

ತನ್ನ ಕೈಗೆ ಅಧಿಕಾರ ಬರುತ್ತಲೇ ಮುಸೋಲಿನಿಯು ವಿರೋಧಕರನ್ನು ಹಿಂಸಿಸಲು ಶುರು ಮಾಡಿದನು. ಅವರ ಭಾಷಣ ಸ್ವಾತಂತ್ರ್ಯ, ಮುದ್ರಣ ಸ್ವಾತಂತ್ರ್ಯ, ಸಂಘಟನಾ ಸ್ವಾತಂತ್ರ, ಮುಂ. ನಾಶಪಡಿಸಿದನು. ಅಲ್ಲದೆ ಮುಸೋಲಿನಿ ಹಾಗೂ ಅವನ ಪಕ್ಷದ ವಿರುದ್ಧ ಅವರು ಸೊಲ್ಲೆತ್ತದಂತೆ ಮಾಡಿಬಿಟ್ಟನು. ಮನೆ ಮನೆಗಳಿಂದ ವಿರೋಧಕರನ್ನು ಸೆರೆಹಿಡಿಯಲಾಗುತ್ತಿತ್ತು. ಅವರಿಗೆ ಬಲವಂತದಿಂದ ಔಡಲೆಣ್ಣೆಯನ್ನು ಕುಡಿಸುವ ಹೊಸ ತಂತ್ರವನ್ನು

ಆರಂಭಿಸಲಾಯಿತು. ಹಲವು ವಿರೋಧಿ ಸದಸ್ಯರು ಈ ಹಿಂಸೆಗೆ ಬೇಸತ್ತು ದೇಶವನ್ನು ತೊರೆದರು. ಹಲವರಿಗೆ ವರ್ಷಾನುಗಟ್ಟಲೆ ಸೆರೆಮನೆಗಳಲ್ಲಿ ಕೊಳೆಯಬೇಕಾಯಿತು. ಇಷ್ಟಾಗಿಯೂ ತುಸು ಮಟ್ಟಿಗಾದರೂ ವಿರೋಧವು ವ್ಯಕ್ತವಾಗದೆ ಇರಲಿಲ್ಲ. ಆದರೆ ಫ್ಯಾಸಿಸ್ಟರು ತಮ್ಮ ಪಾಶವಿ ಸಾಮರ್ಥವನ್ನು ಬಳಸಿ ಅದನ್ನು ಸದೆಬಡಿದರು.

ಫ್ಯಾಸಿಸ್ಟ್ ಪಕ್ಷದ ಕೈಗೆ ರಾಜ್ಯಸಕ್ಕೆ ಬಂದಾಗ ಲೋಕಸಭೆಯಲ್ಲಿ ಅದು ಅಲ್ಪಮತದಲ್ಲಿತ್ತು. ಮುಸೋಲಿನಿಯು ಒಂದೆರಡು ವರ್ಷಗಳಲ್ಲಿ ಸಂವಿಧಾನವನ್ನು ಬದಲಾಯಿಸಿದನು. ಅದಾದ ಬಳಿಕ ನಡೆದ ಚುನಾವಣೆಯಲ್ಲಿ ೧೦೦ % ಫ್ಯಾಸಿಸ್ಟರು ಚುನಾಯಿತರಾದರು. ಈ ಚುನಾವಣೆಯ ಬಗೆಯೇ ಬೇರೆಯದಾಗಿತ್ತು. ಫ್ಯಾಸಿಸ್ಟ್ ಪಕ್ಷವು ತಯಾರಿಸಿದ ಅಭ್ಯರ್ಥಿಗಳ ಹೆಸರಿನ ಪಟ್ಟಿಯಲ್ಲಿ ಅವರವರ ಹೆಸರುಗಳ ಮುಂದೆ 'ಹೌದು ಅಥವಾ ಇಲ್ಲ ಎಂಬುದನ್ನು ನಮೂದಿಸುವ ಹಕ್ಕು ಮಾತ್ರ ಮತದಾರರಿಗೆ ಇದ್ದಿತು. ಅವರು ಪ್ರಕಟವಾಗಿ ಆ ಹಕ್ಕನ್ನು ಚಲಾಯಿಸಬೇಕಿತ್ತು. ಅಂದರೆ ಮತದಾನ ಗುಟ್ಟಾಗಿರಲಿಲ್ಲ. ಅಲ್ಲದೆ ಮತದಾನ ತಮ್ಮ ಬದಿಗೆ ಆಗಲೆಂದು, ಬೆದರಿಕೆ ಒಡ್ಡಲು ಹಾಗೂ ಗೂಂಡಾಗಿರಿಯನ್ನು ನಡೆಸಲು ಫ್ಯಾಸಿಸ್ಟ್ ಗೂಂಡಾಗಳ ತಂಡಗಳು ಅಲ್ಲಿ ಇದ್ದೇ ಇದ್ದವು.

ಮುಸೋಲಿನಿಯು ಪ್ರಜಾಪ್ರಭುತ್ವದ ರಾಜ್ಯಾಡಳಿತ ಹಾಗೂ ಹಕ್ಕುಗಳನ್ನು ನಂಬುತ್ತಿರಲಿಲ್ಲ. ಪ್ರಜಾಪ್ರಭುತ್ವದಿಂದ ದೇಶದಲ್ಲಿ ಹಲವು ಪಕ್ಷಗಳು ಹಾಗೂ ಪಂಥಗಳು ಹುಟ್ಟಿ ಬರುತ್ತವೆ. ಅದರಿಂದಾಗಿ ದೇಶ ಸಡಿಲಾಗುತ್ತದೆ; ಹೀಗಾಗಿ ಅದು ಯಾವುದೇ ಖಚಿತವಾದ ಧೋರಣೆಯನ್ನು ಅವಲಂಬಿಸಲಾರದು, ಎಂಬುದು ಅವನ ಅಭಿಪ್ರಾಯವಾಗಿತ್ತು. ಪ್ರಜಾಪ್ರಭುತ್ವದ ಸ್ವಾತಂತ್ರದಿಂದಲೂ ಹೀಗೆಯೇ ಆಗುತ್ತದೆ, ಎಂದು ಅವನಿಗೆ ಅನ್ನಿಸುತ್ತಿತ್ತು. ಹೀಗಾಗಿ ದೇಶದ ಆಡಳಿತೆಯು ಸರಾಗವಾಗಿ ಸಾಗಬೇಕಿದ್ದರೆ, ದೇಶದ ಪ್ರಗತಿಯಾಗಬೇಕಿದ್ದರೆ, ದೇಶಕ್ಕೆ ಒಬ್ಬನೇ ನಾಯಕನು ಇರತಕ್ಕದ್ದು, ದೇಶದ ಆಡಳಿತೆಯೆಲ್ಲ ಅವನೊಬ್ಬನ ಮನದಂತೆ ನಡೆಯತಕ್ಕದ್ದೆಂಬುದು ಅವನ ಆಗ್ರಹವಾಗಿತ್ತು. ಆದುದರಿಂದ ಒಂಟಿಯಾಗಿ ರಾಜ್ಯಾಡಳಿತೆಂರುನ್ನು ನಡೆಯಿಸಲು ಶುರು ಮಾಡಿ, ಯಾರಿಂದಲೂ ಅದಕ್ಕೆ ವಿರೋಧ ವ್ಯಕ್ತವಾಗಬಾರದೆಂದು ಅವನು ಸರ್ವಾಧಿಕಾರಶಾಹಿಯನ್ನು ಸ್ಥಾಪಿಸಿದನು. ದೇಶದಲ್ಲಿ ಒಬ್ಬ ನಾಯಕನು ಮಾತ್ರ ಇರಬೇಕೆಂಬ ಕಾರಣಕ್ಕಾಗಿ ಅವನು ರಾಜ್ಯದ ಸರ್ವಾಧಿಕಾರಿಯೂ ಪಕ್ಷದ ಏಕಮೇವ ನಾಯಕನೂ ಆದನು. ಅವನು ಫ್ಯಾಸಿಸ್ಟ್ ಪಕ್ಷವನ್ನುಳಿದು ಇತರ ಪಕ್ಷಗಳನ್ನು ಕಾನೂನುಬಾಹಿರ, ಎಂದು ಘೋಷಿಸಿದನು. ದೇಶದ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳನ್ನೆಲ್ಲ ತನ್ನ ಪಕ್ಷದ ಅಧಿಕಾರದಡಿಗೆ ತಂದುಕೊಂಡನು.

ಇಟಲಿಯ ಸರ್ವಸಾಧಾರಣ ಜನತೆಯಿಂದ ಫ್ಯಾಸಿಸಮ್, ಫ್ಯಾಸಿಸ್ಟ್ ಪಕ್ಷ ಹಾಗೂ ಮುಸೋಲಿನಿಗೆ ಬೆಂಬಲ ದೊರೆಯಿತು. ಇದರ ಮುಖ್ಯ ಕಾರಣವೆಂದರೆ ಜನರು ಆ ಕಾಲದ ದುರವಸ್ಥೆ, ಶಾಸನದ ದೌರ್ಬಲ್ಯ ಹಾಗೂ ಸಮಾಜದಲ್ಲಿರುವ ಗೊಂದಲಗಳಿಗೆ ಬೇಸತ್ತಿದ್ದರು. ಅವರಿಗೆ ಸ್ಥಿರ ಹಾಗೂ ಸಮರ್ಥವಾದ ಸರಕಾರ ಬೇಕಿತ್ತು. ಇಂಥ ಸರಕಾರವೇ ಆರ್ಥಿಕ ಅರಿಷ್ಟದಿಂದ ಹೊರಬರುವ ದಾರಿಯನ್ನು ಕಂಡುಕೊಂಡು ಕೈಗಾರಿಕೆಗಳನ್ನು ಬೆಳೆಸಬಹುದು, ನಿರುದ್ಯೋಗವನ್ನು ತೊಲಗಿಸಬಹುದು ಹಾಗೂ ರಾಷ್ಟ್ರದ ಹೆಸರನ್ನು ಉಜ್ವಲಗೊಳಿಸಬಹುದೆಂದು ಅವರಿಗೆ ಅನ್ನಿಸುತ್ತಿತ್ತು. ಗೆದ್ದ ರಾಷ್ಟ್ರಗಳ ಬದಿಯಿಂದ ಮೊದಲ ಮಹಾಯುದ್ಧದಲ್ಲಿ ಯುದ್ಧದಲ್ಲಿ ಭಾಗವಹಿಸಿಯೂ ಬೇಕಿದ್ದಷ್ಟು ಪ್ರದೇಶ ತನಗೆ ದಕ್ಕಲಿಲ್ಲವೆಂಬ ಕಾರಣದಿಂದ ಇಟಲಿಯು ತುಂಬ ಮುಖಭಂಗಕ್ಕೆ ಈಡಾಗಿತ್ತು. ಮುಸೋಲಿನಿ ಹಾಗೂ ಫ್ಯಾಸಿಸ್ಟ್ ಪಕ್ಷ ಇವೆಲ್ಲವನ್ನು ಕುರಿತು ತುಂಬ ಅಕರ್ಷಕವಾದ ಭರವಸೆಗಳನ್ನಿತ್ತರು. ಜನ ಅವುಗಳಿಗೆ ಮರುಳಾದರು. ಅವರು ಫ್ಯಾಸಿಸಮ್‌ಗೆ ಬೆಂಬಲ ನೀಡಿದರು. ಮುಂದೆ ಈ ಭರವಸೆಗಳು ಮೋಸದವೆನ್ನಿಸಿದವು, ಎನ್ನುವುದು ಬೇರೆ ಸಂಗತಿ.

ಅಲ್ಲದೆ ದೇಶದಲ್ಲಿ ಪ್ರಜಾಪ್ರಭುತ್ವದ ಪರಂಪರೆ ಇರಲಿಲ್ಲ. ಜನರ ಮನದ ಮೇಲೆ ರಾಜ, ಮಾಂಡಲಿಕ, ಇಗರ್ಜಿ ಹಾಗೂ ಮೇಲ್ವರ್ಗಗಳವರ ತುಂಬ ಒತ್ತಡವಿತ್ತು. ಅವರು ಆಳಬೇಕು, ತಾವು ಸಂಪ್ರದಾಯದಿಂದ ಬಂದ ಕೃಷಿಯನ್ನು ಮಾಡಬೇಕು, ಕಾರ್ಖಾನೆ ಅಥವಾ ಚಿಕ್ಕಪುಟ್ಟ ಉದ್ಯೋಗಗಳಲ್ಲಿ ಕೆಲಸವನ್ನು ಮಾಡಬೇಕೆಂಬ ಭಾವನೆ ಜನರಲ್ಲಿತ್ತು. ಈ ಪ್ರತಿಯೊಂದು ಬಾಬತ್ತಿಗಾಗಿ ಅವರಿಗೆ ಒಬ್ಬ ನಾಯಕ ಬೇಕಿದ್ದನು. ತಾವು ಅವನ ಹೇಳಿಕೆಯಂತೆ ನಡೆದುಕೊಳ್ಳಬೇಕೆಂದು ಅವರು ಬಯಸುತ್ತಿದ್ದರು. ಅವರಿಗೆ ಸ್ವಸ್ಥತೆ ಹಾಗೂ ಸುರಕ್ಷೆಗಳು ಬೇಕಿದ್ದವು. ಅವರು ಸ್ವಾತಂತ್ರ್ಯಕ್ಕಾಗಿ ಅಷ್ಟಾಗಿ ಒತ್ತಾಯಿಸಿದವರಲ್ಲ. ಮುಸೋಲಿನಿಯು ಜನರ ಈ ಮನೋಧರ್ಮವನ್ನು ಚೆನ್ನಾಗಿ ಬಳಸಿಕೊಂಡನು. ಅವರನ್ನು ಫ್ಯಾಸಿಸಮ್‌ದ ಕೊಟ್ಟಿಗೆಯಲ್ಲಿ ಕೂಡಿಹಾಕಿದನು.

ಈ ಮನೋಧರ್ಮವು ಆಧುನಿಕ ಪ್ರಪಂಚದ ಹಲವು ಸಮುದಾಯಗಳಲ್ಲಿ ಕಂಡುಬರುತ್ತದೆ. ಉತ್ಪಾದನೆಯ ಯಂತ್ರವು ಬೃಹತ್ತಾಗಿ ಬೆಳೆದಿದೆ. ರಾಜ್ಯಸತ್ತೆಯು ತುಂಬ ಪ್ರಬಲವಾಗಿದೆ. ಸಮಾಜವು ತುಂಬ ಶಿಥಿಲವಾಗಿದೆ. ಹೀಗಾಗಿ

ವ್ಯಕ್ತಿಯು ಹತಬಲತೆಯನ್ನು ಅನುಭವಿಸುತ್ತಾನೆ. ಅವನಿಗೆ ಒಂಟಿತನ ಹಾಗೂ ಸ್ವಾತಂತ್ರ್ಯದ ಬಗೆಗೆ ಭಯ ಎನ್ನಿಸತೊಡಗುತ್ತ ಅವನು ಆಧಾರಕ್ಕಾಗಿ ತಡಕಾಡತೊಡಗುತ್ತಾನೆ. ಬಹಳಷ್ಟು ಸಲ ಅದು ಪ್ರಬಲನಾದ ಮುಂದಾಳು ಹಾಗೂ ಅವನ ನಾಯಕತ್ವದಡಿಯ ಏಕತಂತ್ರದ ರಾಜ್ಯಾಡಳಿತೆಯಲ್ಲಿ ಅವನಿಗೆ ಕಂಡುಬರುತ್ತದೆ. ಇತ್ತೀಚಿನ ಸಮುದಾಯದ ಈ ಸಮಸ್ಯೆಯನ್ನು ಎರಿಕ್ ಫ್ರಾಮ್ ಎಂಬ ಸಾಮಾಜಿಕ ತಜ್ಞನು ತನ್ನ 'ಫೀಯರ್ ಆಫ್ ಫ್ರೀಡಮ್' ಅಥವಾ `ಎಸ್ಕೇಪ್ ಫ್ರಾಮ್ ಫ್ರೀಡಮ್ ಎಂಬ ಗ್ರಂಥದಲ್ಲಿ ತುಂಬ ಅಂದವಾಗಿ ವಿವೇಚಿಸಿರುವನು. ಫ್ಯಾಸಿಸಮ್ ಇಟಲಿಗೆ ಸೀಮಿತವಾಗಿ ಉಳಿಯಲಿಲ್ಲ. ಇಟಲಿಯಲ್ಲಿ ಕಾಲೂರಿದ ತರುವಾಯ ಅದು ಜರ್ಮನಿ, ಜಪಾನ್, ಸ್ಪೇನ್, ಪೋರ್ತುಗಾಲ್, ಅರ್ಜೆಂಟಿನಾ ಮೊದಲಾದ ದೇಶಗಳಲ್ಲಿ ಹಬ್ಬಿತು. ಅದು ಜರ್ಮನಿಯಲ್ಲಿ ಹಿಟ್ಲರನ ನಾಯಕತ್ವದಲ್ಲಿ ನಾ ಪಕ್ಷದ ರೂಪದಲ್ಲಿ ಅದು ತುಂಬ ವಿಕೃತವೂ ಭೀಷಣವೂ ಆದ ಸ್ವರೂಪವನ್ನು ತಳೆಯಿತು. ಪ್ರತಿಯೊಂದು ದೇಶದ ಫ್ಯಾಸಿಸಮ್‌ದ ಸ್ವರೂಪವು ಆಯಾ ದೇಶದ ಪರಿಸ್ಥಿತಿಗೆ ತಕ್ಕಂತೆ ಬೇರೆ ಬೇರೆಯಾಗಿತ್ತು. ಏಕೆಂದರೆ ಸುಸ್ಪಷ್ಟವೂ ಸುಸಂಗತವೂ ಆದ ತತ್ತ್ವಜ್ಞಾನವೇ ಅದಕ್ಕಿರಲಿಲ್ಲ. ಉದಾಃ ಜರ್ಮನಿಯಲ್ಲಿ ವಂಶದ ತತ್ಯಕ್ಕೆ ಒತ್ತು ನೀಡಲಾಗುತ್ತಿತ್ತು.



ಹಿಟ್ಲರನ ರಾಜಕೀಯ ತತ್ತ್ವಜ್ಞಾನದಂತೆ ಮಾನವ ವಂಶಗಳಲ್ಲೆಲ್ಲ ಆರ್ಯವಂಶವೇ ಹುಟ್ಟಿನಿಂದ ಶ್ರೇಷ್ಠವಿದ್ದು, ಅದೇ ಮಾನವ ಜಾತಿಯ ಮೇಲೆ ರಾಜ್ಯವಾಳಲು ಸಮರ್ಥವಾಗಿದೆಯೆಂಬ ಮೂಲಭೂತ ಸಿದ್ಧಾಂತವನ್ನು ನಂಬಲಾಗಿದೆ. ಫ್ಯಾಸಿಸಮ್ ಮಾತ್ರ ಅಂಥ ಸಿದ್ಧಾಂತವನ್ನು ಒಪ್ಪಿಕೊಂಡಿರಲಿಲ್ಲ. ಆದರೆ ಅದು ಪ್ರಾಚೀನ ರೋಮನ್ ಸಾಮ್ರಾಜ್ಯದ ಮಾದರಿಯ ಇಟಲಿಯ ಸಾಮ್ರಾಜ್ಯವನ್ನು ಕಟ್ಟುವ ಕನಸನ್ನು ಕಾಣುತ್ತಿತ್ತು.

ರಾಜ್ಯ ಸಂಸ್ಥೆಯು ಸಮಾಜದಲ್ಲಿ ಎಲ್ಲಕ್ಕೂ ಹೆಚ್ಚು ಶ್ರೇಷ್ಠವೂ ಸರ್ವಂಕಷವೂ ಆದ ಸಂಸ್ಥೆಯೆಂದು ಫ್ಯಾಸಿಸಮ್ ನಂಬುತ್ತದೆ. ಸಮಾಜವು ಒಂದು ಸಾವಯವ, ಏಕಾತ್ಮ ವಸ್ತುವಾಗಿದ್ದು ವ್ಯಕ್ತಿಗಳು ಅದರ ಘಟಕಾಂಶರು. ದೇಹಕ್ಕಾಗಿ

ಅವಯವ ಹಾಗೂ ಜೀವಕೋಶಗಳು ಇರುವಂತೆ ವ್ಯಕ್ತಿಗಳು ಸಮಾಜಕ್ಕಾಗಿ ಇರುತ್ತಾರೆ. ರಾಷ್ಟ್ರ ಇಲ್ಲವೆ ರಾಜ್ಯವೆಂದರೆ ಸಮಾಜದ ಅಭಿವೃದ್ಧಿಗೊಂಡ ಇಲ್ಲವೆ ಉನ್ನತಗೊಂಡ ರೂಪವೇ ಸರಿ. ಹೀಗಾಗಿ ದೂರಿಕೊಳ್ಳದೆ ಎಲ್ಲರೂ ರಾಜ್ಯದ ಅಪ್ಪಣೆಯನ್ನು ಪಾಲಿಸತಕ್ಕದ್ದು. ರಾಜ್ಯದ ಹಿತವೇ ಎಲ್ಲರ ಹಿತ. ರಾಜ್ಯದ ಛಾಯಾಛತ್ರದಡಿಯೇ ವ್ಯಕ್ತಿಯ ವಿಕಸನ ಸಾಧ್ಯ. ಎಲ್ಲರೂ ಸೇರಿ ರಾಜ್ಯದ ಸಂರಕ್ಷಣೆ ಅಥವಾ ಸಂವರ್ಧನೆಯನ್ನು ಮಾಡತಕ್ಕದ್ದು. ಪ್ರತಿಯೊಬ್ಬನೂ ಅದಕ್ಕಾಗಿ ತೇದುಕೊಳ್ಳಲು ಇಲ್ಲವೆ ಆತ್ಮತ್ಯಾಗಕ್ಕಾಗಿ ಸಿದ್ಧತೆಯನ್ನು ಮಾಡಿಕೊಳ್ಳಬೇಕು. ರಾಜ್ಯ, ರಾಷ್ಟ್ರ ಮತ್ತು ಸಮಾಜಗಳಲ್ಲಿ ವ್ಯತ್ಯಾಸವಿಲ್ಲ.

ರಾಷ್ಟ್ರದ ನಾಯಕನೇ ರಾಜ್ಯ ಹಾಗೂ ಸಮಾಜದ ನಾಯಕನು. ಅವನ ಕೈಯಲ್ಲಿ ಅನಿಯಂತ್ರಿತವಾದ ಸತ್ತೆ ಬೇಕು. ರಾಷ್ಟ್ರದ ಹಿತ ಯಾವುದರಲ್ಲಿದೆ, ಎಂಬುದನ್ನು ಅವನೇ ಬಲ್ಲನು. ಈ ಹಿತವನ್ನು ಸಾಧಿಸಲಿಕ್ಕೆಂದು ಎಲ್ಲರನ್ನೂ ಅವರವರ ಶಕ್ತಿಗೆ ತಕ್ಕಂತೆ ಕೆಲಸಕ್ಕೆ ಹಚ್ಚುವ ಅಧಿಕಾರ ಅವನಿಗಿದೆ. ಅವನು ಒಂದು ಪಕ್ಷವನ್ನು ಕಟ್ಟುತ್ತಾನೆ. ಒಂದು ರಾಷ್ಟ್ರ, ಒಬ್ಬ ನೇತಾರ ಹಾಗೂ ಒಂದು ಪಕ್ಷವೆಂಬ ಘೋಷಣೆಯನ್ನು ಮಾಡಲಾಗುತ್ತದೆ.

ರಾಷ್ಟ್ರವು ಏಕಜೀವವಾದುದು. ಅದರಲ್ಲಿ ವರ್ಗಭೇದವನ್ನು ಮನ್ನಿಸುವುದೆಂದರೆ ಅದರ ಸಾಮರ್ಥವನ್ನು ಮೊಟಕುಗೊಳಿಸಿದಂತೆ, ಕಾರ್ಮಿಕರು, ಬಂಡವಾಳಗಾರರು, ಒಕ್ಕಲಿಗರು ಹಾಗೂ ಜಮೀನುದಾರರು ಒಕ್ಕಟ್ಟಿನಿಂದ ಕೆಲಸವನ್ನು ಮಾಡಿ ರಾಷ್ಟ್ರದ ಸಾಮರ್ಥವನ್ನು ಹೆಚ್ಚಿಸಬೇಕು.

ರಾಷ್ಟ್ರವು ಅಭಿವೃದ್ಧಿಪರವಾಗಿ ಇರತಕ್ಕದ್ದು. ಅದು ತನ್ನ ಸಾಮ್ರಾಜ್ಯವನ್ನು ನಿರ್ಮಿಸಬೇಕು. ಅದಕ್ಕಾಗಿ ಯುದ್ಧವನ್ನು ಮಾಡಬೇಕಿದೆ. ಯಾವಾಗಲೂ ಯುದ್ಧದ ಸಿದ್ಧತೆ ಬೇಕು. ಯುದ್ಧ ಮಾಡುವುದರಲ್ಲಿ ಪಾಪವೇನೂ ಇಲ್ಲ. ಅದರಿಂದಾಗಿ ವ್ಯಕ್ತಿಯ ಶೌರ್ಯ, ಧೈರ್ಯಗಳು ಹೆಚ್ಚಿ ಅವನ ಗುಣಗಳನ್ನು ಒರೆಗೆ ಹಚ್ಚಲಾಗುತ್ತದೆ.

ಪ್ರಜಾಪ್ರಭುತ್ವವು ಜನರ ಹಿತದ್ದಲ್ಲ. ಅದರಿಂದ ಶ್ರೀಮಂತರು ಹಾಗೂ ದಂಧೆಕೋರ ರಾಜಕಾರಣಿಗಳು ಸೊಕ್ಕೇರುತ್ತಾರೆ. ಅದರಿಂದ ಸಾಮಾನ್ಯರಿಗೆ ನಷ್ಟವಾಗುತ್ತದೆ. ರಾಷ್ಟ್ರಹಿತದ ಗಹನ ಪ್ರಶ್ನೆಗಳು ಸರ್ವಸಾಮಾನ್ಯ ಜನರಿಗೆ ಅರ್ಥವಾಗವು. ಅದರ ಬಗೆಗೆ ಅವರಲ್ಲಿ ಆಸ್ಥೆ ಇರದು. ಹೀಗಾಗಿ ಅರಿತವರು ಅವುಗಳನ್ನು ಎದುರಿಸುವುದು ಒಳ್ಳೆಯದು. ಫ್ಯಾಸಿಸಮ್‌ದ ಅಭಿಜನವಾದವು ಇದರಿಂದ (ಇಲಿಟಿಸಮ್) ಸ್ಪಷ್ಟವಾಗುತ್ತದೆ. ಆದರೆ ಫ್ಯಾಸಿಸ್ಟರಿಗೆ ಅದು ತಪ್ಪಾಗಿ ಕಾಣುವುದಿಲ್ಲ.

ಫ್ಯಾಸಿಸಮ್ ವ್ಯಕ್ತಿಯ ಸ್ವಾತಂತ್ರ ಹಾಗೂ ವ್ಯಕ್ತಿಯ ಸಮಾನತೆಯನ್ನು ಒಪ್ಪುವುದಿಲ್ಲ. ವಿಷಮತೆಯು ಪ್ರಕೃತಿದತ್ತವಾದುದು. ಅದು ಇಲ್ಲವಾಗದು. ಕೆಲವರಲ್ಲಿ ನಾಯಕತ್ವದ ಗುಣಗಳಿವೆ.



ಅವರ ಅಪ್ಪಣೆಯಂತೆ ನಡೆದುಕೊಳ್ಳುವುದೇ ಉಳಿದವರ ಕರ್ತವ್ಯ. ಅದರಲ್ಲೇ ಅವರ ಸ್ವಾತಂತ್ರ್ಯವಿದೆ, ಜೀವನದ ಪರಿಪೂರ್ತಿ ಇದೆ.

ಆರ್ಥಿಕ ಕಾರಣಗಳಿಂದ ಇತಿಹಾಸವು ನಿರ್ಮಾಣವಾಗುವುದಿಲ್ಲ. ಅದು ಪರಾಕ್ರಮಿ ಪುರುಷರ ಪರಾಕ್ರಮದಿಂದಾಗಿ ಉಂಟಾಗುತ್ತದೆ. ಅವರ ಮನದಂತೆ ಪರಾಕ್ರಮವನ್ನು ಮೆರೆಯಲು ಅವರಿಗೆ ಅವಕಾಶವನ್ನು ನೀಡುವುದರಲ್ಲೇ ಸಮಾಜದ ಹಿತವಿದೆ.

ರಾಷ್ಟ್ರದ ನಾಯಕನಿಗೆ ನೆರವಾಗಲು ಹಾಗೂ ಅವನ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲೆಂದು ಒಂದು ಸಂಘಟನೆಯು ಆವಶ್ಯಕ. ಅಂಥ ಸಂಸ್ಥೆಯೆಂದರೆ ಫ್ಯಾಸಿಸ್ಟ್ ಪಕ್ಷ ಈ ಪಕ್ಷವು ಶಿಸ್ತುಬದ್ಧವೂ ಹೋರಾಟಗಾರ ಪ್ರವೃತ್ತಿಯದೂ ಆಗಿರಬೇಕು. ಅದು ನಾಯಕನನ್ನು ಪೂರ್ತಿಯಾಗಿ ನಂಬಬೇಕು.

ಇವಾದವು ಫ್ಯಾಸಿಸಮ್‌ದ ಅಥವಾ ನಾಟ್ಸಿಸಮ್‌ದ ಸರ್ವಸಾಮಾನ್ಯ ತತ್ತ್ವಗಳು. ಅದರ ತತ್ತ್ವಜ್ಞಾನದ ಅಂದರೆ ವಿಶ್ವವನ್ನು ಕುರಿತಾದ ಪರಿಕಲ್ಪನೆಗಳನ್ನು ಇಲ್ಲಿ ಬೇಕೆಂದೇ ಉಲ್ಲೇಖಿಸಿಲ್ಲ. ಏಕೆಂದರೆ, ಅವು ತುಂಬ ಗೋಜಲಿನವು,

ಅಸಂಗತವಾದವುಗಳು. ಫ್ಯಾಸಿಸಮ್ ಜಡವಾದಿಯೋ ಇಲ್ಲವೆ ಆದರ್ಶವಾದಿಯೋ, ಎನ್ನುವುದನ್ನು ಹೇಳುವುದು ಕೂಡ ಕಷ್ಟದ ಸಂಗತಿ. ಅದರ ಕೃತಿಯಲ್ಲಿ ಕೆಳಮಟ್ಟದ ಜಡವಾದ ಅಥವಾ ಭೌತಿಕವಾದವು ಕಂಡುಬರುತ್ತದೆ. ರಾಜ್ಯವೆಂಬ ಅದರ ಎಲ್ಲಕ್ಕೂ ಹೆಚ್ಚು ಮಹತ್ವದ ಪರಿಕಲ್ಪನೆಯಲ್ಲಿ ಆದರ್ಶವಾದವು ಕಂಡುಬರುತ್ತದೆ. ಫ್ಯಾಸಿಸಮ್ ಅಥವಾ ನಾಟ್ಸಿಸಮ್ ಕ್ಕೆ ಹಿಂಸೆ ಅಪಥ್ಯವಲ್ಲ. ಅದರಲ್ಲಿ ಹಿಂಸೆಯನ್ನು ಪುರಸ್ಕರಿಸಲಾಗುತ್ತದೆ. ಹಾಗೆಯೇ ನೀತಿಅನೀತಿಗಳ ವಿಧಿನಿಷೇಧವು ಅದಕ್ಕಿಲ್ಲ. ರಾಷ್ಟ್ರೀಯ ಉದ್ದೇಶಗಳನ್ನು ಸಾಧಿಸಲೆಂದು ಯಾವುದೇ ಮಾರ್ಗವನ್ನು ಅವಲಂಬಿಸಿದರೂ ಸರಿ, ಫ್ಯಾಸಿಸಮ್ ಶಾಂತತಾವಾದಿಯಾಗಿರದೆ ಯುದ್ಧವಾದಿಯಾಗಿದೆ. ಅದು ಉಗ್ರ ರಾಷ್ಟ್ರವಾದಿಯಾಗಿದೆ. ಉಗ್ರ ರಾಷ್ಟ್ರವಾದ ಹಾಗೂ ಯುದ್ಧಗಳು ಯಾವಾಗಲೂ ಜೊತೆಯಾಗಿರುತ್ತವೆ.

ಐತಿಹಾಸಿಕ ದೃಷ್ಟಿಯಿಂದ ಮೊದಲ ಮಹಾಯುದ್ಧವು ಮುಗಿದ ತರುವಾಯ ಫ್ಯಾಸಿಸಮ್ ಹಾಗೂ ಅದರ ಅವಳಿಯಾದ ನಾಟ್ಸಿಸಮ್ ಹುಟ್ಟಿಬಂದವು. ವಾರ್ಸಾದ ಒಪ್ಪಂದದಂತೆ ತಯಾರಾದ ಅಂತರರಾಷ್ಟ್ರೀಯ ವ್ಯವಸ್ಥೆಯನ್ನು ಕಿತ್ತೆಸೆಯಲೆಂದು ನಡೆದ ಯುದ್ಧದಲ್ಲಿ ಜರ್ಮನಿಯ ಸೋಲಾಗಿತ್ತು. ಅದರಿಂದಾಗಿ ಅದು ತನ್ನ ವಸಾಹತುಗಳನ್ನು ಹಾಗೂ ಎಲ್ಸೈಸ್ - ಲಾರೆನ್‌ರಂತಹ ಮಹಾಭಾಗರನ್ನೂ ಕಳೆದುಕೊಳ್ಳಬೇಕಾಯಿತು. ಇಟಲಿ ಸೋತಿರಲಿಲ್ಲ. ಆದರೆ ಯುದ್ಧದ ತರುವಾಯ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಲೆಂದು ದಕ್ಷಿಣ ಯುರೋಪ ಹಾಗೂ ಉತ್ತರ ಆಫ್ರಿಕೆಯಲ್ಲಿ ತನಗೆ ಕೆಲವೊಂದು ಪ್ರದೇಶವು ಲಭಿಸಬಹುದೆಂದು ಆಶಿಸಿತ್ತು. ಅದು ಪೂರ್ತಿಯಾಗಿರಲಿಲ್ಲ. ಹೀಗಾಗಿ ಇಟಲಿ ಅಸಮಾಧಾನಿಯಾಗಿತ್ತು. ಎರಡೂ ದೇಶಗಳು ತಮ್ಮ ಮೇಲೆ ಅನ್ಯಾಯವಾಗಿದೆಯೆಂದು ಭಾವಿಸಿದವು. ತಮಗಾದ ಅನ್ಯಾಯವನ್ನು ಪರಿಹರಿಸಿಕೊಳ್ಳಲೆಂದು ಅವೆರಡೂ ದೇಶಗಳಿಗೆ ಯುದ್ಧ ಬೇಕಿತ್ತು. ಹೀಗಾಗಿ ಅವು ಉಗ್ರ ರಾಷ್ಟ್ರವಾದ ಹಾಗೂ ಯುದ್ಧಕೋರ ಪ್ರವೃತ್ತಿಗಳಿಗೆ ಉತ್ತೇಜನೆಯನ್ನು ನೀಡಿದವು. ಅದೇ ಫ್ಯಾಸಿಸ್ಟ್ ಹಾಗೂ ನಾಟ್ಸಿ ಪಕ್ಷಗಳ ಕಾರ್ಯಕ್ರಮವಾಗಿತ್ತು. ಹೀಗಾಗಿ ಅವುಗಳಿಗೆ ರಾಜಾಶ್ರಯ ದೊರೆತು, ಎರಡೂ ಪಕ್ಷಗಳ ಬಲ ಹಾಗೂ ಮಹತ್ವಗಳು ಒಮ್ಮೆಲೆ ಬೆಳೆದವು.

ಇದೇ ಕಾಲಕ್ಕೆ ಬೇರೊಂದು ಘಟನೆ ನಡೆಯುತ್ತಿತ್ತು. ಅದೆಂದರೆ ಸಂಬಳ ಕಡಿತ, ಕೆಲಸದ

ಹೆಚ್ಚಳ, ಕಾರ್ಮಿಕರನ್ನು ಕೆಲಸದಿಂದ ವಜಾಗೊಳಿಸುವುದು, ಮುಂ. ಬಗೆಯ ಬಂಡವಾಳ ಶಾಹಿಯ ಕಾರ್ಮಿಕರ ಮೇಲಿನ ಹಲ್ಲೆಗಳು, ಯುದ್ಧಾನಂತರದ ಆರ್ಥಿಕ ಪರಿಸ್ಥಿತಿಯಲ್ಲಿ ಬಂಡವಾಳಶಾಹಿಗಳಿಗೆ ಕಾರ್ಮಿಕರಿಗೆ ಹೊಸ ಸವಲತ್ತುಗಳನ್ನು ನೀಡಲು ಸಾಧ್ಯವಿರಲಿಲ್ಲ. ಅಷ್ಟೇ ಅಲ್ಲದೆ ಹಳೆಯ ಸವಲತ್ತುಗಳನ್ನು ಮುಂದುವರಿಸುವುದು ಕೂಡ ಅಸಾಧ್ಯವಾಗಿತ್ತು. ಏಕೆಂದರೆ ಬಂಡವಾಳಶಾಹಿಯ ಬೆಳೆವಣಿಗೆ ನಿಂತಿತ್ತು. ಅದರಿಂದಾಗಿ ತೀವ್ರವಾದ ವರ್ಗಯುದ್ಧವು ಅಪರಿಹಾರ್ಯವಾಗಿ ಶುರುವಾಯಿತು. ಕಾರ್ಮಿಕರು ಮುಷ್ಕರ, ಪ್ರತಿಭಟನೆ ಮೊದಲಾದವನ್ನಂತೂ ಮಾಡಿಯೇ ಮಾಡುತ್ತಿದ್ದರು, ಅದರ ಜೊತೆಗೆ ರಾಜಕೀಯ ಹೋರಾಟವನ್ನೂ ಆರಂಭಿಸಿದರು. ಆ ಹೋರಾಟವು ರಶಿಯದಲ್ಲಿ ಯಶಸ್ವಿಯಾಯಿತು. ಅಲ್ಲಿ ಕಾರ್ಮಿಕರ ರಾಜ್ಯದ ಸ್ಥಾಪನೆಯಯಿತು. ಇತರ ದೇಶಗಳ ಬಂಡವಾಳದಾರರಿಗೆ ಇದೇ ಹೆದರಿಕೆ ಇದ್ದಿತು. ಇಂಥ ಕಾಲಕ್ಕೆ ಅವರಿಗೆ ಫ್ಯಾಸಿಸ್ಟ್ ವಿಚಾರಸರಣಿ ಹಾಗೂ ಫ್ಯಾಸಿಸ್ಟ್ ಪಕ್ಷಗಳು ಅವರಿಗೆ ಆಧಾರವನ್ನು ಒದಗಿಸಿದವು. ಸಾಮ್ಯವಾದಿ ಹಾಗೂ ಸಮಾಜವಾದಿ ವಿಚಾರಗಳಿಗೆ ಉತ್ತರವನ್ನು ನೀಡಬಲ್ಲ ಸಾಮರ್ಥವು ಫ್ಯಾಸಿಸಮ್‌ದಲ್ಲಿ ಇರುವುದು ಅವರಿಗೆ ಕಂಡು ಬಂದು, ಫ್ಯಾಸಿಸ್ಟ್ ಪಕ್ಷವು ಕಾರ್ಮಿಕ ಚಳುವಳಿ ಹಾಗೂ ಸಂಘಟನೆಗಳನ್ನು ಹತ್ತಿಕ್ಕುವ ಯಂತ್ರವನ್ನು ಒದಗಿಸಿತು. ಹೀಗಾಗಿ ಬಂಡವಾಳಶಾಹಿ ಹಾಗೂ ಫ್ಯಾಸಿಸಮ್‌ಗಳ ನಡುವೆ ಹತ್ತಿರದ ನಂಟು ತಯಾರಾಯಿತು.

ಈ ಅನುಭವದಿಂದ ಫ್ಯಾಸಿಸಮ್ ಅನ್ನು ಕುರಿತಾದ ಮಾರ್ಕ್ಸ್ ವಾದಿಗಳ ಸಿದ್ದಾಂತವು ತಯಾರಾಯಿತು. ಅವರ ಸಿದ್ಧಾಂತವು ಹೀಗಿದೆ : ಬಂಡವಾಳಶಾಹಿಗೆ ಇಳಿಗಾಲ ಬರುತ್ತಲೇ ಅದು ಫ್ಯಾಸಿಸಮ್‌ವನ್ನು ಹುಟ್ಟುಹಾಕುತ್ತದೆ. ಏರುಗತಿಯ ಕಾಲದಲ್ಲಿ ಅದು ಕಾರ್ಮಿಕ ಪ್ರಜಾಪ್ರಭುತ್ವ, ಕಾರ್ಮಿಕ ಸಂಘ, ಕಾರ್ಮಿಕರ ಮುಷ್ಕರ ಮೊದಲಾದವನ್ನು ಸಹಿಸಬಲ್ಲುದಾಗಿತ್ತು. ಆದರೆ ಇಳಿಗಾಲದಲ್ಲಿ ಇವೆಲ್ಲವನ್ನು ಸಹಿಸುವುದು ಸಾಧ್ಯವಿಲ್ಲವೆಂದು ಕಂಡುಬಂದು ಬಂಡವಾಳಶಾಹಿಯು ಅವುಗಳನ್ನು ನಾಶಪಡಿಸಲೆಂದು ಫ್ಯಾಸಿಸಮ್‌ವನ್ನು ಹುಟ್ಟುಹಾಕಿತು. ಈ ಉಪಪತ್ತಿಯ ದೋಷವೆಂದರೆ ಬಂಡವಾಳಶಾಹಿಯಿಂದ ಫ್ಯಾಸಿಸಮ್‌ಗೆ ಸಾಕಷ್ಟು ನೆರವು ದೊರೆತಿದ್ದರೂ ಅದು ಫ್ಯಾಸಿಸಮ್‌ವನ್ನು ಹುಟ್ಟು ಹಾಕಿತೆಂದು ಹೇಳುವುದು ಕಷ್ಟ. ಅದು ಮೊದಲೇ ಅಸ್ತಿತ್ವಕ್ಕೆ ಬಂದಾಗಿತ್ತು. ಬಂಡವಾಳಶಾಹಿಯು ಅದರ ಉಪಯುಕ್ತತೆಯನ್ನು ಕಂಡುಕೊಂಡು ತರುವಾಯದಲ್ಲಿ ಅದನ್ನು ಪೋಷಿಸಿತು. ಇದೇ ರೀತಿಯಾಗಿ ರಾಜಕೀಯ ಸತ್ತೆಯನ್ನು ಕೈವಶ ಮಾಡಿಕೊಂಡ ತರುವಾಯ ಫ್ಯಾಸಿಸಮ್ ಕೂಡ ಬಂಡವಾಳಶಾಹಿಯನ್ನು ಜೀತದಾಳಿನಂತೆ

ದುಡಿಸಿಕೊಂಡಿತೆಂಬುದನ್ನು ಮರೆಯುವಂತಿಲ್ಲ. ಅಲ್ಲದೆ ಮಧ್ಯಮ ವರ್ಗದವರಿಂದ ಫ್ಯಾಸಿಸಮ್‌ಗೆ ದೊರೆತ ಬೆಂಬಲವನ್ನು ಈ ಉಪಪತ್ತಿಯಿಂದ ಅರ್ಥೈಸಲಾಗದು. ಫ್ಯಾಸಿಸಮ್‌ದ ಸ್ವರೂಪವು ಕೇವಲ ಬಂಡವಾಳದಾರರ ಪಕ್ಷ ಎಂದಿಷ್ಟೇ ಆಗಿದ್ದರೆ ಮಧ್ಯಮ ವರ್ಗವು ಅದಕ್ಕೆ ಬೆಂಬಲವನ್ನು ನೀಡುತ್ತಿರಲಿಲ್ಲ. ಆದರೆ ಅದರ ಉಗ್ರ ರಾಷ್ಟ್ರವಾದ ಹಾಗೂ ಮಧ್ಯಮ ವರ್ಗಕ್ಕೆ ಬೇರೆ ಮತ್ತು ಸ್ವತಂತ್ರ ಸ್ಥಾನವನ್ನು ನೀಡುವ ಅದರ ಘೋಷಣೆಗಳು ಮಧ್ಯಮವರ್ಗದವರನ್ನು ಮರುಳು ಮಾಡಿದವು. ಹೀಗಾಗಿ ಅವರು ಫ್ಯಾಸಿಸಮ್‌ದ ಚಿತ್ರಹಿಂಸೆಯತ್ತ ಅಲಕ್ಷ್ಯ ತೋರಿದರು. ತರುವಾಯದಲ್ಲಿ ಅವರು ಇದಕ್ಕಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲೇಬೇಕಾಯಿತು. ಫ್ಯಾಸಿಸಮ್ ಪ್ರತ್ಯಕ್ಷದಲ್ಲಿ ಸಮಾಜವಾದ ಮತ್ತು ಸಾಮ್ಯವಾದಗಳಿಗೆ ಹಗೆಯಾಯಾಗಿ ಬೆಳೆಯಿತೆಂಬ ಸಂಗತಿಯಿಂದ ಮಾತ್ರ ಆ ಉಪಪತ್ತಿಗೆ ಬೆಂಬಲ ದೊರೆಯುತ್ತದೆ.

ಮುಸೋಲಿನಿಯು ಸತ್ತೆಯನ್ನು ಪಡೆದಾದ ಬಳಿಕ ಅದನ್ನು ಸುಸಂಘಟಿತ ಹಾಗೂ



ಸ್ಥಿರಗೊಳಿಸಲೆಂದು ಅವನು ಮೊದಲ ಮೂರು-ನಾಲ್ಕು ವರ್ಷಗಳನ್ನು ಕಳೆಯಬೇಕಾಯಿತು. ಈ ಕಾಲದಲ್ಲಿ ಅವನು ವಿರೋಧಿ ಪಕ್ಷಗಳು ಹಾಗೂ ವಿರೋಧಿ ಸಂಸ್ಥೆಗಳನ್ನೆಲ್ಲ ನಾಶಪಡಿಸಿದನು. ಅವನು ದೇಶದ ಕಾನೂನು ಮಂಡಳ, ನೌಕರಶಾಹಿ, ಸೈನ್ಯ, ವೃತ್ತಪತ್ರ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳ ಮೇಲೆ ತನ್ನ ಅಧಿಕಾರವನ್ನು ಸಾಧಿಸಿದನು. ಅಂದರೆ ಅವನು ದೇಶದಲ್ಲಿ ಒಬ್ಬ ನಾಯಕ, ಒಂದು ಪಕ್ಷ ಹಾಗೂ ಒಂದು ಧ್ವನಿ ಇರಬೇಕೆನ್ನುವ ಫ್ಯಾಸಿಸಮ್ದ ಕಾರ್ಯಕ್ರಮವನ್ನು ಕಾರ್ಯಾಚರಣೆಗೆ ತಂದನು. ಅದನ್ನು ಮಾಡುವಾಗ ಅವನು ತುಂಬ ದಬ್ಬಾಳಿಕೆಯನ್ನು ನಡೆಸಿದನು. ವಿರೋಧಕರ ಮೇಲೆ ಬಲಾತ್ಕಾರವನ್ನು ಮಾಡಿದನು. ಎಲ್ಲ ಪ್ರಜಾತಂತ್ರದ ಹಕ್ಕುಗಳನ್ನು ಮೆಟ್ಟಿದನು. ಆದರೆ ದೇಶದ ಕಾನೂನು ಹಾಗೂ ಆಡಳಿತೆಯ ಪರಿಸ್ಥಿತಿಯು ಹದಗೆಟ್ಟಿತ್ತು. ಅವನು ಅದನ್ನು ಮತ್ತೆ ಸ್ಥಾಪಿಸಿದನು. ಅದರಿಂದಲೇ ಹಲವರಿಗೆ ಮೆಚ್ಚುಗೆಯಾಯಿತು. ಮುಸೋಲಿನಿಯ ರಾಜ್ಯದಲ್ಲಿ ವಾಹನಗಳು ವೇಳೆಗೆ ಸರಿಯಾಗಿ

ಹೊರಡುತ್ತವೆಂದು ಹಲವರು ಅವನನ್ನು ಕೊಂಡಾಡಿದರು. ಆದರೆ ಅದಕ್ಕಾಗಿ ತೆತ್ತ ಬೆಲೆ ಎಷ್ಟು ? ಮುಂದೆ ಎಷ್ಟನ್ನು ತೆರಬೇಕಾದೀತು ಎನ್ನುವುದನ್ನು ಅವರು ಮರೆತರು.

ತರುವಾಯದಲ್ಲಿ ಮುಸೋಲಿನಿಯ ಸಾಮ್ರಾಜ್ಯಯುಗವೇ ಫ್ಯಾಸಿಸಮ್ ದ ಕಾರ್ಯಕ್ರಮವನ್ನು ಅನುಸರಿಸಿ ಶುರುವಾಯಿತು. ಸಾಮ್ರಾಜ್ಯವಾದವು ಫ್ಯಾಸಿಸಮ್‌ದ ಅವಿಭಾಜ್ಯ ಭಾಗವಾಗಿದೆ. ಉಗ್ರ ರಾಷ್ಟ್ರವಾದವು ಯಾವಾಗಲೂ ಸಾಮ್ರಾಜ್ಯವಾದದಲ್ಲಿ ಪರಿವರ್ತಿತವಾಗುತ್ತದೆ. ಫ್ಯಾಸಿಸಮ್‌ದ ಕಣ್ಣೆದುರು ಹಳೆಯ ರೋಮನ್ ಸಾಮ್ರಾಜ್ಯದ ಗುರಿ ಇದ್ದಿತು. ಫ್ಯಾಸಿಸ್ಟರು ಆ ಕಾಲದಲ್ಲಿ ಇಟಲಿಗೆ ಇದ್ದ ಪ್ರತಿಷ್ಠೆಯನ್ನು ಮರಳಿ ಪಡೆಯುವ ಕನಸನ್ನು ಕಾಣುತ್ತಿದ್ದರು. ಅದಕ್ಕಾಗಿ ಯುದ್ಧಗಳನ್ನು ಮಾಡಬೇಕಾದೀತು, ಎಂಬುದು ಅವರಿಗೆ ತಿಳಿದಿತ್ತು. ಹೀಗಾಗಿ ಅವರು ಸೈನ್ಯವನ್ನು ಸುಸಜ್ಜಿತವಾಗಿ ಇರಿಸುವತ್ತ ಹೆಚ್ಚಿನ ಗಮನ ಹರಿಸಿದರು. ತಮಗೆ ರೊಟ್ಟಿ ಸಿಕ್ಕದಿದ್ದರೂ ನಡೆದೀತು, ಆದರೆ ಸೈನ್ಯಕ್ಕೆ ಯುದ್ಧದ ಸಲಕರಣೆಗಳ ಕೊರತೆಯಾಗಕೂಡದು, ಎನ್ನುವ ಆಗ್ರಹ ಅವರದಾಗಿತ್ತು. ಅವನು ಇಟಲಿಯ ಜನತೆಯನ್ನು ಉದ್ದೇಶಿಸಿ ತಯಾರಿಸಿದ ಒಂದು ಘೋಷಣೆಯಲ್ಲಿ, "ನಂಬಿ, ಅಪ್ಪಣೆ ಪಾಲಿಸಿ. ಹೋರಾಡಿ," ಎಂದೆನ್ನಲಾಗಿತ್ತು. ೧೯೩೯ರ ತನ್ನೊಂದು ಭಾಷಣದಲ್ಲಿ ಮುಸೋಲಿನಿಯು, 'ನಾವು ಶಸ್ತ್ರಬಲವನ್ನು ಹೆಚ್ಚಿಸಿಕೊಳ್ಳಬೇಕೆಂಬುದು ಹೆಚ್ಚು ಮಹತ್ವದ್ದೂ, ಖಚಿತವೂ ಆದ ಸಂಗತಿಯಾಗಿದೆ. ಅದಕ್ಕಾಗಿ ಹೆಚ್ಚು ಬಂದೂಕುಗಳು, ಹೆಚ್ಚು ಹಡಗುಗಳು ಹಾಗೂ ಹೆಚ್ಚು ವಿಮಾನಗಳನ್ನು ಪಡೆದುಕೊಳ್ಳಿ, ಅವಕ್ಕಾಗಿ ಅದೆಷ್ಟೇ ಬೆಲೆಯನ್ನು ತೆರಬೇಕಾಗಿ ಬಂದರೂ ಪರವಾಗಿಲ್ಲ. ಅದಕ್ಕಾಗಿ ಯಾವುದೇ ಬಗೆಯ ಅಭ್ಯಂತರವಿಲ್ಲ. ಅದಕ್ಕಾಗಿ ಸುಸಂಸ್ಕೃವೆನ್ನಿಸಿದ ನಮ್ಮ ಜೀವನವನ್ನೇ ತೆತ್ತರೂ ಸರಿಯೇ," ಎಂದು ಅಪ್ಪಣೆ ಮಾಡಿದ್ದನು. ಮುಸೋಲಿನಿಯ ಈ ಭಾಷಣದಲ್ಲಿ ಯುದ್ಧದ ಬಗೆಗಿನ ಪ್ಯಾಸಿಸಮ್‌ದ ಧೋರಣೆಯು ಚೆನ್ನಾಗಿ ಪ್ರತಿಬಿಂಬಿತಗೊಂಡಿದೆ.

ಫ್ಯಾಸಿಸಮ್‌ದ ಧೋರಣೆಗೆ ತಕ್ಕಂತೆ ಮುಸೋಲಿನಿಯು ಇಟಲಿಯ ಸಾಮ್ರಾಜ್ಯವನ್ನು ವಿಸ್ತರಿಸಲೆಂದು ೧೯೩೫ ರಲ್ಲಿ ಎಬಿಸೀನಿಯಾ(ಇಂದಿನ ಇಥಿಯೋಪಿಯಾ)ದ ಮೇಲೆ ದಾಳಿ ಮಾಡಿ, ಅದನ್ನು ವಶಪಡಿಸಿಕೊಂಡನು. ತರುವಾಯ ೧೯೩೯ ರಲ್ಲಿ ಅಲ್ಬೇನಿಯವನ್ನು ಕೂಡ ನುಂಗಿದನು. ಸಂಸ್ಕೃತಿಯ ಪ್ರಸಾರಕ್ಕಾಗಿ ತಾನು ಹೀಗೆ ಮಾಡಿದೆನೆಂದು ತನ್ನನ್ನು ಸಮರ್ಥಿಸಿಕೊಳ್ಳುತ್ತಿದ್ದನು. ಅವನು ಸುಯೇಜ್ ಕಾಲುವೆ ಹಾಗೂ ಈಜಿಪ್ತುಗಳ ಮೇಲೂ ತನ್ನ ಅಧಿಕಾರವನ್ನು ಸ್ಥಾಪಿಸಬಯಸಿದ್ದನು. ಆದರೆ ಅಷ್ಟರಲ್ಲಿ, ಅಂದರೆ ೧೯೩೯ ರಲ್ಲಿ ಎರಡನೆಯ ಮಹಾಯುದ್ಧ ಶುರುವಾಗಿ, ಅದಕ್ಕೆ ಫ್ಯಾಸಿಸಮ್ ವಿರುದ್ಧದ ಯುದ್ಧವೆಂಬ ಸ್ವರೂಪ ಲಭಿಸಿ, ಇಟಲಿ, ಜರ್ಮನಿ ಹಾಗೂ ಜಪಾನ ದೇಶಗಳ ಫ್ಯಾಸಿಸ್ಟ್

ರಾಜ್ಯಾಡಳಿತೆಗಳು ಆಹುತಿಯಾದವು. ನಾಟ್ಸಿ-ಫ್ಯಾಸಿಸ್ಟ್ ಜಪಾನಿನ ಸರ್ವಾಧಿಕಾರಿಗಳ ಯುದ್ಧಪಿಪಾಸೆ ಹಾಗೂ ಸಾಮ್ರಾಜ್ಯಕೃಷ್ಣೆಯೇ ಈ ಯುದ್ಧ ಶುರುವಾಗಲು ಕಾರಣ. ಯುದ್ಧಪಿಪಾಸೆ ಹಾಗೂ ಸಾಮ್ರಾಜ್ಯಕೃಷ್ಣಗಳು ಫ್ಯಾಸಿಸಮ್‌ದಲ್ಲಿ ಅಡಕವಾಗಿರುವ ಸಂಗತಿಗಳು. ಜೊತೆಗೆ, ಪ್ರಜಾಪ್ರಭುತ್ವದ ಬಗೆಗೆ ಅವುಗಳಲ್ಲಿರುವ ತಿರಸ್ಕಾರ ಬೇರೆ. ಅಲ್ಲದೆ, ಪ್ರಜಾಪ್ರಭುತ್ವವಾದಿ ದೇಶಗಳು ಇಷ್ಟೊಂದು ತೀವ್ರತೆಯಿಂದ ಹೋರಾಡಬಹುದೆಂದು ಅವುಗಳಿಗೆ ಅನ್ನಿಸಿರಲಿಲ್ಲ. ತಾವು ಸಹಜವಾಗಿ ಗೆಲ್ಲಬಹುದೆಂಬ ಕನಸು ಕಾಣುತ್ತಿದ್ದವು. ಆದರೆ ಪ್ರಜಾಪ್ರಭುತ್ವವು ಅವರ ಭ್ರಮೆಯನ್ನು ದೂರ ಮಾಡಿತು. ಯುದ್ಧದಲ್ಲಾದ ಸೋಲಿನಿಂದ ಸರ್ವಾಧಿಕಾರಿ ದೇಶಗಳು ನಾಶ ಹೊಂದಿದುವಷ್ಟೇ ಅಲ್ಲದೆ ಅವು ಕಟ್ಟಿದ ಸಂಘಟನೆಗಳು ಕೂಡ ನಾಶ ಹೊಂದಿದವು.

ಎರಡನೆಯ ಮಹಾಯುದ್ಧದಿಂದಾಗಿ ಫ್ಯಾಸಿಸ್ಟ್ ರಾಜ್ಯಾಡಳಿತೆಗಳೇನೋ ನಾಶ ಹೊಂದಿದರೂ ಫ್ಯಾಸಿಸ್ಟ್ ಮನೋಧರ್ಮ ಮಾತ್ರ ನಾಶ ಹೊಂದಿತೆನ್ನುವಂತಿಲ್ಲ. ಮಾನವನು ತನ್ನ ಅಧಿಕಾರವನ್ನು ಮೆರೆಯಬಯಸುತ್ತಾನೆ. ಅವಕಾಶ ಸಿಕ್ಕುತ್ತಲೆ ಇಂಥ ಕೆಲವರು ತಲೆಯೆತ್ತುತ್ತಾರೆ. ಉಳಿದವರ ಅಸಹಾಯಕತೆಯೇ ಇಂಥವರಿಗೆ ಒಂದು ಸುವರ್ಣಾವಕಾಶ ಎಂದೆನ್ನಿಸುತ್ತದೆ. ರಾಜಕೀಯ ವಿಪತ್ತು ಇಲ್ಲವೆ ಆರ್ಥಿಕ ಸಂಕಟಗಳಿಂದಾಗಿ ಸಮೂಹದಲ್ಲಿ ಕೆಲವೊಮ್ಮೆ ಅಸಹಾಯಕತೆ ತಲೆದೋರುತ್ತದೆ. ಜನರು ತಕ್ಕ ಆಧಾರಕ್ಕಾಗಿ ಹುಡುಕಾಟವನ್ನು ಆರಂಭಿಸುತ್ತಾರೆ. ಆಗ ಸಾಮರ್ಥ್ಯಶಾಲಿಯಾದವನು ಇಂಥವರಿಗೆ ಆಧಾರವನ್ನು ಒದಗಿಸಲು ಮುಂದಕ್ಕೆ ಬರುತ್ತಾನೆ. ಇದು ಸಣ್ಣ ಪ್ರಮಾಣದಲ್ಲಿದ್ದರೆ ಇಂಥವನನ್ನು 'ದಾದಾ' ಇಲ್ಲವೆ 'ಗೂಂಡಾ' ಎಂದೆನ್ನುತ್ತಾರೆ. ಆದರೆ ಇದೇ ಸಂಗತಿಯು ದೇಶವ್ಯಾಪಿಯಾದರೆ ಅಂಥವನನ್ನು ಫ್ಯಾಸಿಸ್ಟ್, ಸರ್ವಾಧಿಕಾರಿ ಎನ್ನುತ್ತಾರೆ. ಇಂಥ ಸಂಕಟವನ್ನು ತಪ್ಪಿಸಲು ಒಂದೇ ಒಂದು ದಾರಿಯಿದೆ. ಅದೆಂದರೆ ಮನುಷ್ಯರು ಅಸಹಾಯರಾಗದ ಹಾಗೆ ನೋಡಿಕೊಳ್ಳುವುದು, ಅವರಲ್ಲಿ ಆತ್ಮವಿಶ್ವಾಸವನ್ನು ತುಂಬುವುದು, ಅವರಿಗೆ ಸಂಕಟಕಾಲದಲ್ಲಿ ಆಧಾರವನ್ನು ಒದಗಿಸಬಲ್ಲ ಅವರದಾದ ಸಂಘಟನೆಗಳನ್ನು ಕಟ್ಟುವುದು. ಪ್ರಜಾಪ್ರಭುತ್ವವು ಯಾವ ಪ್ರಮಾಣದಲ್ಲಿ ಈ ಕಾರ್ಯವನ್ನು ನೆರವೇರಿಸುವುದೋ ಆ ಪ್ರಮಾಣದಲ್ಲಿ ಫ್ಯಾಸಿಸಂ ಕಡಿಮೆಯಾಗುವುದು.

ಮರಾಠೀ ವಿಶ್ವಕೋಶ : ೧೦, ಪು. ೮೨೮-೮೩೧.

## ಪರಿಶಿಷ್ಟ-೧೭

## ಕಮ್ಯುನಿಸ್ಟ್ ಪಕ್ಷ

**ಐತಿಹಾಸಿಕ ಹಿನ್ನೆಲೆ :** ಮಾರ್ಕ್ಸ್ ಹಾಗೂ ಎಂಗೆಲ್ಸ್ ಅವರ ತತ್ತ್ವಜ್ಞಾನದ ಪ್ರಚಾರ ಮತ್ತು ಪ್ರಸಾರವನ್ನು ಮಾಡುವ, ಕ್ರಾಂತಿಯ ದಾರಿಯಿಂದ ಕಾರ್ಮಿಕ ವರ್ಗದ ರಾಜಕೀಯ ಸತ್ತೆಯನ್ನು ಸ್ಥಾಪಿಸುವ ಹಾಗೂ ಮಾರ್ಕ್ಸವಾದಿ ತತ್ವಜ್ಞಾನವನ್ನು ಆಧರಿಸಿದ ಸಮಾಜವನ್ನು ರಚಿಸಲೆಂದು ಆ ಸತ್ತೆಯನ್ನು ಬಳಸಿಕೊಳ್ಳುವಂಥ ಗುರಿ ಹಾಗೂ ಧೋರಣೆಯಿಂದ ಸಂಘಟಿತವಾದ ಗುಂಪು ಕಮ್ಯುನಿಸ್ಟ್ ಪಕ್ಷವೆಂಬ ಹೆಸರಿನಿಂದ ಗುರುತಿಸಲ್ಪಡುತ್ತದೆ. ೧೯೧೭ ರಲ್ಲಿ ರಶಿಯದಲ್ಲಿ ರಾಜಕೀಯ ಕ್ರಾಂತಿ ನಡೆಯಿತು. ಲೆನಿನ್ ಅದರ ಮುಂದಾಳುವಾಗಿದ್ದನು. ಅವನನ್ನು ರಶಿಯನ್ ಕಮ್ಯುನಿಸ್ಟ್ ಪಕ್ಷದ ಆಗ್ರಹದ ಪುರಸ್ಕರ್ತ ಹಾಗೂ ಒಬ್ಬ ಸಂಸ್ಥಾಪಕನೆಂದು ಮನ್ನಿಸಲಾಗುತ್ತದೆ. ಕಮ್ಯುನಿಸ್ಟ್ ಪಕ್ಷವೆಂದರೆ 'ಕಾರ್ಮಿಕ ವರ್ಗದ ಸಂಘಟಿತ ಅಗ್ರಪಡೆ', ಎಂದು ಅವನು ಅದನ್ನು ವರ್ಣಿಸಿರುವನು. ಈ ಪಕ್ಷವು ಕಾರ್ಮಿಕರನ್ನು ಸಂಘಟಿತರನ್ನಾಗಿ ಮಾಡಬೇಕು, ಅದರ ಸಾಮರ್ಥ್ಯದಿಂದ ಸಮಾಜದ ಬಂಡವಾಳಗಾರ ವರ್ಗ ಮತ್ತು ಪಕ್ಷಗಳ ಕೈಯಿಂದ

ರಾಜಸತ್ತೆಯನ್ನು ಕಿತ್ತುಕೊಳ್ಳಬೇಕು, ಆ ಮೇಲೆ ಸಮಾಜದ ಉತ್ಪಾದನೆಯ ಎಲ್ಲ ಸಾಧನೆಗಳನ್ನು ರಾಜ್ಯದ ಒಡೆತನಕ್ಕೆ ಒಪ್ಪಿಸಬೇಕು ಹಾಗೂ ಆ ಮೂಲಕ ಕೊನೆಗೆ ವರ್ಗರಹಿತವಾದ ಸಮಾಜ ರಚನೆಯ ಗುರಿಯನ್ನು ತಲುಪಬೇಕೆಂದು ನಿನ್ನನು ಈ ಪಕ್ಷದ ಧ್ಯೇಯಧೋರಣೆಯ ರೂಪುರೇಖೆಗಳನ್ನು ಸ್ಪಷ್ಟಪಡಿಸಿದನು. ಸ್ಟಾಲಿನ್ನನು ಈ ಧ್ಯೇಯಧೋರಣೆಯನ್ನು ತನ್ನ ಭಾಷ್ಯಕ್ಕೆ ತಕ್ಕಂತೆ ಬಳಸಿಕೊಂಡು ರಶಿಯದ ಕಮ್ಯುನಿಸ್ಟ್ ಪಕ್ಷದ ನಾಯಕತ್ವವನ್ನು ಪೂರ್ತಿ ತನ್ನ ಕೈಗೆ ತೆಗೆದುಕೊಂಡನು.

ರಶಿಯದಲ್ಲಿ ನಡೆದ ಕ್ರಾಂತಿಯಿಂದ ಪ್ರೇರಣೆಯನ್ನು ಪಡೆದು ಪ್ರಪಂಚದ ಹಲವು ದೇಶಗಳಲ್ಲಿಯೂ ಕಮ್ಯುನಿಸ್ಟ್ ಪಕ್ಷಗಳ ಸ್ಥಾಪನೆ ನಡೆಯಿತು. ಅವು ರಶಿಯದ ಮಾರ್ಗದರ್ಶನವನ್ನು ಪಡೆದು ತಮ್ಮ ತಮ್ಮ ದೇಶಗಳ ರಾಜಕೀಯ ಕ್ಷೇತ್ರಗಳಲ್ಲಿ ಕಾರ್ಯವನ್ನು ಕೈಕೊಂಡವು. ೧೯೬೦ ರಲ್ಲಿ ಪ್ರಕಟವಾದ ಅಂಕಿಸಂಖ್ಯೆಗಳ ಮೇರೆಗೆ ವಿಶ್ವದ ೮೩ ದೇಶಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳು ಸ್ಥಾಪನೆಗೊಂಡಿದ್ದು, ಅವುಗಳ ಒಟ್ಟು ಸದಸ್ಯರ ಸಂಖ್ಯೆಯು ಮೂರು ಕೋಟಿಗಳಷ್ಟಿತ್ತು. ಅದರ ಪೈಕಿ ಶೇಕಡಾ ೮೫% ರಷ್ಟು ಸದಸ್ಯರು ರಶಿಯ ಹಾಗೂ ಚೀನ ದೇಶಗಳಲ್ಲಿ ಇದ್ದು, ಉಳಿದ ಶೇ ೧೫% ರಷ್ಟು ಸದಸ್ಯರು ಒಟ್ಟು ೮೧ ದೇಶಗಳಲ್ಲಿ ಇರುವರು.

ಕಮ್ಯುನಿಸ್ಟ್ ಪಕ್ಷವು ಯುರೋಪಿನ ಕೈಗಾರಿಕೆಯಲ್ಲಿ ಮುಂದುವರೆದ ದೇಶಗಳಲ್ಲಿ ಬೆಳೆಯಲಿದೆ, ಅಲ್ಲಿಯ ಕಾರ್ಮಿಕ-ಸಂಘಟನೆಗಳ ನೆರವಿನಿಂದ ಅದು ಆಯಾ ದೇಶಗಳಲ್ಲಿ ಕ್ರಾಂತಿಯನ್ನು ಉಂಟುಮಾಡಲಿದೆ, ಎಂದು ಮಾರ್ಕ್ಸ್‌ವಾದಿ ಪಕ್ಷವು ನಿರೀಕ್ಷಿಸಿತ್ತು. ಆದರೆ ಕಮ್ಯುನಿಸ್ಟ್ ಪಕ್ಷದ ಸಾಮರ್ಥ್ಯವು ಮುಖ್ಯವಾಗಿ ಅರೆಯಭಿವೃದ್ಧಿ ಹೊಂದಿದ ಅಥವಾ ಅಭಿವೃದ್ಧಿ ಹೊಂದದ ದೇಶಗಳಲ್ಲಿ



ಬೆಳೆಯಿತು. ಮೊದಲ ಮಹಾಯುದ್ಧದ ಕಾಲಕ್ಕೆ ಆ ಮೂಲಕ ರಶಿಯದಲ್ಲಿ ಕ್ರಾಂತಿಯಾಯಿತು. ಎರಡನೆಯ ಮಹಾಯುದ್ಧದ ತರುವಾಯ ಕಮ್ಯುನಿಸ್ಟ್ ಪಕ್ಷವು ಚೀನದಲ್ಲಿ ಸತ್ತೆಯನ್ನು ವಶಪಡಿಸಿಕೊಂಡಿತು. ಎರಡನೆಯ ಮಹಯುದ್ಧ ಮುಗಿಯುತ್ತಲೇ ರಶಿಯವು ತನ್ನ ಸೈನ್ಯದ ಬಲದಿಂದ ಪೂರ್ವ ಯುರೋಪಿನ ದೇಶಗಳ ಕಮ್ಯುನಿಸ್ಟ್ ಪಕ್ಷಗಳನ್ನು ಅಧಿಕಾರಕ್ಕೆ ತಂದಿತು. ಎರಡನೆಯ ಮಹಾಯುದ್ಧದ ಕಾಲಕ್ಕೆ ಚೆಕೋಸ್ಲೋವಾಕಿಯಾ, ಹಂಗೇರಿ, ಪೋಲಂಡ್, ರುಮಾನಿಯಾ, ಬಲ್ಗೇರಿಯಾ, ಪೂರ್ವ ಜರ್ಮನಿಗಳ ಕಮ್ಯುನಿಸ್ಟ್ ಪಕ್ಷಗಳ ಸಾಮರ್ಥ್ಯವು ತೀರ ಮಿತಿಯಲ್ಲಿತ್ತು. ಅಲ್ಲಿಯ

ಪಕ್ಷಗಳು ರಶಿಯದ ನೆರವಿನಿಂದಲೇ ಅಧಿಕಾರಕ್ಕೆ ಬಂದವು. ಚೀನದ ಕಮ್ಯುನಿಸ್ಟ್ ಪಕ್ಷವು ಪೂರ್ವದ ಕೋರಿಯಾ, ವಿಯೆಟ್ನಾಮ್, ಇಂಡೋನೇಶಿಯ, ಖೇರ್ ಪ್ರಜಾಸತ್ತಾಕ, ಮಲಯೇಶಿಯ, ಬ್ರಹ್ಮದೇಶ, ಶ್ರೀಲಂಕಾ ಹಾಗೂ ಕೆಲಮಟ್ಟಿಗೆ ಭಾರತದವರೆಗೂ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡಿತು. ಮೇಲಿನ ಎರಡೂ ಘಟನೆಗಳ ಅರ್ಥವೇನೆಂದರೆ, ಕಮ್ಯುನಿಸ್ಟ್ ಪಕ್ಷವು ಮುಖ್ಯವಾಗಿ ಕೃಷಿಪ್ರಧಾನ, ಕೈಗಾರಿಕೆಯಲ್ಲಿ ಹಿಂದುಳಿದ, ಅರೆಯಭಿವೃದ್ಧಿ ಹೊಂದಿದ ದೇಶಗಳಲ್ಲಿ ಸಂಘಟಿತಗೊಳ್ಳಲು ಸಾಧ್ಯವಾಯಿತೆನ್ನುವುದು. ಅದು ಆಫ್ರಿಕಾ ಹಾಗೂ ದ. ಅಮೇರಿಕಾ ಖಂಡಗಳ ಕೆಲದೇಶಗಳಲ್ಲಿ ಬೇರು ಬಿಡುತ್ತಿರುವುದು ಕಂಡುಬರುತ್ತಿದೆ.

**ಕಮ್ಯುನಿಸ್ಟ್ ಪಕ್ಷದ ಶ್ರದ್ಧಾಸ್ಥಾನಗಳು :** ರಶಿಯದ ಹೊರಗಿನ ದೇಶಗಳ ಕಮ್ಯುನಿಸ್ಟ್ ಪಕ್ಷಗಳು ಸುಮಾರು ೧೯೫೦ ರವರೆಗೂ ರಶಿಯದ ಕಮ್ಯುನಿಸ್ಟ್ ಪಕ್ಷದ ಅಪ್ಪಣೆಯ ಮೇರೆಗೆ ಕೆಲಸ ಮಾಡುತ್ತಿದ್ದವು, ಎಂಬುದನ್ನು ತಾತ್ತ್ವಿಕ ದೃಷ್ಟಿಯಿಂದ ಯಾರೂ ಒಪ್ಪದಿದ್ದರೂ ವ್ಯವಹಾರದಲ್ಲಿ ಅದನ್ನು ನಿರಾಕರಿಸಲಾಗದು. ರಶಿಯದ ಕ್ರಾಂತಿಯ ತರುವಾಯ ನಿರಂತರ ಮೂವತ್ತು ವರ್ಷಗಳ ಕಾಲ ಪ್ರಪಂಚದ ಕಮ್ಯುನಿಸ್ಟ್ ಪಕ್ಷಗಳೆಲ್ಲ ರಶಿಯದ ನಾಯಕತ್ವವನ್ನೇ ಅವಿರೋಧವಾಗಿ ಒಪ್ಪಿಕೊಂಡವು. ಆದರೆ ೧೯೪೮ ರಲ್ಲಿ ಯುಗೋಸ್ಲಾವಿಯಾವು ಮೊದಲ ಬಾರಿಗೆ ಅದ್ವಿತೀಯವೆನ್ನಿಸಿದ ಈ ನಾಯಕತ್ವಕ್ಕೆ ಸವಾಲೊಡ್ಡಿ ತನ್ನ ದೇಶದ ಕಮ್ಯುನಿಸ್ಟ್ ಪಕ್ಷದ ಧೋರಣೆ ಸ್ವತಂತ್ರವಾಗಿ ಇರತಕ್ಕದ್ದೆಂದು ಪಟ್ಟು ಹಿಡಿಯಿತು. ತರುವಾಯದಲ್ಲಿ ಚೀನವು ತನ್ನ ದೇಶದ ಕಮ್ಯುನಿಸ್ಟ್ ಪಕ್ಷವು ಸ್ವತಂತ್ರವಾಗಿ ತನ್ನದೇ ಆದ ಧೋರಣೆಯನ್ನು ನಿರ್ಧರಿಸುವುದಾಗಿ ಸಾರಿತು. ಸ್ಟ್ಯಾಲಿನ್ನನ ಸಾವಿನ ತರುವಾಯ ಹಂಗೇರಿ, ಪೋಲಂಡ್, ಚೆಕೋಸ್ಲಾವಾಕಿಯಾಗಳ ಕಮ್ಯುನಿಸ್ಟ್ ಪಕ್ಷಗಳು ರಶಿಯದ ನಾಯಕತ್ವದ ವಿರುದ್ಧ ಅಪಯಶಗೊಂಡ ಬಂಡಾಯವನ್ನು ಹೂಡಿದವು. ಇವೆಲ್ಲ ಘಟನೆಗಳು ಅದರಲ್ಲೂ ರಶಿಯ ಹಾಗೂ ಚೀನಗಳ ವೈಮನಸ್ಸು ಏಶಿಯ, ದ. ಅಮೇರಿಕೆ ಹಾಗೂ ಆಫ್ರಿಕೆಯ ಸುಮಾರಾಗಿ ಎಲ್ಲ ಕಮ್ಯುನಿಸ್ಟ್ ಪಕ್ಷಗಳ ಧೋರಣೆಗಳ ಮೇಲೆ ಪರಿಣಾಮ ಬೀರಿರುವುದು ಕಂಡು ಬರುತ್ತದೆ. ನಮ್ಮ ದೇಶದಲ್ಲಿ ರಶಿಯವಾದಿ ಹಾಗೂ ಚೀನವಾದಿ ಎಂಬೆರಡು ಬಣಗಳು ಕಂಡುಬರುತ್ತವೆ.

**ಉದ್ದೇಶ ಮತ್ತು ಧೋರಣೆ :** ಮಾರ್ಕ್ಸ್ ಹಾಗೂ ಎಂಗೆಲ್ಸರ ಗ್ರಂಥಗಳನ್ನು ಎಲ್ಲ ಕಮ್ಯುನಿಸ್ಟ್ ಪಕ್ಷಗ ಳ ಶ್ರದ್ಧಾ ಸ್ಥಾನಗಳೆಂದು ನಂಬಲಾಗಿದೆ. ತರುವಾಯದಲ್ಲಿ ಲೆನಿನ್ ಹಾಗೂ ಸ್ಟ್ಯಾಲಿನ್ನರು ಕಮ್ಯುನಿಸಮ್ ಕುರಿತು ನೀಡಿದ ವಿವರಣೆಗಳು ಇವಕ್ಕೆ ಸೇರ್ಪಡೆಗೊಂಡವು. ಸ್ಟಾಲಿನ್ನನ ಸಾವಿನ ತರುವಾಯ ಅವನ ಹೆಸರನ್ನು ಭಾಷ್ಯಕಾರರ ಪಟ್ಟಿಯಿಂದ ತೆಗೆದುಹಾಕಲಾಯಿತು. ಚೀನ ಹಾಗೂ ಚೀನವಾದಿ ಕಮ್ಯುನಿಸ್ಟ್ ಪಕ್ಷಗಳು ಮಾವೋ-ತ್ಸೆ-ತುಂಗ್ ಅವರ ಭಾಷ್ಯವನ್ನು ಅಧಿಕೃತವೆಂದು ನಂಬುತ್ತವೆ.

ಕಮ್ಯುನಿಸ್ಟ್ ಪಕ್ಷಗಳ ಮೂಲಗಳಿಂದ ಆಯಾ ಪಕ್ಷಗಳ ಉದ್ದೇಶವು ಗಮನಕ್ಕೆ ಬರುವಂತಿದೆ.

(೧) ದೇಶದಲ್ಲಿ ಉತ್ಪಾದನೆಯ ಸಾಧನೆಗಳನ್ನೆಲ್ಲ ಸಮಾಜದ ಒಡೆತನದವನ್ನಾಗಿ ಮಾಡುವುದು, ಕೈಗಾರಿಕೋದ್ಯಮ ಹಾಗೂ ಕೃಷಿಗಳನ್ನು ಕೂಡ ಅದಕ್ಕೆ ಸೇರ್ಪಡಿಸುವುದು. (೨) ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿ ಕ್ರಾಂತಿಯನ್ನು ಮಾಡಿ ಸತ್ತೆಯನ್ನು ವಶಪಡಿಸಿಕೊಳ್ಳುವುದು. (೩) ಸಶಸ್ತ್ರ ಕ್ರಾಂತಿಯಲ್ಲಿ ನಂಬಿಕೆ. (೪) ರಾಜ್ಯಕ್ರಾಂತಿಯ ತರುವಾಯ ಇತರ ಪಕ್ಷ ಹಾಗೂ ಸಂಘಟನೆಗಳನ್ನು ಕೊನೆಗೊಳಿಸುವುದು. (೫) ಸಮಾಜವು ಶಿಸ್ತುಬದ್ಧ ಹಾಗೂ ಕೃತಿಶೀಲ ಪಕ್ಷದ ನಾಯಕತ್ವಕ್ಕೆ ರಾಜ್ಯಾಡಳಿತ ಹಾಗೂ ಆರ್ಥಿಕ ಸಾಧನೆಗಳ ಹೊಣೆಯನ್ನು ಒಪ್ಪಿಸತಕ್ಕದ್ದು.

ಕಮ್ಯುನಿಸ್ಟ್ ಪಕ್ಷವು ಸತ್ತೆಯನ್ನು ಕೈವಶ ಮಾಡಿಕೊಳ್ಳುವ ಮುನ್ನ ಹಾಗೂ ತರುವಾಯದ ಕೆಲವು ಕಾಲ ದೇಶದ ಅಲ್ಪಸಂಖ್ಯ ಜಾತಿ-ಕೋಮು, ಅಸಂತುಷ್ಟ ವರ್ಗಗಳು, ಧಾರ್ಮಿಕ ಅಲ್ಪಸಂಖ್ಯರು, ಜನಾಂಗೀಯ ಸಣ್ಣ ಸಣ್ಣ ಬಣಗಳು ಹಾಗೂ ತೀರ ಬಡ ಜನರಿಗೆ ಅಭಿವೃದ್ಧಿಯ ಭರವಸೆಯನ್ನಿತ್ತು ಪಕ್ಷದ ಬಗೆಗೆ ಅವರಲ್ಲಿ ಸಹಾನುಭೂತಿ ಹಾಗೂ ಮಮತೆಯನ್ನು ಉಂಟುಮಾಡುವುದನ್ನು ಪಕ್ಷದ ತಂತ್ರಗಾರಿಕೆಯ ಒಂದು ಬದಿಯೆಂದು ಪರಿಗಣಿಸಲಾಗುತ್ತದೆ. ಇದೇ ರೀತಿಯಾಗಿ ದುಡ್ಡಳ್ಳವರ ವರ್ಗ, ಉತ್ಪಾದನೆಯ ಸಾಧನೆಗಳ ಒಡೆಯರು, ಮೇಲಿನ ಹುದ್ದೆಯ ಅಧಿಕಾರಿಗಳು ಹಾಗೂ ವಿರೋಧಿ ರಾಷ್ಟ್ರಗಳ ವಿರುದ್ಧವಾಗಿ ಬಂಡವಾಳದಾರರ ಕೈಗೊಂಬೆಗಳು, ಶೋಷಕರು, ಸಾಮಾಜವಾದಿಗಳು, ಮುಂ. ವಿಶೇಷಣಗಳಿಂದ ಸಮಾಜದಲ್ಲಿ ಪ್ರಚಾರವನ್ನು ಕೈಗೊಳ್ಳಲಾಗುತ್ತದೆ. ಇದು ಮೇಲಿನ ತಂತ್ರಗಾರಿಕೆಯ ಎರಡನೆಯ ಬದಿಯಾಗಿದೆ. ಅಂತರರಾಷ್ಟ್ರ ಮಟ್ಟದಲ್ಲೂ ಇದೇ ಬದಿಯಿಂದ ಪ್ರಚಾರವನ್ನು ಕೈಕೊಳ್ಳಲಾಗುತ್ತದೆ. ಕಮ್ಯುನಿಸ್ಟ್ ದೇಶಗಳೆಂದರೆ ಶಾಂತತಾವಾದಿಗಳು, ಕಮ್ಯುನಿಸ್ಟ್ರೇತರ ದೇಶಗಳೆಂದರೆ ಯುದ್ಧಕೋರ ದೇಶಗಳು, ಎಂಬ ಸಮೀಕರಣವನ್ನು ತಯಾರಿಸಲಾಗುತ್ತದೆ. ಹೀಗಾಗಿ ಅಭಿವೃದ್ಧಿ ಹೊಂದದ ದೇಶಗಳು ಶಾಂತಿವಾದಿ ಧೋರಣೆಗಾಗಿ, ಅಂದರೆ ಕಮ್ಯುನಿಸ್ಟ್ ದೇಶಗಳ ಧೋರಣೆಗೆ ಬೆಂಬಲ ನೀಡಬೇಕೆಂದು ಕರೆಕೊಡಲಾಗುತ್ತದೆ. ವಿಶ್ವಮಟ್ಟದಲ್ಲಿ ಇದೇ ಸಂಗತಿಗೆ ವರ್ಗಸಂಘರ್ಷ ಎಂದೆನ್ನಲಾಗುತ್ತದೆ. ಈ ಪ್ರಚಾರದ ಹೆಚ್ಚಿನ ಪ್ರಭಾವವು ಹಿಂದುಳಿದ ದೇಶಗಳ ಕಮ್ಯುನಿಸ್ಟ್ ಪಕ್ಷಗಳ ಮೇಲೆ ಬೀಳತೊಡಗಿತೆಂದರೆ ಅವುಗಳಿಗೆ ಸಕ್ರಿಯ ನೆರವನ್ನು ನೀಡಿ ಸಾಧ್ಯವಿದ್ದರೆ ಚುನಾವಣೆಯ ಮೂಲಕ, ಇಲ್ಲದಿದ್ದರೆ ಸೈನ್ಯಬಲದಿಂದ ಅವುಗಳನ್ನು ಸತ್ತೆಗೆ ತರುವುದೂ ಕೂಡ ಈ ಧೋರಣೆಯ ಒಂದು ಅಂಶವಾಗಿದೆ. ಅದಕ್ಕಾಗಿ ರಾಜಕೀಯ ಧೋರಣೆಯ ಜೊತೆಗೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಘಟನೆ, ಸಾಹಿತ್ಯಕ ಚಳುವಳಿಗಳು, ಕಲಾರಂಗದ ಪ್ರಯೋಗಗಳು, ಮೊದಲಾದ ವಿವಿಧ ಸಾಧನೆಗಳನ್ನು ಬಳಸಿಕೊಳ್ಳಲಾಗುತ್ತದೆ. ಸರಕಾರಿ ಯಂತ್ರವನ್ನು

ಒಳಗಿನಿಂದ ಕೊರೆದು ಪೊಳ್ಳುಮಾಡುವುದು, ಪೊಲೀಸ್ ಹಾಗೂ ನ್ಯಾಯ ಇಲಾಖೆಗಳನ್ನು ನಿಷ್ಕ್ರಿಯಗೊಳಿಸುವುದು, ಸಾಧ್ಯವಿದ್ದರೆ ಸೈನ್ಯದ ಯುವಕ ಅಧಿಕಾರಗಳ ಮೇಲೆ ಪ್ರಭಾವ ಬೀರುವುದು, ಮೊದಲಾದ ಉಪಾಯಗಳನ್ನು ಕೂಡ ಕಮ್ಯುನಿಸ್ಟ್ ಪಕ್ಷದ ತಂತ್ರಗಾರಿಕೆಯಲ್ಲಿ ಬಳಸಿಕೊಳ್ಳಲಾಗುತ್ತದೆ. ಇವೆಲ್ಲ ಸಂಗತಿಗಳು ಶಾಂತಿಗಾಗಿ ಆವಶ್ಯಕವಾದವುಗಳು, ಅಪರಿಹಾರ್ಯವಾದವೆಂದು ಬಗೆಯಲಾಗಿದ್ದರಿಂದ ಅದರಲ್ಲಿ ತಪ್ಪೇನೂ ಇಲ್ಲವೆಂದೇ ಭಾವಿಸಲಾಗುತ್ತದೆ.

**ರಷ್ಯಾದ ಕಮ್ಯುನಿಸ್ಟ್ ಪಕ್ಷ :** ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಕೈಗಾರಿಕಾರಂಗದ ಅಸಂತೋಷದಿಂದಾಗಿ ರಷ್ಯಾದಲ್ಲಿ ಮಾರ್ಕ್ಸವಾದಿ ಚಳುವಳಿಯು ಶುರುವಾಯಿತು. ಪ್ಲೇಖನೋವ್ ಎಂಬ ಕ್ರಾಂತಿಕಾರಿಯು ವಿದೇಶಗಳಿಂದ ಕಮ್ಯುನಿಸ್ಟ್ ಸಾಹಿತ್ಯವನ್ನು ಗುಟ್ಟಾಗಿ ರಷ್ಯಾಕ್ಕೆ ತಂದು ರಷ್ಯಾನ್



ಭಾಷೆಯಲ್ಲಿ ಅದರ ಪ್ರಚಾರ ಹಾಗೂ ಪ್ರಸಾರಗಳನ್ನು ಮಾಡಿದನು. ಶುರುವಿನಲ್ಲಿ ಮಾರ್ಕ್ಸವಾದಿ ಬಣದ ವ್ಯಾಪ್ತಿ ತೀರ ಸಣ್ಣದಿತ್ತು. ಲೆನಿನ್ ಹಾಗೂ ಅವನ ಸಂಗಡಿಗರು ಆ ಬಣವನ್ನು ಸೇರಿಕೊಂಡರು. ೧೮೯೦ ರಲ್ಲಿ ಇಪ್ಪತ್ನಾಲ್ಕು ಲಕ್ಷ ಜನ ಕಾರ್ಮಿಕರು ರಶಿಯದಲ್ಲಿ ಇದ್ದರು. ಶುರುವಿನಲ್ಲಿ ಅವರ ಸಂಘಟನೆಯನ್ನು ತಯಾರಿಸುವುದು ತುಂಬ ಕಷ್ಟದ ಕೆಲಸವಾಗಿತ್ತು. ೧೮೯೮ ರಲ್ಲಿ ಮಿನಸ್ ಎಂಬಲ್ಲಿ ರಷ್ಯನ್ ಡೆಮಾಕ್ರ್ಯಾಟಿಕ್ ಲೇಬರ್ ಪಾರ್ಟಿಯ ಸ್ಥಾಪನೆ ನಡೆಯಿತೆಂದು ನಂಬಲಾಗಿದೆ. ೧೯೦೩ ರಲ್ಲಿ ಈ ಪಕ್ಷ ಒಡೆದು ಹೋಳಾಗಿ ಬೋಲ್ಶೆವಿಕ್ ಹಾಗೂ ಮನ್ಶೆವಿಕ್ ಎಂಬೆರಡು ಬಣಗಳು ತಯಾರಾದವು. ಲೆನಿನ್ ಹಾಗೂ ಅವನ ಸಂಗಡಿಗರ ಬೋಲ್ಶೆವಿಕ್ ಬಣವು ಹೆಚ್ಚು ಪ್ರಭಾವಿಯಾಗಿತ್ತು. ರಷ್ಯದ ಕ್ರಾಂತಿಯ ಕಾಲಕ್ಕೆ ಈ ಬಣವು ಮುಂಚೂಣಿಯಲ್ಲಿತ್ತು. ಈ ಬಣವು ೧೯೧೮ ರಲ್ಲಿ ರಷ್ಯನ್ ಕಮ್ಯುನಿಸ್ಟ್ ಪಾರ್ಟಿ

(ಬೋಲ್ಶೆವಿಕ್) ಎಂಬ ಹೆಸರನ್ನು ಸ್ವೀಕರಿಸಿತು. ೧೯೨೫ ರಲ್ಲಿ ಅದರ ಹೆಸರನ್ನು ಆಲ್ ಯೂನಿಯನ್ ಕಮ್ಯುನಿಸ್ಟ್ ಪಾರ್ಟಿ (ಬೋಲ್ಶೆವಿಕ್) ಎಂಬುದಾಗಿ ಬದಲಾಯಿಸಲಾಯಿತು. ತರುವಾಯ ೧೯೫೨ರಲ್ಲಿ ಬೋವಿಕ್ ಪದವನ್ನು ಕೈಬಿಡಲಾಯಿತು. ಬರಿ ಕಮ್ಯುನಿಸ್ಟ್ ಪಾರ್ಟಿ ಆಫ್ ದ ಸೋವಿಯೆತ್ ಯೂನಿಯನ್ ಎಂಬ ಹೆಸರನ್ನು ಅದಕ್ಕೆ ಇಡಲಾಯಿತು.

ಪಕ್ಷದಿಂದ ಅಂಗೀಕರಿಸಲಾದ ತೀರ್ಮಾನವು ಎಲ್ಲ ಸದಸ್ಯರಿಗೆ ಬಂಧನಕಾರಕವೆಂದು ನಂಬಲಾಗುತ್ತದೆ. ಈ ತೀರ್ಮಾನಕ್ಕೆ ಎದುರಾಗಿ ಚರ್ಚಿಸುವುದು, ಪ್ರಕಟವಾಗಿ ಇಲ್ಲವೆ ಗುಟ್ಟಾಗಿ ಅದನ್ನು ಕುರಿತು ಮಾತನಾಡುವುದನ್ನು ನಿಷೇಧಾರ್ಹವೆಂದು ನಂಬಲಾಗುತ್ತದೆ. ಸದಸ್ಯನು ಅದಕ್ಕಾಗಿ ಶಿಕ್ಷಾರ್ಹನೆಂದು ಬಗೆಯಲಾಗುತ್ತದೆ. ಒಬ್ಬ ಸದಸ್ಯನಿಗೆ ಯಾವೊಂದು ತೀರ್ಮಾನವನ್ನು ಕುರಿತು ಚರ್ಚಿಸುವುದು ಅಗತ್ಯದ್ದಾಗಿ ಕಂಡರೆ ಅವನು ಪಕ್ಷದಲ್ಲಿ ಚರ್ಚೆ ನಡೆದ ಕಾಲಕ್ಕೆ ಮಾತ್ರ ಅದನ್ನು ಕುರಿತು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದು. ಅದರ ವಿರುದ್ಧ ನಡೆದುಕೊಳ್ಳುವವರಿಗೆ ಹಲವು ಬಗೆಯಾಗಿ ಶಿಕ್ಷೆಗಳನ್ನು ವಿಧಿಸಲಾಗುತ್ತದೆ. ಜನರೆದುರಿನಲ್ಲಿ ಅವಮಾನ ಮಾಡುವುದು, ಸರಕಾರಿ ಯಂತ್ರದಿಂದ ಕಿತ್ತು ಹಾಕುವುದು, ಇದೇ ಬಗೆಯ ಬೇರೆ ದಾರಿಗಳಿಂದ ಅವನನ್ನು ಪಕ್ಷದಿಂದ ಹೊರಹಾಕುವುದು, ಮೊದಲಾದ ಶಿಕ್ಷೆಗಳಾಗಲು ಸಾಧ್ಯ. ಪಕ್ಷದ ನಾಯಕನು ಒಬ್ಬ ಸದಸ್ಯನನ್ನು ಪಕ್ಷದಿಂದ ಹೊರಹಾಕುವುದನ್ನು ಬಿಟ್ಟರೆ ಇನ್ನೇನನ್ನೂ ಮಾಡಲಾರನು. ಹೀಗಾಗಿ ಸ್ಟಾಲಿನ್ನನು ತನ್ನ ವಿರೋಧಕರನ್ನು ನಾಶಪಡಿಸಲೆಂದು ಪಕ್ಷಶಿಸ್ತಿನ ಕಾರಣವನ್ನು ನೀಡದೆ, ರಾಜಕೀಯವನ್ನು ಉರುಳಿಸುವ ಅಪರಾಧದ ಆಪಾದನೆಯನ್ನು ಅಂಥವರ ಮೇಲೆ ಹೊರಿಸುತ್ತಿದ್ದನು. ಇಂಥ ಅಪರಾಧಕ್ಕಾಗಿ ಶಿಕ್ಷೆ ನೀಡುವುದು ಕಾನೂನಿನ ಪರಿಧಿಯಲ್ಲಿ ಇರುತ್ತಿದ್ದ ಕಾರಣ ಸ್ಟಾಲಿನ್ನನು ತನಗೆ ಮುಳ್ಳಾದ ಎದುರಾಳಿಗಳನ್ನು ಸಹಜವಾಗಿ ಕಿತ್ತೆಸೆಯಬಲ್ಲವನಾಗಿದ್ದನು. ಆ ಮೂಲಕ ಪಕ್ಷ ಶುದ್ಧವಾಯಿತೆಂದು ನಂಬಲಾಗುತ್ತಿದ್ದುದೂ ಉಂಟು.

ಸದಸ್ಯನು ತನ್ನ ತರಬೇತಿಯ ಕಾಲದಲ್ಲಿ ಎಲ್ಲಿಯೂ, ಯಾವುದೇ ಕೆಲಸಕ್ಕೆ ಕೂಡ ಹೋಗಲು ಸಿದ್ಧನಾಗಿರತಕ್ಕದ್ದು, ಅಭ್ಯರ್ಥಿಯ ವಯಸ್ಸು ಕಡಿಮೆ ಎಂದರೆ ೧೮ ವರ್ಷದ್ದಿರಬೇಕು, ರಶಿಯದ ಹೊರಗೆ ಕಮ್ಯುನಿಸ್ಟ್ ಪಕ್ಷದ ಸದಸ್ಯತ್ವವನ್ನು ಪಡೆದುಕೊಳ್ಳುವುದು ಕೂಡ ತುಂಬ ಸಂಕೀರ್ಣವಾದ ಪ್ರಕ್ರಿಯೆ. ಪಕ್ಷದ ಉದ್ದೇಶಗಳಿಗಾಗಿ ತ್ಯಾಗದಿಂದ ಕೂಡಿದ ದುಡಿಮೆಯ ಸಿದ್ಧತೆ, ಶಿಸ್ತು ಹಾಗೂ ಆಜ್ಞಾಪಾಲನೆಗಳನ್ನು ಮೂರು ಮಹತ್ವದ ಒರೆಗಲ್ಲುಗಳೆಂದು ನಂಬಲಾಗುತ್ತದೆ. ಪಕ್ಷದ ಪ್ರಾಥಮಿಕ ಪಕ್ಷದ ಕೇಂದ್ರದ ತೀರ ಕೆಳಮಟ್ಟದ ಸದಸ್ಯನು ತನ್ನ ಕಾರ್ಯದ ಮೂಲಕ ಪಕ್ಷಸಂಘಟನೆಯಲ್ಲಿ

ಮೇಲಿನ ಮಟ್ಟವನ್ನು ಪ್ರವೇಶಿಸಿ ತನ್ನ ಕರ್ತೃತ್ವವನ್ನು ಇನ್ನಷ್ಟು ವಿಸ್ತರಿಸಿಕೊಳ್ಳಬಹುದಾದ ವ್ಯವಸ್ಥೆಯು ಪಕ್ಷದ ನಿಯಮಗಳಲ್ಲಿದೆ. ಕ್ರಾಂತಿಗಿಂತ ಮೊದಲಿನ ಕಾಲದಲ್ಲಿ ಪಕ್ಷದ ಸದಸ್ಯರು ತುಂಬ ಪ್ರತಿಕೂಲದ ಪರಿಸ್ಥಿತಿಯನ್ನು ಎದುರಿಸಬೇಕಿತ್ತು. ಕ್ರಾಂತಿಯ ತರುವಾಯದಲ್ಲಿ ಈ ಪರಿಸ್ಥಿತಿಯು ಬದಲಾಯಿಸಿತು. ಅಂದ ಮಾತ್ರಕ್ಕೆ ಹೊಸ ಪರಿಸ್ಥಿತಿಯು ಎಲ್ಲ ಸದಸ್ಯರಿಗೂ ಒಂದೇ ಬಗೆಯಾಗಿ ಅನುಕೂಲದ್ದಾಗಿತ್ತೆಂದು ಮಾತ್ರ ಹೇಳಲಾಗದು.

ಪಕ್ಷಸದಸ್ಯತ್ವವನ್ನು ಪಡೆಯುವುದು ಕಷ್ಟದಿರುವಂತೆಯೇ ಅದನ್ನು ತೊರೆದು ಹೊರಬರುವುದೂ ಅಷ್ಟೇ ಕಷ್ಟದ್ದು. ಒಬ್ಬ ಸದಸ್ಯನು ರಾಜೀನಾಮೆಯನ್ನು ಕೊಡಲು ತೀರ್ಮಾನಿಸುವುದೆಂದರೆ ಅವನು ಪಕ್ಷದ ಧ್ಯೆಯಧೋರಣೆ, ಕಾರ್ಯಕ್ರಮ ಅಥವಾ ಪಕ್ಷದ ನಾಯಕರು ಮಾಡಿದ ಅಪ್ಪಣೆಗೆ ವಿರೋಧಿ, ಎಂದು ಬಗೆಯಲಾಗುತ್ತದೆ. ಹೀಗಾಗಿ ಅವನು ತನ್ನ ವಿರೋಧವನ್ನು ವ್ಯಕ್ತಪಡಿಸುವಂತಿಲ್ಲ. ಅದರಿಂದಾಗಿ ಅವನಿಗೆ ಉಸಿರುಗಟ್ಟಿದಂತಾಗುತ್ತದೆ. ಇದರ ಪರಿಣಾಮವೆಂದರೆ ಪಕ್ಷದಿಂದ ರಾಜೀನಾಮೆಯನ್ನು ನೀಡಿದ ಸದಸ್ಯರು ಕಾಣಸಿಕ್ಕಲಾರರು. ಪಕ್ಷದ ನಾಯಕತ್ವಕ್ಕೆ ವಿರೋಧಿಯಾದ ಸದಸ್ಯರನ್ನು ಪಕ್ಷದಿಂದ ಹೊರದೂಡಲಾಗುತ್ತದೆ. ಸದಸ್ಯನು ತನ್ನ ಭಿನ್ನಮತವನ್ನು ವ್ಯಕ್ತಪಡಿಸುವುದು ಅಸಾಧ್ಯ. ಇಂಥ ಭಿನ್ನಮತವನ್ನು ಪಕ್ಷದ ಕಾರ್ಯಕ್ರಮಕ್ಕೆ ಬಗೆಯಲಾದ ದ್ರೋಹ, ಎಂದು ಭಾವಿಸಲಾಗುತ್ತದೆ. ಅಲ್ಲದೆ ಅದಕ್ಕಾಗಿ ಪಕ್ಷನಾಯಕನ ವಿರೋಧವನ್ನು ಕಟ್ಟಿಕೊಳ್ಳಬೇಕಿದೆ.

ಪ್ರಜಾಪ್ರಭುತ್ವ-ಕೇಂದ್ರಿತವಾದ ಸತ್ತೆಯನ್ನು ಪಕ್ಷದ ಸಂಘಟನಾತ್ಮಕವಾದ ಮಾರ್ಗದರ್ಶಕ ತತ್ಯವೆಂದು ಬಗೆಯಲಾಗುತ್ತದೆ. ಆದರೆ ವ್ಯವಹಾರದಲ್ಲಿ ಕೇವಲ ಕೆಳಮಟ್ಟದ ಪಕ್ಷಸಂಘಟನೆಗಳ ಸಭೆಗಳಲ್ಲಿ ಟೀಕಿಸುವ ಮಟ್ಟಿಗೆ ಮಾತ್ರ ಈ ಪ್ರಜಾಪ್ರಭುತ್ವವು ಮಿತಿಗೊಂಡಿರುತ್ತದೆ. ಪಕ್ಷದ ಧೇಯಧೋರಣೆಯ ಸರ್ವೋಚ್ಚ ತೀರ್ಮಾನವನ್ನು ಕೈಕೊಳ್ಳುವ ಪಕ್ಷನಾಯಕತ್ವದ ಮೇಲೆ ಈ ಮಾರ್ಗದರ್ಶಕ ತತ್ಯದ ಆಕ್ರಮಣವು ನಡೆಯಕೂಡದಂತೆ ಪ್ರತ್ಯಕ್ಷ-ಪರೋಕ್ಷವಾದ ವ್ಯವಸ್ಥೆಯನ್ನು ಮಾಡಲಾಗುತ್ತದೆ.

ಮರಾಠೀ ವಿಶ್ವಕೋಶ : ೩. ಪು ೨೦೧-೨೦೩..

## ಪರಿಶಿಷ್ಟ-೧೮

## ಫ್ರೆಂಚ್ ರಾಜ್ಯಕ್ರಾಂತಿ

ಇ. ಸ. ೧೧೭೮೯ ರಲ್ಲಿ ನಡೆದ ಫ್ರಾನ್ಸಿನ ಈ ರಾಜ್ಯಕ್ರಾಂತಿಯು ಹದಿನೆಂಟನೆಯ ಶತಮಾನದಲ್ಲಿ ಪ್ರಪಂಚದಲ್ಲಿ ನಡೆದ ಎಲ್ಲಕ್ಕೂ ಮಹತ್ವದ ಘಟನೆ ಎನ್ನಿಸಿದೆ. ಈ ಕ್ರಾಂತಿಯಿಂದ ತಯಾರಾದ ವಿಚಾರಪ್ರವಾಹಗಳು ಯುರೋಪಿನ ದೇಶಗಳ ಮೇಲೆ ಬಗೆಬಗೆಯ ಪರಿಣಾಮಗಳನ್ನು ಬೀರಿದ್ದರಿಂದ ಯುರೋಪಿನ ಊಳಿಗಮಾನ್ಯ ಸಮಾಜರಚನೆಯು ಪೂರ್ತಿ ನಾಶಹೊಂದಿ, ಬಂಡವಾಳಶಾಹಿ ಸಮಾಜರಚನೆಯು ಕೈಗಾರಿಕಾ ಕ್ರಾಂತಿಯ ಅಡಿಗಲ್ಲ ಮೇಲೆ ಆಗತೊಡಗಿದ್ದರಿಂದ, ಫ್ರೆಂಚ್ ರಾಜ್ಯಕ್ರಾಂತಿಯಿಂದಾಗಿ ಆಧುನಿಕ ಯುರೋಪಿನ ಕಟ್ಟಡದ ಕಾಮಗಾರಿ ಶುರುವಾಯಿತೆಂದು ಬಗೆಯಲಾಗಿದೆ. ಹಾಗೆಯೇ, ಕ್ರಾಂತಿ ಎಂಬ ಪರಿಕಲ್ಪನೆಯು ಇತಿಹಾಸ ಹಾಗೂ ರಾಜ್ಯಶಾಸ್ತ್ರಗಳಲ್ಲಿ ಮೊದಲ ಬಾರಿಗೆ ಅಸ್ತಿತ್ವಕ್ಕೆ ಬಂದುದು ಫ್ರೆಂಚ್ ಕ್ರಾಂತಿಯಿಂದಾಗಿಯೇ !

ಈ ಫ್ರೆಂಚ್ ರಾಜ್ಯಕ್ರಾಂತಿಯನ್ನು ಯುರೋಪಿನ ಇತಿಹಾಸದಲ್ಲಷ್ಟೇ ಅಲ್ಲದೆ ಮಾನವನ ಇತಿಹಾಸದ ಬಲು ಮಹತ್ವದ ಘಟನೆ, ಎಂದು ಮನ್ನಿಸಲಾಗಿದೆ. ಹದಿನಾಲ್ಕನೆಯ ಲುಯಿಯಿಂದಾಗಿ (೧೬೪೩-೧೭೧೫) ಯುರೋಪಿನ ರಾಜಕೀಯ, ಸಾಂಸ್ಕೃತಿಕ ಹಾಗೂ ವೈಚಾರಿಕ ಕ್ಷೇತ್ರಗಳಲ್ಲಿ ಫ್ರಾನ್ಸಿಗೆ ಅನನ್ಯಸಾಧಾರಣವಾದ ಸ್ಥಾನ ಲಭಿಸಿತು. ಹೀಗಾಗಿ ಇಡಿಯ ಯುರೋಪು ಫ್ರೆಂಚ್ ರಾಜ್ಯಕ್ರಾಂತಿಯ ಪ್ರಭಾವಕ್ಕೆ ಒಳಗಾದುದರಲ್ಲಿ ಅಚ್ಚರಿಯೇನಿಲ್ಲ. ಈ ಕ್ರಾಂತಿಯು ಫ್ರಾನ್ಸಿನ ಬೂರ್ಬಾ ಮನೆತನದ ಅನಿಯಂತ್ರಿತ ಸತ್ತೆಗೆ ಕಡಿವಾಣವನ್ನು ಹಾಕಿತು. ಅದು ಅಲ್ಲಿ ನಡೆದು ಬಂದ ಸಾಂಪ್ರದಾಯಿಕ ಸರದಾರ ವರ್ಗ ಹಾಗೂ ಧರ್ಮಗುರುಗಳ ಏಕಸ್ವಾಮ್ಯವನ್ನು ಮುಗಿಸಿತು. ನಗರಗಳಲ್ಲಿ ಹೊಸದಾಗಿ ಉದಯಕ್ಕೆ ಬರುತ್ತಿದ್ದ ಉತ್ಪಾದಕ ವರ್ಗ, ಅದರ ಮೇಲಿನ ತೆರಿಗೆಗಳ ಹೊರೆ ಕಡಿಮೆಯಾದ್ದರಿಂದ ವಾಣಿಜ್ಯ ಹಾಗೂ ರಾಜಕೀಯಗಳಲ್ಲಿ ಮುಂದೆ ಬರಲು ಆ ವರ್ಗಕ್ಕೆ ಆಸ್ಪದ ದೊರೆಯಿತು. ಕ್ರಾಂತಿಕಾಲದ ಕಾನೂನಿನಿಂದಾಗಿ ಹೊಲದಲ್ಲಿ ಉಳುವವನೇ ಅದಕ್ಕೆ ಒಡೆಯನಾದನು. ಈ ಕ್ರಾಂತಿಯಿಂದ ಫ್ರಾನ್ಸಿನಲ್ಲಿ ಲಿಖಿತ ಸಂವಿಧಾನದ ಪದ್ಧತಿ ಶುರುವಾಯಿತು. ಕ್ರಾಂತಿಕಾಲದಲ್ಲಿ ಧಾರ್ಮಿಕ ಪುರೋಹಿತಶಾಹಿಯ ವಿರುದ್ಧ ಬುದ್ಧಿವಾದದ ಪ್ರತಿಷ್ಠಾಪನೆ ನಡೆದ ಕಾರಣ ರಾಜಕೀಯದ ಮೇಲಿನ ಚರ್ಚಿನ ಹಿಡಿತ ಕಾಯಮ್ಮಾಗಿ ಸಡಿಲಾಯಿತು.

**ಕಾರಣ ಮೀಮಾಂಸೆ :** ಈ ಕ್ರಾಂತಿಯ ಕಾರಣಗಳನ್ನು ಕುರಿತು ಹೇಳುವಾಗ ವೈಚಾರಿಕ ಪ್ರಬೋಧನೆಯಿಂದಾಗಿ ಲಭಿಸಿದ ಪ್ರೇರಣೆಗೆ ಹೆಚ್ಚಿನ ಒತ್ತು ಕೊಡಲಾಗುತ್ತಿತ್ತು. ಕ್ರಾಂತಿಕಾರಿಗಳು ಕ್ರಾಂತಿಪರ್ವ ಶುರುವಾದ ತರುವಾಯ ತಮ್ಮ ಪ್ರಶ್ನೆಗಳನ್ನು ಮುಂದಿಡಲೆಂದು ಈ ಆಲೋಚನೆಗಳನ್ನು ಬಳಸಿಕೊಳ್ಳುತ್ತಿದ್ದರೆಂಬ ಸಾಕ್ಷಿಯನ್ನು ಮಾತ್ರ ಇತಿಹಾಸ ನೀಡುತ್ತದೆ. ಪ್ರಬೋಧನೆ ಹಾಗೂ ವಿವೇಕವಾದಗಳಿಗೆ ಇದಕ್ಕಿಂತ ಹೆಚ್ಚಿನ ಶ್ರೇಯಸ್ಸನ್ನು ಕೊಡಲಾಗದು.



ಶ್ರಮಜೀವಿ ಕೃಷಿಕರ ಶೋಚನೀಯ ಸ್ಥಿತಿಯು ಕ್ರಾಂತಿಗೆ ಪೋಷಕ ವಾತಾವರಣವನ್ನು ತಯಾರಿಸುವ ಮುಖ್ಯ ಅಂಶವಾಗಿತ್ತು. ಆಡಳಿತೆಯ ಯಂತ್ರದ ಮೇಲಿನ ಸರದಾರವರ್ಗದ ಹಿಡಿತವು ಕಡಿಮೆಯಾಗಿತ್ತಾದರೂ ಆರ್ಥಿಕ ಹಾಗೂ ಸಾಮಾಜಿಕ ಸಂದರ್ಭಗಳಲ್ಲಿ ಅದು ಉಳಿದುಕೊಂಡಿತ್ತು. ಬಹುಮಟ್ಟಿಗಿನ ಕೃಷಿಕರೆಲ್ಲ ತಮ್ಮ ಹೊಲಗಳ ಒಡೆಯರಾಗಿದ್ದರು. ಹೀಗಿದ್ದೂ ಅವರು ಸರದಾರ ವರ್ಗದವರಿಗೆ ವಿನಾಕಾರಣವಾಗಿ ಹಲವು ಬಗೆಯ ತೆರಿಗೆಗಳನ್ನು ಕೊಡಬೇಕಾಗುತ್ತಿತ್ತು. ಸರಕನ್ನು ಮಾರಾಟಕ್ಕೆ ಒಯ್ಯುವಾಗ ದಾರಿಸುಂಕ, ನದಿಯನ್ನು ದಾಟುವಾಗ ಸೇತುವೆ ಸುಂಕ, ಬೆಳೆಯಲ್ಲಿ ಗೊತ್ತುಪಡಿಸಲಾದ ಪಾಲು ಹಾಗೂ ಕೋಳಿಮೊಟ್ಟೆ ಮೊದಲಾದವು ಸರದಾರರಿಗೆ ಹಕ್ಕಿನಿಂದ ದೊರೆಯುತ್ತಿದ್ದವು. ಕೃಷಿಕರು ವಾರದ ಮೂರು ದಿನ ಸರದಾರರ ಹೊಲಗಳಲ್ಲಿ ಗೇಯಬೇಕಿತ್ತು. ಇಲ್ಲದಿದ್ದರೆ ಅದಕ್ಕಾಗಿ ಅವರಿಗೆ ಕಾಸು ಕೊಡಬೇಕಿತ್ತು. ಇದೇ ರೀತಿಯಾಗಿ ರಕ್ಷಣೆಯ ವೆಚ್ಚಕ್ಕಾಗಿ ಸರದಾರ ವರ್ಗಕ್ಕೆ ವಾರ್ಷಿಕ ತೆರಿಗೆಯನ್ನು ತೆರಬೇಕಿತ್ತು. ಇದಲ್ಲದೆ ಕೃಷಿಕರ ಆದಾಯದ ಹನ್ನೆರಡನೆ ಇಲ್ಲವೆ ಹದಿನೈದನೆಯ ಪಾಲನ್ನು ದಂಶಾಂಶ ತೆರಿಗೆಯಾಗಿ ತೆರಬೇಕಿತ್ತು.

ಈ ಮೇಲಿನ ತೆರಿಗೆಗಳಿಗಿಂತ ಹೆಚ್ಚಿನ ಪೀಡೆ ಎಂದರೆ ಸರಕಾರಕ್ಕೆ ತೆರಬೇಕಿದ್ದ ಪ್ರತ್ಯಕ್ಷ ಹಾಗೂ ಪರೋಕವಾದ ತೆರಿಗೆಗಳು. ಇವುಗಳಲ್ಲಿ ಭೂಕಂದಾಯ, ತಲೆತೆರಿಗೆ, ಆದಾಯ ತೆರಿಗೆ, ಉಪ್ಪಿನ ತೆರಿಗೆ, ಮೊದಲಾದವಿದ್ದವು. ಇವಲ್ಲದೆ ಕೃಷಿಕರು ವರ್ಷದ ಎಷ್ಟೋ ವಾರಗಳ ಕಾಲ ದಾರಿಯ ಕೆಲಸಕ್ಕಾಗಿ ಜೀತದಾಳಾಗಿ ದುಡಿಯಬೇಕಿತ್ತು. ಮೇಲಿನ ಇವೆಲ್ಲ ತೆರಿಗೆಗಳಿಂದಾಗಿ ಉಳುವವನಿಗೆ ಉತ್ಪಾದನೆಯ ಅರ್ಧಪಾಲಾದರೂ ದಕ್ಕುತ್ತಿತ್ತೋ, ಇಲ್ಲವೋ ಎಂಬುದು ಸಂದೇಹಾಸ್ಪದವಾಗಿತ್ತು.

ಕೃಷಿಕರಂತೆಯೇ, ಪಟ್ಟಣಗಳಲ್ಲಿ ತಯಾರಾಗುತ್ತಿದ್ದ ಕಾರ್ಮಿಕವರ್ಗದ ಅವಸ್ಥೆಯೂ ದಯನೀಯವಾಗಿತ್ತು. ಅಲ್ಪ ದಿನಗೂಲಿ, ಹೆಚ್ಚುತ್ತಿರುವ ಬೆಲೆಗಳು, ಅನಿಶ್ಚಿತವಾದ ಮಾರುಕಟ್ಟೆಯ ದರಗಳು, ನಿರುದ್ಯೋಗ, ಹೊಟ್ಟೆಗಿಲ್ಲದ ಹಾಗೂ

ಬೇನೆಬೇಸರಿಕೆಗಳು ಅವರ ನಿರಂತರವಾದ ಹಣೆಬರಹವಾಗಿದ್ದವು. ಸಮಾಜದ ಒಂದು ಅಂಚಿನಲ್ಲಿ ದುಡಿಮೆಯ ದುರ್ದೈವಿಗಳ ವರ್ಗವಿದ್ದರೆ ಇನ್ನೊಂದು ಅಂಚಿನಲ್ಲಿ ಚೈನಿ ಹಾಗೂ ವಿಲಾಸಗಳಲ್ಲಿ ಮೈಮರೆತ ಸರದಾರ - ಪುರೋಹಿತ ವರ್ಗಗಳಿದ್ದವು. ಆರ್ಮಾ ಝೂಂ ರೀಶಲ್ಸ್ (೧೫೮೫-೧೬೪೨) ಹಾಗೂ ಹದಿನಾಲ್ಕನೆಯ ಲುಯಿಯ ಧೋರಣೆಗಳಿಂದಾಗಿ ಸರದಾರ ವರ್ಗಕ್ಕೆ ರಾಜ್ಯಾಡಳಿತೆಯಲ್ಲಿ ಯಾವುದೇ ಬಗೆಯ ಸ್ಥಾನವಿರಲಿಲ್ಲ. ಅವರಲ್ಲಿ ಕೆಲವು ಪ್ರಬಲರು ವರ್ಸಾಯ್ ಎಂಬಲ್ಲಿ ಬೃಹತ್ತಾದ ಅರಮನೆಗಳನ್ನು ಕಟ್ಟಿಕೊಂಡು ರಾಜನನ್ನು ಅನುಕರಿಸುತ್ತ ಚೈನಿಯ ಜೀವನವನ್ನು ನಡೆಸುತ್ತಿದ್ದರು. ಹೀಗಾಗಿ ಅವರು ಕೃಷಿ ವರ್ಗದವರಿಂದ ಪೂರ್ತಿ ದೂರಾಗಿದ್ದರು.

ಫ್ರಾನ್ಸಿನ ರಾಜ್ಯಾಡಳಿತೆಯು ಸಂಪೂರ್ಣ ಅನಿಯಂತ್ರಿತವಾಗಿತ್ತು. ರಾಜನು ಮನಬಂದಂತೆ ಕಾನೂನುಗಳನ್ನು ತಯಾರಿಸುತ್ತಿದ್ದನು. ಅವನು ಎದುರಾಳಿಗಳನ್ನು ಬಂಧಿಸಿ ಸೆರೆಯಲ್ಲಿ ಇರಿಸುತ್ತಿದನು. ೧೬೧೪ ರಿಂದ ಸ್ಟೇಟ್ಸ್ ಜನರಲ್ಸ್ (ಸಂಸತ್ತಿನ) ಅಧಿವೇಶನವನ್ನು ಕರೆದೇ ಇರಲಿಲ್ಲ. ನ್ಯಾಯಾಡಳಿತೆಯಲ್ಲಿ ತುದಿಮುಟ್ಟಿದ ಗೊಂದಲವಿತ್ತು. ಕಾನೂನಿನಲ್ಲಿ ಸರಾಗತೆ, ಸುಸೂತ್ರತೆ ಹಾಗೂ ಸಮತೆಗಳ ಕೊರತೆಯಿತ್ತು.

ಅನ್ಯಾಯ, ಬಡತನ ಹಾಗೂ ವಿಷಮತೆಗಳು ಫ್ರಾನ್ಸಿನ ಮಟ್ಟಿಗೆ ಮಾತ್ರ ಮಿತಿಗೊಂಡಿದ್ದವೆಂದಲ್ಲ. ಅವು ಯುರೋಪಿನ ಎಲ್ಲೆಡೆಗಳಲ್ಲೂ ಇದ್ದವು. ಪೋಲಂಡ್ ಹಾಗೂ ಜರ್ಮನಿಯ ಪ್ರಶಿಯಾ, ಬವ್ಹೆರಿಯಾ, ಸ್ಯಾಕ್ಸನಿ, ಹೋಲ್ಪನ್‌ಬರ್ಗ್, ಬ್ರಂಝುವಿಕ್, ಮುಂ. ರಾಜ್ಯಗಳಲ್ಲಿಯಂತೂ ಅವು ಹೆಚ್ಚಿನ

ಪ್ರಮಾಣದಲ್ಲಿದ್ದವು. ಆದರೆ ಇಂಥ ಪರಿಸ್ಥಿತಿಯನ್ನು ಮೆಟ್ಟಿನಿಂತು ತಾವು ತಮ್ಮ ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಲು ಸಾಧ್ಯ, ಎಂದು ಫ್ರೆಂಚರಲ್ಲಿ ಇದ್ದಷ್ಟು ನಂಬಿಕೆ ಬೇರಾರಲ್ಲೂ ಇರಲಿಲ್ಲ. ಈ ನಂಬಿಕೆಯು ವೈಚಾರಿಕ ಕ್ರಾಂತಿಯಿಂದ ಹುಟ್ಟಿಕೊಂಡಿತ್ತು. ಅದು ಗಟ್ಟಿಗೊಳ್ಳಲು ಇಂಗ್ಲೆಂಡಿನ ವೈಭವಶಾಲಿ ರಾಜ್ಯಕ್ರಾಂತಿಯ ಸ್ಫೂರ್ತಿ (೧೬೮೮-೮೯) ಹಾಗೂ ಅಮೇರಿಕೆಯ ಸ್ವಾತಂತ್ರ ಯುದ್ಧಗಳು (೧೭೭೫-೮೩) ಕಾರಣ. ಫ್ರೆಂಚ್ ಸೈನ್ಯವು ಈ ಯುದ್ಧದಲ್ಲಿ ಸಕ್ರಿಯತೆಯಿಂದ ಪಾಲ್ಗೊಂಡಿತ್ತು. ಫ್ರಾನ್ಸಿನಂತೆಯೇ ಇಂಗ್ಲೆಂಡ್, ಜರ್ಮನಿ ಹಾಗೂ ಅಮೇರಿಕೆಗಳಲ್ಲೂ ಹೊಸ ವಿಚಾರಗಳ ಆಂದೋಲನೆಗಳು ನಡೆದಿದ್ದವು. ಆದರೆ ಫ್ರಾನ್ಸಿನ ವಿಚಾರವಂತರು ಹೆಚ್ಚು ಪ್ರಭಾವಶಾಲಿಗಳಿದ್ದ ಕಾರಣ ಜನರ ಮನಸ್ಸುಗಳ ಮೇಲೆ ಅವರ ಪ್ರಭಾವ ಉಂಟಾದುದು ಕಂಡು ಬರುತ್ತದೆ. ಹೊಸ ವಿಚಾರಗಳು ಕೇವಲ ಒಂದು ದೇಶವನ್ನು ಕುರಿತಾಗಿರದೆ ದೇಶನಿರಪೇಕ್ಷವಾಗಿ ಇಡಿಯ ಮಾನವಸಮಾಜದ ಕಲ್ಯಾಣವನ್ನು ಕುರಿತು ಯೋಚಿಸಿದುದು ಕಂಡುಬರುವುದು ಒಂದು ವಿಪರ್ಯಾಸವೇ ಸರಿ. ಮಾನವತಾವಾದದ ದೃಷ್ಟಿಕೋನದಿಂದ ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ಸಂಸ್ಥೆಗಳ ಮೌಲ್ಯಮಾಪನವನ್ನು ಮಾಡಲಾಯಿತು. ಈ ವಿಚಾರವಂತರು ಆ ಕಾಲದ ಸಾಮಾಜಿಕ ಅರ್ಥವ್ಯವಸ್ಥೆ, ಅದರಲ್ಲೂ ಹೆಚ್ಚಾಗಿ ಧರ್ಮಸಂಸ್ಥೆಗಳ ಮೇಲೆ ಕಠೋರವಾಗಿ ದಾಳಿಯಿಕ್ಕಿದರು. ಈ ಸಂದರ್ಭದಲ್ಲಿ ದನಿ ದೀದ್ರ (೧೭೧೩೮೪), ಚಾರ್ಲ್ಸ್ ಮಾಂತೆಸ್ಕ್ಯು (೧೬೮೯-೧೭೫೫), ಫ್ರಾನ್ ಸ್ವಾ ಮಾಲ್ತೆಯರ್ (೧೬೯೪-೧೭೭೮), ಝೂಂ ಝಾಕ್ ರೂಸೊ (೧೭೧೨-೧೭೭೮), ಮೊದಲಾದವರ ಕಾರ್ಯವು ಉಲ್ಲೇಖನೀಯವಾದುದು.

ಫ್ರಾನ್ಸಿನ ಮಧ್ಯಮ ವರ್ಗದವರು, ವ್ಯಾಪಾರಿಗಳು, ಬ್ಯಾಂಕ್ ಸಂಚಾಲಕರು, ಅಂಗಡಿಕಾರರು, ವೃತ್ತಿನಿರತರು, ವಕೀಲರು, ಡಾಕ್ಟರರು, ಪ್ರಾಧ್ಯಾಪಕರೆಲ್ಲರೂ ಈ ಹೊಸ ವಿಚಾರಗಳನ್ನು ಸ್ವಾಗತಿಸಿದರು. ಸರದಾರರು ಹಾಗೂ ಪುರೋಹಿತರ ವರ್ಚಸ್ಸು, ವಿಶೇಷ ಹಕ್ಕುಗಳು ಅಧಿಕಾರಗಳನ್ನು ನಾಶಪಡಿಸಬೇಕು, ರಾಜ್ಯಾಡಳಿತೆಯನ್ನು ಸುಧಾರಿಸಬೇಕು ಹಾಗೂ ಎಲ್ಲರಿಗೂ ವರ್ಗನಿರಪೇಕ್ಷಿತವಾಗಿ ರಾಜಕೀಯ, ಆರ್ಥಿಕ ಹಾಗೂ ಧಾರ್ಮಿಕ ಸ್ವಾತಂತ್ರವನ್ನು ದೊರಕಿಸಿ ಕೊಡಬೇಕೆನ್ನುವುದು, ಅವರ ಮುಖ್ಯ ಬೇಡಿಕೆಯಾಗಿತ್ತು. ಜನರು ಸಾರ್ವಭೌಮರೆನ್ನುವ ರೂಸೋನ ವಿಚಾರದಿಂದ ಅವರೆಲ್ಲರೂ ಪ್ರಭಾವಿತರಾಗಿದ್ದರು. ಆದರೆ ಮೇಲಿನ ಈ ಸಂಗತಿಗಳನ್ನು ಸಾಧಿಸಲು ಫ್ರೆಂಚ್ ರಾಜ್ಯ ವಿಧಾನದಲ್ಲಿ ಕಾನೂನುಬದ್ದವಾದ ದಾರಿ ಕಂಡುಬಾರದ ಕಾರಣ ಅವರಿಗೆ ಕ್ರಾಂತಿಯ ಅಪರಿಹಾರ್ಯತೆ ಕಂಡುಬರತೊಡಗಿತು.

ಇಂಥ ಕಾಲದಲ್ಲಿ ಹದಿನಾರನೆಯ ಲುಯಿಯು (೧೭೭೮-೮೯) ಪಟ್ಟವನ್ನೇರಿದನು. ಒಬ್ಬ ರಾಜ್ಯಕರ್ತನಲ್ಲಿ ಇರಬೇಕಿದ್ದ ದೃಢತೆ, ಕರ್ತೃತ್ವ ಹಾಗೂ ಬುದ್ಧಿಮತ್ತೆಗಳು ಪಾಪಭೀರುವೂ, ಸತ್ಪ್ರವೃತ್ತನೂ ಆದ ಈ ರಾಜನಲ್ಲಿ ಇರಲಿಲ್ಲ.

ರಾಜಸತ್ತೆಯೆಲ್ಲ ಅವನ ರಾಣಿಯಾದ ಮಾರಿ ಆಚಿತ್ವಾನೆತ್ (೧೭೫೫-೯೩) ಇವಳ ಕೈಯಲ್ಲಿತ್ತು. ರಾಜ್ಯಾಡಳಿತೆಯ ಮೇಲೆ ಅವಳ ಪ್ರಭಾವ ಹೆಚ್ಚಿತ್ತು. ರಾಜನು ಜನರ ಕಲ್ಯಾಣವನ್ನು ಬಯಸುತ್ತಿದ್ದನು. ಆದರೆ ಅವನಿಗೆ ಆಡಳಿತ ಹಾಗೂ ರಾಜಕೀಯಗಳಲ್ಲಿ ಅಷ್ಟೊಂದು ಆಸ್ಥೆ ಇರಲಿಲ್ಲ. ನಿರುಪಾಯನಾಗಿ ಅವನು ೧೭೮೯ ರಲ್ಲಿ ಸಂಸತ್ತಿನ ಅಧಿವೇಶನವನ್ನು ಕರೆದನು. ರಾಜ್ಯಾಡಳಿತೆಯಲ್ಲಿ ಸುಧಾರಣೆಗಳನ್ನು ಮಾಡುವ ಉತ್ಸಾಹದಿಂದ ವರ್ಗವಾರು ಚುನಾವಣೆಗಳು ನಡೆದವು. ಮಧ್ಯಮ ವರ್ಗ ಹಾಗೂ ಕೃಷಿಕರು ಸೇರಿ ಮೂರನೆಯ ಒಂದು ವರ್ಗವು ತಯಾರಾಗಿತ್ತು. ಆ ವರ್ಗದ ಪ್ರತಿನಿಧಿಗಳು ಸಂಪ್ರದಾಯದಂತೆ ತಮ್ಮ ಕಷ್ಟಗಳನ್ನು ತೋಡಿಕೊಂಡರು. ರಾಜ್ಯಾಡಳಿತೆಯಲ್ಲಿ

ಸುಧಾರಣೆಯನ್ನು ಮಾಡುವುದು ಹಾಗೂ ಸಾಮಾಜಿಕ ವಿಷಮತೆಯನ್ನು ದೂರಮಾಡುವುದು ಅವರ ಗುರಿಯಾಗಿತ್ತು. ಆದರೆ ತಮ್ಮ ಮನವಿಯಲ್ಲಿ ಅವರು ರಾಜನ ವಿರುದ್ಧ ಚಕಾರವನ್ನೆತ್ತಲಿಲ್ಲ, ಕ್ರಾಂತಿಯ ಕಲ್ಪನೆಯನ್ನು ಸೂಚಿಸಲಿಲ್ಲವೆಂಬುದು ಗಮನಾರ್ಹ ಸಂಗತಿ.

ಇದಾದ ಬಳಿಕ ಸಂಸತ್ತಿನ ಮತದಾನದ ವಿಧಾನವನ್ನು ಕುರಿತಾಗಿ ವಾದ ತಲೆದೋರಿತು. ಸಂಪ್ರದಾಯದಂತೆ ಪುರೋಹಿತರು, ಸರದಾರರು, ಸಾಮಾನ್ಯರು ಅಥವಾ ಮೂರನೆಯ ಗುಂಪಿನವರು (ಥರ್ಡ್ ಇಸ್ಟೇಟ್) ಬೇರೆ ಬೇರೆಯಾಗಿ ಮತದಾನವನ್ನು ಮಾಡಬೇಕೆಂದು ಸರದಾರರು ಹಾಗೂ ಪುರೋಹಿತ ವರ್ಗದವರು ಅಭಿಪ್ರಾಯಪಟ್ಟರು. ಹೀಗೆ ಮಾಡುವುದರಿಂದ ಪುರೋಹಿತ ಹಾಗೂ ಸರದಾರ ವರ್ಗಗಳ ಮತಗಳು ಒಂದು ಬದಿಗಾದರೆ, ಮೂರನೆಯ ಗುಂಪಿನವರ ಮತಗಳು ವಿರುದ್ಧ ಬದಿಗೆಂಬ ಸ್ಥಿತಿ ತಲೆದೋರಿ, ಅವರು ಬಹುಸಂಖ್ಯರಿದ್ದೂ ಅವರ ಮತಗಳು ಸಂಸತ್ತಿನಲ್ಲಿ ಎಂದಿಗೂ ಪ್ರಭಾವವನ್ನು ಬೀರುತ್ತಿರಲಿಲ್ಲ. ಹೀಗಾಗಿ, ತಮಗೆ ಬೇಕಿದ್ದ ಸುಧಾರಣೆಗಳು ಎಂದಿಗೂ ಕಾರ್ಯಾಚರಣೆಯಲ್ಲಿ ಬರಲಾರವೆಂಬುದನ್ನು ಗಮನಿಸಿ, ಮೂರನೆಯ ಗುಂಪಿನವರು ಎಲ್ಲ ವರ್ಗಗಳ ಸಭೆಯನ್ನು ಒಟ್ಟಿಗೆ ಕರೆಯಬೇಕು, ಪ್ರತಿಯೊಬ್ಬನು ತಲಾ ಒಂದರಂತೆ ಮತವನ್ನು ನೀಡಬೇಕೆಂಬ ಬೇಡಿಕೆಯನ್ನು ಸಭೆಯ ಮುಂದಿರಿಸಿದರು. ರಾಜನು ಈ ಪ್ರಶ್ನೆಯ ಬಗೆಗೆ ಖಚಿತವಾದ ನಿಲುವನ್ನು ತಳೆಯುತ್ತಿಲ್ಲ , ಎಂಬುದನ್ನು ಗಮನಿಸಿದ ಮೂರನೆಯ ಗುಂಪು ೧೭ ಜೂನ್ ೧೭೮೯ ರಂದು ತನ್ನ ಈ ಸಭೆಯೇ ರಾಷ್ಟ್ರೀಯ ಸಭೆ ಎಂದು ಘೋಷಿಸಿತು. ಪುರೋಹಿತರು ಹಾಗೂ ಸರದಾರರು ಈ ಸಭೆಯಲ್ಲಿ ಪಾಲ್ಗೊಳ್ಳಬೇಕೆಂದು ಅವರಿಗೆ ಕರೆಕೊಟ್ಟಿತು. ರಾಜನು ರಾಜಸಭೆಯ ನಿಮಿತ್ತವನ್ನು ಮುಂದೊಡ್ಡಿ ಮೂರನೆಯ ಗುಂಪಿನ ಸಭಾಗೃಹಕ್ಕೆ ಬೀಗವನ್ನು ಜಡಿದನಲ್ಲದೆ ಅಲ್ಲಿ ಸೈನ್ಯವನ್ನು ತಂದು ನಿಲ್ಲಿಸಿದನು. ಇದನ್ನು ಕಂಡ ಆನಾರೆ ಗಾಬ್ರಿಯೆಲ್ ಮೀರಾಬೆ (೧೭೪೯-೯೧) ಹಾಗೂ ಆಬೆ ಸ್ವೆಯಯಸ್ ಅವರ ಮುಂದಾಳತ್ವದಲ್ಲಿ ಮೂರನೆಯ ಗುಂಪು ಪಕ್ಕದ ಟೆನಿಸ್ ಆಟದ ಬಯಲಿಗೆ ಹೋಗಿ ಪ್ರಮಾಣವಚನವನ್ನು ಸ್ವೀಕರಿಸಿತು. ಅದು ಹೀಗಿತ್ತು : "ಜನತೆಯ ಸಾರ್ವಭೌಮತ್ವವನ್ನು ಸ್ಥಾಪಿಸುವಂಥ ಸಂವಿಧಾನವನ್ನು ತಯಾರಿಸದ ಹೊರತು ನಾವು ರಾಷ್ಟ್ರೀಯ ಸಭೆಯ (ಸಂಸತ್ತಿನ) ಪ್ರತಿನಿಧಿಗಳು ಪರಸ್ಪರರಿಂದ ದೂರಾಗೆವು. ೨೦ ಜೂನ್ ೧೭೮೯ ರಂದು ನಡೆದ ಈ ಪ್ರಮಾಣವಚನದ ವಿಧಿಯೆಂದರೆ ಫ್ರೆಂಚ್ ರಾಜ್ಯಕ್ರಾಂತಿಯ ನಾಂದಿ, ಎಂದೆನ್ನಲು ಅಭ್ಯಂತರವಿಲ್ಲ.

ಕೊನೆಗೆ ರಾಜನು ಸಂಸತ್ತಿನ ಒಟ್ಟಿಗಿನ ಸಭೆಯನ್ನು ಕರೆಯಲು ಒಪ್ಪಿಕೊಂಡನಲ್ಲದೆ ಅದೇ ಕಾಲಕ್ಕೆ ಸೈನ್ಯವನ್ನು ಒಂದುಗೂಡಿಸಿ ದಬ್ಬಾಳಿಕೆಯ ಸಿದ್ಧತೆಗೆ ತೊಡಗಿದನು. ಇದರಿಂದಾಗಿ ಪ್ಯಾರಿಸ್ಸಿನ ಜನತೆಯು ಸಂಸತ್ತಿನ ನೆರವಿಗೆ ಬಂದು ದಬ್ಬಾಳಿಕೆಯ ಪ್ರತೀಕವಾದ ಬ್ಯಾಸಿಲ್‌ದ ಸೆರೆಮನೆಯನ್ನು ಒಡೆಯಿತು. (೧೪ ಜುಲೈ ೧೭೮೯). ಈ ರೀತಿಯಾಗಿ ಕ್ರಾಂತಿಕಾರಕರು ತಮ್ಮ ಮೊದಲ ಪತಾಕೆಯನ್ನು ಹಾರಿಸಿದರು. ಸ್ವಾತಂತ್ರದ ಪ್ರತೀಕವೆಂದು ರಾಜಪ್ರಭುತ್ವವನ್ನು

ವಿರೋಧಿಸುವ ಕ್ರಾಂತಿಕಾರಕರು ರಾಜಾರೋಷವಾಗಿ ಕೆಂಪು ಟೊಪ್ಪಿಗೆಯನ್ನು ತೊಡಲು ಶುರುಮಾಡಿದರು. ಇದೇ ರೀತಿಯಾಗಿ ೧೭ ಜುಲೈ ೧೭೮೯ ರಂದು ಫ್ರಾನ್ಸಿನ ಕೆಂಪು, ಬಿಳಿ ಹಾಗೂ ನೀಲಿ ಬಣ್ಣಗಳ ರಾಷ್ಟ್ರಧ್ವಜವು ಕ್ರಾಂತಿಕಾಲದ ಲಾಂಛನವೆಂದು ಬಳಕೆಗೆ ಬಂದಿತು.

**ಹಿಂಸಾತ್ಮಕ ಚಳುವಳಿಯ ಪರ್ವ :** ಲುಯಿ ರಾಜನು ಜನರ ಬಂಡಾಯದೆದುರು ತಾತ್ಕಾಲಿಕವಾಗಿ ತಲೆಬಾಗಿದರೂ ಅದನ್ನು ಸದೆಬಡಿಯಲೆಂದು ಸೈನ್ಯವನ್ನು ಕರೆಸಿಕೊಂಡನು. ಇದನ್ನು ತಿಳಿದ ಪ್ಯಾರಿಸ್ಸಿನ



ಜನರು ಮತ್ತೆ ಬಂಡೆದ್ದರು. ೫ ಅಕ್ಟೋಬರ್ ೧೭೮೯ ರಂದು ಅವರು ವಾರ್ಸಾಯ್ದ ಅರಮನೆಗೆ ಸ್ತ್ರೀಯರ ಒಂದು ಮೌನ ಮೆರವಣಿಗೆಯನ್ನು ಹೊರಡಿಸಿದರು. ಆ ದಿನ ಮಾರ್ಕಿ ದ ಲಾಫಾಯೆಲ್ ಎನ್ನುವವನ ಪ್ರಸಂಗಾವಧಾನದಿಂದಾಗಿ (೧೭೫೭-೧೮೩೪) ರಾಜಕುಟುಂಬವು ಅಂದಿನ ಹತ್ಯಾಕಾಂಡದಿಂದ ಬಚಾವಾಯಿತು. ಲುಯಿಯು ವಾರ್ಸಾಯ್ ತೊರೆದು ಪ್ಯಾರಿಸ್ಸಿಗೆ ಬರಬೇಕಾಯಿತು. ಅವನು ತಾ. ೧೦ ಆಗಸ್ಟ್‌ವರೆಗೆ ಪ್ಯಾರಿಸ್ಸಿನ ತುಲರಿಝ್ ಅರಮನೆಯಲ್ಲಿ ಸ್ಥಾನಬದ್ಧನಂತೆ ಕಾಲ ಕಳೆಯಬೇಕಾಯಿತು. ದೇಶದ ತುಂಬೆಲ್ಲ ಮೌನ ಮೆರವಣಿಗೆಯ ವಾರ್ತೆ ಹರಡಿತು. ಆಡಳಿತ ಯಂತ್ರವು ಬಂಡಾಯದ ವಾತಾವರಣವನ್ನು ಎದುರಿಸುವಂತಾಯಿತು. ರೈತಾಪಿ ಜನರು ಗ್ರಾಮಾಂತರಗಳ ಸರದಾರರ ಸೌಧಗಳ ಮೇಲೆ ಏರಿ ಹೋಗಿ ಅವರ ಹಕ್ಕು ಪತ್ರಗಳನ್ನು ಸುಟ್ಟು ಬಿಟ್ಟರು, ಧಾರ್ಮಿಕ ಮಠಗಳನ್ನು ಹಾಳುಗೆಡಹಿದರು. ಲುಯಿಯ ಪಲಾಯನದ ಯತ್ನವು ಸೋತ ತರುವಾಯದಲ್ಲಂತೂ ಅವನಿಗೆ ವಿರುದ್ಧವಾಗಿ ವಾತಾವರಣವು ಕಾವೇರಿತು. ಜನರು ರಾಜಪ್ರಭುತ್ವವನ್ನು ಕಿತ್ತೆಸೆದು ಪ್ರಜಾಸತ್ತೆಯನ್ನು ಸ್ಥಾಪಿಸಬೇಕೆದು ಮಾತನಾಡಲು ಶುರುಮಾಡಿದರು.

**ಕ್ರಾಂತಿಕಾಲದ ಸಂವಿಧಾನ ಹಾಗೂ ಸತ್ಯಾಂತರ :** ನಿರುಪಾಯನಾಗಿ ಹದಿನಾರನೆಯ ಲುಯಿಯು ಕರೆದ ಸಂಸತ್ತಿನ ಅಧಿವೇಶನವು ರಾಷ್ಟ್ರೀಯ ಸಭೆ, ಎಂದು ಹೆಸರು ಪಡೆಯಿತು. ಈ ಸಭೆಯು ಫ್ರಾನ್ಸಿನ ಏಕಗೃಹ ವಿಧಿಮಂಡಲವಾಗಿತ್ತು. ರಾಜನೇ ಸಂಪುಟವನ್ನು ಆಯುತ್ತಿದ್ದನು. ಅದಕ್ಕೂ ಸಂಸತ್ತಿಗೂ ಯಾವುದೇ ಸಂಬಂಧವಿರಲಿಲ್ಲ. ರಾಜನಿಂದ ತಾಂತ್ರಿಕ

ಒಪ್ಪಿಗೆ ಬಾರದ ಹೊರತು ಯಾವುದೇ ಮಸೂದೆಯು ಕಾನೂನಾಗಿ ಜಾರಿಗೆ ಬರುತ್ತಿರಲಿಲ್ಲ. ಆದರೆ ದುರ್ಬಲನಾದ ಲುಯಿ ಮೊದಲೇ ಕಷ್ಟದಲ್ಲಿ ಸಿಕ್ಕಿಕೊಂಡಿದ್ದನು. ಹೀಗಾಗಿ ಸಂಸತ್ತು ಪ್ರಬಲವಾಯಿತು. ಬ್ಯಾಸಿಲ್ ಕುಸಿದು ಬಿದ್ದ ಕಾರಣ ಪ್ಯಾರಿಸ್ಸಿನ ಕಮ್ಯೂನ್‌ದ (ಸ್ಥಾನಿಕ ಸ್ವರಾಜ್ಯ ಸಂಸ್ಥೆ) ಮಹತ್ವವು ಹೆಚ್ಚುತ್ತ ಹೋಗಿ ಅದು ಸಂಸತ್ತಿನ ಮೇಲೆ ಒತ್ತಡವನ್ನು ಹೇರತೊಡಗಿತು. ಸ್ವಾಭಾವಿಕವಾಗಿಯೇ ಪ್ಯಾರಿಸ್ಸಿನ ಕಮ್ರುದ ಪ್ರಭಾವಿ ಬಣ ಹಾಗೂ ವ್ಯಕ್ತಿಗಳ ಪ್ರಭಾವವು ನಿಧಾನವಾಗಿ ಪ್ಯಾರಿಸ್ಸಿನ ರಾಜಕೀಯದ ಮೇಲೆ ಬೀಳತೊಡಗಿದುದು ಕಂಡುಬರುತ್ತದೆ,

೧೭೮೯ ರಿಂದ ೧೭೯೧ರ ನಡುವಿನ ಕಾಲದಲ್ಲಿ ರಾಷ್ಟ್ರೀಯ ಸಂಸತ್ತು ಸಂವಿಧಾನವನ್ನು ಸಿದ್ಧಪಡಿಸಿ, ಮಹತ್ವದ ಕಾನೂನುಗಳನ್ನು ಅಂಗೀಕರಿಸಿ, ಮಾನವೀಯ ಹಕ್ಕುಗಳನ್ನು ಘೋಷಿಸಿಯೂ ಬಿಟ್ಟಿತು. ಅದಕ್ಕೆ ಸ್ವಾತಂತ್ರ್ಯ, ಸಮತೆ ಹಾಗೂ ಜನತೆಯ ಸಾರ್ವಭೌಮತ್ವಗಳನ್ನು ಸೇರ್ಪಡಿಸಿತು. ಈ ಘೋಷಣೆಯಿಂದ ಕ್ರಾಂತಿಯ ತರುವಾಯ ಯುರೋಪಿನ ಕ್ರಾಂತಿಕಾರಕರಿಗೆ ಸ್ಫೂರ್ತಿ ಲಭಿಸುತ್ತ ಹೋಯಿತು. ಈ ಘೋಷಣೆಯು ನೆಪೋಲಿಯನ್ನನ ಇಡಿಯ ಸೈನ್ಯಕ್ಕಿಂತ ಹೆಚ್ಚು ಪ್ರಭಾವಿಯಾಗಿತ್ತೆಂದು ಲಾರ್ಡ್ ಎಕ್ಟನ್ (೧೮೩೪-೧೯೦೨) ಹೇಳಿರುವನು. ೪ ಆಗಸ್ಟ್ ೧೭೮೪ ರಂದು ಒಬ್ಬ ಮಾಂಡಲಿಕನು ಆ ಕಾಲಕ್ಕೆ ಅಸ್ತಿತ್ವದಲ್ಲಿದ್ದ ಮಾಂಡಲಿಕ ಅಧಿಕಾರಗಳನ್ನೆಲ್ಲ ರದ್ದು ಪಡಿಸಬೇಕೆಂದು ಸಂಸತ್ತಿನಲ್ಲಿ ಒಂದು ಪ್ರಸ್ತಾವವನ್ನು ಮಂಡಿಸಿದನು. ಅದರ ತರುವಾಯ ಪುರೋಹಿತ ವರ್ಗದ ಪ್ರತಿನಿಧಿಗಳು ತಮ್ಮ ಹಾಗೂ ಚರ್ಚಿನ ವಿಶೇಷಾಧಿಕಾರಗಳನ್ನು ರದ್ದುಪಡಿಸಬೇಕೆಂಬ ಬೇಡಿಕೆಯನ್ನು ಮುಂದಿಟ್ಟರು. ಅವೆರಡೂ ವರ್ಗಗಳ ನಡುವೆ ಇಂಥ ಪ್ರಸ್ತಾವನೆಗಳನ್ನು ಮುಂದಿಡುವ ಪೈಪೋಟಿಯೇ ನಡೆದಿತ್ತು. ರಾಷ್ಟ್ರೀಯ ಸಂಸತ್ತು ತನ್ನೊಂದು ಸಭೆಯಲ್ಲಿ ಸಂವಿಧಾನ ಸಭೆಯ ನಿಲುವು, ಮಾಂತೆಕ್ಕೂ ಮತ್ತು ರೂಸೋ ಅವರ ತತ್ಯಗಳನ್ನಾಧರಿಸಿ ಒಂದು ಸಂವಿಧಾನವನ್ನು ತಯಾರಿಸಿತು.

ಈ ಸಂವಿಧಾನದನ್ವಯ ರಾಜನ ಸತ್ತೆಯನ್ನು ಮಿತಿಗೊಳಿಸಲಾಯಿತು. ರಾಜನಿಗೆ ಸಚಿವ ಸಂಪುಟದ ಆಯ್ಕೆಯ ಅಧಿಕಾರವನ್ನು ನೀಡಲಾಯಿತಾದರೂ ಇಂಥ ಸಚಿವರು ವಿಧಿಮಂಡಲದ ಸದಸ್ಯರಾಗಿರಕೂಡದು, ಅವರೆಂದಿಗೂ ವಿಧಿಮಂಡಲದ ಸಭೆಗಳಿಗೆ ಹಾಜರಾಗಕೂಡದೆಂದು ವಿಧಿಸಲಾಯಿತು. ರಾಜನ ಖರ್ಚುವೆಚ್ಚಗಳಿಗಾಗಿ ನಿರ್ದಿಷ್ಟ ಮೊತ್ತವನ್ನು ಮಂಜೂರು ಮಾಡಲಾಯಿತು. ಅವನ ಪರಮಾಧಿಕಾರವನ್ನು ಮಿತಗೊಳಿಸಲಾಯಿತು. ವಿಧಿಮಂಡಲವನ್ನು ಏಕಗೃಹವನ್ನಾಗಿ ಇರಿಸಿ ಅದರ ಕಾಲಾವಧಿಯು ಎರಡು ವರ್ಷಗಳದೆಂದು ತೀರ್ಮಾನಿಸಲಾಯಿತು. ಮತದಾನದ ಹಕ್ಕನ್ನು ಒಂದು ಮಟ್ಟಕ್ಕಿಂತ ಹೆಚ್ಚು ತೆರಿಗೆಯನ್ನು ನೀಡುವವರಿಗೆ ಮಾತ್ರ ನೀಡಲಾಯಿತು. ನ್ಯಾಯಾಧೀಶರೆಲ್ಲರನ್ನು ಜನನಿಯುಕ್ತರನ್ನಾಗಿಸಿ ಜ್ಯೂರಿ ಪದ್ಧತಿಯನ್ನು ಜಾರಿಗೆ ತರಲಾಯಿತು. ವಿಭಾಗೀಯ ಆಡಳಿತೆಯನ್ನು ಪುನರಚಿಸಲಾಯಿತು. ಚರ್ಚಿನ ಸಂಪತ್ತನ್ನು ಸರಕಾರಕ್ಕೆ ಜಮೆ ಮಾಡಲಾಯಿತು. ಈ ಸಂಪತ್ತನ್ನು ಆಧರಿಸಿ ಕಾಗದದ ಚಲಾವಣೆಯನ್ನು ಶುರು ಮಾಡಲಾಯಿತು. ಮುಂದೆ ಅದರ ಪ್ರಮಾಣವು ಮೀರಿದ ಕಾರಣ ಚಲಾವಣೆಯ ಬೆಲೆಯು ಕುಸಿಯತೊಡಗಿ ಆರ್ಥಿಕ ವ್ಯವಹಾರಗಳು ಗೊಂದಲಕ್ಕೀಡಾದವು. ಜನರು ಪುರೋಹಿತನನ್ನು ಆಯುವುದು, ಪೋಪನ ಬದಲು ಅವನಿಗೆ ರಾಜ್ಯಾಡಳಿತೆಯಿಂದ ಸಂಬಳ ಸಿಕ್ಕುವಂತೆ ಮಾಡುವಂಥ ಮಹತ್ವದ ಮಾರ್ಪಾಟುಗಳಾದವು. ಪೋಪನು ಇದನ್ನು ವಿರೋಧಿಸಿದ ಕಾರಣ, ಅದನ್ನೆದುರಿಸಲೆಂದು ರಾಷ್ಟ್ರೀಯ ವಿಧಿಮಂಡಲವು ಕಾನೂನಿಗೆ ನಿಷ್ಠನಾಗಿರುವೆವೆಂದು ಪ್ರಮಾಣ ವಚನವನ್ನು ಸ್ವೀಕರಿಸುವಂತೆ ಪುರೋಹಿತರನ್ನು ಬಾಧ್ಯರನ್ನಾಗಿ ಮಾಡಿತು."

ಡಾ. ಬಾಬಾಸಾಹೇಬ ಅಂಬೇಡಕರರು ತಾ. ೨೫ ಡಿಸೆಂಬರ್ ೧೯೨೭ ರಂದು ಆಯೋಜಿಸಿದ ಮಹಾಡ್ ಸತ್ಯಾಗ್ರಹ ಪರಿಷತ್ತಿನಲ್ಲಿ ಆ ಪರಿಷತ್ತಿನ ಸೂಕ್ತತೆಯನ್ನು ವಿವರಿಸುತ್ತ, ಫ್ರೆಂಚ್ ಕ್ರಾಂತಿಯೊಡನೆ ಅದನ್ನು ಹೋಲಿಸುತ್ತ ಮಾಡಿದ ತಮ್ಮ ಭಾಷಣದಲ್ಲಿ ಅವರು ಹೀಗೆನ್ನುತ್ತಾರೆ :

"ನಾವೂ ಇತರಂತೆಯೇ ಮನುಷ್ಯರು' ಎಂಬುದನ್ನು ಸ್ಥಾಪಿಸಲೆಂದೇ ನಾವು ಆ ಕೆರೆಗೆ ಹೋಗಲಿಚ್ಛಿಸುತ್ತೇವೆ. ಸಮತೆಯ ಮಹೂರ್ತವನ್ನು ಸಾಧಿಸುವುಕ್ಕಾಗಿಯೇ ಈ ಸಭೆಯನ್ನು ಕರೆಯಲಾಗಿದೆ.

ಈ ಸಭೆಯನ್ನು ಕುರಿತು ಈ ದೃಷ್ಟಿಯಿಂದ ಯೋಚಿಸಲಾಗಿ ಇದು ಅಪೂರ್ವವಾದುದು, ಎಂಬ ಬಗೆಗೆ ಸಂದೇಹವಿಲ್ಲವೆಂಬ ಖಾತ್ರಿ ನನಗಿದೆ. ಇಂದಿನ ಸನ್ನಿವೇಶ ಹಾಗೂ ಹಿಂದೂಸ್ಥಾನದ ಇತಿಹಾಸದಲ್ಲಿ ಇನ್ನೇನೂ ಅದಕ್ಕೆ ಸರಿದೂಗುವಂಥದಲ್ಲವೆಂದು ನನಗೆ ಅನ್ನಿಸುತ್ತದೆ.

ಹಿಂದಿನ ಕಾಲದಲ್ಲಿ ಇದಕ್ಕೆ ಸರಿದೂಗುವಂಥ ಇನ್ನೊಂದು ಸಭೆಯನ್ನು ಶೋಧಿಸಲು ಹೊರಟರೆ ನಾವು ಯುರೋಪು ಖಂಡದ ಫ್ರಾನ್ಸ್ ದೇಶದ ಇತಿಹಾಸವನ್ನು ಪ್ರವೇಶಿಸಬೇಕಾಗುತ್ತದೆ. ೧೩೮ ವರ್ಷಗಳ ಕೆಳಗೆ ತಾ, ೨೪ ಜನೆವರಿ ಸನ್ ೧೭೮೯ ರಂದು ಫ್ರಾನ್ಸ್ ದೇಶದ ಹದಿನಾರನೆಯ ಲುಯಿ ರಾಜನು ಒಂದು ಸುಗ್ರೀವಾಜ್ಞೆಯಯನ್ನು ಹೊರಡಿಸಿ ತನ್ನ ರಾಜ್ಯದ ಪ್ರಜೆಗಳ ಪ್ರತಿನಿಧಿಗಳಿಗಾಗಿ ಇಂಥದೇ ಒಂದು ಸಭೆಯನ್ನು ಕರೆದಿದ್ದನು. ಕೆಲವು ಇತಿಹಾಸಕಾರರು ಈ ಫ್ರೆಂಚ್ ಕ್ರಾಂತಿಯನ್ನು ಟೀಕಿಸುತ್ತಾರೆ, ಬೆರಳು ಮುರಿಯುತ್ತಾರೆ. ಈ ಸಭೆಯು ಫ್ರಾನ್ಸ್ ದೇಶದ ರಾಜ-ರಾಣಿಯರನ್ನು ಶೂಲಕ್ಕೇರಿಸಿತು. ವರಿಷ್ಠ ವರ್ಗವನ್ನು ಓಡಿ, ಬಿಡಲೋ ಎನ್ನುವಂತೆ ಮಾಡಿ ಅವರನ್ನು ಹತ್ಯೆಗೈದಿತು, ಬದುಕಿ ಉಳಿದವರನ್ನು ದಿಕ್ಕುಪಾಲು ಮಾಡಿತು. ಶ್ರೀಮಂತರ ಸೊತ್ತು, ಆಸ್ತಿಗಳನ್ನು ಜಪ್ತು ಮುಟ್ಟುಗೋಲು

೧ : ಮರಾಠಿ ವಿಶ್ವಕೋಶ : ೧೦, ಪು. ೧೧೨೦-೧೧೨೨.



ಹಾಕಿತು. ಅವರು ೧೫ ವರ್ಷಕ್ಕಿಂತ ಹೆಚ್ಚಿನ ಕಾಲ ಯುರೋಪ ಖಂಡದ ತುಂಬೆಲ್ಲ ಯಾದವಿ ಯುದ್ಧವನ್ನು ಛೇಡಿಸಿತೆಂದು ಈ ಫ್ರೆಂಚ್ ರಾಷ್ಟ್ರೀಯ ಸಭೆಯ ಮೇಲೆ ಆಪಾದನೆಯನ್ನು ಹೊರಿಸುತ್ತಾರೆ. ಈ ಆಪಾದನೆ ಸರಿಯಲ್ಲವೆಂಬುದು ನನ್ನ ಅಭಿಪ್ರಾಯ. ಇಷ್ಟೇ ಅಲ್ಲದೆ ಈ ಫ್ರೆಂಚ್ ರಾಷ್ಟ್ರೀಯ ಸಭೆಯು ಮಾಡಿದ ಸಾಹಸಕಾರ್ಯದ ನಿಜವಾದ ಮರ್ಮವೇ ಇಂಥ ಇತಿಹಾಸಕಾರರಿಗೆ ತಿಳಿದಿಲ್ಲ, ಎನ್ನಬೇಕು. ಈ ಸಭೆಯ ಕಾರ್ಯದಿಂದಾಗಿಯೇ ಫ್ರಾನ್ಸ್ ದೇಶದ ಕಲ್ಯಾಣವಾಯಿತೆಂದು ಮಾತ್ರವಲ್ಲ, ಇಡಿಯ ಯುರೋಪ್ ಖಂಡದ ಕಲ್ಯಾಣವಾಗಿದೆ. ಇಂದು ಯುರೋಪಿನ

ರಾಷ್ಟ್ರಗಳು ಸುಖ ಸಮೃದ್ಧಿಯನ್ನು ಅನುಭವಿಸುತ್ತಿರಲು ಮುಖ್ಯವಾದ ಒಂದೇ ಒಂದು ಕಾರಣವೆಂದರೆ ೧೭೮೯ ರಲ್ಲಿ ಕರೆಯಲಾದ ಕ್ರಾಂತಿಕಾರಕ ಫ್ರೆಂಚ್ ರಾಷ್ಟ್ರೀಯ ಸಭೆಯು ಆ ಕಾಲಕ್ಕೆ ಹರಿದು ಹಂಚಿಹೋಗಿ, ನಿರ್ಮಾಲ್ಯದಂತಾದ ಫ್ರೆಂಚ್ ರಾಷ್ಟ್ರದ ಮುಂದೆ ಸಮಾಜ ಸಂಘಟನೆಯ ತತ್ತ್ವಗಳನ್ನು ಮಂಡಿಸಿ ಅವುಗಳನ್ನು ದೇಶದ ಮೇಲೆ ಬಲವಂತದಿಂದ ಹೇರಿತೆಂಬುದು. ಯುರೋಪ ಖಂಡವು ಇವೇ ತತ್ತ್ವಗಳನ್ನು ಒಪ್ಪಿಕೊಂಡು ಅವನ್ನು ಆಚರಣೆಯಲ್ಲಿ ತಂದಿತು.

ಫ್ರೆಂಚ್ ರಾಷ್ಟ್ರೀಯ ಸಭೆಯ ಮಹತ್ವ ಹಾಗೂ ಅದರ ತತ್ವಗಳ ಘನತೆಯನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ ಆ ಕಾಲದ ಫ್ರೆಂಚ್ ಸಮಾಜದ ಪರಿಸ್ಥಿತಿಯನ್ನು ಗಮನಕ್ಕೆ ತಂದುಕೊಳ್ಳಬೇಕು. ನಮ್ಮ ಈ ಹಿಂದೂ ಸಮಾಜವನ್ನು ವರ್ಣಾಶ್ರಮ ಧರ್ಮದ ಅಡಿಪಾಯದ ಮೇಲೆ ರಚಿಸಲಾಗಿದೆ, ಎಂಬುದು ನಮಗೆಲ್ಲ ತಿಳಿದಿದೆ. ಫ್ರೆಂಚ್ ದೇಶದಲ್ಲಿ ಕೂಡ ೧೭೮೯ ರಲ್ಲಿ ಇದೇ ಬಗೆಯ ವರ್ಣಾಶ್ರಮ ಧರ್ಮವಿತ್ತು. ಇವೆರಡರಲ್ಲಿ ಇರುವ ಒಂದೇ ಒಂದು ವ್ಯತ್ಯಾಸವೆಂದರೆ ಫ್ರೆಂಚ್ ಸಮಾಜವು ತ್ರಿವರ್ಣಗಳದಾಗಿತ್ತು. ಫ್ರಾನ್ಸಿನಲ್ಲೂ ಹಿಂದೂಸ್ಥಾನದಂತೆಯೇ ಬ್ರಾಹ್ಮಣ ವರ್ಣವಿತ್ತು, ಕ್ಷತ್ರಿಯರ ವರ್ಣವೂ ಇದ್ದಿತು. ಆದರೆ ಫ್ರೆಂಚ್ ಸಮಾಜದಲ್ಲಿ ವೈಶ್ಯ, ಶೂದ್ರ ಹಾಗೂ ಅತಿಶೂದ್ರರೆಂಬ ಮೂರು ಬೇರೆ ಬೇರೆ ವರ್ಣಗಳನ್ನು ಮಾಡದೆ ಆ ಮೂರನ್ನು ಒಟ್ಟುಗೂಡಿಸಿ ಮೂರನೆಯ ಒಂದೇ ಒಂದು ವರ್ಣವನ್ನು ತಯಾರಿಸಲಾಗಿತ್ತು. ಈ ವ್ಯತ್ಯಾಸವು ತೀರ ಅಮುಖ್ಯವಾದುದು. ಮಹತ್ವದ ಸಂಗತಿ ಎಂದರೆ, ಹಿಂದೂ ಸಮಾಜ ಹಾಗೂ ಫ್ರೆಂಚ್ ಸಮಾಜಗಳ ವರ್ಣವ್ಯವಸ್ಥೆಯು ಒಂದೇ ಬಗೆಯದಾಗಿತ್ತು. ಇವೆರಡೂ ಸಮಾಜಗಳಲ್ಲಿ ಇರುವ ಹೋಲಿಕೆ ಎಂದರೆ ವರ್ಣಾಶ್ರಮ ವ್ಯವಸ್ಥೆಯಿಂದಾಗಿ ತಲೆದೋರುವ ಭಿನ್ನತೆಯಷ್ಟೇ ಇಲ್ಲ. ಹೀಗಾಗಿ ಆ ದೃಷ್ಟಿಯಿಂದ ಅದನ್ನು ಗಮನಿಸಬೇಕಾಗಿಲ್ಲ. ಫ್ರೆಂಚ್ ಸಮಾಜದ ವರ್ಣವ್ಯವಸ್ಥೆಯಲ್ಲಿ ಅಸಮಾನತೆಯೂ ಇದ್ದಿತು. ಆದರೆ ಅದರ ಸ್ವರೂಪವು ಬೇರೆ ಬಗೆಯದಾಗಿತ್ತು. ಅಲ್ಲಿ ವರ್ಣಗಳ ನಡುವಿನ ಅಸಮಾನತೆಯು ಆರ್ಥಿಕ ಸ್ವರೂಪದ್ದಾಗಿತ್ತು. ಅದರ ಸ್ವರೂಪ ಮಾತ್ರ ಅಷ್ಟೇ ತೀವ್ರವಾಗಿತ್ತು. ಒಟ್ಟಿನಲ್ಲಿ ನೆನಪಿನಲ್ಲಿ ಇರಿಸಿಕೊಳ್ಳಬೇಕಿದ್ದ ಸಂಗತಿ ಎಂದರೆ,

**ಇಂದಿನ ನಮ್ಮ ಈ ಸಭೆ ಹಾಗೂ ತಾ. ೫ ಮೇ ೧೭೮೯ ರಂದು ಫ್ರಾನ್ಸಿನ ವರಸಾಯ್ ಎಂಬಲ್ಲಿ ನಡೆದ ಫ್ರೆಂಚ್ ಜನರ ಕ್ರಾಂತಿಕಾರಕ ರಾಷ್ಟ್ರೀಯ ಸಭೆಗಳ ನಡುವೆ ಬಲು ದೊಡ್ಡ ಸಾಮ್ಯವಿದೆ.**

ಇವುಗಳ ಪರಿಸ್ಥಿತಿಗಳಲ್ಲಿ ಸಾಮ್ಯ ಕಾಣುತ್ತದೆ, ಎಂದಷ್ಟೇ ಅಲ್ಲದೆ ಇವುಗಳ ಗುರಿಗಳಲ್ಲೂ ಬಹುಮಟ್ಟಿಗಿನ ಸಾಮ್ಯವಿದೆ. ಫ್ರೆಂಚ್ ಸಮಾಜದ ಸಂಘಟನೆಯನ್ನು ತಯಾರಿಸಲೆಂದು ಆ ಸಭೆಯನ್ನು ಕರೆಯಲಾಗಿತ್ತು. ಹಿಂದೂ ಸಮಾಜದ ಸಂಘಟನೆಯನ್ನು ಮಾಡಲೆಂದು ಇಂದಿನ ಈ ಸಭೆಯನ್ನು

ಕರೆಯಲಾಗಿದೆ. ಆದರೆ ಯಾವ ತತ್ತ್ವವನ್ನು ಆಧರಿಸಿ ಈ ಸಂಘಟನೆಯನ್ನು ತಯಾರಿಸಬೇಕು, ಎನ್ನುವುದನ್ನು ಕುರಿತು ಚರ್ಚಿಸುವ ಮುನ್ನ ಫ್ರೆಂಚ್ ಜನರ ಈ ಸಭೆಯು ಫ್ರಾನ್ಸ್ ದೇಶದ ಸಂಘಟನೆಯನ್ನು ತಯಾರಿಸಲೆಂದು ಯಾವ ಧೋರಣೆಯನ್ನು ಸ್ವೀಕರಿಸಿತು ಹಾಗೂ ಯಾವ ತತ್ತ್ವಗಳ ಆಧಾರವನ್ನು ಪಡೆಯಿತು, ಎಂಬುದನ್ನು ನಾವೆಲ್ಲರೂ ಅರಿತುಕೊಳ್ಳಬೇಕಿದೆ. ಇಂದಿನ ನಮ್ಮ ಈ ಸಭೆಯ ಹರಹಿಗಿಂತ ಫ್ರೆಂಚ್ ಜನರ ಆ ಸಭೆಯ ಹರಹು ತುಂಬ ಹೆಚ್ಚಿತ್ತು. ಫ್ರೆಂಚ್ ಜನರ ಆ ಸಭೆಯು ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಎಂಬ ತ್ರಿವಿಧವಾದ ಸಂಘಟನೆಯನ್ನು ತಯಾರಿಸಬಯಸಿತ್ತು. ನಾವು ಸಾಮಾಜಿಕ ಹಾಗೂ ಧಾರ್ಮಿಕ ಸಂಘಟನೆಯನ್ನು ಹೇಗೆ ತಯಾರಿಸುವುದು, ಎಂಬುದನ್ನು ಕುರಿತು ಮಾತ್ರ ಯೋಚಿಸಬೇಕಿದೆ. ಸದ್ಯಕ್ಕೆ ನಮಗೆ ರಾಜಕೀಯ ಸಂಘಟನೆಗಳೊಡನೆ ನಂಟು ಬೇಡವಾದ ಕಾರಣ ಆ ಫ್ರೆಂಚ್ ಸಭೆಯು ಧಾರ್ಮಿಕ ಹಾಗೂ ಸಾಮಾಜಿಕ ಸಂಘಟನೆಗಳನ್ನು ಕುರಿತು ಏನು ಮಾಡಿತು, ಎನ್ನುವುದನ್ನಷ್ಟೇ ಕಂಡುಕೊಳ್ಳಬೇಕಿದೆ. ಆ ಫ್ರೆಂಚ್ ಸಭೆಯು ಸಾಮಾಜಿಕ ಹಾಗೂ ಧಾರ್ಮಿಕ ಸಂಘಟನೆಯನ್ನು ಕುರಿತು ತಯಾರಿಸಿದ ಧೋರಣೆಯು ಯಾವ ಬಗೆಯದಾಗಿತ್ತು ಎನ್ನುವ ಸಂಗತಿಯು ಪ್ರಕಟಿಸಲಾದ ಮೂರು ಜಾಹೀರುನಾಮೆಗಳಿಂದ ಯಾರಿಗಾದರೂ ಸ್ಪಷ್ಟವಾಗಲಿದೆ. ತಾ, ೧೭ ಜೂನ್ ೧೭೮೯ ರಂದು ಮೊದಲ ಜಾಹೀರುನಾಮೆ ಪ್ರಕಟವಾಯಿತು. ಅದು ಫ್ರಾನ್ಸಿನ ವರ್ಣಾಶ್ರಮ ಧರ್ಮವನ್ನು ಕುರಿತಾಗಿತ್ತು. ಫ್ರೆಂಚ್ ಸಮಾಜವು ತ್ರೈವರ್ಣಿಕವಾಗಿದ್ದುದನ್ನು ಕುರಿತು ಈ ಮೊದಲೇ ಹೇಳಲಾಗಿದೆ. ಈ ಜಾಹೀರುನಾಮೆಯು ಆ ವರ್ಣಿಕ ಸಮಾಜರಚನೆಯನ್ನು ಮುರಿದು ಅದನ್ನು ಏಕವರ್ಣವನ್ನಾಗಿ ಮಾಡಿತು. ಇಷ್ಟೇ ಅಲ್ಲದೆ, ಈ ತ್ರೈವರ್ಣಿಕರಿಗಾಗಿ ರಾಜಕೀಯ ಸಭಾಗೃಹದಲ್ಲಿ ಇರುವ ಬೇರೆ ಬೇರೆ ಆಸನಗಳನ್ನು ರದ್ದುಪಡಿಸಲಾಯಿತು. ಎರಡನೆಯ ಜಾಹೀರುನಾಮೆಯು ಧರ್ಮೋಪದೇಶಕರ ನೇಮಕಾತಿಯನ್ನು ಕುರಿತಾಗಿತ್ತು. ಪುರಾತನ ಸಂಪ್ರದಾಯದ ಮೇರೆಗೆ ಧರ್ಮೋಪದೇಶಕರ ನೇಮಕಾತಿ ಇಲ್ಲವೆ ಅವರನ್ನು ಕಿತ್ತುಹಾಕುವುದು ರಾಷ್ಟ್ರದ ಕೈಯಲ್ಲಿರದೆ ಪೋಪನಂಥ ವಿದೇಶಿ ಧರ್ಮಾಧಿಕಾರಿಯ ಸೊತ್ತಾಗಿತ್ತು. ಧರ್ಮೋಪದೇಶವನ್ನು ನೀಡುವ ಯೋಗ್ಯತೆ ಇರಲಿ, ಇಲ್ಲದಿರಲಿ ಪೋಪ್‌ನಿಂದ

ನೇಮಕನಾದವನೇ ಧರ್ಮೋಪದೇಶಕನಾಗುತ್ತಿದ್ದನು ! ಈ ಜಾಹೀರುನಾಮೆಯ ಮೂಲಕ ಧರ್ಮಾಧಿಕಾರಿ ವರ್ಗದ ಸ್ವಯಂಭೂತ್ವವನ್ನು ಇಲ್ಲವಾಗಿಸಲಾಯಿತು. ಯಾರು ಈ ವೃತ್ತಿಯನ್ನು ಕೈಕೊಳ್ಳಬೇಕು, ಅದಕ್ಕೆ ಯೋಗ್ಯರಾರು, ಅಯೋಗ್ಯರಾರು, ಅವರಿಗೆ ಸಂಭಾವನೆಯನ್ನು ಕೊಡಬೇಕೆ, ಬೇಡವೆ, ಮೊದಲಾದ ಸಂಗತಿಗಳನ್ನು ತೀರ್ಮಾನಿಸುವ ಅಧಿಕಾರವನ್ನು ಫ್ರೆಂಚ್ ರಾಷ್ಟ್ರಕ್ಕೆ ಕೊಡಲಾಯಿತು. ಮೂರನೆಯ ಜಾಹೀರುನಾಮೆಯು ರಾಜಕೀಯ, ಆರ್ಥಿಕ ಇಲ್ಲವೆ ಧಾರ್ಮಿಕ ವ್ಯವಸ್ಥೆಗಳನ್ನು ಕುರಿತಾಗಿರಲಿಲ್ಲ. ಅದು ಸರ್ವಸಾಧಾರಣವಾದುದಾಗಿದ್ದು, ಯಾವ ತತ್ವವನ್ನು ಆಧರಿಸಿ ಪ್ರತಿಯೊಂದು ಬಗೆಯ ಸಾಮಾಜಿಕ ವ್ಯವಸೆಯನ್ನು ಕಟ್ಟಬೇಕು, ಎಂಬುದನ್ನು ಕುರಿತಾಗಿತ್ತು. ಈ ದೃಷ್ಟಿಯಿಂದ ಮರ ಜಾಹೀರುನಾಮೆಗಳಲ್ಲಿ ಈ ಜಾಹೀರುನಾಮೆ ಎಂದರೆ, ಒಬ್ಬ ರಾಜನಿದ್ದಂತೆ ಎನ್ನಬಹುದು. ಈ ಜಾಹೀರುನಾಮೆಯು ಪ್ರಪಂಚದ ತುಂಬೆಲ್ಲ ಜನ್ಮಸಿದ್ಧ ಮಾನವ ಹಕ್ಕುಗಳ ಜಾಹೀರುನಾಮೆ, ಎಂದು ಹೆಸರಾಗಿದೆ. ಈ ಜಾಹೀರುನಾಮೆಯು ಫ್ರಾನ್ಸ್ ದೇಶದ ಇತಿಹಾಸದಲ್ಲಿ ಒಂದು ಅಪೂರ್ವವಾದ ಸಂಗತಿ ಎನ್ನಿಸಿದೆ. ಇಷ್ಟೇ ಅಲ್ಲದೆ ಇದು ಸುಧಾರಣೆ ಹೊಂದಿದ ರಾಷ್ಟ್ರಗಳ ಇತಿಹಾಸಗಳಲ್ಲಿ ಅಪೂರ್ವವಾಗಿ ಉಳಿದಿದೆ. ಏಕೆಂದರೆ ಯುರೋಪಿನ ಪ್ರತಿಯೊಂದು ರಾಷ್ಟ್ರವು ಈ ಸಭೆಯ ಅನುಕರಣೆಯನ್ನು ಮಾಡುತ್ತ ತನ್ನ ರಾಜ್ಯಾಡಳಿತೆಯಲ್ಲಿ ಅದಕ್ಕೆ ಒಂದು ಅಧಿಷ್ಠಾನವನ್ನು ನೀಡಿದೆ.



ಹೀಗಾಗಿ ಅದು ಫ್ರಾನ್ಸ್ ದೇಶದಲ್ಲಷ್ಟೇ ಕ್ರಾಂತಿಯನ್ನು ಮಾಡಿತೆಂದಲ್ಲ, ಇಡಿಯ ಪ್ರಪಂಚದ ತುಂಬೆಲ್ಲ ಕ್ರಾಂತಿಯನ್ನು ಉಂಟುಮಾಡಿತೆಂದು ಅನ್ನಲು ಎಳ್ಳಷ್ಟೂ ಅಭ್ಯಂತರವಿಲ್ಲ. ಈ ಜಾಹೀರುನಾಮೆಯಲ್ಲಿ ಒಟ್ಟು ೧೭ ಕಲಮುಗಳಿವೆ. ಅವುಗಳಲ್ಲಿ ಈ ಕೆಳಗಿನವು ಮಹತ್ವದವುಗಳು.

(೧) ಮನುಷ್ಯರೆಲ್ಲರೂ ಹುಟ್ಟಿನಿಂದ ಸಮಾನ ದರ್ಜೆಯವರು. ಅವರು ಸಾಯುವವರೆಗೂ ಸಮಾನ ದರ್ಜೆಯವರೇ ಆಗಿರುತ್ತಾರೆ. ಜನರ ಹಿತಕ್ಕೆಂದೇ ಅವರ ದರ್ಜೆಗಳಲ್ಲಿ ವ್ಯತ್ಯಾಸವನ್ನು ಮಾಡಬಹುದಾಗಿದೆ. ಉಳಿದಂತೆಲ್ಲ ಅವರ

ಸಮಾನ ದರ್ಜೆ ಕಾಯಮಾಗಿ ಉಳಿಯತಕ್ಕದ್ದು. (೨) ಮೇಲಿನ, ಮಾನವನ ಜನ್ಮಸಿದ್ಧ ಹಕ್ಕುಗಳು ಕಾಯಮ್ಮಾಗಿ ಉಳಿಯಬೇಕೆನ್ನುವುದೇ ರಾಜಕೀಯದ ಅಂತಿಮ ಗುರಿಯಾಗಿ ಇರತಕ್ಕದ್ದು.

(೩) ಇಡಿಯ ಪ್ರಜೆಯೇ ಅಧಿಕಾರದ ತಾಯಿನಾಡು, ಪ್ರಜೆಯು ಯಾವುದೇ ವ್ಯಕ್ತಿ, ಸಮುದಾಯ ಇಲ್ಲವೆ ವರ್ಗಕ್ಕೆ ವಿಶಿಷ್ಟವಾದ ಹಕ್ಕುಗಳನ್ನು ನೀಡಿರದಿದ್ದರೆ - ರಾಜಕೀಯ ಇಲ್ಲವೆ ಧಾರ್ಮಿಕದಂತಹಬೇರಾವ ಆಧಾರದಿಂದಲೂ ಅವುಗಳನ್ನು ಒಪ್ಪಿಕೊಳ್ಳಲಾಗದು.

(೪) ಯಾವುದೇ ವ್ಯಕ್ತಿಗೆ ತನ್ನ ಜನ್ಮಸಿದ್ಧ ಹಕ್ಕುಗಳಂತೆ ನಡೆದುಕೊಳ್ಳುವ ಪೂರ್ತಿ ಸ್ವಾತಂತ್ರ್ಯವಿದೆ. ಇನ್ನೊಬ್ಬನಿಗೆ ಅವನ ಜನ್ಮಸಿದ್ಧ ಹಕ್ಕುಗಳನ್ನು ಉಪಭೋಗಿಸುವ ಅವಕಾಶವನ್ನು ಒದಗಿಸುವ ಮಟ್ಟಿಗೆ ಮಾತ್ರ ಅವುಗಳನ್ನು ಒಂದು ಮಿತಿಗೆ ಒಳಪಡಿಸಬಹುದು. ಕಾನೂನಿನಿಂದ ಈ ಮಿತಿಯನ್ನು ನಿರ್ಧರಿಸಬಹುದು. ಧರ್ಮಶಾಸ್ತ್ರ ಇಲ್ಲವೆ ಇನ್ನಾವ ಆಧಾರದಿಂದಲೂ ಇದನ್ನು ತೀರ್ಮಾನಿಸಲಾಗದು.

(೫) ಸಮಾಜಕ್ಕೆ ನಷ್ಟವನ್ನು ಉಂಟುಮಾಡಬಹುದಾದ ಸಂಗತಿಗಳನ್ನು ಕೈಗೊಳ್ಳುವುದನ್ನು ಕಾನೂನಿನಿಂದ ನಿಷೇಧಿಸಲು ಸಾಧ್ಯ. ಎಲ್ಲರಿಗೂ ಕಾನೂನಿನನ್ವಯ ನಿಷೇಧಿಸಿರದ ಸಂಗತಿಗಳನ್ನು ಮಾಡುವ ಸ್ವಾತಂತ್ರ್ಯ ಇರತಕ್ಕದ್ದು. ಇದೇ ರೀತಿಯಾಗಿ ಯಾರನ್ನೂ, ಕಾನೂನಿನಿಂದ ಆವಶ್ಯಕವೆಂದು ನಿರ್ಧರಿಸದೆ ಇದ್ದ ಸಂಗತಿಗಳನ್ನು ಮಾಡುವಂತೆ ಬಲವಂತಕ್ಕೆ ಒಳಪಡಿಸಲಾಗದು.

೬) ಕಾನೂನೆಂದರೆ ಒಂದು ವಿಶಿಷ್ಟ ವರ್ಗವು ನಿರ್ಧರಿಸಿದ ಕಟ್ಟುಪಾಡುಗಳಲ್ಲ. ಅದು ಯಾವ ಬಗೆಯಾಗಿರಬೇಕು, ಎನ್ನುವುದನ್ನು ತೀರ್ಮಾನಿಸುವ ಹಕ್ಕು ಪ್ರಜೆಗಳಿಗೆ ಅಥವಾ ಅವರಿಂದ ನೇಮಕಗೊಂಡ ಪ್ರತಿನಿಧಿಗಳಿಗೆ ಇದೆ. ಒಂದು ಕಾನೂನು ಸಂರಕ್ಷಕವಿರಲಿ ಇಲ್ಲವೆ ಆಡಳಿತಾತ್ಮಕವಾಗಿರಲಿ, ಅದು ಎಲ್ಲರಿಗೂ ಸಮಾನವಾಗಿ ಇರತಕ್ಕದ್ದು. ಎಲ್ಲ ಬಗೆಯ ವ್ಯವಸ್ಥೆಯನ್ನು ಸಮಾನತೆಯ ತತ್ತ್ವವನ್ನಾಧರಿಸಿಯೇ ಮಾಡಬೇಕಿದ್ದುದು ನ್ಯಾಯವಾದ ಕಾರಣ, ಯಾವುದೇ ಬಗೆಯ ಮಾನಮರ್ಯಾದೆ, ಅಧಿಕಾರ ಹಾಗೂ ವೃತ್ತಿಗಳಿಗಾಗಿ ಎಲ್ಲರೂ ಸಮಾನರಾಗಿ ಪಾತ್ರರು. ತಪ್ಪಿ ಇದರಲ್ಲೇನಾದರೂ ಏರುಪೇರಾದರೆ ಅದು ಕೇವಲ ವ್ಯಕ್ತಿಗತವಾದ ಗುಣದೋಷಗಳಿಂದಾಗಿ ಆಗಲು ಸಾಧ್ಯ, ಹುಟ್ಟಿನಿಂದಲ್ಲ.

ನಮ್ಮೀ ಸಭೆಯು ಇಂದಿನಿಂದ ಫ್ರೆಂಚ್ ರಾಷ್ಟ್ರೀಯ ಸಭೆಯ ಪ್ರತಿಮೆಯನ್ನು ತನ್ನ ಕಣ್ಣು ಮುಂದೆ ಇರಿಸಿಕೊಳ್ಳಬೇಕೆಂದು ನನಗೆ ಅನ್ನಿಸುತ್ತದೆ. ಅದು ಫ್ರೆಂಚ್ ರಾಷ್ಟ್ರದ ಸಂವರ್ಧನೆಗಾಗಿ ಗೊತ್ತುಪಡಿಸಿದ ಹಾಗೂ ಸುಧಾರಿಸಿದ ರಾಷ್ಟ್ರಗಳು ಒಪ್ಪಿಕೊಂಡ ದಾರಿಯನ್ನೇ ಹಿಂದೂ ಸಮಾಜದ ಸಂವರ್ಧನೆಗಾಗಿ ಈ ಸಭೆಯು ಗೊತ್ತುಪಡಿಸಬೇಕು ಹಾಗೂ ಬೇಟೀಬಂದಿಯಿಂದ ಹಿಡಿದು ಬೇಟೀಬಂದಿಗಳ ವರೆಗಿನ ವರ್ಣಾಶ್ರಮ ಧರ್ಮದ ಚೌಕಟ್ಟಿನ

ಮೊಳೆಗಳನ್ನು ಕಿತ್ತೆಸೆದು ಹಿಂದೂ ಸಮಾಜವನ್ನು ಒಂದು ವರ್ಗವನ್ನಾಗಿ ಮಾಡಬೇಕು. ಅದರ ಹೊರತು ಅಸ್ಪೃಶ್ಯತೆ ತೊಲಗಲಾರದು, ಸಮತೆ ಸ್ಥಾಪನೆಗೊಳ್ಳಲಾರದು." ೧

೧ : 'ಬಹಿಷ್ಕೃತ ಭಾರತ' . ತಾ. ೩ ಫೆಬ್ರುವರಿ ೧೯೨೮.

## ಪರಿಶಿಷ್ಟ-೧೮ ಫ್ರೆಂಚ್ ರಾಜ್ಯಕ್ರಾಂತಿ ೪೬೭

ಈ ಕ್ರಾಂತಿಗೆ ಮೊದಲು ಫ್ರಾನ್ಸಿನಲ್ಲಿ ಕೆಳಕಂಡ ವರ್ಗವ್ಯವಸ್ಥೆ ಇದ್ದಿತು.

೧ನೆಯ ವರ್ಗ - ಕ್ರಿಸ್ತ ಪಾದ್ರಿಗಳು, ಬಿಶಪ್ ಹಾಗೂ ಅರ್ಚ್ ಬಿಶಪ್, ಅವರ ಜೀವನಕ್ರಮವು ಐಶ್ವರ್ಯಶಾಹಿಯ ಸ್ವರೂಪದ್ದಾಗಿದ್ದು, ತಮ್ಮನ್ನು ಪಾದ್ರಿ ವರ್ಗಕ್ಕಿಂತ ಮೇಲಿನವರೆಂದು ಬಗೆಯುತ್ತಿದ್ದರು. ೨ನೆಯ ವರ್ಗ - ಸುಪ್ರತಿಷ್ಠಿತರು, ಶ್ರೀಮಂತ ವರ್ಗ, ಬಡವರ ಬಗೆಗಿನ ವಿಷಮತೆ, ದ್ವೇಷ, ಮೊದಲಾದವನ್ನು ಹೊಂದಿದವರು.

೩ನೆಯ ವರ್ಗ - ಬಡವರು, ಕೃಷಿಕರು, ಕಾರ್ಮಿಕರು, ದಿನಗೂಲಿಯವರು ಮತ್ತು ಇತರ ಸಾಮಾನ್ಯರು, ಕಡುಬಡವರು, ಚಿಕ್ಕಪುಟ್ಟ ಮನೆಗಳಲ್ಲಿ ವಾಸಿಸುವವರು, ದುಃಖಿತರು, ಯಾರನ್ನೂ ಅವರ ಬದಿಯನ್ನು ಕೇಳಿಕೊಳ್ಳದೆ ಎಷ್ಟೆಷ್ಟೋ ದಿನಗಳ

ಕಾಲ ಸೆರೆಮನೆಯಲ್ಲಿ ಇರಿಸುವುದು, ಒಂದೇ ಬಗೆಯ ಅಪರಾಧಕ್ಕಾಗಿ ವರ್ಗಕ್ಕೆ ತಕ್ಕಂತೆ ಬೇರೆ ಬೇರೆ ಬಗೆಯ ಶಿಕ್ಷೆಗಳನ್ನು ವಿಧಿಸುವುದು.

ಸಾಮಾನ್ಯರಲ್ಲಿ ಚೇತನವನ್ನು ಹುಟ್ಟುಹಾಕಲೆಂದು, ಬುದ್ಧಿವಾದಿಗಳು ಹಾಗೂ ತಜ್ಞರು ಈ ಕ್ರಾಂತಿಯ ಮುಹೂರ್ತದಲ್ಲಿ ಬಹುಮುಖ್ಯವಾದ ಕೆಲಸವನ್ನು ಮಾಡಿದ್ದರು. ಅವರಲ್ಲಿ ಪ್ರಮುಖರೆಂದರೆ ಮಾಂಟೆಸ್ಕ್ಯೂ (೧೬೮೯-೧೭೫೫), ವಾಲ್ಟೇರ್ (೧೬೯೪-೧೭೭೪) ಹಾಗೂ ರೂಸೋ (೧೭೧೨-೧೭೭೮) ಇವರನ್ನು ಉಲ್ಲೇಖಿಸಲಾಗುತ್ತದೆ. ಅವರು ಪ್ರಖರತೆಯಿಂದ ಮಾನವತಾವಾದಿ ನಿಲುವನ್ನು ತಳೆದು ವಿಷಮತೆಯ ಧಿಕ್ಕಾರ, ಅಸಮತೆಯನ್ನು ಆಧರಿಸಿದ ಧರ್ಮವ್ಯವಸ್ಥೆಗಳಿಗೆ ಆಘಾತ, ರೂಢಿ, ಸಂಪ್ರದಾಯ ಹಾಗೂ ಮೂಢನಂಬಿಕೆಗಳ ಮೇಲೆ ಕಠೋರ ಪ್ರಹಾರಗಳನ್ನು ಮಾಡಿ, ವರ್ಗವ್ಯವಸ್ಥೆಯ ಬೆತ್ತಲೆ ಸ್ವರೂಪವನ್ನು ಜನರೆದುರು ನಿಲ್ಲಿಸಿದರು. ಇದರೊಟ್ಟಿಗೆ, ಮಾನವನು ಸ್ವಾಭಾವಿಕವಾಗಿಯೇ ಸದಾಚಾರಿ, ನೇರ, ಸ್ವತಂತ್ರ, ನಂಬಿಗಸ್ಥನು, ಸಮಾನತಾವಾದಿಯಾಗಿದ್ದರೂ ಎಲ್ಲ ಬಗೆಯ ಸರಪಳಿಗಳಿಂದ ಕಟ್ಟಿ ಹಾಕಲಾದವನು, ಎಂಬ ದೃಷ್ಟಿಕೋನದಿಂದ ರೂಸೋ ಇವನು ಸಾಮಾಜಿಕ, ಧಾರ್ಮಿಕ ಪ್ರಬೋಧನೆಯನ್ನು ಮಾಡಿದನು.

ತಾ, ೫ ಅಕ್ಟೋಬರ್ ೧೭೮೯ ರಂದು ಸ್ತ್ರೀಯರು ತಮ್ಮ ಕೈಯಲ್ಲಿ ಕೋಲು ಹಾಗೂ ಗದೆಗಳನ್ನು ಹಿಡಿದುಕೊಂಡು ಪ್ಯಾರಿಸ್ಸಿನಿಂದ ವರ್ಸಾಯಿಲ್‌ದ ವರೆಗೆ ರೊಟ್ಟಿ -ರೊಟ್ಟಿ -ರೊಟ್ಟಿ ಎಂಬ ಘೋಷಣೆಯನ್ನು ಕೂಗುತ್ತ ಮೆರವಣಿಗೆ ಹೊರಟು ತಾ, ೫ ಅಕ್ಟೋಬರ್ ೧೭೮೯ ರಂದು ಅರಮನೆಗೆ ಮುತ್ತಿಗೆ ಹಾಕಿದ ಕಾರಣ ರಾಜ, ರಾಣಿ, ಮಕ್ಕಳು ಪ್ಯಾರಿಸ್ಸಿಗೆ ಓಡಿ ಹೋದರು.

ಈ ಕ್ರಾಂತಿಯ ಮುಂದಾಳುತನವು ಎರಡನೆಯ ವರ್ಗದವರ ಕೈಯಲ್ಲಿತ್ತು. ಮೊದಲ ಶ್ರೇಣಿಯ ಬಿಶಪ್ ಹಾಗೂ ಆರ್ಚ್ ಬಿಶಪ್ ಇವರನ್ನು ಬಿಟ್ಟರೆ ಉಳಿದ ಪಾದ್ರಿಗಳು ಹಾಗೂ ಮೂರನೆಯ ವರ್ಗದ ಜನರೆಲ್ಲರೂ ಅದರಲ್ಲಿ ಪಾಲ್ಗೊಂಡಿದ್ದರು.

**ಕ್ರಾಂತಿಯ ಪರಿಣಾಮ ಹಾಗೂ ಮಹತ್ವ :** ಸ್ವಾತಂತ್ರ್ಯ, ಸಮತೆ ಹಾಗೂ ವಿಶ್ವಬಂಧುತ್ವಗಳೆಂಬ ಮೂರು ತತ್ತ್ವಗಳು ಮೇಲಿನ ಕ್ರಾಂತಿಕಾರಕ ಸುಧಾರಣೆಗಳಿಗೆ ಪ್ರೇರಣೆಯಾಗಿದ್ದವು. ಅವುಗಳ ಜೊತೆಗೆ ಈ ಕ್ರಾಂತಿಯು ಜನರ ಸಾರ್ವಭೌಮತ್ವವನ್ನು ಘೋಷಿಸಿತ್ತು. ಈ ಮೂರು ತತ್ವಗಳು ಕ್ರಾಂತಿಯ ಕಾಲಕ್ಕೆ ಸಾರ್ವಜನಿಕ ಕಟ್ಟಡಗಳ ಮೇಲೆ ರಾರಾಜಿಸುತ್ತಿದ್ದವು. ನೆಪೋಲಿಯನ್ನನು ಸರ್ವಾಧಿಕಾರವನ್ನು ಸ್ಥಾಪಿಸಿದ ತರುವಾಯದಲ್ಲಿ ಕೂಡ ಈ ಶಬ್ದಗಳನ್ನು

ಅಳಿಸದೆ ಹಾಗೆಯೇ ಇರಗೊಡಲಾಗಿತ್ತು. ಭಾಷಣ, ಲೇಖನ, ಪ್ರಕಟನೆ, ಧಾರ್ಮಿಕ ಹಾಗೂ ಖಾಸಗಿ ಸೊತ್ತುಗಳನ್ನು ಕೂಡ ಸ್ವಾತಂತ್ರದ ಕಲ್ಪನೆಯಲ್ಲಿ ಒಪ್ಪಿಕೊಳ್ಳಲಾಗಿತ್ತು. ಸಮತೆಯ ಕಲ್ಪನೆಯಲ್ಲಿ, ಸಾಮಂತ ವರ್ಗ ಹಾಗೂ ಅವರ ವಿಶೇಷ ಅಧಿಕಾರಗಳನ್ನು



ಕೊನೆಗೊಳಿಸುವುದು, ನಾಗರಿಕರೆಲ್ಲರಿಗೆ ವರ್ಗದಾಚೆಗಿನ ಸಮಾನ ಅವಕಾಶ ಹಾಗೂ ಕಾನೂನಿನೆದುರು ಸಮಾನತೆಯನ್ನು ನೀಡುವುದು, ಎಂಬ ಸಂಗತಿಗಳು ಒಳಗೊಂಡಿದ್ದವು. ವಿಶ್ವಬಂಧುತ್ವವೆಂದರೆ ಪ್ರಪಂಚದಲ್ಲಿ ಸ್ವಾತಂತ್ರ ಹಾಗೂ ಸಮಾನತೆಗಳನ್ನು ನಂಬುವವರು ಹಾಗೂ ಈ ತತ್ತ್ವಗಳನ್ನು ಅನುಷ್ಠಾನಕ್ಕೆ ತರಲೆಂದು ಹೋರಾಡುವ ಯಾವುದೇ ದೇಶದವರೆಲ್ಲರೂ ಪರಸ್ಪರರ ಬಂಧುಗಳು ಎಂದರ್ಥ.. ಸಶಸ್ತ್ರ ಕ್ರಾಂತಿಗಿಂತ ಮೊದಲೇ ವೈಚಾರಿಕ ಕ್ರಾಂತಿಯನ್ನು ಉಂಟುಮಾಡಿದ ಫ್ರೆಂಚ್ ತತ್ತ್ವವೇತ್ತರು ತಮ್ಮ ಲೇಖನಗಳ ಮೂಲಕ ಸ್ವಾತಂತ್ರ್ಯ, ಸಮತೆ ಹಾಗೂ ವಿಶ್ವಬಂಧುತ್ವಗಳಂತೆಯೇ ಜನರ ಸಾರ್ವಭೌಮತ್ವದ ಪರಿಕಲ್ಪನೆಗಳ ಪ್ರಸಾರವನ್ನು ಮಾಡಿದ್ದರು. ಈ ಪರಿಕಲ್ಪನೆಯನ್ನು ರೂಪುಗೊಳಿಸಲು ಕ್ರಾಂತಿಯು ಹುಂಬುತನದಿಂದ ಯತ್ನಿಸಿತು. ಕ್ರಾಂತಿಗೆ ಅಂತರರಾಷ್ಟ್ರೀಯ ಸ್ವರೂಪ ಪ್ರಾಪ್ತವಾದುದು ಯುರೋಪಿನ ಜನರಿಂದಾಗಿ ಅಲ್ಲ, ಫ್ರೆಂಚ್ ಸೈನ್ಯದಿಂದಾಗಿ ! ಫ್ರಾನ್ಸಿನಾಚೆಗೆ ಕ್ರಾಂತಿಯನ್ನು ಒಪ್ಪಿಕೊಳ್ಳದಿದ್ದರೂ ಅಲ್ಲಿ ಅದನ್ನು ಹೇರಲಾಗಿತ್ತು. ತತ್ಯಗಳಿಗಿಂತ ಹೆಚ್ಚಾಗಿ ಪರಿಸ್ಥಿತಿಯ ಆವಶ್ಯಕತೆಯ ಪ್ರಭಾವವು ಅವರ ಕೃತಿಯ ಮೇಲೆ ಬಿದ್ದಿತ್ತು. ಪ್ರಜಾಪ್ರಭುತ್ವ ಹಾಗೂ ಸಾಮಾಜಿಕ ನ್ಯಾಯದ ಈ ಬಗೆಯ ಕಲ್ಪನೆಗಳು ಯುರೋಪಿನ ಸಾಮಾಜಿಕ ಸಮತೆಯ ಸಂದರ್ಭದ ವಿಚಾರಗಳಲ್ಲಿ ಕಾಯಮ್ಮಾಗಿ ಬೇರುಬಿಟ್ಟವು. ಯುರೋಪು ಹಾಗೂ ಬೇರೆಡೆಗಳಲ್ಲಿ ಈ ಕಲ್ಪನೆಯನ್ನು ಮೂರ್ತರೂಪಕ್ಕೆ ತರುವ ಯತ್ನಗಳು ನಡೆದುದು ಮುಂದಿನ ಇತಿಹಾಸದಿಂದ ಕಂಡುಬರುತ್ತದಲ್ಲದೆ ಅವು

ಆಧುನಿಕ ಯುಗದಲ್ಲೂ ಮುಂದುವರಿದಿವೆ. ಇದೇ ರೀತಿಯಾಗಿ ಬೆಲೆ ನಿಯಂತ್ರಣ, ಸೊತ್ತನ್ನು ವಶಪಡಿಸಿಕೊಳ್ಳುವುದು ಮೊದಲಾದ ಕ್ರಾಂತಿಕಾಲದಲ್ಲಿ ಮಾಡಬೇಕಾಗಿ ಬಂದ ಸಂಗತಿಗಳಿಂದಾಗಿ ಈ ಕಾಲದ ಕೆಲವು ವಿಚಾರವಂತರಿಗೆ ಸಮಷ್ಟಿವಾದದ ಪ್ರೇರಣೆಯು ಲಭಿಸಿತು. ಕ್ರಾಂತಿಕಾರಕರ ಬಂಧುತ್ವ ಹಾಗೂ ಅಂತರರಾಷ್ಟ್ರೀಯ ಏಕಾತ್ಮತೆಯನ್ನು ಪ್ರಪಂಚದ ಗಮನಕ್ಕೆ ತಂದುಕೊಡಲೆಂದು, ಫ್ರೆಂಚ್ ನಾಯಕನಾದ ಲಾಫಾಮ್ ಇವನು ಅಮೇರಿಕೆಯ ಅಧ್ಯಕ್ಷನಾದ ಜಾರ್ಜ್ ವಾಶಿಂಗ್ಟನ್ನನಿಗೆ ಬಸ್ತೀಲ್ದ ಬೀಗದ ಕೈಗಳನ್ನು ಕೊಡುವಂತೆ ಅವುಗಳನ್ನು ಇಂಗ್ಲಿಷ್ ಕ್ರಾಂತಿಕಾರಕರಾದ ಟಾಮಸ್ ಪೇನ್ ಇವನಿಗೆ ಒಪ್ಪಿಸಿದನು. ಫ್ರಾನ್ಸ್ ಟಾಮಸ್ ಪೇನ್ ಹಾಗೂ ಜೆರೆಮಿ ಬೆಥ್ಯಾಮ್ ಇವರಿಗೆ ತನ್ನ ಪೌರ ಹಕ್ಕುಗಳನ್ನು ನೀಡಿತು. ಕ್ರಾಂತಿಯ ತತ್ವಗಳು ಹಾಗೂ ಮೇಲಿನ ಘಟನೆಗಳನ್ನು ಕುರಿತು ಯೋಚಿಸಿದರೆ ಫ್ರೆಂಚ್ ರಾಜ್ಯಕ್ರಾಂತಿಯ ತಳಹದಿಯು ಅಂತರರಾಷ್ಟ್ರೀಯ ಸ್ವರೂಪದ್ದಾಗಿತ್ತೆಂಬುದು ನಮ್ಮ ಗಮನಕ್ಕೆ ಬಂದೀತು. ಎರಡನೆಯ ಮಹತ್ವದ ಪರಿಣಾಮವೆಂದರೆ ಫ್ರಾನ್ಸ್ ಹಾಗೂ ಫ್ರೆಂಚರ ವಶದಲ್ಲಿದ್ದ ಇತರ ದೇಶಗಳಲ್ಲಿ ರಾಷ್ಟ್ರೀಯತ್ವದ ಭಾವನೆಯು ಹುಟ್ಟಿಕೊಂಡುದು, ರಾಷ್ಟ್ರವಾದಕ್ಕೆ ಪ್ರೋತ್ಸಾಹನೆ ಲಭಿಸಿದುದು ಮತ್ತು ಇಪ್ಪತ್ತನೆಯ ಶತಮಾನದ ರಾಜಕೀಯ ಜಾಗೃತಿಯ ಮೇಲೂ ಅದರಿಂದಾದ ಪರಿಣಾಮ, ಕ್ರಾಂತಿಕಾರಕ ಸೈನ್ಯಗಳು ಪರಕೀಯ ರಾಜಮನೆತನವನ್ನು ಹೊರದೂಡಿದುದು ನಿಜ. ಆದರೆ ಕ್ರಾಂತಿಯ ಪ್ರಸಾರವನ್ನು ಮಾಡಲು ಹೊರಟ ಫ್ರೆಂಚ್ ಸೇನೆಯಲ್ಲಿ ದಿನದಿಂದ ದಿನಕ್ಕೆ ಸ್ವಾರ್ಥ ಹಾಗೂ ಆಕ್ರಮಣಶೀಲ ರಾಷ್ಟ್ರವಾದವು ಸಂಚರಿಸಿದ್ದರಿಂದ, ಅದರ ಪ್ರತಿಕ್ರಿಯೆಯೆಂದು ವಿರೋಧಿ ದೇಶಗಳ ಜನರಲ್ಲಿ ಸ್ವತ್ವದ, ಅಂದರೆ ರಾಷ್ಟ್ರೀಯತ್ವದ ಭಾವನೆಯು ಪ್ರಖರವಾದುದು ಕಂಡುಬರುತ್ತದೆ. ಫ್ರೆಂಚ್ ರಾಷ್ಟ್ರದ ಯಶಸ್ಸು ಹಾಗೂ ನೆಪೋಲಿಯನ್ನನ ಮರ್ಯಾದೆಗಾಗಿ ತಾವು ಅವರ ಆಡಳಿತೆಯನ್ನು ಸಹಿಸಿಕೊಳ್ಳಬೇಕಾದುದು ಸ್ಪೇನ್, ಹಾಲಂಡ್, ಆಷ್ಟ್ರಿಯದಂತಹ ದೇಶಗಳ ಜನರಿಗೆ ಅವಮಾನದ ಸಂಗತಿಯಾಗಿ ತೋರಹತ್ತಿತು. ಅನ್ಯಾಯ ಹಾಗೂ ಅವಮಾನಗಳ ಅರಿವಿನಿಂದಾಗಿ ಅವರಲ್ಲಿ ರಾಷ್ಟ್ರೀಯ ಭಾವನೆಯು ಪುಟಿದೆದ್ದಿತು.



ಅವರಲ್ಲಿ ಹೊಸ ಸರಕಾರವನ್ನು ಸ್ಥಾಪಿಸಬೇಕೆಂಬ ಹೊಸ ಗುರಿ ತಲೆದೋರಿತು. ಯುರೋಪಿನ ಹಳೆಗಾಲದ ಸಾಮಾಜಿಕ ಹಾಗೂ ರಾಜಕೀಯ ಶಿಸ್ತು ಹದಗೆಟ್ಟ ಕಾರಣ ಈ ಕ್ರಾಂತಿಯಿಂದ ಹತ್ತೊಂಬತ್ತನೆಯ ಶತಮಾನದ ಮಧ್ಯದಲ್ಲಿ ಇಟಲಿ

ಹಾಗೂ ಜರ್ಮನಿಗಳ ಏಕೀಕರಣದ ಚಳುವಳಿಯು ಶುರುವಾಗಲು ವೇಗ ಬಂದಿತು. ಈ ರೀತಿಯಾಗಿ ಫ್ರೆಂಚ್ ರಾಜ್ಯಕ್ರಾಂತಿಯಿಂದ ಅಚಾನಕ್ಕಾಗಿ ಯುರೋಪಿನ ರಾಷ್ಟ್ರವಾದಕ್ಕೆ ಸ್ಫೂರ್ತಿ ಲಬಿಸಿತು. ಅದರಿಂದಾಗಿ ಹತ್ತೊಂಬತ್ತನೆಯ ಶತಮಾನದಲ್ಲಿ ಈ ರಾಷ್ಟ್ರವಾದಿ ಚಳುವಳಿಗಳು ಬಿರುಸಿನಿಂದ ಬೆಳೆದವು.

ಆಧುನಿಕ ವಿಚಾರವಂತರು ಹಲವು ಬಗೆಯಾಗಿ ಫ್ರೆಂಚ್ ಕ್ರಾಂತಿಯ ಮೌಲ್ಯಮಾಪನವನ್ನು ಮಾಡುತ್ತಾರೆ. ಆದರೆ ಕ್ರಾಂತಿಯ ಗುರಿಗಿಂತ ಅದರ ಸಂಪ್ರದಾಯ ಹೆಚ್ಚು ವ್ಯಾಪಕವಾದುದು. ಅದು ಕ್ರಾಂತಿಕಾರಕ ಪ್ರಕ್ರಿಯೆಗೆ ಅಧಿಕೃತ ಮನ್ನಣೆ, ಕ್ರಾಂತಿಯ ದಾರಿಯಾಗಿ ದೊಡ್ಡ ಗುರಿಯನ್ನು ತಲುಪುವ ಸಾದ್ಯತೆ, ಕ್ರಾಂತಿಮಾರ್ಗದ ಪ್ರಚಾರ ಹಾಗೂ ಕೃತಿಗಳ ಪಾಠವನ್ನು ಯುರೋಪಿನ ಜನರಿಗೆ ನೀಡಿತು. ಕ್ರಾಂತಿಯ ಪರಿಕಲ್ಪನೆ ಹಾಗೂ ಸಿದ್ಧಾಂತಗಳು ಈ ಸಾಮೂಹಿಕ ಅನುಭವದಿಂದ ಹುಟ್ಟಿಬಂದವು. ಸದ್ಯದ ಪರಿಸ್ಥಿತಿಯನ್ನು ಮಾರ್ಪಡಿಸಿ ಜೀವನವನ್ನು ಇನ್ನಷ್ಟು ಪ್ರಗತಿಶೀಲವನ್ನಾಗಿ ಮಾಡಲೆಂದು ಹೋರಾಡುವ ಮಾನವನು ಸ್ಫೂರ್ತಿಸ್ಥಾನಗಳನ್ನು ಈ ಇತಿಹಾಸದಲ್ಲಿ ಅನ್ವೇಷಿಸಲು ನಿರಂತರವಾಗಿ ಯತ್ನಿಸುತ್ತಾನೆ. ನಿಷ್ಠೆ, ತ್ಯಾಗ ಹಾಗೂ ಕೌತಾತ್ಮಗಳ ಉದಾಹರಣೆಗಳಿಂದ ತುಂಬಿ ತುಳುಕುವ ಫ್ರೆಂಚ್ ರಾಜ್ಯಕ್ರಾಂತಿಯು ಅವನಿಗೆ ನಿಸ್ಸಂದೇಹವಾಗಿಯೂ ಸ್ಫೂರ್ತಿದಾಯಕ ಎನ್ನಿಸಲಿದೆ. ೧

**ಫ್ರೆಂಚ್ ರಾಜ್ಯಕ್ರಾಂತಿಯನ್ನು ಕುರಿತು ಪ್ರತಿಕ್ರಿಯೆ**

**ಒಬ್ಬ ತತ್ತ್ವಚಿಂತಕ :** ಯಾವುದೇ ಕ್ರಾಂತಿಯ ಮುಂದಾಳುತನ, ಅದರ ತತ್ತ್ವಜ್ಞಾನ ಮೊದಲಾದವುಗಳು ರಾಜಕೀಯ ಜನರ ಕಡೆಗೆ ಇರಕೂಡದು. ಮಧ್ಯಮಮಾರ್ಗವೇ ಅದರ ಅಡಿಪಾಯವಾಗಿರತಕ್ಕದ್ದು.

**ಡಾ. ಜೆ, ಇ, ಸ್ವೇನ್ :** ಈ ಕ್ರಾಂತಿಯೆಂದರೆ ಪ್ರಜಾಪ್ರಭುತ್ವದ ವಿಜಯವೆಂದು ಇಡಿಯ ವಿಶ್ವವು ಜಯಜಯಕಾರವನ್ನು ಮಾಡುತ್ತಿದೆ.

೧ : ಮರಾಠೀ ವಿಶ್ವಕೋಶ-೧೦, ಪು. ೧೧೨೪-೧೧೨೫.

**ಪರಿಶಿಷ್ಟ-೧೯**

**ನಾರೀವಾದ**

೧೯೧೯ ರಲ್ಲಿ ಜರ್ಮನಿಯಲ್ಲಿ ಸ್ಥಾಪನೆಗೊಂಡ ನ್ಯಾಶನಲ್ ಸೋಸಿಯಾಲಿಸ್ಟ್ ವರ್ಕರ್ಸ್ ಪಾರ್ಟಿಯ ಮೂಲ ಜರ್ಮನ್ ಅಧ್ಯಕ್ಷರಗಳಿಂದಾಗಿ ಅದಕ್ಕೆ ನಾಝೀ ಪಕ್ಷ ಎಂಬ ಹೆಸರು ರೂಢಿಗೆ ಬಂದಿತು. ಹಿಟ್ಲರ್‌ನು ೧೯೦೨ರಲ್ಲಿ ಆ ಪಕ್ಷದ ಸದಸ್ಯನೂ, ತರುವಾಯದಲ್ಲಿ ಅದರ ಪರಮೋಚ್ಚ ನಾಯಕನೂ ಆದನು.

ಇದಕ್ಕೂ ಮೊದಲು ಇಟಲಿಯಲ್ಲಿ ಮುಸೋಲಿನಿಯ ಫ್ಯಾಸಿಸ್ಟ್ ಪಕ್ಷವು ಸತ್ತೆಯನ್ನು ವಶಪಡಿಸಿಕೊಂಡು ಫ್ಯಾಸಿಸಮ್‌ದ ಸರ್ವಾಧಿಕಾರಿ ತತ್ತ್ವಜ್ಞಾನಕ್ಕೆ ಸತ್ತೆಯನ್ನು ತಂದುಕೊಟ್ಟಿತ್ತು. ಹೀಗಾಗಿ ನಾಝೀಗಳನ್ನು ಕೆಲವು ಕಾಲ ಫ್ಯಾಸಿಸ್ಟ್ ರೆಂದು ಕರೆಯಲಾಗುತ್ತಿತ್ತು. ಮುಸೋಲಿನಿಯ ಫ್ಯಾಸಿಸಮ್ ಹಾಗೂ ಹಿಟ್ಲರ್‌ನ ನಾಝಿವಾದಗಳಲ್ಲಿ ಬಹುಮಟ್ಟಿಗೆ ಹೋಲಿಕೆ ಇದ್ದರೂ ನಾಝೀವಾದವು ಸ್ವತಂತ್ರವೂ, ಬೇರೆ ಬಗೆಯದೂ ಆಗಿತ್ತು. ಹಿಟ್ಲರ್‌ನ ಆತ್ಮಚರಿತ್ರೆ ಹಾಗೂ ಬೇರೆ ಬೇರೆ ಸನ್ನಿವೇಶಗಳಲ್ಲಿ ಅವನು ಮಾಡಿದ ಭಾಷಣಗಳಲ್ಲಿ ತನ್ನ ವಿಚಾರ ಹಾಗೂ ಕಲ್ಪನೆಗಳನ್ನು ಪ್ರತಿಪಾದಿಸಿರುವನು. ನಾಝೀವಾದದ ಯೋಚನೆಯು ವ್ಯಕ್ತಿಯಿಂದ ಶುರುವಾಗುವುದಿಲ್ಲ. ರಾಷ್ಟ್ರವು ಈ ಪ್ರಣಾಲಿಯ ಕೇಂದ್ರಬಿಂದುವಿನಲ್ಲಿದೆ. ರಕ್ತದ ಬಂಧನದಿಂದಾಗಿ ರಾಷ್ಟ್ರೀಯ ಸಮಾಜವು ಏಕಾತ್ಮವಾಗಿರುತ್ತದೆಂಬುದು ಅವನ ಹೇಳಿಕೆ. ಒಬ್ಬ ವ್ಯಕ್ತಿಯು ಈ ಸಮಾಜದಿಂದ ಸ್ವತಂತ್ರ ಅಥವಾ ಬೇರೆಯವನಲ್ಲ. ಸಮಾಜದ ಮನಸ್ಸು ಮತ್ತು ಇಚ್ಛೆಗಳ ಸ್ವಾತಂತ್ರ್ಯವು ಎಲ್ಲ ವ್ಯಕ್ತಿಗಳ ಇಚ್ಛೆ ಮತ್ತು ಮನಸ್ಸುಗಳಿಗಿಂತ ಬೇರೆಯಲ್ಲದೆ ಅದು ಹೆಚ್ಚು ಮಹತ್ವದ್ದು. ಹಿಟ್ಲರ್‌ನ ಯೋಚನೆಯು ಅಮೆರಿಕೆ ಹಾಗೂ ಫ್ರೆಂಚ್ ಕ್ರಾಂತಿಗಳು ಮಾನವತೆಗೆ ನೀಡಿದ ವ್ಯಕ್ತಿಸ್ವಾತಂತ್ರ್ಯ, ವ್ಯಕ್ತಿಪ್ರತಿಷ್ಠೆಯ ಪರಿಕಲ್ಪನೆಗಳನ್ನು ಧಿಕ್ಕರಿಸುವಂತಿದೆ. ಹಿಟ್ಲರ್‌ನು ತನ್ನೊಂದು ಭಾಷಣದಲ್ಲಿ ಇದನ್ನು ಸ್ಪಷ್ಟಪಡಿಸಿದನು. ವ್ಯಕ್ತಿಯ ಉದಾರ ಮತವಾದದ ಕಲ್ಪನೆ ಹಾಗೂ ಮಾನವತೆಯ ಮಾರ್ಕ್ಸವಾದದ ಪರಿಕಲ್ಪನೆಗಳನ್ನು ನಾಶಪಡಿಸುವುದು ಅವನ ನಾಝಿಸಮ್ ಕಾರ್ಯಕ್ರಮದ ಮಹತ್ವದ ಭಾಗವಾಗಿದೆ.

ಹಿಟ್ಲರನು ಸಮಾಜ ಅಥವಾ ಜನತೆ ಎಂಬ ಪದಗಳನ್ನು ಬಳಸುತ್ತಿದ್ದನಾದರೂ ಜರ್ಮನ್ ಸಮಾಜವಷ್ಟೇ ಅವನ ಕಣ್ಣೆದುರು ಇರಲಿಲ್ಲ. ಮಾನವ ವಂಶದ ಉಚ್ಚ ನೀಚತೆಯನ್ನು ನಂಬಿಯೇ ಅವನು ತತ್ತ್ವಜ್ಞಾನವನ್ನು ಕಟ್ಟಿದನು. ನಾರ್ಡಿಕ್ ವಂಶವಷ್ಟೇ ಪ್ರಪಂಚದ ಎಲ್ಲಕ್ಕೂ ಶ್ರೇಷ್ಠ ವಂಶ, ಬೇರೆ ದೇಶಗಳವರು ಎರಡನೆಯ ಮಟ್ಟದವರು; ನಾರ್ಡಿಕ್ ಅಂದರೆ ಜರ್ಮನ್ನರು ಶ್ರೇಷ್ಠ ವಂಶದವರಾದ ಕಾರಣ ಜರ್ಮನ್ನರಿಗಷ್ಟೇ ಉಳಿದವರನ್ನು ಆಳುವ ಹಕ್ಕು ಇದೆ, ಎಂಬುದು ಅವನ ಸಿದ್ಧಾಂತವಾಗಿತ್ತು. ಅವನು ಈ ನಾರ್ಡಿಕ್ ವಂಶವನ್ನೇ ಆರ್ಯವಂಶವೆಂದು ಕರೆಯುತ್ತಿದ್ದನು. ಬೇರೆ ಬೇರೆ ಮಾನವಜನಾಂಗಗಳನ್ನು ಒಪ್ಪಿಕೊಳ್ಳುವುದೆಂದರೆ ಒಂದು ಅಪರಾಧವೆಂದು ಅವನಿಗೆ ಅನ್ನಿಸುತ್ತಿತ್ತು.

ಜನಾಂಗಗಳ ನಡುವಿನ ಸಮಾನತೆಯಂತೆಯೇ ಮಾನವ-ಮಾನವರ ನಡುವಿನ ಸಮಾನತೆಯೂ ಒಂದು ಮಹಾಪರಾಧವಾಗಿ ಅವನಿಗೆ ಕಾಣುತ್ತಿತ್ತು. ಬೇರೆ ಬೇರೆ ಮಾನವ ಜನಾಂಗಗಳು ಹಾಗೂ ಬೇರೆ ಬೇರೆ ವ್ಯಕ್ತಿಗಳ ನಡುವಿನ ಸಮಾನತೆಯೇ ಹಿಟ್ಲರನ ವಂಶಸಿದ್ಧಾಂತದ ಅರ್ಥವೆನ್ನಿಸಿತ್ತು.

ಡಾರ್ವಿನ್ನನ ಬದುಕಲು ಸಮರ್ಥನಾದನೇ ಬದುಕುವನು, ಎನ್ನುವ ಸಿದ್ಧಾಂತವನ್ನು ಹಿಟ್ಲರನು ಎತ್ತಿಹಿಡಿಯುವಂತಿತ್ತು. ಜೀವನದಷ್ಟೇ ಜೀವನದ ಸಂಘರ್ಷವೂ ಪುರಾತನವಿದ್ದ ಕಾರಣ ಬಲವುಳ್ಳ ಜೀವಿಯೇ ಬದುಕಿ ಉಳಿಯುವುದು, ದುರ್ಬಲ ಜೀವಿಯು ನಾಶಹೊಂದುವುದು, ಎನ್ನುವುದು ಪ್ರಕೃತಿಯ ಕ್ರಮ. ಮಾನವತೆಯ ತತ್ತ್ವವನ್ನು ಅನುಸರಿಸಿ ಮನುಷ್ಯನು ಪ್ರಾಣಿವಿಶ್ವದಲ್ಲಿ ಶ್ರೇಷ್ಠನೆನ್ನಿಸಲಾರ. ಅವನು ತೀರ ಪಶುವಿನಂತಹ ಹೋರಾಟದ ಮೂಲಕವೇ ತನ್ನನ್ನು ಕಾಪಾಡಿಕೊಳ್ಳಬಲ್ಲನು, ಎಂಬುದು ನಾವಾದದ ಅಲೋಚನೆಯಾಗಿತ್ತು. ಅವನು ಅದಕ್ಕೆ ಸೆಲೆಕ್ಶನ್ ಆಫ್ ದಿ ಫಿಟೆಸ್ಟ್, ಅಂದರೆ ಯೋಗ್ಯತೆಯುಳ್ಳವನೇ ಬದುಕಲು ಆಯ್ಕೆ ಹೊಂದುತ್ತಾನೆ, ಎಂದು ಸೂತ್ರ ರೂಪವನ್ನು ನೀಡಿದನು.

ವಂಶಶ್ರೇಷ್ಠತ್ವ, ಅಸಮಾನತೆ, ಬೇರೆ ಬೇರೆ ವಂಶದವರನ್ನು ಕೀಳೆಂದು ಭಾವಿಸುವ ನಾಲ್ಕು ವಿಚಾರಪ್ರಣಾಲಿಯಲ್ಲಿ ಜ್ಯೂಗಳನ್ನು ಕುರಿತಾದ ಅವನ ದ್ವೇಷವೇ ಮುಖ್ಯವಾಗಿತ್ತು. ಜೂ ಜನರು ಸೈತಾನರು. ಶ್ರೇಷ್ಠ ವಂಶದವರಾದ ಜರ್ಮನ್ನರ ಪುರುಷಾರ್ಥವನ್ನು ಕುಗ್ಗಿಸಲೆಂದು ಅವರು ಬಗೆ ಬಗೆಯ ಕಾರಸ್ಥಾನಗಳನ್ನು ಹೂಡಿದರು. ಕ್ರಿಸ್ಟ್ ಧರ್ಮವೂ ಇಂಥದೇ ಒಂದು ಸಂಚಾಗಿತ್ತು. ನಾಯಿಗಳ ಅಭಿಪ್ರಾಯದ ಮೇರೆಗೆ ಬೋಲ್ಶೆವಿಸಮ್ ಕೂಡ ಜ್ಯಗಳ ಇಂಥದೇ ಒಂದು ಕಾರಸ್ಥಾನವಾಗಿತ್ತು. ಈ ಜ್ಯೂಗಳೇ ಕಮ್ಯುನಿಸ್ಟರಿಂದ ಹಿಡಿದು ಸೂಳೇಗಾರಿಕೆಯವರೆಗಿನ ಎಲ್ಲ ಬಗೆಯ ಭ್ರಷ್ಟತೆ ಹಾಗೂ ಅಧಃಪತನಗಳ ಮೂಲವೆನ್ನುವ ತಲೆತಿರುಕತನದ ನಂಬಿಕೆಯು ನಾಝಿವಾದದ ಪ್ರಣೇತರಲ್ಲಿತ್ತು. ಇದರಿಂದಾಗಿಯೇ ಹೂಗಳ ತಲೆದಂಡದ ಮಾರಣಹೋಮಗಳಂತಹ ಭಯಂಕರವಾದ ಕೃತ್ಯಗಳು ತಲೆಯೆತ್ತಿದವು. ನಾಟ್ಸಿಗಳ ಬಂಧನಾಗಾರಗಳು ಹಾಗೂ ಸಂಹಾರ ಕೇಂದ್ರಗಳೆಂದರೆ ಈ ವಿಚಾರಸರಣಿಯ ಮಾನವೀಯತೆಯ ವಿರೋಧ ಹಾಗೂ ಜ್ಯೋ-ದ್ವೇಷದ ಪರಿಪಾಕವೇ ಆಗಿತ್ತು. ಈ ಬಂಧನಾಗಾರಗಳು ಮನುಷ್ಯರನ್ನು ಕೊಲ್ಲುವ ಮಟ್ಟಿಗೆ ಮಾತ್ರ ಸೀಮಿತಗೊಂಡಿರಲಿಲ್ಲ. ಮನುಷ್ಯರನ್ನು ಕೊಲ್ಲಲು ಇಂಥ ಶಿಬಿರಗಳೇ ಬೇಕೆಂದಿರಲಿಲ್ಲ. ನಾಝಿಗಳಿಗೆ ಅವರನ್ನು ಕೊಲ್ಲುವುದಷ್ಟೇ ಆಗಿರದೆ, ಅಮಾನವೀಯವಾದ ಚಿತ್ರಹಿಂಸೆ ಹಾಗೂ ವಿರೂಪಗೊಳಿಸುವ ಮೂಲಕ ಮಾನವೀಯತೆಯನ್ನು ನಾಶಪಡಿಸುವುದಿತ್ತು. ಅವರ ಮಾನವ ಆತ್ಮ ಹಾಗೂ ಆತ್ಮಪ್ರತಿಷ್ಠೆಗಳನ್ನು ಪೂರ್ತಿಯಾಗಿ ನಾಶಪಡಿಸಿದ ತರುವಾಯವಷ್ಟೇ ಅವರನ್ನು ದೊಡ್ಡ ದೊಡ್ಡ ಒಲೆಗಳಿಗೆ ಎಸೆದು, ಸುಟ್ಟು ಬೂದಿಯನ್ನು ತಯಾರಿಸಲಾಯಿತು. ಅಂದರೇನೇ ನಾಝಿವಾದವು ತಾನು ತಿರಸ್ಕರಿಸುವ ಮಾನವೀಯ ಮೌಲ್ಯಗಳನ್ನು ಸುಟ್ಟು ಬೂದಿಯನ್ನಾಗಿ ಮಾಡಿತು. ಇದು ನಾಝಿವಾದದ ಭಯಂಕರವಾದ ಆವಿಷ್ಕಾರವಾಗಿತ್ತು.

ನಾಝೀವಾದವು ವ್ಯಕ್ತಿಸ್ವಾತಂತ್ರದ ಮೌಲ್ಯವನ್ನು ತಳ್ಳಿ ಹಾಕಿತು. ಅದೇ ರೀತಿ ಅದು ಪ್ರಜಾಪ್ರಭುತ್ವದ ಆಡಳಿತ ಪದ್ಧತಿಯನ್ನು ನಿರಾಕರಿಸಿತು. ಹಿಟ್ಲರನಿಗೆ ೧೯೩೩ ರಲ್ಲಿ ಸರ್ವಾಧಿಕಾರವು ಲಭಿಸುತ್ತಲೇ ಅವನು ಕಾನೂನನ್ನು ರಚಿಸಿ ನಾಝಿ ಪಕ್ಷವನ್ನು ಜರ್ಮನಿಯ ಏಕಮೇವ ಪಕ್ಷವೆಂದು ಘೋಷಿಸಿದನು. ಬೇರೊಂದು ರಾಜಕೀಯ ಪಕ್ಷವನ್ನು ಸ್ಥಾಪಿಸುವ ಯತ್ನವನ್ನು ರಾಷ್ಟ್ರದ್ರೋಹವೆಂದು ಬಗೆಯಲಾಯಿತು. ಹಿಟ್ಲರ ತನ್ನ ಪಕ್ಷದಲ್ಲಿ ಇನ್ನೊಬ್ಬ ಪ್ರತಿಸ್ಪರ್ಧಿ ನಾಯಕನನ್ನು ಒಪ್ಪುತ್ತಿರಲಿಲ್ಲ. ಅವನ ನಾಝಿವಾದದಲ್ಲಿ ನಾಯಕ ತತ್ತ್ವಕ್ಕೆ ತುಂಬ ಮಹತ್ವವಿತ್ತು. ಒಬ್ಬನಾದರೂ ಎದುರಾಳಿ,



ಬಂಡಾಯಗಾರ ನಾಯಕನು ತಯಾರಾದರೆ ಸರ್ವಾಧಿಕಾರದ ಸೌಧ ಕುಸಿದುಬೀಳುವ ಹೆದರಿಕೆ ಇತ್ತು. ಅದರಿಂದಾಗಿ ಪಕ್ಷ, ನಾಯಕನೊಡನೆಯ ಅದರ ಏಕಾತ್ಮಕತೆ ಹಾಗೂ ಏಕನಾಯಕ ತತ್ತ್ವವನ್ನು ಸ್ಥಾಪಿಸಲಾಯಿತು. ಅವನು ಇಡಿಯ ಜರ್ಮನ್ ರಾಷ್ಟ್ರದ ನಾಯೀಕರಣವನ್ನು ಮಾಡಿದನು. ವೃತ್ತಪತ್ರಗಳ ನಾರೀಕರಣ ನಡೆಯಿತು. ನಾರೀಕರಣಕ್ಕೆ ಒಳಗಾಗದವುಗಳನ್ನು ನಿಲ್ಲಿಸಲಾಯಿತು. ಬಾಲತರಗತಿಗಳಿಂದ ಹಿಡಿದು ವಿಶ್ವವಿದ್ಯಾಲಯಗಳವರೆಗಿನ ಇಡಿಯ ಶಿಕ್ಷಣವನ್ನು ನಾರಿವಾದದ ಪ್ರಭುತ್ವದಡಿಗೆ ತರಲಾಯಿತು. ಒಂದೇ ಒಂದು ಹಿಟ್ಲರ್ ರಾಷ್ಟ್ರೀಯ ಯುವಕ ಸಂಘಟನೆಯನ್ನು ಸ್ಥಾಪಿಸಲಾಯಿತು. ಎಲ್ಲ ಕಾರ್ಮಿಕ ಸಂಘಟನೆಗಳನ್ನು ಕಾನೂನು ಬಾಹಿರವೆಂದು ಸಾರಿ ಅವುಗಳಿಗೆ ಬದಲಾಗಿ ಕಾರ್ಮಿಕರು ಹಾಗೂ ಒಡೆಯರ ಮೈತ್ರಿಕೂಟವನ್ನು ತಯಾರಿಸಲಾಯಿತು.

ನಾಝೀವಾದದ ಸರ್ವಾಧಿಕಾರಶಾಹಿಯ ಇನ್ನೊಂದು ವೈಶಿಷ್ಟ್ಯವನ್ನು ಕುರಿತು ನಮೂದಿಸುವಂತಿದೆ. ಸಾಮಾನ್ಯವಾಗಿ ಹುಕುಮಶಾಹಿ ಅಥವಾ ಸರ್ವಾಧಿಕಾರಶಾಹಿ, ಎಂದರೆ ಅಲ್ಪಸಂಖ್ಯರು ಬಹುಸಂಖ್ಯರ ಮೇಲೆ ಅವರ ಮನಸ್ಸಿನ ವಿರುದ್ಧವಾಗಿ ಹೇರಲಾದ ಸತ್ತೆ, ಎಂದು ಅರ್ಥೈಸಲಾಗುತ್ತದೆ. ಆದರೆ ಹಿಟ್ಲರನ ನಾಝೀ ಪಕ್ಷಕ್ಕೆ

ಜರ್ಮನಿಯಲ್ಲಿ ೧೯೩೩ರಲ್ಲಿ ನಡೆದ ಕೊನೆಯ ಪ್ರಕಟ ಚುನಾವಣೆಯಲ್ಲಿ ಶೇಕಡಾ ೪೪ ರಷ್ಟು ಮತಗಳು ಲಭಿಸಿದ್ದವು. ನಾಝೀ ಪಕ್ಷಗಳಂಥ ಇತರ ಪಕ್ಷಗಳ ಮತದಾನವನ್ನು ಗಮನಕ್ಕೆ ತಂದುಕೊಂಡರೆ ಶೇಕಡಾ ೫೫ ಕ್ಕೂ ಮಿಕ್ಕಿದ ಜರ್ಮನ್ ಮತದಾರರು ನಾಝಿವಾದಕ್ಕೆ ಬೆಂಬಲ ನೀಡಿದ್ದರು. ಬಹುಸಂಖ್ಯ ಮತದಾರರ ಸಮ್ಮತಿಯಿಂದ ಸ್ಥಾಪನೆಗೊಂಡ ಹಾಗೂ ಆ ಕಾಲದ ವಾಯಮಾರ್ ಪ್ರಜಾಸತ್ತಾತ್ಮಕ ಸಂಸತ್ತಿನಿಂದ ಅಧಿಕೃತವಾಗಿ ಒಪ್ಪಿಕೊಳ್ಳಲಾದ ಆಧುನಿಕ ಕಾಲದ ಒಂದೇ ಒಂದು ಬಹುಮತದ ಸರ್ವಾಧಿಕಾರಶಾಹಿ ಇದಾಗಿತ್ತು. ನಾವಾದವು ಕೊಲೆ ಹಾಗೂ ಭಯೋತ್ಪಾದನೆಗಳನ್ನು ತಮ್ಮ ಅಧಿಕೃತ ಧೋರಣೆಯನ್ನಾಗಿ ತೀರ್ಮಾನಿಸಿತ್ತು. ಏಕೆಂದರೆ ಚರ್ಚೆ ಹಾಗೂ ವಾದವಿವಾದಗಳನ್ನು ಅದು ನಂಬುತ್ತಿರಲಿಲ್ಲ. ಸಾಕ್ರಟೀಸ್ ಮೊಟ್ಟಮೊದಲಿಗೆ ಬುದ್ಧಿವಾದದ ರೋಗವನ್ನು ಹಬ್ಬಿಸಿದನು. ಏಕೆಂದರೆ ಮೂಲಭೂತ ಪ್ರಶ್ನೆಗಳನ್ನು ಚರ್ಚೆ ಹಾಗೂ ವಾದವಿವಾದಗಳಿಂದ ಬಿಡಿಸಬೇಕೆಂಬ ಸಿದ್ಧಾಂತವನ್ನು ಅವನೇ ಪ್ರತಿಪಾದಿಸಿದನು. ಹೀಗಾಗಿ ಸಾಕ್ರಟೆಸ್ ಮೊದಲ ಸೋಶಿಯಲ್ ಡೆಮೊಕ್ರಾಟಿಕ್ ಆಗಿದ್ದನೆಂದು ನಾರಿವಾದದ ಶ್ರೇಷ್ಠ ಸೈದ್ಧಾಂತಿಕನಾದ ಆರ್ಥರ್ ರೋಸೆನ್‌ಬರ್ಗ್ ಇವನು ಅನ್ನುತ್ತಿದ್ದನು. ಒಟ್ಟಿನಲ್ಲಿ ಎಲ್ಲ ಉದಾರಮತವಾದದ ವಿರೋಧಿ ಪ್ರವೃತ್ತಿಗಳು ಹಾಗೂ ನಿಲುವುಗಳ ಅಂತಿಮ ಪರ್ಯವಸಾನವು ನಾಝಿವಾದದಲ್ಲಿ ಆಗಿತ್ತು. ೧೯೧೯ ರ ವರ್ಸಾಯ್ ಒಡಂಬಡಿಕೆಯಲ್ಲಿ ಜರ್ಮನಿಯಲ್ಲಾದ ಅನ್ಯಾಯ ಅಥವಾ ೧೯೨೩-೩೨ ರ ಆರ್ಥಿಕ ಕುಸಿತದ ಪರಿಣಾಮದಿಂದಾಗಿ ಸೋತ ಹಾಗೂ ಬಿಕ್ಕಾಟ್ಟಾದ ಆರ್ಥಿಕ ಸಂಕಟಕ್ಕೆ ಸಿಲುಕಿದ ಜರ್ಮನಿಯಲ್ಲಿ ಆಕ್ರಮಣಶೀಲ ನಾಝೀವಾದವು ಹುಟ್ಟಿಬಂದಿತೆಂಬ ಒಂದು ಅಭಿಪ್ರಾಯವಿದೆ. ಎರಡನೆಯ ಮಹಾಯುದ್ಧದ ತರುವಾಯ ಜರ್ಮನಿಯ ಪರಿಸ್ಥಿತಿಯು ವರ್ಸಾದ ಒಡಂಬಡಿಕೆಗಿಂತ ಇನ್ನಷ್ಟು ಭೀಕರವಾಯಿತು. ಆದರೆ ಮತ್ತೆ ಅಲ್ಲಿ ನಾಝೀವಾದವು ಉದಯಕ್ಕೆ ಬರಲಿಲ್ಲವೆನ್ನುವ ಸಂಗತಿಯನ್ನು ಗಮನಿಸುವಂತಿದೆ. ೧೯೨೦-೩೨ ರ ಆರ್ಥಿಕ ಕುಸಿತವು ವಿಶ್ವಮಟ್ಟದ್ದಾಗಿತ್ತು. ಇಂಗ್ಲೆಂಡ್, ಅಮೆರಿಕೆಗಳೂ ಈ ಆರ್ಥಿಕ ಹೊಡೆತದಿಂದ ಬಚಾವಾಗಿರಲಿಲ್ಲ. ಆದರೆ ಈ ಆರ್ಥಿಕ ಸಂಕಟದಿಂದ ಅಲ್ಲಿ ಸರ್ವಾಧಿಕಾರಶಾಹಿಯು ಜನ್ಮ ತಳೆಯಲಿಲ್ಲ. ಆದರೆ ಜರ್ಮನಿಯಲ್ಲಿ ಹಾಗಾಗಲಿಲ್ಲ. ಇದಕ್ಕೆ ಕಾರಣವೆಂದರೆ ಆ ಕಾಲಕ್ಕೆ ಅಲ್ಲಿಯ ಪ್ರಜಾಪ್ರಭುತ್ವವು ದುರ್ಬಲವಾಗಿತ್ತಲ್ಲದೆ ಸರ್ವಾಧಿಕಾರಿ

ವಿಚಾರಸರಣಿಯ ಪ್ರಭಾವವು ಮೊದಲೇ ಬೆಳೆದಿತ್ತು.

ನಾಝೀವಾದವೆಂದರೆ ಏಕಾಧಿಕಾರಿ ಬಂಡವಾಳಶಾಹಿಯ ಪರಿಪಾಕವೆಂದು ಮಾರ್ಕ್ಸ್ ವಾದಿಗಳು ಬಗೆಯುತ್ತಾರೆ. ಜರ್ಮನಿಯಲ್ಲಿ ಏಕಾಧಿಕಾರಿ ಬಂಡವಾಳಶಾಹಿಯು ಇದ್ದ ಕಾರಣ ಅದರ ಪ್ರಭಾವವು ಉದಾರಮತವಾದಿ ಪ್ರಜಾಪ್ರಭುತ್ವಕ್ಕೆ ಅನುಕೂಲದ್ದಾಗಿರಲಿಲ್ಲ. ಆದರೆ ಈ ಏಕಾಧಿಕಾರಿ ಬಂಡವಾಳಶಾಹಿಯು ಕೈಸರನ ಕಾಲದ ರಾಷ್ಟಸತ್ತೆಯೊಂದಿಗೆ ಹತ್ತಿರದ ನಂಟನ್ನು ಹೊಂದಿತ್ತು. ಇಂಗ್ಲಂಡ್, ಅಮೆರಿಕೆಗಳಲ್ಲೂ ಏಕಾಧಿಕಾರಿ ಬಂಡವಾಳಶಾಹಿ ಇದ್ದಿತಾದರೂ ಜರ್ಮನಿಯಲ್ಲಿ ಮಾತ್ರ ನಾರಿ ಸರ್ವಾಧಿಕಾರಶಾಹಿಯನ್ನು ತಯಾರಿಸಲು ಏಕಾಧಿಕಾರಿ ಬಂಡವಾಳಶಾಹಿಗೆ ಏಕೆ ಸಾಧ್ಯವಾಯಿತು, ಎಂಬ ಸಂಗತಿಯ ವಿವರಣೆ ಕೇವಲ ಆರ್ಥಿಕ ಕಾರಣಗಳಿಂದ ಆಗಲಾರದು. ಸಮಾಜದಲ್ಲಿ ನೆಲೆಯೂರಿದ ರಾಜಕೀಯ ಸಂಪ್ರದಾಯ, ಪರಿಕಲ್ಪನೆ ಹಾಗೂ ಸಂಸ್ಥೆಗಳ ಸಾಮರ್ಥವು ಮಹತ್ವದ ಘಟಕವಾಗಿದೆ. ಜರ್ಮನಿಯಲ್ಲಿ ಅದಿಲ್ಲದ ಕಾರಣದಿಂದಲೇ ನಾರೀವಾದವು ಉದಯಿಸಲು ಸಾಧ್ಯವಾಯಿತು.

ನಾಝೀವಾದದ ಉದಯ ಏಕಾಯಿತು, ಜರ್ಮನ ಜನತೆ ಅದನ್ನು ಬೆಂಬಲಿಸಿದ್ದೇಕೆ, ಎನ್ನುವ ಸಂಗತಿಗೆ ನಾಝೀವಾದದ ನೇರ ಅಮಾನವೀಯ ಸ್ವರೂಪವೂ ಅಷ್ಟೇ ಮಹತ್ವದ ಕಾರಣ, ಅದರಿಂದ ಮಾನವತೆ, ವ್ಯಕ್ತಿಸ್ವಾತಂತ್ರ್ಯ, ಸಮಾನತೆ, ಪ್ರಜಾಪ್ರಭುತ್ವ ಹಾಗೂ ಮಾನವೀಯ ಪ್ರತಿಷ್ಠೆಯ ಮೌಲ್ಯಗಳನ್ನು ಕಾಪಾಡುವ ಒಂದು ಮಹತ್ವದ ಪಾಠವು ಮಾನವನಿಗೆ ಲಭಿಸುತ್ತದೆ. ಮಾನವತೆ ಹಾಗೂ ಮಾನವವಿರೋಧಿಯಾದ ನಾರಿವಾದದಂತಹ ಶಕ್ತಿಗಳು ಎಲ್ಲ ಸಮಾಜಗಳಲ್ಲೂ ಸುಪ್ತವಾಗಿ ಇರಬಲ್ಲವು. ಇಂಥ ತತ್ತ್ವಜ್ಞಾನವು ವಂಶವಾದ, ತುದಿಮುಟ್ಟಿದ ರಾಷ್ಟ್ರವಾದ, ವಿಶಿಷ್ಟ ಸಾಮಾಜಿಕಗುಂಪಿನ ಬಗೆಗಿನ ದ್ವೇಷ, ಕಲ್ಪಿತ ಅಥವಾ ವಾಸ್ತವದ ಅನ್ಯಾಯದ ಅಳತೆಮೀರಿದ ರೊಚ್ಚು, ಮೊದಲಾದ ಹಲವಾರು ಪ್ರವೃತ್ತಿಗಳ ರಸಾಯನದಿಂದ ತಯಾರಾಗಬಲ್ಲುದು, ತನಗೆ ಬೆಂಬಲವನ್ನು ಪಡೆಯಬಲ್ಲುದು. ಹೀಗಾಗಿ ಈ ಬಗೆಯ ಸಂಕಟವು ಪ್ರಪಂಚದ ಮೇಲೆ ಮತ್ತೆ ಬಾರದಿರಲೆಂದು ಇಂಥ ಪ್ರವೃತ್ತಿಯ ವಿರುದ್ಧ ನಿರಂತರವಾಗಿ ಎಚ್ಚರದಿಂದಿರುವುದು ಆವಶ್ಯಕ.

ಮರಾಠೀ ವಿಶ್ವಕೋಶ : ೮. ಪು. ೪೫೦-೪೫೧.

**ಪರಿಶಿಷ್ಟ -೨೦**

**ಹರಿಜನ ಸೇವಕ ಸಂಘ**

On the 30th September 1932, a largely attended meeting of the Hindus of Bombay was held in the Cowasjee Jehangir Hall under the Presidentship of Pandit Malviya. The object of the meeting was to form All-India Anti-Untoucability League with brances in different provincial centres. The headquarters of the League were to be in Delhi. Mr. G. D. Birla was to be the President and Mr. Amritlal V.Thakkar, Central Secretary. The AllIndia Anti-Untoucability League was Mr. Gandhi's project. It was inspired by him and was the direct outcome of The Poona Pact. At any rate, Mr. Gandhi adopted it as his baby, the moment it was born. The first thing Mr. Gandhi did was to cange its name. In a press message issued on 9th December 1932, Mr. Gandhi told the public that the organisation would thenceforth be known as Sevants of the Untoucables Society. This name also did not appear to Mr. Gandhi as the best. He was searching for another. Ultimately he decided to give it a new name. He called it the Harijan Sewak Sangh. Which means a society of those engaged in Service to the untoucables. This was a natural sequence of the name Harijan by which Mr. Gandhi used to call the Untoucables. This change did not pass off without a controversy between Shaivas and Vaisnawas. Hari is one of the hundred names of Vishnu, while Har is one of hundred names of Shiva. In choosing the name Harijan, Mr. Gandhi was accused of sectarian partiality. Mr. Gandhi did not yield and as the first frits of this new organisation the Unatoucables got a new name.

On the 3rd November 1932, Mr. Birla and Mr. Thakkar issued a statement to the press in which they set out a programme of this organization and the set-up of the machinary to carry out the programme.

As to the programme the statement said :

"The League believes that reasonable persons among the Sanatanists are not much against removal of untoucability as such, as they are against inter-caste dinners and marriages. Since it is not the ambition of the League to undertake reforms beyond

its own scope, it is desirable to make it clear that while the League will work by persuasion among the caste Hindus to remove every vestige of untoucability, the main line of work will be constructive, such as the uplift of Depressed Classes educatioally, economically and socially, which itself will go a great way to remove untoucability. With such a work, even a staunch Sanatanist can have nothing but sympathy. And it is for such work mainly that the League has been established. Social reforms like the abolition of the caste system and inter-dining are kept outside the scope of the League."

For the convinienct prosecution of the programme it was proposed that each Province should be divided into a namber of units and each unit to be in charge of paid workers. A unit may or may not be coterminus with a districts or two States."1

From this summary of its activities an impression may be created that the Sangh must be spending quite a lot of money on the welfare of the untoucables. What are the facts? It will be recalled that the normal amount of money which the Sangh expected to be able to spend on the uplift work among the untoucables was to be about Rs. 6,00,000 per year. How much has the Sangh been actually spending? The Secretary of the Sangh in his Report issued in May 1941 says?:

"During the course of the last 8 years the various branches and the central office of the Sangh have spent approximately Rs. 24,25,700 and Rs. 3,41,607 respectively, on the Harijan work. Looking to the needs of the problem, this sum of Rs. 27,67,307 is too insignificant an amount."

On this basis the Sangh's expenditure comes to about Rs. 3,45,888 per year, which is 50 percent less than what the Sangh hoped to collect. It will be seen that the Sangh is not as big as it is made out to be by its friends. The Sangh has been carrying on a very poor existence. A Budjet of three lakhs per year for a population of 50 millions of Untoucables is not a matter on which the Untouchables need be very jubilant. Even this much show, the Sangh would not have been able to put up if during the two years that they were in office the Congress Governments in different Provinces had not given large grants to the Sangh."

1 : Writings and Speeces, Vol. 9, 126-127 and 130-131.

1 : Writings and Speeces, Vol. 9. P.p. 126-127 and 130-131.

## ಪರಿಶಿಷ್ಟ-೧೦

### ಹರಿಜನ ಸೇವಕ ಸಂಘ

೩೦ ಸೆಪ್ಟೆಂಬರ್ ೧೯೩೨ ರಂದು ಮುಂಬಯಿಯ ಹಿಂದೂಗಳ ಸಭೆಯು ಪಂಡಿತ ಮದನಮೋಹನ ಮಾಲವೀಯರ ಅಧ್ಯಕ್ಷತೆಯಲ್ಲಿ ಕಾವಸ್ಜಿ ಜಹಾಂಗೀರ್ ಹಾಲ್‌ದಲ್ಲಿ ಸೇರಿತ್ತು. ಬಹಳಷ್ಟು ಜನರು ಹಾಜರಿದ್ದರು. ಬೇರೆ ಬೇರೆ ಪ್ರಾಂತಗಳಲ್ಲಿ ಅಖಿಲ ಭಾರತ ಅಸ್ಪೃಶ್ಯತಾ ವಿರೋಧಿ ಸಂಸ್ಥೆಯ ಶಾಖೆಗಳನ್ನು ಸ್ಥಾಪಿಸುವುದು ಸಭೆಯ ಗುರಿಯಾಗಿತ್ತು. ಸಂಸ್ಥೆಯ ಮುಖ್ಯ ಕೇಂದ್ರವು ದಿಲ್ಲಿಯಲ್ಲಿ ಇರಲಿತ್ತು. ಶ್ರೀ ಜಿ. ಡಿ. ಬಿರ್ಲಾ ಅಧ್ಯಕ್ಷರು ಹಾಗೂ ಶ್ರೀ

ಅಮೃತಲಾಲ ವಿ. ಠಕ್ಕರರು ಪ್ರಧಾನ ಕಾರ್ಯದರ್ಶಿಯಾಗಲಿದ್ದರು. ಅಖಿಲ ಭಾರತೀಯ ಅಸ್ಪೃಶ್ಯತಾ ನಿರ್ಮೂಲನ ಸಂಘವು ಶ್ರೀ ಗಾಂಧಿಯವರ ಯೋಜನೆಯಾಗಿತ್ತು. ಅವರಿಂದ ಸ್ಫೂರ್ತಿ ಪಡೆದಿದ್ದ ಅದು ಪುಣೆಯ ಒಪ್ಪಂದದ ನೇರ ಫಲವಾಗಿತ್ತು. ಅದೇನಿದ್ದರೂ ಅದು ಜನ್ಮ ತಳೆಯುತ್ತಲೇ ಶ್ರೀ ಗಾಂಧಿಯವರು ಅದನ್ನು ತಮ್ಮ ದತ್ತು ಮಗುವೆಂದು ಸ್ವೀಕರಿಸಿದ್ದರು. ಗಾಂಧಿಯವರು ಮಾಡಿದ ಮೊದಲ ಸಂಗತಿ ಎಂದರೆ ಅದರ ಹೆಸರನ್ನು ಬದಲಾಯಿಸಿದುದು. ೯ ಡಿಸೆಂಬರ್ ೧೯೩೨ರಂದು ವೃತ್ತಪತ್ರಕ್ಕೆ ನೀಡಿದ ಪ್ರಕಟಣೆಯ ಮೂಲಕ ಅವರು ಜನರಿಗೆ ಮಾಡಿದ ಮನವಿಯಲ್ಲಿ, ಇನ್ನು ಮುಂದೆ ಈ ಸಂಸ್ಥೆಯು ಅಸ್ಪೃಶ್ಯ ಸೇವಕ ಸಂಘವೆಂದು ಕರೆಯಲ್ಪಡುವುದೆಂದು ಸಾರಿದರು. ಈ ಹೆಸರು ಎಲ್ಲಕ್ಕೂ ಉತ್ತಮವಾದುದೆಂದು ಗಾಂಧಿಯವರಿಗೆ ಅನ್ನಿಸಲಿಲ್ಲ. ಅವರು ಬೇರೊಂದು ಹೆಸರಿಗಾಗಿ ಶೋಧಿಸುತ್ತಿದ್ದರು. ಕೊನೆಗೆ ಅವರು ಅದಕ್ಕೆ ಹೊಸದೊಂದು ಹೆಸರನ್ನು ನೀಡಲು ತೀರ್ಮಾನಿಸಿದರು. ಅವರು ಅಸ್ಪೃಶ್ಯರ ಸೇವೆಯಲ್ಲಿ ತೊಡಗಿಸಿಕೊಂಡ ಸಂಸ್ಥೆಯಾದ ಅದನ್ನು ಹರಿಜನ ಸೇವಕ ಸಂಘ ಎಂದು ಕರೆದರು. ಗಾಂಧಿಯವರು ಅಸ್ಪೃಶ್ಯರನ್ನು ಕರೆಯುವ ಸಹಜ ವಿಧಾನ ಇದಾಗಿತ್ತು. ಆದರೆ ಈ ಬದಲಾವಣೆಯು ಶೈವ ಹಾಗೂ ವೈಷ್ಣವರಿಗೆ ಸಹಜವಾಗಿ ಒಪ್ಪಿಗೆಯಾಗಲಿಲ್ಲ. ಹರಿ ಎಂಬ ಹೆಸರು ವಿಷ್ಣುವಿನ ನೂರಾರು ಹೆಸರುಗಳಲ್ಲಿ ಒಂದಾದರೆ ಹರ ಎಂಬ ಹೆಸರು ಶಿವನ ನೂರಾರು ಹೆಸರುಗಳಲ್ಲಿ ಒಂದು. ಹರಿಜನ ಹೆಸರನ್ನು ಆಯ್ಕೆ ಮಾಡುವಲ್ಲಿ ಗಾಂಧಿಯವರು ಪಂಥತಾರತಮ್ಯವನ್ನು ಮಾಡಿದರೆಂದು ಆಪಾದಿಸಲಾಯಿತು. ಶೈವರು ಅಸ್ಪೃಶ್ಯರನ್ನು ಹರಿಜನರೆಂದು ಕರೆಯುವುದನ್ನು ಕುರಿತು ವಾದ ಹೂಡಿದರು. ಆದರೆ ಗಾಂಧಿಯವರು ಅದಕ್ಕೆ ಮಣಿಯಲಿಲ್ಲ. ಈ ಹೊಸ ಸಂಸ್ಥೆಯ ಮೊದಲ ಫಲವೆಂದರೆ ಅಸ್ಪೃಶ್ಯರಿಗೆ ಒಂದು ಹೊಸ ಹೆಸರು ಲಭಿಸಿದುದು.

ಶ್ರೀ ಬಿರ್ಲಾ ಹಾಗೂ ಠಕ್ಕರ ಅವರು ೩ ನವೆಂಬರ್ ೧೯೩೨ರಂದು ಪತ್ರಿಕೆಗೆ ಒಂದು ಹೇಳಿಕೆಯನ್ನು ನೀಡಿ ಈ ಸಂಸ್ಥೆಯ ಕಾರ್ಯಕ್ರಮ ಹಾಗೂ ಅದರ ಅನುಷ್ಠಾನಕ್ಕಾಗಿ ಯಂತ್ರವನ್ನು ಸ್ಥಾಪಿಸಿದುದನ್ನು ಕುರಿತು ವಿಶದಪಡಿಸಿದರು. ಕಾರ್ಯಕ್ರಮವನ್ನು ಕುರಿತಾದ ಹೇಳಿಕೆ ಹೀಗಿದ್ದಿತು :

''ಸನಾತನಿಗಳು ಅಂತರಜಾತೀಯ ಊಟ ಹಾಗೂ ಮದುವೆಗಳ ಬಗೆಗೆ ವಿರುದ್ಧವಾಗಿ ಇರುವಷ್ಟು ಮಟ್ಟಿಗೆ ಅಸ್ಪೃಶ್ಯತೆಯ ಬಗೆಗಿಲ್ಲವೆಂದು ಈ ಸಂಘವು ನಂಬುತ್ತದೆ. ಸಂಘದ ಆಕಾಂಕ್ಷೆಯು ತನ್ನ ಮಿತಿಯಾಚೆಗಿನ ಇಂಥ ಸುಧಾರಣೆಗಳನ್ನು ಮಾಡುವುದಲ್ಲ, ಎಂಬುದನ್ನು ಸ್ಪಷ್ಟಪಡಿಸುವುದು ಅಗತ್ಯದ್ದು. ಸಂಘವು ಸವರ್ಣಿಯರ ಮನವೊಲಿಸಿ, ಅವರ ನಡುವಿನ ಅಸ್ಪೃಶ್ಯತೆಯ ಪ್ರತಿಯೊಂದು ಕುರುಹನ್ನು ಅಳಿಸಿ ಹಾಕುವ ಕೆಲಸವನ್ನು ಮಾಡಲಿದೆ. ಕೆಲಸದ ಮುಖ್ಯ ದಾರಿಯು ರಚನಾತ್ಮಕವಾಗಿರಲಿದೆ. ದಲಿತವರ್ಗಗಳನ್ನು ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕವಾಗಿ, ಮೇಲಕ್ಕೆತ್ತುವ ಕೆಲಸವೇ ದೂರಗಾಮಿಯಾಗಿದ್ದು ಅದು ಅಸ್ಪೃಶ್ಯತೆಯನ್ನು ನಿವಾರಿಸಲಿದೆ. ಕರ್ಮಠನಾದ ಸನಾತನಿಯೊಬ್ಬನ ಮನದಲ್ಲಿ ಇಂಥ ಕೆಲಸದ ಬಗೆಗೆ ಸಹಾನುಭೂತಿಯನ್ನುಳಿದು ಇನ್ನಾವ ಭಾವನೆಯೂ ಇರಲಾರದು. ಹೀಗಾಗಿ ಇಂಥ ಕೆಲಸಕ್ಕಾಗಿಯೇ ಸಂಘವನ್ನು ಸ್ಥಾಪಿಸಲಾಗಿದೆ. ಜಾತಿ ನಿರ್ಮೂಲನೆ ಹಾಗೂ ಅಂತರಜಾತಿಗಳ ಭೋಜನದಂತಹ ಸಾಮಾಜಿಕ ಸುಧಾರಣೆಗಳನ್ನು ಸಂಘದ ಚಟುವಟಿಕೆಗಳ ಪರಿಧಿಯ ಆಚೆಗೆ ಇರಿಸಲಾಗಿದೆ."

ಕಾರ್ಯಕ್ರಮದ ಕಾರ್ಯಾನುಷ್ಠಾನದ ಅನುಕೂಲತೆಗಾಗಿ ಪ್ರತಿಯೊಂದು ಪ್ರಾಂತನ್ನು ಸಣ್ಣ ಸಣ್ಣ ಘಟಕಗಳಾಗಿ ವಿಭಜಿಸಿ ಅವುಗಳನ್ನು ಸಂಬಳ ಪಡೆಯುವ ಕಾರ್ಯಕರ್ತರ ಅಧಿಕಾರದಡಿ ಇರಿಸಲಿದೆ. ಪ್ರತಿಯೊಂದು ಘಟಕವು ಒಂದು ಜಿಲ್ಲೆಗೆ ಸಮನಾಗಿ ಇರಬಹುದು, ಇರಲಿಕ್ಕೂ ಇಲ್ಲ. ಎರಡು ಜಿಲ್ಲೆಗಳು ಇಲ್ಲವೆ ಪ್ರಾಂತಗಳು ಸೇರಿಸಿಯೂ ಇಂಥ ಒಂದು ಘಟಕವಾಗಿರಬಹುದು.''೧

ಚಟುವಟಿಕೆಗಳ ಈ ಸಾರಾಂಶದಿಂದ, ಸಂಘವು ಪದ ದಲಿತರ ಕಲ್ಯಾಣಕ್ಕಾಗಿ ಸಾಕಷ್ಟು ಹಣವನ್ನು ವ್ಯಯಿಸುತ್ತಿರಬಹುದೆಂಬ ಅಭಿಪ್ರಾಯ ಆಗುವ ಸಾಧ್ಯತೆ ಇದೆ. ಆದರೆ ವಾಸ್ತವಾಂಶ ಏನು ? ಸಂಘವು ದಲಿತರ ಅಭಿವೃದ್ಧಿಗಾಗಿ ವರ್ಷಕ್ಕೆ ಸುಮಾರು ೬,೦೦,೦೦೦ ರೂಪಾಯಿಗಳನ್ನು ನಿರೀಕ್ಷಿಸುತ್ತದೆ, ಎಂಬುದನ್ನು ಇಲ್ಲಿ ಸ್ಮರಿಸಬಹುದು. ಸಂಘವು ಪ್ರತ್ಯಕ್ಷದಲ್ಲಿ ಎಷ್ಟು ಹಣವನ್ನು ವ್ಯಯಿಸುತ್ತಿದೆ ? ಸಂಘದ ಕಾರ್ಯದರ್ಶಿಯು ಮೇ ೧೯೪೧ರಲ್ಲಿ ಪ್ರಕಟಿಸಿದ ವರದಿಯಲ್ಲಿ ಹೀಗೆನ್ನಲಾಗಿದೆ" :

"ಕಳೆದ ಎಂಟು ವರ್ಷಗಳಲ್ಲಿ ಸಂಘದ ಕೇಂದ್ರ ಶಾಖೆ ಹಾಗೂ ಘಟಕಗಳು ಹರಿಜನರ ಕಾರ್ಯಕ್ಕಾಗಿ ಅನುಕ್ರಮವಾಗಿ ಸುಮಾರು ೨೪,೨೫,೭೦೦ ರೂಪಾಯಿ ಹಾಗೂ ೩,೪೧,೬೦೭ ರೂಪಾಯಿಗಳನ್ನು ವ್ಯಯಿಸಿವೆ. ಸಮಸ್ಯೆಯ ಆವಶ್ಯಕತೆಯನ್ನು ಗಮನಕ್ಕೆ ತಂದುಕೊಂಡರೆ ರೂ. ೨೭,೬೭,೩೦೭ ಗಳ ಈ ಮೊತ್ತ ಏನೇನೂ ಸಾಲದು."

ಇದರ ಆಧಾರದಿಂದ ಸಂಘದ ವೆಚ್ಚವು ವರ್ಷವೊಂದಕ್ಕೆ ಸುಮಾರು ೩,೪೫,೮೮೮ ರೂಪಾಯಿಗಳಷ್ಟು ಇದ್ದು ಅದು ಸಂಘವು ಕಲೆಹಾಕಬಯಸಿದ ಮೊತ್ತದ ಶೇಕಡಾ ೫೦ ಕ್ಕಿಂತ ಕಡಿಮೆಯಿದೆ. ಸಂಘದ ಸ್ನೇಹಿತರು ಹೇಳಿಕೊಳ್ಳುವಷ್ಟು ದೊಡ್ಡದೇನೂ ಅದಲ್ಲವೆಂಬುದು ಇದರಿಂದ ಕಂಡುಬಂದೀತು. ಅದು ಹೇಗೋ ಬದುಕಿಕೊಂಡಿದೆ ಅಷ್ಟೆ. ೫೦ ಮಿಲಿಯ ದಲಿತರಿಗಾಗಿ ಮೂರು ಲಕ್ಷದ ಮುಂಗಡಪತ್ರವೇನೂ ಸಂತೋಷ ಪಡುವಂಥದಲ್ಲ. ಬೇರೆ ಬೇರೆ ಪ್ರಾಂತಗಳಲ್ಲಿದ್ದ ಕಾಂಗ್ರೆಸ್ಸಿನ ಸರಕಾರಗಳು ದೊಡ್ಡ ಮೊತ್ತದ ಅನುದಾನವನ್ನು ನೀಡಿದೆ ಇದ್ದರೆ ತನ್ನ ಅಧಿಕಾರದ ಎರಡು ವರ್ಷಗಳ ಕಾಲಾವಧಿ ೦ರಲ್ಲಿ ಸಂಘ ವು ಇಷ್ಟರ ಮಟ್ಟಿಗಿನ ಕಾರ್ಯವನ್ನು ತೋರ್ಪಡಿಸಲು ಸಾಧ್ಯವಾಗುವಂತಿರಲಿಲ್ಲ.

೧ : ರೈಟಿಂಗ್ಸ್ ಅಂಡ್ ಸ್ಪೀಚಸ್, ಸಂ. ೯, ಪು. ೧೨೬-೨೭ ಹಾಗೂ ೧೩೦-೧೩೧.

೧ : ರೈಟಿಂಗ್ಸ್ ಅಂಡ್ ಸ್ಪೀಚಸ್, ಸಂ. ೯, ಪು. ೧೨೬-೨೭ ಹಾಗೂ ೧೩೦-೧೩೧.

## ಪರಿಶಿಷ್ಟ-೨೧

## ಬುವಾ ಮಡಿದರು

ಶ್ರೀ ಮಡಕೆ ಬುವಾ ಇವರು ಭಾನುವಾರ ತಾ. ೨೮ ಮಾರ್ಚ್ ೧೯೪೮ ರ ಬೆಳಗಿನ ಜಾವ ಮುಂಬಯಿಯಲ್ಲಿ ದಿವಂಗತರಾದರು. 'ಜನತೆ ಯ ಓದುಗರಿಗೆ ಈ ಸಂಗತಿಯನ್ನು ತಿಳಿಸಲು ನಮಗೆ ತುಂಬ ದುಃಖವಾಗುತ್ತಿದೆ.

ಹಲವು ದಿನಗಳಿಂದ ಅವರಿಗೆ ಹೃದಯದ ತೊಂದರೆ ಇದ್ದಿತು. ಆ ಸಮಸ್ಯೆಯಿಂದ ಬಿಡಿಸಿಕೊಳ್ಳಲೆಂದು ಅವರು ಎಲ್ಲ ಬಗೆಯ ಯತ್ನಗಳನ್ನು ಮಾಡಿದರು. ಆದರೆ ವ್ಯರ್ಥ ! ಕೊನೆಗೆ ಅವರು ಹಾಸಿಗೆಗೆ ಅಂಟಿಕೊಂಡಿರಬೇಕಾಯಿತು. ಅದರಲ್ಲೇ ಅವರ ಅಂತ್ಯವಾಯಿತು. ಮೃತ್ಯುವಿನ ಕಾಲಕ್ಕೆ ಅವರ ವಯಸ್ಸು ೬೧ ವರ್ಷಗಳದಿತ್ತು. ಅವರ ಮೃತ್ಯುವಿನಿಂದಾಗಿ, ಬಾಬಾಸಾಹೇಬರ ಮಾತಿನಲ್ಲಿ ಹೇಳಬೇಕೆಂದರೆ, "ದಲಿತರ ಒಬ್ಬ ದೊಡ್ಡ ಕಾರ್ಯಕರ್ತ, ಕಾರ್ಮಿಕರ ಒಬ್ಬ ದೊಡ್ಡ ಟ್ರೇಡ್ ಯೂನಿಯನಿಸ್ಟ್ ಹಾಗೂ ದಲಿತ ಫೆಡರೇಶನ್ನಿನ ಪ್ರಭಾವಿ ಸಂಘಟಕ, ಅಸ್ಪೃಶ್ಯರ ನಡುವೆ ಇಲ್ಲವಾದನು." ಇದರಿಂದ ದಲಿತ ವರ್ಗ, ಕಾರ್ಮಿಕರು ಹಾಗೂ ಫೆಡರೇಶನ್ನಿಗೆ ಬಲು ದೊಡ್ಡ ನಷ್ಟವಾಗಿದೆ, ಎನ್ನುವಲ್ಲಿ ಸಂದೇಹವೇ ಇಲ್ಲ.

ಮಡಕೆ ಬುವಾ ಅವರ ಹೆಸರು ಶ್ರೀ ಗಣಪತ ಮಹಾದೇವ ಜಾಧವ ಎಂದಿತ್ತು. ಆದರೆ ಆವರು ಈ ಹೆಸರಿನಿಂದ ಅಷ್ಟಾಗಿ ಪರಿಚಿತರಿರಲಿಲ್ಲ. ಅವರ ಹೆಸರು ಜಾಧವ ಎನ್ನುವುದು ಎಷ್ಟೋ ಜನರಿಗೆ ತಿಳಿದಿರಲಿಕ್ಕೂ ಇಲ್ಲ. ಆದರೆ ದಲಿತ ಸಮುದಾಯದಲ್ಲಿ 'ಮಡಕೆ ಬುವಾ' ಎಂಬ ಹೆಸರು ಗೊತ್ತಿಲ್ಲದ ಒಬ್ಬನೂ ಸಿಕ್ಕಲಾರನು. ಧನಾಜಿ ಜಾಧವರ ಎಂಬ ಹೆಸರನ್ನು ಕೇಳಿ ವೈರಿಗಳ ಕುದುರೆಗಳಿಗೆ ಕುಡಿಯುವ ನೀರಿನಲ್ಲೂ ಮರಾಠಾ ಯೋಧನಾದ ವೀರ ಧನಾಜಿ ಜಾಧವನು ಕಾಣುತ್ತಿದ್ದನಂತೆ. ಇದೇ ರೀತಿಯಾಗಿ ಮಡಕೆ ಬುವಾ ಅವರ ಹೆಸರನ್ನು ಕೇಳಿದ ಕೂಡಲೇ ಡಾ. ಬಾಬಾಸಾಹೇಬರ ವಿರೋಧಕರು, ಅಸ್ಪೃಶ್ಯರಲ್ಲಿ ಒಡಕು ಹುಟ್ಟಿಸುವ ಚಿಲ್ಲರೆ ಕಾರ್ಮಿಕ ನಾಯಕರು, ಬಡಬಗ್ಗರನ್ನು ಪೀಡಿಸುವ, ಅವರನ್ನು ತುಚ್ಛತೆಯಿಂದ ಕಾಣುವ ಕಾಡು ಪೋಲೀಸ್ ಅಧಿಕಾರಿಗಳು, ಹಾಗೂ ಅಸ್ಪೃಶ್ಯ ನೌಕರ ವರ್ಗವನ್ನು ಹೀಯಾಳಿಸುವ ಮುನಿಸಿಪಲ್ ಕಮೀಶನರರೆಲ್ಲರಿಗೆ ಆಘಾತಕರವಾದ ಒಂದು ಬಗೆಯ ಬೆದರಿಕೆ ಆಗುತ್ತಿತ್ತು. ಮಡಕೆ ಬುವಾರ ಮಾತು ಮೀರಿ ಹೆಜ್ಜೆ ಎತ್ತುವ ತಾಕತ್ತು ಯಾರಲ್ಲೂ ಇರಲಿಲ್ಲ. ಮಡಕೆ ಬುವಾ ಅವರು ಫರ್ಮಾನು, ಆಜ್ಞೆಗಳನ್ನು ನೀಡುವ ಒಂದು ಒಗಟಾ ಗಿದ್ದರು. ಮಡಕೆ ಬುವಾ ಎಂದರೆ ಗುದ್ದಿ ಗುದ್ದಿ ಮದ್ದು ತುಂಬಿದ ತೋಪಿನಂತಿದ್ದರು. ಆ ತೋಪಿನ ಹೊಡೆತಕ್ಕೆ ಸಿಲುಕಿದ ವಿರೋಧಕರು ಹಾಗೂ ಅಧಿಕಾರಿಗಳು ನುಚ್ಚು ನೂರಾಗುತ್ತಿದ್ದರು.

ಶ್ರೀ ಜಾಧವ ಎನ್ನುವ ಹೆಸರಿನ ಬದಲು ಮಡಕೆ ಬುವಾ ಹೆಸರು ಹೆಚ್ಚು ಪ್ರಸಿದ್ಧವಾಗಲು ಹಾಗೂ ಜನರ ಬಾಯಲ್ಲಿರಲು ಕಾರಣವೆಂದರೆ ಮೊದಲು ಅವರು ಭಕ್ತಿಪಂಥದ ಬುವಾ ಆಗಿದ್ದರು.

ತುಳಸಿಮಾಲೆಯನ್ನು ತೊಡುವ ಮಾಳಕರಿ ಆಗಿದ್ದರು. ಹಿಂದಕ್ಕೆ ಅವರು ಕಾವಿ ಬಟ್ಟೆಗಳನ್ನು ತೊಡುತ್ತಿದ್ದರು. ಆ ಕಾಲಕ್ಕೆ ಬರಿ ಬುವಾ ಎಂದೇ ಅವರು ಗುರುತಿಸಲ್ಪಡುತ್ತಿದ್ದರು. ಅವರು ೧೯೨೯ರಲ್ಲಿ ಆಫ್ರಿಕೆಯಿಂದ ಮುಂಬಯಿಗೆ ತಿರುಗಿ ಬಂದ ಬಳಿಕ ಮಣ್ಣಿನ ಮಡಕೆಗಳ ಮಾರಾಟವನ್ನು ಶುರು ಮಾಡಿದರು. ಆಗಿನಿಂದ ಅವರು 'ಮಡಕೆ ಬುವಾ' ಎಂದೇ ಹೆಸರಾದರು.

ದಿ, ಮಡಕೆ ಬುವಾ ಓದು ಕಲಿತವರಲ್ಲ. ಅವರು ತಿದ್ದಿ, ತೀಡಿ ತಮ್ಮ ಸಹಿಯನ್ನಷ್ಟು ಮಾಡಬಲ್ಲವರಾಗಿದ್ದರು. ಅವರು ನಿರಕ್ಷರರಾಗಿದ್ದರು. ಆದರೆ ಅಜ್ಞಾನಿಗಳಲ್ಲ. ಅವರು ಗುಜರಾತಿ, ಉರ್ದು, ಮರಾಠಿ, ಮೊದಲಾದ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಅವರ ಕಂಠಪಾಠವಂತೂ ನಿಬ್ಬೆರಗಾಗುವಂತಿತ್ತು. ಅವರು ಸಂತ ತುಕಾರಾಮ, ನಾಮದೇವ, ಚೋಖಾಮೇಳಾ ಅವರ ಅಭಂಗಗಳನ್ನು ಚಾಚೂ ತಪ್ಪದಂತೆ ಹೇಳುತ್ತಿದ್ದರು. ಅವರು ಇಂಥ ಅಭಂಗಗಳನ್ನು ಉದ್ಧರಿಸಿ ಹೇಳುವಾಗ ಅವರ ಹಿಡಿತ ಹಾಗೂ ಸನ್ನಿವೇಶದ ಸೂಕ್ತತೆಗಳು ಎದ್ದು ಕಾಣುತ್ತಿದ್ದವು. ತಮಗೆ ಕಂಠಪಾಠ ಇದೆಯೆಂದು ಸುಮ್ಮನೆ ಏನನ್ನಾದರೂ ಉದ್ಧರಿಸುವುದು ಅವರ ಪರಿಪಾಠವಾಗಿರಲಿಲ್ಲ. ಅವರು ಕೊಡುವ ಉದಾಹರಣೆಗಳಲ್ಲಿ ಮಾರ್ಮಿಕತೆಯು ಇರುತ್ತಿತ್ತು. ಇಂಥ ಉದಾಹರಣೆಗಳು ಕೆಲವು ಸಲ ಸಂತರ ಸಂಪ್ರದಾಯದವಾದರೆ ಇನ್ನು ಕೆಲವು ಸಲ ವ್ಯವಹಾರದಲ್ಲಿ ಇರುವ ಹಳ್ಳಿಗರ ಹುಂಬತನದವೂ ಆಗಿರುತ್ತಿದ್ದವು.

ಅವರು ಮೆಕ್ಯಾನಿಕ್ ಕೆಲಸವನ್ನು ತುಂಬ ಉತ್ತಮವಾಗಿ ಮಾಡಬಲ್ಲವರಾಗಿದ್ದರು. ಅವರ ಈ ಕೌಶಲವನ್ನು ಕಂಡೇ ಒಬ್ಬ ಬಿಳಿಯನು ಅವರನ್ನು ಬಾಯ್ ಮೇಕರ್ ಎಂದು ೧೯೨೮ರಲ್ಲಿ ಆಫ್ರಿಕೆಗೆ ಕರೆದೊಯ್ದನು. ಬಾಯ್ ಮೇಕರ್ ಹುದ್ದೆ ತಿಂಗಳಿಗೆ ೩೦೦-೪೦೦ ರೂಪಾಯಿಗಳ ಸಂಬಳದ್ದಾಗಿತ್ತು. ಆದರೆ ಅಲ್ಲಿ ಅವರಿಗೆ ಬಿಳಿಯನೊಂದಿಗೆ ಹೊಂದಿಕೆಯಾಗದ ಕಾರಣ ಅವರು ಒಂದು ವರ್ಷದ ತರುವಾಯ ೧೦೨೯ರಲ್ಲಿ ಮುಂಬಯಿಗೆ ವಾಪಸಾದರು. ದಿ. ಮಡಕೆ ಬುವಾ ಅವರ ವ್ಯಕ್ತಿತ್ವವೂ ಕೂಡ ಚೆನ್ನಾಗಿತ್ತು. ಅವರ ಒರಟು ಧ್ವನಿಯಲ್ಲಿ ಒಂದು ಬಗೆಯ

ಮಾರ್ಗದರ್ಶಕತನವಿತ್ತು. ಅವರು, ದಿನ ನಿತ್ಯದ ಜೀವನದಲ್ಲಿ ತಿನ್ನಬೇಕಾಗಿ ಬರುವ ಪೆಟ್ಟುಗಳ ಉದಾಹರಣೆಗಳನ್ನು ಕೊಟ್ಟು ಹಳ್ಳಿಯ ಗಾಂಪರಲ್ಲಿ ಗಾಂಪನೆನ್ನಿಸುವವನಿಗೂ ತಮ್ಮ ಗ್ರಾಮೀಣ ಭಾಷೆಯಲ್ಲಿ ಡಾ, ಬಾಬಾಸಾಹೇಬರ ತತ್ತ್ವಜ್ಞಾನವನ್ನು ತಿಳಿಸಿ ಹೇಳುತ್ತಿದ್ದರು.

ಅವರಲ್ಲಿ ತುಂಬ ಸಂಘಟನಾಚಾತುರ್ಯವಿತ್ತು. ಡಾ. ಬಾಬಾಸಾಹೇಬರಿಗೆ ಅವರ ಈ ಚಾತುರ್ಯದ ಬಗೆಗೆ ಬಲು ದೊಡ್ಡ ವಿಶ್ವಾಸವಿತ್ತು. ಹೀಗಾಗಿ ಅವರು ಮುಂಬಯಿಯ ದಲಿತ ಚಳುವಳಿಯ ಸೂತ್ರಗಳನ್ನು ದಿ. ಮಡಕೆ ಬುವಾ ಅವರಿಗೆ ನೀಡಿದ್ದರು.

ಆದರೆ ಅವರ ಇವೆಲ್ಲ ಸದ್ಗುಣಗಳಲ್ಲಿ ಎಲ್ಲಕ್ಕೂ ಸರ್ವಶ್ರೇಷ್ಠವಾದ ಗುಣ ಎಂದರೆ ತಮ್ಮ ಪರಮಪೂಜ್ಯ ನಾಯಕರಾದ ಬಾಬಾಸಾಹೇಬ ಅಂಬೇಡಕರರ ಬಗೆಗೆ ಅವರಲ್ಲಿದ್ದ ನಿಸ್ಸಿಮ ಭಕ್ತಿ. ಅವರು ಯಾವಾಗಲೂ, 'ಬಾಬಾಸಾಹೇಬರು ನನ್ನ ದೇವರು. ನನ್ನ ದೇವನು ಅದೆಂದಿಗೂ ತಪ್ಪು ಮಾಡಲಾರನು. ನನ್ನ ಮನದಲ್ಲಿ ಎಂದಿಗೂ ಕೆಟ್ಟ, ಸೊಟ್ಟ ಸಂಗತಿಗಳು ಬರಲಾರವು. ಅವರ ಮೇಲಿನ ನನ್ನ ನಿಷ್ಠೆ ಅದೆಂದಿಗೂ ಕದಲದು. ಅವರ ಪಾದಗಳ ಬಳಿಯೇ ನನಗೆ ಸಾವು ಬರಬೇಕು.'' ಎನ್ನುತ್ತಿದ್ದರು.

ಅವರ ಕರ್ತೃತ್ವದ ಸಾಮರ್ಥ್ಯ ಹಾಗೂ ಹೆಸರು, ಕೀರ್ತಿಗಳು ವಿಶಾಲವಾದ ಈ ನಿಷ್ಠೆಯಲ್ಲಿಯೇ ಒಳಗೊಂಡುದು ಕಂಡು ಬಂದೀತು.

ಅವರು ಸನ್ ೧೯೨೪ರಿಂದ ಹಿಡಿದು ತಮ್ಮ ಸಾವಿನವರೆಗೂ ಬಾಬಾಸಾಹೇಬರ ಏಕನಿಷ್ಠ ಅನುಯಾಯಿಯಾಗಿದ್ದರು. ಬಾಬಾಸಾಹೇಬರು ಬ್ಯಾರಿಸ್ಟರ್ ಆಗಿ ೧೯೨೪ರಲ್ಲಿ ಸ್ವದೇಶಕ್ಕೆ ಮರಳಿದ ಬಳಿಕ ಅವರನ್ನು ಅಭಿನಂದಿಸಲೆಂದು ದಿ. ಮಡಕೆ ಬುವಾರು ಒಂದು ಸಭೆಯನ್ನು ಆಯೋಜಿಸಿದ್ದರು. ದಿ. ಮಡಕೆ ಬುವಾರು ಮಹಾಡ-ಸತ್ಯಾಗ್ರಹ, ನಾಸಿಕ-ಸತ್ಯಾಗ್ರಹ ಹಾಗೂ ಮಹಾರ ಪರಿಷತ್ತುಗಳಲ್ಲಿ ಎಸಗಿದ ಕಾರ್ಯವು ಬಲು ಮುಖ್ಯವಾಗಿತ್ತು,

ಮಹಾಸ ಸತ್ಯಾಗ್ರಹದ ವೇಳೆಗೆ ನಡೆದ ಒಂದು ಘಟನೆ. ಮಡಕೆ ಬುವಾರ ದೃಷ್ಟಿಯಿಂದ ಅದು ಅವಿಸ್ಮರಣೀಯವಾದುದು. ಬಾಬಾಸಾಹೇಬರು ಹಿಂದೂಗಳ ದುಷ್ಟ ಧರ್ಮಗ್ರಂಥವಾದ ಮನುಸ್ಮೃತಿಯನ್ನು ಸಾರ್ವಜನಿಕವಾಗಿ ಸುಡುವುದಾಗಿ ಘೋಷಿಸಿದ್ದರು. ಮನುಸ್ಮೃತಿ-ದಹನದ ಕ್ರಿಯೆಯನ್ನು ಶಾಸ್ತ್ರೋಕ್ತವಾದ ವಿಧಿಯಿಂದ ಮಾಡುವುದಿತ್ತು. ಅಸ್ಪೃಶ್ಯರ ನಿಷ್ಠಾವಂತ ಭೀಮಸೇನೆಯು ಮಂಗಲವಾದ ಈ ವಿಧಿಯನ್ನು ನೋಡಲೆಂದು, ಅದರ ಪರಿಣಾಮವನ್ನು ಎದುರಿಸಲೆಂದು ಆತ್ಮೀಯತೆ ಹಾಗೂ ಎಚ್ಚರಿಕೆಯಿಂದ ಅಲ್ಲಿಗೆ ಬಂದಿತ್ತು. ಒಬ್ಬ ದೇವಿಗೆ ಕುರಿಯನ್ನು ಬಲಿ ಕೊಡುವ ಮುನ್ನ ಅದಕ್ಕೆ ಸಿಂಧೂರವನ್ನು ಬಳಿಯಲಾಗುತ್ತದೆ, ಕೊರಳಿಗೆ ನಿಂಬೆ ಹಣ್ಣನ್ನು ಕಟ್ಟಲಾಗುತ್ತದೆ, ತರುವಾಯ ವಾದ್ಯಗಳನ್ನು ನುಡಿಸುತ್ತ ಮೆರವಣಿಗೆಯಲ್ಲಿ ತಂದು ಅದನ್ನು ಬಲಿ ಕೊಡಲಾಗುತ್ತದೆ, ಮನುಸ್ಮತಿಯನ್ನು ಉರಿನಾಲಿಗೆಗಳಿಗೆ ಬಲಿಕೊಡುವಾಗ ಇವೆಲ್ಲ ಸಂಸ್ಕಾರಗಳನ್ನು ಅದರ ಮೇಲೆ ಮಾಡುವುದಿತ್ತು. ಅಭೂತಪೂರ್ವವಾದ ಈ ಸಮಯಕ್ಕಾಗಿ ಕೆಲವು ಬುವಾ ಜನರನ್ನು ನೇಮಿಸಲಾಗಿತ್ತು. ಅಗ್ನಿ ದೇವತೆಯನ್ನು ಜಾಗೃತಗೊಳಿಸಲೆಂದು ಅವರು ಶ್ಲೋಕಗಳನ್ನು ಉಚ್ಚರಿಸಿದ ತರುವಾಯ ವಿಧಿಪೂರ್ವಕವಾಗಿ ಮನುಸ್ಮೃತಿಯ ಹೋಮವನ್ನು ಮಾಡುವುದಿತ್ತು. ಅವರಲ್ಲಿ ಮಡಕೆ ಬುವಾ ಒಬ್ಬರಾಗಿದ್ದರಷ್ಟೇ ಅಲ್ಲದೆ ಮುಂದಾಳುವಾಗಿದ್ದರು. ಅವರು ಶ್ಲೋಕಗಳನ್ನು ಉಚ್ಚರಿಸಿದರು, ಮನುಸ್ಮೃತಿಯ ಒಂದೊಂದೇ ಪುಟವನ್ನು ಅಗ್ನಿಕುಂಡದಲ್ಲಿ ಎಸೆದು ಅದನ್ನು ಕಾಣದಂತೆ ಮಾಡಿಬಿಟ್ಟರು. ಹೀಗೆ ಬಾಬಾಸಾಹೇಬರ ಏಕನಿಷ್ಠ ಅನುಯಾಯಿಯಾದ ಬುವಾ ಮನುಸ್ಮೃತಿಯ ಅಂತ್ಯಸಂಸ್ಕಾರವನ್ನು ಮಾಡಿದರು. ತಮ್ಮ ಏಕನಿಷ್ಠೆಯ ಬಗೆಗೆ ಅವರಲ್ಲಿ ಯಾವುದೇ ಬಗೆಯ ಭಯವಿರಲಿಲ್ಲ.

ಬಾಬಾ ಸಾಹೇಬರ ಸುರಕ್ಷೆಯನ್ನು ಕುರಿತು ಬುವಾರಿಗೆ ತುಂಬ ಚಿಂತೆ ಎನ್ನಿಸುತ್ತಿತ್ತು. ಡಾ. ಬಾಬಾಸಾಹೇಬರ ಜೀವದ ಮೇಲೆ ಸಂಕಟದ ಸನ್ನಿವೇಶಗಳು ಎದುರಾದಾಗಲೆಲ್ಲ ಬುವಾ ತಮ್ಮ ಸ್ವಂತದ ಜೀವಕ್ಕೆ ಅಪಾಯವಾದರೂ ಅದರ ಪರಿವೆಯಿಲ್ಲ, ಎನ್ನುವ ಭಾವನೆಯಿಂದ ಬಾಬಾಸಾಹೇಬರ ರಕ್ಷಣೆಗೆ ನಿಂತರು. ಇಂಥ ಎರಡು ಸನ್ನಿವೇಶಗಳನ್ನು ನಮೂದಿಸುವಂತಿದೆ.

ಮೊದಲ ಸನ್ನಿವೇಶವು ರಾಯಗಡದ ಮೇಲಿನದು. ಡಾ. ಸಾಹೇಬರು ಮಹಾಡದ ಸಭೆಯನ್ನು ಮುಗಿಸಿ ರಾಯಗಡಕ್ಕೆ ಹೊರಟಿದ್ದರು. ಶೌರ್ಯದಿಂದ ಸವರ್ಣ ಹಿಂದೂಗಳನ್ನು ಅಂಗತ್ತಾಗಿ ಕೆಡಹುವ ಕಾಲ ಅದಾಗಿತ್ತು. ಸವರ್ಣ ಹಿಂದೂಗಳು ಕೂಡ ಹೊಂಚುಹಾಕಿ ಮೇಲೇರಿ ಬರುವ ಸನ್ನಾಹದಲ್ಲಿದ್ದರು. ಅವರು ರಾಯಗಡದ ಮೇಲೆ ಬಾಬಾಸಾಹೇಬರ ಮೇಲೆ ಹಲ್ಲೆ ಮಾಡುವ ಸಂಚನ್ನು ಹೂಡಿದ್ದರು. ಡಾ.ಸಾಹೇಬರನ್ನು ಸುರಕ್ಷಿತವಾಗಿ ಕಾಪಾಡಲೆಂದು ಆ ಸನ್ನಿವೇಶವನ್ನು ಧೈರ್ಯದಿಂದ ಎದುರಿಸಿದವರಲ್ಲಿ ಮಡಕೆ ಬುವಾ ಮುಖ್ಯರಾಗಿದ್ದರು.

ಎರಡನೆಯ ಸನ್ನಿವೇಶವೂ ಇದೇ ಬಗೆಯದು. ಡಾ.ಸಾಹೇಬರ ಮೋಟರು ಮಹಾಡದ ಹತ್ತಿರದ ಕಾಳ್ಯಾ ಸುಕವಲಿ ಕಣಿವೆಯ ದಾರಿಯಲ್ಲಿ ನೀರಿನ ಸೆಳೆತಕ್ಕೆ ಸಿಕ್ಕುಬಿದ್ದಿತ್ತು. ಮಳೆ ಹಾಗೂ



ಕೆಸರು ಇದ್ದ ಕಾರಣ ತುಂಬ ತೊಂದರೆಯಾಯಿತು. ಆಗ ಮಡಕೆ ಬುವಾರು ತಮ್ಮ ಜೀವದ ಹಂಗುತೊರೆದು ಡಾ.ಸಾಹೇಬರನ್ನು ಮೋಟರಿನಿಂದ ಹೊರತೆಗೆದರು.

ಆದರೆ ಅವರು ಎರಡು ಸಂಸ್ಥೆಗಳಲ್ಲಿ ಇದಕ್ಕಿಂತಲೂ ಹೆಚ್ಚು ಸ್ಮರಣೀಯವಾದ ಕೆಲಸವನ್ನು ಮಾಡಿದ್ದಾರೆ. ಇವೆರಡು ಸಂಸ್ಥೆಗಳೆಂದರೆ ಮುಂಬಯಿ ನಗರದ ಶೆಡ್ಯೂಲ್ಡ್ ಕಾಸ್ಟ್ಸ್ ಫೆಡರೇಶನ್ ಮತ್ತು ಮುಂಬಯಿ ಮ್ಯುನಿಸಿಪಲ್ ಕಾಮಗಾರ (ಕಾರ್ಮಿಕ) ಸಂಘ' , ಫೆಡರೇಶನ್ನಿನ ಪ್ರಭಾವಿಯಾದ ಸಂಘಟನೆಯ ಬಹಳಷ್ಟು ಶ್ರೇಯಸ್ಸು ದಿ. ಮಡಕೆ ಬುವಾ ಅವರಿಗೆ ಸಲ್ಲುತ್ತದೆ. ಫೆಡರೇಶನ್ನು ಶುರುವಾದಂದಿನಿಂದ ಹಿಡಿದು ತಮ್ಮ ಕೊನೆಗಾಲದವರೆಗೂ ಅವರು

ಮುಂಬಯಿ ನಗರ ಹಾಗೂ ಬಡಾವಣೆಯ ಶಾಖೆಗಳ ಅಧ್ಯಕ್ಷರಾಗಿದ್ದರು. ಅವರು `ಮುನಿಸಿಪಲ್ ಸಂಘದ ಕಾರ್ಯದರ್ಶಿಗಳೂ ಆಗಿದ್ದರು. ಕಾರ್ಮಿಕ ಶಾಸ್ತ್ರ ಏನೇ ಹೇಳಲಿ, ಹೊಲಸು ಕೆಲಸವನ್ನು ಮಾಡುವ ಅಸ್ಪೃಶ್ಯ ಕಾರ್ಮಿಕರ ಪ್ರಶ್ನೆ ತೀರ ಬೇರೆ, ಬಿಕ್ಕಟ್ಟಿನದು ಹಾಗೂ ತುಂಬ ಮಹತ್ವದ್ದೆಂಬುದನ್ನು ಅವರು ಮನಗಂಡಿದ್ದರು. ಅದನ್ನು ಬಗೆಹರಿಸಲು ತುಂಬ ಬೇರೆ ಬಗೆಯ ಏರ್ಪಾಡು ಆಗಬೇಕಿದೆ. ಮ್ಯು. ಕಾರ್ಮಿಕ ಸಂಘವು ಭದ್ರವಾಗಬೇಕೆಂದು ಅವರು ತುಂಬ ಹೆಣಗಿದರು, ಹಲವು ಯುಕ್ತಿಗಳನ್ನು ಹೂಡಿದರು.

ಅವರು ಶೇಕಡಾ ನೂರರಷ್ಟು ಜನರನ್ನು ಸದಸ್ಯರನ್ನಾಗಿ ಮಾಡಿಕೊಂಡರು. ಅವರು ಬಲು ಚಾತುರ್ಯದಿಂದ ಈ ಬಗೆಯ ಕಾರ್ಮಿಕ ಪ್ರಶ್ನೆಗೆ ಸಾಮಾಜಿಕ ಸ್ವರೂಪವನ್ನು ಒದಗಿಸಿ, ಜ್ಞಾತಿಬಾಂಧವರನ್ನು ಬೇಡಿಕೊಂಡು, ಅವರಿಗೆ ಬೆದರಿಕೆಯೊಡ್ಡಿ ಕಾರ್ಮಿಕರೆಲ್ಲರನ್ನೂ ಸದಸ್ಯರನ್ನಾಗಿ ಮಾಡಿಕೊಂಡರು. ಇದೇ ರೀತಿಯಾಗಿ ಅವರು ಆ ಕಾರ್ಮಿಕರ ವೈಯಕ್ತಿಕ ಸಮಸ್ಯೆಗಳನ್ನು ಬಗೆ ಹರಿಸುವತ್ತ ಎಚ್ಚರದಿಂದ ಗಮನ ಹರಿಸುತ್ತಿದ್ದರು. ಕೆಲಸದ ಹೊರತು ಬೇರೆ ಕಾರಣಗಳಿಂದ ಕಾರ್ಮಿಕರ ಅಪರಾಧ ಸ್ಥಾಪಿತಗೊಂಡು ಅವರ ಕೆಲಸದ ಮೇಲೆ ಗದಾ ಪ್ರಹಾರ ಬಂದಾಗ ಅವರು ಅದನ್ನು ನಿವಾರಿಸುತ್ತಿದ್ದರು. ಮುಂಬಯಿ ಮ್ಯುನಿಸಿಪಲ್ ಕಾರ್ಮಿಕ ಸಂಘ ದ ಕೀರ್ತಿಯು ಹಬ್ಬಿ ಅದೆಂತಹ ಮಾದರಿ ಸಂಸ್ಥೆ ಎಂದು ಪರಿಗಣಿಸಲಾಗಿತ್ತೆಂದರೆ "ಆಲ್ ಇಂಡಿಯಾ ಮ್ಯುನಿಸಿಪಲ್ ಕಾರ್ಮಿಕ ಸಂಘದ ಜನರು ಬುವಾರ ಆಫೀಸನ್ನು ನೋಡಲೆಂದು ಬಂದಿದ್ದರು. ಬುವಾರ, ಮ್ಯುನಿಸಿಪಲ್ ಕಾರ್ಮಿಕರ ಬಗೆಗಿನ ನಿಲುವು ಎಂದಿಗೂ ಹಿಮ್ಮೆಟ್ಟುವಂಥದಾಗಿರಲಿಲ್ಲ. ಈ ಬಗೆಗೆ ಅವರು ತುಂಬ ಒಂಟಿ ಬಂಟರಾಗಿದ್ದರು. ಅವರು (ಇತರ ಸಂಗಡಿಗರೊಡನೆ) ಸಂಘ ಹಾಗೂ ಮುಷ್ಕರಗಳ ಮೂಲಕ ಕಾರ್ಮಿಕರಿಗೆ ಏನೆಲ್ಲವನ್ನು ದೊರಕಿಸಿ ಕೊಟ್ಟರೆನ್ನುವ ಸಂಗತಿಯ ಮಾದರಿಯನ್ನು ಇದೇ ಸಂಚಿಕೆಯ ಮೊದಲ ಪುಟದ ಮೇಲೆ ಪ್ರಕಟಿಸಲಾಗಿದೆ. ಬುವಾರು ಮುಷ್ಕರಕ್ಕಾಗಿ ನೋಟೀಸನ್ನು ಕೊಟ್ಟರೆಂದರೆ ಅಧಿಕಾರಿಗಳು ಭಯಭೀತರಾಗುತ್ತಿದ್ದರು. ಏಕೆಂದರೆ ಬುವಾರನ್ನು ನೋಯಿಸಿ ಮುಷ್ಕರವನ್ನು ಬರಮಾಡಿಕೊಂಡರೆ ಡ್ರೈನೇಜಿನ ಕೆಲಸಗಳು ನಿಂತುಬಿಟ್ಟು, ಮ್ಯುನಿಸಿಪಲ್ ಅಧಿಕಾರಿಗಳಲ್ಲದೆ ಇಡಿಯ ಮುಂಬಯಿಯ ಜನರೆಲ್ಲರೂ ಗಟಾರು ಗಂಗೆಯಲ್ಲಿ ಮೀಯಬೇಕಾದೀತೆಂಬುದರ 'ಸ್ವಚ್ಛ ವಾದ (?) ಚಿತ್ರವು ಅವರ ಕಣ್ಣೆದುರು ನಿಲ್ಲುತ್ತಿತ್ತು. ಹೀಗಾಗಿ ಮುನಿಸಿಪಲ್ ಕಮೀಶನರರು ಬುವಾರ ಮನವೊಲಿಸಲೆಂದು ಅವರ ಆಫೀಸು ಹಾಗೂ ಮನೆಗಳಿಗೆ ಎಡತಾಕಬೇಕಾಗುತ್ತಿತ್ತು. ಬುವಾರು ಮ್ಯು. ಕಾರ್ಮಿಕರಿಗೆ ದೊರಕಿಸಿ ಕೊಟ್ಟ ಹಕ್ಕುಗಳನ್ನು ಕುರಿತು ಭಾಯಿ ಮಿರಜಕರರಂತಹ ಕಮ್ಯುನಿಸ್ಟರು ಮ್ಯು. ಕಾ. ಸಂಘದ ಉಪಾಧ್ಯಕ್ಷರಾದ ಶ್ರೀ ದೋಂದೆ ಅವರೆದುರು ಹೀಗೆಂದು ಉದ್ಧರಿಸಿದ್ದರು : "ಈ ವರೆಗೆ ಯಾವುದೇ ಕಾರ್ಮಿಕ ಸಂಘಟನೆಯು ಕಾರ್ಮಿಕರಿಗಾಗಿ ಏನನ್ನು ಪಡೆದುಕೊಳ್ಳಲು

ಸಾಧ್ಯವಾಗಲಿಲ್ಲವೋ, ಬುವಾರು ಅದನ್ನು ಪಡೆದುಕೊಂಡು ತೋರಿಸಿದ್ದಾರೆ."

ಬುವಾರಲ್ಲಿ ಕೆಲವು ದುರ್ಗುಣಗಳೂ ಇದ್ದವು. ಆದರೆ ಪೂರ್ತಿ ಸದ್ಗುಣಿ, ಎಂದಾದರೂ ಯಾರಿದ್ದಾರೆ? ಬುವಾರ ಸ್ವಭಾವವು ತುಸು ಒರಟಾದ್ದರಿದ ಕೆಲವು ಜನರು ಅವರ ಮೇಲೆ ತುಂಬ ಕೋಪಿಸಿಕೊಂಡಿದ್ದರು. ಅದು ಕೆಲಮಟ್ಟಿಗೆ ಸ್ವಾಭಾವಿಕವೂ ಆಗಿತ್ತು. ಹೀಗಾಗಿ ಕೊನೆಯಲ್ಲಿ ಬುವಾರು ಅಪ್ರಿಯತೆಯನ್ನು ಕಟ್ಟಿಕೊಳ್ಳಬೇಕಾಯಿತು. ಅವರು ಮ್ಯುನಿಸಿಪಾಲಿಟಿಯ ಚುನಾವಣೆಗೆ ಏನಿಲ್ಲೆಂದರೆ ನಾಲ್ಕು ಸಲವಾದರೂ ನಿಂತು ಕೂಡ ಆಯ್ಕೆ ಹೊಂದಲಿಲ್ಲ. ಇಷ್ಟೇ ಅಲ್ಲದೆ ಅಸ್ಪೃಶ್ಯರ ಮತಗಳೂ ತಕ್ಕ ಮಟ್ಟಿಗೆ ಅವರಿಗೆ ಸಿಕ್ಕುತ್ತಿದ್ದುದರಿಂದ ಜನರ ಕಣ್ಣಲ್ಲಿ ಅವರು ಇಳಿದಿದ್ದರು. ಆದರೆ ಬುವಾರು ರೋಷದಿಂದಾಗಿ ಎಂದಿಗೂ ತಮ್ಮ ನಿಷ್ಠೆಯನ್ನು ಕುಸಿಯಗೊಡಲಿಲ್ಲ, ಪಕ್ಷದೊಂದಿಗೆ ಅಪ್ರಾಮಾಣಿಕತೆಯನ್ನು ಮಾಡಲಿಲ್ಲ, ಎಂದಿಗೂ ತಮ್ಮ ತತ್ವಗಳನ್ನು ಹಿತಶತ್ರುಗಳಲ್ಲಿ ಅಡವು ಇರಿಸಲಿಲ್ಲ. ತಮಗಿಂತಲೂ ಪಕ್ಷ ದೊಡ್ಡದು, ಡಾ. ಸಾಹೇಬರು ಅದಕ್ಕಿಂತಲೂ ದೊಡ್ಡವರೆಂದು ಅವರಿಗೆ ಅನ್ನಿಸುತ್ತಿತ್ತು.

ಇಂಥ ಒಬ್ಬ ಕಾರ್ಯಕರ್ತನು ನಮ್ಮಲ್ಲಿಂದ ಹೊರಟುಹೋಗಿರುವನು. ಇದರಿಂದಾಗಿ ತಮಗೆ ಬಲು ದೊಡ್ಡ ನಷ್ಟವಾಗಿದೆ, ಎನ್ನುವುದನ್ನು ಎಲ್ಲರೂ ಮನಗಾಣುವರು. ಡಾ. ಬಾಬಾಸಾಹೇಬರ ವಿಚಾರಗಳನ್ನು ಕರಾರುವಾಕ್ಕಾಗಿಯಷ್ಟೇ ಅಲ್ಲದೆ ಅದಕ್ಕಿಂತಲೂ ಹೆಚ್ಚು ಮುಂದಿನ ವಿವರಣೆಯನ್ನು ನೀಡಬಲ್ಲ ಒಬ್ಬ ಕಾರ್ಯಕರ್ತನು ಹೋಗಿಬಿಟ್ಟನು. ಹೀಗಾಗಿ, ತಯಾರಾದ ನಿರ್ವಾತವು ಅವರಂತಹ ಅಥವಾ ಅವರಿಗಿಂತಲೂ ಹೆಚ್ಚು ನಿಷ್ಠಾವಂತ ಕಾರ್ಯಕರ್ತನಿಂದ ತುಂಬಿಬಂದರೆ ಮಾತ್ರ ಪಕ್ಷಕ್ಕೆ ಗಟ್ಟಿತನವು ಲಭಿಸೀತು.

ನಾವು ದಿ. ಬುವಾ ಅವರ ಕುಟುಂಬದ ಮೇಲೆ ಬಂದೆರಗಿದ ಈ ಆಪತ್ತಿನಲ್ಲಿ ಪಾಲ್ಗೊಳ್ಳುತ್ತೇವೆ. ಮೃತಾತ್ಮರಿಗೆ ಶಾಂತಿ ಲಭಿಸಲಿ ! ಬುವಾ ಹೊರಟುಹೋದರು !

'ಜನತಾ' : ತಾ. ೩ ಎಪ್ರಿಲ್ ೧೯೪೮.

## ಪರಿಶಿಷ್ಟ-೨೨

## ಮಹಾಬೋಧಿ ಸೊಸೈಟಿ

"The Maha Bodhi Society is the first Buddhist organisation in the history of modern Buddhism to begin a propaganda for the dissemination of the Dharma in nonBuddhist lands. India had completely forgotten the Aryan doctrine of the Tathagata, although at one time it held the formost place among the Aryan religions in Aryawarta. For twenty-six years the Maha Bodhi Society has ontinued to exist in spite of the many obstacles, thanks to the generosity of a few friends of the Anaagarika Dharmapala. The Society

was founded by him in May, 1891, under the presidency of the late illustrious High Priest of Ceylon, at Colombo.

In 1892 the Anagarika Dharmapala established the Journal of the maha Bodhi Society, which is still in existence, and now being printed at Colombo in the Maha Bodhi Press. Owing to the paucity of Buddhists who are able to understand English in Buddhist countries the number of subscribers threre to is insufficient to make it pay. The Journal is sent free to the learned societies throughout the world as well as to the princes and nobles of Buddhist countries. For twenty years we are sorry to state the wealthy Buddhist dignitaries in Buddhist countries have failed to respond generously for the expansion of the objects of the Maha Bodhi Society. Japan and Siam have not helped by a single contribution for the furtherance of the noble objects of the society. Burma, contributed generously at the commencement of operations of the society, but since sixteen years have failed to render any assistance. Several hundreds of the subscribers to the Maha Bodhi Journal in Burma, India and Cylon have failed to pay their subscriptions, and the loss thereby to the Journal amounts to several thousand rupees.

The Society had been able to erect two Dharmasalas at Buddhagaya and Sarnath, Benares through the help of the Buddists of Burma, Arakan and Ceylon.

The Anagarika Dharmapala's mother, Shrimati Malika Hevavitarana sent the first contribution of Rs. 600.00 to purchase three acres of land at Sarnath, Benares. The

late Raja of Bhinga contributed Rs. 2,000.00 which amount was expended in the purchase of ten bighas of land at Sarnath. The Society also had purcased a plot of land at Gaya, and it is lying idle as we have not the means of creating a Dharmasala there for the use of piligrims who visit Buddha Gaya. For nearly fifteen years efforts were made to get contributions to erect a Dharmasala from well-to-do Buddhists, but we are sorry to say that we have failed to find one Buddhist who is willing to contribute for the purpose.

Buddhists of Burma and Arakan, countries nearer to India, when written to for help, answer that they have no interest in India. China, Japan, Siam, idependent Buddhist countries, when asked for help answer that charity begins at home. For nearly twenty years the society have received very little help from the people of Ceylon.

Buddhism the oldest and foremost of missionary religions has ceased to exist as a living force in the land of its birth, though its spirit still lingers. The last missionary went forth from Bengal in the person of Shrignana Dipankara Atisa to reform the Buddhism in Tibet, nine hundred years ago. The Buddhism of Java was destroyed by the Arab Muhammedans about five hundred years ago. According to the researches of Archaeological scholars in Central Turkestan, Buddhism was a living religion in those distant lands a thousand years ago.

Archaeological evidence shows that Buddhist temples were built for the last time in Bengal and Magadha in the region of Mahipala, king of Bengal in the eleventh century. In the bginning of 13th century the university of Nalanda was destroyed by Bakhtyar Khilji."[1]

1 : Guruge, Ananda Editor, Returned to Righteousness, Pp. 732-733.

## ಪರಿಶಿಷ್ಟ-೨೨

## ಮಹಾಬೋಧಿ ಸೊಸೈಟಿ

"ಮಹಾಬೋಧಿ ಸೊಸೈಟಿಯು ಆಧುನಿಕ ಬೌದ್ಧ ಧರ್ಮದ ಇತಿಹಾಸದಲ್ಲಿ ಬೌದ್ಧ ಧರ್ಮವಿಲ್ಲದ ದೇಶಗಳಲ್ಲಿ ಅದನ್ನು ಪ್ರಚುರಪಡಿಸಲೆಂದು ಇರುವ ಮೊದಲ ಬೌದ್ಧ ಸಂಸ್ಥೆಯಾಗಿದೆ. ಒಂದು ಕಾಲಕ್ಕೆ ಇಡಿಯ ಆರ್ಯಾವರ್ತದ ಎಲ್ಲ ಧರ್ಮಗಳಲ್ಲಿ ಅದು ಮೊದಲ ಸ್ಥಾನದಲ್ಲಿದ್ದಿತಾದರೂ ಭಾರತವು ತಥಾಗತನ ಆರ್ಯ ಸಿದ್ಧಾಂತವನ್ನು ಪೂರ್ತಿ ಮರೆತಿತ್ತು. ಹಲವಾರು ಅಡೆತಡೆಗಳು ಎದುರಾದರೂ ಕಳೆದ ಇಪ್ಪತ್ತಾರು ವರ್ಷಗಳಿಂದ ಮಹಾಬೋಧಿ ಸೋಸೈಟಿಯು ಅಸ್ತಿತ್ವದಲ್ಲಿದೆ. ಇದಕ್ಕಾಗಿ ಅನಾಗರಿಕ ಧರ್ಮಪಾಲದ ಕೆಲವು ಜನ ಸ್ನೇಹಿತರ ಔದಾರ್ಯಕ್ಕೆ ಕೃತಜ್ಞತೆಗಳು ಸಲ್ಲಲೇಬೇಕು. ಮೇ ೧೮೯೧ರಲ್ಲಿ ಅವರು ಸಿಲೋನಿನ ಶ್ರೇಷ್ಠ ಗುರುಗಳಾದ ಸುಮಂಗಲ ಅವರ ಅಧ್ಯಕ್ಷತೆಯಲ್ಲಿ ಈ ಸೊಸೈಟಿಯನ್ನು ಕೋಲಂಬೋದಲ್ಲಿ ಸ್ಥಾಪಿಸಿದರು.

ಅನಾಗರಿಕ ಧರ್ಮಪಾಲರು ೧೮೯೨ರಲ್ಲಿ ಮಹಾ ಬೋಧಿ ಸೊಸೈಟಿಯಿಂದ ಒಂದು ನಿಯತಕಾಲಿಕೆಯನ್ನು ಶುರು ಮಾಡಿದರು. ಅದು ಇಂದಿಗೂ ಇದೆ. ಈಗ ಕೋಲಂಬೋದ ಮಹಾ ಬೋಧಿ ಮುದ್ರಣಾಲಯದಲ್ಲಿ ಅದನ್ನು ಅಚ್ಚು ಹಾಕಲಾಗುತ್ತದೆ. ಬೌದ್ಧಧರ್ಮದ ದೇಶಗಳಲ್ಲಿ ಇಂಗ್ಲಿಷ್ ಬಲ್ಲ ಓದುಗರ ಕೊರತೆ ಇದ್ದ ಕಾರಣ, ಚಂದಾದಾರರ ಸಂಖ್ಯೆ

ಕಡಿಮೆಯಿದ್ದು, ಅದರಿಂದ ಬರುವ ವರಮಾನವೂ ಸಾಲದು. ಈ ಪತ್ರಿಕೆಯನ್ನು ಪ್ರಪಂಚವಿಡಿಯ ಸುಶಿಕ್ಷಿತ ಸಮಾಜಗಳು, ರಾಜಕುಮಾರರು ಹಾಗೂ ಬೌದ್ಧ ದೇಶಗಳ ಕುಲೀನರಿಗೆ ಉಚಿತವಾಗಿ ಕಳಿಸಲಾಗುತ್ತದೆ. ಆದರೆ ಬೌದ್ಧ ದೇಶಗಳ ಈ ಶ್ರೀಮಂತ ಬೌದ್ಧ ಘನವ್ಯಕ್ತಿಗಳು ಕಳೆದ ನಲವತ್ತು ವರ್ಷಗಳಲ್ಲಿ ಮಹಾಬೋಧಿ ಸೊಸೈಟಿಯ ಗುರಿಗಳನ್ನು ವಿಸ್ತರಿಸುವ ಯತ್ನಗಳಿಗೆ ಸ್ಪಂದಿಸುವಲ್ಲಿ ಸೋತಿರುವರು. ಜಪಾನ ಹಾಗೂ ಸಯಾಮುಗಳು ಸೊಸೈಟಿಯ ಉದಾತ್ತವಾದ ಗುರಿಗಳನ್ನು ಮುಂದುವರಿಸಲು ಒಂದೇ ಒಂದು ಕೊಡುಗೆಯನ್ನು ನೀಡಿಲ್ಲ. ಬ್ರಹ್ಮದೇಶವು ಸೊಸೈಟಿಯ ಆರಂಭದ ಚಟುವಟಿಕೆಗಳಿಗಾಗಿ ಉದಾರತೆಯಿಂದ ತನ್ನ ಕೊಡುಗೆಯನ್ನು ನೀಡಿತಾದರೂ ಕಳೆದ ಹದಿನಾರು ವರ್ಷಗಳಲ್ಲಿ ಅದು ಯಾವುದೇ ಕೊಡುಗೆಯನ್ನು ನೀಡಿಲ್ಲ. ಬ್ರಹ್ಮದೇಶ, ಭಾರತ ಹಾಗೂ ಸಿಲೋನಿನ ಮಹಾ ಬೋಧಿ ಪತ್ರಿಕೆಯ ನೂರಾರು ಜನ ಚಂದಾದಾರರು ತಮ್ಮ ಚಂದಾಹಣವನ್ನು ನೀಡಿಲ್ಲ. ಹೀಗಾಗಿ ಪತ್ರಿಕೆಯ ಒಟ್ಟು ನಷ್ಟವು ಸಾವಿರಾರು ರೂಪಾಯಿಗಳಷ್ಟಾಗಿದೆ.

ಸೊಸೈಟಿಯು ಬ್ರಹ್ಮದೇಶ, ಅರಾಕಾನ್ ಹಾಗೂ ಸಿಲೋನಿನ ಬೌದ್ಧರ ನೆರವಿನಿಂದ ಬುದ್ಧಗಯೆ ಹಾಗೂ ವಾರಣಾಸಿಗಳಲ್ಲಿ ಎರಡು ಧರ್ಮಶಾಲೆಗಳನ್ನು ಕಟ್ಟಿಸಿತು.

ಅನಾಗರಿಕ ಧರ್ಮಪಾಲರ ತಾಯಿ, ಶ್ರೀಮತಿ ಮಾಲಿಕಾ ಹೇಮವಿತರಣ ಅವರು ವಾರಣಾಸಿಯ ಸಾರನಾಥದಲ್ಲಿ ಮೂರು ಎಕರೆ ನೆಲವನ್ನು ಕೊಂಡುಕೊಳ್ಳಲೆಂದು ವಂತಿಗೆಯ ಮೊದಲ ಕಂತೆಂದು ೬೦೦.೦೦ ರೂಪಾಯಿಗಳನ್ನು ಕಳಿಸಿಕೊಟ್ಟರು.

ಭಿಂಗಾದ ದಿವಂಗತ ಅರಸರು ನೀಡಿದ ೨,೦೦೦.೦೦ ರೂಪಾಯಿಗಳಿಂದ ಸಾರನಾಥದಲ್ಲಿ ಹತ್ತು ಬಿಘಾ(೧ ಬಿಘಾ = ೩೦೨೫ ಚದರ ಗಜಗಳು) ನೆಲವನ್ನು ಕೊಂಡುಕೊಳ್ಳಲಾಯಿತು. ಸೊಸೈಟಿಯು ಗಯೆಯಲ್ಲೂ ಒಂದು ನಿವೇಶನವನ್ನು ಕೊಂಡಿದೆ. ಆದರೆ ಅಲ್ಲಿಗೆ ಬರುವ ಬೌದ್ಧ ಯಾತ್ರಿಕರಿಗಾಗಿ ಒಂದು ಧರ್ಮಶಾಲೆಯನ್ನು ಕಟ್ಟಿಸಲು ನೆರವಿಲ್ಲದ ಕಾರಣ ಆ ನಿವೇಶನ ಪಾಳು ಬಿದ್ದಿದೆ. ಧರ್ಮಶಾಲೆಯನ್ನು ಕಟ್ಟಿಸಲೆಂದು ಕಳೆದ ಹದಿನೈದು ವರ್ಷಗಳಿಂದ ಶ್ರೀಮಂತ ಬೌದ್ಧರಿಂದ ವಂತಿಗೆಯನ್ನು ಪಡೆಯಲು ಯತ್ನಿಸಲಾಗುತ್ತಿದೆ. ಆದರೆ ದುರದೃಷ್ಟದ ಸಂಗತಿ ಎಂದರೆ ಇದಕ್ಕಾಗಿ ನೆರವನ್ನು ನೀಡಬಲ್ಲ ಒಬ್ಬನಾದರೂ ಬೌದ್ಧನನ್ನು ಕಂಡುಕೊಳ್ಳಲು ನಮ್ಮಿಂದ ಆಗಲಿಲ್ಲ. ಭಾರತಕ್ಕೆ ಹತ್ತಿರವಾದ ಬ್ರಹ್ಮದೇಶ ಹಾಗೂ ಅರಾಕಾನ್ ದೇಶಗಳ ಬೌದ್ಧರಿಗೆ ನೆರವಿಗಾಗಿ ಬರೆದರೆ ತಮಗೆ ಭಾರತದಲ್ಲಿ ಆಸ್ಥೆಯಿಲ್ಲವೆಂದು ಅಲ್ಲಿಯವರು ಮಾರುತ್ತರಿಸುತ್ತಾರೆ. ಚೀನ, ಜಪಾನ, ಸಯಾಮಿನಂಥ ಸ್ವತಂತ್ರ ದೇಶಗಳನ್ನು ನೆರವಿಗಾಗಿ ಕೇಳಿದರೆ ದಾನಧರ್ಮವು ಮನೆಯಿಂದಲೇ ಶುರುವಾಗುತ್ತದೆಂದು ಉತ್ತರಿಸಿದವು. ಕಳೆದ ಇಪ್ಪತ್ತು ವರ್ಷಗಳಿಂದ ಸೊಸೈಟಿಗೆ ಸಿಲೋನಿನಿಂದ ತೀರ ಅಲ್ಪ ನೆರವು ದಕ್ಕಿದೆ.

ಎಲ್ಲಕ್ಕೂ ಪುರಾತನವೂ ಎಲ್ಲಕ್ಕೂ ಮೊದಲಿನ ಮಿಶನರಿ ಧರ್ಮವೂ ಆಗಿರುವ ಬೌದ್ಧ ಧರ್ಮವು ತನ್ನ ಹುಟ್ಟು ನಾಡಿನಲ್ಲೇ ಒಂದು ಜೀವಂತ ಶಕ್ತಿಯಾಗಿ ಉಳಿದಿಲ್ಲ. ಆದರೆ ಅದು ಇಲ್ಲಿ ಸುಳಿದಾಡುವ ಚೇತನವಾಗಿ ಉಳಿದಿದೆ. ಒಂಬತ್ತು ನೂರು ವರ್ಷಗಳ ಕೆಳಗೆ ಶ್ರೀಗ್ಯಾನ ದೀಪಂಕರ ಆತಿಸನೆಂಬ ಕೊನೆಯ ಮಿಶನರಿಯು ಬೌದ್ಧ ಧರ್ಮವನ್ನು ಸುಧಾರಿಸಲೆಂದು ಬಂಗಾಲದಿಂದ ಟಿಬೆಟ್ಟಿಗೆ ಹೋಗಿದ್ದನು. ಸುಮಾರು ಐದು ನೂರು ವರ್ಷಗಳ ಕೆಳಗೆ ಅರಬ ಮುಸಲ್ಮಾನರಿಂದ ಜಾವಾದ ಬೌದ್ಧ ಧರ್ಮವನ್ನು ನಾಶಪಡಿಸಲಾಗಿತ್ತು. ಮಧ್ಯ ತುರ್ಕಿಸ್ತಾನದ ಪ್ರಾಚ್ಯವಸ್ತುಶಾಸ್ತ್ರ ಸಂಶೋಧಕ ವಿದ್ವಾಂಸರ ಅಭಿಪ್ರಾಯದ ಮೇರೆಗೆ, ಒಂದು ಸಾವಿರ ವರ್ಷಗಳ ಕೆಳಗೆ ಬೌದ್ಧ ಧರ್ಮವು ಆ ದೂರದ ನಾಡಿನಲ್ಲಿ ಜೀವಂತವಾಗಿತ್ತಂತೆ.

ಪ್ರಾಚ್ಯವಸ್ತುಶಾಸ್ತ್ರದ ಸಾಕ್ಷ್ಯದ ಮೇರೆಗೆ, ಬಂಗಾಲ ಹಾಗೂ ಮಗಧಗಳ ಅರಸನಾದ ಮಹಿಪಾಲನ ಆಳ್ವಿಕೆಯ ಕಾಲಕ್ಕೆ ಹನ್ನೊಂದನೆಯ ಶತಮಾನದಲ್ಲಿ ಕೊನೆಯ ಸಲ ಬೌದ್ಧ ದೇವಾಲಯಗಳನ್ನು ಕಟ್ಟಿಸಲಾಗಿತ್ತು. ಹದಿಮೂರನೆಯ ಶತಮಾನದ ಶುರುವಿನಲ್ಲಿ ಬಖ್ತಿಯಾರ್ ಖಿಲ್ಜಿಯು  ನಾಲಂದಾ ವಿಶ್ವವಿದ್ಯಾಲಯವನ್ನು ನಾಶಪಡಿಸಿದನು."೧

೧ : ಗುರುಜಿ, ಆನಂದ ಸಂಪಾದಕರು, ರಿಟರ್ನ್ ಟು ರೈಟಿಮಸ್ನೆಸ್, ಪು. ೭೩೨-೭೩೩.

## ಪರಿಶಿಷ್ಟ-೨೩

## ನಾಲಂದಾ ವಿಶ್ವವಿದ್ಯಾಲಯ

ನಾಲಂದಾ ಬಿಹಾರ ರಾಜ್ಯದ ಸುಪ್ರಸಿದ್ಧವಾದ ಪ್ರಾಚೀನ ಬೌದ್ಧ ಅವಶೇಷಗಳ ಸ್ಥಳ, ಅದು ಗಂಗೆಯ ದಡದ ಮೇಲಿನ ಪಾಟಣಾದ ಆಗ್ನೇಯ ದಿಕ್ಕಿನಲ್ಲಿ ಸುಮಾರು ೭೦ ಕಿ. ಮೀ. ಹಾಗೂ ರಾಜಗೀರದ ಉತ್ತರಕ್ಕೆ ೧೧.೨೭ ಕಿ. ಮೀ. ಅಂತರದ ಬಡಗಾವ ಎಂಬ ಹಳ್ಳಿಯ ಪರಿಸರದಲ್ಲಿ ನೆಲೆಸಿದೆ. ನಾಲಂದಾ ಪ್ರಾಚೀನ ವಿಶ್ವವಿದ್ಯಾಲಯವೆಂದು

ಭಾರತದಲ್ಲಿ ಹೆಸರಾದುದು. ಪ್ರಾಚೀನ ವಾಙ್ಮಯದಲ್ಲಿ ನಾಲಂದಾವನ್ನು ನಲ, ನಾಲಕ, ನಾಲಕಾಗ್ರ, ನಲಂದ ಮೊದಲಾದ ಬೇರೆ ಬೇರೆ ಹೆಸರುಗಳಿಂದ ಬದಲಾಯಿಸಿದುದು ಕಂಡು ಬರುತ್ತದೆ. ನಾಲಂದಾ ಹೆಸರಿನ ಬಗೆಗೆ ಹಲವು ಅಖ್ಯಾಯಿಕೆಗಳಿವೆ. ನಾಲಂದಾ ಪದವನ್ನು (ನ+ಅಲಮ್+ದಾ=ಪೂರ್ತಿಯಾಗಿ ನೀಡಲಾಗದುದು) ಎಂಬುದಾಗಿ ಅರ್ಥೈಸಲಾಗುತ್ತದೆ.

ಪ್ರಾಚೀನ ವಾಙ್ಮಯದ ಪುರಾವೆಯಂತೆ, ನಾಲಂದಾದ ಪ್ರಾಚೀನತೆಯು ಮೌರ್ಯ ಕಾಲದ ಅಶೋಕನ ಸಾಮ್ರಾಜ್ಯದವರೆಗೂ ತಲುಪುತ್ತದೆ. ಆದರೂ ಕ್ರಿ.ಶ. ಐದು, ಆರನೆಯ ಶತಮಾನದಿಂದ ಮುಂದೆ ಆ ಸ್ಥಳದ ಏಳಿಗೆಯಾಯಿತು. ಈ ವಿಶ್ವವಿದ್ಯಾಲಯಕ್ಕೆ ಹರ್ಷವರ್ಧನ ಹಾಗೂ ಪಾಲ ರಾಜರ (ಎಂಟರಿಂದ ಒಂಬತ್ತನೆಯ ಶತಮಾನ) ಉದಾರ ರಾಜಾಶ್ರಯವು ಲಭಿಸಿತು. ಕರ್ನಿಂಗಹ್ಯಾಮ್ ಅವರು ೧೮೭೧ರಲ್ಲಿ ಈ ಸ್ಥಳವನ್ನು ಅನ್ವೇಷಿಸಿದರು. ಆದರೆ ಉತ್ಕನನವು ೧೯೧೬ರಲ್ಲಿ ಪ್ರತ್ಯಕ್ಷ ಶುರುವಾಗಿ ಮುಂದೆ ಅದೆಷ್ಟೋ ಕಾಲ ಸಾಗಿತು. ಇದರಲ್ಲಿ ಹಲವು ದೇವಾಲಯಗಳು, ವಿಹಾರಗಳು, ಸ್ತೂಪಗಳು, ಮುದ್ರೆಗಳು ಹಾಗೂ ಕಂಚಿನ ವಿಗ್ರಹಗಳು ಸಿಕ್ಕವು. ಹಲವು ಮೆಟ್ಟಲುಗಳ ಉತ್ತುಂಗ ದೇವಾಲಯಗಳು, ಮಧ್ಯದಲ್ಲಿ ಚೌಕು ಹಾಗೂ ಸುತ್ತಲೂ ವೆರಾಂಡಾ, ಹಲವಾರು ಕೋಣೆಗಳ ವಿಹಾರಗಳು, ಸಭಾಗೃಹಗಳಿಂದ ಪ್ರಾಚೀನ ವಿಶ್ವವಿದ್ಯಾಲಯದ ಆಂತರಿಕ ಜೀವನಕ್ರಮದ ಕಲ್ಪನೆ ಬರುತ್ತದೆ. ಕಲಾತ್ಮಕವಾದ ಚಿತ್ರಗಳು ಹಾಗೂ ಕೆತ್ತನೆಗಳಿಂದ ಈ ಕಟ್ಟಡಗಳ ಕಂಬ, ಹಾಗೂ ಗೋಡೆಗಳನ್ನು ಅಲಂಕರಿಸಲಾಗಿತ್ತು. ವಿದ್ಯಾರ್ಥಿಗಳ ಜೀವನ ಹೇಗಿತ್ತು ಎನ್ನುವುದರ ಮೇಲೆ ಬೆಳಕು ಬೀರುವಂಥ ಪುರಾವೆಯೂ ದೊಡ್ಡ ಪ್ರಮಾಣದಲ್ಲಿ ಅಲ್ಲಿ ದೊರೆತಿದೆ. ದೇವಪಾಲ ರಾಜನು (ಒಂಬತ್ತನೆಯ ಶತಮಾನ) ಸುಮಾತ್ರಾದ ರಾಜನ ಕೋರಿಕೆಯ ಮೇರೆಗೆ ವಿಹಾರಗಳಿಗಾಗಿ ಗ್ರಾಮಗಳನ್ನು ಇನಾಮು ಕೊಟ್ಟ ಬಗೆಗಿನ ತಾಮ್ರಪಟ ಲಭಿಸಿದೆ. ನಾಲಂದಾ ವಿಹಾರ ಹಾಗೂ ಖಾಸಗಿ ಮತ್ತು ಶ್ರೇಣಿಗಳ ಸಾಕಷ್ಟು ಮುದ್ರೆಗಳು ಸಿಕ್ಕಿವೆ. ಬೌದ್ಧ ಮಠ ಹಾಗೂ ಧಾರ್ಮಿಕ ಗ್ರಂಥಗಳ ಮಜರೂರು ಇರುವ ಮಣ್ಣಿನ ಮುದ್ರೆಗಳೂ ಹಲವು ಸ್ತೂಪಗಳಲ್ಲಿ ಲಭಿಸಿವೆ.

ನಾಲಂದಾ ವಿಶ್ವವಿದ್ಯಾಲಯವು ಪ್ರಾಚೀನ ಭಾರತದ ಒಂದು ಆದರ್ಶ ವಿಶ್ವವಿದ್ಯಾಲಯ, ಅದು ಬಿಹಾರ ರಾಜ್ಯದ ರಾಜಗೀರದ ಉತ್ತರಕ್ಕೆ ೧೧.೨೭ ಕಿ. ಮೀ. ಅಂತರದ ಮೇಲಿದ್ದಿತು. ಇ. ಸ.

ಐದನೆಯ ಶತಮಾನದ ಶುರುವಿನಲ್ಲಿ ಅದರ ಸ್ಥಾಪನೆ ಆಗಿರಬಹುದು. ಬೌದ್ಧ ಆಚಾರ್ಯನಾದ ನಾಗಾರ್ಜುನನ ಶಿಷ್ಯನಾದ ಆರ್ಯದೇವನಿಗೆ ಇದರ ಶ್ರೇಯಸ್ಸನ್ನು ಕೊಡುತ್ತಾರೆ. ಉತ್ಖನನದಲ್ಲಿ ದೊರೆತ ಮುದ್ರೆಯ ಮೇಲೆ 'ಶ್ರೀನಾಲಂದಾ ಮಹಾವಿಹಾರ-ಆರ್ಯಭಿಕ್ಷುಸಂಘಸ್ಯ' ಎಂಬ ಒಕ್ಕಣೆಯಿದ್ದು ಅದರ ಎರಡೂ ಬದಿಗಳ ಮೇಲೆ ಸಾರನಾಥದ ಧರ್ಮಚಕ್ರವಿದೆ. ನಾಲಂದಾ ವಿಶ್ವವಿದ್ಯಾಲಯದ ಭವ್ಯವಾದ ಕಟ್ಟಡ ಹಾಗೂ ವಸತಿಗೃಹಗಳು ಸುಮಾರು ಒಂದೂವರೆ ಕಿ. ಮೀ. ಉದ್ದಳತೆ ಹಾಗೂ ಮುಕ್ಕಾಲು ಕಿ. ಮೀ. ಅಗಲಳತೆಯ ಕ್ಷೇತ್ರದಲ್ಲಿದ್ದವು. ಇದಲ್ಲದೆ ಸುಸಜ್ಜಿತವಾದ ಗ್ರಂಥಾಲಯಕ್ಕಾಗಿ ರತ್ನಸಾಗರ, ರತ್ನೋದಯ ಮತ್ತು ರತ್ನರಂಜಕ ಎಂಬ ಇನ್ನು ಮೂರು ಚೆಂದದ ಕಟ್ಟಡಗಳಿದ್ದವು. ಗ್ರಂಥಾಲಯದ ಈ ವಿಭಾಗಕ್ಕೆ ಧರ್ಮಗಂಜ ಎನ್ನುತ್ತಿದ್ದರು. ವಸತಿಗಾಗಿ ೪,೦೦೦ ಮತ್ತು ಅಧ್ಯಯನಕ್ಕಾಗಿ ೧,೦೦೦ ಕೋಣೆಗಳಿದ್ದವು. ೮,೫೦೦ ಜನ ವಿದ್ಯಾರ್ಥಿಗಳು ಮತ್ತು ೧,೫೦೦ ಜನ ಶಿಕ್ಷಕರಿದ್ದರು. ದಿನಾಲು ಒಂದು ನೂರು ಉಪನ್ಯಾಸಗಳು ನಡೆಯುತ್ತಿದ್ದವು. ಇಲ್ಲಿ ನೆಲೆಸಿದರಿಗೆ ನಿವಾಸ, ಭೋಜನ, ಬಟ್ಟೆಬರೆ, ಚಿಕಿತ್ಸೆ ಹಾಗೂ ಶಿಕ್ಷಣಗಳು ಉಚಿತವಾಗಿ ಲಭಿಸುತ್ತಿದ್ದವು. ದಾನವಾಗಿ ಪಡೆದ ೧೦೦ ಗ್ರಾಮಗಳ ಆದಾಯ ಹಾಗೂ ಇತರ ಕೊಡುಗೆಗಳಿಂದ ಈ ವೆಚ್ಚವನ್ನೆಲ್ಲ ಭರಿಸಲಾಗುತ್ತಿತ್ತು.

ನಾಲಂದಾ ವಿಶ್ವವಿದ್ಯಾಲಯದ ಪಠ್ಯಕ್ರಮವು ಪ್ರಗತಿಪರವೂ ಬಲು ವ್ಯಾಪಕವಾದುದೂ ಆಗಿತ್ತು. ಸಾಂಪ್ರದಾಯಿಕತೆಗೆ ಅದರಲ್ಲಿ ಸ್ಥಾನವಿರಲಿಲ್ಲ. ಬೌದ್ಧ ಧರ್ಮದ ಬೇರೆ ಬೇರೆ ಸಂಪ್ರದಾಯಗಳು, ಜೈನ ಧರ್ಮ, ಬ್ರಾಹ್ಮಣ ಧರ್ಮ ಮತ್ತು ಇತರ ಧರ್ಮಗಳ ಜೊತೆಗೆ ಯೋಗ, ವ್ಯಾಕರಣ, ಸಾಹಿತ್ಯ, ತರ್ಕಶಾಸ್ತ್ರ, ಶಬ್ದವಿದ್ಯೆ, ಚಿಕಿತ್ಸಾ ವಿದ್ಯೆ, ಗಣಿತ, ಚಿತ್ರಕಲೆ, ಶಿಲ್ಪಶಾಸ್ತ್ರ, ದಂಡನೀತಿ, ವೇದವಿದ್ಯೆ, ಮೊದಲಾದ ವಿದ್ಯೆಗಳನ್ನು ಕಲಿಸುವ ಏರ್ಪಾಡು ಅಲ್ಲಿತ್ತು. ಸ್ವಾತಂತ್ರವು ಸತ್ಯಶೋಧನೆಯ ಮೊದಲ ಷರತ್ತು ಆಗಿದೆಯೆಂದು ಬಗೆಯಲಾಗಿತ್ತು. ವಿಶ್ವವಿದ್ಯಾಲಯದ ಕೀರ್ತಿಯಿಂದಾಗಿ ವಿದ್ಯಾರ್ಥಿಗಳು ದೇಶದ ಮೂಲೆ ಮೂಲೆಗಳು ಹಾಗೂ ಚೀನ, ಕೋರಿಯಾ, ಟಿಬೆಟ್, ಮೊದಲಾದ ವಿದೇಶಗಳಿಂದ ಅಲ್ಲಿಗೆ ಬರುತ್ತಿದ್ದರು. ದ್ವಾರಪಂಡಿತರು ಕೈಕೊಳ್ಳುವ ಪರೀಕ್ಷೆ ತುಂಬ ಕಟ್ಟುನಿಟ್ಟಿನದಾಗಿತ್ತು. ಪ್ರವೇಶವನ್ನು ಪಡೆಯಬಯಸುವ ವಿದ್ಯಾರ್ಥಿಗಳಲ್ಲಿ ಶೇಕಡಾ ೨೦ ರಿಂದ ೩೦ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ಲಭಿಸುತ್ತಿತ್ತು. ವಿಶ್ವವಿದ್ಯಾಲಯವು ಆರ್ಯದೇವ, ಸಿಲಭದ್ರ, ಕರ್ಣಮತಿ, ಗುಣಮತಿ, ಬುದ್ಧಕೀರ್ತಿ, ಶಾಂತರಕ್ಷಿತ, ಕಮಲಶೀಲ, ಮುಂ. ವಿದ್ವಾಂಸರ ಮಾಲಿಕೆಯನ್ನೇ ತಯಾರಿಸಿತು. ನ್ಯಾಯಶಾಸ್ತ್ರವು ಈ ವಿಶ್ವವಿದ್ಯಾಲಯದ ದೊಡ್ಡ ಕೊಡುಗೆಯಾಗಿದೆ. ಚಾರಿತ್ರಸಂಪನ್ನ ಹಾಗೂ ಬುದ್ಧಿವಂತ ಶಿಕ್ಷಕರು, ಅಧ್ಯಯನಶೀಲರು ಮತ್ತು ಮುಂದಕ್ಕೆ ಬರಬಹುದಾದ ವಿದ್ಯಾರ್ಥಿಗಳು, ಕುಶಲ ಆಡಳಿತೆ, ರಾಜ್ಯಕರ್ತರಿಂದ ಸತತವಾಗಿ ಲಭಿಸಿದ ಆಶ್ರಯಗಳಿಂದಾಗಿ ನಾಲಂದಾ ವಿಶ್ವವಿದ್ಯಾಲಯವು ನಿರಂತರವಾಗಿ ಎಂಟು ಶತಮಾನಗಳ ಕಾಲ ವೈಭವದಲ್ಲಿತ್ತು. ಭಾರತದ ಅಧ್ಯಯನ ಹಾಗೂ ಅಧ್ಯಾಪನಗಳ ಶ್ರೇಷ್ಠ ಸಂಪ್ರದಾಯಕ್ಕೆ ನಿರಂತರತೆ ಹಾಗೂ ಸಮೃದ್ಧಿಯನ್ನು ತಂದುಕೊಡುವಲ್ಲಿ ಈ

ವಿಶ್ವವಿದ್ಯಾಲಯದ ಪಾಲು ಬಲು ದೊಡ್ಡದು. ಬಿಹಾರ ಸರಕಾರವು ನಾಲಂದಾ ವಿಶ್ವವಿದ್ಯಾಲಯದ ನೆನಪಿಗಾಗಿ ೧೯೫೧ರಲ್ಲಿ ಹೊಸ ನಾಲಂದಾ ಮಹಾವಿಹಾರವನ್ನು (ನಾಲಂದಾ ಪ್ರತಿಷ್ಠಾನ) ಅದೇ ಸ್ಥಾನದಲ್ಲಿ ಸ್ಥಾಪಿಸಿತು. ೧

"नालंदा विश्वविद्यालय की स्थापना ईसा की पांचवी शताब्दी में हुयी ऐसा बताया जाता है । ई. सन. ६०० के समय तो यह अपनी परम कीर्ती पर पहुंचा था। नालंदा राजगृह के पास था। राजगृह

೧ : ಮರಾಠಿ ವಿಶ್ವಕೋಶ : ೮. ಪು. ೫೪೫.



भगवान बुद्ध के समय मगध की राजधानी थी । भगवान बुद्धने कई बार राजगृह की भेट की है। उपाली राजगृह के ही थे, और सारिपुत्र का जन्मग्राम नालक नालंदा के पास ही था।

स्थापत्य के दृष्टीसे नालंदा सब सबसे बड़ा और सबसे सुंदर महाविहार था। ई. सन ६०० मे यहाँ १५०० अध्यापक और दस हजार विद्यार्थी थे । अध्ययन-अध्यापन के लिये कई शालाएँ थी । व्याख्यान के लिये बडे-बडे प्रकोष्ठ बंधवाए थे। शक्रादित्य, बुद्धगुप्त, तथागतगुप्त, बालादित्य, वज्र तथा हर्ष इन छः राजाओं ने अपने अपने समय यहाँ भवन निर्माण किये थे । बंगाल के पाल वंशीय राजा और सुमात्रा के बालपुत्रदेव राजा ने भी यहाँ भवन बनवाये थे, ऐसी जानकारी मिलती है ।

नालंदा यह महायानी शाखा का प्रमुख विश्वविद्यालय था, परंतु बौद्धों के 18 भी पंथों के ग्रंथ यहाँ पढाये जाते थे। साथ ही अधिधर्म-कोश, हेतु-विद्या, शब्द-विद्या, चिकित्सा, संगीत, सांख्य, व्याकरण, न्याय आदि विद्याएँ भी यहाँ सिखायी जाती थी।

नालंदा मे हस्तलिखित ग्रंथों का महान संग्रह था। दुनिया मे इतना बड़ा ग्रंथ-संग्रह उस समय कही भी नही था। यहाँ ग्रंथालय के लिये नौ मंजिलोंवाली ईमारत थी। उनको 'धर्मगज' ऐसा कहा जाता था।

इस विश्व विद्यालयमे प्रवेश पाने के लिये इच्छुक विद्यार्थियों को प्रवेश-परीक्षा देनी पदती थी। दिनभर का शिक्षण-क्रम घटिका-यंत्र के सहारे अनुशासन बद्ध होता था। शिक्षण-व्यवस्था के नियमों का भंग करने वाले विद्यार्थियों को दंड दिया जाता था। पाठ्यक्रम के अंत मे दीक्षांत समारोह होकर उत्तीर्ण विद्यार्थीयों को उपाधियाँ (म्रिीज) प्रदान की जाती थी। ई. सन 603 के समय शीलभद्र नाम के विद्वान भिक्षु इस विश्ववद्यालय के प्रधान आचार्य थे। प्रसिद्ध विद्वान नागार्जुन, शांतिरक्षक, दिडनाग, ज्ञानश्री, आदि यहाँ आचार्य रह चुके थे।

एशिया-खंड के कोने-कोने से विद्यार्थी हजारों मील की यात्रा कर नालंदा मे पढने के लिये आते थे। प्रसिद्ध चिनी-यात्री हुएन्सांग ई. सन 629 मे यहाँ आया था। 10 वर्ष तक उसने यहाँ पढाई की, उसने अपने यात्रा-वर्णन मे नालंदा का विस्तृत वर्णन किया है। फाहियान ने ई. सन 408 मे तथा इत्सिंग ने 680 मे नालंदा की भेट की। नालंदा ठहर कर इत्सिंग ने भी कुछ समय तक अध्ययन किया। अपनी यात्रा-वर्णन मे उसने नालंदा का वर्णन विस्तृत रूप से लिखा है। 1197 इस्वी मे बिहार पर मुस्लिम आक्रमण हआ, और उसमे यह विश्वविद्यालय नष्ट हआ। लेकिन अभी भी बिहार राज्य में राजगृह के पास विद्यमान बडगाँव देहात मे इस विश्वविद्यालय के उध्वस्त खंडहर देखने मे आते हैं।

ಇ. ಸನ್ ಐದನೆಯ ಶತಮಾನದಲ್ಲಿ ನಾಲಂದಾ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತೆಂದು ಹೇಳಲಾಗುತ್ತದೆ. ಇ.ಸ. ೬೦೦ ರವರೆಗೆಂದರೆ ಅದು ಕೀರ್ತಿಯ ಅತ್ಯುಚ್ಚ ಮಟ್ಟವನ್ನು ತಲುಪಿತ್ತು. ನಾಲಂದಾ ಅರಮನೆಯ ಹತ್ತಿರದಲ್ಲಿತ್ತು. ಭಗವಾನ ಬುದ್ಧನ ಕಾಲಕ್ಕೆ ಈ ಅರಮನೆಯು ಮಗಧದ ರಾಜಧಾನಿಯಾಗಿತ್ತು. ಭಗವಾನ ಬುದ್ಧನು ಹಲವು ಬಾರಿ ಅರಮನೆಗೆ ಭೇಟಿ ಕೊಟ್ಟದ್ದನು. ಉಪಾಲಿ ಅರಮನೆಯವರೇ ಆಗಿದ್ದರಲ್ಲದೆ ಸಾರಿಪುತ್ರನ ಹುಟ್ಟೂರಾದ ನಾಲಕ, ನಾಲಂದಾಕ್ಕೆ ಹತ್ತಿರದಲ್ಲೇ ಇತ್ತು.

ನಾಲಂದಾ ವಾಸ್ತುಶಾಸ್ತ್ರದ ದೃಷ್ಟಿಯಿಂದ ಎಲ್ಲಕ್ಕೂ ದೊಡ್ಡದು ಹಾಗೂ ಎಲ್ಲ ಕ್ಕೂ ಹೆಚ್ಚು



ಸುಂದರವಾದ ಮಹಾವಿಹಾರವಾಗಿತ್ತು. ಇ. ಸ. ೬೦೦ರಲ್ಲಿ ಇಲ್ಲಿ ೧೫೦೦ ಅಧ್ಯಾಪಕರು ಹಾಗೂ ಹತ್ತು ಸಾವಿರ ವಿದ್ಯಾರ್ಥಿಗಳಿದ್ದರು. ಅಧ್ಯಯನ ಹಾಗೂ ಅಧ್ಯಾಪನಗಳಿಗಾಗಿ ಹಲವು ಶಾಲೆಗಳಿದ್ದವು. ಉಪನ್ಯಾಸಗಳಿಗಾಗಿ ದೊಡ್ಡ ದೊಡ್ಡ ಸಭಾಗೃಹಗಳನ್ನು ಕಟ್ಟಿಸಲಾಗಿತ್ತು. ಶಕಾದಿತ್ಯ, ಬುದ್ಧಗುಪ್ತ, ತಥಾಗತಗುಪ್ತ, ಬಾಲಾದಿತ್ಯ, ವಜ್ರ ಹಾಗೂ ಹರ್ಷ ಎಂಬ ಆರು ಜನ ಅರಸರು ತಮ್ಮ ತಮ್ಮ ಕಾಲದಲ್ಲಿ ಇಲ್ಲಿ ಸೌಧಗಳನ್ನು ನಿರ್ಮಿಸಿದ್ದರು. ಬಂಗಾಲದ ಪಾಲ ಮನೆತನದ ರಾಜ ಹಾಗೂ ಸುಮಾತ್ರಾದ ಬಾಲಪುತ್ರದೇವ ರಾಜನೂ ಕೂಡ ಇಲ್ಲಿ ಸೌಧಗಳನ್ನು ಕಟ್ಟಿಸಿದ್ದರೆಂಬ ಮಾಹಿತಿ ಲಭಿಸಿದೆ.

ನಾಲಂದಾ ಮಹಾಯಾನ ಶಾಖೆಯ ಪ್ರಮುಖವಾದ ವಿಶ್ವವಿದ್ಯಾಲಯವಾಗಿತ್ತು. ಆದರೂ ಬೌದ್ಧರ ೧೮ ಪಂಥಗಳ ಗ್ರಂಥಗಳನ್ನೆಲ್ಲ ಇಲ್ಲಿ ಕಲಿಸಲಾಗುತ್ತಿತ್ತು. ಜೊತೆಗೆ ಅಧಿಧರ್ಮ-ಕೋಶ, ಹೇತು-ವಿದ್ಯೆ, ಶಬ್ದ-ವಿದ್ಯೆ, ಚಿಕಿತ್ಸೆ, ಸಂಗೀತ, ಸಾಂಖ್ಯ, ವ್ಯಾಕರಣ, ನ್ಯಾಯ, ಮೊದಲಾದ ವಿದ್ಯೆಗಳನ್ನು ಕೂಡ ಇಲ್ಲಿ ಕಲಿಸಲಾಗುತ್ತಿತ್ತು.

ನಾಲಂದಾದಲ್ಲಿ ಕೈಬರಹದ ಗ್ರಂಥಗಳ ಬಲು ದೊಡ್ಡ ಸಂಗ್ರಹವಿತ್ತು. ಆ ಕಾಲಕ್ಕೆ ಪ್ರಪಂಚದಲ್ಲಿ ಇಷ್ಟೊಂದು ಬೃಹತ್ತಾದ ಗ್ರಂಥಸಂಗ್ರಹ ಇನ್ನೆಲ್ಲೂ ಇರಲಿಲ್ಲ. ಗ್ರಂಥಾಲಯಕ್ಕಾಗಿ ಇಲ್ಲಿ ಒಂಬತ್ತು ಮಹಡಿಗಳ ಕಟ್ಟಡಗಳಿದವು. ಅವುಗಳಿಗೆ 'ಧರ್ಮಗಂಜ' ಎಂಬ ಹೆಸರಿತ್ತು.

ಈ ವಿಶ್ವವಿದ್ಯಾಲಯಕ್ಕೆ ಪ್ರವೇಶವನ್ನು ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳು ಪ್ರವೇಶಪರೀಕ್ಷೆಗೆ ಕೂರಬೇಕಿತ್ತು. ಘಟಿಕಾ ಯಂತ್ರದಿಂದ ದಿನವಿಡಿಯ ಶಿಕ್ಷಣಕ್ರಮವನ್ನು ನಿಯಂತ್ರಿಸಲಾಗುತ್ತಿತ್ತು. ಶಿಕ್ಷಣಕ್ರಮವನ್ನು ಉಲ್ಲಂಘಿಸುವ

ವಿದ್ಯಾರ್ಥಿಗಳಿಗೆ ದಂಡವನ್ನು ವಿಧಿಸಲಾಗುತ್ತಿತ್ತು. ಪಠ್ಯಕ್ರಮ ಮುಗಿದ ತರುವಾಯ ವಿದ್ಯಾರ್ಥಿಗಳಿಗೆ ಘಟಿಕೋತ್ಸವದಲ್ಲಿ ಪದವಿಗಳನ್ನು ನೀಡಲಾಗುತ್ತಿತ್ತು. ಇ. ಸ. ೬೦೨ ರ ಕಾಲದಲ್ಲಿ ಶೀಲಭದ್ರ ಎಂಬ ವಿದ್ವಾಂಸರು ಈ ವಿಶ್ವವಿದ್ಯಾಲಯದ ಮುಖ್ಯ ಆಚಾರ್ಯರಾಗಿದ್ದರು. ಹೆಸರಾದ ವಿದ್ವಾಂಸರಾದ ನಾಗಾರ್ಜುನ, ಶಾಂತಿರಕ್ಷಕ, ದಿಡನಾಗ, ಜ್ಞಾನ, ಮೊದಲಾದವರು ಇಲ್ಲಿ ಆಚಾರ್ಯರಾಗಿದ್ದರು.

ವಿದ್ಯಾರ್ಥಿಗಳು ಏಶಿಯಾ ಖಂಡದ ಮೂಲೆ ಮೂಲೆಗಳಿಂದ ಸಾವಿರಾರು ಮೈಲುಗಳ ಪ್ರಯಾಣ ಮಾಡಿ ನಾಲಂದಾದಲ್ಲಿ ವಿದ್ಯಾಭ್ಯಾಸಕ್ಕಾಗಿ ಬರುತ್ತಿದ್ದರು. ಹೆಸರಾದ ಚೀನೀ ಯಾತ್ರಿಕ ಹುಯೇನ್ ಸಾಂಗ್ ಇವನು ಇ. ಸ. ೬೨೯ರಲ್ಲಿ ಇಲ್ಲಿಗೆ ಬಂದಿದ್ದನು. ಅವನು ಹತ್ತು ವರ್ಷಗಳ ಕಾಲ ಇಲ್ಲಿ ಕಲಿಯುತ್ತಿದ್ದನು. ತನ್ನ ಯಾತ್ರೆಯ ವರ್ಣನೆಯಲ್ಲಿ ಅವನು ನಾಲಂದಾವನ್ನು ಕುರಿತು ವಿಸ್ತಾರದಿಂದ ಬರೆದಿರುವನು. ಇ. ಸ. ೪೦೮ರಲ್ಲಿ ಫಾಹಿಯಾನ್ ಹಾಗೂ ಇಂಗ್ ೬೮೦ ರಲ್ಲಿ ನಾಲಂದಾಕ್ಕೆ ಭೇಟಿ ಕೊಟ್ಟಿದ್ದರು. ಇನ್ಸಿಂಗ್ ನಾಲಂದಾದಲ್ಲಿ ಕೆಲಕಾಲ ಉಳಿದು ಅಧ್ಯಯನವನ್ನು ಮಾಡಿದನು. ತನ್ನ ಪ್ರಯಾಣದ ವರ್ಣನೆಯಲ್ಲಿ ಅವನು ನಾಲಂದಾವನ್ನು ಕುರಿತು ವಿಸ್ತಾರದಿಂದ ವರ್ಣಿಸಿರುವನು.

೧೧೯೭ನೆಯ ಇಸವಿಯಲ್ಲಿ ಬಿಹಾರದ ಮೇಲೆ ಮುಸಲ್ಮಾನರ ಆಕ್ರಮಣ ನಡೆಯಿತು. ಅದರಿಂದಾಗಿ ವಿಶ್ವವಿದ್ಯಾಲಯ ನಾಶಹೊಂದಿತು. ಆದರೆ ಇಂದಿಗೂ ಅರಮನೆಗೆ ಹತ್ತಿರದ ಬಡಗಾಂವ್ ಹಳ್ಳಿಯಲ್ಲಿ ಈ ವಿಶ್ವವಿದ್ಯಾಲಯದ ಪಳೆಯುಳಿಕೆಗಳು ಕಾಣಸಿಕ್ಕಿತ್ತವೆ.೧

"..... Taranath in his History of Buddhism (of C. A. D. 1500), records the tradition that Nalanda was the birth place of Sariputta whose Chaitya was seen by Ashoka who added a temple to it. And in this way the first founder of the Nalanda Vihar was Ashoka.'

(P. 72) .... Taranath makes Nagarjuna spend a large part of his life at Nalanda, with which he also associates his pupil "1

"...... I-tsing stayed for his studies at Nalanda for the long period of ten years (A.D. 675-685), during which he collected there some 400 texts amounting to 500,000 Slokas (P.XVII). This shows that Nalanda possessed a well-equipped library. Information on the Nalanda University Library is given in the Tibetan accounts, from which we know that the library, situated in a special area known by the poetical name of Dharmaganj (Mart of Religion), comprised three huge buildings, called Ratnsangara, Ratnodadhi and Ratnaranjaka, of which Ratnsangara, which was a nine-storeyed PranaparamitaSutra and Tantrika books like Samajaguhya and the like." After the Turushka raiders had made incursions in Nalanda, the temples and Chaitya there were spared by a sage named Mudita Bhadra."

"Two notable Muslim Kings who destroyed the Buddhist shrines were Mahmud Gazinav and Bakhiaruddin Khilji. The former plundred the Buddhist shrines at Kot Kangra (Himaachal Pradesh) in the 10th Century and the latter destroyed the monasteries of Nalanda, Vikramasila and Odantapuri which were living institutions till the end of 12th Century

Commenting on the Muslim invasion, Dr. Ambedkar says* that "the religion of the Buddha got the sevsrest blow from the Muslim invasion. They destroyed the Buddhist idols and killed the Bhikkus. They mistook the great Nalanda University as the fort of the Buddhists and killed a large number of monks thinking that they were soldiers. The few Bhikkus who escaped the onslaught fled away to the neighbouring countries like Nepal, Tibet and China." So whatever was left by the Hindu Kings was destroyed by the Muslims.

That the opponents of Buddhism among the Hindus did not lag behind in destroying the Buddhist shrines is evident from the heaps as ashes at Sarnath and its neighbourhood. Apparently, the monasteries were burnt by the fanatics and this seems to have happened more tha once, as says Major Kittoe who caaried out excavations at Sarnath in 1851. He says, *** All has been sacked and burn priests, temples, idols, all together, for in some places, bones, iron, wood, and stone are found in huge masses, and this has happened more than once."

8: He', 7. 30-3%.

1 : Mukherji, P 557

2 : Ibid, P. 574.

* Speech of Colombo, Shri Lank on 29 May 1950.



How some Hindu Yogins exploited the situation created by the Muslim invasion of the Buddhist shrines in Bihar is vividly described by Dharmasvamin, a Tibetan piligrim, who visited Bihar abot three decades after the catastrophe. Accordig to him, Ratnabodhi, the biggest library at Nalanda, which had escaped destruction at the hands of the Mulims, was burnt by Hindu mendicants. He says "they (Hidus) prformed a Yajna, fire sacrifice pit into the Buddhist temples etc. This produced a great conflagration which consumed Ratnabodhi, the nine-storeyed library of the Nalanda University. ***1

"....ನಾಲಂದಾ ಸಾರಿಪುತ್ರನ ಜನ್ಮಸ್ಥಾನವಾಗಿದ್ದು ಅಶೋಕನು ಅವನ ಚೈತ್ಯವನ್ನು ಕಂಡಿದ್ದನು. ಅವನು ಅದಕ್ಕೆ ಒಂದು ದೇವಾಲಯವನ್ನು ಸೇರ್ಪಡಿಸಿದನು, ಎಂಬುದಾಗಿ ತಾರಾನಾಥರು ತಮ್ಮ 'ಹಿಸ್ಟರಿ ಆಫ್ ಬುದ್ದಿಸಮ್' (ಸಿ.ಎ.ಡಿ. ೧೫೦೦) ಪುಸ್ತಕದಲ್ಲಿ ನಮೂದಿಸಿರುವರು. ಹೀಗಾಗಿ, ಈ ರೀತಿಯಾಗಿ ನಾಲಂದಾ ವಿಹಾರದ ಮೊದಲ ಸಂಸ್ಥಾಪಕನೆಂದರೆ ಅಶೋಕ.' (ಪು. ೭೨) ...... ತಾರಾನಾಥರು ನಾಗಾರ್ಜುನನನ್ನು ತನ್ನ ಬಾಳಿನ ಹೆಚ್ಚಿನ ಕಾಲವನ್ನು ನಾಲಂದಾದಲ್ಲಿ ಕಳೆಯಹಚ್ಚುತ್ತಾರೆ, ಅದರೊಂದಿಗೆ ಅವನ ಶಿಷ್ಯರನ್ನೂ ಜೋಡಿಸುತ್ತಾರೆ.1

"......ಇತ್ಸಿಂಗ್ ಇವನು ವಿದ್ಯಾರ್ಥಿಯಾಗಿ ನಾಲಂದಾದಲ್ಲಿ ಹತ್ತು ವರ್ಷಗಳಷ್ಟು ದೀರ್ಘ ಕಾಲವನ್ನು (ಇ. ಸ. ೬೭೫-೬೮೫) ಕಳೆದನು. ಅವನು ಅಲ್ಲಿರುವಾಗ ಸುಮಾರು ೪೦೦ ಪಠ್ಯಗಳನ್ನು ಕಲೆಹಾಕಿದನು. ಅವುಗಳ ಒಟ್ಟು ಶ್ಲೋಕಗಳ ಸಂಖ್ಯೆಯು ೫೦೦.೦೦೦ ದಷ್ಟಿದೆ (ಪು. XVII), ನಾಲಂದಾದಲ್ಲಿ ಉತ್ತಮವಾದ ಗ್ರಂಥಾಲಯವಿತ್ತೆಂಬುದು ಇದರಿಂದ ತಿಳಿದು ಬರುತ್ತದೆ. ನಾಲಂದಾ ವಿಶ್ವವಿದ್ಯಾಲಯದ ಗ್ರಂಥಾಲಯದ ಬಗೆಗಿನ ಮಾಹಿತಿಯನ್ನು ಟಿಬೆಟ್ಟಿನ ಬರವಣಿಗೆಗಳಲ್ಲೂ ನೀಡಲಾಗಿದೆ. ಅವುಗಳಿಂದ, ಗ್ರಂಥಾಲಯವು 'ಧರ್ಮಗಂಜ' (ಧರ್ಮದ ಪೇಟೆ) ಎಂಬ ಕಾವ್ಯಾತ್ಮಕವಾದ ಹೆಸರಿನ ಒಂದು ವಿಶೇಷವಾದ ಸ್ಥಳದಲ್ಲಿದ್ದು ಅದಕ್ಕಾಗಿ ಮೂರು ಬೃಹತ್ ಕಟ್ಟಡಗಳಿದ್ದವು. ಅವುಗಳ ಹೆಸರು ರತ್ನಸಂಗರ, ರತ್ನೋದಧಿ ಹಾಗೂ ರತ್ನರಂಜಕ ಎಂದಿದ್ದವು. ರತ್ನಸಂಗರ ಕಟ್ಟಡ ಒಂಬತ್ತು ಮಹಡಿಗಳಾದಾಗಿತ್ತು. ಪವಿತ್ರ ಕೃತಿಗಳಾದ ಪ್ರಾಣಪರಮಿತಸೂತ್ರ ಹಾಗೂ ಸಮಾಜಗುಹ್ಯದಂತಹ ತಾಂತ್ರಿಕ ಗ್ರಂಥಗಳು ಅದರಲ್ಲಿದ್ದವು. ತುರುಷರು ನಾಲಂದಾದ ಮೇಲೆ ದಾಳಿ ಮಾಡಿದಾಗ ಅಲ್ಲಿಯ ಮುದಿತ ಭದ್ರನೆಂಬ ಋಷಿಯು ದೇವಾಲಯ ಹಾಗೂ ಚೈತ್ಯಗೃಹಗಳನ್ನು ಕಾಪಾಡಿದನು.2

"ಬುದ್ಧ ದೇವಾಲಯಗಳನ್ನು ಹಾಳುಗೆಡಹಿದ ಹೆಸರಾದ ಇಬ್ಬರು ಮುಸಲ್ಮಾನ ಅರಸರೆಂದರೆ ಮಹಮ್ಮದ್ ಗಝನವಿ ಹಾಗೂ ಬಖಿಯರುದ್ದೀನ್ ಖಿಲಜಿ. ಮೊದಲಿನವನು ೧೦ನೆಯ ಶತಮಾನದಲ್ಲಿ ಕೋಟ ಕಾಂಗ್ರಾ (ಹಿಮಾಚಲ ಪ್ರದೇಶ) ದಲ್ಲಿದ್ದ ಬೌದ್ಧ ದೇವಾಲಯಗಳನ್ನು ದೋಚಿದನು. ಎರಡನೆಯವನು ನಾಲಂದಾ, ವಿಕ್ರಮಶಿಲಾ ಮತ್ತು ಓದಂತಪುರಿಯ ಮಠಗಳನ್ನು ನಾಶಪಡಿಸಿದನು.

** The Gazetteer of India, Indian Union-Country and People. 1965, P. 452.

*** Buddh Prakash, Aspeet of Indian History and Civization, Agra, 1965. P. 213, Also see Tibetan Text-Sam-Jan-Zang, ed. Sarat Chandra Das. P. 92 cited in 'Mediaval School of Indian logic' by S. C. Vidyhyabhushan, P. 146.

1: Ahir, P. 31-33.

೧ : 'ದೀನಬಂಧು , ಪು. ೩೦-೩೧.

೧ : ಮುಖರ್ಜಿ, ಪು. ೫೫೭,

೨ : ಅದೇ, ಪು. ೫೭೪,

೧೨ನೆಯ ಶತಮಾನದ ವರೆಗೂ ಅವು ಜೀವಂತ ಸಂಸ್ಥೆಗಳಾಗಿದ್ದವು. ಡಾ. ಅಂಬೇಡಕರರು ಮುಸಲ್ಮಾನರ ದಾಳಿಗಳನ್ನು ಕುರಿತು ಹೀಗೆನ್ನುತ್ತಾರೆ* : "ಮುಸಲ್ಮಾನರ ದಾಳಿಯಿಂದ ಬೌದ್ಧ ಧರ್ಮಕ್ಕೆ ಎಲ್ಲಕ್ಕೂ ಬಲು ದೊಡ್ಡದಾದ ಪೆಟ್ಟು ಬಿದ್ದಿತು. ಅವರು ಬೌದ್ಧ ವಿಗ್ರಹಗಳನ್ನು ನಾಶಪಡಿಸಿದರು, ಭಿಕ್ಕುಗಳನ್ನು ಕೊಲೆ ಮಾಡಿದರು. ಅವರು ನಾಲಂದಾ ವಿಶ್ವವಿದ್ಯಾಲಯವನ್ನು ಬೌದ್ಧರ ಕೋಟೆ ಎಂದು ತಪ್ಪಾಗಿ ಭಾವಿಸಿದ್ದರು, ಬಹಳಷ್ಟು ಜನ ಸಂನ್ಯಾಸಿಗಳನ್ನು ಸೈನಿಕರೆಂದು ಭಾವಿಸಿ ಅವರನ್ನು ಕೊಂದರು. ಕೆಲವು ಜನ ಭಿಕ್ಕುಗಳು ಈ ದಾಳಿಯಿಂದ ತಪ್ಪಿಸಿಕೊಂಡು ನೆರೆಯ ರಾಷ್ಟ್ರಗಳಾದ ನೇಪಾಳ, ಟಿಬೆಟ್ ಮತ್ತು ಚೀನಾಗಳಿಗೆ ಪಲಾಯನ ಗೈದರು. ಹೀಗೆ ಹಿಂದೂ ಅರಸರಿಂದ ಉಳಿಸಲಾದುದನ್ನು ಮುಸಲ್ಮಾನ ಅರಸರು ನಾಶಪಡಿಸಿದರು.

ಪ್ರಾಚ್ಯವಸ್ತು ಸಂಶೋಧಕರಿಗೆ ಸಾರನಾಥ ಹಾಗೂ ಅದರ ಸುತ್ತಲಲ್ಲಿ ದೊರೆತ ಬೂದಿಯ ರಾಶಿಗಳು, ಸುಡಲಾದ ವಿಗ್ರಹಗಳು ಹಾಗೂ ಸಂನ್ಯಾಸಿಗಳ ಮೂಳೆಗಳು ಬೌದ್ಧ ದೇವಾಲಯಗಳನ್ನು ನಾಶಪಡಿಸುವಲ್ಲಿ ಹಿಂದೂಗಳಲ್ಲಿರುವ ಬೌದ್ಧ ವಿರೋಧಿಗಳು ಹಿಂದೂಳಿಯಲಿಲ್ಲ, ಎನ್ನುವುದಕ್ಕೆ ಸಾಕ್ಷ್ಯಗಳನ್ನು ಒದಗಿಸುತ್ತವೆ. ಮೇಜರ್ ಕಿಟ್ಟೋವಿ ಅವರು ೧೮೫೧ ರಲ್ಲಿ ಸಾರನಾಥದಲ್ಲಿ ಉತ್ಕನನವನ್ನು ನಡೆಸಿದರು. ಧರ್ಮಾಂಧರು ಈ ಮಠಗಳನ್ನು ಒಂದಕ್ಕಿಂತ ಹೆಚ್ಚು ಸಲ ಸುಟ್ಟರೆಂದು ಅವರು ಹೇಳುತ್ತಾರೆ. ಅವರು, ** ಧರ್ಮಗುರುಗಳು, ದೇವಾಲಯಗಳು, ವಿಗ್ರಹಗಳು, ಏನೆಲ್ಲವನ್ನೂ ಧರೆಗುರುಳಿಸಲಾಯಿತು, ಸುಡಲಾಯಿತು. ಇದು ಒಂದಕ್ಕಿಂತ ಹೆಚ್ಚು ಸಲ ನಡೆದಿದೆ. ಹೀಗೆನ್ನಲು ಕಾರಣವೆಂದರೆ ಕೆಲವೆಡೆಗಳಲ್ಲಿ ಮೂಳೆಗಳ, ಕಬ್ಬಿಣದ, ಕಟ್ಟಿಗೆಗಳ ಹಾಗೂ ಕಲ್ಲುಗಳ ಬಲು ದೊಡ್ಡ ರಾಶಿಗಳು ಲಭಿಸಿವೆ" ಎನ್ನುತ್ತಾರೆ. ಟಿಬೆಟ್ಟಿನ ಯಾತ್ರಿಕನಾದ ಧರ್ಮಸ್ವಾಮಿನ್ ಎನ್ನುವವನು, ಬಿಹಾರದಲ್ಲಿ ನಡೆದ ಈ ಸರ್ವನಾಶದ ಸುಮಾರು ಮೂರು ದಶಕಗಳ ಬಳಿಕ ಅಲ್ಲಿಗೆ ಭೇಟಿ ಕೊಟ್ಟನು. ಕೆಲವು ಜನ ಹಿಂದೂ ಯೋಗಿಗಳು

ಬಿಹಾರದ ಬೌದ್ಧ ಮಠಗಳ ಮೇಲಿನ ದಾಳಿಗಳ ಸನ್ನಿವೇಶವನ್ನು ಹೇಗೆ ದುರುಪಯೋಗಪಡಿಸಿಕೊಂಡರು, ಎನ್ನುವ ಸಂಗತಿಯನ್ನು ಅವನು ಸ್ಪಷ್ಟವಾಗಿ ವರ್ಣಿಸಿರುವನು. ನಾಲಂದಾದ ಎಲ್ಲಕ್ಕೂ ದೊಡ್ಡ ಗ್ರಂಥಾಲಯವಾದ ರತ್ನಬೋಧವು ಮುಸಲ್ಮಾನರ ದಾಳಿಯನ್ನು ತಪ್ಪಿಸಿಕೊಂಡಿತ್ತು. ಆದರೆ ಹಿಂದೂ ಭಿಕ್ಷುಕರು ಅದನ್ನು ಸುಟ್ಟು ಹಾಕಿದರೆಂದು ಅವನು ಅಭಿಪ್ರಾಯಪಡುತ್ತಾನೆ. ಅವನು, ಅವರು (ಹಿಂದೂಗಳು) ಒಂದು ಯಜ್ಞ, ಹೋಮ ಮಾಡಿ ಅವುಗಳ ಕುಂಡಗಳಿಂದ ಕೆಂಡ ಹಾಗೂ ಬೂದಿಗಳನ್ನು ಬೌದ್ಧ ದೇವಾಲಯಗಳಲ್ಲಿ ಎರಚಿದರು. ಇದರಿಂದಾಗಿ ದುಳ್ಳುರಿ ಹೊತ್ತಿಕೊಂಡು ನಾಲಂದಾ ವಿಶ್ವವಿದ್ಯಾಲಯದ ಒಂಬತ್ತು ಮಹಡಿಗಳ ಗ್ರಂಥಾಲಯವಾದ, ರತ್ನಬೋಧಿಯು ಸುಟ್ಟು ಕರಕಾಯಿತು. *** ೧ ]

* : Speech of Colombo, Sri Lanka on 29 May 1950.

** The Gazetteer of India, Indian Union-Country and People, 1965, P. 452.

*** : Buddh Prakash, Aspect of Indian History and Civilization, Agra, 1965. P. 213, Also see Tibetan Text-Pag-Sam-Jan-Zang, ed. Sarat Chandra Das. P. 92 cited in Mediaval School of Indian logic' by S.C.Vidhyabhushan, P. 146.

1 : Ahir, P. 31-33.

## परिशिष्ट-२४

## तक्षशीला विद्यापीठ

तक्षशीला शिक्षण केंद्र की स्थापना बुद्ध पूर्व है । यह स्थल वर्तमान पाकिस्तान मे पेशावर से २० मील दूरीपर स्थीत है । प्राचीन काल से ही यह स्थल विद्या का केंद्र था । इस नगर को नागराज तक्षक ने बसाया था। पिता के मृत्यु का बदला चुकाने के लिये जनमेजय ने यहाँ के नाग लोगोंको तथा इस नगरी को नष्ट किया था ।

बुद्ध-कालीन कोशल के राजा प्रसेनजित तथा मगध नरेंश बिंबिसार के राजवैद्य जीवक ने यहाँ ही शिक्षण लिया था। सम्राट कनिष्क ने ( समय इ. स. पूर्व १०० मे) यहाँ अनेक बौद्ध स्थलों का एवं भवनों का निर्माण किया था । लेकिन विदेशी आक्रमणी में यह स्थल बार बार विनष्ट होता था । पाचवी सदी के आरंभ मे यह पूर्णतः नष्ट हो गया था ।

प्रसिद्ध चीनी यात्री फाहियान पाचवी सदी के आरंभ मे यहाँ आया था । उसके समय यह विद्या केंद्र कुछ अच्छा था । लेकिन सातवी सदी में आये हए हुएनत्सांग के समय यह खंडहर जैसा था । बौद्ध-काल मे तक्षशीला का विकास भली-भाँती हुआ । पहले यहाँ हस्तविद्या, चिकित्सा, आदि १८ शिल्पों की

पढाई होती थी। बौद्ध काल में यहाँ बौद्ध धम्म तथा दर्शन का अध्ययन होता था । एक समय यहाँ के महाविहार में भिक्षु कुमारलब्ध प्रमुख आचार्य थे ।।

१ : 'दीनबंधु', पु. २९-३०.

## ಪರಿಶಿಷ್ಟ-೨೪

## ತಕ್ಷಶಿಲಾ ವಿಶ್ವವಿದ್ಯಾಲಯ

ತಕ್ಷಶಿಲಾ ಶಿಕ್ಷಣ-ಕೇಂದ್ರದ ಸ್ಥಾಪನೆಯು ಬುದ್ಧನಿಗಿಂತ ಮೊದಲಿನ ಕಾಲದ್ದು. ಈ ತಾಣವು ಇಂದಿನ ಪಾಕಿಸ್ತಾನದ ಪೇಶಾವರದಿಂದ ೨೦ ಮೈಲು ದೂರದಲ್ಲಿದೆ. ಇದು ಪ್ರಾಚೀನ ಕಾಲದಿಂದಲೂ ಸ್ಥಲ ವಿದ್ಯೆಯ ಕೇಂದ್ರವಿತ್ತು. ನಾಗರಾಜನಾದ ತಕ್ಷಕನು ಈ ನಗರವನ್ನು ಸ್ಥಾಪಿಸಿದ್ದನು. ಜನಮೇಜಯನು ತನ್ನ ತಂದೆಯ ಸಾವಿನ ಸೇಡನ್ನು ತೀರಿಸಿಕೊಳ್ಳಲೆಂದು ಇಲ್ಲಿಯ ನಾಗ ಜನ ಹಾಗೂ ಅವರ ನಗರವನ್ನು ನಾಶಪಡಿಸಿದ್ದನು.

ಬೌದ್ಧ ಕಾಲದ ಕೋಶಲ ರಾಜನಾದ ಪ್ರಸೇನಜಿತ ಹಾಗೂ ಮಗಧ ದೇಶದ ನರೇಶನಾದ ಬಿಂಬಿಸಾರನ ರಾಜವೈದ್ಯನಾದ ಜೀವಕನು ಇಲ್ಲಿ ಶಿಕ್ಷಣವನ್ನು ಪಡೆದಿದ್ದನು. ಸಾಮ್ರಾಟ್ ಕನಿಷ್ಕನು (ಕಾಲ ಇ. ಸ. ಪೂರ್ವ ೧೦೦ರಲ್ಲಿ) ಇಲ್ಲಿ ಹಲವು ಬೌದ್ಧ ತಾಣ ಹಾಗೂ ಭವನಗಳನ್ನು ನಿರ್ಮಿಸಿದ್ದನು. ಆದರೆ ವಿದೇಶೀಯ ಆಕ್ರಮಣಗಳಿಂದಾಗಿ ಈ ಸ್ಥಾನವು ಮತ್ತೆ ಮತ್ತೆ ನಾಶ ಹೊಂದುತ್ತಿತ್ತು. ಇದು ಐದನೆಯ ಶತಮಾನದ ಶುರುವಿನಲ್ಲಿ ಪೂರ್ತಿ ನಾಶ ಹೊಂದಿತು.

ಐದನೆಯ ಶತಮಾನದ ಶುರುವಿನಲ್ಲಿ ಪ್ರಸಿದ್ಧ ಚೀನಿ ಯಾತ್ರಿಕನಾದ ಫಾಹಿಯಾನ್ ಇವನು ಇಲ್ಲಿಗೆ ಬಂದಿದ್ದನು. ಅವನ ಕಾಲಕ್ಕೆ ಈ ವಿದ್ಯಾಕೇಂದ್ರವು ತಕ್ಕ ಮಟ್ಟಿಗೆ ಚೆನ್ನಾಗಿತ್ತು. ಆದರೆ ಏಳನೆಯ ಶತಮಾನದಲ್ಲಿ ಬಂದ ಹುಯೆನ್ ತ್ಸಾಂಗ್ ಇವನ ಕಾಲಕ್ಕೆ ಇದು ಪಳೆಯುಳಿಕೆಯಂತಾಗಿತ್ತು. ತಕ್ಷಶಿಲಾದ ಅಭಿವೃದ್ಧಿಯು ಬೌದ್ಧ ಕಾಲದಲ್ಲಿ ಬಲು ಭರದಿಂದ ಸಾಗಿತು. ಮೊದಲು ಇಲ್ಲಿ ಹಸ್ತಿವಿದ್ಯೆ, ಚಿಕಿತ್ಸೆ, ಮೊದಲಾದ ೧೮ ವಿದ್ಯೆಗಳನ್ನು ಕಲಿಸಲಾಗುತ್ತಿತ್ತು. ಬೌದ್ಧ ಕಾಲದಲ್ಲಿ ಇಲ್ಲಿ ಬೌದ್ಧ ಧಮ್ಮ ಹಾಗೂ ತತ್ತ್ವಜ್ಞಾನಗಳ ಅಧ್ಯಯನ ನಡೆಯುತ್ತಿತ್ತು. ಒಂದು ಕಾಲಕ್ಕೆ ಭಿಕ್ಷು ಕುಮಾರಲಬ್ಧರು ಇಲ್ಲಿಯ ಮಹಾವಿಹಾರದಲ್ಲಿ ಪ್ರಮುಖ ಆಚಾರ್ಯರಾಗಿದ್ದರು.[1]

೧ : 'ದೀನಬಂಧು , ಪು. ೧೯-೨೦.

## ಪರಿಶಿಷ್ಟ-೧೫

## ಮಾರ್ಕ್ಸ್‌ವಾದ

ಮಾರ್ಕ್ಸ್‌ವಾದವೆಂದರೆ ಪ್ರಖ್ಯಾತ ಕ್ರಾಂತಿವಾದಿ ತತ್ತ್ವವೇತ್ತನಾದ ಕಾರ್ಲ್ ಮಾರ್ಕ್ಸ್ (೧೮೧೮-೧೮೮೩) ಹಾಗೂ ಅವನ ಗೆಳೆಯ ಮತ್ತು ಕೊನೆಯವರೆಗೂ ಅವನ ಸಂಗಡಿಗನಾದ ಫ್ರೆಡ್ರಿಕ್ ಎಂಗೆಲ್ಸ್ ಅವರು ಪ್ರತಿಪಾದಿಸಿದ ವಿಚಾರ ಹಾಗೂ ತತ್ವಪ್ರಣಾಲಿಗಳು. ಮಾರ್ಕ್ಸ್‌ವಾದವು ವೈಜ್ಞಾನಿಕ ಸಮಾಜ ಸತ್ತಾವಾದದ ಮೂಲಾಧಾರ. ಕೈಗಾರಿಕೋದ್ಯಮದ ಕ್ರಾಂತಿ ನಡೆದು, ಉದ್ಯಮಗಳ ಸಂಖ್ಯೆಯು ಹೆಚ್ಚುತ್ತ ಹೋಗಿ, ಕಾರ್ಮಿಕರು ಹಾಗೂ ಜನಸಾಮಾನ್ಯರ ಪರಿಸ್ಥಿತಿ ಹದಗೆಟ್ಟಿತು. ಆಗ, ಅಂದರೆ ಹದಿನೆಂಟನೆಯ ಶತಮಾನದ ಉತ್ತರಾರ್ಧ ಹಾಗೂ ಹತ್ತೊಂಬತ್ತನೆಯ ಶತಮಾನದ ಶುರುವಿನಲ್ಲಿ ಸಮಾಜ ಸತ್ತಾವಾದವು ಉದಯವಾಗಿ ಪ್ರಸಾರಗೊಂಡಿತು. ಇಂಗ್ಲೆಂಡ್ ಹಾಗೂ ಫ್ರಾನ್ಸ್ ದೇಶಗಳ ಹೆಸರಾದ ಹಲವು ವಿದ್ವಾಂಸರು ಹಾಗೂ ಸಮಾಜದ ಮುಂದಾಳುಗಳು ಅದನ್ನು ಬಲವಾಗಿ ಪುರಸ್ಕರಿಸಿದರು. ಕಾರ್ಲಾಯಿಲ್, ಡಿಕನ್ಸ್, ರಸ್ಕಿನ್, ಮೊದಲಾದ ಲೇಖಕರೂ ಕೂಡ ಆ ವಿಚಾರಕ್ಕೆ ಬೆಂಬಲವನ್ನಿತ್ತರು. ಸಮಾಜ ಸತ್ತಾವಾದದ ಈ ಪ್ರಣೇತರು ಕೇವಲ ಸಮಾಜ ಸತ್ತಾವಾದಿಯಾದ ಸಮಾಜದ ಭವ್ಯವಾದ ಒಂದು ಚಿತ್ರವನ್ನು ಬರೆದರು. ಆದರೆ ಅವರು ಅದನ್ನು ಅಸ್ತಿತ್ವಕ್ಕೆ ತರುವ ಶಾಸ್ತ್ರಶುದ್ಧವಾದ ದಾರಿಯನ್ನು ತೋರಿಸಲಿಲ್ಲ. ಹೀಗಾಗಿ ಅವರಿಗೆ ಯುಟೋಪಿಯನ್ (ಅಸಾಧ್ಯಾದರ್ಶವಾದಿ) ಎಂದೆನ್ನಲಾಗುತ್ತದೆ.

ಮಾರ್ಕ್ಸ್‌ವಾದವು ಹತ್ತೊಂಬತ್ತನೆಯ ಶತಮಾನದಲ್ಲಿ ಬೆಳೆಯಿತು. ೧೮೪೮ ರಲ್ಲಿ ಪ್ರಕಟಪಡಿಸಲಾದ ಸಾಮ್ಯವಾದಿ ಜಾಹೀರುನಾಮೆಯಲ್ಲಿ (ದ ಕಮ್ಯುನಿಸ್ಟ್ ಮ್ಯಾನಿಫೆಸ್ಟೇಶನ್) ಅದರ ಮೊದಲ ವಿವರಣೆ ಕಂಡುಬರುತ್ತದೆ. ಮಾರ್ಕ್ಸ್ ಹಾಗೂ ಎಂಗೆಲ್ಸ್ ರು ಒಟ್ಟಿಗೆ ಜಾಹೀರುನಾಮೆಯನ್ನು ಬರೆದರೂ ಅದರಲ್ಲಿ ಮಾರ್ಕ್ಸ ನ ಪಾಲು ದೊಡ್ಡದಿತ್ತು.

ಕೆಲಸದ ದಿನಗಳನ್ನು ಆದಷ್ಟು ಹೆಚ್ಚಿಸಿ, ಕೆಲಸಕ್ಕೆ ನೇಮಕ ಮಾಡಿದ ಕಾರ್ಮಿಕನಿಗೆ ಮನಬಂದಂತೆ ಸಂಬಳ ಕೊಡುವುದು ಹಾಗೂ ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳುವುದು ಬಂಡವಾಳದಾರರ ಧೋರಣೆಯಾಗಿತ್ತು. ಕಾರ್ಮಿಕರಲ್ಲಿ ಈ ವ್ಯವಸ್ಥೆಯ ಬಗೆಗೆ ತುಂಬ ಅಸಂತೋಷ ಹರಡಿತ್ತು. ಈ ಅಸಂತೋಷವನ್ನು ಹೆಚ್ಚಿಸಿ ಅದನ್ನು ಕ್ರಾಂತಿಕಾರಕ

ಬಂಡಾಯದಲ್ಲಿ ರೂಪಾಂತರಗೊಳಿಸಲು ಸಾಧ್ಯವೆಂದು ಮಾರ್ಕ್, ಅವನ ಗೆಳೆಯರು ಹಾಗೂ ಇತರರಿಗೆ ಅನ್ನಿಸುತ್ತಿತ್ತು. ೧೯೪೮ ಯುರೋಪಿನಲ್ಲಿ ಕ್ರಾಂತಿಯ ವರ್ಷ. ಆ ವರ್ಷ ಯುರೋಪಿನ ಹಲವು ದೇಶಗಳಲ್ಲಿ ಕ್ರಾಂತಿಕಾರಕ ಬಂಡಾಯಗಳೆದ್ಧವು. ಸಾಮ್ಯವಾದಿ ಜಾಹೀರುನಾಮೆಯು ಆ ಬಂಡಾಯಗಳಲ್ಲಿ ಸೇರಿಕೊಳ್ಳುವಂತೆ ಕಾರ್ಮಿಕರಿಗೆ ಕರೆಕೊಟ್ಟಿತು. ಜಾಹೀರುನಾಮೆಯ ಕೊನೆಯಲ್ಲಿ ಮಾರ್ಕ್, ಪ್ರಪಂಚದ ಕಾರ್ಮಿಕರೇ, ನೀವೆಲ್ಲ ಒಂದಾಗಿ, ನಿಮ್ಮ ಬಳಿ ಕಾಲುಬೇಡಿಗಳನ್ನು ಬಿಟ್ಟರೆ ಕಳೆದುಕೊಳ್ಳಲು ಇನ್ನೇನೂ ಇಲ್ಲ," ಎಂದು ಬರೆಯುತ್ತಾನೆ.



ಇಳಿವಯಸ್ಸಿನಲ್ಲಿ ಆ ತತ್ವಗಳನ್ನು ಪರಿಪೋಷಿಸುವ ಮಾರ್ಕ್ಸನು ಹಲವು ವಿದ್ವತ್ತುಪೂರ್ಣವಾದ ಪುಸ್ತಕ, ಪುಸ್ತಿಕೆಗಳನ್ನು ಬರೆದನು. ಅವುಗಳಲ್ಲಿ ಸರ್ವಶ್ರೇಷ್ಠವಾದುದೆಂದರೆ ಮೂರು ಸಂಪುಟಗಳ "ಕ್ಯಾಪಿಟಲ್", ಫರ್ಸ್ ಇಂಟರ್ನಾಶನಲ್ ಸಂಸ್ಥೆಯು (ಇಂಟರ್ನಾಶನಲ್ ವರ್ಡಿಂಗ್ ಮೆನ್ಸ್ ಅಸೋಸಿಏಶನ್ನು) ಕ್ಯಾಪಿಟಲ್ ಗ್ರಂಥವೆಂದರೆ ಕಾರ್ಮಿಕ ವರ್ಗದ ಬೈಬಲ್ ಎಂದು ಈ ಗ್ರಂಥವನ್ನು ಗೌರವಿಸಿತು. ಮೊದಲ ಸಂಪುಟವು ೧೮೬೮ರಲ್ಲಿ ಮಾರ್ಕ್ಸ ಬದುಕಿರುವಾಗಲೇ ಪ್ರಕಟವಾಯಿತು. ಈ ಗ್ರಂಥದಲ್ಲಿ ಬಂಡವಾಳಶಾಹಿಯ ಉತ್ಪತ್ತಿ ಹಾಗೂ ವಿಕಾಸಗಳ ಶಾಸ್ತ್ರಶುದ್ಧವಾದ ಅಧ್ಯಯನವನ್ನು ಪ್ರತಿಪಾದಿಸಲಾಗಿದ್ದು, ಬಂಡವಾಳಶಾಹಿಯು ತನ್ನ ಹುಟ್ಟುಗುಣಗಳಿಂದಾಗಿ ಕಾರ್ಮಿಕರನ್ನು ಹೆಚ್ಚು ಹೆಚ್ಚಾಗಿ ಹೇಗೆ ಶೋಷಿಸುತ್ತದೆ ಮತ್ತು ಅದರಿಂದಾಗಿ ಸಮಾಜವು ಇತಿಹಾಸಕ್ರಮದಲ್ಲಿ ಮುಂದಿನ ಅವಸ್ಥೆಗೆ, ಅಂದರೆ ಕ್ರಾಂತಿಗೆ ಹೇಗೆ ತಯಾರಾಗುತ್ತದೆ, ಎಂಬುದನ್ನು ತೋರಿಸಿಕೊಟ್ಟಿರುವನು. ಇದಲ್ಲದೆ ಅವನು ಹಲವಾರು ಮಹತ್ವದ ಸಣ್ಣ, ದೊಡ್ಡ ಪುಸ್ತಕ, ಪುಸ್ತಿಕೆಗಳನ್ನು ಬರೆದನು. ಅವನ ಸ್ನೇಹಿತನಾದ ಫ್ರೆಡ್ರಿಕ್ ಎಂಗೆಲ್ಸ್ (೧೮೨೦-೧೮೯೫) ಇವನು ಸಾಮ್ಯವಾದ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಕುರಿತು ಬರೆದನಲ್ಲದೆ ಅಯಾ ಸನ್ನಿವೇಶಗಳಲ್ಲಿ ಬರೆದ ಅವನ ಲೇಖನ, ಪುಸ್ತಿಕೆ ಮತ್ತು ಪತ್ರವ್ಯವಹಾರಗಳು ಕೂಡ ಇವೆ. ಏಂಗೆಲ್ಸ್ನ ಪುಸ್ತಕಗಳನ್ನೂ ಇದರಲ್ಲಿ ಸೇರ್ಪಡಿಸಲಾಗುತ್ತದೆ. ಏಕೆಂದರೆ ಮಾರ್ಕವಾದವನ್ನು ಕಟ್ಟುವಲ್ಲಿ ಅವನ ಕೊಡುಗೆಯೂ ಮಾರ್ಕನ ಕೊಡುಗೆಯಷ್ಟೇ ಇದ್ದಿತು. ಇದೆಲ್ಲವನ್ನು ಮೊದಲಿಗೆ ಜರ್ಮನ್ ಭಾಷೆಯಲ್ಲಿ ಬರೆಯಲಾಗಿದೆ.

ಮಾರ್ಕ್ಸ್‌ವಾದವು ರಶಿಯದ ಬೋಲ್ಶೈವಿಕ್ ಕ್ರಾಂತಿಯ ತರುವಾಯ ಪ್ರಪಂಚದ ತುಂಬೆಲ್ಲ ಹಬ್ಬಿತು. ಮಾರ್ಕ್ಸ್‌ವಾದಿ ಕ್ರಾಂತಿ ನಡೆದ ಸೋವಿಯೆತ್ ಯೂನಿಯನ್, ಪೂರ್ವ ಯುರೋಪಿನ ಸಾಮ್ಯವಾದಿ ರಾಷ್ಟ್ರಗಳು, ಚೀನ ಮತ್ತು ಕ್ಯೂಬಾ ದೇಶಗಳಲ್ಲೆಲ್ಲ ಸರ್ವಶ್ರೇಷ್ಠ ಧರ್ಮದ ಪ್ರತಿಷ್ಠೆಯು ಅದಕ್ಕೆ ಲಭಿಸಿದೆ.

ಪ್ರಪಂಚವನ್ನು ಬದಲಾಯಿಸುವುದು ತನ್ನ ಹೊಣೆಯೆಂಬುದು ಮಾರ್ಕ್ಸ್ ನ ತನ್ನ ತತ್ವಜ್ಞಾನವನ್ನು ಕುರಿತಾದ ನಿಲುವಾಗಿತ್ತು. ಸಮಾಜವ್ಯವಸ್ಥೆಯು ಬದಲಾಯಿಸುತ್ತ ಹೋಗುತ್ತದೆ. ಉತ್ಪಾದನೆಯ ಸಲಕರಣೆ, ಉತ್ಪಾದನಾವಿಧಾನ ಮತ್ತು ಆ ವಿಧಾನದಲ್ಲಿ ತಲೆದೋರಿರುವ ಸಾಮಾಜಿಕ ಸಂಬಂಧಗಳಿಂದಾಗಿ ಇಂಥ ಬದಲಾವಣೆಯು ಉಂಟಾಗುತ್ತದೆಂಬುದು ಅವನ ಸಿದ್ಧಾಂತವಾಗಿದೆ. ಇದನ್ನೇ ಐತಿಹಾಸಿಕ ಭೌತಿಕವಾದ (ಹಿಸ್ಟಾರಿಕಲ್ ಮಟೀರಿಯಲಿಸಮ್) ಎಂದೆನ್ನುತ್ತಾರೆ. ಸುತ್ತಲ ಪರಿಸ್ಥಿತಿ, ವಸ್ತುಗಳ ಉತ್ಪಾದನೆ ಹಾಗೂ ವಿನಿಮಯದ ಸಾಧನಗಳು ಹಾಗೂ ವಿಧಾನಗಳು ಬದಲಾಯಿಸುವಂತಹ ಭೌತಿಕ ಕಾರಣಗಳಿಂದಾಗಿ ಇತಿಹಾಸವು ಹುಟ್ಟುವುದು ಹಾಗೂ ಬದಲಾಯಿಸುವುದು. ಅದರಲ್ಲಿ ಪರಮೇಶ್ವರನ ಯೋಜನೆ ಅಥವಾ ದೊಡ್ಡವರ ಕರ್ತೃತ್ವ ಎಂಬುದಿಲ್ಲ. ಮಾರ್ಕನು ಈ ಸಿದ್ಧಾಂತವನ್ನು ಅನುಸರಿಸುತ್ತ ತನ್ನ ಕಾಲದವರೆಗಿನ ಮಾನವೇತಿಹಾಸವನ್ನು ಸ್ಥೂಲಮಾನದಿಂದ ಅರ್ಥೈಸಿ ತೋರಿಸಿದನು.

ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಉತ್ಪಾದನೆಯ ಸಾಧನೆಗಳ ತಂತ್ರವಿಜ್ಞಾನದಲ್ಲಿ ನಡೆದ ಶೋದನೆಗಳಿಂದಾಗಿ ಕೈಗಾರಿಕೆಗಳಲ್ಲಿ ಅಭೂತಪೂರ್ವವಾದ ಕ್ರಾಂತಿಯಾಯಿತು. ವಾಣಿಜ್ಯದ ಬಂಡವಾಳವು ಕೈಗಾರಿಕೋದ್ಯಮದ ಬಂಡವಾಳವಾಗಿ ಮಾರ್ಪಾಟು ಹೊಂದಿತು. ಉಗಿಯಿಂದ ನಡೆಯುವ ಹಲವು ಯಂತ್ರಗಳು ತಯಾರಾದವು. ಈ ಯಂತ್ರಗಳ ಒಡೆತನವನ್ನು ಪಡೆದವರು

ಸಮಾಜದಲ್ಲಿ ಸತ್ತಾಧಾರಿಗಳಾದರು. ಅವರೇ ಇಂದಿನ ಬಂಡವಾಳಗಾರರು, ರಾಜರು, ಸಾಮಂತರು ಹಾಗೂ ಜಮೀನುದಾರರನ್ನು ಅವರವರ ಸ್ಥಾನಗಳಿಂದ ಸತ್ತಾಭ್ರಷ್ಟರನ್ನಾಗಿ ಮಾಡಿ ಬಂಡವಾಳಗಾರರು ಅಲ್ಲಿ ತಮ್ಮ ರಾಜ್ಯವನ್ನು ಸ್ಥಾಪಿಸಿದರು. ಇದು ಬಂಡವಾಳಶಾಹಿ ಕ್ರಾಂತಿ ಎಂದೆನ್ನಿಸಿತು. ಇದು ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ ನಡೆಯುತ್ತದೆ. ಆದರೆ ಇತಿಹಾಸವು ಇಲ್ಲಿಗೇ ನಿಲ್ಲಲಿಲ್ಲ. ಅದು ಮುಂದಕ್ಕೆ ಹೋಗುತ್ತಿದೆ. ಬಂಡವಾಳಶಾಹಿಯಲ್ಲಿ ಮೈಗೂಡಿದ ನಿಯಮಗಳಂತೆ ಕಾರ್ಮಿಕ ವರ್ಗವು ದೊಡ್ಡದಾಗುತ್ತ ಪ್ರಬಲಗೊಳ್ಳುತ್ತದೆ; ಬಂಡವಾಳಗಾರರು ಸಮಾಜದ ಆವಶ್ಯಕತೆಗೆ ತಕ್ಕಂತೆ ಉತ್ಪಾದನೆಯನ್ನು ಹೆಚ್ಚಿಸಲು ಬಾರದಂತಹ ಸ್ಥಿತಿ ತಯಾರಾಗುತ್ತದೆ; ಆಗ ಬಂಡವಾಳಶಾಹಿಯ ಉತ್ಪಾದನೆಯ ವಿಧಾನವು ಸಮಾಜದ ಪ್ರಗತಿಯ ದಾರಿಗೆ ಅಡ್ಡಗಲ್ಲಾಗಿ ಪರಿಣಮಿಸುತ್ತದೆ; ಅದರಿಂದಾಗಿ ಕಾರ್ಮಿಕರ ನಾಯಕತ್ವದಲ್ಲಿ ಕ್ರಾಂತಿಯಾಗುತ್ತದೆ; ಕಾರ್ಮಿಕವರ್ಗವು ರಾಜಕೀಯ ಸತ್ತೆಯನ್ನು ಕೈಗೆತ್ತಿಕೊಳ್ಳುತ್ತದೆ; ದೋಚಿಕೊಳ್ಳುವವರು ದೋಚಿಸಿಕೊಳ್ಳುತ್ತಾರೆ; ಸಮಾಜವಾದಿ ಕ್ರಾಂತಿ ಉಂಟಾಗುತ್ತದೆ; ವರ್ಗವಿರಹಿತ ಸಮಾಜವು ಅಸ್ತಿತ್ವಕ್ಕೆ ಬರುತ್ತದೆ; ರಾಜ್ಯಸಂಸ್ಥೆಯ ಆವಶ್ಯಕತೆಯು ನಿಧಾನವಾಗಿ ಇಲ್ಲದಂತಾಗುತ್ತದೆ; ರಾಜ್ಯ ಸಂಸ್ಥೆಯು ಒಣಗುತ್ತ ಹೋಗಿ ಉದುರಿ ಬೀಳುತ್ತದೆ. ಸ್ವಲ್ಪದರಲ್ಲಿ, ಇತಿಹಾಸದ ಸಾಮರ್ಥ್ಯದಿಂದ ಅಭಿವೃದ್ಧಿಯ ನಿಯಮವನ್ನನುಸರಿಸಿ ಸಮಾಜವಾದ ಸ್ಥಾಪನೆಗೊಳ್ಳುವುದನ್ನು ತಪ್ಪಿಸಲಾಗದು; ಎಂಬುದು ಮಾರ್ಕ್ಸನ ಕೊನೆಯ ನಿಷ್ಕರ್ಷೆಯಾಗಿದೆ.

ಬಂಡವಾಳದಾರನು ಯಾವಾಗಲೂ ದುಡಿತವನ್ನು ಉಳಿಸುವ ಅಂದರೆ ಕಡಿಮೆ ಕಾರ್ಮಿಕರಿಂದ ಹೆಚ್ಚು ಉತ್ಪನ್ನವನ್ನು ಪಡೆಯಬಹುದಾದ ಯಂತ್ರಗಳ ಹುಡುಕಾಟದಲ್ಲಿ ತೊಡಗುತ್ತಾನೆ. ದುಡಿಮೆಯ ಉತ್ಪಾದಕತೆಯನ್ನು ಹೆಚ್ಚಿಸಿ ಲಾಭವನ್ನು ಗಳಿಸುವುದೇ ಉದ್ಯಮಿಯ ಮುಖ್ಯ ಗುರಿ. ಕಾರ್ಮಿಕನ ದುಡಿಮೆಯಿಂದ ನಿರ್ಮಾಣಗೊಂಡ ಸಂಪತ್ತಿನಿಂದ ಅವನಿಗೆ ಬದುಕುವ ಮತ್ತು ಕುಟುಂಬವನ್ನು ನಿರ್ವಹಿಸುವ ಮಟ್ಟಿಗಿನ ಪಾಲನ್ನು ಮಾತ್ರ ಕೊಡಲಾಗುತ್ತದೆ. ಕಾರ್ಮಿಕನು ತಯಾರಿಸಿದ ಸಂಪತ್ತಿನ ಮಿಕ್ಕುಳಿದ ಭಾಗವನ್ನು ಒಡೆಯನು ತನ್ನ ಹತ್ತಿರ ಇರಿಸಿಕೊಳ್ಳುತ್ತಾನೆ. ಇದನ್ನೇ ಲಾಭ ಎನ್ನಲಾಗುತ್ತದೆ. ಲಾಭ ಎಂದರೆ ಶೋಷಣೆ, ಹೀರಿಕೊಳ್ಳುವಿಕೆ, ಲಾಭವೇ ಹೆಚ್ಚಿನ ಬೆಲೆ. ಈ ರೀತಿಯಾಗಿ ಸ್ವಂತದ ಲಾಭವನ್ನು ಹೆಚ್ಚಿಸಿಕೊಳ್ಳಬೇಕೆನ್ನುವ ಬಂಡವಾಳಗಾರನ ಉಪದ್ವ್ಯಾ ಪವು ಯಾವಾಗಲೂ ಕಾರ್ಮಿಕನ ಮೂಲಕ್ಕೆ ಕೊಡಲಿ ಏಟು ಹಾಕುತ್ತದೆ. ಅವರು ಪೈಪೋಟಿಯಲ್ಲಿ ಉಳಿಯಬೇಕಾದರೆ ಹೀಗೆ ಮಾಡಲೇಬೇಕಾಗುತ್ತದೆ. ಅಂದರೆ ಮೇಲುಮೇಲಿಂದಲೂ ಕಾರ್ಮಿಕರು ಹಾಗೂ ಬಂಡವಾಳಗಾರರ ಹಿತಾಸಕ್ತಿಗಳು ಪರಸ್ಪರರಿಗೆ ವಿರೋಧಿಯಾಗಿರುತ್ತವೆ. ಇದರಿಂದಲೇ ವೈಮನಸ್ಯ ಹಾಗೂ ವರ್ಗ ಕಲಹಗಳು ಶುರುವಾಗಿ ಮುಂದೆ ಅವು ವರ್ಗಯುದ್ಧಗಳಾಗಿ ಪರಿಣಮಿಸುತ್ತವೆ. ಮಾರ್ಕ್ಸವಾದದಲ್ಲಿ ವರ್ಗ ಕಲಹ ಹಾಗೂ ವರ್ಗ ಯುದ್ಧಗಳಿಗೆ ತುಂಬ ಮಹತ್ವದ ಸ್ಥಾನವಿದೆ. ವರ್ಗ ಕಲಹದಿಂದಾಗಿಯೇ ಮಾನವಸಮಾಜದ ಇತಿಹಾಸ ರೂಪುಗೊಳ್ಳುತ್ತದೆಂಬುದು ಮಾರ್ಕ್ಸನ ಮನವರಿಕೆ. ಸಮಾಜದ ಈ ವರೆಗಿನ ಇತಿಹಾಸವೆಲ್ಲ ವರ್ಗ ಕಲಹದ ಇತಿಹಾಸವೇ ಆಗಿದೆಯೆಂದು ಅವನು ಸಾಮ್ಯವಾದಿ ಜಾಹೀರುನಾಮೆಯಲ್ಲಿ

ನಮೂದಿಸಿರುವನು. ಬಂಡವಾಳಶಾಹಿ ಪ್ರಪಂಚದಲ್ಲಿ ವರ್ಗ ಕಲಹವು ಒಂದೇ ಸಮನೆ ಹೆಚ್ಚುತ್ತಲೇ ಹೋಗಿ ಆ ಕಲಹದ ಮೂಲಕವೇ ಕ್ರಾಂತಿಯಾಗಿ ಸಮಾಜವಾದವು ಹುಟ್ಟಿಕೊಳ್ಳಲಿದೆ. ಈ ಕಲಹ ಹೇಗೆ ಮತ್ತು ಏಕೆ ಹೆಚ್ಚುತ್ತ ಹೋಗುತ್ತದೆನ್ನುವುದನ್ನು 'ಕ್ಯಾಪಿಟಲ್', ಮೊದಲಾದ ಗ್ರಂಥಗಳಲ್ಲಿ ಮಾರ್ಕನು ಸ್ಪಷ್ಟವಾಗಿಯೂ, ವಿವರವಾಗಿಯೂ ತೋರ್ಪಡಿಸಿದ್ದಾನೆ.



ಬಂಡವಾಳಶಾಹಿಯಲ್ಲಿ ಉತ್ಪಾದನೆಯ ಸಲಕರಣೆಗಳು ಒಬ್ಬ ವ್ಯಕ್ತಿಯ, ಅಂದರೆ ಬಂಡವಾಳ ದಾರನ ಒಡೆತನದವು. ಕಾರ್ಮಿಕನು ತನ್ನ ಹೊಟ್ಟೆ ಪಾಡಿಗಾಗಿ ನೌಕರಿಯನ್ನು ಹುಡುಕಬೇಕಾಗುತ್ತದೆ. ಬಂಡವಾಳದಾರನೇ ಅವನಿಗೆ ಕೆಲಸವನ್ನು ಕೊಡಬಲ್ಲನು. ಹೀಗಾಗಿ ಕಾರ್ಮಿಕನು ಅವನಿಗೆ ತನ್ನ ದುಡಿಮೆಯ ಸಾಮರ್ಥ್ಯವನ್ನು ಮಾರಿಕೊಳ್ಳುತ್ತಾನೆ. ದುಡಿಮೆಯ ಶಕ್ತಿ ಎನ್ನುವುದೊಂದು ವಿಚಿತ್ರವಾದ ಸಂಗತಿ. ಅವನೇ ಮೌಲ್ಯವನ್ನೆಲ್ಲ ನಿರ್ಮಿಸುತ್ತಾನೆ. ದುಡಿಮೆಯಿಂದಲೇ ಒಕ್ಕಲುತನ ತಯಾರಾಗುತ್ತದೆ. ಉತ್ಪಾದನೆಯ ಸಾಧನೆಗಳೆಲ್ಲ ಮಾನವನ ದುಡಿಮೆಯಿಂದಲೇ ರೂಪುಗೊಂಡುದು ಕಂಡುಬರುತ್ತದೆ. ಉಪಭೋಗದ ಇಲ್ಲವೆ ಜೀವನದ ಸಾಧನೆಗಳೆಲ್ಲ ಮಾನವನ ದುಡಿಮೆಯಿಂದಲೇ ತಯಾರಾಗುತ್ತವೆ. ಒಟ್ಟಿನಲ್ಲಿ, ದುಡಿಮೆಯ ಶಕ್ತಿಯ ಬಳಕೆಯಿಂದ ವಸ್ತುಗಳಲ್ಲಿ ಮೌಲ್ಯ ನಿರ್ಮಾಣವಾಗುವುದು. ಇದನ್ನೇ ದುಡಿಮೆ ಮೌಲ್ಯದ ಸಿದ್ಧಾಂತ ಎನ್ನುತ್ತಾರೆ. ಅಂದರೆ ಕಾರ್ಮಿಕರು ತಮ್ಮ ದುಡಿಮೆಯನ್ನು ಬಳಸಿ ಇಡಿಯ ಮೌಲ್ಯವನ್ನು ತಯಾರಿಸುತ್ತಾರೆ. ಆದರೆ, ಇಡಿಯ ಮೌಲ್ಯವು ಅವರ ಕೈಗೆ ಬರುವುದಿಲ್ಲ. ಅದರ ತೀರ ಕಡಿಮೆ ಭಾಗ ಮಾತ್ರ ಅವರಿಗೆ ದಕ್ಕುತ್ತದೆ. ಅವರ ಕೈಯಲ್ಲಿ ಉಳಿಯುವುದು ಕೂಲಿಯ ರೂಪದಿಂದ ದೊರೆಯುವ ಮೌಲ್ಯ ಮಾತ್ರ. ಕೂಲಿಗೂ ತನ್ನದಾದ ಒಂದು ಅಪರಿವರ್ತನೀಯವಾದ ಕಾನೂನಿದೆ. ಮಾರ್ಕ್ಸ್ ನು ಅದನ್ನು ಡೆವಿಡ್ ರೆಕಾರ್ಡೊ ಎಂಬ ಇಂಗ್ಲಿಷ್ ಅರ್ಥಶಾಸ್ತ್ರಜ್ಞನಿಂದ ಪಡೆದುಕೊಂಡನು. ಈ ಕಾನೂನಿನನ್ವಯ ತನ್ನ ಹಾಗೂ ಕುಟುಂಬದವರ ಬದುಕು ಹಾಗೂ ಮಕ್ಕಳನ್ನು ಬದುಕಿಸುವ ಮಟ್ಟಿಗಿನ ಕೂಲಿಯಷ್ಟೇ ಒಬ್ಬ ಕಾರ್ಮಿಕನಿಗೆ ದೊರೆಯಲು ಸಾಧ್ಯ. ದುಡಿಮೆಯಿಂದ ತಯಾರಾದ ಮೌಲ್ಯದಲ್ಲಿ ಎರಡು ಭಾಗಗಳು. ಒಂದು ಭಾಗವು ಕಾರ್ಮಿಕನ

ಸಂಬಳವಾದರೆ, ಇನ್ನೊಂದು ಶಿಲ್ಕಿನ ಭಾಗ, ಅಂದರೆ ಮಿಕ್ಕುಳಿದ ಮೌಲ್ಯ, ಉತ್ಪಾದನ ಸಾಧನಗಳ ಒಡೆತನದಿಂದಾಗಿ ಅದು ಬಂಡವಾಳಗಾರನಿಗೆ ಲಾಭವೆಂದು ಸಲ್ಲುತ್ತದೆ. ಯಾಂತ್ರಿಕ ಅನ್ವೇಷಣೆಗಳಿಂದಾಗಿ ಉತ್ಪಾದನೆಯು ಒಂದೇ ಸಮನೆ ಹೆಚ್ಚುತ್ತಿದ್ದು ಅದರಿಂದಾಗಿ ಮಿಕ್ಕುಳಿದ ಮೌಲ್ಯ ಅಥವಾ ಹೆಚ್ಚು ಹೆಚ್ಚು ಲಾಭ ತಯಾರಾಗುತ್ತಿದೆ. ಅದು ಕೈಗೆ ಬಂದ ಕಾರಣ ಬಂಡವಾಳಗಾರ ವರ್ಗದವರು ಹೆಚ್ಚು ಹೆಚ್ಚು ಶ್ರೀಮಂತರೂ ಸಮರ್ಥರೂ ಆಗುತ್ತಿರುವ ಕಾರಣ ಕಾರ್ಮಿಕರು ಹಾಗೂ ಅವರ ನಡುವಿನ ಕಂದರ ಬೆಳೆಯುತ್ತಿದೆ.

ಈ ರೀತಿಯಾಗಿ ಸಮಾಜದಲ್ಲಿ ಎರಡು ವರ್ಗಗಳು ತಯಾರಾಗುತ್ತವೆ, ಒಂದು ಶ್ರೀಮಂತ ಬಂಡವಾಳದಾರರದ್ದು ಹಾಗೂ ಇನ್ನೊಂದು ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ಬಡವರಾಗುತ್ತ ಹೋಗುವ ಕಾರ್ಮಿಕ ವರ್ಗದವರದು. ಕಾಲಕ್ರಮದಲ್ಲಿ ಇವೆರಡರ ನಡುವಿನ ವರ್ಗಗಳು ನಾಶಹೊಂದುವವು ಇಲ್ಲವೆ ದುರ್ಬಲವಾಗುವವು. ಬಂಡವಾಳಗಾರರ ಹಾಗೂ ಕಾರ್ಮಿಕರ ಎಂಬ ಎರಡೇ ವರ್ಗಗಳು ಯುದ್ಧಕ್ಕೆ ಸಜ್ಜಾಗಿ ಎದುರುಬದಿರಾಗಿ ನಿಲ್ಲುತ್ತವೆ. ಇದು ಬಂಡವಾಳಶಾಹಿ ಸಮಾಜದ ಕೊನೆಯ ಪರಿಸ್ಥಿತಿಯನ್ನು ಕುರಿತು ಮಾರ್ಕ್ಸ್‌ವಾದದ ಭವಿಷ್ಯ ಕಥನವಾಗಿದೆ. ಮಾರ್ಕ್ಸ್‌ವಾದವು ಬಂಡವಾಳಶಾಹಿಯ ಚೌಕಟ್ಟನ್ನು ಮುರಿದು ಅದರಾಚಗೆ ಹೋಗುವ ದಾರಿಯನ್ನೂ ತೋರಿಸಿ ಕೊಟ್ಟಿದೆ. ಕ್ರಾಂತಿಯು ಅಪರಿಹಾರ್ಯ, ಎನ್ನುವುದು ಮಾರ್ಕವಾದದ ಸಿದ್ಧಾಂತ, ಸಮಾಜದ ತೀರ ಶೋಷಿತ, ಪೀಡಿತ ವರ್ಗವೆಂದರೆ ಕಾರ್ಮಿಕ ವರ್ಗ, ಅದು ಈ ಕ್ರಾಂತಿಯನ್ನು ಮಾಡಲಿದೆ. ಕಾರ್ಮಿಕರು ಮೊದಲಿಗೆ ತಮ್ಮ ತಮ್ಮ ಕಾರ್ಖಾನೆಗಳ ಮಟ್ಟಿಗಿನ ಸಂಘಗಳನ್ನು ಕಟ್ಟುತ್ತಾರೆ. ಅವರ ಈ ಗಳಿಗೆಯ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಈ ಸಂಘಗಳು ಇರುತ್ತವೆ. ಈ ಸಂಘಟನೆಯು ನಿಧಾನವಾಗಿ ಬೆಳೆಯುತ್ತ



ಹೋಗಿ ಅದಕ್ಕೆ ರಾಷ್ಟ್ರವ್ಯಾಪಿಯಾದ ಸ್ವರೂಪ ಲಭಿಸುತ್ತದೆ. ಕಾರ್ಮಿಕರು ಬೇಗನೆ ರಾಜಕೀಯ ಬೇಡಿಕೆಗಳನ್ನು ಮುಂದಿಡಲು ಶುರು ಮಾಡುತ್ತಾರೆ. ಅವರು ಅದಕ್ಕಾಗಿ ತಮ್ಮದೊಂದು ರಾಜಕೀಯ ಪಕ್ಷವನ್ನು ಕಟ್ಟಿಕೊಳ್ಳುತ್ತಾರೆ.

ರಾಜಕೀಯ ಸತ್ತೆಯನ್ನು ಕೈವಶ ಮಾಡಿಕೊಳ್ಳುವ ಅವಶ್ಯಕತೆಯು ಅವರಿಗೆ ಕಂಡುಬರತೊಡಗುತ್ತದೆ. ನಡುವಿನ ಕಾಲದಲ್ಲಿ ಅವರ ದುರವಸ್ಥೆ, ಬಡತನ, ನಿರುದ್ಯೋಗ, ಮೊದಲಾದವು ಉಲ್ಬಣಿಸಿರುತ್ತವೆ. ಆಗ ಕ್ರಾಂತಿಯನ್ನು ಮಾಡಿ ಬಂಡವಾಳಶಾಹಿ ಹಾಗೂ ಅದರ ರಾಜ್ಯವನ್ನು ಕಿತ್ತೆಸೆಯದೆ ಬೇರೆ ದಾರಿಯೇ ಉಳಿಯದು. ಕಾರ್ಮಿಕವರ್ಗವು ಯುದ್ಧಕ್ಕೆ ಸಜ್ಜಾಗಿ ಬಂಡವಾಳಗಾರ ವರ್ಗದೆದುರು ನಿಲ್ಲುತ್ತದೆ. ಅಲ್ಲಿಯ ವರೆಗೆಂದರೆ ಕಾರ್ಮಿಕವರ್ಗದ ಸಾಮರ್ಥ ಹಾಗೂ ಸಂಖ್ಯಾಬಲಗಳು ತುಂಬ ಹೆಚ್ಚಿರುತ್ತವೆ, ಬಂಡವಾಳದಾರರ ಬಲವು ತೀರ ಕುಸಿದಿರುತ್ತದೆ. ಬಂಡವಾಳಶಾಹಿಯು ಸೋತು ಅದರ ಜಾಗೆಯಲ್ಲಿ ಕಾರ್ಮಿಕರ ರಾಜ್ಯವು ಬರುತ್ತದೆ. ಈ ಕ್ರಾಂತಿಯು ಸಶಸ್ತ್ರ ಕ್ರಾಂತಿಯಾಗಿರುತ್ತದೆ. ಅದಕ್ಕಾಗಿ ರಕ್ತವನ್ನೂ ಸುರಿಯಬೇಕಾಗುತ್ತದೆ. ಅಪವಾದ ಎನ್ನಿಸಬಹುದಾದ ಇಂಗ್ಲಂಡಿನಂಥ ದೇಶದಲ್ಲಿ ಮಾತ್ರ ಶಾಂತಿಯಿಂದ ಇದು ಕೈಗೂಡಬಲ್ಲುದೆಂದು ಮುಂದಿನ ಕಾಲದಲ್ಲಿ ಮಾರ್ಕನಿಗೆ ಅನ್ನಿಸತೊಡಗಿತ್ತು. (ಮುಂದೆ ಲೆನಿನ್ ಇಂಥ ಅಪವಾದ ಸಾಧ್ಯವಿಲ್ಲೆಂದು ಅಭಿಪ್ರಾಯಪಡುತ್ತಿದ್ದನು.) ಇಂಥ ರಕ್ತರಂಜಿತವಾದ ಕ್ರಾಂತಿಯನ್ನು ಯಶಸ್ವಿಯಾಗಿ ಮಾಡುವುದಿದ್ದರೆ ಕಾರ್ಮಿಕರ ಸಿದ್ಧತೆ ಪೂರ್ತಿಯಾಗಬೇಕು. ಶಿಸ್ತುಬದ್ಧವಾದ ಹಾಗೂ ಹೋರಾಡಬಲ್ಲ ಅವರದಾದ ಒಂದು ಪಕ್ಷ ಬೇಕು. ಅದೇ ಸಾಮ್ಯವಾದಿ ಪಕ್ಷ, ಇಂಥ ಒಂದು ಪಕ್ಷವು ಕೈಗಾರಿಕೆಯ ಕ್ರಾಂತಿಯಾದ ಯುರೋಪಿನ ದೇಶದಲ್ಲಿ ಇರಬೇಕೆಂಬುದು ಮಾರ್ಕವಾದದ ಗುರಿಯಾಗಿತ್ತು. ಮಾರ್ಕ್ಸ್‌ವಾದವು ಇಪ್ಪತ್ತನೆಯ ಶತಮಾನದಲ್ಲಿ ಪ್ರಪಂಚದ ತುಂಬೆಲ್ಲ ಹಬ್ಬಿತು. ಮಾರ್ಕ್ಸ್‌ವಾದಿ ಸಾಮ್ಯವಾದಿ ಪಕ್ಷಗಳು ಹಲವು ದೇಶಗಳಲ್ಲಿ ಹುಟ್ಟಿಕೊಂಡವು.

ಮಾರ್ಕ್ಸ್ ನು ಕ್ರಾಂತಿಯ ತರುವಾಯದಲ್ಲಿ ತಯಾರಾಗಬಹುದಾದ ಸಮಾಜವ್ಯವಸ್ಥೆಯತ್ತ ಅಷ್ಟಾಗಿ ಗಮನ ಹರಿಸಿಲ್ಲ. ಅವನು, ಸಾಮ್ಯವಾದವು ಒಮ್ಮೆಲೆ ಸ್ಥಾಪನೆಗೊಳ್ಳಲಾರದೆಂಬ ಸ್ಪಷ್ಟವಾದ ಎಚ್ಚರಿಕೆಯನ್ನು ಮಾತ್ರ ನೀಡಿರುವನು. ಮಾರ್ಕ್ಸ್ ನು ಸಂಕ್ರಮಣದ ಕಾಲದಲ್ಲಿ ಕಾರ್ಮಿಕರ ಸರ್ವಾಧಿಕಾಶಾಹಿಯು ನೆಲೆಗೊಳ್ಳಲಿದೆಯೆಂದು ಕೂಡ ಒಂದೆಡೆ ಬರೆದಿರುವನು,

ಆಡಳಿತ ಹಾಗೂ ಶೋಷಣೆಗಳಿಲ್ಲದ ಸ್ವತಂತ್ರ ಹಾಗೂ ಸಮಾನರಾದ ವ್ಯಕ್ತಿಗಳುಳ್ಳ ಬೇರೆಯದಾದ ಸಮಾಜವು ಮಾರ್ಕ್ಸ್‌ವಾದದ ಅಂತಿಮವಾದ ರಾಜಕೀಯ ಗುರಿಯಾಗಿದೆ. ರಾಜ್ಯ ಹಾಗೂ ಆಡಳಿತ ಬೇಕಿರುವುದು ವರ್ಗೀಯ ಸಮಾಜಗಳಿಗೆ ಮಾತ್ರ, ವರ್ಗಗಳು ನಾಶವಾದ ಬಳಿಕ ಹಾಗೂ ವರ್ಗೀಯ ಶೋಷಣೆ ನಿಂತ ಬಳಿಕ ರಾಜ್ಯ ಹಾಗೂ ಶಾಸನದ ಆವಶ್ಯಕತೆಯು ಉಳಿಯದು. ಆಗ ಮನುಷ್ಯರ ಮೇಲೆ ರಾಜ್ಯವನ್ನು ಆಳುವುದಲ್ಲ, ವಸ್ತುಗಳನ್ನು ಹಂಚುವುದಿರುತ್ತದೆ, ಪ್ರತಿಯೊಬ್ಬನ ಅಗತ್ಯಕ್ಕೆ ತಕ್ಕಂತೆ ಅವನಿಗೆ ದುಡ್ಡು ಲಭಿಸಬೇಕು ಮತ್ತು ಅವನ ಯೋಗ್ಯತೆಗೆ ತಕ್ಕ ಕೆಲಸವನ್ನು ಅವನಿಗೆ ನೀಡಬೇಕು, ಎನ್ನುವುದು ಸಾಮ್ಯವಾದದ ಕನಸಾಗಿತ್ತು.

ಮಾರ್ಕ್ಸ್‌ವಾದದ ಕೆಲವು ಭವಿಷ್ಯ ಕಥನಗಳು ನಿಜವಾಗಲಿಲ್ಲ. ಅವುಗಳಲ್ಲಿ ಒಂದೆರಡನ್ನು ಕುರಿತು ಇಲ್ಲಿ ಹೇಳುವುದು ಪ್ರಸ್ತುತ, ಕಾರ್ಮಿಕರ ಕ್ರಾಂತಿಯು ಕೈಗಾರಿಕೆಯ ದೃಷ್ಟಿಯಿಂದ ಮುಂದುವರೆದ ಬಂಡವಾಳಶಾಹಿಯ ದೇಶಗಳಲ್ಲಿ ಮೊದಲಿಗೆ ಆದೀತೆಂಬುದು ಮಾರ್ಕವಾದದ ಅಂದಾಜಾಗಿತ್ತು. ಅದರಂತೆ ಇಂಗ್ಲಂಡ್, ಜರ್ಮನಿ, ಫ್ರಾನ್ಸ್ ಅಥವಾ ಅಮೇರಿಕೆಯಂಥ ದೇಶಗಳಲ್ಲಿ ಕಾರ್ಮಿಕರ



ಕ್ರಾಂತಿಯು ಮೊದಲಿಗೆ ನಡೆಯಬೇಕಿತ್ತು. ಆದರೆ ಅದು ನಡೆದುದು ೧೯೧೭ ರಲ್ಲಿ ರಶಿಯದಂಥ ಕೈಗಾರಿಕೆಯಲ್ಲಿ ಹಿಂದುಳಿದ ದೇಶದಲ್ಲಿ. ಮುಂದೆ ಅರವತ್ತೈದು ವರ್ಷಗಳು ಕಳೆದರೂ ಆ ನಾಲ್ಕು ದೇಶಗಳಲ್ಲಿ ಸಾಮ್ಯವಾದಿ ಕ್ರಾಂತಿಯ ಲಕ್ಷಣ ಕಾಣುತ್ತಲಿಲ್ಲ. ಇದರಿಂದ ಕಲಿತುಕೊಳ್ಳಬೇಕಿದ್ದ ಪಾಠವೆಂದರೆ ಕೈಗಾರಿಕೋದ್ಯಮಗಳು ಬೆಳೆದ ಮಾತ್ರಕ್ಕೆ ಕಾರ್ಮಿಕರು ಕ್ರಾಂತಿಗೆ ಸಿದ್ಧರಾಗುತ್ತಾರೆ, ಎಂದಲ್ಲ. ಇನ್ನೊಂದು ಅಂದಾಜು ಕೂಡ ತಪ್ಪಿತು. ಅದೆಂದರೆ, ಬಂಡವಾಳ ಶಾಹಿಂರು ಬೆಳವಣಿಗೆಯೊಂದಿಗೆ ಕಾರ್ಮಿಕರ ದೈನ್ಯ, ಬಡತನ ಹೆಚ್ಚಲಿಲ್ಲ. ಬದಲು, ಕಾರ್ಮಿಕರ ಪರಿಸ್ಥಿತಿಯು ಒಳ್ಳೆಯದಾಯಿತು. ಹೀಗಾಗಿ ಅಲ್ಲಿ ವರ್ಗಕಲಹವು ಒಂದು ಮಿತಿಯಲ್ಲಿ ಮಾತ್ರ ನಡೆಯುತ್ತದೆ. ಜೀವನಮಟ್ಟ ಸುಧಾರಿಸಿದವರೆಲ್ಲರ ತಿಂಡಿ-ತಿನಿಸು, ಬಟ್ಟೆಬರೆಗಳು ಸುಧಾರಿಸಿವೆ. ಅವರ ಕಲ್ಯಾಣಕ್ಕಾಗಿ ಹತ್ತು ಹಲವಾರು ಅನುಕೂಲತೆಗಳು ಒದಗಿವೆ ಹಾಗೂ ಕಾನೂನುಗಳು ತಯಾರಾಗಿವೆ.

ಇತ್ತೀಚೆಗೆ ಮಾರ್ಕವಾದದ ಬಗೆಗೆ ತುಂಬ ಟೀಕೆ ನಡೆಯುತ್ತಿದೆ. ಅದು ನಡೆಯುವುದು ಕೇವಲ ಬಂಡವಾಳಶಾಹಿ ಮನುಷ್ಯರಿಂದ ಮಾತ್ರ, ಎಂದಲ್ಲ. ಮಾರ್ಕ್ಸ ವಾದಿಗಳಲ್ಲೂ ಈ ತತ್ತ್ವಜ್ಞಾನವನ್ನು ಟೀಕಿಸುವವರು ಹಲವರಿರುವರು. ಮಾರ್ಕವಾದವನ್ನು ಟೀಕಿಸುವುದು ರಶ್ಯದಂಥ ಸಾಮ್ಯವಾದಿ ದೇಶಗಳಲ್ಲಿ ಅಸಾಧ್ಯ. ಆದರೆ ಕೆಲವು ಜನ ಸಾಹಸಿಗಳು ಅಲ್ಲಿಯೂ ಹುಟ್ಟಿ ಬಂದಿರುವರು. ಆದರೆ ಅವರು ಶಾಸನದ ರೋಷಕ್ಕೆ ಬಲಿಯಾಗಬೇಕಾಗುತ್ತದೆ.

ಈ ಬಗೆಗೆ ಭಾರತದ ಮೊದಲ ಹೆಸರಾದ ಮಾರ್ಕ್ಸ್‌ವಾದಿಯಾದ ಎಮ್.ಎನ್. ರಾಯ್ ಅವರನ್ನು ಉಲ್ಲೇಖಿಸಬಹುದು. ಮಾರ್ಕ್ಸ್ ನು ವರ್ಗವಾದದಲ್ಲಿ ಸಿಕ್ಕು ಬಿದ್ದುದರಿಂದ ವ್ಯಕ್ತಿಯನ್ನು ಮರೆತನೆನ್ನುವ ಅವರ ಆಕ್ಷೇಪವು ಮೂಲಗಾಮಿಯಾದುದು. ಹೆಚ್ಚು ಉಗ್ರರು ಹಾಗೂ ಕ್ರಾಂತಿಕಾರಿಗಳ ಒಂದು ಬಣವು ಮಾರ್ಕ್ಸ್‌ವಾದಿಗಳಲ್ಲಿ ತಯಾರಾಗಿದೆ. ಅವರನ್ನು 'ನ್ಯೂ ಲೆಫ್ಟ್' ಎನ್ನಲಾಗುತ್ತದೆ. ಅವರಲ್ಲಿ ಹರ್ಬರ್ಟ್ ಮ್ಯಾರ್ಕ್ಸ್ ನ್, ಚೆ ಗೆವೆರಾ, ಝಾ ಪಾಲ್

ಸಾರ್ತ್ರ, ಫ್ರಾನ್ಸ್ ಫನಾನ್, ಮೊದಲಾದವರು. ಇಂದು ಅಭಿವೃದ್ಧಿ ಹೊಂದಿದ ದೇಶಗಳ ಕೈಗಾರಿಕಾ ಕಾರ್ಮಿಕನು ಅವರ ದೃಷ್ಟಿಯಿಂದ ಈಗ ಕ್ರಾಂತಿಕಾರಿಯಾಗಿ ಉಳಿದಿಲ್ಲ. ಅವನು ಮೂರನೆಯ ಪ್ರಪಂಚದ ಕೃಷಿಕರು, ಕೃಷಿಕಾರ್ಮಿಕರು, ವಿದ್ಯಾರ್ಥಿಗಳು, ಹಾಗೂ ಇತರರಿಗೆ ಆ ವಾರಸನ್ನು ನೀಡುತ್ತಾನೆ. ಕೆಲವು ಜನ ಟೀಕಾಕಾರರು ಮಾರ್ಕ್ಸ್ ನ ಉತ್ತರ ಆಯುಷ್ಯದ ವಿಚಾರಗಳಿಗಿಂತ ಪೂರ್ವಾಯುಷ್ಯದ ವಿಚಾರಗಳಿಗೆ ಹೆಚ್ಚು ಮಹತ್ವವನ್ನು ನೀಡುತ್ತಾರೆ. ಈ ವಿಚಾರಗಳಲ್ಲಿ ಎಲ್ಲ ಕ್ಕೂ ಹೆಚ್ಚಿನ ಮಹತ್ವ ಇರುವುದು ಪರಕೀಯತೆಗೆ (ಏಲಿಏನೇಶನ್). ಅದರಲ್ಲಿ ಮಾನವತಾವಾದವೂ ಇದೆ. ಕೆಲವು ಜನರು ಅದನ್ನೇ ನಿಜವಾದ ಮಾರ್ಕವಾದವೆಂದು ನಂಬುತ್ತಾರೆ.

ಮರಾಠೀ ವಿಶ್ವಕೋಶ : ೧೩, ಪು. ೩೮೨-೩೮೫

.

## ಪರಿಶಿಷ್ಟ-೧೯

### DR. AMBEDKAR-LOHIA CORRESPONDENCE

Hyderabad, 10th December 1955

Dear DR. Ambedkar,

The enclosed folders are self-explanatory. "Mankind" would try earnestly to reveal the caste problem in its entirety. It would therefore be very happy to have an article from you. It expects its articles to range between 2,500 and 4,000 words. You are of course free to write something which makes the people of India sit up, not alone in anger, but also in wondrement. I do not know whether the speeces I made about you during the parlimentary campaign in Madhya Pradesh were commuinicated to you by your lieutenant who also travelled with me. Even now I very much wish that sympathy should be joined to anger and that you became a leader not alone of the scheduled castes, but also of the Indian people.

The Zonal Study Camp would be very glad to have you in its midst. The accompanying list of subjects is meant to help. If you could give us a resume of your lecture in advance it would be good for purposes of publication afterwards. We expect that a lecture lasting an hour would be followed by a discussion of similar duration

I do not know whether the foundation conference of the Socialist Party wuld have any interest for you. Although you are not a member member of the Party, the confrence would want to have you as special invitee. The conference will take up, among other subjects, problems relating to any one of which you have something significant to say. If you feel like participating in the proceedings of the conference in order to bring out one or another point, I trust that the conference will extend you special permission to do so.

With warm greetings,

Yours sincerely,

**Rammanohar Lohia**

**MESSRS MEHROTRA AND GOSWAMI'S LETTER:**

I

My dear Doctor Saheb,

Through a friend of ours, we were invited to visit Delhi and meet Dr. Ambedkar. The friend is Dr. Ambedkar's most trusted man. We went to Delhi to meet him, and had a 75 minute talk with him. It was made clear we came purely in a personal capacity.

Dr. Ambedkar would very much like to meet you whenever you are in Delhi. He is an old man and not well. He walked with support.

He wants a copy of all Party literature and all copies of "Mankind". He will pay for it (icluding constitution, policy and programme.)

He agreed with our view that Mr. Nehru is trying to wreck every party, and that opposition should be strong.

He was in favour of a new political party with strong roots.

He did not understand communism or socialism of the Marxist variety as of any good to India, but when we explained our stand, he was interested.

We invited him to seek election from Kanpur City general constituency to parliament; he did not dislike the idea, but said that he wanted to talk to you with an Aii-India prspectve, and we made it clear that we can have no alliances, as per our policy. He, it seems, is not enamoured of his Scheduled Castes Federation. The executive is meeting in Delhi on 30th. He was very interested in the facts about Mr. Nehru (cinema outfit, state belongs to leader etc. from Mankind) and said that adequate publicity be given to these facts. He was interested in talking out an English daily from Delhi.

He was very sympathetic, cordial and eager to understand our viewpoint in detail. He explained the democratic practice in England, at some length, of choosing a candidate, and it seems is a very great believer in democracy.

This is the gist. We could not report in person because we did not know where you were and we had no money. Our trunk call to Hyderabad on 23-9-1956 to party office resulted in "no reply," as nobody picked up the phone on that side

. Dr. Ambedkar's Address : 26, Alipore Road, New Delhi.

Yours sincerely,

**Vimal Mehrotra,**

**D.V.Goswamy.**



## II

## DR. AMBEDKAR'S LETTER

## ALL INDIA SCHEDULED CASTES FEDERATION

26, Alipur Road, Civil Lines, Delhi. 24 September 1956.

Dear Dr. Lohia,

Your two friends had come to see me and I had quite a long talk with them although we did not enter into any discussion about your election programme.

The working committee of the All-India Scheduled Castes Pederation is meeting on 30th September 1956 and I shall put to the committee the proposal which your friends have left with me. After the working committee meeting is over I should like to have a discussion with the important members of your Party so that we can finally settle as to what we can do in coming together. I would therefore be glad if you can be in Delhi on Tuesday, the 2nd October 1956 at my place. If you are coming please let me know by wire so that I can detain some people of the working committee also to meet you.

With kind regards,

Yours sincerely,

B. R. Ambedkar.

III

## LETTER TO DR. AMBEDKAR

Hyderabad, 1st October 1956.

Dear Dr. Ambedkar,

I thank you for your kind letter of 24th September. I read it today after my return to Hyderabad and am therefore wholly unable to reach Delhi in time for the meeting that you have suggested. I would, however, welcome an opportunity to meet you as early as possible. I would be in the Uttar Pradesh round the middle of October so that I could see you in Delhi on the 19th or 20th of October. In case you are in Bombay on the 29th October, I could meet you there. Please let me know by wire which of the two dates would suit you.

I was concerned to know about your health from other friends. I hope you are taking all necessary care.

I am also having the three copies of Mankind' issued so far sent to you under separate cover.

I had half a mind to suggest a subject for you. But I desist from doing so. The three issues of Mankind' will themselves impel you to the subject of your coice. I only wish to emphasise the utter intellectual collapse that has overtaken our country. I hope only temporarily, and how necessary it is for a man like you to speak unreservedly.

Yours sincerely,

**Rammanohar Lohia.**



## IV

## LETTER TO MESSRS MEHROTRA AND GOSWAMY

Hyderabad, 1st October 1956.

Dear Vimal and Dharmavir,

I have your letter. I would want you to persue your talk with Dr, Ambedkar, but remember that you are not to depart from the lines you have yourself indicate in your letter to me.

With Dr. Ambedkar, the greatest difficulty has been his ideological affiliation with the Atlantic camp. I do not think that this affiliation is anything except adealogical. But we have to be very careful about it. I wish that Dr, Ambedkar became attuned with the position of the camp of equal-irrelevance. You might continue a little idealogical discussion with him through your common friends.

I am having a copy of my letter to Dr. Ambedkar sent to you. In case he wants to meet me in Delhi, you may also be there. My meeting with Dr. Ambedkar will as much be a tribute to the fact that the backward and the scheduled castes can produce an intellect like him as for its political consequences.

Yours sincerely,

**Rammanohar Lohia.**

## V

## DR. AMBEDKAR'S LETTER

Delhi, 5th October 1956.

Dear Dr. Lohia,

I am in receipt of your letter No. 8821 of 1st October 1956. If you wish to meet me on the 20th of October I shall be in Delhi and you are welcome. You have only to telephone me to fix the time.

With Kind regards,

Yours sincerely,

**B.R. Ambedkar.**

## VI

## MR. MEHROTRA'S LETTER TO DR. AMBEDKAR

Kanpur, 15th October 1956.

Repected Doctor Saneb,

My friend Mr. D.V. Goswaamy and I met you in Delhi last month, and subsequently we communicate our coversation to Dr. Lohia.

I have been studying with keenest interest the decisions taken by the executive committee of the Scheduled Castes Federation. Three points emerge of special interest to the people of the country.

(a) Your committee has felt the need of a new party to be named as Republican Party of India. We do not as yet know the policy and programme of the new party or its ideology, and it is not possible for the people as yet to form any opinion about it, though the country is looking forward eagerly to the views of a man of your intellectual strature on the remedy for the present ills of ours. It may be out of place for men like me to venture to give advice to you but the country would have very much liked that you had gone through the policy and programmes of various political parties already existing in the country, and given your observations on the profession and practice of these political parties.

(b) you must forgive me if I frankly admit that I have not been able to understand

the policy of your committee on the question of election alliances. I am totally confused. The spokesman of the parlimentary board of U.P.S.C.F. has said in a statement that S.C.F. does not desire any election alliance with any leftist party, while, if I understood correctly from news reports, or some such similar alliance. The Socialist Party, of course, has in its policy laid down that we will not contest elections except in those constituences where its membership is at least one per cent of the total electorate and is spread over one-third of its polling stations. The Socialist Party does not believe that any other party is an opposition party, but the above decision



has opened a way for automatic electoral adjustment with allegedly opposition parties because by this we will keep ourselves out of nearly 3,000 constituences.

(C) The resolution adopted by your committee on the Suez may be based primarily in national interest, but I am extremely doubtful if in the long run, this will be really in the interest of the Indian people. This would mean that The foreign capital ivested in India may not be nationalized without the consent of the countries whose nationals the foreign capitalists may be.

May I request you to very kindly ask the offices of S.C.F. to send us a copy of those resolutions.

I understand that Dr. Lohia was to have met you, but I do not think that he will be able to meet you in the immediate future, but if you can spare your valuable time, I may come over and discuss matters with you.

I hope your health will permit you to spare some time.

Yours sincerely,

**Vimal Mehrotra.**

**CC:** (1) Sri D.V. Goswamy, Civil Lines, Allahabad.

(2) Dr. Rammanohar Lohia, Hyderabad.

(3) G.N. Sexena, Socialist Party, 4, Pan Dariba, Lucknow

## VII

## LETTER TO MADHU LIMAYE

**HYDAERABAD, 1-7-1957.**

Dear Madhu,

I have found the correspondence with and concerning Dr. Ambedkara and I am having it sent to you. You can well understand that my sorrow at Dr. Ambedkar's sudden death has been and is somewhat personal. It had always been my ambition to draw him into our fold, not only organizationally but also in full ideological sense, and that moment seemed to be approaching.

Of course, I would not like you even for a moment to read this corresponence with the back-ground of our common personal loss. Dr. Ambedkar was to me, a great man in Indian politics, and apart from Gandhiji, as great as the greatest of caste Hindus. This fact had always given me solace and confidence that the caste system of Hinduism could one day be destroyed.

I have always been trying to communicate to the Harijans of India, an idea which is basic with me. Dr. Ambedkara and Sri Jagjivan Ram are the two types of modern Harijans in India. Dr. Ambedkara was learned, a man of integrity, courage and idependence; he could be shown to the external world as a symbol of upright India, but he was bitter and exclusive. He refused to become a leader of non-Harijans. I can well understand the agony of the last 5,000 years to and their continuing impact on the Harijans. But that is precisely the point. Such a great Indian as Dr. Ambedkar, I had hoped, would some day be able to rise

above the situation, but death came early. Mr. Jagjivan Raman apparent goodwill towards all Indians and Hindus and although he is known to flatter and kowtow to the caste Hindus when he deals with them, he is reported to sing to the bitter tunes of hatred in exclusively Harijan meetings. This is still no basis for the uplift either of Harijans or of India. But Dr. Ambedkar's type also needs to be modified.

I do not know the men who now run the Scheduled Castes Federation. But I wish that the Schedule Castes of India were persuaded to make a rational



estimate of the last 40 years of Indian politics. I wish they continue to have the symbol of Dr. Ambedkar with his independence but without his bitterness, as Dr. Ambedkar who would act so as to be leader of all India and not Harijans only.

Your affectionately,

**Rammanohar Lohia.**

Lohiya, Pp. 29-37.

## ಪರಿಶಿಷ್ಟ-೨೬

## ಡಾ. ಅಂಬೇಡಕರ - ಲೋಹಿಯಾರ ಪತ್ರವ್ಯವಹಾರ

ಹೈದರಾಬಾದ, ೧೦ ಡಿಸೆಂಬರ್ ೧೯೫೫

ಪ್ರಿಯ ಡಾ. ಅಂಬೇಡಕರರಿಗೆ,

ಜೊತೆಗೆ ಲಗತ್ತಿಸಿದ ಮಾಹಿತಿಪತ್ರಗಳು ಸ್ವಯಂವೇದ್ಯ. "ಮ್ಯಾನ್ ಕೈಂಡ್"ವು ಜಾತಿ ಸಮಸ್ಯೆಯನ್ನು ಪೂರ್ತಿಯಾಗಿ ಬಿಚ್ಚಿಡಲು ಪ್ರಾಮಾಣಿಕವಾಗಿ ಯತ್ನಿಸಲಿದೆ. ಹೀಗಾಗಿ ನಿಮ್ಮಿಂದ ಒಂದು ಲೇಖನವನ್ನು ಪಡೆಯಲು ಸಂತೋಷವಾದೀತು. ತನ್ನ ಲೇಖನಗಳು ೨,೫೦೦ರಿಂದ ೪,೦೦೦ ಶಬ್ದಗಳವರೆಗಿನ ಮಿತಿಯಲ್ಲಿ ಇರಬೇಕೆಂದು ಅದು ನಿರೀಕ್ಷಿಸುತ್ತದೆ. ಆದರೆ ನಿಮ್ಮ ವಿಷಯವನ್ನು ಆಯ್ದುಕೊಳ್ಳುವಲ್ಲಿ ಮಾತ್ರ ನೀವು ಸ್ವತಂತ್ರರು. ನೀವು ನಮ್ಮ ದೇಶದಲ್ಲಿ ಜಾರಿಯಲ್ಲಿರುವ ಜಾತಿ ಪದ್ಧತಿಯ ಒಂದಿಲ್ಲೊಂದು ಬದಿಯನ್ನು ಆಯ್ದುಕೊಳ್ಳುವವರಿದ್ದರೆ, ಜನರು ಕೆರಳಿ ಅಷ್ಟೇ ಅಲ್ಲದೆ, ಅಚ್ಚರಿಯಿಂದಲೂ ನೆಗೆದು ಕುಳಿತುಕೊಳ್ಳುವಂತೆ ಮಾಡುವ ಹಾಗೆ ಅದನ್ನು ಬರೆಯಬೇಕೆಂದು ನಿಮ್ಮಿಂದ ನಿರೀಕ್ಷಿಸುತ್ತೇನೆ. ಮಧ್ಯಪ್ರದೇಶದ ಸಂಸತ್ತಿನ ಪ್ರಚಾರದಲ್ಲಿರುವಾಗ ನಾನು ನಿಮ್ಮನ್ನು ಕುರಿತು ಭಾಷಣಗಳಲ್ಲಿ ಹೇಳಿದುದನ್ನು ನನ್ನ ಜೊತೆಗಿದ್ದ ನಿಮ್ಮ ಅನುಯಾಯಿಯು ನಿಮಗೆ ಹೇಳಿರುವನೋ, ಇಲ್ಲವೋ, ನನಗೆ ತಿಳಿಯದು. ಕನಿಕರವು ಕ್ರೋಧವನ್ನು ಜೊತೆಗೂಡಿರಬೇಕಲ್ಲದೆ ನೀವು ಕೇವಲ ಪರಿಶಿಷ್ಟ ಜಾತಿಗಳ ನಾಯಕರಾಗಿರದೆ, ಇಡಿಯಾ ಭಾರತೀಯರ ನಾಯಕರಾಗಬೇಕೆಂದು ನಾನು ಈಗಲೂ ತುಂಬ ಇಚ್ಛಿಸುತ್ತೇನೆ.

ವಲಯದ ಅಧ್ಯಯನ ಶಿಬಿರದಲ್ಲಿ ನಿಮ್ಮನ್ನು ಬರಮಾಡಿಕೊಳ್ಳಲು ಸಂತೋಷವಾಗಲಿದೆ. ಜೊತೆಗಿರುವ ವಿಷಯಗಳ ಪಟ್ಟಿಯು ನಿಮ್ಮ ನೆರವಿಗಾಗಿ ಎಂದಿದೆ. ನೀವು ನಿಮ್ಮ ಉಪನ್ಯಾಸದ ಟಿಪ್ಪಣಿಯನ್ನು ಮುಂಗಡವಾಗಿ ರವಾನಿಸಿದರೆ ತರುವಾಯದಲ್ಲಿ ಅದನ್ನು ಪ್ರಕಟಿಸಲು ನಮಗೆ ಅನುಕೂಲವಾದೀತು. ಒಂದು ಗಂಟೆಯ ಉಪನ್ಯಾಸ ಹಾಗೂ ಸುಮಾರು ಅಷ್ಟೇ ಅವಧಿಯ ಚರ್ಚೆಯನ್ನು ನಿಮ್ಮಿಂದ ಎದುರು ನೋಡುತ್ತೇವೆ.

ನಿಮಗೆ ಸಮಾಜವಾದಿ ಪಾರ್ಟಿಯ ಅಡಿಪಾಯದ ಸಮಾವೇಶದ ಬಗೆಗೆ ಎಷ್ಟರ ಮಟ್ಟಿಗೆ ಆಸ್ಥೆ ಎನ್ನಿಸಬಹುದೊ, ನಾನರಿಯೆ. ನೀವು ಪಾರ್ಟಿಯ ಸದಸ್ಯರಲ್ಲವಾದರೂ ಸಮಾವೇಶವು ಒಬ್ಬ ವಿಶೇಷ ಆಮಂತ್ರಿತರೆಂದು ನಿಮ್ಮನ್ನು ಬರಮಾಡಿಕೊಳ್ಳಲು ಇಚ್ಛಿಸುತ್ತದೆ. ಸಮಾವೇಶವು ಕೃಷಿ ಕಾರ್ಮಿಕರು, ಕರಕುಶಲ ಕಾರ್ಮಿಕರು, ಸ್ತ್ರೀಯರು ಹಾಗೂ ಸಂಸತ್ತಿನ ಕಲಾಪಗಳ ಸಮಸ್ಯೆಗಳಂತಹ ವಿಷಯಗಳಲ್ಲಿ ನೀವು ಗಮನಾರ್ಹವಾಗಿ ಹೇಳಲಿಚ್ಛಿಸುವ ಯಾವುದೇ ವಿಷಯವನ್ನು ಚರ್ಚೆಗಾಗಿ ಎತ್ತಿಕೊಳ್ಳಲಿದೆ.



ನೀವು ಒಂದಿಲ್ಲೊಂದು ಅಂಶವನ್ನು ಪ್ರಸ್ತಾಪಿಸಲೆಂದು ಸಮಾವೇಶದ ಕಲಾಪಗಳಲ್ಲಿ ಪಾಲ್ಗೊಳ್ಳಲು ಬಯಸುವಿರಾದರೆ, ಅದು ನಿಮಗೆ ಹಾಗೆ ಮಾಡಲು ವಿಶೇಷವಾದ ಅಪ್ಪಣೆಯನ್ನು ನೀಡಬಹುದೆಂದು ನಂಬುತ್ತೇನೆ.

ಹೃತ್ಪೂರ್ವಕವಾದ ಶುಭಾಶಯಗಳೊಂದಿಗೆ,

ತಮ್ಮ ವಿಶ್ವಾಸಿ,

**ರಾಮಮನೋಹರ ಲೋಹಿಯಾ.**

**ಶ್ರೀ ಮೆಹರೋತ್ರಾ ಮತ್ತು ಗೋಸ್ವಾಮಿ ಅವರ ಪತ್ರ** :

ನನ್ನ ಪ್ರಿಯ ಡಾಕ್ಟರ ಸಾಹೇಬರೆ, ೧೭-೯-೫೬.

ನಮ್ಮ ಒಬ್ಬ ಸ್ನೇಹಿತನ ಮೂಲಕ ಡಾ. ಅಂಬೇಡಕರರನ್ನು ಕಾಣಲೆಂದು ನಮ್ಮನ್ನು ದಿಲ್ಲಿಗೆ ಕರೆಯಲಾಗಿತ್ತು. ಈ ಸ್ನೇಹಿತನು ಡಾ. ಅಂಬೇಡಕರರಿಗೆ ತುಂಬ ವಿಶ್ವಾಸದವನು. ಅವರನ್ನು ಕಾಣಲೆಂದು ನಾವು ದಿಲ್ಲಿಗೆ ಹೋಗಿ, ಅವರೊಡನೆ ಸುಮಾರು ೭೫ ನಿಮಿಷಗಳ ಕಾಲ ಅಲ್ಲಿ ಮಾತುಕತೆಯನ್ನು ನಡೆಸಿದೆವು. ನಾವು ಕೇವಲ ವ್ಯಕ್ತಿಗತ ಮಟ್ಟದಲ್ಲಿ ಬಂದವರೆಂದು ಅವರಿಗೆ ಸ್ಪಷ್ಟಪಡಿಸಲಾಯಿತು.

ನೀವು ದಿಲ್ಲಿಯಲ್ಲಿ ಇರುವಾಗ ಯಾವಾಗಲಾದರೂ ಡಾ. ಅಂಬೇಡಕರರು ನಿಮ್ಮನ್ನು ಕಾಣಲು ತುಂಬ ಇಷ್ಟ ಪಡುತ್ತಾರೆ. ಅವರು ಮುಪ್ಪಿನವರಾಗಿದ್ದು ಆರೋಗ್ಯದಿಂದಿಲ್ಲ. ಅವರು ಕೋಲನ್ನು ಹಿಡಿದುಕೊಂಡು ಮಾತ್ರ ನಡೆದಾಡಬಲ್ಲರು.

ಅವರಿಗೆ ಪಾರ್ಟಿಯ ಸಾಹಿತ್ಯ ಹಾಗೂ "ಮ್ಯಾನ್‌ಕೈಂಡ್' 'ದ ಎಲ್ಲ ಪ್ರತಿಗಳು ಬೇಕಿವೆ. ಅವರು ಅವುಗಳ ಬೆಲೆಯನ್ನು ತೆರಲು ಸಿದ್ಧರು (ಸಂವಿಧಾನ, ಧೋರಣೆ ಹಾಗೂ ಕಾರ್ಯಕ್ರಮಗಳನ್ನು ಒಳಗೊಂಡು),

ಶ್ರೀ ನೆಹರು ಅವರು ಪ್ರತಿಯೊಂದು ಪಕ್ಷವನ್ನು ಒಡೆಯಲು ಯತ್ನಿಸುತ್ತಿದ್ದು ಪ್ರತಿಪಕ್ಷವು ಸಮರ್ಥವಾಗಿರತಕ್ಕದ್ದೆಂಬ ನಮ್ಮ ಅಭಿಪ್ರಾಯವನ್ನು ಅವರು ಒಪ್ಪಿಕೊಂಡರು.

ಅವರು ಗಟ್ಟಿಯಾದ ಬೇರುಗಳನ್ನು ಹೊಂದಿದ ಒಂದು ಹೊಸ ರಾಜಕೀಯ ಪಕ್ಷವು ಬೇಕೆಂಬ ಸಂಗತಿಯತ್ತ ಒಲವನ್ನು ಹೊಂದಿರುವರು.

ಕಮ್ಯುನಿಸಮ್ ಇಲ್ಲವೆ ಮಾರ್ಕಿಸ್ಟ್ ಬಗೆಯ ಸಮಾಜವಾದವು ಭಾರತಕ್ಕೆ ಯಾವುದೇ ಬಗೆಯಲ್ಲೂ ಒಳ್ಳೆಯದೆಂದು ಅವರಿಗೆ ಅನ್ನಿಸುವುದಿಲ್ಲ. ನಾವು ನಮ್ಮ ನಿಲುವನ್ನು ವಿವರಿಸುತ್ತಲೆ ಅವರು ಅದರತ್ತ ಆಸ್ಥೆವಹಿಸಿದರು.



ಸಾರ್ವತ್ರಿಕ ಚುನಾವಣೆಯಲ್ಲಿ ಕಾನಪುರ ನಗರದಿಂದ ಸಂಸತ್ತಿಗೆ ಸಾಮಾನ್ಯ ಕ್ಷೇತ್ರದ ಅಭ್ಯರ್ಥಿಯಾಗಲು ಅವರನ್ನು ಆಮಂತ್ರಿಸಿದೆವು. ಈ ಪ್ರಸ್ತಾಪವು ಅವರಿಗೆ ಇಷ್ಟವಾಗದಿರಲಿಲ್ಲ. ಆಗ ತಾವು ಅಖಿಲ ಭಾರತೀಯ ಸಂದರ್ಭದಲ್ಲಿ ನಿಮ್ಮೊಂದಿಗೆ ಮಾತನಾಡಬಯಸುತ್ತೇವೆಂದರು. ನಾವು ಯಾವುದೇ ಬಗೆಯ ಮೈತ್ರಿಕೂಟಕ್ಕೆ ಸಿದ್ಧರಿಲ್ಲವೆಂಬ ನಮ್ಮ ಧೋರಣೆಯಂತೆ ಅವರಿಗೆ ಸ್ಪಷ್ಟಪಡಿಸಿದೆವು. ತಮ್ಮ ಶೆಡ್ಯೂಲ್ಡ್ ಕಾಸ್ಟ್ ಫೆಡರೇಶನ್ ಕುರಿತು ಅವರಿಗೆ ಅಂತಹ ಮೋಹವಿದ್ದಂತೆ ಕಾಣಲಿಲ್ಲ. ಅದರ ಕಾರ್ಯಕಾರಿಣಿಯು ೩೦ ರಂದು ದಿಲ್ಲಿಯಲ್ಲಿ ಸಭೆ ಸೇರಲಿದೆ. ಅವರು ನೆಹರೂರವರನ್ನು ಕುರಿತಾದ ವಾಸ್ತವ ಸಂಗತಿಗಳ ಬಗೆಗೆ ತುಂಬ ಆಸ್ಥೆ ವಹಿಸಿದರು. (ಸಿನೆಮಾದ ಪೂರ್ಣ ಸಾಮಗ್ರಿ, ದೇಶವು ನಾಯಕನಿಗೆ ಸೇರಿದ್ದು ಮುಂ. `ಮ್ಯಾನ್‌ಕೈಂಡ್ ದಿಂದ) ಅವರು ಈ ಸಂಗತಿಗಳಿಗೆ ಸಾಕಷ್ಟು ಪ್ರಚಾರವನ್ನು ಒದಗಿಸಬೇಕೆಂದು ಹೇಳಿದರು. ಅವರು ದಿಲ್ಲಿಯ ಒಂದು ಆಂಗ್ಲ ದಿನಪತ್ರಿಕೆಗಾಗಿ ಮಾತಾಡಬಯಸಿದ್ದರು.

ನಮ್ಮ ದೃಷ್ಟಿಕೋನವನ್ನು ವಿವರವಾಗಿ ಅರಿತುಕೊಳ್ಳುವಾಗ ಅವರು ತುಂಬ ಸಹಾನುಭೂತಿ, ಸಹೃದಯತೆ ಹಾಗೂ ಆತುರತೆಗಳನ್ನು ಹೊಂದಿದ್ದರು. ಅವರು ಪ್ರಜಾಸತ್ತೆಯ ಅಭ್ಯರ್ಥಿಯ ಆಯ್ಕೆಯ ಇಂಗ್ಲೆಂಡಿನ ಸಂಪ್ರದಾಯವನ್ನು ಕುರಿತು ತುಸು ದೀರ್ಘವಾಗಿ ವಿವರಿಸಿದರು. ಅವರು ಪ್ರಜಾಸತ್ತೆಯಲ್ಲಿ ಆಳವಾದ ನಂಬಿಕೆಯುಳ್ಳವರೆಂದು ಕಾಣುತ್ತದೆ.

ಇದು ಸಂಕ್ಷಿಪ್ತ ಮಾಹಿತಿ, ನೀವು ಎಲ್ಲಿದ್ದರೆಂಬುದು ನಮಗೆ ತಿಳಿಯದ ಕಾರಣ ನಿಮಗಿದನ್ನು ಪ್ರತ್ಯಕ್ಷವಾಗಿ ಹೇಳಲು ಆಗಲಿಲ್ಲ. ನಮ್ಮ ಬಳಿ ಒಂದು ಕಾಸು ಕೂಡ ಇರಲಿಲ್ಲ. ನಾವು ೨೩-೯-೧೯೫೬ರಂದು ಹೈದರಾಬಾದಿನ ಪಕ್ಷದ ಕಚೇರಿಗೆ ೬೦ಕ್ ಕರೆ ಮಾಡಿದಾಗ ಯಾರೂ ಕರೆಯನ್ನು ಸ್ವೀಕರಿಸದ ಕಾರಣ "ನೋ ರಿಪ್ಲಾಯ್ ಬಂದಿತು.

ಡಾ. ಅಂಬೇಡಕರರ ವಿಳಾಸ : ೨೬, ಅಲಿಪೂರ ರಸ್ತೆ, ಹೊಸ ದಿಲ್ಲಿ.

ತಮ್ಮ ವಿಶ್ವಾಸಿ,

**ವಿಮಲ ಮೆಹರೋತ್ರಾ,**

**ಡಿ.ವಿ. ಗೋಸ್ವಾಮಿ.**

II

## ಡಾ. ಅಂಬೇಡಕರರ ಪತ್ರ

## ಆಲ್ ಇಂಡಿಯಾ ಶೆಡ್ಯೂಲ್ಡ್ ಕಾಸ್ಟ್ಸ್ ಫೆಡರೇಶನ್

೨೬, ಅಲಿಪೂರ ರಸ್ತೆ, ಸಿವಿಲ್ ಲೈನ್ಸ್, ದಿಲ್ಲಿ. ೨೪ ಸೆಪ್ಟೆಂಬರ್ ೧೯೫೬

ಪ್ರಿಯ ಡಾ. ಲೋಹಿಯಾ ಅವರೆ,

ನಿಮ್ಮಿಬ್ಬರು ಸ್ನೇಹಿತರು ನನ್ನನ್ನು ಕಾಣಲು ಬಂದಿದ್ದರು. ಅವರೊಂದಿಗೆ ದೀರ್ಘವಾದ ಮಾತುಕತೆಗಳು ನಡೆದವು. ಆದರೆ ನಿಮ್ಮ ಚುನಾವಣೆಯ ಕಾರ್ಯಕ್ರಮಗಳನ್ನು ಕುರಿತು ಯಾವುದೇ ಬಗೆಯ ಚರ್ಚೆ ನಡೆಯಲಿಲ್ಲ.

ಆಲ್ ಇಂಡಿಯಾ ಶೆಡ್ಯೂಲ್ಡ್ ಕಾಸ್ಟ್ಸ್ ಫೆಡರೇಶನ್ನಿನ ಕಾರ್ಯಕಾರಿಣಿಯು ೩೦ ಸೆಪ್ಟೆಂಬರ್ ೧೯೫೬ ರಂದು ಸಭೆ ಸೇರಲಿದೆ. ನಿಮ್ಮ ಸ್ನೇಹಿತರು ಸಲ್ಲಿಸಿದ ಪ್ರಸ್ತಾಪವನ್ನು ಅದರ ಮುಂದೆ ಇರಿಸುವೆನು. ಕಾರ್ಯಕಾರಿಣಿಯ ಸಭೆಯ ತರುವಾಯ ನಿಮ್ಮ ಪಕ್ಷದ ಕೆಲವು ಮುಖ್ಯ ಸದಸ್ಯರೊಡನೆ ಚರ್ಚಿಸಬಯಸುತ್ತೇನೆ. ಅಂದರೆ ನಾವು ಜೊತೆಗೂಡಿ ಏನನ್ನು ಸಾಧಿಸಲು ಸಾಧ್ಯ ಎಂಬುದನ್ನು ತೀರ್ಮಾನಿಸಬಹುದು. ಅದಕ್ಕಾಗಿ, ಮಂಗಳವಾರ, ೨ ಅಕ್ಟೋಬರ್ ೧೯೫೬ ರಂದು ನೀವು ನನ್ನ ದಿಲ್ಲಿಯ ಮನೆಗೆ ಬರಲು ಸಾಧ್ಯವಾದರೆ ನನಗೆ ಸಂತೋಷ. ನೀವು ಬರುವಂತಿದ್ದರೆ ದಯವಿಟ್ಟು ಅದನ್ನು ತಂತಿಯ ಮೂಲಕ ನನಗೆ ತಿಳಿಸಬೇಕು. ಅಂದರೆ ಕಾರ್ಯಕಾರಿಣಿಯ ಕೆಲವು ಜನ ಸದಸ್ಯರನ್ನು ನಿಮ್ಮನ್ನು ಕಾಣಲು ಉಳಿಸಿಕೊಳ್ಳಬಹುದು.

ಗೌರವಗಳೊಂದಿಗೆ,

ನಿಮ್ಮ ವಿಶ್ವಾಸಿ,

**ಬಿ. ಆರ್. ಅಂಬೇಡಕರ.**

III

**ಡಾ. ಅಂಬೇಡಕರರಿಗೆ ಪತ್ರ**

ಹೈದರಾಬಾದ, ೧ ಅಕ್ಟೋಬರ್ ೧೯೫೬.

ಪ್ರಿಯ ಡಾ. ಅಂಬೇಡಕರರೆ,

ನಾನು ನಿಮ್ಮ ೨೪ ಸೆಪ್ಟೆಂಬರಿನ ಪತ್ರಕ್ಕಾಗಿ ಕೃತಜ್ಞನು. ಹೈದರಾಬಾದಿಗೆ ಮರಳಿ ಬಂದ ಬಳಿಕ ಇಂದು ಅದನ್ನು ಓದಿದೆ. ಹೀಗಾಗಿ, ನೀವು ಸೂಚಿಸಿದ ಸಭೆಗಾಗಿ ಸಮಯಕ್ಕೆ ಸರಿಯಾಗಿ ದಿಲ್ಲಿಗೆ ಬಂದು ತಲುಪುವುದು ಅಸಾಧ್ಯವೇ ಸರಿ. ನಾನು ಅಕ್ಟೋಬರ್ ತಿಂಗಳ ಮಧ್ಯದಲ್ಲಿ ಉತ್ತರ ಪ್ರದೇಶದ ಪ್ರಯಾಣದಲ್ಲಿರುವೆ. ಆಗ, ೧೯ ಅಥವಾ ೨೦ ಆಕ್ಟೋಬರದಂದು ನನಗೆ ದಿಲ್ಲಿಯಲ್ಲಿ ನಿಮ್ಮನ್ನು ಕಾಣಲು ಸಾಧ್ಯಾವಾದೀತು. ನೀವು ಯಾವುದೇ ಕಾರಣದಿಂದ ೨೦ ಆಕ್ರೋಬರದಂದು ಮುಂಬಯಿಯಲ್ಲಿ ಇರುವಿರಾದರೆ ನಿಮ್ಮನ್ನು ಕಾಣಬಲ್ಲೆನು. ನಿಮಗೆ ಇವೆರಡು ತಾರೀಖುಗಳಲ್ಲಿ ಯಾವುದು ಅನುಕೂಲದ್ದೆಂಬುದನ್ನು ದಯವಿಟ್ಟು ತಂತಿಯ ಮೂಲಕ ತಿಳಿಸಿ,

ನನ್ನ ಬೇರೆ ಸ್ನೇಹಿತರಿಂದ ನಿಮ್ಮ ಆರೋಗ್ಯವನ್ನು ಕುರಿತು ಅರಿತು ಆತಂಕಿತನಾದೆ. ಎಲ್ಲ ಬಗೆಯ ಅಗತ್ಯದ ಎಚ್ಚರವನ್ನು ವಹಿಸುತ್ತಿರುವಿರೆಂದು ಭಾವಿಸುತ್ತೇನೆ.

ಈ ವರೆಗೆ ಪ್ರಕಟಿಸಲಾದ “ಮ್ಯಾನ್‌ಕೈಂಡ್' 'ದ ಮೂರು ಸಂಚಿಕೆಗಳನ್ನು ನಿಮಗೆ ಬೇರೆ ಲಕೋಟೆಯಲ್ಲಿ ಕಳುಹಿಸಲಾಗಿದೆ. ಅವು ನನ್ನ ಬಳಿಯಲ್ಲೂ ಇವೆ. ನಿಮಗೆ ವಿಷಯವನ್ನು ಸೂಚಿಸುವಾಗ ಒಂದು ಬಗೆಯ ಅಳುಕು

ನನ್ನಲಿತ್ತು. ಅದಕ್ಕಾಗಿ ಜಿಗುಪ್ಸೆ ಪಟ್ಟುಕೊಳ್ಳುತ್ತೇನೆ. “ಮ್ಯಾನ್‌ಕೈಂಡ್' 'ದ ಮೂರು ಸಂಚಿಕೆಗಳು ನಿಮ್ಮಲ್ಲಿ ನಿಮ್ಮ ಆಯ್ಕೆಯ ಒಂದು ವಿಷಯವನ್ನು ಪ್ರಚೋದಿಸಲಿವೆ. ನಮ್ಮ ದೇಶವನ್ನು ಆವರಿಸಿದ ಬೌದ್ಧಿಕ ಕುಸಿತಕ್ಕೆ ಮಾತ್ರ ಒತ್ತು ಕೊಡಬಯಸುತ್ತೇನೆ. ನಿಮ್ಮಂಥ ವ್ಯಕ್ತಿಯು ಏನನ್ನೂ ಬಚ್ಚಿಟ್ಟುಕೊಳ್ಳದೆ ಮಾತನಾಡುವುದು ತುಂಬ ಆವಶ್ಯಕವೆಂಬುದನ್ನು ಕುರಿತು ಸದ್ಯದ ಮಟ್ಟಿಗೆ ಆಶಿಸುತ್ತೇನೆ.

ನಿಮ್ಮ ವಿಶ್ವಾಸಿ,

**ರಾಮಮನೋಹರ ಲೋಹಿಯಾ.**



**IV**

## ಶ್ರೀ ಮೆಹರೋತ್ರಾ ಮತ್ತು ಗೋಸ್ವಾಮಿ ಅವರಿಗೆ ಪತ್ರ

ಹೈದರಾಬಾದ, ೧ ಆಕ್ಟೋಬರ್ ೧೯೫೬.

ಪ್ರಿಯ ವಿಮಲ ಹಾಗೂ ಧರ್ಮವೀರರೆ,

ನಿಮ್ಮ ಪತ್ರ ತಲುಪಿದೆ. ನೀವು ಡಾ. ಅಂಬೇಡ್ಕರರ ಜೊತೆಗಿನ ಮಾತುಕತೆಯನ್ನು ಮುಂದುವರಿಸಬೇಕೆಂದು ಬಯಸುತ್ತೇನೆ. ಆದರೆ ನಿಮ್ಮ ಪತ್ರದಲ್ಲಿ ನಮೂದಿಸಿದ ದಿಕ್ಕಿನಿಂದ ನೀವಾಗಿಯೇ ಕದಲಕೂಡದೆಂಬುದನ್ನು ನೆನಪಿಡಿ.

ಡಾ, ಅಂಬೇಡಕರರ ಜೊತೆಗಿನ ಎಲ್ಲಕ್ಕೂ ದೊಡ್ಡ ತೊಂದರೆ ಎಂದರೆ ಅಟ್ಲಾಂಟಿಕ್ ಪಾಳೆಯದ ರಾಜಕೀಯ ಸಿದ್ಧಾಂತದೊಂದಿಗೆ ಅವರು ಹೊಂದಿರುವ ಭಾವಸಂಬಂಧ, ಈ ಭಾವಸಂಬಂಧವು ಅದನ್ನು ಮೀರಿ ಇನ್ನೇನೂ ಆಗಿಲ್ಲವೆಂದು ಪರಿಭಾವಿಸುತ್ತೇವೆ. ಆದರೆ ಈ ಬಗೆಗೆ ನಾವು ತುಂಬ ಎಚ್ಚರದಿಂದಿರುವುದು ಅಗತ್ಯದ್ದು. ಡಾ, ಅಂಬೇಡಕರರು ಅದರಷ್ಟೇ ಅಸಂಗತ ಪಾಳೆಯದ ನಿಲುವಿನೊಡನೆ ಶ್ರುತಿಹೊಂದಬೇಕೆಂದು ಆಶಿಸುತ್ತೇನೆ. ನಿಮ್ಮ ಸ್ನೇಹಿತರ ಮೂಲಕ ನೀವು ರಾಜಕೀಯ ಸೈದ್ಧಾಂತಿಕ ಚರ್ಚೆಯನ್ನು ಮುಂದುವರಿಸಹುದು.

ಡಾ. ಅಂಬೇಡಕರರಿಗೆ ನಾನು ಬರೆದ ಹಾಗೂ ನಿಮಗೆ ರವಾನಿಸಿದ ಪತ್ರದ ಒಂದು ಪ್ರತಿ ನನ್ನಲ್ಲಿದೆ. ನಾನು ದಿಲ್ಲಿಯಲ್ಲಿ ತಮ್ಮನ್ನು ಕಾಣಬೇಕೆಂದು ಅವರು ಬಯಸಿದರೆ ಆಗ ನೀವೂ ಅಲ್ಲಿರಬಹುದು. ಡಾ. ಅಂಬೇಡಕರ ಜೊತೆಗಿನ ನನ್ನ ಭೇಟಿ ಎಂದರೆ ತನ್ನ ರಾಜಕೀಯ ಪರಿಣಾಮಗಳಂತೆಯೇ ಹಿಂದುಳಿದ ಹಾಗೂ ಪರಿಶಿಷ್ಟ ಜಾತಿಗಳು ಅವರಂಥ ಒಬ್ಬ ಬುದ್ಧಿವಾದಿಯನ್ನು ಹುಟ್ಟುಹಾಕಿವೆಯೆಂಬ ವಾಸ್ತವದ ಸಂಗತಿಗೂ ನಾನು ಸಲ್ಲಿಸುವ ಗೌರವಾರ್ಪಣೆಯಾಗಿದೆ.

ನಿಮ್ಮ ವಿಶ್ವಾಸಿ,

**ರಾಮಮನೋಹರ ಲೋಹಿಯಾ.**



V

**ಡಾ. ಅಂಬೇಡಕರರ ಪತ್ರ**

ದಿಲ್ಲಿ, ೧೫ ಆಕ್ಟೋಬರ್ ೧೯೫೬.

ಪ್ರಿಯ ಡಾ. ಲೋಹಿಯಾ ಅವರೆ,

ಕ್ರ. ೮೮೨೧, ದಿ. ೧ ಆಕ್ಟೋಬರ್ ೧೯೫೬ ರ ನಿಮ್ಮ ಪತ್ರ ತಲುಪಿದೆ. ೨೦ ಆಕ್ಟೋಬರ್‌ದಂದು ನೀವು ನನ್ನನ್ನು ಕಾಣಬಯಸುತ್ತಿದ್ದರೆ ಅಂದು ನಾನು ದಿಲ್ಲಿಯಲ್ಲಿರುತ್ತೇನೆ. ನಿಮಗೆ ಸ್ವಾಗತವಿದೆ. ವೇಳೆಯನ್ನು ಗೊತ್ತುಪಡಿಸಲೋಸುಗ ನನಗೊಂದು ದೂರವಾಣಿಯ ಕರೆ ಮಾಡಿದರೆ ಸಾಕು.

ಗೌರವಗಳೊಂದಿಗೆ,

ನಿಮ್ಮ ವಿಶ್ವಾಸಿ,

**ಬಿ.ಆರ್.ಅಂಬೇಡಕರ.**

**VI**

**ಮೆಹತ್ತಾರು ಡಾ. ಅಂಬೇಡಕರರಿಗೆ ಬರೆದ ಪತ್ರ**

ಕಾನಪೂರ, ೧೫ ಆಕ್ಟೋಬರ್ ೧೯೫೬.

ಗೌರವಾನ್ವಿತರಾದ ಡಾಕ್ಟರ್ ಸಾಹೇಬರೆ,

ಕಳೆದ ತಿಂಗಳು ನನ್ನ ಸ್ನೇಹಿತ ಶ್ರೀ ಡಿ. ವಿ. ಗೋಸ್ವಾಮಿ ಹಾಗೂ ನಾನು ದಿಲ್ಲಿಯಲ್ಲಿ ನಿಮ್ಮನ್ನು ಕಂಡಿದ್ದೆವು. ನಮ್ಮಲ್ಲಿ ನಡೆದ ಸಂವಾದವನ್ನು ಕುರಿತು ಡಾ. ಲೋಹಿಯಾ ಅವರಿಗೆ ಅರುಹಿದ್ದೆವು.

ಶೆಡ್ಯೂಲ್ಡ್ ಕಾಸ್ಟ್ಸ್  ಫೆಡರೇಶನ್ನಿನ ಕಾರ್ಯಕಾರಿ ಸಮಿತಿಯು ಕೈಕೊಂಡ ತೀರ್ಮಾನಗಳನ್ನು ಕೂಲಂಕಷ ಆಸ್ಥೆಯಿಂದ ಅಧ್ಯಯನ ಮಾಡುತ್ತಿದ್ದೇನೆ. ದೇಶದ ಜನರಿಗಾಗಿ ವಿಶೇಷ ಆಸ್ಥೆಯ ಮೂರು ಅಂಶಗಳು ಮೂಡಿ ಬರುತ್ತವೆ.

(ಅ) ನಿಮ್ಮ ಸಮಿತಿಯು 'ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ' ಎಂಬ ಹೆಸರಿನ ಹೊಸ



ಪಕ್ಷದ ಆವಶ್ಯಕತೆಯನ್ನು ಮನಗಂಡಿದೆ. ಹೊಸ ಪಕ್ಷದ ಧ್ಯೇಯಧೋರಣೆ ಹಾಗೂ ಕಾರ್ಯಕ್ರಮಗಳಾಗಲಿ ಇಲ್ಲವೆ ರಾಜಕೀಯ ಸಿದ್ಧಾಂತವಾಗಲಿ ನಮಗಿನ್ನೂ ತಿಳಿದುಬಂದಿಲ್ಲ. ಹೀಗಾಗಿ ಇದನ್ನು ಕುರಿತು ಯಾವುದೇ ಬಗೆಯ ಅಭಿಪ್ರಾಯವನ್ನು ಹೊಂದಲು ಸಾಧ್ಯವಾಗುತ್ತಿಲ್ಲ. ನಮ್ಮ ಸದ್ಯದ ಕೇಡುಗಳನ್ನು ಕುರಿತು ದೇಶವು ನಿಮ್ಮಂತಹ ಉನ್ನತ ಬೌದ್ಧಿಕತೆಯ ವ್ಯಕ್ತಿಯ ದೃಷ್ಟಿಕೋನಗಳನ್ನು ಅರಿತುಕೊಳ್ಳಲು ಕಾತರಿಸಿದೆ. ನಮ್ಮಂಥವರು ನಿಮಗೆ ಸಲಹೆಯನ್ನು ನೀಡುವ ಸಾಹಸವನ್ನು ತೋರುವುದು ಸೂಕ್ತವಲ್ಲವಾದರೂ, ಸದ್ಯಕ್ಕೆ ದೇಶದಲ್ಲಿ ಅಸ್ತಿತ್ವದಲ್ಲಿರುವ ಬೇರೆ ಬೇರೆ ರಾಜಕೀಯ ಪಕ್ಷಗಳ ಧ್ಯೇಯಧೋರಣೆ ಹಾಗೂ ಕಾರ್ಯಕ್ರಮಗಳನ್ನು ಅವಲೋಕಿಸಿ ಅವುಗಳ ವೃತ್ತಿ ಹಾಗೂ ಆಚರಣೆಗಳನ್ನು ಕುರಿತು ನೀವು ನಿಮ್ಮ ನಿರೀಕ್ಷಣೆಗಳನ್ನು ನೋಂದಾಯಿಸಬೇಕೆಂದು ದೇಶವು ತುಂಬ ಇಷ್ಟ ಪಡುತ್ತದೆ.

(ಬ) ಚುನಾವಣೆಯ ಮೈತ್ರಿ ಕೂಟಗಳ ಪ್ರಶ್ನೆಯನ್ನು ಕುರಿತಾದ ನಿಮ್ಮ ಸಮಿತಿಯ ಧೋರಣೆಯನ್ನು ಅರ್ಥ ಮಾಡಿಕೊಳ್ಳಲು ನನಗೆ ಸಾಧ್ಯವಾಗಲಿಲ್ಲವೆಂದು ನಾನು ಮುಚ್ಚುಮರೆಯಿಲ್ಲದೆ ಒಪ್ಪಿಕೊಂಡರೆ ನನ್ನನ್ನು ಕ್ಷಮಿಸಬೇಕು. ಪೂರ್ತಿ ಗೊಂದಲದಲ್ಲಿ ಸಿಕ್ಕಿಕೊಂಡಿದ್ದೇವೆ. S.C.F.ವು ಎಡರಂಗದ ಪಕ್ಷಗಳೊಡನೆ ಯಾವುದೇ ಬಗೆಯ ಚುನಾವಣೆಯು ಮೈತ್ರಿಕೂಟವನ್ನು ಇಷ್ಟಪಡುವುದಿಲ್ಲೆಂದು U.PS.C.F, ದ ಪಾರ್ಲಿಮೆಂಟರಿ ಬೋರ್ಡಿನ ವಕ್ತಾರನು ತನ್ನೊಂದು ಹೇಳಿಕೆಯಲ್ಲಿ ನಮೂದಿಸಿದನು. ನಾನು ವೃತ್ತಪತ್ರಗಳ ವರದಿಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದರೆ, ನಿಮ್ಮ ಕೇಂದ್ರ ಸಮಿತಿಯು ಚುನಾವಣೆಯ ಹೊಂದಾಣಿಕೆ ಅಥವಾ ಆ ಬಗೆಯ ಮೈತ್ರಿಕೂಟಗಳಿಗೆ ಅನುಕೂಲವಿರುವುದಾಗಿ ತಿಳಿದು ಬರುತ್ತದೆ. ತಾನು ಯಾವುದೇ ಬಗೆಯ ಚುನಾವಣಾ ಮೈತ್ರಿಕೂಟ ಇಲ್ಲವೆ ಹೊಂದಾಣಿಕೆಯನ್ನು ಮಾಡಿಕೊಳ್ಳಕೂಡದು; ಚುನಾವಣೆಗೆ ಸ್ಪರ್ಧಿಸಕೂಡದು ಎಂದಷ್ಟೇ ಅಲ್ಲದೆ ಯಾವ ಮತದಾರ ಕ್ಷೇತ್ರದಲ್ಲಿ ತನ್ನ ಸದಸ್ಯರ ಸಂಖ್ಯೆಯು ಒಟ್ಟು ಮತದಾರರ ಸಂಖ್ಯೆಯ ಶೇಕಡಾ ಒಂದರಷ್ಟಾದರೂ ಇಲ್ಲದಿದ್ದರೆ ಹಾಗೂ ಅವರು ಒಟ್ಟು ಮತದಾನದ ಕೇಂದ್ರಗಳ ಒಂದುಮೂರಾಂಶದಷ್ಟು ವ್ಯಾಪ್ತಿಗೆ ಹರಡಿಲ್ಲದಿದ್ದರೆ ಅಂಥ ಚುನಾವಣೆಗೆ ತಾನು ಸ್ಪರ್ಧಿಸುವುದಿಲ್ಲವೆಂಬ ಸಂಗತಿಯನ್ನು ಸಮಾಜವಾದಿ ಪಕ್ಷವು ತನ್ನ ಧೋರಣೆಗಳಲ್ಲಿ ಸೇರ್ಪಡಿಸಿದೆ. ಸಮಾಜವಾದಿ ಪಕ್ಷವು ಬೇರೆ ಯಾವುದೇ ಪಕ್ಷವನ್ನು ತನ್ನ ಪ್ರತಿಪಕ್ಷವೆಂದು ಬಗೆಯುವುದಿಲ್ಲ; ಆದರೆ ಮೇಲಿನ ತೀರ್ಮಾನವು ಪ್ರತಿಪಕ್ಷಗಳೆಂದು ಆಪಾದಿಸಲಾದ ಎಲ್ಲ ಪಕ್ಷಗಳೊಡನೆ ಚುನಾವಣೆಯ ಹೊಂದಾಣಿಕೆಯ ದಾರಿಯನ್ನು ಮಾತ್ರ ತಾನಾಗಿಯೇ ತೆರೆದಿಟ್ಟಿದೆ. ಈ ಬಗೆಯಾಗಿ

ನಾವು ಸುಮಾರು ೫೦೦ ರಿಂದ ೬೦೦ ಮತದಾನ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಮಾತ್ರ ಸಾಧ್ಯ. ಆದರೆ ಸುಮಾರು ೩,೦೦೦ ಕ್ಷೇತ್ರಗಳಿಂದ ನಾವು ಹೊರಗುಳಿಯಲಿದ್ದೇವೆ.

(ಕ) ನಿಮ್ಮ ಸಮಿತಿಯು ಸುಯೇಜ್ ಕಾಲುವೆಯನ್ನು ಕುರಿತಾಗಿ ಅಂಗೀಕರಿಸಿದ ಮಸೂದೆಯು ಮೂಲದಲ್ಲಿ ದೇಶದ ಹಿತದ್ದಾಗಿರಬಹುದು. ಆದರೆ ದೀರ್ಘ ಕಾಲದಲ್ಲಿ ಅದು ನಿಜವಾಗಿಯೂ ಭಾರತೀಯರ ಹಿತಾದ್ದಾಗಿ ಉಳಿಯಲಿದೆಯೇ ಎಂಬುದನ್ನು ಕುರಿತು ನನಗೆ ತೀವ್ರವಾದ ಸಂದೇಹವಿದೆ. ವಿದೇಶಗಳ ನಾಗಿರಿಕ ಬಂಡವಾಳಗಾರರು ಭಾರತದಲ್ಲಿ ಹೂಡಿದ ಬಂಡವಾಳದ ರಾಷ್ಟ್ರೀಕರಣವನ್ನು ಆ ದೇಶಗಳ ಒಪ್ಪಿಗೆ ಇಲ್ಲದೆ ಕೈಕೊಳ್ಳಲು ಸಾಧ್ಯವೇ ಇಲ್ಲವೆಂದು ಇದರರ್ಥ.

ಆ ಮಸೂದೆಗಳ ಒಂದು ಪ್ರತಿಯನ್ನು ನನಗೆ ಕಳಿಸುವಂತೆ S.C.F. ದ ಕಚೇರಿಗೆ ದಯವಿಟ್ಟು ಹೇಳಬೇಕೆಂದು ನಾನು ನಿಮ್ಮನ್ನು ವಿನಂತಿಸಹುದೆ ?



ಡಾ. ಲೋಹಿಯಾ ಅವರು ನಿಮ್ಮನ್ನು ಕಾಣಲಿದ್ದರೆಂದು ಬಗೆದಿದ್ದೆ, ಆದರೆ ಇಷ್ಟರಲ್ಲಿಯೇ ನಿಮ್ಮನ್ನು ಕಾಣಲು ಅವರಿಗೆ ಸಾಧ್ಯವಾಗಲಿಕ್ಕಿಲ್ಲವೆಂದು ಅನ್ನಿಸುತ್ತದೆ. ನಿಮಗೆ ಆಸ್ಥೆ ಇದ್ದರೆ ನಾನು ನಿಮ್ಮಲ್ಲಿಗೆ ಬಂದು ಈ ಸಂಗತಿಗಳನ್ನು ಕುರಿತು ಚರ್ಚಿಸಬಲ್ಲೆ.

ನನಗಾಗಿ ತುಸು ಸಮಯವನ್ನು ದಯಪಾಲಿಸಲು ನಿಮ್ಮ ಆರೋಗ್ಯವು ಅನುಮತಿಯನ್ನು ನೀಡೀತೆಂದು ಭಾವಿಸುತ್ತೇನೆ.

ನಿಮ್ಮ ವಿಶ್ವಾಸಿ,

**ವಿಮಲ ಮೆಹರೋತ್ರಾ.**

ತಾ. ಕ. : (	೧) ಶ್ರೀ ಡಿ. ವಿ. ಗೋಸ್ವಾಮಿ, ಸಿವಿಲ್, ಲೈನ್ಸ್, ಅಲಹಾಬಾದ.

(೨) ಡಾ. ರಾಮಮನೋಹರ ಲೋಹಿಯಾ, ಹೈದರಾಬಾದ.

(೩) ಜಿ. ಎನ್. ಸಕ್ಸೇನಾ, ಸಮಾಜವಾದಿ ಪಕ್ಷ ೪, ಪಾನ್ ದರಿಬಾ, ಲಖನೌ,

**VIL**

**ಮಧು ಲಿಮಯ ಅವರಿಗೆ ಪತ್ರ**

ಹೈದರಾಬಾದ, ೧-೭-೧೯೫೭.

ಪ್ರಿಯ ಮಧು,

ಡಾ. ಅಂಬೇಡಕರರ ಜೊತೆಗಿನ ಹಾಗೂ ಅವರನ್ನು ಕುರಿತಾದ ಪತ್ರವ್ಯವಹಾರವು ನನ್ನಲ್ಲಿದ್ದು ಅದನ್ನು ನಿಮಗೆ ಕಳಿಸಹಚ್ಚಿದ್ದೇನೆ. ಡಾ. ಅಂಬೇಡ್ಕರರ ಅಕಸ್ಮಾತ್ತಾದ ಸಾವನ್ನು ಕುರಿತಾದ ನನ್ನ ದುಗುಡವು ಕೆಲಮಟ್ಟಿಗೆ ವ್ಯಕ್ತಿಗತವಾದುದೆಂದು ಚೆನ್ನಾಗಿ ಅರ್ಥ ಮಾಡಿಕೊಳ್ಳಬಲ್ಲಿರಿ. ಅವರನ್ನು ಕೇವಲ ಸಾಂಸ್ಥಿಕವಾಗಿ ಅಲ್ಲದೆ ರಾಜಕೀಯ ಸೈದ್ಧಾಂತಿಕವಾಗಿಯೂ ನಮ್ಮ ಬದಿಗೆ ಸೆಳೆಯಬೇಕೆಂಬ ನಿರಂತರವಾದ ಮಹತ್ವಾಕಾಂಕ್ಷೆಯು ನನ್ನದಾಗಿತ್ತು. ಅಂಥ ಕಾಲ ಕೂಡಿಯೂ ಬಂದಂತಿತ್ತು.

ಅಂದ ಮಾತ್ರಕ್ಕೆ, ನಮ್ಮ ವ್ಯಕ್ತಿಗತವಾದ ನಷ್ಟದ ಸಮಾನ ಹಿನ್ನೆಲೆಯಲ್ಲಿ ನೀವು ಈ ಪತ್ರವ್ಯವಹಾರವನ್ನು ಓದಬೇಕೆಂದು ಒಂದು ಕ್ಷಣವೂ ನಿಮ್ಮಿಂದ ನಿರೀಕ್ಷಿಸೆನು. ಡಾ. ಅಂಬೇಡಕರರು ನನಗೆ ಭಾರತೀಯ ರಾಜಕೀಯದ ಬಲು ದೊಡ್ಡ ವ್ಯಕ್ತಿಗಳಾಗಿ ಕಾಣುತ್ತಿದ್ದರು. ಗಾಂಧೀಜಿಯವರನ್ನು ಹೊರತುಪಡಿಸಿದರೆ ಅವರು ಸವರ್ಣ ಹಿಂದೂಗಳ ಆ ಅತಿ ಮಹಾನ್ ನಾಯಕನಷ್ಟೇ ಮಹಾನರಾಗಿದ್ದರು. ಹಿಂದೂಗಳ ಜಾತಿ ವ್ಯವಸ್ಥೆಯನ್ನು ಒಂದಿಲ್ಲೊಂದು ದಿನ ನಾಶಪಡಿಸಬಹುದೆಂಬ ಈ ವಾಸ್ತವಾಂಶವು ಯಾವಾಗಲೂ ನನಗೆ ನೆಮ್ಮದಿ ಹಾಗೂ ಆತ್ಮವಿಶ್ವಾಸವನ್ನು ನೀಡಿದೆ.

ನನ್ನಲ್ಲಿರುವ ಒಂದು ಮೂಲಭೂತ ಸಂಗತಿಯನ್ನು ಕುರಿತು ಭಾರತದ ಹರಿಜನರೊಂದಿಗೆ



ಸಂವಹಿಸಲು ನಿರಂತರವಾಗಿ ಯತ್ನಿಸಿದ್ದೇನೆ. ಡಾ. ಅಂಬೇಡಕರ ಹಾಗೂ ಶ್ರೀ ಜಗಜೀವನರಾಮರು ಭಾರತದ ಎರಡು ಬಗೆಯ ಆಧುನಿಕ ಹರಿಜನರು. ಡಾ. ಅಂಬೇಡಕರರು ಸುಶಿಕ್ಷಿತರು, ನಿಷ್ಠೆಯುಳ್ಳವರು, ಧೈರ್ಯ ಹಾಗೂ ಸ್ವತಂತ್ರರು; ಅವರನ್ನು ಭಾರತದ ಒಂದು ಗಟ್ಟಿಮುಟ್ಟಾದ ಸಂಕೇತವೆಂದು ಹೊರ ಪ್ರಪಂಚಕ್ಕೆ ತೋರಿಸಬಹುದಿತ್ತು. ಆದರೆ ಅವರು ಕಹಿತನದಿಂದ ಕೂಡಿದವರು ಹಾಗೂ ಇತರರನ್ನು ಸ್ವೀಕರಿಸದವರಾಗಿದ್ದರು, ಅವರು ಹರಿಜನರಲ್ಲದವರ ನೇತೃತ್ವವನ್ನು ಸ್ವೀಕರಿಸಲು ನಿರಾಕರಿಸುತ್ತಿದ್ದರು. ಕಳೆದ ೫,೦೦೦ ವರ್ಷಗಳ ಬವಣೆಗಳು ಹಾಗೂ ಅವುಗಳಿಂದ ಹರಿಜನರ ಮೇಲಾಗುವ ಆಘಾತವನ್ನು ಅರ್ಥಮಾಡಿಕೊಳ್ಳಬಲ್ಲೆ. ಆದರೆ ಇದು ನಿಖರವಾದ ವಾಸ್ತವಾಂಶ, ಡಾ. ಅಂಬೇಡಕರರಂಥ

ಮಹಾನ್ ಭಾರತೀಯನು ಒಂದಿಲ್ಲೊಂದು ದಿನ ಈ ಸನ್ನಿವೇಶದಿಂದ ಮೇಲೆದ್ದು ಬರಬಹುದೆಂದು ಆಶಿಸಿದ್ದೆ. ಆದರೆ ಅವರಿಗೆ ಬೇಗನೆ ಸಾವು ಬಂದುಬಿಟ್ಟಿತು. ಶ್ರೀ ಜಗಜೀವನ ರಾಮರು ಭಾರತೀಯರು ಹಾಗೂ ಹಿಂದುಗಳ ಬಗೆಗೆ ತೋರಿಕೆಯ ಸದ್ಭಾವನೆಯನ್ನು ಉಳಿಸಿಕೊಂಡಿದ್ದಾರೆ. ಅವರು ಜಾತಿ ಹಿಂದೂಗಳೊಡನೆ ನಡೆದುಕೊಳ್ಳುವಾಗ ಅವರ ಮುಖಸ್ತುತಿಂರುನ್ನು ಮಾಡುವುದು ಹಾಗೂ ಅವರೆದುರು ಮಂಡಿಯೂರುವುದನ್ನು ಮಾಡುತ್ತಿದ್ದರೂ, ಹರಿಜನರಿಗಾಗಿ ಮೀಸಲಿದ್ದ ಸಭೆಗಳಲ್ಲಿ ಮಾತ್ರ ಅವರ ಬಗೆಗೆ ಕಟುವಾದ ರಾಗಾಲಾಪನೆಯನ್ನು ಗೈಯುತ್ತಿದ್ದರೆಂದು ವರದಿಯನ್ನು ಮಾಡಲಾಗಿದೆ. ಇದೇನೂ ಹರಿಜನರ ಇಲ್ಲವೆ ಭಾರತದ ಉನ್ನತಿಗಾಗಿ ಒಂದು ತಳಹದಿ ಎನ್ನಿಸಲಾರದು. ಇದೇ ರೀತಿಯಾಗಿ ಡಾ. ಅಂಬೇಡಕರರ ವಿಧಾನವೂ ಮಾರ್ಪಾಟು ಹೊಂದುವುದು ಆವಶ್ಯಕ.

ಸದ್ಯಕ್ಕೆ ಶೆಡ್ಯೂಲ್ಡ್ ಕಾಸ್ಟ್ಸ್ ಫೆಡರೇಶನನ್ನು ನಡೆಸುವವರು ಯಾರೆಂಬುದು ನನಗೆ ತಿಳಿದಿಲ್ಲ. ಆದರೆ ಕಳೆದ ೪೦ ವರ್ಷಗಳ ಭಾರತೀಯ ರಾಜಕೀಯವನ್ನು ಕುರಿತು ವಿವೇಕಪೂರ್ಣವಾದ ಅಂದಾಜನ್ನು ಮಾಡುವಂತೆ ಭಾರತದ ಪರಿಶಿಷ್ಟ ಜಾತಿಗಳನ್ನು ಮನವೊಲಿಸಬೇಕೆಂದು ಇಚ್ಛಿಸುತ್ತೇನೆ. ಕಹಿತನವಿಲ್ಲದ, ಸ್ವಾತಂತ್ರವನ್ನು ಹೊಂದಿದ, ಹರಿಜನರ ನಾಯಕರಷ್ಟೇ ಎನ್ನಿಸದೆ ಅಖಿಲ ಭಾರತೀಯ ನಾಯಕರೆಂದು ಪರಿಗಣಿಸಬಹುದಾದ ಡಾ. ಅಂಬೇಡಕರರನ್ನು ಅವರು ತಮ್ಮ ಗೌರವ ಹಾಗೂ ಅನುಕರಣೆಗಳ ಸಂಕೇತವೆಂದು ಮುಂದುವರಿಸಬೇಕೆಂದು ಬಯಸುತ್ತೇನೆ.

ನಿಮ್ಮ ವಿಶ್ವಾಸಿ,

**ರಾಮಮನೋಹರ ಲೋಹಿಯಾ.**

ಲೋಹಿಯಾ, ಪು. ೨೯-೩೭.

## ವ್ಯಕ್ತಿ, ಸಂಸ್ಥೆ, ಕಾರ್ಯ-ಸೂಚಿ

**ಅಯ್ಯಂಗಾರ ಶ್ರೀನಿವಾಸ ಎಸ್.** (೧೮೭೪-೧೯೪೧) :- ಒಬ್ಬ ಕಾನೂನು ಪಂಡಿತರು. ಮದ್ರಾಸಿನ ಪ್ರೆಸಿಡೆಂಟ್ ಕಾಲೇಜಿನಲ್ಲಿ ಶಿಕ್ಷಣ, ಮದ್ರಾಸ ಹೈಕೋರ್ಟಿನ ಎಡ್ವೋಕೇಟರು. ಮದ್ರಾಸ ವಿಶ್ವವಿದ್ಯಾಲಯದ ಸಿನೇಟಿನ ಸದಸ್ಯರು. ಸೋಸಿಯಲ್ ರಿಫಾರ್ಮ್ ಅಸೋಸಿಯೆಶನ್ನಿನ ಅಧ್ಯಕ್ಷರು. ಕಾಂಗ್ರೆಸ್ ಹಾಗೂ ಮಧ್ಯವರ್ತಿ ಅಸೆಂಬ್ಲಿಯ ಸದಸ್ಯರು. ೧೯೨೬-೨೭ ರಲ್ಲಿ ರಾಷ್ಟ್ರೀಯ ಸಭೆಯ ಅಧ್ಯಕ್ಷರು. ೧೯೨೯ ರಲ್ಲಿ ಇಂಡೆಪೆಂಡನ್ಸ್ ಆಫ್ ಇಂಡಿಯಾ ಲೀಗಿನ ಅಧ್ಯಕ್ಷರು.

**ಅಲಿ ಇಮಾಮ್, ಸರ್** (೧೮೬೯-೧೯೩೨) :- ಹಿಂದೂಸ್ಥಾನದ ರಾಷ್ಟ್ರೀಯ ಮುಸಲ್ಮಾನ್ ಪಕ್ಷದ ಸಂಸ್ಥಾಪಕರು ಹಾಗೂ ಬಿಹಾರ ಪ್ರಾಂತದ ಹೆಸರಾದ ಕಾನೂನು ಪಂಡಿತರು. ಅಖಿಲ ಭಾರತೀಯ ಹಿಂದಿ ನಾಯಕರಲ್ಲಿ ಇವರ ಗಣನೆಯಾಗುತ್ತಿತ್ತು. ಹುಟ್ಟು ಬಿಹಾರದ ಅಣ್ಣಾ ಊರಿನಲ್ಲಿ. ಕಾಲೇಜು ಕೋರ್ಸನ್ನು ಪೂರ್ತಿಗೊಳಿಸುವ ಮುನ್ನವೇ ಬ್ಯಾರಿಸ್ಟರ್ ಆಗಲೆಂದು ಅವರು ಇಂಗ್ಲೆಂಡಿಗೆ ಹೋದರು. ಅಲ್ಲಿ ಬ್ಯಾರಿಸ್ಟರ್ ಆದರು. ಇದೇ ಕಾಲಕ್ಕೆ ಕಾಂಗ್ರೆಸ್ಸಿನ ವತಿಯಿಂದ ಒಂದು ಶಿಷ್ಟ ಮಂಡಳವು ಅಲ್ಲಿಗೆ ಹೋಗಿತ್ತು. ಜಾರ್ಜ್ ಯೂಲ್, ಸುರೇಂದ್ರನಾಥ ಬ್ಯಾನರ್ಜಿ, ಮೊಧೋಳಕರ, ಅರ್ಡಲೆ ನಾರ್ಟನ್ ಹಾಗೂ ಸರ್ ಮೋರೋಪಂತ್ ಜೋಶಿ ಅದರಲ್ಲಿದ್ದರು. ಇವರು ಆ ಮಂಡಳದೊಡನೆ ಕೆಲಸ ಮಾಡಿದರು. ಮುಂದೆ ಅವರು ಪಾಟಣಾದಲ್ಲಿ ವಕೀಲಿಯನ್ನು ಶುರು ಮಾಡಿದರು (೧೮೯೦). ೧೯೦೮ರಲ್ಲಿ ಬಿಹಾರ ಪ್ರಾಂತ ಪರಿಷತ್ತಿನ ಅಧ್ಯಕ್ಷರು ಹಾಗೂ ಅದೇ ವರ್ಷದ ಕೊನೆಯಲ್ಲಿ ಅಮೃತಸರದಲ್ಲಿ ಸೇರಿದ ಮುಸ್ಲಿಮ್ ಲೀಗಿನ ಅಧಿವೇಶನದ ಅಧ್ಯಕ್ಷರಾದರು. ಮೊದಲು ಇವರ ಮೇಲೆ ಅಲೀಗಢ ಮುಸ್ಲಿಮ್ ವಿಶ್ವವಿದ್ಯಾಲಯದ ಕಲ್ಪನೆಯನ್ನು ಪ್ರಕಟಪಡಿಸಿದ ಸರ್ ಸಯ್ಯದ್ ಅಹಮ್ಮದ್ ಅವರ ಪ್ರಭಾವವಿತ್ತು. ಆದರೂ ಧರ್ಮ, ಸಮಾಜಗಳ ಹಿತದೊಡನೆ ರಾಷ್ಟ್ರಹಿತದತ್ತಲೂ ತಮ್ಮ ಗಮನವಿರಬೇಕೆಂಬ ಅಭಿಪ್ರಾಯ ಅವರದಾಗಿತ್ತು. ೧೯೧೦-೧೯೧೫ ರವರೆಗೆ ಅವರು ವಾಯಿಸ್‌ರಾಯ್ ಅವರ ಕಾರ್ಯಕಾರಿ ಮಂಡಲಿಯ ಸದಸ್ಯರಾಗಿದ್ದರು. ಕೆಲವು ತಿಂಗಳುಗಳ ಕಾಲ ಕಲಕತ್ತೆಯ

ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿದ್ದರು (೧೯೧೭). ಇವರು ಭಾರತದ ಮೊದಲ ಪ್ರತಿನಿಧಿಯಾಗಿ ಲೀಗ್ ಆಫ್ ನೇಶನ್ಸ್ ಕ್ಕೆ ಹಾಜರಿದ್ದರು (೧೯೨೦), ನಿಜಾಮನ ಹೈದರಾಬಾದಿನಲ್ಲಿ ಮೂರು ವರ್ಷ ದಿವಾಣ ಹುದ್ದೆಯನ್ನು ಭೂಷಿಸಿದರು. ಅವರು ಸೈಮನ್ ಕಮೀಶನ್ನನ್ನು ನಿಷೇಧಿಸುವಲ್ಲಿ ಪಾಲ್ಗೊಂಡರು. ಸರ್ವ ಪಕ್ಷಗಳ ಪರಿಷತ್ತಿನಲ್ಲಿ ಭಾಗವಹಿಸಿ ನೆಹರು ರೆಪೋರ್ಟ್ ನ್ನ ತಯಾರಿಸಲು ಸಹಕರಿಸಿದರು. ಆ ನಂತರ, ಮುಸಲ್ಮಾನರು ಸಂಯುಕ್ತ ಮತದಾರ ಸಂಘದ ಬೇಡಿಕೆಯನ್ನು ಮಾಡಬೇಕೆಂಬ ಅಭಿಪ್ರಾಯವನ್ನು ಎತ್ತಿ ಹಿಡಿದು, ಅದಕ್ಕಾಗಿ ಅವರು ರಾಷ್ಟ್ರೀಯ ಮುಸ್ಲಿಮ್ ಪಕ್ಷವನ್ನು ಸ್ಥಾಪಿಸಿದರು. ಅವರು ಎರಡನೆಯ ದುಂಡುಮೇಜಿನ ಪರಿಷತ್ತಿಗೆ ಹೋಗಿದ್ದರು. ಲಖನೌದಲ್ಲಿ ನೆರವೇರಿದ ನ್ಯಾಶನ್ಯಾಲಿಸ್ಟ್ ಮುಸ್ಲಿಮ್ ಕಾನ್ ಪ್ರನ್ಸಿನ ಅಧ್ಯಕ್ಷರಾಗಿದ್ದರು (೧೯೩೧).



**ಆರ್ಯ ಸಮಾಜ - ನೋಡಿ, ಸ್ವಾಮಿ ದಯಾನಂದ ಸರಸ್ವತಿ,**

**ಈಸೋಪನೀತಿ :-** ಇ. ಸ. ಪೂರ್ವ ೬೨೦ ರಿಂದ ೫೬೦ ರ ನಡುವಿನ ಕಾಲದಲ್ಲಿ ಈಸೋಪ್ ಎಂಬ ಒಬ್ಬ ಗ್ರೀಕ್ ಗುಲಾವನು ಆಗಿ ಹೋದನು. ತೀರ ಕುರಪಿಯಾಗಿದ್ದರೂ ಅವನು ತೀಕ್ಷ್ಣಮತಿಯಾಗಿದ್ದನೆಂದು ಹೇಳಲಾಗುತ್ತದೆ. ಅವನು ತನ್ನ ಒಡೆಯನ ಮಕ್ಕಳಿಗೆ ಬೋಧನೆಯ ಸಣ್ಣ ಸಣ್ಣ ಕಥೆಗಳನ್ನು ಹೇಳುತ್ತಿದ್ದನು. ಅವು ನೀತಿತತ್ತ್ವಗಳನ್ನು ಆಧರಿಸಿದ ಕಥೆಗಳಾಗಿದ್ದವು. ಅವುಗಳ ಸಂಕಲನೆ 'ಇಸಾಪ್ ಫೇಬಲ್ಸ್' (ಇಸಾಪನೀತಿ) ಎಂದು ಹೆಸರಾಗಿದೆ. ಈ ಕಥೆಗಳು ಪ್ರಪಂಚದ ಎಲ್ಲ ಭಾಷೆಗಳಿಗೆ ಅನುವಾದಗೊಂಡಿವೆ. ಈ ನೀತಿಕಥೆಗಳ ಚೆಹರೆಯು ಬಹಳಷ್ಟು ಮಟ್ಟಿಗೆ ಬುದ್ಧನ 'ಜಾತಕ ಕಥೆಗಳು' ಅಥವಾ 'ಪಂಚತಂತ್ರ 'ಕ್ಕೈ ಹೋಲುವಂತಿದೆ.

**ಕಬೀರ ಮಹಾತ್ಮರು** (೧೪೨೫-೧೫೦೫) :-ಬಹುಜನ ಸಮಾಜದ ದೃಷ್ಟಿಕೋನದಿಂದ ಸಮಾಜ ಪರಿವರ್ತನೆಯ ಕಾರ್ಯವನ್ನು ಗಟ್ಟಿಮುಟ್ಟಾಗಿ ಮಾಡಿದರು. ಅವರು ವಿಗ್ರಹಪೂಜೆ, ಜಾತಿವ್ಯವಸ್ಥೆ, ಪುರೋಹಿತವಾದ

ಹಾಗೂ ಅವರಿಂದ ನಡೆಯುವ ವಿಧಿ, ಮೊದಲಾದವುಗಳಿಗೆ ವಿರೋಧಿಯಾಗಿದ್ದರು. ಮಾನವತಾವಾದ, ವೈಜ್ಞಾನಿಕತೆ, ಬುದ್ಧಿವಾದಗಳು ಅವರ ಉಪದೇಶದ ಕೇಂದ್ರಬಿಂದುವಿನಲ್ಲಿದ್ದವು. ಅವರು, "ಕಲ್ಲನ್ನು ಪೂಜಿಸುವುದರಿಂದ ದೇವದರ್ಶನವು ಆಗುವಂತಿದ್ದರೆ ನಾನು ಬೆಟ್ಟವನ್ನು ಪೂಜಿಸುವೆ. ಸ್ನಾನದಿಂದ ಮೋಕ್ಷ ಲಭಿಸುವಂತಿದ್ದರೆ, ಕಪ್ಪೆಗೆ ಎಲ್ಲರಿಗಿಂತ ಮೊದಲು ಮೋಕ್ಷಪ್ರಾಪ್ತಿ ಆಗಬೇಕು. ಬೆತ್ತಲಾಗಿ ಇರುವುದರಿಂದ ಈಶ್ವರಪ್ರಾಪ್ತಿ ಆಗುವಂತಿದ್ದರೆ, ಜಿಂಕೆಗಳಿಗೆ ಎಲ್ಲಕ್ಕೂ ಮೊದಲು ಈಶ್ವರಪ್ರಾಪ್ತಿ ಆಗಬೇಕು. ಮನುಷ್ಯನು ನೂರಾರು ಪುಸ್ತಕಗಳನ್ನು ಓದಿಕೊಂಡು ಪಂಡಿತನಾಗಲಾರ. 'ಪ್ರೀತಿ' ಎಂಬ ಎರಡೂವರೆ ಅಕ್ಷರಗಳ ಶಬ್ದವನ್ನು ಅರಿತವನೇ ನಿಜವಾದ ಪಂಡಿತನು" ಎಂದು ಅವರು ಅನ್ನುತ್ತಾರೆ. ಮಹಾಮಾನವರಾದ ಕಬೀರರ ಆಲೋಚನೆಗಳು ಖಂಡಿತ ಕ್ರಾಂತಿಕರವಾದವುಗಳು. ಹೀಗಾಗಿಯೇ ಕಬೀರ ಪಂಥೀಯರು ಬಹುಜನ ಸಮಾಜದಲ್ಲಿ ಬಹಳಷ್ಟು ಪ್ರಮಾಣದಲ್ಲಿದ್ದರು, ಇದ್ದಾರೆ. ಡಾ. ಅಂಬೇಡಕರರು ಹೀಗೆಂದಿದ್ದಾರೆ : "ಕಬೀರರು ನನ್ನ ಎರಡನೆಯ ಗುರುವಾಗಿದ್ದರು. ನನ್ನ ಅಪ್ಪ ಕಬೀರ ಪಂಥೀಯರಾಗಿದ್ದರು. ಹೀಗಾಗಿ ಕಬೀರರ ಜೀವನ ಹಾಗೂ ತತ್ತ್ವಗಳ ಬಲು ದೊಡ್ಡ ಪರಿಣಾಮವು ನನ್ನ ಮೇಲಾಯಿತು. ಬುದ್ಧನ ತತ್ತ್ವಜ್ಞಾನದ ನಿಜವಾದ ಗುಟ್ಟು ಕಬೀರರಿಗೆ ತಿಳಿದಿತ್ತು. ನಾನು ಯಾವನನ್ನೂ ದೊಡ್ಡವನೆನ್ನಲಿಲ್ಲ. ಗಾಂಧಿಯವರನ್ನು ಮಹಾತ್ಮರೆನ್ನಲಿಲ್ಲ. ಏಕೆಂದರೆ ಕಬೀರರು, "HTಳ] ಇತT | A HIT ST 07 |' ಎಂದಿದ್ದಾರೆ. ಮನುಷ್ಯನಾಗುವುದು ಕಷ್ಟ, ಅಂದ ಮೇಲೆ ಅವನು ಸಾಧುವಾಗಲು ಹೇಗೆ ಸಾಧ್ಯ ?" (ಸಂ. ೧೮, ಭಾಗ-೩, ಪು. ೪೦೨), ಡಾ. ಅಂಬೇಡ್ಕರರು ಮಹಾತ್ಮ ಕಬೀರರನ್ನು ತಮ್ಮ ಗುರು ಎಂದು ಘೋಷಿಸದೆ ಇದ್ದರೆ ಕಬೀರರ ಜೀವನ ಹಾಗೂ ಕಾರ್ಯಗಳು ಇಷ್ಟೊಂದು ಬೆಳಗುತ್ತಿರಲಿಲ್ಲ. ಅವು ಕಾಲಪ್ರವಾದಲ್ಲಿ ನಾಶ ಹೊಂದುತ್ತಿದ್ದವು.

**ಕಾಂಬಳೆ; ಶಿವರಾಮ ಜಾನಬಾ :-** ಬಾಬಾ ವಲಂಗಕರರ ಚಳುವಳಿಯು ಮೈಲಿಗೆನಾಶ, ಅಸ್ಪೃಶ್ಯತೆಯ ನಿವಾರಣೆಗಳಿಗಾಗಿ ಆಯೋಜಿಸಲಾದುದು. ಆ ಚಳುವಳಿಯ ಮೂಲಕ ಅವರು ಅಸ್ಪೃಶ್ಯ ಸಮುದಾಯದಲ್ಲಿ ಒಂದು ಹೊಸ ಯುಗವನ್ನು ಆರಂಭಿಸಿದರು. ತಮ್ಮ ಜೀವಂತಿಕೆಯ ಮಾತು ಹಾಗೂ ಲೇಖನಗಳ ಮೂಲಕ ಅವರು ಆ ಕಾಲದ ಯುವಕ ತಲೆಮಾರಿನ ಅಸ್ಪೃಶ್ಯರ ಅಂತಃಕರಣಗಳಲ್ಲಿ

ಸಾಮಾಜಿಕ, ಧಾರ್ಮಿಕ, ಆರ್ಥಿಕ, ಮೊದಲಾದ ಬಗೆಯ ದಾಸ್ಯದ ಜಾಲದಿಂದ ಹೊರಬರುವ ಪ್ರೇರಣೆಯನ್ನು ಹುಟ್ಟು ಹಾಕಿದರು. ಈ ಪ್ರೇರಣೆಯಿಂದ ಸ್ಫೂರ್ತಿಗೊಂಡ ಯುವಕರು ಸಾಮಾಜಿಕ ಚಳುವಳಿಯ ಕುಸ್ತಿಯ ಕಣಕ್ಕೆ ಇಳಿದರು. ಅವರಲ್ಲಿ ಪುಣೆಯ ಶ್ರೀ ಶಿವರಾಮ ಜಾನಬಾ ಕಾಂಬಳೆ ಅವರು ಮುಖ್ಯರು. ಅವರು ಚಿಕ್ಕಂದಿನಲ್ಲಿ ಒಬ್ಬ ಯುರೋಪಿಯನ್ನನ ಬಳಿ ನೌಕರಿಯಲ್ಲಿದ್ದರು. ಯುವ ವಯಸ್ಸಿನಲ್ಲಿ ಅಸ್ಪೃಶ್ಯೋನ್ನತಿಯ ಚಳುವಳಿಯನ್ನು ಆರಂಭಿಸಿದರು. ಅವರು ಪ್ರೊ. ರಾಜಾರಾಮಶಾಸ್ತ್ರಿ, ಲೋಕಹಿತವಾದಿ ಬಾಬಾ ಪದಮಜಿ, ಆಗರಕರ, ಫುಲೆ, ಮೊದಲಾದ ಸಮಾಜಸುಧಾರಕರ ಲೇಖನ ಹಾಗೂ ಪುಸ್ತಕಗಳನ್ನು ಓದಿಕೊಂಡು ಅಸ್ಪೃಶ್ಯರ ಸುಧಾರಣೆಯನ್ನು ಕುರಿತು ತಮ್ಮ ದೃಷ್ಟಿಕೋನವನ್ನು ನಿರ್ಧರಿಸಿದರು. ಮುಂದೆ ಅವರು ಅಸ್ಪೃಶ್ಯರ ಹಿತಾಸಕ್ತಿಗಳನ್ನು ಕುರಿತು ವೃತ್ತಪತ್ರಗಳಿಗೆ ಲೇಖನಗಳನ್ನು ಬರೆಯತೊಡಗಿದರು.

ಅವರ ಮೊದಲ ಲೇಖನವು ಕೊಲ್ಲಾಪುರದಿಂದ ಪ್ರಕಟವಾಗುತ್ತಿದ್ದ 'ಮರಾಠಾ ದಿನಬಂಧು 'ವಿನಲ್ಲಿ ಆಕ್ಟೋಬರ್ ೧೯೦೨ ರಲ್ಲಿ ಪ್ರಕಟವಾಯಿತು. ಸೈನ್ಯ ಹಾಗೂ ಪೊಲೀಸ ಇಲಾಖೆಗಳಲ್ಲಿ ತಮ್ಮ ಜನರಿಗೆ ನೌಕರಿಗಳು ದೊರೆಯಬೇಕು, ಸರಕಾರವು ಹುಡುಗ ಹುಡುಗಿಯರ ಶಿಕ್ಷಣದ ಹೊಣೆಯನ್ನು ಹೊರಬೇಕು, ಎಂಬುದನ್ನು ಕುರಿತು ಸರಕಾರಕ್ಕೆ ಪ್ರಕಟ ಮನವಿಯನ್ನು ಸಲಿ ಸಲೆಂದು ಅವರು ಸಾಸವಡ ಊರಲ್ಲಿ ತಾ. ೨೪-೧೧-೧೯೦೨ ರಂದು ೫೧ ಊರುಗಳ ಹೊಲೆಯರ ಸಭೆಯನ್ನು ಕರೆದಿದ್ದರು. ಸರಕಾರವು ಅಸ್ಪೃಶ್ಯರ ಹಿತಕ್ಕಾಗಿ ಯಾವ ಯಾವ ಕೆಲಸಗಳನ್ನು ಮಾಡಬೇಕು, ಎಂಬುದನ್ನು ಕುರಿತು ಚರ್ಚಿಸುವ ಒಂದು ಮನವಿಯನ್ನು ತಯಾರಿಸಿ ೧೫೮೮ ಜನ ಹೊಲೆಯರ ಸಹಿಗಳನ್ನು ಪಡೆದು, ಕಾಂಬಳೆ ಅವರು ಅದನ್ನು ಸರಕಾರಕ್ಕೆ ಕಳಿಸಿ ಕೊಟ್ಟರು. ಇದೇ, ಅಸ್ಪಶ್ಯರಿಂದ ಸರಕಾರಕ್ಕೆ ಹೋದ ಮೊದಲ ಮನವಿ. ಈ ಮನವಿಯ ಇಂಗ್ಲಿಷ್ ಪ್ರತಿಗಳನ್ನು ಇಂಗ್ಲೆಂಡ್, ಹಿಂದೂಸ್ಥಾನದ ಪ್ರಮುಖ ವ್ಯಕ್ತಿಗಳು ಹಾಗೂ ಇಂಗ್ಲಿಷ್ ವೃತ್ತಪತ್ರಗಳಿಗೆ ಕಳಿಸಿದ್ದರು. ಆದರೆ ಸರಕಾರವು ಅದರತ್ತ ಅಲಕ್ಷ್ಯ ತೋರಿತು. ಅದರಿಂದ ಕೆರಳಿದ ಶ್ರೀ ಆಗರಕರರು 'ಸುಧಾರಕ ದ ತಾ. ೧೪-೧೧೧೯೦೪ ರ ಸಂಚಿಕೆಯಲ್ಲಿ 'ಹೊಲೆಯರ ಮನವಿ, ಸರಕಾರ ಮತ್ತು ನಮ್ಮ ಸಮಾಜ' ಎಂಬ ಶೀರ್ಷಿಕೆಯಡಿ ಸರಕಾರವನ್ನು ಕುರಿತು ಕಠೋರವಾಗಿ ಒಂದು ಅಂಕಣದಲ್ಲಿ ಬರೆದರು. ಸರಕಾರವು ಈ ಅರ್ಜಿಯನ್ನು ಕುರಿತು ಸಹಾನುಭೂತಿಯಿಂದ ಯೋಚಿಸಲಿಲ್ಲವೆಂದು ಉಳಿದ ವೃತ್ತಪತ್ರಗಳೂ ಸರಕಾರವನ್ನು ಟೀಕಿಸಿದವು.

ಕಾಂಬಳೆ ಅವರು ತಾ. ೧ ಜುಲೈ ೧೯೦೮ ರಂದು 'ಸೋಮವಂಶೀಯ ಮಿತ್ರ' ಎಂಬ ಒಂದು ಮಾಸ ಪತ್ರಿಕೆಯನ್ನು ಶುರು ಮಾಡಿದರು. ಅದರ ವಾರ್ಷಿಕ ಚಂದಾ ೮ ಆಣೆ. ಅವರು ಈ ಪತ್ರಿಕೆಯಲ್ಲಿ ಅಸ್ಪೃಶ್ಯ ವರ್ಗದ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗಾಗಿ ಹಲವು ಲೇಖನಗಳನ್ನು ಬರೆದರು. ಸಮಾಜಸುಧಾರಣೆಗಾಗಿ ತಾವು ನಡೆಸಿದ ಚಳುವಳಿಗಳನ್ನು ಕುರಿತು ವರದಿಗಳನ್ನು ಈ ಮಾಸ ಪತ್ರಿಕೆಯ ಮೂಲಕ ಪ್ರಕಟಿಸುತ್ತಿದ್ದರು. ಅಸ್ಪೃಶ್ಯ ಸಮುದಾಯದಲ್ಲಿ ಹುಡುಗ ಅಥವಾ ಹುಡುಗಿಯನ್ನು ದೇವಿಗೆ ಅರ್ಪಿಸುವ ದುಷ್ಟ ಪದ್ಧತಿಯ ವಿರುದ್ಧ ಅವರು ಜೋರಿನಿಂದ ಚಳುವಳಿಯನ್ನು ಮಾಡಿದರು. ಮುರಳಿ ಅಥವಾ ಜೋಗತಿಯಾಗಿ ಮಗಳನ್ನು ದೇವಿಗಾಗಿ ಬಿಡುವುದು, ಅವಳು ಮದುವೆಯ ವಯಸ್ಸಿನವಳಾದ ಬಳಿಕ ಬಳಗದವರು ಅವಳ ದೇಹ ಮಾರಾಟವನ್ನು ಅವಲಂಬಿಸಿ ತಮ್ಮ ಹೊಟ್ಟೆ ಹೊರೆದುಕೊಳ್ಳುವ ರೂಢಿಯು ತೀರ ಅಮಾನವೀಯ, ತಿರಸ್ಕರಣೀಯ ಹಾಗೂ ಸಮಾಜಹಿತಕ್ಕೆ



ಬಾಧೆ ತರುವಂಥದು, ಎಂಬುದಾಗಿ ಅವರು ಚಳುವಳಿಯನ್ನು ಮಾಡಿದರು. ಹೀಗಾಗಿ ಕೆಲವು ಜನ ಮುರಳಿಗಳು ಹಾಗೂ ಜೋಗತಿಯರು ತಮ್ಮ ವೃತ್ತಿಯನ್ನು ತ್ಯಜಿಸಿ ಮದುವೆ ಮಾಡಿಕೊಂಡು ಸಂಸಾರ ಹೂಡಲು ಸಿದ್ಧರಾದರು. ಇಂಥ ಸ್ತ್ರೀಯರಲ್ಲಿ ಒಬ್ಬಳಾದ ಶಿವುಬಾಯಿ ಲಕ್ಷ್ಮಣ ಜಾಧವ ಎನ್ನುವವಳು ಮದುವೆ ಮಾಡಿಕೊಂಡು ಸಂಸಾರವನ್ನು ಹೂಡಿದಳು. ಅವಳು ಶ್ರೀ ಕಾಂಬಳೆ ಅವರಿಗೆ ಕೃತಜ್ಞತೆಯನ್ನು ಸಲ್ಲಿಸುವ ಹಾಗೂ ಉಳಿದ ಮುರಳಿಯರು ಹಾಗೂ ಜೋಗತಿಯರು ತನ್ನನ್ನು ಅನುಕರಿಸಬೇಕೆಂದು ಉಪದೇಶಿಸುವ ಒಂದು ಪತ್ರವನ್ನು ಬರೆದಳು. ಕಾಂಬಳೆ ಅವರು ಅದನ್ನು ಸೋಮವಂಶೀಯ ಮಿತ್ರ ದ ೧ ಡಿಸೆಂಬರ್ ೧೯೦೮ ರ ಸಂಚಿಕೆಯಲ್ಲಿ ಪ್ರಕಟಿಸಿದರು. ಇದರಿಂದಾಗಿ ಅಸ್ಪೃಶ್ಯ ಸಮುದಾಯದಲ್ಲಿ ತುಂಬ ಅಲ್ಲೋಲಕಲ್ಲೋಲವಾಯಿತು. ಕೆಲವು ದೇವದಾಸಿಯರು ಶಿವುಬಾಯಿಯ ದಾರಿಯಲ್ಲಿ ಮುನ್ನಡೆದರು.

೧೯೦೨ ರಲ್ಲಿ ಅಹಮ್ಮದ್ ನಗರದಲ್ಲಿ ಗೋವಿಂದ ವಲ್ಲಭ ಮುಕುಂದಾ ಮಹಾರ ಎನ್ನುವವನು ಸಾರ್ವಜನಿಕ ನೀರಿನ ಸೌದಿಗೆ ತನ್ನ ಪಾತ್ರೆಯನ್ನು ಇಳಿಬಿಟ್ಟು, ನೀರು ಸೇದಿ, ಅಲ್ಲೇ ನಿಂತು ಅದನ್ನು ಸೇವಿಸಿದನು. ಇದನ್ನು ಕಂಡು ನಗರದ ಸವರ್ಣ ಹಿಂದೂಗಳ ಕೋಪದಿಂದ ಮೈ ಉರಿಯತೊಡಗಿತು. ನೀರಿನ ಹೌದನ್ನು ಭ್ರಷ್ಟ ಗೊಳಿಸಲಾದ ಕಾರಣ ನಗರದ ಧರ್ಮಮಾರ್ತಂಡರು ಇಂ. ಪಿ. ಕೋಡ್ದ ೨೭೭ ನೇ ಕಲಮಿನನ್ವಯ ಗೋವಿಂದನ ವಿರುದ್ಧ ಕೋರ್ಟಿಗೆ ದೂರು ಸಲ್ಲಿಸಿದರು. ಆರೋಪಿಯ ರಕ್ಷಣೆಯಾಗಬೇಕೆಂದು ಮಹಾರಾಷ್ಟ್ರದ ಹೊಲೆಯರು ಸಲ್ಲಿಸುವ ಮನವಿಯ ಒಂದು ಕಟ್ಟನ್ನೇ ಸರಕಾರಕ್ಕೆ ಕಳಿಸಿಕೊಟ್ಟರು. ಬಚಾವಿನ ನೆರವಿಗಾಗಿ ಒಂದು ಫಂಡ್ ಕಲೆಹಾಕಿದರು. ನಗರದ ಅಂದಿನ ಮ್ಯಾಜಿಸ್ಟ್ರೇಟರಾದ ಶ್ರೀ ಬಾಪು ಹರಿ ಗೋಡಬೋಲೆ (ಎರಡನೆ ವರ್ಗ) ಅವರೆದುರು ಮೊಕದ್ದಮೆ ನಡೆದು ಅವರು ಆಪಾದಿತನಿಗೆ ಎರಡು ವಾರಗಳ ಸಾದಾ ಕೈದು ಹಾಗೂ ಎಂಟು ರೂಪಾಯಿಗಳ ದಂಡವನ್ನು ಘೋಷಿಸಿದರು. ಈ ಶಿಕ್ಷೆ ಅನ್ಯಾಯಕರವಾದುದೆಂದು ನಗರದ ಆ ಕಾಲದ ಕಲೆಕ್ಟರರಾದ ಸರ್ ರಿಚರ್ಡ್ ಅವರು ಹೈಕೋರ್ಟಿಗೆ ದೂರು ಸಲ್ಲಿಸಿದರು. ಹೈಕೋರ್ಟು ಗೋವಿಂದನಿಗಾದ ಶಿಕ್ಷೆಯನ್ನು ರದ್ದುಪಡಿಸಿ, ಅವನನ್ನು ದೋಷಮುಕ್ತನನ್ನಾಗಿ ಮಾಡಿತು. ಗೋವಿಂದನ ಈ ಮೊಕದ್ದಮೆಯು ಆ ಕಾಲಕ್ಕೆ ಮಹಾರಾಷ್ಟ್ರದಲ್ಲಿ ತುಂಬ ಹೆಸರು ಮಾಡಿತು. ಕಾಂಬಳೆ ಅವರು ಈ ಮೊಕದ್ದಮೆಯ ಮಾಹಿತಿಯನ್ನು ತಮ್ಮ 'ಸುಚಿಪತ್ರ' ಎಂಬ ಸಣ್ಣ ಪುಸ್ತಕದಲ್ಲಿ ನೋಂದಾಯಿಸಿರುವರು. ಕಾಂಬಳೆ ಅವರು ಸರಕಾರ ಹಾಗೂ ಗ್ರಾಮಸ್ಥರ ಕೆಲಸಗಳ ನಿಮಿತ್ತವಾಗಿ ಹೊಲೆಯರ ಮೇಲೆ ಅಲ್ಲಲ್ಲಿ ಹೇಗೆ ಅನ್ಯಾಯಗಳು ನಡೆಯುತ್ತವೆ, ಎಂಬುದರ ಉದಾಹರಣೆಗಳನ್ನು ಕಲೆಹಾಕಿ ಈ ಪುಸ್ತಕದಲ್ಲಿ ನೀಡಿರುವರು. ಹೊಲೆಯರ ಮೇಲಾಗುವ ಅನ್ಯಾಯಗಳಿಗೆ ಜನರಲ್ಲಿ ಪ್ರಸಿದ್ಧಿ ಸಿಕ್ಕಬೇಕೆಂದು ಕಾಂಬಳೆ ಅವರು ಈ ಪುಸ್ತಕವನ್ನು ಪ್ರಕಟಿಸಿ ಅವನ್ನು ಊರೂರುಗಳಲ್ಲಿ ಹಂಚಿದರು.

ಕಾಂಬಳೆ ಅವರು ತಮ್ಮ ಸಹಕಾರಿಗಳ ನೆರವಿನಿಂದ ೧೯೦೪ ರಲ್ಲಿ ಪುಣೆಯಲ್ಲಿ 'ಶ್ರೀ ಶಂಕರ ಪ್ರಾಸಾದಿಕ ಸೋಮವಂಶೀಯ ಹಿತಚಿಂತಕ ಮಿತ್ರ ಸಮಾಜ' ಎಂಬ ಸಂಸ್ಥೆಯನ್ನು ಸ್ಥಾಪಿಸಿದರಲ್ಲದೆ "ಶ್ರೀ ಸಚ್ಚಿದಾನಂದ ವಾಚನಗೃಹ'ವನ್ನು ತೆರೆದರು. ಅವರು ತಮ್ಮ ಸಮುದಾಯದಲ್ಲಿ ಜಾಗೃತಿಯನ್ನು ಉಂಟುಮಾಡುತ್ತಿದ್ದರು.''೧

**ಕೀರ, ಭಾಗೋಜಿ ಬಾಳೂಜಿ** (೧೮೭೯-೧೯೪೪) :- ಕಟ್ಟಡಗಳನ್ನು ಕಟ್ಟುವ ಗುತ್ತಿಗೆದಾರ,

೧ : ಬೈರಮೋಡೆ , ಸಂ. ೧, ಪು. ೧೯೫-೧೯೭.

ಸಂಪಿಗೆ ಹೂ ಮಾರುವ ಹಾಗೂ ಚರ್ವಿ ರೋಡ್ ಸ್ಟೇಶನ್ನಿನ ಮೇಲೆ ಕೂಲಿ ಕೆಲಸ ಮಾಡುವ ಒಬ್ಬ ಬಡ ಮನುಷ್ಯ. ಅವರು ತಮ್ಮ ಕರ್ತೃತ್ವ ಮತ್ತು ಪ್ರಾಮಾಣಿಕತೆಗಳ ಬಲದಿಂದ ದೊಡ್ಡ ಶ್ರೀಮಂತನಾದರು. ಹಲವೆಡೆಗಳಲ್ಲಿ ಧರ್ಮಶಾಲೆ, ದೇವಾಲಯ ಹಾಗೂ ಶಾಲೆಗಳನ್ನು ಕಟ್ಟಿಸಿದರು. ದಾನಶೂರರೆಂದು ಹೆಸರಾದರು. ಸ್ವಾತಂತ್ರ್ಯವೀರ ಸಾವರಕರರ ಇಚ್ಛೆಯ ಮೇರೆಗೆ ರತ್ನಾಗಿರಿಯಲ್ಲಿ ಸಮಾಜಕ್ರಾಂತಿಯ ಪ್ರತೀಕವಾಗಿ ಪತಿತಪಾವನ ಮಂದಿರವನ್ನು ಕಟ್ಟಿಸಿದರು.

ಭಾಗೋಜಿ ಕೀರ ಅವರು ರತ್ನಾಗಿರಿಯ ಕೋಟೆಯಲ್ಲಿ ಶ್ರೀ ಭಾಗೇಶ್ವರ ದೇವಾಲಯವನ್ನು ಕಟ್ಟಿಸಿದ್ದರು. ಅಲ್ಲಿ ಪ್ರತಿ ಶಿವರಾತ್ರಿಯನ್ನು ಬಲು ಅದ್ದೂರಿಯಿಂದ ಆಚರಿಸಲಾಗುತ್ತಿತ್ತು. ಅವರು ಒಂದು ಸಲ ಸ್ವಾತಂತ್ರ್ಯವೀರ ಸಾವರಕರರನ್ನು ಉತ್ಸವಕ್ಕೆ ಆಹ್ವಾನಿಸಿದರು. ಆಗ ಸಾವರಕರರು ಮಾತನಾಡುತ್ತ, "ಹಿಂದೂಮಾತ್ರರೆಲ್ಲರೂ ಸಾಂಘಿಕವಾಗಿ ಒಟ್ಟಿಗೆ ಸೇರಿ, ಸಮತೆಯಿಂದ ದೇವರ ಪೂಜೆ ಹಾಗೂ ಪ್ರಾರ್ಥನೆಗಳನ್ನು ಮಾಡಲು ಸಾಧ್ಯವಾಗುವಂತೆ ತಾವು ಒಂದು ಪತಿತಪಾವನ ಮಂದಿರವನ್ನು ಕಟ್ಟಿಸಬೇಕು," ಎಂದರು. ಭಾಗೋಜಿ ಶೇಠರು ಈ ಕೋರಿಕೆಯನ್ನು ಒಂದು ಅಪ್ಪಣೆ ಎಂದು ಭಾವಿಸಿದರು. ರತ್ನಾಗಿರಿಯ ಹಿಂದೂ ಮಹಾಸಭೆಯು ಭಾಗೋಜಿ ಕೀರರಿಗೆ ಅವರು ಇಷ್ಟಪಟ್ಟ ಜಾಗವನ್ನು ಕೊಟ್ಟಿತು. ೨೨ ಫೆಬ್ರುವರಿ ೧೯೩೧ ರಂದು ಶಂಕರಾಚಾರ್ಯರಾದ ಡಾ. ಕುರ್ತಕೋಟಿ ಅವರ ಹಸ್ತದಿಂದ ವಿಗ್ರಹದ ಪ್ರಾಣಪ್ರತಿಷ್ಠೆ ನಡೆದು "ಪತಿತಪಾವನ ಮಂದಿರ'ದ ಕನಸು ನನಸಾಯಿತು. **ಕೇತಕರ, ಗಜಾನನ ವಿಶ್ವನಾಥ**

(೧೮೯೮-೧೯೮೦) :- 'ಕೇಸರಿ' ಯ ಸಂಸ್ಥಾಪಕರು ಹಾಗೂ ವಿಶ್ವಸ್ತರು. ಹಿಂದುತ್ವವಾದಿಯಾದ ಸಾರ್ವಜನಿಕ ಕಾರ್ಯಕರ್ತರು, ಲೋ. ತಿಲಕರ ಹಿರಿಯ ಮಗಳ ಮಗ. ೧೯೩೫ ರಿಂದ 'ಮರಾಠಾ' ಎಂಬ ಇಂಗ್ಲಿಷ್ ವಾರಪತ್ರಿಕೆಯ ಸಂಪಾದಕರು. ಮೊದಲ ಮಡದಿ ತೀರಿಕೊಂಡ ಬಳಿಕ, ಧರ್ಮಾಂತರದ ಮೂಲಕ ಹಿಂದೂವಾಗಿ ಮಾಡಿಕೊಳ್ಳಲಾದ ಒಬ್ಬ ಯುರೋಪಿಯನ್ ಮಹಿಳೆಯ ಜೊತೆಗೆ ೧೯೫೦ರಲ್ಲಿ ಅವರ ಎರಡನೆಯ ಮದುವೆ. ಅದರಿಂದಾಗಿ ಗೊಂದಲವೆದ್ದು ಕೇಸರಿಯ ಸಂಪಾದಕ ಪದವನ್ನು ಬಿಡಬೇಕಾಯಿತು. ೧೦೫೭ರಿಂದ ಪುಣೆಯ 'ತರುಣ ಭಾರತ ದ ಸಂಪಾದಕ ಪದವನ್ನು ಸ್ವೀಕರಿಸಿದರು.

**ಕೇಳಕರ, ನರಸಿಂಹ ಚಿಂತಾಮಣಿ** (೧೮೭೨-೧೯೪೭) :- ಮಿರಜ ಸಂಸ್ಥಾನದ ಮೋಡನಿಂಬ ಎಂಬಲ್ಲಿ ಜನ್ಮ, ರಾಜಕಾರಣಿ ಹಾಗೂ ಸಾಹಿತ್ಯಕರು. 'ಕೇಸರಿ' , 'ಮರಾಠಾ' ಹಾಗೂ 'ಸಹ್ಯಾದ್ರಿ' ಪತ್ರಿಕೆಗಳ ಸಂಪಾದಕರು. ೧೯೧೯ ರಲ್ಲಿ ಇಂಗ್ಲೆಂಡಿನಲ್ಲಿ ಕೆಲಕಾಲ 'ಇಂಡಿಯಾ ಪತ್ರಿಕೆಯ ಸಂಪಾದಕರು. ೧೯೨೧ ರಲ್ಲಿ ಬಡೋದೆಯಲ್ಲಿ ನೆರವೇರಿದ ಮಹಾರಾಷ್ಟ್ರ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರು. ೧೯೩೧ ರಲ್ಲಿ ನಡೆದ ಮೂರನೆಯ ದುಂಡುಮೇಜಿನ ಪರಿಷತ್ತಿನಲ್ಲಿ ಒಬ್ಬ ಪ್ರತಿನಿಧಿಯಾಗಿ ಹಾಜರು. ಕಾಂಗ್ರೆಸ್ ಡೆಮಾಕ್ರಟಿಕ್ ಪಕ್ಷದ ಸ್ಥಾಪನೆ. 'ಕೇಸರಿ ಸಂಸ್ಥೆಯಿಂದ ನಿವೃತ್ತರಾದ ಬಳಿಕ ಕೊನೆಯವರೆಗೆ ನಿರಂತರವಾಗಿ ವಾಚನ, ಲೇಖನ, ವಾಯದ ಬೇರೆ ಬೇರೆ ಕ್ಷೇತ್ರಗಳಲ್ಲಿ ಗಮನಾರ್ಹ ಹಾಗೂ ಉಲ್ಲೇಖನೀಯ ಕಾರ್ಯ, ಜನರಿಂದ 'ಸಾಹಿತ್ಯ ಸಾಮ್ರಾಟ್' ಬಿರುದು. ತಿಲಕ ಸಂಪ್ರದಾಯದವರಾದರೂ ಸೌಮ್ಯ ಸ್ವಭಾವದವರು, ತಣ್ಣನೆಯವರು. ಲೋ, ತಿಲಕ ಚರಿತ್ರೆ, ಗತಗೋಷ್ಟಿ, ಮೊದಲಾದ ಗ್ರಂಥಗಳ ಲೇಖಕರು.

ಗಿರಣಿ ಕಾಮಗಾರ ಯೂನಿಯನ್ ಸಂಘ :- ಮೇ ೧೯೨೮ರಲ್ಲಿ ಮುಂಬಯಿ ಗಿರಣಿ ಕಾರ್ಮಿಕರು ಮುಷ್ಕರ ಹೂಡಿದ್ದರು. ೨೨ ಮೇ ೧೯೨೮ ರಂದು 'ಗಿರಣಿ ಕಾಮಗಾರ ಸಂಘ 'ದ



ಸ್ಥಾಪನೆಯಾಯಿತು. ಕೇ, ನೀ, ಜೋಗಳೇಕರ, ಶಾಂ. ಸಾ. ಮಿರಜಕರ, ಶ್ರೀಪಾದ ಡಾಂಗೆ, ಬ್ರಾಡ್ಲ್,, ಮೊದಲಾದವರು ಅದರ ಕಾರ್ಯಕಾರಿಣಿಯಲ್ಲಿದ್ದರು. ಈ ಮುಷ್ಕರವನ್ನು ಕುರಿತು ಮಾತನಾಡುತ್ತ ಡಾಂಗೆ ಅವರು, 'ಈ ಮುಷ್ಕರ ನಮ್ಮ ನಿರ್ಮಾಣವಾಗಿರದೆ ನಾವೇ ಮುಷ್ಕರದ ನಿರ್ಮಿತಿಯಾಗಿದ್ದೆವು, ಎಂದಿರುವರು.

**ಗೋರಾ ಕುಂಬಾರ** (೧೨೬೭-೧೩೧೭) :- ಮರಾಠಿಯ ಒಬ್ಬ ಸಂತ. ಅವನು ಪಂಡರಪುರದ ಹತ್ತಿರದ ತೇರಡೋಕಿ ಎಂಬ ಊರಿನಲ್ಲಿ ವಾಸವಾಗಿದ್ದನು. ಅವನು ಕುಂಬಾರ ಜಾತಿಯವನು. ಅವನಿಗೆ ಸಂತಿ ಹಾಗೂ ರಾಮಿ ಎಂಬ ಇಬ್ಬರು ಹೆಂಡಂದಿರು. ಅವನು ತನ್ನ ಕೆಲಸದಲ್ಲಿ ಇರುವಾಗಲೂ ವಿಠಲನ ನಾಮಸ್ಮರಣೆಯನ್ನು ಮಾಡುತ್ತಿದ್ದನು. ಒಂದು ಸಲ ಅವನು ಮಣ್ಣನ್ನು ತುಳಿದು ಹದ ಮಾಡುತ್ತ ವಿಠಲನ ನಾಮಸ್ಮರಣೆಯಲ್ಲಿ ಮೈಮರೆತಾಗ ಅಂಬೆಗಾಲಿಕ್ಕುತ್ತ ಅಲ್ಲಿಗೆ ಬಂದ ತನ್ನ ಮಗುವನ್ನು ಕಾಲೆಳಗೆ ಮೆಟ್ಟಿಬಿಟ್ಟನೆಂದು ಒಂದು ಆಖ್ಯಾಯಿಕೆ ಇದೆ. ಅವನನ್ನು ಕುರಿತು ಇನ್ನೂ ಹಲವು ಆಖ್ಯಾಯಿಕೆಗಳಿವೆ.

ಅವನು ಜ್ಞಾನೇಶ್ವರ ಮೊದಲಾದ ಸಂತರಲ್ಲಿ ಎಲ್ಲರಿಗಿಂತಲೂ ಹಿರಿಯನು. ಎಲ್ಲರೂ ಅವನನ್ನು ಕಾಕಾ ಎಂದು ಕರೆಯುತ್ತಿದ್ದರು. ನಾಮದೇವನು ಪರಮಾರ್ಥದಲ್ಲಿ ಪೂರ್ಣನೋ, ಅಪೂರ್ಣನೋ, ಎಂದು ತೀರ್ಮಾನಿಸುವಾಗ ಗೋರಾ ಕುಂಬಾರನ ಅಭಿಪ್ರಾಯವನ್ನು ಪ್ರಮಾಣವೆಂದು ಬಗೆಯಲಾಯಿತು. ಮರದ ಪಟ್ಟಿಯಿಂದ ಮಡಕೆಯನ್ನು ನುಡಿಸಿ ಪರೀಕ್ಷಿಸುವಂತೆ ಅವನು ತನ್ನ ಅನುಭವದಿಂದ ನಾಮದೇವನನ್ನು ತಟ್ಟಿ ಸೂಕ್ತವಾದ ತೀರ್ಮಾನವನ್ನು ಮಾಡಿದನೆಂದು ಹೇಳಲಾಗುತ್ತದೆ. ಅವನು ಬರೆದ ಇಪ್ಪತ್ತು ಅಭಂಗಗಳು ಮಾತ್ರ ಲಭ್ಯ. ಅವುಗಳಲ್ಲಿ ನಾಮದೇವನನ್ನು ಕುರಿತು ಅವನು ಮತ್ತೆ ಮತ್ತೆ ಹೇಳಿರುವನು. ಹದಿನೇಳನೆಯ ಶತಮಾನದಲ್ಲಿ ಆಗಿ ಹೋದ ಉದ್ಧವಚಿದ್ಘನ ಎನ್ನುವವನು ಅವನ ಓವಿಬದ್ಧವಾದ ಚರಿತ್ರೆಯನ್ನು ಮರಾಠಿಯಲ್ಲಿ ಬರೆದಿರುವನು. ತೇರಡೋಕಿಯಲ್ಲಿ ಅವನ ಸಮಾಧಿ ಇದ್ದು ಜನರು ಅಲ್ಲಿಯ ಅವನ ಮನೆ ಹಾಗೂ ಮಣ್ಣು ತುಳಿಯುತ್ತಿದ್ದ ಜಾಗವನ್ನು ಇಂದಿಗೂ ತೋರಿಸುತ್ತಾರೆ.೧

**ಗುರು ಚರಿತ್ರೆ :-** ಸರಸ್ವತಿ ಗಂಗಾಧರನೆಂಬ ಕವಿಯು ಮಹಾರಾಷ್ಟ್ರದಲ್ಲಿ ತುಂಬ ಪವಿತ್ರವೆಂದು ಮನ್ನಿಸಲಾದ ಈ ಪುರಾಣ ಗ್ರಂಥವನ್ನು ಬರೆದನು. ೧೪ ನೆಯ ಶತಮಾನದಲ್ಲಿ ಆಗಿ ಹೋದ ನರಸಿಂಹ ಸರಸ್ವತಿ ಎಂಬ ಒಬ್ಬ ಸ್ವಾಮಿಯ ಚರಿತೆಯು ಇದರಲ್ಲಿದೆ. ಶಕೆ ೧೪೪೦ ರಿಂದ ೧೪೭೦ರ ನಡುವಿನ ಕಾಲದಲ್ಲಿ ಈ ಗ್ರಂಥವನ್ನು ಬರೆಯಲಾಗಿದೆ. ಆ ಕಾಲದ ಚಿತ್ರವನ್ನು ನೀಡಲಾಗಿದ್ದು ಮುಖ್ಯವಾಗಿ ಬ್ರಾಹ್ಮಣರ ಆಚಾರಧರ್ಮವನ್ನು ಕುರಿತು ಇದರಲ್ಲಿ ವಿಸ್ತಾರವಾಗಿ ವಿವೇಚಿಸಲಾಗಿದೆ. ಸ್ತ್ರೀ ಯರಿಗೆ ಈ ಗ್ರಂಥವನ್ನು ಓದುವ ಅಧಿಕಾರವಿಲ್ಲ.

**ಚಕ್ರಧರಸ್ವಾಮಿ :-** "ಚಕ್ರಧರರದು, ಜಾತಿಭೇದದ ವಿರುದ್ಧ ಹೂಡಿದ ಮೂರನೆಯ ಬಂಡಾಯ. ಚಕ್ರಧರ ಸ್ವಾಮಿಯು ಮಹಾನುಭಾವ ಪಂಥದ ಸಂಸ್ಥಾಪಕ ಹಾಗೂ ಪ್ರವರ್ತಕನು, ಗುಜರಾತದ ಭಡೋಚದ ಮಲ್ಲದೇವ ರಾಜನ ವಿಶಾಳದೇವ ಎಂಬ ಸಾಮದೇವಿ ಲಾಡ್ ಬ್ರಾಹ್ಮಣನಿದ್ದನು.

ಈ ಚಕ್ರಧರನು ಅವನ ಮಗನು. ಹರಪಾಲದೇವ ಎಂಬುದು ಅವನ ಮೂಲ ಹೆಸರು. "(ವಿಚಾರ-ಸಮೀಕ್ಷಾ, ಪು. ೨೨). ಅವರ ಜನ್ಮವು ಶಕೆ ೧೧೪೫ (ಇ. ಸ. ೧೨೨೩)ರಲ್ಲಿ

೧ : ಮರಾಠೀ ವಿಶ್ವಕೋಶ : ೫, ಪು. ೨೪೭.



ಮಹಾರಾಷ್ಟ್ರದಲ್ಲಿ ಆಯಿತು. ಮಹಾರಾಷ್ಟ್ರವು ತಮಗೆ ಅನುಕೂಲದ ನಾಡು ಎಂದು ತೀರ್ಮಾನಿಸಿ, ಅವರು ಮಹಾರಾಷ್ಟ್ರದಲ್ಲಿ ಮಹಾನುಭಾವ ಪಂಥವನ್ನು ಸ್ಥಾಪಿಸಿ, ಅದನ್ನು ಬೆಳೆಸಿದರು. ಅವರು ಗುಜರಾತಿಯಾದರೂ ಮರಾಠಿಯಲ್ಲಿ ತಮ್ಮ ಉಪದೇಶವನ್ನು ನೀಡಿದರು. (ಇ.ಸ.೧೧೮೧-೧೨೬೭). ಅವರು ಶಕೆ ೧೧೯೬ (ಇ.ಸ.೧೨೭೪)ರಲ್ಲಿ ದಿವಂಗತರಾದರು. ಅವರು ಜ್ಞಾನದೇವನಿಗಿಂತ ೭೧ ವರ್ಷ ಮೊದಲು ಹುಟ್ಟಿ, ಅವನಿಗಿಂತ ೨೧ ವರ್ಷ ಮೊದಲು ದಿವಂಗತರಾದರು. ಅವರು ಜೀವಿಸಿರುವಾಗ ಮಹಾನುಭಾವ ಪಂಥದ ಒಂದೂ ಗ್ರಂಥವನ್ನು ಬರೆಯಲಾಗಿರಲಿಲ್ಲ. ಆದರೆ ಮುಂದೆ ಅವರ ಶಿಷ್ಯಂದಿರು ಹೊತ್ತು ಹೊತ್ತಿಗೆ ಅವರು ಮಾಡಿದ ಉಪದೇಶಗಳ ಸೂತ್ರಮಯವಾದ ವಚನಗಳನ್ನು ಕಲೆಹಾಕಿ ಒಂದು ಗ್ರಂಥವನ್ನು ತಯಾರಿಸಿದರು. ಅದಕ್ಕೆ 'ಸೂತ್ರಪಾಠ' ಎಂದು ಹೆಸರಿಟ್ಟರು. ಅದು ಮಹಾನುಭಾವರ ವೇದ. "ಜಾತಿಭೇದವನ್ನು ಕಿತ್ತೆಸೆಯಿರಿ," ಎಂದು 'ಸೂತ್ರಪಾಠ'ದಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ. ಆದರೂ ಕೂಡ, 'ಚಾತುರಿವರ್ಣಾಚರಿತ ಭೀಕ್ಷಾ ಯಾ ಶಾಸ್ತ್ರಾಸ ಆನುಸಾರಿಜೇ' (ಆ. ೮೧) ['ಚಾತುರ್ವರ್ಣ್ಯದವರು ಭಿಕ್ಷೆಯನ್ನು ಆಚರಿಸತಕ್ಕದ್ದೆಂಬ ಶಾಸ್ತ್ರವನ್ನು ಅನುಸರಿಸತಕ್ಕದ್ದು']ಎಂಬ ಸೂತ್ರವು ಜಾತಿಭೇದಕ್ಕೆ ನಿಸ್ಸಂದೇಹವಾಗಿ (ಚಾತುರ್ವರ್ಣ್ಯ ಚರೇದ್ಭಕ್ಷ್ಯಮ್) [ಚಾರುರ್ವರ್ಣ್ಯಗಳು ಭಿಕ್ಷೆಯನ್ನು ಆಚರಿಸತಕ್ಕದ್ದು । ಪ್ರತಿಕೂಲವಾದುದು. ಆದರೆ ಚಕ್ರಧರನ ಸಂನ್ಯಾಸ ದೀಕ್ಷೆಯನ್ನು ಸ್ವೀಕರಿಸಿದ ಶಿಷ್ಯರಲ್ಲಿ ಸಾಕಷ್ಟು ಜನ ಪೂರ್ವಾಶ್ರಮದ ಬ್ರಾಹ್ಮಣರಿದ್ದರು. ಚಕ್ರಧರನು ಎಲ್ಲರಂತೆಯೇ ಅವರಿಗೂ, 'ನೀವು ನಾಲ್ಕೂ ವರ್ಣಗಳವರ ಕೈಯಿಂದ ಭಿಕ್ಷಾನ್ನವನ್ನು

ಸ್ವೀಕರಿಸಿ' ಎಂದು ಹೇಳುತ್ತಿದ್ದನು. ಹೀಗಾಗಿ ಅವನು ಅನ್ನದ ಬಳಕೆಯ ಮಟ್ಟಿಗಾದರೂ ಜಾತಿಭೇದವನ್ನು ಮನ್ನಿಸುತ್ತಿರಲಿಲ್ಲವೆಂಬುದು ಸ್ಪಷ್ಟ. ಶಂಕರಾಚಾರ್ಯನು ಬ್ರಾಹ್ಮಣರನ್ನು ಬಿಟ್ಟು ಉಳಿದವರಿಗೆ ಸಂನ್ಯಾಸ ದೀಕ್ಷೆಯ ಅಧಿಕಾರವನ್ನು ಇರಿಸಿರಲಿಲ್ಲ. ಆದರೆ ಚಕ್ರಧರನು ಈ ತತ್ತ್ವವನ್ನು ಮುರಿಯದಿದ್ದರೆ, ಅವನ ಪ್ರತಿಯೊಂದು ಶಬ್ದವನ್ನು ವೇದವಾಕ್ಯವೆಂದು ಭಾವಿಸುವ ಮಹಾನುಭಾವಪಂಥದ ಆಚಾರ್ಯರು ಅವನ ತರುವಾಯದಲ್ಲಿ, ಎದುರಿಗೆ ಕಂಡವನ ವರ್ಣ ಅಥವಾ ಜಾತಿಯನ್ನು ನೋಡದೆ ಅವನನ್ನು ತಮ್ಮ ಗುಂಪಿಗೆ ಕರೆತಂದು, ಅವನಿಗೆ ಸಂನ್ಯಾಸ ದೀಕ್ಷೆಯನ್ನು ನೀಡುತ್ತಿದ್ದರೆ ? ಇದರಿಂದಲೂ ಚಕ್ರಧರನು ಜಾತಿಭೇದದ ಪುರಸ್ಕರ್ತನಾಗಿರಲಿಲ್ಲ, ಎಂದು ಕಲ್ಪಿಸಬಹುದಾಗಿದೆ. ಜನರೂಢಿಗೆ ಎದುರಾಗಿ ಸಂನ್ಯಾಸ ದೀಕ್ಷೆಯನ್ನು ಮುಕ್ತವಾಗಿಸುವುದಲ್ಲದೆ 'ನೀವು ನಾಲ್ಕೂ ವರ್ಣದವರ ಕೈಯಿಂದ ಭಿಕ್ಷಾನ್ನವನ್ನು ಸ್ವೀಕರಿಸುತ್ತ ಹೋಗಿ, ಎಂದು ಉಪದೇಶಿಸುವುದು ಜಾತಿಭೇದದ ಮೇಲೆ ಪ್ರಕಟವಾದ ದಾಳಿಯಾಗಿತ್ತು. ಈ ದಾಳಿಯಿಂದಾಗಿಯೇ ಮುಖ್ಯವಾಗಿ ನಾಮದೇವನಿಂದ ಹಿಡಿದು ಮಹಾನುಭಾವ ಪಂಥದ ಮೇಲೆ ಚಾಟಿ ಏಟು ಬೀಸುವ ಪ್ರವೃತ್ತಿಯು ಸನಾತನಿ ವರ್ಗದಲ್ಲಿ ಉತ್ಪನ್ನವಾಯಿತು. "- (ವಿಚಾರಸಮೀಕ್ಷಾ)

ಶ್ರೀ ದೇಶಪಾಂಡೆ ಅವರ ಅಭಿಪ್ರಾಯದಂತೆ, ಚಕ್ರಧರನು ವೇದ ಮೊದಲಾದ ಹಿಂದೂ ಧರ್ಮಗ್ರಂಥಗಳನ್ನು ನಂಬುತ್ತಿದ್ದನು. ಡಾ. ವಿ. ಮಿ. ಕೋಲತೆ ಅವರು ಜ್ಞಾನದೇವ ಮತ್ತು ಚಕ್ರಧರರನ್ನು ಕುರಿತು 'ಮುಂಬಯಿ ಮರಾಠಿ ಗ್ರಂಥಸಂಗ್ರಹಾಲಯ'ದ ೫೩ ನೆಯ ವಾರ್ಷಿಕೋತ್ಸವದಲ್ಲಿ 'ವಾಗಳೆ ಹಾಲ್'ದಲ್ಲಿ ತಾ. ೧೩ ಮತ್ತು ೧೪ ನವೆಂಬರ್ ೧೯೫೦ ರಂದು ನೀಡಿದ ಉಪನ್ಯಾಸಗಳಲ್ಲಿ, ಚಕ್ರಧರರು ವೇದಾದಿ ಗ್ರಂಥಗಳನ್ನು ಮನ್ನಿಸುತ್ತಿರಲಿಲ್ಲವಲ್ಲದೆ, ಜಾತಿಭೇದದ ಕಡುವೈರಿಯಾಗಿದ್ದರೆಂದು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದರು. ಚಕ್ರಧರರು, ವೇದಗಳಲ್ಲಿ ಈಶ್ವರಸ್ವರೂಪದ ಜ್ಞಾನವಿಲ್ಲ ಹಾಗೂ ಈಶ್ವರಪ್ರಾಪ್ತಿಗಾಗಿ ವೇದಗಳಿಂದ ಯಾವುದೇ ಪ್ರಯೋಜನವಿಲ್ಲವೆಂದು ಬಗೆಯುತ್ತಿದ್ದರು.

ಅವರು ವೇದಾದಿ ಧರ್ಮಗ್ರಂಥಗಳು ಹಾಗೂ ಜಾತಿಭೇದಗಳನ್ನು ಕಠೋರವಾಗಿ ಟೀಕಿಸಿದರು. ಅವರ ಚಳುವಳಿಯು ಬ್ರಾಹ್ಮಣೇತರ ಬಹುಜನ ಸಮಾಜದಲ್ಲಿ ರಭಸದಿಂದ ಬೆಳೆಯಿತು. ಹೀಗಾಗಿ ವೇದಾದಿ ಹಿಂದೂಧರ್ಮ ಗ್ರಂಥಗಳು ಹಾಗೂ ಜಾತಿಭೇದಾದಿ ಅರಿಷ್ಟ ರೂಢಿಗಳ ಬಗೆಗೆ ಬಹುಜನ ಸಮಾಜದಲ್ಲಿ ಅನಾಸ್ಥೆ ತಲೆದೋರತೊಡಗಿತು. ಜ್ಞಾನದೇವನು ಜನರಲ್ಲಿ ಹಬ್ಬಿದ ಈ ಅನಾಸ್ಥೆಯನ್ನು ಕಂಡು ಹಿಂದೂಧರ್ಮದ ಪ್ರಚಾರ ಕಾರ್ಯವನ್ನು ಕೈಗೆತ್ತಿಕೊಂಡು, ಈ ಪ್ರಚಾರಕ್ಕೆ ಅನುರೂಪವಾದ ಗ್ರಂಥಗಳನ್ನು ಬರೆದನು. ಜ್ಞಾನದೇವನು 'ಭಾವಾರ್ಥದೀಪಿಕಾ' ಎಂಬ ಗ್ರಂಥವನ್ನು ಬರೆದು ಚಕ್ರಧರನ ವಿಚಾರಪ್ರಣಾಲಿಯನ್ನು ಖಂಡಿಸಿ, ಹಿಂದೂಧರ್ಮದ ವೇದ, ವೇದಾಂಗಗಳು, ಪುನರ್ಜನ್ಮ, ಅವತಾರ, ಕರ್ಮವಾದ, ಮಾಯಾವಾದ, ಚಾತುರ್ವರ್ಣ್ಯ , ಜಾತಿಭೇದ, ಮೊದಲಾದ ಭಾವನೆಗಳ ಬಗೆಗೆ ಜನರಲ್ಲಿ ಮತ್ತೆ ನಿಷ್ಠೆಯನ್ನು ಜಾಗೃತಗೊಳಿಸಿದನು. ಹಿಂದು ರಾಜರಿಂದ ಜ್ಞಾನದೇವನ ಚಳುವಳಿಗೆ ಸಕ್ರಿಯವಾದ ಬೆಂಬಲ ದೊರೆಯಿತು. ಮಹಾನುಭಾವ ಪಂಥದ ಜನರು ಹಿಂದೂಗಳ ಅಮಾನವೀಯ ಹಿಂಸೆಗೆ ಈಡಾದರು. ಆದರೆ ಜಾತಿಭೇದವನ್ನು ನಾಶಪಡಿಸುವ ಅವರ ಕೆಲಸವು ಸಫಲವಾಗಲಿಲ್ಲ."

**ಚರ್ಚಿಲ್, ಸರ್ ವಿನ್‌ಸ್ಟನ್** (೩೦ ನವೆಂಬರ್ ೧೮೭೪-೨೪ ಜನವರಿ ೧೯೬೫) :

ಬ್ರಿಟನ್ನಿನ ಯುದ್ಧ ಕಾಲದ ಪ್ರಧಾನ ಮಂತ್ರಿ, ಪತ್ರಕಾರ, ಸಾಹಿತ್ಯಕ ಹಾಗೂ ಒಬ್ಬ ಶ್ರೇಷ್ಠ ರಾಜಕೀಯಪಟು. ಅವರ ಪೂರ್ಣ ಹೆಸರು, ವಿನ್‌ಸ್ಟನ್ ಲೆವರ್ಡ್ ಸ್ಪೆನ್ಸರ್ ಚರ್ಚಿಲ್, ಅವರ ಜನ್ಮವು ಬ್ರಿಟನ್ನಿನ ಪ್ರಸಿದ್ಧವಾದ ಮಾರ್ಲ್ಬರೊ ಎಂಬ ಸರದಾರ ಮನೆತನದಲ್ಲಿ ಆಯಿತು. ತಂದೆ ಲಾರ್ಡ್ ಲ್ಯಾಂಡಾಲ್ಫ್ ಇವರು ಒಬ್ಬ ಚಾಕಚಕ್ಯತೆಯ ಹಾಗೂ ಬಂಡಾಯಗಾರ ಸಂಸದರಾಗಿದ್ದರು. ಅಮ್ಮ ಜೆನೆಟ್ ಒಬ್ಬ ರೂಪವಂತೆ ಹಾಗೂ ನ್ಯೂಯಾರ್ಕಿನ ಲೆವರ್ಡ್ ಜೆರೊಮ್ ಎಂಬ ಲಕ್ಷಾಧಿಪತಿಯ ಮಗಳು. ಹೀಗಾಗಿ ವಿನ್‌ಸ್ಟನ್ನರ ಬಾಲ್ಯ ಅಕ್ಕರೆಯಲ್ಲಿ ಕಳೆಯಿತು. ಮನೆಯಲ್ಲೇ ಅವರಿಗೆ ಅನೌಪಚಾರಿಕವಾಗಿ ಶಿಕ್ಷಣವನ್ನು ನೀಡಲಾಯಿತು.

ತನ್ನ ಪ್ರಾಥಮಿಕ ಶಿಕ್ಷಣದ ತರುವಾಯ ವಿನ್‌ಸ್ಟನ್ನರು ಹ್ಯಾರೊ ಎಂಬ ವಿಶ್ವವಿಖ್ಯಾತ ವಿದ್ಯಾಲಯವನ್ನು ಪ್ರವೇಶಿಸಿದರು. ಅವರು ಬಲು ತುಂಟ, ಓದಿನಲ್ಲಿ ಹಿಂದುಳಿದ ವಿದ್ಯಾರ್ಥಿ ಎಂದು ಮೊದಲು ವಿನ್‌ಸ್ಟನ್‌ರ ಕೀರ್ತಿಯಿತ್ತು. ಹ್ಯಾರೊದಲ್ಲಿ ಕೆಲವು ದಿನ ಶಿಕ್ಷಣವನ್ನು ಪಡೆದ ಬಳಿಕ ಅವರು ಸ್ಯಾಂಡರ್ಸ್ಟ ಸೈನಿಕ ಶಾಲೆಯಲ್ಲಿ ಪ್ರವೇಶವನ್ನು ಪಡೆದರು. ತಮ್ಮ ಸ್ವಭಾವಕ್ಕೆ ತಕ್ಕ ವಾತಾವರಣ ಹಾಗೂ ಇಷ್ಟದ ವಿಷಯಗಳು ದೊರೆತ ಕೂಡಲೆ ಅವರ ವ್ಯಕ್ತಿತ್ವದಲ್ಲಿ ಶೀಘ್ರವಾಗಿ ಅಭಿವೃದ್ಧಿಯಾಗತೊಡಗಿತು. ಸೈನಿಕ ಶಿಕ್ಷಣದ ತರುವಾಯ ೧೮೯೫ರಲ್ಲಿ ಕ್ಯೂಬಾದ ಬಂಡಾಯವನ್ನು ಸದೆಬಡಿಯಲೆಂದು ಅವರು ಸ್ಪೇನ್ ಸರಕಾರದ ವತಿಯಿಂದ ಪಾಲ್ಗೊಂಡರು. ಆ ಕಾಲಕ್ಕೆ ಅವರು 'ಡೇಲಿ ಟೆಲಿಗ್ರಾಫ್' ವೃತ್ತಪತ್ರದಲ್ಲಿ ಯುದ್ಧದ ವಾರ್ತೆಗಳನ್ನು ಪ್ರಕಟಿಸಿ ತಮ್ಮ ವೃತ್ತಪತ್ರದ ಜೀವನವನ್ನು ಆರಂಭಿಸಿದರು. ಬರುವ ವರ್ಷ

ಅವರ ನೇಮಕಾತಿಯು ಭಾರತದಲ್ಲಿ ಆಯಿತು. ಅವರು ಮಾಲಕಂದ್ ಎಂಬಲ್ಲಿ ಒಂದು ಸಣ್ಣ ಕಾಳಗದಲ್ಲಿ ಭಾಗವಹಿಸಿ, ಅಲಹಾಬಾದಿನ 'ಪಾಯೋನೀಯರ್' ವೃತ್ತಪತ್ರಕ್ಕೆ ವರದಿಗಳನ್ನು ರವಾನಿಸಿದರು. ಈ ಕಾಳಗವನ್ನು ಕುರಿತು ಅವರು 'ದ ಸ್ಟೋರಿ ಆಫ್ ದ ಮಾಲ್ಕಂದ್
ಫೀಲ್ಡ್ ಫೋರ್ಸ್ (೧೮೯೮) ಎಂಬ ಪುಸ್ತಕವನ್ನು ಬರೆದು ಸಾಹಿತ್ಯಕ್ಷೇತ್ರದಲ್ಲಿ ಹೆಜ್ಜೆ ಇಕ್ಕಿದರು.

೧ : ಬೈರಮೋಡೆ, ಸಂ. ೧, ಪು. ೧೧೭-೧೧೮.



ದಂಡನಾಯಕನಾದ ಕಿಚನೇರನ ಮನಸ್ಸಿನ ವಿರುದ್ಧ ಅವರು ೧೮೯೮ರಲ್ಲಿ ಸೂದಾನದ ಚಳುವಳಿಯಲ್ಲಿ ಪಾಲ್ಗೊಂಡರು. ಹಾಗೆಯೇ ಆ ವರ್ಷ ಅವರು ಬೋಅರ್ ಯುದ್ಧದ ನಿಮಿತ್ತವಾಗಿ ದಕ್ಷಿಣ ಆಫ್ರಿಕೆಯ 'ಮಾರ್ನಿಂಗ್ ಪೋಸ್ಟ್' ವೃತ್ತಪತ್ರದ ಸುದ್ದಿಗಾರರೆಂದು ಹೋದರು. ಅವರು ಅಲ್ಲಿ ವೈರಿಗಳ ಕೈಗೆ ಸಿಕ್ಕು ಬಿದ್ದರು. ಯುದ್ಧಕೈದಿಯಾದ ಅವರು ಬಲು ಸಾಹಸದಿಂದ ತಮ್ಮ ಬಿಡುಗಡೆಯನ್ನು ಮಾಡಿಕೊಂಡು, ಮತ್ತೆ ಸೈನ್ಯವನ್ನು ಸೇರಿ ಬೋಅರ್ ಯುದ್ಧದಲ್ಲಿ ಬ್ರಿಟಿಷರಿಗೆ ವಿಜಯವನ್ನು ದೊರಕಿಸಿ ಕೊಡಲು ನೆರವಾದರು.

ಅವರು ಕಾಂಜರ್ವೇಟಿವ್ ಪಕ್ಷದ ವತಿಯಿಂದ ೧೯೦೦ ರಲ್ಲಿ ಬ್ರಿಟಿಷ್ ಸಂಸತ್ತಿಗೆ ಆಯ್ಕೆಯಾದರು. ಅವರು ಸಂಸತ್ತಿನಲ್ಲಿ ಒಬ್ಬ ಪ್ರಭಾವಿ ವಾಗ್ಮಿ, ಎಂದು ಹೆಸರು ಗಳಿಸಿದರು. ಅವರು ಮುಕ್ತವ್ಯಾಪಾರವನ್ನು ಪುರಸ್ಕರಿಸಿದರು. ೧೯೦೩ ರಲ್ಲಿ ಜೋಸೆಫ್ ಚೇಂಬರ್ಲಿನ್‌ನ ಸುಂಕದ ಧೋರಣೆಯನ್ನು ಕಠೋರವಾಗಿ ವಿರೋಧಿಸಿದರು. ಈ ಬಗೆಗೆ

ಕಾಂಜರ್ವೇಟಿವ್ ಪಕ್ಷದೊಡನೆ ಹೊಂದಿಕೊಳ್ಳಲಾಗದ ಕಾರಣ ಅವರು ಆ ಪಕ್ಷವನ್ನು ತೊರೆದು ಉದಾರಮತವಾದಿ ಪಕ್ಷವನ್ನು ಸೇರಿಕೊಂಡರು. ೧೯೦೬ ರ ಚುನಾವಣೆಯಲ್ಲಿ ಉದಾರಮತವಾದಿಗಳಿಗೆ ಬಲು ದೊಡ್ಡ ಬಹುಮತವು ದೊರೆಯಿತು. ಕೂಡಲೇ ಅವರ ನೇಮಕ ವಸಾಹತಿನ ಉಪಕಾರ್ಯದರ್ಶಿ ಎಂದಾಯಿತು. ಆ ಕಾಲಕ್ಕೆ ಅವರು 'ಲಾರ್ಡ್ ಲ್ಯಾಂಡಾಲ್ಫ್ ಚರ್ಚಿಲ್' (೧೯೦೬) ಎಂಬ ಚರಿತ್ರೆಯನ್ನು ಬರೆದರು. ಚರ್ಚಿಲ್ಲರಿಗೆ ಬ್ರಿಟಿಷ್ ಸಚಿವ ಸಂಪುಟದಲ್ಲಿ ಪ್ರವೇಶ ಲಭಿಸಿತು. ಒಂದೆರಡು ಅಪವಾದಗಳನ್ನು ಬಿಟ್ಟರೆ ೧೯೦೬ ರಿಂದ ೧೯೫೫ ರವರೆಗೆ ಚರ್ಚಿಲ್ಲರು ಒಂದಿಲ್ಲೊಂದು ಇಲಾಖೆಯ ಸಚಿವರಾಗಿದ್ದರು.

೧೯೧೧ ರಲ್ಲಿ ನೌಕಾಪಡೆಯ ಸಚಿವ ಪದ ದೊರೆಯುತ್ತಲೇ ಅವರು ಅಲ್ಪಾವಧಿಯಲ್ಲೇ ಅದರ ಪುನರಚನೆಯನ್ನು ಮಾಡಿದರು. ಹೀಗಾಗಿ ಬ್ರಿಟಿಷ್‌ರ ನೌಕಾ ಪಡೆಯು ಮೊದಲನೆಯ ಮಹಾಯುದ್ಧದ ಶುರುವಿನ ಕಾಲಕ್ಕೆಂದರೆ ಸುಸಜ್ಜಿತವಾಗಿತ್ತು. ಅವರು ನೌಕಾ ಪಡೆಗೆ ವಾಯು ಪಡೆಯನ್ನು ಜೊತೆಗೂಡಿಸುವ ಕಲ್ಪನೆಯನ್ನು ಮುಂದಿರಿಸಿ ಜರ್ಮನ್ ಯುದ್ಧವನ್ನು ತಡೆಹಿಡಿದರು. ದಾರ್ದಾನೆಲ್ಸ್ ಜಲಸಂಧಿಯಿಂದ ತುರ್ಕಸ್ತಾನದ ಮೇಲೆ ಏರಿಹೋಗುವ ಅವರ ಯೋಜನೆಯು ಸೋಲನ್ನಪ್ಪಿತು. ಗಲಿಪಲ್ಲಿಯ ಹೆಸರಾದ ಕಾಳಗದಲ್ಲಿ (೧೯೧೫) ಬ್ರಿಟಿಶ್ ಸೈನ್ಯವು ದೊಡ್ಡ ಪ್ರಮಾಣದಲ್ಲಿ ನಾಶ ಹೊಂದಿತು. ಸ್ವಾಭಾವಿಕವಾಗಿಯೇ ಇದರ ತಪ್ಪನ್ನು ಚರ್ಚಿಲ್ಲರ ಮೇಲೆ ಹೊರಿಸಲಾಯಿತು.

ಅವರು ರಶಿಯನ್ ಕ್ರಾಂತಿಯನ್ನು ಬಲವಾಗಿ ವಿರೋಧಿಸಿ ಎಡ ರಂಗದವರ ಹಗೆತನವನ್ನು ಕಟ್ಟಿಕೊಂಡರು.

ಅವರಲ್ಲಿ ಕಾರ್ಮಿಕ ಪಕ್ಷದ ನಾಯಕರಾದ ರ್‍ಯಾಮ್ಸೆ ಬಗೆಗೆ ಮೊದಲಿನಿಂದಲೇ ಕೆಟ್ಟ ಅಭಿಪ್ರಾಯವಿತ್ತು. ಹೀಗಾಗಿ ಮ್ಯಾಕ್ಡಾನಾಲ್ಡರು ೧೯೩೧ ರ ರಾಷ್ಟ್ರೀಯ ಸಚಿವ ಸಂಪುಟದಲ್ಲಿ ಇವರಿಗೆ ಯಾವುದೇ ಸಚಿವ ಪದವನ್ನು ಕೊಡಲಿಲ್ಲ. ಅವರು ಹಿಂದೀ ಸ್ವಾತಂತ್ರಕ್ಕೆ ಕಠೋರ ವಿರೋಧಿಗಳಾದ್ದರಿಂದ, ಭಾರತಕ್ಕೆ ತುಸು ಮಟ್ಟಿಗಾದರೂ ಅಧಿಕಾರವನ್ನು ಕೊಡಬೇಕೆನ್ನುವ ಕಾಂಜರ್ವೇಟಿವ್ ಪಕ್ಷದ ಧೋರಣೆಯನ್ನು ಸುತರಾಂ ಒಪ್ಪುತ್ತಿರಲಿಲ್ಲ. ಇಷ್ಟೇ ಅಲ್ಲದೆ ಎರಡನೆಯ ಮಹಾಯುದ್ಧದ ಬಿಕ್ಕಟ್ಟಿನ ಕಾಲದಲ್ಲೂ ಕೂಡ ಅವರು ತಮ್ಮ ಈ ಹಠವನ್ನು ಬಿಡಲಿಲ್ಲ. ಅವರು, 'ನಾನೇನೂ ಇಲ್ಲಿ ಬ್ರಿಟಿಶ್ ಸಾಮ್ರಾಜ್ಯವನ್ನು ದಿವಾಳಿ ಎಬ್ಬಿಸಲು ಕುಳಿತಿಲ್ಲ, ಎನ್ನುತ್ತಾರೆ. ಹೀಗಾಗಿ ಅವರನ್ನು ೧೯೩೫ ರ ಕಾಂಜರ್ವೇಟಿವ್ ಪಕ್ಷದ ಸಚಿವ ಸಂಪುಟದಲ್ಲಿ ಸೇರ್ಪಡಿಸಲಾಗಿರಲಿಲ್ಲ.

ಅವರು ಆಗ ಹಿಟ್ಲರನ ಹೆಚ್ಚುತ್ತಿರುವ ಸತ್ತೆಯನ್ನು ತಡೆಯುವುದು ಆವಶ್ಯಕವೆಂದು ಪ್ರತಿಪಾದಿಸುತ್ತಿದ್ದರು. ಇಷ್ಟೇ ಅಲ್ಲದೆ, ಹಿಟ್ಲರ್‌ನು ಇಡಿಯ ಪ್ರಪಂಚದ ಮೇಲೆ ಯುದ್ಧವನ್ನು ಹೇರುವನೆಂದು ಯುದ್ಧಕ್ಕಿಂತ ೩-೪ ವರ್ಷಗಳ ಮೊದಲೇ ಅವರು ಭವಿಷ್ಯ ನುಡಿದಿದ್ದರು. ಆದರೆ ಯಾರೂ ಅದರತ್ತ ಅಷ್ಟಾಗಿ ಗಮನ ನೀಡಲಿಲ್ಲ. ಈ ಕಾಲದಲ್ಲಿ ಅವರು 'ಮಾರ್ಲಬರೊ : ಹೀಸ್ ಲೈಫ್ ಅಂಡ್ ಟೈಮ್ಸ್ (೪ ಸಂಪುಟಗಳು. ೧೯೩೩-೩೮) ಎಂಬ ಪುಸ್ತಕವನ್ನು ಬರೆದರು. ಮೇಲಿನ ಎರಡು ಪುಸ್ತಕಗಳಿಂದ ಅವರಿಗೆ ತುಂಬ ಆರ್ಥಿಕ ಲಾಭವಾಯಿತು. ಅವರು ಸಾಹಿತ್ಯಕ ಕ್ಷೇತ್ರದಲ್ಲಿ ಹೆಸರುವಾಸಿಯಾದರು.

೧೯೩೯ ರಲ್ಲಿ ಎರಡನೆಯ ವಿಶ್ವಮಹಾಯುದ್ಧವು ಶುರುವಾಯಿತು. ಚರ್ಚಿಲ್ಲರನ್ನು ಶಸ್ತ್ರಾಸ್ತ್ರ ಇಲಾಖೆಯ ಸಚಿವರೆಂದು ಕರೆಸಿಕೊಳ್ಳಲಾಯಿತು. ಮುಂದೆ ಒಂದು ವರ್ಷದ ಅವಧಿಯಲ್ಲಿ, ಅಂದರೆ ೧೯೪೦ ರಲ್ಲಿ ಅವರನ್ನು ಸಮ್ಮಿಶ್ರ ಸರಕಾರದ ಪ್ರಧಾನಮಂತ್ರಿಯೆಂದು ನೇಮಕ ಮಾಡಲಾಯಿತು. ಅದು ಬ್ರಿಟಿಶ್ ಸಾಮ್ರಾಜ್ಯದ ಕಾಲವಾಗಿತ್ತು. ಹಿಟ್ಲರ್‌ನ ಜಯಶಾಲಿ ಸೈನ್ಯವು ನಾಲ್ದೆಸೆಗಳಲ್ಲೂ ದಾಳಿ ಇಕ್ಕುತ್ತ ಹೊರಟಂತೆ ಪೋಲಂಡ್, ಹಾಲಂಡ್, ಬೆಲ್ಸಿಯಮ್, ನಾರ್ವೆ, ಫ್ರಾನ್ಸ್, ಮೊದಲಾದ ದೇಶಗಳು ಒಂದೊಂದಾಗಿ ಶರಣಾಗತೊಡಗಿದ್ದವು. ಜರ್ಮನಿಯ ಈ ಅಮಾನವೀಯ ವಿಸ್ತಾರಕ್ಕೆ ತಡೆಯೊಡ್ಡಿ ಪ್ರಜಾಪ್ರಭುತ್ವವನ್ನು ಕಾಪಾಡುವುದು, ಅಂದಿನ ಪ್ರಜಾಸತ್ತೆಯ ರಾಷ್ಟ್ರಗಳ ಮುಖ್ಯ ಗುರಿಯಾಗಿತ್ತು. ತಮ್ಮ ಮೊದಲ ಭಾಷಣದಲ್ಲೇ ಅವರು, ರಕ್ತ, ಕಣ್ಣೀರು, ದುಡಿಮೆ ಹಾಗೂ ಬೆವರುಗಳನ್ನು ಬಿಟ್ಟರೆ ಕೊಡಲು ನನ್ನ ಬಳಿ ಇನ್ನೇನೂ ಇಲ್ಲವೆಂದು ಶಕ್ತಿಯುತವಾಗಿ ಹೇಳಿ ಬ್ರಿಟಿಷರ ವಿಜಿಗೀಷು ಮನೋಧರ್ಮವನ್ನು ಬಡಿದೆಬ್ಬಿಸಿದರು. ಅಮೇರಿಕೆಯು ಯುದ್ಧಕ್ಕೆ ಇಳಿಯುವವರೆಗೆ ಅವರ ನೇರವಾದ ನಾಯಕತ್ವದಲ್ಲಿ ಇಂಗ್ಲೆಂಡು ಇದೇ ಬಗೆಯ ಹೋರಾಟ ಮನೋಭಾವದಿಂದ ಒಂಟಿಯಾಗಿಯೇ ಸೆಣಸಿತು. ಮುಂದೆ ಅವರು ಅಮೇರಿಕೆಯ ಸ್ನೇಹವನ್ನು ಸಂಪಾದಿಸಿದರು. ಇಷ್ಟೇ ಅಲ್ಲದೆ ಸಾಮ್ಯವಾದದ ಬಗೆಗೆ ತಮ್ಮಲ್ಲಿ ದ್ವೇಷವಿರುವಾಗಲೂ ಅವರು ಸ್ಟ್ಯಾಲಿನ್ನನೊಡನೆ ಕೈಜೋಡಿಸಿ ರಶಿಯದೊಂದಿಗೆ ಸ್ನೇಹಸಂಬಂಧವನ್ನು ಸ್ಥಾಪಿಸಿದರು. ಇಂಗ್ಲೆಂಡ್, ಫ್ರಾನ್ಸ್ ಹಾಗೂ ಅಮೇರಿಕೆಯ (ಥ್ರೀ ಬಿಗ್ಸ್) ಜೊತೆಗೆ ರಶಿಯವನ್ನು ಸೇರಿಸಿಕೊಂಡು ಜರ್ಮನಿಯ ವಿರುದ್ಧದ ಬದಿಯನ್ನು ತಯಾರಿಸಿದರು. ಅವರು ಡಂಕರ್ಕ್ ಎಂಬಲ್ಲಿಯ ಸೋಲಿನಿಂದ ಎದೆಗೆಡದೆ ಜಪಾನ್ ಹಾಗೂ ಜರ್ಮನಿಗಳನ್ನು ಸಾಧ್ಯವಿದ್ದಲ್ಲೆಲ್ಲ ಸೋಲಿಸುತ್ತ ಬ್ರಿಟನ್ನಿನ ನೈತಿಕ ಧೈರ್ಯವನ್ನು ಎಂದಿಗೂ ಕುಸಿಯಗೊಡಲಿಲ್ಲ.

ಇಂಗ್ಲೆಂಡ್ ಹಾಗೂ ಪ್ರಪಂಚದ ಇತಿಹಾಸದಲ್ಲೇ ಚರ್ಚಿಲ್ಲರ ಯುದ್ಧಕಾಲದ ನಾಯಕತ್ವವು ಅಸಾಮಾನ್ಯ ಎನ್ನಿಸಿತು. ಆದರೆ ಜರ್ಮನಿಯ ಜೊತೆಗಿನ ಯುದ್ಧವು ಸಮಾಪ್ತವಾಗುತ್ತಲೇ ಜಪಾನಿನ ಪರಾಭವವಾಗುವ ಮುನ್ನವೇ ನಡೆದ ಸಂಸತ್ತಿನ ಚುನಾವಣೆಯಲ್ಲಿ ಅವರ ಪಕ್ಷವು ಸೋಲುಂಡಿತು. ಕಾರ್ಮಿಕ ಪಕ್ಷಕ್ಕೆ ೧೫೦ ಮತಾಧಿಕ್ಯ ಲಭಿಸಿತು. ಮುಂದೆ ಕೂಡ ಅವರು ಆರು ವರ್ಷಗಳ ಕಾಲ ಸಂಸತ್ತಿನಲ್ಲಿ ಪ್ರತಿಪಕ್ಷ ನಾಯಕರೆಂದು ಕೆಲಸ ಮಾಡಿದರು. ಇದೇ ಕಾಲದಲ್ಲಿ ಮಾರ್ಚ್ ೧೯೪೬ ರಲ್ಲಿ ಬೋಸ್ಟನ್ ನಗರದಲ್ಲಿ ಭಾಷಣ ಮಾಡುತ್ತ, ಅವರು ಮುಂಬರುವ ಕಾಲದಲ್ಲಿ ಶೀತಸಮರದ ಅಪಾಯವನ್ನು ಕುರಿತು ಅರಿವನ್ನು ಮೂಡಿಸಿದರು. ೧೯೫೧ ರಲ್ಲಿ ಅವರು ಮತ್ತೆ ಕಾರ್ಮಿಕ ಪಕ್ಷದ ಮತಾಧಿಕ್ಯದಿಂದ ಪ್ರಧಾನ ಮಂತ್ರಿಯಾದರು. ಮುಂದೆ ೧೯೫೫ ರಲ್ಲಿ ಅನಾರೋಗ್ಯದ ನಿಮಿತ್ತವಾಗಿ ಅವರು ನಿವೃತ್ತರಾದರು. ಈ ಕಾಲಾವಧಿಯಲ್ಲಿ ಅವರು ಎರಡನೆಯ ಮಹಾಯುದ್ಧದ ಇತಿಹಾಸವನ್ನು 'ಸೆಕಂಡ್ ವರ್ಲ್ಡ್ ವಾರ್' (೬ ಸಂಪುಟ. ೧೯೪೮-೫೩) ಎಂಬ ಶೀರ್ಷಿಕೆಯಿಂದ ಪ್ರಕಟಿಸಿ ಇಂಗ್ಲಿಷ್



ಸಾಹಿತ್ಯಕ್ಕೆ ತುಂಬ ಮಹತ್ವದ ಕೊಡುಗೆಯನ್ನು ನೀಡಿದರು. ಅವರಿಗೆ ಅದಕ್ಕಾಗಿ ಸಾಹಿತ್ಯದ ನೋಬಲ್ ಪ್ರಶಸ್ತಿ ಲಭಿಸಿತು (೧೯೫೩), ಅವರು ತಮ್ಮ ಬಾಳಿನ ಉಳಿದ ಕಾಲವನ್ನು ಲೇಖನ ಹಾಗೂ ಚಿತ್ರಕಲೆಗಳಿಗೆ ಮೀಸಲಿಟ್ಟರು. ಅವರು ಇಂಗ್ಲೆಂಡಿನ ಇತಿಹಾಸವನ್ನು ಕುರಿತು, "ಎ ಹಿಸ್ಟರಿ ಆಫ್ ದ ಇಂಗ್ಲಿಷ್ ಸ್ಪೀಕಿಂಗ್ ಪೀಪಲ್ಸ್' (೪ ಸಂಪುಟ, ೧೯೫೬-೫೮) ಎಂಬ ಪುಸ್ತಕವನ್ನು ಬರೆದರು. ತಮ್ಮ ಚಿತ್ರಗಳ ಪ್ರದರ್ಶನವನ್ನು ಏರ್ಪಡಿಸಿದರು.

ಯುದ್ಧದ ತರುವಾಯ ಆರನೆಯ ಜಾರ್ಜ್ ರು ಅವರಿಗೆ ಸರದಾರ ಪದವನ್ನು ನೀಡಬೇಕೆಂದು ತೀವ್ರವಾಗಿ ಇಚ್ಛೆಪಟ್ಟಿದ್ದರು. ಆದರೆ ಚರ್ಚಿಲ್ಲರು ಹೌಸ್ ಆಫ್ ಕಾಮನ್ಸ್ಸನ್ನು ತೊರೆಯಲು ನಿರಾಕರಿಸಿದರು.

ಪ್ರಪಂಚದ ಬೇರಾವ ರಾಜಕಾರಣಿಗೂ ಅವರಷ್ಟು ದೀರ್ಘ ಕಾಲದ ಸಚಿವ ಪದವು ಇದುವರೆಗೂ ಲಭಿಸಿಲ್ಲ. ಯೋಧ, ಸಾಹಿತ್ಯಕ, ವೃತ್ತಪತ್ರಕಾರ, ಚಿತ್ರಕಾರ, ವಾಗ್ಮಿ ಹಾಗೂ ಕುಶಲ ರಾಜಕಾರಣಎಂಬ ಹಲವು ಬಗೆಯಾದ ಮರ್ಯಾದೆಯು ಅವರಿಗೆ ಲಭಿಸಿತು. ಅವರ ಹೆಸರು ಒಬ್ಬ ಬಹುಶೃತ ಧುರಂಧರನೆಂದು ಇತಿಹಾಸದಲ್ಲಿ

ಅಜರಾಮರವಾಯಿತು. ಅವರು ಲಂಡನ್ನಿನಲ್ಲಿ ಮರಣ ಹೊಂದಿದರು. ಸರಕಾರದ ಗೌರವಗಳೊಡನೆ ಅವರ ಅಂತ್ಯವಿಧಿಯು ನೆರವೇರಿತು."

* **ಚಟರ್ಜಿ, ರಾಮಾನಂದ** (೧೮೬೫-೧೯೪೩) : ಹಿಂದೂಸ್ಥಾನದ ವಿಶ್ವವಿಖ್ಯಾತ ಸಂಪಾದಕರು ಹಾಗೂ ರಾಷ್ಟ್ರೀಯ ಮನೋಭಾವದ ಸದ್ಗೃಹಸ್ಥರು. ಬಂಗಾಲದ ಹೆಸರಾದ ಚಟ್ಟೋಪಾಧ್ಯಾಯ ಬ್ರಾಹ್ಮಣ ಕುಲದಲ್ಲಿ ಜನ್ಮ, ಕಲಕತ್ತೆಯಲ್ಲಿ ಕಾಲೇಜು ಶಿಕ್ಷಣವನ್ನು ಪಡೆಯುತ್ತಿರುವಾಗಲೇ 'ದಾಸಿ' ಎಂಬ ನಿಯತಕಾಲಿಕೆಯ ಸಂಪಾದಕರಾದರು. ತರುವಾಯ ಪ್ರಯಾಗದ ಕಾಯಸ್ಥ ಕಾಲೇಜಿನಲ್ಲಿ ಪ್ರಾಧ್ಯಾಪಕರಾದರು. ಮುಂದೆ ಅಲಹಾಬಾದ ವಿಶ್ವವಿದ್ಯಾಲಯದಲ್ಲಿ ಫೆಲೊ ಕೂಡ ಆದರು. ಆದರೆ ಮುಂದೆ ಮಾತ್ರ ಅವರು ಸಂಪಾದಕ ವೃತ್ತಿಯನ್ನು ಸ್ವೀಕರಿಸಿದರು. ಕೆಲವು ಕಾಲ 'ಇಂಡಿಯನ್ ಮೆಸೆಂಜರ್' ಪತ್ರಿಕೆಯ ಸಂಪಾದಕರಾಗಿದ್ದರು. ಮುಂದೆ ೧೯೦೧ ರಲ್ಲಿ ಅವರು 'ಪ್ರದೀಪ' ಎಂಬ ನಿಯತಕಾಲಿಕೆ ಹಾಗೂ ಪ್ರವಾಸಿ' ಎಂಬ ಬಂಗಾಲಿ ಮಾಸಪತ್ರಿಕೆಯನ್ನು ಶುರು ಮಾಡಿದರು. ೧೯೦೭ ರಲ್ಲಿ ಸುಪ್ರಸಿದ್ಧ ಆಂಗ್ಲ ಮಾಸಪತ್ರಿಕೆ, 'ಮಾಡರ್ನ್ ರಿವ್ಯು'ವನ್ನು ಶುರು ಮಾಡಿದರು. ಇವುಗಳಲ್ಲಿ ಕೊನೆಯವೆರಡು ದೀರ್ಘ ಕಾಲ ನಡೆದವು. ಅವರು ವೃತ್ತಪತ್ರ ಸೃಷ್ಟಿಯಲ್ಲಿ ಮಹತ್ವದ ಸ್ಥಾನವನ್ನು ಗಿಟ್ಟಿಸಿದರು. ಅವರು ಬ್ರಹ್ಮ ಸಮಾಜದ ಕರ್ತೃ, ಅನುಯಾಯಿ. ರಾಜಕೀಯದಲ್ಲಿ ಪೂರ್ತಿ ಸ್ವಾತಂತ್ರವಾದಿಯಾಗಿದ್ದರು. ಅವರು 'Towards Home Rule' ಎಂಬ ಗ್ರಂಥಮಾಲೆಯನ್ನು ಆರಂಭಿಸಿ ಲೋ. ತಿಲಕರು ಶುರು ಮಾಡಿದ ಸ್ವರಾಜ್ಯದ ಚಳುವಳಿಗೆ ಉತ್ಕೃಷ್ಟವಾದ ನೆರವನ್ನು ನೀಡಿದರು. ಇದೇ ರೀತಿಯಾಗಿ ಅವರು ಮಿ. ಜೆ. ಟಿ. ಸದರ್ಲ್ಯಾಂಡ್ ಅವರ 'ಇಂಡಿಯಾ ಇನ್ ಬಾಂಡೇಜ್' ಪುಸ್ತಕವನ್ನು ಪ್ರಕಟಿಸಿ ಇಲ್ಲಿಯ ಬ್ರಿಟಿಷ್ ರಾಜನೀತಿಯ ಮೇಲೆ ಝಗಝಗಿಸುವ ಬೆಳಕನ್ನು ಬೀರಿದರು. ಕೊನೆಯಲ್ಲಿ ಸರಕಾರ ಈ ಪುಸ್ತಕವನ್ನು ಮುಟ್ಟುಗೋಲು ಹಾಕಿತು. ಇವರು ರಾಷ್ಟ್ರಸಭೆಯ ಅನುಯಾಯಿಯಾಗಿದ್ದರು. ಆದರೆ ರಾಷ್ಟ್ರಸಭೆಯು ಮುಸಲ್ಮಾನರನ್ನು ಕುರಿತು ತಳೆದ

೧ : ಮರಾಠೀ ವಿಶ್ವಕೋಶ ; ೫, ಪು. ೬೭೯-೬೮೧.

* : ಮರಾಠೀ ವಿಶ್ವಕೋಶ : ೬, ಪು.೯೩೪.

ಧೋರಣೆಯು ಅವರಿಗೆ ಒಪ್ಪಿತವಾಗದ್ದರಿಂದ ಅವರು ಹಿಂದೂಸಭೆಯನ್ನು ಪ್ರವೇಶಿಸಿದರು. ಸುರತದಲ್ಲಿ ನೆರವೇರಿದ ಅಖಿಲ ಭಾರತೀಯ ಹಿಂದು ಮಹಾಸಭೆಯ ಅಧಿವೇಶನದ ಅಧ್ಯಕ್ಷರಾಗಿದ್ದರು (ಎಪ್ರಿಲ್ ೧೯೨೯),

**ಚೆಟ್ಟಿ, ಸರ್ ತ್ಯಾಗರಾಯ** (೧೮೫೨-೧೯೨೫) :- ದಕ್ಷಿಣದ ಬ್ರಾಹ್ಮಣೇತರ ಚಳುವಳಿಯ ನಾಯಕರು, ತ್ಯಾಗಿಗಳು ಹಾಗೂ ದಾನಶೂರರು. ತಮ್ಮ ಪಕ್ಷವು ಚುನಾಯಿತವಾಗಿ ಬಂದ ಬಳಿಕವೂ ಅವರು ದಿವಾಣ ಪದವನ್ನು ಸ್ವೀಕರಿಸಲಿಲ್ಲ.

**ಜಯಕರ, ಬ್ಯಾ, ಮುಕುಂದರಾವ ರಾಮರಾವ** (೧೮೭೩-೧೯೫೯) :- ಒಬ್ಬ ಬ್ರಾಹ್ಮಣೇತರ ರಾಜಕಾರಣಿ, ಸಮಾಜಕಾರಣಿ ಹಾಗೂ ವಿಶ್ವವಿಖ್ಯಾತ ಕಾನೂನು ಪಂಡಿತರು. ಮುಂಬಯಿಯ 'ಆರ್ಯನ್ ಎಜ್ಯುಕೇಶನ್ ಸೊಸೈಟಿ'ಯ ಸಂಸ್ಥಾಪಕರು. ರಾಷ್ಟ್ರೀಯ ಪಕ್ಷದ ಪ್ರಮುಖ ಮುಂದಾಳುವಾಗಿ ಲಂಡನ್ನಿನ ದುಂಡುಮೇಜಿನ ಪರಿಷತ್ತಿನಲ್ಲಿ ಒಬ್ಬ ಪ್ರತಿನಿಧಿಯಾಗಿದ್ದರು. ೧೯೪೮ರಲ್ಲಿ ಸ್ಥಾಪಿಸಲಾದ ಪುಣೆ ವಿಶ್ವವಿದ್ಯಾಲಯಕ್ಕೆ ಕೆಲವು ವರ್ಷ ಉಪಕುಲಪತಿಯಾಗಿದ್ದರು. ಇಂಗ್ಲಿಷ್ ಭಾಷೆಯ ಮೇಲೆ ಪ್ರಭುತ್ವ, ನುರಿತ ವಾಗ್ಮಿ, ಎಂದು ಪ್ರಸಿದ್ದರು.

**ಜೇಧೆ, ಕೇಶವರಾವ ಮಾರುತಿರಾವ** (೧೮೯೬-೧೯೫೧) :- ತಮ್ಮ ಶುರುವಿನ ಕಾರ್ಯಕಾಲದಲ್ಲಿ ಬ್ರಾಹ್ಮಣೇತರ ಪಕ್ಷದಲ್ಲಿದ್ದ ಸತ್ಯಶೋಧಕ ಸಮಾಜದ ಕಟ್ಟುನಿಟ್ಟಿನ ಪುರಸ್ಕರ್ತರು. ಮುಂದೆ ಕಾಂಗ್ರೆಸ್ಸಿನ ಮುಂದಾಳು. ೧೯೨೩ ರಲ್ಲಿ 'ತರುಣ ಮರಾಠಾ ಪಕ್ಷದ ಸ್ಥಾಪನೆ ಹಾಗೂ 'ಶಿವಸ್ಮಾರಕ' ವಾರಪತ್ರಿಕೆಯ ಶುರುವಾಯಿತು. ೧೯೨೪ ರಲ್ಲಿ 'ಮಜೂರ' ದಿನಪತ್ರಿಕೆಯ ಶುರುವಾಯಿತು. ದಿನಕರರಾವ ಜವಳಕರರನ್ನು ಜೊತೆಗೂಡಿ ಮುಂಬಯಿಯಲ್ಲಿ 'ಕೈವಾರಿ' ವಾರಪತ್ರಿಕೆಯ ಶುರುವಾಯಿತು. ಮುಂದೆ ಅವರಿಬ್ಬರಲ್ಲಿ ಭಿನ್ನಮತ. ಮುಂಬಯಿ ಇಲಾಖೆಯ ಶೇತಕರಿ (ಕೃಷಿಕ) ಪರಿಷತ್ತಿನ ಪ್ರವರ್ತಕರು. ೧೯೩೩ ರಲ್ಲಿ 'ಹರಿಜನ ಸೇವಕ ಸಂಘ'ದ ಪುಣೆ ಶಾಖೆಯ ಅಧ್ಯಕ್ಷರು. ೧೯೩೫ ರಲ್ಲಿ ಕಾಂಗ್ರೆಸ್ಸಿನ ವತಿಯಿಂದ ಮಧ್ಯವರ್ತಿ ಅಸೆಂಬ್ಲಿಗೆ ಚುನಾಯಿತರು. ಕೆಲಕಾಲ ಮಹಾರಾಷ್ಟ್ರ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು. ಮುಂದೆ ಕಾಂಗ್ರೆಸ್ಸನ್ನು ತೊರೆದು ಬಹುಜನ ಪಕ್ಷದ ಸ್ಥಾಪನೆ. ಕೃಷಿಕರು ಹಾಗೂ ಕಾರ್ಮಿಕರ ಸಂಘಟನೆ.

**ಠಕ್ಕರ, ಅಮೃತಲಾಲ್ ವಿಠಲದಾಸ** (೨೯ ನವೆಂಬರ್ ೧೮೬೯-೧೯ ಜನೆವರಿ ೧೯೫೧):ಗುಜರಾತದ ಸಮಾಜ ಸುಧಾರಕರು. ಅವರು 'ಠಕ್ಕರಬಾಪ್ಪಾ' ಎಂದೂ ಗುರುತಿಸಲ್ಪಡುತ್ತಿದ್ದರು. ಭಾವನಗರದಲ್ಲಿ ಜನ್ಮ, ಪುಣೆಯ ಎಂಜಿನೀಯರಿಂಗ್ ಕಾಲೇಜಿನಿಂದ 'ಎಲ್. ಸಿ. ಈ. (೧೮೯೦). ಮುಂದೆ ಅವರು ವಢವಾಣ ಮತ್ತು ಪೋರಬಂದರ ಸಂಸ್ಥಾನಗಳಲ್ಲಿ (೧೮೯೮-೯೯), ಪೂರ್ವ ಆಫ್ರಿಕೆಯಲ್ಲಿ (೧೮೯೯-೧೯೦೨) ಹಾಗೂ ಸಾಂಗ್ಲಿ ಸಂಸ್ಥಾನದಲ್ಲಿ (೧೯೦೪-೧೯೦೫) ಎಂಜಿನೀಯರಾಗಿ ಕೆಲಸದಲ್ಲಿ ದರು. ಅವರು ಮುಂಬಯಿ ಮಹಾನಗರ ಪಾಲಿಕೆಯಲ್ಲಿ ಕೆಲಸಕ್ಕಿದ್ದರು. ಈ ನೌಕರಿಯನ್ನು ಮಾಡುತ್ತಿರುವಾಗಲೇ ಅವರ ಗಮನವು ಅಸ್ಪೃಶ್ಯ ಜಾತಿಗಳ ಕೀಳುಮಟ್ಟದ ಅವಸ್ಥೆಯತ್ತ ಹೋಯಿತು. ಹೀಗಾಗಿ ಅವರ ಉದ್ಧಾರಕ್ಕಾಗಿ ಹೆಣಗತೊಡಗಿದರು. ೧೯೧೪ ರಲ್ಲಿ ಮುಂಬಯಿ ಮಹಾನಗರ ಪಾಲಿಕೆಯ ನೌಕರಿಯನ್ನು ಬಿಟ್ಟು 'ಭಾರತ ಸೇವಕ ಸಮಾಜ'ದ ಸದಸ್ಯರಾದರು. ಆಸಾಮ, ಉತ್ತರ ಪ್ರದೇಶ, ಪ. ಬಂಗಾಲ, ಗುಜರಾತ ಹಾಗೂ ಓರಿಸ್ಸಾಗಳಲ್ಲಿ ಬರಪರಿಹಾರದ ಕೆಲಸಗಳನ್ನು ಮಾಡಿದರು. ಓರಿಸ್ಸಾದಲ್ಲಿ ಇರುವಾಗ ಅವರು ಪಂಚಮಹಾಲ ಜಿಲ್ಲೆಯ ಭಿಲ್ಲರ ಜೀವನವನ್ನು ಹತ್ತಿರದಿಂದ ಕಂಡುದರಿಂದ

ಅವರ ಗಮನವು ಹರಿಜನರಿಂದ ಗಿರಿಜನರತ್ತ ತಿರುಗಿತು. ಅವರು 'ಭಿಲ್ಲ ಸೇವಾ ಮಂಡಳ' ಮತ್ತು 'ಅಂತ್ಯಜ ಸೇವಾ ಮಂಡಳ'ಗಳನ್ನು ಸ್ಥಾಪಿಸಿದರು (೧೯೨೩-೨೫), ಭಿಲ್ಲ ಸಮುದಾಯದ ಅಜ್ಞಾನ ಮತ್ತು ವ್ಯಸನಾಧೀನತೆಗಳನ್ನು ದೂರಗೊಳಿಸಲು ಹಾಗೂ ಅವರಿಗಾಗುವ ಅನ್ಯಾಯವನ್ನು ದೂರಗೊಳಿಸಲು ಶ್ರಮಪಟ್ಟರು. ಅಸ್ಪೃಶ್ಯರಿಗಾಗಿ ಬಾವಿ ಹಾಗೂ ಭಂಗಿಯವರಿಗಾಗಿ ಧರ್ಮಶಾಲೆಗಳನ್ನು ಕಟ್ಟಲು ಮುಂದಾದರು. ಅವರು ಮ. ಗಾಂಧಿಯವರ ಚಳುವಳಿಯೊಂದಿಗೆ ಸಂಬಂಧವನ್ನು ಹೊಂದಿಲ್ಲದಿದ್ದರೂ ಸರಕಾರವು ಅವರನ್ನು ಬಂಧಿಸಿ ಅವರಿಗೆ ಶಿಕ್ಷೆಯನ್ನು ವಿಧಿಸಿತು. ಆದರೆ ಮುಂದೆ ಅಪೀಲಿನಲ್ಲಿ ಅವರು ಬಿಡುಗಡೆ ಹೊಂದಿದರು (೧೯೩೦), ಮ. ಗಾಂಧಿಯವರು ಜಾತೀಯ ತೀರ್ಪಿನಲ್ಲಿ ಅಸ್ಪೃಶ್ಯರಿಗೆ ನೀಡಲಾದ ಸ್ವತಂತ್ರ ಮತದಾರ ಸಂಘಗಳು ರದ್ದಾಗಬೇಕೆಂದು ಆರಂಭಿಸಿದ ಚಳುವಳಿಯಲ್ಲಿ ಠಕ್ಕರಬಾಪ್ಪಾ ಅವರು ಎಲ್ಲಕ್ಕೂ ದೊಡ್ಡ ಪಾಲನ್ನು ಹೊತ್ತುಕೊಂಡರು. ಅವರು ೧೯೩೨ ರಲ್ಲಿ 'ಹರಿಜನ ಸೇವಕ ಸಂಘದ ಮುಖ್ಯ ಕಾರ್ಯದರ್ಶಿಗಳಾದರು. ೧೯೩೭ ರಲ್ಲಿ ಕಾಂಗ್ರೆಸ್ಸಿನ ಸಚಿವ ಸಂಪುಟಗಳು ಅಧಿಕಾರಕ್ಕೆ ಬಂದ ಕಾಲಕ್ಕೆ ಅವರಿಗೆ ಬೇರೆ ಬೇರೆ ಪ್ರಾಂತಗಳ ಹರಿಜನರು, ಆದಿವಾಸಿಗಳು, ಮುಂ, ಹಿಂದುಳಿದವರ ಸರ್ವೇಕ್ಷಣೆಯನ್ನು ಮಾಡುವ ಕೆಲಸವನ್ನು ಒಪ್ಪಿಸಲಾಯಿತು. ಅವರು ಅದನ್ನು ಬಲು ಪ್ರಯತ್ನಪೂರ್ವಕವಾಗಿ ನಿರ್ವಹಿಸಿದರು. ಮುಂದೆ ಅವರು ೧೯೫೦ ರಲ್ಲಿ ದೇಶದಲ್ಲೆಲ್ಲ ಸುತ್ತಿ ಆದಿವಾಸಿಗಳ ಮಾಹಿತಿಯನ್ನು ಕಲೆಹಾಕಿದರು. ಅದನ್ನಾಧರಿಸಿಯೇ ಮುಂದೆ ಆದಿವಾಸಿಗಳ ಕಲ್ಯಾಣದ ಕಾನೂನುಗಳನ್ನು ರಚಿಸಲಾಯಿತು. ಅವರು 'ಆದಿವಾಸಿ ಸೇವಾ ಮಂಡಳ'ವನ್ನು ಸ್ಥಾಪಿಸಿದರು. ಅವರು ತೀರ ಸಾದಾ ಜೀವನವನ್ನು ಸಾಗಿಸುತ್ತಿದ್ದರು.೧

**ಡಾಂಗೆ, ಕಾಮ್ರೆಡ್ ಶ್ರೀಪಾದ ಅಮೃತ** (೧೮೯೯) :- ಒಬ್ಬ ಹಿಂದಿ ಕಮ್ಯುನಿಸ್ಟ್ ನಾಯಕ ಹಾಗೂ ಸಮಾಜಕಾರ್ಯಕರ್ತರು, ಮುಂಬಯಿಯ ವಿಲ್ಸನ್ ಕಾಲೇಜಿಗೆ ಬಂದಾಗಿನಿಂದ ಇಂಗ್ಲಿಷ್ನಲ್ಲಿ ಬರೆಯುವ, ಮಾತನಾಡುವ ಹಾಗೂ ಕವಿತೆ ಬರೆಯುವ ಅಭ್ಯಾಸ. ೧೯೨೨ ರಲ್ಲಿ 'ಸೋಸಿಯಾಲಿಸ್ಟ್ ಪತ್ರವನ್ನು ಶುರು ಮಾಡಿ ಸಮಾಜವಾದಿ ಮತವನ್ನು ಪ್ರಚಾರ ಮಾಡಿದರು. ಸಹಕಾರಿಗಳ ನೆರವಿನಿಂದ ಕಾನಪುರದಲ್ಲಿ ೧೦೨೫ ರಲ್ಲಿ 'ಕಮ್ಯುನಿಸ್ಟ್ ಪಾರ್ಟಿಯ ಸ್ಥಾಪನೆ. 'ಮೀರತ್ ಕೇಸ್' ಪ್ರಕರಣದಲ್ಲಿ ೧೯೨೯ ರಲ್ಲಿ ೧೨ ವರ್ಷಗಳ ಶಿಕ್ಷೆ, ಆದರೆ ಅಪೀಲಿನಲ್ಲಿ ಅದು ೩ ವರ್ಷಗಳ ಶಿಕ್ಷೆಯೆಂದು ತೀರ್ಮಾನವಾಗಿ ೧೯೩೫ ರಲ್ಲಿ ಬಿಡುಗಡೆ. ತರುವಾಯ 'ಕ್ರಾಂತಿ' ಎಂಬ ಮರಾಠಿ ಮತ್ತು 'ನ್ಯಾಶನಲ್ ಫ್ರಂಟ್' ಎಂಬ ಇಂಗ್ಲಿಷ್ ವಾರಪತ್ರಿಕೆಗಳ ಪ್ರಕಟಣೆ. ೧೯೩೯ ರಲ್ಲಿ ಮುಂಬಯಿಯಲ್ಲಿ ತುಟ್ಟಿಭತ್ಯೆಗಾಗಿ ಎಂಬತ್ತು ಸಾವಿರ ಕಾರ್ಮಿಕರ ಮುಷ್ಕರದ ನಾಯಕತ್ವ, ಪ್ಯಾರಿಸ್ಸಿನಲ್ಲಿ ನೆರವೇರಿದ ವಿಶ್ವ ಕಾರ್ಮಿಕ ಪರಿಷತ್ತಿಗೆ ಎಲ್ಲ ವಸಾಹತುಗಳ ಮುಂದಾಳುವಾಗಿ ಅವುಗಳ ಸ್ವಾತಂತ್ರ್ಯಕ್ಕೆ ಮಾನ್ಯತೆಯನ್ನು ಪಡೆದುಕೊಂಡರು. 'ಲೆನಿನ್ ಮತ್ತು ಗಾಂಧಿ', 'ವೈದಿಕ ಕಾಲದ ಇತಿಹಾಸ' ಮೊದಲಾದ ಪುಸ್ತಕಗಳನ್ನು ಬರೆದರು.

**ತುಕಾರಾಮ** (೧೬೦೮-೦೯ ಮಾರ್ಚ್ ೧೬೫೦) :- ವಾರಕರಿ ಸಂಪ್ರದಾಯದ ನಾಲ್ವರು ಶ್ರೇಷ್ಠ ಸಂತರಲ್ಲಿ ಕೊನೆಯ ಸಂತಕವಿ. ತಂದೆಯ ಹೆಸರು ಬೋಲ್ಹೋಬಾ ಅಥವಾ ಬಾಳೋಬಾ. ಅಮ್ಮನ ಹೆಸರು ಕನಕಾಯಿ, ಕುಲನಾಮ ಮೋರೆ. ಉಪನಾಮ ಅಂಬಿಲೆ. ತುಕಾರಾಮ ಮಹಾರಾಜರ [ಗೌರವಸೂಚಕ ಶಬ್ದ] ಹುಟ್ಟೂರು ದೇಹು (ಪುಣೆ ಜಿಲ್ಲೆ), ಅವರು ಶೂದ್ರ ಅಥವಾ ಕುಣಬಿ (ಒಕ್ಕಲಿಗ)

೧ : ಮರಾಠಿ ವಿಶ್ವಕೋಶ : ೬, ಪು. ೯೩೪.



ಎಂದು ತಮ್ಮ ಜಾತಿಯನ್ನು ಉಲ್ಲೇಖಿಸುತ್ತಾರೆ.

ತುಕಾರಾಮ ಮಹಾರಾಜರ ಹಿಂದಿನ ಎಂಟು ತಲೆಮಾರುಗಳ ಮಾಹಿತಿ ಲಭ್ಯ. ಅವರ ಹಿಂದಿನ ಎಂಟನೆಯ ತಲೆಮಾರಿನ ಪ್ರಮುಖರಾದ ವಿಶ್ವಂಭರರಿಗೆ ಹೊಲದಲ್ಲಿ ಒಂದು ವಿಠಲ ರಖುಮಾಯಿಯ ವಿಗ್ರಹಗಳು ಸಿಕ್ಕವು. ಅವರು ಅವುಗಳನ್ನು ಹೊಳೆ ದಂಡೆಯ ಮೇಲಿನ ಒಂದು ಮನೆಯಲ್ಲಿ ಪ್ರತಿಷ್ಠಾಪಿಸಿದರು. ಈ ಮನೆಯನ್ನು 'ದೇಊಳವಾಡಾ' ಎಂದು ಗುರುತಿಸಲಾಗುತ್ತಿತ್ತು.

ತುಕಾರಾಮ ಮಹಾರಾಜರ ವಂಶವೃಕ್ಷವು ಹೀಗಿದೆ : ವಿಶ್ವಂಭರ-ಹರಿ-ವಿಠೋಬಾ ಪದಾಜಿಶಂಕರ-ಕಾನ್ಹೋಬಾ-ಬೋಲೊಬಾ ಹಾಗೂ ತುಕಾರಾಮ ಮಹಾರಾಜ ಚೈತನ್ಯ, ತುಕಾರಾಮ ಮಹಾರಾಜರ ಅಮ್ಮನಿಗೆ ಸಾವಜಿ, ತುಕಾರಾಮ ಮತ್ತು ಕಾನ್ಹೋಬಾ ಎಂಬ ಮೂರು ಜನ ಮಕ್ಕಳು. ಕೆಲವು ಸಂಶೋಧಕರು ಅವಳಿಗೆ ಇಬ್ಬರು ಹೆಣ್ಣು ಮಕ್ಕಳೂ ಹುಟ್ಟಿದ್ದರೆಂದು ಹೇಳುತ್ತಾರೆ.

ತುಕಾರಾಮ ಮಹಾರಾಜರ ಶಿಕ್ಷಣವು ಆ ಕಾಲದ ಸುಸಂಸ್ಕೃತ ಮನೆತನದ ವ್ಯಕ್ತಿಯಂತೆಯೇ ಆಯಿತೆಂದು ಕಾಣುತ್ತದೆ. ಅವರ ಸಾಹಿತ್ಯದಲ್ಲಿ ಸಂಸ್ಕೃತ-ಪ್ರಾಕೃತ ಗ್ರಂಥಗಳ ವ್ಯಾಪಕವಾದ ಅಧ್ಯಯನ ಹಾಗೂ ಆಳವಾದ ವ್ಯಾಸಂಗದ ಹಲವು ಪ್ರಮಾಣಗಳು ಸಿಕ್ಕುತ್ತವೆ. ಭಕ್ತಿಮಾರ್ಗದಲ್ಲಿ ಇರುವಾಗಲೂ ಅವರಿಗೆ ಪಾತಂಜಲ ಯೋಗಮಾರ್ಗದ ಬೋಧನೆ ಲಭಿಸಿತ್ತೆಂಬ ಸಂಗತಿಯು ಅವರ ಕೆಲವು ಅಭಂಗಗಳಿಂದ ಕಂಡುಬರುತ್ತದೆ. ತಮ್ಮ ಒಡೆತನದ ಪಾಂಡುರಂಗನ ದೇವಾಲಯವಿದ್ದ ಕಾರಣ ಅಲ್ಲಿ ನಡೆಯುವ ನಿತ್ಯನೈಮಿತ್ಯಕ ಭಜನೆ, ಕೀರ್ತನೆ, ಪುರಾಣಗಳನ್ನು ಆಲಿಸಿದ್ದರಿಂದ ಚಿಕ್ಕ ವಯಸ್ಸಿನಲ್ಲಿಯೇ ಅವರಿಗೆ ಬಹುಶ್ರುತತೆ ಲಭಿಸಿತ್ತು. ಮನೆಯ ವ್ಯವಹಾರವನ್ನು ನೋಡಿಕೊಳ್ಳಲೆಂದು ಅವರಿಗೆ ಲೇಖನವಾಚನ-ಜಮಾಖರ್ಚುಗಳ ಶಿಕ್ಷಣವೂ ಅಪರಿಹಾರ್ಯವಾಗಿತ್ತು,

ಅವರು ಚಿಕ್ಕಂದಿನಲ್ಲಿ ಚೆಂಡುಹಲಗೆ, ದನಗಾಹಿಯಾಟ, ಕಬಡ್ಡಿ ಚಿಣಿಕೋಲುಯಂತಹ ಹಲವು ಆಟಗಳನ್ನು ಆಡುತ್ತಿದ್ದಿರಬೇಕು. ಅವರು ಚಿಣಿಕೋಲಾಟ, ಗೌಳಿಗರಾಟ, ಮೊದಲಾದವುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿರಬೇಕು. ಅವರು ಆಟಗಳನ್ನು ಕುರಿತು ಹಲವು ಉತ್ತಮವಾದ ಅಭಂಗಗಳನ್ನು ರಚಿಸಿರುವರು. ತುಕಾರಾಮರ ಗಾಥೆಯಲ್ಲಿ ಕಂಡಷ್ಟು ಬಗೆ ಬಗೆಯ ಆಟಗಳು ಇನ್ನಾವ ಸಂತನ ಸಾಹಿತ್ಯದಲ್ಲಿಯೂ ಕಾಣಬರದು. ಹದಿನಾಲ್ಕನೆಯ ವಯಸ್ಸಿನವರಿದ್ದಾಗ ಅವರ ಮೊದಲ ಮದುವೆಯಾಯಿತು. ಆದರೆ ಅವರ ಮೊದಲ ಹೆಂಡತಿ ರಖುಮಾಯಿ ದುರ್ಬಲತೆ ಹಾಗೂ ಬೇನೆಯಿಂದ ಬಳಲುವವಳಾಗಿದ್ದಳು. ಹೀಗಾಗಿ ಇವರ ಎರಡನೆಯ ಮದುವೆಯು ಪುಣೆಯ ಹತ್ತಿರದ ಖೇಡ ಊರಿನ ಅಪ್ಪಾಜಿ ಗುಳವೆ ಅವರ ಮಗಳಾದ ಅವಲಾಯಿಯೊಡನೆ ಆಯಿತು. ಇವಳೇ ಜಿಜಾಯಿ.

ಚಿಕ್ಕಂದಿನಿಂದಾದ ಆಧ್ಯಾತ್ಮಿಕತೆಯ ಸಂಸ್ಕಾರಗಳು ಜಾಗೃತಗೊಂಡ ಕಾರಣ ಅವರಲ್ಲಿ ವೈರಾಗ್ಯ ತಲೆದೋರಿತು. ಅವರು ಅಧ್ಯಯನದತ್ತ ಸೆಳೆಯಲ್ಪಟ್ಟರು. ಅವರು ಒಂಟಿತನದಲ್ಲಿ ಮನರಮಿಸತೊಡಗಿದರು. ದೇಹು ಊರಿನ ಸುತ್ತಲಲ್ಲಿ ಸಹ್ಯಾದ್ರಿಯ ಹಲವು ಎತ್ತರದ ಬೆಟ್ಟಗಳಿವೆ. ಅವರು ಅಲ್ಲಿಗೆ ಹೋಗಿ ವಾಚನ-ಮನನ-ಚಿಂತನೆಗಳಲ್ಲಿ ಮುಳುಗುತ್ತಿದ್ದರು. ಅವರು ದೇಹುವಿನ ಉತ್ತರದಲ್ಲಿ ಇರುವ ಭಾಮನಾಥ ಅಥವಾ ಭಾಮಚಂದ್ರ ಗುಡ್ಡದ ಮೇಲಿನ ಗುಹೆಯಲ್ಲಿ ಕುಳಿತುಕೊಳ್ಳತೊಡಗಿದರು. ಅವರು ಇದೇ ತಾಣದಲ್ಲಿ ಕುಳಿತು ಭಗವದ್ಗೀತೆ, ಭಾಗವತ, ಜ್ಞಾನೇಶ್ವರಿ, ಏಕನಾಥ ಭಾಗವತ, ನಾಮದೇವ, ಮೊದಲಾದವರ ಗಾಥೆಗಳು, ಯೋಗವಾಸಿಷ್ಠ, ರಾಮಾಯಣ, ದರ್ಶನಗಳು, ಮೊದಲಾದವುಗಳ ವ್ಯಾಸಂಗವನ್ನು ಮಾಡಿದರು. ಮನದಲ್ಲಿರುವ ಪ್ರಿಯೆ, ಪತ್ರ, ಬಂಧುಗಳ

ನಂಟು ಹರಿಯಿತು. ಅಂಗಡಿಯಲ್ಲಿ ಕುಳಿತು ಕುಟುಂಬ ಮತ್ತು ದೇಹದ ಧಾರಣೆಯ ಮಟ್ಟಿಗೆ ಆಗುವ ಸಂಪಾದನೆಯಿಂದಲೇ ಅವರು ಸಂತಸಪಡಲಾರಂಭಿಸಿದರು (ಅಭಂಗ ೨೩೯೬), ಅವರ ಅಭಂಗಗಳಲ್ಲಿ ಶಬ್ದರತ್ನಗಳಂತೆಯೇ ಪವಾಡ ಮಾಡುವ ಬಾಬಾ ಜನರು, ಭವಿಷ್ಯ , ಶಕುನ ಹೇಳುವವರು, ಅವರ ಅಪಧರ್ಮ, ನಾಸ್ತಿಕರು, ಧಾರ್ಮಿಕರು, ಕರ್ಮಕಾಂಡದವರು ಅಥವಾ ಆಡಂಬರದವರು, ಮೊದಲಾದವರನ್ನೆಲ್ಲ ಖಡಾಖಂಡಿತವಾಗಿ ಖಂಡಿಸುವ ಶಸ್ತ್ರಾಸ್ತ್ರಗಳೂ ಕಂಡುಬರುತ್ತವೆ. ಮೇಲಿನ ಅಭಂಗಗಳಲ್ಲಿ ಅವರು ತಮ್ಮ ಶೈಲಿಯ ಸೂತ್ರವನ್ನು ನಿರೂಪಿಸಿರುವರು. ಅವರು ಅಭಂಗಗಳಲ್ಲಿ ತಮ್ಮನ್ನು 'ತುಕಾ' ಎಂದು ಉಲ್ಲೇಖಿಸುತ್ತಾರೆ.

ಅವರು ತಮ್ಮ ಜೀವನ ಹಾಗೂ ಅಭಂಗಗಳ ಮೂಲಕ ಶುದ್ಧ ಪರಮಾರ್ಥವನ್ನು ಸ್ಥಾಪಿಸುವ ಕಾರ್ಯವನ್ನು ಮುಂದುವರಿಸಿದರು. ಅವರ ಅಲೌಕಿಕ ಪ್ರತಿಭೆಯಿಂದ ಮೂಡಿ ಬಂದ ಅಮೃತವಾಣಿಯಿಂದ ಸಾಮಾನ್ಯರ, ಪ್ರತಿಷ್ಠಿತರ ಹಾಗೂ ಸುಸಂಸ್ಕೃತರ ಸಮಾಜವೆಲ್ಲ ಅವರು ಆಕರ್ಷಿಸಲ್ಪಟ್ಟಿತು. ಅವರು ಜೀವಿಸಿರುವಾಗಲೇ ಬ್ರಹ್ಮಸಾಕ್ಷಾತ್ಕಾರಿ ಮಹಾನ್ ಸಂತಕವಿ ಎಂದು ಮಹಾರಾಷ್ಟ್ರದ ತುಂಬೆಲ್ಲ ಅವರ ಕೀರ್ತಿ ಹರಡಿತ್ತು. ತಾವು ಕಳಚಿಕೊಂಡ ತಮ್ಮ ಅಹಂಕಾರವು ಜನರ ಹೊಗಳಿಕೆಯಿಂದ ಮತ್ತೆಲ್ಲಿ ತಲೆ ಎತ್ತುವುದೋ, ಎಂಬ ಹೆದರಿಕೆ ಅವರಿಗಿತ್ತು. ಆದರೂ ಅವರು ಆ ಮೋಹದ ಹಂತವನ್ನು ದಾಟಿದರು. ಅವರು, 'ನಾನು ವಿಠೋಬಾನ ದಿನಗೂಲಿಯವನು' ಎಂದು ಜನರಿಗೆ ಹೇಳಲು ಶುರು ಮಾಡಿದರು. ಅವರಿಗೆ ಮಹಾದೇವ, ವಿಠೋಬಾ, ನಾರಾಯಣ ಎಂಬ ಮೂವರು ಗಂಡುಮಕ್ಕಳು ಹಾಗೂ ಕಾಶಿ, ಭಾಗೀರಥಿ ಹಾಗೂ ಗಂಗಾ ಎಂಬ ಮೂವರು ಹೆಣ್ಣು ಮಕ್ಕಳಿದ್ದರು. ಹೀಗೆ ಒಟ್ಟಿನಲ್ಲಿ ಆರು ಜನ ಮಕ್ಕಳು. ಈ ಹೆಣ್ಣುಮಕ್ಕಳನ್ನು ಮೋರೆ, ಗಾಡೆ ಹಾಗೂ ಚಾಂಭುಲೀಕರ ಎಂಬ ಪ್ರತಿಷ್ಠಿತ ಮನೆತನಗಳಿಗೆ ಮದುವೆ ಮಾಡಿ ಕೊಟ್ಟಿದ್ದರು.

ಅವರು ಜಾತಿಪಾತಿ, ಉಚ್ಚನೀಚತೆಯ ಭೇದಗಳನ್ನು ನಿರಾಕರಿಸಿದರು. ವಿಷ್ಣುದಾಸರು ಜನ್ನಿಸಿ ಬರುವ ಕುಲವೇ ಪವಿತ್ರ ಕುಲ ಹಾಗೂ ಅಂಥ ದೇಶವೇ ಪವಿತ್ರ ದೇಶ, ಎಂಬುದು ಅವರ ನಿಲುವಾಗಿತ್ತು. ಸಾಮಾನ್ಯರಿಗೆ ಸೂಕ್ತವಾದ ಸನ್ಮಾರ್ಗವನ್ನು ತೋರಿಸಬೇಕು. ಜನರು ಭೂತಪ್ರೇತಗಳ ಸಾಧನೆ, ಜಟಾಭಾರವನ್ನು ಬೆಳೆಸುವ ದಾಂಭಿಕರು, ಶಕುನ ಹೇಳುವ ಭವಿಷ್ಯವಾದಿಗಳು, ಕ್ಷುದ್ರ ದೇವತೆಗಳ ಉಪಾಸನೆ, ಮೊದಲಾದ ಸಂಗತಿಗಳಿಂದ ದೂರವಿರಬೇಕೆಂದು ಅವರಿಗೆ ಅನ್ನಿಸುತ್ತಿತ್ತು. ಸಗುಣನಿರ್ಗುಣಗಳು ಒಂದೇ ಆಧ್ಯಾತ್ಮಿಕ ಸಾಕ್ಷಾತ್ಕಾರದ ಬದಿಗಳಾಗಿವೆ; ವಾಸನೆಯು

ಸಂಪೂರ್ಣವಾಗಿ ವಿಲೀನ ಹೊಂದಿ ಅವಿಚಲ ಸ್ಥಿತಿಯನ್ನು ಅನುಭವಿಸುವಂತಾಗುವುದೇ ಅಂಥ ಸಾಕ್ಷಾತ್ಕಾರದ ಫಲ, ಎಂದು ಅವರು ಹೇಳಿದರು. ತುಕಾರಾಮರ ಅಭಂಗ-ಗಾಥೆಯು ಮರಾಠಿ ಸಾಹಿತ್ಯದಲ್ಲಿ ದೃಢವಾದ ಸ್ಥಾನವನ್ನು ಪಡೆದಿದೆ. ತುಕಾರಾಮರು ಸಾಧಕದೆಸೆಯ 'ಮಾನಸೀ ಝಾಲೇಲೇ ಸಂವಾದ (ಮನದಲ್ಲಿ ನಡೆದ ಸಂವಾದ)' ಮತ್ತು 'ನಾನಾ ಬುದ್ಧೀಚೇ ತರಂಗ (ಬುದ್ಧಿಯ ಬಗೆಬಗೆಯ ತರಂಗಗಳು)'ಗಳನ್ನು ಉತ್ಕಟತೆಯಿಂದ ವ್ಯಕ್ತಪಡಿಸಿದರು. ಅವರ ಗಾಥೆಯಲ್ಲಿ, ಸಂಸಾರದಲ್ಲಿ ಎದುರಾದ ಸನ್ನಿವೇಶಗಳು, ಜನರಲ್ಲಿ ಪಡೆದ ಕೆಲವು ಅನುಭವಗಳು ಹಾಗೂ ಅಭಂಗರೂಪದ ವರ್ಣನೆಗಳು ಕಂಡುಬರುತ್ತವೆ. ಸಂಸಾರವಂತರಿಗೆ ಮಾಡಿದ ನೀತಿಯ ಉಪದೇಶ ಹಾಗೂ ಸಮಾಜದ ದಾಂಭಿಕತೆಗಳ ಮೇಲೆ ಮಾಡಿದ ಪ್ರಹಾರಗಳು ಕೂಡ ಅವರ ಅಭಂಗವಾಣಿಯ ದೊಡ್ಡ ವಿಷಯಗಳಾಗಿವೆ. ಲೌಕಿಕದ ನಾನಾ ಬಗೆಯ ಕ್ಷೇತ್ರಗಳ ಉಪಮೆ, ರೂಪಕ, ಮೊದಲಾದ ಅಲಂಕಾರಗಳನ್ನು ಅದರಲ್ಲಿ ಮಾರ್ಮಿಕವಾಗಿ ಬಳಸಿದುದು



ಕಂಡುಬರುತ್ತದೆ. ಸುಭಾಷಿತದಂತಹ ವಚನಗಳಿಂದ ಈ ಅಭಂಗವಾಣಿಯು ಅಲಂಕೃತಗೊಂಡಿದೆ. ಅದು ಮರಾಠಿ ಭಾಷೆಯ ಒಂದು ಅಂಗವಾಗಿದ್ದು ಜನಸಾಮಾನ್ಯರ ಬಾಯಲ್ಲಿ ಕಾಯಮ್ಮಾಗಿ ನೆಲೆಸಿದೆ. ಉತ್ಸ್ಫೂರ್ತ, ಉತ್ಕಟ ಹಾಗೂ ಅಲ್ಪಾಕ್ಷರಸುಂದರವಾದ ಅಭಂಗವಾಣಿಯು ಆಧುನಿಕ ಮರಾಠಿ ಕವಿಗಳಿಗೆ ಸ್ಫೂರ್ತಿದಾಯಕವೂ ಅನುಕರಣೀಯವೂ ಅನ್ನಿಸಿತು. ಅದು ಮರಾಠಿ ಕಾವ್ಯದ ಒಂದು ಶಾಶ್ವತವಾದ ಆಭೂಷಣವೇ ಸರಿ."

ತುಕಾರಾಮರ "ಆಚರಣ ಪದ್ಧತಿಗೆ ಅತ್ಯುಚ್ಚವಾದ ತತ್ತ್ವಜ್ಞಾನ ಹಾಗೂ ಬಲು ಗಂಭೀರ ದರ್ಶನದ ಮಟ್ಟವನ್ನು ಒದಗಿಸುವ ಅವರ ಎರಡು ವಚನಗಳು ತುಂಬ ಮಹತ್ವದವೆನ್ನಿಸುತ್ತವೆ. ಅವೆರಡೂ ವಚನಗಳ ಆಶಯ ಪರಸ್ಪರಮೋಷಕ, ಪೂರಕವಾದುದು. ಅವುಗಳಲ್ಲಿ, ಮನವೇ ಗುರು ಹಾಗೂ ಮನವೇ ಶಿಷ್ಯ, ಎಂಬುದು ಒಂದು ವಚನ. ನಾನೇ ನನ್ನನ್ನು ಈದೆ [ಹೆತ್ತೆ), ಸ್ವಂತದ ಹೊಟ್ಟೆಯಿಂದ ಬಂದೆ, ಎಂಬುದು ಎರಡನೆಯ ಹೇಳಿಕೆ. ............ ತನ್ನ 'ಸ್ವ'ದ ಒಳತಿರುಳಿನಿಂದ ಉತ್ತೂರ್ತವಾಗಿ ಸಿಡಿದೆದ್ದು ಬರುವ ಇನ್ನು ಕೆಲವು ಅಂಶಗಳಿಂದಾಗಿ ಮನುಷ್ಯನು ಅತ್ಯುಚ್ಚವೆನ್ನಿಸಿದ ಗುರಿಯನ್ನು ತಲುಪುತ್ತಾನೆ .........ಅವನ ಮನದ ಅಣು-ಅಣುವಿನಲ್ಲಿ ಒಂದು ಬಗೆಯ ಸ್ಥಿತ್ಯಂತರ ಉಂಟಾಗುತ್ತದೆ. ಅವನ ಅಂತರಂಗದ ಪ್ರತಿಯೊಂದು ಜೀವಕೋಶವು ಒಂದು ಬಗೆಯ ರೂಪಾಂತರವನ್ನು ಹೊಂದುತ್ತದೆ. ಅವನ

ಅಸ್ತಿತ್ವವುಪುನರಚನೆಯನ್ನು ಹೊಂದಿತೇನೋ, ಎಂಬತಾಗುತ್ತದೆ. ಅವನ ವ್ಯಕ್ತಿತ್ವವು ಮರುಜನ್ಮವನ್ನು ಪಡೆದಂತಾಗುತ್ತದೆ. ಅದರಿಂದಾಗಿಯೇ ಅವನ ಮೌಲ್ಯಗಳು ಖಚಿತಗೊಳ್ಳುತ್ತವೆ. ದಾರಿ ಗಟ್ಟಿಯಾಗುತ್ತದೆ. ಧೈಯನಿಷ್ಠೆ ಸ್ಥಿರಗೊಳ್ಳುತ್ತದೆ."- "ಎಲ್ಲ ಪ್ರಾಣಿಗಳನ್ನು ಸಮಾನರೆಂದು ಬಗೆಯುವುದೇ ಶೀಲ, ಇದೇ ನಿಜವಾದ ಪೂಜೆ, ಎನ್ನುವ ಅವರ ನಿಲುವೆಂದರೆ ಧಾರ್ಮಿಕ ಕ್ಷೇತ್ರದ ಪವಿತ್ರತಮವಾದ ವಿಚಾರವೆನ್ನಬೇಕು."

**ಸ್ವಾಮಿ ದಯಾನಂದ ಸರಸ್ವತಿ** (೧೮೨೪-೧೮೮೩) :- ಆರ್ಯಸಮಾಜದ ಸಂಸ್ಥಾಪಕರು ಹಾಗೂ ಹಿಂದೂ ಧರ್ಮದ ಉದ್ಧಾರಕರು. ಮೋರಬಿ ಎಂಬ ಸಂಸ್ಥಾನದ ಔದಿಚ್ಯ ಬ್ರಾಹ್ಮಣ ಕುಲದಲ್ಲಿ ಜನ್ಮ ಮೂಲ ಹೆಸರು ಮೂಲಶಂಕರ. ಬ್ರಹ್ಮಚಾರಿಯಾಗಿ ಉಳಿದು ವೇದಾಧ್ಯಯನವನ್ನು ಮಾಡಲೆಂದು ಸ್ವಾಮಿ ಪೂರ್ಣಾನಂದರೆಂಬ ಮಹಾರಾಷ್ಟ್ರೀಯ ವಿದ್ವಾಂಸ ಸಂನ್ಯಾಸಿಯಿಂದ ಸಂನ್ಯಾಸ ದೀಕ್ಷೆ 'ಸ್ವಾಮಿ ದಯಾನಂದ' ಎಂಬ ಹೆಸರನ್ನು ಧರಿಸಿ ವೈದಿಕ ಜ್ಞಾನದ ಉಜ್ವಲ ಸ್ವರೂಪವನ್ನು ಜನರೆದುರು ಮಂಡಿಸಿದರು. ರೂಢಿಯಲ್ಲಿದ್ದ ವಿಗ್ರಹಪೂಜೆಯ ವಿರುದ್ಧ ಪ್ರಖರವಾಗಿ ಅಭಿಪ್ರಾಯವನ್ನು ಮಂಡಿಸಿದರು. ಗೋವಧೆಯ ವಿರುದ್ಧ ಉಗ್ರವಾದ ಚಳುವಳಿಯನ್ನು ಹೂಡಿದರು. ಶುದ್ಧಿ ಚಳುವಳಿಗಾಗಿ ತುಂಬ ಯತ್ನಿಸಿದರು. ೧೦ ಎಪ್ರಿಲ್ ೧೮೭೫ ರಂದು ಆರ್ಯಸಮಾಜವನ್ನು ಸ್ಥಾಪಿಸಿದರು. ಸತ್ಯಾರ್ಥಪ್ರಕಾಶ, ವೇದಗಳನ್ನು ಕುರಿತು ಭಾಷ್ಯ, ಮೊದಲಾದ ಗ್ರಂಥಗಳನ್ನು ಬರೆದರು. ಏನೆಲ್ಲವೂ ವೇದಗಳಲ್ಲಿದೆ, ಎಂಬ ಅತಿಶಯೋಕ್ತಿಯಿಂದ ಕೂಡಿದ ತಮ್ಮ ಅಭಿಪ್ರಾಯವನ್ನು ಪ್ರತಿಪಾದಿಸುವಾಗ ಅವರು ತೀರ ಇತ್ತೀಚಿನ ವೈಜ್ಞಾನಿಕ ಅನ್ವೇಷಣೆಗಳೂ ಕೂಡ ವೇದಗಳಲ್ಲಿವೆಯೆಂದು ಸ್ಥಾಪಿಸಲೋಸುಗ ಅವುಗಳ ಋಚೆಗಳನ್ನು ವಿಕ್ಷಿಪ್ತವಾಗಿ ಅರ್ಥೈಸುತ್ತಿದ್ದರು. ವೈದಿಕ ದಾರಿಯಲ್ಲಿ ಮುನ್ನಡೆದರೆ ಮಾತ್ರ

೧ : ಮರಾಠೀ ವಿಶ್ವಕೋಶ : ೭, ಪು. ३೯೧-३೯३.

೨ : ಸಾಳುಂಖೆ, ಪು. ೧೪३.

ಹಿಂದೂಸ್ಥಾನವನ್ನು ಉದ್ಧರಿಸಲು ಸಾಧ್ಯವೆಂದು ಹೇಳುವಾಗ ಅವರ ಯುಕ್ತಿವಾದವು ಬಲಹೀನವಾಗುತ್ತಿತ್ತು. ಅವರು ತಮ್ಮ ವಾಗ್ಮಿತೆಯನ್ನು ಆಧರಿಸಿ ಹಲವಾರು ಸಾಹಸಪೂರ್ಣವಾದ ಹೇಳಿಕೆಗಳನ್ನು ನೀಡುತ್ತಿದ್ದರು.

**ನರಿಮನ್, ಖುರಶೇದ್ ಫ್ರಾಮಜಿ** :- (೧೮೮೫-೧೯೪೯) ಒಬ್ಬ ಫಾರಸಿ ಹಿಂದೂ ಮುಂದಾಳು. ಯುವಕರ ಚಳುವಳಿಯನ್ನು ನಡೆಸುವಲ್ಲಿ ಮುಂದಾಗುತ್ತಿದ್ದರು. ಹಲವು ವರ್ಷಗಳ ಕಾಲ ಮುಂಬಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು. ೬ ಎಪ್ರಿಲ್ ೧೯೩೦ ರಂದು ಗಾಂಧಿಯವರಿಗಿಂತ ಮೊದಲು ಉಪ್ಪಿನ ಸತ್ಯಾಗ್ರಹ. ಪಂ. ಮೋತೀಲಾಲ್ ನೆಹರು ಕಮಿಟಿಯ ಯೋಜನೆಗೆ ವಿರೋಧ. ಹಲವು ವರ್ಷಗಳ ಕಾಲ ಮುಂಬಯಿ ಮುನಿಸಿಪಲ್ ಕಾರ್ಪೋರೇಶನ್ ಹಾಗೂ ಮುಂಬಯಿ ಕಾನೂನು ಮಂಡಳಗಳ ಸದಸ್ಯರು.

* **ನಾನಕ** (೧೪೬೯-೧೫೩೯) :- ಸೀಖ ಧರ್ಮದ ಸಂಸ್ಥಾಪಕರು, ತಲವಂಡಿ ರಾಯಿಬೋಯಿ ಎಂಬಲ್ಲಿ ಜನ್ಮ. ಅವರ ಮೂಲ ಹೆಸರು ನಾನಕನ್ ಸಾಹಿತ್, ತಂದೆಯ ಹೆಸರು ಕಾಲಿಯಾನದಾಸ ಬೇದಿ, ಇವರು ಆ ಊರಿನ ಕುಲಕರ್ಣಿಗಳಾಗಿದ್ದರು (ಮೆಹತಾ), ಅವರ ಮಡದಿ ಶ್ರೀಕೃಷ್ಣಾ, ನಾನಕರ ಶಿಕ್ಷಣವು ಹಿಂದೂ ಪಂಡಿತ ಹಾಗೂ ಮುಸಲ್ಮಾನ ಮುಲ್ಲಾರ ಬಳಿ ನಡೆಯಿತು. ಚಿಕ್ಕಂದಿನಿಂದಲೂ ಅವರಿಗೆ ಜೀವನವ್ಯವಹಾರಕ್ಕಿಂತಲೂ ಧಾರ್ಮಿಕ ವ್ಯವಹಾರದತ್ತ ಹೆಚ್ಚಿನ ಸೆಳೆತ. ಸುಲಖಣಿಯೊಡನೆ ಅವರ ಮದುವೆ ಆಯಿತು. ಆದರೆ ಸಂಸಾರದ, ಅವರ ಗಮನ ಇರಲಿಲ್ಲ. ಅವರು ಹಿಂದೂ ಹಾಗೂ ಇಸ್ಲಾಮ್ ಧರ್ಮಗಳ ಶಿಕ್ಷಣವನ್ನು ಪಡೆದು ಭಕ್ತಿಮಾರ್ಗ, ಮೋಕ್ಷ ಮೊದಲಾದ ಅಂಶಗಳನ್ನು ಕುರಿತು ಸೂಕ್ಷ್ಮವಾಗಿ ಆಲೋಚಿಸಿದರು. ಪ್ರಪಂಚದ ಮಾನವರೆಲ್ಲ ಒಬ್ಬ ಪರಮೇಶ್ವರನ ಮಕ್ಕಳು, ಪರಸ್ಪರರ ಬಂಧುಗಳು, ಎಲ್ಲ ಧರ್ಮಗಳವರೂ ಈ ಸಂಗತಿಯನ್ನು ಗಮನಕ್ಕೆ ತಂದುಕೊಂಡು ನಡೆದುಕೊಂಡರೆ ಪ್ರಪಂಚದಲ್ಲಿ ದ್ವೇಷ, ಹಗೆತನ, ಕಲಹಗಳು ಉಳಿಯಲಾರವು. ಅವರು ಈ ವಿಚಾರಗಳಿಂದ ಪ್ರಭಾವಿತರಾಗಿ ಅದನ್ನು ಪ್ರಸಾರ ಮಾಡಲೆಂದು ಭಾರತದ ಪ್ರಮುಖ ಪ್ರದೇಶಗಳಿಗೆಲ್ಲ ಪ್ರಯಾಣ ಬೆಳೆಸಿದರು. ಅವರ ಜೊತೆಗೆ ಹಿಂದೂ ಧರ್ಮದ ಸಂತರು ಹಾಗೂ ಮುಸಲ್ಮಾನ ಧರ್ಮದ ಫಕೀರರಿದ್ದರು. ಮಥುರಾ, ಕಾಶಿ, ಜಗನ್ನಾಥಪುರಿ, ಮಲಬಾರ, ಕೊಂಕಣ, ಮುಂಬಯಿ, ರಾಜಸ್ಥಾನ, ಸಿಲೋನ್, ಲಡಾಖ್, ನೇಪಾಳ, ಮಕ್ಕಾ, ಮದೀನಾ ಮೊದಲಾದ ಸ್ಥಾನಗಳಿಗೆ ಹೋಗಿ ಅಲ್ಲಿಯ ಜನರಿಗೆ ಉಪದೇಶವನ್ನು ಮಾಡಿದರು. ನಾನಕರು ಈಶ್ವರನ ಚಿಂತನೆ ಮತ್ತು ನಾಮಸ್ಮರಣೆಗಳನ್ನು ಮಾಡುವಾಗ ತಮಗೆ ಕಾಣುವ ದೃಶ್ಯಗಳು, ತಮ್ಮಲ್ಲಿ ಹುಟ್ಟುವ ಸದ್ಭಾವಗಳನ್ನು ಕುರಿತು ಬರೆದಿರಿಸಿದರು. ಮುಂದೆ ಈ ಸ್ತೋತ್ರಗಳನ್ನು ಒಟ್ಟಿಗೆ ಕಲೆಹಾಕಿ ಬರೆಯಲಾಯಿತು. ಮುಂದೆ ಈ ಗ್ರಂಥಕ್ಕೆ 'ಆದಿಗ್ರಂಥ' ಅಥವಾ 'ಗ್ರಂಥಸಾಹೇಬ್'

ಎಂಬ ಹೆಸರು ಲಭಿಸಿತು. ಪರಮೇಶ್ವರನು ಅವತಾರವನ್ನು ತಳೆಯುತ್ತಾನೆಂಬ ಸಂಗತಿಯನ್ನು ಅವರು ನಂಬುತ್ತಿರಲಿಲ್ಲ. ನಾನಕರ ಪ್ರವಚನೆಗಳನ್ನು ಆಲಿಸಿ ಸಾವಿರಾರು ಹಿಂದೂಗಳು ಹಾಗೂ ಮುಸಲ್ಮಾನರು ಅವರ ಶಿಷ್ಯರಾದರು. ಈ ಶಿಷ್ಯರಿಗೆ 'ಸತ್ಸಂಗ' ಎಂಬ ಹೆಸರನ್ನು ನೀಡಲಾಯಿತು. ಅವರು ಮಹಾಮಾನವ ಕಬೀರರನ್ನು ತಮ್ಮ ಆಧ್ಯಾತ್ಮಿಕ ಗುರುವೆಂದು ಭಾವಿಸುತ್ತಿದ್ದರು. ಬುದ್ಧ ಹಾಗೂ ಮೊ. ಪೈಗಂಬರರ ತತ್ತ್ವಜ್ಞಾನಗಳ ಪ್ರಭಾವವು ಅವರ ಮೇಲಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಅವರು ಪುರೋಹಿತರ ಕರ್ಮಕಾಂಡ, ಮೂಢ ನಂಬಿಕೆ, ಜಾತೀಯತೆ,

೧ : ತತ್ರೈವ ಪು. ೧೦೬.



ಅವಾಸ್ತವಿಕ ಧಾರ್ಮಿಕ ಆಡಂಬರ ಮತ್ತು ರೂಢಿ, ವಿಗ್ರಹಪೂಜೆಗಳಿಗೆ ವಿರೋಧಿಗಳಾಗಿದ್ದರು. ಅವರು ಪ್ರಾಮಾಣಿಕತೆ, ಸದಾಚಾರದ ಜೀವನ, ವಿನಯ, ದಯೆ, ಔದಾರ್ಯ, ಸತ್ಯ, ಮೊದಲಾದ ಮೌಲ್ಯಗಳನ್ನು ಪೂರ್ತಿಯಾಗಿ ನಂಬುತ್ತಿದ್ದರು. ಹೀಗಾಗಿ ಅವರು ಶೀಲ, ಕೃತಿಯ ಶುದ್ಧತೆ ಹಾಗೂ ನೈತಿಕತೆಯ ನಿಯಮಗಳಿಗೆ ಹೆಚ್ಚಿನ ಒತ್ತು ಕೊಡುತ್ತಿದ್ದರು. ಬ್ರಾಹ್ಮಣವಾದಿ ಸಮಾಜ ವ್ಯವಸ್ಥೆಯ ನೊಗವನ್ನು ಹೆಗಲಿನ ಮೇಲೆ ಹೊತ್ತಿರುವ ಬಹುಮಟ್ಟಿಗಿನ ಶೂದ್ರಾತಿಶೂದ್ರರು ಗುರುನಾನಕರ ಈ ಮಾನವೀಯ ವಿಚಾರಧಾರೆಯಿಂದಾಗಿ ಸೀಖ ಧರ್ಮವನ್ನು ಸ್ವೀಕರಿಸಿದರು. ಸೀಖ ಧರ್ಮಕ್ಕೆ ಇಂದು ಭಾರತೀಯ ಸಮಾಜದಲ್ಲಿ ಪ್ರಮುಖ ಸ್ಥಾನವಿದೆ.

**ನಾಯರ, ಡಾ. ತಾರಾವತ ಮಾಧವನ್ :-** (೧೮೬೮-೧೯೧೯) ಜನ್ಮ ಶಿರೂರಿನಲ್ಲಿ. ಶಿಕ್ಷಣ ಪ್ರೆಸಿಡೆನ್ಸಿ ಮಹಾವಿದ್ಯಾಲಯ ಹಾಗೂ ಮದ್ರಾಸ್ ಮೆಡಿಕಲ್ ಮಹಾವಿದ್ಯಾಲಯಗಳಲ್ಲಿ. ಮುಂದೆ ಹೆಸರಾಂತ ಡಾಕ್ಟರರು, ಹೆಸರಾಂತ ಪ್ರಾಧ್ಯಾಪಕರು, ಹೋರಾಟಗಾರ ನಾಯಕರು, ಧೈರ್ಯಶಾಲಿ ಸಮಾಜ ಸುಧಾರಕರು ಹಾಗೂ ಒಬ್ಬ ನಿರ್ಭಯ ರಾಜಕಾರಣಿ ಪುರುಷರೆಂದು ಕೀರ್ತಿ, ದಕ್ಷಿಣದ ಬ್ರಾಹ್ಮಣೇತರ ಚಳುವಳಿಯ ಅಧ್ವರ್ಯು , ಮದ್ರಾಸಿನ

ವಿಧಿಮಂಡಳದ ಸದಸ್ಯರು. 'ಎಂಟಿಸೆಪ್ಟಿಕ್', ವೈದ್ಯಕೀಯ ನಿಯತಕಾಲಿಕೆಯ ಸಂಪಾದಕರು, ಮಾಂಟ್‌ಫರ್ಡ್ ಸುಧಾರಣೆಯ ಅನುಷ್ಠಾನದ ಅಧಿಕಾರವು ಜಾತಿಭೇದದ ಉಚ್ಚ ನೀಚತೆಯನ್ನು ಪಾಲಿಸುವ ಬ್ರಾಹ್ಮಣರಿಗೆ ದೊರೆತರೆ ಅವರು ಮನುಸ್ಮೃತಿಯಲ್ಲಿರುವ ಕಟ್ಟುಪಾಡುಗಳನ್ನು ಸುಧಾರಿಸಿ, ಅದ್ಯತನ ಮಾಡಿ, ಮನುವಿನ ನಿರ್ಬಂಧಗಳನ್ನು ಹೊಸ ರೂಪದಲ್ಲಿ ಹಿಂದೂಗಳ ಮೇಲೆಲ್ಲ ಹೊರಿಸುವರೆಂದು ಅವರು ಖಚಿತವಾಗಿ ಅಭಿಪ್ರಾಯಪಡುತ್ತಿದ್ದರು.

**ನಾರ್ಡಿಕ್ ವಂಶ** :- ನಾರ್ಡಿಕ್ ವಂಶವು ಪ್ರಪಂಚದ ಸರ್ವಶ್ರೇಷ್ಠ ವಂಶ, ಅನ್ಯ ವಂಶಗಳ ಜನರು ಎರಡನೆಯ ದರ್ಜೆಯವರು, ಅವರನ್ನು ಆಳುವ ಹಕ್ಕು ಶ್ರೇಷ್ಠ ವಂಶದವರಾದ ನಾರ್ಡಿಕ್ ಅಂದರೆ ಜರ್ಮನ್ನರಿಗಿದೆ, ಎನ್ನುವುದು ಹಿಟ್ಲರನ ಸಿದ್ಧಾಂತವಾಗಿತ್ತು. ಹಿಟ್ಲರನು ಈ ನಾರ್ಡಿಕ್ ವಂಶವನ್ನೇ ಆರ್ಯ ವಂಶವೆಂದು ಕರೆಯುತ್ತಿದ್ದನು. ಬೇರೆ ಬೇರೆ ಮಾನವ ವಂಶಗಳಲ್ಲಿ ಸಮಾನತೆಯನ್ನು ಒಪ್ಪಿಕೊಳ್ಳುವುದು ಅವನಿಗೆ ಒಂದು ಅಪರಾಧವಾಗಿ ಕಾಣುತ್ತಿತ್ತು. ಹಿಟ್ಲರನಿಗೆ ವಂಶವಂಶಗಳ ನಡುವಿನ ಸಮಾನತೆಯಂತೆಯೇ ಮಾನವ-ಮಾನವರ ನಡುವಿನ ಸಮಾನತೆ ಕೂಡ ಭಯಂಕರವಾದ ಒಂದು ಅಪರಾಧ ಎನ್ನಿಸಿತ್ತು. ಮಾನವ ಸಮಾಜಗಳು ಹಾಗೂ ವ್ಯಕ್ತಿ ವ್ಯಕ್ತಿಗಳ ನಡುವಿನ ಅಸಮಾನತೆಯೇ ಹಿಟ್ಲರನ ವಂಶಸಿದ್ಧಾಂತದ ಅರ್ಥವಾಗಿತ್ತು,

**ನೆಹರು, ಪಂ. ಮೋತೀಲಾಲ್** :- (೧೮೬೧-೧೯೩೧) ಹಿಂದೂಸ್ಥಾನದ ಸುಪ್ರಸಿದ್ಧರಾದ ಸಂವಿಧಾನ ಶಾಸ್ತ್ರಜ್ಞ, ಕಾನೂನು ಪಂಡಿತ, ರಾಜಕಾರಣಿ, ಮುತ್ಸದ್ಧಿ ಹಾಗೂ ವಾದವಿವಾದಪಟು. ಕಾಶ್ಮೀರಿ ಬ್ರಾಹ್ಮಣರು, ಅಲಾಹಾಬಾದಿನಲ್ಲಿ ಕಾಯಮ್ಮಾಗಿ ನೆಲೆಸಿದ್ದರು. ಇವರು ಮೂರು ತಿಂಗಳ ಮಗುವಾಗಿದ್ದಾಗ ಇವರ ತಂದೆ ತೀರಿಕೊಂಡರು. ಅಣ್ಣನು ಇವರನ್ನು ಬೆಳೆಸಿದರು. ಅವರೂ ವಕೀಲರಾಗಿದ್ದರು. ಇವರು ಹೈಕೋರ್ಟಿನ ಪರೀಕ್ಷೆಯಲ್ಲಿ ಚಿನ್ನದ ಪದಕವನ್ನು ಗಿಟ್ಟಿಸಿ, ವಕೀಲಿಯನ್ನು ಆರಂಭಿಸಿದರು. ಸಾಕಷ್ಟು ದುಡ್ಡು ಗಳಿಸಿದರು. ತುಂಬ ಐಷಾರಾಮದಿಂದ ಬದುಕಬೇಕು, ಹೊತ್ತು ಬಂದರೆ ಪ್ರಗತಿಪರರ ರಾಜಕೀಯದಲ್ಲಿ ಪಾಲ್ಗೊಳ್ಳಬೇಕೆನ್ನುವುದು ಅವರ ಆಗಿನ ಕಾರ್ಯಕ್ರಮವಾಗಿತ್ತು. ಆದರೆ ಅವರು ಮ. ಗಾಂಧಿಯವರ ರಾಜಕೀಯದಿಂದ ತುಂಬ ಪ್ರಭಾವಿತರಾಗಿ ಆಕ್ರಮಕತೆಯ

ರಾಜಕೀಯಕ್ಕೆ ಧುಮುಕಿದರು. ರಾಷ್ಟ್ರಸಭೆಯು ಪಂಜಾಬಿನ ಪ್ರಕರಣದಲ್ಲಿ ವಿಚಾರಣೆಗಾಗಿ ನೇಮಿಸಿದ ಕಮಿಟಿಯಲ್ಲಿ ಕೆಲಸ ಮಾಡಿದ ತರುವಾಯ ಅವರು ಅಮೃತಸರ ರಾಷ್ಟ್ರಸಭೆಯ ಅಧ್ಯಕ್ಷರಾಗಿ ಅಯ್ಕೆಯಾದರು (೧೯೧೯). ಮುಂದೆ ಅವರು ಅಸಹಕಾರ ಚಳುವಳಿಯಲ್ಲೂ ಪಾಲ್ಗೊಂಡರು. ಸ್ವರಾಜ್ಯ ಪಕ್ಷವನ್ನು ಸ್ಥಾಪಿಸಿದರು. ದಿಲ್ಲಿಯ ಮಧ್ಯವರ್ತಿ ಕಾನೂನು ಮಂಡಳದಲ್ಲಿ ಪಕ್ಷದ ನಾಯಕರೆಂದು ಆಯ್ಕೆ ಹೊಂದಿದರು. ಅವರು ತಮ್ಮ ವಾದವಿವಾದ ಕೌಶಲ್ಯದಿಂದ ಸರಕಾರವನ್ನು ನಡುಗಿಸಿಬಿಟ್ಟರು. ರಾಷ್ಟಸಭೆಯು ಮನ್ನಿಸಿದ, ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಕುರಿತಾದ ಅವರ ಯೋಜನೆಯು 'ನೆಹರು ರಿಪೋರ್ಟ್' ಎಂದು ಹೆಸರಾಯಿತು.

**ಪಟೇಲ್, ವಲ್ಲಭಭಾಯಿ ಜವ್ಹೇರಭಾಯಿ :-(**೧೮೭೫-೧೯೫೦) ಸರದಾರ ವಲ್ಲಭಭಾಯಿ ಪಟೇಲ್, ಎಂಬ ಹೆಸರಿನಿಂದ ಪ್ರಸಿದ್ಧರು. ಸ್ವತಂತ್ರ ಭಾರತದ ಮೊದಲ ಗೃಹಮಂತ್ರಿ ಹಾಗೂ ಕಾಂಗ್ರೆಸ್ಸಿನ ಪ್ರಮುಖ ನಾಯಕರು. ಗುಜರಾತಿನ ಖೇಡಾ ಜಿಲ್ಲೆಯ ನಡಿಯಾಡ ಊರಿನಲ್ಲಿ ಜನ್ಮ, ಇಂಗ್ಲೆಂಡಿನ ಮಿಡಲಟೆಂಪಲ್‌ದಿಂದ ಬ್ಯಾರಿಸ್ಟರ್ ಆಗಿ ಬಂದ ಬಳಿಕ ವಕೀಲಿಯನ್ನು ಮಾಡುತ್ತ ಗಾಂಧಿಯವರ ಸ್ವರಾಜ್ಯ ಚಳುವಳಿಯಲ್ಲಿ ಭಾಗವಹಿಸಿದರು. ಹಲವು ಸಲ ಸೆರೆಮನೆವಾಸ. ೧೯೩೧ರ ರಾಷ್ಟ್ರೀಯ ಸಭೆಯ ಅಧಿವೇಶನದ ಅಧ್ಯಕ್ಷರು, ಕಟ್ಟುನಿಟ್ಟು ಹಾಗೂ ದೃಢನಿಶ್ಚಯ ಸ್ವಭಾವದಿಂದ ಜನಾಭಿಮತದ ಮೇಲೆ ದೊಡ್ಡ ಪ್ರಭಾವ. ಅವರ ಈ ಸ್ವಭಾವದಿಂದಾಗಿಯೇ ಹೈದರಾಬಾದ ಸಂಸ್ಥಾನವು ಮುಕ್ತವಾಗಿ ಸ್ವತಂತ್ರ ಭಾರತದಲ್ಲಿ ಸೇರ್ಪಡೆ ಹೊಂದಿತು. ಹೀಗಾಗಿಯೇ ಅವರನ್ನು ಉಕ್ಕಿನ ಮನಷ್ಯನೆಂದು ಕರೆಯಲಾಗುತ್ತದೆ.

**ಪ್ರಾರ್ಥನಾ ಸಮಾಜ, ಮುಂಬಯಿ :-**ಮಹಾರಾಷ್ಟ್ರದಲ್ಲಿ ೧೮೬೭ ರಲ್ಲಿ ಸ್ಥಾಪನೆಗೊಂಡ ಒಂದು ಧರ್ಮಪಂಥ. ಪ್ರತಿಯೊಂದು ಧರ್ಮದಲ್ಲಿ ಹೆಚ್ಚು ಕಡಿಮೆ ಪ್ರಮಾಣದಲ್ಲಿ ಸತ್ಯ ಲೋಪ ಹೊಂದಿರುತ್ತದೆ ಅಥವಾ ಧರ್ಮಾವಿಕಾಸವು ನಿಂತಿರುತ್ತದೆ. ಆಗ ವಿವೇಚಕ ಬುದ್ಧಿಯಿಂದ ಎಲ್ಲ ಧರ್ಮಗಳ ಸತ್ಯವನ್ನಷ್ಟು ಸ್ವೀಕರಿಸಬೇಕು, ದೇಶಕಾಲಗಳಿಗೆ ತಕ್ಕಂತೆ ಧರ್ಮಪ್ರವೃತ್ತಿಯಲ್ಲಿ ತಲೆದೋರಿದ ಅಸತ್ಯದ ಅಂಶವನ್ನು ತ್ಯಜಿಸಬೇಕು ಮತ್ತು ಜಾಗೃತ ವಿವೇಕ ಬುದ್ಧಿಯಿಂದ ಉನ್ನತಿಕಾರಕ ಮತಗಳನ್ನು ಅವಲಂಬಿಸಬೇಕು, ಎನ್ನುವುದು ಪ್ರಾರ್ಥನಾ-ಸಮಾಜದ ಮೂಲ ಗುರಿ. ಪ್ರಾರ್ಥನೆ ಇರುವುದು ಷಡ್ರಿಪುಗಳನ್ನು ಉಚ್ಚಾಟಿಸಲು, ಎಂಬುದನ್ನು ಅರಿತು ಪ್ರಾರ್ಥನಾ-ಸಮಾಜವು ಪ್ರಾರ್ಥನೆಗೆ ಒತ್ತು ಕೊಡುತ್ತದೆ. ರಾಜಾ ರಾಮಮೋಹನರಾಯರು ಕಲಕತ್ತೆಯಲ್ಲಿ ಸ್ಥಾಪಿಸಿದ ಬ್ರಾಹ್ಮ-ಸಮಾಜದ ಮಾದರಿಯಲ್ಲೇ ಪ್ರಾರ್ಥನಾ-ಸಮಾಜದ ಸ್ಥಾಪನೆಯು ಮೊದಲಿಗೆ ಮುಂಬಯಿಯಲ್ಲಿ ಆಯಿತು. ಡಾ. ಭಾಂಡಾರಕರ, ನ್ಯಾಯಮೂರ್ತಿ ರಾನಡೆ, ರಮಾಬಾಯಿ ರಾನಡೆ, ಡಾ. ಆತ್ಮಾರಾಮ ಪಾಂಡುರಂಗ, ಮಾಮಾ ಪರಮಾನಂದ, ವಾಸುದೇವ ಬಾಬಾಜಿ ನವರಂಗೆ, ರಾಮಚಂದ್ರ ವಿಷ್ಣು ಮಾಡಗಾವಕರ, ಬಾಳ ಮಂಗೇಶ ವಾಗಳೆ, ಭಾಸ್ಕರ ಹರಿ ಭಾಗವತ, ವಾಮನ

ಆಬಾಜಿ ಮೋಡಕ, ಶಂಕರ ಪಾಂಡುರಂಗ ಪಂಡಿತ, ದಿನಾನಾಥ ವಿಷ್ಣು ಮಾಡಗಾವಕರ, ನಾರಾಯಣ ಗಣೇಶ ಚಂದಾವರಕರ, ಇವರೆಲ್ಲರು ಅದರ ಪ್ರವರ್ತಕರು. ಈ ಸಮಾಜದ ವತಿಯಿಂದ ೧೮೭೩ ರಿಂದ 'ಸುಬೋಧಪತ್ರಿಕಾ', ವಾರಪತ್ರಿಕೆಯನ್ನು ಶುರು ಮಾಡಲಾಯಿತು. ದ್ವಾ, ಗೋ. ವೈದ್ಯ ಅವರು ಪ್ರಾರ್ಥನಾ-ಸಮಾಜದ ಇತಿಹಾಸವನ್ನು ಬರೆದಿರುವರು.

**ಬಜಾಜ, ಶೇಠ ಜಮುನಾಲಾಲ್ :-(**೧೮೮೯-೧೯೪೨) ವ್ಯಾಪಾರಿ ವರ್ಗದ ಒಬ್ಬ



ಸಾರ್ವಜನಿಕ ಕಾರ್ಯಕರ್ತರು, ವರ್ಧಾದ ಶೇಠ ಬಚ್ಚರಾಜರು ೧೮೯೪ ರಲ್ಲಿ ಇವರನ್ನು ತಮ್ಮ ಮೊಮ್ಮಗನೆಂದು ದತ್ತು ತೆಗೆದುಕೊಂಡರು. ಇವರ ಶಿಕ್ಷಣ ಶಾಲೆ ಇಲ್ಲವೆ ವಿಶ್ವವಿದ್ಯಾಲಯದಲ್ಲಿ ನಡೆಯಲಿಲ್ಲ. ಗಾಂಧೀಜಿ, ವಿನೋಬಾ ಭಾವೆ ಹಾಗೂ ಶ್ರೀಕೃಷ್ಣದಾಸ ಜಾಜೂ ಅವರ ಸಹವಾಸದಿಂದ ಮನದ ಮೇಲೆ ಒಳ್ಳೆಯ ಪರಿಣಾಮವಾಗಿ ರಾಷ್ಟ್ರಕಾರ್ಯದತ್ತ ಸೆಳೆತ, ರಾವಬಹಾದ್ದೂರ ಪದವಿಯನ್ನು ತ್ಯಜಿಸಿ ಕಾಂಗ್ರೆಸ್ಸಿನ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲು. ೧೯೨೮ ರಲ್ಲಿ ಅಸ್ಪೃಶ್ಯರಿಗಾಗಿ ಸ್ವಂತ ಒಡೆತನದ ಲಕ್ಷ್ಮಿನಾರಾಯಣ ಮಂದಿರವನ್ನು ತೆರೆದರು. ಈ ರೀತಿಯಾಗಿ ಅಸ್ಪೃಶ್ಯರಿಗಾಗಿ ತೆರೆಯಲಾದ ಭಾರತದ ಮೊದಲ ದೇವಾಲಯ ಇದು. ಅವರು ಕರ್ತೃತ್ವವಂತ ಸುಧಾರಕರಾಗಿದ್ದರು. ೧೯೨೦ ರಿಂದ ರಾಷ್ಟ್ರೀಯ ಸಭೆಯ ಬೊಕ್ಕಸದ ಅಧಿಕಾರಿಯಾಗಿದ್ದರು. ಮ. ಗಾಂಧಿಯವರ ಬಲಗೈ ಎಂದು ಹೆಸರಾದವರು.

**ಬಸವೇಶ್ವರರು :-** "ಹನ್ನೆರಡನೆಯ ಶತಮಾನದಲ್ಲಿ ಬಿಜ್ಜಳ ಆಗಿ ಹೋದನು. ಅವನು ಕರ್ನಾಟಕದ ರಾಜನಾಗಿದ್ದನು. ಬಸವನು ಅವನ ಪ್ರಧಾನಿಯಾಗಿದ್ದನು. ಬಸವನು ಜಾತಿಯಿಂದ ಬ್ರಾಹ್ಮಣನು. ಆ ಕಾಲಕ್ಕೆ ಹಿಂದು

ಹಾಗೂ ಜೈನಧರ್ಮಗಳ ಪ್ರಾಬಲ್ಯವಿತ್ತು. ಬಿಜ್ಜಳ ಜೈನ ಧರ್ಮದವನು. ಬಸವನು ಶೂರನು, ಧೋರಣೆಯವನು, ಆದರೆ ಭಕ್ತಿಪ್ರಧಾನನು. ಅವನು ಆ ಕಾಲದ ಹಿಂದು ಧರ್ಮ ಹಾಗೂ ಜೈನ ಧರ್ಮಗಳ ಕಂದಾಚಾರಗಳನ್ನು ಕಂಡು ದುಃಖಿತನಾದನು. ಅವನಿಗೆ ಇವೆರಡೂ ಧರ್ಮಗಳಲ್ಲಿ ಬಹುಜನ ಸಮಾಜದ ದೈನ್ಯಾವಸ್ಥೆ ಹಾಗೂ ಪುರೋಹಿತ ವರ್ಗದ ಸಂಪನ್ನತೆಗಳೇ ಕಂಡವು ! ಶ್ರೀ ಬಸವರು ವೇದ, ವೇದಾಂಗ, ಶ್ರುತಿ, ಸ್ಮೃತಿ, ಪುರಾಣಗಳ ಮೇಲೆ ಪ್ರಚಂಡವಾದ ದಾಳಿಯನ್ನು ಮಾಡಿದರು. ಇದೇ ರೀತಿಯಾಗಿ ಅವರು ಬ್ರಾಹ್ಮಣರ ವರ್ಚಸ್ವ, ಜಾತಿಭೇದ ಮತ್ತು ಪೂಜೆ-ಅರ್ಚೆ ಹಾಗೂ ಇತರ ಧಾರ್ಮಿಕ ವಿಧಿಗಳ ವಿರುದ್ಧವಾಗಿ ಬಂಡು ಹೂಡಿದರು. ಅವರು ಹೊಸ ಲಿಂಗಾಯತ ಧರ್ಮವನ್ನು ಸ್ಥಾಪಿಸಿದರು. ಬಹುಜನ ಸಮಾಜದವರು ಹಾಗೂ ಬ್ರಾಹ್ಮಣ ಸಮಾಜದವರು ಕೂಡ ಶ್ರೀ ಬಸವರ ಲಿಂಗಾಯತ ಧರ್ಮಕ್ಕೆ ಬಂದರು. (The Lingayat Movement, p. 20).

"ಅವರು ಧಾರ್ಮಿಕ ಹಾಗೂ ಸಾಮಾಜಿಕ ಕ್ರಾಂತಿಯ ಮೂಲಕ ಮಾನವ ಕ್ಷೇತ್ರದ ಶುದ್ದೀಕರಣವನ್ನು ಮಾಡಲು ಯತ್ನಿಸಿದರು. ಅದಕ್ಕಾಗಿ ಕರ್ಮಕಾಂಡ, ಯಜ್ಞಯಾಗ, ಮೂಢ ನಂಬಿಕೆ, ಚಾತುರ್ವಣ್ಯಗಳನ್ನು ಕಠೋರವಾಗಿ ವಿರೋಧಿಸಿದರು. ಪುರೋಹಿತವಾದ, ತೀರ್ಥಯಾತ್ರೆ, ಗ್ರಂಥಪೂಜೆ, ಪ್ರಾರಬ್ಧ, ಪರಲೋಕ, ಪರದೇವ, ಪರತತ್ತ್ವಗಳನ್ನು ನಂಬಿ ನಿಷ್ಕ್ರಿಯಗೊಂಡ ಸಮಾಜವನ್ನು ಸಕ್ರಿಯಗೊಳಿಸಲು ಕಂಕಣಬದ್ಧರಾದರು. ಕಾಯಕವೇ ಕೈಲಾಸ, ಪ್ರತಿಯೊಂದು ಕಾಯಕವು ಕೈಲಾಸದಷ್ಟೇ ಪವಿತ್ರ, ಅದರಲ್ಲಿ ಉಚ್ಚನೀಚತೆಯ ಭೇದವಿಲ್ಲ, ಎಂದು ಹೇಳಿದರು ......... 'ಸದಾಚಾರವೇ ಸ್ವರ್ಗ, ದುರಾಚಾರವೇ ನರಕ' ಎಂದು ಹೇಳಿ ವಾಸ್ತವವಾದವನ್ನು ಪ್ರಕಟಪಡಿಸಿದರು. ೧

"ಬಸವರಿಗೆ ಚಿಕ್ಕಂದಿನಿಂದಲೂ ಜಾತಿಭೇದವೆಂದರೆ ಜಿಗುಪ್ಸೆ, ಚಿಕ್ಕಂದಿನಿಂದಲೇ ಅವರು ಜಾತಿಭೇದವನ್ನು ಕಿತ್ತೆಸೆಯುವ ಕೆಲಸಕ್ಕೆ ಕೈಹಾಕಿದರು. 'ಬಸವೇಶ್ವರರ ಚರಿತ್ರೆಯನ್ನು ಇ, ಸ. ೧೩೬೯ ರ ಸುಮಾರಿಗೆ ರಚಿಸಲಾದ 'ಬಸವಪುರಾಣ', ಎಂಬ ಗ್ರಂಥದಲ್ಲಿ ಹೆಣೆಯಲಾಗಿದ್ದು ಅದರ ಮೂರನೆಯ ಭಾಗದಲ್ಲಿ, "ಬಸವನು ಬ್ರಾಹ್ಮಣಪುತ್ರನಾದ ಕಾರಣ ಅವನ ಮುಂಜಿವೆಯನ್ನು ಗೊತ್ತುಪಡಿಸಲಾಯಿತು. ಆಗ ಅವನು 'ನಾನು ಬ್ರಾಹ್ಮಣನಲ್ಲ' ಎಂದು ಹೇಳಿ ಮುಂಜಿವೆಯನ್ನು ನಿರಾಕರಿಸಿದನು!" ಎಂಬ

ಸಂಗತಿಯನ್ನು ನಮೂದಿಸಲಾಗಿದೆ (ವಿಚಾರ ಸಮೀಕ್ಷೆ, ಪು. ೫೩), ಬಸವೇಶ್ವರರು ಜಾತಿಭೇದದ ಆಡಂಬರವನ್ನು ನಾಶಪಡಿಸಲೆಂದು ಆಮರಣವಾಗಿ ಚಳುವಳಿಯನ್ನು ಹೂಡಿದರು, ಅದಕ್ಕಾಗಿ ದುಡಿದುಕೊಂಡರು. ಆದರೆ ಅವರಿಗೆ ಸಮಾಜದಿಂದ ಜಾತಿಭೇದವನ್ನು ಕಿತ್ತೆಸೆಯುವಲ್ಲಿ ಯಶಸ್ಸು ಲಭಿಸಲಿಲ್ಲ. ಅದಕೆ ಕಾರಣವೆಂದರೆ, ಹಿಂದೂಧರ್ಮದಲ್ಲಿರುವ ಅವತಾರ, ಪುನರ್ಜನ್ಮ, ಕರ್ಮವಾದ, ಮೋಕ್ಷ, ನರಕಯಾತನೆ, ಮಾಯಾವಾದ, ಮೊದಲಾದ ಉಪದೇಶಗಳು ಜನರ ಮನಸ್ಸಿನ ಮೇಲೆ ಕಾಯಮ್ಮಾಗಿ ಮುದ್ರೆಯೊತ್ತಿರುವುದು ! ಬಸವೇಶ್ವರರ ಅನುಯಾಯಿಗಳು ಕಾಲಾಂತರದಲ್ಲಿ ಲಿಂಗಾಯತ ಧರ್ಮದಲ್ಲೂ ಜಾತಿಭೇದದ ಸಸಿಯನ್ನು ಬೆಳೆಯಗೊಟ್ಟರು. ಹೀಗಾಗಿ ಜಾತಿಭೇದದ ಜಾಲವು ಲಿಂಗಾಯತರಲ್ಲಿ ಕಾಯಮಾಗಿ ಹರಡಿತು. "೨

**ಬಾಳಾಜಿ ಬಾಜೀರಾವ** :-(೧೭೨೧-೧೭೬೧) ಹಿರಿಯ ಬಾಜೀರಾವನ ಚೊಚ್ಚಲು ಮಗನಾದ ಇವನ (ನಾನಾಸಾಹೇಬ) ಜನ್ಮ ಸಾತೆ ಎಂಬಲ್ಲಿ. ಬಾಜೀರಾವನ ತರುವಾಯ ಇವನಷ್ಟು ಯೋಗ್ಯತೆಯ ಇನ್ನೊಬ್ಬನು ಸಿಕ್ಕದ್ದರಿಂದ ಶಾಹು ರಾಜನು ಇವನಿಗೆ ಪೇಶವೆಯ ಪದವನ್ನು ನೀಡಿದನು. ೧೭೩೯ ರಲ್ಲಿ ನಡೆದ ಮಿರಜಿಯ ದಾಳಿಯ ಕಾಲಕ್ಕೆ ಇವನು ಶಾಹುವಿನೊಡನೆ ಇದ್ದನು. ಇವನು ೧೭೪೦-೧೭೪೮ ರವರೆಗೆ ಸುರಜ ಭೇಲಸೆ, ಮಾಳವಾ, ಗುಜರಾತ, ಬಂಗಾಲ, ಪ್ರಯಾಗ, ಭೇಲಸೆ, ಕರ್ನಾಟಕದ ಮೊದಲ ಕಾಳಗ, ಮೊದಲಾದ ಕಾಳಗಗಳನ್ನು ಮಾಡಿದನು. ಮುಂದೆ, ಶಾಹು ಇಡಿಯ ರಾಜ್ಯದ ಸೂತ್ರಗಳನ್ನೆಲ್ಲ ಇವನಿಗೆ ಒಪ್ಪಿಸಿದನು (೧೭೪೯). ಮುಂದೆ ಇವನು ಕೊಲ್ಲಾಪುರದ ತಾರಾಬಾಯಿಯ ಮೊಮ್ಮಗನಾದ ರಾಜಾರಾಮನನ್ನು ಗಾದಿಯ [ಸಿಂಹಾಸನ] ಮೇಲೆ ಕೂರಿಸಿದನು. ೧೭೫೧ ರಲ್ಲಿ ನಿಜಾಮನನ್ನು ಸದೆಬಡಿದನು. ೧೭೬೧ ರ ಪಾನಿಪತ್ ಯುದ್ಧದಲ್ಲಿ ನಡೆದ ಮರಾಠರ ಬಲು ದೊಡ್ಡ ಸಂಹಾರದಿಂದ ಆಘಾತವಾಗಿ ಇವನು ೧೮ ಜೂನ್ ೧೭೬೧ ರಂದು ಪುಣೆಯಲ್ಲಿ ಮರಣ ಹೊಂದಿದನು. ಇವನು ಉತ್ತಮ ಸಂಸ್ಕೃತಜ್ಞನು, ಲೆಕ್ಕಣಿಕೆಯ ಬಹಾದ್ದೂರನು, ಧೋರಣಿ ಹಾಗೂ ಲೆಕ್ಕಾಚಾರದವನಾಗಿದ್ದನು.

**ಬಿಸ್ಮಾರ್ಕ್, ಆಟೋಫೋನ್** :-(೧ ಎಪ್ರಿಲ್ ೧೮೧೫-೩೦ ಜುಲೈ ೧೮೯೮). ಜರ್ಮನ್ ಸಾಮ್ರಾಜ್ಯದ ಜನಕ ಹಾಗೂ ಜರ್ಮನಿಯ ಮೊದಲ ಚಾನ್ಸಲರ್, ಸ್ಯಾಕ್ಸನಿಯ ಶನಹೌಸೆನ್ ಎಂಬಲ್ಲಿ ಸರದಾರ ಮನೆತನದಲ್ಲಿ ಇವನ ಜನ್ಮವಾಯಿತು. ತಂದೆ ಫರ್ಡಿನಾಂಟ್ ಫೋನ್ ಬಿಸ್ಮಾರ್ಕ್-ಶನಹೌಸೆನ್ ಹಾಗೂ ಅಮ್ಮ ವಿಲ್ಹೆಲ್ಮಿನ್ ಮೆನ್‌ಕೆಮ್, ಫರ್ಡಿನಾಂಟರಿಗೆ ರಾಜಕೀಯದಲ್ಲಿ ಆಸ್ಥೆ ಇರಲಿಲ್ಲ. ಆದರೆ ಅವನ ಅಮ್ಮ ಪ್ರಗತಿಪರ ವಿಚಾರದವಳು ಹಾಗೂ

ಮಹತ್ವಾಕಾಂಕ್ಷಿಯಾಗಿದ್ದಳು. ಬಿಸ್ಮಾರ್ಕನು ಗಟಿಂಗಟನ್ ವಿಶ್ವವಿದ್ಯಾಲಯದಿಂದ ಕಾನೂನಿನ ಪದವಿಯನ್ನು ಪಡೆದನು (೧೮೩೫). ಅವನಿಗೆ ಸೈನಿಕ ಶಿಕ್ಷಣದ ಬಗೆಗೆ ಅಷ್ಟೊಂದು ಆಸ್ಥೆ ಇರಲಿಲ್ಲ. ಅಮ್ಮನ ಮಧ್ಯಸ್ಥಿಕೆಯಿಂದಾಗಿ ಅವನಿಗೆ ಎಕ್ಸ್-ಲಾ-ಶಪೆಲ್ ಎಂಬಲ್ಲಿ ಸರಕಾರಿ ಕಾನೂನು ಇಲಾಖೆಯಲ್ಲಿ ನೌಕರಿ ಸಿಕ್ಕಿತು. ಆದರೆ ತುಂಬ ಉಚ್ಛೃಂಖಲತೆ ಹಾಗೂ ಸೋಮಾರಿತನಗಳಿಂದಾಗಿ ಅವನು ಆ ನೌಕರಿಯನ್ನು ಬಿಡಬೇಕಾಯಿತು. ತದನಂತರ ಅವನಿಗೆ ಪಾಟ್ಸ್ ಡ್ಯಾಮ್ ಎಂಬಲ್ಲಿ ನೌಕರಿ ಸಿಕ್ಕಿತು. ಅವನು ಅದನ್ನೂ ಬಿಟ್ಟನು. ತರುವಾಯ ಬಿಸ್ಮಾರ್ಕ್ ತುಂಬ ವಿಲಾಸಿ ಜೀವನವನ್ನು ಸಾಗಿಸಹತ್ತಿದನು. ಅವನು ಸರದಾರ ಮನೆತನದ ಯೋಹಾನ್ನಾ ಪುಟಕಾಮರ್

೧ : ಮೋಗಲೇಕರ, ಡಾ. ಪು. ೪೩.

೨ : ಖೈರಮೋಡೆ, ಸಂ. ೧, ಪು. ೧೧೬-೧೧೭.



ಫೋನ್ ಎಂಬ ಯುವತಿಯನ್ನು ಮದುವೆಯಾದನು (೧೮೪೭), ಬಿಸ್ಮಾರ್ಕನು ಒಬ್ಬ ಸದಸ್ಯನ ಅನುಪಸ್ಥಿತಿಯ ಕಾಲದಲ್ಲಿ ಪ್ರಶಿಯದ ಸಂಸತ್ತಿನಲ್ಲಿ ಅವನನ್ನು ಪ್ರತಿನಿಧಿಸಿದನು (೧೮೪೭). ಮುಂದೆ ೧೮೪೯ ರಲ್ಲಿ ಅವನು ಕನಿಷ್ಠ ಗೃಹಕ್ಕೆ ಚುನಾಯಿತನಾದನು. ೧೮೫೧-೧೮೫೮ ರ ನಡುವಿನ ಕಾಲದಲ್ಲಿ ಅವನು ಫ್ರಾಂಕ್‌ಫರ್ಟ್ ಎಂಬಲ್ಲಿ ಇದ್ದ ಜರ್ಮನ್ ಸಂಸ್ಥಾನಗಳ ಪ್ರಾತಿನಿಧಿಕ ಸಂಸ್ಥೆಯಲ್ಲಿ (ಫೆಡರಲ್ ಡಾಯೆಟ್) ಪ್ರಶಿಯದ ಪ್ರತಿನಿಧಿಯಾಗಿ ಕೆಲಸ ಮಾಡಿದನು. ಇದರಿಂದಾಗಿ ಅವನಿಗೆ ಸಂಸದೀಯ ಕಾರ್ಯಕಲಾಪಗಳ ಅನುಭವವು ಲಭಿಸಿತು. ೧೮೫೯ ರಲ್ಲಿ ಪ್ರಶಿಯದ ರಾಯಭಾರಿಯಾಗಿ ರಶಿಯದಲ್ಲಿ ಅವನ ನೇಮಕವಾಯಿತು. ಅವನು ರಶಿಯ ಹಾಗೂ ಪ್ರಶ್ಯಗಳ ನಂಟನ್ನು ಸುಧಾರಿಸಲು ಯತ್ನಿಸಿದನು. ೧೮೬೨ ರಲ್ಲಿ ಅವನನ್ನು ಪ್ರಶಿಯದ ರಾಯಭಾರಿಯಾಗಿ ಫ್ರಾನ್ಸಿನಲ್ಲಿ ನೇಮಕ ಮಾಡಲಾಯಿತು.

ನಾಲ್ಕನೆಯ ಫ್ರೆಡ್ರಿಕ್ ವಿಲಿಯಮ್‌ನ ಮೃತ್ಯುವಿನ ತರುವಾಯ (೧೮೬೧) ಮೊದಲ ವಿಲಿಯಮ್ ಇವನು ಪ್ರಶಿಯದ ಸಿಂಹಾಸನವನ್ನೇರಿದನು. ಅವನ ಸೈನ್ಯದ ಅಧಿನಿಯಮಕ್ಕೆ ಸಂಸತ್ತಿನ ವಿರೋಧವಿತ್ತು. ಇಂಥ ಪರಿಸ್ಥಿತಿಯಲ್ಲಿ ೧೮೬೨ ರಲ್ಲಿ ಪ್ರಧಾನಮಂತ್ರಿ ಹಾಗೂ ವಿದೇಶವ್ಯವಹಾರ ಮಂತ್ರಿಯೆಂದು ಬಿಸ್ಮಾರ್ಕನ ನೇಮಕವಾಯಿತು. ಪ್ರಶಿಯನ್ ಸಂಸತ್ತನ್ನು ಎದುರಿಸುವ ಸಾಮರ್ಥ್ಯವುಳ್ಳ ಬೇರೊಬ್ಬ ಮುತ್ಸದ್ದಿ ಇಲ್ಲವೆಂಬ ಅರಿವು ವಿಲಿಯಮ್‌ಗೆ ಆಗಿತ್ತು. ೧೮೬೨ ರಿಂದ ೧೮೭೦ ರ ಕಾಲಾವಧಿಯಲ್ಲಿ ಬಿಸ್ಮಾರ್ಕನು ಪ್ರಶಿಯದ ಪ್ರಧಾನಮಂತ್ರಿ ಹಾಗೂ ೧೮೭೧ ರಿಂದ ೧೮೯೦ ರ ಕಾಲಾವಧಿಯಲ್ಲಿ ಜರ್ಮನಿಯ ಚಾನ್ಸಲರ್ ಆಗಿದ್ದನು.

ಬಿಸ್ಮಾರ್ಕನು ಅರಸೊತ್ತಿಗೆಯ ಪುರಸ್ಕರ್ತ ಹಾಗೂ ಸರ್ವಾಧಿಕಾರಿ ಪ್ರವೃತ್ತಿಯವನಾಗಿದ್ದನು. ಹೀಗಾಗಿ ಅವನು ಹೊಸದಾಗಿ ಉದಯಕ್ಕೆ ಬರುತ್ತಿದ್ದ ಸಮಾಜವಾದಕ್ಕೆ ವಿರೋಧಿಯಾದುದು ಸಹಜ. ಅವನು ಜರ್ಮನಿಯ ಅಭಿವೃದ್ಧಿಗಾಗಿ ಸಮಾನ ಕಾನೂನುಗಳನ್ನು ತಯಾರಿಸಿದನು. ಸಮಾನ ಚಲನವ್ಯವಸ್ಥೆಯನ್ನು ಜಾರಿಗೊಳಿಸಿದನು. ೧೮೭೫ ರ ಬ್ಯಾಂಕ್ ಕಾನೂನಿನನ್ವಯ ದೇಶದ ಬ್ಯಾಂಕುಗಳ ನಿಯಂತ್ರಣವನ್ನು ಜರ್ಮನ್ ಸಂಸತ್ತಿನ ಮೇಲ್ಮನೆಗೆ (ಬುನಡೆಸ್ರಾಮ್) ಒಪ್ಪಿಸಲಾಯಿತು. ೧೮೭೬ ರಲ್ಲಿ ರೈಖ್ ಬ್ಯಾಂಕ್ ಅಥವಾ ಇಂಪೀರಿಯಲ್ ಬ್ಯಾಂಕನ್ನು ಸ್ಥಾಪಿಸಲಾಯಿತು. ರೈಲು ಮಾರ್ಗದ ಆಡಳಿತೆಯ ಏಕೀಕರಣ, ಬ್ಯಾಂಕ್ ವಹಿವಾಟಿನ ಸುಧಾರಣೆ ಹಾಗೂ ಕಡ್ಡಾಯದ ಸೈನ್ಯಭರತಿಯಂತಹ ಸುಧಾರಣೆಗಳಿಂದ ಅಂತರ್ಗತ ಆಡಳಿತೆಯ ಕಾರ್ಯದಕ್ಷತೆಯು ಹೆಚ್ಚಿತು. ಕಾರ್ಮಿಕರ ಪರಿಸ್ಥಿತಿಯು ಸುಧಾರಿಸಬೇಕು, ಅವರು ಸಮಾಜವಾದಿ ಪಕ್ಷ ಹಾಗೂ ಆ ವಿಚಾರ ಪ್ರಣಾಲಿಂರುತ್ತ ಆಕರ್ಷಿತರಾಗಬಾರದೆಂದು ಬಿಸ್ಮಾರ್ಕನು ಕಾರ್ಮಿಕರ ಹಿತಕ್ಕಾಗಿ ಸಂಸತ್ತಿನಲ್ಲಿ ಹಲವಾರು ಕಾನೂನುಗಳನ್ನು ಅಂಗೀಕರಿಸಿಕೊಂಡನು. ಅವುಗಳಲ್ಲಿ ಅಪಘಾತ, ಕಾಯಿಲೆಗಳ ಕಾಲಕ್ಕೆ ಕಾರ್ಮಿಕರಿಗೆ ಆರ್ಥಿಕ ನೆರವು, ಕೆಲಸದ ಮಿತಿಬದ್ದ ಗಂಟೆಗಳು, ಸ್ತ್ರೀ-ಬಾಲ ಕಾರ್ಮಿಕರ ಸಂರಕ್ಷಣೆಗಳನ್ನು ಕುರಿತಾದ ಕಾನೂನುಗಳು ಮಹತ್ವದ್ದಾಗಿದ್ದವು. ಈ ಸುಧಾರಣೆಗಳ ಜೊತೆಗೆ ಅವನು ಜರ್ಮನ್ ಕೈಗಾರಿಕೋದ್ಯಮಗಳಿಗೆ ಉತ್ತೇಜನೆ ದೊರೆಯಬೇಕು, ಕಚ್ಚಾ ಸರಕಿನ ಪೂರೈಕೆಯಾಗಬೇಕು, ಎಂಬ ಕಾರಣಕ್ಕಾಗಿ ಜರ್ಮನಿಗಾಗಿ ಹೊಸ ವಸಾಹತುಗಳನ್ನು ಪಡೆಯಲು ಯತ್ನಿಸಿದನು. ರೋಮನ್ ಕ್ಯಾಥೋಲಿಕ್ ಚರ್ಚು ಜರ್ಮನಿಯ ರಾಷ್ಟ್ರವಾದವನ್ನು ವಿರೋಧಿಸುತ್ತಿತ್ತು. ಅದಕ್ಕಾಗಿ ಅವನು ಕ್ಯಾಥೋಲಿಕ್ ಚರ್ಚಿನೊಡನೆ ಸಂಘರ್ಷದ ಧೋರಣೆಯನ್ನು ಅವಲಂಬಿಸಿದನು. ಅವನು ಜೆಸುಬಟ್‌ರನ್ನು ಹೊರದೂಡಿದನು. ವ್ಯಾಟಿಕನ್ ಜೊತೆಗಿನ ರಾಜನೈತಿಕ ಸಂಬಂಧಗಳನ್ನು ಕಡಿದನು. ಕಾನೂನು ತಯಾರಿಸಿ, ಶಾಸನದ ಚರ್ಚಿನ ಮೇಲಿನ ಪ್ರಭಾವವನ್ನು

ಹೆಚ್ಚಿಸಿದನು. ಆದರೆ ಚರ್ಚ್ ಹಾಗೂ ಕ್ಯಾಥೋಲಿಕರ ಮಧ್ಯವರ್ತಿ ಸಂಸ್ಥೆಯು ಈ ಧೋರಣೆಯನ್ನು ಪ್ರಖರವಾಗಿ ವಿರೋಧಿಸಿದವು. ಹೀಗಾಗಿ ಆ ಧೋರಣೆಗೆ ಅಷ್ಟೊಂದು ಯಶಸ್ಸು ಲಭಿಸಲಿಲ್ಲ. ಇಷ್ಟೇ ಅಲ್ಲದೆ ಮುಂದೆ ಚರ್ಚ್ ವಿರೋಧದ ಬಹಳಷ್ಟು ಕಾನೂನುಗಳನ್ನು ಹಿಂತೆಗೆದುಕೊಳ್ಳಲಾಯಿತು. ೧೮೮೮ ರಲ್ಲಿ ಪಟ್ಟಕ್ಕೆ ಬಂದ ಜರ್ಮನ್ ಚಕ್ರವರ್ತಿಯಾದ ಎರಡನೆಯ ವಿಲಿಯಮ್‌ನೊಡನೆ ಬಿಸ್ಮಾರ್ಕ್‌ನಿಗೆ ಮತಭಿನ್ನತೆ ಉಂಟಾಯಿತು. ಅದರ ಪರಿಣಾಮವಾಗಿ ೧೮೯೦ ರಲ್ಲಿ ಬಿಸ್ಮಾರ್ಕನು ರಾಜೀನಾಮೆಯನ್ನು ಸಲ್ಲಿಸಬೇಕಾಯಿತು. ನಿವೃತ್ತಿಯ ಕೆಲಕಾಲದ ತರುವಾಯ ಬರ್ಲಿನ್ನಿನಲ್ಲಿ ಅವನು ಮರಣ ಹೊಂದಿದನು.

ಬಿಸ್ಮಾರ್ಕನ ವಿದೇಶ ನೀತಿಯು ಅಂತರ್ಗತ ಧೋರಣೆಯೊಂದಿಗೆ ಬಹುಮಟ್ಟಿಗೆ ಹೊಂದಿಕೊಳ್ಳುತ್ತಿತ್ತು. ಆದರೂ ಪ್ರಖರ ಬುದ್ಧಿವಾದ ಹಾಗೂ ವ್ಯಾಪಕವಾದ ದೃಷ್ಟಿಕೋನಗಳಿಂದಾಗಿ ಬಿಸ್ಮಾರ್ಕ್ ಪ್ರಶಿಯಾ ಹಾಗೂ ಜರ್ಮನಿಯ ಕಕ್ಷೆಗಳಾಚೆಗೆ ಯುರೋಪಿನ ಮುತ್ಸದ್ದಿ ಎನ್ನಿಸಿದನು. ೧೮೬೨ ರಿಂದ ೧೮೬೬ ರವರೆಗೆ ಪ್ರಶಿಯನ್, ೧೮೬೬ ರಿಂದ ೧೮೭೦ ರ ತರುವಾಯ ಅವನು ಯುರೋಪಿಯನ್ ಮುತ್ಸದ್ದಿಯಾಗಿದ್ದನು. ಅವನ ಸಮರ್ಥ/ಪ್ರಗಲ್ಭ ದೃಷ್ಟಿಕೋನಕ್ಕೆ ಅನುಸರಿಸಿ ಅವನ ವಿದೇಶ ನೀತಿ ಬದಲಾಯಿಸುತ್ತಿತ್ತು. ಅವನು ತನ್ನ ವಿದೇಶ ನೀತಿಗೆ ಯಾವತ್ತೂ ಸೈನ್ಯ ಸಾಮರ್ಥ್ಯದ ಬೆಂಬಲವನ್ನು ನೀಡಿದನು.

೧೮೬೨ ರಲ್ಲಿ ಸಂಸತ್ತನ್ನು ಎದುರಿಸುವಾಗ ಬಿಸ್ಮಾರ್ಕನು ಆದರ್ಶವಾದಿಗಳನ್ನು ಸೋಲಿಸಿದನು. ಹಾಗೆಂದು ಅವನು ರಾಷ್ಟ್ರೀಯ ಚಳುವಳಿಯನ್ನು ಕಡೆಗಣಿಸಲಿಲ್ಲ. ಪ್ರಜಾಪ್ರಭುತ್ವಕ್ಕೆ ಪ್ರಾಧಾನ್ಯತೆಯನ್ನು ನೀಡುವ ರಾಜ್ಯ ಹಾಗೂ ಜರ್ಮನಿಯ ಏಕೀಕರಣವೆಂಬ ಇಬ್ಬಗೆಯ ಬೇಡಿಕೆಗಳಲ್ಲಿ ಅವನು ಏಕೀಕರಣದ ಪ್ರವೃತ್ತಿಗೆ ಪ್ರೋತ್ಸಾಹನೆಯನ್ನು ನೀಡಿದನು. ಹೀಗಾಗಿ ಆದರ್ಶವಾದಿಗಳಿಂದ ವಿರೋಧ ವ್ಯಕ್ತವಾಯಿತು. ಆದರೂ ಸಾಮಾನ್ಯರು ಆವನ ವಿರುದ್ಧವಿರಲಿಲ್ಲ. ಏಕೀಕರಣಕ್ಕಾಗಿ ಫ್ರಾನ್ಸಿನೊಡನೆ ಯುದ್ಧವನ್ನು ತಪ್ಪಿಸದಂತಿತ್ತು. ಆಸ್ಟ್ರಿಯಾದೊಡನೆ ಕೂಡ ಅದರ ಸಾಧ್ಯತೆ ಇತ್ತು. ಬಿಸ್ಮಾರ್ಕ್ನು ಜರ್ಮನ್ ಜನರ ಮೇಲಿನ ಆಸ್ಟ್ರಿಯದ ಪ್ರಭಾವವನ್ನು ದೂರ ಸರಿಸಲೆಂದು ಯಾವುದೇ ಬಗೆಯ ಸಾಧನಗಳನ್ನು ಬಳಸಿಕೊಳ್ಳಲು ಸಿದ್ಧನಿದ್ದನು. ಅವನ ರಾಜನೀತಿಯಲ್ಲಿ ಯುದ್ಧವೂ ಒಂದು ಸಾಧನವಾಗಿದ್ದು, ಅವನು ಅದನ್ನು ಬಳಸಿಕೊಂಡನು. ಡೆನ್ಮಾರ್ಕ್ನ ಉತ್ತರದ ಪ್ರಾಂತಗಳಾದ ಶ್ಲೆಝುವಿಗ್ ಹಾಗೂ ಹೊಲಸ್ಟೈನ್‌ಗಳ ಮೇಲೆ

ಹೊಂದಿದ ಪ್ರಭಾವ ರಾಷ್ಟ್ರವಾದಿಗಳಿಗೆ ಒಂದು ಪೀಡೆಯಾಗಿತ್ತು. ಇದನ್ನು ಬಳಸಿಕೊಂಡು ಬಿಸ್ಮಾರ್ಕನು ಆಸ್ಟ್ರಿಯವು ತಮ್ಮೊಡನೆ ಸ್ನೇಹದಿಂದಿರುವಂತೆ ನೋಡಿಕೊಂಡು ಈ ಪ್ರಾಂತಗಳನ್ನು ವಶಕ್ಕೆ ತೆಗೆದುಕೊಂಡನು. ಪ್ರಶಿಯವು ಒಂಟಿಯಾಗಿ ಜರ್ಮನ್ ರಾಷ್ಟ್ರವಾದಿ ನಿಲುವನ್ನು ತಳೆದು ಜರ್ಮನಿಯಲ್ಲಿ ತನ್ನ ವರ್ಚಸ್ಸವನ್ನು ಸ್ಥಾಪಿಸಬಾರದೆಂದು ಪ್ರಶಿಯದ ಜೊತೆಗೆ ಹೊಂದಾಣಿಕೆಯನ್ನು ಮಾಡಿಕೊಳ್ಳುವುದು ಆಸ್ಟ್ರಿಯಕ್ಕೆ ಅಗತ್ಯದ್ದಾಯಿತು. ಆಗಸ್ಟ್ ೧೮೬೫ ರಲ್ಲಿ ಗಾಸ್ಟಾಯಿನ್‌ದ ಕರಾರಿನಂತೆ ಆಸ್ಟ್ರಿಯಾವು ಹೊಲಸ್ಟೈನ್ ಹಾಗೂ ಪ್ರಶಿಯವು ಶ್ಲೆಝುವಿಗ್ ಪ್ರಾಂತವನ್ನು ವಶಕ್ಕೆ ತೆಗೆದುಕೊಳ್ಳಬೇಕೆಂದು ತೀರ್ಮಾನಿಸಲಾಯಿತು. ಆದರೆ ಹಲವು ಕಾರಣಗಳಿಂದಾಗಿ ಆಸ್ಟ್ರಿಯದೊಡನೆ ಯುದ್ಧವನ್ನು ತಪ್ಪಿಸುವಂತಿರಲಿಲ್ಲ. ಜರ್ಮನಿಯ ನಾಯಕತ್ವವು ಪ್ರಶಿಯದ ಬಳಿ ಇರಬೇಕೆ, ಅಥವಾ ಆಸ್ಟ್ರಿಯದ ಬಳಿಗೆ, ಎನ್ನುವ ಮೂಲಭೂತ ಪ್ರಶ್ನೆ ಸೈನಿಕ ಸಾಮರ್ಥ್ಯದಿಂದಲೇ ಬಗೆಹರಿಯುವಂತಿದ್ದ ಕಾರಣ ಬಿಸ್ಮಾರ್ಕನು ಆಸ್ಟ್ರಿಯದೊಡನೆ ಯುದ್ಧವನ್ನು ಸಾರಿದನು. ಅದಕ್ಕಾಗಿ



ಅವನು ಇಟಲಿಯೊಂದಿಗೆ ಒಪ್ಪಂದ ಮಾಡಿಕೊಂಡು ಆಸ್ಟ್ರಿಯದ ಹಿಡಿತದಲ್ಲಿರುವ ವಿನಿಶಿಯವನ್ನು ದೊರಕಿಸಿ ಕೊಡುವುದಾಗಿ ಮಾತು ಕೊಟ್ಟನು. ಈ ಒಪ್ಪಂದದಿಂದಾಗಿ ಆಸ್ಟ್ರಿಯದ ಬಲಾಢ್ಯ ಸೈನ್ಯವು ಇಟಲಿಯಲ್ಲಿ ಸಿಕ್ಕಿಕೊಂಡಿತು. ಪ್ರತ್ಯಕ್ಷದಲ್ಲಿ ಪ್ರಶಿಯನ್ ಸೈನ್ಯಾಡಳಿತೆಯು ಆಸ್ಟ್ರಿಯದಕ್ಕಿಂತ ಹೆಚ್ಚು ಕಾರ್ಯದಕ್ಷವೆಂದು ಸ್ಥಾಪಿತವಾಯಿತು. ೧೪ ಜೂನ್ ೧೮೬೬ ರಂದು ಯುದ್ಧವನ್ನು ಘೋಷಿಸಲಾಯಿತು. ೩ ಜುಲೈಯಂದು ಎರಡೂ ಸೈನ್ಯಗಳು ಕನಿಖಗ್ರೆಟ್ಸ್ ಎಂಬಲ್ಲಿ ಮುಖಾಮುಖಿಯಾಗಿ ಆಸ್ಟ್ರಿಯ ಪೂರ್ತಿ ಸೋತಿತು. ಜರ್ಮನಿಯಲ್ಲಿ ಪ್ರಶಿಯದ ನಾಯಕತ್ವ ವಾದಾತೀತವಾಯಿತು.

ಜರ್ಮನಿಯ ಏಕೀಕರಣಕ್ಕಾಗಿ ಫ್ರಾನ್ಸಿನೊಡನೆ ಯುದ್ಧವು ಅನಿವಾರ್ಯವಾಗಿತ್ತು. ಯುರೋಪಿನ ಒಂದು ಪ್ರಬಲ ಹಾಗೂ ಮಹತ್ವದ ದೇಶವಾದ ಫ್ರಾನ್ಸಿಗೆ ಯುರೋಪಿನ ಸಮಸ್ಯೆಗಳಲ್ಲಿ ಅಸ್ಥೆ ಇದ್ದೇ ಇತ್ತು. ಫ್ರಾನ್ಸಿನ ಗಡಿಗೆ ಜರ್ಮನಿಯ ಪ್ರದೇಶ ಅಂಟಿಕೊಂಡಿರುವುದಲ್ಲದೆ ಜರ್ಮನಿಯ ಎಲ್ಸೆಸ್ ಹಾಗೂ ಲಾರೆನ್ಸ್ ಎಂಬೆರಡು ಪ್ರಾಂತಗಳು ಫ್ರಾನ್ಸಿನ ಹಿಡಿತದಲ್ಲಿ ಇರುವ ಕಾರಣ ಫ್ರಾನ್ಸಿನ ಸೂಕ್ಷ್ಮವಾದ ಗಮನವು ಜರ್ಮನಿಯ ಧೋರಣೆಯತ್ತ ಇದ್ದಿತು. ಯುದ್ಧವನ್ನು

ತಪ್ಪಿಸಲಾಗದ್ದರಿಂದ ಬಲು ಕುಶಲತೆಯಿಂದ ಅದನ್ನು ನಡೆಸುವುದು ಬಿಸ್ಮಾರ್ಕನ ಧೋರಣೆಯಾಗಿತ್ತು. ಯಾರು ಸ್ಪೇನಿನ ಸಿಂಹಾಸನದ ಮೇಲೆ ಕುಳಿತುಕೊಳ್ಳಬೇಕು, ಎಂಬ ಪ್ರಶ್ನೆಯಿಂದಾಗಿ ವಾತಾವರಣ ಬಿಗಿಯಾಗತೊಡಗಿತ್ತು. ಅದರಿಂದಾದ ಪರಿಣಾಮ ಎಂದರೆ ೧೮೭೦ ರಲ್ಲಿ ಫ್ರಾನ್ಸ್ ಹಾಗೂ ಪ್ರಶಿಯಗಳ ನಡುವೆ ಯುದ್ಧ ನಡೆಯಿತು. ಬಿಸ್ಮಾರ್ಕನು ಜರ್ಮನ್ ಸಾಮ್ರಾಜ್ಯವು ಅಸ್ತಿತ್ವಕ್ಕೆ ಬಂದುದನ್ನು ೧೮ ಜನೆವರಿ ೧೮೭೧ ರಂದು ವಾರ್ಸಾದ ಕನ್ನಡಿಮಹಲಿನಲ್ಲಿ ಘೋಷಿಸಿದನು. ಮಧ್ಯ ಯುರೋಪಿನಲ್ಲಿ ೧೮೭೧ರ ತರುವಾಯದಲ್ಲಿದ್ದ ಪರಿಸ್ಥಿತಿಯನ್ನು ಇದ್ದ ಹಾಗೆ ಉಳಿಸಿಕೊಳ್ಳುವುದು ಬಿಸ್ಮಾರ್ಕನ ಧೋರಣೆಯ ಮುಖ್ಯ ಸೂತ್ರವಾಗಿತ್ತು. ಅದು ಹೊಸದಾಗಿ ಉದಯಿಸಿದ ಜರ್ಮನಿಯ ಅಭಿವೃದ್ಧಿಗಾಗಿ ಹಿತದ್ದಾಗಿತ್ತು. ಸೋತ ಫ್ರಾನ್ಸನ್ನು ಯುರೋಪಿನಲ್ಲಿ ಒಂಟಿಯಾಗಿ ಇರಿಸುವುದರ ಮೇಲೆ ಅವನ ಧೋರಣೆಯ ಯಶಸ್ಸು ಅವಲಂಬಿಸಿತ್ತು. ಫ್ರಾನ್ಸಿಗೆ ಆಗಬಹುದಾದ ಸ್ನೇಹಿತರೆಂದರೆ ಆಸ್ಟ್ರಿಯಾ ಹಾಗೂ ರಶಿಯಗಳಿದ್ದವು. ಆದರೆ ಬಿಸ್ಮಾರ್ಕನು ಇಂಥ ಸ್ನೇಹವಾಗುವ ಮುನ್ನವೇ ೧೮೭೩ ರಲ್ಲಿ ಇವೆರಡೂ ದೇಶಗಳೊಡನೆ ಮೈತ್ರಿಕೂಟವನ್ನು ತಯಾರಿಸಿದನು (ತ್ರಿ ಸಾಮ್ರಾಟ್ ಸಂಘ). ೧೮೭೯ ರಲ್ಲಿ ಅವನು ಆಸ್ಟ್ರಿಯಾದೊಡನೆ ಸ್ವತಂತ್ರವಾದ ಮೈತ್ರಿಕೂಟವನ್ನು ಮಾಡಿಕೊಂಡನು. ೧೮೮೨ ರಲ್ಲಿ ಅವನು ಆಸ್ಟ್ರಿಯಾ, ಇಟಲಿ ಹಾಗೂ ಜರ್ಮನಿಗಳ ಮೈತ್ರಿಕೂಟವನ್ನು ತಯಾರಿಸಿದನು (ರಾಷ್ಟ್ರ-ಕರಾರು), ೧೮೮೭ ರಲ್ಲಿ ಅವನು ರಶಿಯದೊಡನೆ ಒಪ್ಪಂದವನ್ನು ಮಾಡಿಕೊಳ್ಳಲು ಯತ್ನಿಸಿದನು. ಏಕೆಂದರೆ ಅಲ್ಲಿಯವರೆಗೆಂದರೆ ಸಾಮ್ರಾಟ್ ಸಂಘವು ಒಡೆದಿತ್ತು. ಅಲ್ಲದೆ ಅವನು ಬ್ರಿಟನ್ನಿನೊಡನೆ ಸಂಘರ್ಷವಾಗಬಾರದೆಂಬ ಎಚ್ಚರಿಕೆಯನ್ನು ವಹಿಸಿದ್ದನು. ಒಟ್ಟಿನಲ್ಲಿ ೧೮೭೧ ರಿಂದ ಹಿಡಿದು ಅವನು ಅಧಿಕಾರದಲ್ಲಿ ಇರುವವರೆಗೆ (೧೮೯೦) ಫ್ರಾನ್ಸಿಗೆ ಸ್ನೇಹಿತರು ಸಿಕ್ಕದ ಹಾಗೆ ಮತ್ತು ಅದನ್ನು ಒಂಟಿಯಾಗಿ ಉಳಿಸುವಲ್ಲಿ ಬಿಸ್ಮಾರ್ಕನ ಧೋರಣೆ ಯಶಸ್ವಿಯಾಯಿತು, ಎಂದೆನ್ನಬಹುದು.

ಹತ್ತೊಂಬತ್ತನೆಯ ಶತಮಾನದಲ್ಲಿ ವಿಶೇಷವಾಗಿ ೧೮೧೫ ರಿಂದ ೧೮೬೨ ರ ನಡುವಿನ ಕಾಲದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಹಂಚಿಹೋದ ಜರ್ಮನ್ ರಾಜಕೀಯ ಐಕ್ಯಕ್ಕಾಗಿ ಹಲವು ಯತ್ನಗಳಾದವು. ಆದರೆ ಅವೆಲ್ಲ ಸೋಲುಂಡವು, ಬಿಸ್ಮಾರ್ಕನು ಅಧಿಕಾರಕ್ಕೆ ಬಂದ ಹತ್ತು ವರ್ಷಗಳಲ್ಲೆಂದರೆ ತನ್ನ ವಿಧಾನದ ಮೂಲಕ ಜರ್ಮನ್ನರ ಏಕೀಕರಣವನ್ನು ಮಾಡಿದನು. ಫ್ರಾಂಕೊ-

ಪ್ರಶಿಯನ್ (ಜರ್ಮನ್) ಯುದ್ಧದಿಂದಾಗಿ ಜರ್ಮನಿ ಎಂಬ ಆಧುನಿಕ ರಾಷ್ಟ್ರವು ಉದಯವಾಯಿತು. ಹೀಗಾಗಿ ಅವನು ಆಧುನಿಕ ಜರ್ಮನ್ ರಾಷ್ಟ್ರದ ಶಿಲ್ಪಕಾರನೆನ್ನಿಸುತ್ತಾನೆ. ಸೈನ್ಯಶಕ್ತಿಯ ದೃಷ್ಟಿಯಿಂದ ಜರ್ಮನಿ ಒಂದು ಬಲಾಢ್ಯ ರಾಷ್ಟ್ರವಾಯಿತು. ಪ್ರಪಂಚದ ರಾಜಕೀಯದಲ್ಲಿ ಅದರ ಸ್ಥಾನವು ಮೇಲೇರಿತು. ಆದರೆ ಬಿಸ್ಮಾರ್ಕನ ಯುದ್ಧಕೋರ ಹಾಗೂ ಅಧಿಕಾರಶಾಹಿ ವಿಚಾರಪ್ರಣಾಲಿಯಿಂದಾಗಿ ಜರ್ಮನಿಯಲ್ಲಿ ದೀರ್ಘ ಕಾಲ ಪ್ರಜಾಪ್ರಭುತ್ವದ ಬೀಜಗಳು ಮೊಳೆಯಲಿಲ್ಲ. ಇಷ್ಟೇ ಅಲ್ಲದೆ ಇಪ್ಪತ್ತನೆಯ ಶತಮಾನದಲ್ಲಿ ಜರ್ಮನಿಯು ಯುದ್ಧಕೋರ ಹಾಗೂ ವಿಸ್ತಾರವಾದಿ ಧೋರಣೆಯನ್ನು ಸ್ವೀಕರಿಸಿ ಪ್ರಪಂಚವನ್ನು ಎರಡು ಮಹಾಯುದ್ಧಗಳ ಕಂದರಕ್ಕೆ ತಳ್ಳಿದುದರ ಬೀಜಗಳು ಕೂಡ ಬಿಸ್ಮಾರ್ಕನ ಕಾರ್ಯಕಾಲದಲ್ಲಿಯೇ ಬಿತ್ತಲಾದವುಗಳು.

**ಭಾಗವತ, ರಾಜಾರಾಮಶಾಸ್ತ್ರಿ ರಾಮಕೃಷ್ಣ** (೧೮೫೧-೧೯೦೮) :-ಮಹಾರಾಷ್ಟ್ರದ ಸಂಸ್ಕೃತ ಪಂಡಿತರು, ವ್ಯಾಸಂಗಿಗಳಾದ ವೇದಾಭ್ಯಾಸಕರು ಮತ್ತು ಸಮಾಜಸುಧಾರಕರು. ರಾಜಾಪೂರ ತಾಲೂಕಿನ ಕೇಳಶಿ ಊರಲ್ಲಿ ಜನ್ಮ, ಮುಂಬಯಿಯಲ್ಲಿ ಶಿಕ್ಷಣ. ಹಲವು ವರ್ಷಗಳ ಕಾಲ ಸಂಸ್ಕೃತದ ಪ್ರಾಧಾಪಕರು. ಕೊನೆಯ ೫-೬ ವರ್ಷ ಮುಂಬಯಿ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತದ ಪರೀಕ್ಷಕರು. ನಿರ್ದಾಕ್ಷಿಣ್ಯ ಮನೋಧರ್ಮದವರು, ಅಸ್ಪೃಶ್ಯರ ಏಳಿಗೆಗಾಗಿ ತುಂಬ ಕಳಕಳಿ, ಸ್ವತಂತ್ರ ವಿಚಾರಗಳಿಂದಾಗಿ ವಿಕ್ಷಿಪ್ತರೆಂದು ಕೀರ್ತಿ, ವೇದಗಳು, ಬೇರೆ ಬೇರೆ ಧರ್ಮಗಳು, ಇತಿಹಾಸ, ಸಂತ ಕವಿಗಳು, ಭಾಗವತ ಸಂಪ್ರದಾಯ, ವ್ಯಾಕರಣ ಮೊದಲಾದ ಹಲವು ವಿಷಯಗಳ ಮೂಲಗಾಮಿ ಅಧ್ಯಯನ. ಹಲವಾರು ಲೇಖನಗಳು ಹಾಗೂ ಗ್ರಂಥಗಳ ಬರವಣಿಗೆ,

**ಭೂಪಟಕರ, ಲಕ್ಷ್ಮಣ ಬಳವಂತ** :-ಜನ್ಮ ೧೮೮೦ ರಲ್ಲಿ. ಹೆಸರಾದ 'ಭಾಲಾ'ಕಾರ ಭೂಪಟಕರರ ಎಲ್ಲಕ್ಕೂ ಸಣ್ಣ ತಮ್ಮ ಹೆಸರಾದ ವಕೀಲರು, ಹಲವು ಗ್ರಂಥಗಳ ಲೇಖಕರು, ವೃತ್ತಪತ್ರಗಳ ಸಂಪಾದಕರು, ಸಾರ್ವಜನಿಕ, ರಾಜಕೀಯ ಹಾಗೂ ಸಾಮಾಜಿಕ ಚಳುವಳಿಗಳಲ್ಲಿ ನೇರ ಪಾಲು. ರಾಜಕೀಯ ಮತಸ್ವಾತಂತ್ರದ ಜೊತೆಗೇನೆ ಸಾಮಾಜಿಕ ಮತಸ್ವಾತಂತ್ರವು ಇರಬೇಕು, ಎಂಬ ವಿಚಾರದವರು. ೧೯೦೫ ರಿಂದ ಅಸ್ಪೃಶ್ಯತಾ-ನಿವಾರಣೆಯ ವಿಷಯವನ್ನು ಕುರಿತು ಅವರ ಬರವಣಿಗೆ ಮತ್ತು ಉಪನ್ಯಾಸಗಳು ನಡೆದಿದ್ದವು. ಆ ಕಾಲಕ್ಕೆ ನಾಗಪೂರದ ಪ್ರತಿಷ್ಠೆಯನ್ನು ಪಡೆದ ಒಬ್ಬ ಅಸ್ಪೃಶ್ಯ ಮುಂದಾಳುವನ್ನು ಪುಣೆಗೆ ಕರೆಯಿಸಿಕೊಂಡು ಅವರಿಂದ ಉಪನ್ಯಾಸಗಳನ್ನು ನೀಡಿಸುತ್ತಿದ್ದರು. ಅವರು ಶ್ರೀ ಮಾಟೆ ಅವರ ಅಸ್ಪೃಶ್ಯತಾ-ನಿವಾರಕ ಮಂಡಳದ ಅಧ್ಯಕ್ಷರಾಗಿದ್ದರು. ತಮ್ಮ ವಿದ್ಯಾಭ್ಯಾಸದ ಕಾಲಕ್ಕೆ ಕುಸ್ತಿ, ದಾಂಡಪಟ್ಟಾ, ದೇಸಿ ವ್ಯಾಯಾಮ ಪದ್ಧತಿ ಹಾಗೂ ಆಟಗಳ ಜ್ಞಾನವನ್ನು ಗಳಿಸಿದ್ದರು. ಪುಣೆಯ ವ್ಯಾಯಾಮ ಶಾಲೆಯನ್ನು ಅವರೇ ಊರ್ಜಿತಕ್ಕೆ ತಂದರು. ಮಹಾರಾಷ್ಟ್ರ ವಿದ್ಯಾಲಯ ಎಂಬ ರಾಷ್ಟ್ರೀಯ ಹೈಸ್ಕೂಲನ್ನು

ಸ್ಥಾಪಿಸಿದರು. ೧೯೦೫ ರಲ್ಲಿ 'ಭಾಲಾ' ಕಾರ ಭೂಪಟಕರರಿಗೆ ರಾಜದ್ರೋಹದ ಬಗೆಗೆ ಶಿಕ್ಷೆಯಾದ ಬಳಿಕ ಅವರು ಎರಡು ವರ್ಷಗಳ ಕಾಲ 'ಭಾಲಾ' ಪತ್ರಿಕೆಯ ಸಂಪಾದನೆಯ ಕೆಲಸವನ್ನು ಮಾಡಿದರು. ಅವರು ಎರಡು ವರ್ಷಗಳ ಕಾಲ 'ಲೋಕಸಂಗ್ರಹ' ದಿನಪತ್ರಿಕೆಯ ಸಂಪಾದಕರಾಗಿದ್ದರು. ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ್ಸಿಗೆ ನಾಲ್ಕು ವರ್ಷ ಅಧ್ಯಕ್ಷರಾಗಿದ್ದರು. ಅವರು ಪೂನಾ ಲಾ ಕಾಲೇಜನ್ನು ಶುರು ಮಾಡಲು ಮುಂದಾಗಿ ಆ ಕಾಲೇಜಿನ ಕಾನೂನು ಪ್ರೊಫೆಸರ್ ಹಾಗೂ ವೈಸ್ ಪ್ರಿನ್ಸಿಪಾಲ್ ಕೂಡ ಆಗಿದ್ದರು. ಅವರು 'Law of Torts' ಮೊದಲಾದ ಕಾನೂನು ಪುಸ್ತಕ, ದಾಂಡಪಟ್ಟಾ, ಕುಸ್ತಿಯಂಥ ವ್ಯಾಯಾಮಗಳನ್ನು ಕುರಿತಾದ



ಪುಸ್ತಕಗಳನ್ನು, 'ನವರತ್ನಾಚಾ ಹಾರ' ('ನವರತ್ನದ ಹಾರ ), 'ಮೃತ್ಯೂಚ್ಯಾ ಮಾಂಡೀವರ' ('ಮೃತ್ಯುವಿನ ಮಡಿಲಲ್ಲಿ ) ಮುಂ. ಪುಸ್ತಕಗಳನ್ನು ಬರೆದರು.

**ಮೋಝೆಸ್ :-(**ಇ. ಸ. ಪೂ. ಸು. ಹದಿನಾಲ್ಕನೆಯ-ಹದಿಮೂರನೆಯ ಶತಮಾನ). ಜ್ಯೂ ರಾಷ್ಟ್ರಸಂಸ್ಥಾಪಕ, ಸರ್ವಶ್ರೇಷ್ಠ ಪ್ರವಾದಿ ಹಾಗೂ ಜ್ಯೂ ಜನರಿಗೆ ಧಾರ್ಮಿಕ-ನೈತಿಕ-ಸಾಮಾಜಿಕ ಸಂಹಿತೆಯನ್ನು ನೀಡಿದ ಒಬ್ಬ ಶ್ರೇಷ್ಠ ನಾಯಕ. ಮೋಝೆಸ್ (ಹಿಬ್ರು-ಮೋಶೆ) ಪದವು ಈಜಿಪ್ಷಿಯನ್ ಭಾಷೆಯಲ್ಲಿ ಮೋಸೆ ಎಂದರೆ ಮಗ, ಅವನ ಜನ್ಮವು ಈಜಿಪ್ತಿನಲ್ಲಾಯಿತು. ಮೋಝೆಸ್‌ನ ತಂದೆ ಅಮ್ರಾಮ್ ಹಾಗೂ ಅಮ್ಮ ಜೋಶೇಬೇದ್. ಇವರಿಬ್ಬರೂ ಲೆವಿ ಜನಾಂಗದ ಜ್ಯೂಗಳಾಗಿದ್ದರು. ಎರಡನೆಯ ರ್‍ಯಾಮಸೀಝ್ (ಇ. ಸ. ಪೂ. ಸು. ೧೩೦೪-೧೨೩೭) ಎಂಬ ಈಜಿಪ್ತಿನ ರಾಜನ (ಫೆಯರೊ) ರಾಜ್ಯದಲ್ಲಿ ಅವರು ಗುಲಾಮರಾಗಿ ವಾಸಿಸುತ್ತಿದ್ದರು. ಜೂ ಜನರ ಮಕ್ಕಳನ್ನು ನಾಯಿಲ್ ನದಿಯಲ್ಲಿ ಮುಳುಗಿಸಿ ಕೊಲ್ಲಬೇಕೆಂದು ಅವನು ಅಪ್ಪಣೆ ಮಾಡಿದ್ದನು. ಮೋಝೆಸ್‌ನ ಹೆತ್ತವರು ಅವನನ್ನು ಹೇಗೋ ಮೂರು ತಿಂಗಳು ಗುಟ್ಟಾಗಿ ಕಾಪಾಡಿದರು. ಕೊನೆಗೆ ಅವರು ಒಂದು ಹುಲ್ಲಿನ ಪೆಟ್ಟಿಗೆಯಲ್ಲಿ ಅವನನ್ನು ಇರಿಸಿ ನಾಯಿಲ್ ನದಿಯಲ್ಲಿ ತೇಲಿಬಿಟ್ಟರು. ಸುದೈವದಿಂದ ಫೆಯರೋನ ರಾಜಕನ್ಯೆ ಸ್ನಾನಕ್ಕೆಂದು ನದಿಗೆ ಬಂದಿದ್ದಳು. ಅವಳು ಆ ಮಗುವನ್ನು ಕಂಡಳು. ಅದು ಅವಳಿಗೆ ತುಂಬ ಇಷ್ಟವಾಯಿತು. ಅದನ್ನು ತನ್ನ ಹೊಟ್ಟೆಯ ಮಗುವಿನಂತೆ ಬೆಳೆಸಿದಳು. ಅದಕ್ಕೆ ಮೋಝೆಸ್ ಎಂದು ಹೆಸರಿಟ್ಟಳು. ಮೋಝೆಸ್ ದೊಡ್ಡವನಾದ ಬಳಿಕ ಒಂದು ಸಲ ಒಬ್ಬ ಇಜಿಪ್ತಿಯನ್ನನು ಒಬ್ಬ

ಜ್ಯೂನನ್ನು ಹಿಂಸಿಸುತ್ತಿರುವುದನ್ನು ಕಂಡನು. ಅವನು ತಕ್ಷಣ ಆ ಮನುಷ್ಯನನ್ನು ಕೊಲೆಗೈದನು. ಮೋಝೆಸ್‌ನ ರಕ್ತದ ಈ ಗುಣವು ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ಪ್ರಕಟವಾಗತೊಡಗಿತು. ಫೆಯರೋನ ಕೈಗೆ ಸಿಕ್ಕುಬೀಳುವ ಮುನ್ನವೇ ಅವನು ಅಲ್ಲಿಂದ ಓಡಿ ಮೀಡಿಯನ್ನಿನ ಜೇಥ್ರೊ ಎಂಬ ಧರ್ಮಗುರುವಿನಲ್ಲಿಗೆ ಬಂದನು. ಅಲ್ಲಿ ಅವನು ಧರ್ಮಗುರುವಿನ ಮಗಳಾದ ಝಿಪ್ಪೋರಾ ಎನ್ನುವವಳನ್ನು ಮದುವೆಯಾದನು. ಮೋಝೆಸ್‌ನಿಂದ ಅವಳಿಗೆ ಜೆರಶೋಮ್ ಮತ್ತು ಏಲಿಯೇಝರ್ ಎಂಬ ಇಬ್ಬರು ಗಂಡು ಮಕ್ಕಳಾದರು. ಮೊಝೆಸ್‌ನು ನಲವತ್ತು ವರ್ಷಗಳ ಕಾಲ ಅಲ್ಲಿಯೇ ಕುರಿಗಳನ್ನು ಕಾಯುತ್ತಿದ್ದನು. ಒಂದು ಸಲ ಅವನು ಹೊರೆಬ್ ಪರ್ವತದ ಮೇಲೆ ಕುರಿಗಳನ್ನು ಮೇಯಿಸುತ್ತಿರುವಾಗ ಒಂದು ಕಂಟಿಗೆ ಉರಿನಾಲಿಗೆಯು ಅಂಟಿಕೊಂಡಿದ್ದರೂ ಅದು ಕಂಟಿಯನ್ನು ಸುಡುತ್ತಿಲ್ಲವೆನ್ನುವುದು ಅವನಿಗೆ ಕಂಡಿತು. ಅವನು ಅದರ ಹತ್ತಿರಕ್ಕೆ ಹೋಗುತ್ತಲೇ ಅವನಿಗೆ ಈಶ್ವರನ ಸಾಕ್ಷಾತ್ಕಾರವಾಯಿತು. ಈಜಿಪ್ತಿಗೆ ಮರಳಿ ಹೋಗಿ ತನ್ನ ಸೋದರರನ್ನು ಬಿಡಿಸಿಕೊಂಡು ಬರುವಂತೆ ಅವನಿಗೆ ಪರಮೇಶ್ವರನ ಅಪ್ಪಣೆಯಾಯಿತು. ಅದರಂತೆ ಅವನು ಈಜಿಪ್ತಿಗೆ ಬಂದನು. ಅಲ್ಲಿ ಅವನಿಗೆ ಅವನ ತಮ್ಮ ಏಯರನ್ ಭೇಟಿಯಾದನು. ಜ್ಯೂ ಜನರನ್ನು ಬಿಟ್ಟುಕೊಡುವಂತೆ ಫೆಯರೋನ ಮನಸ್ಸನ್ನು ಒಲಿಸುವುದು ಕಷ್ಟದ್ದೆಂಬುದು ಅವರಿಬ್ಬರಿಗೂ ಮನದಟ್ಟಾಯಿತು. ಹೀಗಾಗಿ ಮೋಝೆಸ್‌ನ ದೈವಿ ಶಕ್ತಿಯಿಂದಾಗಿ ಏಹೋವಾನು ಈಜಿಪ್ತಿನ ಮೇಲೆ ಹತ್ತು ಸಲ ಪ್ಲೇಗ್ ಹಾವಳಿಯನ್ನು ಉಂಟುಮಾಡಿದನು. ಕೊನೆಗೆ ಈಜಿಪ್ಷಿಯನ್ ಜನರು ಜ್ಯೂಗಳ ಚಿತ್ರಹಿಂಸೆಯನ್ನು ನಿಲ್ಲಿಸಿ ಅವರನ್ನು ಬಿಡುಗಡೆ ಮಾಡಿದರು. ತರುವಾಯ ಜೂ ಜನರೆಲ್ಲ ವಸಾಹತನ್ನು ತಯಾರಿಸಲೆಂದು ತಮ್ಮ ಕುರಿಮಂದೆಗಳ ಜೊತೆಗೆ ಸುಯೇಝಿನ ದಕ್ಷಿಣದತ್ತ ಹೊರಟರು. ಮೋಝೆಸ್‌ನು ಅವರ ಮುಂದಾಳತ್ವವನ್ನು ವಹಿಸಿದನು. ಈ ಪ್ರಸಂಗವು '

'ಎಕ್ಸೋ ಡಸ್' ಎಂಬ ಹೆಸರಿನಿಂದ ಬೈಬಲ್ ಹಾಗೂ ಇತಿಹಾಸದಲ್ಲಿ ಪ್ರಖ್ಯಾತವಾಗಿದೆ. ಅವರಿಗೆ ಹಲವು ಸಂಕಟಗಳು ಎದುರಾದವು. ಆದರೆ

ಏಹೋವ್-ದೇವನು ಅವರನ್ನು ರಕ್ಷಿಸಿದನು. ಅವರೆಲ್ಲರು ಸಿನಾಯಿಯ ಹತ್ತಿರಕ್ಕೆ ಬಂದಾಗ ಅವರನ್ನು ಅದ್ದೂರಿಯಿಂದ ಸ್ವಾಗತಿಸಲಾಯಿತು. ಇಲ್ಲಿಯೇ ಈ ಪರ್ವತದ ಶಿಖರದ ಮೇಲೆ (ಜೆಬೆಲ್ ಮೂಸಾ) ಮೋಝೆಸ್ ನಿಗೆ ಈಶ್ವರನ ಸಾಕ್ಷಾತ್ಕಾರವಾಯಿತು. ಈಶ್ವರನು ಅವನಿಗೆ ತನ್ನ 'ಹತ್ತು ಆಜ್ಞೆಗಳನ್ನು ಅಥವಾ ಹತ್ತು ನೀತಿನಿಯಮಗಳ ಪಾಠವನ್ನು ನೀಡಿದನು. ಮೋಝೆಸ್ ಇವನು ಪರ್ವತದ ಮೇಲೆ ೪೦ ದಿನಗಳ ಕಾಲ ಈಶ್ವರನ ಸಾನಿಧ್ಯದಲ್ಲಿ ಇದ್ದನು. ತರುವಾಯ ಅವನು ಅಲ್ಲಿಂದ ಕೆಳಗಿಳಿದು ಬಂದು ತನ್ನ ಬಂಧುಬಾಂಧವರನ್ನು ಕಾದೇಶ್ ಎಂಬಲ್ಲಿಗೆ ಕರೆದೊಯ್ದನು. ಅವರು ೩೮ ವರ್ಷಗಳ ತರುವಾಯ ಅಲ್ಲಿಂದ ಪೂರ್ವದತ್ತ ಹೊರಟರು. ಅವರಿಗೆ ಏಸ್ ಹಾಗೂ ಮೋಆಬ್ ಪ್ರದೇಶಗಳ ಮೂಲಕ ಸುಖರೂಪರಾಗಿ ದಾಟಲು ಸಾಧ್ಯವಾಯಿತು. ಆದರೆ ಮುಂದೆ ಅವರ ದಾರಿಗೆ ಅಡ್ಡಿ ಎದುರಾಯಿತು. ಮೋಝೆಸ್‌ನು ಜಾರ್ಡನ್ ನದಿಯನ್ನು ದಾಟಿ ಆಚೆಯ ಕ್ಯಾನನ್ ಪ್ರದೇಶಕ್ಕೆ ಹೋಗಲು ಆಗದು, ತನ್ನ ಅಂತ್ಯಸಮಯ ಹತ್ತಿರಕ್ಕೆ ಬಂದಿದೆ ಎಂಬುದನ್ನು ಗುರುತಿಸಿ ತನ್ನೆಲ್ಲ ಬಾಂಧವರನ್ನು ಹತ್ತಿರಕ್ಕೆ ಕರೆದು ಅವರಿಗೆ ಕೊನೆಯ ಸಂದೇಶವನ್ನು ಇತ್ತನು ('ಡ್ಯೂಟೆರೋನಾಮಿ' ಅಥವಾ 'ಪೆಂಟಾಟ್ಯೂಕ್' ಎಂಬ ಹೆಸರಿನಿಂದ ಗುರುತಿಸಲಾಗುವ ಬೈಬಲ್ಲಿನ ಮೊದಲ ಐದು ಪುಸ್ತಕಗಳಲ್ಲಿ ಈ ಸಂದೇಶವು ಗ್ರಥಿತವಾಗಿದೆ). ತರುವಾಯ ಮೊಝೆಸ್‌ನು ಎಲ್ಲರನ್ನೂ ಹರಸಿ, ತನ್ನ ವಾರಸುದಾರನನ್ನು ನೇಮಿಸಿ ನೆಬೊ ಪರ್ವತದ ಮೇಲಿನ ಪಿಸಗಾಹ ಶಿಖರವನ್ನೇರಿ ಹೋದನು. ಅಲ್ಲಿ ಅವನು ವಯಸ್ಸಿನ ಒಂದುನೂರು ಇಪ್ಪತ್ತನೆಯ ವರ್ಷದಲ್ಲಿ ತನ್ನ ದೇಹವನ್ನಿರಿಸಿದನು. ಅಧ್ಯಯನಕಾರರು ಇ. ಸ. ೧೩೯೧ ರಿಂದ ೧೨೭೧ ವನ್ನು ಅವನ ಆಯುಕಾಲವೆಂದು ಭಾವಿಸುತ್ತಾರೆ.

ಜ್ಯೂ ಧರ್ಮದ ಹೇಳಿಕೆಯಂತೆ ಯೇಹೋವನು ಇಸ್ರೇಲ್ ರಾಷ್ಟ್ರವನ್ನು ನಿರ್ಮಿಸಲೆಂದು ಮೋಝೆಸ್‌ನನ್ನು ಪ್ರವಾದಿಯಾಗಿ ಮಾಡಿದ್ದನು. ಈಶ್ವರನು ಅವನ ಮೂಲಕ ತನ್ನೆಲ್ಲ ಆಜ್ಞೆಗಳನ್ನು ಜೂ ಜನರಿಗೆ ತಲುಪಿಸುತ್ತಿದ್ದನು. ಮೋಝೆಸ್ ಬಲು ಶಾಂತ ಸ್ವಭಾವದವನಾಗಿದ್ದನೆಂದು ಅವನ ವರ್ಣನೆಯಿಂದ ಕಂಡುಬರುತ್ತದೆ. 'ಯಾವನು ಈಶ್ವರನನ್ನು ಎದುರುಬದುರಾಗಿ ನೋಡಿದ್ದಾನೆಯೋ ಅಂಥ ಪ್ರವಾದಿ ಎಂದರೆ ಮೋರೆಸ್ ಒಬ್ಬನೇ ಅಹುದು', ಎಂದು ಅವನ ಹಿರಿಮೆಯನ್ನು ಹಾಡಿ ಹೊಗಳಲಾಗುತ್ತದೆ. ಮೋಝೆಸ್‌ನು ತನ್ನ ಬಾಂಧವರಲ್ಲಿ ಒಕ್ಕಟ್ಟನ್ನು ಉಂಟುಮಾಡಿದ ಕಾಲದಲ್ಲಿ ಅದೇ ತಾನೆ ಯೆಹೋವಾ ಎಂಬ ದೇವನ ನಾಮಮಹಿಮೆ ಶುರುವಾಗಿತ್ತು. ಇಂಥ ಕಾಲದಲ್ಲಿ ಮೋಝೆಸ್‌ನ ಯತ್ನಗಳಿಂದಾಗಿ ಜೂ ಜನರು ಈ ಈಶ್ವರನ ಮೇಲೆ ನಂಬಿಕೆಯನ್ನು ಇರಿಸಿದರು. 'ಸಿನಾಯಿ ಪರ್ವತದ ಮೇಲಿಂದ ಬಿರುಗಾಳಿಯು ಬೀಸಿ ಬಂದು, ಇಡಿಯ ಮರುಭೂಮಿಯ ಮೇಲೆ ಮಳೆಗರೆದು, ಎಲ್ಲೆಡೆಗಳಲ್ಲಿ ಬೆಳೆಗಳು ಸೊಂಪಾಗಿ ಬೆಳೆದವು', ಎಂಬ ಅವರ ಮಾತಿನಿಂದ ಮೋಝೆಸ್‌ನು ನಂಬಲು ಹೇಳಿದ ಈಶ್ವರನು ಅವರಿಗಾಗಿ ಹಲವಾರು ಪವಾಡಗಳನ್ನು ಮಾಡಿದ ಕಥೆಗಳಿವೆ. ಮೊರೊಸ್ ನಿಜವಾಗಿಯೂ ಅವರ ನೆರವಿಗೆ ಬರುವವನೆನ್ನಿಸಿದನು. ಮೋಝೆಸ್‌ನ ಡ್ಯೂಟೆರೋನಾಮಿಯ ನಿಯಮಗಳಿಂದಾಗಿ ಜ್ಯೂ ಜನರಲ್ಲಿ ಒಕ್ಕಟ್ಟು ತಯಾರಾಯಿತು; ಅವರಲ್ಲಿ ರಾಷ್ಟ್ರೀಯ

ಭಾವನೆಯು ಹುಟ್ಟಿಕೊಂಡಿತು; ಇಷ್ಟೇ ಅಲ್ಲದೆ ಧರ್ಮದ ನಿಜವಾದ ಒರೆಗಲ್ಲು ವಿಧಿ ಹಾಗೂ ಪೂಜೆಗಳನ್ನು ಅವಲಂಬಿಸದೆ ನೈತಿಕ ಆಚರಣೆಯನ್ನು ಅವಲಂಬಿಸಿದೆ, ಎನ್ನುವ ದೃಷ್ಟಿಕೋನವು ಅವರಿಗೆ ಮೊದಲು ಮೋರೆಸ್‌ನಿಂದ ದೊರೆಯಿತು.

ಮೈಕೇಲೆಂಜೆಲೊ ಎಂಬ ಹೆಸರಾದ ಕಲಾವಿದನು ತಯಾರಿಸಿದ ತನ್ನ ಶಿಲ್ಪದಲ್ಲಿ ಮೋಝೆಸ್‌ನ



ಹಣೆಯಿಂದ ಕೋಡುಗಳು ಹೊರಚಾಚಿರುವಂತೆ ತೋರಿಸಿರುವನು. ಮೋಝೆಸ್‌ನ ಹಣೆಯ ಮೇಲಿನ ಕೋಡುಗಳ ಕಲ್ಪನೆಯು ಮೂಲದ ಹಿಬ್ರೂದಿಂದ ಲ್ಯಾಟಿನ್ನಿನಲ್ಲಿ ಆದ ತಪ್ಪು ಅನುವಾದದ ಫಲ. 'ಮೋಝೆಸ್‌ನು ಸಿನಾಯಿ ಪರ್ವತದಿಂದ ಕೆಳಗಿಳಿದಾಗ ಅವನ ಮುಖದ ಮೇಲಿನ ಚರ್ಮವು ಮಿಂಚುತ್ತಿತ್ತು.' ಎಂಬ ಬೈಬಲ್ಲಿನ ವಾಕ್ಯದ ಮೂಲದ ಹಿಬ್ರೂದ 'ಮಿಂಚುತ್ತಿತ್ತು' ಎಂಬ ಅರ್ಥದ ಶಬ್ದವು (ಅದರಿಂದ) ಕಿರಣಗಳು ಹೊಮ್ಮುತ್ತಿದ್ದವು,' ಎಂದಾಗಿದೆ. ಲ್ಯಾಟಿನ್ನಿನಲ್ಲಿ 'ಕಿರಣ' ಹಾಗೂ 'ಕೋಡು'ಗಳ ಗೊಂದಲ ನಡೆಯಿತು. ಹಲವರು ಹೆಸರಾದ ಚಿತ್ರಕಾರರು ಹಾಗೂ ಶಿಲ್ಪಕಾರರು ಮೋಝೆಸ್‌ನ ಜೀವನದ ಪ್ರಸಂಗಗಳನ್ನು ಕುರಿತು ಚಿತ್ರ-ಶಿಲ್ಪಗಳನ್ನು ತಯಾರಿಸಿರುವರು."

**ರಾಮಕೃಷ್ಣ ಪರಮಹಂಸ** (೧೮೩೬-೧೮೮೬) :-ಬಂಗಾಲದ ವಿಶ್ವವಿಖ್ಯಾತರಾದ ಸಿದ್ಧಪುರುಷ ಹಾಗೂ ವೇದಾಂತಪ್ರತಿಪಾದಕರು. ಬಂಗಾಲದ ಕಾಮಾರಮುಕುರ ಎಂಬಲ್ಲಿ ಜನ್ಮ. ಮೂಲ ಹೆಸರು ಗದಾಧರ ಚಟ್ಟೋಪಾಧ್ಯಾಯ. ಇವರ ತಾಯಿ, ತಂದೆ ತುಂಬ ಧಾರ್ಮಿಕ ಹಾಗೂ ಸನಾತನಿ ಪ್ರವೃತ್ತಿಯ ಬ್ರಾಹ್ಮಣರು. ಇವರು ೧೮೫೩ ರಲ್ಲಿ ತಮ್ಮ ಅಣ್ಣ ರಾಮಕುಮಾರರ ಜೊತೆಗೆ ಕಲಕತ್ತೆಗೆ ಬಂದರು. ರಾಣಿ ರಾಸಮತಿಯು ಅವರ ಅಣ್ಣನನ್ನು ೧೮೫೬ ರಲ್ಲಿ ಕಲಕತ್ತೆಯ ಬಳಿಯ ದಕ್ಷಿಣೇಶ್ವರದ ಕಾಲಿ ದೇವಾಲಯದ ಮುಖ್ಯ ಅರ್ಚಕನನ್ನಾಗಿ ನೇಮಿಸಿದಳು. ಇವರು ಅಣ್ಣನಿಗೆ ನೆರವಾಗುತ್ತಿದ್ದರು. ಆಗ ತೋತಾಪುರಿ ಎಂಬ ಒಬ್ಬ ಸಂನ್ಯಾಸಿಯು ಅವರಿಗೆ ಸಂನ್ಯಾಸ ದೀಕ್ಷೆಯನ್ನು ಕೊಟ್ಟು ರಾಮಕೃಷ್ಣ ಪರಮಹಂಸ ಎಂಬ ಹೆಸರಿತ್ತಳು. ತರುವಾಯದಲ್ಲಿ ಅವರು ಕ್ರಿಸ್ತ ಹಾಗೂ ಮುಸಲ್ಮಾನ ಧರ್ಮಗಳ

ಅನುಯಾಯಂತೆ ಉಪಾಸನೆಯನ್ನು ಮಾಡಿದರು. ಅದೇ ರೀತಿಯಾಗಿ ಆಸ್ತಿಕತನದಿಂದ ಹಲವು ಮತಪಂಥಗಳನ್ನು ಅಧ್ಯಯನ ಮಾಡಿ ಕೆಲಕಾಲ ಅವುಗಳ ಸಾಧನೆಯನ್ನೂ ಮಾಡಿದರು. ಅವರ ಯೋಚನೆಗಳು ಈಶ್ವರಾಧಿಷ್ಠಿತವಾಗಿದ್ದವು. ಅವರು ತೀರ ಸಾದಾ ಹಾಗೂ ಶುದ್ಧರಾಗಿ ಇರುತ್ತಿದ್ದರು. ಅವರ ಚರಿತ್ರೆ ಹಾಗೂ ಉಪದೇಶಗಳು ಅದೆಷ್ಟು ಅಲೌಕಿಕ ಹಾಗೂ ಪವಾಡಪೂರ್ಣವಾದವೆಂದರೆ ಪ್ರಪಂಚದ ವಿದ್ವಾಂಸರ ಮೇಲೆ ಅವು ತಮ್ಮ ಪ್ರಭಾವವನ್ನು ಬೀರಿದವು. ವಿವೇಕಾನಂದರು ಅವರ ಪ್ರಮುಖ, ಪ್ರಸಿದ್ಧ ಶಿಷ್ಯರಾಗಿದ್ದರು. ಹದಿನಾಲ್ಕನೆಯ ವಯಸ್ಸಿನಿಂದಲೇ ಅವರಿಗೆ ಸಮಾಧಿ ಹತ್ತುತ್ತಿತ್ತು. ಅವರು ಮೇಲಿಂದ ಮೇಲೆ ತಮ್ಮ ದೇಹದ ಅರಿವನ್ನು ಮರೆತು ಬ್ರಹ್ಮಸ್ವರೂಪದಲ್ಲಿ ಲೀನರಾಗುತ್ತಿದ್ದರು. ಅವರ ಪ್ರತಿಪಾದನೆ ತರ್ಕಶುದ್ಧ, ಸ್ಪಷ್ಟ ಹಾಗೂ ಚುಟುಕಾಗಿ ಇರುತ್ತಿತ್ತು. ಕೆಲವು ಸಲ ಅವರ ಮಾತಿನಲ್ಲಿ ನಿಗೂಢತೆಯು ತಲೆದೋರುತ್ತಿತ್ತು. ತಾವು ಅಂತ್ಯಜರಿಗಿಂತ ಮೇಲಿನವರೆಂಬ ಭಾವನೆಯನ್ನು ನಾಶಪಡಿಸಲೆಂದು ಅವರು ತಮ್ಮ ಜಟೆಯಿಂದ ಅಂತ್ಯಜನ ಮನೆಯ ಕಸವನ್ನು ಗುಡಿಸಿದರು.

**ರಾಮತೀರ್ಥ, ಸ್ವಾಮಿ (೧೮೭೩-೧೯೦೬) :-**ಪ್ರಸಿದ್ಧ ಸಾಧುಪುರುಷರು, ತತ್ತ್ವಜ್ಞರು ಹಾಗೂ ಕವಿಗಳು. ಪಂಜಾಬಿನ ಮುರಲಿವಾಲಾ ಎಂಬಲ್ಲಿ ಜನ್ಮ ಮೂಲ ಹೆಸರು ತೀರ್ಥರಾಮ. ಸಂನ್ಯಾಸವನ್ನು ಪಡೆದ ಬಳಿಕ ರಾಮತೀರ್ಥ ಹೆಸರನ್ನು ಧರಿಸಿದರು. ಅವರು ಆರ್ಥಿಕ ಪರಿಸ್ಥಿತಿಯನ್ನು ಎದುರಿಸುತ್ತ ಗಣಿತದಲ್ಲಿ ಎಮ್. ಎ. ಆದರು (೧೮೯೫). ಕೆಲವು ಕಾಲ ಲಾಹೋರದ ಮಿಶನ್ ಕಾಲೇಜಿನಲ್ಲಿ ಗಣಿತದ ಪ್ರಾಧ್ಯಾಪಕರಾಗಿದ್ದರು. ವೇದಾಂತವನ್ನು ಕುರಿತಾದ ಸ್ವಾಮಿ ವಿವೇಕಾನಂದರ ಉಪನ್ಯಾಸಗಳಿಂದ ಪ್ರಭಾವಿತರಾಗಿ ಅವರು ಸರ್ವಸಂಗಪರಿತ್ಯಾಗವನ್ನು ಮಾಡಿದರು. ಟೋಕಿಯೋದಲ್ಲಿ

೧ : ಮರಾಠಿ ವಿಶ್ವಕೋಶ : ೧೩, ಪು. ೧೧೮೫-೧೧೮೬.

ಅವರ ಭಾಷಣಗಳು ತುಂಬ ಜನಪ್ರಿಯವಾಗಿವೆ. ಅವರು ಅಮೇರಿಕೆಗೂ ಹೋಗಿದ್ದರು. ಅಲ್ಲಿ ಅವರಿಗೆ ಅದ್ದೂರಿಯ ಸ್ವಾಗತ. ಅವರ ಮನೋಧರ್ಮ ಸಚಿತರಂಥದು, ಆದರೆ ಪ್ರವೃತ್ತಿ ದೇಶಭಕ್ತಿಯದು. ಅವರು ಗಂಗೆಯಲ್ಲಿ ಸ್ನಾನ ಮಾಡುವಾಗ ಕಾಲಕೆಳಗಿನ ಕಲ್ಲು ಜರಿದು ಮುಳುಗಿ ಮರಣ ಹೊಂದಿದರು.

**ರಾಯ, ರಾಜಾ ರಾಮಮೋಹನ** (೧೭೭೮-೧೮೩೩), :-ಒಬ್ಬ ಪ್ರಮುಖ ಬಂಗಾಲಿ ದೇಶಭಕ್ತರು, ಧರ್ಮಸುಧಾರಕರು ಹಾಗೂ ಬ್ರಾಹ್ಮಸಮಾಜದ ಆದ್ಯ ಸಂಸ್ಥಾಪಕರು. ಬಂಗಾಲದ ಹುಗಳಿ ಜಿಲ್ಲೆಯ ರಾಧಾನಗರದಲ್ಲಿ ಜನ್ಮ, ಬಂಗಾಲಿ, ಫಾರಸಿ, ಅರಬಿ ಹಾಗೂ ಸಂಸ್ಕೃತಗಳ ಶಿಕ್ಷಣ. ವೇದಾಂತ ಹಾಗೂ ಉಪನಿಷತ್ತುಗಳ ಅಧ್ಯಯನದಿಂದ ಏಕೇಶ್ವರ ಮತ. 'ತುಹಫತುಲ್ ಮುವಹಿದ್ದೀನ್ ಎಂಬ ಫಾರಸಿ ಗ್ರಂಥವನ್ನು ಬರೆದು ಅದರಲ್ಲಿ ಮೂರ್ತಿಪೂಜೆಯ ಮೇಲೆ ಕಠೋರ ಟೀಕೆಯನ್ನು ಮಾಡಿದರು. ಮುಂದೆ ಇಂಗ್ಲಿಷ್ ಭಾಷೆಯ ಅಧ್ಯಯನ. ೧೮೧೪ ರಲ್ಲಿ ದಿವಾಣಗಿರಿಯ ನೌಕರಿಯನ್ನು ತ್ಯಜಿಸಿ ಕಲಕತ್ತೆಯಲ್ಲಿ ಆತ್ಮೀಯ ಸಭೆಯ ಸ್ಥಾಪನೆ. ತಮ್ಮ ಅತ್ತಿಗೆ ಸತಿ ಹೋಗುವ ದಾರುಣ ದೃಶ್ಯವನ್ನು ಕಂಡು ಸತಿ ಹೋಗುವ ಕ್ರೂರ ರೂಢಿಗೆ ವಿರೋಧ, ಅವರ ಯತ್ನದಿಂದಾಗಿಯೇ ಸತಿಬಂದಿಯ ಕಾನೂನು. ೧೮೩೦ ರಲ್ಲಿ ಮೊಗಲ್ ಬಾದಶಹನು ಅವರಿಗೆ 'ರಾಜ' ಪದವಿಯನ್ನು ನೀಡಿದ್ದನು. ಫ್ರಾನ್ಸಿನ ಬ್ರಿಸ್ಟಲ್ ನಗರದಲ್ಲಿ ಮರಣ, ಅವರ ಸಮಾಧಿಯು ಕಾರ್ನೋವ್ಲ್ ಎಂಬಲ್ಲಿ ಇದೆ.

**ರಾಜೇಸಾಹೇಬ, ಪಾನಗಲ ತಥಾ ರಾಮರಾಯ ನಿಂಗಾರ** (೧೮೬೬-೧೯೨೮) :-ಇವರು ಕ್ಷತ್ರಿಯ ಕುಟುಂಬದಲ್ಲಿ ಜನಿಸಿದರು. ೧೮೯೩ ರಲ್ಲಿ ಮೊದಲು ರಸಾಯನಶಾಸ್ತ್ರದ ಪದವಿಧರರು. ತರುವಾಯ ವಕೀಲಿಯ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ೧೮೯೯ ರಲ್ಲಿ ತಮಿಳು ಹಾಗೂ ಸಂಸ್ಕೃತ ವಿಷಯಗಳಲ್ಲಿ ಎಮ್. ಎ. ವರಿಷ್ಠ ವಿಧಿ ಮಂಡಳದ ಸದಸ್ಯರು ಹಾಗೂ ಸಾಮ್ರಾಜ್ಯ ಯುದ್ಧ ಪರಿಷತ್ತಿನ ಹಿಂದೂಸ್ಥಾನದ ಪ್ರತಿನಿಧಿ. ೧೯೨೧ ರಲ್ಲಿ ಸ್ಥಾನಿಕ ಸ್ವರಾಜ್ಯ ಇಲಾಖೆಯ ದಿವಾಣರು. ಡಾ. ನಾಯರರ ತರುವಾಯ ೧೦ ವರ್ಷ ಮದ್ರಾಸ ಇಲಾಖೆಯ ರಾಜಕೀಯದ ಸೂತ್ರಧಾರರು. ಬ್ರಿಟಿಷ್ ಸರಕಾರವು ೧೯೨೩ ರಲ್ಲಿ ಅವರಿಗೆ 'ರಾಜೆ' ಎಂಬ ವಂಶಪರಂಪರೆಯ ಪದವಿಯನ್ನು ನೀಡಿತ್ತು. ೧೫ ಡಿಸೆಂಬರ್ ೧೯೨೮ ರಂದು ಅವರು 'ದೋಪಿ' ಜ್ವರದಿಂದ ತೀರಿಕೊಂಡರು.

**ಲಾಸ್ಕಿ, ನಿಕೋಲಸ್ ಅನು ಪ್ರಿಯಯೇವಿಚ್** :-(೬ ಡಿಸೆಂಬರ್ ೧೮೭೦- ೨೪ ಜನವರಿ ೧೯೬೫), ಇತ್ತೀಚಿನ ಕಾಲದ ಪ್ರಮುಖ ರಶಿಯನ್ ತತ್ತ್ವ ವೇತ್ತರು. ಜನ್ಮ ರಶಿಯದ ವೀಟೆಪ್ಸ್ಕ್ ಪ್ರಾಂತದ ಕ್ರೆಸ್ಲಾವ್ಯಾ ಎಂಬ ಹಳ್ಳಿಯಲ್ಲಿ. ಸೇಂಟ್ ಪೀಟರ್ಸ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಪದವಿಯನ್ನು ಪಡೆದು ಜರ್ಮನಿಯಲ್ಲಿ ಸ್ನಾತಕೋತ್ತರ ಶಿಕ್ಷಣ, ಪ್ರಸಿದ್ಧ

ಜರ್ಮನ್ ತತ್ತ್ವ ವೇತ್ತರಾದ ವಿಲ್ಹೆಲ್ಮ್ ವಿಂಡಲ್ಬ್ಯಾಂಟ್, ವಿಲ್ಹೆಲ್ಮ್ ವುಂಟ್ ಹಾಗೂ ಜಿ. ಇ. ಮ್ಯೂಲರ್ ಅವರು ಇವರ ಶಿಕ್ಷಕರಾಗಿದ್ದರು. ೧೯೦೭ ರಲ್ಲಿ ಡಾಕ್ಟರೇಟ್ ಪಡೆದ ಬಳಿಕ ಅವರು ಸೇಂಟ್ ಪೀಟರ್ಸ್ಬರ್ಗ್ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ೧೯೨೧ ರ ವರೆಗೆ ಕೆಲಸ ಮಾಡಿದರು. ೧೯೨೨ ರಲ್ಲಿ ಸೋವಿಯೆಟ್ ಸರಕಾರವು ಅವರನ್ನು ದೇಶದಿಂದ ಬಹಿಷ್ಕರಿಸಿತು. ಆ ಮೇಲೆ ಅವರು ಪ್ರಾಗ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಅವರು ೧೯೪೬ ರಲ್ಲಿ ಅಮೇರಿಕೆಗೆ ಹೋದರು. ಮುಂದಿನ ಹಲವು ವರ್ಷಗಳ ಕಾಲ ಅವರು ನ್ಯೂಯಾರ್ಕಿನ ಸೇಂಟ್ ವಲದ್ಯಿಮ್ಯಿರ್ ರಶಿಯನ್ ಆರ್ಥಡಾಕ್ಸ್ ಸೆಮಿನರಿಯಲ್ಲಿ ಪ್ರಾಧ್ಯಾಪಕರಾಗಿದ್ದರು. ಲಾಸ್ಕಿ ಅವರು ಸಾಕಷ್ಟು ಬರವಣಿಗೆಯನ್ನು ಮಾಡಿರುವರು. ಅವರ ಹಲವು ಗ್ರಂಥಗಳು ಬೇರೆ ಭಾಷೆಗಳಿಗೆ ಅನುವಾದಗೊಂಡಿವೆ.



ಲಾಸ್ಕಿ ಅವರ ತತ್ತ್ವಜ್ಞಾನದ ಮೇಲೆ ಲೈಬ್ನಿಟ್ಸ್ ಹಾಗೂ ಆರಿ ಬೆರ್ಗಸಾ ಅವರ ಹೆಚ್ಚಿನ ಪ್ರಭಾವವಿದೆ. ಅವರು ಬೆರ್ಗಸಾ ಅವರ ಪ್ರಭಾವದಿಂದ ತಮ್ಮ ಜ್ಞಾನಮೀಮಾಂಸೆಯಲ್ಲಿ 'ಪ್ರತಿಮಾನ' ಎಂಬ ಪರಿಕಲ್ಪನೆಗೆ ಕೇಂದ್ರವರ್ತಿ ಸ್ಥಾನವನ್ನು ನೀಡಿದರು. ಲಾಸ್ಕಿ ಅವರ ಅಭಿಮತದಂತೆ ಜ್ಞಾನದ ವಿಷಯವಾಗಿರುವ ವಸ್ತುವೇ ಸಾಕ್ಷಾತ್ತಾಗಿ ನಮಗೆ ಆ ಜ್ಞಾನದಲ್ಲಿ ಗೋಚರಿಸಿರುತ್ತದೆ. ಅಲ್ಲಿ ಪ್ರತಿನಿಧಿತ್ವವನ್ನು ಮಾಡುವ ಸಂವೇದನೆ, ಬಿಂಬ, ಮುಂ.ಗಳು ಈ ಜ್ಞಾನದ ವಿಷಯಗಳಾಗಿರುವುದಿಲ್ಲ. ಆ ವಸ್ತುವೇ ಜ್ಞಾನದ ಸಾಕ್ಷಾತ್ ವಿಷಯವಾಗಿರುತ್ತದೆ. ಇಂಥ ಸಾಕ್ಷಾತ್ ಜ್ಞಾನಕ್ಕೆ 'ಪ್ರತಿಮಾನ' ಎನ್ನುತ್ತಾರೆ. ಶಾಸ್ತ್ರಿ ಅವರು ಪ್ರತಿಮಾನಗಳ ಮೂರು ಪ್ರಕಾರಗಳನ್ನು ಕಲ್ಪಿಸಿರುವರು. ನಮಗೆ ಆಕಾಶ ಮತ್ತು ಕಾಲಗಳಲ್ಲಿ ಸ್ಥಾನವುಳ್ಳ ವಸ್ತು ಇಲ್ಲವೆ ಘಟನೆಗಳ ಪ್ರತಿಮಾನಗಳಿರುತ್ತವೆ. ಇವು ಐಂದ್ರಿಯ ಪ್ರತಿಮಾನಗಳು, ಇಂಥ ವಸ್ತು-ಘಟನೆಗಳಿಗೆ ವಾಸ್ತವದ ಸತ್ತೆ ಇರುತ್ತದೆ, ಎಂದು ಲಾ ಹೇಳುತ್ತಾರೆ. ಸಂಖ್ಯೆ, ವಸ್ತು ಹಾಗೂ ಅದರ ಗುಣಗಳ ನಡುವಿರುವ ಸಂಬಂಧ, ಮುಂತಾದವುಗಳಿಗೆ ಅಸ್ತಿತ್ವ ಎಂದರೆ ಸತ್ತೆ ಇರುತ್ತದೆ; ಆದರೆ ಈ ಅಸ್ತಿತ್ವವು ಸ್ಥಲಕಾಲಾತೀತವಲ್ಲ, ನಮಗೆ ಲಭಿಸುವ ಇಂಥ ಅಸ್ತಿತ್ವಗಳ ಪ್ರತಿಮಾನಗಳು ಬೌದ್ಧಿಕ ಪ್ರತಿಮಾನಗಳಾಗಿರುತ್ತವೆ. ಅಲ್ಲದೆ ಲಾಸ್ಕಿ ಅವರ ಅಭಿಮತದ ಮೇರೆಗೆ ಸ್ಥಲಕಾಲದ ಅಸ್ತಿತ್ವದಾಚೆಯದಾದ ಕೇವಲ ಸತ್ತೆ ಇದೆ. ಈ ಕೇವಲ ಸತ್ತೆ ಎಂದರೆ ಈಶ್ವರ. ನಮಗೆ ಈಶ್ವರನ ಪ್ರತಿಮಾನ ಕೂಡ ಆಗಲು ಸಾಧ್ಯ. ಇದು ನಿಗೂಢವಾದ ಪ್ರತಿಮಾನವೇ ಸರಿ.

ಲಾಸ್ಕಿ ಅವರ ವಸ್ತುಮೀಮಾಂಸೆಯು ಲೈಪ್ನಿಟ್ಸ್ ಅವರ ಮಾದರಿಯದಾಗಿದೆ. ಅವರು ಲೈಪ್ನಿಟ್ಸ್ ಅವರ 'ಏಕಕ'ದ ಪರಿಕಲ್ಪನೆಯ ಬದಲು 'ದ್ರವ್ಯಾತ್ಮಕ ಕರ್ತ'ದ ಪರಿಕಲ್ಪನೆಯನ್ನು ಸ್ವೀಕರಿಸುತ್ತಾರೆ. ಲೈಪ್ನಿಟ್ಸ್ ಅವರ ಹೇಳಿಕೆಯಂತೆ, ಇಡಿಯ ವಸ್ತುಜಾತವು ಏಕಕಗಳಿಂದಲೇ ತಯಾರಾಗಿದ್ದು ಏಕಕಗಳಿರುವ ದ್ರವ್ಯಗಳು ಕೂಡ ಆ ವಸ್ತುಜಾತದ ಅಂತಿಮ ಘಟಕಗಳಾಗಿರುತ್ತವೆ. ಲಾಸ್ಕಿ ಅವರ ಅಭಿಮತದ ಮೇರೆಗೆ, 'ದ್ರವ್ಯಾತ್ಮಕ ಕರ್ತ'ಗಳು ವಸ್ತುಜಾತದ ಅಂತಿಮ ಘಟಕಗಳಾಗಿವೆ. ಪ್ರತಿಯೊಂದು ದ್ರವ್ಯಾತ್ಮಕ ಕರ್ತಕ್ಕೆ ಆಯ್ಕೆಯನ್ನು ಮಾಡುವ ಸ್ವಾತಂತ್ರ್ಯವಿರುತ್ತದೆ. ಯಾವುದೇ ಒಂದು ಪರಮಾಣು ಎಲ್ಲಕ್ಕೂ ಕೆಳಮಟ್ಟದ 'ದ್ರವ್ಯಾತ್ಮಕ ಕರ್ತ'ವಾಗಿದೆ. ಕೆಳಮಟ್ಟದ ಈ ಕರ್ತಕ್ಕೆ ಆಯ್ಕೆಯ ಸ್ವಾತಂತ್ರವು ಇರುವುದರಿಂದ ಅದು ಮೇಲ್ಮಟ್ಟದ ಹಾಗೂ ಅದರ ಮೇಲ್ಮಟ್ಟದ ಸ್ವರೂಪವನ್ನು ಪಡೆದುಕೊಳ್ಳಲು ಯತ್ನಿಸುತ್ತದೆ. ಹೀಗೆ ಯತ್ನಿಸುವ ಸಾಮರ್ಥ್ಯವು ಅದರಲ್ಲಿರುವ ಕಾರಣ ಅದು 'ಕರ್ತ'ವಾಗಿರುತ್ತದೆ. ಈ ರೀತಿಯಾಗಿ ಕನಿಷ್ಠ ಮಟ್ಟದ 'ದ್ರವ್ಯಾತ್ಮಕ ಕರ್ತ'ಗಳು ಮೇಲ್ಮಟ್ಟಗಳಿಗೆ ವಿಕಾಸ ಹೊಂದುತ್ತವೆ. ಒಂದು 'ದ್ರವ್ಯಾತ್ಮಕ ಕರ್ತ'ಕ್ಕೆ ಅಂತಿಮ ನೈತಿಕ ಮೌಲ್ಯಗಳ ಪ್ರತಿಮಾನಗಳು ಲಭಿಸಿ, ಆ ಮೌಲ್ಯಗಳಿಗೆ ತಕ್ಕಂತೆ ತನ್ನ ಆಯ್ಕೆ ಅಥವಾ ತೀರ್ಮಾನವನ್ನು ಮಾಡಿದಾಗಲೇ ಅದು ಒಬ್ಬ ವ್ಯಕ್ತಿ ಅಥವಾ ಪುರುಷ (ಪರ್ಸನ್) ಎನ್ನುವ ಪದವನ್ನು ತಲುಪುತ್ತದೆ.

ಈಶ್ವರನು ಎಲ್ಲ 'ದ್ರವ್ಯಾತ್ಮಕ ಕರ್ತ'ಗಳ ನಿರ್ಮಾತನು. ಈ 'ದ್ರವ್ಯಾತ್ಮಕ ಕರ್ತ'ಗಳಲ್ಲಿ ಪರಸ್ಪರರಲ್ಲಿರುವ ಜಗಳ-ಸಹಕಾರಗಳ ಸಂಬಂಧಗಳು ಹಾಗೂ ಅವು ಪರಸ್ಪರರ ಮೇಲೆ ಬೀರುವ ಪ್ರಭಾವದಿಂದಾಗಿ ವಿಶ್ವದ ವ್ಯವಹಾರವು ತಲೆದೋರುತ್ತದೆ. ವಿಶ್ವದ ವಸ್ತುಗಳೆಲ್ಲ ಒಂದೇ ಆಕಾಶದಡಿ ಹಾಗೂ ಒಂದೇ ಕಾಲದಲ್ಲಿ ಇರುವ ಕಾರಣದಿಂದ ಒಂದು ವಿಶ್ವ ತಯಾರಾಗಿದೆ ಎಂದಲ್ಲ. ಬದಲು ಈಶ್ವರನು ಎಲ್ಲ ವಸ್ತುಗಳನ್ನು, ಅಂದರೆ 'ದೃವ್ಯಾತ್ಮಕ ಕರ್ತ' ಗಳನ್ನು ನಿರ್ಮಿಸಿರುವುದರಿಂದಲೇ ಒಂದು ವಿಶ್ವವು ತಯಾರಾಗಿದೆ. ನಾವು ಯಾವ ಸಂಗತಿಗಳನ್ನು ಆಕಾಶ ಮತ್ತು ಕಾಲ ಎನ್ನುವೆವೋ, ಅವು

'ದ್ರವ್ಯಾತ್ಮಕ ಕರ್ತ'ಗಳ ನಡುವಿನ ಸಂಬಂಧಗಳ ರೂಪುಗಳು. ಈಶ್ವರನ ಅಂದರೆ ಕೇವಲ ಸತ್ತೆಯ ಸಾಕ್ಷಾತ್ ದರ್ಶನ ಅಥವಾ ನಿಗೂಢವಾದ ಪ್ರತಿಮಾನವನ್ನು ಪಡೆದುಕೊಳ್ಳುವುದು ಮನುಷ್ಯನ ಅಂತಿಮ ಭವಿಷ್ಯವೆನ್ನಿಸಿದೆ. ಈಶ್ವರನ ಈ ಬಗೆಯ ಪ್ರತಿಮಾನದಿಂದಾಗಿ ಮನುಷ್ಯನಿಗೆ ಅನಾಸಕ್ತ ತತ್ಯ ಅಥವಾ ಕೇವಲ ನೀತಿ ತತ್ತ್ವ ವು ಲಭಿಸುತ್ತದೆ. ಮನುಷ್ಯನು ಈ ತತ್ತ್ವವನ್ನನುಸರಿಸಿ ತೀರ್ಮಾನಗಳನೆಲ್ಲ ಮಾಡುವ ಮೂಲಕ ತನ್ನ ಆದರ್ಶ ಸ್ವರೂಪವನ್ನು ಪ್ರತ್ಯಕ್ಷದಲ್ಲಿ ಸಿದ್ಧಪಡಿಸುತ್ತಾನೆ.

**" ಲಿನ್‌ಲಿಥಗೊ, ಲಾರ್ಡ್ ವಿಕ್ಟರ್ ಅಲೆಕ್ಝಾಂಡರ್ ಜಾನ್ ಹೋಪ್** (೨೪ ಸಪ್ಟೆಂಬರ್ ೧೮೮೭-೫ ಜನೆವರಿ ೧೯೫೨).:- ಎರಡನೆಯ ಮಹಾಯುದ್ಧದ ಕಾಲಕ್ಕೆ ಬ್ರಿಟಿಷಾಂಕಿತ ಹಿಂದೂಸ್ಥಾನದ ಗವರ್ನರ್ ಜನರಲ್ ಹಾಗೂ ವೈಸರಾಯ್ (೧೯೩೬-೧೯೪೩). ಉಚ್ಚ ಕುಲದ ಮನೆತನದಲ್ಲಿ ಎವರಕಾರ್ನ್ ಎಂಬಲ್ಲಿ (ಪಶ್ಚಿಮ ಲೋಥಿಯನ್-ಸ್ಕಾಟ್ಲಂಡ್) ಅವನ ಜನ್ಮವಾಯಿತು. ಅವನು ಈಟನ್ (ಕೆಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಉಚ್ಚ ಶಿಕ್ಷಣವನ್ನು ಪಡೆದನು. ೧೯೦೮ ರಲ್ಲಿ ಅವನಿಗೆ ವಾರಸಿನಿಂದ ಸರದಾರಪದ ಲಭಿಸಿತು. ಅವನು ಮೊದಲ ಮಹಾಯುದ್ಧದಲ್ಲಿ (೧೯೧೪-೧೯೧೮) ಪಶ್ಚಿಮದ ರಣರಂಗದ ಸೈನ್ಯ ಪಡೆಯಲ್ಲಿ ವಿಶೇಷವಾದ ಕಾರ್ಯವನ್ನು ನಿರ್ವಹಿಸಿದನು. ತರುವಾಯ ಅವನನ್ನು ನೌಕಾಪಡೆಯಲ್ಲಿ ಪೌರ ಅಧಿಕಾರಿಯಾಗಿ ನೇಮಕವಾಯಿತು. ಇಂಗ್ಲೆಂಡಿನಲ್ಲಿ ಕಾರ್ಮಿಕ ಪಕ್ಷವು ಅಧಿಕಾರಕ್ಕೆ ಬರುತ್ತಲೇ ಅವನನ್ನು ಕಾಂಸರ್ವೇಟಿವ್ ಪಕ್ಷದ ಉಪಾಧ್ಯಕ್ಷನನ್ನಾಗಿ ನೇಮಿಸಲಾಯಿತು (೧೯೨೪), ಅವನು ರಾಜ ಕೃಷಿ ಆಯೋಗದ ಅಧ್ಯಕ್ಷನೆಂದು ಹಿಂದೂಸ್ಥಾನಕ್ಕೆ ಬಂದನು (೧೯೨೬-೨೮). ಅವನು ಇಲ್ಲಿಯ ಹಲವು ಪ್ರಶ್ನೆಗಳನ್ನು ಪರಿಚಯಿಸಿಕೊಂಡನು. ಅವನು ಹಿಂದುಸ್ಥಾನದಲ್ಲಿ ಸಂವಿಧಾನಾತ್ಮಕ ಬದಲಾವಣೆಗಳನ್ನು ಮಾಡಲೆಂದು ನೇಮಿಸಲಾದ ಆಯ್ಕೆ ಸಮಿತಿಗೂ ಅಧ್ಯಕ್ಷನಾಗಿದ್ದನು. ಮುಂದೆ ಅವನನ್ನು ಹಿಂದೂಸ್ಥಾನದ ವೈಸರಾಯ್ ಆಗಿ ನೇಮಕ ಮಾಡಲಾಯಿತು (೧೯೩೬),

ಅವನು ಶುರುವಿನಲ್ಲಿ ೧೯೩೫ ರ ಕಾನೂನನ್ನು ಜಾರಿಗೆ ತರಲು ಯತ್ನಿಸಿದನು. ಕಾಂಗ್ರೆಸ್ಸು ಪ್ರಾಂತಿಕ ಸ್ವಾಯತ್ತತೆಯ ತಸ್ತ್ವದ ಮೇರೆಗೆ ಚುನಾವಣೆಯಲ್ಲಿ ಪಾಲ್ಗೊಂಡಿತು. ಅದು ಬಹುಮತದ ತತ್ತ್ವವನ್ನಾಧರಿಸಿ ಆರು ಪ್ರಾಂತಗಳಲ್ಲಿ ಸ್ವತಂತ್ರವಾದ ಸಚಿವ ಸಂಪುಟಗಳನ್ನು ರಚಿಸಿತು (೧೯೩೭). ಪ್ರಾಂತಿಕ ಗವರ್ನರರು ವಿಶೇಷ ಅಧಿಕಾರವನ್ನು ಬಳಸಿ ತಮ್ಮ ಶಾಸನದ ಆಡಳಿತೆಯಲ್ಲಿ ಕೈಹಾಕಬಾರದೆಂದು ಕಾಂಗ್ರೆಸ್ಸು ನಿರೀಕ್ಷಿಸುತ್ತಿತ್ತು. ಆದರೆ ಮುಸ್ಲಿಮ್ ಲೀಗ್ ಮತ್ತು ಒಟ್ಟು ಸರಕಾರಿ ಧೋರಣೆಗಳಿಂದಾಗಿ ಸಚಿವ ಸಂಪುಟಕ್ಕೆ ಬೇಕಿದ್ದ ಸ್ವಾಯತ್ತತೆ ಲಬಿಸಲಿಲ್ಲ. ಅದರಲ್ಲೇ ೧೯೩೯ ರಲ್ಲಿ ಎರಡನೆಯ ವಿಶ್ವ ಮಹಾಯುದ್ಧ ಶುರುವಾಯಿತು. ಲಿನೊಲಿಥಿಗೊ ಇವನು, ಕಾಂಗ್ರೆಸ್ಸು ಹಾಗೂ ಈ ದೇಶದವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಹಿಂದೂಸ್ಥಾನ ಯುದ್ದದಲ್ಲಿ ಪಾಲ್ಗೊಂಡಿರುವುದಾಗಿ ಘೋಷಿಸಿದನು. ಭಾರತೀಯರಿಗೆ ವಸಾಹತಿನ ಸ್ವರಾಜ್ಯ ಹಾಗೂ ಇನ್ನಿತರ ಚಿಲ್ಲರೆ ಭರವಸೆಗಳನ್ನಿತ್ತು ಅವರು ಮಹಾಯುದ್ಧದಲ್ಲಿ

ಸಕ್ರಿಯರಾಗಿ ನೆರವಾಗಬೇಕೆಂದು ಲಿನ್‌ಲಿಥಿಗೆ ಸೂಚಿಸಿದನು. ಕಾಂಗ್ರೆಸ್ಸಿನ ಸಚಿವ ಸಂಪುಟಗಳು ಸರಕಾರಕ್ಕೆ ಸಹಕಾರವನ್ನು ನಿರಾಕರಿಸಲು ಹಾಗೂ ವಾಯ್ಸ್ ರಾಯನ ಘೋಷಣೆಗಳನ್ನು ಪ್ರತಿಭಟಿಸಲೆಂದು ಡಿಸೆಂಬರ್ ೧೯೩೯ ರಲ್ಲಿ ರಾಜೀನಾಮೆಯನ್ನು ಸಲ್ಲಿಸಿದವು.

ಲಿನ್‌ಲಿಥಿಗೊ ಇವನು ವಸಾಹತಿಯ ಸ್ವರಾಜ್ಯ, ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಮತ್ತು ಸಂಸ್ಥಾನಿಕರು ಸೇರಿ ಯುದ್ದ ಸಲಹೆಗಾರ ಮಂಡಳಿಯನ್ನು ನೇಮಿಸಲು ಹಾಗೂ ಯುದ್ಧ ಮುಗಿದ

೧ : ಮರಾಠಿ ವಿಶ್ವಕೋಶ : ೧೫, ಪು. ೪೭೭.



ತರುವಾಯ ಹಿಂದೂಸ್ಥಾನದ ಮುಂಬರುವ ಸಂವಿಧಾನವನ್ನು ತಯಾರಿಸಲು ಎಲ್ಲ ಪಕ್ಷಗಳ ಒಂದು ಸಂವಿಧಾನ ಸಮಿತಿಯನ್ನು ಕರೆಯಲಾಗುವುದೆಂದು ಆಗಸ್ಟ್ ೧೯೪೧ ರಲ್ಲಿ ಘೋಷಿಸಿದನು. ಸರಕಾರವು ಘೋಷಣೆಯ ಭರವಸೆಗಳನ್ನು ಪಾಲಿಸಲಿಲ್ಲವೆಂದು ಕಾಂಗ್ರೆಸ್ಸು ಮ. ಗಾಂಧಿಯವರ ನಾಯಕತ್ವದಲ್ಲಿ ಸತ್ಯಾಗ್ರಹವನ್ನು ಹೂಡಿತು. ಆಗ ಮುಸ್ಲಿಮ್ ಲೀಗ ಹಿಂದೂಸ್ಥಾನದ ವಿಭಜನೆಯನ್ನು ಪುರಸ್ಕರಿಸಿತು.

೧೯೪೧ ರಲ್ಲಿ ಅಂತರರಾಷ್ಟ್ರೀಯ ಪರಿಸ್ಥಿತಿಯು ಬದಲಾಯಿಸಿತು. ಜಪಾನು ಜರ್ಮನಿಯ ಬದಿಯನ್ನು ಸ್ವೀಕರಿಸಿ, ಯುದ್ಧಕ್ಕೆ ಧುಮುಕಿ, ಇಂಡೋನೇಶಿಯದಲ್ಲಿ ವರ್ಚಸ್ವವನ್ನು ಸ್ಥಾಪಿಸಿ, ಸಿಂಗಾಪೂರ, ರಂಗೂನ ಮೊದಲಾದ ಪ್ರದೇಶಗಳನ್ನು ವ್ಯಾಪಿಸಿತು. ಜಪಾನು ಸಾಗರಮಾರ್ಗವಾಗಿ ಭಾರತದ ಮೇಲೆ ಆಕ್ರಮಣವನ್ನು ಮಾಡುವ ಲಕ್ಷಣಗಳು ಕಾಣತೊಡಗಿದವು. ಲಿನ್ ಲಿಥಿಗೊ ಇವನು ಯುದ್ಧ ಸಾಮಗ್ರಿ ಹಾಗೂ ಇಪ್ಪತ್ತು ಲಕ್ಷ ಸೈನ್ಯವನ್ನು ತಯಾರಿಸಿದನು. ಸ್ಟ್ಯಾಫರ್ಡ್ ಕ್ರಿಪ್ಸ್ ನ ನಾಯಕತ್ವದ ಒಂದು ಶಿಷ್ಟ ಮಂಡಳವು ಹಿಂದೂಸ್ಥಾನದ ರಾಜಕೀಯ ಪಕ್ಷಗಳ ಬೆಂಬಲವನ್ನು ಪಡೆಯಬೇಕೆಂದು ಭಾರತಕ್ಕೆ ಬಂದಿತು. ಕ್ರಿಪ್ಸನು ಯುದ್ದೋತ್ತರ ಕಾಲದಲ್ಲಿ ಭಾರತೀಯ ಸಂಘ ರಾಜ್ಯಕ್ಕೆ ವಸಾಹತಿಯ ಸ್ವರಾಜ್ಯವನ್ನು ಕೊಡುವಂಥ ಸಂವಿಧಾನವನ್ನು ಮಂಡಿಸಿ ಜನಪ್ರತಿನಿಧಿಗಳ ಸಂವಿಧಾನ ಸಮಿತಿಯನ್ನು ಕರೆಯಲಾಗುವುದೆಂದು ಸಾರಿದನು. ಕ್ರಿಪ್ಸ್ ಯೋಜನೆಯು ಅಪಯಶ ಹೊಂದಿದ ತರುವಾಯ ಮ. ಗಾಂಧಿಯವರು ೮ ಆಗಸ್ಟ್ ೧೯೪೨ ರಂದು ಛೋಡೋ ಭಾರತ (ಭಾರತದಿಂದ ತೊಲಗಿ) ಆಂದೋಲನೆಯನ್ನು ಆರಂಭಿಸಿದರು.

ಅದರಿಂದಾಗಿ ಮ. ಗಾಂಧಿಯವರೊಡನೆ ಮಾನ್ಯ ನಾಯಕರ ಬಂಧನ ನಡೆಯಿತು. ಈ ಕಾಲಕ್ಕೆ ಸುಭಾಷಚಂದ್ರ ಬೋಸರು ಸ್ಥಾನಬದ್ಧತೆಯಿಂದ ಕಣ್ಣು ತಪ್ಪಿಸಿ ಪಲಾಯನಗೈದು ಜಪಾನಿನಲ್ಲಿ ಆಝಾದ ಹಿಂದ್ ಸೈನ್ಯವನ್ನು ಕಟ್ಟಿದರು. ದೇಶದ ಚಳುವಳಿಯನ್ನು ಹತ್ತಿಕ್ಕಲೆಂದು ಲಿನೊಲಿಥಿಗೊ ನಡೆಸಿದ ಯತ್ನ ಸೋತಿತು. ಹೀಗಾಗಿ ಅವನು ಇಂಗ್ಲೆಂಡಿಗೆ ಮರಳಿ ಹೋಗಬೇಕಾಯಿತು. ಮುಂದೆ ಅವನನ್ನು ಸ್ಕಾಟ್ಲಂಡಿನಲ್ಲಿ ಎಡಿನ್‌ಬರೋ ವಿಶ್ವವಿದ್ಯಾಲಯದ ಕುಲಪತಿಯಾಗಿ ನೇಮಕ ಮಾಡಲಾಯಿತು (೧೯೪೪-೫೨). ಆ ಪದದ ಮೇಲಿರುವಾಗಲೇ ಅವನು ಎವರಕಾರ್ನ್ ಎಂಬಲ್ಲಿ ಮರಣ ಹೊಂದಿದನು.

**ಸ್ವಾಮಿ ವಿವೇಕಾನಂದರು** (೧೮೬೨-೧೯೦೨) :- ಮೂಲ ಹೆಸರು ನರೇಂದ್ರ ದತ್ತ. ಕಾಯಸ್ಥ ಮನೆತನದಲ್ಲಿ ಜನ್ಮ ಕಾಲೇಜಿನಲ್ಲಿದ್ದಾಗ ಪೌರ್ವಾತ್ಯ ಹಾಗೂ ಪಾಶ್ಚಿಮಾತ್ಯ ತತ್ತ್ವಜ್ಞಾನಗಳ ಅಧ್ಯಯನ. ಬಿ. ಎ. ಆದ ತರುವಾಯ ಬ್ರಾಹ್ಮ ಸಮಾಜಕ್ಕೆ ಪ್ರವೇಶ. ಮುಂದೆ ರಾಮಕೃಷ್ಣ ಪರಮಹಂಸರ ಶಿಷ್ಯತ್ವ. ಬೇರೆ ಬೇರೆ ಧರ್ಮಗಳ ತೌಲನಿಕ ಅಧ್ಯಯನ ಹಾಗೂ ಆಧ್ಯಾತ್ಮಿಕ ಚಿಂತನೆ. ೧೮೯೩ ರ ಶಿಕಾಗೋದ ವಿಶ್ವಧರ್ಮ ಪರಿಷತ್ತಿನಲ್ಲಿ ಹಿಂದೂ ಧರ್ಮದ ಪ್ರತಿನಿಧಿತ್ವ, ತಮ್ಮ ಅಸಾಧಾರಣ ವಾಗ್ಮಿತೆಯಿಂದ ಈ ಪರಿಷತ್ತಿನಲ್ಲಿ ಜಯಭೇರಿಯನ್ನು ಹೊಡೆದುದರಿಂದ ಜಾಗತಿಕ ಕೀರ್ತಿ, ೪ ಜುಲೈ ೧೯೦೨ ರಂದು ಸಮಾಧಿಸ್ಥರಾದರು. ಧರ್ಮಕ್ಕಿಂತ ಮಾನವನು ಶ್ರೇಷ್ಠನು. ಹೀಗಾಗಿ ಮಾನವಸೇವೆಯೇ ನಿಜವಾದ ಧರ್ಮ, ಎಂಬುದು ಜನರಿಗೆ ಅವರ ಮುಖ್ಯ ಉಪದೇಶ. ಅದಕ್ಕಾಗಿ ರಾಮಕೃಷ್ಣ ಮಿಶನ್ನಿನ ಸ್ಥಾಪನೆ.

**ವಿಷ್ಣು ಬುವಾ ಬ್ರಹ್ಮಚಾರಿ** (೧೮೨೫-೧೮೭೧) :-ಕ್ರಿಸ್ತಿ ಮಿಶನರಿಗಳನ್ನು ಎದುರಿಸಿದ ಮೊದಲ ಹಿಂದೂ ಮಿಶನರಿ ಹಾಗೂ ಸ್ವತಂತ್ರ ವಿಚಾರದ ಗೃಹಸ್ಥರು. ಅವರ ಪೂರ್ಣ ಹೆಸರು ವಿಷ್ಣು ಭಿಕಾಜಿ ಗೋಖಲೆ, ಊರು ಶಿವಲಿ. ಇವರು ತಮ್ಮ ತಂದೆಯ ಹತ್ತನೆಯ ಮಗ. ಐದನೆಯ ವಯಸ್ಸಿಗೆ ತಂದೆಯ ಸಾವು. ಮನೆಯಲ್ಲಿ ಸ್ವಲ್ಪ ಶಿಕ್ಷಣ ಆಗುತ್ತಲೇ ದನಕಾಯುವುದು, ಅಂಗಡಿ, ಸುಂಕದ ಕಟ್ಟೆ

ಮೊದಲಾದೆಡೆಗಳಲ್ಲಿ ನೌಕರಿ ಮಾಡಿದ ತರುವಾಯ ೨೦ ನೆಯ ವರ್ಷ ವೈರಾಗ್ಯ ಮೂಡಿದ ಅವರು ಸಪ್ತಶೃಂಗಿಯ ಗುಡ್ಡದ ಮೇಲೆ ತಪಸ್ಸು ಮಾಡಿದರು. ನಾಸ್ತಿಕ ಮತವನ್ನು ಖಂಡಿಸಿ ವೈದಿಕ ಧರ್ಮವನ್ನು ಪುನಃಸ್ಥಾಪಿಸಬೇಕೆಂದು ಅವರಿಗೆ ಆದೇಶವಾಯಿತು (ವೇದೋಕ್ತ ಧರ್ಮಪ್ರಕಾಶ ಪು. ೭೩೮). ಈ ಈಶ್ವರಿ ಪ್ರಸಾದವಾದ ಬಳಿಕ ಅವರು ಪಂಢರಪುರದ ವಿಠಲನ ಮಂಟಪದಲ್ಲಿ ಭಾವಾರ್ಥ ರಾಮಾಯಣದ ಮೂರು ಪಾರಾಯಣಗಳನ್ನು ಮಾಡಿದರು. 'ಭಾವಾರ್ಥಸಿಂಧು' ಎಂಬ ಓವಿ(ಛಂದಸ್ಸು )ಬದ್ಧವಾದ ಗ್ರಂಥವನ್ನು ಪ್ರಕಟಿಸಿದರು (೧೮೫೬). ಮಹಾರಾಷ್ಟ್ರದ ತುಂಬೆಲ್ಲ ಉಪನ್ಯಾಸಗಳನ್ನು ಕೊಡುತ್ತ ಮುಂಬಯಿಗೆ ಬಂದರು. ಅಲ್ಲಿ ಕ್ರಿಶ್ಚನ್ ಮಿಶನರಿಗಳ ಆಕ್ಷೇಪಗಳಿಗೆ ಉತ್ತರಗಳನ್ನು ನೀಡಲೆಂದು ಪ್ರತಿ ಶನಿವಾರದಂದು ಪ್ರಭು ಜನರ ವಿದ್ಯಾಲಯದಲ್ಲಿ ಉಪನ್ಯಾಸಗಳನ್ನು ನೀಡಲು ಶುರುಮಾಡಿದರು. ಉಳಿದೆಡೆಗಳಲ್ಲಿ ವಾದವಿವಾದಗಳನ್ನು ಮಾಡಿದರು. ಅಲ್ಲಿ ಪ್ರವೇಶಕ್ಕಾಗಿ ಒಂದಾಣೆಯ ದರವನ್ನು ಇರಿಸಿಯೂ ಪೋಲೀಸರ ಬಂದೋಬಸ್ತು ಬೇಕಾಗುವಷ್ಟು ಜನದಟ್ಟಣೆಯಾಗುತ್ತಿತ್ತು. ಅಸ್ಪೃಶ್ಯರು ಹಾಗೂ ಸ್ತ್ರೀಯರಿಗೆ ಒಳಾಂಗಣಗಳಿಗೆ ಬರಲು ನಿಷೇಧವಿದ್ದ ಕಾರಣ ಅವರು ಸಮುದ್ರ ತೀರದಲ್ಲಿ ಉಪನ್ಯಾಸಗಳನ್ನು ನೀಡಲು ಶುರು ಮಾಡಿದರು. ೧೮೫೭ ರ ಬಂಡಾಯದ ಕಾಲದಲ್ಲಿ ಉಪನ್ಯಾಸವನ್ನು ನೀಡದಂತೆ ಅವರಿಗೆ ತಡೆಯಾಜ್ಞೆಯನ್ನು ವಿಧಿಸಲಾಯಿತು. ಆಗ ಅವರು 'ವೇದೋಕ್ತಧರ್ಮಪ್ರಕಾಶ' ಗ್ರಂಥವನ್ನು ಪ್ರಕಟಿಸಿದರು. ಗೌರವರ್ಣದ, ಗಟ್ಟಿಮುಟ್ಟಾದ ಹಾಗೂ ಪ್ರಸನ್ನ ಮುದ್ರೆಯ ಈ ಗೃಹಸ್ಥರು ಬಲು ಲಹರಿ ಸ್ವಭಾವದವರಾಗಿದ್ದರು.

"ಹೊಲೆಯರು ಮನೆಯಾಚೆಗೆ, ಬ್ರಾಹ್ಮಣರು ಮನೆಯೊಳಗೆ ಎನ್ನುವ ತಾರತಮ್ಯವನ್ನು ಮಾಡಕೂಡದು", ಎಂಬುದು ಅವರ ವಿಚಾರವಾಗಿತ್ತು.

**ಶಾರದಾ ಬಿಲ್** :-ಬಾಲವಿವಾಹ ಕುರಿತಾಗಿತ್ತು. ರಾಯಸಾಹೇಬ ಹರವಿಲಾಸ ಶಾರದಾ (ಸಾರಡಾ) ಅವರು ಖಾಸಗಿ ಸದಸ್ಯರೆಂದು ಇದನ್ನು ಮಂಡಿಸಿದ್ದರು. ಹುಡುಗಿಯ ವಯಸ್ಸಿನ ಮಿತಿ ೧೪ ಎಂದು ನಿರ್ಧರಿಸಲಾಗಿತ್ತು. ೧೪ ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗಳ ಮದುವೆಯನ್ನು ಮಾಡಿಕೊಟ್ಟರೆ ಅಮ್ಮ-ಅಪ್ಪಂದಿರಿಗೆ ೧ ತಿಂಗಳ ಶಿಕ್ಷೆ ಹಾಗೂ ೧೦೦೦ ರೂಪಾಯಿ ದಂಡವನ್ನು ಸೂಚಿಸಲಾಗಿತ್ತು. ಸನಾತನಿಗಳು ಈ ಬಿಲ್ಲನ್ನು ವಿರೋಧಿಸುತ್ತಿದ್ದರು. ಸನಾತನಿಗಳಿಂದ ವಯಸ್ಸನ್ನು ಕಡಿಮೆ ಮಾಡಬೇಕೆಂಬ ಒತ್ತಾಯವಿತ್ತು.

**ಶಿಂದೆ, ಮಹರ್ಷಿ ವಿಠಲ ರಾಮಜೀ** :-(೧೮೭೩-೧೯೪೪) ಸಮತೋಲ ವಿಚಾರವಂತರು. ಎಲ್ಲ ಧರ್ಮಗಳ ವ್ಯಾಸಂಗಿ ಅಧ್ಯಯನಕಾರರು. ಕರ್ತೃತ್ವವುಳ್ಳ ಸುಧಾರಕರು, ಜಮಖಂಡಿಯ ಮರಾಠಾ ಜಾತಿಯಲ್ಲಿ ಜನ್ಮ ಫಸ್ಟ್ ಬಿ. ಎ. ಎಲ್. ಎಲ್. ಬಿ. ಪರೀಕ್ಷೆಯಾದ ಬಳಿಕ ಪ್ರಾರ್ಥನಾ ಸಮಾಜದ ಒಲವು. ಇದೇ ಸಮಾಜದ ವತಿಯಿಂದ ತೌಲನಿಕ

ಧರ್ಮಶಾಸ್ತ್ರಗಳ ಅಧ್ಯಯನಕ್ಕಾಗಿ ಆಕ್ಸಫರ್ಡ್‌ದ ಮ್ಯಾಂಚೆಸ್ಟರ್ ಕಾಲೇಜಿನಲ್ಲಿ ಅಧ್ಯಯನ, ಅಸ್ಪೃಶ್ಯರ ಉನ್ನತಿಯ ಚಳುವಳಿಗಾಗಿ ೧೯೦೬ ರಲ್ಲಿ 'ಡಿಪ್ರೆಸ್ಡ್ ಕ್ಲಾಸ್ ಮಿಶನ್'ದ (ಭಾರತೀಯ ನಿರಾಶ್ರಿತರ ಸಹಾಯಕಾರಿ ಮಂಡಳದ) ಸ್ಥಾಪನೆ, ಮುಂಬಯಿಯಲ್ಲಿ. ಮಹಾರಾಷ್ಟ್ರದ ಬಹುಸಂಖ್ಯ ಮರಾಠಾ ಸಮುದಾಯವು ರಾಜಕೀಯದಲ್ಲಿ ಹಿಂದುಳಿಯಬಾರದೆಂದು ೧೯೧೭ ರಲ್ಲಿ 'ರಾಷ್ಟ್ರೀಯ ಮರಾಠಾ ಪಕ್ಷ'ದ ಸ್ಥಾಪನೆ ಹಾಗೂ ಲೋ, ತಿಳಕರ ಜೊತೆಗೆ ರಾಜಕೀಯ ಕ್ಷೇತ್ರದಲ್ಲಿ ಸಹಕಾರ. ಮುಂದೆ ಮ. ಗಾಂಧಿಯವರೊಂದಿಗೆ ರಾಷ್ಟ್ರೀಯ ಆಂದೋಲನೆಯಲ್ಲಿ

ಮರಾಠೀ ವಿಶ್ವಕೋಶ : ೧೫, ಪು. ೫೦೬-೫೦೭.



ಪಾಲ್ಗೊಂಡು ೧೯೩೦ ರಲ್ಲಿ ೬ ತಿಂಗಳ ಕಾಲ ಸಶ್ರ ಮ ಸೆರೆಮನೆವಾಸ. ಹಲವು ವಿಷಯಗಳನ್ನು ಕುರಿತು ಸಂಶೋಧನೆ, ಚಿಂತನಪರ ಲೇಖನ. 'ಮಾಝ್ಯಾ ಆಠವಣೀ ವ ಅನುಭವ ('ನನ್ನ ನೆನಹುಗಳು ಹಾಗೂ ಅನುಭವಗಳು )' ಎಂಬ ಆತ್ಮಚರಿತ್ರಪರ ಪುಸ್ತಕ, 'ಭಾರತೀಯ ಅಸ್ಪೃಶ್ಯತೆಚಾ ಪ್ರಶ್ನೆ ('ಭಾರತೀಯ ಅಸ್ಪೃಶ್ಯತೆಯ ಪ್ರಶ್ನೆ)' ಎಂಬ ಸಂಶೋಧನಾತ್ಮಕ ಪುಸ್ತಕ ಪ್ರಕಟಿತ.

**ಸತ್ಯಮೂರ್ತಿ** (೧೮೮೭-೧೯೪೩) :-ದಕ್ಷಿಣದ ಒಬ್ಬ ರಾಜಕಾರಣಿ ಹಾಗೂ ಸಮಾಜಕಾರಣಿ ಕಾರ್ಯಕರ್ತರು, ವಾಗ್ಮಿಗಳು, ಶಿಕ್ಷಣ ಪದುಕೊಟ್ಟಾದ ರಾಜಪುತ್ರರ ಕಾಲೇಜು ಹಾಗೂ ಮದ್ರಾಸಿನಲ್ಲಿ. ೩೦ ವರ್ಷ ಕಾಂಗ್ರೆಸ್ಸಿನ ರಾಜಕೀಯದಲ್ಲಿ ಸಕ್ರಿಯರು. ಮದ್ರಾಸ ಜಿಲ್ಲೆ ಹಾಗೂ ತಮಿಳುನಾಡು ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು,

**ಸಮಾಜ-ಸಮತಾ-ಸಂಘ** :-ಸಾಮಾಜಿಕ ಸಮತೆಯ ಚಳವಳಿ ಪ್ರಗತಿಯನ್ನು ಹೊಂದಬೇಕಿದ್ದರೆ ಇದಕ್ಕಾಗಿ ಪ್ರತ್ಯಕ್ಷದಲ್ಲಿ ಜನಜಾಗೃತಿಯಾಗಬೇಕು, ಅದಕ್ಕಾಗಿ ತಮ್ಮ ಕೈಯಿಂದ ಕಾರ್ಯವಾಗಬೇಕೆಂದು ಡಾ. ಬಾಬಾಸಾಹೇಬ ಅಂಬೇಡಕರರು ಒಂದು ಸಂಸ್ಥೆಯನ್ನು ಸ್ಥಾಪಿಸಲು ತೀರ್ಮಾನಿಸಿದರು. ಸಹಕಾರಿಗಳೊಡನೆ ಚರ್ಚಿಸಿ ೪ ಸೆಪ್ಟೆಂಬರ್

೧೯೨೭ ರಂದು ಅವರು ಸಮಾಜಸಮತಾ-ಸಂಘವನ್ನು ಸ್ಥಾಪಿಸಿದರು. ಈ ಸಂಘದ ತತ್ವಗಳು ಹಾಗೂ ಉದ್ದೇಶಗಳು ಕೆಳಗಿನಂತಿವೆ -

(೧) ಮನುಷ್ಯ ಪ್ರಾಣಿಗಳೆಲ್ಲರೂ ಸಮಾನಾಧಿಕಾರಿಗಳಾಗಿದ್ದು ತಮ್ಮ ಮನುಷ್ಯತ್ವದ ಅಭಿವೃದ್ಧಿಗಾಗಿ ಕಾರಣೀಭೂತವಾಗುವ ಪ್ರತಿಯೊಂದು ಸಾಧನೆ, ಸವಲತ್ತು ಹಾಗೂ ಅವಕಾಶಗಳ ಮೇಲೆ ಪ್ರತಿಯೊಬ್ಬನಿಗೆ ಸಮ ಸಮನಾದ ಹಾಗೂ ಒಂದೇ ಬಗೆಯ ಹಕ್ಕು ಇದೆ, ಎಂಬುದು ಸಂಘದ ವಿಶ್ವಾಸ.

(೨) ಸಮಾನತೆಯ ಹಕ್ಕು ಪವಿತ್ರ, ಅಬಾಧಿತ ಹಾಗೂ ಅಭೇದ್ಯವಾದುದು.

(೩) ಈ ಹಕ್ಕು ವರ್ಣ, ಪಂಥ, ಜಾತಿ ಹಾಗೂ ಸ್ತ್ರೀಪುರುಷ ಭೇದಾತೀತವಾದುದು.

(೪) ಸಾಮಾಜಿಕ ಸಮತೆಯು ಅಸ್ತಿತ್ವಕ್ಕೆ ಬಾರದ ಹೊರತು ಸಮಾಜ, ಸಾಮಾಜಿಕ ಜೀವನಕ್ರಮಗಳು ಸರಾಗವಾಗಿ ಸಾಗುವುದು ಅಸಾಧ್ಯ.

(೫) ಸಮಾಜದ ಸರಾಗ ಹಾಗೂ ಸುಸಂಘಟಿತ ಆಯುಷ್ಯ ಕ್ರಮಕ್ಕೆ ಬಾಧಕವಾಗುವ ಎಲ್ಲ ವಿಚಾರಗಳು, ಆಚಾರಗಳು (ಕಾರ್ಯ) ಹಾಗೂ ಸಂಸ್ಥೆಗಳೆಲ್ಲ ಸಮಾಜ ಸಮತೆಯ ವಿರುದ್ಧವಾಗಿವೆ, ಎಂಬುದು ಈ ಸಂಘದ ಪ್ರತಿಭಟನಾಪೂರ್ವಕವಾದ ಘೋಷಣೆಯಾಗಿದೆ.

(೬) ಸಾಧ್ಯವಿದ್ದ ಎಲ್ಲ ಉಪಾಯಗಳಿಂದ ಮೇಲಿನ ತತ್ತ್ವಗಳನ್ನು ಕಾರ್ಯಾಚರಣೆಗೆ ತರುವುದು ಈ ಸಂಘದ ಸಂಕಲ್ಪವಾಗಿದೆ.

**ಸಾವರಕರ, ಡಾ. ನಾರಾಯಣ ದಾಮೋದರ** (೧೮೮೯-೧೯೪೯) :-ಇವರು ಸ್ವಾತಂತ್ರ್ಯವೀರ ಸಾವರಕರರ ತಮ್ಮ ಹಿಂದೂ ಸಭೆಯ ನಿಷ್ಠಾವಂತ ಕಾರ್ಯಕರ್ತರು, ಲಾರ್ಡ್ ಮಿಂಟೋನ ಮೇಲೆ ಬಾಂಬ ಎಸೆತ ಹಾಗೂ ಜ್ಯಾಕ್ಸನ್ ಕೊಲೆ ಪ್ರಕರಣದಲ್ಲಿ ಸೆರೆ. ೧೯೧೨ ರಲ್ಲಿ ಕಲಕತ್ತೆಯ ಮೆಡಿಕಲ್ ಕಾಲೇಜಿಗೆ ಪ್ರವೇಶ, ಕಾಲೇಜು ಫೀಸ್ ಕಟ್ಟಲೆಂದು ಕಾದಂಬರಿಗಳನ್ನು ಬರೆದರು. ೧೯೧೬ ರಲ್ಲಿ ಎಲ್. ಸಿ. ಪಿ. ಎಸ್. (ಹೋಮಿಯೊಪರೀಕ್ಷೆಯಲ್ಲಿ ತೇರ್ಗಡೆ. ದಂತವೈದ್ಯಕ ಶುರು. ೧೯೨೦-೨೧ ರಲ್ಲಿ ಹೋಮ್ ರೂಲ್ ಚಳುವಳಿಯಲ್ಲಿ ಭಾಗವಹಿಸಿದರು. ಸ್ವಾಮಿ ಶ್ರದ್ಧಾನಂದರ ಮೃತ್ಯುವಿನ ತರುವಾಯ ಶುರು ಮಾಡಲಾದ 'ಶ್ರದ್ಧಾನಂದ' ಪತ್ರಕ್ಕೆ ಏಳು ವರ್ಷ ಕಾಲ ಸಂಪಾದಕರು.

**ಸುರ್ವೆ, ಎಡ್, ಆನಂದರಾವ** :- ಭಂಡಾರಿ ಜಾತಿಯ ಮೊದಲ ಬಿ.ಎ., ಎಲ್.ಎಲ್.ಬಿ. ವಿದ್ಯಾರ್ಥಿ ದೆಸೆಯಿಂದಲೇ ಸಾರ್ವಜನಿಕ ಕಾರ್ಯದ ಬಯಕೆ. ಅವರು ನೈಟ್ ಸ್ಕೂಲ್ ತೆರೆದಿದ್ದರು.

## ಆಕರ ಗ್ರಂಥಗಳು

### ಮರಾಠಿ


ಕಾಂಬಳೆ, ಎಡ್. ಬಿ. ಸಿ; ಸಮಗ್ರ ಅಂಬೇಡಕರ ಚರಿತ್ತ, ೧೧/೧೭೪ ಆದರ್ಶ ನಗರ, ಪ್ರಭಾದೇವಿ, ಮುಂಬಯಿ: ಭಾಗ-೩, ೬ ಡಿಸೆಂಬರ್ ೧೯೮೫; ಭಾಗ-೧೦, ೧೪ ಎಪ್ರಿಲ್ ೧೯೮೭,

ಕೀರ, ಧನಂಜಯ; ಡಾ. ಬಾಬಾ ಸಾಹೇಬ ಅಂಬೇಡಕರ ; ಪಾಪ್ಯುಲರ್ ಪ್ರಕಾಶನ, ಮುಂಬಯಿ, ಆರನೆಯ ಮುದ್ರಣ : ೧೦ ಅಕ್ಟೋಬರ್ ೧೯೮೯, ಮರುಮುದ್ರಣ : ೧೯೯೯.

ಖರಾತ, ಡಾ. ಶಂಕರರಾವ; ಡಾ. ಅಂಬೇಡಕರ ಯಾಂಚೀ ಆತ್ಮಕಥಾ; ಇಂದ್ರಾಯಣಿ ಸಾಹಿತ್ಯ, ೨೭೩, ಶನಿವಾರ ಪೇಠ, ಪುಣೆ-೪೧೧ ೦೩೦; ೧೫ ಮಾರ್ಚ್ ೧೯೮೭.

ಖೈರಮೋಡೆ, ಚಾಂ, ಭ; ಡಾ. ಭೀಮರಾವ ರಾಮಜೀ ಅಂಬೇಡಕರ-ಚರಿತ್ರ ಖಂಡ; ೩ (೧೯೬೪), ೪ (೧೯೬೮), ೯ (೧೯೮೭).

ಗಣವೀರ, ರತ್ನಮಿತ್ರಾ; ಅನುವಾದಕ : ಬುದ್ಧ, ಮಾರ್ಕ್ಸ್ ಆಣಿ ಧಮ್ಮಾಚೇ ಭವಿತವ್ಯ, ಸುಗತ ಪ್ರಕಾಶನ : ಡಾ. ಅಂಬೇಡಕರ ಮಾರ್ಗ, ಆವಳೆ ಚೌಕ್, ನಾಗಪೂರ-೧೭, ಧಮ್ಮ ಚಕ್ರ ಪ್ರವರ್ತನ ದಿನ, ೧೯೭೮.

ಗಾಂಜರೆ, ಮಾ. ಫ. ಸಂಪಾದಕ- ಡಾ. ಬಾಬಾ ಸಾಹೇಬ ಅಂಬೇಡಕರಾಂಚೀ ಭಾಷಣೀ, ಅಶೋಕ ಪ್ರಕಾಶನ, ಬ್ಯಾನರ್ಜಿ ಲೇ-ಔಟ್, ನಾಗಪೂರ ೪೪೦ ೦೨೭.

ಗಣವೀರ, ರತ್ನಾಕರ; ಸಂಪಾದಕ-ಡಾ. ಬಾಬಾ ಸಾಹೇಬ ಅಂಬೇಡಕರಾಂಚೇ ಬಹಿಷ್ಕೃತ ಭಾರತಾತೀಲ ಅಗ್ರಲೇಖ; ರತ್ನಮಿತ್ರಾ ಪ್ರಕಾಶನ, ಬೇಝುನಬಾಗ, ನಾಗಪೂರ-೪, ೧೪ ಆಕ್ಟೋಬರ್ ೧೯೮೫,

ದೀನಬಂಧು, ಎಸ್. ಎ. ಶೇಗಾವಕರ; ಬುದ್ಧೋತ್ತರ ಧಮ್ಮ ಇತಿಹಾಸ: ಪ್ರಕಾಶಕ ಸೌ. ಕೌಸಲ್ಯಾಬಾಯಿ ಶೇಗಾವಕರ, ತಥಾಗತ ಪ್ರಕಾಶನ, ಬುದ್ಧ ಛಾಯಾ, ಭೀಮನಗರ, ಅಕೋಲಾ-೪೪೪ ೦೨೨, ೩೨ ; ಧಮ್ಮ-ದೀಕ್ಷಾ ಸ್ಮೃತಿ ದಿನ, ೨೦ ಅಕ್ಟೋಬರ್ ೧೯೮೮, ಬುದ್ಧಾಬ್ದ ೨೫೩೨.

ಮರಾಠಿ ವಿಶ್ವಕೋಶ, ಸಂಪಾದಕ-ತರ್ಕತೀರ್ಥ ಲಕ್ಷ್ಮಣಶಾಸ್ತ್ರಿಜೋಶಿ, ಪ್ರಕಾಶಕ-ಮಹಾರಾಷ್ಟ್ರ ರಾಜ್ಯ ಮರಾಠಿ ವಿಶ್ವಕೋಶ ನಿರ್ಮಿತಿ ಮಂಡಳ, ಮುಂಬಯಿ-೪೦೦ ೦೦೧.

ರೇಗೇ, ಶಾಂ. ಶಂ. ಭೀಮಪರ್ವ, ಸುಗಾವಾ ಪ್ರಕಾಶನ, ೫೬೨, ಸದಾಶಿವ ಪೇಠ, ಚಿತ್ರಶಾಲಾ ಬಿಲ್ಡಿಂಗ್, ಪುಣೆ ૩೦ (ದುಸರೀ ಆವೃ ೬ ಡಿಸೆಂಬರ್ ೨೦೦೧),

ಲೋಖಂಡೆ, ಡಾ. ಭಾವು; ಆಚಾರ್ಯ ಆಶ್ವಘೋಷ ವಜ್ರಸೂಚಿ, ಕರುಣಾ ಪ್ರಕಾಶನ, ವೈಶಾಲಿ ವಿಹಾರ, ಮಾಡೆಲ್ ಟೌನ್, ಕಾಮಠಿ ರೋಡ್, ನಾಗಪೂರ-೪೪೦ ೦೧೪, ಡಾ. ಅಂಬೇಡಕರ ಜನ್ಮಶತಾಬ್ದಿ ವರ್ಷ, ಆಕ್ಟೋಬರ್ ೧೯೯೧.

ಶ್ರೀ ಸಯಾಜಿ ಗೌರವ ಗ್ರಂಥ ಸಂಪಾದಕ ವ ಪ್ರಕಾಶಕ ವಾಢದಿವಸ-ಮಂಡಳ, ಮುಂಬಯಿ ವ ಬಡೋದೆ-೧೯೩೩.

ಸಾಳುಂಖೆ, ಡಾ. ಆ. ಹ. ವಿದ್ರೋಹಿ ತುಕಾರಾಮ, ಸದಾಶಿವ ಬಾಗಾಯಿತಕರ ಸ್ಮೃತಿಮಾಲಾ, ೧೭೪, ಸದಾಶಿವ ಪೇಠ, ಪುಣೆ ೪೧೧ ೦೩೦; ೫ ಡಿಸೆಂಬರ್ ೧೯೯೭.

## English

Ahir, D.C; How and why Buddhism declined in India; The Maha Bodhi Society of India, Buddha Wihar, Mandir Marg, New Delhi (1978).

Ambedkar, Dr.B.R; Dr. Babasaheb Ambedkar's Writings and Speeches, Vol. 9. containing What Congress and Gandhi have done to the Untoucables.

India Votes, Edited and Compild by - R. Chandidas, Ward Morehouse, Lean Clarkand Richard Pantera Published by Popular Prakashan, 35C, Tardeo Road, Bombay34, (First published 1968).

Lohia, Dr. Rammanohar; The Caste System, Rammanohar Lohiya Samata Vidyalaya Nyas;4-5-46, Sultan Bazar, Hyderabad-500 001, Second Edition 1979, May.

Maharashtra State Gazzetteer; Author-Dr. (Mrs.) I. karve, Directorate of Government Printing, Stationary and Publications, Maharashtra State -1968.

Mukharji, Radha Kumud; Ancient India Education; Macmillan and Co. Ltd. St. Martin's Street, London (1947).

Rattu, Nanak Chand, Last few days of Dr. Ambedkar, Amrit publishing house, New Delhi (1997).

Returned to Righteousness: A Collection of Speeches, Essays and Letters of the Anagarika Dharmapala, Edited by Guruge Ananda, Published by the Anagarika Dharmapala Birth Centenary Committee, Ministry of Education and Cultural Affairs, Ceylon, (17th September1965).

**ಮರಾಠಿ ನಿಯತಕಾಲಿಕೆಗಳು**

“ಅರುಣ' ಸಂಪಾದಕ - ಎಡ್, ನಾ. ಖಂ, ತಿರಪಡೆ, ನಾಗಪೂರ.

'ಗರೂಡ' ಸಂಪಾದಕ - ದಾ. ಮ. ಶಿರ್ಕೆ, ಕೋಲ್ಹಾಪೂರ.

'ಜನತಾ' ಸಂಸ್ಥಾಪಕ - ಡಾ. ಭೀ, ರಾ. ಅಂಬೇಡಕರ, ಗೋಕುಲದಾಸ ಪಾಸ್ತ  ರೋಡ್, ದಾದರ, ಮುಂಬಯಿ-೧೪,

'ನವಯುಗ , ಸಂಪಾದಕ - ಪ್ರ. ಕೇ, ಅತ್ರೆ  ಮುಂಬಯಿ.



'ಪ್ರಬುದ್ಧ ಭಾರತ , ಸಂಸ್ಥಾಪಕ - ಡಾ. ಬಿ. ರಾ. ಅಂಬೇಡಕರ್, ಗೋಕುಲದಾಸ, ಪಾಸ್ತಾ ರೋಡ್, ದಾದರ, ಮುಂಬಯಿ-೧೪

“ಬಹಿಷ್ಕೃತ ಭಾರತ', ಸಂಪಾದಕ ವ ಪ್ರಕಾಶಕ - ಡಾ. ಭೀಮರಾಅ ರಾಮಜೀ ಅಂಬೇಡಕರ, ಬಾರ್-ಎಟ್-ಲಾ, ರಹಿಮ ಬಿಲ್ಡಿಂಗ್, ಪೋಯಬಾವಡಿ, ಪರೇಳ-ಮುಂಬಯಿ. ಹಲವು ವೃತ್ತಪತ್ರಿಕೆಗಳು

* * * *